ದುರ್ಗಾಸ್ತಮಾನ

ತ ರಾ ಸು

ಇದೊಂದು ಸಂಕ್ರಮಣಕಾಲದ ಕತೆ.

ಆ ಕಾಲ -

ವ್ಯಾಪಾರಕ್ಕೆಂದು ಬಂದ ಬ್ರಿಟಿಷರು, ಪೋರ್ಚುಗೀಸರು ಭಾರತೀಯ ರಾಜರುಗಳ ಒಳ ಜಗಳದ ಸುಸಂಧಿಯನ್ನೇ ಸಾಧಿಸಿ 'ತಮ್ಮ ರೊಟ್ಟಿ ಜಾರಿ ಎಲ್ಲಿ ಬೆಣ್ಣೆಗೆ ಬೀಳುತ್ತದೆ' ಎಂದು ಕಾಯುತ್ತಿದ್ದ ಕಾಲ. ದಕ್ಷಿಣದಲ್ಲಿ ಪ್ರಬಲರಾದ ಮರಾಠರು, ಹೈದರಾಬಾದಿನ ನಿಜಾಮ, ಮೈಸೂರು ಸಂಸ್ಥಾನದ ಸರ್ವಾಧಿಕಾರಿ ಹೈದರಾಲಿ- ಇವರ ನಿರಂತರ ಹೋರಾಟದ ಏಳು ಬೀಳುಗಳನ್ನವಲಂಬಿಸಿ ತಮ್ಮ ಅಳಿವು ಉಳಿವುಗಳನ್ನು ಕರ್ನಾಟಕದ ಎಲ್ಲ ಪಾಳಯಗಾರರು ನಿರ್ಧರಿಸುತ್ತಿದ್ದ ಪರ್ವಕಾಲ.

ಹೈದರಾಲಿಯ ಬಿರುಗಾಳಿಯ ದಾಳಿಯನ್ನು ಎದುರಿಸಲಾಗದೆ, ತಮ್ಮ ಸರ್ವಸ್ವವನ್ನೂ ಅರ್ಪಿಸಿ ತಮ್ಮ ಪ್ರಾಣರಕ್ಷಣೆ ಮಾಡಿಕೊಳ್ಳುತ್ತಿದ್ದ ಪಾಳೆಯಗಾರರಿದ್ದಾಗ ತನ್ನ ಅಪ್ರತಿಮ ಶೌರ್ಯ-ಸಾಹಸಗಳಿಂದ, ಜನತೆಯ ಅಭಿಮಾನಕೋಟೆಯ ರಕ್ಷಾಬಲದಿಂದ ಎಂದೂ ಸೋತು, ಶರಣಾಗದೆ ಸುಮಾರು ಎರಡು ವರ್ಷಗಳಕಾಲ ಹೈದರಾಲಿಗೆ ಸವಾಲಾಗಿ ನಿಂತು ಸೆಣಸಿದ ಏಕೈಕ ಗಂಡು ಪಾಳಯಗಾರ - ಚಿತ್ರದುರ್ಗದ ಮದಕರಿನಾಯಕ.

ಮದಕರಿನಾಯಕನ ದುರಂತ - ಒಂದು ನಾಡಿನ ದುರಂತ; ಆ ಕಥೆಯನ್ನೇ ಹೇಳುವ ಈ 'ದುರ್ಗಾಸ್ತಮಾನ' – ಆ ಕಾಲದ ಮೌಲ್ಯಗಳ ಅಸ್ತಮಾನವನ್ನೂ ಪರ್ಯಾಯವಾಗಿ ಧ್ವನಿಸುತ್ತದೆ.

ಎಂದೋ, ಶತಶತಮಾನಗಳ ಹಿಂದೆ ನಡೆದುಹೋಗಿರಬಹುದಾದ ಇತಿಹಾಸವನ್ನು, ತಮ್ಮ ಪ್ರತಿಭೆಯ ಪರಶುಮಣಿಸ್ಪರ್ಶದಿಂದ ಸುವರ್ಣಾಧ್ಯಾಯವನ್ನಾಗಿಸಿ, ಕಣ್ಣಿಗೆ ಕಟ್ಟುವಂತೆ ಪುನರ್ ಸೃಷ್ಟಿಸಬಲ್ಲ ಕಲ್ಪನಾಶಕ್ತಿ, ಕಲಾಕೌಶಲ ಇರುವುದು- ತ.ರಾ.ಸು. ಒಬ್ಬರಿಗೇ.

ಸುಳಿಯಲ್ಲಿ ಸಿಕ್ಕವನಂತೆ ದುರಂತದೆಡೆಗೆ ಸಾಗುವ ಮದಕರಿನಾಯಕನ ಬದುಕಿನ ವಿವಿಧ ಮುಖಗಳು ಬಿಚ್ಚಿಕೊಳ್ಳುವ ಬೃಹತ್ ವೇಶ್ಮದ ಮೇಲೆ ಎಲ್ಲ ರಸಗಳ ವರ್ಣಗಳನ್ನೂ ಬಳಸಿ ಚಿತ್ರಿಸುವಾಗ ಅರವತ್ತ ಮೂರರ ತ.ರಾ.ಸು. ಹದಿಹರೆಯದವರನ್ನೂ ನಾಚಿಸುವ ಬಿಸಿನೆತ್ತರ ಕಾವನ್ನು ಕಾರುತ್ತಿರುವಂತೆ, ಪುಟಪುಟಗಳಲ್ಲೂ ತಮ್ಮ ಮಣ್ಣಿನ ಮೇಲಣ ಅಭಿಮಾನವನ್ನು ಅಭಿವ್ಯಕ್ತಿಸಿದಂತೆ ಕಾಣುತ್ತದೆ; ನೆತ್ತರು ಕುದಿಸುವ ತಮ್ಮ ಎಂದಿನ ಸಿಡಿಲಭಾಷೆಯಲ್ಲಿ, ಕಣ್ಣು

ಕೋರೈಸುವ ಮಿಂಚಿನ ಶೈಲಿಯಲ್ಲಿ ಆಳ ಅನುಭವ-ಚಿಂತನಗಳ ರಸಪಾಕದಲ್ಲಿ ಈ ಕೃತಿಯನ್ನೊಂದು ರುದ್ರಾಧ್ಯಾಯವನ್ನಾಗಿಸಿದ್ದಾರೆ.

’ವಿಶ್ವ ಸಿಡಿದೊಡೆಯದಂತೆ ಅದನ್ನು ಕಾಪಾಡಬಲ್ಲುದು ಮಾನವೀಯತೆಯೊಂದೇ; ಕವಿ-ಮಾನವೀಯತೆಯ ಪ್ರವಾದಿ’ ಎಂದು ಸಾರಿದ ಡಾ|| ಅ.ನ.ಕೃ. ಅವರ ಮಾತಿನ ಮೇಲೆ ಹೇಳುವುದಾದರೆ, ಮೂಲತಃ ಮಾನವೀಯತೆಯ ಆರಾಧನೆಯ ದೀಕ್ಷೆತೊಟ್ಟ ಪ್ರಗತಿಶೀಲ ಲೇಖಕರಲ್ಲಿ ಪ್ರಮುಖರಾದ ತ.ರಾ.ಸು. ಈ ಕಾದಂಬರಿ ರಚನೆಯಲ್ಲಿ ಮಾನವೀಯತೆಯ ಸರ್ವಶ್ರೇಷ್ಠತೆಯನ್ನೇ ಎತ್ತಿ ಸಾರುವ ಪ್ರವಾದಿಯಾಗಿ ಎದ್ದು ಕಾಣುತ್ತಾರೆ.

ಹಲವು ವರ್ಷಗಳಕಾಲ ಬರೆಯುವುದನ್ನು ಅನಿವಾರ್ಯ ಕಾರಣಗಳಿಂದ ತ.ರಾ.ಸು. ಬಿಟ್ಟರೂ, ಬರೆಯುವುದು ಅವರನ್ನು ಬಿಡದೆ ಇರುವುದನ್ನೂ, ಅವರೊಳಗಿನ ಲೇಖಕ ಸದಾ ಕ್ರಿಯಾತ್ಮಕನಾಗಿರುವುದನ್ನೂ ಈ ಕೃತಿಯಲ್ಲಿ ಕಾಣಬಹುದು.

ಎಂತಲೇ, ಇದು - ಕ್ರಿಯಾಶಾಲಿ ಲೇಖಕನ ಬಹುಕಾಲದ ಪಕ್ವ ಅನುಭವ, ಇತಿಹಾಸಕ್ಕೆ ಚ್ಯುತಿ ಬಾರದ ಕಲ್ಪನೆ, ಆಳ ವ್ಯಾಸಂಗಗಳಿಂದ ಮುಪ್ಪುರಿಗೊಂಡು, ನಮ್ಮ ಕಾಲದ ಹೆಮ್ಮೆಯ ಐತಿಹಾಸಿಕ ಕೃತಿಯಾಗಿ ಮೈ ತಳೆದು, ಇದೀಗ ಇತಿಹಾಸವನ್ನೇ ಸೃಷ್ಟಿಸಲಿದೆ.

ತ.ರಾ.ಸು. ಅವರ ಐತಿಹಾಸಿಕ ಕಾದಂಬರಿಗಳು

ನೃಪತುಂಗ

ಸಿಡಿಲಮೊಗ್ಗು

ಕೀರ್ತಿನಾರಾಯಣ

ಅಗ್ನಿರಥ - ಮುಕ್ತಿಪಥ

ಚಿತ್ರದುರ್ಗದ ಪಾಳಯಗಾರರನ್ನು ಕುರಿತು

ಕಸ್ತೂರಿ ಕಂಕಣ - ಭಾಗ ೧

ಕಸ್ತೂರಿ ಕಂಕಣ – ಭಾಗ ೨

ಕಂಬನಿಯ ಕುಯಿಲು

ರಾಜ್ಯದಾಹ

ರಕ್ತ ರಾತ್ರಿ

ತಿರುಗುಬಾಣ

ಹೊಸ ಹಗಲು

ವಿಜಯೋತ್ಸವ - ಭಾಗ ೧

ವಿಜಯೋತ್ಸವ - ಭಾಗ ೨

ದುರ್ಗಾಸ್ತಮಾನ

ತ. ರಾ. ಸು.

ಕಾವ್ಯಾಲಯ : ಪ್ರಕಾಶಕರು : ಮೈಸೂರು

DUGĀSTAMĀNA: (Historical Novel in Kannada) Written by Ta. Ra. Su. (T. R. Subba Rao); Published by Smt. Seshamma Chidambaram Kavyalaya Publishers, Jayanagar, Mysore-570 014; First Edition 1982.


ಮೊದಲನೆಯ ಮುದ್ರಣ : ೧೯೮೨

ಆಕರ: https://archive.org/details/durgastamana0000trsu/mode/2up
ಓಸಿಆರ್ ಪರಿವರ್ತನೆ: ವಿಶು [https://vishwakoshaagaara.blogspot.com/]

ಸಾದಾ ಪ್ರತಿ : ರೂ. 50-00 ಕ್ಯಾಲಿಕೋ ಪ್ರತಿ : ರೂ. 90-00

ಮುಖಚಿತ್ರ, ರೇಖಾಚಿತ್ರಗಳು : ವಿ. ಆರ್. ಸಿ. ಶೇಖರ್

ಮುದ್ರಕರು
ಜಿ. ಎಚ್. ಕೃಷ್ಣಮೂರ್ತಿ
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ -ಮೈಸೂರು



ಈ ಕೃತಿರಚನೆಗೆ

ತಮ್ಮ ಅಪಾರ ಅಭಿಮಾನದ ಶಕ್ತಿಯನ್ನು

ನನ್ನಲ್ಲಿ ತುಂಬಿ

ನನ್ನ ಕನಸು- ಕಾದಂಬರಿ ರೂಪವಾಗಿ

ಮೈದಳೆಯಲು ಕಾರಣರಾದ

ನನ್ನ ಒಲವಿನ

ಚಿತ್ರದುರ್ಗದ ಮಹಾಜನತೆಗೆ

ಮತ್ತು

ನನ್ನ ಎಳೆ ವಯಸ್ಸಿನಲ್ಲೇ

ನನ್ನಲ್ಲಿ ಸುಪ್ತವಾಗಿದ್ದ ಸಾಹಿತ್ಯ ರಚನೆಯ ಶಕ್ತಿಗೆ

ತನ್ನ ಅನುಗ್ರಹದ ತಪೋಬಲವನ್ನು ತುಂಬಿ

ನನ್ನನ್ನು ಸಾಹಿತಿಯನ್ನಾಗಿ ನಿರ್ಮಿಸಿದ

ನನ್ನ ಪೂಜ್ಯ ದೊಡ್ಡಪ್ಪನವರಾದ

'ಕನ್ನಡದ ಪ್ರಾತಃಸ್ಮರಣೀಯ ವ್ಯಕ್ತಿ'

'ಮಹಾನ್ ಸಾಹಿತ್ಯ ಶಕ್ತಿ'

ದಿವಂಗತ ಪ್ರೊ|| ಟಿ. ಎಸ್. ವೆಂಕಣ್ಣಯ್ಯನವರಿಗೆ

ಮುನ್ನುಡಿ

ಚಿತ್ರದುರ್ಗದ ಜನರಿಗೆ ಚಿತ್ರದುರ್ಗ ಎಂದರೆ ಒಂದು ಊರಲ್ಲ, ಕೋಟೆಯಲ್ಲಿ, ಬೆಟ್ಟವಲ್ಲ; ತಮ್ಮ ಕರುಳಿಗೆ ಹೊಂದಿಕೊಂಡು ಬೆಳೆದ ಜೀವಂತ ವಸ್ತು. ಮದಕರಿನಾಯಕನೆಂದರೂ ಅಷ್ಟೆ - ಇತಿಹಾಸದ ಇದ್ದು ಹೋದ ಒಬ್ಬ ಅರಸನಲ್ಲ, ತಮ್ಮ ಜೀವಂತ ಆಪ್ತನೆಂಟ. ಈ ಭಾವನೆ ಹೇಗೋ, ಹಾಗೆಯೇ 'ಚಿತ್ರದುರ್ಗ'-'ಮದಕರಿನಾಯಕ' ಎನ್ನುವುದು ಬೇರೆಬೇರೆಯಲ್ಲ, ಒಂದೇ ಎಂಬ ಅವಿನಾಭಾವ; ದುರ್ಗ ಎಂದರೆ ಮದಕರಿ, ಮದಕರಿ ಎಂದರೆ ದುರ್ಗ, ನಾಯಕ ಜನಾಂಗಕ್ಕಷ್ಟೇ ಅಲ್ಲ - ದುರ್ಗದ ನೀರು ಕುಡಿದು, ಆ ಮಣ್ಣಿನಲ್ಲಿ ಹುಟ್ಟಿದವರೆಲ್ಲರಿಗೂ ಆ ಬಗ್ಗೆ ಮಾತನಾಡುವಾಗ ಹೇಳುವುದು 'ನಮ್ಮ ಚಿತ್ರದುರ್ಗ', 'ನಮ್ಮ ಮದಕರಿನಾಯಕ'; ಆ ಎರಡರ ನಡುವಿನ ಕೊಂಡಿ 'ನಾವು' ಎಂಬ ಭಾವನೆ. ಎಲ್ಲ ಊರಿನ ಜನಕ್ಕೂ ತಮ್ಮ ಊರು, ತಮ್ಮ ಸ್ಥಳವನ್ನಾಳಿದ ದೊರೆಯ ಬಗ್ಗೆ ಈ ಭಾವನೆ ಇರುತ್ತದೆಯೋ, ಇಲ್ಲವೋ - ನಾನರಿಯೆ. ಆದರೆ ಚಿತ್ರದುರ್ಗದ ಮಟ್ಟಿಗಂತೂ ಇದು ಎಲ್ಲರಿಗೂ ಅನ್ವಯಿಸುವ ಮಾತು; ಆ ನೆಲದ ಮಗನಾದ ನನಗೂ.

ಹೀಗೆ ಚಿತ್ರದುರ್ಗದ ಜನತೆಯ ಹೃದಯದಲ್ಲಿ ನಿತ್ಯನಿವಾಸಿಯಾಗಿರುವ ಈ 'ಮದಕರಿ ನಾಯಕ', ಚಿತ್ರದುರ್ಗವನ್ನು ಆಳಿದ ನಾಯಕವಂಶದ ಕೊನೆಯ ದೊರೆ - 'ಚಿಕ್ಕಮದಕರಿನಾಯಕ.' ಈ ನಾಯಕ ವಂಶದಲ್ಲಿ ಹಲವಾರು ಮದಕರಿನಾಯಕರು ಆಳಿ, ಅಳಿದಿದ್ದರೂ ಚಿತ್ರದುರ್ಗದ ಜನತೆ 'ಮದಕರಿನಾಯಕ' ಎಂದ ಕೂಡಲೇ ನೆನಸಿಕೊಳ್ಳುವುದು ಈ ಕೊನೆಯ ದೊರೆಯನ್ನೇ. ಆತನಲ್ಲದೆ ಬೇರೆ ಯಾರೂ ನೆನಪಿಗೆ ಬರುವುದಿಲ್ಲ. ಅದಕ್ಕೆ ಕಾರಣ – ಆತನ ಜೀವನದ ದುರಂತ ಮತ್ತು ಆತನ ಶೌರ್ಯ, ಸಾಹಸ, ಕ್ರೌರ್ಯ, ಕಾಮಲೋಲುಪತೆಯ ಬಗ್ಗೆ ಜನಜನಿತವಾಗಿರುವ ಹಲವಾರು ದಂತಕತೆಗಳು, ನಾಡಹಾಡುಗಳು.

ಚಿತ್ರದುರ್ಗವನ್ನಾಳಿದ ನಾಯಕವಂಶದ ಬಗ್ಗೆ ಒಂದು ಕಾದಂಬರಿಮಾಲೆಯನ್ನೇ ರಚಿಸಬೇಕೆಂಬ ಕನಸು ನನ್ನಲ್ಲಿತ್ತು. ಅಂತೆಯೇ ಈ ಕೊನೆಯ ಮದಕರಿನಾಯಕನ ಬಗ್ಗೆ ದುರ್ಗಾಸ್ತಮಾನ ಎಂಬ ಹೆಸರಿನ ಕಾದಂಬರಿಯನ್ನು ಬರೆಯಬೇಕೆಂಬ ಕನಸನ್ನು ಸುಮಾರು ಇಪ್ಪತ್ತೈದು ವರ್ಷಗಳ

ಹಿಂದೆಯೇ ಕಂಡು, ಆ ಅಪೇಕ್ಷೆಯನ್ನು ಚಿತ್ರದುರ್ಗದ ಬಗ್ಗೆ ಬರೆದ ವಿಜಯೋತ್ಸವ ಎಂಬ ಕಾದಂಬರಿಯ ಮುನ್ನುಡಿಯಲ್ಲಿ ವ್ಯಕ್ತಪಡಿಸಿದ್ದೆ. ಆದರೆ ನನ್ನ ಸಾಹಿತ್ಯ ಜೀವನದ ಎಷ್ಟೋ ಕನಸುಗಳಂತೆ ಈ ಕಾದಂಬರಿಯ ಕನಸೂ ಇಷ್ಟು ವರ್ಷಗಳ ಕಾಲ ಅಪೂರ್ಣವಾಗಿಯೇ ಉಳಿದಿತ್ತು.

ಪ್ರಾಯಶಃ ಅದು ಕನಸಾಗಿಯೇ ಉಳಿದುಬಿಡುತ್ತಿತ್ತೋ-ಏನೋ. ಆದರೆ ಚಿತ್ರದುರ್ಗದ ಬಗ್ಗೆ ನಾನು ಬರೆದ ಐತಿಹಾಸಿಕ ಕಾದಂಬರಿಗಳನ್ನು ಓದಿ, ಮೆಚ್ಚಿಕೊಂಡ ಜನ ಈ ಕನಸು ಕನಸಾಗಿಯೇ ಉಳಿಯಲು ಬಿಡಲಿಲ್ಲ. ಚಿತ್ರದುರ್ಗಕ್ಕೆ ನಾನು ಯಾವಾಗ ಹೋದಾಗಲೂ ಈ ಬಗ್ಗೆ ನನ್ನನ್ನು ಎಚ್ಚರಿಸುತ್ತಿದ್ದರು. ಅಲ್ಲಿಯ ಜನತೆಯ ಪ್ರೇಮ ನನ್ನಲ್ಲಿ ಈ ಕಾದಂಬರಿಯನ್ನು ಬರೆಯುವ ಉತ್ಸಾಹವನ್ನು ಮೂಡಿಸಿದರೂ ಏನೇನೋ ಕಾರಣಗಳಿಂದ ನನ್ನ ಕನಸು, ಜನತೆಗೆ ನಾನು ಕೊಟ್ಟ ಮಾತು – ಎರಡೂ ಅಪೂರ್ಣವಾಗಿಯೇ ನನಸಾಗದೆ ಉಳಿದಿತ್ತು.

ನಾನು ಮರೆತರೂ ಜನ ಮರೆಯಲಿಲ್ಲ –

ಚಿತ್ರದುರ್ಗದ ಜನಕ್ಕೆ ನನ್ನ ಬಗ್ಗೆ ಇದ್ದ ಪ್ರೇಮ, ಅಭಿಮಾನ ಎಲ್ಲವೂ ಕಳೆದ ವರ್ಷ ಮಾರ್ಚ್ ತಿಂಗಳ ಎಂಟರಂದು ನಡೆದ ಸನ್ಮಾನಸಮಾರಂಭದಲ್ಲಿ ಅವಿಸ್ಮರಣೀಯವಾಗಿ ಪ್ರಕಟವಾಗಿ, ಆ ದಿನದ ಬಹಿರಂಗಸಭೆಯಲ್ಲಿ ಮದಕರಿನಾಯಕನ ಕಂಚಿನ ಪ್ರತಿಮೆಯನ್ನು ಸ್ಥಾಪಿಸುವ ನನ್ನ ಬಯಕೆಯನ್ನು ತೋಡಿಕೊಂಡಾಗ ಅದನ್ನು ನೆರವೇರಿಸುವ ಆಶ್ವಾಸನೆಯನ್ನು ಬಹಿರಂಗ ಸಭೆಯಲ್ಲೇ ನೀಡಿದ ಜನ, ಆ ಸಭೆಯಲ್ಲೇ ನನ್ನಿಂದ ಈ ಕಾದಂಬರಿ ರಚನೆಯ ಬಗ್ಗೆ ಆಶ್ವಾಸನೆಯನ್ನೂ ಪಡೆದರು. ಸರ್ವಶ್ರೀ ತಿಮ್ಮಪ್ಪನಾಯಕ ಗಂಡುಗಲಿ, ಡಾ. ರಾಮಚಂದ್ರ ನಾಯಕ್, ಸಿ. ಟಿ. ಸಿದ್ದಣ್ಣನಾಯಕ್ ಮತ್ತು ಶ್ರೀಶೈಲಾರಾಧ್ಯರು ನನ್ನ ಮಾತು ಗಾಳಿ ಮಾತಾಗದಂತೆ ಗಟ್ಟಿ ಮಾಡಿದರು.

ಚಿತ್ರದುರ್ಗದಲ್ಲಿ ಮದಕರಿನಾಯಕರ ಕಂಚಿನ ವಿಗ್ರಹವನ್ನು ಸ್ಥಾಪಿಸುವ ಸಲುವಾಗಿ ಚಿತ್ರದುರ್ಗದ ಜಿಲ್ಲಾಧಿಕಾರಿಗಳೂ, ಸಾಹಿತ್ಯ-ಸಂಸ್ಕೃತಿಯ ಸಹಜಾಭಿಮಾನಿಗಳೂ, ಉತ್ತಮ ಕಾರ್ಯವನ್ನು ಮಾಡುವಲ್ಲಿ ನೂರು ಕೈಯಾಗಿ ದುಡಿವ ಸ್ಥಿರಸಂಕಲ್ಪರೂ ಆದ ಶ್ರೀ. ಶ. ನ. ಶಾಂತಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಿಧಿಸಂಗ್ರಹಕ್ಕಾಗಿ ಸಮಿತಿಯೊಂದನ್ನು ರಚನೆಮಾಡಿಕೊಂಡು ಕಾರ್ಯೋನ್ಮುಖರಾದುದಷ್ಟೇ ಅಲ್ಲ, ಆ ಸಮಿತಿಯ ಕಾರ್ಯದರ್ಶಿಗಳೂ, ರಾಜ್ಯ ಸಭಾಸದಸ್ಯರೂ ಆದ ಶ್ರೀ ಹೆಚ್. ಹನುಮಂತಪ್ಪನವರು ಮೈಸೂರಿಗೆ ಬಂದು, ಮಲಗಿದ್ದ

ನನ್ನನ್ನು ಎಚ್ಚರಿಸಿ, ಕಂಚಿನ ಪ್ರತಿಮೆ ಸ್ಥಾಪಿಸಲು ಆಗಿರುವ ಸಿದ್ಧತೆಗಳನ್ನೆಲ್ಲಾ ತಿಳಿಸಿ, 'ಈ ಕೂಡಲೇ, ಆದಷ್ಟು ಬೇಗ ನಿಮ್ಮ ಕಾದಂಬರಿ ಸಿದ್ಧವಾಗಬೇಕು' ಎಂದು ಬೆನ್ನು ತಟ್ಟಿದರು. ನಾನು ನನ್ನ ಅನಾರೋಗ್ಯ, ಅದಲ್ಲದೆ ಬೇರೆ ಹಲವಾರು ಅಡೆತಡೆಗಳನ್ನು ಅವರ ಮುಂದಿಟ್ಟಾಗ ಅದಾವುದಕ್ಕೂ ಅವರು ಬಗ್ಗದೆ, ಜಡವಾಗಿದ್ದ ನನ್ನನ್ನು ತಮ್ಮ ಉತ್ಸಾಹದಿಂದ ಕಾರ್ಯೋನ್ಮುಖವಾಗುವಂತೆ ಮಾಡಿದರು.

ಇದೇ ಸಮಯಕ್ಕೆ ಸರಿಯಾಗಿ ಭದ್ರಾವತಿಯ ಉಕ್ಕಿನ ಕಾರ್ಖಾನೆಯ ನಿವೃತ್ತ ವರ್ಕ್ಸ್ ಮ್ಯಾನೇಜರ್ ಹಾಗೂ ಚಿತ್ರದುರ್ಗ ಸಂಸ್ಥಾನದ ಚಪ್ಪೆಚಾವಡಿ ದಳವಾಯಿಗಳ ನೇರ ವಂಶಸ್ಥರಾದ, ಸುಮಾರು ಎಂಬತ್ತೈದು ವರ್ಷ ಪ್ರಾಯದ ಶ್ರೀ ಸಿ. ಪರಶುರಾಮನಾಯಕ್ ಅವರು ಒಂದು ದಿನ ಬೆಳಿಗ್ಗೆ ನನ್ನ ಮನೆಗೆ ಬಂದು, "ನೀವು ಕೊನೆಯ ಮದಕರಿನಾಯಕರ ಬಗ್ಗೆ ಕಾದಂಬರಿಯನ್ನು ಬರೆಯುವುದಾಗಿ ಪತ್ರಿಕೆಗಳಲ್ಲಿ ಓದಿ, ತಿಳಿದು ನನಗೆ ಹೇಳಲಾಗದಷ್ಟು ಸಂತೋಷವಾಗಿದೆ. ಆದಷ್ಟು ಬೇಗ ಆ ಕಾದಂಬರಿಯನ್ನು ಬರೆದುಬಿಡಿ. ನನ್ನಲ್ಲಿರುವ ದಾಖಲೆಗಳನ್ನು ತೋರಿಸಿ, ನನ್ನ ಹಿರಿಯರಿಂದ ಕೇಳಿ ತಿಳಿದಿರುವ ವಿಷಯಗಳನ್ನು ನಿಮಗೆ ಹೇಳ ಬೇಕೆಂದೇ ನಾನು ಬಂದಿದ್ದೇನೆ. ನೀವು ಕೆಲಸಕ್ಕೆ ಸಿದ್ಧರಾಗಿ" – ಎಂದು ಹೇಳಿ, ತಮ್ಮೊಂದಿಗೆ ತಂದಿದ್ದ ಕೈಚೀಲದಲ್ಲಿದ್ದ ದಾಖಲೆಗಳನ್ನೆಲ್ಲಾ ನನಗೆ ತೋರಿಸಿದ್ದಷ್ಟೇ ಅಲ್ಲ, ಆ ಇಳಿವಯಸ್ಸಿನಲ್ಲೂ ಊಟ, ತಿಂಡಿ, ದೇಹಶ್ರಮ ಎಲ್ಲವನ್ನೂ ಮರೆತು ಇಡೀ ಒಂದು ದಿನ ತಾವು ತಿಳಿದಿದ್ದನ್ನೆಲ್ಲಾ ಹೇಳಿ, ನೆನಪಿನಲ್ಲಿದ್ದ ಲಾವಣಿಗಳನ್ನೆಲ್ಲಾ ಹಾಡಿದರು - ತಮ್ಮ ಪುಟಿಯುವ ಉತ್ಸಾಹದಿಂದ. ಎಂಥದೋ ಜಡತೆ ಕವಿದಿದ್ದ ನಾನು ಅವರ ಉತ್ಸಾಹದಿದಿರು ನಾಚಿ, ಮೈಕೊಡವಿಕೊಂಡು ಕೆಲಸಕ್ಕೆ ಮುಂದಾಗಲು ಸ್ಫೂರ್ತಿ ತುಂಬಿದರು. ಆ ವೃದ್ಧರ ಉತ್ಸಾಹ ನನ್ನ ಮೈಯಲ್ಲಿ ನವ ಚೇತನವನ್ನು ಮೂಡಿಸಿತು. ಹತ್ತುಹತ್ತು ಸಲ ನನ್ನಿಂದ ಕಾದಂಬರಿ ಬರೆಯುವ ಭರವಸೆಯನ್ನು ತೆಗೆದುಕೊಂಡು ಅವರು ಭದ್ರಾವತಿಗೆ ಹಿಂತಿರುಗಿದರು. ಆ ದಿನವೇ ನಾನು ಈ ಕಾದಂಬರಿಯನ್ನು ಬರೆಯಲೇಬೇಕೆಂಬ ಸಂಕಲ್ಪಮಾಡಿ, ಎಷ್ಟೋ ವರ್ಷಗಳಿಂದ ಬಿಟ್ಟಿದ್ದ ನನ್ನ ಲೇಖನಿಯನ್ನು ಕೈಗೆತ್ತಿಕೊಂಡು, ಮದಕರಿನಾಯಕನ ಬಗ್ಗೆ ಚಿಂತಿಸಲು ಆರಂಭಿಸಿದೆ.

ನನ್ನಿಂದ ಈ ಕಾದಂಬರಿ ರಚಿತವಾಗಲು ಇಷ್ಟೇ ಉತ್ಸಾಹ, ಶ್ರದ್ಧೆಯನ್ನು ತೋರಿದವರು ಖಾದಿ ಭಂಡಾರದಲ್ಲಿ ಕೆಲಸದಲ್ಲಿದ್ದು ಈಗ ನಿವೃತ್ತರಾಗಿ ಹೊಳಲ್ಕೆರೆ ತಾಲ್ಲೂಕು ಅರೆಹಳ್ಳಿಯಲ್ಲಿ ವಾಸವಾಗಿರುವ ಪಾಳಯಗಾರರ ವಂಶಸ್ಥರಾದ ಶ್ರೀ ಶ್ರೀನಿವಾಸನಾಯಕರು. ಸಾಕಷ್ಟು ವರ್ಷಗಳ

ಹಿಂದೆಯೇ ಈ ಕಾದಂಬರಿಯನ್ನು ನಾನು ಬರೆಯಲೇಬೇಕೆಂದು ಒತ್ತಾಯಿಸಿ, ಪ್ರೋತ್ಸಾಹಿಸಿದವರು ಅವರು.

ನನ್ನ ಈ ಕಾದಂಬರಿಗೆ ಮೂಲ ಸಾಮಗ್ರಿಯಾದ. ಇದುವರೆಗೂ ಮುದ್ರಣ ರೂಪದಲ್ಲಿ ಪ್ರಕಟವಾಗದಿರುವ ಶ್ರೀ ಚಿಕ್ಕೆರೂರು ಗೋವಿಂದಾಚಾರ್ಯರು ಬರೆದ ಹರಪನಹಳ್ಳಿ ಪಾಳಯಗಾರರ ಚರಿತ್ರೆಯ ಹಸ್ತಪ್ರತಿಯ ನಕಲನ್ನು ನನಗೆ ಒದಗಿಸಿದ ಆ ಮಿತ್ರರ ಅವ್ಯಾಜಪ್ರೇಮವನ್ನು ಸ್ಮರಿಸಬೇಕಾದದ್ದು ನನ್ನ ಕರ್ತವ್ಯ. ಇಂಥ ಮಿತ್ರರ ಅಯಾಚಿತ ಸಹಕಾರವಿಲ್ಲದಿದ್ದಲ್ಲಿ ಇತಿಹಾಸಕ್ಕೆ ನಿಷ್ಠವಾಗಿ ಈ ಕಾದಂಬರಿಯನ್ನು ರಚಿಸುವುದು ನನ್ನಿಂದ ಸಾಧ್ಯವಾಗುತ್ತಿರಲಿಲ್ಲ.

ಕಾದಂಬರಿಯ ಬರವಣಿಗೆಯನ್ನು ಆರಂಭಿಸುವ ಮುನ್ನ, ಹತ್ತಾರು ಐತಿಹಾಸಿಕ ಕಾದಂಬರಿಗಳನ್ನು ಬರೆದು ಕೈ ಪಳಗಿದ್ದ ನನಗೆ 'ಈ ಕಾದಂಬರಿಯನ್ನು ಬರೆಯುವುದು ಒಂದು ದೊಡ್ಡ ಸಾಹಸದ ಕೆಲಸ' ಎಂದು ತೋರದೆ, 'ಬಹು ಸುಲಭವಾಗಿ ಬರೆದು ಮುಗಿಸಬಹುದಾದ ಕೆಲಸ' ಎಂದೇ ಅನಿಸಿತ್ತು. ಆದರೆ ಕೃತಿರಚನೆಯ ಪೂರ್ವಭಾವೀಸಿದ್ಧತೆಯಲ್ಲಿ ತೊಡಗಿದಾಗ- 'ಈ ಕೆಲಸ ಎಷ್ಟು ತೊಡಕಿನದು' ಎನ್ನುವುದು ನನಗೆ ಮನವರಿಕೆಯಾಯಿತು.

ಕಿರಿಯ ಮದಕರಿನಾಯಕನ ಬಗ್ಗೆ ಜನತೆಯಲ್ಲಿ ಪ್ರಚಲಿತವಾಗಿದ್ದ, ತಮಗೆ ತಿಳಿದಿದ್ದ ಕತೆಗಳನ್ನೆಲ್ಲಾ ಹೇಳಿದ ಭದ್ರಾವತಿಯ ಸಿ. ಪರಶುರಾಮನಾಯಕರೂ "ಕಡೆ ಮದಕರಿನಾಯಕ ಅತಿಸಾಹಸಿ, ಅತಿಕ್ರೂರಿ, ಅತಿಮದಾಂಧ, ಅತಿಕಾಮಿ. ಇಂಥವನ ಬಗ್ಗೆ ನೀವು ಹೇಗೆ ಬರೆಯುತ್ತೀರಿ? ಹೈದರಾಲಿ ದೈವಾಂಶಸಂಭೂತ, ಆತನಿಗೆ ಶ್ರೀರಂಗಪಟ್ಟಣದ ಶ್ರೀರಂಗನಾಥನ ಅನುಗ್ರಹವೇ ಅಲ್ಲದೆ, ದುರ್ಗದ ಶ್ರೀ ಉತ್ಸವಾಂಬೆಯೂ ಒಲಿದಿದ್ದಳು. ರಾಜಗುರುಗಳಾದ ಶ್ರೀಮುರುಗೀರಾಜೇಂದ್ರಸ್ವಾಮಿಗಳ ಆಶೀರ್ವಾದವೂ ಹೈದರಾಲಿಗಿತ್ತು. ನಮ್ಮ ನಾಯಕ ದೈವಕೃಪೆ, ಗುರುವಿನ ಅನುಗ್ರಹ-ಎರಡನ್ನೂ ಕಳೆದುಕೊಂಡ ನತದೃಷ್ಟ. ಅಂಥವನನ್ನು ನೀವು ಹೇಗೆ ಚಿತ್ರಿಸುತ್ತೀರಿ?" – ಎಂದು ತಮ್ಮ ಕುತೂಹಲವನ್ನು ಸವಾಲಾಗಿಸಿ ನನ್ನ ಮುಂದಿಟ್ಟರು. ಮದಕರಿನಾಯಕನ ಬಗ್ಗೆ ಸಾಕಷ್ಟು ಮಾಹಿತಿ ತಿಳಿದ ಟಿ. ಎನ್. ಗಂಡುಗಲಿಯೂ ಇದೇ ರಾಗವನ್ನೇ ಎಳೆದರು. ಚಿತ್ರದುರ್ಗದ ಇತಿಹಾಸರಚನೆಗೆ ಉಪಲಬ್ಧವಾಗಿರುವ ಏಕೈಕ ಆಕರ ಗ್ರಂಥ ದಿವಂಗತ ಶ್ರೀ ಎಂ. ಎಸ್. ಪುಟ್ಟಣ್ಣನವರ 'ಚಿತ್ರದುರ್ಗದ ಪಾಳಯಗಾರರು' ಕೂಡ ಸ್ಥೂಲವಾಗಿ ಇದೇ ಭಾವನೆಯನ್ನೇ ಪುಷ್ಟೀಕರಿಸಿತು.

ಇದೆಲ್ಲವನ್ನೂ ಗಮನಿಸಿದಾಗ ಒಂದೆರಡು ದಿನ ನನ್ನಲ್ಲಿ, 'ಈತನ ಬಗ್ಗೆ ಹೇಗೆ ಬರೆಯುವುದು, ಬರೆಯುವುದಕ್ಕಿಂತ ಕೈಬಿಡುವುದೇ ಒಳ್ಳೆಯದೇನೋ' – ಎನ್ನುವ ಭಾವನೆಯೂ ಮೂಡಿತು. ಆದರೆ ನನ್ನ ಹೃದಯವಾಸಿಯಾಗಿದ್ದ ಮದಕರಿನಾಯಕನ ಮೇಲಣ ಅಭಿಮಾನ ಸೋಲನ್ನು ಒಪ್ಪಲು ತಯಾರಿರಲಿಲ್ಲ. 'ಆದದ್ದಾಗಲಿ, ಇದರ ಬಗ್ಗೆ ಸಂಪೂರ್ಣವಾಗಿ ತಳ ಸೋಸಿಯೇಬಿಡಬೇಕು' – ಎನ್ನುವ ನಿರ್ಧಾರಕ್ಕೆ ಬಂದು ಆತನ ಬಗ್ಗೆ, ಆ ಕಾಲದ ಬಗ್ಗೆ 'ಸಮಕಾಲೀನ ಇತಿಹಾಸದಲ್ಲಿ ಏನೇನು ವಸ್ತು, ಆಧಾರ ಸಿಗುತ್ತದೆ' ಎಂದು ಸಂಶೋಧನೆ ಮಾಡಲು ಆರಂಭಮಾಡಿದೆ.

ಉಪಲಬ್ಧವಿದ್ದ ಎಲ್ಲ ದಾಖಲೆಗಳನ್ನೂ ಸಂಗ್ರಹಮಾಡಿ, ಸುಮಾರು ಮೂರು ತಿಂಗಳುಗಳ ಕಾಲ ಸತತವಾಗಿ ಅಧ್ಯಯನ ಮಾಡಿದ ಬಳಿಕ, "ಈ ದಂತಕತೆಗಳಲ್ಲಿ ಬಹಳಷ್ಟು ವಿಶ್ವಾಸಾರ್ಹವಲ್ಲದ್ದು; ಮದಕರಿನಾಯಕನ ಬಗ್ಗೆ, ಹೈದರಾಲಿಯ ಬಗ್ಗೆ ಜನ ತಿಳಿದುಕೊಂಡಿರುವುದು, ಎಂ. ಎಸ್. ಪುಟ್ಟಣ್ಣನವರ 'ಚಿತ್ರದುರ್ಗದ ಪಾಳಯಗಾರರು' ಗ್ರಂಥದಲ್ಲಿ ಉಲ್ಲೇಖವಾಗಿರುವುದು ಐತಿಹಾಸಿಕವಾಗಿ ಅಸಂಗತ, ನಿರಾಧಾರ" ಎಂದು ಖಚಿತವಾಯಿತು, ಅಷ್ಟೇ ಅಲ್ಲ, "ಐತಿಹಾಸಿಕವಾಗಿ ಮದಕರಿನಾಯಕ ನಿಜವಾಗಿಯೂ ಮೆಚ್ಚಬೇಕಾದ ಶೂರ, ದುರಂತ ಕಾದಂಬರಿಗೆ ಅತ್ಯಂತ ಅರ್ಹನಾದ ಧೀರೋದ್ಧಾತನಾಯಕ" ಎನ್ನುವುದೂ ಮನವರಿಕೆಯಾಯಿತು.

ಇತಿಹಾಸಕ್ಕೂ, ಜನರ ನಂಬಿಕೆಗೂ ಎಷ್ಟು ವ್ಯತ್ಯಾಸವಿದೆ ಎಂದು ತೋರಿಸುವುದಕ್ಕೆ ಒಂದೇ ಒಂದು ಘಟನೆಯನ್ನು ನಿದರ್ಶನವಾಗಿ ಹೇಳಬಹುದು. ಆದು – ಮದಕರಿನಾಯಕ ಹೈದರಾಲಿಯ ಪರವಾಗಿ ಮಾಡಿದನೆಂದು ಹೇಳಲಾದ ನಿಡಗಲ್ಲು ಯುದ್ಧ.

ಈ ನಿಡಗಲ್ಲು ಯುದ್ಧದ ಸತ್ಯತೆಯ ಬಗ್ಗೆ ನನಗೆ ಮೊದಲು ಅನುಮಾನ ಮೂಡಿದ್ದು ದಿವಂಗತ ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು ಸಂಪಾದಿಸಿ, ಪ್ರಕಟಿಸಿರುವ 'ಚಿತ್ರದುರ್ಗದ ಬಖೈರು' ಗ್ರಂಥದಲ್ಲಿ ಬರೆದ ಟಿಪ್ಪಣಿಯನ್ನು ಓದಿದಾಗ. ಆ ಟಿಪ್ಪಣಿಯಲ್ಲಿ ಶ್ರೀ ಜೋಯಿಸರು 'ಯುದ್ಧ ನಡೆದದ್ದು ಚಿತ್ರದುರ್ಗಕ್ಕೆ ಸಮೀಪವಾಗಿರುವ ನಿಡಗಲ್ಲು ದುರ್ಗದಲ್ಲಿ ಅಲ್ಲ, ತುಮಕೂರಿಗೆ ಸಮೀಪವಾಗಿರುವ ನಿಜಗಲ್ಲು ದುರ್ಗದಲ್ಲಿ' ಎಂದು ಸೂಚಿಸಿದ್ದರು.

ಈ ಬಗ್ಗೆ ನಾನು ಪಾಳಯಗಾರರ ಇತಿಹಾಸದ ಬಗ್ಗೆ ಸಂಶೋಧನೆ ಮಾಡಿದವರನ್ನು ಕೇಳಿದಾಗಲೂ ಅವರು "ಯುದ್ಧ ನಡೆದದ್ದು ನಿಡಗಲ್ಲಿನಲ್ಲಿ, ನಿಡಗಲ್ಲಿನ ಕಾಮಭೂಪನ ವಿರುದ್ಧ

ಹೈದರಾಲಿಯ ಪರವಾಗಿ; 'ನಿಡಗಲ್ಲು' ಉಚ್ಚಾರಣೆಯಲ್ಲಿ 'ನಿಜಗಲ್ಲು' ಎಂದು ಅಪಭ್ರಂಶವಾಗಿದೆ" ಎಂದೇ ಸಾಧಿಸಿದರು.

ಆದರೆ ಅದು ನನಗೆ ಸಮಾಧಾನ ತರದೆ, ಸಿ. ಹಯವದನರಾಯರ 'ಮೈಸೂರು ಇತಿಹಾಸ', ಗ್ರಾಂಟ್ ಡಫ್ ಮತ್ತು ಸರ್‌ದೇಸಾಯಿಯವರು ಬರೆದಿರುವ 'ಮರಾಠಾ ಇತಿಹಾಸ', ಹೈದರಾಲಿಯ ಸಮಕಾಲೀನನಾದ ನೇಮಯ್ಯನಿಂದ ರಚಿತವಾದ 'ಹೈದರ್‌ನಾಮಾ' – ಗ್ರಂಥಗಳ ಅಧ್ಯಯನದಿಂದ 'ಯುದ್ಧ ನಡೆದದ್ದು ನಿಡಗಲ್ಲಿನಲ್ಲಿ ಅಲ್ಲ, ನಿಜಗಲ್ಲಿನಲ್ಲಿ. ಆ ಯುದ್ಧದಲ್ಲಿ ಮದಕರಿನಾಯಕ ಹೈದರಾಲಿಯ ವಿರುದ್ಧ, ಮರಾಠರ ಪರವಾಗಿ ಪ್ರತ್ಯಕ್ಷವಾಗಿ ಭಾಗವಹಿಸಿದ' ಎನ್ನುವುದು ಸ್ಪಷ್ಟವಾಯಿತು. ಇಷ್ಟೇ ಸಾಲದೆ, ಪುಣೆಯಲ್ಲಿರುವ ಮಿತ್ರರೊಬ್ಬರಿಗೆ ಪತ್ರ ಬರೆದು, ಅವರ ಮೂಲಕ 'ಪೇಶ್ವಾದಫ್ತರ್'ಗಳಲ್ಲಿ ದೊರೆಯುವ ದಾಖಲೆಗಳನ್ನು ತರಿಸಿಕೊಂಡು ಖಚಿತಮಾಡಿಕೊಂಡೆ.

ಹೀಗೆಯೇ 'ಗುತ್ತಿಯುದ್ಧದಲ್ಲಿ ಮದಕರಿನಾಯಕ ತಲೆಗಳ ಸಿಂಹಾಸನದ ಮೇಲೆ ಕುಳಿತು ರಕ್ತಸ್ನಾನ ಮಾಡಿಸಿಕೊಂಡ' ಎನ್ನುವ ಬೀಭತ್ಸ ಪ್ರಸಂಗ - ಇವೆಲ್ಲವೂ ಇತಿಹಾಸಕ್ಕೆ ದೂರವಾದ ಕಾಲ್ಪನಿಕ ವಸ್ತುಗಳು ಎನ್ನುವುದು ಆಕರಗಳ ಪರಿಶೀಲನಾನಂತರ ತಿಳಿದುಬಂತು.

ಹೀಗೆಯೇ ತಲಸ್ಪರ್ಶಿ ಅಧ್ಯಯನದಿಂದ ಮದಕರಿನಾಯಕನ ಬಗ್ಗೆ ಮತ್ತು ಆತನ ಪ್ರಬಲ ಹಗೆಯಾದ ಹೈದರಾಲಿಯ ಬಗ್ಗೆ ಕುತೂಹಲಕರವಾದ ಹಲವಾರು ಅಂಶಗಳು ಬೆಳಕಿಗೆ ಬಂದವು. ಅಷ್ಟೇ ಅಲ್ಲ, ಹೈದರಾಲಿಯ ನಿತ್ಯನಿಜಜೀವನದ ಬಗ್ಗೆ ಬೆಳಕು ಚೆಲ್ಲುವ ಸಮಕಾಲೀನ ದಾಖಲೆಗಳ ಅವಲೋಕನ ಮಾಡಿದಾಗ 'ಹೈದರಾಲಿ ದಕ್ಷಯೋಧ, ಕುಟಿಲ ಕಾರಸ್ಥಾನಿ ಎಂಬೆರಡು ವಿಷಯ ಬಿಟ್ಟರೆ ಟೀಪುವಿಗೆ ತಕ್ಕ ತಂದೆಯಲ್ಲ' ಎಂಬ ಭಾವನೆ ಬೆಳೆಯಿತು.

ಇದರಂತೆಯೇ 'ಪ್ರಧಾನಿ'ಯಾಗಿದ್ದ ಕಳ್ಳಿನರಸಪ್ಪಯ್ಯ ಚಿತ್ರದುರ್ಗಕ್ಕೆ ದ್ರೋಹಮಾಡಿದ ಎಂದು ಜನಜನಿತವಾದ ಮಾತೂ, ಪ್ರಚಾರದಲ್ಲಿರುವ ದಂತಕತೆ – ಸತ್ಯಕ್ಕೆ ಎಷ್ಟು ದೂರ ಎನ್ನುವುದೂ ಅರಿವಿಗೆ ಬಂತು.

ವ್ಯಾಸಂಗ ಮಾಡಿದ ಯಾವುದೇ ಐತಿಹಾಸಿಕ ಆಧಾರದಲ್ಲೂ 'ಕಳ್ಳಿನರಸಪ್ಪಯ್ಯ ಚಿತ್ರದುರ್ಗಕ್ಕೆ ದ್ರೋಹ ಬಗೆದ' ಎಂಬ ಮಾತಿನ ಸ್ಪಷ್ಟ ಉಲ್ಲೇಖವಿಲ್ಲ. ಅಷ್ಟೇ ಅಲ್ಲ, ಸಮಕಾಲೀನ ಇತಿಹಾಸವನ್ನು ಅವಲೋಕಿಸಿದಾಗ 'ಆತ ದ್ರೋಹ ಬಗೆದ' ಎಂದು ಹೇಳಲು ಯಾವ ಸಮಂಜಸ ಕಾರಣವೂ ಕಾಣಸಿಗುವುದಿಲ್ಲ. 'ಅದಕ್ಕೆ ಪ್ರತಿಯಾಗಿ ದುರ್ಗದ ಅರಸು ಮನೆತನದ ಮೂರು ತಲೆಮಾರಿಗೆ

ಪ್ರಧಾನಿಯಾಗಿದ್ದ' ಎಂಬ ಮಾತು ಸ್ಪಷ್ಟವಾಗುತ್ತದೆ. 'ಚಿತ್ರದುರ್ಗ ಬಖೈರಿ'ನಲ್ಲಿ 'ಪರಶುರಾಮನಾಯಕ ಪ್ರಧಾನಿಯಾಗಿದ್ದಾಗ ಕಳ್ಳಿನರಸಪ್ಪಯ್ಯ ಸಭೆಗೆ ಆಹ್ವಾನಿತನಾಗುತ್ತಿದ್ದ ಗಣ್ಯರಲ್ಲಿ ಒಬ್ಬನಾಗಿದ್ದ' ಎಂಬ ಉಲ್ಲೇಖವಿದೆ. ನೇಮಯ್ಯನಿಂದ ರಚಿತವಾದ 'ಹೈದರ್‌ನಾಮಾ' ಗ್ರಂಥದಲ್ಲಿ ಚಿತ್ರದುರ್ಗದ ಪತನಕ್ಕೆ ಕಾರಣರಾದ ತಂತ್ರಿಗಳು ಯಾರು ಯಾರು ಎಂದು ಖಚಿತವಾದ ಹೆಸರು ಮತ್ತು ಘಟನೆಯ ವಿವರಗಳಿದ್ದರೂ ಎಲ್ಲಿಯೂ 'ಕಳ್ಳಿನರಸಪ್ಪಯ್ಯ ದುರ್ಗಕ್ಕೆ ದ್ರೋಹಬಗೆದವರಲ್ಲಿ ಮುಖ್ಯ ನಾಗುವುದಿರಲಿ, ಒಬ್ಬನಾಗಿದ್ದ' ಎನ್ನುವ ಮಾತು ಬರುವುದಿಲ್ಲ. ಆದರೆ ಚಿತ್ರದುರ್ಗದ ಪತನಾನಂತರ ಹೈದರಾಲಿ 'ಕಳ್ಳಿನರಸಪ್ಪಯ್ಯ ಎಂಬಾತನಿಗೆ ದುರ್ಗದಲ್ಲಿ ಒಂದು ಅಧಿಕಾರವನ್ನು ಕೊಟ್ಟ' ಎಂಬ ಮಾತಿನ ಉಲ್ಲೇಖವಿದೆ. ಆದರೆ ಇದು 'ಆತ ದ್ರೋಹಿ' ಎಂದು ಹೇಳಲು ಆಧಾರವಾಗುವುದಿಲ್ಲ. ಈ ಬಗ್ಗೆ ವಿವರವಾಗಿ ಚರ್ಚಿಸಿ, ಸಮಕಾಲೀನರನ್ನು ಭೇಟಿಮಾಡಿ, ಅವರಿಂದ ಮುಖತಃ ಚಿತ್ರದುರ್ಗದ ಪತನದ ಬಗ್ಗೆ ವಿಷಯ ಸಂಗ್ರಹಮಾಡಿದ ವಿಲ್ಕ್ಸ್ ಅವರಾಗಲಿ, ಅವರ ಗ್ರಂಥವನ್ನೂ ಒಳಗೊಂಡಂತೆ ಉಳಿದೆಲ್ಲ ಸಮಕಾಲೀನ ಮರಾಠಿ, ಪರ್ಷಿಯನ್ ಮತ್ತು ಕನ್ನಡದ ದಾಖಲೆಗಳನ್ನು ಆಳವಾಗಿ ಅಧ್ಯಯನ ಮಾಡಿ ಮೈಸೂರಿನ ಇತಿಹಾಸವನ್ನು ರಚಿಸಿದ ಸಿ. ಹಯವದನರಾಯರಾಗಲಿ ಕಳ್ಳಿನರಸಪ್ಪಯ್ಯನ ಬಗ್ಗೆ 'ಆತ ದ್ರೋಹಿ' ಎಂಬ ಮಾತನ್ನು ಎಲ್ಲೂ ಹೇಳಿಲ್ಲ. ವಸ್ತುಸ್ಥಿತಿ ಮತ್ತು ಚಾರಿತ್ರಿಕ ಆಧಾರ ಹೀಗಿರುವಾಗ ವಿನಾಕಾರಣ ಒಬ್ಬ ನಿಷ್ಠಾವಂತ ವ್ಯಕ್ತಿಯನ್ನು 'ದ್ರೋಹಿ' ಎಂದು ಚಿತ್ರಿಸುವ ಸ್ವಾತಂತ್ರ್ಯ ತೆಗೆದುಕೊಳ್ಳದೆ, ಜನಜನಿತವಾದ ದಂತಕತೆಗಳಿಗೂ ಕುರುಡಾಗದೆ, ಎಲ್ಲವನ್ನೂ ಸಮನ್ವಯ ಮಾಡಿಕೊಂಡು, ಆ ಪಾತ್ರವನ್ನು ಒಂದು ದುರಂತ ಪಾತ್ರವಾಗಿ ಸೃಷ್ಟಿಸಿದ್ದೇನೆ. ದಂತಕತೆಗಳು ಹೇಳುವಂತೆ ಕಳ್ಳಿನರಸಪ್ಪಯ್ಯ ವಿದೂಷಕನೂ ಅಲ್ಲ, ಚಪಲಚಿತ್ತನಾದ ಅಧಿಕಾರಲಾಲಸಿಯೂ ಅಲ್ಲ; 'ದುರ್ಗದ ದ್ರೋಹಿ'ಯಂತೂ ಖಂಡಿತವಾಗಿಯೂ ಅಲ್ಲ.

ಹೀಗೆಯೇ ದುರ್ಗಕ್ಕೆ ದ್ರೋಹಿ ಎಂದು ಹೇಳಲಾದ ಜಂಪಣ್ಣನಾಯಕನ ದ್ರೋಹದ ಬಗ್ಗೆಯೂ ಯಾವ ಚಾರಿತ್ರಿಕ ಆಧಾರವೂ ಸಿಗದೆ, ಆಧಾರಗಳಲ್ಲಿ ಕಂಡಹಾಗೇ ಆ ಪಾತ್ರವನ್ನು ಚಿತ್ರಿಸಿದ್ದೇನೆ.

ಇತಿಹಾಸ ರಚನೆಯಲ್ಲಿ ಅದನ್ನು ಆಧರಿಸಿದ ಕಾದಂಬರಿ ರಚನೆಯಲ್ಲಿ ಇದೇ ಕೊನೆಯ ಮಾತು ಎಂದು ಯಾರೂ ಹೇಳಲಾರರು; ನಾನೂ ಹಾಗೆಂದು ನಂಬಿಲ್ಲ. ಆದ್ದರಿಂದ ಈ ಪಾತ್ರಗಳ ಬಗ್ಗೆ ಯಾರಾದರೂ ನಂಬಲರ್ಹವಾದ ಪ್ರಾಮಾಣಿಕ, ಐತಿಹಾಸಿಕ ದಾಖಲೆಗಳನ್ನು ತೋರಿಸಿ 'ನನ್ನ

ಕಲ್ಪನೆ ತಪ್ಪು' ಎಂದು ಸಾಬೀತು ಮಾಡುವುದಾದರೆ 'ಆ ಮಟ್ಟಿಗೆ ನಾನು ತಪ್ಪಿತಸ್ಥ' ಎಂದು ಒಪ್ಪಿಕೊಳ್ಳಲು ಸದಾ ಸಿದ್ಧವಾಗಿದ್ದೇನೆ. ಆದರೆ ಇತಿಹಾಸದಲ್ಲಿ ತಲೆ ಬುಡವೇ ಇಲ್ಲದ ಕಲ್ಪನಾಕುದುರೆಯ ಸವಾರಿ ಮಾಡುವುದು ನಾನು ತಿಳಿದಂತೆ ಐತಿಹಾಸಿಕ ಕಾದಂಬರಿಕಾರನ ಲಕ್ಷಣವಲ್ಲ. ಅಂಥ ಕೃತ್ಯ ಇತಿಹಾಸಕ್ಕೆ ಮತ್ತು ಸಮಕಾಲೀನ ಜನತೆಗೆ ಬಗೆದ ದ್ರೋಹ ಎಂದೇ ನಂಬಿದ್ದೇನೆ.

ಇತ್ತೀಚೆಗೆ ಐತಿಹಾಸಿಕ ಕಾದಂಬರಿಗಳನ್ನು ಬರೆಯುವ ಕೆಲವರಲ್ಲಿ ಅಂದಿನ ಚಾರಿತ್ರಿಕ ಘಟನೆ, ಸಾಮಾಜಿಕ ಸಂಪ್ರದಾಯ, ನೀತಿ-ನಿಯಮ, ನಂಬಿಕೆಗಳನ್ನು ನಮ್ಮ ಇಂದಿನ ಬದಲಾದ ವಿಚಾರಧಾರೆಯ ಒರೆಗಲ್ಲಿಗಿಟ್ಟು ವಿಮರ್ಶಾತ್ಮಕವಾಗಿ ಬರೆಯುವ, ಗತ ಇತಿಹಾಸದ ಮೇಲೆ ನ್ಯಾಯಾಧೀಶನಂತೆ ತೀರ್ಪುಕೊಡುವ ಪ್ರವೃತ್ತಿ ಕಂಡುಬರುತ್ತಿದೆ.

ನನ್ನ ಕೆಲವು ಐತಿಹಾಸಿಕ ಕಾದಂಬರಿಗಳು ಪ್ರಕಟವಾದಾಗ ನನ್ನ ಬಗ್ಗೆ 'ಇಂದಿನ ದೃಷ್ಟಿಯಿಂದ ನೋಡಿಲ್ಲ' ಎಂದು ಕೆಲವರು ವಿಮರ್ಶೆ ಮಾಡಿದ್ದೂ ಉಂಟು. ಆದರೆ ಕಾದಂಬರಿಕಾರ ಇತಿಹಾಸದ ನ್ಯಾಯಾಧೀಶನಲ್ಲ. 'ಇಂದಿನ ನಂಬಿಕೆ ಅಂದಿನ ಜೀವನಕ್ಕೆ ಒರೆಗಲ್ಲು' ಎನ್ನುವುದು ನಾನು ಒಪ್ಪದ ಮಾತು. ಆ ಕಾಲವನ್ನು ಅಂದಿನ ನಂಬಿಕೆ, ನಡವಳಿಕೆ, ನೀತಿ, ನಿಯಮಗಳು ಹೇಗಿದ್ದಿತೋ ಹಾಗೇ ಚಿತ್ರಿಸುವುದು ಮಾತ್ರ ನನ್ನ ಕರ್ತವ್ಯ. ಅವು ಇಂದಿನ ನಮ್ಮ ಜೀವನಕ್ಕೆ ಸರಿಹೊಂದುತ್ತದೆಯೇ-ಇಲ್ಲವೇ ಎಂದು ತೀರ್ಮಾನಿಸುವುದು ಇಂದಿನವರ ಮನೋಭಾವಕ್ಕೆ ಬಿಟ್ಟದ್ದು. ಆದರೆ 'ನನ್ನ ತಾತನ ಅಂಗಿ ನನ್ನ ಮೈಯ ಅಳತೆಗನುಗುಣವಾಗಿ, ನನ್ನ ಷೋಕಿಗೆ ತಕ್ಕಹಾಗೆ ಹೊಲೆಯಲ್ಪಟ್ಟಿಲ್ಲ' ಎಂದು ಹೇಳುವುದು ಎಂಥ ಆಭಾಸವೋ – ಆ ಬಗ್ಗೆ ಯೋಚಿಸುವುದನ್ನೂ ವಾಚಕರಿಗೇ ಬಿಟ್ಟಿದ್ದೇನೆ.

ಮೂಲ ಆಕರಗಳ ಅಧ್ಯಯನ ಬೆಳೆದು ಕಾದಂಬರಿಯ ಒಂದು ಒಟ್ಟು ಚಿತ್ರವನ್ನು ಘಟನೆ ಘಟನೆಯಾಗಿ ವಿಂಗಡಿಸಿಕೊಂಡು, ಒಂದು ಸ್ಥೂಲಚಿತ್ರವನ್ನು ನನ್ನ ಕಣ್ಣು ಮುಂದೆ ತಂದುಕೊಂಡಾಗ ಕಾದಂಬರಿ ನಾನು ಲೆಕ್ಕಹಾಕಿದ ಮುನ್ನೂರು ಪುಟದ ಮಿತಿಗೆ ಮೀರುತ್ತದೆ, ಸಾವಿರ ಪುಟದವರೆಗೂ ಹೋಗಬಹುದು ಎಂದೆನಿಸಿದಾಗ ಮೂಲಸಾಮಗ್ರಿ ಸಿದ್ಧವಾಗಿದ್ದರೂ ಬರವಣಿಗೆಗೆ ಕೈಹಾಕಲು ನನ್ನ ಮೈ ಹೆದರಿತು. ಅದಕ್ಕೆ ಕಾರಣವಿಷ್ಟೆ - ನನ್ನ ದೈಹಿಕ ಅನಾರೋಗ್ಯ.

೧೯೭೬ರಲ್ಲಿ ನನಗೆ ಹೃದಯಾಘಾತವಾದಬಳಿಕ ನಾನು ಕೈಯಿಂದ ಬರೆಯುವುದನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದೆ. ನನ್ನನ್ನು ಕಾಡುತ್ತಿದ್ದ 'ನ್ಯೂರಿಟಿಸ್' ವ್ಯಾಧಿಯಿಂದ ಬರೆಯುವಾಗ ಕೈ

ನಡುಗಿ, ನಿತ್ಯದ ಕಾಗದ-ಪತ್ರಗಳ ವ್ಯವಹಾರಕ್ಕೂ ಪರರನ್ನು ಆಶ್ರಯಿಸಿದ್ದೆ. ಹಾಗೇನಾದರೂ ಸಾಹಿತ್ಯಕವಾಗಿ ಬರೆಯಲೇಬೇಕಾಗಿ ಬಂದಾಗ ನನ್ನ ಕಿರಿಯ ಗೆಳೆಯ ಪಾಂಡವಪುರದ ನಾ. ಪ್ರಭಾಕರ್ ನನಗೆ ನೆರವಾಗುತ್ತಿದ್ದ. ಆದರೆ ಈಗ ಈ ಬೃಹತ್ಕೃತಿಯನ್ನು ಬರೆಯಬೇಕು ಎನ್ನುವ ಹೊತ್ತಿನಲ್ಲಿ ಅನಿವಾರ್ಯ ಕಾರಣಗಳಿಂದಾಗಿ ಆತನ ಸಹಾಯವೂ ದೊರಕದಂತಾಯಿತು.

ಕಾದಂಬರಿಯ ವಸ್ತು ದಿನದಿನಕ್ಕೆ ಬೆಳೆದು, ಹಗಲಿರುಳೂ ನನ್ನನ್ನು ಕಾಡುತ್ತಿತ್ತು. ಹಲವಾರು ಘಟನೆಗಳ ಚಿತ್ರ ಕಣ್ಣಮುಂದೆ ಸುಳಿದಾಡುತ್ತಿದ್ದವು. ಆ ಘಟನೆಗಳನ್ನು ನನ್ನ ಬಾಯಲ್ಲಿ ಕೇಳಿದ ಡಾ|| ಎಸ್. ಎಲ್. ಭೈರಪ್ಪನವರಂತಹ ಆತ್ಮೀಯರು, ಮನೆಯವರು, ಗೆಳೆಯರು, ಎಲ್ಲರಿಗಿಂತ ಹೆಚ್ಚಾಗಿ ಭದ್ರಾವತಿಯ ವೃದ್ಧ ಪರಶುರಾಮನಾಯಕರು 'ಆದಷ್ಟು ಬೇಗ ನಿಮ್ಮ ಭಾವನೆಗಳನ್ನು ಬರವಣಿಗೆಯಲ್ಲಿರಿಸಿ' ಎಂದು ಒತ್ತಾಯಿಸಿ, ಪ್ರೋತ್ಸಾಹಿಸುತ್ತಿದ್ದರು. ನಾನು ಈ ಕಾದಂಬರಿಯನ್ನು ಬರೆಯುವ ಸಿದ್ಧತೆಯಲ್ಲಿದ್ದೇನೆ ಎಂದು ತಿಳಿದ ಗೆಳೆಯ ಡಾ|| ಹಾ. ಮಾ. ನಾಯಕರು ಯಾವಾಗಲಾದರೊಮ್ಮೆ ಭೇಟಿಯಾದಾಗ, ದೂರವಾಣಿಯಲ್ಲಿ ಸಂಪರ್ಕಿಸಿದಾಗ 'ನಿಮ್ಮ ಕಾದಂಬರಿ ಎಲ್ಲಿಗೆ ಬಂತು?' ಎಂದು ಕೇಳುತ್ತಿದ್ದರು.

ಒಳಹೊರಗಿನ ಈ ಪ್ರೀತಿಯ ಒತ್ತಡವನ್ನು ತಡೆಯಲಾಗದೆ ಕೊನೆಗೆ ನಾನು ದೈವವೆಂದೇ ನಂಬಿದ ಶೃಂಗೇರಿಯ ಶ್ರೀಶ್ರೀಗಳವರಿಗೆ ಪತ್ರ ಬರೆದು ಅವರ ಆಶೀರ್ವಾದ ಕೋರಿದೆ. ಶ್ರೀಗುರುಗಳ ಆಶೀರ್ವಾದಾಕ್ಷತೆಗೂಡಿದ ಪತ್ರ ಬಂದ ದಿನದಿಂದಲೇ ನನ್ನಲ್ಲಿ ಆತ್ಮವಿಶ್ವಾಸ, ಹೊಸ ಶಕ್ತಿ ಮೂಡಿ, ಕಾದಂಬರಿಯನ್ನು ಕೈಯಾರೆ ಬರೆಯಲು ಆರಂಭಿಸಿದೆ. ಬರೆಯುವಾಗ ಎರಡು ಮೂರು ಬಾರಿ ಪ್ರವಾಸ ಹೋಗಬೇಕಾಗಿ ಬಂತು. ಮಧ್ಯೆ ಮಧ್ಯೆ ಆರೋಗ್ಯ ಕೆಟ್ಟು, ಒಂದೆರಡು ಬಾರಿ ನರ್ಸಿಂಗ್‌ಹೋಂನ ಮುಖವನ್ನೂ ನೋಡಬೇಕಾಗಿ ಬಂತು. ಆದರೂ ನನ್ನ ಆತ್ಮವಿಶ್ವಾಸವಾಗಲಿ, ಶಕ್ತಿಯಾಗಲಿ ಕುಂಠಿತವಾಗದೆ, ವ್ಯಾಧಿಯೂ ನನ್ನ ಕೈತಡೆಯಾಗದೆ, ಆರ್ಥಿಕ ಅಡಚಣೆಯೂ ನನ್ನ ಉತ್ಸಾಹವನ್ನು ಕುಗ್ಗಿಸದೆ ಸತತವಾಗಿ ಬರವಣಿಗೆ ಕಾರ್ಯ ಮುಗಿದು ಸುಮಾರು ನಾಲ್ಕೈದುತಿಂಗಳ ಅವಧಿಯಲ್ಲಿ ಸಾವಿರದೈನೂರು ಪುಟಗಳಷ್ಟು ದೊಡ್ಡ ಕಾದಂಬರಿ ಸಿದ್ಧವಾಯಿತು.

'ಇಷ್ಟು ದೊಡ್ಡ ಕಾದಂಬರಿಯನ್ನು ಈ ದುಬಾರಿ ಬೆಲೆಯ ದಿನಗಳಲ್ಲಿ ಒಂದೇ ಸಂಪುಟದಲ್ಲಿ ಹೇಗೆ ಹೊರತರುವುದು?' ಎಂದು ಚಿಂತಿಸುತ್ತಿದ್ದಾಗ ಗೆಳೆಯ ಹಾ. ಮಾ. ನಾಯಕ್ ಮತ್ತು ಗೆಳೆಯ ಜಿ. ಎಚ್. ಕೃಷ್ಣಮೂರ್ತಿ ಇಬ್ಬರೂ ಸಮಾಲೋಚಿಸಿ ಪುಟ ತಗ್ಗಿಸುವ, ಆದರೆ ಗ್ರಂಥದ ಅಂದ ಕೆಡದ ಮಾರ್ಗವನ್ನು ಸೂಚಿಸಿದರು. ಕಾವ್ಯಾಲಯದ ಕೃಷ್ಣಮೂರ್ತಿ, ಅವರ

ತಂದೆಯವರ ಮರಣಕಾಲದ ಬಯಕೆಯಂತೆ 'ಈ ಗ್ರಂಥವನ್ನು ನನಗೇ ಕೊಡಬೇಕು' ಎಂದು ಮುಂದೆ ಬಂದು, ಪ್ರಕಾಶನದ ಭಾರ ಹೊತ್ತರು. ದಿವಂಗತರಾದರೂ ಚಿರಸ್ಮರಣೀಯರಾದ ಕಾವ್ಯಾಲಯದ ಶ್ರೀ ಕೂಡಲೀ ಚಿದಂಬರಂ ಅವರ ಆತ್ಮೀಯತೆ, ಅಪೇಕ್ಷೆಗಳನ್ನು ಈ ಸಂದರ್ಭದಲ್ಲಿ ನಾನು ಸ್ಮರಿಸಲೇಬೇಕು. ಈ ಕೃತಿ ಅವರ ಆತ್ಮಕ್ಕೆ ತೃಪ್ತಿಯನ್ನು ತರುತ್ತದೆ ಎಂದು ನಂಬಿದ್ದೇನೆ.

ಈ ಕಾದಂಬರಿಯಲ್ಲಿ ಹಲವಾರು ಸಂದರ್ಭಗಳಲ್ಲಿ, ಸನ್ನಿವೇಶಕ್ಕೆ ಆಗತ್ಯವಾದಾಗ ಹಲವು ಜನಪದ ಗೀತೆಗಳನ್ನು ಉಪಯೋಗಿಸಿದ್ದೇನೆ. ಈ ಜನಪದ ಗೀತೆಗಳಲ್ಲಿ ಕೂಲಹಳ್ಳಿ ಲಡಾಯಿಗೆ ಸಂಬಂಧಿಸಿದ ಜನಪದ ಗೀತೆಯೊಂದನ್ನು ಬಿಟ್ಟು, ಉಳಿದವು ಸಂದರ್ಭೋಚಿತವಾಗಿ ನನ್ನಿಂದಲೇ ರಚಿತವಾದವು. ಹಾಗೆಯೇ ಕಾದಂಬರಿಯಲ್ಲಿ ಬಳಸಿರುವ ಶ್ರೀ ಉತ್ಸವಾಂಬೆಯ ಹಾಡನ್ನು, ಮೂಲಹಾಡು ತುಂಬಾ ಅಪಭ್ರಂಶಗಳಿಂದ ಕೂಡಿ, ಅರ್ಥಮಾಡಿಕೊಳ್ಳಲು ತೊಡಕಾದ್ದರಿಂದ ತಿದ್ದುವ ಸ್ವಾತಂತ್ರ್ಯವನ್ನು ತೆಗೆದುಕೊಂಡಿದ್ದೇನೆ.

ಈ ಕೃತಿಗೆ, ನನಗೆ ಬೇಕಾದ ಚಿತ್ರಗಳನ್ನು ಬರೆದುಕೊಡಲು, ಇದೀಗ ಕಲಾಪ್ರಪಂಚದಲ್ಲಿ ತನ್ನ ಸಹಜಪ್ರತಿಭೆಯಿಂದ ಪ್ರವರ್ಧಮಾನಕ್ಕೆ ಬರುತ್ತಿರುವ ಬೆಂಗಳೂರಿನ ಕಲಾವಿದ ಮಿತ್ರ ವಿ. ಆರ್. ಸಿ. ಶೇಖರ್ ತಾನಾಗಿ ಮುಂದೆ ಬಂದು, ಸ್ವತಃ ಚಿತ್ರದುರ್ಗಕ್ಕೆ ಹೋಗಿ ಈ ಕಾದಂಬರಿಯಲ್ಲಿ ಬಳಸಲಾಗಿರುವ ರೇಖಾಚಿತ್ರಗಳನ್ನೂ, ನನ್ನ ಮನಸ್ಸಿಗೆ ಒಪ್ಪುವಂತಹ ಮುಖಚಿತ್ರವನ್ನೂ ರಚಿಸಿಕೊಟ್ಟರು.

ಈ ಕಾದಂಬರಿಯನ್ನು ಇತಿಹಾಸಕ್ಕೆ ಎಳ್ಳಷ್ಟೂ ಲೋಪಬರದ ರೀತಿಯಲ್ಲಿ ಬರೆಯಲು ಅಗತ್ಯವಾದ ಆಕರಗ್ರಂಥಗಳನ್ನು ಒದಗಿಸಿದ ಮೈಸೂರಿನ ಎಪಿಗ್ರಾಫಿಕ್ ಸರ್ಕಲ್‌ನ ಡಾ. ಕೋ. ವ್ಯಾ. ರಮೇಶ್, ಶ್ರೀ ಮಾಧವ ಕಟ್ಟಿ. ಪ್ರಾಚ್ಯವಸ್ತು ಸಂಶೋಧನಾ ಇಲಾಖೆಯ ಡಾ. ಎಂ. ಎಸ್. ನಾಗರಾಜರಾವ್, ಮಿತ್ರರಾದ ಡಾ|| ಹಾ. ಮಾ. ನಾಯಕ್, ಡಾ. ಎಂ. ವಿ. ಶ್ರೀನಿವಾಸ್, ಕೂಡಲೀಮಠದ ಆಡಳಿತಾಧಿಕಾರಿಗಳಾದ ಶ್ರೀ ರಾಮನಾರಾಯಣಾವಧಾನಿಗಳು, ಮೈಸೂರಿನ ವಾರ್ತಾ ಮತ್ತು ಪ್ರಚಾರ ಇಲಾಖೆಯ ಮುಖ್ಯಾಧಿಕಾರಿಗಳಾದ ಶ್ರೀ ವಿಜಯಕುಮಾರ್, ತಮ್ಮ ಬಳಿಯಿದ್ದ ಪಾಳಯಗಾರರ ಚರಿತ್ರೆಯ ಕೈಬರಹಗ್ರಂಥ, ದಾಖಲೆಗಳು ಮತ್ತು ಈ ಕೃತಿಯಲ್ಲಿ ಬಳಸಲಾಗಿರುವ, ತಮ್ಮ ಬಳಿ ಇದ್ದ ಗಾಜಿನ ಮೇಲೆ ಬರೆಯಲಾದ ಆ ಕಾಲದ ಕಿರಿಮದಕರಿನಾಯಕನ ತ್ರಿವರ್ಣರಂಜಿತ ಚಿತ್ರವನ್ನು ಉದಾರತೆಯಿಂದ ಕೊಟ್ಟ ಭದ್ರಾವತಿಯ ಶ್ರೀ ಸಿ. ಪರಶುರಾಮನಾಯಕ್: ವಸ್ತು ಮತ್ತು ಚಿತ್ರಸಂಗ್ರಹದಲ್ಲಿ ನೆರವಾದ ಚಿತ್ರದುರ್ಗ ವಾಸಿಗಳಾದ

ಸರ್ವಶ್ರೀ ಶ್ರೀಶೈಲಾರಾಧ್ಯ, ಟಿ. ಎನ್. ಗಂಡುಗಲಿ, ಹನೂರು ಕೃಷ್ಣಮೂರ್ತಿ. ಹು. ಶ್ರೀ. ಪಾಂಡುರಂಗಜೋಯಿಸ್, ಕೆ. ವಿ. ಮಂಜುನಾಥರಾವ್, ನಿಶಾನಿ ರಾಮಣ್ಣ ಪಿ. ಎನ್. ಪುಟ್ಟಸ್ವಾಮಿ, ಎಸ್ಕೆ. ಮಧುಸೂದನ ನಾನು ಕ್ಷೇತ್ರ ಪರಿಶೀಲನೆಗೆ ಹೋದಾಗ ತೌರೂರಿನ, ಆತಿಥ್ಯ ನೀಡಿದ ಜಾನಕಲ್ಲಿನ ಗ್ರಾಮಸ್ಥರು-

ಈ ಕೃತಿರಚನೆಯ ವಿಷಯ ತಿಳಿದು ತಮ್ಮ ಉತ್ಸಾಹಪೂರಿತ ಅಭಿಮಾನವನ್ನು ವ್ಯಕ್ತಪಡಿಸಿದ ನಮ್ಮ ರಾಜ್ಯದ ವಿದ್ಯುತ್‌ಖಾತೆ ರಾಜ್ಯ ಸಚಿವರಾದ ಶ್ರೀ ಜಿ. ಎಚ್. ಅಶ್ವತ್ಥ ರೆಡ್ಡಿ; ಜಿಲ್ಲಾಧಿಕಾರಿಗಳಾದ ಶ್ರೀ ಶ. ನ. ಶಾಂತಕುಮಾರ್, 'ಮದಕರಿಬಳಗ'ದ ಮಿತ್ರರಾದ ಸರ್ವಶ್ರೀ ಹೆಚ್. ಹನುಮಂತಪ್ಪ, ಡಾ. ರಾಮಚಂದ್ರನಾಯಕ್, ಡಾ. ಬಿ. ಕೆ. ನಾಗರಾಜ್, ಸಿ. ಟಿ. ಸಿದ್ದಣ್ಣನಾಯಕ್, ನಾಗರಾಜ್ ಹಾಗೂ ಗೆಳೆಯರಾದ ಶ್ರೀ ಟಿ. ಜಿ. ರಾಧಾಕೃಷ್ಣ ಬೆಂಗಳೂರಿನ 'ರಚನಾ'ದ ಶ್ರೀ ಸಿ. ಆರ್. ರಾವ್, ನನ್ನ ಉತ್ಸಾಹ ಬತ್ತದಂತೆ ನೋಡಿಕೊಂಡ ಚಿತ್ರದುರ್ಗದ ಪತ್ರಿಕಾ ಬಳಗದ ಮಿತ್ರರು ಹಾಗೂ ಮೈಸೂರಿನ ಪತ್ರಿಕಾಕರ್ತ ಮಿತ್ರರು –

ನಾನು ಒಂದೆರಡು ಬಾರಿ ಪ್ರವಾಸ ಹೋಗಬೇಕಾಗಿ ಬಂದಾಗ ಅಗತ್ಯವಾದ ಅನುಕೂಲವನ್ನು ಒದಗಿಸಿಕೊಟ್ಟ ಮೈಸೂರು ಜಿಲ್ಲೆಯ ಪೋಲೀಸ್ ಅಧಿಕಾರಿಗಳಾಗಿದ್ದ ಸಾಹಿತ್ಯಪ್ರೇಮಿ ಶ್ರೀ ರೇವಣ್ಣಸಿದ್ದಯ್ಯ: ಆಗಾಗ್ಗೆ ಕೆಡುತ್ತಿದ್ದ ನನ್ನ ಆರೋಗ್ಯವನ್ನು ತೀರಾ ಹದಗೆಡದ ಹಾಗೆ ಎಚ್ಚರಿಕೆ ವಹಿಸಿದ ಡಾ. ಕೆ. ಜಿ. ಸುಬ್ರಹ್ಮಣ್ಯ ಭಟ್, ಬ್ರಿಗೇಡಿಯರ್ ಡಾ. ಗೋಖಲೆ, ಡಾ. ತೇಜೋನಾಥ್, ಡಾ. ಅನ್ನಪೂರ್ಣ, ಡಾ. ಕೆ. ವಿ. ರಾಜಾರಾಂ, ಮಿತ್ರರು: ಒಂದು ಸಂದಿಗ್ಧ ಸಂದರ್ಭದಲ್ಲಿ ಸ್ಥಗಿತಗೊಂಡಿದ್ದ ನನ್ನ ಬರವಣಿಗೆ ಮುಂದುವರೆಯಲು ಒತ್ತಾಯಿಸಿದ ಡಾ|| ಎಸ್. ಎಲ್. ಭೈರಪ್ಪ, ಸಹೃದಯ ಮಿತ್ರರು ಹಾಗೂ ಕಾದಂಬರಿ ಬರೆಯುವ ಹುಚ್ಚು ಉತ್ಸಾಹದಲ್ಲಿ ನಾನು ಮರೆತ ನನ್ನ ಯೋಗಕ್ಷೇಮದ ಬಗ್ಗೆ ಆಸಕ್ತಿ ವಹಿಸಿದ ನನ್ನ ಶ್ರೀಮತಿ –

ನನ್ನ ಮೇಲಣ ನಿರ್ವ್ಯಾಜ ಪ್ರೀತಿಯಿಂದ ಸ್ವಯಂ ಲೇಖಕನಾಗಿಯೂ ತನ್ನೆಲ್ಲ ಕಾರ್ಯಗಳನ್ನು ಬದಿಗಿಟ್ಟು, ಈ ಕೃತಿ ರಚನೆಯ ಆರಂಭದಿಂದ ಹಿಡಿದು ಮುದ್ರಿತ ಪ್ರತಿ ಸಿದ್ಧವಾಗುವವರೆಗೆ ತನ್ನದೇ ಕೃತಿಯೆಂಬಷ್ಟು ಆತ್ಮೀಯತೆಯಿಂದ ಈ ಕೃತಿಯ ಅಚ್ಚುಕಟ್ಟಿಗೆ ಅವಿರತವಾಗಿ ಶ್ರಮಿಸಿದ, ಕಿರಿಯ ಸಹೋದರನಂತಿರುವ ಶ್ರೀ ನಾ. ಪ್ರಭಾಕರ್ –

ಕಾದಂಬರಿಯಲ್ಲಿ ಬಳಸಬೇಕಾಗಿ ಬಂದ ಉರ್ದು ಭಾಷೆಯನ್ನು ಪರಿಷ್ಕರಿಸಿಕೊಟ್ಟ ಪಾಂಡವಪುರದ ನನ್ನ ಲೇಖಕ ಮಿತ್ರ ಶ್ರೀ ಪಿ. ಅಬ್ದುಲ್ ಸತ್ತಾರ್; ಕಲಾವಿದ ಮಿತ್ರ ಶ್ರೀ ವಿ. ಆರ್. ಸಿ.

ಶೇಖರ್: ಕರಡು ತಿದ್ದುವಲ್ಲಿ ಶ್ರಮಿಸಿದ ಶ್ರೀ ಆರ್. ಕೆ. ರೋಹಿಡೇಕರ್, ಶ್ರೀ ಬಸವಣ್ಣ; ಸುಂದರವಾಗಿ ಮುದ್ರಿಸಿಕೊಟ್ಟ ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್‌ನ ಗೆಳೆಯ ಶ್ರೀ ಜಿ. ಎಚ್. ಕೃಷ್ಣಮೂರ್ತಿ ಹಾಗೂ ಮುದ್ರಣಾಲಯದ ಕಾರ್ಮಿಕ ವರ್ಗ; ಪ್ರಕಾಶನದ ಭಾರ ಹೊತ್ತ ಕಾವ್ಯಾಲಯದ ಶ್ರೀ ಸಿ. ಕೆ. ಕೃಷ್ಣಮೂರ್ತಿ ಹಾಗೂ ಅವರ ತಾಯಿ ಶ್ರೀಮತಿ ಶೇಷಮ್ಮ ಚಿದಂಬರಂ –

- ಎಲ್ಲರಿಗೂ, ಎಲ್ಲರಿಗಿಂತ ಮಿಗಿಲಾಗಿ ನನ್ನ ಚೈತನ್ಯದ ಚಿಲುಮೆ ಬತ್ತದಂತೆ ಕಾಪಾಡಿದ ಶೃಂಗೇರಿಯ ಶ್ರೀ ಶಾರದಾಪೀಠಕ್ಕೆ ನಾನು ಋಣಿ.

ಹೀಗೆ ದೈವಸಹಾಯ, ಸನ್ಮಿತ್ರರ ಸಹಕಾರ, ಮನೆಯವರ ಆಸಕ್ತಿಯಿಂದ ಸಿದ್ಧವಾಗಿ, ಕನ್ನಡಿಗರಿಗೆ ಅರ್ಪಿತವಾಗುತ್ತಿರುವ ಈ ಬೃಹತ್ಕಾದಂಬರಿ ಕನ್ನಡಾಭಿಮಾನೀ ವಾಚಕವೃಂದಕ್ಕೆ ಒಪ್ಪಿಗೆಯಾದೀತು ಎಂದು ನಂಬುತ್ತೇನೆ.

ತ.ರಾ.ಸು.

’ಗಿರಿಕನ್ಯಕಾ’
ಮೊದಲನೇ ಮುಖ್ಯರಸ್ತೆ
ಯಾದವಗಿರಿ
ಮೈಸೂರು-೫೭೦ ೦೨೦

ದೀಪಾವಳಿ, ಶ್ರೀ ದುಂದುಭಿ ಸಂವತ್ಸರ
ನವೆಂಬರ್ ೧೬, ೧೯೮೨
ಬಿಡಾರ : ಚಿತ್ರದುರ್ಗ

ಪ್ರಕಾಶಕರ ಮಾತು

ತ.ರಾ.ಸು. ಕನ್ನಡದ ಒಬ್ಬ ಮಹಾನ್ ಕಾದಂಬರಿಕಾರರು. ತಮ್ಮ ಹಲವಾರು ಸಾಮಾಜಿಕ, ಚಾರಿತ್ರಿಕ ಮತ್ತು ಮನೋವೈಜ್ಞಾನಿಕ ಕಾದಂಬರಿಗಳಿಂದ ಕನ್ನಡ ಕಾದಂಬರೀಕ್ಷೇತ್ರವನ್ನು ಅವರು ಶ್ರೀಮಂತಗೊಳಿಸಿರುವುದಲ್ಲದೆ ಅದನ್ನು ಬೆಲೆಬಾಳುವುದಾಗಿಸಿದ್ದಾರೆ. ಚಿತ್ರದುರ್ಗದ ಇತಿಹಾಸವನ್ನು ಕುರಿತು ಅವರು ಈಗಾಗಲೇ ಬರೆದಿರುವ 'ಕಂಬನಿಯ ಕುಯಿಲು', 'ರಕ್ತರಾತ್ರಿ' ಮುಂತಾದ ಕಾದಂಬರಿಗಳು ಹಲವು ಮುದ್ರಣಗಳನ್ನು ಕಂಡು, ಅಪಾರ ಜನಪ್ರಿಯತೆ ಗಳಿಸಿವೆ. ರೋಮಾಂಚನ ಹಾಗೂ ಕುತೂಹಲಗಳನ್ನು ಹುಟ್ಟಿಸುವ ಆ ಕಾದಂಬರಿಗಳ ವರ್ಣಮಯ ಭಾಷೆ, ಚುರುಕು ಚೂಪುಶೈಲಿ, ಆಗಿಹೋದುದನ್ನು ಆಗುತ್ತಿರುವಂತೆ ನಿರೂಪಿಸುವ ಕಲೆಗಾರಿಕೆ ಅನನ್ಯವಾದವು. ಆ ಮಾಲೆಗೆ ಸೇರುವ ಅಮೂಲ್ಯರತ್ನ ಪ್ರಸ್ತುತ 'ದುರ್ಗಾಸ್ತಮಾನ.'

ಈ ಕೃತಿಯಲ್ಲಿ ಚಿತ್ರದುರ್ಗದ ಅಂತಿಮ ಅಧ್ಯಾಯ ವರ್ಣಿತವಾಗಿದೆ. ದುರ್ಗದ ಪ್ರಸಿದ್ಧ ಕೊನೆಯ ದೊರೆ ಮದಕರಿನಾಯಕನ ಜೀವನ ಹಾಗೂ ಆಳ್ವಿಕೆಗಳ ಏಳುಬೀಳುಗಳು ಇಲ್ಲಿ ಚಿತ್ತಚುಂಬಕವಾಗಿ ಚಿತ್ರಿತವಾಗಿವೆ. ಮೈನವಿರೇಳಿಸುವ ಶೈಲಿ ಹಾಗೂ ಕಣ್ಣಿಗೆ ಕಟ್ಟುವ ವರ್ಣನೆಗಳಿಂದ ಇಲ್ಲಿ ಕಡೆಯಲ್ಪಟ್ಟಿರುವ ಓಬವ್ವನಾಗತಿ, ಮದಕರಿನಾಯಕ, ಪರಶುರಾಮ ನಾಯಕ, ಹೈದರಾಲಿ, ಒನಕೆ ಓಬವ್ವ ನಮ್ಮ ಮನಸ್ಸಿನಲ್ಲಿ ಬಹುಕಾಲ ಉಳಿಯುವಂಥವರು. ಬೃಹತ್ತು ಮಹತ್ತುಗಳೆರಡನ್ನೂ ಒಳಗೊಂಡಿರುವ ಈ ಅಪೂರ್ವ ಐತಿಹಾಸಿಕ ಕೃತಿ ಆಧುನಿಕ ಕನ್ನಡದ ಶ್ರೇಷ್ಠ ಕಾದಂಬರಿಗಳಲ್ಲಿ ಒಂದು.

ಇಂಥ ಚಿರಕೃತಿಯನ್ನು ನಮ್ಮ ಪ್ರಕಾಶನ ಮಾಲೆಯಲ್ಲಿ ಪ್ರಕಟಿಸಲು ಹೃತೂರ್ವಕವಾಗಿ ಕೊಟ್ಟ ತ.ರಾ.ಸು. ಅವರಿಗೆ ನನ್ನ ನಮಸ್ಕಾರಗಳು. ತ.ರಾ.ಸು. ನನ್ನ ತಂದೆಯವರ ಆಪ್ತ ಸ್ನೇಹಿತರು ಹಾಗೂ ನಮ್ಮ ಸಂಸ್ಥೆಯ ಹಿತೈಷಿಗಳು. ಅವರದೊಂದು ಅಮೂಲ್ಯ ಪುಸ್ತಕವನ್ನು ಪ್ರಕಟಿಸಬೇಕೆಂಬ ಆಸೆ ಬಹುಕಾಲದಿಂದ ನನ್ನ ತಂದೆಯವರಿಗೆ ಮತ್ತು ನನಗೆ ಇತ್ತು. ಅದು ಈಗ ಈಡೇರಿದೆ. ಇದರಿಂದ ತೀರಿಕೊಂಡ ನನ್ನ ತಂದೆಯವರಿಗೆ ನೆಮ್ಮದಿ ಸಮಾಧಾನಗಳುಂಟಾಗುತ್ತವೆ ಎಂದು ನಾನು ತಿಳಿಯುತ್ತೇನೆ. ತ.ರಾ.ಸು. ನನ್ನ ಬಗ್ಗೆ ಇಟ್ಟಿರುವ ಪ್ರೀತಿ ಅಭಿಮಾನಗಳನ್ನೂ, ನಮ್ಮ ಸಂಸ್ಥೆಗೆ ಕೋರುವ ಹಾರೈಕೆ ಶ್ರೇಯಸ್ಸುಗಳನ್ನೂ ನಾನು ಇನ್ನೊಮ್ಮೆ ನೆನೆಯುತ್ತೇನೆ.

ನಮ್ಮ ಮಾಲೆಯ ಪುಸ್ತಕಗಳನ್ನು ಎಂದಿನಿಂದಲೂ ಮುದ್ರಿಸಿಕೊಡುತ್ತಿರುವವರು 'ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್'ನ ಶ್ರೀ ಜಿ. ಎಚ್. ರಾಮರಾವ್, ಶ್ರೀ ಜಿ. ಎಚ್. ಕೃಷ್ಣಮೂರ್ತಿ ಇಂಥ ಬೃಹತ್ ಪುಸ್ತಕದ ಮುದ್ರಣ ವಿನ್ಯಾಸವನ್ನು ತೀರ್ಮಾನಿಸಿದಲ್ಲದೆ, ಇದನ್ನು ಕೇವಲ ಅರುವತ್ತು ದಿನಗಳಲ್ಲಿ ಶೀಘ್ರವಾಗಿ- ಆದರೆ ಅಂದವಾಗಿ - ಶ್ರೀ ಕೃಷ್ಣಮೂರ್ತಿಗಳು ಮತ್ತು ಅವರ ಕಾರ್ಮಿಕವರ್ಗದವರೂ ಶ್ರಮಶ್ರದ್ಧೆಗಳಿಂದ ಮುದ್ರಿಸಿಕೊಟ್ಟಿದ್ದಾರೆ. ಅವರಿಗೆ ನಾನು ಚಿರಋಣಿ. ಈ ಪುಸ್ತಕದ ಮುದ್ರಣಪ್ರತಿಯನ್ನು ಸಿದ್ಧಮಾಡಿ, ಇದಕ್ಕಾಗಿ ಅಹರ್ನಿಶಿ ದುಡಿದ ನನ್ನ ಆಪ್ತಸ್ನೇಹಿತ ಶ್ರೀ ನಾ. ಪ್ರಭಾಕರ್ ಅವರಿಗೂ ಕರಡು ನೋಡುವಲ್ಲಿ ನೆರವಾದ ಶ್ರೀ ರಂಗರಾವ್ ರೋಹಿಡೇಕರ್ ಅವರಿಗೂ ಪುಸ್ತಕದ ಒಳಗಿನ ಹಾಗೂ ಮುಖಪುಟದ ಚಿತ್ರಗಳನ್ನು ಬರೆದುಕೊಟ್ಟ ಶ್ರೀ ವಿ. ಆರ್. ಸಿ. ಶೇಖರ್ ಅವರಿಗೂ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನನಗೆ ಅನೇಕ ಸಂದರ್ಭಗಳಲ್ಲಿ ಸೂಕ್ತಸಲಹೆ ಹಾಗೂ ನೆರವುಗಳನ್ನು ನೀಡುತ್ತಿರುವ ಡಾ|| ಹಾ. ಮಾ. ನಾಯಕ ಅವರನ್ನೂ ನಾನು ನೆನೆಯುತ್ತೇನೆ. ನನ್ನ ತಂದೆಯವರು ತೀರಿಕೊಂಡಮೇಲೆ ನನಗೆ ಹಿರಿಯರೂ ಹಿತೈಷಿಗಳೂ ಆಗಿರುವವರು ಅವರೇ ಎಂಬುದನ್ನು ನಾನು ಹೇಳಬೇಕು. ಕನ್ನಡ ಕುಲಕೋಟಿ ಈ ಕೃತಿಯನ್ನು ಆದರ ಅಭಿಮಾನಗಳಿಂದ ಬರಮಾಡಿಕೊಳ್ಳುತ್ತದೆ ಎಂದು ನಾನು ನಂಬಿದ್ದೇನೆ.

ನವೆಂಬರ್ ೧೯, ೧೯೮೨ **ಸಿ. ಕೆ. ಕೃಷ್ಣಮೂರ್ತಿ**


ಮೈಸೂರು

ದುರ್ಗಾಸ್ತಮಾನ



ಶ್ರೀ ಮದಕರಿನಾಯಕ

ಪಟ್ಟಾಭಿಷೇಕದ ಪಂಜರ



ರಂಗಯ್ಯನ ಬಾಗಿಲು (ನೀರ್ಥಡಿ ಶ್ರೀ ರಂಗನಾಥಸ್ವಾಮಿ ಮಹಾದ್ವಾರ)



೧

ಕಂಚಿನ ಕುಟ್ಟಣಿಗೆಯನ್ನು ಎದುರಿಗಿಟ್ಟುಕೊಂಡು, ವೀಳೆಯದೆಲೆಯ ನಾರನ್ನು ಬೆರಳುಗುರಿನಿಂದ ತೆಗೆಯುತ್ತಿದ್ದ ಹೊನ್ನವ್ವೆಯ ಕಣ್ಣು ದಂತದ ಕುಸುರಿಗೆಲಸ ಮಾಡಿದ, ಶ್ರೀಗಂಧದ ಮರದ ಮಂಚದ ಒಂದು ಪಾರ್ಶ್ವದಲ್ಲಿ ದಿಂಬಿಗೆ ಮೈಯಾನಿಸಿ ಕುಳಿತ ಓಬವ್ವನಾಗತಿಯನ್ನೇ ನೋಡುತ್ತಿತ್ತು.

'ಅವ್ವ ಹೇಗಿದ್ದರು –

ಈಗ ಹೇಗಾಗಿ ಹೋಗಿದ್ದಾರೆ!'

ಎಳೆಯ ವೀಳೆಯದೆಲೆಯ ನಾರನ್ನು ತೆಗೆಯುವುದನ್ನು ನಿಲ್ಲಿಸಿ, ಹಾಗೇ ಬೆರಳುಗಳನ್ನು ಒಂದೊಂದಾಗಿ ಮುಟ್ಟಿ ನೋಡಿಕೊಳ್ಳುತ್ತಾ ಲೆಕ್ಕ ಹಾಕಿದಳು.

ಆ ದಿನ –

ಒಳ್ಳೇ ಹಾಡಹಗಲಿನಲ್ಲೇ ಸೂರ್ಯ ನಂದಿಹೋದಂತೆ, ಕಸ್ತೂರಿರಂಗಪ್ಪನಾಯಕರು 'ಅವ್ವಾ' ಎಂದು, ಆ ಮಾತು ಆಡಲೂ ಆಗದಷ್ಟು ಶಕ್ತಿ ಕುಗ್ಗಿದ ಧ್ವನಿಯಲ್ಲಿ ಕೂಗಿ, ಕೈಹಿಡಿದು, ಹಾಗೇ ಕಣ್ಣು ಮುಚ್ಚಿದ ದಿನ –

'ಎಷ್ಟು ದಿನ ಆಯಿತು ?'

ನಾಯಕರ ಮಂಚದ ಪಕ್ಕದಲ್ಲೇ ಇದ್ದ ಪಂಡಿತರು, ನಾಯಕರ ಕೈಹಿಡಿದು ನಾಡಿ ನೋಡಿ-

'ತಾಯಿ, ನಮ್ಮ ಪಾಲಿಗಿನ್ನು ನಾಯಕರಿಲ್ಲ'

- ಎಂದು ಹೇಳಿದ ದಿನ –

ಆ ಮಾತು ಕೇಳಿ 'ಮಗಾಽ....' ಎಂದು ಓಬವ್ವನಾಗತಿಯೂ, ಅರಮನೆಯೇ ಕಂಬನಿಗರೆಯುವಂಥ ಆರ್ತಧ್ವನಿಯಲ್ಲಿ ಚೀರಿ, ಮಗನ ಮೈಯ ಮೇಲೆ ಕುಸಿದುಬಿದ್ದ ದಿನ –

ಆ ದಿನ ಅರಮನೆ ಅಳುವಿನ ಮಡುವಾಯಿತು. ಅತ್ತವರೆಷ್ಟು ಜನ; ಅಳಲಾಗದೆ ಕಣ್ಣೀರಿಟ್ಟವರೆಷ್ಟು ಜನ; ಅತ್ತತ್ತು ಕುಸಿದು ಬಿದ್ದವರೆಷ್ಟು ಜನ; ಎಷ್ಟು ನೂರು ಜನವೋ ಲೆಕ್ಕವಿಟ್ಟವರು ಯಾರು ?

ದುಃಖದ ತಿದಿಯೊತ್ತಿದಂತೆ ನಗಾರಿ ಸದ್ದುಮಾಡಿ, ಎಲ್ಲೆಲ್ಲೋ ಕಹಳೆಗಳು ಚೀರಿ, ದುರ್ಗದ ಜನವೆಲ್ಲಾ ಗುಡಿಸಿ ಗುಪ್ಪೆ ಹಾಕಿದಂತೆ ಅರಮನೆಯ ಬಯಲಿನ ಸುತ್ತ ಸೇರಿ, 'ನಮ್ಮನ್ನೆಲ್ಲಾ ತಬ್ಬಲಿಗಳನ್ನಾಗಿ ಮಾಡಿದೆಯಾ, ತಂದೆ' ಎಂದು ಮುಂಗೈಗಳಿಂದ ಕಣ್ಣುಜ್ಜಿಕೊಳ್ಳುತ್ತಾ ಅತ್ತ ದಿನ-

ಕಡಿದ ತಲೆಗೆ ಎರಡು ವರಹ ತೆಗೆದುಕೊಂಡು, ರಕ್ತದಲ್ಲಿ ಮಜ್ಜನ ಮಾಡಿ ಕೇಕೆಹಾಕುವ ಬೇಡಪಡೆಯವರೂ-

'ಅವ್ವಾ - ಕೆಟ್ಟೆವಲ್ಲೇ'

- ಎಂದು ಎದೆ ಘಟ್ಟಿಸಿಕೊಳ್ಳುತ್ತಾ, ಬಾಯಿ ಬಡಿದುಕೊಂಡ ದಿನ –

ಮನೆಯ ಮುಂದಿನ ಮಾವಿನೆಲೆಯ ತೋರಣವೂ ಕಣ್ಣೂರಿಯಾಗಿ, ಅದನ್ನು ಕಿತ್ತು, ಮನೆ ಮುಂದೆ ಹಾಕಿದ ರಂಗೋಲೆಗಳನ್ನೆಲ್ಲಾ ಕಾಲಿನಿಂದ ಒರೆಸಿ, ಎಲ್ಲರನ್ನೂ ಹುಟ್ಟಿಸಿದ ಭಗವಂತನನ್ನೇ ದುರ್ಗದ ಹೆಂಗಸರು ಶಪಿಸಿದ ದಿನ –

ಗಿಜಿಗಿಜಿಗುಡುತ್ತಿದ್ದ ದುರ್ಗ ಉಸುರುಡುಗಿದಂತೆ ನಿಶ್ಯಬ್ದವಾಗಿ ಹೋದ ದಿನ –

ಅರಮನೆಯ ಕಣ್ಣನ್ನೇ ಕತ್ತಲಾಗಿಸಿ, ಮಂಚದ ಮೇಲೆ ಮಲಗಿದ ಮೈ ಹೂವಿನ ಬೆಟ್ಟವಾಗಿ, ಹೊತ್ತವರೂ ಕುಗ್ಗುತ್ತಾ, ಕುಸಿಯುತ್ತಾ, ಕಣ್ಣೀರಿಡುತ್ತಾ, ಕಸ್ತೂರಿರಂಗಪ್ಪ ನಾಯಕರ ಶವವನ್ನು ರಾಜಮನೆತನದವರ ಮಸಣಕ್ಕೆ ಸಾಗಿಸಿದ ಕೆಟ್ಟ ಹೊತ್ತಿನಲ್ಲಿ ಸೂರ್ಯ ಹುಟ್ಟಿದ ಆ ದುರ್ದಿನ –

'ಎಷ್ಟು ದಿನವಾಯಿತು ?'

ಆ ದಿನ —

ತದಿಗೆಯೋ, ಬಿದಿಗೆಯೋ ಎಂಥದೋ ನಕ್ಷತ್ರ- ಹುಟ್ಟಿದ ದಿನದಂತೆಯೇ ಸತ್ತ ದಿನವೂ ಜೋಯಿಸರು ಪಂಚಾಗ ನೋಡಿ –

'ದಿನ, ನಕ್ಷತ್ರ ಒಳ್ಳೆಯದು. ಏನೂ ಯಾರಿಗೂ ಕೆಡಕಿಲ್ಲ'

- ಎಂದಾಗ, ಆ ಮಾತು ಕೇಳಿ –

'ಛಿ, ನಿನ್ನ ಬಾಯಿಗಿಷ್ಟು ಬೆಂಕಿ ಹಾಕ'

- ಎಂದು ತಾನೇ ಜೋಯಿಸರನ್ನು ಶಪಿಸಿದ ದಿನ –

'ಎಷ್ಟು ದಿನವಾಯಿತು ?'

- ಬೆರಳ ತುದಿ ಮುಟ್ಟಿ ನೋಡಿಕೊಳ್ಳುತ್ತಲೇ ಲೆಕ್ಕಹಾಕಿದಳು ಹೊನ್ನವ್ವ.

'ಹನ್ನೆರಡೋ, ಹದಿಮೂರೋ ದಿನಗಳಾಗಿರಬೇಕು.'

ಆ ದಿನ –

ಗುರುವಾರ.

'ಗುರುವಾರ ಗುರುವಾರಕ್ಕೆಂಟು - ಮೇಲೆ ಐದು. ಹೂ - ಹದಿಮೂರು ದಿನ.'

ತಿಂಗಳುಗಳಲ್ಲ, ವರ್ಷಗಳಲ್ಲ, ಬರೀ ಹದಿಮೂರು ದಿನಗಳು. ಅಷ್ಟರಲ್ಲಿ –

'ಅವ್ವ - ಹೇಗಿದ್ದವರು, ಹೇಗಾಗಿ ಹೋದರು.'

ನಾಯಕರು ಹೋದ ಮೂರು ದಿನ, ಅನ್ನ ನೀರು ಮುಟ್ಟಿರಲಿಲ್ಲ. ಮಗ ಹೋದ ದಿನ ಸ್ನಾನ ಮಾಡಿ ಬಂದು ಮಂಚದ ಮೇಲೆ ಮುಸುಕಿಟ್ಟು ಮಲಗಿದಾಕೆ 'ಇದು ಬೇಕು', 'ಇದು ಬೇಡ' ಎಂದು ಕೇಳಿರಲಿಲ್ಲ. 'ಅದು ಹೇಗೆ ಮಾಡಬೇಕು, ಇದೇನು ಮಾಡಬೇಕು?' ಎಂದು ಕೇಳಿದವರಿಗೆ, 'ಅರಮನೆಯಲ್ಲಿ ಹಿರೀಕರು ಬೇರೆ ಯಾರೂ ಇಲ್ಲವೇ? ಅವರನ್ನು ಕೇಳಿ' ಎಂದು ಮಗನೊಂದಿಗೆ ಪ್ರಪಂಚವನ್ನೇ ಕಳೆದುಕೊಂಡವರಂತೆ ಬರಿಗೈಯಾಡಿಸಿ ಹೇಳಿಕಳಿಸಿದ್ದರು.

ಮೂರು ದಿನ ಹಾಗೆ –

ನಾಲ್ಕನೆಯ ದಿನ ತಾವೇ ಮೇಲಕ್ಕೆದ್ದು –

'ನನ್ನ ಮಗ ಪುಣ್ಯವಂತ, ಕಣ್ಣೀರಿಡುತ್ತಾ ಸಹಗಮನಕ್ಕೆ ಹೋಗೋ ಸೊಸೆಯರನ್ನು ನೋಡುವ ಕಷ್ಟವನ್ನು ಕೊಡದೆ, ತನ್ನ ಹೆಂಡಿರ ಕೆಲಸ ತಾನೇ ಮಾಡಿಹೋದ'

ಎಂದು ತಮಗೆ ತಾವೇ ಸಮಾಧಾನ ಹೇಳಿಕೊಂಡು –

'ಕುಡಿಯಲಿಕ್ಕೆ ಒಂದು ಬಟ್ಟಲು ನೀರು ಕೊಡು'

ಎಂದು ಹೇಳಿ, ಅಷ್ಟು ದಿನ ಸತ್ತಂತಿದ್ದ ತನ್ನನ್ನು ಬದುಕಿಸಿದ್ದರು.

ನಾಗತಿ ಆ ಮಾತಾಡಿದಾಗ, 'ಅಬ್ಬಾ - ಇಷ್ಟಕ್ಕೇ ಈ ಬೆಂಕಿ ತಣ್ಣಗಾಯಿತಲ್ಲ' ಎಂದು ಸಮಾಧಾನದ ನಿಟ್ಟುಸಿರಿಟ್ಟಿದ್ದಳು, ಹೊನ್ನವ್ವ. ಹೊಸ ಜೀವ ಬಂದಂತೆ, ಆಕೆ ಹೇಳಿದ್ದನ್ನೆಲ್ಲ ಮಾಡಿದಳು, ಕೇಳಿದ್ದನ್ನೆಲ್ಲಾ ತಂದುಕೊಟ್ಟಳು.

ಬಂದು ಹೋಗುವವರ ಜೊತೆ ಆಕೆ ಒಂದೆರಡು ಮಾತಾಡಿದಾಗ –

'ಸದ್ಯ, ಅವ್ವ ಮತ್ತೆ ಮೊದಲಿನ ಹಾಗಾದರು'

- ಎಂದುಕೊಂಡಿದ್ದಳು, ಹೊನ್ನವ್ವ.

ಓಬವ್ವನಾಗತಿ ನೀರು ಕುಡಿದಿದ್ದಳು. ಊಟ ಮಾಡಿದ್ದಳು, ಬಂದವರೊಂದಿಗೆ ಮಾತನಾಡಿದ್ದಳು - ಅದೆಲ್ಲಾ ಸರಿಯೇ - ಆದರೆ ನಾಗತಿ ಮಾತ್ರ ಹೊನ್ನವ್ವ ಊಹಿಸಿದ ಹಾಗೆ 'ಮೊದಲಿದ್ದ ಹಾಗೆ' ಆಗಿರಲಿಲ್ಲ.

ಆಗ –

ಹದಿಮೂರು ದಿನಗಳ ಕೆಳಗೆ –

ಓಬವ್ವನಾಗತಿ, ನಿಜಕ್ಕೂ - ಓಬವ್ವನಾಗತಿ.

ಈಗ –

ಓಬವ್ವ ನಾಗತಿಯೇ – ಆದರೆ ಹಕ್ಕಿ ಹಾರಿಹೋದ ಪಂಜರ.

ಅವರಿಗೀಗ ವಯಸ್ಸೆಷ್ಟು? ತನ್ನಷ್ಟೇ, ಅಥವಾ ಒಂದೆರಡು ವರ್ಷಕ್ಕೆ ದೊಡ್ಡವರೋ. ಅವರು ದುರ್ಗದ ಹಿರಿಯ ಮದಕರಿನಾಯಕರನ್ನು ಮದುವೆಯಾಗಿ, ಗಂಡನ ಮನೆಗೆ ಹೋಗುವ ಮಗಳೊಂದಿಗೆ, ಆಕೆಯ ಊಳಿಗಕ್ಕೆ ತನ್ನನ್ನು ಕಳಿಸುವ ಮಾತನ್ನು ತನ್ನ ತಂದೆಯಾಡಿ, 'ನಾನು ಮನೆ ಬಿಟ್ಟು ಹೋಗೋಲ್ಲ' ಎಂದಾಗ, ತನ್ನ ತಂದೆ 'ಹತ್ತು ವರ್ಷದ ಘಠವಾಣಿ. ಪುಣ್ಯವಿದ್ದರೆ ಈ ವಯಸ್ಸಿಗೆ ಮದುವೆಯಾಗಿ ಗಂಡನ ಮನೆಗೆ ಹೋಗಬೇಕಾಗಿತ್ತು. ಅಂಥೋಳು ಅರಸರ ಮಗಳ ಜತೆ ಹೋಗು ಎಂದರೆ ನಾಚಿಕೆ ಬಿಟ್ಟು ಅಳುತ್ತೀಯಾ' - ಎಂದು ಗದರಿ, ಆನೆಗೊಂದಿಯಿಂದ ಓಬವ್ವನಾಗತಿಯೊಂದಿಗೆ ತನ್ನನ್ನು ಕಳಿಸಿದ ನೆನಪಿತ್ತು, ಹೊನ್ನವ್ವಗೆ. ಆಗ ತನಗೆ ಹತ್ತು ವರ್ಷ, ಆಮೇಲೆ ಎಷ್ಟು ವರ್ಷವಾಯಿತೋ, ಲೆಕ್ಕ ಇಟ್ಟವರು ಯಾರು? ನಾಗತಿಗೆ ಅರುವತ್ತೋ, ಎಪ್ಪತ್ತೋ ಎಂದು ಮಗ ಕಸ್ತೂರಿರಂಗಪ್ಪನಾಯಕರು ಪಟ್ಟಕ್ಕೆ ಬಂದಾಗ ಯಾರೋ ಆಡಿದ್ದನ್ನು ಕೇಳಿ, ತನಗೂ ಅಷ್ಟು ವಯಸ್ಸಾಗಿದೆ ಎಂದುಕೊಂಡಿದ್ದಳು. ಒಂದೊಂದು ಸಲ ವಯಸ್ಸಿನ ನೆನಪಾದಾಗ 'ಅಬ್ಬಾ- ಅಷ್ಟು ವರ್ಷವಾಯಿತೇ ?' ಎಂದು ಆಶ್ಚರ್ಯಪಟ್ಟಿದ್ದಳು.

ಕಸ್ತೂರಿರಂಗಪ್ಪನಾಯಕರು ಪಟ್ಟಕ್ಕೆ ಬಂದಾಗ ನಾಗತಿಯವರಿಗೆ ಎಪ್ಪತ್ತಾಗಿದ್ದರೆ, ಈಗ - 'ಆರು ವರ್ಷವಷ್ಟೇ ಅವರು ಆಳಿದ್ದು' ಎಂದು ಕೇಳಿ, 'ಅವ್ವನವರಿಗೀಗ ಎಪ್ಪತ್ತಾರಿರಬೇಕು' ಎಂದುಕೊಂಡಿದ್ದಳು.

ಅಷ್ಟು ವರ್ಷವಾಗಿತ್ತು - ಓಬವ್ವನಾಗತಿಯವರಿಗೆ.

ಅಷ್ಟು ವರ್ಷದ ವಯಸ್ಸಿನಲ್ಲಿ ನಾಗತಿ ಎಷ್ಟೋ ಕಷ್ಟಪಟ್ಟಿದ್ದರು, ಸುಖ ಕಂಡಿದ್ದರು. ಮಹಾರಾಣಿಯಾಗಿ ಸಿಂಹಾಸನದ ಮೇಲೆ ಕುಳಿತು ಮೆರೆದರು, ಅಂಬಾರಿ ಆನೆಯ ಮೇಲೆ, ಬೆಳ್ಳಿಯ ಪಲ್ಲಕ್ಕಿಯಲ್ಲಿ, ದಂತದ ಮೇನೆಯಲ್ಲಿ ಕುಳಿತು ಮಹಾಲಕ್ಷ್ಮಿಯ ಹಾಗೆ ಮೆರೆದರು. ಅಷ್ಟು ವೈಭವದಿಂದ ಮೆರೆಸಿದ ಗಂಡ, ಮಾಯಕೊಂಡದ ಮಟ್ಟಿಯ ಮೇಲೆ ಅಂಬಾರಿಯಲ್ಲೇ ಕುಳಿತು ಹೋರಾಡುತ್ತಾ ಅಸುನೀಗಿದಾಗ, ಹತ್ತು ದಿನ ಅತ್ತು, ಹಣೆಯ ಮೇಲಿನ ಕುಂಕುಮ ಒರೆಸಿಕೊಂಡು, ಮಗ ದೊರೆಯಾದ ಸಂತೋಷದಲ್ಲಿ, ಆ ದುಃಖವನ್ನೆಲ್ಲಾ ಮರೆತು ಓಡಾಡಿದರು.

ಆಗೇನೂ ಹೀಗಾಗಿರಲಿಲ್ಲ.

ಗಂಡನ ಪ್ರಾಣವನ್ನು ಬಲಿ ತೆಗೆದುಕೊಂಡ ಹರಪನಹಳ್ಳಿಯ ನಾಯಕನನ್ನು ಮಗ ಸೋಲಿಸುವವರೆಗೂ ಹಾಲು ಮುಟ್ಟುವುದಿಲ್ಲ ಎಂದು ಹಟತೊಟ್ಟು, 'ಆನೆಗೊಂದಿರಾಯರು ಮಗಳಿಗೆ ಗಂಡೋಬವ್ವ ಎಂದು ಹೆಸರಿಟ್ಟಿದ್ದು ಸಾರ್ಥಕವಾಯಿತು' ಎಂದೆನಿಸಿಕೊಂಡಿದ್ದರು. 'ವಯಸ್ಸಿನದೇನು ಹಂಗು' ಎನ್ನುವಂತೆ, ಕಾಲವನ್ನು ಕಾಲಿನಲ್ಲಿ ಮೆಟ್ಟಿ ಓಡಾಡಿದ್ದರು.

ಹಾಗಿದ್ದ ನಾಗತಿ –

ಈಗ ಹೇಗಾಗಿ ಹೋಗಿದ್ದಾರೆ ?!

ಈಗ –

ಮಗ ಹೋದ ಹದಿಮೂರು ದಿನಕ್ಕೆ, ತಮಗಾದ ವಯಸ್ಸಿನ ಭಾರವನ್ನು ಹೊರಲಾಗದೆ ಕುಗ್ಗಿ ಕುಸಿದಂತೆ ಕಾಣುತ್ತಿದ್ದಾರೆ. ಇಷ್ಟು ದಿನ ಕೊಟ್ಟರೂ ಬೇಡವೆನ್ನುತ್ತಿದ್ದ ಚಿನ್ನದ ಹಿಡಿಕೆಯ ದಂತದ ಕೋಲನ್ನು 'ಕೊಡು' ಎಂದು ಕೇಳಿ ತೆಗೆದುಕೊಳ್ಳುತ್ತಾರೆ. ಕೋಲು ಹಿಡಿದರೂ, ಹತ್ತು ಹೆಜ್ಜೆಯಷ್ಟೇ ನಡೆದರೂ, ಉಸಿರು ಹತ್ತಿ ಬಂದವರಂತೆ, ಹತ್ತಿರ ಕುಳಿತುಕೊಳ್ಳಲು ಏನಾದರೂ ಆಸರೆ ಇದೆಯೇನೋ ಎಂದು ನೋಡುತ್ತಾರೆ; ಒಂದು ಕೈ ಕೋಲನ್ನು ನೆಲಕ್ಕೆ ಒತ್ತಿಹಿಡಿದಿದ್ದರೂ, ಇನ್ನೊಂದು ಕೈ ಬೇರೊಂದು ಆಸರೆಯನ್ನು ಹುಡುಕಿ ತಡಕಾಡು ತದೆ. ಓಡಾಡದೆ ಕುಳಿತಿದ್ದರೂ 'ಏಕೋ ಬಾಯಾರಿಕೆ, ಅಷ್ಟು ನೀರು ಕೊಡು' ಎಂದು ಕೇಳುತ್ತಾರೆ. ಕೊಟ್ಟ ನೀರನ್ನು ಕುಡಿಯುವುದನ್ನೂ ಮರೆತು ಬೇರೇನೋ ಹೇಳುತ್ತಾರೆ.

ಅಳುವಿಲ್ಲ, ಕಣ್ಣೀರಿಲ್ಲ, ನಿಟ್ಟುಸಿರಿಲ್ಲ –

ಎಂಥ ದುಃಖ ಇದು !

ಹೆಮ್ಮರವನ್ನು ಒಳಗೇ ಕೊರೆದು ಗೆದ್ದಲುಗೂಡಾಗಿ ಮಾಡುವಂಥ ದುಃಖ. ದುಃಖವನ್ನೇ ಕರಗಿಸಿ ಎರಕಹೊಯ್ದು ನಿರ್ಮಿಸಿದ ಹೆಣ್ಣುಗೊಂಬೆ - ನಾಗತಿ.

ಎಂಥ ವಿಚಿತ್ರ ದುಃಖ ಇದು –

ಆಕೆ ಬಾಯಿಬಿಟ್ಟು ಹೇಳದ –

ತಾನು ಕಣ್ಣಿನಿಂದ ನೋಡಲೂ ಆಗದ –

ಅಷ್ಟು ದೂರಕ್ಕೂ ಕುಲುಮೆಯ ಉರಿಯಂತೆ ಕುದಿಕಾವು ಮುಟ್ಟಿಸುವ ದುಃಖ.

'ಇಷ್ಟು ದುಃಖವನ್ನು ನನ್ನವ್ವ ಹೇಗೆ ತಡೆದುಕೊಂಡಿದ್ದಾಳೆ? ದಿನವೂ ಹೂಪೂಜೆ ಮಾಡಿಸಿಕೊಳ್ಳುವ ಉಚ್ಚಂಗಮ್ಮ ಇನ್ನೆಂಥ ಕಲ್ಲುಮನಸ್ಸೇ ನಿನ್ನದು. ಈ ತಾಯಿಗಿಷ್ಟು ದುಃಖವನ್ನೇಕೆ ಕೊಟ್ಟೆ ?'

- ಎಂದು ನಾಗತಿಯನ್ನು ನೋಡುತ್ತಾ, ಓ ಕೊಡದ ಛಾವಣಿಯತ್ತ ಕಣ್ಣು ತಿರುಗಿಸಿ ನೋಡಿದಳು, ಹೊನ್ನವ್ವ. ನೋಡನೋಡುತ್ತಾ, ಅವಳ ಕಣ್ಣಿನಿಂದ ನೀರು ಹರಿಯಿತು. ಹರಿವ ಕಣ್ಣೀರು ಎದೆ ತುಂಬಿದ ದುಃಖದ ತೂಬನ್ನು ಕಿತ್ತು, ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು, ಹೊನ್ನವ್ವ.

ಆ ಧ್ವನಿಯನ್ನು ಕೇಳಿ ಓಬವ್ವನಾಗತಿ ಹೊನ್ನವ್ವೆಯತ್ತ ತಿರುಗಿ ನೋಡಿದರು. ತನ್ನನ್ನು ಕಂಡು ಅಳುತ್ತಿರುವ ಆಕೆಗೆ ಸಮಾಧಾನದ ಎರಡು ಮಾತು ಹೇಳಬೇಕು ಎನಿಸಿತು. ಆದರೆ ಯಾರಿಗೆ ಯಾರು ಏನು ಹೇಳುವುದು? ಏನು ಹೇಳಿ ತಾನೆ ಉಪಯೋಗವೇನು? ಸಂತೈಸಿದರೆ ದುಃಖಕ್ಕೆ ಬೆನ್ನು ತಟ್ಟಿದಂತಾಗುತ್ತದೆ. ಇಲ್ಲದಿದ್ದರೆ ಎರಡು ಹನಿ ಕಣ್ಣೀರಾಗಿ, ಹೃದಯದಲ್ಲೇ ಇಂಗಿಹೋಗುತ್ತದೆ ಎನ್ನುವುದನ್ನು ಅನುಭವದಿಂದ ಅರಿತ ಓಬವ್ವನಾಗತಿ, ಅಷ್ಟು ಹೊತ್ತು ಸುಮ್ಮನಿದ್ದು ಬಳಿಕ –

"ಹೊನ್ನವ್ವ – ಈಗ ಆದದೆಲ್ಲಾ ಆಗಿಹೋಯಿತು. ಆಗಬಾರದ್ದೂ ಆಯಿತು. ಇನ್ನು ನಾವು ಅತ್ತರೆಷ್ಟು ನಕ್ಕರೆಷ್ಟು ಬಿಡು" - ಎಂದರು.

"ನನ್ನ ದುಃಖ ಏನವ್ವಾ, ಈ ವಯಸ್ಸಿನಲ್ಲಿ ನಿಮಗಿಂಥ ದುಃಖ...."

- ಹೊನ್ನವ್ವೆ ಏನೋ ಹೇಳಹೋದಳು. ಆದರೆ ಆ ಮಾತನ್ನು ನಾಗತಿ ಮಧ್ಯದಲ್ಲಿಯೇ ತಡೆದು –

"ದುಃಖಕ್ಕೂ ವಯಸ್ಸಿಗೂ ಏನು ಸಂಬಂಧ, ಹೊನ್ನವ್ವ, ಪ್ರಾಯ ನೋಡಿಕೊಂಡು ದುಃಖ ಬರುವುದಿಲ್ಲ. ಆದರೂ ಹೆಣ್ಣಾಗಿ ಇಷ್ಟು ವರ್ಷ ಬದುಕಬಾರದು. ನೂರು ವರ್ಷ ಬದುಕು ಎಂದು ಹರಸುವ ಜನಕ್ಕೆ ಬುದ್ಧಿ ಇಲ್ಲ. ಆ ವಯಸ್ಸಿಗೆ ಎಷ್ಟು ಬಗೆಯ ದುಃಖದ ಬೇಗೆ - ಅದರಲ್ಲೂ ಹೆಂಗಸಿಗೆ

- ಬಡಿಯುತ್ತದೆ ಎಂದು ಗೊತ್ತಿದ್ದರೆ ಹಾಗೆ ಹರಸುತ್ತಿರಲಿಲ್ಲ. ನಗುವ ದಿನ ಇನ್ನೂ ಅಷ್ಟು ಇರುವಾಗಲೇ ಶಿವಪಾದ ಸೇರು ಎನ್ನುತ್ತಿದ್ದರು. ಈಗ ಅದೆಲ್ಲಾ ಅಂದುಕೊಂಡು ಏನು ಫಲ...."

- ಎಂದು ನಿಟ್ಟುಸಿರಬಿಟ್ಟು –

"ಮಾಡೋ ಕೆಲಸ ಬೆಟ್ಟದಷ್ಟಿದೆ. ಈ ಹೊತ್ತಿಗೆ ಬರುತ್ತೇನೆ ಎಂದಿದ್ದರು, ನರಸಪ್ಪಯ್ಯನವರು. ಬಂದಿದ್ದಾರೇನೋ ಹೋಗಿ ನೋಡು" - ಎಂದರು.

"ಆಯಿತವ್ವ, ನೋಡಿಬರುತ್ತೇನೆ. ತಾಂಬೂಲ...."

"ಈಗದು ಬೇಡ, ನಡೆಯಬೇಕಾದ ಕೆಲಸ ನಡೆಯಲಿ"

- ಎಂದಳು ಓಬವ್ವನಾಗತಿ.

ಆಕೆಯ ಮಾತಿನಂತೆ ಹೊನ್ನವ್ವೆ ಪ್ರಧಾನಿ ನರಸಪ್ಪಯ್ಯನವರು ಬಂದಿದ್ದಾರೇನೋ ಎಂದು ನೋಡಲು ಹೋದಳು.

ಆಕೆ ಹೋದ ದಿಕ್ಕನ್ನೇ ದಿಟ್ಟಿಸುತ್ತಾ, ಓಬವ್ವನಾಗತಿ, ತನಗೆ ತಾನೇ ಹೇಳಿಕೊಂಡರು-

'ಯಾರಿಗೆ ಯಾರು ಅಳಬೇಕೋ, ಯಾರಿಗೆ ಯಾರು ಸಂತೈಸಬೇಕೋ. ಅಂತೂ ಹೆಣ್ಣಾಗಿ ಹುಟ್ಟೋದೇ ಕಷ್ಟಪಡಲಿಕ್ಕೆ, ಕಣ್ಣೀರಿಡಲಿಕ್ಕೆ. ವಿಧಿ ಹೆಣ್ಣಿನ ಹಣೇಲಿ ಅದೊಂದನ್ನೇ ಬರೆದಿರೋದು.'

೨

ಹೊರಗೆ –

ಆಷಾಢಮಾಸದ ಆಕಾಶ, ಅದರ ಉದ್ದಗಲಕ್ಕೂ ಹಿಟ್ಟುಮೋಡ ಹರಡಿ ನಿಸ್ತೇಜವಾಗಿತ್ತು. ಮಲೆನಾಡಿನ ಮಲೆಗಳಿಗೆ ರುದ್ರಾಭಿಷೇಕ ಮಾಡಿಬಂದ ಕಾರ್ಮೋಡಗಳು, ದುರ್ಗದ ಬೆಟ್ಟ ಸಾಲಿಗೆ ಬರುವ ವೇಳೆಗೆ ತುಂಡು ಹೊಗೆಮೋಡವಾಗಿ, ಆಗೊಮ್ಮೆ-ಈಗೊಮ್ಮೆ ಅತ್ತತ್ತು ಬಸವಳಿದವರ ಕಣ್ಣಲ್ಲಿ ಯಾವಾಗಲೋ ಒಮ್ಮೆ ಒಸರುವ ಕಣ್ಣೀರಿನಂಥ ಜಿನುಗು ಮಳೆಕರೆದು, ಅಷ್ಟಕ್ಕೇ ಶಕ್ತಿ ಕಳೆದುಕೊಂಡಂತೆ, ಅಲ್ಲಲ್ಲಿ ತೇಲಾಡುತ್ತಿದ್ದವು. ಅರಸರ ಅಧಿಕಾರ ತಪ್ಪಿದಾಗ ಸೊಕ್ಕಿ ಮೆರೆವ ಆಳಿನಂತೆ ಭೋರ್ಗಾಳಿ, ಬೆಟ್ಟದ ಸಂದುಸಂದಿನಿಂದಲೂ ಬೆಟ್ಟವನ್ನೇ ಅಲುಗಾಡಿಸುವಷ್ಟು ರಭಸವಾಗಿ ಬೀಸುತ್ತಿತ್ತು. ಚೈತ್ರ-ವೈಶಾಖ ಮಾಸಗಳಲ್ಲಿ ಬಿಸಿಯುಗುಳುತ್ತಿದ್ದ ಬಂಡೆಗಲ್ಲುಗಳೂ, ಈಗ ತಾವೂ ತಣ್ಣಗಾಗಿ, ಮೈಕೊರೆವ ಕಂಪನ್ನು ಹೊರಸೂಸುತ್ತಿವೆ. ಸೂರ್ಯನ ಬೆಳಕು ಕುಗ್ಗಿ ಹೋದ ಬೆಳಕಿನಲ್ಲಿ, ಬೆಟ್ಟದ ಗವಿಗಳೂ ಚಳಿಯ ಮಂಜುಗಣ್ಣಿನಂತಿವೆ, ಬರಲಿರುವ ಸಾಲುಹಬ್ಬದ ದಿನಗಳಿಗಾಗಿ ಸುಣ್ಣ ಬಣ್ಣದ ಕಾರಣೆ ಮಾಡಿಸಿಕೊಂಡ ಗುಡಿ, ಗೋಪುರಗಳು, ಅರಮನೆ,

ಗುರುಮನೆಗಳು, ಉಯ್ಯಾಲೆಯ ಕಂಬ, ಗಾಳಿಮಂಟಪಗಳು ಕೊನೆಗೆ ಹಸಿರಾಗಿ ಕಾಣುವ ಗಿಡಮರಗಳೂ ತಮ್ಮ ಬಣ್ಣದ ಕಾಂತಿಯನ್ನು ಕಳೆದುಕೊಂಡು, ಚಳಿಯನ್ನು ಮುಕ್ಕಳಿಸುತ್ತಿವೆ. ಕೋಟೆಸಾಲು, ಬುರುಜು, ಬತೇರಿಗಳು ಬೂದಿಯಲ್ಲಿ ಸ್ನಾನಮಾಡಿದಂತೆ ಕಾಣುತ್ತಿವೆ. ಬಂಡೆಯ ಬಿರುಕುಗಳಲ್ಲಿ, ಬೀದಿ ಬದಿಗಳಲ್ಲಿ ಬೆಳೆದ ಹಸಿರು ಹುಲ್ಲೂ ಚಳಿಯೇ ಮೊಳಕೆ ಹೊಡೆದಂತಿದೆ. ಅರಮನೆ, ಗುರುಮನೆ, ಗುಡಿಗಳು, ರಾಜ್ಯ ಕಾರ್ಯಾಲಯಗಳಿಗೆ ಓಡಾಡಿ, ದುರ್ಗದ ಹೃದಯಭೂಮಿಯಂತೆ ಜೀವಂತವಾಗಿ ಮಿಡಿಯಬೇಕಾಗಿದ್ದ ತಾರಾಮಂಡಲ, ಜನ ಸಂಚಾರದ ಲವಲವಿಕೆಯನ್ನು ಕಳೆದುಕೊಂಡು, ಅಗತ್ಯದ ಕೆಲಸಕ್ಕಷ್ಟೇ ಆಗೊಮ್ಮೆ-ಈಗೊಮ್ಮೆ ಚಳಿಗೆ ಮೈ ಮುದುಡಿಕೊಂಡು ಓಡಾಡುವ ಜನರಿದ್ದರೂ ನಿರ್ಜನವಾದಂತೆ, ಚಳಿಯ ಮುಸುಕು ಹೊದೆದುಕೊಂಡು ಮಂಕಾಗಿ ಮಲಗಿದೆ.

ದುರ್ಗದ ಈ ನಿಸ್ತೇಜ, ನಿರ್ಜೀವ ವಾತಾವರಣವನ್ನು ಕುಳಿತ ಮೇನೆಯ ಬಾಗಿಲಿನಿಂದ ನೋಡುತ್ತಿದ್ದ, ಶಾಲು ಹೊದೆದು ಕುಳಿತ ಪ್ರಧಾನಿ ಕಳ್ಳಿನರಸಪ್ಪಯ್ಯನವರ ಕಣ್ಣುಗಳಲ್ಲೂ ಅದೇ ಮಂಕು; ಹೃದಯದಲ್ಲೂ ಚಳಿಗೆ ಸುಕ್ಕಾದ ಜಡತೆ - ಪಾದರಸದಂಥ ಮಿದುಳೂ ಹೆಳವನಂತಾಗಿ, ಬೋವಿಗಳು ಮೇನೆಯನ್ನು ಹೊತ್ತು ಹೋಗುವ ಹಾದಿಯಲ್ಲಿ, ಕಣ್ಣಿಗೆ ಬೀಳುವ ದೇವಸ್ಥಾನಗಳಿಗೆ ಕುಳಿತಲ್ಲಿಂದಲೇ ಕೈ ಮುಗಿಯುತ್ತಾ ಕುಳಿತಿದ್ದರು. ಹೆಜ್ಜೆಗೊಮ್ಮೆ 'ಧೋ', 'ಉಧೋ' ಎಂದು ಕೂಗುತ್ತಾ, ಓಡಾಡುವ ಜನಕ್ಕೆ 'ಪ್ರಧಾನಿಗಳ ಮೇನೆ ಬರುತ್ತಿದೆ, ದಾರಿಬಿಡಿ' ಎಂದು ಕೂಗುತ್ತಿದ್ದ ಮೇನೆಯ ಬೋವಿಗಳಿಗೂ ಇಂದು ಹಾಗೆ ಕೂಗಬೇಕಾದ ಸಂದರ್ಭ ಒದಗದೆ, ಅಭ್ಯಾಸಬಲದಿಂದ 'ಧೋ', 'ಉಧೋ' ಎನ್ನುತ್ತಾ ಕಂಬಳಿ ಹೊದ್ದ ಹೆಗಲಿನ ಮೇಲೆ ಮೇನೆಯನ್ನು ಹೊತ್ತು ಅರಮನೆಯತ್ತ ನಡೆಯುತ್ತಿದ್ದರು.

ಆ ಸದ್ದು ಅಷ್ಟು ದೂರದಿಂದ ಕೇಳುತ್ತಿದ್ದಹಾಗೆ, ಕಾವಲುಮನೆಯೊಳಗೆ ಬೆಚ್ಚಗೆ ಕುಳಿತಿದ್ದ ಅರಮನೆಯ ಕಾವಲುಭಟರು ತಟಕ್ಕನೆ, ಎಚ್ಚರವಾಗಿ, ಉಡುಪು ಸರಿಪಡಿಸಿಕೊಂಡು, ಶಸ್ತ್ರಾಸ್ತ್ರಗಳನ್ನು ಧರಿಸಿ, ಹೊರಬಂದು ನಿಂತರು. ಕಾವಲುಭಟರು ಮಾಡಿದ ನಮಸ್ಕಾರ ಗೌರವವನ್ನು ನೋಡಿಯೂ ನೋಡದವರಂತೆ, ಅಭ್ಯಾಸವಶದಿಂದ ಕೈಯಾಡಿಸಿ, ಅದನ್ನು ಸ್ವೀಕರಿಸಿದ ಸನ್ನೆ ಮಾಡಿ, ಅತ್ತಿತ್ತ ತಿರುಗಿಯೂ ನೋಡದೆ ಅರಮನೆಯತ್ತ ನಡೆದರು, ನರಸಪ್ಪಯ್ಯ.

ಅತ್ತಿತ್ತ ನೋಡದೆ, ಹೊರಲಾಗದ ಭಾರವನ್ನು ಹೊತ್ತಂತೆ ಬೆನ್ನು ಬಾಗಿಸಿ, ತಲೆತಗ್ಗಿಸಿ, ಅರಮನೆಯ ಹೊರ ಅಂಗಳವನ್ನು ದಾಟಿಬಂದ ಪ್ರಧಾನಿಯವರನ್ನು ಬಾಗಿಲ ಬಳಿಯೇ ಇದಿರುಗೊಂಡ ದರ್ಬಾರುಬಕ್ಷಿ ಅವರಿಗೆ ನಮಸ್ಕರಿಸಿ ಮಾತನಾಡದೆ ಮುಂದೆ ನಡೆಯಲು ಹಾದಿ ತೋರಿದ.

ಚಿರಪರಿಚಿತವಾದ ಅರಮನೆಯನ್ನು ಹೊಸಬರಂತೆ ಅತ್ತಿತ್ತ ಕಣ್ಣು ಹೊರಳಿಸಿ ನೋಡುತ್ತಾ, ನಡೆಯುತ್ತಾ –

“ಬರಬೇಕಾದವರೆಲ್ಲಾ ಬಂದಿದ್ದಾರೆಯೇ ?”

ಎಂದು ಕೇಳಿದರು ನರಸಪ್ಪಯ್ಯ, ತಗ್ಗಿದ ಧ್ವನಿಯಲ್ಲಿ.

“ಆರು ಚಾವಡಿಯ ದಳವಾಯಿಗಳು, ಪಟ್ಟಣಶೆಟ್ಟರು - ಎಲ್ಲರೂ ಆಗಲೇ ಬಂದು ತಮಗಾಗಿ ಕಾದಿದ್ದಾರೆ. ತಾವೂ ಬರುವುದಾಗಿ ಜಗದ್ಗುರುಗಳೂ ಹೇಳಿಕಳಿಸಿದ್ದಾರೆ. ಅವರಿಗೂ ಸುದ್ದಿ ಕಳುಹಿಸಿದ್ದೇನೆ. ತಮ್ಮ ಮೇನೆ ಮಠದ ಮುಂದೆ ಹಾದುಬಂದುದನ್ನು ಮಠದವರೂ ನೋಡಿರಬೇಕು. ಇನ್ನೆರಡು ಗಳಿಗೆಯಲ್ಲಿ ದಯಮಾಡಿಸುತ್ತಾರೆ”

- ಎಂದ ದರ್ಬಾರುಬಕ್ಷಿ.

“ಹಿರಿಯ ನಾಗತಿಯವರು ಹೇಗಿದ್ದಾರೆ ?”

- ನಡೆಯುತ್ತಿದ್ದ ಹಾಗೇ ನಿಂತು ಕೇಳಿದರು, ನರಸಪ್ಪಯ್ಯ.

“ಈಗೆರಡು ದಿನದಿಂದ ಸ್ವಲ್ಪ ಚೇತರಿಸಿಕೊಂಡಿದ್ದಾರೆ. ಅವರ ಖಾಸಾ ಊಳಿಗದ ಹೆಣ್ಣು ಹೊನ್ನವ್ವೆ, ಈಗ ತಾನೆ ಬಂದು, ’ಯಾರು ಯಾರು ಬಂದಿದ್ದಾರೆ?’ ಎಂದು ಕೇಳಿ, ತಾವು, ಜಗದ್ಗುರುಗಳೂ ಬರುತ್ತಿದ್ದ ಹಾಗೇ ಸುದ್ದಿ ಕಳಿಸಿ ಎಂದು ಹೇಳಿ ಹೋದಳು.”

“ಇವೊತ್ತಿನ ಸಭೆಗೆ ಅವರು ಬರುತ್ತಾರೆ ತಾನೇ ?”

“ಬರುವುದಾಗಿ ಹೇಳಿದಳು, ಹೊನ್ನವ್ವೆ.”

ಆ ಮಾತು ಕೇಳಿ, ನರಸಪ್ಪಯ್ಯನವರ ಹೃದಯದ ಮೇಲಿದ್ದ ಬಹು ದೊಡ್ಡ ಭಾರ ಇಳಿದಂತಾಗಿ-

“ಹಿರಿಯ ನಾಗತಿಯವರು ಚೇತರಿಸಿಕೊಂಡರೆ ದುರ್ಗಕ್ಕೆ ಮತ್ತೆ ಹೊಸ ಚೈತನ್ಯ ಬಂದ ಹಾಗಾಯಿತು....ಅವರಿಗೆ ನಾವು ಬಂದ ಸುದ್ದಿ ತಿಳಿಸಿ. ಯಾವುದಕ್ಕೂ ಅವಸರ ಮಾಡಬೇಡಿ. ಅವರು ಆದಷ್ಟು ಬೇಗ ಬರಲಿ, ನಾವು ಅಷ್ಟು ಹೊತ್ತು ಕಾದರೂ ಚಿಂತೆಯಿಲ್ಲ, ಅವರ ಯೋಗಕ್ಷೇಮ ಬಹಳ ಮುಖ್ಯ. ಈಗ ನಮಗೆ ದಾರಿ ತೋರಿಸಲು ಉಳಿದಿರುವವರು ಅವರೊಬ್ಬರೇ?”

- ಎಂದು ಹೇಳಿ, ನರಸಪ್ಪಯ್ಯ ಆಪ್ತಮಂತ್ರಾಲೋಚನೆಯ ಹಜಾರದತ್ತ ನಡೆದರು.

ಅತ್ತ ನಡೆಯುತ್ತಲೇ ಅರಮನೆಯಲ್ಲಿ ಸುತ್ತಲೂ ನೋಡಿದರು. ಕಂಬಕ್ಕೊಬ್ಬ ಬಿಚ್ಚುಗತ್ತಿಯ ಭಂಟ ಎಚ್ಚರವಾಗಿ ನಿಂತಿದ್ದ. ಮಾತಾಡದೆ, ವಿಗ್ರಹಗಳಂತೆ ನಿಂತ ಆ ಕಾವಲುಭಟರ ಹದ್ದುಗಣ್ಣು ಬಂದು ಹೋಗುವವರನ್ನು ಹುಡುಕುನೋಟದಿಂದ ನೋಡುತ್ತಾ, ಅವರ ಕೈಯಲ್ಲಿದ್ದ ಕತ್ತಿಯಷ್ಟೇ ಹರಿತವಾಗಿತ್ತು.

'ದಳವಾಯಿಗಳು ಅರಮನೆಯ ಕಟ್ಟುಪಾಡು ಚೆನ್ನಾಗಿ ಮಾಡಿದ್ದಾರೆ'

- ಎಂದು ತಮಗೆ ತಾವೇ ಹೇಳಿಕೊಂಡು, ನರಸಪ್ಪಯ್ಯ ಮಂತ್ರಾಲೋಚನೆಯ ಹಜಾರವನ್ನು ಪ್ರವೇಶಿಸಿ, ಬಾಗಿಲಿನಲ್ಲೇ ತಮಗೆ ನಮಸ್ಕರಿಸಿದ ಬೆಳ್ಳಿ ಕಟ್ಟಿಗೆಯ ಹರಿಕಾರನನ್ನು ಹಿಂಬಾಲಿಸಿ, ತಮಗಾಗಿ ಸಿದ್ಧಗೊಳಿಸಿದ ಆಸನದ ಬಳಿ ಸಾರಿದರು.

ಪ್ರಧಾನಿ ನರಸಪ್ಪಯ್ಯನವರು ಪ್ರವೇಶಿಸುತ್ತಿದ್ದಂತೆಯೇ, ಆ ವೇಳೆಗೆ ಅಂದಿನ ಸಭೆಗೆ ಆಹ್ವಾನಿತರಾಗಿ ಬಂದಿದ್ದವರೆಲ್ಲರೂ ಎದ್ದು ನಿಂತು ಪ್ರಧಾನಿಗಳಿಗೆ ಮುಜುರೆಯೊಪ್ಪಿಸಿದರು. ಆಸನದಲ್ಲಿ ಕುಳಿತುಕೊಳ್ಳುತ್ತಲೇ, ಯಾರು ಯಾರು ಬಂದಿದ್ದಾರೆಂದು ನೋಡಿದರು, ನರಸಪ್ಪಯ್ಯ.

ದಳವಾಯಿ ಭರಮಣ್ಣನಾಯಕ, ಬಾಣದ ಮದಕರಿನಾಯಕ, ದಳವಾಯಿ ನಿಂಗಪ್ಪನಾಯಕ, ಪಾರುಪತ್ತೇಗಾರ ಕೆಂಚಪ್ಪನಾಯಕ, ಕೊತ್ವಾಲಚಾವಡಿಯ ದಳವಾಯಿ ಕಾಶಣ್ಣನಾಯಕ, ಬೊಕ್ಕಸದ ಅಜ್ಜಪ್ಪ, ಚಪ್ಪಚಾವಡಿಯ ದಳವಾಯಿ ಹುಚ್ಚಪ್ಪನಾಯಕ, ಗಡಿಠಾಣ್ಯಗಳ ದಳವಾಯಿ ಕಾಟನಾಯಕ, ಪಟ್ಟಣಶೆಟ್ಟಿ ಚನ್ನಮಲ್ಲಪ್ಪ – ಬರಬೇಕಾದವರೆಲ್ಲ ಬಂದಿದ್ದರು. ಕೆಲವು ಆಸನಗಳು ಮಾತ್ರ ಬರಿದಾಗಿದ್ದವು. ಅವು ರಾಜವಂಶದ ಹಿರಿಯರು ಕುಳಿತುಕೊಳ್ಳಬೇಕಾದ ಆಸನಗಳು. ಸಂತಾನವಿಲ್ಲದೆ ಸತ್ತ ನಾಯಕರ ಸಿಂಹಾಸನಕ್ಕೆ ಯಾರನ್ನು ತರಬೇಕು ಎನ್ನುವುದನ್ನು ಚರ್ಚಿಸುವ ಸಲುವಾಗಿ ಅಂದಿನ ಸಭೆ ಸೇರಿತ್ತು. ಪಾಳಯಗಾರರ ದಾಯಾದಿಗಳು, ಹತ್ತಿರದ ನೆಂಟರನ್ನು ನರಸಪ್ಪಯ್ಯ ಉದ್ದೇಶಪೂರ್ವಕವಾಗಿಯೇ ಅಂದಿನ ಗುಪ್ತಾಲೋಚನೆಯ ಸಭೆಗೆ ಕರೆಸಿರಲಿಲ್ಲ - 'ನಾಯಕರ ಪೀಠಕ್ಕೆ ಯಾರು?' - ಎಂದು ಚರ್ಚೆ ನಡೆದಾಗ, ಒಬ್ಬೊಬ್ಬರು ಒಬ್ಬೊಬ್ಬರ ಕಡೆ ಮಾತನಾಡಿ, ಆರಂಭದಲ್ಲೇ ಅಂತಃಕಲಹದ ಮೊಳಕೆ ಒಡೆಯಬಾರದು ಎಂದು. 'ಯಾರು ಎನ್ನುವುದನ್ನು ಎಲ್ಲರೂ ಬಿಚ್ಚು ಮಾತಿನಿಂದ ಚರ್ಚಿಸಬೇಕು, ಮಾತನಾಡುವ ಯಾರೊಬ್ಬರ ನಾಲಗೆಗೆ ಇದಿರು ಇರುವವರ ಮುಖ ಅಡ್ಡ ಬರಬಾರದು, ಸಂಯಮದಿಂದ ನಡೆಯಲೇಬೇಕಾದ ಮಾತಿನಲ್ಲಿ ಎಲ್ಲ ಬಿಸಿ ಏರಲು ಅವಕಾಶವಿರಬಾರದು; ಚರ್ಚೆ ಹತ್ತು ದಿಕ್ಕಿನಲ್ಲಿ ನಡೆದರೂ ತೀರ್ಮಾನ ಒಮ್ಮುಖವಾಗಬೇಕು; ರಾಜ್ಯ ರಕ್ಷಣೆಗೆ ಅಗತ್ಯವಾದ ಯಾರೂ ತಮಗೆ ಮಾತಿಗೆ ಅವಕಾಶವಾಗಲಿಲ್ಲ. ತಮ್ಮ ಮಾತಿಗೆ ಬೆಲೆ ಬರಲಿಲ್ಲ ಎಂದು ತಳಮಳಿಸಬಾರದು; ಒಳಗೆ ನಡೆದ ಮಾತಿನ ತೀರ್ಮಾನ ಹೊರಗಿನ ಜನಕ್ಕೆ ತಿಳಿದಾಗಲೂ, ಒಳಗೆ ನಡೆದ ಮಾತಿನ ವಿವರ ಯಾರಿಗೂ ತಿಳಿಯಬಾರದು' ಎಂದು ಅಳೆದೂ ಸುರಿದು, ಲೆಕ್ಕಾಚಾರ ಮಾಡಿ, ಯಾರ ನಿಷ್ಠೆಯಲ್ಲಿ ತಿಲಮಾತ್ರ ಸಂದೇಹಕ್ಕೂ ಅವಕಾಶವಿಲ್ಲವೋ, ಯಾರು ಇದ್ದೇ ಅಂದಿನ ತೀರ್ಮಾನಕ್ಕೆ ಕಟ್ಟುಬೀಳಬೇಕೋ, ಅಂಥವರನ್ನು ಮಾತ್ರ ಆರಿಸಿ, ಅಂದಿನ ಸಭೆಗೆ ಬರಲು ಆಮಂತ್ರಣ ಕಳಿಸಿದ್ದರು. ನರಸಪ್ಪಯ್ಯ, ಕರೆಕಳಿಸಿದ ಜನವೆಲ್ಲಾ ಬಂದಿದ್ದರು. ಕರೆ ಬಂದ

ಯಾರೊಬ್ಬರೂ ಯಾವುದೋ ನೆಪ ಮುಂದುಮಾಡಿ ಬರಲು ತಪ್ಪಿಸಿಕೊಂಡಿರಲಿಲ್ಲ. ಅದನ್ನು ನೋಡಿ ನರಸಪ್ಪಯ್ಯನವರ ಹೃದಯಕ್ಕೆ ನೆಮ್ಮದಿಯಾಗಿ ಚರ್ಚೆ ಫಲಪ್ರದವಾಗುವುದು ಎನಿಸಿ, ಸಮಾಧಾನದ ನಿಟ್ಟುಸಿರುಬಿಟ್ಟು ಕುಳಿತು ಕೊಂಡರು.

ಅವರು ಕುಳಿತುಕೊಳ್ಳುತ್ತಿದ್ದಹಾಗೇ ರಾಜಗುರುಗಳಾದ ಶ್ರೀ ಮುರುಗಾರಾಜೇಂದ್ರಸ್ವಾಮಿಗಳ ಬಿರುದನ್ನು ಹಾಡುವ ಭಟರಾಜರ 'ಭೋ ಪರಾಕ್, ಜಗದ್ಗುರು ಮಹಾಸ್ವಾಮಿ ಭೋ ಪರಾಕ್' ಎಂಬ ಕೂಗಿನ ಸದ್ದು ಕೇಳಿಬಂದು, ಸಭೆಯಲ್ಲಿ ನೆರೆದಿದ್ದವರೆಲ್ಲರೂ, ರಾಜಗುರುಗಳನ್ನು ಸ್ವಾಗತಿಸಲು ಸಿದ್ಧರಾಗಿ ಎದ್ದು ನಿಂತರು.

ಹಾಗೆ ಅವರೆಲ್ಲರೂ ಎದ್ದುನಿಂತ ಅನತಿಕಾಲದಲ್ಲಿಯೇ, ಶ್ರೀಮದಲ್ಲಪ್ರಭು ಪರಂಪರಾಗತ ಶೂನ್ಯಸಿಂಹಾಸನಾಧೀಶ್ವರರೂ, ಚಿನ್ಮೂಲಾದ್ರಿಯ ಅರಸುಮನೆತನದ ರಾಜಗುರುಗಳೂ ಆದ ಶ್ರೀಶ್ರೀ ಗುರುಪಾದ ದೇಶಿಕೇಂದ್ರ ಮಹಾಸ್ವಾಮಿಗಳು, ಪುರುಷಾಕಾರ ಧರಿಸಿದ ಯೋಗಶಕ್ತಿಯಂತೆ, ಮಾನವರೂಪುವೆತ್ತ ತಪೋಬಲದಂತೆ, ಕಾಷಾಯ ಧರಿಸಿದ ಸಾರ್ವಭೌಮರಂತೆ, ಕಾವಿಯುಟ್ಟ ಇಬ್ಬರು ಮರಿದೇವರುಗಳು ದಾರಿ ತೋರುತ್ತಿರಲು, ಕಾವಿಯ ಬಣ್ಣದ ಮುಂಡಾಸು, ಅದೇ ಬಣ್ಣದ ನಿಲುವಂಗಿ, ಅಂಥದೇ ದಟ್ಟಿಯನ್ನುಟ್ಟು ಮರದ ಪಾದುಕೆಗಳನ್ನು ಧರಿಸಿ, ಬಂಗಾರದ ರಾಜಲಾಂಛನವನ್ನುಳ್ಳ ಕೋಲನ್ನು ಹಿಡಿದು, ಧೀರ ಗಂಭೀರ ನಡಗೆಯಿಂದ ಒಳಬಂದು, ತಮಗಾಗಿ ಸಿದ್ಧಪಡಿಸಿದ ರಜತಪೀಠದ ಮೇಲೆ, ಮರಿದೇವರುಗಳು ಹಾಸಿದ ವ್ಯಾಘ್ರಾಜಿನ, ಕಾವಿಯ ಬಟ್ಟೆಯ ಮೇಲೆ ಕುಳಿತು ನೆಲದ ಮೇಲೆ ತಮ್ಮ ಪಾದುಕೆಗಳನ್ನು ಬಿಟ್ಟರು. ನೆರೆದಿದ್ದವರೆಲ್ಲರೂ ಅವರ ಪಾದುಕೆಗಳನ್ನು ಮುಟ್ಟಿ ನಮಸ್ಕರಿಸಿದ ಬಳಿಕ ಕೈ ಎತ್ತಿ ಅವರೆಲ್ಲರನ್ನೂ ಆಶೀರ್ವದಿಸಿ, ಎಲ್ಲರ ಕುಶಲವನ್ನು ಮೃದುಧ್ವನಿಯಲ್ಲಿ ವಿಚಾರಿಸಿ, 'ನಾಗತಿಯವರು ಬರಲಿಲ್ಲವೆ?' ಎಂದು ಕೇಳುವಂತೆ, ಅವರಿಗಾಗಿ ಸಿದ್ಧಪಡಿಸಿದ ಆಸನದತ್ತ ನೋಡಿದರು.

ನೆಲಕ್ಕೆ ರತ್ನಗಂಬಳಿ ಹಾಸಿದ, ಅಷ್ಟೇನೂ ವಿಶಾಲವಲ್ಲದ, ಕೆಲವೇ ಮಂದಿ ಸೇರಲು ಸಾಕಾಗುವಷ್ಟು ಮಟ್ಟಿಗೆ ವಿಶಾಲವಾಗಿದ್ದ, ಮರೆಯಲ್ಲಿ, ಕದ್ದು ನಿಂತು ಅಲ್ಲಿ ನಡೆದ ಚರ್ಚೆಯ ಮಾತುಗಳನ್ನು ಯಾರೂ ಕೇಳಿಸಿಕೊಳ್ಳಲು ಅವಕಾಶವಾಗದಂತೆ, ಕಂಬಗಳಾಗಲಿ, ಕಿಟಕಿಗಳಾಗಲಿ, ತೆರೆಗಳಾಗಲಿ, ತೆರೆಹಾಕಿದ ಗೂಡುಗಳಾಗಲಿ ಇಲ್ಲದಂತೆ ರಚಿತವಾದ, ಸರಳ ಚಿತ್ರಗಳನ್ನು ಬಿಡಿಸಿದ ಭಿತ್ತಿಗಳ, ಒಳಬರಲು ಹೊರಗಿನಿಂದ ಒಂದು, ಅರಮನೆಯೊಳಗಿನಿಂದ ಬರಲು ಒಂದು-ಎರಡೇ ದ್ವಾರಗಳಿದ್ದ, ಆಪ್ತಾಲೋಚನಾಗೃಹದ ನಡುಭಾಗದಲ್ಲಿ, ಇಬ್ಬದಿಯಲ್ಲ ಬೆನ್ನು, ಆಸನಕ್ಕೆ ನೀಲಿಯ ಮಖಮಲ್ಲಿನ ಮೆತ್ತೆಗಳನ್ನು ಅಳವಡಿಸಿದ ಸುಖಾಸನಗಳು, ಅವುಗಳ ಮಧ್ಯೆ ಪಾಳಯಗಾರರು

ಕುಳಿತುಕೊಳ್ಳುವ, ಉಳಿದವಕ್ಕಿಂತ ಅಷ್ಟು ಎತ್ತರವಾಗಿ ಮತ್ತಷ್ಟು ವಿಶಾಲವಾಗಿ, ಇಬ್ಬದಿಯಲ್ಲಿ ಚಿನ್ನ-ಬೆಳ್ಳಿಯ ದಾರದ ಕಸೂತಿಗೆಲಸದ ಮಖಮಲ್ಲಿನ ದಿಂಬುಗಳಿದ್ದ ಪೀಠದ ಮೇಲೆ ರಾಜಲಾಂಛನವಿದ್ದ ರಾಜಾಸನ. ಅದರ ಬದಿಯಲ್ಲೇ ರಾಜಗುರುಗಳು ಕುಳಿತುಕೊಳ್ಳುವ ರಜತಪೀಠ, ಇದು ಆ ಹಜಾರದ ಅಚ್ಚುಕಟ್ಟು, ಇಂದು ರಾಜಾಸನದ ಬದಿಯಲ್ಲೇ ಮತ್ತೊಂದು ಗೌರವಪೀಠ - ಹಿರಿಯ ನಾಗತಿಯವರಿಗೆಂದು. ಅಷ್ಟೇನೂ ಎತ್ತರವಲ್ಲದ, ಕುಳಿತುಕೊಳ್ಳಲು, ಏಳಲು ಶ್ರಮಪಡಬೇಕಾಗದಷ್ಟು ಮಟ್ಟದಲ್ಲಿ, ಮೈಯಾಡಿಸಲು ಅವಕಾಶವಿದ್ದ, ಕೈ, ಬೆನ್ನುಗಳಿಗೆ ಬಹುಮೃದುವಾದ ಮೆತ್ತೆಯಿದ್ದ ಸುಖಾಸನ. ಅದರ ಮೇಲೂ ಸಣ್ಣ ಪ್ರಮಾಣದ ರಾಜಲಾಂಛನ, ಕಸ್ತೂರಿರಂಗಪ್ಪನಾಯಕರು ಪಟ್ಟಕ್ಕೆ ಬಂದಾಗ, ಅಂಥ ಸಭೆಗಳಲ್ಲಿ ಭಾಗವಹಿಸುವ ತಮ್ಮ ತಾಯಿಗೆಂದೇ ಮಾಡಿಸಿದ. ದಂತದ ಕುಸುರಿಗೆಲಸದ, ಬೆಳ್ಳಿ-ಬಂಗಾರದ ಹೂವು, ಬಳ್ಳಿ, ಹಕ್ಕಿಗಳ ಅಲಂಕಾರ ಮಾಡಿದ ವಿಶೇಷ ಆಸನ.

ಇಂದು –

ಜಗದ್ಗುರುಗಳಂತೆಯೇ ಎಲ್ಲರ ಕಣ್ಣೂ ಆ ಆಸನದತ್ತ ನೋಡಿದವು.

ಆ ಸೂಚನೆಯನ್ನರಿತ ದರ್ಬಾರುಬಕ್ಷಿಗಳು ನೆರೆದ ಸಭೆಗೆ ಹಿರಿಯ ನಾಗತಿಯವರನ್ನು ಕರೆತರಲು ದಾಪುಗಾಲು ಹಾಕುತ್ತಾ ಧಾವಿಸಿದರು.

೨

"ಅವ್ವಾ, ಸಭೆಗೆ ಬರಬೇಕಾದವರೆಲ್ಲಾ ಬಂದು ತಮಗಾಗಿ ಕಾಯುತ್ತಿದ್ದಾರಂತೆ."

- ಕುಳಿತೆಡೆಯಿಂದ ಏಳಲೂ ಮನಸ್ಸಿಲ್ಲದವಳಂತೆ, 'ಇದ್ದ ಹಾಗೇ ಹೋಗುತ್ತೇನೆ' ಎಂದಾಗ 'ಅವ್ವಾ, ತಾವು ರಾಜಮಾತೆ, ಮನಸ್ಸಿನಲ್ಲೆಷ್ಟೇ ವ್ಯಸನವಿದ್ದರೂ ಇದ್ದ ಹಾಗೆ ಹೋಗುವುದು ಚೆನ್ನಲ್ಲ' ಎಂದ ಹೊನ್ನವ್ವೆಯ ಮಾತಿಗೆ ಕಟ್ಟುಬಿದ್ದು, ಆಕೆ ಬಲವಂತವಾಗಿ ಉಡಿಸಿದ ಹಳದಿಯ ಬಣ್ಣದ ಪೀತಾಂಬರವನ್ನುಟ್ಟು, ಬೆಳ್ಳಿಯ ನವಿರೆಳೆಗಳ ಬುಟ್ಟಿಯಂತಿದ್ದ ತಲೆಯನ್ನು ಆದಷ್ಟು ಒಪ್ಪ ಮಾಡಿಸಿಕೊಂಡು, ಕುಳಿತಿದ್ದ ಓಬವ್ವನಾಗತಿ, ಕರೆಯಬಂದ ದರ್ಬಾರ್‌ಬಕ್ಷಿಯಿಂದ ಸುದ್ದಿ ತಿಳಿದು ಬಂದ ಹೊನ್ನವ್ವೆ ಹೇಳಿದುದನ್ನು ಕೇಳಿ –

"ಹಿರಿಯರನ್ನು ಕಾಯಿಸಬಾರದು. ಕೋಲು ಕೊಡು"

- ಎಂದು ಹೇಳಿ, ಕುಳಿತ ಮಂಚದ ಪಕ್ಕವನ್ನೇ ಊರೆಗೋಲು ಮಾಡಿಕೊಂಡು ಎದ್ದು ನಿಂತರು.

ಓಬವ್ವನಾಗತಿಗೆ, ಆಕೆ ಉಪಯೋಗಿಸುತ್ತಿದ್ದ ಬಂಗಾರದ ಮಕರಮುಖದ ಹಿಡಿಕೆಯಿದ್ದ ದಂತದ ಕೋಲನ್ನು ಕೊಟ್ಟು –

"ಅವ್ವಾ, ಹೊರಗೆ ತುಂಬಾ ಥಂಡಿಗಾಳಿ, ಶಾಲು ಕೊಡುತ್ತೇನೆ. ಹೊದ್ದು ಹೋಗಿ"

- ಎಂದು ಹೇಳಿ ಹೊನ್ನವ್ವೆ, ಅವಸರವಸರವಾಗಿ ಓಡಿ, ಪೆಠಾರಿಯಲ್ಲಿದ್ದ ಶಾಲನ್ನು ನಾಗತಿಗೆ ಹೊದಿಸಲು ತಂದಳು.

ಹೊನ್ನವ್ವ ತನಗಾಗಿ ತಂದುಕೊಟ್ಟ ಶಾಲನ್ನು ನಾಗತಿ ನೋಡಿದರು –

ಆ ಶಾಲು –

ದಟ್ಟ ಕೆಂಪು ಬಣ್ಣದ ಉಣ್ಣೆಯ ಬಟ್ಟೆಯ ಮೇಲೆ, ಚಿನ್ನ, ಬೆಳ್ಳಿಯ ನೆರಿಗೆಯ ಕುಸುರಿ ಹೂಗೆಲಸ ಮಾಡಿದ, ಅಂಚುಗಳಿಗೆ ತುದಿಯಲ್ಲಿ ಕೆಂಪು ಹರಳಿಟ್ಟು, ಸಣ್ಣಮುತ್ತಿನ ಕುಚ್ಚುಗಳ ಮಾಲೆಯನ್ನು ಹೊಲಿದ ಶಾಲು –

ಆ ಶಾಲನ್ನು ನೋಡುತ್ತಿದ್ದ ಹಾಗೇ ಓಬವ್ವನಾಗತಿಗೆ ಸ್ವರ್ಗಸ್ಥನಾದ ತನ್ನ ಪತಿಯ ನೆನಪಾಯಿತು.

ಕೂಡಲೀ-ಶೃಂಗೇರಿಯ ಶ್ರೀ ಶಾರದಾಪೀಠದ ಜಗದ್ಗುರುಗಳು ಹಿರಿಯ ಮದಕರಿನಾಯಕರಿಗೆ ಶಿವಪಂಚಾಕ್ಷರಿಯ ಮಂತ್ರೋಪದೇಶಮಾಡಿ, ಆರಾಧಿಸಲು ಚಂದ್ರಮೌಳೇಶ್ವರರ ಸ್ಫಟಿಕ ಲಿಂಗವನ್ನು ಅನುಗ್ರಹಿಸಿದ ದಿನ ಕೊಟ್ಟದ್ದು – ಆ ಶಾಲನ್ನು, ಆರಮನೆಗೆ ತಂದ ನಾಯಕರು ಅದನ್ನು ತಾವು ಹೊದೆಯದೆ, ತಮ್ಮ ಪ್ರೀತಿಯ ರಾಣಿಯಾದ ಓಬವ್ವನಾಗತಿಗೆ ಹೊದಿಸಿ –

'ಗುರುಗಳು ನಮಗೆ ಮಂತ್ರೋಪದೇಶದ ರಕ್ಷಾಕವಚ ಕೊಟ್ಟಿದ್ದಾರೆ. ಅವರು ಅನುಗ್ರಹಿಸಿದ ಇದು ನಿಮಗೆ ರಕ್ಷಾಕವಚವಾಗಿರಲಿ'

-ಎಂದು ಹೇಳಿ, ಹಿಗ್ಗುತ್ತಾ, ನಾಚುತ್ತಾ ಆ ಶಾಲನ್ನು ಹೊದ್ದು ನಿಂತಿದ್ದ ತನ್ನನ್ನು ಕಂಡು ಆನಂದಿಸಿದ್ದರು.

ಅಂಥ ಗಂಡ ಹೋದ ಬಳಿಕ ನಾಗತಿ, ಕುಚ್ಚಿನ ಮುತ್ತುಗಳೆಲ್ಲ ನೆನಪಿನ ಮುಳ್ಳಾಗಿ ಚುಚ್ಚುತ್ತಿದ್ದ ಆ ಶಾಲನ್ನು ಹೊದ್ದದ್ದು ಬಹಳ ಅಪರೂಪ. ಗಂಡ ಗತಿಸಿದ ಬಳಿಕ ಪೆಟ್ಟಿಗೆ ಸೇರಿಸಿದ ಅದನ್ನು ಆಕೆ ಯಾವಾಗಲಾದರೊಮ್ಮೆ ಮಗನ ಸಂತೋಷಕ್ಕಾಗಿ ಹೊದೆಯುತ್ತಿದ್ದರು. ಈಗ – ಆ ಗಂಡನೂ ಇಲ್ಲ; ಮಗನೂ ಇಲ್ಲ. ಉಳಿದದ್ದು ಇದೊಂದೇ. 'ಇದಾದರೂ ಏಕೆ ಬೇಕು ? ಯಾರ ಕಣ್ಣ ತೃಪ್ತಿಗೆ ?' ಎನಿಸಿತು.

ಆ ಅನಿಸಿಕೆಯಿಂದ ನಾಗತಿಯ ಕಣ್ಣು ತೇವವಾಗಿ –

“ಅದು ಬೇಡ, ಬೇರೆಯದಿಲ್ಲವೇ ?”

-ಎಂದು ಕೇಳಿದರು.

“ಅವ್ವಾ, ನೀವು ಧರಿಸದೆ ಗುರುಗಳು ಕೊಟ್ಟದ್ದು - ಹುಳು ತಿಂದು ಹೋಗಬೇಕೇ ? ಇಂಥ ಕಷ್ಟದ ಹೊತ್ತಿನಲ್ಲಲ್ಲದೆ ಮತ್ತಿನ್ನಾವಾಗ ಹೊದೆಯಬೇಕು. ಗುರುಗಳ ಅನುಗ್ರಹ ನಿಮಗೆ ಬೆನ್ನೆಲುಬಾಗಿರಲಿ”

-ಎಂದು ಹೇಳಿದಳು ಹೊನ್ನವ್ವೆ.

“ನೀನಾಡುವುದೂ ನಿಜವೇ. ಈಗ, ಇದನ್ನು ಕೊಟ್ಟ ಗುರುಗಳು, ಇದನ್ನು ನನಗೆ ಹೊದಿಸಿದ ಹಿರಿಯರೇ ನನ್ನನ್ನು ನಡೆಸಬೇಕು”

-ಎಂದು ಹೇಳಿ, ಭಾರವಾದ ಆ ಶಾಲನ್ನು ಹೊದ್ದು, ಒಂದು ಕೈಯಲ್ಲಿ ಕೋಲು ಹಿಡಿದು, ಮತ್ತೊಂದು ಕೈಯನ್ನು ಹೊನ್ನವ್ವೆಯ ಹೆಗಲ ಮೇಲೆ ಹಾಕಿ, ಸಭೆಗೆ ಹೋಗುವ ಮುನ್ನ ನಮಸ್ಕರಿಸಲೆಂದು, ತನ್ನ ಪತಿಯ ಭಾವಚಿತ್ರದತ್ತ ಹೆಜ್ಜೆ ಹಾಕಿದಳು.

ಹಿರಿಯ ಮದಕರಿನಾಯಕರಿದ್ದ ಕಾಲದಲ್ಲೇ, ಮೈಸೂರು ಕಡೆಯಿಂದ ಬಂದ ಚಿತ್ರಕಾರನೊಬ್ಬ ಗಾಜಿನ ಮೇಲೆ ಬರೆದ ಅವರ ಚಿತ್ರ ಅದು.

ಕೆಂಪು ರೇಶಿಮೆಯ ಮೇಲೆ ಜರಿಹೂಗೆಲಸ ಮಾಡಿದ ದೊಡ್ಡ ಜರತಾರಿಯಂಚಿನ, ಮುತ್ತಿನ ತುರಾಯಿ ಜೋಡಿಸಿದ, ಅರವತ್ತು ಮೊಳದ ಮುಂಡಾಸನ್ನು ಮಕುಟದಂತೆ ಧರಿಸಿದ ಭವ್ಯಮೂರ್ತಿ. ಅವರ ಹೆಸರು ಹೇಗೆ ಹಿರಿದೋ, ಅವರಲ್ಲಿ ಎಲ್ಲವೂ ಹಿರಿದೇ. ಅವರ ದುಂಡು ಮುಖದಲ್ಲಿ ಅಗಲವಾದ ಹಣೆ, ಹೊಳ್ಳೆಗಳು ಉಬ್ಬಿದ ದೊಡ್ಡ ಮೂಗು, ತುಂಬುಕೆನ್ನೆಗಳು, ದಟ್ಟವಾಗಿ ಬೆಳೆದ ಕಪ್ಪು ಹುಬ್ಬುಗಳಡಿಯಲ್ಲಿ ಹೊಳೆವ ದೊಡ್ಡ ಕಣ್ಣುಗಳು. ವಜ್ರದ ಕಡಕನ್ನು ಧರಿಸಿದ ಅಗಲವಾದ ಹಾಳೆಯ ಕಿವಿ, ವಿಶಾಲ ಫಾಲ, ಅದರ ಮೇಲೆ ದೊಡ್ಡ ಗಂಧದ ಬೊಟ್ಟು, ಹುಬ್ಬುಗಳ ನಡುವೆ ಧೂಳಿತವನ್ನು ಧರಿಸಿ ಅದರ ಮೇಲೆ ಅಮ್ಮನವರ ಭಂಡಾರದ ಅಲಂಕಾರ, ತುಂಬಿದ ಕೆನ್ನೆಯ ಅಗಲಕ್ಕೂ ಹರಡಿದಂತೆ ಗಿರ್ಜಾಮೀಸೆ, ಯೋಧನ ಭುಜ, ತನ್ನಂಥ ಇಬ್ಬರು ಹೆಂಡಿರು ತಲೆ ಇಟ್ಟು ಮಲಗಬಹುದಾದಷ್ಟು ಅಗಲವಾದ, ಮಾಂಸ ಖಂಡ ತುಂಬಿಕೊಂಡ ಎದೆ, ಹೆಗಲಮೇಲೊಂದು ವಸ್ತ್ರ, ಕತ್ತಿನಲ್ಲಿ ಎರಡೆಳೆಯ ದೊಡ್ಡ ಮುತ್ತು ಹವಳಗಳು ಪೋಣಿಸಿದ ಮಾಲೆ. ಮೀಸೆ ನೆರೆತ ವಯಸ್ಸಿನಲ್ಲೂ ನೋಡಿದ ಹೆಣ್ಣುಗಳಿಗೆ ಮುತ್ತಿಡಬೇಕೆಂಬ ಚಪಲವನ್ನು ಮೂಡಿಸುವ ಮೋಹನಾಕಾರ.

ಚಿತ್ರಕಾರ ಆ ಚಿತ್ರವನ್ನು ಮುಗಿಸಿ, ಅದಕ್ಕೆ ಕೆತ್ತನೆಗೆಲಸ ಮಾಡಿದ ಶ್ರೀಗಂಧದ ಕಟ್ಟನ್ನು ಹಾಕಿ ತಂದುಕೊಟ್ಟ ದಿನ, ಅರಮನೆಯ ಓಲಗಶಾಲೆಯಲ್ಲಿ ಅದನ್ನು ಹಾಕಿಸಬೇಕೆಂದು

ನಾಯಕರು ಚಿಂತಿಸಿದಾಗ, ಓಬವ್ವನಾಗತಿ, ನಾಯಕರಂತೆಯೇ ಆ ಚಿತ್ರಕ್ಕೆ ಮನಸೋತು, 'ಅಂಥ ಮಾತು ಬಾಯಿಬಿಟ್ಟು ಆಡಬಾರದು' ಎನಿಸಿದರೂ ಸುಮ್ಮನಿದ್ದರೆ, ಅದು ಓಲಗ ಸಾಲೆಗೆ ಹೋಗಿಬಿಡುತ್ತದೆಂದು ಹೆದರಿ-

'ಅದು ನಿಮ್ಮ ಕೊಠಡಿಯಲ್ಲೇ ಇರಲಿ' – ಎಂದು ಬೇಡಿದ್ದರು.

ಆಗ ನಾಯಕರು-

'ಅಲ್ಲಿ ನಾವೇ ಇರುತ್ತೇವಲ್ಲಾ, ನಮ್ಮ ಚಿತ್ರವಿನ್ನೇಕೆ ಬೇಕು ?'

-ಎಂದು ಚೇಷ್ಟೆ ಮಾಡಿದಾಗ –

'ನೀವಿದ್ದಾಗ, ನೀವು : ನೀವಿಲ್ಲದಿದ್ದಾಗ ಅದು - ನಮ್ಮ ಪೂಜೆಗೆ ಇರುತ್ತದೆ'

-ಎಂದಿದ್ದರು.

'ಚಿತ್ರಕ್ಕೇನೋ ಪೂಜೆ ಮಾಡಬಹುದು. ಆದರೆ ನೀವು ನನಗೆ ಪೂಜೆ ಮಾಡಿದ ನೆನಪಿಲ್ಲವಲ್ಲ, ಅದು ಹೇಗೆ ಮಾಡುತ್ತೀರೋ ನಾವು ನೋಡಬೇಕಲ್ಲಾ - ತೋರಿಸುತ್ತೀರಾ ?'

-ಎಂದು ಕೆಣಕಿ ಕೇಳಿ, ನಾಗತಿಯ ಮುಖ ಕೆಂಪೇರುವಂತೆ ಮಾಡಿದ್ದರು.

'ಗೊತ್ತಿದ್ದನ್ನು ಇಲ್ಲವೆಂದು ಹೇಳಿ ಆಟವಾಡಬೇಡಿ. ನಿಮಗೆ ನನ್ನ ಮಾತು ಅಲ್ಲ ಎನಿಸಿದರೆ, ಅದನ್ನು ಓಲಗಶಾಲೆಗೇ ಕಳಿಸಿ'

-ಎಂದು ಹುಸಿಮುನಿಸಿನ ಮಾತನಾಡಿದಾಗ ಬದುಕಿದ್ದಷ್ಟು ದಿನ ಯಾವುದಕ್ಕೂ ಇಲ್ಲವೆನ್ನದಿದ್ದ ದೊರೆ –

'ಹೇಳು – ಇದು ಎಲ್ಲಿರಬೇಕು ? ನಿನ್ನ ತಲೆಯ ಮೇಲೋ, ಕಾಲ ಕಡೆಗೋ ?'

-ಎಂದು ನಗುತ್ತಾ ಹೇಳಿ, ಆಳನ್ನು ಕರೆಯದೆ, ತಾವೇ ಎಲ್ಲಿದ್ದರೆ ಚೆನ್ನ ಎಂದು ಯೋಚಿಸಿ, ಗೋಡೆಗೆ ಅದನ್ನು ತೂಗುಹಾಕಿದ್ದರು.

ಅವತ್ತಿನ ಮಾತನ್ನು ನೆನಸಿಕೊಂಡು ಎಷ್ಟೋ ಬಾರಿ ಸಂತೋಷಪಟ್ಟಿದ್ದರು, ಓಬವ್ವ ನಾಗತಿ.

ಇಂದು –

ಆ ನೆನಪೂ ಕಣ್ಣೀರಿನ ಕಪ್ಪ ಕೇಳುತ್ತದೆ.

'ಏನು ವಿಚಿತ್ರ ಈ ವಿಧಿಯಾಟ. ಒಂದು ಕಾಲಕ್ಕೆ ಸುಖಕ್ಕೆ ಕಾರಣವಾದದ್ದೆಲ್ಲಾ ಇಂದು ದುಃಖಕ್ಕೆ ಕಾರಣ. ಒಂದೊಂದೇನು ? ಎಲ್ಲ ನೆನಪೂ ನೋವೇ – ಬಹಳ ಕಾಲ ಬದುಕಿದರೆ'

-ಎನಿಸಿತು, ನಾಗತಿಗೆ.

’ಹಲಗೆಯ ಮೇಲೆ ಬರೆದದ್ದನ್ನು ಒರಸುವ ಹಾಗೆ ಹೃದಯದ ಮೇಲೆ ಬರೆದದ್ದನ್ನು ಒರೆಸಲು ಸಾಧ್ಯವಾಗಿದ್ದಿದ್ದರೆ ಜೀವನ ಎಷ್ಟು ಸುಖವಾಗುತ್ತಿತ್ತು. ಎಲ್ಲಾ ಕೊಟ್ಟು, ಬ್ರಹ್ಮ ಮನುಷ್ಯನ ಬುದ್ಧಿಗೆ ಇದೊಂದು ಶಕ್ತಿ ಕೊಡಲಿಲ್ಲವಲ್ಲ’

-ಎಂದುಕೊಳ್ಳುತ್ತಾ, ನಾಯಕರ ಭಾವಚಿತ್ರಕ್ಕೆ ಹಣೆ ಮುಟ್ಟಿಸಿ, ನಮಸ್ಕಾರ ಮಾಡಿ, ಚಿತ್ರದ ಕೆಳಗೆ ಹಾಕಿದ ಹಲಗೆಯ ಸೀಳಿನ ಮೇಲೆ ಇರಿಸಿದ ಭಂಡಾರದ ಭರಣಿಯಿಂದ ಪ್ರಸಾದವನ್ನು ತೆಗೆದುಕೊಂಡು, ಹುಬ್ಬುಗಳ ನಡುವೆ ಇಟ್ಟುಕೊಂಡಳು. ಅದನ್ನು ಇಟ್ಟುಕೊಳ್ಳುತ್ತಿದ್ದ ಹಾಗೇ, ಆಕೆಯ ಮನಸ್ಸಿನ ಮೇಲೆ ಮೋಡಿ ಹಾಕಿದಂಥ ಪರಿಣಾಮವಾಗಿ –

“ನೀವಿದ್ದೂ, ನಾನು ಮಾಡಬೇಕಾದ ಕೆಲಸಕ್ಕೆ, ಆಡಬೇಕಾದ ಮಾತಿಗೆ ಹೆದರಿ, ಬೆನ್ನು ತೋರಿಸಿ ಮಲಗಿದ್ದೆನಲ್ಲ - ಈ ಮೂರು ದಿನ ನಾನೆಂಥ ತಪ್ಪು ಮಾಡಿದೆ”

- ಎಂದು ತನಗೆ ತಾನೇ ಹೇಳಿಕೊಂಡು, ನಾಯಕರ ಭಾವಚಿತ್ರದ ಮುಂದೆ ಹಾಕಿದ ಗುಲಾಬಿಯ ಹೂವುಗಳಲ್ಲಿ ಎರಡು ಬಣ್ಣದ ನಾಲ್ಕು ಹೂಗಳನ್ನು ಆರಿಸಿಕೊಂಡು, ಬೊಗಸೆಯೊಳಗೆ ಅದನ್ನು ಕುಲುಕಿ –

“ಯಾರಾಗಬೇಕೋ ನೀವೇ ಹೇಳಿ”

-ಎಂದು ಹೂವನ್ನು ಅವರ ಮುಂದೆ ಹಾಕಿ –

“ಹೊನ್ನವ್ವೆ, ದೇವರ ಧ್ಯಾನ ಮಾಡಿ, ನಾಯಕರ ಮುಖ ನೋಡಿ, ಒಂದು ಹೂವೆತ್ತಿಕೊ”

-ಎಂದರು ಓಬವ್ವನಾಗತಿ.

ಹೊನ್ನವ್ವೆಗೆ ಅನಿರೀಕ್ಷಿತವಾದ ಆ ಮಾತು, ವರ್ತನೆ ಯಾವುದೂ ಅರ್ಥವಾಗದೆ ’ಅವರ ಮನಸ್ಸಿನಲ್ಲೇನಿದೆಯೋ, ಏನಾದರೂ ಈ ತಾಯಿಗೆ ಸುಖವಾಗಲಿ’ ಎಂದು ಏಕನಾಥಮ್ಮನನ್ನು ಮನದಲ್ಲಿಯೇ ಸ್ಮರಿಸಿ, ಒಂದು ಹೂ ಎತ್ತಿ, ನಾಗತಿಯ ಕೈಗೆ ಕೊಟ್ಟಳು.

ಹೊನ್ನವ್ವೆ ತನ್ನ ಕೈಗೆ ಕೊಟ್ಟ ಕೆಂಪು ಗುಲಾಬಿಯನ್ನು ನೋಡಿ –

’ನಾನಂದುಕೊಂಡದ್ದು ನಿಮಗೂ ಒಪ್ಪಿಗೆಯಾಯಿತು. ಇನ್ನು ನನ್ನ ಕೆಲಸ ಹಗುರವಾಗುತ್ತದೆ’

- ಎಂದು ಮನಸ್ಸಿನಲ್ಲಿಯೇ ಹೇಳಿಕೊಂಡು, ಹೊಸ ಉತ್ಸಾಹ ಬಂದಂತೆ, ಕೋಲನ್ನು ಹಿಡಿದು ಓಬವ್ವನಾಗತಿ, ಮಂತ್ರಾಲೋಚನೆಯ ಹಜಾರದತ್ತ ಹೆಜ್ಜೆ ಹಾಕಿದರು. ಈಗ ಹೊನ್ನವ್ವೆಯನ್ನು ’ನಿನ್ನ ಹೆಗಲ ಆಸರೆ ಕೊಡು’ ಎಂದು ಕೇಳಲಿಲ್ಲ. ಆಕೆಗೆ ’ಜೊತೆಗೆ ಬಾ’ ಎಂದಷ್ಟೇ ಹೇಳಿ, ತಾವೇ ಹೆಜ್ಜೆ ಮುಂದೆ ಹಾಕಿದರು.

ಸಣ್ಣ ಪವಾಡವನ್ನು ಕಂಡಂತೆ ಅಚ್ಚರಿಪಡುತ್ತಾ, ನಾಗತಿಯನ್ನು ಹಿಂಬಾಲಿಸಿದಳು, ಹೊನ್ನವ್ವೆ.

೪

ಹೊನ್ನವ್ವೆಯನ್ನು ಹಿಂದಿಟ್ಟುಕೊಂಡು, ನಾಗತಿಯವರು ಒಳಗೆ ಬರುತ್ತಿದ್ದಹಾಗೇ, ರಾಜ ಗುರುಗಳ ವಿನಾ ಉಳಿದೆಲ್ಲರೂ ಎದ್ದು ನಿಂತು, ನಡು ಬಗ್ಗಿಸಿ ನಮಸ್ಕಾರ ಮಾಡಿದರು. ಅವರೆಲ್ಲರಿಗೂ ಪ್ರತಿನಮಸ್ಕಾರ ಮಾಡಿದ ನಾಗತಿ, ಗುರುಪೀಠದ ಬಳಿ ಬಂದು –

"ಆಯಾಸ ಮಾಡಿಕೊಳ್ಳಬೇಡಿ. ನಿಂತು ಶರಣುಮಾಡಿದರೂ ಶಿವ ಮೆಚ್ಚುತ್ತಾನೆ"

- ಎಂದು ಗುರುಗಳು ಹೇಳಿದರೂ ಕೇಳದೆ, ಹೊನ್ನವ್ವೆಯ ಕೈಗೆ ಕೋಲು ಕೊಟ್ಟು, ಗುರುಗಳ ಪಾದುಕೆಗೆ ಹಣೆಮುಟ್ಟಿ ನಮಸ್ಕರಿಸಿ, ಅದನ್ನು ಮುಟ್ಟಿದ ಕೈಯನ್ನು ಕಣ್ಣಿಗೊತ್ತಿಕೊಂಡು, ಮತ್ತೆ ಹೊನ್ನವ್ವೆ ತನ್ನ ಕೈಗೆ ಕೊಟ್ಟ ಕೋಲೂರಿ ನಡೆದು, ತನ್ನ ಆಸನದಲ್ಲಿ ಕುಳಿತುಕೊಂಡರು.

ಅಂದಿನ ಸಭೆಯ ವಿಷಯವೇನೆಂದು ಗೊತ್ತಿದ್ದ ಹೊನ್ನವ್ವ, ಅಲ್ಲಿಂದ ಹೊರಹೋಗಲು ಸಿದ್ಧಳಾದುದನ್ನು ಕಂಡು, ಸಭೆಗೆ –

"ನಮ್ಮ ಹೊನ್ನವ್ವೆಯ ಬಗ್ಗೆ ಯಾರಿಗೂ ಅನುಮಾನ ಬೇಡ. ಈಗ ನಾಲಗೆಯಷ್ಟೇ ನಮ್ಮದು; ಈಕೆಯೇ ನಮ್ಮ ಕಣ್ಣು ಕಿವಿ"

- ಎಂದು ಅಪ್ಪಣೆ ಮಾಡುವಂಥ ಧ್ವನಿಯಲ್ಲಿ ಹೇಳಿ –

"ಈಗ ಮುಂದಿನ ಮಾತು ನಡೆಯಬಹುದು" - ಎಂದರು, ಓಬವ್ವನಾಗತಿ.

ನಾಗತಿಯ ಮಾತು ಮೀರಲಾಗದೆ ಹೊನ್ನವ್ವೆ, ನಾಗತಿಯ ಕೋಲನ್ನು ಹಿಡಿದು, ಆಕೆಯ ಬೆನ್ನ ಬದಿಯಲ್ಲಿ ನಿಂತಳು.

"ತಮ್ಮ ಅಪ್ಪಣೆಯೇ ನಮ್ಮ ಚಿತ್ತ"

- ಎಂದು ಎಲ್ಲರ ಪರವಾಗಿ, ಪ್ರಧಾನಿ ನರಸಪ್ಪಯ್ಯನವರೇ ಹೇಳಿ, ದರ್ಬಾರುಬಕ್ಷಿಗೆ –

"ಎರಡು ಕಡೆಯ ಬಾಗಿಲನ್ನೂ ಮುಚ್ಚಿಸಿ, ಬಾಗಿಲುಗಳಿಗೇ ಬಿಚ್ಚುಗತ್ತಿಯವರ ಕಾವಲು ಹಾಕಿಸಿ, ನೀವೂ ಹೊರಗೆ ನಿಲ್ಲಿ. ತುಂಬಿದ ಓಲಗದಲ್ಲಲ್ಲದೆ, ಬೇರೆ ಯಾರ ಕಿವಿಗಾದರೂ ಇಲ್ಲಿ ನಡೆದ ಮಾತು ಬಿದ್ದರೆ, ಕೇಳಿದ ಕಿವಿ, ಆಡಿದ ನಾಲಗೆ ಎರಡಕ್ಕೂ ಅಲಗಿನ ಸೇವೆಯಾಗುತ್ತದೆ. ಎಚ್ಚರ" – ಎಂದು ಹೇಳಿದರು.

ಅವರು ಆ ಮಾತನ್ನು ತಗ್ಗಿದ ಧ್ವನಿಯಲ್ಲಿ ಮೃದುವಾಗಿ ಆಡಿದರೂ, ಅದರಲ್ಲಿ ಮಸೆದ ಕತ್ತಿಯ ಅಲಗಿನ ಹರಿತವಿತ್ತು.

ಆ ಅಪ್ಪಣೆಯನ್ನು ತಲೆಯಲ್ಲಿ ಹೊತ್ತಂತೆ ನೆರೆದವರೆಲ್ಲರಿಗೂ ನಮಸ್ಕರಿಸಿ, ದರ್ಬಾರುಬಕ್ಷಿ ಹೊರಗೆ ನಡೆದ. ಅಷ್ಟು ಹೊತ್ತು ತೆರೆದಿದ್ದ ಇಬ್ಬದಿಯ ಬಾಗಿಲುಗಳೂ ಮುಚ್ಚಿದವು. ಅದನ್ನು ನೋಡಿದ ಬಳಿಕ, ತಾವೂ ಕುಳಿತು –

"ಇನ್ನು ಮುಂದಿನ ಮಾತಾಗಬಹುದು" - ಎಂದರು ನರಸಪ್ಪಯ್ಯ.

ಅಂದಿನ ಸಭೆಯಲ್ಲಿ ಚರ್ಚಿಸಬೇಕಾದ ವಿಷಯ ಏನೆಂಬುದು ಎಲ್ಲರಿಗೂ ತಿಳಿದಿತ್ತು. ಸಭೆಗೆ ಬರುವ ಮುನ್ನವೇ ಎಲ್ಲರೂ ತಮ್ಮ ಮನಸ್ಸಿನಲ್ಲಿ ಅಳೆದು, ಸುರಿದು, ಹತ್ತೆಂಟು ಕಡೆಯಿಂದ ಯೋಚನೆ ಮಾಡಿ, ಸಂತಾನವಿಲ್ಲದೆ ಮೃತರಾಗಿ, ಕಸ್ತೂರಿರಂಗಪ್ಪನಾಯಕರು ಬರಿದುಮಾಡಿದ ಸಿಂಹಾಸನಕ್ಕೆ ಯಾರನ್ನು ತಂದರೆ ಆದೀತು ಎಂದು ಅಂದುಕೊಂಡು, 'ಹತ್ತು ಜನ ಹಿರಿಯರು ಕಲೆತ ಸಭೆಯಲ್ಲಿ. ತಮ್ಮ ಮಾತೇ ನಡೆಯುವುದಿಲ್ಲ' ಎನ್ನುವುದೂ ತಿಳಿದಿದ್ದರಿಂದ, 'ಹಾಗಲ್ಲ - ಹೀಗೆ' ಎಂದು ಮಾತು ಚರ್ಚೆಗೆ ಬಿದ್ದರೆ, ತಾವು ಯಾರ ಪರವಹಿಸಬಹುದು ಎಂಬ ಯೋಚನೆಯನ್ನೂ ಮಾಡಿಕೊಂಡೇ ಬಂದಿದ್ದರು. ಹೀಗೆ - ವಿಷಯ ಎಲ್ಲರಿಗೂ ತಿಳಿದಿದ್ದಾದರೂ, ಎಲ್ಲರಿಗೂ ತಾವೇ ಮುಂದಾಗಿ ಮಾತಾಡಲು ಅಳುಕು. ಅವರು ಮಾತು ಮೊದಲಾಡಲಿ. ಇವರಾಡಲಿ ಎಂದು ಒಬ್ಬರು ಮತ್ತೊಬ್ಬರ ಮುಖ ನೋಡುತ್ತಿರುವುದನ್ನು ಕಂಡು, ನಾಗತಿಯವರ ಅಪ್ಪಣೆಯಂತೆ ಸಭೆ ಸೇರಿದ ನರಸಪ್ಪಯ್ಯನವರೇ, ಅರ್ಥವಿಲ್ಲದ ವಿನಯ, ವ್ಯರ್ಥ ಸಂಪ್ರದಾಯ, ಮುಖದಾಕ್ಷಿಣ್ಯದಲ್ಲಿ ಹೊತ್ತು ಕಳೆಯಲು ಬಿಡದೆ, ತಾವೇ ಮುಂದಾಗಿ ಎದ್ದು ನಿಂತು-

"ಈ ರಾಜ್ಯಕ್ಕೆ ಪ್ರಧಾನಿಯಾಗಿ, ಹಿರಿಯ ನಾಗತಿಯವರ ಅಪ್ಪಣೆಯಂತೆ, ನಾವು ಈ ಸಭೆಯನ್ನು ಕರೆದಿರುವುದು, ನಿಜ. ಇಲ್ಲಿ ಹಿರಿಯರು, ಕಿರಿಯರು ಎಲ್ಲರೂ ಕಲೆತಿದ್ದಾರೆ. ಆದರೆ ಈ ಸಿಂಹಾಸನಕ್ಕೆ ನಿಷ್ಠೆಯ ವಿಷಯದಲ್ಲಿ ನಾವೆಲ್ಲರೂ ಏಕಾಭಿಪ್ರಾಯ ಉಳ್ಳವರು, ಸಮಾನರು. ನಮ್ಮ ನಮ್ಮ ನಡುವೆ ಮಾತಿನಲ್ಲಿ ಹಿಂದೆ-ಮುಂದಾದರೂ. ಅದನ್ನು ತಪ್ಪು ತಿಳಿಯುವವರು ಯಾರೂ ಇಲ್ಲ. ಆದ್ದರಿಂದ ಯಾರಾದರೂ ಮಾತು ಆರಂಭಿಸಬಹುದು"

– ಎಂದು ಚರ್ಚೆಗೆ ಪೀಠಿಕೆ ಹಾಕಿದರು.

"ಯಾರು ಮೊದಲು ಮಾತನಾಡಿದರೂ, ಕೊನೆಗೆ ಒಪ್ಪಬೇಕಾದವರು, ಹಿರಿಯ ನಾಗತಿಯವರು. ಅವರು ನಮ್ಮನ್ನು ನಂಬಿ, ಮನಬಿಚ್ಚಿ ಏನಿದೆಯೋ ಹೇಳಲಿ. ಅವರಾಡಿದ ಮಾತು, ತೋರಿಸಿದ ಅವರ ಪಾದವನ್ನು ತಲೆಯ ಮೇಲೆ ಹೊತ್ತು ನಾವು ನಡೆಯುತ್ತೇವೆ. ಸುಮ್ಮನೆ ಎಲ್ಲರೂ,

ಇಂಥ ಮುಖ್ಯ ವಿಷಯದಲ್ಲಿ ತಲೆಗೊಂದು ಮಾತಾಡುವುದು, ಕಲೆತ ಹತ್ತು ಜನಕ್ಕೆ, ಹತ್ತುಬಗೆಯ ಮನಸ್ಸಾಗಲು ಕಾರಣವಾಗುತ್ತದೆ. ಅದು ಬೇಡವೇ ಬೇಡ"

- ಎಂದ ಭರಮಣ್ಣನಾಯಕ, ಒಂದೇ ಏಟಿಗೆ ಮಾತು ಮುಗಿಸಿಬಿಡುವಂತೆ.

"ಅಷ್ಟೇ ಆಗಿದ್ದರೆ ಈ ಸಭೆಯನ್ನು ಕರೆಯಲು ನಾವು ಹೇಳುತ್ತಲೇ ಇರಲಿಲ್ಲ. ಪಲ್ಲಕ್ಕಿಯಲ್ಲಿ ಕೂರುವವರು ಒಬ್ಬರಾದರೂ, ಅದನ್ನು ಹೊರುವವರು ನಾಲ್ಕು ಜನ. ಅವರೆಲ್ಲಾ ಒಂದೇ ದಿಕ್ಕಿನಲ್ಲಿ ನಡೆಯಬೇಕು; ತಾವು ಹೊತ್ತವರು ತಮ್ಮ ಹೆಗಲಿಗೆ ಹೊರೆ ಎನಿಸದೆ, ಅವರ ಬಗ್ಗೆ ಗೌರವ, ಆದರಗಳಿರಬೇಕು; ಕೂತವರು ತಮ್ಮವರು ಎಂಬ ಅಭಿಮಾನವಿರಬೇಕು. ಆದ್ದರಿಂದಲೇ ಪಲ್ಲಕ್ಕಿಯಲ್ಲಿ ಕುಳಿತವರಿಗಿಂತ, ಹೊತ್ತು ನಡೆಸುವವರು ಮುಖ್ಯ. ಯಾರಾದರೆ ಆದೀತು ಎಂದು ನೀವು ಮನಬಿಚ್ಚಿ ಮಾತನಾಡಿದರೆ, ನಮಗೂ ತೋರಿದ ಮಾತಾಡಲು ಸುಲಭವಾಗುತ್ತದೆ. ಹಾಗಿಲ್ಲದಿದ್ದರೆ ಸಭೆ ಕರೆದದ್ದೇ ವ್ಯರ್ಥವಾಗುತ್ತದೆ....ನೀವೆಲ್ಲಾ ಅರಮನೆಯ ಹಿತೈಷಿಗಳು, ನಿಮ್ಮ ನಿಷ್ಠೆಯ ಬಲದ ಬುನಾದಿಯ ಮೇಲೆ ಈ ಸಿಂಹಾಸನ ನಿಂತಿದೆ. ಆದ್ದರಿಂದ ಯಾರಿಗೆ ಯಾರು ಸರಿ ಎಂದು ತೋರುತ್ತದೋ ಹೇಳಿ" - ಎಂದರು ಓಬವ್ವನಾಗತಿ.

"ನಮ್ಮ ಮಾತು ತಮ್ಮ ನಾಲಗೆಗೆ ತಡೆಯಾದರೆ..."

- ಅಧಿಕಾರದ ಹಿರಿತನ, ರಾಜರಕ್ತಸಂಬಂಧ ಎರಡೂ ಇದ್ದ ಬಾಣದ ನಿಂಗಯ್ಯ ಹೇಳಿದ.

"ಹಾಗಾಗುವುದಿಲ್ಲ; ಆಗಬಾರದು. ಕಲೆತ ಹತ್ತು ಜನ, ಹತ್ತು ಹೆಸರು ಹೇಳಿದರೂ, ಕೊನೆಗೆ ಯಾರ ಹೆಸರು ನಿಲ್ಲುತ್ತದೆಯೋ, ಅವರಿಗೆ ನಿಷ್ಠೆಯಿಂದಿರುವ ಪ್ರಮಾಣವನ್ನು, ಗುರುಪಾದ ಮುಟ್ಟಿ ಎಲ್ಲರೂ ಮಾಡಬೇಕು. ಆಡಿದ ಮಾತನ್ನು ಇಲ್ಲಿಯೇ ಮರೆತುಬಿಡಬೇಕು; ಮಾಡಿದ ನಿರ್ಧಾರ ಮಾತ್ರ ಉಳಿಯಬೇಕು. ಉಳಿದ ಮಾತಾಗುವ ಮೊದಲು ಈ ಪ್ರಮಾಣವಾಗಬೇಕು. ಒಬ್ಬೊಬ್ಬರದು ಒಂದೊಂದು ಮಾತಾಗಿ, ದೊರೆಗೊಂದು ಮಾತು, ದಳವಾಯಿಗೊಂದು ಮಾತು ಅಂತ ಆಗಿ, ಹಿಂದೊಮ್ಮೆ ದುರ್ಗದಲ್ಲಿ ರಕ್ತಪ್ರಳಯವಾಗಿದೆ - ಇಂಥದೇ ಸಂದರ್ಭ ಬಂದಾಗ, ಮತ್ತೆ ಹಾಗಾಗಬಾರದು. ನಿಮ್ಮನ್ನು ಕರೆದದ್ದು ನಂಬಿಕೆಯಿಂದ, ನಿಮ್ಮ ಮಾತು ಕೇಳಬೇಕು ಎಂಬ ವಿಶ್ವಾಸದಿಂದ. ಅದೆಲ್ಲಕ್ಕೂ ಅರ್ಹರಾಗಿ, ಮನಸ್ಸಿನಲ್ಲಿದ್ದ ಮಾತಾಡಿ. ನಿಷ್ಠೆ ಒಮ್ಮುಖವಾಗಿದ್ದರೆ, ಮಾತು ಹತ್ತು ಕಡೆ ಹರಿದರೂ ಚಿಂತೆಯಿಲ್ಲ, ಹೇಳಿ"

- ಎಂದರು ಪ್ರಧಾನಿ ನರಸಪ್ಪಯ್ಯ.

"ನಾನೊಂದು ಮಾತು ಹೇಳಬಹುದೇ...?"

- ಚಪ್ಪೇಚಾವಡಿಯ ದಳವಾಯಿ ಹುಚ್ಚಪ್ಪನಾಯಕ ಕೇಳಿದರು.

"ಹೇಳಿ - ಮಾತಾಡಬೇಕೆಂದೇ ನಿಮ್ಮನ್ನು ಕರೆಸಿದ್ದು."

“ಹಿರಿಯರಾದ ಪ್ರಧಾನಿಗಳು, ಎಂದೋ ನಡೆದು ದಳವಾಯಿಗಳ ಹೆಸರಿಗೆ ಶಾಶ್ವತ ಕಲಂಕ ತಂದ ದಳವಾಯಿ ಮುದ್ದಣ್ಣನ ಮಾತನ್ನು ನೆನಪಿಗೆ ತಂದು, ಈ ಹೊತ್ತು ನಾವು, ದಳವಾಯಿ ಜನ ಎದೆಮುಟ್ಟಿ ನೋಡಿಕೊಳ್ಳುವ ಹಾಗೆ ಮಾಡಿದ್ದಾರೆ. ಅವರು, ನಾಗತಿಯವರು, ನಮ್ಮನ್ನೆಲ್ಲಾ ಇಲ್ಲಿಗೆ, ಗುರುಸಮ್ಮುಖದಲ್ಲಿ ಏಕೆ ಕರೆಸಿದ್ದಾರೆ ಎಂದು ನಾನು ಬಲ್ಲೆ, ಆ ಹೊತ್ತು ಆದದ್ದನ್ನು ಮರೆತುಬಿಡಿ - ಕೈಜೋಡಿಸಿ ಕೇಳಿಕೊಳ್ಳುತ್ತೇನೆ. ಚಾವಡಿಯ ದಳವಾಯಿಗಳು ಆರು ಜನ ನಾವಿಲ್ಲಿದ್ದೇವೆ. ದಂಡಿನ ದಳವಾಯಿಗಳೂ ಇಲ್ಲಿದ್ದಾರೆ. ಅವರನ್ನು ನಾನು ಬಲ್ಲೆ, ಅವರ ಮನಸ್ಸನ್ನೂ ಬಲ್ಲೆ. ಅವರೆಲ್ಲರ ಪರವಾಗಿ ನಾನು ಹೇಳುತ್ತೇನೆ. ಆ ಮಾತಾಡಿಕೊಂಡೇ ನಾವಿಲ್ಲಿಗೆ ಬಂದಿದ್ದೇವೆ. ಆದ್ದರಿಂದ ನೀವು ಯಾವ ಪ್ರಮಾಣ ಮಾಡಬೇಕು - ಹೇಳಿ. ಹಾಗೆ ಪ್ರಮಾಣ ಮಾಡುತ್ತೇವೆ. ಸಿಂಹಾಸನಕ್ಕೆ ಯಾರು ಎಂದು ನಮ್ಮನ್ನು ಕೇಳಬೇಡಿ. ಇಂಥವರು ಎಂದು ಹೇಳಿ. ನೀವಾಡಿದ ಮಾತನ್ನು ಹೊತ್ತು ನಡೆಸುತ್ತೇವೆ. ಈ ಮಾತಿಗೆ ತಪ್ಪಿದರೆ, ನಮ್ಮ ನಾಲಗೆಯನ್ನು ಕತ್ತರಿಸಿ, ನಾಗತಿಯವರ ಪಾದರಕ್ಷೆಗೆ ತಳ ಹೊಲಿಸುತ್ತೇವೆ. ಆದ್ದರಿಂದ ಅರಮನೆಯವರೋ, ಗುರುಮನೆಯವರೋ, ಇಬ್ಬರನ್ನೂ ಅರಿತ ಪ್ರಧಾನಿಯವರೋ -ಯಾರಾದರೊಬ್ಬರು ದಾರಿ ತೋರಿಸಿ.”

ಹುಚ್ಚಪ್ಪನಾಯಕರಾಡಿದ ಮಾತನ್ನು ಕೇಳಿ, ಚಕಿತರಾಗಿ, ’ಇದು ನಿಜವೇ?’ ಎಂಬಂತೆ ನೆರೆದ ದಳವಾಯಿಗಳೆಲ್ಲರ ಮುಖ ನೋಡಿದರು ನರಸಪ್ಪಯ್ಯ, ಅವರು ಆಡಿದುದು ಅಲ್ಲ ಎಂದು ಯಾರೂ ಹೇಳಲಿಲ್ಲ. ಅವರ ಮುಖಭಾವದಲ್ಲೂ ಭಿನ್ನಾಭಿಪ್ರಾಯ ವ್ಯಕ್ತವಾಗಲಿಲ್ಲ.

“ಯಾವ ಮಾತೂ ಇಲ್ಲ. ಚರ್ಚೆಯಾಗಿ ನಿರ್ಧಾರವಾಗಬೇಕು ಎಂದು ಸಭೆ ಸೇರಿಸಿದ್ದೇವಿ....”

-ನರಸಪ್ಪಯ್ಯ ಹೇಳಿದರು.

“ನಮ್ಮನ್ನು ಕೇಳಲು ಕರೆಸಿದ್ದು ನಾಗತಿಯವರ ಹಿರಿಮೆ. ಅವರು ನಮ್ಮಲ್ಲಿ ತೋರಿದ ನಂಬಿಕೆ, ಗೌರವವನ್ನು ಉಳಿಸಿಕೊಳ್ಳದೆ ಹೋದರೆ ನಮ್ಮದು ನಾಯಿಬಾಳು. ರಾಜ್ಯಕ್ಕೆ ಹಿರಿಯರಾದವರು ನಮ್ಮಲ್ಲಿ, ನಮ್ಮ ಯೋಗ್ಯತೆಗೆ ಮೀರಿದಷ್ಟು ಗೌರವ ತೋರಿಸಿದ್ದೀರ. ಅದಕ್ಕೆ ಊನ ಬರದ ಹಾಗೆ ನಾವೂ ನಡೆದುಕೊಳ್ಳುತ್ತೇವೆ. ಆದ್ದರಿಂದ ದೊಡ್ಡನಾಗತಿಯವರು ಹೇಳಿದರೂ ಆಯಿತು, ರಾಜಗುರುಗಳು ಹೇಳಿದರೂ ಆಯಿತು - ದೊಡ್ಡವರು ದಾರಿ ತೋರಿಸಿ”

- ಹುಚ್ಚಪ್ಪನಾಯಕ ಶಪಥ ಮಾಡುವ ಧ್ವನಿಯಲ್ಲಿ ಹೇಳಿದರು.

“ದಳವಾಯಿಗಳು ಅರಮನೆಯ ಬಗ್ಗೆ ತೋರಿದ ವಿಶ್ವಾಸವನ್ನು ನಾವು ಮರೆಯುವುದಿಲ್ಲ. ’ನಮ್ಮದು ನಿಂತ ಪಟ್ಟ, ತಮ್ಮದು ಕುಳಿತ ಪಟ್ಟ’ ಎಂದು ನಮ್ಮ ಹಿರಿಯರು ಗುರುಪೀಠಕ್ಕೆ ಮಾತು ಕೊಟ್ಟಿದ್ದಾರೆ. ಆದ್ದರಿಂದ ಗುರುಗಳು ತಮ್ಮ ಅಭಿಪ್ರಾಯವನ್ನು ಅಪ್ಪಣೆಮಾಡಬೇಕು”

- ಎಂದು ರಾಜಗುರುಗಳಿಗೆ ಕೈಮುಗಿದು ಕೇಳಿದಳು, ಓಬವ್ವನಾಗತಿ.

“ನಮ್ಮದು ಅಪ್ಪಣೆ ಮಾಡುವ ಪೀಠವಲ್ಲ, ಆಶೀರ್ವಾದ ಮಾಡುವ ಪೀಠ. ನೀವೆಲ್ಲ ಯಾರನ್ನೂ ಸಿಂಹಾಸನಕ್ಕೆ ಆರಿಸಿದರೂ ಅವರಿಗೆ ನಮ್ಮ ಆಶೀರ್ವಾದವಿದ್ದೇ ಇದೆ. ಆ ಬಗ್ಗೆ ಆತಂಕ ಬೇಡ. ನೀವೇ ಆರಿಸಿ; ಅರ್ಹರಾದವರನ್ನು ಆರಿಸಿ; ಅಷ್ಟೇ ನಮ್ಮ ಅಭಿಪ್ರಾಯ”

-ಎಂದರು ಶ್ರೀ ಗುರುಪಾದದೇಶಿಕೇಂದ್ರ ಮಹಾಸ್ವಾಮಿಗಳು.

“ತಮ್ಮ ಅನುಗ್ರಹದ ಬಗ್ಗೆ ನಮಗಾರಿಗೂ ಅನುಮಾನವಿಲ್ಲ. ಆದರೂ ಅರಮನೆಗಿಂತ ಗುರುಮನೆಗೆ ಹೆಚ್ಚು ಜನ ಬಂದು ಹೋಗುತ್ತಾರೆ. ಅರಮನೆಯಲ್ಲಿ ಮಾತನಾಡುವುದಕ್ಕಿಂತ ಮಿಗಿಲಾಗಿ ಸನ್ನಿಧಾನದಲ್ಲಿ ಮನಬಿಚ್ಚಿ ಮಾತನಾಡುತ್ತಾರೆ. ಆದ್ದರಿಂದ ನಮಗೆ ತಿಳಿದಿರುವುದಕ್ಕಿಂತ ಹೆಚ್ಚಿನ ವಿಷಯ ತಮಗೆ ತಿಳಿದಿರುತ್ತದೆ. ಆದ್ದರಿಂದ ಈ ಹೊತ್ತಿನಲ್ಲಿ ಹೊರಗಿನ ಜನ ಏನು ಹೇಳುತ್ತಾರೆ ಎನ್ನುವುದನ್ನಾದರೂ ಸನ್ನಿಧಾನ ತಿಳಿಸಬಹುದಲ್ಲ”

– ಪ್ರಧಾನಿ ನರಸಪ್ಪಯ್ಯ ಹೇಳಿದರು.

“ಪ್ರಧಾನಿಗಳು ನಡತೆಯಲ್ಲಿ ಎಷ್ಟು ನಿಷ್ಠುರೋ, ಮಾತಿನಲ್ಲಷ್ಟೂ ನಿಪುಣರು. ಹತ್ತು ಜನ ಆಡುವ ಮಾತು ನಮ್ಮ ಕಿವಿಗೂ ಬಿದ್ದಿರುವುದು ನಿಜ. ಅಂಥ ಮಾತು, ತಳವಾರಚಾವಡಿಯ ಮುಖಾಂತರ ನಿಮ್ಮ ಕಿವಿಯನ್ನೂ ಮುಟ್ಟಿರಬೇಕಲ್ಲ....ಆಡಿಕೆಯ ಮಾತನ್ನು ನಮ್ಮ ಬಾಯಲ್ಲಿ ಆಡಿಸುವುದೇಕೆ?” – ರಾಜಗುರುಗಳು ಕೇಳಿದರು.

“ಸನ್ನಿಧಾನ ಹೇಳಿದ್ದರಲ್ಲಿ ತಪ್ಪಿಲ್ಲ. ತಳವಾರಚಾವಡಿಯ ಜನ ಅಷ್ಟಿಷ್ಟು ಸುದ್ದಿಯನ್ನು ನಮ್ಮ ಕಿವಿಗೂ ಮುಟ್ಟಿಸಿದ್ದಾರೆ; ತಮ್ಮ ಕಿವಿಗೆ ಬಿದ್ದ ಮಾತು, ನಮ್ಮ ಕಿವಿಗೆ ಬಿದ್ದ ಮಾತೂ ಒಂದೇ ಏನೋ ಎಂದು ತಿಳಿಯುವುದಕ್ಕಾಗಿ ಕೇಳಿದೆ” – ನರಸಪ್ಪಯ್ಯ ಹೇಳಿದರು.

“ಅಷ್ಟಕ್ಕೇ ಆದರೆ, ಹೇಳಲು ನಮಗೇನೂ ಅಭ್ಯಂತರವಿಲ್ಲ. ನಾವು ಕೇಳಿ, ಹೇಳಿದ ಮಾತನ್ನು ನಮ್ಮ ಅಭಿಪ್ರಾಯ ಎಂದು ಯಾರೂ ಭಾವಿಸಬಾರದು”

– ಎಂದು ರಾಜಗುರುಗಳು ಹೇಳಿದರು.

ಅವರಿಬ್ಬರೂ ಆಡಿದ ಮಾತನ್ನು ಕೇಳಿ, ನಾಗತಿಯವರ ಕಿವಿ ಚುರುಕಾಯಿತು. ಮನದಲ್ಲಿ ಕೊಂಚ ಆತಂಕ ಮೂಡಿತು.

“ತಾವಿಬ್ಬರೂ ಏನು ಕೇಳಿದಿರೋ ಅದನ್ನು ಹೇಳಬೇಕು” – ಎಂದರು ಓಬವ್ವನಾಗತಿ.

ಅಷ್ಟು ಹೊತ್ತು ಎತ್ತಲೋ ಸುತ್ತಿದ ಮಾತು, ರಾಜಗುರುಗಳ, ಪ್ರಧಾನಿಗಳ ಮಾತಿನಿಂದ ಒಂದು ನಿರ್ದಿಷ್ಟ ದಿಕ್ಕಿನತ್ತ ಹರಿದಂತಾಗಿ, ಅದೇನೆಂದು ತಿಳಿಯಲು ಎಲ್ಲರ ಆಸಕ್ತಿಯೂ ಕೆರಳಿತು. ಎಲ್ಲರೂ ಅವರತ್ತಲೇ ಮುಖಮಾಡಿ ನೋಡಿದರು.

"ರಾಜ್ಯದ ಹಿತಚಿಂತಕರು ನಮ್ಮಲ್ಲಿ ಆಡಿದ ಮಾತನ್ನು ಮಾತ್ರ ಹೇಳುತ್ತಿದ್ದೇವೆ. ನಾವು ಕೇಳಿದುದು ಇಷ್ಟು, ಹೊಸದುರ್ಗದ ಸೇನಾಧಿಪತಿಗಳೂ, ಕೈಲಾಸವಾಸಿಗಳಾದ ರಾಜಾ ಹಿರೇಮದಕರಿನಾಯಕರ ತಮ್ಮಂದಿರೂ ಆಗಿರುವ ದಂಡಿನದಳವಾಯಿ ಜಂಪಣ್ಣನಾಯಕರ ಕುಮಾರ ಭರಮಪ್ಪನಾಯಕರಿಗೆ ಪಟ್ಟಕಟ್ಟಿದರೆ ಆದೀತು ಎಂಬುದು ಹಲವರ ಅಭಿಪ್ರಾಯ"

- ಶ್ರೀ ಗುರುಪಾದದೇಶಿಕೇಂದ್ರ ಮಹಾಸ್ವಾಮಿಗಳು ಹೇಳಿದರು.

"ತಳವಾರಚಾವಡಿಯ ಮುಖಾಂತರ ನಮ್ಮ ಕಿವಿಯನ್ನು ಮುಟ್ಟಿದ ಹೆಸರೂ ಅದೇ. ಆ ಬಗ್ಗೆ ಉಳಿದವರು ತಮ್ಮ ಅಭಿಪ್ರಾಯ ತಿಳಿಸಬೇಕು" - ಎಂದರು ನರಸಪ್ಪಯ್ಯ.

ಅವರಿಬ್ಬರೂ ಹೇಳಿದ ಮಾತು ಉಳಿದವರಿಗೂ ಸಮರ್ಪಕವೆಂದು ಕಂಡಿತು. ಹಿರೇಮದಕರಿನಾಯಕರ ಖಾಸಾ ತಮ್ಮನ ಮಗನೇ ಇರುವಾಗ, ಅತ್ತಿತ್ತ ಹುಡುಕಾಡುವುದೇಕೆ? ಯಾರೋ ದೂರದವರು ಸಿಂಹಾಸನಕ್ಕೆ ಬರುವುದೇಕೆ? – ಎಂದೇ ಅನಿಸಿತು.

"ಹಿರಿಯ ನಾಗತಿಯವರೂ ಉಳಿದ ಹಿರಿಯರೂ ಒಪ್ಪಿದರೆ, ಆ ಹೆಸರಿಗೆ ನಮ್ಮ ಅಭ್ಯಂತರ ಏನೂ ಇಲ್ಲ. ರಾಜ್ಯಾಧಿಕಾರ ಖಾಸಾ ವಂಶಸ್ಥರಲ್ಲೇ ಉಳಿದಂತಾಗುತ್ತದೆ"

-ಉಳಿದ ದಳವಾಯಿಗಳ ಪರವಾಗಿ ದಳವಾಯಿ ಭರಮಣ್ಣ ಹೇಳಿದ.

ಆ ಮಾತಿಗೆ ನಾಗತಿಯವರು ಏನು ಹೇಳುವರೋ ಎಂದು ಎಲ್ಲರೂ ನಾಗತಿಯವರ ಮುಖ ನೋಡಿದರು. ಆದರೆ ಅವರ ಮಾತು ನಾಗತಿಯವರಿಗೆ ಒಪ್ಪಿಗೆಯಾದಂತೆ, ಅವರ ಮುಖ ಲಕ್ಷಣದಿಂದ ಅನಿಸಲಿಲ್ಲ. ಅವರೇನು ಹೇಳುವರೋ ಎಂದು ಎಲ್ಲರ ಕಿವಿಗಳೂ ಕಾತರವಾದವು.

ಅಷ್ಟು ಹೊತ್ತು ಓಬವ್ವನಾಗತಿ ಏನೂ ಹೇಳಲಿಲ್ಲ.

"ಹೀಗೆಂದು ಹೇಳಬೇಕಾದ ನಾಗತಿಯವರು ಸುಮ್ಮನೆ ಕುಳಿತರೆ ಹೇಗೆ? ನಿಮ್ಮ ಮನಸ್ಸಿನಲ್ಲಿರುವುದನ್ನು ನಮ್ಮಲ್ಲಿ ನಂಬಿಕೆ ಇಟ್ಟು ಹೇಳಬೇಕು" - ರಾಜಗುರುಗಳೇ ಹೇಳಿದರು.

"ನೀವೆಲ್ಲರೂ ನಿಮ್ಮ ಆಯ್ಕೆಯನ್ನು ಹೇಳಿದಿರಿ. ಎಲ್ಲರೂ ಒಟ್ಟಾಗಿ ಹೇಳಿದ ಬಳಿಕ ನಮ್ಮ ಮಾತಿಗೆ..."

"ನಾವು ನಮ್ಮ ಆಯ್ಕೆಯನ್ನು ಹೇಳಲಿಲ್ಲ. ಹಾಗೆಂದು ತಾವು ತಿಳಿಯಬಾರದು. ನಾವು ಕೇಳಿದ ವಿಚಾರ. ಆ ಬಗ್ಗೆ ನಮ್ಮ ಅಭಿಪ್ರಾಯ ಹೇಳಿದೆವು. ಆದರೂ ಈಗಲೂ ನಮ್ಮದು

ಮುಕ್ತಮನಸ್ಸು, ತೆರೆದ ಹೃದಯ. ನಿರಾತಂಕವಾಗಿ ನಾಗತಿಯವರು ತಮ್ಮ ಅಭಿಲಾಷೆಯನ್ನು ಹೇಳಬೇಕು" – ನರಸಪ್ಪಯ್ಯ ಹೇಳಿದರು.

"ನಾವು ಹೇಳಲಿರುವುದು ನಾವು ಕೇಳಿದ ಮಾತೂ ಅಲ್ಲ, ಯೋಚಿಸಿದ ಅಭಿಪ್ರಾಯವೂ ಅಲ್ಲ. ನಮ್ಮನ್ನು ಕೈಹಿಡಿದು ಆಳಿದ, ಇದ್ದಾಗಲೂ, ಸ್ವರ್ಗವೇರಿದಮೇಲೂ ನಮ್ಮ ಬದುಕಿಗೆ ದಾರಿದೀಪವಾಗಿರುವ, ನೀವೆಲ್ಲ ಹೇಳಿದ ಹಿರಿಯರೇ ನಮಗೆ ಸ್ವಪ್ನದಲ್ಲಿ ಬಂದು ಹೇಳಿದ ಮಾತನ್ನು ತಮ್ಮ ಮುಂದೆ ಇಡುತ್ತಿದ್ದೇನೆ...."

– ಅಷ್ಟು ಹೇಳಿ ಮಾತನ್ನು ತಡೆದರು ಓಬವ್ವನಾಗತಿ.

"ಅವರೇನು ಹೇಳಿದರು, ಹೇಳಿ" – ನರಸಪ್ಪಯ್ಯ ಕೇಳಿದರು.

"ಅದು ಕನಸಿನ ಮಾತು...."

"ಹಿರೇ ಮದಕರಿನಾಯಕರು ಸ್ವಪ್ನದಲ್ಲಿ ಹೇಳಿದ ಮಾತೂ ನಮಗೆ ವೇದವಾಕ್ಯ ಕಟ್ಟಪ್ಪಣೆ"

- ದಳವಾಯಿ ಭರಮಣ್ಣ ಹೇಳಿದರು.

"ನಮಗೂ ಅವರ ಮಾತೆಂದರೆ ಅಷ್ಟೆ. ಮುಂದೇನು ಮಾಡುವುದು ಎಂದು ಚಿಂತಿಸುತ್ತಿದ್ದಾಗ, ನಿನ್ನೆ ಒಳ್ಳೇ ಬೆಳಗಿನ ಝಾವದ ಹೊತ್ತಿನಲ್ಲಿ ಅವರು ಕನಸಿನಲ್ಲಿ ಕಾಣಿಸಿಕೊಂಡು – 'ನಾನು ಸತ್ತಿಲ್ಲ, ಬದುಕಿದ್ದೇನೆ. ಜಾನಕಲ್ಲುದುರ್ಗದ ತೊದಲು ಭರಮಣ್ಣನಾಯಕರ ಮಗನಾಗಿ ಹುಟ್ಟಿ ಬೆಳೆಯುತ್ತಿದ್ದೇನೆ. ಅವರಿವರನ್ನು ಸಿಂಹಾಸನಕ್ಕೆ ತರುವ ಮಾತು ಬಿಟ್ಟು. ನನಗೇ ಪಟ್ಟಕಟ್ಟು' ಎಂದರು. ಕನಸಿನಲ್ಲಿ ಕೇಳಿದ ಮಾತು - ಈಗಲೂ ಕಿವಿಯಲ್ಲಿ ಮೊಳಗುತ್ತಿದೆ. ನಾನು ಸಾವಿರ ಬಾರಿ ಕೇಳಿದ ನನ್ನವರ ಧ್ವನಿಯೇ, 'ಆಯಿತು, ನಿಮ್ಮ ಮಾತು ನಡೆಸುತ್ತೇನೆ' ಎಂದು ಅವರ ಪಾದ ಮುಟ್ಟಿ ಹೇಳಿದೆ...."

"ಅಲ್ಲಿಗೆ ಮುಗಿಯಿತಲ್ಲ...." - ಹುಚ್ಚಪ್ಪನಾಯಕ ಹೇಳಿದರು.

"ಆದರೂ ಆದು ಕನಸಿನ ಮಾತು. ಅದು ಸತ್ಯವೋ ಅಲ್ಲವೋ ಎಂದು ಪರೀಕ್ಷಿಸಲು, ಇಲ್ಲಿಗೆ ಬರುವ ಮೊದಲು ನಾನು ದೇವರೆಂದು ಪೂಜಿಸುವ ಅವರ ಚಿತ್ರದ ಮುಂದೆ, ಎರಡು ಬಣ್ಣದ ಹೂವು ಹಾಕಿ 'ಈಗೇನು ಹೇಳುತ್ತೀರೋ ಹೇಳಿ' ಎಂದು ಕೇಳಿ, ಹೊನ್ನವ್ವೆಯ ಕೈಯಲ್ಲಿ ಹೂವೆತ್ತಿಸಿದೆ. ಅದೇ ಉತ್ತರವೇ ಬಂತು. ಹೌದೋ-ಅಲ್ಲವೋ, ಹೊನ್ನವ್ವೆ ಇಲ್ಲಿಯೇ ಇದ್ದಾಳೆ - ಕೇಳಿ....ನಾನೇನು ಮಾಡಬೇಕೋ ಹೇಳಿ" - ಎಂದರು ಓಬವ್ವನಾಗತಿ.

"ನಿಮ್ಮ ಮಾತಿನಲ್ಲಿ ನಮಗೆಲ್ಲರಿಗೂ ನಂಬಿಕೆಯಿದೆ. ಮೂರನೆಯವರನ್ನು ಕೇಳಬೇಕಾದ ಪ್ರಮೇಯವೇನೂ ಇಲ್ಲ. ತಾವು ಇಷ್ಟು ಮಾತನ್ನು ಮೊದಲೇ ಹೇಳಿದ್ದರೆ, ಮತ್ತೊಬ್ಬರ ಹೆಸರು ಬರುವ ಅವಕಾಶವೇ ಇರುತ್ತಿರಲಿಲ್ಲ" – ನರಸಪ್ಪಯ್ಯ ಹೇಳಿದರು.

"ಹೇಳಬಹುದಾಗಿತ್ತು. ಆದರೆ ವಿಚಾರಕ್ಕೆ ನಿಮ್ಮೆಲ್ಲರನ್ನೂ ಕರೆಸಿ, 'ನನಗೆ ಹೀಗೆ ಕನಸಾಯಿತು' ಎಂದು ಹೇಳಿಕಳಿಸಲು ಮನಸಾಗಲಿಲ್ಲ. ನೀವೂ ಇದ್ದ ಮಾತು ಹೇಳಿದಿರಿ. ನಾವೂ ಇದ್ದದ್ದನ್ನು ಹೇಳಿದ್ದೇವೆ. ಮುಂದೇನು ಮಾಡಬೇಕೋ - ಗುರುಗಳಿದ್ದಾರೆ, ಪ್ರಧಾನಿಗಳಿದ್ದಾರೆ, ದಳವಾಯಿಗಳು, ಪಟ್ಟಣಶೆಟ್ಟರು ಎಲ್ಲರೂ ಇದೀರ. ಕನಸಿನ ಮಾತಿಗೆ ಹೂ ಎನ್ನುತ್ತಿರೋ, ಹತ್ತು ಜನರ ಮಾತಿಗೆ ಬೆಲೆ ಕೊಡುತ್ತೀರೋ, ತಿಳಿದಂತೆ ಮಾಡಿ"

- ಓಬವ್ವನಾಗತಿ ಯಾವ ಭಾವವಿಕಾರವೂ ಇಲ್ಲದ ಧ್ವನಿಯಲ್ಲಿ ಹೇಳಿದರು.

"ಬೆಳಗಿನ ಝಾವದ ಕನಸಿನಲ್ಲಿ, ಹೂವಿನ ಶಾಸ್ತ್ರದ ಬಾಯಲ್ಲಿ ಹಿರಿನಾಯಕರು ಆಡಿದ ಮಾತಿಗೆ ಎದಿರು ಹೇಳಿದರೆ, ನಮ್ಮ ಬಾಯಲ್ಲಿ ಹುಳ ಸುರಿದಾವು. ಅವರಿಟ್ಟ ಅನ್ನ ಉಂಡವರು ನಾವು. ಇನ್ನು ಬೇರೆ ಮಾತಿಲ್ಲ. ನಾನು ಮೊದಲೇ ಹೇಳಿದೆ - ಮಾತು ನಿಮ್ಮದು, ನಡೆಸುವ ಆಳು ನಾವು. ನೀವು ಹೇಳಿದಿರಿ, ನಿಮ್ಮ ಬಾಯಲ್ಲಿ ಹಿರಿಯ ನಾಯಕರು ಈ ಮಾತು ಹೇಳಿದರು ಎಂದಮೇಲೆ ಮುಗಿದೇಹೋಯಿತು. ಏನೇನು ಮಾತಾಗುತ್ತದೆ ಎಂದು ಹೆದರಿದ್ದೀವಿ. ದೊಡ್ಡನಾಗತಿಯವರ ಮಾತಿನಿಂದ ಬೆಟ್ಟದಂಥ ಮಾತು ಹೂವಿನ ಸರ ಎತ್ತಿವಷ್ಟು ಹಗುರಾಯಿತು. ಯಾರೇನಾದರೂ ಹೇಳಲಿ - ನಾನು ದಳವಾಯಿಗಳ ಪರವಾಗಿ ಹೇಳುತ್ತೇನೆ - ಅವ್ವ, ನಿಮ್ಮ ಮಾತು ನಡೆಸುವುದಕ್ಕೆ ನಾವು ತಲೆಕೊಡುತ್ತೇವೆ"

- ಎಂದು ಓಬವ್ವನಾಗತಿಯ ಪಾದದ ಬಳಿ ತನ್ನ ಕತ್ತಿಯನ್ನಿಟ್ಟು, ಆಕೆಯ ಪಾದಕ್ಕೆ ಅಡ್ಡ ಬಿದ್ದು ಹೇಳಿದ ಹುಚ್ಚಪ್ಪನಾಯಕ.

ಆತನ ಮಾತಿಗೆ ಸಮ್ಮತಿಸಿದಂತೆ ಮತ್ತೆ ಹತ್ತು ಕತ್ತಿ ನಾಗತಿಯ ಚರಣಕ್ಕೆ ತಲೆಬಾಗಿದವು.

"ನಿಮ್ಮ ಮಾತಿಗೆ ನಮ್ಮ ಹರಕೆಯೂ ಇದೆ" - ಎಂದರು ರಾಜಗುರುಗಳು.

"ನೀವೆಲ್ಲರೂ ನಮ್ಮ ಮಾತಿಗೆ ಒಪ್ಪಿ ನನ್ನನ್ನು ಬದುಕಿಸಿದಿರಿ. ಮಾತು ಮುಗಿಯಿತು ಎಂದಾದರೆ, ಸಭೆ ಮುಗಿಸಬಹುದು" - ಎಂದರು ಓಬವ್ವನಾಗತಿ.

ಆ ಮಾತಿಗೆ ಯಾರೂ ಪ್ರತಿಯಾಡಲಿಲ್ಲ.

"ಮಾತು ಮುಗಿಯಿತು; ಕಲೆತ ಕೆಲಸವೂ ಆಯಿತು. ಆದರೆ ಓಲಗಶಾಲೆಯಲ್ಲಿ ಬಹಿರಂಗವಾಗಿ ಪ್ರಕಟಿಸುವವರೆಗೂ ಇಲ್ಲಾದ ಮಾತನ್ನು ಯಾರೂ ಹೊರಗಾಡಬಾರದು. ಇದು ಬೇಡಿಕೆಯಷ್ಟೇ ಅಲ್ಲ, ಹಿರಿಯ ನಾಗತಿಯವರ ಪರವಾಗಿ ನಾವು ಮಾಡುವ ರಾಜಾಜ್ಞೆ.

ಉಳಿದವರಿಗೆ ಮಾತ್ರ ಇದು ಆಜ್ಞೆ, ಗುರುಗಳಲ್ಲಿ ಇದು ನಮ್ಮ ನಮ್ಮ ಪ್ರಾರ್ಥನೆ" – ಎಂದರು ನರಸಪ್ಪಯ್ಯ.

"ಆದರೆ ನಾವಿನ್ನು ಹೊರಡಬಹುದೇ ?"

– ಎಂದು ಕೊಂಚ ದಣಿದ ಧ್ವನಿಯಲ್ಲಿ ಕೇಳಿದರು ಓಬವ್ವನಾಗತಿ.

"ತಾವು ಹೋಗಿ ವಿಶ್ರಾಂತಿ ತೆಗೆದುಕೊಳ್ಳಿ. ನಿಶ್ಚಿಂತರಾಗಿರಿ. ಶಿವಾನುಗ್ರಹದಿಂದ ಎಲ್ಲವೂ ಒಳಿತಾಗುತ್ತದೆ"

- ಎಂದು ನಮಸ್ಕರಿಸಿದ ಓಬವ್ವನಾಗತಿಯನ್ನು ಹರಸಿ ಹೇಳಿದರು ಶ್ರೀ ಗುರುಪಾದ ದೇಶಿಕೇಂದ್ರ ಮಹಾಸ್ವಾಮಿಗಳು.

ಸಭೆಗೆ ಕೈಮುಗಿದು ಒಬವ್ವನಾಗತಿ ಹೊನ್ನವ್ವ ಕೊಟ್ಟ ಕೋಲನ್ನು ಹಿಡಿದು ಮೇಲೆದ್ದರು.

ಸಭೆ ಕದಲಿತು.

ಆಪ್ತಾಲೋಚನಾಸಭೆಯಲ್ಲಿ ನಡೆದುದೆಲ್ಲವೂ ಹೊನ್ನವ್ವೆಗೆ ಸೋಜಿಗವನ್ನುಂಟುಮಾಡಿತ್ತು. ಅದು ನಡೆದಷ್ಟು ಹೊತ್ತು, ಆಕೆ ಯಾವುದೋ ಕನಸಿನ ಲೋಕದಲ್ಲಿದ್ದಂತಿದ್ದಳು.

ನಾಗತಿಯವರು ಹೊನ್ನವ್ವೆಯನ್ನು 'ಈಕೆ ನನ್ನ ಕಿವಿ, ಕಣ್ಣು' ಎಂದ ಮಾತಿನಲ್ಲಿ ಉತ್ಪ್ರೇಕ್ಷೆಯೇನೂ ಇರಲಿಲ್ಲ. ನಾಗತಿ ಮಾಡಿದುದಕ್ಕೆಲ್ಲಾ ಆಕೆಯ ನೆರವು ಇದ್ದೇ ಇರುತ್ತಿತ್ತು. ತವರು ಮನೆಯಿಂದ ತನ್ನೊಂದಿಗೆ ಬಂದು, ತನ್ನ ಬೆನ್ನಲ್ಲಿ ಬಿದ್ದವಳಿಗಿಂತ ಹೆಚ್ಚಿನ ಪ್ರೀತಿ, ನಿಷ್ಠೆಯಿಂದ ನಡೆದುಕೊಂಡ ಹೊನ್ನವ್ವೆಯಲ್ಲಿ 'ರಾಜರಹಸ್ಯ' ಎನಿಸಿಕೊಳ್ಳುವ ಮಾತನ್ನುಳಿದು, ಮಿಕ್ಕೆಲ್ಲ ಸುಖ-ದುಃಖದ ಮಾತುಗಳನ್ನೆಲ್ಲಾ ತೋಡಿಕೊಂಡಿದ್ದರು. ಓಬವ್ವನಾಗತಿಗೆ ಏನಾದರೂ ಮಾಡಬೇಕು ಎನಿಸಿದರೆ ಮೊದಲದನ್ನು ಹೇಳುತ್ತಿದ್ದುದೇ ಹೊನ್ನವ್ವೆಗೆ. ಗಂಡ, ಮಕ್ಕಳು, ಸೊಸೆಯರಿಗೆ ಹೇಳಬೇಕಾದ ಮಾತನ್ನು ಬಿಟ್ಟು, ಬೇರೆ ಯಾರಿಗಾದರೂ ಏನನ್ನಾದರೂ ಹೇಳಬೇಕೆಂದಿದ್ದರೆ, ಆ ಮಾತಿಗೆ ಹೊನ್ನವ್ವೆಯೇ ನಾಗತಿಯ ನಾಲಗೆಯಾಗಿದ್ದಳು. ಇಷ್ಟು ವರ್ಷ ಎಂದೂ ಆ ಸಂಬಂಧದಲ್ಲಿ ತೊಡಕು ಬಂದಿರಲಿಲ್ಲ. ಮಧ್ಯೆ ಒಮ್ಮೆ ವಯಸ್ಸಿಗೆ ಬಂದ ಹೊನ್ನವ್ವೆಗೆ, ನಾಗತಿಯೇ ಮುಂದಾಗಿ ನಿಂತು, ತಕ್ಕ ಗಂಡನನ್ನು ಆರಿಸಿ, ಆಕೆಯ ಮದುವೆ ಮಾಡಿದ್ದರು. ಮದುವೆಯಾಗಿ, ಬೇರೆ ಸಂಸಾರ ಹೂಡಬೇಕಾಗಿ ಬಂದ ಒಂದೆರಡು ವರ್ಷ, ಹೊನ್ನವ್ವೆ ದಿನದಲ್ಲಿ ಅಷ್ಟು ಹೊತ್ತು, ಗಂಡ-ಸಂಸಾರ

ಎಂದು ಹೊರಗೆ ಹೊತ್ತು ಕಳೆಯುತ್ತಿದ್ದಳು. ಆದರೆ ಆನೆಗೊಂದಿಯಿಂದ ದುರ್ಗಕ್ಕೆ ಕೂಡಿ ಬಂದ ಅವರು, ದಿನದಲ್ಲಿ ಹಲವಾರು ಗಂಟೆಗಳ ಕಾಲವಾದರೂ ಬೇರೆಯಾಗಿರುವುದು ವಿಧಿಯ ಮನಸ್ಸಿಗೆ ಬರಲಿಲ್ಲವೋ, ಏನೋ. ನಾಯಕರ ಸೇನೆಯಲ್ಲಿ ಸಿಪಾಯಿಯಾಗಿದ್ದ ಹೊನ್ನವ್ವೆಯ ಗಂಡ, ಆಕೆಗೆ ಮಕ್ಕಳನ್ನು ಕೊಡದೆ, ನಾಯಕರು ಪಟ್ಟಕ್ಕೆ ಬಂದ ತರುಣದಲ್ಲೇ ಬಿದನೂರಿನ ಪಾಳಯಗಾರರೊಂದಿಗೆ ನಡೆದ ರಾಮಗಿರಿ ಯುದ್ಧದಲ್ಲಿ ತೀರಿಹೋಗಿ, ಶಾಸ್ತ್ರಕ್ಕೆ ಬೇರೆ ಮನೆ ಮಾಡಿದ ಹೊನ್ನವ್ವೆ, ತನ್ನ ಕಂಪಳ ತೆಗೆದುಕೊಂಡು ಬಂದು ಮತ್ತೆ ಆರಮನೆಯನ್ನು ಸೇರಿದ್ದಳು. ಅದಾಗಿ ಎಷ್ಟು ವರ್ಷವಾಯಿತೋ - ಆ ಬಳಿಕ, ಓಬವ್ವನಾಗತಿಯವರ ಶಯ್ಯಾಗೃಹಕ್ಕೆ ಸಮೀಪವಾದ ಒಂದು ಕಿರು ಕೋಣೆ ಹೊನ್ನವ್ವೆಯ ಹೆಸರಿನಲ್ಲಿ ಉಳಿದಿದ್ದರೂ, ಹೊನ್ನವ್ವೆ ಇರುತ್ತಿದ್ದುದು ಮಾತ್ರ, ನಾಗತಿಯವರ ಶಯ್ಯಾಗೃಹದಲ್ಲೇ. 'ಊಟ-ತಿಂಡಿಗೂ ಹೊರಗೆ ಹೋಗುವುದು ಬೇಡ' ಎಂದು ಹೇಳಿ, ತಾನು ಉಣ್ಣುವ ಊಟದಲ್ಲಿ, ಅಷ್ಟನ್ನು ಓಬವ್ವನಾಗತಿ ಹೊನ್ನವ್ವೆಗೆ ಕೊಡುತ್ತಿದ್ದರು. ಬೇರೆ ಮಲಗುವುದಕ್ಕೂ ಬಿಡದೆ, 'ಒಂದು ಹೊತ್ತಿನಲ್ಲಿ ಏನಾದರೂ ಬೇಕಾದರೆ, ಯಾರನ್ನು ಕೂಗಲಿ? ನೀನು ದೂರ ಮಲಗುವುದು ಬೇಡ. ಇಷ್ಟು ದೊಡ್ಡ ಕೊಠಡಿ. ಒಬ್ಬಳೇ ಮನುಷ್ಯರು ಮುಟ್ಟಿದ ಗುಬ್ಬಿಯ ಹಾಗೆ, ಒಂಟಿಯಾಗಿ ಹೇಗಿರಲಿ. ನೀನೂ ಇಲ್ಲೇ ಬಂದಿರು' ಎಂದು ಹೇಳಿ, ತಮ್ಮ ಶಯ್ಯಾಗೃಹದಲ್ಲೇ, ಹೊನ್ನವ್ವೆಗೂ ಮಲಗಲೊಂದು ತಾವು ಮಾಡಿಕೊಟ್ಟಿದ್ದರು. ಅಂದಿನಿಂದ ಅವರಿಬ್ಬರೂ, ಒಬ್ಬರು ನಾಗತಿ, ಇನ್ನೊಬ್ಬಳು ಊಳಿಗದಾಕೆಯಾದರೂ ಗೆಳೆವಕ್ಕಿಗಳಂತೆ, ಆ ಕೋಣೆಯಲ್ಲಿ ಜೀವನ ನಡೆಸುತ್ತಿದ್ದರು - ಒಬ್ಬರೊಬ್ಬರ ನಗು-ಕಣ್ಣೀರನ್ನು ಸಮಸಮನಾಗಿ ಹಂಚಿಕೊಂಡು, ವರ್ಷಗಳು ಕಳೆದ ಹಾಗೆ ಆ ಬೆಸುಗೆ ಬಲವಾಗಿತ್ತೇ ವಿನಾ, ಯಾರ ಮಾತು, ಯಾವ ಕಾರಣಕ್ಕೂ ಸಡಿಲವಾಗಿರಲಿಲ್ಲ.

ಅವರಿಬ್ಬರೂ ಹೀಗಿದ್ದುದರಿಂದಲೇ, ಆ ದಿನದ ಸಭೆಯಲ್ಲಿ ಓಬವ್ವನಾಗತಿಯವರಾಡಿದ ಬಹಳ ಮಾತು, ಹೊನ್ನವ್ವೆಗೆ ಆಶ್ಚರ್ಯವನ್ನುಂಟುಮಾಡಿತ್ತು.

ಸಭೆಗೆ ಹೋಗುವ ಮುನ್ನ, ಓಬವ್ವನಾಗತಿಯವರು ತಮ್ಮ ಪತಿಯ ಚಿತ್ರದ ಮುಂದೆ ನಿಂತು ಹೂವಿನಶಕುನ ಕೇಳಿದುದನ್ನು ಆಕೆ ಕಣ್ಣಾರೆ ಕಂಡಿದ್ದಳು. ಆದರೆ ಕನಸುಬಿದ್ದ ಮಾತು, ಇಂಥವರು ಸಿಂಹಾಸನಕ್ಕೆ ಬರಬೇಕು ಎಂದು ಓಬವ್ವನಾಗತಿಯವರು ಯೋಚನೆ ಮಾಡಿದ್ದು - ಇದಾವುದೂ ಆಕೆಗೆ ತಿಳಿದಿರಲಿಲ್ಲ. ಜಡವಾದ ಕೊರಡಿನಂತೆ, ಇದ್ದೆಡೆಯನ್ನು ಬಿಟ್ಟಗಲದೆ ಇದ್ದ ಓಬವ್ವನಾಗತಿಯವರು ಇಷ್ಟೆಲ್ಲಾ ಯೋಚನೆ ಮಾಡಿದ್ದು ಯಾವಾಗ ? ಆ ಮಾತಿನ ಸುಳುವಿನ ಎಳೆಯನ್ನು ತನಗೂ ಹೇಳದೆ ಇಟ್ಟದ್ದು ಏಕೆ ? - ಎಂದು ಏನೇನೋ ಯೋಚನೆ ಮಾಡಿದಳು. ಯೋಚಿಸುತ್ತಾ, ಯೋಚಿಸುತ್ತಾ ತಾನೆಲ್ಲಾ ಬಲ್ಲೆ ಎಂದುಕೊಂಡ ನಾಗತಿಯವರ ಮನಸ್ಸಿನ

ನದಿಯಲ್ಲೂ, ತನಗರಿವಾಗದ ಮಡವುಗಳಿವೆ ಎನಿಸಿ, ಆಶ್ಚರ್ಯವಾಗಿ, ಹೊತ್ತು ಸಿಕ್ಕಾಗ ಆ ಮಾತನ್ನು ಕೇಳಬೇಕು ಎಂದುಕೊಂಡಿದ್ದಳು. ಆದರೆ ಅದಕ್ಕೆ ಅವಕಾಶವೇ ಸಿಗಲಿಲ್ಲ.

ಓಬವ್ವನಾಗತಿಯವರು ಸಭೆಯನ್ನು ಮುಗಿಸಿಕೊಂಡು ಬಂದು, ಮಂಚದ ಮೇಲಿದ್ದ ಲೋಡಿಗೆ ಮೈಯಾನಿಸಿ, ಕಾಲುಚಾಚಿ ಮಲಗಿ ವಿಶ್ರಾಂತಿ ತೆಗೆದುಕೊಳ್ಳಬೇಕು ಎನ್ನುವಷ್ಟರಲ್ಲೇ, ಅಂತಃಪುರದ ಬಾಗಿಲು ಊಳಿಗದಾಕೆ ಒಳಗೆ ಬಂದು –

"ಪ್ರಧಾನಿಯವರು ತಮ್ಮನ್ನು ಕಾಣಬೇಕೆಂದು ಬಂದಿದ್ದಾರೆ. 'ನಿಮ್ಮ ಸಮಯ ತಿಳಿದು ಕೊಂಡು ಹೇಳು' ಎಂದರು. ಅವರಿಗೆ ಏನು ಹೇಳಬೇಕೋ ಅಪ್ಪಣೆಯಾಗಬೇಕು" – ಎಂದಳು.

ಓಬವ್ವನಾಗತಿಗೆ ಸಭೆಯ ಮಾತುಕತೆಯಿಂದ ಆಯಾಸವಾಗಿತ್ತು ಎಂಬುದನ್ನು ಅವರ ಮುಖಲಕ್ಷಣದಿಂದಲೇ ಅರ್ಥಮಾಡಿಕೊಂಡ ಹೊನ್ನವ್ವೆಗೆ 'ಈಗ ಬಿಡುವಿಲ್ಲ, ಮತ್ತೊಮ್ಮೆ ಅಷ್ಟು ಹೊತ್ತು ಬಿಟ್ಟು ಬರಲಿ' ಎಂದು ಹೇಳಿಕಳಿಸಬೇಕೆನಿಸಿದರೂ, 'ಅದು ತಾನಾಡಬಹುದಾದ ಮಾತಲ್ಲ' ಎಂಬ ಎಚ್ಚರದಿಂದ, 'ಓಬವ್ವನಾಗತಿಯವರೇ ಆ ಮಾತಿಗೆ ಏನು ಹೇಳುವರೋ, ಹೇಳಲಿ' ಎಂದು ಓಬವ್ವನಾಗತಿಯವರತ್ತ ನೋಡಿದಳು.

ಓಬವ್ವನಾಗತಿಯ ಮೈಗೆ ದಣಿವಾಗಿದ್ದುದು ದಿಟ. ಅದಕ್ಕಿಂತ ಹೆಚ್ಚಾಗಿ, ಹತ್ತಾರು ದಿನಗಳಿಂದ 'ಹೇಗೋ - ಏನೋ' ಎಂದು ಚಿಂತಿಸುತ್ತಾ, ಯಾರೊಬ್ಬರ ಮುಂದೂ ಆಡದೆ, ಮನದಾಳದಲ್ಲಿ ಬಹುಪ್ರಯತ್ನದಿಂದ ಹುಗಿದಿಟ್ಟುಕೊಂಡಿದ್ದ ಮಾತನ್ನು ಆಡಿ ಮುಗಿಸಿ, ಯಾವ ಅಡೆ-ತಡೆ, ಮುನಿಸು, ಆಕ್ರೋಶ, ಮತ್ಸರದ ಮಾತುಗಳಿಗೆ ಎಡೆಕೊಡದೆ ಮಾತು ಮುಗಿದದ್ದು ಬಿಗಿದಿಟ್ಟಿದ್ದ ಬಿಲ್ಲಿನ ಹಗ್ಗವನ್ನು ಸಡಿಲ ಮಾಡಿದಂತಾಗಿ, ಮನಸ್ಸಿನ ನೆಮ್ಮದಿ ಮೈಗೆ ವಿಶ್ರಾಂತಿಯನ್ನು ಬಯಸಿತ್ತು. ಎಂತಲೇ ಬಾಗಿಲ ಊಳಿಗದಾಕೆ ಹೇಳಿದುದನ್ನು ಕೇಳಿದ ಕೂಡಲೇ, ಹೊನ್ನವ್ವೆಯಂತೆ 'ಈಗ ಸಮಯವಿಲ್ಲ' ಎಂದು ಹೇಳಿಕಳಿಸಬೇಕೆನಿಸಿದರೂ, 'ಪ್ರಧಾನಿಗಳು ಅನಗತ್ಯವಾಗಿ ಅಷ್ಟು ಆತುರವಾಗಿ ಬರುವವರಲ್ಲ. ಅವರು ಹಾಗೆ ಬರಬೇಕಾದರೆ ಏನೋ ಪ್ರಬಲ ಕಾರಣವಿರಲೇಬೇಕು, ಹಾಗೆ ಬಂದವರನ್ನು ಹಿಂದಕ್ಕೆ ಕಳಿಸುವುದು ಉಚಿತವಲ್ಲ' – ಎಂದು ವಿವೇಚನೆ ಆಕೆಯ ಹೃದಯಕ್ಕೆ ಸಲಹೆ ಮಾಡಿ-

"ಬರಹೇಳು"

- ಎಂದು ಬಾಗಿಲ ಊಳಿಗದಾಕೆಗೆ ಹೇಳಿಕಳಿಸಿ, ಹೊನ್ನವ್ವೆಗೆ –

"ಪ್ರಧಾನಿಗಳಿಗೊಂದು ಆಸನ ತಂದಿಡು"

- ಎಂದು ಹೇಳಿ, ತನ್ನ ಉಡುಪನ್ನು ಸರಿಪಡಿಸಿಕೊಂಡು, ನರಸಪ್ಪಯ್ಯನವರು ಬರುವುದನ್ನೇ ಕಾಯುತ್ತಾ ಕುಳಿತರು.

ನರಸಪ್ಪಯ್ಯನವರು ಓಬವ್ವನಾಗತಿಯನ್ನು ಹೆಚ್ಚು ಹೊತ್ತು ಕಾಯಿಸಲಿಲ್ಲ.

ಬಾಗಿಲ ಊಳಿಗದಾಕೆ ನಾಗತಿಯ ಅಪ್ಪಣೆಯನ್ನು ಪಡೆದುಹೋದ ಅನತಿಕಾಲದಲ್ಲಿಯೇ. ನರಸಪ್ಪಯ್ಯನವರು ಒಳಗೆ ಬಂದು, ಆ ವೇಳೆಗೆ ಹೊನ್ನವ್ವೆ, ಅವರಿಗಾಗಿ ಸಿದ್ಧಪಡಿಸಿದ ಆಸನದಲ್ಲಿ ಕುಳಿತು, ದಣಿವಿನಿಂದ ಮೈಸೋತು ಕುಳಿತ ನಾಗತಿಯನ್ನು ನೋಡಿದರು. 'ಹೊರಲಾಗದ ಬಗೆಬಗೆಯ ದುಃಖದಿಂದ ಬಸವಳಿದ ಈ ವೃದ್ಧ ಜೀವಕ್ಕೆ ತೊಂದರೆ ಕೊಡಬೇಕಲ್ಲಾ' ಎನಿಸಿದರೂ, ಅವರು ಆಕೆಯೊಂದಿಗೆ ಅವಸರವಾಗಿ ಮಾತನಾಡುವುದು ಅನಿವಾರ್ಯವಾಗಿತ್ತಾದ ಕಾರಣದಿಂದ ಅಲ್ಲಿಗೆ ಬಂದಿದ್ದರು. ಎಂತಲೇ ಸುತ್ತುಬಳಸಿನ ಮಾತಿನಲ್ಲಿ ಪರಿಣತರಾದ ನರಸಪ್ಪಯ್ಯ, ಈಗ ಹಾಗೆ ಮಾಡದೆ, ನೇರವಾದ ಮಾತಿಗಿಳಿದು –

"ಸಭೆಯಲ್ಲಾದ ದಣಿವಿನಿಂದ ಚೇತರಿಸಿಕೊಳ್ಳುವುದಕ್ಕೂ ಅವಕಾಶ ಕೊಡದೆ, ಬೆನ್ನಟ್ಟಿ ಬಂದ ನನ್ನ ಆತುರವನ್ನು ನಾಗತಿಯವರು ಮನ್ನಿಸಬೇಕು. ಕಾಯಬಹುದಾಗಿದ್ದ ಮಾತಾಗಿದ್ದರೆ ಕಾಯುತ್ತಿದ್ದೆ...." – ಎಂದರು.

"ಅದು ನಮಗೂ ಗೊತ್ತಿದೆ, ಪ್ರಧಾನಿಗಳೇ. ನಿಮಗೂ ನಮ್ಮಷ್ಟೇ ಪ್ರಾಯ. ನಮಗಾದದ್ದಕ್ಕಿಂತ ಹೆಚ್ಚಿನ ಆಯಾಸ ನಿಮಗೂ ಆಗಿರಬೇಕು. ಆದ್ದರಿಂದ ನಮ್ಮಿಬ್ಬರ ನಡುವೆ ಉಪಚಾರದ ಮಾತಿನ ಅಗತ್ಯವಿಲ್ಲ. ಅದೇನು ಮಾತೋ, ಹೇಳಿ" - ಓಬವ್ವನಾಗತಿ ಹೇಳಿದರು.

"ಸಭೆಯಲ್ಲಿ ಇಂಥವರು ದುರ್ಗಕ್ಕೆ ಮುಂದಿನ ದೊರೆಗಳಾಗಬೇಕು ಎಂದು ನೀವೇ ಹೇಳಿದ್ದು ನಮ್ಮ ಮೇಲಿನ ಹೊರೆಯನ್ನು ಹಗುರ ಮಾಡಿತು. 'ಇಂಥವರನ್ನು ಪಟ್ಟಕ್ಕೆ ತನ್ನಿ' ಎಂದು ಹಿರಿಯ ನಾಯಕರು ತಮಗೆ ಕನಸಿನಲ್ಲಿ ಅಪ್ಪಣೆ ಮಾಡಿದ್ದನ್ನು ಹೇಳಿದಿರಿ. ಆಯಿತು. ಆ ಮಾತು ನನಗೂ ಶಿರೋಧಾರ್ಯ. ಆದರೆ ಆ ಬಗ್ಗೆ ಆಗುಹೋಗುಗಳನ್ನಾದರೂ ತಾವು ಚಿಂತಿಸಿದ್ದೀರಾ?"

"ಏನು ಚಿಂತಿಸಬೇಕಾಗಿತ್ತು ? ನಾವಾಡಿದ್ದು - ನುರಿತ ರಾಜಕಾರಣಿಗಳಾದ ತಮಗೆ ಒಪ್ಪಿಗೆಯಾಗಲಿಲ್ಲವೇ? ನಾವು ಹೇಳಿದವರ ಬಗ್ಗೆ ತಮಗೇನಾದರೂ ಶಂಕೆಯಿದೆಯೇ ?"

- ಕೊಂಚ ಗಡುಸಾದ ಧ್ವನಿಯಲ್ಲಿ ಕೇಳಿದರು ಓಬವ್ವನಾಗತಿ.

"ಹಾಗೇನೂ ಇಲ್ಲ...."

"ಇಲ್ಲ ಎಂದರೆ ಮತ್ತೇಕೆ ಬಂದಿರಿ. ನೀವು ಪ್ರಧಾನಿಗಳು. ನಮಗೆ ತಿಳಿಯದ ನೂರು ಸುದ್ದಿ ತಳವಾರಚಾವಡಿಯ ಮುಖಾಂತರ ನಿಮಗೆ ತಿಳಿದಿರುತ್ತದೆ. ಜಾನಕಲ್ಲು ಭರಮಣ್ಣನಾಯಕರ ಬಗ್ಗೆಯಾಗಲಿ, ಅವರ ಪೂರ್ವೋತ್ತರಗಳ ವಿಷಯದಲ್ಲಾಗಲಿ, ಈ ರಾಜ್ಯಕ್ಕೆ ಅವರ ನಿಷ್ಠೆಯ ಬಗ್ಗೆಯಾಗಲಿ ನಿಮಗೇನಾದರೂ ಅಡ್ಡಸುದ್ದಿ ಬಂದಿದ್ದರೆ, ಹೇಳಿ. ನಮಗಾದ ಕನಸಿನ ಮಾತು

ಎಂದು ನೀವು ಮುಖದಾಕ್ಷಿಣ್ಯಕ್ಕೆ ಯಾವುದನ್ನೂ ಮರೆಮಾಚುವುದು ಬೇಡ. ನಮಗಿಂತ, ನಿಮಗಿಂತ ಈ ರಾಜ್ಯ ಮುಖ್ಯ."

"ಜಾನಕಲ್ಲು ನಾಯಕರ ಬಗ್ಗೆ, ಅವರ ನಿಷ್ಠೆಯ ಬಗ್ಗೆ ನಮಗೆ ಸಂದೇಹವಿದ್ದಿದ್ದರೆ, ಆ ಮಾತನ್ನು ನಾನು ಸಭೆಯಲ್ಲೇ ತಮಗೆ ಹೇಳುತ್ತಿದ್ದೆ. ಅಷ್ಟು ಸ್ವಾತಂತ್ರ್ಯವನ್ನು ತಾವು ನನಗೆ ಕೊಟ್ಟಿದ್ದೀರ. ಈ ಮಾತು ಹಾಗಿರಲಿ, ಅವರ ಬಗ್ಗೆ ಅನುಮಾನ ಬಂದಿದ್ದರೆ, ಅವರನ್ನು ಜಾನಕಲ್ಲಿನಲ್ಲಿರಲೂ ಅವಕಾಶ ಕೊಡುತ್ತಿರಲಿಲ್ಲ. ಜಾನಕಲ್ಲುದುರ್ಗ ಎಷ್ಟು ಪ್ರಧಾನವಾದ ಗಡಿಠಾಣ್ಯ ಎಂಬುದು ನಿಮಗೂ ಗೊತ್ತು. ಸಂಶಯಕ್ಕೆ ಕಾರಣರಾದವರು ರಾಜಕುಮಾರರಾದರೂ, ಅವರನ್ನು ಅಲ್ಲಿರಲು ಬಿಡುತ್ತಿರಲಿಲ್ಲ. ಅದಲ್ಲ ನನ್ನ ಚಿಂತೆ -"

"ಮತ್ತೇನು ?"

"ನಾವು ಈ ರಾಜ್ಯಕ್ಕೆ ಅರಸನಾಗಲು ಆಯ್ಕೆ ಮಾಡಿದವರ ವಯಸ್ಸೆಷ್ಟು ಗೊತ್ತೆ ?"

"ಗೊತ್ತು. ಅವರನ್ನು ನಾವು ನೋಡಿಯೂ ಇದ್ದೇವೆ. ಈಗ ಹತ್ತು ದಿನದ ಹಿಂದೆ ತಾನೆ ಅಂತ್ಯಕ್ರಿಯೆಗಳಿಗಾಗಿ ಅವರೆಲ್ಲಾ ಇಲ್ಲಿ ಬಂದಿದ್ದರಲ್ಲಾ.... ಅವರೊಂದಿಗೆ ಹೆಚ್ಚು ಮಾತಾಡಲು ನಮಗೆ ಹೆಚ್ಚು ಅವಕಾಶವಾಗಲಿಲ್ಲ."

"ನಿಜ. ನೀವು ಆರಸುತನಕ್ಕೆ ಆಯ್ಕೆ ಮಾಡಿದವರು ಕೇವಲ ಹನ್ನೆರಡು ವರ್ಷದ ಹುಡುಗ."

"ಆದು ನಮಗೂ ಗೊತ್ತು."

"ದುರ್ಗಕ್ಕೀಗ ಸುತ್ತಮುತ್ತಲೂ ಶತ್ರುಗಳಿದ್ದಾರೆ. ಮಿತ್ರರು, ನೆಂಟರು ಎನಿಸಿಕೊಂಡವರೂ ಯಾವ ಹೊತ್ತಿನಲ್ಲಿ ಎತ್ತ ತಿರುಗುವರೋ ಯಾರಿಗೂ ಗೊತ್ತಿಲ್ಲ. ಇಂಥ ಸಮಯದಲ್ಲಿ.... ರಾಜಕಾರಣದ ಅನುಭವವಿಲ್ಲದ ಹುಡುಗ...."

"ಕನಸಾದಬಳಿಕ ನಾವೂ ಆ ಯೋಚನೆ ಮಾಡಿದೆವು. ಯೋಚಿಸಿದಮೇಲೂ ಕನಸಿನಲ್ಲಿ ಹಿರಿಯರು ಹೇಳಿದ ಮಾತು ಸರಿ ಎನಿಸಿತು."

"ಅಂದರೆ - ?"

"ಜಾನಕಲ್ಲು ನಾಯಕರ ಮಗ ಪಟ್ಟಕ್ಕೆ ಬಂದ ಕೂಡಲೆ ನಾವು, ನೀವು, ದಂಡು-ದಳವಾಯಿಗಳೆಲ್ಲ ಕೋಟೆಯ ಕೀಲಿಗೈಯನ್ನು ಅವರಿಗೆ ಒಪ್ಪಿಸಿ ಹೋಗುತ್ತೇವೆಯೇ ? ನಮ್ಮ-ನಿಮ್ಮ ಕಣ್ಣ ನಜರುಬಂದಿಯಾಗೇ ನಾಯಕರು ಬೆಳೆಯಬೇಕು, ಅಲ್ಲವೇ ?"

"ನಿಜ-"

“ಯಾರು ಬಂದರೂ ಅವರನ್ನು ಈ ಅಧಿಕಾರಕ್ಕೆ ಪಳಗಿಸಬೇಕು. ಆ ಭಾರ ನಮ್ಮ ಮೇಲಿದೆ. ತಿದ್ದುವುದಕ್ಕೆ ಬೆಳೆದ ಬುದ್ಧಿಗಿಂತ, ಎಳೆಯ ಪ್ರಾಯ ಅನುಕೂಲ. ಹನ್ನೆರಡು ವರ್ಷದ ಹುಡುಗ, ಅಧಿಕಾರ ಬಂತೆಂದು ಹಿರಿಯರ ಹಾಗೆ ಮೆರೆಯುವುದಿಲ್ಲ. ನಾವಿನ್ನು ಕಲಿಯುವುದೇನಿದೆ ಎಂದು ನಮ್ಮ-ನಿಮ್ಮ ಮಾತನ್ನು ಅಸಡ್ಡೆ ಮಾಡುವುದಿಲ್ಲ. ಎಳೆಯ ವಯಸ್ಸಿನ ಮೇಣದಂತಹ ಬುದ್ಧಿಯನ್ನು ಹೇಗೆ ಬೇಕೋ ಹಾಗೆ ತಿದ್ದಿ, ಬೇಕಾದ ರೂಪು ಕೊಡಬಹುದು. ಕಣ್ಣಹದ್ದಿನಲ್ಲೇ ಇಟ್ಟುಕೊಂಡು ಬೆಳೆಸಬಹುದು. ಬಲಿತದ್ದನ್ನು ಬಗ್ಗಿಸಹೋದರೆ, ಅದು ಬಗ್ಗಲೂಬಹುದು, ಮುರಿದು ಮರದಿಂದ ಬೇರೆಯಾಗಲೂಬಹುದು. ಅದೆಲ್ಲಾ ಯೋಚನೆ ಮಾಡಿಯೇ, ಹಿರಿಯರು ಕನಸಿನಲ್ಲಿ ಹೇಳಿದ ಮಾತನ್ನು ಮತ್ತೆ ಎಚ್ಚರದಲ್ಲಿ ಶಕುನ ಕೇಳಿ, 'ಸರಿ' ಅನ್ನಿಸಿಕೊಂಡು ನಿಮ್ಮ ಮುಂದೆ ಆಡಿದ್ದು. ನಮ್ಮ ಯೋಚನೆ ತಪ್ಪೆ? ಕುಮಾರ ಭರಮಪ್ಪನಾಯಕರೀಗ, ಸಾಕಷ್ಟು ವಯಸ್ಸಾಗಿ, ಮಗುವಿನ ತಂದೆಯಾಗಿರುವುದೂ ನಿಮಗೀಗ ತಿಳಿದಿರಬೇಕಲ್ಲ. ಅಧಿಕಾರದ ಅನುಭವವೂ ಅವರಿಗೆ ಸಾಕಷ್ಟಾಗಿದೆ. ಅಂಥವರನ್ನು ನಮ್ಮ ದಾರಿಗೆ ಪಳಗಿಸುವುದು ಸುಲಭವೇ ?”

ನಾಗತಿ ಹೇಳಿದ ಮಾತನ್ನು ಅಷ್ಟು ಹೊತ್ತು ಮೆಲಕು ಹಾಕಿದ ಬಳಿಕ, ನರಸಪ್ಪಯ್ಯ ಹೇಳಿದರು –

“ನಾವು ನಿಮ್ಮಷ್ಟು ದೂರ ಯೋಚನೆ ಮಾಡಿರಲಿಲ್ಲ. ಅವರ ಅನುಭವ, ನಿಷ್ಠೆ-ಇಷ್ಟನ್ನೇ ಯೋಚನೆ ಮಾಡಿದ್ದೆವು.”

“ಹೊಸದುರ್ಗದ ನಾಯಕರ ನಿಷ್ಠೆಯಲ್ಲಿ ನಿಮಗೇನೂ ಸಂಶಯವಿಲ್ಲವಲ್ಲ.”

“ಇಲ್ಲ. ಅಂಥ ಗಾಳಿಮಾತೂ ನಮ್ಮ ಕಿವಿಗೆ ಬಿದ್ದಿಲ್ಲ.”

“ಹಾಗಿದ್ದರೆ ಸರಿ. ಈ ಪ್ರಸಂಗ ಅವರ ನಿಷ್ಠೆಗೂ ಪರೀಕ್ಷೆಯಾಗುತ್ತದೆ; ಅದನ್ನು ಮಾಡಿ ನೋಡೋಣ. ನಮಗೂ ಅವರಿಗೂ ಅಸಮಾಧಾನವಾಗಬಹುದು ಎಂಬ ಚಿಂತೆ ಇಲ್ಲದಿಲ್ಲ. ಯಾವುದಕ್ಕೂ ಈಗ ಒರೆಗಲ್ಲು ಹಚ್ಚುವ ಕಾಲ. ಈಗ ಹೇಳಿ - ನೀವು ಮೊದಲು ಹೇಳಿದ್ದಲ್ಲದೆ, ಮತ್ತೇನಾದರೂ ಕಾರಣಗಳಿವೆಯೇ?”

“ಏನೂ ಇಲ್ಲ. ಈಗ ಮನಸ್ಸು ನಿರ್ಮಲವಾಯಿತು. ಮುಂದಿನ ಕೆಲಸದ ಸಿದ್ಧತೆ ಮಾಡುತ್ತೇನೆ” – ಎಂದರು ನರಸಪ್ಪಯ್ಯ.

“ನೀವು ಹೇಳಿದ್ದು, ಕೇಳಿದ್ದು ಎಲ್ಲ ಮುಗಿಯಿತಲ್ಲ - ನಾವೂ ನಿಮ್ಮನ್ನೊಂದು ಮಾತು ಕೇಳುವುದಿದೆ.”

“ಅಪ್ಪಣೆಯಾಗಲಿ.”

"ಇಂದು ಆಪ್ತಾಲೋಚನಾಸಭೆಯಲ್ಲಾದ ಮಾತು, ಮುಂದೆ ಓಲಗಸಾಲೆಯಲ್ಲಿ ಪ್ರಕಟವಾಗುವವರೆಗೂ, ಯಾರಿಗೂ ತಿಳಿಯಬಾರದು ಎಂದು ಕಟ್ಟಾಜ್ಞೆ ಮಾಡಿದಿರಲ್ಲಾ, ಯಾರೋ, ಏನೋ ಎಂದು ಜನ ಸಂಶಯಪಡುತ್ತಿರುವ ಮಾತು, ಇತ್ಯರ್ಥವಾದಬಳಿಕವೂ ರಹಸ್ಯವಾಗಿ ಉಳಿಯುವುದು ಅಗತ್ಯವೇ?" - ಓಬವ್ವನಾಗತಿ ಕೇಳಿದರು.

"ಅತ್ಯಂತ ಅಗತ್ಯ."

"ಏಕೆ? ಆ ಬಗ್ಗೆ ಬೇರೇನಾದರೂ ಮಾತಾಗಬೇಕೇ? ಬೇರೆಯವರೊಂದಿಗೆ ನೀವು ಯೋಚಿಸಬೇಕೇ? ಅಥವಾ ಜೋಯಿಸರನ್ನು ಕೇಳಿ, ದಿನ, ಮುಹೂರ್ತ ತಿಳಿದುಕೊಳ್ಳಬೇಕೇ?"

"ಅದಾವುದೂ ಇಲ್ಲ. ದುರ್ಗಕ್ಕೆ ಶತ್ರುಗಳು ಕೇವಲ ಹೊರಗಷ್ಟೇ ಅಲ್ಲ, ದುರ್ಗದೊಳಗೂ ಇದ್ದಾರೆ. ಇಂಥವರು ಅರಸರಾದರೆ ತಮಗೆ ಅನುಕೂಲ ಎಂದು ಸಂಚುಮಾಡುವ, ದುರ್ಗದ ಶತ್ರುಗಳ ಹಸ್ತಕರೂ ದುರ್ಗದಲ್ಲಿದ್ದಾರೆ. ಆದ್ದರಿಂದ, ಮುಂದೆ ಪಾಳಯಗಾರರಾಗುವವರು ಯಾರು ಎಂಬುದು, ಈಗಲೇ ಪ್ರಕಟವಾದರೆ, ಅವರು ದುರ್ಗಕ್ಕೆ ಬರುವ ಮೊದಲೇ ಅವರಿಗೇನಾದರೂ ಅಪಾಯಮಾಡಿದರೆ, ಆಡುವ ಹುಡುಗನನ್ನು ಹಾವಿನಿಂದ ಕಚ್ಚಿಸುವುದೋ, ಹಣ ಕೊಟ್ಟು ಅವರು ಮಾಡುವ ಊಟದಲ್ಲಿ ವಿಷವಿಕ್ಕಿಸುವುದೋ, ಏನಾದರೂ ಮಾಟ-ತಂತ್ರ ಮಾಡಿಸುವುದೋ – ಇಂಥ ಏನಾದರೂ ಕೆಡಕು ಮಾಡಿದರೆ? ಆದ್ದರಿಂದಲೇ ನಂಬಿಗಸ್ಥರನ್ನು ಜಾನಕಲ್ಲಿಗೆ ಕಳಿಸಿ, ಭರಮಣ್ಣನಾಯಕರಿಗೆ ಈ ವಿಷಯ ತಿಳಿಸಿ, ಮುಂದೆ ತಮ್ಮ ನಾಯಕರಾಗಲಿರುವವರಿಗೆ ಅಗತ್ಯವಾದ ರಕ್ಷಣೆಯೊದಗಿಸಿದಮೇಲೆ, ಈ ಸುದ್ದಿ ಇಲ್ಲಿ ಪ್ರಕಟವಾಗಬೇಕು. ಆಮೇಲೆ ಜೋಯಿಸರನ್ನು ಕೇಳಿ ಒಳ್ಳೆಯ ದಿನ ಅವರನ್ನು ದುರ್ಗಕ್ಕೆ ಕರೆತರಬೇಕು. ಇದಕ್ಕಾಗಿಯೇ ಆ ಆಜ್ಞೆ ಮಾಡಿದ್ದು"

- ಎಂದು ನರಸಪ್ಪಯ್ಯ ತಾವು ಮಾಡಿದ ಕಟ್ಟಾಜ್ಞೆಯ ಹಿನ್ನೆಲೆಯನ್ನು ವಿವರಿಸಿದರು.

ಅವರು ಹೇಳಿದುದನ್ನು ಕೇಳಿದ ಬಳಿಕ ಓಬವ್ವನಾಗತಿಗೂ ಅವರು ಮಾಡಿದ ಆಜ್ಞೆ ಸರಿ ಎನಿಸಿತು. ಅಷ್ಟೇ ಅಲ್ಲ, ಅವರ ಮುಂಜಾಗರೂಕತೆಯ ಬುದ್ಧಿಯ ಬಗ್ಗೆ ಮೆಚ್ಚುಗೆ ಮೂಡಿ ಹೇಳಿದರು-

"ಹೆಣ್ಣು ಹೆಂಗಸು - ನಾವು ಅಷ್ಟು ದೂರ ಯೋಚನೆ ಮಾಡಿರಲಿಲ್ಲ."

"ಇದೆಲ್ಲ ಸಣ್ಣ ಮಾತು, ಇಂಥ ಮಾತನ್ನು ಯೋಚಿಸುವುದಕ್ಕೆಂದೇ ಅರಮನೆ ನನ್ನಂಥ ನೂರು ಮಂದಿಯನ್ನು ಸಾಕುತ್ತಿದೆ. ಬಹಳ ಹೊತ್ತು ಮಾತನಾಡಿ, ತಮ್ಮ ಆಯಾಸ ಹೆಚ್ಚಿಸಿದೆ. ಮನ್ನಿಸಿ. ಇನ್ನು ಅಪ್ಪಣೆಯಾದರೆ ಬರುತ್ತೇನೆ"

- ಎಂದು ಓಬವ್ವನಾಗತಿಗೆ ಕೈಮುಗಿದು ಎದ್ದು ನಿಂತರು ನರಸಪ್ಪಯ್ಯ.

"ನಿಮಗೇನು ಆದ ವಯಸ್ಸು ಸ್ವಲ್ಪವೇ ? ನನ್ನಷ್ಟೇ ನಿಮಗೂ ಶ್ರಮವಾಯಿತು. ಹೋಗಿ ವಿಶ್ರಾಂತಿ ತೆಗೆದುಕೊಳ್ಳಿ" - ಎಂದರು ಓಬವ್ವನಾಗತಿ.

"ಇಷ್ಟು ದಿನ ಮನಸ್ಸಿಗೆ ಶಾಂತಿ ಇಲ್ಲದಿದ್ದರೂ ಮೈಗೆ ವಿಶ್ರಾಂತಿ ಇತ್ತು. ಈಗಲೇ ಕೆಲಸ ಆರಂಭವಾಗಿರುವುದು. ಏನಾಗಬೇಕೋ ಎಲ್ಲವನ್ನೂ ಮಾಡಿಸುತ್ತೇನೆ. ನನಗಿಂತ ಹೆಚ್ಚಾಗಿ ತಮ್ಮ ಮೈಗೆ, ಅದಕ್ಕಿಂತ ಮಿಗಿಲಾಗಿ ಆಯಾಸವಾಗಿದೆ. ಎಲ್ಲ ಮಾತೂ ಮುಗಿಯಿತಲ್ಲ, ಇನ್ನಾದರೂ ತಾವು ಮನಸ್ಸಿಗೆ ಶಾಂತಿ ತಂದುಕೊಂಡು ಊಟ-ಉಪಚಾರಗಳ ಬಗ್ಗೆ ಅನಾದರ ಮಾಡದೆ, ಮೈ ಗಟ್ಟಿ ಮಾಡಿಕೊಳ್ಳಬೇಕು. ನಮಗಿಂತ ಹೆಚ್ಚಿನ ಹೊಣೆಗಾರಿಕೆ ಈಗ ತಮ್ಮ ಮೇಲಿದೆ" – ಎಂದರು ನರಸಪ್ಪಯ್ಯ.

"ಇನ್ನಾಯಿತಲ್ಲ- ಮುಂದೆ ನನಗೇನು ಕೆಲಸ ?" – ಓಬವ್ವನಾಗತಿ ಕೇಳಿದರು.

"ನೀವು ಆರಿಸಿದವರನ್ನು ರಾಜರನ್ನಾಗಿ ಒಪ್ಪಿ, ನಿಷ್ಠೆಯಿಂದ ಅವರ ಸೇವೆ ಮಾಡುವುದಷ್ಟು ನಮ್ಮ ಕೆಲಸ. ನೀವು ಆರಿಸಿದ ಹುಡುಗನನ್ನು, ದುರ್ಗದ ಜನ ಒಪ್ಪುವಂಥ ರಾಜನನ್ನಾಗಿ ತಿದ್ದಿ ಬೆಳಸುವುದು ನಿಮ್ಮ ಮೇಲಿರುವ ಹೊಣೆಗಾರಿಕೆ. ಆದೇನೂ ಹಗುರವಾದ ಕೆಲಸವಲ್ಲ. ನೀವೇ ಹೇಳಿದಿರಲ್ಲ – ಎಳೆಯ ಬುದ್ಧಿ ತಿದ್ದಬೇಕು ಎಂದು. ಇನ್ನದರ ಚಿಂತೆ ಮಾಡಿ"

- ಎಂದರು ನರಸಪ್ಪಯ್ಯ.

"ಅದೂ ನಿಜವೇ, ಈಗ ಹಣ್ಣೆಲೆಗಳೆಲ್ಲಾ ಕಲೆತು ಚಿಗುರನ್ನು ಬೆಳಸುವ ಚಿಂತೆ ಮಾಡಬೇಕಾಗಿದೆ. ಆದರೆ ನಿಮ್ಮಂಥವರು ಜೊತೆಗಿದ್ದರೆ, ಬೆಟ್ಟ ಹೊರುವುದೂ ಕಷ್ಟದ ಕೆಲಸವಾಗುವುದಿಲ್ಲ. ರಾಜರಾಗುವವರು ಇಲ್ಲಿಗೆ ಬರಲಿ - ಆಮೇಲೆ ಇಬ್ಬರೂ ಕಲೆತು ಅವರನ್ನು ಬೆಳಸುವ ಮಾತನಾಡೋಣ"

- ಎಂದು, ಹೊನ್ನವ್ವೆಯತ್ತ ತಿರುಗಿ ಓಬವ್ವನಾಗತಿ ಹೇಳಿದರು –

"ಹೊನ್ನವ್ವೆ, ಪ್ರಧಾನಿಗಳಿಗೆ ತಾಂಬೂಲ ತರಿಸಿಕೊಡು."

"ಈಗ ಅದೇನೂ ಬೇಡ. ತಾವು ಯಾವ ಆಯಾಸವನ್ನೂ ಮಾಡಿಕೊಳ್ಳಬೇಡಿ. ಅಪ್ಪಣೆಯಾದರೆ ಬರುತ್ತೇನೆ" – ನರಸಪ್ಪಯ್ಯ ನುಡಿದರು.

"ತಾಂಬೂಲ ತಮಗೆ ಬಹಳ ಪ್ರಿಯ ಎಂದು ಹಿರಿಯರು ಹೇಳಿದುದನ್ನು ಕೇಳಿದ್ದೆ...."

"ಬರೀ ತಾಂಬೂಲವೇನು, ತಂಬಾಕು ಬೇಕು ಎನ್ನುತ್ತದೆ, ಈ ಮುದಿನಾಲಗೆ, ಅಂತೂ ನಮ್ಮ ಚಟದ ವಿಷಯ ತಮ್ಮ ಕಿವಿಗೂ ಬಿದ್ದಿದೆ."

"ಅದನ್ನೊಂದು ದೋಷ ಎಂದು ಯಾರೂ ಹೇಳಲಿಲ್ಲ. ಹಿರಿಯ ನಾಯಕರು ಒಮ್ಮೆ 'ಪ್ರಧಾನಿಗಳಿಗೆ ತಾಂಬೂಲ, ತಂಬಾಕು, ನಮಗೆ ಫಿರಂಗಿ, ಬಂದೂಕು ಇದ್ದ ಹಾಗೆ. ಹೊತ್ತಿಗೆ

ಸರಿಯಾಗಿ ಅದಿದ್ದರೆ ಲಕ್ಷ ಫೌಜನ್ನು ಜಯಿಸುತ್ತಾರೆ' ಎಂದು ಹೇಳಿದ್ದರು. ಏಕೋ ಈಗ ಅದು ನೆನಪಾಯಿತು."

"ಕೇಳಿದ್ದನ್ನು ಕೊಟ್ಟು ಮಕ್ಕಳ ಹಾಗೆ ಸಾಕಿದರು, ಹಿರಿಯ ನಾಯಕರು"

- ಎಂದು ಏನೋ ಹೇಳಹೋಗಿ, ಮಾತನ್ನು ಮಧ್ಯದಲ್ಲೇ ತಡೆದು –

"ಮೈಗೆ ವಯಸ್ಸಾದಂತೆ ಬಾಯಿಗೆ ಮಾತಾಡುವ ಚಪಲವೂ ಹೆಚ್ಚುತ್ತಿದೆ. ಹಳೆಯ ಮಾತಾಡುತ್ತಾ ಕುಳಿತರೆ ದಿನವೆಲ್ಲಾ ಸಾಕಾಗುವುದಿಲ್ಲ. ನಾನಿನ್ನು ಬರುತ್ತೇನೆ. ವಿಶ್ರಾಂತಿ ತೆಗೆದುಕೊಳ್ಳಿ"

- ಎಂದು ಹೇಳಿ, ಓಬವ್ವನಾಗತಿಗೆ ನಮಸ್ಕರಿಸಿ, ಅಲ್ಲಿಂದ ಹೊರಟರು ನರಸಪ್ಪಯ್ಯ.

ಅವರು ಹೋದ ಬಳಿಕ, ಅಷ್ಟು ಹೊತ್ತು ಮೌನವಾಗಿ ಅವರಾಡಿದ ಮಾತುಗಳನ್ನೆಲ್ಲಾ ಕೇಳಿಸಿಕೊಂಡ ಹೊನ್ನವ್ವೆ –

"ಪ್ರಧಾನಿಗಳದು ಬಹು ಚುರುಕು ಬುದ್ಧಿ, ವಯಸ್ಸಾಯಿತು ಎನ್ನುತ್ತಾರೆ, ಆದರೂ ಪಾದರಸದ ಹಾಗಿದ್ದಾರೆ"

- ಎಂದಳು, ಮೆಚ್ಚುಗೆ ಸೂಸುವ ಧ್ವನಿಯಲ್ಲಿ.

"ಬರೀ ಪಾದರಸದಂಥ ಬುದ್ಧಿಯೇನು – ಮನುಷ್ಯ ಮಹಾ ಸ್ವಾಭಿಮಾನಿ, 'ಆಡಿದರೆ ಅರಗಿಳಿ, ಕಾಡಿದರೆ ಕಾಳಸರ್ಪ' ಎನ್ನುತ್ತಿದ್ದರು ಹಿರಿಯರು. ಪಟ್ಟಕ್ಕೆ ಬರುವ ಹುಡುಗ ಇಂಥ ಹಿರಿಯರನ್ನು ಹೇಗೆ ಕಾಪಾಡಿಕೊಳ್ಳುತ್ತಾನೋ ಏನೋ…"

- ಎಂದರು ಓಬವ್ವನಾಗತಿ, ತುಸು ಆತಂಕವಿದ್ದ ಧ್ವನಿಯಲ್ಲಿ.

"ಎಂಥವರು ಬಂದರೂ, ತಿದ್ದುವುದಕ್ಕೆ ನೀವಿದ್ದೀರಲ್ಲ, ಅವ್ವ. ನನ್ನಂಥ ಕಾಡುಕೊರಡನ್ನೇ ಮನುಷ್ಯಳನ್ನಾಗಿ ಮಾಡಿದಿರಿ…."

- ಎಂದು ಹೇಳುತ್ತಾ, ಮತ್ತೇನೋ ಮಾತು ನೆನಪಾಗಿ

"ಆವ್ವಾ, ಪಟ್ಟಕ್ಕೆ ಬರುವ ಹುಡುಗನನ್ನು ನೀವು ನೋಡಿದ್ದೀರಾ ?"

- ಎಂದು ಹೊನ್ನವ್ವೆ ಕೇಳಿದಳು.

"ನೋಡಿದೀನಿ."

"ಹೇಗಿದ್ದಾರವ್ವಾ ?"

"ಇಲ್ಲಿಗೆ ಮಗನ ಕೊನೆಯ ದಿನಗಳ ಕೆಲಸಕ್ಕೆ ಬಂದಾಗಲೇ ನೋಡಿದ್ದು. ಹುಡುಗ ಕಂಚಿನ ಒನಕೆ ಇದ್ದ ಹಾಗಿದ್ದಾನೆ. ಎರಡು ಮಾತಾಡಿಸಿ ನೋಡಿದೆ. ಬುದ್ಧಿಯೂ ಚುರುಕಾಗಿದೆ.

ನೋಡುತ್ತಿದ್ದ ಹಾಗೇ 'ಅರಸಾಗಲು ಹುಟ್ಟಿದವನು ಈ ಹುಡುಗ' ಅನಿಸಿತು. ಕನಸಿನಲ್ಲೂ ಹಿರಿಯರು ಅದೇ ಹೇಳಿದರು."

"ಇಷ್ಟು ದಿನ ಆ ಮಾತು ನನ್ನ ಮುಂದೆ ಹೇಳಲೇ ಇಲ್ಲವಲ್ಲ ಅವ್ವ...."

"ನನಗೀಗ ಸುಖವಿರುವುದೆಲ್ಲಾ ಕಾಣುವ ಕನಸಿನಲ್ಲಿ - ಅದೆಲ್ಲಾ ನಿನ್ನ ಮುಂದೆ ಹೇಳಿ, 'ಅವ್ವನವರಿಗೆ ಇಷ್ಟು ವಯಸ್ಸಾದರೂ, ಪ್ರಾಯದ ಚಪಲ ಹೋಗಿಲ್ಲ ಎನಿಸಿಕೊಳ್ಳಲೇ? ಹುಚ್ಚುಮೂಳಿ, ಹೇಳಿದ ಮಾತಷ್ಟು ಕೇಳು, ಕಂಡದ್ದಷ್ಟನ್ನು ನೋಡು. ಆದರಾಚೆಯ ಮಾತು ನಿನಗೆ ಬೇಡ...."

-ಎಂದು ನಗುತ್ತಾ ಹೇಳಿ –

"ಎಲ್ಲಿ, ಆಗ ತಾಂಬೂಲ ಕುಟ್ಟುತ್ತಿದ್ದೆಯಲ್ಲ. ಅದನ್ನು ಮರತೇಬಿಟ್ಟೆಯೇನು ?"

- ಎಂದರು ಓಬವ್ವನಾಗತಿ.

ಓಬವ್ವನಾಗತಿ ಅಷ್ಟು ದಿನಗಳ ಮೇಲೆ ನಕ್ಕಿದ್ದನ್ನು ಕೇಳಿ ಹೊನ್ನವ್ವೆಗೆ ಹಾಲು-ಜೇನು ಕುಡಿದಷ್ಟು ಹರ್ಷವಾಗಿ –

"ಅದನ್ನು ಮರತೇಬಿಟ್ಟಿದ್ದೆ"

- ಎಂದು ಕಂಚಿನ ಕುಟ್ಟಣಿ, ತಾಂಬೂಲದ ತಟ್ಟೆಯನ್ನು ತರಲು ಎದ್ದು ಹೋದಳು.

೬

ಚಿತ್ರದುರ್ಗದ ಪಶ್ಚಿಮಭಾಗಕ್ಕೆ, ಚಿತ್ರದುರ್ಗದ ಸಪ್ತಶಿಖರಗಳ ಬೆಟ್ಟ ಸಾಲಿಗೆ, ಹಸಿರು ರಕ್ಷಾಕವಚವನ್ನು ತೊಡಿಸಿದಂತೆ ಹಬ್ಬಿದೆ, ಗಾದ್ರಿಮಲೆ ಗಿರಿಮಾಲೆ, ಅದರ ಬೆನ್ನ ಬದಿಗೆ, ಗಾದ್ರಿಮಲೆ ಸಾಲಿನ ಮತ್ತೊಂದು ಸೀಳಾದ ಹೊಸದುರ್ಗದ ಬೆಟ್ಟಗಳ ಪಂಕ್ತಿ. ಆ ಎರಡು ಬೆಟ್ಟಗಳ ಸಾಲಿನ ನಡುವೆ, ಸದಾ ಹಸಿರುಮುರಿವ, ಹೆಸರನ್ನು ಸಾರ್ಥಕಪಡಿಸುವ ಪಚ್ಚೆಯ ಕಣಿವೆ. ಆ ಪಚ್ಚೆ ಕಣಿವೆಯ ಗೋಪುರ ಪದಕದಂತಿದೆ - ಜಾನಕಲ್ಲು ಗ್ರಾಮ. ಆ ಗ್ರಾಮದ ಮಧ್ಯಭಾಗದಲ್ಲಿ ಚಿತ್ರದುರ್ಗದತ್ತ ಬರುವ ಶತ್ರುಗಳ ಸೈನ್ಯವನ್ನು ಎದುರಿಸಲು, ಎದೆಸೆಟಿಸಿ ನಿಂತ ಭಟನಂತಿದೆ – ಜಾನಕಲ್ಲು ಗುಡ್ಡ. ಗುಡ್ಡದ ಎಡಬಲಭಾಗಗಳಲ್ಲಿ ಕಣ್ದಿಟ್ಟಿ ಹೋಗುವವರೆಗೂ ಅಡಿಕೆ, ತೆಂಗಿನ ತೋಟಗಳು, ಮಾವು, ಹುಣಿಸೆಯ ಮರದ ತೋಪುಗಳು, ಬತ್ತದ ಗದ್ದೆಯ ಹಾಸು. ಮಲೆನಾಡ ಸೆರಗಿನ, ಹಸಿರಿನ ವಿವಿಧ ಛಾಯೆಗಳ ಲೀಲಾವಿಲಾಸವನ್ನು ನೋಡುತ್ತಾ ನಿಂತ ಮೈಯಲ್ಲಿ, ಹಸಿರು

ಹರ್ಷವಾಗಿ ಮೈತುಂಬುತ್ತದೆ. ಸುತ್ತಿ ಸುತ್ತಿ ಎಷ್ಟು ಸಲ ನೋಡಿದರೂ, ಇನ್ನಷ್ಟು ನೋಡಬೇಕೆನ್ನಿಸುವ ಆ ಹಸಿರಿನ ಅಮಲೇರಿದ ಕಣ್ಣುಗಳಿಂದ ನೋಡುತ್ತಾ ನಿಂತಿದ್ದ ಮದಕರಿನಾಯಕ.

ಗರಡಿಯ ಮನೆಯಲ್ಲಿ ಚಳಿಯಲ್ಲಿ ಬೆವರುವಷ್ಟು ಸಾಮುಮಾಡಿ, ಗರಡಿಮನೆಯ ಮೇಲಿನ ಬಾವುಟದ ಬತೇರಿಯನ್ನೇರಿ ನಿಂತು, ಗರಡಿಮನೆಯ ಮಟ್ಟಿಯ ಕೆಂಪುಧೂಳು ಕವಿದ ಮೈಗೆ, ಇರುಳು ಬಂದುಹೋದ ಜಿನಗುಮಳೆಯಲ್ಲಿ ತೊಯ್ದು ತಣ್ಣಗೆ ಬೀಸುವ ತಂಗಾಳಿಯೂ ಹಿತವಾಗಿ, ಸಾಮುಮಾಡಿದ ಎದೆ, ತೋಳು, ತೊಡೆಗಳನ್ನು ನೀವಿಕೊಳ್ಳುತ್ತಾ ಮೈಮರೆತು ನಿಂತಿದ್ದ ಮದಕರಿಗೆ ಇಹಲೋಕಪ್ರಜ್ಞೆ ಬಂದದ್ದು ಚಿತ್ರದುರ್ಗದತ್ತಣಿಂದ ವೇಗವಾಗಿ ಬರುತ್ತಿದ್ದ ಹತ್ತಿಪ್ಪತ್ತು ಮಂದಿ ಅಶ್ವಾರೋಹಿಗಳನ್ನು ಕಂಡಾಗಲೇ.

ಜಾನಕಲ್ಲು ಚಿತ್ರದುರ್ಗಸೀಮೆಯ ಆಯಕಟ್ಟಿನ ಗಡಿಕೋಟೆ. ದುರ್ಗದಿಂದ ಸೇನೆಯ ಜನ, ಅಲ್ಲಿಗಾಗಲಿ, ಅದರಾಚೆಗಿದ್ದ ಹೊಸದುರ್ಗದ ಕೋಟೆಗಾಗಲಿ ಹೋಗಿ ಬರುವುದು ಅಪರೂಪದ ದೃಶ್ಯವೇನೂ ಅಲ್ಲ. ಎಷ್ಟೋ ಬಾರಿ, ಬರೀ ಹತ್ತಿಪ್ಪತ್ತೇನು, ನೂರಾರು ಕುದುರೆಗಳ ಸೇನೆ ಬಂದದ್ದನ್ನು ಆ ಗುಡ್ಡದ ತುದಿಯ ಬತೇರಿಯ ಮೇಲಿನಿಂದ ನಿಂತು ನೋಡಿದ್ದ, ಮದಕರಿ ನಾಯಕ. ಅದೆಲ್ಲಾ ಯುದ್ಧ ಕಾರ್ಯವಿದ್ದಾಗ, ಅಂಥ ಹೊತ್ತಿನಲ್ಲಿ ಬರೀ ಸೇನೆ ಬಂದು ಹೋಗುವುದೇನು, ಜಾನಕಲ್ಲು ಕೋಟೆಯೂ ಬಗೆಬಗೆಯ ಯುದ್ಧ ಚಟುವಟಿಕೆಗಳ ಜೇನುಗೂಡಾಗುತ್ತಿತ್ತು. ಆ ಸಮಯದಲ್ಲಿ ಮೂರು ದಿನ ಮುಂಚೆಯೇ ದುರ್ಗದತ್ತಣಿಂದ ಯುದ್ಧದ ಸುದ್ದಿಯ ಗಾಳಿ ಬೀಸುತ್ತಿತ್ತು. ಈಗ ಅಂಥ ವಾರ್ತೆಯೇನೂ ಬಂದಿರಲಿಲ್ಲ. ಆದರೂ ಇಷ್ಟು ಹೊತ್ತಿಗೆ ಮುಂಚೆ ಈ ಸವಾರರೇಕೆ ಬರುತ್ತಿದ್ದಾರೆ ಎನಿಸಿ, ಹುಡುಗುತನದ ಉತ್ಸಾಹದಲ್ಲಿ ಹತ್ತಿರದಲ್ಲಿದ್ದ ಬತೇರಿಯ ಕಾವಲುಸೈನಿಕನಿಗೆ-

"ಜೋಗನಾಯಕ....ದುರ್ಗದ ಕಡೆಯಿಂದ ಕುದುರೆಗಳು ಬರುತ್ತಿವೆ. ಅಪ್ಪಯ್ಯನಿಗೆ ಸುದ್ದಿ ಹೇಳು"

- ಎಂದು ಕೂಗಿ ಹೇಳಿ, ಕಾಲಕಳೆದಂತೆ ಹತ್ತಿರವಾಗುತ್ತಿದ್ದ ಆಶ್ವಾರೋಹಿಗಳನ್ನು ಕುತೂಹಲದಿಂದ ನೋಡುತ್ತಾ ನಿಂತಿದ್ದ. ಮದಕರಿನಾಯಕ.

ಅವನ ಕೂಗುಧ್ವನಿಯನ್ನು ಕೇಳಿ, ಗರಡಿಮನೆಯ ಬಾಗಿಲಿನಲ್ಲಿ ಅಣ್ಣನಿಗಾಗಿ ಕಾದು ಕುಳಿತಿದ್ದ ಪರಶುರಾಮನಾಯಕ –

"ಸೇನೆಯ ಜನವೇನು, ಬರುತ್ತಾರೆ-ಹೋಗುತ್ತಾರೆ. ನೀನು ಬರಿಮೈಯಲ್ಲಿ ಎಷ್ಟು ಹೊತ್ತು ಥಂಡಿಗಾಳಿಯಲ್ಲಿರುತ್ತಿ. ಇಳಿದು ಬಾ, ದುರ್ಗದಿಂದ ಬಂದ ಜನ ನಮ್ಮನ್ನು ಹೀಗೆ ನೋಡಿದರೆ, ಅಪ್ಪಯ್ಯ ಕೈಗೆ ಬಾರುಕೋಲು ತೆಗೆದುಕೊಳ್ಳುತ್ತಾರೆ" – ಎಂದು ಕೂಗಿ ಕರೆದ.

ಪರಶುರಾಮನಾಯಕ ಅಪ್ಪಯ್ಯನ ಕೈಯ ಬಾರುಕೋಲನ್ನು ಜ್ಞಾಪಿಸುತ್ತಿದ್ದ ಹಾಗೇ, ಮದಕರಿಯ ಬೆನ್ನಿಗೆ ಚುರುಕು ಮುಟ್ಟಿದಂತಾಗಿ –

"ಇಗೋ - ಬಂದೆ"

- ಎಂದು ಹೇಳಿ, ಬತೇರಿಯಿಂದ ಗರಡಿಮನೆಯ ಬಾಗಿಲ ಮುಂದಕ್ಕೆ ಧುಮುಕಿ, ಹೆಗಲ ಮೇಲೆ ಹೊದ್ದಿದ್ದ ದಟ್ಟಿಯನ್ನು ಕಾಚಾ ಕಟ್ಟಿದ್ದ ತೊಡೆಗಳಿಗೆ ಸುತ್ತಿ, ತಮ್ಮನೊಂದಿಗೆ ಸನಿಹದಲ್ಲಿದ್ದ ಅರಮನೆಯತ್ತ ನಡೆದ.

"ಅದೇನಣ್ಣ, ಕುದುರೆಗಳು ಬರುತ್ತಿವೆ ಎಂದು ಕೂಗಿದೆಯಲ್ಲಾ"

– ಎಂದು ಕೇಳಿದ ಪರಶುರಾಮನಾಯಕ.

"ಹೂ, ದುರ್ಗದ ಕಡೆಯಿಂದ. ಹತ್ತಿಪ್ಪತ್ತಾದರೂ ಇರಬೇಕು. ಧೂಳಿನಲ್ಲಿ ಎಷ್ಟು ಎಂದು ಎಣಿಸಲಿಕ್ಕಾಗಲಿಲ್ಲ. ಹಗಲು ಹರಿವ ಹೊತ್ತಿಗೇ ಬಂದಿದ್ದಾರೆ. ಅದೇನು ಅವಸರದ ಸುದ್ದಿಯೋ ಮತ್ತೇನು ಕೆಟ್ಟ ಸುದ್ದಿ ತಂದರೋ. ಈಗಷ್ಟು ದಿನಗಳ ಹಿಂದೆ ದೊರೆಗಳು ಸತ್ಯ ಸುದ್ದಿ ಹೇಳಿ, ಅಪ್ಪಯ್ಯನನ್ನು ಕರೆದೊಯ್ಯಲು ನಡುರಾತ್ರಿಯಲ್ಲೇ ಬಂದಿದ್ದರು. ಈಗ ಮತ್ತಿನ್ನೇನು ಅವಸರದ ಸುದ್ದಿ ತಂದಿದ್ದಾರೋ ?"

"ಅವರು ತಂದ ಸುದ್ದಿ ಒಳ್ಳೆಯದೋ-ಕೆಟ್ಟದ್ದೋ, ಅದನ್ನು ಕಟ್ಟಿಕೊಂಡು ನಮಗಾಗಬೇಕಾದ್ದೇನು. ಅವರುಂಟು, ಅಪ್ಪಯ್ಯನುಂಟು - ಅದಕ್ಕೆಲ್ಲಾ. ನಾವು ಮಿಂದು ಮಡಿಯುಡೋಣ. ಏನಾದರೂ ಮಾತು ಹೇಳಲು ಅಪ್ಪಯ್ಯ ನಮ್ಮನ್ನು ಕರೆದು, ನಾವು ಹೀಗೇ ಹೋದರೆ, 'ನೀವೇನು ನಾಯಕರೋ, ದನಕಾಯುವ ಗೊಲ್ಲರೋ' – ಎಂದು ಬಂದವರ ಎದುರಿಗೆ ಛೀಮಾರಿ ಮಾಡಿಯಾನು."

"ಅದೂ ನಿಜವೇ. ಹೊತ್ತು ಹುಟ್ಟುತ್ತಿದ್ದ ಹಾಗೆ ಬೈಸಿಕೊಳ್ಳುವುದೇಕೆ – ನಡಿ"

- ಎಂದು, ಇಬ್ಬರು ದಾಪುಗಾಲು ಹಾಕುತ್ತಾ, ಕಲ್ಲಿನಿಂದ ಕಲ್ಲಿಗೆ ಧುಮುಕುತ್ತಾ, ಅರಮನೆಯತ್ತ ಇಳಿದು, ಅದರ ಹಿಂಬಾಗಿಲಿನಿಂದ ಒಳಸೇರಿ, ಆತುರಾತುರವಾಗಿ ಸ್ನಾನದ ಮನೆ ಸೇರಿ, ಸ್ನಾನದ ಮನೆಯ ಆಳಿಗೆ ಬಿಸಿನೀರು ತೋಡಿಕೊಡಲು ಹೇಳಿದರು.

ಅವರಿಬ್ಬರೂ ಸ್ನಾನ ಮುಗಿಸಿ ಬರುವ ವೇಳೆಗೆ, ಅವರ ತಾಯಿ ನಿಂಗವ್ವ ಅವರಿಬ್ಬರಿಗೂ ಕಂಚಿನ ತಣಿಗೆಗಳಲ್ಲಿ ಬಿಸಿಬಿಸಿ ರೊಟ್ಟಿ, ಬೆಣ್ಣೆಯ ಮುದ್ದೆ, ಪಲ್ಯಗಳನ್ನು ಬಡಿಸಿ ಕಾಯುತ್ತಿದ್ದಳು. ಅದನ್ನು ನೋಡುತ್ತಿದ್ದ ಹಾಗೇ, ಮೈಮೇಲೆ ಬಿಸಿನೀರು ಬಿದ್ದಾಗಲೇ ಸಣ್ಣಗೆ ಕೊರೆಯಲು ಆರಂಭಿಸಿದ್ದ ಹಸಿವು, ಭಗ್ಗನೆ ಉರಿಯಾಗಿ, ಹಸಿದ ತೋಳಗಳಂತೆ ತಟ್ಟೆಗೆ ಕೈಹಾಕಿದರು.

ಅವರಿನ್ನೂ ರೊಟ್ಟಿ ಬೆಣ್ಣೆ ತಿನ್ನುತ್ತಿರುವಾಗಲೇ, ಅವರ ತಂದೆ ಭರಮಣ್ಣನಾಯಕ ಅವಸರವಸರವಾಗಿ ಬಂದು-

"ದು.....ದು..... ದುರ್ಗದಿಂದ.....ದ...ದ...ದ್ದ...ದಳವಾಯಿಗಳು ಬಂದಿದ್ದಾರೆ... ಬೇ . . . ಬೇ... ಗ... ಅವರಿಗಿಷ್ಟು... ರೊ... ರೊ...ಟ್ಟಿ... ಫಲಹಾರ...ಮಾ..ಮಾ-ಡಿ-ಸು..."

-ಎಂದು ಮಕ್ಕಳಿಗೆ ಬಡಿಸುತ್ತಿದ್ದ ನಿಂಗವ್ವನಿಗೆ ಹೇಳಿದ.

"ನಿಧಾನವಾಗಿ ಹೇಳಿ, ನೀವು ಆತುರವಾಗಿ ಹೇಳಿದರೆ ಮಾತು ತಡವರಿಸುತ್ತದೇ ಹೊರತು, ಅಡಿಗೆ ಬೇಗ ಆಗುವುದಿಲ್ಲ. ಬಂದವರ ಎದುರಿಗೂ ಹೀಗೇ ಆತುರವಾಗಿ ಮಾತಾಡಿ ನಗೆಸಾರವಾಗಬೇಡಿ. ಹೇಳಿದ್ದಾಯಿತಲ್ಲ - ನೀವಿನ್ನು ಬಂದವರೊಡನೆ ಮಾತಾಡುತ್ತಿರಿ. ತಟ್ಟೆ ಹಾಕಿಸಿ, ಹೇಳಿಕಳಿಸುತ್ತೇನೆ" – ಎಂದಳು ನಿಂಗವ್ವ.

"ಹಾಗೆ ಮಾತಾಡಿದ ಹೆಂಡತಿಯನ್ನೊಮ್ಮೆ ದುರುಗುಟ್ಟಿ ನೋಡಿ –

"ಮಾತಿಗಿಂತ ಕೈ ಮುಂದಾಗಲಿ" - ಎಂದು ಹೇಳಿ, ಭರಮಣ್ಣನಾಯಕ ಹೊರಗೆ ಹೋದ.

"ಅಪ್ಪಯ್ಯ, ತನಗೆ ಕೈ ಮುಂದು ಅಂತ ಎಲ್ಲರಿಗೂ ಕೈ ಮುಂದು ಅಂತ ತಿಳಕೊಂಡಿದ್ದಾನೆ. ಇದ್ಯಾಕವ್ವ ಅಪ್ಪಯ್ಯಂಗಿಷ್ಟು ಸಿಟ್ಟು? ಮಾತೆತ್ತಿದರೆ ಸಿರ್ ಅಂತಾನೆ. ಕಮಕ್ ಕಿಮಕ್ ಅಂದರೆ ಕೋಲು ಕೈಗೆ ಬರುತ್ತೆ" - ಎಂದು ಕೇಳಿದ ಮದಕರಿನಾಯಕ.

"ಸಿಟ್ಟಲ್ಲ ಕಣಪ್ಪ. ಅದು ನಿಮ್ಮಪ್ಪಯ್ಯನೋರ ಶಿಸ್ತು. ದಂಡಿನಲ್ಲಿ ಬೆಳೆದು, ದಂಡನ್ನಾಳೋರು ಅವರು. ಹೆಂಡತಿ-ಮಕ್ಕಳೂಂದರೂ ಸಿಪಾಯಿಗಳೂಂತಲೇ ತಿಳಕೊಂಡಿದ್ದಾರೆ.... ಅದವರ ಗುಣ. ಹೋಗಲಿ ಬಿಡು, ಹಿರಿಯರ ವಿಷಯ ಮಾತಾಡೋ ಕೆಟ್ಟ ಚಾಳಿ ಮಾತ್ರ ನೀನು ಕಲಿತುಕೋಬೇಡ...."

- ಎಂದು ಮಕ್ಕಳ ತಟ್ಟೆಗಿನ್ನೆರಡು ರೊಟ್ಟಿ ಹಾಕಿ –

"ಕಾಟವ್ವಾ....ಒಲೆ ಉರಿ ದೊಡ್ಡದು ಮಾಡಿ, ದೊಡ್ಡ ಹಂಚು ಹಾಕು. ದುರ್ಗದಿಂದ ಯಾರು ಯಾರೋ ಜನ ಬಂದಿದಾರಂತೆ. ಊಟಕ್ಕೂ ನಿಲ್ತಾರೇನೋ....ಯಾರ ಕೈಲಾದರೂ ಅಷ್ಟು ತರಕಾರಿ, ಹೆಚ್ಚು ಹಾಲು, ಮೊಸರಿಗೆ ಹೇಳಿಕಳಿಸು - ನೀನು ಬರೋವರೆಗೂ ನಾನು ರೊಟ್ಟಿ ಸುಡ್ತಾ ಇರ್ತೀನಿ...."

- ಎಂದು ಕಾಟವ್ವನನ್ನು ಕಳಿಸಿ –

"ನಿಧಾನವಾಗಿ ತಿನ್ನಿ. ಹೊಟ್ಟೆಗೆ ಆತುರ ಮಾಡಿಕೋಬಾರದು....ಏನಾದ್ರೂ ಬೇಕಾದ್ರೆ ಕೂಗಿ ಕೇಳಿ...."

- ಎಂದು ಹಸಿವಿನಿಂದ ಆತುರಾತುರವಾಗಿ ತಿನ್ನುತ್ತಿದ್ದ ಮಕ್ಕಳಿಗೆ ಹೇಳಿ, ನಿಂಗವ್ವ ಅಡಿಗೆಯ ಮನೆಯತ್ತ ನಡೆದಳು,

"ಅಪ್ಪಯ್ಯನಿಗಿದ್ದ ಆತುರ ಅವ್ವನಿಗಿದ್ದಿದ್ದರೆ ನಮ್ಮ ಹೊಟ್ಟೆ ಹಸಿದು, ಬತ್ತಿದ ಬೆಂಡಾಗುತ್ತಿತ್ತು. ಅವ್ವ ಏನಾರ ಅನ್ನಲಿ, ಅಪ್ಪಯ್ಯನಿಗೆ ಮಾತ್ರ ಮೂಗಿನ ತುದಿಲೇ ಸಿಟ್ಟು"

- ಎಂದ ಮದಕರಿನಾಯಕ, ರಾಗಿಯ ರೊಟ್ಟಿಯ ತುಂಡಿಗೆ ಬೆಣ್ಣೆ ಸವರುತ್ತಾ.

"ಅಪ್ಪಯ್ಯನಿಗೆ ಸಿಟ್ಟು ಅಂತ ಅನ್ನೋದ್ಯಾಕೆ; ಸಿಟ್ಟಿನಲ್ಲಿ ನೀನೂ ಆ ಅಪ್ಪನ ಮಗನೇ; ಮೊನ್ನೆ ಕತ್ತಿವರಸೆ ಹೇಳಿಕೊಡುತ್ತಿದ್ದ ಜಟ್ಟಿಗಳು 'ಕತ್ತಿ ಹಂಗೆ ಕೆಳಗಾಡಿಸಬಾರ್ದು, ಅದು ಕಸಬರಿಕೆಯಲ್ಲ' ಅಂದಾಗ, 'ನನ್ನ ಕತ್ತೀನ ಕಸಬರಿಕೆ ಅನ್ತೀರಾ, ನಿಮ್ಮ ತಲೆ ಬೋಳಿಸಿ ತೋರಿಸಲಾ-ನನ್ನ ಕೈಲಿರೋದು ಕತ್ತೀನೋ, ಕಸಬರಿಕೇನೋ' ಅಂತ. ನೀನು ಅಷ್ಟು ವಯಸ್ಸಾದೋರ ಮೇಲೆ ಎಗರಿಬೀಳಲಿಲ್ವಾ? ಅಪ್ಪಯ್ಯ ದೊಡ್ಡೋರು, ಅವರ ಸಿಟ್ಟು ನಿನಗೆ ಕಾಣ್ತದೆ. ನಿನ್ನ ಸಿಟ್ಟು ನಿನಗೆ ಕಾಣ್ತದಾ?" – ಎಂದು ಕೇಳಿದ ಪರಶುರಾಮನಾಯಕ.

"ನನಗೆ ಸಿಟ್ಟು ಹೇಗಾದರಿರಲಿ, ಮಾತಿನಾಗೆ ಮಾತ್ರ ನೀನು ಅವ್ವನಂಗೇ. ನಾವು ಕತ್ತೀಲಿ ಕಡಿದ್ರೆ, ನೀನು ಸೂಜೀಲೇ ಕತ್ತರಿಸಿಬಿಡ್ತಿ" – ಎಂದ ಮದಕರಿನಾಯಕ.

ಮಕ್ಕಳಿಬ್ಬರೂ ಹಾಗೆ ಮಾತನಾಡುತ್ತಾ ರೊಟ್ಟಿ ತಿನ್ನುತ್ತಿರುವಾಗಲೇ ಹೊರಗಿನಿಂದ ಏರಿದ ಸ್ವರದಲ್ಲಿ –

"ಮದಕೇರೀ... ಮದಕೇರೀ..."

- ಎಂದು ಭರಮಣ್ಣನಾಯಕ ಕೂಗಿದುದು ಕೇಳಿಸಿ, ಮದಕರಿನಾಯಕ ಕೈಯಲ್ಲಿದ್ದ ರೊಟ್ಟಿಯನ್ನು ತಟ್ಟೆಯಲ್ಲೇ ಬಿಟ್ಟು, ಉಟ್ಟ ದಟ್ಟಿಗೇ ಕೈ ಒರೆಸಿಕೊಂಡು, ಧಡಕ್ಕನೆ ಮೇಲೆದ್ದು ಹೊರಗೆ ಓಡಿದ.

ಹೊರಗಿನ ಹಜಾರದಲ್ಲಿ ದುರ್ಗದಿಂದ ಬಂದವರೊಂದಿಗೆ ಮಾತನಾಡುತ್ತಾ ಕುಳಿತಿದ್ದ ಭರಮಣ್ಣನಾಯಕ ತನ್ನ ಕರೆಗೆ ಉತ್ತರವಾಗಿ 'ಏನಪ್ಪಯ್ಯ' ಎಂದು ಕೇಳಿಕೊಂಡು ಬಂದ ಮದಕರಿನಾಯಕನನ್ನು ನೋಡಿದ.

ತಂದೆಯ ಕರೆಗೆ ಓಗೊಡುವ ಆತುರದಲ್ಲಿ, ಮೈಮೇಲೆ ಅಂಗಿಯೂ ಇಲ್ಲದೆ, ಬರಿ ಮೈಯಾಗಿ, ದಟ್ಟಿಯನ್ನುಟ್ಟು ಬಂದಿದ್ದ ಮಗನನ್ನು ನೋಡಿ, ಕಣ್ಣು ತಿವಿದಂತಾಗಿ –

"ಇಲ್ಲಿ ಬಾ...ಬಾ...ರ...ಲಾ..."

- ಎಂದ ಬಿಗಿದ ಧ್ವನಿಯಲ್ಲಿ,

"ಏನಪ್ಪಯ್ಯ ?" – ಎಂದು ಮತ್ತಷ್ಟು ಹತ್ತಿರ ಬಂದ ಮದಕರಿನಾಯಕ,

“ಬಂದ... ಹಿಂಗೇನಲಾ ಬರೋದು....ಬಾ ಅಂದರೆ....ದುರುಗದ ದೊರೆಯಾಗೋನು ಜಿನ್ನೇ ದೇವರಂಗೆ ಬಂದು ನಿಂತುಕೋತಾನೆ, ನಾಚಿಕೆಗೆಟ್ಟ ನನ್ನ ಮಗ....”

- ಎನ್ನುತ್ತಲೇ ಎದ್ದು ಮಗನ ಕಪಾಳಕ್ಕೆ ತಲೆತಿರುಗುವಷ್ಟು ಬಲವಾಗಿ ಬಿಗಿದ.

ಆತನನ್ನು ಹಾಗೇ ಬಿಟ್ಟಿದ್ದರೆ ಇನ್ನೇನು ಮಾಡುತ್ತಿದ್ದನೋ, ದುರ್ಗದಿಂದ ಬಂದ ಹಿರಿಯರೊಬ್ಬರು, ತಟಕ್ಕನೆ ಭರಮಣ್ಣನಾಯಕನ ಕೈ ಹಿಡಿದು ಹಿಂದಕ್ಕೆಳೆದು –

“ನಾವಾಡಿದ ಮಾತನ್ನು ಸಿಟ್ಟಿನಲ್ಲಿ ಮರೆತುಬಿಡಬೇಡಿ, ಭರಮಣ್ಣನಾಯಕರೇ. ಇವತ್ತು ಇವರು ನಿಮ್ಮ ಮಕ್ಕಳು. ನಾಳೆಯಿಂದ ದುರ್ಗದ ಪಾಳೆಯಗಾರರು - ನಿಮಗೂ”

- ಎಂದು ಹೇಳಿದರು, ಕಡೆಯ ಮಾತಿಗೆ ಒತ್ತುಕೊಟ್ಟು.

ಅವರು ಹೇಳಿದುದನ್ನು ಕೇಳಿ ಭರಮಣ್ಣನಾಯಕ ಹಾಗೇ ಕುಸಿದು, ಕೆನ್ನೆಯಮೇಲೆ ಬಾಸಾಳ ಮೂಡಿ, ಕೆಂಪೇರಿದ ಮುಖದ ಮಗನನ್ನು ನೋಡಿದ.

ಇವತ್ತು - ಮಗ ; ನಾಳೆ- ದುರ್ಗದ ದೊರೆ!

ಹಿಂದೆಂದೂ ಆ ಮಗನನ್ನು ನೋಡದಿದ್ದವನಂತೆ ಬೆರಗು ತುಂಬಿದ ಕಣ್ಣುಗಳಿಂದ ನೋಡಿದ ಭರಮಣ್ಣನಾಯಕ, ದುರ್ಗದವರಾಡಿದ ಮಾತಿನ ಮೋಡಿಗೆ ಅವನ ಸಿಟ್ಟೆಲ್ಲಾ ಇಬ್ಬನಿಯಂತೆ ಕರಗಿಹೋಗಿ, ಹಾಗೇ ನೋಡನೋಡುತ್ತಾ ಆ ಮಗನ ಬಗ್ಗೆ ಅಭಿಮಾನ ಮೂಡಿಬಂದು –

“ಇವತ್ತು ನೀವು ಹೇಳಿದ್ದೆಲ್ಲಾ ಕೇಳಿ, ನನ್ನ ಬುದ್ಧಿ ಎತ್ತೆತ್ತಲೋ ಆಗಿಹೋಗಿದೆ.... ಮದಕೇರಣ್ಣಾ, ಸಿಟ್ಟಿನಲ್ಲಿ ನಿನ್ನ ಏನೋ ಅಂದುಬಿಟ್ಟೆ ಅಂತ ಬೇಸರ ಮಾಡಿಕೋಬೇಡ.... ಒಂದು ತಂಬಿಗೆ ಹಾಲು, ಒಂದು ತಟ್ಟೆ ತುಂಬಾ ಸಕ್ಕರೆ ತಗೊಂಡುಬಾಂತ ಹೇಳು”

- ಎಂದವನು –

“ನೀನು ಬೇಡ. ಪರಶುರಾಮಣ್ಣನಿಗೆ ಹೇಳು....ನೀನೊಂದು ಹೊಸ ಅಂಗಿ, ದಟ್ಟಿ ಸುತ್ತಿಕೊಂಡು ಬಾ....ಹಾಗೇ ನಿಮ್ಮವ್ವನನ್ನು ಇಲ್ಲಿ ಬಾಂತ ಹೇಳು”

– ಎಂದು ಮೊದಲಿನ ಮಾತು ತಿರುಗಿಸಿ ಮೃದುವಾದ ಧ್ವನಿಯಲ್ಲಿ ಹೇಳಿದ.

ಮದಕರಿನಾಯಕನಿಗೆ ತಂದೆಯ ಮಾತು, ವರ್ತನೆ ಒಂದೂ ಅರ್ಥವಾಗದೆ, ಕಾಣದ ಕಾಡಿನಲ್ಲಿ ಸುತ್ತಿಸಿದಂತಾಗಿ –

“ಅವ್ವ ಬಂದವರಿಗೆ ರೊಟ್ಟಿ ಮಾಡುತ್ತಿದ್ದಾಳೆ” – ಎಂದ.

“ಆದಾಮೇಲೆ ಆಗಲಿ, ಮೊದಲು ಇಲ್ಲಿಗೆ ಬಂದು ಒಳ್ಳೆ ಸುದ್ದಿ ಕೇಳೂಂತ ಹೇಳು. ಹಾಗೇ ನೀನೂ ಒಳ್ಳೆ ಬಟ್ಟೆ, ಅದೇ ಹಬ್ಬಕ್ಕೆ ಹೊಲಿಸಿದ್ದಿತ್ತಲ್ಲ, ಅದನ್ನು ಉಟ್ಟು, ಹೆಗಲ ಮೇಲೊಂದು ಶಲ್ಯ

ಹಾಕಿಕೊಂಡು ಬಾ. ಹೂ, ಬೇಗ ಹೋಗು - ನಿಮ್ಮವ್ವನ್ನ ಬೇಗ ಬಾಂತ ಹೇಳು. ನೀನೂ ತಡಮಾಡಬೇಡ" - ಎಂದು ಆತುರ ಮಾಡಿದ ಭರಮಣ್ಣನಾಯಕ.

ಅದೆಲ್ಲಾ ಕೇಳಿಯೂ ಮದಕರಿನಾಯಕನಿಗೆ ಇವತ್ತೇನೋ ವಿಶೇಷವಿರಬೇಕೆನಿಸಿತೇ ಹೊರತು ಹೆಚ್ಚಿನದೇನೂ ಅರ್ಥವಾಗದೆ. ತಂದೆ ಹೇಳಿದ ಮಾತನ್ನು ನಡೆಸಲು ಒಳಗೆ ಹೋಗಿ, ಅಡಿಗೆಯ ಮನೆಯಲ್ಲಿದ್ದ ನಿಂಗವ್ವನಿಗೆ ತಂದೆ ಹೇಳಿದುದನ್ನೆಲ್ಲಾ ತಿಳಿಸಿದ. ಆಕೆಗೂ ಮಗನ ಮಾತು ವಿವರವಾಗಿ ಅರ್ಥವಾಗಲಿಲ್ಲ. 'ಏನೋ, ಒಳ್ಳೆ ಸುದ್ದಿ ಇರಬೇಕು' ಎಂದಷ್ಟೇ ಅರ್ಥಮಾಡಿಕೊಂಡು, ರೊಟ್ಟಿ ಮಾಡುವ ಕೆಲಸವನ್ನು ಕಾಟವ್ವನಿಗೆ ಒಪ್ಪಿಸಿ, ಕಂಚಿನ ತಟ್ಟೆಯ ತುಂಬಾ ಸಕ್ಕರೆ, ಒಂದು ದೊಡ್ಡ ತಂಬಿಗೆಯ ತುಂಬಾ ಹಾಲನ್ನು ಪರಶುರಾಮನಾಯಕನ ಕೈಲಿ ತೆಗೆಸಿಕೊಂಡು ಬಂದು, ಅವೆಲ್ಲವನ್ನು ದುರ್ಗದವರ ಮುಂದೆ ಇಡಲು ಹೇಳಿ, ತಾನು ಬಾಗಿಲ ಮರೆಯಲ್ಲಿ ನಿಂತಳು.

"ಅಷ್ಟು ದೂರ ನಿಂತುಕೋಬೇಡ. ಹತ್ತಿರ ಬಾ. ಒಳ್ಳೆ ಸುದ್ದಿ ಕೇಳೋದಿದೆ. ನೀನು ಮಗನನ್ನು ಹಡೆದದ್ದು ಸಾರ್ಥಕವಾಯಿತು"

-ಎಂದು ಹೆಂಡತಿಯನ್ನು ಹಜಾರದೊಳಗೇ ಬರಲು ಕರೆದ, ಭರಮಣ್ಣನಾಯಕ.

ಗಂಡನ ಮಾತನ್ನು ಕೇಳಿದ ನಿಂಗವ್ವ, ಎದೆ ತುಂಬಾ ಸುತ್ತಿ, ತಲೆಯ ಮೇಲೂ ಸೆರಗನ್ನು ಹೊದ್ದು ಹಜಾರದೊಳಗೆ ಬಂದು ತಲೆ ತಗ್ಗಿಸಿ ಕುಳಿತಳು.

"ಈ ಮಗನ ತಾಯಿಗೆ ನೀವೇ ಸುದ್ದಿ ಹೇಳಿ. ನಾನು ಹೇಳಿದರೆ ನಂಬೋದಿಲ್ಲ"

-ಎಂದ ಭರಮಣ್ಣನಾಯಕ,

"ಆಯಿತು, ನಾವೇ ಹೇಳುತ್ತೇವೆ. ನಿಮ್ಮ ಮಕ್ಕಳೂ ಬರಲಿ"

-ಎಂದರು ದುರ್ಗದಿಂದ ಬಂದವರಲ್ಲೊಬ್ಬರು.

ಅಷ್ಟು ಮಾತಾಗುವ ವೇಳೆಗೆ. ತಡಮಾಡಿದರೆ ಮತ್ತೆಲ್ಲಿ ತಪರಾಕಿಗೆ ಬಿದ್ದಿತೋ ಎಂದು ಹೆದರಿದ ಮದಕರಿನಾಯಕ, ತಂದೆ ಹೇಳಿದಂತೆ ಹಬ್ಬಕ್ಕೆ ಹೊಲಿಸಿದ ರೇಶಿಮೆಯ ಅಂಗಿ, ಜರತಾರಿಯಂಚಿನ ದಟ್ಟಿಯನ್ನು ಧರಿಸಿ, ಹೆಗಲ ಮೇಲೆ ರೇಶಿಮೆಯ ಶಲ್ಯ ಹಾಕಿಕೊಂಡು ಬಂದು ತಾಯಿಯ ಬಳಿ ನಿಂತ.

"ನೀವು ಅಷ್ಟು ದೂರ ನಿಲ್ಲುವುದು ಬೇಡ, ಇಲ್ಲೇ ನಿಮ್ಮ ತಂದೆಯ ಹತ್ತಿರ ಕುಳಿತುಕೊಳ್ಳಿ" - ಎಂದರು ದುರ್ಗದ ಮತ್ತೊಬ್ಬರು.

"ಬಾ, ಮಗಾ. ಇವರೆಲ್ಲಾ ನಮ್ಮವರೇ, ನಿನ್ನ ನೋಡಲಿಕ್ಕೇ ಬಂದಿದಾರೆ"

- ಎಂದು ಭರಮಣ್ಣನಾಯಕನೂ ಮಗನನ್ನು ವಿಶ್ವಾಸದಿಂದ ಹತ್ತಿರ ಕರೆದು ಕೂರಿಸಿಕೊಂಡು, ಉಕ್ಕಿಬಂದ ಪ್ರೀತಿಯಲ್ಲಿ ಮಗನ ಹೆಗಲ ಮೇಲೆ ಕೈಹಾಕಿ

"ಇವರೆಲ್ಲ ಯಾರು ಗೊತ್ತೆ, ಮದಕೇರಂಣ.... ಇವರು ಬಾಣದ ಮದಕರಿನಾಯಕರು-ಠಾಣ್ಯದಚಾವಡಿ ದಳವಾಯಿಗಳು, ಇವರು ಚಪ್ಪೇಚಾವಡಿ ದಳವಾಯಿಗಳು - ಹುಚ್ಚಪ್ಪನಾಯಕರು, ಇವರು ಪಾರುಪತ್ತೇಗಾರ ಕೆಂಚಪ್ಪನವರು... ಇವರು ಬೊಕ್ಕಸದ ಅಜ್ಜಪ್ಪನವರು....ಇವರು ಅಠವಣೆಚಾವಡಿಯ ಗಂಗಾಧರಪ್ಪನವರು...."

- ಎಂದೆಲ್ಲಾ ವಿವರವಾಗಿ ಬಂದಿದ್ದವರ ಪರಿಚಯ ಮಾಡಿಸಿ, ಅವರು ತಿರುಗಿ –

"ಈಗ ಮುಂದಿನ ಮಾತನ್ನು ನೀವು ಹೇಳಿ"

ಎಂದು ಮಾತು ತೊದಲದಂತೆ ನಿಧಾನವಾಗಿ ಹೇಳಿದ.

"ನಿಮಗೆ ಹೇಳಿದುದೆಲ್ಲಾ ಆಯಿತಲ್ಲ - ಮುಖ್ಯ ವಿಷಯವಿಷ್ಟೆ. ಕೈಲಾಸದಲ್ಲಿರೋ ಕಸ್ತೂರಿ ರಂಗಪ್ಪನಾಯಕರಿಗೆ ಮಕ್ಕಳಿಲ್ಲದ ವಿಷಯ ನಿಮಗೆಲ್ಲಾ ಗೊತ್ತಲ್ಲ, ಮುಂದೆ ಯಾರಿಗೆ ಪಟ್ಟವಾಗಬೇಕು ಎಂಬ ವಿಷಯದಲ್ಲಿ, ನಿನ್ನೆ ಮಧ್ಯಾಹ್ನ ಹಿರಿಯರೆಲ್ಲರ ಸಭೆ ನಡೆದು, ಒಮ್ಮತವಾಗಿ, ಹಿರಿಯ ಓಬವ್ವನಾಗತಿಯವರು ಅಪ್ಪಣೆ ಮಾಡಿದಂತೆ ನಿಮ್ಮ ಹಿರಿಯ ಮಕ್ಕಳು ಮದಕರಿನಾಯಕರನ್ನು ದುರ್ಗದ ದೊರೆಗಳಾಗಿ ಪಟ್ಟಕಟ್ಟಬೇಕೆಂದು ತೀರ್ಮಾನವಾಯಿತು. ಆ ಸುದ್ದಿಯನ್ನು ತಮಗೆ ತಿಳಿಸಲು ನಮಗೆ ಅಪ್ಪಣೆಯಾಯಿತು. ತಾವು ಸಂತೋಷವಾಗಿ ಒಪ್ಪಿ, ಈ ಶುಭಕಾರ್ಯವನ್ನು ನಡೆಸಿಕೊಡಬೇಕು"

-ಎಂದು ದುರ್ಗದಿಂದ ಬಂದವರೆಲ್ಲರ ಪರವಾಗಿ ದಳವಾಯಿ ಹುಚ್ಚಪ್ಪನಾಯಕ ಹೇಳಿದ.

ಅವರು ಹೇಳಿದ ಮಾತುಗಳೆಲ್ಲಾ ಕೇಳಕೇಳುತ್ತಾ ಭರಮಣ್ಣನಾಯಕನ ಹೃದಯ ಸಂತೋಷದಿಂದ ಪ್ರವಾಹಕಾಲದಲ್ಲಿ ಮೆಟ್ಟಿಲುಮೆಟ್ಟಿಲಾಗಿ ಏರುವ ಕೆರೆಯಂತೆ ತುಂಬಿ, ತುಳುಕಿ, ಕೊನೆಗೆ ಕೋಡಿಕಿತ್ತು ಹರಿದಂತೆ, ತನ್ನ ಹರ್ಷವನ್ನು ತಡೆಯಲಾಗದೆ, ಹೆಂಡತಿಯತ್ತ ತಿರುಗಿ –

"ಕೇಳಿದೆಯಾ, ಚೆನ್ನಾಗಿ ಕೇಳಿಸಿಕೊಂಡೆಯಾ....ನಿನ್ನ ಮಗ ದುರ್ಗದ ನಾಯಕರು; ನೀನು ದೊರೆಗಳ ತಾಯಿ, ನಿನ್ನ ಬಂಗಾರದ ಬಸಿರಿನಲ್ಲಿ ಹುಟ್ಟಿದ ಮಗ, ಈ ಮನೆಗೆ, ಊರಿಗೆ ರನ್ನದ ಕಿರೀಟವಿಟ್ಟ....ಪರಶುರಾಮಣ್ಣಾ....ಎಲ್ಲರಿಗೂ ಸಕ್ಕರೆ ಹಂಚಿ, ಹಾಲು ಕೊಡು"

- ಎಂದು ಹೇಳಿದ ಭರಮಣ್ಣನಾಯಕ, ಆನಂದಾತಿರೇಕದಲ್ಲಿ ತನ್ನ ಪಕ್ಕದಲ್ಲಿದ್ದ ಮಗನನ್ನು ಬಿಗಿದಪ್ಪಿ.

ಆ ಮಾತನ್ನು ಕೇಳಿದ ನಿಂಗವ್ವನ ಕಣ್ಣಿನಲ್ಲಿ ನೀರು ಧಾರಾಕಾರವಾಗಿ ಹರಿಯುತ್ತಿತ್ತು. ಪರಶುರಾಮನಾಯಕ ತಂದೆಯಾಡಿದ ಮಾತನ್ನು ಕೇಳಿಯೂ ಕೇಳಿಸದವನಂತೆ, ಆನಂದ-ಆಶ್ಚರ್ಯಗಳು ತುಂಬಿದ ಕಣ್ಣುಗಳಿಂದ ತನ್ನಣ್ಣನನ್ನೇ ನೋಡುತ್ತಾ ನಿಂತಿದ್ದ.

ಅವರು ಯಾರೊಬ್ಬರೂ ಮಾತನಾಡದಿದ್ದುದನ್ನು ಕಂಡು –

"ಅವ್ವಾ, ನಿಮಗೆ ನಮ್ಮ ಮಾತು ಒಪ್ಪಿಗೆಯಾಯಿತೇ ? ನೀವು ಹೂ ಅಂದರೆ ಹೂ ಕೊಟ್ಟ ಹಾಗೆ" – ಎಂದು ಬಾಣದ ಮದಕರಿನಾಯಕ ಹೇಳಿದ.

"ಕಿರೀಟ ಇಡಲಿಕ್ಕೆ ಬಂದವರು ಕಾಲಿಗೂ ಬಿದ್ದು ಕೇಳಬೇಕೆ, ಹೂ ಅನ್ನಬಾರದೆ ?"

- ಭರಮಣ್ಣನಾಯಕ ಹೆಂಡತಿಗೆ ಹೇಳಿದ.

"ನಾನೇನು ಹೇಳಲಿ - ಅರೀದ ಹೆಣ್ಣು ನೀವೇ ಹೇಳಿದಿರಲ್ಲಾ ಕಿರೀಟವಿಟ್ಟರು ಅಂತ. ಅದರ ಮೇಲಿನ್ನೇನು ಹೇಳಲಿ. ಇಷ್ಟು ವರ್ಷ ಸ್ವಾಮಿ ತಿಮ್ಮಪ್ಪನ ಸೇವೆ ಮಾಡಿದ್ದು ಸಾರ್ಥಕವಾಯಿತು" - ಎಂದಷ್ಟೇ ಸಂತೋಷದಿಂದ ಬಿಗಿದು ಭಾರವಾದ ಧ್ವನಿಯಲ್ಲಿ ಹೇಳಿದಳು.

"ಅಷ್ಟೆಂದರೆ ಆಯಿತಲ್ಲ... ಬಂದವರಿಗೆಲ್ಲಾ ಹಾಲು-ಸಕ್ಕರೆ ಹಂಚು, ಪರಶುರಾಮಣ್ಣ... ಅದಾದಮೇಲೆ ಊರ ಗೌಡರಿಗೂ, ಶಾನುಭೋಗರಿಗೂ ಹೇಳಿಕಳಿಸು. ಇವೊತ್ತು ಊರಿನಲ್ಲಿರೋ ದೇವರಿಗೆಲ್ಲಾ ಪೂಜೆ ಆಗಬೇಕು. ಸಂಜೆಗೆ ಊರಿನ ಜನಕ್ಕೆ ಹೋಳಿಗೆ ಊಟ ಹಾಕಬೇಕು...."

-ಸಂತೋಷದಲ್ಲಿ ಬೀಗುತ್ತಾ, ಆ ಸಂತೋಷವನ್ನು ಊರಿಗೆ ಹಂಚುವ ವ್ಯವಸ್ಥೆ ಮಾಡುತ್ತಿದ್ದ ಭರಮಣ್ಣನಾಯಕನನ್ನು ಮಧ್ಯದಲ್ಲೇ ತಡೆದು –

"ಈಗ ನಿಮಗೆ ತಿಳಿದದ್ದು ಊರಿಗೆ ತಿಳಿಯುವುದು ಬೇಡ. ಮುಂದೆ ಅದಕ್ಕೆ ದಿನವಿದೆ. ನಿಮಗೆ ಈ ವಿಷಯವನ್ನೂ ತಿಳಿಸಬೇಕು - ಮುಂದೆ ನಾಯಕರಾಗಲಿರುವವರು, ದುರ್ಗಕ್ಕೆ ಹೊರಡುವವರೆಗೂ ಅವರ ಮೇಲೆ ಸದಾ ನಿಗ ಇಡುವ ವ್ಯವಸ್ಥೆ ಮಾಡಬೇಕು ಎಂದು ನಮಗೆ ಅಪ್ಪಣೆಯಾಯಿತು. ಅದನ್ನು ನಿಮಗೆ ಹೇಳಿದ್ದೇವೆ. ದುರ್ಗದಿಂದ ಬಂದಿರುವ ಕಾವಲು ಜನರಿಲ್ಲದೆ, ನಾಯಕರು ಎಲ್ಲ ಹೊರಗೆ ತಿರುಗಾಡಬಾರದು. ಹಗಲಿರುಳೂ ಕೋಟೆಗೆ, ಮನೆಗೆ ಬಿಗಿಯಾದ ಕಾವಲಿದ್ದು ತೀರಾ ನಂಬಿಕಸ್ಥರಲ್ಲದವರು ಯಾರಿಗೂ ಪ್ರವೇಶವಿರಬಾರದು. ಇದು – ರಾಜಾಜ್ಞೆ"

- ಎಂದು ಹೇಳಿ, ನಿಂಗವ್ವನತ್ತ ತಿರುಗಿ –

"ಅವ್ವಾ, ನಾವು ಮತ್ತೆ ಬಂದು ಯಥೋಚಿತರೀತಿಯಲ್ಲಿ ನಾಯಕರನ್ನು ದುರ್ಗಕ್ಕೆ ಕರೆದುಕೊಂಡು ಹೋಗುವವರೆಗೂ, ನೀವೇ ಅವರಿಗೆ ಅಡಿಗೆ ಮಾಡಿ, ಬಡಿಸಬೇಕು. ನೀವು ಕೊಟ್ಟಿದ್ದನಲ್ಲದೆ ಬೇರೆ ಯಾರು ಕೊಟ್ಟ ಹಾಲು, ನೀರನ್ನೂ ಅವರು ಕುಡಿಯಲು ಬಿಡಬಾರದು. ಎರಡು ದಿನ ಅಷ್ಟು ಕಟ್ಟೆಚ್ಚರದಿಂದ ನೀವು ನಿಮ್ಮ ಮಕ್ಕಳನ್ನು, ನಮ್ಮ ನಾಯಕರನ್ನು ಕಾಪಾಡಬೇಕು"

- ಎಂದು ಹೇಳಿದ, ಪಾರುಪತ್ತೇಗಾರ ಕೆಂಚಪ್ಪನಾಯಕ.

"ನಮ್ಮ ಮಕ್ಕಳನ್ನು ನಾವು ಹೇಗೆ ಕಾಪಾಡಬೇಕು ಎಂಬುದನ್ನು ನೀವು ನಮಗೆ ಕಲಿಸಬೇಕೇ?" – ಭರಮಣ್ಣನಾಯಕ ಕೇಳಿದ.

"ಈ ಗಳಿಗೆಯಿಂದ ಇವರು ನಿಮ್ಮ ಮಕ್ಕಳಷ್ಟೇ ಅಲ್ಲ - ಈ ಸೀಮೆಯ ದೊರೆಗಳು. ದೊರೆತನಕ್ಕೆ ಎಷ್ಟು ಮಂದಿ ಆಪ್ತರೋ, ಅಷ್ಟೇ ಮಂದಿ ಹಗೆಗಳೂ ಇರುತ್ತಾರೆ. ಈಗಿನದಂತೂ ತುಂಬಾ ಇಕ್ಕಟ್ಟಿನ ಸಮಯ. ಆದ್ದರಿಂದ ಎಷ್ಟು ಎಚ್ಚರವಾಗಿದ್ದರೂ ಸಾಲದು. ಅದಕ್ಕೇ ಆದನ್ನೆಲ್ಲಾ ಹೇಳಬೇಕಾಯಿತು. ನಮ್ಮ ಮಾತನ್ನು ತಾವು ಅನ್ಯಥಾ ಭಾವಿಸಬಾರದು"

- ಎಂದ ಬಾಣದ ಮದಕರಿನಾಯಕ.

"ಆಯಿತು. ನೀವು ಎಲ್ಲಾ ತಿಳಿದವರು. ಎಲ್ಲಾ ನೀವು ಹೇಳಿದಂತೆಯೇ ಆಗಲಿ. ನೀವಾದರೂ ಇದ್ದು ಹೋಳಿಗೆಯೂಟ ಉಂಡುಹೋಗಿ" – ಎಂದ ಭರಮಣ್ಣನಾಯಕ.

"ನಮ್ಮ ಮಾತಿಗೆ ನಾಯಕರ ತಂದೆ-ತಾಯಿ, ನೀವು 'ಹೂ' ಅಂದಿರಲ್ಲ, ಅದೇ ಪಾಯಸ, ಪಂಚಭಕ್ಷ್ಯದ ಊಟ. ಈಗ ನಮ್ಮ ಹಸಿದ ಹೊಟ್ಟೆಗೆ ಏನಾದರೂ ಕೊಟ್ಟು, ನಮ್ಮನ್ನು ಕಳಿಸಿ ಕೊಡಿ" – ಎಂದ ಹುಚ್ಚಪ್ಪನಾಯಕ.

"ಇಷ್ಟು ಆತುರವಾಗಿ ಹೋಗಬೇಕೇ ? ಒಪ್ಪೊತ್ತಿದ್ದು ಹೋಗಿ"

- ಭರಮಣ್ಣನಾಯಕ ಹೇಳಿದ.

"ಇಲ್ಲಿಗೆ ಬಂದ ಒಂದು ಕೆಲಸ ಆಯಿತು. ದುರ್ಗದಲ್ಲಿನ್ನು ನಾವು ಮಾಡಬೇಕಾದ ಸಾವಿರ ಕೆಲಸಗಳಿವೆ. ಸಂತೋಷವಾಗಿ ಕಳಿಸಿಕೊಡಿ" – ಎಂದ ಬೊಕ್ಕಸದ ಅಜ್ಜಪ್ಪ.

"ಅವರಿಗೆ ಹೇಗೆ ಸಂತೋಷವೋ ಹಾಗೆ ಮಾಡಲಿ...."

- ಎಂದು ನಿಂಗವ್ವ, ಕಡೆದ ವಿಗ್ರಹದಂತೆ ಕುಳಿತಿದ್ದ ಮದಕರಿನಾಯಕನಿಗೆ –

"ಏಳಪ್ಪಾ, ದೊಡ್ಡವರಿಗೆಲ್ಲಾ ನಮಸ್ಕಾರ ಮಾಡಿ, ಒಳಗೆ ಹೋಗಿ ದೇವರಿಗೆ ನಮಸ್ಕಾರ ಮಾಡು" – ಎಂದಳು.

ತಾಯಿಯ ಮಾತಿನಂತೆ ಮದಕರಿನಾಯಕ ಎಲ್ಲರಿಗೂ ನಮಸ್ಕರಿಸಲು ಎದ್ದ. ಅದನ್ನು ಕಂಡು ಚಪ್ಪೇಚಾವಡಿಯ ದಳವಾಯಿ ಹುಚ್ಚಪ್ಪನಾಯಕ –

"ಈ ಗಳಿಗೆಯಿಂದ, ಅವರು ನಮ್ಮ ನಾಯಕರು. ತಂದೆ, ತಾಯಿ, ದೇವರಿಗಲ್ಲದೆ ಬೇರಾರಿಗೂ ನಮಸ್ಕಾರ ಮಾಡುವುದು ಸಂಪ್ರದಾಯವಲ್ಲ"

– ಎಂದು ಹೇಳಿ, ತಾನು ಹೇಳಿದ್ದು ಸರಿಯಲ್ಲವೇ ಎಂಬಂತೆ ತನ್ನೊಂದಿಗೆ ಬಂದಿದ್ದವರನ್ನು ನೋಡಿದ.

ಆತನ ಮಾತಿಗೆ ಒಪ್ಪಿದವರಂತೆ ಕುಳಿತಿದ್ದವರೆಲ್ಲರೂ ಅಲ್ಲಿಂದಲೇ ತಲೆಬಾಗಿ ಮದಕರಿ ನಾಯಕನಿಗೆ ನಮಸ್ಕರಿಸಿದರು.

ಅದನ್ನು ಕಂಡು, ಇದ್ದಕ್ಕಿದ್ದ ಹಾಗೇ ಮದಕರಿನಾಯಕನ ಎದೆಯೊತ್ತಿ ಬಂದು, ಕಣ್ಣಲ್ಲಿ ಎರಡು ಹನಿ ನೀರು ಹರಿಯಿತು.

೭

ಚಿತ್ರದುರ್ಗದ ದಳವಾಯಿಗಳು ಬಂದದ್ದು-ಹೋದದ್ದು ಎಲ್ಲಾ ಸ್ವಪ್ನಲೋಕದ ಘಟನೆಗಳಂತಾಗಿದ್ದವು ಭರಮಣ್ಣನಾಯಕನ ಮನೆಯವರಿಗೆಲ್ಲಾ. ದುರ್ಗದಿಂದ ಬಂದ ಹತ್ತು ಮಂದಿ ಸೈನಿಕರ ಕಾವಲು ಮನೆಯ ಸುತ್ತಲೂ ಇರದಿದ್ದರೆ, ಅದನ್ನು ಕನಸು ಎಂದುಕೊಂಡು ಮರೆತು ಬಿಡುತ್ತಿದ್ದರೋ ಏನೋ. ಆದರೆ ಈಗ ಅದನ್ನು ಮರೆಯುವ ಹಾಗಿರಲಿಲ್ಲ - ನಡೆದುದೆಲ್ಲವೂ ನಿಜ. ಆದರೆ ಅದಕ್ಕೆ ಹೊಂದಿಕೊಳ್ಳುವುದು ಎಲ್ಲರಿಗೂ ಕಷ್ಟವಾಗಿತ್ತು.

ಎಲ್ಲರ ಹೃದಯದಲ್ಲೂ ಹರ್ಷವಿದ್ದರೂ, ಚಿರಪರಿಚಿತರಾದ ಅವರೆಲ್ಲರೂ, ಒಬ್ಬರು ಮತ್ತೊಬ್ಬರಿಗೆ ಹೊಸಬರಾದಂತೆ ಆಗಿದ್ದರು.

ಆಗುವ ಕೆಲಸದಲ್ಲಿ ಕೊಂಚ ಹಿಂಚು-ಮುಂಚಾದರೂ ರಕ್ತಗತವಾದ ಮುಂಗೋಪದಿಂದ ಹೆಂಡಿರು, ಮಕ್ಕಳ ಮೇಲೆ ಹರಿಹಾಯುತ್ತಿದ್ದ ಭರಮಣ್ಣನಾಯಕನಿಗೆ ನಾಲಗೆಗಿರಲಿ, ಬುದ್ಧಿಗೇ ಕಡಿವಾಣ ಹಾಕಿದಂತಾಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ, ಮಾತುಮಾತಿಗೆ 'ಹೋಗಲೆ', 'ಬಾರಲೆ' ಎನ್ನುತ್ತಿದ್ದ, ಏನು ಕೆಲಸವಿದ್ದರೂ ಮೊದಲು ಮಾಡಲು ಕರೆಯುತ್ತಿದ್ದ ಹಿರಿಯ ಮಗ ಮದಕರಿಯನ್ನು ಈಗ ತಾನೇ ಮೊದಲಿನಂತೆ 'ಅಪ್ಪಯ್ಯ' ಎಂದು ಕರೆದರೂ, 'ಏನಲೆ?' ಎಂದು ಕರೆಯಲು ನಾಲಗೆಯನ್ನು ತಡೆದಂತಾಗುತ್ತಿತ್ತು.

ಇನ್ನೆರಡು ದಿನದಲ್ಲಿ ದುರ್ಗದ ಸೀಮೆಗೇ ನಾಯಕನಾಗುವ ಮಗ- ಆತನೊಂದಿಗೆ ತಾನು ಹೇಗೆ ನಡೆದುಕೊಳ್ಳಬೇಕು ?

ಮಗ ದುರ್ಗದ ದೊರೆ ; ತನ್ನ ಮಗ- ದುರ್ಗದ ಪಾಳಯಗಾರ –

ಆ ಮಾತು ನೆನಪಿಗೆ ಬಂದಾಗಲೆಲ್ಲಾ ಕಲ್ಲುಸಕ್ಕರೆಯನ್ನು ಕಡಿದಷ್ಟು ಸಂತೋಷವಾಗುತ್ತಿತ್ತು. ಆ ಹಿಗ್ಗು -ಹೆಮ್ಮೆಯನ್ನು ಹತ್ತು ಜನರ ಮುಂದೆ 'ನಾನೀಗ ಬರೀ ದಳವಾಯಿಯಲ್ಲ, ದುರ್ಗದ ನಾಯಕರ ತಂದೆ' ಎಂದು ಎದೆಯುಬ್ಬಿಸಿ ಹೇಳಬೇಕು ಎನಿಸುತ್ತಿತ್ತು. ಹಾಗೆ ಆ ಹಿಗ್ಗು-ಹೆಮ್ಮೆಗಳನ್ನು ಹತ್ತು ಜನರಲ್ಲಿ ಹಂಚಿಕೊಂಡಿದ್ದರೆ ಆತನನ್ನು ಹಿಡಿದಾಡಿಸುತ್ತಿದ್ದ

ಅವಾಸ್ತವತೆಯ ವಾತಾವರಣ ಕರಗಿಹೋಗಿ, ಆತ ಬಹುಬೇಗ ಎಂದಿನಂತಾಗುತ್ತಿದ್ದನೋ ಏನೋ. ಅದಕ್ಕೆ ಆವಕಾಶವಿಲ್ಲದ್ದು ಭರಮಣ್ಣನಾಯಕನಿಗೆ ಮಿಸುಗಲೂ ಅವಕಾಶವಿಲ್ಲದ ಕಬ್ಬಿಣದ ಕವಚವನ್ನು ತೊಡಿಸಿದಂತಾಗಿತ್ತು.

ಆತನಿಗೆ ಹಾಗೆ –

ತಾಯಿ ನಿಂಗವ್ವನ ಯೋಚನೆಗಳೇ ಬೇರೆ.

ಮಗ ನಾಯಕನಾಗುತ್ತಾನೆ-ಅದೇನೋ ಸಂತಸದ ಮಾತೇ. ಆದರೆ ತನ್ನಿಂದ, ಮನೆಯಿಂದ ದೂರವಾಗುತ್ತಾನಲ್ಲಾ, ಹನ್ನೆರಡು ವರ್ಷ ಮಮತೆಯ ತೊಟ್ಟಿಲಲ್ಲಿಟ್ಟು ಸಾಕಿ ಬೆಳೆಸಿದ ಮಗ ಎನ್ನುವುದು ನೆನಪಾದಾಗ ಕರುಳಲ್ಲಿ ಕತ್ತರಿಯಾಡಿಸಿದಂತಾಗುತ್ತದೆ. ದುರ್ಗದ ಅರಮನೆಯಲ್ಲಿ ಹೇಗಿರುತ್ತಾನೋ ಎಂದು ಹತ್ತಾರು ತೆರ ಯೋಚಿಸುವುದು, ಆ ಮಗನ ರೀತಿ-ನೀತಿ, ಬೇಕು-ಬೇಡ, ಸ್ವಭಾವ, ಹೊಟ್ಟೆಯಳತೆಯೆಷ್ಟು, ಸಿಟ್ಟು ಬಂದಾಗ ಹೇಗೆ, ದುಃಖವಾದಾಗ ಹೇಗೆ -ಇದೆಲ್ಲ ಅವನನ್ನು ಹಡೆದ ಕರುಳು, ತನಗೆ, ಅವನು ತೊಟ್ಟಿಲು-ತೊಡೆಯ ಮೇಲಾಡುವ ದಿನದಿಂದ ಎದೆಯುದ್ದದ ಮಗನಾಗುವವರೆಗೆ ಅವನೊಂದಿಗೇ ಬೆಳದು ತಿಳಿದಿತ್ತು. ದುರ್ಗದಲ್ಲಿ ಅವನು ಅರಸಾಗಬಹುದು, ಕೈ-ಕಣ್ಣ ಸನ್ನೆಯರಿತು ನಡೆಯುವ ಪಳಗಿದ ಪರಿಚಾರಗಿತ್ತಿಯರೇ ಇರಬಹುದು – ಏನಾದರೂ ಅವರು ಈ ಮಗನನ್ನು ತಾಯಿಯಂತೆ ನೋಡಿಕೊಳ್ಳುತ್ತಾರಾ? ತನ್ನೊಂದಿಗೆ ಮನಬಿಚ್ಚಿ ಮಾತನಾಡಿದ ಹಾಗೆ ಅಲ್ಲವನಿಗೆ ಮಾತಾಡಲು ಸಾಧ್ಯವೇ? ಅರಮನೆಯೆಂದರೆ - ಎಲ್ಲರಿಗೂ, ರೀತಿ-ರಿವಾಜುಗಳ ಕಟ್ಟುಪಾಡಿನ ಪಂಜರ. ಇಲ್ಲಿ ಕಾಡುಪಾರಿವಾಳದ ಹಾಗೆ ಸ್ವೇಚ್ಛೆಯಾಗಿ ಬದುಕಿದ ಮಗ, ಅಲ್ಲಿಗೆ ಹೇಗೆ ಹೊಂದಿಕೊಂಡಾನು? ಅರಮನೆಯಲ್ಲಿ ಹಿರಿಯ ನಾಗತಿಯವರೇನೋ ಇದ್ದಾರೆ. ಆದರೆ ಅವರು ನಾಗತಿ, ಕಣ್ಣು ಮೂಗು ನೋವಾದರೆ, ಹೊಟ್ಟೆಗೆ ಹಸಿವಾದರೆ 'ಅವ್ವಾ' ಎಂದು ಇಲ್ಲಿ ಹೇಳಿ ಕೇಳಿದ ಹಾಗೆ, ಅಲ್ಲಿ ಯಾರ ಮುಂದೆ ಕೇಳಬೇಕು? ಇವನನ್ನು ಅರಿತುಕೊಂಡು ನಡೆಯುವವರು ಯಾರು? – ಇದನ್ನೆಲ್ಲಾ ಯೋಚಿಸಿದಾಗ ಆ ತಾಯ ಹೃದಯಕ್ಕೆ ತನ್ನ ಮಗನನ್ನು ಹುಡುಕಿಕೊಂಡು ಬಂದ ಅಷ್ಟದಿಗ್ಬಂಧನದ ಈ ರಾಜಪದವಿ ಏಕಾದರೂ ಬಂದಿತೋ, ಬರದಿದ್ದರೇ ಲೇಸಾಗುತ್ತಿತ್ತು ಎನಿಸುವುದು.

ಮಗನಿಗೆ ತಾಯಿಯಾಗಿ ಚಿಂತಿಸಿದಾಗ ಹೀಗೆ –

ಅದು ಮರೆತು ಬೇರೆಯವರಂತೆ ಯೋಚಿಸಿದಾಗ - ಜಗತ್ತೆಲ್ಲಾ ಬಯಸುವ ರಾಜಪದವಿಯ ವೈಭವ ತಾನಾಗಿಯೇ ತನ್ನ ಮಗನನ್ನು ಹುಡುಕಿಕೊಂಡು ಬಂದಿರುವಾಗ, ಈ ಅಪರೂಪ ಸೌಭಾಗ್ಯಕ್ಕಾಗಿ ಆನಂದಿಸದೆ, ಅತ್ತೆಯ ಮನೆಗೆ ಮೊದಲ ಬಾರಿಗೆ ಮಗಳನ್ನು ಕಳಿಸುವ

ತಾಯಿಯ ಹಾಗೆ ಚಿಂತಿಸುವುದು ಎಂಥ ಹೆಡ್ಡತನ ಎನಿಸಿ, ತನ್ನ ಯೋಚನೆಗೆ ತನಗೇ ನಾಚಿಕೆಯಾಗುವುದು. 'ಮಗ ದೊರೆಯಾಗುವನೆಂಬ ಸುದ್ದಿ ತಿಳಿದು, ಆ ಸಂತೋಷವನ್ನು ಕೊರಗಾಗಿ ಮಾಡಿಕೊಂಡು ಕಣ್ಣೀರಿಡುವುದೇಕೆ, ಮಗನನ್ನು ದೊರೆ ಮಾಡಿದ ದೇವರು ಅವನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾನೆ' ಎಂದು ತನಗೆ ತಾನೇ ಸಮಾಧಾನ ಹೇಳಿಕೊಳ್ಳುವಳು.

ಮದಕರಿನಾಯಕನಿಗೂ ಅಷ್ಟೆ - ಕಾಲಿಗೇನೋ ಬೇಡಿ ಬಿದ್ದ ಹಾಗಿತ್ತು. ಈ ದೊರೆಯಾಗುವ ಮಾತು. ಅಪ್ಪ ಒಂದು ಥರ, ಅವ್ವ ಮತ್ತೊಂದು ಥರ. ಇದ್ದದ್ದರಲ್ಲಿ ತಮ್ಮ ಪರಶುರಾಮನಾಯಕ ಅಷ್ಟು ವಾಸಿ. ಅಣ್ಣನ ಹತ್ತಿರ ಏನೇನೋ ನೂರೆಂಟು ಕನಸಿನ ಮಾತಾಡುತ್ತಾನೆ. ಆದರೆ ಅವನಿಗೂ ಅಷ್ಟೆ - ಓರಗೆಯವರ ಮುಂದೂ ಈ ಮಾತು ಹೇಳಿ ಸಂತೋಷಪಡುವುದಕ್ಕಿಲ್ಲವಲ್ಲ. ಗರಡಿಗೂ ಹೋಗುವುದು ತಪ್ಪಿತ್ತು. ದಿನವೂ ಅವರಿಬ್ಬರೂ ಜೊತೆಯಾಗಿ ಹೋಗುತ್ತಿದ್ದ ತಿಮ್ಮಪ್ಪನ ಗುಡಿಗೆ ಹೋಗಲೂ ಅಡ್ಡಿ - 'ನೀವು ಹೋದರೆ ಹಿಂದೆ ಕಾವಲು ಭಟರು ಬರುತ್ತಾರೆ. ಅದೇಕೆಂದು ಊರಿನಲ್ಲೆಲ್ಲ ಪುಕಾರಾಗುತ್ತದೆ. ದೇವರೆಲ್ಲೂ ಓಡಿ ಹೋಗುವುದಿಲ್ಲ. ಎರಡು ದಿನ ತಣ್ಣಗೆ ಮನೆಯಲ್ಲಿರಿ' – ಎಂಬ ತಂದೆಯ ಅಪ್ಪಣೆ.

ಅಂತೂ ಹೀಗೆ ಒಬ್ಬೊಬ್ಬರಿಗೆ ಒಂದೊಂದು ಬಗೆಯ ಮೂಗುಬ್ಬಸದಲ್ಲಿ ಮೂರು ದಿನ ಕಳೆಯಿತು.

೮

ಮೂರು ದಿನ ಕಳೆಯಿತು –

ನಾಲ್ಕನೆಯ ದಿನ ಬಂದಿತು.

ಅದರೊಂದಿಗೆ ಅಂಬಾರಿಯ ಆನೆ, ಬಗೆಬಗೆಯ ಸಮವಸ್ತ್ರ, ಶಸ್ತ್ರ ಧರಿಸಿದ ಸೈನಿಕರು ನಿಶಾನಿಯವರು, ಮೇನೆಗಳು, ಅಲಂಕರಿಸಿದ ಆನೆ, ಕುದುರೆ, ಒಂಟೆಗಳು, ರಾಜಲಾಂಛನಗಳನ್ನು ಹಿಡಿದ ಆಳುಗಳು-

ಜಾನಕಲ್ಲು ಹಿಂದೆಂದೂ ಅಂಥ ವೈಭವವನ್ನು ನೋಡಿರಲಿಲ್ಲ.

ಅವೆಲ್ಲವೂ ಊರಿನ ಹೊರಕೋಟೆಯಲ್ಲಿ ಬಂದು ಬೀಡು ಬಿಡುತ್ತಿದ್ದ ಹಾಗೇ, ರಾಜಭಟರು ಕಹಳೆ ನಗಾರಿಗಳ ಸದ್ದಿನೊಂದಿಗೆ –

"ರಾಜಾ ಮದಕರಿನಾಯಕರು ಪಟ್ಟಾಭಿಷೇಕಕ್ಕಾಗಿ ನಾಳೆ ಚಿತ್ರದುರ್ಗಕ್ಕೆ ವಿಜಯಯಾತ್ರೆ ಬೆಳಸುವರು. ಊರಿನ ಜನವೆಲ್ಲಾ ಮನೆಗಳಿಗೆ ತೋರಣ, ಚಪ್ಪರ ಕಟ್ಟಿ, ಹಾದಿಗೆ ರಂಗೋಲಿ ಹಾಕಿ, ಬೀಳ್ಕೊಡಬೇಕು" – ಎಂಬ ಸುದ್ದಿಯನ್ನು ಊರಿನಲ್ಲೆಲ್ಲಾ ಸಾರಿದರು.

ಆ ಸುದ್ದಿಯನ್ನು ಕೇಳಿ ಊರು ಕೆಣಕಿದ ಜೇನುಹುಟ್ಟಿನಂತಾಯಿತು. ಊರಿಗೆ ಉತ್ಸಾಹದ ನೆರೆ ಏರಿದಂತಾಗಿ ಮದಕರಿನಾಯಕನ ಹೆಸರು ಹೇಳಿ ಜಯಘೋಷ ಮಾಡಿದರು, ಕೇಕೆಹಾಕಿದರು, ಕೋಲಾಟವಾಡಿದರು. ಹಿರಿಯರೆನಿಸಿಕೊಂಡವರೆಲ್ಲಾ ಕೈಗೆ ಸಿಕ್ಕ ಹೂವು-ಹಣ್ಣು ಹಿಡಿದು ಭರಮಣ್ಣನಾಯಕರ ಮನೆಯತ್ತ ಓಡಿದರು.

ಆ ರಾತ್ರಿ ಊರಿನಲ್ಲಾರೂ ಮಲಗಲಿಲ್ಲ –

ಊರ ಮಗ ದುರ್ಗದ ದೊರೆಯಾಗಲು ಹೋಗುತ್ತಿರುವಾಗ ನಿದ್ರೆ ಯಾರಿಗೆ ಬೇಕು ? ದಿನನಿತ್ಯದ ಊಟ ಯಾರಿಗೆ ಬೇಕು ? ಮದಕರಿನಾಯಕನ ಓರಗೆಯ ಹುಡುಗರಿಗಂತೂ ತಾವೇ ದೊರೆಗಳಾದಷ್ಟು ಸಂತೋಷ, ಊರ ಯುವಕರೆಲ್ಲಾ ಒಟ್ಟಾಗಿ ಸೇರಿ, ಮನೆ ಮುಂಗಟ್ಟು, ದೇವಾಲಯಗಳಿಗೆ ಸುಣ್ಣ ಬಣ್ಣ ಬಳಿದು ಸಿಂಗರಿಸಿದರೆ, ಒಂದೊಂದು ಮನೆಯ ಹೆಂಗಸರೂ, ಒಬ್ಬರು ಮತ್ತೊಬ್ಬರೊಂದಿಗೆ ಸ್ಪರ್ಧಿಸಿ, ತಮ್ಮ ತಮ್ಮ ಮನೆಗಳ ಮುಂದೆ ಸಾರಿಸಿ, ಬಣ್ಣ ಬಣ್ಣದ ರಂಗೋಲಿಯ ಬಗೆಬಗೆಯ ಚಿತ್ರ ಬರೆದು, ರಸ್ತೆ, ರನ್ನಗಂಬಳಿಯಂತೆ ಕಾಣುವ ಹಾಗೆ ಮಾಡಿದರು. ರಾತ್ರಿಯೆಲ್ಲಾ ಗರ್ನಾಲುಗಳು ಸಿಡಿದವು, ಬಣ್ಣಬಣ್ಣದ ಮತಾಪಿನ ಬುಡ್ಡಿಗಳು ಸಿಡಿದು, ಮನೆಯ ಮುಂದೆ ದೀಪಸಾಲು ಮಿನುಗಿ, ಜನರ ಕೂಗು-ಕೇಕೆಗಳೊಂದಿಗೆ, ಆನೆಗಳ ಘೀಂಕಾರ, ಹಯಗಳ ಹೇಷಾರವ, ಕಹಳೆ, ತಮಟೆಗಳ ಸದ್ದು, ದೇವಾಲಯಗಳ ಘಂಟಾನಿನಾದವೂ ಬೆರತು, ಊರು ಬಣ್ಣ, ಬೆಳಕು, ಬಗೆಬಗೆಯ ಸದ್ದುಗಳ ಬೀಡಾಯಿತು. ಆ ರಾತ್ರಿ ಯಾರೂ ಕಣ್ಣು ಮುಚ್ಚಲಿಲ್ಲ.

ಊರೇ ಎಚ್ಚತ್ತಿದ್ದಾಗ –

ಇನ್ನು ಅರಮನೆಯಲ್ಲಿ ಯಾರಿಗೆ ನಿದ್ರೆ ಬರಬೇಕು ? ನಿದ್ರೆ ಮಾಡಬೇಕೆಂಬ ಬಯಕೆಯ ಇಲ್ಲ, ಎಲ್ಲರೂ ಉತ್ಸಾಹದ ಚಿಲುಮೆಗಳಂತೆ ದುಡಿಯುತ್ತಿದ್ದರು, ಮರುದಿನದ ಉತ್ಸವಕ್ಕಾಗಿ. ನಾಯಕರ ಪಯಣ - ಹಗಲಿನ ಊಟ ತೀರಿಸಿದ ಬಳಿಕ ಎಂದು ನಿಶ್ಚಯವಾದುದರಿಂದ, ಊರಿಗೆ ಊಟ ಹಾಕುವ ಸಲುವಾಗಿ, ನಡುರಾತ್ರಿಯಿಂದಲೇ ಅಡಿಗೆಯ ಹರಿಯೊಲೆಗಳು ಉರಿಯಲಾರಂಭಿಸಿದವು. ಆ ಸುದ್ದಿಯನ್ನು ಡಂಗೂರದವರು ಸಾರಿ ಹೇಳಿದರು. ದೇವಾಲಯ, ಬಸದಿಗಳ ಅರ್ಚಕರು ರಾತ್ರಿಯಿಂದಲೇ ಹಗಲಿನ ಪೂಜೆಗೆ ಸಿದ್ಧತೆ ನಡೆಸಿದರು.

ತಮ್ಮ ಉತ್ಸಾಹದಲ್ಲಿ ಊರ ಜನ ಮಲಗುವುದಿರಲಿ-

ಮರಗಳಲ್ಲಿದ್ದ ಹಕ್ಕಿ-ಪಕ್ಕಿಗಳನ್ನೂ ಮಲಗಲು ಬಿಡಲಿಲ್ಲ.

ಹೀಗೇ ಇರುಳು ಕಳೆದು ಹಗಲಾಯಿತು.

ಮುಗಿಲಿನಲ್ಲಿ ಮೂಡಣ ಕೆಂಪು ಕಾಣುತ್ತಿದ್ದ ಹಾಗೇ, ಊರಿನ ಉತ್ಸಾಹ ಮತ್ತಷ್ಟು ರಂಗೇರಿತು. ಅರಮನೆ ಸಂತೋಷದ ಗದಗೆದರಿತು.

ಹಗಲಾಗುತ್ತಿದ್ದ ಹಾಗೇ –

ಎದ್ದು ಪ್ರಾತರ್ವಿಧಿಗಳನ್ನು ಮುಗಿಸಿ ಬಂದ ಮದಕರಿನಾಯಕನನ್ನು, ಊರ ಮುತ್ತೈದೆಯರೆಲ್ಲಾ ಕಲೆತು, ಹಸೆಯ ಮೇಲೆ ಕೂರಿಸಿ, ಹತ್ತು ಬಗೆಯ ಹಾಡು ಹೇಳಿ 'ಎಣ್ಣೆಶಾಸ್ತ್ರ' ಮಾಡಿ ಮುಗಿಸಿದರು. ಉಡಿಯೊಡ್ಡಿ ಆರತಿ ಕಾಣಿಕೆ ಕೇಳಿ ನಕ್ಕು ನಲಿದಾಡಿದರು. ಆಳುಗಳು ಆತನ ಮೈಗೆ ಎಣ್ಣೆ ಉಜ್ಜಿದರೆ, ಹೆಂಗಳೆಯರು 'ನಾ ಮುಂದು ತಾ ಮುಂದು' ಎಂದು ನೀರೆರೆದರು. 'ನಾನೂ ಮಗನ ನೆತ್ತಿಗೆ ನಾಲ್ಕು ತಂಬಿಗೆ ನೀರು ಹಾಕುತ್ತೇನೆ' ಎಂದು ಬಂದ ನಿಂಗವ್ವನಿಗೆ ಯಾರೂ ಅವಕಾಶ ಕೊಡಲಿಲ್ಲ. 'ಇಷ್ಟು ವರ್ಷ ನೀನು ಮಾಡಿದೀಯ, ನಿನ್ನ ಮಗನಿಗೆ. ಇವತ್ತು ನಿನ್ನ ಮಗ – ಊರ ಮಗ. ಮಜ್ಜನ ಮಾಡಿಸುವ ಸರದಿ ನಮ್ಮದು' ಎಂದು ಆಕೆಯ ಕೈಯಲ್ಲಿದ್ದ ತಂಬಿಗೆಯನ್ನು ಕಿತ್ತುಕೊಂಡು, ಮೂಲೆಗೆ ಕೂಡಿಸಿದರು. 'ಮಗ ದೊರೆಯಾಗುತ್ತಿದ್ದ ಹಾಗೇ, ಹಡೆದವಳು, ನನ್ನನ್ನು ದೂರ ಮಾಡಿದಿರಲ್ಲಾ' ಎಂದು ನಿಂಗವ್ವ ಕಣ್ಣೀರಿನಲ್ಲಿ ತೊಯ್ದು ಮೃದುವಾದ ಧ್ವನಿಯಲ್ಲಿ ಹೇಳಿದ್ದು ಕೇಳಿಸಿದುದು ಮದಕರಿನಾಯಕನ ಕಿವಿಗೆ ಮಾತ್ರ. ಆ ಮಾತು ಕೇಳಿ, ಆತನ ಕಣ್ಣೂ ತೇವವಾಯಿತು. ತಲೆಯ ಮೇಲೆ ಧಾರೆಯಾಗಿ ಬೀಳುತ್ತಿದ್ದ ನೀರಿನಲ್ಲಿ ಅದೂ ಯಾರ ಕಣ್ಣಿಗೂ ಬೀಳಲಿಲ್ಲ. ಆ ಸಡಗರದ ಅಭ್ಯಂಜನ, ಭರಮಣ್ಣನಾಯಕ 'ಪ್ರಯಾಣಮುಹೂರ್ತಕ್ಕೆ ತಡವಾಗುತ್ತದೆ ಎಂದು ಪುರೋಹಿತರು ಹೇಳುತ್ತಿದ್ದಾರೆ' ಎಂದು ಕೂಗದಿದ್ದರೆ ದಿನವಿಡೀ ನಡೆಯುತ್ತಿತ್ತೋ ಏನೋ.

ಹಾಗೆ ಸ್ನಾನ ಮುಗಿಸಿ ಬಂದ ಮದಕರಿನಾಯಕನಿಗೆ ಹೊಸ ಉಡುಗೆ ತೊಡಿಸಿ, ಮತ್ತೆ ಹಸೆಮೇಲೆ ಕೂರಿಸಿ, ಆರತಿ ಎತ್ತಿ, ಆರತಿಯ ನೀರಿನಲ್ಲಿ ವೀಳಿಯದೆಲೆಯನ್ನು ನಿವಾಳಿಸಿದರು. ಊರ ಎಲ್ಲಾ ದೇವಾಲಯಗಳಿಂದ ಬಂದ ಪ್ರಸಾದದ ಕುಂಕುಮ, ವಿಭೂತಿ, ಭಂಡಾರವನ್ನು ಆತನ ಹಣೆಗಿಟ್ಟರು. ಅದು ಮುಗಿಯುತ್ತಿದ್ದ ಹಾಗೇ, ಊಟಕ್ಕೆ ಸಿದ್ಧಪಡಿಸಿದ ಸುದ್ದಿ ಬಂತು. ಆ ಊಟಕ್ಕೆಂದು ಮನೆಗೊಂದು ಭಕ್ಷ್ಯಗಳನ್ನು ಮಾಡಿಕೊಂಡು ಬಂದಿದ್ದ ಮಹಿಳೆಯರು ಬಡಿಸಲು ಮುಂದೆ ನುಗ್ಗಿದರು. ಎಲ್ಲರಿಗೂ ತಾವು ತಂದದ್ದನ್ನು ದೊರೆ ತಿನ್ನಬೇಕೆಂಬ ಬಯಕೆ; ಈಗಲ್ಲದಿದ್ದರೆ ದೊರೆಗೆ ಬಡಿಸುವ ಅವಕಾಶ ಮತ್ತೆಲ್ಲಿ ದೊರೆತೀತು ಎಂಬ ಆತುರ.

ಆದರೆ ಮದಕರಿನಾಯಕ ಎಲ್ಲರ ಉತ್ಸಾಹವನ್ನೂ ಮುರಿದು ಹೇಳಿದ –

"ಅವ್ವ ಬಡಿಸದಿದ್ದರೆ, ನನಗೆ ಊಟವೇ ಬೇಡ."

ಆ ಮಾತು ಅವರೆಲ್ಲರಿಗೂ ಒಂದು ಬಗೆಯ ನಿರಾಶೆಗೆ ಕಾರಣವಾದರೂ, ತಾಯಿ-ಮಕ್ಕಳ ಪ್ರೀತಿ ಯಾರಿಗೂ ಬೇಸರ ತರಲಿಲ್ಲ.

'ಮಗ ಎಂದರೆ ಹೀಗಿರಬೇಕು. ಇಂಥ ಹೊತ್ತಿನಲ್ಲಿ ನೆನೆದವನೇ ಮಗ' ಎನಿಸಿ –

"ಆಯಿತು. ನಿಮ್ಮವ್ವನೇ ಬಡಿಸಲಿ. ನಾವು ಕೂತು ನೋಡಿ, ಕಣ್ಣ ತೃಪ್ತಿ ಪಡೆಯುತ್ತೇವೆ" ಎಂದರು.

ಆ ಮಾತಿಗೆ ಹಲವು ಹಿರಿಯ ಹೆಣ್ಣುಮಕ್ಕಳು –

"ಹಾಗೆ ಎಲ್ಲರೂ ಕೂತು ನೋಡಿದರೆ ಕಣ್ಣೆಸರಾದೀತು. ತಾಯಿ ಮಗನಿಗೆ ಬಡಿಸಲಿ. ಮಗ ಹೊಟ್ಟೆ ತುಂಬ ಊಟ ಮಾಡಲಿ"

- ಎಂದು ಹೇಳಿ, ನೆರೆದವರೆಲ್ಲರನ್ನೂ ಹೊರಗೆ ಕಳಿಸಿ, ಕೇಳದೆಯೇ ನಿಂಗವ್ವನ ಬಯಕೆಯನ್ನು ಈಡೇರಿಸಿದರು.

ಕಲೆತ ಜನವೆಲ್ಲಾ ಹೊರಗೆ ಹೋಯಿತು –

ದೊಡ್ಡ ಬೆಳ್ಳಿಯ ತಟ್ಟೆ ಮುಂದಿತ್ತು-

ಅಡುಗೆಗಳೂ ನಿಂಗವ್ವನ ಕೈಗಾಗಿ ಕಾಯುತ್ತಿದ್ದವು.

ಊಟ ಮಾಡಲು ಸಿದ್ಧನಾಗಿ ಮದಕರಿನಾಯಕ ಕುಳಿತಿದ್ದ.

ಆ ಮಗನನ್ನು ನೋಡುತ್ತಾ ಹಾಗೇ ನಿಂತಿದ್ದಳು, ನಿಂಗವ್ವ –

"ಅವ್ವಾ, ಬಡಿಸುವುದಿಲ್ಲವೇ?" - ಎಂದು ಮಗ ತಾನಾಗಿಯೇ ಕೇಳುವವರೆಗೂ.

ಮಗ ಹಾಗೆ ಹೇಳಿದಾಗ ನಿಂಗವ್ವನಿಗೂ ಏನೋ ಹೇಳಬೇಕು ಎನಿಸಿತು. ಆದರೆ ಮಾತಿಗಿಂತ ಮುಂದಾಗಿ ಕಣ್ಣಲ್ಲಿ ನೀರು ತುಂಬಿತು. ಅದು ಮಗನ ಕಣ್ಣಿಗೆ ಬೀಳಬಾರದೆಂದು, ಮಗನ ಕಡೆ ಬೆನ್ನು ಮಾಡಿ, ಕಣ್ಣೀರನ್ನು ಒರೆಸಿಕೊಂಡು, ಪಾಯಸವನ್ನು ಬಡಿಸಿದಳು. ಒಂದು ಸೌಟಿನಷ್ಟು ಬೀಳಬೇಕಾದ ಪಾಯಸ ತಟ್ಟೆ ತುಂಬಿತು. ಅದನ್ನು ನೋಡಿ, ಬಡಿಸಲು ಬಗ್ಗಿದ ತಾಯ ಮುಖವನ್ನು ತಲೆತಗ್ಗಿಸಿ ನೋಡಿದ- ಕಣ್ಣಂಚಿನಲ್ಲಿ ಹನಿ: ಕೆನ್ನೆಯ ಮೇಲೆ ಕಣ್ಣೀರಿನ ಕರೆ.

ಅದನ್ನು ಕಂಡು ಮದಕರಿನಾಯಕ, ಅಷ್ಟು ಪಾಯಸ ಕೈಗೆ ಹಚ್ಚಿಕೊಂಡು ನಾಲಗೆಗೆ ತೀಡಿ-

"ಯಾರವ್ವಾ ಈ ಪಾಯಸ ಮಾಡಿದ್ದು?" – ಎಂದು ಕೇಳಿದ.

"ನಾನೇ....ಯಾಕೆ....ರುಚಿಯಾಗಿಲ್ಲವೇ?" - ನಿಂಗವ್ವನಾಗತಿ ಕೇಳಿದಳು.

"ಇದೆಂಥ ಪಾಯಸವವ್ವಾ - ಬರೀ ಉಪ್ಪುಪ್ಪು" - ಎಂದ ಮದಕರಿನಾಯಕ.

"ಪಾಯಸ – ಉಪ್ಪು !"

- ದಿಗ್ಭ್ರಾಂತಳಾಗಿ ಕೇಳಿದಳು ನಿಂಗವ್ವ.

"ಹೂ, ಕಣವ್ವ."

"ಇರಬಹುದೋ ಏನೋ. ಇವತ್ತು ನನ್ನ ಬುದ್ಧಿಗೆ ಏನೋ ಆಗಿದೆ. ಪಾಯಸಕ್ಕೆ ಸಕ್ಕರೆ ಬದಲು ಉಪ್ಪು ಹಾಕಿಬಿಟ್ಟೆನೋ ಏನೋ....ಅದನ್ನು ತೆಗೆದುಬಿಡು"

- ಎಂದು ಏನೋ ಹೇಳಹೋದಳು ನಿಂಗವ್ವ.

"ಅದಲ್ಲ ಕಣಪ್ಪ, ನೀನು ಸಕ್ಕರೇನೇ ಹಾಕಿದ್ಯೇನೋ. ಆದರೆ ನಿನ್ನ ಕಣ್ಣೀರು ಬಿದ್ದು ಬಿದ್ದು ಪಾಯಸವೆಲ್ಲಾ ಉಪ್ಪು ಗಂಜಿಯಾಗಿದೆ....ನೀನು ನಗ್ತಾನಗ್ತಾ ಬಡಿಸು, ಸರಿಹೋಗುತ್ತೆ ಕಣವ್ವ"

– ಎಂದ ಮದಕರಿನಾಯಕ.

ಆ ಮಾತು ಕೇಳಿ, ಮದಕರಿನಾಯಕ ತನ್ನ ಮೇಲಿಟ್ಟಿದ್ದ ಪ್ರೀತಿ, ಅವಳೆದೆಯನ್ನು ತಟ್ಟಿ ಕಣ್ಣೀರು ಕರೆಸಿ –

"ನನ್ನ ನಗು ಅಷ್ಟು ಸವೀನಾ, ಮಗ...."- ಎಂದು ಕೇಳಿದಳು.

"ಹೂ, ಕಣವ್ವ, ನಿನ್ನ ನಗು ಸಕ್ಕರೆಗಿಂತ ಸಿಹಿ, ಬೆಟ್ಟದ ಜೇನಿಗಿಂತ ಸವಿ"

- ನಗುತ್ತಾ ಹೇಳಿದ ಮದಕರಿನಾಯಕ.

"ನನ್ನ ನಗು ಅಷ್ಟು ಸವಿಯೇ, ಮಗಾ. ಹಾಗಿದ್ದರೆ ನಾನು ನಗ್ತೀನಿ. ನೀನು ಹೊಟ್ಟೆ ತುಂಬಿಕೊ, ಇಷ್ಟು ದೊಡ್ಡ ಮಗನಾದೆ; ಸೀಮೆಗೆ ದೊರೆಯಾದೆ; ಇನ್ನೂ ಹುಡುಗಾಟ ಬಿಡಲಿಲ್ಲ. ಇವತ್ತು ನಿಮ್ಮಪ್ಪಯ್ಯನ ಕೈಲಿ ನನ್ನ ಬೈಸಬೇಡ. ಬೇಗ ಊಟ ಮಾಡು"

- ಎಂದಳು ನಿಂಗವ್ವ.

"ಹಾಗಿದ್ರೆ ನಗುತ್ತಾ ಬಡಿಸು. ನಾನು ದುರ್ಗಕ್ಕೆ ಹೋಗೋವರೆಗೂ, ಆಮೇಲೂ ನೀನು ಕಣ್ಣೀರು ಹಾಕಬಾರದು. ನಿನಗೆ ಕಣ್ಣೀರು ತರಿಸುವ ರಾಜ್ಯಾನೂ ನನಗೆ ಬೇಡ, ಸ್ವರ್ಗಾನೂ ನನಗೆ ಬೇಡ. ಆ ಮಾತು ಕೊಡು, ಊಟ ಮಾಡ್ತೀನಿ. ಇಲ್ಲಾಂದರೆ ಇಲ್ಲ, ತಿಮ್ಮಪ್ಪನಾಣೆ"

– ಎಂದ ಮದಕರಿನಾಯಕ.

"ಇಂಥ ಸಣ್ಣ ಮಾತಿಗೆಲ್ಲಾ ದೊಡ್ಡದೇವರ ಹೆಸರಿನ ಆಣೆ, ಪ್ರಮಾಣ ಮಾಡಬಾರದು. ನೀನು ಹೇಳಿದ ಹಾಗೆ ಕೇಳೀನಿ. ನೀನು ನಗುನಗುತ್ತಾ ಊಟಮಾಡು" – ಎಂದಳು ನಿಂಗವ್ವ.

"ನೀನಷ್ಟು ಹೇಳಿದರಾಯ್ತು, ಬಡಿಸು"

- ಎಂದ ಮದಕರಿನಾಯಕ.

ಕಣ್ಣ ತುಂಬ ನೀರು, ಎದೆತುಂಬ ಆನಂದ ತುಂಬಿಕೊಂಡು ನಿಂಗವ್ವ ಬಡಿಸಿದಳು ಮಗ 'ಸಾಕಾಯಿತು' ಎನ್ನುವವರೆಗೂ.

"ಇವೊತ್ತಿನ ಊಟ ನಾನು ಯಾವತ್ತೂ ಮರೆಯೋಲ್ಲ ಕಣವ್ವ."

"ನಾನೂ ಅಷ್ಟೆ, ಮದಕೇರಣ್ಣ."

* * *

ಊಟ ಮುಗಿಯುತ್ತಿದ್ದ ಹಾಗೇ, ದುರ್ಗದಿಂದ ಬಂದ ಆಳುಗಳು, ಮದಕರಿನಾಯಕನನ್ನು ಬೇರೊಂದು ಕೋಣೆಗೆ ಕರೆದೊಯ್ದು, ಆತನಿಗಾಗಿ ತಂದ, ನೀಲಿಯ ಬಣ್ಣದ ಮಖಮಲ್ಲಿನ, ಬೂಟಾಕೆಲಸಮಾಡಿದ ನಿಲುವಂಗಿ, ಬಿಳಿಯ ರೇಶಿಮೆಯ ಸುರುವಾಲು ತೊಡಿಸಿ, ಕೈಗೆ ಕಂಕಣ, ಕಿವಿಗೆ ವಜ್ರದ ಕಡಕು, ಕತ್ತಿಗೆ ಆರೆಳೆಯ ಮುತ್ತುಹವಳದ ಮಾಲೆ ತೊಡಿಸಿ, ತಲೆಗೆ ಸುತ್ತ ಕೆಂಪು ನಡುವೆ ದೊಡ್ಡ ವಜ್ರದ ಪದಕವಿದ್ದ ಮುತ್ತಿನ ತುರಾಯಿ ಸಿಕ್ಕಿಸಿದ, ಪಟ್ಟೆ ಜರತಾರಿಯಂಚಿನ ಕೆಂಪು ರೇಶಿಮೆಯ ಮುಂಡಾಸನ್ನು ತಲೆಗಿಟ್ಟು, ಸೊಂಟಕ್ಕೆ ಕಿನಕಾಪಿನ ಪಟ್ಟಿ ಕಟ್ಟಿ, ಬಂಗಾರದ ಒರೆಯ ಕಠಾರಿಯನ್ನು ಒಂದು ಪಕ್ಕಕ್ಕೆ, ಚಿನ್ನದ ಒರೆಯ ಕತ್ತಿಯನ್ನು ಮತ್ತೊಂದು ಪಕ್ಕಕ್ಕೆ ಕಟ್ಟಿ, ಪಾದಕ್ಕೆ ಚೇಳಿನಕೊಂಡಿಯಂತೆ ಮುತ್ತಿನ ತುದಿಗೆಲಸ ಮಾಡಿದ ಕೆಂಪು ಮಖಮಲ್ಲಿನ ಚಡಾವು ಮೆಟ್ಟಿಸಿ, ಮನೆಯ ಮುಂದಿಟ್ಟ ಸುಖಾಸನದಲ್ಲಿ ಕೂಡಿಸಿದರು. ನೆತ್ತಿಯ ಮೇಲೆ ಒಬ್ಬಾತ ಅಂಚಿಗೆ ಮುತ್ತು, ಕೆಂಪುಗಳ ಗೊಂಡೆಯ ಸರವಿದ್ದ ಶ್ವೇತಚ್ಛತ್ರವನ್ನು ಹಿಡಿದ.

ಆ ಅಲಂಕಾರಪರಿವೇಶದಲ್ಲಿ ರಾಜನಾಗಲೆಂದೇ ಹುಟ್ಟಿದಂತೆ ಶೋಭಿಸಿದ ಮದಕರಿನಾಯಕನಿಗೆ, ದುರ್ಗದಿಂದ ಬಂದ ಪುರೋಹಿತರು, ಸ್ಥಳೀಯ ಬ್ರಾಹ್ಮಣಪುರೋಹಿತರು ರಾಜಾಶೀರ್ವಾದ ಮಾಡಿದ ಬಳಿಕ, ಮುತ್ತೈದೆಯರು ಬಂಗಾರದ ತಟ್ಟೆಯಲ್ಲಿ ಆರತಿಯನ್ನೆತ್ತಿದರು. ಆ ತಟ್ಟೆಗೆ ಮದಕರಿನಾಯಕ ತನ್ನ ಪಕ್ಕದಲ್ಲಿದ್ದ ಭಟರು ಹಿಡಿದಿದ್ದ ಥೈಲಿಗಳಲ್ಲಿದ್ದ ಚಿನ್ನದ ಮೊಹರುಗಳನ್ನು ಎರಡೂ ಕೈಗಳಿಂದ ತೆಗೆದುಕೊಂಡು ಬೊಗಸೆ ತುಂಬಿ ಹಾಕಿದ. ಮುತ್ತೈದೆಯರು ವೀಳೆಯದೆಲೆಯನ್ನು ನಿವಾಳಿಸಿದ ಬಳಿಕ, ನೂರಾರು ಜನ ದೃಷ್ಟಿಪರಿಹಾರಕ್ಕೆಂದು ಇಡಿಗಾಯಿ ಒಡೆದರು. ದಂಡಿನ ದಳವಾಯಿಗಳು, ಗ್ರಾಮದ ಶಾನುಭೋಗ, ಪಟೇಲರು, ಸಾಹುಕಾರರಾದಿಯಾಗಿ ಊರವರೆಲ್ಲಾ ಹೂ ಹಾರ ಹಾಕಿ, ತಮಗೆ ಸಾಧ್ಯವಾದ ಕಾಣಿಕೆಯೊಪ್ಪಿಸಿದರು.

ಹಾಗೆ ಊರವರೆಲ್ಲರೂ ಮರ್ಯಾದೆ ಮಾಡಿದಮೇಲೆ, ಅಷ್ಟು ಹೊತ್ತು ದೂರ ನಿಂತು ತನ್ನ ಸರದಿಯನ್ನು ಕಾಯುತ್ತಿದ್ದ ಮದಕರಿಗೆ ಕಸರತ್ತು ಕಲಿಸಿದ ವಯೋವೃದ್ಧನಾದ ಹಿರಿಯ ಜೆಟ್ಟಿ ತನ್ನೆರಡು ತೋಳುಗಳಿಂದಲೂ, ಇಬ್ಬದಿಯ ಜನವನ್ನು ಅತ್ತಿತ್ತ ಸರಿಸಿ ದಾರಿಮಾಡಿಕೊಂಡು, ಮದಕರಿಯ ಹತ್ತಿರ ಬಂದು, ತನ್ನ ತೋಳಗಾತ್ರವಿದ್ದ ಮಲ್ಲಿಗೆಯ ಹೂವಿನ ಹಾರ ಹಾಕಿ, ಆತನ

ಕೈಗೆರಡು ನಿಂಬೆಹಣ್ಣು ಕೊಟ್ಟು, ಹರ್ಷಾಶ್ರುತುಂಬಿದ ಕಣ್ಣುಗಳಿಂದ ಅಲಂಕೃತನಾದ ಮದಕರಿನಾಯಕನನ್ನು ನೋಡುತ್ತಾ-

"ಮದಕೇರಂಣಾ...." – ಎಂದ ಗದ್ಗದ ಧ್ವನಿಯಲ್ಲಿ.

"ಏನಜ್ಜಾ?"

"ನಾನು ಮಾತು ಬರದ ಮೂಳ. ನನಗೆ ಗೊತ್ತಿರೋ ಎರಡು ಮಾತು ಹೇಳ್ತಿನಿ - ಮರೀಬ್ಯಾಡ, ಮದಕೇರಂಣ."

"ಅದೇನು ಹೇಳಜ್ಜಾ?"

"ನೀನು ನಮ್ಮ ಗರಡಿ ಷಾಗಿರ್ದು. ದುರ್ಗಕ್ಕೆ ದೊರೆಯಾಗಲು ಹೋಗ್ತಿದೀಯಾ. ದೊರೆ ಎಂದರೆ ದಿನಾ ಕಾಳಗ, ಆ ಕಾಳಗದಾಗೆ ನೀನು ಯಾವತ್ತೂ ಶತ್ರುವಿಗೆ ಬೆನ್ನು ತೋರಿಸಿ, 'ಚಿತ್' ಆಗಬಾರ್ದು. ಸತ್ತರೂ ಗಂಡಾಗಿ ಸಾಯಬೇಕು; ಬದುಕಿದರೂ ಹಂಗೆ. ಯಾವತ್ತೂ ಈ ಗರಡಿಮನೆ ಮರ್ಯಾದೆ ಕಳೀಬ್ಯಾಡ. ನಾನಷ್ಟೇ ಕೇಳಿಕೊಳ್ಳೋದು. ಈ ಮುದುಕನ ಮಾತು ಯಾವತ್ತೂ ಮರೀಬಾರ್ದು, ಮರಿ. ಮರೆತೆಯಾ, ನಿನಗೆ ಹಾಕಿದ ಹಾರ ನಾಯಿಗೆ ಹಾಕಿದ ಹಾಗಾಗುತ್ತೆ"

- ಎಂದು ಮದಕರಿನಾಯಕನ ನೆತ್ತಿ, ತೋಳು, ಎದೆ ಸವರಿ ಹೇಳಿದ.

"ಊಹೂ. ನಿನ್ನ ಮಾತು ಯಾವತ್ತೂ ಮರೆಯೋಲ್ಲ, ಅಜ್ಜ. ನಮ್ಮ ಗರಡಿಗೆ ಕೆಟ್ಟ ಹೆಸರು ತರೋದಿಲ್ಲ" – ಪ್ರಮಾಣ ಮಾಡಿದಂತೆ ಹೇಳಿದ ಮದಕರಿನಾಯಕ.

"ಅಷ್ಟು ಹೇಳಿದೆಯಲ್ಲಾ – ಬಿಂದಿಗೆ ಬಾದಾಮಿಹಾಲು ಕುಡ್ದಂಗಾಯ್ತು. ಗಂಡಾಗಿ ಬಾಳು, ಮಗಾ..."- ಎಂದು, ಮದಕರಿಗೆ ಕೈಮುಗಿದು ಹೊರಟುಹೋದ ವೃದ್ಧ ಜೆಟ್ಟಿ.

ಹಾಗೆ ಯಾರು ಯಾರೋ ನೂರು ಹೇಳಿದರು –

ಆದರೆ ಮದಕರಿನಾಯಕನ ಮನಸ್ಸಿನಲ್ಲಿ ಆ ಮಾತೊಂದು ಮಾತ್ರ ಶಿಲಾಕ್ಷರದಂತೆ ಸ್ಥಿರವಾಗಿ ಉಳಿಯಿತು.

ಬಳಿಕ ಪ್ರಯಾಣಭೇರಿ ಸದ್ದು ಮಾಡಿ, ಬೆಳ್ಳಿಯ ಅಂಬಾರಿಯನ್ನು ಹೊತ್ತ ಪಟ್ಟದಾನೆ ಬಂದು ಮನೆಬಾಗಿಲು ಮುಂದೆ ನಿಂತಿತು. ಮದಕರಿನಾಯಕ ತಂದೆತಾಯಿಗೆ ನಮಸ್ಕಾರ ಮಾಡಿ, ಆಳುಗಳಿಟ್ಟ ಮರದ ನಿಚ್ಚಣಿಗೆಯನ್ನು ಹತ್ತಿ, ಅಂಬಾರಿಯಲ್ಲಿ ಕುಳಿತು, ಜಯಘೋಷ ಮಾಡುತ್ತಿದ್ದ ಜನರಿಗೆ ಕೈಮುಗಿದು, ಹಾಗೆ ಮನೆಯತ್ತ ನೋಡಿದ.

ಮಗ ತನ್ನತ್ತ ನೋಡಿದುದನ್ನು ಕಂಡು ಕಂಬನಿಗರೆಯುತ್ತಿದ್ದ ನಿಂಗವ್ವ, ಕಂಬದ ಮರೆಯಲ್ಲಿ ಮುಖ ಮುಚ್ಚಿಕೊಂಡಳು.

"ಅಪ್ಪಾ...." - ಎಂದು ಕೂಗಿದ ಮದಕರಿನಾಯಕ.

ಜನರ ಜಯಘೋಷದಲ್ಲಿ ಆ ಮಾತು ಆಕೆಯ ಕಿವಿಗೆ ಬೀಳಲಿಲ್ಲ. ನಿಂಗವ್ವ ಕಣ್ಣೀರು ಒರೆಸಿಕೊಂಡು, ಮತ್ತೊಮ್ಮೆ ಮಗನ ಮುಖ ನೋಡಬೇಕೆನ್ನುವಷ್ಟರಲ್ಲೇ ಅಂಬಾರಿಯ ಆನೆ, ಮನೆಯ ಕಡೆ ಬೆನ್ನು ಮಾಡಿ, ಮುಂದೆ ಹೆಜ್ಜೆ ಹಾಕಿತ್ತು.

* * *

ಮುಂದೆ ದುರ್ಗದ ದೊರೆಯಾಗಲಿರುವ ಮದಕರಿನಾಯಕನಿಗೆ ಎಂಥ ಉಡುಪು ತೊಡಿಸ ಬೇಕು, ಹೇಗೆ ಕರೆತರಬೇಕು ಎಂಬ ವಿವರಗಳ ಬಗ್ಗೆ, ಆತನನ್ನು ಕರೆತರಲು ಹೋಗುವವರಿಗೆ ತಾನೇ ತಿಳಿಸಿದ್ದ ಓಬವ್ವನಾಗತಿ, ಆ ಮೆರವಣಿಗೆ ಪುರದ್ವಾರವನ್ನು ತಲುಪಿತೆಂಬ ಸುದ್ದಿಯನ್ನು ಕೇಳಿದ ಗಳಿಗೆಯಿಂದಲೂ, ಮದಕರಿನಾಯಕನನ್ನು ತನ್ನ ಕಣ್ಣಾರೆ ನೋಡಲು ಕಾದು ಕುಳಿತಿದ್ದರು.

ಹೊನ್ನವ್ವೆಯನ್ನು ಹತ್ತು ಬಾರಿ ಹೊರಕಳಿಸಿ 'ಆ ಮೆರವಣಿಗೆ ಬಂದಿತೇ? ಜನ ದೊರೆಯನ್ನು ಸ್ವಾಗತಿಸಲು ಹೇಗೆ ಪುರಾಲಂಕಾರ ಮಾಡಿದ್ದಾರೆ? ಈಗ ಎಲ್ಲಿಯವರೆಗೆ ಬಂದಿದೆ?' ಎಂದು ಕೇಳಿ ತಿಳಿದುಕೊಳ್ಳುತ್ತಿದ್ದ ನಾಗತಿಗೆ, ಅದೆಲ್ಲವನ್ನೂ ತಿಳಿದು ಬಂದು ಹೇಳಿದ ಹೊನ್ನವ್ವೆ –

“ಅವ್ವಾ, ನೋಡಿದ ಜನ, ಆ ಮೆರವಣಿಗೆ ಕಾಣಲು ನೂರು ಕಣ್ಣು ಸಾಲದು ಎನ್ನುತ್ತಾರೆ. ಹತ್ತು ಹೆಜ್ಜೆಗೊಂದು ಬಾರಿ ನಿಂತು ಬರುವ ಮೆರವಣಿಗೆ, ಅರಮನೆ ಸೇರುವ ಹೊತ್ತಿಗೆ ಸರಿರಾತ್ರಿಯಾಗಬಹುದು. ಅಷ್ಟು ಹೊತ್ತು ನೀವು ಕಾದಿದ್ದು ದಣಿಯುವುದೇಕೆ? ಅಷ್ಟು ಊಟಮಾಡಿ, ವಿಶ್ರಾಂತಿ ತೆಗೆದುಕೊಳ್ಳಿ. ನಿಮಗೆ ಎಚ್ಚರವಿದ್ದರೆ ರಾಜಕುಮಾರರನ್ನು ಈಗಲೇ ನೋಡಿದರಾಯಿತು. ಇಲ್ಲ - ಹೇಗೂ ಬೆಳಿಗ್ಗೆ ಅವರೇ ನಿಮ್ಮನ್ನು ನೋಡಲು ಬರುತ್ತಾರಲ್ಲಾ...”

- ಎಂದು ಸಮಾಧಾನ ಹೇಳಿದರೂ, ನಾಗತಿ ಆ ಮಾತಿಗೆ ಒಪ್ಪದೆ –

“ಎದೆಯೊಳಗೆ ಕಾತರವಿಟ್ಟುಕೊಂಡು ಮಲಗಿದರೆ ಕಣ್ಣು ಮುಚ್ಚಬಹುದು, ನಿದ್ರೆ ಬಂದೀತೇ ? ಮಲಗುವುದು ದಿನಾ ಇದ್ದದ್ದೇ. ಇದು ಇವತ್ತಷ್ಟೆ - ನಾಳೆ ಬೇಕೆಂದರೂ, ಕೂಡ ನೋಡಸಿಗುವುದಿಲ್ಲ. ಈಗ ಇದ್ದ ಹಾಗೇ ನೋಡಿದರೇ ತೃಪ್ತಿ: ಇಲ್ಲವಾದರೆ ತಂಗಳೂಟ ತಿಂದ ಹಾಗಾಗುತ್ತದೆ”

- ಎಂದು ಹೇಳಿ, ಮೆರವಣಿಗೆ ಮುಗಿಯುತ್ತಿದ್ದ ಹಾಗೇ ಮದಕರಿನಾಯಕನನ್ನು ತನ್ನ ಬಳಿ ಕರೆತರಲು ಅಪ್ಪಣೆ ಮಾಡಿ ಕಾಯುತ್ತಾ ಕುಳಿತಿದ್ದರು.

ಮೆರವಣಿಗೆ ಅರಮನೆಯ ಬಳಿ ಸೇರುವುದು ಹೊನ್ನವ್ವೆ ಹೇಳಿದಂತೆ ಸರಿರಾತ್ರಿಯ ಹೊತ್ತೇ ಆಗಿತ್ತು. ಅವನನ್ನು ನೋಡಲು ಕಾದು ಕುಳಿತ ಓಬವ್ವನಾಗತಿಯ ಕಣ್ಣಿಗೆ ದಣಿವಾದಂತೆಯೇ, ಅಷ್ಟು ಹೊತ್ತು ಎಂದೂ ಹಾಗೆ ಪಂಜರದಲ್ಲಿದ್ದಂತೆ ಕುಳಿತು ಅಭ್ಯಾಸವಿರದಿದ್ದ

ಮದಕರಿನಾಯಕನಿಗೂ ಹೊಟ್ಟೆಯಲ್ಲಿ ಹಸಿವು ಕಡಿಯುತ್ತಿದ್ದರೂ, ಹೊತ್ತು ಕಳೆದ ಹಾಗೆ ಹಸಿವು ಮರೆತು, ನಿಂತಲ್ಲಿಯೇ ನಿದ್ರೆ ಮಾಡುವಷ್ಟು ಆಯಾಸವಾಗಿ, ಅದು ಅಷ್ಟುದೂರ ನಿಂತವರಿಗೂ ಕಾಣುವಷ್ಟು ಸ್ಪಷ್ಟವಾಗಿತ್ತು, ಆತನ ಮುಖಭಾವದಲ್ಲಿ

ಆದರೂ ನಾಗತಿಯ ಅಪ್ಪಣೆಯಂತೆ –

ಅರಮನೆಯ ಮುಂದೆ ಅಂಬಾರಿಯಿಂದಿಳಿದ ಮದಕರಿನಾಯಕನಿಗೆ 'ದೃಷ್ಟಿ ತೆಗೆಯುವ' ಶಾಸ್ತ್ರ ಮುಗಿಯುತ್ತಿದ್ದಂತೆಯೇ, ಉಳಿದಾವುದಕ್ಕೂ ತಡಮಾಡದೆ, ಆತನನ್ನು ಓಬವ್ವನಾಗತಿಯ ಬಳಿ ಕರೆತಂದರು.

ತನ್ನ ಇಚ್ಛೆಯಂತೆ ವಸ್ತ್ರಾಲಂಕಾರಗಳನ್ನು ಧರಿಸಿದ ಮದಕರಿನಾಯಕನನ್ನು ಒಮ್ಮೆ ಕಣ್ಣು ತುಂಬ ನೋಡಿ –

'ಅವರು ಕನಸಿನಲ್ಲಿ ಹೇಳಿದ್ದು ಸುಳ್ಳಲ್ಲ. ಅವರೇ ಈ ಹುಡುಗನಾಗಿ ಬಂದಿದ್ದಾರೆ'

-ಎಂದು ತನಗೆ ತಾನೇ ಹೇಳಿಕೊಂಡು, ತನಗೆ ಮಣಿದ ಮದಕರಿನಾಯಕನ ಮೈದಡವಿ – "ನೂರು ವರ್ಷ ನಗುನಗುತ್ತಾ ಬದುಕು, ನನ್ನಪ್ಪ" – ಎಂದು ಹರಸಿ, ಹೆಚ್ಚು ಮಾತಾಡದೆ, ಮೊದಲೇ ತರಿಸಿಟ್ಟುಕೊಂಡಿದ್ದ ಬಿಸಿಹಾಲನ್ನು ಅವನಿಗೆ ಕುಡಿಯಲು ಕೊಟ್ಟು, ಆತ ಕುಡಿದಾದ ಮೇಲೆ, ಪಕ್ಕದಲ್ಲಿ ಕೂಡಿಸಿಕೊಂಡು –

"ತುಂಬಾ ದಣಿವಾಯಿತಾ, ಮಗು. ಮೊದಲ ದಿನಕ್ಕೆ ಈ ಅರಸುತನ ಅನ್ನೋದು ಎಷ್ಟು ಕಷ್ಟ ಅನಿಸಿರಬೇಕಲ್ಲ. ಬೆಳಿಗ್ಗೆ ಬಿಸಿನೀರು ಮೈಗೆ ಬೀಳುವವರೆಗೂ ಈ ಮೈನೋವು ಹೋಗುವುದಿಲ್ಲ. ಈಗ ಇಲ್ಲೇ ಸೇರಿದಷ್ಟು ಊಟ ಮಾಡಿ, ಮಲಗು. ಹೊಸ ಜಾಗ, ಹೊಸ ಜನ ಎಂದೇನೂ ಬೇಸರಮಾಡಿಕೊಳ್ಳಬೇಡ" – ಎಂದು ಹೇಳಿ, ಹೊನ್ನವ್ವೆಗೆ –

"ಸಮಾರಾಧನೆಯ ಊಟಕ್ಕೆ ಇವರನ್ನು ಕಾಯಿಸುವುದು ಬೇಡ. ಆದಷ್ಟು ಬೇಗ ಇಲ್ಲೇ ಅಷ್ಟು ತಂದು ಬಡಿಸಲು ಹೇಳು. ಬಟ್ಟೆ ಬದಲಿಸಲು ಆಳುಗಳಿಗೆ ಹೇಳು"

-ಎಂದು ಅಪ್ಪಣೆ ಮಾಡಿ, ಆ ವೇಳೆಗೆ ಮದಕರಿನಾಯಕನ ನೆತ್ತಿಗೆ ಭಾರವಾಗಿದ್ದ ಮುಂಡಾಸನ್ನು ತಾನೇ ತೆಗೆದು ಬದಿಗಿರಿಸಿ-

"ಹಾಗೇ ಮೈಚಾಚಿಕೊ....ಕೂತು ಕೂತು ಸೊಂಟ ಸಿಡಿಯುವಷ್ಟು ಬಿಗಿಯಾಗಿರಬೇಕು"

-ಎಂದು, ಆಕೆಯ ಹಾಸಿಗೆಯ ಮೇಲೆ ಮಲಗಲು ಹಿಂಜರಿಯುತ್ತಿದ್ದ ಮದಕರಿನಾಯಕನನ್ನು, ತಾನೇ ಬಲವಂತವಾಗಿ ಮಲಗಿಸಿ, ತಾನು ಹತ್ತಿರವಿದ್ದ ಸುಖಾಸನದ ಮೇಲೆ ಕುಳಿತು, ಆಸನದ ಬೆನ್ನಿಗೆ ಮೈಚಾಚಿದ್ದರು.

ನಾಗತಿಯ ಮಾತಿನಂತೆ ಹೊನ್ನವ್ವೆ, ಆಕೆ ಹೇಳಿದ ಸಿದ್ಧತೆಗಳನ್ನೆಲ್ಲಾ ಮುಗಿಸಿ, 'ಊಟಕ್ಕೇಳಿ' ಎಂದು ಹೇಳುವ ವೇಳೆಗೆ ಮಂಚದ ಮೇಲೆ ಮಲಗಿದ ಮದಕರಿನಾಯಕ, ಸುಖಾಸನದ ಮೇಲೆ ಬೆನ್ನು ಚಾಚಿದ ಓಬವ್ವನಾಗತಿ - ಇಬ್ಬರೂ ಊಟದ ಗಡಿಯನ್ನು ದಾಟಿ, ನಿದ್ರಾಪರವಶರಾಗಿದ್ದರು.

ಹಾಯಾಗಿ ಮಲಗಿದ ಅವರಿಬ್ಬರನ್ನೂ ಕಂಡು, ಎಚ್ಚರಗೊಳಿಸಲು ಮನಸ್ಸಾಗದೆ, ಇಬ್ಬರ ಮೈಮೇಲೂ ಹೊದಿಕೆಯನ್ನು ಹೊದಿಸಿ, ತಂದಿದ್ದ ಊಟವನ್ನು ಹೊರಗೆ ಕಳಿಸಿ, ತಾನೂ ಎಂದಿನ ಜಾಗದಲ್ಲಿ ಮಲಗಿದಳು, ಹೊನ್ನವ್ವೆ.

೬

ಹಗಲು ಹರಿದು, ಕಣ್ಣು ಬಿಟ್ಟಾಗ ಹೊಸ ಲೋಕವೊಂದರಲ್ಲಿ ಕಣ್ದೆರೆದಂತಾಯಿತು – ಮದಕರಿನಾಯಕನಿಗೆ. ಮೊದಲು ಕಣ್ಣಿಗೆ ಬಿದ್ದ ಬಗೆಬಗೆಯ ವರ್ಣಚಿತ್ರಗಳಿಂದ ರಂಜಿತವಾದ ಛಾವಣಿಯೇ, ಅದು ತನಗೆ ನಿತ್ಯಪರಿಚಿತವಾದ ಲೋಕವಲ್ಲ ಎಂದು ಹೇಳಿತು. ಹಾಗೇ ಸುತ್ತಲೂ ಕಣ್ಣಾಡಿಸಿದ. ರಾಜಶಯ್ಯಾಗೃಹದ ವೈಭವಕ್ಕೆ ಉಚಿತವಾದ ಚಿತ್ರವಿಚಿತ್ರ ವಸ್ತುಗಳಿಂದ ಅಲಂಕೃತವಾದ ಗೂಡು-ಮಾಡುಗಳು, ಗೋಡೆಗೆ ಜೋಡಿಸಿದ ಗಾಜಿನ ದೀಪಗಳ ಮಧ್ಯೆ ತೂಗು ಹಾಕಿದ ಬಗೆಬಗೆಯ ಚಿತ್ರಗಳು, ಅಲ್ಲಲ್ಲಿ ಇರಿಸಿದ ಸುಖಾಸನಗಳು, ಛಾವಣಿಯಿಂದ ಇಳಿಬಿದ್ದ ಬಗೆಬಗೆಯ ಬಣ್ಣದ ದೀಪದ ಗೊಂಚಲುಗಳು, ಅಲ್ಲಲ್ಲಿ ಇರಿಸಿದ ಅಮೃತಶಿಲೆಯ, ದಂತದ, ಶ್ರೀಗಂಧದ ಪ್ರತಿಮೆಗಳು, ವಿವಿಧ ಕೋನಾಕೃತಿಯಲ್ಲಿ ರಚಿತವಾಗಿ ದಂತದ ಕುಸುರಿಗೆಲಸದಿಂದ, ಬಣ್ಣಗಳಿಂದ, ಮೇಲೆ, ಆ ಸ್ತಂಭಗಳನ್ನು ಹೊತ್ತು ನಿಂತಂತಿರುವ ದಾರುವಿಗ್ರಹಗಳಿಂದ ಕೂಡಿದ ಕಂಬಗಳು, ಒಂದೊಂದೂ 'ಇದು ತಾನೆಂದೂ ಕಾಣದ ಸ್ವಪ್ನಲೋಕದ ನೋಟ' ಎನಿಸಿ, ಹಾಗೇ ಬಲಮಗ್ಗುಲಾಗಿ ಮೈಹೊರಳಿಸಿ ನೋಡಿದಾಗ, ತಾನು ಮಲಗಿದ ಬಹು ಮೃದುವಾದ ಶಯ್ಯೆಗೆ, ಅನತಿದೂರದಲ್ಲಿ, ಸುಖಾಸನದಲ್ಲಿ ಕುಳಿತ ವೃದ್ಧನಾಗತಿ ಕಾಣಿಸಿ –

'ಈ ಅಪರಿಚಿತ ವೃದ್ಧೆ ಯಾರು ?'

-ಎಂದು, ಕಣ್ಣಲ್ಲಿನ್ನೂ ಉಳಿದಿದ್ದ ನಿದ್ರೆಯ ಮಂಪರನ್ನು ಕಣ್ಣುಜ್ಜಿ ತೆಗೆದು ನೋಡಿದಾಗ, ಹಿಂದಿನ ರಾತ್ರಿ ತಾನಾಕೆಯನ್ನು ನೋಡಿದುದು, ಆಕೆ ತನ್ನೊಂದಿಗೆ ಮಾತನಾಡಿದುದು, ಮಾತನಾಡುತ್ತಲೇ ತಾನು ನಿದ್ದೆ ಹೋದದ್ದು ನೆನಪಾಗಿ, ಅಪರಿಚಿತರ ಹಾಸಿಗೆಯ ಮೇಲೆ ಮಲಗಿರುವುದರ ಅರಿವಾಗಿ, ನಾಚಿಕೆ-ಭಯಗಳಿಂದ ದಿಗ್ಗನೆ ಎದ್ದು ಕುಳಿತ.

ತನ್ನತ್ತ ನೋಡಿದ ಮದಕರಿನಾಯಕನ ಬೆದರುಗಣ್ಣೇ, ಓಬವ್ವನಾಗತಿಗೆ, ಅವನು ಹೇಳಬೇಕೆಂದಿದ್ದ ಮಾತುಗಳೆಲ್ಲವನ್ನೂ ಹೇಳಿದಂತಾಗಿ –

"ಅಷ್ಟೇಕೆ ಗಾಬರಿ? ನೀನೇನೂ ಇರಬಾರದ ಸ್ಥಳದಲ್ಲಿಲ್ಲ. ನಿನ್ನ ಮನೆಯೇ ಇದು. ಎದ್ದ ತಕ್ಷಣ ದೇವರ ಚಿತ್ರಕ್ಕೆ ಕೈಮುಗಿಯಬೇಕಪ್ಪ"- ಎಂದು ಮೃದುವಾಗಿ ಮಾತನಾಡಿಸಿ, ಮಂಚಕ್ಕೆ ಎದುರಾಗಿದ್ದ ನಾಯಕರ ಮನೆದೇವತೆ ಉತ್ಸವಾಂಬೆಯ ಚಿತ್ರವನ್ನು ತೋರಿಸಿದಳು.

ಮೃದುವಾಗಿಯಾದರೂ ಅಪ್ಪಣೆ ಮಾಡುವಂಥ ಧ್ವನಿಯಲ್ಲಿ ಮಾತನಾಡಿದ ನಾಗತಿಯ ಮಾತಿಗೆ ಬದಲು ಹೇಳಲಾಗದೆ, ಆಕೆ ತೋರಿಸಿದ ಚಿತ್ರಕ್ಕೆ ಕೈಮುಗಿದು, ಏನೋ ಹೇಳಬೇಕೆಂದಿರುವಷ್ಟರಲ್ಲಿ ಓಬವ್ವನಾಗತಿಯೇ –

"ಈಗೇನೂ ಮಾತು ಬೇಡ. ಮೊದಲು ಬಟ್ಟೆ ಬದಲಿಸಿ. ಬೆಳಗಿನ ಕೆಲಸ ತೀರಿಸಿ, ಬಾ.... ಆಮೇಲೆ – ಮಾತಿಗೇನು, ಬೇಕಾದಷ್ಟು ಹೊತ್ತಿದೆ"

-ಎಂದು ಆತನಿಗೆ ಹೇಳಿ, ಬೇರೊಂದೆಡೆಯಲ್ಲಿದ್ದ ಹೊನ್ನವ್ವೆಗೆ –

"ಹೊನ್ನವ್ವ, ಚಿಕ್ಕನಾಯಕರಿಗೆ ಇದು ಹೊಸ ಜಾಗ. ಎಲ್ಲವನ್ನೂ ಅವರಿಗೆ ತೋರಿಸಬೇಕು. ಇಲ್ಲಿಯ ರೀತಿನೀತಿಗಳೂ ಹೊಸವು. ನಾಯಕರಲ್ಲಿ ಆಳುಗಳು ಅವಿನಯದಿಂದ ನಡೆದುಕೊಂಡಾರು. ಅವರಿಗೆ ಎಚ್ಚರ ಹೇಳಿ, ಅವರು ತಮ್ಮ ಕೆಲಸ ತೀರಿಸಿಕೊಂಡ ಬಳಿಕ, ನೀನೇ ಅವರಿಗೆ ಉಪಹಾರ ಮಾಡಿಸಿ ಕರೆದುಕೊಂಡು ಬಾ...."

- ಎಂದು ಮದಕರಿನಾಯಕನತ್ತ ತಿರುಗಿ –

"ಯಾವುದನ್ನೂ ಕೇಳುವುದಕ್ಕೆ ಸಂಕೋಚಪಟ್ಟುಕೊಳ್ಳುವುದು ಬೇಡ. ಏನಿದ್ದರೂ ಹೊನ್ನವ್ವೆಯನ್ನು ಕೇಳು. ನಿನ್ನ ಕೆಲಸವೆಲ್ಲಾ ತೀರಿಸಿಕೊಂಡು ಬಾ. ಆಮೇಲೆ ನಾನೂ-ನೀನೂ ಮಾತಾಡುವುದಿದೆ" - ಎಂದರು ಓಬವ್ವನಾಗತಿ.

ಆಕೆಯ ಮೃದುವಾದ ಅಕ್ಕರೆ ಸೂಸುವ ಮಾತಿನಲ್ಲಿ, ಅದಾವ ವಶೀಕರಣಶಕ್ತಿಯಿತ್ತೋ, ಆಕೆಗೆ ಅಪರಿಚಿತನಾದ ಮದಕರಿನಾಯಕ, ತಾನಾಗಿಯೆ ಆಕೆಗೆ ಸೋತುಹೋಗಿ, ಯಾರೂ ಹೇಳದೆಯೇ ತಾನಾಗಿಯೇ ಎದ್ದು ಆಕೆಯ ಪಾದ ಮುಟ್ಟಿ ನಮಸ್ಕರಿಸಿ, ಆಕೆ ತೋರಿಸಿದ ಹೊನ್ನವ್ವೆಯನ್ನು ಹಿಂಬಾಲಿಸಿದ.

ಶಯ್ಯಾಗೃಹವನ್ನು ದಾಟಿ ಮುಂದೆ ನಡೆದ ಬಳಿಕ, ಉಕ್ಕಿಬಂದ ಕುತೂಹಲವನ್ನು ಹುದುಗಿ ಇಟ್ಟುಕೊಳ್ಳಲಾಗದೆ –

"ಅವರು ಯಾರು ?" – ಎಂದು ಹೊನ್ನವ್ವೆಯನ್ನು ಕೇಳಿದ ಮದಕರಿನಾಯಕ.

"ಅವರೇ - ? ನಿಮಗೆ ತಿಳಿಯದೆ - ಈ ಮನೆಗೇ ಹಿರಿಯರು, ಓಬವ್ವನಾಗತಿಯರು. ತೀರಿಕೊಂಡ ನಾಯಕರ ತಾಯಿ, ಹಿರಿಯ ಮದಕರಿನಾಯಕರ ಮಡದಿ, ವಾವೆಯಲ್ಲಿ ನಿಮಗೆ ಅವರು ಏನಾಗಬೇಕೋ - ನನಗೆ ತಿಳಿಯದು. ನಿಮ್ಮ ತಂದೆ ಹಿರಿಮದಕರಿನಾಯಕರ ಚಿಕ್ಕಪ್ಪ ಎಂದು ನಾನು ಕೇಳಿದ್ದೇನೆ. ಆದ್ದರಿಂದ ಅವರು ನಿಮಗೆ ಏನಾಗಬೇಕೋ ನನಗೆ ಗೊತ್ತಿಲ್ಲ. ವಯಸ್ಸಿನಲ್ಲಿ ನಿಮಗೆ ಮುತ್ತಜ್ಜಿ ಇದ್ದ ಹಾಗೇ. ಈಗಂತೂ ಅವರೇ ನಿಮ್ಮ ಸಾಕುತಾಯಿ. ಅವರು ಆಸೆಪಟ್ಟಿದ್ದರಿಂದಲೇ ನೀವು ದುರ್ಗದ ನಾಯಕರಾದಿರಿ" – ಎಂದು ವಿವರಿಸಿ ಹೇಳಿ, ಮದಕರಿನಾಯಕನನ್ನು ಬಟ್ಟೆ ಬದಲಿಸಲು ಬೇರೊಂದೆಡೆಗೆ ಕರೆದೊಯ್ದಳು, ಹೊನ್ನವ್ವೆ.

* * *

ಮದಕರಿನಾಯಕ ಇದ್ದ ಮನೆಯನ್ನು ಜಾನಕಲ್ಲಿನ ಜನ ಅರಮನೆಯೆಂದೇ ಕರೆಯುತ್ತಿದ್ದರು. ಆದರೆ ತಾನು ನೋಡಿದಷ್ಟಕ್ಕೇ ಹೋಲಿಸಿದರೆ, ಇದು ಅರಮನೆಯೆಂದಾದರೆ ತಾನಿದ್ದದ್ದು ಕೊಟ್ಟಿಗೆಯಂತೆ ಕಾಣಿಸಿತು. ಹಿತ್ತಲಿಗೆ ಹೋಗಲು ಆಳು, ಸ್ನಾನಕ್ಕಿಬ್ಬರು, ಬೇಕೆನ್ನುವ ಮೊದಲೇ ತಂದುಕೊಡುವ ಜನ. ಸ್ನಾನದ ಮನೆಯ ವೈಭವವೂ ಅಷ್ಟೇ - ನೀರು ಕಾಯಿಸುವ ಹಂಡೆಯೊಂದು ಬೆಳ್ಳಿಯದಲ್ಲ, ನೆಲಕ್ಕೆ, ಗೋಡೆಗೆ ಬೆಳ್ಳಿಯ ತಗಡು ಹಾಸಿಲ್ಲ. ಅದೊಂದು ಕಡಮೆ -ಆದರೆ ಬರೀ ಸ್ನಾನಕ್ಕೂ ಎಷ್ಟು ಉಪಚಾರ; ಕೂಡುವ ಆಸನ, ಮೈಗೆ ತಿಕ್ಕುವ ಪರಿಮಳ ತೈಲ, ಆ ಎಣ್ಣೆಯನ್ನು ತೊಳೆಯಲೂ ಸುವಾಸನೆಯ ಪುಡಿ; ಮೈ ಒರಸುವ ಬಟ್ಟೆಯೂ ಎಷ್ಟು ನಾಜೂಕು – ಇದೂ ಒಂದು ರೀತಿಯ ಒಡ್ಡೋಲಗವೇ! ಸ್ನಾನ ಮುಗಿದ ಬಳಿಕ ತಾನು ಹೋಗಿ ಪ್ರಸಾದ ಸ್ವೀಕರಿಸಿದ ದೇವರ ಮನೆ ಜಕಣಾಚಾರಿ ಕಟ್ಟಿದ ಗುಡಿಯಂಥದು. ಅದೇನು ಮಂಟಪ ! ಈ ಜನಕ್ಕೆ ಚಿನ್ನ, ಬೆಳ್ಳಿ, ದಂತ, ಶ್ರೀಗಂಧದ ಮರ - ಮರಳು, ಮಣ್ಣಿಗಿಂತ ಅಗ್ಗವಾಗಿತ್ತೇನೋ ಅನಿಸಿತು. ತನಗೆ ಬಟ್ಟೆ ತೊಡಿಸಲು ಕರೆದೊಯ್ದ ಕೊಠಡಿಯ ಶೃಂಗಾರವೂ ಹಾಗೆ - ದೇವರ ಮನೆ ಗಂಧದ ಗುಡಿಯಾದರೆ, ಇದು ಕನ್ನಡಿಯ ಕೋಣೆ. ಎತ್ತ ನೋಡಿದರೂ ತಾನೇ ಕಾಣಿಸುವಂತಹುದು, ಅದೆಲ್ಲವನ್ನೂ ಅಚ್ಚರಿಯಿಂದ ನೋಡುತ್ತಾ, ಬೆರಗಾಗುತ್ತಾ, ಉಪಹಾರ ಮುಗಿಸಿ, ಆ ವೇಳೆಗೆ ತನಗಾಗಿ ಕಾದಿದ್ದ ಹೊನ್ನವ್ವೆಯೊಂದಿಗೆ ಓಬವ್ವ ನಾಗತಿಯ ಅಂತಃಪುರಕ್ಕೆ ಬಂದ. ಆ ವೇಳೆಗೆ ತಾನೂ ಮಿಂದು, ಮಡಿಯುಟ್ಟು, ಶಿವಪೂಜೆ ಮುಗಿಸಿಕೊಂಡು ಬಂದು ಕುಳಿತಿದ್ದ ನಾಗತಿಯನ್ನು ನೋಡಿದ. ಆ ನಾಗತಿ - 'ವಾವೆಯಲ್ಲಿ ನಿಮಗೆ ಮುತ್ತಜ್ಜಿ ಇದ್ದ ಹಾಗೆ' - ಎಂದು ಹೊನ್ನವ್ವೆ, ಹೇಳಿದ್ದು ಬಿಳಿದಾದ ತಲೆಗೂದಲು, ಸುಕ್ಕಾದ ಚರ್ಮ ನೋಡಿಯಷ್ಟೇ ಆ ಮಾತು ಹೇಳಿರಬೇಕು. ಅದು

ಬಿಟ್ಟರೆ - ಅದೇನು ಗಾಂಭೀರ್ಯ, ಕುಳಿತ ಠೀವಿ ಎಂಥ ಸೊಗಸು. 'ರಾಣಿ ಎನ್ನಬೇಕು – ಇಂಥ ಹೆಂಗಸಿಗೇ' ಅನಿಸಿತು ಮದಕರಿನಾಯಕನಿಗೆ.

ನಾಗತಿಗೂ –

ಸಡಿಲವಾದ ಬಿಳಿಯ ರೇಶಿಮೆಯ ನಿಲುವಂಗಿ, ಜರತಾರಿ ಅಂಚಿನ ದಟ್ಟಿಯನ್ನುಟ್ಟು, ಲಲಾಟದಲ್ಲಿ ಗಂಧ, ಕುಂಕುಮವಿಟ್ಟು ಬಂದ ಮದಕರಿನಾಯಕನ ಸಾಮುಮಾಡಿ ತುಂಬಿದ ತೊಡೆ-ತೋಳು, ಎದೆಗಳ ಬಲ, ನಡಿಗೆಯಗತ್ತಿನಲ್ಲಿ ಎದ್ದು ಕಾಣುವ ಗಂಡುಗತ್ತನ್ನು ಕಂಡು, 'ಈ ಹುಡುಗ ತಾನು ತುಳಿಯುವ ಭೂಮಿಯನ್ನು ಆಳಲು ಹುಟ್ಟಿದ ಮರಿಸಲಗ' ಎನಿಸಿ, ಅಕ್ಕರೆ ತುಂಬಿ ಬಂದು, ನಮಸ್ಕರಿಸಿದವನನ್ನು ಹರಸಿ, ತನ್ನ ಬಳಿಯಲ್ಲಿ ಕೂರಿಸಿಕೊಂಡು-

"ಸ್ನಾನ, ತಿಂಡಿ ಎಲ್ಲಾ ಒಪ್ಪವಾಯಿತಾ? ಹೊಟ್ಟೆ ತುಂಬ ತಿಂದು ಬಂದೆಯೋ, ಅಥವಾ ಇಲ್ಲಿಲ್ಲದ ನಿಮ್ಮವ್ವನನ್ನು ನೆನಸಿಕೊಂಡು ಅರೆಹೊಟ್ಟೆ ಊಟ ಮಾಡಿದೆಯೋ ?"

-ಎಂದು ಕೇಳಿದರು.

ಆ ಮಾತು ಕೇಳಿ, ಮದಕರಿನಾಯಕನಿಗೆ ಅಷ್ಟು ಹೊತ್ತು ಮರೆತುಹೋಗಿದ್ದ ತನ್ನ ತಾಯಿಯ ನೆನಪಾಗಿ –

"ಎಲ್ಲಾ ಚಂದಾಗಿಯೇ ಇತ್ತು. ಆದರೂ ಅವ್ವನ ಕೈಯ ಊಟದಷ್ಟು ರುಚಿಯಿಲ್ಲ"

- ಎಂದು, ತನಗೆ ತೋಚಿದ್ದನ್ನು ಮರೆಮಾಚದೆ, ನೇರವಾಗಿ.

ಆ ಮಾತು ನಾಗತಿಗೆ ತೃಪ್ತಿ ತಂದಿತು. ಅರಮನೆಯ ವೈಭವದಲ್ಲಿ ತನ್ನ ತಾಯನ್ನು ಮರೆಯದೆ, ಇದ್ದದ್ದನ್ನು ಇದ್ದ ಹಾಗೇ ಆಡುವ ಮದಕರಿಯ ನೇರನಡತೆ ಆಕೆಗೆ ಮೆಚ್ಚುಗೆಯಾಗಿ –

"ನಿನ್ನನ್ನು ಹಡೆದಾಕೆ ದೇವತಾಸ್ತ್ರೀ. ಒಳ್ಳೆಯ ಮಗನನ್ನು ಹಡೆದವಳೆ. ನಿನ್ನ ಮಾತು ಸರಿ. ಪರರ ಕೈ ಅಮೃತ, ಅಮ್ಮನ ಕೈ ಎಸರೂಟಕ್ಕೆ ಸಮನಲ್ಲ. ಅದನ್ನು ಬಿಟ್ಟು ಬೇರೇನೂ ಕೊರತೆಯಾಗಲಿಲ್ಲವಲ್ಲ" – ಎಂದು ಕೇಳಿದರು.

"ಏನೂ ಇಲ್ಲ. ಆದರೆ ಈ ಅರಮನೆಯ ಊಟದೊಂದು ಸೋಜಿಗ."

"ಅದೇನು ಸೋಜಿಗ ?"

"ನಮಗೆ ಬಡಿಸುವ ಮೊದಲು, ಎಲ್ಲವನ್ನೂ ಬೆಕ್ಕಿಗೆ ಹಾಕಿ, ಆಮೇಲೆ ನಮಗೆ ಬಡಿಸುತ್ತಾರೆ. ಇದೇನು ಅರಮನೆಯ ಸಂಪ್ರದಾಯವೇ? ನಾಯಕರು ಬೆಕ್ಕು ತಿಂದು ಮಿಕ್ಕಿದುದನ್ನು ತಿನ್ನಬೇಕೇ?" – ಎಂದು ಕೇಳಿದ ಮದಕರಿನಾಯಕ.

"ಅದೇನು ಸೋಜಿಗವೂ ಅಲ್ಲ, ಸಂಪ್ರದಾಯವೂ ಅಲ್ಲ. ಆದರೂ ಅದನ್ನು ನೀನು ಗಮನಿಸಿದ್ದು ಒಳ್ಳೆಯದಾಯಿತು. ಅರಮನೆಯಲ್ಲಿ ಅರಸರಿಗೆ ಆಗದ ಜನ ಇರುತ್ತಾರೆ. ಅಂಥವರು

ಊಟಕ್ಕೇನಾದರೂ ವಿಷ-ಮದ್ದು ಹಾಕಿದ್ದಾರು ಎಂದು ಮೊದಲು ಬೆಕ್ಕಿಗೆ ಬಡಿಸಿ ನೋಡಿ, ಆಮೇಲೆ ನಿಮಗೆ ಊಟಕ್ಕಿಡುತ್ತಾರೆ. ಬೆಕ್ಕು ಸತ್ತರೆ ತರಬಹುದು, ಅರಸು ಸತ್ತರೆ ಗರತಿಯ ಕುಂಕುಮವನ್ನೇ ಕಿತ್ತುಕೊಂಡ ಹಾಗಾಗುತ್ತದಲ್ಲ. ಅದಕ್ಕೇ ಈ ಪರೀಕ್ಷೆ”

- ಎಂದು ವಿವರಿಸಿದರು ಓಬವ್ವನಾಗತಿ.

“ಅಂತೂ ಅರಸಾಗುವುದು ಭಯದ ಕೆಲಸ. ಊಟಕ್ಕೆ ಭಯ, ಮಲಗಲು ಭಯ, ಓಡಾಡಲು ಭಯ - ಇಂಥ ಅರಸುತನ ಬೇಕೆಂದು ಜನ ಏಕೆ ಬಯಸುತ್ತಾರೋ ? ಇದೆಲ್ಲಾ ನೋಡಿದರೆ ’ಇದು ಬೇಡವೇ ಬೇಡ’ ಅನಿಸುತ್ತೆ.”

“ನಿಮ್ಮವ್ವ ನಿನ್ನನ್ನು ಹಡೆಯಲು ಎಷ್ಟು ಶ್ರಮಪಟ್ಟಳು ಗೊತ್ತೇ ? ತನ್ನ ಜೀವ ಒತ್ತೆ ಇಟ್ಟು ನಿನ್ನನ್ನು ಹಡೆದಳು. ನೋವಿನಲ್ಲಿ ಹೆಣ್ಣಾಗಿ ಹುಟ್ಟುವುದೇ ಬೇಡ ಅನಿಸುತ್ತದೆ. ಮಗನ ಮುಖ ನೋಡಿದರೆ ಅದೆಲ್ಲಾ ಮರೆತುಹೋಗುತ್ತದೆ. ಹೆಂಗಸಾಗಿ ಹುಟ್ಟಿದವಳು ಹಡೆಯಲು ಹೆದರಬಾರದು. ಅರಸಾಗಲು ಹುಟ್ಟಿದವನು ಇದಕ್ಕೆಲ್ಲಾ ಹೆದರಬಾರದು. ಇಷ್ಟಕ್ಕೇ ಹೆದರಿದವನು, ನಾಳೆ ಯುದ್ಧ ಬಂದರೇನು ಮಾಡುತ್ತೀ? ಓಡಿಹೋಗಿ ನಿಮ್ಮವ್ವಯ ಸೆರಗಿನಲ್ಲಿ ಅವಿತುಕೊಳ್ಳುತ್ತೀಯಾ?” – ಎಂದು ಕೆಣಕಿ ಕೇಳಿದರು ಓಬವ್ವನಾಗತಿ.

“ಹೆದರಲು ನಾನೇನು ಎಳೆ ಮುಟ್ಟಿದರೆ ಬಲೆಯ ಮಧ್ಯಕ್ಕೆ ಓಡುವ ಜೇಡರ ಹುಳವಾ? ನಮ್ಮವ್ವ ನನ್ನನ್ನು ಗಂಡುಮಗಾಂತ ಹಡೆದಿದ್ದಾಳೆ”

- ಸ್ವಾಭಿಮಾನ ಕೆರಳಿ ಹೇಳಿದ, ಮದಕರಿನಾಯಕ.

“ಅದು ಗಂಡಸಾಡುವ ಮಾತು. ಹಾಗಿದ್ದರೆ ಇಂಥ ಸಣ್ಣದಕ್ಕೆಲ್ಲಾ ಏನು, ಏಕೆ ಎಂದು ಯೋಚನೆ ಮಾಡಬೇಡ. ಅದೆಲ್ಲಾ ನೋಡಿಕೊಳ್ಳಲು ನೂರು ಜನ ಇದ್ದಾರೆ. ನೀನು ಮಾಡಬೇಕಾದ ಚಿಂತೆ ಸಾವಿರ ಇದೆ - ಅದೆಲ್ಲಾ ಮುಂದಿನ ಮಾತು. ಈಗಿಷ್ಟು ಹೇಳು - ಇಲ್ಲಿರುತ್ತೀಯೋ, ಮಾತುಮಾತಿಗೂ ನಿಮ್ಮವ್ವನನ್ನು ನೆನೆಸಿಕೊಂಡು, ಊರಿಗೆ ಹೋಗುತ್ತೀಯೋ?”

- ನೇರವಾಗಿ ಕೇಳಿದರು ಓಬವ್ವನಾಗತಿ.

“ಅವ್ವನನ್ನು ನೆನಸಿಕೊಳ್ಳುವುದಿಲ್ಲ ಎಂದರೆ ಸುಳ್ಳಾಡಿದಂತಾದೀತು. ಅವ್ವನನ್ನು ಮರೆಯುವುದೂ ಇಲ್ಲ; ನೀವೇಕೆ ಕರೆಸಿಕೊಂಡಿರೋ ಆ ಕೆಲಸಕ್ಕೆ ಬೆನ್ನು ತೋರಿಸಿ ಓಡುವುದೂ ಇಲ್ಲ. ಹಾಗೆ ಓಡಿದರೆ ನನ್ನನ್ನು ಹಡೆದವರಿಗೆ, ಹೆತ್ತ ಊರಿಗೆ ಮರ್ಯಾದೆ ಬಂದೀತಾ?”

-ಎಂದು ಕೇಳಿದ ಮದಕರಿನಾಯಕ, ಊರು ಬಿಡುವ ಮೊದಲು ತನಗೆ ವ್ಯಾಯಾಮ ಕಲಿಸಿದ ಹಿರಿಯ ಜೆಟ್ಟಿಯಾಡಿದ ಮಾತಿನ ನೆನಪಾಗಿ.

"ಅದು ಗಂಡಸಾಡಬೇಕಾದ ಮಾತು. ಹೆದರಿಕೆ ಅನ್ನುವುದು ಅರಸನ ಹೆಸರಿನ ಹತ್ತಿರವೂ ಸುಳಿಯಬಾರದು. ಈಗ ಆ ಮಾತು ಬಿಡು. ನಿನ್ನವ್ವ, ಅಪ್ಪನ ವಿಷಯ ಎಲ್ಲಾ ಹೇಳು"

-ಎಂದು ಮಾತಿನ ಜಾಡು ಬದಲಿಸಿ ಮಾತನಾಡುತ್ತಾ ಕುಳಿತರು. ಓಬವ್ವನಾಗತಿ - ಹೊನ್ನವ್ವೆ ಬಂದು 'ಪ್ರಧಾನಿಗಳು ನಿಮ್ಮನ್ನು ಕಾಣಲು ಬಂದಿದ್ದಾರೆ' ಎಂದು ಕರೆಯುವವರೆಗೂ.

೧೦

"ನಾಯಕರು ನಿಮಗೆ ಒಪ್ಪಿಗೆಯಾದರೆ, ಪ್ರಧಾನಿಗಳೇ ?"

- ತನ್ನನ್ನು ಕಾಣಲು ಬಂದು, ಶಯ್ಯಾಗೃಹದ ಪಾರ್ಶ್ವದ ಕೊಠಡಿಯಲ್ಲಿ ತಮಗಾಗಿ ಕಾಯುತ್ತಾ ಕುಳಿತ ನರಸಪ್ಪಯ್ಯನವರನ್ನು ಕಂಡು, ಕುಶಲ ವಿಚಾರಿಸಿದ ಬಳಿಕ ಕೇಳಿದರು, ಓಬವ್ವನಾಗತಿ.

"ಒಪ್ಪಿಗೆಯಾಯಿತು ಎಂದು ಹಿಂದೆಯೇ ಹೇಳಿದ್ದಾಯಿತಲ್ಲ. ಈಗ ಮತ್ತೇನು ಹೇಳುವುದಿದೆ ?"

"ಆಗ ನಾನು ಹೇಳಿದ ಹೆಸರನ್ನು ಒಪ್ಪಿದಿರಿ. ಈಗ ಅವರನ್ನೇ ನೋಡಿದಿರಿ. ಮನಕ್ಕೊಪ್ಪಿದ್ದು ಕಣ್ಣಿಗೂ ಒಪ್ಪಿಗೆಯಾಯಿತೇ ?"

"ಅಂಬಾರಿಯಲ್ಲಿ ಬಂದ ನಾಯಕರನ್ನು ನೋಡಿದವರೆಲ್ಲಾ ಒಪ್ಪಿದರು."

"ಅವರಿವರ ಮಾತು ನೀವು ಹೇಳಬೇಡಿ, ಪ್ರಧಾನಿಗಳೇ. ಎಲ್ಲರ ಕಣ್ಣಿನಂತಲ್ಲ, ನಿಮ್ಮ ಕಣ್ಣು. ನೂರು ಕಣ್ಣಿಗೆ ಮರೆಯಾದದ್ದು ನಿಮ್ಮ ಕಣ್ಣಿಗೆ ಕಾಣುತ್ತದೆ. ಮುಖ ನೋಡಿಯೇ ಮನುಷ್ಯ ಹೀಗೆ ಎಂದು ಹೇಳುವ ಶಕ್ತಿ ನಿಮಗೆ ಗೊತ್ತಿದೆ. ನಮ್ಮಿಬ್ಬರ ಮಧ್ಯೆ ದಾಕ್ಷಿಣ್ಯವೇಕೆ? ನಿಮಗನಿಸಿದ್ದನ್ನು ನೇರವಾಗಿ ಹೇಳಿ."

"ಶಿಲೆಯೇನೋ ಒಳ್ಳೆಯದು. ಮೂರ್ತಿ ಹೇಗೆ ರೂಪುಗೊಳ್ಳುತ್ತದೋ ನೋಡಬೇಕು."

"ಆದು ಸರಿಯಾದ ಮಾತು. ನಮಗೂ ಹಾಗೇ ಅನಿಸಿತು. ಮುಂದೆ ಆ ಮೂರ್ತಿಯನ್ನು ಕಡೆಯಬೇಕಾದವರು ನೀವು. ಅದಕ್ಕೇ, ನಿಮ್ಮನ್ನೇ ಕಲ್ಲಿನ ಗುಣ ಹೇಗಿದೆ ಎಂದು ಕೇಳಿದ್ದು"

- ಓಬವ್ವನಾಗತಿ ಹೇಳಿದರು.

"ಆ ಮಾತು ಹೇಳಿ ನಮ್ಮ ಮೇಲೆ ಬಹಳ ದೊಡ್ಡ ಭಾರ ಹೊರಿಸುತ್ತಿದ್ದೀರ. ಎಲ್ಲರಿಗೂ ಹಿರಿಯರಾಗಿ ನೀವಿದ್ದೀರ. ಹೇಗೆ ಬೆಳಸಬೇಕು ಎಂದು ನಿಮಗೂ ಗೊತ್ತು...."

"ನಮಗೆ ಗೊತ್ತಿರುವಷ್ಟನ್ನು ನಾವು ಮಾಡುತ್ತೇವೆ. ಆದರೆ ಕುಸುರಿಗೆಲಸವೆಲ್ಲಾ ನಿಮ್ಮಿಂದಲೇ ಆಗಬೇಕು. ಪಟ್ಟಣದ ಸ್ಥಿತಿಗತಿ ನಿಮಗೆ ಗೊತ್ತಿರುವ ಹಾಗೇ, ಸುತ್ತಲ ಹತ್ತು ಸೀಮೆಗಳ ವಿಷಯ ನೀವು ಬಲ್ಲಿರಿ. ಆ ರಾಜಕಾರಣದ ನಯನವಿರುಗಳನ್ನೆಲ್ಲಾ ಕಲಿಸಲು ನಮಗೆ ಬಂದೀತೇ? ಅದಕ್ಕೆ ನೀವೇ ಸರಿ."

"ನಾವೇನೋ ನಮಗೆ ತಿಳಿದಷ್ಟನ್ನೂ ಕಲಿಸಬಹುದು. ಆದರೆ ಕಲಿಯಲು ನಾಯಕರು ಸಿದ್ಧವಾಗಿರಬೇಕು. ನೆಲದ ಮೇಲೆ ನಿಂತಾಗ ಇರುವ ಬುದ್ಧಿ ಸಿಂಹಾಸನ ಹತ್ತಿದ ಮೇಲೂ ಇರಬೇಕಲ್ಲ..."

"ಇರಬೇಕು....ಇರುತ್ತದೆ."

- ಕಡ್ಡಿ ಮುರಿದು ತುಂಡು ಮಾಡಿದ ಹಾಗೆ ಹೇಳಿದರು ಓಬವ್ವನಾಗತಿ –

"ನಾಯಕರನ್ನು ನಾವು ತಂದದ್ದು ಅವರು ಸಿಂಹಾಸನದ ಮೇಲೆ ಕುಳಿತರೆ ಅವರು ಹೇಗೆ ಕಾಣುತ್ತಾರೆ ಎಂದು ನೋಡುವುದಕ್ಕಲ್ಲ, ಈ ಸೀಮೆ ಕಾಪಾಡುವುದಕ್ಕೆ. ಆದ್ದರಿಂದ ಆ ಕೆಲಸಕ್ಕೆ ಹೇಗೆ ಬೇಕೋ ಹಾಗೆ ಅವರು ರೂಪುಗೊಳ್ಳಬೇಕು. ಅರಸನಾದವನು ಸಿಂಹಾಸನದ ಮೇಲೆ ಕೂರುವುದು ಈ ಸೀಮೆಯ ಚಾಕರಿ ಮಾಡುವ ಮತ್ತೊಂದು ರೀತಿ ಎಂದು ಅರ್ಥಮಾಡಿಕೊಳ್ಳದೆ, ಹತ್ತು ಜನರನ್ನು ಆಳುವುದಕ್ಕೇ ಹುಟ್ಟಿದವನು ಎಂದು ಅಮಲೇರಿದಂತೆ ನಡೆದುಕೊಂಡರೆ ಈ ದೇಶ ಉಳಿಯುವುದಿಲ್ಲ. ಪ್ರಾಯ ಬಂದು ಬಲಿತ ಬುದ್ಧಿಯ ಭೂಮಿಯಲ್ಲಿ ಈ ಬೀಜ ಬೆಳೆಯುವುದಿಲ್ಲ ಎಂದಲ್ಲವೇ ಕಿರಿಯರನ್ನು ಆಯ್ದದ್ದು . ಆದ್ದರಿಂದ ನೀವು ಕಲಿಸಿದ್ದನ್ನು ಅವರು ಕಲಿಯುತ್ತಾರೆ. ಆ ಕಟ್ಟುಪಾಡು ನಾವು ಮಾಡುತ್ತೇವೆ. ಉಳಿದದ್ದು ನಿಮ್ಮ ಕೆಲಸ. ಆ ಕಿರಿಯ ನಮ್ಮ ಕರುಳಿಗೆ ಒಪ್ಪಿಗೆಯಾದರೇ ಸಾಲದು, ಹಿರಿಯರು, ನಿಮಗೂ ಒಪ್ಪಿಗೆಯಾಗುವಂತೆ ಬೆಳೆಯಬೇಕು. ಆದ್ದರಿಂದ ಹೊತ್ತು ಬಂದಾಗಲೆಲ್ಲಾ ಅಗತ್ಯವಾದ ಬುದ್ಧಿಯ ಮಾತು ಹೇಳಿ, ರಾಜಕಾರಣ ನೀವು ಕಲಿಸಿ, ರಣವಿದ್ಯೆ ಕಲಿಸಲು ತಕ್ಕವರನ್ನು ನೇಮಿಸಲು ದಳವಾಯಿ ಭರಮಪ್ಪನಾಯಕರಿಗೆ ಹೇಳಿ. ಒಟ್ಟಿನಲ್ಲಿ ನಮಗಿರುವ ಆಸೆಯಷ್ಟೆ: ದುರ್ಗದ ಕೀರ್ತಿಗೆ ಕಳಂಕ ತರದಂತಹ ಅರಸು ಇವರಾಗಬೇಕು. ಮಿಕ್ಕದ್ದೆಲ್ಲ ನಿಮಗೆ ಸೇರಿದ ಮಾತು."

ಆಕೆ ಅಷ್ಟು ಮಾತನಾಡುವಾಗ, ನರಸಪ್ಪಯ್ಯ ನಾಗತಿಯ ಮುಖಭಾವವನ್ನು ಗಮನಿಸುತ್ತಿದ್ದರು. ನೋಡನೋಡುತ್ತಾ ಆತನಿಗೆ, ಓಬವ್ವನಾಗತಿಗೆ ನಾಲ್ಕು ದಿನ ಹಿಂದಿದ್ದ ಮುಪ್ಪು ತಗ್ಗಿ, ಹೊಸಶಕ್ತಿ, ಬಂದಂತೆ ಕಾಣುತ್ತಿತ್ತು. ನಾಗತಿಯ ವೃದ್ಧ ದೇಹದಲ್ಲಿ ಪುಟಿಯಲಾರಂಭಿಸಿದ ಹೊಸರಕ್ತದ ಶಕ್ತಿಚಿಲುಮೆಯನ್ನು ಕಂಡು ಅವರಿಗೆ ಸಂತೋಷವಾಗಿ –

“ನೀವು ನಮ್ಮನ್ನಿಷ್ಟು ನಂಬಿ ಉತ್ಸಾಹವಾಗಿ ಹೇಳುತ್ತಿರುವಾಗ, ಆ ನಂಬಿಕೆಗೆ ನಾವು ಅಪಾತ್ರರಾಗುವುದಿಲ್ಲ. ಮುಂದಿನದು ಭಗವಂತನ ಚಿತ್ರ” ಎಂದರು, ನರಸಪ್ಪಯ್ಯ.

“ಆ ಮಾತು ಅಲ್ಲಿಗಾಯಿತಲ್ಲ. ಪಟ್ಟಾಭಿಷೇಕಕ್ಕೆ ದಿನವೆಂದು ಎಂದು ವಿರೂಪಾಕ್ಷ ಜೋಯಿಸರನ್ನು ಕೇಳಿದಿರಾ ?”

“ಅದಕ್ಕೆಂದೇ ಅಣಜಿಗೆ ಒಬ್ಬರನ್ನು ಕಳಿಸಿದ್ದೆವು. ಈ ದಿನ ಸುದ್ದಿ ಬಂತು. ಅದನ್ನು ಹೇಳ ಬೇಕೆಂದೇ ನಾನಿಲ್ಲಿಗೆ ಬಂದದ್ದು.”

“ಎಂದಿಗೆ ದಿನವಿಟ್ಟು ಕೊಟ್ಟಿದ್ದಾರೆ ?”

“ಆಷಾಢ ಶುದ್ಧ ದ್ವಾದಶಿ ಪ್ರಶಸ್ತವಾಗಿದೆಯೆಂದು ತಿಳಿಸಿದ್ದಾರೆ.”

“ಬಹಳ ಹತ್ತಿರದ ದಿನವಾಯಿತಲ್ಲ....ತುಂಬಾ ತರಾತುರಿಯಿಂದ ಕೆಲಸವಾಗಬೇಕು. ನಿಮಗೆಲ್ಲಾ ಕಷ್ಟವಾಗುತ್ತದೆ.” - ಓಬವ್ವನಾಗತಿ ಹೇಳಿದರು.

“ಇವೊತ್ತಿನಿಂದ ಆರಂಭಮಾಡಬೇಕೆಂದಿದ್ದರೆ ಕಷ್ಟವಾಗುತ್ತಿತ್ತು. ನೀವು ಇಂಥವರು ಪಟ್ಟಕ್ಕೆ ಬರಲಿ ಎಂದು ಹೇಳಿದ ದಿನದಿಂದಲೇ, ಆ ಕಾರ್ಯಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡುವಂತೆ ಹೇಳಿದ್ದೇವೆ. ಸಿಂಹಾಸನ ಬಹಳ ದಿನ ಬರಿದಾಗಿ ಉಳಿಯಬಾರದು. ಸುತ್ತಲ ಶತ್ರುಗಳ ಹುಲಿಗಣ್ಣುಗಳು ಇತ್ತಲೇ ನೋಡುತ್ತಿವೆ. ಆದ್ದರಿಂದ ಅದಷ್ಟು ಬೇಗ ಆಗಲಿ ಎಂದು ನಮ್ಮ ಆಸೆ. ಹೇಗೂ ನೀವು ಇಂಥವರು ದುರ್ಗದ ದೊರೆ ಎಂದು ಹೇಳಿದ ದಿನವೇ ನಿಜವಾದ ಪಟ್ಟಾಭಿಷೇಕ ನಡೆದುಹೋಯಿತು. ಮುಂದೆ ನಡೆಯುವುದೆಲ್ಲಾ ಸಂಪ್ರದಾಯದ, ಕಣ್ಣಿ ತೃಪ್ತಿಯ ಮಾತು. ಅಷ್ಟಕ್ಕೇಕೆ ತಡವಾಗಬೇಕು?” – ನರಸಪ್ಪಯ್ಯ ಹೇಳಿದರು.

“ಅದೂ ನಿಜವೇ. ಆದರೆ ಬೊಕ್ಕಸದ ಅಜ್ಜಯ್ಯ ಏನು ಹೇಳುತ್ತಾರೆ ?”

“ಅದೆಲ್ಲಕ್ಕೂ ವ್ಯವಸ್ಥೆ ಮಾಡಿಯಾಗಿದೆ. ನೀವು ಅಸ್ತು ಎಂದರೆ, ಮುಂದೆ ನಡೆಯಲು ದಾರಿ ಕಾಣುತ್ತದೆ.”

“ದುಡಿಯಬೇಕಾದ ಜನ ನೀವು. ನೋಡಬೇಕಾದವರು ನಾವು. ನಿಮಗೆ ಸರಿ ಎನಿಸಿದ ಹಾಗೆ ನಡೆಯಲಿ, ಆತುರದ ಪಟ್ಟಾಭಿಷೇಕವೆಂದು ಯಾರಿಗೂ ಅಸಮಾಧಾನವಾಗದಿದ್ದರೆ ಸರಿ” – ಎಂದರು ಓಬವ್ವನಾಗತಿ.

“ದುಡಿಯುವ ಕೈ ಆಡುವ ನಾಲಿಗೆಗೆ ಅಂಜುತ್ತಾ ಕುಳಿತರೆ ಯಾವ ಕೆಲಸವಾದೀತು? ನೀವು ಅಸ್ತು ಎಂದಿರಿ. ಇನ್ನು ಮುಂದಿನ ಕೆಲಸ ಹೇಗಾಗಬೇಕೋ ಹಾಗಾಗುತ್ತದೆ. ಇಷ್ಟು ಹೇಳಿ ಹೋಗಬೇಕೆಂದು ಬಂದೆವು. ನಾವಿನ್ನು ಬರಬಹುದೇ ?”

- ಎಂದು ಕೇಳಿದರು ನರಸಪ್ಪಯ್ಯ.

“ಹೋಗಿ ಬನ್ನಿ. ನಮ್ಮ ಮಾತೂ ನಿಮ್ಮ ಉತ್ಸಾಹಕ್ಕೆ ಅಡ್ಡಿಯೆಂದು ಕಂಡೀತು”

- ಎಂದು ನಗುತ್ತಾ ಹೇಳಿದರು, ಓಬವ್ವನಾಗತಿ.

ನಮಸ್ಕರಿಸಿ ನರಸಪ್ಪಯ್ಯ ಹೋದರು.

ನರಸಪ್ಪಯ್ಯ ಹೋದರು –

ಅವರು ಮಾಡಹೋದ ಕೆಲಸ ಹೇಗಾಗಬಹುದೆಂದು ಚಿಂತಿಸುತ್ತಾ, ಹಾಗೇ ತೆರೆದ ವಾತಾಯನದಿಂದಾಚೆ ಕಾಣುವ ಗುಡ್ಡದ ಸಾಲನ್ನು ನೋಡುತ್ತಾ ಕುಳಿತರು, ಓಬವ್ವನಾಗತಿ.

ಆಕೆಯ ಒಳಗಣ್ಣು-

ಏನೇನೋ ಹಳೆಯ ನೆನಪುಗಳನ್ನು ಮೆಲಕುಹಾಕುತ್ತಿತ್ತು.

ಹಾಗೆಯೇ ಕನಸು ಕಾಣಲಾರಂಭಿಸಿತು –

ಬರಲಿರುವ ಆ ದಿನದ ಬಗ್ಗೆ.

೧೧

ಆ ದಿನ –

ಚಿತ್ರದುರ್ಗದ ಜನ ಕೋಟೆ, ಪೇಟೆಗಳನ್ನೆಲ್ಲಾ ಸಡಗರದಿಂದ ಸಿಂಗರಿಸಿದ ದಿನ –

ಗುಡಿಗೋಪುರಗಳು ಸುಣ್ಣದ ಮೆರಗುಪಡೆದು ರಜತಗೋಪುರಗಳಂತೆ ಕಂಗೊಳಿಸಿದ ದಿನ; ದೇವಾಲಯದ ಭವಂತಿಯ ಗೂಡುಗಳಲ್ಲಿಟ್ಟ ದೇವತಾವಿಗ್ರಹಗಳು ಬಗೆಬಗೆಯ ಬಣ್ಣ ತೊಟ್ಟು, ಆ ದೃಶ್ಯವನ್ನು ನೋಡಲು ದೇವತೆಗಳೇ ಭುವಿಯಿಂದ ಧರೆಗಿಳಿದು ಬಂದಂಥ ದಿನ-

ರಂಗಯ್ಯನ ಬೀದಿ, ಸಿದ್ದಯ್ಯನ ಬೀದಿಯ ಅಂಗಡಿಮುಂಗಟ್ಟುಗಳ ಮುಂದೆ ಹಾಕಿದ ಹಸಿರು ಚಪ್ಪರ, ತಳಿರುತೋರಣ, ಹೂಮಾಲೆಗಳ ಅಲಂಕಾರದಿಂದ, ನಂದನವನವೇ ನೆಲಕ್ಕೆ ಇಳಿದುಬಂದಿದೆಯೇನೋ ಎಂಬ ಭ್ರಾಂತಿಯನ್ನು ಮೂಡಿಸಿದ ದಿನ –

ಲಾವಣಿ, ಕೋಲಾಟದ ಹಾಡುಗಳು ಹೊಳೆಯಾಗಿ ಹರಿದ ದಿನ –

ದೇಶ-ವಿದೇಶಗಳ ಮನೋರಂಜಕರು, ಬೀದಿಬೀದಿಗಳು, ರಸ್ತೆಗಳು ಕೂಡುವೆಡೆಯಲ್ಲಿ ಕಲೆತು, ನಗೆ-ಸಂತೋಷದ ತೂಗುಯ್ಯಾಲೆಯಲ್ಲಿ ದುರ್ಗದ ಜನವನ್ನಿಟ್ಟು ತೂಗಿದ ದಿನ –

ಸುತ್ತಲ ನೂರು ಹಳ್ಳಿಗಳಿಂದ ಬಂದ ಜನಕ್ಕೆ ಮನೆಮನೆಯ ಮುಂದೆಯೂ ಪಾನಕ, ಪಣಿಯಾರ, ಸಿಹಿತಿಂಡಿಗಳ ಸಮಾರಾಧನೆ ನಡೆದ ದಿನ –

ಸಂದೂಕಗಳಲ್ಲಿ ಅವಿತ ಬಗೆಬಗೆಯ ಬಣ್ಣದ ಸೀರೆ, ಕುಪ್ಪುಸಗಳು, ಕಬ್ಬಿಣದ ಪೆಟ್ಟಿಗೆಗಳಲ್ಲಿದ್ದ ಬೆಳ್ಳಿ-ಬಂಗಾರ, ಮುತ್ತು-ಮಾಣಿಕ್ಯದ ಒಡವೆಗಳು, ಹೆಂಗಸರ ಮೈಯನ್ನಲಂಕರಿಸಿ, ದುರ್ಗದ ಬೀದಿಯನ್ನು ಬಣ್ಣದ ಹೊಳೆಯಾಗಿಸಿದ ದಿನ –

ಪಟ್ಟಾಭಿಷಿಕ್ತರಾಗಲಿರುವ ನಾಯಕರಿಗೆ ಕಾಣಿಕೆಗಳನ್ನೊಪ್ಪಿಸಲೆಂದು, ಒಂದೊಂದು ಹಳ್ಳಿಯ ಹಿರಿಯರೂ, ತಮ್ಮ ಹಿರಿಮೆಯನ್ನು ಮೆರಸುವಂತೆ, ಕುದುರೆಗಳ ಮೇಲೆ, ಗಾಡಿಗಳ ಮೇಲೆ ಬಂದು, ಒಂದು ಹೆಜ್ಜೆ ಮುಂದಿಡಲು ಹತ್ತು ಕ್ಷಣ ಕಾಯ್ದ ದಿನ –

ಆಹ್ವಾನಿತರಾದ ಮಿತ್ರಪಾಳಯಗಾರರ ವಿವಿಧ ವರ್ಣದ ವಸ್ತ್ರಾಲಂಕಾರಗಳನ್ನು ಧರಿಸಿದ ಗಜರಥಾಶ್ವಪದಾತಿದಳಗಳು, ಒಬ್ಬರೊಡನೊಬ್ಬರು ಸ್ಪರ್ಧಿಸಿ ತಮ್ಮ ವೈಭವವನ್ನು ಮೆರೆದ ದಿನ –

ತಾವು ತಂದ ಪಟ್ಟಗಾಣಿಕೆ ದುರ್ಗದ ಜನರ ಕಣ್ಣುಕೋರೈಸಬೇಕೆನ್ನುವ ಸ್ಪರ್ಧೆ ಹೂಡಿದಂತೆ, ಆನೆ-ಕುದುರೆಗಳ ಮೇಲೆ, ದಾಸದಾಸಿಯರ ಕೈಯ ಹರಿವಾಣದಲ್ಲಿಟ್ಟು, ಸರದಿಗಾಗಿ, ಬೀದಿಬೀದಿಗಳಿಂದ ಬಂದು ಮೇಲುದುರ್ಗವನ್ನೇರಿದ ದಿನ –

ಮಾವಿನ ತೋರಣ, ಚಪ್ಪರಗಳು, ಬಣ್ಣ ಬಣ್ಣದ ಬಟ್ಟೆಯ ತೋರಣಗಳು, ಚಿತ್ರವಿಚಿತ್ರ ವೇಷಧಾರಿಗಳು, ನಡೆದಾಡುವ ಬಂಡಿಮಂಟಪಗಳ ಮೇಲೆ ನರ್ತಿಸುವ ನರ್ತಕಿಯರು, ತಾರಾ ಮಂಡಲವನ್ನೇ ನಾಟ್ಯಶಾಲೆಯನ್ನಾಗಿ ಮಾಡಿದ ದಿನ –

ದುರ್ಗದ ಬಂಡೆಬಂಡೆಯೂ ನೂರು, ಸಾವಿರ ಜನರನ್ನು ಹೆತ್ತಂತೆ, ಅಷ್ಟು ಜನರನ್ನು ಹೊತ್ತ ದಿನ –

ಬುರುಜು-ಬತೇರಿಗಳಿಂದ ಕಹಳೆ, ನಗಾರಿ, ಭೇರಿ, ಢಕ್ಕೆ ಮೊದಲಾದ ವಾದ್ಯಗಳು ವಿವಿಧ ನಾದದ ಹೊನಲು ಹರಿಸಿದ ದಿನ –

ಕೆಳದುರ್ಗದಲ್ಲಿದ್ದ ದೇವತೆಗಳೆಲ್ಲರೂ ಮೇಲುದುರ್ಗಕ್ಕೆ ಬಿಜಯಮಾಡಿಸಿ, ತಮ್ಮ ದೇವತಾ ಸಾನ್ನಿಧ್ಯದಿಂದ ಉತ್ಸಾಹಕ್ಕೆ ಮಂಗಳದ ಮಾಂಗಲ್ಯ ಕಟ್ಟಿದ ದಿನ –

ದೇವತೆಗಳ ಹಾರೈಕೆಯೇ ಮಂಗಳನಿನಾದವಾಗಿ ಹೊರಹೊಮ್ಮಿದಂತೆ, ಹತ್ತಾರು ಗುಡಿಗಳಿಂದ ಗಂಟೆ, ಜಾಗಟೆ, ಶಂಖಗಳ ನಾದ, ದುರ್ಗದ ಗುಹೆಗಹ್ವರಗಳಿಂದ ಮಾರ್ದನಿಸಿದ ದಿನ –

ಶಕವರ್ಷ ೧೬೭೬ನೇ ಭಾವಸಂವತ್ಸರದ ಆಷಾಢ ಶುದ್ಧ ದ್ವಾದಶಿಯ ದಿನ –

ಸಂಪಿಗೆ ಸಿದ್ಧೇಶ್ವರನ ದೇವಾಲಯದ ಮುಂದಿನ ಪಟ್ಟಾಭಿಷೇಕಾಂಗಣದಲ್ಲಿ, ಮಣಿಖಚಿತ ದಿವ್ಯ ಹೇಮಸಿಂಹಾಸನದ ಮೇಲೆ, ಪುರೋಹಿತರು ನಿಷ್ಕರ್ಷಿಸಿದ ಶುಭಮುಹೂರ್ತದಲ್ಲಿ, ಹೊನ್ನುಡುಗೆಯುಟ್ಟು, ರತ್ನಕಿರೀಟ ತೊಟ್ಟು, ಬಾಲರವಿಯಂತೆ ಬೆಳಗುತ್ತಾ,

ಸಿದ್ಧರು ಅನುಗ್ರಹಿಸಿದ ದೆಸೆಗಟ್ಟಿನ ಧೂಳಿತ, ಉತ್ಸವಾಂಬೆಯ ಭಂಡಾರವನ್ನು ಲಲಾಟದಲ್ಲಿ ಧರಿಸಿ, ಕೈಯಂಬು ಹಿಡಿದು, ವಿಪ್ರಸ್ತೋಮ ಗಂಭೀರ ಧ್ವನಿಯಲ್ಲಿ ರಾಜ್ಯಾಭಿಷೇಕದ ಮಂತ್ರೋಚ್ಚಾರಣೆ ಮಾಡುತ್ತಿರಲು, ದುರ್ಗದ ಆರಸುಪೀಠಕ್ಕೆ ರಕ್ಷೆಯೆಂಬಂತೆ, ರಾಜಗುರುಗಳಾದ ಶ್ರೀ ಮುರುಗೀಸ್ವಾಮಿಗಳು, ಕೂಡಲೀ ಶೃಂಗೇರಿಯ ಶ್ರೀ ಶಾರದಾಪೀಠದ ಶ್ರೀಗಳು ರಜತ ಪೀಠದಲ್ಲಿ ಮಂಡಿಸಿರಲು, ಮದಕರಿನಾಯಕರು ಪಟ್ಟಾಭಿಷಿಕ್ತರಾದರು.

ವಿಪ್ರೋತ್ತಮರ ವೇದಾಶೀರ್ವಾದದ ಧ್ವನಿಗಿಂತ ಹತ್ತು ಪಟ್ಟು ಮಿಗಿಲಾಗಿ ಉಚ್ಚಸ್ವರದಿಂದ ಜಯಘೋಷ ಕೂಗಿದ ಜನಸ್ತೋಮ ಹೊಸ ಅರಸರಿಗೆ ಜನತಾಶೀರ್ವಾದ ನೀಡಿತು.

ರಾಜ್ಯದ ಪ್ರಧಾನಿಗಳು, ದಳವಾಯಿಗಳು, ಪೇಟೆ-ಪಟ್ಟಣಶೆಟ್ಟರು, ಅರಸುಮಿತ್ರರು ತಮ್ಮ ಶಕ್ತ್ಯಾನುಸಾರ ಪಟ್ಟಗಾಣಿಕೆ ಕೊಟ್ಟು, ಹೂ-ತಳಿರಿನ ಹಂದರವಿದ್ದ ರಾಜಾಂಗಣವನ್ನು, ಹೊನ್ನಿನ ವಜ್ರ-ವೈಡೂರ್ಯಗಳ ಪ್ರದರ್ಶನಶಾಲೆಯನ್ನಾಗಿ ಮಾಡಿದನಂತರ, ದೇವತಾಪ್ರಸಾದ, ಗುರುಗಳ ಆಶೀರ್ವಾದ, ಜಡಶಿಲೆಯನ್ನು ಚೈತನ್ಯದ ಚಿಲುಮೆಯನ್ನಾಗಿ ಮಾಡುವ ಜನತೆಯ ಆನಂದೋನ್ಮತ್ತ ಜಯಘೋಷದಿಂದ, ಆನಂದೋದ್ವೇಗಗಳು ಎದೆಯನ್ನು ತುಂಬಿ ತೂಗು ತಿರಲು, ಗಂಟಲಾಳದಲ್ಲಿ ಹುದುಗಲೆಳಸುವ ಮಾತನ್ನು, ಪ್ರಯತ್ನಪೂರ್ವಕವಾಗಿ ಹೊರ ತಂದು –

"ನಾವಿಂದು ಅರಸಾಗಿರುವುದು ನಿಮ್ಮ ವಿಶ್ವಾಸದಿಂದ. ನಾವಿಂದು ಕುಳಿತ ಈ ಸ್ವರ್ಣ ಸಿಂಹಾಸನಕ್ಕಿಂತಲೂ ಮಿಗಿಲಾದದ್ದು ನಿಮ್ಮ ಹೃದಯದಲ್ಲಿರುವ ಪ್ರೇಮಸಿಂಹಾಸನ. ನೀವು ಕೊಟ್ಟ ಆಸನಕ್ಕೆ ಅರ್ಹರಾಗಿ ಬಾಳುವಂತೆ ದುರ್ಗದ ದೇವ-ದೇವಿಯರು, ಸಿದ್ಧ-ಸತ್ಪುರುಷರು, ಗುರು-ಹಿರಿಯರು ನಮ್ಮನ್ನು ಆಶೀರ್ವದಿಸಿ. ನಮ್ಮನ್ನು ಅರಸಾಗಿ ಆರಿಸಿದಿರಿ. ಆ ಪ್ರೇಮಕ್ಕೆ ನಮ್ಮ ದೇಹ ಇರುವಷ್ಟು ದಿನವೂ, ಇದರ ಹನಿಹನಿ ರಕ್ತವೂ ಕೃತಜ್ಞವಾಗಿರುತ್ತದೆ. ಆ ಶಕ್ತಿ, ಆ ಭಾವನೆ ಸದಾ ನಮ್ಮಲ್ಲಿ ಎಚ್ಚರವಾಗಿರುವಂತೆ ಅನುಗ್ರಹಿಸಿ"

-ಎಂದಷ್ಟೇ ಹೇಳಿ, ಕುಳಿತರು ನಾಯಕರು, ಕಲಿಸಿದ ಮಾತನ್ನು ನಿಧಾನವಾಗಿ ಆಡಿ.

ಆ ಮಾತು ಕೇಳಿದ ಜನ ಹರ್ಷದಲ್ಲಿ ಹುಚ್ಚಾಗಿ ಜಯಧ್ವನಿ ಮಾಡಿದರು. ಅದರೊಂದಿಗೆ ಸ್ಪರ್ಧಿಸುವಂತೆ ಭಟರಾಜರು ನಾಯಕರ ಬಿರುದು-ಬಾವಲಿಗಳನ್ನು ಉಗ್ಗಡಿಸಿದರು.

ಇದೆಲ್ಲವನ್ನೂ ಕಂಡು ಕೇಳಿ, ಹರ್ಷದಲ್ಲಿ ಹುಚ್ಚೇರಿದಂತೆ, ಝುಂಡಾಬತೇರಿಯ ಮೇಲಿದ್ದ ಕುಸುಂಬಿವರ್ಣದ ಹನುಮದ್ಗರುಡ ರಾಜಧ್ವಜ ಬೀಸುಗಾಳಿಯೊಂದಿಗೆ ಸ್ಪರ್ಧಿಸಿ, ನರ್ತಿಸಿತು.

"ಚಿರಾಯುವಾಗಿ ಬಾಳು ನಮ್ಮ ದೊರೆ" – ಎಂದು ಜನ ಕೂಗಿದರು.

ಸಹಸ್ರ ಸಹಸ್ರ ಮಂದಿ ಆ ನೋಟವನ್ನು ಕಂಡು ಹಿಗ್ಗಿದರು.

ಅದೆಲ್ಲವನ್ನೂ ನೋಡುತ್ತಾ ಓಬವ್ವನಾಗತಿಯ ಜೊತೆಯಲ್ಲಿ ಕುಳಿತ ತಾಯಿ ನಿಂಗವ್ವನ ಕಣ್ಣುಗಳಿಂದ ಹರ್ಷ ಅಶ್ರುಮಣಿಮಾಲೆಯಾಗಿ ಹರಿಯಿತು.

'ತಾಯಿ ಉಚ್ಚಂಗಿ ಎಲ್ಲವ್ವ, ನಿನ್ನ ಮಗನನ್ನು ನೀನೇ ಕಾಪಾಡು'

-ಎಂದು ಬೇಡಿತು ಆಕೆಯ ಹೃದಯ.

* * *

"ನಿಮ್ಮ ಕೀರ್ತಿ ಆಚಂದ್ರಾರ್ಕಸ್ಥಾಯಿಯಾಗಲಿ"

-ಎಂದು ಮನಸಾರೆ ಹಾರೈಸಿದ ಜನ, ಹಾಗೆ ಹಾರೈಸುವಷ್ಟರಲ್ಲೇ ತೃಪ್ತಿಗಾಣದೆ –

"ಇದು ಬದುಕಿರುವಷ್ಟು ಕಾಲ ಈ ಪಟ್ಟಾಭಿಷೇಕ ದಿನದ ವೈಭವದ ನೆನಪು ಸದಾ ಜನಮನದೆದೆಯಲ್ಲಿ ಹಸುರಾಗಿರಲಿ. ಇಂದು ಸಸಿಯಾಗಿ, ನಾಳೆ ಹೆಮ್ಮರವಾಗುವ ಈ ಅಶ್ವತ್ಥದಂತೆ ನಮ್ಮ ದೊರೆಯ ಕೀರ್ತಿ ದಿಗ್-ದಿಗಂತಗಳಲ್ಲಿ ವ್ಯಾಪಿಸಲಿ"

-ಎಂದು ಅಯ್ಯಣ್ಣನ ಪೇಟೆಯಲ್ಲಿ, ದಳವಾಯಿ ದೇಸಣ್ಣ ಕಟ್ಟಿಸಿದ ಆಂಜನೇಯಸ್ವಾಮಿ ದೇವಾಲಯದ ಮುಂದೆ, ಕೆಂದಳಿರ ತುರಾಯಿ ಧರಿಸಿದ ಅಶ್ವತ್ಥ ಸಸಿಯನ್ನು[1] ಶಾಸ್ತ್ರೋಕ್ತವಾಗಿ ನೆಟ್ಟು, ಅದಕ್ಕೆ ಹಾಲೆರೆದರು.

ಇದೇ ಸಂದರ್ಭದಲ್ಲಿಯೇ ಚಿತ್ರದುರ್ಗದ ಸನಿಹದಲ್ಲಿ, ಮೊಳಕಾಲ್ಮುರುವಿಗೆ ಹೋಗುವ ಹಾದಿಯಲ್ಲಿ, ಕುಂಚಿಗನಹಾಳಿನ ಬೆಟ್ಟದ ಕಣಿವೆಯ ಪಕ್ಕದಲ್ಲೊಂದು ಹೊಸ ಗ್ರಾಮವನ್ನು ನಿರ್ಮಿಸಿ, ಅದಕ್ಕೆ 'ಮದಕರಿಪುರ' ಎಂದು ನಾಮಕರಣ ಮಾಡಿ, ಜನತೆ ತಮ್ಮ ನಾಯಕರ ಮೇಲಣ ಪ್ರೇಮವನ್ನು ಅಭಿವ್ಯಕ್ತಿಸಿತು.

ಪಟ್ಟಾಭಿಷೇಕಕ್ಕೆಂದು ದುರ್ಗಕ್ಕೆ ಬಂದ ಜನ, ಸೀಮೆಯಲ್ಲೆಲ್ಲಾ ಅದರ ವೈಭವವನ್ನು ಹಾಡಾಗಿ ಹಾಡಿದರು.

* * *

ಮೂರು ದಿನಗಳ ಕಾಲ ಏಕಪ್ರಕಾರವಾಗಿ ಹರಿದ ಉತ್ಸಾಹದ ನೆರೆ ಕ್ರಮೇಣ ತಗ್ಗಿ ಅರಮನೆ ಎಂದಿನಂತಾಗಿ ಜನ ನಿತ್ಯದ ಕೆಲಸದತ್ತ ಮನ ಮಾಡಿದರು. ಬಂದವರಿಗೆ ಔತಣ, ಉಡುಗೊರೆ, ಬೀಳ್ಕೊಡುಗೆಯ ಸುಖ-ದುಃಖ ಸಮ್ಮಿಶ್ರಿತ ಭಾವನೆಯಿಂದ ತೂಗಾಡಿದ

---

[1] ಅಂದು ನೆಟ್ಟ ಸಸಿ, ಇಂದು ಹೆಮ್ಮರವಾಗಿ ಬೆಳೆದು ನಿಂತಿರುವುದನ್ನು ಈಗಲೂ ಚಿತ್ರದುರ್ಗದಲ್ಲಿ ನೋಡಬಹುದು.

ಅರಮನೆಯ ಜನ, ನಿತ್ಯದ ಕೆಲಸಕ್ಕೆ ಮೈ-ಮನಸ್ಸುಗಳನ್ನು ಒಗ್ಗಿಸಿಕೊಳ್ಳಲು ನಾಲ್ಕು ದಿನವೇ ಬೇಕಾಯಿತು.

ಆ ನಾಲ್ಕು ದಿನಗಳಲ್ಲಿ ಅರಮನೆಯ ಹಿರಿಯರಿಂದ ರೀತಿ-ರಿವಾಜುಗಳ ಪಾಠ ಕಲಿತ ಮದಕರಿನಾಯಕ, ಮಾತುಕಥೆಯಲ್ಲಿ ಹೊಸಬನೆಂಬಷ್ಟು ಪರಿವರ್ತಿತನಾದ. ಆದರೆ ತಂದೆ, ತಾಯಿ, ತಮ್ಮ ಊರಿಗೆ ಮರಳಲೆಂದು ಹೊರಟಾಗ ಅದೆಲ್ಲವೂ ಮರೆತುಹೋಗಿ –

"ಅವ್ವಾ, ನೀವೆಲ್ಲಾ ಹೋಗಲೇಬೇಕೆ ?" – ಎಂದು ಕೇಳಿದ, ಕಣ್ಣೀರು ಕರೆದು.

"'ನೀರಿಗೆ ಹತ್ತಿರ, ದೊರೆಗೆ ದೂರ ಇರು' ಎನ್ನುತ್ತಾರೆ ಹಿರಿಯರು. ನೀನೀಗ ದೊರೆ. ನಿನ್ನ ಕಾರ್ಯಭಾರ ನಿನಗೆ; ನಿಮ್ಮ ಅಪ್ಪಯ್ಯನ, ತಮ್ಮನ ಯೋಗಕ್ಷೇಮ ನೋಡಿಕೊಳ್ಳಬೇಕಾದ ಕೆಲಸ ನನಗೆ. ಹೋದರೆ ಹೋಗುವುದೇ ಇಲ್ಲವಲ್ಲ. ಮತ್ತೆ ಬರುತ್ತೇವೆ. ಜಾನಕಲ್ಲೇನು ದೂರವೇ -? ಬತೇರಿಯ ಮೇಲೆ ನಿಂತು ನೀನು ಕೂಗಿದರೆ ಕೇಳಿಸುತ್ತದೆ"

- ಎಂದು ಸಮಾಧಾನ ಹೇಳಿದಳು, ನಿಂಗವ್ವ.

ಆಕೆ ಹೇಳಿದುದನ್ನು ಕೇಳಿದ ಮದಕರಿನಾಯಕ –

ಆದರೆ ಹೇಳಿದ ಹೃದಯಕ್ಕಾಗಲಿ, ಕೇಳಿದ ಹೃದಯಕ್ಕಾಗಲಿ, ಆ ಮಾತು ಸಂಪೂರ್ಣ ತೃಪ್ತಿಕೊಡಲಿಲ್ಲ. ಅರೆ-ಬರೆ ಸಮಾಧಾನದಿಂದಲೇ ತನ್ನ ತಂದೆ-ತಾಯಿ, ತಮ್ಮನನ್ನು ಬೀಳ್ಕೊಟ್ಟ.

ಆ ದುಃಖ ದುಮ್ಮಾನದಲ್ಲಿಯೂ ಮದಕರಿನಾಯಕ, ಓಬವ್ವನಾಗತಿಯನ್ನು ಕೇಳಿ. ಜಾನಕಲ್ಲಿನ ತನ್ನ ಆರಾಧ್ಯದೇವತೆ ತಿಮ್ಮಪ್ಪನಿಗೆ ತನ್ನ ಕಿರುಗಾಣಿಕೆಯೆಂದು ಒಂದು ಖಡ್ಗ, ಚಿನ್ನದ ತುರಾಯಿಯನ್ನು ಕಳಿಸಲು ಮರೆಯಲಿಲ್ಲ.

ಅವರು ಹೋದ ಬಳಿಕ ತುಂಬಿದ ಅರಮನೆಯೂ ಬರಿದಾದಂತೆ ತೋರಿತು - ಆತನಿಗೆ.

೧೨

ಆಪ್ತೇಷ್ಟರೆಲ್ಲರೂ ತೆರಳಿ –

ಜಡವಾದ ಮೈ, ಹಗುರವಿಲ್ಲದ ಹೃದಯ, ಬರಿದಾದ ಮನಗಳನ್ನು ಹೊತ್ತು, ತುಂಬಿದ ಅರಮನೆಯಲ್ಲಿ ಏಕಾಂಗಿತನವನ್ನು ಅನುಭವಿಸುತ್ತಿದ್ದ ಮದಕರಿನಾಯಕನಿಗೆ –

"ನಾಳೆ, ಪ್ರಭುಗಳು ಬಿಡುವು ಮಾಡಿಕೊಂಡು, ಚಾವಡಿಗಳ ಪರಾಂಬರಿಕೆಗೆ ದಯಮಾಡಿಸಬೇಕು"

-ಎಂದು ಹೇಳಿ, ನರಸಪ್ಪಯ್ಯನವರು, ತಾನು ಅರಸನಾದುದನ್ನೇ ಮರೆತಂತಿದ್ದ ಅವನನ್ನು ಕರ್ತವ್ಯಪಥದತ್ತ ನಡೆಸಿದರು.

ಒಂದೆರಡು ದಿನ, ಅಷ್ಟೇನೂ ಕಷ್ಟವಿಲ್ಲದ, ತಾನು ಹೆಚ್ಚಾಗಿ ಏನೂ ಮಾಡಬೇಕಾದದ್ದೇ ಇಲ್ಲದ ಚಾವಡಿಗಳ ತನಿಖಾಕಾರ್ಯದಲ್ಲಿ ಪ್ರಧಾನಿಗಳೊಂದಿಗೆ ಭಾಗವಹಿಸಿ, ಅವರಿಂದ ಅಲ್ಲಿಯ ಹಿರಿಯರು ಯಾರು, ನೌಕರರು ಯಾರು, ಯಾರೊಂದಿಗೆ ಹೇಗೆ ವರ್ತಿಸಬೇಕು, ಎಲ್ಲಿ ಏನು ಕೇಳಬೇಕು ಎಂಬುದನ್ನೆಲ್ಲಾ ಪರಿಚಯಮಾಡಿಕೊಂಡ, ಮದಕರಿನಾಯಕ, ಒಂದೊಂದು ಚಾವಡಿಯಲ್ಲೂ ಹೊತ್ತುಗೊತ್ತು ಮರೆತು, ತನ್ಮಯರಾಗಿ, ಬಗೆಬಗೆಯ ವಿವರಗಳನ್ನು ವಿಚಾರಿಸುತ್ತಾ, ಅದಕ್ಕೆ ಸಂಬಂಧಿಸಿದ ಕಾಗದಪತ್ರಗಳ ಪರಿಶೀಲನೆಮಾಡಿ, ಅನುಮಾನ ಬಂದ ಕಡೆ ಹತ್ತು ಕಡೆಯಿಂದ ಪ್ರಶ್ನೆಮಾಡಿ, ಮನಸ್ಸಿಗೆ ನೆಮ್ಮದಿ ಮಾಡಿಕೊಳ್ಳುತ್ತಿದ್ದ ನರಸಪ್ಪಯ್ಯನವರ ಕೆಲಸ, ಮದಕರಿನಾಯಕನಿಗೇನೋ ಅದು ತನಗೆ ಸಂಬಂಧವಿಲ್ಲದ, ನೀರಸವಾದ ವೃಥಾ ಕಾಲಹರಣದ ಕೆಲಸವೆಂದೇ ತೋರಿತು. ಕೇಳುವವರು ಪ್ರಧಾನಿಗಳು, ಉತ್ತರ ಕೊಡುವವರು ಮತ್ತೆ ಯಾರೋ – ತಾನು ಮಾತ್ರ ಮರ್ಯಾದೆಯ ಸ್ಥಾನದಲ್ಲಿ ಮೂಲಮೂರ್ತಿಯಂತೆ ಕುಳಿತಿರಬೇಕು. 'ಇದೆಲ್ಲ ತನಗೇಕೆ ಬೇಕು' ಎನಿಸಿತು.

ಆ ಕೆಲಸದಲ್ಲೂ ಮದಕರಿನಾಯಕನಿಗೆ ಅಷ್ಟಾಗಿ ಹಿಡಿಸಿದ್ದು - ಸೇನೆಯ ತನಿಖೆ, ವಿವಿಧ ಆಯುಧಾಗಾರಗಳ ಪರಿಶೀಲನೆ, ಮದ್ದು ಗುಂಡುಗಳನ್ನು ತಯಾರಿಸುವ ಕಾರ್ಯಾಲಯಗಳ ಕೆಲಸ. ಸೇನೆಗೆ ಹೊಸದಾಗಿ ಸೇರಿದವರು ಪಡೆಯುತ್ತಿದ್ದ ಬಗೆಬಗೆಯ ತರಬೇತಿಗಳು, ಅವರ ಕವಾಯತು ಅವನ ಮನಸ್ಸಿಗೆ ಮೆಚ್ಚುಗೆಯಾಗಿ. ಹೊಸ ನಾಯಕರಿಗೆ ತಮ್ಮ ಕಾರ್ಯಕುಶಲತೆಯನ್ನು ತೋರಿಸಲು, ಸೇನೆಯ ವಿವಿಧಾಂಗಗಳಿಗೆ ಸೇರಿದ ಹಿರಿಯರು ತಮ್ಮ ಕೆಲಸದಲ್ಲಿ ತೋರುತ್ತಿದ್ದ ಉತ್ಸಾಹ, ಜಡವಾದ ಅವನ ದೇಹದಲ್ಲಿ ಹೊಸ ರಕ್ತ ಸಂಚಾರ ಮಾಡಿಸಿದ್ದಷ್ಟೇ ಅಲ್ಲದೆ, ಆ ಕೆಲಸದಲ್ಲಿ ತಾನೂ ಭಾಗವಹಿಸಬೇಕೆಂಬ ಉತ್ಸಾಹವನ್ನೂ ಮೂಡಿಸಿತು. ಆತನೊಂದಿಗೆ ಸದಾ ಇರುತ್ತಿದ್ದ ಪ್ರಧಾನಿ ನರಸಪ್ಪಯ್ಯ ತಾನು ಮಾಡಬೇಕಾದ ಕೆಲಸವನ್ನು ಮಾಡುತ್ತಿದ್ದುದೇ ಅಲ್ಲದೆ, ಆಗಾಗ ಆ ಕೆಲಸದ ಅಗತ್ಯವನ್ನು ಆತನಿಗೆ ವಿವರಿಸಿ ಹೇಳಿ, ಕೆಲವೊಮ್ಮೆ 'ಈ ವಿವರವನ್ನು ನೀವೇ ಕೇಳಿ' ಎಂದು ಮದಕರಿನಾಯಕನಿಗೆ ಮಾರ್ಗನಿರ್ದೇಶನ ಮಾಡಿ, ಅವನು ಸುಮ್ಮನಿರಲು ಬಿಡದೆ, ಆ ಕಾರ್ಯದಲ್ಲಿ ಪಾಲುಗಾರನಾಗುವಂತೆ ಮಾಡುತ್ತಿದ್ದರು. ಹಾಗೆ ಮದಕರಿನಾಯಕ ಮಾತನಾಡಿದಾಗ, ಆತನ ಮಾತಿನ ರೀತಿನೀತಿಗಳನ್ನು ಗಮನಿಸುತ್ತಾ, ನಡುನಡುವೆ ಮಾತಿಗೆ ದಾರಿ ತೋರಿಸುತ್ತಾ, ಆ ಹೊತ್ತಿನಲ್ಲಿ ಕಾರ್ಯಪರಿಶೀಲನೆಯೊಂದಿಗೆ, ಆತನನ್ನು ಸೂಕ್ಷ್ಮದೃಷ್ಟಿಯಿಂದ ನೋಡುತ್ತಾ, ಆತನ ಒಲವೆತ್ತ ಎಂಬುದನ್ನು ಪರೀಕ್ಷಿಸುತ್ತಿದ್ದರು.

ಹಾಗೇ ನಾಲ್ಕಾರು ದಿನಗಳ ಕಾಲ ನಡೆಯಿತು. ಈ ಪರಿಚಯದ ಕಾರ್ಯದೊಂದಿಗೆ ವಿವಿಧ ಇಲಾಖೆಗಳ ಮುಖ್ಯಸ್ಥರ ಪರಿಚಯವೂ ಮದಕರಿನಾಯಕನಿಗೆ ಆಯಿತು.

ಹೀಗೆ ಮದಕರಿನಾಯಕನಿಗೆ ನರಸಪ್ಪಯ್ಯ ಆರೆಂಟುದಿನ ದುರ್ಗದ ಪರಿಚಯ ಮಾಡಿಕೊಟ್ಟ ಬಳಿಕ ಒಂದು ದಿನ ಓಬವ್ವನಾಗತಿ, ನರಸಪ್ಪಯ್ಯನವರನ್ನು ಕರೆಸಿಕೊಂಡು –

"ಹೊಸ ನಾಯಕರಿಗೆ ತೋರಿಸಬೇಕಾದದ್ದೆಲ್ಲಾ ತೋರಿಸಿ, ಹೇಳಬೇಕಾದದ್ದನ್ನೆಲ್ಲಾ ಹೇಳಿದಿರಾ, ಪ್ರಧಾನಿಗಳೇ ?"

-ಎಂದು ಕೇಳಿದರು.

"ಇಷ್ಟು ಆತುರಕ್ಕೆ ಮುಗಿಯುವ ಕೆಲಸವೇ, ಅದು? ಆದರೂ ಆದಷ್ಟು ತೋರಿಸಿದೆ. ಇನ್ನೂ ಅವರು ನೋಡಬೇಕಾದದ್ದು, ತಿಳಿಯಬೇಕಾದದ್ದು ಬಹಳವಿದೆ."

"ಆಯಿತು - ಅದಕ್ಕೆಲ್ಲಾ ಬೇಕಾದಷ್ಟು ಕಾಲವಿದೆ. ಈಗ ನಿಮಗೆ ಹೊಸ ನಾಯಕರ ಪರಿಚಯ ಸಾಕಷ್ಟಾಯಿತಲ್ಲ, ಅವರ ಬಗ್ಗೆ ಏನನಿಸಿತು - ಹೇಳಿ, ಅದು ಮುಖ್ಯ."

"ಅವರು ಹೀಗೇ ಎಂದು ಹೇಳಲು ಇನ್ನಷ್ಟು ಕಾಲ ಬೇಕು. ಅಲ್ಲದೆ ಅವರ ವಯಸ್ಸೂ ಬಹಳ ಸಣ್ಣದು."

"ಅದು ಗೊತ್ತಿರುವುದೇ – ಮೊದಲಿಗೆ ಹೇಗನಿಸಿತು ಹೇಳಿ? ಅವರ ಬಗ್ಗೆ ನಿಮಗೆ ಏನು ಅನಿಸಿದೆಯೋ ಅದನ್ನು ನಾವು ತಿಳಿದುಕೊಳ್ಳಬೇಕಾದ್ದು ಮುಖ್ಯ."

"ನಾನು ಹೇಳುವುದು ಸದ್ಯಕ್ಕೆ ನನಗನಿಸಿರುವುದಷ್ಟು ಮಾತ್ರ- ಕಾಗದ-ಕಠಾರಿ ಎರಡನ್ನೂ ಎದುರಿಗಿಟ್ಟು, 'ಯಾವುದು ಬೇಕು ?' ಎಂದರೆ 'ಕಠಾರಿ' ಎನ್ನುವ ಬುದ್ಧಿ ಅವರದು. ಅದು ಅವರ ಪ್ರಾಯಕ್ಕೆ ತಕ್ಕ ಬುದ್ಧಿ ಅನಿಸುತ್ತದೆ."

"ಏನಾದರೂ 'ಗಂಡುಬುದ್ಧಿ' ಎನ್ನಿ, ನಾವು ಬಯಸಿದ್ದೂ ಅಷ್ಟೆ - ಪಟ್ಟಕ್ಕೆ ತಕ್ಕವರು ಸಿಕ್ಕಹಾಗಾಯಿತು"

– ಎಂದು ತೃಪ್ತಿಯಾದಂತೆ ಹೇಳಿದರು, ಓಬವ್ವನಾಗತಿ.

"ನಾಯಕರು ಹುಟ್ಟಾ ಗಂಡು ಅನ್ನುವುದರಲ್ಲಿ ಏನೂ ಅನುಮಾನವಿಲ್ಲ. ಆದರೆ ಈಗ ಕಾಲ ಮೊದಲಿದ್ದ ಹಾಗಿಲ್ಲ, ತಾಯಿ. ಕೋವಿಗೆಷ್ಟು ಬೆಲೆಯೋ ಕಂಟಕ್ಕೂ ಅಷ್ಟೇ ಬೆಲೆ. ಬರೇ ತೋಳು, ತೋಫು, ಕತ್ತಿಗಳಿಂದ ಈಗ ರಾಜಕೀಯ ನಡೆಯುತ್ತಿಲ್ಲ. ಕುಂಪಣಿ ಸೀಮೆಯವರು ತಕ್ಕಡಿ ಹಿಡಿದು ಈ ದೇಶಕ್ಕೆ ಕಾಲಿಟ್ಟ ದಿನದಿಂದ, ಕೋವಿಗಿಂತ ಹೆಚ್ಚಿನ ಬಲ ಕಾಗದಕ್ಕೆ ಹರಿತವಾದ ಕತ್ತಿಗಿಂತ ಚುರುಕಾದ ಬುದ್ಧಿಗೆ ಹೆಚ್ಚು ಬೆಲೆ ಬಂದಿದೆ. ನಯವಾದ ಮಾತಿನಲ್ಲೇ ಹೈದರಾಲಿ ಶ್ರೀರಂಗಪಟ್ಟಣದ ಸೀಮೆಯನ್ನು ನುಂಗಿಬಿಟ್ಟ. ಕತ್ತಿಹಿಡಿದ ಛತ್ರಪತಿಗಳು ಮೂಲೆ ಗುಂಪಾಗಿ, ಅವರ ಕಾಗದ

ಬರೆಯುತ್ತಿದ್ದ ಪೇಶ್ವೆಯವರ ದರ್ಬಾರು ದೇಶದಲ್ಲೆಲ್ಲಾ ನಡೆದಿದೆ. ಇದಾವ ನಾಜೂಕೂ ತಿಳಿಯದ ನಿಜಾಮ ಮತ್ತೇರಿದ ಗೂಳಿಯ ಹಾಗೆ, ಹೊತ್ತಿಗೊಂದು ಥರ ನಾಟಕ ಆಡುತ್ತಾ ದೇಶದ ರಾಜಕೀಯವನ್ನೆಲ್ಲಾ ಹದಗೆಡಿಸಿಬಿಟ್ಟಿದ್ದಾನೆ. ಹೊರಗಿನಿಂದ ಬಂದವರು ತಮ್ಮ ರೊಟ್ಟಿ ಯಾರ ಒಲೆಯಲ್ಲಿ ಬೆಂದರೆ ಅದೇ ಸರಿಯೆಂದು, ಕಣ್ಣುಮುಚ್ಚಾಲೆ ಆಡುತ್ತಿದ್ದರೆ, ನಮ್ಮ ಜನ, ನಾಳಿನ ಚಿಂತೆಯನ್ನೇ ಮಾಡದೆ 'ಸಿಕ್ಕದ್ದೇ ಶಿವಲಗ್ಗೆ' ಅನ್ನೋ ಹುಡುಗರಾಟ ಮಾಡಿಬಿಟ್ಟಿದ್ದಾರೆ, ದೇಶದ ರಾಜಕೀಯಾನ. ಇಂಥ ಹೊತ್ತಿನಲ್ಲಿ, ಕತ್ತಿ, ಕೋವೀನೇ ನಂಬಿಕೊಂಡು ಸೀಮೆ-ಸಿಂಹಾಸನ ಉಳಿಸಿಕೊಳ್ಳೋದು ಬಹಳ ಕಷ್ಟ"

- ಅಂದಿನ ದೇಶದ ರಾಜಕೀಯ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ವಿವರಿಸಿ ಹೇಳಿದರು ನರಸಪ್ಪಯ್ಯ.

"ನೀವು ಹೇಳುವುದೂ ನಿಜ. ನಾವು ನೋಡುತ್ತಾ ಇದೀವಲ್ಲ - ನಮ್ಮ ನಾಯಕರುಗಳಲ್ಲೂ ಮೊದಲಿನ ಒಕ್ಕಟ್ಟು ಉಳಿದಿಲ್ಲ. ಸ್ನೇಹ, ವಿಶ್ವಾಸ ಇರಲಿ, ಕರಳುಬಳ್ಳಿನೂ ಕತ್ತರಿಸಿ, ತಮ್ಮ ಕೋಡು ಮೆರಸಲು ಹೊರಟಿದ್ದಾರೆ. ಹೆಣ್ಣು ಕೊಟ್ಟವರು, ತಮ್ಮ ಹೆಣ್ಣು ತಂದುಕೊಂಡವರು ಎಂಬ ಯಾವ ಹಂಗೂ ಉಳಿದಿಲ್ಲ, ಅದೆಲ್ಲಾ ನಮ್ಮ ಕಣ್ಣೆ ಕಂಡಿವೆ"

- ನಿರಾಶೆಯ ಕಹಿ ವ್ಯಥೆಯಿದ್ದ ಧ್ವನಿಯಲ್ಲಿ ಹೇಳಿದರು ಓಬವ್ವನಾಗತಿ.

"ಅದು ಸರಿ. ಅದಕ್ಕೇ ಈಗ ದೇಶವಾಳೋ ದೊರೆ, ಕತ್ತಿ, ಕಠಾರಿ ಹುಚ್ಚನ್ನು ಹೆಚ್ಚಾಗಿ ಹಚ್ಚಿಕೊಳ್ಳದ ರಾಜಕೀಯದ ನಯ-ನವಿರುಗಳನ್ನು ಅರ್ಥಮಾಡಿಕೊಳ್ಳಬೇಕು."

"ನಿಜ - ಅದನ್ನು ನಾಯಕರಿಗೆ ಕಲಿಸಬೇಕೆಂದೇ ನಿಮಗೆ ಹೇಳಿದ್ದು. ಅದರ ಹಾಗೇ ಕೋಟೇನ ಕಟ್ಟಿ, ಆಳೋ ಗಂಡಸುತನವೂ ಬೇಕಲ್ಲ. ನಾವು ನಂಬಿದವರಿಗೆ ದ್ರೋಹಮಾಡಿಲ್ಲ. ನಮಗೆ ದ್ರೋಹ ಮಾಡಿದವರನ್ನು ಬದುಕಬಿಟ್ಟಿಲ್ಲ. ಮಾತಿಗೆ ತಲೆಯ ಬೆಲೆ ಕಟ್ಟಿ ಬಾಳಿದವರು ನಾವು. ಆದ್ದರಿಂದ ಈ ಸೀಮೆ ಆಳೋ ದೊರೆ ಫಿರಂಗಿ ಸದ್ದಿಗೆ ಹೆದರಿ, ಕೋಟೆಯೊಳಗೆ ಅವಿತು ಕುಳಿತರೆ ಅಂಥ ತರಗುತಲೆ ಈ ಸೀಮೇನ ಕಾಪಾಡೀತಾ ? ದೊರೆ ಹೆದರುಪುಕ್ಕನಾದರೆ, ಶೆಟ್ಟರ ಹಾಗೆ ತಕ್ಕಡಿ ತೂಗುತ್ತಾ ಕೂತರೆ, ಕೋಟೆ, ಸೇನೆ, ಈ ಸೀಮೇನ ಉಳಿಸೀತಾ? ಅರಸು ತೊಡೆತಟ್ಟಿದರೆ, ಸಾವಿರ ಜನಕ್ಕೆ ಗಂಡಸುತನ ಬರುತ್ತದೆ. ಆಳುವವನಿಗೆ ಆ ತಾಖತ್ತು ಬೇಕಲ್ಲ."

"ಬೇಕು – ಎರಡೂ ಬೇಕು."

"ಒಂದನ್ನು ನೀವು ಕಲಿಸಿ, ಇನ್ನೊಂದನ್ನು ನಾವು ಆದಷ್ಟು ಹೇಳತೀವಿ. ನೀವು ಕಲಿಸ ಬೇಕಾದ್ದನ್ನು ನೀವು ಕಲಿಸಿ. ಒಟ್ಟಿನಲ್ಲಿ - ಗಂಡುಸೀಮೆ ಗಂಡಾಗಿಯೇ ಬಾಳಬೇಕು. ನಾವು ಪಟ್ಟಕ್ಕೆ ಆರಿಸಿದವರಿಂದ, ಈ ವಂಶಕ್ಕೆ ಕೆಟ್ಟ ಹೆಸರು ಬರಬಾರದು"

-ಎಂದರು ಓಬವ್ವನಾಗತಿ.

"ಉಳಿದದ್ದೇನೇ ಇರಲಿ, ಆ ಬಗ್ಗೆಯಂತೂ ಎಳ್ಳುಕಾಳು-ಮುಳ್ಳುಮೊನೆಯಷ್ಟು ಸಂಶಯವೂ ನನಗಿಲ್ಲ" – ಎಂದು ನರಸಪ್ಪಯ್ಯ ಹೇಳಿದರು.

"ನೀವಷ್ಟು ಹೇಳಿದಿರಲ್ಲ - ನಾನು ಬದುಕಿದೆ" - ಎಂದರು, ಓಬವ್ವನಾಗತಿ.

೧೩

ಆ ದಿನ ಪ್ರಾತಃಕಾಲ, ಮದಕರಿನಾಯಕರು ಖಾಸಾ ಗರಡಿಯ, ಕಸ್ತೂರಿಯ ಕಂಪು ಬೀರುವ ಕೆಮ್ಮಣ್ಣು ಮಟ್ಟಿಯಲ್ಲಿ ವ್ಯಾಯಾಮ ಮಾಡುತ್ತಾ, ಆ ಸುಖದ ಅಮಲಿನಲ್ಲಿರುವಾಗಲೇ ಕಲ್ಲಿನ ಗರಡಿಯ ಮನೆಯ ಕಿರಿದಾದ ಬಾಗಿಲಿನಲ್ಲಿ, ತಳವಾರಚಾವಡಿಯ ಆಳೊಬ್ಬನು ಕಾಣಿಸಿಕೊಂಡು, ನಾಯಕರ ವ್ಯಾಯಾಮದ ಉಸ್ತುವಾರಿಯನ್ನು ನೋಡುಕೊಳ್ಳುತ್ತಿದ್ದ ಗರಡಿಯ ಹಿರಿಯ ಜೆಟ್ಟಿಗೆ –

"ಮಹಾಸ್ವಾಮಿಯರನ್ನು ಕೂಡಲೇ ತಳವಾರಚಾವಡಿಗೆ ಕಳಿಸಿಕೊಡಬೇಕಂತೆ"

-ಎಂದು ಹೇಳಿದ.

"ಯಾರು ಹೇಳಿಕಳಿಸಿದವರು ?" - ಜೆಟ್ಟಿ ಕೇಳಿದ.

"ಖುದ್ದು ಪ್ರಧಾನಿಗಳೇ ಹೇಳಿಕಳಿಸಿದ್ದಾರೆ...."

"ಪ್ರಭುಗಳು ಕಸರತ್ತು ಮಾಡುತ್ತಿದ್ದಾರೆ. ಅದಿನ್ನೂ ಮುಗಿದಿಲ್ಲ, ಮೈಕೈಯೆಲ್ಲಾ ಮಟ್ಟಿಯ ಧೂಳಾಗಿದೆ. ಈ ವೇಷದಲ್ಲಿ ಹೇಗೆ ಬಂದಾರು? ಪ್ರಧಾನಿಗಳಿಗೆ ಅಷ್ಟು ತಿಳಿಯಲಿಲ್ಲವೇ? ಪ್ರಭುಗಳು ಈ ಹೊತ್ತಿನಲ್ಲಿ ಇಲ್ಲಿರುವುದು ಎಲ್ಲರಿಗೂ ಗೊತ್ತಲ್ಲ."

"ತಳವಾರಚಾವಡಿಯ ದಳವಾಯಿ ಕಾಟನಾಯಕರೂ ಈ ಮಾತನ್ನು ಪ್ರಧಾನಿಗಳಿಗೆ ಅರಿಕೆ ಮಾಡಿಕೊಂಡರು. ಅದಕ್ಕವರು 'ನಾವೂ ಬೆಳಗಿನ ಆಹ್ನಿಕ, ಪೂಜೆಗಳನ್ನು ಮುಗಿಸಿಕೊಳ್ಳದೆ ಬಂದಿದ್ದೇವೆ, ಈ ವಿಷಯವನ್ನು ಸನ್ನಿಧಾನಕ್ಕೆ ಅರಿಕೆ ಮಾಡಿ, ಕೂಡಲೇ ಬರಬೇಕೆಂದು ಕೇಳಿಕೊಂಡರು ಎಂದು ಹೇಳು' ಎಂದು ಅವರ ಅಪ್ಪಣೆಯಾಯಿತು. ಓಡಿಬಂದೆ."

"ಅಂಥ ತಲೆ ಹೋಗುವ ಕೆಲಸ ಏನಪ್ಪಾ ?"

"ಕೆಲಸ ಇಂಥದು ಎಂದು ತಳವಾರಚಾವಡಿಯ ಜನ ಹೇಳಿದರೆ ನಮ್ಮ ತಲೆ ಉಳಿದೀತಾ? ಅದೆಲ್ಲಾ ದೊಡ್ಡವರಾಡಬೇಕಾದ ಮಾತು, ನಮಗೆ-ನಿಮಗೆ ಬೇಡ ಬಿಡಿ. ಮಹಾಸ್ವಾಮಿಗಳನ್ನು ಕೂಡಲೇ ಕಳಿಸಿಕೊಡಿ" – ಎಂದು ಬೇಡಿದ ತಳವಾರಚಾವಡಿಯ ಆಳು.

"ಆಯಿತು – ತಳವಾರಚಾವಡಿಯವರ ಕೈಲಿ ನಮಗೇನು ಸರಸ. ನಾಳೆ ಹೀಗೆ ಕೇಳಿದರು ಎಂದು ಅದನ್ನೂ ವರದಿ ಮಾಡಿ, ನಮ್ಮ ಹೆಸರಿಗೆ ಕೆಸರು ತಗಲಿಸುತ್ತೀರ. ಆಯಿತು - ಮಹಾಸ್ವಾಮಿಯವರು ಮೈ-ಕೈ ಒರಸಿಕೊಂಡು ಬರುತ್ತಾರೆ"

- ಎಂದು ಹೇಳಿ, ಜೆಟ್ಟಿ, ಅಲ್ಲೇ ನಿಂತಿದ್ದ ಗರಡಿಯಾಳುಗಳಿಗೆ, ನಾಯಕರ ಮೈ ಒರೆಸಿ, ಬಟ್ಟೆ ತೊಡಿಸಲು ಹೇಳಿದ.

ಅದುವರೆಗೂ ಅವರಾಡಿದ ಮಾತುಗಳನ್ನು ಕೇಳಿಸಿಕೊಂಡ ನಾಯಕನೂ, ಅಷ್ಟು ಅವಸರದ ಕೆಲಸವೇನಿರಬಹುದೆಂದು ಚಿಂತಿಸುತ್ತಲೇ, ಗರಡಿಯಾಳುಗಳು ಮೈಯೊರೆಸಿ, ತೊಡಲು ಕೊಟ್ಟ ಬಟ್ಟೆಯನ್ನುಟ್ಟು, ಗರಡಿಯಿಂದ ಹೊರಬಂದು ಆಳು, ತನ್ನ ಮುಂದೆ ನಿಲ್ಲಿಸಿದ ಕುದುರೆಯನ್ನೇರಿ, 'ಪರಾಕ್....ಭೋ ಪರಾಕ್....ರಾಸ್ತಾ....ರಾಸ್ತಾ' ಎಂದು ಕೂಗುತ್ತಾ ಓಡುತ್ತಿದ್ದ ತಳವಾರಚಾವಡಿಯ ಆಳನ್ನು ಹಿಂಬಾಲಿಸಿ, ತಳವಾರಚಾವಡಿಯತ್ತ ಧಾವಿಸಿದ.

ತಳವಾರಚಾವಡಿ, ನಗರದ ಕಾವಲು ಕಾಯುವ ಕೆಲಸ ಮಾಡುವ, ಹಾಗೇ ಗೂಢಚಾರ ಪಡೆಯ ಮೇಲೆ ಹತೋಟಿಯಿದ್ದ ಬಹು ಪ್ರಮುಖವಾದ ಚಾವಡಿ. ಅಗತ್ಯ ಕೆಲಸವಿಲ್ಲದ ಜನ ಅತ್ತ ಕಡೆ ಬರಲೂ ಹೆದರುತ್ತಿದ್ದರು - ತಮ್ಮ ಮೇಲೆ ಏನು ಗುಮಾನಿ ಬಂದೀತೋ ಎಂದು ಅಂಜಿ. ಎಂತಲೇ ತಳವಾರಚಾವಡಿಯ ಬಾಗಿಲ ಕಾವಲಿಗೆ ಇಬ್ಬರು ಭಟರಿರುತ್ತಿದ್ದುದು ವಾಡಿಕೆ. ಆದರೆ ಈ ದಿನ ತಳವಾರಚಾವಡಿ ಇನ್ನೂ ಅಷ್ಟು ದೂರವಿದೆ ಎನ್ನುವಾಗಲೇ, ಹತ್ತು ಹೆಜ್ಜೆಗೊಬ್ಬರಂತೆ, ಅತ್ತಿತ್ತ ಕಾವಲುಸೈನಿಕರು ನಿಂತುದನ್ನು ನೋಡಿಯೇ, ಅವಸರದ ಕರೆ ಕೇಳಿದಾಗ 'ಏನೋ ವಿಶೇಷ ವಿಷಯ' ಎಂದುಕೊಂಡ ಮದಕರಿ ನಾಯಕನ ಕುತೂಹಲ, ಆ ಬಿಗಿಕಾವಲನ್ನು ಕಂಡು ಮತ್ತಷ್ಟು ಹೆಚ್ಚಿ, ಆಳನ್ನು ಹಿಂಬಾಲಿಸಿ ತಳವಾರಚಾವಡಿಯ ಬಾಗಿಲನ್ನು ಸೇರಿ, ಬಳಿ ಬಂದ ಆಳಿಗೆ ಕುದುರೆಯನ್ನೊಪ್ಪಿಸಿ, ಸನಿಹದಲ್ಲೇ ಇಳಿಸಿದ ಪ್ರಧಾನಿಗಳ ಮೇನೆಯನ್ನು ನೋಡುತ್ತಲೇ ಒಳಗೆ ಹೋದ.

ಗೋಡೆಗಳಿಗೆ ಚಾವಡಿಯ ತಂಪು ಆರೆಗತ್ತಲಿನಲ್ಲೂ ಹೊಳೆವ ಬಗೆಬಗೆಯ ಆಯುಧಗಳನ್ನು ತೂಗುಹಾಕಲಾಗಿದ್ದು, ನಾಲ್ಕು ಕಡೆಗಳಲ್ಲೂ ಜಗ್ಗುತ್ತಿದ್ದ ಬೇಟೆಯ ನಾಯಿಗಳನ್ನು ಹಿಡಿದು ಹತ್ತು ಜನ ಭಟರು ನಿಂತಿದ್ದರು. ಅವರುಗಳು ತಳವಾರಚಾವಡಿಯ ಭಟರು ಎನ್ನುವುದನ್ನು ಅವರ ಕೂರಲಗಿನಂತಿದ್ದ ಕೆಂಗಣ್ಣುಗಳು, ದಪ್ಪ ಮೀಸೆಗಳಡಿಯ ಬಿಗಿದ ಮುಖ, ಅವರು ಕೈಯಲ್ಲಿ ಜಗ್ಗಿ ಹಿಡಿದ ಬೇಟೆಯ ನಾಯಿಗಳಂತೆಯೇ ತಿಳುವಾದರೂ, ಗಟ್ಟಿಬಿದರಿನಂಥ ಮೈ, ಹುರಿಗಟ್ಟಿದ ಮಾಂಸಖಂಡಗಳ ಎದೆ, ಹೆಗಲ ಮೇಲೆ ಇಳಿಬಿದ್ದ ಕಪ್ಪು ಗಂಬಳಿ, ಅಷ್ಟು

ದೂರದಿಂದಲೇ ನೋಡಿದವರನ್ನು ಅಂಜಿಸುವಂಥ, ಬೇಟೆಯ ಮಿಗದ ಮೇಲೆ ಹಾರಲು ಸಿದ್ಧವಾದ ಚಿರತೆಯಂಥ ನಿಲುವು - ಸಾರಿಹೇಳುತ್ತಿದ್ದವು.

ಆ ಆಯುಧಗಳು, ಆ ಭಟರನ್ನು ಬಿಟ್ಟರೆ ತಳವಾರಚಾವಡಿಯಲ್ಲಿ ಹೆಚ್ಚಿನ ವಿಶೇಷ ಏನಿಲ್ಲದಿದ್ದರೂ ಭಯಮೂಡಿಸುವಂಥ ವಾತಾವರಣವಿತ್ತು.

ಆ ಚಾವಡಿಯ ಒಂದು ಪಾರ್ಶ್ವದಲ್ಲಿ ತಳವಾರಚಾವಡಿಯ ದಳವಾಯಿಗಳಿಗೆಂದೇ ಮೀಸಲಾದ ಆಸನ ಬರಿದಾಗಿದ್ದು, ಅದರ ಬಳಿಯ ಆಸನದಲ್ಲಿ, ಪ್ರಧಾನಿ ಕಳ್ಳಿನರಸಪ್ಪಯ್ಯನವರು ಮಂಡಿಸಿದ್ದರು. ಕುಳಿತಿರಬೇಕಾದ ಕೆರಳಿದ ಹುಲಿಯಂತಿದ್ದ ಕಾಟನಾಯಕ ಹತ್ತಿರದಲ್ಲೇ ನಿಂತಿದ್ದ. ಪ್ರಧಾನಿಗಳ ಮುಖದ ಮೇಲಿದ್ದ ಮುದ್ರೆಗಳು, ಅವರ ಸ್ನಾನ ಮುಗಿದುದನ್ನು ಸಾರಿಹೇಳುತ್ತಿತ್ತು. ನಾಯಕರ ಬರವಿಗಾಗಿಯೇ ಕಾದಂತಿದ್ದ ನರಸಪ್ಪಯ್ಯನವರು –

"ಪ್ರಭುಗಳು ದಯಮಾಡಿಬೇಕು"

- ಎಂದು ಹೇಳಿ, ಎದ್ದು ನಿಂತು, ಬರಿದಾಗಿದ್ದ ತಳವಾರರ ಆಸನದತ್ತ ಕೈ ತೋರಿಸಿದರು.

ಒಳಬಂದ ನಾಯಕರನ್ನು ಕಂಡು ನಿಂತವರೆಲ್ಲರೂ ಇದ್ದಲ್ಲಿದ್ದಂತೇ ಕೈಮುಗಿದರು. ಪ್ರಧಾನಿಗಳು ತೋರಿಸಿದ ಆಸನದ ಮೇಲೆ ಕುಳಿತ ಮದಕರಿನಾಯಕ 'ಏನು ವಿಶೇಷ ?' ಎಂಬಂತೆ ಪ್ರಧಾನಿಗಳತ್ತ ನೋಡಿದ.

"ವಿಷಯವನ್ನು ನೀವೇ ಹೇಳಿ"

-ಎಂದು ನರಸಪ್ಪಯ್ಯ ಕಾಟನಾಯಕನಿಗೆ ಹೇಳಿದರು.

"ಇದು ಹಳೆಯ ಸಂಗತಿ. ಹೋದ ಶುಕ್ಲ ಸಂವತ್ಸರದಲ್ಲಿ ಅರಮನೆಯ ಬೊಕ್ಕಸಕ್ಕೆ ಯಾರೋ ಕನ್ನಹಾಕಿ ಅಷ್ಟಿಷ್ಟು ನಗನಾಣ್ಯಗಳನ್ನು ಕಳವು ಮಾಡಿದ್ದರು. ಅರಮನೆಗೆ ಕನ್ನ ಹಾಕುವವರು ಒಳಗಿನವರೇ ಇರಬೇಕು ಎಂಬ ಅನುಮಾನದ ಮೇಲೆ ನಾಲ್ಕು ಜನರನ್ನು ಹಿಡಿದು, ಅವರ ಬಾಯಿಂದ ಸುದ್ದಿ ಹೊರಡಿಸಿದಾಗ 'ಇದು ಅರಮನೆಯ ಒಳಗಿನ ನಾಲ್ಕು ಜನ ಚಿಲ್ಲರೆಯವರು. ಹರಪನಹಳ್ಳಿಯ ಕಡೆಗೆ ಮೂರು ಜನದ ಚಿತಾವಣೆ ಮಾತು ಕೇಳಿ, ಮಾಡಿದ ಕೆಲಸ' ಎಂದು ತಿಳಿಯಿತು; ಕೈಕಾಲುಗಳಿಗಾಗಬೇಕಾದದ್ದೇನೋ ಆಯಿತು. ಆದರೆ ಬದ್ಮಾಷ್ ತಲೆಯಾಳುಗಳೇ ಸಿಕ್ಕಿರಲಿಲ್ಲ. ಇಷ್ಟು ದಿನದಿಂದ ಹತ್ತು ಕಡೆಯೂ ಆಳು ಬಿಟ್ಟು ಹುಡುಕಿಸುತ್ತಾ ಇದ್ದಿವಿ. ಈಗ ಮೂರು ದಿನ ಆಯಿತು, ಕಳ್ಳ ನನ್ನ...."

-ಎಂದು ಏನೋ ಹೇಳಹೋಗಿ, ಎದುರಿಗೆ ನಾಯಕರಿರುವುದು ಅರಿವಾಗಿ, ಮಾತನ್ನು ತಡೆದ ಕಾಟನಾಯಕ.

"ಮೂರು ದಿನವಾಯಿತೇ? ಇಷ್ಟು ದಿನ ವಿಚಾರಣೆಗಾಗಿ ಕಾದಿರಾ?"

– ಎಂದು ಕೇಳಿದ ಮದಕರಿನಾಯಕ.

“ವಿಚಾರಣೆ, ಶಿಕ್ಷೆ ಆಮೇಲೆ - ಮೊದಲು ಮಾಡಿದ್ದೇಕೆಂದು ತಿಳಿಯಬೇಕಲ್ಲಾ....”

“ಹೇಳಿದರೆ - ?”

“ಅಷ್ಟು ಸಲೀಸಾಗಿ ಬಾಯಿಬಿಡ್ತಾರಾ? ಕಣ್ಣು ಮೂಗಿಗೆ ಖಾರದಪುಡಿ ಹಾಕಿದರೂ, ಮುಳ್ಳುಚಾವಟಿಯಿಂದ ಮೈಚರ್ಮ ತತಾತೂತಾಗಿ, ಆ ಗಾಯಕ್ಕೆ ಖಾರದಪುಡಿ, ಉಪ್ಪು ನೀರಿನ ಆರೈಕೆ ಮಾಡಿದರೂ ಉಸ್ಸೆಂದರೇ ಹೊರತು, ಬಾಯಿಬಿಡಲಿಲ್ಲ.”

“ಅಷ್ಟೆಲ್ಲಾ ಏಕೆ? ಮಾಡಿದ ತಪ್ಪಿಗೆ ಶೂಲಕ್ಕೇರಿಸಬಹುದಾಗಿತ್ತಲ್ಲಾ....?”

- ಕಾಟನಾಯಕ ಹೇಳಿದುದನ್ನು ಕೇಳಿ, ಮದಕರಿನಾಯಕ ಮೂಕನಂತೆ ಕುಳಿತುದನ್ನು ಕಂಡು ನರಸಪ್ಪಯ್ಯನವರೇ ಕೇಳಿದರು.

“ಅದೇನು ಮಹಾಕಲಸ. ಶೂಲದ ಮರಕ್ಕೇಕೆ ಇವರ ಭಾರ ಹೊರುವ ಶಿಕ್ಷೆ? ತಲೆ ಕತ್ತರಿಸಿದ್ದರೆ, ಅಲ್ಲಿಗೇ ಮುಗಿದುಹೋಗುತ್ತಿತ್ತು. ಆದರೆ ಯಾಕೆ ಮಾಡಿದರು ಅಂತ ಬಾಯಿ ಬಿಡಿಸಬೇಕಾಗಿತ್ತಲ್ಲಾ....” - ಕಾಟನಾಯಕ ಹೇಳಿದ.

“ಬಾಯಿಬಿಡಿಸಿದಿರಾ? ಏಕೆ ಮಾಡಿದರಂತೆ ಈ ಹೊಲೆಗೆಲಸ?”.

-ಮದಕರಿನಾಯಕ ಕೇಳಿದ.

“ಬಾಯಿಬಿಡದಿದ್ದರೆ ಬಿಟ್ಟೇನಾ? ಮಾಡೋ ಉಪಚಾರಗಳನ್ನೆಲ್ಲಾ ಮಾಡಿ, ಕೊನೆಗೆ ಇಕ್ಕಳದಿಂದ ಬಾಯಗಲಿಸಿ, ಅಂಗುಳಕ್ಕೆ ಉಕ್ಕಿನಮುಳ್ಳುಹಾಕಿ ನಾಲಗೆ ಹೊರಗೆಳಸಿ, ಜೋತು ಬಿದ್ದ ನಾಲಗೆಯ ಎದುರು ಹಸಿದ ನಾಯನ್ನು ಹಿಡಿದು ನಿಲ್ಲಿಸಿದಾಗ ಬಾಯಿಬಿಟ್ಟರು.”

- ರಸವತ್ತಾದ ಕಥೆ ಹೇಳುವವನಂತೆ ಆ ಬೀಭತ್ಸವನ್ನು ಉತ್ಸಾಹದಿಂದ ವಿವರಿಸಿದ, ಕಾಟನಾಯಕ –

“ಇದೆಲ್ಲಾ ಹರಪನಹಳ್ಳಿಯವರ ಪಿತೂರಿ. ’ಅರಮನೆಯೇ ಅಭದ್ರ. ಇನ್ನು ಕೋಟೆಯೇನು ಉಳಿದೀತು?’ ಅನ್ನೋ ಅನುಮಾನ ಜನರಲ್ಲಿ ಹುಟ್ಟಿಸಬೇಕೂಂತ ಮಾಡಿದರಂತೆ”

- ಎಂದು ಅಪರಾಧಿಗಳ ಬಾಯಿಂದ ಹೊರಬಿದ್ದದ್ದನ್ನು ವರದಿಮಾಡಿದ.

“ವಿಷಯವೆಲ್ಲಾ ತಿಳಿದಾಯಿತಲ್ಲಾ....ಇನ್ನವರಿಗೆ ಕೊಡಬೇಕಾದ ಶಿಕ್ಷೆಕೊಡಿ. ಅದಕ್ಕೆ ನಾವೇಕೆ ಬೇಕಾಗಿತ್ತು?” – ಎಂದು ಕೇಳಿದ, ಮದಕರಿನಾಯಕ.

"ಅಪರಾಧಿಗಳನ್ನು ಹಿಡಿಯುವುದು, ಅಪರಾಧವನ್ನು ಸಾಬೀತು ಮಾಡುವುದು ತಳವಾರ ಚಾವಡಿಯ ಕೆಲಸ. ಶಿಕ್ಷಕೊಡುವುದು, ಅದರಲ್ಲೂ ರಾಜಕೀಯ ಸಂಪರ್ಕವಿದ್ದ ಬಂದಿಗಳಿಗೆ ಶಿಕ್ಷೆ ವಿಧಿಸುವುದು ಪ್ರಭುಗಳ ಕೆಲಸ. ಅಪರಾಧಿಗಳನ್ನು ಇಲ್ಲಿಗೆ ಕರೆಸಿ, ತಳವಾರರೇ"

- ಎಂದರು ನರಸಪ್ಪಯ್ಯ.

"ಏ, ಯಾರಲ್ಲಿ....ಒಳಗಿರೋ ಆ ಕುನ್ನಿಗಳನ್ನು ಎಳೆದು ತನ್ನಿರೋ....ಆ ನಾಯಿ ಮುಖಾನ ದೊರೆಗಳೂ ನೋಡಲಿ" – ಎಂದು ಕೂಗಿ ಹೇಳಿದ ಕಾಟನಾಯಕ.

ಆತನ ಕೂಗಿಗೆ ಕಣ್ದೆರದಂತೆ, ತಳವಾರಚಾವಡಿಯ ಹಿಂಬದಿಯಲ್ಲಿದ್ದ ಗೂಡಿನಂಥ ಕೊಠಡಿಯ ಕಬ್ಬಿಣದ ಕಿರುಬಾಗಿಲನ್ನು ತೆರೆದು, ಒಳಗಿದ್ದ ಭಟರು, ಬಂದಿಗಳಾಗಿದ್ದ ಮೂರು ಮಂದಿಯನ್ನು ಎತ್ತಿ ತೂಗಿ ಹೊರಬಿಸುಟರು.

ದೊಪ್ಪೆಂದು ಚಾವಡಿಯ ಕಲ್ಲುನೆಲದ ಮೇಲೆ ಬಿದ್ದ, ಮೈಯೆಲ್ಲಾ ರಣರಂಪವಾಗಿ, ಕೀವು ಸುರಿಯುತ್ತಾ, ಅದಕ್ಕೆ ಸವರಿದ ಬೆಲ್ಲದಪಾಕದ ಆಸೆಗಾಗಿ ಆ ಕೀವನ್ನು ಕಚ್ಚಿ ಹಿಡಿದ ಕಟ್ಟಿರುವೆಗಳು ಮೈಮೇಲೆಲ್ಲಾ ಹರಿದಾಡುತ್ತಿದ್ದ, ಬೆಳಕು ಸತ್ತ ಕಣ್ಣುಗಳಲ್ಲಿ ಮಾತ್ರ ಜೀವದ ನೆರಳಿದ್ದ, ಆ ಮೂರು ಮನುಷ್ಯದೇಹಗಳನ್ನು ಕಂಡು ಮದಕರಿನಾಯಕನಿಗೆ ಹೊಟ್ಟೆ ತೊಳಸಿಬಂದಂತಾಯಿತು. ಆ ಓಕರಿಕೆಯ ಧ್ವನಿಯಲ್ಲೇ –

"ಇವರಿಗೇನು ಬೇಕಾದರೂ ಶಿಕ್ಷೆ ಕೊಡಿ. ನಾನಿದನ್ನು ನೋಡಲಾರೆ. ಮೊದಲು ನನ್ನ ಕಣ್ಣೆದುರಿನಿಂದ ಇವರನ್ನು ಸಾಗಿಸಿ" - ಎಂದ, ಪ್ರಯಾಸದಿಂದ.

"ಅದಾಗದು, ನೀವೇ ಶಿಕ್ಷೆಕೊಡಬೇಕು. ಅದು ಪ್ರಭುಗಳ ಕರ್ತವ್ಯ"

- ಬಿರುಸಾದ ಧ್ವನಿಯಲ್ಲಿ ಹೇಳಿದರು ನರಸಪ್ಪಯ್ಯ.

"ನೀವೇನು ಬೇಕಾದರೂ ಶಿಕ್ಷೆ ಕೊಡಿ. ನಾನಿದನ್ನು ನೋಡಲಾರೆ"

-ಎಂದ ಮದಕರಿನಾಯಕ.

"ನಾವು ಕೊಡುವ ಶಿಕ್ಷೆಯನ್ನು ಪ್ರಭುಗಳು ಒಪ್ಪುತ್ತೀರಾ?"

– ನರಸಪ್ಪಯ್ಯ ಮದಕರಿನಾಯಕರನ್ನು ಪರೀಕ್ಷೆಮಾಡುವಂತೆ ಕೇಳಿದರು.

ಆ ಪ್ರಶ್ನೆ ಕೇಳಿದ ಪ್ರಧಾನಿಗಳ ಮುಖವನ್ನು ಮದಕರಿನಾಯಕನೂ ನೋಡಿದ –

ವಯಸ್ಸಾಗಿ ನಿರಿಗೆಗಟ್ಟಿದ, ಬೋಳುಗೆನ್ನೆಯ, ಚೂಪುಮೂಗಿನ, ನರೆತ ಹುಬ್ಬಿನಡಿಯ ಕೊರೆವ ಮಂಜುಗಡ್ಡೆಯಂಥ ಕಣ್ಣಿನ ನರಸಪ್ಪಯ್ಯನವರ ಮುಖವನ್ನು ನೋಡಿ, ಮದಕರಿನಾಯಕನ ಹೆದರಿಕೆಯರಿಯದ ಹೃದಯವೂ ಒಂದು ಕ್ಷಣ ಕಂಪಿಸಿತು.

"ಹೇಳಿದೆವಲ್ಲಾ – ನಿಮಗಿಷ್ಟ ಬಂದ ಶಿಕ್ಷೆಕೊಡಿ"

– ಎಂದ ಮದಕರಿನಾಯಕ.

“ಆಯಿತು. ದೊರೆಗಳ ಮಾತು ನಮಗೆ ಆಜ್ಞೆ”

-ಎಂದಷ್ಟೇ ಹೇಳಿ, ಕಾಟನಾಯಕನತ್ತ ತಿರುಗಿ-

“ತಳವಾರರೇ, ಈ ಮೂರು ಜನರನ್ನು ಶೂಲದ ಬನದಲ್ಲಿ ಶೂಲಕ್ಕೆ ತೂಗುಹಾಕಿಸಿ. ಕೊಲ್ಲುವುದು ಬೇಡ. ಹದ್ದು, ಕಾಗೆಗಳು ಕಿತ್ತು ತಿಂದು, ಸಾಯಲಿ ಇವರು. ಹಾಗೇ ಅದನ್ನು ಊರ ಜನರೆಲ್ಲಾ ನೋಡಲಿ”

-ಎಂದು ಅಪ್ಪಣೆ ಮಾಡಿ –

“ಸರಿಯೇ ನಾನು ಮಾಡಿದ ಆಜ್ಞೆ?” – ಎಂದು ನಾಯಕರನ್ನು ಕೇಳಿದರು, ನರಸಪ್ಪಯ್ಯ ನರಸಪ್ಪಯ್ಯ, ಸಾಯುವ ಸ್ಥಿತಿಯಲ್ಲಿದ್ದವರಿಗೆ ವಿಧಿಸಿದ ಶಿಕ್ಷೆಯನ್ನು ಕೇಳಿ ನಾಯಕರ ಮೈ ಜುಂಮೆಂದಿತು. ಮೈಯೆಲ್ಲಾ ಕಟ್ಟಿರುವ ಹರಿದಂತಾಗಿ-

“ಈಗಾಗಲೇ ಅವರಿಗಾಗಿರುವ ಶಿಕ್ಷೆ ಸಾಲದೆ ? ಶೂಲಕ್ಕೇರಿಸಿ ಎಂದು ಹೇಳಿ”

-ಎಂದ ಮದಕರಿನಾಯಕ.

“ಆ ಆಜ್ಞೆ ಬೇಕಾದರೆ ಪ್ರಭುಗಳು ಮಾಡಬಹುದಿತ್ತು. ಆ ಅಧಿಕಾರವನ್ನು ನಮಗೆ ಕೊಟ್ಟಿರಿ. ನೀವೀಗ ಅದನ್ನು ಬದಲಿಸಿದರೆ ನಮ್ಮ ಮಾತಿಗೆ ಬೆಲೆ ಏನು ?”

- ಕೆಣಕಿ ಕೇಳಿದರು ನರಸಪ್ಪಯ್ಯ.

“ನಿಮ್ಮ ಮಾತಿಗೆ ಬೆಲೆಕೊಡಬಾರದು ಎಂದಲ್ಲ....”

“ಅದು ಬೇಡ. ನನ್ನ ಆಜ್ಞೆ ಸರಿಹೋಗದಿದ್ದರೆ ಬೇಡ ಎಂದು ನಿಮ್ಮ ಅಪ್ಪಣೆ ತಿಳಿಸಿ.”

“ಶೂಲಕ್ಕೇರಿಸಿಬಿಡಿ, ಪ್ರಧಾನಿಗಳೇ”

ಅಪರಾಧಿಗಳ ಪರವಾಗಿ ಬೇಡುವಂತೆ ಕೇಳಿದ, ಮದಕರಿನಾಯಕ.

“ಅದಾಗದು. ಆರಮನೆಗೆ ಕನ್ನಹಾಕಿದ ಕ್ರಿಮಿಗಳಿಗೆ ಏನಾಗುತ್ತದೆ ಎಂದು ಜನಕ್ಕೆ ತಿಳಿಯಬೇಕು. ತಳವಾರಚಾವಡಿಯ ಭಯ ಜನರಲ್ಲಿರಬೇಕು. ಅದಕ್ಕಾಗಿ ನಮ್ಮಾಜ್ಞೆ, ಈಗಲೂ ಹೇಳಿ- ನಮ್ಮಾಜ್ಞೆಯನ್ನು ಬದಲಿಸಬೇಕೆ ?”

ಪ್ರಧಾನಿಗಳ ಮಾತಿಗೆ ಏನು ಉತ್ತರ ಕೊಡಲೂ ತೋಚಲಿಲ್ಲ, ಮದಕರಿನಾಯಕನಿಗೆ. ಅವರ ಮಾತು ತನಗೆ ಸರಿಹೋಗಲಿಲ್ಲ ಎಂಬ ರೀತಿಯಲ್ಲಿ, ಪ್ರಧಾನಿಗಳಿಗೆ ನಮಸ್ಕರಿಸಿ, ಮರುಮಾತಿಗೆ ಕಾಯದೆ ಅಲ್ಲಿಂದ ಹೊರಟುಹೋದ, ಮದಕರಿನಾಯಕ.

“ಹುರಿಯಿನ್ನೂ ಜಾಳಾಗಿದೆ. ಹೊಸೆದು ಬಿಗಿಮಾಡಬೇಕು”

-ಎಂದು ತನಗೆ ತಾನೇ ಹೇಳಿಕೊಂಡಂತೆ ಹೇಳಿ, ನರಸಪ್ಪಯ್ಯ–

“ಮುಂದಿನ ಕೆಲಸ ನಡೆಸಿ”

- ಎಂದು ಕಾಟನಾಯಕನಿಗೆ ಅಪ್ಪಣೆ ಮಾಡಿದರು.

* * *

ಎರಡು ಕಡೆಯಿಂದಲೂ ಈ ಸುದ್ದಿ ಓಬವ್ವನಾಗತಿಗೆ ವರದಿಯಾಯಿತು. ಯಾರದು ತಪ್ಪು ಎಂದು ಆಕೆ ಹೇಳಲಿಲ್ಲ – ಅವರ ಇದಿರಿನಲ್ಲಿ, ಹೊನ್ನವ್ವೆಗೆ ಮಾತ್ರ –

“ಪೆಡಸು, ಎರಕದ ಕಬ್ಬಿಣ ಕತ್ತಿಯಾದೀತಾ? ಉಕ್ಕಾಗಬೇಕು, ಉಕ್ಕು ಮಾಡಬೇಕು”

- ಎಂದು ಹೇಳಿದರು.

ಆ ಮಾತಾಡುತ್ತಾ ಆಡುತ್ತಾ ಮೃದುವಾಗಿದ್ದ ಆಕೆಯ ಮುಖ ಬಿರುಸಾಯಿತು.

೧೪

ಅದಾದ ಮೂರನೆಯ ದಿನ –

ಮದಕರಿನಾಯಕ ಬೆಳಗಿನ ವ್ಯಾಯಾಮ ಮುಗಿಸಿ, ಸ್ನಾನಕ್ಕೆಂದು ಸ್ನಾನಗೃಹಕ್ಕೆ ಹೋದಾಗ ದಿನವೂ ಅಲ್ಲಿ ಕೆಲಸ ಮಾಡುತ್ತಿದ್ದ ಊಳಿಗದಾಳು ಕಾಣದೆ, ಹುಚ್ಚವ್ವ ಅಲ್ಲಿ ನಿಂತಿದ್ದುದು ನಾಯಕನ ಕಣ್ಣಿಗೆ ಬಿದ್ದು ಆಶ್ಚರ್ಯವಾಯಿತು.

ಸ್ತ್ರೀರೂಪ ಧರಿಸಿದ ಯೋಧವಿಗ್ರಹದಂತಿದ್ದ, ಆರಡಿಯ ಎತ್ತರದ ಬೀಸಾಗಿ ಬೆಳೆದ ಮೈಯ ಹುಚ್ಚವ್ವನನ್ನು ಒಮ್ಮೆ ಓಬವ್ವನಾಗತಿಯೇ ಆತನಿಗೆ ಪರಿಚಯ ಮಾಡಿಸಿ –

’ಈಕೆ ಅಂತಃಪುರದ ಕಾವಲಿನ ದೇಶಾಬಾಗ್ ಪಡೆಯ ಮುಖ್ಯಸ್ಥ. ಈಕೆಯನ್ನು ದಳವಾಯಿ ಎಂದು ನಾವು ಕರೆಯುವುದಿಲ್ಲ, ಆದರೆ ಸಾಹಸದಲ್ಲಿ, ಶಸ್ತ್ರವಿದ್ಯೆಯಲ್ಲಿ ಯಾವ ದಳವಾಯಿಗಿಂತಲೂ ಕಡಿಮೆಯಿಲ್ಲ. ಹೊತ್ತು ಬಂದರೆ ಅವರಿಗಿಂತ ಒಂದು ಕೈ ಹೆಚ್ಚು ಎಂದು ತೋರಿಸ ಬಲ್ಲ ಹೆಣ್ಣು ಈಕೆ. ಈಕೆಯ ಕೈಕೆಳಗೆ ನುರುಪಡಿಯಾದ ನೂರು ಮಂದಿ ದೇಶಾಬಾಗ್ ಹೆಣ್ಣು ಮಕ್ಕಳಿದ್ದದ್ದರಿಂದಲೇ ನಾವು, ಹಿರಿಯ ನಾಯಕರೊಂದಿಗೆ ಮಾಯಕೊಂಡದ ಸಮರಕ್ಕೆ ಹೋದಾಗ ಕ್ಷೇಮವಾಗಿ ಹಿಂದೆ ಬರಲು ಸಾಧ್ಯವಾಯಿತು. ಹುಚ್ಚವ್ವ ಎಂದರೆ ರಣಹುಚ್ಚವ್ವ ಈಕೆ’ – ಎಂದು ಆಕೆಯನ್ನು ವರ್ಣಿಸಿದ್ದರು.

ಎಂತಲೇ ಸ್ನಾನಗೃಹದಲ್ಲಿ ಆಕೆಯನ್ನು ಕಂಡಾಗ, ’ಮಜ್ಜನದ ಮನೆಯಲ್ಲಿ ಈಕೆಗೇನು ಕೆಲಸ?’ ಎನಿಸಿ, ಅದನ್ನೇ ಕೇಳಿದ –

"ನೀನೇಕವ್ವಾ ಇಲ್ಲಿ ?"

"ನಾಗತಿಯರು ನಿಮ್ಮನ್ನು ಕಾಣಬೇಕಂತೆ. ನೀವು ಬಂದಾಗ ಕೈಕಾಲು ತೊಳೆಯಲು ನೀರು ಕೊಟ್ಟು, ಅದಾದಮೇಲೆ ಕರೆತಾ ಎಂದು ಒಡತಿಯ ಅಪ್ಪಣೆಯಾಯಿತು, ಬಂದೆ, ಮುಖ ತೊಳೆದುಕೊಳ್ಳಿ"

- ಎಂದು ದೊಡ್ಡ ತಂಬಿಗೆಯೊಂದನ್ನು ಮದಕರಿನಾಯಕನ ಕೈಗೆ ಕೊಟ್ಟಳು.

'ಇಷ್ಟು ಅವಸರದ ಕಾರಣವೇನಿರಬಹುದು ?'

-ಎಂದು ಚಿಂತಿಸುತ್ತಲೇ, ಎತ್ತಲೋ ಜ್ಞಾನದಲ್ಲಿ ಮದಕರಿನಾಯಕ ಆಕೆ ಕೊಟ್ಟ ತಂಬಿಗೆಯಲ್ಲಿದ್ದ ನೀರನ್ನು ಕೈಗೆ ಹಾಕಿಕೊಂಡ.

ಕೈ ಎಲ್ಲಾ ಕೆಂಪಾಯಿತು. ಕೈಯನ್ನು ಆವರಿಸಿದ ರಕ್ತಗೆಂಪನ್ನು ಕಂಡು ಆಶ್ಚರ್ಯವಾಗಿ, ಅಂಟುಅಂಟಾದ ಆ ನೀರನ್ನು ಮುಟ್ಟಲೂ ಅಸಹ್ಯವಾಗಿ-

"ಇದೇನು ನೀರು?! ರಕ್ತದ ಹಾಗಿದೆ"

-ಎಂದು ಕೇಳಿದ.

"ಹಾಗಿದೆ ಎನ್ನುವುದೇನು – ಅದು ರಕ್ತವೇ. ಮುಖ ತೊಳೆದುಕೊಳ್ಳಿ"

- ಅಪ್ಪಣೆ ಮಾಡುವ ಧ್ವನಿಯಿದ್ದ ರೀತಿಯಲ್ಲಿ ಹೇಳಿದಳು, ಹುಚ್ಚವ್ವ.

ರಕ್ತ –

ಕೈತುಂಬಿ, ಕಾಲಮೇಲೂ ಸೋರಿ, ಕಪ್ಪು ಬಣ್ಣಕ್ಕೆ ತಿರುಗುತ್ತಿರುವ ಕಡುಗೆಂಪು ರಕ್ತ.

ಅದನ್ನು ನೋಡಲೂ ಆಗದೆ, ತಂಬಿಗೆಯಲ್ಲಿದ್ದುದನ್ನೆಲ್ಲಾ ಬಚ್ಚಲಿಗೆ ಚೆಲ್ಲಿದ. ಬಚ್ಚಲಿಗೆ ಹಾಸಿದ ಬಿಳುಪಾದ ಹಾಲುಗಲ್ಲಿನ ಮೇಲೆ ರಕ್ತ ಹರಿದು, ಹಿಂದೆಂದೂ ಅಷ್ಟು ರಕ್ತವನ್ನೊಂದು ಬಾರಿಗೆ ನೋಡದಿದ್ದ ಮದಕರಿನಾಯಕನಿಗೆ ತಲೆಸುತ್ತಿ ಬಂದಂತಾಗಿ, ಹಾಗೇ, ಗೋಡೆಗೆ ಮೈಯಾನಿಸಿ-

"ಇದರಲ್ಲಿ ಮುಖ ತೊಳೆಯುವುದು ನನ್ನಿಂದಾಗದು...ಇದನ್ನು ಕಣ್ಣಾರೆ ನೋಡಲೂ ಆರೆ....ಬೇಗ ಬೇರೆ ನೀರು ಕೊಡು... ಊಹೂ....ಆ ತಂಬಿಗೆಯೂ ಬೇಡ..."

-ಎಂದು ಬೇಡಿಕೊಳ್ಳುವವನಂತೆ ಹೇಳಿದ.

ಹಾಗೆ ಹೇಳಿದ ಮದಕರಿನಾಯಕನ ಮುಖವನ್ನೊಮ್ಮೆ ಕೂರ್ನೋಟದಿಂದ ನೋಡಿ –

"ಇವತ್ತಿಗಿದು ಬೇಡವಾದರೆ, ಬಿಡಿ"

-ಎಂದು ಬೇರೆ ತಂಬಿಗೆಯಲ್ಲಿ ಬಿಸಿನೀರು ಕೊಟ್ಟಳು, ಹುಚ್ಚವ್ವ.

ಆಕೆ ಕೊಟ್ಟ ನೀರಿನಿಂದ ಕೈಕಾಲು ಮುಖ ತೊಳೆದರೂ, ಕೈಗಂಟಿದ ರಕ್ತ ಹೋದ ಹಾಗನಿಸಲಿಲ್ಲ, ಮದಕರಿನಾಯಕನಿಗೆ. ಹತ್ತಾರು ತಂಬಿಗೆಯ ನೀರಿನಲ್ಲಿ ಕೈಕಾಲು ತೊಳೆದು, ಆಕೆ ಕೊಟ್ಟ ವಸ್ತ್ರದಿಂದ ಮುಖ ಒರೆಸಿಕೊಂಡು, ಓಬವ್ವನಾಗತಿಯನ್ನು ನೋಡಲು ಆಕೆಯನ್ನು ಹಿಂಬಾಲಿಸಿದ.

ತನ್ನ ಎಂದಿನ ಆಸನದಲ್ಲಿಯೇ ಕುಳಿತು ಓಬವ್ವನಾಗತಿ ಮದಕರಿನಾಯಕನಿಗಾಗಿ ಕಾಯುತ್ತಿದ್ದರು. ಆದರೆ ಆಕೆಯ ಮುಖಭಾವ ಮಾತ್ರ ಎಂದಿನಂತೆ ಮೃದುವಾಗಿರದೆ, ಒರಟುಕಲ್ಲಿನಲ್ಲಿ ಕಡೆದಂತೆ ಬಿರುಸಾಗಿತ್ತು.

“ಮುಖ ತೊಳೆದಾಯಿತೇ ?”

- ಎಂದು ಕೇಳಿದರು ಓಬವ್ವನಾಗತಿ, ತನ್ನಿದಿರು ಬಂದು ನಿಂತ ಮದಕರಿನಾಯಕನನ್ನು ಎಂದಿನಂತೆ ಕೂಡಲೂ ಹೇಳದೆ.

ಅದನ್ನು ಕಂಡು ಮದಕರಿನಾಯಕನಿಗೆ ಆಶ್ಚರ್ಯ ಮತ್ತಷ್ಟು ಹೆಚ್ಚಾಗಿ –

“ಅವ್ವಾ - ಇವತ್ತು ನೀವಿದೇನು ಮಾಡಿದಿರಿ? ರಕ್ತದಲ್ಲೇಕೆ ಮುಖ ತೊಳೆಯಲು ಅಪ್ಪಣೆ ಮಾಡಿದಿರಿ ?” – ಎಂದು ಕೇಳಿದ.

“ತಪ್ಪೇನಾಯಿತು ?” – ಚುರುಕಾಗಿ ಕೇಳಿದರು ಓಬವ್ವನಾಗತಿ.

“ತಪ್ಪೇ? ರಕ್ತದಲ್ಲಿ ಮುಖ ತೊಳೆಯುವುದೇ? ಅದನ್ನು ನೋಡಿಯೇ ನನಗೆ ಹೊಟ್ಟೆ ತೊಳಸಿ, ತಲೆಸುತ್ತಿ ಬಂದಂತಾಯಿತು.”

“ಅಂದರೆ - ನೀವು ದುರ್ಗದ ನಾಯಕರಾದದ್ದು ಸಾರ್ಥಕವಾಯಿತು !”

-ಚಾವಟಿಯ ಏಟಿನಂತಿತ್ತು, ಓಬವ್ವನಾಗತಿಯ ಮಾತು.

ಆ ಮಾತಿನಲ್ಲಿದ್ದ ನವಿರಾದ ವ್ಯಂಗ್ಯ, ಮದಕರಿನಾಯಕ ಆಕೆಯನ್ನು ಹಿಂದೆಂದೂ ನೋಡದಿದ್ದ ಹೊಸ ವ್ಯಕ್ತಿಯೆಂಬಂತೆ ನೋಡುವಂತೆ ಮಾಡಿ –

“ಅವ್ವಾ - ಇವತ್ತಿನ ನಿಮ್ಮ ಮಾತು, ರೀತಿ ನನಗೊಂದೂ ಅರ್ಥವಾಗುತ್ತಿಲ್ಲ. ಹೀಗೇಕೆ ಮಾತಾಡುತ್ತಿದ್ದೀರ? ನಾನೇನು ತಪ್ಪು ಮಾಡಿದೆವು ಹೇಳಬಾರದೆ?”

- ಎಂದು ದೀನಧ್ವನಿಯಲ್ಲಿ ಕೇಳಿದ.

“ರಕ್ತಕ್ಕೆ ಹೇಸಿದವನು ಅರಸನಾಗಲಾರ. ಆದರೆ ಬಹಳ ದಿನ ಅರಸಾಗಿ ಉಳಿಯಲೂ ಆರ.”

“ಅರಸಾದವನೂ ಮನುಷ್ಯನೇ ಅಲ್ಲವೇ? ನನಗೇನು, ಎಂಥವರಿಗೂ ಒಮ್ಮೆಗೇ ಇಷ್ಟು ರಕ್ತ ಕಂಡರೆ ವಾಕರಿಕೆ ಬರುತ್ತದೆ.”

“ನಿಜ - ನಿಮಗೇನು, ಎಲ್ಲರಿಗೂ ರಕ್ತ ಕಂಡಾಗ ಭಯವಾಗುತ್ತದೆ, ವಾಕರಿಕೆ ಬಂದಂತಾಗು ಇದೆ, ತಲೆಸುತ್ತಿದಂತಾಗುತ್ತದೆ; ಏಕೆ - ಎಷ್ಟೋ ಜನಕ್ಕೆ ಹುಚ್ಚ ಹಿಡಿಯುತ್ತದೆ. ಅದು ಸಾಮಾನ್ಯ ಮನುಷ್ಯರ ಮಾತಾಯಿತು.”

“ನಾವು ಮನುಷ್ಯರಲ್ಲವೇ ?”

“ಆದರೂ ಅರಸು. ಅರಸುಪದವಿ ಎಂದರೇನೆಂದುಕೊಂಡಿರಿ. ಹತ್ತಾರು ಸಾವಿರ ಹೆಣಗಳ ಬುನಾದಿಯ ಮೇಲೆ ಕಟ್ಟಿದ್ದು ಈ ಅರಸು ಸಿಂಹಾಸನ. ಇದರ ಮೇಲೆ ಕುಳಿತು ಆಳುವಾತ ಹನಿರಕ್ತಕ್ಕೆ ಹೆದರಿದರೆ ಹೇಗೆ? ಯುದ್ಧದಲ್ಲಿ ರಕ್ತದ ಕೋಡಿ ಹರಿಸಬೇಕಾದ ನಿಮಗೆ ಹಾಗೆ ಮೈತಪ್ಪದಂತೆ, ಬುದ್ಧಿ ಕೆಡದಂತೆ ರಕ್ತದ ಅಭ್ಯಾಸವಾಗಬೇಕು. ರಕ್ತ ನೀರಿಗಿಂತ ಸದರವಾಗ ಬೇಕು. ಅರಸೇ ರಕ್ತಕ್ಕೆ ಹೆದರಿದರೆ, ಅವರ ಹಿಂದೆ ಬರುವ ಸೈನಿಕರೇನು ಮಾಡಬೇಕು ಅವರು ನೀರಿಗೂ ಅಂಜಿ ಓಡಬೇಕೇ ?”

“ಅಂದರೆ ಯುದ್ಧಕ್ಕೆ ಹೋಗುವ ಸಿಪಾಯಿಗಳಿಗೆಲ್ಲಾ ಹೀಗೇ ರಕ್ತದ ಅಭ್ಯಾಸ ಮಾಡಿಸುತ್ತಾರೆಯೇ ?” – ಮದಕರಿನಾಯಕ ಕೇಳಿದ.

“ಇಲ್ಲ, ಅವರು ಶೇಂದಿ, ಷರಾಬು ಕುಡಿದು, ಗಾಂಜಾ ಸೇದಿ, ಆ ಅಮಲಿನಲ್ಲಿ ಯುದ್ಧ ಮಾಡುತ್ತಲೇ ರಕ್ತಾಭ್ಯಾಸ ಮಾಡುತ್ತಾರೆ....” - ಓಬವ್ವನಾಗತಿ ಹೇಳಿದರು.

“ನಾವೂ ಹಾಗೆ ಮಾಡಿದರೆ ಆಗದೆ ?”

“ಕೂಡದು, ಎಚ್ಚರವಿದ್ದೇ ನಾವೂ ರಕ್ತ ಹರಿಸಬೇಕು. ಈ ನಿಷಾ ಬುದ್ಧಿಕೆಡಿಸುತ್ತದೆ. ಯುದ್ಧ ನಡೆಸಬೇಕಾದ ದೊರೆ ಬುದ್ಧಿಗೆಡಬಾರದು. ಸುತ್ತಲ ಸಾಲುಕಗೊಲೆಯಿಂದ ಅವನ ಬುದ್ಧಿ ಮತ್ತಷ್ಟು ಚುರುಕಾಗಬೇಕು. ಕುಡಿದು ಲಢಾಯಿ ಮಾಡಿದರೆ ತಲೆ, ದೇಶ ಎರಡನ್ನೂ ಕಳೆದುಕೊಂಡು ಬರಬೇಕಾಗುತ್ತದೆ” – ಓಬವ್ವನಾಗತಿ ವಿವರಿಸಿ ಹೇಳಿದರು.

“ಹಾಗಂದರೆ ರಕ್ತ ನೋಡಿ ಹೇಸಿಗೆಯಾದಂತೆ ನಾವೂ ಅಮಲೇರಲು ಏನಾದರೂ ಕಂಡು ಹಿಡಿಯಬೇಕು.”

“ಕಂಡುಹಿಡಿಯುವುದೇನು - ಇದೆಯಲ್ಲಾ : ಸುತ್ತ ಹರಿವ ರಕ್ತವನ್ನು ಕಂಡೇ ನಿಮಗೇ ಅಮಲೇರಬೇಕು. ತೆನೆ ಕೊಯ್ದ ಹಾಗೆ ತಲೆ ಕಡಿಯಬೇಕು. ಇದೆಲ್ಲಾ ಮೊದಲು ಕಷ್ಟವಾಗುತ್ತದೆ” – ಎಂದು ಹೇಳಿ, ಧ್ವನಿಯನ್ನು ಕೊಂಚ ಮೃದುವಾಗಿಸಿ –

“ಮಗುವಾಗಿದ್ದಾಗ ನೀವು ತಾಯಿಹಾಲು ಕುಡಿಯುತ್ತಿದ್ದಿರಿ. ಬೆಳೆಯುತ್ತಾ ಮುದ್ದೆ, ಎಸರು, ಓಗರ ಎಲ್ಲಾ ಅಭ್ಯಾಸವಾಯಿತು - ಅಲ್ಲವೇ ? ಇದೂ ಹಾಗೆಯೇ. ಹತ್ತು ಸಲ ಕಂಡದ್ದಕ್ಕೆ ಕಣ್ಣು ಒಗ್ಗುತ್ತದೆ, ಹತ್ತು ಸಲ ತಿಂದದ್ದಕ್ಕೆ ನಾಲಗೆ ಒಗ್ಗುತ್ತದೆ. ಮನುಷ್ಯ ಸ್ವಭಾವವೇ ಅಷ್ಟು, ಕಾಮನ

ಹಬ್ಬದಲ್ಲಿ ಓಕುಳಿಯಾಡುತ್ತೇವಲ್ಲಾ, ಅದು ಅಸಹ್ಯವಾಗುತ್ತದೆಯೇ ? ರಕ್ತವೂ ಹಾಗೇ ಆಗಬೇಕು - ಬೇರೆಯವರದಷ್ಟೇ ಅಲ್ಲ, ನಮ್ಮ ರಕ್ತವೂ ನಮಗೆ ನೀರಿಗಿಂತ ಅಗ್ಗವಾಗಬೇಕು. ಈ ಅಭ್ಯಾಸ ಬೆಳಸಿಕೊಳ್ಳಿ"

- ಎಂದರು ಓಬವ್ವನಾಗತಿ.

"ಅಂತೂ ಆರಸನಾಗಬೇಕು ಎಂದವರು ಮನುಷ್ಯತ್ವ ಮರೆಯಬೇಕು"

-ಸೋತು ಹೇಳಿದ ಮದಕರಿನಾಯಕ.

"ಉಂಟೇ? ಮನುಷ್ಯತ್ವ ಇರಬೇಕು- ಕಲ್ಲಿನ ಪೆಟ್ಟಿಗೆಯೊಳಗೆ ಮಲ್ಲಿಗೆಯ ಹೂವಿದ್ದಂತೆ ಇರಬೇಕು. ಇದ್ದದ್ದು ಬೇರೆಯವರಿಗೆ ತಿಳಿಯಬಾರದು. ಬೇಸರ ಮಾಡಿಕೊಳ್ಳಬೇಡಿ, ಯೋಚಿಸಿ ಹೇಳಿ? ದುರ್ಗದ ಸುತ್ತ ಸಾವಿರ ಶತ್ರುಗಳು. ಅಂಥವರ ಮಧ್ಯೆ ರಕ್ತಕ್ಕೆ ಹೆದರಿ ದಾತ ಪಟ್ಟಕ್ಕೆ ಕುಳಿತರೆ ನಮ್ಮ ರಾಜ್ಯ ಸುರಕ್ಷಿತವಾಗಿ ಉಳಿದೀತೇ ?"

ನಾಗತಿ ಹೇಳಿದಂತೆಯ ಮದಕರಿನಾಯಕ ಯೋಚಿಸಿದ-

ಯೋಚಿಸಿದಂತೆ ಆಕೆಯ ಮಾತು ಎಷ್ಟು ನಿಜ ಎನಿಸಿತು.

"ನಿಜ, ಅವ್ವಾ, ನಾನಿನ್ನೂ ಕಲಿಯಬೇಕಾದದ್ದು ಬಹಳ ಇದೆ."

"ಇದೆ. ನಾವೇ ಕಲಿಯಬೇಕು. ಇಲ್ಲವಾದರೆ ಜೀವನ ಆ ಪಾಠ ಕಲಿಸುತ್ತದೆ – ಮಾತು ಆಡಿಯಲ್ಲಿ, ಏಟು ಕೊಟ್ಟು. ಇವತ್ತಿಗಿಷ್ಟು ಮಾತು ಸಾಕು. ಸ್ನಾನಮಾಡಿ ವಿಶ್ರಾಂತಿ ತೆಗೆದು ಕೊಳ್ಳಿ." – ಎಂದು ಮಾತು ಮುಗಿಸಿದಂತೆ ಹೇಳಿದರು. ಓಬವ್ವನಾಗತಿ.

ಆಕೆ ಅಷ್ಟು ಹೇಳಿದ ಬಳಿಕ ಅಲ್ಲಿ ತನಗಿನ್ನೇನೂ ಕೆಲಸವಿಲ್ಲವೆಂಬಂತೆ ಅಲ್ಲಿಂದ ಹೊರಡಲು ಸಿದ್ಧನಾದ ಮದಕರಿನಾಯಕ.

ಹೋಗುತ್ತಿದ್ದ ಆತನನ್ನು ಕಂಡು ಮರೆತ ಯಾವುದೋ ಮಾತನ್ನು ಜ್ಞಾಪಿಸಿಕೊಂಡಂತೆ-

"ಒಂದು ಕ್ಷಣ - ನಿಲ್ಲಿ" - ಎಂದರು, ಓಬವ್ವನಾಗತಿ.

ಆ ಮಾತನ್ನು ಕೇಳಿ, ಮತ್ತೇನು ಮಾತೋ ಎಂದು ಹೋಗಲಿದ್ದ ಮದಕರಿನಾಯಕ ಹಾಗೇ ನಿಂತು 'ಏನು?' ಎಂದು ಕೇಳುವಂತೆ ಅವರತ್ತ ನೋಡಿದ.

"ಇನ್ನೊಂದು ಸಣ್ಣ ಮಾತು ನಿಮಗೆ ಹೇಳುವುದಿತ್ತು."

"ಏನು ಹೇಳಿ?"

"ಮೊನ್ನೆ ತಳವಾರಚಾವಡಿಯಲ್ಲಿ ನೀವೊಂದು ಮಾತು, ಪ್ರಧಾನಿಗಳೊಂದು ಮಾತು ಹೇಳಿದಿರಂತೆ."

ಆ ಮಾತು ಕೇಳಿ ಅಂದು ನಡೆದುದನ್ನು ನೆನಪಿಸಿಕೊಂಡು-

"ಹೌದು" – ಎಂದು ಹೇಳಿದ, ಮದಕರಿನಾಯಕ.

"ಆ ದಿನ ನಿಮ್ಮ ಮಾತು ನಡೆಯದೆ, ಕೊನೆಗೆ ಪ್ರಧಾನಿಗಳ ಮಾತೇ ನಡೆಯಿತಂತೆ."

"ನಿಜ."

"ಆ ದಿನದ್ದು ಸಣ್ಣ ವಿಚಾರ. ಆದರೂ ನೀವು ನೆನಪಿನಲ್ಲಿಟ್ಟುಕೊಳ್ಳಬೇಕು: ಈ ದುರ್ಗಕ್ಕೆ ನೀವು ನಾಯಕರು. ಅವರು ಪ್ರಧಾನಿಗಳು. ಪ್ರಧಾನಿಗಳಿಗಿಂತ ನಾಯಕರು ದೊಡ್ಡವರು. ಆ ದಿನ ಆಡಿದಿರೋ ಬಿಟ್ಟಿರೋ. ಆದರೂ ಈ ಸೀಮೆಯಲ್ಲಿ ನಡೆಯಬೇಕಾದ್ದು ನಾಯಕರ ಮಾತು, ಪ್ರಧಾನಿಗಳದ್ದಲ್ಲ. ಇದು ಸದಾ ನಿಮಗೆ ನೆನಪಿನಲ್ಲಿರಬೇಕು. ಅದನ್ನು ಮರೆತಿರೋ, ನಿಮ್ಮ ಕೈಕೆಳಗೆ ಕೆಲಸ ಮಾಡುವ ಜನಕ್ಕೆ ನಿಮ್ಮ ಮಾತು ಸದರವಾಗುತ್ತದೆ. ಇನ್ನು ಅಂಥದಕ್ಕೆ ಅವಕಾಶ ಕೊಡಬೇಡಿ. ಯಾವ ಮಾತೇ ಆಗಲಿ - ವಿಚಾರಿಸಿ ಆಡಿ. ನೀವು ಆಡಿದ್ದು ಕೊನೆಯ ಮಾತಾಗಬೇಕು. ಈ ಮಾತಿಗೆ ಎಂದೂ ಲೋಪ ಬಾರದಹಾಗೆ ನೋಡಿಕೊಳ್ಳಿ" ಎಂದು ದಂಡಿಸುವಂತೆ ಹೇಳಿ, ಬಳಿಕ –

"ಇನ್ನು ಹೋಗಿ, ಸ್ನಾನ, ಊಟ ಮುಗಿಸಿ. ಆದರೆ ನಾವು ಹೇಳಿದ ಮಾತು ಮರೆಯ ಬೇಡಿ" - ಎಂದರು ಓಬವ್ವನಾಗತಿ.

"ಆಯಿತು. ಅವ್ವಾ. ನಿಮ್ಮ ಮಾತನ್ನಿಂದೂ ಮರೆಯುವುದಿಲ್ಲ"

- ಎಂದು ಹೇಳಿಹೋದ, ಮದಕರಿನಾಯಕ, ತಪ್ಪು ಮಾಡಿ ದಂಡನೆಗೊಳಗಾದವನಂತೆ ಆತ ಹೋದ ರೀತಿಯನ್ನು ನೋಡಿದ ಹುಚ್ಚವ್ವ –

"ಅವ್ವಾ...ಒಂದು ಮಾತು ಹೇಳಬಹುದೇ ?" – ಎಂದು ಕೇಳಿದಳು.

"ಏನು ಹೇಳು?"

"ಒಂದೇ ದಿನಕ್ಕೆ ನಾಯಕರನ್ನು ಬಹಳ ದಂಡಿಸಿಬಿಟ್ಟಿರಿ. ಅವರನ್ನು ನೋಡಿ ಅಯ್ಯೋ ಅನ್ನಿಸಿತು."

"ನಿಜ, ಆಡಬಾರದ ಮಾತು ಆಡಿದೆವೇ – ನಾವು ?"

"ಇಲ್ಲ, ಆದರೆ ನಾಯಕರಿಗಿನ್ನೂ ಬಹಳ ಚಿಕ್ಕ ವಯಸ್ಸು, ಕಲಿಯಲು ಇನ್ನೂ ಸಾಕಷ್ಟು ದಿನಗಳಿವೆ."

"ನಿಜ - ಕಲಿಯಲು ಅವರಿಗೆ ಕಾಲವಿದೆ. ಆದರೆ ನಿಧಾನವಾಗಿ ಕಲಿಸಲು ನಮಗೆ ಆಯಸ್ಸಿದೆಯೇ? ಎಲ್ಲಾ ಕಲಿತವರು ನಮ್ಮ ಕೈಬಿಟ್ಟುಹೋದರು. ಮತ್ತೆ ಈಗ ಹೊಸಬರಿಗೆ ಓನಾಮದಿಂದ ಕಲಿಸಬೇಕಾದ ಕಷ್ಟವನ್ನು ದೇವರು ನಮಗೆ ಕೊಟ್ಟ – ಅದೂ ಈ ವಯಸ್ಸಿನಲ್ಲಿ" – ಎಂದು ವಿಷಣ್ಣಳಾಗಿ ಹೇಳಿದರು. ಓಬವ್ವನಾಗತಿ.

ಆಕೆಯ ಮಾತಿನ ಅಂತರಾಳದಲ್ಲೆಲ್ಲೋ ಕಂಬನಿ ಜಿನುಗುತ್ತಿದ್ದುದನ್ನು ಅರ್ಥಮಾಡಿಕೊಂಡ ಹುಚ್ಚವ್ವ ಆ ಮಾತನ್ನು ಮುಂದಕ್ಕೆ ಬೆಳಸಲಿಲ್ಲ.

ಅವಳ ಮನಸ್ಸೂ ಓಬವ್ವನಾಗತಿಗಾಗಿ ಮಮ್ಮಲ ಮರುಗಿತು.

೧೫

ಸಾಲುಸಡಗರದ ಹಬ್ಬ ಹರಿದಿನಗಳಿಗಾಗಿ, ಗಾಳಿಯಿಂದ ಧೂಳು ಕೊಡವಿ, ಹನಿಮಳೆಯಿಂದ ನೆಲಕ್ಕೆ ನೀರು ಸಿಂಪಡಿಸಿ, ಹರುಷದ ಮೊಳಕೆಯಂತೆ ನೆಲದಲ್ಲಿ ಹಸಿರು ಮೂಡಿಸಬೇಕಾದ ಆಷಾಢಮಾಸದಲ್ಲಿ, ಕಸ್ತೂರಿ ರಂಗಪ್ಪನಾಯಕರು ಸಂತತಿವಿಹೀನರಾಗಿ ಸ್ವರ್ಗಸ್ಥರಾಗಿ, 'ಈ ವರ್ಷ ಆರಮನೆಯಲ್ಲೇ ಉತ್ಸವಗಳಿಲ್ಲ; ದೊರೆಮನೆಗಿಲ್ಲದ್ದು ಊರಮನೆಗಳಿಗೆಲ್ಲಿ?' ಎಂದು ಜನ ಉದಾಸೀನತೆಯ ಜಡತೆಯ ಕಂಬಳಿ ಹೊದ್ದ ಹೊತ್ತಿನಲ್ಲೇ. ಹೊಸ ನಾಯಕರು ಪಟ್ಟಕ್ಕೆ ಬಂದು, ಜನರ ಉತ್ಸಾಹಕ್ಕೆ ಕೋಡುಮೂಡಿಸಿ, ಪ್ರತಿವರ್ಷಕ್ಕಿಂತಲೂ ಇಮ್ಮಡಿಯಾದ ಉತ್ಸಾಹದಿಂದ, ಶ್ರಾವಣಮಾಸದ ನಾಗರಚೌತಿ-ಪಂಚಮಿ ಹಬ್ಬಗಳನ್ನು, ಮಂಗಳಗೌರಿ, ಗೋಕುಲಾಷ್ಟಮಿ ಹಬ್ಬಗಳನ್ನು ಆಚರಿಸಿ. ಭಾದ್ರಪದ ಮಾಸದ ಗೌರಿ-ಗಣಪತಿಯ ಪೂಜೆಗೆ ಸಿದ್ಧವಾದರು.

ಉಳಿದ ಹಬ್ಬಗಳು ಎಲ್ಲರ ಮನೆಯಂತೆಯೇ, ಆರಮನೆಯಲ್ಲಿ ನಡೆದರೂ, ವಿನಾಯಕನ ಚೌತಿಗೆ ಮಾತ್ರ ಮತ್ತಾವ ಹಬ್ಬಕ್ಕೂ ಇಲ್ಲದಷ್ಟು ಸಡಗರ.

ಚಿತ್ರದುರ್ಗ ಸಿಂಹಾಸನವನ್ನು ಮೂವತ್ತುಮೂರು ವರ್ಷಗಳ ಕಾಲ ಅವಿಚ್ಛಿನ್ನವಾಗಿ ಆಳಿ, ದುರ್ಗದ ಖ್ಯಾತಿಯನ್ನು ಹಳ್ಳಿಯಿಂದ ದಿಳ್ಳಿಯವರೆಗೂ ಹಬ್ಬಿಸಿದ ಭರಮಣ್ಣ ನಾಯಕರು, ಎಲ್ಲಾ ಮತದ ಮಠದ ಗುರುಗಳ ಬಗ್ಗೆಯೂ ತಮಗಿದ್ದ ಭಕ್ತಿಯ ದ್ಯೋತಕವಾಗಿ, ಆ ದಿನ, ಚಿತ್ರದುರ್ಗದಲ್ಲಿದ್ದ ಸಕಲ ಮಠಗಳ ಗುರುಗಳು ತಮ್ಮ ಆಶೀರ್ವಾದವೆಂದು ಅರಮನೆಗೆ ಕಜ್ಜಾಯವನ್ನು ತಂದೊಪ್ಪಿಸಬೇಕೆಂದು ಕಟ್ಟಳೆ ಮಾಡಿದ್ದರು. ಅವರ ಕಾಲದಲ್ಲಿ ಆರಂಭವಾದ ಈ ಶುಭಸಂಪ್ರದಾಯಕ್ಕೆ ಜನರ ಉತ್ಸಾಹವೂ ಬೆರೆತು. ಶ್ರೀಮಠಗಳ ಗುರುಗಳಿರಲಿ, ನಗರದ ಹಿರಿಯರೆಲ್ಲರೂ ತಮ್ಮ ಮನೆಗಳಲ್ಲಿ ಪೂಜೆ ಮುಗಿಸಿದವರೇ, ಮನೆಗೊಬ್ಬ ಮುತ್ತೈದೆ, ಹಿರಿಯರು ಬಂದು ಅರಮನೆಗೆ 'ಮಡಿಕಜ್ಜಾಯ'ದ ಕಾಣಿಕೆಸಲ್ಲಿಸಿ, ಅರಮನೆಯವರು ಮುತ್ತೈದೆಯರಿಗೆ ಕೊಡುತ್ತಿದ್ದ ಹಾಗಿನ ಹಿರಿಯರಿಗೆ ಕೊಡುತ್ತಿದ್ದ ಗಣಪತಿ ಪ್ರಸಾದವನ್ನು ಸ್ವೀಕರಿಸಿ ಹೋಗುತ್ತಿದ್ದರು. ಆ ದಿನ ಏಕನಾಥೇಶ್ವರಿಯ ಬಾಗಿಲಿನ - ಜನ ಪ್ರೀತಿಯಿಂದ ಅಜ್ಜಿಯ ಬಾಗಿಲು ಎಂದು

ಕರೆಯುತ್ತಿದ್ದುದು - ಕೋಟೆಸಾಲಿನ ಹೊರವಲಯದಲ್ಲಿದ್ದ ಸ್ವಯಂಭೂ ಸಾನಂದಗಣಪತಿಗೆ ನಡೆಯುತ್ತಿದ್ದ ವಿಶೇಷ ಪೂಜೆ, ಸಹಸ್ರಮೋದಕ ಹೋಮಗಳನ್ನು ನೋಡಿ, ಪಂಚಾಮೃತ, ಪಂಚಕಜ್ಜಾಯಗಳ ಪ್ರಸಾದವನ್ನು ಸ್ವೀಕರಿಸಲು ಸಾವಿರಾರು ಜನ ಕಿಕ್ಕಿರಿಯುತ್ತಿದ್ದರು.

ಆ ದೇವಾಲಯದ ಮುಂದಿನ ಜಾಗ ಕಿರಿದಾದುದರಿಂದ, ಕಜ್ಜಾಯದ ಕಾಣಿಕೆಯ ಸ್ವೀಕಾರ, ಮುತ್ತೈದೆಯರಿಗೆ ಗೌರಿಯ ಬಾಗಿನ ಗಣಪತಿಯ ಪ್ರಸಾದವನ್ನು ಹಂಚಲು, ತಾರಾಮಂಡಲದ ವಿಶಾಲ ಬಯಲಿನಲ್ಲಿ, ಬಹು ವಿಸ್ತಾರವಾದ ತಳಿರು, ತೋರಣ, ಬಾಳೆಯ ಕಂದು, ಬಾಳೆ ಗೊನೆ, ಅಡಿಕೆಯ ಹೂಗೊಂಚಲಿನಿಂದ, ಪಂಚಫಲಗಳ ಗೊಂಚಲುಗಳಿಂದ, ಬಗೆಬಗೆಯ ಬಣ್ಣದ ವಸ್ತ್ರದ ಸೀಳುಗಳಿಂದ ಅಲಂಕೃತವಾದ ಚಪ್ಪರವೊಂದು ನಿರ್ಮಿತವಾಗಿ, ಆ ಮಂಟಪದಲ್ಲಿ ನಿರ್ಮಿತವಾದ ವಿಶೇಷ ವೇದಿಕೆಯ ಮೇಲೆ ನವರತ್ನಾಭರಣಗಳಿಂದಲಂಕೃತವಾದ ಸ್ವರ್ಣಗೌರಿ, ಗಣಪತಿ ಮೂರ್ತಿಗಳನ್ನು ರಜತಮಂಟಪದಲ್ಲಿಟ್ಟು ಅರಮನೆಯವರು ಪೂಜಿಸಿ, ಆ ಪೂಜೆ ನೋಡಲೆಂದು, 'ಕಜ್ಜಾಯ ಕಾಣಿಕೆ'ಯೊಪ್ಪಿಸಲೆಂದು ಬಂದ ಹಿರಿಯ ಮುತ್ತೈದೆಯರಿಗೆ ಬಾಗಿನ, ಗಣ್ಯರಿಗೆ ಸಹಸ್ರಾರ್ಚನೆ ಮಾಡಿದ ರಜತ ಬಿಲ್ವದಳ ಪ್ರಸಾದವನ್ನು ಉಳಿದ ಪ್ರಸಾದಗಳೊಂದಿಗೆ ಕೊಟ್ಟು ಕಳಿಸುವುದು ವಾಡಿಕೆಯಾಗಿತ್ತು.

ಈ ವರ್ಷವೂ –

ಹೊಸ ನಾಯಕರಿಗೆ ಅರಮನೆಯಲ್ಲಿ ಮೊದಲ ಗಣಪತಿ ಹಬ್ಬ,

ಎಂತಲೇ ಉಳಿದ ವರ್ಷಗಳಿಗಿಂತ ಮಿಗಿಲಾದ ಸಂಭ್ರಮದಿಂದ ಗೌರಿ-ಗಣಪತಿಯರ ಪೂಜೆಗೆ ಸಿದ್ಧತೆಗಳಾದವು. ಓಬವ್ವನಾಗತಿಗೂ ಆ ದಿನದ ಹಬ್ಬದ ವೈಭವವನ್ನು ಕಂಡು ಹಿಗ್ಗಾದರೂ, 'ಮುತ್ತೈದೆಯರಿಗೆ ಬಾಗಿನ ಕೊಡಲು ಮನೆಯಲ್ಲೊಬ್ಬ ಸೊಸೆ ಇದ್ದಿದ್ದರೆ - ?' ಎಂಬ ಸಣ್ಣ ಕೊರಗು ಒಳಗೆ ಮಿಡಿಯುತ್ತಿತ್ತು. ಆ ಪ್ರಾರ್ಥನೆ ದೇವರಿಗೆ ಮುಟ್ಟಿತೋ ಏನೋ ಎಂಬಂತೆ. 'ಕಜ್ಜಾಯದ ಕಾಣಿಕೆ'ಯನ್ನು ಶ್ರೀಶಾರದಾಚಂದ್ರಮೌಳೇಶ್ವರರ ಪ್ರಸಾದದೊಂದಿಗೆ ಒಪ್ಪಿಸಲು ಕೂಡಲಿ-ಶೃಂಗೇರಿ ಶ್ರೀಮಠದ ಪರವಾಗಿ ಬಂದ ಶ್ರೀಶ್ರೀಗಳವರ ಸಮ್ಮುಖ ಸರ್ವಾಧಿಕಾರಿಗಳಾದ ಮಾಣಿಕ್ಯಭಟ್ಟರು. ಕಾಣಿಕೆಯೊಪ್ಪಿಸಿ, ಶ್ರೀಮಠಕ್ಕೆ ಸಲ್ಲಬೇಕಾದ ಗುರುಕಾಣಿಕೆಯನ್ನು ಹೊಸ ನಾಯಕರಿಂದಲೇ ಸ್ವೀಕರಿಸಿದ ಬಳಿಕ-

"ತಮಗೆ ಅಂತರಂಗದಲ್ಲಿ ವಿಜ್ಞಾಪಿಸಿಕೊಳ್ಳಬೇಕಾದ ಮಾತೊಂದನ್ನು ಸನ್ನಿಧಾನದವರು ಹೇಳಿಕಳಿಸಿದ್ದಾರೆ. ಯಾವಾಗ, ಯಾವ ಹೊತ್ತು ಎಂದು ಅಪ್ಪಣೆಯಾದಲ್ಲಿ ಬಂದು ಕಾಣುತ್ತೇನೆ" - ಎಂದು ಅರಿಕೆ ಮಾಡಿಕೊಂಡರು.

“ತಾವು ಶ್ರೀಶ್ರೀಗಳವರ ಸಾಕ್ಷಾತ್ ಪ್ರತಿನಿಧಿಗಳು. ತಾವೂ ಹೊತ್ತುಗೊತ್ತಿನ ಅಪ್ಪಣೆಗಾಗಿ ಕಾಯಬೇಕೆ?'' - ಎಂದರು ಓಬವ್ವನಾಗತಿ.

“ಆ ಸ್ವಾತಂತ್ರ್ಯವನ್ನೇನೋ. ತಾವು ನಮಗೆ ಕೊಟ್ಟಿದ್ದೀರಾ....ಆದರೂ ಈ ಹಬ್ಬದ ಗದ್ದಲದಲ್ಲಿ ತಮಗೆ ಸಾಕಷ್ಟು ಆಯಾಸವಾಗಿರುತ್ತದೆ. ಆದ್ದರಿಂದ....”

“ಆಯಿತು, ತಾವು ಇಲ್ಲಿಯೇ ಇರುವುದಾದರೆ, ನಾಳೆ ಮಧ್ಯಾಹ್ನ ಬನ್ನಿ, ಆ ಹೊತ್ತಾದರೆ ನಿಮ್ಮ ಆಹ್ನೀಕ-ಪೂಜೆಗಳಿಗೆ ತೊಂದರೆಯಾಗುವುದಿಲ್ಲ. ಆದರೆ ಇಷ್ಟೆ - ಇದು ನಾವೊಬ್ಬರೇ ಕೇಳಬೇಕಾದ ಮಾತೋ, ಅಥವಾ ಪ್ರಧಾನಿಗಳಿಗೂ ಹೇಳಿಕಳಿಸಬೇಕೋ ?”

“ಅವರೂ ಇದ್ದರೆ ಮತ್ತಷ್ಟು ಅನುಕೂಲವಾಗುತ್ತದೆ. ಮಾತನ್ನು ಮುಗಿಸಿಯೇ ಬಿಡಬಹುದು'' – ಎಂದರು ಮಾಣಿಕ್ಯಭಟ್ಟರು.

ಅವರು ಹಾಗೆ ಹೇಳಿದ್ದನ್ನು ಕೇಳಿ, ಏನು ಮಾತೋ ಎಂದು ಓಬವ್ವನಾಗತಿಯ ಕುತೂಹಲವೂ ಗರಿಗೆದರಿತು.

* * *

ತಾವು ಹೇಳಿದಂತೆಯೇ ಇಳಿಮಧ್ಯಾಹ್ನದ ಮೇಲೆ, ನರಸಪ್ಪಯ್ಯನವರೊಂದಿಗೆ ಕಾದು ಕುಳಿತಿದ್ದ ಓಬವ್ವನಾಗತಿಯನ್ನು ಕಾಣಲು ಬಂದರು. ಮಾಣಿಕ್ಯಭಟ್ಟರು, ಉಭಯತ್ರರೂ ಪರಸ್ಪರ ಕುಶಲವನ್ನು ವಿಚಾರಿಸಿದ್ದಾದಮೇಲೆ, ಓಬವ್ವನಾಗತಿಯೇ –

“ಗುರುಗಳು ಏನು ಸುದ್ದಿ ಕಳಿಸಿದ್ದಾರೆ ?” – ಎಂದು ಕೇಳಿದರು.

“ತಮಗೆ ತರೀಕೆರೆಯ ಸಂಸ್ಥಾನಾಧೀಶ್ವರರಾದ ಸರ್ಜಾ ಹನುಮಪ್ಪನಾಯಕರ ಪರಿಚಯ ವಿದೆಯಲ್ಲ....'' - ಆಡುವ ಮಾತಿಗೆ ಪೀಠಿಕೆ ಹಾಕಿಕೊಂಡು ಹೇಳಿದರು, ಮಾಣಿಕ್ಯಭಟ್ಟರು.

“ಗೊತ್ತೇನು - ಚೆನ್ನಾಗಿಯೇ ಗೊತ್ತಿದೆ.”

- ತರೀಕೆರೆಯವರ ಹೆಸರು ಕೇಳುತ್ತಿದ್ದ ಹಾಗೆಯೇ ಓಬವ್ವನಾಗತಿ ಕೊಂಚ ಗಡುಸಾದ ಧ್ವನಿಯಲ್ಲಿ ಹೇಳಿದರು.

ಆ ಮಾತಿನ ಧ್ವನಿಯನ್ನು ಕೇಳಿ, ಆಡುವ ಮಾತಿಗೆ ಮೊದಲೇ ಅಡ್ಡಗಾಲು ಬಿದ್ದಂತಾಗಿ ಮಾತನ್ನು ಹೇಗೆ ಮುಂದುವರಿಸುವುದು ಎಂದು, ಹೊದ್ದ ಜರಿಯ ಶಾಲನ್ನು ಸರಿಪಡಿಸಿಕೊಳ್ಳುತ್ತಾ ಯೋಚಿಸಿ, ಗಂಟಲನ್ನು ಸರಿಪಡಿಸಿಕೊಂಡು-

“ತಮಗೂ ಅವರಿಗೂ ಹಲವು ತಲೆಮಾರುಗಳ ವೈಮನಸ್ಯವಿದೆಯೆಂದು ಸನ್ನಿಧಾನದವರಿಗೂ ಗೊತ್ತು. ಆದರೂ ತಾವು ಎರಡು ಮನೆಗಳೂ ಒಂದು ಕಾಲಕ್ಕೆ

ಒಂದಾಗಿದ್ದವರು. ಹೀಗೇ ಬೇರೆಯಾಗಿ ಎಷ್ಟು ದಿನ ಇರಬೇಕು?'' – ಎಂದು ಕೇಳಿದರು, ಮಾಣಿಕ್ಯಭಟ್ಟರು.

"'ಕೂಡಿ ಕೆಡಬಾರದು, ಕೆಟ್ಟು ಕೊಡಬಾರದು' ಎಂದು ಗಾದೆಯೂ ಇದೆಯಲ್ಲ.''

"ಗಾದೆಯೇನೋ ಹಾಗುಂಟು. ಆದರೂ ಇವೊತ್ತಿನ ರಾಜಕೀಯ ಪರಿಸ್ಥಿತಿಯಲ್ಲಿ, ಎರಡು ಪ್ರಬಲ ಸಂಸ್ಥಾನಗಳೂ ಪರಸ್ಪರ ವಿರೋಧಿಗಳಾಗಿರುವುದಕ್ಕಿಂತ ಕೂಡಿ ಬಾಳಿದರೆ, ಇಬ್ಬರಿಗೂ ಲೇಸು....''

"ಅವರಿಗೆ ಹಾಗನಿಸಿದೆಯೇ?''

"ಅವರಿಗೆ ಹಾಗನಿಸಿದೆ ಎಂದು ನಂಬಿಕೆಯಾದಮೇಲೆಯೇ ಮುಂದಿನ ಮಾತಾಡಲು ಶ್ರೀಶ್ರೀಗಳವರು ನನ್ನನ್ನಿಲ್ಲಿಗೆ ಕಳಿಸಿದ್ದು....''

"ಆಯಿತು. ಮುಂದಕ್ಕೇನೋ ಅಪ್ಪಣೆಯಾಗಲಿ....'' - ಓಬವ್ವನಾಗತಿ ಕೇಳಿದರು.

"ಮೊನ್ನೆ ಆಷಾಢಮಾಸದಲ್ಲಿ, ಚತುರ್ದಶಿ, ದಕ್ಷಿಣಾಯನ ಪುಣ್ಯಕಾಲದಲ್ಲಿ, ದೇವತಾ-ಗುರುದರ್ಶನ, ಭಾಗೀರಥಿ ಪೂಜೆಗೆಂದು, ನಾಯಕರು ಶ್ರೀಶ್ರೀಗಳವರನ್ನು ನೋಡಲು ಕುಟುಂಬಪರಿವಾರಸಮೇತರಾಗಿ ಬಂದಿದ್ದರು. ಎರಡು ದಿನ ಅಲ್ಲೇ ಬಿಡಾರ ಮಾಡಿದ್ದರು. ಅವರಿಗೊಂದು ಹೆಣ್ಣು ಮಗುವಿದೆ; ಲಕ್ಕಾಂಬೆ ಎಂದು ಹೆಸರು, ಹತ್ತು ವರ್ಷ ವಯಸ್ಸಿನ ಕನ್ಯ. ಆ ಮಾತು ಈ ಮಾತು ಆಡುತ್ತಾ ಮಗಳ ಮದುವೆಯ ಮಾತು ತೆಗೆದು 'ಕನ್ಯೆಗೆ ವಯಸ್ಸಾಯಿತು. ತಕ್ಕ ಸಂಬಂಧ ನೋಡಬೇಕು. ಹರಪನಹಳ್ಳಿ, ಜರಿಮಲೆ ಕಡೆಯವರೇನೋ ಹೇಳಿಕಳಿಸಿದ್ದಾರೆ. ಆ ಸಂಬಂಧ ನಮ್ಮ ಮನಸ್ಸಿಗೆ ಬರಲಿಲ್ಲ. ಆದರೂ ಹೆಣ್ಣು ಹಡೆದವರ ದುಃಖ ನಿಮಗೆ ಗೊತ್ತಲ್ಲ. ಎಲ್ಲಿಯಾದರೂ ಒಳ್ಳೆಯ ಗಂಡು ಬರುವ ಹಾಗೆ ಆಶೀರ್ವಾದ ಮಾಡಬೇಕು' ಎಂದು ಹನುಮಪ್ಪನಾಯಕರ ಪತ್ನಿ ಗಂಗಾಂಬಿಕೆಯವರೇ ಕೇಳಿದರು. 'ಆ ಯೋಚನೆ ನಮಗೂ ಇದೆ' ಎಂದು ನಾಯಕರೂ ಹೇಳಿ, 'ಆಶೀರ್ವಾದವಾಗಬೇಕು' ಎಂದು ಶ್ರೀಶ್ರೀಗಳವರಲ್ಲಿ ಬೇಡಿದರು. ಶ್ರೀಶ್ರೀಗಳವರೂ ಆ ಕನ್ಯೆಯನ್ನು ನೋಡಿದರು. ಹೆಣ್ಣು ಬಹು ಲಕ್ಷಣವಾಗಿದೆ; ದಂತದ ಗೊಂಬೆಯ ಹಾಗೆ. ಆಕೆಯನ್ನು ನೋಡಿ ಶ್ರೀಶ್ರೀಗಳವರಿಗೆ ತಮ್ಮ ಮದಕರಿನಾಯಕರ ನೆನಪಾಯಿತು. 'ಈ ಸಂಬಂಧ ಆಗಬಹುದೇ?' ಎಂದು ಕೇಳಿದರು. ಅವರೂ ಹಳೆಯ ಮಾತು ನೆನಪಿಸಿಕೊಂಡು 'ಏನೋ ಆದದ್ದಾಯಿತು. ಈಗ ಒಳ್ಳೆಯದಾಗಬಾರದೆಂದಿಲ್ಲ. ತಮ್ಮ ಆಶೀರ್ವಾದವಿದ್ದ ಹಾಗೆ ಆಗಬಹುದು' ಎಂದರು. ಈಗ ನೀವೂ ಒಪ್ಪಿದರೆ....''

- ಎಂದು ಕ್ಷಣಕಾಲ ಮಾತು ತಡೆದು, ನಾಗತಿ, ಪ್ರಧಾನಿಗಳಿಬ್ಬರ ಮುಖವನ್ನು ನೋಡುತ್ತಾ–

"ಆದಷ್ಟು ಬೇಗ. ಎರಡು ದೊಡ್ಡ ರಾಜ್ಯ ಒಂದಾಗಬಹುದು" - ಎಂದರು ಮಾಣಿಕ್ಯಭಟ್ಟರು.

"ಹಿಂದೆ ಒಂದಾಗಿದ್ದ ನಾವು ಒಂದಾಗಿಯೇ ಇದ್ದಿದ್ದರೆ...." - ಓಬವ್ವನಾಗತಿ ಏನೋ ಹೇಳಹೋದರು.

"ಚಿಕ್ಕಣ್ಣನಾಯಕರ ಕಾಲದಲ್ಲಾದದ್ದನ್ನು ಮರೆತುಬಿಡಿ. ಇದು ನನ್ನದಲ್ಲ, ಶ್ರೀಶ್ರೀ ಗಳವರ ಮಾತು.''

"ಮರೆತರೆ ಒಳ್ಳೆಯದಾಗುತ್ತದೆ ಎಂದು ಮಹಾಸ್ವಾಮಿಗಳು ಹೇಳಿದರೆ?" – ಓಬವ್ವ ನಾಗತಿಯೇ ಕೇಳಿದರು.

"ಅವರ ಶ್ರೀಚಿತ್ತಕ್ಕೆ ಹಾಗನಿಸಿದ್ದರಿಂದಲೇ ನಮ್ಮನ್ನು ಇಷ್ಟು ದೂರ ಕಳಿಸಿದರು. ಒಳ್ಳೆಯ ಮನಸ್ಸಿನಲ್ಲಿ ತಾವೂ ಒಪ್ಪಿಕೊಳ್ಳಿ. ಲೋಕೋದ್ಧಾರ ಮಾಡಲು ಗಂಗಾ ಭಾಗೀರಥಿಯೇ ಭೂಮಿಗೆ ಬಂದ ದಿನ ಆದ ಮಾತು. ವಿನಾಯಕ ಚತುರ್ಥಿಯ ಶುಭದಿನ ಮುಂದುವರಿದಿದೆ....."

"ಹೆಣ್ಣು ಹಡೆದವರೇ ನಮ್ಮನ್ನೊಂದು ಮಾತು ಕೇಳಬಹುದಾಗಿತ್ತಲ್ಲ....''

"ಅವರಿಗಿಂತ ಹೆಚ್ಚಾಗಿ, ಶ್ರೀಶ್ರೀಗಳವರೇ ಅವರ ಪರವಾಗಿ ನಮ್ಮನ್ನು ಕಳಿಸಿದ್ದಾರಲ್ಲ. ಮಾಮೂಲು ಸಂಪ್ರದಾಯದ ಮಾತು ಮರೆತುಬಿಡಿ. ಶ್ರೀಶ್ರೀಗಳವರ ಆಶೀರ್ವಾದದಲ್ಲಿ ತಮಗೆ ಅಷ್ಟು ನಂಬಿಕೆಯಿಲ್ಲವೇ?"

"ಶಿವ...ಶಿವಾ....ಹಾಗಂದರೆ ತಲೆದಂಡ ಕೊಡಬೇಕಾದೀತು.''

-ಎರಡೂ ಕೈಗಳಿಂದ ಕೆನ್ನೆಗಳನ್ನು ತಟ್ಟಿಕೊಂಡು ಹೇಳಿದರು. ಓಬವ್ವನಾಗತಿ –

"ಮಹಾಸ್ವಾಮಿಗಳವರು ನಮ್ಮ ಪಾಲಿಗೆ ಪ್ರತ್ಯಕ್ಷ ಪರಮೇಶ್ವರರಿದ್ದ ಹಾಗೆ. ಅವರ ಮಾತಿಗೆ ಎಂದೂ ತಾವು ಅಡ್ಡ ಮಾತು ಹೇಳಿಲ್ಲ. ಅವರ ಮಾತು ದೇವವಾಣಿ.''

"ಹಾಗಿದ್ದರೆ ಈ ಸಂಬಂಧ ತಮಗೆ ಒಪ್ಪಿಗೆಯಾಯಿತು ಎಂದು ಸನ್ನಿಧಾನಕ್ಕೆ ಹೇಳಲೇ? ಒಳ್ಳೆಯ ಮನಸ್ಸಿನಲ್ಲಿ ಹೆಣ್ಣು ತಂದುಕೊಳ್ಳಿ. ಹೆಸರು ಲಕ್ಷ್ಮಿ: ರೂಪೂ ಹಾಗೆ : ಅರಮನೆಗೆ ವರಲಕ್ಷ್ಮಿ. ಜಯಲಕ್ಷ್ಮಿ ಒಲಿದು ಬರಲಿ.''

"ಮಹಾಸ್ವಾಮಿಗಳ ಮಾತು ಎಂದು ತಾವಾಡಿದಮೇಲೆ ನಾವು ಬದಲು ಹೇಳುವುದು ಏನಿದೆ? ಗುರುಚಿತ್ತದಲ್ಲಿ ಇದ್ದಂತಾಗಲಿ" - ಎಂದರು ಓಬವ್ವನಾಗತಿ ಮುಗಿಲತ್ತ ಕೈಜೋಡಿಸಿ ಮುಗಿದು.

"ಆಯಿತು. ಶುಭಸ್ಯ ಶೀಘ್ರಂ. ಸನ್ನಿಧಾನಕ್ಕೆ ತಮ್ಮ ಒಪ್ಪಿಗೆಯನ್ನು ತಿಳಿಸುತ್ತೇನೆ. ಮುಂದಿನ ಕೊಡ-ತರುವ ಮಾತನ್ನು ಇಬ್ಬರ ಕಡೆಯ ಹಿರಿಯರೂ ಆಡಿಕೊಳ್ಳಿ. ನನಗೆ ಅಪ್ಪಣೆಯಾದರೆ ನಾನಿನ್ನು ಬರುತ್ತೇನೆ'' - ಎಂದರು ಮಾಣಿಕ್ಯಭಟ್ಟರು.

"ಶ್ರೀಮಠಕ್ಕೆ ತಮ್ಮ ಪ್ರಯಾಣವೆಂದು? ಹೋಗುವ ಮುನ್ನ ದಯಮಾಡಿಸಿ, ಮಹಾಸ್ವಾಮಿಗಳವರಿಗೆ ನಮ್ಮ ಬಡಕಾಣಿಕೆಯನ್ನೊಯ್ದು ಮುಟ್ಟಿಸಬೇಕು."

"ಅಗತ್ಯವಾಗಿ, ಹೋಗುವ ಮುನ್ನ ಮತ್ತೆ ಬರುತ್ತೇನೆ"

- ಎಂದು ಹೇಳಿ. ಓಬವ್ವನಾಗತಿ ಪರಿಚಾರಿಕೆಯಿಂದ ತರಿಸಿಕೊಟ್ಟ ಫಲತಾಂಬೂಲದೊಂದಿಗೆ ಅವರಿಬ್ಬರ ನಮಸ್ಕಾರಗಳನ್ನು ಸ್ವೀಕರಿಸಿ. ಆಶೀರ್ವಾದ ಮಾಡಿ ಹೋದರು, ಮಾಣಿಕ್ಯಭಟ್ಟರು.

ಅವರು ಹೋದ ಬಳಿಕ. ಅದುವರೆಗೂ ಒಂದೂ ಮಾತಾಡದೆ ಕುಳಿತಿದ್ದ ನರಸಪ್ಪಯ್ಯನವರತ್ತ ತಿರುಗಿ –

"ತಾವೇಕೆ ಒಂದೂ ಮಾತಾಡಲಿಲ್ಲ?" – ಎಂದು ಕೇಳಿದರು, ಓಬವ್ವನಾಗತಿ.

"ಗುರ್ವಾಜ್ಞೆ ಎಂದು ಬ್ರಹ್ಮದಂಡವನ್ನು ಅಡ್ಡವಿಟ್ಟುಬಿಟ್ಟರಲ್ಲ, ಮಾಣಿಕ್ಯಭಟ್ಟರು. ಅದರ ಮೇಲೆ ನಾವು ಮಾತನಾಡುವುದೇನಿದೆ?'' - ಎಂದರು ನರಸಪ್ಪಯ್ಯ.

"ಹಾಗೆಂದರೆ - ತಾವೇನೋ ಮಾತಾಡಬೇಕಿತ್ತು ಎಂದಾಯಿತು. ಯೋಚಿಸಬೇಕಾದ ಮಾತೇ? ತಾಂಬೂಲ ತರಿಸಲೆ?" – ಎಂದು ಕೇಳಿದರು, ಓಬವ್ವನಾಗತಿ.

"ತಾಂಬೂಲವೇನೋ ಬೇಕು: ಆದರೆ ತಂಬಾಕಿಲ್ಲದೆ ಅದು ರುಚಿಸುವುದಿಲ್ಲ. ನನ್ನ ತಾಂಬೂಲದ ರುಚಿ ಸಂನ್ಯಾಸಿಯ ಲಂಗೋಟಿಸಂಸಾರವಿದ್ದಂತೆ. ಅದಕ್ಕೇ ಅರಮನೆಗೆ ಬರುವ ಮೊದಲೇ ಆಷ್ಟು ಜಗಿದು ಬಂದಿದ್ದೇನೆ."

ಪ್ರಧಾನಿ ನರಸಪ್ಪಯ್ಯನವರ 'ತಾಂಬೂಲದ ದರ್ಬಾರ'ನ್ನು ಕಣ್ಣಿನಿಂದ ನೋಡದಿದ್ದರೂ ಅದರ ಬಗ್ಗೆ ಓಬವ್ವನಾಗತಿ ಕೇಳಿದ್ದರು. ಅವರು ವೀಳ್ಯ ಹಾಕಿಕೊಳ್ಳಬೇಕೆಂದರೆ ವೀಳ್ಯ ಮಡಿಸಿಕೊಡಲು ಒಬ್ಬ, ತಂಬಾಕು ತೀಡಿಕೊಡಲು ಮತ್ತೊಬ್ಬ: ಮೂರನೆಯವನೊಬ್ಬ ಪೀಕದಾನಿಯನ್ನು ಹಿಡಿದು ನಿಂತಿರಬೇಕು. ಅದು ನೆನಪಾಗಿ ಮೆಲುನಗೆ ನಕ್ಕು –

"ಆಯಿತು. ಈಗ ನಿಮ್ಮ ಮನಸ್ಸಿನಲ್ಲಿರುವುದೇನು ಹೇಳಿ?" – ಎಂದು ಕೇಳಿದರು, ಓಬವ್ವನಾಗತಿ.

"ಆದದ್ದೆಲ್ಲಾ ಒಳಿತೇ ಆಯಿತು. ಆದರೂ ತಾವು ಒಪ್ಪಿಗೆ ಕೊಡುವ ಮೊದಲು ಶ್ರೀಮುರುಗಿ ಮಠದ ಮಹಾಸ್ವಾಮಿಗಳ ಕಿವಿಗೂ ಈ ಸುದ್ದಿ ಹಾಕಿ. ಆಗಬಹುದು ಎನ್ನಬಹುದಿತ್ತು."

“ಏಕೆ? ಅವರಿಗೆ ಆ ಸಂಬಂಧ ಇಷ್ಟವಿಲ್ಲವೇ?” – ಚಕಿತರಾಗಿ ಕೇಳಿದರು, ನಾಗತಿ.

“ಹಾಗಲ್ಲ. ನಾವು ಹೇಳಿದ್ದರೆ ಅವರು ಬೇಡವೆನ್ನುತ್ತಿರಲೂ ಇಲ್ಲ.”

“ಮತ್ತೆ?”

“ಹಿಂದೆ ಪಟ್ಟಕ್ಕೆ ತರುವ ಮಾತು ಬಂದಾಗ, ಅವರ ಮಾತು ಹಿರಿಯ ನಾಯಕರು ತಮ್ಮ ಸ್ವಪ್ನದಲ್ಲಿ ಬಂದಾಡಿದ ಮಾತಿನಿಂದ ನಡೆಯಲಿಲ್ಲ. ಈ ಮಾತು ಜನದ ಕಿವಿಗೆ ಬಿದ್ದಿದೆ.”

“ಹೇಗೆ ಬಿತ್ತು ? ಅದು ಯಾರಿಗೂ ತಿಳಿಯಬಾರದೆಂದು ಕಟ್ಟಳೆಯಾಗಿತ್ತಲ್ಲ.”

“ಆದರೂ ಜನದ ಕಿವಿಗೆ ಬಿದ್ದಿದೆ. ಈಗ ನಾಯಕರಿಗೆ ಹೆಣ್ಣು ತಂದುಕೊಳ್ಳುವ ವಿಷಯ ಎಂದರೆ ಈ ರಾಜ್ಯಕ್ಕೆ ನಾಗತಿಯವರನ್ನು ತಂದಂತೆ. ಎಷ್ಟಾದರೂ ಶ್ರೀಮಂತರಿಗೆ ಸ್ವಾಮಿಗಳು ರಾಜಗುರುಗಳು. ಮಾತು ಮುಗಿಸಿ 'ಅಸ್ತು' ಎನ್ನಿ ಎಂದು ಕೇಳುವ ಮುನ್ನವೇ ದೊಡ್ಡವರನ್ನು ಒಂದು ಮಾತು ಕೇಳಬಹುದಾಗಿತ್ತು....”

“ನಿಜ....ನಿಜ....ಹೆಂಗಸಿನ ಬುದ್ಧಿ ಮೊಳಕಾಲ ಕೆಳಗೆ ಎನ್ನುವುದು ಇದಕ್ಕೇ. ಈಗೇನು ಮಾಡುವುದು?”

- ಬಿಸಿ ತುಪ್ಪ ನಾಲಗೆಯ ಮೇಲಿದ್ದವಳಂತೆ ಪಶ್ಚಾತ್ತಾಪಪಡುತ್ತಾ ಕೇಳಿದರು. ಓಬವ್ವನಾಗತಿ.

“ಈಗ ಆದದ್ದು ಆಗಿಹೋಯಿತು. ತಾವು ತಪ್ಪುತಿಳಿದುಕೊಳ್ಳದಿದ್ದಲ್ಲಿ....”

“ಇಲ್ಲ – ಏನು ಹೇಳಿ ?”

“ಈ ಮದುವೆಯ ಮಾತು ಊರಿಗೆ ತಿಳಿಯುವ ಮೊದಲು, ತಾವೇ ಎರಡು ಹೆಜ್ಜೆ ಶ್ರೀಮಠಕ್ಕೆ ಹೋಗಿ ಆದ ವಿಷಯ ತಿಳಿಸಿಬಂದರೆ, ಶ್ರೀಗಳವರಿಗೂ ಸಂತೋಷವಾಗುತ್ತದೆ. ನೀವು ಹೋದ ಸಂತೋಷದಲ್ಲಿ ಮೊದಲು ಕೇಳಲಿಲ್ಲವೆಂಬ ಬೇಸರವಿದ್ದರೆ ಹೋಗುತ್ತದೆ. ತಾವು ಅವರ ಅಪ್ಪಣೆ ಪಡೆದು ಬರುವವರೆಗೂ ಈ ಮಾತು ಹೊರಗಾಡದಂತೆ ಮಾಣಿಕ್ಯಭಟ್ಟರಿಗೆ ನಾನು ಹೇಳಿಕಳಿಸುತ್ತೇನೆ” - ಎಂದರು ನರಸಪ್ಪಯ್ಯ.

“ಅಷ್ಟಾದರೆ ಸಾಕಲ್ಲ. ಬರೀ ಹೋಗುವುದೇನು - ಅಡ್ಡ ಬಿದ್ದು ಕೇಳಿಬರುತ್ತೇನೆ....ಅಂತೂ ಈ ಮಾತು ನಡೆದಾಗ ನೀವಿಲ್ಲಿದ್ದದ್ದು ಉಪಕಾರವಾಯಿತು” - ಎಂದರು ಓಬವ್ವನಾಗತಿ ಕೃತಜ್ಞತೆ ತುಂಬಿದ ಧ್ವನಿಯಲ್ಲಿ.

“ಉಪಕಾರವೇನು ಬಂತು. ನಾನು ಅರಮನೆಯ ಉಪ್ಪು ಉಣ್ಣುತ್ತಿರುವುದೇ ತಿಳಿದ ಮಾತು ಹೇಳಲು. ತಾವು ನಾನು ಹೇಳಿದಷ್ಟು ಮಾಡಿ. ನಾನು ಬೇಗ ಹೋಗಿ, ಮಾಣಿಕ್ಯಭಟ್ಟರಿಗೆ

ತಾಕೀತು ಮಾಡಿಸುತ್ತೇನೆ. ಬ್ರಾಹ್ಮಣರಿಗೆ ಬಾಯಿ ದೊಡ್ಡದು. ಕೂಡಲೇ ಹೇಳದಿದ್ದರೆ ಊರೆಲ್ಲಾ ಸುದ್ದಿ ಹರಡಿಬಿಟ್ಟಾರು. ನನಗಿನ್ನು ಅಪ್ಪಣೆಕೊಡಿ" - ಎಂದರು ನರಸಪ್ಪಯ್ಯ, ಕೈಮುಗಿದು.

"ಬ್ರಾಹ್ಮಣರ ಬಾಯಿ ದೊಡ್ಡದು ಎಂದಿರಿ. ನೀವೂ ಬ್ರಾಹ್ಮಣರಲ್ಲವೇ?"

"ಅಲ್ಲದೆ ಏನು? ಆದರೆ ನನ್ನನ್ನು ತುಂಡುನಾಲಗೆ ಮಾಡಿ ಹಡೆದಿದ್ದಾಳೆ, ನನ್ನ ತಾಯಿ. ಅದಕ್ಕೇ ಪ್ರಧಾನಿಯಾದೆ"

- ಎಂದು ನಗುತ್ತಾ ಹೇಳಿ ಮತ್ತೊಮ್ಮೆ ನಾಗತಿಗೆ ಕೈಮುಗಿದು ಹೋದರು ನರಸಪ್ಪಯ್ಯ

೧೬

ನರಸಪ್ಪಯ್ಯನವರಾಡಿದ ಎಚ್ಚರಿಕೆಯ ಮಾತು ಓಬವ್ವನಾಗತಿಯ ಚಿತ್ತದಾಳವನ್ನು ಕಲಕಿ ಬಗೆಬಗೆಯ ಚಿಂತಾತರಂಗಗಳನ್ನು ಮೂಡಿಸಿತು.

ಶ್ರೀಮುರುಗಿ ಮಠದ ರಾಜಗುರುಗಳನ್ನು ತಾನೊಂದು ಮಾತು ಕೇಳದೆ, ಹೊಸನಾಯಕರ ಮದುವೆಯ ಮಾತಿಗೆ ಒಪ್ಪಿಗೆ ಕೊಟ್ಟದ್ದು, ತನಗೆ ತಿಳಿದಷ್ಟು ದೂರ, ಅರಮನೆ-ಗುರು ಪೀಠಗಳ ನಡುವಣ ಬಾಂಧವ್ಯವನ್ನು ಚಿಂತಿಸಲು ಕಾರಣವಾಯಿತು.

ಬಿಳಿಜೋಡು ಅರಸುವಂಶದ ಮೊದಲ ದುರ್ಗದ ದೊರೆ ಬಿಚ್ಚುಗತ್ತಿ ಭರಮಣ್ಣನಾಯಕರು ಶ್ರೀಮುರುಗಿ ರಾಜೇಂದ್ರ ಮಹಾಸ್ವಾಮಿಗಳ ಕರುಣೆಯ ಕಂದ. ಅವರ ಆಶೀರ್ವಾದ ಫಲವಾಗಿಯೇ, ಭರಮಣ್ಣನಾಯಕರಿಗೆ ಚಿತ್ರದುರ್ಗದ ಸಿಂಹಾಸನಾಧಿಕಾರ ಪ್ರಾಪ್ತವಾಗಿತ್ತು. ಆ ಅನುಗ್ರಹವನ್ನು, ಆಶೀರ್ವಾದಮಾಡಿದ ಗುರುಗಳಿಗೆ 'ಕೂತ ಪಟ್ಟ ನಿಮ್ಮದು. ನಿಂತ ಪಟ್ಟ ನಮ್ಮದು' ಎಂಬ ವಚನವನ್ನು ಕೊಟ್ಟ ಭರಮಣ್ಣನಾಯಕರು ಎಂದೂ ಮರೆಯಲಿಲ್ಲ. ಆ ಗುರುಗಳಿಗಾಗಿ ಸಂಪಿಗೆ ಸಿದ್ಧೇಶ್ವರನ ದೇವಾಲಯದ ಬಳಿ ಅರವತ್ತು ಅಂಕಣದ ಕಲ್ಲು ಮಠವನ್ನು ಕಟ್ಟಿಸಿಕೊಟ್ಟು. ದುರ್ಗಕ್ಕೆ ದೊರೆ ಬೇರೆಯಲ್ಲ. ಗುರುಗಳು ಬೇರೆಯಲ್ಲ ಎಂಬಂತೆ ಬಾಳಿದರು. ಆ ಗುರುಗಳು ಸಶರೀರರಾಗಿ, ಯೋಗಸಮಾಧಿಯನ್ನು ಸೇರಲು, ಅವರೇ ಗುರುಪೀಠಕ್ಕೆ ಕರ್ತರೆಂದು ನೇಮಿಸಿದ ಇಮ್ಮಡಿ ಮುರುಗಿ ರಾಜೇಂದ್ರಸ್ವಾಮಿಗಳಲ್ಲಿಯೂ ಅದೇ ಭಕ್ತಿಭಾವದಿಂದ ನಡೆದುಕೊಂಡು, ಸ್ವಭಾನು ಸಂವತ್ಸರದಲ್ಲಿ ದುರ್ಗದಲ್ಲಿ ಮದ್ದಿನ ಮನೆಯಲ್ಲಿ ಇಲಿಗಳು ತಿರುತಿರುಗಿ ಸತ್ತು, ಜನರ ತೊಡೆ, ಕಂಕುಳ ಸಂದಿಯಲ್ಲಿ ಗಡ್ಡೆ ಕಾಣಿಸಿಕೊಂಡು, ಆ ಗುಳ್ಳೆ ರೋಗದಿಂದ ಜನ ಹುಳ-ಹುಪ್ಪಟೆಗಳಂತೆ ಸತ್ತು, ದುರ್ಗದ ಕೋಟೆ ಬಾಗಿಲಿಗೆ ಮುಳ್ಳುಬೇಲಿ ಬಿಗಿಸಿ, ಅರಮನೆಯ ಜನರೊಂದಿಗೆ ಊರವರೆಲ್ಲಾ ಹೊರಗೆ ಹೋಗಿ ಬಿಡಾರಗಳನ್ನು ಕಟ್ಟಿಕೊಂಡು

ವಾಸಮಾಡಿದಾಗ, ಚೌಡಿಯ ಕೊತ್ತಲಿನಲ್ಲಿದ್ದ ಅರಮನೆಯನ್ನೇ ಗುರುಮನೆಯಾಗಿ ಬಿಟ್ಟುಕೊಟ್ಟು 'ಇನ್ನಿಂಥ ಶಿಷ್ಯರಿಲ್ಲ' ಎಂಬ ಗುರುಕೃಪೆಗೆ ಪಾತ್ರರಾದರು. ಅಂದಿನಿಂದ ಬೃಹನ್ಮಠ ಕೆಳದುರ್ಗದ ಬೃಹನ್ಮಠದಲ್ಲಿ ಪೀಠ ಸ್ಥಾಪಿಸಿತು. ಭರಮಣ್ಣನಾಯಕರು ಜೀವಂತರಾಗಿರುವವರೆಗೂ, ಎಲ್ಲಾ ಮಠದ ಗುರುಗಳನ್ನು ಸಮಾನಭಾವದಿಂದ ಪೂಜಿಸಿದರೂ ಬೃಹನ್ಮಠ ಮಾತ್ರ ರಾಜಗುರುಪೀಠವಾಗಿಯೇ ಉಳಿಯಿತು.

ಭರಮಣ್ಣನಾಯಕರು ಕೈಲಾಸವಾಸಿಗಳಾದ ಬಳಿಕ, ತನ್ನ ಪತಿ ಹಿರಿಯ ಮದಕರಿ ನಾಯಕರ ಕಾಲದಲ್ಲಿ, ಇಮ್ಮಡಿ ಮುರುಗಿ ಸ್ವಾಮಿಗಳು ಶಿವಪಾದ ಸೇರಿ, ಶ್ರೀಶ್ರೀ ಗುರುಪಾದ ದೇಶಿಕೇಂದ್ರ ಮಹಾಸ್ವಾಮಿಗಳು ಶಿಖಾ-ಶೈಲಿಗಳನ್ನು ಧರಿಸಿ ರಾಜಗುರುಪೀಠವೇರಿದ ಕಾಲದಲ್ಲಿ, ಹಿರಿಯ ಮದಕರಿನಾಯಕರು ಶ್ರೀ ಕೂಡಲೀ-ಶೃಂಗೇರಿಮಠದ ಶ್ರೀಶಾರದಾ ಪೀಠಾಧೀಶ್ವರರಾದ ಶ್ರೀಶ್ರೀಶಂಕರಭಾರತಿ ಸ್ವಾಮಿಗಳಿಂದ ಶ್ರೀಶಿವಪಂಚಾಕ್ಷರಿ ಮಂತ್ರೋಪದೇಶ ಪಡೆದು, ಶ್ರೀಚಂದ್ರಮೌಳೀಶ್ವರರ ಅವಿಚ್ಛಿನ್ನ ಭಕ್ತರಾದ ಕಾಲದಲ್ಲಿ ಬೃಹನ್ಮಠದ ಗುರುಗಳಿಗೆ ಅರಮನೆಯಿಂದ ಸಲ್ಲುತ್ತಿದ್ದ ರಾಜಮರ್ಯಾದೆಯಲ್ಲಿ ಎಳ್ಳಷ್ಟೂ ಆಪೋಹ ಬರದಿದ್ದರೂ, ಗುರು-ದೊರೆಗಳ ನಡುವೆ ಮೊದಲಿನ ಏಕಭಾವ ತಗ್ಗಿತು.

ನಂತರ ತನ್ನ ಪುತ್ರ ಕಸ್ತೂರಿ ರಂಗಪ್ಪನಾಯಕರು ಆಳಿದ್ದೇ ಆರು ವರ್ಷಕಾಲ.

ಅವರಾದ ಬಳಿಕ, ಮುಂದಿನ ಪಟ್ಟಕ್ಕೆ ನಾಯಕರನ್ನು ಆರಿಸುವ ಕಾಲದಲ್ಲಾದ ಮಾತಿನಲ್ಲಿ, ರಾಜಗುರುಗಳ ಮಾತನ್ನು ಪಕ್ಕಕ್ಕೆ ಸರಿಸುವ ಉದ್ದೇಶವಿಲ್ಲವಾದರೂ, ತನಗಾದ ಕನಸಿನ ನಿಮಿತ್ತದಿಂದಾಗಿ ಅವರಾಡಿದ ಮಾತಿಗೆ, ಮಾಡಿದ ಆಯ್ಕೆಗೆ ಪುರಸ್ಕಾರ ದೊರೆಯಲಿಲ್ಲ.

ಆದರೂ ರಾಜಗುರುಗಳು ಮಾತ್ರ ತಮ್ಮೊಂದಿಗೆ ಎಂದಿನಂತೆಯೇ ವಿಶ್ವಾಸದಿಂದ ನಡೆದುಕೊಂಡಿದ್ದರು. ಆ ಪ್ರಸನ್ನತೆಯ ಹಿಂದೆ, ಶ್ರೀಶ್ರೀಗಳವರಿಗಾಗಲಿ, ಆ ಪೀಠದ ಶಿಷ್ಯಕೋಟಿಗಾಗಲಿ ಅಸಮಾಧಾನವಡಗಿತ್ತೆ? ಆ ಬಗ್ಗೆ ಪ್ರಧಾನಿಗಳು ಕೇಳಿದ ಕರ್ಣಾಕರ್ಣಿಕೆಯ ಮಾತಿನಲ್ಲಿ ಸತ್ಯವಿರಬಹುದೆ ?

ಈಗ ತಾನು ಅವರನ್ನೊಂದು ಮಾತು ಕೇಳುತ್ತೇನೆಂಬ ವಾಡಿಕೆಯ ಸೌಜನ್ಯವನ್ನೂ ಬಿಟ್ಟು ತರೀಕೆರೆಯ ಪಾಳೆಯಗಾರರ ಮಗಳನ್ನು ತಂದುಕೊಳ್ಳಲು ಮಾತುಕೊಟ್ಟದ್ದು ದುಡುಕಾಯಿತೆ?

ತನ್ನಿಂದ ಈ ಮಾತು ಕೇಳಿ ರಾಜಗುರುಗಳು ಏನೆನ್ನಬಹುದು ? – ಎಂದು ಆಳುಕುತ್ತಲೇ, ಮೇನೆಯ ಮೆತ್ತನೆಯ ಆಸನದ ಮೇಲೂ ಮುಳ್ಳಿನ ಮೇಲೆ ಕುಳಿತವರಂತೆ ಮಿಡುಕುತ್ತಾ, ರಾಜಗುರುಗಳ ದರ್ಶನಕ್ಕೆ ಹೋದರು, ಓಬವ್ವನಾಗತಿ.

ನಾಗತಿಯವರು ಶ್ರೀಶ್ರೀಗಳವರ ದರ್ಶನಕ್ಕೆ ಬರುತ್ತಾರೆಂಬ ಸುದ್ದಿಯನ್ನು ಮೊದಲೇ ತಿಳಿದ ಮಠದ ಹಿರಿಯರು, ಮಠದ ಮುಂಬಾಗಿಲಿನಲ್ಲಿಯೇ ಉಚಿತರೀತಿಯಲ್ಲಿ ಸ್ವಾಗತಿಸಿ, ಆಕೆಯನ್ನು ಮೇಲುಪ್ಪರಿಗೆಯಲ್ಲಿ ಆಕೆಗಾಗಿ ಕಾಯುತ್ತಾ ಕುಳಿತಿದ್ದ ಗುರುಗಳ ದರ್ಶನಕ್ಕಾಗಿ ಕರೆದೊಯ್ದರು.

ರಜತಪೀಠದಲ್ಲಿ ಪ್ರಸನ್ನಭಾವದಿಂದ ಮಂಡಿಸಿದ್ದ ಶ್ರೀಶ್ರೀಗಳವರ ಸನ್ನಿಧಾನದಲ್ಲಿ, ಅರಮನೆಯಿಂದ ತಂದಿದ್ದ ಕಾಣಿಕೆಗಳನ್ನು ಅರ್ಪಿಸಿ, ಪಾದುಕೆಗಳನ್ನು ಮುಟ್ಟಿ ನಮಸ್ಕರಿಸಿದ ಓಬವ್ವನಾಗತಿಯವರು ಆಶೀರ್ವಾದ ಪಡೆದು, ಗುರುಗಳು ತೋರಿಸಿದೆಡೆಯಲ್ಲಿ ಕುಳಿತು, ಕುಶಲಪ್ರಶ್ನೆಗಳಾದ ಬಳಿಕ –

“ತಮ್ಮಲ್ಲಿ ಏಕಾಂತದಲ್ಲಾಡಬೇಕಾದ ಮಾತೊಂದಿದೆ” -ಎಂದು ಬಿನ್ನವಿಸಿಕೊಂಡರು.

ನಾಗತಿಯವರ ಮಾತಿನ ಭಾವವನ್ನರಿತ ಗುರುಗಳು ತಮ್ಮ ಪರಿವಾರದವರನ್ನೆಲ್ಲ ದೂರ ಹೋಗಲು ಸನ್ನೆ ಮಾಡಿದ ಬಳಿಕ. ನಾಗತಿ ಹಾಗೆಯೇ ರಾಜಪೀಠದಲ್ಲಿ ಕುಳಿತ ತಪೋಮೂರ್ತಿಯನ್ನು ನೋಡಿದರು. ಅವರ ಮುಖದ ಮೇಲಿದ್ದ ಪ್ರಸನ್ನಭಾವ, ಓಬವ್ವನಾಗತಿಗೆ ಮುಂದಿನ ಮಾತಾಡಲು ಧೈರ್ಯ ನೀಡಿತು. ಆ ಧೈರ್ಯವನ್ನವಲಂಬಿಸಿ –

“ಅರಿತೋ ಅರಿಯದೆಯೋ ಸನ್ನಿಧಾನದಲ್ಲಿ ನಮ್ಮಿಂದ ಕೆಲವು ಅಪಚಾರಗಳಾಗಿರಬಹುದು'' -ಎಂದರು.

“ಅರಿತು ಮಾಡಿದ್ದು ಪಾಪ; ಮರೆತು ಮಾಡಿದ್ದು ಮನುಷ್ಯ ಸ್ವಭಾವ. ಆ ಚಿಂತೆ ತಮಗೆ ಬೇಡ. ನಮಗೆ ತಿಳಿದಂತೆ ತಮ್ಮಿಂದ ಯಾವ ಅಪಚಾರವೂ ಆಗಿಲ್ಲ. ಆಗಿದ್ದರೆ 'ಇಂಥ ತಪ್ಪಾಯಿತು. ತಿದ್ದಿಕೊಳ್ಳಿ' ಎಂದು ಹೇಳುವಷ್ಟು ಗೌರವವನ್ನು ತಾವು ಸದಾ ನಮ್ಮಲ್ಲಿ ತೋರಿದ್ದೀರ. ಹಾಗಿರುವಾಗ ಆ ಮಾತೇಕೆ? ಇಷ್ಟು ದೂರ ದಣಿದು ಬಂದದ್ದೇಕೆ ಹೇಳಿ?” ಎಂದು ಕೇಳಿದರು ಶ್ರೀಗುರುಪಾದ ದೇಶಿಕೇಂದ್ರ ಮಹಾಸ್ವಾಮಿಗಳು.

“ತಾಯಿಗೆ ಮಕ್ಕಳು ಮಾಡಿದ ತಪ್ಪು ಕಾಣುವುದಿಲ್ಲ. ನಮ್ಮಲ್ಲಿಷ್ಟು ಪ್ರೇಮವನ್ನು ತಾವು ಯಾವಾಗಲೂ ತೋರಿದ್ದೀರ. ಆದರೆ ನಾವು ತುಳಿದ ಮುಳ್ಳು ನಮ್ಮ ಕಾಲನ್ನು ಚುಚ್ಚುತ್ತಲೇ ಇರುತ್ತದೆಯಲ್ಲಾ.....”

“ಅಂದರೆ - ನಿಮ್ಮ ಮನಸ್ಸಿನ ಅಳುಕು ನಿವಾರಿಸಿಕೊಳ್ಳಲು ಬಂದಿದ್ದೀರ....ಅದೇನೋ ಹೇಳಿ. ನಿಮ್ಮ ಮನಸ್ಸಿನ ಆತಂಕವೇನಿದೆಯೋ ಹೇಳಿ ತೀರಿಸಿಕೊಳ್ಳಿ.”

“ಹೊಸ ನಾಯಕರನ್ನು ಪಟ್ಟಕ್ಕೆ ತರುವಾಗ, ತಮ್ಮ ಅಪ್ಪಣೆಯನ್ನು ಪಾಲಿಸುವುದು ನಮ್ಮಿಂದ ಆಗಲಿಲ್ಲ. ಕನಸಿನಲ್ಲಿ ಹಿರಿಯರಾಡಿದ ಮಾತಿಗೆ ಕಟ್ಟು ಬಿದ್ದೆವು.”

"ಅಪ್ಪಾ, ಹೆಣ್ಣಿಗೆ ಪತಿಯೇ ಶಿವಸ್ವರೂಪ. ಆತನ ಆಜ್ಞೆಯಂತೆ ನಡೆದ ಸಾಧ್ವಿಯರಲ್ಲಿ ತಪ್ಪೆಣಿಸುವುದು ಈ ಪೀಠಕ್ಕೆ ತಕ್ಕ ಮಾತಲ್ಲ. ನೀವು ಮಾಡಿದುದು ತಪ್ಪಾಗಿದ್ದರೆ, ಹಾಗೆಂದು ಆಗಲೇ ಹೇಳುತ್ತಿದ್ದೆವು. 'ನ್ಯಾಯನಿಷ್ಠುರಿ ದಾಕ್ಷಿಣ್ಯಪರ ನಾನಲ್ಲವಯ್ಯ' ಎಂಬ ಮಾತು ನಮಗೆ ದಾರಿದೀಪ. ಆದ್ದರಿಂದ ನಾವು ನಿಮ್ಮ ಮಾತಿಗೆ ಒಪ್ಪಿದುದು. ಮುಖಮರ್ಯಾದೆಗೆ ಕಟ್ಟುಬಿದ್ದ ನಡತೆ ಎಂದು ಭಾವಿಸಬಾರದು. ಹಾಗೆಂದುಕೊಂಡರೆ ಮಾತ್ರ ಅಪಚಾರವಾದೀತು. ಈ ವಿಷಯದಲ್ಲಿ ನಮಗೇನೂ ಅಸಮಾಧಾನವಿಲ್ಲ."

"ಹಾಗೆಂದು ನನ್ನನ್ನು ಬದುಕಿಸಿದಿರಿ. ಆದರೂ ಜನ ಆ ವಿಷಯದಲ್ಲಿ ಬೇರೇನೋ ಆಡಿಕೊಳ್ಳುತ್ತಿದ್ದಾರೆ ಎಂದು ಕಿವಿಗೆ ಬಿತ್ತು......"

"ಪಿಸುಣರ ಮಾತಿಗೆ ಅಂಜುವುದು. ಅಳುಕುವುದು ತರವಲ್ಲ, ತಾಯಿ. 'ಆನೆಯ ಮೇಲೆ ಹೋಹವರ ಶ್ವಾನ ಕಚ್ಚಬಲ್ಲುದೇ?' ಆ ಮಾತು ಬಿಡಿ. ಬಂದ ಕಾರಣವೇನು ಹೇಳಿ, ತಾಯಿ."

"ಈಗಲೂ ಅಂಥದೇ ಸಂದರ್ಭ ಒದಗಿಬಂತು. ಕೂಡಲಿ-ಶೃಂಗೇರಿಯ ಶ್ರೀಶ್ರೀಗಳವರು 'ತರೀಕೆರೆ ಪಾಳೆಯಗಾರರ ಮಗಳನ್ನು ನಿಮ್ಮ ಮನೆಯ ಸೊಸೆಯಾಗಿ ಮಾಡಿಕೊಳ್ಳಿ' ಎಂದು ಹೇಳಿಕಳಿಸಿದರು....."

"ಒಳ್ಳೆಯ ಸುದ್ದಿ ಹೇಳಿದಿರಿ. ಶುಭಮಸ್ತು."- ಹಿಂದೆ ಮುಂದೆ ನೋಡದೆ ಹೇಳಿದರು ರಾಜಗುರುಗಳು.

"ಅಪ್ಪಾ. ನಿಮಗೆ ನಮ್ಮಲ್ಲಿ ಬಹಳ ಪ್ರೇಮ. ದೊಡ್ಡವರು ಹೇಳಿದ ಮಾತಿಗೆ ಇಲ್ಲವೆನ್ನಲಾಗದೆ ಒಪ್ಪಿ, ಒಪ್ಪುವ ಮೊದಲು ನಿಮ್ಮನ್ನೊಂದು ಮಾತು ಕೇಳಲಿಲ್ಲವಲ್ಲಾ ಎಂದು ತಪಿಸುತ್ತಿದ್ದೆ" – ಎದೆಯ ಮೇಲಿದ್ದ ಬೆಟ್ಟದ ಭಾರವಿಳಿದಂತಾಗಿ ಹೇಳಿದರು. ಓಬವ್ವನಾಗತಿ-

"ಕೇಳಿದರೆ ವರಕೊಡುವ ದೇವರು ಶಿವ; ಕೇಳದೆಯೇ ವರಕೊಡುವ ದೇವರು ನೀವು."

"ಒಳ್ಳೆಯ ಕಾರ್ಯಕ್ಕೆ, ಒಳ್ಳೆಯ ಮಾತಿಗೆ ಅಲ್ಲವೆಂದವರುಂಟೆ? ತಾಯಿ – ಇವೊತ್ತು ನಿಮಗೊಂದು ಮಾತು ಹೇಳುತ್ತೇವೆ ಕೇಳಿ: ನಮ್ಮ ಮಾತನ್ನು ನಂಬಿ. ಈ ಸಂಸಾರದ ಮಾತು. ರಾಜಕಾರಣದ ಮಾತು ವಿರಕ್ತರಿಗಲ್ಲ. ನಿಮ್ಮ ಹಿರಿಯರ ಭಕ್ತಿಗೆ ಕಟ್ಟುಬಿದ್ದು ಚರಮೂರ್ತಿಗಳಾಗಿದ್ದ ಕರ್ತೃಗಳು ಸ್ಥಿರಮೂರ್ತಿಗಳಾಗಿ ಇಲ್ಲಿ ನಿಲ್ಲಬೇಕಾಯಿತು. ಹತ್ತು ಜನಕ್ಕೆ ಒಳಿತು ಹೇಳುವ, ಅನ್ನವಿಕ್ಕುವ ಪುಣ್ಯಕಾರ್ಯ - ನೀವು ಮಾಡಬೇಕಾದದ್ದನ್ನು ನಮ್ಮಿಂದ ಮಾಡಿಸುತ್ತಿದ್ದೀರ. ಅದು ಶಿವ ಮೆಚ್ಚುವ ಕೆಲಸ. ಆಸುರ ರಾವಣನಿಗೆ, ಬೇಡರ ಕಣ್ಣಪ್ಪನಿಗೆ, ವಿಟ ನಂಬಿಯಣ್ಣನಿಗೆ 'ಓ' ಎಂದು ಕೂಗಿದ ಕೂಡಲೇ ಬಂದು ಒಲಿದ ನಮ್ಮ ಶಿವ; ಅವನ ಭಕ್ತರು ನಾವು, ಶಿಷ್ಯರು. ಭಕ್ತರು ಮಾಡುವ ತಪ್ಪುಗಳ ಲೆಕ್ಕಹಾಕುತ್ತಾ ಕೂಡುವ ಕಾರಕೂನರಲ್ಲ, ನಾವು. ಎಲ್ಲದಕ್ಕೂ ನಮ್ಮ ಮಾತೇ

ಆಗಬೇಕೆಂದು ಬಂದು ಗುರುಮನೆಯನ್ನು ಅರಮನೆಯನ್ನಾಗಿ ಮಾಡಬೇಡಿ. ಧರ್ಮದ ಮಾತಿದ್ದರೆ ಬಂದು ಕೇಳಿ, ಹೇಳುತ್ತೇವೆ. ಉಳಿದ ಮಾತು ಹೇಳುವುದೂ ಬಿಡುವುದೂ ನಿಮ್ಮ ವಿಶ್ವಾಸ. ನಾವು ಹೇಳುವುದಿಷ್ಟೇ ತಾಯಿ. ನಮ್ಮೊಳಗಿರುವ ಶಿವ ನಿಮ್ಮಲ್ಲೂ ಇದ್ದಾನೆ. ಆತ ಒಪ್ಪುವಂಥ ಕೆಲಸ ಮಾಡಿ. ಅದಕ್ಕೆ ಸದಾ ನನ್ನ ಆಶೀರ್ವಾದವಿದೆ. ಆದದ್ದು ಒಳಿತಾಯಿತು. ಬೇಗ ಸೊಸೆ ಬರಲಿ. ವಂಶ ಬೆಳೆಯಲಿ" -ಎಂದರು ರಾಜಗುರುಗಳು.

ಶ್ರೀಶ್ರೀಗಳವರ ಹೃದಯದಾಳದಿಂದ ಮೂಡಿಬಂದ ಸರಳ ಮಾತು, ಓಬವ್ವನಾಗತಿಯ ಹೃದಯವನ್ನು ತಟ್ಟಿ –

"ಅಪ್ಪಾ - ನಿಮ್ಮ ಮಾತಿಗೆ ಅಡ್ಡ ಬಿದ್ದೆ. ಕಲ್ಲಾಗಿದ್ದ ಹೃದಯ ಹೂವಾಯಿತು – ನಿಮ್ಮ ಪಾದಸ್ಪರ್ಶದಿಂದ. ಹೀಗೇ ನಮ್ಮನ್ನು ಹರಸುತ್ತಾ ಬರಬೇಕು. ಗುರುವೇ" - ಎಂದು ಬೇಡಿದರು, ಕಣ್ಣಲ್ಲಿ ನೀರು ಕರೆಯುತ್ತಾ.

"ನೀವು ಎಲ್ಲಿಯವರೆಗೆ ಧರ್ಮ ಬಿಡುವುದಿಲ್ಲವೋ ಅಲ್ಲಿಯವರೆಗೂ ನಿಮಗೆ ಹರಕೃಪೆಯಾಗಲಿ, ಗುರುಕೃಪೆಯಾಗಲಿ ತಪ್ಪುವುದಿಲ್ಲ, ತಾಯಿ. ಆರಮನೆಯವರು ಆಷ್ಟು ಅರಿತುಕೊಂಡರೆ ಸಾಕು."

"ಆಯಿತು, ಅಪ್ಪಾ. ನೀವಾಡಿದಂತೆ ನಡೆಯುತ್ತೇವೆ. ತಪ್ಪಾದರೆ, ಕರೆದು ದಂಡಿಸಿ: ಮುನಿಸಿಕೊಳ್ಳಬೇಡಿ. ನಿಮ್ಮ ಸಿಟ್ಟು ಸಹಿಸಿಕೊಳ್ಳುವಷ್ಟು ತ್ರಾಣ ನಮಗಿಲ್ಲ" ಎಂದು ಹೇಳಿ –

"ಈಗ ನಾವು ಮಾಡಿದ ಕೆಲಸ ಸರಿಯಾಯಿತೇ?" – ಎಂದು ಕೇಳಿದರು ನಾಗತಿ.

"ನೀವು ಮಾಡುವುದನ್ನು ನಿರ್ಮಲಚಿತ್ತದಿಂದ ಮಾಡಿ. ಉಳಿದದ್ದನ್ನು ಶಿವನಿಗೆ ಬಿಡಿ"

- ಎಂದ ರಾಜಗುರುಗಳು. ಆ ಮಾತಿನ ಜಾಡು ಬದಲಿಸಿ –

"ಹೊಸ ನಾಯಕರು ಹೇಗೆ ಬೆಳೆಯುತ್ತಿದ್ದಾರೆ?" – ಎಂದು ಕೇಳಿದರು.

"ಅಪ್ಪಾ. ನಿಮ್ಮ ಆಶೀರ್ವಾದ - ಮನೆಗೆ ಬಂದದ್ದು ಮನಸ್ಸಿಗೂ ತೃಪ್ತಿಯಾಯಿತು"

-ಎಂದು ಹೇಳಿ, ಓಬವ್ವನಾಗತಿ ನಮಸ್ಕಾರಮಾಡಿದರು.

"ನೀವು ಮಾಡಿದ ಕೆಲಸವೆಲ್ಲಾ ಶಿವಾನುಗ್ರಹದಿಂದ ಹಾಗೇ ಆಗಲಿ"

-ಎಂದು ಹೇಳಿ, ನಮಸ್ಕರಿಸಿದ ಓಬವ್ವನಾಗತಿಯನ್ನು ಹರಸಿದರು, ರಾಜಗುರುಗಳು.

ಭಾರವಾದ ಹೃದಯ ಹೊತ್ತು ಬಂದಿದ್ದ ಓಬವ್ವನಾಗತಿ, ಹಗುರವಾದ ಹೃದಯದಿಂದ ಅರಮನೆಗೆ ಹಿಂತಿರುಗಿದರು.

೧೭

ಬೇಸಿಗೆಯಲ್ಲಿ ಕರಗಿ, ನೀರಾಗಿ ಹರಿದ ಮಂಜುಗಡ್ಡೆ ಮತ್ತೆ ಚಳಿಗಾಲ ಬರಲು ಹಿಟ್ಟು ಮಂಜಾಗಿ, ಕೊನೆಗೆ ಹೆಪ್ಪುಗಟ್ಟಿ ಹಿಮಶೈಲವಾಗುವಂತೆ ಪಟ್ಟಾಭಿಷೇಕ ಕಾಲದಲ್ಲಿ ಕೂಡಿ ಕರಗಿದ ಜನಸ್ತೋಮ, ಮತ್ತೆ ಭಾವಸಂವತ್ಸರದ ಕಾರ್ತಿಕ ಬಹುಳ ಬಿದಿಗೆ, ಸ್ಥಿರವಾರದ ಹಗಲಿನಲ್ಲಿ ನಡೆದ ಮದಕರಿನಾಯಕರ ವಿವಾಹಮಹೋತ್ಸವದನ್ನು ಕಾಣಲು ಕಿಕ್ಕಿರಿಯಿತು. ಅವಸರದಲ್ಲಿ ನಡೆದುಹೋದ ಪಟ್ಟಾಭಿಷೇಕದ ವರ್ಣನೆಯನ್ನು ಕಥೆಯಾಗಿ, ಹಾಡಾಗಿ ಕೇಳಿದ, ಹತ್ತು ಕಡೆಯ ಜನ, ಈಗ ಮದುವೆಯನ್ನು ಕಂಡು, ಕಣ್ಣಿಗೆ ಹಬ್ಬ ಮಾಡಿಕೊಳ್ಳಲು ನೆರೆದು, ಛತ್ರ, ಚಾವಡಿಗಳು, ಮನೆ-ಮುಂಗಟ್ಟುಗಳು, ಗುಡಿ-ಮಠಗಳು, ತೋಪು-ತೆವರುಗಳಲ್ಲಿ, ಎಲ್ಲಿ ನೆಲೆ ಸಿಕ್ಕರಲ್ಲಿ ತಳ ಊರಿ ನಾಯಕರ ಮದುವೆಗೆಂದು ಮದುವಣಗಿತ್ತಿಯಂತೆಯೇ ಸಿಂಗಾರವಾದ ಅರಮನೆಯನ್ನು ನೋಡಿ ನಲಿದಾಡಿದರು. ಅದೃಷ್ಟವಿದ್ದವರು ಅರಮನೆಯಲ್ಲಿ ನಡೆದ ಮದುವೆ, ಆ ಸಂಜೆ – ದೀಪಾಲಂಕೃತವಾದ ತಾರಾಮಂಡಲದಲ್ಲಿ ಏಕನಾಥೇಶ್ವರಿಯ ದೇವಾಲಯದ ಮುಂದಿನ ಕಲ್ಲಿನ ನವಿಲುಯ್ಯಾಲೆ ಕಂಬಕ್ಕೆ ತೂಗುಹಾಕಿದ ಬೆಳ್ಳಿಯ ಉಯ್ಯಾಲೆ ಮಣೆಯ ಮೇಲೆ ಬಾಲದಂಪತಿಗಳನ್ನು ಕೂಡಿಸಿ, ಉಯ್ಯಾಲೆಯಾಟವಾಡಿಸಿದುದನ್ನು ನೋಡಿದರೆ, ಆ ಭಾಗ್ಯವಿಲ್ಲದ ಜನ ಕಂಡವರ ಬಾಯಿಂದಲೇ ಕೇಳಿ, ಕಣ್ಣಾರೆ ಕಂಡದ್ದಕ್ಕಿಂತಲೂ ಹೆಚ್ಚು ಹರ್ಷಪಟ್ಟು 'ಬಾಲಗೋಪಾಲರಾಧೆ'ಯರನ್ನು ನೋಡಿದಂತೆ ನಲಿದಾಡಿದರು. ಮದುವೆಯ ಮನೆಯ ರಸದೂಟ ತಿಂದು ಸಾವಿರ ನಾಲಗೆ ರುಚಿ ಚಪ್ಪರಿಸಿದರೆ, ತಾವು ತಂದ ರೊಟ್ಟಿ-ಬುತ್ತಿಯನ್ನೇ ಲಾಡು-ಚಿರೋಟಿಗಳಂತೆ ಮೆದ್ದು ತೃಪ್ತಿಯಿಂದ ತೇಗಿದರು. ಮದುವೆಯನ್ನು ನೋಡಿ ತೃಪ್ತಿಪಟ್ಟವರಿಗಿಂತ ಹತ್ತುಪಟ್ಟು ಜನ, ಮದುವೆಗೆಂದು ಬಂದು ನೆರೆದ ಸಾಮಂತ, ಮಿತ್ರ ಪಾಳೆಯಗಾರರು, ದೂರದ ರಾಜಪ್ರತಿನಿಧಿಗಳು ತಮ್ಮದೇ ಒಂದು ಮೆರವಣಿಗೆಯೆಂಬಂತೆ, ವೈಭವದಿಂದ ಬಗೆಬಗೆಯ ವಾಹನಗಳಲ್ಲಿ ಕುಳಿತು ಹೋದುದನ್ನು ಕಂಡು, ಹಿಗ್ಗಿ ಕೇಕೆಹಾಕಿದರು.

ಆ ದಿನ ನಡೆದ ವೈಭವದ ವಿವಾಹ –

ಆ ಸಂಜೆ ನಡೆದ –

ಗಜ, ತುರಗ, ರಥ ಪಡೆಗಳು, ಬಗೆಬಗೆಯ ಶಸ್ತ್ರ-ಸಮವಸ್ತ್ರ ಧರಿಸಿದ ಪದಾತಿಗಳು, ಪಲ್ಲಕ್ಕಿಗಳು, ಬಗೆಬಗೆಯ ಶಬ್ದ ನಿನಾದಗಳಿಂದ ಜನರೆದೆಗಳನ್ನು ಮಿಡಿವ ಭೇರಿ, ಕಹಳೆ, ತುತ್ತೂರಿ, ಸೂರ್ಯವಾದ್ಯ, ಚಂದ್ರವಾದ್ಯ, ಕಾಶೀಜಲ್ಲರಿ, ಬಾಜಾಬಜಂತ್ರಿ, ಕಂಚಿನ ನಗಾರಿ ಮೊದಲಾದ ವಾದ್ಯಗಳನ್ನು ನುಡಿಸುವವರು, ಹಗಲುದೀವಟಿಗೆ, ಪಂಚದೀವಟಿಗೆ, ಸಪ್ತದೀವಟಿಗೆ, ಸಾಲು ಪಂಜುಗಳು. ವಿವಿಧ ವೇಷಧಾರಿಗಳು, ಬಗೆಬಗೆಯ ಹಾಡು ಹಾಡುತ್ತಾ ಕೋಲಾಟವಾಡುವವರು,

ವೀರಗಾಸೆ, ನಂದಿಕೋಲು, ಕರಡಿಮಜಲು ಕುಣಿತಗಳು, ಇರುಳನ್ನು ಹಗಲಾಗಿಸುವ ಜಾಣ ಬಿರುಸುಗಳ ನಡುವೆ ಕಲಶ ಕನ್ನಡಿ ಹಿಡಿವ ಸುವಾಸಿನಿಯರ ಹಿಂದೆ ದಿವ್ಯಾಲಂಕೃತವಾದ ಆನೆಯ ಮೇಲೆ ಬಂಗಾರದ ಅಂಬಾರಿಯಲ್ಲಿ ಕುಳಿತು, ಮನೆಮನೆಯ ಮುಂದೂ ಆರತಿ ಮಾಡಿಸಿಕೊಂಡ ಬಾಲದಂಪತಿಗಳ ಮೆರವಣಿಗೆ –

ಆ ಉತ್ಸವದಂಗವಾಗಿ ನಡೆದ ದೀವಟಿಗೆಯ ಕವಾಯತು-

ಇವೆಲ್ಲವನ್ನೂ ನೋಡಿದವರೂ ಹಿಗ್ಗಿದವರೂ –

ನೋಡಿದುದನ್ನು ಹೇಳಿದ್ದು ಕೇಳಿಯೂ ಸಂತೋಷಪಟ್ಟರು ಸೀಮೆಯ ಜನ.

ಆ ವೈಭವವನ್ನೆಲ್ಲಾ ನೋಡಲು ನೆರೆದವರ ನಾಲಗೆ ಮೊರದಗಲವಾದರೆ-

ಮಗನೊಡನೆ ಹಸೆಯ ಮೇಲೆ ಕುಳಿತು, ನವರತ್ನಾಭರಣಗಳಿಂದ ಸಿಂಗರಿಸಿದ ದಂತದ ಗೊಂಬೆಯಂತಿದ್ದ ಸೊಸೆಯನ್ನು ಧಾರೆ ಎರೆಸಿಕೊಂಡ ನಿಂಗವ್ವನಿಗೆ ಹರ್ಷಾಶ್ರುವಿನಿಂದ ನೋಡುವ ಕಣ್ಣು, ಆನಂದಾತಿರೇಕದಿಂದ ಆಡುವ ಬಾಯಿ - ಎರಡೂ ಕಟ್ಟಿಹೋಗಿತ್ತು.

ಅರಮನೆಯಲ್ಲಿ ಒಬ್ಬರು ಮತ್ತೊಬ್ಬರ ಕುಶಲ ವಿಚಾರಿಸುವ ಸಹಸ್ರ ಜನವಿದ್ದರೂ, ಗಂಡು-ಹೆಣ್ಣಿನ ಚಂದವನ್ನು ನೂರು ಮಂದಿ ಹೊಗಳಿದರೂ –

’ನಾವು ತಂದ ಈ ಹೆಣ್ಣು ನಿನಗೆ ಒಪ್ಪಿಗೆಯಾಯಿತಾ?’ – ಎಂದು ಯಾರೂ ಮದುವೆಯ ಗಂಡನ್ನೇ ಕೇಳಿರಲಿಲ್ಲ.

ಕೊನೆಗೂ ಓಬವ್ವನಾಗತಿಯೇ ಆ ಸಡಗರದಲ್ಲಿ ಮರೆತುಹೋಗುತ್ತಿದ್ದ ಆ ಮಾತನ್ನು ಜ್ಞಾಪಿಸಿಕೊಂಡು, ಆ ರಾತ್ರಿ ತನಗೆ ನಮಸ್ಕರಿಸಬೇಕೆಂದು ಬಂದ ಬಾಲದಂಪತಿಗಳನ್ನು ಮನದಣಿಯ ಹರಸಿ, ಅವರಿಬ್ಬರನ್ನೂ ತನ್ನೆರಡು ಪಕ್ಕದಲ್ಲಿ ಕೂರಿಸಿಕೊಂಡು, ಇಬ್ಬರ ಹೆಗಲ ಮೇಲೂ, ಮಮತೆಯ ಅಂಗರಕ್ಷೆಯಂತೆ ಕೈಹಾಕಿ, ಮದುವಣಿಗನನ್ನು ಕೇಳಿದರು –

“ನಾವು ತಂದ ಈ ಹೆಣ್ಣು ನಿನಗೆ ಒಪ್ಪಿಗೆಯಾಯಿತಾ ?”

ಆಕೆಯ ಮಾತುಗಳನ್ನು ಕೇಳಿ, ಬಾಲದಂಪತಿಗಳಿಬ್ಬರೂ ಒಬ್ಬರ ಮುಖವನ್ನು ಮತ್ತೊಬ್ಬರು ನೋಡಿದರು. ಏಕೆಂದು ತಿಳಿಯದೆಯೇ ಅವರಿಬ್ಬರ ಮುಖಗಳೂ ರಂಗೇರಿದವು.

ಮದಕರಿನಾಯಕನ ಬಾಯಿಂದ ಮಾತೇ ಹೊರಡಲಿಲ್ಲ.

“ನೀನು ಮೂಕ ಬಸವಣ್ಣ, ಬಿಡು. ಸೊಸೆ ಅರಗಿಳಿಯನ್ನೇ ಕೇಳುತ್ತೇನೆ – ಏನವ್ವಾ ಕಂದಾ, ನೀನೊಪ್ಪಿದೆಯಾ ನಿನ್ನ ತಂದೆ-ತಾಯಿ ಆರಿಸಿದವರನ್ನು?”

ಲಕ್ಕಾಂಬೆ ಹೇಳಬೇಕಾದ ಮಾತನ್ನು ಆಕೆಯ ಕದಪಿನ ಕೆಂಪು ಹೇಳಿತಾಗಲಿ, ತುಟಿ ಎರಡಾಗಲಿಲ್ಲ.

“ಈಗಲೇ ಮುದುಕಿಯ ಕೈಲಿ ಮಾತಾಡಬೇಡ ಎಂದು ಕಟ್ಟು ಮಾಡಿದ್ದೀಯಾ. ನಿನ್ನ ಕೈ ಹಿಡಿದಾಕೆಗೆ?” – ಎಂದು ತೋರಿಕೆಯ ಸಿಟ್ಟಿದ್ದ ಧ್ವನಿಯಲ್ಲಿ ಕೇಳಿದರು, ಓಬವ್ವನಾಗತಿ.

ಆ ಮಾತು ಮದಕರಿನಾಯಕನ ಹೃದಯವನ್ನು ನಾಟಿ –

“ಏನವ್ವಾ, ನಾನಂಥ ಕೆಟ್ಟ ಮಗನಾ?” – ಎಂದು ಕೇಳಿದ.

“ಅಲ್ಲ ಎಂದಾದರೆ ಕೇಳಿದ ಮಾತಿಗೆ ಉತ್ತರ ಕೊಡು.”

“ನಿಜ ಹೇಳಲೇ. ಅವ್ವಾ....”

“ನನ್ನಲ್ಲೇಕೆ ಮುಚ್ಚುಮರೆ. ಏನಿದೆಯೋ ಹೇಳು ?”

“ನಾನು ಹುಡುಗನಾಗಿದ್ದಾಗ, ನಮ್ಮವ್ವನ ಪಕ್ಕದಲ್ಲಿ ಮಲಗಿಕೊಂಡು ಆಕೆ ಹೇಳುತ್ತಿದ್ದ ರಾಜಕುಮಾರರ ಕಥೆ ಕೇಳುತ್ತಿದ್ದಾಗ ನಾನೂ ಆ ರಾಜಕುಮಾರರಂತೆ, ಒಬ್ಬ ರಾಜಕುಮಾರಿಯನ್ನು ಗೆದ್ದು ತರಬೇಕು ಎಂದಿದ್ದೆ....”

“ಈಗೇನಾಯಿತು. ತಾನಾಗಿ ಬಂದವಳೇ ನಿನ್ನನ್ನು ಗೆದ್ದಳು. ಅಲ್ಲವಾ ? ಅದು ಕಥೆ – ಇದು ಜೀವನ. ಇರಲಿ ಬಿಡು. ಇನ್ನಷ್ಟು ಪ್ರಾಯ ಬಂದಾಗ ಮತ್ತೊಬ್ಬ ಸೊಸೆಯನ್ನು ಗೆದ್ದು ತಾ. ಅಲ್ಲಿಯವರೆಗೂ ನನ್ನ ಈ ಪಟ್ಟದ ಸೊಸೆಯನ್ನು ಮಲ್ಲಿಗೆಯ ಹೂವಿನ ಹಾಗೆ ನೋಡಿಕೋ”

-ಎಂದು ಅವರಿಬ್ಬರ ನೆತ್ತಿಗಳನ್ನು ನೇವರಿಸಿದರು, ಓಬವ್ವನಾಗತಿ.

ಮದಕರಿನಾಯಕನ ಪಾಲಿಗೆ ಆ ನೇವರಿಕೆಯೇ ನಿಜವಾದ ಲಗ್ನವಾಯಿತು.

೧೮

ನಾಯಕರ ಮದುವೆ ಎಲ್ಲರಿಗೂ ಆನಂದವನ್ನುಂಟುಮಾಡಿತ್ತು.

ಆದರೆ ಮದಕರಿನಾಯಕರಿಗೆ ನಿಜವಾದ ಆನಂದವಾದದ್ದು ಓಬವ್ವನಾಗತಿ ಆತನನ್ನು ಕರೆಸಿಕೊಂಡು –

“ಮದುವೆಯಾಗಿ ಹತ್ತು ದಿನ ಕಳೆದಿಲ್ಲ. ನಿಮ್ಮವ್ವ-ಅಪ್ಪ ಮುಳ್ಳಿನ ಮೇಲೆ ಕುಳಿತವರ ಹಾಗೆ ಈಗಲೇ ಊರಿಗೆ ಹೋಗಲು ನಿಂತಿದ್ದಾರೆ. ಅವರಿದ್ದರೆ ಮನೆ ತುಂಬಿದ ಹಾಗಿರುತ್ತೆ. ನೀನಾದರೂ ಅವರನ್ನು ಇಲ್ಲಿ ಇರು ಅಂತ ಹೇಳು” - ಎಂದು ಹೇಳಿದಾಗ.

ಮದಕರಿನಾಯಕನಿಗೂ ತಂದೆ-ತಾಯಿ, ಎಲ್ಲಕ್ಕಿಂತ ಹೆಚ್ಚಾಗಿ, ಹಳೆಯ ದಿನಗಳನ್ನೆಲ್ಲಾ ನೆನಪಿಗೆ ತಂದು, ಹೊಸ ಉತ್ಸಾಹ ಮೂಡಿಸಿದ ತಮ್ಮ ಪರಶುರಾಮ ಜಾನಕಲ್ಲಿಗೆ ಹಿಂತಿರುಗುವುದು ಬೇಸರದ ಮಾತಾಗಿತ್ತು. ಆದರೆ ಇದನ್ನು ತಾಯಿಗೆ ಹೇಳಿದ್ದಾಗ ಆಕೆ, ’ನೀನು ಇರು ಎಂದದ್ದೇ ಸಾಕು

ಅಂತ, ಬೆಚ್ಚಗೆ ಇದೆ ಅಂತ ಇದ್ದರೆ ಅರಮನೆಯಲ್ಲಿ, ಮನೆಯಲ್ಲಿದ್ದ ಹಾಗಾದೀತಾ, ನಿನ್ನ ಸಂತೋಷ ನೋಡಿಕೊಂಡು ಇದ್ದರೆ, ಅಲ್ಲಿನ ಕೆಲಸ ನೋಡುವವರು ಯಾರು? ನಿನ್ನ ಸುಖ-ಸೌಭಾಗ್ಯ ಕಣ್ಣು ತುಂಬಾ ನೋಡಿದ್ದಾಯಿತು, ಇನ್ನು ಮನೆಯ ಚಿಂತೆ ಮಾಡಬೇಡವೇ? ಎಷ್ಟು ದಿನ ಇದ್ದರೂ, ಒಂದು ದಿನ ಹೋಗಲೇಬೇಕಲ್ಲಪ್ಪ' ಎಂದಿದ್ದಳು.

ಓಬವ್ವನಾಗತಿಗೆ ಮದಕರಿನಾಯಕ, ತನ್ನ ತಾಯಿಯಾಡಿದ ಮಾತನ್ನು ತಿಳಿಸಿದಾಗ –

"ಹಾಗೇಕೆ ಹೋಗಬೇಕು? ಇಲ್ಲೇ ಇದ್ದರಾಗದೇ?" – ಎಂದು ಕೇಳಿದರು, ಏನೋ ಯೋಚಿಸುತ್ತಾ.

"ಹಾಗಂದರೇನವ್ವಾ?"

"ನಾವು ಪ್ರಧಾನಿಗಳಿಗೆ ಹೇಳುತ್ತೇವೆ. ಜಾನಕಲ್ಲು ಕೋಟೆಗೆ ಬೇರೆ ದಳವಾಯಿಗಳನ್ನು ನೇಮಿಸಿದರಾಯಿತು. ನಿಮ್ಮಪ್ಪ, ಅವ್ವ ಇಲ್ಲೇ ಇರಲಿ. ಮುಪ್ಪಿನ ಮುದುಕಿ - ನಾನು ನಿನ್ನ, ನಿನ್ನ ಹೆಂಡತೀನು, ಎಲ್ಲರನ್ನು ನೋಡಿಕೊಳ್ಳೋದಾದೀತಾ? ನೀನು ಇಲ್ಲಿಗೆ ಬಂದಾಗಲೇ ಈ ಮನೆ ಅವರದಾಯಿತು. ಹಾಗಂದುಕೊಂಡು, ಇಲ್ಲಿರುವುದು ಬಿಟ್ಟು ದೂರ ಹೋಗಿ, ದಿನವೂ 'ಮಗ ಹೇಗಿದ್ದಾನೋ ಸೊಸೆ ಹೇಗಿದ್ದಾಳೋ' ಎಂದು ಉಣ್ಣುವಾಗ, ಉಡುವಾಗ ನಿನ್ನ ತಾಯಿ ಕಣ್ಣೀರು ಒರೆಸಿಕೊಂಡರೆ, ಅದು ಯಾವ ದೇವರಿಗೆ ಪ್ರೀತಿ. ಊಹೂ - ಹಾಗಾಗದು. ಈ ದಾಕ್ಷಿಣ್ಯಕ್ಕೆ ತಕ್ಕ ಶಿಕ್ಷೆ ಮಾಡಲೇಬೇಕು"

-ಎಂದು ಹೇಳಿದ ಓಬವ್ವನಾಗತಿ. ಮರುದಿನವೇ ಪ್ರಧಾನಿ ನರಸಪ್ಪಯ್ಯನವರೊಂದಿಗೆ ಜಾನಕಲ್ಲು ದುರ್ಗದ ದಳವಾಯಿತನಕ್ಕೆ ಯಾರನ್ನು ನೇಮಿಸುವುದು ಎಂದು ಚಿಂತಿಸಿದಳು.

ಆದರೆ ಆ ಕೆಲಸ ಯೋಚಿಸಿದಷ್ಟು ಮಾಡಲು ಸುಲಭವಾಗಿರಲಿಲ್ಲ.

ಜಾನಕಲ್ಲು ಗಡಿಠಾಣ್ಯ ಎಂಬ ಕಾರಣಕ್ಕಷ್ಟೇ ಪ್ರಧಾನವಾಗಿರಲಿಲ್ಲ. ಅದಕ್ಕಿಂತಲೂ ಮಿಗಿಲಾಗಿ ದುರ್ಗದ ದಂಡಿಗೆ ಕತ್ತಿ, ಕಠಾರಿ, ಬಾಕು, ಕೋವಿ, ತುಫಾಕಿ, ತೋಪು, ಗುಂಡುಗಳಿಗೆ ಬೇಕಾದ ಕಬ್ಬಿಣವನ್ನು ಗಾದ್ರಿಮಲೆಯ ಸೆರಗಿನಲ್ಲಿದ್ದ ಕಿಟ್ಟದಾಳನಿಂದ, ಜಾನಕಲ್ಲಿಗೆ ಸಮೀಪದಲ್ಲಿದ್ದ ಗಟ್ಟಿಹೊಸೂರಿಗೆ ತಂದು, ಕರಗಿಸಿ ಗಟ್ಟಿಗಳನ್ನಾಗಿ ಮಾಡಿ, ಕೋಣದ ಬಂಡಿಗಳಲ್ಲಿ ದುರ್ಗಕ್ಕೆ ತರುತ್ತಿದ್ದರು. ಎಂತಲೇ ಆ ಮಾರ್ಗ ದುರ್ಗಕ್ಕೆ ಒಂದು ರೀತಿಯಲ್ಲಿ ಜೀವನಾಡಿಯಾಗಿತ್ತು. ಆದುದರಿಂದಲೇ ಆ ಮಾರ್ಗದ ಇಬ್ಬದಿಯಲ್ಲಿದ್ದ ಜಾನಕಲ್ಲು, ಹೊಸದುರ್ಗದ ಕೋಟೆಗಳಿಗೆ, ಅರಸರಿಗೆ ಬಹು ಹತ್ತಿರದ ರಕ್ತ ಸಂಬಂಧಿಗಳನ್ನು ದಳವಾಯಿಗಳನ್ನಾಗಿ ನೇಮಿಸುವುದು ಅಗತ್ಯವಾಗಿತ್ತು. ಈಗ ಜಾನಕಲ್ಲಿನಿಂದ ಭರಮಪ್ಪನಾಯಕರನ್ನು ಕದಲಿಸಿದರೆ, ಅಲ್ಲಿಗೆ ಯಾರನ್ನು ನೇಮಿಸುವುದು ? – ನರಸಪ್ಪಯ್ಯ ಈ ಪ್ರಶ್ನೆಯನ್ನೆತ್ತಿದಾಗ –

“ಹೊಸದುರ್ಗದ ದಳವಾಯಿಗಳನ್ನೇ ಅಲ್ಲಿಗೆ ನೇಮಿಸಿದರಾಗದೇ?” – ಎಂದು ಕೇಳಿದರು ಓಬವ್ವನಾಗತಿ.

“ಜಂಪಣ್ಣನಾಯಕರನ್ನು ಜಾನಕಲ್ಲಿನ ದಳವಾಯಿಗಳಾಗಿ ನೇಮಿಸುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಆದರೆ ಆ ವಿಷಯದಲ್ಲೂ ತಮ್ಮಲ್ಲೊಂದು ಮಾತು ಹೇಳಬೇಕಾಗಿದೆ” - ಎಂದರು ನರಸಪ್ಪಯ್ಯನವರು, ಬೇರೇನೋ ಯೋಚನೆಮಾಡಿ.

“ಅಲ್ಲಿಯದೇನು ಹೊಸ ಮಾತು ?”

-ಅನಿರೀಕ್ಷಿತವಾದ ಪ್ರಧಾನಿಗಳ ಮಾತಿನಿಂದ ಚಕಿತರಾಗಿ ಕೇಳಿದರು, ಓಬವ್ವನಾಗತಿ.

“ಹೊಸದೇನೂ ಇಲ್ಲ, ಹಳೆಯ ಮಾತೇ. ಹಿಂದೆ ಪಟ್ಟಕ್ಕೆ ಯಾರನ್ನು ತರಬೇಕು ಎಂಬ ಮಾತು ಬಂದಾಗ, ಜಂಪಣ್ಣನಾಯಕರ ಪುತ್ರ ಧರಮಣ್ಣನಾಯಕರ ಹೆಸರೂ ಬಂದಿತ್ತು. ಅವರ ಮನಸ್ಸಿನಲ್ಲೂ ಆ ಆಸೆ ಮೂಡಿದ್ದರೆ ಆಶ್ಚರ್ಯವೇನೂ ಇಲ್ಲ. ಆಸೆ ಇದ್ದು ಅದು ನಡೆಯದಿದ್ದಾಗ ಮನಸ್ಸಿನಲ್ಲಿ ಕಸಿರು ಉಳಿಯುತ್ತದೆ. ಈಗ ಹೇಗೂ, ಅವರು ಲಗ್ನಕ್ಕೆ ಬಂದಿದ್ದಾರೆ. ತಮಗೂ ಅವರು ದೂರದವರಲ್ಲ. ಅವರನ್ನು ಕರೆಸಿಕೊಂಡು ಒಂದು ಮಾತು ಕೇಳಿದರೆ, ಅವರಿಗೂ ಅರಮನೆ ತಮ್ಮನ್ನು ಮರೆತಿಲ್ಲ ಎಂದು ಸಂತೋಷವಾಗುತ್ತದೆ. ಅವರ ಮನಸ್ಸು ತಿಳಿಯಾಗಿದ್ದರೆ, ಎಲ್ಲ ಕೆಲಸವೂ ಸುಲಭವಾಗುತ್ತದೆ. ಇದು ರಾಜಸಂಸಾರ ಒಗ್ಗಟ್ಟಿನಿಂದ ಇರಬೇಕಾದ ಕಾಲ” – ಎಂದು ತಮ್ಮ ಅಭಿಪ್ರಾಯವನ್ನು ವಿವರಿಸಿ ಹೇಳಿದರು, ನರಸಪ್ಪಯ್ಯ.

ಯೋಚಿಸಿದಾಗ ಓಬವ್ವನಾಗತಿಗೂ ಆ ಮಾತು ಸರಿ ಎನಿಸಿತು.

“ಆಯಿತು – ಇವತ್ತೋ, ನಾಳೆಯೋ ಹೊತ್ತು ನೋಡಿಕೊಂಡು, ಅವರ ಮನಸ್ಸು ತಿಳಿದು ಇಲ್ಲಿಗೆ ಕಳಿಸಿ. ಈ ಮಾತಾಗುವವರೆಗೂ ಅವರು ಹೊಸದುರ್ಗಕ್ಕೆ ಹೋಗುವುದು ಬೇಡ” – ಎಂದರು, ಓಬವ್ವನಾಗತಿ.

“ಅಷ್ಟು ಮಾಡಿ ಬಂದು. ತಮ್ಮನ್ನು ಕಾಣುತ್ತೇನೆ” - ಎಂದು ನರಸಪ್ಪಯ್ಯನವರು ಹೋದ ಬಳಿಕ –

“ಹಸಿ ಕೆಸರಿನಲ್ಲಿ ಗೋಡೆ ಕಟ್ಟುವಂಥ ಈ ಅರಮನೆಯ ಹಿರಿತನ ನನ್ನ ಶತ್ರುವಿಗೂ ಬೇಡ. ಮಹಾರಾಯರು ಇಂಥ ಕೆಲಸ ಇಪ್ಪತ್ತೆಂಟು ವರ್ಷಗಳ ಕಾಲ ಅದು ಹೇಗೆ ನಡೆಸಿದರೋ, ಒಂದು ದಿನವಾದರೂ ಆ ಕಷ್ಟ ಹೇಳಿಕೊಳ್ಳಲಿಲ್ಲವಲ್ಲ” ಎಂದು ಗತಿಸಿದ ತಮ್ಮ ಪತಿಯನ್ನು ನೆನೆದುಕೊಂಡರು, ಓಬವ್ವನಾಗತಿ.

* * *

ಪ್ರಧಾನಿ ನರಸಪ್ಪಯ್ಯನವರು ಊಹಿಸಿದ್ದಂತೆ ದುರ್ಗದ ಸಿಂಹಾಸನಕ್ಕೆ ಅರಸರನ್ನು ಆಯ್ಕೆ ಮಾಡುವ ವಿಷಯದಲ್ಲಿ ಜಂಪಣ್ಣನಾಯಕರಿಗೆ ಅಸಮಾಧಾನವಾಗಿದ್ದುದು ನಿಜ. ಕಸ್ತೂರಿ ರಂಗಪ್ಪನಾಯಕರು ಅವರಿಗೆ ಖಾಸಾ ಅಣ್ಣನ ಮಗ. ತಮ್ಮ ಮಗ ಇದ್ದ ಹಾಗೇ, ಆತ ಸಂತಾನವಿಲ್ಲದೆ ತೀರಿಕೊಂಡಾಗ 'ಆ ಸಿಂಹಾಸನ ತನಗೋ, ತನ್ನ ಇಬ್ಬರು ಗಂಡುಮಕ್ಕಳಲ್ಲಿ ಒಬ್ಬನಿಗೆ ಅದು ಆಗಲೇಬೇಕು: ಆಗುತ್ತದೆ' ಎಂದೇ ನಂಬಿಕೊಂಡಿದ್ದ. ಆದರೆ ನಂತರ ನಡೆದ ರಾಜಕೀಯದ ಪಗಡೆಯಾಟದಲ್ಲಿ ದಾಳ ಅವರಿಗೆ ಬೇಕಾದ ಗರವನ್ನು ಹಾಕಿರಲಿಲ್ಲ. ಅತ್ಯಂತ ಅನಿರೀಕ್ಷಿತವಾಗಿ, ಅಷ್ಟೇ ಶೀಘ್ರವಾಗಿ ಆತ ತನ್ನ ಬಾಯ ತುತ್ತು ಎಂದುಕೊಂಡದ್ದು ಪರರ ಪಾಲಾಗಿತ್ತು. ಆ ಅಸಮಾಧಾನ ಪ್ರಕಟವಾಗಲು ಸಂದರ್ಭ ಸಿಗದೆ ಒಳಗೇ ಹೊಗೆಯಾಡುತ್ತಿತ್ತು. ಈಗ ಪ್ರಧಾನಿಗಳು ತಾವೇ ಆತನನ್ನು ಕರೆಸಿಕೊಂಡು –

"ಹಿರಿಯ ನಾಗತಿಯವರು ನಿಮ್ಮ ಬಳಿ ಮಾತಾಡಬೇಕಾದ ವಿಷಯವಿದೆಯಂತೆ. ನಿಮ್ಮ ಸಮಯ ನೋಡಿ, ಕಳಿಸಿ ಎಂದು ಹೇಳಿದರು" - ಎಂದಾಗ, ಅದಕ್ಕೊಂದು ಅವಕಾಶ ದೊರೆತಂತಾಗಿ –

"ದಂಡಿನ ಊಳಿಗದವರಿಗೂ ಅರಮನೆಗೂ ಎಲ್ಲಿಯ ಸಂಬಂಧ? ಏನಾದರೂ ಕೆಲಸವಿದ್ದರೆ ನೇಮಿಸಲಿ, ನಡೆಸುತ್ತೇವೆ" - ಎಂದು ಹೇಳಿದ.

"ನಿಮ್ಮನ್ನು ಕರೆಸಿದವರು ಹಿರಿಯ ನಾಗತಿಯವರಷ್ಟೇ ಅಲ್ಲ, ನಿಮ್ಮ ಅತ್ತಿಗೆಯವರು...."

"ಆ ನೆಂಟಸ್ಥಿಕೆ ಯಾರಿಗೆ ನೆನಪಿದೆ? ಇದ್ದರೂ ಆಗಬೇಕಾದದ್ದೇನು - ಈ ಬರೀ ಊಟ, ಉಪಚಾರದ ನೆಂಟಸ್ಥಿಕೆಯಿಂದ. ಅದಿದೆ ಎಂದುಕೊಳ್ಳುವುದಕ್ಕಿಂತ ನಾವು ಊಳಿಗದವರು ಎಂದುಕೊಂಡರೆ ಮನಸ್ಸೆಷ್ಟೋ ತಣ್ಣಗಿರುತ್ತದೆ" - ಎಂದ ಜಂಪಣ್ಣನಾಯಕ, ಸಣ್ಣಗೆ ಕಿಡಿ ಕಾರುತ್ತಾ.

"ನಿಮ್ಮ ದುಗುಡ-ದುಮ್ಮಾನ ನಮಗೂ ಅರ್ಥವಾಗುತ್ತೆ, ಆ ವ್ಯಥೆ ಯಾರಿಗಿಲ್ಲ ಎಂದು ಕೊಂಡಿದ್ದೀರಾ...."

"ಯಾರಿಗಿದೆ ?" – ಕುಳಿತ ನೆಲ ತಟ್ಟಿ ಕೇಳಿದ ಜಂಪಣ್ಣನಾಯಕ.

"ನಮಗೆ. ದಂಡಿನ ದಳವಾಯಿಗಳಿಗೆ. ನಮ್ಮೆಲ್ಲರಿಗಿಂತಲೂ ಹೆಚ್ಚಾಗಿ ಹಿರಿಯ ನಾಗತಿಯವರಿಗಿದೆ. 'ಕನಸಿನಲ್ಲಿ ಪತಿದೇವರ ಅಪ್ಪಣೆಯಾಯಿತು ಅಂತ ಹನ್ನೆರಡು ವರ್ಷದ ಹಸುಳೆಯನ್ನು ಇಷ್ಟು ದೊಡ್ಡ ರಾಜ್ಯಕ್ಕೆ ಪಟ್ಟಕ್ಕೆ ತರುವುದು ಸರಿಯೇ?' ಎಂದು ಮೂರು ದಿನ ಊಟ, ನೀರು ಬಿಟ್ಟು ಯೋಚನೆ ಮಾಡಿದರು. ಕನಸು ಸುಳ್ಳೋ ನಿಜವೋ ಎಂದು 'ವಿಘ್ನೇಶ್ವರಶಾಸ್ತ್ರ' ಓದಿಸಿದರು: ಶಕುನ ಕೇಳಿದರು. ಎಲ್ಲ ಕಡೆಯೂ ಆ ಹೆಸರೇ ಬಂತು. ಆಗಲೂ ಮಗನಿಗಿಂತ ಹೆಚ್ಚಾದ ಮೈದುನನನ್ನಿಟ್ಟುಕೊಂಡು, ಈ ಕೆಲಸ ಮಾಡಬೇಕಾಯಿತಲ್ಲಾ ಎಂದು

ಕಣ್ಣೀರಿಟ್ಟು ಕೊರಗಿದರು. ಕೊನೆಗೆ ನಾವೇ ಅವರಿಗೆ ಧೈರ್ಯ ಹೇಳಬೇಕಾಯಿತು.... ಅಂಥ ಅತ್ತಿಗೆಯ ವಿಷಯದಲ್ಲಿ ನೀವು ಹೀಗಾಡಬಹುದೇ?"

- ಸತ್ಯದ ಮುಖದ ಮೇಲೆ ಹೊಡೆದಷ್ಟು ಧೈರ್ಯವಾಗಿ ಸುಳ್ಳು ಸಮಾಧಾನ ಹೇಳಿ –

"ನಾವು ಈ ರಾಜ್ಯದ ಪ್ರಧಾನಿಗಳಾಗಿದ್ದರೂ ಪರರು, ಗಂಡ ತೀರಿದ ಆರು ವರ್ಷಕ್ಕೇ, ಆಳುವ ಮಗನನ್ನು ಕಳೆದುಕೊಂಡು ತಬ್ಬಲಿಯಾಗಿರುವ ಅತ್ತಿಗೆಗೆ ನೀವು ಸಮಾಧಾನ ಹೇಳಿ, ಧೈರ್ಯಕೊಡುವುದು ಬಿಟ್ಟು, ಇಂಥ ಮಾತಾಡಿದರೆ ಈ ರಾಜ್ಯವನ್ನೇನು ಕೋಟೆಬಾಗಿಲ ಆಂಜನೇಯ ಕಾಪಾಡಬೇಕೇ?" – ಎಂದು ಹೇಳಿ ಜಂಪಣ್ಣನಾಯಕನ ಮೇಲೇ ತಪ್ಪು ಹೊರಿಸಿದರು, ನರಸಪ್ಪಯ್ಯ.

ಆ ಮಾತು ಕೇಳಿ ಜಂಪಣ್ಣನಾಯಕನ ಮುಖಕ್ಕೆ ರಾಚಿದಂತಾಯಿತು. ಯಾವುದೋ ನೋವಿನಲ್ಲಿ ಮರೆತುಹೋದ ಹಳೆಯ ಪ್ರೇಮವನ್ನು ಕೆದಕಿದಂತಾಗಿ –

"ಇದೆಲ್ಲಾ ನಮಗೆ ಹೇಳಿದ್ದರೆ ನಾವು ಬೇಡ ಎನ್ನುತ್ತಿದ್ದೆವೇ?" - ಎಂದು ಕೇಳಿದ.

"ಹೇಳಬೇಕಾಗಿತ್ತು. ಆದರೆ ಯಾವ ಮುಖ ಇಟ್ಟುಕೊಂಡು ಹೇಳುವುದು ಎಂದು ಹೊಟ್ಟೆಯೊಳಗೇ ಇಟ್ಟುಕೊಂಡು, ಮೂಗುಬ್ಬಸಪಡುತ್ತಿದ್ದರು, ನಾಗತಿಯವರು. ನಾವೇ ಅವರಿಗೆ ಸಮಾಧಾನ ಹೇಳಿ, ಧೈರ್ಯಕೊಟ್ಟು, ನೀವಾಡಬೇಕಾದ ಮಾತೆಲ್ಲಾ ನಾವಾಡಿದೆವು..."

"ಅದೇಕೆ ಬೇಕಾಗಿತ್ತು? ನಾವೇನು ಸತ್ತಿದ್ದೆವೇ? ಕರೆಸಿ ಹೇಳಿದ್ದರೆ ನೀವು ಹೇಳಿದ ಮಾತು ನಾವೇ ಹೇಳುತ್ತಿದ್ದವು. ನಮ್ಮಲ್ಲಿ ಅವರಿಗಷ್ಟು ವಿಶ್ವಾಸವಿಲ್ಲವೇ? ನಮ್ಮನ್ನೇನು ನಿನ್ನೆ -ಇವತ್ತಿನಿಂದ ನೋಡುತ್ತಿದ್ದಾರೆಯೇ?" – ಎಂದು ಕೇಳಿದ ಜಂಪಣ್ಣನಾಯಕ.

"ನಿಮಗೆ ಅವರಲ್ಲೆಷ್ಟು ವಿಶ್ವಾಸವೋ, ಅಷ್ಟೇ ಪ್ರೀತಿ. ವಿಶ್ವಾಸ ನಿಮ್ಮಲ್ಲಿ ಅವರಿಗೂ ಇದೆ. ಅದಕ್ಕೇ ಏನೋ ಮುಖ್ಯ ವಿಷಯದ ಮಾತು ಬಂದಾಗ, ಏನೆಂದು ನಮಗೆ ಹೇಳದೆ, ನಿಮಗೆ ಹೇಳಿಕಳಿಸಿದರು. ಈಗ ನೀವೇ ಹೋಗಿ ಅವರ ಹತ್ತಿರ ಮಾತಾಡಿ, ಏನು ವಿಷಯವೋ ತಿಳಿದು ಬನ್ನಿ. ಗೃಹಕೃತ್ಯದ ವಿಷಯವಾಗಿದ್ದರೆ ನಿಮ್ಮಲ್ಲೇ ಇರಲಿ. ರಾಜಕೀಯವಾದರೆ ನಮಗೂ ಬಂದು ಹೇಳಿ"

- ಎಂದು ಜಂಪಣ್ಣನಾಯಕನಿಗೆ ಇಲ್ಲದ ಹಿರಿತನ ಕೊಟ್ಟು, ಆತನ ಕೋಪಕ್ಕೆ ಮತ್ತಷ್ಟು ಶೈತ್ಯೋಪಚಾರಮಾಡಿದರು, ಪ್ರಧಾನಿಗಳು.

"ಆಯಿತು. ಇವತ್ತೇ ಹೋಗಿ ನೋಡುತ್ತೇನೆ. ನಿಮಗೆ ತಿಳಿಸುವ ವಿಷಯವಾದರೆ ಖಂಡಿತ ತಿಳಿಸುತ್ತೇನೆ. ರಾಜಕೀಯ ವಿಷಯದಲ್ಲಿ, ಅರಮನೆಗೆ ನೀವೂ ನಮ್ಮಷ್ಟೇ ಹತ್ತಿರದ ನೆಂಟರು"

- ಎಂದು ಓಬವ್ವನಾಗತಿಯವರನ್ನು ಅಂದೇ ನೋಡಲು ಜಂಪಣ್ಣನಾಯಕ ಆತುರ ತೋರಿಸಿದಾಗ-

"ಇವೊತ್ತು ಅವರು ದೂರದ ನೆಂಟರನ್ನು ಊರಿಗೆ ಕಳಿಸುವ ಗದ್ದಲದಲ್ಲಿದ್ದಾರೆ. ನಾಳೆ ಹೋಗಿ ನೋಡಿ. ಅದಕ್ಕೇ 'ನೀವು ನನ್ನನ್ನು ನೋಡದೆ ಹೋಗಬಾರದು' ಎಂದು ಹೇಳಿ ಎಂದು ನಮ್ಮ ಬಳಿ ಹೇಳಿಕಳಿಸಿದರು" - ಎಂದರು ನರಸಪ್ಪಯ್ಯ.

"ಆಯಿತು – ಅತ್ತಿಗೆಯವರ ಕೆಲಸಕ್ಕಾದರೆ, ಒಂದು ದಿನವಾದರೇನು, ಎರಡು ದಿನವಾದರೂ ಇಲ್ಲಿರುತ್ತೇನೆ. ದೂರದವರಿಗಾದರೆ ಹೋಗುವ ಆತುರ, ನಮಗಿದು ಮನೆ" - ಎಂದ ಜಂಪಣ್ಣನಾಯಕ.

"ಅತ್ತಿಗೆ-ಮೈದುನರ ವಿಶ್ವಾಸ ಹೀಗೇ ಇರಲಿ. ಅಷ್ಟೇ ನಮ್ಮ ಅಪೇಕ್ಷೆ"

- ಎಂದು ಹೇಳಿ, ಜಂಪಣ್ಣನಾಯಕರನ್ನು ಬೀಳ್ಕೊಟ್ಟು, ಬಳಿಕ ನೇರವಾಗಿ ಅರಮನೆಗೆ ಹೋಗಿ, ನಾಗತಿಯವರನ್ನು ಕಂಡು ನಡೆದ ಮಾತೆಲ್ಲವನ್ನೂ ವಿವರಿಸಿ ಹೇಳಿದರು ನರಸಪ್ಪಯ್ಯ.

ಅವರು ಹೇಳಿದುದನ್ನೆಲ್ಲಾ ಕೇಳಿ, ಅವರ ಜಾಣ್ಮೆಯನ್ನು ಮೆಚ್ಚಿಕೊಂಡು –

"ನಿಮ್ಮವ್ವ ನಿಮಗೆ ತುಂಡುನಾಲಗೆ ಕೊಟ್ಟು ಹಡೆದರು ಎಂದು ಅಂದೊಂದು ದಿನ ಹೇಳಿದಿರಿ. ಆ ತುಂಡುನಾಲಗೆಗೆ ಇಷ್ಟು ಅಗ್ನಿಶಾಮಕ ಶಕ್ತಿ ಇದೆ ಎಂದು ನಮಗೆ ತಿಳಿದಿರಲಿಲ್ಲ. ಅಂತೂ ನಮಗಾಗಿ ನೀವಿಷ್ಟು ಆಟ ಕಟ್ಟಬೇಕಾಯಿತು" - ಎಂದರು, ಓಬವ್ವನಾಗತಿ.

"ಈ ರಾಜ್ಯಕ್ಕೆ ತಲೆಕೊಡಲು ಸಿದ್ಧವಾಗಿ, ಈ ಪ್ರಧಾನಿಪಟ್ಟ ಕಟ್ಟಿಸಿಕೊಂಡೆವು. ತಲೆ ನಿಮ್ಮದಾದ ಬಳಿಕ, ಅದರಂಗವಾದ ನಾಲಗೆಯೂ ಅರಮನೆಯ ಸೇವೆಯಲ್ಲಿ ಸಾರ್ಥಕವಾಗಬೇಡವೇ?" – ಎಂದರು ನರಸಪ್ಪಯ್ಯ.

"ಅದೆಲ್ಲ ಸರಿಯೇ, ಹೊಸ ನಾಯಕರಿಗೂ ಈ ನಾಲಗೆಯ ನಯ ಕಲಿಸಿ. ಅಂತೂ ನಿಮ್ಮಿಂದ ನಮ್ಮ ಕೆಲಸ ಹಗುರವಾಯಿತು. ನಿಮಗೆ ನಾವು ಎಷ್ಟು ಋಣಿಗಳಾಗಿದ್ದರೂ ಸಾಲದು" – ಎಂದರು, ಓಬವ್ವನಾಗತಿ.

"ಮಾಡಬೇಕಾದ ಕೆಲಸ ಮಾಡಿದ್ದಕ್ಕೆ ಹೊಗಳಿಕೆಯ ಉಡುಗೊರೆ ಅಗತ್ಯವಿಲ್ಲ, ತಾಯಿ. ಈಗ ಜಂಪಣ್ಣನಾಯಕರು ಹದಕ್ಕೆ ಬಂದಿದ್ದಾರೆ. ಅವರ ಮಕ್ಕಳಿಗೆ ಜಾನಕಲ್ಲು ದುರ್ಗದ ದಳವಾಯಿತನ ಕೊಟ್ಟು. ತಂದೆ-ಮಕ್ಕಳಿಬ್ಬರೂ ಒಬ್ಬರಿಗೊಬ್ಬರು ಒತ್ತಾಸೆಯಾಗಿ ನಿಂತು, ಈ ರಾಜ್ಯಕ್ಕೆ ಕಾವಲಾಗುವ ಕೆಲಸಮಾಡಿ. ಆಗ ಎಲ್ಲವೂ ಸಲೀಸಾಗುತ್ತದೆ" – ಎಂದು ಮುಂದಿನ ಮಾರ್ಗವನ್ನು ಸೂಚಿಸಿದರು, ನರಸಪ್ಪಯ್ಯ.

“ಮುಂದೆ ಎಂದಾದರೂ ಮತ್ತೆ ಅಸಮಾಧಾನ ಕೆರಳಿ, ತಂದೆ-ಮಗ ಒಂದಾಗಿ, ದುರ್ಗದ ಗಂಟಲು ಹಿಸುಕಿದರೆ....?”

“ಆ ಭೀತಿ ಅನಗತ್ಯ. ರಾಜ್ಯದ ಬಗ್ಗೆ ಅವರ ನಿಷ್ಠೆ ಅಚಲ. ಜಂಪಣ್ಣನಾಯಕರು ಮಹಾಸ್ವಾಮಿಗಳಾದ ಭರಮಣ್ಣನಾಯಕರ ಮಕ್ಕಳು. ಹಾಗೂ ಪ್ರಸಂಗ ಬಿದ್ದರೆ - ಅದಕ್ಕೂ ಮುಂದೆ ಒಂದು ದಾರಿ ಯೋಚಿಸೋಣ. ಸದ್ಯಕ್ಕೆ ಆ ಭಯ ಬೇಡ. ಏನು ಬಂದರೂ ನಾವಿದ್ದೀವಿ.”

“ಅದೊಂದು ನಂಬಿಕೆ ಮಾತ್ರ ಖಂಡಿತವಾಗಿಯೂ ನಮಗಿದೆ.”

“ಅಷ್ಟು ವಿಶ್ವಾಸವಿದ್ದರೆ ಸಾಕು. ನಂಬಿದರೆ ತಲೆಕೊಡುವ ಮನುಷ್ಯ ಈ ನರಸಪ್ಪಯ್ಯ. ಅದೆಲ್ಲಾ ಬಿಟ್ಟು - ಮುಂದಿನ ಯೋಚನೆ ಮಾಡಿ. ಈ ವಯಸ್ಸಿನಲ್ಲಿ ನಿಮ್ಮ ಚಿಂತೆಯನ್ನಷ್ಟು ಕಡಿಮೆ ಮಾಡಿದರೆ, ನಿಮ್ಮ ಉಪ್ಪುಂಡದ್ದು ಸಾರ್ಥಕವಾಗುತ್ತದೆ” – ಎಂದು ಹೇಳಿ ನಾಗತಿಯ ಅಪ್ಪಣೆ ಪಡೆದು ಹೊರಟರು, ನರಸಪ್ಪಯ್ಯ.

ಅವರು ಹೋದ ದಿಕ್ಕನ್ನೇ ನೋಡುತ್ತಾ-

ನರಸಪ್ಪಯ್ಯನವರ ನಿಷ್ಠೆಯನ್ನೋ, ಜಾಣೆಯನ್ನೂ - ಯಾವುದನ್ನು ಮೆಚ್ಚಬೇಕೆಂದು ತಿಳಿಯದೆ ಮುಗ್ಧರಾಗಿ ಕುಳಿತುಬಿಟ್ಟರು ಓಬವ್ವನಾಗತಿ.

* * *

ನಡುನೀರಿನಲ್ಲಿ ತನ್ನನ್ನು ಕೈಬಿಟ್ಟು ಮಗ ಸ್ವರ್ಗಸ್ಥನಾಗುವವರೆಗೂ, ಅರಮನೆಯಲ್ಲಿದ್ದೂ ರಾಜಕೀಯದಿಂದ ದೂರವಿದ್ದ ಓಬವ್ವನಾಗತಿಗೆ, ತನ್ನ ಪತಿಯಷ್ಟೇ ರಾಜ್ಯದ ಬಗ್ಗೆ ತಲೆ ಕೊಡುವಷ್ಟು ನಿಷ್ಠೆ ಇದ್ದರೂ, ರಾಜಕಾರಣದ, ಅಡ್ಡಬಳಸು ವಕ್ರಮಾರ್ಗದ ಪರಿಚಯವಿರಲಿಲ್ಲ. ನಾಗತಿಯಾಗಿ ಮನಸ್ಸಿನ ಗುಟ್ಟನ್ನು ಬಿಟ್ಟುಕೊಡದೆ, ಗಂಭೀರವಾಗಿ ಮಾತನಾಡುವುದು ತಿಳಿದಿತ್ತೇ ಆಗಲಿ, ಎದೆಯಾಳದಲ್ಲೊಂದು ಮಾತಿಟ್ಟುಕೊಂಡು, ನಾಲಗೆಯ ತುದಿಯಲ್ಲಿ ಮತ್ತೊಂದು ಮಾತನಾಡುವ ಚತುರತೆ ತಿಳಿದಿರಲಿಲ್ಲ, ಆದಷ್ಟು ಮಟ್ಟಿಗೆ ನೇರವಾಗಿ ನಡೆದು ಅಭ್ಯಾಸವಾದ ಆಕೆಗೆ. ’ಈ ವಯಸ್ಸಿನಲ್ಲಿ ಇದೇನೇನು ಹೊಸ ವಿದ್ಯೆ ಕಲಿಯಬೇಕಾಯಿತಪ್ಪ, ಶಿವನೇ’ ಎನಿಸಿದರೂ, ಈಗ ಈ ಹೊಸ ಜಾಡಿನಲ್ಲಿ ನಡೆಯದೆ ಗತ್ಯಂತರವಿರಲಿಲ್ಲ. ಅದರಲ್ಲೂ ಆಪ್ತರು, ನೆಂಟರಿಷ್ಟರೊಂದಿಗೆ ಅಂಥ ಮಾತನಾಡಬೇಕಾಗಿ ಬಂದ ಪ್ರಸಂಗ ಮನಸ್ಸಿಗೆ ಸಾಕಷ್ಟು ಹಿಂಸೆಯನ್ನೇ ಕೊಟ್ಟಿತು. ’ಆಯಿತು - ಈ ವಯಸ್ಸಿನಲ್ಲಿ ಏನೇನು ಮಾಡಿಸುತ್ತೀಯೋ ಮಾಡು, ತಾಯಿ. ಆದರೆ ಮನಸ್ಸಿಲ್ಲದೆ ಮಾಡಿದ ತಪ್ಪನ್ನು ಕ್ಷಮಿಸು’ ಎಂದು ಕುಲದೇವತೆಯನ್ನು ಬೇಡಿ, ತನ್ನೊಂದಿಗೆ ಮಾತನಾಡಲು ಬಂದ ಜಂಪಣ್ಣನಾಯಕನೊಂದಿಗೆ, ನರಸಪ್ಪಯ್ಯ ಹೇಳಿಕೊಟ್ಟ ರೀತಿಯಲ್ಲಿ ಮಾತನಾಡಿದರು.

ನರಸಪ್ಪಯ್ಯ ಹಾಕಿದ ಅಡಿಪಾಯ ಭದ್ರವಾಗಿದ್ದುದರಿಂದ, ಮನಸ್ಸಿಗೆ ಬೇಸರವಾದ ಮಾತನ್ನು ಓಬವ್ವನಾಗತಿ ಹೆಚ್ಚಾಗಿ ಆಡುವ ಪ್ರಸಂಗ ಬರಲಿಲ್ಲ. ತನ್ನ ಮಾತಿನ ಬಲೆಯಲ್ಲಿ ಸಿಲುಕಿಕೊಂಡು ತಾನೇ ತಪ್ಪಿತಸ್ಥ ಎಂಬಂತೆ ಮಿಡುಕುತ್ತಿದ್ದ ಜಂಪಣ್ಣನಾಯಕನಿಗೂ ಓಬವ್ವನಾಗತಿಗೆ ಬಹಳ ಕಾಲ ಮುಖಕೊಟ್ಟು ಮಾತನಾಡುವುದು ಸಾಧ್ಯವಾಗದೆ, ಬಹುಬೇಗ ಆಕೆ ಹೇಳಿದ ಮಾತಿಗೆ ಒಪ್ಪಿ-

"ಅವ್ವಾ, ನೀವು ಹೇಗೂ ನಮಗೆ ಹಿರಿಯರು. ಕಿರಿಯರು ಮಾಡಿದ ತಪ್ಪನ್ನು ಹೊಟ್ಟೆಯಲ್ಲಿ ಹಾಕಿಕೊಳ್ಳಬೇಕು" – ಎಂದು ಹೇಳಿ ಹೋದ.

ಆದರೆ ಜಂಪಣ್ಣನಾಯಕನನ್ನು ಒಪ್ಪಿಸಿದಷ್ಟು ಸುಲಭವಾಗಿ ನಿಂಗವ್ವನನ್ನು ಒಪ್ಪಿಸುವುದು ಓಬವ್ವನಾಗತಿಗೆ ಕಷ್ಟವಾಯಿತು. ಆಕೆ ಹೇಳಿದುದನ್ನೆಲ್ಲ ಕೇಳಿದ ನಿಂಗಪ್ಪ–

"ಅವ್ವಾ. ನಾವು ನಮ್ಮದು ಎಂದುಕೊಳ್ಳುವುದೆಲ್ಲಾ ಏನಿದ್ದರೂ ಈ ಮನೆಗೆ ಸೇರಿದ್ದು. ಅದಕ್ಕೇ 'ಈ ರಾಜ್ಯದ ಸೇವೆಗೆ ನಿನ್ನ ಮಗ ಬೇಕು' ಎಂದಾಗ, ಮರುಮಾತಾಡದೆ ಕೊಟ್ಟೆವು. ಹಾಗೆಂದು ನಾವೇ ಇಲ್ಲಿ ಬಂದು ಬಿಡಾರಬಿಟ್ಟರೆ ನೋಡಿದ ಜನ ಏನಂದಾರು? ಆ ಲೋಕಾಪವಾದ ನಮಗೆ ಬೇಡ. ನೀವು ಕರೆದಾಗ ಬರುತ್ತೇವೆ. ನಮ್ಮ ಮಗ ಹೇಗೆ ಬೆಳೆಯುತ್ತಿದ್ದಾನೋ ನೋಡಿಕೊಂಡು ಹೋಗುತ್ತೇವೆ, ಅಷ್ಟು ಪ್ರೀತಿ ಸಾಕು" – ಎಂದುಬಿಟ್ಟಳು.

ನಿಂಗವ್ವನಾಡಿದ ಮಾತು ಸರಿ ಎನಿಸಿದರೂ, ಆ ಮಾತಿನ ಹಿಂದಿದ್ದ ನಿಃಸ್ಪೃಹತೆ ಮೆಚ್ಚುಗೆಯಾದರೂ-

"ಇದೇನು ಮಾತು - ನಾವು ಕೇಳಿದಾಗ ನಿನ್ನ ಕರುಳಿನ ಬಳ್ಳಿಯನ್ನೇ ಕತ್ತರಿಸಿಕೊಟ್ಟು, ಈಗ ನಮಗೆ ದೂರವಾದ ಹಾಗೆ ಮಾತಾಡುತ್ತೀಯಲ್ಲ. ಅವರಿವರ ಮಾತು ನನಗೆ ಬೇಡ -ನಿನ್ನ ಮಗನ ಮುಖ ನೋಡಿಯಲ್ಲ, ನನ್ನ ಮುಖ ನೋಡಿ ಹೇಳು. ಮುಪ್ಪಿನ ಮುದುಕಿ -ಈ ವಯಸ್ಸಿನಲ್ಲಿ ನಾನೆಷ್ಟು ಭಾರ ಹೊರಲಿ? ನಿನ್ನ ಮಗನಿಗೆ ರಾಜ್ಯವಾಳುವುದು ಹೇಳಿಕೊಟ್ಟ ಹಾಗೆ, ನಿನ್ನ ಸೊಸೆಗೆ ಸಂಸಾರಮಾಡುವುದನ್ನೂ ನಾನು ಕಲಿಸಬೇಕೆ? ರಾಜ್ಯದ ಮೇಲೆ ನಿಷ್ಠೆ, ಮಗನ ಮೇಲೆ ಪ್ರೀತಿ ಎಲ್ಲಾ ಇರಲಿ ಎನ್ನುತ್ತೀಯ. ನನ್ನ ಮೇಲೆ ಮಾತ್ರ ನಿನಗೆ ಕನಿಕರ ಇಲ್ಲವೇ? ಇಲ್ಲಿ ನಾವು ಅತ್ತರೂ, ಸತ್ತರೂ ಕೇಳುವುದಕ್ಕೆ ಇನ್ನೊಂದು ಹೆಣ್ಣು ಜೀವ, ಈ ತುಂಬಿದ ಅರಮನೆಯಲ್ಲಿಲ್ಲ. ಅದಕ್ಕೇ 'ನಮ್ಮ ಬೆನ್ನಿಗೆ ಆಸರೆಯಾಗಿ ಬಾರವ್ವಾ' ಎಂದರೆ ಊರಿನ ಮಾತು ಹೇಳಿ ದೂರ ಮಾಡುತ್ತೀಯಾ? ನನ್ನದೆಲ್ಲಾ ಇನ್ನೆಷ್ಟು ದಿನದ ಮಾತು - ಇವತ್ತೋ ನಾಳೆಯೋ ಶಿವನ ಕರೆಗೆ ಕಾದಿರುವ ಮುದುಕಿ. ನಾನು ಕಣ್ಣು ಮುಚ್ಚಿಕೊಂಡ ಮೇಲಾದರೂ ನೀನು ಇಲ್ಲಿಗೆ ಬರದೆ ಆಗುತ್ತದೆಯೇ? ನೀನು ಬೇಡವೆಂದರೂ ನಿನ್ನ ಮಗ ಬಿಡುತ್ತಾನೆಯೇ? ಇವತ್ತಲ್ಲ-ನಾಳೆ ಮಗನಿಗಾಗಿ ಬರಬೇಕಾದವಳು. ಎರಡು ದಿನ ಮುಂಚೆ

ಬಂದರೆ ತಪ್ಪೇನಾಯಿತು? ನಾಗತಿಯಾಗಿ ನಾನು ಕೇಳಿದಾಗ ಮಗನನ್ನು ಕೊಟ್ಟೆ. ಹಾಗೇ ಅಪ್ಪಣೆಮಾಡಿದರೆ ಇಲ್ಲ ಎನ್ನುತ್ತೀಯಾ?"

"ಅಪ್ಪಣೆಮಾತಿಗೆ ಎದುರಾಡುವಷ್ಟು ಧೈರ್ಯ ನಮಗಿಲ್ಲ. ಅದು ರಾಜಾಪರಾಧ" - ಎಂದಳು ನಿಂಗವ್ವ.

"ಅದಕ್ಕೇ ಅದು ಬೇಡ ಎಂದು ಪ್ರೀತಿಯಿಂದ ಕರೆದೆ. ಬದಲು ಮಾತಾಡದೆ ಬಾ. ನಿನ್ನ ಮನಸ್ಸು ನಮಗೆ ಗೊತ್ತು. ಸಣ್ಣ ಜನರ ನಾಲಗೆ ತಪ್ಪು ಮಾಡಿದರೆ, ಅದನ್ನು ಕತ್ತರಿಸಿ ನಾಯಿಗೆ ಹಾಕಿದರಾಯಿತು. ನೀನೇನೂ ಕುಂಟುನೆಪ ತೆಗೆಯಬೇಡ. ಮಗ ಸೊಸೆ ಈ ಮನೆಯಲ್ಲಿ ನಲಿಯುವುದನ್ನು ನೋಡುವ ಭಾಗ್ಯ ಕಳೆದುಕೊಂಡೆ - ಯಾವ ಜನ್ಮದಲ್ಲಿ ಮಾಡಿದ ಪಾಪಕ್ಕೋ, ಈ ಜನ್ಮದಲ್ಲಿ ತಾಯಿ-ಮಕ್ಕಳನ್ನು ಅಗಲಿಸುವ ಪಾಪ ನನ್ನ ತಲೆಗೆ ಕಟ್ಟಬೇಡ, ಇನ್ನು ಇರುವಷ್ಟು ದಿನ - ಹಾಯಾಗಿರಲುಬಿಡು ತಾಯಿ-ಮಕ್ಕಳು, ಅಣ್ಣ-ತಮ್ಮಂದಿರು, ಗಂಡ-ಹೆಂಡತಿ, ಮಗ-ಸೊಸೆ – ಎಲ್ಲಾ ಕಲೆತು ಮಾಡೋ ಸಂಸಾರದ ಸೊಗಸು ನೋಡುತ್ತಾ ಕಣ್ಣು ಮುಚ್ಚಿಕೊಳ್ಳುತ್ತೇನೆ. ಈ ಮಾತಿಗೆ ಬದಲು ಹೇಳಿ, ಲೋಕಕ್ಕೆ ಹೆದರಿ, ದೇವರ ಕಣ್ಣಿನಲ್ಲಿ ಪಾಪ ಕಟ್ಟಿಕೊಳ್ಳಬೇಡ"

- ಎಂದು ಸಕಲಾಸ್ತ್ರವನ್ನೂ ಪ್ರಯೋಗಿಸಿದಮೇಲೇ, ನಿಂಗವ್ವ, ಓಬವ್ವನಾಗತಿಯ ಮಾತಿಗೆ ಒಪ್ಪಿಗೆ ಕೊಟ್ಟಿದ್ದು.

"ನೀವಿಷ್ಟೆಲ್ಲಾ ಹೇಳಿ ನನ್ನ ಬಾಯಿ ಕಟ್ಟಿಬಿಟ್ಟಿರಿ" – ಎಂದಳು ನಿಂಗವ್ವ.

"ಈಗಷ್ಟೇ – ಇನ್ನು ಮುಂದೆ ಈ ಮನೆಯಲ್ಲಿ ನಿನ್ನ ಬಾಯಿಗೆ ಯಾರೂ ಎದಿರಾಡುವುದಿಲ್ಲ"

-ಎಂದರು ನಗುತ್ತಾ, ಓಬವ್ವನಾಗತಿ, 'ತಾನಿನ್ನು ಆದಷ್ಟು ಭಾರ ಕಡಿಮೆ ಮಾಡಿಕೊಳ್ಳಬೇಕು' – ಎಂದು ಯೋಚಿಸಿ.

ಆಕೆಯ ಯೋಚನೆ ಹಾಗಿತ್ತು.

ತಂದೆ, ತಾಯಿ, ತಮ್ಮ ದುರ್ಗಕ್ಕೆ ಬರಲು ಒಪ್ಪಿದ್ದಾರೆ ಎಂದು ಕೇಳಿ ಮದಕರಿನಾಯಕನೂ ಮದುವೆಯಾದದ್ದಕ್ಕಿಂತ ಹೆಚ್ಚಿನ ಸಂತೋಷಪಟ್ಟು, ಬೇರೆ ಏನನ್ನೋ ಕನಸು ಕಟ್ಟಿದ.

ಅವನ ಕನಸು ಹಾಗಿತ್ತು.

ಆದರೆ –

ವಿಧಿ ಕಟ್ಟಿದ ವ್ಯೂಹವೇ ಬೇರೆಯಾಗಿತ್ತು.

ಗರಿಬಿಚ್ಚಿದ ಗರುಡ



ಕಾಮಗೇತಿ ಬಾಗಿಲು



ಶ್ರೀ ಸಂಪಿಗೆ ಸಿದ್ಧೇಶ್ವರ ದೇವಾಲಯ

೧

"ತಿ....ತ್ತಿ....ರಿ...ರಿ...ಥ್ರೂ...ಥ್ರೂ., ತ್ತಿತ್ತಿರಿ...ರಿರಿ...ಥ್ರೂ...ಡೂಹೂ..."

ದುರ್ಗವನ್ನು ಕವಿದ ನಡುರಾತ್ರಿಯ ಕತ್ತಲಲ್ಲಿ, ಆ ಕತ್ತಲೆಯನ್ನು ಕತ್ತರಿಸುವಂತೆ ಕೇಳಿ ಬರುವ ಕಹಳೆಯ ಸದ್ದನ್ನು ಕೇಳಿ. ಸುಖನಿದ್ರೆಯಲ್ಲಿ ಮಲಗಿದ್ದ ದಳವಾಯಿ ಭರಮಣ್ಣನಾಯಕ, ಕೆಟ್ಟ ಕನಸು ಬಿದ್ದವನಂತೆ, ಮೆಟ್ಟಿಬಿದ್ದು ಮೇಲೆದ್ದು ಕಿವಿ ಚುರುಕುಮಾಡಿ ಕೇಳಿದ.

"ತಿ...ತ್ತಿ...ರಿ...ರಿ...ಕುಹೂ...ತ್ತಿ...ತ್ತಿ...ರಿರಿ...ಕುಹೂ..."

- ಮತ್ತೊಮ್ಮೆ ಅರಮನೆಯ ಸನಿಹದ ಕಹಳೆಯ ಬತೇರಿಯಿಂದ ಮೊಳಗಿದ ಕಹಳೆಯ ಸದ್ದು ಕೇಳಿಸಿತು.

ಆ ಸದ್ದು ಜಾವಗಹಳೆಯ ಸದ್ದಲ್ಲ, ಅಪಾಯಸೂಚನೆಯ 'ಸನ್ನೆಗಹಳೆ'ಯ ಎಚ್ಚರಿಸುವ ಕರ್ಕಶ ಕೂಗು.

ಆ ಸದ್ದು ಕೊಟ್ಟ ಸೂಚನೆ ಸತ್ಯವೆಂಬಂತೆ –

"ಢಣ…ಢಣ…ಢಣ…"

- ಎಂಬ ಕಂಚಿನ ನಗಾರಿಯ ಮೊಳಗು ಕೇಳಿಸಿತು.

ಆ ಸದ್ದನ್ನು ಕೇಳುತ್ತಿದ್ದ ಹಾಗೇ ದಳವಾಯಿ ಭರಮಣ್ಣ ಕೆಂಜಿಗದಿಂದ ಕಚ್ಚಿಸಿಕೊಂಡವನಂತೆ ಛಟ್ಟನೆ ಮಲಗಿದ್ದವನು ಮಂಚದ ಮೇಲಿಂದ ಎದ್ದು, ಪಕ್ಕದಲ್ಲಿ ಮಲಗಿದ್ದ ಹೆಂಡತಿಯನ್ನು ಎಬ್ಬಿಸುವ ಯೋಚನೆಯನ್ನೂ ಮಾಡದೆ, ಬಚ್ಚಲುಮನೆಗೆ ಹೋಗಿ, ಬಾಯಿಮುಕ್ಕಳಿಸಿ, ಕಣ್ಣನ್ನು ಕವಿದಿದ್ದ ನಿದ್ದೆಯ ಮಂಪರನ್ನು ತಣ್ಣೀರಿನಿಂದ ತೊಳೆದು, ಆತುರಾತುರವಾಗಿ ಉಡುಪು ಧರಿಸಿ, ಹೊರಬಂದು, ಬಾಗಿಲು ಕಾಯುತ್ತಿದ್ದ ಭಟನಿಗೆ, ಲಾಯದ ಆಳನ್ನೆಬ್ಬಿಸಿ ಕುದುರೆಯನ್ನು ತರಿಸುವಂತೆ ಹೇಳಿ, 'ಇದೇನು ಅನಿರೀಕ್ಷಿತ' ಎಂದು ಚಿಂತಿಸುತ್ತಲೇ ಅತ್ತಿಂದಿತ್ತ ಮನೆಯ ಮುಂದಿನ ಕೈಸಾಲೆಯಲ್ಲಿ ಶತಪಥ ಹಾಕಲಾರಂಭಿಸುತ್ತಾ, ಹಾಗೆ ಅಕ್ಕಪಕ್ಕ ನೋಡಿದ.

ಆತನ ಮನೆಯಿದ್ದ ಸಾಲಿನಲ್ಲೇ ಮತ್ತೆ ಹತ್ತಾರು ದಳವಾಯಿಗಳ ಮನೆಗಳು.

ಭರಮಣ್ಣನಾಯಕ ನೋಡುವ ವೇಳೆಗೆ ಆ ಮನೆಗಳ ಮುಂದೂ ದಳವಾಯಿಗಳು ತನ್ನಂತೆಯೇ ಅವಸರದಿಂದ ಹೊರಡುವ ಸಿದ್ಧತೆ ಮಾಡುತ್ತಿರುವುದು ಕಾಣಿಸಿತು. ಒಂದಕ್ಕೊಂದು ಒತ್ತಿಕೊಂಡು ಕಟ್ಟಿದ ಮನೆಗಳು ಅವು. ಇಲ್ಲಿಂದ ಕೂಗು ಹಾಕಿದರೆ, ಅತ್ತಿತ್ತ ನಾಲ್ಕು ಮನೆಗಳಿಗೆ ಕೇಳಿಸುತ್ತದೆ.

ಆದರೆ ಅದಾವ ಗೊಡವೆಗೂ ಹೋಗದೆ –

"ಬೇಕೂಫ….ಒಂದು ಕುದುರೆ ತರಲು ಎಷ್ಟು ಹೊತ್ತು ಮಾಡುತ್ತಿದ್ದಾನೆ"

-ಎಂದು ವಟಗುಟ್ಟುತ್ತಾ ಲಾಯದ ಆಳನ್ನು ಬೈಯುತ್ತಿದ್ದವನು, ಆಳು ಕುದುರೆಯನ್ನು ತರುತ್ತಿದ್ದ ಹಾಗೇ, ಕುದುರೆಯ ಬೆನ್ನೇರಿ ಕುಳಿತು, ಕೆನೆಯುತ್ತಿದ್ದ ಕುದುರೆಯ ಬೆನ್ನು ಚಪ್ಪರಿಸಿ, ಲಗಾಮನ್ನು ಸಡಿಲಬಿಟ್ಟು, ಪ್ರಧಾನಿಗಳ ಮನೆಯ ಬಳಿಯಿದ್ದ 'ಅವಸರದ ಚಾವಡಿ'ಯತ್ತ ದೌಡಾಯಿಸಿದ. ಅವನ ಕುದುರೆಯ ಖುರಪುಟದ ಸದ್ದನ್ನು ಪ್ರತಿಧ್ವನಿಸಿದಂತೆ, ಮತ್ತೆ ಹತ್ತಾರು ಕುದುರೆಗಳ ಖುರಪುಟದ ಸದ್ದು ಕೇಳಿಸಿ, ಆ ಸದ್ದುಗಳು, ದಳವಾಯಿ ಭರಮಣ್ಣನನ್ನು ಹಿಂಬಾಲಿಸಿದವು.

ದಳವಾಯಿಗಳು ಅವಸರದ ಚಾವಡಿಗೆ ಬರುವ ವೇಳೆಗಾಗಲೇ ಪ್ರಧಾನಿ ನರಸಪ್ಪಯ್ಯನವರು ಅಲ್ಲಿಗೆ ಬಂದು, ಬರುವವರಿಗಾಗಿ ಕಾಯುತ್ತಾ ಕುಳಿತಿದ್ದರು. ಬರಬೇಕಾದವರೆಲ್ಲಾ ಬರುವವರೆಗೂ ಒಂದೂ ಮಾತನಾಡದೆ ಯಾವುದೋ ದೀರ್ಘಾಲೋಚನೆಯಲ್ಲಿ ಮಗ್ನರಾಗಿ, ದಿಂಬಿಗೆ ಒರಗಿ ಕುಳಿತಿದ್ದ ನರಸಪ್ಪಯ್ಯನವರನ್ನು-

"ಏನು ಸಮಾಚಾರ?" - ಎಂದು ದಳವಾಯಿ ಭರಮಣ್ಣ ಕೇಳಿದ.

"ನಂದಿವಾಳದ ಗುಡ್ಡದ ಮೇಲೆ ಬೆಂಕಿ ಕಾಣಿಸಿಕೊಂಡಿತಂತೆ. ಕಹಳೆಬತೇರಿಯ ಆಳು ಸೂಚನೆ ಕೊಟ್ಟು ಹೋದ ಕೂಡಲೇ ಕಹಳೆ ಊದಿಸಲು ಹೇಳಿದೆವು" – ಎಂದರು ನರಸಪ್ಪಯ್ಯ.

"ನನ್ನಿವಾಳದ ಗುಡ್ಡ ಎಂದರೆ ರಾಯದುರ್ಗದ ಕಡೆಯಿಂದಲೋ, ನಿಡುಗಲ್ಲಿನ ಕಡೆಯಿಂದಲೋ ದುರ್ಗಕ್ಕೆ ಅಪಾಯ ಹೊಂಚುಹಾಕುತ್ತಿದೆಯೆಂದೇ ಅರ್ಥ." – ಬಾಣದ ಮದಕರಿನಾಯಕ ಹೇಳಿದ.

"ಅದೇನೋ ನಿಜವೇ. ಆದರೆ ಆ ಇಬ್ಬರಲ್ಲಿ ಯಾರು ಎಂದು ನಾವು ಯೋಚಿಸುತ್ತಿದ್ದೇವೆ. ಅಪಾಯ ಎತ್ತಣಿಂದ ಎಂಬುದು ಬೆಳಕು ಹರಿಯುವ ವೇಳೆಗೆ ತಿಳಿಯುತ್ತದೆ. ಎತ್ತಕಡೆಯಿಂದ ಬಂದರೂ ನಾವಂತೂ ಎದುರಿಸಲು ಸಿದ್ಧರಾಗಬೇಕು. ಸೇನೆ ಯಾವ ಸ್ಥಿತಿಯಲ್ಲಿದೆ, ದಳವಾಯಿಗಳೇ?" – ಪ್ರಧಾನಿಗಳು ಕೇಳಿದರು.

"ನಮ್ಮ ಸೇನೆ ಯಾವಾಗಲೂ ಸಿದ್ಧ." – ದಳವಾಯಿ ಭರಮಣ್ಣ ಹೇಳಿದ.

"ಈಚೆಗೆ ನೀವು ಸೇನೆಗೆ ಯುದ್ಧದ ಕವಾಯತು ಮಾಡಿಸಿ ನೋಡಿದ್ದೀರಾ? ಪಟ್ಟಾಭಿಷೇಕ, ನಾಯಕರ ವಿವಾಹ ಎಂದು ಎರಡೆರಡು ಬಾರಿ ಕಾಣಿಕೆ ಪಡೆದ ಸೈನಿಕರು, ಎಚ್ಚರವಾಗಿದ್ದಾರೋ, ಇನ್ನೂ ಕುಡಿದು ತಿಂದ ಅಮಲಿನಲ್ಲಿಯೇ ಇದ್ದಾರೆಯೋ - ಈಗಿಂದೀಗಲೇ ಹೋಗಿ, ತುಕಡಿಗಳ ಸರದಾರರಿಗೆಲ್ಲ ಎಚ್ಚರಿಸಿ, ಹಗಲಾಗುವ ವೇಳೆಗೆ, ಎಲ್ಲಾ ಕಾದು ಸಿದ್ಧರಾಗಿರಬೇಕು. ಲಗ್ನವಾದ ಬಳಿಕ ನೆಂಟರಿಷ್ಟರ ಮನೆಗೆ ಹೋದ ಸೈನಿಕರೆಲ್ಲಾ ಹಿಂದಿರುಗಿದ್ದಾರೆಯೇ ? - ಎಲ್ಲಾ ಲೆಕ್ಕ ತೆಗೆದುಕೊಳ್ಳಿ"

- ಎಂದು ದಳವಾಯಿ ಭರಮಣ್ಣನಿಗೆ ಹೇಳಿ –

"ಮದ್ದು ಗುಂಡಿನ ಸಂಗ್ರಹ, ಕೋವಿ, ತುಫಾಕಿಗಳು, ಫಿರಂಗಿಗಳು ಯಾವ ಸ್ಥಿತಿಯಲ್ಲಿವೆ ಎಂಬುದನ್ನು ಖುದ್ದಾಗಿ ವಿಚಾರಿಸಿ" – ಎಂದು ಠಾಣ್ಯದ ಚಾವಡಿಯ ಹುಚ್ಚಪ್ಪನಾಯಕರಿಗೆ ಅಪ್ಪಣೆ ಮಾಡಿ –

"ನಿಮ್ಮ ಕುದುರೆದಳ ಹೇಗಿದೆ ? ಎಷ್ಟು ಕುದುರೆ ಲಡಾಯಿಗೆ ಹೋಗಲು ಸಿದ್ಧವಾಗಿದೆ ಎನ್ನುವುದರ ಲೆಕ್ಕ ನಾಳೆ ಬೆಳಗಿನೊಳಗಾಗಿ ನಮಗೆ ಗೊತ್ತಾಗಬೇಕು" – ಎಂದು ಅಶ್ವದಳದ ಮನಸುಬದಾರ ನೀಲಕಂಠರಾಯನಿಗೆ ಹೇಳಿದರು ನರಸಪ್ಪಯ್ಯ.

"ಅಂತೂ ನಾವು ಈ ಸಡಗರದಲ್ಲಿ ಮೈಮರೆತಿರುವ ಹೊತ್ತನ್ನೇ ಕಾದಿದ್ದರು – ಅಂತ ಕಾಣುತ್ತದೆ, ಈ ಚಂಡಾಲರು. ಎರಡು ದಿನ ಹಾಯಾಗಿ ಮಲಗಲೂ ಬಿಡಲಿಲ್ಲ." – ಬಾಣದ ಮದಕರಿನಾಯಕ ಹೇಳಿದ.

“ಇಂಥ ಹೊತ್ತಿನಲ್ಲೇ ದಾಳಿ ಮಾಡದಿದ್ದರೆ, ಅವರು ಶತ್ರುಗಳು ಹೇಗಾದಾರು? ಆಹ್ವಾನ ಪತ್ರಿಕೆ ಕೊಟ್ಟು ಬರಲು ಅವರೇನು ಬೀಗರೇ....ಬರಲಿ. ಬರಲಿ” - ಎಂದು ಹಲ್ಲುಕಡಿದು ಹೇಳಿದ, ಕಂದನಕೋವಿ ಭರಮಣ್ಣ.

“ಅವರೇ ಬರುತ್ತಾರೋ, ನಾವೇ ಹೋಗಬೇಕೋ – ಬೆಳಗಾದಮೇಲೆ ಇತ್ಯರ್ಥವಾಗುತ್ತದೆ. ಅಲ್ಲಿಯವರೆಗೂ ನಾವು ಮಾಡಬೇಕಾದ ಕೆಲಸ ಬೇಕಾದಷ್ಟಿದೆ. ಈಗಾಗಲೇ ನಾಗತಿಯವರಿಗೂ ಕಹಳೆಯ ಸದ್ದು ಕೇಳಿಸಿರಬೇಕು. ಖಚಿತವಾದ ಸುದ್ದಿ ಬರುತ್ತಲೇ, 'ನಾವೇ ಅವರಲ್ಲಿಗೆ ಖುದ್ದಾಗಿ ಬಂದು ವಿಷಯ ಅರಿಕೆ ಮಾಡಿಕೊಳ್ಳುತ್ತೇವೆ' - ಎಂದು ಅರಮನೆಗೆ ಸುದ್ದಿ ಮುಟ್ಟಿಸಿ”

-ಎಂದು ಅಲ್ಲಿ ನೆರದವರಲ್ಲಿ ಯಾರೊಬ್ಬರಾದರೂ ಆ ಕೆಲಸ ಮಾಡುವಂತೆ ತಿಳಿಸಿ, ತಳವಾರಚಾವಡಿಯ ಕಾಟಪ್ಪನಾಯಕನಿಗೆ –

“ರಂಗಯ್ಯನ ಕೋಟೆ ಕಾವಲಿನವರಿಗೆ ಸುದ್ದಿಚಾರರು ಬಂದಕೂಡಲೇ, ನಮ್ಮಲ್ಲಿಗೆ ಕರೆತರುವಂತೆ ಹೇಳಿ'' – ಎಂದರು ನರಸಪ್ಪಯ್ಯ.

“ತಾವು ಮನೆಯಲ್ಲಿರಿ. ಆ ಕೆಲಸ ನಾನು ಮಾಡುತ್ತೇನೆ” - ಎಂದ ತಳವಾರ ಚಾವಡಿಯ ದಳವಾಯಿ ಕಾಟಪ್ಪನಾಯಕ.

“ಮನೆ – ಅದೇ. ನಮ್ಮ ಮನೆಯ ಮಾತು ಹಾಗಿರಲಿ. ಅದರ ಚಿಂತೆ ನಮಗಿಲ್ಲ. ರಂಗಯ್ಯನ ಕೋಟೆಬಾಗಿಲವರಿಗೆ ಸುದ್ದಿ ಮುಟ್ಟಿಸಿ, ನೀವು ಈ ಗಳಿಗೆಯಿಂದ ತಳವಾರಚಾವಡಿಯ ಜನ ಕಟ್ಟೆಚ್ಚರದಲ್ಲಿರುವಂತೆ ಅಪ್ಪಣೆಮಾಡಿ. ಹೀಗೆಂದು ಖಚಿತವಾಗಿ ಸುದ್ದಿ ಬಂದಮೇಲೆ ಹೇಳಿ ಕಳಿಸುತ್ತೇನೆ; ಅರಮನೆಯಲ್ಲಿ ಸೇರೋಣ. ಅಲ್ಲಿಯವರೆಗೆ ನಿಮ್ಮ ನಿಮ್ಮ ಕೆಲಸ ನೋಡಿ. ನಿದ್ರೆ ಮಾಡುವ ಕಾಲ ನಮಗಿನ್ನು ಮುಗಿಯಿತು ಎಂದು ಕಾಣುತ್ತದೆ'' - ಎಂದು ಹೇಳಿ, ನರಸಪ್ಪಯ್ಯ ಬೇರಾವುದೋ ಚಿಂತೆಯಲ್ಲಿ ಮಗ್ನರಾದರು.

ಅವರು ಬೇರಾವುದೋ ಚಿಂತೆಯಲ್ಲಿ ಮುಳುಗಿದಂತೆಯೇ, ಉಳಿದ ದಳವಾಯಿಗಳಿಗೂ ಮಾತನಾಡಲು ಬಿಡುವಿಲ್ಲದಷ್ಟು ಮಾಡುವ ಕೆಲಸವಿತ್ತು. ಎಲ್ಲರೂ ಮಾತಿಗಿಂತ ಕೆಲಸದಲ್ಲಿ ನುರುಪಡಿಯಾದ ಜನ. ಯಾರೂ ಹೇಳದೆಯೇ ಒಬ್ಬೊಬ್ಬರಿಗೂ ತಾವು ಮಾಡಬೇಕಾದ ಕೆಲಸವೇನೆಂದು ತಿಳಿದಿತ್ತು. ಎಂತಲೇ ಯಾರೂ ಮುಂದಿನ ಮಾತಿಗಾಗಿ ಕಾಯದೆ, ತಮ್ಮ ತಮ್ಮ ಕಾರ್ಯಕ್ಷೇತ್ರದತ್ತ ಚದುರಿದರು.

ಮುಂಜಾವಿನ ಕೆಂಪು ಕರಗಿ, ಬೆಳಕು ಬೆಳ್ಳಗಾಗುವ ವೇಳೆಗೆ, ಅರಮನೆಯಲ್ಲಿ ಅವಸರದ ಓಲಗ ಕೂಡಿತು.

ಅಂಥ ಸಭೆಗೆ ಬರಬೇಕಾದವರು, ನಡುರಾತ್ರಿಯೊಳಗೇ ಸುದ್ದಿ ಮುಟ್ಟಿದ್ದರಿಂದ, ಒಬ್ಬರಿಗಿಂತ ಒಬ್ಬರು ಮುಂದಾಗಿ ಬಂದು, ದರ್ಬಾರು ಬಕ್ಷಿಗಳ ವಾಡಿಕೆಯ ಸ್ವಾಗತಕ್ಕೂ ಕಾಯದೆ ತಮಗೆ ಚಿರಪರಿಚಿತವಾದ ತಮ್ಮ ತಮ್ಮ ಆಸನಗಳಲ್ಲಿ ಮಂಡಿಸಿದರು.

ಎಲ್ಲರಿಗಿಂತಲೂ ಮುಂಚಿತವಾಗಿಯೇ ಬಂದಿದ್ದ ಪ್ರಧಾನಿ ನರಸಪ್ಪಯ್ಯನವರು, ಬರಬೇಕಾದವರೆಲ್ಲರೂ ಬಂದ ಕೂಡಲೇ ವಾಡಿಕೆಯ ಮಾತಿಗೆ ಅವಕಾಶಕೊಡದೆ, ದರ್ಬಾರು ಬಕ್ಷಿಗಳಿಗೆ—

“ಸಭೆ ಕಾದಿದೆ ಎಂದು ಹಿರಿಯ ನಾಗತಿಯವರಿಗೆ, ಮಹಾಸ್ವಾಮಿಗಳಿಗೆ ಸುದ್ದಿ ತಿಳಿಸಿ” ಎಂದು ಹೇಳಿದರು.

ಸಭೆ ಕಲೆತು, ಸಭೆಗೆ ನಾಯಕರು ಬರುವವರೆಗಿನ ನಡುವಿನ ಅವಧಿಯಲ್ಲಿ ಸಭೆ ಸೇರಿದ ಜನ ತಗ್ಗಿದ ಧ್ವನಿಯಲ್ಲಿ ಒಬ್ಬರೊಡನೊಬ್ಬರು ಏನಾದರೂ ಮಾತನಾಡುತ್ತಿದ್ದರು. ಆದರೆ ಈ ದಿನ ಮಾತ್ರ ಯಾರಿಗೂ ಮಾತನಾಡುವ ಇಚ್ಛೆ ಇದ್ದಂತಿರಲಿಲ್ಲ. ಎಲ್ಲರ ಮುಖವೂ ದೃಢ ನಿರ್ಧಾರದ ಕಠೋರತೆಯ ಏಕೈಕ ಮುದ್ರೆಯನ್ನು ತಳೆದು, ಯಾವಾಗಲೂ ಗಂಭೀರವಾಗಿರುತ್ತಿದ್ದ ಸಭೆಯಲ್ಲಿ ಗಭೀರತೆಯನ್ನು ಮೂಡಿಸಿತ್ತು. ತಮ್ಮ ಆಸನದಲ್ಲಿ ಸ್ಥಿರವಾಗಿ ಕುಳಿತಿರಬೇಕಾಗಿದ್ದ ಪ್ರಧಾನಿ ನರಸಪ್ಪಯ್ಯ, ಇಂದು ಹಾಗೆ ಮಾಡದೆ ಯುದ್ಧ ಚಿಂತೆಯಿಂದ ಅಲ್ಲಕಲ್ಲೋಲವಾದ ಎಲ್ಲರ ಮನಸ್ಸಿನ ಪ್ರತಿನಿಧಿಯೆಂಬಂತೆ, ಅತ್ತಿಂದಿತ್ತ ಸುತ್ತಾಡುತ್ತಿದ್ದರು. ಗಳಿಗೆಗೊಮ್ಮೆ ನಾಗತಿಯವರು ಪ್ರವೇಶಿಸುವ ಬಾಗಿಲ ಕಡೆ ನೋಡುತ್ತಾ.

ನಾಗತಿಯವರೂ ಬಹಳ ಹೊತ್ತು ಕಾಯಿಸಲಿಲ್ಲ. ಆತುರವಾಗಿಯೇ, ದಾರಿತೋರುತ್ತಿದ್ದ ಬೆಳ್ಳಿಕಟ್ಟಿಗೆಯವರು ತಮಗೆ ಅಡ್ಡವಾಗದಂತೆ 'ದೂರ ನಿಲ್ಲು' ಎಂದು ಹೇಳಿ, ನಾಯಕರೊಂದಿಗೆ ಸಭೆಯನ್ನು ಪ್ರವೇಶಿಸಿ, ತಮ್ಮ ಸ್ಥಾನದಲ್ಲಿ ಕುಳಿತು, ಬಿಗಿದ ಧ್ವನಿಯಲ್ಲಿ–

“ಸಭೆ ಕರೆದ ವಿಷಯ ಎಲ್ಲರಿಗೂ ತಿಳಿದಿದೆ. ಮುಂದಿನ ಮಾತೇನೆಂಬುದನ್ನು ಪ್ರಧಾನಿಗಳು ಹೇಳಲಿ”

- ಎಂದು ಕುಳಿತುಕೊಳ್ಳುತ್ತಿದ್ದಂತೆಯೇ ಸಭೆ ನಡೆಯಲು ಅಪ್ಪಣೆಕೊಟ್ಟರು.

ಇರುಳೆಲ್ಲಾ ನಿದ್ರೆಗೆಟ್ಟು ಕಣ್ಣು ಕೆಂಪೇರಿದ್ದರೂ, ಆ ದಣಿವನ್ನು ಮುಖಭಾವದಲ್ಲಿ ಪ್ರಕಟಿಸದೆ, ಉಗ್ರನಿರ್ಧಾರದ, ನೋಡಿದವರ ಎದೆಯಲ್ಲಿ ಭೀತಿಯನ್ನು ಮೂಡಿಸುವ ಮುಖಭಾವ

– ಓಬವ್ವನಾಗತಿಯವರ ಮನಸ್ಸಿನ ಕನ್ನಡಿಯಂತಿತ್ತು. ಅಷ್ಟಿಷ್ಟು ನಿದ್ರೆಯ ಮಂಪರಿದ್ದುದು, ಆತುರದಲ್ಲಿ ಎದ್ದ ಮದಕರಿನಾಯಕನ ಹುಡುಗುಮುಖವೊಂದರಲ್ಲಿಯೇ.

ಅವರಿಬ್ಬರ ಮುಖಗಳನ್ನು ಕ್ಷಣಕಾಲ ನೋಡಿ, ಕೈಚಪ್ಪಾಳೆ ತಟ್ಟಿ, ಆ ಕರೆಗೆ ಉತ್ತರವಾಗಿ ಹತ್ತಿರ ಬಂದ ದರ್ಬಾರು ಬಕ್ಷಿಗಳಿಗೆ –

"ಹೊರಗಿರುವ ಜಾಸೂದರನ್ನು ಒಳಗೆ ಕರೆತನ್ನಿ" - ಎಂದು ಅಪ್ಪಣೆ ಮಾಡಿದರು, ನರಸಪ್ಪಯ್ಯ.

ಅವರ ಅಪ್ಪಣೆಯಾಗುತ್ತಿದ್ದ ಹಾಗೇ ಜಾಸೂದರನ್ನು ಕರೆತರಲು ಹೋದ, ದರ್ಬಾರು ಬಕ್ಷಿಗಳ ಹಿಂದೆ ಜಾಸೂದರು ಬರಲಿದ್ದ ಬಾಗಿಲತ್ತಲೇ ಎಲ್ಲರ ಮುಖಗಳೂ ಕೀಲುಗೊಂಬೆಗಳಂತೆ ತಿರುಗಿದವು.

ಬಿಚ್ಚುಗತ್ತಿಯ ಭಟರನ್ನು ಹಿಂಬಾಲಿಸಿ ಜಾಸೂದರಿಬ್ಬರು ಒಳಬಂದರು. ಇರುಳೆಲ್ಲಾ ನಿದ್ರೆಗೆಟ್ಟು ಕುದುರೆಸವಾರಿ ಮಾಡಿಬಂದಿದ್ದ ಅವರು, ದಣಿವನ್ನೂ ಆರಿಸಿಕೊಳ್ಳದೆ, ಮುಖವನ್ನೂ ತೊಳೆಯದೆ ಹಾಗೇ ಬಂದಿದ್ದರೆಂಬುದನ್ನು ಅವರ ಬಳಲಿದ ಮುಖ, ನಿದ್ರೆಗೆಟ್ಟು ದಾರಿ ನೋಡಿ ಸೋತ ಕಣ್ಣುಗಳು ಸಾರಿಹೇಳುತ್ತಿದ್ದವು. ರಸ್ತೆಯ ಧೂಳಿನ್ನೂ ಅವರ ಮೈ ಮೇಲಿದ್ದ ಕಂಬಳಿಯಿಂದ ಕದಲಿರಲಿಲ್ಲ. ಒಳಗೆ ಬಂದ ಅವರಿಬ್ಬರೂ ನಮಸ್ಕರಿಸುತ್ತಿದ್ದಂತೆಯೇ –

"ಈ ಮುಂಜಾನೆ ನಮಗೆ ಹೇಳಿದ್ದನ್ನು ಸಭೆಗೆ ಹೇಳು, ಮಾರಯ್ಯ" – ಎಂದರು, ತಮ್ಮ ಆಸನದಲ್ಲಿ ಕುಳಿತ ನರಸಪ್ಪಯ್ಯ.

"ಮಾಸ್ವಾಮಿ, ರಾಯದುರ್ಗದ ಜನ ನಮ್ಮ ಮೇಲೆ ಯುದ್ಧ ಹೂಡುವ ಹವಣಿಕೆಯಲ್ಲಿದ್ದಾರೆ. ನಿನ್ನೆ ಸಂಜೆ ನಮ್ಮ ಗಡಿಯ ಚರಾಯಿನಲ್ಲಿ ಮೇಯುತ್ತಿದ್ದ ಹಸುಕರುಗಳನ್ನು ಕದ್ದು ಯುದ್ಧಕ್ಕೆ ಕರೆದಿದ್ದಾರೆ'' – ಎಂದು ಚುರುಕಾಗಿ, ಚುಟುಕಾಗಿ ತಾನು ಹೇಳಬೇಕಾಗಿದ್ದ ಮಾತನ್ನು ಹೇಳಿದ, ಮಾರಯ್ಯ.

"ನಮ್ಮ ಜನ ಅದನ್ನು ತಡೆಯಲಿಲ್ಲವೇ ? ಅವರೇನು ದನ ಕಾಯುತ್ತಿದ್ದರೇ ?"

-ದಳವಾಯಿ ಭರಮಣ್ಣ ತಟಕ್ಕನೆ ಕೆರಳಿ ಕೇಳಿದ.

"ಮಾಸ್ವಾಮಿ, ಹಸು ಕಾಯುವ ಜನ ಗೊಲ್ಲರು, ಸೇನೆಯವರಲ್ಲ. ಆದರೂ ಹತ್ತು ಜನ ಕೈಯಲ್ಲಿದ್ದ ಕೋಲಿನಲ್ಲೇ ಹೊಡೆದಾಡಿ ಸತ್ತ ಮೇಲೇ ಅವರು ನಮ್ಮ ಹಸು ಮುಟ್ಟಿದ್ದು. ಸೇನೆಯವರಿದ್ದಿದ್ದರೆ ಸುದ್ದಿಯನ್ನಲ್ಲ, ಅವರ ತಲೆ ತರುತ್ತಿದ್ದೆವು – ಸನ್ನಿಧಾನಕ್ಕೆ.''

- ಗಂಡುವರಸೆಯಲ್ಲಿ ಮಾರಯ್ಯ ಆಡಿದ ಮಾತನ್ನು ಕೇಳಿ. 'ಭೇಷ್' ಎನ್ನಬೇಕು ಎನಿಸಿತು, ಸಭೆಗೆ.

ಆದರೆ ಆ ಮಾತು ಮುಖ್ಯವಲ್ಲವೆಂಬಂತೆ, ನರಸಪ್ಪಯ್ಯ ಹೇಳಿದರು :

"ನೂರು ಹಸು ಅವರು ಹಿಡಿದದ್ದು ದೊಡ್ಡ ಸುದ್ದಿಯಲ್ಲ. ರಾಯದುರ್ಗದ ತಲೆತಿರುಕ ಆಡಿದ ಮಾತನ್ನು ಸಭೆಗೆ ಹೇಳು."

ಪ್ರಧಾನಿಗಳು ಬಿಡಿಸಿ ಬಿಡಿಸಿ ಕೇಳಿದಾಗ. ರಾಯದುರ್ಗದವರು ಹೇಳಿದ ಮಾತನ್ನು ತುಂಬಿದ ಸಭೆಯಲ್ಲಿ, ಹಿರಿಯ ನಾಗತಿಯವರ ಇದುರಿಗೇ ಹೇಗೆ ಹೇಳುವುದೆಂದು ಅವನು ಹಿಂಜರಿದಾಗ –

"ಆ ಮುಲಾಜುಗಳಿಗೀಗ ಸಮಯವಿಲ್ಲ. ಕೇಳಿದ್ದು ಹೇಳು. ಆ ಮಾತನ್ನು ಸಭೆ ಕೇಳಬೇಕು'' – ಎಂದು ಅಪ್ಪಣೆ ಮಾಡುವಂತೆ ಹೇಳಿದರು, ನರಸಪ್ಪಯ್ಯ.

"ಮಾಸ್ವಾಮಿ, ರಾಯದುರ್ಗದ ತಲೆತಿರುಕರು ಹಡೆದ ತಾಯಿಗೆ ಕೆಟ್ಟ ಮಾತು ಆಡುವವರು..."

"ಆ ದಾಕ್ಷಿಣ್ಯಕ್ಕಿಗ ಹೊತ್ತಿಲ್ಲ ಎಂದು ಹೇಳಿದೆವಲ್ಲ...." – ಗದರಿಸಿದರು, ನರಸಪ್ಪಯ್ಯ.

"'ದುರ್ಗಕ್ಕೀಗ ಗಂಡಸರ ದಿಕ್ಕಿಲ್ಲ. ಪಟ್ಟದ ಮೇಲೆ ಚೋಟುದ್ದ ಹುಡುಗ. ಆಡಳಿತ ಮಾಡೋಳು ಮುದುಕಿ, ನಿಮ್ಮ ಕೈಲೇನಾದೀತು' ಎಂದರು. ನಮ್ಮವರಲ್ಲ, ರಾಯದುರ್ಗದ ಪೋಕರಿ ಜನ'' – ಎಂದು ಮಾರಯ್ಯ ಅಳುಕುತ್ತಾ, ಅಳುಕುತ್ತಾ ಹೇಳಿದ.

ಅವನಾಡಿದ ಮಾತನ್ನು ಕೇಳುತ್ತಿದ್ದ ಹಾಗೇ ಸಭೆ ಕ್ರೋಧ ಕುದಿವ ಕಡಾಯಿಯಾಯಿತು.

"ಆ ಮಾತಾಡಿದ ನಾಲಗೆಯನ್ನು ಕತ್ತರಿಸಿ, ನಾಯಿಗೆ ಉಣಬಡಿಸದಿದ್ದರೆ, ನನ್ನ ಹೆಸರು ಭರಮಣ್ಣನಲ್ಲ, ಅಪ್ಪಣೆಯಾಗಬೇಕು."

-ತನ್ನಾಸನದಿಂದ ಸಿಡಿದು ನಿಂತು ಹೇಳಿದ ದಳವಾಯಿ ಭರಮಣ್ಣ.

"ನಮ್ಮ ನಾಯಕರನ್ನು ಚೋಟುದ್ದದ ಹುಡುಗ ಎಂದರಲ್ಲವೇ ಆ ಕೊಳಕು ನಾಲಗೆಯವರು. ಆ ರಾಯದುರ್ಗದವರ ನೆತ್ತಿಯ ಮೇಲೆ ನಮ್ಮ ಹುಡುಗರ ಮೂತ್ರವಿಸರ್ಜನೆ ಮಾಡಿಸದಿದ್ದರೆ, ನನಗೆ ದುರ್ಗದ ಬೀದಿಯಲ್ಲಿ ಹೆಣ್ಣುಡುಗೆ ಹಾಕಿ ಮೆರವಣಿಗೆ ಮಾಡಿಸಿ. ನನಗೆ ರಣವೀಳ್ಯ ಅಪ್ಪಣೆಯಾಗಬೇಕು" – ಎಂದ ಬಾಣದ ಮದಕರಿನಾಯಕ, ಉಕ್ಕಿಬಂದ ಕ್ರೋಧದಲ್ಲಿ ಸಭಾಮರ್ಯಾದೆಯನ್ನೂ ಮರೆತು.

ಪ್ರಕ್ಷುಬ್ಧ ಕ್ರೋಧದ ವಿವಿಧಾಕಾರಗಳಂತಿದ್ದ ದಳವಾಯಿಗಳು ಇನ್ನೂ ಏನು ಮಾತಾಡುತ್ತಿದ್ದರೋ ಏನೋ, ಆದರೆ ಓಬವ್ವನಾಗತಿಯವರೇ –

"ಸದ್ದು" - ಎಂದರು, ಒರೆಯಿಂದ ಹಿರಿದೆಳೆದ ಖಡ್ಗದ ಧ್ವನಿಯಲ್ಲಿ.

ಆ ಮಾತು ಕೇಳುತ್ತಿದ್ದ ಹಾಗೇ, ಸಭೆಯಲ್ಲಿ ಸದ್ದಡಗಿ ನಾಗತಿಯವರು ಏನಾಡುವರೋ ಎಂದು ಆಲಿಸಿತು. ಕ್ರೋಧದಿಂದ ಆಕೆಯ ಮುಖ ರಕ್ತದಲ್ಲದ್ದಿದಂತಾಗಿ, ಮೈ ಸಹಿಸಲಾಗದ ಸಿಟ್ಟಿನಲ್ಲಿ ನಸುಕಂಪಿಸುತ್ತಿದ್ದರೂ, ದೃಢವಾಣಿಯಲ್ಲಿ ಹೇಳಿದರು ಓಬವ್ವನಾಗತಿ –

"'ಆಳುತ್ತಿರುವವರು ಹೆಂಗಸರು, ಪಟ್ಟದ ದೊರೆ ಹುಡುಗ' ಎಂದರಲ್ಲವೇ ಆ ಹೇಡಿ ತುರುಗಳ್ಳರು. ನಿಜ - ಇಂಥ ಹೊತ್ತಿನಲ್ಲಿ ಶತ್ರುಗಳ ಕೋಳಿಯ ಪುಕ್ಕಕ್ಕೆ ಗರುಡರೆಕ್ಕೆಯ ಬಲ ಬರುತ್ತದೆ. ಎಂಜಲು ನೆಕ್ಕುವ ನಾಯಿಗೆ ದೇವರೆಡೆಯಲ್ಲಿ ನಾಲಗೆ ಚಾಚಬೇಕು ಅನಿಸುತ್ತದೆ. ಇದು ನಿಮಗಲ್ಲ, ನಮಗೆ ಸವಾಲು. ಈ ಬಾರಿಯ ರಣವೀಳ್ಯವನ್ನು ನಾವು ಯಾರಿಗೂ ಕೊಡುವುದಿಲ್ಲ. ನಾವೇ ತೆಗೆದುಕೊಂಡಿದ್ದೇವೆ. ನಮ್ಮ ಹಸು ಕದ್ದವರನ್ನು ಹಿಡಿದೆಳೆದು ತಂದು, ನಮ್ಮ ಅರಮನೆಯ ಗೋದಲಿಯಲ್ಲಿ ಕಟ್ಟದಿದ್ದರೆ ನಾವು ಗಂಡುಗಲಿ ಮದಕರಿನಾಯಕರ ಮಡದಿಯಲ್ಲ. ಹಸುಗಳನ್ನು ಕಟ್ಟುವುದೂ ಒಂದೇ, ಹೆಣ್ಣುಮಕ್ಕಳ ಸೆರಗಿಗೆ ಕೈಹಾಕುವುದೂ ಒಂದೇ. ಇಂಥ ನೀಚಮಾತು ಕೇಳಿ, ನಾವು ಸೇನೆಯ ಹಿಂದೆ ಅರಮನೆಯಲ್ಲಿ ಕೂತರೆ ನಮ್ಮ ಕುಲಕ್ಕೇ ಕಳಂಕ. ಪ್ರಧಾನಿಗಳೆ, ದಳವಾಯಿಗಳೇ - ಸೇನೆಗೆ ಸಿದ್ಧವಾಗಲು ಹೇಳಿ. ಇಂದೋ ನಾಳೆಯೋ ಮುಹೂರ್ತ ಕೇಳಿ, ಕೂಚುಭೇರಿ ಹೊಡೆಯಿಸಿ."

- ಓಬವ್ವನಾಗತಿಯಾಡಿದ ಮಾತನ್ನು ಕೇಳಿ ಸಭೆ ನಿಬ್ಬೆರಗಾಯಿತು.

"ನಾವಿನ್ನೂ ಬದುಕಿದ್ದೇವೆ...." - ಎಂದು ಏನೋ ಹೇಳಹೊರಟ ದಳವಾಯಿ ಭರಮಣ್ಣ

"ನಾವೂ ಸತ್ತಿಲ್ಲ. ಮುಂದಿನ ಮಾತು, ರಾಯದುರ್ಗದ ದಾರಿಯಲ್ಲಾಗಲಿ"

-ಎಂದು ಹೇಳಿ, ಓಬವ್ವನಾಗತಿ, ಸಭೆ ಮುಗಿಸಿದಂತೆ ಎದ್ದು ನಿಂತರು. ಉಳಿದ ಜನ ಎದ್ದು ನಿಂತು ಪವಾಡವನ್ನು ಕಂಡವರಂತೆ ನಾಗತಿಗೆ ಕೈಮುಗಿದರು.

೩

ಸಭೆಯಿಂದ ನೇರವಾಗಿ ತನ್ನ ಶಯ್ಯಾಗೃಹಕ್ಕೆ ಬಂದ ಓಬವ್ವನಾಗತಿ, ತನ್ನ ಹಿಂದೆ ಬಂದ ಹೊನ್ನವ್ವೆಯತ್ತ ತಿರುಗಿ –

"ಹೊನ್ನವ್ವೆ, ಹುಚ್ಚವ್ವನಿಗೆ ಬರಬೇಳು. ಈ ಗಂಡಸರು, ಗಂಡಸಾಗಿ ಹುಟ್ಟಿದ್ದೇ ಒಂದು ಹಿರಿಮೆ ಎಂದುಕೊಂಡಿದ್ದಾರೆ. ಹೆಣ್ಣು ಕೈಗತ್ತಿಯ ರುಚಿ ತೋರಿಸಬೇಕು" - ಎಂದರು, ಇನ್ನೂ ಇಳಿಯದ ಉದ್ವೇಗದಲ್ಲಿ ಶತಪಥ ತಿರುಗುತ್ತಾ.

"ಅವ್ವಾ..."

-ಚಾವಟಿ ಸೆಳೆದಂಥ ಧ್ವನಿಯನ್ನು ಕೇಳಿ ತಟಕ್ಕನೆ ತಿರುಗಿ ನೋಡಿದರು ಓಬವ್ವನಾಗತಿ.

ಆ ಮಾತನಾಡಿದವನು - ಮದಕರಿನಾಯಕ.

ಅದುವರೆಗೂ ಆಕೆಗೆ ಆತನ ನೆನಪೇ ಮರೆತುಹೋಗಿತ್ತು.

ಆ ಹುಡುಗ –

ಮದಕರಿನಾಯಕನೇ-

ಆದರೆ ಹಿಂದೆಂದೂ ಅಂಥ ಮದಕರಿನಾಯಕನನ್ನು ನೋಡಿರಲಿಲ್ಲ, ಓಬವ್ವನಾಗತಿ.

ಹುಡುಗುಕಳೆ ಸೂಸುತ್ತಿದ್ದ ಮದಕರಿನಾಯಕನ ಮುಖವೀಗ, ಕಾರ್ಮೋಡ ಕವಿದು ಸಿಡಿಲಪ್ಪಳಿಸುವ ಮುಗಿಲಿನಂತಿತ್ತು. ಇನ್ನೂ ಕಪ್ಪಿಗೆ ತಿರುಗದ ಕೆಂಚುಬಣ್ಣದ ಚಿಗುರು ಕೂದಲುಗಳ ಕೆಳಗಿನ ಕತ್ತಿಯಂಥ ತುಟಿ, ಕಾರ್ಗಾಲದ ಸಂಜೆಯಂತೆ ರಕ್ತಗೆಂಪೇರಿದ ದುಂಡುಗೆನ್ನೆ, ಸವಾಲುಹಾಕುವಂತೆ ಮುಂದೊತ್ತಿದ ಗಂಡುಗಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಕುದಿವ ಕೆಂಬಣ್ಣದ ಕಬ್ಬಿಣದಂತೆ ಪ್ರಜ್ವಲಿಸುತ್ತಿದ್ದ ಕಣ್ಣುಗ್ಗಳು –

ಇವನು ಹುಡುಗನಲ್ಲ, ಹೆಡೆಬಿಚ್ಚಿ ನಿಂತ ಪೊರೆಕಳಚಿದ ಎಳೆ ಕಾಳಿಂಗಸರ್ಪ ಎನಿಸಿತು- ಆ ಮದಕರಿನಾಯಕನನ್ನು ಕಂಡು ಓಬವ್ವನಾಗತಿಗೆ.

ಕೊಬ್ಬೇರಿದ ಕ್ರೋಧದ ಬಾಲಪುರುಷಾವತಾರದಂತೆ ಎದೆ ಸೆಟಿಸಿನಿಂತ ಮದಕರಿನಾಯಕನ ನಿಲುವಿನ ಠೀವಿಯನ್ನೇ ಮೆಚ್ಚುತ್ತಾ ಕೇಳಿದರು, ಓಬವ್ವನಾಗತಿ –

"ಏನು?"

"ನಿಮ್ಮ ಮಾತಿನಲ್ಲಿ ನನ್ನನ್ನು ಮರೆತು, ಸೊಕ್ಕಿದ ಗುಲಾಮರು ಹುಡುಗ ಎಂದು ಕರೆದವರನ್ನು ನೀವೂ ಹುಡುಗನನ್ನಾಗಿ ಮಾಡಿಬಿಟ್ಟಿರಲ್ಲಾ, ಇದಾವ ನ್ಯಾಯ, ಅವ್ವಾ?" – ಎಂದು ಉದ್ವಿಗ್ನನಾಗಿ ಕೇಳಿದ ಮದಕರಿನಾಯಕ.

"ನಿಮಗೇನು ಅನ್ಯಾಯವಾಯಿತು?" - ಚಕಿತರಾಗಿ ಕೇಳಿದರು, ಓಬವ್ವನಾಗತಿ.

"ಅನ್ಯಾಯವಲ್ಲದೆ ಮತ್ತೇನು, ಅವ್ವಾ - ನಾವು ಬದುಕಿದ್ದೂ ನೀವು ರಣವೀಳ್ಯ ತೆಗೆದುಕೊಳ್ಳಬೇಕೇ ? ನೀವಲ್ಲಿ ರಣರಂಗದಲ್ಲಿ ಹೋರಾಡುವಾಗ, ನಾವಿಲ್ಲಿ ಅರಮನೆಯ ಹೆಂಗಸರೊಂದಿಗೆ ಚಕ್ಕಂದವಾಡುತ್ತಾ, 'ಸೆರಗಿನ ಮರೆಯಲ್ಲಿ ಬದುಕಿದ ನಾಯಕ' ಎನಿಸಿಕೊಳ್ಳಬೇಕೇ? ಅದಾಗದು, ಅವ್ವಾ. ಆ ದಿನ ರಕ್ತದ ಓಕುಳಿಯಾಡಬೇಕು ಎಂದು ನೀವೇ ಹೇಳಿದ್ದಿರಲ್ಲ, ಈಗ ತಾನಾಗಿಯೇ ಆ ಹಬ್ಬ ಒದಗಿಬಂದಿದೆ. ಈ ಹೊತ್ತಿನಲ್ಲಿ ನಾನಿಲ್ಲಿ ನಿಲ್ಲುವವನಲ್ಲ"- ಎಂದು ಹಟ ತೊಟ್ಟವನಂತೆ ಹೇಳಿದ, ಮದಕರಿನಾಯಕ.

ಆ ಮಾತನ್ನು ಕೇಳಿ, ಓಬವ್ವನಾಗತಿಯ ತಲೆಯನ್ನು ಕವಿದಿದ್ದ ಕ್ರೋಧದ ಅಮಲು ಇಳಿದು. ವಿವೇಚನೆ ಮೂಡಿ –

"ಅಪ್ಪಾ - ಈ ಯುದ್ಧ ಜೂಜಿದ್ದಂತೆ. ಜಯಾಪಜಯ, ಸಾವು-ಬದುಕು ಹೀಗೆ ಎಂದು ಹೇಳುವಂತಿಲ್ಲ. ಈ ಹುಲುಗಾಳಗದಲ್ಲಿ, ಈಗ ತಾನೆ ಪಟ್ಟಕ್ಕೆ ಬಂದಿರುವ ನಿಮ್ಮ ಹುಡುಗ ತಲೆಯನ್ನು ಪಣವಾಗಿಡುವುದು ನಮಗೆ ಇಚ್ಛೆಯಿಲ್ಲ. ಮುಂದಿನ್ನೂ ಬೇಕಾದಷ್ಟು ಕಾಲವಿದೆ : ಎಷ್ಟೋ ಯುದ್ಧಗಳು ಕಾದಿವೆ. ನಿಮ್ಮ ಸರದಿ ಬರುವವರೆಗೂ ಕಾದಿರಿ" - ಎಂದು ಹೇಳಿದರು.

"ಮುಂದೆ ನೂರು ಲಡಾಯಿ ಆಗಬಹುದು-ಬಿಡಬಹುದು. ಆದರಿದು ಮೊದಲ ಲಡಾಯಿ. ಚೋಟುದ್ದದ ಹುಡುಗ ಎಂದು ನಮ್ಮನ್ನು ಹೀನಾಯ ಮಾಡಿದವರ ಮೇಲಿನ ಯುದ್ಧ. ಈ ಯುದ್ಧಕ್ಕೆ ಬೆನ್ನು ಕೊಟ್ಟು ಬದುಕುವಾಸೆ ನಮಗಿಲ್ಲ.''

"ಇದು ನಿಮ್ಮ ಪ್ರಶ್ನೆಯಲ್ಲ, ಅಪ್ಪಯ್ಯ. ಈ ಸಿಂಹಾಸನದ ನಾಯಕತನದ ಪ್ರಶ್ನೆ. ನೀವು ಯುದ್ಧಕ್ಕೆ ಬಂದರೆ...."

"ಏನಾದೀತು ಅವ್ವಾ - ನನಗೆ ಸಾವು ಬಂದೀತು ಎಂದು ಹೆದರುತ್ತೀರಾ. ಸತ್ತರೆ ಕೀರ್ತಿ ಬರುತ್ತದೆ. ಈ ಸಿಂಹಾಸನ ಹತ್ತುವ ಗಂಡುಜನ ಸಾವಿರವಿದ್ದಾರೆ. ಈ ಬಾರಿ ನೀವು ಬೇಡನ್ನಬಾರದು. ನೀವು ರಣವೀಳ್ಯ ತೆಗೆದುಕೊಂಡಿರಿ. ನನಗೆ ರಣಭಿಕ್ಷೆ ಕೊಡಲೇಬೇಕು. ನಮ್ಮ ಗಂಡಸುತನದ ಪರೀಕ್ಷೆ ಈಗಲೇ ನಡೆದುಹೋಗಲಿ" – ಎಂದು ಬೇಡಿದ, ಮದಕರಿನಾಯಕ.

"ಅಪ್ಪಾ, ನಿನ್ನ ಮಾತಿಗೆ ಹೂ ಎನ್ನಲಾರೆ, ಬೇಡ ಎನ್ನಲಾರೆ...."

"ಏನೂ ಅನ್ನಬೇಡಿ. ನಿಮ್ಮ ಆನೆಯ ಮುಂದಿನ ಕುದುರೆಯಲ್ಲಿ ಕೂಡಿಸಿ ನನ್ನನ್ನು ಕರೆದುಕೊಂಡು ಹೋಗಿ. ಆ ಗೋಗಳ್ಳರ ಗೋಣುಮುರಿದು, ನೀವು ನನ್ನನ್ನು ಪಟ್ಟಕ್ಕೆ ತಂದದ್ದು ಸಾರ್ಥಕವಾಯಿತು ಎನಿಸಿ ಬದುಕುತ್ತೇನೆ''

-ಎಂದಷ್ಟೇ ಹೇಳಿ, ಓಬವ್ವನಾಗತಿ ಮುಂದೇನೂ ಮಾತನಾಡಲು ಅವಕಾಶಕೊಡದೆ ಅಲ್ಲಿಂದ ಹೊರಟುಹೋದ, ಮದಕರಿನಾಯಕ.

ತಾ ಮೆಟ್ಟಿದ ನೆಲ. ತನ್ನ ಕಾಲ ಕೆಳಗಿನ ಹುಳವೆಂಬಂತೆ, ಘಟ್ಟಿಸುತ್ತಾ, ಒಮ್ಮೆಯಾದರೂ ಹಿಂದಿರುಗಿಯೂ ನೋಡದೆ ಗಂಡುನಡಿಗೆಯಿಂದ ನಡೆದುಹೋದ ಮದಕರಿನಾಯಕನನ್ನು ನೋಡಿ, ಓಬವ್ವನಾಗತಿ ಅವಾಕ್ಕಾಗಿ ನಿಂತರು - ಒಣಕರಟವಾದ ಓಟೆ ತಟಕ್ಕನೆ ಚಿಗಿತು ಮಾಮರವಾದ ಇಂದ್ರಜಾಲವನ್ನು ಕಂಡು ಮುಗ್ಧೆಯಾದಂತೆ.

ಅತ್ತ ತಿರುಗಿದ ಆಕೆಯ ಕಣ್ಣು ಬೇರೆ ಕಡೆ ತಿರುಗಲೂ, ಹುಚ್ಚವ್ವ ಬಂದು –

"ಅವ್ವಾ, ಏನೋ ಕರೆಕಳಿಸಿದರಂತಲ್ಲಾ" – ಎಂದು ಕೇಳಿ, ಎಚ್ಚರಿಸಬೇಕಾಯಿತು.

“ಇದೇನು ಸೋಜಿಗ, ಮೇಣದ ಗೊಂಬೆ ಎಂದುಕೊಂಡಿದ್ದು ಇದ್ದಕ್ಕಿದ್ದ ಹಾಗೆ ಉಕ್ಕಿನ ವಿಗ್ರಹವಾದದ್ದು ನೋಡಿದೆಯಾ? ಆ ಹುಡುಗು-ಬಾಯಲ್ಲಿಷ್ಟು ಗಂಡುಮಾತು ಬಂದೀತೆಂದು ನಾನು ಕನಸೂ ಕಂಡಿರಲಿಲ್ಲ''

-ಎಂದಳು ಓಬವ್ವನಾಗತಿ, ಇನ್ನೂ ಕನಸಿನ ಭಾವ ಭಾರವಾಗಿ ತೂಗುತ್ತಿದ್ದ ಧ್ವನಿಯಲ್ಲಿ.

“ಯಾವ ಹುಡುಗರವ್ವಾ?”

-ವಿಷಯವೇನೆಂದು ತಿಳಿಯದ ಹುಚ್ಚವ್ವ ಕೇಳಿದಳು.

“ಇನ್ನಾರು, ಹೊಸ ನಾಯಕರೇ. ಇನ್ನೂ ಇವತ್ತು-ನಿನ್ನೆಯ ಮಾತು ಎಂದ ಹಾಗಿದೆ ಕಿವಿಯಲ್ಲಿ. ಅವತ್ತು ರಕ್ತ ಕಂಡು ತಲೆತಿರುಗಿತು ಎಂದ ಹಸುಳೆ, ಇವತ್ತು ರಣಭಿಕ್ಷೆ ಕೇಳುತ್ತಿದೆ. ನಾವೇನೋ ಅಂದುಕೊಂಡಿದ್ದೆವು. ನಿಜಕ್ಕೂ ಬ್ರಹ್ಮ ದುರ್ಗದ ಭವಿಷ್ಯವನ್ನು ಈ ಹುಡುಗನ ಹಣೆಯಲ್ಲಿ ಬಂಗಾರದ ಅಕ್ಷರಗಳಿಂದ ಬರೆದಿದ್ದಾನೆ. ಹಿರಿಯರು ಕನಸಿನಲ್ಲಿ ಹೇಳಿದ್ದು ಸುಳ್ಳಲ್ಲ - ಅವರೇ ಇವನು. ಬರೀ ಹೆಸರಿನಲ್ಲಲ್ಲ, ಪೌರುಷದಲ್ಲೂ.''

- ಧನ್ಯತೆಯ ಭಾವ ತುಂಬಿದ ಧ್ವನಿಯಲ್ಲಿ ಹೇಳಿದರು, ಓಬವ್ವನಾಗತಿ.

ಆಕೆ ಅಷ್ಟು ಹೇಳಿದ ಬಳಿಕ ನಡೆದದ್ದು ಏನಿರಬಹುದೆಂದು ಊಹಿಸಿದ ಹುಚ್ಚವ್ವ –

“ತಕ್ಕವರಿಗಲ್ಲದೆ ಅಂತಿಂಥ ಜಳ್ಳುಗಳಿಗೆ ಈ ಗಂಡುಸಿಂಹಾಸನ ಹತ್ತುವ ಧೈರ್ಯ ಬಂದೀತಾ ?....ಅದಿರಲಿ, ನೀವೀಗ ನನ್ನನ್ನು ಕರೆಸಿದ್ದೇಕೆ ?” – ಎಂದು ಓಬವ್ವನಾಗತಿ ಮರೆತ ಮಾತನ್ನು ನೆನಪಿಸಿದಳು.

ಆ ಮಾತು ಕೇಳಿ, ಆದುವರೆಗೂ ಬೇರಾವುದೋ ಲೋಕದಲ್ಲಿದ್ದ ಓಬವ್ವನಾಗತಿ, ಇಹ ಲೋಕಕ್ಕೆ ಬಂದು ಹೇಳಿದರು-

“ನಾವೀಗ ಕತ್ತಿ ಹಿಡಿದು ಯುದ್ಧಕ್ಕೆ ಹೊರಡಬೇಕಾದ ಕಾಲ ಬಂದಿದೆ. ನಿನ್ನ ದೇಶಾಬಾಗಿನ ಹೆಣ್ಣುಗಳು ಹೇಗಿದ್ದಾರೆ?”

ಓಬವ್ವನಾಗತಿ ಹೇಳಿದುದನ್ನು ಕೇಳಿ, ಹುಚ್ಚವ್ವ ನಿಬ್ಬೆರಗಾಗಿ –

“ನೀವು ಕತ್ತಿ ಹಿಡಿದು ಹೊರಡುವುದೇ....ಅಂಥದೇನು ಸಂದರ್ಭ ಬಂತವ್ವಾ?'' – ಎಂದು ಕೇಳಿದಳು.

“ಅದನ್ನೆಲ್ಲಾ ಬಿಚ್ಚಿ ಹೇಳಲಾರೆ. ರಾಯದುರ್ಗದ ಪುಂಡು ಪಾಳೆಯಗಾರ, ದುರ್ಗದ ಹೆಂಗಸರಿಗೆ ಅಪಮಾನಮಾಡಿ, ಕೈಲಾಗದ ಹೇಡಿ, ಸೇನೆ ಗೆಲ್ಲಲಾಗದೆ ಹಸು ಹಿಡಿದಿದ್ದಾನೆ. ಅವನಿಗೆ ನಾವೇ ಬುದ್ಧಿ ಕಲಿಸಬೇಕು” - ಎಂದು ನಡೆದದ್ದನ್ನು ಆದಷ್ಟು ಸಂಕ್ಷಿಪ್ತವಾಗಿ ಹೇಳಿ –

“ನಾವೀಗ ರಣವೀಳ್ಯ ತೆಗೆದುಕೊಂಡಿದ್ದೇವೆ. ನೀನೇನು ಹೇಳುತ್ತೀ?” ಎಂದು ಕೇಳಿದರು ಓಬವ್ವನಾಗತಿ.

“ಹೇಳುವುದೇನಿದೆ, ಅವ್ವಾ - ನಮ್ಮ ಕತ್ತಿಗಳೂ ಬಹಳ ದಿನಗಳಿಂದ ಬಾಯಾರಿವೆ. ಯಾವಾಗ ಬೇಕೋ ಆವಾಗ ಕೂಚುನಗಾರಿ ಹೊಡೆಸಿ. ಇಷ್ಟು ದಿನ ಅಂಬಲಿ ಕಾಯಿಸಿ, ರೊಟ್ಟಿ ತಟ್ಟುತ್ತಿದ್ದ ನಮ್ಮ ಹೆಣ್ಣುಗಳಿಗೆ ಕತ್ತಿಗಳನ್ನು ಸಾಣೆಗೆ ಕೊಡಿ ಎಂದು ಈಗಲೇ ಹೇಳುತ್ತೇನೆ”

-ಎಂದಳು ಹುಚ್ಚವ್ವ, ಕಾಲಿಗೆ ಕಟ್ಟಿದ್ದ ದಾರವನ್ನು ಬಿಚ್ಚಿ ಹಾರಾಡಲು ಬಿಟ್ಟ ಬೇಟೆಯ ಗಿಡುಗನಂತೆ.

೪

ಚಿತ್ರದುರ್ಗದ ರಣಮಂಡಲದ ಸುತ್ತಿನ ಕೋಟೆಯಲ್ಲಿದ್ದ ಠಾಣ್ಯದ ಚಾವಡಿಯ ಹಜಾರದಲ್ಲಿ, ಬಾಣದ ಮದಕರಿನಾಯಕ, ಅಲ್ಲಿ ನೆರೆದ ಕರಣಿಕರಿಂದ ರಾಯದುರ್ಗದ ಮೇಲೆ ಯುದ್ಧ ನಡೆಸಲು ಅಗತ್ಯವಾದ, ರಾಯದುರ್ಗದವರ ಸೇನೆಯ ಬಲಾಬಲ, ಆ ಕೋಟೆಯ ಆಯಕಟ್ಟಿನ ವಿವರಗಳ ಬಗ್ಗೆ ಗೂಢಚಾರರು ಕಳಿಸಿದ ವರದಿಗಳು, ಎಲ್ಲವನ್ನೂ ವಿಚಾರಿಸುತ್ತಾ, ಮನಸ್ಸಿನಲ್ಲಿಯೇ ಮುಂಬರುವ ಸಮರದ ತಂತ್ರದ ಬಗ್ಗೆ ಚಿಂತಿಸುತ್ತಾ ಕುಳಿತಿದ್ದಾಗ, ಆತನನ್ನು ಕಾಣಲುಬಂದ ಕುಮಾರಚಾವಡಿಯ ಪರಶುರಾಮನಾಯಕ ಮತ್ತೊಂದು ಸುದ್ದಿಯನ್ನು ಹೇಳಿ, ಚಕಿತಗೊಳಿಸಿದ.

“ಈ ಸಲದ ಲಡಾಯಿಯಲ್ಲಿ ನಮಗೂ, ನಿಮಗೂ ಏನೂ ಕೆಲಸವೇ ಇರುವ ಹಾಗೆ ಕಾಣುವುದಿಲ್ಲ” – ಎಂದು ಹೇಳಿದ ಪರಶುರಾಮನಾಯಕ.

“ಹಾಗೆಂದರೇನು - ನಿಮ್ಮ ಮನೆಯವರೂ ಲಡಾಯಿಗೆ ಹೋಗುತ್ತಾರಂತೇನು ?”

“ಹಿರಿಯ ನಾಗತಿಯವರೇ ರಣವೀಳ್ಯ ಹಿಡಿದಮೇಲೆ ನಮ್ಮ-ನಿಮ್ಮ ಮನೆಯವರು ಆ ಮಾತಾಡಿದರೆ, ಆಶ್ಚರ್ಯವೇನೂ ಇಲ್ಲ. ಆದರೆ ನಾನು ಹೇಳಿದ್ದು ಅದಲ್ಲ.”

“ಮತ್ತೇನು ?”

“ಹುಡುಗರೆಲ್ಲಾ ಸೇರಿ, ಮೀಸೆ ನೆರೆಯಲು ಬಂದ ನಮ್ಮಂಥವರನ್ನು ಮೂಲೆಗೆ ಕೂಡಿಸುವ ಕಾಲ ಬಂದ ಹಾಗೆ ಕಾಣುತ್ತದೆ.”

“ಏಕೆ?”

“ನಾಯಕರೂ ಯುದ್ಧಕ್ಕೆ ಹೊರಟದ್ದನ್ನು ಕೇಳಿ, ನಮ್ಮ ಕುಮಾರಚಾವಡಿಯ ಹುಡುಗು ಜನ, 'ನಾವೂ ಇಷ್ಟು ವರ್ಷ ಆರಮನೆಯ ರೊಟ್ಟಿ ಬೆಣ್ಣೆ ತಿಂದು, ಮೈ ಕೊಬ್ಬಿಸಿಕೊಂಡಿದ್ದೇವೆ. ನಮ್ಮನ್ನು ಕಳಿಸಿಕೊಡಿ' ಎಂದು ಕಸ್ತು ಮಾಡುತಿದ್ದಾರೆ. 'ನಿಮಗಿನ್ನೂ ದಂಡಿಗೆ ಹೋಗುವ ಪ್ರಾಯವಿಲ್ಲ' ಎಂದರೆ, 'ನಮ್ಮ ನಾಯಕರ ಪ್ರಾಯವೆಷ್ಟು, ಅವರಿಗಿಂತ ನಾವು ಕಿರಿಯರೇ? ದಿನಾ ಕಸರತ್ತು ಮಾಡೋ ನಮ್ಮ ತೋಳಿಗೆ ತುಕ್ಕು ಹಿಡಿದಿದೆಯಾ?' ಅಂತ ಇಲ್ಲದ ಮೀಸೆ ಮುಟ್ಟಿ ನೋಡಿಕೊಳ್ಳುತ್ತಾ ಇದ್ದಾರೆ. ನೀನೇನೇ ಹೇಳು, ಮದಕರಿನಾಯಕ - ಈ ಸಾರಿಯ ರಾಯದುರ್ಗದ ಮೇಲಿನ ಈ ಲಡಾಯಿ ಹಿಂದೆ ಯಾವತ್ತೂ, ಯಾವ ಯುದ್ಧವೂ ನಮ್ಮ ಜನಾನ ಇಷ್ಟು ಕೆರಳಿಸಿರಲಿಲ್ಲ” - ಎಂದ ಪರಶುರಾಮನಾಯಕ.

“ಹುಡುಗರು ದುರ್ಗದ ಗಂಡುಕಲ್ಲಿನ ನೀರು ಕುಡಿದವರಲ್ಲವಾ ? ಅದು ಸರಿ – ಆದರೆ ಹಿರಿಯ ನಾಗತಿಯವರು, ಚಿಕ್ಕಪ್ರಾಯದ ಪಾಳೆಯಗಾರರು ಮುಂದೆ ನುಗ್ಗಿರೋ ಈ ಯುದ್ಧದಲ್ಲಿ ಅವರಿಬ್ಬರನ್ನೂ ಉಳಿಸಿಕೊಂಡು, ಹೇಗೆ ಗೆಲ್ಲೋದು ಅನ್ನೋ ಯೋಚನೆ ಬೆಳಗಿನಿಂದ ನನ್ನ ತಲೆ ತಿನ್ನುತ್ತಾ ಇದೆ. ಅವರಿಬ್ಬರೂ ಇಲ್ಲದಿದ್ದರೆ ನಿರಾತಂಕವಾಗಿ ಕೂಚುಭೇರಿ ಹೊಡೆ ಬಿಡ್ತಾ ಇದ್ದೆ” – ಎಂದ ಬಾಣದ ಮದಕರಿನಾಯಕ.

“ನಮಗೆಲ್ಲಾ ಹಿರಿಯರಾಗಿ ದಂಡಿನ ದಳವಾಯಿ ಭರಮಣ್ಣನಾಯಕರಿದ್ದಾರಲ್ಲಾ - ಅವರೇನು ಯೋಚನೆ ಮಾಡುವರೋ ಕೇಳೋಣ. ಎಲ್ಲರಿಗೂ ಮೇಲಾಗಿ ಪ್ರಧಾನಿಗಳಿದ್ದಾರೆ, ಚಾಣಕ್ಯ ಇದ್ದ ಹಾಗೆ. ಅವರೇನು ಹೇಳುತ್ತಾರೋ ? ನಾವು ಒಂದು ಯೋಚನೆ ಮಾಡೋ ಹೊತ್ತಿಗೆ ಅವರ ತಲೆ ನೂರು ಗಾವುದ ಮುಂದೆ ಹೋಗಿರುತ್ತೆ. ಎಲ್ಲರೂ ಕಲೆತಾಗ ತಾನೇ ಹೀಗಂತ ನಿಷ್ಕರ್ಷೆಯಾಗಬೇಕು” - ಎಂದ ಪರಶುರಾಮನಾಯಕ.

“ಆದರೂ ಅವರು ಕೇಳಿದಾಗ ಹೀಗೇಂತ ನಾವೂ ಒಂದು ಮಾತು ಹೇಳಬೇಕಲ್ಲ. ಅವರು ಹೇಳಿದ್ದಕ್ಕೆ ತಲೆ ಹಾಕಿದರಾಯಿತೆ, ಬೇಲಿ ಮೇಲಿನ ಓತಿಕೇತದ ಹಾಗೆ.”

- ಸವಾಲೊಡ್ಡಿದಂತೆ ಕೇಳಿದ ಬಾಣದ ಮದಕರಿನಾಯಕ.

“ಹಾಗೆಂದರೆ ಆದೀತೇ - ಇದೆಲ್ಲಾ ಹತ್ತು ಜನ ಕಲೆತು ಆಡಬೇಕಾದ, ನಿರ್ಧರಿಸಬೇಕಾದ ಮಾತು. ಆದರೆ ಯಾವುದು ಏನಾದರಾಗಲಿ, ನಾಗತಿಯವರು, ನಾಯಕರು ಯುದ್ಧಕ್ಕೆ ಹೊರಟಿದ್ದು - ನಮ್ಮ ದಂಡಿನ ಜನಕ್ಕೆ ಹುಚ್ಚೆಬ್ಬಿಸಿದೆ. 'ಇದಾಯಿತಾ, ಅದಾಯಿತಾ' ಎಂದು ಕೇಳುವ ಮೊದಲೇ ಜನ ಹತ್ಯಾರು ಹಿಡಿದು ನಿಂತಿದ್ದಾರೆ- ನಾವು ಹೂ ಎನ್ನುವುದನ್ನೇ ಕಾಯುತ್ತಾ. ನಾವು ತಡಮಾಡಿದರೆ, ಅವರೇ ಹೊರಡುತ್ತಾರೇನೋ ಅನ್ನುವ ಹಾಗಿದ್ದಾರೆ” ಎಂದ ಪರಶುರಾಮನಾಯಕ.

ಆತ ಆಡಿದ ಮಾತು ಅಕ್ಷರಶಃ ಸತ್ಯವಾಗಿತ್ತು.

ರಾಯದುರ್ಗದ ಜನ, ದುರ್ಗದವರ ಹಸು ಹಿಡಿದು, ಕಾಲುಕೆದರಿ, ಕದನಕ್ಕೆ ಕರೆದ ವಾರ್ತೆ, ಮೊಳಕಾಲುಮುರುವಿನ ಗುಡ್ಡದ ಮೇಲೆ ಹೊಗೆಯಾಗಿ, ತಳಕಿನ ಗುಡ್ಡದ ಮೇಲೆ ಬೆಳಕಾಗಿ, ನನ್ನಿವಾಳದ ಗುಡ್ಡದ ಮೇಲೆ ಉರಿಯಾಗಿ ಕಾಣಿಸಿಕೊಂಡು, ಚಿತ್ರದುರ್ಗದ ಸೇನೆಯ ಹೃದಯದಲ್ಲಿ ದಾವಾಗ್ನಿಯಾಗಿ ಪ್ರಜ್ವಲಿಸಲಾರಂಭಿಸಿತ್ತು. ಆ ದಳ್ಳುರಿಗೆ ತೈಲಾಹಾರವಾಗಿತ್ತು. ನಾಗತಿ ಮತ್ತು ನಾಯಕರೇ ಯುದ್ಧಕ್ಕೆ ಹೊರಟಿದ್ದು.

ಬೇಗ –

ಆದಷ್ಟು ಬೇಗ –

ಇಂದಾದರೆ ಇಂದೇ. ಈ ಗಳಿಗೆಯೆಂದರೆ ಈಗಲೇ. ಮಿಂಚಿನ ವೇಗದಲ್ಲಿ ಪ್ರತೀಕಾರಕ್ಕಾಗಿ ಹಾತೊರೆಯುತ್ತಿತ್ತು, ರಾಯದುರ್ಗದ ಗಂಡಸರು ಮಾಡಬಾರದ ಹಸುಗಳ್ಳತನದ ಹೀನಕೃತಿಯಿಂದಾಗಿ ಹೇಸಿದ ಚಿತ್ರದುರ್ಗದ ಸೇನೆ.

ಆ ಸೂಕ್ಷ್ಮವನ್ನು ಗ್ರಹಿಸಿಯೇ ಪ್ರಧಾನಿ ನರಸಪ್ಪಯ್ಯನವರು, ಉಳಿದ ದಳವಾಯಿಗಳೊಂದಿಗೆ ಸಮಾಲೋಚನೆ ನಡೆಸಿ, ಅದಕ್ಕೆ ತಕ್ಕಂತೆ ರಣತಂತ್ರ ಹೂಡಿ. ಯುದ್ಧಸಿದ್ಧತೆ ಮಾಡಿದರು.

"ಈ ಬಾರಿಯ ಯುದ್ಧ ಎಂದಿನಂತಹ ಯುದ್ಧವಲ್ಲ. ಯುದ್ಧದಲ್ಲಿ ಜಯಾಪಜಯ ದೈವಾಧೀನ. ಆದರೆ ಈ ಬಾರಿ ದೈವಚಿತ್ರವನ್ನು ನಮ್ಮ ಇಚ್ಛೆಗೆ ಒಲಿಸಿಕೊಳ್ಳುವಂಥ ಪುರುಷ ಪ್ರಯತ್ನ ನಮ್ಮದಾಗಬೇಕು. ವಯೋವೃದ್ಧರಾದ ಹಿರಿಯ ನಾಗತಿಯವರೂ, ಹೊಸ ಪಾಳಯಗಾರರೂ ತಮ್ಮ ತಲೆಯ ಪಣವೊಡ್ಡಿ ಹೊರಟಿರುವ ಈ ಸಮರದಲ್ಲಿ, ಆ ಎರಡೂ ಹಿರಿಯ ತಲೆಗಳಲ್ಲದೆ, ಮಿಕ್ಕ ತಲೆಗಳು ಯುದ್ಧದಲ್ಲಿ ಗೆಲ್ಲುವುದೇ ಅಲ್ಲದೆ, ಆ ತಲೆಗಳನ್ನು ಕಾಪಾಡಿಕೊಂಡೇ ಗೆಲ್ಲುತ್ತೇವೆಂಬ ಶಪಥ ತೊಟ್ಟೇ ಹೊರಡಬೇಕು. ಹಾಗಾಗಬೇಕು ಎಂದರೆ, ಯುದ್ಧ ವಿಳಂಬವಾಗಬಾರದು. ವಿಳಂಬವಾದರೆ ಅತ್ತ ಹರಪನಹಳ್ಳಿ, ಇತ್ತ ನಿಡುಗಲ್ಲವರು ರಾಯದುರ್ಗದವರ ನೆರವಿಗೆ ಬಂದು ನಮ್ಮ ಸೇನೆ ಕತ್ತರಿಯಲ್ಲಿ ಸಿಕ್ಕಂತಾಗುವುದು. ಹಾಗಾಗ ಬಾರದು ಎಂದರೆ – ಈ ಬಾರಿಯದು ಮಿಂಚಿನ ಯುದ್ಧವಾಗಬೇಕು. ದಂಡು ಬರುತ್ತಿದೆ ಎಂಬ ಸುದ್ದಿ ರಾಯದುರ್ಗದವರಿಗೆ ಮುಟ್ಟುವ ಮೊದಲು ನಮ್ಮ ಸೇನೆ ಅವರ ಗಡಿ ದಾಟಿರಬೇಕು. ಎರಡು ದಿನ, ಹೆಚ್ಚೆಂದರೆ ಮೂರು ದಿನಗಳಲ್ಲಿ ಯುದ್ಧ ಮುಗಿಯಬೇಕು. ಇಂತಹ ಯುದ್ಧಕ್ಕೆ ನಮ್ಮ ಅಶ್ವದಳವೇ ಮೂಲಬಲವಾಗಬೇಕು. ಮಿಕ್ಕ ಸೇನೆ ಅದಕ್ಕೆ ಪೋಷಕವಾಗಿರಲಿ. ಎಲ್ಲಕ್ಕಿಂತ ಹೆಚ್ಚಾಗಿ, ನಾವು ಎಂದು ಯುದ್ಧಕ್ಕೆ ಹೊರಡುತ್ತೇವೆಂಬುದೂ ಶತ್ರುಗಳಿಗೆ ತಿಳಿಯಬಾರದು. ಎರಡು ದಿನ ನಾವು ಯುದ್ಧಕ್ಕೆ

ಸಿದ್ಧವಾಗುತ್ತಿದ್ದೇವೆ ಎನ್ನುವ ಸುದ್ದಿಯಲ್ಲದೆ, ಬೇರಾವ ಸುದ್ದಿಯೂ ಹೊರಗೆ ಹೋಗಬಾರದು" ಎಂದು ಹೇಳಿದ ದಳವಾಯಿ ಭರಮಣ್ಣ.

"ಎರಡು ದಿನ ತಡವಾದರೆ, ನಾವು ಯುದ್ಧಕ್ಕೆ ಹದರಿದವು ಎಂದು ಶತ್ರುಗಳು ತಿಳಿಯುವುದಿಲ್ಲವೇ?' – ಬಾಣದ ಮದಕರಿನಾಯಕ ಕೇಳಿದ.

"ತಿಳಿದರೇನೂ ತಪ್ಪಿಲ್ಲ. ಬರೇ ಹೆದರಿದರು ಅನ್ನುವುದೇನು - 'ದುರ್ಗದವರು ಸದ್ಯಕ್ಕೆ ಯುದ್ಧಕ್ಕೆ ಹೊರಡುವ ಸ್ಥಿತಿಯಲ್ಲೇ ಇಲ್ಲ. ಮೇಲಿಂದ ಮೇಲೆ ಪಟ್ಟಾಭಿಷೇಕ, ಮದುವೆ ಎಂದು ಬೊಕ್ಕಸವೆಲ್ಲಾ ಬರಿದಾಗಿದೆ. ಮದುವೆಗೆ ಕೊಟ್ಟ ರಜಾಕ್ಕೆ ತಮ್ಮ ತಮ್ಮ ಹಳ್ಳಿಗಳಿಗೆ ಹೋದ ಸೈನಿಕರಿನ್ನೂ ದಂಡಿಗೆ ತಿರುಗಿ ಬರದೆ ಎಲ್ಲಾ ಅಸ್ತವ್ಯಸ್ತವಾಗಿದೆ. ದುರ್ಗದವರು ಯುದ್ಧಕ್ಕೆ ಮನಸ್ಸು ಮಾಡಿದರೂ, ಅದಕ್ಕೆ ಸಿದ್ಧವಾಗಲು ಇನ್ನೊಂದು ವಾರವಾದರೂ ಬೇಕು ಎಂಬ ಸುದ್ದಿಯನ್ನು ರಾಯದುರ್ಗದ ಸೀಮೆಯಲ್ಲಿ ಹಬ್ಬಿಸಲು, ಈಗಾಗಲೇ ಹತ್ತಿಪ್ಪತ್ತು ಜನರನ್ನು ಕಳಿಸಿಯಾಗಿದೆ. ಅದಕ್ಕೇ ನಮ್ಮ ಸೇನೆ ಹೊರಡಲು ಎರಡು ದಿನ ತಡವಾಗಲಿ ಎಂದದ್ದು."

- ತಮ್ಮ ತಂತ್ರವನ್ನು ವಿವರಿಸಿ ಹೇಳಿದರು, ಪ್ರಧಾನಿ ನರಸಪ್ಪಯ್ಯ.

"ಆದರೆ ಯುದ್ಧಕ್ಕೆ ಹೊರಡಲು ಊರ ಗುಡಿಗಳಲ್ಲಿ ಪೂಜೆ, ಉತ್ಸವಗಳು ನಡೆದರೆ, ಊರ ಜನರಲ್ಲಿ ಹರಡಿದ ಸುದ್ದಿ ರಾಯದುರ್ಗದವರಿಗೆ ತಿಳಿಯುವುದು ತಡವಾದೀತೇ? ದುರ್ಗದಲ್ಲೂ ಅವರ ಕಡೆಯವರಿರಬೇಕಲ್ಲಾ...." - ಕಂದನಕೋವಿ ಬೊಮ್ಮಣ್ಣ ಕೇಳಿದ.

"ಇರಬೇಕಲ್ಲ ಎನ್ನುವುದೇನು - ಇದ್ದಾರೆ ಎಂದು ತಿಳಿದೇ ನಗರವನ್ನೆಲ್ಲಾ ಜಾಲಾಡಿ, ಅನುಮಾನ ಬಂದವರನ್ನೆಲ್ಲಾ ಊರಿನಲ್ಲಿ ಪುಕಾರಾಗದಂತೆ ಬಂಧಿಸಿ, ಗುಪ್ತ ಸೆರೆಮನೆಗಟ್ಟಬೇಕು ಎಂದು ತಳವಾರಚಾವಡಿ, ಕೊತ್ವಾಲಚಾವಡಿಯವರಿಗೆ ಕಟ್ಟಾಜ್ಞೆ ಮಾಡಿಯಾಗಿದೆ. ಸೇನೆಗೆಂದು ಪೇಟೆಯಲ್ಲಿ ಸಾಮಾನು ಖರೀದಿಮಾಡದೆ, ಅವಸರದ ದಾಸ್ತಾನಿನಿಂದ ಸೇನೆಗೆ ಬೇಕಾದದ್ದನ್ನು ಸರಬರಾಜು ಮಾಡಲು ಹೇಳಿಯಾಗಿದೆ. ಅಷ್ಟೇ ಅಲ್ಲ - ಉತ್ಸವಾಂಬಾ ದೇವಸ್ಥಾನದಲ್ಲಿ ರಾತ್ರಿ ವಿಶೇಷ ಪೂಜೆ ನಡೆಯುವುದೊಂದಲ್ಲದೆ, ಮಿಕ್ಕ ದೇವಾಲಯಗಳಲ್ಲಿ ಎಂದಿನ ಪೂಜೆಯೇ ನಡೆದರೆ ಸಾಕು ಎಂದು ಹೇಳಿಯೂ ಆಗಿದೆ.''

"ಈ ಮಾತಿಗೆ ಹಿರಿಯ ನಾಗತಿಯವರು ಒಪ್ಪುತ್ತಾರೆಯೇ ?'' - ಏಕಾಸಿ ಕಾಟಣ್ಣ ಕೇಳಿದ.

"ಅವರನ್ನು ಒಪ್ಪಿಸುವುದನ್ನು ನಮಗೆ ಬಿಡಿ.'' – ನರಸಪ್ಪಯ್ಯ ಹೇಳಿದರು.

"ಪೂಜೆ ಕೊಡಲಿಲ್ಲವೆಂದು ದೇವರುಗಳು ಮುನಿದುಕೊಂಡರೆ...." – ಪರಶುರಾಮ ನಾಯಕ ಅನುಮಾನಿಸಿದ.

"ಈಗ ನಾವು ಮಾಡಿಸಿರುವ ಪೂಜೆ ಸಾಕಷ್ಟಾಗಿದೆ. ಹೆಚ್ಚು ಬೇಕೆಂದರೆ, ಗೆದ್ದು ಬಂದ ಮೇಲೆ ತಪ್ಪುಗಾಣಿಕೆ ಕೊಟ್ಟು, ಹೆಚ್ಚಿನ ಸೇವೆ ಮಾಡಿಸಿದರಾಯಿತು. ನಾವು ಪೂಜಿಸುವ ದೇವರಿಗೆ ನಮ್ಮ ಮನಸ್ಸು ತಿಳಿಯದಿದ್ದರೆ, ಇನ್ನೇನು ಬಂಡೆಕಲ್ಲಿಗೆ ತಿಳಿಯುತ್ತದೆಯೇ ? ಅದೆಲ್ಲಾ ಚಿಂತೆ ಬಿಡಿ" - ಎಂದು ಆ ಮಾತಿಗೂ ನರಸಪ್ಪಯ್ಯನವರೇ ಉತ್ತರ ಕೊಟ್ಟರು.

"ಈಗಾಗಲೇ ಪ್ರಧಾನಿಗಳು ಎಲ್ಲಾ ಯೋಚನೆಯನ್ನೂ ಮಾಡಿರುವಂತಿದೆ."

"ತಲೆಯೋಡಿಸಲಿಕ್ಕೆಂದೇ ಅಲ್ಲವೇ ನನ್ನನ್ನು ನಿಮ್ಮ ತಲೆಯ ಮೇಲೆ ಕೂಡಿಸಿದ್ದು" - ಎಂದು ನಗುತ್ತಾ –

"ಅಷ್ಟೇ ಅಲ್ಲ – ನನಗಿದೇ ಕೆಲಸವೆಂದೇ ಹುಟ್ಟಿಸುವಾಗಲೇ ದೇವರು ನನಗೆ ತಲೆ, ನಿಮ್ಮ ಕೈಯಲ್ಲಿ ಕತ್ತಿ ಕೊಟ್ಟ" – ಎಂದು ಹೇಳಿದರು ನರಸಪ್ಪಯ್ಯ.

"ಹಾಗಾದರೆ ಸೇನೆ ಹೊರಡುವ ದಿನವನ್ನೂ ನಿಶ್ಚಯಮಾಡಿದೀರ ಎನ್ನಿ" - ಏಕಾಸಿ ಕಾಟಣ್ಣ ಕೇಳಿದ.

"ಅದೂ ಆಗಿದೆ. ನಾಳೆ ರಾತ್ರಿ - ನಡುರಾತ್ರಿಯ ಮೇಲೆ ದುರ್ಗದ ದಂಡಿನ ಪ್ರಯಾಣ. ಗೊತ್ತಾದ ಸೇನೆಯವರೆಲ್ಲಾ ಆ ಹೊತ್ತಿಗೆ, ಒಬ್ಬೊಬ್ಬರು, ಇಬ್ಬಿಬ್ಬರು ಹೊರಟು, ಕುಂಚಿಗನಾಳು ಕಣಿವೆ ದಾಟಬೇಕು. ಕುರುಬರಹಳ್ಳಿ ಬಳಿ ಸೇನೆ ಕಲೆತು, ಮುಂದಿನ ಪ್ರಯಾಣ." -ದಳವಾಯಿ ಭರಮಣ್ಣ ಹೇಳಿದ.

"ನಾಯಕರು, ನಾಗತಿಯವರು. ಅವರ ದೇಶಾಬಾಗಿನ ಹೆಣ್ಣು ದಳ...?"

"ಅದಕ್ಕೆ ಬೇರೆ ವ್ಯವಸ್ಥೆಯಾಗಿದೆ. ನಾಗತಿಯವರು, ನಾಯಕರೊಡನೆ ಮದುವೆಯ ಸೇವೆಗೆಂದು ಹಿರಿಯೂರಿನ ತೇರುಮಲ್ಲೇಶ್ವರನ ಪೂಜೆ ಮಾಡಲು ಹಿರಿಯೂರ ದಾರಿಯಲ್ಲಿ ಹೊರಟು, ಅಡ್ಡದಾರಿಯಲ್ಲಿ ನಡುವೆ ಬಂದು ಸೇನೆಯೊಂದಿಗೆ ಕೂಡಿಕೊಳ್ಳುತ್ತಾರೆ. ಅವರ ಕಾವಲಿಗೆಂದು ಐದುನೂರು ಜನರ ಅಶ್ವದಳ ಹೋಗುತ್ತದೆ." - ನರಸಪ್ಪಯ್ಯನವರು ಹೇಳಿದರು.

"ತೋಫುಗಳು - ?" - ಏಕಾಶಿ ಕಾಟಣ್ಣ ಅನುಮಾನಿಸುತ್ತಾ ಕೇಳಿದ.

"ಮೊಳಕಾಲ್ಮುರುವಿನಲ್ಲಿ ಹತ್ತು ತೋಫುಗಳನ್ನು ಸಿದ್ಧಪಡಿಸಲು ಸುದ್ದಿ ಕಳಿಸಿಯಾಗಿದೆ. ಈ ವಿವರದ ಚರ್ಚೆಯೆಲ್ಲಾ ಕಾಲವ್ಯಯ. ನಾವು ನಾಗತಿಯವರನ್ನು ಕಾಣಲು ಹೋಗುತ್ತೇವೆ. ಮಿಕ್ಕ ಮಾತನ್ನು ದಳವಾಯಿ ಭರಮಣ್ಣನವರು ವಿವರಿಸುತ್ತಾರೆ"

- ಎಂದು ಅವಸರವಾಗಿ, ನೆರೆದವರಿಗೆ ಕೈಮುಗಿದು, ಪ್ರಧಾನಿ ನರಸಪ್ಪಯ್ಯ, ಓಬವ್ವ ನಾಗತಿಯವರನ್ನು ಕಾಣಲು ಹೊರಟರು.

"ತಂತ್ರ ಎಂದರೆ ಹೀಗಿರಬೇಕು. ತಲೆ ಅಂದರೆ ನಮ್ಮ ಪ್ರಧಾನಿಗಳದು"

- ಎಂದು ಮೆಚ್ಚಿ ಹೇಳಿದ ಬಾಣದ ಮದಕರಿನಾಯಕ ಹೋಗುತ್ತಿದ್ದ ಪ್ರಧಾನಿ ನರಸಪ್ಪಯ್ಯನವರನ್ನು ನೋಡಿ –

"ಈ ಬುದ್ಧಿಗೆ ತಕ್ಕಂಥ ಮೈ ಕೊಡಲಿಲ್ಲ, ದೇವರು. ಬಡಕಲು ಮೈ. ಪಂದ್ಯದ ಕುದುರೆಯಂಥ ಚುರುಕು ಬುದ್ಧಿ!"

* * *

ದಳವಾಯಿಗಳ ಸಭೆಯಲ್ಲಿ ನಡೆದುದನ್ನೆಲ್ಲಾ ಪ್ರಧಾನಿ ನರಸಪ್ಪಯ್ಯನವರು ಓಬವ್ವನಾಗತಿಗೆ ಸವಿವರವಾಗಿ ವರದಿ ಮಾಡಿದರು.

ಅವರು ಮಾಡಿದ ಯುದ್ಧದ ತಂತ್ರಗಳೆಲ್ಲವೂ ಆಕೆಗೆ ಒಪ್ಪಿಗೆಯಾದರೂ, ಯುದ್ಧಕ್ಕೆ ಹೊರಡುವ ಮೊದಲು ವಿಜಯಕ್ಕಾಗಿ ನಾನಾ ದೇವಾಲಯಗಳಲ್ಲಿ ಮಾಡಬೇಕಾದ ವಿಶೇಷ ಪೂಜೆಗಳು, ಮಠ-ಮಂದಿರಗಳಲ್ಲಿ ನಡೆಯಬೇಕಾದ ರುದ್ರಾಭಿಷೇಕ, ಹೋಮ ಹವನ, ಧ್ವಜ ಪೂಜೆ, ಉತ್ಸವಾಂಬೆಗೆ ಎದುರೆತ್ತಿ ಶಕುನ ಕೇಳುವುದು - ಮೊದಲಾದ ಸಾಂಪ್ರದಾಯಿಕ ವಿಧಿಗಳನ್ನಾಚರಿಸದೆ, ಸೇನೆ ದುರ್ಗದಿಂದ ಹೊರಡುವುದು ಕುಲಾಚರಣೆಯಲ್ಲಿ, ಸಾಂಪ್ರದಾಯಿಕ ಆಚಾರ-ವಿಚಾರಗಳಲ್ಲಿ ಅಚಲನಿಷ್ಠೆಯಿಂದಿದ್ದ ಓಬವ್ವನಾಗತಿಯ ಮನಸ್ಸಿಗೆ ಒಪ್ಪಿಗೆಯಾಗಲಿಲ್ಲ.

ಹಾಗೆಂದು ಸಮರದಂಥ ಮಹತ್ವದ ವಿಷಯದಲ್ಲಿ ತರ್ಕಯುಕ್ತವಾದ ನರಸಪ್ಪಯ್ಯನವರ ಮಾತನ್ನು ನಿರಾಕರಿಸುವಂತೆಯೂ ಇರಲಿಲ್ಲ. ಈ ಇಕ್ಕಟ್ಟಿನ ಸಮಯದಲ್ಲಿ ಏನು ಮಾಡುವುದು ಎಂದು ಬಹು ಹೊತ್ತು ಯೋಚಿಸಿದ ಬಳಿಕ ಆಕೆಗೆ ಒಂದು ಪರಿಹಾರೋಪಾಯ ಕಂಡು, ಹೊನ್ನವ್ವಗೆ ಮದಕರಿನಾಯಕರನ್ನು ಕರೆತರುವಂತೆ ಹೇಳಿದರು.

ತನ್ನ ಕರೆಯಂತೆ ಮದಕರಿನಾಯಕ ಬಂದ ಬಳಿಕ ಅವನೊಂದಿಗೆ ಗೋಶಾಲೆಗೆ ಹೋಗಿ, 'ದೇಣಿಗೆ'ಯ ಹಸು-ಎಮ್ಮೆಗಳಿಗಾಗಿಯೇ ಪ್ರತ್ಯೇಕಾಂಕಣದಲ್ಲಿದ್ದ ದೇಣಿಗೆಯ ಹಸುವನ್ನು ಅರಿಶಿನ, ಕುಂಕುಮ, ಮಂತ್ರಾಕ್ಷತೆ ಪುಷ್ಪಗಳಿಂದ ಅರ್ಚಿಸಿ, ಕತ್ತಿಗೆ ಹೂವಿನ ಹಾರ ಹಾಕಿ, ಅದಕ್ಕೆ ತಿನ್ನಲು ಅಕ್ಕಿ, ತೆಂಗಿನತುರಿ, ಬೆಲ್ಲಗಳನ್ನಿಟ್ಟು, ಅದು ತಿಂದ ಬಳಿಕ –

"ನಮ್ಮವ್ವಾ ನಿತ್ಯಕಲ್ಯಾಣಿ, ಇವೊತ್ತು ನೀನೇ ನಮ್ಮ ಪಾಲಿಗೆ ಸಕಲ ದೇವತೆಗಳು. ನಿನ್ನ ಮೈರೋಮಗಳಲ್ಲಿ ಮೂವತ್ತಮೂರು ಕೋಟಿ ದೇವತೆಗಳಿದ್ದಾರೆ. ನಿನ್ನ ಕಣ್ಣುಗಳು ಸೂರ್ಯ ಚಂದ್ರರು. ನಿನ್ನ ಕೋಡುಗಳಲ್ಲಿ ವೀರಭದ್ರ-ಕಾಲಭೈರವರಿದ್ದಾರೆ. ನೀನೇ ಸಾಕ್ಷಾತ್ ಕಾಮಧೇನು. ನಮ್ಮ ಪಾಲಿಗೆ ಕೇಳಿದ್ದನ್ನು ಕೊಡುವ ಕಲ್ಪವೃಕ್ಷವೂ ನೀನೇ, ನೀನು ಒಲಿದರೆ ಬರದ ಭಾಗ್ಯವಿಲ್ಲ; ಮುನಿದರೆ ಒದಗದ ವಿಪತ್ತಿಲ್ಲ. ತಾಯಿ - ನಾವು ನಿನ್ನನ್ನು ದಿನಾ ಮನೆದೇವತೆಯಂತೆ ಪೂಜಿಸಿ, ನಿನ್ನ

ಹಾಲನ್ನು ನಿತ್ಯವೂ ಶಿವನಿಗೆ ಅರ್ಪಿಸಿ, ಆ ತೀರ್ಥ ಕುಡಿದು ಬದುಕಿದ್ದೇವೆ. ಹಿಂದೆ ಕೌರವರಾಯ ನಿನ್ನ ಮಕ್ಕಳ ಮೈ ಮುಟ್ಟಿ ವಂಶಕ್ಕೆ ಕೇಡು ತಂದುಕೊಂಡ. ಈಗ ರಾಯದುರ್ಗದ ಪಾಳಯಗಾರ ನಿನ್ನ ಪಾಪವರಿಯದ ಕಂದಮ್ಮಗಳನ್ನು ಅಪಹರಿಸಿ ಕೇಡು ತಂದುಕೊಂಡಿದ್ದಾನೆ. ಆ ನಿನ್ನ ಮಕ್ಕಳನ್ನು ಕಾಪಾಡಲು ಹೋಗುತ್ತಿರುವ ನಮ್ಮ ಕಾರ್ಯಕ್ಕೆ ಜಯಕೊಡು. ನಮಗೆ ಯಾವ ಕೇಡೂ ಆಗದಂತೆ ಕಾಪಾಡು. ಗೆದ್ದು ಬಂದರೆ ನಿನ್ನ ಕೋಡಿಗೆ ಬಂಗಾರದ ಕಲಶ ಇಡಿಸುತ್ತೇನೆ"

- ಎಂದು ಹೇಳಿ ಅದರ ಪಾದ ಮುಟ್ಟಿ ನಮಸ್ಕರಿಸಿದರು, ಓಬವ್ವನಾಗತಿ, ಮದಕರಿನಾಯಕನೊಂದಿಗೆ.

ಆದರ ಪ್ರಸಾದವೆಂಬಂತೆ ಅದರ ನೊಸಲಿಗೆ ತೊಡೆದಿದ್ದ ಕುಂಕುಮವನ್ನು ಭಂಡಾರದಂತೆ ಮದಕರಿನಾಯಕನ ಭ್ರೂಮಧ್ಯದಲ್ಲಿಟ್ಟು, ಪ್ರಸಾದದ ಹೂವನ್ನು ಕಣ್ಣಿಗೊತ್ತಿಕೊಂಡು ಉಡಿಯಲ್ಲಿಟ್ಟುಕೊಂಡರು.

ಆ ದೇಣಿಗೆಯ ಹಸು, ಆಕೆ ಕೊಟ್ಟ ಆಹಾರವನ್ನು ನಿಧಾನವಾಗಿ ಮೆದ್ದು, ಮೆಲುಕು ಹಾಕುತ್ತಾ, ತನ್ನ ಗಂಗೆದೊಗಲನ್ನು ನೇವರಿಸಿದ ಓಬವ್ವನಾಗತಿಯ ಕೈಯನ್ನು ತನ್ನ ನಾಲಗೆಯಿಂದ ನೇವರಿಸಿದಾಗ, ಹಾಗೆ ತೃಪ್ತಿಯಿಂದ ತಲೆಯಲ್ಲಾಡಿಸಿದಾಗ, ಅವರ ಬಲಗೊಂಬಿಗೆ ಸಿಕ್ಕಿಸಿದ ಹೂ ಕೆಳಗೆ ಬಿದ್ದಾಗ, ಓಬವ್ವನಾಗತಿಗೆ ತಾನು ಕೈಕೊಂಡ ಕೆಲಸ ಆಗಲೇ ನೆರವೇರಿದಷ್ಟು ತೃಪ್ತಿಯಾಗಿ –

"ನೀನು ಪ್ರಸಾದ ಕೊಟ್ಟೆ, ನಮ್ಮ ಕಾರ್ಯ ಜಯವಾಯಿತು"

-ಎಂದು ಮತ್ತೊಮ್ಮೆ ಕೈಮುಗಿದು, ಪ್ರಸಾದದ ಹೂವನ್ನು ಮದಕರಿನಾಯಕನಿಗೆ ಕೊಟ್ಟು ಎಲ್ಲಾ ದೇವತೆಗಳಿಗೂ ಪೂಜೆ ಮಾಡಿಸಿದ ತೃಪ್ತಿಯನ್ನು ಪಡೆದರು.

ಆಕೆ ಮಾಡುತ್ತಿದ್ದ ಗೋಪೂಜೆ, ಆ ಹಸುವಿಗೆ ನಿರ್ಮಿಸಿದ ವಿಶೇಷವಾದ ಅಲಂಕೃತವಾದ ಗೋದಲಿಯನ್ನು ನೋಡಿ, ಇದೇನೆಂಬಂತೆ ಕಣ್ಣಲ್ಲಿ ಪ್ರಶ್ನಿಸಿದ ಮದಕರಿನಾಯಕನಿಗೆ –

"ಇದು ದೇಣಿಗೆಯ ಹಸು. ಇದು ಕರೆದ ಹಾಲೆಲ್ಲವೂ ಶಿವಾಭಿಷೇಕಕ್ಕೇ ಮೀಸಲು. ದಿನವೂ ಬೆಳಗ್ಗೆ ಎದ್ದು ಇದಕ್ಕೆ ನಮಸ್ಕಾರ ಮಾಡಿದರೆ, ಮಿಂದು ತೀರ್ಥ ಕುಡಿದರೆ, ಎಲ್ಲ ದೇವರುಗಳಿಗೂ ಪೂಜಿಸಿದಷ್ಟು ಪುಣ್ಯ ಬರುತ್ತದೆ. ಬೆಳಗ್ಗೆ ಎದ್ದು ಮುಖ ತೊಳೆದು ಈ ನಿತ್ಯ ಕಲ್ಯಾಣಿಗೆ ನಮಸ್ಕರಿಸದೆ ಮನೆ ಬಿಟ್ಟು ಹೊರಡಬಾರದು. ಅದು ಈ ಮನೆಯಲ್ಲಿ ನಡೆದು ಬಂದ ಸಂಪ್ರದಾಯ"

-ಎಂದು ಓಬವ್ವನಾಗತಿ ವಿವರಿಸಿ ಹೇಳಿದಾಗ, ಪಂಚಕಲ್ಯಾಣಿ ಜಾತಿಗೆ ಸೇರಿ, ನಿತ್ಯಕಲ್ಯಾಣಿ ಎಂಬ ಹೆಸರು ಪಡೆದು, ಆ ಹೆಸರಿಗೆ ಸಾರ್ಥಕವಾಗುವಂತಿದ್ದ ಹಸುವಿಗೆ ಮತ್ತೊಮ್ಮೆ ನಮಸ್ಕರಿಸಿದ ಮದಕರಿನಾಯಕ.

೨೫

ಆ ದಿನ –

ಪುರೋಹಿತರು ನಿಶ್ಚಯಿಸಿದ ಮುಹೂರ್ತದಲ್ಲಿ, ಓಬವ್ವನಾಗತಿಯವರು, ಮದಕರಿ ನಾಯಕರು, ನಾಗತಿಯವರ ಕಾವಲಿನ ದೇಶಾಬಾಗಿನ ಹೆಣ್ಣು ಪಡೆ, ಅವರ ರಕ್ಷಣೆಗೆಂದು ಗೊತ್ತಾದ ಅಶ್ವಬಲದೊಂದಿಗೆ, ಉತ್ಸವಾಂಬೆಯ ಪ್ರಸಾದ ಸ್ವೀಕರಿಸಿ, ಇಂಗಳದಾಳು ಕಣಿವೆಯ ಮಾರ್ಗವಾಗಿ ಹಗಲು ಹಿರಿಯೂರಿನತ್ತ ನಡೆಯಿತು - ತೇರುಮಲ್ಲೇಶ್ವರಸ್ವಾಮಿಗೆ ಪೂಜೆಯೊಪ್ಪಿಸುವ ನೆಪ ಮುಂದಿಟ್ಟುಕೊಂಡು.

ಅದರ ಹಿಂದಿನ ರಾತ್ರಿಯೇ ಮತ್ತೆರಡು ಸೀಳಾಗಿ, ರಾಜಮಾರ್ಗವನ್ನು ಬಿಟ್ಟು, ಗುಡ್ಡ ಬೆಟ್ಟಗಳ ಅಡ್ಡಮಾರ್ಗದಲ್ಲಿ ಸರ್ಪವೇಗದಿಂದ ಸಂಚರಿಸಿದ ಸೇನೆ, ಓಬಳಾಪುರವನ್ನು ಸೇರಿತು. ಆ ಸೇನೆ ಅಲ್ಲಿಗೆ ಬರುವುದರೊಳಗೆ, ನಾಗತಿಯವರ ಪಡೆಯೂ ಅಲ್ಲಿಗೆ ಬಂದು ಕೂಡಿತು.

ತಮ್ಮ ರಣತಂತ್ರಕ್ಕೆ ಕಾಲ್ಬಲಕ್ಕಿಂತ ಮಿಗಿಲಾಗಿ ಅಶ್ವಸೇನೆಯೇ ಪ್ರಬಲಾಸ್ತ್ರವಾಗಬೇಕೆಂದು ಪ್ರಧಾನಿ ನರಸಪ್ಪಯ್ಯನವರು ನಿಶ್ಚಯಿಸಿದ್ದರೂ, ಗಾಳಿಯಲ್ಲಿ ಯುದ್ಧದ ವಾಸನೆ ಹಿಡಿದ ಗ್ರಾಮಗ್ರಾಮಗಳ ಕಟ್ಟಾಳುಗಳು, ಯಾರ ಒತ್ತಾಯ, ಪ್ರೇರೇಪಣೆಯೂ ಇಲ್ಲದೆ, ಕತ್ತಿ, ಮಚ್ಚು, ಕುಡುಗೋಲು, ಕೊಡಲಿ, ಕೋವಿ, ದೊಣ್ಣೆ - ಸಿಕ್ಕ ಅಸ್ತ್ರಗಳನ್ನು ಹಿಡಿದು ಸೇನೆಯೊಂದಿಗೆ ಕೂಡಿಕೊಂಡು, ದುರ್ಗದಿಂದ ಹನಿಹನಿಯಾಗಿ ಜಿನುಗಿದ ಸೇನೆ, ಓಬಳಾಪುರವನ್ನು ಸೇರುವ ವೇಳೆಗೆ ಕಾಲ್ಬಲವೇ ಎರಡುಸಾವಿರದಷ್ಟಾಗಿತ್ತು. ಶತ್ರುಗಳು, ಯಾವ ಪಾಪವನ್ನೂ ಮಾಡದ, ರೈತರು ಮನೆದೇವರಂತೆ ಪೂಜಿಸುವ ಹಸು-ಹೋರಿಗಳನ್ನು ಹಿಡಿದರೆಂಬ ಸುದ್ದಿ, ಸೇನೆಗೆ ಸೇರಿದವರಲ್ಲಿ ಹಿಂದೆಂದೂ ಇರದ ಕೆಚ್ಚನ್ನು ಮೂಡಿಸಿತ್ತು.

ಅದಕ್ಕಿಂತಲೂ ಮಿಗಿಲಾಗಿ, ನಾಗತಿಯವರೇ ತಮ್ಮ ಕಾವಲುಪಡೆಯ ಹೆಣ್ಣುಗಳೊಡನೆ ಯುದ್ಧಕ್ಕೆ ಹೋಗಲಿದ್ದಾರೆಂಬ ಸುದ್ದಿಯನ್ನು ಕೇಳಿದ ಗ್ರಾಮಸ್ತ್ರೀಯರು ಯಾರೂ ಕೇಳದೆಯೇ, ಹೇಳದೆಯೇ ಒಂದೊಂದು ಮನೆಯವರೂ, ಹತ್ತು ಜನಕ್ಕಾಗುವಷ್ಟು ರೊಟ್ಟಿಯ ಬುತ್ತಿಗಳನ್ನು ಕಟ್ಟಿಕೊಟ್ಟಿದ್ದಲ್ಲದೆ, ತಾವೇ ಕೈಗೆ ಸಿಕ್ಕ ಹಾರೆ, ಒನಕೆ, ಬೀಸುವ ಕಲ್ಲಿನ ಗೂಟ ಅದು ಇಲ್ಲದಿದ್ದವರು ಹಸು ಹಿಡಿದ ರಾಯದುರ್ಗದವರ ಗಂಡಸುತನಕ್ಕೆ ಪೂಜೆ ಮಾಡಬೇಕೆಂದು ಕೈಗೆ ಸಿಕ್ಕ ತುಂಡುಪೊರಕೆಗಳನ್ನು ಹಿಡಿದು, ವೀರಗಚ್ಚೆ ಹಾಕಿದ ಸೀರೆಯುಟ್ಟು, ಮನೆ-ಗ್ರಾಮಗಳನ್ನು ವೃದ್ಧರ ಕಾವಲಿಗೊಪ್ಪಿಸಿ ಹೊರಟು ಬಂದರು - ನಾಗತಿಯವರ ಬೆಂಬಲಕ್ಕೆಂದು.

ಕನಸು-ಮನಸ್ಸಿನಲ್ಲಿಯೂ ಊಹಿಸಲಾಗದ ಈ ವಿಚಿತ್ರ ಸೇನಾಸಮೂಹವನ್ನು ಕಂಡು, ದಾಳಿಯ ಮುಂದಾಳತ್ವ ವಹಿಸಿದ್ದ ಆಶ್ವಬಲದ ಮನಸಬುದಾರ ನೀಲಕಂಠರಾಯನಿಗೆ ಯೋಚನೆಯಾಯಿತು.

ಸಮರದಲ್ಲಿ ಪಳಗಿದ ಸೇನೆ, ಕಾಲ್ಬಲಗಳನ್ನು ಹೇಗೆ ನಡೆಸಬೇಕೆಂಬುದು ದೊಡ್ಡ ಸಮಸ್ಯೆಯಾಗದಿದ್ದರೂ, ಎಂದೂ ಸಮರದಲ್ಲಿ ಭಾಗವಹಿಸದ, ಗ್ರಾಮೀಣ ತರುಣರನ್ನು ಸ್ತ್ರೀಯರನ್ನು ಹೇಗೆ ನಡೆಸಬೇಕು, ಅವರನ್ನು ಯಾವ ಯಾವ ಮಾರ್ಗದಲ್ಲಿ ಮುನ್ನಡೆಸಬೇಕೆಂಬುದನ್ನು ನೀಲಕಂಠರಾಯ ಚಿಂತಿಸುತ್ತಿರುವಾಗಲೇ, ರಾಯದುರ್ಗದ ಸೀಮೆಯ ಸಂದುಗೊಂದುಗಳ ನಿಕಟಪರಿಚಯವಿದ್ದ ಗ್ರಾಮತರುಣರು ತಾವುತಾವೇ ಗುಂಪಾಗಿ, ಯಾವ ಯಾವ ಮಾರ್ಗವಾಗಿ ಮುನ್ನುಗ್ಗಬೇಕೆಂದು ನಿಶ್ಚಯಿಸಿ, ತಮಗೆ ಸರಿಕಂಡವರನ್ನು ನಾಯಕರನ್ನಾಗಿ ಆರಿಸಿಕೊಂಡು, ಸುತ್ತಮುತ್ತ ಬೋಳುಬಂಡೆಗಳ ಬೆಟ್ಟಗಳು ಒತ್ತಾಗಿ ಕಿಕ್ಕಿರಿದ ಗಿರಿಸಾಲಿನ ಗುಪ್ತಮಾರ್ಗಗಳಲ್ಲಿ ಸಂಚರಿಸಿ, ದಾರಿಯಲ್ಲಿ ಸಿಕ್ಕ ಶತ್ರುಸೀಮೆಯವರನ್ನು ತುಂಡರಿಸಿ, ಆಯ ಕಟ್ಟಿನ ಜಾಗಗಳನ್ನು ಹಿಡಿದು, ಸಜ್ಜಾಗಿ ನಿಂತರು.

ಗ್ರಾಮಸ್ಥರ ಉತ್ಸಾಹ, ದುರ್ಗದ ಸೇನೆಯ ತೋಳಿಗೆ ಸಿಡಿಲಿನ ಬಲ ತಂದುಕೊಟ್ಟಿತು.

ಆ ಇರುಳು ಹೊರಟ ಸೇನೆ –

ರಾಯದುರ್ಗದ ಜನ ಇದೇನಾಯಿತೆಂದು ಅರ್ಥ ಮಾಡಿಕೊಳ್ಳುವುದರೊಳಗಾಗಿ ಮಿಂಚಿನ ವೇಗದಿಂದ ಮುನ್ನುಗ್ಗಿ, ಕಾರ್ಗಾಲದ ಸಿಡಿಲಿನಂತೆ ಭೋರ್ಗರೆದು, ಬಂಡೆಬಂಡೆಗಳಿಗೂ ಅರಿರುಂಡ-ಮುಂಡಗಳ ಬಲಿಕೊಟ್ಟು, ಗಡಿಗ್ರಾಮಗಳಾದ ಕೋನಾಪುರ, ಕೊಡಗನೂರು ಗ್ರಾಮಗಳನ್ನು ಹಿಡಿದು ಹಗಲಾಗುವ ವೇಳೆಗೆ, ರಾಯದುರ್ಗದ ಕೋಟೆಗೆ ಲಗ್ಗೆ ಹಾಕಿತು.

ಅವಸರವಸರವಾಗಿ ರಾಯದುರ್ಗದ ಸೇನೆ, ಸಿದ್ಧವಾಗಿ ಚಿತ್ರದುರ್ಗದ ದಂಡನ್ನು ಎದುರಿಸಲು ಮುನ್ನುಗ್ಗಿದಾಗ, ಗುಡ್ಡ ಬಂಡೆಗಳ ಸಂದುಗಳಲ್ಲಿ ಅವಿತ ಗ್ರಾಮಪಡೆ, ಸೇನೆಯ ಮಾರ್ಗದಲ್ಲಿ ಬಂಡೆಗಳನ್ನುರುಳಿಸಿ, ಇಬ್ಬದಿಯ ಬಂಡೆಗಲ್ಲುಗಳ ನಡುವೆ ನಿಂತ ಶತ್ರುಸೇನೆಯ ಮೇಲೆ ದಾಳಿಮಾಡಿ, ಗುಂಪುಗುಂಪಾಗಿ ಸಿಡಿದು ಚದುರಿದ ಸೇನೆಯನ್ನು ಮಚ್ಚು, ಕುಡುಗೋಲು, ಕೊಡಲಿಗಳಿಂದ ತಲೆ ತರಿದು, ಸತ್ತ ಶತ್ರು ಸೈನಿಕರ ಶಸ್ತ್ರಾಸ್ತ್ರಗಳನ್ನೇ ತಮ್ಮ ಸಾಧನವಾಗಿ ಮಾಡಿಕೊಂಡು ಮುನ್ನುಗ್ಗಿತು.

ಇಂಥ ದಿಕ್ಕಿನಿಂದ ಬರುತ್ತಿದೆಯೆಂದು ಅರ್ಥವಾಗದ ವಿಚಿತ್ರ ದಾಳಿ: ನಿಂತಲ್ಲಿ ನೆತ್ತಿಯ ಮೇಲುರುಳುವ ಬಂಡೆಗಳು, ಸೊಯ್ಯೆಂದು ಬೀಸಿಬರುವ ಕವಣೆಗಲ್ಲುಗಳ ಸುರಿಮಳೆ, ಅಡ್ಡವಾದ

ಬಂಡೆಗಳ ಮೇಲೆ ಕುದುರೆಗಳನ್ನು ಹಾರಿಸುತ್ತಾ. ಸುತ್ತ ಗುಂಡುಗಳ ಕೆಂಡಗಳನ್ನು ಕಾರುತ್ತಾ ಏರಿಬಂದ ಅಶ್ವದಳ –

ಇದೆಲ್ಲಕ್ಕಿಂತಲೂ ಮಿಗಿಲಾಗಿ, ಕೇಳಿದವರ ಎದೆ ತಲ್ಲಣಿಸುವಂತೆ ರಣಕೇಕೆ ಹಾಕುತ್ತಾ, ದೇಶಾಬಾಗ್ ಹೆಣ್ಣು ಪಡೆಯೊಡನೆ, ಎಂದೂ ಯುದ್ಧಕ್ಕೆ ಬಳಸದ ವಿವಿಧ ವಿಚಿತ್ರಾಯುಧಗಳನ್ನು ಹಿಡಿದು, ಎದುರಿಸಿದವರ ತಲೆಕಡಿದು, ತಲೆಬಾಗಿದವರ ನೆತ್ತಿಯ ಮೇಲೆ ಒನಕೆಗಳನ್ನು ಅಪ್ಪಳಿಸಿ, ನೋಡಲು ನಿಂತವರ ನೆತ್ತಿಗೆ, ಮುಖಕ್ಕೆ ಪೊರಕೆಯಿಂದ ಹೊಡೆದು ಕೆಣಕಿದ ಹೆಜ್ಜೇನುಪಡೆಯಂತೆ, ಹುಚ್ಚವ್ವನಾಗತಿಯ ಮುಂದಾಳತ್ವದಲ್ಲಿ ನುಗ್ಗಿದ ರಣದುರ್ಗಿಯರ ಸೇನೆಯಂಥ ಸ್ತ್ರೀಸೇನೆಯ ಹೊಡೆತಕ್ಕೆ ಸಿಕ್ಕ, ರಾಯದುರ್ಗ ತತ್ತರಿಸಿತು.

ಹಣೆಗೆ ಹಣೆಯಷ್ಟಗಲದ ಭಂಡಾರ ಧರಿಸಿ, ವೀರಗಚ್ಚೆ ಹಾಕಿದ ಸೀರೆಯುಟ್ಟ ಸ್ತ್ರೀಯರ ಸೇನೆ, ಉಳಿದವರಿಗಿಂತ ಮುಂದಾಗಿ, ರಾಯದುರ್ಗದ ಕೋಟೆಯ ಬಾಗಿಲನ್ನು ಸೇರಿ, ಬಂದೂಕುಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದ ಕಾವಲಿನವರ ತಲೆಗಳನ್ನು, ಕಾಳತೆನೆಗಳಂತೆ ಕತ್ತರಿಸಿ, ದಿಡ್ಡಿ ಬಾಗಿಲುಗಳ ಸಂದುಗಳಿಂದ ಮುನ್ನುಗ್ಗಿ, ಸ್ತ್ರೀಪಡೆ ಕೆಳಗೋಟೆಯನ್ನು ಸೇರುವುದರೊಳಗಾಗಿ ಅವರ ಬೆನ್ನು ಕಾಯ್ದು ಬಂದ ಗ್ರಾಮಪಡೆ, ಮುಚ್ಚಿದ ಹೆಬ್ಬಾಗಿಲನ್ನು ತೆರೆದು, ಸೇನೆ ಮುನ್ನುಗ್ಗಲು ದಾರಿಮಾಡಿಕೊಟ್ಟಿತು.

ಅಶ್ವಾರೋಹಿಯಾಗಿ, ಬಿಚ್ಚಿದ ಬಿಳಿಗೂದಲು ರಾಯದುರ್ಗದವರ ಪತನಕ್ಕಾಗಿ ಮೂಡಿದ ಧೂಮಕೇತುವಿನಂತೆ ಆಡುತ್ತಿರಲು, 'ಕಡಿ, ಬಡಿ, ಕೊಲ್ಲು' ಎಂದು ಕೂಗುತ್ತಾ, ಬೀಸಿದ ಕತ್ತಿಗೆ ಅಡ್ಡವಾದ ತಲೆ ಕೈಕಾಲುಗಳನ್ನು ಕತ್ತರಿಸುತ್ತಾ, ಉಟ್ಟ ಬಟ್ಟೆ, ಶತ್ರು ರಕ್ತದಲ್ಲಿ ತೊಯ್ದು ರಣಗಾಳಿಯ ರಕ್ತಾಂಬರದಂತೆ ಕಂಡವರ ಎದೆ ನಡುಗಿಸುತ್ತಿರಲು ಮಹಿಷಾಸುರಮರ್ದಿನಿಯಂತೆ ಮುನ್ನುಗ್ಗಿದ ಓಬವ್ವನಾಗತಿಯನ್ನು ಕಂಡು ಮದಕರಿನಾಯಕನ ತೋಳುಗಳಲ್ಲೂ ಮಿಂಚು ಸಂಚರಿಸಿ, ಬಿರುಗಾಳಿಯಂತೆ ನುಗ್ಗುವ ಅಶ್ವವೂ ತನ್ನ ವೇಗಕ್ಕೆ ಸಾಲದೆಂಬಂತೆ, ಕುದುರೆಯಿಂದ ಧುಮುಕಿ, ಕೈಯಲ್ಲಿ ಹಿಡಿದ ಎಂಟಲಗಿನ ಪರಿಘವನ್ನು ಚಕ್ರಾಕಾರವಾಗಿ ತಿರುಗಿಸಿ ಹೊಯ್ದು ಕಡಿದುಬಿದ್ದ ಶತ್ರುಸೈನಿಕರನ್ನೇ ಮೆಟ್ಟಲಾಗಿ ಮಾಡಿಕೊಂಡು, ಬೆಟ್ಟದ ನಡುಭಾಗದಲ್ಲಿದ್ದ ರಾಯದುರ್ಗದ ನಾಯಕರ ಮನೆದೇವತೆಯಾದ ಪಟ್ಟದ ಎಲ್ಲಮ್ಮನ ಗುಡಿಯ ಮುಂದಿನ ಕಲ್ಲಾನೆಯನ್ನು ಏರಿ ನಿಂತು,

"ಎಳೆದು ತನ್ನಿರೋ, ರಾಯದುರ್ಗದ ಕುನ್ನಿ ಕೃಷ್ಣಪ್ಪನನ್ನು" – ಎಂದು ಕೇಕೆಹಾಕಿದ.

ತನ್ನೆದುರಿನ ಮಾತಂಗಿಯ ಗುಡಿಯ ಮುಂದಿನ ಜಾತ್ರೆಯ ಕುರಿಕೋಣಗಳ ಬಲಿಯನ್ನೂ ನೋಡಲಾಗದೆ, ತೆರೆಯ ಹಿಂದೆ ಕುಳಿತಿರುತ್ತಿದ್ದ ಪಟ್ಟದ ಎಲ್ಲಮ್ಮ ದೇವತೆ, ತನ್ನೆದುರೇ

ರಾಶಿರಾಶಿಯಾಗಿ ಬಿದ್ದ ಮೃತಸೈನಿಕ ದೇಹಗಳನ್ನು, ಮಡುಗಟ್ಟಿ ಹರಿದ ರಕ್ತಪ್ರವಾಹವನ್ನು ಕಂಡು, ಹಸುಗಳನ್ನು ಹಿಡಿದು ಹೀನಕೆಲಸ ಮಾಡಿದ ರಾಯದುರ್ಗದವರನ್ನು ಕಂಡು ಹೇಸಿದಂತೆ ಕಣ್ಮುಚ್ಚಿದಳು.

ಕಡಿದಾದ ಮೇಲುದುರ್ಗದ ಕೋಡುಗಲ್ಲುಗಳನ್ನು, ರಕ್ತದಿಂದ ತೊಯ್ದು ಕಾಲುಗಳು ಜಾರುತ್ತಿದ್ದರೂ ಏರಿ, ಬಾಯಲ್ಲಿ ಕತ್ತಿಯನ್ನು ಕಚ್ಚಿಹಿಡಿದು ಅರಮನೆಯತ್ತ ನುಗ್ಗಿ ಬಂದ, ದುರ್ಗದ ಸೇನೆಯನ್ನು ಕಂಡು ಬೆದರಿದ ಕೃಷ್ಣಪ್ಪನಾಯಕ, ತನ್ನ ರಾಣೀವಾಸದವರೊಂದಿಗೆ ಅರಮನೆಯ ಗುಪ್ತದ್ವಾರದ ಮೂಲಕ ಕೋಟೆಯಾಚೆಗೆ ಪಲಾಯನ ಮಾಡಿ, ಹರಪನಹಳ್ಳಿಯ ಹಾದಿಯಲ್ಲಿ ಓಡಿ ತಲೆ ಉಳಿಸಿಕೊಂಡ.

ತಲೆ ಉಳಿಸಿಕೊಂಡ-

ಆದರೆ ಮರ್ಯಾದೆಯನ್ನು ಮಾತ್ರ ಉಳಿಸಿಕೊಳ್ಳಲಾಗಲಿಲ್ಲ.

ತಂಬಿಗೆ ರಕ್ತಕ್ಕೆ ಹೇಸಿದ್ದ ಮದಕರಿನಾಯಕ –

ರಕ್ತಸ್ನಾನಮಾಡಿ, ರಣಕೇಕೆ ಹಾಕುತ್ತಾ, ಕತ್ತರಿಸಿದ ಶತ್ರು ತಲೆಗಳನ್ನು ಜುಟ್ಟು ಹಿಡಿದು ತೂಗಾಡಿಸುತ್ತಾ –

"ನೀನು ಗಂಡು. ನಿನ್ನನ್ನು ಮಗ ಎಂದು ಕರೆದದ್ದು ಸಾರ್ಥಕವಾಯಿತು" ಎಂದು ಓಬವ್ವನಾಗತಿಯ ಕೈಲಿ ಹೊಗಳಿಸಿಕೊಂಡ.

ಇರುಳು ಆರಂಭವಾದ ಯುದ್ಧವನ್ನು, ಹಗಲಾಗಿ ನಾಲ್ಕು ಗಳಿಗೆ ಕಳೆಯುವುದರೊಳಗಾಗಿ ಮುಗಿಸಿ, ರಾಯದುರ್ಗದ ಮೇಲೆ ತನ್ನ ಹನುಮದ್ಗರುಡಧ್ವಜವನ್ನು ಹಾರಿಸಿತು, ದುರ್ಗದ ಸೇನೆ.

ಸೋತು. ಅಳಿದುಳಿದ ಶತ್ರುಸೇನೆ ನಾಚಿ ತಲೆಬಾಗಿಸಿತು –

ಕತ್ತಿಯೇಟಿಗಿಂತ ಬಲವಾಗಿ, ತಮಗೆ ಬಿದ್ದ ದುರ್ಗದ ಹೆಣ್ಣು ಮಕ್ಕಳ ಕೈಯ ಪೊರಕೆಯ ಏಟಿನಿಂದ.

ಶತ್ರುಗಳ ಸದ್ದಡಗಿದಮೇಲೆ, ಹೊಂಡದ ನೀರಿನಲ್ಲಿ ರಕ್ತಸಿಕ್ತವಾದ ಕೈಮುಖಗಳನ್ನು ತೊಳೆದು, ಊರಿನಿಂದ ತಂದ ರೊಟ್ಟಿಯನ್ನುಂಡು, ರಾಯದುರ್ಗದವರು ಮತ್ತೆಂದೂ ಮರೆಯದಂತೆ, ಬೆಟ್ಟದ ಕೋಡುಗಲ್ಲುಗಳೂ ತತ್ತರಿಸುವಂತೆ ವಿಜಯಕೇಕೆ ಹಾಕಿದರು, ದುರ್ಗದ ಧೀರಭಟರು.

ವಿಜಯೋನ್ಮತ್ತರಾದ ದುರ್ಗದ ಸೈನಿಕರ ಉತ್ಸಾಹಕ್ಕೆ ಕೊನೆಯೆಂಬುದೇ ಇರಲಿಲ್ಲ. ರಾಯದುರ್ಗದವರು ಹಿಡಿದ ತಮ್ಮ ಹಸು-ಹೋರಿಗಳ ಕತ್ತಿಗೆ, ಶತ್ರುರುಂಡಮಾಲೆಯ ಸರ ಹಾಕಿ, ಮತ್ತೆ ದುರ್ಗದತ್ತ ನಡೆಯಿತು, ಸೇನೆ.

ಆ ಉತ್ಸಾಹದಲ್ಲೇ ಕೆಲವರು ರಾಯದುರ್ಗದವರ ಹಸುಗಳ ಮಂದೆಯನ್ನು ತಮ್ಮ ಹಸುಗಳೊಂದಿಗೆ ಹೊಡೆದೊಯ್ಯಲು ಸಿದ್ಧರಾದಾಗ, ನಾಗತಿ ದೃಢವಾದ ಕಂಠದಲ್ಲಿ ಹೇಳಿದರು –

"ರಾಯದುರ್ಗದವರು ಮಾಡಿದ ಹಸುಗಳ್ಳತನದ ಪಾಪ ಅವರನ್ನು ತಿಂದಿತು. ನಮ್ಮ ಸೇನೆ ಆ ಪಾಪ ಮಾಡಕೂಡದು. ಹಸುಗಳು, ಹೆಂಗಸರು ಎಂದೂ ನಮ್ಮ ಶತ್ರುಗಳಲ್ಲ. ನಮ್ಮ ಮಕ್ಕಳೆಂದೂ ಆ ಪಾಪ ಮಾಡಕೂಡದು."

ಓಬವ್ವನಾಗತಿಯ ಆ ಮಾತು –

ರಾಯದುರ್ಗದ ಹಸುಗಳನ್ನು, ಹೆಂಗಸರನ್ನು ರಕ್ಷಿಸಿತು.

* * *

ಇದ್ದಕ್ಕಿದ್ದಂತೆಯೇ ಒದಗಿಬಂದ ರಾಯದುರ್ಗದ ಯುದ್ಧ ಮೂರು ದಿನಗಳಲ್ಲಿ ಮುಕ್ತಾಯವಾಯಿತು : ಆ ಗೆಲುವಿನ ಹಬ್ಬ ಆರು ದಿನ ನಡೆಯಿತು, ಚಿತ್ರದುರ್ಗದಲ್ಲಿ.

ವೃದ್ಧ ಓಬವ್ವನಾಗತಿಯ ರಣಸಾಹಸ, ಯುವನಾಯಕನ ಪರಶುರಾಮಪ್ರತಾಪ ಹಾಡಿನ ಹೊಳೆಯಾಗಿ ನಾಡಿನಲ್ಲೆಲ್ಲಾ ಹರಿಯಿತು.

ಆ ಯುದ್ಧ ನಡೆದ ಯುವ ಸಂವತ್ಸರ ಚಿತ್ರದುರ್ಗದ ಯುವನಾಯಕರ ಕೀರ್ತಿಪಳವಿಗೆಯನ್ನು ಹಿಡಿದೆತ್ತಿ ತನ್ನ ಹೆಸರನ್ನು ಸಾರ್ಥಕಪಡಿಸಿಕೊಂಡಿತು.

೬

ಮದಕರಿನಾಯಕ ಪಟ್ಟಕ್ಕೆ ಬಂದಾಗ ಮೊದಲ ಯುದ್ಧದಲ್ಲೇ ಗೆಲುವು ದೊರೆತದ್ದು –

ಆ ಗೆಲುವಿಗಾಗಿ, ಸೇನೆಯೊಂದಿಗೆ ಹಳ್ಳಿಹಳ್ಳಿಯ ಹೆಣ್ಣು-ಗಂಡುಗಳೂ ಸೇನೆಯವರಿಗೂ ಮೀರಿದ ಉತ್ಸಾಹದಿಂದ ಹೋರಾಡಿದ್ದು –

ರಾಯದುರ್ಗದವರು ಸೇನೆಯ ಕೈಯಲ್ಲಿರಲಿ, ಗಂಡಸರ ಕೈಯಲ್ಲಿರಲಿ, ಹೆಂಗಸರಿಂದ ಪೆಟ್ಟುತಿಂದು ಸೋತದ್ದು –

ದುರ್ಗದ ಜನತೆ ಆ ಹರ್ಷದ ಹೊನಲನ್ನು ಹಾಡಾಗಿ ಹರಿಸಿ, ಸುತ್ತಲ ಸೀಮೆಗಳವರೆಲ್ಲರೂ ದುರ್ಗದ ವಿಜಯವೈಭವವನ್ನು ಕಂಡು ತಲೆದೂಗುವಂತಾಗಿದ್ದರೆ –

ಆ ಗೆಲುವಿಗಿಂತಲೂ ಮಿಗಿಲಾದ ಹರ್ಷವನ್ನು ಮೂಡಿಸಿತ್ತು –

ತನ್ನ ತಂದೆ, ತಾಯಿ, ತಮ್ಮ, ದುರ್ಗದ ಅರಮನೆಯಲ್ಲಿ ಬಿಡಾರ ಹೂಡಲು ಬಂದದ್ದು ಮದಕರಿನಾಯಕನಿಗೆ.

ರಣದಲ್ಲಿ ಗೆದ್ದು ಕೀರ್ತಿಶಾಲಿಯಾಗಿ ಬಂದು ವಂದಿಸಿದ ಮಗನನ್ನು –

"ನೀನು ಹಿಡಿದ ಕೆಲಸವೆಲ್ಲಾ ಹೀಗೇ ಜಯವಾಗಲಿ" - ಎಂದು ನಿಂಗವ್ವ ಹರಸಿದಾಗ –

"ಈಗಲೇ ಗೆದ್ದು ಬಂದೆ. ಇನ್ನು ನನ್ನನ್ನು ಹರಸಲು ಸದಾ ನೀನಿರುವಾಗ, ಸೋಲಿನ ನೆರಳೂ ದುರ್ಗದ ಸನಿಹ ಸುಳಿಯುವುದಿಲ್ಲ" – ಎಂದು ಹೆಮ್ಮೆಯಿಂದ ಹೇಳಿದ. ಮದಕರಿನಾಯಕ.

"ನೀನು ಗೆದ್ದು, ಗಂಡಾಗಿ ಹುಟ್ಟಿದ್ದಕ್ಕೆ, ಕೊಟ್ಟ ಮನೆಗೆ ತಂದ ಮನೆಗೆ ಎರಡಕ್ಕೂ ಕೀರ್ತಿ ತಂದೆ" – ಎಂದು ತಂದೆ ಭರಮಣ್ಣನಾಯಕ ಹರಸಿದರೆ –

"ಅಣ್ಣಾ, ನೀನೇನೋ ಗೆದ್ದು ಬಂದೆ. ಯುದ್ಧಕ್ಕೆ ಹೊರಟಾಗ ನನ್ನನ್ನು ಮರೆತು ಬಿಟ್ಟೆಯಲ್ಲ ಒಂದು ಮಾತು ಹೇಳಿಕಳಿಸಿದ್ದರೆ ಹಕ್ಕಿಯಂತೆ ಹಾರಿಬರುತ್ತಿದ್ದೆ. ನನ್ನ ಕೈ-ಏಟಿನ ರುಚಿಯನ್ನು ರಾಯದುರ್ಗದವರಿಗೆ ತೋರಿಸಬಹುದಾಗಿತ್ತು" - ಎಂದು ಹಿಗ್ಗಿ ಹಾರಾಡಿದ ಪರಶುರಾಮನಾಯಕ.

"ಇನ್ನು ಮುಂದೆ ಇಲ್ಲೇ ಇರುತ್ತೀಯಲ್ಲ, ನನ್ನ ಬಲಭುಜವಾಗಿ. ಅದೆಷ್ಟು ಸೀಮೆ ಗೆದ್ದು ತರುತ್ತೀಯೋ ನೋಡೋಣ"

-ಎಂದು ತಮ್ಮನ ಬೆನ್ನು ತಟ್ಟಿ, ಏನೋ ಜ್ಞಾಪಿಸಿಕೊಂಡು –

"ಅಂದಹಾಗೆ – ಈ ಗೆಲುವಿನ ಸುದ್ದಿ ಕೇಳಿ, ಗರಡಿಯ ಹಿರಿಯ ಜೆಟ್ಟಿಗಳು ಏನು ಹೇಳಿದರು ? ಅವರು ಹೇಗಿದ್ದಾರೆ ?" – ಎಂದು ಕೇಳಿದ ಮದಕರಿನಾಯಕ.

"ಓ - ಈ ಸುದ್ದಿ ಬಂದ ದಿನ ನೀನವರ ಮುಖ ನೋಡಬೇಕಿತ್ತು, ಅಣ್ಣ. ಉತ್ಸಾಹದಲ್ಲಿ ಮೊರದಗಲ ಮುಖ ಮಾಡಿಕೊಂಡು, ತಾವೇ ಊರಿಗೆಲ್ಲ ಸಿಹಿ ಹಂಚಿಸಿದರು - 'ನಮ್ಮ ಗರಡಿಯ ಪೈಲ್ವಾನ. ರಾಯದುರ್ಗದವರ ಸೊಕ್ಕಿಗೆ ಕಡಿವಾಣ ಆದ' ಅಂತ. ಆ ದಿನ ಗುಡ್ಡದ ತಿಮ್ಮಪ್ಪನ ಗುಡಿಯಲ್ಲಿ ಪೂಜೆ ಮಾಡಿಸಿ, ನಿನ್ನ ಕತ್ತಿಗೆ ಕಟ್ಟಿಕೊಳ್ಳಲು ಬೆಳ್ಳಿಯ ಹನುಮಂತನ ತಾಯಿತ ಕಳಿಸಿದ್ದಾರೆ. ಹಾಗೇ ನೀನು ಊರು ಬಿಡುವ ದಿನ ಅದೇನೋ ಹೇಳಿದ್ದರಂತಲ್ಲ. 'ಅದನ್ನು ನಿಮ್ಮಣ್ಣ ಮರೆತುಬಿಟ್ಟಾನು, ಮುದುಕನ ಮಾತು ಯಾವತ್ತೂ ಸುಳ್ಳು ಮಾಡಬಾರದು ಎಂದು ನೆನಪಿಸು' ಎಂದರು"

- ಎಂದು ಹೇಳಿ, ತನ್ನ ಕಸೆಯಂಗಿಯ ಜೇಬಿನಲ್ಲಿಟ್ಟುಕೊಂಡಿದ್ದ ಕರಿಯ ದಾರದ ಬೆಳ್ಳಿಯ ಹನುಮನ ವಿಗ್ರಹವಿದ್ದ ತಾಯತವನ್ನು ಅಣ್ಣನ ಕುತ್ತಿಗೆಗೆ ಕೈಯಾರ ಕಟ್ಟಿ –

"ಬರೇ ಜಟ್ಟಿಗಳೇ ಅಲ್ಲವಣ್ಣ ನಮ್ಮ ಗರಡಿಯ ಹುಡುಗರೆಲ್ಲಾ ಸೇರಿ, ನಿನ್ನ ಕೈಗೆ ಹಾಕಲು ಬೆಳ್ಳಿಯ ಕಡಗ ಕೊಟ್ಟಿದ್ದಾರೆ. ಅವರದನ್ನು ತಂದುಕೊಟ್ಟಾಗ ಅಪ್ಪಯ್ಯ 'ಅರಸರು ಬೆಳ್ಳಿಯ ಕಡಗ

ಹಾಕುತ್ತಾರೇನೋ?' ಎಂದು ಜಬರಿಸಿದಾಗ, 'ಬಡವರ ಕಾಣಿಕೆ. ಒಪ್ಪಿಸಿಕೊಳ್ಳುವುದೂ, ಬಿಡುವುದೂ ದೊರೆಗಳ ಚಿತ್ತ' ಎಂದರು. ಅಪ್ಪಯ್ಯನ ಮಾತು ಕೇಳಿ ಆ ಜನರ ಮುಖ ಹಿಡಿಯಷ್ಟಾಗಿ ಹೊರಟೇಬಿಟ್ಟಿದ್ದರು. ನಾನು ಅವರ ಹಿಂದೆ ಹೋಗಿ 'ಅರಸರ ಕೈಗೆ ನಾನು ತೊಡಿಸುತ್ತೇನೆ. ಕೊಡಿ' ಅಂತ ಹೇಳಿ ತೆಗೆದುಕೊಂಡು ಬಂದೆ'' - ಎಂದು ತಾನು ಮುಚ್ಚಿ ತಂದ ಬೆಳ್ಳಿಯ ಕಡಗವನ್ನು ತೋರಿಸಿದ, ಪರಶುರಾಮನಾಯಕ.

"ಅರಸುತನ ನನಗಿಂತ ಹೆಚ್ಚಾಗಿ ಅಪ್ಪಯ್ಯನಿಗೇ ಬಂದ ಹಾಗಿದೆ. ಆ ಕಡಗ ನನ್ನ ಕೈಗೆ ಹಾಕು - ಇದರ ಮುಂದೆ ನವರತ್ನದ ಕಡಗಾನ ನಿವಾಳಿಸಿ ಒಗೆಯಬೇಕು. ಪ್ರೀತಿಗಿಂತ ಬಂಗಾರಕ್ಕೆ ಬೆಲೆಯಾ? ಈ ಅರಮನೆಯಲ್ಲಿ ಬಂಗಾರ ಕಾಲಕಸ: ಪ್ರೀತಿ ನಾಗರಹೆಡೆಯ ಮಣಿಯಷ್ಟು ಅಪರೂಪ"

- ಎಂದು ಬೆಳ್ಳಿಯ ಕಡಗವನ್ನು ಧರಿಸಲು ಕೈಚಾಚಿ, ತನ್ನ ಬಲಗೈಯನ್ನು ಅಲಂಕರಿಸಿದ ಬೆಳ್ಳಿಯ ಕಡಗವನ್ನು ಪ್ರೀತಿ ತುಂಬಿದ ಹೆಮ್ಮೆಯಿಂದ ನೋಡುತ್ತಾ-

"ಇದನ್ನು ಯಾವತ್ತೂ ನನ್ನ ಕೈಯಿಂದ ತೆಗೆಯುವುದಿಲ್ಲ....ಹಾಗೇ ಪರಶುರಾಮಣ್ಣ ನಾಳೆ ನನಗೆ ಜ್ಞಾಪಿಸು. ಪ್ರಧಾನಿಗಳಿಗೆ ಹೇಳಿ, ಹಿರಿಯ ಜೆಟ್ಟಿಗಳ ಕೈಗೊಂದು ಬಂಗಾರದ ಕಡಗ, ನಮ್ಮ ಹುಡುಗರಿಗೆಲ್ಲಾ ಚಿನ್ನದ ಹನುಮನ ತಾಯತ ಕಳಿಸುವ ಹಾಗೆ ಹೇಳುತ್ತೇನೆ'' ಎಂದು ಹೇಳಿದ ಮದಕರಿನಾಯಕ.

ಆತನಾಡಿದ ಮಾತು, ಪರಶುರಾಮನಾಯಕನಿಗೆ ಬಹು ಪ್ರಿಯವಾಗಿ –

"ಅರಸಾದಮೇಲೂ, ಹಳ್ಳಿಯ ಮೇಲಿನ ನಿನ್ನ ಹಳೆಯ ಅಭಿಮಾನ ಬಿಡಲಿಲ್ಲ'' – ಎಂದ ಅಭಿಮಾನ ತುಂಬಿದ ಧ್ವನಿಯಲ್ಲಿ.

"ಏ – ಎಂಥ ಮಾತಾಡುತ್ತೀಯೋ, ತಮ್ಮ ಹೆಂಡತಿ ಬಂದಳು ಅಂತ ಹಡೆದವ್ವನನ್ನು ಯಾರಾದರೂ ಮರೆತಾರಾ ?" – ಎಂದು ಕೇಳಿದ ಮದಕರಿನಾಯಕ.

ಅಣ್ಣನಾಡಿದ ಆ ಮಾತನ್ನು ಕೇಳಿ, ಪರಶುರಾಮನಾಯಕನಿಗೆ ತನ್ನ ಅಣ್ಣನಿಗೆ ಮದುವೆಯಾಗಿರುವುದು ನೆನಪಾಗಿ –

"ನೋಡು – ಇದೆಲ್ಲಾ ಮಾತಿನಲ್ಲಿ ಐನಾತಿ ಮಾತನ್ನೇ ಮರೆತುಬಿಟ್ಟಿದ್ದೆ. ಅತ್ತಿಗೆವ್ವ ಹೆಂಗವರೆ? ನೀನು ಗೆದ್ದು ಬಂದಾಗ ನಿನಗೆ ಮುತ್ತಿನಾರತಿ ಮಾಡಿದರಂತಲ್ಲಾ, ಅವರು ಏನು ಹೇಳಿದರು?'' – ಎಂದು ಕೇಳಿದ.

"ನಿನ್ನತ್ತಿಗೇನಾ - ಚೆನ್ನಾಗಿದ್ದಾಳೆ. ನೋಡೋಕೆ ಬಣ್ಣದ ಗೊಂಬೆ. ಆದರೆ ಮಾತಾಡಿಸಿದರೆ ಮೂಗಿಯಾಗಿ ಹೋಗುತ್ತಾಳೆ" - ಎಂದ ಮದಕರಿನಾಯಕ.

“ಇನ್ನೂ ನಿನ್ನೆ-ಮೊನ್ನೆ ತವರುಮನೆ ಬಿಟ್ಟು ಬಂದ ಹಸುಗೂಸಲ್ಲವಾ? ಎರಡು ದಿನ ಕಳೆದು ಮೈಛಳಿ ಬಿಡಲಿ. ಆಮೇಲೆ ನೀನೇ ಆ ಬಾಯಿಗೆ ಹೆದರುವ ಹಾಗೆ ಬೆಳೆಯುತ್ತಾಳೆ.. ನನ್ನತ್ತಿಗೆವ್ವ” - ಎಂದ ಪರಶುರಾಮನಾಯಕ.

“ಮೈಛಳಿ ಬಿಟ್ಟ ಮೇಲಲ್ಲವೇ. ಬಾಯಿಬಿಡುವ ಮಾತು. ಅವ್ವನಿಗೆ ಹೇಳಬೇಕು – ನಿನ್ನ ಸೊಸೆಗೆ ಮಾತು ಕಲಿಸು ಅಂತ.”

“ಹೇಳು'' – ಎಂದ ಪರಶುರಾಮನಾಯಕ.

“ನಾನು ಹೇಳುವುದು....ಅದೂ ಅವ್ವನ ಮುಂದೆ....ಅದು ನನ್ನ ಕೈಲಾಗದ ಮಾತು. ನೀನೇ ನಾನು ಹೇಳಿದೆ ಅಂತ ಅವ್ವನಿಗೆ ಹೇಳು'' – ಎಂದ ಮದಕರಿನಾಯಕ.

“ಯಾಕೆ – ಈಗಲೇ ಹೆದರಿಕೇನಾ ? ಅವ್ವನದೋ, ಅತ್ತಿಗವ್ವನದೋ ?''

- ಅಣ್ಣನನ್ನು ಕೆದಕಿ ಕೇಳಿದ ಪರಶುರಾಮನಾಯಕ.

“ದಂಡಿಗೆ ಹೆದರಲಿಲ್ಲ, ದಾಳಿಗೆ ಹೆದರಲಿಲ್ಲ. ಈ ಗಾಜಿನ ಗೊಂಬೆಗೆ ಹೆದರೋದಾ ? ಅದಲ್ಲ - ನನ್ನ ಹೆಂಡತಿ ವಿಷಯ ನಾ ಹೇಗೆ ಹೇಳಲಿ. ಅವ್ವನ ಮುಂದೆ ?''

“ನಿನ್ನ ಹೆಂಡತಿ ವಿಷಯ ನೀನು ಹೇಳದೆ, ನಾನು ಹೇಳುವುದೇ?”

“ಅವಳು ನನಗೆ ಹೆಂಡತಿ: ನಿನಗೆ ಅತ್ತಿಗೆ. ಆದ್ದರಿಂದ ನೀನು ಹೇಳು....ಇಷ್ಟಕ್ಕೂ ನೀನಿಲ್ಲಿಗೆ ಬಂದದ್ದು ಯಾಕೆ?”

“ನಿನಗೂ-ಅತ್ತಿಗೆವ್ವನಿಗೂ ಮಧ್ಯಸ್ಥಿಕೆ ಮಾಡಲೇ?”

“ಥೂ. ನಾಚಿಕೆಬಿಟ್ಟವನೇ. ನಾನು ಹೇಳಲಾಗದ ಮಾತಿಗೆ ತಮ್ಮನಾದ ನೀನು ನನ್ನ ನಾಲಗೆಯಾಗಬೇಕು - ಇದೊಂದು ವಿಷಯದಲ್ಲಲ್ಲ, ಎಲ್ಲದರಲ್ಲೂ'' – ಎಂದ ಮದಕರಿನಾಯಕ.

“ಇಂಥ ಮಾತಾದರೆ ಎಷ್ಟಾದರೂ ಅವ್ವನನ್ನು ಕೇಳಿಯೇನು. ಮಿಕ್ಕ ವಿಷಯ ಮಾತಾಡಲು ಹಳ್ಳಿಯಮುಕ್ಕ ನನಗೇನು ತಿಳಿಯುತ್ತದೆ.”

“ತಿಳಿಯುತ್ತದೆ - ತಿಳುಕೋಬೇಕು. ನಿನಗೆ ಮಾತು ಕಲಿಸೋಕೆ ಪ್ರಧಾನಿಗಳಿಗೆ ಹೇಳುತ್ತೇನೆ” – ಎಂದ ಮದಕರಿನಾಯಕ.

“ಅಂತೂ, ಅರಮನೆಗೆ ಬಂದ ಮೊದಲ ದಿನವೇ ನನ್ನನ್ನು ನಿನ್ನ ಊಳಿಗದಾಳಾಗಿ ಮಾಡಿ ಬಿಟ್ಟೆ. ಇವತ್ತು ನನ್ನನ್ನು ನಾಲಗೆ ಎಂದೆ – ನಾಳೆ ಮತ್ತೇನನ್ನುತ್ತೀಯೋ. ನಾನು ಇಲ್ಲಿಗೆ ಬಂದದ್ದೇ ತಪ್ಪಾಯಿತು” - ಎಂದ ಹುಸಿಮುನಿಸಿನಲ್ಲಿ ಪರಶುರಾಮನಾಯಕ.

“ನಾಲಗೆ ಅಂದರೆ ಆಳು ಅಂತ ತಿಳಿದುಕೊಂಡೆಯಾ, ಕಾಡುಮುಸವ – ನಿನಗೆ ಗೊತ್ತಿಲ್ಲ. ಈ ಸೀಮೆಯಲ್ಲಿ ಅರಸರ ನಾಲಗೆ ಎಂದರೆ, ಅರಸರ ಖಡ್ಗ. ನೀನು ಅದಾಗಿರಬೇಕು ಅಂತ ನನ್ನ ಆಸೆ.”

“ಅದೇನು ಆಸೆಯೋ - ಅದೇನೇನು ಮಾಡುತ್ತೀಯೋ ಮಾಡು. ನೀನಿಟ್ಟ ಗುರಿಗೆ ಹಾರುವ ಬಾಣ ನಾನು” - ಎಂದ ಪರಶುರಾಮನಾಯಕ.

“ಅಷ್ಟಂದೆಯಲ್ಲಾ - ಅದೇ ಮಾತು. ನಾವಿಬ್ಬರೂ ಬದುಕಿರುವವರೆಗೂ” – ಎಂದು ತಮ್ಮನನ್ನು ಬಿಗಿದಪ್ಪಿ ಹೇಳಿದ, ಮದಕರಿನಾಯಕ.

* * *

ಇತ್ತ ಮದಕರಿನಾಯಕ. ತಮ್ಮನೊಂದಿಗೆ ಸರಸ ಸಂಭಾಷಣೆಯಲ್ಲಿ ಮಗ್ನನಾಗಿದ್ದಾಗ, ಅತ್ತ ಅಂತಃಪುರದಲ್ಲಿ ಓಬವ್ವನಾಗತಿ, ನಿಂಗವ್ವನಿಗೆ ಅಂತಃಪುರದ ಸರ್ವಾಧಿಕಾರವನ್ನೊಪ್ಪಿಸುವ ಮಾತಾಡುತ್ತಿದ್ದಳು.

“ನಿಂಗವ್ವ, ಕೊನೆಗೂ ನೀನಿಲ್ಲಿರಲು ಒಪ್ಪಿ ಬಂದದ್ದು ನನ್ನ ಎದೆಯ ಮೇಲಿನ ಬೆಟ್ಟವನ್ನು ಇಳಿಸಿದಷ್ಟು ಹಗುರಾಯಿತು. ಇನ್ನು ಮೇಲೆ ಇಷ್ಟು ದಿನ ಮರೆತಿದ್ದ ಶಿವಧ್ಯಾನ ಮಾಡಿಕೊಂಡು ನೆಮ್ಮದಿಯಾಗಿರಬಹುದು.”

“ನೀವು ಹಾಗಂದರಾದೀತಾ, ಅವ್ವಾ? ಎಷ್ಟಾದರೂ ಈ ರಾಜ್ಯದ ಒಡತಿ ನೀವು.”

“ಒಡೆತನ-ಹಿರಿತನ ಎಲ್ಲಾ ಇನ್ನು ಮುಂದೆ ನಿನ್ನದು. ಮುಪ್ಪಿನ ಮುದುಕಿ – ನನ್ನನ್ನು ನನ್ನ ಪಾಡಿಗೆ ಬಿಟ್ಟು ಬಿಡು.”

“ನಿಮಗೆ ಮುಪ್ಪು ಎಂದರೆ ಆ ಮಾತಿಗೆ ಮುಪ್ಪು ಬಂದೀತು. ನಿನ್ನೆಮೊನ್ನೆ ರಣಕಾಳಿಯ ಹಾಗೆ ಖಡ್ಗ ಹಿಡಿದು ಯುದ್ಧಕ್ಕೆ ಹೊರಟು ಗೆದ್ದು ಬಂದ ನೀವು ಮುಪ್ಪಿನ ಮಾತಾಡಿದರೆ ಲೋಕ ನಂಬೀತಾ. ಶಿವ ಒಪ್ಪಿಯಾನಾ? ನೀವು ದೊಡ್ಡವರು - ದೊಡ್ಡವರ ಹಾಗೆ ನನ್ನಂಥ ಚಿಕ್ಕವರಿಗೆ ದಾರಿತೋರಿಸುತ್ತಾ ಇರಿ. ನಿಮ್ಮ ಸೇವೆಮಾಡಿ ನಾವು ನಮ್ಮ ಬದುಕು ಸಾರ್ಥಕ ಮಾಡಿಕೊಳ್ಳುತ್ತೇವೆ” – ಎಂದಳು ನಿಂಗವ್ವ.

“ನಾನು ಯುದ್ಧಕ್ಕೆ ಹೋದದ್ದು-ಗೆದ್ದದ್ದು ಇಷ್ಟು ದೊಡ್ಡದು ಮಾಡಬೇಡ. ನೂರು ಜನ ಹಿಡಿದೆಳೆದರೆ ಕಲ್ಲಿನ ತೇರೂ ಕುದುರೆಯಾಗುತ್ತದೆ. ಅದು ದೊಡ್ಡ ವಿಷಯಾನಾ ? ಅಲ್ಲದೆ – ನೀನು ಕೇಳಿಲ್ಲವಾ – ಆರುವ ದೀಪಕ್ಕೆ ಬೆಳಕು ಹೆಚ್ಚು. ನನ್ನ ಕಥೆಯೂ ಅಷ್ಟೆ.”

"ಛಿ - ಬಿಟ್ಟಿತು ಎನ್ನಿ. ಎಂಥಾ ಮಾತಾಡುತ್ತೀರ, ಅವ್ವ, ನೂರಾರುವರ್ಷ ಬೆಳಗಬೇಕಾದ ನಂದಾದೀಪ ನೀವು, ನಿಮ್ಮ ಬಾಯಲ್ಲಿ ಆ ಮಾತು ಬರಬಾರದು."

– ಓಬವ್ವನಾಗತಿಯ ಮಾತಿನಿಂದ ನೊಂದು ಹೇಳಿದಳು, ನಿಂಗವ್ವ.

"ನೋಡು. ನಿಂಗವ್ವ – ಒಳ್ಳೆ ತಾಯಿ ಹಡೆದ ಮಗಳು ನೀನು. ನಿಜ ಹೇಳಿದರೂ ನಂಬುತ್ತೀಯಾ, ಸುಳ್ಳು ಹೇಳಿದರೂ ನಂಬುತ್ತೀಯಾ. ಇಷ್ಟು ವಯಸ್ಸಾದ ಹೆಂಗಸು ನಾನು. ನನಗಿಷ್ಟು ಸಿಟ್ಟು-ಸೆಡವು ಇರಬಾರದು. ಆದರೆ ಚಿಕ್ಕಂದಿನಿಂದ ಕೈಹಿಡಿದವರು ಕಲಿಸಿದ ಬುದ್ಧಿ – ಕೆಟ್ಟ ಮಾತು ಕೇಳಿದರೆ ಕರುಳಿಗೆ ಕೊಳ್ಳಿ ಇಟ್ಟಹಾಗಾಗುತ್ತದೆ. ಹಾಗೇ ಆಯಿತು – ಆ ರಾಯದುರ್ಗದೋನು ಮುಪ್ಪಿನ ಮುದುಕಿ ಅಂತ ನನ್ನನ್ನು ಹಂಗಿಸಿದಾಗ, ಆ ಒಂದು ಮಾತಿಗೆ ಎಷ್ಟು ರಕ್ತಪಾತ ಆಯಿತು. ಅದನ್ನೆಲ್ಲಾ ನೋಡಿ ನೋಡಿ ಸಾಕಾಗಿದೆ. ಇನ್ನಿರೋದೆಲ್ಲಾ ಒಂದೇ ಆಸೆ-" ಓಬವ್ವನಾಗತಿ ಹೇಳಿದರು.

"ಏನವ್ವಾ – ಅದೇನು ಹೇಳಿ. ಏನಿದ್ದರೂ ಅದನ್ನು ತಲೆಯ ಮೇಲೆ ಹೊತ್ತುಕೊಂಡು ನಡೆಸುತ್ತೀನಿ."

"ನಿನ್ನ ಸರದಿ ಬಂದಾಗ ನೀನು ಆ ಕೆಲಸ ಮಾಡಿದಿ. ಈಗ ನನಗಿರೋ ಆಸೇನ ನನ್ನ ಸೊಸೆ ತೀರಿಸಬೇಕು. ಸಣ್ಣ ಮಕ್ಕಳು ಅತ್ತದ್ದು ನಕ್ಕದ್ದು ಕೇಳಬೇಕು ಅಂತ ಬಯಸುತ್ತದೆ ನನ್ನ ಮುದಿಮನಸ್ಸು. ಎಷ್ಟು ವರ್ಷ ಆಯಿತು ಆ ಸದ್ದು ಕೇಳದೆ. ಈ ತುಂಬಿದ ಅರಮನೆ ಬಿಕೋ ಎನ್ನುತ್ತದೆ."

"ಹಿಂದಿನ ಜನ್ಮದಲ್ಲಿ ಒಳ್ಳೇ ಸಂಪಿಗೆ, ಮಲ್ಲಿಗೆ ಪೂಜೆಮಾಡಿ ಹುಟ್ಟಿದ್ದೀರ – ನಿಮ್ಮ ಯಾವ ಆಸೇನೂ ತೀರದೆ ಉಳಿಯೋಲ್ಲ."

"ಹಾಗಂತೀಯ, ನಿನ್ನ ಸೊಸೆ ಮನೆಗೆ ಬಂದು ಈ ಕಾರ್ತಿಕಕ್ಕೆ ಒಂದು ವರ್ಷ ಆಯ್ತು."

"ಅವ್ವಾ, ನಿಮಗೆ ಬಹಳ ಆತುರ. ನಿಮಗೇನೋ ಚಿಕ್ಕನಾಗತಿಗೆ ಮದುವೆಯಾಗಿ ಒಂದು ವರ್ಷ ಆಯ್ತು. ಆದರೆ ಆ ಹೆಣ್ಣಿಗಿನ್ನೂ ಹತ್ತೋ, ಹನ್ನೊಂದೋ ವಯಸ್ಸು. ಇನ್ನೊಂದು ಎರಡು ವರ್ಷ ಹಾಯಾಗಿರಲಿ. ಆಮೇಲೆ ಇಲ್ಲೇ ಚಿನ್ನದ ತೊಟ್ಟಿಲು ತೂಗುಹಾಕಿದರೆ ಆಯಿತು. ಶಿವಧ್ಯಾನ ಮಾಡುತ್ತಾ, ಮೊಮ್ಮಗನ್ನ ಆಡಿಸಬಹುದು" - ಎಂದು ನಗುತ್ತಾ ಹೇಳಿದಳು, ನಿಂಗವ್ವ.

"ಅಷ್ಟು ನೋಡಿದರೆ – ಅಲ್ಲಿಗೆ ಮುಗೀತು. ಆದರೆ ನಿನಗಿನ್ನೂ ಚಿಕ್ಕ ವಯಸ್ಸು. ಕಾಯಲಿಕ್ಕೆ ಕಾಲವಿದೆ. ಆದರೆ ನನಗೆ - ನಾಳೆ ಆಗೋದು ಇವತ್ತೇ ಆದರೆ ಆಗದೇ ಅಂತ ಜೀವ ತುಡಿಯುತ್ತೆ. ನನ್ನದು ಅತಿ ಆಶೆಯ ಜೀವ" - ಓಬವ್ವನಾಗತಿ ಹೇಳಿದರು.

"ಅತಿ ಆಸೆ ಎಂಥದು, ಅವ್ವಾ. ಎಲ್ಲಾ ಹೆಂಗಸರಿಗಿರೋ ಆಸೇನೇ ನಿಮ್ಮದೂ. ನಿಮ್ಮ ಹಾಗೆ ನನಗೂ ಮಗನಿಗೆ ಮದುವೆಯಾದ ದಿನದಿಂದ ಕಣ್ಣು ಕಾತರಿಸುತ್ತೆ."

"ಹಾಗಿದ್ದರೆ - ಆ ಹುಡುಗಸಂಸಾರಾನ ಸ್ವಲ್ಪ ನಿಗವಾಗಿ ನೋಡಿಕೋ. ಜೋಯಿಸರನ್ನು ಕೇಳಿನೋಡು, ವೈದ್ಯರಿಗೆ ಹೇಳಿ. ಅಷ್ಟು ಒಳ್ಳೆ ಬಲ ಬರೋ ಔಷಧ ಕೊಡಿಸು. ನಿನ್ನ ಸೊಸೆಗೆ."

"ಅದೆಲ್ಲಾ ದೊಡ್ಡವರು ಮಾಡಬೇಕಾದ ಕೆಲಸ. ಅಬ್ಬಾ....ಈ ಅರಮನೇಲಿ ನಾನು...."

"ಈ ಅರಮನೇಲಿ....ನೀನು......"

-ನಿಂಗವ್ವನ ಮಾತನ್ನು ಮಧ್ಯದಲ್ಲಿಯೇ ತಡೆದು ಹೇಳಿದರು. ಓಬವ್ವನಾಗತಿ –

"ನೀನು ಅಂದರೆ ಏನೂಂತ ಅಂದುಕೊಂಡಿದ್ದೀಯ. ಮಗನಿಗೆ ತಾಯಿ, ಸೊಸಗೆ ಅತ್ತೆ, ಉಳಿದವರಿಗೆ ಯಜಮಾನಿ. ಹಾಗನ್ನದೆ ಯಾರಾದರೂ ಸೊಟ್ಟ ಮಾತಾಡಿದರೆ, ಮುಖ ದಾಕ್ಷಿಣ್ಯ ನೋಡದೆ. ಅವರ ಸೊಕ್ಕಿಳಿಸು."

"ಎಲ್ಲರಿಗೂ ಹಿರಿಯರಾಗಿ ನೀವಿರುವಾಗ ನಾನು ಈ ಅರಮನೆಗೆ ಯಜಮಾನಿ ಹೇಗಾದೇನವ್ವಾ. ನೀವು ಪ್ರೀತಿಯಿಂದ ಬಾ ಅಂದಿರಿ : ಬಂದೆ."

"ಯಾಕೆ - ಸಟ್ಟುಗ. ಲಟ್ಟಣಿಗೆ ಆಡಿಸೋಕೆ ಕರೆಸಿದೆನಾ ನಾನು ನಿನ್ನನ್ನು ಇಲ್ಲಿಗೆ. ಆ ಮಾತು ಜಾನಕಲ್ಲು ಬಿಟ್ಟಾಗಲೇ ಹೋಯಿತು ಅಂದುಕೋ. ನಾಯಕರ ತಾಯಿ, ನೀನು ಇನ್ನೊಬ್ಬರನ್ನು ಯಜಮಾನಿ ಅನ್ನಬೇಕಾ ? ಯಾರಿಗೂ ಆ ಸದರ ಕೊಡಬೇಡ. ಇವತ್ತೊಬ್ಬ ಸೊಸೆ ಬಂದಿದಾಳೆ, ನಾಳೆ ಮತ್ತಿಬ್ಬರು ಬರಬಹುದು. ಯಾರು ಬರಲಿ, ಹೋಗಲಿ – ಅಂತಃಪುರದಲ್ಲಿ ನಿನ್ನ ಮಾತು ನಡೀಬೇಕು. ಆ ಬಿಕ್ಕಟ್ಟು ಬಿಟ್ಟುಕೊಟ್ಟರೆ ನಿನ್ನ ಸೊಸೆಯರಿರಲಿ, ಊಳಿಗದವರೂ ನಿನ್ನ ನೆತ್ತಿ ಮೇಲೆ ಮೆಣಸು ಅರೀತಾರೆ. ಎಂತೆಂಥ ಸೊಕ್ಕಿನ ಹೆಣ್ಣು ಮಕ್ಕಳು ಅರಮನೆ ಕೆಲಸಕ್ಕೆ ಬರುತ್ತವೆ : ಮಳ್ಳಿಯ ಹಾಗೆ ಬಂದವಳೂ ಕಳ್ಳಿಯ ಕುಡಿಯ ಹಾಗೆ ಕೊಬ್ಬಿ ಬಿಡುತ್ತಾಳೆ - ಅರಮನೆಯ ಊಟ ಉಂಡರೆ, ನನ್ನ ಹತ್ತಿರ ಇದ್ದ ಹಾಗೆ ನೀನು ಅವರ ಹತ್ತಿರವೂ ಮೆತ್ತಗಿದ್ದರೆ, ನಾಳೆ ನಿನ್ನನ್ನಲ್ಲ, ನಿನ್ನ ಮಗನನ್ನೂ ಆಳಿಬಿಡುತ್ತಾರೆ - ತೊತ್ತುಗಳು. ಅದಕ್ಕೇ ಅರಮನೆಯ ಯಜಮಾನಿ ಅಂದರೆ ಹೇಗಿರಬೇಕು ಗೊತ್ತೆ-?"

"ನಾನೇನೂ ತಿಳಿಯದವಳು. ಹೇಗಿರಬೇಕು ಹೇಳಿ." - ನಿಂಗವ್ವ ಕೇಳಿದಳು.

"ಕಣ್ಣು ಕಠಾರಿ, ನಾಲಗೆ ಬಾರುಕೋಲಾಗಿರಬೇಕು. ಒಳ್ಳೆಯ ಮಾತು ಆಡಿದರೂ ಉಡುಗೊರೆ ಕೊಟ್ಟ ಹಾಗಿರಬಾರದು, ದಾನ ಕೊಟ್ಟ ಹಾಗಿರಬೇಕು." - ಓಬವ್ವನಾಗತಿ ಹೇಳಿದರು.

"ಆಯಿತವ್ವಾ - ಹೇಗಿರಬೇಕೋ ಕಲಿಸಿ. ನೀವು ಕಲಿಸಿದ್ದನ್ನು ನಾನು ಕಲಿತುಕೋತೀನಿ."

"ಕಲಿತುಕೊ, ಆದರೆ ಬೇಗ ಕಲಿತುಕೋ... ಬಹಳ ದಿನ ನಿನಗೆ ಕಲಿಸುವಷ್ಟು ಪ್ರಾಯ ನನಗಿಲ್ಲ" - ಎಂದರು ಓಬವ್ವನಾಗತಿ.

೭

ಚಿತ್ರದುರ್ಗದಲ್ಲಿ ದಸರಾ ಎಂದರೆ, ದೇವರ ಹಬ್ಬ-ಹರಿದಿನಗಳಿಗಿಂತ ಹೆಚ್ಚಾಗಿ ತರುಣರ ಅದರಲ್ಲೂ ಗರಡಿಯಲ್ಲಿ ಕಸರತ್ತು ಮಾಡುವ ಯುವಕರ, ಕುಮಾರಚಾವಡಿಯಾಶ್ರಯದಲ್ಲಿ ಬಗೆಬಗೆಯ ರಣವಿದ್ಯೆ ಕಲಿಯುವ ಯುವಕರ ಹಬ್ಬ. ವರ್ಷಋತುವಿನ ಮೊದಲ ಮಾಸವಾದ ಶ್ರಾವಣದ ತಂಪುಗಾಳಿ, ಆ ತರುಣರ ಮೈಯಲ್ಲಿ ಚಳಿ ಮೂಡಿಸದೆ, ಹೊಸ ಉತ್ಸಾಹದ ಬಿಸಿ ಮೂಡಿಸುತ್ತದೆ. ಅಂದಿನವರೆಗೂ ಮಾಮೂಲು ವ್ಯಾಯಾಮ ಮಾಡಿ, ಬಿಡುವಿನ ವೇಳೆಯನ್ನು ಪಾರಿವಾಳದ ಜೂಜಿನಲ್ಲೋ, ಹುಲಿ ಕಟ್ಟುವ ಆಟದಲ್ಲೋ, ಮತ್ತಾವುದೋ ಮನೋರಂಜನೆಯಲ್ಲಿ ಹೊತ್ತುಗಳೆಯುತ್ತಿದ್ದ ಯುವಜನ ಮೈಯಲ್ಲಿ ಹೊಸಗಾಳಿ ಬೀಸಿದಂತೆ ಹುರಿದುಂಬುತ್ತಾರೆ.

ಶ್ರಾವಣಮಾಸದ ಒಂದು ಶುಭ ಶನಿವಾರ. ಕಲಶಕನ್ನಡಿ ಹಿಡಿದ ಮುತ್ತೈದೆಯರೊಂದಿಗೆ ಸಿಂಗರಿಸಿದ ಎತ್ತುಗಳನ್ನು ಹೂಡಿದ ಗಾಡಿಯಲ್ಲಿ ಹೊಸ ಕೆಂಪುಮಣ್ಣು - ಕುಂಕುಮದಂತಿರುವುದನ್ನು - ತಂದು ಜರಡಿಯಾಡಿ ಶೋಧಿಸಿ, ಮಟ್ಟಿಯಲ್ಲಿ ರಾಶಿಹಾಕಿ, ರಾಶಿಯನ್ನು ಅಲಂಕರಿಸಿ, ಅದರಲ್ಲೊಂದು ಸುಲಿದ ತೆಂಗಿನಕಾಯಿಯನ್ನು ಹುದುಗಿಸಿಟ್ಟು ಪೂಜೆಮಾಡಿ, ಹೊಸಮಣ್ಣನ್ನು ಮಟ್ಟಸವಾಗಿ ಮಟ್ಟಿಯ ಮೇಲೆ ಹರಡುವರು. ರಾಶಿಯಲ್ಲಿ ಹುದುಗಿಸಿಟ್ಟ ತೆಂಗಿನಕಾಯಿ ಯಾರಿಗೆ ಸಿಗುತ್ತದೋ ಅವರು ಮುಂದೆ ಗರಡಿಗೆ ಒಳ್ಳೆ ಹೆಸರು ತರುತ್ತಾರೆ ಎಂದು ನಂಬಿ, ಉತ್ಸಾಹದಿಂದ ಆ ಕೆಲಸಮಾಡುತ್ತಾರೆ. ಅಂದಿನಿಂದ ಹೊಸ ಹುರುಪು ಹೊತ್ತು ಗರಡಿಯ 'ತಾಲೀಮು' ನಡೆಯಲಾರಂಭವಾಗುತ್ತದೆ. ಈಗ ಅವರ ಕಾಲವೆಲ್ಲಾ ಕಸರತ್ತಿಗೆ ಮೀಸಲು. ಬೆಳಗಿನ ಝಾವ ಮೂರು ಗಂಟೆಗೇ ಎದ್ದು, ಪ್ರಾತರ್ವಿಧಿಗಳನ್ನು ತೀರಿಸಿ, ಮೈಗೆ ನಿಂಬೆ ಹಣ್ಣಿನ ರಸ ಬೆರೆಸಿದ ಹುಚ್ಚಳ್ಳೆಣ್ಣೆಯನ್ನು ಲೇಪಿಸಿಕೊಂಡು. 'ಮಟ್ಟಿ'ಗೆ ನಮಸ್ಕರಿಸಿ, ವ್ಯಾಯಾಮಕ್ಕೆ ಇಳಿದರೆಂದರೆ, ನೂರಿನ್ನೂರು ಬಸ್ಕಿ ಹೊಡೆಯುವುದು. 'ಸಾಂಬ್ರಾಣಿ ಕಲ್ಲು' ಎತ್ತುವುದು. ಬಹು ತೂಕವಾದ ಬಳೆಯಾಕಾರದ ಕಲ್ಲುಚಕ್ರಗಳನ್ನು ತೋಳಿಗೇರಿಸಿಕೊಂಡು 'ಉಟ್‌ಬೈಸ್' ಮಾಡುವುದು. ಬಹುಭಾರವಾದ ಮರದ 'ಲೋಡು'ಗಳನ್ನು ಒಂದು ಕೈಯಲ್ಲಿ, ಎರಡು ಕೈಗಳಲ್ಲಿ ಹಿಡಿದು ಕೈಕುತ್ತಿಗೆಯ ಹಿಂಭಾಗಕ್ಕೆ ಬರುವಂತೆ ಸುತ್ತಿಸುವುದು, ಬಹು ಭಾರವಾದ, ವಿವಿಧ ತೂಕದ ಕಬ್ಬಿಣದ ಉಂಗುರಗಳನ್ನು ಪೋಣಿಸಿದ, ಅಡಿಯಲ್ಲಿ ಬಹುಭಾರವಿರುವ ಕತ್ತಿಯನ್ನು

ಮುಂಗೈಯಲ್ಲಿ ಎತ್ತಿ ಇಳಿಸುವುದು, ಜಿಡ್ಡು ಬಳಿದ ಮೈಯಲ್ಲಿ 'ಮಲ್ಲ ಕಂಭ'ವನ್ನು ಕೈಕಾಲುಗಳ ತಿರುವಿನ ನೆರವಿನಿಂದ ಏರಿಳಿಯುವುದು - ಹೀಗೆ ಮೈಯಲ್ಲಿರುವ ಕೊಬ್ಬು ಕರಗಿ, ನೀರಾಗಿ ಹರಿವಂತೆ ಕಸರತ್ತು ಮಾಡಿ, ಬಳಿಕ ಗೋಪಾಲಸ್ವಾಮಿಯ ಹೊಂಡಕ್ಕೋ, ಮತ್ತಾವುದಾದರೂ ಹೊಂಡಕ್ಕೋ ಹೋಗಿ, ಮೈಹಗುರಾಗುವಷ್ಟು ಈಜಾಡಿ ಬಂದು, ಸೂರ್ಯ ಮೂಡುವ ವೇಳೆಗೆ ಮತ್ತೆ ಗರಡಿಯ ಮನೆಯನ್ನು ಸೇರಿ, ರಾತ್ರಿ ನೆನೆಹಾಕಿದ ಕಡ್ಲೆಕಾಳನ್ನು ತಿಂದು, ಗಸಗಸೆ, ಬಾದಾಮಿ, ಸಕ್ಕರೆ, ಕೋಳಿಮೊಟ್ಟೆ ಹಾಕಿ ಹದ ಮಾಡಿದ ಹಾಲು ಸೇರು, ಅಚ್ಚೇರಿನಷ್ಟು ಕುಡಿದು ವಿಶ್ರಾಂತಿ ಪಡೆಯುವರು. ಮಧ್ಯಾಹ್ನಕ್ಕೆ ಗೋದಿಯ ರೊಟ್ಟಿ, ಕುರಿ, ಮೇಕೆಯ ತಲೆಯಿಂದ, ಬಗೆಬಗೆಯ ಮಸಾಲೆ ಹಾಕಿ ಮಾಡಿದ 'ಸೇರುವೆ', 'ತುಂಡು'ಗಳನ್ನು ತಿಂದು ವಿಶ್ರಾಂತಿಪಡೆಯುವರು. ಮತ್ತೆ ಸಂಜೆ ವ್ಯಾಯಾಮ, ರಾತ್ರಿಯೂಟ, ಮೈ ಬಳಲಿದ್ದರೆ ಭಂಗಿಯ ಸೊಪ್ಪು, ಕಲ್ಲುಸಕ್ಕರೆ, ಕಲ್ನಾರು, ಪಚ್ಚಕರ್ಪೂರ, ಬಾದಾಮಿ, ಎಳನೀರು ಹಾಕಿ ಭಟ್ಟಿ ಇಳಿಸಿದ 'ರಾಮರಸ' ಕುಡಿದು, ಮೈ-ಮನಸ್ಸನ್ನು ಹಗುರ ಮಾಡಿಕೊಂಡು ಮಲಗುವರು.

ಹೀಗೆ ಕಸರತ್ತು ಮಾಡಿ, ಮೈಮಾಂಸಖಂಡಗಳು ಹುರಿಗೊಂಡು, ನಡಗೆಗೊಂದು ಗತ್ತು ಬಂದು, ತೇಗದ ಚಕ್ಕೆಯಂತೆ, ಚೇಣಿಬಿದಿರಿನಂತೆ ಅಡ್ಡಾಡುವ ಗರಡಿಯ ಹುಡುಗರನ್ನು ನೋಡಿದರೆ ಕಣ್ಣಿಗೆ ಹಬ್ಬವಾಗುವುದು.

ಗರಡಿಯ ಯುವಕ ಮಲ್ಲರಿಗೆ ತರಬೇತು ಕೊಟ್ಟ ಹಾಗೇ, ಯೋಧತರುಣರಿಗೂ – ಕೋಟೆ ಹತ್ತುವ, ಕಂದಕ ದಾಟುವ, ಕೋವಿ ಹಾರಿಸುವ, ಬಗೆಬಗೆಯ ಬಂಡೆಗಲ್ಲನ್ನು ಬರಿಗಾಲಿನಲ್ಲಿ, ಪಾದರಕ್ಷೆ ಧರಿಸಿದ ಕಾಲಲ್ಲಿ, ಎಣ್ಣೆ ಹಚ್ಚಿ ಜಾರುವ ಕಾಲಿನಲ್ಲಿ ಏರಿಳಿಯುವ ತರಬೇತಿ, ಯುದ್ಧಾಸ್ತ್ರಗಳಲ್ಲಿ ತಯಾರಿ, ಅಶ್ವಾರೋಹಣ, ಗಜಾರೋಹಣ, ಹಾಗೂ ಅವುಗಳ ಮೇಲೇರಿ ವಿವಿಧಾಸ್ತ್ರ ಹಿಡಿದು ಹೋರಾಡುವ ಬಗೆ, ಕಾಡುಮೃಗಗಳೊಂದಿಗೆ, ಆನೆ ಕುದುರೆಗಳೊಂದಿಗೆ, ಹುಲಿಯುಗುರು, ಗುದ್ದಗುತ್ತಿ, ಬಾಕು. ಕಠಾರಿ, ಕೋವಿಗಳನ್ನು ಹಿಡಿದು ಹೋರಾಡುವ ರಣಶಿಕ್ಷಣ ಕೊಡುವರು.

ಇವುಗಳಿಂದಾಗಿ ದುರ್ಗದ ತರುಣ ಪೀಳಿಗೆಗೆ ವರ್ಷಕಾಲ ಉತ್ಸಾಹದ ಸುಗ್ಗಿಯಾಗುತ್ತಿತ್ತು.

ಆ ಕಾಲದಲ್ಲಿ ಕಲಿತ ಕಲೆಗಳನ್ನು, ತಮ್ಮ ಜಾಣ್ಮೆಯನ್ನು, ಗಂಡುಗಾಡಿಯನ್ನು ದುರ್ಗದ ಅರಮನೆಯವರಿಗೆ, ಊರ ಜನರಿಗೆ ತೋರಿಸಿ ಮೆಚ್ಚುಗಾಣಿಕೆ ಪಡೆವ ಕಾಲ - ಆಶ್ವೀಜ ಮಾಸದ ದಸರಾ.

ಆಡುವವರೂ, ನೋಡುವವರೂ ವರ್ಷವಿಡೀ ಕಾಯುವ ಹರ್ಷದ ದಿನಗಳು ಅವು.

ಸಿದ್ದಯ್ಯನ ಬಾಗಿಲ ಮುಂದಿನ ವಿಶಾಲಾಂಗಣ ವಿವಿಧ ಮಲ್ಲಕ್ರೀಡೆಗಳಿಗೆ 'ಅಖಾಡಾ' ಆದಂತೆ, ಸಂಪಿಗೆ ಸಿದ್ದೇಶ್ವರನ ದೇವಾಲಯದ ಬೆನ್ನಿಗಿರುವ ಬೃಹದಾಕಾರದ 'ತುಪ್ಪದಕೋಣ'ದ ಜಾರುಬಂಡೆ – ಕೋಡುಗಲ್ಲೇರುವ ಕ್ರೀಡೆಗೆ ಸ್ಪರ್ಧಾಸ್ಥಾನ.

ಆ ಕ್ರೀಡೆಯಲ್ಲಿ ಭಾಗವಹಿಸುವವರಿಗೆ ದೇಹದ ನರನರದ ಮೇಲೂ ಹತೋಟಿಯಿರಬೇಕಾದಂತೆಯೇ, ಸಾವಿನೊಂದಿಗೆ ಸೆಣಸುವ ಗಂಡೆದೆಯೂ ಇರಬೇಕಾಗಿತ್ತು.

ಆ ಸ್ಪರ್ಧೆಯಲ್ಲಿ ಭಾಗವಹಿಸುವ ತರುಣಯೋಧರು, ಬರಿ ಚಲ್ಲಣವೊಂದನ್ನೇ ತೊಟ್ಟು, ಗೋಪಾಲಕೃಷ್ಣಸ್ವಾಮಿಯ ದೇವಾಲಯದ ಮುಂಭಾಗದ ಬಂಡೆಯಿಂದ ಓಡುತ್ತಾ ಬಂದು, ಹೊಂಡದೊಳಗೆ ಬಿದ್ದು ಈಸಾಡಿ, ತೊಯ್ದ ಕೈ, ಕಾಲುಗಳಿಂದಲೇ, ಸುಮಾರು ಐನೂರು ಅಡಿಗಳಷ್ಟು ಎತ್ತರವಾದ, ಬಹುಕಡಿದಾಗಿ ಇಳಿಜಾರಾದ ನುಣುಪು ಬಂಡೆಯನ್ನು ತಮ್ಮ ಕೈ-ಕಾಲುಗಳ ಆಸರೆಯಿಂದಲೇ, ಉಡಗಳಂತೆ, ಚಕಚಕನೆ ಮೇಲೇರಿ ಬಂದು, ಕೊಣದ ಮೇಲಿನ ಬತೇರಿಯ ಮೇಲೆ ರಚಿತವಾದ ಮಂಟಪದಲ್ಲಿ ಕುಳಿತ ನಾಯಕರಿಂದ ಮೆಚ್ಚುಗಾಣಿಕೆ ಪಡೆಯಬೇಕು. ಈ ಸ್ಪರ್ಧೆಯಲ್ಲಿ ಕೊಂಚ ಕೈ-ಕಾಲು ಜಾರಿದರೂ, ಮೈ ನೀರಿನ ಪಾಲು, ಇಲ್ಲವೇ ತಲೆ ನುಚ್ಚುನೂರು.

ಇದರಷ್ಟೇ ಕಠಿಣವಾದ ಸ್ಪರ್ಧೆ ಇನ್ನೂರು-ಮುನ್ನೂರು ಅಡಿಗಳಷ್ಟು ಎತ್ತರವಾಗಿ, ನೇರವಾಗಿ, ನುಣುಪಾಗಿ ನಿಂತ ಕೋಡುಗಲ್ಲಿನ ತುದಿಯನ್ನು ಉಡ, ನೂಲೇಣಿಯಿಂದ ಏರುವ ಸಾಹಸ.

ಇಂಥ ಸ್ಪರ್ಧೆಗಳಲ್ಲಿ ಭಾಗವಹಿಸುವವರು ನೂರಾದರೆ, ನೋಡುವವರು ಸಾವಿರ. ಆ ಜನರ ಉತ್ಸಾಹದ ಕಾಕು-ಕೇಕೆಗಳು ಎಷ್ಟು ಪ್ರೋತ್ಸಾಹಕರವೋ ಅಷ್ಟೇ ಆಪಾಯಕರ.

ಸ್ಪರ್ಧಿಗಳು –

ಕಿವಿಯಿದ್ದೂ ಕೇಳಬಾರದು, ಕಣ್ಣಿದ್ದೂ ಅತ್ತಿತ್ತ, ಬೆಂಬದಿಯನ್ನು ನೋಡಬಾರದು.

ಹೆಜ್ಜೆ ಹೆಜ್ಜೆಗೆ ಸಾವನ್ನು ಕೆಣಕುವ ಇಂಥ ಸ್ಪರ್ಧೆಗಳಲ್ಲಿ ಭಾಗವಹಿಸಿದ ಯೋಧಯುವಕರಿಗೆ ಅರಸರು ಹಿಡಿಹೊನ್ನು ಕೊಟ್ಟರೆ, ನೋಡನಿಂತ ಜನ ಹತ್ತು ಹಿಡಿ ಹೊನ್ನು ಕೊಡುವರು; ನೋಡನೋಡುತ್ತಾ ಮೈದುಂಬಿಬಂದಂತಾಗಿ, ತಾವೂ ಆ ಸ್ಪರ್ಧೆಗಳಲ್ಲಿ ಭಾಗವಹಿಸುವರು. ಅಂಥವರನ್ನು ತಡೆಯುವುದು ಕಾವಲಭಟರಿಗೂ ಕಷ್ಟವಾಗುತ್ತಿತ್ತು.

ಎಂದೂ ವ್ಯಾಯಾಮ ಮಾಡದ ನಾಗರಿಕರಿಗೂ ಇಂಥ ಉತ್ಸಾಹ ಮೂಡಿಸುವ ಮಲ್ಲ ಕ್ರೀಡೆ, ಸ್ವಯಂ ವ್ಯಾಯಾಮಪಟುವಾಗಿ, ಮಲ್ಲವಿದ್ಯೆ, ಸಮರವಿದ್ಯೆಗಳನ್ನು ಕಲಿತ ಮದಕರಿ ನಾಯಕನನ್ನು ಸುಮ್ಮನಿರಲು ಬಿಟ್ಟಿತೇ ?

ಎರಡು ವರ್ಷ ಹಿರಿಯರ ಹೆದರಿಕೆಗೆ ಸುಮ್ಮನೆ ಕುಳಿತು, ಈ ಕ್ರೀಡೆಗಳನ್ನು ನೋಡಿದ ಮದಕರಿನಾಯಕ, ಮೂರನೆಯ ವರ್ಷ ತಾನೇ 'ಕಾಚಾ' ತೊಟ್ಟು, ಸ್ಪರ್ಧೆಗಿಳಿದ.

ಅದನ್ನು ಕಂಡು ಅರಮನೆಯ ಹಿರಿಯರು ಬೆಚ್ಚಿದಂತೆಯೇ, ಸ್ಪರ್ಧೆಯಲ್ಲಿ ಭಾಗವಹಿಸಿದ ಮಲ್ಲರ ಮೈಯಲ್ಲಿ ಮಿಂಚಿನ ಸಂಚಾರವಾಯಿತು.

ದುರ್ಗದ ಅದೃಷ್ಟ ಚೆನ್ನಾಗಿತ್ತು –

ಮದಕರಿನಾಯಕ ಯಾವ ಸ್ಪರ್ಧೆಯಲ್ಲೂ ಹಿಂದಾಗಲಿಲ್ಲ. ಮೈ-ಕೈ ಪೆಟ್ಟಾದರೂ ಸೋಲದೆ, ಗೆದ್ದು ಬಂದು, ಜನರಿಂದ ಪುಷ್ಪವೃಷ್ಟಿ ಮಾಡಿಸಿಕೊಂಡ.

"ನಾಯಕರು ಎಂದರೆ ಹೀಗಿರಬೇಕು" – ಎಂದು ಜನ ಮದಕರಿನಾಯಕನನ್ನು ಕೊಂಡಾಡಿದರು.

ಆದರೆ, ಮದುವೆಯಾಗಿಯೂ ಇನ್ನೂ ಸಂತತಿಯಿಲ್ಲದ ತರುಣನಾಯಕರು ಸಾವಿನೊಂದಿಗೆ ಸ್ಪರ್ಧೆಗಿಳಿದದ್ದನ್ನು ನೋಡಿ, ರಾಜ್ಯದ ಹಿತೈಷಿಗಳಿಗೆ ಗಂಟಲು ಹಿಸುಕಿದಂತಾಗಿ. ಅವರೆಲ್ಲರ ಮುಂದಾಳಾಗಿ ದಳವಾಯಿ ಭರಮಣ್ಣನಾಯಕ, ಓಬವ್ವನಾಗತಿಯವರನ್ನು ಕಂಡು –

"ತಾವು – ತಾವೇ ನಾಯಕರಿಗೆ ಬುದ್ಧಿ ಹೇಳಬೇಕು. ಇಂಥ ಕ್ರೀಡೆಗಳಲ್ಲಿ ಖುದ್ದಾಗಿ ಭಾಗವಹಿಸಿ, ನಾಯಕರು ತಮ್ಮ ತಲೆಯನ್ನಷ್ಟೇ ಅಲ್ಲ, ರಾಜ್ಯದ ಪ್ರಾಣವನ್ನೇ ಪಣವಾಗಿ ಒಡ್ಡುತ್ತಿದ್ದಾರೆ. ಇದು ಆಗಬಾರದು. ತಾಯಿ" - ಎಂದು ಕೈಮುಗಿದು ಬೇಡಿದ.

ಆ ಮಾತನ್ನು ದಳವಾಯಿಗಳ ಬಾಯಿಂದ ಕೇಳುವ ಮುನ್ನವೇ ಅರಮನೆಯ ಹತ್ತಾರು ಬಾಯಿಗಳಿಂದ ಆ ಸುದ್ದಿ ಓಬವ್ವನಾಗತಿಯ ಕಿವಿಗೆ ಮುಟ್ಟಿತ್ತು.

ಮದಕರಿನಾಯಕನ ಸಾಹಸಮನೋಭಾವ ಆಕೆಗೆ ಮೆಚ್ಚಾದಂತೆಯೇ, ಉಳಿದ ಹಿರಿಯರ ಚಿಂತೆ ಆಕೆಯ ನೆತ್ತಿಯನ್ನೂ ಕಾಡಿತ್ತು.

ತನ್ನ ಚಿಂತೆಯನ್ನು, ಮದಕರಿನಾಯಕರ ಉತ್ಸಾಹ ಕೆಡದ ಹಾಗೆ ಹೇಗೆ ಹೇಳಬೇಕು ಎಂದು ಹತ್ತು ಬಗೆಯಾಗಿ ಯೋಚಿಸಿ, ಮಗನ ಸಾಹಸವನ್ನು ಕಂಡು ಹಿಗ್ಗುತ್ತಿದ್ದ ನಿಂಗವ್ವನನ್ನು ಕರೆಸಿ –

"ನಿಂಗವ್ವಾ, ನಿನ್ನ ಮಗನಿಗಿರುವುದು ಒಂದೇ ತಲೆ. ಈ ರಾಜ್ಯಕ್ಕಿರುವುದೂ ಒಂದೇ ತಲೆ : ರಾವಣನ ಹಾಗೆ ಹತ್ತು ತಲೆ ಇದ್ದಿದ್ದರೆ, ಒಂದು ಹೋದರೆ ಒಂಬತ್ತು ಉಳಿಯಿತು ಎಂದು ನಾನೂ ಹಿಗ್ಗುತ್ತಿದ್ದೆ. ಆದರೀಗ ಸಂತೋಷಪಡಲೂ ನಮಗೆ ಸಮಯವಿಲ್ಲವಲ್ಲ, ನಿನ್ನ ಮಗ ರಾಯನಿಗಷ್ಟು ಬುದ್ಧಿ ಹೇಳು. ಬೇಕಾದ ಕಸರತ್ತು ಮಾಡಲಿ, ರಾಜ್ಯವಾಳುವ ಗಂಡಸಿಗೆ ಅದೆಲ್ಲಾ ಬೇಕು.

ಯುದ್ಧವಲ್ಲದೆ, ಆಟಕ್ಕೆ ತಲೆಯೊಡ್ಡುವುದು ನಾಯಕರಿಗೆ ತಕ್ಕುದಲ್ಲ" - ಎಂದು ಹೇಳಿದರು, ಓಬವ್ವನಾಗತಿ.

"ಅವ್ವಾ, ಆ ಮಗನಾಟವನ್ನು ಕಂಡು ನನಗೆ ಸಂತೋಷವಾದರೂ, ಭಯದಲ್ಲಿ ಜೀವ ಹಿಡಿಯಷ್ಟಾಗಿತ್ತು. ಆದರೆ ಅವನಿಗೆ ಹೇಗೆ ಹೇಳಲಿ?'' - ನಿಂಗವ್ವ ಕೇಳಿದಳು.

"ಹೇಗೆ ಹೇಳಲಿ ಎಂದು ತಾಯಾದ ನೀನೇ ಹೀಗೆ ಹೇಳಿದರಾಯಿತೆ? ನಾಯಕರ ಹುಡುಗಬುದ್ಧಿಗೆ ಅರ್ಥವಾಗದಿದ್ದ ಮಾತನ್ನು ನಾವು ಹಿರಿಯರು ತಿಳಿಹೇಳಬೇಕು.''

"ಎಲ್ಲರಿಗೂ ಹಿರಿಯರಾಗಿ ನೀವಿದ್ದೀರಲ್ಲ. ಅವ್ವಾ, ನೀವೇ ಒಂದು ಮಾತು ಹೇಳಿ -ನಿಮ್ಮ ಮಾತಿಗೆ ಬಗ್ಗುವಷ್ಟು ಸುಲಭವಾಗಿ ಬಗ್ಗುವನಲ್ಲ, ಈ ಮಗ. ಮೊದಲಿನಿಂದಲೂ ಈ ಗರಡಿಯ ಗೀಳು ಇದ್ದದ್ದೇ.''

"ಹುಡುಗನಾಗಿದ್ದಾಗ ಸರಿ - ಈಗ ಹದಿನೈದಾಯಿತಲ್ಲ.... ಗೀಳು ಹಿಡಿಯಬೇಕಾದ ಪ್ರಾಯ....'' - ಎಂದು ಏನೋ ಯೋಚಿಸಿ -

"ನಿನ್ನ ಮಗ-ಸೊಸೆ ಸರಸವಾಗಿದ್ದಾರಾ?" – ಎಂದು ಕೇಳಿದರು ಓಬವ್ವನಾಗತಿ –

"ಮದುವೆಯಾಗಿ ಮೂರು ವರ್ಷಕ್ಕೆ ಬಂತು. ನಿನ್ನ ಕೈಗಿನ್ನೂ ಮೊಮ್ಮಗ ಬರಲಿಲ್ಲ. ನನಗಂತೂ ಮುಪ್ಪಿನ ಮರೆವು. ನಿನಗೂ ಈ ಚಿಂತೆ ಬರಲಿಲ್ಲವೇ?"

"ತಾಯಿಯಾದವಳು ನನಗೆ ಆ ಆಸೆ ಇಲ್ಲವಾ ? ಆದರೇಕೋ ಅವರಿಬ್ಬರೂ ಕೂಡಿರುವ ಲಕ್ಷಣವೇ ಕಾಣುತ್ತಿಲ್ಲ ನನಗೆ" ಎಂದಳು ನಿಂಗವ್ವ.

"ಯಾರ ತಪ್ಪೋ - ಕಣ್ಣಿಟ್ಟು ನೋಡು. ಗಂಡಿನದಾದರೆ ಬುದ್ಧಿ ಹೇಳು. ಹೆಣ್ಣಿನದಾದರೆ ವೈದ್ಯರ ಕೈಲಿ ಪರೀಕ್ಷೆಮಾಡಿಸಿ, ಬೇರೆ ಯೋಚನೆ ಮಾಡಬೇಕು" - ಎಂದಳು ಓಬವ್ವನಾಗತಿ.

"ಆಯಿತವ್ವಾ, ಹೀಗೆಂದು ಗೊತ್ತಾದರೆ ಹೇಳುತ್ತೇನೆ"

-ಎಂದು ನಿಂಗಪ್ಪ, ನಾಗತಿಗೆ ಮಾತುಕೊಟ್ಟಳು.

ಆ ಮಾತು ಕೊಟ್ಟ ಮಾತ್ರಕ್ಕೆ ನಾಗತಿಯ ಚಿಂತೆ ತೀರಲಿಲ್ಲ –

'ಹೀಗೇಕಾಯಿತು ?'

-ಎಂಬ ಚಿಂತೆ ಆ ವೃದ್ಧ ಚಿತ್ತವನ್ನು ಕಾಡತೊಡಗಿತು.

ಗರಡಿಯ ಗೀಳಿಗೆ ಬಿದ್ದ ಜನ ಹೆಣ್ಣೆಂದರೆ ತಮ್ಮ ಗಂಡಸುತನಕ್ಕೆ ಬಂದಡರುವ ಮುಪ್ಪು ಎಂದು ಹೆದರುತ್ತಾರೆ – ಎಂಬ ಮಾತನ್ನು ಓಬವ್ವನಾಗತಿ ಕೇಳಿದ್ದರು.

'ಮದಕರಿನಾಯಕನಿಗೆ ಈ ಭೀತಿಯೇ ?'

-ಎಂದು ಒಮ್ಮೆ ಯೋಚಿಸಿದರೆ, ಮತ್ತೊಮ್ಮೆ–

’ಆ ರಾಜಕುಮಾರಿಯದು ಬಂಜೆ ಬಸಿರೇ ?’ – ಎಂದು ಭಯವಿಹ್ವಲರಾಗುತ್ತಿದ್ದರು.

ಆದರೆ ಈ ಮಾತನ್ನು ಹೇಗೆ, ಯಾರನ್ನು ಬಾಯಿಬಿಟ್ಟು ಕೇಳುವುದು ಎಂದು ಚಿಂತಿಸಿ, ಆ ಭಾರವನ್ನು ತಾಯಿಯಾದ ನಿಂಗವ್ವ ಹೊತ್ತಮೇಲೆ, ಓಬವ್ವನಾಗತಿಯ ಹೃದಯ ಕೊಂಚ ಹಗುರವಾಯಿತು : ಚಿಂತೆ ಮಾತ್ರ ತೀರಲಿಲ್ಲ.

೮

ಈ ಮಾತನ್ನು ಯಾರಿಗೆ ಕೇಳುವುದು, ಹೇಗೆ ಕೇಳುವುದು ಎಂಬ ಚಿಂತೆಯಲ್ಲೇ ನಾಲ್ಕು ದಿನ ಕಳೆದು ಕೊನೆಗೆ ನಿಂಗವ್ವ ತನ್ನ ಮಗ ಪರಶುರಾಮನಾಯಕನ ಮುಂದೆ ಏನಾದರೂ ಹೇಳಿರಬಹುದೋ ಏನೋ ಎಂದು ಯೋಚಿಸಿ, ಆ ಮಗನನ್ನೇ ಕೇಳಿದಳು –

“ಪರಶುರಾಮಣ್ಣ, ನಿಮ್ಮಣ್ಣ-ಅತ್ತಿಗೆ ಅನ್ಯೋನ್ಯವಾಗಿದ್ದಾರಾ ?”

“ಏಕವ್ವಾ - ಅವರು ಜಗಳವಾಡಿದರು ಎಂದು ಯಾರಾದರೂ ಹೇಳಿದರೇ ?”

- ಪರಶುರಾಮನಾಯಕ ಕೇಳಿದ.

“ಇಲ್ಲ - ತನ್ನ ಹೆಂಡತಿಯ ವಿಷಯ ನಿನ್ನ ಮುಂದೇನಾದರೂ ಹೇಳಿದನೇ, ನಿನ್ನಣ್ಣ ? ಅವನ ಮನಸ್ಸು ತಿಳಿದವನು ನೀನು : ತಾಯಿಗೂ ಹೇಳಬಾರದ ಮಾತನ್ನು ತಮ್ಮನ ಮುಂದಾದರೂ ಹೇಳಿರಬಹುದಲ್ಲಾ....”

“ಗಂಡ-ಹೆಂಡಿರ ಸುದ್ದಿ ನಮಗೇಕಲ್ವಾ ?”

-ಎಂದು ಹಾರಿಕೆಯ ಉತ್ತರ ಕೊಟ್ಟ ಪರಶುರಾಮನಾಯಕ.

“ಹಾಗಂದರೆ ನಿನಗೇನೋ ಸುದ್ದಿ ಗೊತ್ತಿರಲೇಬೇಕು. ಅದೇನು ಹೇಳು – ಹೇಳದಿದ್ದರೆ, ನನ್ನಾಣೆ” - ಎಂದು ಕೇಳಿದಳು ನಿಂಗವ್ವ.

ಆಕೆ ಹಾಗೆ ಪಟ್ಟು ಹಿಡಿದು ಕೇಳಿದಮೇಲೆ, ಹೇಗೆ ಹೇಳಬೇಕು, ಹೇಳದಿದ್ದರೆ ಹೇಗೆ ಎಂದೆಲ್ಲಾ ಯೋಚಿಸಿ, ಕೊನೆಗೆ –

“ಯಾಕೋ - ಅವರಿಬ್ಬರಿಗೂ ಮನಸ್ಸು ಕೂಡಿದಂತಿಲ್ಲವ್ವಾ”

-ಎಂದು ಹೇಳಿದ ಪರಶುರಾಮನಾಯಕ.

“ನಿನ್ನಣ್ಣ ನಿಮ್ಮಪ್ಪಯ್ಯನಿದ್ದ ಹಾಗೇ : ಮೂಗಿನ ತುದಿಯಲ್ಲೇ ಸಿಟ್ಟು. ಹೆಂಡತಿಯ ಮೇಲೆ ಮುನಿಸಿಕೊಂಡಿದ್ದಾನೇನು ?”

“ಹಾಗೇನೂ ಇಲ್ಲ.”

"ಮತ್ತೆ - ?"

"ಮೊದಲಷ್ಟು ದಿನ ತನ್ನ ಹೆಂಡತಿ ರಂಭೆ, ಗಾಜಿನ ಗೊಂಬೆ, ದಂತಹ ವಿಗ್ರಹ ಅನ್ನುತ್ತಿದ್ದ. ಈಗ ಹೆಂಡತಿಯ ಮಾತೆತ್ತಿದರೆ ಮುಖ ಬೇರೆ ಕಡೆ ಮಾಡಿ 'ಆಡಲು ಬೇರೆ ಮಾತಿಲ್ಲವೇ?' ಅನ್ನುತ್ತಾನೆ."

ಪರಶುರಾಮನಾಯಕ ಹೇಳಿದುದನ್ನು ಕೇಳಿ, ನಿಂಗವ್ವನಿಗೆ ಗುಡ್ಡ ತಲೆಯ ಮೇಲೆ ಬಿದ್ದಂತಾಗಿ –

"ಅವನು ಅಷ್ಟಂದರೆ ನೀನು ಅಷ್ಟಕ್ಕೇ ಬಿಟ್ಟೆಯಾ, ಯಾಕೆ ಎಂದು ಕೇಳಲಿಲ್ಲವೆ? ನೀನೆಂಥ ತಮ್ಮ?" – ಎಂದು ಕಾತರಳಾಗಿ ಕೇಳಿದಳು.

"ನಾನು ತಮ್ಮನೇ, ಆತ ಅಣ್ಣನೇ. ಆದರೂ ಸಂಸಾರದ ಮಾತು ಹೇಗೆ ಕೇಳಲಿ ? ಅದೂ 'ನಿನಗೆ ಬೇಡ' ಎನ್ನುವ ಹಾಗೆ ಅಣ್ಣ ನಡೆದುಕೊಂಡಾಗ. ಅವನನ್ನು ಹಡೆದವ್ವ, ನೀನೇ ಮಗನನ್ನು ಮಾತಾಡಿಸು. ನಿನ್ನ ಮುಂದೆಯೂ ಅಣ್ಣ ಬಾಯಿಬಿಡಲಿಲ್ಲ ಅಂದರೆ ಬ್ರಹ್ಮನಿಗೂ ಸಾಧ್ಯವಿಲ್ಲ" – ಎಂದ ಪರಶುರಾಮನಾಯಕ.

ಅವನಷ್ಟು ಹೇಳಿದ ಬಳಿಕ ಅನ್ಯಥಾ ಮಾರ್ಗ ಕಾಣದೆ, ಹೇಗೆ ಕೇಳುವುದು, ಯಾವಾಗ ಕೇಳುವುದು ಎಂದು ಆಳೆದು-ಸುರಿದು, ಕೊನೆಗೊಂದು ದಿನ, ಏನೋ ಸಂತೋಷದ ಮಾತು ಹೇಳಲು ಬಂದ ಮದಕರಿನಾಯಕನಿಗೆ –

"ನಿನ್ನನ್ನೊಂದು ಮಾತು ಕೇಳಬೇಕೆಂದಿದ್ದೆ, ಕೇಳಲಾ ?" – ಎಂದು ಕೇಳಿದಳು ನಿಂಗವ್ವ.

"ಕೇಳವ್ವ, ನೀನು ಕೇಳಬಾರದ ಮಾತು ಏನಿದೆ ?"

"ಕೇಳಿದರೆ, ದೊರೆಯಾಗಿ ಉತ್ತರ ಕೊಡದೆ, ಮಗನಾಗಿ ಉತ್ತರ ಕೊಡುತ್ತೀಯಾ ?"

"ಊರಿಗೆ ಅರಸಾದರೂ, ತಾಯಿಗೆ ಮಗನಲ್ಲವೇನವ್ವಾ ? ಅದೇನು ಕೇಳು."

"ಕೇಳಿದರೆ ಇದ್ದದ್ದು ಇದ್ದಹಾಗೆ ಹೇಳಬೇಕು."

"ಹಾಗಲ್ಲದೆ ಬೇರೆ ರೀತಿ ನಿನಗೆ ಉತ್ತರ ಕೊಟ್ಟದ್ದು ನೆನಪಿದೆಯಾ ? ಅದೇನಿದ್ದರೂ ಕೇಳು ಹೇಳುತ್ತೇನೆ" – ಎಂದ ಮದಕರಿನಾಯಕ.

"ನೀನು ನಿನ್ನ ಹೆಂಡತಿಯೊಂದಿಗೆ ಸರಿಯಾಗಿದ್ದೀಯಾ ?"

ತಾಯಿ ಕೇಳಿದ ಪ್ರಶ್ನೆಯನ್ನು ಕೇಳಿ, ಮದಕರಿನಾಯಕನ ಮುಖದ ಮೇಲಿದ್ದ ಸಂತೋಷ ಬಾಡಿಹೋಗಿ, ಕೊಂಚ ಬಿರುಸಾದ ಧ್ವನಿಯಲ್ಲಿ ಹೇಳಿದ –

"ನನ್ನನ್ನು ಹಾಗೆ ಕೇಳುವುದು ಬಿಟ್ಟು, ನಿನ್ನ ಗಂಡನೊಂದಿಗೆ ಸರಿಯಾಗಿದ್ದೀಯಾ ಎಂದು ನಿನ್ನ ಸೊಸೆರಾಣಿಯನ್ನು ಕೇಳು ? ಉತ್ತರ ಹೇಳಬೇಕಾದವಳು ಅವಳು - ನಾನಲ್ಲ."

ಮಗನ ಮಾತು ಕೇಳಿ ಹಾಗೇ ಉಡುಗಿಹೋದ ನಿಂಗವ್ವ –

"ಹಾಗಂದರೇನಪ್ಪ...."

"ಏನೂ ಇಲ್ಲ, ಅವ್ವ, ನಿನ್ನ ಸೊಸೆಗೆ ನನ್ನಂಥವನಲ್ಲ, ಆಮರಾವತಿಯಿಂದ ಗಂಡನಾಗಿ ಬರಬೇಕಾಗಿತ್ತು. ಮಾತೆತ್ತಿದ್ದರೆ ತವರಿನ ಕೋಡು ತುರಿಸುವ ಗಯ್ಯಾಳಿಗೂಳಿ ನನಗೆ ಬೇಕಾಗಿಲ್ಲವ್ವ"- ನಿರ್ಧಾರದ ಧ್ವನಿಯಲ್ಲಿ ಹೇಳಿದ, ಮದಕರಿನಾಯಕ.

"ಛಿ - ಇದೇನು ಮಾತು. ಆ ಮಗುವಿಗೆ ಎಷ್ಟು ವಯಸ್ಸಾಗಿದೆ ಎಂತ ಹೀಗಾಡುತ್ತೀಯ ? ಇನ್ನೂ ಅರೀದ ಕಂದ...."

"ಕಂದ! ವಯಸ್ಸಾಗಿಲ್ಲ. ಮೈಗೆ ವಯಸ್ಸಾಗಿಲ್ಲ, ಬುದ್ಧಿಗೆ ಸೊಕ್ಕು ಬಂದಿದೆ. ಆಳುವ ಅರಸರ ಕೈಹಿಡಿಯಬೇಕಾದ ತಾನು, ಊಳಿಗದವರ ಮನೆಗೆ ಬಂದೆ ಎನ್ನುವಂಥ ಹೆಂಡತಿಯಲ್ಲೇನು ಸರಸ ? ಕಳಿಸಿಬಿಡವ್ವಾ, ಅವಳನ್ನು ಅವಳ ಶ್ರೀಗಂಧದ ಅರಮನೆಯ ತವರಿಗೆ -ಬಂಗಾರದ ಕೊರಡಿನೊಂದಿಗೆ ಸಂಸಾರ ಮಾಡಲಿ"

- ಎಂದು ಮುಂದೇನೂ ಮಾತಾಡಲು ಅವಕಾಶ ಕೊಡದೆ, ತಾಯ ಇದುರಿನಿಂದ ಹೊರಟು ಹೋದ ಮದಕರಿನಾಯಕ.

ಆ ಮಾತು ಕೇಳಿ ನಿಂಗವ್ವ ಪಾತಾಳಕ್ಕಿಳಿದುಹೋದಳು. 'ಮಗನ ಸಂಸಾರ ಹೀಗೆ ವಿರಸವಾಯಿತಲ್ಲಾ' ಎಂದು ಕೊರಗಿ, ಅದುವರೆಗೂ ತಾನು ಮಾಡದಿದ್ದ ಕೆಲಸ ಅಂತಃಪುರದ ದಾಸಿಯರನ್ನು 'ರಾಣಿ ಹೇಗೆ ?' ಎಂದು ಕೇಳುವುದು – ಎನ್ನುವುದನ್ನು ಮಾಡಿದಳು.

ಅವರೂ ಸುಲಭಕ್ಕೆ ಬಾಯಿಬಿಡಲಿಲ್ಲ. ನಯವಿನಯವಾಗಿ, ಕೊನೆಗೆ ಹೆದರಿಸಿ-ಬೆದರಿಸಿ ಕೇಳಿದಮೇಲೆ ತಿಳಿಯಿತು - ತನ್ನ ಸೊಸೆಗೆ, ಗಂಡನ ಮನೆಗಿಂತ ತವರಿನ ಮೋಹ ಹೆಚ್ಚೆಂದು.

"ಕೈಹಿಡಿದವರೊಂದಿಗೆ ಹೇಗಿದ್ದಾರೋ ನಾವು ಕಾಣೆವು, ಅವ್ವಾ. ಆದರೆ ಅವರಾಯಿತು, ಅವರೂರಿನಿಂದ ಕರೆತಂದ ಊಳಿಗದವರಾಯಿತು. ನಮ್ಮನ್ನು ಕಂಡರೆ, ಸಂತೆಯಲ್ಲಿ ಕೊಂಡು ತಂದ ಗುಲಾಮರ ಹಾಗೆ ಮಾತಾಡಿಸುತ್ತಾರೆ. ಅವರಿರಲಿ, ಅವರೊಂದಿಗೆ ಬಂದ ಅವರೂರಿನ ತೊತ್ತುಗಳಿಗೂ ನಾವೆಂದರೆ ಕಾಲುಕಸ. ಊರು ಬಿಟ್ಟು ಕಾಡಿಗೆ ಬಂದವರ ಹಾಗೆ ಆಡುತ್ತಾರೆ. ಅವರ ಸೊಕ್ಕು ನೋಡಿದರೆ ಪೊರಕೆ ನಿವಾಳಿಸಬೇಕು ಎನಿಸುತ್ತದೆ. ಆದರೆ ನಾವು ಬಾಯಿ ಸತ್ತ ಊಳಿಗದವರು, ಹಾಗಿದ್ದೇವೆ"

- ಎಂದು ಒಬ್ಬಳಲ್ಲ, ನಾಲ್ಕು ಜನ ಅದೇ ಮಾತು ಹೇಳಿದರು.

ಆ ಮಾತು ಕೇಳಿ ನಿಂಗವ್ವನಿಗೆ ಕಣ್ಣರಿಯದ ಕಾಡಿನಲ್ಲಿ ಒಂಟಿಯಾಗಿ ಬಿಟ್ಟಂತಾಯಿತು. ಅನಿರೀಕ್ಷಿತವಾಗಿ ಬಂದೊದಗಿದ ಈ ಸಂಸಾರದ ಸಂಕಷ್ಟದಲ್ಲಿ ಯಾರನ್ನು ಕೇಳುವುದು, ಏನು

ಮಾಡುವುದು ಎಂದು ಯೋಚಿಸಿ ಯೋಚಿಸಿ ತಲೆ ಬರಡಾಗಿ, ಕೊನೆಗೆ ದಾಸಿಯರು ಹೇಳಿದ ಮಾತು ನಿಜವೋ, ಸುಳ್ಳೋ ಎಂದು ಪರೀಕ್ಷಿಸಲು ತಾನೇ ಸೊಸೆಯನ್ನು ಹೋಗಿ ನೋಡಲು ನಿಶ್ಚಯಿಸಿದಳು.

ಆ ಸೊಸೆಯನ್ನಾಕೆ ನೋಡಿದ್ದಳು - ಮಗನಿಗೆ ಮಡದಿಯಾಗಿ ಹಸೆಯ ಮೇಲೆ ಕುಳಿತ ದಿನದಿಂದಲೂ, ಆ ದಿನಗಳಲ್ಲಾಕೆ ಸರ್ವಾಭರಣಭೂಷಿತಳಾಗಿ, ಧರಿಸಿದ ಒಡವೆಗಳಿಗೆ ತಾನೇ ಒಂದು ಒಡವೆಯಂತಿದ್ದ ಸುಂದರಿಯಾದ ಸೊಸೆಯನ್ನು ನೋಡಿ, 'ತನ್ನ ಮಗನಿಗೆ ತಕ್ಕ ಮಡದಿ' ಎಂದು ಹಿಗ್ಗಿದ್ದಳು; ಹೆಮ್ಮೆಪಟ್ಟಿದ್ದಳು. ಎಲ್ಲಾ ತಾಯಂದಿರಂತೆಯೇ ತನ್ನ ಮಗನ ಸುಖ ಸಂಸಾರದ ಭವಿಷ್ಯದ ಬಗ್ಗೆ ನೂರು ಕನಸು ಕಟ್ಟಿದ್ದಳು. ಈಗ ಕನಸುಗಳೆಲ್ಲಾ, ಬರೀ ಕನಸುಗಳಾಗಿ, ಹೂವಿನ ಹಾದಿ ಮುಳ್ಳಿನ ಮಾರ್ಗವಾಯಿತಲ್ಲ ಎಂದೆನಿಸಿದಾಗ ಆಕೆಗಾದ ದುಃಖ ಅಷ್ಟಿಷ್ಟಲ್ಲ.

ಆ ಮಾತನ್ನೆಲ್ಲಾ ನುಂಗಿಕೊಂಡು, ನಿಂಗವ್ವ, ಅತ್ತೆಯಾಗಿ ಸೊಸೆಗೆ ಹೇಳಿಕಳಿಸದೆ, ತಾನೇ ಸೊಸೆಯನ್ನು ಕಾಣಹೋದಳು.

* * *

ತನ್ನ ಅಂತಃಪುರದಲ್ಲಿ ಕೆಳದಿಯೊಬ್ಬಳೊಂದಿಗೆ ನಗುತ್ತಾ, ಪಗಡೆಯಾಡುತ್ತಾ ಕುಳಿತ, ಆ ಮನೆಯ ದೀಪಲಕ್ಷ್ಮಿಯಂತಿದ್ದ, ರೂಪವತಿಯಾದ ಸೊಸೆ ಲಕ್ಕಾಂಬೆಯನ್ನು ನೋಡಿ, ನಿಂಗವ್ವನಿಗೆ 'ಕೆಂಡಸಂಪಿಗೆಯ ಹಾಗಿದ್ದಾಳೆ - ನನ್ನ ಸೊಸೆ' ಎನಿಸಿ ಹೆಮ್ಮೆಯಾಯಿತು. 'ಇಂಥ ಸೊಸೆಯಲ್ಲಿ ತನ್ನ ಮೊದ್ದು ಮಗ ಏನೋ ಅಡ್ಡವಾಸನೆ ಕಂಡುಹಿಡಿದಿದ್ದಾನಲ್ಲಾ' ಎನಿಸಿ, ತನ್ನ ಮಗನ ಬಗ್ಗೆ ಬೇಸರವಾಯಿತು.

ಇದ್ದಕ್ಕಿದ್ದ ಹಾಗೇ ಅಲ್ಲಿಗೆ ಬಂದ ಅತ್ತೆಯನ್ನು ಕಂಡು, ಆಟ ನಿಲ್ಲಿಸಿ, ದಿಗ್ಗನೆದ್ದು, ಏನು ಮಾಡುವುದು ಎಂದು ಹಿಂದೆ ಮುಂದೆ ನೋಡುತ್ತಾ, ಹಿರಿಯರಿಗೆ ಗೌರವಿಸುವುದಕ್ಕಿಂತ ಹೆಚ್ಚಾಗಿ, ತನ್ನತ್ತೆಯ ಮೇಲೆ ಶಠಗೋಪುರವಿಡುವಂತೆ ನಡೆದು ಬಂದು, ಬಗ್ಗಲಾರೆನೆನ್ನುವ ಮೈಯನ್ನು ಬಲಾತ್ಕರಿಸಿ, ನಮಸ್ಕರಿಸಿದ ಸೊಸೆಯನ್ನು ನಿಂಗವ್ವ ನೋಡಿದಳು.

ಅಷ್ಟು ದೂರಕ್ಕೆ ಅರಳಿದ ಹೂವಿನಂತೆ ಕಂಡ ಸೊಸೆ ಹತ್ತಿರ ಬಂದಾಗ, ಅರಳುವ ಮೊದಲೇ ಬಾಡಿದ ಮೊಗ್ಗಿನಂತೆ ಕಂಡು, ಹೊಟ್ಟೆಯಲ್ಲಿ ಸಂಕಟವಾಗಿ, ನಮಸ್ಕರಿಸಿದವಳಿಗೆ ಹರಸಿದ ಶಾಸ್ತ್ರ ಮಾಡಿದಳು.

“ಇದೇನು, ಇಷ್ಟು ದೂರ ಬಂದಿರಲ್ಲಾ; ಕರೆಕಳಿಸಿದ್ದರೆ ನಾವೇ ಬರುತ್ತಿದ್ದೆವು'' – ಎಂದಳು ಲಕ್ಕಾಂಬಿಕೆ.

ಹಿರಿಯರ ಇದಿರು ತನ್ನ ಬಗ್ಗೆ ತಾನೇ ಬಹುವಚನ ಪ್ರಯೋಗ ಮಾಡಿಕೊಂಡು ಮಾತನಾಡಿದ ಸೊಸೆಯ ರೀತಿ, ನಿಂಗವ್ವನಿಗೆ ಹಿಡಿಸದಿದ್ದರೂ 'ಇದು ಅರಮನೆಯ ಸಂಪ್ರದಾಯವೇನೋ' ಎಂದುಕೊಂಡು, ಅದನ್ನು ಮನಸ್ಸಿಗೆ ತಂದುಕೊಳ್ಳದೆ –

"ಕರೆಸುವುದಕ್ಕೆ, ಹೇಳಿಕಳಿಸುವುದಕ್ಕೆ ನಾವೇನು ಹೊರಗಿನವರೇ, ತಾಯಿ. ನಿನ್ನ ಹತ್ತಿರ ಮಾತಾಡಲು ನಾನು ಅಷ್ಟೆಲ್ಲಾ ಶಾಸ್ತ್ರಸಂಪ್ರದಾಯ ನೋಡಬೇಕೇ ? ನಿನ್ನ ಹತ್ತಿರ ಏನೋ ಮಾತಾಡುವುದಿತ್ತು, ಬಂದೆ. ಆಟಕ್ಕೆ ಅಡ್ಡಿಯಾಯಿತೇ ?" – ಎಂದು ಕೇಳಿದಳು.

"ಆಟವೇನು - ಹಗಲಿರುಳೂ ಇದ್ದದ್ದೇ. ಅದಲ್ಲದೆ ನನಗಿಲ್ಲಿ ಬೇರೇನು ಕೆಲಸ ?"

- ಎಂದು ಅಪರಿಚಯಸ್ಥರೊಡನೆ ಮಾತನಾಡುವಾಗಿನ ಬಿಗುವಿದ್ದ ಧ್ವನಿಯಲ್ಲಿ ಹೇಳಿ, ತನ್ನ ಬಾಗಿಲಿಗೇ ಬಂದ ಅತ್ತೆಯನ್ನು ಕುಳಿತುಕೊಳ್ಳಿ ಎನ್ನುವ ಸೌಜನ್ಯವನ್ನೂ ತೋರದೆ –

"ಏನೋ ಮಾತಾಡುವುದಿದೆ ಎಂದಿರಲ್ಲಾ...." – ಎಂದಷ್ಟೇ ಕೇಳಿದಳು, ಲಕ್ಕಾಂಬಿಕೆ.

ತನಗೆ 'ಕುಳಿತುಕೊಳ್ಳಿ' ಎಂದು ಹೇಳಲಿಲ್ಲ, ತಾವಿಬ್ಬರು ಮಾತನಾಡಬೇಕಾದಾಗ ಅಲ್ಲಿರಲು ಅನರ್ಹಳಾದ ದಾಸಿಯನ್ನು 'ಹೊರಗೆ ಹೋಗು' ಎನ್ನಲಿಲ್ಲ - ಈ ವರ್ತನೆಯ ಅಸಭ್ಯತೆ ನಿಂಗವ್ವನಿಗೆ ಸರಿಕಾಣಲಿಲ್ಲ. 'ಏನೂ ಮಾತಾಡುವುದಿಲ್ಲ' ಎಂದು ಹೇಳಿ ಹೋಗಬೇಕೆನಿಸಿತು. ಆದರೆ ಮೊದಲೇ ಬಿಗಿದ ತಂತಿಯನ್ನು ಕಡಿಯುವಷ್ಟು ಎಳೆಯಬಾರದು ಎನಿಸಿ, ತಾನೇ ಸೋತು, ಅಲ್ಲಿದ್ದ ದಾಸಿಗೆ –

"ಅಷ್ಟು ಹೊತ್ತು ಹೊರಗಿರು. ನಾವು ನಾಗತಿಯವರೊಂದಿಗೆ ಮಾತಾಡುವುದಿದೆ" ಎಂದು ಹೇಳಿದಳು.

ಆ ಮಾತನ್ನು ಕೇಳಿದ ದಾಸಿ 'ಹೋಗಲೋ – ಬೇಡವೋ' ಎಂಬಂತೆ, ಎರಡು ಮೂರು ಬಾರಿ, ನಿರ್ವಿಕಾರಮುಖಭಾವದಿಂದ ನಿಂತ ತನ್ನ ಒಡತಿಯತ್ತ ನೋಡಿ ಹೊರಗೆ ಹೋದಳು. ತಾನು ಅಪ್ಪಣೆ ಮಾಡದೆ, ತನ್ನ ದಾಸಿಯನ್ನು ನಿಂಗವ್ವ ಹೊರಗೆ ಕಳಿಸಿದುದು ತನಗೆ ಅಪಮಾನವಾಯಿತು ಎಂಬಂತೆ –

"ಅದೇನೋ ಮಾತನಾಡುವುದಿತ್ತು ಎಂದಿರಲ್ಲಾ...."

-ಎಂದು ಕೇಳಿದಳು ಲಕ್ಕಾಂಬಿಕೆ, ಆಗಲೂ ತನ್ನತೆಗೆ ಕುಳಿತುಕೊಳ್ಳಲು ಹೇಳದೆ; ತಾನೂ ಕುಳಿತುಕೊಳ್ಳದೆ.

ದಾಸಿ ಕಣ್ಣು ಮರೆಯಾದಬಳಿಕ, ಕಿತ್ತುಹೋಗುತ್ತೇನೆ ಎನ್ನುತ್ತಿದ್ದ ತಾಳ್ಮೆಯ ಹುರಿಯನ್ನು ಪ್ರಯತ್ನಪೂರ್ವಕವಾಗಿ ಬಿಗಿಹಿಡಿದು –

"ನಿಂತುಕೊಂಡೇ ಮಾತಾಡುವುದೇಕೆ, ಕುಳಿತುಕೋ, ತಾಯಿ"

-ಎಂದು ಶಾಂತವಾದರೂ, ಬಿಗಿದ ಧ್ವನಿಯಲ್ಲಿ ಹೇಳಿ, ತಾನೇ ಹತ್ತಿರವಿದ್ದ ಒಂದು ಆಸನದಲ್ಲಿ ಕುಳಿತು ಸೊಸೆಯನ್ನು ಕುಳಿತುಕೊಳ್ಳಲು ಹೇಳಿ, ಆಕೆ ಕುಳಿತ ಬಳಿಕ ತಗ್ಗಿದ ಧ್ವನಿಯಲ್ಲಿ-

"ಇದು ನಮ್ಮಿಬ್ಬರಲ್ಲಿರಬೇಕಾದ ಮಾತು....ನೀನಾಡುವ ಪಗಡೆಯಾಟದ ದಾಳಗಳಂತೆ ಜೊತೆಯಾಗಿರದೆ, ಗಂಡ-ಹೆಂಡಿರು ನೀವಿಬ್ಬರೂ ಬೇರೆಬೇರೆಯಾಗಿದ್ದೀರಂತೆ. ಅದೇಕೆ? ನಮ್ಮ ಮಕ್ಕಳು ತಪ್ಪಾಗಿ ನಡೆದುಕೊಂಡರಾ?" – ಎಂದು ಕೇಳಿದಳು, ನಿಂಗವ್ವ.

"ಅವರೇನು ಹೇಳಿದರು ?"

"ನಿನ್ನನ್ನು ಕೇಳು ಎಂದರು."

"ನಮ್ಮನ್ನು ಕೇಳುವುದೇನಿದೆ ? ಅವರ ವರ್ತನೆಗೆ ಅವರೇ ಹೊಣೆ."

"ಅರಸಿಯನ್ನು ಹಾಗೆ ಕಾಣದೆ ಹಾಸಿಗೆಯ ತೊತ್ತು ಎಂದು ಕಾಣಲು, ನಾವು ಯುದ್ಧದಲ್ಲಿ ಗೆದ್ದು ತಂದ ದಾಸಿಯರೂ ಅಲ್ಲ, ಮೇಲೆಬಿದ್ದು ಬಂದ ಬೆಲೆವೆಣ್ಣೂ ಅಲ್ಲ."

- ತಡೆಯಲಾಗದ ಸಿಡುಕಿನಿಂದ ಉತ್ತರ ಕೊಟ್ಟಳು ಲಕ್ಕಾಂಬಿಕೆ.

ಆ ಮಾತಿನಲ್ಲಿದ್ದ ಸೆಟವು ನಿಂಗವ್ವನಿಗೆ ಅಸಹನೀಯವಾಗಿ 'ನನ್ನ ಮಗನೇನು ನಿನ್ನ ಕಾಲಿಗೆ ಬಿದ್ದು ಕೇಳಿ, ನಿನ್ನ ಹತ್ತಿರ ಬರಬೇಕಾಗಿತ್ತಾ?' ಎಂದು ಕೇಳಬೇಕೆನಿಸಿದರೂ, ಹಾಗೆ ಕೇಳದೆ -

"ಗಂಡ-ಹೆಂಡಿರ ನಡುವೆ ಇದೇನು ಮಾತು, ತಾಯಿ ?" – ಎಂದು ಶಾಂತವಾಗಿಯೇ ಕೇಳಿದಳು.

"ಗಂಡ-ಹೆಂಡಿರು ನಿಜ. ಆದರೆ ಅದಕ್ಕೂ ಒಂದು ರೀತಿ-ರಿವಾಜಿಲ್ಲವೇ ? ಇದೇನು ಕಾಡು ಗೊಲ್ಲರ ಕೂಡಿಕೆಯೇ - ಅವರು ಬಂದಾಗ ಹಾಸಿಗೆ ಹಾಸಿ ಕೂತಿರಲು ?"

- ತಗ್ಗುತ್ತಿದ್ದ ಅತ್ತೆಯ ಸಹನೆಯನ್ನು ಕೆಣಕಿ ಹೇಳಿದಳು, ಲಕ್ಕಾಂಬಿಕೆ.

"ನಮ್ಮ ಮಕ್ಕಳು ಏನು ತಪ್ಪು ಮಾಡಿದರು ?"

"ತಪ್ಪು-ಸರಿ ಎನ್ನುವುದು ಹುಟ್ಟಿನಿಂದ ಬರಬೇಕು; ಹೇಳಿಕೊಟ್ಟರೆ ಬಂದೀತಾ? ಅದೃಷ್ಟಕ್ಕೆ ಅರಸುತನ ಸಿಕ್ಕವರಿಗೆ ನಮ್ಮನ್ನು ಕೊಟ್ಟು, ನಮ್ಮ ಅಪ್ಪಾಜಿ ತಪ್ಪು ಮಾಡಿದರು. ಅವ್ವ ಈ ಮಾತು ಬಂದಾಗಲೇ 'ಇರುವ ಪದವಿ ನೋಡಬೇಡಿ, ಹುಟ್ಟಿದ ಮನೆ ನೋಡಿ' ಎಂದು ಹೇಳಿದರು. ಗುರುಗಳ ಮಾತು ಎಂದು ಅಪ್ಪಾಜಿ ಒಪ್ಪಿದರು. ಹಿರಿಯರ ಮಾತಿಗೆ ನಾವೂ ಬೇಡವೆನ್ನಲಿಲ್ಲ. ಆದರೆ ನಿಮ್ಮ ಮಕ್ಕಳು ಮಾತ್ರ ನಡೆದುಕೊಳ್ಳುವ ಹಾಗೆ ನಡೆದುಕೊಳ್ಳಲಿಲ್ಲ" – ಎಂದು ಕಿಡಿಗಾರುತ್ತಾ ಹೇಳಿದಳು, ಲಕ್ಕಾಂಬಿಕೆ.

ಲಕ್ಕಾಂಬಿಕೆಯಾಡಿದ ಮಾತಿನ ಮರ್ಮ ನಿಂಗವ್ವನ ಹೃದಯಕ್ಕೆ ವಿಷದಲಗಿನಂತೆ ನಟ್ಟು 'ಇದು ಸಂಸಾರಮಾಡುವ ಗರತಿಯಾಡಬೇಕಾದ ಮಾತಲ್ಲ. ನಿನಗೆ ಈ ಮಾತು ಹೇಳಿಕೊಟ್ಟವರು ನಿನ್ನ ಬಾಳು ಹಾಳುಮಾಡಿದರು' – ಎಂದೆನ್ನಬೇಕು ಎನಿಸಿತಾದರೂ, ಹಾಗೆ ಹೇಳದೆ –

"ಕೈಹಿಡಿದ ಹೊಸತರಲ್ಲಿ ಇಂಥ ಸಣ್ಣ ಮಾತೆಲ್ಲಾ ದೊಡ್ಡದಾಗಿ ಕಾಣುತ್ತದೆ. ಕೈಯಲ್ಲಾಡುವ ಕೂಸೊಂದು ಬಂದರೆ ಆಗ ಇದಾವುದೂ ಇಷ್ಟು ಬೆಟ್ಟವಾಗಿ ಕಾಣುವುದಿಲ್ಲ. ನೀನು ಸರಿ, ಅವನು ತಪ್ಪು- ಇದೆಲ್ಲಾ ನಾನು ಹೇಳುವುದಿಲ್ಲ. ನೀವು ಕೂಡಿ ಬಾಳಿದರೆ ಸಂತೋಷಪಡುವವರು ಹತ್ತು ಜನ, ಕೆಟ್ಟರೆ ನೋಡಿ ನಗುವವರು ಸಾವಿರ. ಏನೋ ದೈವೇಚ್ಛೆ ಹೀಗಿತ್ತು - ಕಲೆತದ್ದಾಯಿತು. ಆದದ್ದು ಆಗದ್ದು ಮರೆತು ಸಂತೋಷವಾಗಿರಿ. ಅರಮನೆಯ ಸಂಸಾರ ಬೀದಿಯ ಮಾತಾಗಬಾರದು" – ಎಂದು ಹೇಳಿದಳು, ನಿಂಗವ್ವ.

"ಅದಕ್ಕೆ ನಾವೇನು ಮಾಡಬೇಕು ?"

"ಗಂಡ-ಹೆಂಡಿರು ಹೇಗಿರಬೇಕು ಅಂತ ಯಾರಾದರೂ ಕಲಿಸಬೇಕಾದ ಮಾತಾ ? ನಾವು ಹೇಳುವುದಿಷ್ಟೆ - ಒಳಗಿನ ಮಾತು ಒಳಗಿರಲಿ. ನೀವು ಸಂತೋಷವಾಗಿರಿ. ನಿಮ್ಮ ಹೊಟ್ಟೆಯಲ್ಲೊಂದು ಮಗುವಾಗಿ, ರಾಜ್ಯಕ್ಕೆ ದೀಪವಾಗಬೇಕೆಂದು ದೊಡ್ಡವರು ಕನಸು ಕಾಣುತ್ತಾ ಇದಾರೆ. ಅವರ ಮನಸ್ಸಿಗೆ ಸಂತೋಷವಾಗುವ ಹಾಗೆ ಕಿರಿಯರು ನಡೆದುಕೊಳ್ಳುವುದು ರೀತಿ"

- ಎಂದಳು ನಿಂಗವ್ವ.

"ರೀತಿ-ನೀತಿ ನಿಮ್ಮ ಮಕ್ಕಳಿಗೆ ಹೇಳಿಕೊಡಿ" – ಎಂದು ಮಾತು ಮುರಿದಂತೆ ಹೇಳಿ -

"ಶಾಂತವ್ವ, ಆಟ ಅರ್ಧಕ್ಕೇ ನಿಲ್ಲಿಸಿಬಿಟ್ಟೆಯಲ್ಲ - ಬಾ" – ಎಂದು ಮಾತು ಮುಗಿಸಿದಂತೆ ಹೊರಗಿದ್ದ ದಾಸಿಯನ್ನು ಕೂಗಿದಳು ಲಕ್ಕಾಂಬಿಕೆ.

ಮಾತು ಆ ಮಟ್ಟಕ್ಕೆ ಮುಟ್ಟಿದ ಮೇಲೆ ತಾನಿನ್ನು ಅಲ್ಲಿರುವುದು ತರವಲ್ಲವೆಂದು, ನಿಂಗವ್ವ -

"ನಾನು ಬದುಕುವ ಮಾತು ಹೇಳಿದೆ. ನಿನಗದು ಇಷ್ಟವಾಗಲಿಲ್ಲ. ಬರುತ್ತೇನೆ"

- ಎಂದು ಹೇಳಿ. ಅಲ್ಲಿಂದ ಹೊರಟುಬಿಟ್ಟಳು.

* * *

ನಿಂಗವ್ವ ಹೇಳಿದುದನ್ನು ಕೇಳಿ, ಓಬವ್ವನಾಗತಿ ಸಿಟ್ಟಿನಲ್ಲಿ ಸಿಡಿಲಾಗಿ -

"ನೀನೇಕೆ ಬೇಡಿಕೊಳ್ಳಲು ಹೋದೆ. ಕುಲದ ಮಾತಾಡುತ್ತಾಳೆ, ಸೆಟವುಗಾತಿ - ತನ್ನ ನಾಲಗೆ ತನ್ನ ಕುಲ ಹೇಳಿತು ಎನ್ನುವುದನ್ನು ಮರೆತು. ಈಗ ಆಶ್ವಿಜ ಕೃಷ್ಣಪಕ್ಷ ಅಲ್ಲವೇ ? ದೀಪಾವಳಿಗೆ ಮೊದಲು ನಿನ್ನ ಸೊಸೆಯನ್ನು ತವರಿಗೆ ಕಳಿಸಿಬಿಡು" - ಎಂದಷ್ಟೇ ಹೇಳಿದರು.

"ಹಾಗಂದರೆ ?"

-ಓಬವ್ವನಾಗತಿಯಾಡಿದ ಬಿರುನುಡಿಯನ್ನು ಕೇಳಿ, ಕೆಟ್ಟ ಕನಸು ಕಂಡಂತೆ ಹೆದರಿ ಕೇಳಿದಳು ನಿಂಗವ್ವ.

"ತವರುಮನೆಯಲ್ಲಿ ಬುದ್ಧಿ ಬರುವಷ್ಟು ದಿನ ಇದ್ದು ಬರಲಿ. ಹೀಗೆ ಲಿಂಗ ನೆಕ್ಕುವ ನಾಯಿ ಮಾತಾಡುವುದನ್ನು ಕಲಿಸಿದ ತಾಯಿ ಮಗಳಿಗಷ್ಟು ಬುದ್ಧಿ ಹೇಳಲಿ."

"ಅವರು ಕರೆಯದೆ, ನಾವು ಕಳಿಸಿದರೆ...."

"ನಿಮ್ಮ ಮಗಳ ನಡತೆ ಸರಿಯಾಗಿಲ್ಲ ಎಂದು ಬೀಗಿತ್ತಿಗೆ ಮುಖಕ್ಕೆ ಹೊಡೆದು ಹೇಳಬೇಕೆ? ಅವರು ಸೂಕ್ಷ್ಮ ತಿಳಿದುಕೊಂಡರೆ, ಅವರ ಮಗಳು ಸುಖವಾಗಿರುತ್ತಾಳೆ. ಇಲ್ಲ - ನಿನ್ನ ಮಗನೇನೂ ಷಂಡನಲ್ಲ, ಬೇರೊಬ್ಬ ಹೆಂಡತಿ ಬರುತ್ತಾಳೆ" - ಎಂದು ನಿರ್ದಾಕ್ಷಿಣ್ಯವಾಗಿ ಹೇಳಿದರು, ಓಬವ್ವನಾಗತಿ.

* * *

ತಾನು ಸೊಸೆಯನ್ನು ಕಾಣಹೋದದ್ದು ಹೀಗೆ ಹಾವಾಗಿ ತಿರುಗಿಬಿತ್ತಲ್ಲಾ ಎಂದು ಸಂಕಟ ಪಡುತ್ತಲೇ, ನಿಂಗವ್ವ ಮದಕರಿನಾಯಕನ ಮುಂದೆ ಈ ಮಾತಾಡಿ-

"ಕೆಟ್ಟದ್ದನ್ನು ಕೂಡಿಸಬೇಕು ಎನ್ನುತ್ತಾರೆ. ನಾನು ಹೋದದ್ದು ಕೂಡಿದ್ದನ್ನು ಕೆಡಿಸಿದ ಹಾಗಾಯಿತಲ್ಲಣ್ಣಾ" - ಎಂದು ಕಂಬನಿಗರೆದಾಗ -

"ಕೂಡಿದ್ದರಲ್ಲವೇ ಕೆಡಿಸುವ ಮಾತು. ಮೊದಲೇ ಕೆಟ್ಟಿತ್ತು, ಇನ್ನೂ ಕೊಳೆತು ನಾರುವುದು ಬೇಡ. ಹಿರಿಯರು ಹೇಳಿದ ಹಾಗೆ ಮಾಡು" – ಎಂದು ಅದು ತನ್ನ ಸಂಸಾರಕ್ಕೆ ಸಂಬಂಧಿಸಿದ ವಿಷಯವೇ ಅಲ್ಲವೆಂಬಂತೆ ಹೇಳಿ, ಮದಕರಿನಾಯಕನೂ ತಾಯಿಯ ಎದುರಿನಿಂದ ಹೊರಟು ಹೋದ.

"ಮನೆಗೆ ದೀಪ ಎಂದು ಹೊತ್ತಿಸಿದ್ದು ಕೊಳ್ಳಿಯಾಯಿತಲ್ಲಾ!" - ಎಂದು ಮಮ್ಮಲ ಮರುಗಿದಳು, ನಿಂಗವ್ವ.

* * *

ಆ ಮಾತಾದ ನಾಲ್ಕು ದಿನಕ್ಕೆ ಚಿತ್ರದುರ್ಗದಿಂದ ತರೀಕೆರೆಗೆ ಬಂದ ಮಗಳನ್ನು ನೋಡಿ, ಹನುಮಪ್ಪನಾಯಕರು-

"ಕರೆಸದೆ ಬಂದದ್ದೇಕೆ ?" – ಎಂದು ಕೇಳಿದರೆ -

"ನೀವು ಕರೆಸಲಿಲ್ಲ, ಅವರು ಕಳಿಸಿದರು. ಬೇಡವೆಂದು ಬಿಸಾಡಿದರೆ ಮೂಲೆಯಲ್ಲಿರಲು ನನ್ನ ಮಗಳೇನು ಕಸಬರಲೇ? ಇನ್ನು ಸೊಸೆ ಬೇಕಾದರೆ, ಕಾಲಿಗೆ ಬಿದ್ದು ಬರಲಿ"- ಎಂದಳು, ಸಿಟ್ಟಿಗೆದ್ದ ಗಂಗವ್ವನಾಗತಿ.

ಅವರು ಕರೆಸಲಿಲ್ಲ; ಇವರು ಹೋಗಲಿಲ್ಲ -

ಆ ಮದುವೆ ಎರಡು ಮನೆತನಗಳನ್ನು ಕೂಡಿಸದೆ, ಕವಲಾಗಿಸಿ, ಕವಲಿನೊಳಗೆ ಕಿಚ್ಚಿನ ಕಿಡಿ ಮೂಡಿ, ಒಳಗೇ ಹೊಗೆಯಾಡಲಾರಂಭಿಸಿತು.

ಆಗ ಹೊಗೆಯಾಡಲಾರಂಭಿಸಿದ್ದು-

"ಮದಕರಿನಾಯಕರಿಗೆ ಗುಡಿಕೋಟೆಯ ಪಾಳೆಯಗಾರರಾದ ಮುಮ್ಮಡಿ ಜಟಂಗಿ ನಾಯಕರ ಮಗಳು ಪದ್ಮವ್ವನಾಗತಿ ಮತ್ತು ಜರಿಮಲೆಯ ಪಾಳೆಯಗಾರರಾದ ಇಮ್ಮಡಿ ಬೊಮ್ಮಣ್ಣ ನಾಯಕರ ಮಗಳು ಬಂಗಾರವ್ವನಾಗತಿ - ಇವರೊಡನೆ ವಿವಾಹವನ್ನು ನಿಶ್ಚಯಿಸಲಾಗಿದೆ"

-ಎಂಬ ವಿವಾಹ ಮಹೋತ್ಸವದ ಆಹ್ವಾನಪತ್ರಿಕೆ ಚಿತ್ರದುರ್ಗದಿಂದ ತರೀಕೆರೆಗೆ ಬಂದಾಗ, ಹೊಗೆಯಾದದ್ದು ಉರಿಯಾಯಿತು.

೯

ಒಂದೇ ಹಸೆಯ ಮೇಲೆ ಕುಳಿತು ಇಬ್ಬರು ಮದುವಣಗಿತ್ತಿಯರ ಕೊರಳಿಗೆ ತಾಳಿ ಕಟ್ಟಿದ ಮದಕರಿನಾಯಕನನ್ನು ಕಂಡು ಓಬವ್ವನಾಗತಿಯ ವೃದ್ಧಹೃದಯ ಸಂತೋಷಕ್ಕಿಂತ ಹೆಚ್ಚಾಗಿ ಹೆಮ್ಮೆಯಿಂದ ಬೀಗಿತು. ಹೊಸ ಪ್ರಾಯ ಬಂದಂತೆ ಮದುವೆಯ ಮನೆಯಲ್ಲಿ ಓಡಾಡಿದರು. ಹಿಂದೆ ನಡೆದ ನಾಯಕರ ಮದುವೆ ಈ ವಿವಾಹದ ವೈಭವದ ಮುಂದೆ ಏನೂ ಅಲ್ಲ ಎಂದಿತು ನೋಡಿದ ಜನ. ಅದನ್ನು ಕಂಡು ಸಂತೋಷಪಡದವರೇ ಇರಲಿಲ್ಲ, ಅರಮನೆಯಲ್ಲಿ. ಆದರೆ ಹೊರಗೆ ಎಷ್ಟೇ ಸಡಗರದಿಂದ ಓಡಾಡಿದರೂ, ನಿಂಗವ್ವನ ಹೃದಯ ಮಾತ್ರ ಹಿರಿಯ ಸೊಸೆಯನ್ನು ನೆನೆದು ಮರುಗಿತು -

"ಸಣ್ಣ ಮಾತಿಗೆ ಜೀವವಿಡೀ ದುಃಖಕ್ಕೆ ಸೆರೆಯಾಳಾಯಿತಲ್ಲಾ ಆ ಅರಿಯದ ಹೆಣ್ಣು ಜೀವ" – ಎಂದು.

ಹಾಗೆಯೇ-

"ಹಿರಿಯ ನಾಗತಿಯವರು, ತಾವು ಹೆಣ್ಣಾಗಿಯೂ, ಬೇರೆಯವರ ಹೆಮ್ಮೆಯಡಗಿಸಲು ಹೊರಟು, ಅದರಲ್ಲಿ ತಾವು ಬೇರೆಯವರಿಗಿಂತ ಕಡಮೆಯವರಲ್ಲ ಎಂದು ತೋರಿಸಿಕೊಂಡು, ಅರಿಯದ ಜನರ ಇದಿರು 'ಚಿಕ್ಕ ಮಕ್ಕಳ ಸಂಸಾರ ಕೆಡಸಿದರು' ಎನ್ನುವ ಅಪವಾದಕ್ಕೆ ದಾರಿ ಮಾಡಿಕೊಟ್ಟರಲ್ಲಾ. ಇಷ್ಟು ಸಂತೋಷದಲ್ಲಿ ಒಂದು ಕ್ಷಣವಾದರೂ ಹಿರಿಯ ಸೊಸೆಯನ್ನು ನೆನೆದುಕೊಳ್ಳಲಿಲ್ಲವಲ್ಲ. ಬಾಯಿಬಿಟ್ಟು ಒಂದು ಮಾತು ಆ ವಿಷಯ ಆಡಲಿಲ್ಲವಲ್ಲ" – ಎಂದು ಕೊರಗಿದಳು, ನಿಂಗವ್ವ.

ನಿಜ-

ಪತಿಯಿಂದ ದೂರಳಾದ ಹಿರಿಯ ಸೊಸೆ ಲಕ್ಕಾಂಬಿಕೆಯ ಹೆಸರನ್ನು ಓಬವ್ವನಾಗತಿ ಯಾರ ಮುಂದೂ ಆಡಿರಲಿಲ್ಲ. ಅಷ್ಟೇ ಅಲ್ಲ, ಆಕೆಯ ನೆನಪೇ ಇಲ್ಲದಂತೆ ನಡೆದುಕೊಂಡಿದ್ದರು, ಮದುವೆಯ ಸಡಗರ ಮುಗಿಯುವವರೆಗೂ. ಆ ಸದ್ದು-ಸಡಗರ ಮುಗಿದ ಬಳಿಕ, ಅದುವರೆಗೂ ತೊಳೆದ ಕನ್ನಡಿಯಂತೆ ಬೆಳಗಿದ ಓಬವ್ವನಾಗತಿಯವರ ಮುಖ ಮಂಕಾಗಿ, ಕಣ್ಣಲ್ಲಿ ನೋವು ಮಡುಗಟ್ಟಿ, ಉಸಿರಿಳಿದ ತಿದಿಯಂತೆ ಕುಗ್ಗಿ, ಮದುವೆಯ ಆಯಾಸದಿಂದೆಂಬಂತೆ ಹಾಸಿಗೆ ಹಿಡಿದು ಮಲಗಿದವರು ಒಂದು ದಿನ ಹೊನ್ನವ್ವೆಯ ಕೈಲಿ ಹೇಳಿಕಳಿಸಿ, ನಿಂಗವ್ವನನ್ನು ಕರೆಸಿಕೊಂಡು -

"ಆಗಬೇಕಾದದ್ದೆಲ್ಲಾ ಆಯಿತು. ಒಂದು ಒಳ್ಳೆಯ ಶುಕ್ರವಾರ, ಉಚ್ಚಂಗಮ್ಮನವರಿಗೆ ಪೂಜೆ ಮಾಡಿಸಿ, ನೂರೆಂಟು ಜನ ಮುತ್ತೈದೆಯರಿಗೆ ಅರಶಿನ, ಕುಂಕುಮ, ಬಾಗಿನ ಕೊಡಿಸು - ಹೊಸ ಸೊಸೆಯರ ಕೈಯಲ್ಲಿ" – ಎಂದರು.

ಮದುವೆಯ ಮೊದಲೇ ಸೊಸೆಯರು ಗೌರಿಪೂಜೆ ಮಾಡುವಾಗ ಸುವಾಸಿನಿಯರ ಪೂಜೆಯನ್ನು ಮಾಡಿದ್ದರು. ಆದರೂ ಈಗೇಕೆ ಇದು ಎಂದು ಯೋಚಿಸಿ-

"ಏನಾದರೂ ಹರಕೆ ಹೊತ್ತಿದ್ದಿರಾ, ಅವ್ವಾ ?" - ಎಂದು ಕೇಳಿದಳು, ನಿಂಗವ್ವ.

"ಹರಕೆಯಲ್ಲ ಕಣವ್ವ, ಶಾಪದ ಭಯ" - ಎಂದರು ಓಬವ್ವನಾಗತಿ.

"ಶಾಪದ ಭಯ – ಯಾರ ಶಾಪದ ಭಯ, ಅವ್ವಾ ?" – ಚಕಿತಳಾಗಿ ಕೇಳಿದಳು ನಿಂಗವ್ವ.

"ಹಿರಿಯ ಸೊಸೆಯದು, ಆಕೆಯನ್ನು ಹೆತ್ತ ತಾಯಿಯದು. ದೇಶವೆಲ್ಲಾ ನಕ್ಕಾಗ, ಅವರು ಕಣ್ಣೀರಿಟ್ಟು, ನಮ್ಮನ್ನು ಶಪಿಸದೆ ಬಿಟ್ಟಿರುತ್ತಾರೆಯೇ? ಗಂಡಸಿನ ಸಾವಿರ ಶಾಪಕ್ಕಿಂತ, ಹೆಣ್ಣಿನ ನಿಟ್ಟುಸಿರು ಹಾಲಾಹಲ, ಕಣವ್ವ. ಅದು ಈ ವಂಶಕ್ಕೆ ತಟ್ಟದಿರಲಿ ಅಂತ ಈ ಮುತ್ತೈದೆಯರ ಪೂಜೆ ಮಾಡಿಸು ಎಂದದ್ದು. ಆದಷ್ಟು ಬೇಗ ಮಾಡಿಸು. ಇಲ್ಲದಿದ್ದರೆ ಈ ಸೊಸೆಯರ ಬಸಿರೂ ಬರಡಾದೀತು" - ಎಂದರು ಓಬವ್ವನಾಗತಿ.

"ನೀವು ಎದ್ದು ಓಡಾಡುವ ಹಾಗಾಗಿ, ಈ ಶುಭಕಾರ್ಯ ಅಗತ್ಯವಾಗಿ ಮಾಡಿಸೋಣ"

- ಎಂದಳು ನಿಂಗವ್ವ.

"ನಾನು ಏಳುವುದಕ್ಕೆ ಕಾಯಬೇಡ. ಹೆಂಗಸಿನ ಶಾಪ ಎಂದರೆ ಕರಡುಹುಲ್ಲಿಗೆ ಬೆಂಕಿಬಿದ್ದ ಹಾಗೆ. ಬಿದ್ದಿತು ಅಂತ ಗೊತ್ತಾಗುವುದರೊಳಗೇ ಸುಟ್ಟು ಮುಗಿದಿರುತ್ತದೆ. ಸುಮ್ಮನೆ ತಡ ಮಾಡಬೇಡ. ಆ ಕಾರ್ಯ ಸುಲಭವಾಗಿ ಮುಗಿದು, ಮಾತಾಯಿ ಬಲಗಡೆ ಹೂ ಕೊಟ್ಟರೆ, ನಾನು ಮತ್ತೆ ಜೀವ ಬಂದ ಹಾಗೆ ಎದ್ದು ಓಡಾಡ್ತೀನಿ. ನನ್ನ ಮೈಗೇನೂ ಆಗಿಲ್ಲ" – ಎಂದರು ಓಬವ್ವನಾಗತಿ.

ಆ ಮಾತು, ಹಿರಿಯ ಸೊಸೆಯ ನೋವು, ಓಬವ್ವನಾಗತಿಯವರ ಹೃದಯದಲ್ಲಿ ಎಷ್ಟು ಆಳವಾಗಿ ಬೇರುಬಿಟ್ಟಿದೆ ಎನ್ನುವುದಕ್ಕೆ ಅಳತೆಗೋಲಾಗಿತ್ತು.

ತಾನು ಆಕೆಗಿಲ್ಲ ಎಂದುಕೊಂಡಿದ್ದ ಚಿಂತೆ ಇದೆ ಎಂದು ತಿಳಿದು ನಿಂಗವ್ವನಿಗೆ ಎಷ್ಟು ಆಶ್ಚರ್ಯವಾಯಿತೋ ಅದನ್ನು ಅಷ್ಟು ದಿನ ಮುಖಭಾವದಲ್ಲಿ ಪ್ರಕಟಿಸವಿದ್ದ ಅವರ ಚಿತ್ತಸ್ಥೈರ್ಯ ಅಷ್ಟೇ ಅಚ್ಚರಿಯನ್ನುಂಟುಮಾಡಿತು. ಅದಕ್ಕಿಂತಲೂ ಮಿಗಿಲಾಗಿ, ಓಬವ್ವನಾಗತಿ ಹೆದರಿದ ಶಾಪ, ನಿಂಗವ್ವನನ್ನು ಮತ್ತಷ್ಟು ಭಯಂಕರವಾಗಿ ಕಾಡಿಸಿ, ಆತುರಾತುರವಾಗಿ ಸುವಾಸಿನಿಯರ ಪೂಜೆ ಮಾಡಿಸಿದಳು.

ಆ ಪೂಜೆ ನಡೆಯಿತು -

ನಡೆದಮೇಲೆ ಮತ್ತೆ ಮೊದಲಿನ ಹಾಗಾಗುತ್ತೇನೆ ಎಂದಿದ್ದರು, ಓಬವ್ವನಾಗತಿ.

ಆದರೆ ಅದಾಗದೆ -

ದಿನಗಳೆದಂತೆ ಉರಿಯುವ ಮೇಣದ ಬತ್ತಿಯಂತೆ ಅವರ ದೇಹ ಕರಗಲಾರಂಭಿಸಿತು.

ಆಕೆ ಹಾಗೆ ಕರಗಲಾರಂಭಿಸಿದ ಹಾಗೆ -

ಅರಮನೆಗೆ ವೈದ್ಯರು, ಜೋಯಿಸರು, ಪ್ರಧಾನಿಗಳು, ದಳವಾಯಿಗಳು, ಆಪ್ತೇಷ್ಟರು ಬಂದು ಹೋಗುವುದು ದಿನದಿನಕ್ಕೆ ಹೆಚ್ಚಾಯಿತು.

ನೂರಾರು ಜನರು ಬಂದು ಹೋಗುತ್ತಿದ್ದರೂ ಓಬವ್ವನಾಗತಿಗೆ ಅವರಾರ ಪರಿವೆಯೂ ಇದ್ದಂತಿರಲಿಲ್ಲ; ಅವರೂ ಬೇಕಿದ್ದಂತಿರಲಿಲ್ಲ.

ಆಕೆಗೆ ಬೇಕಾಗಿದ್ದವರು ಇಬ್ಬರೇ -

ಚಿಕ್ಕಂದಿನ ಸಂಗಾತಿ ಹೊನ್ನವ್ವೆ, ವೃದ್ಧಾಪ್ಯದ ಊರೆಗೋಲು ಮದಕರಿನಾಯಕ. ಯಾರು ಬರಲಿ, ಹೋಗಲಿ, ಏನು ಮಾತಾಡಲಿ, ಅವರಿಬ್ಬರನ್ನು ಮಾತ್ರ ಕೇಳುವರು, ಕರೆಯುವರು.

ಆಕೆ ಬೇಕೆನಿಸಿದವರು ಜೊತೆಗಿದ್ದಾಗಲೂ, ಆಕೆ ಕರೆದಾಗೊಮ್ಮೆ ಅವರು 'ಅವ್ವ, ನಾವಿಲ್ಲೇ ಇದ್ದೀವಿ' ಎಂದು ಹೇಳಿದರೂ, ಅವರ ಕೈಹಿಡಿದು ನೋಡುವರು.

ಕಣ್ಣು ಬಿಟ್ಟಾಗ ಹೊನ್ನವ್ವೆ ಮುಖ ಕಾಣಿಸಬೇಕು. ಕೈಚಾಚಿದಾಗ ಮದಕರಿನಾಯಕ ಆ ಕೈಗೆಟುಕಬೇಕು. ಅದಾಗದೆ ಯಾವಾಗಲೋ ಒಮ್ಮೆ ಕಣ್ಣು ಮಂಜಾಗಿ ಕಂಡದ್ದು ಕಾಣಿಸದಿದ್ದಂತಾದಾಗ, ಕೈಗೆ ಬೇಕಾದದ್ದು ಸಿಗದೆ ತಡವರಿಸುವಂತಾದಾಗ -

"ಈ ಕಾಲಕ್ಕೂ ಹತ್ತಿರವಿಲ್ಲದೆ ಎಲ್ಲಿ ಹೋದರು ?"

- ಎಂದು ಸಿಡಿಮಿಡಿಯಾಗಿ, ಅವರು ಆ ವೃದ್ಧೆಗೆ ಕಣ್ಣು ಮಂಜೇನೋ ಎಂದು –

"ನಾವಿಲ್ಲೇ ಇದ್ದೇವೆ. ಎಲ್ಲೂ ಹೋಗಿಲ್ಲ" – ಎಂದು ಹೇಳಿದಾಗ -

"ಮೆತ್ತಗೆ ಹೇಳಪ್ಪಾ, ಕಿವಿಗೇನೋ ಆಗಿದೆ. ಸಣ್ಣ ಸದ್ದಾದರೂ ಕಿವಿಯಲ್ಲಿ ತಮಟೆ ಹೊಡೆದ ಹಾಗಾಗುತ್ತದೆ" – ಎನ್ನುವರು.

ಮಾತನಾಡಿದರೆ ಹಾಗೆ -

ಮಾತನಾಡದಿದ್ದರೆ -

"ಮುದುಕಿಯ ಹತ್ತಿರ ಏನು ಮಾತು, ಎಷ್ಟು ಮಾತು ಎಂದು ಬೇಸರವಾಯಿತೇ ? ಬೇಸರ ಮಾಡಿಕೊಳ್ಳಬೇಡಿ - ಇನ್ನೆಲ್ಲಾ ಎರಡು ದಿನದ ಮಾತು" – ಎಂದು ಸುತ್ತ ನೆರೆದವರು ಕಂಬನಿಗರೆವಂತೆ ಮಾಡುವರು, ಓಬವ್ವನಾಗತಿ.

ಆಕೆಯಾಡುವ ಮಾತೂ ಅಷ್ಟೆ - ಹೀಗೆಂದು ಖಚಿತವಿಲ್ಲ. ಕನಸು, ನೆನಪು, ಇರುವಿಕೆಗಳ ನಡುವೆ ಎತ್ತೆತ್ತಲೋ ತೂಗಾಡುತ್ತದೆ - ಆಷಾಢಮಾಸದ ಗಾಳಿಯಲ್ಲಿ ಯಾರೊಬ್ಬರೂ ಕೂಡದೆ, ಸುಮ್ಮನೆ ಜೋರಾಗಿ ಬೀಸಿಬಿಟ್ಟ ಹುಡುಗರ ಕೈಯ ಉಯ್ಯಾಲೆಯಂತೆ.

ನೆನಪುಗಳು – ಎಂದೆಂದಿನದೋ ನೆನಪುಗಳು -

ಮತ್ತೆ ತಿಮ್ಮಣ್ಣನಾಯಕರು ಸಾಳುವ ನರಸಿಂಹರಾಯನ ಪಟ್ಟದ ಕುದುರೆ ಹಿಡಿಯಲು ಹೋಗಿ, ಕೈ ಕಳೆದುಕೊಂಡು, ಬಂಗಾರದ ಕೈಯಲ್ಲೇ ಬಾಣ ಹೊಡೆದು ಪಟ್ಟದಾನೆಯನ್ನು ಕೊಂದದ್ದು:

ಕಸ್ತೂರಿ ರಂಗಪ್ಪನಾಯಕರು ಹಿರಿಯೂರ ನಾಗತಿಯ ಓಲೆಭಾಗ್ಯ ಉಳಿಸಿ, ಹೊನ್ನಿನಾರತಿ ಎತ್ತಿಸಿಕೊಂಡದ್ದು;

ಭರಮಪ್ಪನಾಯಕರು ಹರಪನಹಳ್ಳಿಯನ್ನು ಗೆದ್ದು, ನಡುಪೇಟೆಯಲ್ಲಿ ಮೇಳ ಕಟ್ಟಿಸಿ, ಶತ್ರುಗಳ ಆರ್ತನಾದ ಕೇಳಲಾಗದೆ ಧರ್ಮಗಹಳೆ ಊದಿಸಿದ್ದು;

ದೊಡ್ಡೇರಿಯ ನವಾಬ ಅಫೀಮು ಸಿಗದೆ ಕೋಟೆಯನ್ನು ದುರ್ಗದವರಿಗೆ ಒಪ್ಪಿಸಿದ್ದು;

ಸಂಪಿಗೆ ಸಿದ್ಧೇಶ್ವರನ ದೇವಾಲಯದ ಮುಂದಿನ ಸಿದ್ಧರ ಹಲಸಿನ ಮರದಿಂದ ರಕ್ತದ ಸೋನೆ ಸುರಿದದ್ದು:

ಹಿರಿಮದಕರಿನಾಯಕರ ಕಾಲದಲ್ಲಿ ದುರ್ಗದಲ್ಲಿ ಸಣ್ಣ ಭೂಕಂಪವಾಗಿ ಹಿಡಿಂಬೇಶ್ವರನ ದೇವಾಲಯದ ಮುಂದಿನ ಕಲ್ಲುಕಂಭ ಎಡಕ್ಕೆ ಬಾಗಿದ್ದು :

ಅದೇ ನಾಯಕರು ಹರಪನಹಳ್ಳಿಯ ಸೋಮಶೇಖರನಾಯಕನ ಕರೋಲನ್ನೇ ಕಸಿದುಕೊಂಡು ಸೋಟೆ ತಿವಿದದ್ದು :

ಆ ನಾಯಕರ ಜಂಗಿ ಲಢಾಯಿಯಲ್ಲಿ ಅವರಿಗೆ ಅಂಬಾರಿಯೇ ವೀರಸ್ವರ್ಗವಾದದ್ದು –

- ಹೀಗೆ ಎಂದಿನದೋ ಕಥೆಗಳು, ಎಲ್ಲಿಯವೋ ನೆನಪುಗಳು, ಏನೇನೋ ಬಯಕೆಗಳು, ಕನಸುಗಳು –

ಒಮ್ಮೆ ಕೆಟ್ಟ ನೆನಪು ಸುಳಿದಾಗ -

"ಮತ್ತೆ ಹಾಗಾಗಬಾರದು" - ಎಂದು ಸಣ್ಣದನಿಯಲ್ಲಿ ನರಳಿದರೆ, ಸವಿಗನಸುಗಳು ಮನದಲ್ಲಿ ಮರುಕಳಿಸಿದಾಗ -

"ದೊರೆ ಮಗ ಬದುಕಿದರೆ ಹಾಗೆ, ಬದುಕಬೇಕು : ಸತ್ತರೆ ಹಾಗೆ ಸಾಯಬೇಕು. ಅಂಥ ಸಾವು ಸಾವಲ್ಲ, ಸಾವಿನ ಮೇಲೇ ದಿಗ್ವಿಜಯ" - ಎಂದು ಏರಿದ ಧ್ವನಿಯಲ್ಲಿ ಹೇಳಿ, ತನ್ನ ಬಳಿ ಕುಳಿತಿದ್ದ ಮದಕರಿನಾಯಕರ ಕೈ ಒತ್ತಿ ಹಿಡಿದು -

"ಗಂಡು ದುರ್ಗದ ದೊರೆ ಅಂದರೆ ಹಾಗಿರಬೇಕು. ಭೂಮಿತಾಯಿಗಲ್ಲದೆ ಶತ್ರುವಿಗೆ ಬೆನ್ನು ತೋರಿಸಬಾರದು" - ಎನ್ನುವರು.

ಆ ಮಾತುಗಳನ್ನು ಕೇಳುತ್ತಾ, ಮೌನವಾಗಿ ಕುಳಿತ ಮದಕರಿನಾಯಕನಿಗೆ ಒಮ್ಮೆ ರೋಮಾಂಚನವಾಗುವುದು, ಎದೆಯಲ್ಲಿ ಉತ್ಸಾಹ ತುಂಬಿ ಬಂದು -

"ಅಪ್ಪಾ, ನಿಮ್ಮ ಕನಸು, ನಿಮ್ಮ ನೆನಪು - ನಮ್ಮ ಬದುಕಿಗೆ ದಾರಿದೀಪ"

-ಎಂದು ಓಬವ್ವನಾಗತಿಯ ಕೈ ಒತ್ತಿ ಹಿಡಿಯುವನು, ಭಾಷೆ ಕೊಟ್ಟಂತೆ.

ಆಕೆಯ ಮಾತು ಕೇಳಿದವರು ಒಮ್ಮೆ ಕಂಬನಿಗರೆಯುವರು, ಒಮ್ಮೆ ಹೆಮ್ಮೆಯಲ್ಲಿ ಬೀಗುವರು.

ಹೊನ್ನವ್ವಗೆ ಮಾತ್ರ ಅದಾವುದೂ ಇಲ್ಲ -

ಬರೀ ಕಣ್ಣೀರ ಧಾರೆ - ಕನಸು ಹೇಳಿದಾಗಲೂ ಅಷ್ಟೆ ; ಎಚ್ಚರವಾಗಿ ಮಾತಾಡಿಸಿದಾಗಲೂ ಅಷ್ಟೇ.

ಹಾಗೆ ಒಮ್ಮೆ ಎಚ್ಚರ ಬಂದಾಗ ಓಬವ್ವನಾಗತಿ, ಬಹು ಪ್ರಯಾಸಪಟ್ಟು, ಏನೋ ಮರೆತ ಮಾತನ್ನು ನೆನಪಿಗೆ ತಂದುಕೊಂಡು ಮದಕರಿನಾಯಕರಿಗೆ ಹೇಳಿದರು -

“ಅಪ್ಪಯ್ಯ, ಪ್ರಧಾನಿಗಳೊಂದಿಗೆ ನಿಮಗೆ ಸದರ ಬೇಡ. ಹಿರಿಯರು ಹೇಳುತ್ತಿದ್ದರು - ’ನರಸಪ್ಪಯ್ಯ ನಾಗರಹಾವಿದ್ದಂತೆ : ನಂಬಿದರೆ ನಿಧಿಯ ಹಾಗೆ ಕಾಪಾಡುತ್ತಾರೆ; ಕಚ್ಚಿದರೆ ಕಾಳಿಂಗಸರ್ಪ.’ ಹುಷಾರಾಗಿರು.”

ಒಮ್ಮೆ ಈ ಎಚ್ಚರಿಕೆಯ ಮಾತು : ಮಗುದೊಮ್ಮೆ–

“ಹೊನ್ನವ್ವೆ, ಈ ಅರಮನೆಯಲ್ಲಿ ಮಗುವಿನ ಧ್ವನಿ ಕೇಳಿ ಎಷ್ಟು ದಿನವಾಯಿತೇ ? ಇನ್ನೆಷ್ಟು ದಿನಕ್ಕೆ ಅದು ಕೇಳುವುದು ?” - ಎಂದು ಕರುಳು ಕತ್ತರಿಸುವಂತೆ ಕೇಳುವರು.

ಮತ್ತೊಮ್ಮೊಮ್ಮೆ ತಮಗೆ ತಾವೇ ಹೇಳಿಕೊಂಡಂತೆ -

“ಹಿರಿಯವಳು, ನಾನು ಅರಿತುಕೊಂಡು ನಡೆಯಬೇಕಾಗಿತ್ತು. ಹುಡುಗಿಗಿಂತ ಹಟಮಾಡಿ, ಮನೆಗೆ ಹೆಣ್ಣುಶಾಪ ಅಂಟಿಸಿಬಿಟ್ಟೆ” - ಎಂದು ನರಳುವರು.

ಇಂಥ ಮಾತಿಗೆ, ಇಂಥ ನರಳುವಿಕೆಗೆ ಏನು ಮದ್ದು ಯಾರು ವೈದ್ಯ? ಆಕೆಯ ಸುತ್ತ ಕಲೆತ ಜನ, ಆಸಹಾಯಕರಾಗಿ ವಿಲವಿಲ ಒದ್ದಾಡುವರು, ಕೆಂಡದ ಮೇಲೆಬಿದ್ದ ಕ್ರಿಮಿಗಳಂತೆ.

ಕೊನೆಗೊಂದು ದಿನ – ವೈದ್ಯರು ಏನೋ ಔಷಧ ಕೊಡಲು ಬಂದು, ಉಳಿದವರು ಬಲವಂತ ಮಾಡಿದಾಗ, ಎಚ್ಚರವಾದ ನಾಗತಿಯವರು-

“ನನಗೇನಾಗಿದೆ ಅಂತ ಮದ್ದು? ನನಗೇನೂ ಆಗಿಲ್ಲ... ಹೊನ್ನವ್ವೆ. ನೀನು ಮಾಡಿಕೊಟ್ಟ ತಾಂಬೂಲ ತಿಂದು ಎಷ್ಟು ದಿನ ಆಯಿತು. ಜಾಕಾಯಿ, ಕಸ್ತೂರಿ, ಪಚ್ಚೆಕರ್ಪೂರ ಬಿದ್ದ ನಿನ್ನ ಕೈ ತಾಂಬೂಲ ಬಾಯಿಗೆ ಬಿದ್ದರೆ ಮತ್ತೆ ನಾನು ನೂರು ವರ್ಷ ಬದುಕುತ್ತೇನೆ. ಅದನ್ನು ತಾ” -ಎಂದು ಹೇಳಿದರು.

ಹೊನ್ನವ್ವೆ ಕಣ್ಣೀರಿಡುತ್ತಾ ತಾಂಬೂಲ ಸಿದ್ಧಪಡಿಸಲು ಹೋಗಿ, ಆ ಕಂಚಿನ ಕುಟ್ಟಣಿಗೆಯ ಸದ್ದು ಕೇಳುತ್ತಿದ್ದಾಗ –

“ನನ್ನ ಹೊನ್ನವ್ವೆ ಬಹಳ ನಿಯತ್ತಿನ ಹೆಂಗಸು, ನಾಗತಿಯಾಗಬೇಕಾಗಿತ್ತು, ಬ್ರಹ್ಮ ಒಂದು ಅಡ್ಡಗೀರು ಬರೆದು ದಾಸಿ ಮಾಡಿದ. ಆದರೆ ಅವಳನ್ನು ಮಾತ್ರ ನನ್ನ ಹಾಗೇ ಕಾಣಬೇಕು’’ - ಎಂದು ಹೇಳಿದರು, ಸುತ್ತ ನೆರೆದಿದ್ದವರಿಗೆ.

ಹೊನ್ನವ್ವೆಯ ಕೈ ಕಂಚಿನ ಕುಟ್ಟಣಿಗೆಯನ್ನು ಸದ್ದು ಮಾಡುತ್ತಲೇ ಇತ್ತು.

ಅವಳ ಮನಸ್ಸು - ಹಿಂದಿನದೋ, ಮುಂದಿನದೊ, ಅಂದಿನದೋ ಎಲ್ಲವನ್ನೊ ಯೋಚಿಸುತ್ತಿತ್ತು, ನೆನಪುಗಳನ್ನು ಮೆಲುಕುಹಾಕುತ್ತಿತ್ತು.

ಆ ನೆನಪುಗಳ ನಡುವೆ -

ಶುಭ್ರ ಆಕಾಶದಲ್ಲಿ ಇದ್ದಕ್ಕಿದ್ದ ಹಾಗೆ ಮಿನುಗಿದ ಮಿಂಚಿನಂತೆ ಮತ್ತೋಡಿನ ಸಿದ್ದಪ್ಪ ನಾಯಕನ ಮಡದಿ ಮಲ್ಲವ್ವನಾಗತಿಯ ನೆನಪಾಯಿತು .

'ಈ ತಾಯಿಯ ಹೊಟ್ಟೆಯಲ್ಲೇ ಹುಟ್ಟಿದ ಹೆಣ್ಣು ಆಕೆ; ಈ ಬಸಿರ ಒಂದೇ ಒಂದು ಹೆಣ್ಣುಕುಡಿ. ಇದೇ ರೂಪ, ಇಂಥದೇ ಬುದ್ಧಿ ಆದರೂ ಪ್ರಾಯದಲ್ಲಿ ಮನಸ್ಸು ಜಾರಿ, ಆಗದವರಿಗೆ ಮನಸ್ಸು ಕೊಟ್ಟು, ಬೇಡ ಎಂದವರನ್ನು ಮದುವೆಯಾಗಿ, ಎಲ್ಲರಿಗೂ ಬೇಡವಾಗಿ ಮನೆಯಿಂದ ಹೊರಟುಹೋದಳು... ಅವತ್ತಿನಿಂದ ಇವತ್ತಿನವರೆಗೆ ಈ ತಾಯಿಯ ಬಾಯಲ್ಲಿ ಆ ಮಗಳ ಹೆಸರೇ ಬರುವುದಿಲ್ಲ. ಶುಭಕಾರ್ಯಕ್ಕೆ ಕರೆಸಲಿಲ್ಲ. ಕೆಟ್ಟದಾದಾಗ ಹೇಳಿಕಳಿಸಲಿಲ್ಲ. ಏನೂ ಬೇಡ, ನೆಪಕ್ಕೆ ಒಂದು ಸಲ ಆ ಮಗಳ ಹೆಸರೂ ಎತ್ತಲಿಲ್ಲ. ಯಾವಾಗಲೂ ಬೇಡ. ಈಗಲಾದರೂ ಅವ್ವನಿಗೆ ಆ ಮಗಳ ನೆನಪಾಗುವುದಿಲ್ಲವೇ ? ಯಾರುಯಾರನ್ನೋ ನೆನಸಿಕೊಳ್ಳುತ್ತಾರೆ. ಮಗಳ ಮಾತೇ ಆಡುವುದಿಲ್ಲವೇಕೆ ? ಅರೆಮರುಳಿನಲ್ಲೂ ಆ ಮಗಳು ನೆನಪಿಗೆ ಬರುವುದಿಲ್ಲವೇ – ಈಕೆಗೆ ? ಎಂತಹ ತಾಯಿ – ಎಂತಹ ಮಗಳು ?

'ಈ ತಾಯಿ ಕರೆಸಲಿಲ್ಲ – ಆ ಮಗಳು ಬರಲಿಲ್ಲ. ಇಂಥ ಸೋಜಿಗವೂ ಉಂಟೆ ?

'ಮನೆ ಬಿಟ್ಟುಹೋದ ಮಗಳು ಮನಸ್ಸಿನಿಂದಲೇ ಒರೆಸಿ ಹೋಗಿಬಿಟ್ಟಳೇ - ಹಲಗೆಯ ಮೇಲಿನ ಚಿತ್ರ ಒರೆಸಿಬಿಟ್ಟಹಾಗೆ.

'ಈ ಅಪ್ಪಾ – ಮನುಷ್ಯಳೋ – ಮರವೋ ?

'ಈ ಅವ್ವಾ - ಮನುಷ್ಯಳೋ – ದೇವತೆಯೋ ?

'ಆ ಮಗಳಾದರೂ ಎಂಥವಳು --

'ಹೋಗು' ಎಂದರೆ ಹೋಗೆ ಬಿಟ್ಟಳು, ಆರಿಸಿದ ದೀಪದ ಹಾಗೆ.

'ಎಂಥ ತಾಯಿ - ಎಂಥ ಮಗಳು !

'ಭಗವಂತನ ಸೃಷ್ಟೀಲಿ ಇಂಥ ತಾಯಿ-ಮಕ್ಕಳೂ ಉಂಟೆ ?'

ಹಿಂದೆ ಒಂದೆರಡು ಬಾರಿ, ಬಹು ಅನಿವಾರ್ಯವಾದ ಪ್ರಸಂಗಗಳಲ್ಲಿ -

ಹಿರಿಯ ನಾಯಕರು ತೀರಿಕೊಂಡಾಗ -

ಮತ್ತೆ ಮಗ ಕೈಬಿಟ್ಟು ಕೈಲಾಸಕ್ಕೆ ನಡೆದಾಗ –

ಹೊನ್ನವ್ವೆಯೇ ತಾಯಿಗೆ ಮಗಳ ನೆನಪನ್ನು ಎಚ್ಚರಿಸುವ ಪ್ರಯತ್ನ ಮಾಡಿದ್ದಳು –

'ಅಪ್ಪಾ - ಮಲ್ಲವ್ವನಾಗತಿಯವರು ಬೇಡವೇ ?' – ಎಂದು.

ಆಗ ಓಬವ್ವನಾಗತಿ, ತೆರೆಯಲೆತ್ನಿಸಿದ ಬಾಗಿಲನ್ನು ಮುಚ್ಚಿ ಬೀಗಹಾಕಿದ ಹಾಗೆ ಹೇಳಿದ್ದರು.

'ಸತ್ತವರ ಹೆಸರು ಮತ್ತೆ ಎತ್ತೀಯ : ನಿನ್ನ ನಾಲಗೆ ಸುಟ್ಟೇನು!' – ಎಂದು.

ಅಷ್ಟೇ -

ಆ ಮಾತಿನೊಂದಿಗೆ ಹೊನ್ನವ್ವೆಯೂ ತಾನಾಡಿಸಿದ ನಾಗತಿಯ ಮಗಳ ನೆನಪನ್ನು ಮನದಾಳದಲ್ಲಿ ಹುಗಿದುಬಿಟ್ಟಿದ್ದಳು - ಮತ್ತೆ ಆ ಹೆಸರೆತ್ತಲು ಹೆದರಿ –

'ಮನೆಯ ದೀಪ, ಸ್ಮಶಾನದ ಕೊಳ್ಳಿಯಷ್ಟು ಅಪಶಕುನದ ವಿಪಯವಾಯಿತಲ್ಲಾ'

-ಎಂದು ನೊಂದು, ಕಂಬನಿ ಕರೆಯಲೂ ಧೈರ್ಯವಾಗದೆ.

ಹೊನ್ನವ್ವೆಯೇ ಎತ್ತಲಾಗದ ಹೆಸರನ್ನು ಓಬವ್ವನಾಗತಿಯರ ಎದಿರು ಎತ್ತಲು ಮತ್ತಾರಿಗೆ ಧೈರ್ಯ ?

ತಾಯಿ ಮರೆತ ಮಗಳನ್ನು ಅರಮನೆಯೇ ಮರೆತುಬಿಟ್ಟಿತು. ಆ ಮಗಳು ಮಲಗಿದ ತೊಟ್ಟಿಲಿಗೂ ಆಕೆಯ ನೆನಪತ್ತಲು ಬಾಯಿ ಬರಲಿಲ್ಲ. ಸಕ್ಕರೆಯಾಗಿ, ಉಪ್ಪಾಗಿ, ವಿಷವಾಗಿ, ಒಗರಾಗಿ – ಕೊನೆಗೆ ಏನೂ ಅಲ್ಲವಾಗಿ ಕರಗಿಹೋಯಿತು - ಆ ನೆನಪು.

ತಾಯಿಗೆ ಮಗಳು-

ಮಗಳಿಗೆ ತಾಯಿ ?

"ಎಷ್ಟು ಹೊತ್ತು ಮಾಡುತ್ತೀಯೇ ಸುಟ್ಟುಮೋರೆಯವಳೇ. ಕೇಳಿ ಕೇಳಿ ಗಂಟಲು ಒಣಗಿ ಹೋಯಿತು" – ಎಂದು, ತಟಕ್ಕನೆ ಎದ್ದು ಕುಳಿತು, ಕೂಗಿ ಕೇಳಿದರು.

"ಬಂದೆ - ಅವ್ವಾ" - ಎಂದು ಕೂಗಿ ನೆನಪಿನ ಗುಂಗಿನಿಂದ ಮೇಲೆದ್ದು ಓಡಿಬಂದಳು ಹೊನ್ನವ್ವೆ.

"ನೀನು ಬರುವಾಗ ಬಾ. ನನ್ನ ಕೆಲಸ ಆಯಿತು" - ಎಂದು ಎದ್ದು ಕುಳಿತಿದ್ದ ನಾಗತಿ, ಹಾಗೇ ತಟ್ಟನೆ ಕುಸಿದುಬಿದ್ದಳು.

ಬಿದ್ದಳು -

ಮತ್ತೆ ಏಳಲಿಲ್ಲ.

ಆಕೆಯ ಕಟಬಾಯಿಂದ ಹರಿದ ನೊರೆ, ಮತ್ತೆ ಆಕೆ ಮೇಲೇಳುವುದಿಲ್ಲ ಎಂದು ಹೇಳಿತು. ಅರಮನೆ ಅಳುವಿನ ಬಿರುಗಾಳಿಯಲ್ಲಿ ಸಿಕ್ಕು ತುಯ್ದು ತುಯ್ದು ತೂಗಾಡಿತು.

* * *

ಓಬವ್ವನಾಗತಿಯವರು ಸತ್ತ ಮೂರನೆಯ ದಿನ, ಅವರ ಶಯ್ಯಾಗೃಹದ ಮೂಲೆಯಲ್ಲಿ ಹಾಸಿದ ಚಾಪೆಯ ಮೇಲೆ ಮಲಗಿದ್ದ ಕಂಚಿನ ಕುಟ್ಟಣಿಗೆಯನ್ನು ಕೈಯಲ್ಲೇ ಹಿಡಿದಿದ್ದ ಹೊನ್ನವ್ವೆಯ ದೇಹ –

ತಣ್ಣನೆಯ ಕೊರಡಾಗಿತ್ತು.

ಓಬವ್ವನಾಗತಿ ಮೃತವಾದ ದಿನದಷ್ಟೇ ಅಂದೂ ಅರಮನೆ ಕಂಬನಿಗರೆಯಿತು.

* * *

ಎಲ್ಲರೂ ಅತ್ತರು ; ಮದಕರಿನಾಯಕನೂ.

ಆದರೆ ಆತನ ಹೃದಯವನ್ನು ದಹಿಸಿದ ದುಃಖಾಗ್ನಿ, ಅಶ್ರುಜಲಪಾತದಿಂದ ತಣ್ಣಗಾಗದೆ, ದಾವಾಗ್ನಿಯಂತೆ ಮತ್ತಷ್ಟು ಪ್ರಜ್ವಲಿಸಿತು.

ಮೂರು ದಿನ ಓಬವ್ವನಾಗತಿಯವರಿದ್ದ ಶಯ್ಯಾಗೃಹವನ್ನು ಬಿಟ್ಟು ಅಗಲದಿದ್ದ ಮದಕರಿ ನಾಯಕ, ಒಂದು ದಿನ ದಿಗ್ಗನೆದ್ದು-

“ಈ ನೆನಪುಗಳ ಉರಿಯನ್ನು ನಾನು ಸಹಿಸಲಾರೆ; ಈ ಶಯ್ಯಾಗೃಹದ ಬಾಗಿಲನ್ನು ಮುಚ್ಚಿಸಿಬಿಡಿ” – ಎಂದು ಕಟ್ಟಪ್ಪಣೆ ಮಾಡಿದ.

ಆ ಒಂದು ಕೋಣೆಯ ಬಾಗಿಲು ಹಾಕಿಸಿದಾಗ -

ನೂರಾರು ಕೋಣೆಗಳಿಂದ ಸಾವಿರಸಾವಿರವಾಗಿ ನಾಗತಿಯರ ನೆನಪುಗಳು ನುಗ್ಗಿ ಬಂದು, ಮುಚ್ಚಿದ ಶಯ್ಯಾಗೃಹದ ಬಾಗಿಲನ್ನು ಬಿಚ್ಚಿಸಿ -

“ಅವ್ವಾ, ನನ್ನೆದೆಯೇ ನಿಮ್ಮ ನೆನಪಿನ ಅರಮನೆಯಾಗಿರುವಾಗ ಮರೆಯಲು ಏನು ಮಾಡಿದರಾದೀತು ?” – ಎಂದು ಅಸಹಾಯಕನಾಗಿ ಕಂಬನಿಗರೆದ.

ಮಗನ ದುಃಖವನ್ನು ನೋಡಲಾಗದ ನಿಂಗವ್ವ -

“ಅಪ್ಪಾ, ಅತ್ತರೆ ಸತ್ತವರು ಬದುಕಿ ಬರುತ್ತಾರೆಯೇ ? ಅವರು ಬದುಕಿದಂತೆ, ಅವರು ನುಡಿದಂತೆ ನಾವು ಬದುಕಿದರೆ, ಅವರೂ ಬದುಕಿದ್ದ ಹಾಗೇ” – ಎಂದು ಸಮಾಧಾನ ಹೇಳಿದಳು.

ಯಾವುದೋ ಹೊಸ ಮಾತು ಕೇಳಿದಂತೆ ನಿಂಗವ್ವನ ಮಾತನ್ನು ಕೇಳಿದ ಮದಕರಿನಾಯಕ ನಿಧಾನವಾಗಿ ಆಕೆ ಹೇಳಿದುದನ್ನು ಮೆಲುಕುಹಾಕಿ, ಹೇಳಿದ -

“ನಿಜ ಕಣವ್ವ, ನಿನ್ನ ಮಾತು. ಇನ್ನು ಅಳುವುದಿಲ್ಲ. ಅವರು ಭೇಷ್ ಅನ್ನುವ ಹಾಗೆ ಬದುಕುತ್ತೇನೆ.”

ಆ ಮಾತಿನೊಂದಿಗೆ ಕಂಬನಿ ಬತ್ತಿತು : ಮಾತಿನ ನೆನಪು ಶಿಲಾಶಾಸನವಾಯಿತು.

"ಬದುಕುತ್ತೇನೆ....ಬದುಕುತ್ತೇನೆ...."

-ಎಂದು ತನಗೆ ತಾನೇ ಹೇಳಿಕೊಳ್ಳುತ್ತಲೇ ತನ್ನ ಶಯ್ಯಾಗಾರದತ್ತ ನಡೆದು, ಋತು ಸ್ನಾತಳಾಗಿ ಸಾವಿನ ಕರಾಳತೆಯನ್ನು ಮೆಟ್ಟಿನಿಂತ, ಬದುಕಿನ ಸುಂದರ ಸವಾಲಿನಂತಿದ್ದ ಪದ್ಮವ್ವನಾಗತಿಯನ್ನು ಬಿರುಗಾಳಿಯಂತೆ ಬಿಗಿದಪ್ಪಿ, ಶಯ್ಯೆಗೆ ಸೆಳೆದೊಯ್ದು ಬರಿಮೈ ಮಾಡಿ, ಚಿಗುರುಮೊಲೆಗಳನ್ನು ತುಟಿಯಿಂದ ಬಿಗಿಹಿಡಿದು ಹೀರಿದ -

ಸಾವನ್ನು ಶಾಶ್ವತವಾಗಿ ಗೆಲ್ಲುವ ಅಮೃತವನ್ನು ಹೀರಿದಂತೆ.

ಮೂರು ದಿನ ಶಯ್ಯಾಗೃಹದಾಚೆ ಮದಕರಿನಾಯಕನ ಮುಖ ಕಾಣಲಿಲ್ಲ.

೧೦

ದುಃಖದ ಹುಚ್ಚು ಕಾಮದ ಕಿಚ್ಚಾಗಿ ಉರಿದು, ಪ್ರಜ್ವಲಿಸಿದ ಪ್ರಥಮ ಪ್ರಣಯದ ರತಿ ಲೀಲಾವಿಲಾಸದಲ್ಲಿ ಮಗ್ನನಾಗಿದ್ದ ಮದಕರಿನಾಯಕನ ಬಿಗಿದ ಶಯ್ಯಾಗೃಹದ ಬಾಗಿಲು ಮತ್ತೆ ತೆರೆಯಬೇಕಾದರೆ, ಕದನವೇ ಬಂದು ಕದ ತಟ್ಟಬೇಕಾಯಿತು.

ಸಮರದ ಹೆಸರು ಕೇಳುತ್ತಿದ್ದಹಾಗೇ ಮದಕರಿನಾಯಕನ ಮೈ-ಮಿದುಳನ್ನು ಕವಿದಿದ್ದ ಕಾಮ ಇಬ್ಬನಿಯಂತೆ ಕರಗಿ ಹೋಗಿ, ಗೋಪಾಲಸ್ವಾಮಿಯ ಹೊಂಡದಲ್ಲಿ ಮನದಣಿಯ ಈಸಾಡಿ, ಹೊಸ ಹುರುಪು ತುಂಬಿಕೊಂಡು, ಅಷ್ಟು ದಿನ ಕಳಚಿಟ್ಟಿದ್ದ ಓಲಗದ ಉಡುಗೆಯನ್ನುಟ್ಟು, ಬಂಗಾರದ ಕಟ್ಟಿಗೆಯಾಳುಗಳು ದಾರಿ ತೋರುತ್ತಿರಲು ಪ್ರಧಾನಿ ನರಸಪ್ಪಯ್ಯನವರು ಕರೆಸಿದ ಸಮಾಲೋಚನಾ ಸಭೆಗೆ ಬಂದ.

ತಾವು ಬರುತ್ತಿದ್ದಂತೆಯೇ ಎದ್ದು ನಿಂತು, ನಡುಬಗ್ಗಿಸಿ ಸಭಾಸದಸ್ಯರಿತ್ತ ನಮಸ್ಕಾರದ ಮರ್ಯಾದೆಯನ್ನು ಪ್ರತಿನಮಸ್ಕಾರದಿಂದ ಸ್ವೀಕರಿಸಿ, ಮುಂದಿನ ವಿಷಯವನ್ನು ತಿಳಿಸುವಂತೆ ಪ್ರಧಾನಿಗಳತ್ತ ನೋಡಿ -

"ದುರ್ಗದವರ ಗಂಡುತನವನ್ನು ಕೆಣಕಿ ನೋಡಲು ಮತ್ತಾರೋ ಪಿಸುಣರು ಹೀನ ಮನಸ್ಸು ಮಾಡಿದಾರೆ ಎಂಬಷ್ಟು ವಿಷಯ ದರ್ಬಾರು ಬಕ್ಷಿಗಳಿಂದ ತಿಳಿಯಿತು. ರಾಯದುರ್ಗದವರದಾಯಿತು. ಈ ಬಾರಿ ಮತ್ತಾರ ಸರದಿ ?" – ಎಂದು ಕೇಳಿದ ಮದಕರಿನಾಯಕ.

"ಪ್ರಭುಗಳು ಅಷ್ಟು ನಿರ್ಲಕ್ಷ್ಯದಿಂದ ಕಾಣಬೇಕಾದದ್ದಲ್ಲ ಈ ಬಾರಿಯ ಸಮರವಾರ್ತೆ"

- ಪ್ರಧಾನಿ ನರಸಪ್ಪಯ್ಯನವರು ಹೇಳಿದರು.

“ಯಾವ ಯುದ್ಧವೂ ಸಣ್ಣದಲ್ಲ - ಕೆಣಕಿದವರು ದೊಡ್ಡವರೋ, ಸಣ್ಣವರೋ ಎಂದು ಕೇಳಿದೆವು.”

“ಚಿತ್ರದುರ್ಗದ ಆಜನ್ಮವೈರಿಗಳಾದ ಹರಪನಹಳ್ಳಿಯ ಸೋಮಶೇಖರನಾಯಕರ ಸೇನೆ. ನಮ್ಮ ಗಡಿಕೋಟೆಯಾದ ತುಯ್ಯಲಹಳ್ಳಿಗೆ ಮುತ್ತಿಗೆಹಾಕಿ, ಕಾಲುಕೆರೆದು ಯುದ್ಧಕ್ಕೆ ಕರೆದಿದ್ದಾರೆ” – ಎಂದರು ಪ್ರಧಾನಿ ನರಸಪ್ಪಯ್ಯ.

“ಎಂದು ಬಂತು ಈ ವಾರ್ತೆ ? ಕೂಡಲೇ ನಮಗೇಕೆ ವರದಿಯಾಗಲಿಲ್ಲ ?”

- ಮದಕರಿನಾಯಕ ಸಣ್ಣಗೆ ಕೆರಳುತ್ತಾ ಕೇಳಿದ.

“ಈ ಸಣ್ಣಪುಟ್ಟ ಗಡಿಕಾಳಗ, ದಿನನಿತ್ಯದ ವ್ಯವಹಾರ, ಅರಸರ ಕಿವಿ ಮುಟ್ಟಿಸುವಷ್ಟು ಪ್ರಾಮುಖ್ಯವಾದದ್ದೇನಲ್ಲ. ಅಂಥ ಹುಲುಗಾಳಗವನ್ನೆದುರಿಸುವಷ್ಟು ಸಾಮರ್ಥ್ಯ ನಮ್ಮ ಗಡಿ ಕೋಟೆಗಳಿಗಿದೆ.” – ದಳವಾಯಿ ಭರಮಣ್ಣ ಹೇಳಿದ.

“ರಾಯದುರ್ಗದವರು ಹಸು ಹಿಡಿದದ್ದು ಸಣ್ಣ ವಿಷಯವಾಗಲಿಲ್ಲ. ಹರಪನಹಳ್ಳಿಯವರು ನಮ್ಮ ಗಡಿಕೋಟೆಗೆ ಮುತ್ತಿಗೆ ಹಾಕಿದ್ದು ಅಮುಖ್ಯವಾಯಿತೇ ? ಆ ಕೂಡಲೇ ನಮಗೆ ವರದಿಯಾಗಬೇಕಿತ್ತು.”

“ವರದಿಯಾಗಿದ್ದರೆ....”

– ಪ್ರಧಾನಿ ನರಸಪ್ಪಯ್ಯ ಆರೆಮಾತಿನಲ್ಲಿ ಕೇಳಿದರು.

“ದಂಡು ಹೊರಡಬೇಕಾಗಿತ್ತು, ಅವರನ್ನು ಸದೆಬಡೆಯಲು.”

- ತೊಡೆ ತಟ್ಟುವ ಧ್ವನಿಯಲ್ಲಿ ಹೇಳಿದ ಮದಕರಿನಾಯಕ.

“ದಂಡು ಹೊರಡಿಸುವುದು, ಕೂಚು ನಗಾರಿ ಬಾರಿಸಹೇಳುವುದು, ತಾಫೆಗೆ ಗೆಜ್ಜೆ ಕಟ್ಟಿದಷ್ಟು ಸುಲಭದ ಕೆಲಸ. ಆದರೆ ಮುಂದಿನ ಯುದ್ಧಕ್ಕೆ ನಾವೆಷ್ಟು ಸಿದ್ಧರಾಗಿದ್ದೇವೆ ಎಂಬುದು ಮುಖ್ಯ ವಿಷಯ. ಕೆಲವಾರು ಮಾಸಗಳಿಂದ ಪ್ರಭುಗಳು ದಿನದ ಸಭೆಗೆ ಬರುತ್ತಿಲ್ಲ, ವರದಿ ಕೇಳುತ್ತಿಲ್ಲ. ಅದನ್ನು ತಮ್ಮ ದೋಷವೆಂದು ನಾವು ಹೇಳುತ್ತಿಲ್ಲ. ಪ್ರಭುಗಳನ್ನು ಕವಿದ ದುಃಖದ ಕಾವಳ ಎಷ್ಟು ದಟ್ಟವಾದದ್ದು ಎಂಬುದು ಗೊತ್ತಿತ್ತು. ಆದ್ದರಿಂದ ಮಾಮೂಲಿನ ವಿಷಯಗಳಿಂದ ತಮ್ಮನ್ನು ಆಯಾಸಗೊಳಿಸಲಿಲ್ಲ, ಹಾಗೆಂದು ನಾವು ಮೈಮರೆತು ಮಲಗಲಿಲ್ಲ. ಸಾಲು ವಿವಾಹಗಳಿಂದ, ಮಧ್ಯೆ ಒದಗಿದ ಹಿರಿಯ ನಾಗತಿಯವರ ನಿಧನದಿಂದ ಆದ ಖರ್ಚು ವೆಚ್ಚಗಳಿಂದ ಬೊಕ್ಕಸ ಸಾಕಷ್ಟು ಬರಿದಾಗಿದೆ. ಸೈನಿಕರೂ ಅಷ್ಟಿಷ್ಟು ಮೈಮರೆತಿದ್ದಾರೆ. ಅದೆಲ್ಲವನ್ನೂ ಸಜ್ಜುಗೊಳಿಸಿಕೊಳ್ಳುವುದಕ್ಕೆ ಸಾಕಷ್ಟು ಸಮಯ ಬೇಕಾಯಿತು. ಹಾಗೇ ಹರಪನಹಳ್ಳಿಯವರು

ಸುಮ್ಮನೆ ನಮ್ಮನ್ನು ಕೆಣಕಿ ನೋಡಿ ಹೋಗುತ್ತಾರೇನೋ ಎಂದು ಪರೀಕ್ಷೆಮಾಡಿ ನೋಡಿದ್ದೂ ಆಯಿತು....”

“ಅದು ಆದ ಮಾತು – ಈಗ ?”

“ಈಗ ನಮ್ಮ ಸೇನೆ ಸಿದ್ಧವಾಗಿದೆ. ಶತ್ರುಗಳ ಬಲಾಬಲ ತಿಳಿಯಲು ಕಳಿಸಿದ ಗೂಢಚಾರರೂ ನಮಗೆ ಬೇಕಾದ ವಿವರ ತಂದು ಒದಗಿಸಿದ್ದಾರೆ.”

“ಜಾಸೂದರು ಹೇಳಿದ್ದೇನು - ಇದೇನು ಗಡಿಕಾಳಗವೋ, ಘನ ಲಢಾಯಿಯೋ ?”

“ಗಡಿಕಾಳಗವಲ್ಲ. ಇದೊಂದು ನೆಪ ಮಾತ್ರ. ಹರಪನಹಳ್ಳಿಯವರು ತಾವೊಬ್ಬರೇ ಯುದ್ಧಕ್ಕೆ ಹೊರಡದೆ, ಕುಮ್ಮಕ್ಕಿಗೆ ಸವಣೂರಿನ ನವಾಬ ಹಕೀಂಖಾನ್, ರಾಯದುರ್ಗದವರು, ನಗರದ ಪಾಳಯಗಾರರು ಎಲ್ಲಾ ಒಟ್ಟು ಸೇರಿ, ಎರಡು ಸಾವಿರ ಸೇನೆ, ಇಪ್ಪತ್ತು ತೋಪು, ನಾಲ್ಕು ಸಾವಿರ ಅಶ್ವದಳ, ಅದಕ್ಕೆ ತಕ್ಕಷ್ಟು ಮದ್ದು ಗುಂಡು ಜಮಾಯಿಸಿ, ದುರ್ಗದತ್ತ ನುಗ್ಗಲು ಹೊತ್ತುಕಾಯುತ್ತಿದ್ದಾರೆ.” - ದಳವಾಯಿ ಭರಮಣ್ಣನಾಯಕ ಹೇಳಿದ.

ಆತ ಹೇಳಿದ ಶತ್ರುಸೇನೆಯ ಬಲಾಬಲವನ್ನೆಲ್ಲಾ ಮನದಲ್ಲಿಯೇ ಲೆಕ್ಕಹಾಕಿ -

“ದುರ್ಗವನ್ನು ಕಬಳಿಸಲು ಹೊರಟಂತೆಯೇ ಇದೆ ಶತ್ರು ಸಮೂಹ. ಅದಕ್ಕೆ ನಮ್ಮ ಪ್ರತಿಸಿದ್ಧತೆ ಹೇಗಿದೆ ? ಸಂಧಾನವೋ, ಸಮರವೋ - ಇಂದಿನ ಸಭೆಯ ಉದ್ದೇಶವೇನು ?”

- ಮಂಜಿನಂತೆ ಕೊರೆಯುವ ಧ್ವನಿಯಲ್ಲಿ ಕೇಳಿದ ಮದಕರಿನಾಯಕ.

“ಸಂಧಾನದ ಮಾತಾಗಿದ್ದರೆ ಇಷ್ಟು ಜನ ದಳವಾಯಿಗಳ ಸಭೆ ಕರೆಯುತ್ತಿರಲಿಲ್ಲ.”

- ಪ್ರಧಾನಿ ನರಸಪ್ಪಯ್ಯ ಹೇಳಿದರು.

“ಮತ್ತೆ ?”

“ಮುಂದೆ ನಾವು ಮಾಡಿದ ಯೋಚನೆಯನ್ನು ಮನಸುಬುದಾರ ನೀಲಕಂಠರಾಯರು ಹೇಳಬೇಕು”

– ಎಂದು ಪ್ರಧಾನಿಗಳು ಅಶ್ವದಳದ ದಳವಾಯಿ ನೀಲಕಂಠರಾಯನತ್ತ ನೋಡಿದರು.

“ಶತ್ರುಗಳ ಸೇನೆ, ಸರಂಜಾಮು ದೊಡ್ಡದು.....”

- ನೀಲಕಂಠರಾಯ ಏನೋ ಹೇಳಲಿದ್ದ. ಆ ಮಾತನ್ನು ಅರ್ಧದಲ್ಲೇ ತಡೆದು -

“ಗತಿಸಿದ ನಾಗತಿಯವರ ಆತ್ಮಕ್ಕೆ ತಕ್ಕ ರಕ್ತತರ್ಪಣ ಕೊಡಬಹುದು.”

- ಶತ್ರುಸೇನೆ ದೊಡ್ಡದೆಂದು ಕೇಳಿ ಉತ್ಸಾಹ ತಗ್ಗದೆ, ಮತ್ತಷ್ಟು ಹೆಚ್ಚಿ ಹೇಳಿದ ಮದಕರಿನಾಯಕ.

“ಆ ಕೆಲಸಕ್ಕೇನೂ ಅಡ್ಡಿಯಿಲ್ಲ. ಆದರೆ ಮನಸುಬುದಾರರ ಅಭಿಪ್ರಾಯ ಅದಲ್ಲ....”

-ನರಸಪ್ಪಯ್ಯ ಹೇಳಿದರು.

"ಮತ್ತೆ – ಶತ್ರುಸೇನೆ ನಮ್ಮ ಗಡಿಯೊಳಗೆ ನುಗ್ಗಲು ಅವಕಾಶ ಕೊಟ್ಟರೆ, ನಮ್ಮ ಸೀಮೆಗೆ ಹೆಚ್ಚು ನಷ್ಟ; ದುರ್ಗದ ಕೋಟೆಗೂ ಅಪಾಯ ತಪ್ಪಿದ್ದಲ್ಲ. ಆದ್ದರಿಂದ ಯುದ್ಧವೇನಿದ್ದರೂ ಹರಪನಹಳ್ಳಿಯವರ ಸೀಮೆಯಲ್ಲೇ ನಡೆಯಬೇಕು." - ನೀಲಕಂಠರಾಯ ಹೇಳಿದ.

"ಅದಕ್ಕೇನು ಮಾಡಬೇಕು ?"

"ಆದಷ್ಟು ಶೀಘ್ರ ನಮ್ಮ ಸೇನೆ ರಣಾಂಗಣಕ್ಕೆ ಇಳಿಯಬೇಕು. ಅದಕ್ಕೆ ಅಪ್ಪಣೆಯಾಗಬೇಕು." – ದಳವಾಯಿ ಭರಮಣ್ಣನಾಯಕ ಹೇಳಿದ.

"ಅದಕ್ಕಾಗಿ ಕಾಯುತ್ತಿದ್ದೀರಾ ?"

"ಕಾಯುವುದಕ್ಕೆ ಬೇರೆ ಕಾರಣಗಳೂ ಇದ್ದವು. ಈಗ ಮುಂದಿನ ಕೆಲಸಕ್ಕೆ ಅನುಮತಿ ನೀಡಬೇಕು" – ಎಂದು ಕೇಳಿದ ಪ್ರಧಾನಿಗಳಿಗೆ -

"ಯುದ್ಧವೆಂದರೆ ನಾವು ಸದಾ ಸಿದ್ಧ. ಆನೆಯೋ ಕುದುರೆಯೋ ಸಿದ್ಧವಾಗಲಿ"

- ಎಂದ ಮದಕರಿನಾಯಕ, ಉತ್ಸಾಹದಿಂದ.

"ಪ್ರಭುಗಳಿಗಿಷ್ಟು ಉತ್ಸಾಹವಿರುವುದು ನಮ್ಮ ಪುಣ್ಯ. ದಳವಾಯಿಗಳೇ - ನಾವು ಯೋಚಿಸಿದಂತೆ ಎಲ್ಲೆಡೆಗೂ ಸುದ್ದಿ ಹೋಗಲಿ. ನಾವು ಪುರೋಹಿತರನ್ನು ಕೇಳಿ, ಧ್ವಜ ಪೂಜೆ ಮಾಡಿಸುತ್ತೇವೆ" - ಎಂದರು ಪ್ರಧಾನಿ ನರಸಪ್ಪಯ್ಯ.

* * *

ರಾಯದುರ್ಗದ ಮೇಲೆ ಯುದ್ಧಕ್ಕೆ ಹೊರಟಂತಲ್ಲದೆ ಈ ಬಾರಿ-

ಶಾಸ್ತ್ರೋಕ್ತವಾಗಿ ಧ್ವಜಪೂಜೆ, ಪಟ್ಟದ ಆನೆ ಕುದುರೆಗಳ ಪೂಜೆ ಮಾಡಿ, ದೇವರುಗಳಿಗೆ ಪೂಜೆ ಮಾಡಿಸಿ ರಣಕಾಳಿಗೆ ಬಲಿ ಕೊಟ್ಟನಂತರ -

ಉಕ್ಕಿನ ಕವಚ, ಶಿರಸ್ತ್ರಾಣ, ಉಕ್ಕಿನ ತಂತಿಬಲೆಯ ಸುರುವಾಲು, ಚೂರಿಮೊನೆಯ ಚಡಾವು ಧರಿಸಿ, ಮುತ್ತೈದೆಯರಿಂದ ಆರತಿ ಮಾಡಿಸಿಕೊಂಡು, ತಂದೆತಾಯಿಗೆ ನಮಸ್ಕರಿಸಿ -

"ಅವ್ವಾ - ಇದು ನಮ್ಮ ಮೊದಲ ಯುದ್ಧ. ಗೆದ್ದು ಬರುವಂತೆ ಆಶೀರ್ವದಿಸಿ"

-ಎಂದು ಬೇಡಿದ ಮದಕರಿನಾಯಕ.

"ನಮ್ಮ ಹೃದಯ ಹಗಲಿರುಳೂ ಹರಸುವುದು ಅದನ್ನೇ. ಅದು ನಿಮ್ಮೊಂದಿಗೆ ಯಾವಾಗಲೂ ಇರುತ್ತದೆ. ಸೊಸೆಯರಿಗೆ ಒಂದು ಮಾತು ಹೇಳುವುದಿಲ್ಲವೇ ?" – ಎಂದು ಕೇಳಿದಳು, ನಿಂಗವ್ವ.

"ಆವ್ವ. ನಮ್ಮ ಪರವಾಗಿ ನೀವೇ ಹೇಳಿ - ಗೆದ್ದು ಆರತಿ ಮಾಡಿಸಿಕೊಳ್ಳಲು ಬರುತ್ತೇವೆ"

-ಎಂದಷ್ಟೇ ಹೇಳಿ, ಆಳು ಹಿಡಿದ ಕಡಿವಾಣವನ್ನು ಅಸಹನೆಯಿಂದ ಜಗ್ಗುತ್ತಿದ್ದ ರಣಾಶ್ವವನ್ನು ಚಪಲತೆಯಿಂದ ಹಾರಿ ಕುಳಿತು ಒರೆಗಳಚಿದ ಖಡ್ಗವನ್ನು ಬೀಸಿ-

"ಜೈ ಉತ್ಸವಾಂಬೆ – ಗೆದ್ದು ಬಂದು ಈ ಕತ್ತಿಯನ್ನು ಒರೆಗಿಡಲು ಹರಸಿ" - ಎಂದು ಕೂಗಿ ಹೇಳಿ, ನೆರೆದು ನಿಂತ ಸೇನೆಗೆ --

"ಜಯಕಾರ ಮಾಡಿರೋ, ನನ್ನ ಜನಗಳಿರಾ - ದುರ್ಗದ ಸೇನೆಗೆ ಸೋಲಿಲ್ಲವೆನ್ನಿ"

- ಎಂದು ಹೇಳಿ ಮದಕರಿನಾಯಕ ಕುದುರೆಯನ್ನು ದೌಡಾಯಿಸಿದ, ತನ್ನ ಸುತ್ತ ನೆರೆದು ನಿಂತ ಕಾವಲ ಅಶ್ವಾರೋಹಿಗಳು ಹಿಂದಾಗುವಷ್ಟು ವೇಗದಿಂದ.

ಸೇನೆ ರಣಕೇಕೆ ಹಾಕಿ ಅಬ್ಬರಿಸಿತು; ನಿಂತು ನೋಡಿದ ಜನ ಜಯಘೋಷ ಮಾಡಿದರು.

ಮುನ್ನುಗಿದ್ದ ದುರ್ಗದ ಹನುಮದ್ಗರುಡಧ್ವಜಲಾಂಛನವನ್ನು ಹೊತ್ತು ಶ್ವೇತಾಶ್ವವನ್ನು, ಅದರ ಮೇಲೆ ಸಾಗಿದ ದೊರೆಯನ್ನು ಹಿಂಬಾಲಿಸಿತು-

ಗಜ, ತುರುಗ, ಪದಾತಿಬಲ; ಬಿಚ್ಚುಗತ್ತಿಯ ಬೇಡಪಡೆ; ಖಾಸಾ ಬಿರಾದರಿಯವರು, ಮುಕ್ಕಂಣುಸುತ್ತು, ಪಂಚಭಲ್ಲೆಯದವರು, ಎಡಭರ್ಜಿ, ಬಲಭರ್ಜಿ ಜನ, ಖಾಸಾ ತಬೇಲಿ ಜನ, ಪುರುಭಯ್ಯ ಸೈನಿಕರು, ಬಾರೂತ್ ಜನ, ಏಕ್ಕಂಡೆ ಸಿಪಾಯಿಗಳು.

ಬೆಟ್ಟದ ಬಂಡೆಯಂಥ ಕೋಣಗಳು ಎಳೆವ ಫಿರಂಗಿ ಗಾಡಿಗಳು -

ಬೆಳಗಿನ ಬಿಸಿಲಿನಲ್ಲಿ ಮಿಂಚಿನ ಚಕ್ಕೆಗಳಂತೆ ಹೊಳೆವ ಮಸೆದ ಆಯುಧಗಳು-

ಆ ಆಯುಧಗಳಿಗಿಂತ ಉಗ್ರವಾಗಿ, ಮಸೆದ ಮಿಂಚಿನ ಪಡೆಯಂತೆ, ಸಿಡಿಲು, ಗುಡುಗು, ಮಿಂಚು ಮೊಳಗುವ ಕಾರ್ಗಾಲದ ಮೇಘಮಾಲೆಯಂತೆ ರೌದ್ರತೆಯ ಮೈತಳೆದ ದುರ್ಗದ ಸೇನೆ -

ರಣಭೇರಿ, ಕಹಳೆಗಳು – ಅರಿಮರ್ದನಮಾಡುವ ದುರ್ಗದ ವೀರನಿರ್ಧಾರವನ್ನು ಸ್ವರ್ಗಕ್ಕೆ ಸಾರಿ ಹೇಳಿದವು.

ದಾರಿಯಲ್ಲಿ ಸಬರದವರು ಕೊಟ್ಟ ರೊಟ್ಟಿ, ಬೆಣ್ಣೆ, ಮಸಾಲೆ ಮಾಂಸದ ತುಂಡುಗಳನ್ನು ತಿಂದು, ತೋಳಿಗೆ ಹಾಕಿದ ತೊಗಲು ಚೀಲದಲ್ಲಿದ್ದ ನೀರನ್ನು ಕುಡಿದು -

ನಿಂತಲ್ಲಿ ನಿಲ್ಲದೆ, ಹೇಗಿದ್ದರೆ ಹಾಗೆ ನಿದ್ರೆಯ ಚಪಲ ತೀರಿಸಿಕೊಂಡು, ಶತ್ರುಸೇನೆ ಹತ್ತಿರವಾದಷ್ಟು ಹೆಚ್ಚುತ್ತಿದ್ದ ಉತ್ಸಾಹದಿಂದ ಶತ್ರುಗಳ ಮೇಲೆ ದಾಳಿ ಮಾಡಲು ಹಾತೊರೆಯುತ್ತಾ, ದುರ್ಗದ ಗಡಿಯನ್ನು ದಾಟಿ, ಹರಪನಹಳ್ಳಿಯ ಗಡಿಯನ್ನೂ ದಾಟಿ, ಹೊಸ ಕೆರೆಯ ಹಿಂಬದಿಯಲ್ಲಿ ಬಂದಿಳಿಯಿತು - ದುರ್ಗದ ಫೌಜು.

ನಾಯಕರು ಬಿಡಾರ ಹೂಡಿ, ನಿಶಾನಿ ನಿಲ್ಲಿಸಿ, ರಣಚಂಡಿಗೆ ಬಲಿಕೊಟ್ಟು, ದಾಳಿಗೆ ಅಪ್ಪಣೆ ನೀಡಿದರು.

ಆ ವೇಳೆಗೆ ಗೂಢಚಾರರು ತಂದಿದ್ದ ಶತ್ರುಸೇನೆಯ ಬಗೆಬಗೆಯ ವಿವರಗಳನ್ನು ತಿಳಿದ ದಳವಾಯಿಗಳು, ಆ ಸುದ್ದಿಗೆ ತಕ್ಕಂತೆ ವ್ಯೂಹರಚನೆ ಮಾಡಿ, ಶತ್ರುಪಾಳಯಗಾರರು ತಮ್ಮ ಸೇನೆಯನ್ನು ಸಜ್ಜುಗೊಳಿಸುವ ವೇಳೆಗೆ ಒಂದೇ ಬಾರಿಗೆ ಹತ್ತು ತೋಫುಗಳನ್ನು ಉಡಾಯಿಸಲು ಗೋಲಂದಾಜರಿಗೆ ಆಜ್ಞೆ ಮಾಡಿದರು.

ಮುಗಿಲು ಮಾರ್ಮೊಳಗುವಂತೆ, ಹಗಲು ಕತ್ತಲಾಗುವಂತೆ, ಸಿಡಿಗೆಂಡದ ಮಳೆಗರೆಯುತ್ತಾ ಹಾರಿದ ತೋಫುಗಳ ಆಶ್ರಯ ಪಡೆದು, ಬಗೆಬಗೆಯ ಬಂದೂಕು, ಕೋವಿ, ರೈಫಲ್‌ಗಳಿಂದ ಸುತ್ತ ಸಾವಿನ ಮಳೆಗರೆಯುತ್ತಾ ಅಶ್ವಾರೋಹಿಗಳು ಮುನ್ನುಗ್ಗಿದರು - ಸಾವಿರ, ಸಾವಿರ. ಕತ್ತಲಾದ ಮುಗಿಲು ಮಿಂಚಿನ ಮಳೆಗರೆದಂತೆ. ಮತಾಪು ಬತ್ತಿಗಳು ಮುಗಿಲೆತ್ತರಕ್ಕೆ ಹಾರಿ ಸಿಡಿದು, ಶತ್ರುಗಳ ಕಣ್ಣಲ್ಲಿ ಕತ್ತಲು ಕವಿಸಿತು. ಸಿಡಿಲೇಟಿಗೆ ಸಿಕ್ಕು ತತ್ತರಿಸುತ್ತಿದ್ದ ಶತ್ರು ಸೇನೆ, ಸಾವರಿಸಿಕೊಳ್ಳುವುದರೊಳಗಾಗಿ ಮಾರಿಯ ಕೋಣದ ಮಸೆದ ಕೋಡುಗಳಂಥ ಬಿಚ್ಚುಗತ್ತಿಗಳನ್ನು ಹಿಡಿದ, ಹಗಲು ಕಗ್ಗೊಲೆಗೆ ಹೆಸರಾದ ಬೇಡಪಡೆ - ಚಕ್ರಾಕಾರವಾಗಿ ಕತ್ತಿ ಬೀಸುತ್ತಾ, ಕಂಡವರನ್ನು ಕಡಿಯುತ್ತಾ, ನೆತ್ತರ ಮಳೆಯಲ್ಲಿ ಮಿಂದು ಮತ್ತೇರಿ, ಮೈಗಾದ ಗಾಯಗಳಿಂದ ಮತ್ತಷ್ಟು ಉತ್ಸಾಹ ಬಂದಂತಾಗಿ, ಕತ್ತರಿಸಿದ ತಮ್ಮ ತೋಳು, ತೊಡೆಗಳನ್ನೂ ಲೆಕ್ಕಿಸದೆ ಏಟಿಗೆರಡು ತಲೆಯೆಂಬಂತೆ ಬಲಿತೆಗೆದುಕೊಳ್ಳುತ್ತಾ ಕುರಿಮಂದೆಯ ಮೇಲೆ ಬಿದ್ದ ತೋಳಗಳ ಹಿಂದಿನಂತೆ ಎರಗಿದರು.

ಸೈನಿಕರ ಉತ್ಸಾಹಕ್ಕೆ ಮುಮ್ಮಡಿಯಾಗಿತ್ತು- ಮದಕರಿನಾಯಕನ ರಣೋತ್ಸಾಹ.

ಉಟ್ಟ ಶ್ವೇತವಸ್ತ್ರ ಕ್ಷಣಾರ್ಧದಲ್ಲಿ ರಕ್ತಾಂಬರವಾಗಿ, ಏರಿದ ಕುದುರೆ ಕಾಳಿಯ ಕೋಣವಾಗಿ, ಆಯ್ದ ಪಡೆಯೊಡನೆ ನೆರೆದ ಶತ್ರುನಾಯಕರ ನಿಶಾನಿಗಳು ಹಾರುತ್ತಿದ್ದ ಗುಡಾರಗಳತ್ತ ನುಗ್ಗಿದ.

ಶತ್ರುಗಳೂ ಅಷ್ಟೇ ಉತ್ಸಾಹದಿಂದ ಮುನ್ನುಗ್ಗಿ, ನೆಲ ರಕ್ತಗೆಸರಾಗಿ, ಕಡಿದ ರುಂಡಮುಂಡಗಳು, ಗಜಾಶ್ವಗಳು, ರಣಭೂಮಿಯಲ್ಲಿ ಮಾರಿಗಿಕ್ಕಿದ ರಣಬಲಿಯಂತೆ ಎತ್ತೆತ್ತಲೂ ಕೆಂಪು ಕಾರಿತು. ಮುಗಿಲೆತ್ತರಕ್ಕೇರಿದ ಒಬ್ಬರ ಮುಖ ಮತ್ತೊಬ್ಬರಿಗೆ ಕಾಣದಂತಾಯಿತು.

ಇದುರಿನಲ್ಲಿ ಮೇಲೇರಿ ಬಂದ ದುರ್ಗದ ದಾಳಿಯನ್ನು ತಡೆಯಲು ಹೆಣಗುವಷ್ಟರಲ್ಲೇ, ಪೂರ್ವನಿಯೋಜಿತ ಯೋಜನೆಯಂತೆ ಮತ್ತೆರಡು ಕಡೆಯಿಂದ ಜರಿಮಲೆ, ಗುಡಿಕೋಟೆಯವರ ಸೇನೆ ಶತ್ರುಸೇನೆಯ ಮೇಲೆ ಕಗ್ಗೊಲೆ ಬಿದ್ದು, ಹರಪನಹಳ್ಳಿಯವರು, ರಾಯದುರ್ಗದವರು

ದುರ್ಗವನ್ನು ಗೆಲ್ಲುವ ಹಮ್ಮು ಮರೆತು, ತಮ್ಮ ನಿಶಾನಿಗಳನ್ನು ದುರ್ಗದವರಿಗೊಪ್ಪಿಸಿ, ಪ್ರಾಣ ಉಳಿದರೆ ಸಾಕೆಂದು ಓಡಿದರು.

ನಾಲ್ಕು ತಾಸು ಪರ್ಯಂತ ಯುದ್ಧ ನಡೆಯುವುದರೊಳಗಾಗಿ, ಶತ್ರುನಾಯಕರ ಬಾವುಟಗಳು ಹಾರಾಡುತ್ತಿದ್ದೆಡೆಯಲ್ಲಿ ದುರ್ಗದ ನಿಶಾನಿ ವಿಜೃಂಭಿಸಿತು.

"ದೀನ್, ದೀನ್ - ಅಲ್ಲಾ ಹೋ ಅಕ್ಬರ್" ಎಂದು ಮುನ್ನುಗ್ಗಿದ, ಸವಣೂರು ನವಾಬನ ಸೇನೆ 'ಅಮ್ಮಾಗೇ!' ಎಂದು ಒದೆ ತಿಂದ ಕುನ್ನಿಗಳಂತೆ ಓಡಿತು.

ದುರ್ಗದ ಸೇನೆ ಸೋತ ಶತ್ರುಗಳ ಸೇನೆಯನ್ನು ಲೂಟಿ ಮಾಡಲಾರಂಭಿಸಿತು. ಹರಪನಹಳ್ಳಿ ಸೋಮಶೇಖರ ನಾಯಕ, ರಾಯದುರ್ಗದ ಕೃಷ್ಣಪ್ಪನಾಯಕ ಪ್ರಾಣ ತ್ರಾಣಪರಾಯಣರಾಗಿ ದೌಡಾಯಿಸಿದರು.

ಮದಿಸಿಬಂದ ಶತ್ರುಗಳ ರುಂಡಗಳ ಪಿಂಡಗಳನ್ನು ರಾಶಿ ಮಾಡಿ, ಓಬವ್ವನಾಗತಿಯದರ ಆತ್ಮಕ್ಕೆ ರಕ್ತತರ್ಪಣವಿತ್ತು - ತನ್ನ ರಕ್ತದಾಹವನ್ನು ತಣಿಸಿಕೊಂಡ ಮದಕರಿನಾಯಕ.

"ಕಾಳಗವೆಂದರೆ ಕಲಿಯಾದೀತು ಚಿಂತರಕಲ್ಲು
ಆಳು ಹೊರಟೀತು ಅಡಿಕೆ ಸಸಿಯಂತೆ | ರನ್ನದ ಕೋಲೆ |
ಆಳು ಹೊರಟೀತು ಅಡಿಕೆಸಸಿಯಂತೇ, ಮದಕೇರಂಣ
ಹೊರಟಾನೇ ಸೋಗೆ ನವಿಲ್ಹಂಗೆ | ರನ್ನದ ಕೋಲೆ ||

"ಎದ್ದನೋ ಮದಕೇರಣ್ಣ ಎಳೆಮೀಸೆ ತಿರವೂತ
ಗಗ್ಗರದೋರ ಮುಂದೆ ನಡೆಸೂತ | ರನ್ನದ ಕೋಲೆ |
ಗಗ್ಗರದೋರ ಮುಂದೆ ನಡೆಸೂತ
ಕೂಲಳ್ಳಿ ದಿಬ್ಬಕೆ ಡೇರೆಗಳ ಹೊಡೆಸೀದ ||

"ಏರಿಯ ಹಿಂದೆ ಹೋರಾಡುವ ಇವನ್ಯಾರೋ
ಗೀರು ಗಂಧಗಳ ಬೆವರೂತ | ರನ್ನದ ಕೋಲೆ|
ಗೀರು ಗಂಧಗಳ ಬೆವರೂತ ಮದಕೇರಂಣ
ಭೋರಾಡಿ ತನ್ನ ಮನಹಾರ ||

"ಅಂದಣ ಹಾಗೆ ಕುಂದಣ ಹೊಳೆಧಾಂಗೆ

ಬಂದೀತು ಊರಿಗೆಲ್ಲ ಉಡುಗೋರೆ | ರನ್ನದ ಕೋಲೆ |
ಬಂದೀತು ಊರಿಗೆಲ್ಲ ಉಡುಗೋರೆ
ಶಿದ್ಧರಂಗ ಸಂಪಿಗೆಸಿದ್ಧ ನಿಮ್ಮ ದಯವಿರಲಿ | ರನ್ನದ ಕೋಲೆ ||"

-ಎಂದು ರಣದಲ್ಲಿ ಗೆದ್ದ ಜನ ಉತ್ಸಾಹದಿಂದ ಗೆಲುವಿನ ಗೀತೆ ಹಾಡಿದರು.

* * *

ಹರಪನಹಳ್ಳಿಯವರು, ರಾಯದುರ್ಗದವರು ಜೀವ ಉಳಿದರೆ ಸಾಕೆಂದು ಓಡಿದರು –

ಆದರೆ ಅವರೊಂದಿಗೆ ಓಡಿದ ಸವಣೂರಿನ ನವಾಬ ಹಕೀಂಖಾನನಿಗೆ ಮಾತ್ರ ಆ ಇರುಳು ನಿದ್ರೆ ಬರಲಿಲ್ಲ, ಸೋಲು ಅವನ ಹೃದಯವನ್ನು ಶಲ್ಯದಂತೆ ಇರಿಯುತ್ತಿತ್ತು.

ತನ್ನ ಖಾಸಾ ಅಂಗರಕ್ಷಕ ಪಡೆಯವರಿಗೆ, ಓಡುತ್ತಿದ್ದ ತನ್ನ ಕಡೆಯ ಸೈನಿಕರನ್ನು ಗುಂಡಿಟ್ಟು ಕೊಲ್ಲುವಂತೆ ಆಜ್ಞೆ ಮಾಡಿ, ಅವರನ್ನು ತಾನೇ ಕೊಲ್ಲಿಸಿ, ಅದನ್ನು ಕಂಡು ದಿಗ್ಭ್ರಾಂತರಾಗಿ ನಿಂತ ಸರದಾರರಿಗೆ -

"ಶತ್ರುವಿಗೆ ನಿಶಾನಿ, ನಗಾರಿ, ತೋಫುಖಾನೆ ಒಪ್ಪಿಸಿ ಓಡಿಬಂದ ನಾಮರ್ದಾ ನನ್ನ ಮಕ್ಕಳಿರಾ. ನಮ್ಮ ನಿಶಾನಿಯನ್ನು ಹಿಂದಕ್ಕೆ ತರಬೇಕು; ಇಲ್ಲ ಯುದ್ಧದಲ್ಲಿ ಷಹೀದ್ ಆಗಬೇಕು" – ಎಂದು ಕಟ್ಟಪ್ಪಣೆ ಮಾಡಿದ.

ಆ ಕೆಲಸವನ್ನು ಹೇಗೆ ಮಾಡುವುದೆಂದು ಯೋಚಿಸಿದರು, ಸರದಾರರು.

* * *

ಹಗಲೆಲ್ಲಾ ಯುದ್ಧ ಮಾಡಿ ದಣಿದು ಗೆದ್ದ ದುರ್ಗದ ಸೇನೆ, ಇರುಳು ನೆಮ್ಮದಿಯಿಂದ ಮಲಗಿದ್ದಾಗ, ಸವಣೂರಿನ ನವಾಬನ ಆಯ್ದ ಐನೂರು ಮಂದಿ ಸೈನಿಕರು, ಮಲಗಿದ ಸೇನೆಯ ಮೇಲೆ ಮೋಸದ ದಾಳಿ ಮಾಡಿ, ಕೈಗೆ ಸಿಕ್ಕ ಸರದಾರರನ್ನು ಕಡಿದು, ಆದಷ್ಟು ಜನರನ್ನು ಕೊಂದು, ದುರ್ಗದ ಪತಾಕೆಯ ಊಳಿಗ ಮಾಡುತ್ತಿದ್ದ ಸವಣೂರು ನವಾಬನ ಹಸಿರು ಬಾವುಟವನ್ನು ಹಿಡಿದು, ಮಲಗಿದ ಸೇನೆ ಮೇಲೇಳುವುದರೊಳಗಾಗಿ ಪಲಾಯನ ಮಾಡಿದರು.

ದಂಡಿನಲ್ಲಿ ಗದ್ದಲವಾದದ್ದನ್ನು ಕೇಳಿ ಎಚ್ಚೆತ್ತ ಮದಕರಿನಾಯಕ ಕೂಡಲೇ ನೂರು ಪಂಜು ಹೊತ್ತಿಸಿ, ಆದದ್ದೇನು ಎಂದು ಅರಿತು, ರುದ್ರಾವತಾರ ತಾಳಿ -

"ಇರುಳು ಕಾವಲಿರಬೇಕಾಗಿದ್ದವರನ್ನು ಹಿಡಿದು ತನ್ನಿ" - ಎಂದು ಅಬ್ಬರಿಸಿದ.

ಹೆದರುತ್ತಾ ದೊರೆಯ ಇದಿರು ನಿಂತ ಇರುಳು ಕಾವಲವರನ್ನು ವಿಚಾರಿಸಿ, ಅವರು ಕುಡಿದು ಮಲಗಿದ್ದರೆಂಬುದನ್ನು ಕೇಳಿ, ನಿಂತಲ್ಲೇ ಅವರ ನೆತ್ತಿಗಳನ್ನು ಕತ್ತರಿಸಲು ಆಜ್ಞೆ ಮಾಡಿ, ನೆತ್ತರುಗಾರುತ್ತಾ ಉರುಳಿದ ಆ ತಲೆಗಳನ್ನು ಉಳಿದ ಸೈನಿಕರಿಗೆ ಕತ್ತಿಯ ಮೊನೆಯಿಂದ ತೋರಿಸಿಸಿ -

"ಇನ್ನು ಮುಂದೆ – ಇರುಳುಕಾವಲಿನಲ್ಲಿ ಕುಡಿದವರ ನಾಲಗೆ ಕತ್ತರಿಸಿ, ಮತ್ತೇರಿ ಮಲಗಿದವರ ತಲೆ ತರಿದು ತನ್ನಿ...."

-ಎಂದು ಕಟ್ಟಾಜ್ಞೆ ಮಾಡಿ -

"ಈ ಇರುಳೇ ಶತ್ರುಸೇನೆಯ ಬೆನ್ನಟ್ಟಿ ಅವರು ಕದ್ದೊಯ್ದ ಮೂರು ಆನೆ. ನಾಲ್ಕು ಫಿರಂಗಿಗಳನ್ನು ಹಿಂದಕ್ಕೆ ತರಬೇಕು" - ಎಂದು ಅಪ್ಪಣೆ ಸಾರಿಸಿದ.

ಆದರೆ ಸೇನೆಯ ಹಿರಿಯರಿಗೆ ದೊರೆಯ ಆಜ್ಞೆ ಸರಿಯೆಂದು ಕಾಣಲಿಲ್ಲ.

"ಇದು ಮರೆಮೋಸದ ಯುದ್ಧ. ಮುಂದೆ ಹೋದಷ್ಟೂ ಶತ್ರುಸೀಮೆ. ಸೋತು ರೋಸಿದ ಅವರು ಮತ್ತೇನು ಹೊಂಚುಹಾಕಿದ್ದಾರೋ. ಅದು ತಿಳಿಯದೆ ಮುಂದೆ ನುಗ್ಗುವುದು ಅಪಾಯಕ್ಕೆ ಆಹ್ವಾನ ಕೊಟ್ಟಂತೆ" - ಎಂದು ಎಚ್ಚರಿಸಿ –

"ನಾವು ಸೋಲಲಿಲ್ಲ. ಶತ್ರು ಬೆನ್ನು ತೋರಿಸಿ ಓಡಿದ. ಮರೆಗೆಲಸದ ಸಾವು ಸೋಲಲ್ಲ. ಇದು ನಮ್ಮ ಗೆಲವು" - ಎಂದು ಶತಪ್ರಯತ್ನಪಟ್ಟು, ತಮ್ಮ ದಾರಿಗೆ ನಾಯಕರನ್ನು ಒಲಿಸಿದರು.

ಆ ಮಾತಿಗೆ ಒಪ್ಪಿದರೂ, ನಾಯಕರ ಕ್ರೋಧ ಶಮನವಾಗಲಿಲ್ಲ –

"ತಾಯಿ, ಉತ್ಸವಾಂಬೆ ! ಹೋದ ಫಿರಂಗಿಗಳನ್ನು ಮತ್ತೆ ಹಿಂದಕ್ಕೆ ತರದಿದ್ದರೆ, ನನ್ನ ಮೀಸೆ ಮೀಸೆಯಲ್ಲ, ತುರುಚು ಹುಲ್ಲು" - ಎಂದು ಶಪಥ ಮಾಡಿದ.

* * *

ಹರಪನಹಳ್ಳಿ, ರಾಯದುರ್ಗ, ನಗರದವರು, ಸವಣೂರಿನ ನವಾಬ -

ಇಷ್ಟು ಜನರ ಮೇಲೆ ದುರ್ಗದ ಸೇನೆ ಸಾಧಿಸಿದ ವಿಜಯವಾರ್ತೆ, ದೇಶದೇಶದಲ್ಲೂ ಹರಡಿ, ತನಗಿಂತ ಬಲಿಷ್ಠರಿಲ್ಲ ಎಂದು ಬೀಗುತ್ತಿದ್ದ ಹೈದರಾಲಿಯ ಕಿವಿಗೂ, ಅವನು ಮಧುಗಿರಿಯ ಬಿಡಾರದಲ್ಲಿದ್ದಾಗ ಈ ವಾರ್ತೆ ಬಿದ್ದು, ತನ್ನ ಬಲಗೈಯಂತಿದ್ದ ಭಾವಮೈದುನ ಆಲಿರಾಜಾಖಾನ್‌ನಿಗೆ ಹೇಳಿದ -

"ಲವಂಡೀಕೆ ! ಈ ಚಿತ್ರದುರ್ಗದ ಗುಬ್ಬಿ ಗಿಡಗವಾಗುತ್ತಿದೆ. ಅದಕ್ಕೆ ಗರಿಬಲಿವ ಮೊದಲು ಅದರ ರೆಕ್ಕೆಗಳನ್ನು ಕತ್ತರಿಸಬೇಕು."

ಆ ಮಾತು ಹೇಳುತ್ತಲೇ ಹೈದರನ ಕಿಗ್ಗಣ್ಣುಗಳಲ್ಲಿ, ಅಂಗಳದಲ್ಲಾಡುವ ಪಾರಿವಾಳವನ್ನು ಕಂಡು, ಆಕಾಶದಲ್ಲಿ ಹಾರುತ್ತಾ ಅದನ್ನು ನೋಡಿದ ಹದ್ದಿನ ಕಣ್ಣುಗಳಂತೆ ಕ್ರೂರವಾಗಿ ಹೊಳೆದು, ತನ್ನ ಬಿಡಾರದ ಒಂದೆಡೆಯಲ್ಲಿ ತೂಗು ಹಾಕಿದ ನಕ್ಷೆಯನ್ನು ನೋಡುತ್ತಾ-

"ಸಿರಾ, ಹುಳಿಯಾರು ಮಾರ್ಗವಾಗಿ ನಮ್ಮ ಫೌಜು, ದುರ್ಗದ ಸೀಮೆಯ ಹೊಸದುರ್ಗ ದತ್ತ ದೌಡಾಯಿಸಲಿ" - ಎಂದು ಅಪ್ಪಣೆ ಮಾಡಿದ.

೧೧

ವಿಕ್ರಮ ಸಂವತ್ಸರದಲ್ಲಿ ಹರಪನಹಳ್ಳಿಯ ಪಾಳಯಗಾರರ ಪಡೆಯನ್ನು ಮುರಿದು ಬಂದ ಮೇಲೆ, ಮದಕರಿನಾಯಕನ ನಡತೆಯಲ್ಲಿ ಅತ್ಯಾಶ್ಚರ್ಯಕರವಾದ ಪರಿವರ್ತನೆಯಾಗಿತ್ತು. ಅಂದಿನವರೆಗೆ ಇದ್ದ ನಾಯಕರು, ಪ್ರಧಾನಿಗಳು, ದಳವಾಯಿಗಳು, ಸೇನೆ – ಎಂಬ ಕ್ರಮ ಪರಿವರ್ತನೆಯಾಗಿ, ನಾಯಕರೀಗ ಸೇನೆಯೊಂದಿಗೆ ನೇರ ಸಂಪರ್ಕ ಬೆಳೆಸಿಕೊಂಡಿದ್ದರು. ದಿನವೂ ತಾವೇ ದಂಡಿನ ಕವಾಯತನ್ನು ವೀಕ್ಷಿಸಬೇಕು, ದಂಡಿನ ದಳವಾಯಿಗಳಿರಲಿ, ತುಕಡಿಯ ಮುಖಂಡರ ಯೋಗಕ್ಷೇಮವನ್ನೂ ತಾವೇ ಖುದ್ದಾಗಿ ವಿಚಾರಿಸಬೇಕು, ಯಾರಿಗೆ ಅನುವು-ಆಪತ್ತಾದರೂ, ಅದು ಹತ್ತಾರು ಕಿವಿಗಳನ್ನು ದಾಟದೆ, ನೇರವಾಗಿ ತನ್ನ ಕಿವಿ ಸೇರಬೇಕು, ಯಾರಿಗೆ ಏನು ಪರಿಹಾರ ದೊರೆಯಬೇಕಾದರೂ ಅದು ನಾಯಕರ ಕೈಯಿಂದ ಎಂಬಂತೆ, ಸೇನೆಯವರಿಗೆ ಸೇರಬೇಕು, ಹಬ್ಬ, ಹರಿದಿನ, ಮದುವೆ-ಪ್ರಸ್ತಗಳಾದರೆ ಅರಮನೆಯಿಂದ ಉಡುಗೊರೆ ಹೋಗಬೇಕು - ದಳವಾಯಿಗಳ ಮುಖಾಂತರ. ಇದರೊಂದಿಗೆ ತನ್ನ ಸೋದರ ಪರಶುರಾಮನಾಯಕನೊಂದಿಗೆ ದಿನವೂ ಮದ್ದು ಅರೆಯುವ ಕಾರ್ಖಾನೆ, ಸೇನೆಗೆ ಬೇಕಾದ ವಿವಿಧ ಸಾಮಗ್ರಿಗಳನ್ನು ತಯಾರು ಮಾಡುವ ಬಗೆಬಗೆಯ ಕಾರ್ಯಾಗಾರಗಳು, ಇಸ್ತೋರು, ಮದ್ದುಗುಂಡಿನ ಉಗ್ರಾಣ, ಬುರುಜು ಬತೇರಿಗಳ ಮೇಲಿದ್ದ ತೋಫು-ಕೋವಿಗಳ ರಣಸಿದ್ಧತೆ - ಇವುಗಳನ್ನು ಕಣ್ಣಾರೆ ಕಂಡು ಮನಸ್ಸಿಗೆ ತೃಪ್ತಿ ಮಾಡಿಕೊಂಡು ಬರುತ್ತಿದ್ದ, ಹೀಗಾಗಿ ಸೇನೆಯ ಮುಖ್ಯಸ್ಥರಲ್ಲಿ ಹೆಸರು ತಿಳಿಯದವರಾರೂ ಉಳಿಯಲಿಲ್ಲ – ಮದಕರಿನಾಯಕನಿಗೆ, ದುರ್ಗದ ದಂಡಿನಲ್ಲಿ.

ಸೇನೆಯೊಂದಿಗಿನ ತಮ್ಮ ಸಂಪರ್ಕವನ್ನು ಮಾರ್ಪಡಿಸಿಕೊಂಡ ಈ ರೀತಿ ಹಿರಿಯರಿಗೆ ಮೊದಮೊದಲು ಹಿಡಿಯಲಿಲ್ಲ, 'ಸಾಮಾನ್ಯರೊಂದಿಗೆ ಕಲೆತು ದೊರೆಗಳು ಸದರವಾಗುತ್ತಾರೆ' ಎಂದೇ ಅಂಜಿದರು, ಹಳೆಯ ಸಂಪ್ರದಾಯದಲ್ಲಿ ಬೆಳೆದಿದ್ದ ಹಿರಿಯರು. ಆದರೆ, ಮದಕರಿನಾಯಕ

ಮಾಡಿದ ಈ ಪರಿವರ್ತನೆ, ಅವರು ನಿರೀಕ್ಷಿಸಿದ ಸದರದ ವಾತಾವರಣವನ್ನು ಮೂಡಿಸದೆ, 'ಸೇನೆ - ದೊರೆಯ ತೋಳುಗಳು' ಎಂಬಷ್ಟು ನಿಕಟಬಾಂಧವ್ಯ ಬೆಳೆಯಿತು. ನಾಯಕರ ವಿಶ್ವಾಸ ಎಷ್ಟು ಲಾಭದಾಯಕವೋ, ಅವರ ಸಿಟ್ಟೂ ಅಷ್ಟೇ ಶೀಘ್ರಪರಿಣಾಮಕಾರಿಯಾಗಿ ಉಗ್ರವಾಗಿರುತ್ತದೆ – ಎಂಬುದನ್ನು ಅರಿತ ಸೇನೆಯ ಜನ, ನಾಯಕರ ವರ್ತನೆಯಿಂದ ಕಸಿವಿಸಿಗೊಳ್ಳುವುದಕ್ಕೆ ಪ್ರತಿಯಾಗಿ, 'ನಾಯಕರು ದೂರದವರಲ್ಲ, ತಮ್ಮ ಹಡೆದ ತಂದೆ' ಎಂಬಂತೆ ಪ್ರೀತಿಸಲಾರಂಭಿಸಿದರು. ತಮ್ಮನ್ನು ತನ್ನ ಹೃದಯಕ್ಕಷ್ಟು ಸಮೀಪವಾಗಿ ಮಾಡಿಕೊಂಡ ನಾಯಕರಿಗಾಗಿ ಹಣಕ್ಕಿಂತ ಹೆಚ್ಚಾಗಿ, ಪ್ರೇಮಕ್ಕೆ ತಲೆಕೊಡಲು ಸಿದ್ಧವಾದರು. ಮದಕರಿನಾಯಕರ ಪ್ರೇಮವಿದ್ದೂ ಬಿಗಿಯಾದ ಮೇಲ್ವಿಚಾರಣೆಯಲ್ಲಿ ಸೇನೆಯ ಹಲವಂಗಗಳು, ಬೇರೆಬೇರೆಯಾಗಿ ಉಳಿಯದೆ, ಒಂದೇ ಮೈಯೆಂಬಂತೆ ಬಲಿಷ್ಠವಾಗಿ ಬೆಳೆಯಿತು. ಸೋಮಾರಿಗಳು, ಆಲಸಿಗಳು, ಉಡುಗೊರೆಗಳಿಗಾಗಿ ಸೇನೆಗೆ ಸೇರಿದವರನ್ನು ಸೈನಿಕರು ತಾವೇ ಪತ್ತೆಹಚ್ಚಿ ಅಂತಹವರನ್ನು ಕಳೆಯಂತೆ ಕಿತ್ತು ಬಿಸುಟು, ಹಸನು ಮಾಡಿ, ತೆನೆ ಬಲಿತ ಪೈರಿನಂತೆ ಕಳಕಳಿಸಿತು, ದುರ್ಗದ ಸೇನೆ.

ಒಂದು ವರ್ಷ –

ಆ ಒಂದೇ ಒಂದು ವರ್ಷದಲ್ಲಿ -

ದುರ್ಗದ ಸೇನೆಯಲ್ಲಾದ ಈ ಕ್ರಾಂತಿಕಾರಕ ಬದಲಾವಣೆ ಮೊದಮೊದಲು 'ದೊರೆಗಳು ತಮ್ಮನ್ನು ದೂರಮಾಡುತ್ತಿದ್ದಾರೆ' ಎಂದು ಅಸಮಾಧಾನಗೊಂಡ ಹಿರಿಯರಲ್ಲೂ, ಅಚ್ಚರಿ, ಮೆಚ್ಚುಗೆಯನ್ನು ಮೂಡಿಸಿ, ತಾವೂ ನಾಯಕರೊಂದಿಗೆ ಸರಿಸಮವಾಗಿ, ಉತ್ಸಾಹದಿಂದ ಬೆರೆತು, ನೋಡಿದ ಜನ, 'ದೊರೆ ಎಂದರೆ ಹೀಗಿರಬೇಕು, ದಂಡು ಎಂದರೆ ದುರ್ಗದ ದಂಡು' ಎಂದು ಹೊಗಳಿಸಿಕೊಳ್ಳುವಂತೆ ಮಾಡಿದರು.

ಮದಕರಿನಾಯಕ ಸೇನೆಯನ್ನು ಒಪ್ಪ ಮಾಡಲು ಇಷ್ಟು ಶ್ರಮಿಸಿದ್ದು ವಿಫಲವಾಗಲಿಲ್ಲ.

ಆ ಎಲ್ಲ ಶ್ರಮಕ್ಕೂ ಸಫಲತೆಯ ಸುವರ್ಣಕಿರೀಟವಿಟ್ಟಂತೆ ಒಂದು ದಿನ -

ಆ ದಿನ, ಹಗಲು ಹರಿದು, ಪ್ರಧಾನಿ ನರಸಪ್ಪಯ್ಯನವರು ತಮ್ಮ ಪ್ರಾತರಾಹ್ನಿಕಗಳನ್ನು ಮುಗಿಸಿ, ದೇವರ ಮನೆಯಿಂದ ಹೊರಬರುತ್ತಿದ್ದ ಹಾಗೆಯೇ ಅವರ ಮಡದಿ ಭಾಗೀರಥೀ ಬಾಯಿ, ತನ್ನ ಪತಿಗೆ –

"ಕೊತ್ವಾಲ ಚಾವಡಿಯ ದಳವಾಯಿ ಕಾಶಣ್ಣ ನಾಯಕರು ಬಂದು ತಮಗಾಗಿ ಕಾಯುತ್ತಿದ್ದಾರೆ" – ಎಂದು ಸುದ್ದಿ ಕೊಟ್ಟಳು.

“ಕೊತ್ವಾಲ ಚಾವಡಿಯ ದಳವಾಯಿಗಳು - ಇಷ್ಟು ಹೊತ್ತಿನಲ್ಲಿ - ಏನೋ ಅವಸರದ ಕೆಲಸವಿರಬೇಕು” - ಎಂದು ತಮಗೆ ತಾವೇ ಹೇಳಿಕೊಂಡಂತೆ ಹೇಳಿ, ಅಂಗಿಯನ್ನೂ ಧರಿಸದೆ. ಬರಿಮೈಮೇಲೊಂದು ವಸ್ತ್ರ ಹೊದೆದು-

“ದಳವಾಯಿಗಳಿಗೆ ಕುಡಿಯಲು ಹಾಲು ಕಳಿಸು”

- ಎಂದು ಹೆಂಡತಿಗೆ ಹೇಳಿ, ಹಜಾರಕ್ಕೆ ಬಂದು, ತಮಗಾಗಿ ಕಾದು ಕುಳಿತಿದ್ದ ಕಾಶಣ್ಣ ನಾಯಕರಿಗೆ ವಂದಿಸಿ –

“ಕುಳಿತುಕೊಳ್ಳಿ, ಹಗಲು ಹರಿಯುತ್ತಿದ್ದ ಹಾಗೆ ಬಂದಿರಲ್ಲಾ – ಏನು ವಿಶೇಷ ? ಹಾಲು ಕುಡಿದು ಮಾತಾಡುವಷ್ಟು ಸಮಯವಿದ್ದರೆ, ನೀವು ಹಾಲು ಕುಡಿಯಿರಿ, ನಾನು ಅಂಗಿ ಧರಿಸಿ ಬರುತ್ತೇನೆ” – ಎಂದು ಹೇಳಿದರು, ನರಸಪ್ಪಯ್ಯ.

“ಅಂಗಿ ಧರಿಸಿ ಬರಬಹುದು, ಆದರೆ ವಿಷಯವೇನೋ ಅವಸರವಾದದ್ದೇ” -ಎಂದ ಕಾಶಣ್ಣನಾಯಕ.

“ಆಯಿತು – ಯಾರಲ್ಲಿ....ನನ್ನ ಅಂಗಿ ಕಳಿಸಿಕೊಡಿ” - ಎಂದು ಒಳಗೆ ಕೂಗಿ ಹೇಳಿ, ಹಾಸಿದ ಲೋಡಿನ ಮೇಲೆ ದಿಂಬಿಗೆ ಒರಗಿ ಕುಳಿತು –

“ಏನು ಸುದ್ದಿ ?” – ಎಂದು ಕೇಳಿದರು, ಪ್ರಧಾನಿ ನರಸಪ್ಪಯ್ಯ.

“ನಿನ್ನೆ ರಾತ್ರಿ - ನಡುರಾತ್ರಿ ದಾಟಿರಬಹುದು. ಆ ಹೊತ್ತಿನಲ್ಲಿ ಗೊಡಬನಹಾಳು ಕಣಿವೆ ಕಾವಲುಠಾಣ್ಯದ ನಾಯಕ ಯಾರೋ ಹತ್ತು ಜನ ಕುದುರೆಸವಾರರು ಬಂದು ಒಳಗೆ ಬಿಡಿ ಎಂದು ಕೇಳಿದರು. ’ರಹದಾರಿ ಇದೆಯೇ?’ ಎಂದು ಕೇಳಿದ್ದಕ್ಕೆ ’ನಮ್ಮಲ್ಲಿ ರಹದಾರಿಯಿಲ್ಲ. ನಾವು ರಾಜಪುರುಷರು. ನಿಮ್ಮ ಪ್ರಧಾನಿಗಳನ್ನೋ, ದಳವಾಯಿಗಳನ್ನೋ ಅವಸರವಾಗಿ ಕಾಣಬೇಕು. ಅವರ ಬಳಿ ಕರೆದುಕೊಂಡು ಹೋಗಿ’ ಎಂದು ಹೇಳಿದರು. ’ಇರುಳು ರಹದಾರಿ ಇಲ್ಲದವರನ್ನು ಒಳಗೆ ಬಿಡಲು ಅಪ್ಪಣೆಯಿಲ್ಲ, ಆವಸರವಾಗಿ ಪ್ರಧಾನಿಗಳನ್ನು ನೋಡಬೇಕೆನ್ನುತ್ತೀರಿ’ ಎಂದು ಹೇಳಿ, ಆ ಹೊತ್ತಿನಲ್ಲಿ ಮಾಡಬೇಕಾದ ಝಡತಿಮಾಡಿ, ಸಿದ್ಧಯ್ಯನ ಕೋಟೆ ಬಾಗಿಲವರ ವಶಕ್ಕೆ ಒಪ್ಪಿಸಿ, ನನ್ನ ಬಳಿ ಬಂದು ಸುದ್ದಿ ಹೇಳಿದರು. ಅವರ ಬಳಿ ಹತ್ತಿದ ಕುದುರೆ, ಸೊಂಟದಲ್ಲಿ ಬಿಗಿದ ಕತ್ತಿ ಬಿಟ್ಟರೆ ಬೇರೇನೂ ಅನುಮಾನಕ್ಕೆ ಆಸ್ಪದವಾದುದಿರಲಿಲ್ಲ. ಅವರು ಪ್ರಯಾಣದಿಂದ ದಣಿದಿದ್ದರೂ, ಉಡುಪು ಸಾಮಾನ್ಯವಾಗಿದ್ದರೂ ಮುಖ, ಮೀಸೆ, ಮೈಕಟ್ಟು ನೋಡಿದರೆ, ಅವರ ಪೈಕಿ ಒಬ್ಬರ ಕೈಯಲ್ಲಿ ಮುದ್ರೆಯುಂಗುರ, ಒರೆಯಲ್ಲಿ ಚಿನ್ನದ ಹಿಡಿಯ ಕತ್ತಿ ಇದ್ದ ವಿವರ ತಿಳಿದುಕೊಂಡು, ’ಬಿಗಿಕಾವಲಿನಲ್ಲಿ ನಮ್ಮ ಬಳಿ ಕರೆತನ್ನಿ’ ಎಂದು ಹೇಳಿದೆ. ಹಾಗೆ ಕರೆತಂದರು....”

“ಬಂದವರು ಯಾರಂತೆ ?”

- ಕಾಶಣ್ಣನಾಯಕ ಹೇಳಿದಷ್ಟನ್ನೇ ಕೇಳಿ ಕುತೂಹಲ ಕೆರಳಿ ಕೇಳಿದರು, ನರಸಪ್ಪಯ್ಯ.

"ಬಿದನೂರಿನ ರಾಜಕುಮಾರ ಚನ್ನಬಸವನಾಯಕರಂತೆ."

"ಹ್ಯಾ- ಹೌದೇ....?" – ಚಕಿತರಾಗಿ ಕೇಳಿದರು ಪ್ರಧಾನಿ ನರಸಪ್ಪಯ್ಯ.

"ಅವರು ಹೇಳಿದುದನ್ನು ಕೇಳಿ ನನಗೂ ಹಾಗೇ ಅನ್ನಿಸಿತು. 'ನಿಮ್ಮ ಮಾತು ನಂಬಬಹುದೇ? ಬಿದನೂರಿನ ಚನ್ನಬಸವನಾಯಕರು ಸತ್ತರೆಂದೂ, ಕೊಲೆಯಾಯಿತೆಂದೂ ನಮಗೆ ಸುದ್ದಿ ಬಂದಿತ್ತು. ಹಾಗಿರುವಾಗ ನೀವು ಹೇಳುವ ಮಾತು ನಂಬುವುದು ಹೇಗೆ?' ಎಂದು ಕೇಳಿದೆ. 'ಇದು ನೋಡಿ ಮುದ್ರೆಯುಂಗುರ. ನಾವು ಸತ್ತೆವೆಂದು ನೀವು ಕೇಳಿದ ಸುದ್ದಿ ಸುಳ್ಳು. ಪ್ರಧಾನಿಗಳ ಬಳಿ ಕರೆದುಕೊಂಡು ಹೋಗಿ, ಅವರಿಗೆ ಮುಂದಿನ ಮಾತು ಹೇಳುತ್ತೇವೆ' ಎಂದರು. ಗಂಡಭೇರುಂಡದ ಮುದ್ರೆಯಿದ್ದ ನವರತ್ನದ ಉಂಗುರವನ್ನು ನೋಡಿ 'ಆ ಮಾತು ಇದ್ದರೂ ಇರಬಹುದು' ಎಂದು, ಬಿಡದಿಯ ಮನೆಯಲ್ಲಿ ಅವರನ್ನು ನಜರುಬಂದಿನಲ್ಲಿರಿಸಿ ಈ ಸುದ್ದಿ ನಿಮಗೆ ತಿಳಿಸಲು ಬಂದೆ" – ಎಂದು ಇದ್ದ ವಿಷಯವನ್ನೆಲ್ಲಾ ಹೇಳಿದ ಕಾಶಣ್ಣನಾಯಕ.

ಆತ ಹೇಳಿದುದನ್ನು ಕೇಳಿ, ಪ್ರಧಾನಿ ನರಸಪ್ಪಯ್ಯನವರ ಕುತೂಹಲ ಮಾತುಮಾತಿಗೆ ಮೆಟ್ಟಿಲುಮೆಟ್ಟಿಲಾಗೇರಿ –

"ರಾತ್ರಿ ಅವರ ಊಟ ಉಪಚಾರಕ್ಕೆ ಏರ್ಪಾಡುಮಾಡಿದಿರಾ ? ಅವರ ಬೆಳಗಿನ ಕೆಲಸ ಮುಗಿದಿದ್ದರೆ ಕರೆದುಕೊಂಡು ಬನ್ನಿ" – ಎಂದರು.

"ತಮ್ಮ ಅಪ್ಪಣೆ ಆದ ಹಾಗೆ"

- ಎಂದು ಹೇಳಿ, ಪರಿಚಾರಕ ತಂದುಕೊಟ್ಟ ಹಾಲನ್ನು ಅವಸರವಸರವಾಗಿ ಕುಡಿದು, ಬಂದಿದ್ದವರನ್ನು ಕರೆತರಲು ಹೋದ ಕಾಶಣ್ಣನಾಯಕ.

ದಳವಾಯಿಗಳು ಹೇಳಿದುದನ್ನು ಕೇಳಿ, ನರಸಪ್ಪಯ್ಯನವರ ತಲೆ, ತಾವು ಕೇಳಿದುದನ್ನೆಲ್ಲಾ ಅಳೆದು ಸುರಿದು ಯೋಚಿಸಲಾರಂಭಿಸಿತು.

ಬಿದನೂರಿನ ಅರಸು ಬಸವನಾಯಕರು ಮೃತರಾದಬಳಿಕ, ಪಟ್ಟಕ್ಕೆ ಬಂದ ಚನ್ನಬಸವನಾಯಕರು ಎರಡು ವರ್ಷ ಆಳಿ ಬಳಿಕ ತೀರಿಕೊಂಡರು ಎಂದು ಒಂದು ಸುದ್ದಿ ತಿಳಿಸಿದರೆ, ಮತ್ತೊಂದು ವಾರ್ತೆ ಬಸವನಾಯಕರ ಮಡದಿ ವೀರಮ್ಮಾಜಿಯವರು ನಂಬೈಯನೆಂಬ ಜಟ್ಟಿಯನ್ನು ಮೋಹಿಸಿ, ಆ ಮೋಹದಲ್ಲಿ ತನ್ನ ಗಂಡನನ್ನು, ನಂತರ ಅಧಿಕಾರಕ್ಕೆ ಬಂದ ಮಗನನ್ನು ಕೊಲ್ಲಿಸಿ, ಕೆಟ್ಟ ಹೆಸರು ಹೊತ್ತು, ಹೆಸರಿಗೆ ಸೋಮಶೇಖರನಾಯಕನೆಂಬ ಹುಡುಗನನ್ನು ದತ್ತು ತೆಗೆದುಕೊಂಡು, ತಾನೇ ಸರ್ವಾಧಿಕಾರ ಮಾಡುತ್ತಿದ್ದಾಳೆ ಎಂದು ತಿಳಿಸಿತ್ತು. ಆ ಎರಡು ಸುದ್ದಿಗಳನ್ನೂ ಕೇಳಿದ್ದ ನರಸಪ್ಪಯ್ಯ 'ಅವರ ಕರ್ಮ ಅವರನ್ನು ತಿನ್ನುತ್ತದೆ. ಅವರ ರಾಜ್ಯದ

ಚಿಂತೆ ನಮಗೇಕೆ?' ಎಂದುಕೊಂಡಿದ್ದಾಗ, ಸತ್ತ ರಾಜಕುಮಾರ ಚನ್ನಬಸವನಾಯಕ ತಾನು ಬದುಕಿದ್ದೇನೆ ಎಂದು ಹೇಳಿದರೆ ನಂಬುವುದೋ ಬಿಡುವುದೋ ಎಂದು ಆಶ್ಚರ್ಯಪಡುತ್ತಿರುವಾಗಲೇ, ಕಾಶಣ್ಣನಾಯಕ, ಚನ್ನಬಸವನಾಯಕ ಎಂದು ಹೇಳಿಕೊಂಡಾತನನ್ನು ಕರೆತಂದು ಅವರ ಇದಿರು ನಿಲ್ಲಿಸಿದ.

ತನ್ನೆದುರು ನಿಂತಾತನನ್ನು ನಖಶಿಖಾಂತವಾಗಿ ಪರೀಕ್ಷಕದೃಷ್ಟಿಯಿಂದ ನೋಡಿ –

"ಕುಳಿತುಕೊಳ್ಳಿ. ತಾವು ಬಿದನೂರಿನ ರಾಜರು ಎಂದು ಕೇಳಿದಿವಿ. ನಮ್ಮವರ ಅನುಮಾನದಿಂದ ತಮಗೇನೂ ತೊಂದರೆಯಾಗಲಿಲ್ಲವಲ್ಲಾ?" – ಎಂದು ಕೇಳಿದರು.

"ನಾವು ಬದುಕಿರುವುದೇ ಹೊರೆಯಾಗಿರುವಾಗ, ಅದಕ್ಕಿಂತ ಹೆಚ್ಚಿನ ತೊಂದರೆ ಬೇರೇನು ಆಗಬಹುದು ?" – ಬಂದಾತ ವಿಷಣ್ಣಧ್ವನಿಯಲ್ಲಿ ಕೇಳಿದ.

"ಹಾಗಲ್ಲ, ನಮ್ಮವರ ತನಿಖೆಯಿಂದ ತಮಗೆ ಅಪಮಾನ...."

"ಬಿಡಿ - ತಾಯಿ ಕೆಟ್ಟ ನಡತೆಯಾಕೆ, ಕೊಲ್ಲಿಸುವ ಪ್ರಯತ್ನ ಮಾಡಿದರು ಎಂದು ನಾವೇ ಹೇಳುವುದಕ್ಕಿಂತ ಹೆಚ್ಚಿನ ಆಪಮಾನ ಬೇರಾವುದಿದೆ. ಅದನ್ನೇ ಸಹಿಸಿಕೊಂಡು ನಾವು ಬದುಕಿದ್ದೇವೆ - ಎಂದಬಳಿಕ, ಚಿಲ್ಲರೆ ಮಾತಿಗೆ ಅಪಮಾನ, ಅಸಮಾಧಾನ ಎಂದು ಹೇಳಿಕೊಳ್ಳಲೂ ಹೇಸಿಗೆಯಾಗುತ್ತದೆ. ತಾವು ನನ್ನ ಮಾತು ನಂಬಿದರೆ ಅಷ್ಟೇ ಮರ್ಯಾದೆ ಸಾಕು."

"ನಾವು ನಂಬುವುದು ಬಿಡುವುದು ನಿಮ್ಮ ಕೈಯಲ್ಲಿದೆ. ನೀವಾಡಿದ ಮಾತೆಲ್ಲಾ ನಮ್ಮ ಕಿವಿಗೂ ಬಿದ್ದಿವೆ. ಕೇಳಬಹುದೇ - ನೀವು ಚನ್ನಬಸವನಾಯಕರು ಎಂದು ಹೇಳಿಕೊಳ್ಳಲು ನಿಮ್ಮ ಬಳಿ ಪ್ರಮಾಣಗಳೇನಾದರೂ ಉಂಟೆ ?"

"ಸಮಾಧಿಯಿಂದ ಬದುಕಿಬಂದ ನಮ್ಮ ಬಳಿ ಇರುವುದು ಎರಡೇ ಪುರಾವೆ – ಒಂದು ನಮ್ಮ ಮುಖ, ಮತ್ತೊಂದು ನಮ್ಮ ಕೈಯಲ್ಲಿರುವ ಈ ಮುದ್ರೆಯುಂಗುರ, ನೀವು ನಂಬಿ ನೆರವು ನೀಡಿದರೆ, ನಗರವನ್ನು ಗೆದ್ದು ಲಕ್ಷ ಜನರ ಸಾಕ್ಷಿಯಾಗಿ ನಮ್ಮ ಮಾತು ನಿಜ ಎಂದು ತೋರಿಸುತ್ತೇವೆ." – ಇದಿರು ಕುಳಿತಾತ ಗಂಭೀರವಾಗಿ ಹೇಳಿದ.

ಆತ ಮಾತನಾಡುತ್ತಿರುವಾಗ ನರಸಪ್ಪಯ್ಯ ಅವರ ಮುಖಭಾವ, ಮಾತಿನ ರೀತಿಯನ್ನು ನೋಡಿ ನಂಬಬಹುದು ಅಂದುಕೊಂಡರು. ಆದರೆ ಇಷ್ಟಕ್ಕೇ - ಗಂಭೀರವಾದ ಮಾತು, ಮುದ್ರೆಯುಂಗುರ, ಅನುಕಂಪ ಮೂಡಿಸುವ ರೀತಿ – ಎಂದೂ ಕಾಣದಿದ್ದವನನ್ನು ನಗರದ ಸಂಸ್ಥಾನಾಧಿಪತಿ ಎಂದು ನಂಬುವುದು ಹೇಗೆ ?

ನಂಬದಿದ್ದರೆ ಈತನನ್ನು ಏನು ಮಾಡಬೇಕು ?

ನಂಬಲು ಸಾಧ್ಯವಿಲ್ಲ ಎಂದು ಈತನನ್ನು ಆಚೆಗೆ ಕಳಿಸಿ, ಮುಂದೆ ಈತ ನಿಜವಾದ ದೊರೆಯೆಂದಾದರೆ, ಆಗ ಅಂಗೈಗೆ ಬಂದ ಬಂಗಾರದ ಗಟ್ಟಿಯನ್ನು ಬೆಣಚುಕಲ್ಲೆಂದು ಬಿಸುಟ ಹೆಡ್ಡನಂತಾಗದೇ ?

ನಗರದವರು ದುರ್ಗದವರ ಆಜನ್ಮವೈರಿಗಳು. ಅದೃಷ್ಟವಶಾತ್ ಅವರ ಅರಸೇ ನಮ್ಮ ಆಶ್ರಯವನ್ನು ಬಯಸಿ ಬಂದಿದ್ದಾನೆ. ಇದು ನಿಜವೆಂದಾದರೆ ಮುಂದೆ ಇತಿಹಾಸದ ಪುಟವನ್ನೇ ಬದಲಿಸುವಂತಾಗಬಹುದು.

ಇಟ್ಟುಕೊಂಡರೆ –

ಅನುಮಾನ ಪರಿಹಾರವಾಗುವವರೆಗೆ ಅಷ್ಟು ಅನ್ನ ದಂಡ. ಅಷ್ಟಕ್ಕಿಂತ ಹೆಚ್ಚೇನೂ ನಷ್ಟವಾಗಲಾರದು.

ಹೀಗೆ ಯೋಚಿಸಿ –

"ಆಯಿತು. ನೀವು ನಮ್ಮಲ್ಲಿರಲು ಸದ್ಯಕ್ಕೆ ಬಾಧಕವೇನೂ ಇಲ್ಲ. ಈಗಲೇ ನೀವು ರಾಜ್ಯ ಸಂಪಾದನೆಗೆ ನಮ್ಮ ನೆರವನ್ನು ಕೋರಿದರೆ ಅದಾಗುವುದು ಕಷ್ಟ - ನಾವು ದುರ್ಬಲರಲ್ಲ, ಆದರೂ ನಗರ ಬಲಿಷ್ಠ ರಾಜ್ಯ. ಯಾವುದಕ್ಕೂ ನಮಗೂ ಕಾಲಾವಕಾಶ ಕೊಡಬೇಕು"

- ಎಂದು ಹೇಳಿದರು, ನರಸಪ್ಪಯ್ಯ.

"ನಾವು ಕಾಯುತ್ತಿರುವುದೂ ಕಾಲಕ್ಕೇ - ಅಲ್ಲಿಯವರೆಗೆ ನಾವು ತಲೆಮರೆಸಿಕೊಂಡಿರಲೊಂದು ರಾಜಾಶ್ರಯ ಬೇಕಾಗಿದೆ."

-ಬಂದಾತ ಹೇಳಿದ -

"ನಾವು ಚನ್ನಬಸವನಾಯಕರು ಎಂದು ನಂಬಿಕೆಯಾಗಿದ್ದರೆ ಅಷ್ಟು ಮಾಡಬಹುದಲ್ಲಾ...."

"ಅಷ್ಟಕ್ಕೇನೂ ಅಡ್ಡಿಯಿಲ್ಲ. ಆದರೆ ಸೂಕ್ತ ಸಮಯ ಬರುವವರೆಗೂ ತಾವು ಯಾರು ಎಂಬುದು ನಮಗಷ್ಟೇ ತಿಳಿದಿರಬೇಕು. ನಿಮ್ಮ ಜೊತೆ ಬಂದವರನ್ನು ನಾವು ನಂಬಬಹುದೇ ?"

-ನರಸಪ್ಪಯ್ಯ ಕೇಳಿದರು.

"ಅವರನ್ನು ನಾವು ನಂಬದಿದ್ದರೆ ಇಂದು ಜೀವಂತವಾಗಿ ನಿಮ್ಮೆದುರು ನಿಲ್ಲುವುದು ಸಾಧ್ಯವಾಗುತ್ತಿರಲಿಲ್ಲ."

"ಅದು ಸರಿ – ನಿಮ್ಮ ಜೊತೆ ಬಂದವರು ನಿಮ್ಮ ಜೊತೆಯಲ್ಲೇ ಇರುತ್ತಾರೋ ?"

"ಒಬ್ಬಿಬ್ಬರಿರಬಹುದು. ಉಳಿದವರಿಗೆ ನಗರದ ಸೀಮೆಯಲ್ಲಿ ಮಾಡುವ ಕೆಲಸವಿದೆ. ನಮ್ಮ ನಿಮ್ಮ ರಾಜ್ಯಕ್ಕೆ ವೈರವಿದೆ. ಆದರೂ ನಾವು ನಿಮ್ಮನ್ನು ನಂಬಿದ್ದೇವೆ. ನಮ್ಮ ರಾಜ್ಯದ ಮೇಲೆ

ನಿಮಗಿರುವ ದ್ವೇಷವೇ ಇಂದಿನ ವಿಚಿತ್ರ ಪರಿಸ್ಥಿತಿಯಲ್ಲಿ ನಮ್ಮ ತಲೆಗಾಯಬಹುದೆಂದು. ಉಳಿದದ್ದು ನಿಮಗೆ ಸೇರಿದ್ದು" - ಎಂದು ಹೇಳಿದ, ಆತ.

"ಈಗಂತೂ ನಾವು ನಿಮ್ಮನ್ನು ನಂಬಿದ್ದೇವೆ. ನಮ್ಮ ದೊರೆಗಳಿಗೂ ಹೇಳುತ್ತೇವೆ. ಅವರ ಭೇಟಿಯನ್ನೂ ಮಾಡಿಸುತ್ತೇವೆ – ರಹಸ್ಯವಾಗಿ. ಆದರೆ ನಾವು ಹೇಳದೆ ನೀವು ಯಾರೆಂಬುದಾಗಲಿ, ನಮ್ಮ ಆಶ್ರಯದಲ್ಲಿದ್ದೀರೆಂಬುದಾಗಲಿ ಹೊರಗೆಲ್ಲೂ ಪ್ರಕಟವಾಗಬಾರದು. ಈ ಮಾತನ್ನು ನಿಮ್ಮವರಿಗೂ ಸ್ಪಷ್ಟವಾಗಿ ಹೇಳಬೇಕು."

"ನಮ್ಮವರಲ್ಲಿ ನಮಗೆ ನಂಬಿಕೆ ಉಂಟು. ನಿಮ್ಮನ್ನು ನಂಬುತ್ತೇವೆ. ಆದರೆ ನೀವು ನಮ್ಮನ್ನು ನಂಬುವುದು ಎಲ್ಲಕ್ಕಿಂತಲೂ ಮುಖ್ಯ."

"ಅಷ್ಟಕ್ಕೆ ನೀವು ನಮ್ಮನ್ನು ನಂಬಿ ನಿರಾತಂಕವಾಗಿರಬಹುದು, ನಿಮ್ಮ ವಸತಿಗೆ ತಕ್ಕ ಏರ್ಪಾಡುಮಾಡುತ್ತೇವೆ. ಅಲ್ಲಿಯವರೆಗೆ ಈಗಿರುವಲ್ಲಿ ಇರಲು ಅಭ್ಯಂತರವಿಲ್ಲವಲ್ಲ ?"

– ಎಂದು ಕೇಳಿದರು, ನರಸಪ್ಪಯ್ಯ.

"ಕೊತ್ವಾಲ ಚಾವಡಿಯವರ ಬಿಡದಿ – ನೆಲದಡಿಯ ಸಮಾಧಿಗೆ ಹೋಲಿಸಿದರೆ ಅರಮನೆ"

-ಎಂದು ಖೇದ ತುಂಬಿದ ನಗೆ ನಕ್ಕು ಹೇಳಿದ, ಬಂದಾತ.

ಆ ಮಾತು ಕೇಳಿ, ನರಸಪ್ಪಯ್ಯನವರಿಗೂ 'ಅಯ್ಯೋ, ವಿಧಿಯೇ' ಎನಿಸಿತು.

ಆದರೆ ಆಗ –

ಅವರು ಅಷ್ಟು ಹೇಳುವುದಕ್ಕಿಂತ ಹೆಚ್ಚಿನದೇನನ್ನೂ ಮಾಡುವ ಸ್ಥಿತಿಯಲ್ಲಿರಲಿಲ್ಲ.

* * *

ಆ ದಿನವೇ-

ಚನ್ನಬಸವನಾಯಕನ ರಹಸ್ಯ ವಸತಿಗೆ ತಕ್ಕ ವ್ಯವಸ್ಥೆಮಾಡಿ, ಪ್ರಭುಗಳನ್ನು ಕಂಡು ವಿಷಯವನ್ನೆಲ್ಲಾ ವಿವರಿಸಿ –

"ಇದು ಇಬ್ಬಾಯಿ ಕತ್ತಿ, ಹೇಗೂ ಬಳಕೆಯಾಗಬಹುದು. ಆಶ್ರಯ ಕೊಟ್ಟಿದ್ದು ಸರಿಯಾಯಿತೇ ?" – ಎಂದು ಕೇಳಿದರು.

ಪ್ರಧಾನಿಗಳು ಹೇಳಿದುದನ್ನೆಲ್ಲಾ ಸವಿವರವಾಗಿ ಕೇಳಿದ ಮದಕರಿನಾಯಕ -

"ಅಪಾಯಕ್ಕಂತೂ ಭೀತಿ ಇಲ್ಲವಲ್ಲ. ಅವರು ಇಬ್ಬಾಯ ಕತ್ತಿಯಾದರೂ ಹಿಡಿ ಇರುವುದು ನಮ್ಮ ಕೈಯಲ್ಲಿ, ಇರಲಿ – ಹೊತ್ತು ಬಂದಾಗ ಹೇಗೆ ಪ್ರಯೋಗಿಸಬೇಕೋ - ಚಿಂತಿಸೋಣ"

-ಎಂದಷ್ಟೇ ಹೇಳಿದ, ಮುಂದಿನದೇನೋ ಚಿತ್ರ ಕಾಣುತ್ತಾ.

ಚಿತ್ರ -

ಮನೆಬಾಗಿಲಿಗೆ ಆಶ್ರಯ ಬೇಡಿ ಬಂದ ಪ್ರಬಲ ಶತ್ರುರಾಜನನ್ನು ತಮ್ಮವನನ್ನಾಗಿ ಮಾಡಿಕೊಂಡು-

ಚಿತ್ರದುರ್ಗ-ನಗರ ಸಂಸ್ಥಾನಗಳೆರಡೂ ಒಂದಾಗಿ -

ತಮ್ಮ ಕುಸುಂಬಿವರ್ಣದ ಧ್ವಜದಲ್ಲಿ ಒಂದಾಗಿ ಕಲೆತ ಹನುಮದ್ಗರುಡರಂತೆ –

ಕಡಲನ್ನು ಹಾರುವ, ಬೆಟ್ಟವನ್ನು ಅಂಗೈಯಲ್ಲಿ ಎತ್ತಿ ತರುವ, ಸ್ವರ್ಗದ ಅಮೃತಕುಂಭವನ್ನೇ ಧರೆಗಿಳಿಸುವ ಸುವರ್ಣಾವಕಾಶ.

ಮಾಡಿದ ಯೋಚನೆಗಳೆಲ್ಲವೂ ಫಲಿಸುವುದೆಂದು ನಿಶ್ಚಯವಾಗಿ, ಆ ಫಲಕ್ಕೆ ಕೈಚಾಚಿದಾಗ -

ಅದಕ್ಕಾಗಿ ಮದಕರಿನಾಯಕನ ಹೃದಯ ಹಾತೊರೆಯುತ್ತಿದ್ದಾಗ -

ಅದೆಲ್ಲವನ್ನೂ ವಿಫಲಗೊಳಿಸುವಂತೆ –

ಪೂನಾದ ಪೇಶ್ವೆಗಳು, ಹೈದರಾಬಾದಿನ ಮೊಗಲ ಸಾಮ್ರಾಟರ ಪ್ರತಿನಿಧಿ ನಿಜಾಮರನ್ನು ನಡುಗಿಸಿ, ದಕ್ಷಿಣ ಭಾರತದಲ್ಲಿ 'ಅಜೇಯ' ಎನಿಸಿಕೊಂಡ. ಹೈದರಾಲಿ ಲಕ್ಷ ಫೌಜಿನೊಂದಿಗೆ, ಹೊಸದುರ್ಗಕ್ಕೆ ಮುತ್ತಿಗೆಹಾಕಿ, ಚಿತ್ರದುರ್ಗ ಸಂಸ್ಥಾನದ ಮೇಲೆರಗಿದ ಹದ್ದಾದ.

೧೨

"ಶ್ರೀರಂಗಪಟ್ಟಣದ ಹೈದರಾಲಿಯ ಒಂದು ಲಕ್ಷ ಸೇನೆ, ಬಾಗೂರನ್ನು ವಶಪಡಿಸಿಕೊಂಡು ಹೊಸದುರ್ಗಕ್ಕೆ ಮುತ್ತಿಗೆಹಾಕಿದೆ. ಈ ವಿಷಯದಲ್ಲಿ ನಿಮ್ಮೊಂದಿಗೆ ಮಾತನಾಡಲು, ಪತ್ರದೊಂದಿಗೆ ಹೈದರಾಲಿಯ ವಕೀಲರು ಬಂದಿದ್ದಾರೆ."

ಹೊಸದುರ್ಗ-

ಆ ಹೆಸರು ಕಿವಿಗೆ ಬೀಳುತ್ತಿದ್ದ ಹಾಗೆಯೇ ಮದಕರಿನಾಯಕನಿಗೆ ನೆನಪಾದದ್ದು - ತನ್ನ ಹುಟ್ಟೂರು ಜಾನಕಲ್ಲು.

ಹೊಸದುರ್ಗದ ಬೆಟ್ಟದ ಮೇಲೆ ನಿಂತು ಕೈಬೀಸಿದರೆ, ಜಾನಕಲ್ಲಿನ ಗುಡ್ಡಕ್ಕೆ ಕಾಣುತ್ತದೆ - ಅಷ್ಟು ಸನಿಹ. ಬಾಗೂರು ಗೆದ್ದ ಹೈದರನ ಸೇನೆ ಹೊಸದುರ್ಗಕ್ಕೆ ಮುತ್ತಿಗೆಹಾಕಿದರು ಎಂಬ ಜಾಸೂದರು ತಂದ ಅವಸರದ ಪಾರ್ತೆಯನ್ನು ಕೇಳಿ, ಮದಕರಿನಾಯಕನಿಗೆ, ಹೈದರಾಲಿ ತನ್ನ

ತಾಯಿಯ ಕತ್ತಿನ ತಾಳಿಗೇ ಕೈಹಾಕಿದನೆಂಬಷ್ಟು ಆಕ್ರೋಶ ಮೂಡಿ, ಸುದ್ದಿ ಕೇಳಿದ ಗಳಿಗೆಯಲ್ಲೇ ರಣಸನ್ನದ್ಧವಾಗಿರಬೇಕೆಂದು ಸೇನೆಯಲ್ಲಿ ಡಂಗೂರ ಹೊಯ್ಯಿಸಿ, ತನ್ನ ಸೇನಾ ಬಲ, ಆ ಅನಿರೀಕ್ಷಿತ ದಾಳಿಯ ವೇಳೆಯಲ್ಲಿ ಅನುಸರಿಸಬೇಕಾದ ರಣತಂತ್ರವನ್ನು ಚರ್ಚಿಸಲು ರಾಜ್ಯದ ಪ್ರಮುಖರ ಸಭೆ ನೆರೆಸಲು, ತಾನೇ ಪ್ರಧಾನಿಗಳನ್ನು ಕರೆಸಿ ಅಪ್ಪಣೆ ಮಾಡಿದ -ಪ್ರಧಾನಿಗಳು, ದಳವಾಯಿಗಳು ಸಭೆ ಕರೆಸಲು ಕಾಯದೆ.

ಹೈದರಾಲಿ ಚಿತ್ರದುರ್ಗ ಸಂಸ್ಥಾನದ ಮಣ್ಣಿನ ಮೇಲೆ ಪದಾಕ್ರಾಂತ ಮಾಡಿದುದನ್ನು ಕೇಳಿ, ನಾಯಕರು ಕೆರಳಿದುದಿರಲಿ, ಆ ಬಗ್ಗೆ ಚರ್ಚಿಸಲು ನೆರೆದ ಸಭೆ ಏಕಕಂಠದಿಂದ ಹೇಳಿತು –

“ಆ ತುಡುಗು ದಂಡನ್ನು ಎದುರಿಸಲು ನಾವು ಸಿದ್ಧ.”

ಈ ದೃಢನಿರ್ಧಾರದ ವಜ್ರಕವಚವನ್ನು ಧರಿಸಿಯೇ ಮದಕರಿನಾಯಕರು, ಹೊಸದುರ್ಗದಿಂದ ಹೈದರಾಲಿಯ ಓಲೆಯನ್ನು ತಂದ ವಕೀಲರನ್ನು ಕಾಣಲು ನಿರ್ಧರಿಸಿದ.

ನಾಯಕರ ಮನೋಭಿಪ್ರಾಯವನ್ನರಿತ ಪ್ರಧಾನಿ ನರಸಪ್ಪಯ್ಯನವರು, ಹೊಸದುರ್ಗದಿಂದ ಹೈದರಾಲಿಯ ಪತ್ರ ತಂದ ವಕೀಲರುಗಳಾದ ಮೀರ್ ಗುಲಾಂ ಆಲಿ, ಮುರ್ತಜಾ ಬೇಗರನ್ನು ಆತುರವಾಗಿ ನಾಯಕರ ಭೇಟಿಗೆ ಕರೆದೊಯ್ಯದೆ, ’ಎರಡು ದಿನ ಅರಸರಿಗೆ ಕೆಲಸವಿದೆ. ದಯವಿಟ್ಟು ಕಾಯಬೇಕು’ ಎಂದು ವಿನಯದಿಂದ ಮಾತಾಡಿ, ಅವರ ಅಂತಸ್ತಿಗೆ ತಕ್ಕ ಆತಿಥಿಭವನದಲ್ಲಿ ಅವರನ್ನು ಇಳಿಸಿ, ಅವರ ಆರಾತಿಥ್ಯಕ್ಕೆ ಬೇಕಾದದ್ದನ್ನೆಲ್ಲಾ ಮಾಡಿ, ತಮ್ಮ ಅನುಮತಿಪಡೆಯದೆ ಯಾರೇ ಆಗಲಿ ಹೈದರಾಲಿಯ ವಕೀಲರನ್ನು ಕಾಣದಿರುವಂತೆ ಕಟ್ಟೆಚ್ಚರದ ಕಾವಲು ಹಾಕಿ, ಮೂರನೆಯ ದಿನ. ಅವರನ್ನು ನಾಯಕರ ಭೇಟಿಗೆಂದು ಕರೆ ತಂದರು.

ತಮ್ಮ ನಿಯೋಗ ಕಾರ್ಯದಲ್ಲಿ ಹತ್ತಾರು ರಾಜಾಸ್ಥಾನಗಳನ್ನು ನೋಡಿರಬಹುದಾದ ನಿಯೋಗಿಗಳೂ, ಮೆಚ್ಚಿ ತಲೆದೂಗುವಂತೆ ಸಜ್ಜಾಗಿದ್ದ ಓಲಗದಲ್ಲಿ ನಾಯಕರು ಹೈದರಾಲಿಯ ನಿಯೋಗಿಗಳನ್ನು ಕಂಡರು. ಪರಸ್ಪರ ಪರಿಚಯವಾದಬಳಿಕ, ಹೈದರಾಲಿಯ ನಿಯೋಗಿಗಳಲ್ಲಿ ಹಿರಿಯನಾದ ಮೀರ್ ಗುಲಾಂ ಆಲಿ, ಹೈದರಾಲಿಯ ಪತ್ರವಿದ್ದ ಕಿನಕಾಪಿನ ಥೈಲಿಯನ್ನು ಪ್ರಧಾನಿ ನರಸಪ್ಪಯ್ಯರಿಗೆ ಒಪ್ಪಿಸಿ –

“ನಮ್ಮ ನವಾಬರದು ದಿನಕ್ಕೆ ನೂರು ಗಾವುದ ಹೋಗುವ ಸೇನೆ. ಸಣ್ಣ ಕೋಟೆ, ಕಿಲ್ಲೆಗಳ ಮುಂದೆ ಲಕ್ಷ ಸೇನೆ ಇಟ್ಟುಕೊಂಡು ಕಾಯುತ್ತಾ ಕುಳಿತಿರುವುದು ನಮ್ಮ ಸೇನೆಗೆ ಅಪಮಾನ. ಅರ್ಧ ದಿನದಲ್ಲಿ ಉತ್ತರ ಪಡೆದು ಬರಬೇಕು ಎಂದು ಅಪ್ಪಣೆಯಾಗಿತ್ತು. ಅರ್ಧ ದಿನವಿರಲಿ, ಎರಡು ದಿನ ಕಾಯಿಸಿರಿ”

-ಎಂದು ಅಸಮಾಧಾನ, ಶೀವಿಗಳು ಸಮಸಮವಾಗಿ ಬೆರೆತ ಧ್ವನಿಯಲ್ಲಿ ಹೇಳಿದ.

ಆ ಮಾತು ಕೇಳಿಯೇ ನಾಯಕರ ಮುಖ ಗಡುಸಾಯಿತು. ಆ ಮಾತಿಗೆ ನೇರವಾಗಿ ಉತ್ತರ ಕೊಡದೆ –

"ಪ್ರಧಾನಿಗಳೇ, ಶ್ರೀರಂಗಪಟ್ಟಣದ ಸರ್ವಾಧಿಕಾರಿಗಳ ಅಪೇಕ್ಷೆಯೇನೋ ಪತ್ರವನ್ನೋದಿ, ಅಭಿಪ್ರಾಯ ತಿಳಿಸಿ" - ಎಂದು ಚಾವಟಿಯ ಏಟಿನಂತೆ ಚುರುಕಾಗಿ ಹೇಳಿದರು.

ವಕೀಲರ ಮಾತಿಗೆ ನಾಯಕರು ಕೊಟ್ಟ ಉತ್ತರದ ರೀತಿಯಿಂದಲೇ ಅವರ ಮನೋಭಿಪ್ರಾಯವನ್ನರಿತ ಪ್ರಧಾನಿ ನರಸಪ್ಪಯ್ಯನವರು, ತಾವೇ ಹೈದರಾಲಿಯ ಮೊಹರಾದ ಥೈಲಿಯನ್ನು ಒಡೆದು, ಪತ್ರವನ್ನು ಓದಿ -

"ಸರ್ವಾಧಿಕಾರಿಗಳ ಪತ್ರದ ಸಾರಾಂಶವಿಷ್ಟೆ - 'ಒಂದು ಲಕ್ಷ ವರಹ ಬಂಡಣಿ ಕೊಡಬೇಕು. ಇಲ್ಲವಾದಲ್ಲಿ ನಿಮ್ಮ ಸೀಮೆ ನಿಮ್ಮದಾಗಿ ಉಳಿಯದು.' ಹಾಗೆಂದು ಬರೆಸಿದ್ದಾರೆ"

-ಎಂದು ಹೇಳಿದರು.

"ಖಂಡಣಿ – ಹಾಗಂದರೇನು ?"

-ಆ ಮಾತಿನ ಅರ್ಥವೇ ತಿಳಿಯದಂತೆ ಕೇಳಿದರು, ಮದಕರಿನಾಯಕರು.

"ಖಂಡಣಿ ಎಂದರೆ ಗೊತ್ತಾದ ಪೊಗದಿ. ರಾಜರಿಗೆ ಸಾಮಂತರು ಒಪ್ಪಿಸಬೇಕಾದದ್ದು."

-ವಿವರಿಸಿ ಹೇಳಿದರು, ಪ್ರಧಾನಿಗಳು.

"ಹಾಗೇ - ನಮ್ಮ ಸೀಮೆ ಸರ್ವಾಧಿಕಾರಿಗಳಿಗೆ ಸಾಮಂತ ರಾಜ್ಯವಾದದ್ದೆಂದು? ಯುದ್ಧದ ಅವಸರದಲ್ಲಿ ಅವರಿಗೆ ಇತಿಹಾಸ ಮರೆತುಹೋಗಿರಬೇಕು; ಇಲ್ಲವೇ ಪತ್ರ ಬರೆದವರು ಸರ್ವಾಧಿಕಾರಿಗಳ ಮಾತನ್ನು ತಪ್ಪಾಗಿ ಬರೆದಿರಬಹುದು. ಚಿತ್ರದುರ್ಗದಿಂದ ಪೊಗದಿಯನ್ನು ಕೇಳುವ ಗಂಡು ದೊರೆಗಳು ಇದ್ದಾರೆ ಎಂದು ಕೇಳಿಯೂ ನಮಗೆ ಗೊತ್ತಿಲ್ಲ."

- ನವಿರಾದ ವ್ಯಂಗ್ಯವಿದ್ದ ಧ್ವನಿಯಲ್ಲಿ ಹೇಳಿದರು ನಾಯಕರು.

ಆ ಮಾತು ಕೇಳಿ ಹೈದರಾಲಿಯ ವಕೀಲರ ಮುಖ ಕ್ರೋಧದಿಂದ ಕಪ್ಪಿಟ್ಟು -

"ಮೂರು ಜನ ಕರಣಿಕರು ಬರೆದಿದ್ದನ್ನು, ಆರು ಜನರಿಂದ ಓದಿಸಿ, ಪತ್ರ ಬರೆಸುವ ಸಂಪ್ರದಾಯ ನಮ್ಮದು" - ಎಂದ ಮುರ್ತಜಾ ಬೇಗ್.

"ತಪ್ಪು ಮೂರು ಜನರಿಂದಲೂ ಆಗಬಹುದು, ಆರು ಜನರಿಂದಲೂ ಆಗಬಹುದು. ಒಬ್ಬರು ಮಾಡಿದ ತಪ್ಪನ್ನು ಹತ್ತು ಜನ ಮಾಡುತ್ತಾರೆ. ಆಳು ಮಾಡಿದ ತಪ್ಪನ್ನು ಅರಸು ಅನುಭವಿಸಬೇಕಾಗುತ್ತದೆ. ಅದಕ್ಕೆ ನಾವು ಹೊಣೆಯಲ್ಲ. ಮತ್ತೊಮ್ಮೆ ವಿಚಾರಿಸಿ. ಪತ್ರ ಬರೆಯಲು ಹೇಳಿ, ತಮ್ಮ ಶ್ರೀಮಂತ ಸರ್ವಾಧಿಕಾರಿಗಳಿಗೆ"

-ಎಂದು ಪ್ರಧಾನಿ ನರಸಪ್ಪಯ್ಯನವರತ್ತ ತಿರುಗಿ -

“ಅವರ ಪತ್ರವನ್ನು ಮತ್ತೊಮ್ಮೆ ಓದಿ ನೋಡಿ. ನೋಡಿದ ನಿಮ್ಮ ಕಣ್ಣಾಗಲಿ, ಕೇಳಿದ ನಮ್ಮ ಕಿವಿಯದಾಗಲಿ ತಪ್ಪಿಲ್ಲವೆಂದು ಖಚಿತ ಮಾಡಿಕೊಳ್ಳಿ” - ಎಂದರು ನಾಯಕರು.

“ಎರಡೆರಡು ಬಾರಿ ಓದಿ, ಇದ್ದುದನ್ನು ಅರಿಕೆ ಮಾಡಿಕೊಂಡಿದ್ದೇನೆ. ಯಾವ ತಪ್ಪೂ ಆಗಿಲ್ಲ” - ಎಂದು ಖಚಿತಸ್ವರದಲ್ಲಿ ಹೇಳಿದರು, ಪ್ರಧಾನಿಗಳು.

“ಹಾಗಿದ್ದರೆ ನಮ್ಮ ಉತ್ತರವೂ ಸರಿಯಾಗಿದೆ. ನಮ್ಮ ಪರವಾಗಿ ವಿಶ್ವಾಸಪೂರ್ವಕವಾಗಿ ಉತ್ತರ ಬರೆಯಿಸಿ. ಪ್ರಧಾನಿಗಳೇ, ಸರ್ವಾಧಿಕಾರಿಗಳ ಬಗ್ಗೆ - ಅವರು ನಮ್ಮ ಗಡಿ ದಾಟಿ ಬಂದಿದ್ದರೂ ಇನ್ನೂ ಸ್ನೇಹವಿದೆ. ಬೇಕೆನಿಸಿದಾಗ ಅವರಿಗೆ ಸಹಾಯ ಮಾಡುವ ಮನಸ್ಸೂ ನಮಗಿದೆ. ಅದಕ್ಕಿಂತ ಹೆಚ್ಚಿನ ಋಣಾನುಬಂಧ ನಮ್ಮೀರ್ವರಲ್ಲಿ ಬೆಳೆಯಲು ಇದುವರೆವಿಗೂ ಕಾಲಾವಕಾಶವಾಗಲಿಲ್ಲ. ಆದರೂ ಅವರ ಬಗ್ಗೆ ನಮಗೆ ಸ್ನೇಹವಿದೆ; ಸಂಧಾನಕ್ಕಿನ್ನೂ ಸಮಯವಿದೆ – ಇದನ್ನು ಹೇಳಿ, ಹಾಗೇ ನಿಮ್ಮ ಸರ್ವಾಧಿಕಾರಿಗಳಿಗೆ ಲಕ್ಷ ಫೌಜು ಕೊಟ್ಟ ಭಗವಂತ ನಮಗೆರಡು ತೋಳೂ ಕೊಟ್ಟಿದ್ದಾನೆ. ಇದನ್ನು ನಮ್ಮ ಸ್ನೇಹಪೂರ್ವಕ ನಮನಗಳೊಡನೆ ತಿಳಿಸಿ...”

-ಎಂದು ಪ್ರಧಾನಿ ನರಸಪ್ಪಯ್ಯನವರತ್ತ ತಿರುಗಿ -

“ಶ್ರೀರಂಗಪಟ್ಟಣದ ನಿಯೋಗಿಗಳಿಗೆ ಸ್ವಲ್ಪವೂ ಆಯಾಸವಾಗದಂತೆ, ನಮ್ಮ ಗಡಿಯವರೆಗೂ ಕಟ್ಟೆಚ್ಚರದ ಕಾವಲಿನಲ್ಲಿ ಕಳಿಸಲು ಏರ್ಪಾಡುಮಾಡಿ”

-ಎಂದು ಹೇಳಿ ಸಭೆ ಮುಗಿಯಿತು ಎಂಬಂತೆ ಎದ್ದು ನಿಂತರು ನಾಯಕರು.

ಚಿತ್ರದುರ್ಗದ ಸಂಸ್ಥಾನಾಧೀಶರ ಗಂಡು ರೀತಿಯನ್ನು ಕಂಡು ನಿಬ್ಬೆರಗಾದರು- ಹೈದರಾಲಿಯ ನಿಯೋಗಿಗಳು.

* * *

ನಿಯೋಗಿಗಳು ದುರ್ಗದಿಂದ ತೆರಳಿದ ಬಳಿಕ, ಸೇರಿದ ಆಪ್ತರ ಸಭೆಯಲ್ಲಿ-

“ಪ್ರಭುಗಳು, ಸರ್ವಾಧಿಕಾರಿಗಳಿಗೆ ಕೊಟ್ಟ ಉತ್ತರ ಇನ್ನಷ್ಟು ಸೌಮ್ಯವಾಗಿರಬಹುದಾಗಿತೇನೋ ?” – ಎಂದು ಹೇಳಿದರು ಪ್ರಧಾನಿ ನರಸಪ್ಪಯ್ಯ.

“ಸೌಮ್ಯ - ಸಾಲಕೊಟ್ಟವರಂತೆ ಮನೆಬಾಗಿಲಿಗೆ ಬಂದು ಡಂಗ ಕುಳಿತ ಸರ್ವಾಧಿಕಾರಿಯ ವಕೀಲರನ್ನು ಸೆರೆಗಟ್ಟಿ. ನವಾಬರ ಪ್ರಶ್ನೆಗೆ ತೋಫಿನ ಉತ್ತರ ಕೊಡಬೇಕಾಗಿತ್ತು. ಅಷ್ಟು ಮಾಡದೆ ಬಿಟ್ಟಿದ್ದು - ನಮ್ಮ ಸಜ್ಜನಿಕೆ.”

- ಕ್ರೋಧವಿನ್ನೂ ಇಳಿಯದ ನಾಯಕರು ಹೇಳಿದರು.

“ಹಾಗಲ್ಲ – ಹೈದರಾಲಿಯವರ ಸೇನೆ ಸಾಮಾನ್ಯವಾದುದಲ್ಲ....”

"ಕಟ್ಟುಕಥೆ ಕೇಳಿ ಹೆದರುವವರು ಹೆಂಗಸರು, ಮಕ್ಕಳು. ಆ ಮಾತಿಗೆಲ್ಲಾ ಹೆದರಿದರೆ, ದುರ್ಗದ ಸೀಮೆಯಲ್ಲಿ ದಟ್ಟಿ ನೇಯಿಸುವುದನ್ನು ಬಿಟ್ಟು, ಬರೀ ಸೀರೆಗಳನ್ನು ನೇಯಿಸಬೇಕಾದೀತು. ಮಾತಾಯಿತು - ಸಜ್ಜಾಗಿರಲು ನಮ್ಮ ಸೈನ್ಯಕ್ಕೆ ಹೇಳಿ"

– ಎಂದು ಮಾತು ಮುಗಿಸಿದರು ನಾಯಕರು.

* * *

ದುರ್ಗಕ್ಕೆ ಹೋಗಿಬಂದ ನಿಯೋಗಿಗಳು ತಂದ ಉತ್ತರವನ್ನು ಮೂರು ಮೂರು ಬಾರಿ ಓದಿಸಿ ಕೇಳಿ, ಕೆರಳಿ -

"ಲವಂಡೀಕೆ....ಗಡಾಕ್ಕೆ ತೋಫು ಉಡಾಯಿಸಲು ಹೇಳಿ" – ಎಂದ ಹೈದರಾಲಿ.

"ಖಾವಂದಿರು ಅಷ್ಟು ದುಡುಕಬಾರದು. ದುರ್ಗದ ಸೇನೆ ಸಣ್ಣದಲ್ಲ, ಕೋಟೆಯೂ ಪೊಳ್ಳಲ್ಲ. ಮುಂದೆ ನಾವು ಮರಾಠರ ಮೇಲೆ ಸಾಧಿಸಬೇಕಾದ ಕಾರ್ಯವಿದೆ. ನಗರದ ಸಂಸ್ಥಾನದವರೂ ನಮ್ಮ ವೈರಿಗಳು. ನಾವಿಲ್ಲಿ ಯುದ್ಧಕ್ಕೆ ನಿಂತರೆ ಗೆಲ್ಲಬಹುದು. ಸೋತರೆ, ವೈರಿ ವೈರಿಗಳು ಮಿತ್ರರಾಗಿ, ನಮ್ಮ ಸೇನೆ ಕತ್ತರಿಯಲ್ಲಿ ಸಿಕ್ಕಂತಾಗಬಹುದು. ಸ್ನೇಹಕ್ಕೆ ಸಮಯವಿದೆ ಎಂದು ಹೇಳಿದ್ದಾರೆ. ದುರ್ಗದ ನಾಯಕರು, ಈಗ ಸ್ನೇಹ ಕೇಳಿ - ಶತ್ರುನಾಶವಾದಮೇಲೆ, ಅವರ ಪ್ರಶ್ನೆಗೆ ತಕ್ಕ ಉತ್ತರ ಕೊಡಲು ಕಾಲ ಬಂದೀತು"

- ಎಂದು ಸಲಹೆ ಮಾಡಿದರು ಪೂರ್ಣಯ್ಯ.

"ಆಯಿತು - ಸ್ನೇಹಿತರಾಗಿಯೇ ಬಂದು ನೋಡಿ ಎಂದು ಕಾಗದ ಕಳಿಸಿ"

-ಎಂದ ಹೈದರಾಲಿ, ಅಲ್ಪರಿಗೆ ದಾನ ಕೊಡುವ ಧ್ವನಿಯಲ್ಲೆ.

೧೨

ಹಗಲು -

ಹೊಳಲಕೆರೆಯ ಬಳಿಯ ವಿಸ್ತಾರವಾದ ಬಯಲಿನಲ್ಲಿ ನೂರಾರು ಗುಡಾರಗಳನ್ನು ಹಾಕಿದ ಸೇನಾಪಾಳಯದ ಮಧ್ಯದಲ್ಲಿ ಮೈಸೂರರಸರ ಗಂಡುಭೇರುಂಡ ಧ್ವಜವನ್ನು ಧರಿಸಿದ ಹೈದರಾಲಿಯ ಓಲಗದ ಬಿಡಾರದಲ್ಲಿ, ಸರದಾರರು, ಸಾಮಂತರು, ದರ್ಬಾರಿಜನ ಮುಂಚೆಯೇ ನೆರೆದು, ಉಚಿತಾಸನಗಳಲ್ಲಿ ಕುಳಿತು, ಹೈದರಾಲಿಯ ಆಗಮನವನ್ನೇ ನಿರೀಕ್ಷಿಸುತ್ತಾ, ಆತನಿಗಾಗಿ ಸಿದ್ಧಪಡಿಸಿದ ಉನ್ನತ ರಜತಾಸನದತ್ತ ನೋಡುತ್ತಿರಲು –

ವಂದಿಮಾಗಧರು ಪರಾಕು ಹೇಳಿ, ಬಂಗಾರದ ಕಟ್ಟಿಗೆಯಾಳುಗಳು ಇಬ್ಬದಿಯಲ್ಲಿ ನಿಂತು 'ಸವಾರಿ ಆ ರಹಾ ಹೈ....ರಾಸ್ತಾ - ರಾಸ್ತಾ' - ಎಂದು ಕೂಗುತ್ತಿರಲು, ಮಿತಭಟಪರಿವಾರದೊಂದಿಗೆ ಸಭಾಪ್ರವೇಶ ಮಾಡಿದ ಹೈದರಾಲಿ ತನ್ನ ಆಸನದಲ್ಲಿ ಕುಳಿತು, ಮಾಮೂಲಿಯ ಮಾತಾದ ಬಳಿಕ, ಸುತ್ತಲೂ ಕಣ್ಣಾಡಿಸಿ ನೋಡಿ -

"ಚಿತ್ರದುರ್ಗದ ಪಾಳೆಯಗಾರರು ನಿನ್ನೆಯ ರಾತ್ರಿಯೇ ಬಂದರೆಂದು ಕೇಳಿದೆವು – ಇನ್ನೂ ಬರಲಿಲ್ಲವೇ?" – ಎಂದು ಕೇಳಿದ.

ಆತನ ಪ್ರಶ್ನೆಗೆ ಉತ್ತರವೆಂಬಂತೆ, ಹೊರಗೆ, ಅಷ್ಟು ದೂರದಲ್ಲಿ ಕಹಳೆ, ಭೇರಿಗಳು ಮೊಳಗಿ, ಉಚ್ಚವಾದ ನೀಳ್ದನಿಯಲ್ಲಿ ವಂದಿಮಾಗಧರು -

"ಶ್ರೀ ಶ್ರೀ ಛತ್ರಪತಿ ಖಡೆ ಯಶೋವಂತ -

ಪರದಳಬಾಡ -

ಅರಿರಾಯಮರ್ದನ-

ಹಿಂಡುಪಾಳೆಯಗಾರರ ಪ್ರಚಂಡ -

ಇಟ್ಟ ಹೆಜ್ಜೆ ಹಿಂದೆಗೆಯುವವರ ಗಂಡ -

ನುಡಿದು ತಪ್ಪುವ ಲೋಭಿನಾಯಕರ ಗಂಡ -

ಮಲೆನಾಡಿನವರ ಗಂಡ-

ಚಂದ್ರಗಾವಿಯ ಛಲದಂಕ -

ಭಾರಿ ನಿಗಳಾಂಕ -

ಧಾಳಿಗೆ ವಜೀರ -

ಶ್ರೀಮನ್ ಮಹಾನಾಯಕಾಚಾರ್ಯ-

ನಾಯಕಶಿರೋಮಣಿ -

ಕಾಮಗೇತಿ ಕಸ್ತೂರಿ-

ಹಗಲುಕಗ್ಗೊಲೆಮಾನ್ಯ-

ಗಾದ್ರಿಮಲೆ ಹೆಬ್ಬುಲಿ-

ಗಂಡುಗೊಡಲಿ ಸರ್ಜಾ-

ರಾಜಾ ಕಸ್ತೂರಿ ರಂಗಪ್ಪನಾಯಕರ ವರಪುತ್ರ ಪ್ರಚಂಡ -

ರಣದೋರ್ದಂಡ ರಾಜಾ ಶ್ರೀ ಮದಕರಿನಾಯಕ -

ರಾಜಾ - ಮಹಾರಾಜಾ -

ಪರಾಕ್...ಭೋ...ಪರಾಕ್...

-ಎಂದು ಹೊಗಳುತ್ತಿರಲು, ತೂರ್ಯಗಳು ಮೊಳಗುತ್ತಿರಲು, ತನ್ನ ಬಿಡಾರದಿಂದ, ರಾಜೋಚಿತ ಮರ್ಯಾದೆಗಳೊಡನೆ, ಬೋಯಿಗಳು ಹೊತ್ತ ಬೆಳ್ಳಿಯ ಪಲ್ಲಕ್ಕಿಯಲ್ಲಿ ಹೈದರಾಲಿಯ ಓಲಗ ಬಿಡಾರದ ಬಳಿ ಬಂದು, ಬಂಗಾರದ ಕಟ್ಟಿಗೆಯಾಳುಗಳು ಕೈಗೊಟ್ಟು, ಕೆಳಗಿಳಿಸಿದ ಪಲ್ಲಕ್ಕಿಯಿಂದ ಕೆಳಗಿಳಿದು, ಮುಂದೆ ದಾರಿ ತೋರುತ್ತಿರಲು-

ತನ್ನ ನೆಲೆವೀಡಾದ ಕಾಡಿನಲ್ಲಿ, ನಿರಾತಂಕ ನಿರ್ಭೀತಿಯಿಂದ ವಿಹರಿಸಹೊರಟ, ಯೌವನ ಮದೋನ್ಮತ್ತ ಪುರುಷವ್ಯಾಘ್ರದಂತೆ, ಬಿಳಿಯ ರೇಶಿಮೆಯ ನಿಲುವಂಗಿಯ ಮೇಲೆ, ರತ್ನಾಭರಣಗಳಿಂದೊಪ್ಪುವ ಬೀಸಾದ ಗಂಡೆದೆಯನ್ನು ಸವಾಲುಹಾಕುವಂತೆ ಮುಂಚಾಚಿ, ನಡಗೆಯ ಗಂಡುಗಾಡಿಗೆ ಭೂಮಿಯೇ ಹಾಸಿದ ರತ್ನಗಂಬಳಿಯೆಂಬಂತೆ ತುಳಿದು, ನಿಧಾನವಾಗಿ ತನ್ನ ಆಸನದತ್ತ ನಡೆದುಬಂದು ಮದಕರಿನಾಯಕನ ಗಂಡುಠೀವಿಗೆ ಮನಸೋತರೂ, ಒಳಗೇ ಕೋಪ ಕುದಿದು - 'ಲವಂಡೀಕೆ....ಇತನಿ ಹಿಮ್ಮತ್?' ಎಂದು ಕೇಳಬೇಕೆಂದೆನಿಸಿ, ತುಟಿಯವರೆಗೂ ಬಂದ ಮಾತನ್ನು ತಡೆಹಿಡಿದು, ಹೈದರಾಲಿ ನೋಡಿದ – ಕಣ್ಣ ತಕ್ಕಡಿಯಲ್ಲಿ ಮದಕರಿನಾಯಕನ ಬೆಲೆ ಕಟ್ಟುವ ಚಿನಿವಾರ ದೃಷ್ಟಿಯಿಂದ.

ನಾಯಕರು ಬಂದ ರೀತಿ -

ಸರ್ವಾಧಿಕಾರಿಗಳ ಇದಿರು ಸಾಮಾನ್ಯ ಸಾಮಂತರು ಬರುವ ರೀತಿಯಲ್ಲ.

ಅವರು, ಅಷ್ಟು ದೂರವಿರುವಾಗಲೇ ನಡುಬಾಗಿ, ಶುನಕದಂತೆ ಬಳಿಸಾರಿ, ಮೂರು ಮೂರು ಬಾರಿ ಕುರ್ನಿಸಾತ್ ಮಾಡಿ, ಕೈಜೋಡಿಸಿ, ಕುಳಿತುಕೊಳ್ಳಲೂ ಅಪ್ಪಣೆ ಬೇಡುವುದು. ಹೈದರಾಲಿಯ ಸಭಾ ಸಂಪ್ರದಾಯ.

ಮದಕರಿನಾಯಕರ ಮೈಯನ್ನು ಮೃದುವಾಗಿ ಮುಟ್ಟಿ ಮೃದು ಧ್ವನಿಯಲ್ಲಿ -

"ಸಾಮಂತರು...." – ಎಂದು ಏನೋ ಹೇಳಹೊರಟರು, ದರ್ಬಾರುಬಕ್ಷಿಗಳು.

"ಸಾಮಂತರು..."

-ಆ ಮಾತು ಕಿವಿಗೆ ಬೀಳುತ್ತಿದ್ದ ಹಾಗೇ, ಮದಕರಿನಾಯಕರ ಮುಖ ಕಾದು ಕೆಂಪೇರಿದ ತಾಮ್ರದ ತಗಡಿನಂತಾಗಿ, ಮೃದುವಾದರೂ ದೃಢವಾದ ಕಂಠದಲ್ಲಿ –

"ಸಾಮಂತರು....ತಪ್ಪಾಡುತ್ತಿದ್ದೀರ....ನಾವು ಸಾಮಂತರಲ್ಲ - ಸ್ನೇಹಿತರು. ಅಹುದೋ ಅಲ್ಲವೋ, ಕೇಳಿ ನೋಡಿ" - ಎಂದ ಮದಕರಿನಾಯಕ, ತಟಕ್ಕನೆ ನಿಂತಲ್ಲಿಯೇ ನಿಂತು.

ಹಿಂದೆಂದೂ ಕಾಣದ ಈ ಸೋಜಿಗವನ್ನು ಚಿತ್ರಾರ್ಪಿತ ಪ್ರತಿಮೆಗಳಂತೆ ಕುಳಿತು ನೋಡುತ್ತಿದ್ದ ಸಾಮಂತ, ಮಾಂಡಲಿಕ, ಮನ್ನೆಯರು, ದರ್ಬಾರಿನ ಜನ – ಮುಂದೇನಾಗುವುದೋ ಎಂದು ದಿಗಿಲುಗಣ್ಣುಗಳಿಂದ ನೋಡುತ್ತಿರಲು, ಹೈದರಾಲಿ -

"ಚಿತ್ರದುರ್ಗದ ಪಾಳಯಗಾರರು ದಯಮಾಡಿಸಬೇಕು. ಬಕ್ಷಿಗಳೇ - ಅವರಿಗೆ ಉಚಿತಾಸನವನ್ನು ತೋರಿಸಿ"

-ಎಂದಪ್ಪಣೆ ಮಾಡಿ, ತನಗೆ ಮದಿಸಿದ ಮದಕರಿನಾಯಕನಿಗೆ ಪ್ರತಿವಂದನೆ ಮಾಡಿ -

"ನಮ್ಮ ಕರೆಯಂತೆ ಬಂದದ್ದು ಬಹು ಸಂತೋಷ. ತಾವು ಕುಶಲವೇ, ತಮ್ಮ ರಾಜ್ಯ ಕುಶಲವೇ?" – ಎಂದು ಕೇಳಿದ.

"ತಮಗೆ ಶ್ರೀರಂಗನಾಥನ ಕೃಪೆ ಇದೆ. ನಮಗೆ ಶ್ರೀಮಾತೆ ಉತ್ಸವಾಂಬೆಯ ಅನುಗ್ರಹವಿದೆ. ದೇವತಾನುಗ್ರಹದಿಂದ ಸಕಲವೂ ಕುಶಲ. ನಮ್ಮ ನಾಡವರೆಗೂ ಬಂದು ಸಂತೋಷ ಮಾಡಿದಿರಿ. ತಾವು ನಮ್ಮ ಅತಿಥಿಗಳು. ನಮ್ಮ ದುರ್ಗದವರೆಗೂ ಬಂದಿದ್ದರೆ ಯಥೋಚಿತವಾಗಿ ಸತ್ಕಾರಮಾಡುತ್ತಿದ್ದೆವು. ಈಗ ನಮ್ಮ ಮನೆಯಲ್ಲೇ ನಮ್ಮನ್ನು ಅತಿಥಿಗಳನ್ನಾಗಿ ಮಾಡಿದಿರಿ – ತಮ್ಮ ವಿಶ್ವಾಸ ದೊಡ್ಡದು. ಮುಂದೆ ನಮ್ಮಿಂದಾಗಬಹುದಾದುದನ್ನು ಹೇಳಬೇಕು" - ಎಂದು ಕೇಳಿದ ಮದಕರಿನಾಯಕ.

ನಯ-ವಿನಯಗಳಿದ್ದರೂ ಮರ್ಮಾಘಾತವಾದ ಮಾತುಗಳನ್ನಾಡಿದ ಮದಕರಿನಾಯಕನ ಮಾತನ್ನು ಕೇಳಿ, ಹೈದರಾಲಿಯ ಹೃದಯದಲ್ಲಿ ಕ್ರೋಧ ಕಡೆದುಬಂದರೂ ಅದನ್ನು ಮಾತಿನಲ್ಲಿ ತೋರಗೊಡದೆ –

"ತಮ್ಮಲ್ಲಿ ಆಡಬೇಕಾದ ಮಾತು ಸಾಕಷ್ಟಿದೆ. ಏಕಾಂತದಲ್ಲಿ ಅದನ್ನಾಡಬಹುದು. ಒಂದು ದಿನ ಇಲ್ಲಿರಲು ಬಿಡುವುಂಟೆ ?" – ಎಂದು ಕೇಳಿದ.

"ತಮ್ಮ ಅಪೇಕ್ಷೆ ಇದ್ದಂತೆ ಆದೀತು" - ಎಂದಷ್ಟೇ ಹೇಳಿದ. ಮದಕರಿನಾಯಕ.

"ತಮಗೆ ಬೇಸರವಾಗದಿದ್ದಲ್ಲಿ ಇವತ್ತಿನ ರಾಜಿಕಕ್ಕೆ ನಾವು ತೊಡಗುತ್ತೇವೆ"

- ಎಂದು ಪೂರ್ಣಯ್ಯನವರು ನೋಡಿದ ಹೈದರಾಲಿ.

ಹೈದರಾಲಿ ತನ್ನ ಕೆಲಸದಲ್ಲಿ ನಿರತನಾದಾಗ, ಮದಕರಿನಾಯಕ ಹಾಗೇ ಅಷ್ಟು ದಿನ ಬಹುವಾಗಿ ಕೇಳಿದ್ದ ಹೈದರಾಲಿಯನ್ನು ನೋಡಿದ.

ನೋಡಲು ಹೈದರಾಲಿ ಅಷ್ಟೇನೂ ಭವ್ಯ ವ್ಯಕ್ತಿಯಾಗಿ ತೋರಲಿಲ್ಲ. ಮಟ್ಟಸವಾದ ಎತ್ತರದ ತೆಳು ಮೈಕಟ್ಟಿನ ಆಳು. ಕಪ್ಪೆಂದೇ ಹೇಳಬಹುದಾದ ಮೈಬಣ್ಣ; ಒರಟಾಗಿ ಕಾಣಿಸುವಂಥ, ಸ್ವಲ್ಪ ಚೌಕಾಕಾರದ ಮುಖದಲ್ಲಿ ಒರಟುತನ ಎದ್ದು ಕಾಣಿಸುವ ಕುರುಚಲು ಗಡ್ಡ ಮೀಸೆ ; ತುದಿ ಕೊಂಚ

ಮೇಲೆದ್ದ ತೆಳು ಮೂಗು; ದಪ್ಪನಾದ ಕೆಳದುಟಿಯ ಬಾಯಿ; ಆ ಮುಖದಲ್ಲೆಲ್ಲಾ ಎದ್ದು ಕಾಣಿಸುವುದು - ಪಾದರಸದಂತೆ ಚಲಿಸುವ ಕೂರ್ನೋಟದ ಕಣ್ಣುಗಳು.

ಎದೆಗೆ ಗುಂಡಿಯ ಬದಲು, ಅಡ್ಡಡ್ಡವಾಗಿ ಸಾಲುದಾರ ಪೋಣಿಸಿದ, ಮೈ-ತೋಳುಗಳಿಗೆ ಹತ್ತಿಕೊಂಡಂಥ ಬೆಳಿಯ ಮಸ್ಲಿನ್ ಅಂಗರೇಖು, ಸೊಂಟಕ್ಕೆ ಜಿಗಿಯಾಗಿ ಕಟ್ಟಿದ ರೇಶಿಮೆಯ ವಸ್ತ್ರ – ಎದೆ ಅಗಲವಾಗಿ ಕಾಣುವಂತೆ ಮಾಡಿದೆ. ತಲೆಯ ಮೇಲೊಂದು ಮುತ್ತಿನ ಗರಿ ಸಿಕ್ಕಿಸಿದ, ಮೇಲೆ ಚಪ್ಪಟೆಯಾದ ಅಡ್ಡಸರಿಗೆರುಮಾಲು, ಎಡಗೈಯಲ್ಲೊಂದು ಕಂಕಣ – ಅಷ್ಟೇ ಆಭರಣ – ಇಷ್ಟು ದೊಡ್ಡ ರಾಜ್ಯ ಆಳುವ ಸರ್ವಾಧಿಕಾರಿಗೆ! ಸುಖಾಸನದ ಮೇಲಿಟ್ಟ ದಪ್ಪನಾದ ಲೋಡಿಗೆ ಮೈಯಾನಿಸಿ ಕುಳಿತಿದ್ದ ಹೈದರಾಲಿ.

ಎಷ್ಟು ಸಾಮಾನ್ಯ, ಸರಳ ವ್ಯಕ್ತಿ, ಆದರೆ ಆತನ ಸುತ್ತೆ ಏನೋ ಒಂದು ಭಯದ ಪರಿವೇಶವಿದ್ದಂತೆ ಇತ್ತು.

ಆತ ಎಷ್ಟು ಸರಳನೋ, ಆತನಿದ್ದ ಡೇರೆಯೂ ಅಷ್ಟೇ ಸರಳ. ಬಿಳಿಯ ಬಣ್ಣದ ಮೇಲೆ ಹೈದರಾಲಿಗೆ ಪ್ರೀತಿ ಹೆಚ್ಚು ಎಂದು ಕಾಣುತ್ತದೆ. ತೊಟ್ಟ ಉಡುಗೆ ಬಿಳಿಯ ಬಣ್ಣದ್ದಿರಲಿ, ಹೊರಗೆ ವಿವಿಧ ವರ್ಣರಂಜಿತವಾದ ಗುಡಾರವೂ, ಒಳಗೆ ಶುಭಶ್ವೇತವರ್ಣದ ರೇಶಿಮೆಯ ವಸ್ತ್ರದಿಂದ ಆಚ್ಛಾದಿತವಾಗಿತ್ತು. ನೆಲಕ್ಕೆ ಹಾಸಿದ ಹೂಗೆಲಸವಿದ್ದ ರತ್ನಗಂಬಳಿಯಲ್ಲ ಬಿಳುಪೇ ಪ್ರಧಾನ ವರ್ಣ.

ಹೈದರಾಲಿಯ ಓಲಗದ ಬಿಡಾರದಲ್ಲಿ ಮದಕರಿನಾಯಕನಿಗೆ ಎಲ್ಲಕ್ಕಿಂತ ಹೆಚ್ಚು ಆಶ್ಚರ್ಯವನ್ನುಂಟುಮಾಡಿದ್ದು, ಆಸ್ಥಾನಮುಖ್ಯರಿಗಿಂತಲೂ ಕರಣಿಕರ ಪಡೆ; ಅದಕ್ಕಿಂತಲೂ ಮಿಗಿಲಾಗಿ ಆತನ ಸುತ್ತಲೂ ಬಾರುಕೋಲು ಹಿಡಿದು ನಿಂತ ಐವತ್ತು ಜನ, ಇದ್ದಿಲು ಮೈಬಣ್ಣದ ಹಬಸಿ ಆಳುಗಳು; ಕತ್ತಿ, ಕಠಾರಿ ಹಿಡಿದವರಿಗಿಂತ ಅವರೇ ಹೆಚ್ಚು ಭಯಂಕರ.

ಇದೆಲ್ಲಕ್ಕಿಂತ ಮಿಗಿಲಾಗಿ ಮದಕರಿನಾಯಕನಿಗೆ ಆಶ್ಚರ್ಯವನ್ನು ಉಂಟುಮಾಡಿದ್ದು ಹೈದರಾಲಿಯ ಕಾರ್ಯವಿಧಾನ. ಅವಸರದ ಕೆಲಸದ ಮೇಲೆ ಬಂದುಹೋಗುವವರೊಡನೆ ಮಾತನಾಡುತ್ತಿದ್ದರೂ, ಆತ ಕರಣಿಕರಿಗೆ ಹೇಳಿ ಬರೆಸುತ್ತಿದ್ದ ಕಾಗದದ ಕೆಲಸ ನಿಲ್ಲುತ್ತಿರಲಿಲ್ಲ. ಮಾತಿನ ಮಧ್ಯೆ ಎಲ್ಲಿ ನಿಂತ ಮಾತು, ಪುನಃ ಅಲ್ಲಿಂದಲೇ ಆರಂಭವಾಗುತ್ತಿತ್ತು; ಸ್ವಲ್ಪವೂ ಹಿಂದುಮುಂದಾಗುತ್ತಿರಲಿಲ್ಲ; ಎಲ್ಲಿಗೆ ನಿಂತಿತು ಎಂದು ಕರಣಿಕರನ್ನೂ ಕೇಳುತ್ತಿರಲಿಲ್ಲ. ಎಷ್ಟು ಅಸಾಧಾರಣ ಜ್ಞಾಪಕಶಕ್ತಿ ಆತನದೋ, ಆಷ್ಟೇ ಅಸಾಧಾರಣ ಆತ ಕಾಗದ ಬರೆಸಲು ಬಳಸುತ್ತಿದ್ದ ವಿವಿಧ ಭಾಷೆ - ಕನ್ನಡ, ತೆಲುಗು, ತಮಿಳು, ಮರಾಠಿ, ಉರ್ದು, ಬರೆದುಕೊಳ್ಳುವ ಯಾರಿಗೂ ಬಿಡುವಿರಲಿಲ್ಲ. ಅದೂ ಎಷ್ಟು ವಿಚಿತ್ರ. ಒಂದು ಕಾಗದ ಮೂರು ಜನ ಬರೆಯ ಬೇಕು; ಒಬ್ಬರು ಬರೆದದ್ದನ್ನು ಬೇರೆ ಮೂರು ಜನರು ಓದಿ ಹೇಳಬೇಕು. ಒಂದು ಅಕ್ಷರ ವ್ಯತ್ಯಾಸ ಕಂಡರೂ

ಧಾರಾಳವಾಗಿ, ನಿಸ್ಸಂಕೋಚವಾಗಿ ಗ್ರಾಮ್ಯಭಾಷೆಯ ಪ್ರಯೋಗ, ಅಷ್ಟೇ ಅಲ್ಲ - ತಪ್ಪು ಬರೆದ ಅಥವಾ ಹೇಳಿದ ಕರಣಿಕನ ಹೆಸರು ಹೇಳಿ 'ಇವನ ಲೆಕ್ಕದಲ್ಲಿ ಇವನಿಗೆ ಎರಡು ಕೊರಡಾ ಏಟು ಎಂದು ನೆನಪಿಟ್ಟುಕೋ' ಎಂದು ತನ್ನ ಸುತ್ತ ನಿಂತ ಬಾರುಕೋಲು ಪಡೆಯ ಮುಖ್ಯಸ್ಥನಿಗೆ ಹೇಳುತ್ತಿದ್ದ. ಅದನ್ನು ಕೇಳಕೇಳುತ್ತಾ 'ಈ ನವಾಬನದು ಕತ್ತಿಗಿಂತ ಬಾರುಕೋಲಿನದೇ ರಾಜ್ಯ' ಎನಿಸಿತು, ಮದಕರಿನಾಯಕನಿಗೆ.

ಹೀಗೆ ದಿನನಿತ್ಯದ ಕೆಲಸದೊಂದಿಗೆ ಆಸ್ಥಾನದ ಕೆಲಸವನ್ನೂ ಮುಗಿಸಿ, ಸಭೆಯನ್ನು ಬರಖಾಸ್ತು ಮಾಡುವಂತೆ, ಕಣ್ಸನ್ನೆಯಿಂದಲೇ ದರಬಾರುಬಕ್ಷಿಗಳಿಗೆ ಸೂಚಿಸಿ, ಮದಕರಿ ನಾಯಕನತ್ತ ತಿರುಗಿ -

"ಈ ಅಪರಾಹ್ನ ತಮಗೆ ಬಿಡುವಿದ್ದರೆ ನೋಡಬಹುದು. ತಮ್ಮ ಅನುಕೂಲ ಹೇಗೆ ?" - ಎಂದು ಕೇಳಿದ ಹೈದರಾಲಿ.

"ನಾವು ಬಂದಿರುವುದೇ ತಮ್ಮೊಂದಿಗೆ ಇದ್ದು ಹೋಗಲು. ತಮ್ಮ ಅನುಕೂಲ ನೋಡಿ ತಿಳಿಸಬೇಕು" – ಎಂದ ಮದಕರಿನಾಯಕ.

"ನೀವು ನಮ್ಮಲ್ಲಿಗೆ ಬರುತ್ತೀರೋ, ನಾವೇ ನಿಮ್ಮ ಬಿಡಾರಕ್ಕೆ ಬರಬೇಕೋ ?"

- ಹೈದರಾಲಿ ಮದಕರಿನಾಯಕನ ಮುಖಭಾವವನ್ನು ಪರೀಕ್ಷಕ ದೃಷ್ಟಿಯಿಂದ ನೋಡುತ್ತಾ ಕೇಳಿದ.

"ತಾವೇ ಹೇಳುವುದಾಗಲಿ."

"ನಾವು ಸಿಪಾಯಿಜನ, ನೀವು ರಾಜರು, ರೀತಿ-ರಿವಾಜಿಗೆ ನಿಮ್ಮಲ್ಲಿ ನಿಗಾ ಹೆಚ್ಚೆಂದು ಕಾಣುತ್ತದೆ. ನಿಮಗೆ ನಮ್ಮ ಮಕ್ಕಳ ವಯಸ್ಸು. ನೀವೇ ಬಂದರೆ ಸಂತೋಷವಾಗುತ್ತದೆ."

"ರೀತಿ-ರಿವಾಜಿಗಿಂತಲೂ ಪ್ರೀತಿ ಮುಖ್ಯ. ತಾವು ಬರಬೇಕು ಎನ್ನುವುದಾದರೆ ಹಾಗೂ ಆಗಬಹುದು. ಹಿರಿಯರಿಗೆ ಮರ್ಯಾದೆ ಕೊಡುವುದೂ ರೀತಿಯೇ" – ಎಂದ ಮದಕರಿ ನಾಯಕ.

"ತಾವು ಈ ಮಾತು ಹೇಳಿದ್ದು ತುಂಬಾ ಸಂತೋಷವಾಯಿತು. ಆಗತ್ಯವಾಗಿ ದಯ ಮಾಡಿಸಬೇಕು. ನಾವೇ ಜನರನ್ನು ಕಳಿಸುತ್ತೇವೆ"

- ಎಂದ ಹೈದರಾಲಿ, ತನ್ನೊಂದಿಗೆ ಎದ್ದು ನಿಂತ ಮದಕರಿನಾಯಕನ ಕೈಹಿಡಿದು.

ಓಲಗದ ಊಳಿಗದವರು ಬಂದವರಿಗೆಲ್ಲಾ ಅತ್ತರು, ಹೂವನ್ನು ಕೊಟ್ಟಮೇಲೆ ಸಭೆ ಬರಖಾಸ್ತಾಯಿತು.

'ರಾಜಕಾರ್ಯ ಮಾಡಬೇಕು ಎಂದರೆ ಹೀಗೆ ಮಾಡಬೇಕು.' – ಎಂದು ಹೈದರನ ಕಾರ್ಯ ವಿಧಾನವನ್ನು ಮೆಚ್ಚುತ್ತಾ, ಮದಕರಿನಾಯಕ ತನ್ನ ಬಿಡಾರಕ್ಕೆ ಹಿಂದಿರುಗಿದ.

೧೪

ಆ ಅಪರಾಹ್ನ-

ತನ್ನನ್ನು ಕಾಣಲು, ತನ್ನ 'ಖಾಸಾ ಬಿಡಾರ'ದ ಬಳಿ, ಇಬ್ಬರು ಅಂಗರಕ್ಷಕರೊಡನೆ ಬಂದ ಮದಕರಿನಾಯಕನನ್ನು ಹೈದರಾಲಿಯೇ ಬಾಗಿಲವರೆಗೂ ಬಂದು ಇದಿರುಗೊಂಡು, ತಬ್ಬಿ, ಒಳಗೆ ಕರೆದುಕೊಂಡು ಹೋಗಿ, ವಿರಾಮಾಸನದಲ್ಲಿ ಅವರಿಬ್ಬರೂ ಕುಳಿತ ಬಳಿಕ, ಬಿಡಾರದ ಊಳಿಗದ ದಾಸಿ, ಒಂದು ದೊಡ್ಡ ಹರಿವಾಣದಲ್ಲಿ ಅಷ್ಟು ಮಿಠಾಯಿ, ಕುಡಿಯಲು ನೀರು, ಷರಬತ್ತುಗಳನ್ನು ಅದಕ್ಕೆ ಅಗತ್ಯವಾದ ಬೆಳ್ಳಿಯ ಪಾತ್ರೆಗಳೊಂದಿಗೆ ತಂದು ಅವರಿಬ್ಬರ ನಡುವಿದ್ದ ಪೀಠದ ಮೇಲಿರಿಸಿ ಹೋದಳು.

"ತೆಗೆದುಕೊಳ್ಳಬೇಕು"

- ಎಂದು ತಾನೇ ಮೊದಲೊಂದು ಮಿಠಾಯಿಯನ್ನು ಬಾಯಲ್ಲಿ ಹಾಕಿಕೊಂಡು ಅದನ್ನು ಜಗಿಯುತ್ತಲೇ, ನಗುತ್ತಾ -

"ಯಾವ ಭಯವೂ ಇಲ್ಲ"

- ಎಂದ ಹೈದರಾಲಿ, ಆಹಾರದ ಬಗ್ಗೆ ಮದಕರಿನಾಯಕನಿಗಿರಬಹುದಾದ ಅನುಮಾನವನ್ನು, ಆ ಮಾತಾಡದೆ ನಿವಾರಿಸಿ,

"ಭಯ – ವಿಶ್ವಾಸದಿಂದ ಕರೆದವರಲ್ಲಿ ಭಯವೇಕೆ ?"

- ಮದಕರಿನಾಯಕ ತಾನೂ ಒಂದು ಮಿಠಾಯಿ ತುಂಡನ್ನು ಬಾಯಲ್ಲಿಟ್ಟುಕೊಂಡು ಹೇಳಿದ.

"ಎಷ್ಟಾದರೂ ನಾವು ನಿಮಗೆ ಹೊಸಬರು. ಭಯವಿಲ್ಲ- ಸಂಶಯವಾದರೂ ಇರಬಹುದಲ್ಲ" – ಹೈದರಾಲಿ ಕೇಳಿದ.

"ಎದೆಯಲ್ಲಿ ಮೋಸ, ತಟವಟವಿದ್ದಲ್ಲಿ ಭಯ-ಸಂಶಯಗಳು ಇರುತ್ತವೆ. ನಮಗೆ ಅದೂ ಇಲ್ಲ. ಇದೂ ಇಲ್ಲ. ನಂಬಿ ಎಂದವರನ್ನು ನಂಬುತ್ತೇವೆ. ಅದನ್ನು ಉಳಿಸಿಕೊಳ್ಳುವುದು ನಿಮ್ಮ ಧರ್ಮ."

"ಅಂತೂ ನಿಮಗೆ ಧರ್ಮದಲ್ಲಿ ತುಂಬಾ ನಂಬಿಕೆ. ಹಾಗಿರುವವರನ್ನು ಕಂಡರೆ ನಮಗೂ ತುಂಬಾ ವಿಶ್ವಾಸ, ಆ ವಿಶ್ವಾಸದಿಂದಲೇ ಕೇಳುತ್ತೇವೆ - ನಾವು ಬನ್ನಿ ಎಂದು ಕರೆದಾಗ ನೀವು ಬಂದಿರಿ. ನಿಮ್ಮ ಸಂಗಡ ಸೇನೆಯೇನೂ ಬರಲಿಲ್ಲ. ನಾವು ಶತ್ರುಗಳಂತೆ ನಿಮ್ಮ ಗಡಿ ದಾಟಿದವರು.

ಹಾಗಿರುವಾಗ ನಿಮಗೆ, ಶತ್ರುಪಾಳಯಕ್ಕೆ ಇಷ್ಟು ಮಿತಪರಿವಾರದೊಂದಿಗೆ ಬೀಗರ ಮನೆಗೆ ಬಂದ ಹಾಗೆ ಬಂದಿರಲ್ಲಾ - ನಿಮಗೆ ಅಂಜಿಕೆಯಾಗಲಿಲ್ಲವೆ ?"

"ಅಂಜಿಕೆ – ಯಾರ ಅಂಜಿಕೆ ?"

"ನಮ್ಮದು ಎಂದೇ ಇಟ್ಟುಕೊಳ್ಳಿ....ನಮ್ಮ ಸುತ್ತ ಎಷ್ಟು ಸೇನೆ, ಸಿಬ್ಬಂದಿ ಇದೆ ಎನ್ನುವುದನ್ನು ನೋಡಿದಿರಲ್ಲಾ ?"

"ನೋಡಿದೆವು."

"ಆದರೂ ಅಂಜಿಕೆಯಾಗಲಿಲ್ಲ - ?"

"ಆ ಶಬ್ದವೇ ನಮಗೆ ತಿಳಿಯದು." - ನೇರವಾಗಿ ಉತ್ತರಕೊಟ್ಟ ಮದಕರಿನಾಯಕ.

"ನಾವು ವಿಶ್ವಾಸದ್ರೋಹ ಮಾಡಿದರೆ -"

"ನಮ್ಮ ತಲೆ ಕಾಯ್ದುಕೊಳ್ಳುವಷ್ಟು ಶಕ್ತಿ ನಮ್ಮ ತೋಳುಗಳಲ್ಲಿದೆ. ಹಾಗೂ ಹೋದರೆ ನಮ್ಮ ಒಂದು ತಲೆ ಹೋದೀತು. ನಮ್ಮ ಒಂದು ತಲೆಯ ಭಯಕ್ಕೆ ನೂರು ಜನರ ಬಲಿ ಕೊಡುವುದೇಕೆ?" – ಮದಕರಿನಾಯಕ ಪ್ರಶ್ನೆ ಮಾಡಿದ.

"ಎಷ್ಟಾದರೂ ನೀವು ಈ ರಾಜ್ಯದ ರಾಜರು. ರಾಜರು ಹೋದರೆ -"

"ನಮ್ಮ ಹಿಂದೆ ಹತ್ತುಜನ ಆರಸರಾಗಿದ್ದವರು ಹೋಗಿದ್ದಾರೆ; ಮುಂದೆ ಹತ್ತು ಜನ ಬರಲಿದ್ದಾರೆ. ನಾವೇನು ಅಮೃತ ಕುಡಿದು ಹುಟ್ಟಿದವರೇ, ನಮ್ಮೊಂದಿಗೆ ಇಂದ್ರಪಟ್ಟ ಹೋಗುತ್ತದೆ ಎಂದು ಹೆದರಲು. ಅದೆಲ್ಲಕ್ಕಿಂತ ಹೆಚ್ಚಾಗಿ - ರಾಜ್ಯ ಉಳಿಯುವುದು ರಾಜನಿಂದಲ್ಲ, ಪ್ರಜೆಗಳಿಂದ. ನೀವು ನಮ್ಮ ಕೊಲೆ ಮಾಡಿಸಿದ್ದರೆ, ಸೆರೆ ಹಿಡಿದಿದ್ದರೆ – ಈ ಗಂಡು ಸೀಮೆಯಲ್ಲಿ ವಿಶ್ವಾಸದ್ರೋಹ ಮಾಡಿದವರಿಗೆ ಏನಾಗುತ್ತದೆ ಎಂದು ಕಾಣುತ್ತಿದ್ದಿರಿ. ನಾವು ನಂಬಿದೆವು; ನೀವು ದ್ರೋಹ ಮಾಡಲಿಲ್ಲ. ಈಗೇಕೆ ಆ ಮಾತು" - ಎಂದ ಮದಕರಿನಾಯಕ.

"ಅದೂ ನಿಜವೇ. ಆದರೂ ನಿಮ್ಮ ಹೃದಯ ಅರಿತುಕೊಳ್ಳಲು ಕೇಳಿದೆವು. ಈ ಮಾತನ್ನು ಹಾಗೇ ತಿಳಿದುಕೊಳ್ಳಬೇಕು. ಈ ದಿನ ನೀವು ಓಲಗಕ್ಕೆ ಬಂದರೀತಿ, ನಮ್ಮಲ್ಲಿ ಬಹಳ ಜನಕ್ಕೆ 'ನವಾಬರಿಗೆ ಅಸಮಾಧಾನವಾಯಿತು' ಎಂದುಕೊಳ್ಳಲು ಕಾರಣವಾಯಿತು."

"ನೀವೂ ಹಾಗೇ ತಿಳಿದುಕೊಂಡಿರಾ ?"

"ನಾವು ತಿಳಿದುಕೊಳ್ಳುವುದಿರಲಿ, ನಿಮ್ಮ ಮಾತು ಹೇಳಿ."

"ನೀವು ಬಿಡಾರ ಬಿಟ್ಟಿರುವುದು ನಮ್ಮ ರಾಜ್ಯದ ಗಡಿಯೊಳಗೆ - ಅದೂ ನಮ್ಮ ಆಹ್ವಾನವಿಲ್ಲದೆ. ಹಾಗಿರುವಾಗ ನಾನು ಸಾಮಂತನಂತೆ ಬಂದಿದ್ದರೆ, ಯುದ್ಧವಿಲ್ಲದೆಯೇ ನಿಮ್ಮ ಊಳಿಗವನ್ನು ಅಂಗೀಕರಿಸಿದಂತಾಗುತ್ತಿತ್ತು. ನಮ್ಮ ನಿಮ್ಮ ಮಾತು ಬೇರೆ - ನಮ್ಮ ಜನ, ನಮ್ಮ

ನಾಯಕರು ನವಾಬರಿಗೆ ಹೆದರಿಕೊಂಡರು ಎನ್ನುತ್ತಿದ್ದರು. ಹೆದರಿಕೆ, ಸೋಲು ಎರಡೂ ಒಂದೇ ಶಬ್ದವಲ್ಲವೇ? ಆದ್ದರಿಂದ ನಿಮ್ಮ ಮಾತಿಗೆ ಮರ್ಯಾದೆ ಬರುವ ಹಾಗೆ, ನಮ್ಮ ಮರ್ಯಾದೆಗೆ ಲೋಪ ಬರದ ಹಾಗೆ ನಡೆದುಕೊಂಡೆವು. ಉಳಿದವರ ಮಾತು ಏನಾದರಾಗಲಿ - ನಿಮಗೆ ಬೇಸರವಿಲ್ಲ ತಾನೇ ?"

"ಬೇಸರವೇ, ಭೇಷ್ ಅನ್ನಿಸಿತು. ನಮ್ಮ ಮಕ್ಕಳೂ ಹೀಗೆ ನಡೆದುಕೊಳ್ಳಬೇಕು ಎನ್ನಿಸಿತು. ಈ ವಯಸ್ಸಿಗೇ ನಿಮಗೆ ಎಲ್ಲಾ ವಿದ್ಯೆಯನ್ನೂ ಚೆನ್ನಾಗಿ ಕಲಿಸಿದ್ದಾರೆ."

"ನಿಜ – ನಮ್ಮಲ್ಲಿ ವಯಸ್ಸು ನೋಡಿ ಕಲಿಸುವುದಿಲ್ಲ, ಅಧಿಕಾರ ನೋಡಿ ಕಲಿಸುತ್ತಾರೆ."

"ಮಾತನಾಡುವುದನ್ನೂ ಕಲಿಸುತ್ತಾರೋ - ನಾಲಗೆಗೆ ಉಪ್ಪುಕಾಗದ ಉಜ್ಜಿ."

- ನಗುತ್ತಾ ಕೇಳಿದ ಹೈದರಾಲಿ.

"ಮಾತು ನಮ್ಮವ್ವೆಯವರು ಕಲಿಸಿದ್ದು. ರೀತಿ ನಮ್ಮಪ್ಪಾಜಿಯವರು ಕಲಿಸಿದ್ದು - ಇದು ಸಣ್ಣ ಮಾತಾಯಿತು. ತಾವೇನೋ ಏಕಾಂತದಲ್ಲಿ ಮಾತನಾಡಬೇಕು ಎಂದಿರಿ"

-ಎಂದು ಉಪಚಾರದ ಮಾತುಗಳಲ್ಲಿ ಹೊತ್ತು ಕಳೆಯಲು ಇಷ್ಟಪಡದೆ ನೇರವಾಗಿ ವಿಚಾರಕ್ಕೆ ಬಂದು ಕೇಳಿದ ಮದಕರಿನಾಯಕ.

"ಸಭೆಯಲ್ಲಿ ನೀವು ರಾಜರಾಗಿ ಹೇಗೆ ನಡೆದುಕೊಂಡಿರಿ ಎಂದು ನಾವು ನೋಡಿದೆವು. ಏಕಾಂತವಾಗಿ ನಿಮ್ಮ ಹೃದಯ ಹೇಗೆ ಎಂದು ತಿಳಿಯಬೇಕೆಂದಿತ್ತು. ತಿಳಿದಾಯಿತು; ಮೆಚ್ಚಿಗೆಯಾಯಿತು. ಇನ್ನೊಂದೇ ಮಾತು - ರೀತಿ, ರಿವಾಜು ತಿಳಿದವರು ನೀವು - ನಾವು ಖಂಡಣಿ ಕಳಿಸಿ ಎಂದಾಗ ಸಿಟ್ಟಾದಿರಿ; ಸಂತೋಷ, ಕಿರಿಯರು ದೊಡ್ಡವರನ್ನು ಬರಿಗೈಯಲ್ಲಿ ಕಾಣಬಾರದು ಎಂದು ತಿಳಿದವರು ಹೇಳುತ್ತಾರೆ. ಖಂಡಣಿ ಬೇಡ - ಹಿರಿಯರಿಗೆ ಮರ್ಯಾದೆ. ಲಕ್ಷ ವರಹ ಕಳಿಸಿಕೊಡಿ - ನಿಮ್ಮ ಸ್ನೇಹವೆಂದು ನಮಗೂ ಸಂತೋಷವಾಗುತ್ತದೆ. ಲಕ್ಷ ವರಹ ನಿಮಗೂ ದೊಡ್ಡದಲ್ಲ."

- ಹೈದರಾಲಿ ಮತ್ತೆ ನಯವಾಗಿ ಹಣದ ಮಾತೆತ್ತಿದೆ.

ಹಣವಿಲ್ಲದೆ ಈ ಹದ್ದು ಹಾರಿ ಹೋಗುವುದಿಲ್ಲವೆಂದು ಅರ್ಥಮಾಡಿಕೊಂಡ ಮದಕರಿನಾಯಕ -

"ನೀವು ಪ್ರೀತಿಯಿಂದ ಕೇಳಿದರೆ ಇಲ್ಲವೆನ್ನುವುದು ನಮಗೆ ಧರ್ಮವಲ್ಲ, ಕಳಿಸುತ್ತೇವೆ. ಹಾಗೇ ತಾವೂ ನಮಗೊಂದು ಮಾತು ಕೊಡಬೇಕು'' – ಎಂದು ಹೇಳಿದೆ.

"ಅದೇನು ಹೇಳಿ ?"

"ನಗರದಲ್ಲಿ ನಡೆಯುತ್ತಿರುವ ರಾಜಕೀಯ ತಮಗೆ ತಿಳಿದಿರಬೇಕು."

“ಕೇಳಿದ್ದೇವೆ. ನ್ಯಾಯವಾದ ವಾರಸುದಾರರನ್ನು ಕೊಲೆ ಮಾಡಿಸಿ, ವೀರಮ್ಮಾಜಿಯವರು ತಮಗೆ ಬೇಕಾದವರೊಂದಿಗೆ ಕೂಡಿಕೊಂಡು ರಾಜ್ಯವಾಳುತ್ತಿದ್ದಾರೆ ಎಂದು. ಅದು ಆಗದವರ ಮಾತೂ ಇರಬಹುದು.”

- ಹೈದರಾಲಿ ಎಲ್ಲಿಯ ಮಾತೋ ಮತ್ತೆಲ್ಲಿಗೋ ಮುಟ್ಟುತ್ತಿರುವುದನ್ನು ಕಂಡು, ಮಾತನ್ನು ತೂಕ ಹಾಕುತ್ತಾ ಹೇಳಿದ.

“ಇಲ್ಲ - ನಿಜವಾದ ಚನ್ನಬಸವನಾಯಕರು ಇದ್ದಾರೆ.”

“ಎಲ್ಲಿ?”

“ನಮ್ಮ ಆಶ್ರಯದಲ್ಲಿ. ತಮಗೆ ನ್ಯಾಯವಾಗಿ ದಕ್ಕಬೇಕಾದ ಸಿಂಹಾಸನ ನಮಗೆ ದೊರಕಿಸಿ ಎಂದು ಕೇಳಿ ನಮಗೆ ರಹಸ್ಯ ಪತ್ರ ಬರೆಸಿದ್ದಾರೆ. ನೀವು ಅವರಿಗೆ ಸಹಾಯ ಮಾಡಬೇಕು.”

“ನೀವು ಹೇಳುವವರು ಗೈಬು ಚನ್ನಬಸವನಾಯಕ ಎನ್ನುತ್ತಾರಲ್ಲಾ....”

“ಅದು ಸುಳ್ಳು ವದಂತಿ.”

“ಇರಬಹುದು. ನಿಮಗೂ ನಗರದವರಿಗೂ ವ್ಯಾಜ್ಯ ಉಂಟು ಎಂದೂ ನಾವು ಕೇಳಿದ್ದೇವೆ.”

“ಅದು ಖಂಡಿತ. ನೀವು ಚನ್ನಬಸವನಾಯಕರ ಪಕ್ಷ ವಹಿಸಿ.”

“ಪಕ್ಷ ವಹಿಸಿದರೆ ನಿಮ್ಮ ಸೇನೆ -?”

“ನಿಮ್ಮ ಬೆನ್ನ ಹಿಂದೆ ನಾವಿದ್ದೇ ಇರುತ್ತೇವೆ.”

“ಹಾಗಿದ್ದರಾಯಿತು. ಆ ಚನ್ನಬಸವನಾಯಕರನ್ನು ನಮ್ಮ ಬಳಿ ಕಳಿಸಿ – ನಿಮ್ಮ ವಿಶ್ವಾಸದ ಉಡುಗೊರೆಯೊಂದಿಗೆ, ನಮ್ಮ ಮೈತ್ರಿ ಹೀಗೇ ಮುಂದುವರೆಯಲಿ”

-ಎಂದು ಮಾತು ಮುಗಿಸಿ, ಬಾಗಿಲ ಹೊರಗೆ ಬೆಳಕು ಮಬ್ಬಾಗುತ್ತಿದ್ದುದನ್ನು ಗಮನಿಸಿ -

“ರಾತ್ರಿ ಇಲ್ಲಿದ್ದು ಸ್ವಲ್ಪ ಖಾನಾ, ಪೀನಾ, ಗಾನಾ, ದಿಲ್‌ಖುಷ್ ಮಾಡಿಕೊಂಡು ಹೋಗಬಹುದಲ್ಲ” – ಎಂದ ಹೈದರಾಲಿ.

“ನಮಗೆ ಒಪ್ಪಿಗೆಕೊಟ್ಟರೆ, ನಾವು ಇರುಳೇ ದುರ್ಗಕ್ಕೆ ಪ್ರಯಾಣ ಮಾಡುತ್ತೇವೆ. ನೀವಿಲ್ಲಿ ಊಟಮಾಡುವ ವೇಳೆಗೆ ನಾವು ದುರ್ಗದಲ್ಲಿರುತ್ತೇವೆ” – ಎಂದ ಮದಕರಿನಾಯಕ.

“ಆಯಿತು ಹೋಗಿ ಬನ್ನಿ.”

ತಬ್ಬಿ ಬೀಳ್ಕೊಟ್ಟು -

“ನೀವು ಬಿಡಾರ ತಲುಪುವ ವೇಳೆಗೆ, ನಮ್ಮ ಬಿಡಾರ ದಾಟಲು ರಹದಾರಿ ಕಳಿಸುತ್ತೇವೆ” -ಎಂದ ಹೈದರಾಲಿ.

ಮದಕರಿನಾಯಕ ಹೈದರಾಲಿಯೊಂದಿಗೆ ರಾಜಕೀಯವನ್ನು ಸಾಧಿಸಿಕೊಂಡು ಬಂದ ರೀತಿ, ಬಹು ವರ್ಷ ಆ ಬಗೆಯ ರಾಜಕಾರಣದಲ್ಲೇ ನುರಿತ ಪ್ರಧಾನಿ ನರಸಪ್ಪಯ್ಯನವರಿಗೂ ಆಶ್ಚರ್ಯವನ್ನುಂಟುಮಾಡಿ –

"ನಾವು ಮೀನಿನ ಮರಿಗೆ ಈಜು ಕಲಿಸಲು ಹೊರಟ ಹಾಗಾಯಿತು" – ಎಂದು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

"ಅದೆಲ್ಲಾ ನೀವು ಕಲಿಸಿದ ವಿದ್ಯೆ" - ಎಂದು ಮದಕರಿನಾಯಕ ವಿನಯವನ್ನು ಬಿಡದೆ ಹೇಳಿದ.

ರಾಜ್ಯದ ಹಿರಿಯರಿಂದಲೂ ಪ್ರಶಂಸೆಗೆ ಪಾತ್ರವಾದ ಮಗನ ರಾಜಕೀಯ ನೈಪುಣ್ಯ, ತಂದೆ ಭರಮಣ್ಣನಾಯಕನಿಗೆ ತನ್ನ ತಲೆಯ ಮೇಲೇ ಹೊನ್ನ ಕಲಶವಿಟ್ಟಂತಾಗಿ –

"ನೋಡಿದೆಯಾ, ಚಿಕ್ಕಂದಿನಲ್ಲಿ ಮಗನನ್ನು ನಾನು ಶಿಕ್ಷೆ ಮಾಡಿ ಬೆಳೆಸಿದ್ದರ ಫಲ. ನೀನು ಹೇಳಿದ ಹಾಗೆ ಬರೇ ರೊಟ್ಟಿ ಬೆಣ್ಣೆ ತಿನ್ನಿಸಿ ಬೆಳೆಸಿದ್ದರೆ ಮುದ್ದೆ ಮುದ್ದಣ್ಣ ಆಗುತ್ತಿದ್ದ. ಸೀಮೆ ಕೊಂಡಾಡುವ ಸಿಪಾಯಿಯಾಗುತ್ತಿರಲಿಲ್ಲ" – ಎಂದು ತನ್ನ ಪ್ರತಾಪವನ್ನು ಕೊಚ್ಚಿ ಕೊಂಡ.

"ತಾಯಿ ಬೆಳೆಸಿದ ಹೊಟ್ಟೆ, ತಂದೆ ಕಲಿಸಿದ ಶಿಕ್ಷೆ ಎಂದು ದೊಡ್ಡವರು ಗಾದೆ ಮಾಡಿರುವುದೇ ಇಂತಹ ಮಕ್ಕಳಿಗಾಗಿ. ಮಗ ಕೀರ್ತಿಶಾಲಿಯಾದದ್ದು ನಿಮಗೆ ಕಿರೀಟ ಇಟ್ಟ ಹಾಗಾದರೆ ನನಗೆ ಪಟ್ಟೆಸೀರೆ ಉಟ್ಟ ಹಾಗಾಯಿತು"

- ಎಂದು ನಿಂಗವ್ವ, ಮಗನ ಬಗ್ಗೆ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿದರೂ -

"ನಗರ ಬಹಳ ದೊಡ್ಡ ರಾಜ್ಯ, ಕೋಟಿ ವರಹದ ಸೀಮೆ ಅನ್ನೋದನ್ನ ಕೇಳಿದೀನಿ. ಹೈದರಾಲಿಯನ್ನು ಮೆಚ್ಚಿಸಲು ಹೋಗಿ, ನೀನು ಭಾವಿ ಬಿಟ್ಟು ಸಮುದ್ರಕ್ಕೆ ಈಜಲು ಇಳಿದ ಹಾಗಾಯಿತಲ್ಲಪ್ಪ" – ಎಂದು ಮಗನ ಮುಂದೆ, ತನ್ನೆದೆಯ ಆತಂಕವನ್ನು ಆಡಿ ತೋರಿಸಿದಳು.

ಆ ಚಿಂತೆ ನಿಂಗವ್ವ ಒಬ್ಬಳಿಗೇ ಅಲ್ಲ, ದುರ್ಗದ ಹಲವಾರು ಹಿರಿಯ ತಲೆಗಳಿಗೂ ಇತ್ತು.

ಎಲ್ಲರಿಗಿಂತ ಹೆಚ್ಚಾಗಿ, ಅರಮನೆ-ದಂಡು ಎರಡರಲ್ಲೂ ಹಿರಿಯನಾದ ಬಾಣದ ಮದಕರಿನಾಯಕ, ಹತ್ತು ಜನ ಹಿರಿಯರು ಕಲೆತಾಗ -

"ನಂಬಿದವರು ಯಾರನ್ನೂ ಉಳಿಸಲಿಲ್ಲ, ಈ ನವಾಬ. ಗಿಳಿಯ ಹಾಗೆ ಸಾಕಿದ ಖಂಡೇರಾಯನನ್ನೇ, ಗಿಳಿಯ ಹಾಗೆ ಸಾಕುತ್ತೇನೆ ಎಂದು ಪಂಜರದಲ್ಲಿಟ್ಟು ಹಸಿಮೆಣಸಿನಕಾಯಿ

ತಿನ್ನಿಸಿದ; ಕರಾಚೂರಿ ನಂಜರಾಜಯ್ಯನವರಿಗೆ ಬೆನ್ನಚೂರಿಯಾದ. ಹಾಗಿರುವಾಗ ಚೂಪು ನಾಲಗೆಯ, ತಳಿ ಸುರಂಗದ ಬುದ್ಧಿಯ ಹೈದರಾಲಿಯನ್ನು ನಂಬಿ ನಾವು ಖಡಾಖಾಡಿಯಾಗಿ, ನಗರದವರ ದ್ವೇಷ ಕಟ್ಟಿಕೊಂಡರೆ, ನಾಳೆ ಏನಾದೀತು ? ನಾವು ಈತನನ್ನು ನಂಬಿ ನಗರದ ಸೀಮೆಯನ್ನು ಹಿಡಿದುಕೊಟ್ಟು, ನಾಳೆ ಅದೇ ನಮಗೆ ಮುಳುಗು ನೀರಾದರೆ...." -ಎಂದು ಸ್ಪಷ್ಟವಾಗಿಯೇ ತನ್ನ ಸಂಶಯವನ್ನು ವ್ಯಕ್ತಪಡಿಸಿದ.

"ಅದಿರಲಿ. ನಂಬಿದ ಹೈದರಾಲಿ ಕೈಕೊಟ್ಟರೆ - ಅದು ನಾಳಿನ ಮಾತು - ನೋಡಿಕೊಳ್ಳಬಹುದು. ಆದರೆ ನವಾಬ ನಗರಕ್ಕೆ ನುಗ್ಗಿದ ಅಂತ, ಪೂನಾದವರು ಅತ್ತ ಕಡೆಯಾಗಿ, ನಾವು ಇತ್ತ ನವಾಬ - ಅತ್ತ ಪೇಶ್ವೆ ಇಬ್ಬರ ನಡುವೆ ಸಿಕ್ಕು ಅಡಕತ್ತರಿಯಲ್ಲಿ ಸಿಕ್ಕ ಅಡಕೆ ಗೋಟಿನ ಹಾಗಾದೀತಲ್ಲಾ ?" – ಎಂದು ದಳವಾಯಿ ಭರಮಣ್ಣ ಹೇಳಿದ.

"ನವಾಬ ನಾಗರಹಾವಾದರೆ, ಮರಾಠರು ಸೀಳುನಾಯಿ ಕಡೆ ಇದ್ದ ಹಾಗೆ. ಇಬ್ಬರಲ್ಲಿ ಯಾರನ್ನು ನಂಬಿದರೂ ನಾಯತಲೆಯ ಮೇಲಿನ ಬುತ್ತಿ ಇದ್ದ ಹಾಗೆ. ನನಗೇಕೋ ನಗರದ ರಾಜಕುಮಾರ ಎಂದು ಹೇಳಿಕೊಂಡು ಬಂದವರನ್ನು ನಂಬಿದ್ದು ಹೊರಗೆ ಹೋಗೋ ಮಾರೀನ ಒಳಗೆ ಬಾ ಅಂತ ಕರೆದ ಹಾಗಾಯಿತೇನೋ ಅನಿಸುತ್ತಿದೆ" - ಎಂದ ಚಪ್ಪೇ ಚಾವಡಿಯ ದಳವಾಯಿ, ಹುಚ್ಚಪ್ಪನಾಯಕ.

ಹೀಗೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ವ್ಯಕ್ತಪಡಿಸಿದ ಚಿಂತೆಯನ್ನು ತಮ್ಮ ಪರಶುರಾಮಪ್ಪ, ಮದಕರಿನಾಯಕರ ಮುಂದೆ ಹೇಳಿದಾಗ -

"ಇವರದೆಲ್ಲಾ ತರಗೆಲೆ ಬಿದ್ದಾಗ ಆಕಾಶ ಬಿದ್ದಿತು ಅಂತ ಹೆದರಿ ಓಡಿದ ಕೋಳಿಯ ಕಥೆಯಾಯಿತು, ಪರಶುರಾಮಣ್ಣ. ಹೀಗೆ ನಮ್ಮ ಹಿಂದಿನವರು ಹೆದರಿದ್ದರೆ ಚಿತ್ರದುರ್ಗ ಇಷ್ಟು ದೊಡ್ಡ ಸೀಮೆಯಾಗುತ್ತಿತ್ತೆ? ಬಂಡೆಕೆಳಗಿನ ಹುಲ್ಲಿನ ಹಾಗೆ ಬಾಡಿ ಬತ್ತಿ ಹೋಗೋದು. ನೀರಿಗೆ ಇಳಿದಿದ್ದಾಯಿತು - ಯಾರ ಆಳ ಎಷ್ಟಿದೆಯೋ ನೋಡೇ ಬಿಡೋಣ. ಯಾರು ಇರಲಿ, ಬಿಡಲಿ – ನಮ್ಮ ತೋಳಬಲವಂತೂ ನಮಗಿದ್ದೇ ಇದೆ; ಅದರಲ್ಲಂತೂ ನಮಗಾವ ಅಪನಂಬಿಕೆಯೂ ಇಲ್ಲ, ಅಷ್ಟೇ ಅಲ್ಲ, ಆಪತ್ತಿನ ಸಮಯ ಅಂತ ನಂಬಿ ಬಂದ ರಾಜ ಕುಮಾರರನ್ನು ಬರಿಗೈ ತೋರಿಸಿ, ಬೀದಿ ಭಿಕಾರಿ ಹಾಗೆ ಕಳಿಸಬೇಕೇ? ಅದು ಗಂಡು ಸೀಮೆಗೆ ಒಪ್ಪುವ ಮಾತಿರಲಿ - ನಮ್ಮನ್ನು ನಂಬಿದ ತಲೆಗೆ, ನಮ್ಮ ತಲೆ ಬಲಿಯಾದರೂ ಸರಿ – ಅಂತೂ ಒಮ್ಮೆ ಈ ನಗರದವರ ಸೊಕ್ಕಿಳಿಸಿಬಿಡಬೇಕು. ಯಾಕೆಂದರೆ ಅವರು ಬೆನ್ನು ಹತ್ತಿ ನಮ್ಮ ಮೇಲೆ ಬೀಳುತ್ತಾರೆ, ಬೇಟೆ ನಾಯಿಗಳ ಹಾಗೆ, ಇವರ ಕುಮ್ಮಕ್ಕಿಲ್ಲದಿದ್ದರೆ ಎಂದೋ ಹರಪನಹಳ್ಳಿಯವರ ಹುಟ್ಟಡಗಿಸಿಬಿಡಬಹುದಾಗಿತ್ತು. ನಾವು ಇವರ ಸೀಮೆಗೆ ನುಗ್ಗಲಿಲ್ಲ, ಇವರ ಶತ್ರುಗಳ ಸ್ನೇಹ ಮಾಡಲಿಲ್ಲ; ಇವರು ಮಾತ್ರ ನಮ್ಮ ಮೇಲಿನ ದ್ವೇಷ

ಬಿಡಲಿಲ್ಲ. ಈಗ ಕಾಲ ಬಂದಿದೆ. ನಾಳೆ - ಆದದ್ದು ಆಗಲಿ. ಇವತ್ತು ನಗರಾನ ಬಲಿ ತಗೊಳ್ಳೋದು ನಿಶ್ಚಯ. ಭರಮಣ್ಣನಾಯಕರು ಹರಪನಹಳ್ಳಿ ಪೇಟೇಲಿ ಮೇಳ ಕಟ್ಟಿಸಿದ್ದರಂತೆ. ಅವರ ಮೊಮ್ಮಗ ನಾನು- ನಗರದ ನಡುಬೀದೀಲಿ ಚದುರಂಗ ಆಡಿ, ಚಿತ್ರದುರ್ಗದ ಹೆಸರು ಮೆರೆಸದಿದ್ದರೆ ಕೇಳು" - ಎಂದ ಮಾತುಮಾತಿಗೆ ರೊಚ್ಚೇರಿ, ಮದಕರಿನಾಯಕ.

"ಅದೇನೇನು ಆಟ ಆಡ್ತೀಯೋ ಆಡಣ್ಣ, ನಾವೂ ನೋಡಿ ಸಂತೋಷ ಪಡ್ತೀವಿ" -ಎಂದ ಪರಶುರಾಮನಾಯಕ.


"ಊಹೂ....ನೀನು ನಿಂತು ನೋಡಿದರಾಗದು. ಪರಶುರಾಮಣ್ಣ; ನನ್ನ ಬಲಗೈಯಾಗಬೇಕು. ಹೇಗೂ ನಿನಗೆ ರಾಜಕೀಯದ ಮಾತು ಅಂದರೆ ರುಚಿ. ಪ್ರಧಾನಿಗಳಿಗೆ ಹೇಳುತ್ತೇನೆ - ಅಷ್ಟು ದಿನ ಅವರ ಗರಡೀಲಿ ನೀನು ಸಾಮುಮಾಡು. ಈ ದುರ್ಗ ಉಳಿಸಲು, ಬೆಳಸಲು ತೋಳೊಂದೇ ಸಾಲದು, ತಲೆಯೂ ಬೇಕು. ನಾವು ತೋಳಾಗುತ್ತೇವೆ, ನೀನು ತಲೆಯಾಗು, ನವಾಬರು, ಮರಾಠೆಯವರು, ನಿಜಾಮರು - ಮೂರು ಜನಕ್ಕೂ ಕಣ್ಣು ಮುಚ್ಚಾಲೆಯಾಟ ಆಡಿಸಿಬಿಡೋಣ. ನಮ್ಮ ಕಾಲದಲ್ಲಿ ದುರ್ಗದ ಹೆಸರು ದೆಹಲಿಗೆ ಮುಟ್ಟಿ, ಅಲ್ಲಿಯವರು ನಮ್ಮ ಹಿರಿಯರನ್ನು ಮತ್ತೆ ನೆನೆದುಕೊಳ್ಳಲಿ" - ಎಂದು ಹೇಳಿದ ಮದಕರಿ ನಾಯಕ, ಭವ್ಯ ಭವಿಷ್ಯದ ಕನಸು ಕಾಣುತ್ತಾ.

"ಅದೇನೇನು ಆಗುತ್ತೀಯೋ ಆಗಣ್ಣ - ನೀನೀಗ ಜಾನಕಲ್ಲಿನ ಅರಮನೆಯ ಅಂಗಳದಲ್ಲಿ ಆಡುತ್ತಿದ್ದ ಹಳೆ ಮದಕರಿಯಲ್ಲ, ದುರ್ಗದ ಕೋಡುಗಲ್ಲಿನ ಮೇಲೆ ನಿಂತು ಗರಿಬಿಚ್ಚಿದ ಗರುಡ" - ಎಂದ ಪರಶುರಾಮಪ್ಪ ಅಣ್ಣನ ಕನಸಿನಲ್ಲಿ ತಾನೂ ಪಾಲುಗಾರನಾಗಿ.

ಸಿಡಿಲು ಮಿಂಚುಗಳೊಡನೆ ಸರಸ



ಟೀಕಿನ ಬಾಗಿಲು (ಕಸ್ತೂರಿ ರಂಗಪ್ಪನಾಯಕರ ಬಾಗಿಲು)



ತಾರಾಮಂಡಲ

೧

ಕನಸುಗಳು, ಕನಸುಗಳು, ಕನಸುಗಳು –

ಮಿರಮಿರನೆ ಮಿರುಗುವ, ಥಳಥಳ ಹೊಳೆಯುವ ಬಗೆಬಗೆಯ ಬಣ್ಣಗಳ ಕನಸುಗಳು –

ದುರ್ಗದಿಂದ ದೆಹಲಿಯವರೆಗೆ –

ಕಾಮನ ಬಿಲ್ಲಿನ ಸಪ್ತವರ್ಣರಂಜಿತ ಕನಸಿನ ಕಮಾನು –

ಶ್ರೀಗಂಧದ ಮರದ ಚಪ್ಪರಪಲ್ಲಂಗದ ಸುಪ್ಪತ್ತಿಗೆಯಲ್ಲಿ ಬಂಗಾರವ್ವ ನಾಗತಿಯ ತೋಳ ತೆಕ್ಕೆಯಲ್ಲಿ ಪವಡಿಸಿದ ಮದಕರಿನಾಯಕನ ಸವಿನಿದ್ರೆಯನ್ನು ಕರಗಿಸಿ, ಬೇರಾವುದೋ ಲೋಕಕ್ಕೆ ಕೊಂಡೊಯ್ದ ಕನಸುಗಳು.

ಎಚ್ಚರವಾಗಿ ಕಣ್ಣು ತೆರೆದರೂ ಕರಗದ ಆ ಕನಸುಗಳ ಭಾರವನ್ನು ಕಣ್ಣಲ್ಲಿ ಹೊತ್ತೇ, ಪ್ರಾತರ್ವಿಧಿಗಳನ್ನು ತೀರಿಸಿ, ಅರಮನೆಯಿಂದ ಹೊರಬಂದು, ಇದುರಿಗೆ ಕಂಡ ಸುಬ್ರಹ್ಮಣ್ಯೇಶ್ವರನ ದೇವಾಲಯಕ್ಕೆ ಕೈಮುಗಿದು, ಬೆಳಗಿನ ಎಳೆಬೆಳಕಿನಲ್ಲಿ, ಅರಳಿದ ಪುಷ್ಪಗಳ ನವಿರುಗಂಧ ಹೀರುತ್ತಾ ಹಸಿರು ಹೊಮ್ಮುವ ಶೃಂಗಾರವನದ ಇಬ್ಬದಿಯಲ್ಲಿ ಹೂಗಿಡಗಳಿಂದ ಅಲಂಕೃತವಾದ ಕಾಲುದಾರಿಯಲ್ಲಿ ನಡೆದು, ಗೋಪಾಲಸ್ವಾಮಿಯ ಹೊಂಡವನ್ನು ದಾಟಿ, ಎಡಕ್ಕೆ ತಿರುಗಿ, ಬೃಹದಾಕಾರದ ಬಂಡೆಗಳಲ್ಲಿ ನಿರ್ಮಿಸಿದ ಕಲ್ಲುಮೆಟ್ಟಿಲುಗಳ ಅಂಕುಡೊಂಕಾದ ದಾರಿಯಲ್ಲಿ ಮೇಲೇರಿ, ಅತ್ಯಂತ ಎತ್ತರವಾದ ನೆಲ್ಲಿಕಾಯಿ ಸಿದ್ಧಪ್ಪನ ಬೆಟ್ಟದ ಕೋಡುಗಲ್ಲ ತುದಿಯ

ಬತೇರಿಯನ್ನು ಹತ್ತಿ, ತುಯ್ದು ತುಯ್ದು ತೂಗುವ ಬೆಳಗಿನ ತಂಗಾಳಿಯ ಉಯ್ಯಾಲೆಯಲ್ಲಿ ಕುಳಿತು. ಸುತ್ತಲೂ ಕಣ್ಣುಹಾಯಿಸಿದ, ಮದಕರಿನಾಯಕ.

ಮುಂಜಾವಿನ ಕೆಂಪು ಕರಗಿ, ಬೆಳಕಿನ ಹೊಳೆಯಾಗಿ, ಕವಿದ ಮೋಡಗಳ ಮಧ್ಯೆ ಹರಿದು ನೆಲಮುಗಿಲುಗಳನ್ನೊಂದಾಗಿಸಿದೆ. ನೆಲ-ಮುಗಿಲುಗಳ ನಿಲುದಾಣದವರೆಗೂ ಕನಸು ಕಾಣುವ ಕಣ್ಣುಗಳಿಂದ ನೋಡಿದ.

ದೂರ, ಬಹುದೂರ –

ಮುಗಿಲ ನೀಲಿಯನ್ನೇ ಗಿರಿಮಾಲೆಯಾಗಿ, ನವಿರಾಗಿ ನೀಲರೇಖೆಗಳಿಂದ ಚಿತ್ರಿಸಿದ ನಿಡಗಲ್ಲು, ಪಾವಗಡದ ಗುಡ್ಡದ ಸಾಲಿನವರೆಗೂ –

ಆ ನೋಟವನ್ನು ಎದೆತುಂಬ ತುಂಬಿಕೊಳ್ಳುತ್ತಾ ನೋಡಿದ –

ನೋಡಿದಷ್ಟೂ ಮನ ತಣಿಯಲಿಲ್ಲವೆಂಬಂತೆ ಆ ನೋಟವನ್ನು ಕಣ್ಣುಗಳಿಂದ ಹೀರಿದ.

ಹಗಲಿನಲ್ಲೇ ಏಕಾಂಗಿಯಾಗಿ ಹೊರಟ ನಾಯಕರನ್ನು ತ್ವರಿತಗತಿಯಲ್ಲಿ ಹಿಂಬಾಲಿಸಿ ಬಂದ ಅರಮನೆಯ ಅಂಗರಕ್ಷಕರಾಗಲಿ, ಯಾವ ಮುನ್ಸೂಚನೆಯನ್ನೂ ಕೊಡದೆ ಬಂದ ನಾಯಕರನ್ನು ಕಂಡು ನಿಬ್ಬೆರಗಾಗಿ ನಿಂತ ಬತೇರಿಯ ಕಾವಲುಭಟರಾಗಲಿ –

ಯಾರೂ ಮದಕರಿನಾಯಕನ ಕಣ್ಣಿಗೆ ಕಾಣಲಿಲ್ಲ.

ಉತ್ತರ ದಿಕ್ಕಿನ ಮುಗಿಲಂಚಿನಲ್ಲಿ ಕಾಣುವ ಜಟಂಗಿ ರಾಮೇಶ್ವರನ ಗುಡ್ಡದ ಸಾಲು; ದಕ್ಷಿಣಕ್ಕೆ ಹಸಿರು ಮುಕ್ಕಳಿಸುತ್ತಾ, ಹರಿದ ಗಾದ್ರಿಮಲೆ ಸಾಲು; ಪಶ್ಚಿಮದಲ್ಲಿ ದೂರ ಬಹುದೂರ ಹರಡಿದ ಬಯಲಂಚಿಗೆ ನೀಲಿಯ ಸೆರಗನ್ನು ಕಟ್ಟಿದಂತೆ ಕಾಣುವ, ತನ್ನೆತ್ತರದ ವಿಸ್ತಾರದಲ್ಲಿ ದುಮ್ಮಿಯ ಗುಡ್ಡವನ್ನೂ ಕಿರಿದಾಗಿಸಿದ ಸಹ್ಯಾದ್ರಿಯ ಪಡುವಣ ತಡಿಯ ಮರಿಗಿರಿಗಳ ಮಾಲೆ –

ನೋಡನೋಡುತ್ತಾ –

ಆ ಅಗಲಕ್ಕೆ, ಆ ಆಪಾರ ವಿಸ್ತಾರಕ್ಕೆ ಹೊಂದಿಕೊಂಡಂತೆ ಒಗ್ಗಿ ಬೆಳೆಯಿತು - ಮದಕರಿನಾಯಕನ ಮನೋಕಾಯ.

ಎಂಥದೋ ಹೆಬ್ಬಯಕೆ ತುಂಬಿದ ಕಣ್ಣುಗಳಿಂದ, ಅಮೃತವನ್ನು ಹೀರುವಷ್ಟು ಆನಂದದಿಂದ ಸುತ್ತೆತ್ತಲೂ ಹಬ್ಬಿದ ಹಗಲುಚೆಲುವಿನ ರಸಧಾರೆಯನ್ನೀಂಟುತ್ತಾ ನಿಂತಿದ್ದ ಮದಕರಿನಾಯಕನಿಗೆ ಇಹಲೋಕಪ್ರಜ್ಞೆ ಬಂದದ್ದು –

"ಇದೇನಣ್ಣಾ ನನಗೆ, ಯಾರಿಗೂ ಹೇಳದೆ, ಕೇಳದೆ, ಅರಮನೆಯಲ್ಲೆಲ್ಲಾ ಗಡಿಬಿಡಿಯನ್ನುಂಟುಮಾಡಿ, ಇಲ್ಲಿ ಬಂದು ಏನೋ ನೋಡುತ್ತಾ ನಿಂತುಬಿಟ್ಟೆಯಲ್ಲಾ ?"

- ಎಂದು ತಮ್ಮ ಪರಶುರಾಮನಾಯಕ, ಮದಕರಿನಾಯಕನ ಮೈ ತಟ್ಟಿ ಕೇಳಿದಾಗಲೇ.

“ಹೂ....ಬಂದುಬಿಟ್ಟೆವು. ಈ ಸುತ್ತಲ ವಿಸ್ತಾರವನ್ನು ನೋಡಿದೆಯಾ, ಪರಶುರಾಮಣ್ಣ?”

- ಇನ್ನೂ ಕನಸು ಕರಗದಿದ್ದ ಧ್ವನಿಯಲ್ಲಿ ಹೇಳಿದ ಮದಕರಿನಾಯಕ.

“ನೋಡದೇ ಏನು. ದಿನವೂ ನೋಡುವುದೇ ಇದು.”

“ನಿಜ - ದಿನವೂ ನೋಡುವುದೇ ಇದು. ಆದರೆ ಈ ದಿವಸ ಹೊಸದು.”

“ಹೊಸದು - ಏಕೆ, ಇವತ್ತು ಏನಾಗಿ ಕಾಣಿಸುತ್ತಿದೆ - ಈ ಗುಡ್ಡ ಸಾಲು ?”

“ಏನನ್ನಿಸುತ್ತಿದೆ. ಗೊತ್ತಾ - ಕೇಳಿ ನಗಬೇಡ.”

“ಇಲ್ಲ - ಹೇಳು.”

“ಸುತ್ತಲೂ, ನಾಲ್ಕು ಸುತ್ತಲೂ ಕಣ್ಣು ಕಾಣುವವರೆಗೂ ಹಬ್ಬಿದ ಸೀಮೆಯನ್ನು, ತನ್ನದಾಗಿಸಿಕೊಂಡು, ತೋಳೊಳಗೆ ತಬ್ಬಿಕೊಳ್ಳಬೇಕು ಎನಿಸುತ್ತಿದೆ. ಸುತ್ತ ನೋಡುವ ನಮ್ಮ ಕಣ್ಣನೋಟಕ್ಕೆ ಬೇರಾವ ರಾಜ್ಯವೂ ಅಡ್ಡಿಯಾಗಬಾರದು. ಅಗೋ - ಅಲ್ಲಿ ಕಾಣುತ್ತಿದೆಯಲ್ಲಾ...”

- ಅನತಿದೂರದಲ್ಲಿ ಕಾಣುತ್ತಿದ್ದ ಝಂಡಾಬತೇರಿಯ ಮೇಲೆ ಹಾರುತ್ತಿದ್ದ ಚಿತ್ರದುರ್ಗದ ರಾಜಧ್ವಜವನ್ನು ಕೈಬೆರಳು ಚಾಚಿ ತೋರಿಸುತ್ತಾ ಹೇಳಿದೆ –

“ಆ ಬಾವುಟ, ಆ ದೂರದ ಗುಡ್ಡಗಳ ತುದಿಯ ಮೇಲೆ ಹಾರಾಡಬೇಕು. ಅದರಾಚೆಗೂ ಹಾರಬೇಕು.”

“ಆ ಕನಸು ಬಹು ಸೊಗಸು. ನಡುವೆ ಎಷ್ಟು ಪಾಳೆಯಗಾರರ ಗುಡ್ಡಗಳಿವೆ - ಗೊತ್ತೆ ?”

“ಗೊತ್ತು - ಆ ಗುಡ್ಡಗಳು, ನಮಗೆ ಅಡ್ಡಿಯಾದ ಗುಡ್ಡಗಳಾಗಬಾರದು. ಪರಶುರಾಮಣ್ಣ ನಾವು ದಿನವೂ ತಬ್ಬುವ ನಾಗತಿಯರ ವಕ್ಷಃಸ್ಥಲವಾಗಬೇಕು”

- ಎಂದು ಹೇಳಿ, ಹೇಳುತ್ತಲೇ ತಮ್ಮನಿಗಿನ್ನೂ ಮದುವೆಯಾಗಿಲ್ಲದಿದ್ದುದು ನೆನಪಾಗಿ –

“ಆ ಸುಖ, ಆ ಹಿತ ನಿನಗೀಗೆ ತಿಳಿಯುವುದಿಲ್ಲ. ನಾಳೆ - ಮದುವೆಯಾಗಲಿ. ಆಗ ನಿನಗೆ ಗೊತ್ತಾಗುತ್ತದೆ, ಬೆಟ್ಟವನ್ನು ತಬ್ಬುವುದೂ ಎಷ್ಟು ಬೆಚ್ಚನೆಯ ಹಿತವಾಗುತ್ತದೆ - ಎಂದು”

-ಎಂದು ನಗುತ್ತಾ ಹೇಳಿ –

“ಅರಮನೆಗೆ ಹೋದಾಗ ನೆನಪಿಸು. ಅವ್ವನಿಗೆ ಹೇಳಿ ನಿನಗೊಂದು ಹೆಣ್ಣನ್ನು ಬೇಗ ತರಬೇಕು. ಆಗ ನೀನು ನನ್ನ ತಮ್ಮನಷ್ಟೇ ಆಗದೆ. ಕನಸಿನ ಸಂಗಾತಿಯೂ ಆಗುತ್ತಿಯಾ’’ -ಎಂದ ಮದಕರಿನಾಯಕ.

ಅಣ್ಣ ತನ್ನ ಮದುವೆಯ ಮಾತಾಡಿದಾಗ ಪರಶುರಾಮನಾಯಕನಿಗೆ ಸಿಗ್ಗಾಗಿ-

“ಈ ನಗೆಚಾಟಿಕೆಯ ಮಾತು ಬಿಡು. ಈ ಹಗಲು ನಿನಗೇನಾಗಿದೆ? ರಾತ್ರಿ ರಾಮರಸ ಕುಡಿದು ಮಲಗಿದ್ದೆಯಾ ?” – ಎಂದು ಕೇಳಿದ.

"ರಾಮರಸ - ನಿಜ. ಆದರೆ ನೀನು ಹೇಳಿದ ರಾಮರಸವಲ್ಲ, ಹಿರಿಸಾಮ್ರಾಜ್ಯದ ಕನಸಿನ ರಾಮರಸ. ಈ ರಾಮರಸದ ಮಾದಕತೆಯ ಮುಂದೆ ನಿನ್ನ ರಾಮರಸ ಏನು ಕೆಲಸ ಮಾಡೀತು."

"ಮಾಡದಿದ್ದರೆ ಬೇಡ - ಈಗ ನಿನ್ನ ಕನಸು ಕಾಣುವ ಅಮಲು ಇಳಿದಿದ್ದರೆ, ಹೊರಡು. ಅವ್ವ ಅರಮನೆಯಲ್ಲೆಲ್ಲಾ ನಿನ್ನನ್ನು ಹುಡುಕಿಸುತ್ತಿದ್ದಾಳೆ" - ಎಂದ ಪರಶುರಾಮನಾಯಕ.

"ಹೂ - ನೀನು ಬಂದೆಯಲ್ಲ. ಇನ್ನು ಕನಸಿಗೆಲ್ಲಿ ಹೊತ್ತು? ನಡೆ – ಹೋಗೋಣ. ಆದರೂ ಈ ಕನಸನ್ನು ನಾನು ಮರೆಯಲಾರೆ. ನೀವೆಲ್ಲಾ ಅದಕ್ಕೆ ನೆರವಾಗಬೇಕು" – ಎಂದು ಇಳಿಯುತ್ತಲೇ ಹೇಳಿದ, ಮದಕರಿನಾಯಕ.

"ನಾವಿಲ್ಲದೆ ಎಲ್ಲಿ ಹೋಗುತ್ತೇವೆ" – ಎಂದು ಭರವಸೆಕೊಟ್ಟ, ಪರಶುರಾಮನಾಯಕ.

ಆ ಕನಸುಕಾಣುತ್ತಲೇ ಇಳಿದಾಗ ತುಸು ಹೆಜ್ಜೆ ಜಾರಿ, ಪಕ್ಕದ ಬಂಡೆಗೆ ಮದಕರಿನಾಯಕ ಕೈ ಊರಿದಾಗ. ಆ ಬಂಡೆಯೂ –

"ನಾನೂ ನಿನ್ನ ನೆರವಿಗಿದ್ದೇನೆ" - ಎಂದು ಹೇಳಿದಂತಾಯಿತು.

ಹಾಗನಿಸಿ ಸುತ್ತಲೂ ನೋಡಿದ –

ಸುತ್ತ ನಾಲ್ದೆಸೆಯಲ್ಲಿ ಹಬ್ಬಿದ ಒಂದೊಂದು ಬಂಡೆಗಲ್ಲೂ, ಆ ಬಂಡೆಗಲ್ಲಿನ ಮಾತನ್ನೇ ಮಾರ್ದನಿಸಿ ಹೇಳಿದಂತಾಯಿತು –

"ನಿನ್ನ ಕನಸಿನ ಜತೆಗಾರರಾಗಿ - ನಾವೂ ಇದ್ದೇವೆ."

ಆ ಹೊತ್ತಿನಲ್ಲಿ ಬಂಡೆಗಳ ಮೇಲೆ ಬಂಡೆಗಳನ್ನು ಪೇರಿಸಿದಂತಿದ್ದ ಚಿತ್ರದುರ್ಗದ ಬೆಟ್ಟ, ಆ ಬೆಟ್ಟವನ್ನು ಸುತ್ತುವರಿದ ಕೋಟೆಸಾಲುಗಳು, ಬುರುಜು, ಬತೇರಿಗಳು –

ಎಲ್ಲವೂ-

ಹೆಚ್ಚು ಆತ್ಮೀಯವಾಗಿ, ತನ್ನ ಬಾಳಿನ ಆತ್ಮೀಯ ಸಹಚರಿಗಳಂತೆ ಕಂಡವು.

ಆ ಆನಂದ ತುಂಬಿದ ನೋಟದಲ್ಲೇ, ಆ ಗಿರಿಬಂಧುವನ್ನು ಆಲಂಗಿಸುತ್ತಾ ಕೆಳಗಿಳಿದ ಮದಕರಿನಾಯಕ, ಕನಸಿನುಯ್ಯಾಲೆಯಲ್ಲಿ ತೂಗುತ್ತಲೇ.

೨

ಅಂದು ಕಂಡ ಕನಸು –

ಕರಗಿ ಮಾಯವಾಗುವ ಕನಸಾಗದೆ ಮದಕರಿನಾಯಕನಲ್ಲಿ ಹೊಸ ಚೈತನ್ಯವನ್ನು ಮೂಡಿಸಿ, ಹಗಲಿರುಳೂ ಆ ಬಗ್ಗೆ ಚಿಂತಿಸತೊಡಗಿದ.

ಚಿತ್ರದುರ್ಗ – ರಕ್ತ ಕುಡಿದೇ ಹುಟ್ಟಿದ ರಾಜ್ಯ. ಅಲ್ಲಿ ಜನಿಸಿದ ಹಸುಗೂಸಿಗೂ ಮಾತೃಸ್ತನ್ಯಪಾನದ ರುಚಿಯ ಮೊದಲೇ ಶತ್ರುರಕ್ತದ ಸವಿಯನುಭವವಾಗುತ್ತಿತ್ತು. ಸುತ್ತ ಮುತ್ತ ಹಗೆಪಾಳೆಯಗಾರರಿದ್ದ ವಾತಾವರಣದಲ್ಲಿ ಚಿತ್ರದುರ್ಗದ ಕೋಟೆಯಂತೂ ಸದಾ ಸನ್ನದ್ಧ ಯೋಧ ಶಿಬಿರವಾಗಿತ್ತು. ದಿನದಿನಕ್ಕೆ ಗರಿಕಟ್ಟುತ್ತಿದ್ದ ಚಿತ್ರದುರ್ಗವನ್ನು ಕಬಳಿಸಲು ಹಗಲಿರುಳೂ ಹೊತ್ತು ಕಾಯುತ್ತಿದ್ದ ಶತ್ರುಪಾಳಯಗಾರರಿಂದ ದುರ್ಗವನ್ನು ರಕ್ಷಿಸಲು, ಆ ದುರ್ಗದ ಕೋಟೆಯನ್ನು ಕಟ್ಟಿ ಬೆಳೆಸಿದ ಹಿರಿಯರು ಮೊದಲು ಕಲಿತ ಪಾಠ –

ಶತ್ರುಸೇನೆ ಎಂದೂ ಚಿತ್ರದುರ್ಗಕ್ಕೆ ದಾಳಿ ಮಾಡದಂತೆ ಎಚ್ಚರಿಕೆ ವಹಿಸುವುದು.

ಅದಕ್ಕಾಗಿಯೇ ಆಯಕಟ್ಟಿನ ಸ್ಥಳದಲ್ಲಿ ಬಲಿಷ್ಠವಾದ ಗಡಿಠಾಣ್ಯಗಳನ್ನು ಕಟ್ಟಿಸಿದುದೇ ಅಲ್ಲದೆ, ಯಾವ ಹೊತ್ತಿನಲ್ಲಿ ಶತ್ರುಸೇನೆಯ ಕಹಳೆಮೊಳಗು ಕೇಳಿದರೂ, ಅತ್ತ ಮಿಂಚಿನ ವೇಗದಿಂದ ಚಲಿಸಬಲ್ಲ ಯೋಧಪಡೆಯನ್ನು ನಿರ್ಮಾಣ ಮಾಡಿತ್ತು. ಅದಕ್ಕಾಗಿಯೇ ದುರ್ಗದ ಸೈನಿಕರು ರಣರಂಗದಲ್ಲಿ ಊಟೋಪಚಾರದ ಚಿಂತೆ ಮಾಡದಂತೆ 'ಮನೆಯಲ್ಲಿ ಉಂಡು, ದಂಡಿನಲ್ಲಿ ಕೈತೊಳೆಯಬೇಕು' ಎಂದು ಕಟ್ಟಪ್ಪಣೆಯನ್ನೇ ಮಾಡಲಾಗಿತ್ತು. ಅಲ್ಲದೆ ರಣ ರಂಗದಲ್ಲಿ ಹೋರಾಡುವ ಸೈನಿಕರಿಗೆ ದುರ್ಗದಿಂದಲೇ ಆಹಾರ ಸರಬರಾಜು ಮಾಡುವ ಸಲುವಾಗಿ, ಬೈಗು-ಬೆಳಗೂ ರೊಟ್ಟಿ, ಬೆಣ್ಣೆ, ಮಾಂಸದ ಪದಾರ್ಥಗಳನ್ನು ತಯಾರು ಮಾಡಲು ಮುನ್ನೂರು ಜನ ಹೆಂಗಸರಿದ್ದಂತೆಯೇ, ತಯಾರಿಸಿದ ಆಹಾರ ಪದಾರ್ಥಗಳ ತುಕಡಿಗಳನ್ನು ಯುದ್ಧರಂಗಕ್ಕೆ ಸಾಗಿಸಲು ಐದುನೂರು ಸಬರದ ಎತ್ತುಗಳೂ ಸದಾ ಸಿದ್ಧವಾಗಿರುತ್ತಿದ್ದವು. ಸೇನೆಗೆ ಬೇಕಾದ ಆಹಾರ ಸಾಮಗ್ರಿಗೆ ಎಂದೂ ಕೊರತೆ ಬೀಳದಂತೆ, ಗ್ರಾಮಗ್ರಾಮಗಳಿಂದಲೂ ಸುಗ್ಗಿಯಲ್ಲಿ ಬಂದ ಆಹಾರಧಾನ್ಯಗಳನ್ನು ಸಂಗ್ರಹಿಸಿಡಲು, ದುರ್ಗದಲ್ಲಿ ನೂರಾರು ಕಣಜಗಳು ಕಟ್ಟಲ್ಪಟ್ಟಿದ್ದುವಲ್ಲದೆ, ಮದ್ದುಗುಂಡಿನ ತಯಾರಿಗಾಗಿ, ಕೆಳಸುತ್ತಿನ ಕೋಟೆಯ ಒಳಭಾಗದಲ್ಲಿ ಮದ್ದು ಬೀಸುವ ಕಾರ್ಖಾನೆ, ಗುಂಡುಗಳು, ಫಿರಂಗಿಗಳನ್ನು ಎರಕಹೊಯ್ಯುವ ಕಮ್ಮಾರಸಾಲೆಗಳೂ ನಿರ್ಮಾಣವಾಗಿ, ದುರ್ಗದಲ್ಲಿ ಶತ್ರುಗಳಿಗೆ ಅಭೇದ್ಯವಾದ ಸ್ಥಳಗಳಲ್ಲಿ ಮದ್ದಿನ ಸಂಗ್ರಹಾಲಯಗಳನ್ನು ಕಟ್ಟಿಸಿದ್ದರು.

ಬೆಟ್ಟದ ಮೇಲೆ ಬಿದ್ದ ಮಳೆಯ ಹನಿನೀರೂ ಪೋಲಾಗದೆ ಅಲ್ಲಲ್ಲಿ ಸಂಗ್ರಹವಾಗುವಂತೆ ಹೊಂಡ, ಪುಷ್ಕರಣಿಗಳನ್ನು ಕಟ್ಟಿಸಿ, ದುರ್ಗದಲ್ಲಿ ಜೀವಂತ ಜಲವಿದೆ ಎಂಬ ಖ್ಯಾತಿ ಬರುವಂತೆ ವ್ಯವಸ್ಥೆ ಮಾಡಿದ್ದರು.

ಕೋಟೆಯ ಸಂದಿನಲ್ಲಿ ಬೆಳೆಯುವ ಹುಲ್ಲನ್ನು ಕಾಲಕಾಲಕ್ಕೆ ಕತ್ತರಿಸುವುದರಿಂದ ಹಿಡಿದು, ಯುದ್ಧದ ಕುದುರೆಗಳ ಬೆಳೆದ ಮೈಗೂದಲನ್ನು ಕತ್ತರಿಸುವವರೆಗೆ – ಪ್ರತಿಯೊಂದು ವ್ಯವಸ್ಥೆಗೂ ಕಟ್ಟಪ್ಪಣೆಯ ನಿಬಂಧನೆಯಾಗಿತ್ತು.

ರಣಶಸ್ತ್ರಾಸ್ತ್ರಗಳ ಗುಪ್ತ ಸಂಗ್ರಹಾಲಯಗಳು, ರಹಸ್ಯ ಭಂಡಾರಗೃಹಗಳೂ ನಿರ್ಮಿತವಾಗಿದ್ದುದಲ್ಲದೆ, ಕೋಟೆಯ ಬಾಗಿಲುಗಳನ್ನು ಸಮರಶಸ್ತ್ರವಾಗಿ ನಿಯೋಜಿಸಲಾಗಿತ್ತು.

ಸೇನೆಗೆ ಅಗತ್ಯವಾದ ಮೀಸಲುಪಡೆಯ ತರಬೇತಿಗೆಂದೇ ಕುಮಾರಚಾವಡಿ ನಿರ್ಮಾಣವಾಗಿತ್ತು.

ಕೋಟೆಯ ರಕ್ಷಣೆ – ಮಿಂಚಿನ ವೇಗದ ಧಾಳಿ – ಇದಕ್ಕೆ ಬೇಕಾದ ಯಾವ ವಿವರವನ್ನೂ ಬಿಡದೆ, ಚಿಂತಿಸಿ ತಕ್ಕ ಬಂದೋಬಸ್ತನ್ನು ಮಾಡಿ –

'ಚಿತ್ರದುರ್ಗದ ಕೋಟೆ ನೋಡಲು ಸುಂದರ, ಕಾದಾಡಲು ಭಯಂಕರ' – ಎಂಬ ಗಾದೆ ಮಾತು ಜನಜನಿತವಾಗುವಂತೆ ಮಾಡಿದ್ದರು.

ಚಿತ್ರದುರ್ಗದ ಬೇಡಪಡೆಯ ಸಮರದಾಹವನ್ನು ನೆನೆದರೂ ಶತ್ರುಪಡೆ ನಡುಗುತ್ತಿತ್ತು. ತಲೆ ಕತ್ತರಿಸುವುದು, ರಕ್ತಸ್ನಾನ ಮಾಡುವುದು - ಆ ಖ್ಯಾತಿ ಬೇಡಪಡೆಯ ನಿತ್ಯದಾಟವಾಗಿತ್ತು.

ಇದಕ್ಕೆ ಸಮಸಮನಾಗಿಯೇ ಸೇನೆಯಲ್ಲಿ ಸಮರೋತ್ಸಾಹ ನಿತ್ಯಜಾಗೃತವಾಗಿರಲು ಬೇಕಾದ ಪ್ರೋತ್ಸಾಹವನ್ನು ಕೊಡುಗೈಯಿಂದ ನೀಡಿ, ಚಿತ್ರದುರ್ಗದ ಕೋಟೆ ರಣಕಾಳಿಯ ರಕ್ತಪಿಪಾಸೀ ನಾಲಗೆಯಾಗುವಂತೆ ನೋಡಿಕೊಂಡಿದ್ದರು, ಪಾಳಯಗಾರರು.

ಇಷ್ಟೆಲ್ಲಾ ಇತ್ತು –

ಇದೆಲ್ಲಾ ದುರ್ಗದ ಮೇಲಾದ ಧಾಳಿಯನ್ನು ತಡೆಯಲು, ಗಡಿಯ ಮೇಲಾದ ಧಾಳಿಯಿಂದ, ದುರ್ಗದ ಅಷ್ಟೇನೂ ವಿಸ್ತಾರವಲ್ಲದ ಸೀಮೆಯನ್ನು ರಕ್ಷಿಸಲು ಸಾಕು.

ಆದರೆ –

ಈಗ-

ಹೈದರಾಲಿಯ ನೆರವಿನಿಂದ ದುರ್ಗ-ನಗರಗಳೆರಡನ್ನೂ ಒಂದುಗೂಡಿಸಿ, ಪಶ್ಚಿಮ ಸಮುದ್ರತೀರದವರೆಗೆ –

ರಾಜ್ಯವಿಸ್ತರಣೆಯ ಮಹತ್ವಾಕಾಂಕ್ಷೆಗೆ –

ಈ ಬಲ ಸಾಲದು ಎನಿಸಿತು - ಮದಕರಿನಾಯಕನ ಕಣ್ಣಿನಲ್ಲಿ,

ಇರುವ ಸೇನೆಯನ್ನು ಸಾಣೆಗೆ ಕೊಟ್ಟು ಮತ್ತಷ್ಟು ಹರಿತ ಮಾಡಿಸಬೇಕು; ದೂರ ದಿಗ್ವಿಜಯಕ್ಕೆ ತಕ್ಕಂತೆ ಬಲ ಬೆಳಸಬೇಕು.

ಈ ದೃಷ್ಟಿಯಿಂದ ಚಿಂತಿಸಲು ಹಿರಿಯ ದಳವಾಯಿಗಳ ಸಭೆ ಕರೆದು ಸಮಾಲೋಚನೆ ಮಾಡಿದ – ಮದಕರಿನಾಯಕ.

ನೆರೆದ ಹಿರಿಯರ ಸಭೆಗೆ ನಾಯಕರು ತಮ್ಮ ಉದ್ದೇಶವನ್ನು ಹೇಳಿದಾಗ –

ರಿಗೂ ನಾಯಕರ ಕನಸು ಸುಳ್ಳಾಗಬಹುದು ಎನಿಸಲಿಲ್ಲ.

"ಹೈದರಾಲಿ ಒಂದುವೇಳೆ ನಂಬಿಸಿ ಮೋಸ ಮಾಡಿದರೆ, ನಮಗಾಗುವ ನಗರವನ್ನು ತಾನೇ ಕಬಳಿಸಿ ಬೆಕ್ಕು ಕಜ್ಜಾಯ ಹಂಚಿದ ಕತೆ ಮಾಡಿದರೆ - ?"

- ಎಂದು ಪ್ರಧಾನಿ ನರಸಪ್ಪಯ್ಯ ಸಂಶಯ ವ್ಯಕ್ತಪಡಿಸಿದಾಗ-

"ಹೈದರಾಲಿಯನ್ನು ನಂಬಬೇಕು ಎಂದು ನಾವೂ ಹೇಳುವುದಿಲ್ಲ. ಅವರು ತಮ್ಮ ನಂಬಿಕೆ ಉಳಿಸಿಕೊಂಡರೆ ನಗರದವರು ನಮ್ಮ ಮಿತ್ರರಾಗಿ ನಮ್ಮ ಬಲ ಬೆಳೆಯುತ್ತದೆ. ಇಲ್ಲವೆಂದಾದರೆ – ಎಂದೂ ನಮ್ಮ ಶತ್ರುಗಳಾದ ನಗರರಾಜ್ಯ ನಿರ್ಮೂಲವಾಗಿ, ಇಬ್ಬರನ್ನು ಎದುರಿಸಬೇಕಾದ ಕಡೆ ಒಬ್ಬರನ್ನು ಎದುರಿಸಬೇಕಾಗುತ್ತದೆ. ಈಗ ನಾವು ಹೈದರಾಲಿಯವರಿಗೆ ಮಿತ್ರರಾಗಿದ್ದೇವೆ. ನವಾಬರು ನಮಗೆ ದ್ರೋಹಬಗೆದರೆ, ಈಗಾಗಲೇ ಅವರು ಎದುರಿಸುತ್ತಿರುವ ಪೇಶ್ವೆಯವರೊಂದಿಗೆ ನಮ್ಮನ್ನೂ ಎದುರಿಸಬೇಕಾಗುತ್ತದೆ. ನಾವು ಪ್ರಬಲರಾಗಿದ್ದು ನವಾಬರಿಗೆ ನಾವು ಬೇಡವಾದರೆ 'ಶತ್ರುಗಳ ಶತ್ರು ನಮ್ಮ ಮಿತ್ರ' ಎಂಬ ಗಾದೆಯಂತೆ ಪೇಶ್ವೆಯವರು ನಮ್ಮ ಮಿತ್ರರಾಗುತ್ತಾರೆ. ಆದರೆ ನಾವೀಗ ಇರುವಷ್ಟೇ ಇದ್ದರೆ – ಎಲ್ಲರಿಗೂ ನಮ್ಮನ್ನು ಗೆಲ್ಲುವ ಪೊಗರು ಬಲಿಯುತ್ತದೆಯೇ ಆಗಲಿ, ಮಿತ್ರತ್ವ ಬೇಡುವ ಮನಸ್ಸು ಬರುವುದಿಲ್ಲ. ಯೋಚಿಸಿ ನೋಡಿ, ಪ್ರಧಾನಿಗಳೇ – ಇದು ದಕ್ಷಿಣ ಭಾರತದ ಭೂಪಟವೇ ಬದಲಾಗಬೇಕಾದ ಕಾಲ. ಈ ಕಾಲದಲ್ಲಿ ನಾವು ಇದ್ದ ಹಾಗಿರಬೇಕೋ, ಮತ್ತಷ್ಟು ಪ್ರಬಲರಾಗಬೇಕೋ ?"

- ಎಂದು ನಾಯಕರನ್ನು ವಿವರಿಸಿ ಹೇಳಿದ ಬಳಿಕ ಉಳಿದವರೂ ಅವರ ಮಾತಿಗೆ ಒಪ್ಪಲೇ ಬೇಕಾಯಿತು.

"ಪ್ರಬಲವಾಗಬೇಕೆಂಬುದೇನೋ ದಿಟ. ಆದರೆ ನಿಮ್ಮ ನೋಟಕ್ಕೆ ಸರಿಗಟ್ಟಿ ಓಡುವ ಶಕ್ತಿ ನಮ್ಮ ಬುದ್ಧಿಗೆ ಬರಬೇಕು. ಹೈದರಾಲಿ ಕರಟಕನಾದರೆ, ಪೂನಾದ ಪೇಶ್ವೆ ದಮನಕ...." -ಎಂದು ಪ್ರಧಾನಿಗಳು ಹೇಳಿದರು.

"ಆ ನರಿಗಳೆರಡನ್ನೂ ಹದ್ದು ಬಸ್ತಿನಲ್ಲಿಡಲು ನಮ್ಮ ಶಕ್ತಿಯ ಭೀತಿಯೊಂದೇ ಸಾಧನ"

- ಎಂದು ನಾಯಕರು ನುಡಿದಾಗ, ಅವರೂ ಉಳಿದೆಲ್ಲ ಚಿಂತೆಯನ್ನೂ ಬದಿಗಿರಿಸಿ –

"ಇದು ಅದೃಷ್ಟ ಪರೀಕ್ಷೆಯ ಕಾಲ. ನಡೆಯಲಿ, ಆದದ್ದೆಲ್ಲಾ ಒಳಿತಾಗಲಿ. ಈ ಹೊತ್ತಿನಲ್ಲಿ ನಮ್ಮ ಮುದಿಕೈಗಳಿಗೆ ನೀವು ಪರಶುರಾಮನಾಯಕರ ಊರೆಗೋಲು ಕೊಟ್ಟಿದ್ದು ಮತ್ತಷ್ಟು ಒಳ್ಳೆಯದಾಯಿತು" - ಎಂದರು.

"ನಮ್ಮ ತಮ್ಮ ನಿಮಗೆ ಒಪ್ಪಿಗೆಯಾದರೆ ಅದಕ್ಕಿಂತ ಹೆಚ್ಚಿನ ಸಂತೋಷ ಬೇರೊಂದಿಲ್ಲ. ನೀವೆಲ್ಲಾ ಒಟ್ಟಾಗಿ ನಿಂತು, ಸೇನೆಕಟ್ಟಿ"- ಎಂದರು ನಾಯಕರು.

"ಮುಂದೆ ನಡೆಸುವ ಹೊಣೆ ನಿಮ್ಮದಾಗಿರುವಾಗ ನಮ್ಮದೇನೂ ಅಷ್ಟು ಶ್ರಮದ ಕೆಲಸವಲ್ಲ" – ಎಂದ ದಳವಾಯಿ ಭರಮಣ್ಣನಾಯಕ.

"ಆದರೆ – ತಮ್ಮ ಇಚ್ಛೆ ಈಡೇರಬೇಕಂದಿದ್ದರೆ, ನಮ್ಮ ಬೊಕ್ಕಸ –"

- ಬೊಕ್ಕಸದ ಅಜ್ಜಯ್ಯ ಹಣದ ಪ್ರಶ್ನೆ ಎತ್ತಿದ.

"ವೆಚ್ಚ ಮಾಡಿ. ನಗರ ನಮ್ಮ ಕೈದಕ್ಕದಿದ್ದರೂ ಬೊಕ್ಕಸವಾದರೂ ನಮ್ಮದಾಗುತ್ತದೆ. ಅದರ ಚಿಂತೆ ಬೇಡ" ಎಂದರು ನಾಯಕರು.

* * *

ದುರ್ಗದಲ್ಲಿ ಕೇರಿಗೊಂದು ಗರಡಿಮನೆಯಾಗಿ, ಗರಡಿಯ ಮನೆಗಳು ಮಲ್ಲಶಾಲೆಗಳಾಗಿ, ಕುಮಾರಚಾವಡಿ, ಕಡಲನ್ನು ತುಂಬುವ ಕಾರ್ಗಾಲದ ನೆರೆ ಸೊಕ್ಕಿದ ನದೀಪ್ರವಾಹವಾಯಿತು. ಕಿಟ್ಟದಾಳಿನಿಂದ ದುರ್ಗದತ್ತ ಬರುವ ಬಂಡಿಗಳು ಲೆಕ್ಕಕ್ಕೆ ಸಿಕ್ಕದಷ್ಟಾದವು. ಮದ್ದಿನ ಬೀಸುಗಲ್ಲು ಎಳೆಯುವ ಕೋಣಗಳು, ಗಂಟೆಗೆ ನಾಲ್ಕರಂತೆ ಸರದಿ ಬದಲಿಸುತ್ತಿದ್ದವು. ಮದ್ದಿನ ಉಗ್ರಾಣಗಳು ಬಿರಿವಷ್ಟು ತುಂಬಿದವು. ಹಾಗೆಯೇ ಶಸ್ತ್ರಾಸ್ತ್ರ ಸಂಗ್ರಹಾಲಯ - ಕೋವಿಗಳು. ಕತ್ತಿಗಳು, ಕಠಾರಿ, ಬಾಕು, ಭರ್ಜಿ, ಭಲ್ಲೆಗಳು, ಕಾಳಿಯ ಬಾಯಂತೆ ಭೀತಿ ಮೂಡಿಸುವ ಫಿರಂಗಿಗಳು - ಗಜಾಶ್ವ, ಪದಾತಿಪಡೆಗಳು –

ನಾಯಕರ ಕನಸನ್ನು ನನಸಾಗಿ ಮಾಡುವ ದಿನಕ್ಕಾಗಿ ಕಾಯತೊಡಗಿದವು.

ಒಬ್ಬ ನಾಯಕರು-

ಹತ್ತು ಮೈ ಧರಿಸಿದಂತೆ, ರಣಸಿದ್ಧತೆ ನಡೆಯುತ್ತಿರುವೆಡೆಯಲ್ಲೆಲ್ಲಾ ಮಿಂಚಿ, ಜನದ ಉತ್ಸಾಹಕ್ಕೆ ತಮ್ಮ ಪ್ರೋತ್ಸಾಹದ ಗರಿಕಟ್ಟಿದರು.

ದುರ್ಗದರಮನೆಯವರು ಒದಗಿಸಿದ ಸುಖವಸತಿಯಲ್ಲಿದ್ದ ಚನ್ನಬಸವನಾಯಕನಿಗೂ ಆ ಉತ್ಸಾಹದ ಸೋಂಕು ಅಂಟಿ –

"ನಾಯಕರೇ, ಎಂದು ನಗರದತ್ತ ನಮ್ಮ ಪ್ರಯಾಣ ? ಇನ್ನೆಷ್ಟು ದಿನ ಕಾಯಬೇಕು ?"

-ಎಂದು ಕೇಳಿದ.

"ಕಾಯುವಿಕೆ ನಿಮ್ಮಷ್ಟೇ ನಮಗೂ ಕಾತರಕ್ಕೆ ಕಾರಣವಾಗಿದೆ. ನವಾಬರಿಂದ ಅಂಚೆ ಬಂದ ಮರುಗಳಿಗೆಯೇ ಹೊರಡಲು ನಾವು ಸಿದ್ಧವಾಗಿದ್ದೇವೆ" - ಎಂದು ಉತ್ಸಾಹದಿಂದ ಉತ್ತರ ಕೊಟ್ಟ ಮದಕರಿನಾಯಕ.

ಕೊನೆಗೊಂದು ದಿನ ನವಾಬರ ಬಿಡಾರದಿಂದ ಪತ್ರ ಬಂತು –

'ನಮ್ಮ ಸೇನೆ ನಗರದತ್ತ ಹೊರಡಲು ಸಿದ್ಧವಾಗಿದೆ. ಗಡಿಯ ಬಳಿ ಬಂದು ಕೂಡಿಕೊಳ್ಳಿ' - ಎಂಬ ವಿಷಯ ಹೊತ್ತು.

೩

ಚಿತ್ರದುರ್ಗಕ್ಕೆ ಹೈದರಾಲಿಯ ಕರೆಬಂತು-

ನಿರೀಕ್ಷಿಸಿದ್ದಕ್ಕಿಂತ ಮುಂಚಿತವಾಗಿಯೇ.

ಕಬ್ಬಿನಗದ್ದೆಗೆ ನುಗ್ಗಲು ಆನೆಯ ಹಿಂಡಿಗೆ ಆಹ್ವಾನ ಕೊಟ್ಟಂತಿತ್ತು - ಮದಕರಿನಾಯಕ, ನಗರದ ರಾಜ್ಯದ ಮೇಲೆ ದಾಳಿ ಮಾಡಲು ಹೈದರಾಲಿಗೆ ನೆಪವನ್ನೊದಗಿಸಿದುದು.

ಸೈನ್ಯ ದಾಳಿ ಮಾಡುವ ಮೊದಲೇ ಹೈದರಾಲಿಯ ಗೂಢಚಾರರು ನಗರದ ರಾಜ್ಯದಲ್ಲಿ 'ಗೈಬುರಾಜ'ನ ಪರವಾಗಿ, 'ನಿಜವಾದ ಚನ್ನಬಸವನಾಯಕರು ರಾಜ್ಯವಾಳಲು ಬರುತ್ತಿದ್ದಾರೆ. ಭ್ರಷ್ಟರಾಣಿಯನ್ನೋಡಿಸಿ, ನಿಜವಾದ ರಾಜನಿಗೆ ನೆರವಾಗಿ' ಎಂದು ಪ್ರಚಾರ ಮಾಡಿ ಜನ ಮನದಲ್ಲಿ ದಿಗ್ಭ್ರಾಂತಿಯನ್ನು ಮೂಡಿಸಿದ್ದರು.

'ಬರಲಿರುವ ನಿಜವಾದ ರಾಜರಿಗೆ –

ರಾಜ್ಯವನ್ನಾಳುತ್ತಿರುವ ರಾಣಿ ವೀರಮ್ಮಾಜಿಗೆ –

ಇವರಿಬ್ಬರಲ್ಲಿ ಯಾರಿಗೆ ನೆರವಾಗಿ ನಿಲ್ಲಬೇಕು ?'

- ಅತ್ತಲೋ - ಇತ್ತಲೋ ಎಂದು ಜನ ಹೊಯ್ದಾಡುತ್ತಿರುವಾಗಲೇ, ನಾಲ್ಕು ಸೀಳಾಗಿ ನಗರದತ್ತ ಹೊರಟಿತು - ಹೈದರನ ಸೇನೆ, ಸಂತೇಬೆನ್ನೂರು ಮಾರ್ಗವಾಗಿ; ಚಿತ್ರದುರ್ಗದ ಪಡೆಯ ಬೆಂಬಲದೊಡನೆ –

ಹೋದೆಡೆಯಲ್ಲೆಲ್ಲಾ ಆನೆಯ ಮೇಲಿನ ಅಂಬಾರಿಯಲ್ಲಿ ಕೂಡಿಸಿ, 'ನಿಜ'ವಾದ ಚನ್ನಬಸವನಾಯಕನ ಮೆರವಣಿಗೆ ಮಾಡಿ 'ಇವರಿಗೆ ನೆರವಾಗಿ ನಿಲ್ಲಿ' ಎಂದು ಕೂಗುತ್ತಾ.

ಸಂತೇಬೆನ್ನೂರಿನಿಂದ ದಾಳಿಗೆ ಮೊದಲ ಹೆಜ್ಜೆಯನ್ನಿಟ್ಟ ಹೈದರಾಲಿ, ಆ ರಾಜ್ಯದ ಗೆಲುವಿಗಾಗಿ ತನ್ನ ಸರ್ವಸ್ವವನ್ನೂ ಪಣವಿಟ್ಟಂತಿತ್ತು. ಆ ಪ್ರಚಂಡ ಸೇನಾವಾಹಿನಿಯನ್ನು ಕಂಡ ಮದಕರಿನಾಯಕ, ತನ್ನರ್ಧ ಸೇನೆಗೆ ದುರ್ಗದಲ್ಲೇ ಉಳಿಯಲು ಹೇಳಿ, ಮಿಕ್ಕ ಬಲದೊಂದಿಗೆ ಹೈದರಾಲಿಯನ್ನು ಹಿಂಬಾಲಿಸಿದ್ದ. ದುರ್ಗದ ಸಕಲ ಬಲವೂ ತನ್ನ ಬೆಂಬಲಕ್ಕೆ ಬರಲಿಲ್ಲವೆಂದು ಗಮನಿಸಿದ ಹೈದರಾಲಿ-

"ಉಳಿದ ಸೇನೆಯೆಲ್ಲಿ?" – ಎಂದು ಕೇಳಿದಾಗ –

"ದುರ್ಗದ ರಕ್ಷಣೆಗೆ ಬೇಕಾದಷ್ಟು ಬಲ ಅಲ್ಲಿ ಬಿಟ್ಟು ಬಂದಿದ್ದೇವೆ – ಬರಿದಾದ ದುರ್ಗದ ಮೇಲೆ ಈ ಅವಕಾಶವನ್ನು ಉಪಯೋಗಿಸಿಕೊಂಡು ಶತ್ರುಗಳು ಧಾಳಿ ಮಾಡದೆ ಇರಲಿ ಎಂದು" – ಎಂದು ನಂಬಬಹುದಾದ ಕಾರಣ ಹೇಳಿ-

"ಅಗತ್ಯ ಬಂದಾಗ ಆ ಸೇನೆಯೂ ಬರಲು ಸನ್ನದ್ಧವಾಗಿದೆ'

-ಎಂದು ಭರವಸೆಕೊಟ್ಟ.

ಆ ಮಾತನ್ನು ಹೈದರಾಲಿ ನಂಬಿದನೋ ಬಿಟ್ಟನೋ, ಚರ್ಚೆ-ವಿರಸಗಳಿಗದು ಸಮಯವಲ್ಲವೆಂದು ಸುಮ್ಮನಾದನೋ – ಅಂತೂ ಸೇನೆ ಮುಂದೆ ನಡೆಯಿತು.

ಚಿತ್ರದುರ್ಗದಿಂದ ಹೊರಟ ಸೇನೆ ಹೊಳಲ್ಕೆರೆಯ ಮಾರ್ಗದಲ್ಲಿ ನಡೆದು ಸಂತೆಬೆನ್ನೂರನ್ನು ಹಿಂದಿಟ್ಟು ಮಲೆನಾಡನ್ನು ಪ್ರವೇಶಿಸಿತು –

ಮುಂದೆ ಹೆಜ್ಜೆ ಹೆಜ್ಜೆಗೂ ಹಳ್ಳ, ಹೊಳೆಗಳ ಹಾದಿ. ಸದಾ ಹಸಿರು ಬಣ್ಣ ತೊಟ್ಟು ಮೆರೆಯುತ್ತಾ ಒಂದರೊಡನೊಂದು ಸ್ಪರ್ಧಿಸಿ ಬೆಳೆದ ಮರ-ಮಲೆಗಳ ಮಾರ್ಗ. ನಡು ಹಗಲಿನಲ್ಲೇ ಹುಲಿ, ಆನೆಗಳು ನಿರಾತಂಕವಾಗಿ ಸಂಚರಿಸುವ ವಿಪಿನವೀಧಿ. ಮೇಲೆ ಮುಗಿಲು ಕಾಣಲೂ ಅಡ್ಡವಾದ ಕಾಡು, ಕೆಳಗೆ ಕಾನನಗತ್ತಲಲ್ಲಿ ಬಗೆಬಗೆಯ ಹಾವು, ಜಿಗಣೆಗಳ ಸಾಮ್ರಾಜ್ಯ. ಹಳು ಹೊಕ್ಕರೆ ದಿಕ್ಕುಗಾಣದೆ ದಿಗ್ಭ್ರಮೆ ಹುಟ್ಟಿಸುವಂಥ ಮರಬಿದಿರುಗಳ ಬಲೆ. ಮಲೆನಾಡು ಎಷ್ಟು ಸುಂದರವೋ ಅಷ್ಟೇ ಭಯಂಕರ.

ಆದರೆ ಆ ಸೌಂದರ್ಯವನ್ನು ಸವಿಯಲಾಗಲಿ, ಭಯಕ್ಕೆ ಬೆದರಲಾಗಲಿ ಯಾರಿಗೂ ಮಲೆನಾಡಿನ ಕಾಡುಚಳಿ ಬಿಡುವು ಕೊಡಲಿಲ್ಲ. ಎಂಥ ಚಳಿ ! ಹಿಂದೆಂದೂ ಅಂಥ ಚಳಿಯನ್ನು ದುರ್ಗದ ಸೈನಿಕರು ಅನುಭವಿಸಿರಲಿಲ್ಲ. ಆ ಮೈಕೊರೆವ ಚಳಿಯನ್ನು, ಆ ಚಳಿಗೆ ಕಾರಣವಾದ, ಮುಗಿಲಿಂದ ಬೀಳುತ್ತಿದ್ದ ಇಬ್ಬನಿಯ ಧಾರೆ ಕಾಡಿಗೆ ಮುಸುಗಿಟ್ಟುದುದನ್ನು ಕಾಣಬಹುದಾಗಿತ್ತು. ಕಾಡಿನಲ್ಲಿ ಮಂಡಿಯಾಳದ ನೀರಿದ್ದ ಕಡೆ ಇಬ್ಬನಿ ಲಂಗರು ಹಾಕಿದ ನಾವೆಯಂತೆ ನಿಂತಿದ್ದರೆ, ಹೊಳೆಗಳಂತೂ ಹೆಪ್ಪುಗಟ್ಟಿದ ಹೊಗೆಯ ಸಾಲು. ಚಳಿಗೆಂದು ಹೊದ್ದ ಕಂಬಳಿಯೂ

ಥಂಡಿಯಾಗಿ, ಒದ್ದೆ ಬಟ್ಟೆಯನ್ನು ಮೈಗೆ ಸುತ್ತಿಕೊಂಡಂತಾಗಿ ಹಲ್ಲುಗಳು ಗಿಟಕರಿಸುತ್ತಿದ್ದವು. ಹೊದ್ದ ಕಂಬಳಿಯೊಳಗೆ, ಉಟ್ಟ ದಟ್ಟಿ, ಚಲ್ಲಣದೊಳಗೆ ಹೇಗೋ ಹೊಕ್ಕು, ಕಡ್ಡಿಯಂತಿದ್ದುದು, ರಕ್ತ ಕಾರುವ ಮಾಂಸದ ತುಂಡುಗಳಂತಾಗಿ ಮೈಯಿಂದ ಸಿಡಿದುಬೀಳುತ್ತಿದ್ದ ಜಿಗಣೆಗಳಂತೂ ನೆನೆದರೇ ನಡುಕ ಬರುವ ಹಾಗಿದ್ದವು. ಅವುಗಳ ಕಾಟ ತಪ್ಪಿಸಿಕೊಳ್ಳಲು ಸುಣ್ಣ, ಹೊಗೆಸೊಪ್ಪುಗಳ ರಸವನ್ನು ಮೈಗೆ ಬಳಿದುಕೊಳ್ಳುತ್ತಾ, ಮೈಕೊರೆವ ಚಳಿಯ ಹಿಂದುಮುಂದಿನ ಆರು ತಲೆಮಾರುಗಳನ್ನು ಅವಾಚ್ಯ ಶಬ್ದಗಳಿಂದ ಶಪಿಸುತ್ತಾ –

ಭದ್ರಾವತಿ, ಶಿವಮೊಗ್ಗ, ಆಯನೂರು, ಕುಂಸಿ, ಆನಂದಪುರಗಳ ಮಾರ್ಗವಾಗಿ ನಡೆದ ಸೇನೆ, ನಗರದ ಹೊರವಲಯ ತಲುಪಿದಾಗ –

ಶಿವಮೊಗ್ಗದ ಬಳಿ ಬಂದಾಗ ನಾಲ್ಕು ಲಕ್ಷ ಕೊಡುವೆನೆಂದು, ಆನಂದಪುರದ ಬಳಿ ಬಂದಾಗ ಹನ್ನೆರಡು ಲಕ್ಷ ಕೊಡುವೆನೆಂದು ಹೇಳಿದ ರಾಣಿ ವೀರಮ್ಮಾಜಿಯ ಬೇಡಿಕೆಯನ್ನು ಧಿಕ್ಕರಿಸಿ -ಕುಂಸಿಯಲ್ಲಿ ಹೈದರಾಲಿಯೊಂದಿಗೆ ಕೂಡಿಕೊಂಡ ನಗರದ ಹಳೆಯ ಮಂತ್ರಿ ಮೂಡಬಿದ್ರೆ ಲಿಂಗಪ್ಪಯ್ಯನಿಂದ ನಗರದ ಕೋಟೆ, ಕಾಡುಗಳ ಮರ್ಮವನ್ನೆಲ್ಲಾ ಅರಿತು, ಹೈದರನ ಸೇನೆ ನಗರಕ್ಕೆ ಮುತ್ತಿಗೆ ಹಾಕಿದಾಗ –

ಮಲೆನಾಡ ಸೈನಿಕರು, ಕೆಣಕಿದ ಹೆಜ್ಜೇನು ಪಡೆಯಂತೆ ಮುಗಿಲಿನಿಂದ ಮಳೆಗರೆವ ಕೆಂಜಿಗಗಳಂತೆ, ಕತ್ತಿ, ಕೋವಿ ಹಿಡಿದ ಕಾಡುಮರಗಳಂತೆ ಹೈದರನ ಸೇನೆಯ ಮೇಲೆ ಬಿದ್ದು, ತಮ್ಮ ತಲೆ ಕತ್ತರಿಸಿ ಬೀಳುತ್ತಿದ್ದಾಗಲೂ ಶತ್ರುತಲೆಯನ್ನು ತರಿದರು. ಮಲೆನಾಡಿನ ಮರ ಮರವೂ ಯೋಧನಾದಂತೆ, ಹೈದರನ ಅಪಾರ ಸೈನ್ಯರಾಶಿಯನ್ನು ತಗಣಿ, ಸೊಳ್ಳೆಗಳನ್ನು ಹಿಸುಕಿ ಒರೆದಂತೆ ತರಿದರು.

ಆ ಪ್ರಬಲವಾದ ಶತ್ರುಸೈನ್ಯಾಘಾತಕ್ಕೆ ಪ್ರತಿಯಾಗಿ ಅಷ್ಟೇ ವೀರಾವೇಶದಿಂದ ಹೋರಾಡಿತು - ಹೈದರನ ಸೇನೆ. ಯುದ್ಧದಲ್ಲಿ ಶತ್ರುಗಳ ತಲೆಕಡಿಯುವುದಷ್ಟನ್ನೇ ಕಂಡಿದ್ದ ದುರ್ಗದ ಸೈನಿಕರು, ಬರೀ ಮೂಗು, ಕಿವಿ ಕತ್ತರಿಸಿ, ನೆತ್ತರುಕಾರುತ್ತಾ ಮೈದಳೆದ ಭೀತಿಯಂತೆ ಅರಚುವ ಮಲೆನಾಡ ಸೈನಿಕರನ್ನು ಕಂಡು 'ನಮ್ಮದು ಬೇಡಪಡೆ, ಹೈದರನದು ಕಟುಕರ ಸೇನೆ' ಎಂದುಕೊಂಡರು.

ಎಂಥ ಯುದ್ಧ!

ಮೂಡಬಿದ್ರೆ ಲಿಂಗಪ್ಪಯ್ಯನಿಂದ ಕಳ್ಳದಾರಿಯನ್ನರಿತು, ನಗರದೊಳಗೆ ನುಗ್ಗಿದಾಗಲೂ, ಮನೆಮನೆಯ ರಣಾಂಗಣವಾಗಿ, ಹನಿರಕ್ತಕ್ಕೊಂದು ಜೀವದ ಬಲಿ ತೆಗೆದುಕೊಳ್ಳುತ್ತಾ ಹೋರಾಡಿದ ಮಲೆನಾಡ ಸೈನಿಕರ ಸಾಹಸ, ಮದಕರಿನಾಯಕನೂ ಮೆಚ್ಚಿ 'ಶಹಭಾಸ್' ಎನ್ನುವಂತೆ ಮಾಡಿತು.

ಬರೀ ಗಂಡೇನು, ಹೆಣ್ಣೂ ಹುಲಿಯಂತೆ ಹೋರಾಡಿದುದನ್ನು ನೋಡಿ –

'ರಾಣಿ ಕೆಟ್ಟ ನಡತೆಯವಳೆಂದು ನಾವು ಕೇಳಿದ್ದು ಕಟ್ಟುಕಥೆ, ದಿಟವಲ್ಲ. ದಿಟವಾಗಿದ್ದರೆ, ಆ ಒಂದು ಜೀವಕ್ಕೆ ಇಷ್ಟು ಜನ ತಮ್ಮ ಜೀವವನ್ನು ಬಲಿಗೊಟ್ಟು ನಿವಾಳಿಸಿ ತೆಗೆದೊಗೆಯುತ್ತಿರಲಿಲ್ಲ' – ಎನಿಸಿತು, ಅವನಿಗೆ.

ಆ ಹೆಣ್ಣು - ವೀರಮ್ಮಾಜಿ, ರಾಣಿಯೆಂದರೆ ರಾಣಿ ! - ಯುದ್ಧ ಮನೆಯಂಗಳಕ್ಕೆ ಬಂದಾಗಲೂ ಆ ಹೆಣ್ಣು ಹೆದರಲಿಲ್ಲ.

'ಕಂಡವರನ್ನು ಕೊಲ್ಲಿ- ಕೈಗೆ ಸಿಕ್ಕಷ್ಟನ್ನು ಲೂಟಿ ಮಾಡಿ. ನಿಮಗೆ ಸಿಕ್ಕಿದ್ದು ನಿಮ್ಮದೇ' ಎಂದು ಹೈದರಾಲಿ, ರಕ್ತತೃಷೆಯಿಂದ ಮದಿಸಿದ ಸೈನ್ಯದ ಕಾಳ್ಗಿಚ್ಚಿಗೆ ಲೋಭದ ಎಣ್ಣೆ ಸುರಿದು, ಮೈಸೂರು ಸೇನೆ, ಅರಮನೆಯ ಮೇಲೆ ನುಗ್ಗಿದಾಗ-

ಅವರ ಕೈಗೆ ಸಿಕ್ಕಿದ್ದು – ಉರಿದು ಕಂಕಾಳವಾಗಿದ್ದ ಅರಮನೆ, ಹಿಟ್ಟಾಗಿ ಬೀಸಿದ ಮುತ್ತು ರತ್ನ, ಕರಗಿ ಕೈ ಸುಡುತ್ತಿದ್ದ ಬೆಳ್ಳಿ ಬಂಗಾರದ ಚೂರು.

ಅಷ್ಟಾದರೂ ರಾಣಿ ವೀರಮ್ಮಾಜಿ ಹೈದರನ ಕೈಗೆ ಸಿಕ್ಕಲಿಲ್ಲ. ಗುಪ್ತಮಾರ್ಗದಲ್ಲಿ ನುಣುಚಿ, ಕವಲೆದುರ್ಗವನ್ನು ಸೇರಿದರು.

ಅಲ್ಲಿಗೂ ಬಿಡದೆ ಬೆನ್ನಟ್ಟಿ. ಹಿಡಿದೆಳೆತರಿಸಿದ ಪಟ್ಟದರಾಣಿ ವೀರಮ್ಮಾಜಿಯನ್ನು, ಕಲ್ಲೆದೆಯ ಹೈದರಾಲಿ. ಕಂಕಣ, ಕಾಲ್ಗಡಗ, ನೂಪುರಗಳನ್ನು ಧರಿಸಿದ ಆಕೆಯ ಕೈಕಾಲುಗಳಿಗೆ ಕಬ್ಬಿಣದ ಸರಪಳಿ ಬಿಗಿಸಿ, ಮಧುಗಿರಿಯ ಕೋಟೆಯ ಸೆರೆಗಟ್ಟಿದ.

ಅಷ್ಟಾದರೂ - ತನ್ನ ಆಶ್ರಯವನ್ನು ಕೋರಿಬಂದ ಚನ್ನಬಸವನಾಯಕನ ಪಟ್ಟಾಭಿಷೇಕವನ್ನು ನೋಡುವೆನೆಂದಿದ್ದ ಆಸೆ - ನಿರಾಶೆಯಾಗಿ, ರಾಣಿಯೊಂದಿಗೆ ಆತನೂ ಮಧುಗಿರಿಯ ಸೆರೆ ಸೇರಿ, ನಗರದ ಕೋಟೆಯ ಮೇಲೆ ಮೈಸೂರಿನ ಗಂಡಭೇರುಂಡ ಧ್ವಜದ ಬದಲು, ಹೈದರನ ಹಸಿರು ನಿಶಾನಿ ಹಾರಿದಾಗ –

ಸಾವಿರಾರು ಮಲೆನಾಡಿನ ಸುಂದರಿಯರನ್ನು ತನ್ನ ಸೇನೆಯೊಂದಿಗೆ ಶ್ರೀರಂಗಪಟ್ಟಣಕ್ಕೆ ಕಳಿಸಿದುದನ್ನು ಕಂಡಾಗ –

ಹೈದರಾಲಿಯಂತೆಯೇ ಆತನ ಸೇನೆ ಹಿರಿಕಿರಿಯರನ್ನದ ಹೆಂಗಳೆಯರ ಮೇಲೆ ಮಾಡಿದ ಅತ್ಯಾಚಾರವನ್ನು ನೋಡಿದಾಗ –

ಮದಕರಿನಾಯಕನ ಕಲ್ಲೆದೆಯ ಕರಗಿ, ತನಗೆ ತಾನೇ ಹೇಳಿಕೊಂಡ –

'ಆದದ್ದು ಒಳ್ಳೆಯದಾಗಲಿಲ್ಲ, ತೆಂಗಿನ ತೋಟ ಸವರಿ ಜಾಲಿಕಳ್ಳಿಯ ಪೊದೆ ಬೆಳೆಸಿದ ಹಾಗಾಯಿತು.'

ನಗರದಲ್ಲಿ ನಡೆದ ಹೈದರನ ಸೇನೆ ನಡೆಸಿದ ಅತ್ಯಾಚಾರದ ಪೈಶಾಚಿಕ ದೃಶ್ಯವನ್ನು ಕಂಡು ಹೇಸಿದ ಮದಕರಿನಾಯಕನ ಹೃದಯ ಕಲ್ಲಾಗಿ –

'ಈ ನವಾಬನ ಕಲ್ಲೆದೆಯೂ ಕಣ್ಣೀರಿಡುವಂತೆ ಮಾಡದಿದ್ದರೆ ನಾನು ಮದಕರಿಯಲ್ಲ' – ಎಂದುಕೊಂಡ.

ಆದರೆ ಸೇಡಿನ ಮಾತಿಗದು ಸಮಯವಾಗಿರಲಿಲ್ಲ.

ಯುದ್ಧದಲ್ಲಿ ಗೆದ್ದ ಬಳಿಕ ಹೈದರಾಲಿ ತನಗೆ ಉಡುಗೊರೆಯಾಗಿ ಕೊಟ್ಟ ಆರಳೆಯ ಪಚ್ಚೆ, ವಜ್ರದ ಕಂಠಿಹಾರ, ಗಜ್ಜುಗದ ಗಾತ್ರದ ಮುತ್ತುಗಳ ಮೂರೆಳೆಯ ಮಾಲೆ, ರತ್ನ ಕಂಕಣಗಳು, ಹೊದ್ದಿಗೆರೆ, ಮರವಂಚಿ, ಸಂತೆಬೆನ್ನೂರು ಗ್ರಾಮಗಳನ್ನು ಒಪ್ಪಿ ಮೆಚ್ಚಿದಂತೆ ಸ್ವೀಕರಿಸಿ-

"ನಾಯಕರೇ, ನಿಮ್ಮದು ಗಂಡುಸೇನೆ. ನೀವಿಲ್ಲದಿದ್ದರೆ ನಮಗಿಷ್ಟು ಸುಲಭವಾಗಿ ನಮ್ಮ ಕಾರ್ಯವಾಗುತ್ತಿರಲಿಲ್ಲ"

- ಎಂಬ ಮಾತನ್ನು ಕಹಿಸೋರೆಯ ರಸದಂತೆ ನುಂಗಿ, ಆದಷ್ಟು ಬೇಗ ದುರ್ಗಕ್ಕೆ ಹಿಂದಿರುಗುವ ಮಾತಾಡಿದ.

ಸ್ವಭಾನು ಸಂವತ್ಸರದ ಮಾಘ ಶುದ್ಧ ಪಂಚಮಿ ನಗರದ ಕೋಟೆ ಹೈದರಾಲಿಯ ವಶವಾಯಿತು.

ಆ ಗೆಲವು ಹೈದರಾಲಿಯ ಸಾಹಸಕ್ಕೆ ಗರಿ ಮೂಡಿಸಿ –

"ನಾಯಕರು ನಮ್ಮ ಕಾರ್ಯ ಮುಗಿಸಿಕೊಟ್ಟು ಹೋಗಬೇಕು. ಮಳೆಗಾಲ ಆರಂಭವಾಗುವ ವೇಳೆಗೆ ಕೃಷ್ಣಾನದಿಯ ತಡಿಯಲ್ಲಿರುತ್ತೇವೆ ಎಂದು ನಾವು ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯ ಇದಿರು ಶಪಥ ಮಾಡಿದ್ದೇವೆ"

- ಎಂದು ಹೇಳಿ, ವಿಶ್ರಾಂತಿಗೆಂದು ಕಾಲಕಳೆಯಲಿಚ್ಛಿಸದೆ, ಯುದ್ಧ ಸಮಯದಲ್ಲಿ ವೀರಮ್ಮಾಜಿಗೆ ನೆರವು ನೀಡಿದ ಸವಣೂರಿನ ನವಾಬ ಹಕೀಂಖಾನನ ರಾಜಧಾನಿಯತ್ತ, ತನ್ನ ವಿಜಯೀ ಸೇನೆಯನ್ನು ಮುಂದೂಡಿದ – ಫೌಜುಲ್ಲಾಖಾನನ ನೇತೃತ್ವದಲ್ಲಿ.

ಫೌಜುಲ್ಲಾಖಾನನ ಸೇನೆ, ತುಂಗಭದ್ರಾ ನದಿಯನ್ನು ದಾಟಿ, ಮರಾಠರಿಗೆ ಸೇರಿದ ರಾಣಿಬೆನ್ನೂರಿಗೆ ಮುತ್ತಿಗೆ ಹಾಕಿದಾಗ, ಸವಣೂರಿನ ನವಾಬ ಹಕೀಂಖಾನ್ ತನ್ನ ಪ್ರಬಲ ಪಠಾಣ ಸೇನೆಯೊಂದಿಗೆ ಬಂದು, ಫೌಜುಲ್ಲಾಖಾನನ ಸೇನೆಯ ಮೇಲೆ ಅನಿರೀಕ್ಷಿತವಾಗಿ ದಾಳಿ ಮಾಡಿದ

ಆ ಸುದ್ದಿ ಕೇಳುತ್ತಿದ್ದ ಹಾಗೇ ಹೈದರಾಲಿ ತನ್ನ ಸೇನೆಯನ್ನು ಶಿಕಾರಿಪುರದತ್ತ ನಡೆಸಿ 'ನಿನ್ನ ನೆರವಿಗೆ ನಾವು ಬರುತ್ತಿದ್ದೇವೆ' ಎಂಬ ವಾರ್ತೆಯನ್ನು ಫೌಜುಲ್ಲಾಖಾನನಿಗೆ ಕಳುಹಿಸಿ, ರಾತ್ರಿ ವಿಶ್ರಮಿಸಿಕೊಳ್ಳುತ್ತಿದ್ದ ಸವಣೂರಿನ ಸೇನೆಯ ಮೇಲೆ ಬಿದ್ದು ಆ ಸೇನೆಯನ್ನು ಇರುಳುಗಾಳಗದಲ್ಲಿ

ಸವರಿ, ಸೋತ ಹಕೀಂಖಾನನಿಂದ ಅವನ ರತ್ನದ ಕಠಾರಿ, ಮೂರು ಲಕ್ಷ ವರಹ ಖಂಡಣಿ ತೆಗೆದುಕೊಂಡು ಮುನ್ನುಗ್ಗಿ ಬಂಕಾಪುರದ ಮೇಲೆ ದಾಳಿಮಾಡಿದ.

ತನ್ನ ಮಿಂಚಿನ ವಾಳಿಗೆ ಬಂಕಾಪುರ ತರಗೆಲೆಯಂತೆ ತೂರಿ ಹೋಗುತ್ತದೆ ಎಂದು ಊಹಿಸಿದ್ದ ಹೈದರಾಲಿ.

ಆದರೆ ಬಂಕಾಪುರ ಅಷ್ಟು ಸುಲಭವಾಗಿ ಬಗ್ಗಲಿಲ್ಲ.

* * *

ಬಂಕಾಪುರದ ಕೋಟೆಯ ರಕ್ಷಣೆಯ ಹೊಣೆ ಹೊತ್ತಿದ್ದ ಮರಾಠಾ ಸರದಾರ ಗೋವಿಂದ ಪಂತ್ ಸಖದೇವ್, ಪೂನಾಕ್ಕೆ ಸಹಾಯಕ್ಕಾಗಿ ಹೇಳಿ ಕಳಿಸಿ, ಕೋಟೆಯ ಬಾಗಿಲು ಬಿಗಿಸಿ, ಹೈದರನ ಸೇನೆಯ ಮೇಲೆ ಎದುರುತೋಫು ಉಡಾಯಿಸಿದ.

ಒಂದು ತಿಂಗಳು ಹೋರಾಡಿದರೂ ಕೋಟೆ ಹೈದರನ ಕೈವಶವಾಗಲಿಲ್ಲ.

ಆಗ ತನ್ನೆದುರು ಎದೆ ಸೆಟಿಸಿ ನಿಂತ ಬಂಕಾಪುರದ ಕೋಟೆಯನ್ನು ಹೈದರಾಲಿ, ಮದಕರಿನಾಯಕನಿಗೆ ತೋರಿಸಿ –

"ನಾಯಕರೇ, ನಿಮ್ಮ ಸಾಹಸದಿಂದ ನಗರ ನಮ್ಮದಾಯಿತು. ಬಂಕಾಪುರವೂ ನಿಮ್ಮಿಂದಲೇ ನಮ್ಮದಾಗಬೇಕು. ನಗರ, ರಾಣಿಬೆನ್ನೂರಲ್ಲಿ ಇಬ್ಬರೂ ಜೊತೆಜೊತೆಯಾಗಿ ಹೋರಾಡಿದೆವು. ಗೆಲುವು ನಮ್ಮಿಬ್ಬರದೂ ಆಯಿತು. ಆದರೆ ಇದು ನಿಮ್ಮ ಮೀಸಲು ಯುದ್ಧವಾಗಬೇಕು, ಈ ಗೆಲವು ನಿಮ್ಮದಾಗಬೇಕು. ಕೋಟೆಕಾಳಗದಲ್ಲಿ ಚಿತ್ರದುರ್ಗದವರು ನಿಸ್ಸೀಮರು ಎಂದು ಕೇಳಿದ್ದೇನೆ. ಈ ಕೋಟೆಯನ್ನು ಗೆದ್ದು ನಿಮ್ಮ ಸೀಮೆಯ ಕೀರ್ತಿ, ನಿಮ್ಮ ಸಾಹಸವನ್ನು ಸಾರ್ಥಕಪಡಿಸಿಕೊಳ್ಳಿ. ಇಲ್ಲ, ನೀವಿದ್ದೂ ನಮಗೆ ಸೋಲಾಯಿತು ಎಂಬ ಅಪಕೀರ್ತಿ ನಿಮ್ಮದಾಗುತ್ತದೆ" – ಎಂದು ಹೇಳಿದ.

ತನ್ನ ಸೀಮೆಯ ಕೀರ್ತಿಯ ಪರೀಕ್ಷೆ –

ತನ್ನ ಸಾಹಸದ ಅಗ್ನಿ ಪರೀಕ್ಷೆ –

"ಇದುವರೆಗೆ ನಮ್ಮ ಸ್ನೇಹವನ್ನು ಪರೀಕ್ಷೆಮಾಡಿದಿರಿ. ಈಗ ನಮ್ಮ ಸಾಹಸದ ಪರೀಕ್ಷೆಯಾಗಬೇಕಲ್ಲವೇ? ಆಯಿತು - ನಿಮ್ಮ ಸೇನೆ ನಮ್ಮ ಬೆಂಗಾವಲಿಗಿದ್ದರಷ್ಟು ಸಾಕು"

-ಎಂದಷ್ಟೇ ಹೇಳಿ, ತನ್ನ ಬಿಡಾರದಲ್ಲಿ ದಳವಾಯಿ ಭರಮಣ್ಣ, ಬಾಣದ ಮದಕರಿನಾಯಕರನ್ನು ಕರೆಸಿಕೊಂಡು, ಯಾವ ಬಗೆಯ ಯುದ್ಧವಿಧಾನ ಸೂಕ್ತ – ಎಂದು ಸಮಾಲೋಚನೆ ಮಾಡಿದ, ಮದಕರಿ.

"ಕೋಟೆ ಒಂದು ತಿಂಗಳು ಮುತ್ತಿಗೆ ಬಿದ್ದು, ಒಳಗಿನ ಜನ ನಿತ್ರಾಣವಾಗಿದ್ದಾರೆ. ಅವರು ಹೋರಾಡುವುದನ್ನು ನೋಡಿದರೆ ಹೊರಗಿನ ಸಹಾಯ ನಿರೀಕ್ಷಿಸುತ್ತಾ ಇರುವಂತೆ ಕಾಣುತ್ತದೆ. ಇದು ಪೇಶ್ವಗಳ ಸೀಮೆ. ಕಾದು ಕುಳಿತರೆ ಲಡಾಯಿಯಲ್ಲಿ ನಮಗೆ ಜಯವಾಗುವುದಿಲ್ಲ. ಆದ್ದರಿಂದ ಏನಿದ್ದರೂ ಇರುಳುಕಾಳಗವೇ ಸರಿ. ಅದಕ್ಕೆ ನಮ್ಮ ಖಾಸಾಪಡೆಯವರನ್ನು ಬಿಟ್ಟರೆ ಆದೀತು" - ಎಂದು ದಳವಾಯಿಗಳು ಹೇಳಿದರು.

ಅವರು ಮಾಡಿದ ಸಲಹೆಯನ್ನು ಕೇಳಿದ ಮದಕರಿನಾಯಕ ಸಾಕಷ್ಟು ಯೋಚನೆ ಮಾಡಿ, ಹೈದರಾಲಿಗೆ -

"ಕೋಟೆ ನಾವು ಹಿಡಿದುಕೊಡಬೇಕಾದರೆ ತಾವೊಂದು ಕೆಲಸ ಮಾಡಬೇಕು" ಎಂದು ಹೇಳಿದ.

"ಏನು?"

"ನಾಳೆ ಹಗಲು ತಾವು ಕೋಟೆಯನ್ನು ಗೆಲ್ಲುವ ಆಸೆಯನ್ನು ಬಿಟ್ಟು, ಮುತ್ತಿಗೆ ಎಬ್ಬಿಸಬೇಕು. ತಮ್ಮ ಫೌಜು ಇಲ್ಲಿಂದ ಹೊರಡಬೇಕು. ಅದು ಕೋಟೆಯೊಳಗಿನ ಜನಕ್ಕೆ ಕಾಣಬೇಕು. ಅಷ್ಟು ಮಾಡಿ, ಮುಂದಿನ ಕೆಲಸ ನಮಗೆ ಬಿಡಿ" - ಎಂದು ಹೇಳಿದ, ಮದಕರಿ ನಾಯಕ.

ಅದರಂತೆಯೇ ಮರುದಿನ ಬೆಳಿಗ್ಗೆ ಹೈದರನ ಸೇನೆ, ಕೋಟೆಯೊಳಗಿನ ಜನ ಕಾಣುವಂತೆ, ಅಲ್ಲಿಂದ ಬೇಡುಕಿತ್ತು ಪ್ರಯಾಣ ಹೊರಡುವ ಸಿದ್ಧತೆ ನಡೆಸಿತು - ಆದಷ್ಟು ಗದ್ದಲದೊಂದಿಗೆ ಆನೆ, ಕುದುರೆ, ಫಿರಂಗಿಯ ಗಾಡಿಗಳು - ಎಲ್ಲವೂ ಬಂಕಾಪುರದತ್ತ ಬೆನ್ನು ಮಾಡಿ ನಡೆದವು.

ಹಗಲಿನಿಂದ ಸಂಜೆಯವರೆವಿಗೂ ಹೈದರನ ಸೇನಾಪ್ರಯಾಣ ನಡೆಯಿತು.

ಬಂಕಾಪುರದ ಜನಕ್ಕೆ ಬಂದ ಪೀಡೆ ತೊಲಗಿದಷ್ಟು ನೆಮ್ಮದಿಯಾಗಿ, ಊರ ದೇವರಿಗೆ ಹಣ್ಣುಕಾಯಿ -ಪೂಜೆಮಾಡಿಸಿ, ನಿಶ್ಚಿಂತೆಯಿಂದ ನಿದ್ರೆ ಮಾಡಿದರು.

ಆ ರಾತ್ರಿ–

ಕೋಟೆಗೆ ಲಗ್ಗೆ ಹತ್ತುವುದರಲ್ಲಿ ನಿಸ್ಸೀಮರಾದ ಐನೂರು ಮಂದಿ ಖಾಸಾ ಬೇಡಪಡೆಯ ಪೈಕಿ ನೂರು ಮಂದಿ ಬರಿಮೈಗೆ ಕಂಬಳಿ ಸುತ್ತಿಕೊಂಡು ಹಗಲು ಆಯ್ದ ಸ್ಥಳಗಳಲ್ಲಿ ನೂಲೇಣಿಯ ನೆರವಿನಿಂದ ಕೋಟೆಯನ್ನೇರಿ, ಕಾವಲವರನ್ನು ಕಡಿದು, ಕೋಟೆಯ ಬಾಗಿಲು ತೆಗೆದರು.

ಅದನ್ನೇ ಕಾದಿದ್ದ ಮಿಕ್ಕ ಪಡೆ, ಊರೊಳಗೆ ನುಗ್ಗಿ ನೇರವಾಗಿ, ಕಿಲ್ಲೇದಾರ ಗೋವಿಂದ್ ಪಂತ್ ಸಖದೇವ್‌ನ ಅರಮನೆಗೆ ಮುತ್ತಿಗೆಹಾಕಿ ಅವಿತು ಕುಳಿತರು. ಕೋಟೆಯ ಮೇಲಿದ್ದವರು

ಅಲ್ಲಿದ್ದ ಫಿರಂಗಿಗಳನ್ನು ಹಿಮ್ಮೊಗ ಮಾಡಿ, ಊರೊಳಗೆ ಗುರಿಯಿಟ್ಟು ಫಿರಂಗಿಗಳನ್ನು ಉಡಾಯಿಸಿದರು.

ಫಿರಂಗಿಗಳ ಹೊಡೆತಕ್ಕೆ ಊರೊಳಗಿದ್ದ ನೂರಾರು ಮನೆಗಳು ಧೂಳಾದದ್ದಲ್ಲದೆ, ಬಂಕಾಪುರಕ್ಕೇ ಬೆಂಕಿಬಿದ್ದಂತೆ ಧಗಧಗ ಉರಿಯಲಾರಂಭಿಸಿತು. ಅಷ್ಟಾಗುವುದರೊಳಗೆ ಬಂಕಾಪುರದ ಸೇನೆ ಸಾವರಿಸಿಕೊಂಡು ಪ್ರತಿಯುದ್ಧಕ್ಕೆ ಸಿದ್ಧವಾದಾಗ, ಅರಮನೆಯತ್ತ ಗುರಿ ಮಾಡಿದ ತೋಪು ತೋರಿಸಿ, 'ಮುಂದೆ ಹೆಜ್ಜೆ ಇಟ್ಟರೆ, ನಿಮ್ಮರಮನೆ ಧೂಳಿಪಟವಾಗುತ್ತದೆ' - ಎಂದು ಭರಮಣ್ಣನಾಯಕ ಅಬ್ಬರಿಸಿದಾಗ, ಬಂಕಾಪುರದವರು ಶಸ್ತ್ರಗಳನ್ನು ಕೆಳಗಿಟ್ಟು ನಿಂತರು.

ಅರಮನೆಯೊಳಗಿದ್ದ ಗೋವಿಂದಪಂತ್ ಸಖದೇವ್ 'ಇದೇನು ಗದ್ದಲ'ವೆಂದು ಹೊರಬಂದು ನೋಡುವ ವೇಳೆಗೆ, ಅರಮನೆಯನ್ನು ಪ್ರವೇಶಿಸಿದ್ದ ದುರ್ಗದ ಪಡೆ – ಸಪರಿವಾರ ಅವನನ್ನು ಬಂಧಿಸಿ, ಹಿಂಗಟ್ಟು ಮುಂಗಟ್ಟು ಕಟ್ಟಿ ಹಿಡಿದು, ನಡುರಾತ್ರಿಯ ವೇಳೆಗೆ ಮದಕರಿ ನಾಯಕರ ಎದುರಿಗೆ ತಂದು ಕೆಡವಿತು.

ಆತನನ್ನು, ಆತನ ಅಂತಃಪುರದವರನ್ನು ಹೈದರಾಲಿಗೆ ಒಪ್ಪಿಸಿದರೆ ಏನಾದೀತು ಎಂಬುದನ್ನು ನಗರದ ಯುದ್ಧದಲ್ಲಿ ಕಣ್ಣಾರೆ ನೋಡಿ, ಆ ದಾರುಣ ದೃಶ್ಯವನ್ನು ಕಂಡು ಕಂಬನಿಗರೆದಿದ್ದ ಮದಕರಿನಾಯಕ, ಆ ಮಾತನ್ನು ಮರಾಠ ಸರದಾರನಿಗೆ ತಿಳಿಸಿ -

"ನೀವು ನಮಗೆ ಕೋಟೆ ಒಪ್ಪಿಸಿ, ನಿಮ್ಮ ಅಂತಃಪುರದವರೊಂದಿಗೆ ಹೊರಟು ಹೋಗಿ. ನಿಮಗೆ ನಾವು ಮಿತ್ರರಲ್ಲ, ಆದರೆ ವೈರಿಗಳೂ ಅಲ್ಲ. ನಮ್ಮವರಿಂದ ನಿಮ್ಮ ಜೀವಕ್ಕೆ ಆಪಾಯವಿಲ್ಲ; ಮರ್ಯಾದೆಗೆ ಭಂಗವಿಲ್ಲ"

-ಎಂದು ಸ್ಪಷ್ಟವಾಗಿ ಹೇಳಿದ ಬಳಿಕ, ಗೋವಿಂದಪಂತನಿಗೆ ಅನ್ಯಥಾ ಮಾರ್ಗ ಉಳಿಯದೆ, ಶರಣಾಗತನಾಗಿ ತನ್ನ ಪರಿವಾರದೊಂದಿಗೆ ರಾತ್ರೋರಾತ್ರಿ ಧಾರವಾಡದತ್ತ ದೌಡಾಯಿಸಿದ.

ಬಂಕಾಪುರದ ಅರಮನೆಯ ಮೇಲೆ ಹನುಮದ್ಗರುಡಧ್ವಜ ಹಾರಾಡಿತು.

ಮರುದಿನ ಪ್ರಾತಃಕಾಲ, ಹತ್ತಿರದಲ್ಲೇ ಬಿಡಾರ ಮಾಡಿದ ಹೈದರಾಲಿಗೆ ಕೋಟೆ ವಶವಾದ ಸುದ್ದಿಯನ್ನು ತಿಳಿಸಿದಾಗ ಹೈದರಾಲಿ ಮೊದಲು ಕೇಳಿದ ಪ್ರಶ್ನೆ-

"ಕಿಲ್ಲೇದಾರ ಕೈವಶವಾದನೇ ?"

"ಕೋಟೆ ನಮ್ಮದಾಯಿತು. ಗದ್ದಲದಲ್ಲಿ ಕಿಲ್ಲೇದಾರ ತಪ್ಪಿಸಿಕೊಂಡ. ಕಿಲ್ಲೇದಾರನಿಗಿಂತ ಕೋಟೆ ಮುಖ್ಯ ಎಂದು ನಿಮಗೆ ಸುದ್ದಿ ಕಳಿಸಿದೆವು" – ಎಂದು ಹೇಳಿದ ಮದಕರಿನಾಯಕ.

ಆ ಸುದ್ದಿಯನ್ನು ಕೇಳಿ, ಕೋಟೆಯನ್ನು ಕೈವಶಮಾಡಿಕೊಳ್ಳಲು ಬಂದ ಹೈದರಾಲಿ, ಅರಮನೆಯ ಮೇಲೆ ದುರ್ಗದ ಬಾವುಟ ಹಾರಾಡುತ್ತಿದ್ದುದನ್ನು ಕಂಡು ಕಿಗ್ಗಣ್ಣಾಗಿ -

"ಇಲ್ಲಿ ನಿಮ್ಮ ಬಾವುಟವೇಕೆ ?" – ಎಂದು ಕೇಳಿದಾಗ -

"ನಿಮ್ಮವರು ನಿಮ್ಮ ಬಾವುಟ ನಮ್ಮ ಕೈಗೆ ಕೊಟ್ಟಿರಲಿಲ್ಲ. ನಮ್ಮ ಜನ ಕೋಟೆ ವಶವಾದ ಉತ್ಸಾಹದಲ್ಲಿ ತಮ್ಮ ಬಳಿಯಿದ್ದ ಬಾವುಟವನ್ನು ಹಾರಿಸಿದರು. ನಾವು-ನೀವು ಬೇರೆಯಲ್ಲವಲ್ಲ, ನಿಮಗೆ ಬೇಕಾದಾಗ ನಮ್ಮ ಬಾವುಟ ನಾವೇ ಇಳಿಸುತ್ತೇವೆ. ನಿಮ್ಮ ಬಾವುಟ ಹಾರಿಸಬಹುದು" – ಎಂದು ಹೇಳಿದ ಮದಕರಿನಾಯಕ.

ಸಕಾರಣವಾಗಿದ್ದ ಆ ಉತ್ತರದಲ್ಲಿ ಕೊಂಕೇನನ್ನೂ ಕಾಣಲು ಸಾಧ್ಯವಾಗಲಿಲ್ಲ. ಆದರೂ -

"ಕಿಲ್ಲೇದಾರ ತಪ್ಪಿಸಿಕೊಂಡರೂ ಅವನ ಜನಾನಾ ತಪ್ಪಿಸಿಕೊಳ್ಳಲು ಬಿಡಬಾರದಾಗಿತ್ತು"

- ಎಂದು ಹೇಳಿದ ಹೈದರಾಲಿ -

"ನಿಮ್ಮ ಸಾಹಸಕ್ಕಿದು ನಮ್ಮ ಮೆಚ್ಚುಗಾಣಿಕೆ"

-ಎಂದು ಆರೆಳೆಯ ಮುತ್ತಿನ ಮಾಲೆಯನ್ನು ಕೈಯಾರೆ ಮದಕರಿನಾಯಕನ ಕುತ್ತಿಗೆಗೆ ಹಾಕಿ, ಆತನ ಮುಂಡಾಸಿಗೆ ವಜ್ರದ ಹೂಮಾಗಿರಿ, ಶಿರಪೇಶ್ ಸಿಕ್ಕಿಸಿದ.

ಅದನ್ನು ಸಂತೋಷದಿಂದ ಸ್ವೀಕರಿಸಿದ ಮದಕರಿನಾಯಕ ತನ್ನ ಮನದಾಳದಲ್ಲಿ ಹುದುಗಿ ಹೋಗಿದ್ದ, ಸವಣೂರಿನ ನವಾಬನ ಮೇಲೆ, ತುಯ್ಯಲಹಳ್ಳಿ ಲಡಾಯಿಯ ಸಂದರ್ಭದಲ್ಲಿ ಫಿರಂಗಿಗಳನ್ನು ಕಳೆದುಕೊಂಡಾಗ ಮಾಡಿದ ಪ್ರತಿಜ್ಞೆ ನೆನಪಾಗಿ -

"ನವಾಬರಿಗೆ ನಮ್ಮ ಸಾಹಸದಿಂದ ಸಂತೋಷವಾಗಿದ್ದರೆ ತಮ್ಮಿಂದ ಬಯಸುವ ಬಹುಮಾನ ಬೇರೊಂದಿದೆ" - ಎಂದು ಹೇಳಿದ.

"ಏನು ಬಹುಮಾನ ಬೇಕು ಕೇಳಿ. ನಿಮ್ಮ ಯಾವ ಮಾತಿಗೂ ನಾವು ಇಲ್ಲ ಎನ್ನುವುದಿಲ್ಲ."

"ಹಾಗಿದ್ದರೆ ಹಿಂದೆ ಸವಣೂರಿನ ನವಾಬ ತುಯ್ಯಲಹಳ್ಳಿ ಯುದ್ಧದಲ್ಲಿ ನಮ್ಮ ಮೇಲೆ, ರಾತ್ರಿಯ ವೇಳೆ ಕೂಟಯುದ್ಧಮಾಡಿ ತೆಗೆದುಕೊಂಡು ಹೋದ ನಮ್ಮ ನಾಲ್ಕು ಫಿರಂಗಿಗಳನ್ನು ಮತ್ತೆ ನಮ್ಮ ವಶಕ್ಕೆ ಕೊಡಿಸಬೇಕು. ಅದೇ ನಾವು ನಿಮ್ಮಿಂದ ಬಯಸುವ ದೊಡ್ಡ ಉಡುಗೊರೆ" – ಎಂದು ಹೇಳಿದ ಮದಕರಿನಾಯಕ, ತಾನು ಆ ಸಂದರ್ಭದಲ್ಲಿ ಮಾಡಿದ ಪ್ರತಿಜ್ಞೆಯನ್ನು ವಿವರಿಸಿ.

ಆ ಮಾತನ್ನು ಕೇಳಿದ ಹೈದರಾಲಿ -

"ನೀವು ಶೂರರಷ್ಟೇ ಅಲ್ಲ, ಆಡಿದ ಒಂದು ಸಣ್ಣ ಮಾತನ್ನೂ ಮರೆಯದೆ ಉಳಿಸಿಕೊಳ್ಳುವ ಧೀರರು"

-ಎಂದು ಹೊಗಳಿ, ತನ್ನ ಸೈನ್ಯಾಧಿಕಾರಿಗೆ -

"ಸವಣೂರಿನ ನವಾಬನ ನಾಲ್ಕು ಫಿರಂಗಿಗಳಷ್ಟೇ ಅಲ್ಲ, ನಾಯಕರು ಮತ್ತೇನನ್ನು ಕೇಳುತ್ತಾರೋ ಕೊಡಿ. ಶೂರರು ಮಾಡಿದ ಪ್ರತಿಜ್ಞೆ ಎಂದೂ ಸುಳ್ಳಾಗಬಾರದು"

-ಎಂದು ಅಪ್ಪಣೆ ಮಾಡಿ -

"ನಿಮ್ಮ ಶಪಥಶಕ್ತಿ ಸದಾ ನಮ್ಮ ಪರವಾಗಿಯೇ ಇರಲಿ" - ಎಂದು ಮದಕರಿನಾಯಕನಿಗೆ ಹೇಳಿದ.

"ತಮ್ಮ ಕಾರ್ಯವಾಯಿತು, ನಮ್ಮ ಪ್ರತಿಜ್ಞೆಯೂ ನೆರವೇರಿತು. ನಮಗಿನ್ನು ದುರ್ಗಕ್ಕೆ ಹಿಂದಿರುಗಲು ಅನುಮತಿಕೊಡಬೇಕು" - ಎಂದು ಕೇಳಿದ ಮದಕರಿನಾಯಕ.

"ಒಂದು ದಿನ ನಮ್ಮೊಡನಿದ್ದು ಸುಖಭೋಜನ ನಡೆಸಿ, ಬಳಿಕ ಹೋದರಾಗದೇ ?" ಎಂದ ಹೈದರಾಲಿ.

ಹೈದರಾಲಿಯ ಬಿಡಾರದಲ್ಲಿ ಸುಖಭೋಜನವೆಂದರೆ ಏನೆಂಬುದು ಆ ವೇಳೆಗೆ ಮದಕರಿ ನಾಯಕನಿಗೆ ಚೆನ್ನಾಗಿ ಅರ್ಥವಾಗಿತ್ತು.

ಸುಖಭೋಜನ ಎಂದರೆ –

ಸಂಜೆಯಾದ ಬಳಿಕ ಬಿಡಾರದಲ್ಲಿ ಅಷ್ಟರೊಡನೆ ಮೈಮರೆಯುವಷ್ಟು ಮದ್ಯಪಾನ, ಸುಂದರ ವೇಶ್ಯೆಯರ ಗಾನ-ನರ್ತನ ; ಅಶ್ಲೀಲವಾದ ಸರಸಗೋಷ್ಠಿ.

ಇದಾವುದರಲ್ಲೂ ಮದಕರಿನಾಯಕನಿಗೆ ಇಷ್ಟವಿರಲಿಲ್ಲ. ಮದ್ಯಪಾನದಲ್ಲಿ ಆಸಕ್ತಿಯಿಲ್ಲದ ಆತನಿಗೆ ಸರಸ-ಸಲ್ಲಾಪದಲ್ಲಾಗಲಿ, ಸುರಸುಂದರಿಯರಂಥ ವೇಶ್ಯೆಯರ ಗಾನ-ನರ್ತನಗಳಲ್ಲಾಗಲಿ ಆಸಕ್ತಿಯಿರಲಿಲ್ಲವೆಂದಲ್ಲ. ಅರಸು ಅಮಲಿನ ಆಳಾಗಬಾರದು ಎಂಬ ಹಿತವಚನವನ್ನು ಓಬವ್ವನಾಗತಿಯವರಿಂದ ಕೇಳಿದ ದಿನದಿಂದ, ಆತ ಆ ಚಟದ ಚಿಂತೆಗೂ ತಿಲಾಂಜಲಿ ಕೊಟ್ಟಿದ್ದ. ಆದರೆ ಪ್ರಾಯಕ್ಕೆ ಬಂದ ಮನಸ್ಸಿಗೆ ಗಾನ-ನರ್ತನೆಗಳು - ಅದೂ ಆಯ್ದ ಸುಂದರಿಯರ ವಿಲಾಸವೈಖರಿಗಳಿಂದ ಕೂಡಿದ ಸರಸಗೋಷ್ಠಿ ಹಿತವಾಗಿತ್ತು. ಆದರೆ ಹೈದರಾಲಿಯ ಬಿಡಾರದಲ್ಲಿ ನಡೆವ ನರ್ತನ-ಗಾಯನದ ರೀತಿ - ಮದಕರಿನಾಯಕನ ಹೃದಯಕ್ಕೆ ಹರ್ಷ ತರುವುದಕ್ಕಿಂತ ಹೆಚ್ಚಾಗಿ ಹೇಸಿಗೆಯನ್ನುಂಟುಮಾಡಿತ್ತು.

ಹೈದರಾಲಿಯ ಬಿಡಾರದಲ್ಲಿ ನಡೆಯುತ್ತಿದ್ದ ಗಾಯನ-ನರ್ತನಗಳೂ ಒಂದು ರೀತಿಯಲ್ಲಿ ಸೇನೆಯ ಕವಾಯಿತು ಇದ್ದ ಹಾಗೆ. ಅದರಲ್ಲಿ ಭಾಗವಹಿಸುವವರೆಲ್ಲಾ ಬರೀ ಪ್ರೇಕ್ಷಕರು ಮಾತ್ರ: ಹೈದರಾಲಿಗೊಬ್ಬನಿಗೇ ಸರಸದ ಸ್ವಾತಂತ್ರ್ಯ.

ನರ್ತಕಿಯರು - ಅದರಲ್ಲೂ - ಹಿಂದೂ-ಮುಸ್ಲಿಂ ಎಂದು ಎರಡು ತಂಡ. ಹಿಂದೂ ವೇಶ್ಯೆಯರು ಕೇವಲ ಬಿಳಿಯುಡುಪು ಮಾತ್ರ ಧರಿಸಬೇಕು. ಮಿಕ್ಕ ರಂಗುರಂಗಿನ ವಸ್ತ್ರವೆಲ್ಲಾ

ಮುಸ್ಲಿಂ ವೇಶ್ಯಯರಿಗೆ ಮೀಸಲು. ಯಾರು ಯಾವುದೇ ವಸ್ತ್ರ ಧರಿಸಿರಲಿ, ಹಾಡುತ್ತಿರಲಿ, ನರ್ತನ ಮಾಡುತ್ತಿರಲಿ, ನವಾಬರ ಆಪ್ತೇಷ್ಟರೇ ಆಗಿರಲಿ, ಅವರತ್ತ ನೋಡದೆ, ಹಾವಭಾವದಲ್ಲಿ ಕಾಮೋತ್ತೇಜಕವಾದ ಬೆಡಗು-ಬಿನ್ನಾಣಗಳನ್ನು ಪ್ರದರ್ಶಿಸದೆ, ಪ್ರೇಕ್ಷಕರ ಮೆಚ್ಚುಗೆಗೆ ಮಂದಹಾಸ, ಕುಡಿಗಣೋಟದ ಪ್ರತಿಕ್ರಿಯೆ ತೋರದೆ, ಸೂತ್ರದ ಗೊಂಬೆಗಳಂತೆ ನರ್ತಿಸಬೇಕು - ಯಂತ್ರದ ಗೊಂಬೆಗಳಂತೆ ಹಾಡಬೇಕು. ಅದು ತಪ್ಪಿದರೆ - ಅಲ್ಲೇ ಇದ್ದ ಆ ತಂಡದ ಯಜಮಾನಿಯಿಂದ ಕೊರಡಾ ಏಟು ಬೀಳುತ್ತಿತ್ತು.

ನೋಡುವ ಪ್ರೇಕ್ಷಕರೂ ಅಷ್ಟೇ- ನವಾಬರಿಗೆ ಎಷ್ಟೇ ಆಪ್ತನಾದರೂ, ಮಾತಿನಲ್ಲಿರಲಿ ನೋಟದಲ್ಲಿ ತನ್ನ ಆನಂದವನ್ನು ಪ್ರದರ್ಶಿಸುವಂತಿಲ್ಲ. ಸುಮ್ಮನೆ ಕುಳಿತು ನೋಡಬೇಕು ಕಣ್ಣಿದ್ದೂ ಕುರುಡನಂತೆ. ಅದು ಬಿಟ್ಟು 'ವಹವ್ವಾ' ಎಂದನೋ, ಕಾಮೋತ್ತೇಜಿತನಾಗಿ ನೋಡಿದನೊ, ಕುಡಿದರೂ ಪ್ರಜ್ಞೆ ತಪ್ಪದ ನವಾಬನ ನಾಲಗೆ ಆ ಸಭ್ಯರನ್ನು ಚಾಟಿ ಏಟಿಗಿಂತ ಕ್ರೂರವಾಗಿ ದಂಡಿಸುತ್ತಿತ್ತು. ಒಮ್ಮೆ ಒಬ್ಬಾತ ತನಗಾದ ಹರ್ಷವನ್ನು ತಡೆಯಲಾಗದೆ 'ವಹವ್ವಾ' ಎಂದಾಗ ಹೈದರಾಲಿ, ಕ್ರೂರ ವ್ಯಂಗ್ಯವಿದ್ದ ಧ್ವನಿಯಲ್ಲಿ -

"ಹೇಳು, ಹೇಳು....ಇನ್ನೊಮ್ಮೆ ವಹವ್ವಾ ಎಂದು ಹೇಳು. ನಿಮ್ಮಮ್ಮ ಅವಳ ಮಿಂಡನೊಂದಿಗೆ ಹೇಗೆ ನರ್ತಿಸುತ್ತಿದ್ದಾಳೆಂದು ನೋಡಿ, ಇನ್ನೂ ಹತ್ತು ಸಲ ಹೇಳು" - ಎಂದು ಹೇಳಿ ನೆರೆದವರೆಲ್ಲಾ ನಾಚುವಂತೆ ಮಾಡಿದ್ದ.

ಇಂಥ ವಿಲಾಸಗೋಷ್ಠಿ - ಇದು ಹರ್ಷವಲ್ಲ, ಹಿಂಸೆ.

ಎಂತಲೇ ಆ ಮಾತು ಕೇಳಿದ ದಿನದಿಂದ ಮದಕರಿನಾಯಕ, ಹೈದರಾಲಿ ಎಷ್ಟೇ ಪ್ರೋತ್ಸಾಹಿಸಿದರೂ ಆ ಗೋಷ್ಠಿಗಳಲ್ಲಿ ಎಂದೂ ಭಾಗವಹಿಸಿರಲಿಲ್ಲ.

"ಇದು ಪ್ರಾಯಕ್ಕೆ ತಕ್ಕ ನಡತೆಯಲ್ಲ"

-ಎಂದು ಹೈದರಾಲಿ ಕೆಣಕಿದಾಗಲೂ -

"ಚಿಕ್ಕಂದಿನಿಂದ ನಮ್ಮ ಹಿರಿಯರು ಹಾಗೆ ಬೆಳಸಿದ್ದಾರೆ" - ಎಂದು ಹೇಳಿ, ಜಾರಿಕೊಂಡಿದ್ದ.

ಆ ಬಳಿಕ ಈ ಅರಸಿಕನನ್ನು ತನ್ನ ವಿಲಾಸಗೋಷ್ಠಿಗೆ ಆಹ್ವಾನಿಸಲು ಹೈದರಾಲಿಯೂ ಪ್ರಯತ್ನಿಸಿರಲಿಲ್ಲ.

ಎಂತಲೇ ಈ ಬಾರಿಯೂ ಹೈದರಾಲಿ ತನ್ನನ್ನು ಸುಖಭೋಜನಕ್ಕೆಂದು ಆಹ್ವಾನಿಸಿದಾಗ, ಮದಕರಿನಾಯಕ-

"ಮನ್ನಿಸಬೇಕು. ನಾವು ದುರ್ಗ ಬಿಟ್ಟು ಬಹುದಿನಗಳಾದವು. ನಮ್ಮ ಕಾರ್ಯ-ತಮ್ಮ ಕಾರ್ಯ ಜಯವಾಯಿತು. ನಮಗಿನ್ನು ಹೊರಡಲು ಸಂತೋಷವಾಗಿ ಅನುಮತಿ ಕೊಡಬೇಕು" - ಎಂದು ಕೇಳಿದ.

"ಹೋಗಿ ಬನ್ನಿ. ಯಾವಾಗಲೂ ನಮ್ಮ ಕಾರ್ಯಕ್ಕೆ ನಿಮ್ಮ ಬೆಂಬಲವಿರಲಿ"

- ಎಂದು ಹೇಳಿ, ಆನೆ, ಕುದುರೆ, ಪಲ್ಲಕ್ಕಿಗಳ ಖಿಲ್ಲತ್ತನ್ನು ಕೊಟ್ಟು ಮದಕರಿನಾಯಕನನ್ನು ಬೀಳ್ಕೊಟ್ಟ ಹೈದರಾಲಿ.

೪

ಹೈದರಾಲಿಯ ಕೈಯಲ್ಲಿ ಶಕ್ತಿರೇಖೆಗಿಂತ ಅದೃಷ್ಟರೇಖೆ ಬಲವಾಗಿತ್ತು. ಎಂತಲೇ ಸ್ವಭಾನು ಸಂವತ್ಸರದಲ್ಲಿ ಅವನು ಕಾಲಿಟ್ಟ ಕಡೆ ಗೆಲವು ದೊರೆತು, ಕತ್ತು ಚಾಚಿದಲ್ಲಿ ವಿಜಯ ಮಾಲೆ ಕೊರಳಿಗೆ ಬಿದ್ದು ಅವರು ಕನಸು ಕಾಣುತ್ತಿದ್ದ ನಗರದ ಅಕ್ಷಯಭಂಡಾರ ಅವನದಾಗಿತ್ತು.

ಆದರೆ ಅವನ ಸಾಲುಗೆಲುವಿಗೆ, ಮದಕರಿನಾಯಕ, ಹೈದರಾಲಿಯನ್ನು ನಂಬಿ ನಗರವನ್ನುಗೆಲ್ಲಲ್ಲು ದಾರಿ ನೇರ್ಪಡಿಸಿಕೊಟ್ಟುದೊಂದೇ ಅಲ್ಲದೆ, ಪಾಣೀಪತ್‌ನ ರಣತಾಂಡವದಲ್ಲಿ ಮರಾಠರಿಗಾದ ಪ್ರಚಂಡ ಪರಾಭವ, ಬಾಜೀರಾಯನ ಸಾವು, ಬಳಿಕ ಮರಾಠರ ರಾಜಗೃಹ ಅಂತಃಕಲಹದ ಉರಿಬೇಗೆಯಲ್ಲಿ ಬೆಂದದ್ದು ಹೈದರಾಲಿಯ ಸಾಲುಗೆಲುವಿಗೆ ಹೂವಿನ ಹಾದಿಯನ್ನು ಹಾಸಿತ್ತು.

ಸ್ವಭಾನು ಸರಿದು ಬಂದ ಕಾರಣ ಸಂವತ್ಸರ ಹೈದರಾಲಿಯ ಪಾಲಿಗೆ ಮಾರಣಸಂವತ್ಸರವಾಯಿತು.

ಬಾಜೀರಾಯನ ನಂತರ ಪೇಶ್ವೆಯ ಪಟ್ಟಕ್ಕೆ ಬಂದ ಮಾಧವರಾಯ ಮದಿಸಿದ ಸಲಗದಂತೆ ಮೆರೆಯುತ್ತಿದ್ದ ತನ್ನ ಚಿಕ್ಕಪ್ಪ ರಘುನಾಥರಾಯನ ಸೊಕ್ಕಡಗಿಸಿ, ಮೂಲೆ ಗುಂಪಾಗಿ ಮಾಡಿ, ಅವನನ್ನು ಕೂಡಿಸಿದುದೇ ಅಲ್ಲದೆ ಹುಲಿಯಿಲ್ಲದ ಕಾಡಿನಲ್ಲಿ ಸಲಗದಂತೆ ಸ್ವೇಚ್ಛೆಯಾಗಿ ವಿಹರಿಸಿದ ಹೈದರಾಲಿಯ ಸೊಕ್ಕಡಗಿಸಲು ದೃಢನಿರ್ಧಾರ ಮಾಡಿ, ಪ್ರಬಲ ಸೇನೆಯೊಂದಿಗೆ ಹೈದರಾಲಿ ಕೈವಶಮಾಡಿಕೊಂಡ ರಾಜ್ಯದ ಮೇಲೆ ತನ್ನ ಪ್ರಮುಖ ಬೆಂಬಲಿಗರಾದ ಮುರಾರಿರಾವ್ ಘೋರ್ಪಡೆ, ಗೋಪಾಲರಾವ್ ಪಟರ್ಧನ, ಹರಿಪಂತ್‌ರ ಸೇನಾಬಲದೊಂದಿಗೆ ದಾಳಿ ಮಾಡಿದ.

ಧಾರವಾಡ, ಬಂಕಾಪುರ, ಸವಣೂರು -

ಇದೆಲ್ಲಕ್ಕಿಂತ ಹೆಚ್ಚಾಗಿ ಮೊದಲಿನಿಂದಲೂ ಮರಾಠರೊಂದಿಗೆ ಮಧುರ ಬಾಂಧವ್ಯವನ್ನಿಟ್ಟುಕೊಂಡಿದ್ದ ನಗರದ ರಾಜ್ಯ- ಹೈದರನ ತೋಳಕವಳಿಗೆಯಾದದ್ದು ಮಾಧವರಾಯನ ಪೌರುಷಕ್ಕೆ ಸವಾಲಾಗಿ, ಹೈದರಾಲಿಯ ಇತಿಹಾಸವನ್ನೇ ಮುಗಿಸುವ ದೃಢನಿಶ್ಚಯದಿಂದ ಮುನ್ನುಗ್ಗಿದ.

ತನ್ನ ಸಾಮಂತರ ಸೋಲು, ನೆಚ್ಚಿದ ನಗರದ ಪತನ – ಮಾಧವರಾಯನ ಹೃದಯದಲ್ಲಿ ಹೈದರಾಲಿಯ ಬಗ್ಗೆ ದ್ವೇಷದ ದಾವಾನಲವನ್ನು ಪ್ರಜ್ವಲಗೊಳಿಸಿತ್ತು.

ಹೈದರಾಲಿ ತಿಂಗಳುಗಟ್ಟಲೆ ಹೆಣಗಿ ಹಿಡಿದ ಧಾರವಾಡ, ಬಂಕಾಪುರ, ಸವಣೂರುಗಳನ್ನು ಮತ್ತೆ ವಶಪಡಿಸಿಕೊಂಡುದೇ ಅಲ್ಲದೆ, ನಗರ ಸಂಸ್ಥಾನವನ್ನು ತನ್ನ ಕೈವಶಮಾಡಿಕೊಳ್ಳುವ ದೃಢನಿರ್ಧಾರದಿಂದ, ಅತ್ತಕಡೆ ತನ್ನ ಚಪಲಗತಿಯ ಸಹಸ್ರ, ಸಹಸ್ರ ಅಶ್ವಬಲವನ್ನು ಮುಂದೊತ್ತಿದ ಮಾಧವರಾಯ.

ಗೆದ್ದು ಬೀಗುತ್ತಿದ್ದ ಹೈದರಾಲಿಯೂ, ಮರಾಠರ ಮಾರ್ಬಲವನ್ನು ಮುರಿಯುವ ನಿಶ್ಚಲ ನಿರ್ಧಾರ ಮಾಡಿ, ತನ್ನ ಬಲವನ್ನೆಲ್ಲಾ ಕಲೆಹಾಕಿ, ಶಿಕಾರಿಪುರದ ಬಳಿಯ ಮಾಸೂರು-ಮದಗದ ಕೆರೆಯ ಬಯಲಿನಲ್ಲಿ ಮಾಧವರಾಯನ ಸೇನೆಗೆ ಮಾರಿಬಲೆಯನ್ನೊಡ್ಡಿ ಕುಳಿತ.

ಆದರೆ ಮಾಧವರಾಯನ ಸೇನೆ ಆ ಮಾರಿಬಲೆಯೊಳಗೆ ಮಿಕವಾಗಿ ಬೀಳದೆ, ತನಗಾಗಿ ಕಾದು ಕುಳಿತ ಹೈದರಾಲಿಯ ಸೇನೆಯನ್ನು ಸುತ್ತುವರಿದು ನಿಂತು, ಅತ್ತಿತ್ತ ಅಲುಗಲೂ ಅವಕಾಶಕೊಡದೆ, ಸುತ್ತಲ ಸೀಮೆಯನ್ನು ಕೈವಶಮಾಡಿಕೊಂಡು, ಹೈದರಾಲಿ ತಾನೊಡ್ಡಿದ ಬಲೆಯಲ್ಲಿ ತಾನೇ ಮೀನಾಗಿ ಬಲಿಬೀಳುವ ಪ್ರತಿವ್ಯೂಹವನ್ನೊಡ್ಡಿದ.

ಹೈದರಾಲಿ ನಿರೀಕ್ಷಿಸಿದ ಕಡೆ ಮರಾಠರು ನುಗ್ಗಲಿಲ್ಲ - ಅವರು ಕುಳಿತಲ್ಲಿಂದ ಕದಲದಂತೆ ಮಾಡಿ, ಸುತ್ತಲ ಸೀಮೆಯನ್ನು ಗೆದ್ದು, ಹೈದರಾಲಿ ತಾನೇ ಮಾಧವರಾಯನ ಸೇನೆಯ ಮೇಲೆ ಬೀಳದೆ ಅನ್ಯಥಾ ಮಾರ್ಗವಿಲ್ಲವೆಂಬಂತೆ ಮಾಡಿದ. ಹಿನ್ನುಗ್ಗಿ-ಮುನ್ನುಗ್ಗಿ, ಅತ್ತಿತ್ತ ಸರಿದಾಡಲು ತಾವುಗಾಣದೆ, ಬಿದನೂರನ್ನು ಮರಾಠರಿಂದ ರಕ್ಷಿಸಿಕೊಳ್ಳಲು, ಸವಣೂರು -ಹರಿಹರಗಳು ಕೂಡುವೆಡೆಯ ಕಗ್ಗಾಡಿನ ಬೆಂಬಲವಿದ್ದ ರಟ್ಟೆಹಳ್ಳಿಯ ಗುಡ್ಡದ ಮೇಲೆ ತನ್ನ ದಂಡನ್ನು ಕೂಡಿಸಿ, ತನಗನುಕೂಲವಾದ ಅತ್ತಕಡೆ ಮಾಧವರಾಯನ ಸೇನೆ ಬರುವುದನ್ನೇ ಕಾದು ಕುಳಿತ – ಮತ್ತೊಮ್ಮೆ ಚಿತ್ರದುರ್ಗದ ಪ್ರಖ್ಯಾತ ಬೇಡಪಡೆಯ ನೆರವನ್ನೂ ಕೋರಿ. ಅದರ ಬರುವನ್ನೇ ನಿರೀಕ್ಷಿಸುತ್ತಾ.

ಹೈದರಾಲಿ ತನಗನುಕೂಲವಾದ ಎಡೆಯನ್ನು ಆರಿಸಿಕೊಂಡು ಕಾದು ಕುಳಿತಿದ್ದ. ಆದರೆ ಅತ್ತ ನುಗ್ಗಲೇಬೇಕೆಂಬ ಅಗತ್ಯವಿಲ್ಲದ ಮರಾಠರ ಸೇನೆ, ಹೈದರಾಲಿಯನ್ನು ಕುಳಿತಿರುವಲ್ಲಿಯೇ ಬಿಟ್ಟು, ಅವನು ವರದಾನದಿಯ ದಕ್ಷಿಣಭಾಗದಲ್ಲಿ ಆಕ್ರಮಿಸಿದ ಸ್ಥಳಗಳನ್ನೆಲ್ಲಾ ಮತ್ತೆ ಗಳಿಸಿ, ತನ್ನ

ಬಲವನ್ನು ಮುಪ್ಪುರಿಗೊಳಿಸಿಕೊಂಡಿತು. ಹಾಗೆ ಕುಳಿತರೆ ಕುಳಿತಲ್ಲಿಯೇ? ಮುಪ್ಪಾಗಬೇಕೆಂದು ಹೆದರಿದ ಹೈದರಾಲಿ, ರಟ್ಟಿಹಳ್ಳಿಯ ಬಳಿ ಫಜಲುಲ್ಲಾಖಾನನನ್ನು ಕಾವಲಿಟ್ಟು, ತಾನೇ ಇಪ್ಪತ್ತು ಸಾವಿರ ಸೇನೆಯೊಂದಿಗೆ ಮುನ್ನುಗ್ಗಿದ – ಆಗಲೂ ಈ ಎರಡು ಪಡೆಗಳ ನಡುವೆ ಮರಾಠರ ಸೇನೆಯನ್ನು ಕತ್ತರಿಪಟ್ಟಿನಲ್ಲಿ ಸಿಕ್ಕಿಸಿಕೊಳ್ಳಲು ಹೊಂಚುಮಾಡಿ.

ಹೈದರಾಲಿ ಮದಗಜವಾದರೆ, ಮರಾಠರ ಪಡೆ ಸೀಳುನಾಯಿಯ ತಂಡವಾಯಿತು. ಎಲ್ಲ ನಿಂತು ಯುದ್ಧಮಾಡದೆ, ಮೂಲಬಲವನ್ನು ಹೈದರಾಲಿಯ ಏಟಿಗೆ ಸಿಕ್ಕಿಸದೆ, ಅತ್ತಿತ್ತ ಗುಂಪಾಗಿ ಸರಿದು, ಅಕ್ಕಪಕ್ಕ, ಹಿಂದಿನಿಂದ ಹೈದರನ ಸೇನೆಯನ್ನು ಛಿದ್ರ-ವಿಚ್ಛಿದ್ರಗೊಳಿಸುತ್ತಾ, ಹೈದರಾಲಿಯ ಬಲವನ್ನು ನುಗ್ಗುನುರಿ ಮಾಡಿತು. ಆಗಲೂ ಹೈದರಾರಿ ರಟ್ಟಿಹಳ್ಳಿಯ ಬಲೆಯಲ್ಲಿ ಮರಾಠ ಸೇನೆಯನ್ನು ಕೆಡವಿಕೊಳ್ಳಲು ಯತ್ನಿಸಿದ. ಆದರೆ ಮಾಧವರಾಯ ಹೈದರಾಲಿ ತೋಡಿದ ಭಾವಿಗೆ ಬೀಳದೆ, ಆ ಭಾವಿಯಲ್ಲೇ ಹೈದರಾಲಿಯನ್ನು ತಳ್ಳಿ ಸಮಾಧಿ ಮಾಡುವ ಯತ್ನ ನಡೆಸಿದ. ಗೆಲ್ಲಲು ಯತ್ನಿಸಿದ ಹೈದರಾಲಿ ತನ್ನ ಸೇನೆಯ ತೋಳನ್ನೇ ಕಳೆದುಕೊಂಡು ತತ್ತರಿಸಿದ. ಆ ಸುತ್ತುಹೊಡೆತದ ಇದಿರು ಹೈದರಾಲಿಗೆ ಹಿಂಜರಿಯದೆ ಬೇರೆ ಮಾರ್ಗವೇ ಉಳಿಯದೆ, ಆ ಕಾಲಕ್ಕೆ ತನ್ನ ನೆರವಿಗೆ ಬಂದ ಚಿತ್ರದುರ್ಗ ಪಡೆಯ ಸಾಹಸದಿಂದ ತಲೆಯುಳಿಸಿಕೊಂಡು ಆನವಟ್ಟಿಯನ್ನು ಸೇರಿ, ಅಲ್ಲಾದರೂ ತಾನು ಗೆಲ್ಲಬೇಕು ಎಂದು ಹೊಂಚುಹಾಕಿದ. ಆದರೆ ಮಾಧವರಾಯ ಅವನು ತೋಡಿದ ಖೆಡ್ಡಕ್ಕೆ ಬೀಳಲೂ ಇಲ್ಲ, ಹೈದರಾಲಿ ಸುಮ್ಮನಿರಲೂ ಬಿಡಲಿಲ್ಲ. ಮಿಂಚಿನ ವೇಗದಿಂದ ಸಂಚರಿಸುವ ತನ್ನ ಅಶ್ವದಳವನ್ನು ಹತ್ತೆಡೆಯಿಂದ ಹೈದರಾಲಿಯ ಸೇನೆಯತ್ತ ನುಗ್ಗಿಸಿ, ಎತ್ತ ನುಗ್ಗಿದರತ್ತ ಸದೆಬಡಿಯುತ್ತಾ, ಇದ್ದಲ್ಲೂ ಇರಲು ಬಿಡದೆ, ಹತ್ತಿರದ ಗುಡ್ಡದ ಮೇಲಿಟ್ಟ ತೋಫಿನಿಂದ ಗುಂಡು ಉಡಾಯಿಸುತ್ತಾ, ಇರುಕಿನೊಳಗೆ ಸಿಕ್ಕಿಕೊಂಡ ಹೈದರಾಲಿ ಹೊರಬರುವುದನ್ನೇ ಕಾದು ಕುಳಿತ.

ತನ್ನ ಬಲಕ್ಕೆ ಮೂರರಷ್ಟಿದ್ದ ಮರಾಠರನ್ನು ಸೋಲಿಸಿ ಪಾರಾಗುವ ದಾರಿ ಯಾವುದೆಂದು ಚಿಂತಿಸಿದ ಹೈದರಾಲಿ ದಿಕ್ಕುಗಾಣದೆ ಹಗಲುಗಾಳಗದಲ್ಲಿ ತನಗೆ ಗೆಲುವಿಲ್ಲವೆಂದು ನಿಶ್ಚಯಿಸಿ, ಇರುಳುಗಾಳಗದಲ್ಲಿ ಮರಾಠರನ್ನು ಗೆಲ್ಲಲು ಯೋಚಿಸಿ, ತನ್ನ ಬೊಕ್ಕಸ, ಭಂಡಾರವನ್ನು ಫಜಲುಲ್ಲಾಖಾನನ ರಕ್ಷಣೆಗೊಪ್ಪಿಸಿ, ಎರಡುಸಾವಿರ ಕಾಲ್ಬಲ, ಒಂದು ಸಹಸ್ರ ಅಶ್ವಬಲ, ನಾಲ್ಕು ವೇಗವಾಗಿ ಚಲಿಸಬಲ್ಲ ಹಗುರು ಫಿರಂಗಿಗಳೊಂದಿಗೆ ಮರಾಠರು ತನ್ನ ಮೇಲೆ ಗುಂಡು ಕರೆಯುತ್ತಿದ್ದ ಗುಡ್ಡವನ್ನು ಹಿಡಿಯಲು ನುಗ್ಗಿದ.

ಆದರೆ ಇಷ್ಟೆಲ್ಲಾ ಆಗುವ ವೇಳೆಗೆ ಇರುಳು ಹಗಲಾಗಿ, ಹೈದರಾಲಿಯ ಸೇನೆಯನ್ನು ಕಂಡ ಮರಾಠರು 'ಲೂಟೋ - ಮಾರೋ' ಎಂಬ ರಣಘೋಷ ಕೂಗುತ್ತಾ, ಹೈದರಾಲಿಯ ಸೇನೆಯ

ಮೇಲೆ ಹದ್ದಿನಂತೆ ಎರಗಿದರು. ಆ ಹೊತ್ತಿನಲ್ಲಿ ಇರುಳೆಲ್ಲಾ ಇಬ್ಬನಿಯಲ್ಲಿ ನೆನೆದ ಫಿರಂಗಿಯ ಬತ್ತಿಗಳೂ ಹೊತ್ತಿಕೊಳ್ಳದೆ, ಹೈದರಾಲಿಯ ಸೇನೆ ಮರಾಠರ ಕತ್ತಿಗೆ ಸಿಕ್ಕ ಕುರಿಗಳ ತಂಡವಾಯಿತು.

ತನ್ನನ್ನು ಕಾಪಾಡುವುದೆಂದು ತಿಳಿದ ಕಗ್ಗಾಡು, ಈಗ ಅವನ ಕಾಲಿಗಡ್ಡವಾಗಿ, ನಿಶ್ಚಿತ ಸಾವನ್ನು ನಿರೀಕ್ಷಿಸುತ್ತಾ ಕುಳಿತಿದ್ದಾಗ ಹೈದರಾಲಿಯೊಂದಿಗಿದ್ದ ಮದಕರಿನಾಯಕನಿಗೆ ಒಂದು ಉಪಾಯ ತೋಚಿತು. ಹೈದರಾಲಿಯನ್ನು ಕಾಡ ಮರೆಯಲ್ಲಿ ಕುಳ್ಳಿರಿಸಿ, ತನ್ನ ಬೇಡ ಪಡೆಯನ್ನು ಕಾಡಿನಲ್ಲೆಲ್ಲಾ ಚದುರಿಸಿ, ಅವರು ರಣವಾದ್ಯಗಳನ್ನು ಬಾರಿಸುತ್ತಾ, ರಣಕೇಕೆ ಹಾಕಲು ಹೇಳಿದ.

ರಣವಾದ್ಯಗಳ ಭೋರ್ಗರೆವ ನಿನಾದ, ಹತ್ತಾರು ಕಡೆಗಳಿಂದ ಕೇಳಿ ಬಂದ ರಣಘೋಷ – ಮತ್ತಾವುದೋ ಹೊಸ ಬಲ ಹೈದರಾಲಿಯ ರಕ್ಷಣೆಗೆ ಬಂತೆಂಬ ಭ್ರಾಂತಿಯನ್ನು ಮೂಡಿಸಿ, ಮರಾಠರು ಮುನ್ನುಗ್ಗುವುದನ್ನು ನಿಲ್ಲಿಸಿ, ತಾವು ವಶಪಡಿಸಿಕೊಂಡ ಫಿರಂಗಿಗಳೊಂದಿಗೆ ತಮ್ಮ ಮೂಲನೆಲೆಗೆ ಹಿಂದಿರುಗಿದರು. ಹೈದರಾಲಿ ಬಿಟ್ಟಿದ್ದನ್ನು ಬಿಟ್ಟು, ಅಳಿದುಳಿದ ಸೈನಿಕ-ಸರಂಜಾಮಿನೊಂದಿಗೆ, ಕಾಡಿನ ನಡುವೆ ಕದ್ದು ನಡೆದು ತನ್ನ ಸೇನೆಯೊಂದಿಗೆ ಸೇರಿಕೊಂಡು, ತನ್ನನ್ನು ನಿಶ್ಚಿತ ಅಪಾಯದ ಅಂಚಿನಿಂದ ಪಾರುಮಾಡಿದ. ಮದಕರಿನಾಯಕನ ಸೇನೆಗೆ ಕೈಬಿಚ್ಚಿ ಬಹುಮಾನವಿತ್ತು –

"ಇಂದು, ನಿಮ್ಮಿಂದ ನಮ್ಮ ಮಾನ-ಪ್ರಾಣ ಉಳಿಯಿತು" - ಎಂದು ಹೇಳಿದ.

ಮದಕರಿನಾಯಕನೊಂದಿಗೆ ಮಳೆಗಾಲವೂ ಹೈದರಾಲಿಯ ನೆರವಿಗೆ ಬಂದಿತು.

ಬಿದನೂರಿನ ಭದ್ರಪಾಳಯವನ್ನು ಸೇರಿದ ಹೈದರಾಲಿಯನ್ನು ಅಲ್ಲಿ ಇರಗೊಟ್ಟು, ಪೇಶ್ವೆ ಮಾಧವರಾಯನ ಸೇನೆ ಪೂನಾಕ್ಕೆ ಹಿಂತಿರುಗಲಿಲ್ಲ.

ಆವರೆಗೆ ಹೈದರಾಲಿ ಗೆದ್ದ ಸೀಮೆಯನ್ನೆಲ್ಲಾ ವಶಮಾಡಿಕೊಂಡು, ರಾಯದುರ್ಗ, ಹರಪನಹಳ್ಳಿಯ ಪಾಳಯಗಾರರಿಂದಲೂ ಚೌತಾಯಿ ವಸೂಲು ಮಾಡಿಕೊಂಡು, ಹೊಸದುರ್ಗದ ಬಳಿ ಭದ್ರವಾಗಿ ತಳವೂರಿ, ಮಳೆಗಾಲ ಕಳೆಯುವುದನ್ನೇ ಕಾದು ಕುಳಿತ – ಪೇಶ್ವ ಮಾಧವರಾಯ.

ಯುದ್ಧದಲ್ಲಿ ಗೆಲ್ಲಲಾಗದ ಪೇಶ್ವೆ ಮಾಧವರಾಯನನ್ನು ಸೋಲಿಸಲು ಹೈದರಾಲಿ, ಮಾಧವರಾಯನ ವೈರಿಯಾದ. ಅವನ ಚಿಕ್ಕಪ್ಪ ರಘುನಾಥರಾಯನೊಂದಿಗೆ ಪಿತೂರಿ ಮಾಡಿದ.

ಮಳೆಗಾಲ ಕಳೆದು, ಮತ್ತೆ ಬಿಸಿಲು ಮೈಬಿಟ್ಟು ಆ ಹಗಲು ಹೈದರಾಲಿಯ ಪಾಲಿಗೆ ಕತ್ತಲರಾತ್ರಿಯಾಯಿತು. ಮಳೆ ಇಳಿದು ಕಾಡುದಾರಿ ಸುಗಮವಾಗುತ್ತಿದ್ದ ಹಾಗೇ, ಮಾಧವರಾಯ ವನಯುದ್ಧದಲ್ಲೇ ಪರಿಣತವಾದ ಪ್ರಬಲಸೇನೆಯೊಂದಿಗೆ ಮತ್ತೆ ಮಲೆನಾಡಿನ ಮೇಲೆ ಧಾಳಿ ಮಾಡಿದ. ಪೊದೆಪೊದೆಯಾಗಿ ಹೊಸೆದು ಬೆಳೆದ ಹೆಮ್ಮರಗಳ ಕಾಡನ್ನು ಕತ್ತರಿಸುತ್ತಾ ಮಾಧವರಾಯನ ಸೇನೆ ಮುಂದುವರಿದಂತೆ. ಮಳೆಗಾಲದಲ್ಲಿ ಮತ್ತೆ ಮುನ್ನುಗ್ಗಿದ ಹೈದರಾಲಿ ಹೆಜ್ಜೆ

ಹೆಜ್ಜೆಯಾಗಿ ಹಿಂಜರಿದು, ಚೆಲ್ಲಾಪಿಲ್ಲಿಯಾದ ತನ್ನ ಸೇನೆಯನ್ನು ಒಟ್ಟುಗೂಡಿಸಿಕೊಳ್ಳಲೂ ಸಮಯ ಸಾಲದೆ, ಸಿಕ್ಕಷ್ಟನ್ನು ಉಳಿಸಿಕೊಂಡು ಮತ್ತೆ ಬಿದನೂರನ್ನು ಸೇರಿದ – ತಾನು ಮಾಡಿದ ಒಳಸಂಚು 'ಏನು ಫಲ ತರುತ್ತದೋ' ಎಂದು ಕಾಯುತ್ತಾ.

ಆನವಟ್ಟಿ, ಹಾರನಹಳ್ಳಿ, ಕುಂಸಿ, ಆನಂದಪುರಗಳನ್ನು ಕೈವಶಮಾಡಿಕೊಂಡು ಬಿದನೂರಿಗೇ ಮುತ್ತಿಗೆ ಹಾಕಿತು ಮರಾಠಪಡೆ. ಆ ವೇಳೆಗೆ ಪೇಶ್ವೆ ಮಾಧವರಾಯನ ಆರೋಗ್ಯ ಕೆಟ್ಟು, ತನ್ನ ಚಿಕ್ಕಪ್ಪ ರಘುನಾಥರಾಯನನ್ನು ಸೇನಾಧಿಪತ್ಯಕ್ಕೆ ನೇಮಿಸಿದ.

ಆಗ ಹೃದರಾಲಿ ಮಾಡಿದ ಪಿತೂರಿ ಫಲಕೊಟ್ಟು, ಮಾಧವರಾಯ ತನ್ನ ಚಿಕ್ಕಪ್ಪ ರಘುನಾಥರಾಯನ ಸಲಹೆಗೆ ಮಣಿದು, ಗತಪ್ರಾಣನಾದ ಹೈದರಾಲಿಯೊಂದಿಗೆ 'ಬಿದನೂರಿನ ಒಪ್ಪಂದ' ಮಾಡಿಕೊಂಡು, ಹೈದರಾಲಿಗೆ ಜೀವದಾನ ಮಾಡಿದ - ಇಪ್ಪತ್ತೆಂಟುಲಕ್ಷ ಖಂಡಣಿ, ಐದುಲಕ್ಷ ರೂಪಾಯಿ ಉಡುಗೊರೆ, ಗೆದ್ದ ರಾಜ್ಯಗಳನ್ನು ತೆಗೆದುಕೊಂಡು.

ಆ ಒಪ್ಪಂದದ ಸಲಹೆ ಮಾಡಿದವನು ರಘುನಾಥರಾಯ. ತನ್ನ ಚಿಕ್ಕಪ್ಪನ ಮಾತಿಗೆ ಕಟ್ಟು ಬಿದ್ದು ಪೇಶ್ವ ಮಾಧವರಾಯ ಆ ಒಪ್ಪಂದಕ್ಕೆ ಒಪ್ಪಿಗೆ ನೀಡಿದೆ.

ಹೋದ ಪ್ರಾಣ ಮರಳಿ ಬಂದ ಹೈದರಾಲಿ ಮದಕರಿನಾಯಕನಿಗೆ, ಹಲ್ಲು ಕಡಿಯುತ್ತಾ ಹೇಳಿದ -

"ನಾಯಿಗೆರಡು ಎಲುಬಿನ ತುಂಡು, ಮರಾಠರಿಗಿಷ್ಟು ಬಂಗಾರದ ಗಟ್ಟಿ, ಅಷ್ಟಿದ್ದರೆ ಯಾವ ಯುದ್ಧದಲ್ಲಿ ಗೆಲ್ಲಬಹುದು. ಈ ಮಾತನ್ನು ಮರೆಯಬೇಡಿ. ಇದು ಇಂದಿನ ಯುದ್ಧನೀತಿಗೆ ಕೀಲಿಕೈ."

ಮದಕರಿನಾಯಕನಿಗೆ ಯುದ್ಧನೀತಿಯ ಪಾಠವನ್ನು ಕಲಿಸುವವನಂತೆ ಹೇಳಿದ ಹೈದರಾಲಿಯ ಮಾತನ್ನು ಕೇಳಿ, ಆ ವೇಳೆಗೆ ಅವನ ಬಗ್ಗೆ ಸಾಕಷ್ಟು ನಿರಸನಗೊಂಡಿದ್ದ ಮದಕರಿನಾಯಕನ ಕಣ್ಣು ಪೂರ್ಣ ತೆರೆದು -

"ಯುದ್ಧವೆಂದರೆ ಇದು ಗಂಡು ಯುದ್ಧವಲ್ಲ. ಕಾಲು ಕೊಟ್ಟು ತಲೆ ಉಳಿಸಿಕೊಳ್ಳುವ ಚದುರಂಗದಾಟ" – ಎಂದೆನಿಸಿತು.

ಹಾಗನಿಸಿತು ಅಷ್ಟೆ -

ಆದರೆ ಆ ನೀತಿ ಅವನ ಗಂಡುಹೃದಯಕ್ಕೆ ಒಪ್ಪಿಗೆಯಾಗಲಿಲ್ಲ.

ಅಷ್ಟೇ ಅಲ್ಲ -

ಹೈದರಾಲಿಯ ರಾಜಕೀಯ ಚಾತುರ್ಯವನ್ನು ಮೆಚ್ಚಿಕೊಂಡಷ್ಟೇ ಹೇಸಿಕೊಂಡ ಮದಕರಿ ನಾಯಕ, ಹೈದರಾಲಿ ಕೊಟ್ಟ ಉಡುಗೊರೆಯನ್ನು ಸ್ವೀಕರಿಸಿ-

‘‘ನೀವು ಕಲಿಸಿದ ಯಾವ ಪಾಠವನ್ನೂ ನಾವು ಮರೆತಿಲ್ಲ, ಮರೆಯುವುದೂ ಇಲ್ಲ”

-ಎಂದು ಹೇಳಿ, ಚಿತ್ರದುರ್ಗಕ್ಕೆ ಹಿಂತಿರುಗಿದ - ಒಂದಲ್ಲ, ಎರಡು ಪಾಠ ಕಲಿತು.

ಆದರೆ ಮದಕರಿನಾಯಕ ಕಲಿತ ಪಾಠ ಏನೆಂಬುದು ಕಲಿಸಿದ ಹೈದರಾಲಿಗೇ ಅರ್ಥವಾಗಲಿಲ್ಲ.

“ನಾವು ಯುದ್ಧಕ್ಕೆ ಹೋಗಿ, ಎರಡು ಪಾಠ ಕಲಿತು ಬಂದೆವು”

-ಎಂದು ಯುದ್ಧದ ಬಗ್ಗೆ, ರಣಾಂಗಣದಿಂದ ಹಿಂದಿರುಗಿದ ಮದಕರಿನಾಯಕ ಹೇಳಿದ ಮಾತು, ತಮ್ಮ ಪರಶುರಾಮನಾಯಕನಿಗೂ ಅರ್ಥವಾಗದ ಒಗಟಾಯಿತು.

“ಏನು ಪಾಠ ಕಲಿತು ಬಂದಿರಿ ?” – ಎಂದು ಕೇಳಿದ ಪರಶುರಾಮನಾಯಕ,

‘‘ಮೊದಲನೆಯದು – ಯಾರನ್ನು ನಂಬಿದರೂ ಹೈದರಾಲಿಯನ್ನು ನಂಬಬಾರದು.”

“ಎರಡನೆಯದು…”

“ಬೊಕ್ಕಸ ಸಿಕ್ಕಾಗ, ನಮ್ಮವರದು, ಪರರದು ಎಂದು ನೋಡದೆ, ಸಿಕ್ಕದ್ದು ಬೊಕ್ಕಸ ಮಾತ್ರ ಎಂದು ಅದನ್ನು ಸಾಗಿಸಬೇಕು.”

“ಈ ಪಾಠವನ್ನು ಹೈದರಾಲಿಯವರೇ ನಿಮಗೆ ಹೇಳಿಕೊಟ್ಟರೇ ?”

“ಅವರು ಕಲಿಸಲಿಲ್ಲ. ಅವರನ್ನು ನೋಡಿ ನಾವು ಕಲಿತುಕೊಂಡೆವು.”

“ಆದರೆ – ಕಲಿತದ್ದಷ್ಟೇ ನಮಗೆ ಬಂದ ಲಾಭ ಎನ್ನಿ” – ಎಂದು ಕೇಳಿದ ಪರಶುರಾಮ ನಾಯಕ.

“ಅಷ್ಟೆಯೋ-ಅಲ್ಲವೋ ಎನ್ನುವುದು ನಿನಗೇ ಇನ್ನೆರಡು ದಿನಗಳಲ್ಲಿ ಅರ್ಥವಾಗುತ್ತದೆ”

-ಎಂದಷ್ಟೇ ಹೇಳಿದ ಮದಕರಿನಾಯಕ.

* * *

ಆ ಮಾತಿಗೆ ಸಾಕ್ಷ್ಯವೆಂಬಂತೆ ಎರಡು ದಿನ ಕಳೆದ ಬಳಿಕ, ಬಹು ಭಾರವಾದ ಹೊರೆಗಳನ್ನು ಹೊತ್ತ ಇಪ್ಪತ್ತು ಕುದುರೆಯಾಳುಗಳು ಚಿತ್ರದುರ್ಗಕ್ಕೆ ಬಂದರು.

ಬಂದವರು ಹೈದರಾಲಿಯ ಸೈನಿಕರ ಉಡುಪನ್ನು ಧರಿಸಿದ್ದರೂ, ಅವರ ಮುಂದಾಳಾಗಿ ದಳವಾಯಿ ಭರಮಣ್ಣ ನಾಯಕನೇ ಇದ್ದುದರಿಂದ ಅವರನ್ನು ಗಡಿಯಲ್ಲಾಗಲಿ, ಕೋಟೆ ಬಾಗಿಲಿನಲ್ಲಾಗಲಿ, ಯಾರೂ ತಡೆಯಲಿಲ್ಲ.

ಎಲ್ಲಿಯೂ ನಿಂತು ದಣಿವಾರಿಸಿಕೊಳ್ಳದೆ ಆಶ್ವಾರೋಹಿಗಳೊಂದಿಗೆ ಬಂದ ಭರಮಣ್ಣ ನಾಯಕ, ನೇರವಾಗಿ ಅರಮನೆಯ ಬಾಗಿಲನ್ನು ತಲುಪಿ, ತಾನು ಬಂದದ್ದನ್ನು ನಾಯಕರಿಗೆ ತಿಳಿಸುವಂತೆ ಹೇಳಿದೆ.

ಆ ಸುದ್ದಿಗಾಗೇ ಕಾಯುತ್ತಿದ್ದ ಮದಕರಿನಾಯಕ ಅಶ್ವಾರೋಹಿಗಳು ತಂದ ಮೂಟೆಗಳನ್ನು ಆರಮನೆಯ ರಹಸ್ಯಕೋಣೆಯೊಂದರಲ್ಲಿ ಇಳಡುವಂತೆ ಹೇಳಿ, ಪರಶುರಾಮನಾಯಕನಿಗೆ -

"ನಾವು ಕಲಿತ ಎರಡನೆಯ ಪಾಠವನ್ನು ನೋಡು ಬಾ" – ಎಂದು ಕರೆದ.

ಅಣ್ಣನ ಆಣತಿಯಂತೆ, ಆತನನ್ನು ಹಿಂಬಾಲಿಸಿ ಬಂದ ಪರಶುರಾಮನಾಯಕ, ಕೊಠಡಿಯಲ್ಲಿ ಆಳುಗಳು ತಂದು ಸುರುವಿದ ಚಿನ್ನದ ಮೊಹರುಗಳ ರಾಶಿಯನ್ನು ನೋಡಿ-

"ಇದೆಲ್ಲಿಯದು ?" – ಎಂದು ಬೆರಗಾಗಿ ಕೇಳಿದ.

"ನಾವು ಕಲಿತ ಪಾಠದಿಂದ ಬಂದ ಲಾಭವೇನು ಎಂದು ಕೇಳಿದೆಯಲ್ಲಾ - ಇದೇ ಅದು." ಮದಕರಿನಾಯಕ ಹೇಳಿದ.

"ಅಂದರೆ - ಇದು ಯಾರದು ?"

"ಹೈದರಾಲಿಯವರದು."

"ಯುದ್ಧದ ವೆಚ್ಚಕ್ಕೆಂದು ಕೊಟ್ಟರೆ ?"

"ಅವರು ಉದಾರವಾಗಿ ಕೊಟ್ಟಿದ್ದರೆ, ನಾವಿದನ್ನು ಊರ ಬೀದಿಯಲ್ಲಿ ಮೆರೆಸುತ್ತಿದ್ದೆವು. ಅವರು ಕೊಡಲಿಲ್ಲ; ಕೊಡುವ ಬುದ್ಧಿಯೂ ಅವರಿಗೆ ಬರಲಿಲ್ಲ. ಬಾಡಿಗೆಗೆ ಬಂದ ಸಿಪಾಯಿಯಂತೆ ನಮಗೆ ಒಂದು ಆನೆ, ಎರಡು ಕುದುರೆ, ನಾಲ್ಕು ಸರ ಕೊಟ್ಟು, ಸಿಕ್ಕದ್ದನ್ನೆಲ್ಲಾ ಅವರು ಪಟ್ಟಣಕ್ಕೆ ಸಾಗಿಸಿದರು. ಈ ಬಾರಿ, ಅವರ ಬೊಕ್ಕಸದ ರಕ್ಷಣೆ ನಮ್ಮ ಪಾಲಿಗೆ ಬಂದಾಗ, ದಳವಾಯಿ ಭರಮಣ್ಣನವರಿಗೆ ಅದನ್ನು ದುರ್ಗಕ್ಕೆ ಸಾಗಿಸಲು ಹೇಳಿ, ನವಾಬರಿಗೆ 'ಮರಾಠರು ಲೂಟಿ ಮಾಡಿದರು' ಎಂದು ಹೇಳಿದೆವು. ಹಿಂದೆ ನಾವು ನವಾಬರನ್ನು ನಂಬಿದೆವು; ಈ ಬಾರಿ ಅವರು ನಮ್ಮನ್ನು ನಂಬಿದರು, ಅವರು ನಮಗೆ ಕಲಿಸಿದ ಪಾಠ ವ್ಯರ್ಥವಾಗಲಿಲ್ಲ" – ಎಂದ ಮದಕರಿನಾಯಕ ನಗುತ್ತಾ.

ಆ ಮಾತನ್ನು ಕೇಳಿ ಪರಶುರಾಮನಾಯಕನೂ ಹೊಟ್ಟೆ ತುಂಬ ನಕ್ಕ.

"ಈಗ ಒಂದು ಪಾಠ ಕಲಿಸಿದ್ದರೆ ಋಣ ತೀರಿಸಿದ ಹಾಗಾಯಿತು. ಇನ್ನೊಂದು ಪಾಠದ ಋಣವನ್ನು ತೀರಿಸಬೇಕಾದದ್ದು ಮಾತ್ರ ಉಳಿದಿದೆ" - ಎಂದು ಮದಕರಿನಾಯಕ ನೀರಸವಾದ ಧ್ವನಿಯಲ್ಲಿ ಹೇಳಿದ -

“ಇನ್ನು ಬೇಕಾದರೆ ನವಾಬರು ನಮಗೆ ಕೊಟ್ಟ ಖಿಲ್ಲತ್ತುಗಳ ಮೆರವಣಿಗೆ ಮಾಡಿ ನಗರದಲ್ಲಿ.”

“ಅದು ಆಗತ್ಯವೇ ?” – ಎಂದು ಪರಶುರಾಮನಾಯಕ ಕೇಳಿದ.

“ನಾವು ಕಲಿತಷ್ಟು ಮಟ್ಟಿಗೆ ರಾಜಕಾರಣದಲ್ಲಿ ಯಾವುದೂ ಅನಗತ್ಯವಲ್ಲ” – ಎಂದ ಮದಕರಿನಾಯಕ.

ॐ

ದುರ್ಗದಲ್ಲಾದಿನ ಸಡಗರದ ಸಂತೆ.

ಶ್ರೀರಂಗಪಟ್ಟಣದ ನವಾಬರು ದುರ್ಗದರಸುಗಳಿಗೆ, ಯೋಧರುಗಳಿಗೆ ಕೊಟ್ಟ ಬಗೆಬಗೆಯ ರತ್ನಾಭರಣಗಳು, ಆನೆ, ಕುದುರೆ, ಒಂಟೆಗಳನ್ನು ನಗರದ ರಾಜಬೀದಿಗಳಲ್ಲಿ ಪ್ರದರ್ಶಿಸುವ ಉತ್ಸವ. ಚಿತ್ರದುರ್ಗದ ಸೇನೆ, ಹೈದರಾಲಿಯ ಪರವಾಗಿ, ನಗರದ ಯುದ್ಧದಲ್ಲಿ, ಬೇರೆಬೇರೆ ಕಾಳಗಗಳಲ್ಲಿ ಗಳಿಸಿದ ಗೆಲುವಿನ ವಾರ್ತೆಯನ್ನು ಕೇಳಿದ ಜನಕ್ಕೆ ನವಾಬರು ಕೊಟ್ಟ ಉಡುಗೊರೆಯನ್ನು, ಅವನ್ನು ಗಳಿಸಿದ ಯೋಧರನ್ನು ಕಣ್ಣಾರೆ ನೋಡುವ ಉತ್ಸಾಹ, ಆನೆ, ಕುದುರೆಗಳು ವಿವಿಧ ವಸ್ತ್ರಾಲಂಕಾರಗಳಿಂದ ಅಲಂಕೃತವಾಗಿದ್ದಂತೆಯೇ, ವಿವಿಧ ಪಡೆಗಳ ಯೋಧರೂ ತಮ್ಮ ಅಸ್ತ್ರ, ವಾಹನ, ವಸ್ತ್ರಗಳನ್ನು ಧರಿಸಿ, ಜನರ ಮೆಚ್ಚುಗೆ ಗಳಿಸಲು ಆತುರರಾಗಿದ್ದರು.

ಆ ಮೆರವಣಿಗೆಯ ವೈಭವವೇ ಒಂದು ಬಗೆಯಾದರೆ -

ಉತ್ಸವಾಂಬಾ ದೇವಾಲಯದ ಎದುರಿನ ಚೌಪಥ ಪ್ರದೇಶದಲ್ಲಿ, ಆ ಸೈನಿಕರನ್ನು ಗೌರವಿಸಲು ನಾಯಕರು, ದುರ್ಗದ ಆಸ್ಥಾನಪ್ರಮುಖರು, ದಂಡಿನ ಹಿರಿಯ ಅಧಿಕಾರಿಗಳು, ನಗರದ ಗಣ್ಯರಿಂದ ಕಿಕ್ಕಿರಿದ, ವಿಶೇಷವಾಗಿ ನಿರ್ಮಿತವಾದ ಮಂಟಪದ ವೈಭವವೇ ಮತ್ತೊಂದು ಬಗೆಯದಾಗಿತ್ತು.

ಜನರಿಗೆ ಎರಡು ಉತ್ಸವಗಳನ್ನು ನೋಡಲು ಆತುರ, ಕಾತರ.

ನಿಂತು ನೋಡುವ ಜನರಿಗೆ ಕಾಣಿಸುವಷ್ಟು ಎತ್ತರದಲ್ಲಿ, ಕುದುರೆಗಳಿಂದ ಎಳೆಯಲ್ಪಟ್ಟ ರಥಗಳಲ್ಲಿ ವಜ್ರವೈಡೂರ್ಯಗಳ ಬೆಳಕು ಮತ್ತಷ್ಟು ಕಂಗೊಳಿಸುವಂತೆ ಮಾಡುವ ನೀಲಿಯ ಮಖಮಲಿನ ಹಾಸಿನ ಮೇಲೆ ಓರಣವಾಗಿ ಜೋಡಿಸಲ್ಪಟ್ಟ ಆಭರಣಗಳು ನೋಡಿದವರ ಕಣ್ಣು ಕೋರೈಸಿದರೆ --

ಆ ಎಲ್ಲ ಉತ್ಸವದ ವೈಭವಕ್ಕೆ ವಿಜಯಪತಾಕೆಯನ್ನು ಹಾರಿಸಿದಂತೆ, ಉತ್ಸವಾಂಬಾ ದೇವಾಲಯದ ಮಹಾದ್ವಾರದ ಇಬ್ಬದಿಗಳಲ್ಲೂ ಅಲಂಕೃತವಾದ ಬಂಡಿಗಳ ಮೇಲೆ ನಿಲ್ಲಿಸಿದ್ದ, ದುರ್ಗದ ಪತಾಕೆಗಳೊಂದಿಗೆ ಪುಷ್ಪಾಲಂಕೃತವಾದ, ನಾಯಕರು ಸವಣೂರು ನವಾಬನಿಂದ ತಮ್ಮ ಪ್ರತಿಜ್ಞೆಯನ್ನು ಪೂರ್ಣಗೊಳಿಸಿ ಗೆದ್ದು ತಂದ ನಾಲ್ಕು ತೋಪುಗಳು ದುರ್ಗದರಸರ ಮನೆದೇವತೆಯ ಕೀರ್ತಿಪತಾಕೆಗಳಂತೆ ಕಂಗೊಳಿಸುತ್ತಿದ್ದವು; ಅವುಗಳನ್ನು ನೋಡಿದ ದುರ್ಗದವರಲ್ಲಿ 'ತಾವು ಅಲ್ಲಿಯವರು' ಎಂಬ ಹೆಮ್ಮೆಯನ್ನು ಹತ್ತುಪಟ್ಟು ಹೆಚ್ಚುಗೊಳಿಸುತ್ತಿದ್ದವು.

ತನ್ನ ಸೈನಿಕರನ್ನು ಗೌರವಿಸಿದ ನಾಯಕರ ಔದಾರ್ಯ, ಯೋಧರಲ್ಲದವರಲ್ಲಿಯೂ ತಾವೂ ಯೋಧರಾಗಿ ಹುಟ್ಟಲಿಲ್ಲವೇಕೆ ಎಂಬ ಅಸೂಯೆಯನ್ನು ಮೂಡಿಸಿತು.

ನಾಯಕರು ಎಲ್ಲರನ್ನೂ ಗೌರವಿಸಿ ವಿಶ್ರಮಿಸಿದಾಗ --

ಜನ ಒಕ್ಕೊರಳಲ್ಲಿ ಕೂಗಿತು -

"ನಾಯಕರು ಬರಬೇಕು.... ಮಹಾಸ್ವಾಮಿಗಳು ಬರಬೇಕು"

- ಎಂಬ ಕೂಗೂ ಒಕ್ಕೊರಲಿನಲ್ಲಿ ಕೇಳಿಬಂತು. ಜನರೊಂದಿಗೇ ನೆರೆದ ಸೇನಾಸಮೂಹದಿಂದ.

'ಈ ಕೂಗೇಕೆ ?'

-ಎಂದು ನಾಯಕರು ಮಂಟಪದಿಂದ ಹೊರಬಂದಾಗ -

ಹತ್ತಾರು ಜನ ಸೈನಿಕರು ಎಳೆತಂದ ವೈಭವೋಪೇತವಾಗಿ ಅಲಂಕೃತವಾದ ಮಂಟಪವೊಂದು, ದೇವಾಲಯದ ಇದಿರು ನಿಂತು, ನೂರಾರು ಕಂಠಗಳು ಕೂಗಿ ಹೇಳಿದವು –

"ನಮ್ಮ ದೊರೆ, ಅಲ್ಲಿರುವ ಭದ್ರಾಸನವನ್ನು ಅಲಂಕರಿಸಿ. ನಮ್ಮ ಕಣ್ಣಾಸೆಯನ್ನು ತಣಿಸಬೇಕು."

"ಇದೇನು ಚೋದ್ಯ. ಇದಕ್ಕೇನು ಕಾರಣ ?"

- ಎಂಬಂತೆ ನಾಯಕರು, ಸನ್ಮಾನಿತನಾಗಿ ಬೀಗುತ್ತಿದ್ದ ದಳವಾಯಿ ಭರಮಣ್ಣನಾಯಕನ ನೋಡಿದಾಗ, ಆತ -

"ಪ್ರಭು. ಇದು ನಮ್ಮ ಸೇವೆಯ ಜನರ ಅಪೇಕ್ಷೆ. ನೀವು ಅವರೆಲ್ಲರಿಗೂ ಉಡುಗೊರೆಗಳನ್ನಿತ್ತಾಗ ತಮಗೆ ಅವರೂ 'ಈ ಕೆಲಸ ಮಾಡುತ್ತೇವೆ' ಎಂದರು. ನಾವು 'ಬೇಡ, ಹಿಂದೆಂದೂ ಈ ರೀತಿಯಾಗಿಲ್ಲ. 'ಪ್ರಭುಗಳು ಸಿಟ್ಟಾದಾರು' ಎಂದಾಗ ಪ್ರಭುಗಳು ಸಿಟ್ಟಾದರೆ, ಆ ಸಿಟ್ಟಿಗೆ ನಮ್ಮ ತಲೆ ಕೊಡುತ್ತೇವೆ. ಅವರಿಗೆ ಹೇಳಬೇಡಿ. ನಾವು ಬೇಡಿದಾಗ, ಅವರಿಗೆ ಅಡ್ಡ ಬಿದ್ದು ಕರೆತಂದು ನಮ್ಮ ಕಣ್ಣಿಗೆ ಹಬ್ಬಮಾಡಿ' ಎಂದು ಕಾಲಿಗೆ ಬಿದ್ದು ಬೇಡಿದರು. ಅವರ ಆಸೆ ನಮಗೂ

ಇತ್ತು. 'ಆಯಿತು, ಪ್ರಭುಗಳು ಸಿಟ್ಟಾದರೆ, ಅವರ ಕತ್ತಿಗೆ ಮೊದಲು ನಮ್ಮ ತಲೆ ಕೊಡುತ್ತೇವೆ, ನಿಮ್ಮಿಚ್ಛೆಯಿದ್ದಂತೆ ಮಾಡಿ' ಎಂದೆವು...."

- ದಳವಾಯಿ ಭರಮಣ್ಣನಾಯಕ ಆನಂದದಿಂದ ಬಿಗಿದ ಕಂಠದಿಂದ ಹೇಳಿದ -

"ಪ್ರಭುಗಳು ದೊಡ್ಡ ಮನಸ್ಸು ಮಾಡಿ. ಬಡವರ ಸಂತೋಷವನ್ನು ಒಪ್ಪಿಸಿಕೊಳ್ಳಬೇಕು."

"ಏನವರ ಬಯಕೆ ?"

"ನಮಗದು ತಿಳಿಯದು. ತಾವು ಆ ರಜತಾಸನವಿರುವ ಮಂಟಪಕ್ಕೆ ಬಿಜಯ ಮಾಡಿಸಬೇಕು. ಬಡವರು ಕೊಟ್ಟಿದ್ದನ್ನು ಸ್ವೀಕರಿಸಬೇಕು" – ಎಂದು ಕೈಜೋಡಿಸಿ ದಾರಿ ತೋರಿದ, ಭರಮಣ್ಣನಾಯಕ.

"ದಾರಿ ಬಿಡಿ... ಪ್ರಭುಗಳಿಗೆ ದಾರಿ ಬಿಡಿ"

– ಎಂದು ಸೈನಿಕರು ಉಚ್ಚಸ್ವರದಲ್ಲಿ ಕೂಗಿ, ಆ ದೃಶ್ಯವನ್ನು ನೋಡಲು ಮುಂದೆ ಬರುತ್ತಿದ್ದ ಜನಸಂದಣಿಯನ್ನು ಹಿಂದೊತ್ತಿ, ಬಿಚ್ಚುಗತ್ತಿಯನ್ನು ಕೈಯಲ್ಲಿ ಧರಿಸಿ, ಇಬ್ಬದಿಯಲ್ಲೂ ಸಾಲಾಗಿ ನಿಂತು ನಮಸ್ಕರಿಸಿ, ನಾಯಕರಿಗೆ ಮಾರ್ಗ ಮಾಡಿಕೊಟ್ಟರು.

ಆ ಪ್ರೀತಿಯ ಒತ್ತಾಯಕ್ಕೆ ಮಣಿದು, ನಾಯಕರು, ಸುತ್ತಲವರೆಲ್ಲರಿಗೂ ಕಾಣುವಂತೆ ಎತ್ತರವಾಗಿ ನಿರ್ಮಿತವಾದ, ಅಲಂಕೃತ ವೇದಿಕೆಯನ್ನು ಹತ್ತಿನಿಂತು, ಜನತೆಗೆ ಕೈಮುಗಿಯುತಿದ್ದಂತೆಯೇ, ಸುತ್ತ ನೆರೆದು ನಿಂತ ಸೇನೆ ಜಯಘೋಷ ಮಾಡುತ್ತಾ ಅವರ ಮೇಲೆ ಹೂಮಳೆ ಗರೆದರು.

ಮೊದಲು ಹಿರಿಯ ಸೇನಾಧಿಕಾರಿಗಳು -

ಬಳಿಕ ಒಬ್ಬೊಬ್ಬರಾಗಿ, ಇಬ್ಬಿಬ್ಬರಾಗಿ, ಹತ್ತಿಪ್ಪತ್ತು ಮಂದಿ ಗುಂಪಾಗಿ, ತಾವು ತಂದಿದ್ದ ಹೊನ್ನುಗಳು, ಆಭರಣಗಳು, ದಿವ್ಯದುಕೂಲಗಳನ್ನು ತಂದು, ನಾಯಕರ ಮುಂದೆ ಆಳೆತ್ತರವಾಗುವಷ್ಟು ರಾಶಿರಾಶಿಯಾಗಿ ಸುರಿದರು. ನಾಯಕರ ಮೈ ಮುಚ್ಚುವಷ್ಟು ಹೂಹಾರಗಳು ಅವರ ಮೈಯನ್ನು ಆಲಂಕರಿಸಿದವು.

"ಇವೆಲ್ಲ ಎಲ್ಲಿಯವು ?"

- ಎಂದು, ಆನಂದದಲ್ಲಿ ಹೂತುಹೋಗಿದ್ದ ಧ್ವನಿಯನ್ನು ಪ್ರಯತ್ನ ಪೂರ್ವಕವಾಗಿ ಹೊರತಂದು, ಹತ್ತಿರದಲ್ಲಿದ್ದ ದಳವಾಯಿ ಭರಮಣ್ಣನಾಯಕನನ್ನು ಕೇಳಿದರು ನಾಯಕರು.

"ನಮ್ಮ ಸೈನಿಕರು ತಮ್ಮ ಜೀವದ ಬೆಲೆ ಕೊಟ್ಟು, ಶತ್ರುಪಾಳಯದಿಂದ ತಂದವು ಇವು. ಇವನ್ನು ತಮ್ಮ ಪಾದಗಾಣಿಕೆಯಾಗಿ ತಮಗೆ ಒಪ್ಪಿಸಿದ್ದಾರೆ. ಬೇಡವೆನ್ನದೆ ಒಪ್ಪಿಕೊಳ್ಳಬೇಕು."

"ಅವರು ಗೆದ್ದ ಇವು ಅವರಿಗೇ ಸೇರಬೇಕಲ್ಲವೇ ? ನಮಗೇಕೆ ?" - ನಾಯಕರು ಕೇಳಿದರು.

"ಹಿಂದಾವಾಗಲೂ ಹೀಗಾದುದಿಲ್ಲ. ಸೇನೆಯ ಜನ ನಾವು ಬೇರೆ ತಾವು ಬೇರೆ ಎಂದು ಭಾವಿಸಿಲ್ಲ. ಕೊಲೆ, ಕಳವು, ಅತ್ಯಾಚಾರಗಳಿಂದ ತಂದವಲ್ಲ ಇವು. ರಕ್ತದ ಬೆಲೆಗೊಟ್ಟು ಯುದ್ಧದಲ್ಲಿ ಗೆದ್ದು ತಂದದ್ದು. ಅನುಮಾನ ಮಾಡದೆ 'ಒಪ್ಪಿಸಿಕೊಂಡೆ, ಸಂತೋಷವಾಯಿತು' ಎಂದಷ್ಟು ಹೇಳಿದರೆ ಸಾಕು" – ಎಂದು ವಿವರಿಸಿದ ಭರಮಣ್ಣನಾಯಕ.

"ನಿಮ್ಮ ಪ್ರೀತಿಯನ್ನು ನಾವು ಬೇಡವೆನ್ನುವುದಿಲ್ಲ" – ಎಂದರು ನಾಯಕರು.

"ನಮಗಲ್ಲ – ಆ ಮಾತಿಗಾಗಿ ಕಾದ ಸಾವಿರ ಕಿವಿಗಳಿವೆ. ಅವರಿಗೆ ಹೇಳಬೇಕು."

"ನಿಮ್ಮ ಪ್ರೀತಿ - ನಮಗೆ ಅಪ್ಪಣೆ"

- ಎಂದು ಕಿಕ್ಕಿರಿದು ನೆರೆದ ಸೇನಾಸಮೂಹಕ್ಕೆ -

"ನೀವಿಷ್ಟು ದಿನ ನಮ್ಮ ಸೈನಿಕರಾಗಿದ್ದಿರಿ. ಈಗ ನೀವು ನಮ್ಮ ಮೈಯ ರಕ್ತ ; ಅದರ ಒಂದೊಂದು ಹನಿ ನೀವು ನಿಮ್ಮ ಪ್ರೀತಿಯನ್ನು ಸದಾ ಉಳಿಸಿಕೊಳ್ಳುವ ಕೃಪೆಯನ್ನು ತಾಯಿ ಉತ್ಸವಾಂಬೆ ನಮಗೆ ಅನುಗ್ರಹಿಸಲಿ"

- ಎಂದಷ್ಟೇ ಹೇಳಿ, ಪ್ರೀತಿಯ ಭಾರವನ್ನು ಹೊರಲಾಗದಂತೆ ಬಾಗಿದರು ನಾಯಕರು.

ಜನ ಕೇಕೆಹಾಕಿ, ಜಯಘೋಷ ಕೂಗಿ, ಕೈಚಪ್ಪಾಳೆ ತಟ್ಟಿ - ಸಹಸ್ರ ರೀತಿಯಲ್ಲಿ ತಮ್ಮ ಆನಂದವನ್ನು ಸೂಚಿಸಿತು ; ಮತ್ತೊಮ್ಮೆ ನಾಯಕರ ಮೇಲೆ ಹೂಮಳೆಗರೆಯಿತು.

ಆ ಪುಷ್ಪವೃಷ್ಟಿಯಲ್ಲಿ ಮೇಲಿನಿಂದ ಭಾರವಾಗಿ ಬಿದ್ದ ಹೂವಿನ ಹಾರವೊಂದನ್ನು ಕಂಡು 'ಇದೆಲ್ಲಿಯದು ?' ಎಂದು ಕಣ್ಣೆತ್ತಿ ನೋಡಿದರು- ನಾಯಕರು.

ದೇವಾಲಯದ ಮೇಲುಪ್ಪರಿಗೆಯಲ್ಲಿ ನೆರೆದ ಸ್ತ್ರೀಸಮೂಹದಿಂದ ಬಿದ್ದ ಹಾರ-

ಯಾರೆಂದು ನೋಡಿದರು -

ಕುಶಲ ರೂವಾರಿ ಕಡೆದ ರತಿಯ ಪುತ್ಥಳಿಯಂತಿದ್ದ ಸ್ತ್ರೀಮುಖವೊಂದು, ತನ್ನತ್ತ ತಿರುಗಿದ ಮದಕರಿನಾಯಕರ ಮುಖವನ್ನು ಕ್ಷಣಕಾಲ ಬಯಕೆ ತುಂಬಿದ ಕಣ್ಣುಗಳಿಂದ ನೋಡಿ, ಮತ್ತೆ ಸನಿಹದ ಸ್ತ್ರೀಸಮೂಹದಲ್ಲಿ ಮರೆಯಾಯಿತು.

ನಾಯಕರು ನೋಡಿದರು -

ಓ, ಎಂಥ ಮುಖ! -

ತಮ್ಮೆದುರು ಆಳೆತ್ತರ ನಿಂತ ಕಾಣಿಕೆಗಳಿಗೆ, ಕಾಮನಿಟ್ಟ ಸೌಂದರ್ಯದ ಸ್ವರ್ಣಕಿರೀಟ !

ಮಿಂಚಿನಂತೆ ಕಂಡು ಮರೆಯಾದ ಆ ಮುಖವನ್ನು ತನ್ನೆದೆಯೊಳಗೆ ತುಂಬಿಕೊಂಡಂತೆ, ಆ ಹಾರವನ್ನು ಹಾಗೇ ಎದೆಗೊತ್ತಿಕೊಂಡರು ನಾಯಕರು.

ಆ ದಿನ ನಡೆದುದೆಲ್ಲವೂ ನಾಯಕರಿಗೆ ಸೋಜಿಗವಾಗಿತ್ತು –

ಎಲ್ಲಕ್ಕಿಂತ ಹೆಚ್ಚಿನ, ಸೊಗಸಿನ ಸೋಜಿಗ ಅದು, ಸಾವಿರ ಹಾರ ತುಂಬಿದ ಅವರ ವಕ್ಷಃಸ್ಥಳವನ್ನು ಅಲಂಕರಿಸಿದ ಲಾವಣ್ಯಲತೆ ಅದು.

ಆ ಹಾರ ಬಿದ್ದು, ಆ ಮುಖ ಕ್ಷಣಮಾತ್ರ ಕಾಣಿಸಿ -

ನಾಯಕರ ಮೈಯನ್ನು ಮಿಂಚಿನ ಬಳ್ಳಿಯಂತೆ ಹೊಯ್ದಾಡಿಸಿತು.

ಕಂಡದ್ದನ್ನು ಮತ್ತೆ ಮರೆಯಬಾರದೆಂಬಂತೆ ಅವರ ಕಣ್ಣು ಮುಚ್ಚಿತು.

ನಾಯಕರ ಮುಚ್ಚಿದ ಕಣ್ಣು ರೆಪ್ಪೆಗಳ ಸೆರೆಯಾಯಿತು, ಮುಖದ ಗೆರೆಗೆರೆಯಲ್ಲೂ ಸೊಬಗು ಸೂಸುವ ಆ ಅಪರಿಚಿತ ಮುಖ.

ಜನ ಕೈಚಪ್ಪಾಳೆ ತಟ್ಟುತ್ತಾ, ಕೇಕೆಹಾಕುತ್ತಾ, ಹರ್ಷೋದ್ಗಾರ ಮಾಡುತ್ತಾ ಮೊರೆಯುತ್ತಿತ್ತು.

ನಾಯಕರ ಮನಸ್ಸು ಮಾತ್ರ ಅದೆಲ್ಲವನ್ನು ಮರೆತು, ಕ್ಷಣಕಾಲ ಕಂಡು ಮರೆಯಾದ ಆ ಮುಖವನ್ನು ನೆನೆಯುತ್ತಿತ್ತು.

* * *

ನಾಲ್ಕು ದಿನವಾಯಿತು -

ಕಂಡ ಮುಖ ಕನಸಾಗಿ, ಆ ಕನಸು ಬಗೆಬಗೆಯ ಬಯಕೆಗಳ ಬಳ್ಳಿಯಾಗಿ, ಇಬ್ಬರು ಮಡದಿಯರು ಮನಸಾರೆ ಬಡಿಸಿದ ರತಿಯೂಟವೂ ಸಪ್ಪೆಗೂಳಾಗಿ - ಕಂಡು ಮರೆಯಾದ ಆ ಮುಖವನ್ನು ಚಿಂತಿಸುತ್ತಿತ್ತು -

'ಆಕೆ ಯಾರಿರಬಹುದು ? ಏಕೆ ಆ ಹೂಹಾರ ಹಾಕಿದಳು ? ಬೇಕೆಂದು ಬಿದ್ದುದೇ, ಕೈಜಾರಿ ಬಿದ್ದುದೇ ?'

'ಆ ಮುಖ ನೆನಸಬಹುದಾದದ್ದೇ'? -

'ಕಂಡರೂ ಮತ್ತೆ ನೆನಸಬಾರದ ಗರತಿ ಮೊಗವೋ ?

'ಯಾರನ್ನು ಕೇಳುವುದು ? ಏನೆಂದು ಕೇಳುವುದು ? ಹೇಗೆ ಕೇಳುವುದು ?'

ಮರೆಯಬೇಕೆನಿಸಿದಷ್ಟೂ ಮತ್ತಷ್ಟು ಉಗ್ರವಾಗಿ ಎದೆಯಂಗಳದಲ್ಲಿ ಪ್ರಜ್ವಲಿಸುತ್ತಿದ್ದ ಆ ರೂಪಶಿಖಿಯ ಬೇಗೆಯನ್ನು ಹೃದಯದಲ್ಲಿ ಹೊತ್ತು ಹೊಯ್ದಾಡಿದ, ಮದಕರಿನಾಯಕ.

ಚಿತ್ರದುರ್ಗದ ಅರಮನೆಗೆ ಬಂದು ನೆಲಸಿದ ಬಳಿಕ, ನಿಂಗವ್ವನಿಗೆ ಮಾಡಲು ಕೆಲಸವಿಲ್ಲವಾಯಿತು. ಜಾನಕಲ್ಲಿನಲ್ಲಾದರೆ, ಆಳಿನಿಂದ ಮನೆಯ ಯಜಮಾನನವರೆಗೆ ನೋಡಿಕೊಳ್ಳುವ ನೂರು ದಿನನಿತ್ಯದ ಕೆಲಸ. ಇಲ್ಲಿ - ಆಕೆ ಒಂದು ಕೆಲಸ ಮಾಡಬೇಕೆಂದರೆ ಹತ್ತು ಕೈ ಆ ಕೆಲಸಕ್ಕೆ ನೆರವಾಗಲು ಬರುವವು. ಕೆಲಸವಿಲ್ಲವೆಂದು ಹರಟೆಯಲ್ಲೇ, ಹೆಂಗಸರಾಡುವ ಚೌಕಾಬಾರ, ಪಗಡೆ, ಕವಡೆಯಾಟ ಇಂಥ ಆಟಗಳಲ್ಲಿ ಹೊತ್ತು ಕಳೆಯುವ ಸ್ವಭಾವವೂ ಅಲ್ಲ ಆಕೆಯದು, ಅಲ್ಲದೆ ಹರಟೆ ಹೊಡೆಯಬೇಕೆಂದರೂ ಯಾರ ಜೊತೆ ?

ಮಗನಿಗೆ ಸೀಮೆಯ ಚಿಂತೆ, ಗಂಡನಿಗೆ ಅರಮನೆಯ ಸರ್ವಾಧಿಕಾರದ ಕೆಲಸ, ಸೊಸೆಯಂದಿರು - ಅವರಿಗೆ ಅತ್ತೆ ಎಷ್ಟೇ ಸರಳಳಾದರೂ, ಆಕೆಯೊಂದಿಗೆ ಸದರದಿಂದಿರಲು ಅಳುಕು. ಹಾಗೂ ಮಾತನಾಡಿದರೂ ಎಷ್ಟು ಹೊತ್ತು ಮಾತನಾಡಬಹುದು, ಏನು ಮಾತನಾಡಬೇಕು ? ಕಿರಿಯ ಮಗ ಪರಶುರಾಮನಾಯಕ ಮೊದಲೆರಡು ದಿನ ತಾಯಿಯೊಂದಿಗೆ ಆಗಾಗ ಹರಟೆ ಕೊಚ್ಚುತ್ತಿದ್ದ. ಈಗ ಅವನೂ ಪ್ರಧಾನಿ ನರಸಪ್ಪಯ್ಯನವರೊಂದಿಗೆ ಏನೋ ರಾಜ್ಯವ್ಯವಹಾರ ಕಟ್ಟಿಕೊಂಡು ಓಡಾಡುತ್ತಿದ್ದಾನೆ. ಹೀಗೆ ಒಬ್ಬೊಬ್ಬರಿಗೂ ಅವರವರ ಕೆಲಸ.

ಅಡುಗೆ ಮಾಡುವುದಿಲ್ಲ, ಬಡಿಸುವುದಿಲ್ಲ- ಅದಕ್ಕೆಲ್ಲಾ ಆಳುಕಾಳು. ತಾನೇನು ಮಾಡಬೇಕು? ಮೊದಲಿನಿಂದಲೂ ಆಲಸಿಕೆಯಲ್ಲೇ ಬೆಳೆದ ಹೆಣ್ಣಾಗಿದ್ದರೆ ಒಂದು ರೀತಿ. ಆದರೆ ಚಿಕ್ಕಂದಿನಿಂದಲೂ, ಸುಟಿಯಾಗಿ, ಮನೆಗೆಲಸ ಮಾಡಿಕೊಂಡು ಓಡಾಡುತ್ತಾ ಬೆಳೆದಾಕೆ. ಅಂಥ ನಿಂಗವ್ವನಿಗೆ ಅರಮನೆಯ ಬಾಳು ಒಂದು ರೀತಿಯ ಸುಖದ ಪಂಜರವಾಗಿ, ತಾನೇ ಮಾಡಲು ಒಂದು ಕೆಲಸ ಹಚ್ಚಿಕೊಂಡಿದ್ದಳು - ಇಹಕ್ಕಾಗುತ್ತದೆ, ಪರಕ್ಕಾಗುತ್ತದೆ ಎಂದು.

ಆ ಕೆಲಸ - ಅರಮನೆಯ ಎದುರಿನ ಶೃಂಗಾರತೋಟದಲ್ಲಿ ಬೆಳೆದಿದ್ದ ಅಲಂಕಾರದ ಹೂಗಳನ್ನು ಬಿಟ್ಟು, ಬೇರೆ ದೇವರ ಪೂಜೆಗಾಗುವ ಹೂವುಗಳನ್ನೆಲ್ಲಾ ಬಿಡಿಸಿ, ಹಾರ ಕಟ್ಟಿ, ಅರಮನೆಯ ದೇವರಿಗಷ್ಟು, ಬೆಟ್ಟದ ಮೇಲಿನ ದೇವರುಗಳಿಗಷ್ಟು, ಉತ್ಸವಾಂಬೆಯ ದೇವಸ್ಥಾನಕ್ಕಷ್ಟು ಹೂವಿನ ಹಾರಗಳನ್ನು ಕಟ್ಟಿ ಕಳಿಸುವುದು.

ಆಕೆ ಆ ಕೆಲಸ ಮಾಡುವುದಕ್ಕೆ ಅಡ್ಡಿಯಾಗಿ ನಾಲ್ಕು ಕೈ ತಾವೇ ಮುಂದಾಗಿದ್ದವು -

"ಅವ್ವಾ, ನಾವಿರುವಾಗ ನಿಮಗೇಕೆ ಈ ಚಾಕರಿ ?"

ಗಂಡನೂ ಕೇಳಿದ, ಮಗನೂ ಕೇಳಿದ – ಆದರೆ ಆಕೆಯದು ಎಲ್ಲರಿಗೂ ಒಂದೇ ಉತ್ತರ- "ಸುಮ್ಮನೆ ಕೂತು ಬೊಜ್ಜು ಬೆಳೆಸಿದರೆ ರೋಗ ಬಂದೀತು. ಇಲ್ಲವೇ ಹುಚ್ಚು ಹಿಡಿದೀತು. ಹಿಂದಿನ

ಜನ್ಮದಲ್ಲಿ ಮಾಡಿದ ಪೂಜೆ, ಈ ಜನ್ಮಕ್ಕಿಷ್ಟು ಸುಖ ಕೊಟ್ಟಿತು. ಇಷ್ಟು ಸಾಕೇ ? ಮುಂದಿನ ಜನ್ಮಕ್ಕಿಷ್ಟು ಬುತ್ತಿ ಕಟ್ಟಿಕೊಳ್ಳುತ್ತೇನೆ”

- ಎಂದು ತನಗೆ ಸಹಾಯ ಮಾಡಬಂದವರನ್ನು ಕಟ್ಟುನಿಟ್ಟಾಗಿ ದೂರ ಮಾಡಿ, ಹೂ ಆಯ್ದು ಮಾಲೆ ಕಟ್ಟುವ ಕೆಲಸವನ್ನು ತನ್ನ ಪಾಲಿಗಿಟ್ಟುಕೊಂಡಿದ್ದಳು.

ಆಕೆ ಕಟ್ಟಿದ ಹೂವಿನ ಹಾರ ದಿನವೂ ಅರಮನೆಯಿಂದ ದೇವಾಲಯಗಳಿಗೆ ಹೋದರೆ, ಸೋಮವಾರ ಸಂಪಿಗೆ ಸಿದ್ಧೇಶ್ವರ, ಹಿಡಿಂಬೇಶ್ವರನಿಗೆ. ಮಂಗಳ-ಶುಕ್ರವಾರಗಳಂದು ಏಕನಾಥೇಶ್ವರಿ, ಉಚ್ಚಂಗಮ್ಮನ ದೇವಾಲಯಗಳಿಗೆ ತಾನೇ ಹೂವಿನ ಹಾರ ತೆಗೆದುಕೊಂಡು ಹೋಗಿ, ದೇವರ ಸೇವೆ ಮಾಡಿ ಬರುವಳು. ಶನಿವಾರ ಕೋಟೆಯ ಆಂಜನೇಯ. ಊರಾಚೆಯ ವೆಂಕಟರಮಣಸ್ವಾಮಿಗೆ ಹೂ ಸೇವೆ ಸಲ್ಲುವುದು. ದಿನವೂ ಶೃಂಗಾರವನದ ಇದುರಿಗಿದ್ದ ಗೋಪಾಲಕೃಷ್ಣಸ್ವಾಮಿಗೆ, ಅರಮನೆಯ ಎದುರಿನ ಸುಬ್ರಹ್ಮಣೇಶ್ವರನಿಗೆ ಇಬ್ಬರು ಮಕ್ಕಳ ಹೆಸರಿನಲ್ಲಿ ಒಂದು ಪುಷ್ಪಹಾರದ ಸೇವೆಸಲ್ಲಿಸಿ, ದಿನವೂ ಓಬವ್ವನಾಗತಿಯವರ ಗಾಜಿನ ಚಿತ್ರಕ್ಕೊಂದು ಸಣ್ಣ ಹೂ ಹಾರ ಹಾಕುವಳು. ಬೇಕೆನಿಸಿದಾಗ ಸೊಸೆಯಂದಿರ ಮುಡಿಗೂ ಪುಷ್ಪೋಪಚಾರ ನಡೆಯುವುದು.

ಆಕೆ ರಾಶಿರಾಶಿಯಾಗಿ ಹೂವು ತಂದು ಕಟ್ಟುವುದನ್ನು ನೋಡಿದವರಿಗೆ ‘ಹೂ ಕಟ್ಟುವುದೂ ಬೆಟ್ಟದಂಥ ಕೆಲಸ’ ಎನಿಸಬೇಕು. ನಿಂಗವ್ವನಿಗೆ ಮಾತ್ರ ಹಾಗನಿಸಿರಲಿಲ್ಲ. ಎಷ್ಟು ಹೂವಿದ್ದರೂ ಸಾಲದು. ಆ ಹೂವಿನೊಂದಿಗೆ ತನ್ನ ಹೂವಿನ ಮನಸ್ಸನ್ನೂ ಸೇರಿಸಿ ಮಾಲೆ ಕಟ್ಟುತ್ತಿದ್ದಳು.

ಹಗಲೆದ್ದು ಪ್ರಾತರ್ವಿಧಿ ಮುಗಿಸಿ, ಮುಖ ತೊಳೆದು, ರಟ್ಟೆ ಸೋಲುವಷ್ಟು ಹೂ ಬಿಡಿಸಿ ತಂದು, ಮಿಂದು ಮಡಿಯುಟ್ಟು, ಮಡಿಯಲ್ಲಿ, ಹಸಿಹೊಟ್ಟೆಯಲ್ಲೇ ಕಟ್ಟಳೆಯ ಹೂಹಾರಗಳನ್ನು ಕಟ್ಟಿ ಮುಗಿಸಿ, ಬಳಿಕ ಹಾಲು ಕುಡಿದು ಮತ್ತೆ ಆ ಕೆಲಸಕ್ಕೆ ಕೂಡುವಳು.

ಒಂದೆರಡು ದಿನ ವಿಚಿತ್ರವಾಗಿ ಕಂಡ ಕೆಲಸ, ಬರಬರುತ್ತಾ ದಿನನಿತ್ಯದ ನೋಟವಾಗಿ, ಅರಮನೆಯಲ್ಲಿ ಎಲ್ಲರಿಗೂ ಅದು ನಿತ್ಯ ನೋಟವಾಯಿತು. ‘ಅವ್ವನವರು ಏನು ಮಾಡುತ್ತಿದ್ದಾರೆ?’ ಎಂದೂ ಯಾರು ಕೇಳಿದರೂ, ‘ಹೂವಿನ ಚಾಕರಿ ಮಾಡುತ್ತಿದ್ದಾರೆ’ ಎನ್ನುವುದು ಎಲ್ಲರ ಬಾಯ ಮಾತಾಯಿತು. ಹಾಗೇ ಹಗಲು ಹೊತ್ತು, ‘ಅವ್ವನವರಲ್ಲಿ ?’ ಎಂದು ಕೇಳಿದರೆ ‘ಶೃಂಗಾರವನದಲ್ಲಿ’ ಎಂದು ಹೇಳುವುದೂ ರೂಢಿಯಾಯಿತು.

ದಿನವೂ ಹಾಗೆ ಹೂ ಬಿಡಿಸುತ್ತಾ, ಮಾಲೆ ಕಟ್ಟುತ್ತಾ, ತನ್ನ ನೆರವಿಗೆ ಬಂದವರೊಂದಿಗೆ ಅವರ ಕಷ್ಟಸುಖ ವಿಚಾರಿಸಿಕೊಳ್ಳುತ್ತಾ ಕಾಲಕಳೆಯುತ್ತಿದ್ದಳು. ಅರಮನೆಯವರಿಗೆ ಆಕೆ ಹೂ

ಕಟ್ಟುವ ಕಾಲ ತಮ್ಮ ಕಷ್ಟಸುಖ ಹೇಳಿಕೊಳ್ಳುವ ಕಾಲವಾದರೆ, ಹಗಲು ಹೂ ಬಿಡಿಸುವ ಹೊತ್ತಿನಲ್ಲಿ ಊರ ಹೆಂಗಸರು ಯಾರು ಬೇಕಾದರೂ ಬಂದು ಆಕೆಯ ಮುಂದೆ ತಮಗೆ ಬೇಕಾದ ಮಾತಾಡಿ ಹೋಗಲು ಅವಕಾಶವಿತ್ತು. 'ನೀನು ರಾಜನ ತಾಯಿ. ಹಾಗೆ ಕಂಡವರೊಂದಿಗೆ ಮಾತನಾಡಬಾರದು' ಎಂದು ಒಮ್ಮೆ ಗಂಡ ಭರಮಣ್ಣನಾಯಕ ಆಕ್ಷೇಪಿಸಿದಾಗ, 'ನಿಮ್ಮ ಹಾಗೆ ನಾನು ಕಿರೀಟ ಇಟ್ಟುಕೊಂಡು ಹುಟ್ಟಲಿಲ್ಲ ಈ ಜನ್ಮದಲ್ಲಿ. ಮುಂದಿನ ಜನ್ಮದಲ್ಲೇನಾಗುತ್ತೇನೋ. ಏನೋ ಹೆಣ್ಣು ಮಕ್ಕಳು, ತಮಗೆ ಬೇಕಾದದ್ದೇನೋ ಹೇಳಬಂದರೆ, ಇಲ್ಲದ ದರ್ಪ ತೋರಿಸಿ, ಮುಂದಿನ ಜನ್ಮದ ಭಾಗ್ಯಕ್ಕೆ ಕಲ್ಲುಹಾಕಿಕೊಳ್ಳಬೇಕೇ ? ನೀವು ರಾಜನ ತಂದೆ. ಬೇಕಾದ್ದು ಮಾಡಿ - ನಾನು ಹಳ್ಳಿಹೆಂಗಸು. ಜಾನಕಲ್ಲಿನಲ್ಲಿ ಹೇಗಿದ್ದೆನೋ ಹಾಗಿರುತ್ತೇನೆ' ಎಂದು ಖಡಾಖಂಡಿತವಾಗಿ ಹೇಳಿದ್ದಳು. 'ಹಾಗಲ್ಲ – ಅರಮನೆಯವರ ಭಯ ಜನಕ್ಕಿರಬೇಕು' ಎಂದು ಒಮ್ಮೆ ಹುಚ್ಚವ್ವ ಹೇಳಿದಾಗ 'ಭಗವಂತನ ಮನಸ್ಸಿನಲ್ಲಿ ಹಾಗಿದ್ದರೆ, ಅರಮನೆಯ ಹೆಂಗಸರಿಗೆ ಹುಲಿಯ ಮುಖ ಕೊಟ್ಟು ಹುಟ್ಟಿಸುತ್ತಿದ್ದ. ನನಗಾರ ಭಯವೂ ಇಲ್ಲ. ನನ್ನನ್ನು ಕಂಡು ಯಾರೂ ಹೆದರುವುದೂ ಬೇಡ, ಬಂದವರೇನೂ ನನ್ನ ಮಗನ ರಾಜ್ಯ ಕಿತ್ತುಕೊಂಡು ಹೋಗುವುದಿಲ್ಲ, ಹೂವಿನ ಗಿಡಕ್ಕೆ ವಿಷ ಹಾಕುವುದೂ ಇಲ್ಲ. ಇಲ್ಲದ ಕಟ್ಟುಪಾಡು ನನಗೆ ತರಬೇಡಿ' ಎಂದು ಹೇಳಿ ನಿರಾತಂಕವಾಗಿದ್ದಳು.

ತಾಯಿ ಹಾಗಿದ್ದದ್ದು ಮಗನಿಗೂ ಸಂತೋಷವಾಗಿತ್ತು. 'ಅವ್ವನ ದಾರಿಗೆ ಯಾರೂ ಅಡ್ಡ ಬರಬೇಡಿ' ಎಂದು ಹೇಳಿದ್ದ. ದೊರೆಯೇ ಹಾಗಂದಮೇಲೆ ಬೇರೆ ಮಾತುಂಟೆ ? ಅದರಿಂದಾಗಿ ನಿಂಗವ್ವನ ಬೆಳಗಿನ ಪುಷ್ಪೋಪಚಯನ ಕೆಲಸ, ಮತ್ತೊಂದು ರೀತಿಯಲ್ಲಿ 'ಉದ್ಯಾನದ ಓಲಗ', 'ಸದರದ ಚಾವಡಿ' ಎಂಬ ಹೆಸರುಗಳಿಗೆ ಪಾತ್ರವಾಗಿ, ದುರ್ಗದವರೆಲ್ಲರಿಗೂ ಪರಿಚಯವಾಗಿತ್ತು.

ದುರ್ಗದಲ್ಲಿ ಮದಕರಿನಾಯಕನಿಗೆ ಕನಕಾಭಿಷೇಕ ನಡೆದು ಒಂದೆರಡು ದಿನಗಳಾದಬಳಿಕ, ಒಂದು ದಿನ ಬೆಳಗ್ಗೆ ನಿಂಗವ್ವ, ಶೃಂಗಾರವನದಲ್ಲಿ ಹೂ ಬಿಡಿಸುತ್ತಿದ್ದಾಗ, ತೋಟದ ಕಾವಲಿನ ಆಳು ಬಂದು -

"ತಮ್ಮನ್ನು ಕಾಣಬೇಕೂಂತ ಯಾರೋ ಒಬ್ಬಾಕೆ ಬಂದಿದ್ದಾರೆ. ಕರೆತರಲೆ ?" – ಎಂದು ಕೇಳಿದ.

"ಕಾಯಿಸಿ ಕೇಳಲಿಕ್ಕೆ ಇದೇನು ನಾಯಕರ ಓಲಗವಾ ? ಕರೆದು ತಾ. ಏನು ಅವಸರದ ಕೆಲಸವಾಗಿ ಬಂದಿದ್ದಾಳೋ, ಇಷ್ಟು ಹೊತ್ತಿಗೇ ನೋಡಲಿಕ್ಕೆ" – ಎಂದಳು ನಿಂಗವ್ವ.

ಆಕೆಯ ಮಾತಿನಂತೆ, ಆಳು ಹೊರಗೆ ಬಂದಿದ್ದಾಕೆಯನ್ನು ಆಕೆಯ ಬಳಿ ಕರೆತಂದ. ಬಂದಾಕೆಯನ್ನು ನಿಂಗವ್ವ ನೋಡಿದಳು.

ಬಂದಾಕೆ ನಡುವಯಸ್ಸು ದಾಟಿದ ಹೆಂಗಸು, ಸುಖವಾಗಿ ಬೆಳೆದ, ಸ್ವಲ್ಪ ಸ್ಥೂಲವಾದ ಕಾಯ. ನೋಡಲು ಲಕ್ಷಣವಾದ ಹೆಂಗಸು. ಕತ್ತು, ಕೈಗಳಲ್ಲಿದ್ದ ಒಡವೆಗಳು 'ಈಕೆ ಬಡವಳಲ್ಲ' ಎಂದು ಹೇಳಿದರೆ, ಲಕ್ಷಣವಾಗಿ ಉಟ್ಟ ದಪ್ಪ ರೇಶಿಮೆಯ ಸೀರೆ, ಅಚ್ಚುಕಟ್ಟಾಗಿ ಬಾಚಿದ ತಲೆಗೂದಲು, 'ಈಕೆ ಕಷ್ಟ ಕಾರ್ಪಣ್ಯವನ್ನು ಹೇಳಿಕೊಳ್ಳಲು ಬಂದ ಸಾಮಾನ್ಯ ಸ್ತ್ರೀಯಲ್ಲ' ಎಂದು ಹೇಳಿ, ಮತ್ತೇನೋ ಕೆಲಸಕ್ಕೆ ಬಂದಿರಬೇಕೆಂದು ತೋರಿ -

"ಕುಳಿತುಕೋ ತಾಯಿ, ಇಷ್ಟು ಬೆಳಿಗ್ಗೆಯೇ ಬಂದಿರಲ್ಲಾ. ಏನು ಕೆಲಸ ?"

- ಎಂದಳು, ಬಂದಾಕೆಗೆ ಕುಳಿತುಕೊಳ್ಳಲು ಶಿಲಾಸನವನ್ನು ತೋರಿಸಿ.

ಬಂದಾಕೆ, ನಿಂಗವ್ವ ನಿಂತಿದ್ದುದರಿಂದ ಕುಳಿತುಕೊಳ್ಳದೆ, ತಾನೂ ನಿಂತೇ –

"ಅವ್ವಾ, ನಾನು ಅರಮನೆಯ ರೀತಿ-ರಿವಾಜು ತಿಳಿಯದವಳು. ಮಹಾರಾಜರ ತಾಯಿ-ತಮ್ಮನ್ನು ಹೇಗೆ ಕರೆಯಬೇಕೋ ತಿಳಿಯದು. 'ಅವ್ವಾ' ಎಂದು ಕರೆದರೆ ತಪ್ಪು ತಿಳಿಯಬಾರದು. ತಾವು ಕುಳಿತುಕೊಳ್ಳಬೇಕು. ತಮ್ಮಲ್ಲಿ ತೋಡಿಕೊಳ್ಳಬೇಕಾದ ಮಾತೊಂದಿದೆ" – ಎಂದು ಹೇಳಿದಳು.

"ಅವ್ವಾ ಎನ್ನು, ಅಕ್ಕ ಎನ್ನು - ಮಾರಾಜರ ತಾಯಿ ಎಂದು ಮಾತ್ರ ಕರೆಯಬೇಡ. ಹಾಗೆ ಯಾರಿಂದಲೂ ಕರೆಸಿಕೊಂಡು ನನಗೆ ಅಭ್ಯಾಸವಿಲ್ಲ. ನಿನ್ನ ಹಾಗೆ ನಾನೂ ಹೆಂಗಸು. ವಯಸ್ಸಿನಲ್ಲಿ ನೀನು ನನಗಿಂತ ಹಿರಿಯಳೊ ಕಿರಿಯಳೋ ತಿಳಿಯದು. ಆದ್ದರಿಂದ ಸರಿತೋರಿದ ಹಾಗೆ ಕರಿ. ತಪ್ಪೇನೂ ಆಗುವುದಿಲ್ಲ. ಆದರೆ ನಿಂತು ಮಾತಾಡಬೇಡ. ನಿಂತರೆ ಎದೆಯ ಮೇಲೆ ನಿಂತ ಹಾಗಿರುತ್ತದೆ. ಕುಳಿತುಕೊಂಡು ಅದೇನು ಮಾತೋ ಹೇಳು" – ಎಂದಳು ನಿಂಗವ್ವ.

"ತಾವು ನಿಂತಿರುವಾಗ ...."

"ನನಗೆ ಕುಳಿತು ಕುಳಿತು ಸಾಕಾಗಿ, ಕೈಕಾಲುಗಳಿಗೆ ಕೆಲಸ ಕೊಡಲು ಈ ಕೆಲಸದ ನೆಪಮಾಡಿ ಕೊಂಡು ಓಡಾಡುತ್ತಿದ್ದೇನೆ. ಆ ಸಂಕೋಚ ಬೇಡ. ನೀನು ಮೇಲುದುರ್ಗದವಳೋ, ಕೆಳಗಿನ ಪೇಟೆಯಾಕೆಯೋ? ಕೆಳಗಿನಿಂದ ಬಂದಿದ್ದರೆ ಬೆಟ್ಟ ಹತ್ತಿ ದಣಿವಾಗಿರಬೇಕು. ಕುಳಿತುಕೊಂಡು ಅದೇನು ಹೇಳು. ನಾನು ನಿಂತು ಕೇಳುತ್ತೇನೆ."

"ನಿಂತು ಮಾತನಾಡುವುದು ನನಗೂ ಅಭ್ಯಾಸವಾಗಿದೆ. ಆದರೂ ತಾವು ಕುಳಿತರೆ ನನಗೆ ಮಾತಾಡಲು ಸುಲಭವಾಗುತ್ತದೆ"

- ಎಂದು ಒತ್ತಾಯ ಮಾಡಿದಮೇಲೆ, 'ಈ ಕೆಲಸಕ್ಕೆ ಬರದ ಮಾತಿನಲ್ಲಿ ಹೊತ್ತೇಕೆ ವ್ಯರ್ಥವಾಗಬೇಕು' ಎಂದು ಹೂವಿನ ಬುಟ್ಟಿಯನ್ನು ತನ್ನ ಪಕ್ಕದಲ್ಲಿರಿಸಿಕೊಂಡು, ಶಿಲಾಸನದ ಮೇಲೆ ಕುಳಿತು -

“ಅದೇನು ಮಾತು, ಹೇಳವ್ವಾ? ನಿನ್ನ ಹೆಸರೇನು ? ಗಂಡ, ಮಗ, ಏನು ಮಾಡುತ್ತಿದ್ದಾರೆ?” ಎಂದು ಕೇಳಿದಳು.

ನಿಂಗವ್ವ ಕುಳಿತುಕೋ ಎಂದು ಹೇಳಿದರೂ ಕುಳಿತುಕೊಳ್ಳದೆ, ಬಂದಿದ್ದಾಕೆ -

“ಅವ್ವಾ, ನನ್ನ ಹೆಸರು ಮಾದೇವಿ ಎಂದು. ಮಾದವ್ವಾ ಎಂದು ಕರೆಯುತ್ತಾರೆ. ನೀವು ಹೇಗೆ ಕರೆದರೂ ಸರಿಯೆ. ಮನೆಯ ಗಂಡಸರ ಉದ್ಯೋಗ ಕೇಳಿದಿರಿ....ಆದರೆ....ಆದರೆ....”

-ಎಂದು ಏಕೋ ಮಾತು ತಡೆದು ಹೇಳಿದಳು, ಮಾದೇವಮ್ಮ.

“ಏಕೆ, ನಿನ್ನ ಮನೆಯ ಗಂಡಸರಿಗೆ ಉದ್ಯೋಗ ಇಲ್ಲವೇ ?”

“ಹಾಗಲ್ಲ ಅವ್ವ, ನಮ್ಮಲ್ಲಿ ಗಂಡಸರು ಉದ್ಯೋಗ ಮಾಡುವುದಿಲ್ಲ.’

“ಹಾಗಂದರೆ ಗಂಡಸು ಮನೆಯಲ್ಲಿ ಉಂಡು ಮಲಗಿ, ಹೆಂಗಸು ನೀನು ದುಡಿಯುತ್ತೀಯಾ? ಆಯಿತು ಬಿಡು, ಅದು ನಿನ್ನ ಮನೆಯ ವಿಷಯ - ಈಗ ನನ್ನಿಂದೇನಾಗಬೇಕು? ಗಂಡಸರು ಉದ್ಯೋಗ ಮಾಡುವುದಿಲ್ಲ ಎಂದೆ. ನಿನ್ನ ಮಗಳಿಗೇನಾದರೂ ಅರಮನೆಯಲ್ಲಿ ಉದ್ಯೋಗ ಬೇಕಾಗಿತ್ತೆ ?”

“ಆ ಮಾನಗೆಟ್ಟ ಮಗಳ ವಿಷಯ ಮಾತಾಡುವುದಕ್ಕೇ ಬಂದೆ, ಕಣವ್ವ....”

“ಮಗಳನ್ನು, ಹಡೆದ ತಾಯಿ ಮಾನಗೆಟ್ಟವಳು ಎನ್ನಬಾರದು. ಅದೇನು ಹೇಳು. ನಿನ್ನ ಮಗಳಿಗೆ ನನ್ನಿಂದಾಗಬೇಕಾದ ಕೆಲಸವೇನು ?”

“ಅವ್ವಾ, ಇದ್ದ ಮಾತು ಬಾಯಿ ಬಿಟ್ಟಾಡಿದರೆ ಮೊಕಕ್ಕೆ ಪೊರಕೆ ನಿವಾಳಿಸಬೇಡಿ. ನಮ್ಮ ಕೆಲಸ ಏನು ಎಂದು ಕೇಳಿದಿರಿ - ನಾವು ದೇವದಾಸಿಯರು, ಒಳ್ಳೆಯದೋ, ಕೆಟ್ಟದ್ದೋ ಅದು ತಲೆಮಾರಿನಿಂದ ಕುಲದ ಕಸುಬಾಗಿ ಬಂದುಬಿಟ್ಟಿದೆ. ಹತ್ತು ಜನರ ಸೇವೆ ಮಾಡಿ, ಬದುಕುವ ಬಾಳು ನಮ್ಮದು. ಆದರೆ ಹಾಗೆಂದು ನಾವು ಬೀದಿಹೆಂಗಸರಲ್ಲ. ದೊಡ್ಡವರೊಂದಿಗೆ ಸಂಸಾರ ಮಾಡಿದವರು. ನನಗೊಬ್ಬ ಪ್ರಾಯಕ್ಕೆ ಬಂದ ಮಗಳಿದ್ದಾಳೆ. ಹಾಳುಮೂಳಿ - ಮಹಾರಾಜರ ಮುಖ ನೋಡಿ ‘ಅವರ ಸೇವೆ ಕೊಡಿಸು, ಇಲ್ಲ ಹೊಂಡಕ್ಕೆ ಹಾರುತ್ತೇನೆ’ ಅಂತ ಮೂರು ದಿನದಿಂದ ಊಟ ಬಿಟ್ಟು ಕುಳಿತವಳೆ. ಹೆಂಗಸಿನ ಕಷ್ಟ ಹೆಂಗಸಿಗಲ್ಲದೆ ಮತ್ತಾರಿಗೆ ಗೊತ್ತಾಗ ಬೇಕು. ಅದಕ್ಕೇ ನಿಮ್ಮ ಮುಂದೆ ಹೇಳಿಕೊಳ್ಳಲು ಬಂದೆ.”

ಮಾದೇವಮ್ಮ ಅಷ್ಟು ಹೇಳಿದರೂ ಮಾತೇನೆಂದು ಸ್ಪಷ್ಟವಾಗಿ ಅರ್ಥವಾಗದೆ –

“ನಿನ್ನ ಮಗಳು, ಊಟ ಮಾಡಲು ನಾನೇನು ಮಾಡಬೇಕು ?”

- ಎಂದು ಕೇಳಿದಳು, ನಿಂಗವ್ವ, ಮುಗ್ಧಭಾವ ತುಂಬಿದ ಧ್ವನಿಯಲ್ಲಿ.

"ಕಿವಿಗೆರಡು ವಜ್ರದೋಲೆ ಇದ್ದ ಹಾಗೆ ನಿಮಗಿಬ್ಬರು ಸೊಸೆಯಂದಿರಿದ್ದಾರೆ. ಈ ಮೂರನೆಯವಳನ್ನು ಸೊಸೆಯಾಗಿಯಲ್ಲ, ನಿಮ್ಮ ಮಕ್ಕಳಿಗೆ ತೊತ್ತಾಗಿ ತಂದುಕೋಬೇಕು. ಹೆಂಗಸು -ಆದರೂ ಹಡೆದ ಕರುಳು. ಮಾನ, ಮರ್ಯಾದೆ ಬಿಟ್ಟು ಬೇಡುತ್ತಾ ಇದೀನಿ - ಮಗಳ ಸಂಕಟ ನೋಡಲಾರದೆ. ಅವ್ವಾ - ಇಲ್ಲ, ಬೇಡ ಎಂದು ನನ್ನ ಮಗಳ ಬಾಳು ಹಾಳುಮಾಡಬೇಡಿ. 'ಆದರೆ ಮಾರಾಜರ ತೊತ್ತಾಗುತ್ತೇನೆ, ಇಲ್ಲವೇ ಹೊಂಡಕ್ಕೆ ತುತ್ತಾಗುತ್ತೀನಿ' ಅಂತಾಳೆ -ನಿಮ್ಮ ಮಕ್ಕಳಲ್ಲಿ ವ್ಯಾಮೋಹಪಟ್ಟುಕೊಂಡು. ಕೇಳಿದ ನನ್ನನ್ನು ಬೇಕಾದರೆ ಕಾಲಿನಿಂದ ನೂಕಿ; ಆದರೆ ನನ್ನ ಮಗಳನ್ನು ನಿಮ್ಮ ಉಡೀಲಿ ಹಾಕಿದ್ದೇನೆ, ಉಳಿಸಿಕೊಡಿ"

- ಎಂದು ಕಣ್ಣಲ್ಲಿ ನೀರು ತುಂಬಿಕೊಂಡು ಕೇಳಿದಳು. ಮಾದೇವಮ್ಮ.

ಆಕೆಯಾಡಿದ ಮಾತು ಕೇಳಿ, ನಿಂಗವ್ವನಿಗೆ ದಿಗ್ಭ್ರಾಂತಿಯಾಗಿ –

"ಇದೇನು ಮಾತು ಕೇಳುತ್ತೀಯಾ ? ನಾನೇನು ಮಾಡಬೇಕು ಅನ್ನುತ್ತೀಯಾ ?" – ಎಂದು ಕೇಳಿದಳು.

"ಹೇಳಿದೆನಲ್ಲವ್ವ - ಮಾರಾಜರ ಮುಖ ಕಂಡಾಗಲಿಂದ ಅವರೇ ನನ್ನ ಗಂಡ ಎಂದುಕೊಂಡು, ಕಂಕಣ ಕಟ್ಟಿಕೊಂಡು, ಊಟ ನೀರು ಬಿಟ್ಟು ಕೂತವಳೆ ...."

"ಅದಿರಲಿ - ನಿನ್ನ ಮಗಳಿಗೆ ನನ್ನ ಮಗನಿಗೆ ಏನಾಗಬೇಕೂಂತ ಆಸೆ ?"

- ಕೊಂಚ ಬಿರುಸಾಗಿ ಕೇಳಿದಳು, ನಿಂಗವ್ವ.

"ಏನಾದರೂ ಮಾಡಿಕೊಳ್ಳಿ, ಅವ್ವ.... ಅವರ ಪಾದಕ್ಕೆ ಸೇರಿಸಿ. ಆ ಮಗಳ ಸಂಕಟಾನ ಹಡೆದ ತಾಯಾಗಿ ನೋಡಲಾರೆ"

- ಎಂದು ಕಂಬನಿಗರೆಯುತ್ತಲೇ, ನಿಂಗವ್ವನ ಕಾಲು ಹಿಡಿದು ಬೇಡಿದಳು ಮಾದೇವಮ್ಮ.

'ಛಿ - ಇದೆಂಥ ಕೆಟ್ಟ ಹೆಂಗಸು. ನಾಚಿಕೆ ಬಿಟ್ಟು ತನ್ನ ಮಗಳ ವಿಷಯ ಹೀಗೆ ಹೇಳು ತ್ತಿದ್ದಾಳಲ್ಲಾ'

- ಎನಿಸಿ, ಅವಳು ಮುಟ್ಟಿದ ಕಾಲನ್ನು ಕೊಡವಿಕೊಳ್ಳಬೇಕೆನಿಸಿದರೂ, ಹಾಗೆ ನಿರ್ದಾಕ್ಷಿಣ್ಯವಾಗಿ ನಡೆದು ಅಭ್ಯಾಸವಿಲ್ಲದ ನಿಂಗವ್ವ-

"ಇದೇನು ಮಾತು ಕೇಳುತ್ತೀಯ ? ಹೆಂಗಸಾಗಿ ನೀನು ಹೇಳಬಾರದು. ನಾನು ಕೇಳಬಾರದು' – ಎಂದಳು.

"ನಿಜ, ಕಣವ್ವ. ಇಂಥ ಮಾತು ಕೇಳೋ ಗತಿ ಬರೋದಕ್ಕಿಂತ ಸಾವು ಬಂದಿದ್ದರೆ ಸಂತೋಷ ಪಡ್ತಾ ಇದ್ದೆ. ಹೆಣ್ಣು ಕಸಬಿನ ಕೆಲಸದಲ್ಲಿ ಹುಟ್ಟಿದರೂ ಇನ್ನೂ ಯಾರೂ ಮುಟ್ಟದ ಜೀವ, ನನ್ನ ಮಗಳು. ಸೆಟ್ಟರು, ಸಾಹುಕಾರರು, ದಳವಾಯಿಗಳು ಸಾವಿರ ಜನ ಹೇಳಿಕಳಿಸಿದರು -'ನಿನ್ನ

ಮನೆಗೆ ಬಂಗಾರ ತಂದು ಅಳೆಯುತ್ತೇವೆ; ಮಗಳನ್ನು ಕಳಿಸು. ಅರಗಿಳಿ ಹಾಗೆ ಸಾಕಿ ಕೊಳ್ಳುತ್ತೇವೆ' ಅಂತ. ನಾನೂ ಅದೇ ಹೇಳಿದೆ. ಬಯ್ದೆ ಹೊಡೆದೆ, ಬೀದಿಗೆ ನೂಕುತ್ತೇನೆ ಅಂದೆ. 'ಹೊಂಡಕ್ಕೆ ಹಾರಿಕೊಳ್ಳುತ್ತೇನೆ' ಅಂದಳೇ ಹೊರತು, ಹಿಡಿದ ಮಾತು ಬದಲಿಸಲಿಲ್ಲ. ಈಗ ನೀವು ಬೇಡ ಅಂದರೆ, 'ಹೊಂಡಕ್ಕಾದರೂ ಹಾರು, ಕೆಂಡಕ್ಕಾದರೂ ಬೀಳು' ಅಂತ ಕರುಳು ಕಲ್ಲುಮಾಡಿಕೊಂಡು ಹೇಳ್ತೀನಿ.... ನೀವು ಕಳಿಸು ಅಂದರೆ ಕಳಿಸುತ್ತೇನೆ. ನಿಮಗೆ, ಮಾರಾಜರಿಗೆ ಒಪ್ಪಿಗೆಯಾದರೆ ಅರಮನೆಗೆ ತೊತ್ತಾಗಿ ಇಟ್ಟುಕೊಳ್ಳಿ -ಇಲ್ಲ ನೂಕಿಬಿಡಿ, ಎಲ್ಲಾದರೂ ಸಾಯಲಿ. ನಾನೂ ಹೆಂಗಸೇ ಕಣವ್ವ. ಇಂಥ ಮಾತು ಕೇಳಬೇಕು ಅಂದರೆ ಜೀವ ಮುಪ್ಪಾಗಿ, ಹಿಡಿಯಷ್ಟಾಗುತ್ತೆ. ಆದರೇನು ಮಾಡಲಿ - ಹಡೆದ ತಪ್ಪಿಗೆ ಕಾಲಿಗೆ ಬಿದ್ದು ಕೇಳಿಕೋತೀನಿ. ನನ್ನನ್ನು ಮಾನಗೆಟ್ಟವಳು ಎಂದು ಅನ್ನಿರಿ. ಆದರೆ ನನ್ನ ಮಗಳ ಜೀವ ಉಳಿಸಿಕೊಡಿ. ಅಲ್ಲೀವರೆಗೂ ನಿಮ್ಮ ಪಾದ ಬಿಡೋಲ್ಲ"

- ಎಂದು ಕಾಲು ಹಿಡಿದಂತೆಯೇ ಕಂಬನಿಗರೆಯುತ್ತಾ ಬೇಡಿದಳು, ಮಾದೇವಮ್ಮ ತನ್ನ ಜೀವನದಲ್ಲಿ ಹಿಂದೆಂದೂ ಇಂಥ ಪ್ರಸಂಗವನ್ನು ಎದುರಿಸಿರಲಿಲ್ಲ, ನಿಂಗವ್ವ.

ಏನು ಮಾಡಬೇಕು ? -

ಏನು ಹೇಳಬೇಕು ? -

ಈಗ ಆಕೆಗೆ ಮಾದವ್ವನ ಬಯಕೆ ಏನೆಂಬುದು ಅರ್ಥವಾಗಿತ್ತು. ಹೆಣ್ಣಾಗಿ ಕರಗಿ, 'ಹೂ' ಎಂದರೆ, ತನ್ನ ಸೊಸೆಯರ ಸೆರಗಿಗೆ ಕೆಂಡ ಕಟ್ಟಿದಂತಾದರೆ - ?

'ಬೇಡ' ಎಂದರೆ ಆ ಹಟದ ಹೆಣ್ಣು ಹೇಳಿದಂತೇ ಮಾಡಿ ಪ್ರಾಣ ಕಳೆದುಕೊಂಡರೆ - ?

ಆ ಯೋಚನೆ ಮಾಡುವಾಗ ಇದ್ದಕ್ಕಿದ್ದ ಹಾಗೆ ಮನೆ ಬಿಟ್ಟು ಹೋದ ಮೊದಲ ಸೊಸೆಯ ನೆನಪಾಗಿ, ಆದರೊಂದಿಗೆ -

'ಈ ಮನೆಗೆ ಆಕೆಯ ಶಾಪ ತಟ್ಟೋದು ಬೇಡ'

- ಎಂದು ಓಬವ್ವನಾಗತಿ ಸುವಾಸಿನಿಯರ ಪೂಜೆ ಮಾಡಿಸಿದುದು ನೆನಪಾಗಿ -

'ಈಗ ಈ ಹೆಣ್ಣು 'ಈ ವಂಶ ನಿರ್ವಂಶವಾಗಲಿ' ಎಂದು ಶಪಿಸಿ ಸತ್ತರೆ – ?'

-ಎಂಬ ಯೋಚನೆಯೂ ನುಸುಳಿತು.

ಆ ಯೋಚನೆಯೇ ನಿಂಗವ್ವನ ಮೈಯನ್ನು ನಡುಗಿಸಿತು.

ಏನು ಮಾಡಲೂ ತೋಚದೆ -

"ಅವ್ವಾ – ನನಗೇನು ಹೇಳಲೂ ತೋಚುತ್ತಿಲ್ಲ, ನಿನ್ನ ಮಗಳಿಗೆ ನೀನೂ ಹೇಳುವಷ್ಟು ಬುದ್ಧಿ ಹೇಳಿದ್ದೀನಿ ಅನ್ನುತ್ತೀಯಾ. ಆಯಿತು - ಆಕೆಯನ್ನು ಇಲ್ಲಿಗೆ ತಂದುಬಿಡು. ನಮ್ಮ ಯಜಮಾನರಿಗೆ,

ಮಗನಿಗೆ ಒಪ್ಪಿಗೆಯಾದರೆ ಇಲ್ಲಿರಲಿ. ಇಲ್ಲವಾದರೆ ಯಾರ ಹಣೆಯಲ್ಲಿ ಏನು ಬರೆದಿದ್ದರೆ ಆದಾಗಲಿ' – ಎಂದಷ್ಟೇ ಹೇಳಿದಳು.

"ಅವ್ವ - ಇಷ್ಟು ಹೇಳಿ ನನ್ನನ್ನು ಬದುಕಿಸಿದಿರಿ. ನಿಮ್ಮ ವಂಶ ಸಿದ್ಧೇಶ್ವರನ ಗುಡಿಯ ಮುಂದಿನ ಸಂಪಿಗೆಯ ಮರವಾಗಿ ಬೆಳೆಯಲಿ. ನಿಮ್ಮ ಕೈಗೆ ತಂದು ಒಪ್ಪಿಸುತ್ತೀನಿ. ನಿಮ್ಮ ಮಗ ಮಾರಾಜರಿಗೆ ಬೇಕಾದರೆ ಇಟ್ಟುಕೊಳ್ಳಿ - ಇಲ್ಲ - ನಿಮ್ಮ ತೊತ್ತಾಗಿ ಬೆಳೆಯಲಿ"

-ಎಂದು ಹೇಳಿ, ವರ ಪಡೆದವಳಂತೆ ಹೋದಳು. ಮಾದೇವಮ್ಮ.

ಆ ವರ ಕೊಟ್ಟ ನಿಂಗವ್ವ -

ಗರಬಡಿದಂತೆ ಕುಳಿತುಬಿಟ್ಟಳು ಮುಂದೇನು ಮಾಡಬೇಕೆಂದು ತೋಚದೆ.

'ಮಗಳನ್ನು ಕಳಿಸು' – ಎಂದು ಮಾದೇವಮ್ಮನಿಗೇನೋ ಹೇಳಿದಳು.

'ಆ ಹುಡುಗಿ ಬಂದರೆ ಮುಂದೇನು ಮಾಡಬೇಕು ?'

'ಯಾರ ಮುಂದೆ ಹೇಳಬೇಕು - ತನ್ನ ಪತಿಯ ಮುಂದೋ, ಮಗನ ಮುಂದೋ – ?'

- ಎಂದು ಚಿಂತಿಸುತ್ತಾ, ಕಣ್ಣೆದುರಿಗೆ ಕಂಡ ಸುಬ್ರಹ್ಮಣೇಶ್ವರನ ದೇವಾಲಯಕ್ಕೆ ಕೈ ಮುಗಿದು –

"ಸ್ವಾಮಿ, ನಿನ್ನ ಚಿತ್ತದಲ್ಲಿದ್ದಂತಾಗಲಿ" - ಎಂದಷ್ಟೇ ಹೇಳಿದಳು.

೭

ಆ ಮಾತಾದ ಎರಡು ಮೂರು ದಿನಕ್ಕೆ ಮಾದೇವಮ್ಮ ತನ್ನ ಮಗಳನ್ನು ಕರೆದುಕೊಂಡು ಬಂದು ನಿಂಗವ್ವನಿಗೆ ಒಪ್ಪಿಸಿದಳು. ತಲೆಯ ತುಂಬಾ ಸೆರಗಿನ ಮುಸುಕು ಹಾಕಿಕೊಂಡು, ಯಾವ ಬೆಡಗು ಬಿನ್ನಾಣವನ್ನೂ ಬೀರದೆ. ತಲೆತಗ್ಗಿಸಿ ತನ್ನೆದುರು ನಿಂತ ಮಟ್ಟಸವಾದ ಎತ್ತರದ, ಪ್ರಮಾಣಬದ್ಧವಾಗಿ ಬೆಳೆದ ಮೈಯ, ದಂತದ ಬಣ್ಣದ ಕೈತುಂಬಾ ಬಳೆಗಳನ್ನಿಟ್ಟುಕೊಂಡು, ತಲೆತಗ್ಗಿಸಿ ನಿಂತ, ಸುಮಾರು ಹದಿನಾರು-ಹದಿನೇಳರ ಪ್ರಾಯದ ಹುಡುಗಿಯನ್ನು ನೋಡಿ ನಿಂಗವ್ವ-

"ನೀನು ಪ್ರೀತಿಸಿದವರಿಗಲ್ಲದೆ ಬೇರೆಯವರಿಗೆ ಮುಖ ತೋರಿಸಬಾರದು ಅಂತ ಮಾಡಿದೀಯಾ. ಮುಖ ಎತ್ತಿ ತೋರಿಸವ್ವಾ, ದೊರೆಗೆ ಮರುಳಾದ ನಿನ್ನ ಮುಖ ಹೇಗಿದೆಯೋ ನೋಡೋಣ" – ಎಂದು ಕೇಳಿದಳು.

ಆ ಮಾತು ಕೇಳಿ ಮಾದೇವಮ್ಮನೊಂದಿಗೆ ಬಂದ ಯುವತಿ, ಮುಖವೆತ್ತಿ, ಹಡೆದ ತಾಯಿಯಷ್ಟು ಆದರದಿಂದ ಮಾತನಾಡಿಸಿದ ನಿಂಗವ್ವನ ಮುಖ ನೋಡಿದಳು.

ಬೆಳಗಿನ ಬಿಸಿಲು ಸೋಂಕದೆ, ಅರಳಿ ಕಳಕಳಿಸುತ್ತಿರುವ ಹೂವಿನಂಥ ಮುಖ, ತಿದ್ದಿದ ತುಟಿ, ಮೂಗು, ಹುಬ್ಬು, ಗಲ್ಲಗಳ, ನೋಡಿದರೆ ಮತ್ತಷ್ಟು ನೋಡಬೇಕೆನಿಸುವಂತಿದ್ದ ತರುಣಿಯ ಮುಖ, ನಿಂಗವ್ವನ ಮಾತು ಕೇಳಿ, ಕೆಂಪೇರಿ, ಕೆಂಡಸಂಪಿಗೆಯಂತಿತ್ತು.

"ಮುಖ ನೋಡುತ್ತಾ ನಿಂತೆಯಲ್ಲ, ಅವ್ವನವರಿಗೆ ನಮಸ್ಕಾರ ಮಾಡು" – ಎಂದು ಮಗಳಿಗೆ ಹೇಳಿದಳು. ಮಾದೇವಮ್ಮ.

ತಾಯ ಮಾತಿನಂತೆಯೇ ಮುಂದೆ ಬಂದು ನಮಸ್ಕರಿಸಿದ ಯುವತಿಯ ನೆತ್ತಿಯನ್ನು ನೇವರಿಸಿ-

"ಮುದ್ದಾದ ದುಂಡುಮಲ್ಲಿಗೆಯಂಥ ಮಗಳು. ಹೆಸರೇನಿಟ್ಟಿದ್ದೀಯಾ?" – ಎಂದು ಮಾದೇವಮ್ಮನನ್ನು ಕೇಳಿದಳು. ನಿಂಗವ್ವ.

"ಕಡೂರವ್ವ -"

"ಕಡೂರವ್ವ? - ಇದಾವ ಕಾಡುಸೀಮೆಯ ಹೆಸರೇ - ಹೂವಿನಂಥ ಹುಡುಗಿಗೆ ! ಮುಖ ನೋಡಿ ಮೈಮರೆತು ಈ ಹೆಸರಿಟ್ಟಿಯೇನು ? ಇಷ್ಟು ಲಕ್ಷಣವಂತೆಯಾದ ಹುಡುಗಿಗೆ ಒಂದು ಒಳ್ಳೆ ಹೆಸರಿಡಲು ಬರಲಿಲ್ಲವೇ ?"

-ಎಂದು ನಗುತ್ತಾ ಕೇಳಿ, ಹುಡುಗಿಯತ್ತ ತಿರುಗಿ -

"ನಾವೇನೆಂದು ಕರೆಯಬೇಕವ್ವ, ನಿನ್ನ ?" – ಎಂದು ಕೇಳಿದಳು, ನಿಂಗವ್ವ.

"ಕಡೂರಿ ಅಂತ ಕರೆಯಿರಿ, ಅವ್ವ ಕರೆದ ಹಾಗೆ. ಬೇಡವಾದರೆ ನಿಮಗೆ ಪ್ರೀತಿಯಾದ ಹೆಸರಿನಿಂದ ಕರೆಯಿರಿ" - ಎಂದಳು ಕಡೂರಿ, ನಾಚುತ್ತಾ.

"ನಿನಗೆ ಹೆಸರಿಡುವವರು ಬೇರೆ ಇದಾರೆ. ನನಗೇಕೆ ಆ ಸ್ವಾತಂತ್ರ್ಯ" – ಎಂದು ಕಡೂರಿಗೆ ಹೇಳಿ –

"ನಿನ್ನ ಮಗಳು ನನಗೆ ಒಪ್ಪಿಗೆಯಾದಳು, ಮಾದೇವಮ್ಮ. ಇಲ್ಲಿ ಬಿಟ್ಟು ಹೋಗು. ನಾಲ್ಕು ದಿನ ನನ್ನ ಹತ್ತಿರವೇ ಇರಲಿ. ಸದ್ಯಕ್ಕೆ ಈ ಸುದ್ದಿಯನ್ನು ಹೊರಗೆಲ್ಲೂ ಆಡಬೇಡ. ಮಗನ ಮನಸು ತಿಳಿದುಕೊಂಡು ಮುಂದಿನ ಮಾತು ಹೇಳಿಕಳಿಸುತ್ತೇನೆ"

- ಎಂದು ಮಾದೇವಮ್ಮನಿಗೆ ಹೇಳಿ, ಕಡೂರಿಯತ್ತ ತಿರುಗಿ -

"ಏನವ್ವಾ - ಹೊಸ ಮನೆ, ಹೊಸ ಜನ ಎಂದು ಬೇಸರ ಮಾಡಿಕೊಳ್ಳದೆ ಇಲ್ಲಿ ಇರುತ್ತೀಯಾ?" – ಎಂದು ಕೇಳಿದಳು, ನಿಂಗವ್ವ.

ಆ ವೇಳೆಗೆ ನಿಂಗವ್ವನ ಆತ್ಮೀಯತೆಗೆ ಮಾರುಹೋದ ಕಡೂರಿ -

"ಅವ್ವಾ, ನಿಮ್ಮ ಮಕ್ಕಳು ಒಪ್ಪಿದರೆ, ಅವರ ತೊತ್ತಾಗಿರುತ್ತೇನೆ. ಇಲ್ಲ, ನಿಮ್ಮ ಮನೆಯ ಹೊಸ್ತಿಲಾಗಿರುತ್ತೇನೆ - ದಿನಾ ನಿಮ್ಮ ಪಾದಧೂಳಿ ಹಣೆಗೆ ಹಚ್ಚಿಕೊಂಡು" – ಎಂದಳು, ಸಹಜ ವಿಶ್ವಾಸವಿದ್ದ ಧ್ವನಿಯಲ್ಲಿ.

"ರೂಪಿಗೆ ತಕ್ಕ ಮಾತನಾಡಿದೆಯವ್ವಾ, ನಿನ್ನಂಥವರಿಗೆ ದೇವರು ಕೆಡಕು ಮಾಡುವುದಿಲ್ಲ. ನನ್ನ ಹತ್ತಿರ ಇರು- ನಿನಗೆ ಬೇಕಾದವರು ನಿನ್ನನ್ನು ಕರೆದುಕೊಂಡು ಹೋಗುವವರೆಗೂ""

- ಎಂದು ಹೇಳಿ -

"ನಾನು ಬಂದ ಕೆಲಸ ಆಯಿತವ್ವ, ಬಳ್ಳಿಯಿಂದ ಹೂ ಬಿಡಿಸಿ ನಿಮ್ಮ ಕೈಗಿಟ್ಟಿದ್ದೇನೆ. ತಲೆಗಾದರೂ ಮುಡಿದುಕೊಳ್ಳಿ. ಬೇಲಿಗೆಸೆದು ಬಾಡಿಸಿದರೂ ಬಾಡಿಸಿ. ಇವತ್ತಿನಿಂದ ಇವಳು ನಿಮ್ಮವಳು. ಒಳ್ಳೆಯವರ ಕೈಗಿಟ್ಟು, ನನ್ನ ಹಡೆದ ಹೊಟ್ಟೆ ತಂಪು ಮಾಡಿಕೊಂಡೆ"

- ಎಂದು ಕಣ್ಣೀರಿಡುತ್ತಾ ಹೇಳಿದ ಮಾದೇವಮ್ಮನಿಗೆ -

"ನಗುತ್ತಾ ಬಿಟ್ಟು ಹೋಗು, ನಿನ್ನ ಕಣ್ಣೀರಿಟ್ಟ ಮುಖ ಜ್ಞಾಪಿಸಿಕೊಂಡು ನಿನ್ನ ಮಗಳು ಬಾಡುವುದು ಬೇಡ"

- ಎಂದು ಮಾದೇವಮ್ಮ 'ಬೇಡ ಬೇಡ'ವೆಂದರೂ ಉಚಿತ ಉಡುಗೊರೆಯನ್ನಿತ್ತು.. ಹಾಲು ಕುಡಿಸಿ ಕಳುಹಿಸಿ, ಕಡೂರಿಯನ್ನು ತನ್ನ ಅಂತಃಪುರದಲ್ಲಿರಿಸಿಕೊಂಡಳು, ನಿಂಗವ್ವ.

* * *

ಕಡೂರಿ ತನ್ನ ಅಂತಃಪುರಕ್ಕೆ ಸೇರಿದ್ದರಿಂದ ನಿಂಗವ್ವನ ಸಮಸ್ಯೆ ಪರಿಹಾರವಾಗಲಿಲ್ಲ. ತನ್ನ ಮಗ ಈ ಹುಡುಗಿಯನ್ನು ಒಪ್ಪುತ್ತಾನೆ ಎಂಬ ನಂಬಿಕೆಯೂ ಆಕೆಗಿತ್ತು. ಆದರೆ ಇಷ್ಟು ರೂಪವತಿಯಾದ ಹುಡುಗಿಯನ್ನು ಮಗನಿಗೆ ತಂದುಕೊಂಡು - ಮನೆಯಲ್ಲಿದ್ದ ಸೊಸೆಯರ ಸುಖಕ್ಕೆ ಕಿಚ್ಚಿಟ್ಟಂತಾದರೆ? ಆ ಚಿಂತೆ ಹಿಂದೆ-ಮುಂದೆ ನಿಂಗವ್ವನನ್ನು ಕಾಡಿತು. ತನ್ನ ಮಗ ಸೊಸೆಯರೊಂದಿಗೆ ಹೇಗಿದ್ದಾನೆ ಎಂದು ಆದುವರೆಗೂ ಯೋಚಿಸಿರಲಿಲ್ಲ. ಈಗ ಮಗನಿಗಿಂತ ಹೆಚ್ಚಾಗಿ, ಸೊಸೆಯರ ಚಿಂತೆ ಆಕೆಯನ್ನು ಕಾಡಿತು. ಅವರು ಹೇಗಿದ್ದಾರೆ. ಅವರನ್ನು ತನ್ನ ಮಗ ಚೆನ್ನಾಗಿ ನೋಡಿಕೊಂಡಿದ್ದಾನೆಯೇ, ಅವರಿಬ್ಬರೂ ಪರಸ್ಪರ ಪ್ರೀತಿಯಿಂದ ಇದ್ದಾರಾ? - ಎನ್ನುವುದನ್ನೆಲ್ಲಾ ಸೂಕ್ಷ್ಮವಾಗಿ ವಿಚಾರಿಸಿ, ಮಗ ಸೊಸೆಯರ ಸುಖಕ್ಕೇನೂ ಕಡಿಮೆ ಮಾಡಿಲ್ಲವೆಂದು ತಿಳಿದು ಸಂತೋಷವಾಯಿತು.

ಇಷ್ಟು ದಿನ ಹೀಗಿತ್ತು-

ಆದರೆ ಇನ್ನು ಮುಂದೆ, ಈ ಹೊಸ ಹುಡುಗಿ ಬಂದಮೇಲೆ –

ಹೇಗಾಗುವುದೋ. ಎಂತಾಗುವುದೋ, ಶಾಂತವಾಗಿದ್ದ ಅಂತಃಪುರದಲ್ಲಿ ಎಲ್ಲಿ ಬಿರುಗಾಳಿ ಬೀಸೀತೋ, ಒಳಗೇ ಕಮರುವ ಕಿಡಿ ಎಲ್ಲಿ ಹೊತ್ತಿತೋ - ಎಂದು ಹೆದರಿ ನಾಲ್ಕು ದಿನ ಯಾರೊಂದಿಗೂ ಕಡೂರಿ ತನ್ನ ಅಂತಃಪುರದಲ್ಲಿ ಏಕೆ ಬಂದಿದ್ದಾಳೆ ಎಂದು ಹೇಳದೆ, ಅವಳು ಮಗನ ಕಣ್ಣಿಗೂ ಬೀಳದಹಾಗೆ ಎಚ್ಚರವಾಗಿದ್ದಳು.

ಆಕೆ ಮಾತನ್ನೇನೋ ಮುಚ್ಚಿಟ್ಟುಕೊಂಡಳು - ಆದರೆ ಹುಡುಗಿಯೇನು ಹೂವೇ - ಯಾರಿಗೂ ಕಾಣದಂತೆ ತುರುಬಿನಲ್ಲಿ ಮುಚ್ಚಿಟ್ಟುಕೊಳ್ಳಲು.

ಕಡೂರಿ ನಿಂಗವ್ವನಾಗತಿಯ ಅಂತಃಪುರಕ್ಕೆ ಬಂದ ಎರಡು ದಿನದಲ್ಲೇ 'ದೊಡ್ಡವ್ವನವರ ಅಂತಃಪುರಕ್ಕೆ ಹೊಸ ಹುಡುಗಿಯೊಬ್ಬಳು ಬಂದಿದ್ದಾಳೆ' ಎಂಬ ಪಿಸುಮಾತು, ಅರಮನೆಯ ಎಲ್ಲ ಅಂತಃಪುರಗಳಲ್ಲೂ ಪ್ರತಿಧ್ವನಿಸಿತು.

ಅರಮನೆಯ ಅಂತಃಪುರ ಎನ್ನುವುದು ಕೂಗುಬಂಡೆ ಇದ್ದಹಾಗೆ. ಒಂದು ಕಣ್ಣಿಗೆ ಕಂಡದ್ದು - ಮಾತಾಗಿ, ಅದು ಹತ್ತು ಕಿವಿಗಳಿಗೆ ಹರಡುವುದಕ್ಕೆ ತಡವೇ ಆಗುವುದಿಲ್ಲ. ಮೊದಲೆರಡು ದಿನ ಅಂತಃಪುರದ ಊಳಿಗದವರ ಬಾಯ ಮಾತಾಗಿ, ಸೊಸೆಯಂದಿರ ಕಿವಿಗೆ ಬಿದ್ದು ಕೊನೆಗೊಂದು ದಿನ ಮದಕರಿನಾಯಕನ ಕಿವಿಗೂ ಆ ಮಾತು ಬಿದ್ದು 'ಆ ಹುಡುಗಿ ಯಾರು. ಏಕೆ ಬಂದಿದ್ದಾಳೆ, ಯಾರಿಗೂ ಹೇಳದೆ ಏಕೆ ಇಟ್ಟುಕೊಂಡಿದ್ದೀಯ ?' ಎಂದು ಬಾಯಿಬಿಟ್ಟು ತಾಯಿಯನ್ನು ಕೇಳಲಾಗದೆ, ಹಾಗೂ ಹೀಗೂ ಹೊತ್ತು ಕಾದು, ಒಂದು ದಿನ ಆ ಹುಡುಗಿ ಯಾರೆಂದು ನೋಡಿದ.

ಆ ಯುವತಿ ಮತ್ತಾರೂ ಅಲ್ಲ -

ತನ್ನ ಕುತ್ತಿಗೆಗೆ ಹೂವಿನ ಹಾರ ಹಾಕಿ ಮನಸ್ಸನ್ನು ಕದ್ದು ಗೆದ್ದ ತರುಣಿ.

ಆ ತರುಣಿಯನ್ನು ಕಂಡ ಕೂಡಲೇ, ಎರಡು ದಿನ ಅಡಗಿದ್ದ ಬಯಕೆ ಎದ್ದು ಹೆಡೆಯಗಲಿಸಿ, ತನ್ನಾತುರವನ್ನು ತಡೆಯಲಾಗದೆ, ಒಂದು ದಿನ ತನ್ನ ತಾಯಿ ಒಬ್ಬಳೇ ಇದ್ದ ಹೊತ್ತು ನೋಡಿ, ತಾವು ಮಾತಾಡುತ್ತಿರುವಾಗ ಬೇರಾರೂ ಕದ್ದು ಕೇಳದಂತೆ ಕಟ್ಟು ಮಾಡಿ, ತನ್ನ ತಾಯನ್ನು ಕಂಡು, ಗಂಭೀರ ಮುಖಮುದ್ರೆಯಿಂದ-

"ಅವ್ವಾ - ನಿನ್ನ ಮೇಲೊಂದು ದೂರು ಬಂದಿದೆ" – ಎಂದು ಹೇಳಿದ ಮದಕರಿನಾಯಕ.

ಆ ಮಾತಿನ ಹಿಂದು-ಮುಂದು ತಿಳಿಯದ ನಿಂಗವ್ವ, ಆ ಮಾತು ಕೇಳಿ ಮಿಡುಕಿ –

"ದೂರು - ನನ್ನ ಮೇಲೆ ? ಏನು ದೂರು, ಹೇಳಿದವರು ಯಾರು ?" – ಎಂದು ಕೇಳಿದಳು.

"ನೀವು ಕದ್ದ ಮಾಲನ್ನು ಇಟ್ಟುಕೊಂಡಿದ್ದೀರ ಎಂದು. ಅದೇಕವ್ವಾ - ನಿಮಗೆ ಈ ವಯಸ್ಸಿನಲ್ಲಿ ಇಂಥ ಬುದ್ಧಿ ಬಂತು ?" – ಎಂದು ಮತ್ತಷ್ಟು ಗಂಭೀರವಾಗಿ ಕೇಳಿದ.

ಮಗನ ಮಾತು ಕೇಳಿ ನಿಂಗವ್ವನ ಮುಖ ಸಿಟ್ಟಿನಿಂದ ಕೆಂಪಾಗಿ -

"ನನ್ನ ಮೇಲೆ ಇಂಥ ಕೆಟ್ಟ ಮಾತು ಆಡಿದವರ ನಾಲಗೆ ಸುಡಿಸಬೇಕು. ಯಾರು ದೂರು ಹೇಳಿದವರು ?" – ಎಂದು ಕೇಳಿದಳು.

"ಅವರಿವರು ಹೇಳಿದ್ದರೆ ನಾನೂ ನಂಬುತ್ತಿರಲಿಲ್ಲ. ಆ ನಾಲಗೆಯನ್ನು ಸುಡಿಸುವುದೇನು, ನಾನೇ ಸೀಳಿ ಹಾಕುತ್ತಿದ್ದೆ. ಆದರೆ ಕದ್ದ ಮಾಲನ್ನು ನೋಡಿದವರೇ ಆ ಮಾತು ಹೇಳಿದಾಗ ನಾನೇನು ಮಾಡಬೇಕು ?"

"ದೂರು ಕೊಟ್ಟವರನ್ನು ತಂದು ನನ್ನೆದುರು ನಿಲ್ಲಿಸು. ಕೆನ್ನೆಗೆ ಬಾರಿಸಿ ಕೇಳುತ್ತೇನೆ -ಸುಳ್ಳು ಹೇಳುವ ಧೈರ್ಯ ಹೇಗೆ ಬಂದಿತೆಂದು."

"ಖಂಡಿತವಾಗಿಯೂ ?"

"ಆಣೆ ಇಟ್ಟು ಹೇಳಬೇಕೆ - ತಂದು ನಿಲ್ಲಿಸು, ಅವರ ಕೆನ್ನೆ ಊದಿಕೊಳ್ಳುವುದನ್ನು ನೀನೇ ನೋಡುತ್ತೀಯಾ" – ನಿಷ್ಠುರವಾಗಿ ಹೇಳಿದಳು, ನಿಂಗವ್ವ -

"ಹುಟ್ಟಿ ಇಷ್ಟು ವರ್ಷ ಆಯಿತು- ಹಡೆದವರು ಹೇಳಲಿಲ್ಲ. ಕೈಹಿಡಿದವರು ಹೇಳಲಿಲ್ಲ, ಹೊಟ್ಟೆಯಲ್ಲಿ ಹುಟ್ಟಿದವರು ಹೇಳಲಿಲ್ಲ. ಈಗ ಈ ಮಾತು. ತಿಂದದ್ದು ಹೆಚ್ಚಾಗಿ ಸೊಕ್ಕಿರಬೇಕು. ಆದಾರು ಹೇಳು ?"

"ಅಷ್ಟು ಕೇಳಿದ ಮೇಲೆ ಹೇಳುತ್ತೇನೆ - ದೂರು ಕೇಳಿದವರು, ಹೇಳಿದವರು - ನಾನೇ. ಕೆನ್ನೆಗಾದರೂ ಹೊಡಿ, ಬೆನ್ನಿಗಾದರೂ ಹೊಡಿ. ನಿನ್ನ ಅಂತಃಪುರದಲ್ಲಿ ಕದ್ದು ಮುಚ್ಚಿ ಹುಡುಗಿಯೊಬ್ಬಳನ್ನಿಟ್ಟುಕೊಂಡಿರುವುದು ಸುಳ್ಳೇ ?"– ಮದಕರಿನಾಯಕ ನಗುತ್ತಾ ಕೇಳಿದ.

"ಮಾತಿನಲ್ಲಿ ಭಾಳ ಜಾಣ ಆದೆಯಲ್ಲ- ಕಂಡವರ ಹುಡುಗಿ ನೋಡುವ ಆಸೆ ನಿನಗೇಕೆ ? ಕದ್ದ ಕೆಲಸ ಮಾಡಿದ್ದು ನೀನೋ – ನಾನೋ ? ಆ ಹುಡುಗಿಯ ವಿಷಯ ಮರೆತುಬಿಡು" - ಎಂದಳು ನಿಂಗವ್ವ, ಸಿಟ್ಟಾದಂತೆ.

"ಏಕೆ?"

"ಪರರ ಒಡವೆ ನೋಡುವ ಕೆಟ್ಟಾಸೆ ನಿನಗೇಕೆ ?"

"ಪರರ ಒಡವೆಯೇ ?"

- ನೆತ್ತಿಯ ಮೇಲೆ ಗುಡ್ಡ ಕಳಚಿ ಬಿದ್ದವನಂತೆ ಕೇಳಿದ ಮದಕರಿನಾಯಕ -

"ಯಾರ ಒಡವೆ ?"

"ನನ್ನ ಮಗನದು !"

"ನಾನು ನಿನ್ನ ಮಗನಲ್ಲವೇ ?"

"ನೀನೊಬ್ಬನೇ ಅಲ್ಲ, ಪರಶುರಾಮಣ್ಣನೂ ನನ್ನ ಮಗ ಅನ್ನುವುದನ್ನು ಮರೆತೆಯಾ ?"

"ಆವ್ವಾ - ನಾನು ಕೆಟ್ಟೆ, ಪರಶುರಾಮಣ್ಣನಿಗೆ ಆರಿಸಿ ತಂದಿರುವ ಹುಡುಗಿಯೇ ಆಕೆ. ನನ್ನಿಂದ ತಪ್ಪಾಯಿತು, ಅವ್ವಾ, ಖಂಡಿತ - ಈ ಕೆನ್ನೆಗೆ ಹೊಡೆಯಿರಿ. ಈ ನಾಲಗೆಯನ್ನು ಸುಟ್ಟರೂ ತಪ್ಪಿಲ್ಲ"

- ಎಂದು ತನ್ನ ಕೆನ್ನೆಯನ್ನು ತಾಯ ಮುಂದೆ ಚಾಚಿದ ಮದಕರಿನಾಯಕ, ನಿರ್ವಿಣ್ಣನಾಗಿ ; ಕಣ್ಣಂಚಿನಲ್ಲಿ ಕಂಬನಿಯೊಡೆದು –

"ನಿನ್ನ ಹೊಟ್ಟೆಯಲ್ಲಿ ಹುಟ್ಟಿಯೂ ಇಂಥ ಕೆಟ್ಟ ಬುದ್ಧಿ ಬಂತಲ್ಲವ್ವ ನನಗೆ. ಇಂಥ ತಪ್ಪು ಮಾಡುವುದಿಲ್ಲ. ಇವತ್ತಿಗೆ ಕ್ಷಮಿಸಿಬಿಟ್ಟೆ ಎಂದು ಹೇಳು" - ಎಂದು ತಾಯಿಯ ಕೈ ಹಿಡಿದು ಕೇಳಿದ.

"ಕ್ಷಮಿಸಲು ನಾನು ಯಾರು ? ಯಾರಿಗೆ ತಪ್ಪು ಮಾಡಿದೆಯೋ ಅವರನ್ನೇ ಕೇಳು ಕ್ಷಮಿಸುವುದೂ ಬಿಡುವುದೂ ಅವರ ಕೆಲಸ" - ಎಂದಳು ನಿಂಗವ್ವ ಕೊಂಚ ಸಡಿಲವಾಗಿ.

"ಅಂದರೆ....ಅಂದರೆ....ಪರಶುರಾಮಣ್ಣನನ್ನು ತಪ್ಪಾಯಿತು ಎಂದು ಕೇಳಬೇಕಾ, ಅವ್ವಾ.. ನನ್ನಾಣೆ - ಬೇಡಿ. ನನ್ನ ಕೆಟ್ಟ ಬಾಯಿಂದ ಇಂಥ ಮಾತು ಬಂದಿತು ಎಂದು ತಮ್ಮನಿಗೆ ತಿಳಿಯುವುದು ಬೇಡ'' – ಎಂದು ಬೇಡಿದ, ಮದಕರಿನಾಯಕ.

"ತಮ್ಮನಿಗಾದರೆ ತಿಳಿಯುವುದು ಬೇಡ. ಇಷ್ಟು ಗಟ್ಟಿಯಾಗಿ ಅಬ್ಬರಿಸಿ ಕೇಳಿದೆಯಲ್ಲಾ - ಹಡೆದ ತಾಯನ್ನು, ಆ ಹುಡುಗಿ ಏನು ಅಂದುಕೊಂಡಿರುತ್ತದೆ - ನನ್ನ ಬಗ್ಗೆ, ನಿನ್ನ ಬಗ್ಗೆ."

''ತಪ್ಪಾಯಿತು ಅವ್ವಾ, ಆ ಹುಡುಗಿಯನ್ನೇ ಕರೆಯಿರಿ. ಆಕೆಯನ್ನೇ ಕೇಳುತ್ತೇನೆ - ಪರಶುರಾಮಣ್ಣನ ಕಿವಿಗೆ ಮಾತ್ರ ಈ ನಾಣ್ಗೇಡಿ ಮಾತು ಬೀಳುವುದು ಬೇಡ.."

"ಹಾಗಿದ್ದರೆ - ಆ ಹುಡುಗಿಯನ್ನು ಕರೆಯಲಾ ?"

"ಕರೆಯವ್ವ – ತಪ್ಪು ಮಾಡಿದ್ದಾಯಿತು. ಶಿಕ್ಷೆ ಅನುಭವಿಸುತ್ತೇನೆ."

"ಸರಿ, ಹಾಗೇ ಮಾಡು"

- ಎಂದು ನಿಂಗವ್ವ, 'ಕಡೂರವ್ವಾ, ಕಡೂರವ್ವಾ' ಎಂದು ಕೂಗಿದಳು.

ಆಕೆಯ ಕರೆ ಕೇಳಿ, ಅಲ್ಲಿಯವರೆಗಿನ ಮಾತು ಕೇಳುತ್ತಾ, ದೂರ, ಮರೆಯಲ್ಲಿದ್ದ ಕಡೂರಿ, ಕಣ್ಣಿಗೆ ಕಾಣಿಸಿಕೊಂಡು ನಾಚುತ್ತಾ-

"ಏನವ್ವಾ ಕೂಗಿದಿರಿ ?" – ಎಂದು ಕೇಳಿದಳು.

“ನಿಮ್ಮ ನಾಯಕರು ತಪ್ಪು ಮಾಡಿ, ಶಿಕ್ಷೆ ಕೊಡುವ ಅಧಿಕಾರವನ್ನು ನಿನಗೆ ಕೊಟ್ಟಿದ್ದಾರೆ. ಏನು ಶಿಕ್ಷೆ – ಹೇಳು ?” – ಎಂದಳು ನಿಂಗವ್ವ.

ತಾನು ಮೋಹಿಸಿದ ನಾಯಕರಿಗೆ ತಾನು ಶಿಕ್ಷೆ ಕೊಡುವುದೇ ? ಕಡೂರಿಯ ಮುಖ ಕೆಂಪು ದಾಸವಾಳವಾಯಿತು, ಬಾಯಿಂದ ಮಾತು ಹೊರಡಲಿಲ್ಲ.

“ನಾಯಕರ ಇದಿರು ನಿನ್ನ ನಾಲಗೆ ಸತ್ತುಹೋಯಿತಲ್ಲವೇ ? - ನಾನೇ ಶಿಕ್ಷೆ ಕೊಡುತ್ತೇನೆ. ಹಡೆದ ತಾಯಿ ನಾನು ತಾನೇ ಈ ಕೆಲಸ ಮಾಡಬೇಕಾದ್ದು” – ಎಂದು ಹೇಳಿ -

“ಇಲ್ಲಿ ಬಾ, ಮದಕೇರಂಣ”

- ಎಂದು ಮಗನನ್ನು ಹತ್ತಿರ ಕರೆದು, ಅವನ ಕೈಯನ್ನು ಹಿಡಿದು ಜಗ್ಗಿ, ಕಡೂರಿಯ ಕೈಯನ್ನು ಅವನ ಕೈಯಲ್ಲಿಟ್ಟು -

“ಇದೊ – ಈ ಕೈಯನ್ನು ನಿನ್ನ ಕೈಗೆ ಕೊಟ್ಟಿದ್ದೇನೆ. ಗಟ್ಟಿಯಾಗಿ, ಬದುಕಿರುವವರೆಗೂ ಹಿಡಿಯಬೇಕು. ಇದೇ ಶಿಕ್ಷೆ” – ಎಂದು ನಗುತ್ತಾ ಹೇಳಿ -

“ಕಡೂರವ್ವಾ - ನೀನೂ ಅಷ್ಟೇ. ನಮ್ಮ ಹುಡುಗನಿಗೆ ಕದ್ದು ನೋಡುವ ಚಟ ಬಿಡಿಸಿದಿದ್ದರೆ, ನಿನಗೂ ತಕ್ಕ ಶಿಕ್ಷೆಯಾದೀತು” - ಎಂದಳು ನಿಂಗವ್ವ.

ಆ ಮಾತು ಕೇಳಿ, ಮದಕರಿನಾಯಕ ನಿಬ್ಬೆರಗಾಗಿ -

“ಅವ್ವಾ - ಪರಶುರಾಮಣ್ಣ....” - ಎಂದು ತೊದಲಿದ.

“ನೀನೊಂದು ಸುಳ್ಳು ಹೇಳಿದೆ, ನಾನೊಂದು ಸುಳ್ಳು ಹೇಳಿದೆ. ಅದಕ್ಕದು ಸರಿ ಆಯಿತು. ಈಗ ನಿನ್ನ ವಸ್ತು ನಿನಗೆ ಕೊಟ್ಟಿದ್ದೇನೆ. ಜೋಪಾನವಾಗಿ ನೋಡಿಕೋ, ಆದರಿಷ್ಟೆ-ನಿಮ್ಮಿಬ್ಬರ ಸುಖದಲ್ಲಿ, ನನ್ನ ಇನ್ನಿಬ್ಬರು ಸೊಸೆಯಂದಿರು ಬೇಸರ ಮಾಡಿಕೊಂಡರೆ ನಿಮ್ಮ ಅಪ್ಪಾಜಿಗೆ ಹೇಳಿ, ಹುಡುಗುದಿನದ ಹಾಗೆ ಬಾರುಕೋಲಿನಲ್ಲಿ ಹೊಡೆಸುತ್ತೇನೆ. ಎಚ್ಚರ -ಮೂಗಿಗೆ ಮೂಗುಬಟ್ಟು ಬಂತು ಅಂತ ಕಿವಿಯಲ್ಲಿನ ಓಲೆಗಳನ್ನು ಮರೆಯಬಾರದು”

- ಎಂದು ಇಬ್ಬರಿಗೂ ಎಚ್ಚರಿಸಿದ ನಿಂಗವ್ವ -

“ಹಾಲು-ಸಕ್ಕರೆ ಒಂದಾಯಿತು - ಮಧ್ಯೆ ಬಟ್ಟಲಿಗೇನು ಕೆಲಸ” – ಎಂದು ಹೇಳಿ, ನಗುತ್ತಾ ಹೊರಗೆ ಹೋದಳು.

ಮದಕರಿನಾಯಕ-ಕಡೂರಿ -

- ಇಬ್ಬರೂ ಒಬ್ಬರನ್ನೊಬ್ಬರು ನೋಡಿದರು.

ನೋಡಿದರು-

ನೋಡಿ, ನೋಡಿ ಕಣ್ಣುಗಳು ಒಂದಕ್ಕೊಂದು ಕೀಲಿಸಿದಂತೆ, ತೋಳುಗಳು ಒಂದಕ್ಕೊಂದು ಹೊಸೆದುಕೊಂಡವು.

* * *

ಮದಕರಿನಾಯಕನಿಗೊಬ್ಬ ಪ್ರೇಯಸಿ ಬಂದಳೆಂಬ ಮಾತು ಗುಟ್ಟಾಗಿ ಉಳಿಯಲಿಲ್ಲ.

ಆ ಮಾತು ಕೇಳಿ, ಅದುವರೆಗೂ ಸವತಿಯಂತಿದ್ದ ಬಂಗಾರವ್ವ, ಪದ್ಮವ್ವನಾಗತಿಯರು ಮತ್ತಷ್ಟು ಆತ್ಮೀಯರಾದರೆ, ತಮ್ಮ ಪರಶುರಾಮನಾಯಕ -

'ನಿನ್ನ ಸಂಸಾರ ಮೂರು ಕಲಶದ ಗೋಪುರವಾಯಿತು'

- ಎಂದು ಅಣ್ಣನ ಹರ್ಷದಲ್ಲಿ ಹಿಗ್ಗಿದರೆ -

ತಂದೆ ಭರಮಣ್ಣನಾಯಕ -

'ನಾಯಕರೆಂದರೇ ಹೀಗೆ - ಸಾವಿರ ಕುದುರೆ ಸರದಾರರಿದ್ದ ಹಾಗೆ' – ಎಂದು ತನ್ನ ನರೆತ ಮೀಸೆಯನ್ನು ತಿರುವಿಕೊಂಡ.

ಅವರೆಲ್ಲರೂ ಹಾಗಿದ್ದಾಗ, ನಿಂಗವ್ವ ಒಬ್ಬಳು ಮಾತ್ರ ಮೈಮರೆಯದೆ -

"ಮದಕೇರಂಣ - ನಿನಗೆ ಮೂರು ಹೆಣ್ಣಾದರೂ ಪರಶುರಾಮಣ್ಣನಿಗಿನ್ನೂ ಮದುವೆಯಾಗಲಿಲ್ಲ. ಅದೊಂದು ಕೆಲಸ ಆದಷ್ಟು ಬೇಗ ಮುಗಿಸಬೇಕು"

- ಎಂದು ತಂದೆ, ಮಕ್ಕಳಿಬ್ಬರಿಗೂ ಮರೆತ ಮಾತನ್ನು ಜ್ಞಾಪಿಸಿ, ಮಗನಿಗೆ -

"ಮಗಾ - ನಿನ್ನ ಕೂಡಿದಾಕೆಗಾಗಿ ಬೇರೊಂದು ಮನೆ ಮಾಡು. ಮೂರು ಜನ ಒಂದು ಕಡೆ ಕಲೆತರೆ, ಸರಸದ ಮಾತಿನಲ್ಲಿ ವಿರಸದ ಕಿಡಿ ಹೊತ್ತಿತು. ಇಷ್ಟು ದಿನದ ಹಾಗಲ್ಲ – ಇನ್ನು ಬಹಳ ಎಚ್ಚರವಾಗಿ ಸಂಸಾರ ಮಾಡಬೇಕು. ರಾಜರು ಮೂರು-ನಾಲ್ಕು ಮದುವೆ ಮಾಡಿಕೊಳ್ಳುವುದು ಅಪರೂಪವಲ್ಲ; ಹಾಗಾಗಿ ಒಂದಾದ ಮನೆ ನಾಲ್ಕಾದದ್ದೂ ಅಪರೂಪವಲ್ಲ. ಮೂರು ಜನರನ್ನು ಕಟ್ಟಿಕೊಂಡದ್ದು ದೊಡ್ಡದಲ್ಲ ; ಮೂರು ಜನರನ್ನೂ ಸರಿಯಾಗಿ ಬಾಳಿಸುವುದು ದೊಡ್ಡದು" – ಎಂದು ಮೂರು ಮೂರು ಬಾರಿ ಎಚ್ಚರಿಸಿದಳು.

೮

ರಾಜ್ಯವನ್ನು ವಿಸ್ತರಿಸಲೆಂಬ ಕನಸಿನಿಂದ ಕಟ್ಟಿದ ಪಟುಭಟರ ಸೇನೆ, ಆ ಕಾರ್ಯಕ್ಕೆ ವಿನಿಯೋಗವಾಗದೆ, ಹೈದರಾಲಿಯ ಸೇವೆಯಲ್ಲಿ ಸವೆದದ್ದು ಮದಕರಿನಾಯಕನ ಹೃದಯಕ್ಕೆ

ಅಪಾರ ವ್ಯಥೆಯನ್ನುಂಟುಮಾಡಿದರೂ, ಆ ಸಾಲುಯುದ್ಧಗಳಿಂದ ಹಿಂತಿರುಗುವಾಗ ದಳವಾಯಿಗಳು ತಂದ ಭಂಡಾರ, ಸೈನಿಕರು ಸಹಜಪ್ರೀತಿಯಿಂದ ಮಾಡಿದ ಕನಕಾಭಿಷೇಕ, ಮದಕರಿನಾಯಕರ ಕೊಂಚ ಬಾಡಿದ ಬಯಕೆಯ ಬಳ್ಳಿ ಮತ್ತೆ ಚಿಗುರೊಡೆಯಲು ಕಾರಣವಾಯಿತು-ಯುದ್ಧದಲ್ಲಿ ತನ್ನ ಮೈಗಾಯಗಳಿಂದ ಹರಿದ ರಕ್ತ ಮತ್ತೆ ಕೂಡಿಕೊಂಡು, ಹೊಸ ರಕ್ತ ಹೊಮ್ಮಿದಂತೆ.

ಆ ಉತ್ಸಾಹದ ಬಳ್ಳಿಯಲ್ಲಿ ತಾನಾಗಿಯೇ ಒಲಿದುಬಂದ ಕಡೂರಿಯ ಪ್ರೇಮ, ಹಲವು ಬಣ್ಣದ, ಹಲವು ಪರಿಮಳದ ಹೂವುಗಳನ್ನು ಅರಳಿಸಿತ್ತು.

ಮದಕರಿನಾಯಕನಿಗೆ ಸ್ತ್ರೀಸಂಗದಿಂದ ಮೂಡುವ ಸಂತೋಷ ಹೊಸದೇನೂ ಆಗಿರಲಿಲ್ಲ. ಆ ವೇಳೆಗಾಗಲೇ ಮೂವರು ಹೆಂಡಂದಿರನ್ನು ಮದುವೆಯಾಗಿ, ಹೆಣ್ಣು ಕೊಡುವ ಸುಖ ಎಂಥದೆಂದು ಅರಿತಿದ್ದ. ಆದರೆ ಆ ಸುಖ - ಹಣ್ಣಾಗಲು ಬಂದ ದೊರೆಗಾಯಿನ ರುಚಿ. ಕಡೂರಿಯದು ಮರದಲ್ಲೇ ಬಲಿತು ಹಣ್ಣಾದ ಫಲದ ಸವಿ. ಎಷ್ಟುಂಡರೂ ಸಾಕೆನಿಸದಷ್ಟು, ಮತ್ತಷ್ಟು ಬೇಕೆಂಬ ಬಯಕೆಯನ್ನು ಮೂಡಿಸುವ, ಕಾಮಕಲೆಯನ್ನು ಹುಟ್ಟುವಾಗಲೇ ಕಲಿತು ಬಂದ ಹೆಣ್ಣಿನ ಮಾದಕವಾದ ರತಿವಿಲಾಸ.

ತಾಯಿಯ ಎಚ್ಚರಿಕೆಯ ಮಾತಿಲ್ಲದಿದ್ದರೆ ಮದಕರಿನಾಯಕ ಆ ವಿನೂತನ ರಸಕೇಳಿಯಲ್ಲಿ ಮೈಮರೆತುಬಿಡುತ್ತಿದ್ದನೋ ಏನೋ - ಯುದ್ಧಾಸಕ್ತಿಯ ಅವಸರದ ರಾಜಕಾರಣವಿಲ್ಲದ, ಆ ದಿನಗಳಲ್ಲಿ.

ಆದರೆ ಮಗ ಹಾಗೆ ಮೈಮರೆಯಲು ಬಿಡಲಿಲ್ಲ - ಆ ತಾಯಿ.

ಮಗನನ್ನು ಕವಿದ ಮೋಹ ಎಷ್ಟು ಮಾದಕವೆಂದು ಅರಿತಿದ್ದ ನಿಂಗವ್ವ -

"ಮದಕೇರಂಣ, ಹೊಸ ನೀರಿನಲ್ಲಿ ಹಳೆ ನೀರು ಕೊಚ್ಚಿಕೊಂಡು ಹೋಗಬಾರದು. ಮೋಹದವಳಿಗಾಗಿ, ಮಡದಿಯರನ್ನು ಮರೆಯಬೇಡ. ಈ ಹೆಣ್ಣು ನಿನಗೆಷ್ಟು ಸವಿಯಾದರೂ, ನಾಳೆ ಪಟ್ಟಕ್ಕೆ ಅರಸನನ್ನು ಕೊಡುವವರು ಇವರು. ಇವರನ್ನು ತಾತ್ಸಾರ ಮಾಡುವುದು ಸಲ್ಲ. ಹಾಗೆ ಮಾಡಿದೆಯೋ - ಅಂತಃಪುರ ಮತ್ಸರದ ಉರಿಮನೆಯಾಗುತ್ತದೆ"

- ಎಂದು ಆಗಾಗ ಎಚ್ಚರಿಸಿ ಹೇಳುತ್ತಿದ್ದ ಮಾತುಗಳು, ಮಗನನ್ನು ಕವಿದ ಮೋಹದ ಅಮಲು, ಅವನನ್ನು ಕುರುಡನನ್ನಾಗಿಸದಂತೆ ಕಾಪಾಡಿತ್ತು.

ಮಗನನ್ನು ಎಚ್ಚರಿಸಿದಂತೆಯೇ ಕಡೂರಿಯನ್ನೂ -

"ನಾಯಕರಿಗೆ ನಿನ್ನಲ್ಲಿ ಈಗ ಮಿತಿಮೀರಿದ ವ್ಯಾಮೋಹವಿದೆ. ನಿನಗೂ ಅವರಲ್ಲಿ ಅನುರಾಗವಿದೆ. ಅದೆಲ್ಲಾ ಸರಿಯೆ. ಆದರೆ ನಿನಗೆ ನಾಯಕರಲ್ಲಿ ಪ್ರೇಮವಿರುವುದು ದಿಟವಾದರೆ,

ಅದು ದೀಪವಾಗುವಂತೆ ಇಟ್ಟುಕೋ. ನಿನ್ನನ್ನು ಸುಟ್ಟು, ಇತರರನ್ನೂ ಸುಡುವ ಉರಿಯಾಗಿ ಮಾಡಬೇಡ. ಹಾಗಾದರೆ ನಾನೇ ನಿನ್ನನ್ನು ಹೊರಹಾಕಬೇಕಾದೀತು. ಇದು ನೆನಪಿರಲಿ - ದೊಡ್ಡದಾಗಿ ಹೊತ್ತಿ ಉರಿಯುವ ದೀಪ ಬಹಳ ಹೊತ್ತು ಬೆಳಗುವುದಿಲ್ಲ. ನಂದಾದೀಪದ ಹಾಗೆ ಸಣ್ಣಗೆ ಮಿಣುಗುತ್ತಾ, ಬೆಳಕು ನೀಡುತ್ತಾ ಇರಬೇಕು" - ಎಂದು ನಿರ್ದಾಕ್ಷಿಣ್ಯವಾಗಿ ಎಚ್ಚರಿಸಿ ಹೇಳಿದಳು, ನಿಂಗವ್ವ.

ತಾಯ ಈ ಎಚ್ಚರಿಕೆ ಮದಕರಿನಾಯಕನನ್ನು ಕಾಮದ ಸುಳಿಯಲ್ಲಿ ಮುಳುಗದಂತೆ ಕೈಹಿಡಿದ ಹಾಗೆಯೇ -

"ನಿನ್ನ ಸುಖದಲ್ಲಿ ಪರಶುರಾಮಣ್ಣನಿಗೆ ಪ್ರಾಯವಾದದ್ದು ಮರೆಯಬೇಡ"

- ಎಂದು ಹೇಳಿ, ಅಣ್ಣನ ಲಕ್ಷ್ಯವನ್ನು ತಮ್ಮನ ಸುಖದತ್ತ ಸೆಳೆದಿದ್ದಳು.

"ನಾನೆಲ್ಲಿ ಮರೀತೀನವ್ವ, ನೀನೊಂದು ಒಳ್ಳೆ ಹೆಣ್ಣು ನೋಡು. ಅರಮನೆಯವರು ಅಂತ ಉರಿಮುಖದವರನ್ನ ತರೋದು ಬೇಡ. ಮೂರು ಹೆಂಡರಿಗಿಂತ ಸರಸದ ಒಂದು ಹೆಣ್ಣು ಸಾಕು. ನೀನಂಥ ಹೆಣ್ಣು ಹುಡುಕು. ಸೀಮೆ ನೋಡಿ ಮೆಚ್ಚ ಹಾಗೆ ಮದುವೆ ಮಾಡುತೀನಿ" - ಎಂದಿದ್ದ ಮದಕರಿನಾಯಕ.

ಮಗನ ಮಾತಿನ ಹಿಂದಿದ್ದ ಸಿಹಿ-ಕಹಿ ಎರಡೂ ಮನವರಿಕೆಯಾದ ನಿಂಗವ್ವನಾಗತಿ ಹತ್ತಾರು ಕಡೆಯಲ್ಲಿ ಹುಡುಕಿಸಿ, ಕೊನೆಗೂ ಪರಶುರಾಮನಾಯಕನಿಗೆ ತನ್ನ ಬಳಗದ ಕಡೆಯ ಹೆಣ್ಣು ಸಿದ್ದವ್ವನನ್ನು ತಂದು ಮದುವೆ ಮಾಡಿಸಿದಳು.

'ನಾಯಕರ ಮದುವೆಗಿಂತ ಈ ಮದುವೆ ಇನ್ನೂ ಅಷ್ಟು ಚೆನ್ನಾಗಿಯೇ ಆಯಿತು' – ಎಂದು ಜನ ಆಡಿಕೊಳ್ಳುವಂತೆ ತಮ್ಮನ ಮದುವೆ ಮಾಡಿದ ಮದಕರಿನಾಯಕ.

ಗುರುಗಳು, ಹಿರಿಯರು ನಿಂತು ಮಾಡಿಸಿದ ಆ ಮದುವೆಗೆ, ನಾಯಕರ ಮದುವೆಗೆ ಬಂದ ಜನವೆಲ್ಲವೂ ಬಂದದ್ದಲ್ಲದೆ, ಶ್ರೀರಂಗಪಟ್ಟಣದ ನವಾಬರಿಂದ, ಪುಣೆಯ ಪೇಶ್ವೆಗಳಿಂದ ಉಡುಗೊರೆಗಳು ಬಂದು, ಲಗ್ನಕ್ಕೆ ಕಳೆಕಟ್ಟಿಸಿದವು.

ಮದುವೆಯಾದ ತಮ್ಮನ ವಾಸಕ್ಕೆಂದು ಚಿಕ್ಕಣ್ಣನಾಯಕರ ಅರಮನೆಯನ್ನು ತೆರವು ಮಾಡಿಸಿಕೊಟ್ಟು, ಆ ವೇಳೆಗೆ ಪ್ರಧಾನಿ ಕಳ್ಳಿನರಸಪ್ಪಯ್ಯನವರ ಕೈಯಲ್ಲಿ ನುರುಪಡಿಯಾದ ತಮ್ಮನನ್ನು, ಅವರ ಕೈಕೆಳಗೆ ಉಪಪ್ರಧಾನಿಯನ್ನಾಗಿ ಮಾಡಿ, ಅರಮನೆಯಲ್ಲಷ್ಟೇ ಅಲ್ಲ ಆಸ್ಥಾನದಲ್ಲೂ, ತಮ್ಮನಿಗೆ ಉತ್ತಮ ಸ್ಥಾನ ಕಲ್ಪಿಸಿದ.

ಈ ಸಂತೋಷವೇ ಸಾಕೆಂದು ಬೀಗುತ್ತಿದ್ದ ಮದಕರಿನಾಯಕನ ಕಿವಿಯಲ್ಲಿ ಪದ್ಮವ್ವನಾಗತಿ, ತಾನು ಗರ್ಭಿಣಿಯಾದ ಸುದ್ದಿಯನ್ನು ತಿಳಿಸಿ, ಎಲ್ಲ ಸಂತೋಷಕ್ಕೂ ಹೊನ್ನ ಕಳಶವಿಟ್ಟಳು.

'ಸ್ವರ್ಗಕ್ಕೆ ಮೂರೇ ಗೇಣಷ್ಟು ದೂರ' ಎಂಬಷ್ಟು ಹರ್ಷದಲ್ಲಿ, ಆ ವರ್ಷದ ಮಾಘಶುದ್ಧ ಹುಣ್ಣಿಮೆಯಂದು 'ಭಾರತದ ಹುಣ್ಣಿಮೆ'ಯ ಕಟ್ಟಲೆ ನಡೆಸಲು, ರಾಜಪರಿವಾರ 'ಜೋಗು' ಹೊರಟಿತು – ಕಣಕುಪ್ಪೆಗೆ.

'ಅರಸುಪರಿವಾರ ಬೇವಿನ ಉಡುಗೆಯುಟ್ಟು ಜೋಗು ಹೊರಟಾಗ ಪ್ರತಿ ಗ್ರಾಮದ ಗೌಡನೂ ಒಂದು ವರಹ ಜೋಗು ಕಾಣಿಕೆ ಕೊಡಬೇಕು. ಗ್ರಾಮದ ತಳವಾರರು ಒಂದು ಟಗರು, ಒಂದು ತುಪ್ಪದ ಕುಂಭ ತಂದು ಒಪ್ಪಿಸಬೇಕು' – ಎನ್ನುವುದು ಭರಮಣ್ಣನಾಯಕರ ಕಾಲದಲ್ಲಾದ ಕಟ್ಟಲೆ.

ಈ ವರ್ಷ ಗ್ರಾಮಸ್ಥರು ಕಟ್ಟಳೆಯೆಂದು ಕೊಡಲಿಲ್ಲ, ಸಂತೋಷವಾಗಿ ಕೊಟ್ಟರು – ಒಂದಕ್ಕೆ ಎರಡರಷ್ಟು.

ಆ ವರ್ಷ ಕಣಕುಪ್ಪೆಯಲ್ಲಿ ನಡೆದ ಉತ್ಸವಾಂಬಾ ಅಮ್ಮನವರ ಪೂಜೆ, ಕಾಟಮ್ಮದೇವರ ಸೇವೆ - ಹಿಂದೆ ಮತ್ತಾವ ವರ್ಷವೂ ಅಷ್ಟು ವೈಭವದಿಂದ ನಡೆದಿರಲಿಲ್ಲ ಎಂದು ನೋಡಿದ ಜನ ನಲಿದು ಹೇಳಿದರು.

ಆ ಉತ್ಸವವನ್ನೆಲ್ಲಾ ಮುಗಿಸಿಕೊಂಡು ಮದಕರಿನಾಯಕ ಕಣಕುಪ್ಪೆಯ ಬಿಡಾರದಲ್ಲಿದ್ದಾಗ ಆ ಉತ್ಸವದಲ್ಲಿ ಭಾಗವಹಿಸಲು ಬಂದ ಕೆಲವು ತರುಣಜನ, ನಾಯಕರ ಮುಂದೆ ಬಂದು, ಅಡ್ಡ ಬಿದ್ದು ವಿಚಿತ್ರ ಬೇಡಿಕೆಯೊಂದನ್ನು ಮಂಡಿಸಿದರು –

"ಮಾಸ್ವಾಮಿ – ನಾವು ಕೋಗುಂಟೆ ಗ್ರಾಮದವರು. ನಮಗೆಲ್ಲಾ ಮುರುಗಿಸ್ವಾಮಿಗಳವರು ಹಳ್ಳಿಯಲ್ಲಿ ಉಪ್ಪು ಬೆಂಕಿ ಕೊಡದ ಹಾಗೆ ಕಟ್ಟು ಮಾಡಿದ್ದಾರೆ. ತಾವು ಮಹಾಸ್ವಾಮಿಗಳ ತಾವ ಮಾತನಾಡಿ, ಊರ ಜನ ನಮಗೆ ಹೊರಗಿಟ್ಟಿರುವುದನ್ನು ತಪ್ಪಿಸಬೇಕು."

ಅವರಾಡಿದ ಮಾತನ್ನು ಕೇಳಿ ಮದಕರಿನಾಯಕನಿಗೆ ಆಶ್ಚರ್ಯವಾಗಿ -

"ನೀವು ತಪ್ಪು ಮಾಡದೆ, ಗುರುಗಳು ಶಿಕ್ಷೆಕೊಡುವವರಲ್ಲ, ಜನ ಎಂದರೆ ಮಕ್ಕಳು ಎಂದು ತಿಳಿದ ತಾಯಿಯಂಥ ಹೃದಯದವರು ಅವರು. ನೀವು ಅವರಿಗೆ ಬೇಸರವಾಗುವಂಥ ತಪ್ಪೇನು ಮಾಡಿದಿರಿ ?" – ಎಂದು ಕೇಳಿದ.

ನಾಯಕರ ಪ್ರಶ್ನೆಗೆ ಆ ತರುಣರು ಉತ್ತರ ಕೊಡಲಿಲ್ಲ. ದಪ್ಪ ಮೈಕಟ್ಟಿನ, ಜಾಲಿಯ ಕೊರಡಿನ ಹಾಗಿದ್ದ ಆ ತರುಣರು, ನಾಲಗೆಗೆ ಮೊಳೆ ಬಡಿದ ಹಾಗೆ ಮೌನವಾಗಿ ತಲೆತಗ್ಗಿಸಿ ನಿಂತರು.

“ನೀವು ಏನೂ ಮಾತನಾಡದೆ ಸುಮ್ಮನೆ ನಿಂತರೆ ಹೇಗೆ ? ಗುರುಗಳ ಹತ್ತಿರ ಹೋಗಿ ‘ನಾವು ತಪ್ಪು ಮಾಡಿದ್ದೇವೆ, ಕ್ಷಮಿಸಿ’ ಎಂದು ಕೇಳುವುದೇ ? ಅದೇನು ಮಾತಿದ್ದರೂ ಹೇಳಿ” - ಎಂದು ಶಾಂತವಾಗಿ ಕೇಳಿದ, ಮದಕರಿನಾಯಕ.

ಆಗಲೂ ತರುಣರು ಬಾಯಿ ಬಿಡಲಿಲ್ಲ. ಅದನ್ನು ಕಂಡು ಆ ಗುಂಪಿನ ಜೊತೆಗಿದ್ದ ವೃದ್ಧನೊಬ್ಬ-

“ಬಾಯಿ ಬಿಟ್ಟು ಆಡದಂಥ ತಪ್ಪು ಮಾಡಿ, ಮಾಸ್ವಾಮಿಯವರ ಮುಂದೆ ಮೂಕಕುರಿಗಳ ಹಾಗೆ ನಿಂತವರೆ. ಬಾಯಿ ಬಿಟ್ಟರೆ ಬಣ್ಣಗೇಡು” - ಎಂದ.

“ಅವರಿಗೆ ಮಾಡಿದ ತಪ್ಪು ಹೇಳಲು ಸಂಕೋಚವಾದರೆ, ಯಜಮಾನರು. ನೀವು ಹೇಳಿ? ನೀವೂ ಅದೇ ಗ್ರಾಮದವರೇ ?”

“ಹೌದು, ಮಾಸ್ವಾಮಿ. ನಾನೂ ಅದೇ ಹಳ್ಳಿಯವನು. ಇವರು ಮಾಡಿದ್ದು ಎಲ್ಲಾ ಗೊತ್ತಿದೆ. ಊರಲ್ಲಿ ಮೊಕ ತೋರಿಸದೆ ಅಡ್ಡಾಡುತ್ತಿದ್ದವು, ಮೂದೇವಿಗಳು. ನಾನೇ ಅವರನ್ನು ಸನ್ನಿಧಾನದ ತಾವ ಕರೆದುಕೊಂಡು ಬಂದೆ. ದೊರೆ ಕಾಲಿಗೆ ಬಿದ್ದು ‘ತಪ್ಪಾಯಿತು’ ಅಂತ ಕೇಳಿಕೊಳ್ಳಿ, ದಾರಿ ತೋರಿಸಿಯಾರು ಅಂತ” – ಎಂದ ಆ ವೃದ್ಧ.

“ಆಯಿತು, ನೀವೇ ಹೇಳಿ – ಆದದ್ದೇನು ?” – ಎಂದು ಕೇಳಿದ ಮದಕರಿನಾಯಕ.

“ಈ ಪಡ್ಡೆ ಪ್ರಾಯದ ಗೂಳಿಮರಿಗಳೆಲ್ಲಾ ನಮ್ಮ ಗ್ರಾಮದವೆ. ಈ ವರ್ಷ ಶ್ರಾವಣ ಮಾಸದಾಗೆ ನಮ್ಮ ಹಳ್ಳಿಯಾಗೆ ಅಯ್ಯನೋರು ಒಬ್ಬರು ಬಂದಿದ್ದರು - ಅಯ್ಯನೋರು ಅಂದರೆ ಜಂಗಮರು. ಊರಿನ ಜನವೆಲ್ಲಾ ಅವರ ಕೈಲಿ ಚನ್ನಬಸವಪುರಾಣ ಓದಿಸಿ ಕೇಳಿದಿವಿ. ಅದನ್ನು ಓದಿದ ಅಯ್ಯನವರು ಬಸವಣ್ಣನವರು ಮಾಡಿದ್ದನ್ನೆಲ್ಲಾ ಹೇಳಿ, ‘ಅಂಗದ ಮೇಲೆ ಲಿಂಗವಿದ್ದರೆ, ಕೈಲಾಸ ಮನೆಯಂಗಳದಲ್ಲಿ. ಜಾತಿ, ಕಟ್ಟಿನ ಭಯವಿಲ್ಲದೆ ಯಾರೂ ಲಿಂಗ ಧರಿಸಿ, ಶಿವಭಕ್ತರಾಗಿ ಮುಕ್ತಿಗೆ ದಾರಿ ಕಾಣಬಹುದು’ ಅಂತ ಹೇಳಿದರು. ಆಯ್ಯನೋರ ಮಾತು ಕೇಳಿ, ಈ ಮುಂಡೇವಕ್ಕೆಲ್ಲಾ ಎಲ್ಲಿಲ್ಲದ ಶಿವಭಕ್ತಿ ಉಕ್ಕಿಬಂದು ‘ಅಯ್ಯಾ, ನಾವು ಶಿವಭಕ್ತರಾಗುತ್ತೀವಿ, ಉದ್ಧಾರ ಮಾಡಿ’ ಅಂದರು. ಅಯ್ಯನೋರು ಯಾರು, ಏನು ಅಂತ ಕೇಳದೆ ಇವರೆಲ್ಲರಿಗೂ ಶುದ್ಧಿ ಮಾಡಿಸಿ, ಲಿಂಗಧಾರಣೆ ಮಾಡಿ ‘ಇವತ್ತಿನಿಂದ ಶಿವಭಕ್ತರಾದಿರಿ. ಬದುಕಿ’ ಎಂದು ಹೇಳಿದರು ...”

“ಒಳ್ಳೆಯ ಕೆಲಸವನ್ನೇ ಮಾಡಿದರು ಅಯ್ಯನೋರು.”

“ಅವರು ಮಾಡಿದ್ದೇನೋ ಒಳ್ಳೆ ಕೆಲಸ. ಆದರೆ ಆ ಹೊತ್ತಿನಲ್ಲಿ. ನಮ್ಮೂರಲ್ಲೊಬ್ಬ ಹೊಲೆಯರ ಹೆಣ್ಣಿದೆ, ಮಹಾ ಸೊಕ್ಕುಗಾತಿ - ಆಕೆ ‘ನನಗೂ ಲಿಂಗಧಾರಣೆ ಮಾಡಿಸಿ’ ಎಂದು ಕೇಳಿದಳು. ಅದಕ್ಕೆ ಅಯ್ಯನೋರು ‘ನೀನು ಯಾವ ಜಾತಿಯಾದರೇನು, ಆದರೆ ಕಸುಬೇನು

ಮಾಡುತ್ತೀಯಾ?' ಎಂದು ಕೇಳಿದರು. ಅವಳು ಅಡ್ಡದಾರಿ ಹಿಡಿದ ಸೊಕ್ಕಿನ ಹೆಣ್ಣು. ನಿಮ್ಮ ಶಿವ ನಮ್ಮ ಭಕ್ತಿ ನೋಡ್ತಾನೋ, ಹೊಟ್ಟೆಗೆ ಮಾಡೋ ಕಾಯಕ ನೋಡ್ತಾನೋ. ಇವರೆಲ್ಲಾ ದಂಡಿನ ಹುಡುಗರು. ಯುದ್ಧ ಬಂದರೆ ದಿನಕ್ಕೆ ಹತ್ತು ಜನಾನ ಕೊಲ್ತಾರೆ. ಇವರಿಗೆ ಶಿವಲಿಂಗ ಕಟ್ಟಿ ಭಕ್ತರನ್ನು ಮಾಡಿದಿರಿ. ನನ್ನ ಕಾಯಕ ಯಾಕೆ ಕೇಳ್ತೀರಿ. ಅವರು ಶಿವಭಕ್ತರಾದರೆ, ನಾನು ಶಿವಭಕ್ತರ ಸೂಳೆ. ಸೂಳೆಗೆ ಲಿಂಗಧಾರಣೆ ಇಲ್ಲವೆ ? ಎಂದು ಸೊಕ್ಕಿನ ಮಾತಾಡಿದಳು. ಅಯ್ಯನವರಿಗೆ ಸಿಟ್ಟು ಬಂತು – 'ನೀನು ಯಾವ ಜಾತಿಯಾದರೂ ಆಗು, ಕಾಯಕ ಏನಾದರೂ ಮಾಡು. ಸೊಕ್ಕಿದವರಿಗೆ ಶಿವಲಿಂಗವಿಲ್ಲ. ನಡಿ - ನನ್ನ ಕಣ್ಣೆದುರಿನಿಂದ' ಅಂತ ಕೆಂಡವಾದರು. ಇವರು ಶಿವಭಕ್ತರಾದರು. ಅವಳು ಹಾಗೆ ಉಳಿದಳು ...."

"ಕಥೆ ವಿಚಿತ್ರವಾಗಿದೆ- ಮುಂದೇನಾಯಿತು ?"

"ಅಯ್ಯನವರು ಕಾಲಿಗೆ ಬಿದ್ದವರಿಗೆಲ್ಲಾ ಲಿಂಗಧಾರಣೆ ಮಾಡಿ, ಶ್ರಾವಣ ಕಳೆದುಕೊಂಡು ಮುಂದಿನ ಊರಿಗೆ ಹೋದರು. ಈ ಹೆಣ್ಣು ಸುಮ್ಮನಿರಬೇಕಲ್ಲ. ಅವಳ ಹೆಸರೇ ಕೆಂಡಗೂಳಿ ಅಂತ. ಒಳ್ಳೆ ಪ್ರಾಯದವಳು, ನೋಡಲಿಕ್ಕೂ ಚಂದಾಗವಳೆ - ಇಂಥ ಪ್ರಾಯದ ಹುಡುಗರು 'ಆ' ಅಂತ ಬಾಯಿ ಬಿಡೋ ಹಂಗೆ. ಅತ್ತಲಾಗೆ ಅಯ್ಯನವರು ಹೋಗುತ್ತಿದ್ದ ಹಾಗೇ, ಇತ್ತಲಾಗೆ ಈ ಹುಡುಗುಮುಂಡೇವು ಅವಳ ಸೆರಗಿನ ಹಿಂದೆ ಓಡಾಡಲಿಕ್ಕೆ ಆರಂಭ ಮಾಡಿದರು. ಆ ಲೌಡಿಗೆ ಅದೇನು ಕೆಟ್ಟ ಬುದ್ಧಿ ಬಂತೋ, ಮೊದಲಷ್ಟು ದಿನ ಮರ್ಯಾದೆಯಾಗಿ ತನ್ನ ಕಸಬು ಮಾಡಿಕೊಂಡಿದ್ದವಳು, ಈಗ 'ನನ್ನ ಸಂಗ ಬೇಕಾದರೆ ನಿಮ್ಮ ಕತ್ತಿನಲ್ಲಿರೋ ಲಿಂಗ ಕೊಡಿ' ಅಂತ ಷರತ್ತು ಹಾಕಿದಳು. ಈ ಮಂಕುಮುಂಡೇವಕ್ಕಾದರೂ ಲಿಂಗದ ಬೆಲೆ ತಿಳಿಬೇಡವಾ? ಆ ಹೀನಸುಳಿ ಕೇಳಿದ್ದು ಈ ಸೊಕ್ಕಿದ ಗೂಳಿಗಳು ಕೊಟ್ಟವು. ಅದಾದರೂ ಒಳಗೇ ನಡೆದಿದ್ದರೆ ಚೆಂದಾಗಿತ್ತು. ಅಯ್ಯನವರು ತನಗೆ ಲಿಂಗಧಾರಣೆ ಮಾಡಲಿಲ್ಲ ಅನ್ನೋ ಅಸಮಾಧಾನವಿದ್ದ ಹೆಣ್ಣು, ಈ ಹುಡುಗಪಡ್ಡೇವು ಕೊಟ್ಟ ಲಿಂಗಾನೆಲ್ಲಾ ಕೊರಳಿಗೆ ಜೋಮಾಲೆ ಹಾಕಿಕೊಂಡು, ಊರ ತುಂಬ ಮೆರೆದಳು. ಈ ಹುಡುಗರು ಮಾಡಿದ ಹಲ್ಕಾ ಕೆಲಸ ನೋಡಿ, ಊರ ಹಿರಿಯರಿಗೆ ರೇಗಿತು. ಬುದ್ಧಿ ಹೇಳಿದರು, ಬೈದರು. 'ತಪ್ಪುಗಾಣಿಕೆ ಕಟ್ಟಿ ಪ್ರಾಯಶ್ಚಿತ್ತ ಮಾಡಿಸಿಕೊಳ್ಳಿ' ಅಂದರು. 'ಹಂಗೆ ಮಾಡಿದೋರು ಮತ್ತೆ ನನತಾವ ಬರೋ ಹಂಗಿಲ್ಲ' ಅಂತ ಷರತ್ತು ಹಾಕಿತು, ಆ ಹುಡುಗಿ. ಅದೇನು ಮೋಡಿ ಮಾಡಿದ್ದಳೋ, ಮಾಟಾನೇ ಮಾಡಿಸಿದ್ದಳೋ, ಆ ಸಿಟ್ಟಿಗೆದ್ದ ಹೆಣ್ಣು. 'ಲಿಂಗವಿಲ್ಲದಿದ್ದರೆ ಬೇಡ, ಅವಳ ಸಂಗ ಬೇಕು' ಅಂದವು ಇವು. ಲಿಂಗದ ಮಹಿಮೆ ಗೊತ್ತಿದ್ರೆ ಇಂಥ ಕೆಲಸ ಮಾಡ್ತಿದ್ರಾ -ದಂಡಿನಲ್ಲಿ ದುಡಿಯೋ ತುಡುಗು ಜನ ಇವು. ಮಾಡಬಾರದ್ದು ಮಾಡಿ, ಮಾಡಿದ್ದೇ ಸರಿ ಅಂದರು. ಗುರುಮನೆಯವರೆಗೂ ದೂರು ಮುಟ್ಟಿತು. ಗುರುಗಳು ಸಿಟ್ಟಾಗಿ 'ಇಂಥ ಕೆಲಸ ಮಾಡಿದೋರಿಗೆ

ನೀರು ಬೆಂಕಿ ಕೊಡಬೇಡಿ' ಅಂತ ಕಟ್ಟುಮಾಡಿದ್ರು. ಈಗ ಮಾಡಬಾರದ್ದು ಮಾಡಿ, ಮಂಗನ ಹಂಗೆ ನಿಮ್ಮ ಮುಂದೆ ಬಂದು ಹಲ್ಲು ಕಿರೀತಾ ನಿಂತಿವೆ. ಈಗ ತಾವೇ ಎಲ್ಲಾ ವಿಚಾರಣೆ ಮಾಡಿ, ಈ ತಿಳೀದ ಮಕ್ಕಳಿಗೆ ಬದುಕೋ ದಾರಿ ತೋರಿಸಬೇಕು"

- ಎಂದ ನಡದದ್ದೆಲ್ಲಾ ವಿವರಿಸಿ, ತರುಣರ ಪರವಾಗಿ, ಅವರ ಮಾತನ್ನು ನಾಯಕರ ಮುಂದಿಟ್ಟ ವೃದ್ಧ.

ಆತ ಹೇಳಿದುದನ್ನೆಲ್ಲ ಸಾವಧಾನವಾಗಿ ಕೇಳಿದ ಮದಕರಿನಾಯಕನಿಗೆ ಆ ತರುಣರು ಮಾಡಿದ್ದು ತಪ್ಪು ಕೆಲಸ ಅನ್ನಿಸಿತು, ಹಾಗೆಯೇ ಅವರ ಮುಗ್ಧ ಬುದ್ಧಿಯನ್ನು ಕಂಡು ಕನಿಕರವೂ ಆಯಿತು.

"ಏನಿರೋ-ಒಳ್ಳೆ ತಾಯ ಹಡೆದ ಮಕ್ಕಳು ನೀವು. ಇಂಥ ಕೆಲಸ ಮಾಡಬಹುದಾ ?" ಎಂದು ಕೇಳಿದ, ಮದಕರಿನಾಯಕ.

"ಮಾಸ್ವಾಮಿ, ನಾವು ಧರ್ಮಗಿರ್ಮ ತಿಳಿದವರಲ್ಲ. ಬರೀ ಲಡಾಯಿ ಮಾಡಿ ಬದುಕಿದ ಜನ. ಲಿಂಗ ಕಟ್ಟಿಸಿಕೊಂಡರೆ ಮುಕ್ತಿ ಅಂದರು, ಕಟ್ಟಿಸಿಕೊಂಡೆವು. ಇದು ಇಷ್ಟು ರಂಪಕ್ಕಿಟ್ಟುಕೊಳ್ಳುತ್ತೆ ಅಂತ ಗೊತ್ತಿದ್ರೆ ಅವತ್ತೇ ಈ ಕೆಲಸ ಮಾಡ್ತಾ ಇರಲಿಲ್ಲ. ಲಿಂಗ ಕಟ್ಟಿದ ಗುರುಗಳೂ ಲಿಂಗ ಕಟ್ಟಿಕೊಂಡವರು ಇಂಥ ಕೆಲಸ ಮಾಡಬಾರದು ಅಂತ ಕಟ್ಟುಮಾಡಿ ಹೇಳಲಿಲ್ಲ. ಏನೋ ತಿಳೀದೆ ತಪ್ಪು ಮಾಡಿದೆವು. ದಂಡಿನ ಜನ ನಾವು - ನಿಮ್ಮ ಮಕ್ಕಳಿದ್ದಂಗೆ. ಅರಮನೆ ಕೊಟ್ಟ ರೊಟ್ಟಿ ಬೆಣ್ಣೆ ತಿಂದು ಬೆಳೆದವರು. ಮಾನಕ್ಕೆ ತಲೆ ಕೊಡೋದಷ್ಟೇ ಗೊತ್ತು. ನಮಗೆ ನೀವು ಕೈಹಿಡಿದು ಕಾಪಾಡಿದರೆ ಕಾಪಾಡಿ. ಇಲ್ಲ, ಮರ್ಯಾದೆ ಹೋದ ಊರಿನಲ್ಲಿರೋಕ್ಕಿಂತ ಪರದೇಶಕ್ಕೆ ಹೋಗಿ ಸಾಯ್ತೀವಿ -ದೊರೇನೂ ತನ್ನ ಮಕ್ಕಳ ಕೈಬಿಟ್ಟ ಅಂತ" – ಎಂದು ಕಣ್ಣೀರಿಟ್ಟು ಹೇಳಿದ ಒಬ್ಬ ತರುಣ.

ಪ್ರಾಯದ ಹುಡುಗರಿಗೆ, ಅದರಲ್ಲೂ ದಂಡಿನ ತರುಣರಿಗೆ - ಹೆಣ್ಣು ಎಂದರೆ ಎಷ್ಟು ಪ್ರಾಣ ಎಂದು ಮದಕರಿನಾಯಕನಿಗೆ ಗೊತ್ತು. ಅವರಿವರು ಹೇಳುವುದೇನು - ತಾನೇ ಕಡೂರಿಯ ಹುಚ್ಚಿನಲ್ಲಿ ಹತ್ತು ದಿನ ಪ್ರಪಂಚ ಕಳೆದುಹೋದವನ ಹಾಗಿರಲಿಲ್ಲವೇ - ಅವಳು ತನ್ನವಳಾಗುವವರೆಗೆ.

ಮದಕರಿನಾಯಕನ ಪ್ರಾಯವೂ ಕನಿಕರದೊಂದಿಗೆ ಆ ತರುಣರ ಪಕ್ಷವಹಿಸಿ, ನಡೆದದ್ದೆಲ್ಲವೂ ವಿನೋದದ ವಿಷಯವೆಂದುಕೊಂಡು-

“ಆಯಿತು ಬಿಡಿ. ಇನ್ನುಮುಂದೆ ದಂಡಿನ ಜನ ಜಾತಿ-ಗೀತಿ ಅಂತ ಕಟ್ಟಿಕೊಂಡು ಕೆಂಡ ಮುಟ್ಟಲಿಕ್ಕೆ ಹೋಗಬೇಡಿ. ನಿಮ್ಮದು ತಪ್ಪಾಯಿತು ಅಂತ ಗುರುಗಳಿಗೆ ಹೇಳಿ, ಈ ಸಲ ನಿಮ್ಮ ಮರ್ಯಾದೆ ಉಳಿಸುತ್ತೀವಿ” - ಎಂದು ಮಾತುಕೊಟ್ಟ, ಮದಕರಿನಾಯಕ.

“ನೀವು ಅಷ್ಟು ಹೇಳಿದರೆ ನಾವು ಬದುಕಿದೆವು, ಮಾಸ್ವಾಮಿ”

- ಎಂದು ಹೇಳಿ ತರುಣರೆಲ್ಲರೂ ದೊರೆಗೆ ಅಡ್ಡ ಬಿದ್ದು –

“ಮಾಸ್ವಾಮಿ –ದೊರೆಗಳಿಗೆ ಸಾವಿರ ಕೆಲಸ. ಊರಿಗೆ ಹೋಗಿ ಮರೆತುಬಿಟ್ಟು ನಮ್ಮ ಮಾನಗೆಟ್ಟ ಬದುಕು ಬೀದಿಪಾಲು ಮಾಡಬೇಡಿ” – ಎಂದು ಬೇಡಿದರು.

“ಆಯಿತು, ನಿಮ್ಮ ಮಾತು ಮರೆಯುವುದಿಲ್ಲ” – ಎಂದು ಭರವಸೆ ಕೊಟ್ಟು –

“ನಗರದ ಲಡಾಯಿಗೆ ನೀವೂ ಬಂದಿದ್ದಿರೇನೋ?” – ಎಂದು ಕೇಳಿದ, ಮದಕರಿನಾಯಕ.

“ಹೌದು ಮಾಸ್ವಾಮಿ ಅಲ್ಲಿದ್ದ ಸಾವಿರ ಮೊಕಗಳಲ್ಲಿ ನಮ್ಮ ಮೊಕಗಳು ನಿಮಗೆ ನೆನಪಿರಲಿಕ್ಕಿಲ್ಲ” – ಎಂದರು ಆ ತರುಣರು.

ಆ ಯುವಕರು ನಗರದ ಲಡಾಯಿಯಲ್ಲಿ ಭಾಗವಹಿಸಿದವರು, ಅಂದರೆ ತನಗೆ ಕನಕಾಭಿಷೇಕ ಮಾಡಿದವರಲ್ಲಿ ಇವರೂ ಇದ್ದಿರಬೇಕು ಎನಿಸಿ, ಅವರ ಬಗ್ಗೆ ಮತ್ತಷ್ಟು ಅಭಿಮಾನ ಮೂಡಿ –

“ದುರ್ಗದ ಮರ್ಯಾದೆ ಉಳಿಸಿದ ಜನ ನೀವು ನಿಮ್ಮನ್ನು ನಾವು ಮರೆಯುತ್ತೇವೆಯೇ ?”

– ಎಂದು ಮತ್ತೊಮ್ಮೆ ಪ್ರಮಾಣ ಮಾಡಿದಂತೆ ಹೇಳಿದ. ಮದಕರಿನಾಯಕ.

೯

ತಮ್ಮ ನೆಚ್ಚಿನ ಭಟರಿಗೆ ಕೊಟ್ಟ ಮಾತನ್ನು ಮದಕರಿನಾಯಕ ಮರೆಯಲಿಲ್ಲ.

’ಜೋಗು’ ಮುಗಿಸಿಕೊಂಡು ಬಂದು, ಆ ಆಯಾಸ ಪರಿಹಾರವಾದ ಮಾರನೆಯ ದಿನವೇ, ಬೃಹನ್ಮಠಕ್ಕೆ ಗುರುದರ್ಶನಕ್ಕಾಗಿ ತಾನು ಬರುತ್ತಿರುವುದಾಗಿಯೂ, ಸನ್ನಿಧಾನಕ್ಕೆ ಅನುಕೂಲವಾದ ಸಮಯವನ್ನು ತಿಳಿಸಬೇಕೆಂದೂ ವಾರ್ತೆ ಕಳಿಸಿ, ಗುರುಗಳು ತಮಗೆ ಅನುಕೂಲವೆಂದು ತಿಳಿಸಿದ ಅಪರಾಹ್ನದ ವೇಳೆಗೆ ಗುರುದರ್ಶನಕ್ಕೆಂದು ಬಂದ.

ಮಠದ ಮಹಾದ್ವಾರದ ಬಳಿಗೆ ಬಂದ ನಾಯಕರನ್ನು ಮಠದ ಮಹಾದ್ವಾರದಲ್ಲೇ ಉಚಿತ ಮಾನಮರ್ಯಾದೆಗಳಿಂದ ಎದುರುಗೊಂಡ, ಮಠದ ಸರ್ವಾಧಿಕಾರಿಗಳು, ನಾಯಕರನ್ನು ಗುರು ದರ್ಶನಕ್ಕೆ ಕರೆದೊಯ್ದರು.

ಗುರುದರ್ಶನಕ್ಕೆ ಬಂದ ಮದಕರಿನಾಯಕ, ಸರ್ವಾಧಿಕಾರಿಗಳು ಅವನಿಗಾಗಿ ಸಜ್ಜುಗೊಳಿಸಿದ ಆಸನದಲ್ಲಿ ಕುಳಿತು, ರಾಜಗುರುಗಳ ಅಂತಸ್ತಿಗೆ ತಕ್ಕ ರೀತಿಯಲ್ಲಿ ಅಣಿಗೊಳಿಸಿದ ಅವರ ಆಪ್ತಾಲೋಚನೆಯ ಕಿರುಹಜಾರವನ್ನು ಹಾಗೇ ಕಣ್ಣಾಡಿಸಿ ನೋಡಿದ –

ನೆಲಕ್ಕೆ ಹಾಸಿದ ಅಮೃತಶಿಲೆಯ ಹಾಲುಗಲ್ಲಿನ ಮೇಲೆ ಹಾಸಿದ ರತ್ನಗಂಬಳಿ, ಕಿಟಕಿಗಳಿಗೆ ಇಳಿಬಿಟ್ಟ ಕಾವಿಬಣ್ಣದ ರೇಶಿಮೆಯ ತೆರೆಗಳು, ಭಿತ್ತಿಯನ್ನು ಅಲಂಕರಿಸಿದ ಗಾಜಿನ ಮೇಲೆ ಬರೆದ ಶಿವನ ನಾನಾಲೀಲೆಯ ವರ್ಣಚಿತ್ರಗಳು, ಛಾವಣಿಯಿಂದ ತೂಗುಬಿಟ್ಟ ಗಾಜಿನ ದೀಪಗುಚ್ಛ, ಬಣ್ಣ ಬಣ್ಣದ ಗುಳೂಪಗಳು, ಬಿಡಿದೀಪಗಳನ್ನು ಹೊತ್ತಿಸಿದ ಗೋಡೆಗೆ ಸಿಗಿಸಿದ ವಿವಿಧ ವರ್ಣದ ಗಾಜಿನ ದೀಪದ ಬುಡ್ಡಿಗಳು, ಗುರುಗಳು ಕುಳಿತುಕೊಳ್ಳುವ ವ್ಯಾಘ್ರಾಜಿನ ಹಾಸಿದ ರಜತಪೀಠ, ಆ ಪೀಠದ ಹಿಂದೆ, ಮಠದ ಮೂಲಗುರುಗಳಾದ ಶ್ರೀ ಮುರುಗೀ ರಾಜೇಂದ್ರಸ್ವಾಮಿಗಳು ಹಾಗೂ ಅವರ ಪಾದದಡಿಯಲ್ಲಿ ಕೈಮುಗಿದು ಕುಳಿತ ಭರಮಣ್ಣನಾಯಕರ ಭವ್ಯವಾದ ತೈಲಚಿತ್ರ, ಪೀಠಕ್ಕೆ ಅಷ್ಟು ದೂರದಲ್ಲಿ ಮೂಲೆಯಲ್ಲಿಟ್ಟ ಕಾಲುಮಣೆಯಲ್ಲಿ ಪರಿಮಳ ಬೀರುವ ಅಗರುಬತ್ತಿಯ ಬೆಳ್ಳಿಯ ಪೀಠಗಳು –

ಸರಳವಾದ, ಆದರೆ ಗಾಂಭೀರ್ಯಕ್ಕೆ ತಕ್ಕಂಥ ಉಡುಪು ಧರಿಸಿದ ರಾಜಪುರುಷನಂತಿತ್ತು ಗುರುಮಂದಿರ.

ಮದಕರಿನಾಯಕ ನಾಯಕತನಕ್ಕೆ ಬಂದಮೇಲೆ, ಮಠಕ್ಕೆ ಬಂದದ್ದು ಬಹು ಅಪರೂಪ. ಇದು ಎರಡನೆಯ ಬಾರಿಯೋ, ಮೂರನೆಯ ಬಾರಿಯೋ –

ಗುರುಗಳ ದರ್ಶನ ಮದಕರಿನಾಯಕನಿಗೆ ಅಪರೂಪವಲ್ಲದಿದ್ದರೂ ಕೆಳಗಿನ ಬೃಹನ್ಮಠಕ್ಕೆ ಹೆಚ್ಚಾಗಿ ಬಂದಿರಲಿಲ್ಲ, ಎಂತಲೇ ಪರಿಚಿತವಾದರೂ, ಅಪರಿಚಿತವೆಂಬಂತೆ ಇದ್ದ ಆ ಮಂದಿರವನ್ನು ಕಣ್ಣಾಡಿಸಿ ನೋಡುತ್ತಿರುವಾಗಲೇ, ಒಂದು ಬದಿಯ ಕೆತ್ತನೆಗೆಲಸದ ಶ್ರೀಗಂಧದ ಬಾಗಿಲು ತೆರೆದು, ಬೆಳ್ಳಿಕಟ್ಟಿಗೆ ಹಿಡಿದ ಇಬ್ಬರು ಕಾವಿಯುಟ್ಟ ಶಿಷ್ಯರು 'ಪರಾಕ್....ಭೋ ಪರಾಕ್' ಎಂದು ಗುರುಗಳ ಆಗಮನವನ್ನು ಸೂಚಿಸಲು, ಆ ಸದ್ದನ್ನು ಹಿಂಬಾಲಿಸಿದಂತೆ -ನೀಳ್ಕಾಯರಾಗಿ, ಯಮನಿಯಮಗಳಿಂದ ಹುರಿಗೊಂಡ ಮೈಯ, ಮಾಡಿದ ತಪಸ್ಸು ಭಸ್ಮ ಧರಿಸಿದ ಮುಖದಲ್ಲಿ ಬೆಳಕಿನಂತೆ ಹೊಳೆಯುತ್ತಿರಲು, ಕಂಠದಲ್ಲಿ ರುದ್ರಾಕ್ಷಿಮಾಲೆ, ತಲೆಗೆ ಕಾವಿಯ ರುಮಾಲನ್ನು ಧರಿಸಿ, ಗಾಂಭೀರ್ಯವೇ ರೂಪುವೆತ್ತಂತೆ ನಡೆದುಬಂದು, ತಾವು ಒಳಗೆ ಬರುತ್ತಿದ್ದ ಹಾಗೇ ಎದ್ದು ನಿಂತ

ನಾಯಕರನ್ನು ಮಂದಹಾಸದಿಂದಲೇ ಆಶೀರ್ವದಿಸಿ, ತಮ್ಮ ಪೀಠದ ಬಳಿ ಬಂದು, ಧರಿಸಿದ ಮರದ ಹಾವುಗೆಗಳನ್ನು ಕೆಳಗೆ ಬಿಟ್ಟು ಕುಳಿತರು - ಶ್ರೀ ಶ್ರೀ ಗುರುಪಾದದೇಶಿಕ ಮಹಾಸ್ವಾಮಿಗಳು.

ಅವರು ಕುಳಿತುಕೊಳ್ಳುತ್ತಿದ್ದ ಹಾಗೇ ಪಾದುಕೆ ಮುಟ್ಟಿ ನಮಸ್ಕರಿಸಿದ ನಾಯಕರನ್ನು ಉಚಿತವಾಗಿ ಆಶೀರ್ವದಿಸಿ –

"ಕುಳಿತುಕೊಳ್ಳಿ. ನೋಡಿ ಬಹಳ ದಿನವಾಯಿತು. ತಾವು ಕುಶಲವೇ, ಅರಮನೆಯಲ್ಲಿ ಎಲ್ಲರೂ ಕುಶಲವೇ ?" – ಎಂದು ಕೇಳಿದರು ಶ್ರೀ ಗುರುಪಾದದೇಶಿಕ ಸ್ವಾಮಿಗಳು.

"ತಮ್ಮ ದರ್ಶನದಿಂದ ಕೃತಾರ್ಥನಾದೆ. ತಮ್ಮ ಚಿತ್ತಕ್ಕೆ ಗೊತ್ತಿಲ್ಲದ ವಿಷಯ ಯಾವುದಿದೆ. ಯುದ್ಧಗಳು, ರಾಜಕೀಯ - ಈ ಗೊಂದಲದಲ್ಲಿ ಬಹುದಿನ ಗುರುದರ್ಶನದ ಭಾಗ್ಯಕ್ಕೆ ಅವಕಾಶವಾಗಲಿಲ್ಲ, ಅಪರಾಧವನ್ನು ಕ್ಷಮಿಸಬೇಕು" – ಎಂದ ಮದಕರಿನಾಯಕ.

"ಅರಸರು ಅರಸುಕಾರ್ಯ ಮಾಡುತ್ತಿದ್ದರೆ, ಆ ಕಾರ್ಯಬಾಹುಳ್ಯದಲ್ಲಿ ಇಲ್ಲಿಗೆ ಬರಲಾಗದಿದ್ದರೆ ಅಪರಾಧವೇನಾಯಿತು. ಕಣ್ಣು ನೋಡದಿದ್ದರೂ ಮನಸ್ಸಿನಲ್ಲಿದ್ದರೆ ಸಾಕು. ಶಿವ ಕೇಳುವುದು ಅಷ್ಟೇ ಭಕ್ತಿ."

"ಅಷ್ಟಕ್ಕಂತೂ ನಮ್ಮಲ್ಲಿ ಎಂದೂ ಕೊರತೆಯಿಲ್ಲ. ಗುರುದರ್ಶನವಾದರೆ ಹರದರ್ಶನವಾದಷ್ಟು ಹರ್ಷ ನನಗೆ. ಆ ಸುಖಕ್ಕೆ ಇಷ್ಟು ದಿನ ದೂರವಾದೆನಲ್ಲ ಎಂದು ದುಃಖವಾಗುತ್ತಿದೆ."

"ನೀವು ದೂರವಿದ್ದಿರಿ: ದೇಹದಿಂದ ನಮ್ಮಲ್ಲಿಯೇ ನಿತ್ಯವೂ ಇದ್ದಿರಿ; ನೆನಪಾಗಿ. ನಿಮಗೆ ಶ್ರೇಯಸ್ಸನ್ನು ಬಯಸಲೆಂದಲ್ಲವೇ ನಮ್ಮ ಹಿರಿಯರು ಇಲ್ಲಿ ನಿಂತದ್ದು. ಆ ಕಳವಳ ಬೇಡ. ದಿನವೂ ಶಿವಪೂಜೆ ಮಾಡುವಾಗ ನಿಮ್ಮನ್ನು ನೆನೆಸುತ್ತೇವೆ; ನಮ್ಮವರಿಂದ ನಿಮ್ಮ ಕುಶಲ ವಾರ್ತೆ ತರಿಸಿಕೊಳ್ಳುತ್ತೇವೆ. ನೀವೇ ಬಾಯಿಬಿಟ್ಟು 'ಎಲ್ಲವೂ ಕ್ಷೇಮ' ಎಂದು ಕೇಳಿದರೆ ಕಿವಿಗೆ ತೃಪ್ತಿ; ಕಣ್ಣಿಗೂ ಆನಂದ. ಈಗ ನಿಮ್ಮನ್ನು ಇಷ್ಟು ದೂರ ಬರಮಾಡಿದ ಕಾರಣ ಯಾವುದು?" – ಎಂದು ಕೇಳಿದರು ಶ್ರೀ ಗುರುಪಾದದೇಶಿಕರು.

"ನಾನು ಬಂದದ್ದು ಬಹಳ ಸಣ್ಣ ವಿಷಯ."

"ಅರಸರ ಬಾಯಮಾತು ಎಂದೂ ಅಲ್ಪವಾಗುವುದಿಲ್ಲ, ಅದೇನು ಹೇಳಿ."

"ನನ್ನ ಕೋರಿಕೆಯೊಂದನ್ನು ಕೃಪೆಯಿಟ್ಟು ನಡೆಸಿಕೊಡಬೇಕು. ಸಣ್ಣ ಮಾತು ಎಂದು ಆಗದು ಎನ್ನಬಾರದು."

"ನೀವು ಅಂಥ ಮಾತು ಕೇಳುವುದಿಲ್ಲ ಎಂದು ನಂಬಿಕೆ ನನಗಿದೆ. ಏನು ಹೇಳಿ ?"

"ಕೋಗುಂಟೆಯಲ್ಲಿ ನಡೆದ ವಿಷಯ ...."

"ಅದೇ. ಅದು ನಿಜಕ್ಕೂ ಸಣ್ಣ ಮಾತು. ತಪ್ಪು ಮಾಡಿದವರಿಗೆ ತಕ್ಕ ದಂಡ ವಿಧಿಸಿದ್ದಾಯಿತು. ಹಾಗೆಯೇ ಮನದಲ್ಲಿ ದೃಢಭಕ್ತಿಯಿಲ್ಲದ ಚಪಲಚಿತ್ತರಿಗೆ ಲಿಂಗಧಾರಣೆ ಮಾಡುವ ಶಿವದ್ರೋಹವನ್ನು ಇನ್ನು ಮುಂದೆ ಮಾಡಕೂಡದು ಎಂದು ಅಯ್ಯನವರಿಗೂ ಎಚ್ಚರಿಕೆ ಹೇಳಿ ಕಳಿಸಿದ್ದಾಯಿತು. ಅದರಲ್ಲಿ ಮತ್ತೇನು ಮಾತು ಉಳಿಯಿತು ?"

- ಗಂಭೀರ ಧ್ವನಿಯಲ್ಲಿ ಕೇಳಿದರು ಶ್ರೀ ಗುರುಪಾದದೇಶಿಕ ಸ್ವಾಮಿಗಳು.

"ತಮ್ಮ ಕಾರ್ಯ ತಾವು ಮಾಡಿದಿರಿ. ಅದರಲ್ಲಿ ನನ್ನ ಆಕ್ಷೇಪಣೆ, ಅನುಮಾನ ಯಾವುದೂ ಇಲ್ಲ. ಪ್ರಾರ್ಥನೆಯೊಂದಿದೆ."

"ಏನು ?"

"ತಪ್ಪು ಮಾಡಿದ ತರುಣರೆಲ್ಲಾ, ಕುರುಡುಪ್ರಾಯದ ಮಂದಬುದ್ಧಿಗಳು..."

"ಅದರಲ್ಲಿ ಅನುಮಾನವೇ ಇಲ್ಲ."

"ಅದೇನೋ ಸರಿಯೇ. ಆದರೆ ಹುಡುಗುಬುದ್ಧಿ ಮಾಡಿದ ಸಣ್ಣ ಕೆಲಸಕ್ಕೆ ಹಿರಿಯರು ಮಾಡಿದ ಶಿಕ್ಷೆ ಬಹಳ ಉಗ್ರವಾಯಿತು."

"ಕುರುಡು ಉತ್ಸಾಹದಲ್ಲಿ ಲಿಂಗಧಾರಣೆ ಮಾಡಿಸಿಕೊಂಡದ್ದು ಹುಡುಗುಬುದ್ಧಿ. ಆದರೆ ಮಂಗಲಮಯ ಶಿವಲಿಂಗವನ್ನು ಸೂಳೆಯಾಟದ ಸದರ ಮಾಡಿದ ತಪ್ಪು ಸಣ್ಣದಲ್ಲ. ಒಮ್ಮೆ ಧರಿಸಿದ ಶಿವಲಿಂಗ ಕೈತಪ್ಪಿ ಕೆಳಗೆ ಜಾರಿದರೂ ಮಹಾಪಾತಕ ಎನ್ನುತ್ತದೆ ಶಾಸ್ತ್ರ. ಧರಿಸಿದ ಲಿಂಗಕ್ಕೆ ದ್ರೋಹಬಗೆದವರಿಗೆ ತಲೆದಂಡ ಎಂದಿದ್ದಾರೆ ಹಿರಿಯರು. ಸಮಯಾಚಾರವರಿತು ಭಯಭಕ್ತಿಗಳಿಂದ ಪೂಜಿಸಬೇಕಾದ ಶ್ರೀಲಿಂಗವನ್ನು ಕವಡೆಗಿಂತ ಕಡೆ ಎಂಬಂತೆ ಸೂಳೆಯ ಸೊಂಟಕ್ಕೆ ಸುತ್ತಿದುದು ಸಣ್ಣ ತಪ್ಪಲ್ಲ; ಕಾಳಸರ್ಪವನ್ನು ಕೆಣಕಿದಂಥ ಘೋರಾಪರಾಧ. ಅಂಥ ತಪ್ಪು ಮಾಡಿದವರನ್ನು, ಒಮ್ಮೆ ಒಬ್ಬರನ್ನು ಕ್ಷಮಿಸಿದರೆ, ದಿನವೂ ಅಂಥ ಪಾಪದ ಕೆಲಸ ನಡೆಯಲು ರಹದಾರಿ ಕೊಟ್ಟಂತಾದೀತು. ಆದ್ದರಿಂದ ಆ ಮಾತು ಬಿಡಿ. ಬೇರೆ ವಿಷಯವಿದ್ದರೆ ಆಡಿ."

-ನಿಷ್ಠುರ ಗಂಭೀರ ಧ್ವನಿಯಲ್ಲಿ ಹೇಳಿದರು ಶ್ರೀ ಗುರುಪಾದದೇಶಿಕ ಸ್ವಾಮಿಗಳು.

"ಆದರೆ ತಪ್ಪು ಮಾಡಿದ ಜನ, ನಮ್ಮ ಸೇನೆಯ ಭಂಟರು ...."

"ಇರಬಹುದು. ಆದರೆ ಶಾಸ್ತ್ರ ಆಳಿಗೊಂದು, ಅರಸಿಗೊಂದು ಎಂದು ಭೇದವೆಣಿಸುವುದಿಲ್ಲ. ಹಾಲಾಹಲ ಕುಡಿದದ್ದು ಹಸುಗೂಸಾದರೂ ಉಳಿದೀತೆ, ಹುಡುಗನೆಂದು ಕೆಣಕಿದ ಸರ್ಪ ಕರುಣೆ ತೋರಿಸೀತೇ? ಶಾಸ್ತ್ರವೂ ಅಷ್ಟೆ, ಧರ್ಮವೂ ಅಷ್ಟೆ - ಬಿಟ್ಟುಬಿಡಿ ಆ ಮಾತನ್ನು."

- ಮತ್ತಷ್ಟು ಬಿಗಿದ ಧ್ವನಿಯಲ್ಲಿ ನಾಯಕರನ್ನು ಎಚ್ಚರಿಸುವ ಧ್ವನಿಯಲ್ಲಿ ಹೇಳಿದರು.

ಆ ಮಾತು ಕೇಳಿ ಮದಕರಿನಾಯಕನ ಅಂದಿನವರೆಗೂ ಇದಿರುನುಡಿ ಕೇಳದ ರಾಜಹೆಮ್ಮೆ ಗಣೆಕೆದರಿ, ಹೇಳಿದ –

"ಬಿಡುವ ಮಾತಾಗಿದ್ದರೆ, ನಾನಿಷ್ಟು ದೂರ ಬರುತ್ತಿರಲಿಲ್ಲ. ತಾವು ಶಿಕ್ಷೆ ವಿಧಿಸಿರುವುದು – ನಮ್ಮ ಸೈನಿಕರಿಗೆ. ಅವರು ಶಸ್ತ್ರಪರಿಣತರೇ ಹೊರತು ತಮ್ಮಂತೆ ಶಾಸ್ತ್ರಪರಿಣತರಲ್ಲ."

"ಇರಬಹುದು. ನಿಮ್ಮ ಶಸ್ತ್ರಕ್ಕೆ ಕರುಣೆಯಿದೆಯೇ ? – ನಮ್ಮ ಶಾಸ್ತ್ರಕ್ಕೂ ಅಷ್ಟೆ."

"ತಾವು ಅಷ್ಟು ನಿಷ್ಠುರವಾಗಿ ಅಪ್ಪಣೆ ಕೊಡಿಸಬಾರದು. ದಯೆಗಣ್ಣು ತೆರೆದು ಆಲೋಚಿಸಬೇಕು - ದಿನನಿತ್ಯವೂ ತಮ್ಮ ಜೀವವನ್ನು ಮುಂಗೈಯ ಮೇಲಿಟ್ಟುಕೊಂಡು, ಕೋವಿ ಕತ್ತಿಗಳನ್ನೆದುರಿಸುವ, ತಮ್ಮ ಪ್ರಾಣತೆತ್ತು ಈ ದೇಶವನ್ನು ರಕ್ಷಿಸುವ ಯೋಧರ ಬಗ್ಗೆ ತಮ್ಮ ಚಿತ್ತವನ್ನು ಪರಾಮರ್ಶಿಸಬೇಕು."

"ಹಾಗಂದರೆ - ನಾವು ಯೋಚಿಸದೆ ಬಹಿಷ್ಕಾರಾಜ್ಞೆ ವಿಧಿಸಿದೆವು ಎಂದೇ ತಮ್ಮ ಮಾತು?"

"ಹಾಗಲ್ಲ."

"ಅಲ್ಲವಾದರೆ ಬಿಡಿ. ನಿಮಗೆ ತಿಳಿಯದ ಧರ್ಮವನ್ನು ತಿಳಿಸುವುದಕ್ಕಾಗಿಯೇ ನಾವಿರುವುದು."

"ಅರಸನಾಗಿ ನಾನು ತಮ್ಮನ್ನು ಪ್ರಾರ್ಥಿಸುತ್ತಿದ್ದೇನೆ."

"ಆಗಲೇ ಹೇಳಿದೆವಲ್ಲ - ಅರಸಿಗೊಂದು, ಆಳಿಗೊಂದು ಬೇರೆ ಧರ್ಮವಿಲ್ಲ. ಧರ್ಮದ ದಾರಿಗೆ ಅಡ್ಡ ಬರಬೇಡಿ. ದೇಶರಕ್ಷಣೆಯ ಕೆಲಸ ಮಾಡಿ. ಅರಸುಚಿತ್ತಕ್ಕೆ ಮರುಳು ಮುಸುಕಿದಾಗಲೇ ದಾರಿತೋರಲು ಅರಮನೆಗೊಂದು ಗುರುಮನೆ ಇರಬೇಕು ಎಂದು ಹಿರಿಯರು ಮಾಡಿದ್ದು, ಅದನ್ನು ಮರೆಯಬೇಡಿ."

- ನಾಯಕರ ಮುಖಕ್ಕೆ ರಾಚಿದಂತೆ ಹೇಳಿದರು. ಶ್ರೀ ಗುರುಪಾದದೇಶಿಕ ಸ್ವಾಮಿಗಳು.

ಆ ಮಾತು ಮದಕರಿನಾಯಕನಲ್ಲಿದ್ದ ಅರಸುತನದ ಅಹಂಕಾರವನ್ನು ಮತ್ತಷ್ಟು ಕೆರಳಿಸಿ

"ದೊಡ್ಡ ಮಾತು ಹೇಳಿದಿರಿ. ಅರಮನೆಗೊಂದು ಗುರುಮನೆ ಇರಬೇಕು ಎಂದಿರಿ. ಗುರು ಮನೆಗೂ ಒಂದು ಅರಮನೆ ಬೇಕು ಎಂಬುದನ್ನು ತಾವು ಮರೆಯಬಾರದು"

- ಎಂದು ಹೆಡೆ ತುಳಿದ ಹಾವಿನಂತೆ ಹೇಳಿ, ಸರಳವಾದರೂ ರಾಜೋಚಿತವಾದ ರೀತಿಯಲ್ಲಿ ಸಜ್ಜಾದ ಹಜಾರವನ್ನು ಸುತ್ತಾ ನೋಡುತ್ತಾ ಹೇಳಿದ, ಮದಕರಿನಾಯಕ - 'ಇದು ನಮ್ಮ ಹಂಗು' ಎನ್ನುವಂತೆ.

"ಅಲ್ಲವೇ - ಆ ಮಾತು ಅರಿವಿದ್ದವರೇ ನಮ್ಮ ಬಗ್ಗೆ ತಮ್ಮ ಬಳಿ ದೂರು ತಂದರು. ದೊರೆಗಳು ದುಡುಕಬಾರದು. ಆ ಪಡ್ಡೆ ಜನ, ಅರಸರ ರಕ್ಷಣೆಯಿದೆಯೆಂದು ಹಳ್ಳಿಯನ್ನು

ಹಾದರಗೇರಿ ಮಾಡಿದರು. ಲಿಂಗವನ್ನು ಪಗಡೆಯಾಟದ ಕಾಯಿ ಮಾಡಿದರು. ಧರ್ಮ, ಶಿಷ್ಯರು ನಾಚುವಂತೆ ಮಾಡಿದರು. ಶಿಷ್ಯ ಸಂರಕ್ಷಣೆ ಈ ಪೀಠದ ಕರ್ತವ್ಯ-"

"ಗುರುಪೀಠಕ್ಕೊಂದು ಕರ್ತವ್ಯವಿರುವಂತೆಯೇ ರಾಜಪೀಠಕ್ಕೂ ಒಂದು ಕರ್ತವ್ಯವಿದೆ. ಶಿಷ್ಯ ರಕ್ಷಣೆ ನಿಮ್ಮ ಕರ್ತವ್ಯ; ನಮ್ಮ ಸೈನಿಕರ ರಕ್ಷಣೆ ನಮ್ಮ ಕರ್ತವ್ಯ."

"ದೊರೆ ಬೇರೆ - ಗುರು ಬೇರೆ - ನೆನಪಿಸಿ ಒಳ್ಳೆಯದು ಮಾಡಿದಿರಿ. ಮುನಿಸು ಸೋಕಿ ಮನಸ್ಸಿಗೆ ಮೈಲಿಗೆಯಾಯಿತು. ಸ್ನಾನಮಾಡಿ, ಶಿವಪೂಜೆ ಮಾಡಬೇಕು. ಶಿವನಿಚ್ಛೆಯಿದ್ದಂತಾಗಲಿ... ದೊರೆಗಳಿಗೆ ಶಿವಪ್ರಸಾದ ತಂದುಕೊಡುತ್ತಾರೆ"

- ಎಂದಷ್ಟೇ ಹೇಳಿ, ಮಾತು ಮುಗಿಯಿತು ಎಂಬಂತೆ ಪೀಠದಿಂದಿಳಿದು ಪಾದುಕೆ ಮೆಟ್ಟಿ, ನೆಲಕ್ಕೆ ಹಾಸಿದ ರತ್ನಗಂಬಳಿಯೂ ಕಂಪಿಸುವಂತೆ, ದೃಢವಾದ ಹೆಜ್ಜೆ ಹಾಕುತ್ತಾ ನಡೆದು ಹೋದರು ಶ್ರೀ ಗುರುಪಾದದೇಶಿಕ ಸ್ವಾಮಿಗಳು.

ಮಾತು ಹಾಗೆ ಇದ್ದಕ್ಕಿದ್ದಂತೆ ಮುಕ್ತಾಯವಾದದ್ದನ್ನು ಕಂಡು ಮದಕರಿನಾಯಕ –

ಕಾಣದೆ ಕಾಳಸರ್ಪ ಹಿಡಿದವನಂತೆ ಮಿಡುಕಿದ.

೧೦

ಮರುದಿನ ದುರ್ಗದಲ್ಲೆಲ್ಲಾ ಗುಜುಗುಂಪಲು. ಎಲ್ಲರ ಬಾಯಲ್ಲೂ ಒಂದೇ ಮಾತು –

'ಬೃಹನ್ಮಠದ ಬಾಗಿಲು ತೆರೆದಿದೆ: ಗುರುಗಳಿಲ್ಲ.'

'ಏಕೆ ಹೀಗಾಯಿತು?'

ಯಾರಿಗೂ ತಿಳಿಯದು.

ಆದರೂ –

ಎಲ್ಲರ ಬಾಯಲ್ಲೂ ಅದೇ ಮಾತು, ಮನಸ್ಸಿನಲ್ಲಿ ಆತಂಕ, ಕಳವಳ.

ವಿಷಗಾಳಿಯಂತೆ ಊರಿನಲ್ಲೆಲ್ಲಾ ಹಬ್ಬಿದ ಈ ಮಾತು ಪ್ರಧಾನಿ ಕಳ್ಳಿನರಸಪ್ಪಯ್ಯನ ಕಿವಿ ಮುಟ್ಟಲು ತಡವಾಗಲಿಲ್ಲ.

ಹಿಂದಿನ ದಿನ ಅಪರಾಹ್ನ ನಾಯಕರು ಗುರುದರ್ಶನಕ್ಕೆಂದು ಬೃಹನ್ಮಠಕ್ಕೆ ಹೋದ ವಿಷಯ ನರಸಪ್ಪಯ್ಯನಿಗೆ ತಿಳಿದಿತ್ತು. ಆದರೆ ಏನು ಮಾತಾಯಿತು, ಏನು ಪರಿಣಾಮವಾಯಿತು, ತಿಳಿದಿರಲಿಲ್ಲ. ಎಂತಲೇ ಈ ಮಾತು ಕೇಳುತ್ತಿದ್ದಹಾಗೇ ಎದುರಿಗಿದ್ದ ತಾಂಬೂಲದ ತಟ್ಟೆಯನ್ನತ್ತ

ತಳ್ಳಿ, ತಾಂಬೂಲದಿಂದ ಕೆಂಪಾದ ಬಾಯನ್ನು ತೊಳೆಯುವುದನ್ನೂ ಮರೆತು, ಬೀದಿಯಲ್ಲೇ ತಾಂಬೂಲ ಉಗುಳಿ, ಅರಮನೆಯತ್ತ ಧಡಧಡ ನಡೆದ.

ಅವಸರವಸರವಾಗಿ ತಮ್ಮನ್ನು ಕಾಣಲು ಬಂದ ಪ್ರಧಾನಿಯವರಿಂದ, ರಾಜಗುರುಗಳು ಕಾವಲುಸೇನೆಯನ್ನಾಗಲಿ, ಪರಿವಾರವನ್ನಾಗಲಿ, ಗಡಿಠಾಣ್ಯಗಳಿಗೆ ರಹದಾರಿಯನ್ನಾಗಲಿ ಪಡೆಯದೆ, ಒಬ್ಬಿಬ್ಬರು ಆಪ್ತಶಿಷ್ಯರೊಡನೆ ಹಗಲು ಹರಿವ ಮುನ್ನವೇ, ಎತ್ತಲೋ ಹೋದರೆಂಬುದನ್ನು ಕೇಳಿ, ಮದಕರಿನಾಯಕನಿಗೆ ಕೆಂಡವನ್ನು ನುಂಗಿದಂತಾಗಿ-

"ಅಯ್ಯೋ ದುಡುಕಿ ಮಾತಾಡಿ, ತಪ್ಪು ಮಾಡಿಬಿಟ್ಟೆವು" - ಎಂದು ಹಲುಬಿದ.

"ಏನು ನಡೆಯಿತು ?"

- ಎಂದು ನರಸಪ್ಪಯ್ಯನವರು ಕೇಳಿದಾಗ, ನಡೆದುದನ್ನು ಹೇಳಿ –

"ಹೀಗಾಗುವುದೆಂದು ತಿಳಿದಿರಲಿಲ್ಲ" – ಎಂದು ತೊಳಲಾಡುತ್ತಾ-

"ಬಹುದೂರ ಹೋಗಿರಲಾರರು. ಹುಡುಕಿಸಿ ಕರೆತನ್ನಿ" – ಎಂದು ಹೇಳಿದ, ಮದಕರಿನಾಯಕ.

"ಬಹುದೂರ ಹೋಗಿರಲಾರರು - ನಿಜ. ಆದರೆ ನಾನೊಂದು ಮಾತು ವಿನಂತಿ ಮಾಡಿಕೊಳ್ಳಲೇ?"

"ಏನು ಹೇಳಿ ?"

"ಅವರನ್ನು ಹುಡುಕಲು ಆಳುಗಳನ್ನು ಅಟ್ಟುವುದಕ್ಕಿಂತ ..."

"ಆಳುಗಳನ್ನು ಕಳಿಸಿ ಎಂದು ಯಾರು ಹೇಳಿದರು? ನೀವೇ ಹೋಗಿ, ಪ್ರಧಾನಿಗಳೇ. ಎಲ್ಲಿದ್ದರೂ ಗುರುಗಳನ್ನು ಹುಡುಕಿಸಿ ಕರೆತನ್ನಿ."

"ನಾವು ಹೋಗುವುದಕ್ಕಿಂತ ತಾವೇ ...."

ತಾನು ಹುಡುಕಿಕೊಂಡು ಹೋಗಬೇಕು. ಏಕೋ ಮದಕರಿನಾಯಕನ ಆತ್ಮಾಭಿಮಾನಕ್ಕದು ಸಹನವಾಗಲಿಲ್ಲ.

"ನಾವು ಮಾಡಬಾರದ್ದು ಮಾಡಲಿಲ್ಲ, ಬೇಡಿಕೊಂಡೆವು. ಕೇಳಲಿಲ್ಲ. ಎಲ್ಲವನ್ನೂ ಮರೆತ ವೈರಾಗ್ಯಮೂರ್ತಿಗಳಿಗೇ ಇಷ್ಟು ಅಸಹನೆಯಾದರೆ, ಅರಸು ಆಳಾಗಬೇಕೇ ? ಅದು ಸಾಧ್ಯವಿಲ್ಲ. ನೀವು ಹೋಗಿ. ಕರೆತನ್ನಿ."

"ನಮ್ಮ ಮಾತಿಗೆ ಬರದಿದ್ದರೆ ?"

"ಗುರುಚಿತ್ತವಿದ್ದಂತಾಗಲಿ"

- ಎಂದಷ್ಟೇ ಹೇಳಿದ, ಅಪ್ರಿಯವಾದ ಆ ಮಾತನ್ನು ಮುಂದುವರಿಸಲು ಇಷ್ಟವಿಲ್ಲದವನಂತೆ.

"ರಾಜಗುರುಗಳು ಸಾಮಾನ್ಯರಲ್ಲ. 'ನಿಂತ ಪಟ್ಟ ನಮ್ಮದು. ಕುಳಿತ ಪಟ್ಟ ತಮ್ಮದು' ಎಂದು ತಮ್ಮ ಹಿರಿಯರು ತಪಸ್ವಿಗಳಿಗೆ ಕೊಟ್ಟ ಮಾತನ್ನು ಮನಸಿನಲ್ಲಿ ಮರೆಯಬಾರದು."

"ಮರೆತಿಲ್ಲ. ಈಗಲೂ ನಮ್ಮದು ನಿಂತ ಪಟ್ಟ, ನಡೆದಾಡುವ ಪಟ್ಟವಲ್ಲ. ನಾವು ಹೇಳಿದಷ್ಟು ಮಾಡಿ" – ಎಂದಷ್ಟೇ ಹೇಳಿ, ಒಳಗೆ ನಡೆದುಬಿಟ್ಟ ಮದಕರಿನಾಯಕ.

-ಆ ಮಾತು- ಆ ರೀತಿ-

-ಎರಡೂ ನರಸಪ್ಪಯ್ಯನವರಿಗೆ ಹಿಡಿಸಲಿಲ್ಲ.

"ಪಟ್ಟಕ್ಕೆ ಬಂದರೂ ಪ್ರಾಯದ ಬುದ್ಧಿ ಮಾಗಲಿಲ್ಲ. ಆದದ್ದು ಸರಿಯಾಗಲಿಲ್ಲ"

- ಎಂದು ಹೇಳಿ ವ್ಯಥೆಪಡುತ್ತಾ ಅಲ್ಲಿಂದ ಹೊರಟುಹೋದರು ನರಸಪ್ಪಯ್ಯ, ರಾಜ ಗುರುಗಳನ್ನು ಹುಡುಕಿಸಲು.

* * *

ಆದದ್ದು ಸರಿಯಾಗಲಿಲ್ಲ –

ಈ ಮಾತು ಮದಕರಿನಾಯಕನಿಗೂ ಮನವರಿಕೆಯಾಗಿತ್ತು.

ಆದರೆ ಆದದ್ದು ಮುಗಿದುಹೋಯಿತು. ಮುಂದೇನು ಮಾಡುವುದು ಎಂದು ತೋರದೆ, ಪ್ರಧಾನಿಗಳ ಸಲಹೆ ಮನಸ್ಸಿಗೆ ಬಾರದೆ, ಆಗ ದುರ್ಗದಲ್ಲೇ ಇದ್ದ ಶ್ರೀ ಕೂಡಲೀ-ಶೃಂಗೇರೀ - ಪೀಠಾಧೀಶ್ವರರಾದ ಶ್ರೀ ಶ್ರೀ ಶಂಕರಭಾರತೀಸ್ವಾಮಿಗಳಿಂದ ಮಾರ್ಗದರ್ಶನ ಪಡೆಯಲು ಅವರನ್ನು ಹೋಗಿ ಭೇಟಿ ಮಾಡಿ, ಅವರ ಬಳಿ ನಡೆದದ್ದನ್ನೆಲ್ಲಾ ವಿವರಿಸಿ–

'ಹೀಗಾಯಿತು'

– ಎಂದು ಬಿನ್ನವಿಸಿಕೊಂಡಾಗ, ಅವರೂ –

"ಆದದ್ದು ಸರಿಯಾಗಲಿಲ್ಲ" – ಎಂದೇ ಹೇಳಿದರು.

"ನಮ್ಮನ್ನು, ದೇಶವನ್ನು ಕಾಪಾಡುವ ಸೈನಿಕರ ಒಳಿತಿಗಾಗಿ ನಾವು ಮಾಡಿದ ಪ್ರಾರ್ಥನೆ ತಪ್ಪೇ? ಅರಸರಾಗಿ ನಾವು 'ಗುರುಗಳು ಮಾಡಿದ ಅಪ್ಪಣೆಯನ್ನು ಕಿತ್ತೊಗೆಯಿರಿ, ರಾಜ್ಯದಲ್ಲಿ ನಡೆಯಬೇಕಾದದ್ದು ನಮ್ಮಾಜ್ಞೆ' ಎಂದಿದ್ದರೆ ಏನಾಗುತ್ತಿತ್ತು? ರಾಜಗುರುಗಳನ್ನು ಬೇಡಲು ಹೋದುದೇ ನಮ್ಮ ತಪ್ಪಾಯಿತೇ ?"

- ಸ್ವಾಭಿಮಾನ-ಪಶ್ಚಾತ್ತಾಪಗಳ ನಡುವೆ ಹೊಯ್ದಾಡುತ್ತಾ ಕೇಳಿದ, ಮದಕರಿನಾಯಕ –

"ನಿಮ್ಮನ್ನು ಬೇಡಿದ್ದರೆ ತಾವೂ ಅದೇ ಮಾತು ಹೇಳುತ್ತಿದ್ದೀರಾ ?"

"ರಾಜಗುರುಗಳು ಹೇಳಿದ್ದು ಸರಿ. ಧರ್ಮಕ್ಕಿರುವುದು ಒಂದೇ ನಾಲಗೆ, ಗುರುಗಳು ಇಬ್ಬರಾದರೆ, ಧರ್ಮ ಎರಡಾಗುವುದಿಲ್ಲ."

"ದೇಶವನ್ನು ಕಾಪಾಡುವ ಸೈನಿಕರ ಬಗ್ಗೆ ನಿಮಗೂ ಕರುಣೆ ಇಲ್ಲವೇ ?"

"ಕರುಣೆಯ ಮಾತು ಬೇರೆ, ಶಾಸ್ತ್ರದ ಮಾತು ಬೇರೆ."

"ಅಂದರೆ ಶಾಸ್ತ್ರಕ್ಕೆ ಕರುಣೆಯಿಲ್ಲವೇ ? ಧರ್ಮಕ್ಕೆ ಕಣ್ಣಿಲ್ಲವೇ ? ಹಿರಿಯರೆಲ್ಲಾ ಇದೇನು ಮಾತು ಹೇಳುತ್ತಿದ್ದೀರಾ? ಪಶ್ಚಾತ್ತಾಪಕ್ಕೆ ದಾರಿ ಕೊಡದ ಧರ್ಮವಿಲ್ಲ ಎಂದರೆ ಅದೆಂತಹ ಧರ್ಮ ? ಅದೇನು ಕೊರಡೇ, ಕಗ್ಗಲ್ಲೇ ? ಅಂಥದಕ್ಕೆ ನಾವೇಕೆ ಮಣಿಯಬೇಕು ?"

"ಮಣಿಯಿರಿ, ನಮಸ್ಕಾರ ಮಾಡಿ, ಶರಣಾಗತರಾಗಿ ಎಂದು ಧರ್ಮ ಎಂದೂ ಯಾರಿಗೂ ಹೇಳುವುದಿಲ್ಲ."

"ಆದರೂ ಅದಕ್ಕೆ ತಪ್ಪು ಮಾಡಿದ ತನ್ನ ಮಕ್ಕಳಲ್ಲಿ ಮಮತೆಯಿಲ್ಲ. ತಾವು ಇಲ್ಲಿದ್ದೀರ - ಯುದ್ಧರಂಗದಲ್ಲಿ ನಡೆವುದನ್ನು ನೋಡಿಲ್ಲ. ಅಲ್ಲಿ ನಡೆಯದಿರುವುದು ಯಾವುದಿದೆ-ಕೊಲೆ, ಕಳವು, ರಕ್ತಪಾತ, ಅತ್ಯಾಚಾರ, ವ್ಯಭಿಚಾರ - ಇವೆಲ್ಲ ದಿನನಿತ್ಯದ ಮಾತು. ಅಂಥಕಡೆ ಬದುಕುವವರಿಗೆ, ಅವರ ರಕ್ಷಣೆಯಲ್ಲಿ ತಂಪಾಗಿ ಕುಳಿತವರು ಶಾಸ್ತ್ರದ ಮಾತು ಹೇಳಿ ಬೆದರಿಸುವುದು ಸರಿಯೇ ?" – ಶ್ರೀಶ್ರೀಗಳ ವಾದ ಮನಸ್ಸಿಗೆ ಹಿಡಿಯದೆ ಕೇಳಿದ, ಮದಕರಿನಾಯಕ.

"ಯುದ್ಧದಲ್ಲಿ ನಡೆಯುವುದು ಅಲ್ಲಿಯ ವಿಷಯ. ದಂಡಿನ ನಿಯಮವನ್ನು ನಗರಕ್ಕೂ ನೀವು ಅನ್ವಯಿಸುತ್ತೀರಾ? ದಂಡಿನಲ್ಲಿ ಸೈನಿಕರು ಮಾಡುವುದನ್ನು ನಗರದಲ್ಲಿ ಮಾಡಿದರೆ, ಸೈನಿಕರನ್ನಾದರೂ ಬಿಡುತ್ತೀರಾ. ಛಳಿಗೆ ಕಂಬಳಿ, ಬೆಂಕಿ, ಬಿಸಲಿಗೆ ಬರಿಮೈ - ಈ ಸೂಕ್ಷ್ಮವನ್ನು ಅರ್ಥಮಾಡಿಕೊಳ್ಳದಿದ್ದರೆ ಧರ್ಮವೂ ಉಳಿಯುವುದಿಲ್ಲ, ವ್ಯವಹಾರವೂ ನಡೆಯುವುದಿಲ್ಲ. ಇನ್ನು ಯುದ್ಧದ ಮಾತಾಡಿದಿರಿ, ಅಲ್ಲಿ ನಡೆಯುವುದರ ವಿಷಯ ಹೇಳಿದಿರಿ - ನಿಜ, ನಾವದನ್ನು ನೋಡಿಲ್ಲ, ಕೇಳಿದ್ದೇವೆ. ಅದಕ್ಕೇ ಯುದ್ಧವೇ ಪಾಪದ ತವರುಮನೆ ಎನ್ನುವುದು. ಯುದ್ಧದಲ್ಲಿ ಹೀಗಾಗುತ್ತದೆ ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನೇ ಹೇಳಿದ್ದಾನೆ."

"ಆದರೆ ಆ ದೇವರೇ ಪಾರ್ಥನಿಗೆ ಯುದ್ಧ ಮಾಡಿ, ನೆಂಟರಿಷ್ಟರನ್ನು ಕೊಲ್ಲು ಎಂದು ಹೇಳಿ, ನಿಂತು ಕೊಲ್ಲಿಸಿದನಲ್ಲಾ, ಅದು ಧರ್ಮವೇ ?"

"ಯುದ್ಧ ಭೂಮಿಯಲ್ಲಿ ನಿಂತವನು ಯುದ್ಧ ಮಾಡುವುದು ಧರ್ಮ; ನಮ್ಮಂಥ ಸನ್ಯಾಸಿಯ ಹಾಗೆ ರಕ್ತಕ್ಕೆ ಅಂಜಿ ಕೂಡಬಾರದು ಎಂದು ಹೇಳಿದ, ಶ್ರೀಕೃಷ್ಣ. ಯುದ್ಧದಲ್ಲಿ

ನಡೆಯುವುದೆಲ್ಲಾ ಅಲ್ಲಿಗೇ ಸರಿ, ನಗರಜೀವನಕ್ಕಲ್ಲ. ಹಾಗಾದರೆ ಧರ್ಮ, ಕರುಣೆ, ಪಶ್ಚಾತ್ತಾಪಗಳಿರಲಿ, ದಂಡಿನ ನೀತಿ ನಗರಕ್ಕೂ ಅನ್ವಯವಾದರೆ ಮನುಷ್ಯನೂ ಉಳಿಯುವುದಿಲ್ಲ; ಮನುಷ್ಯತ್ವವೂ ಉಳಿಯುವುದಿಲ್ಲ. ಬೀದಿಯ ಧೂಳು ಮನೆಗೆ ಬರಬಾರದು ಎಂದು ಪಾದರಕ್ಷೆ ಧರಿಸುವುದಿಲ್ಲವೇ, ಹಾಗೇ ಯುದ್ಧದಲ್ಲಿ ಸರಿಯಾದದ್ದು ನಿತ್ಯನಡತೆಗೆ ನಿಯಮವಾಗುವುದಿಲ್ಲ"

- ವಿವರಿಸಿ ಹೇಳಿದರು ಶ್ರೀ ಶಂಕರಭಾರತೀ ಸ್ವಾಮಿಗಳು.

ಅವರ ತರ್ಕವನ್ನು ಪ್ರತಿಭಟಿಸುವುದು ಸಾಧ್ಯವಾಗದಿದ್ದರೂ ಸೋಲಲಾಗದೆ –

"ಅದೆಲ್ಲಾ ತಿಳಿಯದ ಜನ ನಾವು. ಆದರೂ ನಾವೆಷ್ಟು ಬೇಡಿಕೊಂಡರೂ, ಅವರೂ ನಮ್ಮ ಬೇಡಿಕೆ ಕೇಳಲಿಲ್ಲ, ತಾವೂ ಅವರು ಹೇಳಿದ್ದನ್ನೇ ಆಡಿದಿರಿ. ಆದರೂ ನಮ್ಮ ಒಂದು ಮಾತು ಕೇಳಿದ್ದಿದ್ದರೆ ಧರ್ಮ ಮುಳುಗುತ್ತಿರಲಿಲ್ಲ. ಎಲೆ ಬಿದ್ದದ್ದಕ್ಕೆ ಮರ ಬಿದ್ದಷ್ಟೇ ರಂಪ ಮಾಡಿದರು, ರಾಜಗುರುಗಳು. ಮಾಡಬಾರದ ತಪ್ಪು ನಾವು ಮಾಡಿದೆವು ಅನ್ನುವಂತೆ ನಮ್ಮನ್ನು ನಡುನೀರಿನಲ್ಲಿ ಕೈಬಿಟ್ಟು ಹೋದರು. ಧರ್ಮ ತಾಯಿ ಎಂದು ತಿಳಿದಿದ್ದೆ, ಕತ್ತಿ ಅಂತ ತಿಳಿದಿರಲಿಲ್ಲ. ಆದದ್ದು ಆಯಿತು - ನೀವೂ ನನ್ನ ಕೈಬಿಡಬೇಡಿ"

- ಎಂದು ಹೇಳಿ ಕೈಮುಗಿದು, ಅವರ ಆಶೀರ್ವಾದ ಪಡೆದ ಮದಕರಿನಾಯಕ, ಕರಾವಿನ ಕಟ್ಟೆಯಲ್ಲಿದ್ದ ಮಠವನ್ನು ಬಿಟ್ಟು, ರಂಗಯ್ಯನ ಬಾಗಿಲ ರಾಜಮಾರ್ಗದಲ್ಲಿ ಮೇಲುದುರ್ಗದತ್ತ ಹೋಗುತ್ತಿರುವಾಗ ಕಣ್ಣೆದುರಿಗೆ, ಬೆಟ್ಟದೆತ್ತರಕ್ಕೆ ಬೆಳೆದ ಧವಳಗಿರಿಯಂತೆ ನಿಂತ ಉತ್ಸವಾಂಬೆಯ ದೇವಾಲಯ ಕಂಡು, ಕತ್ತಲಲ್ಲಿ ತಡಕಾಡುತ್ತಿದ್ದವನಿಗೆ ಏನೋ ಒಂದು ದಾರಿ ಕಂಡಂತಾಗಿ, ಹೊತ್ತುಗೊತ್ತು ಯಾವುದೂ ನೋಡದೆ, ಯಾರಿಗೂ ಕರೆಕಳಿಸದೆ, ಮೇನೆಯನ್ನು ದೇವಾಲಯದ ಇದಿರು ನಿಲ್ಲಿಸಲು ಹೇಳಿ, ತಾಯ ಬಳಿ ಹೋಗುವ ಮಗುವಿನಂತೆ, ಬಿರುಗಾಳಿ ಹೊಕ್ಕವನಂತೆ ದೇವಾಲಯದ ಮೆಟ್ಟಿಲುಗಳನ್ನು ಏರಿ, ಒಳನಡೆದು, ಗರ್ಭಗುಡಿಯ ನಂದಾ ದೀಪಗಳ ಬೆಳಕಿನಲ್ಲಿ, ನಕ್ಷತ್ರಗಳ ಉಡುಗೆಯನ್ನು ಧರಿಸಿದಂತೆ ಹೊಳೆಯುತ್ತಾ, ನವರತ್ನಾಭರಣಗಳನ್ನು ಧರಿಸಿದ ಉತ್ಸವಾಂಬೆಗೆ –

"ಅವ್ವಾ, ಉತ್ಸವಾಂಬಾ, ನೀನು ನಮ್ಮ ತಾಯಿ. ಯಾರು ಕೈಬಿಟ್ಟರೂ ನೀನು ನಮ್ಮ ಕೈಬಿಡಬೇಡ"

- ಎಂದು ಬೇಡುತ್ತಾ ದೀರ್ಘದಂಡ ಪ್ರಣಾಮ ಮಾಡಿದ, ಕಣ್ಣಲ್ಲಿ ಕಂಬನಿಸುರಿಸುತ್ತಾ.

೧೧

'ಮರೆತುಬಿಡಬೇಕು –

ರಾಜಗುರುಗಳು ಹೇಳದೆ, ಕೇಳದೆ ರಾಜ್ಯವನ್ನು ತ್ಯಜಿಸಿದವರಂತೆ ದುರ್ಗವನ್ನು ಬಿಟ್ಟು ಹೋದುದನ್ನು ಮರೆತುಬಿಡಬೇಕು'

- ಎಂದು ಎಷ್ಟೆಷ್ಟು ಪ್ರಯತ್ನಿಸಿದರೂ, ಆ ಮಾತು, ಅವರಿವರ ಬಾಯಲ್ಲಿ ಬೇರಾವುದೋ ರೂಪತಾಳಿ ಬಂದು, ತುಳಿದು ಕಾಲಿನೊಳಗೇ ಉಳಿದ ಮುಳ್ಳಿನ ಮೊನೆಯಂತೆ, ಮದಕರಿ ನಾಯಕನ ಹೃದಯವನ್ನು ಇರಿಯುತ್ತಿತ್ತು –

ರಾಜಗುರುಗಳ ರಾಜ್ಯತ್ಯಾಗ –

ಹೋದತ್ತ ಬಂದತ್ತ ಗರಗಸದಂತೆ ಕೊಯ್ಯುವ ಆ ನೋವನ್ನು ಭರಿಸಲಾಗದೆ –

'ಈ ಸನ್ಯಾಸಿಗಳ ಸಹವಾಸ ಸರ್ಪದ ಹತ್ತಿರ ಸರಸವಾಡಿದಂತೆ. ಹತ್ತಿರ ಹೋಗದೆ ಕೈ ಮುಗಿದುಬಿಡುವುದೇ ಲೇಸು' - ಎಂದು ನೂರು ನೂರು ಬಾರಿ ತನಗೆ ತಾನೇ ಹೇಳಿಕೊಂಡ.

ಹಾಗನಿಸಿದ ಹೊತ್ತಿನಲ್ಲಿ ಒಮ್ಮೊಮ್ಮೆ ಪಶ್ಚಾತ್ತಾಪದಿಂದ ಕಂಬನಿ ಮೂಡಿದರೆ, ಮತ್ತೊಮ್ಮೊಮ್ಮೆ 'ಸಣ್ಣ ಮಾತಿಗೆ ಸಿಟ್ಟಾಗುವ ಈ ಸನ್ಯಾಸಿಗಳನ್ನು ನಮ್ಮ ರಾಜ್ಯದಿಂದಲೇ ಗಡೀಪಾರು ಮಾಡಿಬಿಡಬೇಕು' ಎಂದು ಕುರುಡುಕ್ರೋಧ ಪ್ರಜ್ವಲಿಸುತ್ತಿತ್ತು.

ಅಂತರಂಗದಲ್ಲಿ ಹೊತ್ತಿದ ಬೇಗೆಯನ್ನು ಭರಿಸಲಾಗದೆ ಸುತ್ತಲವರ ಮೇಲೆಲ್ಲ ಹರಿಹಾಯುತ್ತಿದ್ದ ಮದಕರಿನಾಯಕನನ್ನು ಆ ಹೊತ್ತಿನಲ್ಲಿ ತಣಿಸಿ, ಶಾಂತಿ ನೀಡಿದವರು ಇಬ್ಬರೇ-ತಾಯಿ ಉತ್ಸವಾಂಬೆ, ಮೆಚ್ಚಿದ ನಲ್ಲೆ ಕಡೂರಿ.

ಆ ಇಬ್ಬರೂ ಮಾತನಾಡಲಿಲ್ಲ, ತಮ್ಮ ಮೌನದಿಂದಲೇ ಮದಕರಿನಾಯಕನ ಅಶಾಂತಚಿತ್ತಕ್ಕೆ ತಂಪೆರದರು.

ಆ ತಂಪಿನೊಂದಿಗೆ ಪದ್ಮವ್ವನಾಗತಿ ಗಂಡುಮಗುವಿನ ತಾಯಾಗಿ, ಉಕ್ಕೇರಿ ಬಂದ ಸಂತೋಷದಲ್ಲಿ, ಮನದಲ್ಲಿ ಕವಿದಿದ್ದ ದುಗುಡವೆಲ್ಲವೂ ಕೊಚ್ಚಿ ಹೋಗಿ, ಮಳೆ ತೊಳೆದ ಮುಗಿಲಿನಂಥ ತಂಪುಕಾಂತಿ ಮದಕರಿನಾಯಕನ ಮುಖದ ಮೇಲೆ ಮಿನುಗಿ, ಅವನ ಹೃದಯದಲ್ಲಿ ಮೂಡಿದ ಆನಂದನಾದವನ್ನು ಪ್ರತಿಧ್ವನಿಸಿದಂತೆ, ನಗರದ ದೇವಾಲಯಗಳಲ್ಲೆಲ್ಲಾ ವಿಶೇಷ ಪೂಜೆಗಳ ಗಂಟೆ, ಜಾಗಟೆ, ತಾಳ, ಶಂಖ, ಚೌಡಿಕೆ, ಉರುಮೆಗಳ ನಿನಾದ ನಿನದಿಸಿ, ಗುಡ್ಡದ ಕಲ್ಲು-ಕಲ್ಲ ಒಂದಕ್ಕೊಂದು ಆ ಮಾತನ್ನು ಹೇಳಿಕೊಂಡಂತೆ –

'ನಾಯಕರಿಗೆ ಗಂಡುಮಗುವಾಯಿತು, ರಾಜ್ಯಕ್ಕೆ ಮುಂದಿನ ರಾಜಸೂರ್ಯ ಉದಿಸಿದ'

- ಆ ಮಂಗಳನಿನಾದವನ್ನು ಮಾರ್ದನಿಸಿದವು.

ಅರಮನೆಯ ಹರ್ಷವನ್ನು, ಸಕ್ಕರೆ ಮೂಟೆ ಹೊತ್ತ ಒಂಟೆಗಳು ಮನೆಮನೆಗೂ ಹಂಚಿದವು.

ಶುಭದಿನದಂದು ಸಾವಿರ ಸಾವಿರ ಮುತ್ತೈದೆಯರು ಮಾಡಬೇಕಾದ ಶಾಸ್ತ್ರಗಳನ್ನೆಲ್ಲಾ ಮಾಡಿ, ಚಿನ್ನದ ಸರಪಳಿಗಳಿಂದ ತೂಗುಬಿಟ್ಟ ರತ್ನಖಚಿತ ತೊಟ್ಟಿಲಲ್ಲಿ ಮಲಗಿದ ಮಗುವಿಗೆ ಏನು ಹೆಸರಿಡಬೇಕು ಎಂದು ನಿಂಗವ್ವನನ್ನು ಕೇಳಿದಾಗ –

"ನಮ್ಮ ವಂಶಕ್ಕೆ ಹೊನ್ನದೀವಟಿಗೆಯಾಗಿ ಬೆಳಗಿದವರು ಈ ಮಗುವಿನ ಮರಿತಾತ ಭರಮಣ್ಣನಾಯಕರು. ಅವರ ಹೆಸರನ್ನೇ ಇಟ್ಟು ಸಣ್ಣ ಭರಮಣ್ಣನಾಯಕರು ಎಂದೇ ಕರೆಯಿರಿ" – ಎಂದಳು.

ನಾಮಕರಣೋತ್ಸವವಾದಮೇಲೆ –

"ಅವ್ವಂದಿರಾ, ಈ ವಂಶದ ಕುಡಿ, ನಿಮಗೆ ಕೊಟ್ಟ ಅರಿಶಿನ ಕುಂಕುಮದಂತೆ ಹೆಚ್ಚಲಿ, ಚಿಗುರೊಡೆದು ಹಬ್ಬಿ ಹಂದರವಾಗಲಿ ಎಂದು ಹರಸಿ" - ಎಂದು ಸುವಾಸಿನಿಯರನ್ನು ಬೇಡಿದಳು, ನಿಂಗವ್ವ.

ಅದರಂತೆ, ಮುತ್ತೈದೆಯರ ಹಾರೈಕೆ ಹೊತ್ತು-

ಆ ದಿನ ಮುತ್ತೈದೆಯರಿಗೆ ಕೊಟ್ಟ ಪುನುಗು, ಜವ್ವಾಜಿ, ಕಸ್ತೂರಿಗಳ ಪರಿಮಳದಂತೆಯೇ ಸೀಮೆಯಲ್ಲೆಲ್ಲಾ ಸಣ್ಣಭರಮಣ್ಣನಾಯಕನ ಹೆಸರು ಹಬ್ಬಿತು.

* * *

ಮದಕರಿನಾಯನಿಗೆ ಪುತ್ರೋತ್ಸವವಾಗಿ, ದುರ್ಗದ ಸೀಮೆಯಲ್ಲಿ ಕವಿದ ಕತ್ತಲನ್ನು ಕರಗಿಸಿ, ಹರುಷದ ಹೊಸ ಹಗಲಿನ ಹೊಂಬೆಳಕನ್ನು ಮೂಡಿಸಿದ ಸಮಯದಲ್ಲೇ, ರಾಜ್ಯದ ಉತ್ತರ ದಿಗ್ಭಾಗದಲ್ಲಿ ಸಣ್ಣ ಕಾರ್ಮೋಡವೊಂದು ಕಾಣಿಸಿಕೊಂಡು, ಬರಲಿರುವ ಕಾರ್ಗಾಲವನ್ನು ಘೋಷಿಸುವ ಸಣ್ಣ ಗುಡುಗಿನ ಸದ್ದಿನಂತೆ, ಆ ಮಂಕು ಕವಿಸಲಿರುವ ಮಳೆದಿನಗಳ ಮಬ್ಬಿನ ಹರಿಕಾರರಂತೆ ಪುಣೆಯಿಂದ, ಪೇಶ್ವೆ ಮಾಧವರಾಯರ ವಕೀಲರಿಬ್ಬರು, ಅವರ ಪತ್ರದೊಂದಿಗೆ ನಾಯಕರನ್ನು ಕಾಣಲು ಚಿತ್ರದುರ್ಗಕ್ಕೆ ಬಂದರು - ಪೇಶ್ವೆಗಳು ಸ್ನೇಹಸೂಚಕವಾಗಿ ಕಳಿಸಿದ ಉಡುಗೊರೆಗಳೊಂದಿಗೆ.

ತುಂಬಿದ ಓಲಗದಲ್ಲಿ ಪೇಶ್ವೆಯವರ ವಕೀಲರಾದ ಪುರುಷೋತ್ತಮರಾವ್, ಸಾರ್ವಭೌಮ ರಾವ್ ತಂದಿತ್ತ ಪತ್ರವನ್ನು, ಉಡುಗೊರೆಗಳನ್ನು ಸ್ವೀಕರಿಸಿ, ಅವರಿಗೆ 'ದುರ್ಗದಲ್ಲಿ

ಎರಡು ದಿನ ನಮ್ಮ ಅತಿಥಿಗಳಾಗಿರಿ' ಎಂದು ಹೇಳಿ, ಬಳಿಕ ಅವರು ತಂದ ಪತ್ರಕ್ಕೆ ಕೊಡುವ ಉತ್ತರದ ಬಗ್ಗೆ ಚರ್ಚಿಸಲು ಆಪ್ತಾಲೋಚನಾಸಭೆಯೊಂದು ಸೇರಿತು.

ನೆರೆದ ಸಭೆಗೆ ಪ್ರಧಾನಿ ನರಸಪ್ಪಯ್ಯನವರು, ಪೇಶ್ವೆಗಳ ಪತ್ರದ ಸಾರಾಂಶವನ್ನು ಸಂಗ್ರಹವಾಗಿ ವಿವರಿಸಿ –

"ಪತ್ರದ ಒಕ್ಕಣೆಯೇನೋ ತುಂಬಾ ಸ್ನೇಹಪೂರ್ಣವಾಗಿದೆ. ಆದರೆ ಅದರ ಅಂತರಾರ್ಥ ಬಹು ಮಾರ್ಮಿಕವಾಗಿದೆ. ಅವರ ಅಭಿಪ್ರಾಯವನ್ನು ಗ್ರಹಿಸಿದರೆ. ಪೇಶ್ವೆಯವರು ಮತ್ತೆ ಇತ್ತಕಡೆ ದಾಳಿ ಮಾಡುವ ಸಿದ್ಧತೆಗಳನ್ನು ಮಾಡಿಕೊಂಡು, 'ಹಿಂದಿನ ಯುದ್ಧಗಳಲ್ಲಿ ನೀವು ಹೈದರಾಲಿ ನವಾಬರಿಗೆ ಮಿತ್ರರಾಗಿದ್ದಿರಿ. ಆದರೆ ಯುದ್ಧ ನಡೆದದ್ದು ನಮಗೂ-ಹೈದರಾಲಿಯವರಿಗೂ. ನಮಗೂ-ನಿಮಗೂ ಪ್ರತ್ಯಕ್ಷ ದ್ವೇಷಭಾವನೆಗೆ ಕಾರಣವಿಲ್ಲ. ನಾವು ಉತ್ತರ ದೇಶದ ವ್ಯವಹಾರದಲ್ಲಿ ನಿರತರಾಗಿದ್ದಾಗ, ಹೈದರಾಲಿಯವರು ಪ್ರಬಲಿಸಿ, ನಮ್ಮ ಸೀಮೆಯನ್ನು ಕಬಳಿಸಲು ಯತ್ನಿಸಿ, ಹಾಲಾಹಲವನ್ನುಂಡಂತೆ, ತಿಂದದ್ದನ್ನು ಕಕ್ಕಿದ್ದನ್ನು ನೀವು ಕಣ್ಣಾರೆ ಕಂಡಿದ್ದೀರ. ನಿಮ್ಮ ಪರಾಕ್ರಮ ಸಾಹಸವಿಲ್ಲದಿದ್ದರೆ ಬಿದನೂರಿನ ಕಾಳಗದಲ್ಲಿ ಹೈದರಾಲಿಯವರು ಉಳಿಯುತ್ತಿರಲಿಲ್ಲ. ಈ ಬಾರಿ ಅವರು ಉಳಿಯುವುದಿಲ್ಲ. ನಾವು ನಿಮ್ಮ ಪರಾಕ್ರಮವನ್ನು ಕಂಡಂತೆ ನೀವೂ ನಮ್ಮ ಸೇನಾಬಲವನ್ನು ಕಂಡಿದ್ದೀರ. ಆದ್ದರಿಂದ ಈ ಬಾರಿ ತಾವು ಮುಳುಗುವ ದೋಣಿಯನ್ನು ಉಳಿಸುವ ಪ್ರಯತ್ನ ಮಾಡದೆ, ನಮಗೆ ಬೆಂಬಲವಾಗಬೇಕು' - ಎಂದು ತಮ್ಮ ಅಪ್ಪಣೆಯನ್ನು ಕೋರಿಕೆಯ ರೂಪದಲ್ಲಿ ಖರೀತವನ್ನು ಬರೆಸಿದ್ದಾರೆ. ಇದಕ್ಕೆ ಏನು ಉತ್ತರ ಕೊಡಬೇಕು ಎಂದು ಹಿರಿಯರು ನಿರ್ಧರಿಸಬೇಕು" - ಎಂದು ಹೇಳಿದರು.

ಪ್ರಧಾನಿ ನರಸಪ್ಪಯ್ಯನವರು ಹೇಳಿದುದನ್ನು ಸಭೆ ಗಂಭೀರಮೌನದಲ್ಲಿ ಆಲಿಸಿತು.

"ನವಾಬರು ಪಕ್ಕದ ಪಿಡುಗು – ಸದ್ಯಕ್ಕೆ ಪೇಶ್ವೆಯವರು ದೂರದ ಗುಡುಗು. ಆದರೂ ಯಾವ ಗಳಿಗೆಯಲ್ಲಾದರೂ ಅದು ಸಿಡಿಲಾಗಬಹುದೆಂದು ನಾವು ಕಂಡಿದ್ದೇವೆ. ಈ ಎರಡು ಸಲಗಗಳ ಹೋರಾಟದಲ್ಲಿ ನಾವು ಎತ್ತಕಡೆ ನಿಲ್ಲಬೇಕೆಂದು, ಈ ರಾಜಕೀಯದಲ್ಲಿ ನಮಗಿಂತ ಪಳಗಿದ ಹಿರಿಯರು ಮಾರ್ಗದರ್ಶನ ಮಾಡಬೇಕು"

- ಎಂದು ಸುಮ್ಮನಿದ್ದ ಸಭೆಗೆ. ಅದು ಮೌನಕ್ಕೆ ಸಮಯವಲ್ಲವೆಂದು ಎಚ್ಚರಿಸುವಂತೆ ಹೇಳಿದರು, ನರಸಪ್ಪಯ್ಯ.

"ಪಿಡುಗೋ-ಗುಡುಗೋ, ಅಂತೂ ಇಬ್ಬರೂ ನಮ್ಮ ಬಲವನ್ನು, ಬೊಕ್ಕಸವನ್ನು ಬರಿದು ಮಾಡುವ ಬಕಪಕ್ಷಿಗಳೇ. ನಮಗೆ ಯಾರ ಸ್ನೇಹವೂ ಬೇಡ, ಯಾರ ದ್ವೇಷವೂ ಬೇಡ. ನಮ್ಮ ರಾಜ್ಯ ನಮ್ಮ ಜನ ನೋಡಿಕೊಂಡು ತಣ್ಣಗಿದ್ದರಾಗದೆ? ಬಂದವರೆಲ್ಲಾ ಅಲ್ಲಾಡಿಸಿ, ಅಲ್ಲಾಡಿಸಿ, ಮರದ

ಹಣ್ಣು, ಕಾಯಿ, ಮಿಡಿ ಎಲ್ಲಾ ಉದುರಿಸಿಬಿಟ್ಟರು" – ಎಂದು ಕಹಿಯಾದ ಧ್ವನಿಯಲ್ಲಿ ಹೇಳಿದ, ಬಾಣದ ಮದಕರಿನಾಯಕ.

"ಹಾಗೆ ನಮ್ಮ ಪಾಡಿಗೆ ನಾವು ತಣ್ಣಗಿರಲು ಬಿಟ್ಟಿದ್ದರೆ, ದುರ್ಗದ ಬತೇರಿಗಳಿಗೆಲ್ಲಾ ಬಂಗಾರದ ಲೇಪ ಹಾಕಿಸಬಹುದಾಗಿತ್ತು. ಅದಕ್ಕೂ ಬಿಡುವುದಿಲ್ಲ – ಯಾರ ಯಾರದೋ ಲಡಾಯಿಗೆ ನಮ್ಮ ಹೂವಿನಂಥ ಹುಡುಗರು ಸುಟ್ಟು ಕರಿಕಾದರು. ಅದನ್ನು ನೆನಕೊಂಡರೆ ಕೆಟ್ಟ ಮಾತು ಬರ್ತದೆ ಬಾಯಲ್ಲಿ. ನಮ್ಮದೆಲ್ಲಾ – ಊರ ಚಾಕರಿಗೆ ಉಟ್ಟ ಸೀರೆ ಹರಿದುಕೊಂಡ ಬಡಬೋರಿಯ ಕಥೆಯಾಯಿತು"

- ಎಂದು ಸಿಟ್ಟು, ನೋವು, ವ್ಯಥೆಗಳು ಸಮಸಮವಾಗಿ ತುಂಬಿದ ಧ್ವನಿಯಲ್ಲಿ ಹೇಳಿದ ದಳವಾಯಿ ಭರಮಣ್ಣನಾಯಕ.

"ಹಾಗೆ ನಮ್ಮ ಪಾಡಿಗೆ ನಾವಿರಲು ಸಾಧ್ಯವಾಗಿದ್ದಿದ್ದರೆ ಚೆನ್ನಾಗಿತ್ತು, ಆದರೆ ಇವು - ಸುಮ್ಮನಿದ್ದವರನ್ನಲ್ಲ, ಸತ್ತವರನ್ನೂ ಕಿತ್ತು ತಿನ್ನುವ ರಣಹದ್ದುಗಳು. ಯಾರ ಪಕ್ಷವೂ ಬೇಡ ಎಂದು ಕುಳಿತರೆ, ಅವರೋ, ಇವರೋ - ಇಬ್ಬರಲ್ಲೊಬ್ಬರು, ಹೈದರಾಲಿ ನಗರಸಂಸ್ಥಾನವನ್ನೇ ನುಂಗಿ ನೀರು ಕುಡಿದ ಹಾಗೆ ಮಾಡುತ್ತಾರೆ. ಆದ್ದರಿಂದ ನಾವು ಸುಮ್ಮನಿರಲು ಸಾಧ್ಯವಿಲ್ಲ. ಪೇಶ್ವೆಗಳಿಗೆ ಏನು ಉತ್ತರ ಕಳಿಸಬೇಕು - ಹೇಳಿ. ಅತ್ತಕಡೆ ಯೋಚನೆ ಮಾಡಬೇಕು"

- ಎಂದು ಪ್ರಧಾನಿ ನರಸಪ್ಪಯ್ಯ ಅತ್ತಿತ್ತ ತೂಗುತ್ತಿದ್ದ ಎಲ್ಲರ ಲಕ್ಷ್ಯವನ್ನು ವಾಸ್ತವಿಕತೆಯತ್ತ ಸೆಳೆದರು.

"ಹೈದರಾಲಿಯ ಪಕ್ಷವಹಿಸಿ ಹೋರಾಡಿ ನಾವು ಸುಖ, ಸೌಭಾಗ್ಯ ಅನುಭವಿಸಿದ್ದಾಯಿತಲ್ಲಾ. ಪೇಶ್ವೆಗಳ ದಂಡು ಇಲ್ಲದಿದ್ದಾಗ ಹದ್ದಿನಂತೆ ಹಾರಾಡಿದ. ಅವರು ಬಂದು ಎರಡು ಮಡಗಿದ ಕೂಡಲೇ ಹಲ್ಲುಕಿತ್ತ ಹಾವಾಗಿ, ಬಿದನೂರಿನ ಕೋಟೆಯಲ್ಲಿ ಮುದುರಿಕೊಂಡು ಕುಳಿತ. ಇದೆಲ್ಲಾ ನಾವು ಕಂಡ ಮಾತು. ಪೇಶ್ವೆಗಳ ಬಲ ದೊಡ್ಡದು. ಸ್ನೇಹ ಮಾಡುವುದಿದ್ದರೆ ಅವರ ಪರವೇ ಆಗಲಿ" – ಎಂದು ಯುದ್ಧದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿದ್ದ ದಳವಾಯಿ ಹೇಳಿದ.

ನರಸಪ್ಪಯ್ಯನವರಿಗೆ ದಳವಾಯಿ ಭರಮಣ್ಣನ ಮಾತು ಹಿಡಿಸಿದಂತೆ ತೋರಲಿಲ್ಲ. ಅವರ ಮುಖಭಾವ ಆ ಮಾತು ಹೇಳಿದರೂ, ಬಾಯಿ ಮಾತ್ರ –

"ಎಲ್ಲಾ ತಿಳಿದ ಪ್ರಭುಗಳು, ಮುಂದೇನು ಮಾಡಬೇಕೆಂದು ಹೇಳಬೇಕು" – ಎಂದರು.

"ಪ್ರಧಾನಿಗಳ ಮನಸ್ಸಿನಲ್ಲಿ ಏನಿದೆ ಎಂಬುದು ಸಭೆಗೆ ತಿಳಿಯಲಿ. ಇದು ನಮ್ಮೊಬ್ಬರ ಇಚ್ಛೆಗೆ ಬಿಟ್ಟ ವಿಷಯವಲ್ಲ" – ಎಂದು ನಾಯಕರು ನುಡಿದರು.

“ನೇರವಾಗಿ ಇದ್ದದ್ದು ಹೇಳಿದರೆ ಯಾರೂ ತಪ್ಪು ತಿಳಿಯಬಾರದು. ನಾನು ಯಾರ ಪಕ್ಷಪಾತಿಯೂ ಅಲ್ಲ, ದುರ್ಗದ ಹಿತೈಷಿ. ಆ ದೃಷ್ಟಿಯಿಂದ ಹೇಳುತ್ತೇನೆ. ಯುದ್ಧದಲ್ಲಿ ಜಯಾಪಜಯ ಯಾರಿಗೂ ಕಟ್ಟಿಟ್ಟ ಬುತ್ತಿಯಲ್ಲ. ಬಿದನೂರಿನ ಯುದ್ಧದಲ್ಲಿ ನವಾಬರು ಸೋತಿರಬಹುದು. ಹಾಗೇ ಪಾಣಿಪತ್ತದ ಯುದ್ಧದಲ್ಲಿ ಮರಾಠರ ತೋಳಬಲವೂ ಉಡುಗಿ ಹೋಯಿತು. ಆದ್ದರಿಂದ - ಒಂದು ಯುದ್ಧದ ವಿಷಯ ತೆಗೆದುಕೊಂಡು ಪಕ್ಷ ನಿರ್ಧರಿಸುವುದು ಬೇಡ. ಹೇಗೂ ಒಮ್ಮೆ ನಾವು ನವಾಬರ ಪಕ್ಷದವರು ಎನ್ನುವುದು ಪ್ರಖ್ಯಾತವಾಯಿತು. ಇನ್ನು ಕೊನೆಯವರೆಗೂ ಈ ಪಕ್ಷದಲ್ಲಿ ಇರುವುದೇ ಲೇಸು ಎಂದು ನನಗೆ ತೋರುತ್ತದೆ. ಎಷ್ಟಾದರೂ ನಮಗೆ ಶ್ರೀರಂಗಪಟ್ಟಣ ಹತ್ತಿರ; ಪೂನಾ ಬಹುದೂರ” – ಎಂದರು ಪ್ರಧಾನಿ ನರಸಪ್ಪಯ್ಯ.

“ಹಾಗೆಂದು ತಾವಾಗಿಯೇ ನಮ್ಮ ಸ್ನೇಹ ಕೋರಿದ ಪೇಶ್ವೆಗಳಿಗೆ ಇಲ್ಲ ಎನ್ನುವುದು ಮುತ್ಸದ್ದಿತನವಾದೀತೇ ?” – ಬಾಣದ ಮದಕರಿನಾಯಕ ಕೇಳಿದ.

“ಹಾಗೆನ್ನುವುದು ಬೇಡ. ಅವರು ಕೊಟ್ಟ ಉಡುಗೊರೆಗೆ ದುಗಣಿ ಉಡುಗರೆ ಕೊಟ್ಟು 'ಸಮಯ ಬಂದಾಗ ನಿಮ್ಮ ಸ್ನೇಹವನ್ನು ನಾವು ಕಳೆದುಕೊಳ್ಳುವುದಿಲ್ಲ' ಎಂದು ಹೇಳಿ ಕಳಿಸೋಣ. ಹಾಗೇ ಪೇಶ್ವೆಗಳು ನಮ್ಮ ಸಹಾಯ ಕೇಳಿದ್ದಾರೆಂದು ನವಾಬರಿಗೆ ತಿಳಿಸೋಣ” – ನರಸಪ್ಪಯ್ಯ ಸಲಹೆ ಮಾಡಿದರು.

“ನಿಮ್ಮ ಮಾತಿನಲ್ಲಿ ಮೊದಲರ್ಧ ಆಗಬಹುದು. ಎರಡನೆಯದು - ನವಾಬರಿಗೆ ಸುದ್ದಿ ಕಳಿಸುವ ವಿಷಯ ಬೇಡ. ನಾವು ಅವರ ಸಾಮಂತರೂ ಅಲ್ಲ, ಗೂಢಚಾರರೂ ಅಲ್ಲ” – ಎಂದು ಖಂಡಿತವಾಗಿ ಹೇಳಿದರು, ನಾಯಕರು.

“ಪ್ರಭುಗಳು ನಮ್ಮ ಮಾತಿನಲ್ಲಿ ಇಲ್ಲದ ಅರ್ಥ ಹುಡುಕಬಾರದು. ನಾವು ನವಾಬರ ಸಾಮಂತರು, ಅವರ ಗೂಢಚಾರರಾಗಬೇಕು ಎಂದು ನನ್ನ ಮಾತಿನ ಅರ್ಥವಲ್ಲ. ಪೇಶ್ವೆಗಳು ನಮ್ಮ ಸ್ನೇಹ ಯಾಚಿಸುತ್ತಿದ್ದಾರೆ ಎಂದು ತಿಳಿದರೆ ಹೈದರಾಲಿಯವರು ನಮ್ಮ ಮೇಲೆ ಹಾಕ ಬಹುದಾದ ಲಗಾಮು ಸಡಿಲವಾಗಿ, ನಮ್ಮ ಬಗ್ಗೆ ವಿಶ್ವಾಸ ಮತ್ತಷ್ಟು ಕುದುರುತ್ತದೆ ಎಂದಷ್ಟೇ ನನ್ನ ಯೋಚನೆ.”

“ಅದೇನೇ ಇರಲಿ – ನವಾಬರು, ನಾವು ಅವರನ್ನು ನೆಚ್ಚಿಕೊಂಡು ಬದುಕುತ್ತಿದ್ದೇವೆ ಎನ್ನುವುದು, ನಮ್ಮನ್ನು ನಂಬಿದ ಪೇಶ್ವೆಗಳಿಗೆ ದ್ರೋಹ ಬಗೆಯುವುದು ನಮಗೆ ಸಮ್ಮತವಿಲ್ಲ. ನಿಮ್ಮ ಮೊದಲರ್ಧದ ಮಾತನ್ನು ಹೇಗೆ ಬರೆಸುತ್ತೀರೋ ಬರೆಸಿ ತಂದು ತೋರಿಸಿ, ಮುಂದಿನದು ಮುಂದೆ ಯೋಚಿಸೋಣ” - ಎಂದು ತಾವೇ ನಿರ್ಧಾರ ತೆಗೆದುಕೊಂಡಂತೆ ಹೇಳಿದರು, ಮದಕರಿನಾಯಕರು.

“ಪ್ರಭುಚಿತ್ತ” – ಎಂದಷ್ಟೇ ಹೇಳಿದರು, ನರಸಪ್ಪಯ್ಯ.

ಉಳಿದವರಾರೂ ನಾಯಕರ ಮಾತಿಗೆ ಪ್ರತಿಯಾಡಲಿಲ್ಲ. ಆದರೂ ಸಭೆ ಸರಸದಲ್ಲಿ ಮುಗಿಯಿತು ಎಂಬ ಭಾವನೆ ಯಾರಿಗೂ ಬರಲಿಲ್ಲ.

ಆ ದುಗುಡದಲ್ಲೇ ನಾಯಕರು ಓಲಗ ಮುಗಿಸಿದರು.

* * *

ಬಿದನೂರಿನ ಯುದ್ಧದಿಂದ, ಹೈದರಾಲಿಯಿಂದ ಬಾಯುಪಚಾರ ಹೇಳಿಸಿಕೊಂಡು ಬಂದಂದಿನಿಂದ ಮದಕರಿನಾಯಕನ ಮನಸ್ಸು ಪೇಶ್ವೆಗಳತ್ತ ಒಲಿದಿತ್ತು.

ಈಗ –

ಪೇಶ್ವೆಯವರೇ ತಮ್ಮ ಸ್ನೇಹ ಕೋರಿದಾಗ –

ಸಭೆ ಅತ್ತ ಒಲವು ತೋರಿದ್ದರೆ ಆತನ ಹೃದಯಕ್ಕೆ ಸಮಾಧಾನವಾಗುತ್ತಿತ್ತು.

ಅದಾಗಲಿಲ್ಲ –

ಅದಕ್ಕೆ ಪ್ರತಿಯಾಗಿ ತಮ್ಮ ಪ್ರಧಾನಿ ನವಾಬರ ಪಕ್ಷ ಎನಿಸಿ, ಮನಸ್ಸಿಗೆ ಮುಳ್ಳು ಇರಿದಂತಾಗಿತ್ತು.

ಆ ಮಾತನ್ನು ಬಹಿರಂಗವಾಗಿ ಆಡಿದರೆ ರಾಜ-ಪ್ರಧಾನಿ ಇಬ್ಬಣವಾಗುವುದಲ್ಲಾ – ಎಂಬ ಚಿಂತೆಯಿಂದ ನೇರವಾಗಿ ಆಡಬೇಕೆನಿಸಿದ ಮಾತನ್ನು ಆಡಲಾಗದೆ, ಆ ಇರಿಸು-ಮುರಿಸಿನಲ್ಲೇ ಓಲಗ ಮುಗಿಸಿಕೊಂಡು ಬಂದ ಮದಕರಿನಾಯಕ, ವಿಶ್ರಾಂತಿಪಡೆಯಲೆಂದು ತನ್ನ ಮಗನ ತಾಯಿ, ಪದ್ಮವ್ವನಾಗತಿಯ ಅಂತಃಪುರಕ್ಕೆ ಹೋದಾಗ, ಅಲ್ಲಾಕೆ ಮಗುವಿಗೆ ಹಾಲುಣಿಸುತ್ತಿರುವುದು ಕಂಡು, ಮನಸ್ಸಿಗೆ ಸಂತೋಷವಾದರೂ, ಬೇಕೆನಿಸಿದ ವಿಶ್ರಾಂತಿಗೆ ಅದು ಸ್ಥಳವಲ್ಲ ಎನಿಸಿ, ಬಾಗಿಲ ಪಡಿಯರತಿಗೆ –

“ನಾವಿತ್ತ ಬಂದ ಸುದ್ದಿಯನ್ನು ನಾಗತಿಯವರಿಗೆ ಹೇಳುವುದು ಬೇಡ”

– ಎಂದು ಅಪ್ಪಣೆ ಮಾಡಿ, ಬಂಗಾರವ್ವನಾಗತಿಯ ಅಂತಃಪುರದತ್ತ ಹೊರಟ.

* * *

ಮದಕರಿನಾಯಕ ಬಂಗಾರವ್ವನಾಗತಿಯ ಅಂತಃಪುರದ ಬಳಿ ಬಂದಾಗ, ಬಾಗಿಲಿನಲ್ಲಿರಬೇಕಾದ ದಾಸಿ ಅಲ್ಲಿ ಕಾಣದೆ, ಬಾಗಿಲು ತೆರೆದಿದ್ದರೂ ಒಳಗಾರೋ ಹಾಡುತ್ತಿರುವುದು ಕೇಳಿಸಿ, ಹಾಗೇ ಬಾಗಿಲು ಮರೆಗೆ ನಿಂತು ನೋಡುತ್ತಾ ಕೇಳಿದ –

ಅಂತಃಪುರದೊಳಗೆ ಬಂಗಾರವ್ವನಾಗತಿ, ಉಯ್ಯಾಲೆಯಲ್ಲಿ ತೂಗಿಕೊಳ್ಳುತ್ತಾ ಕೇಳುತ್ತಿದ್ದಳು. ಅವಳ ದಾಸಿ ಹಾಡುತ್ತಿದ್ದಳು –

ಒಂದರ ಮೇಲೊಂದು ಮೂರಂಗಿ | ಚಂದವೇನೋ ನನ ಸರದಾರ |

ಒಂದು ಹೂ ಅಂದ ಎರಡು ಹೂ ಚಂದ | ಮಾಲೆ ಮುಡಿಗೆ ಬಲು ಭಾರ ||

ಸದರ ಬ್ಯಾಡೋ ರಾಯ | ಕಂಡವರ ಮನೆ ಹೆಣ್ಣಿನಲಿ |

ಇದ ತಿಳಿದ ನನ್ನ ತವರವರು |

ಇದ ತಿಳಿದ ನನ್ನ ತವರವರು | ಬಂದು ಎದೆಗೊದ್ದಾರು |

ಬಂದು ಎದೆಗೊದ್ದಾರು | ಕಂದಾಯ ಕೇಳ್ಯಾರು ತಮ್ಮಣ್ಣ ಕಣ್ಣೀರಿಗೆ ||

ಕಲ್ಲುಬಸವನ ಆಡುತ್ತಾ ದಾಸಿ ಆ ಹಾಡು ಹೇಳುತ್ತಿದ್ದಳು, ರಾಗರಾಗವಾಗಿ; ಬಂಗಾರವ್ವ ನಾಗತಿ ಉಯ್ಯಾಲೆಯಲ್ಲಿ ತನ್ನನ್ನೇ ತಾನು ಕೂಗಿಕೊಳ್ಳುತ್ತಾ, ಆನಂದವಾಗಿ ಕೇಳುತ್ತಿದ್ದಳು, ದಾಸಿ ಹಾಡುತ್ತಿದ್ದ ಹಾಡನ್ನು

ಅದನ್ನು ಕಂಡು –

ಆ ಹಾಡನ್ನು ಕೇಳಿ –

ಮದಕರಿನಾಯಕನ ಮುಖದ ಮೇಲಿನ ಮೀಸೆ ಮುಳ್ಳಾಗಿ ಕೆದರಿ, ಕೈ ಬಾರುಕೋಲನ್ನು ಬಯಸಿತು. ಒಳಹೋಗಬೇಕೆಂದಿದ್ದವನು ಹಾಗೇ ಹಿಂದಿರುಗಿ, ತನ್ನ ತಾಯಿಯ ಶಯ್ಯಾಗೃಹದತ್ತ ತೆರಳಿ, ಸಂಜೆ ದೇವರಿಗೆ ಕಳಿಸಲೆಂದು ಹೂ ಕಟ್ಟುತ್ತಾ ಕುಳಿತಿದ್ದ ನಿಂಗವ್ವನನ್ನು ಕಂಡು –

"ಅವ್ವಾ" – ಎಂದ ಆಕ್ರೋಶ ತುಂಬಿದ ಧ್ವನಿಯಲ್ಲಿ.

ಆ ಧ್ವನಿಯ ಬಿರುಸನ್ನೇ ಕೇಳಿ ಬೆಚ್ಚಿ ಬಿದ್ದ ನಿಂಗವ್ವ, ತಟಕ್ಕನೆ ತಲೆ ಎತ್ತಿ, ಎದೆಯೊತ್ತುತ್ತಿದ್ದ ಕ್ರೋಧದಲ್ಲಿ ಬುಸುಗುಡುತ್ತಾ ನಿಂತಿದ್ದ ಮಗನನ್ನು ಕಂಡು –

"ಏನಾಯಿತಪ್ಪಾ?" – ಎಂದು ಕೇಳಿದಳು.

"ಆಗುವುದೇನಿದೆ. ದೇವರಿಗೆ ಹೂಕಟ್ಟುವುದರಲ್ಲಿ ಅಂತಃಪುರದ ಮೇಲುಸ್ತುವಾರಿ ನಿನ್ನದೆಂಬುದನ್ನು ಮರೆತುಬಿಟ್ಟೆ...."

"ಇರಬಹುದು. ಏನಾಯಿತು ?"

"ಏನಾಗಬೇಕು - ನಿನ್ನ ಕೈ ಹೂ ಕಟ್ಟುವುದನ್ನು ಬಿಟ್ಟು, ಬಾರುಕೋಲು ಹಿಡಿಯದಿದ್ದರೆ ಜರಿಮಲೆಯವರ ಮಗಳೂ ತರೀಕೆರೆಯವರ ಮಗಳ ಹಾದಿ ಹಿಡಿದಾಳು. ಎಚ್ಚರವಾಗಿರಲು ಹೇಳು" – ಎಂದಷ್ಟೇ ಹೇಳಿ, ಮರುಮಾತಿಗೂ ಕಾಯದೆ ಅಲ್ಲಿಂದ ಹೊರಟುಬಿಟ್ಟ –

ಹೊರಟುಬಿಟ್ಟ –

ತನಗೆ ತಿಳಿದ ಒಂದೇ ಒಂದು ತಂಪುದಾಣ - ಕಡೂರಿಯತ್ತ.

* * *

ಗುರುಮನೆಯಲ್ಲಿ ಭಕ್ತಿ ಕಡಿಮೆಯಾಯಿತು; ಓಲಗದಲ್ಲಿ ನಂಬಿಕೆ ಸಡಿಲವಾಯಿತು; ಅಂತಃಪುರದಲ್ಲಿ ಒಲವು ತಗ್ಗಿತು –

ತಾನು ನಿಂತ ನೆಲ ಪರಕೀಯ ಎನಿಸಿದ ಆ ಸಮಯದಲ್ಲಿ, ಮದಕರಿನಾಯಕ ತನ್ನ ತಾಯಿಯಲ್ಲಿ ತನ್ನ ಅಳಲನ್ನು ತೋಡಿಕೊಳ್ಳಬಹುದಾಗಿತ್ತು.

'ಅದು ಹೆಣ್ಣು ಮಾಡುವ ಕೆಲಸ' – ಎಂದು ಆ ಯೋಚನೆಯನ್ನು ಬದಿಗೊತ್ತಿದ.

ತಮ್ಮ ಪರಶುರಾಮನಾಯಕನಲ್ಲಿ ಹೇಳಿಕೊಳ್ಳಬಹುದಾಗಿತ್ತು.

'ಸುಖವಾಗಿರುವ ತಮ್ಮನಿಗೆ ತನ್ನ ದುಃಖದ ಹೊರೆ ಹೊರಿಸುವುದು ಏಕೆ? ಇರುವವರಾದರೂ ಹಾಯಾಗಿರಲಿ' - ಎಂದು ಆ ಬಯಕೆಯನ್ನು ಅತ್ತ ತಳ್ಳಿದ.

ತಾನು ಬಯಸಿ, ತನ್ನನ್ನು ಬಯಸಿದ ಹೆಣ್ಣು ಕಡೂರಿ –

ಅವಳಲ್ಲಿ ಹೇಳಿಕೊಳ್ಳಬಹುದು –

'ನನ್ನ ಅಂತಃಪುರವೇ ನನಗೆ ಎದುರುಬೀಳುವಷ್ಟು ಪೊಗರು ಬೆಳೆಸಿಕೊಂಡಿದೆ'

- ಎಂದು ಅವಳಿಗೆ ಹೇಳಿದರೆ ತನ್ನ ಗಂಡಸುತನಕ್ಕೆ ಹೀನಾಯವೆನಿಸಿ, ಅಲ್ಲೂ ಆ ಮಾತನಾಡಲಿಲ್ಲ.

ಎಲ್ಲ ಹೇಳಿಕೊಳ್ಳಲಾಗದ ಆ ಮಾತನ್ನು ಮದಕರಿನಾಯಕ ಹೇಳಿಕೊಂಡದ್ದು –

ತಾಯಿಗಿಂತಲೂ ಮಿಗಿಲಾದ ತಾಯಿ ಉತ್ಸವಾಂಬೆಗೆ.

ಆಕೆ ಅವನ ಮನದಾಳದ ಮಾತನ್ನು ಕೇಳಿದಳು –

ಆದರೆ ಕಲ್ಲುವಿಗ್ರಹವಾಗಿ ಕುಳಿತ ಆಕೆ ಬಾಯಿಬಿಟ್ಟು ಏನು ತಾನೆ ಹೇಳಿಯಾಳು ?

ಹಾಗಾದರೆ ಹೋದತ್ತ ಬಂದತ್ತ ಸೋಟೆ ತಿವಿಯುತ್ತಿದ್ದ ದಾಸಿಯ ಬಾಯ ಮೂಲಕ ಬಂದ ಬಂಗಾರವ್ವನಾಗತಿಯ ಹಾಡನ್ನು ಮರೆಯುವುದೆಲ್ಲಿ ?

'ಯಾರಲ್ಲೂ ಹೇಳಿಕೊಳ್ಳಬಾರದು; ಆದರೂ ಅದನ್ನು ಮರೆಯಬೇಕು' - ಆ ತೃಷೆಯಲ್ಲಿ ಕ್ರೋಧ, ಕಾಮವಾಗಿ ಕೆರಳಿ, ಮದಕರಿನಾಯಕನ ಮನಸ್ಸು, ಬಾಯಿ ಮುಚ್ಚಿಕೊಂಡು ಕಾಮಕ್ಕೆ ಮೈಯೊಪ್ಪಿಸುವ ಹೆಣ್ಣನ್ನು ಬಯಸಿತು.

ಆ ಹುಚ್ಚು ಕಾಮ-ಕ್ರೋಧದ ಕಿಚ್ಚನ್ನು ಕರಗದಂತೆ ನೆತ್ತಿಯ ಮೇಲೆ ಹೊತ್ತು ಕಡೂರಿಯಿದ್ದ 'ದ್ಯಾಮವ್ವನ ಹಜಾರ'ಕ್ಕೆ ಬಂದಾಗ, ಅಲ್ಲಿ ಅಕ್ಕನೊಂದಿಗೆ ಮಾತಾಡುತ್ತಾ ಕುಳಿತಿದ್ದ, ಕಡೂರಿಯ ತಂಗಿ, ಅಕ್ಕನಷ್ಟೇ ಚೆಲುವೆ, ನಾಗವ್ವ ಕಣ್ಣಿಗೆ ಬಿದ್ದಳು.

"ಈ ಹೆಣ್ಣು ಯಾರು ?" – ಎಂದು ಕೇಳಿದ ಮದಕರಿನಾಯಕ.

"ನನ್ನ ತಂಗಿ, ನಾಗವ್ವ" – ಎಂದಳು, ಏನೂ ತಿಳಿಯದ ಕಡೂರಿ.

"ಅದನ್ನು ಕೇಳಲಿಲ್ಲ. ಆಕೆಯ ಕೈಹಿಡಿದವನಾರು ಎಂದು ಕೇಳಿದೆ."

"ಇನ್ನೂ ಗೆಜ್ಜೆ ಪೂಜೆಯಾಗಿಲ್ಲ, ಅವ್ವಾ ಆ ಮಾತಾಡುತ್ತಿದ್ದಾಳೆ."

- ಮದಕರಿನಾಯಕನ ವಿಚಿತ್ರಪ್ರಶ್ನೆಗೆ ಕಾರಣ ತಿಳಿಯದೆ, ಭ್ರಾಂತಳಾಗಿ ಹೇಳಿದಳು ಕಡೂರಿ.

"ಆಗಿಲ್ಲವಲ್ಲ - ಒಳಿತಾಯಿತು. ನಿನ್ನವ್ವೆಗಿನ್ನು ಆ ಮಾತು ಬಿಡು ಎಂದು ಹೇಳು"

- ಎಂದವನೇ, ಕಡೂರಿ ದಿಗ್ಭ್ರಾಂತಳಾಗಿ ನೋಡುತ್ತಿರಲು, ನಾಗವ್ವೆಯ ತೋಳು ಹಿಡಿದೆತ್ತಿ-

"ನಡೆ - ನನ್ನ ಮಲಗುವ ಮನೆಗೆ" – ಎಂದು ಎಳೆದುಕೊಂಡು ಹೋದ.

ಹಿಂದೆಂದೂ ಮದಕರಿನಾಯಕನಲ್ಲಿ ಕಾಣದ ಈ ಕೀಚಕತನವನ್ನು ಕಂಡು, ಹೆದರಿ –

'ದೇವರೇ - ಇವರ ಬುದ್ಧಿ ಹೀಗೇಕಾಯಿತು ?' – ಎಂದು ಹಲುಬಿದಳು.

'ಇದು ನನ್ನ ಮನೆಯಲ್ಲೇ ಆದದ್ದು ಒಳಿತಾಯಿತು. ಬೇರಾರಿಗೂ ತಿಳಿಯದಿರಲಿ. ಮತ್ತೆಲ್ಲೂ ಹೀಗಾಗದಿರಲಿ' – ಎಂದು ತನಗೆ ಗೊತ್ತಿದ್ದ ದೇವರನ್ನು ಬೇಡಿದಳು, ಕಡೂರಿ.

ಅಕ್ಕನನ್ನು ನೋಡಿ ಹೋಗಲೆಂದು ಬಂದ ತಂಗಿ, ಅಕ್ಕನ ಮನೆಯಲ್ಲೇ ಸ್ಥಿರವಾಗಿ ನಿಂತಳು.

೧೨

'ಈ ಮಾತು ಯಾರಿಗೂ ತಿಳಿಯದಿರಲಿ. ನನ್ನ ದೊರೆಯ ಹೆಸರಿಗೆ ಕೆಸರು ತಗಲುವುದು ಬೇಡ' – ಎಂದು ಕಡೂರಿ ಹಾರೈಸಿದಳು ; ಕಣ್ಣೀರಿಟ್ಟು ದೇವರನ್ನು ಬೇಡಿದಳು.

ದೇವರ ಕಿವಿಗೆ ಆ ಮಾತು ಬಿದ್ದಿತೋ ಇಲ್ಲವೋ –

ಆದರೆ ನಾಗವ್ವನ ತಾಯಿಗೆ ತಿಳಿದು, ಆಕೆಯ ಮೂಲಕ ಆಕೆಯ ಆಪ್ತೇಷ್ಟರಿಗೂ 'ತನ್ನ ಇನ್ನೊಬ್ಬ ಮಗಳೂ ಅರಸರ ಬಂಗಾರದವಳಾದಳು' ಎಂಬ ಸಂತೋಷದ ಸುದ್ದಿಯಾಗಿ ಮುಟ್ಟಿ,

ಕಿವಿಯಿಂದ ಕಿವಿಗೆ, ಬಾಯಿಂದ ಬಾಯಿಗೆ ದಾಟುವಾಗ, ತನ್ನ ಮೂಲಸ್ವರೂಪ ಬಣ್ಣವನ್ನೆಲ್ಲಾ ಕಳೆದುಕೊಂಡು, ವಿಕಾರಸ್ವರೂಪ ತಳೆದು –

'ಬರಬರುತ್ತಾ ನಾಯಕರಿಗೆ, ಹೆಣ್ಣಿನ ಹುಚ್ಚು ಹೆಚ್ಚಾಯಿತು. ದಿನಕ್ಕೊಂದು ಹೊಸ ಹೆಣ್ಣು ಕೇಳುತ್ತಾರೆ'

- ಎಂಬ ವಿಕೃತವಾರ್ತೆಯಾಗಿ, ತಾಯಿ ನಿಂಗವ್ವನ ಕಿವಿ ತಲುಪಿ, ಏಕೋ ಈಚೆಗೆ 'ದೇವರು ಮೈಮೇಲೆ ಬಂದವನಂತೆ' ಇರುತ್ತಿದ್ದ ಮದಕರಿನಾಯಕನ ಮುಂದೆ ಆ ಮಾತು ಆಡಲು ಹೆದರಿ, ಇನ್ನೊಬ್ಬ ಮಗ ಪರಶುರಾಮನಾಯಕನಿಗೆ –

"ನಿನಗೆ ಹೆಂಡತಿ ಬಂದಳು ಅಂತ ನಿನ್ನಣ್ಣನ ಕಷ್ಟ-ಸುಖ ಕೇಳುವುದನ್ನೂ ಬಿಟ್ಟೆಯಾ? ನೀನೆಂಥ ತಮ್ಮ" – ಎಂದು ಹೇಳಿ ಕಿಡಿಗಾರಿದಳು.

"ಯಾಕವ್ವ, ಅಣ್ಣನನ್ನು ಯಾವ ಕಷ್ಟದಲ್ಲಿ ನಾನು ಕೈಬಿಟ್ಟೆ ?"

- ಎಂದು ಅಣ್ಣನ ಬಗ್ಗೆ ಎಂದೂ, ಯಾವ ಬಗೆಯ ಅಪರಾಧವನ್ನೂ ಮಾಡದಿದ್ದ ಪರಶುರಾಮನಾಯಕ ಛಡಿ ಏಟಿನಂತಿದ್ದ ತಾಯ ಮಾತನ್ನು ಕೇಳಿ, ಮಿಡುಕಿ ಹೇಳಿದ.

"ಕೈಬಿಡಲಿಲ್ಲ. ಕಣ್ಣು ಕಿವಿ ಮುಚ್ಚಿಕೊಂಡು ಕುಳಿತೆ. ನೀನೆಂಥ ತಮ್ಮ" – ಎಂದು ಮತ್ತಷ್ಟು ಛೇಡಿಸಿದಳು, ನಿಂಗವ್ವ.

"ಮೊದಲು ನಾನೇನು ಮಾಡಿದೆ ಅಂತ ಹೇಳು. ಆಮೇಲೆ ತಪ್ಪಿದರೆ ಉಂಟು ಎಂದು ಹೇಳಿ, ನಿನ್ನ ಕೈಲಿ ಕಿವಿ ಹಿಂಡಿಸಿಕೊಳ್ಳುತ್ತೇನೆ" - ಎಂದು ಬೇಡಿದ ಪರಶುರಾಮನಾಯಕ.

ಕಿರಿಯ ಮಗನಾಡಿದ ಮಾತು ಕೇಳಿ, ನಿಂಗವ್ವನ ಕಣ್ಣಲ್ಲಿದ್ದ ಸಿಟ್ಟು, ಎದೆಯಲ್ಲಿದ್ದ ನೋವು ನೀರಾಗಿ ಹರಿದು –

"ನಿಮ್ಮಣ್ಣನ ಬಗ್ಗೆ ಊರ ಜನ ಏನು ಹೇಳುತ್ತಿದ್ದಾರೆ, ಕೇಳಿದ್ದೀಯಾ ?" – ಎಂದು ಕೇಳಿದಳು.

"ಏನು ಹೇಳುತ್ತಿದ್ದಾರೆ ?"

"'ಆಳುವ ದೊರೆ ದೇವರ ಗೂಳಿಯಾದ' ಎಂದು ಬೀದಿಯ ಮರ್ಯಾದಸ್ಥ ಹೆಣ್ಣುಗಳು ಸೆರಗು ಮುಖಕ್ಕೆ ಅಡ್ಡಹಾಕಿಕೊಂಡು ಓಡಾಡುವ ಹಾಗಾಗಿದೆಯಂತೆ. ಈ ಮಾತು ಕೇಳಿ ನಾನು ಸತ್ತುಹೋದೆ. ನೀನಾದರೂ ನಿಮ್ಮಣ್ಣನಿಗೆ ಹೇಳಬಾರದಾ - ಈ ಕೆಸರು ತುಳಿಯುವ ಕೆಲಸ ಬಿಡು ಎಂದು" - ಕಣ್ಣೀರಿಡುತ್ತಲೇ ಹೇಳಿದಳು, ನಿಂಗವ್ವ.

“ನಿಮ್ಮಣ್ಣ, ನಿಮ್ಮಣ್ಣ ಎಂದು ಮಾತುಮಾತಿಗೆ ನನ್ನನ್ನು ಹಂಗಿಸುತ್ತೀಯಲ್ಲವ್ವಾ. ನನ್ನಣ್ಣ ನಿನ್ನ ಮಗನಲ್ಲವೇ ? ನಾನೆಷ್ಟಾದರೂ ಕಿರಿಯ. ಎಲ್ಲರಿಗಿಂತ ದೊಡ್ಡವಳು ನೀನು. ನೀನು ಕೇಳಿದ ಮಾತು ನನ್ನ ಕಿವಿಗೂ ಬಿದ್ದಿದೆ. ಅಣ್ಣನ ಮುಂದೆ ಇಂಥ ಮಾತು ನಾನು ಹೇಗೆ ಹೇಳಲವ್ವಾ ?”

“ಗಂಡಸು ನೀನು ಹೇಳಲು ಹೆದರಿದರೆ ಹೆಂಗಸಾಗಿ ನಾನು ಹೇಗೆ ಹೇಳಲಿ ? ಅದೂ ಹಡೆದ ಮಗನಿಗೆ - ದೊರೆಯಾಗಿ ಪಡೆದ ಕೀರ್ತಿಯನ್ನು ಹೆಣ್ಣಿಗಾಗಿ ಕಳೆದುಕೊಳ್ಳಬೇಡ ಎಂದು. ಏನೂ ತಪ್ಪಾಗುವುದಿಲ್ಲ, ನೀನು ಹೇಳು. ಸಿಟ್ಟಾದರೆ ತಪ್ಪು ನನ್ನ ಮೇಲೆ ಹಾಕು. ಒಂದು ರೀತೀಲಿ ಇದು ನನ್ನದೇ ತಪ್ಪು. ನಿಮ್ಮಣ್ಣ ರಾಜ್ಯ ಆಳಿದಷ್ಟು ಬಿಗಿಯಾಗಿ ಅವನ ಅಂತಃಪುರಾನ ಆಳೋದು ನನಗಾಗಲಿಲ್ಲ. ಆದದ್ದಾಯಿತು. ಮುಂದೆ ಹೆಚ್ಚಿನದೇನೂ ಆಗದಿರಲಿ. ನೀನು ನಿಮ್ಮಣ್ಣನಿಗೆ ಹೇಳಿ, ಬೆನ್ನಲ್ಲಿ ಬಿದ್ದ ಋಣ ಬಗೆಹರಿಸಿಕೋ” – ಎಂದಳು ನಿಂಗವ್ವ.

ಮದಕರಿನಾಯಕನ ಬಗ್ಗೆ ಇಂಥ ದುರ್ವಾರ್ತೆಯನ್ನು ಕೇಳಿ, ಪರಶುರಾಮನಾಯಕನ ಹೃದಯಕ್ಕೂ ಹಿಂಸೆಯಾಗಿತ್ತು. ಊರ ಜನ ಆಡುವುದು ನಿಜವೇನೋ ಎಂದು. ಅಣ್ಣನ ಬೆನ್ನ ಕಣ್ಣಾಗಿ ನೋಡಿದ ಕಡೂರಿಯ ತಂಗಿ ನಾಗವ್ವನ ವಿನಾ ಮತ್ತಾವ ಹೆಣ್ಣೂ ಕಾಣಲಿಲ್ಲ.

’ಆದರೂ ಎಷ್ಟು ವಿಕಾರ, ಭೂತಾಕಾರ ತಳೆದಿದೆ ಈ ಸಣ್ಣ ಮಾತು. ಆಡಿದವರ ನಾಲಗೆಯನ್ನು ಶೂಲಕ್ಕೇರಿಸಬೇಕು’

- ಎನಿಸಿತ್ತಲ್ಲದೆ, ಅಣ್ಣನಿಗೆ ತಾನು ವಿವೇಕ ಹೇಳಬೇಕು ಎಂಬಷ್ಟು ವಿಕೋಪ ಪರಿಸ್ಥಿತಿ ಎನಿಸಿರಲಿಲ್ಲ.

ಈಗ-

ತಾಯಿ ನಿಂಗವ್ವ ಹೀಗೆ ಕಣ್ಣೀರಿಟ್ಟು ಬೇಡಿದಾಗ –

ನಾಲ್ಕಾರು ದಿನ ಹೊತ್ತು ಕಾದು, ಮಾತು ಹೂವಾಗುವುದೋ, ಹಾವಾಗುವುದೋ ಎಂದು ಹೆದಹೆದರುತ್ತಲೇ –

“ಅಣ್ಣಾ, ನಿಮಗೊಂದು ಮಾತು ಕೇಳಲೇ ?” – ಎಂದು ಕೇಳಿದ, ಪರಶುರಾಮನಾಯಕ.

“ಕೇಳು ಪರಶುರಾಮಣ್ಣ, ನೀನು ಕೇಳಬಾರದ ಮಾತಾವುದಿದೆ ?” – ಎಂದ ಮದಕರಿನಾಯಕ, ಎಂದಿನ ವಿಶ್ವಾಸದಿಂದಲೇ.

ಆದರೆ ಆ ಮಾತಿನಲ್ಲಿ ಹಿಂದೆ ಮಾತಾಡುತ್ತಿದ್ದಾಗ ಒಸರುತ್ತಿದ್ದ ಬನಿ ಇರಲಿಲ್ಲ. ಆ ಮಾತಾಡಿದ ಮುಖವನ್ನು ನೋಡಿದ. ಆ ಮುಖವೂ ಅಷ್ಟೆ - ಕೊಂಚ ಬಾಡಿದಂತಿತ್ತು. ಕಣ್ಣು ಸ್ವಲ್ಪ ಆಳಕ್ಕಿಳಿದಂತಿದ್ದು ನೋಟವೂ ನಸುಮಂಕಾಗಿತ್ತು.

ಹಾಗಿದ್ದ ಅಣ್ಣ 'ಹೇಳು' ಎಂದು ಹೇಳಿದರೂ, ನಾಲಗೆ ಹೇಳಲು ಹೇಸಿದ ಮಾತನ್ನು, ಅಕ್ಕರೆಯ ಅಣ್ಣನ ಕಿವಿಗೆ ಸೋಕಿಸಬೇಕು ಎಂದು ತಿಳಿಯದೆ –

"ಇಂಥ ಮಾತು ಕೇಳುತ್ತೇನೆ ಎಂದು ಬೇಸರ ಮಾಡಿಕೊಳ್ಳಬೇಡ, ಅಣ್ಣ....ಈಚೆಗೆ ಊರಿನ ಮಾತಿಗೆ ನಿನ್ನ ಕಿವಿ ಕಿವುಡಾಗಿದೆಯೇ, ಅಣ್ಣಾ?" – ಎಂದು ಕೇಳಿದ, ಪರಶುರಾಮನಾಯಕ.

"ಇಲ್ಲವಲ್ಲ. ಮನಸ್ಸಿಗೇನೋ ಬೇಸರವಾಗಿತ್ತು; ಆದರೆ ಊರನ್ನೂ ಮರೆಯುವಷ್ಟಲ್ಲ. ಆದರೂ ಬೇರೆಯವರ ಕಿವಿಗೆ ಬಿದ್ದ ಎಷ್ಟೋ ಮಾತು ನಮ್ಮ ಕಿವಿಗೆ ಬೀಳುವುದಿಲ್ಲ. ಅದಕ್ಕೆಂದೇ ಅಲ್ಲವೇ - ನಿನ್ನನ್ನು ನಮ್ಮ ಕಿವಿಯಾಗಿಟ್ಟುಕೊಂಡಿರುವುದು. ಏನು ಕೇಳಿದೆ ?"

"ಬಹಳ ಕೆಟ್ಟ ಮಾತು."

"ನಮ್ಮ ಬಗೆಗೋ, ರಾಜ್ಯದ ಬಗೆಗೋ ?" – ತಟಕ್ಕನೆ ಚುರುಕಾಗಿ ಕೇಳಿದ ಮದಕರಿನಾಯಕ.

"ಸೀಮೆಯ ಬಗ್ಗೆಯಾಗಿದ್ದರೆ ಆ ಮಾತನ್ನು ವಿಚಾರಿಸಲು ಕೊತ್ವಾಲಚಾವಡಿ, ತಳವಾರ ಚಾವಡಿಗಳಿವೆ. ಆದರೆ ದೊರೆಯ ಬಗ್ಗೆ ದೂರನ್ನು ಯಾವ ಚಾವಡಿ ಕೇಳಬೇಕು ?"

"ನಮ್ಮ ಬಗ್ಗೆ ದೂರೇ – ಯಾರು, ಯಾರಿಗೆ ಹೇಳಿದರು ?"

"ಯಾರು, ಯಾರೋ ಊರಿನ ಸಣ್ಣ ಜನ. ಅವ್ವನ ಕಿವಿಗೆ ಬಿದ್ದು, ನನಗೆ ಹೇಳು ಅಂದಳು."

"ಆಯಿತು- ಏನು ದೂರು?"

ಆ ಮಾತು ಹೇಗೆ ಹೇಳುವುದು ಎಂದು ಯೋಚಿಸಿ-

"ದ್ಯಾಮವ್ವನ ಹಜಾರದ ಮಾತು, ಬೀದಿಯ ಮಾತಾಗಿದೆ."

"ಅಲ್ಲಿಯ ಅಕ್ಕ-ತಂಗಿಯರ ಮಾತೇ- ಅದು ಗುಟ್ಟು ಎಂದು ನಾವು ಯಾರಿಗೂ ಕಟ್ಟು ಮಾಡಿಲ್ಲ."

"ಬರೀ ಅಷ್ಟೇ ಮಾತಾಗಿದ್ದರೆ ನಾನೂ ನಿಮ್ಮ ಬಳಿ ಬರುತ್ತಿರಲಿಲ್ಲ. ಆದರೆ ಅದು ಭೂತಾಕಾರ ತಳೆದಿದೆ."

"ಅಂದರೇನು-ನಾವು ಭೂತದ ಕೈಹಿಡಿದಿದ್ದೇವೆ ಎನ್ನುತ್ತಾರೋ ಜನರು. ಅವರ ಕಣ್ಣಿಗೆ ಈ ಅಕ್ಕ-ತಂಗಿಯರ ರೂಪ ಮಂಕುಹಿಡಿಸಿರಬೇಕು"-ನೀರಸವಾಗಿ ನಗುತ್ತಾ ಹೇಳಿದ, ಮದಕರಿನಾಯಕ.

"ಮಂಕುಹಿಡಿಯದೆ, ಕುರುಡಾಗಿದ್ದರೂ ನಾನು ಚಿಂತಿಸುತ್ತಿರಲಿಲ್ಲ, ಅಣ್ಣ. ಆದರೆ ಹಿಸುಣರ ಹುಳ ಹಿಡಿದ ನಾಲಗೆ, ಅಕ್ಕ-ತಂಗಿಯರ ಗಡಿಯನ್ನು ದಾಟಿ, ದೊರೆಯ ಕಣ್ಣು ಬೀದಿಬೀದಿ ಹುಡುಕಿಕೊಂಡು, ಗೂಳಿಯ ಹಾಗೆ ಅಲೆಯುತ್ತಿದೆ ಎನ್ನುತ್ತಿದೆ."

"ಅಂದರೆ ?"

"ಗರತಿಯರು, ಪ್ರಾಯಕ್ಕೆ ಬಂದ ಹೆಂಗಸರು ನಾಯಕರ ಕಣ್ಣಿಗೆ ಬಿದ್ದರೆ, ಅವರು ನಿಮ್ಮ ಶಯ್ಯಾಗೃಹದ ನಾಯಿಯಾಗುತ್ತಾರೆ, ಎಂದಾಡಿ, ಜನರಲ್ಲಿ ಇಲ್ಲದ ಭೀತಿ ಮೂಡಿಸಿದೆ. ಅವ್ವ ಆ ಮಾತು ಕೇಳಿ ಅಂಜಿದಳು."

"ಆ ಮಾತು ನೀನು, ಅವ್ವ ನಂಬಿದಿರಾ ?"

"ನಮ್ಮ ನಂಬಿಕೆ ಮುಖ್ಯವಲ್ಲ ಅಣ್ಣ. ದೊರೆ ಊರ ನಾಲಗೆಗೆ ಹೆದರಬೇಕು, ಎನ್ನುತ್ತಾರೆ ಹಿರಿಯರು."

"ಮಾಡದ ತಪ್ಪಿಗೆ, ಆಡಿದವರ ಮಾತಿಗೆ ಅಂಜಿ ಏನು ಮಾಡಲಾದೀತು? ಹೆಣ್ಣು ಹುಡುಕಿಕೊಂಡು ಅಲೆದದ್ದು ನೀನು ನೋಡಿದ್ದೀಯಾ, ಪರಶುರಾಮಣ್ಣ?"

"ಇಲ್ಲಣ್ಣ."

"ಸರಿ ಮತ್ತೆ, ಆ ಮಾತು ಅವ್ವನಿಗೆ ಹೇಳು."

"ಅವ್ವನಿಗೆ ಜನದ ಮಾತಿನ ಅಂಜಿಕೆ..."

"ಅದಕ್ಕೆ ನಾವೇನು ಮಾಡಬೇಕು-ಕಣ್ಣಿಗೆ ಪರದೆ ಕಟ್ಟಿಕೊಂಡು, ಹಣೆಗೆ 'ನಮ್ಮನ್ನು ಕಂಡು ಯಾವ ಶೀಲವಂತ ಹೆಣ್ಣೂ ಹೆದರಬೇಕಾಗಿಲ್ಲ' ಎಂದು ಪಟ್ಟಿ ಕಟ್ಟಿಸಿಕೊಂಡು ಓಡಾಡಬೇಕೇ ? ನೀನು ನಿಜ ಹೇಳಿದರೂ ನಂಬುತ್ತೀಯಾ, ಸುಳ್ಳು ಹೇಳಿದರೂ ನಂಬುತ್ತೀಯಾ-ಅಣ್ಣನ ಮಾತು ಎಂದು. ಆದರೂ ಅವ್ವನ ಮೇಲೆ ಆಣೆ ಮಾಡಿ ಹೇಳುತ್ತೇನೆ-ನಮ್ಮ ನಡತೆ, ನಾಯಿಯಾಗಲು ನಾವು ಬಿಟ್ಟಿಲ್ಲ. ಇನ್ನು ಕಣ್ಣನ್ನು ದೂರುವವರಿಗೆ ಏನು ಹೇಳಲಿ- ಇಷ್ಟಂತೂ ನಿಜ. ಬೀದಿಯಲ್ಲಿ ಹೋಗುವಾಗ ಕಟ್ಟುಮಸ್ತಾದ, ಪ್ರಾಯದ ಹುಡುಗ ಕಣ್ಣಿಗೆ ಬಿದ್ದರೆ, "ಇವನು ನಮ್ಮ ದಂಡಿನಲ್ಲಿರಬೇಕು" ಎನಿಸಿದ ಹಾಗೆ, ರೂಪವಂತೆಯಾದ ಹೆಣ್ಣು ಕಂಡರೆ "ಈ ದೀಪ ನಮ್ಮ ಅಂತಃಪುರದಲ್ಲಿರಬಾರದಾಗಿತ್ತೇ" ಎನ್ನುತ್ತದೆ, ಮನಸ್ಸು. ಆದರೆ ಇಷ್ಟು ಮಾತಂತೂ ಸತ್ಯ- ಈ ನಾಲಗೆ, ಎಂದೂ ಕಣ್ಣು, ಮನಸ್ಸಿನ ಆಳಾಗಿ ಯಾವ ಹೆಣ್ಣನ್ನೂ ಹಾಸಿಗೆಗೆ ಕರೆದಿಲ್ಲ- ಉರಿಯುವ ಸೂರ್ಯ ನಮ್ಮ ಮಾತಿಗೆ ಸಾಕ್ಷಿ. ಆದರೂ ಜನ ದೂರಿದರೆ ನಾವೇನು ಮಾಡಬೇಕು. ದೂರಬೇಕು ಎನ್ನುವ ಹಗುರ ನಾಲಗೆಗೆ ನೂರು ನೆಪ. ನೋಡಿದರೆ ನೋಡಿದೆವು ಎನ್ನುತ್ತಾರೆ. ಆದ್ದರಿಂದ ದೂರುವ ನಾಲಗೆಗೆ ಅಂಜಿದರೆ ಬದುಕುವುದಕ್ಕೂ ಎಡೆಯಿಲ್ಲ. ನಾವು ದೂರಿಗೆ ಅಂಜುವುದಿಲ್ಲ.

ನಮ್ಮ ಅಂತಃಸಾಕ್ಷಿಗೆ ಅಂಜುತ್ತೇವೆ. ಅದಕ್ಕೆ ನಾವು ನಿಜವಾಗಿಯೂ ತಪ್ಪು ಮಾಡಿದಾಗ ಅವ್ವ ಇಡುವ ಕಣ್ಣೀರಿಗೆ, ಅಲ್ಲಿಯವರೆಗೆ ಈ ಬೆದರು ಗೊಂಬೆಗೆ ನಾವೂ ಅಂಜುವುದಿಲ್ಲ. ನೀವೂ ಅಳುಕಬೇಕಾಗಿಲ್ಲ...”

-ಎಂದು ಉದ್ವೇಗದಿಂದಾಡಿ, ಮಾತು ನಿಲ್ಲಿಸಿ, ಶಾಂತಿ ತಂದುಕೊಳ್ಳುತ್ತಾ-

“ನಾವು ಈಗೇನು ಮಾಡುತ್ತಿದ್ದೇವೆ ಎಂದು ನಮಗೆ ಅರಿವಿದೆ, ಪರಶುರಾಮಣ್ಣ, ಎರಡು ದಿನ, ನಮ್ಮ ಪಾಡಿಗೆ ನಮ್ಮನ್ನು ಬಿಟ್ಟುಬಿಡಿ. ಆಮೇಲೆ ಎಲ್ಲವೂ ಸರಿಹೋಗುತ್ತದೆ” ಎಂದು ಹೇಳಿದ, ಮದಕರಿನಾಯಕ.

“ಆಯಿತಣ್ಣ ಅವ್ವ ಹೇಳಿದ್ದನ್ನು ನಿಮಗೆ ಹೇಳಿದೆವು. ಅಂತೂ ನೀವು ಮೊದಲಿನಂತಾಗುವ ದಿನ ಬೇಗ ಬರಲಿ”

-ಎಂದು ಹರಕೆ ಹೊರುವವನಂತೆ ಹೇಳಿದ, ಪರಶುರಾಮನಾಯಕ.

* * *

“ಆ ದಿನ-

ಮದಕರಿನಾಯಕರು ಮತ್ತೆ ಮೊದಲಿನಂತಾಗುವ ದಿನ-

ಬೇಗ ಬರಲಿ. ಆದಷ್ಟು ಬೇಗ ಬರಲಿ; ಏತಕ್ಕಾಗಿಯೋ ಮುಚ್ಚಿದ ಅಣ್ಣನ ಕಣ್ಣು ಬೇಗ ತೆರೆಯಲಿ”

-ಎಂದು ಪರಶುರಾಮನಾಯಕನಂತೆಯೇ, ಅವರ ತಾಯಿ ನಿಂಗವ್ವ, ಆತನ ಹಿತೈಷಿಗಳಾದ ಎಲ್ಲರೂ ಹಾರೈಸಿದರು.

“ನಿಮ್ಮಣ್ಣನ ಕಣ್ಣು ಬೇಗ ತೆರೆಯಬೇಕಣ್ಣ ನೋಡೋಣ-ತಾಯಿ ಹೇಗೆ ಕಣ್ಣು ತೆರೆಸುತ್ತಾಳೆ”-ಎಂದು ಆ ದಿನಕ್ಕಾಗಿ ನಿರೀಕ್ಷಿಸುತ್ತಾ.

೧೩

ಆ ದಿನವೂ ಬಂದಿತು-

ನಿರೀಕ್ಷಿಸಿದ್ದಕ್ಕಿಂತ ಬಹುಬೇಗ; ಅತ್ಯಂತ ಅನಿರೀಕ್ಷಿತವಾದ ರೀತಿಯಲ್ಲಿ.

ಯುಗಾದಿಯ ಬೇವು-ಬೆಲ್ಲ ಉಂಡ ಚಿತ್ರದುರ್ಗ, ಹದಿನೈದು ದಿನಗಳ ಅಂತರದಲ್ಲಿ ಬರುವ 'ಏಕನಾಥೇಶ್ವರಿಯ ಸಿಡಿ', ಆ ಬಳಿಕದ ಮಂಗಳವಾರ ನಡೆಯುವ ಬರಗೇರಮ್ಮ-

ತ್ರಿಪುರಗಟ್ಟಮ್ಮದೇವಿಯರ 'ಭೇಟಿ'ಗೆಂದು, ಕೋಟೆ-ಪೇಟೆಗಳು, ಗುಡಿ-ಗೋಪುರಗಳು, ಹಸೆಮಣೆ ಏರಲು ಸಿದ್ಧಳಾದ ನವವಧುವಿನಂತೆ ಅಲಂಕೃತವಾಗಿ, ವಸಂತಋತುವಿನ ತಳಿರು-ಹೂಗಳಿಂದ, ಹೊಸತಾದ ಮಾವು-ಬೇವುಗಳಂತೆ ಕಳಕಳಿಸುತ್ತಿತ್ತು ವರ್ಷದ ಬಹುದೊಡ್ಡ ಉತ್ಸವವಾದ "ಭೇಟಿ"ಯನ್ನು ನೋಡಲೆಂದು ಬಂದ ಜನ ಮನೆಮನೆಯನ್ನು ತುಂಬಿ, ಬಹುಬಣ್ಣದ ಹೊಸ ಬಟ್ಟೆಯುಟ್ಟು ರಾಜಬೀದಿಗಳಲ್ಲಿ ಅಡ್ಡಾಡಿ, ದುರ್ಗದ ಬೀದಿಬೀದಿಗಳಲ್ಲೂ ವಸಂತಋತು ತನ್ನ ಒಡ್ಡೋಲಗ ನಡೆಸಿದಂತೆ ಕಾಣುತ್ತಿತ್ತು. ಆ 'ಸಿಡಿ', 'ಭೇಟಿ'ಯ ದಿನಗಳಿಗಾಗಿ, ಕೋಟೆ-ಪೇಟೆಗಳಲ್ಲಿ ನಡೆಯುತ್ತಿದ್ದ ಸಿದ್ಧತೆಗಳನ್ನೊಮ್ಮೆ ಕಣ್ಣಾರೆ ನೋಡಿಬರಲೆಂದು, ಮದಕರಿನಾಯಕ ತಮ್ಮ ಪರಶುರಾಮನಾಯಕ, ಮತ್ತೆ ಕೆಲವರು ಅಶ್ವಾರೋಹಿ ಅಧಿಕಾರಿಗಳೊಂದಿಗೆ ಅರಮನೆಯಿಂದ ಹೊರಟು, ತಾರಾಮಂಡಲದಲ್ಲಿ ನಡೆದ ಸಿದ್ಧತೆಗಳನ್ನೆಲ್ಲಾ ನೋಡಿ ಕೆಳದುರ್ಗಕ್ಕೆ ಇಳಿಯಲು 'ಅಜ್ಜಿಯ ಬಾಗಿಲು' ಕಡೆ ಹೊರಟರು.

'ಅಜ್ಜಿಯ ಬಾಗಿಲಿ'ನಿಂದ ಹತ್ತು ಹೆಜ್ಜೆ ಹಾಕಿ 'ಬೀಡಿನ ಬಾಗಿಲಿ'ನತ್ತ ಇಳಿದರೆ, ಸಾನಂದ ಸ್ವಯಂಭೂಗಣಪತಿಯ ದೇವಾಲಯ. ಆ ದೇವಾಲಯದ ಹಿಂದಿನ ಬಂಡೆಯ ನಡುವಣ ಕಡಿದಾದ ಮೈದಾನದಲ್ಲಿ, ಬಂಡೆಗಳನ್ನು ಅನುಸರಿಸಿಯೇ ಕಟ್ಟಿದ ತಳವಾರರ ಮನೆಗಳು. ಆ ಮನೆಗಳಿಗೆ ಹೊಂದಿಕೊಂಡಂತೆ, ದೇವಾಲಯದ ಮುಂಭಾಗದಲ್ಲಿ ಒಂದು ಪಾರ್ಶ್ವಕ್ಕಿರುವ ಕಲ್ಲಿನ ಗರಡಿಯ ಮನೆಗೆ ಹಿಂಭಾಗದಲ್ಲಿ ತಳವಾರ ಕಟ್ಟೆ,

ಬೆಟ್ಟದಿಂದ ಕೆಳಗಿಳಿಯುವ ಮೊದಲು, ಗಣಪತಿಗೆ ನಮಸ್ಕರಿಸಿ ಹೋಗುವ ನಿತ್ಯದ ವಾಡಿಕೆಯಂತೆ ಆ ದಿನವೂ ದೇವಾಲಯದ ಬಳಿ ಕುದುರೆಯಿಂದಿಳಿದ ಮದಕರಿನಾಯಕ, ಕುದುರೆಯನ್ನು ಆಳಿನ ಕೈಗೆ ಕೊಟ್ಟು, ಸುತ್ತಮುತ್ತ, ಬೆಳಗಿನ ಬೆಳಕಿನಲ್ಲಿ ಕಣ್ಣಿಗೆ ಹಬ್ಬವಾಗಿ ಕಾಣುತ್ತಿದ್ದ ಕೋಟೆ, ಅದರ ಹಿಂದಿನ ಗುಡಿಗೋಪುರ, ಝುಂಡಾಬತೇರಿಗಳನ್ನು ನೋಡುತ್ತಿದ್ದಾಗ, ಅತ್ತಿತ್ತ ಸುಳಿದ ಕಣ್ಣುಗಳು - ಸನಿಹದ ಬಂಡೆಯ ಮೇಲೆ, ಎಣ್ಣೆಸ್ನಾನ ಮಾಡಿ, ಬಿಸಿಲಿನಲ್ಲಿ ಹೊರವಾಗಿ ಬೆಳೆದ ತಲೆಗೂದಲನ್ನು ಕೈಗಳಿಂದ ಹರಡಿಕೊಂಡು, ತೇವ ಆರಿಸಿಕೊಳ್ಳುತ್ತಿದ್ದ ತರುಣಿಯೊಬ್ಬಳನ್ನು ಕಂಡವು.

ಬಿಚ್ಚಿ ಹರಡಿದ ಕೇಶರಾಶಿಯೇ, ಸೋಗೆಬಿಚ್ಚಿದ ನವಿಲಿನಂತೆ ಮದಕರಿನಾಯಕನ ಕಣ್ಣನ್ನು ಆಕರ್ಷಿಸಿದರೆ, ನಾಯಕರು ಬಂದುದು ಅರಿವಾಗಿ ಎದೆ ಮೇಲಿನ ಸೆರಗು ನಸುಜಾರಿದುದೂ ಅರಿವಾಗದೆ ಗಾಬರಿಯಿಂದ ಎದ್ದು ನಿಂತ, ಪ್ರಾಯಪ್ರಮತ್ತ ಹೆಣ್ಣಿನ ಮೈಯ ಮಾಟ, ನಾಯಕರ ಕಣ್ಣಿಗೆ ಮೋಡಿ ಮಾಡಿ, ತನಗೇ ಅರಿವಿಲ್ಲದಂತೆಯೇ –

"ಓ, ಎಂಥ ಚಲುವಾದ ಹೆಣ್ಣು"

-ಎಂದು ಪಕ್ಕದಲ್ಲಿದ್ದದವರಿಗೆ ಕೇಳುವಷ್ಟು ಗಟ್ಟಿಯಾಗಿ, ಅವರಿಂದ ಮೆಚ್ಚುಗೆ ಮಾತಾಗಿ ಹೊರಹೊಮ್ಮಿತು.

ಆ ಮಾತು - ಆ ಹೆಣ್ಣಿನ ಕಿವಿಗೂ ಬಿದ್ದಿತೇನೋ, ಹುಲಿವಾಸನೆ ಹಿಡಿದ ಜಿಂಕೆಯಂತೆ. ಬಂಡೆಗಲ್ಲಿನಿಂದ ಧುಮುಕಿ, ನಾಯಕರ ಕಣ್ಣುಗಳಿಗೆ ಮರೆಯಾದಳು.

ಆ ಓಟ, ಬಂಡೆಯಿಂದ ಧುಮುಕಿದುದು - ಒಂದೊಂದೂ ಆ ತರುಣಿಯ ಏರಿಳಿವಿನ ಮೈಮಾಟದ ಚೆಲುವನ್ನು ತೆರೆದು ತೋರಿಸಿದಂತಿತ್ತು. ಯಾರ ಚಿತ್ತವೂ ಸೋಲಬಹುದಾದಂಥ ಚೆಲುವು ಆ ಯುವತಿಯದು. ಆ ರೂಪ ಮೂಡಿಸಿದ ಕ್ಷಣಿಕ ಅಮಲಿನಲ್ಲಿಯೇ ಮದಕರಿನಾಯಕ ಪಕ್ಕದಲ್ಲಿದ್ದವರನ್ನು –

"ಯಾರು ಆಕೆ ?" – ಎಂದು ಕೇಳಿದ.

"ಅದು ತಳವಾರ ಕಂಪಳಯ್ಯನವರ ಮನೆ. ಅವರ ಮಗಳಿರಬೇಕು."

"ಹಾಗೇ – ಪುಣ್ಯವಂತೆ ಹಡೆದ ಹೆಣ್ಣು; ಕೈ ಹಿಡಿಯುವವನು ಭಾಗ್ಯವಂತ"

-ಎಂದಷ್ಟೇ ನುಡಿದು, ಮರುಗಳಿಗೆಯೇ ಅರಿವು ಮರಳಿ, ಮಾತು ನಿಲ್ಲಿಸಿ, ಗಣೇಶನಿಗೆ ನಮಸ್ಕರಿಸಲೆಂದು ದೇವಾಲಯಕ್ಕೆ ಹೋದ, ಮದಕರಿನಾಯಕ.

ಆಗಲೂ ಅವನ ಕಣ್ಣಿದಿರು ಆ ಹೆಣ್ಣಿನ ರೂಪದ ನವಿಲು ಗರಿಬಿಚ್ಚಿತು.

ಮತ್ತೊಂದು ಗಳಿಗೆ ಆ ನೆನಪು.

ಅಷ್ಟೇ –

ಮತ್ತೆ ಅದನ್ನು ಮರೆತುಬಿಟ್ಟ-

'ಯಾರ ಮನೆಯ ನಂದಾದೀಪವೋ, ಅದರ ಚಿಂತೆ ನಮಗೇಕೆ ?'

- ಎಂದು ತಿಳಿವು ತಂದುಕೊಂಡು.

ಮದಕರಿನಾಯಕರೇನೋ ಅದನ್ನು ಮರೆತುಬಿಟ್ಟರು - ಆದರೆ ವಿಧಿ ಮರೆಯಲಿಲ್ಲ.

ಅದಾದ ಮೂರು ದಿನಗಳ ಬಳಿಕ ಒಂದು ದಿನ ಮದಕರಿನಾಯಕರು, ಯಾವುದೋ ಕಾರ್ಯವನ್ನು ಚಿಂತಿಸುತ್ತಾ, ಒಂಟಿಯಾಗಿ ಕುಳಿತಿದ್ದಾಗ, ಯಾವುದೋ ಉದ್ವೇಗದ ಬಿರುಗಾಳಿಯನ್ನೇರಿ ಬಂದವನಂತೆ ಬಂದು –

"ಅಣ್ಣಾ - ನಿಮ್ಮ ಅಲೆಮಾರಿ ಕಣ್ಣು ಹೆಣ್ಣಿನ ಬಲಿ ತೆಗೆದುಕೊಂಡುಬಿಟ್ಟಿತು" – ಎಂದು ಹೇಳಿದ, ಪರಶುರಾಮನಾಯಕ.

"ಏನಂದೆ – ?"

- ತನ್ನೆದೆಯೊಳಗೇ ಸಿಡಿಲು ಮಿಂಚುಗಳು ಕವಲೊಡೆದಂತೆ ಮೆಟ್ಟಿಬಿದ್ದು ಕೇಳಿದ ಮದಕರಿನಾಯಕ.

"ಹೂನಣ್ಣಾ ತಳವಾರ ಕಂಪಳಯ್ಯನವರ ಮಗಳ ಪಾಲಿಗೆ ನಿಮ್ಮ ಕಣ್ಣು ಮೃತ್ಯುವಾಯಿತು"

-ಎಂದ ಪರಶುರಾಮನಾಯಕ, ಹಲವಾರು ಭಾವನೆಗಳು ಸಮ್ಮಿಶ್ರವಾಗಿ ಕುದಿಯುತ್ತಿದ್ದ ಧ್ವನಿಯಲ್ಲಿ.

"ತಳವಾರ ಕಂಪಳಯ್ಯನವರ ಮಗಳು - ಯಾರು - ನಮ್ಮ ಕಣ್ಣೇನು ಕೇಡುಮಾಡಿತು ಆಕೆಗೆ? ಇದೇನು ನೀನಾಡುತ್ತಿರುವ ಮಾತು. ಪರಶುರಾಮಣ್ಣ ?" - ದಿಗ್ಭ್ರಾಂತನಾಗಿ ಕೇಳಿದ ಮದಕರಿನಾಯಕ.

"ಇಷ್ಟು ಬೇಗ ಆ ಹುಡುಗಿಯನ್ನು ಮರೆತುಬಿಟ್ಟಿರಾ. ಅಣ್ಣಾ?"

– ಕೊಂಚ ಕಹಿಯಾಗಿ ಕೇಳಿದ ಪರಶುರಾಮನಾಯಕ.

"ಮೈತಿಳಿದು ಮಾತಾಡು, ಪರಶುರಾಮಣ್ಣ. ಯಾವ ಹೆಣ್ಣು ಆಕೆಗೂ ನಮ್ಮ ಕಣ್ಣಿಗೂ ಏನು ಸಂಬಂಧ ? ಇಲ್ಲದ ಒಗಟೆಯಾಡಬೇಡ. ಆದದ್ದೇನು ಹೇಳು ?"

"ನಿಮಗೆ ನೆನಪಿಲ್ಲವೇ, ಅಣ್ಣ- ಈಗ್ಗೆ ಮೂರು ದಿನಗಳ ಹಿಂದೆ -"

"ಹೂ – ಮೂರು ದಿನಗಳ ಹಿಂದೆ ಏನಾಯಿತು ?"

"ನೀವು 'ಭೇಟಿ'ಯ ಸಿದ್ಧತೆಗಳನ್ನು ನೋಡಲೆಂದು ಹೋದಾಗ... ಸಾನಂದಗಣಪತಿಯ ದೇವಾಲಯದ ಹಿಂದಿನ ಬಂಡೆಯ ಮೇಲೆ....ತಲೆಯೊಣಗಿಸಿಕೊಳ್ಳುತ್ತಾ, ನಿಮ್ಮ ಮಾತು ಕೇಳಿ ಚಿಗರೆಯಂತೆ ಓಡಿದ ಹೆಣ್ಣು...."

"ಓ- ಆ ಹೆಣ್ಣೇ ...."

- ಮರೆತುಹೋದುದನ್ನು ನೆನಪಿಗೆ ತಂದುಕೊಂಡು ಹೇಳಿದ ಮದಕರಿನಾಯಕ.

"ಹೂ. ಆ ಹೆಣ್ಣೆ - ಈಗ 'ಈ' ಹೆಣ್ಣಲ್ಲ 'ಆ' ಹೆಣ್ಣು."

"ಅಂದರೆ-?"

"ನಿಮ್ಮ ಕಣ್ಣನೋಟ, ಹಗುರ ನಾಲಗೆ ಆ ಹೆಣ್ಣಿನ ಪಾಲಿಗೆ ಮೃತ್ಯುವಾಯಿತು."

"ಅಂದರೆ-"

- ಕಿವಿ ಕೇಳಿದ ಮಾತಿಗೆ ತಲೆ ಸುತ್ತುತ್ತಾ ಕೇಳಿದ ಮದಕರಿನಾಯಕ.

"ನಿಮ್ಮ ನೋಟಕ್ಕೆ ದುರ್ಗದ ಹೆಣ್ಣು ಹೆದರುತ್ತಾರೆ ಎಂದರೆ ನೀವು ನಂಬಲಿಲ್ಲ. ಈಗಲಾದರೂ ನಂಬಿ – ನಿಮ್ಮ ಕಣ್ಣು ಮೆಚ್ಚಿದ ಹೆಣ್ಣು ಈಗ ಹದ್ದುಗಳಿಗೆ ಬಲಿ."

"ಏನಾಯಿತು ಪರಶುರಾಮಣ್ಣ - ಯಾರು ಆ ಚೆಲುವಿನ ಕೊಲೆ ಮಾಡಿದ ಪಾಪಿಗಳು ? ನಿಂತ ನಿಲುವಿನಲ್ಲಿ ಅವರನ್ನು ಸೀಳಿ, ನಾಯಿನರಿಗಳಿಗೆ ಉಣಬಡಿಸುವಂತೆ ಹೇಳು."

- ಏರಿಬಂದ ಕ್ರೋಧದಲ್ಲಿ ಸಿಡಿದು ಹೇಳಿದ ಮದಕರಿನಾಯಕ.

"ಹಾಗೆ ಮಾಡಬೇಕು ಎಂದರೆ - ನಿಮ್ಮ ನಾಲಗೆ, ಕಣ್ಣುಗಳು ನಾಯಿನರಿಗಳಿಗೆ ಊಟವಾದೀತು, ಅಣ್ಣ. ಅವೇ ಆ ನಿರಪರಾಧಿಯ ಕೊಲೆಗೆ ಕಾರಣವಾದದ್ದು. ನಿಮ್ಮ ಕಣ್ಣು ಆ ಹುಡುಗಿಯ ರೂಪು ಕಂಡು ಮೆಚ್ಚಿತು, ಬಾಯಿ ಅದನ್ನು ಒಡೆದು ಹೇಳಿತು – ಅಕ್ಕಪಕ್ಕದವರೂ ಕೇಳುವಂತೆ. ಅದೂ ಸಾಲದೆಂಬಂತೆ 'ಯಾರಾಕೆ, ಯಾರ ಮಗಳು ?' ಎಂದೆಲ್ಲಾ ಕೇಳಿದಿರಿ. ಈ ಸುದ್ದಿ ತಿಳಿದ ತಳವಾರ ಕಂಪಳಯ್ಯ, ನಿಮ್ಮ ಕಣ್ಣು ತಮ್ಮ ಮನೆಗೆ ಕಳಂಕ ತಂದೀತೆಂದು ಹೆದರಿ, ದೇವರು ಮಾಡುವ ನೆಪದ ಮೇಲೆ ಹಿಮವತ್ಕೇದಾರಕ್ಕೆ ಕರೆದೊಯ್ದು ಅಲ್ಲಿಯ ಭೈರವನಿಗೆ ಆ ಚೆಲುವೆಯ ಬಲಿಕೊಟ್ಟು ಬಂದರಂತೆ – ಮನೆತನದ ಮಾನ ಉಳಿಸಿಕೊಳ್ಳಲು."

"ನೀಚರು....ಚಂಡಾಲರು... ಕಟುಕರು.. ನೆತ್ತರುಣಿನಾಯಿಗಳು."

"ಯಾರನ್ನು ಕುರಿತು ಆ ಮಾತಾಡುತ್ತಿದ್ದೀರ - ಮರ್ಯಾದೆಗೆ ಅಂಜಿ ಮಗಳನ್ನು ಕೈಯಾರೆ ಕಡಿದ ತಂದೆಯನ್ನೇ ಮನೆಗೆ ಕಸ್ತೂರಿ ತಿಲಕದಂತಿದ್ದ ಮಗಳನ್ನು ಕಳೆದುಕೊಂಡ ತಾಯನ್ನೇ, ಕಣ್ಣೀರಿಡುವ ಆಕೆಯ ಬಂಧು-ಬಳಗದವರನ್ನೇ – ಯಾರನ್ನು ಬಯ್ಯುತ್ತಿದ್ದೀರಿ, ಅಣ್ಣಾ. ಅನ್ನುವುದಿದ್ದರೆ ನಿಮ್ಮ ಕಣ್ಣನ್ನು ಬೈದುಕೊಳ್ಳಿ. ನಾಲಗೆಯನ್ನು ನಿಂದಿಸಿಕೊಳ್ಳಿ, ಬೀದಿ ಮಾತಾದ ನಿಮ್ಮ ನೀತಿಯನ್ನು ಹಂಗಿಸಿಕೊಳ್ಳಿ......"

-ಉಕ್ಕಿಬಂದ ಉದ್ವೇಗದಲ್ಲಿ ತಾನೇನು ಮಾತಾಡುತ್ತಿದ್ದೇನೆ ಎಂದು ತಿಳಿಯದೆ ಮಾತಾಡಿದ, ಪರಶುರಾಮನಾಯಕ, ಮಾರಿ ಮೈಮೇಲೆ ಬಂದವನಂತೆ.

"ತೊಲಗಾಚೆ ನನ್ನ ಕಣ್ಣೆದುರಿನಿಂದ, ತೊತ್ತಿನ ಮಗನೆ" ಎಂದು ಸಿಡಿಲಿನಂತೆ ಅಬ್ಬರಿಸಿದ ಮದಕರಿನಾಯಕ.

ತಾನಾಡಿದ ವಾರ್ತೆಯನ್ನು ಕೇಳಿ, ಪ್ರಳಯಜ್ವಾಲೆಯಂತಾದ ತನ್ನಣ್ಣನ ಕಣ್ಣುಗಳನ್ನು, ಉರಿ ಕಕ್ಕುವ ಮೋರೆಯನ್ನು, ಸಿಡಿಲಬ್ಬರವಾದ ಧ್ವನಿಯನ್ನು–

ನಿಂತು ನೋಡಲಾಗದೆ, ಕೇಳಲಾಗದೆ, ಅಲ್ಲಿಂದ ಹೊರಟುಹೋದ ಪರಶುರಾಮನಾಯಕ.

'ತಾಯಿ - ಇದೇನು ಕಲಂಕ ತಂದೆ, ನನ್ನ ನೆತ್ತಿಗೆ'

-ಎಂದು ನೆತ್ತರೊಸರುವಂತೆ, ಹಣೆಯನ್ನು ಹತ್ತಿರದ ಗೋಡೆಗೆ ಘಟ್ಟಿಸಿ ಹಾಗೆ ಕುಸಿದು ಬಿಟ್ಟ ಮದಕರಿನಾಯಕ, ಅಗಸನೆತ್ತಿ ಕುಕ್ಕಿದ ತೊಯ್ದ ಬಟ್ಟೆಯಂತೆ.

ಒಂದು ದಿನವಾಯಿತು, ಎರಡು ದಿನವಾಯಿತು-

ಕುಳಿತೆಡೆಯಿಂದ ಮೇಲೇಳಲಿಲ್ಲ, ಮದಕರಿನಾಯಕ –

ಸುತ್ತಲೂ ಭೋರ್ಗರೆವ ಕಡಲಲೆಗಳು ಅಪ್ಪಳಿಸುತ್ತಿರುವ ನೀರ ನಡುವಣ ಬಂಡೆಯಂತೆ-

ಮರಿಯನ್ನು ಕಳೆದುಕೊಂಡ ವ್ಯಾಘ್ರಣಿಯ ಮುಖ ಹೊತ್ತು.

ಮಾತಿಲ್ಲ, ಕಥೆಯಿಲ್ಲ, ಊಟವಿಲ್ಲ, ನೀರಿಲ್ಲ - ಹತ್ತಿರ ಯಾರು ಸುಳಿದರೂ, ಆ ಮುಖವನ್ನು ಕಂಡ ಕಣ್ಣು ಕೆಂಡದ ಮೇಲೆ ಬಿದ್ದ ಭತ್ತ ಅರಳಾಗಿ ಸಿಡಿವಂತೆ ನೋಡುತ್ತಾ.

ಉರಿ ಉರಿದು ಬರಿ ಗಾಜಿನ ಬುರುಡೆಯಂತಾದ ಮುಖ. ಉರಿಬಿಸಿಲ ಬೇಸಿಗೆಗೆ ಬತ್ತಿ ಪಾತಾಳಕ್ಕಿಳಿದ ಭಾವಿಯ ನೀರಿನಂಥ ಕಣ್ಣುಗಳು, ಮುಖದ ಗೆರೆಗೆರೆಯೂ ದುಃಖದ ಕೋಣ ಮದಿಸಿ ತುಳಿದ ಕೆಸರಿನಂತೆ, ನರ ಬಿಗಿದಷ್ಟು ಬಿಗಿದು, ಸಿಡಿದು ಸಿಂಬಿಯಾಗಿ ಸುರುಟಿಗೊಂಡಂಥ ಮೈ, ಆಗೊಮ್ಮೆ-ಈಗೊಮ್ಮೆ, ಯಾವುದೋ ಭಾವೋದ್ವೇಗಕ್ಕೆ ಕಂಪಿಸುವ ಕೈಬೆರಳುಗಳು, ಕಚ್ಚಿ ಕಚ್ಚಿ ರಕ್ತದ ಕರೆಕಟ್ಟಿದ ತುಟಿಗಳು, ಕಣ್ಣೀರಿಂಗಿ ಮಲಿನವಾದ ಕೆನ್ನೆಗಳು-

ಕುಳಿತರೆ ಕುಸಿದ ಹಾಗೆ, ನಡೆದರೆ ನೆಲ ನುಂಗುವ ಹಾಗೆ;

ಬೆಟ್ಟದಂತಿದ್ದ ಮದಕರಿನಾಯಕ, ದುಃಖದ ದಾವಾಗ್ನಿ ಉರಿಸಿ, ಬೇಸರಿಸಿ ಕಕ್ಕಿದ ಬೂದಿಯ ಗುಡ್ಡೆಯಂತಾಗಿದ್ದ.

ಅವರಿವರಿರಲಿ –

ಹೆತ್ತ ತಾಯಿ ನಿಂಗವ್ವನಿಗೂ ಆ ಮುಖವನ್ನು ನೋಡುವ ಧೈರ್ಯವಾಗಲಿಲ್ಲ; ಮಾತಾಡಿಸಲು ಉಸಿರು ಹೊರಡಲಿಲ್ಲ.

ಕಾಣಬಂದ ಕಡೂರಿಯೂ, ಆ ಮುಖವನ್ನು ನೋಡಲಾಗದೆ ಕಣ್ಣೀರಧಾರೆಯಾಗಿ ಕೆರಳಿದಳು.

ಹಾಗಿದ್ದ ಮದಕರಿನಾಯಕ, ಒಂದು ದಿನ ಇದ್ದಕ್ಕಿದ್ದಂತೆ, ಸೆಟೆದು ನಿಂತು, ಬಾಗಿಲಾಚೆ ಎಲ್ಲೋ ನಿಂತಿದ್ದ ಆಳನ್ನು ಕೂಗಿ –

"ಹೋಗು - ನಾವು ಪಟ್ಟದ ಮೇಲೆ ಕೂಡುವ ದಿನ ಹಾಕಿಕೊಳ್ಳುವ ಬಟ್ಟೆಬರೆ, ಆಭರಣ, ಕಿರೀಟ ಎಲ್ಲವನ್ನೂ ತಾ. ತಡಮಾಡಿದರೆ ತೊಗಲು ಸುಲಿದೇನು !" – ಎಂದು ಹೇಳಿದ.

ಆಳು ಆತುರಾತುರವಾಗಿ ಓಡಿ, ನಾಯಕರ ವಸ್ತ್ರಾಭರಣಗಳ ಮೇಲ್ವಿಚಾರಣೆ ನೋಡಿಕೊಳ್ಳುವ ಅಧಿಕಾರಿಗಳಿಗೆ, ನಾಯಕರ ಅಪ್ಪಣೆಯನ್ನು ತಿಳಿಸಿದ.

ಆ ಮಾತು ಕೇಳಿದ ಅಧಿಕಾರಿ ಬೆಚ್ಚಿದ. ಅರಸರ ಆಜ್ಞೆ ಎಂದು ಭಂಡಾರಿಗಳನ್ನು ಕರೆಸಿ, ಬೀಗಮುದ್ರೆ ತೆಗೆಸಿ, ಆಳುಗಳನ್ನು ಕರೆದು. ಎಲ್ಲವನ್ನೂ ಬೆಳ್ಳಿಯ ಹರಿವಾಣಗಳಲ್ಲಿ ಹೊರೆಸಿಕೊಂಡು, ದೊರೆಗೆ ಉಡುಪು ಉಡಿಸಿ, ಆಭರಣ ತೊಡಿಸುವ ಕಾಯಕದವರನ್ನು ಕರೆಸಿಕೊಂಡು ನಾಯಕರತ್ತ ಹೊರಟ.

ಆ ವಿಚಿತ್ರವಾರ್ತೆ ಆರಮನೆಯಲ್ಲೆಲ್ಲಾ ಹರಡಿ, ನಿಂಗವ್ವಯ ಕಿವಿಗೆ ಬಿದ್ದು 'ಮಗ ಇದೇನು ಮಾಡುತ್ತಿದ್ದಾನೆ, ದುಃಖದಲ್ಲಿ ಬುದ್ಧಿ ಅಸ್ತವ್ಯಸ್ತವಾಯಿತೇನೋ' ಎಂದು ಹೆದರಿ, ಆತುರಾತುರವಾಗಿ, ಇದ್ದಕ್ಕಿದ್ದ ಹಾಗೇ ಬರಬೇಕೆಂದು ಪರಶುರಾಮನಾಯಕನನ್ನು ಕರೆಯಲು ಆಳನ್ನಟ್ಟಿ, ಮದಕರಿನಾಯಕನನ್ನು ನೋಡಲು ಹೊರಟಳು.

ಆಕೆ ಮದಕರಿನಾಯಕನಿದ್ದೆಡೆಗೆ ಬಂದಾಗ, ಆತ ಶಿಲಾವಿಗ್ರಹದಂತೆ ನಿಂತು, ಆಳುಗಳು ತೊಡಿಸುತ್ತಿದ್ದ ಉಡುಪನ್ನು ಧರಿಸುತ್ತಿದ್ದ.

ಹಿಂದೆ, ಆ ಉಡುಗೆಯುಟ್ಟಾಗ ಮದಕರಿನಾಯಕ –

ಎಣ್ಣೆ ತುಂಬಿಸಿ ಹೊತ್ತಿದ ದೀಪದ ಕುಡಿಯಂತೆ ಉಜ್ವಲವಾಗಿ ಕಾಣುತ್ತಿದ್ದ.

ಈಗ –

ಬೋಳುಮರಕ್ಕೆ ಕಡ ತಂದ ಕೊಂಬೆ, ಎಲೆಗಳನ್ನು ಕಟ್ಟಿದ ಹಾಗೆ ಕಾಣುತ್ತಿದ್ದಾನೆ, ಅಲಂಕಾರವೂ ಕಣ್ಣಿರಿಯುವ ವಿಕಾರವಾಗಿ.

ಆ ನೋವು ತಡೆಯಲಾಗದೆ –

"ಇದೇನು ಮಾಡುತ್ತಿದ್ದೀಯ, ಮದಕೇರಂಣ ?"

- ನುಡಿನುಡಿಯೂ ಕಣ್ಣೀರಿಡುವ ಮಾತುಗಳಲ್ಲಿ ಕೇಳಿದಳು, ನಿಂಗವ್ವ.

"ಇತ್ತ ನೀವೇಕೆ ಬಂದಿರಿ, ಅವ್ವಾ. ಬರಬೇಡಿ – ಹೋಗಿ, ನಾನು ಮಾಡಿದ ಪಾಪವನ್ನು ತೊಳೆದುಕೊಂಡು ಬರುವವರೆಗೂ ನನ್ನ ಹೇಸಿಗೆ ಮುಖ ನೋಡಲು ಬರಬೇಡಿ, ಯಾರಿಗೂ ಮುಖ ತೋರಿಸಲೂ ನಾಚಿಕೆಯಾಗುತ್ತದೆ."

- ಎಲ್ಲ ಭಾವನೆಯೂ ಸತ್ತ ಸ್ವರದಲ್ಲಿ ಹೇಳಿದ, ಮದಕರಿನಾಯಕ.

"ನೀನೆಲ್ಲಿಗೆ ಹೋಗುತ್ತಿದ್ದೀಯಾ ಹೇಳು."

"ಬದುಕಬೇಕಾಗಿದ್ದವರನ್ನು ಬಲಿತಿಂದ ನಾನು ಮತ್ತೆ ಬದುಕಲು ಸಾಧ್ಯವೇನೋ ಎಂದು ತಿಳಿಯುವ ಸ್ಥಳಕ್ಕೆ."

"ಅಂದರೆ – "

"ಈಗ ಮಾತು ಬಿಡಿ, ಅವ್ವ. ಬದುಕಿ ಬಂದರೆ ಮತ್ತೆ ಹೇಳುತ್ತೇನೆ."

"ಇದೇನು ಮಾತು. ಈಗೇಕೆ ಈ ವೇಷ ?"

"ಈ ವೇಷದ ಪೊಗರೇ ನನ್ನನ್ನು ರಕ್ಕಸನನ್ನಾಗಿ ಮಾಡಿದ್ದು. ಅಪ್ಪಾ, ನೀವಿನ್ನು ಮಾತಾಡಬೇಡಿ. ನಿಮ್ಮ ಮಗ, ಮಗನೆಂದು ಕರೆಸಿಕೊಳ್ಳಲು ಅರ್ಹನಾಗುವವರೆಗೆ ನನ್ನನ್ನು ನೋಡಲು ಬರಬೇಡಿ. ಕಾಲಿಗೆ ಬಿದ್ದು ಕೇಳುತ್ತೇನೆ - ಇಲ್ಲಿಂದ ಹೊರಟುಹೋಗಿ."

ಮದಕರಿನಾಯಕ ಆ ಮಾತಾಡುತ್ತಿರುವ ವೇಳೆಗೆ ಪರಶುರಾಮನಾಯಕನೂ ಅಲ್ಲಿಗೆ ಓಡಿ ಬಂದು ಅಣ್ಣನ ವಿಚಿತ್ರಾವತಾರವನ್ನು ಕಂಡು ದಿಗ್ಭ್ರಾಂತನಾಗಿ –

"ಅವ್ವ - ಇದೇನಾಗುತ್ತಿದೆ ?" – ಎಂದು ಕೇಳಿದ.

"ನನಗೇನೂ ತಿಳಿಯದು. ನಿಮ್ಮಣ್ಣನನ್ನೇ ಕೇಳಪ್ಪಾ. ಹೆತ್ತ ಹೊಟ್ಟೆಯನ್ನು ಹೀಗೇಕೆ ಉರಿಸುತ್ತಿದ್ದಾನೋ –"

- ಉಕ್ಕಿದ ಕಂಬನಿಯ ಭಾರದಲ್ಲಿ ಕುಸಿಯುತ್ತಾ ಕೇಳಿದಳು, ನಿಂಗವ್ವ.

"ಅಣ್ಣಾ - ಇದೇನು ಮಾಡುತ್ತಿದ್ದೀರ ?"

"ಅಂದುಕೊಂಡ ಕೆಲಸ ಮಾಡಿಬಂದು ಹೇಳುತ್ತೇನೆ - ಅಲ್ಲಿಯವರೆಗೆ ಯಾರೂ ಮಾತಾಡಿಸಬೇಡಿ."

"ನಾನು - ನಿಮ್ಮ ತಮ್ಮ, ನಾನೂ ಕೇಳಬಾರದೆ ?"

"ನಾನು ಈಗ ಯಾರ ಅಣ್ಣನೂ ಅಲ್ಲ, ಯಾರ ಮಗನೂ ಅಲ್ಲ - ಕೇವಲ ದೊರೆಯ ಉಡುಪು ತೊಟ್ಟ ಕೊಲೆಗಡುಕ, ಅರ್ಥವಾಯಿತೇ - ಇನ್ನಾಚೆಗೆ ಹೋಗಿ."

-ಅಚಲನಿರ್ಧಾರ ತುಂಬಿದ ನಿಷ್ಠುರವಾಣಿಯಲ್ಲಿ ಹೇಳಿದ ಮದಕರಿನಾಯಕ, ಆ ವೇಳೆಗೆ ತನ್ನ ಅಲಂಕಾರ ಮುಗಿದು, ಹೊರಡಲು ಸಿದ್ಧನಾಗಿ,

"ಎಲ್ಲಿಗೆ ಹೋಗುತ್ತೀಯ, ಹೇಳು - ಹೇಳದಿದ್ದರೆ ನನ್ನ ಹೆಣ ತುಳಿದುಕೊಂಡು ಹೋಗು"

-ಎಂದು ಅಡ್ಡ ಮಲಗಿದಳು, ನಿಂಗವ್ವ.

ಅಡ್ಡ ಮಲಗಿದ ತಾಯನ್ನು ಕಂಡು ಮದಕರಿನಾಯಕನ ಗಂಟಲು ಹಿಸುಕಿದಂತಾಗಿ-

"ನೀವೇ ನನ್ನ ದಾರಿಗೆ ಅಡ್ಡವಾಗಬೇಕೇ, ಅವ್ವಾ... ಆಯಿತು, ಮೇಲೇಳಿ – ಲೋಕಕ್ಕೇ ತಿಳಿಯಬೇಕಾದದ್ದು ಮೊದಲು ನಿಮಗೇ ತಿಳಿದರೇನು ತಪ್ಪು. ಆದರಿಷ್ಟೇ - ಹೀಗೆಂದು ಹೇಳಿದ ಬಳಿಕ, ಮತ್ತೆ ನೀವು ನನ್ನ ದಾರಿಗೆ ಅಡ್ಡನಿಲ್ಲಬಾರದು"

- ಎಂದು ಎಲ್ಲ ಭಾವವೂ ಸತ್ತ ಧ್ವನಿಯಲ್ಲಿ ಹೇಳಿ, ಸುತ್ತಲಿದ್ದ ಪರಿಚಾರಕರನ್ನು ಅಲ್ಲಿಂದ ಹೋಗುವಂತೆ ಕಣ್ಣೋಟದಿಂದಲೇ ಅಪ್ಪಣೆಮಾಡಿದ.

ಮದಕರಿನಾಯಕನ ಉರಿಗಣ್ಣಿ ನೋಟವನ್ನು ನೋಡಿ, ಪರಿಚಾರಕರು ಅಲ್ಲಿಂದ ಮಂಜಿನಂತೆ ಕರಗಿದರು.

ಪರಿಚಾರಕರು ಅಲ್ಲಿಂದ ತೆರಳಿದ ಬಳಿಕ, ಮೇಲೆದ್ದ ತಾಯಿಗೆ-

"ಅಲ್ಲಿ ಕುಳಿತುಕೊಳ್ಳಿ, ಅವ್ವಾ - ನೀವೇನೂ ನಾನು ಮಸಣಕ್ಕೆ ಹೋಗುತ್ತಿದ್ದೇನೆಂದು ಹೆದರಬೇಡಿ; ಮನುಷ್ಯನಾಗಲು ಹೋಗುತ್ತಿದ್ದೇನೆ"

-ಎಂದು ಹೇಳಿದ, ತಾಯಿ ತನ್ನ ಮಾತಿನಂತೆ ಕುಳಿತ ಬಳಿಕ, ಮದಕರಿನಾಯಕ.

"ಆ ಮುಂದಿನ ಮಾತು ಹಾಗಿರಲಿ - ಈಗೆಲ್ಲಿಗೆ ಹೊರಟಿದ್ದೀಯ ಎಂದು ಹೇಳು."

"ತಳವಾರ ಕಂಪಳಯ್ಯನವರ ಮನೆಗೆ."

"ಏಕೆ ?"

- ನಿಂಗವ್ವ, ಪರಶುರಾಮಪ್ಪ ಇಬ್ಬರೂ ಒಟ್ಟಾಗಿ ಕೇಳಿದರು, ಮದಕರಿನಾಯಕನಾಡಿದ ಮಾತು ಕೇಳಿ.

"ಅರಸುತನದ ಸೊಕ್ಕು ತುಂಬಿದ ನಾಲಗೆ, ಪ್ರಾಯದ ಪೊಗರಿನಿಂದ ಬೀಗಿದ ಕಣ್ಣುಗಳು ಮಾಡಿದ ಕಗ್ಗೊಲೆಯ ಅಪರಾಧಕ್ಕೆ ಬಲಿಯಾದ ಅವರ ಮಗಳ ಕೊಲೆಯ ಅಪರಾಧಕ್ಕೆ, ಈ ಅರಸುತಲೆಗೆ ಹೆತ್ತ ಕರುಳು ವಿಧಿಸುವ ದಂಡವೇನು, ವಿಧಿಸಬೇಕಾದ ಪ್ರಾಯಶ್ಚಿತ್ತವೇನು ಎಂದು ಕೇಳಿ ತಿಳಿಯುವುದಕ್ಕೆ."

- ನಿರ್ವಿಕಾರವಾದ ಧ್ವನಿಯಲ್ಲಿ, ಅದು ತನಗೆ ಸಂಬಂಧಿಸಿದ್ದಲ್ಲವೇನೋ ಎಂಬಂತೆ ಹೇಳಿದ, ಮದಕರಿನಾಯಕ.

ಆ ಮಾತು ಕೇಳಿ, ನಿಂಗವ್ವ-ಪರಶುರಾಮನಾಯಕ ಇಬ್ಬರಿಗೂ ನಾಯಕನ ಹೃದಯವನ್ನು ಸುಡುತ್ತಿರುವ ಬೆಂಕಿ ಎಂಥದು ಎಂದು ಅರಿವಾಯಿತು.

ವಿಷಯವೇನೆಂದು ತಿಳಿದ ನಿಂಗವ್ವ –

"ತಪ್ಪು ಕೇಳಬೇಕಾದದ್ದೇನೋ ಸರಿಯೇ – ಅದಕ್ಕೆ ಈ ಉಡುಪು, ವೈಭವಗಳೆಲ್ಲಾ ಏಕೆ?"

-ಎಂದು ಕೇಳಿದಳು.

"ಇದೆಲ್ಲಾ ನಮ್ಮ ರಕ್ಷಣೆಗಿದ್ದವು ಎಂದಲ್ಲವೇ ನಾವು ರಾಳ ಹಾಕಿದ ಪಂಜಿನಂತೆ ಉರಿದದ್ದು. ಆದ್ದರಿಂದ ಅದನ್ನು ಧರಿಸಿಯೇ ಹೋಗಿ ಕ್ಷಮೆ ಬೇಡಿ. ಕೇಳಿದ ದಂಡ ಕೊಟ್ಟು ಬರುತ್ತೇನೆ. ಅದಾಗುವವರೆಗೂ ನನ್ನ ಮನಸ್ಸಿಗೆ ಶಾಂತಿಯಿಲ್ಲ" – ಎಂದು ಹೇಳಿದ ಮದಕರಿನಾಯಕ.

"ಹಾಗೆ ತಾವು ಮಾಡುವುದು ಸಾಧ್ಯವಿಲ್ಲ"

-ಎಂದ ನರಸಪ್ಪಯ್ಯನವರ ಅನಿರೀಕ್ಷಿತವಾದ ಧ್ವನಿ ಕೇಳಿ, ತಮ್ಮ ಮಾತಿನಲ್ಲಿ ಬೇರಾವುದೋ ಲೋಕದಲ್ಲಿದ್ದ ತಾಯಿ ಮಕ್ಕಳು ಚಕಿತರಾಗಿ, ತೆರೆದ ಬಾಗಿಲ ಬಳಿ ನಿಂತ ನರಸಪ್ಪಯ್ಯನವರನ್ನು ನೋಡಿದರು.

"ಈ ಮಾತಿಗೆ ನಿಮ್ಮನ್ನಾರು ಬರಹೇಳಿದರು ?"

- ತಮ್ಮ ಮಾತಿಗೆ ಅಡ್ಡವಾಗಿ ಬಂದ ನರಸಪ್ಪಯ್ಯನವರ ಮುಖವನ್ನು ದುರುಗುಟ್ಟಿ ನೋಡುತ್ತಾ, 'ಇಲ್ಲಿಂದ ಹೋಗಿ' ಎಂಬ ಧ್ವನಿಯಲ್ಲಿ ಕೇಳಿದ ಮದಕರಿನಾಯಕ.

"ಇಂಥ ವಿಷಯಗಳಿಗೆ ನಮಗೆ ಯಾರೂ ಅಕ್ಷತೆ ಕೊಟ್ಟು ಕರೆಸಬೇಕಾಗಿಲ್ಲ, ತಾವು ದೊರೆ, ನಾನು ಪ್ರಧಾನಿ, ದೊರೆಯಾಗಿ ನೀವು ಮಾಡುವ ಕೆಲಸದಲ್ಲಿ ಪ್ರಧಾನಿಯಾಗಿ ನಾನು ಇರಬೇಕು."

- ಕೊಂಚವೂ ಅಂಜದೆ, ಅಳುಕದೆ, ತಣ್ಣನೆಯ ಧ್ವನಿಯಲ್ಲಿ ಹೇಳಿದರು, ನರಸಪ್ಪಯ್ಯ.

"ಇದು ನಿಮಗೆ ಸಂಬಂಧಿಸಿದ ವಿಷಯವಲ್ಲ."

"ಹಾಗೆಂದು ನೀವು ಹೇಳಬಹುದು. ಆದರೆ ನಾನದನ್ನು ಒಪ್ಪುವುದಿಲ್ಲ. ಇದು ಬರೀ ತಾಯಿ-ಮಕ್ಕಳ ವಿಷಯವಾಗಿದ್ದರೆ, ನಾನು ಮಧ್ಯಪ್ರವೇಶ ಮಾಡುತ್ತಿರಲಿಲ್ಲ – ಅಷ್ಟು ದೂರ ಸರಿದು ನಿಲ್ಲುತ್ತಿದ್ದೆ. ಆದರೆ ಹಾಗಲ್ಲ - ಈಗಿನ್ನೂ ನೀವು ದುರ್ಗದ ನಾಯಕರು, ಅರಸರಾದ ನೀವು ನಾಡಾಡಿಯಂತೆ ನಡೆದುಕೊಳ್ಳಲು ಬಿಟ್ಟರೆ, ಅದು ನಮ್ಮ ಕರ್ತವ್ಯಚ್ಯುತಿಯಾದೀತು -"

-ಎಂದು ತನ್ನ ಮಾತಿನ ಮಧ್ಯೆ ಏನೋ ಹೇಳಹೊರಟ ಮದಕರಿನಾಯಕನನ್ನು ಕೈ ಮೇಲೆತ್ತಿ ತಡೆದು –

"ನನ್ನ ಮಾತನ್ನು ತಾಳ್ಮೆಯಿಂದ ಕೇಳಬೇಕು. ವಿಷಯವೆಲ್ಲಾ ನನಗೆ ಗೊತ್ತಿದೆ. ನಿಮ್ಮ ಮನಸ್ಸು ಏನೆಂಬುದೂ ನನಗೆ ಅರ್ಥವಾಗಿದೆ. ಆದ್ದರಿಂದ ತಾವು ಮಾತನಾಡುವ ಆಯಾಸ ತೆಗೆದುಕೊಳ್ಳದೆ, ನಾನು ಹೇಳುವುದನ್ನು ಕೇಳಬೇಕು. ನಾಯಕರ ಕೀರ್ತಿಗೆ ಕಾಮದ ಕಳಂಕ ತೊಡೆದಿರುವುದು, ಅದನ್ನು ನಿಜವೆಂದು ನಂಬಿದ ತಂದೆಯಿಂದ ನಿರಪರಾಧಿ ಮಗಳ ವಧೆಯಾದುದು – ನಮಗೆ ಎರಡು ದಿನದ ಹಿಂದೆಯೇ ತಿಳಿಯಿತು. ಈ ವಿಷಯದಲ್ಲಿ ನೀವು ನಿರಪರಾಧಿಗಳು. ಜನರ ಹೊಲಸುನಾಲಗೆ ನಿಜವಾದ ಅಪರಾಧಿ ಎಂದು ನಮಗೆ ನಂಬಿಕೆಯಾದ್ದರಿಂದ, ಮಾನವ ಸಹಜವಾಗಿ ನಿಮ್ಮಲ್ಲಿ ಮೂಡಿದ ದುಃಖ ಶಾಂತವಾಗಲಿ ಎಂದು ಸುಮ್ಮನಿದ್ದೆವು. ಆದರೆ ಇದೆಲ್ಲಾ ನೋಡಿ, ಈಗ ತಾವು ಒಂದು ಗಳಿಗೆಯ ಹಿಂದೆ ಮಾಡಿದ ನಿರ್ಧಾರದ ಮಾತು ಕೇಳಿ, ತಮ್ಮ ದುಃಖ ಅತಿರೇಕಕ್ಕೆ ಹೋಗಿ, ನಿಮ್ಮ ಪದವಿಗೆ ಅಪಚಾರವಾಗುತ್ತಿದೆ ಎಂದು ತಿಳಿದೇ ನಾನು ಮಧ್ಯಪ್ರದೇಶ ಮಾಡಿದ್ದು." - ಹೇಳಿದರು, ನರಸಪ್ಪಯ್ಯ.

"ಮಧ್ಯೆ ಬಂದು ಮಹದುಪಕಾರ ಮಾಡಿದಿರಿ. ಮುಂದೆ ನಾವೇನು ಮಾಡಬೇಕು ಎಂಬುದನ್ನು ಪ್ರಧಾನಿಗಳು ಅಪ್ಪಣೆ ಕೊಡಿಸಬೇಕು."

- ಸುರುಗಿಯಂತೆ ಇರಿವ ವ್ಯಂಗ್ಯವಿದ್ದ ಧ್ವನಿಯಲ್ಲಿ ಕೇಳಿದರು, ಮದಕರಿನಾಯಕ.

"ನಿಮ್ಮ ದುಃಖ, ಸಿಟ್ಟು ಅರ್ಥವಾದಂತೆ ನಿಮ್ಮ ಮಾತಿನ ವ್ಯಂಗ್ಯವೂ ನನಗೆ ಅರ್ಥವಾಗುತ್ತದೆ - ಅದು ಹಾಗಿರಲಿ."

"ಇರಲಿ – ಈಗ ನಾವೇನು ಮಾಡಬೇಕು ?"

"ಏನೂ ಮಾಡಬೇಕಾದದ್ದಿಲ್ಲ. ಅರಿಯದೆ ಆದ ಅನ್ಯಾಯವನ್ನು ಸರಿಪಡಿಸುವ ಹೊಣೆಯನ್ನು ನಮಗೆ ಬಿಡಬೇಕು. ರಾಜರಾದವರು, ತಾವು ಮಾಡದ ತಪ್ಪಿಗಾಗಿ – ಒಂದುವೇಳೆ ತಪ್ಪಾಗಿದ್ದರೂ ಸರಿಯೆ - ಪ್ರಜೆಯೊಬ್ಬರ ಪಾದಕ್ಕೆರಗುವುದು ಅರಸುಪದವಿಗೆ ಅಪಮಾನ."

"ಇದು ರಾಜ-ಪ್ರಜೆಯ ಸಂಬಂಧವಲ್ಲ...."

"ತಂದೆ ತನ್ನ ತಪ್ಪುತಿಳುವಳಿಕೆಯಿಂದ ಮಗಳ ಕೊಲೆ ಮಾಡಿದ ದುರ್ಘಟನೆ, ದುರ್ದೈವದಿಂದ ಇದರಲ್ಲಿ ಅರಸರ ಹೆಸರು ಬೆರೆತಿದೆ. ಆ ತಪ್ಪು ತಿಳುವಳಿಕೆಯನ್ನು ಸರಿಪಡಿಸಲು ನಮಗೆ ಬಿಡಬೇಕು."

"ತಿಳಿದೋ ತಿಳಿಯದೆಯೋ, ಈ ಕೊಲೆಗೆ ನಮ್ಮ ಕಣ್ಣು ನಾಲಗೆ ಕಾರಣವಾದದ್ದು ಸತ್ಯ. ನಮ್ಮ ಕಣ್ಣುನಾಲಗೆಗೆ ಕೀಲುಕಡಿವಾಣವಿದ್ದಿದ್ದರೆ ಈ ದುರಂತ ನಡೆಯುತ್ತಿರಲಿಲ್ಲ, ಆದ್ದರಿಂದ ತಪ್ಪು ನಮ್ಮದಾಗಲಿಲ್ಲವೇ ?" – ಮದಕರಿನಾಯಕ ಕೆಣಕುವಂತೆ ಕೇಳಿದ.

"ಧರ್ಮಸೂಕ್ಷ್ಮ ನಿಮ್ಮ ಮಾತನ್ನು ಒಪ್ಪಬಹುದು. ಆದರೆ ದೊರೆಯಾದವನು ಹೋಗಿ, ಪ್ರಜೆಯಾದವನಿಗೆ ಅಡ್ಡಬಿದ್ದು ತಪ್ಪಾಯಿತು ಎಂದು ಕೇಳಿಕೊಂಡರೆ, ಆ ಬಳಿಕ ನೀವು ಡಂಗೂರ ಹೊಡೆಸಿ ಸಾರಿಸಿದರೂ ನೀವು ನಿರಪರಾಧಿಗಳು ಎಂದು ಯಾರೂ ನಂಬುವುದಿಲ್ಲ. ಈಗ ಮಾತಾಗಿರುವುದು ಸತ್ಯವೆಂಬಂತಾಗುತ್ತದೆ. ಆದ್ದರಿಂದ ಇದು ಕೂಡದು."

"ಏಕೆ ?"

"ದುಃಖದಲ್ಲಿ ಪ್ರಭುಗಳ ಕಣ್ಣು ಕುರುಡಾಗಿದೆ. ಯೋಚಿಸಿ ನೋಡಿ. ಅರಿತು ನೀವು ಅಪರಾಧ ಮಾಡಲಿಲ್ಲ, ಆದರೂ ಮನಸ್ಸಿನ ಪಾಪಕ್ಕೆ ಅಂಜಿದಿರಿ, ಅಳುಕಿದಿರಿ. ಪಶ್ಚಾತ್ತಾಪ ಪಟ್ಟಿರಿ. ಅದೆಲ್ಲವೂ ಸರಿಯೆ -"

" ಅದೆಲ್ಲವೂ ಸರಿ – ಆದರೆ ನಾವು ಕ್ಷಮೆ ಕೇಳುವುದು ಮಾತ್ರ ತಪ್ಪು."

"ನಿಜ. ನೂರು ಬಾರಿ ಬೇಕಾದರೂ ಹೇಳುತ್ತೇನೆ - ತಪ್ಪು. ಅರಸುಪದವಿ ಎಂದರೆ ಬಯಲು ನಾಟಕದಲ್ಲಿ ದೊರೆಯ ವೇಷ ಧರಿಸಿದ ಹಳ್ಳಿಗನ ರಾಜಪದವಿಯಲ್ಲ, ಮಹಾ ಸ್ವಾಮಿ. ಈ

ವೇಷ ತೊಟ್ಟು ಹೋಗಿ ನೀವು ಕಂಪಳಯ್ಯನವರ ಕಾಲಿಗೆ ಬಿದ್ದರೆ, ಜನ ನಿಮ್ಮ ಹೆಸರನ್ನು ಕೊಂಡಾಡುವುದಿಲ್ಲ, ಹಿಂದೆ ಆಡಿಕೊಂಡು ನಗುತ್ತಾರೆ. ತಮ್ಮ ನೀತಿ, ನಡತೆ ಎಲ್ಲವೂ ನಗೆಪಾಟಲಾಗುತ್ತದೆ. ನೀವು ದೊರೆಯಾಗಿ ಯೋಚನೆ ಮಾಡುತ್ತಿಲ್ಲ."

"ಇಲ್ಲ - ಮನುಷ್ಯನಾಗಿ ಯೋಚನೆ ಮಾಡುತ್ತಿದ್ದೇನೆ. ನಾನು ಮನುಷ್ಯನಲ್ಲವೇ ? ಅರಸು ಮನುಷ್ಯನಲ್ಲವೇ ? ಮನುಷ್ಯನಾದವನು ಮನುಷ್ಯನ ಕ್ಷಮೆ ಬೇಡುವುದು ತಪ್ಪೆ ?"

"ತಾವು ಮನುಷ್ಯರೇ. ಆದರೂ ದೊರೆ. ಆದ್ದರಿಂದ ತಮ್ಮ ದುಃಖ. ಕ್ಷಮಾಯಾಚನೆ ಎಲ್ಲವೂ ಆ ಅಂತಸ್ತಿನಲ್ಲಿಯೇ ನಡೆಯಬೇಕು. ತಾವು ತಪ್ಪು ಮಾಡದಿದ್ದರೂ ಕ್ಷಮೆ ಕೇಳ ಬೇಕು ಎನ್ನುತ್ತೀರ. ನಿಮ್ಮ ಮಾತು ನಡೆಸಲು ನಾವಿದ್ದೇವೆ - ನಮಗೆ ಬಿಡಿ. ನಿಮ್ಮ ದುಃಖ, ಹೆತ್ತವರ ದುಃಖ ಎರಡಕ್ಕೂ ಸರಿಹೋಗುವಂತೆ ನಾವು ಕರ್ತವ್ಯ ನಿರ್ವಹಿಸುತ್ತೇವೆ."

"ಅಂದರೆ – ನಮ್ಮ ಪರವಾಗಿ ನೀವು ಹೋಗುತ್ತೀರಾ...."

"ಅಪ್ಪಣೆಯಾದರೆ ನಾವು ಹೋಗುತ್ತೇವೆ" – ನರಸಪ್ಪಯ್ಯ ಹೇಳಿದರು.

"ನೀವು - ಪ್ರಧಾನಿ, ಹೋಗಬಹುದು ; ನಾನು - ಅರಸು, ಹೋಗಕೂಡದು."

"ಕೂಡದು. ನಿಮ್ಮ ದುಃಖವನ್ನು, ಅವರು ಆತುರದಲ್ಲಿ ಮಾಡಿದ ಅವಿವೇಕವನ್ನು ಹೇಗೆ ಬೇಕೋ ಹಾಗೆ ಹೇಳಿ, ನಿಮ್ಮ ಕೀರ್ತಿ ಕೆಡದ ಹಾಗೆ, ಹೆತ್ತವರ ದುಃಖ ತಂಪಾಗುವ ಹಾಗೆ ಮಾಡುತ್ತೇವೆ."

"ನೀವು ಹೇಳುತ್ತೀರ... ಮಾಡುತ್ತೀರ....ನಾವೇನು ಮಾಡಬೇಕು ?"

"ಅರಸು ಅರಸಿದ್ದ ಹಾಗಿರಿ. ಅವಿವೇಕದಲ್ಲಿ ನಡೆದ ಅಚಾತುರ್ಯವನ್ನು ನಾವು ಸರಿ ಪಡಿಸುತ್ತೇವೆ."

"ಅಂತೂ ನಾನು ಏನು ಮಾಡಿದರೂ ಅರಸನಾಗಿ ಉಳಿಯಬೇಕು, ಮನುಷ್ಯನಾಗಬಾರದು."

"ಅದು ನೀವು ಹೊತ್ತ ಪದವಿಯ ದೃಷ್ಟಿಯಿಂದ ಅನಿವಾರ್ಯ."

"ನೀವು ಹೋಗಿ ಕೇಳಿದರೆ ಮಗಳನ್ನು ಬಲಿಗೊಟ್ಟ ಹೊಟ್ಟೆ ತಂಪಾಗುತ್ತದೆಯೇ ?"

"ಆಗುವುದಿಲ್ಲ - ನಾವು ಹೇಳಿದರೂ ಆಗುವುದಿಲ್ಲ. ನೀವು ನಿಮ್ಮ ನೆತ್ತಿಯ ಕಿರೀಟವನ್ನು ಅವರ ಕಾಲಿಗೆ ತೊಡಿಸಿದರೂ ತಂಪಾಗುವುದಿಲ್ಲ; ಮರ್ಯಾದೆ ಮುಕ್ಕಾಗುತ್ತದೆಯೇ ಹೊರತು ಬೇರೇನೂ ಆಗುವುದಿಲ್ಲ. ಈಗಲೇ ಊರ ಜನವೆಲ್ಲಾ ಹತ್ತಾರು ರೀತಿ ಮಾತಾಡುತ್ತಿದ್ದಾರೆ; ನೀವು ಹೋಗಿ ಕ್ಷಮೆ ಬೇಡಿ - ಈ ದುರ್ಗದ ರಾಜಪದವಿಗೆ ಶಾಶ್ವತ ಕಲಂಕ ತರಬೇಡಿ. ನಮ್ಮ ಮಾತು

ನಿಮಗೆ ನಂಬಿಕೆಯಾಗದಿದ್ದರೆ ನಿಮ್ಮ ಹಡೆದವರನ್ನು ಕೇಳಿ, ಅವರು ರಾಜ್ಯವಾಳದಿದ್ದರೂ ಲೋಕವನ್ನು ಬಲ್ಲವರು. ಹೇಳಿ ತಾಯಿ - ನಾವು ಹೇಳುವುದು ಸರಿಯೋ ತಪ್ಪೋ ?"

- ಸುಮ್ಮನಿದ್ದ ನಿಂಗವ್ವನನ್ನು ಮಾತಿಗೆಳೆದು ಕೇಳಿದರು ನರಸಪ್ಪಯ್ಯ.

ಅದುವರೆಗೂ ಪ್ರಧಾನಿಗಳು ಹೇಳಿದುದನ್ನೆಲ್ಲ ಕೇಳಿದ ನಿಂಗವ್ವನಿಗೆ ಅವರ ಮಾತು ಸರಿಯೆಂದೇ ತೋರಿ –

"ಹಿರಿಯರು ಹೇಳಿದುದು ಸರಿ. ಎಂಥ ಸಮಯದಲ್ಲೂ ದೊರೆ ಪ್ರಜೆಗಳಿಗೆ ಸದರವಾಗಬಾರದು. ಪ್ರಧಾನಿಗಳು ಹೇಳಿದ್ದು, ನೀನು ಹೇಳಿದ್ದು - ಎಲ್ಲಾ ನಾನು ಕೇಳಿದ್ದೇನೆ. ನೀವಿಬ್ಬರೂ ಹೋಗುವುದು ಬೇಡ. ನನಗೆ ಬಿಡಿ. ನಾನು ಹೆಣ್ಣಾಗಿ, ಆ ಹೆತ್ತ ಕರುಳಿಗೆ ಹೇಳ ಬೇಕಾದ ಸಮಾಧಾನ ಹೇಳಿ ಬರುತ್ತೀನಿ. ನಿನಗಷ್ಟು ಬೇಕೆನಿಸಿದರೆ - ಎರಡು ದಿನ ಬಿಟ್ಟು ತಳವಾರ ಕಂಪಳಯ್ಯನವರನ್ನು ಕರೆಸಿ ಸಮಾಧಾನ ಹೇಳು. ನನಗೆ ಈ ವಿಷಯ ಬಿಡಿ – ಇದು ಗಂಡಸಾದವರು ಪ್ರವೇಶ ಮಾಡಬಹುದಾದಂಥ ದುಃಖವಲ್ಲ" – ಎಂದು ಹೇಳಿದಳು.

"ಅವ್ವಾ, ನೀನೂ ಪ್ರಧಾನಿಗಳ ಪಕ್ಷ ಹಿಡಿದೆ. ರಾಜ ಹೋಗಕೂಡದು, ರಾಜನ ತಾಯಿ ನೀವು ಹೋಗಬಹುದೆ ?"

-ತಾಯನ್ನು ಆಕ್ಷೇಪಿಸುವಂತೆ ಕೇಳಿದ ಮದಕರಿನಾಯಕ.

"ನಾನು ರಾಜಮಾತೆಯಾಗಿ ಹೋಗುವುದಿಲ್ಲ. ಹೆಣ್ಣಾಗಿ ಹೋಗುತ್ತೇನೆ. ಅಡ್ಡಿ ಬರಬೇಡ" -ಎಂದು ಅಪ್ಪಣೆ ಮಾಡಿದಂತೆ ಹೇಳಿದಳು, ನಿಂಗವ್ವ.

"ಅಂತೂ ಯಾರಾದರೂ ಹೋಗಬಹುದು; ನಾನು ಹೋಗಕೂಡದು. ಹೋಗಿ -ನನ್ನಂಥ ಮಗನನ್ನು ಹಡೆದ ತಪ್ಪಿಗೆ ಅದೇನು ಪ್ರಾಯಶ್ಚಿತ್ತ ಅನುಭವಿಸುತ್ತೀರೋ ಅನುಭವಿಸಿ. ಅಂತೂ ನೀವೆಲ್ಲಾ ನಾನು ಮನುಷ್ಯನಾಗಬಾರದು ಎಂದು ಹಟ ತೊಟ್ಟಿದ್ದೀರ. ಇಷ್ಟೆಲ್ಲಾ ಹೇಳಿದಿರಿ – ಈಗ ನಾವೇನು ಮಾಡಬೇಕೋ - ಅದನ್ನಾದರೂ ಹೇಳಿ ಹೋಗಿ"

- ಎಂದು ಕುಸಿದು ಕುಳಿತು ಕೇಳಿದ, ಮದಕರಿನಾಯಕ, ಆ ತರ್ಕ-ವಿತರ್ಕಗಳ ಮಾತಿನಲ್ಲಿ ದುಃಖದ ಉದ್ವೇಗ ತಿಳಿದು.

"ಅಪ್ಪಾ, ಅರಿಯದೆ ಆದ ದುಃಖಕ್ಕೂ ನೀನು ಕಣ್ಣೀರಿಟ್ಟೆಯಲ್ಲ - ನಿನ್ನನ್ನು ಹೆತ್ತ ಹೊಟ್ಟೆಗೆ ಅಷ್ಟು ಸಂತೋಷ ಸಾಕು. ಈಗ ಆದದ್ದಾಯಿತು. ಪ್ರಧಾನಿಗಳು ಹೇಳಿದಂತೆ ಬೀದಿಹಗರಣದಿಂದ ಏನು ಸಾಧನೆಯೂ ಆಗುವುದಿಲ್ಲ. ಸದ್ಯಕ್ಕೆ ಅವರು ಹೇಳಿದಷ್ಟು ಮಾಡು - ಸಾಕು" – ಎಂದಳು ನಿಂಗವ್ವ.

"ಅಷ್ಟೇ ಸಾಕೇ - ?" - ಮದಕರಿನಾಯಕ ಕೇಳಿದ.

“ಸದ್ಯಕ್ಕಿಷ್ಟು ಸಾಕು. ಆದರೂ ಈಗ ಸಮಯ ಬಂದಿದೆ ಎಂದು ಒಂದು ಮಾತು ಹೇಳುತ್ತೇನೆ - ಪ್ರಭುಗಳು ಚಿತ್ತವಿಟ್ಟು ಕೇಳಬೇಕು.”

“ಹೇಳಿ – ಅದೇನೇನು ಹೇಳುತ್ತೀರೋ ಹೇಳಿ, ಪ್ರಧಾನಿಗಳೇ. ಇವತ್ತು ನಿಮ್ಮ ನಾಲಗೆಗೆ ಅಖಾಡಾ ಇದು. ಅದೇನು ಹೊಸ ಕಸರತ್ತು ಕಲಿಸುತ್ತೀರೋ ಕಲಿಸಿ.”

“ಹೆಚ್ಚು ಹೇಳುವುದೇನೂ ಇಲ್ಲ, ಇಷ್ಟೆ : ದೊರೆಗಳಾದವರು ಮನಸ್ಸಿಗೆ ಬಂದದ್ದನ್ನು ನೂರು ಮಾತಿನಲ್ಲಿ ಯಾರ ಮುಂದೂ ಹೇಳಬಾರದು. ನೋವಿರಬೇಕಾದದ್ದು, ಎಚ್ಚರವಿರ ಬೇಕಾದದ್ದು ಮನಸ್ಸಿನಲ್ಲಿ, ಮಾತಿನಲ್ಲಲ್ಲ. ಹತ್ತು ಯೋಚನೆಗೆ - ಒಂದು ಮಾತು. ಅಷ್ಟೇ ಅಲ್ಲ - ರಾಜರಾದವರು ಬೇರೆಯವರು ಧಾರಾಳವಾಗಿ ಮಾತಾಡಲು ಬಿಡಬೇಕು. ದೊರೆಯ ಮನಸ್ಸು ಅವರ ಮಾತಿನಲ್ಲಿ ಮಾತಿನ ಹಿಂದಿನ ಮರ್ಮವನ್ನು ಇಣುಕಿ ನೋಡುತ್ತಿರಬೇಕು. ರಾಜರು ಇದನ್ನು ಕಲಿಯಬೇಕು. ಅರಸರ ಅಂತರಂಗ ಮುಷ್ಟಿಯೊಳಗಡಗಿದ ಮಾಣಿಕ್ಯ.” -ನರಸಪ್ಪಯ್ಯ ಹೇಳಿದರು.

“ಈ ಕಲಿಕೆಗೆ ಏನು ಹೆಸರೋ ?” - ಮದಕರಿನಾಯಕ ವ್ಯಂಗ್ಯವಾಗಿ ಕೇಳಿದ.

“ತಾವು ಏನೇ ಹೇಳಬಹುದು - ತಿಳಿದವರು ಇದನ್ನು ಮುತ್ಸದ್ದಿತನ, ರಾಜಕಾರಣ ಎನ್ನುತ್ತಾರೆ. ಪ್ರಭುಗಳಿಗಿನ್ನೂ ಚಿಕ್ಕ ಪ್ರಾಯ. ಕಲಿಯಲು ಸಾಕಷ್ಟು ಕಾಲಾವಕಾಶವಿದೆ. ಆದರೆ ಮೊದಲು ಈ ಹಗರಣ ಬಗೆಹರಿಸಬೇಕು. ಅದಕ್ಕೆ ಕಾಲಾವಕಾಶವಿಲ್ಲ....ಬನ್ನಿ ತಾಯಿ, ಅರಸರು ಹಾಗಿರಲಿ. ನಾವು ಮಾಡಬೇಕಾದ ಕೆಲಸ ಮಾಡೋಣ” – ಎಂದು ಹೇಳಿದ ನರಸಪ್ಪಯ್ಯ.

“ಅಪ್ಪಯ್ಯಾ, ನೀನಿವತ್ತು ಅರಮನೆ ಬಿಟ್ಟು ಹೊರಬಂದರೆ ನನ್ನಾಣೆ. ನಾನು ಬರುತ್ತೇನೆ” - ಎಂದು ಹೇಳಿ, ನಿಂಗವ್ವ, ನರಸಪ್ಪಯ್ಯನವರನ್ನು ಹಿಂಬಾಲಿಸಿದಳು.

“ಸದ್ಯಕ್ಕೆ ಇಷ್ಟಕ್ಕೇ ಮುಗಿಯಿತಲ್ಲ - ಇವತ್ತೇನು ಪ್ರಳಯವಾಗುವುದೋ ಎಂದು ಹೆದರಿದ್ದೆ ನಾನು”

- ಎಂದು, ಅದುವರೆಗೂ ಹಾವಿನಿದಿರು ಕುಳಿತ ಕಪ್ಪೆಯಂತೆ ತೆಪ್ಪಗಿದ್ದ ಪರಶುರಾಮನಾಯಕ, ನಿಟ್ಟುಸಿರುಬಿಡುತ್ತಾ ಹೇಳಿದ.

“ಮುಗಿಯಿತು - ? ಇಷ್ಟಕ್ಕೇ ಮುಗಿಯಲಿಲ್ಲ, ಪರಶುರಾಮಣ್ಣ - ರಕ್ತದ ಹೊಳೆ ಹರಿಸಿ, ಈ ಕಲಂಕವನ್ನು ತೊಡೆದುಹಾಕಿ, 'ಇನ್ನಿಂಥ ದೊರೆಯನ್ನು ಕಂಡಿರಲಿಲ್ಲ' ಎಂದು ಜನ ಅನ್ನುವ ಹಾಗೆ ಮಾಡದಿದ್ದರೆ, ನಮ್ಮವ್ವಗೆ ಹುಟ್ಟಿದ ಮಗನಲ್ಲ, ನಾನು”

- ಎಂದ ಮದಕರಿನಾಯಕ, ಏನೋ ಭೀಷ್ಮನಿರ್ಧಾರ ಮಾಡಿದಂತೆ. ಹಾಗಂದು ಬಳಿಕ ಏನೋ ಜ್ಞಾಪಿಸಿಕೊಂಡವನಂತೆ –

"ಪ್ರಧಾನಿಗಳು ಕಲಿಸಿದರಲ್ಲಾ- ಆ ವಿದ್ಯೆಗೆ ಏನು ಹೆಸರು ಹೇಳಿದರವರು ?" – ಎಂದು ಕೇಳಿದ.

"ರಾಜಕಾರಣ." - ಅಣ್ಣನ ಮಾತು ಅರ್ಥವಾಗದೆ ಹೇಳಿದ ಪರಶುರಾಮನಾಯಕ.

"ರಾಜಕಾರಣ ಹೂ - ನೆನಪಾಯಿತು – ಮುತ್ಸದ್ದಿತನ. ಅಮಾನುಷತೆಗೆ ಇದು ಮತ್ತೊಂದು ಹೆಸರು. ಇದನ್ನು ನೀನು ಬರದಿಟ್ಟುಕೋ ಪರಶುರಾಮಣ್ಣ, ಇವತ್ತಲ್ಲ ನಾಳೆ ದುರ್ಗದ ಪ್ರಧಾನಿಯಾಗಬೇಕಾದವನು ನೀನು... ನಾನು ಮರೆಯುವುದಿಲ್ಲ – 'ಅರಸುತನ' ಎಂದರೆ ಮೃದುತ್ವಕ್ಕೆ ತಿಲಾಂಜಲಿ ಎಂದು, 'ರಾಜಪದವಿ' ಎಂದರೆ ಕೊಲೆ, ಸುಲಿಗೆ, ಅತ್ಯಾಚಾರಗಳಿಗೆ ರಹದಾರಿ ಎಂದು ಈ ಜನ ತಿಳಿದಿದ್ದಾರೆ. ನಾನು ತೋರಿಸುತ್ತೇನೆ - 'ಅರಸುತನ ಎಂದರೆ ಅದಲ್ಲ, ಪುರುಷಪೌರುಷದ ಪತಾಕೆ' ಎಂದು"

-ಎಂದು ನುಡಿದ ಮದಕರಿನಾಯಕ, ಪ್ರವಾದಿಯ ಧ್ವನಿಯಲ್ಲಿ.

೧೪

ತೊಡೆದುಬಿಡುತ್ತೇನೆ....ನನ್ನ ಹೆಸರಿಗೆ ಹತ್ತಿದ ಕಲಂಕವನ್ನು ಶತ್ರುರಕ್ತದ ಹೊಳೆಯಲ್ಲಿ ತೊಳೆದುಬಿಡುತ್ತೇನೆ. ಹಾಗೆ ಮಾಡಿ –

'ಇಂಥ ಧೀರದೊರೆ ಬೇರಾರೂ ದುರ್ಗವನ್ನಾಳಲಿಲ್ಲ'

-ಎಂಬ ಶಪಥ ಮಾಡಿ, ತನ್ನ ಬಾಳನ್ನು ಕವಿದ ದುರಂತದ ದುರ್ಘಟನೆಯ ವಿಷಮಡುವಿನಿಂದ, ಅಗ್ನಿಜಲಧಾರೆಯಲ್ಲಿ ಮಿಂದು ಮರುಹುಟ್ಟು ಪಡೆದು, ಸಾಣೆಹಿಡಿದ ಸಿಡಿಲಿನಂತೆ ವಿಜೃಂಭಿಸಿದ ಮದಕರಿನಾಯಕನ ಧೀರನಿರ್ಧಾರಕ್ಕೆ ಸವಾಲು ಹಾಕಿದಂತೆ, ಪೇಶ್ವೆ ಮಾಧವರಾಯನಿಂದ ಕರೆಬಂತು - ನಿಜಗಲ್ಲು ಕೋಟೆಯ ಬಳಿಯಿಂದ.

ವಿರೋಧಿ ಸಂವತ್ಸರದ ಮಾಘಮಾಸದಲ್ಲಿ, ತನ್ನ ಆಜನ್ಮವೈರಿಯಾದ ಹೈದರಾಲಿಯನ್ನು ಮುರಿದು ಮೂಲೆಗುಂಪಾಗಿ ಮಾಡಲು ನಿಶ್ಚಯಿಸಿದ ಪೇಶ್ವೆ ಮಾಧವರಾಯ, ಮರಾಠರ ಶಕ್ತಿಯನ್ನು ದುರ್ಬಲಗೊಳಿಸಿದ ಆಂತರಿಕ ಕಲಹವನ್ನು ನಿರ್ದಾಕ್ಷಿಣ್ಯವಾಗಿ ತುಳಿದು, ತನ್ನ ಆರಿಸಿದ ಸೇನಾನಿಗಳಾದ ಗೋಪಾಲರಾವ್ ಪಟವರ್ಧನ್, ತ್ರಯಂಬಕರಾವ್ ಪೇಠೆ, ಮುರಾರಿ ರಾವ್ ಘೋರ್ಪಡೆ, ಸವಣೂರಿನ ಹಕೀಂಖಾನ್- ಇವರ ಸೇನೆಯ ಜೊತೆಗೆ, ಅತ್ತಿತ್ತ ಚಿನ್ನಾಟವಾಡುತ್ತಿದ್ದ ಹೈದರಾಬಾದ್ ನಿಜಾಮನ ಕತ್ತುಪಟ್ಟಿಯನ್ನು ಬಿಗಿಯಾಗಿ ಹಿಡಿದು ಅವನ ಸೇನೆಯನ್ನೂ ತಂದು ಹೈದರಾಲಿ ಆಕ್ರಮಿಸಿದ ರಾಜ್ಯದ ಮೇಲೆ ಬಿರುಗಾಳಿಯಂತೆ ಮುನ್ನುಗ್ಗಿದ. ಆ ಪ್ರಚಂಡ

ಆಘಾತದಿದಿರು, ಹೈದರಾಲಿಯನ್ನು ಆಶ್ರಯಿಸಿದ ಆದವಾನಿ, ಬಳ್ಳಾರಿ, ಕರ್ನೂಲು, ದೇವದುರ್ಗ, ರಾಯದುರ್ಗ ಮೊದಲಾದ ಪುಡಿಪಾಳಯಗಾರರು ತರಗೆಲೆಯಂತೆ ತೂರಿಹೋಗಿ, ಮರಾಠರ ಸಾಮಂತರಾಗಲು ಒಪ್ಪಿ ತಲೆಬಾಗಿದರು.

ಬೆಟ್ಟದ ಕೋಡುಗಲ್ಲಿನ ಮೇಲೆ ಬಿದ್ದ ಧಾರಾವರ್ಷ ಹತ್ತಾರು ಸೀಳಾಗಿ ಹರಿದು, ಬಂಡೆಯನ್ನೆಲ್ಲಾ ಆವರಿಸುವಂತೆ, ನಾಲ್ಕಾರು ಕಡೆಯಿಂದ ನುಗ್ಗಿ ಬಂದ ಮರಾಠರ ಸೇನೆ - ಕಬಳಿಸಿ, ಬೆಂಗಳೂರು ಬಳಿಯ ಭೈರವಗಡ, ದಾರಿಯ ದೇವರಾಯನದುರ್ಗ, ಕೋಲಾರಗಳನ್ನು ತ್ರಯಂಬಕರಾವ್ ಪೇಠೆ, ಹುಲಿಯಿದ್ದ ಕಗ್ಗವಿಗೇ ನುಗ್ಗುವ ಧೀರವ್ಯಾಧನಂತೆ ಶ್ರೀರಂಗಪಟ್ಟಣ ದತ್ತ ತನ್ನ ವಿಜಯೀ ಸೇನೆಯನ್ನು ಮುಂದೊತ್ತಿದೆ.

ಭೋರ್ಗರೆವ ಬಿರುಗಾಳಿಗೆ ಹೆಮ್ಮರಗಳೆಲ್ಲಾ ತತ್ತರಿಸಿ, ಮುರಿದು ಧರೆಗುರುಳಿದಾಗ, ಮೋಟುಮರವೊಂದು ಬಿರುಗಾಳಿಯ ಶಕ್ತಿಗೆ ಸವಾಲುಹಾಕಿದಂತೆ. ನೆಲಮಂಗಲದ ಬಳಿಯ ನಿಜಗಲ್ಲು ದುರ್ಗ ಮರಾಠರ ಅಪ್ರತಿಹತ ಸೇನೆಗೆ ಸವಾಲಾಗಿ ನಿಂತಿತು.

ಎತ್ತಿ ನಿಲ್ಲಿಸಿದ ಅರೆವೃತ್ತದಂತೆ, ಸುತ್ತಲೂ ಇಳಿಜಾರು ಬಂಡೆಗಳ ರಕ್ಷಣೆಯನ್ನು ಪಡೆದ ನಿಜಗಲ್ಲು ದುರ್ಗ, ಎರಡೆರಡು ಬಾರಿಯ ದಾಳಿಗೂ ತಲೆಬಾಗದೆ, ಮರಾಠರ ಆತ್ಮಗೌರವಕ್ಕೆ ಪೆಟ್ಟುಕೊಟ್ಟಂತೆ ಪೇಶ್ವೆ ಮಾಧವರಾಯನ ತಮ್ಮ ನಾರಾಯಣರಾಯನ ಕೈ ಮುರಿದು, ಈ ಕೋಟೆಯನ್ನು ಹಿಡಿದಲ್ಲದೆ ಕಾಲು ಕದಲುವುದಿಲ್ಲ ಎಂದು ಶಪಥ ತೊಟ್ಟ ಮಾಧವರಾಯ, ಮರವನ್ನೇರಿದ ಬೇಟೆ ದಣಿದು ಬೀಳಲು ಕಾದ ಸೀಳುನಾಯಿಗಳ ತಂಡದಂತೆ, ಸೇನೆಯೊಡನೆ ದುರ್ಗವನ್ನು ಸುತ್ತುವರಿದು ನಿಂತ. ಅವನ ಅಶ್ವಾರೋಹಿದಳ, ಸುತ್ತಲ ಸೀಮೆಯನ್ನು ಸುಲಿದು, ತುಂಬಿದ ಹಳ್ಳಿಗಳನ್ನು ಪಾಳುಗೆಡವಿ, ಹಸಿದ ತೋಳಗಳಂತೆ, ಎದುರಿಸಿ ನಿಂತ ನಿಜಗಲ್ಲನ್ನು ನೋಡುತ್ತಾ ನಿಂತಿತು.

ಅತ್ಯಂತ ಪ್ರಬಲ ದುರ್ಗಗಳನ್ನು ಮಣಿಸಿದ ಮರಾಠಾ ಸೇನೆಯ ಸರದಾರರಿಗೆ, ಪೇಶ್ವೆ ಮಾಧವರಾಯ ಸವಾಲುಹಾಕಿದ, ಹೆದರಿಸಿದ, ಹಂಗಿಸಿದ, ಬಗೆಬಗೆಯ ಆಮಿಷವೊಡ್ಡಿದ. ಆ ಮಾತುಗಳಿಗೆ ಕೆದರಿ, 'ಗೆದ್ದಲ್ಲದೆ ಹಿಂತಿರುಗುವುದಿಲ್ಲ' ಎಂದು ಮೀಸೆ ಹುರಿಮಾಡಿದ ಮರಾಠಾ ಸರದಾರರು, ಸೋತು ಹತಾಶರಾಗಿ, ನಾಚಿ ತಲೆತಗ್ಗಿಸಿ - ತಮ್ಮ ಬಿಡಾರಗಳಿಗೆ ಹಿಂದಿರುಗಿದರು. ಆ ಹೊತ್ತಿನಲ್ಲಿ ಪೇಶ್ವೆ ಮಾಧವರಾಯ 'ಹೊತ್ತು ಬಂದಾಗ ನಮ್ಮ ವಿಶ್ವಾಸ ತೋರಿಸುತ್ತೇವೆ' ಎಂದ ಚಿತ್ರದುರ್ಗದ ಮದಕರಿನಾಯಕರಿಗೆ ಪತ್ರ ಬರೆದು, ಹಜೀಬರನ್ನು ಅಟ್ಟಿದ.

ಪೇಶ್ವೆ ಮಾಧವರಾಯನಿಂದ ಬಂದ ಪತ್ರ, ಬರೀ ಪತ್ರವಲ್ಲ- ಮದಕರಿನಾಯಕನ ನಿಮಿರಿನಿಂತ ಹೊಸ ಶಪಥಕ್ಕೆ ಸವಾಲು; ದುರ್ಗದ ಪೌರುಷವನ್ನು ಕೆಣಕಿ 'ನೀವು ಗಂಡುಗಲಿಗಳು

ಎಂದು ನಾವು ಕೇಳಿದ್ದೇವೆ. ಅದು ನಿಜವಾದರೆ, ಬಂದು ತೋರಿಸಿ – ನಿಜಗಲ್ಲು ನಿಮ್ಮ ಪರಾಕ್ರಮಕ್ಕೆ ಒರೆಗಲ್ಲು' – ಎಂದು.

ಪ್ರಧಾನಿಗಳು, ದಳವಾಯಿಗಳಿದ್ದ ಸಭೆಯಲ್ಲಿ ಪೇಶ್ವೆಯವರ ಪತ್ರವನ್ನು ಓದಿಸಿ ಕೇಳಿದ ಮದಕರಿನಾಯಕ, ಯಾರನ್ನೂ 'ಈಗೇನು ಮಾಡಬೇಕು ?' ಎಂದು ಕೇಳಲಿಲ್ಲ.

"ಪ್ರಧಾನಿಗಳೇ, ನವಾಬರು ನಮಗೆ ಹತ್ತಿರದ ಪಿಡುಗು ಎಂದಿರಿ. ಆ ಪಿಡುಗು ಗಂಡುತನ ಉಡುಗಿ, ಮುದುರಿ ಕುಳಿತಿದೆ. ಈಗ ಪೇಶ್ವೆಗಳೊಂದಿಗೆ ಸ್ನೇಹವೇ ನಮ್ಮ ನಿರ್ಧಾರ"

-ಎಂದು ಘೋಷಿಸಿ, ಪೇಶ್ವೆಯ ವಕೀಲರಿಗೆ –

"ಹೋಗಿ - ನಿಮ್ಮ ಶ್ರೀಮಂತರಿಗೆ ಹೇಳಿ - ನಿಜಗಲ್ಲು ನಮಗೆ ಸವಾಲೂ ಅಲ್ಲ, ಒರೆಗಲ್ಲೂ ಅಲ್ಲ. ನಮ್ಮನ್ನು ಕೆಣಕಿದ ಬಳಿಕ ಅದು ಪುಡಿಗಲ್ಲು. ಇನ್ನು ಮೂರು ದಿನದಲ್ಲಿ ನಿಜಗಲ್ಲು ಹಿಡಿದು. ಕಿಲ್ಲೇದಾರ ಸರ್ದಾರ್‌ಖಾನನನ್ನು ಬಂದಿಯಾಗಿ ಹಿಡಿತಂದು ಭೇಟಿಮಾಡುತ್ತೇವೆ. ಅಲ್ಲಿಯವರೆಗೆ ಅವರು ನಿಶ್ಚಿಂತವಾಗಿರಲಿ. ನಾವು ಕಾರ್ಯಸಾಧಿಸುವವರೆಗೂ ಪೇಶ್ವೆಯವರ ದಂಡಿನಿಂದ ಗುಂಡು ಹಾರಬಾರದು - ಇದು ನಮ್ಮ ಷರತ್ತು"

-ಎಂದು ಹೇಳಿಕಳಿಸಿ, ಅವರು ದುರ್ಗದಿಂದ ತೆರಳಿದ ಬಳಿಕ, ದಳವಾಯಿಗಳಿಗೆ ಹೇಳಿದ-

"ಕೋಟೆಗಾಳಗದಲ್ಲಿ ಪಳಗಿದ ನಮ್ಮ ಆಯ್ದ ಬೇಡಪಡೆ ಸಿದ್ಧವಾಗಲಿ. ದುರ್ಗದಲ್ಲಿ ಉಂಡು, ರಣರಂಗದಲ್ಲಿ ಶತ್ರುರಕ್ತದಲ್ಲಿ ಕೈ ತೊಳೆಯಬೇಕು - ನಮ್ಮ ಸೇನೆ. ಶೀಘ್ರ ಪ್ರಯಾಣಕ್ಕೆ ಅಡ್ಡಿಯಾಗುವ ಯಾವ ಪುಡಿಬಲವೂ ನಮ್ಮೊಂದಿಗೆ ಹೊರಡದಿರಲಿ."

ನಾಯಕರ ಅಪ್ಪಣೆಯಂತೆ, ಆಯ್ದ ಆಣಿಮುತ್ತಿನಂಥ ಕೋಟೆಗಾಳಗದಲ್ಲಿ ಎಂದೂ ಸೋಲರಿಯದ ಸಾಹಸಿಗಳಾದ ಸಾವಿರದ ಇನ್ನೂರು ಜನರ ಸೇನೆ ಸಿದ್ಧವಾಯಿತು.

ಆನೆಯಿಲ್ಲ, ಕುದುರೆಯಿಲ್ಲ, ಫಿರಂಗಿಗಳಿಲ್ಲ – ಬರೀ ಪದಾತಿಗಳ ಪಡೆ.

ಆ ಪಡೆಯ ಒಬ್ಬೊಬ್ಬ ಆಳೂ, ಕಾಳಿಯ ಕೋಣನಂತಿದ್ದರೆ, ಅವರು ಧರಿಸಿದ ಉಡುಪು ಮತ್ತಷ್ಟು ಘೋರ.

ಕಿಗ್ಗಣ್ಣು ಗಲ್ಲಾ ಮೀಸೆಗಳ ಕಪ್ಪು ಒರಟುಗಲ್ಲಿನಲ್ಲಿ ಕಡೆದಂತಿದ್ದ ಮುಖಕ್ಕೆ ಕಾವಿಯ ಬಣ್ಣ ಹಣೆಗೆ ಚಿಕ್ಕಿ ಬಟ್ಟಿನ ನಾಮ. ಕಂಕುಳಲ್ಲಿ ಮೂರು ದಿನ ರೊಟ್ಟಿಯ ಬುತ್ತಿ. ನೀರಿನ ತಿತ್ತಿಯಿದ್ದ ಕೈಚೀಲಗಳನ್ನು ಹೆಗಲಿಗೆ ಹಾಕಿಕೊಂಡು, ಅದರ ಮೇಲೊಂದು ಕಂಬಳಿ ಹೊದ್ದು, ಬೆನ್ನಿಗೆ ನೂಲೇಣಿಯೆ ಮೂಟೆ, ಮುಳ್ಳಿನ ಹೊರೆ ಹೊತ್ತು, ಸೊಂಟಕ್ಕೆರಡು ಖಡ್ಗ, ಕೈಯಲ್ಲೊಂದು

ಗಂಡುಗೊಡಲಿ ಹಿಡಿದು ರಣಕೇಕೆ ಹಾಕುತ್ತಾ ನಿಜಗಲ್ಲಿನತ್ತ ಹೊರಟಿತು - ನೆಲ ಮುಗಿಲು ನಡಗುವಂತೆ.

* * *

ತನ್ನೊಂದಿಗೆ ಹೊರಟ ಕಾಲ್ಬಲವನ್ನು ಹಿಂದೆಬಿಟ್ಟು, ಆ ಸೇನೆ ಬಂದು ತನ್ನನ್ನು ಕೂಡಿಕೊಳ್ಳುವುದರೊಳಗಾಗಿ, ನಿಜಗಲ್ಲಿನ ಪರಿಸರವನ್ನು ಸೇರಿ, ಯುದ್ಧ ತಂತ್ರವನ್ನು ರೂಪಿಸಬೇಕೆಂಬ ಉದ್ದೇಶದಿಂದ, ಆರಿಸಿದ ಇಪ್ಪತ್ತು ಕಟ್ಟಾಳುಗಳೊಂದಿಗೆ, ಮಾರುವೇಷಧರಿಸಿ ಅಶ್ವಾರೋಹಿಯಾಗಿ ಹೊರಟ ಮದಕರಿನಾಯಕ, ಸೀರ್ಯದ ರಾಜಮಾರ್ಗವನ್ನು ಬಿಟ್ಟು ಬಳಸುದಾರಿಗಳಲ್ಲಿ ನಿಜಗಲ್ಲಿನತ್ತ ಹೊರಟಾಗ ಕಂಡ ಆ ಸೀಮೆಯ ನೋಟ, ಹತ್ತಾರು ರಣಭೂಮಿಗಳನ್ನು ಕಂಡ ಮದಕರಿನಾಯಕನ ಹೃದಯವೂ ಮರುಗುವಂತೆ ಮಾಡಿತು.

ಬೆಳೆಗೆ ಹಿಂಗಾರುಮಳೆ ನೆಚ್ಚಿ, ಕೆರೆಕುಂಟೆಗಳ ಆಶ್ರಯವಿದ್ದಲ್ಲಿ ತೋಟ ತುಡಿಕೆ, ಗದ್ದೆಗಳ ಹಸಿರುಸಿರುಬಿಡುವ ಬೆಂಗಾಡು ಪ್ರಾಂತ್ಯವದು. ಈಗ ಎಲ್ಲೂ ಹಸಿರಿನ ಉಸಿರಿಲ್ಲ. ಕೆರೆಕಟ್ಟೆಗಳನ್ನೊಡೆದು, ಬತ್ತಿ ಬಿರಿದ ಭೂಮಿ, ಬಿರುಕುಗಳಿಂದ ಬಿಸಿಯುಸಿರು ಕಕ್ಕುತ್ತಿದ್ದರೆ, ತೋಟತುಡಿಕೆಗಳಿದ್ದ ಕಡೆ ಅವುಗಳ ಕಂಕಾಳ ಮಾತ್ರ ಕಾಣಿಸಿತು. ಅಕ್ಕಪಕ್ಕದಲ್ಲಿದ್ದ ಮರಗಳು ಆನೆ, ಕುದುರೆಗಳಿಗೆ ಮೇವಾಗಿ, ಬೋಳುರೆಂಬೆಗಳು ಮರದ ಎಲುಬುಗೂಡಿನಂತೆ ಮನುಷ್ಯರನ್ನು ಅಣಕಿಸುತ್ತಿದ್ದವು.

ಜನಸತಿಯಿದ್ದ ಹಳ್ಳಿಗಳು ನಿರ್ಜನವಾಗಿ, ತುಂಬಿದ ಮನೆಗಳು ಬರಿದಾಗಿ, ಕಿಟಕಿ ಬಾಗಿಲುಗಳು ಹಾರುಹೊಡೆದು, ಮನೆಯಂಗಳಗಳು, ಮುರಿದ ಪೆಟ್ಟಿಗೆಗಳ, ಬರಿದಾದ ಕಣಜಗಳ, ಕಿತ್ತೊಗೆದ ಬೀಸು, ಒರಳುಕಲ್ಲುಗಳ, ಮನುಷ್ಯರು ಕತ್ತರಿಸಿ ಕಡಿದೊಗೆದು ಮಿಗಿಸಿದುದನ್ನು ನಾಯಿನರಿಗಳು ತಿಂದು ಮಿಗಿಸಿದ ಮುರಿದ ಎಲುಬುಗಳ ಪಾಳಾಗಿ, ಸೈನಿಕರ ಅತ್ಯಾಚಾರಕ್ಕೊಳಗಾಗಿ, ಕತ್ತಿನ ಮಾಂಗಲ್ಯವನ್ನು, ಮೈಯ ಮಡಿಯನ್ನು ಕಳೆದುಕೊಂಡು, ಉಟ್ಟ ಸೀರೆಗಳ ಚಿಂದಿಗಳನ್ನೂ ಬರಿಗಾಳಿ ಭೋಗಿಸುತ್ತಾ, ರಣಭೂಮಿಗಿಂತಲೂ ದಾರುಣವಾಗಿ, ಕಣ್ಣುಸುಡುವ ಕೆಂಡದ ಹರಹುಗಳಾಗಿದ್ದವು. ಮನುಷ್ಯರಿದ್ದ ಊರಿನಲ್ಲಿ ದನಕರುಗಳೂ ಕಾಣದೆ, ಅಸ್ತಿಪಂಜರದಂತಿದ್ದ ಹಸಿದ ಕಣ್ಣುಗಳ ನಾಯಿನರಿಗಳು ದಿಕ್ಕರಿಯದೆ ಬೂದಿ ಬಣ್ಣದ ಎಲುಬುಗಳನ್ನೇ ನೆಕ್ಕುತ್ತಾ ಹುಚ್ಚು ಹಿಡಿದಂತೆ ಬೊಗಳುವ, ಊಳಿಡುವ ದೃಶ್ಯ ನೋಡಿದತ್ತ ನೋಟವನ್ನು ಇರಿಯುತ್ತಿತ್ತು.

ಜನ –

ಎಲ್ಲಿ?

ಇಂದಲ್ಲ, ಎಂದಾದರೂ ಇದ್ದರೇ ಎಂಬ ಅನುಮಾನ ಬರಿಸುವಂಥ ಕರುಳ ನೀರವತೆ ಕಿವಿಯನ್ನಿರಿದು, ನೋಡಿದ ಎದೆಯಲ್ಲೂ ಶೂನ್ಯತೆಯನ್ನು ತುಂಬುತ್ತಿತ್ತು. ಆಗೊಮ್ಮೆ ಈಗೊಮ್ಮೆ ಅಪರೂಪಕ್ಕೆ ಕಂಡ ಮನುಷ್ಯರು - ಅವರು ಮನುಷ್ಯರೇ, ಭೀತಿಯ ಪ್ರೇತಗಳು - ಅಶ್ವಾರೋಹಿಗಳಾಗಿ ಬಂದ ಮನುಷ್ಯರನ್ನು ಕಂಡು ಹುಲಿ ಕಂಡಂತೆ ಹೆದರಿ ಓಡುತ್ತಿದ್ದರು. ಅಲ್ಲಲ್ಲಿ, ಮಾರ್ಗಮಧ್ಯದಲ್ಲಿ ಸಿಗುವ ಬೋಳುಗುಡ್ಡಗಳು ಸ್ಮಶಾನವನ್ನು ಕಾವಲು ಕಾದು ನಿಂತ ಬರಿಮೈಯ ಭೇತಾಳಗಳಂತಿದ್ದವು.

ಎಲ್ಲಿ ನೋಡಿದರಲ್ಲಿ ಆನೆ, ಕುದುರೆ, ಮನುಷ್ಯರ, ಕೆಟ್ಟವಾಸನೆಯಿಂದ ತಲೆಗಿಮ್ಮೆನ್ನಿಸುವ ಲದ್ದಿ, ಎಂದೋ ಅಟ್ಟಡುಗೆಯುಂಡು ಬರಿದುಮಾಡಿ ಬಿಸುಡಿದ ಮಡಕೆ-ಕುಡಿಕೆಗಳು, ಗಾಳಿ ತುಂಬಾ ಬೂದಿ, ಕಪ್ಪಾದ ಒಲೆಗುಂಡುಗಳು - ಹಾದಿಬೀದಿಯುದ್ದಕ್ಕೂ.

ನೆಲ ಬರಿದು - ನಾಯಿ ನರಿಗಳನ್ನುಳಿದು; ಮುಗಿಲು-ಮಾನವರನ್ನು ಹಂಗಿಸುವಂತೆ ಹಾರುವ ಕಾಗೆ, ಹದ್ದು, ರಣಹದ್ದುಗಳ ವಿಹಾರಭೂಮಿ-

ಆ ಸೀಮೆಯನ್ನು ಕಂಡಾಗ, ನೆಲತಾಯಿಯ ಮೇಲೆ ನೂರಾರು ಜನ ಸಾಲು ಅತ್ಯಾಚಾರ ಮಾಡಿದಂತೆ ಕಂಡು, ರಕ್ತಮಾಂಸಗಳ ಮಡುವಾಗಿದ್ದ ರಣಭೂಮಿಯನ್ನು ಕಂಡಿದ್ದ ಮದಕರಿನಾಯಕನ ಗಂಡುಹೃದಯವೂ ಮರುಗಿ ತಲ್ಲಣಿಸಿತು. ಯುದ್ಧಭೂಮಿಗಿಂತಲೂ ಭಯಂಕರವಾಗಿತ್ತು – ನೂರಾರು ಮೈಲಿಗಳಷ್ಟು ವಿಸ್ತಾರದ, ಆನೆ-ಕುದುರೆ-ಮನುಷ್ಯರು ಮುರಿದ ಹಳ್ಳಿಗಳು, ಮುರುಕು ಬಂಡಿಗಳು, ಬೀದಿಗೆ ಬಿದ್ದ ಬೇಸಾಯದ ಉಪಕರಣಗಳ ಅಸ್ಥಿಪಂಜರವಿದ್ದ ನಿಟ್ಟುಸಿರಿನಂತೆ ಬಿಸಿಗಾಳಿ ಆಗೊಮ್ಮೆ ಈಗೊಮ್ಮೆ ಸುಳಿವ ಆ ಮಹಾಮಸಣ-ಮಾನವನೇ ಮಾನವತೆಯನ್ನು ಕೊಂದು ನಿರ್ಮಿಸಿದ ರುದ್ರಭೂಮಿ.

ಆ ನೋಟಕ್ಕೆ ಉರಿಯಾದ ನೆಲವನ್ನು ನೋಡಿ, ನಿಟ್ಟುಸಿರಿಡಲೂ ಹೊತ್ತು ಸಾಲದೆ, ಈ ಯುದ್ಧವೇ ಬೇಡವೆನ್ನುವಷ್ಟು ಹೇಸಿಗೆಯಾದರೂ ಹೊತ್ತ ಛಲ ಸಾಧಿಸಬೇಕೆಂಬ ಆತುರದಲ್ಲಿ ಬದುಕಿದ್ದವರನ್ನೂ ಮುತ್ತುತ್ತಿದ್ದ ಹಸಿದ ರಣಹದ್ದುಗಳನ್ನು ಕತ್ತರಿಸುತ್ತಾ, ನಿಜಗಲ್ಲಿಗೆ ಕೂಗಳತೆಯ ದೂರದಲ್ಲಿ ನಿಂತು, ಕಣ್ಣಿಗೆ ದುರ್ಬೀನು ಹಾಕಿಕೊಂಡು ನೋಡಿದ ಮದಕರಿ ನಾಯಕ – ತನ್ನ ಪರಿವಾರದೊಂದಿಗೆ.

ಬೋರಲುಹಾಕಿದ ಬೃಹದಾಕಾರದ ಬೋಗುಣಿಯಂತಿದ್ದ, ದಿನನಿತ್ಯವೂ ಸುರಿದ ಕುದಿದ ಎಣ್ಣೆ, ಕಾದ ಅಂಬಲಿಗಳ ಕರೆಗಟ್ಟಿ, ಮಂಕಾದ ಜಾರುಬಂಡೆಗಳ ಬೆತ್ತಲೆಯನ್ನುಟ್ಟ ನಿಜಗಲ್ಲಿನ ಬೆಟ್ಟ, ಏರಲೆಳಸುವವರಿಗೆ ನಿಜಕ್ಕೂ ಸವಾಲಿನಂತಿತ್ತು. ಆ ಬೋಳುಬೆಟ್ಟದ ತುದಿಯಲ್ಲಿ ಕಟ್ಟಿದ ಕೋಟೆಯ

ಬುರುಜು, ಬತ್ತೇರಿಗಳಲ್ಲಿ ಕೆಂಡಕಾರಲು ಸಿದ್ಧವಾದ ತೋಪುಗಳು, ತೆನೆಯ ಕೋವಿಗಂಡಿಗಳಲ್ಲಿಣುಕಿ ನೋಡುತ್ತಿದ್ದ ಕೋವಿಗಳು, ಕೋಟೆಯ ಮೇಲೆ ಗಸ್ತು ತಿರುಗುವ ಸಿಪಾಯಿಗಳು, ಆ ಬೆಟ್ಟದ ಬಂಡೆಗೂ ತೋಫಿನೇಟು ತಗಲದಷ್ಟು ವಿಸ್ತಾರವಾದ ಪಾಚಿಗಟ್ಟಿದ ನೀರಿನ ಕಂದಕ - ಇದನ್ನು ಕಂಡು, ಒಂದು ಗಳಿಗೆ ತಾನು ತೊಟ್ಟ ಪಣ, ಬರಿ ಬಡಾಯಿಯಾಗುವುದೇನೋ ಎನಿಸಿತು, ಮದಕರಿನಾಯಕನಿಗೆ.

ಆದರೆ ಮರುಗಳಿಗೆಯೇ ಕೋಟೆಯಿದ್ದಲ್ಲಿ ಜನ ಓಡಾಡುವ ಮಾರ್ಗವಿರಬೇಕು ಎನಿಸಿ, ಅದನ್ನು ತಿಳಿಯಲು ತನ್ನೊಂದಿಗೆ ಬಂದವರಿಗೆ, 'ಸುತ್ತಮುತ್ತ ಹುಡುಕಿ, ಯಾವ ಗಂಡು ಸಿಕ್ಕರೂ ಎಳೆದು ತನ್ನಿ' ಎಂದು ಅಪ್ಪಣೆ ಮಾಡಿ ಹಾಗೇ ಚಿಂತಿಸುತ್ತಾ ನಿಂತ.

ಸುಮಾರು ಅರ್ಧತಾಸಿನ ಕಾಲ ಸುತ್ತಮುತ್ತ ಅಲೆದು ಒಬ್ಬನನ್ನು ಹಿಡಿದು ತಂದರು, ದುರ್ಗದ ಸೈನಿಕರು.

ಆ ಸೈನಿಕರನ್ನು, ಅದರ ನಾಯಕರನ್ನು ಕಂಡು ತರಗೆಲೆಯಂತೆ ತತ್ತರಿಸುತ್ತಾ, ಅಸ್ತಿಪಂಜರದಂತಿದ್ದ ಆ ಹಳ್ಳಿಗನಿಗೆ ಜೀವದ ಭರವಸೆಯಿತ್ತು. ತಮ್ಮೊಂದಿಗೆ ತಂದ ರೊಟ್ಟಿ ಬೆಣ್ಣೆಯನ್ನು ಉಣಲು ಕೊಟ್ಟು –

“ನಾವು ಯುದ್ಧ ಮಾಡಲು ಬಂದವರಲ್ಲ. ಈ ಕೋಟೆ ನೋಡಬೇಕೆಂದು ಬಂದವರು. ಈ ಕೋಟೆಯನ್ನು ನೋಡಿದರೆ ಮನುಷ್ಯರಿರಲಿ, ಗಾಳಿ ಹೋಗುವುದಕ್ಕೂ ತಾವು ಇದ್ದಂತಿಲ್ಲ. ದಾರಿ ಯಾವುದು?” – ಎಂದು ಕೇಳಿದ. ಮದಕರಿನಾಯಕ.

ಆ ಹಳ್ಳಿಗ ರೊಟ್ಟಿ, ಬೆಣ್ಣೆ ಮಸಾಲೆ ಮಾಂಸವನ್ನು ಕಂಡು ಎಷ್ಟು ದಿನವಾಗಿತ್ತೋ, ಗಬಗಬನೆ ತಿಂದು, ಕುಡಿಯುವಷ್ಟು ನೀರು ಕೇಳಿ ಕುಡಿದು, ಬಳಿಕ ಮರುಹುಟ್ಟು ಪಡೆದವನಂತೆ ಹೇಳಿದ –

“ಈ ಸಮಯದಲ್ಲಿ ನೀವ್ಯಾಕೆ ಇತ್ತ ಬಂದಿರಿ. ಸುತ್ತ ನೋಡಿದರೆ ಕಾಣಕಿಲ್ಲವಾ - ಈ ಸುಟ್ಟ ಭೂಮಿ. ಕೋಟೆಯಲ್ಲೀಗ ಭಾರಿ ಕಾಳಗ ನಡದೈತೆ, ಗಟ್ಟಿಮುಟ್ಟಾದ ಮೈಯಿರೋ ನಿಮ್ಮನ್ನು ಕಂಡರೆ ದಂಡಿಗೆ ಎಳೆದುಕೊಂಡು ಹೋದಾರು. ಬಂದ ದಾರಿಯಲ್ಲಿ ಹೋಗಿ, ಜೀವ ಉಳಿಸಿಕೊಳ್ಳಿ.”

“ಕೋಟೆ - ಯಾರದು ?”

“ಪಟ್ಟಣದ ನವಾಬರದು. ಮರಾಟೇರು ಬಂದು ಮುತ್ತಿಗೆಹಾಕಿದಾರೆ - ಈ ಕೋಟೆ ತಗೋಬೇಕು ಅಂತ. ಎರಡು ತಿಂಗಳಾಯ್ತು, ಪೈಶ್ವೆ ತಮ್ಮನ ಕೈ ಮುರೀತು. ಆದರೆ ಕೋಟೇದು ಒಂದು ಕಲ್ಲ ಅಲ್ಲಾಡಿಸಲಿಕ್ಕಾಗಲಿಲ್ಲ - ದಿಳ್ಳಿ ತಗೊಂಡ ಮರಾಟೆಯೋರಿಗೆ. ಅವರು ತಂದಿದ್ದ ಮದ್ದು

ಗುಂಡೆಲ್ಲಾ ಮುಗಿದೋಯ್ತೇನೋ - ನಿನ್ನೆಯಿಂದ ಅವರ ಕಡೆಯಿಂದ ಮದ್ದು ಗುಂಡಿನ ಸದ್ದೇ ಇಲ್ಲ.” - ಹಳ್ಳಿಯವ ಹೇಳಿದ.

“ಅಷ್ಟು ಬಲವಾದ ಕೋಟೇನಾ ಇದು ?”

“ಮತ್ತಿನ್ನೇನು - ರಸಾಸಿದ್ದರು ಹರಸಿದ ಕೋಟೆ ಅಲ್ಲವಾ ಇದು. ಉದ್ದಾನೆ ವೀರಭದ್ರ ಕಾವಲಿರೋವರೆಗೂ ಕೋಟಿಕಲ್ಲು ಮುಟ್ಟಕ್ಕೂ ಆಗೋದಿಲ್ಲ - ಮರಾಟೆಯೋರಿಗೆ.”

“ಎರಡು ತಿಂಗಳಿಂದ ಲಡಾಯಿ ನಡೀತಾ ಇದೆ ಅಂತೀಯ. ಕೋಟೆ ನೋಡಿದರೆ ಬರೇ ಬಂಡೆಗಲ್ಲು. ತಿನ್ನೋ ಅನ್ನ ಹಾಗಿರಲಿ. ಕೋಟೆಯೊಳಗಿನ ಜನ ಕುಡಿಯಲು ನೀರಿಗೇನು ಮಾಡ್ತಾರೆ?”

“ಬಂಡೆಗಲ್ಲು - ಹಂಗೇ ಕಾಣ್ತದೆ ಹೊರಗಿನಿಂದ, ಆದರೆ ಒಳಗೆ, ಯಾವತ್ತೂ ನೀರು ಬತ್ತದ ರಸಸಿದ್ಧರ ದೊಣೆ, ಕಂಚಿನ ದೊಣೆ, ಅಕ್ಕತಂಗೇರ ದೊಣೆ ಇಲ್ಲವಾ ? ಕೋಟೆಗೆ ಇನ್ನೊಂದು ಕೋಟೆ ಹಂಗಿರೋ ಕೋಟೆ ಆಗಳಿಗೆ ನೀರು ಬರೋದೆ ಅಲ್ಲಿಂದ. ನೀರಿಗೂ ಬರ ಇಲ್ಲ. ತಿನ್ನೋಕೂ ಬರ ಇಲ್ಲ. ಸುತ್ತಲ ಸೀಮೆ ಸುಲಿದು, ಎರಡು ವರ್ಷಕ್ಕಾಗೋ ಅಷ್ಟು ದಾಸ್ತಾನು ಮಡಗಿದಾನೆ, ನವಾಬರ ಸರ್ದಾರ.”

“ಹಾಗಾದರೆ ಕೋಟೆಗೆ ಹೋಗಲು ದಾರಿ ಇಲ್ಲವಾ ?”

“ಊರು ಅಂದಮೇಲೆ ದಾರಿ ಇರದೆ ಇರುತ್ತಾ ? ಉತ್ತರಕ್ಕೊಂದು, ಪೂರ್ವಕ್ಕೊಂದು ಹೆಬ್ಬಾಗಿಲಿವೆ. ಅವುಗಳ ಕದ ಹಾಕಿಸಿಬಿಟ್ಟರೆ ನೊಣಾನೂ ಒಳ ಹೊರಗೆ ಸುಳಿಯೋ ಹಂಗಿಲ್ಲ. ಈ ಮರಾಟೆಯವರಿಗೇನೋ ಹುಚ್ಚು – ಕೋಟೆ ತಗೋತಿವಿ ಅಂತ ಬಂದವರೆ. ಹಿಂಗೇ ಮದ್ದುಗುಂಡು ಕಳಕೊಂಡು ನೀರು ನೆರಳಿಲ್ಲದೆ ನೆಗೆದುಬಿದ್ದುಹೋಗ್ತಾರೆ. ಅವರ ಆನೆ, ಕುದುರೆ ಎಲುಬು- ಅಷ್ಟೆ ಅವರಿಗೆ ಸಿಗೋದು” – ಎಂದು ತಮ್ಮ ದುರ್ಗದ ಬಗ್ಗೆ ಹೆಮ್ಮೆಯಿಂದ ಹೇಳಿದ, ಹಳ್ಳಿಗ.

“ಅಂತೂ ಮರಾಟೆಯವರಿಗೆ ಕೋಟೆ ಠಾಣ್ಯ ಆಗೋಲ್ಲ – ”

“ಏ- ಆ ಮಾತೇ ಮರೆತುಬಿಡಿ. ನೀವೂ ಅಷ್ಟೆ - ಬಂದ ದಾರಿ ಹಿಡಿದ್ಹೋಗಿ ಜೀವ ಉಳಿಸಿಕೊಳ್ಳಿ, ಆಳು ಕುದುರೆ ಕಂಡರೆ ಬಿಡಾಕಿಲ್ಲ ಈ ಮರಾಟೆಯೋರು. ಅದಕ್ಕೆ ನಮ್ಮ ಜನವೆಲ್ಲಾ ದಿಕ್ಕಾಪಾಲಾಗಿ ಬೆಟ್ಟ ಗುಡ್ಡ ಸೇರಿಕೊಂಡಿದ್ದಾರೆ. ಇಂಥ ರೊಟ್ಟಿ, ಮಾಂಸದ ತುಕಡಿ ತಿಂದು, ತಿನ್ನೊದೇನು - ನೋಡಿಯೂ ಭಾಳ ದಿನ ಆಗಿತ್ತು. ಹೊಟ್ಟೆ ತುಂಬ ಇಟ್ಟು ಉಪಕಾರ ಮಾಡಿದಿರಿ. ನನ್ನ ಕೈಬಿಟ್ಟರೆ ಬರ್ತೀನಿ. ಅನ್ನ ಇಟ್ಟ ಪಾದಕ್ಕಡ್ಡ ಬಿದ್ದೆ” – ಎಂದು ಕೈಮುಗಿದ ಹಳ್ಳಿಯವ.

ಅಷ್ಟು ಸುದ್ದಿಯನ್ನೊದಗಿಸಿದ ಹಳ್ಳಿಯವನಿಗೆ ಕೃತಜ್ಞತೆಯನ್ನರ್ಪಿಸಿ, ಅವನನ್ನು ಹೋಗಗೊಟ್ಟು, ತನ್ನ ಶಪಥಕ್ಕೆ ಸವಾಲಾಗಿ ನಿಂತ ಕೋಟೆಯನ್ನು ನೋಡುತ್ತಾ ನಿಂತ,

ಮದಕರಿನಾಯಕ. ಆ ಯೋಚನೆಯಲ್ಲೇ ಅಷ್ಟು ದೂರದಿಂದಲೇ ಕೋಟೆಯನ್ನು ಒಂದು ಸುತ್ತು ಹಾಕಿ ನೋಡಿದ. ಹಳ್ಳಿಗೆ ಹೇಳಿದ ಬಾಗಿಲುಗಳ ಬಳಿ ಭಾರಿ ಸೇನೆಯ ಜಮಾವಣೆ ಕಂಡು ಬಂದು, ಜಾರುಗಲ್ಲೊಂದೇ ಏರುವ ಮಾರ್ಗವೆಂದು ನಿಶ್ಚಯಿಸಿ, ಅಷ್ಟು ದೂರದಲ್ಲಿ, ಬರಲಿರುವ ತನ್ನ ಭಟರಿಗಾಗಿ ಕಾದು ಕುಳಿತ.

ಇರುಳ ಕತ್ತಲಿನಲ್ಲಿ ಸೇನೆ ಬಂದು ನಾಯಕರನ್ನು ಕೂಡಿಕೊಂಡಿತು.

ಒಬ್ಬೊಬ್ಬರಾಗಿ ಸೈನಿಕರು ಬಂದು ಕೂಡಿಕೊಳ್ಳುತ್ತಿದ್ದ ಹಾಗೇ, ಮದಕರಿನಾಯಕನ ರಣೋತ್ಸಾಹವೂ ಮೈತುಂಬಿ –

'ಮುಳ್ಳುಪೊದೆಗಳಿಗೆ ಬೆಂಕಿ ಹೊತ್ತಿಸಿ'

-ಎಂದು ಅಪ್ಪಣೆ ಮಾಡಿದ, ಇರುಳೂಟದ ಹೊತ್ತಿಗೆ.

ನಾಯಕರು ಅಪ್ಪಣೆ ಮಾಡುತ್ತಿದ್ದಂತೆಯೇ, ಚಕಮಕಿಕಲ್ಲುಗಳು ಚಟಪಟ ಸಿಡಿದು, ಅವರು ಹೊತ್ತುತಂದ ಮುಳ್ಳುಹೊರೆಗಳು, ಕತ್ತಲು ಕವಿದ ವಿಸ್ತಾರವಾದ ಬಯಲಿನಲ್ಲಿ, ಹೊಗೆಯಾಡಿ, ಕಿಡಿಗಾರಿ, ಅಲ್ಲಲ್ಲಿ ಹೊತ್ತಿ ಉರಿಯಲಾರಂಭಿಸಿದವು. ಆ ಉರಿಯಂತೆಯೇ, ಆ ಉರಿಗಳನ್ನು ಹೊತ್ತಿಸಿದ, ಭಂಗಿ ಕುಡಿದು ಅಮಲೇರಿದ ಬೇಡರ ಕಣ್ಣುಗಳೂ ಬರಲಿರುವ ಯುದ್ಧವನ್ನು ನೆನೆದು ಉರಿಗಾರಲಾರಂಭಿಸಿದವು.

ಇರುಳ ಕಾಳಗದಲ್ಲಿ ನುರಿತು ನುರುಪಡಿಯಾದ ಸೈನಿಕರು, ಹೊತ್ತಿಸಿದ ಮುಳ್ಳು ಪೊದೆಯ ಬೆಳಕಿನಲ್ಲಿ ರೊಟ್ಟಿ, ಮಾಂಸದ ತುಂಡುಗಳನ್ನು ತಿಂದು, ಬೆನ್ನಿಗೆ ನೂಲೇಣಿ, ಸೊಂಟದ ಚೀಲದಲ್ಲಿ ಸಾಕಿದ ಉಡಗಳನ್ನು ಕಟ್ಟಿಕೊಂಡು ಮೈಗೆ ಕಂಬಳಿ ಹೊದ್ದು, ದೂರದಲ್ಲಿ ಕಂಡ ಮಿಕದತ್ತ ಪೊದೆಯಲ್ಲಿ ಸದ್ದಾಗದಂತೆ ಸರಿಯುವ ಚಿರತೆಗಳಂತೆ ನಡೆದು, ಕಂದಕದ ಬಳಿಸಾರಿ, ಏರಲು ನಿಶ್ಚಯಿಸಿದ ಇದ್ದದ್ದರಲ್ಲಿ ಸುಲಭವಾದ ಜಾಗವನಾಯ್ದು ತಮ್ಮೊಂದಿಗೆ ಎಳೆತಂದ ಕುದುರೆಗಳನ್ನು ಕಡಿದು ತುಂಡುತುಂಡು ಮಾಡಿ ಕಂದಕದಲ್ಲಿದ್ದ ಮೊಸಳೆಗಳಿಗೆ ಉಣಬಡಿಸಿದರು. ಕಂದಕದಲ್ಲಿದ್ದ ಮೊಸಳೆಗಳು ಆ ಹಸಿಮಾಂಸಕ್ಕಾಗಿ ಹೊಯ್ದಾಡುತ್ತಿದ್ದಾಗ, ಭಟರು ಕಂದಕದ ನೀರಿಗಿಳಿದು, ಕಂದಕದೊಳಗೆ ನಟ್ಟ ಮೊನಚಾದ ಬಿದಿರು ಸೀಳುಗಳು ಮೈಹೋಗದಂತೆ, ಕಂಬಳಿಗಳನ್ನು ಮೈಗೆ ಬಿಗಿದು, ನೀರಿಗೆ ವಿಷ ಬೆರೆಸಿರಬಹುದೆಂಬ ಭಯದಿಂದ, ಆ ನೀರು ನಾಲಗೆಯನ್ನು ಸೋಂಕದಂತೆ, ಬಾಯಿ ಕಚ್ಚಿ ಉಸಿರು ಬಿಗಿ ಹಿಡಿದು, ಹೆಚ್ಚು ಸದ್ದಾಗದಂತೆ ಈಸಿ, ಕಂದಕದ ಆಚೆಯ ಬಂಡೆಗಲ್ಲನ್ನು ಸೇರಿ, ಕಾಲಿಗೆ ನೂಲೇಣಿ ಬಿಗಿದ ಉಡಗಳನ್ನು ರೊಯ್ಯನೆ ಮೇಲೆತ್ತಿ ಬೀಸಿ, ಉಡ ಬಂಡೆಯನ್ನು ಕಚ್ಚಿಕೊಂಡಿತು ಎಂದು ಅರಿವಾಗುತ್ತಿದ್ದಂತೆಯೇ, ಅದನ್ನು ಹಿಡಿದು ಹಲ್ಲಿಗಳಂತೆ ಬಂಡೆಗಲ್ಲನ್ನು

ಕಚ್ಚಿ ಮೇಲೇರಿದರು. ಐದುನೂರು ಭಟರಿದ್ದರೂ ಒಬ್ಬಾಳಿನ ಸದ್ದೂ ಆಗಲಿಲ್ಲ. ಕಂದಕ ದಾಟುವ ಮೊದಲು ಬಿಗಿಹಿಡಿದ ಉಸಿರು, ಸಡಿಲಾದುದು ಬಂಡೆಗಲ್ಲನ್ನು ಏರಿದ ಬಳಿಕವೇ.

ಬಂಡೆಗಲ್ಲನ್ನು ಏರುತ್ತಿದ್ದಂತೆಯೇ ಕೋಟೆಯ ಬಾಗಿಲು ತೆರೆದಂತಾಯಿತು, ಬೇಡಪಡೆಗೆ.

ಉಳಿದವರೊಂದಿಗೆ ಕೋಟೆಯನ್ನೇರಿದ ಮದಕರಿನಾಯಕ, ತನ್ನ ಕೈಯಲ್ಲಿ ಹಿಡಿದ ಪರಿಘಾಯುಧವನ್ನು ಬೀಸಿ, ಕಾದ ಬೇಡಪಡೆಗೆ ಮುನ್ನುಗ್ಗಲು ಅಪ್ಪಣೆ ಮಾಡಿದ.

ಕತ್ತಲಲ್ಲಿ ಬೀಸಿದ ಆ ಆಯುಧ ಸನ್ನೆ ಕಂಡೊಡನೆಯೇ ಐದುನೂರು ಮಂದಿಯೂ ನಕ್ಷತ್ರ ತುಂಬಿದ ಕಾರಿರುಳ ಮುಗಿಲು, ಹರಿದು ಚೂರಾಗುವಂತೆ ಒಮ್ಮೆಲೇ ರಣಕೇಕೆ ಹಾಕಿ, ಕುರಿಮಂದೆಯ ಮೇಲೆ ಬಿದ್ದ ಚಿರತೆಗಳ ಪಡೆಯಂತೆ, ಆ ಸದ್ದು ಕೇಳಿ ಎಚ್ಚೆತ್ತು, ಬೆದರಿ ನಿದ್ದೆಗಣ್ಣುಜ್ಜಿಕೊಳ್ಳುತ್ತಿದ್ದ ನಿಜಗಲ್ಲಿನ ಸೈನಿಕರನ್ನು ಕಂಡಕಂಡಲ್ಲಿ, ಗಾಳಿಯಲ್ಲಿ ಸೊಯ್ಯೆಂದು ರಣಗಾಳಿಯ ಬಿಸಿಯುಸಿರಿನಂತೆ ಸುಯ್ಯುಟ್ಟುವ ಗಂಡುಗೊಡಲಿಗಳನ್ನು ಬೀಸುತ್ತಾ ಕಡಿಯಲಾರಂಭಿಸಿದರು.

ಹತ್ತು ಗಳಿಗೆಯ ಹಿಂದೆ ಮೌನವಾಗಿ ಮಲಗಿದ್ದ ನಿಜಗಲ್ಲು ಕೋಟೆ, ಬಗೆಬಗೆಯ ಬೇಡರ ಶಬ್ದಗಳ ತೆರೆಹೊಯ್ಯುವ ಕಾರ್ಗಾಲದ ಕಡಲಿನಂತಾಯಿತು.

ಎದ್ದವರು, ಮಲಗಿದವರು, ಸೈನಿಕರು, ನಾಗರಿಕರು –

ತಲೆ, ಕೈ, ಕಾಲು –

- ಯಾವುದೊಂದನ್ನೂ ನೋಡದೆ ಐದುನೂರು ಗಂಡುಗೊಡಲಿಗಳು ಕಂಡದ್ದನ್ನು ಕತ್ತರಿಸಿ ತುಂಡುತುಂಡುಮಾಡಿ, ದಿಕ್ಕುದಿಕ್ಕಿಗೆ ಚೆಲ್ಲಿತು. ಇದೇನಾಯಿತು ಎಂದು ಅರಿವಾಗುವುದರೊಳಗೆ ನೂರಾರು ಜನ ಕತ್ತರಿಸಿ ಬಿದ್ದು, ಬಗೆಬಗೆಯಾಗಿ ಗಾಯಗೊಂಡು, ಭೀತಿಗೊಂಡವರ ಆಕ್ರಂದನ, ಬೇಡಪಡೆಯ ರಣಕೂಗಿನೊಂದಿಗೆ ಬೆರತು, ಬೃಹದಾಕಾರದ ಬೆಟ್ಟವೇ ಚೀರಿದಂತಾಯಿತು.

ಬಹುಮಂದಿ ಬೇಡರು, ಆ ಕಗ್ಗೊಲೆಯಲ್ಲಿ ನಿರತರಾಗಿದ್ದಾಗ ಆಲಿಸಿದ ಜನ, ದಾರಿಗೆ ಸಿಕ್ಕವರನ್ನು ಕತ್ತರಿಸುತ್ತಾಹೋಗಿ, ಕೋಟೆಬಾಗಿಲನ್ನು ಕಾಯುತ್ತಿದ್ದವರನ್ನು ಕಡಿದು, ಬಾಗಿಲು ತೆರೆದರು. ಅದಕ್ಕಾಗಿ ಕಾದಿದ್ದ ಬೇಡಪಡೆ ಕಾಲಭೈರವನ ರಣಶ್ವಾನಪಡೆಯಂತೆ ಕೋಟೆಯೊಳಗೆ ನುಗ್ಗಿ, ಕೈಯ ಆಯುಧದಷ್ಟೇ ಹರಿತವಾದ ರಣಕೇಕೆಹಾಕುತ್ತಾ, ದಾರಿ ಕಂಡ ಕಡೆ ನುಗ್ಗಿತು – ಕಬ್ಬಿನ ಪೈರು ತುಳಿಯುವ ಸೊಕ್ಕೇರಿದ ಸಲಗದ ಮಂದೆಯಂತೆ.

ಬೇಡಪಡೆ ಆ ಕಗ್ಗೊಲೆಯಲ್ಲಿ ನಿರತರಾಗಿರುವಾಗಲೇ, ಕೈಯ ಪರಿಘಾಯುಧ ಎಂಟಾಳಿನ ಕೊಲೆ ಮಾಡುತ್ತಿರಲು, ಆಯ್ದ ನೂರು ಮಂದಿಯೊಂದಿಗೆ ಮದಕರಿನಾಯಕ, ಕಿಲ್ಲೇದಾರ ಸರ್ದಾರ್‌ಖಾನನಿದ್ದ ಅರಮನೆಯತ್ತ ನುಗ್ಗಿದ.

ಶತ್ರುದಾಳಿಯ ನಿರೀಕ್ಷೆಯಿಲ್ಲದೆ, ಸುಖವಾಗಿ ನಿದ್ರಿಸುತ್ತಿದ್ದ ಕೋಟೆಯ ಕಿಲ್ಲೇದಾರ ಸರ್ದಾರ್‌ಖಾನ್ ಎಚ್ಚೆತ್ತು 'ಎತ್ತಣ ದಾಳಿ, ದಾಳಿ ಮಾಡಿದವರಾರು' ಎಂದು ತಿಳಿಯದೆ, ಮಲಗಿದುಡುಗೆಯಲ್ಲೇ ಎದ್ದು ಬಂದು, 'ದೀವಟಿಗೆಗಳನ್ನು ಹೊತ್ತಿಸಿ, ಶತ್ರುಗಳನ್ನು ಎದುರಿಸಿ' ಎಂದು ಕೂಗಿದ. ಆತನ ಆಜ್ಞೆಯಂತೆ ಕೋಟೆಯಲ್ಲಿ ನೂರಾರು ದೀವಟಿಗೆಗಳು ಬೆಳಗಿದುದು - ಕತ್ತರಿಸುವ ಖಡ್ಗಗಳಿಗೆ ದಾರಿ ತೋರಿದುತಾಗಿ, ದೀವಟಿಗೆಗಳನ್ನು ಹಿಡಿದವರನ್ನು ಹಾಗೇ ಬಿಟ್ಟು, ಆತುರಾತುರವಾಗಿ ಕೋವಿ, ಖಡ್ಗಗಳನ್ನು ಧರಿಸುತ್ತಿದ್ದ ಸೈನಿಕರನ್ನು ಉಸಿರೊಡಿಸಲೂ ಅವಕಾಶ ಕೊಡದೆ ಕತ್ತರಿಸಲು ಅನುಕೂಲವಾದುದೇ ಅಲ್ಲದೆ, ಕಿಲ್ಲೇದಾರನನ್ನು ಹುಡುಕುತ್ತಿದ್ದ ಮದಕರಿನಾಯಕನಿಗೆ 'ಆತ ಇಲ್ಲೇ ಇದ್ದಾನೆ' ಎಂದು ಬೊಟ್ಟು ಮಾಡಿ ತೋರಿಸಿದಂತಾಯಿತು.

ಗುರಿಕಾಣದೆ, ಯಾರನ್ನು ಹೊಡೆಯಬೇಕೆಂದು ತಿಳಿಯದೆ ಕೋಟೆಯ ಸೈನಿಕರು ತತ್ತರಿಸುತ್ತಿದ್ದಾಗ, ಹತ್ತುಮಂದಿ ಭಟರೊಂದಿಗೆ, ಮದಕರಿನಾಯಕ, ಸರ್ದಾರ್‌ಖಾನ್‌ನನ್ನು ಬಂಧಿಸಿ

"ಯುದ್ಧ ನಿಲ್ಲಿಸಹೇಳು. ಇಲ್ಲದಿದ್ದರೆ ಕಗ್ಗೊಲೆ ನಿಲ್ಲುವುದಿಲ್ಲ"

- ಎಂದು ಕಠೋರವಾಗಿ ಎಚ್ಚರಿಸಿದ, ಕೈಯಲ್ಲಿ ಹಿಡಿದ ಪರಿಘಾಯುಧವನ್ನು ಝಳಪಿಸುತ್ತಾ.

ದೀವಟಿಗೆಗಳ ಆರೆಗತ್ತಲ ಬೆಳಕಿನಲ್ಲಿ ಮದಕರಿನಾಯಕನನ್ನು ಗುರುತಿಸಿದ ಸರ್ದಾರ್‌ಖಾನ್-

"ನೀವು ಚಿತ್ರದುರ್ಗದ ದೊರೆಗಳು, ನೀವೂ ನಮಗೆ ದ್ರೋಹ ಬಗೆದಿರಾ ? ಆಯಿತು - ಯಾರ ಕೈಲೋ ಬರಬೇಕಾದ ಮೃತ್ಯು ನಮ್ಮ ಸಾಮಂತರ ಕೈಯಿಂದಲೇ ಬರಬೇಕಾಯಿತೇ? ನಡೆಯಲಿ. ನಿಮ್ಮ ಕೈಯಲ್ಲಿನ ವಿಶ್ವಾಸದ್ರೋಹ ಕತ್ತಿಗೆ ಅಪ್ಪಣೆ ಕೊಡಿ"

-ಎಂದು ನುಡಿದಾಗ ಮದಕರಿನಾಯಕನನ್ನು ಕವಿದ ರಕ್ತದ ಅಮಲು ಇಳಿದು –

"ನಾವೀಗ ಪೇಶ್ವೆಯವರ ಮಿತ್ರರು, ನವಾಬರ ಊಳಿಗದವರಲ್ಲ. ವಿಶ್ವಾಸದ್ರೋಹ ನಿಮ್ಮ ನವಾಬರು ಕಲಿತ ಪಾಠ. ಅದರ ಹೆಸರು ನಮ್ಮ ಮುಂದೆ ಎತ್ತಬೇಡಿ. ಹಾಗೇ ಮತ್ತೊಮ್ಮೆ ನಿಮ್ಮ ನವಾಬರ ಸಾಮಂತರು ಎಂದಿರಾದರೆ, ಆ ಮಾತಿಗೆ ನಿಮ್ಮ ನಾಲಗೆಯನ್ನು ಕತ್ತರಿಸಬೇಕಾದೀತು. ವೀರಸಾವು ನಿಮ್ಮ ಇಚ್ಛೆಯಾಗಿದ್ದಲ್ಲಿ ಈಗಲೂ ಅವಕಾಶ ಕೊಡುತ್ತೇನೆ -ಕತ್ತಿ ತೆಗೆದುಕೊಳ್ಳಿ. ಕಗ್ಗೊಲೆ ನಿಂತು ನಮ್ಮಿಬ್ಬರ ಯುದ್ಧದಲ್ಲಿ ಜಯಾಪಜಯಗಳು ನಿರ್ಧಾರವಾಗಲಿ"

- ಎಂದು ಮದಕರಿನಾಯಕ, ಸರ್ದಾರ್‌ಖಾನನ ಮೇಲೆ ನುಗ್ಗಲಿದ್ದ ತನ್ನ ಕಡೆಯವರನ್ನು ತಡೆದು ಹೇಳಿದ.

"ಈಗಲೂ ನನ್ನ ಕೈಗೆ ಕತ್ತಿ ಕೊಡಲು ತಯಾರಾಗಿದ್ದೀರಾ - ಮಲಗಿದವರನ್ನು ಮರೆವಿನಲ್ಲಿ ಕೊಂದ ನೀವು ?"

- ವ್ಯಂಗ್ಯ ಕಾರುತ್ತಿದ್ದ ಧ್ವನಿಯಲ್ಲಿ ಕೇಳಿದ, ಸರ್ದಾರ್‌ಖಾನ್.

"ಇರುಳುಯುದ್ಧ ಜಗತ್ತು ಒಪ್ಪಿದ ರಣತಂತ್ರ. ಆದರೆ ಯುದ್ಧಭಿಕ್ಷೆ ಬೇಡಿದವರಿಗೆ ಚಿತ್ರದುರ್ಗದವರು ಎಂದೂ ನಿರಾಕರಿಸಿಲ್ಲ. ಇದು ಮಾತಿಗೆ ಸಮಯವಲ್ಲ - ಕತ್ತಿ ತೆಗೆದುಕೊಳ್ಳುತ್ತೀರೋ, ಶರಣಾಗತರಾಗುತ್ತೀರೋ - ಎರಡರಲ್ಲೊಂದು ಹೇಳಿ ?"

- ನಿಷ್ಠುರವಾಗಿ ಹೇಳಿದ ಮದಕರಿನಾಯಕ.

"ಮರಾಠರ ಕೈಯ ಸಾವಿಗಿಂತ ಇದು ಮೇಲು - ಕತ್ತಿ ಕೊಡಿ" - ಎಂದ ಸರ್ದಾರ್‌ಖಾನ್.

ತನ್ನ ಒರೆಯಲ್ಲಿದ್ದ ಖಡ್ಗವನ್ನೇ ಹಿರಿದು ಸರ್ದಾರ್‌ಖಾನನ ಕೈಗಿತ್ತು. ತನ್ನ ವರತ್ತ ಕೂಗಿ ಹೇಳಿದ –

"ಸದ್ಯಕ್ಕೆ ಯುದ್ಧ ನಿಲ್ಲಲಿ."

ಅತ್ಯಂತ ವಿಚಿತ್ರ ತಿರುವು ಪಡೆದ ಯುದ್ಧದ ರೀತಿ ಇಬ್ಬಣದವರನ್ನೂ ಬೆರಗುಗೊಳಿಸಿತು. ಇದೇನೆಂದು ನೋಡುತ್ತಿರುವಾಗಲೇ ತನ್ನ ಕೈಯ ಪರಿಘಾಯುಧವನ್ನು ತನ್ನ ಪಕ್ಕದವರಿಗೆ ಕೊಟ್ಟು, ಅವರ ಕೈಯ ಗಂಡುಗೊಡಲಿ ಹಿಡಿದು, ತನ್ನತ್ತ ನುಗ್ಗಿದ ಸರ್ದಾರಖಾನನ ಮೇಲೆ ಏರಿಹೋದ.

ಸರ್ದಾರ್‌ಖಾನನೂ ಧೀರಯೋಧ, ಆದಷ್ಟು ಹೋರಾಡಿದ. ಆದರೆ ರಣೋನ್ಮತ್ತನಾದ ಮದಕರಿನಾಯಕನಿದಿರು ಸೆಣಸಲಾಗದೆ, ಕೈಯೊಂದಿಗೆ ಕತ್ತರಿಸಿಬಿದ್ದ ಕತ್ತಿಯನ್ನು ನೋಡುತ್ತಾ-

"ನಾನು ಸೋತೆ. ಈಗಲೂ ಹೇಳುತ್ತೇನೆ, ನಾಯಕರೇ. ಕೊಲ್ಲುವುದಾದರೆ ನೀವು ಕೊಲ್ಲಿ. ಮರಾಠರ ಕೈಗೆ ಒಪ್ಪಿಸಬೇಡಿ. ಅವರ ನಾಯಿನರಿಗಳಿಗೆ ಊಟವಾಗುವುದಕ್ಕಿಂತ ನಿಮ್ಮ ಕೈಯ ಸಾವು ಸ್ವರ್ಗ" – ಎಂದು ಹೇಳಿದ.

"ಆಯುಧಹೀನರಾದವರನ್ನು ಕೊಲ್ಲುವಷ್ಟು ಹೀನ ಜನರು ನಾವಲ್ಲ, ಮರಾಠರ ಕೈಯ ಸಾವು ನಿಮಗಿಷ್ಟವಿಲ್ಲವಾದರೆ, ಅವರಿಂದ ನಿಮ್ಮ ಜೀವವನ್ನು ರಕ್ಷಿಸುವ ಭಾರ ನಮಗಿರಲಿ" ಎಂದ ಮದಕರಿನಾಯಕ.

"ನಿದ್ರೆಯಲ್ಲಿದ್ದವರನ್ನು ಕೊಂದ ನಿಮ್ಮನ್ನು ನಾನು ನಂಬಬಹುದೇ ?"

"ನೀವು ಕತ್ತಿ ಹಿಡಿದಾಗ ಮಲಗಿರಲಿಲ್ಲ. ಮಲಗಿದ್ದರೂ ಎಬ್ಬಿಸಿ ಕತ್ತಿ ಕೊಟ್ಟು, ಕಾಳಗ ಮಾಡಿ ಗೆಲ್ಲುತ್ತಿದ್ದೆ. ಕೊಟ್ಟ ಮಾತಿಗೆ ತಪ್ಪಿದವರಲ್ಲ ಚಿತ್ರದುರ್ಗದವರು. ನಮ್ಮ ನಾಲಗೆಗೆ ತಲೆಗಿಂತ

ಹೆಚ್ಚು ಬೆಲೆ. ಹಾಗೇ ಇದನ್ನೂ ನೆನಪಿಡಿ - ನಿದ್ರೆಯಲ್ಲಿ ಮಲಗಿದ್ದ ಶತ್ರುವನ್ನಲ್ಲ, ಮಲಗಿದ ಹುಲಿಯನ್ನೂ ಬೇಟೆಯಾಡಿ ಅಭ್ಯಾಸವಿಲ್ಲ ನನಗೆ. ನನ್ನನ್ನು ನಂಬಿದರೆ ನನ್ನ ಜೊತೆ ಬನ್ನಿ. ಕೋಟೆಯ ಮೇಲೆ ಬಿಳಿ ಬಾವುಟ ಹಾರಿಸಿ. ಹಗಲು ನಿಮ್ಮನ್ನು ಪೇಶ್ವೆಯವರಿಗೊಪ್ಪಿಸುವ ಪಂಥ ತೀರಿಸಿ, ನಿಮ್ಮನ್ನು ನಿಮ್ಮ ಜನಾನಾದೊಂದಿಗೆ ಪಟ್ಟಣಕ್ಕೆ ಕಳಿಸುತ್ತೇನೆ" -ಎಂದು ಹೇಳಿದ ಮದಕರಿನಾಯಕ.

"ಆಯಿತು. ಆ ಪರೀಕ್ಷೆಯೂ ನಡೆದುಹೋಗಲಿ"

- ಎಂದಷ್ಟೇ ಹೇಳಿದ ಸರ್ದಾರ್‌ಖಾನ್ –

"ಕೋಟೆಯ ಮೇಲೆ ಬಿಳಿ ಬಾವುಟ ಹಾರಿಸಿ"

-ಎಂದು ತನ್ನ ಕಡೆಯವರಿಗೆ ಅಪ್ಪಣೆ ಮಾಡಿದ.

೧೫

ಹಗಲು ಹರಿಯುತ್ತಿದ್ದಂತೆಯೇ ಎರಡು ತಿಂಗಳಕಾಲ ಅಭೇದ್ಯವಾಗಿದ್ದ ನಿಜಗಲ್ಲಿನ ಕೋಟೆಯ ಮೇಲೆ ಶಾಂತಿ ಪ್ರಾರ್ಥಿಸುವ ಬಿಳಿಬಾವುಟವನ್ನು ಕಂಡು, ಪೇಶ್ವೆಯ ಪಾಳಯ ನಿಬ್ಬೆರಗಾಗಿ 'ಇದೇನು ಪವಾಡ ನಡೆಯಿತು' ಎಂದು ನೋಡುತ್ತಿರುವಾಗಲೇ, ತನ್ನ ಬಂದಿಯಾದ ಸರ್ದಾರ್ ಖಾನನೊಂದಿಗೆ ಅಶ್ವಾರೋಹಿಯಾಗಿ, ತನ್ನ ಬೇಡಪಡೆಯೊಂದಿಗೆ, ಹನುಮದ್ಗರುಡಧ್ವಜವನ್ನು ಹಾರಿಸುತ್ತಾ ಬಂದ ಮದಕರಿನಾಯಕನನ್ನು ನೋಡಿ ಜಯಘೋಷ ಮಾಡಿತು.

ಆ ಜಯಘೋಷವನ್ನು ಕೇಳಿ ಪೇಶ್ವೆ ಮಾಧವರಾಯ ಅವಸರದಲ್ಲಿ ತನ್ನ ಸರ್ದಾರರನ್ನು ಸೇರಿಸಿ, ಮದಕರಿನಾಯಕನನ್ನು ಸ್ವಾಗತಿಸಿ –

"ನಿಮ್ಮನ್ನು ನಾವು ನಂಬಿದ್ದು ಸುಳ್ಳಾಗಲಿಲ್ಲ"

- ಎಂದು ಹೇಳಿ, ಸೆರೆಯಾಳಾಗಿ ನಿಂತ ಸರ್ದಾರ್‌ಖಾನನನ್ನು ಮರುಗುಟ್ಟಿ ನೋಡುತ್ತಾ –

"ನಿಮಗೆ ಕಾದಿರುವ ಶಿಕ್ಷೆ ಏನು ಗೊತ್ತೆ ?"

- ಎಂದು ಕೇಳಿದ, ಎರಡು ತಿಂಗಳ ಯುದ್ಧದ ಕಹಿಯನ್ನು ನೆನಪಿಸಿಕೊಳ್ಳುತ್ತಾ.

"ಸೋತಾಗಲೇ, ತಲೆ ಇರುವುದನ್ನು ಮರೆತಿದ್ದೇನೆ. ಬೇಕಾದ ಶಿಕ್ಷೆ ವಿಧಿಸಬಹುದು"

- ಎಂದು ನಿರ್ಭಯವಾಗಿ ಉತ್ತರವಿತ್ತ, ಸರ್ದಾರ್‌ಖಾನ್.

“ಗುಂಡೇಟು ಬಿದ್ದ ನಮ್ಮ ಸೋದರ ಕೈಗೆ ಪ್ರತಿಯಾಗಿ ನಿಮ್ಮ ಕೈ ಕತ್ತರಿಸಬೇಕೆಂದು ಮಾಡಿದ್ದೆ. ಆದರೆ ಆ ಕೆಲಸವನ್ನು ನಮ್ಮ ಮಿತ್ರರೇ ಮಾಡಿದ್ದಾರೆ, ಈಗ ಉಳಿದಿರುವುದೊಂದೆ.”

- ಕ್ಷಯರೋಗ ಬಂದು ಬಡಕಲಾದ ಮೈ ಕ್ರೋಧದಿಂದ, ವಿಚಿತ್ರಹೆಮ್ಮೆಯಿಂದ ಕಂಪಿಸುತ್ತಿರಲು ಕೇಳಿದ ಪೇಶ್ವೆ ಮಾಧವರಾಯ.

“ಏನು - ಹೇಳಿ ?”- ಸರ್ದಾರ್‌ಖಾನ್ ಕೇಳಿದ.

“ನೀವು, ಮೈಸೂರಿನವರು ಸೋತವರ ಮೂಗು ಕತ್ತರಿಸುತ್ತೀರಿ. ಪ್ರಾಣ ತೆಗೆಯುವುದಕ್ಕಿಂತ ಹೀನಾಯಮಾನವಾದ ಅಪಮಾನ ಅದು. ಆ ಶಿಕ್ಷೆಯನ್ನೇ ನಿಮಗೂ ವಿಧಿಸಿದ್ದೇವೆ”

- ಪೇಶ್ವೆ ಮಾಧವರಾಯ ಹೇಳಿದ.

“ಅದು ಕೂಡದು ಶ್ರೀಮಂತರೇ, ಮೂಗು ಕೊಮ್ಮಿಸುವುದು ತಲೆ ತೆಗೆಯುವುದಕ್ಕಿಂತ ಹೀನ ಕೆಲಸ ಎಂದಿರಿ. ಸರ್ದಾರ್‌ಖಾನರ ಮೂಗು ಹೋಗಬಹುದು. ಆದರೆ ಮಾನ ಹೋಗುವುದು ಮರಾಠರಿಗೆ. ಅದಾಗದು- ಸರ್ದಾರ್‌ಖಾನರು ನಮ್ಮ ಸೆರೆಯಾಳಾದರೂ ಅತಿಥಿ. ಅವರನ್ನೂ, ಅವರ ಜನಾನಾದವರನ್ನೂ ಕ್ಷೇಮವಾಗಿ ಪಟ್ಟಣಕ್ಕೆ ಸೇರಿಸುವ ವಾಗ್ದಾನ ಮಾಡಿದ್ದೇವೆ. ನಮ್ಮ ಸ್ನೇಹ ಇಂದಲ್ಲ, ಮುಂದೆಯೂ ತಮಗೆ ಬೇಕಾದರೆ ನಮ್ಮನ್ನು ವಚನಭ್ರಷ್ಟರನ್ನಾಗಿ ಮಾಡಬೇಡಿ”

- ಮದಕರಿನಾಯಕ ದೃಢಕಂಠದಲ್ಲಿ ಪೇಶ್ವೆಯವರನ್ನು ಎಚ್ಚರಿಸುವ ಧ್ವನಿಯಲ್ಲಿ ಹೇಳಿದ.

“ನೀವು ನುಡಿದ ಮಾತಿನಂತೆ ಕೋಟೆ ಗೆದ್ದು ಕೊಟ್ಟಿರಿ. ನಿಮ್ಮ ಮಾತು ನಮಗೆ ಮಾನ್ಯ. ಅದು ಬಿಡಿ - ನಿಮ್ಮ ಪರಾಕ್ರಮಕ್ಕೆ ನೀವು ಯಾವ ಸೀಮೆಯನ್ನು ಕೇಳುತ್ತೀರ ಹೇಳಿ - ನಾವು ಗೆದ್ದ ಸೀಮೆಯಲ್ಲಿ ಆರಿಸಿದ ರಾಜ್ಯ ನಿಮ್ಮದು”

– ಎಂದ ಪೇಶ್ವೆ ಮಾಧವರಾಯ, ಮದಕರಿನಾಯಕನ ಶೌರ್ಯ-ಔದಾರ್ಯ ಎರಡಕ್ಕೂ ಮೆಚ್ಚಿ.

“ಬಹುಮಾನ ಪಡೆಯಲು ನಾವು ಸಿಪಾಯಿಗಳಲ್ಲ, ರಾಜರು. ಬೇಕಾದ ಸೀಮೆಯನ್ನು ಗೆಲ್ಲುವ ಬಲ ದೇವರು ನಮಗೆ ಕೊಟ್ಟಿದ್ದಾನೆ. ಮಾತುಕೊಟ್ಟೆವು, ಕೊಟ್ಟ ಮಾತನ್ನು ಉಳಿಸಿಕೊಂಡೆವು. ಅಷ್ಟು ಬಹುಮಾನ ಸಾಕು-”

- ಎಂದು ಸಗರ್ವವಾಗಿ ನುಡಿದು, ಸುತ್ತಲಿದ್ದ ಹರಪನಹಳ್ಳಿ, ರಾಯದುರ್ಗ, ಬಳ್ಳಾರಿಯ ಪಾಳೆಯಗಾರರ ಮುಖವನ್ನು ನೋಡುತ್ತಾ ಏನೋ ಹೊಳೆದು-

“ಹಾಗೂ ನಿಮಗೆ ಬಹುಮಾನ ಕೊಡಬೇಕೆಂಬ ಅಭಿಮಾನವಿದ್ದರೆ, ತುಂಬಿದ ಪಾಳಯದಲ್ಲಿ ’ಚಿತ್ರದುರ್ಗದ ಗಂಡು, ಎಪ್ಪತ್ತೇಳು ಪಾಳಯಗಾರರ ಗಂಡ’ ಎಂಬ ಬಿರುದನ್ನು ಕೂಗಿಸಿ ನಗಾರಿ ಹೊಮ್ಮಿಸಿರಿ. ಅಷ್ಟು ಸಾಕು”- ಎಂದ ಮದಕರಿನಾಯಕ.

“ಅದಾವ ದೊಡ್ಡ ಮಾತು. ಈ ಹಗಲೇ ನೆರವೇರಿಸುತ್ತೇನೆ” - ಎಂದು ಹೇಳಿ –

“ಸರ್ದಾರ್‌ಖಾನ್‌ರೇ, ನೀವಿಂದು ನಮ್ಮ ಬಿಡಾರದಲ್ಲಿ ವಿಶ್ರಾಂತಿಪಡೆದು, ನಾಳೆ ಪಟ್ಟಣಕ್ಕೆ ಪ್ರಯಾಣ ಮಾಡಬಹುದು. ಹಾಗೇ ಪೇಶ್ವೆಯ ಶ್ರೀಮಂತರು ತಮ್ಮ ವೀರರನ್ನು ಹೇಗೆ ಗೌರವಿಸುತ್ತಾರೆ ಎಂಬುದನ್ನೂ ಕಣ್ಣಾರೆ ನೋಡಿ ಹೋಗಿ” - ಎಂದು ಹೇಳಿದ ಪೇಶ್ವೆ ಮಾಧವರಾಯ.

ಮದಕರಿನಾಯಕನ ವಿಚಿತ್ರ ಬೇಡಿಕೆ, ಅದನ್ನು ಪೇಶ್ವೆಗಳು ಒಪ್ಪಿದುದನ್ನು ಕೇಳಿದ ಸಭೆಯಲ್ಲಿದ್ದ ಪಾಳಯಗಾರರ ಮುಖಗಳು ಕೆಂಪೇರಿ, ಕಾವಳಿದ ಇದ್ದಿಲಂತೆ ಕಪ್ಪಾದವು. ಅವರ ಕಣ್ಣುಗಳಲ್ಲಿ ಅಪಮಾನದ ಉರಿ ಹೊತ್ತಿತು.

ಆದರೆ ಸರ್ದಾರ್‌ಖಾನ್ –

“ರಾಜಾ ಮದಕರಿನಾಯಕರೇ, ’ನುಡಿದು ತಪ್ಪುವ ಲೋಭಿ ನಾಯಕರ ಗಂಡ’ ಎಂಬುದು ನಿಮ್ಮ ಪೂರ್ವಜರ ಬಿರುದು ಎಂದು ಕೇಳಿದ್ದೆ. ಅದನ್ನು ನೀವಿಂದು ಸಾರ್ಥಕಪಡಿಸಿಕೊಂಡಿರಿ. ನಿಮ್ಮ ತೋಳವೀರವನ್ನು, ನಿಮ್ಮ ಹೃದಯದ ಔದಾರ್ಯವನ್ನು ನಾವು ಎಂದೂ ಮರೆಯುವುದಿಲ್ಲ”

- ಎಂದು ಮನದುಂಬಿ ಹೇಳಿದ, ಕಣ್ಣಲ್ಲಿ ಸ್ನೇಹ-ಕೃತಜ್ಞತೆಗಳು ನೀರಾಗಿ ಹರಿಯುತ್ತಿರಲು.

ಅದನ್ನು ಕಂಡ ಮದಕರಿನಾಯಕ ಹೇಳಿದ –

“ನಿಮ್ಮ ಕಂಬನಿ ನಮಗಿಂದು ನಿಜವಾದ ವೀರಪಟ್ಟಾಭಿಷೇಕ.”

* * *

ಅವಸರದ ಸಭೆಯಲ್ಲಾದ ಮಾತುಕತೆ, ಮದಕರಿನಾಯಕರು ಪೇಶ್ವೆಯವರಿಂದ ಬೇಡಿದ ವಿಚಿತ್ರ ಉಡುಗೊರೆ, ಅದನ್ನು ನೀಡಲು ಪೇಶ್ವೆಯವರು ಒಪ್ಪಿದುದು - ಪೇಶ್ವೆಯವರ ಸಹಸ್ರ ಸಹಸ್ರ ಯೋಧರಿದ್ದ ಪಾಳಯದಲ್ಲಿ ಬರೀ ಮಾತಾಗದೆ ಮಿಂಚಿನಂತೆ ಹೊಳೆಯಿತು. ನಾಯಕರ ಬೇಡ ಪಡೆಗಂತೂ ಹಿಡಿಸಲಾಗದಷ್ಟು ಹರ್ಷವಾಗಿ, ಕುಣಿದು ಕೇಕೆಹಾಕಿದರು. ತಮ್ಮ ಕೈಯ ರಕ್ತಸಿಕ್ತ ಗಂಡುಗೊಡಲಿಗಳನ್ನು ಮುಗಿಲಿಗೆಸೆದು, ಹಿಡಿದು, ಕೋಲಾಟವಾಡಿ.

ಸ್ವಯಂ ರಣರಂಗಕಲಿಯಾದ ಪೇಶ್ವೆ ಮಾಧವರಾಯನಿಗೆ ಮದಕರಿನಾಯಕರು ನಿಜಗಲ್ಲಿನ ದುರ್ಗವನ್ನು ಹಿಡಿದುಕೊಟ್ಟಿದ್ದು ಎಷ್ಟು ಸಂತೋಷವನ್ನುಂಟುಮಾಡಿತ್ತೋ, ಅದಕ್ಕಿಂತಲೂ ಮಿಗಿಲಾಗಿ ಕೋಟೆಯನ್ನು ಹಿಡಿದ ಗಂಡು ರೀತಿ, ರಣರಂಗದಲ್ಲಿ ಶತ್ರುನಾಯಕನೊಂದಿಗೆ ತೋರಿದ ಧೀರ ಔದಾರ್ಯ ಮತ್ತಷ್ಟು ಹೆಚ್ಚಿನ ಉತ್ಸಾಹ ಮೂಡಿಸಿ, ಮದಕರಿನಾಯಕರನ್ನು ಧೀರೋಚಿತ ರೀತಿಯಲ್ಲಿ ಸತ್ಕರಿಸಲು ಸಿದ್ಧತೆ ಮಾಡಿದರು.

ಪೇಶ್ವೆಯವರ ಆತಿಥ್ಯಕ್ಕಾಗಿ ಪಾಳಯದಲ್ಲಿ ಉಳಿದ ಮದಕರಿನಾಯಕರಿಗೆ ಮಂಗಳಸ್ನಾನ ಮಾಡಿಸಿ, ಹೊಸ ಪೋಷಾಕು ಧರಿಸಿ, ನೆತ್ತಿಯ ಮೇಲೆ ವಜ್ರ-ಮುತ್ತುಗಳ ಶಿರಪೇಶ್‌ನ ಅಲಂಕಾರವಿದ್ದ ಜರೀ ರುಮಾಲನ್ನು ತೊಡಿಸಿ ಚಿನ್ನದ ಒರೆಯಿದ್ದ ಖಡ್ಗವನ್ನು ಕೈಯಾರ ಸೊಂಟಕ್ಕೆ ಉಡಿಸಿ, ಓಲಗದ ಬಿಡಾರದ ಮುಂದಿನ ವಿಶಾಲವಾದ ಬಯಲಿನಲ್ಲಿ ವೀರಾಸನವನ್ನು ಇಡಿಸಿ, ಸುತ್ತಲೂ ಅವರ ಚದುರಂಗಬಲ ಹರ್ಷೋದ್ಗಾರ ಮಾಡುತ್ತಾ ಕಿಕ್ಕಿರಿದು ನೆರೆದಿರಲು, ಮದಕರಿನಾಯಕರನ್ನು ವೀರಾಸನದಲ್ಲಿ ಕುಳ್ಳಿರಿಸಿ, ಆನೆಯಿಂದ ಅವರಿಗೆ ಹೂಮಾಲೆ ಹಾಕಿಸಿ-

“ಬೆಳ್ಳಿಪಲ್ಲಕ್ಕಿಯಲ್ಲಿ ನಾಯಕರನ್ನು ಕೂರಿಸಿ, ವೀರವಾದ್ಯಗಳೊಂದಿಗೆ, ಅವರು ನಮ್ಮಿಂದ ಪಡೆದ ’ಚಿತ್ರದರ್ಗದ ಗಂಡು - ಕೊಟ್ಟ ಮಾತಿಗೆ ತಪ್ಪದ ಗಂಡ – ಎಪ್ಪತ್ತೇಳು ಪಾಳಯ ಗಾರರ ಮಿಂಡ -’ ಎಂಬ ಬಿರುದನ್ನು ಪಾಳಯದಲ್ಲೆಲ್ಲಾ ಮೊಳಗಿಸಿ ಕರೆತನ್ನಿ” -ಎಂದು ಅಪ್ಪಣೆ ಮಾಡಿದ, ಪೇಶ್ವೆ ಮಾಧವರಾಯ.

ಪೇಶ್ವೆಯವರ ಪಾಳಯದಲ್ಲಿ ಹಿಂದೆಂದೂ, ಯಾರಿಗೂ ಆಗಿರದ, ಆ ವೀರಪೂಜೆಯನ್ನು ಕಂಡು, ಶೂರರೆಲ್ಲರಿಗೂ ಒಂದು ಬಗೆಯ ಸಂತೋಷವಾದರೆ, ದುರ್ಗದ ಬೇಡಪಡೆ, ವೀರಾಸನದಲ್ಲಿ ಕುಳಿತ ನಾಯಕರಿಗೆ ಅಡ್ಡ ಬಿದ್ದು-

“ಮಾಸ್ವಾಮಿ, ದುರ್ಗದ ಸೇನೆ ತಮ್ಮ ನಾಯಕರಿಗೆ ಮಾಡುವ ವೀರಪೂಜೆಯನ್ನು ಮಾಡಲು ನಮಗೆ ಅಪ್ಪಣೆ ಕೊಡಬೇಕು” - ಎಂದು ಬೇಡಿದರು.

“ಏನು ನಿಮ್ಮ ಬೇಡಿಕೆ ?” – ಎಂದು ಪೇಶ್ವೆ ಮಾಧವರಾಯ ಕೇಳಿದ.

“ಮಾಸ್ವಾಮಿ, ಇದು ಮದುವೆಯ ದಿಬ್ಬಣದಂತಾಯಿತು. ನಮ್ಮಲ್ಲಿ ವೀರಪೂಜೆ ಮಾಡುವ ರಿವಾಜು ಇದಲ್ಲ, ಕಗ್ಗೊಲೆಕಾಳಗದಲ್ಲಿ ಗೆದ್ದು ಬಂದ ಪ್ರಭುಗಳನ್ನು ಅರಿರುಂಡಗಳ ಪೀಠದ ಮೇಲೆ ಕೂರಿಸಿ, ಶತ್ರುರಕ್ತದಿಂದ ಅಭಿಷೇಕ ಮಾಡಿಸುವುದು ದುರ್ಗದ ಪದ್ಧತಿ. ಹಿಂದೆ ಈ ಮನೆತನದ ಮೂಲಪುರುಷರು, ಮತ್ತಿ ತಿಮ್ಮಣ್ಣನಾಯಕರ ಕಾಲದಲ್ಲಿ ಕಲ್ಬುರ್ಗಿಯ ಕಾಳಗದಲ್ಲಿ ಅವರು ಹಾಗೆ ಮಾಡಿಸಿಕೊಂಡಿದ್ದನ್ನು ನಾವು ಕೇಳಿದ್ದೇವೆ. ಪರಾಕ್ರಮದಲ್ಲಿ ನಮ್ಮ ಮಾಸ್ವಾಮಿಯವರು ಮತ್ತೊಬ್ಬ ಮತ್ತಿ ತಿಮ್ಮಣ್ಣನಾಯಕರು. ಅವರು ಕಲ್ಬುರ್ಗಿ ಕೋಟೆ ಹಿಡಿದಂತೆಯೇ ಇವರು ನಿಜಗಲ್ಲು ಕೋಟೆ

ಹಿಡಿದಿದ್ದಾರೆ. ಇನ್ನಿಂಥ ದುರ್ಗದ ಸೇನೆ ಕಂಡಿಲ್ಲ -ನಮಗೂ ಆ ವೀರಪೂಜೆ ಮಾಡಲು ಅಪ್ಪಣೆಯಾಗಬೇಕು"

- ಎಂದು ಬೇಡಿದ ಬೇಡಪಡೆಯ ಮುಂದಾಳು, ಕಠಾರಿ ವೀರನಾಯಕ.

ಆತ ಹೇಳಿದುದನ್ನು ಕೇಳಿಯೇ ಪೇಶ್ವೆಯವರ ಕಣ್ಣಲ್ಲಿ ಕತ್ತಲು ತುಂಬಿ –

"ಏಷ್ಟಾದರೂ ನಾವು ಬ್ರಾಹ್ಮಣರು - ನಾವದನ್ನು ಕಣ್ಣಿಂದ ನೋಡಲಾರೆವು"

-ಎಂದರೆ, ಮದಕರಿನಾಯಕ –

"ನೀವು ಕಡಿದ ತಲೆಗಳ ಮೇಲೆ ಕುಳಿತು ರಕ್ತಾಭಿಷೇಕ ಮಾಡಿಸಿಕೊಳ್ಳಲು ನಾವು ಸಿದ್ಧರಿಲ್ಲ, ಮುಂದೊಂದು ಯುದ್ಧದಲ್ಲಿ ನಾವೇ ಅಷ್ಟು ತಲೆ ಕಡಿದಾಗ ಆ ಪೂಜೆ ಮಾಡಿ, ಒಪ್ಪಿಸಿಕೊಳ್ಳುತ್ತೇವೆ. ಸದ್ಯಕ್ಕೆ ನಿನ್ನೆ ನೀವು ಮಾಡಿದುದೇ ನಮಗೆ ವೀರಪೂಜೆ, ರಕ್ತಾಭಿಷೇಕ"

- ಎಂದು ಹೇಳಿ, ಆ ಬೀಭತ್ಸವನ್ನು ತಪ್ಪಿಸಿದ.

ಆ ವೀರಪೂಜೆಯೇನೋ ತಪ್ಪಿತು. ಆದರೆ ಅದು ನಡೆದಂತೆಯೇ ಸಂತೋಷಪಟ್ಟಿತು ಬೇಡಪಡೆ. ಆ ಬೇಡರಾಡಿದ ಮಾತು, ನಡೆದ ಘಟನೆಯಂತೆ ಪಾಳೆಯದಲ್ಲಷ್ಟೇ ಅಲ್ಲ, ದೇಶದಲ್ಲೆಲ್ಲಾ ಹಬ್ಬಿತು.

ಕುದುರೆಯನ್ನೇರಿ ರಣರಂಗಕ್ಕೆ ನಡೆದ ಮದಕರಿನಾಯಕ, ಪೇಶ್ವೆಯವರಿತ್ತ ಬೆಳ್ಳಿಯ ಪಾಲಕಿಯಲ್ಲಿ ಕುಳಿತು, ಅವರ ಗೌರವಾರ್ಥವಾಗಿ, ಪೇಶ್ವೆಯವರು ಕಳಿಸಿದ ಸಹಸ್ರ ಸಶಸ್ತ್ರ ಅಶ್ವಬಲ, ನಗಾರಿ, ನೌಬತ್ತುಗಳ ವಾದ್ಯರವ, ಒಬ್ಬೊಬ್ಬ ಬೇಡನಿಗೂ ಪೇಶ್ವೆಯವರಿತ್ತ ವೀರಪೋಷಾಕಿನ ವಸ್ತ್ರ ಧರಿಸಿದ ಬೇಡಪಡೆಯವರೊಂದಿಗೆ ನಿಜಗಲ್ಲಿನಿಂದ, ಚಿತ್ರದುರ್ಗದ ಉತ್ಸವಾಂಬೆಯ ದೇವಾಲಯದ ಮುಖದ್ವಾರದವರೆಗೂ ಮೆರವಣಿಗೆಯಲ್ಲಿ ಬಂದರು – ತಾವು ಪಡೆದ 'ಎಪ್ಪತ್ತೇಳು ಪಾಳಯಗಾರರ ಮಿಂಡ' ಎಂಬ ಬಿರುದನ್ನು ಹೊಗಳುಭಟರಿಂದ ಹೊಗಳಿಸಿಕೊಳ್ಳುತ್ತಾ, ಆ ಸಂತೋಷದಲ್ಲಿ ಮುಂದಾಳಾಗಿ, ಚಿತ್ರದುರ್ಗದ ಹನುಮದ್ಗರುಡ ಧ್ವಜ ಗಾಳಿಯಲ್ಲಿ ಗರಿಗೆದರಿದ ನವಿಲಿನಂತೆ ನರ್ತಿಸುತ್ತಿರಲು.

ಆ ಮೆರವಣಿಗೆಯನ್ನು ಕಂಡ ದುರ್ಗದ ವಯೋವೃದ್ಧ ಜನ ತಮಗೆ ತಾವೇ ಹೇಳಿಕೊಂಡರು –

"ಇನ್ನಿಂಥ ಧೀರ ಪಾಳಯಗಾರರನ್ನು ನಾವು ಕಂಡಿರಲಿಲ್ಲ. ಮದಕರಿನಾಯಕರು ದುರ್ಗದ ಪರಾಕ್ರಮಕ್ಕೆ ಸ್ವರ್ಣಕಲಶ."


ಆ ಮಾತು ಮನೆಮಾತಾಗಿ, ಊರ ವಾರ್ತೆಯಾಗಿ, ವೀರಗೀತೆಯಾಗಿ ನಾಡಿನಾದ್ಯಂತ ನಾಯಕನ ಪರಾಕ್ರಮದ ಪರಿಮಳದಂತೆ ಹರಡಿತು.

* * *

ಈ ವಾರ್ತೆಯನ್ನು ಕೇಳಿದ ನಾಡ ಪಾಳಯಗಾರರ ಮುಖ ದ್ವೇಷಾಸೂಯೆಯಿಂದ ಕಪ್ಪಿಟ್ಟರೆ, ಶ್ರೀರಂಗಪಟ್ಟಣಕ್ಕೆ ಹಿಂದಿರುಗಿದ, ಸರ್ದಾರ್‌ಖಾನ್‌ನಿಂದ ನಡೆದುದೆಲ್ಲವನ್ನೂ ಬಿಡಿಸಿ ಬಿಡಿಸಿ ಕೇಳಿದ, ಚಿನಕುರುಳಿ ಯುದ್ಧದಲ್ಲಿ ಮರಾಠಾ ಸರದಾರ ತ್ರಯಂಬಕರಾವ್ ಪೇಶೆ ಕೊಟ್ಟ ಪೆಟ್ಟನ್ನು ತಡೆದುಕೊಳ್ಳಲಾಗದೆ, ವೇಷಮರೆಸಿ ಕದ್ದು ಪಟ್ಟಣ ಸೇರಿ, ಮೂವತ್ತೆಂಟು ಲಕ್ಷ ರೂಪಾಯಿಗಳ ದಂಡ ತೆತ್ತು ಕ್ರೋಧರ ಕಡಾಯಿಯಂತೆ ಕುದಿಯುತ್ತಿದ್ದ ಹೈದರಾಲಿಯ ಕಿಗ್ಗಣ್ಣು ಮೊನಚು ಕಠಾರಿಯಾಗಿ, ಹದ್ದಿನ ಇರಿವ ಸುರುಗಿಯಾಗಿ, ಹೃದಯದಲ್ಲಿ ಕ್ರೋಧದ ದಾವಾನಲ, ಕಿಡಿ ಸೋಕಿದ ಮದ್ದಿನ ಕುಡಿಕೆಯಂತೆ ಆಸ್ಫೋಟಿಸಿ, ತನಗೆ ತಾನೇ ಹೇಳಿಕೊಂಡ-


’ಮುರಿದುಬಿಡಬೇಕು, ಮುರಿದುಬಿಡಬೇಕು – ಈ ಮದಕರಿಯ ಮದಿಸಿದ ದಂತದಲಗನ್ನು!’

ಸಂಚುಗಳ ಸುಳಿಯಲ್ಲಿ



ಅಹೋಬಲ ನರಸಿಂಹನ ದ್ವಾರ

(ಲಾಲ್ ಕೋಟೆ ಬಾಗಿಲು ಅಥವಾ ಕತ್ತರಿ ಬಾಗಿಲು ಅಥವಾ ಜೋಡು ಬತೇರಿ ಬಾಗಿಲು)



ಗಾಳಿಮಂಟಪ, ಶ್ರೀ ಹಿಡಿಂಬೇಶ್ವರನ ದೇವಾಲಯ

೧

ಮದಕರಿನಾಯಕ ಹಾಗೇ ನಿಂತು ನೋಡಿದ-

ನಿಂಗವ್ವ ನಾಲ್ಕು ವರ್ಷದ ತನ್ನ ಮೊಮ್ಮಗ ಭರಮಣ್ಣನನ್ನು ತೊಡೆಯ ಮೇಲೆ ಕೂರಿಸಿಕೊಂಡು, ತೊಡೆಯನ್ನು ಹಾಗೇ ತೂಗಾಡಿಸುತ್ತಾ, ಹೂ ಕಟ್ಟುತ್ತಾ ಕುಳಿತಿದ್ದಾಳೆ. ಆಕೆಯ ಇಬ್ಬದಿಯಲ್ಲಿ ಕುಳಿತ ಪದ್ಮವ್ವ, ಬಂಗಾರವ್ವ ನಾಗತಿಯರು, ಮಗುವಾಡಿದ ಏನೋ ಮಾತನ್ನು ಕೇಳಿ ನಗುತ್ತಾ, ಅತ್ತೆಗೆ ನೆರವಾಗಿ, ತಾವೂ ಹೂ ಕಟ್ಟುತ್ತಿದ್ದಾರೆ –

ತಮ್ಮೆದುರಿನ ಹೂವಿನ ಜೊತೆಗೆ ತಾವೂ ಹೂವುಗಳಂತೆ –

ಪದ್ಮವ್ವ ಮಲ್ಲಿಗೆಯಾದರೆ, ಬಂಗಾರಪ್ಪ ಕನಕಾಂಬರ, ತಾಯಿ ನಿಂಗವ್ವ ಕೇದಿಗೆಯ ತೆನೆ.

ಬಣ್ಣಬಣ್ಣದ ಮಣಿಗಳನ್ನು ಅಂದವಾಗಿ, ಒಂದಾಗಿ ಬೆಸೆದ ಪದಕದಂತಿದ್ದ ತನ್ನ ಸಂಸಾರವನ್ನು ಕಂಡು, ಸಂತೋಷದಲ್ಲಿ ನಾಯಕನ ಹೃದಯ, ತಾಯ ಕೈಯ ಹೂವಿನಷ್ಟು ಹಗುರಾಗಿ, ಅವರ ಸಂತೋಷ ಅವನ ಮನದಲ್ಲೂ ತುಂಬಿ –

“ಏನಪ್ಪಾ, ಈ ನಗುವಿನ ಹಬ್ಬದೂಟದಲ್ಲಿ ನಮಗೇನೂ ಉಳಿಸಿಲ್ಲವೇ?” ಎಂದು ಕೇಳಿದ.

ತಾವೇನೋ ಸರಸಸಲ್ಲಾಪದಲ್ಲಿದ್ದಾಗ ಅನಿರೀಕ್ಷಿತವಾಗಿ ಬಂದ ಗಂಡನನ್ನು ಕಂಡು ನಾಗತಿಯರಿಬ್ಬರೂ, ನಾಚಿ ಸೆರಗಿನಲ್ಲಿ ಮುಖ ಮರೆಮಾಡಿಕೊಂಡು ಅಲ್ಲಿಂದ ಹೋಗಲು ಯತ್ನಿಸಿದರು.

"ಇದೇನವ್ವಾ, ನಾವಿಲ್ಲಿಗೆ ಬಂದರೆ ಹುಲಿ ನೋಡಿದ ಹಾಗೆ ಹೆದರಿಕೊಂಡು ಹೋಗುತ್ತಾರೆ, ನಿನ್ನ ಸೊಸೆಯಂದಿರು. ನಾವೂ ಎರಡು ಗಳಿಗೆ ಎಲ್ಲಾರೂ ಜೊತೆಯಾಗಿ ಸರಸವಾಗಿರುವುದನ್ನು ನೋಡಿ, ಕಣ್ಣು ತಂಪು ಮಾಡಿಕೊಳ್ಳುತ್ತೇವೆ. ಅದು ನಿಮಗೆ ಬೇಡವೋ – ಅಥವಾ - ನಮ್ಮನ್ನು ಕಂಡರೆ ನಿಮ್ಮ ಸಂತೋಷಕ್ಕೆ ವಿಘ್ನವೇ ?"

-ಎಂದು ನಗುತ್ತಲೇ ಕೇಳಿ, ಪರೋಕ್ಷವಾಗಿ ಅವರಿಬ್ಬರಿಗೂ ಅಲ್ಲಿರುವಂತೆ ಹೇಳಿದ, ಮದಕರಿನಾಯಕ.

"ಎರಡೂ ಅಲ್ಲ. ನೀನು ನಿಂತು ಮಾತಾಡಿದರೆ, ಅವರು ಕುಳಿತು ಮಾತಾಡಲು ಆದೀತೇ? ಬಿಡುವಾಗಿದ್ದರೆ ಕೂತುಕೋ. ನಿನ್ನ ಮಗ ಕಲಿತ ಮುದ್ದು ಪಾಠ ಕೇಳಿ ನೀನೂ ಸಂತೋಷ ಪಡು" – ಎಂದಳು ನಿಂಗವ್ವ.

"ಈಗಾಗಲೇ ಪಾಠ ಕಲಿಯುವಷ್ಟು ದೊಡ್ಡವನಾದನೇ - ಈ ಗಿಳಿಯ ಮರಿ. ಅವನನ್ನಿತ್ತ ಕೊಡವ್ವಾ - ನಿನ್ನ ತೊಡೆಗೆ ಹೂವಾಗಿರುವುದು ನಮ್ಮ ತೊಡೆಗೆ ತಂಪಾಗಲಿ"

- ಎಂದ ಮದಕರಿನಾಯಕ ನಗುತ್ತಾ, ತನ್ನ ಮಗನತ್ತ ಕೈಚಾಚಿ.

"ನಿನ್ನ ಮಗ ಹೂವಾ ? ಆಡುತ್ತಾ ಕುಳಿತರೆ ಹಾಗನಿಸುತ್ತೆ. ಆದರೆ ಅವನನ್ನು ಎತ್ತಿಕೊಡುವಷ್ಟು ಶಕ್ತಿ ನನ್ನ ತೋಳಿಗಿಲ್ಲ. ಬಂಗಾರವ್ವಾ - ನೀನೇ ಎತ್ತಿಕೊಡು. ಮಗ ಎಷ್ಟು ಹೂವಿನ ತೂಕ ಅಂತ ನಿಮ್ಮ ಯಜಮಾನರಿಗೆ ತಿಳಿಯಲಿ"

- ಎಂದು ಬಂಗಾರವ್ವನಾಗತಿಗೆ ಹೇಳಿದಳು, ನಿಂಗವ್ವ.

ಅತ್ತೆಯ ಮಾತಿನಂತೆ ಬಂಗಾರವ್ವನಾಗತಿ. ಭರಮಣ್ಣನನ್ನು ಎತ್ತಿ ಗಂಡನ ಕೈಗೆ ಕೊಟ್ಟಳು. ಆಕೆ ಕೊಟ್ಟ ಮಗನನ್ನು ತೋಳಲ್ಲಿ ಹಿಡಿದು. ಎದೆಗಪ್ಪಿ ಮುತ್ತಿಟ್ಟು, ಹತ್ತಿರದಲ್ಲಿದ್ದ ಉಯ್ಯಾಲೆಯ ಮೇಲೆ ಕೂತು ನಿಧಾನವಾಗಿ ತೂಗಿಕೊಳ್ಳುತ್ತಾ –

"ನೀನು ಹೇಳಿದ್ದು ನಿಜ ಕಣವ್ವ, ಈ ಮಗ ನೋಡಲಿಕ್ಕೆ ಹೂವು, ಹೊರಲಿಕ್ಕೆ ತೋಫಿನ ಗುಂಡು"

- ಎಂದು ಮಗನ ಮೇಲಿನ ಅಭಿಮಾನದಿಂದ, ಅವನ ನೆತ್ತಿಯ ಗುಂಗುರುಕೂದಲಿನಲ್ಲಿ ಕೈಬೆರಳಾಡಿಸುತ್ತಾ-

"ಅದೇನು ಪಾಠ ಕಲಿತಿದೀಯ, ಅರಗಿಳಿ... ಹೇಳು ?" – ಎಂದು ಕೇಳಿದ ಮದಕರಿನಾಯಕ.

ಆ ಮಾತಿಗೆ ಉತ್ತರ ಕೊಡದೆ ಮಗು, ಬಂಗಾರವ್ವನಾಗತಿಯತ್ತ ನೋಡಿ-

"ಅವ್ವ - ಹೇಳಲಿ" - ಎಂದಿತು.

"ಅವ್ವ ಹೇಳಬೇಕು – ಅವಳು ಹೇಳಿದ್ದನ್ನು ನೀನು ಹೇಳಬೇಕು. ಬಿಡೋ – ನೀನು ಅರಗಿಳಿಯಲ್ಲ. ಮರಗಿಳಿ"

- ಎಂದು ಮಗುವಿನ ಬೆನ್ನು ತಟ್ಟಿ –

"ಹೂ - ಇವನು ಬಾಯಿಬಿಡಲು ನಿನ್ನ ಅಪ್ಪಣೆಯೇ ಆಗಬೇಕೇನೋ, ಆಗಲಿ – ನೀನೇ ಹೇಳು. ನೀನು ಹೇಳಿದ್ದನ್ನು ಇವನು ಹೇಳಿ ಇಬ್ಬರಾಡಿದ್ದನ್ನು ಕೇಳಿ ನಮ್ಮ ಕಿವಿಗಿಂಪಾಗಲಿ" ಎಂದು ಮದಕರಿನಾಯಕ ಹೇಳಿದ.

ಗಂಡನ ಮಾತಿಗೆ ಏನು ಹೇಳಬೇಕೆಂದು ತೋಚದೆ ಬಂಗಾರವ್ವನಾಗತಿ, ನಿಂಗವ್ವನತ್ತ ನೋಡಿದಳು.

"ಸಂಸಾರಕ್ಕೆ ಬಂದು ಇಷ್ಟು ವರ್ಷವಾಯಿತು. ಇನ್ನೂ ನನ್ನ ಮುಖ ನೋಡಬೇಕಾ? ನೀನು ಕಲಿಸಿದ ಮಾತು. ನೀನು ಕೇಳಿದರೆ ನಿನ್ನ ಮಗ ಕೇಳುತ್ತಾನೆ. ಹೇಳವ್ವಾ ?"

- ಎಂದಳು ನಿಂಗವ್ವ, ಸೊಸೆಯನ್ನು ಪ್ರೀತಿಯಿಂದ ನೋಡುತ್ತಾ.

ಇತ್ತ ಗಂಡನ ಪ್ರೀತಿ, ಅತ್ತ ಅತ್ತೆಯ ಮಾತು - ಎರಡನ್ನೂ ಮೀರಲಾಗದೆ ಬಂಗಾರವ್ವ ನಾಗತಿ –

"ಹೇಳು, ಬಂಗಾರ ಮರಿ... 'ಅ' - ಅಂದರೆ..."

-ಎಂದು ಮಗುವನ್ನು ರಮಿಸುವ ಧ್ವನಿಯಲ್ಲಿ ಕೇಳಿದಳು.

"ಊಹೂ....ಕಲ್ಲುಸಕ್ಕರೆ...." – ಮಗ ಭರಮಣ್ಣ ಕೇಳಿದ.

"ಕಲ್ಲುಸಕ್ಕರೆ ಕೊಡದೆ, ನಿಮ್ಮ ಮಗ ಬಾಯಿ ಬಿಡುವುದಿಲ್ಲ"

-ಎಂದು ಹೇಳಿ, ಬಂಗಾರವ್ವನಾಗತಿ, ತನ್ನ ಪಕ್ಕದಲ್ಲಿಟ್ಟುಕೊಂಡಿದ್ದ ಚಿನ್ನದ ಭರಣಿಯಲ್ಲಿದ್ದ ಕಲ್ಲುಸಕ್ಕರೆಯ ಹಳುಕನ್ನು ಮಗುವಿನ ಬಾಯಿಗಿಟ್ಟು –

"ಹೂ - ನೀನು ಕೇಳಿದ್ದು ಕೊಟ್ಟಾಯಿತಲ್ಲ. ಈಗ ಹೇಳು – 'ಅ' – ಅಂದರೆ...." ಎಂದಳು, ಬಂಗಾರವ್ವನಾಗತಿ.

ಆಕೆ ಬಾಯಲ್ಲಿಟ್ಟ ಕಲ್ಲುಸಕ್ಕರೆಯನ್ನು ಚಪ್ಪರಿಸುತ್ತಾ. ಜೊಲ್ಲು ಸುರಿಸುತ್ತಾ, ರಾಗವಾಗಿ – "'ಅ' ಎಂದರೆ ಆರಸು....'ಆ' ಎಂದರೆ ಆಳು....'ಇ' ಎಂದರೆ ಇರಿ....'ಈ' ಎಂದರೆ ಈಟಿ....'ಉ' ಎಂದರೆ ಉಕ್ಕಿನ ಕವಚ...." - ಎಂದು ಮುದ್ದು ಮುದ್ದಾಗಿ ಹೇಳಿದ ಭರಮಣ್ಣ.

ಮಗ ಹೇಳಿದ ವಿಚಿತ್ರ ಅಕ್ಷರಮಾಲೆಯನ್ನು ಕೇಳಿ, ಬೆರಗಾಗಿ –

"ಇದಾದ ಹೊಸ ಅಕ್ಷರ ಕಲಿತೆಯವ್ವಾ....?" – ಎಂದು ಕೇಳಿದ ಮದಕರಿನಾಯಕ.

"ನಿನ್ನ ರಾಜಕುಮಾರಿ ಹೆಂಡತಿ ಹೇಳಿ ಮಾಡಿಸಿದ್ದಾಳಪ್ಪಾ, ಈ ಅರಮನೆಯ ಅಕ್ಷರಾಭ್ಯಾಸ- ನಿನ್ನ ಮಗ, ದುರ್ಗ ಆಳೋ ರಾಜಕುಮಾರನಿಗೆ... ಇದನ್ನೇ ಕೇಳಿ ಇಷ್ಟು ಬೆರಗಾಗಿ ಬಿಟ್ಟೆಯಲ್ಲ....ನಿನ್ನ ಮಗ ಹೇಳೋ ಮಗ್ಗಿ ಕೇಳು"

-ಎಂದಳು ನಿಂಗವ್ವ, ಹೆಮ್ಮೆ-ಸಂತೋಷಗಳು ಬೆರೆತ ಧ್ವನಿಯಲ್ಲಿ.

"ನಾವು ಕಲಿತ ಅಕ್ಷರಾಭ್ಯಾಸವಲ್ಲ ಬಿಡು ಇದು. ನಮಗೆ ಹೇಳಿಕೊಟ್ಟದ್ದೇ ಬೇರೆ. ಮಗ್ಗಿಯೂ ಹೀಗೆ ಇದೆಯೋ - ಹೇಳೋ ನನ ಕಂದಾ...."

-ಎಂದು ಮಗನನ್ನು ಸಂತಸದಿಂದ ಬಿಗಿದಪ್ಪಿ ಕೇಳಿದ, ಮದಕರಿನಾಯಕ.

ಆ ವೇಳೆಗೆ ಬಾಯಲ್ಲಿದ್ದ ಕಲ್ಲುಸಕ್ಕರೆಯನ್ನು ಕರಗಿಸಿ ನುಂಗಿದ ಭರಮಣ್ಣ –

"ಅವ್ವಾ - ಕಲ್ಲುಸಕ್ಕರೆ -" ಎಂದ ಬಂಗಾರವ್ವನಾಗತಿಯತ್ತ ಕೈಚಾಚಿ.

"ಅವ್ವಾ, ನಿನ್ನ ಮೊಮ್ಮಗನಿಗೆ ಹೈದರಾಲಿ ಗಾಳಿ ತಗುಲಿದೆ. ಅವನು ಬಾಯಿಬಿಟ್ಟರೆ 'ಖಂಡಣಿ' ಅಂದ ಹಾಗೆ, ಇವನು ಬಾಯಿ ಬಿಡಲಿಕ್ಕೆ 'ಕಲ್ಲುಸಕ್ಕರೆ' ಅಂತಾನೆ. ಈಗಲೇ ಹೀಗೆ - ದೊಡ್ಡೋನಾದಮೇಲೆ ಇನ್ನೇನು ಕೇಳ್ತಾನೋ – ಹೂ – ಕೊಡು, ಒಳ್ಳೇ ವಿದ್ಯಾನೇ ಕಲಿಸಿದೀಯಾ" – ಎಂದು ನಗುತ್ತಾ ಹೇಳಿದ ಮದಕರಿನಾಯಕ.

"ಕೂತು ಕೇಳಿದರೆ ಅವನ ಬಾಯಲ್ಲಿ ಮಗ್ಗಿ ಹೊರಡೊಲ್ಲ. ಕೆಳಗಿಳಿಸಿ - ನಿಂತು ಮಗ್ಗಿ ಹೇಳೋ ಝೋಕು ನೋಡಿ"- ಎಂದಳು ಪದ್ಮವ್ವನಾಗತಿ.

"ನಿಂತು ಹೇಳಬೇಕಾ – ಅದೂ ಒಂದು ವರಸೇನಾ ? ಹೂ - ನಡೀಲಿ – ನಿಮ್ಮ ಮಗನ ದರ್ಬಾರು" - ಎಂದು ಹೇಳಿದ, ಮದಕರಿನಾಯಕ, ಮಗನನ್ನು ಕೆಳಗಿಳಿಸಿ.

ತಂದೆಯ ತೋಳಿನಿಂದ ಕೆಳಗಿಳಿದ ಮಗ, ಈ ಬಾರಿ ಪದ್ಮವ್ವನಾಗತಿ ಕೊಟ್ಟ ಕಲ್ಲುಸಕ್ಕರೆಯನ್ನು ಬಾಯಲ್ಲಿ ಹಾಕಿಕೊಂಡು, ಎದೆ ಸೆಟೆಸಿ, ಸೈನಿಕನಂತೆ ನಿಂತು, ನಡುನಡುವೆ ತೊದಲುತ್ತಿದ್ದ ಎಳೆಯ ಧ್ವನಿಯಲ್ಲಿ, ಗಂಭೀರವಾಗಿ –

ಒಂದೊಂದಲ ಒಂದು

ದಂಡು ಸೇನೆ ತಂದು |

ಒಂದೆರಡಲ ಎರಡು
ಶತ್ರು ಮೇಲೆ ಹೊರಡು |
ಒಂದು ಮೂರಲ ಮೂರು
ಸೇನೆಲೆಲ್ಲಾ ಸಾರು |
ಒಂದು ನಾಕಲ ನಾಕು
ಕತ್ತಿಗೆ ರಕ್ತ ಬೇಕು |
ಒಂದೈದಲ ಐದು
ಕಾಳೆ ತುತ್ತೂರಿ ಊದು |
ಒಂದಾರಲ ಆರು
ಶತ್ರು ಸೇನೆ ಚುಕ್ಕಾಚೂರು |
ಒಂದೇಳಲ ಏಳು
ಕೂಗಿ ಕೂಗಿ ಹೇಳು |
ಒಂದೆಟಲ ಎಂಟು
ಕತ್ತಿಗೂ ನಮಗೂ ನಂಟು |
ಒಂದೊಂಬತ್ತಲ ಒಂಬತ್ತು
ಬಾರಿಸು ನಗಾರಿ ನೌಬತ್ತು |
ಒಂದು ಹತ್ತಲ ಹತ್ತು
ಶತ್ರುಸೇನೆ ಕಾಲಿಗೆ ಬಿತ್ತು ||

-ಕವಾಯತು ಮಾಡುವಂತೆ ಹೆಜ್ಜೆ ಹಾಕುತ್ತಾ, ಮಗು ಹೇಳಿದ ಮಗ್ಗಿಯನ್ನು ಕೇಳಿ, ಮದಕರಿನಾಯಕನ ಹೃದಯ ಹೆಮ್ಮೆಯಿಂದ ಬೀಗಿ, ಯಾರನ್ನೂ ಕೇಳದೆ, ತಾನೇ ಮಗನ ಬಾಯಿಗೆ ಹಿಡಿಯುವಷ್ಟು, ಕಲ್ಲುಸಕ್ಕರೆ ಕೊಟ್ಟು, ಮಗನನ್ನು ಮುಂಡಾಡಿ, ಕತ್ತಲಿದ್ದ ಮುತ್ತಿನ ಹಾರವನ್ನು ತೆಗೆದು-

"ನನ್ನ ಮಗನಿಗೆ ತಕ್ಕ ವಿದ್ಯೆ ಕಲಿಸಿದೆ. ತೆಗೆದುಕೋ ಈ ಬಹುಮಾನ"

- ಎಂದು ಹೇಳಿ, ಬಂಗಾರವ್ವನಾಗತಿಯತ್ತ ಕೈಚಾಚಿದ.

"ನನಗಲ್ಲ - ಈ ಸಿಪಾಯಿ ಮಗನನ್ನು ಹಡೆದವರಿಗೆ ಕೊಡಿ ಆ ಬಹುಮಾನ"

-ಎಂದಳು ಬಂಗಾರವ್ವನಾಗತಿ, ಒಂದು ಹೆಜ್ಜೆ ಹಿಂದೆ ಸರಿದು.

"ನನಗ್ಯಾಕಪ್ಪಾ ಬಹುಮಾನ ಬರೀ ಹಡೆದವಳು ನಾನು, ಬುದ್ಧಿ ಕಲಿಸಿದವಳು ನೀನು, ನಿನಗೇ ಅದು ಸೇರಬೇಕು" – ಎಂದಳು ಪದ್ಮವ್ವನಾಗತಿ, ಹಗುರವಾಗಿ ನಗುತ್ತಾ.

ಹೆಮ್ಮೆಯಿಂದ ಬೀಗುತ್ತಿದ್ದ ಮಗ, ಸಂತೋಷದಿಂದಿದ್ದ ಸೊಸೆಯರು, ಅವರೆಲ್ಲರ ಸಂತೋಷದ ಬಳ್ಳಿಯನ್ನು ಅರಳಿಸಿದಂತಿದ್ದ ಮೊಮ್ಮಗನನ್ನು ನೋಡಿ, ನಿಂಗವ್ವ ನಗುತ್ತಾ –

"ಇಬ್ಬರೆದುರಿಗೆ ಒಂದು ಹಾರ ಹಿಡಿದುಕೊಳ್ಳೆಯಲ್ಲಾ, ಮದಕೇರಂಣ. ನಿನ್ನ ಸರ ನಿನ್ನ ಮಗನಿಗೆ ಹಾಕು - ನನ್ನ ಸೊಸೆಯಂದಿರಿಗೆ ಬೇಕಾಗಿರೋದು ಈ ಹಾರವಲ್ಲ" – ಎಂದಳು.

"ಹಾರ ಬೇಡ - ಮತ್ತೇನು ಕೊಡಲಿ. ನೀವೇ ಹೇಳಿ ಅವ್ವಾ" – ಎಂದ ಮದಕರಿನಾಯಕ.

"ನಿನ್ನ ಹತ್ತಿರ ಇರೋದು ಒಂದೇ ಹಾರ. ದೇವರು ಕೊಟ್ಟಹಾಗೆ ತೋಳು ಎರಡಿಲ್ಲವಾ, ಮದಕೇರಂಣ – ನನ್ನ ಸೊಸೆಯರಿಗೆ ಬೇಕಾಗಿರೋದು ಆ ಹಾರ"

- ಎಂದಳು ನಿಂಗವ್ವನಾಗತಿ, ನಗೆಯ ಚಿಲುಮೆಯಂತೆ ಕಳಕಳಿಸುತ್ತಾ.

"ಇದೇನು ನಗೆಚಾಟಿಲ ಮಾತಾಡ್ತೀರ, ಅವ್ವಾ -"

- ಎಂದು ಹೇಳಿ, ಅತ್ತೆಯ ಮಾತನ್ನು ಕೇಳಿದ ಸೊಸೆಯರಿಬ್ಬರೂ ನಗುತ್ತಾ, ನಾಚುತ್ತಾ ಅಲ್ಲಿಂದ ಎದ್ದು ಓಡಿದರು.

ತನ್ನ ಸುತ್ತ ಮಡುಗಟ್ಟಿ ನಿಂತ ಆನಂದದ ಅಮಲೇರಿ, ಎದೆ ಹಿಗ್ಗಿಸಿ, ಮಗನನ್ನೆತ್ತಿ ತೋಳಲ್ಲಿ ತೂಗುತ್ತಾ –

"ಅವ್ವಾ - ಅವರಾರಿಗೂ ಅಲ್ಲ- ಹರಿಯೋ ತಂತಿ ಹಾಗೆ ಬಿಗಿದುಕೊಂಡಿದ್ದ ಸಂಸಾರದಲ್ಲಿ ಇಂಥ ಸಂತೋಷದ ಹಾಡು ಹೇಳಿಸಿದೆಯಲ್ಲವ್ವ, ನಿನಗೆ ಬಹುಮಾನ ಕೊಡಬೇಕು. ಏನು ಕೊಡಲಿ ಹೇಳವ್ವಾ?" – ಎಂದು ಮುಗಿಲೆತ್ತರ ಬೆಳೆದು ನಿಂತವನಂತೆ ಕೇಳಿದ ಮದಕರಿನಾಯಕ.

"ನನಗೆ ಬಹುಮಾನವಾ - ನಿನ್ನಂಥ ಮಗನನ್ನು ಪಡೆದೆ. ಇಂಥ ಮೊಮ್ಮಗನನ್ನ ಕೊಟ್ಟೆ. ಇದಕ್ಕಿಂತ ಬಹುಮಾನ ಬೇಕಾ ?"

- ಎಂದು, ನಿಂತ ಮೊಮ್ಮಗನನ್ನು ಎತ್ತಿ ಎದೆಗಪ್ಪಿಕೊಂಡು ಹೇಳಿದಳು ನಿಂಗವ್ವ.

"ಅವತ್ತು ಬಾರುಕೋಲು ತಗೊ ಅಂದೆಯಲ್ಲಾ- ಆ ಬಾಯಿ ಇವತ್ತು ಏನು ಹೇಳುತ್ತೆ ?"

"ಬುದ್ಧಿ ಇಲ್ಲದೆ ಮಾತಾಡಿದ ಮಗನಿಗೆ ಆ ಬಹುಮಾನ ಕೊಡು ಎನ್ನುತ್ತೆ"

- ಎಂದು ಹೇಳಿ, ತಾಯ ತೋಳಲ್ಲಿದ್ದ ಮಗನಿಗೆ ಮುತ್ತಿಟ್ಟ ಮದಕರಿನಾಯಕ, ಹಾಗೇ ಅಷ್ಟು ಹೊತ್ತು ಆ ಆನಂದಾಸ್ವಾದನ ಮಾಡುತ್ತಾ ನಿಂತಿದ್ದು, ಬಳಿಕ ಏನೋ ಜ್ಞಾಪಿಸಿ ಕೊಂಡು –

"ಈ ಸಂತೋಷದಲ್ಲಿ ಮರತೇಬಿಟ್ಟಿದ್ದೆ ಕಣವ್ವ, ಪುಣೆಯಿಂದ ವಕೀಲರು ಬಂದಿದಾರೆ. ಇವತ್ತು ಸಾಯಂಕಾಲ ನೋಡ್ತೀನಿ ಎಂದು ಹೇಳಿದ್ದೆ. ಈಗನಿಸುತ್ತೆ - ಅದನ್ನು ಇವತ್ತೇ ಯಾಕಾದರೂ ಹಚ್ಚಿಕೊಂಡನೋ ಅಂತ"- ಎಂದು ಹೇಳಿದ.

"ದೇಶ ಆಳೋ ಸರದಾರ - ಅದನ್ನು ಮರೆತರೆ ಹೇಗಪ್ಪ ? ನಿನ್ನ ಕೆಲಸ ನೋಡಿಕೋ. ಹಾಗೇ ಆ ಕೆಲಸದಲ್ಲಿ ಅಂತಃಪುರಾನೂ ಮರೆತುಬಿಡಬೇಡ. ಆಳೋ ಅರಸನಿಗೆ ದೇಶ ಕವಚವಿದ್ದ ಹಾಗಿದ್ದರೆ, ರಾಣೀವಾಸ ಹೃದಯವಿದ್ದ ಹಾಗೆ. ಎರಡೂ ನಗುತ್ತಾ ಕೆಲಸ ಮಾಡಬೇಕು" – ಎಂದಳು ನಿಂಗವ್ವ.

"ನಿನ್ನ ಹೊಟ್ಟೆಯಲ್ಲಿ ಹುಟ್ಟಿದ ನನಗೆ ನಿನ್ನಷ್ಟು ಜಾಣತನ ಬರಲಿಲ್ಲ. ಒಂದು ಸಲ ನಿಧಾನವಾಗಿ ಬರ್ತೀನಿ - ಹೀಗೇ ನಗುನಗುತ್ತಾ ಹೇಳಿಕೊಡು"

- ಎಂದು, ಮಗನ ತುಟಿಗೆ ಮುತ್ತಿಟ್ಟಾಗ ಹತ್ತಿದ ಸಕ್ಕರೆ ಸವಿಯನ್ನು ನಾಲಗೆಯಿಂದ ಸವರಿಕೊಳ್ಳುತ್ತಾ, ತಾಯ ಕಾಲುಗಳನ್ನು ಮುಟ್ಟಿ, ನಮಸ್ಕರಿಸಿದ ಮದಕರಿನಾಯಕ ಅಂತಃಪುರದಿಂದ ಓಲಗಸಾಲೆಯತ್ತ ಹೊರಟ.

೨

ಆ ದಿನ –

ಅಂತಃಪುರದ ವಾತಾವರಣ ಎಷ್ಟು ಸರಸವಾಗಿತ್ತೋ, ಓಲಗ ಅಷ್ಟೇ ಗಂಭೀರವಾಗಿತ್ತು.

ಪುಣೆಯಿಂದ ಪೇಶ್ವೆ ಮಾಧವರಾಯನ ಅಕಾಲಮರಣವಾರ್ತೆಯನ್ನು ತಂದ ವಕೀಲ ಸಾರ್ವಭೌಮರಾಯ –

"ನಟ್ಟನಡುಹಗಲಿನಲ್ಲೇ ಸೂರ್ಯ ನಂದಿಹೋದಂತಾಯಿತು, ಪೇಶ್ವೆ ಮಾಧವರಾಯರು ಕ್ಷಯರೋಗಕ್ಕೆ ಬಲಿಯಾಗಿ ತೀರಿಕೊಂಡದ್ದು. ಅವರಿರುವವರೆಗೂ ಮುತ್ತಿನ ಹಾರದ ಹಾಗೆ ಒಂದಾಗಿದ್ದ ದೊಡ್ಡ ದೊಡ್ಡ ಮರಾಠಾ ಸರದಾರರೆಲ್ಲಾ ಚೆಲ್ಲಾಪಿಲ್ಲಿಯಾಗಿ, ಪೇಶ್ವೆಗಳ ಅರಮನೆ ರಘುನಾಥರಾಯರು ಹೊತ್ತಿಸಿದ ಅಂತಃಕಲಹದಲ್ಲಿ ಬೇಯುತ್ತಿದೆ. ಅವರ ಸ್ಥಾನಕ್ಕೆ ಬಂದಿರುವ ಪೇಶ್ವೆ ನಾರಾಯಣರಾಯರಿನ್ನೂ ಹುಡುಗುಪ್ರಾಯದವರು. ಪಾಣಿಪತ್ತಿನ ಯುದ್ಧದನಂತರ, ಹರಿದುಹಂಚಿಹೋಗಿದ್ದ ಮರಾಠಾ ಸಾಮ್ರಾಜ್ಯವನ್ನು ಒಂದಾಗಿ ಬೆಸೆದು ಕಟ್ಟಿದ ಶ್ರೀಮಂತ ಮಾಧವರಾಯರು ಇನ್ನಷ್ಟು ವರ್ಷ ಬದುಕಿದ್ದರೆ ಚನ್ನಾಗಿತ್ತು"

- ಎಂದು ಶೋಕತಪ್ತವಾಗಿದ್ದ ಗಂಭೀರಧ್ವನಿಯಲ್ಲಿ ಹೇಳಿದ.

ಅವರ ಮಾತನ್ನು ಕೇಳಿ –

ಒಂದು ಬಾರಿ, ಒಂದೇ ಒಂದು ಬಾರಿ, ನಿಜಗಲ್ಲಿನ ರಣಾಂಗಣದಲ್ಲಿ ಪೇಶ್ವೆ ಮಾಧವರಾಯರನ್ನು ಕಂಡಿದ್ದ ಮದಕರಿನಾಯಕನಿಗೂ ಅನಿಸಿತು –

'ನಿಜ - ಅವರು ಬದುಕಿರಬೇಕಾಗಿತ್ತು.'

ಹಾಗೆ ತಾನು ಕಂಡ ಪೇಶ್ವೆ ಮಾಧವರಾಯನನ್ನು ಜ್ಞಾಪಿಸಿಕೊಂಡ – 'ಕ್ಷಯರೋಗದಿಂದ ದುರ್ಬಲವಾದ ಆ ದೇಹದಲ್ಲಿ ಎಂಥ ಉಕ್ಕಿನ ನಿರ್ಧಾರ, ಎಷ್ಟು ಪರಾಕ್ರಮವೋ ಅಷ್ಟೇ ಔದಾರ್ಯ. ನಿಜ - ಆ ಬಡಕಲಾದ ಎದೆಗಿಂತ ವಿಸ್ತಾರವಾದ ಹೃದಯವಿದ್ದ ಶ್ರೀಮಂತ ಮಾಧವರಾಯರು.'

"ಈಗ ಏನನ್ನುತ್ತಾರೆ ಅಲ್ಲಿಯ ಜನ ?" – ಮದಕರಿನಾಯಕರು ಕೇಳಿದರು.

"ಯಾರು ಅನ್ನುವುದೇನು - ಯಾವುದು ಏನಾದರೂ ಒಂದು ಮಾತಂತೂ ಸತ್ಯ – ಇಷ್ಟು ದಿನ ಮರಾಠ ಸೈನಿಕರ ಕುದುರೆಗಳ ಹುಲ್ಲುಗಾವಲಾಗಿದ್ದ ಸೀಮೆಯಲ್ಲಿ ಮತ್ತೆ ಹೈದರಾಲಿಯವರಿಗೆ ತಮ್ಮ ಬಾರುಕೋಲಿನ ರಾಜ್ಯ ನಡೆಸಲು ದಾರಿ ನಿರಾತಂಕವಾಯಿತು."

-ಸಾರ್ವಭೌಮರಾವ್ ಹೇಳಿದ.

"ಈಗಿನ ಪೇಶ್ವೆಯವರು ಚಿಕ್ಕವರಿರಬಹುದು. ಆದರೆ ರಘುನಾಥರಾಯರು ಸಮರ್ಥರಲ್ಲವೇ ?" – ಪರಶುರಾಮನಾಯಕ ಕೇಳಿದ.

"ರಘುನಾಥರಾಯರು ಸಮರ್ಥರು - ಕುಟಿಲಕಾರಸ್ಥಾನದಲ್ಲಿ ! ಅವರ ಕುತಂತ್ರವಿಲ್ಲದೆ ಇದ್ದರೆ, ಹೈದರಾಲಿಯವರದು ಎಂದೋ ಮುಕ್ತಾಯವಾಗುತ್ತಿತ್ತು. ಅವರಿಗೆ ಜೀವನದಲ್ಲಿರುವುದೆಲ್ಲಾ ಒಂದೇ ಆಸೆ – ತಾವು ಪೇಶ್ವೆಯಾಗಬೇಕೆಂಬುದು. ಅದಕ್ಕಾಗಿ, ಅವರಿವರೊಂದಿಗೆ ಪಿತೂರಿ ಮಾಡುತ್ತಾ ಪೇಶ್ವೆಯವರ ಸಾವಿಗಾಗಿ ತಮ್ಮ ವಾಡೆಯಲ್ಲಿ ಮಂತ್ರ, ಮಾಟ, ಮಾರಣ ಹೋಮಗಳನ್ನು ಮಾಡಿಸುವುದಕ್ಕೇ ಅವರಿಗೆ ಹೊತ್ತು ಸಾಲದು. ಅವರಿಂದ ಗಟ್ಟಿಮರವಾಗಿದ್ದ ಮರಾಠಾ ರಾಜ್ಯ ಗೆದ್ದಲ ಗೂಡಾಯಿತು. ಈಗ - ಕುಣಿಯುವ ಕಾಲಿಗೆ ಗೆಜ್ಜೆ ಕಟ್ಟಿದಂತಾಯಿತು. ಲಾಭವಾದದ್ದೆಲ್ಲಾ ಇಂಗ್ಲೀಷರಿಗೆ, ಹೈದರಾಲಿಯವರಿಗೆ. ಇನ್ನು ಉಳಿದ ಮರಾಠಾ ಸರದಾರರಿಗೂ ಇದು ಕಟ್ಟು ಕಿತ್ತ ಪಂಜುಗಳಂತೆ ಉರಿಯುವ ಸಮಯ."

- ಪುಣೆಯಲ್ಲಿ ತಾವು ಅರಿತ ಪರಿಸ್ಥಿತಿಯನ್ನು ವಿವರಿಸಿ ಹೇಳಿದರು ಸಾರ್ವಭೌಮರಾವ್.

"ಅಂತೂ ಇದು ಪೇಶ್ವೆಗಳನ್ನು ನಂಬಿದವರಿಗೆ ಪಶ್ಚಾತ್ತಾಪ ಪಡುವ ಕಾಲ."

-ಅದುವರೆಗೂ ಸುಮ್ಮನಿದ್ದ ನರಸಪ್ಪಯ್ಯ ಹೇಳಿದರು.

"ಅಂದರೆ – ?" – ಪ್ರಧಾನಿಗಳ ಮಾತು ಅರ್ಥವಾಗದೆ ನಾಯಕರು ಕೇಳಿದರು.

"ಅಂತರಂಗದಲ್ಲಿ ಏನೇ ಇದ್ದರೂ, ನಿಜಗಲ್ಲಿನ ಯುದ್ಧದಲ್ಲಿ ನಾವು ಪ್ರಕಟವಾಗಿ ಪೇಶ್ವೆಯವರ ಪಕ್ಷ ವಹಿಸಿದ್ದು ತಪ್ಪಾಯಿತೋ ಅನಿಸುತ್ತದೆ."

"ಬಳ್ಳಾರಿ, ಹರಪನಹಳ್ಳಿ, ರಾಯದುರ್ಗ - ಎಲ್ಲರೂ ಪೇಶ್ವೆಯವರ ಊಳಿಗದವರಾಗಿಯೇ ಇದ್ದಾರಲ್ಲ...."

- ನಾಯಕರು ಕೇಳಿದರಾಗಿ ನರಸಪ್ಪಯ್ಯ ಹೇಳಿದರು-

"ಅವರಿಗೆ ಪಕ್ಷ ಬದಲಿಸಲು ಹೊತ್ತು ಬೇಕಾಗುವುದಿಲ್ಲವೆಂದೇ ನಮ್ಮ ನಂಬಿಕೆ. ಮುಂದೆಯೂ ಪಾಳೆಯಗಾರರಾಗಿ ಉಳಿಯಬೇಕೆಂದಿದ್ದರೆ ಅವರಿಗೆ ಉಳಿದಿರುವುದು ಹೈದರ್ ಆಲಿಯವರಿಗೆ 'ಹಸಾದ' ಎಂದು ಹೇಳುವುದೊಂದೇ."

"ಅವರು ಹಾಗೆ ಮಾಡುತ್ತಾರೆ ಎನ್ನಿ." - ನಾಯಕರು ಕೆಣಕಿ ಪ್ರಶ್ನೆ ಮಾಡಿದರು.

"ನಾನು ಅನ್ನುವುದೇನು, ತಾವೇ ನೋಡುತ್ತೀರಿ."

"ಅಂದರೆ - ನಾವೇನು ಮಾಡಬೇಕೆಂದು ನಿಮ್ಮ ಅಭಿಪ್ರಾಯ ?"

"ಆ ಚರ್ಚೆ ಸದ್ಯಕ್ಕೆ ಅಪ್ರಕೃತ. ನಾವೀಗ ಕಲೆತಿರುವುದು ಸಾರ್ವಭೌಮರಾಯರು ತಂದ ವಾರ್ತೆ ಕೇಳುವುದಕ್ಕೆ. ಮುಂದಿನ ವಿಷಯ ಮುಂದೆ ಯೋಚಿಸೋಣ"

- ಎಂದಷ್ಟೇ ಹೇಳಿ, ನರಸಪ್ಪಯ್ಯ-

"ನಾವೊಂದು ಮಾತು ಕೇಳಿದ್ದೆವು, ಸಾರ್ವಭೌಮರಾಯರೇ-"

-ಎಂದು ಸಾರ್ವಭೌಮರಾಯರತ್ತ ತಿರುಗಿ ಕೇಳಿದರು.

"ಏನು?"

"ಚಿನಕುರುಳಿ ಲಡಾಯಿಯಲ್ಲಿ ನವಾಬರ ಆನೆ, ಕುದುರೆ, ಮದ್ದು ಗುಂಡು, ತೋಫು, ತುಫಾಕಿ ಎಲ್ಲಾ ಮರಾಠರ ವಶವಾಗಿತ್ತಲ್ಲಾ – "

"ಹೌದು."

"ಅದನ್ನು ಮರಾಠ ಸರದಾರರು ಹೈದರಾಲಿಯವರಿಗೆ ದುಡ್ಡಿಗೆರಡು, ದುಗ್ಗಾಣಿಗೆ ಮೂರು ಎಂದು ಮಾರಿಹೋದರಂತೆ, ನಿಜವೇ?"

"ನಿಜ. ಆ ವಿಷಯ ನಾನು ಪುಣೆಯಲ್ಲಿ ಕೇಳಿದೆ. ಪೇಶ್ವೆ ಮಾಧವರಾಯರು ಬದುಕಿದ್ದರೆ ಹಾಗಾಗಲು ಬಿಡುತ್ತಿರಲಿಲ್ಲ."

"ಬದುಕು-ಸಾವು - ಭಗವಂತನ ಇಚ್ಛೆ. ಅದಕ್ಕೆ ಯಾರೇನು ಹೇಳುವುದು. ಆದರೂ ಬಿದನೂರಿನಲ್ಲೊಂದು ಬಾರಿ, ಶ್ರೀರಂಗಪಟ್ಟಣದಲ್ಲಿ ಒಂದು ಬಾರಿ - ಎರಡು ಬಾರಿ, ಮೂವತ್ತೊ-

ಮೂವತ್ತೈದು ಲಕ್ಷವೋ - ಹಣ ಕೊಟ್ಟಿದ್ದಕ್ಕೆ ಹೈದರಾಲಿಯವರ ರಾಜ್ಯ ಉಳಿದದ್ದು ಸುಳ್ಳಲ್ಲ. ಅದಾದಾಗ ಪೇಶ್ವೆ ಮಾಧವರಾಯರು ಬದುಕಿದ್ದರು."

– ನರಸಪ್ಪಯ್ಯ ಕೇಳುವುದಕ್ಕಿಂತ ಹೆಚ್ಚಾಗಿ ಹೇಳಿದರು.

"ಅದಕ್ಕೆ ಕಾರಣ ಮಾಧವರಾಯರಲ್ಲ, ರಘೋತ್ತಮರಾಯರು."

"ಈಗ ಮಾಧವರಾಯರಿಲ್ಲ - ರಘೋತ್ತಮರಾಯರಿದ್ದಾರೆ."

"ಇದ್ದಾರೆ - ಮರಾಠರ ಎದೆಮುಳ್ಳಾಗಿ !"

- ಕಹಿಯಾದ ಧ್ವನಿಯಲ್ಲಿ ಹೇಳಿದರು ಸಾರ್ವಭೌಮರಾವ್.

"ಆ ಮುಳ್ಳು ನಮಗೂ ಮುಳ್ಳಾಗದಿದ್ದರೆ ಸಾಕು."

ನರಸಪ್ಪಯ್ಯನವರಾಡಿದ ಮಾತು ಕೇಳಿ ಸಾರ್ವಭೌಮರಾಯರ ಮುಖ ಕೆಂಪಾಗಿ, ತಲೆಯ ಮೇಲಿನ ಪಗಡಿಯನ್ನು ಸರಿಪಡಿಸಿಕೊಳ್ಳುತ್ತಾ –

"ನಿಜವೇ. ಅಂತೂ ಈಗ ನಿಮ್ಮಂತಹ ಧೀರ ಹಿತಚಿಂತಕರು ಮರಾಠಾ ರಾಜ್ಯಕ್ಕೆ ಬಹಳ ಅಗತ್ಯವಾಗಿದ್ದಾರೆ" - ಎಂದು ಹೇಳಿದ.

"ನಿಮ್ಮ ರಾಜ್ಯದ ಚಿಂತೆಯನ್ನು ನಾವು ಮಾಡಬೇಕು, ನಮ್ಮ ರಾಜ್ಯದ ಚಿಂತೆಯನ್ನೂ ನಾವು ಮಾಡಬೇಕು. ಆಯಿತು - ಹೊತ್ತು ಬಂದಾಗ ಆ ಬಗ್ಗೆ ಯೋಚಿಸೋಣ. ಮುಂದೆ ಪುರುಷೋತ್ತಮರಾಯರು ಏನು ಸುದ್ದಿ ತರುತ್ತಾರೋ ತರಲಿ"

-ಎಂದು ತಾವೇ ಮಾತಿಗೆ ಮುಕ್ತಾಯ ಹೇಳಿದಂತೆ ಹೇಳಿದ ನರಸಪ್ಪಯ್ಯ.

ಆ ಮಾತಿಗೆ ನಾಯಕರು ಏನೂ ಹೇಳದೆ ಸುಮ್ಮನೆ ತನ್ನ ತಮ್ಮ ಪರಶುರಾಮನಾಯಕನ ಮುಖ ನೋಡಿ-

"ಹಾಗೆ ಚರ್ಚೆ ಮುಗಿದಿದ್ದರೆ ಮಾತು ಮುಗಿಸಿ" – ಎಂದು ಹೇಳಿ, ಮೇಲೆದ್ದರು.

* * *

ಪ್ರಧಾನಿ ನರಸಪ್ಪಯ್ಯ, ಸಾರ್ವಭೌಮರಾಯರಿಬ್ಬರೂ ಹೊರಟ ಬಳಿಕ, ತಾನೂ ಕೆಲಸದ ಮೇಲೆ ಹೊರಡಲು ಸಿದ್ಧನಾದ ಪರಶುರಾಮನಾಯಕನನ್ನು ತಡೆದು –

"ಅವಸರದ ಕೆಲಸವೇನೂ ಇಲ್ಲವಲ್ಲ, ಪರಶುರಾಮಣ್ಣ" – ಎಂದು ಕೇಳಿದ ಮದಕರಿನಾಯಕ.

"ಕೆಲಸವಿಲ್ಲದೆ ಇರುತ್ತದೆಯೇ - ಆದರೆ ಅಂಥ ತಲೆಹೋಗುವ ಕೆಲಸವೇನೂ ಇಲ್ಲ."

"ಹಾಗಿದ್ದರೆ ಸರಿ - ನಾವಿಬ್ಬರೇ ಅಷ್ಟು ಹೊತ್ತು ತೋಟದಲ್ಲಿ ಕುಳಿತುಕೊಂಡು ಹಾಯಾಗಿ ಮಾತನಾಡೋಣ...."

- ಎಂದು ಹೇಳಿ, ಅರಮನೆಯ ಹೊರಗೆ ನಾಯಕರ ಮುಖ ಕಾಣುತ್ತಿದ್ದ ಹಾಗೆಯೇ, ಚುರುಕಾಗಿ ನಿಂತು-

"ಅಪ್ಪಣೆಯಾದರೆ - ಕುದುರೆಯನ್ನೋ ಮೇನೆಯನ್ನೂ ತರಲು ಹೇಳುತ್ತೇವೆ"

-ಎಂದ ಓಲಗದ ಪರಿಚಾರಕರಿಗೆ –

"ಅದಾವುದೂ ಬೇಡ. ನಾವಿಲ್ಲೇ ತೋಟದಲ್ಲಿರುತ್ತೇವೆ. ಕಾವಲವರಿಗೆ ಹೇಳಿ-"

- ಎಂದಪ್ಪಣೆ ಮಾಡಿ, ಆರಮನೆಯ ಮುಂಭಾಗದಲ್ಲಿದ್ದ ಶೃಂಗಾರವನದ ಮೆಟ್ಟಿಲುಗಳನ್ನು ನಿಧಾನವಾಗಿ ಇಳಿದು, ಅಷ್ಟು ದೂರ, ದಾರಿಯ ಇಬ್ಬದಿಯಲ್ಲಿ ಬೆಳೆದ ಪುಷ್ಪ ಕುಂಜದ ಎಲೆಗಳ ಮೇಲೆ ಹಗುರವಾಗಿ ಕೈಯಾಡಿಸುತ್ತಾ ನಡೆದು, ಶಿಲೆಯ ವಿರಾಮಾಸನವೊಂದರ ಮೇಲೆ ಕುಳಿತ, ಮದಕರಿನಾಯಕ.

ಅಣ್ಣನನ್ನು ಹಿಂಬಾಲಿಸಿಬಂದ ಪರಶುರಾಮನಾಯಕನೂ ಅಣ್ಣನ ಪಕ್ಕದಲ್ಲೇ ಕುಳಿತು, ಆತನೇ ಮಾತಿಗಾರಂಭಿಸಲೆಂದು ಕಾದು ಕುಳಿತ. ಆದರೆ ಆತ ನಿರೀಕ್ಷಿಸಿದಂತೆ, ಮದಕರಿ ನಾಯಕ ಮಾತನಾಡಲಿಲ್ಲ. ಎದುರಿಗೆ ಕಾಣುತ್ತಿದ್ದ ರಣಬತೇರಿಯನ್ನು ನೆತ್ತಿಯ ಮೇಲೆ ಹೊತ್ತ ಗುಡ್ಡವನ್ನು, ಭಾವಶೂನ್ಯ ನೋಟದಿಂದ ನೋಡುತ್ತಾ ಕುಳಿತ ಅಣ್ಣನನ್ನು ಕಂಡು ಪರಶುರಾಮನಾಯಕನೇ –

"ಏಕಣ್ಣ - ಹೀಗಿದ್ದೀರಿ ? ಏನು ಯೋಚನೆ ?" – ಎಂದು ಕೇಳಿದ.

"ಯೋಚನೆಯೇ ಹೂಂ - ಯೋಚಿಸುತ್ತಿದ್ದೇನೆ."

"ಏನು?"

"ಈ ಯೋಚನೆಗಳಿಂದ ಮಿದುಳಿಗೆ ಎಂದು ಬಿಡುವು ಎಂದು."

-ಮದಕರಿನಾಯಕನ ನೋಟದಂತೆ ಮಾತೂ ಮಂಕಾಗಿತ್ತು.

"ಇವತ್ತೇಕೋ ಪ್ರಧಾನಿಗಳ ಮಾತಿನಿಂದ ನಿಮಗೆ ತುಂಬಾ ಬೇಸರವಾದಂತಿದೆ."

"ನಿನಗೆ - ?"

- ತಟಕ್ಕನೆ ತಮ್ಮನತ್ತ ತಿರುಗಿ ಕೇಳಿದ ಮದಕರಿನಾಯಕ.

ಆ ಅನಿರೀಕ್ಷಿತ ಪ್ರಶ್ನೆಯನ್ನು ಕೇಳಿ ಪರಶುರಾಮನಾಯಕ ಚಕಿತನಾಗಿ ಕೇಳಿದ –

"ಹಾಗಂದರೇನು ಅಣ್ಣ, ಸ್ವಲ್ಪ ಬಿಡಿಸಿ ಹೇಳಿ ?"

"ಬಿಡಿಸಿ ಹೇಳುವುದೇನಿದೆ. ಪರಶುರಾಮಣ್ಣ, ಈ ರಾಜ್ಯದ ಗಾಣದ ನೊಗಕ್ಕೆ ಕತ್ತೊಪ್ಪಿಸಿ, ನಾವೆಂಥ ಮೃಗಗಳಾಗಿಹೋಗಿದ್ದೇವೆ, ಪರಶುರಾಮಣ್ಣ, ಸತ್ತವರು ಸತ್ತರು - ಆ ಚಿಂತೆ ನಮಗಿಲ್ಲ,

ಅದಕ್ಕಿಂತ ಹೆಚ್ಚಾಗಿ ನಮ್ಮ ನೆತ್ತಿಯುಳಿಸಿಕೊಳ್ಳುವ ಮಾತು ಮೊದಲಾಡುತ್ತೇವಲ್ಲಾ – ನಮಗಿನ್ನೂ ಹೃದಯವಿದೆಯೇ ಎಂದು ನಾವು ಯೋಚಿಸುತ್ತಿದ್ದೇವೆ."

"ಈ ಬದುಕಿನಾಟವೇ ಹಾಗಲ್ಲವೇನಣ್ಣ - ಸತ್ತವರ ಜೊತೆಗೆ ಬದುಕಿರುವವರೂ ಸಾವಿನ ಚಿಂತೆ ಮಾಡಲು ಸಾಧ್ಯವೇ ? ಸತ್ತವರು - ಸ್ವರ್ಗದಲ್ಲಿ ಸಂಪಿಗೆಯಾದರು; ಬದುಕಿರುವವರು ಬದುಕುವ ಚಿಂತೆ ಮಾಡಬೇಕು. ಜಗತ್ತು ನಡೆಯುವುದೇ ಹೀಗೆ."

"ಹೂ – ಅದು ನಡೆದಿರುವುದೇ ಹೀಗೆ. ಅದನ್ನು ನಾವು ಕಂಡಿದ್ದೇವೆ, ಪರಶುರಾಮಣ್ಣ. ಈ ಬದುಕು ಶಾಶ್ವತವಲ್ಲ, ಹಾಗೇ ಈ ಸಾಮ್ರಾಜ್ಯಗಳೂ ಶಾಶ್ವತವಲ್ಲ."

"ಆದೂ ನಿಜವೇ."

"ನೀನು – ನನ್ನ ತಮ್ಮ ಹಾಗನ್ನುತ್ತೀಯ. ಆದರೆ ನರಸಪ್ಪಯ್ಯನವರು ಹಾಗೆ ತಿಳಿದಂತಿಲ್ಲ. ಪೇಶ್ವೆ ಮಾಧವರಾಯರು ಹೋದರು-ಹೋದರು. ಆದರೆ ಹೈದರಾಲಿ ಸಾವಿಲ್ಲದ ಅಶ್ವತ್ಥ ವೃಕ್ಷ ಎಂದು ತಿಳಿದಿರುವ ಹಾಗಿದೆ."

"ನಿಜ - ಅಣ್ಣ, ಮಾಧವರಾಯರು ಹೋದರು. ಹೈದರಾಲಿಯವರು ಬದುಕಿದ್ದಾರೆ. ಆ ಸರ್ಪದ ನೆರಳಿನಲ್ಲಿ ಬದುಕಬೇಕಾದ ಈ ರಾಜ್ಯದ ಚಿಂತೆ ಮಾಡುವ ಪ್ರಧಾನಿಗಳು, ಮಾಡಬೇಕಾದ ಯೋಚನೆಯನ್ನೇ ಮಾಡಿದರು."

"ನರಸಪ್ಪಯ್ಯನವರ ಕೈಕೆಳಗೆ ನುರಿತ ನೀನೂ ಅವರ ಹಾಗೆಯೇ ಚಿಂತಿಸುವುದನ್ನು ಕಲಿಯಬೇಕಾದ ಅಗತ್ಯವಿಲ್ಲ, ಪರಶುರಾಮಣ್ಣ, ಮಾಧವರಾಯರು ಹೋದರು, ಹೈದರಾಲಿಯವರೂ ಹೋಗುತ್ತಾರೆ - ಇವತ್ತಲ್ಲ, ನಾಳೆ. ಹುಟ್ಟಿನ ಜೊತೆಯಲ್ಲಿಯೇ ಹೊತ್ತುತಂದ ಹೊರೆ ಸಾವು. ಅದು ಯಾರನ್ನೂ ಬಿಟ್ಟಿದ್ದಲ್ಲ - ಉಳಿದರೆ ಈ ಬಂಡೆಗಲ್ಲೊಂದು ಉಳಿಯುತ್ತದೆಯೋ, ಅದೂ ಸವೆದು ಸಣ್ಣ ಧೂಳಾಗಿ ಹೋಗುತ್ತದೆಯೋ ನಾವು ಕಾಣೆವು. ಆದರೆ ಈ ಎಲ್ಲ ಸಾವುಗಳ ಮಧ್ಯದಲ್ಲಿ ಉಳಿಯುವುದೊಂದಿದೆಯಲ್ಲಾ – "

- ನಿರ್ವಿಕಾರವಾಗಿಯೇ ಹೇಳಿದ ಮದಕರಿನಾಯಕ.

"ಯಾವುದು ?"

"ನಮ್ಮ-ನಿಮ್ಮ ಹೆಸರು. ನಮಗಿಂತ ಹತ್ತು ವರ್ಷ ಹೆಚ್ಚು ಕಾಲ ಬದುಕುವ ಹೆಸರಿಗೆ ಕಲಂಕ ತೊಡೆವ ಚಿಂತೆ ಮಾಡದೆ ನೆತ್ತಿಯ ಮೇಲೆ ಹಾರಿದ ಹದ್ದಿಗೆ ಹೆದರುತ್ತಾ ಕೂಡುವುದೇ? ಆ ಹೆದರಿಕೆಗೆ ಮಾನ-ಮರ್ಯಾದೆಯನ್ನು ಮಾರುವುದೇ ?"

"ಛಿ - ಆ ಮಾತು ಯಾರು ಹೇಳಿದರು ?" - ಪರಶುರಾಮನಾಯಕ ಕೇಳಿದ.

"ನರಸಪ್ಪಯ್ಯನವರ ಮಾತಿನ ಅರ್ಥವಿನ್ನೇನು. ಪರಶುರಾಮಣ್ಣ ? ಮಾಧವರಾಯರು ಸತ್ತರು, ಅವರ ಮನೆ ಒಡೆಯಿತು. ಆ ಉರಿಯುವ ಮನೆಯ ಗಳ ಹಿರಿಯುವ ಹೈದರಾಲಿಯವರಿಗೆ ಹೆದರಿ, ನಾವು ಅವರ ಹಿಂಬಾಲಕರಾಗಬೇಕೆಂದಲ್ಲವೇ, ಅವರ ಅಭಿಪ್ರಾಯ ?"

"ಅವರಾಡಿದುದು – ಹೃದಯದ ಮಾತಲ್ಲ, ರಾಜಕಾರಣದ ಮಾತು."

"ಬೆಂಕಿಹಚ್ಚು, ನಿನ್ನ ಶನಿರಾಜಕಾರಣಕ್ಕೆ, ಪರಶುರಾಮಣ್ಣ ! ಮನುಷ್ಯನಾಗಿ ಒಂದು ಕ್ಷಣ ಯೋಚಿಸು. ಪೇಶ್ವೆ ಮಾಧವರಾಯರು ನಮ್ಮನ್ನೆಷ್ಟು ಪ್ರೀತಿಸಿದ್ದರು, ಎಷ್ಟು ಗೌರವಿಸಿದರು – ನಾವು ಕೇಳಿದ ಯಾವ ಮಾತಿಗೂ ಇಲ್ಲವೆನ್ನದೆ, ಸಾಮಂತರಂತೆ ಕಾಣದೆ, 'ಈ ಪ್ರೀತಿ, ಸ್ನೇಹ ಶಾಶ್ವತವಾಗಿರಲಿ' ಎಂದು ಬಯಸಿದರು. ಅವರು ಸತ್ತರು. ನಾವು ಅವರನ್ನು ಮರೆತು, ಈಗ ಹೈದರಾಲಿಯವರ ತಾಂಬೂಲಕ್ಕೆ ಕೈಚಾಚಬೇಕೇ ?"

-ಕೊಂಚ ಉದ್ವಿಗ್ನನಾಗಿ ಕೇಳಿದ ಮದಕರಿನಾಯಕ.

"ಹೈದರಾಲಿಯವರೂ ನಮ್ಮನ್ನು ನಂಬಿದ್ದರಲ್ಲವೇ ?" - ಪರಶುರಾಮನಾಯಕ ಕೇಳಿದ.

"ತಪ್ಪು, ಅವರು ನಮ್ಮನ್ನು ನಂಬಲಿಲ್ಲ. ನಾವು ಅವರನ್ನು ನಂಬಿದ ಮೂರ್ಖತನ ಮಾಡಿದೆವು. ಹೈದರಾಲಿಯವರನ್ನು ನಂಬಿ ಬದುಕಿದವರೊಬ್ಬರ ಹೆಸರು ಹೇಳು – ಪರಶುರಾಮಣ್ಣ, ನಂಬಿ ನಂಬಿ, ನಗರದ ನಾಯಕರನ್ನು ಹೈದರಾಲಿಯವರ ಕೈಗೊಪ್ಪಿಸಿದೆವಲ್ಲಾ - ಅವರ ಗತಿ ಏನಾಯಿತು? ಅವರೀಗ ಮಧುಗಿರಿಯ ಕಗ್ಗಲ್ಲಕಾರಾಗೃಹದಲ್ಲಿ ಕೂಳುನೀರಿಲ್ಲದೆ, ನರಳುತ್ತಿದ್ದಾರೆ - ಬಹುಶಃ ಹೈದರಾಲಿಯನ್ನಲ್ಲ, ನಮ್ಮನ್ನು ಶಪಿಸುತ್ತಾ. ಹೆತ್ತ ಮಗನಂತೆ ಸಾಕಿ ಸಲಹಿದ ದೇವರಾಜಯ್ಯ, ನಂಜರಾಜಯ್ಯ, ಖಂಡೇರಾಯ, ನವಾಬರಿಟ್ಟ ವಿಷ ತಿಂದು ಸತ್ತ ಮೈಸೂರು ಅರಸುಮಕ್ಕಳು – ನೂರು ಹೆಸರು ಹೇಳಲೇ ? ಅವರನ್ನು ನಂಬಿ ಬದುಕಿದವರ ಹೆಸರನ್ನು ಒಂದಾದರೂ ಹೇಳು... ನವಾಬರಲ್ಲಿ ನಮ್ಮ ನಂಬಿಕೆ ಎಂದೋ ಸತ್ತುಹೋಯಿತು, ಪರಶುರಾಮಣ್ಣ, ನಾವು ಹೇಳುತ್ತೇವೆ ಕೇಳು - ನವಾಬರು ನಂಬಿರುವುದು, ನಮ್ಮ ಯಾರನ್ನೂ ಅಲ್ಲ, ತಮ್ಮ ಕುಟಿಲತೆಯೊಂದನ್ನೇ. ಆ ಕುಟಿಲತೆಯಿಂದ, ನಂಬಿದವರ ಬೆನ್ನಿರಿದ ಪಾಪ – ಅವರ ಬೆನ್ನನ್ನು ಹುಳವಾಗಿ ತಿನ್ನದಿದ್ದರೆ ಕೇಳು."

-ಕಾವೇರಿ ಭವಿಷ್ಯ ನುಡಿಯುವವನಂತೆ ಹೇಳಿದ ಮದಕರಿನಾಯಕ.

ಅಣ್ಣನ ಮಾತು ಕೇಳಿ, ಪರಶುರಾಮನಾಯಕ ಕ್ಷಣಕಾಲ ಗರಬಡಿದಂತೆ ಕುಳಿತಿದ್ದು ಬಳಿಕ ನಿಧಾನವಾಗಿ ಸಾವರಿಸಿಕೊಂಡು, ಹೇಳಿದ –

"ನೀವು ಹೇಳುವುದೆಲ್ಲಾ ನಿಜ, ಅಣ್ಣ, ಆದರೆ ಮರಾಠರ ಚರಿತ್ರೆಯೂ ಹಾಗೇ ಇದೆ."

"ಅವರಿವರಲ್ಲಿ ತಪ್ಪು ಕಾಣುವ ಹಿರಿಯರು ನಾವು ಮಾಡುತ್ತಿರುವುದೇನು ಪರಾಕ್ರಮದ ಕೆಲಸ, ಪರಶುರಾಮಣ್ಣ. ನಾಯಿ ಮಾಡಿದ್ದನ್ನು ಕತ್ತೆ ಮಾಡಿತು, ಕತ್ತೆ ಮಾಡಿದ್ದನ್ನು ಹಂದಿ ಮಾಡಿತು - ಆ ಎರಡೂ ಮಾಡಿದ್ದನ್ನು ನಾವೂ ಮಾಡಬೇಕೇ ? ನಮ್ಮ ಹೆಸರಿಗಿನ್ನೂ ಆ ವಿಶ್ವಾಸದ್ರೋಹದ ಕಳಂಕ ಅಂಟಿಲ್ಲ, ಅಂಟಕೂಡದು."

"ಹೈದರಾಲಿಯವರಿಗೆ ವಿರುದ್ಧವಾಗಿ ನಾವು ಮರಾಠರಿಗೆ ನೆರವಾಗಲಿಲ್ಲವೇ ?"

"ನಗರ ನಾಯಕರಿಗೆ ಹೈದರಾಲಿಯವರು ದ್ರೋಹಬಗೆಯದಿದ್ದರೆ, ನಿಜಗಲ್ಲಿನಲ್ಲಿ ನಮ್ಮ ಪಡೆ, ಹೈದರಾಲಿಯವರ ಪರವಾಗಿ ಹೋರಾಡುತ್ತಿತ್ತು. ಆ ನಂಬಿಕೆಯನ್ನವರು ಉಳಿಸಿಕೊಳ್ಳಲಿಲ್ಲ. ಅದರಲ್ಲಿ ನಮ್ಮ ತಪ್ಪಿಲ್ಲ."

"ಅದೆಲ್ಲಾ ನಾಳೆ ಬರುವ ಜನ ಎರಡೂ ಕಡೆ ನೋಡಿ ಹೇಳಬೇಕಾದ ಚರಿತ್ರೆಯ ಮಾತು."

"ಚರಿತ್ರೆ-ಇತಿಹಾಸ, ಅದೇನು ಬರೀ ಸತ್ತವರ ಕಥೆಯೋ, ಬದುಕಿರುವವರಿಗೆ ದಾರಿ ದೀಪವೋ -? ನಾಳಿನ ಚಿಂತೆ ಮರೆತು, ಇವತ್ತು ನಮ್ಮ ನೀತಿಯ ಕಥೆ ಹೇಳು. ರಾಜಕಾರಣ ಎಂದರೆ ಹೃದಯವಿಲ್ಲದ್ದು ಎಂದರು ಪ್ರಧಾನಿಗಳು, ಚರಿತ್ರೆ ಸತ್ತವರ ಕಥೆ ಎನ್ನುತ್ತೀಯ, ಅವರ ಕೈಲಿ ಪಳಗಿದ ನೀನು- ಗುರುವಿಗೆ ತಕ್ಕ ಶಿಷ್ಯನಾದೆ."

"ಅಣ್ಣಾ - ಆ ಮಾತು ಹಿಂದಾಗಲಿ, ನರಸಪ್ಪಯ್ಯನವರು ರಾಜಕಾರಣ ನಮಗೆ ಕಲಿಸಿರಬಹುದು. ಆದರೆ ನಾನು ನಿಮ್ಮ ತಮ್ಮ. ಕೃತಜ್ಞತೆ, ವಿಶ್ವಾಸದ್ರೋಹ – ನಮ್ಮ ನೆರಳಿನಲ್ಲಿ ಸುಳಿಯಲಾಗದ ಶನಿ."

-ಅಣ್ಣನ ಮಾತು ಕೇಳಿ, ತಾನೂ ಕಾವೇರಿ ಹೇಳಿದ ಪರಶುರಾಮನಾಯಕ.

"ಅಷ್ಟು ಆಡಿದೆಯಲ್ಲಾ-ನಿನ್ನ ಅಣ್ಣನಾಗಿ ನಾನು ಬದುಕಿದೆ. ಹಾಗಿದ್ದರೆ ನನ್ನ ತಮ್ಮನಾಗಿ ಹೇಳು - ಸತ್ತ ಮಾಧವರಾಯರ ಹೆಸರಿಗೆ ನಾವು ದ್ರೋಹಬಗೆಯಬೇಕೇ ?"

"ಬೇಡ– ಎಂದರೆ, ಈ ಹೈದರಾಲಿಯ ಸ್ನೇಹದ ಕೆಸರು ತುಳಿದಿದ್ದಾಗಿದೆಯಲ್ಲಾ...."

"ನಿಜ. ಒಂದು ಕಾಲು ಕೆಸರು ತುಳಿಯಿತು, ಹಾಗೆಂದು ಆ ಕಾಲನ್ನು ತೊಳೆಯಬೇಕೇ ಹೊರತು, ಮತ್ತೊಂದು ಕಾಲನ್ನೂ ಆ ಕೆಸರು ತೆಗೆಯಲು ಬಳಸಿದರೆ, ಎರಡೂ ಕಾಲು ಕೊಚ್ಚೆಯಾಗುತ್ತದೆಯಲ್ಲದೆ, ಇದ್ದ ಒಂದು ಕಾಲಿನ ಕೆಸರು ಹೋಗುವುದಿಲ್ಲ."

"ಅಂದರೆ – ಹೈದರಾಲಿಯವರ ಸಖ್ಯ ನಿಮಗೆ ಬೇಡ ?"

"ಎಂದೆಂದಿಗೂ ಬೇಡ."

"ಬೇಡ ಎಂದುಬಿಟ್ಟರೆ ಈ ರಾಜ್ಯ ಉಳಿಯುವುದಿಲ್ಲ. ರಾಜ್ಯ ಹೋದರೆ ಹೋಗಲಿ ಎನ್ನುತ್ತೀರಾ ?"

"ನಾವು ಬದುಕಿದ್ದು ಈ ರಾಜ್ಯ ಹೋಗಲು ನಾವು ಬಿಡುವುದಿಲ್ಲ. ಅದರ ಮಾತು ಹೈದರಾಲಿಯವರು ನಮ್ಮ ರಾಜ್ಯಕ್ಕೆ ಮುತ್ತಿಗೆಹಾಕುವವರೆಗೂ ಕಾದಿರಲಿ...."

"ಅಲ್ಲಿಯವರೆಗೆ -?"

"ಅಲ್ಲಿಯವರೆಗೆ - ನೀವು ಗುರುಶಿಷ್ಯರು ಅದೇನು ರಾಜಕಾರಣದ ನಾಟಕ ಆಡುತ್ತೀರೋ ಆಡಿ. ಒಂದೇ ರಾತ್ರಿ ಹತ್ತು ಅವತಾರದ ಪಾತ್ರ ಹಾಕುವ 'ದಶಾವತಾರ' ನಾಟಕದ ಪಾತ್ರ ಮಾತ್ರ ನಮಗೆ ಬೇಡ. ನಮ್ಮ ಮನಸ್ಸಿನ ಮಾತು ನಿನಗೆ ತಿಳಿದಿರಲಿ ಎಂದು ಇಲ್ಲಿಗೆ ಕರೆತಂದೆ. ಈ ಮಾತು ನಮ್ಮಿಬ್ಬರಲ್ಲೇ ಇರಲಿ" – ಮದಕರಿನಾಯಕ ಹೇಳಿದ.

"ಅಂದರೆ ನಾವು ಪ್ರಧಾನಿಗಳನ್ನು ನಂಬಬಾರದೆಂದೇ...."

"ಇನ್ನೂ ಅಷ್ಟರವರೆಗೆ ನಮ್ಮ ಬುದ್ಧಿ ಬೆಳೆದಿಲ್ಲ. ಒಂದೇ ಜಾಡಿನಲ್ಲಿ ನಡೆದು ಅವರ ಗಾಡಿಯ ಚಕ್ರ ಸವೆದುಹೋಗಿದೆ. ಆದ್ದರಿಂದ ಅವರಿಗೆ ಗುಟ್ಟು ಬಿಟ್ಟುಕೊಡದ ಹಾಗೆ ಈ ಚದುರಂಗದಾಟ ನೀನೇ ಆಡಬೇಕು. ಸಾರ್ವಭೌಮರಾಯರನ್ನು ಅಂತರಂಗಕ್ಕೆ ಕರೆಸಿಕೊಂಡು, ರಹಸ್ಯವಾಗಿ ಪುಣೆಯಿಂದ ವರದಿ ತರಿಸಿಕೊಳ್ಳುವ ವ್ಯವಸ್ಥೆ ಮಾಡು. ಬಂದ ವರದಿ, ನಮ್ಮಿಬ್ಬರ ಕಣ್ಣಿಗೆ ಬಿದ್ದು ಬಳಿಕ ನರಸಪ್ಪಯ್ಯನವರ ಕಣ್ಣು-ಕಿವಿ ಸೇರಬೇಕು. ಹೈದರಾಲಿಯವರ ವಿಷಯ ಅವರಿಂದಲೇ ನಮಗೆ ಬರಲಿ. ಅವರಲ್ಲಿ ನಮ್ಮ ನಂಬಿಕೆ ಸಡಿಲವಾಗಿದೆ ಎನ್ನುವುದು ನಮ್ಮಿಬ್ಬರ ವಿನಾ, ಬೇರಾರಿಗೂ ತಿಳಿಯದಿರಲಿ" - ಮದಕರಿನಾಯಕ ಹೇಳಿದ.

"ಆಯಿತು - ನಿಮ್ಮ ಆಸೆ, ಆಜ್ಞೆ ಎರಡೂ ಒಂದೇ ನನ್ನ ಪಾಲಿಗೆ. ಇವತ್ತಲ್ಲ ನಾಳೆ, ಹೈದರಾಲಿಯವರ ಕಣ್ಣು ನಮ್ಮ ಮೇಲೆ ಬೀಳುವುದು ಖಂಡಿತ. ನೀವು ಪೇಶ್ವೆಯವರ ಪಾಳಯದಲ್ಲಿ ಹೊಗಳಿಸಿಕೊಂಡ ಬಿರುದು ಹೈದರಾಲಿಯವರ ಕಣ್ಣಿಗೆ ಮುಳ್ಳಾಗಿದೆ. ಆ ಬಗ್ಗೆ ಅವರು ನಮ್ಮ ಬಗ್ಗೆ ಅಸಂತುಷ್ಟರಾಗಿರುವ ರಹಸ್ಯವರದಿ ಜಾಸೂದರಿಂದ ಪ್ರಧಾನಿಗಳ ಚಾವಡಿಗೆ ಬಂದಿದೆ. ಆದ್ದರಿಂದಲೇ ಈ ದಿನ ನರಸಪ್ಪಯ್ಯನವರು ಹಾಗೆ ಮಾತಾಡಿದ್ದು. ನೋಡಬೇಕು ಹೈದರಾಲಿಯವರ ಕೋಪ ಯಾವ ರೂಪದಲ್ಲಿ ಬಂದು ಕಾಣಿಸಿಕೊಳ್ಳುತ್ತದೋ...." – ಎಂದ ಪರಶುರಾಮನಾಯಕ.

"ಹೇಗಾದರೂ ಬರಲಿ - ತಕ್ಕ ತಾಳ ನೀನು ಹಾಕು. ನಮ್ಮ ಮನಸ್ಸೇನೆಂಬುದು ನಿನಗೆ ತಿಳಿಯಿತಲ್ಲ."

"ತಿಳಿಯಿತು – ದಶಾವತಾರದ ಪಾತ್ರ ನಮಗೆ ಬೇಡ ಎಂದು ನೀವು, ನನಗೆ ಎರಡೂ ಕಡೆ ತಲೆ ತಟ್ಟಿಸಿಕೊಳ್ಳುವ ಮದ್ದಲೆ ಮಾಡಿದಿರಿ."

"ಹಾಗೆಂದು ಬೇಸರವೇ, ಪರಶುರಾಮಣ್ಣ?"

“ಬೇಸರವೇನೂ ಇಲ್ಲ - ತಲೆಯ ಎರಡೂ ಕಡೆ, ಲಯಬದ್ಧವಾಗಿದೆಯೇನೋ ಎಂದು ಸ್ವಲ್ಪ ನೋಡಿಕೊಂಡು ಬಾರು ಬಿಗಿಮಾಡಿಕೊಳ್ಳಬೇಕು, ಅಷ್ಟೆ”

-ಎಂದ ಪರಶುರಾಮನಾಯಕ ಹೇಳಿದ –

“ಅಂದರೆ – ಹಳೆ ತಲೆಗಳು ಹೋಗಿ, ಬಂದಿರುವ ಹೊಸ ತಲೆಗಳು ಹೇಗಿವೆ ಎಂದೂ ನೋಡ ಬೇಕು.”

ಆ ಮಾತು ಕೇಳಿ ಹಾಗೇ ಯೋಚಿಸಿದ ಮದಕರಿನಾಯಕ –

’ಎಷ್ಟು ವರ್ಷವಾಯಿತು ತಾನು ಪಟ್ಟಕ್ಕೆ ಬಂದು –

’ವ್ಯಯ ಸಂವತ್ಸರದಿಂದ ಖರ ಸಂವತ್ಸರದವರೆಗೆ, ಹದಿನೆಂಟು ವರ್ಷ –

ಆ ಹದಿನೆಂಟು ವರ್ಷಗಳು-

ಬಹುಬೇಗ ಕಳೆದುಹೋದಂತೆ, ಜರಡಿಯಲ್ಲಿ ಹಾಕಿ, ಸೋರಿಹೋದ ನೀರಿನಂತೆ ಕಾಣಿಸಿದವು - ಆ ವರ್ಷಗಳು.

ಕಳೆದ ಆ ವರ್ಷಗಳು –

ಆ ವರ್ಷಗಳೊಂದಿಗೇ –

ಸಂಗ್ರಾಮ, ಸಾವು, ರೋಗ, ವೃದ್ಧಾಪ್ಯಗಳಿಂದ –

ಸಂಭ್ರಮದಿಂದ ತನ್ನನ್ನು ಪಟ್ಟಕ್ಕೆ ತಂದು, ಚೆನ್ನಾಗಿ, ಕಣ್ಣಾಗಿ ನಡೆಸಿದ ಹಿರಿಯರ ತಲೆಗಳು-

ದಳವಾಯಿ ಭರಮಣ್ಣ, ಬಾಣದ ಮದಕರಿನಾಯಕರು –

ಆ ಇಬ್ಬರು ಹಿರಿಯರಂತೆಯೇ –

ತನ್ನೊಂದಿಗೆ ರಣರಂಗದಲ್ಲಿ ಜೊತೆಜೊತೆಯಾಗಿ ಹೋರಾಡಿದ, ಮಡಿದ ನೂರಾರು ಮುಖಗಳು - ಪರಿಚಿತ, ಅಪರಿಚಿತ - ಈಗ ಎಲ್ಲವೂ ಮರೆವಿನಾಳದಲ್ಲಿ ಹುದುಗಿಹೋಗಿವೆ.

ಮರೆತಿದೆಯೇ -?

ಇಲ್ಲ- ನೆನಪಿದೆ, ಇದ್ದೂ ಇಲ್ಲದ ಹಾಗೆ, ನೀರಿನಲ್ಲಿ ಬೆರೆತ ಹತ್ತು ಬಣ್ಣಗಳ ಹಾಗೆ.

ಹೀಗೆ ಯಾವಾಗಲಾದರೊಮ್ಮೆ ಬರುವ ಕಿರಿನೋವು, ಯುದ್ಧಗಳು ಮೈಮೇಲೆ ಮೂಡಿಸಿದ ಗಾಯದ ಕಲೆಗಳಂತೆ –

ಮನಸ್ಸಿನ ಒಳಪದರದ ಮೇಲೆ ನೆನಪಿನ ಕಲೆಗಳನ್ನು ಮೂಡಿಸುತ್ತವೆ.

ಗಾಯದ ಕಲೆಗಳ ನೆನಪಾಗಿ ಹಾಗೇ ತನ್ನ ಕೈಕಾಲುಗಳನ್ನು ನೋಡಿಕೊಂಡ. ಅವುಗಳ ಮೇಲೂ ಕಳೆದ ಪ್ರಾಯ ತನ್ನ ಸೂಕ್ಷ್ಮರೇಖೆಗಳನ್ನುಳಿಸಿ ತೆರಳಿವೆ –

ಬರಿ ಉರಿನೆನಪಾಗಿ ತವರಿಗೆ ತೆರಳಿದ ಲಕ್ಕಾಂಬೆಯಂತೆ.

ಲಕ್ಕಾಂಬೆಯ ನೆನಪಿನೊಂದಿಗೇ ನುಗ್ಗಿ ಬಂತು –

ತನ್ನ ಇಂದಿನ ಬಾಳಿನ ಆದಿಶಕ್ತಿ ಓಬವ್ವನಾಗತಿಯ ನೆನಪು.

ಓಬವ್ವನಾಗತಿಯರ ನೆನಪಿನೊಂದಿಗೇ ನರಸಪ್ಪಯ್ಯನವರದೂ ನೆನಪಾಯಿತು.

'ಈ ನರಸಪ್ಪಯ್ಯ ಆಕೆಯಷ್ಟೇ ಪ್ರಾಯದವರಿರಬೇಕು. ಆದರೆ ಈಗಲೂ ಹಾಗೇ ಇದ್ದಾರೆ - ಸಾವನ್ನು ಗೆದ್ದವರ ಹಾಗೆ.'

'ಇವರು ಹೋಗಿ, ಆಕೆ ಇದ್ದಿದ್ದರೆ -?'

-ಒಂದು ಕ್ಷಣ ಸಿಹಿಯಾದ ನೆನಪು ಕಹಿಯಾಯಿತು.

ನರಸಪ್ಪಯ್ಯ ಎಂದಕೂಡಲೇ ಹೈದರಾಲಿಯ ನೆನಪಾಗಿ ಕಹಿಯಾಗಿದ್ದು ಮತ್ತಷ್ಟು ಕಹಿಯಾಯಿತು.

ತನ್ನ ಮಾತಿಗೆ ಉತ್ತರ ಕೊಡದೆ ಸುಮ್ಮನೆ ಕುಳಿತ ಅಣ್ಣನನ್ನು ನೋಡಿ ಪರಶುರಾಮನಾಯಕ –

"ಯಾಕಣ್ಣ- ಹೀಗೆ ಕುಳಿತುಬಿಟ್ಟರಿ- ಮೈಕೈ ನೋಡಿಕೊಳ್ಳುತ್ತಾ" - ಎಂದು ಕೇಳಿದ.

ಆ ಮಾತಿಗೆ ಒಣನಗೆ ನಕ್ಕು –

"ನೀನು ನಿನ್ನ ತಲೆಯ ನೆನಪು ಮಾಡಿ, ನಮಗೂ ನಮ್ಮ ತಲೆಯ ನೆನಪು ಮಾಡಿದೆ. ಹಾಗೇ ಈ ಕೈಕಾಲುಗಳೂ ಹೋದವರೊಂದಿಗೆ ಹೋಗಿದೆಯೋ ಇದೆಯೋ ಎಂದು ನೋಡಿಕೊಂಡೆ. ನಿಜಕ್ಕೂ ಪರಶುರಾಮಣ್ಣ, ಮನುಷ್ಯನಿಗೆ ಮಿದುಳು ಕೊಟ್ಟ ದೇವರು, ಮರೆಯುವ ಶಕ್ತಿಯನ್ನೇ ಕೊಡದಿದ್ದರೆ, ಆ ಮಿದುಳು ಇಷ್ಟು ಹೊತ್ತಿಗೆ ಎಂಥ ರಣರಂಪವಾಗುತ್ತಾ ಇತ್ತು...." – ಎಂದು ನಿಟ್ಟುಸಿರು ಬಿಟ್ಟು, ಮೈಕೊಡವಿಕೊಂಡವನಂತೆ –

"ನನ್ನ ನೆನಪುಗಳ ಕಾಟ ನನಗಿರಲಿ, ನಿನಗೆ ಮಾಡಬೇಕಾದ ಕೆಲಸ ಸಾವಿರವಿದೆ. ಅದಕ್ಕೆ ಹೆಚ್ಚು ಕಾಲಾವಕಾಶವೂ ಇದ್ದಂತೆ ಕಾಣುವುದಿಲ್ಲ"- ಎಂದ ಮದಕರಿನಾಯಕ, ಶಿಲಾಸನದಿಂದ ಮೇಲೇಳುತ್ತಾ.

"ಏಕೋ – ಇಬ್ಬರಿಗೂ ಹಳೆಯ ದಿನಗಳ ನೆನಪಾಯಿತು. ಜೊತೆಗೆ ಕುಳಿತುಂಡು ಬಹಳ ದಿನವಾಯಿತು. ನಮ್ಮ ಮನೆಗೇ ಬಾರಣ್ಣ, ಜೊತೆಗೆ ಊಟ ಮಾಡೋಣ" - ಎಂದ ಪರಶುರಾಮನಾಯಕ.

"ಅದು ಬೇಡ, ಅರಮನೆಗೆ ಬಾ. ನಾವಿಬ್ಬರೂ ಜೊತೆಯಾಗಿ ಕೂತು, ಅವ್ವನ ಕೈಲಿ ಬಡಿಸಿಕೊಂಡು ಊಟ ಮಾಡೋಣ"

- ಎಂದು ಹೇಳಿ, ತಮ್ಮನ ಹೆಗಲ ಮೇಲೆ ಕೈಹಾಕಿ, ಅರಮನೆಯತ್ತ ನಡೆದ ಮದಕರಿನಾಯಕ.

೨

ಚಿನಕುರಳಿಯ ಯುದ್ಧದಲ್ಲಿ ಮರಾಠರಿಂದ ಮರೆಯಲಾಗದ ಪೆಟ್ಟು ತಿಂದು, ಶ್ರೀರಂಗಪಟ್ಟಣದ ಬಳಿ ನಿಂತ ತ್ರಿಯಂಬಕರಾವ್ ಪೇಶೆಗೆ ಮೂವತ್ತೊಂದುಲಕ್ಷ ರೂಪಾಯಿಗಳ ಪೊಗದಿ, ಯುದ್ಧದ ವೆಚ್ಚ ಕೊಡುವ ಒಪ್ಪಂದ ಮಾಡಿಕೊಂಡು, ಹೆಡೆ ತುಳಿದ ಹಾವಿನಂತೆ ಬುಸುಗುಟ್ಟುತ್ತಾ, ಕಾಲಕ್ಕಾಗಿ ಕಾಯುತ್ತಿದ್ದ ಕಾಳಸರ್ಪನಂತಿದ್ದ ಹೈದರಾಲಿ, ಪೇಶ್ವೆ ಮಾಧವರಾಯ ಮೃತನಾದ ಸುದ್ದಿ ಕೇಳಿ, ಪೊರೆಬಿಟ್ಟ ಹಾವಾಗಿ ಫೂತ್ಕರಿಸತೊಡಗಿದ. ಹೊಸದಾಗಿ ಚಿಗಿತ ಅವನ ವಿಷದ ಹಲ್ಲು ಬಯಸಿದ ಮೊದಲ ಬೇಟೆ – ಚಿತ್ರದುರ್ಗ.

ಆದರೆ ಬಯಸಿದ ಕೂಡಲೇ ಸೆರಗು ಸರಿಸುವ ಬೀದಿಯ ಬೆಲೆವೆಣ್ಣಿನಂತಹ ಹರಕುಪಾಳಯ ಪಟ್ಟಾಗಿರಲಿಲ್ಲ - ಚಿತ್ರದುರ್ಗದ ಗಂಡುಮೆಟ್ಟು. ಆ ದುರ್ಗವನ್ನಾಳುವ ಮದಕರಿನಾಯಕ, ಆತನ ಧೀರಯೋಧಪಡೆಯ ಸಮರಸಾಮರ್ಥ್ಯ ಎಂತಹವುದೆಂಬುದನ್ನು ನಗರ, ಬಂಕಾಪುರ, ಆನವಟ್ಟಿ, ರಟ್ಟೆಹಳ್ಳಿಯ ಕಾಳಗಗಳಲ್ಲಿ ಕಣ್ಣಾರೆ ಕಂಡಿದ್ದ ಹೈದರಾಲಿ, ನಿಜಗಲ್ಲಿನ ಗಂಡು ದುರ್ಗವನ್ನು, ಒಂದು ಗುಂಡೂ ಹಾರಿಸದೆಯೇ ಮರಾಠರಿಗೊಪ್ಪಿಸಿದ ಸಾಹಸವನ್ನು, ಮದಕರಿ ನಾಯಕನ ಔದಾರ್ಯದಿಂದ ಬದುಕಿಬಂದ ಸರ್ದಾರ್‌ಖಾನನ ಬಾಯಿಂದ ಕೇಳಿ, ದುರ್ಗಕ್ಕೆ ಅದರ ಗಂಡುಪಡೆಯೇ ಅಲ್ಲದೆ, ಮರಾಠಾಸೇನೆಯ ರಕ್ಷೆಯೂ ಇದೆಯೆಂಬುದನ್ನು ಅರಿತು, ಅನುಕೂಲಕಾಲಕ್ಕಾಗಿ ಕಾಯತೊಡಗಿದ, ಹಲ್ಲುಮಸೆಯುತ್ತಾ.

ಹೈದರನ ಬಯಕೆಯ ಬೆಂಕಿಯ ಮತ್ತೊಂದು ಕರಾಳಜಿಹ್ವೆ - ರಘೋತ್ತಮರಾಯ. ತನ್ನ ತಮ್ಮ ಮಾಧವರಾಯನನ್ನು ಸುಟ್ಟು ಭಸ್ಮ ಮಾಡಿದ ಚಿತಾಗ್ನಿ ತಣ್ಣಗಾಗಲೂ ಅವಕಾಶ ಕೊಡದೆ, ಎಲ್ಲರೂ ಪೇಶ್ವೆಯೆಂದು ಅಂಗೀಕರಿಸಿದ ತರುಣ ನಾರಾಯಣನ ನೆತ್ತಿಯ ಮೇಲೆ ಬಿದ್ದ ಪಟ್ಟಾಭಿಷೇಕದ ಜಲಧಾರೆ ಒಣಗುವ ಮುನ್ನವೇ, ಮಾಧವರಾಯ ಮೈಸವೆಸಿ ಕಟ್ಟಿದ ಮರಾಠರ ಕೋಟೆಯಲ್ಲಿ ತನ್ನ ರಾಕ್ಷಸೀಮಹತ್ವಾಕಾಂಕ್ಷೆಯ ದಾವಾಗ್ನಿಯನ್ನು ಆವಾಹನೆಮಾಡಿ, ಪುಣೆಯ ರಾಜವಾಡೆಯಲ್ಲಿ ಅಂತಃಕಲಹದ ಕಿಚ್ಚು ಹೊತ್ತಿಸಿ, ಒಂದಾಗಿದ್ದ ಮರಾಠಾ ಸರದಾರರಲ್ಲಿ ಯಾದವೀಕಲಹದ ವಿಷಬೀಜ ಬಿತ್ತಿ, ತನ್ನ ಪಾಶವೀ ಒಳಸಂಚಿಗೆ ನೆರವಾದಾರೆಂದು ಅತ್ತಿತ್ತ

ಡೇಗೆಗಣ್ಣು ಹಾಯಿಸುತ್ತಾ, ಹೈದರಾಲಿಯ ಹೆಬ್ಬಯಕೆಯ ಮಾರಿರಥ ಮುನ್ನಡೆಯಲು, ಹಾದಿಯನ್ನು ಸುಗಮಗೊಳಿಸಿದ.

ನಂದನನಾಮ ಸಂವತ್ಸರದ ಭಾದ್ರಪದ ಮಾಸದಲ್ಲೊಂದು ದಿನ, ನಡುಹಗಲಿನಲ್ಲಿ ಸೂರ್ಯ ಉರಿಯುತ್ತಿರುವಾಗಲೇ, ತುಂಬಿದರಮನೆಯಲ್ಲಿ ಪೇಶ್ವೆ ನಾರಾಯಣರಾಯನನ್ನು ಕಗ್ಗೊಲೆಗಡಿಸಿ, ತಾನೇ ಪೇಶ್ವೆ ಎಂದು ಘೋಷಿಸಿಕೊಂಡು ರಘೋತ್ತಮರಾಯ, ಆ ಕೊಲೆಯ ಕಗ್ಗತ್ತಲಿನಲ್ಲಿ ದಾರಿಗಾಣದೆ ಮರಾಠಾಮಂತ್ರಿ-ಸರದಾರರು ತಡಕಾಡುತ್ತಿರುವಾಗಲೇ ತನಗೆ ಅನುಕೂಲವಾದವರನ್ನು ಜೊತೆಗೂಡಿಸಿಕೊಂಡು, ಜೈತ್ರಯಾತ್ರೆ ಹೊರಟ – ಹೈದರಾಲಿಯಿಂದ ಚೌತಾಯಿ ವಸೂಲಿ ಮಾಡುತ್ತೇನೆ ಎಂದು, ತನ್ನ ರಕ್ತಸಿಕ್ತವಾದ ಬೆರಳುಗಳಿಂದ ಮೀಸೆ ಹುರಿ ಮಾಡಿಕೊಂಡು.

ಮೊದಲಿನಿಂದಲೂ ತನಗೆ ಅಂತರಂಗದ ಆಪ್ತನಾಗಿದ್ದ ರಘೋತ್ತಮರಾಯನ ಇಂತಹ ತರಾತುರಿಯ ದಾಳಿಯನ್ನೆದುರಿಸಲು ಹೈದರಾಲಿ ಸನ್ನದ್ಧನಾಗಿ, ತನ್ನ ಸೇನೆಯನ್ನು ಆತನ ವಿರುದ್ಧ ನಡೆಸಿದ.

ರಘೋತ್ತಮರಾಯ-ಹೈದರಾಲಿ, ಪರಸ್ಪರ ಆಪ್ತರಾಗಿದ್ದವರು, ವೈರಿಗಳಾಗಿ ರಣಾಂಗಣದಲ್ಲಿ ಸಂಧಿಸುವ ಮೊದಲೇ, ಪೇಶ್ವೆ ಆಸ್ಥಾನದ ಮಂತ್ರಿಮುಖ್ಯರು ನಾನಾ ಫಡ್ನವೀಸನ ನಾಯಕತ್ವದಲ್ಲಿ, ಕಗ್ಗೊಲೆಯ ಕರಾಳ ಆಘಾತದಿಂದ ಚೇತರಿಸಿಕೊಂಡು, ರಘೋತ್ತಮರಾಯನನ್ನು ಕೊಲೆಗಾರನೆಂದು ಆಪಾದಿಸಿ, ನಾರಾಯಣರಾಯನ ಮರಣಾನಂತರ ಹುಟ್ಟಿದ ಮಗು ಮಾಧವರಾಯನೆಂದು ನಾಮಕರಣ ಮಾಡಿ, ತೊಟ್ಟಿಲಿಗೇ ಪಟ್ಟ ಕಟ್ಟಿಸಿ, ಆ ಪೇಶ್ವೆಯ ಹೆಸರಿನಲ್ಲಿ, ಸರದಾರರಾರೂ ಈ ಕೊಲೆಗಡುಕನಿಗೆ ನೆರವಾಗಕೂಡದೆಂದು ನಿಷೇಧಾಜ್ಞೆ ಹೊರಡಿಸಿದರು.

ಗೆದ್ದು ಸಾಮ್ರಾಜ್ಯ ಕಟ್ಟುತ್ತೇನೆ ಎಂದು ಎದೆಯುಬ್ಬಿಸಿ ಹೊರಟ ರಘೋತ್ತಮರಾಯ ಬಳ್ಳಾರಿ, ರಾಯದುರ್ಗಗಳನ್ನು ದಾಟಿ, ಸೊಂಡೂರು ಸೇರುವ ವೇಳೆಗೆ, ನಾನಾ ಫಡ್ನವೀಸನ ನಿಷೇಧಾಜ್ಞೆ ಮರಾಠಾ ಸರದಾರರಿಗೆ ಸೇರಿ, ತನ್ನ ತಮ್ಮನ ಮಗನ ಕೊಲೆ ಮಾಡಿಸಿದ ರಘೋತ್ತಮರಾಯನ ಕೈಯಾಳುಗಳಾಗಲು ಹೇಸಿ ಅವನೊಂದಿಗೆ ಬಂದ ಮರಾಠಾ ಸರದಾರರೆಲ್ಲರೂ ತಮ್ಮ ಸೇನೆಯೊಂದಿಗೆ ಹಿಂದಿರುಗಿ, ಅಳಿದುಳಿದ ಒಂದೆರಡು ಸಾವಿರ ಪಿಂಡಾರಿಯವರ ಸೇನೆಯೊಂದಿಗೆ ಹೈದರಾಲಿಯನ್ನು ಎದುರಿಸಲಾಗದ ರಘೋತ್ತಮರಾಯ, ತನ್ನ ಹಳೆಯ ನೆಂಟಸ್ತಿಕೆಯನ್ನು ಹೈದರಾಲಿಗೆ ನೆನಪಿಸಿ, 'ನಾನು ಪೇಶ್ವ ಎಂದು ನೀನು ಒಪ್ಪಿಕೋ. ಕೊಟ್ಟಷ್ಟು ಚೌತಾಯಿ ಕೊಡು' ಎಂದು ಸಂಧಿಗೆ ಕೈಚಾಚಿದ.

ಹೈದರಾಲಿಗೂ ಬೇಕಾದುದಷ್ಟೆ, ಹಸಿದ ನಾಯಿಗೆ ಎಲುಬಿನ ಚೂರನ್ನು ಒಗೆಯುವಂತೆ, ರಘೋತ್ತಮರಾಯನಿಗೆ ಹತ್ತುಲಕ್ಷ ಕೊಟ್ಟು, ಕೃಷ್ಣಾ ನದಿಯ ಬಲದಂಡೆಯ ರಾಜ್ಯವೆಲ್ಲಾ ಹೈದರಾಲಿಗೆ ಸೇರಿದ್ದು ಎಂದು, ಸನ್ನದನ್ನು ಬರೆಸಿಕೊಂಡ. ಈ ಒಪ್ಪಂದದ ಮೊದಲ ಕಂತಾಗಿ ಹೈದರಾಲಿ ಕೇಳಿದ್ದು ಸೀರ್ಯದ ಸುಭೇದಾರಿಕೆ.

ಈ ನಕಲಿ ಪೇಶ್ವೆ, 'ಅಸಲಿ' ಪೇಶ್ವೆಗಿಂತ ಹೆಚ್ಚಿನ ಜಬರ್‌ದಸ್ತಿನಿಂದ, ಹೈದರಾಲಿಗೆ ಸೀರ್ಯದ ಸುಭೇದಾರಿಕೆಯನ್ನು ವಹಿಸಿಕೊಡಲು, ತನ್ನ ಮಲತಮ್ಮ ಬಾಜಿರಾವ್ ಖರ್ವೆಯನ್ನು ಪತ್ರದೊಂದಿಗೆ, ಸೀರ್ಯದ ಮರಾಠ ಸುಭೇದಾರ ಬಾಪೂಜಿ ಸಿಂಧ್ಯಾಗೆ ಹುಕುಂ ಕಳಿಸಿದ.

ಬೆಂಕಿಗೆ ಬೇಕಾದ ಬಿರುಗಾಳಿಯ ನೆಂಟಸ್ತಿಕೆ ದೊರೆಯಿತು.

ಆ ಪತ್ರದ ಬೆನ್ನ ಹಿಂದೆ ಬಂದ ಹೈದರಾಲಿಯ ಆಳುಗಳಿಗೆ, ಸೀರ್ಯದ ಕೋಟೆಯನ್ನು ಒಪ್ಪಿಸಲು ತಿರಸ್ಕರಿಸಿ, ಆ ಕಾಗದವನ್ನು ತಿಪ್ಪೆಗೆಸೆದು ಬಾಪೂಜಿ ಸಿಂಧ್ಯಾ – ಹೈದರಾಲಿಯನ್ನು ಎದುರಿಸಲು ಸಿದ್ಧನಾದ. ಹೈದರಾಲಿಗೂ ಆ ಯುದ್ಧ ಬೇಕಾಗಿತ್ತು : ಆ ಯುದ್ಧಕ್ಕಿಂತ ಹೆಚ್ಚಾಗಿ ಸೀರ್ಯ, ಎಂತಲೇ, ಹೈದರಾಲಿ ಸೀರ್ಯವನ್ನು ವಶಪಡಿಸಿಕೊಳ್ಳಲು ತನ್ನ ಮಗ ಟೀಪುವಿನ ನೇತೃತ್ವದಲ್ಲಿ ಸರ್ದಾರ್‌ಖಾನ್, ಮೀರ್ ಆಲಿ ರಜಾಖಾನರೊಂದಿಗೆ ಬಲವಾದ ಸೈನ್ಯ ಕಳಿಸಿದ.

ವಿಜಯಸಂವತ್ಸರದ ಚೈತ್ರಮಾಸ –

ಅತ್ತ ಪುಣೆಯಲ್ಲಿ, ತುಂಬಿದ ನ್ಯಾಯಾಲಯದಲ್ಲಿ ನ್ಯಾಯಾಧೀಶ ರಾಮಶಾಸ್ತ್ರಿ, ರಘೋತ್ತಮರಾಯನನ್ನು ಕೊಲೆಗಡುಕನೆಂದು ತೀರ್ಪಿತ್ತ.

ಇತ್ತ ಹೈದರಾಲಿಯ ಸೇನೆ, ಸೀರ್ಯಕ್ಕೆ ಮುತ್ತಿಗೆಹಾಕಿತು.

ಸೀರ್ಯದ ಪರಿಸರದಲ್ಲಿ ಹೈದರಾಲಿ ಸೇನೆಯ ರಣಭೇರಿಗಳ ಸದ್ದು ಕೇಳಿದ ಕೂಡಲೇ, ಗಡಿಠಾಣ್ಯಗಳಿಗೆ ಬಿಗಿಕಾವಲಿನ ಅಪ್ಪಣೆಯಾಯಿತು.

೪

"ಯಾರಂತೆ ....ಯಾಕಂತೆ ...?"

- ದಪ್ಪ ಹುಬ್ಬುಗಳಡಿಯಲ್ಲಿ, ಉದ್ದವಾದ ರೆಪ್ಪೆ ಗಾವಲಿನ ದೊಡ್ಡ ಕಣ್ಣುಗಳನ್ನು ತಿರುಗಿಸಿ ನೋಡುತ್ತಾ ಕೇಳಿದ, ಮಧ್ಯಾಹ್ನದ ಊಟ ಮಾಡಲೆಂದು ಕೈತೊಳೆಯುತ್ತಿದ್ದ ಕೊತ್ವಾಲ ಚಾವಡಿಯ ದಳವಾಯಿ ಕಾಶಣ್ಣನಾಯಕ, ತನ್ನ ಹೆಂಡತಿ ವೀರವ್ವನನ್ನು.

“ನಾನು ಕೇಳಿದ್ರೆ ಹೇಳ್ತಾರಾ, ಹುಟ್ಟುವಾಗಲೇ ತುಟಿ ಹೊಲಿಸ್ಕೊಂಡು ಹುಟ್ಟಿರೋ ಕೊತ್ವಾಲ ಚಾವಡಿಯ ನಿಮ್ಮ ಜನ. ’ದಳವಾಯಿಗಳು ಬೇಕು’ ಅಂದ. ಹೇಳಲಿಕ್ಕೆ ಬಂದೆ.”

“ಶುದ್ಧ ಅನ್ನ ಗಂಟಿಕ ಜನ - ಊಟ, ನಿದ್ದೆಗೂ ಬಿಡೋಲ್ಲ.”

“ನೀವು ಕೊತ್ವಾಲ ಚಾವಡಿಯ ಜನ - ನಿಮ್ಮನ್ನು ಕಂಡ ಜನಕ್ಕೆ ಊಟ ನಿದ್ದೆ ಇಲ್ಲ, ನಿಮಗೂ ಇಲ್ಲ. ಅದೇನೋ ಕೇಳಿ ಬಂದು ಊಟಕ್ಕೇಳಿ. ಹೊತ್ತು ಮಾಡಬೇಡಿ. ಬಡಿಸಿದ್ದು ತಂಗಳಾದೀತು” - ಎಂದಳು ವೀರವ್ವ,

“ಬಂದಿರೋದೇನು ಒಂದು ಗಳಿಗೇಲಿ ಹೋಗೋ ಗ್ರಹಾನೋ, ದಿನವೆಲ್ಲಾ ಕಾಡೋ ದೈಯ್ಯಾನೋ ಕೇಳಿ ಬರ್ತೀನಿ”

- ಎಂದು ತೊಳೆಯುತ್ತಿದ್ದ ಕೈಯನ್ನು ಹಾಗೇ ಒರೆಸಿಕೊಂಡು, ಹೊರಗೆ ತಲೆಬಾಗಿಲ ಬಳಿ ಬಂದು-

“ಯಾರೂ ಬಂದಿರೋದು – ಏನು ಸುದ್ದಿ ?”

- ಎಂದು ಹೊಟ್ಟೆಯ ಹಸಿವು ಕೆದರುತ್ತಿದ್ದ ಕ್ರೋಧದಲ್ಲಿ ಕೇಳಿದ.

ಬಂದವನು ತಗ್ಗಿದ ಧ್ವನಿಯಲ್ಲಿ ಏನೋ ಹೇಳಿದ.

ಅವನು ಹೇಳಿದುದನ್ನು ನಿಧಾನವಾಗಿ ಕೇಳಿ –

“ಬಂದೆ – ನಡಿ”

– ಎಂದು ಕೊತ್ವಾಲ ಚಾವಡಿಯ ಆಳನ್ನು ಕಳಿಸಿ, ಹಜಾರದಲ್ಲಿ ಒಂದು ಗೂಟಕ್ಕೆ ನೇತು ಹಾಕಿದ್ದ ತನ್ನ ಕಸೆಯಂಗಿಯನ್ನು ತೊಟ್ಟುಕೊಳ್ಳುತ್ತಲೇ –

“ತಳಿಗೆ ತೆಗೆದುಬಿಡು. ನಿಧಾನವಾಗಿ ಉದ್ಯೋಕೆ ಬರ್ತೀನಿ”

- ಎಂದು ಹೇಳಿ, ಮುಂಡಾಸವನ್ನು ನೆತ್ತಿಗಿಟ್ಟುಕೊಂಡು ಅವಸರವಸರವಾಗಿ ಕೊತ್ವಾಲ ಚಾವಡಿಗೆ ಹೊರಟ, ಬೆನ್ನ ಹಿಂದೆ ಹೆಂಡತಿ ಹೇಳುತ್ತಿದ್ದ ಮಾತೂ ಕಿವಿಗೆ ಬೀಳದವನಂತೆ.

ಕೊತ್ವಾಲಚಾವಡಿ, ಹಗಲಿನಲ್ಲಿ ಎಂದೂ ಪೂರ್ಣ ಬೆಳಕು ಬಿದ್ದ ಜಾಗವಲ್ಲ. ನೆತ್ತಿಯ ಮೇಲಿನ ಗವಾಕ್ಷಗಳಿಂದ ಬರುತ್ತಿದ್ದ ಬೆಳಕು ಬಿಟ್ಟರೆ ಸುತ್ತ ಅರೆಮಬ್ಬುಗತ್ತಲು ಕವಿದ ಕಲ್ಲುಹಜಾರ. ಕೊತ್ವಾಲರು ಕೂಡುವ ಕಡೆ ನೆಲಕ್ಕೆ ಒಂದು ದಪ್ಪ ಪಟ್ಟೆ ಪಟ್ಟೆಯ ಜಮಖಾನ ಹಾಸಿ, ಒರಗಿಕೊಳ್ಳಲು ಒಂದು ದಿಂಬನ್ನಿಟ್ಟಿದ್ದರು. ಅದರ ಮುಂದೆ ಸಣ್ಣದೊಂದು, ಒಂದೂವರೆ ಮೊಳಕ್ಕೆ ಎತ್ತರದ ಇಳಿಜಾರಾದ ಕೈಪೀಠ.

ನಡೆಯುವಾಗ 'ಜಿರ್ ಜಿರ್' ಎಂದು ಸದ್ದು ಮಾಡುತ್ತಿದ್ದ ಗುಲಾಬಿ ಬಣ್ಣದ ಚೇಳುಕೊಂಡಿಯ ಮೊನೆಯ ಚಡಾವನ್ನು ಬಾಗಿಲಲ್ಲಿ ಬಿಟ್ಟು, ತನ್ನ ಸ್ಥಾನದ ಸನಿಹದಲ್ಲಿ, ಇಬ್ಬರು ಬಿಚ್ಚುಗತ್ತಿಯಾಳುಗಳ ನಡುವೆ ನಿಂತಿದ್ದಾತನನ್ನು ನೋಡಿದ.

ತೊಟ್ಟಿದ್ದ ಉಡುಪು ಮರಾಠಾ ಸೈನಿಕರು ಧರಿಸುತ್ತಿದ್ದಂಥ ಬಿಳಿಯ ಕಸೆಯಂಗಿ, ತಲೆಯ ಮೇಲೊಂದು ಪಾಗು. ಆದರೆ ಮುಖದ ಗಡ್ಡ ಮೀಸೆ ನೋಡಿದರೆ ಮುಸಲ್ಮಾನನೇನೋ ಎಂಬ ಅನುಮಾನ ಬರಿಸುವಂಥ ಮುಖ. ಆ ಮುಖ ನೋಡಿದ ಕಣ್ಣಲ್ಲಿ ಗೌರವ ಹುಟ್ಟಿಸದಿದ್ದರೆ, ಕಿವಿ ಹಿಡಿದು ನೋಡಿ, ಹಿಂದುವೋ-ಮುಸಲ್ಮಾನನೋ ಎಂದು ಪರೀಕ್ಷಿಸಿ ನೋಡುತ್ತಿದ್ದ ಕಾಶಣ್ಣನಾಯಕ. ಆದರೆ ಆ ಮುಖ ಅದಕ್ಕೂ ಮೊದಲು ಆ ಚಾವಡಿಯಾಳು ಹೇಳಿದ ಮಾತು, ಕಾಶಣ್ಣನಾಯಕ ಆ ಕೆಲಸ ಮಾಡಲು ಬಿಡದೆ, ಠೀವಿಯಿಂದ ಹೋಗಿ ತನ್ನಾಸಿನದಲ್ಲಿ ಕುಳಿತು, ತುಟಿಯ ಮೇಲಿನ ಮೀಸೆಯ ಮೇಲೆ ಕೈಯಾಡಿಸುತ್ತಲೇ –

"ಏನೋ, ನನ್ನನ್ನೇ ನೋಡಬೇಕು ಅಂತಂದೆಯಂತಲ್ಲ. ಅದೇನು ನಿನ್ನ ರಾಜರಹಸ್ಯ ?"

-ಎಂದು ಅಪ್ಪಣೆ ಮಾಡುವಂತೆ ಕೇಳಿ, ತನ್ನ ಕಡೆಯವರನ್ನು ನೋಡುತ್ತಾ –

"ಮೈ ಕೈ ಎಲ್ಲಾ ಹುಡುಕಿ ನೋಡಿದಿರಾ - ಏನೂ ಕಾಗದ, ಪತ್ರ ಇಲ್ಲವಲ್ಲ" – ಎಂದು ಕೇಳಿದ, ಕಾಶಣ್ಣನಾಯಕ.

"ಎಲ್ಲಾ ನೋಡಿದಿವಿ. ಇದ್ದದಿಷ್ಟೆ"

-ಎಂದು ಹೇಳಿ, ಚಾವಡಿಯ ಕರಣಿಕ, ಸಣ್ಣ ಕಾಗದದ ತುಂಡೊಂದನ್ನು ದಳವಾಯಿ ಕಾಶಣ್ಣನಾಯಕನ ಮುಂದಿಟ್ಟ.

ಕಾಶಣ್ಣನಾಯಕ ಆ ಕಾಗದವನ್ನು ನೋಡಿದ –

ಆ ಕಾಗದದಲ್ಲಿ ಏನೂ ಬರವಣಿಗೆ ಇರಲಿಲ್ಲ. ಇದ್ದುದಿಷ್ಟೆ - ಮೊಳಕೈವರೆಗಿನ ಕತ್ತಿ ಹಿಡಿದ ಹಸ್ತ, ಅದೂ ಅಚ್ಚಲ್ಲ; ಒರಟಾಗಿ ಕೈಯಲ್ಲಿ ಬರೆದದ್ದು.

ಅದನ್ನು ನೋಡಿ –

"ಇದು ಯಾವ ಸೀಮೇದು. ಯಾರು ಕೊಟ್ಟ ರಹದಾರಿ ? ನಮ್ಮ ಸೀಮೇಲಿ ಇದಕ್ಕೇನೂ ಬೆಲೆ ಇಲ್ಲ" – ಎಂದ ಕಾಶಣ್ಣನಾಯಕ.

"ಇದು ಯಾವ ಸೀಮೆಯ, ಯಾರ ರಹದಾರಿಯೂ ಅಲ್ಲ. ನಿಮ್ಮ ಪ್ರಭುಗಳ ಬಳಿ ನನ್ನನ್ನು ಕರೆದುಕೊಂಡು ಹೋಗಿ. ಅವರಿಗೆ ಇದು ಯಾರದೆಂದು ಅರ್ಥವಾಗುತ್ತದೆ. ಅಷ್ಟೆ-ಇಲ್ಲಿ ಮತ್ತೇನೂ ಕೇಳಬೇಡಿ"

- ಎಂದ ಕಾಗದ ತೋರಿಸಿದಾತ, ಅಪ್ಪಣೆ ಮಾಡಲು ಪಳಗಿದ ಧ್ವನಿಯಲ್ಲಿ.

"ಈ ಮೊಂಡುಕ್ಕೈ ಚಿತ್ರ ತಗೊಂಡುಹೋಗಿ ನಿನ್ನನ್ನು ಮಹಾಸ್ವಾಮಿಯವರ ಹತ್ತಿರ ಬಿಡಬೇಕೋ? ಯಾರಿಗೆ ಹೇಳತೀಯ, ಈ ಮಾತನ್ನು, ನಾನು ಕೊತ್ವಾಲ ಚಾವಡಿಯ ದಳವಾಯಿ, ನಿನ್ನಂಥ ಸಾವಿರ ಜನಾನ ನೋಡಿದೀನಿ"- ದರ್ಪದಿಂದ ಕೇಳಿದ ಕಾಶಣ್ಣನಾಯಕ.

"ನೋಡಿರಬಹುದು, ಇಲ್ಲದಿರಬಹುದು. ದಳವಾಯಿಗಳೇ - ಇದು ಮಾಮೂಲು ಚಾವಡಿಯ ವ್ಯವಹಾರವಲ್ಲ. ಆದಷ್ಟು ಬೇಗ ನನ್ನನ್ನು ನಿಮ್ಮ ಪ್ರಭುಗಳ ಬಳಿ ಕರೆದುಕೊಂಡು ಹೋಗಿ, ಈ ಚೀಟಿ ತೋರಿಸಿ – "

"ಈ ಊಟದ ಹೊತ್ತಿನಲ್ಲಿ ಅವರನ್ನು ಕರೆದು ಇದನ್ನು ತೋರಿಸಿದರೆ ಬಾರುಕೋಲು ಏಟು ಬಿದ್ದಾವು - ಈ ಚಿಲ್ಲರೆ ಕೆಲಸಕ್ಕೆ ಬೇರೆ ಜನ ಇಲ್ಲವೇ ಎಂದು. ಅದೇನು ಹೇಳುವುದಿದೆಯೋ - ನನ್ನ ಮುಂದೆ ಹೇಳು. ಅಂಥ ಮುಖ್ಯ ವಿಷಯವಾಗಿದ್ದರೆ, ಏನು ಮಾಡಬೇಕೋ ಮಾಡುತ್ತೀನಿ."

"ಮುಂದಿನದು ನಿಮ್ಮಿಷ್ಟ, ನೀವೆಷ್ಟು ತಡಮಾಡಿದರೆ, ಬಳಿಕ ನೀವೇ ಅಷ್ಟೂ ಪಶ್ಚಾತ್ತಾಪ ಪಡಬೇಕಾಗುತ್ತೆ. ಇದು ನಿಮ್ಮ ಮಾಮೂಲಿ ಕೊತ್ವಾಲಚಾವಡಿಯ ವ್ಯವಹಾರವಲ್ಲ. ಈಗಲೇ ಕರೆದುಕೊಂಡು ಹೋದರೆ ಎರಡು ಕೆಟ್ಟಮಾತು ಕೇಳಬಹುದು - ತಪ್ಪಾದರೆ, ತಡವಾದರೆ ನಿಮ್ಮ ತಲೆ ಉಳಿಯುವುದಿಲ್ಲ."

-ಕೊಂಚವೂ ಅಳುಕದೆ ಉತ್ತರ ಕೊಟ್ಟ ಬಂದಿದ್ದಾತ.

"ದಳವಾಯಿಗಳು, ಪ್ರಧಾನಿಗಳು...."

"ಕೂಡದು. ನಿಮ್ಮ ಪ್ರಭುಗಳೇ ಹೇಳಿ ಅನ್ನುವವರೆಗೂ, ನಾನಿಲ್ಲಿಗೆ ಬಂದಿರುವುದೂ ನಿಮಗೆ ಇಲ್ಲಿರುವ ನಿಮ್ಮಾಳುಗಳಿಗೆ - ನಿಮ್ಮ ಪ್ರಭುಗಳಿಗೆ ವಿನಾ ಮತ್ತಾರಿಗೂ ತಿಳಿಯ ಕೂಡದು"

-ಕಾಶಣ್ಣನಾಯಕನಿಗೆ ಕೆನ್ನೆಗೆ ಹೊಡೆದಂತೆ ಹೇಳಿದ ಬಂದಿದ್ದಾತ.

'ಭಾಳ ಪೊಗರು ಮಾಡ್ತಾನೆ. ನಾಲ್ಕೇಟು ಹುಣಿಸೆಬರಲಿನಲ್ಲಿ ಬಿಗಿಸಲೇ -'

-ಎಂದು ಮನಸ್ಸಿನಲ್ಲಿ ಹೇಳಿಕೊಳ್ಳುತ್ತಲೇ, ಕಣ್ಣನೋಟದಲ್ಲೇ ಬಂದವನ ಬೆಲೆಕಟ್ಟುವಂತೆ ತೂಗಿನೋಡುತ್ತಾ-

'ಯುದ್ಧ ಕಾಲ. ಏನಿದೆಯೋ - ನಾನೇಕೆ ತಡಮಾಡಲಿ. ತಪ್ಪಾದರೆ ಆಮೇಲೆ ಒಂದಕ್ಕೆ ನಾಲ್ಕರಷ್ಟು ತೀರಿಸಿಕೊಂಡರಾಯಿತು' – ಎಂದು ಅಂದಾಜುಮಾಡಿ –

"ಮೈತೊಗಲು ತಗಡು ಮಾಡಿಕೋ"

- ಎಂದಷ್ಟೇ ಹೇಳಿ, ತನ್ನಾಳುಗಳಿಗೆ 'ಕುದುರೆ ತನ್ನಿ' ಎಂದು ಹೇಳಿದ ಕಾಶಣ್ಣನಾಯಕ.

"ನನ್ನ ಕುದುರೆಯನ್ನೂ ತರಲು ಹೇಳಿ. ಹಾಗೇ ಅದರ ಜೀನೆಲ್ಲಾ ಕಿತ್ತು ಹರಿದು ತಡಕಾಡಿದ್ದಾರೆ- ನನ್ನ ಬಟ್ಟೆಯನ್ನು ಶೋಧಿಸುವುದರ ಜೊತೆಗೆ. ಈಗ ಬರೀ ಕುದುರೆಯೊಂದನ್ನು ತಂದರೂ ಸಾಕು, ನಾನು ಹಿಂತಿರುಗುವ ವೇಳೆಗೆ ಹೊಸ ಜೀನು ತಂದಿರಲು ಹೇಳಿ"

- ಎಂದ. ಬಂದಿದ್ದಾತ, ತನ್ನ ಹೆಗಲ ಮೇಲಿದ್ದ ಕೈವಸ್ತ್ರವನ್ನು ತೆಗೆದು. ಅದನ್ನು ತನ್ನ ನೆತ್ತಿ, ಮುಖ ಸ್ಪಷ್ಟವಾಗಿ ಕಾಣಿಸದಂತೆ, ನೆತ್ತಿಯಿಂದ ಕೆನ್ನೆಯ ಮೇಲೆ ಒಂದು ಗಡ್ಡದ ಕೆಳಗೆ ಗಂಟು ಬರುವಂತೆ ಕಟ್ಟಿ.

ಆತ ಆ ಕೆಲಸ ಮಾಡುವ ವೇಳೆಗೆ, ಕೊತ್ವಾಲಚಾವಡಿಯ ಆಳುಗಳು ಬಂದು 'ಕುದುರೆಗಳು ಸಿದ್ಧವಾಗಿವೆ' ಎಂದು ಹೇಳಿದರು.

ದಳವಾಯಿ ಕಾಶಣ್ಣನಾಯಕ ಬಂದಿದ್ದಾತನೊಂದಿಗೆ ಅಶ್ವಾರೋಹಿಯಾಗಿ –

"ನಾವು ಹೇಳುವವರೆಗೂ ಈ ವಿಷಯ ಬೇರಾರಿಗೂ ತಿಳಿಯಕೂಡದು"

- ಎಂದು ಆಳುಗಳಿಗೆ ಕಟ್ಟಪ್ಪಣೆ ಮಾಡಿ, ಮೇಲುದುರ್ಗದತ್ತ ಕುದುರೆಯನ್ನು ತಿರುಗಿಸಿದ.

* * *

"ಕತ್ತಿ ಹಿಡಿದ ತುಂಡುತೋಳು ಚಿತ್ರ ಹಿಡಿದುಕೊಂಡು ಬಂದಾತ ತಮ್ಮನ್ನೇ ನೋಡಲು ಬಂದಿದ್ದಾನೆ. ಯಾರು, ಎತ್ತ - ನಿಮ್ಮ ಮುಂದಲ್ಲದೆ, ಬೇರಾರ ಮುಂದೂ ಹೇಳುವುದಿಲ್ಲ ಎನ್ನುತ್ತಾನೆ. ಮುಂದೇನು ಮಾಡಬೇಕೋ – ಪ್ರಭುಗಳು ಅಪ್ಪಣೆ ಮಾಡಬೇಕು"

-ಎಂದ ದಳವಾಯಿ ಕಾಶಣ್ಣನಾಯಕನ ಮಾತು ಕೇಳಿ, 'ಇದೆಲ್ಲಿಯ ಚಿತ್ರ, ಏನಿದರ ಅರ್ಥ ?' – ಎಂದು ಹಾಗೇ ಚಿಂತಿಸಿದ ಮದಕರಿನಾಯಕ.

ಎರಡು ಕ್ಷಣ ಕಳೆದ ಬಳಿಕ, ಏನೋ ಹೊಳೆದು, ಅವಸರವಿದ್ದ ಧ್ವನಿಯಲ್ಲಿ –

"ಕೂಡಲೇ ಆತನನ್ನಿಲ್ಲಿಗೆ ಬರಮಾಡಿ" - ಎಂದ, ಮದಕರಿನಾಯಕ.

ನಾಯಕರ ಅಪ್ಪಣೆಯಂತೆ ಕಾಶಣ್ಣನಾಯಕ, ಹೊರಗೆ ನಿಲ್ಲಿಸಿದ್ದ ಬಂದಾತನನ್ನು ಒಳಗೆ ಕರೆತಂದ. ಬರುತ್ತಿದ್ದ ಹಾಗೇ ತನಗೆ ನಮಸ್ಕರಿಸಿದ ಆ ವ್ಯಕ್ತಿಯನ್ನು ನಖಶಿಖಾಂತವಾಗಿ ನೋಡಿ –

"ಉದ್ದಾನಯ್ಯ"

-ಎಂದು ಕೇಳಿದ ಮದಕರಿನಾಯಕನಿಗೆ –

"ರಂಗನಾಥ" – ಎಂದು ಉತ್ತರ ಕೊಟ್ಟ ಬಂದಿದ್ದಾತ.

ಆ ಉತ್ತರವನ್ನು ಕೇಳಿದ ಕೂಡಲೇ, "ಕುಳಿತುಕೊಳ್ಳಿ" ಎಂದು ಬಂದಿದ್ದಾತನಿಗೆ ಹೇಳಿ, ದೊರೆಗಳು ಏನು ಹೇಳುತ್ತಾರೋ ಎಂದು ಕಾದು ನಿಂತಿದ್ದ ಕಾಶಣ್ಣನಾಯಕನಿಗೆ –

"ಬಾಗಿಲು ಮುಚ್ಚಿ, ಹೊರಗೆ ನೀವೇ ಕಾವಲು ನಿಲ್ಲಿ"

- ಎಂದು ಹೇಳಿ, ಕಾಶಣ್ಣನಾಯಕನನ್ನು ಹೊರಗೆ ಕಳಿಸಿ-

"ಸರ್ದಾರ್‌ಖಾನರು ಕ್ಷೇಮವೇ ?" – ಎಂದು ಕೇಳಿದ ಮದಕರಿನಾಯಕ.

"ಕ್ಷೇಮವಾಗಿದ್ದಾರೆ. ನಿಮಗೊಂದು ಅವಸರದ ವಾರ್ತೆ ಕಳಿಸಿದ್ದಾರೆ. ಅವಿನಯವನ್ನು ಕ್ಷಮಿಸಬೇಕು"

- ಎಂದು ಹೇಳಿ, ಪಗಡಿಯನ್ನು ತೆಗೆದು ಬದಿಗಿರಿಸಿ, ತೊಟ್ಟ ಅಂಗಿಯನ್ನು ಬಿಚ್ಚಿ. ಅದನ್ನು ಹಿಂದುಮುಂದುಮಾಡಿ, ಅದರ ಒಳಭಾಗದಲ್ಲಿದ್ದ ಜೇಬನ್ನು, ಟಾಕುಹಾಕಿ ಹೊಲಿದ ದಾರವನ್ನು ಆದಷ್ಟು ಬೇಗ ತೆಗೆದು, ಜೇಬಿನಷ್ಟು ಅಗಲವಿದ್ದ ಬಟ್ಟೆಯನ್ನು ತೆಗೆದು, ಮದಕರಿನಾಯಕನ ಕೈಗಿತ್ತು–

"ತಾವೇ ಓದಿಕೊಳ್ಳಬಹುದು" – ಎಂದ ಬಂದಿದ್ದಾತ.

ಆ ಬಟ್ಟೆಯ ಮೇಲೇ ಬರೆದಿದ್ದ ಅಕ್ಷರಗಳನ್ನು ನಿಧಾನವಾಗಿ ಓದುತ್ತಾ –

"ನಮ್ಮ ಕೊತ್ವಾಲ ಚಾವಡಿಯವರು ನಿಮ್ಮ ಶೋಧ ಮಾಡಲಿಲ್ಲವೇ ?" – ಎಂದು ಕೇಳಿದ ಮದಕರಿನಾಯಕ.

"ಮಾಡದೆ ಬಿಡುತ್ತಾರೆಯೇ - ನನ್ನ ನೆತ್ತಿಯ ಕೂದಲನ್ನೂ ಎಣಿಸಿ ನೋಡಿದರು. ಜೇಬುಗಳನ್ನೆಲ್ಲಾ ತಡಕಾಡಿ ನೋಡಿದರು. ಅವರು ಶೋಧಿಸುವ ಮೊದಲೇ ಅವರ ಕೈಗೆ ನಾನು ತಂದದ್ದನ್ನು ಕೊಟ್ಟಿದ್ದೆನಲ್ಲಾ. ಜೇಬಿನಲ್ಲಿ ಕಾಗದವಿದ್ದುದು ತಿಳಿಯುತ್ತಿತ್ತು. ಆದರೆ ಜೇಬಿನ ಹೊಲಿಗೆಯನ್ನೇ ಬಿಚ್ಚಿ ನೋಡಬೇಕೆಂಬಷ್ಟು ಸೂಕ್ಷ್ಮ ತಿಳಿಯಲಿಲ್ಲ." – ನಗುತ್ತಾ ಹೇಳಿದ ಬಂದಿದ್ದಾತ.

"ನಮ್ಮ ಕೊತ್ವಾಲ ಚಾವಡಿಯವರು ಕಲಿಯಬೇಕಾದದ್ದು ಇನ್ನೂ ಬಹಳ ಇದೆ. ನೀವಾರೆಂದು ಪತ್ರದಿಂದ ತಿಳಿಯಿತು. ಮುಂದಿನ ಮಾತು ಹೇಳಿ"

-ಎಂದ ಮದಕರಿನಾಯಕ, ಕ್ಷಣಕಾಲ ನಕ್ಕು, ಬಳಿಕ ಗಂಭೀರವಾಗಿ.

"ಹೈದರಾಲಿಯವರು ತಮ್ಮ ಬಗ್ಗೆ ಬಹಳ ಆಕ್ರೋಶದಿಂದಿದ್ದಾರೆ. ನಿಮ್ಮಲ್ಲಿ ಅವರಿಗೆ ನಂಬಿಕೆ ತಪ್ಪಿ ಹೋಗಿದೆ. ಮರಾಠರ ಮೇಲಿನ ಯುದ್ಧ ಕಾರ್ಯವಿಲ್ಲದಿದ್ದಲ್ಲಿ, ಅವರ ಸೇನೆ ಈಗ ನಿಮ್ಮ ಮೇಲೇ ನುಗ್ಗುತ್ತಿತ್ತು. ಆದರೆ ನವಾಬರಿಗೆ ಈಗ ತಮ್ಮ ಸೇನೆಯನ್ನು ಇಲ್ಲಿ ಬಳಸಲು ಇಚ್ಛೆಯಿಲ್ಲ. ಮರಾಠರ ನಕಲಿ ಪೇಶ್ವೆ ರಘೋತ್ತಮರಾಯರು ಹೈದರಾಲಿಯವರಿಗೆ ಕೃಷ್ಣಾನದಿಯ ದಕ್ಷಿಣಭಾಗವನ್ನೆಲ್ಲಾ ಒಪ್ಪಿಸಿಕೊಟ್ಟಿರುವುದು ತಮಗೂ ತಿಳಿದಿರಬಹುದು."

"ತಿಳಿದಿದೆ."

"ಈಗ. ಹಿಂದೆ ತಮ್ಮದಾಗಿದ್ದು. ಈಗ ಮರಾಠಾ ಸರ್ದಾರರ ವಶದಲ್ಲಿರುವ ಸೀಮೆಯನ್ನೆಲ್ಲಾ ವಶಪಡಿಸಿಕೊಂಡ ಬಳಿಕ, ನಿಮ್ಮ ಯೋಗಕ್ಷೇಮ ವಿಚಾರಿಸಿಕೊಳ್ಳುವುದು ಅವರ ಹಂಚಿಕೆ. ಹಾಗೆಂದು ಅಲ್ಲಿಯವರೆಗೂ ನಿಮ್ಮನ್ನು ಸಡಿಲವಾಗಿ ಬಿಡಲೂ ಅವರಿಗೆ ಇಷ್ಟವಿಲ್ಲ."

"ಏನು ಮಾಡಬೇಕು ಎಂದಿದ್ದಾರೆ ?"

"ನಿಮ್ಮ ಆಸ್ಥಾನಕ್ಕೆ, ಉಭಯತಾಪಿ ವಿಷಯ ತಿಳಿಯುವ ನೆಪದಮೇಲೆ, ಗೂಢಚಾರರನ್ನು, ಅಂಚೆಹರಿಕಾರರ ರೂಪದಲ್ಲಿ ಕಳಿಸಬೇಕೆಂದು ಮಾಡಿದ್ದಾರೆ. ಯುದ್ಧದ ವೆಚ್ಚಕ್ಕಾಗಿ ಹಣ ಕೇಳಲು. ನವಾಬರ ಖಾಸಾ ಭಾವಮೈದುನರಾದ ಮೊಕ್ದುಂ ಸಾಹೇಬರು ಬರಲಿದ್ದಾರೆ. ನೀವು ಅಂಚೆಹರಿಕಾರರನ್ನು ಇಡಲು ಒಪ್ಪದಿದ್ದರೆ, ಹಣಸಹಾಯ ಮಾಡಲು ತಪ್ಪಿದರೆ, ಈಗ ಸೀರ್ಯಕ್ಕೆ ಮುತ್ತಿಗೆ ಹಾಕಿರುವ ಭಾರೀ ಸೇನೆಯೇ ಅಲ್ಲದೆ, ಮತ್ತಷ್ಟು ಸೇನೆ ಜಮಾವಣೆ ಮಾಡಿ, ದುರ್ಗಕ್ಕೆ ಮುತ್ತಿಗೆ ಹಾಕಬೇಕು ಎಂದು ಅವರ ಲೆಕ್ಕಾಚಾರ. ನಮ್ಮ ಆಸ್ಥಾನಕ್ಕೆ ತಿಳಿದಿರುವ ಪ್ರಕಾರ 'ಈಗ ನಿಮ್ಮಲ್ಲಿ ಹೈದರಾಲಿಯವರನ್ನು ಎದುರಿಸುವಷ್ಟು ಸೇನಾಬಲವಿಲ್ಲ. ಅಂತಃಕಲಹದಲ್ಲಿರುವ ಮರಾಠರಿಂದಲೂ ಸಹಾಯ ಸಿಗದಿರಬಹುದು.' ಈ ಎಲ್ಲಾ ಯೋಚನೆ ಮಾಡಿ ನವಾಬರು ಈ ತಂತ್ರ ಹೂಡಿದ್ದಾರೆ - ಈ ಸಮಯದಲ್ಲಿ ತಾವು ದುಡುಕಬಾರದು. ಸ್ವಲ್ಪ ನಯವಾಗಿ ವರ್ತಿಸಿ. ಅಷ್ಟೋ ಇಷ್ಟೋ ಕೊಟ್ಟು ಮೊಕ್ದುಂ ಸಾಹೇಬರನ್ನು ಸಾಗಹಾಕಿ. ಅವರು ಕರೆತರುವ ಅಂಚೆಹರಿಕಾರರ ಬಗ್ಗೆ ಎಚ್ಚರದಿಂದಿದ್ದು, ನಿಮ್ಮ ದುರ್ಗ ಉಳಿಸಿಕೊಳ್ಳುವ ಬಗ್ಗೆ ಹುಷಾರಿಯಿಂದ ಇರಬೇಕು - ಮುಂದೆ ಸಮಯ ಸಿಕ್ಕಾಗ, ಹೆಚ್ಚಿನ ವಿಷಯ ತಿಳಿಯುತ್ತದೆ - ಇಷ್ಟು ಸರ್ದಾರ್‌ಖಾನರು ತಮಗೆ ಕಳಿಸಿರುವ ಸಂದೇಶ."

ಬಂದಾತ ಹೇಳಿದ ಒಂದೊಂದು ಮಾತನ್ನೂ, ಮೈಯೆಲ್ಲಾ ಕಿವಿಯಾಗಿ ಕೇಳಿದ. ಕೇಳ ಕೇಳುತ್ತಾ – ಮದಕರಿನಾಯಕನ ಮುಖ ಗಂಭೀರವಾಗಿ-

"ಸರ್ದಾರ್‌ಖಾನರಿಗೆ ನಾವು ಮಾಡಿದ ಅಲ್ಪ ಉಪಕಾರಕ್ಕೆ ಪ್ರತಿಯಾಗಿ ಬಹುದೊಡ್ಡ ಉಪಕಾರ ಮಾಡಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆ ತಿಳಿಸಿ. ಹಾಗೇ - ಇದು ನಮ್ಮ ಕೃತಜ್ಞತೆಯ ಕುರುಹಾಗಿ ಸರ್ದಾರ್‌ಖಾನರಿಗೆ ಕೊಡಿ"

- ಎಂದು ಹೇಳಿ, ತನ್ನ ಕತ್ತಿನಲ್ಲಿದ್ದ ಮೂರೆಳೆಯ ಮುತ್ತಿನ ಹಾರವನ್ನು ತೆಗೆಯಲು ಕೈ ಹಾಕಿದ. ಬಂದಾತ ಅದನ್ನು ತಡೆದು –

"ಈ ಕೃತ್ರಿಮ ರಾಜಕಾರಣದಲ್ಲಿ ನೀವಿನ್ನೂ ಪಳಗಿಲ್ಲ ಎಂದು ಸರ್ದಾರ್‌ಖಾನರು ಹೇಳಿದರು. ಅದು ನಿಜ. ಆ ಹಾರ ನಿಮ್ಮ ಬಳಿಯೇ ಇರಲಿ. ನಮ್ಮ ಕೊರಲಿಗೆ ಉರುಲಾಗುವುದು ಬೇಡ" – ಎಂದ.

“ನಮ್ಮವರಾರೂ ಮತ್ತೆ ನಿಮ್ಮನ್ನು ಶೋಧನೆ ಮಾಡುವುದಿಲ್ಲ.”

“ಅದಿರಬಹುದು. ನಾನು ಮತ್ತೆ ಸಿರಾಕ್ಕೆ ಹಿಂದಿರುಗಬೇಕಲ್ಲ. ಅಲ್ಲಿಯ ಜಾಸೂದ ದಳದ ಸರ್ದಾರ ಹೈದರಾಲಿಯವರ ಕೈಯಲ್ಲೇ ಪಳಗಿದ ಖದೀಮ. ಸೇನೆಯಿಂದ ಏನೋ ನೆಪಮಾಡಿ ಹೊರಬಂದ ನಾವು, ಮತ್ತೆ ಸೇನೆಗೆ ಹಿಂದಿರುಗುವಾಗ, ನಮ್ಮನ್ನು ಶೋಧಿಸದೆ ಒಳಗೆ ಬಿಡುವುದಿಲ್ಲ. ಅವರ ಕಣ್ಣಿಗೆ ಈ ಹಾರ ಬಿದ್ದರೆ, ನನ್ನ ಜೀವಕ್ಕೇ ಸಂಚಕಾರ ಬರುತ್ತದೆ. ಆದ್ದರಿಂದ ನೀವೀಗ ಏನೂ ಕೊಡಬೇಡಿ. ಆ ಜೇಬಿನ ಬಟ್ಟೆಯನ್ನು ನಿಮ್ಮವರಿಗೂ ತಿಳಿಯದಂತೆ ಸುಟ್ಟುಬಿಟ್ಟು, ಆ ’ಮೊಂಡುಕೈ’ ಕಾಗದ ತಂದವನನ್ನು ನೇರವಾಗಿ ನಿಮ್ಮ ಬಳಿ ಬರಲು, ಕೊತ್ವಾಲಚಾವಡಿಯ ದಳವಾಯಿಗಳಿಗೆ ಹೇಳಿ. ಅವರೂ ಅಷ್ಟೆ - ದಳವಾಯಿಗಳು, ಪ್ರಧಾನಿಗಳು ಅಂತ ಅವರಿವರ ಮುಂದೆ ಈ ತುಂಡುಗೈ ರಹಸ್ಯ ಹೇಳುವುದು ಬೇಡ. ನಾವು ನಾಲ್ವರು - ಅಂದರೆ - ನಾನು, ಸರ್ದಾರ್‌ಖಾನರು, ನೀವು, ನಿಮ್ಮ ಕೊತ್ವಾಲಚಾವಡಿಯ ದಳವಾಯಿಗಳು ಇಷ್ಟು ಜನಕ್ಕೆ ಮಾತ್ರ ತಿಳಿದಿರಲಿ. ಹಾಗೆಂದು ಸರ್ದಾರ್‌ಖಾನರೇ ಹೇಳಿದ್ದಾರೆ.”

“ನಿಮ್ಮಷ್ಟು ಮುಂಜಾಗರೂಕತೆ ನಮಗಿಲ್ಲ. ಸರ್ದಾರ್‌ಖಾನರು ಹೇಳಿದುದು ನಿಜ. ಈ ರಾಜಕೀಯ ಚದುರಂಗದಾಟದಲ್ಲಿ ನಾವು ತಿಳಿಯಬೇಕಾದ್ದು ಬಹಳ ಇದೆ. ಆಯಿತು -ಇನ್ನು ಮುಂದೆ ಉಡುಗೊರೆ ಕೊಡುವ ದುಡುಕುತನ ಮಾಡುವುದಿಲ್ಲ. ನಿಮ್ಮ ನವಾಬರು ನಿಮ್ಮನ್ನೆಲ್ಲಾ ಬಹಳ ಚೆನ್ನಾಗಿ ತಯಾರು ಮಾಡಿದ್ದಾರೆ” - ಎಂದ ಮದಕರಿನಾಯಕ.

“ನವಾಬರು ಎಂದರೆ ಏನೆಂದು ನಿಮಗಿನ್ನೂ ಅರ್ಥವಾಗಿಲ್ಲ. ಕೃತ್ರಿಮ ರಾಜಕಾರಣದ ರಕ್ತದ ಮಡುವಿನಲ್ಲಿ ಮರಿಮೀನುಗಳನ್ನೆಲ್ಲಾ ತಿಂದೇ ಬೆಳೆದಿರುವ ಹುಲಿಮೀನು. ಅಂಥವರೊಂದಿಗೆ ವಿರಸ ಕಟ್ಟಿಕೊಂಡಿದ್ದೀರ. ನೀವು ಎಷ್ಟು ಎಚ್ಚರದಿಂದಿದ್ದರೂ ಸಾಲದು. ನಿಮ್ಮ ತೋಟದಲ್ಲಿ ಹೂವು ಯಾವುದು, ಮುಳ್ಳು ಯಾವುದು ಎಂದು ಈಗಿನಿಂದಲೇ ಶೋಧಿಸುವಂತೆ ನಿಮ್ಮ ಕೊತ್ವಾಲ ಚಾವಡಿಯ ದಳವಾಯಿಗಳಿಗೆ ಹೇಳಿ, ಮೊದಲು ಅವರು ಹೇಗೆ - ನಿಮ್ಮ ನಂಬಿಕೆಗೆ ತಕ್ಕವರೇ ?” – ಎಂದು ಕೇಳಿದ, ಬಂದಿದ್ದಾತ.

“ಅವರಲ್ಲಿ ನಮಗೆ ಎಳ್ಳಷ್ಟೂ ಅಪನಂಬಿಕೆಯಿಲ್ಲ.”

“ಸದ್ಯಕ್ಕೆ – ಎಂದಷ್ಟೇ ಹೇಳಿ, ಯಾರ ಬಗ್ಗೆಯೂ, ಯಾವುದರ ಬಗ್ಗೆಯೂ ಕೂಡಲೇ ಅಂತಿಮ ತೀರ್ಮಾನ ತೆಗೆದುಕೊಳ್ಳಬೇಡಿ; ಎಂದೂ. ನಾನೂ ಅವರನ್ನು ಸ್ವಲ್ಪ ಪರೀಕ್ಷಿಸಿ ನೋಡಿ, ಮುಂದಿನ ಬಾರಿ ಬಂದಾಗ ಹೇಳುತ್ತೇನೆ. ನನ್ನನ್ನು ನಿಮ್ಮ ಗಡಿಯಾಚೆಯವರೆಗೂ ಕಳಿಸಿ ಬನ್ನಿ ಎಂದು ಅವರಿಗೇ ಹೇಳಿ, ನನ್ನೊಂದಿಗೆ ಕಳಿಸಿ. ನಾನೂ ಅವರ ಹತ್ತಿರ ಮಾತಾಡಿ, ಆತನನ್ನು ನಂಬಬಹುದೋ, ಬಿಡಬಹುದೋ ಎಂದು ಸುದ್ದಿ ನಿಮಗೆ ತಿಳಿಸುತ್ತೇನೆ.”

"ಹೇಗೆ - ?"

"ಆತ ನಾವು ನಂಬಬಹುದು ಎನಿಸಿದರೆ, ಮರೆತ ಮಾತಿನ ಹಾಗೆ 'ಉಂಗುರ ಸಿಕ್ಕಿತು' ಎಂದು ಹೇಳಿಕಳಿಸುತ್ತೇನೆ. ಆ ಮಾತು ಹೇಳಿಕಳಿಸದಿದ್ದರೆ ಅವರನ್ನು ನಂಬಬೇಡಿ"

-ಎಂದು ಹೇಳಿ, ತನ್ನ ಕೈಯಲ್ಲಿದ್ದ ಉಂಗುರವನ್ನು ಪಗಡಿಯ ಪದರಿನೊಳಗೆ ಮುಚ್ಚಿಟ್ಟುಕೊಂಡ, ಬಂದಿದ್ದಾತ.

"ಒಂದುವೇಳೆ ಅವರು ನಮ್ಮ ನಂಬಿಕೆಗೆ ಅನರ್ಹರು ಎಂದು ನಿಮಗೆ ತೋರಿದರೆ -"

"'ನೀವು ಕೊಟ್ಟ ಉಂಗುರ ನಿಮ್ಮಲ್ಲೇ ಮರೆತುಬಂದೆ' ಎಂದು ಹೇಳಿಕಳಿಸುತ್ತೇನೆ. ದೇವರು, ನಿಮ್ಮನ್ನು, ನಿಮ್ಮ ರಾಜ್ಯವನ್ನೂ ಕಾಪಾಡಲಿ"

- ಎಂದು ಹೇಳಿ, ಹೊರಡಲು ಸಿದ್ಧನಾಗಿ ನಿಂತ.

"ಮಾತುಮಾತಿನಲ್ಲಿ ಹೊರಟೇಬಿಟ್ಟಿರಲ್ಲಾ- ಊಟ ಮಾಡಿ ಹೋಗಿ" – ಎಂದ ಮದಕರಿನಾಯಕ.

"ಅಪರಿಚಿತನಿಗೆ ಅರಮನೆಯಲ್ಲಿ ಊಟ ಹಾಕಿಸಿದರೆ, ಅದೂ ಅನುಮಾನಕ್ಕೆ ಕಾರಣವಾಗುತ್ತದೆ. ಕಾರ್ಯದ ಮೇಲೆ ಬಂದಾಗ, ಎರಡೆರಡು ದಿನ ಉಪವಾಸವಿದ್ದು ನನಗೆ ಅಭ್ಯಾಸವಿದೆ. ಈಗ ನನ್ನನ್ನು ಕಳಿಸಿಕೊಡಿ. ಹಾಗೇ ಕೊತ್ವಾಲಚಾವಡಿಯ ದಳವಾಯಿಗಳಿಗೆ 'ಚಾವಡಿಯಲ್ಲಿ ಊಟ ಹಾಕಿ ಕಳಿಸಿ' ಎಂದು ಹೇಳಿ. ಮುಂದೆ ಸಮಯ ಬಂದಾಗ ತಮ್ಮ ಊಟದ ರುಚಿ ನೋಡುತ್ತೇನೆ. ನಾನಿನ್ನು ಬರಲೆ ?" – ಎಂದು ಕೈಮುಗಿದ ಬಂದಿದ್ದಾತ.

"ನೀವು ನಮ್ಮಲ್ಲಿದ್ದಿದ್ದರೆ ಎಷ್ಟು ಚೆನ್ನಾಗಿತ್ತು. ರಾಜ್ಯ ಉಳಿಯಲು ನಿಮ್ಮಂಥವರು ಬೇಕು. ಆಯಿತು - ಈಗ ಎಲ್ಲದಕ್ಕೂ ನಮ್ಮ ಕೈ-ಬಾಯಿ ಕಟ್ಟಿದಿರಿ. ನೀವು ಹೇಳಿದುದನ್ನು ಕಾಶಣ್ಣನಾಯಕರಿಗೆ ಹೇಳುತ್ತೇನೆ. ಸುಖವಾಗಿ ಹೋಗಿಬನ್ನಿ"

- ಎಂದು ಹೇಳಿ, ಪ್ರೀತಿಯಿಂದ ಆತನ ಕೈ ಕುಲುಕಿ –

"ಹೋಗಲಿ, ನಿಮ್ಮ ಹೆಸರಾದರೂ ಹೇಳಿ ಹೋಗಿ" - ಎಂದು ಕೇಳಿದ ಮದಕರಿನಾಯಕ.

"ಗೂಢಚಾರಿಕೆಯಲ್ಲಿ ಹೆಸರು ಹೇಳುವುದು. ಕೇಳುವುದಕ್ಕಿಂತ ಹೆಚ್ಚಿನ ಅಪಾಯಕಾರಿ. ಆದ್ದರಿಂದ ನನ್ನ ಹೆಸರು ಬೇಡ. ಮುಖ ನೆನಪಿಟ್ಟುಕೊಳ್ಳಿ. ಮುಖದ ಅನುಮಾನ ಬಂದಾಗ ಮೀಸೆ ಎತ್ತಿಸಿ ನೋಡಿ - ಇಲ್ಲೊಂದು ಹುಟ್ಟು ಕಪ್ಪು ಮಚ್ಚೆ ಇದೆ. ಮರೆತೆ - ಮುಂದಿನ ಸಲ ಬಂದಾಗ 'ಕಪ್ಪು ಮಚ್ಚೆ' ಎಂದು ಹೇಳಿಕಳಿಸುತ್ತೇನೆ. ತುಂಡುಕೈನ ಕಾಗದ ತರುವುದಿಲ್ಲ. ಹೀಗೆ ಸಲಕ್ಕೊಂದು ಬಾರಿ ಈ ಸಂಕೇತ ಬದಲಾಗಬೇಕು....ಆ ಜೇಬಿನ ಬಟ್ಟೆಯ ತುಂಡನ್ನು ನೀವೇ ಕೈಯಾರ ಸುಟ್ಟು ಬಿಡಿ. ಬರುತ್ತೇನೆ - ಕೊತ್ವಾಲಚಾವಡಿಯ ದಳವಾಯಿಗಳ ಇದಿರು ನನಗೆ ಹೆಚ್ಚಿನ ಮರ್ಯಾದೆ

ತೋರಿಸಬೇಡಿ. ಇರುವುದೆಲ್ಲಾ ನಿಮ್ಮ ತಲೆಯಲ್ಲಿರಲಿ. ಇನ್ನೊಮ್ಮೆ ನಾನು ಬಂದಾಗ ಯಾರೂ ನನ್ನನ್ನು ನಿಮ್ಮ ಬಳಿ ಕರೆತರಲು ಇಷ್ಟು ತಡಮಾಡಬಾರದು. ಎಷ್ಟು ಆತುರದಲ್ಲಿ ಬಂದು ಹೋಗುವ ಕೆಲಸ ಬೀಳುತ್ತದ್ದೋ ಏನೋ. ನಮ್ಮ ಸರ್ದಾರರ ಜೀವ, ಅದಕ್ಕಿಂತ ಹೆಚ್ಚಾಗಿ ಅವರ ಮರ್ಯಾದೆ ಉಳಿಸಿದಿರಿ. ನಾವು ಅದಕ್ಕಾಗಿ ಆಜೀವಪರ್ಯಂತ ಕೃತಜ್ಞರು. ನಾನಿನ್ನು ಬರುತ್ತೇನೆ – ನಿಮ್ಮ ದಳವಾಯಿಗಳನ್ನು ಕರೆಯಿರಿ" ಎಂದು ಆತ ಹೇಳಿದಾಗ, ಮದಕರಿನಾಯಕ –

"ಸರ್ದಾರ್‌ಖಾನ್‌ರಿಗೆ ನಾವು ಮಾಡಿದ್ದು ಅಲ್ಪ. ಅವರು ಮಾಡಿದ ಉಪಕಾರ ದೊಡ್ಡದು. ಅವರಿಗೆ ನಮ್ಮ ಕೃತಜ್ಞತೆ ತಿಳಿಸಿ. ಸಮಾಧಾನವಾಗಿ ಕುಳಿತು ಮಾತನಾಡುವ ಕಾಲ ಬೇಗ ಬರಲಿ"

- ಎಂದು ಹೇಳಿ, ಹೊರನಿಂತ ಕಾಶಣ್ಣನಾಯಕನನ್ನು ಒಳಬರಲು ಕೈಚಪ್ಪಾಳೆ ತಟ್ಟಿದ.

ಆತ-

ಕಾಶಣ್ಣನಾಯಕ ತನ್ನ ಮನೆಯಿಂದಲೇ ತರಿಸಿಕೊಟ್ಟ ಮುದ್ದೆ ಎಸರನ್ನು, ಪಂಚಭಕ್ಷ್ಯ ಪರಮಾನ್ನದಂತೆ ನಿಧಾನವಾಗಿ, ಚಪ್ಪರಿಸಿ ಊಟ ಮಾಡುತ್ತಾ, ಹಸಿದು ಎದುರಿಗೆ ಕುಳಿತು, ಊಟ ಮಾಡುತ್ತಿದ್ದ ತನ್ನನ್ನು ಕೆಕ್ಕರಗಣ್ಣಿನಿಂದ ನೋಡುತ್ತಿದ್ದ ದಳವಾಯಿ ಕಾಶಣ್ಣನಾಯಕನಿಗೆ –

"ದುರ್ಗದ ದೊರೆಗಳು ಅಂದರೆ ಕೊಡುಗೈ ಕರ್ಣ ಎಂದು ಕೇಳಿದ್ದೆ. ಇಲ್ಲಿ ನೋಡಿದರೆ - 'ಒಂದು ತುತ್ತು ಊಟ ಮಾಡು' ಎಂದು ಕೂಡಾ ಹೇಳಲಿಲ್ಲ. ಇದ್ಯಾವ ಸೀಮೆ ಪಾಳೇಗಾರಿಕೆ ಮಾಡೋ ಲಕ್ಷಣ" - ಎಂದು ತನಗೆ ತಾನೇ ಗೊಣಗಿಕೊಂಡಂತೆ ಹೇಳಿದ.

ಮೊದಲೇ ಹೊಟ್ಟೆ ಹಸಿದು ಕೆರಳಿದ ಕಾಶಣ್ಣನಾಯಕನಿಗೆ, ಯಾವ ಊರ ಪರದೇಶಿಯೋ ತನ್ನ ಪ್ರಭುಗಳನ್ನು ಹೀನಾಯವಾಗಿ ಆಡಿಕೊಂಡದ್ದು ಕೇಳಿ, ನಾಯಕರು 'ಆತ'ನನ್ನು ಕಳಿಸಿದ ರೀತಿಯಿಂದ ಇವನಾರೋ ಮಾಮೂಲಿ ಮನುಷ್ಯನಿರಬೇಕೆಂದು ಊಹಿಸಿ, ಸಿಟ್ಟು ನೆತ್ತಿಗೇರಿ-

"ಲೋ – ಭಿಕಾರಿ ನನ್ನ ಮಗನೇ, ಸುಮ್ಮನೆ ಕೊಟ್ಟಷ್ಟು ತಿಂದು ನಿನ್ನ ಊರ ದಾರಿ ಹಿಡಿ. ಹೆಚ್ಚು ಮಾತಾಡಿದರೆ, ಆ ಮಾತಾಡಿದ ನಾಲಗೆಯನ್ನು ಕತ್ತರಿಸಿ, ಊಟಕ್ಕೆ ಉಪ್ಪಿನಕಾಯಿ ಮಾಡಿಕೊಡಬೇಕಾದೀತು" – ಎಂದು ಗದರಿಸಿದ.

"ದೊರೆಗೆ ತಕ್ಕ ಕೊತ್ವಾಲರು ನೀವು. ಸದ್ಯ ಮುದ್ದೆಯ ಜೊತೆಗೆ ಎಸರು ಕೊಟ್ಟೆಯಲ್ಲ. ದೊಡ್ಡ ಉಪಕಾರ ಮಾಡಿದಿರಿ. ಇನ್ನೊಂದು ಸಣ್ಣ ಉಪಕಾರ ಮಾಡ್ತೀರಾ ?" – ಎಂದು ಕೇಳಿದ 'ಆತ.'

"ಏನು ?"

"ಊಟ ಆದಮೇಲೆ ಎರಡು ಗಳಿಗೆ ನಿದ್ದೆ ಮಾಡ್ತೀನಿ. ಅಷ್ಟು ಹೊತ್ತಿಗೆ ನೀವೂ ಉಂಡು ಬನ್ನಿ, ಹಾಗೇ ನಿಮ್ಮ ದುರ್ಗದ ವಿಷಯ ಬಹಳ ಕೇಳಿದೇನೆ. ಒಂದು ಸುತ್ತು ಊರು ತೋರಿಸಿ, ಕಳಿಸಿಕೊಡಿ" – ಎಂದು ಕೇಳಿದ.

"ಅದೆಲ್ಲಾ ಆಗದ ಮಾತು. ಬೇಗ ಉಂಡು ಮುಗಿಸು. ನಿನ್ನ ಮೊದಲು ಗಡಿ ದಾಟಿಸಿ ಬಂದು ಆಮೇಲೆ ಬೇರೆ ಕೆಲಸ."

"ಹಾಗಂತ ನಿಮ್ಮ ದೊರೆಗಳು ಹೇಳಿದ್ದಾರಾ ?"

"ದೊಡ್ಡೋರ ಮಾತು ನಿನಗೆ ಬೇಡ. ಕೆಲಸ ನೋಡು. ನಿದ್ದೆ ಬೇಕಾದರೆ, ನೀನು ಬಂದ ದಾರೀಲಿ ಸಾಲುಮರ ಬೇಕಾದಷ್ಟಿದೆ. ಬೇಕಾದಷ್ಟು ಮಲಗಿ ನಿದ್ದೆ ಮಾಡು. ಈಗ ನೀನು ತಿಂದದ್ದು ಮುಗೀತೋ ಇಲ್ಲವೋ ಅಷ್ಟು ಹೇಳು."

"ಊರು ತೋರಿಸೋದಿಲ್ಲವಾ ?"

"ಬೇಗ ಊಟ ಮಾಡಿ ಮುಗಿಸದಿದ್ದರೆ, ಈ ಊರಲ್ಲ, ನಿನ್ನ ಊರಿನ ಮುಖಾನೂ ನೀನು ನೋಡಲ್ಲ...."

- ಎಂದಷ್ಟೇ ಹೇಳಿ –

"ಕುದುರೆಗಳು ಸಿದ್ಧವಾಗಿದೆಯಾ ?"

- ಎಂದು ಹೊರನಿಂತ ಕಾವಲುಭಟರನ್ನು ಕೇಳಿ –

"ತಿಂದದ್ದು ಸಾಕಾಗಿದ್ದರೆ ಮೇಲೇಳು."

- ಎಂದು ಹೊರಡಲು ಸಿದ್ಧನಾಗಿ ಎದ್ದುನಿಂತ ಕಾಶಣ್ಣನಾಯಕ.

"ಏನೋ ದೊಡ್ಡ ಜನ, ದೊಡ್ಡ ದೊರೆ, ದೊಡ್ಡ ಊರು ಅಂತ ನಂಬಿಕೊಂಡು ಬಂದದ್ದು ನನ್ನ ತಪ್ಪಾಯಿತು"

- ಎಂದು ಗೊಣಗುತ್ತಲೇ ಹೇಳಿ, ತಣಿಗೆಯಲ್ಲೇ ಕೈ ತೊಳೆದು, ಉಟ್ಟ ಧೋತರದ ಅಂಚಿನಲ್ಲಿ ಕೈ ಒರೆಸಿಕೊಳ್ಳುತ್ತಾ –

"ಹೊಟ್ಟೆತುಂಬ ಮುದ್ದೆ ಹಾಕಿ, ಒಂದು ಗಳಿಗೆ ಮಲಗಲಿಕ್ಕೂ ಬಿಡಲಿಲ್ಲ – ತಗಣಿ ಜಾತಿ ಜನ"

- ಎಂದು ಹೇಳಿ, ಆತ, ಬದಿಗಿರಿಸಿದ್ದ ತನ್ನ ಪಗಡಿಯನ್ನು ನೆತ್ತಿಗೇರಿಸಿ –

"ಇಲ್ಲಿ ಹೀಗಾಡ್ತೀರಲ್ಲಾ, ನಮ್ಮ ಊರಿಗೆ ಬಾ. ಹೊರಗಿನಿಂದ ಬಂದೋರನ್ನ ಹೇಗೆ ನೋಡಿಕೋಬೇಕು ಅನ್ನೋದನ್ನ ಕಲಿಸಿಕೊಡುತ್ತೀವಿ" - ಎಂದು ಹೇಳಿ, ಚಾವಡಿಯಿಂದ ಹೊರಬಂದ.

ಆ ವೇಳೆಗೆ ಕುದುರೆಗಳು ಸಿದ್ಧವಾಗಿದ್ದವು. ಇಬ್ಬರೂ ಕುದುರೆಗಳ ಮೇಲೆ ಕುಳಿತರು. 'ಆತ' ಅತ್ತಿತ್ತ ನೋಡಲೂ ಅವಕಾಶಕೊಡದಂತೆ ವೇಗಗತಿಯಲ್ಲಿ ಕುದುರೆಯನ್ನು ನಡೆಸಿ, ರಂಗಯ್ಯನ ಬಾಗಿಲನ್ನು ದಾಟಿ, ಅಷ್ಟು ದೂರ ಹೋದ ಬಳಿಕ, ಆತನೇ, ಮೌನವಾಗಿದ್ದ ಕಾಶಣ್ಣನಾಯಕನನ್ನು ಕೆಣಕಿ –

"ನೀವು ಕೊತ್ವಾಲ ಚಾವಡಿ ದಳವಾಯಿಗಳಲ್ಲವಾ ?" – ಎಂದು ಕೇಳಿದ.

"ಹೂಂ."

- ಗೂಳಿ ಗುಟುರೆಹಾಕುವನಂತೆ ಹೇಳಿದ ಕಾಶಣ್ಣನಾಯಕ.

"ನೀವು ನನಗೆ ಹಾಕಿಸಿದ ಊಟ ನಿಮ್ಮ ಮನೇದೋ, ನಿಮ್ಮ ಆಳಿನ ಮನೇದೋ?" ಎಂದು ಕೇಳಿದ, ಆತ.

"ಏಕೆ - ಎಸರು ರುಚಿಯಾಗಿರಲಿಲ್ಲವೇ ?"

"ರುಚಿಯಾಗಿತ್ತು. ಅದಕ್ಕೇ ಕೇಳಿದೆ."

"ನಮ್ಮ ಮನೆಯದೇ ಊಟ."

"ಅಂದರೆ - ಕೊತ್ವಾಲಚಾವಡಿ ದಳವಾಯಿಗಳು ಮುದ್ದೆ ಎಸರಿನ ಊಟ ಮಾಡುತ್ತೀರಾ? ನಮ್ಮ ಸೀಮೆಗೆ ಬಂದು ನೋಡಿ, ದಿನವೂ ಪಂಚಭಕ್ಷ್ಯ ಪರಮಾನ್ನದ ಊಟ ಮಾಡುತ್ತಾರೆ. ಪ್ರಧಾನಿಗಳಿಗೆ ಕೊಟ್ಟಷ್ಟು ಸಂಬಳ ಕೊಡುತ್ತಾರೆ. ನಮ್ಮಲ್ಲಿ ತಿರುಪೆಯವರಿಗೂ ಇಂಥ ಊಟ ಹಾಕೊಲ್ಲ."

-ಕಾಶಣ್ಣನಾಯಕನನ್ನು ಹಂಗಿಸುವಂತೆ ಹೇಳಿದ ಆತ.

ಆ ಮಾತಿಗೆ ಪ್ರತ್ಯುತ್ತರ ಕೊಡದೆ, ಕುದುರೆಯ ಮೇಲೆ ಕುಳಿತ ಆತನ ಮುಖ ನೋಡಿ-

"ನೋಡು- ಮಾತುಮಾತಿಗೆ ನಿಮ್ಮೂರಿನ ಬಡಾಯಿ ಕೊಚ್ಚಬೇಡ. ಗಡಿ ದಾಟಿ ತಲೆ ಉಳಿಸಿಕೋ" – ಎಂದು ಗದರಿದ, ಕಾಶಣ್ಣನಾಯಕ.

"ನಾನೂ ಬೆಳಗಿನಿಂದ ನೋಡಿದೆ - ನೀನು ಒಳ್ಳೆ ನಿಯತ್ತಿನ ಮನುಷ್ಯ. ಕೈಕೆಳಗಿನ ಜನಾನ ಚೆನ್ನಾಗಿ ತಯಾರು ಮಾಡಿದ್ದೀಯ. ಅದಕ್ಕೇ ಏನೋ ಒಂದು ಉಪಕಾರ ಮಾಡೋಣ ಅನ್ನಿಸಿತು. ನೀನು ಮಿಕ್ಕಿದ್ದೆಲ್ಲಾ ಸರಿ– ಆದರೆ ಮಾತನಾಡಿಸಿದರೆ ಸಿರ್ ಅನ್ನೀಯಾ. ಕೊಟ್ಟೊ ಗೊತ್ತಿಲ್ಲ

ತಗೊಂಡೂ ಗೊತ್ತಿಲ್ಲ. ಏನೋ ಒಂದು ಉಪಕಾರ ಮಾಡೋಣಾಂತ ನೋಡಿದೆ. ಮಾತಾಡಲಿಕ್ಕೇ ಬರೋದಿಲ್ಲ ನೀನು.”

“ಉಪಕಾರ ಮಾಡ್ತೀಯಾ ? ಏನುಪಕಾರ ?”

“ಈ ಲೋಭಿನಾಯಕರ ಚಾಕರಿ ಬಿಟ್ಟು, ನಮ್ಮ ಊರಿಗೆ ಬಾ. ದಿನಕ್ಕೆ ಹತ್ತು ಹೊನ್ನಿನ ವರಹ ಕೊಡಿಸುತ್ತೀನಿ.”

“ಹ ! ಹತ್ತು ಹೊನ್ನಿನ ವರಹ, ಅದರ ಮುಖಾನಾದ್ರೂ ನೋಡಿದ್ದೀಯಾ ನೀನು ?”

“ನಾನೂಂದ್ರೆ ಏನು ಬೀದೀಲಿ ಬಿದ್ದಿರೋ ತರಗೆಲೆ ಅಂದುಕೊಂಡೆಯಾ? ದಿರಸು ಹೀಗಿದ್ದರೂ ದೊರೆಗಳ ಹತ್ತಿರ ವ್ಯವಹಾರ ಮಾಡೋ ಮನುಷ್ಯ, ನೋಡಲಿಲ್ಲವಾ -ನಿಮ್ಮ ದೊರೆಗಳೇ ನನ್ನ ಹತ್ತಿರ ಮಾತಾಡಿದ್ದನ್ನು. ನಾನೇನು ವಿಷಯ ಹೇಳಿದೆ ಗೊತ್ತೇ ?”

- ಬಡಾಯಿ ಕೊಚ್ಚಿಕೊಳ್ಳುವವನಂತೆ ಹೇಳಿದ, ಆತ.

ಮುಂದೋಡುತ್ತಿದ್ದ ತನ್ನ ಕುದುರೆಯನ್ನು ಲಗಾಮು ಹಾಕಿ ತಟ್ಟನೆ ಎಳೆದು, ನಿಲ್ಲಿಸಿ, ತಾನೇ ಆತನ ಕುದುರೆಯ ಲಗಾಮನ್ನೂ ಹಿಡಿದು ಜಗ್ಗಿ ನಿಲ್ಲಿಸಿ –

“ತಿರುಗಿಸು ನಿನ್ನ ಕುದುರೇನ - ಹಿಂದಕ್ಕೆ” - ಎಂದು ಅಪ್ಪಣೆ ಮಾಡುವಂತೆ ಹೇಳಿದ, ಕಾಶಣ್ಣನಾಯಕ.

“ಏಕೆ ?” – ಆಶ್ಚರ್ಯಚಕಿತನಾದಂತೆ ಕೇಳಿದ, ಆತ.

“ನೀನು ಯಾರೋ ದೊಡ್ಡ ಮನುಷ್ಯ ಅಂತ ತಿಳಿದಿದ್ದೆ. ಆದರೆ ನಿನ್ನನ್ನು ನಂಬಿ ನಮ್ಮ ದೊರೆಗಳು ಕೆಟ್ಟರು. ನಿನ್ನಂಥ, ಪಂಚಭಕ್ಷ್ಯ ತಿಂದು ಸಡಿಲವಾದ ಮನುಷ್ಯನನ್ನು ಗಡಿಯಾಚೆ ಬಿಡಬಾರದು”

- ಎಂದು ಕರ್ಕಶವಾದ ಧ್ವನಿಯಲ್ಲಿ ಹೇಳಿ –

“ಹೂ. ನಿನ್ನ ಕುದುರೆ ಹಿಂದಕ್ಕೆ ತಿರುಗಿಸು”

- ಎಂದು ಹೇಳಿ, ಸೊಂಟದಲ್ಲಿದ್ದ ಕಠಾರಿಯನ್ನು ಹಿಡಿದೆಳೆದು ಹೇಳಿದ ಕಾಶಣ್ಣನಾಯಕ-

“ನಿನ್ನ ಹೀಗೇ ಬಿಟ್ಟರೆ, ದೊರೆಗಳು ನಿನ್ನ ನೋಡಿದ ಸುದ್ದಿನ ಸೀಮೆಯಲ್ಲೆಲ್ಲಾ ಬಿತ್ತುತ್ತೀಯ. ನನಗೆ ದಿನಕ್ಕೆ ಹತ್ತು ಹೊನ್ನಿನ ವರಹ ಕೊಡಿಸುತ್ತೀಯಲ್ಲಾ ನಮ್ಮಲ್ಲಿ ವರಹಕ್ಕೆ ನೂರು ಛಡಿ ಏಟಿನ ಬಹುಮಾನ ಕೊಡಿಸುತ್ತೇನೆ.”

ಆ ಮಾತನ್ನು ಕೇಳಿ, ಆತ ಗಾಬರಿಯಾದಂತೆ –

“ನಾನೇನು ಆಡಬಾರದ ಮಾತಾಡಿದೆ ?” – ಎಂದು ಕೇಳಿದ.

“ಒಂದಲ್ಲ ನೂರು ತಪ್ಪು ಮಾತಾಡಿದೆ. ಒಂದೊಂದಕ್ಕೂ ಒಂದೊಂದು ಛಡಿ ಏಟು ಬಿಗಿಸಿ ಹೇಳ್ತೀನಿ.”

“ದಮ್ಮಯ್ಯ - ಆ ಕೆಲಸ ಮಾಡಬೇಡ. ಉಂಡ ಮತ್ತಿನಲ್ಲಿ ಏನಾಡಿದೆನೋ ಬಿಟ್ಟೆನೋ- ನನಗೆ ಅವಸರದ ಕೆಲಸವಿದೆ. ನಿಮ್ಮ ದೊರೆಗಳದೇ ಕೆಲಸ.”

“ಅವರ ಕೆಲಸದ ವಿಷಯ ಅವರು ಹೇಳುತ್ತಾರೆ. ನೀನು ಹೇಳಬೇಕಾಗಿಲ್ಲ. ದೊರೆಗಳಿಗೂ ನಿನ್ನ ವಿಷಯದಲ್ಲಿ ಅನುಮಾನ ಬಂದಿರಬೇಕು. ಅದಕ್ಕೇ ನನ್ನನ್ನೇ ನಿನ್ನ ಉಸ್ತುವಾರಿಗೆ ಬಿಟ್ಟರು. ನಿನ್ನ ಯೋಗ್ಯತೆ ಎಷ್ಟು ಅಂತ ಈಗ ಗೊತ್ತಾಯ್ತು.”

“ಅದೇನಾದರೂ ಮಾಡು. ನಾನೇನು ತಪ್ಪು ಮಾಡಿದೆ ಅಂತ ಹೇಳು - ತಪ್ಪು ಮಾಡಿದ್ದರೆ ತಲೆ ಕೊಡ್ತೀನಿ.”

“ದೊರೆಗಳನ್ನು ಅಷ್ಟು ಆತುರವಾಗಿ ನೋಡಲಿಕ್ಕೆ ಬಂದೋನು, ಊರು ತೋರಿಸು ಅಂತ ಕೇಳಿದಾಗಲೇ ನಿನ್ನನ್ನು ಒಳಗೆ ತಳ್ಳಿಸಬೇಕಾಗಿತ್ತು – ಈಗ ನನ್ನ ಮುಂದೆ ನಮ್ಮ ದೊರೆಗಳ ಮುಂದಾಡಿದ ವಿಷಯ ಹೇಳೀನೀಂತ್ಯಲ್ಲ. ನೀನು ಕುದುರೆ ಮೈ ಉಜ್ಜೋ ಕೆಲಸಕ್ಕೂ ನಾಲಾಯಕ್ಕು. ನಿನ್ನನ್ನು ಕಳಿಸಿದೋರಿಗೆ ಹೇಳೋ ಸುದ್ದಿ ಇದ್ದರೆ, ಆ ಕೆಲಸ ಮಾಡಲಿಕ್ಕೆ ತಕ್ಕ ಜನ ಇದಾರೆ, ನಮ್ಮಲ್ಲಿ.”

“ಏನು - ಭಾಳ ಸದರವಾಗಿ ಮಾತಾಡ್ತೀಯಲ್ಲ - ನಾನು ಯಾರ ಕಡೆಯ ಮನುಷ್ಯ ಗೊತ್ತೆ?” – ಸೆಟೆದು ನಿಂತಂತೆ ಹೇಳಿದ ’ಆತ’.

“ಯಾರ ಕಡೆಯವನಾದರೂ ಆಗು- ಆ ಮಾತನ್ನು ನನಗಲ್ಲ, ನಿನ್ನ ಹಣ ತಿನ್ನೋ ಹದ್ದುಗಳಿಗೆ ಹೇಳುವೆಯಂತೆ. ನಾಲಗೆಗೆ ಲಗಾಮಿಲ್ಲದ ನಿನ್ನಂಥವನನ್ನು ಜೀವಸಹಿತ ಬಿಟ್ಟರೆ ನಿನ್ನ ಕಳಿಸಿದೋರಿಗೂ ಅಪಾಯ, ನಮಗೂ ಅಪಾಯ. ಮುಂದೇನೂ ಮಾತಾಡಬೇಡ, ಬಾಯಿಗೆ ಬೀಗ ಹಾಕಿಕೊಂಡು ಹಿಂದಕ್ಕೆ ನಡಿ. ನೀನು ತಂದ ಸುದ್ದಿ ದೊರೆಗಳಿಗೆ ಹೇಳಿದ್ದಾಯಿತಲ್ಲ. ಇನ್ನು ನಿನ್ನ ಕೊಂದರೇನೂ ಭಯವಿಲ್ಲ. ನಿನ್ನಂತಹ ಸಡಿಲ ಬಾಯೋನ್ನ ಬಿಡೋದಕ್ಕಿಂತ ತಪ್ಪಾದರೆ ನಮ್ಮ ದೊರೆಗಳಿಗೆ ತಲೆದಂಡ ಕೊಡುವುದು ಲೇಸು. ಇನ್ನು ಬಾಯಿ ಮುಚ್ಚಿಕೊಂಡು ಹಿಂದಕ್ಕೆ ಹೊರಡು”

- ಎಂದು ತನ್ನ ಕುದುರೆಯನ್ನು, ’ಆತ’ನ ಕುದುರೆಗೆ ಅಡ್ಡ ತಿರುಗಿಸಿ ನಿಲ್ಲಿಸಿ ಹೇಳಿದ ಕಾಶಣ್ಣನಾಯಕ –

“ನಿನಗೆ ಚಾವಡೀಲಿ ಊಟ ಹಾಕಿಸಿ, ಗಡಿ ದಾಟಿಸಿ ಬಾ ಅಂತ ದೊರೆಗಳು ಹೇಳಿದಾಗಲೇ ನಿನ್ನ ತೂಕ ಎಷ್ಟು ಅಂತ ನನಗೆ ಅರ್ಥ ಆಯ್ತು. ಊರು ತೋರಿಸು ಅಂದಾಗ ನಿನ್ನ ಬಣ್ಣ ಬಿಟ್ಟಿತು. ನೋಡೋಣ - ಇನ್ನೇನು ಮಾತಾಡ್ತೀಯೋ ಅಂತ ಸುಮ್ಮನಿದ್ದರೆ, ನನ್ನನ್ನು ಕುರಿ ಕಾಯೋ ಕುರುಬ ಅಂತ ತಿಳಿದುಕೊಂಡೆಯಲ್ಲ, ಇನ್ನು ಮುಂದಕ್ಕೆ ಒಂದು ಮಾತೂ ಬೇಡ.”

"ನೀನು ಬಹಳ ತಪ್ಪು ಮಾಡುತ್ತಾ ಇದೀಯ, ದಳವಾಯಿ."

"ಇನ್ನು ನೀನು ಗೀನು ಅಂದರೆ ಹಲ್ಲು ಮುರಿದೀತು. ತೆಪ್ಪಗೆ ಬಾ. ನಿನ್ನಾಟ ಎಲ್ಲಾ ದೊರೆಗಳ ಮುಂದೆ ಹೇಳ್ತೀನಿ. ಆಮೇಲೆ ಅವರು ಅಪ್ಪಣೆ ಮಾಡಿದ್ದನ್ನು ಅನುಭವಿಸು"

- ಎಂದು ಹೇಳಿ 'ಆತ'ನ ಕುದುರೆಯನ್ನು, ತನ್ನ ಎಡಗೈಯಿಂದ ಲಗಾಮು ಹಿಡಿದೆಳೆದು ಹಿಂದಕ್ಕೆ ತಿರುಗಿಸಿ –

"ಇನ್ನು ನೀನೂ ಬಂದ ದಾರಿಗೆ ಕೈಮುಗಿದುಬಿಡು. ಮುಂದೆ ಮಾತಾಡಿದರೆ ನನ್ನ ಕಠಾರಿಗೆ ಉತ್ತರ ಹೇಳಬೇಕಾಗುತ್ತೆ" – ಎಂದ ಕಾಶಣ್ಣನಾಯಕ.

"ಅದೇನು ಮಾಡ್ತೀಯೋ ಮಾಡು, ಏನು ಮಾತಾಡಿದ್ರೂ ಹುಲಿ ಹೊಟ್ಟೇಲಿ ಹುಟ್ಟಿದೋನ ಹಾಗೆ ಮಾತಾಡ್ತೀಯ. ಏಕೋ ಇವತ್ತು ಬೆಳಗ್ಗೆ ನಾನು ಎದ್ದ ಹೊತ್ತೇ ಚೆನ್ನಾಗಿಲ್ಲ. ಆದರಿಷ್ಟೇ - ನೀನೇನು ಮಾಡಿದರೂ ಅದು ನನಗೆ-ನಿನಗೆ-ನಿಮ್ಮ ನಾಯಕರಿಗೆ ಮಾತ್ರ ಗೊತ್ತಾಗಬೇಕು. ಕೊತ್ವಾಲ ಚಾವಡಿ ದಳವಾಯಿಯಾದದ್ದಕ್ಕೆ ಇಷ್ಟು ಮಾತ್ರ ಅರ್ಥ ಮಾಡಿಕೋ" – ಎಂದ 'ಆತ' ಶರಣಾಗತನಾದವನಂತೆ.

'ಏನು ಮಾಡಬೇಕು – ಈ ಸಡಿಲ ನಾಲಗೆಯ ಗೂಢಚಾರನನ್ನು ಏನು ಮಾಡಬೇಕು ?'

- ಎಂದು ಯೋಚಿಸುತ್ತಿದ್ದ ಕಾಶಣ್ಣನಾಯಕನಿಗೆ, 'ಆತ'ನ ಮಾತಿನಿಂದ ಏನೋ ಒಂದು ದಾರಿ ಹೊಳೆದಂತಾಗಿ –

"ನಾವೇನು ಮಾಡಬೇಕು ಅಂತ ನನಗೆ ಹೇಳಿಕೊಡಬೇಡ. ಗದ್ದಲ ಗಲಾಟೆ ಮಾಡದೆ, ಸ್ನೇಹಿತನ ಹಾಗೆ ಜೊತೇಲಿ ಬಾ....ಅಂದ ಹಾಗೆ ನಿನ್ನ ಹೆಸರು ಏನೂಂದೆ...."

- ಕಾಶಣ್ಣನಾಯಕ ಕೇಳಿದ.

ಆ ಪ್ರಶ್ನೆಗೆ ಆತ ಒಣನಗೆ ನಕ್ಕು-

"ನಿಮ್ಮ ನಾಯಕರನ್ನು ಕೇಳು"

- ಎಂದಷ್ಟೇ ಹೇಳಿ, ಕಾಶಣ್ಣನಾಯಕನನ್ನು ಹಿಂಬಾಲಿಸಿದ.

ತನ್ನೊಂದಿಗೆ ಬಂದಾತ ನೇರವಾಗಿ ದೊರೆಗಳನ್ನು ಕಂಡುಬಂದವನು ಎಂಬುದಷ್ಟೇ ತಿಳಿದಿದ್ದ ಕಾಶಣ್ಣನಾಯಕ, 'ಆತ'ನನ್ನು ಮತ್ತೆ ಕೊತ್ವಾಲಚಾವಡಿಗೆ ಕರೆದೊಯ್ಯದೆ ತನ್ನ ಮನೆಗೇ ಕರೆದೊಯ್ದು, ಒಳಕೋಣೆಯೊಂದರಲ್ಲಿ ಕೂರಿಸಿ –

"ನಾನು ನಾಯಕರನ್ನು ನೋಡಿ ಬರೋವರೆಗೂ, ಇಲ್ಲಿರು. ಅವರು ಏನು ಹೇಳ್ತಾರೋ ಕೇಳಿಕೊಂಡು ಬಂದು ಮುಂದಿನ ಕೆಲಸ ಮಾಡ್ತೀನಿ. ಇದು ಮನೆಯಾದ್ರೂ, ನೀನು ಗದ್ದಲ ಮಾಡಿದರೆ ಜೀವಸಹಿತ ಹೊರಗೆ ಹೋಗಲಾರೆ" – ಎಂದು ಎಚ್ಚರಿಕೆ ಹೇಳಿದ.

“ನಾನು ಇಲ್ಲಿಗೆ ಬಂದಿರೋದು ಪ್ರಾಣ ಕಳೆದುಕೊಳ್ಳಲಿಕ್ಕಲ್ಲ. ಹೇಗೂ ನಿಮ್ಮನಾಯಕರನ್ನು ನೋಡ್ತೀಯಲ್ಲ – ಅವರಿಗೊಂದು ಮಾತು ಹೇಳಿಬಿಡು” - ಆತ ಹೇಳಿದ.

“ಏನು ?”

“ನಿಮ್ಮ ದೊರೆಗಳನ್ನು ನೋಡಿದಾಗ ಕೈಯಲ್ಲಿದ್ದ ಉಂಗುರ ಕಾಣಲಿಲ್ಲ. ’ಉದುರಿಹೋಯಿತೇನೋ ಹುಡುಕಿಸಿ’ ಎಂದು ಪ್ರಭುಗಳಿಗೆ ಹೇಳಿದ್ದೆ. ಈಗ ಅದನ್ನು ನನ್ನ ಪಗಡೀಲಿ ಇಟ್ಟು ಕೊಂಡದ್ದು ಜ್ಞಾಪಕಕ್ಕೆ ಬಂತು”

- ಎಂದು ಹೇಳಿ ನೆತ್ತಿಯ ಮೇಲಿದ್ದ ಪಗಡಿಯನ್ನು ತೆಗೆದು, ಅದರ ಮಡಿಕೆಯಲ್ಲಿದ್ದ ಉಂಗುರ ತೆಗೆದು ಕೈಗೆ ಹಾಕಿಕೊಂಡು ಹೇಳಿದ ಆತ –

“ಪ್ರಭುಗಳಿಗೆ ಉಂಗುರ ಸಿಕ್ಕಿತು ಅಂತ ಹೇಳಿಬಿಡು” – ಎಂದ.

“ಎಲ್ಲಿ ಆ ಉಂಗುರ ?”

- ಎಂದು ಆ ಉಂಗುರವನ್ನು ಆತನ ಕೈಯಿಂದ ತೆಗೆದುಕೊಂಡು, ಅದನ್ನು ಸೂಕ್ಷ್ಮವಾಗಿ ಪರೀಕ್ಷಿಸಿದ ಕಾಶಣ್ಣನಾಯಕ.

ಆ ಉಂಗುರದಲ್ಲೇನೂ ವಿಶೇಷವಿರಲಿಲ್ಲ. ಹಿಂದೆ-ಮುಂದೆ ತಿರುಗಿಸಿ, ತಿರುಗಿಸಿ, ಅದರ ಹರಳಿನ ಹಿಂಭಾಗದಲ್ಲಿ ವಿಷದ ಭರಣಿ ಏನೂ ಇಲ್ಲ ಎಂದು ಖಚಿತ ಮಾಡಿಕೊಂಡು-

“ನಿನ್ನ ಪಗಡೀಲಿ ಇನ್ನೇನೇನು ಇಟ್ಟಿದ್ದೀಯಾ ?” – ಎಂದು ಕೇಳಿದ ಕಾಶಣ್ಣನಾಯಕ.

“ನನ್ನ ಮಾತು ನಂಬೋ ಮನುಷ್ಯನಲ್ಲ ನೀನು. ನೀನೇ ನೋಡಿಕೋ”

- ಎಂದು ಹೇಳಿ, ಪಗಡಿಯನ್ನೇ ಕಾಶಣ್ಣನಾಯಕನ ಕೈಗೆ ಕೊಟ್ಟ ಆತ.

ಬರೀ ಪಗಡಿಯನ್ನೇ ಅಲ್ಲದೆ, ಆತನ ತಲೆಯ ಕೂದಲನ್ನು ಕೊಡವಿ ನೋಡಿ, ಏನೂ ಇಲ್ಲವೆಂದು ಖಚಿತ ಮಾಡಿಕೊಂಡು –

“ಮತ್ತೆ ನಿನ್ನ ಮೈಯೆಲ್ಲಾ ಹುಡುಕೋ ಅಷ್ಟು ಹೊತ್ತಿಲ್ಲ. ಎಲ್ಲಾದರೂ ವಿಷಗಿಷ ಇಟ್ಟುಕೊಂಡು, ನಾನು ಹೋದಮೇಲೆ ತೆಗೆದುಕೊಂಡರೆ, ನರಿ-ಹದ್ದುಗಳಿಗೂ ಅಪಕಾರ ಮಾಡ್ತೀಯಾ - ಅಷ್ಟೆ”

- ಎಂದು ತಾತ್ಸಾರವಾಗಿ ಹೇಳಿ, ಕೋಣೆಯಲ್ಲಿ ಆತನನ್ನು ಕೂಡಿಸಿ, ಬಾಗಿಲಿಗೆ ಬೀಗ ಹಾಕಿಕೊಂಡು ಹೊರಟುಹೋದ ಕಾಶಣ್ಣನಾಯಕ.

* * *

ಕೊತ್ವಾಲಚಾವಡಿ ದಳವಾಯಿ ಕಾಶಣ್ಣನಾಯಕ ಹೇಳಿದುದನ್ನೆಲ್ಲಾ ನಿಧಾನವಾಗಿ ಕೇಳಿ, ಕೊನೆಯಲ್ಲಿ ಆತ –

“ತಳ ತುದೀಗೆ ಅರ್ಥವಾಗದಂಥ ಮನುಷ್ಯ, ಆತ. ಬರೋವಾಗ ಕೊನೆ ಗಳಿಗೇಲಿ ನಿಮಗೆ 'ಉಂಗುರ ಸಿಕ್ಕಿತು' ಅಂತ ಹೇಳಿ ಅಂದ”

-ಎಂದುದನ್ನು ಕೇಳಿ ಸಮಾಧಾನದ ನಿಟ್ಟುಸಿರು ಬಿಟ್ಟು –

“ಆತನ ಬಗ್ಗೆ ನಿಮಗೆ ಯಾವ ಸಂಶಯವೂ ಬೇಡ, ದಳವಾಯಿಗಳೇ. ಆತ ನಮ್ಮ ನಂಬುಗೆಯ ಮನುಷ್ಯ. ನಿಮ್ಮೆದುರಿಗೆ ಆಡಿದುದೆಲ್ಲಾ ನಾಟಕ. ಆತ 'ಉಂಗುರ ಸಿಕ್ಕಿತು' ಎಂದು ಹೇಳಿದ್ದು ಕೇಳಿ, ನಮಗೆ ನಮ್ಮ ಕೋಟೆಯ ಬಾಗಿಲು ಭದ್ರವಾಗಿದೆ ಎಂದು ನಂಬಿಕೆಯಾಯಿತು. ಆತನನ್ನು ಎಚ್ಚರದಿಂದ ಗಡಿದಾಟಿಸಿ ಬಂದು ನಮ್ಮನ್ನು ನೋಡಿ” - ಎಂದ ಮದಕರಿನಾಯಕ.

“ಆತ ಈ ಆಟ ಎಲ್ಲಾ ಆಡ್ತಾನೆ ಅಂತ ತಮಗೆ ಗೊತ್ತಿತ್ತಾ?”

- ಆಶ್ಚರ್ಯದಿಂದ ಕೇಳಿದ, ಕಾಶಣ್ಣನಾಯಕ.

“ಅಷ್ಟೇ ಏನು - ಇನ್ನೂ ಏನೇನೋ ಬಹಳಷ್ಟು ಗೊತ್ತಿದೆ. ನಿಮಗೆ ಹೇಳುವುದೂ ಬೇಕಾದಷ್ಟಿದೆ. ಆತನನ್ನು ಗಡಿದಾಟಿಸಿ ಬಂದ ಕೂಡಲೇ ನಮ್ಮನ್ನು ನೋಡಿ. ಹಾಗೇ – ಆತನ ವಿಷಯ, ಆತನನ್ನು ಕಂಡವರು ಅಲ್ಲಲ್ಲಿ ಬಾಯಿಬಿಟ್ಟಾರು - ಎಚ್ಚರಿಕೆ. ಈಗ ನಡೆದದ್ದು -ನಮಗೆ ನಿಮಗಲ್ಲದೆ, ಬೇರೆ ಯಾರಿಗೂ ತಿಳಿಯಕೂಡದು. ಆ ಕೆಲಸವನ್ನು ಬಹು ಜಾಗರೂಕತೆಯಿಂದ ನಿರ್ವಹಿಸಿ. ನಾವು ಹೇಳುವವರೆಗೂ ಪ್ರಧಾನಿಗಳಿಗೂ ಕೂಡ ಆತನ ವಿಷಯ ತಿಳಿಯಬಾರದು”

- ಎಂದು ಎಚ್ಚರಿಕೆಯ ಮಾತನ್ನು ಒತ್ತುಕೊಟ್ಟು ಹೇಳಿದ ಮದಕರಿನಾಯಕ.

“ಆತನ ವಿಷಯದಲ್ಲಿ ನಾನು ದುಡುಕದಿದ್ದುದು ನನ್ನ ಅದೃಷ್ಟ”- ಎಂದ ಕಾಶಣ್ಣನಾಯಕ.

“ನಿಮ್ಮೊಬ್ಬರದೇ ಏನು – ದುರ್ಗದ ಭಾಗ್ಯ” - ಎಂದು ಮದಕರಿನಾಯಕ ಹೇಳಿದ.

೬

'ಆತ'ನಾಗಿ ಬಂದು, 'ಆತ'ನಾಗಿಯೇ ಉಳಿದುಹೋದ 'ಆತ'ನನ್ನು ಜಾಗರೂಕತೆಯಿಂದ ಕಾಶಣ್ಣನಾಯಕ ಗಡಿದಾಟಿಸಿ ಬಂದ ಬಳಿಕ, ಮದಕರಿನಾಯಕ, ತನ್ನ ತಮ್ಮ ಪರಶುರಾಮನಾಯಕ, ಕಾಶಣ್ಣನಾಯಕರೊಂದಿಗೆ ರಹಸ್ಯ ಸ್ಥಳವೊಂದರಲ್ಲಿ 'ಆತ' ಮೂಡಿಸಿದ ಸೋಜಿಗದ ಹಿನ್ನೆಲೆಯನ್ನು ವಿವರಿಸಿ –

"ಒಂದು ರಾತ್ರಿಯಲ್ಲಿ ಹತ್ತು ಅವತಾರ ಎತ್ತುವ 'ದಶವತಾರ'ದ ಪಾತ್ರ ನಮಗೆ ಬೇಡ ಎಂದಿದ್ದೆ ಪರಶುರಾಮಣ್ಣ. ಆದರೆ ನಮಗೆ ಬೇಡವಾದುದನ್ನು ಮಾಡಿಸಲೇಬೇಕೆಂದು ದೈವೇಚ್ಛೆ ಎಂದು ಕಾಣುತ್ತದೆ. ಈ ನಾಟಕದಲ್ಲಿ ನಿಮ್ಮಿಬ್ಬರ ಸಹಕಾರ ನಮಗೆ ಸಂಪೂರ್ಣವಾಗಿ ಬೇಕು" – ಎಂದು ಹೇಳಿದ ಮದಕರಿನಾಯಕ.

"ಅಂತೂ ನಮ್ಮ ನೆರಳನ್ನು ನಾವೇ ನಂಬದ ಕಾಲ ಬಂದಿತು. ಈಗ ನಮ್ಮಿಬ್ಬರಿಗಿಂತ ಕೊತ್ವಾಲಚಾವಡಿಯ ದಳವಾಯಿಗಳಿಗೆ ಬಹಳ ಕಷ್ಟದ ಕೆಲಸ- ಹುಲ್ಲುಮೆದೆಯಲ್ಲಿ ಸೂಜಿ ಹುಡುಕುವ ಕೆಲಸ – ಗಂಟುಬಿತ್ತು" - ಎಂದ ಪರಶುರಾಮನಾಯಕ.

ಅವರಿಬ್ಬರು ಮಾತಾಡುವುದನ್ನು ಮಧ್ಯೆ ಒಂದೂ ಮಾತಾಡದೆ ಕುಳಿತು ಕೇಳಿದ ಕಾಶಣ್ಣನಾಯಕ.

"ಇದು ನಮ್ಮ ಕೈನೆರಳಿಗೂ ಹತ್ತು ಬೆರಳಿದೆಯೋ ಇಲ್ಲವೋ ಎಂದು ನೋಡಿಕೋ ಬೇಕಾದಷ್ಟು ಕಷ್ಟದ ಕೆಲಸ. ಆಯಿತು - ನಮ್ಮ ಪಾಲಿಗೆ ಒಪ್ಪಿಸಿದ ಕೆಲಸವನ್ನು ದೇವರು ಮೆಚ್ಚುವಷ್ಟು ರೀತಿಯಲ್ಲಿ ಮಾಡುತ್ತೇವೆ. ಇಂಥ ಕೆಲಸದಲ್ಲಿ ಪ್ರಭುಗಳಿಗೆ ನಮ್ಮಲ್ಲಿ ಬಹಳ ನಂಬಿಕೆ ಇರಬೇಕು" – ಎಂದು ಹೇಳಿದ.

"ನಂಬಿಕೆ ಇದೆಯೆಂದೇ ನಿಮಗಿಷ್ಟು ಹೇಳಿದ್ದಾಯಿತು" - ಮದಕರಿನಾಯಕ ಹೇಳಿದ.

"ಈ ನಂಬಿಕೆ ಬೇರೆ - ಆದರೆ ನಾನು ಕೇಳೋ ನಂಬಿಕೆ ಬೇರೆ"

- ಕಾಶಣ್ಣನಾಯಕ ಯೋಚಿಸುತ್ತಾ ಹೇಳಿದ.

"ನಮ್ಮಿಂದ ನಿಮಗೇನು ನಂಬಿಕೆ ಬೇಕು ?"

"ನಮಗೆ ಅನುಮಾನ ಬಂದ ಜನರ ವಿಷಯದಲ್ಲಿ, 'ಏನು ಮಾಡಲಿ ?' ಎಂದು ಗಳಿಗೆ ಗಳಿಗೆಯೂ ತಮ್ಮನ್ನು ಬಂದು ಕೇಳುವುದು ಕಷ್ಟವಾಗುತ್ತದೆ. ಅಂಥ ಸಂದರ್ಭದಲ್ಲಿ ನಮಗಷ್ಟು ಕೈಯಾಡಿಸಲು ಸ್ವಾತಂತ್ರ್ಯ ಬೇಕು."

ಕಾಶಣ್ಣನಾಯಕ ಕೇಳಿದ ಸ್ವಾತಂತ್ರದ ಸಾಧಕ-ಬಾಧಕಗಳ ಬಗ್ಗೆ ಯೋಚಿಸಿ-

"ನಿಮಗೆ ಸ್ವಾತಂತ್ರ್ಯವನ್ನೇನೋ ಕೊಡುತ್ತೇವೆ. ಆದರೆ ಎಚ್ಚರವಿರಲಿ – ಅದು ದುರುಪಯೋಗವಾಗಬಾರದು. ನೀವು ಮಾಡಿದ ಕಾರ್ಯದ ವರದಿಯನ್ನು ಪರಶುರಾಮನಾಯಕರಿಗೆ ಒಪ್ಪಿಸಿ. ಏನು ಮಾಡಬೇಕು, ಹೇಗೆ ಮಾಡಬೇಕು ಎಂದು ಅವರೊಂದಿಗೆ ಪರ್ಯಾಲೋಚಿಸಿ. ಅಂತೂ ಈ ಕೆಲಸ ಇಂದಿನಿಂದಲೇ ಆರಂಭವಾಗಬೇಕು. ಎಲ್ಲಿಂದ ಆರಂಭಿಸುತ್ತೀರ ?" – ಮದಕರಿನಾಯಕ ಕೇಳಿದ.

“ಮನೆ ಒಪ್ಪಮಾಡಿಕೊಂಡ ಮೇಲಲ್ಲವಾ - ಬೀದಿ ಕೆಲಸ. ಅದನ್ನು ನಮಗೆ ಒಪ್ಪಿಸಬಹುದು” – ಎಂದ ಕಾಶಣ್ಣನಾಯಕ.

“ನಿಮ್ಮ ಶೋಧನೆಗೆ ಅರಮನೆಯೂ ಹೊರತಲ್ಲ. ಆದರೆ, ಹತ್ತು ಜನರ ಬಾಯಿಗೆ ಬಿದ್ದ ಮಾತು, ಹತ್ತುಜನರನ್ನು ಕೂಡಿದ ಹೆಣ್ಣಿನ ಹಾಗೆ. ಆ ಎಚ್ಚರವಿರಲಿ” - ಎಂದ ಮದಕರಿನಾಯಕ.

“ತಮ್ಮ ಕಾರ್ಯಕ್ಕೆ ಎಂದೋ ಈ ತಲೆ ಮೀಸಲಾಗಿದೆ” – ಎಂದಷ್ಟೇ ಹೇಳಿದ ಕಾಶಣ್ಣನಾಯಕ.

“ನಮಗೆ ಮೀಸಲಾದರೆ ಸಾಲದು. ನಮ್ಮ ತಲೆ, ನಿಮ್ಮ ತಲೆ ಎಲ್ಲಾ ಈ ದುರ್ಗದ ರಕ್ಷಣೆಗೆ ಮೀಸಲಾಗಿದೆ ಎಂಬುದಷ್ಟು ನಿಮಗೆ ನೆನಪಿದ್ದರೆ ಸಾಕು. ನಾವು ಹೇಳಿದ ಯಾವ ಮಾತನ್ನೂ ಮರೆಯಬೇಡಿ.”

“ಮರೆಯುವುದಿಲ್ಲ - ಆದರೆ ಒಂದು ಮಾತು - ?” – ಕಾಶಣ್ಣನಾಯಕ ಕೇಳಿದ.

“ಏನು?”

“ನಾನು ತಮ್ಮನ್ನು ಕಾಣಬಾರದು, ಏನು ಮಾಡಿದರೂ ಚಿಕ್ಕಬುದ್ಧಿಯವರಿಗೆ ಒಪ್ಪಿಸಿದರಾಯಿತು ಎಂದಿರಿ. ಇವರಿಗೂ ಕೊತ್ವಾಲಚಾವಡಿಗೂ ಏನೇನೂ ಸಂಬಂಧವಿಲ್ಲ. ನಾವೆಲ್ಲಾ ಚಪ್ಪೇಚಾವಡಿಯ ದಳವಾಯಿಗಳ ಅಂಕೆಗೆ ಒಳಪಟ್ಟ ಜನ. ನಮಗೆ ಪ್ರಧಾನಿಗಳೂ ಬಹಳ ದೂರ. ಹಾಗಿರುವಾಗ ಅವರನ್ನೆಲ್ಲಾ ಬಿಟ್ಟು ಆಗಾಗ ನಾನು ತಮ್ಮನ್ನಾಗಲಿ, ಚಿಕ್ಕಬುದ್ಧಿಯವರನ್ನಾಗಲಿ ಕಂಡರೆ, ಜನ ಅನುಮಾನಪಡಬಹುದಲ್ಲಾ.....”

- ಎಂದು ತನಗಿದ್ದ ಆತಂಕವನ್ನು ವಿವರಿಸಿದ ಕಾಶಣ್ಣನಾಯಕ.

ಕಾಶಣ್ಣನಾಯಕನ ಮಾತಿನ ಹಿಂದಿದ್ದ ವಾಸ್ತವಿಕತೆಯನ್ನು ಅರ್ಥಮಾಡಿಕೊಂಡ ಮದಕರಿನಾಯಕ –

“ಚಪ್ಪೇಚಾವಡಿ ದಳವಾಯಿ ಹುಚ್ಚಪ್ಪನಾಯಕರು ನಮಗೆ ಹಿರಿಯರು. ಹತ್ತು ಹದಿನೆಂಟು ವರ್ಷಗಳಿಂದ ಅವರನ್ನು ಕಂಡಿದ್ದೇವೆ. ಅವರ ಬಗ್ಗೆ ನಮಗೆ ಅನುಮಾನವಿಲ್ಲ. ಆದರೆ-” ಎಂದು ಏನೋ ಹೇಳಹೋದ.

“ಮಹಾಸ್ವಾಮಿಯವರ ಮಾತು ಸತ್ಯ. ಚಪ್ಪೇಚಾವಡಿ ದಳವಾಯಿಗಳು ಅಪರಂಜಿಯಂಥವರು.”

“ಅವರು ಅಪರಂಜಿಯಂಥವರು. ಅವರ ಮನಸೂ ಕನ್ನಡಿಯಷ್ಟು ಶುಭ್ರ. ಆದರೆ ಈ ಕುಟಿಲ ಕಾರಸ್ಥಾನಕ್ಕೆ ಅವರನ್ನು ಎಳೆಯುವುದು ಸರಿಯಾದೀತೇ ?”

“ಅವರನ್ನು ಬಿಟ್ಟರೂ ಅಪಚಾರವಾಗುತ್ತದೆ.” - ಪರಶುರಾಮನಾಯಕ ಹೇಳಿದ.

“ಈ ಸಮಸ್ಯೆಯನ್ನು ಬಗೆಹರಿಸುವುದು ಹೇಗೆ ?” - ಮದಕರಿನಾಯಕ ಕೇಳಿದ.

“ನಾನೊಂದು ಮಾತು ಹೇಳಲು ಅಪ್ಪಣೆಯಾದರೆ -”- ಕಾಶಣ್ಣನಾಯಕ ಕೇಳಿದ.

“ಏನು ಹೇಳಿ ?”

“ನಾನೇ ಅವರಿಗೊಂದು ಸಲಹೆಮಾಡ್ತೀನಿ. 'ಯುದ್ಧ ಹತ್ತಿರ ಬರ್ತಿದೆ. ಕೊತ್ವಾಲಚಾವಡಿ, ತಳವಾರಚಾವಡಿಗಳಿಗೆ ಕೆಲಸ ಹೆಚ್ಚು. ದೊರೆಗಳಿಗೆ ಸುದ್ದಿ ಮುಟ್ಟಿಸಬೇಕಾದ ಕಾಲವೂ ಬರಬಹುದು. ಅದಕ್ಕೆ ಸದ್ಯಕ್ಕೆ ತಳವಾರಚಾವಡಿ- ಕೊತ್ವಾಲಚಾವಡಿಗಳೆರಡರ ಮೇಲುಸ್ತುವಾರಿಗೂ ಚಿಕ್ಕಬುದ್ಧಿಗಳನ್ನು ನೇಮಿಸಿದರೆ, ಆದೀತು' ಅಂತ ಅವರು ತಮ್ಮನ್ನು ಕೇಳದೆ ಏನೂ ಮಾಡುವುದಿಲ್ಲ. ತಾವೂ ಅವರ ಮಾತಿಗೆ ಕಟ್ಟುಬಿದ್ದ ಹಾಗೆ 'ಆಗಲಿ' ಎನ್ನಿ. ಆಗ ಎಲ್ಲರ ದಾರಿಯೂ ಸಲೀಸಾಗುತ್ತದೆ. ನಾವು ಅವರನ್ನು ಕಾಣುವುದಿರಲಿ, ಆಗಾಗ ಚಿಕ್ಕಬುದ್ಧಿಗಳೂ ನಮ್ಮ ಚಾವಡಿಗಳಿಗೆ ಬಂದರೆ, ಯಾರಿಗೂ ಏನೂ ಅನುಮಾನ ಕಾಣುವುದಿಲ್ಲ” – ಎಂದು ಸಲಹೆ ಮಾಡಿದ ಕಾಶಣ್ಣನಾಯಕ.

ಅದಲ್ಲದೆ ಬೇರೆ ದಾರಿ ಮದಕರಿನಾಯಕರಿಗಾಗಲಿ, ಪರಶುರಾಮನಾಯಕರಿಗಾಗಲಿ ಕಾಣಲಿಲ್ಲ.

“ಆಯಿತು - ಹೊತ್ತು ನೋಡಿಕೊಂಡು ಆ ಕೆಲಸ ಮಾಡಿ - ಆದರೆ ನಿಮ್ಮ ಕೆಲಸ ಇಂದಿನಿಂದಲೇ ಆರಂಭವಾಗಲಿ” – ಎಂದ ಮದಕರಿನಾಯಕ.

ಕಾಶಣ್ಣನಾಯಕ ನಿರೀಕ್ಷಿಸಿದ ಸಮಯವನ್ನು, ಹೈದರಾಲಿಯೇ ಒದಗಿಸಿಕೊಟ್ಟ.

೭

'ನಕಲಿ' ಪೇಶ್ವೆ ರಘೋತ್ತಮರಾಯ ಕೊಟ್ಟ ಸನ್ನದನ್ನು ಶಸ್ತ್ರವಾಗಿ ಹಿಡಿದು, ಸುಲಿದ ಬಾಳೆಯ ಹಣ್ಣಿನ ಹಾಗೆ ಸೀರ್ಯವನ್ನು ನುಂಗುತ್ತೇನೆ ಎಂದು ಲೆಕ್ಕಹಾಕಿ, ಸಾಕಷ್ಟು ಪ್ರಬಲ ಸೈನ್ಯವನ್ನು ಸಾಹೇಬ್‌ಜಾದೆ ಟೀಪುವಿನ ನಾಯಕತ್ವದಲ್ಲಿ ಕಳಿಸಿಕೊಟ್ಟಿದ್ದ ಹೈದರಾಲಿ – ಸೀರ್ಯ ಸುಲಭವಾಗಿ ಗಂಟಲಲ್ಲಿಳಿದರೆ, ಹಾಗೇ ಚಿತ್ರದುರ್ಗವನ್ನೂ ಅಂಕೆಗೆ ತೆಗೆದುಕೊಳ್ಳಬೇಕೆಂದು.

ಆದರೆ ಬಾಪೂಜಿ ಸಿಂಧಿಯಾನ ಸೇನೆ, ಹೈದರಾಲಿ ಎಣಿಸಿದಷ್ಟು ದುರ್ಬಲವಾಗಿರಲಿಲ್ಲ. ಒಂದು ವಾರದಲ್ಲಿ ಮುಗಿಸಬಹುದು ಎಂದಿದ್ದ ಯುದ್ಧ ಎರಡು ತಿಂಗಳಾದರೂ ಮುಗಿಯುವ ಸೂಚನೆ ಕಾಣದೆ, ಈ ಸಮಯದಲ್ಲಿ ಚಿತ್ರದುರ್ಗದ ಪ್ರಬಲಸೇನೆ ಮರಾಠರಿಗೆ ನೆರವಾದರೆ ತನ್ನ ಗತಿ ಕತ್ತರಿಯಲ್ಲಿ ಸಿಕ್ಕಂತಾಗಬಹುದು ಎಂದು ಊಹಿಸಿ, ದುರ್ಗದ ಬಲವನ್ನು ಪರೀಕ್ಷಿಸುವಂತೆ, ತನ್ನ

ಭಾವಮೈದುನ ಮೊಕ್ದುಂ ಸಾಹೇಬನ ಮುಖಂಡತ್ವದಲ್ಲಿ ಒಂದು ನಿಯೋಗವನ್ನು ತನ್ನ ಪತ್ರದೊಂದಿಗೆ ಚಿತ್ರದುರ್ಗಕ್ಕೆ ಕಳುಹಿಸಿಕೊಟ್ಟ.

'ಆತ' ಬಂದುಹೋದ ದಿನದಿಂದಲೇ, ಮೊಕ್ದುಂ ಸಾಹೇಬನ ಆಗಮನವನ್ನು ನಿರೀಕ್ಷಿಸುತ್ತಿದ್ದ ಮದಕರಿನಾಯಕ. ಇಂಗಳದಾಳು ಉಕ್ಕಡದ ಬಳಿ ಬಂದಿಳಿದ. ಹೈದರಾಲಿಯ ನಿಯೋಗದ ವಿಚಾರವನ್ನು ಉಕ್ಕಡದ ದಫೇದಾರ್ ಪರಶುರಾಮನಾಯಕ, ಗಡಿಠಾಣ್ಯಗಳ ದಳವಾಯಿ, ಕಾಟನಾಯಕರಿಗೆ ತಿಳಿಸಿ, ಅವರಿಂದ ಆ ವಿಷಯ ಪ್ರಧಾನಿಗಳಿಗೆ ತಿಳಿದು, ನರಸಪ್ಪಯ್ಯನವರು ಆ ವಾರ್ತೆಯನ್ನು ನಾಯಕರಿಗೆ ಮುಟ್ಟಿಸಿ –

"ಏನು ಮಾಡುವುದು ?"

- ಎಂದು ಕೇಳಿದರು, ಮದಕರಿನಾಯಕರನ್ನು ತೂಗುವಂತೆ ನೋಡುತ್ತಾ.

"ದೊಡ್ಡವರು ತಾವಾಗಿಯೇ ಮನೆಬಾಗಿಲಿಗೆ ಬಂದಾಗ ನಾವು ಹೇಳುವುದೇನಿದೆ? ಇಂಥವರನ್ನು ಹೇಗೆ ಸ್ವಾಗತಿಸಬೇಕು ಎಂಬುದರಲ್ಲಿ ತಾವು ಪಳಗಿದವರು, ಪ್ರಧಾನಿಗಳೇ. ನಿಮಗೆ ಸೂಕ್ತ ಕಂಡಹಾಗೆ ಮಾಡಿ. ಬಂದವರು ಬರಲಿ. ಏಕೆ ಬಂದಿದ್ದಾರೋ ತಿಳಿಯಲಿ. ಮುಂದೆ ಹೇಗೆ ಮಾಡಬೇಕೆಂದು ಮಾರ್ಗ ತೋರಿಸಲು ನೀವಿದ್ದೀರಲ್ಲ" - ಎಂದಷ್ಟೇ ಹೇಳಿದ ಮದಕರಿನಾಯಕ.

ಆ ಮಾತುಗಳನ್ನು ಬಹು ಸೂಕ್ಷ್ಮವಾಗಿ ಕೇಳಿ, ಅದರಲ್ಲಿ ವ್ಯಂಗ್ಯವೇನೂ ಇಲ್ಲವೆಂದು ಮನವರಿಕೆಯಾದಬಳಿಕ –

"ಈ ಮಾತಾಡಿ ನಮ್ಮ ಮೇಲೆ ಬಹಳ ದೊಡ್ಡ ಹೊರೆ ಹೊರಿಸಿದಿರಿ. ಅದನ್ನು ಹೊರುವಷ್ಟು ಶಕ್ತಿಯನ್ನು ಪರಮಾತ್ಮ ನಮಗೆ ಅನುಗ್ರಹಿಸಲಿ. ಆದರೆ ತಮ್ಮಲ್ಲೊಂದು ಮನವಿ -"

-ನರಸಪ್ಪಯ್ಯ ಹೇಳಿದರು.

"ಏನು ?"

"ಕಾಲ ಬಹಳ ಸೂಕ್ಷ್ಮವಾಗಿದೆ. ತಾವು ಪೂರ್ವಾಗ್ರಹಗಳನ್ನು ಮರೆತು ದುರ್ಗದ ಹಿತ ಚಿಂತನೆ ಮಾಡಬೇಕು."

"ರಾಜಕೀಯದಲ್ಲಿ ವೈಯಕ್ತಿಕ ಇಷ್ಟಾನಿಷ್ಟಗಳಿಗೆ ಬೆಲೆಯಿಲ್ಲ ಎಂದು ತಾವು ಹೇಳಿದ ಮಾತನ್ನು ನಾವು ಮರೆತಿಲ್ಲ, ಪ್ರಧಾನಿಗಳೇ, ನಾವು-ನೀವು ಮುಖ್ಯವಲ್ಲ, ದುರ್ಗದ ಕೀರ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನೀವು ಮಾಡುವ ಸಲಹೆಗಳು ನಮಗೆ ಸದಾಕಾಲವೂ ಮಾನ್ಯ. ಆದ್ದರಿಂದ ನಮ್ಮ ಬಗ್ಗೆ ಪೂರ್ಣ ನಂಬಿಕೆಯಿಟ್ಟು ಮುಂದಿನ ಕೆಲಸ ಮಾಡಿ" – ಎಂದು ಹೇಳಿದ ಮದಕರಿನಾಯಕ.

"ಕೈಕಾಲಾಡಿಸಲು ನಮಗಿಷ್ಟು ಅನುಕೂಲ ಕಲ್ಪಿಸಿದರೆ ನಾನು ಧನ್ಯ"

- ಎಂದು ಹೇಳಿ, ನಾಯಕರಿಗೆ ಕೈಮುಗಿದು ಬಂದ ಪ್ರಧಾನಿ ನರಸಪ್ಪಯ್ಯ, ಗಡಿಠಾಣ್ಯದ ಕಾಟನಾಯಕರಿಗೆ-

"ಹೈದರಾಲಿನವಾಬರ ಲಷ್ಕರಿನಿಂದ ಮಹಾಪ್ರಭುಗಳನ್ನು ಕಾಣಲು ಬಂದ ನಿಯೋಗದವರನ್ನು ಒಳಗೆ ಬಿಡಲು, ಗಡಿ ಉಕ್ಕಡದವರಿಗೂ, ರಂಗಯ್ಯನ ಬಾಗಿಲವರಿಗೂ ಅಪ್ಪಣೆ ಕೊಡಿಸಿ. ಬಂದಿರುವವರು ದೊಡ್ಡ ಸರದಾರರಷ್ಟೇ ಅಲ್ಲ, ನವಾಬರ ಖಾಸಾ ಭಾವಮೈದುನರು. ಆದ್ದರಿಂದ ಅವರ ಮರ್ಯಾದೆಗೆ ಭಂಗಬರದ ಹಾಗೆ, ಆದರೆ ಉಳಿದ ರೀತಿಯಲ್ಲಿ ಮಾಮೂಲು ಎಚ್ಚರಿಕೆಯೊಡನೆ ಕಾರ್ಯನಿರ್ವಹಿಸುವಂತೆ ಕೊತ್ವಾಲಚಾವಡಿಯವರಿಗೆ ತಿಳಿಸಿ. ಹಾಗೇ ಬಂದವರು ನವಾಬರ ಭಾವಮೈದುನರಾದುದರಿಂದ, ಚಪ್ಪೇಚಾವಡಿಯ ದಳವಾಯಿಗಳು ಅವರನ್ನು ಇದಿರುಗೊಂಡು, ಕರೆತಂದು, ಬಿಡಾರದಲ್ಲಿಳಿಸಲಿ" – ಎಂದು ಹೇಳಿದರು.

ಪ್ರಧಾನಿಗಳ ಅಪ್ಪಣೆಯನ್ನು ಕಾಟನಾಯಕರಿಂದ ತಿಳಿದ ಕಾಶಣ್ಣನಾಯಕ –

"ಅಂತೂ ನಮ್ಮ ಸತ್ವಪರೀಕ್ಷೆಯ ಸಮಯ ಬಹುಬೇಗ ಬಂದಿತು" - ಎಂದು ಅಂದುಕೊಂಡ.

* * *

ಹೈದರಾಲಿಯ ಉಳಿದ ಸರ್ದಾರರಿಗೆ, ನವಾಬರ ಸರ್ದಾರರು ಎಂಬ ಒಂದು ಕೋಡಿದ್ದರೆ, ಮೊಕ್ದುಂ ಸಾಹೇಬರಿಗೆ ಎರಡು ಕೋಡು -ತಾನು ಸರ್ದಾರನೂ ಅಲ್ಲದೆ, ನವಾಬರ ಭಾವ ಮೈದುನ ಎಂಬ ಕಾರಣಕ್ಕಾಗಿ. ಆದ್ದರಿಂದಲೇ, ತಾನು ಬಂದಕೂಡಲೇ, ಭೇಟಿಕೊಟ್ಟು ನಾಯಕರು ತನ್ನ ಕಾರ್ಯ ಮುಗಿಸಲಿಲ್ಲವಲ್ಲ, ಯಾವುದೋ ಕಾರಣದಮೇಲೆ ಒಂದು ದಿನ ಕಾಯಿಸಿದರಲ್ಲಾ ಎಂಬ, ಹಾಗೇ 'ನಾಯಕರು ಬೇಡ, ತಾನು ಬಂದು ಬಿಡಾರದಲ್ಲಿಳಿದ ಕೂಡಲೇ ಪ್ರಧಾನಿಗಳಾದರೂ ಬಂದು ಕಾಣಲಿಲ್ಲವಲ್ಲಾ' – ಎಂಬ ಅಸಮಾಧಾನಗಳು ಒಳಗೇ ಮುಳ್ಳಿನಂತೆ ಇರಿಯುತ್ತಿತ್ತು. ಇದು ಲಷ್ಕರಿ ವ್ಯವಹಾರವಲ್ಲ. ಸೂಜಿ ಹಾಕಿ ದಬ್ಬಳ ತೆಗೆಯುವಂಥ ಕೆಲಸ. ದುರ್ಗದವರ ಕಣ್ಣು ಬೆದರಿಕೆಗೆ ನಿಮ್ಮನ್ನು ಕಳಿಸಿದ್ದೇವೆ. ಅಷ್ಟಲ್ಲದೆ ಆಡುವ ಮಾತೇನಿದ್ದರೂ ವಕೀಲ ನಾರಾಯಣಯ್ಯನೇ ಮಾತನಾಡತಕ್ಕದ್ದು' ಎಂದು ಹೈದರಾಲಿ ಹೊರಡುವ ಮುನ್ನವೇ ತಾಕೀತು ಮಾಡಿ ಕಳಿಸದಿದ್ದರೆ, 'ಈ ಪಾಳೇಗಾರರ ಪೊಗರನ್ನು ಒಂದು ಕೈ ನೋಡಬಹುದಾಗಿತ್ತು' ಎಂದು ಒಳಗೇ ಕುದಿಯುತ್ತಲೇ ಓಲಗದ ಕರೆ ಬಂದ ದಿನ, ನಾಯಕರನ್ನು ಕಾಣಲು ಹೋದ, ತನ್ನ ಪರಿವಾರದವರೊಂದಿಗೆ.

ಬೆಳ್ಳಿಕಟ್ಟಿಗೆಯ ಹರಿಕಾರರೊಂದಿಗೆ ಬಂದ ದರ್ಬಾರು ಭಕ್ಷಿಗಳು ಮೊಕ್ದುಂ ಸಾಹೇಬರ ಪರಿವಾರವನ್ನು ಸಭಾದ್ವಾರದಲ್ಲಿ ಸ್ವಾಗತಿಸಿ, ಅವರ ಪರಿವಾರಕ್ಕೆಂದು ಮೀಸಲಾಗಿದ್ದ ಆಸನಗಳಲ್ಲಿ ಕುಳ್ಳಿರಿಸಿದರು.

ಸುಖಾಸನದಲ್ಲಿ ಕುಳಿತ ಮೊಕ್ದುಂ ಸಾಹೇಬ್ ಹಾಗೇ ಸಭಾಗೃಹದ ಸುತ್ತಲೂ ಕಣ್ಣಾಡಿಸಿದ.

ಬಹುವಿಶಾಲವಾದ ಓಲಗಸಾಲೆಯನ್ನು ಅಂಕಣ ಅಂಕಣವಾಗಿ ವಿಭಾಗಿಸಿ ನಿಂತ, ಸುವರ್ಣ ನಿರ್ಮಿತವೋ ಎಂಬಂತೆ ಕಾಣುವ ಬಹು ಎತ್ತರವಾದ, ವಿವಿಧ ಕೋಣಾಕೃತಿಯ ಕಂಭಗಳು, ಕಂಭಗಳ ಮೇಲಿನ ಚಿತ್ರಗೆಲಸದ ಕಮಾನುಗಳು, ಕಂಭಗಳನ್ನು ಓಲಗಸಾಲೆಯ ಛಾವಣಿಗೆ ಎತ್ತಿಹಿಡಿದಂತೆ ನಿಂತ ವಿವಿಧಭಂಗಿಯ ಮದನಿಕಾ ವಿಗ್ರಹಗಳು, ಬಣ್ಣಬಣ್ಣದ ಗಾಜಿನ ಹಲಗೆಗಳನ್ನು ಕೂಡಿಸಿದ ಸಭಾಭವನದ ಛಾವಣಿ, ಛಾವಣಿಗಳಿಂದ ಅಲ್ಲಲ್ಲಿ ಇಳಿಬಿಟ್ಟ ಗಾಜಿನ, ಅಲಂಕಾರದ ದೀಪಗುಚ್ಛಗಳು, ಸಭಾಭವನದಲ್ಲಿ ನವಿರಾದ ಕಂಪುಬೀರುತ್ತಾ ಹೊಗೆಯಾಡುವ ಅಗರುಬತ್ತಿಗಳನ್ನು ಹೊತ್ತ ಆಳೆತ್ತರದ ಸುಂದರ ಸ್ತ್ರೀವಿಗ್ರಹಗಳು, ಹೂಬಳ್ಳಿಗಳ ಚಿತ್ರ ಗೆಲಸ ಮಾಡಿದ ಅಲಂಕಾರದ ಮಾತುಗಳು, ಅಲ್ಲಲ್ಲಿ ಇಳಿಬಿಟ್ಟ ಬಣ್ಣ ಬಣ್ಣದ ತೆರೆಗಳು, ಕಂಭಕ್ಕೆ ಕಾವಲುಗಾರರಂತೆ ನಿಂತ ಬೆಳ್ಳಿಕಟ್ಟಿಗೆಯವರು, ಖಡ್ಗಧಾರಿ ಸೈನಿಕರು, ಅವರ ವಸ್ತ್ರಾಲಂಕಾರ, ತಮ್ಮ ಸ್ಥಾನಕ್ಕೆ ತಕ್ಕಂತೆ ವಿವಿಧಾಸನಗಳಲ್ಲಿ ಮಂಡಿಸಿದ ಪ್ರಧಾನಿ, ದಳವಾಯಿ, ಪಟ್ಟಣಶೆಟ್ಟಿ, ಮೊದಲಾದ ಸಭಾಸದರು –

ಈ ಸಭಾಭವನದ ವೈಭವಕ್ಕೆ ಕಳಶವಿಟ್ಟಂತೆ, ಅಷ್ಟು ವಿಶಾಲವಾದ ಸಭಾಭವನದಲ್ಲಿ ಕಲೆತವರೆಲ್ಲ ಕಣ್ಣನ್ನು ತನ್ನತ್ತ ಸೆಳೆವ ಅಷ್ಟೆತ್ತರದ ವೇದಿಕೆ ಮೇಲಿಟ್ಟ ನಾಯಕರು ಕುಳಿತುಕೊಳ್ಳುವ, ಮಣಿ, ರತ್ನಗಳ ಕಾಂತಿಯಿಂದ ಕಣ್ಣು ಕುಕ್ಕುವ ಸುವರ್ಣಸಿಂಹಪೀಠ, ಅದರ ಕೆಳಗಿನ ಮಖಮಲಿನ ಮೆತ್ತೆಯ ಪಾದಪೀಠ, ಆ ಸಿಂಹಪೀಠದ ಇಬ್ಬದಿಯಲ್ಲಿ ಬಂಗಾರದ ಕಟ್ಟಿಗೆ ಹಿಡಿದುನಿಂತ ಚೋಪದಾರರು, ಬಿಚ್ಚುಗತ್ತಿಯ ಭಟರು, ಅವರನ್ನು ರಕ್ಷಿಸಲು ಸ್ವರ್ಗದಿಂದಿಳಿದುಬಂದ ದೇವತೆಯಂತೆ, ನವರತ್ನಗಳ ಕಾಂತಿಯಿಂದ ವಿವಿಧವರ್ಣದ ಜ್ಯೋತಿಯಂತೆ ಕಂಗೊಳಿಸುವ ಸುವರ್ಣನಿರ್ಮಿತ ಹನುಮದ್ಗರುಡಲಾಂಛನ –

ಒಂದೊಂದೂ – ಮೊಕ್ದುಂ ಸಾಹೇಬನ ಅಸಮಾಧಾನದ ಹೊಗೆ ಕವಿದ ಕಣ್ಣುಗಳನ್ನು ಕುಕ್ಕಿ, ಅಸೂಯೆಯನ್ನು ಮೂಡಿಸಿ, ಆ ಕಿಚ್ಚಿನಲ್ಲಿ ಬೇಯುತ್ತಿರುವಾಗಲೇ, ಪರಾಕು ಹೇಳುತ್ತಾ ಸಭಿಕರನ್ನು ಎಚ್ಚರಿಸುವ ಪರಾಕು ಹೇಳಿಬಂದು, ಉಳಿದವರಂತೆಯೇ ತಾನು ಎದ್ದು ನಿಂತು, 'ರಾಸ್ತಾ', 'ರಾಸ್ತಾ' ಎಂದು ಕೂಗುತ್ತಾ ನಡುಬಗ್ಗಿಸಿದ ಬಂಗಾರದ ಕಟ್ಟಿಗೆಯವರು ದಾರಿ ತೋರುತ್ತಿರಲು, ಬೆನ್ನ ಬದಿಯಲ್ಲೋರ್ವ ಶ್ವೇತಛತ್ರ ಹಿಡಿದಿರಲು, ಇಬ್ಬದಿಯಲ್ಲೂ ಈರ್ವರು

ಶ್ವೇತಚಾಮರಗಳನ್ನು ಬೀಸುತ್ತಿರಲು, ಮುಂಬದಿಯಲ್ಲಿ ವಿವಿಧ ರಾಜಲಾಂಛನಗಳನ್ನು ಹೊತ್ತ ಭಟರು, ಬೆಂಬದಿಯಲ್ಲಿ ಬಿಚ್ಚುಗತ್ತಿಯ ಭಟರ ಮಧ್ಯೆ, ನವರತ್ನ ಖಚಿತ ದಿವ್ಯಾಭರಣಗಳಿಂದ ಅಲಂಕೃತನಾಗಿ, ಮುತ್ತಿನ ತುರಾಯಿಯ ಮುಂಡಾಸನ್ನು ನೆತ್ತಿಯ ಮೇಲೆ ಧರಿಸಿ, ನೋಡಿದವರಿಗೆ ಎಚ್ಚರಿಕೆ ಹೇಳುವಂತೆ ಸೊಂಟದಲ್ಲಿ ಖಡ್ಗ ರಾರಾಜಿಸುತ್ತಿರಲು, ಹೊತ್ತ ಹೆಸರೇ ಪುರುಷಾಕಾರ ತಳೆದಂತೆ, ಗಂಭೀರವಾಗಿ ನಡೆದು ಬಂದು, ದ್ವಿಜಸಮೂಹದ ರಾಜಾಶೀರ್ವಾದಮಂತ್ರಗಳನ್ನು ಕೇಳುತ್ತಾ, ಅವರಿತ್ತ ಪ್ರಸಾದ ಮಂತ್ರಾಕ್ಷತೆಗಳನ್ನು ಸ್ವೀಕರಿಸಿ, ಸಭಾಸದರಿತ್ತ ಮುಜುರೆಯನ್ನು ಒಪ್ಪಿಸಿಕೊಂಡು, ಸಿಂಹ ಪೀಠದಲ್ಲಿ ಠೀವಿಯಿಂದ ಕುಳಿತ ಮದಕರಿನಾಯಕರನ್ನು ನೋಡಿ, 'ನಮ್ಮ ನವಾಬರಿಗೆ ನಡು ಬಗ್ಗಿಸಿ ನಿಲ್ಲಬೇಕಾದವನಿಗಿಷ್ಟು ಪೊಗರು' ಎಂಬ ಕಿಡಿಮೂಡಿ, ರಿವಾಜಿಗೆ ಕಟ್ಟುಬಿದ್ದು ಉಳಿದವರಂತೆ ತಾನೂ ಮುಜುರೆ ಮಾಡಿ ಕುಳಿತುಕೊಂಡ, ಮೊಕ್ದುಂ ಸಾಹೇಬ, ಎದೆಸೆಟೆಸಿಕೊಂಡು; ಮದಕರಿನಾಯಕರನ್ನು ಕೆಣಕುವವನಂತೆ.

ನಾಯಕರೂ ಆ ನೋಟವನ್ನು, ಆ ನೋಟದ ಹಿಂದೆ ಇಣಿಕುತ್ತಿದ್ದ ಅಹಂಕಾರವನ್ನು ಗಮನಿಸಿ, ಸಭೆ ತನ್ನ ಕಾರ್ಯಕಲಾಪವನ್ನು ಮುಂದುವರಿಸುವಂತೆ, ದರ್ಬಾರುಭಕ್ಷಿಯತ್ತ ಕೈಸನ್ನೆ ಮಾಡಿದರು.

ಆ ಕೈಸನ್ನೆ ಕಂಡಕೂಡಲೇ, ಅಷ್ಟಿಷ್ಟು ಸದ್ದಿದ್ದ ಓಲಗಸಾಲೆಯಲ್ಲಿ ಗಂಭೀರ ಮೌನ ವ್ಯಾಪಿಸಿ, ಪ್ರಧಾನಿ ನರಸಪ್ಪಯ್ಯನವರು ಎದ್ದು ನಿಂತು, ರಾಜಪೀಠಕ್ಕೆ ನಮಸ್ಕರಿಸಿ –

"ಶ್ರೀರಂಗಪಟ್ಟಣದಿಂದ, ಶ್ರೀಮನ್ಮಹಾರಾಜಾರವರ ಸರ್ವಾಧಿಕಾರಿಗಳಾದ ನವಾಬ್ ಹೈದರಲ್ಲಿ ಖಾನ್ ಸಾಹೇಬರವರು, ಸರ್ದಾರ್ ಮೊಕ್ದುಂ ಸಾಹೇಬರೊಂದಿಗೆ, ಸ್ನೇಹಪೂರ್ವಕವಾಗಿ ಉಡುಗರೆಗಳನ್ನು, ತಮ್ಮ ಪರಾಂಬರಿಕೆಗಾಗಿ ಒಂದು ಪತ್ರವನ್ನು ಕಳಿಸಿರುತ್ತಾರೆ - ಒಪ್ಪಿಸಿಕೊಳ್ಳಬೇಕು"

-ಎಂದು ಹೇಳಿ, ಒಬ್ಬೊಬ್ಬರಾಗಿ ಶ್ರೀರಂಗಪಟ್ಟಣದಿಂದ ಬಂದ ನಿಯೋಗದವರ ಹೆಸರು, ಅಧಿಕಾರಿಗಳನ್ನು ನಾಯಕರಿಗೂ, ಸಭಿಕರಿಗೂ ಪರಿಚಯ ಮಾಡಿಕೊಟ್ಟ ಬಳಿಕ. ಮೊಕ್ದುಂ ಸಾಹೇಬರತ್ತ ತಿರುಗಿ –

"ಮುಂದಿನ ಮಾತನ್ನು ತಾವು ಆಡಬಹುದು" - ಎಂದರು.

ಪ್ರಧಾನಿಗಳು ಆ ಮಾತು ಆಡುತ್ತಿದ್ದ ಹಾಗೇ, ವಕೀಲ ನಾರಾಯಣಯ್ಯ ಎದ್ದು ನಿಂತು. ನಮಸ್ಕಾರ ಮಾಡಿ, ತಮ್ಮೊಂದಿಗೆ ಬಂದಿದ್ದವರಿಗೆ, ಹೈದರಾಲಿ ಕಳಿಸಿದ ಉಡುಗೊರೆಗಳನ್ನು ಚಿನ್ನ, ಬೆಳ್ಳಿಯ ಹರಿವಾಣಗಳಲ್ಲಿಟ್ಟು ಹೊತ್ತುತಂದವರಿಗೆ, ಅದನ್ನು ನಾಯಕರಿಗೆ ಒಪ್ಪಿಸಲು

ಸೂಚನೆಕೊಟ್ಟರು. ಆಳುಗಳು ಗೌರವಪೂರ್ವಕವಾಗಿ ತಂದ, ಹರಿವಾಣಗಳಲ್ಲಿದ್ದ ಆಭರಣಗಳ ಉಡುಗೊರೆಯನ್ನು, ತಟ್ಟೆಯನ್ನು ಮುಟ್ಟಿ, ಸ್ವೀಕರಿಸಿ –

"ನವಾಬ್ ಸಾಹೇಬ್‌ರವರಿಗೆ ನಮ್ಮಲ್ಲಿ ಪರಮವಿಶ್ವಾಸ. ಅವರು, ಅವರ ಕುಟುಂಬ ವರ್ಗದವರು ಕುಶಲವೇ ?" – ಎಂದು ಕೇಳಿದರು, ನಾಯಕರು.

"ನವಾಬ್ ಸಾಹೇಬರವರು ಕುಶಲವಾಗಿದ್ದು, ತಮ್ಮ ಕುಶಲವನ್ನು ವಿಚಾರಿಸುವಂತೆ ನಮಗೆ ಅಪ್ಪಣೆ ಮಾಡಿ. ಈ ಪತ್ರವನ್ನು ತಮಗೆ ಒಪ್ಪಿಸಲು ಅಪ್ಪಣೆ ಮಾಡಿದ್ದಾರೆ"

- ಎಂದು ಹೇಳಿ, ನಾರಾಯಣಯ್ಯ, ತಾನೇ, ರಾಜಪೀಠದವರೆಗೂ ನಡೆದುಬಂದು, ಮೊಹರಾಗಿದ್ದ ಕಿನಕಾಪಿನ ಥೈಲಿಯಲ್ಲಿದ್ದ ಪತ್ರವನ್ನು ನಾಯಕರಿಗೆ ಒಪ್ಪಿಸಿದ.

ಆತನಿಂದ ಅದನ್ನು ತೆಗೆದುಕೊಂಡು, ಆತನೊಂದಿಗೆ ತಮ್ಮ ಬಳಿ ಬಂದ ಪ್ರಧಾನಿಗಳಿಗೆ ಆ ಪತ್ರವಿದ್ದ ಥೈಲಿಯನ್ನಿತ್ತು –

"ಪತ್ರವಲ್ಲದೆ, ಮತ್ತೇನಾದರೂ ಹೇಳುವುದಿದೆಯೇ ?"

- ಎಂದು ಕೇಳಿದರು, ನಾಯಕರು, ತಮ್ಮ ಹತ್ತಿರ ಬಂದ ವಕೀಲ ನಾರಾಯಣಯ್ಯನ ತೂಕವನ್ನು ಆತನ ಮುಖಲಕ್ಷಣದಲ್ಲಿಯೇ ತೂಗುತ್ತಾ.

"ದೊಡ್ಡವರು ದೊಡ್ಡವರಿಗೆ ಹೇಳಬೇಕಾದ ಮಾತೆಲ್ಲಾ ಪತ್ರದಲ್ಲಿದೆ. ತಾವದನ್ನು ಖುದ್ದಾಗಿ ಪರಾಂಬರಿಸಿ ಉತ್ತರಕೊಡಬೇಕು. ತಮ್ಮಲ್ಲಿ ವೈಯಕ್ತಿಕವಾಗಿ ಹೇಳಲು ಅಪ್ಪಣೆಯಾದ ಮಾತೊಂದಿದೆ" ಎಂದ ನಾರಾಯಣಯ್ಯ,

"ಏನು?"

"ಚಿತ್ರದುರ್ಗಕ್ಕೆ ಶ್ರೀರಂಗಪಟ್ಟಣ ಪುಣೆಗಿಂತ ಹತ್ತಿರ. ಆದರೂ ತಾವು ನಮ್ಮನ್ನು ಈಚೆಗೆ ಮರೆತಿದ್ದೀರ. ಕುಶಲ ಸಮಾಚಾರ ತಿಳಿಯುವುದೂ ಕಷ್ಟವಾಗಿದೆ – ಎಂದು ತಿಳಿಸು ಎಂದು ನಮಗೆ ಅಪ್ಪಣೆಯಾಯಿತು."

-ನಮ್ರವಾಗಿ ವಿನಂತಿ ಮಾಡುವವನಂತೆ ಹೇಳಿದ ನಾರಾಯಣಯ್ಯ –

"ಆಪ್ತರ ಮಧ್ಯೆ ಇಷ್ಟು ಅಂತರವಿರಬಾರದು" - ಎಂದೂ ಹೇಳಿದ.

"ಇದೆ ಎಂದು ಹೇಳಿದವರಾರು ? ಶ್ರೀರಂಗಪಟ್ಟಣ ನಮಗೆ ಎಷ್ಟು ಹತ್ತಿರವೋ ನವಾಬ ಸಾಹೇಬರು ನಮ್ಮ ಹೃದಯಕ್ಕೆ ಮತ್ತಷ್ಟೇ ಹತ್ತಿರ. ನಮ್ಮದು ಸಣ್ಣ ರಾಜ್ಯ - ನವಾಬ – ಸಾಹೇಬರು ಕೃಷ್ಣಾದಿಂದ ಕನ್ಯಾಕುಮಾರಿಯವರೆಗೆ ಕಾರ್ಯಭಾರ ಮಾಡುವ ಹಿರಿಯರು. ಅವರಿಗೆ ನಮ್ಮ ನೆನಪೆಲ್ಲಿ ಮರೆತುಹೋಗಿತ್ತೋ ಎಂದು ಚಿಂತೆಯಾಗಿತ್ತು. ಈಗ ಅವರಿಂದ ಪತ್ರ ಬಂದಿತು, ತಾವೆಲ್ಲಾ ಬಂದಿರಿ. ಆತ್ಮೀಯರಿಂದ ಉಡುಗೊರೆ ತಂದಿರಿ. ನಮಗೆ ತುಂಬಾ ಸಂತೋಷವಾಯಿತು.

ದೂರದಿಂದ ಬಂದಿದ್ದೀರ. ಎರಡು ದಿನ ಸಂತೋಷವಾಗಿದ್ದು ನಮ್ಮ ಆತಿಥ್ಯ ತೆಗೆದುಕೊಂಡು ಹೋಗಬೇಕು" - ಎಂದರು ನಾಯಕರು.

"ಅಷ್ಟು ದಿನ ಇಲ್ಲಿರಲು ನಮಗೆ ಕಾಲಾವಕಾಶವಿಲ್ಲ. ಇದು ಯುದ್ಧ ಕಾಲ. ಹತ್ತಿರದಲ್ಲೇ, ಸೀರ್ಯದಲ್ಲಿ ಲಡಾಯಿ ನಡೆಯುತ್ತಿದೆ. ಖುದ್ದಾಗಿ ಸಾಹೇಬ್‌ಜಾದೆ ಟೀಪು ಸಾಹೇಬರೇ ಬಂದಿದ್ದಾರೆ. ಅದನ್ನು ಮರೆತು ಬೇರೇನೋ ಮಾತು ಆಡುತ್ತಿದ್ದೀರ."

- ಮಾತುಕಥೆಗಳ ಮಧ್ಯದಲ್ಲಿ ಎದ್ದು ನಿಂತು, ಎಲ್ಲರ ಗಮನವನ್ನೂ ತನ್ನತ್ತ ಸೆಳೆದು ಹೇಳಿದ ಮೊಕ್ದುಂ ಸಾಹೇಬ.

ಸಭಾಮರ್ಯಾದೆಯನ್ನು ಮೀರಿ, ಆತನಾಡಿದ ಮಾತನ್ನು ಕೇಳಿ, ಅದುವರೆಗೆ ಪ್ರಸನ್ನವಾಗಿದ್ದ ನಾಯಕರ ಮುಖ ಗಂಭೀರವಾಗಿ, 'ಇವರು ಯಾರು ?' ಎಂಬಂತೆ ಆತನ ನೋಡಿದರು.

"ಇವರು....ಸರ್ದಾರ್ ಮೊಕ್ದುಂ ಸಾಹೇಬರು...."

ತಟಕ್ಕನೆ ಕಾವೇರಿದ ವಾತಾವರಣವನ್ನು ಗಮನಿಸಿದ ನಾರಾಯಣಯ್ಯ, ಅದನ್ನು ಸಮಸ್ಥಿತಿಗೆ ತರಲು ಯತ್ನಿಸುತ್ತಾ ಏನೋ ಹೇಳಹೊರಟ. ಆದರೆ ಅದನ್ನು ಗಮನಿಸದೆ ನಾಯಕರು-

"ಸರ್ದಾರರನ್ನು ನಾವು ಬಲ್ಲೆವು. ಇವರ ಖ್ಯಾತಿಯನ್ನು ನಾವು ಕೇಳಿದ್ದೇವೆ. ನಗರದಲ್ಲಿ, ಬಂಕಾಪುರದಲ್ಲಿ, ಆನವಟ್ಟಿ ಯುದ್ಧಗಳಲ್ಲಿ ಇವರ ಪರಾಕ್ರಮವನ್ನು ನೋಡಿದ್ದೇವೆ. ಈಚೆಗೆ ಚಿನಕುರಳಿ ಲಡಾಯಿಯಲ್ಲೂ ಬಹಳ ಸಾಹಸ ಮಾಡಿದರೆಂದು ಕೇಳಿದೆವು. ಸರ್ದಾರರು, ಏನು ಹೇಳುವುದಿದೆಯೋ ಹೇಳಬೇಕು."

- ಕತ್ತಿಗೆ ಕತ್ತಿಯನ್ನು ಸೋಕಿಸಿದಂತೆ ಹೇಳಿದರು, ನಾಯಕರು.

ನಾಯಕರು ಚಿನಕುರುಳಿ ಯುದ್ಧದ ನೆನಪು ಮಾಡಿಕೊಟ್ಟಿದ್ದು, ಮೊಕ್ದುಂ ಸಾಹೇಬನಿಗೆ, ಮುಳ್ಳಿನಂತೆ ಇರಿದು –

"ತಮಗೆ ಎಲ್ಲಾ ತಿಳಿದಿದೆ. ಆದರೆ ರಾಜಾಸಾಹೇಬರು ನಮ್ಮನ್ನು ನೋಡಲು ಒಂದು ದಿನ ತೆಗೆದುಕೊಂಡಿರಿ. ಅದು ಸಾಲದೆಂಬಂತೆ ಇನ್ನೆರಡುದಿನ ಇಲ್ಲಿರಬೇಕು ಎನ್ನುತ್ತಿದ್ದೀರಾ...."

- ಎಂದು ಮುಂದೇನೋ ಹೇಳಲಿದ್ದ ಮೊಕ್ದುಂ ಸಾಹೇಬ.

"ರಾಜಾಸಾಹೇಬರು ವಿಶ್ವಾಸದಿಂದ ಹೇಳಿದ ಮಾತನ್ನು ಸರ್ದಾರ್ ಸಾಹೇಬರು ಅರ್ಥಾಂತರ ಮಾಡಬಾರದು. ಆಡಬೇಕಾದ ಮಾತನ್ನು ನಮಗೆ ಬಿಡಬೇಕು"

- ಎಂದು ಚುರುಕಾಗಿ ಮೊಕ್ದುಂ ಸಾಹೇಬನತ್ತ ತಿರುಗಿ, ಹೇಳಿ –

"ಕುದುರೆಯ ಬೆನ್ನಿನ ಮೇಲೆ ಕೂತೇ ಊಟ, ನಿದ್ರೆ ಮಾಡುವ ನಮ್ಮ ಸರ್ದಾರ ಸಾಹೇಬರ ಆತುರಸ್ವಭಾವದ ಮಾತನ್ನು ರಾಜಾಸಾಹೇಬರು ತಪ್ಪು ತಿಳಿಯಬಾರದು. ಆದಷ್ಟು ಬೇಗ ಬನ್ನಿ ಎಂದು ನಮಗೆ ನವಾಬ ಸಾಹೇಬರು ಹೇಳಿದ್ದುಂಟು. ಆದರೆ ನಿಂತ ಕಾಲಮೇಲೆ ಉತ್ತರ ತನ್ನಿ ಎಂದೇನೂ ಅಪ್ಪಣೆಯಾಗಿಲ್ಲ. ತಮ್ಮ ಅಪ್ಪಣೆಯಾದಂತೆ ಎರಡು ದಿನ ನಿಲ್ಲುತ್ತೇವೆ. ಪ್ರಭುಗಳು ನಿಧಾನವಾಗಿ ನವಾಬಸಾಹೇಬರ ಪತ್ರವನ್ನು ಪರಾಂಬರಿಸಿ, ವಿಶ್ವಾಸ ಬೆಳೆಯುವ ಉತ್ತರ ಬರೆಸಬೇಕು" – ಎಂದು ಕೈಮುಗಿದು ಹೇಳಿದ, ನಾರಾಯಣಯ್ಯ.

"ತಮ್ಮ ಆತುರ ನಮಗೆ ಅರ್ಥವಾಗುತ್ತದೆ. ಆದರೂ ಎರಡು ದಿನ ನಿಲ್ಲಲು ಒಪ್ಪಿದ್ದು ಸಂತೋಷ. ಬಿಡಾರದಲ್ಲಿ ತಮಗಾವ ತೊಂದರೆಯೂ ಇಲ್ಲವಲ್ಲ. ಏನಿದ್ದರೂ, ಊಳಿಗದವರಿಂದ ಏನಾದರೂ ಅನಾನುಕೂಲವಾಗಿದ್ದರೆ, ಪ್ರಧಾನಿಗಳಿಗೆ ಸುದ್ದಿ ಮುಟ್ಟಿಸಿ. ಇದ್ದ ವಿಶ್ವಾಸ ಉಳಿಯುತ್ತದೆ ಎಂಬ ಸಂತೋಷದಲ್ಲಿ ವಿಶ್ರಾಂತಿ ತೆಗೆದುಕೊಳ್ಳಿ - ಪ್ರಧಾನಿಗಳೇ, ಇವರ ಯೋಗಕ್ಷೇಮ ನಿಮ್ಮ ಜವಾಬ್ದಾರಿ"

- ಎಂದಷ್ಟೇ ಹೇಳಿ, ಸಭೆ ಮುಗಿಯಬೇಕೆಂಬ ಸೂಚನೆ ಕೊಟ್ಟರು, ನಾಯಕರು.

"ವಿಶ್ವಾಸ ಉಳಿಯುತ್ತದೆ ಎಂದು ತಾವು ಹೇಳಿದ್ದೇ ನಮಗೆ ರಾಜೋಪಚಾರ"

- ಎಂದ ನಾರಾಯಣಯ್ಯ, ಮಾತು ಅಷ್ಟಕ್ಕೇ ಮುಗಿಯಿತಲ್ಲ ಎಂಬ ಸಂತೋಷದಿಂದ, ಕೈಮುಗಿದು.

೮

"ನವಾಬ ಸಾಹೇಬರ ಪತ್ರದ ಸಾರಾಂಶ ತಮಗೆ ಮನವರಿಕೆಯಾಯಿತೇ ?"

- ಮರುದಿನ ನಡೆದ ಏಕಾಂತಸಭೆಯಲ್ಲಿ ನಾಯಕರು ನರಸಪ್ಪಯ್ಯನನ್ನು ಕೇಳಿದರು.

"ಬಿಸಿತುಪ್ಪ."

– ನರಸಪ್ಪಯ್ಯ ಯೋಚಿಸುತ್ತಾ ಹೇಳಿದರು.

"'ದಿನನಿತ್ಯ ಯುದ್ಧ ನಡೆಯುತ್ತಿದೆ. ಪೇಶ್ವೆಯವರಿಂದ ಅಪಾರ ಹಾನಿಯಾಗಿ, ಸೇನೆಗೆ ಹಣದ ಅಡಚಣೆಯಾಗಿದೆ. ಹತ್ತುಲಕ್ಷ ವರಹ ಕೊಡಿ ಎಂದು ಹೇಳಿ, ನಿಮ್ಮ ಕುಶಲ ಸಮಾಚಾರ ಆಗಿಂದಾಗ್ಗೆ ನಮಗೆ ತಿಳಿಸುವುದಕ್ಕಾಗಿ, ನಿಮ್ಮಲ್ಲಿ ನಾರಾಯಣಯ್ಯ, ಸೂರಪ್ಪ ಇಬ್ಬರನ್ನು ನಮ್ಮ ಅಂಚೆಹರಿಕಾರರನ್ನಾಗಿ ಇಟ್ಟುಕೊಳ್ಳಿ' ಎಂದಿದ್ದಾರೆ, ಹೈದರಾಲಿಯವರು. ಈ ಕಾಗದ ಹಿಡಿದರೆ ಹುಲಿ, ಬಿಟ್ಟರೆ ಹಾವು."

"ನಿಂತ ಕಾಲಲ್ಲಿ ಹತ್ತುಲಕ್ಷ ವರಹ ಕೊಡಿ ಎಂದರೆ, ಕೊಡಲಿಕ್ಕೆ ದುರ್ಗದ ಬಂಡೆಗಳೆಲ್ಲಾ ಬಂಗಾರದವು ಎಂದು ನವಾಬರು ತಿಳಿದಿರಬೇಕು. ಯಾರ ಸೀಮೆ ಲೂಟಿಮಾಡಿ ತರಬೇಕು, ಅಷ್ಟು ಹಣ ? ನವಾಬರಿಗೆ ಕೇಳುವುದೇನೋ ಸುಲಭ - ಸುಲಿಯುವುದು, ಕಕ್ಕುವುದು ಎರಡೂ ಅವರಿಗೆ ಅಭ್ಯಾಸವಾಗಿದೆ. ಆದ್ದರಿಂದ, ನಮಗೂ ಸದ್ಯಕ್ಕೆ ಹಣದ ಅಡಚಣೆ ಎಂದು ಹೇಳುವುದೇ ಸರಿ" – ಎಂದ ಚಪ್ಪೇಚಾವಡಿ ದಳವಾಯಿ ಹುಚ್ಚಪ್ಪನಾಯಕ.

"ಅಷ್ಟೇ ಅಲ್ಲ - ನಮ್ಮ ಆಸ್ಥಾನದಲ್ಲಿ ಅವರ ಅಂಚೆಹರಿಕಾರರನ್ನು ಇಟ್ಟುಕೊಳ್ಳುವುದು ಎಂದರೆ, ಹುಲ್ಲಿನ ಮೆದೆಯೊಳಗೆ ಬರಲು ಉರಿಯುವ ಕೊಳ್ಳಿಗೆ ಆಹ್ವಾನ ಕೊಟ್ಟಂತೆ. ಬೇಕಾದರೆ ಅಷ್ಟಿಷ್ಟು ಹಣ ಕೊಡಬಹುದು. ಆದರೆ ಅಂಚೆಹರಿಕಾರರನ್ನಿಟ್ಟುಕೊಳ್ಳುವುದು ಆಗದ ಕೆಲಸ." – ಬಾಣದ ಓಬನಾಯಕ, ಖಾರವಾಗಿ ಹೇಳಿದ.

"ಮೊಕ್ದುಂ ಸಾಹೇಬರ ಹಾಗೇ ನಮ್ಮ ದಳವಾಯಿಗಳೂ ಮಾತನಾಡುತ್ತಿದ್ದಾರೆ. ಅಷ್ಟು ಸಲೀಸಾಗಿ ಉತ್ತರ ಹೇಳುವಂಥ ಪತ್ರವಲ್ಲ ಇದು. ನಾವು ಹಾಗೆ ಹೇಳಬಹುದು ಎಂದೇ ಹತ್ತಿರ ಇರುವ ಸೀರ್ಯದ ಸೇನೆಯ ನೆನಪು ಕೊಡಲು ಖುದ್ದಾಗಿ ಮೊಕ್ದುಂ ಸಾಹೇಬರನ್ನು ಕಳಿಸಿದ್ದಾರೆ, ನವಾಬರು. ನಾರಾಯಣಯ್ಯನದು ನಯವಾದ ಮಾತು. ಆ 'ವಿಶ್ವಾಸ ಉಳಿಸಿಕೊಳ್ಳಿ' ಎಂಬ ನಾಜೂಕು ಮಾತಿನ ಹಿಂದೆಯೇ ಹಾವು ಹೆಡೆಯಾಡಿಸುತ್ತಿದೆ. ನಿರ್ದಾಕ್ಷಿಣ್ಯವಾಗಿ ಮಾತನಾಡಿ ಇದಿರುಹಾಕಿಕೊಳ್ಳುವ ಸ್ಥಿತಿಯಲ್ಲಿಲ್ಲ, ನಾವು. ಆದ್ದರಿಂದ ತಾವು ಆಲೋಚನೆ ಮಾಡಬೇಕು" – ಎಂದ ಉಪಪ್ರಧಾನಿ ಪರಶುರಾಮನಾಯಕ.

ಆ ಮಾತು ಕೇಳಿ, 'ನನ್ನ ಗರಡಿಯಲ್ಲಿ ಪಳಗಿದ್ದು ಸಾರ್ಥಕವಾಯಿತು' ಎಂಬಂತೆ ಮೆಚ್ಚುಗೆಯ ಭಾವದಿಂದ ಪರಶುರಾಮನಾಯಕನನ್ನು ನೋಡುತ್ತಾ –

"ಚಿಕ್ಕನಾಯಕರು ಹೇಳುವುದು ಸರಿ. ದುಡುಕಿಗೆ ಇದು ಸಮಯವಲ್ಲ. ದಳವಾಯಿಗಳಂತೆ, ನವಾಬರ ಪತ್ರ ನಮಗೂ ಹಿಡಿಸಿಲ್ಲ. ಬರೀ ಹಣ ಕೇಳುವುದಷ್ಟೇ ಅಲ್ಲ ನಯವಾಗಿ ನಮ್ಮನ್ನು ಅಪಮಾನಿಸುವ ಹೊಂಚೂ ಇದೆ" - ಎಂದರು ನರಸಪ್ಪಯ್ಯ.

"ಅಪಮಾನ ! - ಪತ್ರದಲ್ಲಿ ಅಂಥ ಮಾತೇನಿದೆ ?"

– ಪ್ರಧಾನಿಗಳ ಮಾತೇ ಅರ್ಥವಾಗದಂತೆ ಕೇಳಿದರು, ನಾಯಕರು.

"ಸಮಾನಸ್ಕಂಧರ ಆಸ್ಥಾನಕ್ಕೆ ವಕೀಲರನ್ನು ಕಳಿಸುವುದು ಸಂಪ್ರದಾಯ – ಪೇಶ್ವೆಗಳು ಮಾಡಿದ ಹಾಗೆ. ಅದು ಬಿಟ್ಟು ಮಾಮೂಲಿ ಅಂಚೆಹರಿಕಾರರನ್ನು ಇಟ್ಟುಕೊಳ್ಳಿ ಎಂದರೆ, ನೀವು ನಮಗಿಂತ ಒಂದು ಗೇಣು ಎತ್ತರದಲ್ಲಿ ಕಡಮೆ ಎಂದು ಹೇಳಿದ ಹಾಗೇ. ನಮಗೇನೋ ಇದು ಉದ್ದೇಶಪೂರ್ವಕವಾಗಿಯೇ ನಮ್ಮನ್ನು ಕೆಣಕುವ ಹಂಚಿಕೆ ಎಂದು ತೋರುತ್ತದೆ"

- ಎಂದರು ನರಸಪ್ಪಯ್ಯ, ತಮ್ಮ ಮನೋಗತವನ್ನು ವಿವರಿಸಿ.

"ಹೂ – ಯೋಚಿಸಿದರೆ ಹಾಗೇ ಕಾಣುತ್ತದೆ. ಮೊದಲು ಈ ಸೂಕ್ಷ್ಮ ತಿಳಿದಿರಲಿಲ್ಲ."

– ನರಸಪ್ಪಯ್ಯನವರು ಹೇಳಿದುದನ್ನು ಕೇಳಿ, ಕ್ಷಣಕಾಲ ತಾವೂ ಯೋಚಿಸಿ ಹೇಳಿದರು, ನಾಯಕರು –

"ಹಾಗೆಂದು ಪರಶುರಾಮನಾಯಕರ ಮಾತನ್ನು ತಳ್ಳಿಹಾಕಲು ಸಾಧ್ಯವಿಲ್ಲ....ಈಗೇನು ಮಾಡುವುದು ?"

"ನಿಮಗೆ ಸರಿತೋರಿದರೆ ಒಂದು ಕೆಲಸ ಮಾಡಬಹುದು...."- ನರಸಪ್ಪಯ್ಯ ಹೇಳಿದರು.

"ಏನು ?"

"ನವಾಬರು ವಕೀಲರನ್ನು ಕಳಿಸಿಲ್ಲ. ಅಂಚೆಹರಿಕಾರರನ್ನು ಕಳಿಸಿದ್ದಾರೆ. ಆದ್ದರಿಂದ, ಅವರನ್ನು ಇಟ್ಟುಕೊಳ್ಳುವುದು ಎಂದಾದರೆ, ಮಾಮೂಲಿ ಅಂಚೆಹರಿಕಾರರನ್ನು ಇಟ್ಟುಕೊಂಡ ಹಾಗೆ, ಅವರಿಗೆ 'ದಿನವೂ ಆಸ್ಥಾನಕ್ಕೆ ಬರುವ ಅಗತ್ಯವಿಲ್ಲ' ಎಂದು ಹೇಳಿ, ಅವರ ದಿನನಿತ್ಯದ ನಡವಳಿಕೆಯ ಬಗ್ಗೆ ಉಸ್ತುವಾರಿ ನೋಡಿಕೊಳ್ಳಲು ಕೊತ್ವಾಲಚಾವಡಿಗೆ ಅಪ್ಪಣೆಮಾಡಿ, ನವಾಬರ ಮಾತನ್ನು ನವಾಬರಿಗೆ ಮುಟ್ಟಿಸಿದರೆ, ಈ ತಲೆನೋವನ್ನು ಸದ್ಯಕ್ಕೆ ತಡೆದುಕೊಳ್ಳಬಹುದು. ಅವರ ಮಾತೂ ಉಳಿಯುತ್ತದೆ, ನಮ್ಮ ಅಪಮಾನವೂ ತಪ್ಪುತ್ತದೆ"

- ಎಂದು ನರಸಪ್ಪಯ್ಯ, ತಮ್ಮ ಅಭಿಪ್ರಾಯವನ್ನು ವಿವರಿಸಿ ಹೇಳಿದರು.

"ಇನ್ನು ಮೊಕ್ದುಂ ಸಾಹೇಬರ ಜೊತೆಯಲ್ಲಿ ಅವರು ಕೇಳಿದ ಹಣ ಕೊಡುವ ವಿಚಾರ ಪ್ರಭುಗಳು ತೀರ್ಮಾನಿಸಬೇಕು."

"ನಾವು ಹೇಳುವುದಿಷ್ಟೆ – ಈಗ ಎಲ್ಲವೂ ಕಲಸುಮೇಲೋಗರವಾಗಿರುವ ಕಾಲ, ಎಲ್ಲಾ ತಿಳಿಯಾಗಿ, ಯಾರ ಕೈಮೇಲು ಎಂದು ಅರ್ಥವಾಗುವವರೆಗೂ, ಆದಷ್ಟು ಹಣ ಕೊಟ್ಟು, ಕಾಲವನ್ನು ಕೊಂಡುಕೊಳ್ಳುವುದೇ ಲೇಸು ಎಂದು ಕಾಣುತ್ತದೆ.... ಏನು ಅಜ್ಜಯ್ಯ, ನಿಮ್ಮ ಬೊಕ್ಕಸ ಏನು ಹೇಳುತ್ತದೆ ?"

- ಎಂದು ಅದುವರೆಗೂ ಮಾತಿನಲ್ಲಿ ಬೆರೆಯದಿದ್ದ ಬೊಕ್ಕಸದ ಅಜ್ಜಯ್ಯನನ್ನು ಕೇಳಿದರು, ನಾಯಕರು.

"ಹತ್ತುಲಕ್ಷ ಎಂದರೆ ಆಗದ ಮಾತು - ಒಂದೆರಡು ಲಕ್ಷ ಆದರೆ ಆಗಬಹುದು" – ಎಂದ ಬೊಕ್ಕಸದ ಅಜ್ಜಯ್ಯ.

"ಆಯಿತು – ಅಷ್ಟಕ್ಕೆ ಮೊಕ್ದುಂ ಸಾಹೇಬರನ್ನು ಒಪ್ಪಿಸುವ ಭಾರವನ್ನು ಪ್ರಧಾನಿಗಳು ಹೊರಲಿ. ಆದರೆ ಇಷ್ಟೆ - ನಾವು ಕೊಟ್ಟ ಹಣ ಸಾರ್ಥಕವಾಗಬೇಕು."

"ಅಂದರೆ - ?"

- ನಾಯಕರ ಮಾತು ಕೇಳಿ, ಮರುಪ್ರಶ್ನೆ ಮಾಡಿದರು, ನರಸಪ್ಪಯ್ಯ.

"ಏನಾದರೂ – ಇವತ್ತಲ್ಲ, ನಾಳೆ - ಮರಾಠರನ್ನೋ, ನವಾಬರನ್ನೋ ಎದುರಿಸುವ ತಲೆನೋವಂತೂ ನಮಗೆ ತಪ್ಪಿದ್ದಲ್ಲ. ಇಬ್ಬರಲ್ಲಿ ಒಬ್ಬರು, ಯಾರಾದರೂ ನಮಗೆ ಬೇಡದ ತಾಳಿ ಕಟ್ಟುತ್ತಾರೆ. ಆದ್ದರಿಂದ ನಮಗೆ ದೊರೆಯುವಷ್ಟು ಕಾಲಾವಕಾಶದಲ್ಲಿ ನಮ್ಮ ಸೇನೆಯನ್ನು ಬಲಪಡಿಸಿಕೊಳ್ಳಬೇಕು. ಇವತ್ತಿನದು ಗುಡುಗು; ಬರಲಿರುವುದು ಸಿಡಿಲು. ಅದನ್ನು ಎದುರಿಸಲು ನಾವು ಸಿದ್ಧರಾಗಬೇಕು. ಅತ್ತಕಡೆ ನಮ್ಮ ದಳವಾಯಿಗಳು ಯೋಚನೆ ಮಾಡಬೇಕು."

- ಚಿಂತಿಸುತ್ತಾ, ನರಸಪ್ಪಯ್ಯನವರು ನೋಡುತ್ತಾ ಹೇಳಿದರು, ನಾಯಕರು.

"ಪ್ರಭುಗಳು ಹೇಳಿದ ಮಾತು ಸರಿ ಎಂದೇ ನನಗೆ ತೋರುತ್ತದೆ. ಏನೇ ಆದರೂ ನಮಗೆ ಮಾತ್ರ ಒಂದೇ ಸಮಾಧಾನ."

"ಏನು ?"

"ಪ್ರಭುಗಳು ಸಣ್ಣ ಅಪಮಾನದ ಮಾತು ಹಿಡಿದು. ದುಡುಕಿ ದೊಡ್ಡದು ಮಾಡಲಿಲ್ಲ."

"ನಾವು ಹಾಗೆ ಮಾಡಿದರೆ, ಅದು ನಿಮ್ಮ ಪ್ರಧಾನಿಗಿರಿಗೆ ಅಪಮಾನ ಅಲ್ಲವೇ ? ಪರಶುರಾಮನಾಯಕರು ನಿಮ್ಮ ಕೈಕೆಳಗೆ ಕಲಿತು, ನಮ್ಮ ಬುದ್ಧಿಯನ್ನು ದಿನದಿನವೂ ಹದಮಾಡುತ್ತಿದ್ದಾರೆ. ಚಿಂತಿಸಬೇಡಿ - ದುಡುಕಿ ರಾಜ್ಯ ಕಳೆದುಕೊಳ್ಳಲು ನಾವು ದುರ್ಯೋಧನನಲ್ಲ. ಆದ್ದರಿಂದ ಆ ಮಾತು ಬಿಡಿ - ಮುಂದೆ ಹೇಳುವದಿದ್ದರೆ ಹೇಳಿ ?" – ಎಂದರು ನಾಯಕರು, ಉಳಿದವರ ಕಡೆ ನೋಡುತ್ತಾ.

"ನನ್ನದೊಂದು ಸಣ್ಣ ಮನವಿ."

– ಚಪ್ಪೇಚಾವಡಿ ದಳವಾಯಿ ಹುಚ್ಚಪ್ಪನಾಯಕ ಮೌನ ಮುರಿದು ಮಾತನಾಡಿದ.

"ಏನು?"

"ನವಾಬರ ಅಂಚೆಹರಿಕಾರರನ್ನು ಊರಲ್ಲಿಟ್ಟುಕೊಂಡು, ಅವರ ಮೇಲೆ ಗಸ್ತುಕಾಯುವುದು ಬಹು ನಾಜೋಕಿನ ಕೆಲಸ. ಅದನ್ನು ಕೊತ್ವಾಲಚಾವಡಿಗೇ ಬಿಟ್ಟರೆ ಆಗದು. ಆದ್ದರಿಂದ ಸಮಯಸಂದರ್ಭ ಅರಿತು ಪ್ರಭುಗಳ ಹತ್ತಿರ ನೇರವಾಗಿ ಮಾತನಾಡುವ ಅವಕಾಶ ಇರುವವರೊಬ್ಬರನ್ನು ಆ ಚಾವಡಿಯ ಮೇಲುಸ್ತುವಾರಿಗೆ ಹಾಕುವುದು ಲೇಸು."

"ಇವೊತ್ತು ಎಲ್ಲರ ತಲೆಯೂ ನಾಳಿನ ಯೋಚನೆ ಮಾಡುತ್ತಿದೆ. ಇದು ನವಾಬರು ನಮಗೆ ಮಾಡಿದ ಉಪಕಾರ, ಪ್ರಧಾನಿಗಳೇ. ಈ ಕೆಲಸವನ್ನು ನೀವೇ ಏಕೆ ವಹಿಸಿಕೊಳ್ಳಬಾರದು? ಕಾಶಣ್ಣನಾಯಕರನ್ನು ಕರೆಸಿ, ನಾವು ಹೇಳುತ್ತೇವೆ" – ಎಂದರು ನಾಯಕರು.

"ವಹಿಸಿಕೊಳ್ಳಬಹುದು. ಅದರಲ್ಲಿ ತಪ್ಪೇನೂ ಇಲ್ಲ. ಆದರೆ ನಮಗೂ ವಯಸ್ಸಾಯಿತು. ಪ್ರಭುಗಳು ಹೊರಿಸಿದಷ್ಟು ಭಾರವನ್ನು ಹೊರುವ ಆಸೆ ಇದ್ದರೂ, ಶಕ್ತಿಯಿಲ್ಲ. ನನಗನಿಸುತ್ತದೆ – ಈ ಕೆಲಸ ಚಿಕ್ಕದು ಎಂದು ತಿಳಿಯದಿದ್ದರೆ, ಈ ಕೆಲಸಕ್ಕೆ ಚಿಕ್ಕನಾಯಕರನ್ನು ನೇಮಿಸುವುದು ಲೇಸು. ಪರಶರಾಮನಾಯಕರು ಪ್ರತಿನಿತ್ಯವೂ ನಮ್ಮಿಬ್ಬರ ಬಳಿ ಓಡಾಡುವವರು. ಆದುದರಿಂದ ಬೇಕಾದಾಗ ಯಾರ ಸಲಹೆ ಬೇಕೋ, ಅವರ ಸಲಹೆ ಪಡೆಯಬಹುದು. ಹಾಗೇ ಕಾಶಣ್ಣನಾಯಕರಿಗೆ ಅಸಮಾಧಾನವಾಗುವುದೂ ತಪ್ಪುತ್ತದೆ." - ನರಸಪ್ಪಯ್ಯ ಹೇಳಿದರು.

"ಕಾಶಣ್ಣನಾಯಕರಿಗೆ ಅಸಮಾಧಾನ - ಅದೇನು ಮಾತು ?" ಚಕಿತರಾದಂತೆ ಕೇಳಿದರು, ನಾಯಕರು.

"ಇಷ್ಟು ದಿನ ಕೊತ್ವಾಲಚಾವಡಿಯನ್ನು ಸಮರ್ಥವಾಗಿ ನಿರ್ವಹಿಸಿದ ದಕ್ಷರು ಅವರು. ಅವರ ಮೇಲೆ ಸಲಹೆಗೆ ಮತ್ತೊಬ್ಬರನ್ನು ನೇಮಿಸಿದರೆ, 'ನನ್ನ ಯೋಗ್ಯತೆಯ ಬೆಲೆ ಕಡಮೆಯಾಯಿತು' ಎಂದು ಅವರು ಅಸಮಾಧಾನಪಡಬಹುದು. ಚಿಕ್ಕನಾಯಕರನ್ನೇ ನೇಮಿಸಿದರೆ -ಅದೂ ಪ್ರಭುಗಳೇ ಹೇಳಿ, ಅವರನ್ನು ಒಪ್ಪಿಸಿದರೆ - ಆಗ ಅವರ ಚಾವಡಿಗೆ ಮತ್ತಷ್ಟು ಹೆಚ್ಚಿನ ಬೆಲೆ ಬರುತ್ತದೆ, ಚಿಕ್ಕನಾಯಕರಿಂದಾಗಿ."

"ಏನು ಪರಶುರಾಮಂಣ. ನೀವೇನು ಹೇಳುತ್ತೀರ - ಪ್ರಧಾನಿಗಳ ಮಾತಿಗೆ ?"

- ತಮ್ಮನತ್ತ ತಿರುಗಿ ಕೇಳಿದರು, ನಾಯಕರು.

"ನನ್ನನ್ನು ಕೇಳುವುದೇನು. ಯಾವತ್ತೂ, ಯಾವುದಕ್ಕೂ ನಿಮ್ಮ ಮಾತಿಗೆ ಅಡ್ಡಿ ಬಂದಿಲ್ಲ. ಆದರೆ ಇದಕ್ಕೆ ಮುಖ್ಯ ಒಪ್ಪಬೇಕಾದವರು ಒಪ್ಪುತ್ತಾರೋ ಇಲ್ಲವೋ ಹೇಳಿ" ಎಂದ ಪರಶುರಾಮನಾಯಕ.

"ಯಾರು ?"

"ಚಪ್ಪೇಚಾವಡಿ ದಳವಾಯಿಗಳು. ಎಲ್ಲ ಚಾವಡಿಗಳ ಮೇಲಿನ ದಳವಾಯಿಗಳೂ ಅವರೇ ಅಲ್ಲವೆ ? ಅವರು ಒಪ್ಪಿದರೆ ಮುಂದಿನದು ಆಡಬಹುದು."

"ಇದಾವ ಕಿರೀಟ ಹೋಗುವ ಘನಂದಾರಿ ಮಾತು. ತಿಳಿದವರೆಲ್ಲಾ ಒಪ್ಪಿ ಹೀಗಾಗ ಬೇಕೆಂದರೆ, ಹೆಸರಿನ ಬಣ್ಣ ಕೊಂಚ ಕಡಿಮೆಯಾಯಿತು ಎಂದು ನಾವೆಂದೂ ತರಲೆ ತೆಗೆದವರಲ್ಲ. ನಮ್ಮ ತಲೆಯನ್ನೇ ನಿಮಗೆ ಒಪ್ಪಿಸಿದ್ದೀವಿ. ಸರಿಕಂಡ ಹಾಗೆ ಮಾಡಿ"

- ಎಂದು ಹೇಳಿದ, ಚಪ್ಪೇಚಾವಡಿ ದಳವಾಯಿ ಹುಚ್ಚಪ್ಪನಾಯಕ.

"ಎಲ್ಲ ಮಾತುಗಳಲ್ಲೂ ನಾವು ಹೀಗೆ ಒಮ್ಮತವಾಗಿದ್ದರೆ, ದುರ್ಗಕ್ಕೆ ಎಂದೂ, ಯಾರಿಂದಲೂ ಅಪಾಯವಿಲ್ಲ, ಪ್ರಧಾನಿಗಳೇ, ಈಗ ನಾವು ಚಿಂತಿಸಬೇಕು ಅಂದುಕೊಂಡದ್ದಕ್ಕಿಂತ

ಹೆಚ್ಚು ದೂರ ಯೋಚಿಸಿಯಾಯಿತು. ಇನ್ನು ನವಾಬರ ಜನಕ್ಕೆ ಅಸಮಾಧಾನವಾಗದ ಹಾಗೆ, ಈ ಕಾರ್ಯಭಾರ ಮುಗಿಸಿಬಿಡಿ" - ಎಂದರು ನಾಯಕರು, ಹಗುರವಾದ ಹೃದಯದಿಂದ.

ಮಾತು ಅಲ್ಲಿಗೆ ಮುಗಿದು, ಬಂದಿದ್ದವರೆಲ್ಲರೂ ನಾಯಕರಿಗೆ ವಂದಿಸಿ ತೆರಳಿದರು.

* * *

ಅವರೆಲ್ಲರೂ ಹೋದ ಬಳಿಕ, ಪರಶುರಾಮನಾಯಕ –

"ಅಣ್ಣಾ, ನೀವೂ ಮಾತಿನ ನಯ ಕಲಿತುಬಿಟ್ಟಿರಿ - ಅಭಿಮಾನದ ಬಿಗಿ ಕಡಿಮೆ ಮಾಡಿ"

- ಎಂದ ಅಭಿಮಾನದಿಂದ, ಮೆಚ್ಚುಗೆ ಸೂಸುವ ಧ್ವನಿಯಲ್ಲಿ.

"ಹೂ - ರಾಜಕಾರಣಕ್ಕಾಗಿ ಮನುಷ್ಯತ್ವವನ್ನೇ ಮರೆಯಬೇಕು ಎಂದಾಗ, ಅಭಿಮಾನ, ಮನುಷ್ಯತ್ವಕ್ಕಿಂತ ಹಿರಿದೇ? ನೋಡೋಣ - ಕಾಲ ನಮಗೆ ಇನ್ನೂ ಏನೇನು ಬುದ್ಧಿ ಕಲಿಸುತ್ತದೆಯೋ, ಏನಾದರಾಗಲಿ, ಈ ನಿಮಿಷಕ್ಕಂತೂ ಮಾತು ಮುಗಿದು, ಸಮಾಧಾನವಾಗಿ ಉಸಿರಾಡಲು ಅವಕಾಶವಾಯಿತು" - ಎಂದ ಮದಕರಿನಾಯಕ.

ಆ ಮಾತಾಡಿದಾಗ –

ಆತನ ಧ್ವನಿಯಲ್ಲಿ, ಅದುವರೆಗೂ ಕಾಣದಿದ್ದ ಆಯಾಸ ಕಂಡಿತು.

೬

'ಇನ್ನು ಸಮಾಧಾನವಾಗಿ ಉಸಿರಾಡಬಹುದು.'

ಚಿತ್ರದುರ್ಗದ ಆಸ್ಥಾನದಲ್ಲಿ ನಾರಾಯಣಯ್ಯ, ಸೂರಪ್ಪ ನವಾಬರ ಅಂಚೆಹರಿಕಾರರಾಗಿ ನೇಮಕಗೊಂಡು, 'ಹತ್ತು ಲಕ್ಷ ಕೇಳಿದರೆ ಎರಡು ಲಕ್ಷ ಕೊಟ್ಟು ಕೈಯಾಡಿಸಿದರು. ಕುದುರೆ ಇನ್ನೂ ತುಂಟಾಟವಾಡುತ್ತಿದೆ. ಲಗಾಮು ಬಿಗಿಮಾಡಿ' ಎಂದು ತನ್ನ ಕಡೆಯವರಿಗೆ ಮೊಕ್ದುಂ ಸಾಹೇಬ ಎಚ್ಚರಿಸಿ, ನಾಯಕರು ಹೈದರಾಲಿಗೆ ಕೊಟ್ಟ ಉಡುಗೊರೆಗಳನ್ನು, ಪ್ರತ್ಯುತ್ತರವನ್ನು ತೆಗೆದುಕೊಂಡು, 'ದುರ್ದಾನ' ತೆಗೆದುಕೊಂಡವನಂತೆ, ಚಿತ್ರದುರ್ಗದಿಂದ ತೆರಳಿದ ಬಳಿಕ –

'ಇನ್ನು ಸಮಾಧಾನವಾಗಿ ಉಸಿರಾಡಬಹುದು' – ಎಂದುಕೊಂಡಿದ್ದ ಮದಕರಿನಾಯಕ.

ಆದರೆ ಕಾಲಕ್ಕೇ ಸಮಾಧಾನವಾಗಿ ಉಸಿರಾಡಲು ಅವಕಾಶವಿಲ್ಲದಂತಿತ್ತು, ಅಂದಿನ ರಾಜಕೀಯ ಪರಿಸ್ಥಿತಿ.

ಅಂಕೆ ತಪ್ಪಿದ ಪಂಜು ತಾನು ಉರಿಯುವುದಷ್ಟೇ ಅಲ್ಲದೆ, ಹೊಕ್ಕ ಮನೆಗಳಿಗೆಲ್ಲಾ ಕಿಚ್ಚಿಡುವಂತೆ, ರಾಜ್ಯದಾಹದಿಂದ ದಹಿಸುತ್ತಾ, ತಾನು ಬೆಳೆದ ಪೇಶ್ವೆಯ ಅರಮನೆಗಷ್ಟೇ ಅಲ್ಲ, ಇಡೀ ದಕ್ಷಿಣ ಭಾರತದಲ್ಲೇ, ಅನಿಶ್ಚಯ ರಾಜಕೀಯ ಪರಿಸ್ಥಿತಿಯ ದಾವಾನಲವನ್ನು ಹೊತ್ತಿಸಿ, ತಲೆಯ ಮೇಲೆ ಕೊಲೆಯ ಕಲಂಕವನ್ನು ಹೊತ್ತು, ಪುಣೆಯಲ್ಲಿರಲಾಗದೆ, ಮರಾಠಾ ಸರದಾರರ ವಿಶ್ವಾಸಗಳಿಸಲಾಗದೆ, ಇಂಗ್ಲಿಷರ ಆಶ್ರಯವನ್ನು ಬೇಡಿ, ಆ ಹೊಸ ಪಿಡುಗು, ಮರಾಠರ ಹಳೆಯ ಶತ್ರುವಾದ ಹೈದರಾಲಿಯೊಂದಿಗೆ ಒಂದು ಕಡೆ ಸೆಣಸುತ್ತಿದ್ದ ಪೇಶ್ವೆಶಾಹಿ, ಅತ್ತ ಇಂಗ್ಲೀಷರೊಂದಿಗೂ ಹೋರಾಡಲು ಅವಕಾಶ ಕಲ್ಪಿಸಿ, ಹಸುಳೆ ಮಾಧವರಾಯನನ್ನು ಪೇಶ್ವೆ - ಪಟ್ಟಕ್ಕೇರಿಸಿದ ಪ್ರಧಾನಿ ನಾನಾ ಫಡ್ನವೀಸನ ಜಾಣ್ಮೆಯೊಂದಿಗೆ, ಭಾರತದ ಭಾಗ್ಯವನ್ನೂ ಪರೀಕ್ಷಿಸುವ ಸಂಕಷ್ಟವನ್ನು ತಂದೊಡ್ಡಿದ್ದ ರಘೋತ್ತಮರಾಯ.

ಅತ್ತ ಬ್ರಿಟಿಷರೊಂದಿಗೆ ಹೋರಾಡುತ್ತಾ, ಇತ್ತ ಹೈದರಾಲಿಯೊಂದಿಗೆ ಸೆಣಸುತ್ತಾ, ಒಂದೊಂದು ಕೋಟೆಯನ್ನು ಉಳಿಸಿಕೊಳ್ಳಲೂ ಶತಪ್ರಯತ್ನ ಮಾಡುತ್ತಿದ್ದ ಸಮಯದಲ್ಲಿ ಮರಾಠರು ತಮ್ಮ ಪರಮಾಪ್ತಮಿತ್ರನೆಂದು ನಂಬಿದ ದುರ್ಗದ ನಾಯಕರು ಈಗ ಹೈದರಾಲಿಯ ಬೆದರಿಕೆಗೆ ತಲೆಬಾಗಿದುದು, ಚಿತ್ರದುರ್ಗದಲ್ಲಿ ಪೇಶ್ವೆ ಆಸ್ಥಾನದ ವಕೀಲರಿಗೆ ಕಳವಳವನ್ನುಂಟು ಮಾಡಿತು.

ನೆತ್ತಿಯ ಮೇಲೆ ಈ ಕಳವಳದ ಕತ್ತಲ ಹೊರೆಯನ್ನು ಹೊತ್ತೇ ವಕೀಲ ಪುರುಷೋತ್ತಮರಾಯ, ಪ್ರಧಾನಿ ನರಸಪ್ಪಯ್ಯನವರನ್ನು ಕಂಡು-

"ನಮಗಿನ್ನು ಇಲ್ಲಿಯ ಆಸ್ಥಾನದಲ್ಲೇನು ಸ್ಥಾನ-ಮಾನ ?" – ಎಂದು ಕೇಳಿದ.

ದುರ್ಗದ ಪ್ರಧಾನಿಯಾದರೂ, ನರಸಪ್ಪಯ್ಯನಿಗೆ ಆ ನೇರವಾದ ಪ್ರಶ್ನೆಗೆ, ಅಷ್ಟೇ ನೇರವಾದ ಉತ್ತರ ಕೊಡಲು ಸಾಧ್ಯವಾಗದೆ –

"ನಮ್ಮ ಸ್ಥಾನಮಾನವೇ ಏನೆಂಬುದು ತಕ್ಕಡಿಯಲ್ಲಿ ತೂಗುತ್ತಿರುವಾಗ, ನಿಮಗೆ ನಾವೇನು ಹೇಳುವುದು. ನಾಲ್ಕು ದಿನ ದಯವಿಟ್ಟು ಕಾದು ನೋಡಿ....ತಾಂಬೂಲ ಹಾಕಿಕೊಳ್ಳಿ, ನಿಧಾನವಾಗಿ ಮಾತಾಡೋಣ"

- ಎಂದಷ್ಟೇ ಹೇಳಿದರು, ತಾಂಬೂಲದ ತಟ್ಟೆಯನ್ನು ಪುರುಷೋತ್ತಮರಾಯನು ಸರಿಸಿ.

"ನಮಗೀಗ ಈ ಉಪಚಾರದಲ್ಲಿ ಕಾಲಕಳೆಯಲು ಹೊತ್ತಿಲ್ಲ. ಪ್ರಭುಗಳ ಅಂತರಂಗವನ್ನರಿತವರು ನೀವು. ನೀವೇ ಹೀಗೆ ಹೇಳಿದರೆ, ನಾವು ಪೇಶ್ವೆಗಳಿಗೆ ಏನೆಂದು ಕಾಗದ ಬರೆಯಬೇಕು. ಇಲ್ಲಿ ನಡೆದ ವಿಷಯವನ್ನು ಮುದ್ದಾಮಾಗಿ ತಿಳಿಸುವಂತೆ ನಮಗೆ ನಮ್ಮವರಿಂದ ಅಪ್ಪಣೆಯಾಗಿದೆ. ನೀವಿಲ್ಲಿ ನವಾಬರ ಅಂಚೆಹರಿಕಾರರಿಗೆ ಇರಲು ಅವಕಾಶ ನೀಡಿದ್ದು ಅವರಿಗೆ

ಧನಸಹಾಯಮಾಡಿದ್ದು - ಈ ವಿಷಯವನ್ನು ನಾವು ನಮ್ಮ ಸರ್ಕಾರಕ್ಕೆ ವರದಿಮಾಡದಿದ್ದರೆ ಕರ್ತವ್ಯಲೋಪ ಮಾಡಿದಂತಾಗುತ್ತದೆ. ನಮಗೀಗ ಕಷ್ಟಕಾಲ - ಹತ್ತು ಕಡೆಯಿಂದ ಕೆಟ್ಟ ವಾರ್ತೆಯನ್ನು ಕೇಳುತ್ತಿರುವ ಹೊತ್ತಿನಲ್ಲಿ ಹನ್ನೊಂದನೆಯ ಕಡೆಯಿಂದಲೂ ಅಂಥದೇ ಸುದ್ದಿ ಬಂದರೆ, ಹೇಗೋ ತಡೆದುಕೊಳ್ಳಬಹುದು. ತೀರಾ ಮುಳುಗಿದವನಿಗೆ ಚಳಿಯೇನು, ಮಳೆಯೇನು ಎಂಬಂತೆ. ಆದರೆ ಅನಿಶ್ಚಯತೆ ಮಾತ್ರ ಅಸಹನೀಯ. ಇದುವರೆಗೂ ನಾವು ನಿಮ್ಮ ಬೆನ್ನಲ್ಲಿ ಇರಿದುದಿಲ್ಲ. ಈಗಲೂ ನಿಮಗೆ ತಿಳಿಸದೆ ಏನೊಂದು ಸುದ್ದಿಯನ್ನೂ ತಿಳಿಸಲು ಇಷ್ಟವಿಲ್ಲ. ಆದ್ದರಿಂದ- ಹೀಗೆಂದು ಹೇಳಿಬಿಡಿ. ನೀವು ಕೊಟ್ಟ ಉತ್ತರವನ್ನು ಪೇಶ್ವಗಳಿಗೆ ಹಾಗೇ ತಿಳಿಸುತ್ತೇವೆ" - ಎಂದು ಖಡಾಖಂಡಿತವಾಗಿ ಕೇಳಿದ ಪುರುಷೋತ್ತಮರಾಯ.

"ಹೈದರಾಲಿಯವರು ನಮ್ಮನ್ನೊಂದು ಬಗೆಯ ಇಕ್ಕಟ್ಟಿಗೆ ಗುರಿಮಾಡಿದರೆ, ತಾವು ಮತ್ತೊಂದು ಬಗೆಯ ಇಕ್ಕಟ್ಟಿಗೆ ಸಿಕ್ಕಿಸುತ್ತಿದ್ದೀರಿ...."

- ನಿಧಾನವಾಗಿ ಬಾಯಲ್ಲಿದ್ದ ತಾಂಬೂಲವನ್ನು ಜಗಿಯುತ್ತಾ, ಅದನ್ನು ಒಂದು ಕಡೆಯದವಡೆಗೆ ಒತ್ತರಿಸಿಕೊಂಡು ಹೇಳಿದರು, ನರಸಪ್ಪಯ್ಯ.

"ನೀವು ನಮ್ಮ ಮಿತ್ರರು ಎಂದು ನಂಬಿದ್ದೇವೆ. ನಿಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸುವುದೇ ನಮ್ಮ ಉದ್ದೇಶವಾಗಿದ್ದಿದ್ದರೆ ನವಾಬರ ಕಡೆಯವರು ಇಲ್ಲಿ ಕಾಲಿಡುವ ಮೊದಲೇ, ಸೀರ್ಯದವರ ಸಹಾಯಕ್ಕೆ ನಿಮ್ಮ ಸೇನೆಯನ್ನು ಕೊಡಿ ಎಂದು ಕೇಳಿ ಸ್ನೇಹದ ಪರೀಕ್ಷೆ ಮಾಡಬಹುದಾಗಿತ್ತು. ಆದರೂ, ಎಂದಿದ್ದರೂ ನೀವು ನಮ್ಮವರು, ಸಮಯ ಬಂದಾಗ ಇರಲಿ ಎಂದು ನಿಮ್ಮನ್ನು ಹಾಗೇ ಉಳಿಸಿಕೊಂಡಿದ್ದೆವು. ಅದು ನಮ್ಮ ತಪ್ಪಾಯಿತೇ ?"

"ಇಲ್ಲ."

"ಇಲ್ಲ- ಎಂದಾದಮೇಲೆ, ನೇರವಾಗಿ ಕೇಳುವ ಪ್ರಶ್ನೆಗೆ ನೇರವಾಗಿ ಉತ್ತರ ಕೊಡಿ. ನಮಗೆ ರಾಜ್ಯವನ್ನು ಕಳೆದುಕೊಳ್ಳುವುದು, ಕಳೆದುಕೊಂಡದ್ದನ್ನು ಮತ್ತೆ ಗಳಿಸುವುದೂ ಅಭ್ಯಾಸವಾಗಿದೆ. ಪಾಣೀಪತ್ ಯುದ್ಧಕ್ಕಿಂತಲೂ ಹೆಚ್ಚಿನ ಪರೀಕ್ಷೆಯೇನಲ್ಲ – ಹೈದರಾಲಿಯವರು ನಮ್ಮ ಮುಂದೆ ಇಟ್ಟಿರುವುದು. ಹುಲಿ ಗವಿಯೊಳಗಿರುವಾಗ ಹೊರಗೆ ನರಿಗಳ ರಾಜ್ಯ ನಡೆಯುವುದು ಎಲ್ಲರೂ ಕಂಡದ್ದೇ. ಉಳಿಯುವವರು ಯಾರು, ಹೋಗುವವರು ಯಾರು ಎಂದು ನಿಶ್ಚಯಿಸಿ ಹೆಜ್ಜೆ ಇಡಬೇಕಾದವರು ನೀವು. ಚಿನಕುರಳಿ ಯುದ್ಧದಲ್ಲಿ ವೇಷ ಮರೆಸಿಕೊಂಡು ಪಲಾಯನ ಮಾಡಿ ಜೀವ ಉಳಿಸಿಕೊಂಡು, ಶ್ರೀರಂಗಪಟ್ಟಣದ ಬಾಗಿಲಲ್ಲೇ ನಿಂತ ನಮ್ಮ ಸರದಾರರಿಗೆ ಸಲಾಮು ಮಾಡಿದ ಹೈದರಾಲಿಯವರ ಭಯ ನಮಗಿಲ್ಲ. ಎರಡು ದಿನ - ಹೀಗೆ; ನಮ್ಮ ಪಾಲಿಗೆ ಕೃಷ್ಣಪಕ್ಷ. ಈ ಹೊತ್ತಿನ ಭಯ ನಿಮಗಿದ್ದರೆ ಹೇಳಿಬಿಡಿ. ನಮ್ಮ ನಮ್ಮ ದಾರಿ ನಾವು ನೋಡಿಕೊಳ್ಳುತ್ತೇವೆ."

- ಪುರುಷೋತ್ತಮರಾಯ ಪಟ್ಟು ಹಿಡಿದು ಕೇಳಿದ.

“ಆಯಿತು – ನಮ್ಮ ಅಂತಿಮ ತೀರ್ಮಾನ ಹೇಗೆಂದು ಕೇಳುತ್ತಿದ್ದೀರ. ಅದಕ್ಕೆ ಉತ್ತರ ಕೊಡಬೇಕಾದವರು, ನಾವಲ್ಲ; ಪ್ರಭುಗಳು. ನೀವು ಆಡಿದ ಮಾತನ್ನು ಅವರಿಗೆ ಹೇಳಿ, ಅವರ ಅಭಿಪ್ರಾಯ ತಿಳಿದು ನಿಮಗೆ ತಿಳಿಸುತ್ತೇವೆ. ಅಷ್ಟು ಕಾಲಾವಕಾಶವಂತೂ ಉಂಟಲ್ಲ.”

“ಅಗತ್ಯವಾಗಿ. ನಿಮ್ಮ ಪ್ರಭುಗಳನ್ನು ಕೇಳಿ, ಅವರಿಂದ ಏನು ಅಪ್ಪಣೆಯಾಯಿತೆಂದು ತಿಳಿಸಿ, ಅಪ್ಪಣೆಯಾದರೆ ಬರುತ್ತೇವೆ”

- ಎಂದು ಹೇಳಿ, ಪ್ರಧಾನಿಗಳ ಉತ್ತರಕ್ಕೂ ಕಾಯದೆ ಹೊರಟುಹೋದ, ಪುರುಷೋತ್ತಮರಾಯ.

“ಕಾಲಕ್ಕೆ ಕಾಯಲಾರದವನು ಕಾಲಕಾಲಕ್ಕೂ ಉಳಿಯಲಾರ”

-ಎಂದು ತನಗೆ ತಾನೇ ಹೇಳಿಕೊಂಡು, ಈ ಸಮಸ್ಯೆಯನ್ನು ಹೇಗೆ ಬಗೆಹರಿಸುವುದು ಎಂದು ಚಿಂತಿಸುತ್ತಲೇ, ಬಾಯಲ್ಲಿದ್ದ ತಾಂಬೂಲವನ್ನು ಪೀಕದಾನಿಗೆ ಉಗಿದು, ಕರವಸ್ತ್ರದಿಂದ ಬಾಯಿ ಒರೆಸಿಕೊಂಡು, ನಾಯಕರನ್ನು ಕಾಣಲು ಹೋದರು, ನರಸಪ್ಪಯ್ಯ,

* * *

“‘ಉತ್ತರ ಕೊಡು, ಇಲ್ಲ ನಿನ್ನ ತಮ್ಮಂದಿರನ್ನು ತಿನ್ನುತ್ತೇನೆ’ ಎಂದು ಯಕ್ಷ ಧರ್ಮರಾಯನನ್ನು ಕೇಳಿದ ಹಾಗೆ ಕೇಳುತ್ತಿದ್ದಾರೆ, ಪುರುಷೋತ್ತಮರಾಯರು. ಇವರಿಗೇನು ಉತ್ತರ ಹೇಳುವುದು ?”

-ಎಂದು ನರಸಪ್ಪಯ್ಯ, ಒಂದು ರೀತಿಯಲ್ಲಿ ಪರಿಹಾರವಾದಂತೆ ಕಂಡು, ಮತ್ತೊಂದು ರೀತಿಯಲ್ಲಿ ಎದ್ದು ಬಂದುನಿಂತ ಭೇತಾಳ ಪ್ರಶ್ನೆಯನ್ನು, ಮದಕರಿನಾಯಕರ ಮುಂದಿಟ್ಟರು.

“ಅಂತೂ ಇದ್ದಕ್ಕಿದ್ದ ಹಾಗೇ ಎಲ್ಲರಿಗೂ ನಮ್ಮನ್ನು ಪ್ರಶ್ನಿಸುವ ಧೈರ್ಯ ಬಂದಿತು. ನೆರವು ಕೇಳುವ ಜನ, ನಮ್ಮ ತೋಳನ್ನೇ ಜಗ್ಗಿಸಿ ನೋಡುವಷ್ಟು ದೌರ್ಬಲ್ಯ ಬಂದಿತೇ ದುರ್ಗಕ್ಕೆ? ಇದು ಪ್ರಶ್ನೆಯಲ್ಲ, ಅಪಮಾನ. ಇದನ್ನು ಸಹಿಸಬೇಕೆನ್ನುತ್ತೀರಾ, ನರಸಪ್ಪಯ್ಯ.”

“ನಾವೂ ಅದನ್ನೇ ಯೋಚಿಸುತ್ತಿದ್ದೇವೆ.”

“ಯೋಚಿಸುವುದಕ್ಕೆ ಹೆಚ್ಚಿನದೇನನ್ನು ಉಳಿಸಿದ್ದಾರೆ -ಈ ದಾಡಿಯವರು, ಪಗಡಿಯವರು. ಅವರಿಬ್ಬರೂ ನಮ್ಮನ್ನು ಆಪತ್ತಿಗಾಗಬಹುದಾದ ನೆಂಟ ಎಂದು ಭಾವಿಸಿಲ್ಲ. ಅದಕ್ಕೆ ಪ್ರತಿಯಾಗಿ, ಚಿತ್ರದುರ್ಗ ಅವರ ಕುದುರೆಗಳು ಬೇಕಾದಾಗ ಮೇಯಲು ದೇವರು ಬೆಳೆಸಿ ಕೊಟ್ಟ ಹುಲ್ಲುಗಾವಲು ಎಂದು ತಿಳಿದಿದ್ದಾರೆ. ಇವರದೂ ಒಂದು ರಾಜ್ಯ, ಇವರಿಗೂ ಇವರ ಕ್ಷೇಮಚಿಂತನ

ಮಾಡಬೇಕಾದ ಪ್ರಜೆಗಳಿದ್ದಾರೆ, ಎಂಬ ಯೋಚನೆ ಇದ್ದಿದ್ದರೆ ಇಷ್ಟು ತಾತ್ಸಾರವಾಗಿ ನಮ್ಮ ವಿಶ್ವಾಸ ತನಿಖೆಮಾಡುವ ಲೆಕ್ಕಾಧಿಕಾರಿಗಳಾಗುತ್ತಿರಲಿಲ್ಲ. ಹೀಗೆ ತಮ್ಮ ಸಾಲಗಾರನ ಹಾಗೆ ನೆತ್ತಿಯ ಮೇಲೆ ಗುಂಡು ಹೊರೆಸಿ - 'ಕೊಡಬೇಕಾದ ಬಾಕಿ ತೀರಿಸಿ ಹೋಗು' ಎಂದು ನಿರ್ದಾಕ್ಷಿಣ್ಯವಾಗಿ ಕೇಳುತ್ತಿರಲಿಲ್ಲ - ಪ್ರಧಾನಿಗಳೇ, ಈ ಜನ ನಮ್ಮ ಸ್ನೇಹವನ್ನು ಸ್ನೇಹವೆಂದು ತಿಳಿದುಕೊಂಡಿಲ್ಲ; ದೌರ್ಬಲ್ಯವೆಂದು ಭಾವಿಸಿದ್ದಾರೆ. ಇಂಥವರಿಗೆ ಇಷ್ಟೇ ಉತ್ತರ - ನಮ್ಮ ಸ್ನೇಹ ಬೇಕಿದ್ದರೆ ಇರಿ; ಇಲ್ಲ, ನಿಮ್ಮ ದಾರಿ ನೋಡಿಕೊಳ್ಳಿ ಎಂದು ಹೇಳುವುದು"

- ತೀರಾ ರೋಸಿಹೋದವನಂತೆ ಉತ್ತರ ಕೊಟ್ಟ, ಮದಕರಿನಾಯಕ.

"ತಾವು ಹೇಳುವುದು ವಾಸ್ತವ. ಆದರೆ ಹಾಗೆಂದು ಒಮ್ಮಿಂದೊಮ್ಮೆಗೇ ಇಷ್ಟು ವರ್ಷಗಳ ಸ್ನೇಹ-ಸಂಬಂಧ ಕಡಿದುಕೊಂಡುಬಿಟ್ಟರೆ ಹೇಗೆ ?"

"ಈ ಮಾತನ್ನು ನಾವು ಯೋಚಿಸಬೇಕು, ಅವರು ಯೋಚಿಸಬಾರದೆ? ನಾವು ಏನೇನೋ ಡೊಂಬರಾಟ ಮಾಡಿದರೂ, ಇವತ್ತಲ್ಲ ನಾಳೆ - ಇವರಲ್ಲೊಬ್ಬರ ನಂಟು ಕಡಿದುಹೋಗುವುದು ಖಂಡಿತ."

"ಅದು ನಿಜ."

"ಈಗ ಹೇಗೂ ನವಾಬರ ಸ್ನೇಹ ಬೆಳೆಸಿದ್ದಾಯಿತು. ಪುಣೆಯವರಿಗೆ ನಾವು ಬೇಡ ಎನ್ನಲಿಲ್ಲ; ಅವರೇ ಕೇಳುತ್ತಿದ್ದಾರೆ. ಆದ್ದರಿಂದ 'ಈಗ ಇಲ್ಲಿ ನಡೆದಿರುವುದನ್ನು ನಿಮ್ಮ ಪೇಶ್ವೆಗಳಿಗೆ ತಿಳಿಸಿ. ಅವರು ಹೇಗೆ ಹೇಳಿದರೆ ಹಾಗೆ ಮಾಡಿ' ಎಂದಷ್ಟೇ ಹೇಳಿ."

– ತಾನೇ ಒಂದು ನಿರ್ಧಾರಕ್ಕೆ ಬಂದಂತೆ ಹೇಳಿ –

"ಇದು ಸರಿಯಲ್ಲವೇ ?" – ಎಂದು ಕೇಳಿದ ಮದಕರಿನಾಯಕ.

"ಹಾಗೆ ಹೇಳಬಹುದು. ಆದರೆ ಕೊಂಚ ಯೋಚಿಸಿ ಮಾಡಬೇಕಾದ ಕೆಲಸ. ಪುಣೆಯ ವಕೀಲರು ನಮ್ಮಲ್ಲಿ ಹಲವಾರು ವರ್ಷಗಳಿಂದ ಇದ್ದಾರೆ, ತಾವೂ ಅವರ ಬಗ್ಗೆ ವಿಶ್ವಾಸದಿಂದ ನಡೆದುಕೊಂಡಿದೀರ. ನಮ್ಮ ಜನರಲ್ಲೂ ಅವರ ಹೊಕ್ಕು ಬಳಕೆ ಹೆಚ್ಚಾಗಿದೆ. ಆದ್ದರಿಂದ, ಅವರ ಸಂಬಂಧ ಕಡಿದುಕೊಳ್ಳುವ ಮೊದಲು, ಅವರ ಸ್ನೇಹದ ಬಳ್ಳಿ ಎತ್ತೆತ್ತ ಹಬ್ಬಿದೆ ಎಂದು ನೋಡಿಕೊಂಡು, ಆಮೇಲೆ ಬುಡ ಕಡಿಯುವುದು ಒಳ್ಳೆಯದು ಎಂದು ಕಾಣುತ್ತದೆ."

– ನರಸಪ್ಪಯ್ಯ ಯೋಚಿಸಿ ಹೇಳಿದರು.

"ಅಂದರೆ - ಇಲ್ಲಿ ನಮ್ಮವರು ಯಾರಾದರೂ ಬಹಿರಂಗವಾಗಿ ನಮ್ಮವರಾಗಿದ್ದು ಅಂತರಂಗದಲ್ಲಿ ಅವರ ಆಪ್ತರಾಗಿರಬಹುದು ಎಂದು ನಿಮ್ಮ ಊಹೆಯಾ ?...."

-ಎಂದು ಹೇಳಿ, ಸ್ವಲ್ಪ ಹೊತ್ತು ಯೋಚಿಸಿ-

"ನಿಮ್ಮ ಊಹೆ ಅಕಾರಣವಲ್ಲ. ಇದನ್ನು ಈಗ ಯೋಚಿಸಿದಿರೋ. ಈ ಹಿಂದೆಯೇ ಯೋಚಿಸಿದ್ದೀರೋ ?" – ಎಂದು ಕೇಳಿದ ಮದಕರಿನಾಯಕ.

"ಪರರಾಜರ ಕಡೆಯವರು ನಮ್ಮಲ್ಲಿ ಬಿಡಾರ ಮಾಡಿದ ದಿನದಿಂದಲೇ ಯೋಚಿಸಿದ ವಿಷಯ ಇದು. ಆದರೂ ಅವರು ಪ್ರಭುಗಳಿಗೆ ವಿಶ್ವಾಸಿಗಳಾಗಿದ್ದುದರಿಂದ, ಅವರ ಬಗ್ಗೆ ಕಟ್ಟುನಿಟ್ಟಿನ ಕಾವಲು ಹಾಕಿಸಿರಲಿಲ್ಲ. ಹಾಗೂ ಅವರ ಓಡಾಟದ ಬಗ್ಗೆ ಅಷ್ಟಿಷ್ಟು ವರದಿ ತರಿಸಿಕೊಂಡಿದ್ದೇನೆ. ಎಲ್ಲ ನಮ್ಮಿಂದ ಕರ್ತವ್ಯಲೋಪವಾಗಬಾರದಲ್ಲಾ - ಆ ದೃಷ್ಟಿಯಿಂದ."

"ವರದಿ ಯಾರಿಂದ ತರಿಸಿಕೊಂಡಿರಿ- ಕೊತ್ವಾಲ ಚಾವಡಿಯವರಿಂದಲೇ ?"

"ಅಲ್ಲಿಯದೂ ಇದೆ. ನಮ್ಮ ಚಾವಡಿಯ ಕರಣಿಕರೂ ಅಷ್ಟಿಷ್ಟು ಕೆಲಸ ಮಾಡಿದ್ದಾರೆ. ಆದ್ದರಿಂದ ಆ ಬಗ್ಗೆ ನಮಗೆ ಕೆಲವರಲ್ಲಿ ಸಂಶಯವಿದೆ."

"ಇದ್ದರೆ ಮೊದಲೇ ನಮಗೆ ತಿಳಿಸಲಿಲ್ಲವೇಕೆ ?"

"ಪ್ರಭುಗಳೇ ಅವರ ವಿಶ್ವಾಸಿಗಳಾಗಿದ್ದಾಗ, ಮಿತ್ರರ ಬಗ್ಗೆ ದೂರು ಹೇಳುವುದು ತಪ್ಪಾಗುತ್ತದೆ – ಎಂದು ತಿಳಿಸಲಿಲ್ಲ. ಈಗ ನಿಮ್ಮ ಮನಸ್ಸು ಹೇಗೆ ಎಂದು ನಿಚ್ಚಳವಾಗಿ ತಿಳಿಯಿತು. ಇನ್ನು ಆ ಬಗ್ಗೆ ನಮಗೆ ಬಂದಿರುವ ವರದಿಗಳನ್ನು ತಮಗೆ ತಿಳಿಸಲು ಅಡ್ಡಿಯಿಲ್ಲ" ಎಂದರು, ನರಸಪ್ಪಯ್ಯ.

"ನಿಮ್ಮಂತಹ ದೂರದೃಷ್ಟಿಯ ಪ್ರಧಾನಿಗಳಿರುವುದು ದುರ್ಗದ ಪುಣ್ಯ. ನಿಮಗೆ ಯಾರ ಯಾರ ಬಗ್ಗೆ ಅನುಮಾನ ಬಂದಿದೆಯೋ, ಅವರ ವಿವರ ತಿಳಿಸಿ. ಆ ಬಗ್ಗೆ ಎಚ್ಚರವಾಗಿರುವಂತೆ ಪರಶುರಾಮನಾಯಕರಿಗೆ ಹೇಳುತ್ತೇವೆ ಅಥವಾ ನೀವೇ ಆ ವ್ಯವಸ್ಥೆ ಮಾಡುತ್ತೀರೋ?"

"ದೊರೆ-ಪ್ರಧಾನಿಗಳ ಮನಸ್ಸು ಒಂದಾದಬಳಿಕ ನಮ್ಮ ರಹಸ್ಯ-ನಿಮ್ಮ ರಹಸ್ಯ ಎಂದು ಎರಡಿಲ್ಲ. ನಮಗೆ ಅನುಮಾನ ಬಂದಿರುವವರ ವಿವರ ತಿಳಿಸುತ್ತೇವೆ. ಬಳಿಕ ಪ್ರಭುಗಳು ಸೂಕ್ತ ಕಂಡಂತೆ ಮಾಡಬಹುದು."

- ನರಸಪ್ಪಯ್ಯ ಹೇಳಿದರು –

"ಈಗ ಪೇಶ್ವೆ ವಕೀಲರಿಗೆ ಏನು ಹೇಳುವುದು, ಅವರ ಬಗ್ಗೆ ದುಡುಕುವುದು ಅಷ್ಟು ಸೂಕ್ತವಾಗಲಾರದು."

"ಈ ವಿಷಯದಲ್ಲಿ ಕಾಲಹರಣಮಂತ್ರ ಜಪಿಸಬೇಕು ಎನ್ನಿ."

"ನಿಜ. ಹಾಗಿದ್ದರೆ ಅವರಿಗೆ ಎರಡು ದಿನ ಸಮಾಧಾನವಾಗಿರಲು ಹೇಳಿ."

“ನಾವು ಹೇಳಿದರೆ, ಅವರ ಮನಸ್ಸಿಗೆ ನಂಬಿಕೆಯಾಗದಿರಬಹುದು. ನಾವು ನವಾಬರ ಪಕ್ಷಪಾತಿಗಳು ಎಂಬ ಸಂಶಯ ಅವರಿಗಿದ್ದಂತಿದೆ. ಆದ್ದರಿಂದ ತಾವೇ ಅವರನ್ನು ಕರೆಸಿಕೊಂಡು ಮಾತಾಡುವುದು ಲೇಸು.”

“ಪರಶುರಾಮನಾಯಕರು ಹೇಳಿದರೆ ಆಗದೆ ?”

“ಇದುವರೆಗೂ ಅವರಿಗೆ ನೇರವಾಗಿ ತಮ್ಮಲ್ಲಿಗೆ ಬರಲು ಅವಕಾಶವಿತ್ತು. ಈಗ ಅದನ್ನು ತಪ್ಪಿಸಿದರೆ, ನಮ್ಮ ಮಾತಿನಲ್ಲಿ ಅವರಿಗೆ ನಂಬಿಕೆ ಹುಟ್ಟದೇ ಹೋಗಬಹುದು. ಆದ್ದರಿಂದ ಎಷ್ಟೇ ಅಪ್ರಿಯವಾದರೂ, ತಾವೇ ಈ ಕೆಲಸದ ಹೊಣೆಗಾರಿಕೆ ಹೊರುವುದು ಲೇಸು.”

“ಆಯಿತು - ನಿಮ್ಮ ಮಾತೇ ನಮಗೆ ದಾರಿಯಾಗಲಿ. ಹಾಗೇ, ನೀವು ತರಿಸಿಕೊಂಡಿರುವ ವರದಿಯನ್ನು ಪರಶುರಾಮನಾಯಕರಿಗೆ ಕೊಡಿ. ಪುಣೆಯ ಜನ ನಮ್ಮಲ್ಲಿ ಎಷ್ಟು ಆಳವಾಗಿ ಬೇರುಬಿಟ್ಟಿದ್ದಾರೆ ಎಂದು ತಿಳಿದರೆ ಮುಂದಿನ ಮಾತಿಗೆ ಅನುಕೂಲವಾಗುತ್ತದೆ” - ಎಂದು ಹೇಳಿದ ಮದಕರಿನಾಯಕ.

“ಅದು ಸರಿ. ಪರಶುರಾಮನಾಯಕರೊಂದಿಗೆ ನಮ್ಮ ವರದಿಯನ್ನು ಕಳಿಸುತ್ತೇನೆ. ಒಂದೆರಡು ದಿನ ಬಿಟ್ಟುಕೊಂಡು ನಿಮ್ಮನ್ನು ಕಾಣಲು ಪುರುಷೋತ್ತಮರಾಯರಿಗೆ ಹೇಳುತ್ತೇನೆ.”

“ಅಷ್ಟು ಮಾಡಿ”

-ಎಂದ ಮದಕರಿನಾಯಕ, ಅಪ್ರಿಯವಾದ ಮಾತನ್ನು ಆದಷ್ಟು ಬೇಗ ಮುಗಿಸುವಂತೆ..

“ಅಪ್ಪಣೆ” – ಎಂದು ಹೇಳಿ ಹೋದರು, ನರಸಪ್ಪಯ್ಯ.

* * *

ನರಸಪ್ಪಯ್ಯನವರು ಆಡಿದ ಮಾತು. ಮದಕರಿನಾಯಕನ ಮನಸ್ಸಿನಲ್ಲಿ ಅಂದಿನವರೆಗೂ ಇರದಿದ್ದ ಹೊಸ ಭಾವನೆಗಳನ್ನು ಮೂಡಿಸಿ, ಕಣ್ಣಿಗೆ ಅಂಜನ ಹಾಕಿದಂತಾಗಿ, ಪರಶುರಾಮನಾಯಕನನ್ನು ಕರೆಸಿ, ಆದ ಮಾತುಕಥೆಯನ್ನೆಲ್ಲಾ ವಿವರಿಸಿ-

“ಪ್ರಧಾನಿಗಳು ಪಕ್ಕಾ ಪಾತಾಳಗರಡಿ. ಅವರು ಮರೆತು ಆಡಿದರೋ, ಅರಿತು ಆಡಿದರೋ -ಅದೂ ನಮಗೆ ಸಂದೇಹ. ಆದರೆ ಇಷ್ಟಂತೂ ಅರ್ಥವಾಯಿತು. ಅವರು ನಮಗರಿವಾಗದ ಹಾಗೆ ತಮ್ಮದೇ ಆದ ಬೇಹುಗಾರರನ್ನಿಟ್ಟುಕೊಂಡಿದ್ದಾರೆ. ಇದರ ಮೂಲವನ್ನು ಕೂಡಲೇ ಹುಡುಕಿ ತೆಗೆಯಬೇಕು” - ಎಂದು ಹೇಳಿದ.

ಆತ ಹೇಳಿದುದನ್ನು ಕೇಳಿದ ಪರಶುರಾಮನಾಯಕ ಹೇಳಿದ –

"ಪ್ರಧಾನಿಗಳು ಆಳ ಎಂದು ತಿಳಿದಿತ್ತು; ಆದರೆ ಬರೀ ಆಳವಷ್ಟೇ ಅಲ್ಲ, ಸುಳಿಮಡು ಎಂದೇ ಕಾಣುತ್ತದೆ. ಏನಾದರೂ ಪ್ರಧಾನಿಗಳ ಮೇಲೆ ಬೇಹುಗಾರರನ್ನು ಹಾಕುವುದು ತುಂಬಾ ಅಪಾಯದ ಕೆಲಸ."

"ಅದು ನಮಗೂ ಗೊತ್ತು - ಹಾವಿನ ಹೆಡೆಗೆ ಕೈಹಾಕಿದಂತೆ ಎಂದು, ಆದರೂ ಅದು ಆಗಲೇಬೇಕು. ಇತ್ತೀಚಿನ ದಿನಗಳಲ್ಲಿ ಪ್ರಧಾನಿಗಳ ಚಾವಡಿಗೆ ಹೊಸಬರು ಯಾರು ಯಾರು ಸೇರಿದ್ದಾರೆ, ಅವರ ಶಿಫಾರಸ್ಸಿನ ಮೇಲೆ ಬೇರೆ ಬೇರೆ ಚಾವಡಿಗಳಲ್ಲಿ ಕೆಲಸ ಮಾಡುತ್ತಿರುವವರು ಯಾರು, ಅವರ ಪೂರ್ವೋತ್ತರವೇನು ಎಂಬುದನ್ನು ನಾವು ಆದಷ್ಟು ಬೇಗ ಪತ್ತೆ ಹಚ್ಚದಿದ್ದರೆ ನಾವು ಅಂದುಕೊಂಡ ಆಟ, ನಮಗೇ ತಿರುಗುಬಾಣವಾಗಬಹುದು. ಆದ್ದರಿಂದ, ಇವೊತ್ತು ಎಂದರೆ ಇವೊತ್ತಿನಿಂದಲೇ, ಆ ಕೆಲಸಕ್ಕೆ ತಕ್ಕ ಜನ ನೇಮಿಸು"

- ಎಂದು ಹೇಳಿ, ಮತ್ತೇನೋ ಯೋಚಿಸಿ –

"ಪ್ರಧಾನಿಗಳು ಪುಣೆಯ ವಕೀಲರ ಬಗ್ಗೆ ತಮ್ಮ ತನಿಖಾವರದಿಯನ್ನು ಕಳಿಸುವುದಾಗಿ ಹೇಳಿದ್ದಾರೆ. ಆ ಪಟ್ಟಿಯಲ್ಲಿ ಯಾರ ಯಾರ ಹೆಸರುಗಳಿರುತ್ತವೆಯೋ, ಅವರ ಬಗ್ಗೆ ಎಚ್ಚರದಿಂದಿರುವುದಷ್ಟೇ ಅಲ್ಲ, ಆ ಪಟ್ಟಿಯಲ್ಲಿ ಉದ್ದೇಶಪೂರ್ವಕವಾಗಿ ತಮಗೆ ಬೇಕಾದವರ ಹೆಸರನ್ನು ಸೇರಿಸಿ, ಅವರ ಮುಖಾಂತರ ನಮ್ಮ ಕಾರ್ಯವಿವರ ತಿಳಿದುಕೊಳ್ಳಲೂ ನರಸಪ್ಪಯ್ಯನವರು ಯತ್ನಿಸಬಹುದು. ಆದ್ದರಿಂದ ಅವರು ಕಳಿಸುವ ವರದಿಯ ಬಗ್ಗೆ ಬೆನ್ನೆಲ್ಲಾ ಕಣ್ಣಾಗಿ ನೋಡಬೇಕು. ಹಾಗೇ ಪಟ್ಟಣದಿಂದ ಬಂದಿರುವ ಅಂಚೆಹರಿಕಾರರ ಮೇಲೆ ಬಹಳ ಕಟ್ಟುನಿಟ್ಟಾದ ಕಾವಲು ಹಾಕಬೇಕು. ನಮಗೆ ತಿಳಿಯದೆ ಅವರು ಯಾರನ್ನೂ ಕಾಣಬಾರದು, ನಮಗೆ ತಿಳಿಯದ ಹಾಗೆ ಅವರಿಂದ ದುರ್ಗದಾಚೆಗೆ ಯಾರಿಗೂ, ಯಾವ ಕಾರಣಕ್ಕೂ ಕಾಗದಗಳು ಹೋಗಬಾರದು...."

"ಹಾಗೆಂದರೆ - ನೀವು ಕಳಿಸುವ ಕಾಗದಗಳೆಲ್ಲಾ ನಮ್ಮ ಅನುಮತಿ ಪಡೆದೇ ಹೋಗಬೇಕು ಎಂದು ಅವರಿಗೆ ಹೇಳಬೇಕೇ ?"

"ನೀನು ಹೇಳಬೇಡ ಪರಶುರಾಮಣ್ಣ- ನಮ್ಮ ಪರವಾಗಿ ಪ್ರಧಾನಿಗಳು ಆ ಕೆಲಸ ಮಾಡಲಿ, ಆ ಕೆಲಸವನ್ನು ಅವರೆಷ್ಟು ಎಚ್ಚರದಿಂದ ನಿರ್ವಹಿಸುತ್ತಾರೆ ಎಂದು ಕಟ್ಟೆಚ್ಚರದಿಂದ ನೋಡಿಕೊಳ್ಳಬೇಕು. ನಾವು ನೋಡುವುದೊಂದು ಕಾಗದ - ಹೊರಗೆ ಹೋಗುವುದೊಂದು ಕಾಗದ ಆಗಬಾರದು."

"ಒಂದು ವೇಳೆ ಅನುಮಾನಕ್ಕೆ ಆಸ್ಪದವಾದ ಕಾಗದ ತಿಳಿದುಬಂದರೆ....ಅದನ್ನೂ ತಡೆ ಹಿಡಿದುಬಿಡಬೇಕೇ ?"

- ಪರಶುರಾಮನಾಯಕ ಅಣ್ಣನನ್ನು ನೋಡುತ್ತಿರುವವನಂತೆ ಕೇಳಿದ.

“ನಮಗೆ ವಿವರ ತಿಳಿದ ಬಳಿಕ, ಆ ಕಾಗದ ಹಲ್ಲುಕಿತ್ತ ಹಾವಾಗುತ್ತದೆ. ಆಗ ಅದು ಹೋದರೆ ನಮಗೆ ನಷ್ಟವಿಲ್ಲ. ಅದಕ್ಕೆ ತಕ್ಕಂತೆ ಆಟ ಕಟ್ಟಬಹುದು. ಅಂತೂ ಈಗ ಯಾರ ನೆರಳನ್ನೂ ನಂಬುವುದೂ ಬೇಡ. ಈ ಬಹುಸೂಕ್ಷ್ಮವಾದ ಕೆಲಸದ ಈ ಚದುರಂಗದಾಟದಲ್ಲಿ ನಮ್ಮ ಪ್ರಧಾನಿಗಳೊಂದಿಗೆ ಮೊದಲಾಟ ಆಡಬೇಕಾಗಿ ಬಂದಿರುವುದು, ನೀನು ಆ ಪ್ರಧಾನಿಗಳ ಬಳಿ ಎಷ್ಟು ವಿದ್ಯೆ ಕಲಿತಿದ್ದೀಯಾ ಎಂಬುದಕ್ಕೆ ಒರೆಗಲ್ಲು. ಈ ಆಟದಲ್ಲಿ ಹೇಗೆ ಗೆದ್ದು ಬರುತ್ತೀಯೋ ನೋಡೋಣ. ದಳವಾಯಿ ಕಾಶಣ್ಣನಾಯಕರಿಗೂ ಎಚ್ಚರವಾಗಿರಲು ಹೇಳು”

- ಎಂದು ಹೇಳಿ-

“ನೀನೀಗ ಮೊದಲು ಮಾಡಬೇಕಾದ ಕೆಲಸವೊಂದಿದೆ” – ಎಂದ ಮದಕರಿನಾಯಕ.

“ಏನು ?”

“ನಾವು ಪುರುಷೋತ್ತಮರಾಯರನ್ನು ಯಾರಿಗೂ ತಿಳಿಯದಂತೆ ಕಾಣಬೇಕು. ಅದಕ್ಕೆ ವ್ಯವಸ್ಥೆ ಮಾಡು. ಅವರೊಂದಿಗೆ ಮಾತನಾಡಿದಬಳಿಕ, ಮುಂದೇನು ಮಾಡಬೇಕು ಎಂದು ನಾವು ಹೇಳುತ್ತೇವೆ. ಈ ಕೆಲಸ ಮಾಡಿ, ಪ್ರಧಾನಿಗಳ ನೆರಳಾಗಿ ಕೆಲಸ ಮಾಡಲು ಯಾರು ಬೇಕೋ ಅವರನ್ನು ನೇಮಿಸು” - ಎಂದು ಹೇಳಿದ, ಮದಕರಿನಾಯಕ.

“ಅಂತೂ ಬಹು ಅನಿರೀಕ್ಷಿತವಾಗಿ, ಅತ್ಯಂತ ವೇಗದಿಂದ ಸುತ್ತುತ್ತಿದೆ, ದುರ್ಗದ ಭಾಗ್ಯಚಕ್ರ, ಆಯಿತು. ನಮ್ಮ ಕೈಲಾದಷ್ಟು ಮಾಡುತ್ತೇವೆ”

- ಎಂದು ಭರವಸೆ ಕೊಟ್ಟ, ಪರಶುರಾಮನಾಯಕ.

“ಕೆಲಸ ಎಂದಷ್ಟೇ ತಿಳಿದುಕೊಂಡಿದ್ದೆವು, ನಾವು. ಊಹೂ. ಈಗ ನಮ್ಮ ಕತ್ತಿಗಿಂತ ಮಿದುಳು ಹರಿತವಾಗಿರಬೇಕಾಗಿದೆ. ಇದು ನಿಮಗೂ ಪರೀಕ್ಷೆ; ನಮಗೂ ಅಗ್ನಿಪರೀಕ್ಷೆ. ಈ ಆಟದಲ್ಲಿ ಪಣ ನಮ್ಮ ತಲೆಯಲ್ಲ, ದುರ್ಗ !”

-ಎಂದು ಕತ್ತಿಯನ್ನು ಸಾಣೆಹಿಡಿಯುತ್ತಿರುವಂತೆ ಹೇಳಿದ, ಮದಕರಿನಾಯಕ.

೧೦

ಪುರುಷೋತ್ತಮರಾಯನ ಮನಸ್ಸು ಹಾವಿನ ಹುತ್ತವಾಗಿತ್ತು-

’ಮರಾಠರ ಬಗ್ಗೆ, ಅದರಲ್ಲೂ ತಮ್ಮ ಬಗ್ಗೆ ಅಷ್ಟು ಪ್ರಸನ್ನರಾಗಿದ್ದ ನಾಯಕರು ಎಷ್ಟು ಬೇಗ, ಎಷ್ಟು ಬದಲಾಗಿಬಿಟ್ಟರು.’

ಮೊದಲು ನಾಲ್ಕಾರು ದಿನಗಳಿಗೊಮ್ಮೆ ತಾವಾಗಿಯೇ ಕರೆಕಳಿಸಿ, ಪುಣೆಯ ಕಡೆಯಿಂದ ಬಂದ ವರ್ತಮಾನವನ್ನು ಕೇಳಿ ತಿಳಿದುಕೊಳ್ಳುವುದರ ಜೊತೆಗೆ, ವೈಯಕ್ತಿಕವಾಗಿ ನಮ್ಮ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದ ನಾಯಕರು, ಈಗ ತಾನೇ ಅವರನ್ನು ನೋಡಬೇಕೆಂದರೂ, 'ಇವತ್ತು, ನಾಳೆ' ಎಂದು ದಿನ ದೂಡುತ್ತಿದ್ದಾರೆ. ನರಸಪ್ಪಯ್ಯನವರೇನೇ ಎರಡು ಮೂರು ಬಾರಿ 'ಇವತ್ತು ನಿಮಗೆ ಕರೆ ಬರಬಹುದು' ಎಂದು ಹೇಳಿದ್ದರೂ, ಆ ನಿರೀಕ್ಷಿತ ಕರೆ, ಅರಮನೆಯಿಂದ ಬಂದಿರಲಿಲ್ಲ, ತಮ್ಮನ್ನು ಅವರು ನೋಡಬಾರದಂಥ ಅನಿವಾರ್ಯಘಟನೆಗಳೂ ನಡೆದಿರಲಿಲ್ಲ, ಆದರೂ ನಾಯಕರು ತಮಗೆ ಕರೆಕಳಿಸಿಲ್ಲ. ಏಕಿರಬಹುದು ? ಅವರಿಗೆ ತಿಳಿದ ಹಾಗೆ, ತಮ್ಮ ಬಗ್ಗೆ ನಾಯಕರು ಅಸಂತುಷ್ಟರಾಗುವಂಥ ಕೆಲಸವೇನನ್ನೂ ತಾವು ಮಾಡಿರಲಿಲ್ಲ. ಪ್ರಧಾನಿಗಳ ಇದಿರು ಖಡಾಖಂಡಿತವಾಗಿ ಮಾತಾಡಿದ್ದುಂಟು, ಅದನ್ನು ನರಸಪ್ಪಯ್ಯನವರು ನಾಯಕರಿಗೆ ತಿಳಿಸಿರಬೇಕು. ಅದರಲ್ಲಿ ಅನಿರೀಕ್ಷಿತವಾದುದೇನೂ ಇರಲಿಲ್ಲ. ನಾಯಕರಿಗೆ ಹೇಳಬೇಕಾದದ್ದನ್ನೇ ಹೇಳಿದ್ದರು. ಅಷ್ಟನ್ನು ನಾಯಕರ ಎದುರು ಹೇಳಲೂ ಸಿದ್ಧರಾಗಿದ್ದರು. ಅಂಥ ಮಾತು, ತಾವಾಡಿದ್ದ ಹಾಗೇ ವರದಿಯಾಗಿದ್ದರೆ, ಮತ್ತಷ್ಟು ಬೇಗ ನಾಯಕರಿಂದ ಕರೆಬರಬೇಕಾಗಿತ್ತು. ಅದಕ್ಕೆ ಪ್ರತಿಯಾಗಿ ಈ ಅನಾದರಣೆ ಏಕಿರಬಹುದು ?

ನರಸಪ್ಪಯ್ಯನವರು ತಾವು ಹೇಳಿದ ಮಾತನ್ನು ಬೇರೆ ರೀತಿ ಹೇಳಿದರೇ? ತಾವಾಡಿದ ಮಾತು ಹೆಚ್ಚಾಯಿತೇ? ಅಥವಾ ದುರ್ಗದಲ್ಲಿ ತಳ ಊರಿದ ನವಾಬರ ಅಂಚೆಹರಿಕಾರರ ಅಂಜಿಕೆಯೇ –

ಏನು ಕಾರಣವಿರಬಹುದು ?

ಮರಾಠರ ಭವಿಷ್ಯ ಆದೃಷ್ಟದ ತಕ್ಕಡಿಯಲ್ಲಿ ಏರುಪೇರಾಗಿ ತೂಗುತ್ತಿರುವಾಗ, ದಿನಕ್ಕೊಂದು ಬಗೆಯ ಕೆಟ್ಟ ಸುದ್ದಿಯೇ ಪುಣೆಯ ಕಡೆಯಿಂದ ಬರುತ್ತಿರುವಾಗ, ಆದಷ್ಟು ಬೇಗ, ನಾಯಕರ ನಿಲುವಿನ ಬಗ್ಗೆ ಅವರು ಪುಣೆಗೆ ಸುದ್ದಿ ಕಳಿಸಬೇಕಾಗಿತ್ತು.

ಅವಸರದ ಹೊತ್ತಿನಲ್ಲಿ ಈ ಅನಾದರಣೆ ?

ಇಷ್ಟು ದಿನ ಮರಾಠರ ಬಗ್ಗೆ ನಾಯಕರು ತೋರಿದ ಅಭಿಮಾನವೆಲ್ಲಾ ಬರೀ ನಾಟಕವೇ ?

ಯಾವುದೂ ಹೀಗೆಂದು ಅರ್ಥವಾಗದೆ, ಪುರುಷೋತ್ತಮರಾಯನ ಮನಸ್ಸು ಕಗ್ಗತ್ತಲ ಗವಿಯಲ್ಲಿ ತೊಳಲಾಡುತ್ತಾ, ಮುಸುಗುಟ್ಟುತ್ತಿರುವಾಗ –

ಹೊರಗೆ ಉರುಮೆಯ ಶಬ್ದ –

'ರುಮು... ರುಮು... ರುಮು... ರುಮು...'

ಮಿದುಳನ್ನು ಕಡೆಗೋಲಿನಲ್ಲಿ ಕಡೆಯುವಂಥ, ನರನರವನ್ನು ಬೀಸುಗಲ್ಲಿನಲ್ಲಿ ಹಾಕಿ ಬೀಸುವಂಥ ಏಕನಾದ.

"ಯಾರಲ್ಲಿ - ಅದೇನು ಸದ್ದು - ಮನೆಯಲ್ಲಿರುವವರಿಗೆಲ್ಲಾ ಕಿವಿ ಸತ್ತುಹೋಗಿದೆಯಾ ? ಏನಾದರೂ ಅಷ್ಟು ಹಾಕಿ ತೊಲಗಿಸಿ, ಮನೆಬಾಗಿಲಿನಿಂದ ಈ ಶಬ್ದವನ್ನು. ಯಾರೇ....ಲೆ...."

- ಎಂದು ಅಬ್ಬರಿಸಿ, ಮನೆಯೊಳಗಿದ್ದ ಹೆಂಡತಿಯನ್ನು ಕೂಗಿದ, ಪುರುಷೋತ್ತಮರಾಯ.

"ನಮಗೂ ಸಾಕಾಗಿದೆ. ಎಷ್ಟು ಹೇಳಿದರೂ ಹೋಗವಲ್ಲ ಈ ಮಾರಮ್ಮನವನು. ಆಳುಗಳ ಕೈಲಿ ಹೇಳಿಸಿದ್ದಾಯಿತು. ನಾವೇ ಹೇಳಿದ್ದಾಯಿತು. ಏನಂದರೂ ಚಂಡಿಹಟ ಹಿಡಿದಿದ್ದಾನೆ. ಕೆಟ್ಟ ಮಾತು ಹೇಳೋಣ ಅಂದರೆ, ಶುಕ್ರವಾರ ಮನೆಬಾಗಿಲಿಗೆ ಬಂದ ದೇವರು."

- ಗಂಡನ ಕೂಗು ಕೇಳಿ, ಬಂದ ಆತನ ಮಡದಿ ಅಂಬಾಬಾಯಿ ಹೇಳಿದಳು.

"ಅದೇನು ಬೇಕೋ ಕೊಟ್ಟು ಕಳಿಸಬಾರದೇ ? ಕಾಳೋ, ಬಟ್ಟೆಯೋ, ಹಣವೋ – ಕಿವಿ ಚಿಟ್ಟು ಹಿಡಿದು ಹೋಯಿತು."

"ಅದೆಲ್ಲಾ ಆಯಿತು...."

"ಮತ್ತೇನು ಬೇಕಂತೆ -- ಚಾವಟಿ ಏಟು ಬೇಕಂತೇನು ?"

"ನೀವು ಹೊಡೆಸೋದೇನು - ಅವನೇ ಹೊಡೆದುಕೋತಾ ಇದಾನೆ – ಮೈ ರಕ್ತ ಬರುವ ಹಾಗೆ. ರುಮು ರುಮು ಕೇಳಿಸಿತು. ಅದು ಕೇಳಿಸಲಿಲ್ಲವೇ - ಛಟಾಪಟಾಂತ ಹೊಡೆದುಕೊಳ್ಳೋದು. ಮಾರಮ್ಮನ ಪೂಜಾರಿಗೆ ನಮ್ಮ ಚಾಟಿಯ ಭಯ ಏನು ?" – ಅಂಬಾಬಾಯಿ ಹೇಳಿದಳು.

"ಮತ್ತೇನು ಬೇಕಂತೆ - ಆ ಕಿವಿ ಸತ್ತವನಿಗೆ ?"

- ಉಕ್ಕುವ ಸಿಟ್ಟಿನಲ್ಲಿ ಕೇಳಿದ ಪುರುಷೋತ್ತಮರಾಯ.

"ಹಾಗೆಲ್ಲ ಕೆಟ್ಟ ಮಾತಾಡಬೇಡಿ - ಮಾರಮ್ಮನ ಪೂಜಾರಿ. ಅದೇನೋ 'ಕೆಟ್ಟ ಕಾಲ - ಯಜಮಾನರ ಮೈಬಟ್ಟೆ ಕೊಡಿ' ಎಂದು ಕೇಳಿದ...."

"ಕೊಟ್ಟು ಸಾಗಹಾಕಬೇಕಾಗಿತ್ತು...."

"ಅದನ್ನ ನೀವೇ ಕೈಯಿಂದ ಕೊಡಬೇಕಂತೆ. ನಾನು ನಿಮಗೆ ಅದನ್ನು ಹೇಳಬೇಕೂಂತ ಬಂದೆ - ನೀವೇ ನನ್ನನ್ನು ಕರೆದಿರಿ. ಅಂಥ ತಲೆ ಹೋಗೋ ಕೆಲಸ ಇಲ್ಲದಿದ್ದರೆ, ಎದ್ದು ಬಂದು ಅವನಿಗೆ ಒಂದು ತುಂಡು ಬಟ್ಟೆ ಕೊಟ್ಟು ಕಳಿಸಿ. ನೀವೇ ಹೇಳುತ್ತಿದ್ದೀರಿ - ನಿಮಗೀಗ ದಿನ ಚೆನ್ನಾಗಿಲ್ಲ ಅಂತ. ಅದನ್ನು ಬಗೆಹರಿಸೋಕೇ ಬಂದಿರಬೇಕು, ಈ ಮಾರಮ್ಮ ಅವನು 'ರುಮುರುಮು' ಮಾಡಿದ ಹಾಗೆ ನೀವೂ ಚಂಡಿ ಮಾಡಬೇಡಿ."

"ಮನುಷ್ಯರು ನಮ್ಮನ್ನು ಕಾಡೋದು ಸಾಲದೂಂತ ಈ ದೇವರುಗಳು ಕಾಡುತ್ತವೇನೋ - ಯಾವುದಾದರೂ ಒಂದು ಬಟ್ಟೆ ತುಂಡು ತೆಗೆದಿಡು. ಒಳ್ಳೆ ಮಾತಾಡಿಹೋದರೆ ಸಾಕು"

- ಎಂದು ಪುರುಷೋತ್ತಮರಾಯ ಎದ್ದು ಹೊರಬಂದು ನೋಡಿದ.

ಮನೆಯ ಮುಂದೆ –

ಅರಶಿನ, ಕುಂಕುಮ, ಕೆಂಪುಬಣ್ಣದ ಹೂವುಗಳು, ಅಡಕೆಯ ಸಿಂಗಾರದ ಅಲಂಕಾರ ಮಾಡಿಕೊಂಡು, ಮಿರುಗಿಟ್ಟು ಥಳಥಳ ಹೊಳೆಯುತ್ತಿರುವ ಇಷ್ಟಗಲ ಕಣ್ಣಿನ ಹಿತ್ತಾಳೆಯ ಮುಖವಾಡವಿದ್ದ ಪೆಟ್ಟಿಗೆಯನ್ನು ನೆತ್ತಿಯ ಮೇಲೆ ಹೊತ್ತು, ಕೈಯಲ್ಲಿದ್ದ ನೆತ್ತಿಯ ಮೇಲಿದ್ದ ದೇವರನ್ನು ಬಗೆಬಗೆಯಾಗಿ ಹೊಗಳುತ್ತಾ, ಗಳಿಗೆಗೊಮ್ಮೆ 'ಹೂಂ' ಎಂದು ಅಬ್ಬರಿಸುತ್ತಾ, ಕೈಯಲ್ಲಿದ್ದ ಚಾವಟಿಯನ್ನು ಬೀಸಿ, ಬೀಸಿ ಅದರಿಂದ ಹೊಡೆದುಕೊಳ್ಳುತ್ತಾ, ಹೊತ್ತ ದೇವರಿಗಿಂತ ಭಯಂಕರವಾಗಿ ಕಾಣಿಸುವ ಮಾರಮ್ಮನ ಪೂಜಾರಿ, ಆವೇಶ ಬಂದವನಂತೆ ತೂಗಾಡುತ್ತಾ ನಿಂತಿದ್ದ. ಅವನ ಬದಿಯಲ್ಲೇ ಉರುಮೆ ಬಾರಿಸುವವನೊಬ್ಬ, ಕೊಟ್ಟ ಕಾಣಿಕೆ ಸ್ವೀಕರಿಸುವ ಹೆಂಗಸೊಬ್ಬಳು. ಆ ಪೂಜಾರಿ ಪುರುಷೋತ್ತಮರಾಯನ ಮುಖ ಕಾಣುತ್ತಿದ್ದ ಹಾಗೇ –

"ಶುಭ ಹೇಳೆ, ಶುಭ ಹೇಳೆ - ಬೆಟ್ಟದ ಏಕನಾಥಿ, ದುರ್ಗದ ಉಚ್ಚಂಗಿ, ಗುಡ್ಡದ ಎಲ್ಲವ್ವ, ಕಣಿವೆ ಮಾರಮ್ಮ - ನಿನ್ನ ಭಕುತರು ಬಂದಿದ್ದಾರೆ - ಕಾಣಿಕೆ ಕೊಡುತಾರೆ - ಬಲಗಡೆಗೆ ಹೂ ಕೊಡು – ಶುಭ ಹೇಳು... ಶುಭ ಹೇಳು...."

- ಎಂದು ಹೇಳಿ, ಏರಿದ ಉರುಮೆಯ ಸದ್ದಿನೊಂದಿಗೆ, ನಾಲ್ಕು ಬಾರಿ ತನ್ನ ಮೈಯನ್ನು ಚಾವಟಿಯಿಂದ ಹೊಡೆದುಕೊಂಡ.

ಆ ಏಟುತಿಂದ ಅವನ ಮೈಮೇಲೆ ಬಾಸುಂಡೆ ಎದ್ದು, ಅಲ್ಲಲ್ಲಿ ರಕ್ತ ಜಿನುಗುತ್ತಿತ್ತು.

ಅದನ್ನು ನೋಡಲಾಗದೆ ಪುರುಷೋತ್ತಮರಾಯ –

"ಸಾಕುಮಾಡು, ಮಾರಾಯ. ನಿನಗೂ, ನಿನ್ನ ದೇವರಿಗೂ ನಮಸ್ಕಾರ. ಇದು ತಗೊ"

- ಎಂದು ಹೇಳಿ, ಅಂಬಾಬಾಯಿ ತಂದುಕೊಟ್ಟ ಬಟ್ಟೆಯನ್ನು ತಾನೇ ತನ್ನ ಬಳಿ ಬಂದ ಹೆಂಗಸಿಗೆ ಕೊಟ್ಟ.

"ಅವ್ವಾ - ನೀನು ಕೇಳಿದ್ದು ಕೊಟ್ಟವರೆ, ಶುಭ ಕೊಡು, ಶುಭ ಕೊಡು"

- ಎಂದು ಹೇಳಿ, ತನ್ನ ನೆತ್ತಿಯ ಮೇಲಿದ್ದ ದೇವರ ಬಳಿಯಿಂದ ಅಷ್ಟು ಹೂವು-ಕುಂಕುಮ ತೆಗೆದು –

"ಅವ್ವನ ಪ್ರಸಾದ – ಕೈಯಾಗೆ ತಗೋಬೇಕು. ಬಂದ ಕಾಟ ದೂರಾಗುತ್ತದೆ"

- ಎಂದು ಹೇಳಿದ ಮಾರಮ್ಮನ ಪೂಜಾರಿ, ತಾನೇ ಮುಂದೆ ಬಂದು.

"ಕೊಡಪ್ಪಾ" – ಎಂದು ಕೇಳಿದ ಪುರುಷೋತ್ತಮರಾಯ, ಬೊಗಸೆಕೈ ನೀಡಿ.

ಪ್ರಸಾದ ಕೊಡಲು ಹತ್ತಿರ ಬಂದ ಪೂಜಾರಿ, ಆತನ ಹಿಡಿ ತುಂಬುವಷ್ಟು ಪ್ರಸಾದ ಹಾಕಿ –

"ಅಮ್ಮ ವರ ಕೊಟ್ಟವಳೆ. ಕಣ್ಣಿಗೊತ್ತಿಕೊಂಡು, ಹಣೆಗಿಟ್ಟುಕೊಳ್ಳಿ, ಶುಭವಾಗುತ್ತೈತೆ"

- ಎಂದು ಹೇಳಿ, ಉರುಮೆಯ ಶಬ್ದದ ಮಧ್ಯೆ ತಗ್ಗಿದ ಧ್ವನಿಯಲ್ಲಿ –

"ಪ್ರಸಾದ ಯಾರ ಕೈಗೂ ಕೊಡಬಾರದು. ನೆಲದ ಮೇಲೆ ಮಡಗಬಾರದು. ಅಮ್ಮನೋರ ಕುಂಕುಮ ನೀವೇ ಕೈಯಾರ ತಗೊಂಡು, ಭಕ್ತರಿಗೆ ಕೈಯಾರ ಕೊಡಿ"

-ಎಂದು ಹೇಳಿ ಮತ್ತೆ ಮಾರಮ್ಮನ ಪರಾಕು ಕೂಗಲಾರಂಭಿಸಿದ.

ಆ ಮಾತು ಕೇಳಿ, ಪುರುಷೋತ್ತಮರಾಯ ಚಕಿತನಾಗಿ, ಪೂಜಾರಿ ಕೊಟ್ಟ ಪ್ರಸಾದವನ್ನು ಕೈಯಲ್ಲಿ ಮುಚ್ಚಿ ಹಿಡಿದು ಮುಂದೆ ಹೋದ ಮಾರಮ್ಮನ ಪೂಜಾರಿಯನ್ನೇ ನೋಡುತ್ತಾ ಒಳಗೆ ಹೋಗಿ, ಪ್ರಸಾದವನ್ನು ಕಣ್ಣಿಗೆ ಒತ್ತಿಕೊಳ್ಳುವವನಂತೆ ನೋಡಿದ –

ಹೂವು ಕುಂಕುಮಗಳ ಮಧ್ಯೆ ಒಂದು ಸಣ್ಣ ಕಾಗದದ ಮುದ್ದೆ ಕಾಣಿಸಿತು. ಕುಂಕುಮವನ್ನು ಹಣೆಗಿಟ್ಟುಕೊಂಡು, ಪ್ರಸಾದದ ಹೂವನ್ನು ತೆಗೆದುಕೊಳ್ಳುವವನಂತೆ ಕಾಗದವನ್ನು ತೆಗೆದುಕೊಂಡು, ಮಿಕ್ಕ ಪ್ರಸಾದವನ್ನು ಹೆಂಡತಿಯ ಕೈಗೆ ಕೊಟ್ಟು, ತನ್ನ ಕೊಠಡಿಗೆ ಹೋಗಿ, ಬಾಗಿಲು ಹಾಕಿಕೊಂಡು, ಪ್ರಸಾದದಲ್ಲಿದ್ದ ಕಾಗದದ ಉಂಡೆಯನ್ನು ಹುಷಾರಾಗಿ ಬಿಚ್ಚಿ, ನೋಡಿದ –

ಈರುಳ್ಳಿಯ ಪೊರೆಯಷ್ಟು ತೆಳುವಾದ ನಸುನೀಲಿ ಬಣ್ಣದ ಚೀನೀ ಕಾಗದ. ಆ ಕಾಗದದಲ್ಲಿದ್ದುದು ಎರಡೇ ಸಾಲು-

'ಈ ರಾತ್ರಿ - ದುರ್ಗ ಮಲಗಿದ ಮೇಲೆ - ಎಚ್ಚರವಾಗಿರಿ.'

- ಕಪ್ಪು ಮಸಿಯಲ್ಲಿ ಸೂಜಿಯಲ್ಲಿ ಬರೆದಷ್ಟು ಸಣ್ಣ ಅಕ್ಷರ.

ಬರೆದವರು ಯಾರೆಂದಿಲ್ಲ; ಏನು ಕೆಲಸವೆಂದಿಲ್ಲ. ಯಾರಿಗೆಂದಿಲ್ಲ. ತಲೆ ಬುಡ, ಹಿಂದು ಮುಂದಿಲ್ಲದ ಆ ಕಾಗದದ ತುಣುಕಿನಲ್ಲಿ ಅವರಿಗೆ ಕಂಡದ್ದು - ಬಲು ಅಪರೂಪವಾದ, ಸಾಮಾನ್ಯರಿಗೆ ದುರ್ಲಭವಾದ ಚೀನೀ ಕಾಗದ. ಆ ಕಾಗದ, ಅದನ್ನು ಕಳುಹಿಸಿದವರು ಯಾರೋ ಸಾಮಾನ್ಯರಲ್ಲವೆಂದು ಹೇಳಿ, ಆ ಕಾಗದವನ್ನು ಬೆಳಕಿಗೆ ಹಿಡಿದು ನೋಡಿ, ಅದರಲ್ಲಿ ಮತ್ತೇನೂ ಸಂಕೇತಗಳಿರದಿದ್ದುದನ್ನು ಕಂಡು, ಅದನ್ನು ಕೈಯಲ್ಲಿ ನಾದಿ, ಆದಷ್ಟು ಸಣ್ಣ ಉಂಡೆಮಾಡಿ, ಅದನ್ನು ಬಚ್ಚಲುಮನೆಯ ನೀರೊಲೆಗೆ ಎಸೆದು, ಸುಟ್ಟು ಬೂದಿಯಾದದ್ದನ್ನು ಕಣ್ಣಾರೆ ಕಂಡು, ಮತ್ತೆ ತನ್ನ ಕೊಠಡಿಗೆ ಬಂದು ಕುಳಿತ – ನಡುರಾತ್ರಿಯಾಗುವುದನ್ನೇ ಆತುರದಿಂದ ನಿರೀಕ್ಷಿಸುತ್ತಾ.

* * *

ಪುರುಷೋತ್ತಮರಾಯನ ಆತುರವನ್ನು ಒರೆಹಚ್ಚುವಂತೆ, ನಿಧಾನವಾಗಿ ಹಗಲು ಸರಿದು ಸಂಜೆಯಾಗಿ, ಇರುಳಾಗಿ, ತಾಸಿಗೊಮ್ಮೆ ಕಾಲದ ಎಚ್ಚರಿಕೆ ಕೊಡುತ್ತಿದ್ದ 'ಜಾವಗಹಳೆ'ಯ ಸದ್ದು ಸದ್ದಡಗಿದ ನಗರದ ಬೀದಿಗಳಲ್ಲಿ 'ಹೋಷಿಯಾರ್' ಎಂದು ಕೂಗುತ್ತಾ ಹೋಗುವ ತಳವಾರಚಾವಡಿಯ ಜನರ ಕೂಗು, ಆಗೊಮ್ಮೆ-ಈಗೊಮ್ಮೆ, ಒಮ್ಮೆ ಹತ್ತಿರದಲ್ಲಿ, ಒಮ್ಮೆ ದೂರದಲ್ಲಿ ಬೊಗಳುವ ನಾಯಿಗಳ ಸದ್ದು - ಈ ಸದ್ದುಗಳಲ್ಲದೆ ಬೇರಾವ ಸದ್ದೂ ಕೇಳಿಸದ ಹೊತ್ತಿನಲ್ಲಿ, ಮನೆಯ ದೀಪಗಳನ್ನೆಲ್ಲಾ ಆರಿಸಿ, ಪುರುಷೋತ್ತಮರಾಯನೊಬ್ಬನು ಮಾತ್ರ ಎಚ್ಚರವಾಗಿ ಕಾದು ಕುಳಿತಿದ್ದ - ಯಾವ ಹೊತ್ತಿಗೆ ಏನು ಸೂಚನೆ ಬಂದೀತೋ ಎಂದು ನಿರೀಕ್ಷಿಸುತ್ತಾ, ಅರೆತೆರೆದ ಕಿಟಕಿಯ ಬಾಗಿಲಿನಿಂದ ಜನಶೂನ್ಯವಾದ ಬೀದಿಯನ್ನು ನೋಡುತ್ತಾ.

ಆತ ಹಾಗೆ ನೋಡುತ್ತಿರುವಾಗಲೇ –

ಕತ್ತಲೆಯೇ ಕತ್ತರಿಸಿ, ಅದರ ಒಂದು ಸಣ್ಣ ತುಣುಕು ಪುರುಷಾಕೃತಿ ಧರಿಸಿದಂತೆ, ಪುರುಷೋತ್ತಮರಾಯನ ಮನೆಯ ತಲೆಬಾಗಿಲ ಬಳಿ ಬಂದು, ಹೊರಚಿಲುಕದ ಸದ್ದು ಮಾಡಿತು. ಆ ಸದ್ದು ಕೇಳುತ್ತಿದ್ದ ಹಾಗೇ, ಪುರುಷೋತ್ತಮರಾಯ ದಿಗ್ಗನೆದ್ದು, ತಲೆಬಾಗಿಲ ಬಳಿ ಸಾರಿ, ಬಾಗಿಲು ತೆಗೆದ. ಆ ಬಾಗಿಲ ಸಂದಿನಿಂದ ಒಳ ನುಸುಳಿದ ವ್ಯಕ್ತಿ –

"ನಿಮ್ಮ ಬಟ್ಟೆ ಮೇಲೆ ಇದನ್ನು ಹಾಕಿಕೊಳ್ಳಿ"

-ಎಂದು ತಗ್ಗಿದ ಧ್ವನಿಯಲ್ಲಿ ಹೇಳಿ, ಪುರುಷೋತ್ತಮರಾಯನ ಕೈಗೆ ತಳವಾರಚಾವಡಿಯ ಜನ ಹೊದ್ದುಕೊಳ್ಳುವ ಕಂಬಳಿಯನ್ನು ಕೊಟ್ಟು, ಅದನ್ನು ಆತ ಹೊದ್ದ ಮೇಲೆ –

"ಹೊರಗಿರುವವರ ಜತೆ ಹೋಗಿ - ನಿಮ್ಮ ಮನೆ ಕಾವಲಿಗೆ ನಾನಿರುತ್ತೇನೆ. ಮತ್ತಾವ ಮಾತೂ ಬೇಡ" – ಎಂದು ಹೇಳಿದ, ಅಪ್ಪಣೆ ಮಾಡುವಂತೆ.

ಆ ಮಾತನ್ನು ಕೇಳಿದ ಪುರುಷೋತ್ತಮರಾಯ, ಆತ ಹೇಳಿದಂತೆಯೇ, ಕಂಬಳಿಯನ್ನು ಸರಿಯಾಗಿ ಮೈತುಂಬಾ ಹೊದ್ದು, ಕತ್ತಲೆಯಲ್ಲಿ ತನಗಾಗಿ ಕಾಯುತ್ತಿದ್ದ ಮತ್ತೊಬ್ಬನನ್ನು ಹಿಂಬಾಲಿಸಿದ.

ಇಬ್ಬದಿಯಲ್ಲೂ ಕತ್ತಲ ಮುಸುಕು ಹೊದ್ದು ಮಲಗಿದ ಮನೆಗಳ, ಪುರುಷೋತ್ತಮರಾಯನಿಗೆ ಪರಿಚಿತವಾದ ರಾಜಮಾರ್ಗದಲ್ಲಿ ನಡೆದು, ಗಾರೆಯ ಬಾಗಿಲ ಸಮೀಪದಲ್ಲಿದ್ದ ದ್ಯಾಮವ್ವನಾಗತಿಯ ಹಜಾರವನ್ನು ತಲುಪಿದಾಗ, ಪುರುಷೋತ್ತಮರಾಯನ ಜೊತೆಯಲ್ಲಿ ಇದ್ದಾತ, ಸಣ್ಣದಾಗಿ ಶಿಳ್ಳುಹಾಕಿದ. ಆ ಶಿಳ್ಳಿನ ಸದ್ದು ಕೇಳುತ್ತಿದ್ದಂತೆಯೇ, ಹಜಾರದ ಮುಂದಿನ ಕಾವಲುಮನೆಯಿಂದ ಇಬ್ಬರು ಹೊರಬಂದು, ಏನೊಂದೂ ಮಾತನಾಡದೆ,

ಪುರುಷೋತ್ತಮರಾಯನನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು, ಆತನನ್ನು ಕರೆತಂದ ಆಳಿಗೆ, 'ನೀನಿನ್ನು ಹೋಗು' ಎಂದಷ್ಟು ಹೇಳಿ, ಪುರುಷೋತ್ತಮರಾಯನನ್ನು ಹಜಾರದತ್ತ ನಡೆಸಿದರು.

ಅವರಿಗಾಗಿಯೇ ಕಾದಿದ್ದಂತೆ, ಆ ಭವನದ ಪಾರ್ಶ್ವದ ಕಿರುಬಾಗಿಲೊಂದು ತೆರೆದು, ಆ ಬಾಗಿಲಿನ ಮೂಲಕ ಪುರುಷೋತ್ತಮರಾಯ ತನ್ನೊಡನಿದ್ದವರನ್ನು ಹಿಂಬಾಲಿಸಿ ಒಳನಡೆದ. ಗೋಡೆಯಲ್ಲಿನ ಮಾಡುಗಳಲ್ಲಿ ಹೊತ್ತಿಸಿದ ಹಣತೆಗಳ ಅರಬೆಳಕಿನಲ್ಲಿ, ನಾಲ್ಕಾರು ಬಾಗಿಲುಗಳನ್ನು ದಾಟಿ, ಪುರುಷೋತ್ತಮರಾಯನೊಂದಿಗೆ ಬಂದಿದ್ದವರು, ಮುಚ್ಚಿದ ಕದವೊಂದನ್ನು ಮೃದುವಾಗಿ ತಟ್ಟಿ –

"ವಕೀಲರು ಬಂದಿದ್ದಾರೆ" - ಎಂದು ಹೇಳಿದರು.

ಆ ಮಾತಿಗೆ ತೆಗೆದಂತೆ ಬಾಗಿಲು ತೆರೆದು, ಹತ್ತಾರು ಮಾಡುಗಳಲ್ಲಿ ಹೊತ್ತಿಸಿದ ಉಜ್ವಲವಾದ ದೀವಿಗೆಗಳ ಬೆಳಕಿನಲ್ಲಿ, ಶಯ್ಯಾಸನವೊಂದರ ಬೆನ್ನಿಗೆ ಬೆನ್ನು ಕೊಟ್ಟು ಮಲಗಿದ್ದ ಮದಕರಿನಾಯಕರು ಕಂಡುಬಂದು ಪುರುಷೋತ್ತಮರಾಯ ಚಕಿತನಾದ.

ಆತನ ಕಾಲ ಸದ್ದು ಕೇಳುತ್ತಿದ್ದ ಹಾಗೇ ಎದ್ದು ಕುಳಿತ ನಾಯಕರು-

"ಬರಬೇಕು – ಕುಳಿತುಕೊಳ್ಳಿ"

-ಎಂದು ಪುರೋತ್ತಮರಾಯನಿಗೆ ಸಮೀಪದ ಆಸನವೊಂದನ್ನು ಕುಳಿತುಕೊಳ್ಳಲು ತೋರಿಸಿ, ಜೊತೆಗೆ ಬಂದಿದ್ದ ಆಳುಗಳಿಗೆ –

"ಬಾಗಿಲು ಮುಂದುಮಾಡಿಕೊಂಡು, ಹೊರಗೆ ನಿಲ್ಲಿ"

-ಎಂದು, ಆತನ ಅಪ್ಪಣೆಯಂತೆ ಅವರು ಹೊರಗೆ ಹೋದ ಬಳಿಕ –

"ದುರ್ಗದ ನಾಯಕರು, ಪುಣೆಯ ವಕೀಲರನ್ನು ಓಲಗದಲ್ಲಿ ಕಾಣದೆ, ಮರೆಮುಸುಕಿನಲ್ಲಿ ಅಪರಾತ್ರಿಯಲ್ಲಿ ನೋಡಬೇಕಾಗಿ ಬಂದದ್ದು ಎಂಥ ದುರ್ದೈವ"

- ಎಂದು ವಿಷಾದ ತುಂಬಿದ ಧ್ವನಿಯಲ್ಲಿ ಹೇಳಿ –

"ನಿಮಗೇನೂ ಬೇಸರವಿಲ್ಲ ತಾನೇ ?" – ಎಂದು ಕೇಳಿದರು ನಾಯಕರು.

"ನಮಗೆ ಬೇಸರವಾಗಲಿ, ವ್ಯಸವವಾಗಲಿ ಇಲ್ಲ. ಆದರೆ ಅಂತಹ ಪರಿಸ್ಥಿತಿ ಏನು ಬಂದಿತು ಎಂದು ನನಗೆ ಅರ್ಥವಾಗುತ್ತಿಲ್ಲ. ನಮ್ಮಿಂದಾಗಲಿ, ನಮ್ಮ ಕಡೆಯ ಯಾರಿಂದಲಾಗಲಿ, ತಮಗೆ ಬೇಸರವುಂಟುಮಾಡುವಂಥದೇನೂ ನಡೆದಿಲ್ಲವಲ್ಲ."

"ಇಲ್ಲ. ಹಾಗಿದ್ದರೆ ನಿಮ್ಮನ್ನೀಗ ಕಾಣಲು ಕರೆಸುತ್ತಿರಲಿಲ್ಲ. ಈಗ ಮೂರು ದಿನದಿಂದ ನೀವು ನಮ್ಮನ್ನು ನೋಡಬಯಸಿದರೂ, ನಿಮ್ಮ ಮಾತೇ ಕಿವಿಗೆ ಬೀಳದಂತೆ ಇದ್ದೆವು. ಅದರಿಂದ ನಿಮಗೆ, ನಮಗೆ ನಿಮ್ಮಲ್ಲಿ ಅಸಡ್ಡೆಯುಂಟಾಗಿದೆ ಎಂಬ ಭಾವನೆ ಮೂಡಿರಬೇಕು. ನಿಜ ನಿಮಗೊಬ್ಬರಿಗೇ

ಅಲ್ಲ – ಎಲ್ಲರಲ್ಲೂ ಆ ಭಾವನೆ ಮೂಡಬೇಕೆಂಬುದೇ ನಮ್ಮ ಉದ್ದೇಶವಾಗಿತ್ತು. ಅದಾಗಿದೆ – ಈಗ ನೀವು ನಮ್ಮಿಂದ ಮತ್ತೊಂದು ಅಪಮಾನಕ್ಕೆ ಸಿದ್ಧವಾಗಬೇಕಾಗಿದೆ.”

“ಅಪಮಾನ – ?”

“ನಿಜ – ಅದೂ ತುಂಬಿದೋಲಗದಲ್ಲಿ, ನೀವದಕ್ಕೆ ಸಿದ್ಧರಾಗಿರಬೇಕು. ಅಲ್ಲದೆ ಅದಾದಾಗ ನಮ್ಮ ಬಗ್ಗೆ ಆಕ್ರೋಶಗೊಂಡಂತೆಯೇ ನಟಿಸಿ, ಚಿತ್ರದುರ್ಗ ಬಿಟ್ಟು ಹೊರಡಬೇಕು.”

“ಏಕೆ ?” – ಚಕಿತನಾಗಿ ಕೇಳಿದ ಪುರುಷೋತ್ತಮರಾಯ.

“ನಮ್ಮಿಬ್ಬರ ಹಿತದೃಷ್ಟಿಯಿಂದ. ದುರ್ಗಕ್ಕೆ ನವಾಬರ ಅಂಚೆಹರಿಕಾರರು ಬಂದು, ನಮ್ಮಲ್ಲಿ ವಿಚಿತ್ರ ಪರಿಸ್ಥಿತಿಯನ್ನುಂಟುಮಾಡಿದ್ದಾರೆ. ಈ ಹೊತ್ತಿನಲ್ಲಿ ನಮ್ಮ ಅಂತರಂಗವೇನಿದ್ದರೂ ಬಹಿರಂಗದಲ್ಲಿ ನಾವು ನಿಮ್ಮ ಮಿತ್ರತ್ವ ಕಡಿದುಕೊಂಡಂತೆ ವರ್ತಿಸಬೇಕಾಗಿದೆ. ಈ ಆಟದಲ್ಲಿ ನೀವು ನಮ್ಮೊಂದಿಗೆ ಸಹಭಾಗಿಗಳಾಗಬೇಕು, ಅಷ್ಟೇ ಅಲ್ಲ - ನೀವು ಮಾಡಬೇಕಾದ ಗುರುತರವಾದ ಕಾರ್ಯವೊಂದಿದೆ.”

“ಏನು ?”

“ನೀವು ಪುಣೆಗೆ ಹೋಗಿ, ನಿಮ್ಮ ಪ್ರಧಾನಿಗಳೊಂದಿಗೆ ಮಾತನಾಡಿ, ಅಲ್ಲಿಯ ಪರಿಸ್ಥಿತಿಯ ಬಗ್ಗೆ ನಮಗೆ ರಹಸ್ಯ ವರದಿ ಕಳಿಸುವುದಷ್ಟೇ ಅಲ್ಲ, ನಾವು-ನೀವು ನಂಬಬಹುದಾದಂಥ ಕೆಲವು ಜನ - ಗೂಢಚಾರಿಕೆಯಲ್ಲಿ ನಿಪುಣರಾದವರನ್ನು ಇಲ್ಲಿಗೆ ಕಳಿಸಬೇಕು. ಪುಣೆಯ ಅರಮನೆಯೂ ಈಗ ಯಾದವೀಕಲಹದಿಂದ ಛಿದ್ರ-ವಿಚ್ಛಿದ್ರವಾಗಿದೆ. ಆದ್ದರಿಂದ ನೀವು ಕಳಿಸುವ ಜನ ಸಂಪೂರ್ಣವಾಗಿ ನಿಮ್ಮ ನಂಬಿಕೆಗೆ ಅರ್ಹರಾಗಿರಬೇಕು. ಅದು ಸಾಧ್ಯವಾದೀತೇ ?”

-ನಾಯಕರು ಕೇಳಿದರು.

“ಅದು ಕಷ್ಟವಾಗದಿರಬಹುದು - ನಿಮ್ಮ ಉದ್ದೇಶ ಏನು ಎಂದು ತಿಳಿದರೆ ?”

-ಪುರುಷೋತ್ತಮರಾಯ ಚಿಂತಿಸುತ್ತಾ ಕೇಳಿದ.

“ಪೇಶ್ವೆ ಮಾಧವರಾಯರು ರೆಕ್ಕೆ ಕತ್ತರಿಸಿದ್ದ ಹೈದರಾಲಿಗೆ ರಘೋತ್ತಮರಾಯರು ಮತ್ತೆ ಹೊಸ ಜೀವ ಕೊಟ್ಟರು. ಆದರೆ ನವಾಬರು ಪೂರ್ಣವಾಗಿ ಚೇತರಿಸಿಕೊಳ್ಳುವುದರೊಳಗಾಗಿ, ಅವರನ್ನು ಮುರಿಯದಿದ್ದರೆ, ಮತ್ತೆಂದೂ ಇಂಥ ಅವಕಾಶ ಸಿಗದೆ ಹೋಗಬಹುದು. ಅದಕ್ಕೆ ನಾವು ಸಾಕಷ್ಟು ಕಾಲ ಕಾಯಬೇಕು. ಆ ಕಾಲಕ್ಕಾಗಿಯೇ ನವಾಬರ ಅಂಚೆಹರಿಕಾರರಿಗೆ ನಮ್ಮ ಆಸ್ಥಾನದಲ್ಲಿ ಎಡೆಕೊಟ್ಟೆವು. ಈ ವಿಷಯವನ್ನೆಲ್ಲಾ ನಿಮ್ಮ ಪ್ರಧಾನಿಗಳಿಗೆ ವಿವರಿಸಿ, ನೀವು ಇತ್ತಕಡೆ ಗಮನ ಕೊಡಬೇಕಲ್ಲದೆ, ನಮ್ಮ ಕೈಯನ್ನು ಬಲಪಡಿಸಬೇಕು.”

ನಾಯಕರು ಹೇಳಿದುದನ್ನು ಕೇಳಿ, ಕಳೆದ ಕೆಲವು ದಿನಗಳಿಂದ ಕವಿದಿದ್ದ ಕತ್ತಲಿನ ಮೇಲೆ ಬೆಳಕು ಬಿದ್ದಂತಾಗಿ, ಇಂಥ ರಾಜಕೀಯದಲ್ಲಿ ಪಳಗಿದ ಪುರುಷೋತ್ತಮರಾಯ –

“ಈ ವಿಷಯದಲ್ಲಿ ನಿಮ್ಮ ಪ್ರಧಾನಿಗಳು ಹೇಗೆ ?” – ಎಂದು ಕೇಳಿದ.

“ಅವರಿಗೆ ನಿಮ್ಮಲ್ಲಿಗಿಂತಲೂ ನವಾಬರಲ್ಲಿ ಹೆಚ್ಚಿನ ನಂಬಿಕೆ.”

“ನಮ್ಮದು ನಿಮ್ಮದು ಇರಲಿ - ದುರ್ಗದ ಬಗ್ಗೆ ?”

“ಆ ಬಗ್ಗೆ ಅವರ ನಿಷ್ಠೆಯನ್ನೇ ಸಂಶಯಪಡುವ ಕಾಲವಿನ್ನೂ ಬಂದಿಲ್ಲ, ಆದರೆ ನಾವು ಹೇಳುವವರೆಗೆ ನಮ್ಮ ನಿಮ್ಮ ನಡುವೆ ನಡೆವ ಯಾವ ವಿಷಯವೂ ಪ್ರಧಾನಿಗಳಿಗೂ ತಿಳಿಯಬಾರದು. ಈಗ – ದುರ್ಗವನ್ನೇ ಜರಡಿಯಾಡಿಸಿ ನೋಡಬೇಕಾದ ಕಾಲ ಬಂದಿದೆ.”

– ವಿಷಾದದ ನಡುವೆ ಉಕ್ಕಿನ ಎಳೆಯಿದ್ದ ಧ್ವನಿಯಲ್ಲಿ ಹೇಳಿದರು ನಾಯಕರು.

“ನಾಯಕರು-ಪ್ರಧಾನಿಗಳಲ್ಲಿ ಏಕಾಭಿಪ್ರಾಯವಿಲ್ಲದಿರುವುದು ತುಂಬಾ ಕ್ಲಿಷ್ಟಕರವಾದ ಪರಿಸ್ಥಿತಿ. ಆದರೆ ಈ ರಾಜಕಾರಣದ ನಾಟಕದಲ್ಲಿ ನಡೆಯುವಂಥ ಘಟನೆಯೇ ಇದು. ನೀವು ನಮ್ಮವರಾಗಿಯೇ ಇದ್ದೀರೆಂದು ತಿಳಿದು ತುಂಬಾ ಮನಸ್ಸಿಗೆ ನೆಮ್ಮದಿಯಾಯಿತು. ಇನ್ನು ನಿಮ್ಮ ನಾಟಕದಲ್ಲಿ ಯಾವ ಪಾತ್ರ ಕೊಟ್ಟರೂ ಸರಿಯೆ” – ಎಂದ ಪುರುಷೋತ್ತಮರಾಯ.

“ಬರೀ ಪಾತ್ರವಹಿಸಿದರೆ ಸಾಲದು, ಅದಕ್ಕೆ ಕಳೆಕಟ್ಟಿಸಬೇಕು. ಪುಣೆಯಿಂದ ನೀವು ಸುದ್ದಿ ಹೇಗೆ ಕಳಿಸುತ್ತೀರ; ಯಾರ ಮೂಲಕ? ಅವರು ನಮ್ಮವರು ಎಂದು ನಾವು ತಿಳಿಯುವುದು ಹೇಗೆ?”

“ನಿಂತ ಕಾಲಮೇಲೆ ಅದನ್ನು ಹೇಳಲು ಸಾಧ್ಯವಿಲ್ಲ. ಯೋಚಿಸಿ ಹೇಳುತ್ತೇನೆ – ಸ್ವಲ್ಪ ಕಾಲಾವಕಾಶ ಕೊಡಿ.”

“ಕಾಲ - ಅದೊಂದೇ ನಮ್ಮ ಬಳಿ ಇಲ್ಲದಿರುವ ಸರಕು. ಆಯಿತು – ಯೋಚಿಸಿ ಹೇಳಿ. ನಾಳೆ ಒಲಗದಲ್ಲಿ ನಮ್ಮ ನಿಮ್ಮ ಭೇಟಿಯಾದ ಬಳಿಕ, ಮತ್ತೆ ಸೂಕ್ತ ಕಾಲ ಬರುವವರೆಗೂ ನಾವಿಬ್ಬರೂ ಒಬ್ಬರು ಮತ್ತೊಬ್ಬರನ್ನು ನೋಡುವಂತಿಲ್ಲ. ಇನ್ನೇನಿದ್ದರೂ ನೀವು ಪ್ರಧಾನಿಗಳನ್ನು ನೋಡಬಹುದು – ಹೋಗುವ ಮೊದಲು ಬೇಕೆನಿಸಿದರೆ ನಮ್ಮ ಸೋದರ ಪರಶುರಾಮನಾಯಕರನ್ನು ನೋಡಿ. ನಮಗೆ ಹೇಳಬಹುದಾದ ಮಾತನ್ನು ಅವರಿಗೆ ಹೇಳಬಹುದು. ನಾಳಿನ ಪ್ರಸಂಗದ ಮೊದಲು ನಿಮಗಿಷ್ಟು ಹೇಳಬೇಕಾಗಿತ್ತು - ಹೇಳಿದ್ದೇನೆ. ನಿಮ್ಮ ಪ್ರಧಾನಿಗಳಿಗೆ ನಮ್ಮ ಅಂತರಂಗ ತಿಳಿಸಿ, ನಮ್ಮ ನಮಸ್ಕಾರಗಳನ್ನು ತಿಳಿಸಿ.”

- ಮಾತು ಮುಗಿಸಿದಂತೆ ಹೇಳಿದರು, ನಾಯಕರು.

"ನಿಮ್ಮ ಮನಸ್ಸು ತಿಳಿದು ಸಂತೋಷವಾಯಿತು. ನಾವು ಬಹಿರಂಗವಾಗಿ ಮತ್ತೆ ಭೇಟಿ ಮಾಡುವ ಕಾಲ ಬೇಗ ಬರಲಿ ಎಂದು ನಮ್ಮ ಕುಲದೇವತೆ ತುಳಜಾಭವಾನಿಯನ್ನು ಪ್ರಾರ್ಥಿಸುತ್ತೇನೆ"

- ಎಂದು ಹೇಳಿ, ಎದ್ದು ನಿಂತು, ನಾಯಕರಿಗೆ ಕೈಮುಗಿದ ಪುರುಷೋತ್ತಮರಾಯ.

೧೧

"ಇಂದಿನ ಸಭೆಯ ಉದ್ದೇಶ, ನಮ್ಮ ಮನೋಭಿಪ್ರಾಯ ಏನೆಂಬುದನ್ನು ಪ್ರಧಾನಿಗಳು ಪುಣೆಯ ವಕೀಲರಿಗೆ ತಿಳಿಸುವುದಾಗಲಿ"

- ಎಂದು ಮದಕರಿನಾಯಕರು, ಅವಸರದಲ್ಲಿ ಕರೆದು, ಮುಖ್ಯಸ್ಥರು ಸೇರಿದ ಓಲಗದಲ್ಲಿ ಪ್ರಧಾನಿ ನರಸಪ್ಪಯ್ಯನವರಿಗೆ ಹೇಳಿ, ಅದುವರೆಗೂ ಪುಣೆಯ ವಕೀಲರತ್ತ ನೋಡುತ್ತಿದ್ದ ತಮ್ಮ ದೃಷ್ಟಿಯನ್ನು ಬೇರೊಂದೆಡೆಗೆ ತಿರುಗಿಸಿದರು.

"ಪುಣೆಯ ಶ್ರೀಮಂತರ ವಕೀಲರು ಪ್ರಭುಗಳ ಮಾತಿಗೆ ಅಪಾರ್ಥ ಕಲ್ಪಿಸಬಾರದು. ಹಾಗೇ ನಾವು ಪಕ್ಷಪಾತಿಗಳೆಂದೂ ತಿಳಿಯಬಾರದು. ಈಗ ನಮ್ಮ ಆಸ್ಥಾನದಲ್ಲಿ ಶ್ರೀರಂಗಪಟ್ಟಣದ ನವಾಬರ ಕಡೆಯ ಜನಕ್ಕೆ ಅಂಚೆಹರಿಕಾರತನಕ್ಕೆ ಮಾತ್ರ ಅವಕಾಶಕೊಟ್ಟಿರುವುದರಿಂದ, ಪುಣೆಯವರಿಗೆ ಅದಕ್ಕಿಂತ ಹೆಚ್ಚಿನ ಸ್ಥಾನಮಾನ ಕೊಡುವುದು ಇಂದಿನ ಪರಿಸ್ಥಿತಿಯಲ್ಲಿ ಸರಿಯಾಗಿ ಕಾಣಲಾಗದು. ಆದುದರಿಂದ ಇದುವರೆಗೆ ಶ್ರೀಮಂತರ ವಕೀಲರಿಗೆ, ಆಸ್ಥಾನಕ್ಕೆ ಕೊಡಲಾಗಿದ್ದ ಮರ್ಯಾದೆಗಳು, ವಿಶೇಷ ಸವಲತ್ತುಗಳನ್ನು ಇಂದಿನಿಂದ ಹಿಂತೆಗೆದುಕೊಂಡು ಇಂದಿನಿಂದ ಅವರೂ ಸಹ ಅಂಚೆಹರಿಕಾರರಂತೆ ಮಾತ್ರ ವ್ಯವಹರಿಸಿ, ನಮ್ಮ ನಿಷ್ಪಕ್ಷಪಾತ ಮನೋಭಾವವನ್ನು ಉಳಿಸಿಕೊಂಡು ಹೋಗಲು ನೆರವಾಗಬೇಕೆಂಬುದು ಪ್ರಭುಗಳ ಆಶಯ."

-ಯಾವ ಏರಿಳಿತವೂ ಇಲ್ಲದ ನಿರ್ವಿಕಾರ ಧ್ವನಿಯಲ್ಲಿ ಹೇಳಿದರು, ಪ್ರಧಾನಿ ನರಸಪ್ಪಯ್ಯ.

ಅತ್ಯಂತ ಅನಿರೀಕ್ಷಿತವಾದ ಆ ಘೋಷಣೆಯನ್ನು ಕೇಳಿ ಸಭೆ ನಿಬ್ಬೆರಗಾದಂತೆಯೇ, ಪುಣೆಯ ವಕೀಲರ ಮುಖ್ಯಸ್ಥನಾದ ಪುರುಷೋತ್ತಮರಾಯ, ಕುಳಿತ ಆಸನಕ್ಕೆ ಬೆಂಕಿ ಬಿದ್ದವನಂತೆ ಸಿಡಿದೆದ್ದು-

"ಇದು ಆಶಯವಲ್ಲ, ಅಪಮಾನ. ನಮ್ಮ ಶ್ರೀಮನ್ತರ ಅಪ್ಪಣೆಯಾಗದೆ, ನೀವು ಹೇಳಿದ ಊಳಿಗ ಮಾಡಲು ನಾವು ಈ ರಾಜ್ಯದ ಊಳಿಗದಾಳುಗಳಲ್ಲ, ನೀವು ಏರಿಸಿದಂತೆ ಏರಲು, ಇಳಿಸಿದಂತೆ ಇಳಿಯಲು ಪುಣೆಯ ವಕೀಲರು ನಿಮ್ಮ ಕೈಯ ಗಾಳಿಪಟವೆಂದುಕೊಂಡಿದ್ದೀರಾ?

ನಮಗೆ ಈ ಮಾತು ಹೇಳುವ ಮೊದಲು, ಇದಕ್ಕೆ ನಮ್ಮ ಶ್ರೀಮನ್ತರ ಅನುಮತಿ ಪಡೆಯಬೇಕಾಗಿತ್ತು. ಹಾಗೆ ಮಾಡದೆ, ಏಕಪಕ್ಷೀಯವಾಗಿ ನಿರ್ಧಾರ ಮಾಡುವುದು ನಮಗಷ್ಟೇ ಅಲ್ಲ, ನಮ್ಮ ಸರ್ಕಾರಕ್ಕೂ ಅಪಮಾನ. ಅದನ್ನು ಸಹಿಸಲು ನಮ್ಮನ್ನಿಲ್ಲಿಗೆ ನೇಮಕ ಮಾಡಿಲ್ಲ"

- ಎಂದು, ಉರಿಸೋಕಿದ ಬಿರುಸಿನ ಬುಡ್ಡಿಯಂತೆ ಕಿಡಿಗಾರಿದ.

"ಶ್ರೀಮಂತರ ವಕೀಲರಿಗೆ ಸಿಟ್ಟು ಬಂದಿರಬಹುದು. ಆದರೆ ಇದು ದುರ್ಗದರಸರ ಸಭೆ ಎಂಬುದನ್ನು ಮರೆಯಬಾರದು. ವಕೀಲರಿಗೆ ಸಭೆಯ ರೀತಿ-ರಿವಾಜು ತಿಳಿದಿರಬೇಕು."

- ಪುರುಷೋತ್ತಮರಾಯನನ್ನು ಎಚ್ಚರಿಸುವಂತೆ ಹೇಳಿದ, ಪ್ರಧಾನಿ ನರಸಪ್ಪಯ್ಯ.

"ಅವರಿವರಿಂದ ನಾವು ರೀತಿ-ರಿವಾಜುಗಳನ್ನು ಕಲಿಯಬೇಕಾಗಿಲ್ಲ. ಅದನ್ನು ದಿಲ್ಲಿಯ ಬಾದಷಹರಿಗೂ ಕಲಿಸಿದವರು ನಮ್ಮ ಶ್ರೀಮನ್ತರು. ನಾವು ಈಗಲೂ ಕೇಳುತ್ತೇವೆ ಪ್ರಭುಗಳು ಈ ಆತುರದ ಆಜ್ಞೆಯನ್ನು ಹಿಂತೆಗೆದುಕೊಂಡು, ನಾವು ನಮ್ಮ ಶ್ರೀಮನ್ತರಿಗೆ ಪತ್ರ ಬರೆದು, ಉತ್ತರ ತರಿಸಿಕೊಳ್ಳುವಷ್ಟು ಕಾಲಾವಕಾಶ ಕೊಡಬೇಕು. ಅಲ್ಲಿಯವರೆಗೂ ಇಂದಿನವರೆಗೂ ಹೇಗಿದ್ದಿರೋ ಹಾಗೆ ನಡೆದುಬರಬೇಕು."

- ಅಪ್ಪಣೆ ಮಾಡಿದಂತೆ ಹೇಳಿದ ಪುರುಷೋತ್ತಮರಾಯ.

"ಪ್ರಭುಗಳಿಗೆ ಹೀಗೆ ಮಾಡಬೇಕೆಂದು ಹೇಳುವಷ್ಟು ಹಿರಿಯತನ ವಕೀಲರಿಗೆ ಬಂದುದು ಎಂದಿನಿಂದ..."

"ನೀವು ನಮ್ಮನ್ನು ನಿಮ್ಮ ಊಳಿಗದಾಳುಗಳಂತೆ ನಮ್ಮೊಂದಿಗೆ ವ್ಯವಹರಿಸಿದ ಗಳಿಗೆಯಿಂದ ಪ್ರಭುಗಳನ್ನೇ ಕೇಳುತ್ತೇವೆ - ಇದು ತಮ್ಮ ಅಂತಿಮ ತೀರ್ಮಾನವೇ ?"

"ನಮ್ಮಲ್ಲಿ ದೊರೆಗಳದೊಂದು ಮಾತು, ಪ್ರಧಾನಿಗಳದೊಂದು ಮಾತು ಎಂದಿಲ್ಲ. ನಮ್ಮ ಮನಸ್ಸಿನಲ್ಲಿದ್ದುದನ್ನು ಪ್ರಧಾನಿಗಳು ಆಡಿದ್ದಾರೆ."

- ನಾಯಕರು ನಿರ್ವಿಕಾರವಾದ ಗಂಭೀರ ಧ್ವನಿಯಲ್ಲಿ ಹೇಳಿದರು.

"ಇರಬಹುದು, ಆದರೂ ಪುನರಾಲೋಚನೆ ಮಾಡಲು ಇನ್ನೂ ಕಾಲ ಮಿಂಚಿಲ್ಲ."

"ಯೋಚಿಸದೆಯೇ ಗಳಿಗೆಗೊಂದು ರೀತಿ ಬದಲಾಯಿಸುವಂಥ ದುಡುಕು ಮಾತನ್ನಾಡುವುದು ನಮ್ಮಲ್ಲಿ ಎಂದೂ ನಡೆದಿಲ್ಲ. ಎಲ್ಲ ಯೋಚನೆ ಮಾಡಿಯೇ ಪ್ರಭುಗಳು ಅಪ್ಪಣೆ ಮಾಡಿದ್ದಾರೆ."

- ಪುರುಷೋತ್ತಮರಾಯನಿಗೆ ಉತ್ತರ ಕೊಟ್ಟರು, ನರಸಪ್ಪಯ್ಯ.

"ಇದರ ಪರಿಣಾಮ ಏನಾಗಬಹುದೆಂದು ಯೋಚಿಸಿದ್ದೀರಾ, ಪ್ರಧಾನಿಗಳೇ ?"

-ಸವಾಲು ಹಾಕಿದಂತೆ ಕೇಳಿದ, ಪುರುಷೋತ್ತಮರಾಯ.

"ನಮ್ಮ ಮಾತಿನ ಪರಿಣಾಮ ನಮಗೆ ಸೇರಿದ್ದು. ಪ್ರಭುಗಳ ಆಜ್ಞೆಯನ್ನು ಪ್ರಶ್ನಿಸುವಷ್ಟು ಅಧಿಕಾರ ವಕೀಲರಿಗಿಲ್ಲ."

- ಬಿಗಿಯಾದ ಧ್ವನಿಯಲ್ಲಿ ಹೇಳಿದರು, ನರಸಪ್ಪಯ್ಯ.

"ಹಾಗಿದ್ದರೆ – ಈ ಅಪಮಾನವನ್ನು ಸಹಿಸಲು ನಾವೂ ಸಿದ್ಧರಿಲ್ಲ. ನಮ್ಮನ್ನಿಲ್ಲಿ ವಕೀಲರು ಎಂದು ಇಟ್ಟುಕೊಳ್ಳುವುದು ಸಾಧ್ಯವಾಗದಿದ್ದರೆ, ನಮಗೆ - ನಮ್ಮ ಸಿಬ್ಬಂದಿಗೆ ಇಲ್ಲಿಂದ ಹೊರಡಲು ರಹದಾರಿ ಸಿದ್ಧಪಡಿಸಿ."

-ಒಂದು ನಿಲುವಿಗೆ ಬಂದ ದೃಢ ಕರ್ಕಶ ಧ್ವನಿಯಲ್ಲಿ ಹೇಳಿದ ಪುರುಷೋತ್ತಮರಾಯ.

"ಅದೇ ತಮ್ಮ ಇಚ್ಛೆಯಾದರೆ - ಅದಕ್ಕೆ ಬೇಕಾದ ವ್ಯವಸ್ಥೆ ಮಾಡುತ್ತೇವೆ" – ಎಂದರು ನರಸಪ್ಪಯ್ಯ.

"ಹಾಗಿದ್ದರೆ - ನಮಗಿನ್ನು ಅಪ್ಪಣೆಕೊಡಿ"

-ಎಂದು ಹೇಳಿ, ತನ್ನ ಕಡೆಯವರಿಗೆ ಏಳಲು ಸನ್ನೆ ಮಾಡಿ, ಅವರು ಎದ್ದು ನಿಂತಬಳಿಕ –

"ಇಷ್ಟು ದಿನ ನಮಗೆ ತೋರಿದ ವಿಶ್ವಾಸಕ್ಕೆ ನಾವು ಕೃತಜ್ಞರು"

- ಎಂದು ಹೇಳಿ, ನರಸಪ್ಪಯ್ಯನವರತ್ತ ಕೆಕ್ಕರಿಸಿ ನೋಡುತ್ತಲೇ, ಪ್ರಭುಗಳಿಗೆ ಕೈ ಮುಗಿದ, ಪುರುಷೋತ್ತಮರಾಯ.

- "ಓಲಗ ಇನ್ನೂ ಮುಗಿದಿಲ್ಲ, ವಕೀಲರೇ...."

-ನರಸಪ್ಪಯ್ಯ ಏನೋ ಹೇಳಹೊರಟರು.

"ನಿಮ್ಮ ಓಲಗ ಮುಗಿಯದಿರಬಹುದು. ನಮ್ಮ ಪಾಲಿಗಿನ್ನು ಇದು ಮುಗಿದಂತೆಯೇ, ಎಲ್ಲರಿಗೂ ನಮ್ಮ ನಮಸ್ಕಾರ"

- ಎಂದು ಹೇಳಿ, ಪುರುಷೋತ್ತಮರಾಯ, ತನ್ನ ಸಿಬ್ಬಂದಿಯೊಂದಿಗೆ ಎದ್ದು ಓಲಗಸಾಲೆಯಿಂದ ಹೊರನಡೆದ.

ಆತನ ಈ ಅನಿರೀಕ್ಷಿತ ವರ್ತನೆಯನ್ನು ಕಂಡು ಓಲಗ ಗರಬಡಿದಂತೆ ಮೌನವಾಗಿತ್ತು. ಅಲ್ಲಿ ನೆರೆದವರ ಮುಖಗಳೆಲ್ಲವೂ ಗಂಭೀರವಾಗಿದ್ದವು. ಆ ಹೊತ್ತಿನಲ್ಲಿ ತಾತ್ಸಾರದ ಕಿರುನಗೆಯೊಂದು ಮಿಂಚಿಹೋದುದು ಪ್ರಧಾನಿ ನರಸಪ್ಪಯ್ಯನವರ ಮುಖದ ಮೇಲೆ ಮಾತ್ರ.

* * *

ಆ ಘಟನೆಯಾದ ಮೂರು ದಿನಗಳೊಳಗಾಗಿ, ಚಿತ್ರದುರ್ಗದಲ್ಲಿದ್ದ ಪೇಶ್ವೆಯವರ ವಕೀಲರ ಸಿಬ್ಬಂದಿ ದುರ್ಗವನ್ನು ಬಿಡಲು ಸಿದ್ಧವಾಯಿತು - ಯಾರ ಮನೆಯ ಊಟ, ಉಪಹಾರದ ಆಹ್ವಾನವನ್ನೂ ಅಂಗೀಕರಿಸದೆ.

ತಮ್ಮ ಸಿಬ್ಬಂದಿ ಯಾವ ಅಡೆತಡೆಯೂ ಇಲ್ಲದೆ ಪುಣೆಯತ್ತ ಹೋಗಲು ಅಗತ್ಯವಾದ ರಹದಾರಿಗಳನ್ನು ಪಡೆಯಲು, ಪ್ರಧಾನಿಗಳ ಚಾವಡಿಯಲ್ಲೇ ನರಸಪ್ಪಯ್ಯನವರನ್ನು ಭೇಟಿ ಮಾಡಿದ ಪುರುಷೋತ್ತಮರಾಯ, ನರಸಪ್ಪಯ್ಯನವರು 'ಕುಳಿತುಕೊಳ್ಳಿ' ಎಂದು ಹೇಳಿದರೂ ಕುಳಿತುಕೊಳ್ಳದೆ –

"ಬರುತ್ತೇವೆ ಪ್ರಧಾನಿಗಳೇ, ಇನ್ನು ಬಂದರೆ ಇಲ್ಲಿ ಶಾಶ್ವತವಾಗಿ ಕುಳಿತುಕೊಳ್ಳಲು ಬರುತ್ತೇವೆ. ನಮ್ಮ ರಹದಾರಿಗಳು ಸಿದ್ಧವಾಗಿದ್ದರೆ ಕೊಡಿ" – ಎಂದು ಕೇಳಿದ.

"ಪುರುಷೋತ್ತಮರಾಯರೇ, ತಾವು ಪಳಗಿದ ವಕೀಲರು ಎಂದು ತಿಳಿದಿದ್ದೆವು. ಆದರೆ ನಮ್ಮ ತಿಳುವಳಿಕೆ ತಪ್ಪು ಮಾಡಿದಿರಿ. ಹೀಗೆ ನೀವು ನಮ್ಮ ಸಂಬಂಧ ಕಡಿದುಕೊಂಡದ್ದು ಒಳ್ಳೆಯದಲ್ಲ" – ಎಂದರು ನರಸಪ್ಪಯ್ಯ.

"ನಮ್ಮ ತಪ್ಪು-ನೆಪ್ಪು ವಿಚಾರಿಸಲು ನಮ್ಮ ಶ್ರೀಮನ್ತರಿದ್ದಾರೆ. ನಮಗೆ ಈಗ ಆಪತ್ಕಾಲವೆಂದು ತಿಳಿದು ನೀವು ನಮಗೆ ಅಪಮಾನ ಮಾಡಿದಿರಿ. ಇದು ನಮಗೂ ಅರ್ಥವಾಗುತ್ತದೆ. ನಮ್ಮ ಶ್ರೀಮನ್ತರಿಗೂ ಅರ್ಥವಾಗುತ್ತದೆ. ನಿಮ್ಮ-ನವಾಬರ ಸಂಬಂಧ ಎಷ್ಟು ಶಾಶ್ವತವೋ ನೋಡೋಣ"

- ಎಂದು ಹೇಳಿ, ತಟಕ್ಕನೆ ಒಂದು ಯೋಚನೆ ಬಂದವನಂತೆ –

"ನಮ್ಮ ಪರವಾಗಿ ತಮ್ಮ ಪ್ರಭುಗಳಿಗೆ ಇದೊಂದು ಮಾತು, ಕಡೆಯ ಮಾತೆಂದು ಹೇಳಿ" -ಎಂದ ಪುರುಷೋತ್ತಮರಾಯ.

"ಅದೇನು ಹೇಳಿ ?"

"ಅಫಜಲ್‌ಖಾನನನ್ನು ತಬ್ಬಿ, ಹರಿದು ರಕ್ತ ಹೀರಿದ ಶಿವಛತ್ರಪತಿಗಳ ವ್ಯಾಘ್ರನಖ ಇನ್ನೂ ನಮ್ಮ ಪೇಶ್ವೆಗಳ ಕೈಯಲ್ಲೇ ಇದೆ. ಅದಕ್ಕೆ ತುಕ್ಕುಹಿಡಿದಿಲ್ಲ. ಉಕ್ಕು ಮೊಂಡಾಗಬಹುದು. ಆದರೆ ಉಕ್ಕಿಗೆ ಎಂದೂ ತುಕ್ಕು ಹಿಡಿಯುವುದಿಲ್ಲ. ಮಸೆದಷ್ಟೂ ಅದು ಹರಿತವಾಗುತ್ತದೆ. ಅದು ನೆನಪಿನಲ್ಲಿರಲಿ..." - ಎಂದು ಹೇಳಿದ ಪುರುಷೋತ್ತಮರಾಯ.

"ಇದು ಸಂದೇಶವಲ್ಲ, ಸವಾಲು. ಈ ಮಾತನ್ನೇ ಹೇಳಬಹುದೇ ?"

- ಮುಖ ಕೆಂಪಗೆ ಮಾಡಿಕೊಂಡು ಕೇಳಿದರು ನರಸಪ್ಪಯ್ಯ, ಆ ಮಾತಾಡಿದ ಪುರುಷೋತ್ತಮರಾಯನನ್ನು ದುರುಗುಟ್ಟಿ ನೋಡುತ್ತಾ,

"ಹೇಳಬೇಕು. ಅದರಲ್ಲೇನೂ ನಯ-ವಿನಯ ನೋಡದೆ ಹೇಳಿದ ಮಾತನ್ನು ಹೇಳಿದ ಹಾಗೇ ಹೇಳಿ. ನಮ್ಮ ರಹದಾರಿಗಳು ಸಿದ್ಧವಾಗಿದೆಯೇ ?" – ಪುರುಷೋತ್ತಮರಾಯ ಕೇಳಿದ.

"ಸಿದ್ಧವಾಗಿವೆ"

- ಎಂದು ತನ್ನ ಚಾವಡಿಯ ಕರಣಿಕರತ್ತ ನೋಡಿದರು, ನರಸಪ್ಪಯ್ಯ

* * *

ರಹದಾರಿಗಳನ್ನು ಪಡೆದ ಮರುದಿನವೇ, ಪುರುಷೋತ್ತಮರಾಯ, ತನ್ನ ಸಿಬ್ಬಂದಿಯೊಂದಿಗೆ ಪುಣೆಯತ್ತ ಪಯಣ ಬೆಳೆಸಿದ.

ಅವರು ಹೋದ ಬಳಿಕ, ಪುರುಷೋತ್ತಮರಾಯ ಹೊರಡುವ ಮುನ್ನ ತನಗೆ ಹೇಳಿದ ಮಾತನ್ನು, ನಾಯಕರಿಗೆ ಹೇಳಿ –

"ಇಷ್ಟು ರಾಜ್ಯ ಕಳೆದುಕೊಂಡರೂ, ಪೇಶ್ವೆಯವರ ಜನಕ್ಕಿನ್ನೂ ಪೊಗರು ಅಡಗಿಲ್ಲ. ಎಂದೋ ಸತ್ತ ಶಿವಾಜಿಯ ವ್ಯಾಘ್ರನಖ ಇನ್ನೂ ಬದುಕಿದೆಯೆಂದೇ ತಿಳಿದುಕೊಂಡಿದ್ದಾರೆ. ಹೀಗೆ ಸೊಕ್ಕು ಮಾಡಿಯೇ ಸಾಮ್ರಾಜ್ಯ ಕಳೆದುಕೊಂಡ ಜನ ಇವರು"

-ಎಂದು ತಾತ್ಸಾರವಾಗಿ ಹೇಳಿದರು, ನರಸಪ್ಪಯ್ಯ

"ಹೋದವರ ಮಾತು, ಅವರ ದಾರಿಯಲ್ಲೇ ಹೋಗಲಿ. ನಮಗದರ ಯೋಚನೆ ಬೇಡ"

-ಎಂದು ನಿರ್ಲಕ್ಷ್ಯವಾಗಿ ಹೇಳಿ –

"ನಾವೀಗ ಯೋಚನೆ ಮಾಡಬೇಕಾದದ್ದು ಪೇಶ್ವೆಗಳದೂ ಅಲ್ಲ, ನವಾಬರದೂ ಅಲ್ಲ. ನಮ್ಮ ದುರ್ಗದ ಚಿಂತೆ ನಾವು ಮಾಡಬೇಕು. ನಮ್ಮ ಗರಿ ಬಲಮಾಡಿಕೊಳ್ಳುವ ಯೋಚನೆ ನಾವು ಮಾಡೋಣ. ಉಳಿದ ಯೋಚನೆ ಮರೆತು ನಮ್ಮ ಸೇನೆ ಕಟ್ಟುವ ಯೋಚನೆ ಮಾಡಿ. ಪ್ರಧಾನಿಗಳೇ" – ಎಂದಷ್ಟೇ ಹೇಳಿದ, ಮದಕರಿನಾಯಕ.

೧೨

ಚಿತ್ರದುರ್ಗದಿಂದ ಪೇಶ್ವೆಗಳ ಪರಿವಾರ ಹೋದ ಬಳಿಕ –

ಸೀರ್ಯಾ, ಮಧುಗಿರಿ ಮೊದಲಾದ ಮರಾಠರಿಗೆ ಸೇರಿದ ಕೋಟೆಗಳು ಒಂದೊಂದಾಗಿ, ಹೈದರಾಲಿಯ ಸೇನೆಯ ವಶವಾಗಿ, ಹಿಂದೆ ಪೇಶ್ವೆಗಳ ಜರಿಪಟಕಾ ಹಾರುತ್ತಿದ್ದ ಕೋಟೆಗಳ ಮೇಲೆ, ಮೈಸೂರರಸರ ಗಂಡಭೇರುಂಡ ಧ್ವಜ ಹಾರಲಾರಂಭಿಸಿದ ಬಳಿಕ ಒಂದು ದಿನ ಸೀಬಾರದ ಕಣಿವೆ

ಉಕ್ಕಡದ ದಫೇದಾರ, ವೀರನಾಯಕ ವಿಚಿತ್ರವಾರ್ತೆಯೊಂದನ್ನು ತಂದು ತಲುಪಿಸಿದ, ಕೊತ್ವಾಲಚಾವಡಿಗೆ.

"ಒಬ್ಬರಲ್ಲ, ಇಬ್ಬರಲ್ಲ – ಐದುನೂರು, ಆರುನೂರು ಜನ ಕುದುರೆಸವಾರರು, ಎಲ್ಲಾ ಸೈನಿಕರು. ನೋಡಲು ನವಾಬರ ಕಡೆಯ ಹಾಗೂ ಇಲ್ಲ, ಮರಾಠ ಸೈನಿಕರ ಹಾಗೂ ಇಲ್ಲ. ಎಲ್ಲಾ ಕಟ್ಟು ಮಸ್ತಾದ ಆಳುಗಳು. ಅವರು ಬಂದು, ನಮ್ಮ ಗಡಿ ಬಳಿ ನಿಂತು - 'ನಾವು ದಾಳಿಮಾಡಲು ಬಂದವರಲ್ಲ, ಚಾಕರಿ ಬೇಡಿ ಬಂದವರು. ದುರ್ಗದ ದೊರೆಗಳು ಬಲವಾದ ಸೈನ್ಯ ಕಟ್ಟುತಾ ಇದಾರೆ - ಅಂತ ಕೇಳಿದೆವು. ನಮಗೆ ನಿಮ್ಮ ದಳವಾಯಿಗಳನ್ನು ನೋಡಲು ಅಪ್ಪಣೆಕೊಡಿಸಿ' ಎಂದು ಹೇಳಿದ ಅವರ ಮುಖಂಡ. ಅದೆಂಥದೋ ಸಿಂಗ್ ಅಂತೆ ಅವನ ಹೆಸರು. ಏನು ಮಾಡಬೇಕೋ - ಅಪ್ಪಣೆಯಾಗಬೇಕು"

-ಎಂದು ಕಾಶಣ್ಣನಾಯಕನಿಗೆ ಹೇಳಿದ.

"ಅವರ ಹತ್ತಿರ ಹತಾರು, ಬಂದೂಕ ಏನಿವೆ ?" - ಕಾಶಣ್ಣನಾಯಕ ಕೇಳಿದ.

"ಏನೂ ಇಲ್ಲ."

"ಏನೂ ಇಲ್ಲದವರು ನೀವೆಂಥ ಸೈನಿಕರು ಅಂತ ಕೇಳಲಿಲ್ಲವಾ ? ಝಡತಿ ಮಾಡಿದೆಯಾ?"

-ಕಾಶಣ್ಣನಾಯಕ ಪ್ರಶ್ನಿಸಿದ.

"ನಾವಿರೋದು ಐವತ್ತು ಜನ. ಐನೂರು ಜನರ ಝಡತಿ ಮಾಡೋದು ಯಾವಾಗ -ಅದು ಮುಗಿಯೋದು ಯಾವಾಗ ?"

"ಹಾಗಂದ್ರೆ- ಅವರು ಹೇಳಿದಷ್ಟು ಮಾತು ನಂಬಿಕೊಂಡು, ಐದುನೂರು ಜನಾನ ನಂಬಿ, ಉಕ್ಕಡದ ಹತ್ತಿರ ಬಿಟ್ಟು ಬಂದೆಯಲ್ಲಾ - ನೀನೆಂಥ ಅಡ್ಡ ಕಸಬಿ ದಫೇದಾರ. ನೀನಿತ್ತಲಾಗೆ ಬಂದಾಗ, ಅವರು ಉಕ್ಕಡದ ಮೇಲೆ ಧಾಳಿ ಮಾಡಿದ್ರೆ, ಕೋಟೆಬಾಗಿಲು ಹಾರುಹೊಡೆದ ಹಾಗಾಗುತ್ತಲ್ಲ. ಆಳು ಕಳಿಸಿ, ನೀನು ಅಲ್ಲೇ ಇರೋಕೆ ಏನಾಗಿತ್ತು ? ಅವರೇನು ಐನೂರು ಜನಾನೇ ಇದಾರೋ, ಅವರ ಹಿಂದೆ ಐದುಸಾವಿರದ ದಂಡು ಇದೆಯೋ ? ಒಪ್ಪಿಸಿದ ಕೆಲಸ ಹಿಂಗೇನಾ ಮಾಡೋದು, ಬೇಕೂಫ. ನೀನಿತ್ತಲಾಗೆ ಬಂದಾಗ, ಅತ್ತಲಾಗೆ ಅವರು ಉಕ್ಕಡದ ಮೇಲೆ ಧಾಳಿ ಮಾಡಿದ್ರೆ - ಬರೀ ಉಕ್ಕಡದೋರ ತಲೆಯಷ್ಟೇ ಅಲ್ಲ, ಇನ್ನೆಷ್ಟು ತಲೆ ಬಲಿ ಕೊಡಬೇಕು – ನಿನ್ನ ಬೇಫಾಮೀಗೆ. ಅಷ್ಟು ಕುದುರೆ ಧೂಳು ಕಾಣ್ತಿದ್ದ ಹಾಗೆ, ಅಪಾಯದ ಕಹಳೆ ಊದಿಸಬೇಕು ಅನ್ನೋ ಕಟ್ಟಳೇನೂ ಮರೆತುಹೋಯ್ತಾ ? ಆಳು ಕಾಣೋ ಮೊದಲು ಧೂಳು ಕಾಣಲಿಲ್ಲವಾ ?"

-ಕಿಡಿಕಿಡಿಯಾಗಿ ಕೇಳಿದ ಕಾಶಣ್ಣನಾಯಕ, ಮುಂದೇನು ಮಾಡಬೇಕೆಂದು ಯೋಚಿಸುತ್ತಾ, ಕೆಂಪೇರಿದ ಕಣ್ಣುಗಳಿಂದ ಉಕ್ಕಡದ ದಫೇದಾರನನ್ನು ನೋಡುತ್ತಾ.

"ಹಂಗೆ ಸುಳಿವು ಕೊಡೋ ಹಂಗೆ ಬಂದಿದ್ರೆ - ನೀವು ಹೇಳಿದ ಕೆಲಸ ಎಲ್ಲಾ ಮಾಡ್ತಿದ್ದೆ ಮಾಸ್ವಾಮಿ. ಆದ್ರೆ ಕತ್ತಲಲ್ಲಿ ಧೂಳು ಕಾಣೋದು ಹೆಂಗೆ. ಧೂಳು ಕಾಣೋದು ಇರಲಿ, ಅಷ್ಟು ಕುದುರೆ ಕಾಲು ಸಪ್ಪಳ ಕೇಳಿದ್ರೂ ನಾನು ಮಾಡಬೇಕಾದ ಕೆಲಸ ಮಾಡ್ತಿದ್ದೆ. ಮೊದಲು ಬಂದೋರು ಐದು ಜನ. ರಾತ್ರಿ ಬಂದರು. ಅಟಕಾವು ಮಾಡಿದಾಗ, ಏನೂ ಕಸ್ತು ಮಾಡದೆ, ನಾನು ಹೇಳಿದ ವಿಷಯ ಹೇಳಿದರು. ಹಗಲು ಹರಿಯೋ ಹೊತ್ತಿಗೆ ಮಿಕ್ಕ ಜನ ಬಂತು..."

"ಅಷ್ಟು ಜನ ಬಂದಾಗ ನೀನೇನು ಮಾಡ್ದೆ ?"

"ಚಾಕರಿ ಕೇಳಿಕೊಂಡು ಬಂದಿರೋರಾದ್ರೆ, ನಿಮ್ಮ ಕುದುರೇನೆಲ್ಲಾ ಉಕ್ಕಡದೋರ ಕಾವಲಿಗೆ ಒಪ್ಪಿಸಿ ಅಂತ ಹೇಳಿ, ಅವರ ಕುದುರೇನೆಲ್ಲಾ ನಮ್ಮ ವಶಕ್ಕೆ ತಗೊಂಡು, ಅವರು ನೂರುಜನಕ್ಕೆ ನಮ್ಮ ಹತ್ತು ಜನ ಕೋವಿಯೋರನ್ನು ಕಾವಲುಹಾಕಿ ಬಂದೆ. ನಾವು ಮಾಡಿದ ಯಾವುದಕ್ಕೂ ಅವರು ಬೇಡ ಅನ್ನಲಿಲ್ಲ. 'ರಾತ್ರಿ ಎಲ್ಲಾ ಬಂದು ದಣಿದಿದೀವಿ. ಇಲ್ಲಿ ತಂಗಲಿಕ್ಕೆ ಬಿಡಿ' ಅಂತ ಹೇಳಿದರು. ಕುದುರೇನ ನಮ್ಮ ವಶಕ್ಕೆ ಕೊಟ್ಟು, ಅದೆಲ್ಲಾ ವ್ಯವಸ್ಥೆ ಮಾಡೋಕೆ ಇಷ್ಟು ಹೊತ್ತಾಯ್ತು"

- ಎಂದು ವಿವರಿಸಿ ಹೇಳಿದ ಉಕ್ಕಡದ ದಫೇದಾರ.

"ನೀವೇನೇ ಹೇಳಿದ್ರೂ, ಮಾಡೋ ಕೆಲಸ ಮಾಡೋ ಹಾಗೆ ಮಾಡಲಿಲ್ಲ. ಆಯ್ತು - ನಡಿ. ನಾನೇ ಅಲ್ಲಿಗೆ ಬರ್ತೀನಿ. ಅವರು ಯಾರನ್ನೂ ಒಳಕ್ಕೆ ಬಿಡೋದು ಬೇಡ, ನೀನಿತ್ತಲಾಗೆ ಬಂದಾಗ ಅಲ್ಲೇನಾಗಿದೆಯೋ ನೋಡು ಹೋಗು"

-ಎಂದವನೇ ಕಾಶಣ್ಣನಾಯಕ, ಕೊತ್ವಾಲ ಚಾವಡಿಯ ಕಾವಲಿಗೆ ಅಗತ್ಯವಾದಷ್ಟು ಜನವನ್ನಿರಿಸಿ, ಮಿಕ್ಕವರನ್ನು ತನ್ನ ಜೊತೆಗೆ ಕರೆದುಕೊಂಡು, ಕುದುರೆಯನ್ನೇರಿ, 'ಏನು ಅಪಾಯ ಬಂದರೆ - ಹೇಗೆ ಎದುರಿಸಬೇಕು' ಎಂದು ಯೋಚಿಸುತ್ತಲೇ, ಸಿದ್ದಯ್ಯನ ಬಾಗಿಲು ಕಾವಲುಪಡೆಯವರಿಗೆ ಎಚ್ಚರವಾಗಿರಲು ಹೇಳಿ, ಉಕ್ಕಡದ ದಫೇದಾರ ವೀರನಾಯಕನೊಂದಿಗೆ ಸೀಬಾರದ ಕಣಿವೆಯತ್ತ ದೌಡಾಯಿಸಿದ.

ಉಕ್ಕಡ ತಲುಪುವವರೆಗೂ ದಳವಾಯಿ ಕಾಶಣ್ಣನಾಯಕನ ಮನಸ್ಸಿಗೆ ನೆಮ್ಮದಿ ಇರಲಿಲ್ಲ. ಉಕ್ಕಡದತ್ತಣಿಂದ ಏನು ಸದ್ದುಗದ್ದಲವೂ ಕೇಳದೆ, ಮನಸ್ಸಿಗೆ ಸ್ವಲ್ಪ ನೆಮ್ಮದಿಯಾಗಿ, ಉಕ್ಕಡದ ಬಳಿ, ಕುದುರೆಯ ಮೇಲೆಯೇ ಕುಳಿತು ಹಾಗೇ ಕಣ್ಣುಹಾಯಿಸಿ ನೋಡಿದ.

ಬಂದಿದ್ದವರ ಕುದುರೆಗಳು, ಉಕ್ಕಡದಿಂದೀಚೆಗೆ, ದುರ್ಗದ ಸರಹದ್ದಿನ ಒಳಭಾಗದಲ್ಲಿ ಸಾಲುಮರಗಳಿಗೆ ಕಟ್ಟಲ್ಪಟ್ಟಿದ್ದವು. ಕುದುರೆಯನ್ನೇರಿ ಬಂದ ಸೈನಿಕರು, ಗಡಿಯಾಚೆ ಉಕ್ಕಡದ ಕೋವಿಯಾಳುಗಳ ಕಾವಲಿನಲ್ಲಿ, ಗುಂಪುಗುಂಪಾಗಿ ಏನೋ ಹರಟೆ ಹೊಡೆಯುತ್ತಾ ಕುಳಿತಿದ್ದರು. ಅಲ್ಲಿ ಶಾಂತ ಪರಿಸ್ಥಿತಿ ಇದ್ದುದನ್ನು ಕಂಡು, ಆತನ ಮನಸ್ಸಿಗೆ ಮತ್ತಷ್ಟು ನೆಮ್ಮದಿಯಾಗಿ, ಉಕ್ಕಡದ ಕಾವಲಿನವನ ಕೈಗೆ ಕುದುರೆಯೊಪ್ಪಿಸಿ, ಉಕ್ಕಡದೊಳಗೆ ಕುಳಿತು-

"ಈ ಬಂದಿರೋ ಜನರಲ್ಲಿ ಯಾರು ಮುಖ್ಯಸ್ಥರೋ ಅವರನ್ನು ಕರೆದುಕೊಂಡು ಬಾ"

-ಎಂದು ಅಪ್ಪಣೆ ಮಾಡಿದ, ವೀರನಾಯಕನಿಗೆ.

ಆ ಅಪ್ಪಣೆಯಾದ ಸ್ವಲ್ಪ ಹೊತ್ತಿನಲ್ಲೇ ವೀರನಾಯಕ, ಒಬ್ಬ ಸೈನಿಕನೊಂದಿಗೆ ಉಕ್ಕಡದೊಳಗೆ ಬಂದು –

"ಈತ ಈ ಗುಂಪಿನ ಸರದಾರನಂತೆ. ಮುಂದಿನ ಮಾತನ್ನು ತಾವು ಕೇಳಬೇಕು" – ಎಂದು ಹೇಳಿದ, ವೀರನಾಯಕ.

ಬಂದಿದ್ದಾತನನ್ನು ಕಾಶಣ್ಣನಾಯಕ ಹುಡುಕುದೃಷ್ಟಿಯಿಂದ ನೋಡಿದ.

ಆತ –

ಮೂವತ್ತೈದು-ನಲವತ್ತರ ಪ್ರಾಯದವನಿರಬಹುದು. ಕಟ್ಟು ಮಸ್ತಾದ ಆಳು. ತೆಳು ಹುಬ್ಬಿನ, ಚುರುಕುಗಣ್ಣಿನ, ಕತ್ತಿಮೀಸೆಯ, ಕಪ್ಪು ಬಣ್ಣದ, ಗಡಸು ಮುಖದ ಮನುಷ್ಯ. ಕೆಂಪು ಉಣ್ಣೆ ಬಟ್ಟೆಯ ಎದೆಗಟ್ಟಿನ ಅಂಗಿಯನ್ನು ಕೊಬ್ಬಿ ಬೆಳೆದ ಎದೆ ಎದ್ದು ಕಾಣುವಂತೆ ಧರಿಸಿ, ನೆತ್ತಿಯ ಮೇಲೆ ಬಿಳಿ, ಹಳದಿ ಚುಕ್ಕೆಗಳ ಬಟ್ಟೆಯ ಮುಂಡಾಸನ್ನು ಧರಿಸಿ, ತೊಡೆಯಿಂದ ಕೆಳಗೆ ಮೊಳಕಾಲವರೆಗೂ ಕುದುರೆಸವಾರಿಗೆ ಅನುಕೂಲವಾಗುವಂಥ ಚರ್ಮದ ರಕ್ಷೆ ಯಿದ್ದ ಪರಾಯಿ ತೊಟ್ಟು, ಕಾಲಿಗೆ ಬಿಗಿದು ಕಟ್ಟಿದ ಪಾದರಕ್ಷೆ ಧರಿಸಿದ್ದ.

ಅವನ ಉಡುಪು, ಮುಖ ನೋಡಿದರೆ ವೀರನಾಯಕ ಹೇಳಿದ ಹಾಗೆ ದಾಕ್ಷಿಣಾತ್ಯದ ಮುಖದ ಹಾಗೆ ಕಾಣದೆ –

"ನಿನ್ನ ಹೆಸರೇನು ?" – ಎಂದು ಕೇಳಿದ ಕಾಶಣ್ಣನಾಯಕ.

"ಶಿವಪ್ರಸಾದ್ ಸಿಂಗ್."

"ಯಾವ ಸೀಮೆಯ ಜನ ನೀವು ?"

"ಉತ್ತರದವರು."

"ಇತ್ತಕಡೆ ಬಂದದ್ದು ಯಾಕೆ ?"

"ನಾವೆಲ್ಲಾ ಹಣ್ಣಿದ್ದ ಮರದಲ್ಲಿ ವಾಸಮಾಡೋ ಹಕ್ಕಿಗಳು. ಲಡಾಯಿ ಮಾಡುವುದು ನಮ್ಮ ಕುಲಕಸಬು. ನಮ್ಮ ಹಿರಿಯರು ಪುಣೆಯ ಪೇಶ್ವೆಗಳ ದಂಡಿನ ಜೊತೇಲಿ ಇತ್ತಕಡೆ ಬಂದರು. ನಾವು ಎಲ್ಲಾ ದಂಡಿನಲ್ಲೇ ಹುಟ್ಟಿ ಬೆಳೆದವರು. ಮರಾಠರ ಸೇನೆ ಜೊತೇಲಿ ಬಂದೋರು, ಸವಣೂರಿನ ನವಾಬರ ಹತ್ತಿರ ಚಾಕರಿಗೆ ನಿಂತಿದ್ದಿವಿ. ಆರು ತಿಂಗಳಾಯಿತು -ಸಂಬಳಸಾರಿಗೆ ಕೊಡಲಿಲ್ಲ. ನಿಮ್ಮ ಚಾಕರಿ ಬೇಡ ಅಂದಿವಿ. ಅದಕ್ಕೆ 'ನಮ್ಮ ಹತ್ತಿರ ರೊಕ್ಕ 'ಇಲ್ಲ, ಚಾಕರಿ ಮಾಡೋಕೆ ಇಷ್ಟ ಇಲ್ಲದಿದ್ದರೆ ನಮ್ಮ ಕತ್ತಿ ಕೋವಿ ಕೊಟ್ಟು ಹೋಗಿ ಅಂದ್ರು. ಹೈದರಾಲಿ ನವಾಬರ ಹತ್ತಿರ ಹೋಗಬೇಕೂಂತ ಬಂದ್ವಿ. ಹೀಗೇ ದುರ್ಗದ ಸೇನೇಲಿ ಚಾಕರಿಗೆ ಜನಾನ ತಗೋತಾರೆ ಅಂತ ಕೇಳಿದಿವಿ. ಹಾಗೆ ಹೋಗೋ ಕುದುರೇನ ಹೀಗೆ ತಿರುಗಿಸಿದಿವಿ"

-ಎಂದು ಹೇಳಿದ, ಶಿವಪ್ರಸಾದ್ ಸಿಂಗ್.

"ನಮ್ಮ ಸೀಮೆ ಸರಹದ್ದಿನಲ್ಲಿ ನಿಮ್ಮನ್ನು ಹೇಗೆ ಬಿಟ್ಟರು ?"- ಕಾಶಣ್ಣನಾಯಕ ಪ್ರಶ್ನಿಸಿದ.

ಆ ಪ್ರಶ್ನೆಗೆ ಆತ ಕೂಡಲೇ ಉತ್ತರ ಕೊಡದೆ, ಅತ್ತಿತ್ತ ನೋಡುತ್ತಾ –

"ನೀವು ಯಾರೋ ದೊಡ್ಡೋರು ಇದ್ದಂಗಿದ್ದೀರಾ....ಯಾರೂಂತ ಕೇಳಿದ್ರೆ ತಪ್ಪಾದೀತಾ?" – ಎಂದು ಕೇಳಿದ.

ಆತನ ಮುಖವನ್ನು ಸೂಕ್ಷ್ಮವಾಗಿ ನೋಡುತ್ತಿದ್ದ ಕಾಶಣ್ಣನಾಯಕ –

"ನಾನು ಕೊತ್ವಾಲಚಾವಡಿ ದಳವಾಯಿ - ಕಾಶಣ್ಣನಾಯಕ" – ಎಂದು ಹೇಳಿದ.

"ಹಂಗಿದ್ರೆ ಸರಿ"

– ಎಂದು ತನ್ನ ಧ್ವನಿಯನ್ನು ತಗ್ಗಿಸಿ –

"ಹುಲಿಯುಗುರಿನ ಲಂಚ ಕೊಟ್ಟು ಬಂದ್ವಿ" – ಎಂದ ಶಿವಪ್ರಸಾದ್ ಸಿಂಗ್.

ಹುಲಿಯುಗುರು – ವ್ಯಾಘ್ರನಖ !

ಅದನ್ನು ಕೇಳುತ್ತಿದ್ದ ಹಾಗೇ ಕಾಶಣ್ಣನಾಯಕ ಚುರುಕಾಗಿ –

"ಇಷ್ಟು ಜನ ಒಂದೇ ಸಲ ಬಂದ್ರೆ ಸೇರಿಸಿಕೊಳ್ಳೋಕೆ ದುರ್ಗದ ದಂಡೇನು – ದನದ ದೊಡ್ಡಿಯಾ? ಆಯಿತು - ನೆಚ್ಚಿಕೊಂಡು ಬಂದಿದ್ದೀರ. ಹತ್ತು ಜನ ನನ್ನ ಜೊತೇಲಿ ಬನ್ನಿ. ದಳವಾಯಿಗಳಿಗೆ ಸುದ್ದಿ ಕೊಡ್ತೀನಿ. ಆಮೇಲೆ ಅವರು ಹೇಳಿದ ಹಾಗೆ ಮಾಡೋಣ. ನಿಮ್ಮಲ್ಲಿ ಮುಖ್ಯಸ್ಥರು ಯಾರೋ ಅವರು ನಮ್ಮ ಜೊತೆ ಬರಲಿ. ಉಳಿದೋರು ನಮ್ಮ ಅಪ್ಪಣೆ ಬರೋವರೆಗೂ ಅಲ್ಲಿರಲಿ"

- ಎಂದು ಹೇಳಿ. ಶಿವಪ್ರಸಾದ್ ಸಿಂಗನನ್ನು ಕಳಿಸಿ, ಹತ್ತಿರವಿದ್ದ ಉಕ್ಕಡದ ದಫೇದಾರ್ ವೀರನಾಯಕನಿಗೆ –

"ನಿನ್ನೆ ರಾತ್ರಿ ಸರದಿ ಇದ್ದ ಕಾವಲುಗಾರರು ಯಾರು ?" – ಎಂದು ಕೇಳಿದ.

"ನಲವತ್ತು ಜನ ಹೊಸದಾಗಿ ನೇಮಕವಾದ 'ಉಚ್ಚಂಗಮ್ಮನ ಪಡೆ'ಯವರು. ಉಳಿದವರು ಹಳಬರು" – ಎಂದ ವೀರನಾಯಕ.

"ಆ ಹತ್ತು ಜನಾನ ಇಲ್ಲಿಗೆ ಕರೆಸು. ಅವರು ಯಾರು ಗೊತ್ತಿದೆ ತಾನೇ ?"

"ಗೊತ್ತಿದೆ."

"ಕರೆಸು" – ಎಂದು ಅಪ್ಪಣೆ ಮಾಡಿದ ಕಾಶಣ್ಣನಾಯಕ.

ವೀರನಾಯಕ, ಆ ಹತ್ತು ಜನರನ್ನು ಕರೆತಂದು ಕಾಶಣ್ಣನಾಯಕನ ಇದಿರು ನಿಲ್ಲಿಸಿದ - ಅವರನ್ನು ನೋಡಿದ ಕಾಶಣ್ಣನಾಯಕ.

ತನ್ನೆದುರು ನಿಂತ ಉಕ್ಕಡದ ಸಿಪಾಯಿಗಳಿಗೆ –

"ನಿಮ್ಮ ಸರದಿ ಮುಗಿಯೋದು ಯಾವಾಗ ?"- ಎಂದು ಕೇಳಿದ, ಕಾಶಣ್ಣನಾಯಕ.

"ನಿನ್ನೆ ಸಂಜೆ ಇಲ್ಲಿಗೆ ಬಂದೋರು - ಈಗ ಸರದಿ ಬದಲಾಗಿ, ಬೆಳಗಿನ ಸರದಿಯವರು ಬಂದಾಗ ನಮ್ಮ ಸರದಿ ಮುಗಿಯುತ್ತದೆ" - ಎಂದ ಆ ಪೈಕಿ ಒಬ್ಬಾತ.

"ಹಾಗಿದ್ದರೆ, ನೀವು ಹತ್ತು ಜನ ಈಗ ನಮ್ಮ ಜೊತೆಗೆ ಬನ್ನಿ – ಜೊತೆಗೆ ಬರೋರಿಗೆ ಕಾವಲಾಗಿ" – ಎಂದು ಕಾಶಣ್ಣನಾಯಕ ಅಪ್ಪಣೆ ಮಾಡಿದ.

ಆತನ ಅಪ್ಪಣೆಯಂತೆ ಇರುಳ ಕಾವಲಿನ ಸರದಿಗೆ ಬಂದ ಆ ಹತ್ತು ಜನ ಬೇರೆಯಾಗಿ ನಿಂತರು. ಆ ವೇಳೆಗೆ ಶಿವಪ್ರಸಾದ್ ಸಿಂಗ್ ತನ್ನ ಕಡೆಯ ಹತ್ತು ಮಂದಿಯೊಂದಿಗೆ ಬಂದ. ಅವರನ್ನು ನೋಡಿ –

"ನೀವು ನಡೆದುಕೊಂಡೇ, ಈ ಕಾವಲು ಸಿಪಾಯಿಗಳ ಜೊತೆ ಬರಬೇಕು. ಉಳಿದವರ ವಿಚಾರ, ನಾವು ದುರ್ಗ ಸೇರಿದಮೇಲೆ ವ್ಯವಸ್ಥೆ ಮಾಡುತ್ತೇವೆ"

- ಎಂದು ಹೇಳಿ, ಉಕ್ಕಡದಿಂದ ಹೊರಬಂದು, ತನ್ನೊಂದಿಗೆ ಬಂದ ಕೊತ್ವಾಲಚಾವಡಿಯ ಜನಕ್ಕೆ-

"ಐದು ಜನ ನಮ್ಮ ಜೊತೆಗೆ ಬನ್ನಿ, ಉಳಿದವರು ಕೊತ್ವಾಲಚಾವಡಿಯಿಂದ ಆಜ್ಞೆ ಬರುವವರೆಗೆ ಇಲ್ಲಿರಬೇಕು" - ಎಂದು ಅಪ್ಪಣೆ ಮಾಡಿ, ಕುದುರೆ ಹತ್ತಿದ.

ಶೀಬಾರದ ಉಕ್ಕಡದಿಂದ ಬಂದ ಕಾಶಣ್ಣನಾಯಕ ಸಿದ್ದಯ್ಯನ ಬಾಗಿಲ ಬಳಿಗೆ ಬಂದಾಗ, ಅಲ್ಲಿದ್ದ ಕಾವಲವರಿಗೆ –

"ಸೀಬಾರದ ಕಣಿವೆ ಉಕ್ಕಡದಿಂದ ನಮ್ಮ ಕಡೆಯ ಹತ್ತು ಜನ ಪರಸ್ಥಳದ ಹತ್ತು ಜನ ಬರುತ್ತಾರೆ. ಅವರನ್ನು, ಬೇರೆಲ್ಲೂ ಹೋಗಲು ಬಿಡದೆ, ಕೊತ್ವಾಲಚಾವಡಿಗೆ ಕರೆದುತರಬೇಕು"

- ಎಂದು ಅಪ್ಪಣೆ ಮಾಡಿ, ಕೊತ್ವಾಲಚಾವಡಿಗೆ ಹೋದ.

* * *

ಚಾವಡಿಗೆ ಹೋದ ಕೂಡಲೇ ಕಾಶಣ್ಣನಾಯಕ, ಅಲ್ಲಿದ್ದ ಕರಣಿಕರನ್ನು –

"ನಿನ್ನೆ ಸೀಬಾರದ ಉಕ್ಕಡಕ್ಕೆ ಇರುಳುಸರದಿಕಾವಲು ನೇಮಕ ಮಾಡಿದವರು ಯಾರು?"

-ಎಂದು ಕೇಳಿದ.

"ಕುರುಬರ ಚನ್ನಯ್ಯ" - ಕರಣಿಕನೊಬ್ಬ ಉತ್ತರ ಕೊಟ್ಟ,

"ಈಗಿಂದೀಗಲೇ ಹೋಗಿ, ಅವರನ್ನು ಅವಸರದ ಕೆಲಸವಿದೆ ಎಂದು ಕರೆದುಕೊಂಡು ಬನ್ನಿ"

-ಎಂದು ಕೊತ್ವಾಲಚಾವಡಿಯ ಸಿಪಾಯಿಯೊಬ್ಬನಿಗೆ ಅಪ್ಪಣೆಮಾಡಿ. ಹುಬ್ಬುಗಂಟು ಹಾಕಿಕೊಂಡು ಯೋಚಿಸುತ್ತ ಕುಳಿತ – ಉಳಿದವರು ಅವನ ಮುಖ ನೋಡಲೂ ಹೆದರುವಂತೆ.

ಸ್ವಲ್ಪ ಹೊತ್ತಿನಲ್ಲೆ, ಕೊತ್ವಾಲಚಾವಡಿಯ ಸಿಪಾಯಿ, ಕುರುಬರ ಚನ್ನಯ್ಯನೊಂದಿಗೆ ಬಂದ.

ತನ್ನೆದುರು ನಿಂತ, ಚನ್ನಯ್ಯನನ್ನು ನಖಶಿಖಾಂತವಾಗಿ ನೋಡುತ್ತಾ –

"ಸೀಬಾರದ ಕಣಿವೆ-ಉಕ್ಕಡಕ್ಕೆ ನಿನ್ನೆ ರಾತ್ರಿ ಎಷ್ಟು ಜನಾನ ಕಳಿಸಿದ್ದೆ?" – ಎಂದು ಪ್ರಶ್ನೆ ಮಾಡಿದ ಕಾಶಣ್ಣನಾಯಕ.

"ಮಾಮೂಲಿನ ಹಾಗೆ ಐವತ್ತು ಮಂದಿ."

"ಯಾವ ಪಡೆಯವರನ್ನು ನೇಮಕ ಮಾಡಬೇಕು ಎಂದು ಅಪ್ಪಣೆಯಾಗಿತ್ತು."

"ಉಚ್ಛಂಗಮ್ಮನ ಪಡೆಯವರನ್ನು."

"ಐವತ್ತೂ ಜನರೂ ಆ ಪಡೆಯವರೇ ಹೋಗಿದ್ದರೇ ?"

- ಚಾವಟಿಯ ಏಟಿನಂತಿದ್ದ ಕಾಶಣ್ಣನಾಯಕನ ಪ್ರಶ್ನೆಗೆ ಸರಿಯಾದ ಉತ್ತರ ಕೊಡಲು ತೊದಲುತ್ತಾ ಹೇಳಿದ, ಚನ್ನಯ್ಯ

"ನೆನಪು – ಬರೀ ನೆನಪು - ಯಾರು ಅಂತ ಗೊತ್ತಿಲ್ಲ. ಅಪ್ಪಣೆ ಮಾಡಿದಾಗ ಭಂಗಿ ಸೇದಿದ್ದೆಯೋ, ಷರಾಬು ಕುಡಿದಿದ್ದೆಯೋ – ?"

"ಗ್ನಾನ ನೆಟ್ಟಗಿತ್ತು...."

"ಆಗ ನೆಟ್ಟಗಿತ್ತು, ಈಗ ಸೊಟ್ಟಾಗಿದೆಯಲ್ಲವೇ? ನಿನಗೆ ನಮ್ಮ ಅಪ್ಪಣೆ ಏನಾಗಿತ್ತು- ಉಕ್ಕಡದ ಕಾವಲಿಗೆ ಉಚ್ಛಂಗಮ್ಮನ ಪಡೆಯವರಲ್ಲದೆ ಬೇರೆ ಯಾರನ್ನೂ ನೇಮಿಸಕೂಡದು

ಎಂದು ಹೇಳಿರಲಿಲ್ಲವೇ? ಆದರೂ ಅದು ನಿನಗೆ ನೆನಪಾಗಲಿಲ್ಲ - ಗ್ನಾನ ನೆಟ್ಟಗಿತ್ತು ಅಲ್ಲವೇ, ನಾಯಿ ನನ್ನ ಮಗನೇ. ಇವನ್ನ ಒಳಕ್ಕೆ ತಳ್ಳಿರೋ – ಆಮೇಲೆ ವಿಚಾರಿಸಿಕೋತೀನಿ”

- ಎಂದು ಛಡಿ ಏಟು ಹೊಡೆದ ಹಾಗೆ ಅಪ್ಪಣೆ ಮಾಡಿದ ಕಾಶಣ್ಣನಾಯಕ.

ಆತನ ಅಪ್ಪಣೆಯಾಗುತ್ತಿದ್ದಂತೆಯೇ, ಅದನ್ನು ಕೇಳಿ ಗದಗದ ನಡುಗುತ್ತಿದ್ದ ಚನ್ನಯ್ಯನನ್ನು, ಸಿಪಾಯಿಗಳಿಬ್ಬರು ರೆಟ್ಟೆ ಹಿಡಿದು, ಚಾವಡಿಯ ಹಿಂದಿನ ಕತ್ತಲುಮನೆಗೆ ದರದರ ಎಳೆದುಕೊಂಡು ಹೋದರು.

ಅವರು ಕಣ್ಣುಮರೆಯಾದ ಕೂಡಲೇ ಕಾಶಣ್ಣನಾಯಕ –

“ನಿನ್ನೆ ರಾತ್ರಿ ಸೀಬಾರದ ಉಕ್ಕಡದ ಕಾವಲಿಗೆ ಹೋದವರಲ್ಲಿ ಹತ್ತು ಜನ ಬರುತ್ತಾರೆ. ಅವರನ್ನು ಬಂದಕೂಡಲೇ, ಅವರು ಸರದಿ ಮುಗಿಸಿ, ಮನೆಗೆ ಹೋಗುವಾಗ, ಒಬ್ಬೊಬ್ಬರನ್ನಾಗಿ ಸುಳಿವು ಕೊಡದ ಹಾಗೆ ಬಂಧಿಸಿ, ತಳವಾರಚಾವಡಿಯ ಕಾಟಣ್ಣನಾಯಕರ ಖಾಸ ವಶಕ್ಕೆ ಒಪ್ಪಿಸಿ, ಅವರ ಮನೆಯವರೆಲ್ಲರಿಗೂ, ’ಇರುಳಕಾವಲಿಗೆ ಹೋಗಿದ್ದವರನ್ನು ಚಾವಡಿಯ ಅವಸರದ ಕೆಲಸದ ಮೇಲೆ ಜಾನಕಲ್ಲಿಗೆ ಕಳಿಸಲಾಗಿದೆ. ಬರುವುದು ಮೂರು ದಿನವಾಗುತ್ತದೆ’ ಎಂದು ಸುದ್ದಿ ಕೊಡಿ. ಚನ್ನಯ್ಯನ ಮನೆಗೆ ಹೋಗಿ ’ಅವರು ಒಂದು ವಾರಕಾಲ ಮಾಯಕೊಂಡಕ್ಕೆ ಚಾವಡಿ ಕೆಲಸಕ್ಕೆ ಹೋಗಬೇಕಾಗಿದೆ. ಬಟ್ಟೆಬರೆ ಕೊಡಿ’ ಎಂದು ಕೇಳಿ ತೆಗೆದುಕೊಂಡು ಬನ್ನಿ. ಮನೆಖರ್ಚಿಗೆ ಬೇಕಾದರೆ ಚಾವಡಿಗೆ ಸುದ್ದಿ ಕೊಟ್ಟರೆ, ಎಷ್ಟು ಅಗತ್ಯವೋ ಅಷ್ಟು ಕೊಡಿ. ಆಮೇಲೆ ಮುಂದಿನ ವಿಚಾರ ನೋಡಿಕೊಳ್ಳೋಣ”

- ಎಂದು, ಕೇಳುವವರ ಮನಸ್ಸಿನ ಮೇಲೆ ತನ್ನ ಮಾತು ನಾಟುವ ಹಾಗೆ, ಮೊಳೆಯ ಮೇಲೆ ಹೊಡೆವ ಸುತ್ತಿಗೆಯ ಸದ್ದಿನ ಹಾಗೆ ಕೇಳಿಸುವಂತೆ ಹೇಳಿ –

“ನಮ್ಮ ಚಾವಡಿ ಹಗಲುಸರದಿ ದಫೇದಾರರು, ಇರುಳುಸರದಿ ದಫೇದಾರರು, ಉಕ್ಕಡಗಳ ಸರದಿಗೆ - ಸೀಬಾರದ ಕಣಿವೆಗೆ ’ಉಚ್ಚಂಗಮ್ಮನ ಪಡೆ’, ಗೊಡಬನಾಳು ಕಣಿವೆಗೆ ’ಬರಗೇರಮ್ಮನ ಪಡೆ’, ಕುಂಚಿಗನಾಳು ಕಣಿವೆಗೆ ’ಕಣಿವೆಮಾರಮ್ಮನ ಪಡೆ’, ಮದಕರಿಪುರದ ಉಕ್ಕಡಕ್ಕೆ ’ತಿಪ್ಪಲಗಟ್ಟಮ್ಮನ ಪಡೆ’ಯವರನ್ನಲ್ಲದೆ, ಬೇರೆ ಯಾರನ್ನಾದರೂ ನೇಮಕಮಾಡಿದರೆ, ಅವರ ನಾಲಗೆ ನಾಯಿಗೆ ಊಟ ಆಗುತ್ತದೆ. ನಿಗಾ ಇರಲಿ, ಖಾಯಿಲೆ, ಕಸರು ಅಂತ ನಾಕುಜನ ಹೆಚ್ಚು ಕಡಮೆಯಾದರೂ ತೂಗಿಸಿಕೊಂಡು ಹೋಗಬೇಕಲ್ಲದೆ, ಬೇರೆಯವರನ್ನು ನೇಮಕ ಮಾಡಬಾರದು”

- ಎಂದು ಎಚ್ಚರಿಸಿದ, ಚಾವಡಿಯಲ್ಲಿದ್ದ ಅರೆಬೆಳಕೂ ಮಾಯವಾಗಿ ಕತ್ತಲಾವರಿಸುವಂಥ ಧ್ವನಿಯಲ್ಲಿ.

ಕಾಶಣ್ಣನಾಯಕ ಇಷ್ಟು ಆಜ್ಞೆಮಾಡಿ ಮುಗಿಸುವ ವೇಳೆಗೆ, ಸೀಬಾರದ ಉಕ್ಕಡದಿಂದ ಬರಬೇಕಾದ ಜನ ಬಂದರು.

ಹೊಸಬರೊಂದಿಗೆ ಬಂದ ಇರುಳ ಸರದಿಯ ಕಾವಲವರಿಗೆ –

"ನಿಮ್ಮ ಸರದಿ ತೀರಿತು. ಮನೆಗೆ ಹೋಗಿ"

-ಎಂದು ಅಪ್ಪಣೆಮಾಡಿ, ಅವರು ಹೋದಬಳಿಕ, ಶಿವಪ್ರಸಾದ್ ಸಿಂಗ್‌ಗೆ –

"ಒಟ್ಟೊಟ್ಟಿಗೆ ಐದುನೂರು ಕುದುರೆಸವಾರರನ್ನು ಕಳಿಸಿದಾರಲ್ಲಾ ನಿಮ್ಮ ಜನ. ಅವರಿಗೆ ಜಾಸೂದ್‌ಗಾರಿಕೆ ಅಭ್ಯಾಸವಿಲ್ಲವಾ? ಅಷ್ಟು ಜನ ಬಂದರೆ ಗುಮಾನಿಗೆ ಕಾರಣವಾಗುವುದಿಲ್ಲವಾ? ಇವತ್ತಿಗೆ ಆಯಿತು - ಇನ್ನು ಮೇಲೆ ಬರುವವರು, ನಾವು ಹೇಳುವವರೆಗೆ ನಾಲ್ಕು ಜನ, ಹತ್ತು ಜನ ಗೋಸಾಯಿಗಳಾಗಿ, ಜಂಗಮರಾಗಿ, ದಾಸಯ್ಯಗಳಾಗಿ, ಸಂತೆಗೆ ಬರುವ ಜನರ ಹಾಗೆ ಬರಬೇಕು. ಇದನ್ನು ಯಾರಾದರೂ ಒಬ್ಬರ ಮೂಲಕ ಕೂಡಲೇ ತಿಳಿಸಿ. ಇವತ್ತಿನ ತುತ್ತು ಹೇಗೋ ದಕ್ಕಿಸಿಕೊಳ್ಳುತ್ತೇನೆ"

- ಎಂದು ಹೇಳಿ, ಆ ಮಾತೂ ಅಲ್ಲಿಗೇ ಮುಗಿಸಿದಂತೆ –

"ಮತ್ತೇನು ಹೇಳಿಕಳಿಸಿದ್ದಾರೆ, ನಿಮ್ಮವರು ?" – ಎಂದು ಕೇಳಿದ ಕಾಶಣ್ಣನಾಯಕ.

"ಮುಂದೆ ಬರುವವರು ಹಾಗೇ ಬರುತ್ತಾರೆ. ನಮ್ಮನ್ನು ನಾಯಕರ ಖಾಸಾಪಡೆಗೆ ನೇಮಿಸಿಕೊಳ್ಳಬೇಕು – ಎಂದು ಅಪ್ಪಣೆಯಾಗಿದೆ. ನಾಯಕರ ಕಾವಲು, ಅರಮನೆಯ ಕಾವಲು ನಮ್ಮದಾಗಬೇಕು. ಅದು ಹೇಗೆ ಮಾಡುತ್ತೀರೋ ಮಾಡಿ. ನಾವು ನಮ್ಮ ದೊರೆಗಳ ಅಂಗ ರಕ್ಷಕರಾಗಿದ್ದವರು" – ಎಂದು ಹೇಳಿದ ಶಿವಪ್ರಸಾದ್ ಸಿಂಗ್.

"ಆದೇನು ಬರಿ ಬಾಯಿಮಾತೋ, ಕುರುಹು ಕಳಿಸಿದಾರೋ?" - ಕಾಶಣ್ಣನಾಯಕ ಕೇಳಿದ.

ಆ ಮಾತಿಗೆ ಉತ್ತರವಾಗಿ, ಶಿವಪ್ರಸಾದಸಿಂಗ್, ತನ್ನಂಗಿಯನ್ನು ಬಿಚ್ಚಿ ಕತ್ತಿಗೆ ಕರಿದಾರದಲ್ಲಿ ಕಟ್ಟಿಕೊಂಡಿದ್ದ ಬೆಳ್ಳಿಯ ತಾಯತ ತೆಗೆದು ತೋರಿಸಿದ. ಆ ತಾಯತದಲ್ಲಿ ಸ್ಥೂಲವಾಗಿ ಗಣೇಶನಂತೆ, ಸೂಕ್ಷ್ಮವಾಗಿ ನೋಡಿದರೆ ಮರಾಠ ಸರದಾರರು ತಲೆಗೆ ಧರಿಸುವ ಪಗಡಿಯಂತಿದ್ದ ಕೆತ್ತನೆಯನ್ನು ನೋಡಿ –

"ಈಗ ನೆಮ್ಮದಿಯಾಯಿತು. ನಿಧಾನವಾಗಿ ನಿಮ್ಮ ಕೆಲಸ ಮಾಡುತ್ತೇನೆ. ಅಲ್ಲಿಯವರೆಗೆ ನೀವು ನಾವು ಹೇಳಿದ ಚಾವಡಿಗಳಲ್ಲಿ ಕೆಲಸ ಮಾಡಬೇಕು - ಯಾರಿಗೂ ಅನುಮಾನಕ್ಕೆ ಆಸ್ಪದ ಕೊಡದ ಹಾಗೆ. ನಿಮ್ಮ ಬಗ್ಗೆ ಯಾರಿಗಾದರೂ ಸಂಶಯ ಬಂದು, ಏನಾದರೂ ಕೇಳಿದರೆ, ಆ ವಿಷಯ ನೇರವಾಗಿ, ಸವಿವರವಾಗಿ ನಮ್ಮ ಚಾವಡಿಗೆ ವರದಿಯಾಗಬೇಕು"

-ಎಂದು ಹೇಳಿ –

"ಇವರಿಗೆಲ್ಲಾ ಬೇರೆ ಬೇರೆ ಕಡೆ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಮಾಡಿಸಿ. ಇವತ್ತು ರಾತ್ರಿ ಸಿದ್ದಯ್ಯನ ಬಾಗಿಲು ಕಾವಲಿಗೆ ಖಾಸಾಚಾವಡಿಯವರನ್ನು ನೇಮಿಸಿ, ಸೀಬಾರದ ಕಣಿವೆಯಿಂದ ಬರೋ ಕುದುರೆಸವಾರರನ್ನು ಒಳಗೆ ಬಿಡಲು ಅಪ್ಪಣೆ ಮಾಡಿ. ಆ ಕುದುರೆ, ಸವಾರರನ್ನು ಚಪ್ಪೇಚಾವಡಿ ದಳವಾಯಿಗಳ ಚಾವಡಿಗೆ ಒಪ್ಪಿಸಿ. ಸೀಬಾರದ ಕಣಿವೆ ಇರುಳು ಕಾವಲಿನವರಿಗೆ, ಹಗಲು ಸರದಿಯನ್ನೂ ಅವರೇ ಮಾಡುವಂತೆ ಸುದ್ದಿ ಕಳಿಸಿ. ಅಲ್ಲೇ ಅವರ ಊಟ-ತಿಂಡಿಗೆ ವ್ಯವಸ್ಥೆ ಮಾಡಿ. ಐದುನೂರು ಕುದುರೆಗಳಿಗೆ ಹುರುಳಿ, ಹುಲ್ಲು, ನೀರು, ಸಿಪಾಯಿಗಳಿಗೆ ಊಟಕ್ಕೆ ಗಡಿಗ್ರಾಮಗಳಲ್ಲಿ ಏರ್ಪಾಟುಮಾಡಿ. ನಾಳೆ ಬೆಳಿಗ್ಗೆ ನಮ್ಮ ಅಪ್ಪಣೆ ಆಗುವವರೆಗೂ ಅಲ್ಲಿನ ಸರದಿ ಬದಲಾಗಬಾರದು"

- ಎಂದು ಕಟ್ಟಪ್ಪಣೆ ಮಾಡಿದ, ಕಾಶಣ್ಣನಾಯಕ.

೧೩

ಇದುವರೆಗೂ ಅಳಕಜಳಕವಾಗಿ, ಸಡಿಲವಾಗಿದ್ದುದು - ಈಗ ಬಿಗಿಯಾಗುತ್ತಿದೆ. ತಣ್ಣಗಿದ್ದುದು ನಿಧಾನವಾಗಿ ಕಾವೇರಿ, ಸರಾಗವಾಗಿ ಉಸಿರಾಡುವಂತಿದ್ದ ಪರಿಸ್ಥಿತಿ, ನಿಧಾನವಾಗಿ ಹೊಗೆ ಹಬ್ಬಿ ಕಷ್ಟವಾಗುತ್ತಿದೆ. ಯಾವುದೋ ಕಾಣದ ಎಳೆಗಳು, ಇಚ್ಛೆ ಬಂದಂತೆ ಆಡುವ ಕೈಕಾಲುಗಳಿಗೆ ತಡೆಯಾಗುತ್ತಿದೆ –

ಎಂದಿನಂತಿಲ್ಲ – ಇಂದಿನ ಪರಿಸ್ಥಿತಿ.

- ಈ ಹೊಸ ಪರಿಸ್ಥಿತಿಯ ಘಾಟಿನ ಚುರುಕು ಮೊದಲು ತಟ್ಟಿದ್ದು - ಪಟ್ಟಣದ ಅಂಚೆಹರಿಕಾರ ನಾರಾಯಣಯ್ಯನಿಗೆ.

ಚಿತ್ರದುರ್ಗದಿಂದ ಪೇಶ್ವೆಗಳ ವಕೀಲರು ಹೋದ ಬಳಿಕ, ದುರ್ಗದ ವಾತಾವರಣ ನಾರಾಯಣಯ್ಯನಿಗೆ ಹಿತಕರವಾಗಿತ್ತು. ಅನುಕೂಲಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ನಾರಾಯಣಯ್ಯ ತನ್ನ ಕಛೇರಿಯ ಮೂಲಕ, ತಾನು ಸಂಗ್ರಹಿಸಿದ ಸುದ್ದಿಯನ್ನು ಶ್ರೀರಂಗಪಟ್ಟಣಕ್ಕೆ ಕಳಿಸುತ್ತಿದ್ದ - ತಿಂಗಳಿಗೊಮ್ಮೆ. ಆ ವಾರ್ತೆಕಾರರನ್ನು ಶ್ರೀರಂಗಪಟ್ಟಣಕ್ಕೆ ಕಳಿಸಲು ಪ್ರಧಾನಿಗಳ ಚಾವಡಿಯಿಂದ ರಹದಾರಿಯನ್ನು ಪಡೆದರೆ ಸಾಕಾಗಿತ್ತು.

ಸೀರ್ಯಾ ಹೈದರಾಲಿಯ ವಶವಾಗಿ, ವೆಂಕಪ್ಪಯ್ಯನವರು ಸೀರ್ಯದ ಸುಭೇದಾರರಾಗಿ ನೇಮಕವಾದ ಬಳಿಕ, ಸುದ್ದಿ ಕಳಿಸುವ ದೂರ ಕಡಿಮೆಯಾಗಿ, ಮೊದಲು ತಿಂಗಳಿಗೊಮ್ಮೆ ಪತ್ರ

ಕಳಿಸುತ್ತಿದ್ದವನು, ಈಗ ವಾರಕ್ಕೊಮ್ಮೆ ಕಾಗದ ಕಳಿಸಲಾರಂಭಿಸಿದ. ಅದಕ್ಕೆ ಪ್ರಧಾನಿಗಳ ಚಾವಡಿಯ ಅಪ್ಪಣೆ ಪಡೆಯುವುದೂ ಕಷ್ಟವಾಗಿರಲಿಲ್ಲ. ಪ್ರಧಾನಿಗಳ ಚಾವಡಿಗೆ ಹೋಗಿ, ಅವಕಾಶವಾದರೆ ಅವರನ್ನೇ, ಇಲ್ಲವೇ ಅವರ ಚಾವಡಿಯ ಮುಖ್ಯ ಕರಣಿಕ ಅನಂತಯ್ಯನನ್ನೇ ಕಂಡು 'ಇಂಥ ವಿಷಯ ತಿಳಿಸುವುದಿದೆ' ಎಂದು ಹೇಳಿದರೆ, ಅವರು ಅದರ ವಿವರ ಕೇಳುವ ಶಾಸ್ತ್ರ ಮಾಡಿ, ಅಗತ್ಯವಾದ ರಹದಾರಿಗಳನ್ನು ಕೊಡಿಸುತ್ತಿದ್ದರು. ಸಿರಾದ ಕಡೆಯಿಂದ ಬಂದ ಪತ್ರಗಳೂ, ಹೆಚ್ಚಿನ ತನಿಖೆಗೊಳಪಡದೆ ಅವರ ಕೈಸೇರುತ್ತಿದ್ದವು. ಈ ಅನುಕೂಲ ವಾತಾವರಣವನ್ನು ತನ್ನ ಕಾರ್ಯಕ್ಕೆ ಉಪಯೋಗಿಸಿಕೊಂಡು ನಾರಾಯಣಯ್ಯ ಹಲವಾರು ಚಾವಡಿ ಜನಗಳ ಪರಿಚಯವನ್ನು ಮಾಡಿಕೊಂಡಿದ್ದ. ಅವರನ್ನು ತನಿಖೆ ಮಾಡಿ ಕೇಳದಿದ್ದರೂ, ದಿನಬಳಕೆಯ ಮಾತಿನಲ್ಲಿ ಅವರಾಡುತ್ತಿದ್ದ ಮಾತುಗಳಿಂದ, ತನಗೆ ಬೇಕಾದ ಸುದ್ದಿಯ ಜಾಡು ಹಿಡಿಯುವ ಜಾಣ್ಮೆಯೂ ಆತನಲ್ಲಿತ್ತು. ಅಲ್ಲದೆ, ಪೇಶ್ವೆಗಳ ವಕೀಲರನ್ನು ದುರ್ಗದ ಆಸ್ಥಾನದಿಂದ ಅಪಮಾನಕರವಾದ ರೀತಿಯಲ್ಲಿ ಹೊರಗಟ್ಟಿದ ಬಳಿಕ, ತಾನು ನಾಯಕರಿಗೆ ಹೆಚ್ಚು ಸಮೀಪನಾದವನು ಎಂದು ತೋರಿಸಿಕೊಂಡು, ಸಣ್ಣಪುಟ್ಟವರ ಮೇಲೆ ತನ್ನ ವರ್ಚಸ್ಸು ಬೆಳಸುವ ಕುಶಲರೀತಿಯೂ ಅವನಿಗೆ ಕರಗತವಾಗಿತ್ತು. ಅದೆಲ್ಲವನ್ನೂ ಬಳಸಿಕೊಂಡು ಆತ, ಹಲವಾರು ಚಿಕ್ಕಪುಟ್ಟ ಅಧಿಕಾರಿಗಳ ಮೇಲೆ ತನ್ನ ಪ್ರಭಾವಬೀರಿ, ಆಗಾಗ ಅವರಿಗೆ ಊಟ-ಉಪಚಾರಕ್ಕೆ ಕರೆದು, ಅಗತ್ಯಬಿದ್ದಾಗ ಅಷ್ಟಿಷ್ಟು ಧನಸಹಾಯ ಮಾಡಿ, ನವಾಬ ಹುಟ್ಟಿದ ದಿನ, ಅವರ ಮಗ ಹುಟ್ಟಿದ ದಿನ - ಹೀಗೆ ಚಿಲ್ಲರೆ ಕಾರಣಗಳಿಗೆ ಸಣ್ಣಪುಟ್ಟ ಉಡುಗೊರೆ ಕೊಟ್ಟು, ಆ ಜನ ಅರಿವಾಗದ ಹಾಗೆ ತನ್ನ ಹಂಗಿನಲ್ಲಿರುವಂತೆ ನೋಡಿಕೊಂಡಿದ್ದ - ಆದರೆ ಅದಾವುದೂ ಎದ್ದು ಕಾಣದ ಹಾಗೆ.

ಚಿತ್ರದುರ್ಗದ ನಾಯಕರೊಂದಿಗೆ, ಅವರ ಅಂಕುಶಕ್ಕೆ ಒಳಪಟ್ಟ ಸಣ್ಣಪುಟ್ಟ ಪಾಳಯಗಾರರ ಸಂಬಂಧ, ಅವರ ನಡುವಿನ ವಿಶ್ವಾಸ ಎಷ್ಟಿದೆಯೆಂದು ತಿಳಿದುಕೊಳ್ಳುವುದು ನಾರಾಯಣಯ್ಯನಿಗೆ ಎಷ್ಟು ಅವಶ್ಯಕವಾಗಿತ್ತೋ ಅದಕ್ಕಿಂತ ಹೆಚ್ಚಾಗಿ ಆತನಿಗೆ ಚಿತ್ರದುರ್ಗದ ದಂಡಿನ ಮಾಹಿತಿ ಬೇಕಾಗಿತ್ತು. ದುರ್ಗದ ಜೀವನಾಡಿಯಾದ ದಂಡಿನ ವಿವರ ತಿಳಿದುಕೊಳ್ಳಲೆತ್ನಿಸುವುದು ಹಾವಿನ ಹುತ್ತಕ್ಕೆ ಕೈ ಇಡುವಷ್ಟು ಕಷ್ಟದ ಕೆಲಸವಾದರೂ, ಕಿವಿಗೆ ಬಿದ್ದಷ್ಟೇ ಚಿಲ್ಲರೆ ವಿಷಯಗಳನ್ನು ಸಂಗ್ರಹಿಸಿ, ಹತ್ತು ಕಡೆ ಕಿವಿಗೆ ಬಿದ್ದ ಮಾತಿನಿಂದ, ತನ್ನ ಅನುಭವ, ಜಾಣ್ಮೆಯನ್ನುಪಯೋಗಿಸಿ, ಒಂದು ಸ್ಥೂಲವಾದ ಅಂದಾಜು ಮಾಡುವ ಕುಶಲತೆ ಆತನಿಗಿತ್ತು. ಆದ್ದರಿಂದ ಸ್ವಾಭಾವಿಕವಾಗಿಯೇ ಆತ, ಉಳಿದ ಚಾವಡಿಯ ಜನಗಳಿಗಿಂತ ಹೆಚ್ಚಾಗಿ, ದಂಡಿನ ಬೇರೆ ಬೇರೆ ಇಲಾಖೆಗಳಿಗೆ ಸೇರಿದ ಜನರ ಸ್ನೇಹಗಳಿಸುವಲ್ಲಿ ಹೆಚ್ಚಿನ ಶ್ರದ್ಧೆ ತೋರಿಸುತ್ತಿದ್ದ. ಆತನ ಕಡೆಯ ಜನರೂ ಅಷ್ಟೆ - ಆಗಾಗ ತಮಗೆ ಬೇಕಾದ ಸಾಮಾನು ಕೊಳ್ಳಲು ಅಂಗಡಿಗಳಿಗೆ ಹೋದಾಗ

'ಈಗ ಹುರುಳಿಯ ವ್ಯಾಪಾರ ಹೇಗಿದೆ? ಧಾರಣೆ ಎಷ್ಟು?' ಎಂದು ಒಬ್ಬ ವಿಚಾರಿಸಿಕೊಂಡು ಬಂದರೆ, ಮತ್ತೊಬ್ಬ ಹುಲ್ಲಿನ ಮಾರಾಟದವರೊಂದಿಗೆ ಮಾತಾಡಿ, ಜನಕ್ಕೆ ಸುಲಭವಾಗಿ ಹಸಿಹುಲ್ಲು ಸಿಗುತ್ತಿದೆಯೇ - ಇಲ್ಲವೇ, ಅದಕ್ಕೆ ದಂಡಿನ ಬೇಡಿಕೆ ಹೆಚ್ಚಾಗಿದೆಯೇ? – ಎಂದು ಏರಿಳಿಯುತ್ತಿದ್ದ ಬೆಲೆಗಳ ಅಂದಾಜು ಮಾಡಿಕೊಂಡು ಬಂದು, ನಾರಾಯಣಯ್ಯನಿಗೆ ವರದಿ ಒಪ್ಪಿಸುತ್ತಿದ್ದ. ಅವನ ಕಛೇರಿಯ ಕೆಲವರಂತೂ ಕಳ್ಳಂಗಡಿಗಳ ಖಾಯಂ ಗಿರಾಕಿಗಳಾಗಿದ್ದರು. ಸೂಳೆಯರ ಮನೆಗಳೂ ಅವರಿಗೆ ವಿಷಯ ಸಂಗ್ರಹಿಸುವ ಮೂಲಗಳಾಗಿದ್ದವು. ಆಳು, ಕುದುರೆಗಳಿಗೆ ಬೇಕಾದ ಚರ್ಮದ ಸಾಮಾನ್ನುಗಳನ್ನು ತಯಾರಿಸುತ್ತಿದ್ದ ಮಚ್ಚಿಗರ ಕೇರಿಯೂ, ನಾರಾಯಣಯ್ಯನ ದೃಷ್ಟಿಗೆ ಹೊರತಾಗಿರಲಿಲ್ಲ. ಅಲ್ಲಿಯೂ ಒಂದೆರಡು ಅಂಗಡಿಗಳಿಗೆ ನವಾಬರ ಅಂಚೆಹರಿಕಾರರ ಕಛೇರಿ ಖಾಯಂ ಗಿರಾಕಿಯಾಗಿತ್ತು. ಎಲ್ಲ ಕಡೆಯೂ ಹೀಗೆ ಪರಿಚಿತರನ್ನು ಬೆಳೆಸಿಕೊಂಡಿದ್ದ ನಾರಾಯಣಯ್ಯನಿಗೆ, ಹೆಚ್ಚು ಉಪಕಾರವಾದದ್ದು ಪ್ರಧಾನಿಗಳ ಚಾವಡಿಯ ರಹದಾರಿ ಇಲಾಖೆಯ ಕರಣಿಕ ಅನಂತಯ್ಯನಿಂದ.

ಅನಂತಯ್ಯನಿಗೆ ತನ್ನ ಮಹತ್ವ ಎಷ್ಟು ಎನ್ನುವುದು ತಿಳಿದಿತ್ತೋ ಇಲ್ಲವೋ; ಆದರೆ ಅವನ ಮಹತ್ವವನ್ನರಿತ ನಾರಾಯಣಯ್ಯ ಆತನಿಗೆ, ಆತನ ಸ್ಥಾನಕ್ಕೆ ಸಲ್ಲುವುದಕ್ಕಿಂತ ಹೆಚ್ಚಿನ ಮರ್ಯಾದೆ ತೋರಿಸಿ, ಊಟ-ಉಪಚಾರ-ಉಡುಗೊರೆಗಳಲ್ಲಿ ಧಾರಾಳಮಾಡಿ, ಆತನನ್ನು ಕೈವಶ ಮಾಡಿಕೊಂಡಿದ್ದ.

ಅನಂತಯ್ಯ ನೇರವಾಗಿ ನಾರಾಯಣಯ್ಯನಿಗೇ ಕೈವಶವಾಗಿದ್ದರೆ, ಕೊತ್ವಾಲಚಾವಡಿಯ ಸದರಿ ನೇಮಕದ ದಫೇದಾರ ಕುರುಬರ ಚನ್ನಯ್ಯ, ನಾರಾಯಣಯ್ಯನ ಬಲಗೈ ಬಂಟನಾದ ಕಛೇರಿಯ ಬಸವಯ್ಯನಿಗೆ ಆಪ್ತಮಿತ್ರನಾಗಿದ್ದ. ಅವರಿಬ್ಬರೂ ಎರಡು-ಮೂರು ದಿನಕ್ಕೊಮ್ಮೆ ಭೇಟಿಯಾಗುತ್ತಿದ್ದುದು-ಕರಾವಿನಕಟ್ಟೆಯ ಓಣಿಯೊಂದರಲ್ಲಿದ್ದ ಅಗಸರ ಚಿಕ್ಕವ್ವನ ಮನೆಯಲ್ಲಿ.

ಆ ದಿನ, ರಾತ್ರಿ ಮಾಮೂಲುವೇಳೆಗೆ ಬಸವಯ್ಯ ಚಿಕ್ಕವ್ವನ ಮನೆಗೆ ಹೋದಾಗ ಬಾಗಿಲು ಹಾಕಿದ್ದರೂ, ಕಿಟಕಿಯಿಂದ ಸ್ವಾಗತಿಸುತ್ತಿದ್ದ ದೀಪದ ಬೆಳಕೂ ಕಾಣದೆ, ಕತ್ತಲಲ್ಲೇ ಮನೆ ಬಾಗಿಲನ್ನು ತಟ್ಟಿದಾಗ, ಬಾಗಿಲಿಗೆ ಬೀಗ ಬಿದ್ದಿರುವುದು ಕಾಣಿಸಿ, ಅವನು ಮಾಡಿದ ಬಾಗಿಲು ತಟ್ಟುವ ಸದ್ದನ್ನು ಕೇಳಿ, ಪಕ್ಕದ ಮನೆಯಿಂದ ಬಂದಾತನನ್ನು–

"ಚಿಕ್ಕವ್ವ ಊರಿನಲ್ಲಿಲ್ಲವ್ವಾ ?"

- ಎಂದು ಕೇಳಿದಾಗ –

"ಇದಾಳೆ. ಯಾರೋ ನೆಂಟರ ಮನೆಗೆ ಹೋಗಿದಾಳೆ. ನೀವು ಬಂದರೆ ಇರಬೇಕೂಂತ ಹೇಳಿ ಹೋಗವಳೆ. ಇನ್ನೇನು ಬರೋ ಹೊತ್ತಾಯ್ತು. ಎರಡು ಗಳಿಗೆ ಕಾದರೆ ಬಂದುಬಿಡಬಹುದು. ನಮ್ಮನೇಲಿ ಕುಂತಿರಿ"- ಎಂದು ಹೇಳಿದ.

ಆ ಮಾತನ್ನು ಕೇಳಿ ಇರುವುದೋ, ಹೋಗುವುದೋ ಎಂದು ಬಸವಯ್ಯ ಯೋಚಿಸುತ್ತಿದ್ದಾಗ, ಪಕ್ಕದ ಮನೆಯಾತ –

"ನಾವೂ ಚಿಕ್ಕವ್ವನ ನೆಂಟರೇ, ಸಂಕೋಚ ಏನೂ ಬೇಡ. ನಿಮ್ಮನ್ನು ಹಂಗೆ ಕಳಿಸಿಬಿಟ್ರೆ, ನಾನು ಹೇಳಿಹೋಗಿದ್ರೂ ಹಿಂಗ ಮಾಡಿದಿರಲ್ಲಾಂತ ಚಿಕ್ಕವ್ವ ಬೇಜಾರು ಮಾಡಿಕೋಬೋದು. ಬನ್ನಿ" - ಎಂದು ಬಲವಂತ ಮಾಡಿ ಕರೆದ.

ಆ ಒತ್ತಾಯಕ್ಕೆ ಮಣಿದು ಬಸವಯ್ಯ, ಆ ಮನೆಯೊಳಗೆ ಹೋಗಿ, ಆತ ಹಾಸಿದ ಚಾಪೆಯ ಮೇಲೆ ಕುಳಿತ - ಎದುರಿಗೆ ಗೂಡಿನಲ್ಲಿ ಉರಿಯುವ ಬುಡ್ಡಿಯ ದೀಪವನ್ನೇ ನೋಡುತ್ತಾ.

ಹಾಗೆ ನೋಡುತ್ತಿರುವಾಗಲೇ-

ಹೊರಗಿನಿಂದ ಬೀಸಿಬಂದ ಗಾಳಿಗೆಂಬಂತೆ, ಬೆಳಕಿಗಿಂತ ಹೆಚ್ಚಾಗಿ ಹೊಗೆ ಕಾರುತ್ತಿದ್ದ ದೀಪ ಆರಿಹೋಗಿ, ಕತ್ತಲಲ್ಲಿದ್ದ ಬಸವಯ್ಯನ ಮೇಲೆ ಕಂಬಳಿಯ ಮುಸುಗುಬಿದ್ದು ಅವನು ಸದ್ದು ಮಾಡುವುದಕ್ಕೂ ಅವಕಾಶ ಕೊಡದಂತೆ ಇಬ್ಬರು ಧಡಿಯರು, ಮೂಟೆಯಂತೆ ಅವನನ್ನು ಹೊತ್ತು ಹೊರಗೆ ನಡೆದು, ಹೊರಗಿನ ಕತ್ತಲಲ್ಲಿ ನೆರಳಿನಂತೆ ಕರಗಿಹೋದರು.

* * *

ಹಗಲನ್ನು ಕತ್ತಲಾಗಿಸುವಂಥ ಮಬ್ಬುಗತ್ತಲು ಕವಿದಿದ್ದ ಗುಹೆ. ಗುಹೆಯ ನೆಲದ ಬಂಡೆ ಮಂಜಿನಷ್ಟು ತಣ್ಣಗಿದ್ದರೆ, ನೆತ್ತಿಯ ಮೇಲಿನ ಬಂಡೆಗಳ ಸಂದಿನಿಂದ. ಮೈಯ ರಕ್ತವನ್ನು ಹನಿಹನಿಯಾಗಿ ಹೆಪ್ಪುಗಟ್ಟಿಸುವ ತಣ್ಣನೆಯ ನೀರು, ಬರಿಮೈ ಮೇಲೆ ಸೋರುತ್ತಿತ್ತು. ಅತ್ತಿತ್ತ ಅಲುಗಾಡಲೂ ಅವಕಾಶವಿಲ್ಲದಂತೆ, ಕಂಬಕ್ಕೆ ಬಿಗಿಯಲ್ಪಟ್ಟಿದ್ದ ಬಸವಯ್ಯ ಮಂಜಿನಗೊಂಬೆಯಂತಾಗಿದ್ದ. ನೆತ್ತಿಯ ಮೇಲೆ ಕೊಟ ಕೊಟ್ಟ ಬಿದ್ದು, ನೆತ್ತಿಯನ್ನು ತೋಯಿಸಿ, ಹಣೆಯ ಮೇಲೆ ಹರಿದು, ಕಣ್ಣನ್ನು ತುಂಬುತ್ತಿದ್ದ ನೀರನ್ನು ಒರಸಿಕೊಳ್ಳಲೂ ಆಗದಂತೆ ಕೈಗಳನ್ನು ಎಳೆದು ಕಟ್ಟಿದ್ದರು. ತಣ್ಣೀರು ಹರಿಹರಿದು ಕಣ್ಣು ಕೆಂಡ ಹಾಕಿದಂತೆ ಉರಿಯುತ್ತಿತ್ತು. ಗಳಿಗೆಗೊಮ್ಮೆ ಎದೆಯನ್ನು ಸೀಳುವಂಥ ಸೀನು. ಮೈಯೆಲ್ಲಾ ನೀರಾದರೂ ಒಣಗಿದ ನಾಲಗೆಯನ್ನು ಮುಖದ ಮೇಲೆ ಹರಿಯುತ್ತಿದ್ದ ನೀರಿನಿಂದ ತೇವಮಾಡಿಕೊಳ್ಳಲಾಗದಂತೆ, ಮುಟ್ಟಿದರೆ ಗಂಟೆಗಟ್ಟಲೆ ನವೆ ಬರಿಸುವ ನಸುಗುನ್ನಿಯ ಪುಡಿಯ ಲೇಪ ತುಟಿಗಳಿಗೆ. ಅದು ಸಾಲದೆಂಬಂತೆ, ಆಗಾಗ ಚರ್ಮದ

ಹೊದಿಕೆ ಧರಿಸಿದ ಕೈಗಳು, ಮೈಗೆ ನಸುಗುನ್ನಿಯ ಪುಡಿಯನ್ನು ಉದುರಿಸಿ, ನವೆ ತಾಳಲಾರದೆ, ತುರಿಸಿಕೊಳ್ಳಲಾಗದೆ ಉರಿ-ಮಂಜುಗಳ ನಡುವೆ ಹೊಯ್ದಾಡುತ್ತಾ, ಆಗಾಗ ಎಚ್ಚರ ತಪ್ಪುತ್ತಾ, ಎಚ್ಚರ ತಪ್ಪಿದಾಗ ಮೈಮೇಲೆ ಹರಿಯಬಿಟ್ಟ ಕೆಂಜೇಳುಗಳ ಕಡಿತದ ಛಳಕು ಉರಿಯ ವಿಷವೇರಿ ಚೀರುತ್ತಾ, 'ಸಾವಾದರೂ ಬರಬಾರದೇ' ಎಂದು ಬಯಸುತ್ತಾ, ಬಾರದ ಸಾವನ್ನು ಶಪಿಸುತ್ತಾ, ಎರಡು ದಿನ ಬಾಯಿ ಬಿಗಿಹಿಡಿದಿದ್ದ ಬಸವಯ್ಯ, ಅಂಗುಷ್ಟದಿಂದ ನಡುನೆತ್ತಿಯವರೆಗೂ ದಹಿಸುತ್ತಿದ್ದ ಬಾಯಾರಿಕೆಯ ಬೇಗೆಯಲ್ಲಿ ಹೊಯ್ದಾಡುತ್ತಾ.

ಆತನಿಗೆ ಅಷ್ಟು ದೂರದ ಅರೆಗಲ್ಲ ಮೇಲೆ ಕುಳಿತ ಇಬ್ಬರು, ಅವನನ್ನು ಏನೊಂದೂ ಕೇಳಿರಲಿಲ್ಲ.

'ನಿನಗಿಷ್ಟ ಬಂದಾಗ ಬಾಯಿಬಿಡು, ನಮಕ್ ಹರಾಮ್' - ಎಂದು ಹಿಡಿದು ತಂದ ದಿನ ಹೇಳಿದ್ದರು.

ಅಷ್ಟೇ-

ಮತ್ತೇನೂ ಕೇಳಿರಲಿಲ್ಲ ; ಏನೂ ಹೇಳಿರಲಿಲ್ಲ.

ಹಾಗೆ ಹಗಲಿಬ್ಬರು, ರಾತ್ರಿ ಇಬ್ಬರು - ಸರದಿಯಂತೆ ಬಂದು ಹೋಗುತ್ತಿದ್ದರು. ಹಸಿದ ತೋಳಗಳಂತೆ ಅವನನ್ನು ನೋಡುತ್ತಿದ್ದರು. ಆದರೆ ಏನೊಂದೂ ಮಾತಾಡಿರಲಿಲ್ಲ – ಆಗಾಗ ಅವನ ಮೈಯನ್ನು ತೊಳೆಯುತ್ತಿದ್ದ ನೀರಿನಲ್ಲಿ ನಸುಗುನ್ನಿಯ ಪುಡಿಯನ್ನು ಹಾಕುವುದನ್ನು ಬಿಟ್ಟು, ಆಗಾಗ ತಮ್ಮ ಬಳಿಯಲ್ಲಿದ್ದ ಮುಚ್ಚಿದ ಬುಟ್ಟಿಯೊಳಗಿದ್ದ ತೊಗಲಿನ ಹೊದಿಕೆ ಧರಿಸಿದ ಕೈಯಿಂದ ಹಿಡಿದು ರೇಗಿಸಿ ಬಾಲದ ಕೊಂಡಿಯನ್ನೆತ್ತಿದ ಚೇಳುಗಳನ್ನು ಅವನ ದೇಹದ ಮರ್ಮಸ್ಥಾನದ ಸಂದಿಗಳಲ್ಲಿ ಬಿಡುತ್ತಿದ್ದರು. ಎರಡು ದಿನಗಳ ಬಸವಯ್ಯನ ಮಲ-ಮೂತ್ರಗಳ ವಾಸನೆ ಅವನಿಗೆ ವಾಕರಿಕೆ ಬರಿಸುತ್ತಿದ್ದರೂ, ಅವರಿಗೆ ಅದರದೇನೂ ಪರಿವೆ ಇದ್ದಂತಿರಲಿಲ್ಲ.

ಮೂರನೆಯ ದಿನ, ಅವರು ಏನೂ ಕೇಳದೆ, ಬಸವಯ್ಯನೇ ಉಸಿರು ಹೊರಡದ ಧ್ವನಿಯಲ್ಲಿ ಹೇಳಿದ –

"ಅದೇನು ಬೇಕೋ ಕೇಳಿ. ಹೇಳಿಬಿಡ್ತೀನಿ - ಕುಡೀಲಿಕ್ಕಷ್ಟು ನೀರು ಕೊಡಿ."

ಆ ಮಾತು ಕೇಳಿದ ಒಬ್ಬಾತ, ಅವನ ಬಾಯನ್ನು ಹಿಗ್ಗಲಿಸಿ ಗೊಟ್ಟವನ್ನಿಟ್ಟು ನಾಲಗೆಯ ತೇವವಾರುವಷ್ಟು ನೀರು ಬಿಟ್ಟು –

"ನೀನು ಮಾಡಿದ ಪಾಪಕರ್ಮ ಏನೇನಿದೆಯೋ ಎಲ್ಲಾ ಒದರಿಬಿಡು."

- ಕೆಂಡ ಉಗುಳುವಂತೆ ಹೇಳಿದ –

"ಚನ್ನಯ್ಯ ಹೇಳೋ ಪುರಾಣ ಬ್ಯಾಡ. ಆ ಕುನ್ನಿ ಬೊಗಳೋದೆಲ್ಲಾ ಕೇಳಿದ್ದಾಗಿದೆ. ನಿಮ್ಮ ಹಿರಿಯ ನಾರಾಯಣಯ್ಯ ದುರ್ಗದಲ್ಲಿ ಯಾರ ಯಾರ ದೋಸ್ತಿ ಮಾಡಿದಾನೆ ? ಅವರಲ್ಲಿ ಯಾರು ಮುಖ್ಯ ?"

"ಅಕ್ಕಸಾಲಿ ಚಿನ್ನಾಚಾರಿ...." - ನಿಧಾನವಾಗಿ ಬಾಯಿಬಿಟ್ಟ, ಬಸವಯ್ಯ.

"ಅವನಿಗೇನು ಕೆಲಸ ?"

"ಕಳ್ಳರಹದಾರಿಯ ಮುದ್ರೆ ಮಾಡಿಕೊಟ್ಟೋನು ಅವನು."

"ನಿಜವಾದ ಮುದ್ರೆ ಕೊಟ್ಟೋರು ಯಾರು ?"

"ಪ್ರಧಾನಿಗಳ ಚಾವಡಿಯ ರಹದಾರಿ ಕರಣಿಕ ಅನಂತಯ್ಯ."

"ಆ ಕಳ್ಳಮುದ್ರೆ ಯಾರ ಹತ್ತಿರ ಇದೆ ?"

"ನಾರಾಯಣಯ್ಯನ ಕಬ್ಬಿಣದ ತಿಜೋರೀಲಿ....ಗಂಟಲು ಒಣಗ್ತಾ ಇದೆ...."

"ಅವರ ಮನೆ ಕಾವಲಿಗೆ ಎಷ್ಟು ಜನಾನ ತಗೊಂಡಿದಾರೆ....ಎಲ್ಲಾ ನಿಮ್ಮೋರೇನೇ, ದುರ್ಗದೋರು ಇದಾರೋ ?"

- ಮತ್ತೆ ನಾಲ್ಕು ಹನಿ ನೀರನ್ನು ಗೊಟ್ಟದಲ್ಲಿ ಬಿಟ್ಟು ಕೇಳಿದ ಆತ.

"ಹಗಲುಕಾವಲಿಗೆ ನಿಮ್ಮೋರೇ - ಇರುಳುಕಾವಲಿಗೆ ಮಾತ್ರ ನಮ್ಮವರು."

"ಎಷ್ಟು ಜನ ಇದಾರೆ ?"

"ಹದಿನೈದು ಜನ."

"ಹೂಂ. ಮತ್ತಿನ್ನಾರು ನಿನಗೆ ಸುದ್ದಿ ಕೊಡ್ತಿದ್ದೋರು ?"

"ಕುದುರೆಲಾಯದ ಲಾಳದ ಇಮಾಂಸಾಬಿ ವಾರಕ್ಕೊಂದು ಸಲ ಎಷ್ಟು ಹೊಸ ಕುದುರೆಗೆ ಲಾಳ ಕಟ್ಟಿದೀವಿ ಅಂತ ಹೇಳ್ತಾ ಇದ್ದ."

"ಇನ್ನಾವ ಹಲಾಲುಕೋರ ಮತ್ತೇನು ಸುದ್ದಿ ಕೊಡ್ತಾ ಇದ್ದ ?"

"ಮಚ್ಚಿಗರ ಚಲುವಯ್ಯ."

"ಎಕ್ಕಡ, ಜೋಡಿನ ಲೆಕ್ಕ ಕೊಡ್ತಾ ಇದ್ನಾ?"

"ಇದೆಲ್ಲಾ ಜುಜುಬಿ ಜನ. ಬಾಲ ನಮಗೆ ಬೇಕಿಲ್ಲ. ಹೆಡೆ ಅಂತ ಹೆಸರು ಹೇಳು."

"ಅದೆಲ್ಲಾ ನಾರಾಯಣಯ್ಯ, ಸೂರಪ್ಪನೋರಿಗೆ ಗೊತ್ತು."

"ಅವರನ್ನು ಬಿಟ್ರೆ...."

"ಕಳ್ಳಸುದ್ದಿ ಸಾಗಿಸೋನು ರಂಗಯ್ಯನ ಬಾಗಿಲಾಚೆಗೆ ಭೂತದ ತೋಪಿನ ಹತ್ತಿರ ಇರೊ ಗೋಸಾಯಿಕಟ್ಟೇಲಿ ಭಂಗಿ ಶಿವಲಿಂಗಯ್ಯಾಂತ ಇದಾನೆ. ಹಗಲುಹೊತ್ತು ತಿರುಪೆ ಕೇಳೋಕೆ ಬಂದ

ಹಾಗೆ ಬಂದು, ಭಿಕ್ಷೆ ಜೊತೇಲಿ ಕೊಟ್ಟ ಕಳ್ಳಸುದ್ದಿ, ಖೋಟಾಮುದ್ರೆ ಹಾಕಿದ ಕಾಗದ ಸಾಗಿಸೋನು ಅವನು. ಅವನ್ನ ಹಿಡಿದ್ರೆ ಭಾಳ ವಿಷಯ ಸಿಗ್ತದೆ. ಅಷ್ಟು ನನಗೆ ಗೊತ್ತಿರೋದು. ನೀವಿನ್ನು ತಲೆ ಕಡಿದ್ರೂ ನನಗೆ ಬ್ಯಾರೆ ವಿಷಯ ಗೊತ್ತಿಲ್ಲ."

- ಬಾಯಾರಿಕೆಯಲ್ಲಿ ತೊದಲುತ್ತಾ ಹೇಳಿದ ಬಸವಯ್ಯ.

"ಇಷ್ಟು ಹೇಳಿದೆಯಲ್ಲಾ, ಸಾಕು. ಪಾಪ- ಮಾತಾಡಿ ಭಾಳ ದಣಿದಿದಾನೆ. ಚೆನ್ನಾಗಿ ನೀರು ಕುಡಿಸು" - ಎಂದು ಸುಮ್ಮನೆ ಮಾತು ಕೇಳುತ್ತಾ ಕುಳಿತಿದ್ದಾತ ಹೇಳಿದ.

"ನಿಜ, ನಿಜ - ಭಾಳ ದಣಿದಿದಾನೆ. ಬೇಕಾದ ಸುದ್ದೀನೆಲ್ಲಾ ಹೇಳ್ದ. ಅವನ ಬಾಯಿ ಸಿಹಿಮಾಡು"

- ಎಂದು ಹೇಳಿ, ತನ್ನ ಸೊಂಟದಲ್ಲಿದ್ದ ಬೇರೊಂದು ತಿತ್ತಿಯಿಂದ, ಬಸವಯ್ಯನ ಬಾಯಿಗೆ ಧಾರಾಳವಾಗಿ ನೀರು ಹಾಕಿದ, ಪ್ರಶ್ನೆ ಕೇಳುತ್ತಿದ್ದಾತ.

ಆ ಸಿಹಿನೀರು ಕುಡಿದ ಬಸವಯ್ಯ –

ಆ ನೀರು ಗಂಟಲಿನಲ್ಲಿಳಿದು ಇಂಗುತ್ತಿದ್ದಂತೆಯೇ ಬಸವಯ್ಯನ ನಾಲಗೆ ಕಂದು ಬಣ್ಣವಾಗಿ, ಕಂಭಕ್ಕೆ ಒರಗಿದ ಅವನ ತಲೆ. ಶಕ್ತಿಯನ್ನು ಕಳೆದುಕೊಂಡಂತೆ ಪಕ್ಕಕ್ಕೆ ಜಾರಿತು.

* * *

ನಾಲ್ಕೈದು ದಿನವಾಯಿತು-

ತಮ್ಮ ನಂಬಿಕೆಯಾಳು ಬಸವಯ್ಯ ಪತ್ತೆ ಇಲ್ಲ.

ನಾರಾಯಣಯ್ಯ, ತನ್ನ ಆಳುಗಳನ್ನೆಲ್ಲಾ ಬಿಟ್ಟು, ಬಸವಯ್ಯ ಮಾಮೂಲಾಗಿ ಹೋಗಿ ಬರುತ್ತಿದ್ದ ಜಾಗಗಳಲ್ಲೆಲ್ಲಾ ವಿಚಾರಿಸಿಸಿದ. ಎಲ್ಲ, ಯಾರಿಗೂ ಸುದ್ದಿ ತಿಳಿಯದು. ಅವನನ್ನು ಕಂಡವರೂ ಇಲ್ಲ. ಯಾರನ್ನು ಕೇಳಬೇಕು, ಯಾರಿಗೆ ಹೇಳಬೇಕು ? - ಬಸವಯ್ಯ ಏಕಾಏಕಿ ನಾಪತ್ತೆಯಾದುದು ನಾರಾಯಣಯ್ಯನ ನರವೇ ಕುಗ್ಗಿದ ಹಾಗಾಯಿತು.

ಸೂರಪ್ಪನೊಂದಿಗೆ ಈ ವಿಷಯ ಪ್ರಧಾನಿಗಳಿಗೆ ತಿಳಿಸಬೇಕೆಂದರೆ ಆತ ಜ್ವರ ಬಂದು ಹಾಸಿಗೆ ಹಿಡಿದಿದ್ದ. ಹಾಗಾಗಿ ಮಾಮೂಲಿ ಕೆಲಸಕ್ಕೆ ತಾವೇ ಪ್ರಧಾನಿಗಳ ಬಳಿ ಎಂದೂ ಹೋಗದ ನಾರಾಯಣಯ್ಯ ಎದೆ ಗಟ್ಟಿಮಾಡಿಕೊಂಡು, ಯಾವುದೋ ಪತ್ರಕ್ಕೆ ರಹದಾರಿ ಪಡೆಯುವ ನೆಪಮಾಡಿಕೊಂಡು, ತಾವೇ ಪ್ರಧಾನಿಗಳ ಚಾವಡಿಗೆ ಹೋಗಿ ನರಸಪ್ಪಯ್ಯನವರನ್ನು ಕಂಡು-

"ಈ ಪತ್ರ ಕಳುಹಿಸಲು ರಹದಾರಿ ಬೇಕಾಗಿತ್ತು. ಕೊಡಿಸಿಕೊಡಿ" ಎಂದು ಕೇಳಿದ.

"ಇದೇನು ಇವತ್ತು ನೀವೇ ಬಂದಿರಲ್ಲಾ. ಸೂರಪ್ಪಾ, ಬಸವಯ್ಯ ಇರಲಿಲ್ಲವೇ ?"

-ಎಂದು ಕೇಳಿದರು ನರಸಪ್ಪಯ್ಯ.

"ಸೂರಪ್ಪನವರಿಗೆ ಮೈಲಿ ಹುಷಾರಿರಲಿಲ್ಲ, ಎರಡು ದಿನದಿಂದ ಜ್ವರ. ಬಸವಯ್ಯ ಇರಲಿಲ್ಲ. ಅದಕ್ಕೆ ನಾನೇ ಬಂದೆ. ಜರೂರಾಗಿ ಈ ಕಾಗದ ಸೀರ್ಯಕ್ಕೆ ಕಳಿಸಬೇಕಾಗಿತ್ತು"

-ಎಂದ ನಾರಾಯಣಯ್ಯ, ಕಾಗದವನ್ನು ನರಸಪ್ಪಯ್ಯನವರ ಮುಂದಿಟ್ಟು,

ನರಸಪ್ಪಯ್ಯ ಆ ಕಾಗದವನ್ನು ಓದಿದ ಶಾಸ್ತ್ರ ಮಾಡಿ, ಅದನ್ನು ಥೈಲಿಯೊಳಗಿಟ್ಟು ಆಳೊಬ್ಬನನ್ನು ಕರೆದು –

"ಇದಕ್ಕೆ ರಹದಾರಿಪತ್ರ, ಥೈಲಿಗೆ ಮುದ್ರೆ ಹಾಕಿಸಿಕೊಂಡು ಬಾ"

-ಎಂದು ಹೇಳಿ –

"ಮತ್ತೇನಾದರೂ ಹೇಳುವುದಿದೆಯೋ ?" – ಎಂದು ಕೇಳಿದರು.

ಆ ಮಾತಿಗೆ ಉತ್ತರವೆಂಬಂತೆ, ನಾರಾಯಣಯ್ಯ ಸುತ್ತಲೂ ನೋಡಿ, ತಮ್ಮ ಧ್ವನಿ ಕೇಳುವಷ್ಟು ಹತ್ತಿರದಲ್ಲಿ ಬೇರಾರೂ ಇಲ್ಲವೆಂದು ಖಚಿತಮಾಡಿಕೊಂಡು-

"ನಿಮ್ಮಿಂದ ಒಂದು ಉಪಕಾರವಾಗಬೇಕಾಗಿತ್ತು" - ಎಂದು ತಗ್ಗಿದ ಧ್ವನಿಯಲ್ಲಿ ಕೇಳಿದ.

"ಏನು?"

"ನಮ್ಮ ಖಾಸಾ ಆಳು ಬಸವಯ್ಯ, ಈಗ ಐದು ದಿನದ ಹಿಂದೆ, ಸಂಜೆ ಪೇಟೆಯಲ್ಲಿ ಸುತ್ತಾಡಿಕೊಂಡು ಬರುತ್ತೇನೆ ಎಂದು ಹೋದವನು - ಆವೊತ್ತಿನಿಂದ ಪತ್ತೆ ಇಲ್ಲ."

"ಈ ವಿಷಯ ಕೂಡಲೇ ತಳವಾರ ಚಾವಡಿಗೆ ಹೇಳಬೇಕಾಗಿತ್ತು. ಇಷ್ಟು ತಡ ಏಕೆ ಮಾಡಿದಿರಿ?"

"ಬಸವಯ್ಯ ಸ್ವಲ್ಪ ಷೋಕಿ ಮನುಷ್ಯ, ಒಂದೊಂದು ಸಲ ಒಂದೆರಡು ದಿನ ಹೀಗೆ ಕಾಣೆಯಾಗುವುದುಂಟು."

"ಅಂಥವರನ್ನು ನಿಮ್ಮ ಆಪ್ತ ಎಂದಿಟ್ಟುಕೊಂಡಿದ್ದೀರಲ್ಲಾ - ಆಯಿತು. ನಾವೇ ತಳವಾರ ಚಾವಡಿಗೆ ಸುದ್ದಿ ಮುಟ್ಟಿಸಿ ಹುಡುಕಿಸಲು ಹೇಳುತ್ತೇವೆ. ಆದರೆ ಇನ್ನು ಮೇಲೆ ಹೀಗೆ ಊರು ಅಲೆಯುವ ಜನಗಳನ್ನ ಇಟ್ಟುಕೊಳ್ಳಬೇಡಿ. ಅಂಥವರಿಂದ ನಿಮಗೂ ಅಪಾಯ, ನಮಗೂ ಕೆಟ್ಟ ಹೆಸರು. ಬಸವಯ್ಯ ಸಿಕ್ಕರೆ ಪಟ್ಟಣಕ್ಕೆ ಕಳಿಸಿಬಿಡಿ" - ಎಂದರು ನರಸಪ್ಪಯ್ಯ.

"ಈಗಾಗಲೇ ನಾನು ಆ ತೀರ್ಮಾನ ಮಾಡಿದ್ದೇನೆ. ಈಗ ಸದ್ಯಕ್ಕೆ ಅವನು ಸಿಕ್ಕರೆ ಸಾಕು" - ಎಂದ ನಾರಾಯಣಯ್ಯ.

"ಅಷ್ಟು ಯೋಚಿಸಬೇಡಿ. ಆತ ಎಲ್ಲಿದ್ದರೂ ನಮ್ಮ ತಳವಾರಚಾವಡಿಯ ಜನ ಹುಡುಕಿಸಿ ಕರೆತರುತ್ತಾರೆ. ನಾವೇ ಹೇಳಿದಮೇಲೆ ಮತ್ತಷ್ಟು ಮುತುವರ್ಜಿ ವಹಿಸುತ್ತಾರೆ. ಸೂರಪ್ಪನವರ ಆರೋಗ್ಯ ಸರಿಯಾಗಿ ನೋಡಿಕೊಳ್ಳಿ. ನಮ್ಮ ವೈದ್ಯರನ್ನು ಕಳಿಸೋಣವೇ ?"

– ನರಸಪ್ಪಯ್ಯ ಕೇಳಿದರು.

"ಜ್ವರ ಹೆಚ್ಚಾದರೆ ಹೇಳಿ ಕಳಿಸುತ್ತೇನೆ. ಸದ್ಯಕ್ಕೆ ಇದೊಂದು ಸಣ್ಣ ಉಪಕಾರಮಾಡಿ" - ಎಂದು ಕೇಳಿದರು ನಾರಾಯಣಯ್ಯ,

ಆ ವೇಳೆಗೆ ಅವರ ಕಾಗದಕ್ಕೆ ರಹದಾರಿಪತ್ರ, ಕಾಗದದ ಥೈಲಿಗೆ ಮುದ್ರೆ ಒತ್ತಿಸಿಕೊಂಡು ಬರಲು ಹೋದ ಆಳು, ಅವೆರಡನ್ನೂ ತಂದು ಪ್ರಧಾನಿಗಳ ಮುಂದಿಟ್ಟ.

ರಹದಾರಿಪತ್ರ, ಥೈಲಿಗೆ ಸರಿಯಾಗಿ ಮುದ್ರೆ ಬಿದ್ದಿದೆಯೋ ಇಲ್ಲವೋ ಎಂದು ನೋಡಿದ ನಾರಾಯಣಯ್ಯ ಮುದ್ರೆ ಮಾಮೂಲಿನದಾಗದೆ ಹೊಸ ಬಗೆಯದಾಗಿರುವುದನ್ನು ಕಂಡು –

"ಇದೇನು ಹೊಸ ಮುದ್ರೆ ಬಂದಂತಿದೆಯಲ್ಲಾ ?" – ಎಂದು ಕೇಳಿದ.

"ಹಾಗೇನೂ ಇಲ್ಲವಲ್ಲ, ಮುದ್ರೆ ಬದಲಾಗಲು ಕಾರಣವಿಲ್ಲವಲ್ಲ. ಎಲ್ಲಿ ?" – ಎಂದು ನರಸಪ್ಪಯ್ಯನವರೂ ರಹದಾರಿಪತ್ರ, ಥೈಲಿಗಳ ಮೇಲಿದ್ದ ಮುದ್ರೆ ನೋಡಿದರು.

ನಾರಾಯಣಯ್ಯ ಹೇಳಿದ ಮಾತು ನಿಜವಾಗಿತ್ತು.

ಮುದ್ರೆ, ಎಂದಿನಂತೆ 'ಹನುಮದ್ಗರುಡ' ಲಾಂಛನವಾಗಿರದೆ, ಬಳ್ಳಿಗೆಲಸದಲ್ಲಿ ಸೂಕ್ಷ್ಮವಾಗಿ ಕಾಣುವ ಆನೆಯ ಮುದ್ರೆಯಾಗಿತ್ತು, ಮುದ್ರೆಯ ಲಾಂಛನ ಬದಲಾದ ವಿಷಯ ನರಸಪ್ಪಯ್ಯನವರಿಗೂ ತಿಳಿಯದು. ಆದರೂ ಆ ವಿಷಯವನ್ನು ಪರಕೀಯನಾದ ನಾರಾಯಣಯ್ಯನಿಗೆ ಹೇಳಲಾಗದೆ –

"ಈ ಮುದ್ರೆಯೇ - ಇದು ನಿಮಗೆ ಹೊಸದು, ನಮಗಲ್ಲ. ಈಗೆರಡು ದಿನಗಳ ಕೆಳಗೆ ಹೊಸ ಮುದ್ರೆ ಮಾಡಿಸುವ ತೀರ್ಮಾನವಾಯಿತು. ನಿಮಗದು ತಿಳಿಯದು, ಅಷ್ಟೆ"

- ಎಂದು ಹೇಳಿ, ನಾರಾಯಣಯ್ಯನನ್ನು ಕಳಿಸಿಕೊಟ್ಟು, ಆಳನ್ನು ಕರೆದು-

"ರಹದಾರಿ ಕರಣಿಕ ಅನಂತಯ್ಯನನ್ನು ಕರಿ" – ಎಂದು ಹೇಳಿದರು.

ನರಸಪ್ಪಯ್ಯನವರು ಕರೆದದ್ದು ಅನಂತಯ್ಯನನ್ನು, ಆದರೆ ಬಂದದ್ದು ಬೇರೊಬ್ಬಾತ. ಅದನ್ನು ಕಂಡು ನರಸಪ್ಪಯ್ಯ –

"ಅನಂತಯ್ಯ ಎಲ್ಲಿ ಹೋದ ?" – ಎಂದು ಕೇಳಿದರು.

"ಎರಡು ದಿನ ಭರಮಸಾಗರದಲ್ಲಿ ಏನೋ ತುರ್ತುಕೆಲಸ ಇದೆ ಎಂದು ರಜಾ ಕೇಳಿ ಹೋಗಿದ್ದಾರೆ."

“ಆತನಿಗೆ ರಜ ಕೊಟ್ಟವರು ಯಾರು? ನಿನ್ನನ್ನು ಇಲ್ಲಿಗೆ ನೇಮಕ ಮಾಡಿದವರು ಯಾರು?”

“ಚಿಕ್ಕ ನಾಯಕರು.”

“ಈ ಮುದ್ರೆ ಬದಲಾದದ್ದು ಯಾವಾಗ ?”

“ಎರಡು ದಿನ ಆಯಿತು.”

“ನಮಗೇಕೆ ಈ ವಿಷಯ ತಿಳಿಸಲಿಲ್ಲ ? ಹಳೆಯದು ಏನಾಯಿತು ?”

“ಹಳೆಯದರ ಹಿಡಿ ಮುರಿದಿತ್ತು. ಚಿಕ್ಕನಾಯಕರಿಗೆ ಆ ವಿಷಯ ಅರಿಕೆ ಮಾಡಿಕೊಂಡಾಗ ’ಮುದ್ರೆಯೂ ಹಳೆಯದಾಯಿತು. ಮುಂದೆ ಇದನ್ನು ಬಳಸಿ’ ಎಂದು ಅಪ್ಪಣೆ ಮಾಡಿದರು. ತಮಗಿದನ್ನು ತಿಳಿಸಿರಬಹುದು ಎಂದುಕೊಂಡಿದ್ದೆವು. ತಮ್ಮನ್ನು ಕೇಳದೆ ಮಾಡಿದ್ದು ತಪ್ಪಾದರೆ ಕ್ಷಮಿಸಬೇಕು” – ಎಂದ ಹೊಸ ರಹದಾರಿ ಕರಣಿಕ.

“ಚಿಕ್ಕನಾಯಕರ ಮಾತು ಎಂದರೆ ನಮ್ಮ ಮಾತಿದ್ದ ಹಾಗೇ, ಅನಂತಯ್ಯ ರಜಾದಿಂದ ಬಂದ ಕೂಡಲೇ ನಮ್ಮನ್ನು ಕಾಣಲು ಹೇಳು?....ಅಂದಹಾಗೆ ನಿನ್ನ ಹೆಸರೇನು ?” – ಎಂದು ಕೇಳಿದರು ನರಸಪ್ಪಯ್ಯ.

“ಬಾಳಾಜಿರಾಯ.”

“ಇಷ್ಟು ದಿನ ಎಲ್ಲಿ ಕೆಲಸ ಮಾಡುತ್ತಿದ್ದೆ ?”

“ಚಪ್ಪೇಚಾವಡಿ ದಳದಾಯಿಗಳ ಚಾವಡಿಯಲ್ಲಿದ್ದೆ, ಬದಲಿ ಕೆಲಸಕ್ಕೆಂದು ಕಳಿಸಿದರು.”

- ವಿನಯ ತುಂಬಿದ ಧ್ವನಿಯಲ್ಲಿ ಹೇಳಿದ ಆತ.

“ಆಯಿತು – ನೀನಿನ್ನು ಹೋಗು”

- ಎಂದಷ್ಟೇ ಹೇಳಿ, ನರಸಪ್ಪಯ್ಯ ತಮ್ಮ ಮುಂದಿದ್ದ ಯಾವುದೋ ಕಾಗದ ಕೈಗೆ ತೆಗೆದುಕೊಂಡರು.

ಅವರ ಮಾತಿನಲ್ಲಾಗಲಿ, ಧ್ವನಿಯಲ್ಲಾಗಲಿ ಏನೂ ಬದಲಾವಣೆಯಿರಲಿಲ್ಲ. ಆದರೆ ಮನಸ್ಸು ಮಾತ್ರ ವ್ಯಗ್ರವಾಗಿ –

“’ಈ ಬದಲಾವಣೆಗಳೆಲ್ಲಾ ಏಕೆ ?’ ಎಂದು ಚಿಕ್ಕನಾಯಕರನ್ನು ಕೇಳಬೇಕು” - ಎಂದಿತು. ಮರುಗಳಿಗೆಯೇ –

’ಇದು ಸಣ್ಣ ವಿಷಯ - ಕೇಳುವುದು ಉಚಿತವಲ್ಲ’ -ಎಂದು ಅವರ ಬುದ್ಧಿಯೇ ಅವರಿಗೆ ವಿವೇಕ ಹೇಳಿತು.

'ಕೇಳುವಷ್ಟು ದೊಡ್ಡದಲ್ಲ, ಬಿಡಬಹುದಾದಷ್ಟು ಸಣ್ಣ ವಿಷಯವಲ್ಲ. ಹೀಗೇ, ಇಂಥದೇ - ಇನ್ನೇನೇನು ನಡೆಯುತ್ತಿದೆಯೋ ದುರ್ಗದಲ್ಲಿ'

-ಎಂದು ಚಿಂತಿಸಿತು, ನರಸಪ್ಪಯ್ಯನವರ ಚಿತ್ತ.

ಏಕೋ ಆ ಗಳಿಗೆಯಲ್ಲಿ ಅವರಿಗೆ ತಮ್ಮ ಅಧಿಕಾರ, ತಮ್ಮ ಕೈಯಿಂದ ಹನಿಹನಿಯಾಗಿ ಜಾರಿಹೋಗುತ್ತಿರುವಂತೆ ಅನಿಸಿ, ಮನಸ್ಸಿನಲ್ಲಿ ಸಣ್ಣ ಹೊಗೆಯಾಡಿತು.

೧೪

ಮೃದು-ಕಠಿಣವಾಗಿ, ಬೆಚ್ಚಗಿದ್ದೂ ಅಪೂರ್ವ ಹಿತವನ್ನು, ಮೈಯ ನರನರಕ್ಕೂ ಉಣಿಸುವ ಬಂಗಾರವ್ವನಾಗತಿಯ ತೊಡೆಗಳ ಮೇಲೆ ತಲೆಯಿಟ್ಟು ಮಲಗಿ, ಆ ಸುಖದಿಂದ ಉದ್ರೇಕಿತವಾದ ಕೈಯನ್ನು, ಆಕೆಯ ಕೆನ್ನೆ, ಸ್ತನದ್ವಯಗಳ ಮೇಲೆ ನಯವಾಗಿ ಆಡಿಸುತ್ತಾ, ಆ ಸ್ಪರ್ಶ ಸುಖದ ಮಾದಕತೆಯಿಂದ ಕಾವೇರಿದ ಹೆಣ್ಣು ದೇಹದ ಸುಖೋಷ್ಣತೆಯನ್ನು ಹನಿಹನಿಯಾಗಿ ಜೇನು ಕುಡಿಯುವಂತೆ ಅನುಭವಿಸುತ್ತಾ ಅರೆಗಣ್ಣು ಮುಚ್ಚಿ ಮಲಗಿದ್ದ ಮದಕರಿನಾಯಕನ ಹಣೆಯ ಮೇಲೆ ಕಣ್ಣೀರು ಬಿದ್ದು, ಚಕಿತನಾಗಿ ಕಣ್ದೆರೆದು, ತನ್ನೆರಡೂ ಕೈಗಳನ್ನು ಮೇಲಕ್ಕೆತ್ತಿ ಬಂಗಾರವ್ವನಾಗತಿಯ ಮುಖವನ್ನು ತನ್ನ ಕಣ್ಣೆದುರು ತಂದುಕೊಂಡು ನೋಡಿದ –

ನಸುಗೆಂಪೇರಿದ ಆಕೆಯ ಕೆನ್ನೆಯ ಮೇಲೆ ಕಣ್ಣೀರ ಕರೆ ಕಾಣಿಸಿತು. ಮುಖದಲ್ಲಿ ಆನಂದದ ಭಾವವಿದ್ದರೂ, ಎಂಥದೋ ನೋವು ತುಂಬಿದ ನೋಟ ಕಣ್ಣೀರಿನಲ್ಲಿ ಈಸುತ್ತಿತ್ತು. ಸುಖಾನುಭವದ ಈ ವೇಳೆಯಲ್ಲಿ ಕಣ್ಣೀರೇಕೆ ? ಏನು ಅರಕೆ, ಏನು ಕೊರತೆ ?

ಅಷ್ಟು ಹೊತ್ತು, ತೋಡಿದಷ್ಟೂ ತಣ್ಣೀರನ್ನು ಒಸರುವ ಹಳ್ಳದ ಮರಳಿನಂತೆ, ಬಯಸಿದಷ್ಟೂ ಬೇಕೆನಿಸುವಷ್ಟು ತೃಪ್ತಿಯನ್ನು ನೀಡಿದ, ಉದ್ರಿಕ್ತಕಾಮದ ಕಾಮನಬಿಲ್ಲಿನಂತೆ ರಂಜಿಸುತ್ತಿದ್ದ ಈಕೆಯ ಕಣ್ಣಿನಲ್ಲಿ, ಬರಬಾರದ ಹೊತ್ತಿನಲ್ಲಿ ಬೇಡದ ನೆಂಟನಂತೆ ಬಂದ ಈ ಕಣ್ಣೀರೇಕೆ ? ನೋವಿನ ನೆರಳೇಕೆ ?

ಆಕೆಯ ಕಣ್ಣಿನಿಂದ ಉರುಳಿದ ಎರಡು ಹನಿ ಕಣ್ಣೀರು, ಮದಕರಿನಾಯಕನಲ್ಲಿ ಆಕೆಯ ಬಗ್ಗೆಯಿದ್ದ ಪ್ರೇಮವನ್ನು ಮತ್ತಷ್ಟು ಹೆಚ್ಚಿಸಿ, ಕೈ ಹಿಡಿದ ಮುಖವನ್ನು, ತನ್ನ ಮುಖದ ಹತ್ತಿರ ಎಳೆದುಕೊಂಡು ತನ್ನ ತುಟಿಗಳಿಂದ ಆಕೆಯ ಕೆನ್ನೆಯ ಮೇಲಿದ್ದ ಕಣ್ಣೀರ ಕರೆಯನ್ನು ಒರೆಸಿ, ಕಣ್ಣುಗಳನ್ನು ಸಂತೈಸುವಂತೆ ಮೃದುವಾಗಿ ಮುತ್ತಿಟ್ಟು, ಮುಖವನ್ನು ತನ್ನ ಎದೆಗಪ್ಪಿಕೊಂಡು –

"ಇದಾವ ಬಯಕೆಯ ಕಣ್ಣೀರು ? ಇದಕ್ಕೇನು ಕಪ್ಪ ಕೊಡಬೇಕು ?"

-ಎಂದು ಬಹು ಮೃದುವಾಗಿ ಕೇಳಿದ –

"ಏನಾಗಬೇಕಿತ್ತು ? ನಮ್ಮಿಂದ ಏನಾದರೂ ಅಪಚಾರವಾಯಿತೇ ?"

"ನೀವು ನನಗೆ ಯಾವ ಸುಖಕ್ಕೂ ಕಡಿಮೆ ಮಾಡಲಿಲ್ಲ."

-ಕಣ್ಣೀರಿನಲ್ಲಿ ತೊಯ್ದು ಮೃದುವಾದ ಧ್ವನಿಯಲ್ಲಿ ಹೇಳಿದಳು, ಬಂಗಾರವ್ವನಾಗತಿ.

"ಮತ್ತೆ - ?"

"ನಮಗೆ ಬೇಕಾದ ಸುಖವನ್ನೆಲ್ಲಾ ಕೇಳಿದ್ದಕ್ಕಿಂತಲೂ ಹೆಚ್ಚಾಗಿ ಕೊಟ್ಟ ದೇವರು. ಆದರೆ ಅದೇ ಹೊಟ್ಟೆಕಿಚ್ಚೇನೋ – ಒಂದು ಸಣ್ಣ ಕೊರಗಿಟ್ಟ....."

"ಏನು ಕೊರಗು ?"

"ನಿಮ್ಮ ಕೈಹಿಡಿದ ಹೆಂಡತಿಯಾದೆ...."

"ಬರೀ ಕೈಹಿಡಿದದ್ದೇನು, ಮೈಮನ ಮೆಚ್ಚಿದ ಮಡದಿಯೂ ಆದೆ."

"ಎಲ್ಲವೂ ಆದೆ. ಆದರೆ ನಿಮ್ಮ ಕೈಗೆ ನನ್ನ ಮೈಯಷ್ಟೇ ಆಟದ ವಸ್ತುವಾಯಿತು. ಎತ್ತಿಕೊಳ್ಳಲು ನನ್ನದು ಎಂದು ನಿಮ್ಮ ಕೈಗೆ ಕೊಡುವ ಕೂಸೊಂದನ್ನು ಕೊಡಲಿಲ್ಲ, ದೇವರು."

- ನಿಟ್ಟುಸಿರಿಟ್ಟು ಹೇಳಿದಳು, ಬಂಗಾರವ್ವನಾಗತಿ.

"ಆ ಮಾತು ನಿನಗನಿಸಿತೋ - ಯಾರಾದರೂ ಆಡಿದರೋ ?"

-ತಟಕ್ಕನೆ ಚುರುಕಾಗಿ ಕೇಳಿದ ಮದಕರಿನಾಯಕ.

"ಯಾರೂ ಆಡಲಿಲ್ಲ, ಯಾರೂ ಆಡದ ಮಾತನ್ನು ಯಾವಾಗಲಾದರೊಮ್ಮೆ ನನ್ನ ಹಾಳು ಹೆಣ್ಣು ಮನಸ್ಸೇ ಹೇಳುತ್ತದೆ - ಬೇಡಬೇಡವೆಂದರೂ ಕೇಳದೆ."

"ಮದುವೆಯಾಗಿ ಇಷ್ಟು ವರ್ಷವಾಯಿತು, ಈಗೇಕೆ ಅದರ ಚಿಂತೆ. ನೋಡು – ನೀನು ಬಂಗಾರದ ಬಳ್ಳಿ, ಹೂ ಬಿಡದಿದ್ದರೇನಾಯಿತು. ಬಂಗಾರದ ಬಳ್ಳಿಯ ಬೆಲೆ ಕಡಿಮೆಯಾಯಿತೇ ? ನೀನು ತಾಯಾಗಿದ್ದರೆ ನಾನೂ ಸಂತೋಷಪಡುತ್ತಿದ್ದೆ. ಆದರೆ ಈಗ ಇನ್ನೂ ಹೆಚ್ಚಿನ ಸಂತೋಷ ನಿನ್ನನ್ನು ಕಂಡರೆ -"

"ಏಕೆ ? ನನ್ನ ಬಂಜೆತನ ನಿಮಗೆ ಪ್ರಿಯವೇ ?"

"ಅಲ್ಲ, ಬಂಗಾರಿ, ನಿನ್ನ ಮೈ ಕೊಡುವ ಸುಖವೆಲ್ಲಾ ನಮಗೆ ಮೀಸಲಾಗಬೇಕು. ಅದಕ್ಕೆ ಬೇರೆ ಯಾರೂ ಪಾಲುಗಾರರು ಬರಬಾರದು ಎಂದು ದೇವರ ಹರಕೆ. ನೀನು ತಾಯಾಗಿದ್ದರೆ, ಹೀಗೆ ಬೇಕಾದಾಗ ನಿನ್ನ ಹತ್ತಿರ ಬಂದು ಹೋಗಲು ನಮಗೆ ಸಾಧ್ಯವಿತ್ತೆ ? ಮಗನೋ-ಮಗಳೋ – ಆ ಚೋಟುದ್ದದವರ ಅಪ್ಪಣೆಗೆ ನಿನ್ನ ಬಾಗಿಲು ಕಾಯಬೇಕಾಗಿತ್ತು. ಈಗ ಅದಾವ ಅಡ್ಡಿ ಆತಂಕವೂ

ಇಲ್ಲ. ನೀನೂ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ. ನನ್ನ ಪ್ರೀತಿ ಕಡಿಮೆಯಾದ ದಿನ ದೂರು ಹೇಳು"

-ಎಂದು ಮೃದುವಾಗಿ ಮಡದಿಯನ್ನು ಸಂತೈಸಿದ ಮದಕರಿನಾಯಕ.

"ಅದೆಲ್ಲಾ ಪ್ರೀತಿ ನಿಮಗಿದೆ ಎಂದು ನನಗೆ ಗೊತ್ತು. ಆದರೂ...."

"ಆದರೂ ಅಂತ ರಾಗ ಎಳೆದರಾಯಿತೇ ? ಏನು ಮಾಡಬೇಕು ಹೇಳು ?"

"ನೀವು ಬೇಡ ಎನ್ನದಿದ್ದರೆ ಒಂದು ಕೆಲಸ ಮಾಡಬೇಕೆಂದಿದ್ದೇನೆ."

"ಏನು? ಸುಬ್ರಹ್ಮಣ್ಯಸ್ವಾಮಿಗೆ ಹರಸಿಕೊಂಡದ್ದಾಯಿತು, ಉಚ್ಚಂಗಮ್ಮನಿಗೆ ಚಿನ್ನದ ತೊಟ್ಟಿಲು ಕೊಟ್ಟಿದ್ದಾಯಿತು. ಈಗ ಹೊಸದೇನು ಮಾಡಬೇಕೆಂದಿದ್ದೀಯಾ ?"

"ಕೋಟೆಯ ಹೊರಗೆ ವೆಂಕಟರಮಣಸ್ವಾಮಿ ದೇವಾಲಯವಿದೆಯಲ್ಲಾ..."

"ಇದೆ. ಆ ದೇವರಿಗೆ ನವರತ್ನದ ತಿಲಕ ಕೊಡಬೇಕು ಎಂದು ಹೇಳುತ್ತೀಯಾ ? ಮಾಡು, ಲಂಚಕ್ಕೆ ಒಲಿಯುವ ದೇವರು ತಿರುಪತಿ ತಿಮ್ಮಪ್ಪ."

"ನಿಮಗೆಲ್ಲಾ ಹುಡುಗಾಟಿಕೆ, ಅದು ಬಿಟ್ಟು ಹೇಳು ಎಂದರೆ ಹೇಳುತ್ತೇನೆ."

"ಇಲ್ಲ - ಗಂಭೀರವಾಗಿ ಕೇಳುತ್ತೇನೆ - 'ಏನಪ್ಪಣೆ ಮಹಾರಾಣಿ.'"

"ಇದೇ - ನಾನು ಅಲ್ಲ ಅಂದದ್ದು. ಸ್ವಲ್ಪ ನಿಧಾನವಾಗಿ ಕೇಳಿ. ವೆಂಕಟರಮಣಸ್ವಾಮಿ ದೇವಸ್ಥಾನಕ್ಕೆ ಹೋಗುವ ದಾರಿಯಲ್ಲಿ, ಆನೆಯ ಮೈ ತೊಳೆಯುವ ಹೊಂಡವಿದೆಯಲ್ಲ."

"ಹೂ."

"ಅಲ್ಲಿಗೊಬ್ಬ ಮುಸಲ್ಮಾನ್ ಫಕೀರರು ಬಂದಿದ್ದಾರಂತೆ. ಮಹಾತಪಸ್ವಿಗಳು. ಅವರು ಧ್ಯಾನಮಾಡಿ ಯಂತ್ರ ಕಟ್ಟಿದರೆ, ಕೇಳಿದ ಬಯಕೆ ತೀರುತ್ತದೆಯಂತೆ. ನೀವು ಕೇಳಿಲ್ಲವೇ ಅವರ ವಿಷಯ ?"

"ಕೇಳಿದ್ದೇನೆ."

ವೆಂಕಟರಮಣಸ್ವಾಮಿಯ ದೇವಾಲಯಕ್ಕೆ ಹೋಗುವ ದಾರಿಯಲ್ಲಿ ಸಾಕಷ್ಟು ವಯಸ್ಸಾದ ಮುಸ್ಲಿಂ ಫಕೀರನೊಬ್ಬ, ಈಚೆಗೆ ಬಂದು ಅಲ್ಲಿ ಬಿಡಾರ ಹೂಡಿದ್ದ. ಮೂರುಹೊತ್ತೂ ಏನೋ ಧ್ಯಾನ, ಐದುಹೊತ್ತೂ ನಮಾಜು. ಆತ ಯಾರನ್ನೂ ಏನನ್ನೂ ಬೇಡುವುದಿಲ್ಲ. ಊರೊಳಗೆ ಭಿಕ್ಷೆಗೆ ಬರುವುದೂ ಇಲ್ಲ. ಯಾರಾದರೂ ಹಣ್ಣು ಹಾಲು ತೆಗೆದುಕೊಂಡು ಹೋಗಿ ಕೊಟ್ಟರೆ ಅಷ್ಟೇ ಅವನ ಆಹಾರ. ಯಾರಾದರೂ ಸಂಸಾರಿಕರು ಹೋಗಿ ಕಷ್ಟ-ಸುಖ ಹೇಳಿಕೊಂಡರೆ ಕೇಳುತ್ತಾನೆ, ಕಣ್ಮುಚ್ಚಿ ಧ್ಯಾನಿಸಿ, ಆ ಪ್ರಶ್ನೆಗೆ ಉತ್ತರ ಕೊಡುತ್ತಾನೆ. ಖಾಯಿಲೆಯವರಿಗೆ ಸಕ್ಕರೆ ಮಂತ್ರಿಸಿ ಕೊಡುತ್ತಾನೆ. ಸಣ್ಣ ಪುಟ್ಟ ಖಾಯಿಲೆಗೆ, ಮಂತ್ರ ಹೇಳಿ, ತನ್ನ ಬಳಿಯ ನವಿಲುಗರಿಯ ಕುಂಚವನ್ನು

ತಲೆಯ ಮೇಲಿಟ್ಟು ಅವರ ತೊಂದರೆಯನ್ನು ಪರಿಹರಿಸುತ್ತಾನೆ. ಹೆಚ್ಚಿನ ಕಷ್ಟವಿದ್ದರೆ ಅಗರುಬತ್ತಿಯ ಧೂಪಹಾಕಿದ 'ತಾವೀಜು' ಕಟ್ಟಿ 'ಖುದಾ ಭಲಾ ಕರೇಂ' ಎಂದು ಹೇಳುತ್ತಾನೆ. ಎಷ್ಟೋ ಜನಕ್ಕೆ ಆತನಿಂದ ಒಳ್ಳೆಯದಾಗಿದೆ; ಕಷ್ಟನಿವಾರಣೆಯಾಗಿದೆ. ಹಜರತ್ ಸೈಯದ್ ಅಹಮದ್ ಷಾ ವಲಿ ಎಂದು ಆತನ ಹೆಸರು. ಅಷ್ಟು ಮಾತ್ರ ಎಲ್ಲರಿಗೂ ಗೊತ್ತು. ಆತ ಎಲ್ಲಿಯವನು, ಎಲ್ಲಿಂದ ಬಂದ, ಏಕೆ ಬಂದ -ಯಾರಿಗೂ ಏನೊಂದೂ ತಿಳಿಯದು. ನಗರದ ಮುಸಲ್ಮಾನರಷ್ಟೇ ಅಲ್ಲ, ಹಿಂದೂಗಳು ಆತನಲ್ಲಿ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಯಾರೋ, ಆತ ಇರಲು ಒಂದು ಗುಡಿಸಲು ಕಟ್ಟಿಕೊಟ್ಟಿದ್ದಾರೆ. ಹಾಸಲು ಒಂದು ಮಂದಲಿಗೆ, ಹೊದೆಯಲು ಒಂದು ಕಂಬಳಿ, ಒಂದೆರಡು ಬಟ್ಟೆ, ಖುರಾನ್ ಪವಿತ್ರಗ್ರಂಥ, ನಮಾಜು ಮಾಡಲು ಉಪಯೋಗಿಸುವ 'ಜ-ಎ-ನಮಾಜ್' ಎಂಬ ಪವಿತ್ರವಸ್ತ್ರ, ಒಂದೆರೆಡು ಕಟ್ಟು ಸುವಾಸನಾಯುಕ್ತ ಊದುಬತ್ತಿ - ಇಷ್ಟು ಬಿಟ್ಟರೆ ಆತನ ಬಳಿ ಬೇರೇನೂ ಇಲ್ಲ. ಯಾರು ಏನು ಕೊಟ್ಟರೂ ತೆಗೆದುಕೊಳ್ಳುವುದಿಲ್ಲ. ದುಡ್ಡು ಕಾಸನ್ನಂತೂ ಕಣ್ಣಿಂದಲೂ ನೋಡುವುದಿಲ್ಲ. ಮಕ್ಕಳನ್ನು ಕಂಡರೆ ತುಂಬಾ ಪ್ರೀತಿ. 'ಖುದಾನ ತೋಟದ ಹೂವುಗಳು ಇವು' ಎನ್ನುತ್ತಾನೆ. ಅವರಿಗೆ ತನ್ನ ಭಕ್ತರು ತಂದುಕೊಟ್ಟ ಹಣ್ಣು ಸಕ್ಕರೆ ಕೊಟ್ಟು ಅವು ತಿನ್ನುವುದನ್ನು ನೋಡಿ ಸಂತೋಷಪಡುತ್ತಾನೆ. ಆತ ಹೇಗೋ ಏನೋ ಎಂದು ಕಾಶಣ್ಣನಾಯಕ ಕಾವಲುಹಾಕಿ ವರದಿ ಹೇಳಿದ್ದ : 'ಆತ ದೇವರ ಮನುಷ್ಯ. ಏನೂ ದೋಷವಿಲ್ಲ. ಅನುಮಾನಕ್ಕೆ ಏನೂ ಕಾರಣವಿಲ್ಲ.' ಎಲ್ಲರೂ ಆತನ ದೈವೀಶಕ್ತಿಯ ಬಗ್ಗೆ ಏನೇನೋ ಹೇಳಿದ್ದರೂ ಕೆಟ್ಟ ಮಾತಂತೂ ಯಾರೂ ಆಡಿರಲಿಲ್ಲ. ಎಂತಲೇ ಆ ಬಗ್ಗೆ ಮದಕರಿನಾಯಕನಾಗಲಿ, ಬೇರೆ ಯಾರಾಗಲಿ ತಲೆಗೆ ಹಚ್ಚಿಕೊಂಡಿರಲಿಲ್ಲ. ಊರಲ್ಲಿ ಮಠ, ಮಂದಿರ, ಮಸೀದಿಗಳಿಗೇನೂ ಕೊರತೆಯಿರಲಿಲ್ಲ; ಬಂದು ಹೋಗುವ ಸ್ವಾಮಿಗಳು, ಗುರುಗಳು, ಜಗದ್ಗುರುಗಳು, ಫಕೀರರು, ಸಾಧು-ಸಂತರುಗಳಿಗೂ ಕಡಿಮೆಯಿಲ್ಲ. ಆಯಿತು - ಹತ್ತರ ಜತೆಗೆ ಹನ್ನೊಂದು ಎಂದು ಸುಮ್ಮನಿದ್ದರು.

ಈಗಲೂ ಬಂಗಾರವ್ವನಾಗತಿ ಆತನ ವಿಷಯ ಹೇಳಿದಾಗ.

“ನೋಡು – ಈ ಸಾಧುಗಳು, ಸನ್ಯಾಸಿಗಳು ಎಂದರೆ ನಮಗೆ ಹಾವು ಕಂಡಷ್ಟು ಭಯ. ನಿನಗೆ ಅವರಲ್ಲಿ ನಂಬಿಕೆ ಇದ್ದರೆ - ತಪ್ಪಿಲ್ಲ. ಪೂಜೆ-ಪುರಸ್ಕಾರ ಎಲ್ಲಾ ಅವ್ವನ ಇಲಾಖೆ. ಆಕೆ ಆಯಿತು ಎಂದರೆ ಹೋಗಿ ಬಾ. ನಮಗೆ ಬೇಕಾದ್ದು ನಿನ್ನ ನಗೆಮುಖ ಮಾತ್ರ. ಅದನ್ನು ಮಾತ್ರ ತಪ್ಪಿಸಬೇಡ” - ಎಂದಷ್ಟೇ ಹೇಳಿದ.

"ಅತ್ತೆಯವರೇ ಈ ವಿಷಯ ಹೇಳಿದ್ದು, ಮಾವಯ್ಯನವರಿಗೆ ಈಗೆರಡು ವರ್ಷದಿಂದ ಸಂಧಿವಾತವಿದೆಯಲ್ಲ, ಅದು ಆತ ಮಂತ್ರಿಸಿಕೊಟ್ಟ ಸಕ್ಕರೆ ತಿನ್ನಿಸಿದಮೇಲೆ ಕಡಿಮೆಯಾಯಿತಂತೆ" – ಎಂದಳು ಬಂಗಾರವ್ವನಾಗತಿ.

"ಆಯಿತು – ನೀನೂ ಸಕ್ಕರೆ ತಿನ್ನು, ಊರಿಗೂ ಸಕ್ಕರೆ ಹಂಚಿಸು, ಆದರೆ ನಮ್ಮ ಸಕ್ಕರೆಗೆ ಮಾತ್ರ ಅಷ್ಟು ರುಚಿ ಕಡಿಮೆಯಾಗುತ್ತದೆ. ಅದಾಗುವ ಮೊದಲೇ, ಈ ಸಕ್ಕರೆಯ ಸವಿಯನ್ನು ಪೂರಾ ಸವಿದುಬಿಡಬೇಕು" - ಎಂದು ಮಡದಿಯನ್ನು ಬಿಗಿದಪ್ಪಿದ ಮದಕರಿನಾಯಕ.

ಆ ಅಪ್ಪುಗೆ ಮುಂದಾವ ಮೆಟ್ಟಿಲನ್ನು ಹತ್ತುತ್ತಿತ್ತೋ ಏನೋ - ಹೊರಗೆ ದಾಸಿಯೊಬ್ಬಳು ಕೆಮ್ಮಿದ ಶಬ್ದವಾಗಿ, ಬಂಗಾರವ್ವನಾಗತಿ, ಒಲ್ಲದ ಮನಸ್ಸಿನಿಂದ ಗಂಡನ ಬಾಹುಬಂಧನದಿಂದ ಹೊರಬಂದು, ಬಾಗಿಲು ತೆಗೆದು, ಹೊರಗಿನ ದಾಸಿಯೊಡನೆ ಮಾತನಾಡಿ ಬಂದು-

"ನಿಮ್ಮ ತಮ್ಮನವರು ಕಾಣಲು ಬಂದಿದಾರಂತೆ" – ಎಂದು ಹೇಳಿದಳು.

"ಆಯಿತು – ಬಂದರು ಎಂದು ಹೇಳಿ ಕಳಿಸು. ಯುದ್ಧವಿಲ್ಲದಿದ್ದರೂ ಹಾಯಾಗಿರಲು ಬಿಡುವುದಿಲ್ಲ – ಈ ರಾಜಕಾರಣ" – ಎಂದು ಗೊಣಗಿದ ಮದಕರಿನಾಯಕ.

"ನನ್ನ ಪಾಲಿಗೆ ಇದೇ ಬಹಳ ಕೆಟ್ಟ ಸವತಿ....ನಾನು ಕಾಯುತ್ತೇನೆ. ತಮ್ಮಂದಿರನ್ನು ಕಾಯಿಸಬೇಡಿ" – ಎಂದಳು ಬಂಗಾರವ್ವನಾಗತಿ.

"ಮಾತು ಅರ್ಥವಾಯಿತು"

- ಎಂದು ಬಂಗಾರವ್ವನಾಗತಿಯ ಕೆನ್ನೆಯನ್ನು ಮೃದುವಾಗಿ ತಟ್ಟಿ, ಹೊರಗೆ ಹೋದ ಮದಕರಿನಾಯಕ.

೧೫

ಪರಶುರಾಮಪ್ಪ ತಮ್ಮನೇ ಆದರೂ ಅನಿವಾರ್ಯವಾದ ಕಾರಣವಿಲ್ಲದೆ, ಕಾರ್ಯವಿದ್ದು ಅಣ್ಣ ಹೇಳಿ ಕಳಿಸದಿದ್ದರೆ ಅರಮನೆಗೆ, ಆಗಾಗ ಬರುವ ಮನುಷ್ಯನಲ್ಲ, ಎಂತಲೇ 'ಆತ ತಾನಾಗಿಯೇ ಬಂದಿದ್ದಾನೆ' ಎನ್ನುವುದನ್ನು ಕೇಳಿಯೇ ಏನೋ ಗಂಭೀರವಾದ ವಿಷಯವಿರಬೇಕೆಂದು ಊಹಿಸಿ, ತಮ್ಮನನ್ನು ಕಾಣಲು ಬಂದ ಮದಕರಿನಾಯಕ.

"ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಿರೇನೋ - ತೊಂದರೆ ಕೊಟ್ಟೆ"

-ಎಂದು ಪರಶುರಾಮನಾಯಕ ಪಶ್ಚಾತ್ತಾಪವಿದ್ದ ಧ್ವನಿಯಲ್ಲಿ ಹೇಳಿ –

“ಅಷ್ಟು ಅಗತ್ಯದ ವಿಷಯವಿಲ್ಲದಿದ್ದರೆ ಬರುತ್ತಿರಲಿಲ್ಲ. ಕೂಡಲೇ ತಿಳಿಸಬೇಕಾದ ಎರಡು ಸುದ್ದಿ ಇತ್ತು. ಅದಕ್ಕಾಗಿ ಬಂದೆ” - ಎಂದು ಹೇಳಿದ.

“ನಿನ್ನ ಸ್ವಭಾವ ನಮಗೆ ಗೊತ್ತು. ವಿಷಯವೇನು ? ಚಿಂತೆಗೆ ಕಾರಣವಾದ ವಿಷಯವೋ, ಸಂತೋಷಕ್ಕೆ ಕಾರಣವಾದ ವಿಷಯವೋ ?”

-ಮದಕರಿನಾಯಕ ಕುಳಿತುಕೊಳ್ಳುತ್ತಲೇ ಕೇಳಿದ.

“ನಿಮ್ಮ ಮನಸ್ಸಿಗೆ ಸಂತೋಷಕೊಡುವ ಸುದ್ದಿಯನ್ನು ತರುವ ಕಾಲ ಬೇಗ ಬರಲಿ ಎಂದು ನಾನೂ ಹಾರೈಸುತ್ತೇನೆ.”

“ಅಂದರೆ – ಈಗ ತಂದಿರುವುದು ಚಿಂತೆಗೆ ಕಾರಣವಾದ ವಿಷಯ - ಏನು ?”

“ಪ್ರಧಾನಿಗಳು ಎಲ್ಲಾ ಚಾವಡಿಗಳಿಗೂ ಒಂದು ಸುತ್ತೋಲೆ ಕಳಿಸಿದಾರೆ.”

“ಏನಂತೆ?”

“’ಯಾವ-ಯಾವ ಚಾವಡಿಗಳಲ್ಲಿ ಕಳೆದ ಮೂರು ತಿಂಗಳುಗಳಲ್ಲಿ ಹೊಸದಾಗಿ ಯಾರು ಯಾರು ನೇಮಕವಾಗಿದ್ದಾರೆ. ನೇಮಕದ ಅಪ್ಪಣೆ ಮಾಡಿದವರು ಯಾರು - ಎಲ್ಲಾ ವಿವರಗಳನ್ನು ಪ್ರಧಾನಿಗಳ ಚಾವಡಿಗೆ ಮುದ್ದಾಂ ತಿಳಿಸಬೇಕು’ – ಎಂದು.”

ಪರಶುರಾಮನಾಯಕ ಹೇಳಿದ ಮಾತನ್ನು ಕೇಳಿ, ಮದಕರಿನಾಯಕನ ಮುಖಭಾವ ಬಿರುಸಾದಂತೆಯೇ, ಧ್ವನಿಯೂ ಬಿಗಿದು ಕೇಳಿದ –

“ಉಳಿದ ಚಾವಡಿಗಳ ವಿಷಯ ಪ್ರಧಾನಿಗಳಿಗೇಕೆ ಬೇಕಂತೆ ?”

“ಅವರ ಚಾವಡಿಯಿಂದ ಅವರಿಗೆ ತಿಳಿಯದ ಹಾಗೆ ಅನಂತಯ್ಯನನ್ನು ಎತ್ತಿಹಾಕಿದ ವಿಷಯ ತಮಗೆ ಗೊತ್ತಲ್ಲ.”

“ಹೂ.”

“ಅದು ಅವರ ಮನಸ್ಸಿನಲ್ಲಿ ’ತಮಗೆ ತಿಳಿಯದ ಹಾಗೆ ಏನೋ ನಡೆಯುತ್ತಿದೆ-’ ಎಂಬ ಅನುಮಾನ ಮೂಡಿಸಿದೆ. ನವಾಬರ ಅಂಚೆಹರಿಕಾರ ಕಛೇರಿಯ ಬಸವಯ್ಯ ಕಾಣೆಯಾದ ವಿಷಯದಲ್ಲಿ ಕೊತ್ವಾಲ ಚಾವಡಿಯವರು ಬೇಹುಷಾರಿಯಿಂದ ನಡೆದುಕೊಂಡಿದ್ದಾರೆ ಎಂಬ ಅಸಮಾಧಾನ ಅವರಿಗಿದೆ. ಅದರ ಫಲ - ಈ ಸುತ್ತೋಲೆ. ಪ್ರಧಾನಿಗಳೇ ಖುದ್ದಾಗಿ ಕೇಳಿದ ವಿವರವನ್ನು ಕೊಡುವುದೋ ಬೇಡವೋ ಎಂದು ಚಾವಡಿಯ ದಳವಾಯಿಗಳಿಗೆ ಚಿಂತೆಯಾಗಿದೆ. ಅವರ ಚಿಂತೆ, ಪ್ರಧಾನಿಗಳ ಅಸಮಾಧಾನ – ಎರಡಕ್ಕೂ ಉತ್ತರ ಹೇಳಬೇಕಾದ ಹೊಣೆ ನಮ್ಮ ಪಾಲಿಗೆ ಬಂದಿದೆ.”

“ನಿಮ್ಮ ಪಾಲಿಗೆ ಬಂದದ್ದು ನಮ್ಮ ಪಾಲಿಗೆ ಬಂದಂತೆಯೇ. ಅದಕ್ಕೆ ನೀನೇನು ಯೋಚನೆ ಮಾಡಿದ್ದೀಯಾ, ಪರಶುರಾಮಣ್ಣ ?”

“ಇದು ಬಲು ತೊಡಕಿನ ವಿಷಯ. ವಿಚಾರಿಸಿಕೊಳ್ಳಲಿ ಎಂದು ಬಿಟ್ಟರೆ, ಈ ತನಿಖೆ ಮುಂದೆ ಯಾವ ದಾರಿ ಹಿಡಿಯುತ್ತದೆಯೋ ಹೇಳುವುದು ಕಷ್ಟ. ಅನುಮಾನ ಬಂದರೆ ಯಾರನ್ನು ಬೇಕಾದರೂ ವಿಚಾರಿಸುವ, ಮಹತ್ವದ ರಾಜಕೀಯ ನಿರ್ಧಾರವಲ್ಲದಿದ್ದರೆ, ತಾನೇ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಪ್ರಧಾನಿಗಳಿಗಿದೆ. ದಳವಾಯಿಗಳು ಅವರಿಗೆ ಹೆದರದಿರಬಹುದು, ಸಣ್ಣ ಪುಟ್ಟವರು ಅಂಜುವುದು ಸಹಜ. ಅಲ್ಲದೆ, ಹೊಣೆಯ ವಾಸನೆ ನೋಡಿ ಎಂಥ ಬೆಂಕಿ ಎಂದು ಹೇಳುವ ಚತುರತೆ ಪ್ರಧಾನಿಗಳಿಗಿದೆ.”

-ಪರಶುರಾಮಪ್ಪ ತನ್ನ ತೊಡಕನ್ನು ವಿವರಿಸಿ ಹೇಳಿದ.

“ಪ್ರಧಾನಿಗಳು ಈಗೇನು ವಿವರ ಕೇಳಿದ್ದಾರೋ. ತನಿಖೆಗೆ ಬರುವುದಾಗಿ ತಿಳಿಸಿದ್ದಾರೆ.”

“ವಿವರ ಕೇಳುವುದು ಮೊದಲ ಹೆಜ್ಜೆ ಆಮೇಲೆ ತನಿಖೆಗೂ ಬರಬಹುದು. ಅದಕ್ಕೂ ಅವರಿಗೆ ಅಡ್ಡಿ ಇಲ್ಲವಲ್ಲ.”

“ಒಂದು ಸಣ್ಣ ನೌಕರನ ಬದಲಾವಣೆಯ ಬಗ್ಗೆ ಪ್ರಧಾನಿಗಳು ಇಷ್ಟು ದೂರ ಬಂದರು -”

“ನನಗನಿಸುತ್ತದೆ – ಈ ಸುತ್ತೋಲೆ ಒಂದು ನೆಪ. ಇದರ ಹಿಂದಿನ ಅಭಿಪ್ರಾಯ, ತಮ್ಮ ಬಲಾಬಲದ ಪರೀಕ್ಷೆ. ಹಿಂದಿನ ಹಾಗೆ ತಮ್ಮ ಮಾತು ನಡೆಯುತ್ತದೆಯೋ ಇಲ್ಲವೋ ನೋಡಬೇಕೆಂದು ಪರೀಕ್ಷೆಗೆ ಹೊರಟಿರುವಂತಿದೆ, ಪ್ರಧಾನಿಗಳು.”

- ಪರಶುರಾಮನಾಯಕ ಹೇಳಿದ ಮಾತನ್ನು ಮನಸ್ಸಿನಲ್ಲಿಯೇ ಮೆಲಕುಹಾಕುತ್ತಾ, ಏನು ಮಾಡಬೇಕೆಂದು ಯೋಚಿಸುತ್ತಾ ಅಷ್ಟು ಹೊತ್ತು ಸುಮ್ಮನಿದ್ದು ಬಳಿಕ ಹೇಳಿದ –

“ಈ ಪ್ರಶ್ನೆಯ ಕತ್ತಿಗೆ ಬೇರೆಯವರ ತಲೆಯೊಪ್ಪಿಸುವುದು ಬೇಡ. ಇದು ನಾವೇ ನುಂಗಬೇಕಾದ ಬೆಂಕಿ. ಒಂದು ಕೆಲಸ ಮಾಡು, ಪರಶುರಾಮಣ್ಣ, ಯಾವ ದಳವಾಯಿಗಳೂ ಪ್ರಧಾನಿಗಳ ಚಾವಡಿಯ ಸುತ್ತೋಲೆಗೆ ವಿವರ ಬರೆದು ಕಳಿಸುವುದು ಬೇಡ. ನಾಲ್ಕು ದಿನ ತಡಮಾಡಲಿ.”

“ಅಷ್ಟರಲ್ಲಿ ಮತ್ತೊಂದು ಎಚ್ಚರಿಕೆಯ ಸುತ್ತೋಲೆ ಬಂದರೆ – ”

“ಅಷ್ಟರಲ್ಲಿ ನಾವೇ ಪ್ರಧಾನಿಗಳ ಕಛೇರಿ ತನಿಖೆ ಮಾಡುತ್ತೇವೆ. ಆ ತನಿಖೆಗೆ ಬೇಕಾದ ವಿವರಗಳನ್ನೆಲ್ಲಾ ಸಿದ್ಧಪಡಿಸಿಕೊಡಲು ದಳವಾಯಿ ಕಾಶಣ್ಣನಾಯಕರಿಗೆ ಹೇಳು”

-ಎಂದು ಆ ವಿಷಯವನ್ನು ಅಲ್ಲಿಗೆ ಮುಗಿಸಿದಂತೆ –

“ಮತ್ತೊಂದು ಸುದ್ದಿಯೇನು ?” – ಎಂದು ಕೇಳಿದ ಮದಕರಿನಾಯಕ.

"ಪುಣೆಯಿಂದ ಪುರುಷೋತ್ತಮರಾಯರು ಸುದ್ದಿ ಕಳಿಸಿದ್ದಾರೆ."

"ಏನೆಂದು ?" – ಆತುರವಾಗಿ ಕೇಳಿದ ಮದಕರಿನಾಯಕ.

"ಪೇಶ್ವೆಗಳು, ಹೈದರಾಲಿಯ ಮೇಲೆ ದಾಳಿಮಾಡಲು ಒಪ್ಪಂದ ಮಾಡಿಕೊಂಡಿದ್ದಾರಂತೆ. ಇಷ್ಟರಲ್ಲೇ ನಿಜಾಮನ ಸೈನ್ಯಾಧಿಕಾರಿ ಇಬ್ರಾಹಿಂ ಧೂನ್‌ಸಾ, ಮುರಾರಿರಾವ್ ಘೋರ್ಪಡೆಯವರಿಗೆ ನೆರವಾಗಿ, ಅವರಿಬ್ಬರೂ ಕಲೆತು ಅರವತ್ತು ಸಾವಿರ ದಂಡು, ಎಂಬತ್ತು ತೋಫಿನ ಬಲವಾದ ಸೇನೆಯೊಂದಿಗೆ ಬಳ್ಳಾರಿಗೆ ಮುತ್ತಿಗೆಹಾಕಲು ಸಿದ್ಧತೆ ಮಾಡಿಕೊಂಡಿದ್ದಾರಂತೆ. ಕಡಪಾದ ನವಾಬ ಹಾಲೀಂಖಾನನೂ ಇವರೊಂದಿಗೆ ಸೇರಲು ಒಪ್ಪಿದಾನಂತೆ. ಆದ್ದರಿಂದ ಅವರ ಸೇನೆ ಬಳ್ಳಾರಿಗೆ ಮುತ್ತಿಗೆಹಾಕುವ ವೇಳೆಗೆ ನಾವೂ ಅವರಿಗೆ ನೆರವಾಗಿ ಸಹಾಯ ಕೊಟ್ಟಲ್ಲಿ ಈ ಬಾರಿ ಹೈದರಾಲಿಯ ಕಥೆ ಮುಗಿಸುವುದಾಗಿ ಹೇಳಿಕಳಿಸಿದ್ದಾರೆ. ಮುಂದೆ ಸಮಯ ಬಂದ ಹಾಗೆ ವಿವರಗಳನ್ನು ತಿಳಿಸುವುದಾಗಿಯೂ, ನೀವು ಬಲವಾದ ಸೇನೆಯನ್ನು ಕಟ್ಟಿ ಸಿದ್ಧವಾಗಿರಬೇಕೆಂದೂ ಹೇಳಿಕಳಿಸಿದ್ದಾರೆ"

- ಪುರುಷೋತ್ತಮರಾಯ ಬೇಹುಗಾರರೊಬ್ಬನ ಮೂಲಕ ಕಳಿಸಿದ ಸುದ್ದಿಯನ್ನು ವಿವರಿಸಿ ಹೇಳಿದ ಪರಶುರಾಮನಾಯಕ.

ಯುದ್ಧದ ಸುದ್ದಿ ಕೇಳಿ, ಅದುವರೆಗೂ ಬರೀ ಮಾತುಕಥೆಗಳಲ್ಲಿ ಕಾಲಕಳೆದ ಮದಕರಿನಾಯಕನ ಮೈಯಲ್ಲಿ ಹೊಸ ರಕ್ತ ಹರಿದಂತಾಗಿ –

"ಒಳ್ಳೇ ಸಮಯಕ್ಕೆ ಈ ಸುದ್ದಿ ಬಂದಂತಾಯಿತು. ನಾವು ಸೇನೆ ಸಿದ್ಧ ಮಾಡಬೇಕು ಎಂದರೆ, ನವಾಬರ ಅಂಚೆಹರಿಕಾರರನ್ನು ಇಲ್ಲಿಂದ ಓಡಿಸದಿದ್ದರೆ ಆಗುವುದಿಲ್ಲ. ಈಗ ಪ್ರಧಾನಿಗಳ ತನಿಖೆಯ ಬಗ್ಗೆ ನಾವು ಚಿಂತಿಸಬೇಕಾದ ಅಗತ್ಯವಿಲ್ಲ. ಅದಕ್ಕಿಂತ ಮೊದಲು ಅವರ ಸತ್ವ ಪರೀಕ್ಷೆಗೆ ಸಮಯ ಸಿಕ್ಕಿತು. ಕಾಶಣ್ಣನಾಯಕರಿಗೆ ಮುಂದಿನ ಕೆಲಸ ನಡೆಸಲು ಹೇಳು. ಇನ್ನು ಮೀನ-ಮೇಷ ಎಣಿಸಲು ಸಮಯವಿಲ್ಲ" – ಎಂದ ಮದಕರಿನಾಯಕ ತುಂಬ ಉತ್ಸಾಹದಿಂದ.

"ಆಯಿತು, ತಮ್ಮ ಅಪ್ಪಣೆಯನ್ನು ಕಾಶಣ್ಣನಾಯಕರಿಗೆ ತಿಳಿಸುತ್ತೇನೆ."

"ಬೇಗ – ಆದಷ್ಟು ಬೇಗ. ಈ ನವಾಬರ ಗೂಬೆ ನಮ್ಮ ನಗರದಿಂದ ಎಷ್ಟು ಬೇಗ ತೊಲಗಿದರೆ ಅಷ್ಟು ಬೇಗ ಒಳ್ಳೆಯದು" – ಎಂದ ಮದಕರಿನಾಯಕ.

* * *

ಆ ಮಾತುಕಥೆಯಾದ ಎರಡು ದಿನಗಳ ಬಳಿಕ –

ಒಂದು ನಡುರಾತ್ರಿ –

ನಗರ ನಿಶ್ಶಬ್ದವಾಗಿ ನಿದ್ರಿಸುತ್ತಿದ್ದಾಗ-

ಗಾರೆಬಾಗಿಲು ಕೋಟೆಯ ಬದಿಯಿಂದ ಕರಾವಿನಕಟ್ಟೆಗೆ ಹೋಗುವ ಮಾರ್ಗದಲ್ಲಿದ್ದ ನವಾಬರ ಅಂಚೆಹರಿಕಾರ ನಾರಾಯಣಯ್ಯನ ಮನೆಯನ್ನು, ಐವತ್ತು ಮಂದಿ ಕೊತ್ವಾಲ ಚಾವಡಿಯ ಸೈನಿಕರು ಮುತ್ತಿ, ಮನೆಯನ್ನು ಕಾಯುತ್ತಿದ್ದ ನವಾಬರ ಕಡೆಯ ಕಾವಲು ಸಿಪಾಯಿಗಳನ್ನು ದಸ್ತಗಿರಿ ಮಾಡಿದುದೇ ಅಲ್ಲದೆ, ಬಾಗಿಲನ್ನು ಮುರಿದು ಒಳನುಗ್ಗಿ, ಅರೆನಿದ್ರೆಯಲ್ಲಿ ಗದ್ದಲ ಕೇಳಿ ಎಚ್ಚೆತ್ತ ಅಂಚೆಹರಿಕಾರ ನಾರಾಯಣಯ್ಯ, ಸೂರಪ್ಪ ಮೊದಲಾದವರನ್ನೆಲ್ಲಾ ಬಂಧಿಸಿ, ತೆಗೆದುಕೊಂಡು ಹೋದುದಲ್ಲದೆ, ಹತ್ತಾಳುಗಳು ಆ ಮನೆಯ ಮೂಲೆ, ಮುರುಕುಗಳನ್ನು ಹುಡುಕಿಸಿ, ಅನುಮಾನ ಬಂದ ಕಡೆ ಗೋಡೆಯನ್ನು ಕೆಡವಿ, ನೆಲವನ್ನು ಅಗೆದು ಸಿಕ್ಕ ಕಾಗದ-ಪತ್ರ, ಕಬ್ಬಿಣದ ತಿಜೋರಿ, ಪೆಟ್ಟಿಗೆಗಳನ್ನು ಕೊತ್ವಾಲಚಾವಡಿಗೆ ಸಾಗಿಸಿದರು.

* * *

ಮರುದಿನ ಪ್ರಾತಃಕಾಲ –

ಪ್ರಧಾನಿ ನರಸಪ್ಪಯ್ಯನವರು ಏಳುತ್ತಿದ್ದ ಹಾಗೇ ಕೇಳಿದ ಸುದ್ದಿ-

"ರಾತ್ರಿ ದುರ್ಗದ ಕೊತ್ವಾಲಚಾಡಿಯ ಸಿಪಾಯಿಗಳು, ನವಾಬರ ಅಂಚೆಹರಿಕಾರರ ಮನೆಯನ್ನು ಮುತ್ತಿ. ಅಲ್ಲಿದ್ದವರನ್ನೆಲ್ಲಾ ದಸ್ತಗಿರಿ ಮಾಡಿ ಕೊಂಡೊಯ್ದರು."

ಆ ಸುದ್ದಿಯನ್ನು ಕೇಳುತ್ತಿದ್ದ ಹಾಗೇ, ನರಸಪ್ಪಯ್ಯನವರು ಬೇರಾವ ಕಾರ್ಯಕ್ಕೂ ಕಾಯದೆ, ಕುದುರೆಯನ್ನು ತರಿಸಿಕೊಂಡು, ಆತುರವಾಗಿ ಅಂಚೆಹರಿಕಾರರ ಮನೆಯ ಕಡೆ ದೌಡಾಯಿಸಿ ಹೋಗಿ, ನೋಡಿದರು.

ಇಡೀ ಬೀದಿಗೆ ಬೀದಿಯೇ ಹೆದರಿ ಉಸಿರಡಗಿದಂತಿತ್ತು. ಇಬ್ಬದಿಯ ಎಲ್ಲ ಮನೆಗಳ ಬಾಗಿಲುಗಳೂ ಮುಚ್ಚಿ, ಹತ್ತು ಹೆಜ್ಜೆಗೊಬ್ಬನಂತೆ ಕೊತ್ವಾಲಚಾವಡಿಯ ಸಿಪಾಯಿ ಬಿಚ್ಚುಗತ್ತಿಯನ್ನು ಹಿಡಿದು ಕಾವಲು ನಿಂತಿದ್ದ. ಜನ ಮನೆಬಾಗಿಲು ತೆರೆದು ಹೊರಬರುವುದಿರಲಿ, ಕಿಟಕಿಗಳ ಬಾಗಿಲು ತೆರೆದರೂ ಬೀದಿಯ ಉದ್ದಕ್ಕೂ ಕುದುರೆಯ ಮೇಲೆ ಕುಳಿತು ಗಸ್ತು ತಿರುಗುತ್ತಿದ್ದ ಸಿಪಾಯಿಗಳ ಕೋವಿಗಳು ಅತ್ತ ತಿರುಗಿ ತೆರೆದ ಕಿಟಕಿ ಮುಚ್ಚುತ್ತಿತ್ತು.

ಭಯ – ಮೌನ –

ಎಲ್ಲೆಡೆಯಲ್ಲೂ ಅದರದೇ ಸರ್ವಾಧಿಕಾರ.

ಬೀದಿಯ ಪ್ರದೇಶಭಾಗದಲ್ಲಿ ನಿಂತಿದ್ದ ಕೊತ್ವಾಲಚಾವಡಿಯ ದಫೇದಾರ ಪ್ರಧಾನಿಗಳನ್ನು ಅಂಚೆಹರಿಕಾರರ ಮನೆಯ ಕಡೆ ಹೋಗಲು ಬಿಡದೆ –

"ಕೊತ್ವಾಲಚಾವಡಿಯ ಕಟ್ಟಪ್ಪಣೆ ಆಗಿದೆ. ಅಲ್ಲಿಂದ ಅಪ್ಪಣೆಚೀಟಿ ತರದೆ ಯಾರಿಗೂ ಪ್ರವೇಶವಿಲ್ಲ. ಪ್ರಧಾನಿಗಳು ನನ್ನನ್ನು ಕ್ಷಮಿಸಬೇಕು" – ಎಂದು ಕೈಮುಗಿದು ಹೇಳಿದ.

ಆಳಿನ ಇದಿರು ತಮ್ಮ ಅಧಿಕಾರಪ್ರದರ್ಶನ ಮಾಡಲಿಚ್ಛಿಸದ ನರಸಪ್ಪಯ್ಯನವರು, ತಮ್ಮ ಕುದುರೆಯನ್ನು ಕೊತ್ವಾಲಚಾವಡಿಯತ್ತ ನಡೆಸಿದರು.

ಕೊತ್ವಾಲಚಾವಡಿ ಇನ್ನೂ ಸಾಕಷ್ಟು ದೂರವಿರುವಾಗಲೇ, ಆ ಮಾರ್ಗದ್ವಾರದಲ್ಲಿದ್ದ ಬಿಚ್ಚುಗತ್ತಿ, ಕೋವಿಗಳನ್ನು ಧರಿಸಿದ ಕಾವಲುಸೈನಿಕರು ಮರ್ಯಾದೆಯಿಂದ ಪ್ರಧಾನಿಗಳನ್ನು ತಡೆದು –

"ಗರೀಬರನ್ನು ಮಾಫ್ ಮಾಡಬೇಕು. ಈ ವೇಳೆ ಕೊತ್ವಾಲಚಾವಡಿಗೆ ಹೋಗಲು ಯಾರಿಗೂ ಅನುಮತಿಯಿಲ್ಲ" - ಎಂದು ಹೇಳಿದರು.

"ಪ್ರಧಾನಿಗಳಿಗೂ ಈ ಆಜ್ಞೆ ಅನ್ವಯಿಸುತ್ತದೆಯೋ ?"

- ಪ್ರಕ್ಷುಬ್ಧರಾಗಿ ಕೇಳಿದರು ನರಸಪ್ಪಯ್ಯ.

"ಹೌದು - ಮಾಸ್ವಾಮಿ."

"ಇದು ಯಾರ ಆಜ್ಞೆ – ದಳವಾಯಿಗಳದೋ ?"

– ಚಾವಟಿಯಿಂದ ಹೊಡೆದಂತೆ ಕೇಳಿದರು, ನರಸಪ್ಪಯ್ಯ.

"ಅಲ್ಲ - ಖುದ್ದಾಗಿ ಮಾಸ್ವಾಮಿಯವರೇ ಕಟ್ಟುಮಾಡಿದ್ದಾರೆ."

"ಪ್ರಧಾನಿಗಳಿಗೂ ಬಿಡಕೂಡದೆಂದು ಅವರು ಹೇಳಿದರೇ ?"

"ಹಾಗೆ ಹೇಳಲಿಲ್ಲ - ನಮ್ಮ ಆಜ್ಞೆ ಇಲ್ಲದೆ, ನೊಣವೂ ಈ ಕಡೆ ಸುಳಿಯಕೂಡದು ಎಂದು ಹೇಳಿದ್ದಾರೆ."

"ಪ್ರಭುಗಳು ಎಲ್ಲಿದ್ದಾರೆ ?"

"ಕೊತ್ವಾಲಚಾವಡಿಯಲ್ಲಿ."

"ಹಾಗಿದ್ದಲ್ಲಿ, ಹೋಗಿ, ಅವರಿಗೆ ನಾವಿಲ್ಲಿಗೆ ಬಂದಿರುವ ವಿಷಯ ತಿಳಿಸು."

"ಅಪ್ಪಣೆ - ಮಾಸ್ವಾಮಿ"

- ಎಂದು ಕೈಮುಗಿದು ಕೊತ್ವಾಲಚಾವಡಿಯ ಕಡೆ ಹೋದ ಸಿಪಾಯಿ, ಹೇಳಿ ಹಿಂತಿರುಗಿ ಬರುವ ವೇಳೆಗೆ ಒಂದು ತಾಸಾಗಿ, ಅಷ್ಟು ಹೊತ್ತು ಕುದುರೆಯ ಮೇಲೆ ಕುಳಿತಿರಲಾಗದೆ ಇಳಿದು ಅತ್ತಿಂದಿತ್ತ ಶತಪಥ ಹಾಕುತ್ತಾ, ಅಸಮಾಧಾನದಿಂದ ಬುಸುಗುಟ್ಟುತ್ತಾ ಇದ್ದ ನರಸಪ್ಪಯ್ಯನವರು, ಆ ಸಿಪಾಯಿ ಬರುತ್ತಿದ್ದ ಹಾಗೇ ಕೇಳಿದರು –

"ಏನಪ್ಪಣೆಯಾಯಿತು ?"

"ಸಂಜೆ ತಮ್ಮನ್ನೇ ಅರಮನೆಗೆ ಬರಹೇಳಿದ್ದಾರೆ, ಮಹಾಸ್ವಾಮಿಗಳು. ಇಷ್ಟು ಸುದ್ದಿ ತರಲು ಇಷ್ಟು ಹೊತ್ತಾಯಿತು, ಕ್ಷಮಿಸಬೇಕು" - ಎಂದು ಹೇಳಿದ ಸಿಪಾಯಿ.

ಆ ಮಾತು ನರಸಪ್ಪಯ್ಯನವರ ಕೆನ್ನೆಗೆ ಹೊಡೆದಂತೆ ಕೇಳಿ, ಮರುಮಾತಾಡದೆ ಅವರು ಕುದುರೆಯನ್ನು ತಮ್ಮ ಮನೆಯತ್ತ ತಿರುಗಿಸಿದರು.

೧೬

"ಇಲ್ಲ....ಹೀಗೆ....ಒಂದೊಂದಾಗಿ ನೋಡಿ, ಪ್ರಧಾನಿಗಳೇ - ನವಾಬರು ನಮ್ಮ ಯೋಗಕ್ಷೇಮ ವಿಚಾರಿಸಿಕೊಂಡ ರೀತಿಯನ್ನು."

ಅಷ್ಟು ಎತ್ತರವಾದ, ವಿಶಾಲವಾದ ಮರದ ಪೀಠದ ಮೇಲೆ ಸಾಲಾಗಿ ಇಟ್ಟ, ಕೃತಕ ಮೊಹರುಗಳು, ಅವುಗಳ ಮೇಣದ ಪಡಿಯಚ್ಚುಗಳು, ದುರ್ಬೀನುಗಳು, ಬಗೆಬಗೆಯ ಬೀಗದ ಕೈಗಳ ಮಾದರಿಗಳು, ನಕ್ಷೆಗಳು, ಬಗೆಬಗೆಯ ಅಂಕೆಗಳಿದ್ದ ಕಾಗದಗಳು, ಹೈದರಾಲಿಯವರ ಮುದ್ರೆಯಿದ್ದ ಕಾಗದಗಳು, ಮದ್ದು ಅರೆಯುವ ಬೀಸುಗಲ್ಲಿನ ಮಾದರಿ, ಕೋವಿಗಳು, ಬಿಚ್ಚಿದ ಕಾಗದದ ಪೊಟ್ಟಣದಲ್ಲಿದ್ದ ಮದ್ದಿನ ಪುಡಿ, ಕೃತಕ ರಹದಾರಿ ಕಾಗದಗಳು –

ಪ್ರದರ್ಶನಕ್ಕೆಂಬಂತೆ ತೆರೆದಿಟ್ಟ ಆ ವಸ್ತುಗಳತ್ತ ಕೈತೋರಿಸಿ, ಉರಿಯುವ ಗಾಯದ ಮೇಲೆ ಉಪ್ಪುಕಾಗದದಿಂದ ಉಜ್ಜುವಂತಿದ್ದ ಧ್ವನಿಯಲ್ಲಿ ಹೇಳಿದ ಮದಕರಿನಾಯಕ.

ಆ ಒಂದೊಂದೂ ಕೂಡ ಸಬಳದಂತೆ ನರಸಪ್ಪಯ್ಯನವರ ಕಣ್ಣುಗಳನ್ನು ಇರಿದವು. ಒಂದು ಮಾತೂ ಪ್ರತ್ಯುತ್ತರ ಕೊಡದೆ, ನಿಸ್ತೇಜ ಕಣ್ಣುಗಳಿಂದ ಅವುಗಳನ್ನೆಲ್ಲಾ ನೋಡಿದರು, ನರಸಪ್ಪಯ್ಯ.

"ಇದನ್ನು ಕೇಳಿ-"

- ಎಂದು ಹೇಳಿ, ಒಂದು ಕಾಗದವನ್ನು ಕೈಗೆತ್ತಿಕೊಂಡು ಓದುತ್ತಾ –

"'ಪ್ರಧಾನಿ ನರಸಪ್ಪಯ್ಯನವರಿಗೆ ಖಾವಿಂದರಲ್ಲಿ ಅಪಾರ ವಿಶ್ವಾಸವಿದೆ. ತಮ್ಮ ಸೇನಾ ಚಾತುರ್ಯದ ಇದಿರು ಮರಾಠರಾಗಲಿ, ನಿಜಾಮರಾಗಲಿ ಏನೂ ಮಾಡಲಾರರು ಎಂದು, ದುರ್ಗದ ನಾಯಕರಿಗೆ ಅದಕ್ಕೆ ತಕ್ಕಹಾಗೆ ಸಲಹೆಕೊಡುತ್ತಾ ಇರುತ್ತಾರೆ. ದುರ್ಗದ ನಾಯಕರಿಗೆ ಪ್ರಧಾನಿಗಳ ಮಾತು ವೇದವಾಕ್ಯ. ಇದು ನಮಗೆ ಅನುಕೂಲವಾದ ವಿಷಯ. ನಾಯಕರಿಗೆ ರಾಜಕೀಯದಲ್ಲಿ ಮುಂದಾಲೋಚನೆ ಕಡಮೆ. ಬುದ್ಧಿಗಿಂತ ಕತ್ತಿಯನ್ನು ನಂಬಿ ಕೆಲಸ ಮಾಡುವವರು ಅವರು.' – ಸಾಕೇ - ನವಾಬರ ಹರಿಕಾರರು ನಮಗೆ ಕೊಟ್ಟಿರುವ ಶಿಫಾರಸುಪತ್ರ, ಮುಂದಕ್ಕೆ ಓದಲೇ? ಅಥವಾ

ಇನ್ನೊಂದು ಕಾಗದ ಓದಲೇ ? – ಈ ಮೊಹರು ನೋಡಿ, ಪ್ರಧಾನಿಗಳೇ, ಇದು ನಿಮ್ಮ ಚಾವಡಿಯ ರಹದಾರಿ ಮೊಹರಿನ ನಕಲಲ್ಲವೇ ? ಇದು ಅವರ ಕೈಗೆ ಹೇಗೆ ಸೇರಿತು ? ದುರ್ಗದಲ್ಲಿ ಹುಲ್ಲು, ಹುರುಳಿಯ ಧಾರಣೆ ಬೇಕೇ? ತಿಂಗಳಿಗೆಷ್ಟು ಎಕ್ಕಡ, ಜೋಡು, ಚಡಾವು, ನ್ಯಾಪ್‌ಚಾಕ್ ಚೀಲ ತಯಾರಾಗುತ್ತದೆ - ಲೆಖ್ಖ ಬೇಕೇ ?"

– ಎಂದು ನವಿರಾದ ವ್ಯಂಗ್ಯವಿದ್ದ ಧ್ವನಿಯಲ್ಲಿ ಕೇಳಿ –

"ಆಗಿಂದಾಗ್ಗೆ ನಮ್ಮ ಆರೋಗ್ಯದ ವಿಷಯ ತಿಳಿದುಕೊಳ್ಳಲು ನವಾಬರಿಗೆ ದಿನವೂ ನಮ್ಮಲ್ಲಿ ದಂಡಿಗೆ ಎಷ್ಟು ಕುರಿ ಕಡಿಯುತ್ತಾರೆ ಎಂಬುದು ಅಗತ್ಯವಾಗಿತ್ತು. ನಾವೂ ಅವರ ದೃಷ್ಟಿಯಲ್ಲಿ ಕುರಿಗಳ ನಂಟರಲ್ಲವೇ ?"

- ಎಂದು ಹೇಳಿ, ಕೈಚಪ್ಪಾಳೆ ತಟ್ಟಿ, ಆ ಕರೆಗೆ ಉತ್ತರವಾಗಿ ಬಂದ ಆಳಿಗೆ –

"ಪ್ರಧಾನಿಗಳ ಚಾವಡಿಯ ಕರಣಿಕ ಅನಂತಯ್ಯನನ್ನು ಎಳೆದುಕೊಂಡು ಬಾ. ಅವನು ನಮಗೆ ಹೇಳಿದ್ದನ್ನೆಲ್ಲಾ ಪ್ರಧಾನಿಗಳಿಗೇ ಹೇಳಲಿ"

- ಎಂದ ಮದಕರಿನಾಯಕ, ಗಳಿಗೆಗಳಿಗೆಗೂ ಎಣ್ಣೆಯುಂಡು ಹೆಚ್ಚುತ್ತಿರುವ ಬೆಂಕಿಯಂತೆ.

ನಾಯಕರ ಅಪ್ಪಣೆಯಂತೆ, ಆಳುಗಳು, ಅನಂತಯ್ಯನನ್ನು ಎಳೆತಂದು ಒಳದಬ್ಬಿದರು. ಆ ವೇಗಕ್ಕೆ ದೊಪ್ಪನೆ ನೆಲಕ್ಕೆ ಬಿದ್ದ ಅನಂತಯ್ಯ, ಮಲಗಿಯೇ ಕೈಮುಗಿದು. ಮುಕ್ಕಾಲು ಸತ್ತಧ್ವನಿಯಲ್ಲಿ –

"ತಪ್ಪಾಯಿತು" – ಎಂದು ಗೋಗರೆದ.

ನರಸಪ್ಪಯ್ಯ ಅಷ್ಟಾದರೂ ಒಂದೂ ಮಾತಾಡಲಿಲ್ಲ.

"ಇನ್ನೂ ಹತ್ತು ಜನ ಇದ್ದಾರೆ. ಕರೆಸಬೇಕೇ - ಪ್ರಧಾನಿಗಳೇ, ನಮಗೆ-ದುರ್ಗಕ್ಕೆ ನೀವು ಹಿರಿಯರು. ಈಗೇನು ಮಾಡಬೇಕೋ ನೀವೇ ಹೇಳಿ" – ಎಂದು ಕೇಳಿದ ಮದಕರಿನಾಯಕ.

ಆ ಮಾತು ಕೇಳಿ, ನರಸಪ್ಪಯ್ಯ ಮದಕರಿನಾಯಕನನ್ನು ನೋಡಿದರು - ದಣಿದು ಹಿಂಡಿದಂತಾಗಿದ್ದ ಮುಖದಲ್ಲಿ ಕಣ್ಣುಗ್ಗಳೆರಡು ಪಂಜಿನಂತೆ ಉರಿಯುತ್ತಿದ್ದವು.

ಬಲವಂತದ ಅತ್ಯಾಚಾರಕ್ಕೊಳಗಾಗಿ, ಕೆರಳಿ ಕೆದರಿದ ಕುಲಸ್ತ್ರೀಯ ಮುಖದಂತಿದ್ದ ನಾಯಕರ ಮುಖವನ್ನು ಕಣ್ಣು ಬಿಟ್ಟು ನೋಡಲೂ ಆಗದೆ, ಒಳಗೇ ಸಾಯಲೆತ್ನಿಸುತ್ತಿದ್ದ ತಮ್ಮ ಧ್ವನಿಯನ್ನು ಬಲವಂತವಾಗಿ ಹೊರಗೆಳೆದು ತಂದು –

"ಅಪ್ಪಣೆಯಾದರೆ ನಾನು ಬರುತ್ತೇನೆ"

- ಎಂದಷ್ಟೇ ಹೇಳಿದರು ನರಸಪ್ಪಯ್ಯ. ಎಲ್ಲಿಯಾದರೂ ಮುಖ ಮರೆಸಿಕೊಳ್ಳಬೇಕು ಎನಿಸಿ.

"ದುರ್ಗದ ಪ್ರಧಾನಿಗಳು ನೀವು – ಅಷ್ಟು ಹೇಳಿದರೆ ಆಯಿತೇ. ಇಷ್ಟಕ್ಕೇ ಅಲ್ಲ ತಮ್ಮನ್ನು ಕರೆಸಿದ್ದು."

"ನನ್ನಿಂದ ಏನಾಗಬೇಕು ?"

"ನವಾಬರ ಅಂಚೆಹರಿಕಾರರು ನಮ್ಮ ಸ್ನೇಹ, ವಿಶ್ವಾಸಗಳನ್ನು ದುರುಪಯೋಗಪಡಿಸಿಕೊಂಡು ಬೇಹುಗಾರಿಕೆಯ ಅಪರಾಧ ಮಾಡಿದ್ದಾರೆ ಎಂಬುದು ನಿಮ್ಮ ಮನಸ್ಸಿಗೀಗ ನಂಬಿಕೆ ಆಗಿದೆಯೇ ?"

"ಆಗಿದೆ."

"ಆಗಿದ್ದರೆ ಅದಕ್ಕೇನು ಶಿಕ್ಷೆ ವಿಧಿಸಬೇಕು - ಹೇಳಿ ?"

– 'ಈ ಕಂದಕವನ್ನು ದಾಟದೆ ನೀನು ಪಾರಾಗಲಾರೆ' ಎಂಬಂತೆ ಕೇಳಿದ ಮದಕರಿನಾಯಕ.

"ಆಗಿರುವುದು ದೊಡ್ಡ ಅಪರಾಧ. ಪ್ರಭುಗಳು ತಮ್ಮಗಿಷ್ಟ ಬಂದ ಶಿಕ್ಷೆ ವಿಧಿಸಬಹುದು."

- ಜಡವಾದ ಧ್ವನಿಯಲ್ಲಿ ಹೇಳಿದರು ನರಸಪ್ಪಯ್ಯ.

"ಅಪರಾಧ ಮಾಡಿರುವವರೂ ದೊಡ್ಡವರೇ. ನಮ್ಮ ಕಾಲದಲ್ಲಿ ಇಂಥ ಅಪರಾಧ ನಡೆದದ್ದು, ಅದಕ್ಕೆ ಶಿಕ್ಷೆ ವಿಧಿಸಿದ್ದು ನಮಗೆ ತಿಳಿಯದು. ಬಹುಕಾಲದಿಂದ ಆಳಿ ಅಭ್ಯಾಸ ಇದ್ದವರು ನೀವು. ಹಿಂದೆ ಇಂತಹುದು ಎಷ್ಟೋ ಆಗಿ ತಮ್ಮ ಅನುಭವಕ್ಕೆ ಬಂದಿರಬಹುದು. ಆದುದರಿಂದ ನೀವೇ ಹೇಳಿ - ಈ ಅಪರಾಧಕ್ಕೇನು ಶಿಕ್ಷೆ ?"

- ಜುಟ್ಟು ಹಿಡಿದು ನಿಲ್ಲಿಸಿದಂತೆ ಕೇಳಿದ ಮದಕರಿನಾಯಕ.

ಅನಿವಾರ್ಯವಾಗಿ ವಿಷವನ್ನು ನುಂಗಲೇಬೇಕಾಗಿ ಬಂದವರಂತೆ, ಶುಷ್ಕವಾದ ಧ್ವನಿಯಲ್ಲಿ ಹೇಳಿದರು, ನರಸಪ್ಪಯ್ಯ –

"ನಮ್ಮ ಕಾಲದಲ್ಲಿ ಇಂಥ ಅಪರಾಧಿಗಳಿಗೆ, ಅವರ ಅಪರಾಧದ ವಿಷಯ ಊರ ಜನಕ್ಕೆಲ್ಲಾ ತಿಳಿಯುವಂತೆ ಡಂಗೂರ ಹೊಡೆಸಿ, ಅಪರಾಧಿಗಳಿಗೆ ತಲೆಬೋಳಿಸಿ, ಕತ್ತೆಯ ಮೇಲೆ ಹಿಂದು ಮುಂದಾಗಿ ಕೂಡಿಸಿ, ಊರ ಬೀದಿಗಳಲ್ಲೆಲ್ಲಾ ಮೆರವಣಿಗೆ ಮಾಡಿಸಿ, ಸಣ್ಣಪುಟ್ಟ ಜನರೂ ಅವರನ್ನು 'ಥೀ-ಥೂ' ಎಂದು ಉಗಿದಮೇಲೆ ಶೂಲದ ಬನಕ್ಕೊಯ್ದು ಗಲ್ಲಿಗೇರಿಸುವುದು ಸಂಪ್ರದಾಯ."

ಕಲಿತ ಪಾಠ ಒಪ್ಪಿಸುವ ಧ್ವನಿಯಲ್ಲಿ ನರಸಪ್ಪಯ್ಯ ಹೇಳಿದ ಮಾತು ಕೇಳಿ –

"ನವಾಬರ ಅಂಚೆಹರಿಕಾರರಿಗೂ ಈ ಶಿಕ್ಷೆ ವಿಧಿಸುವುದು ಸೂಕ್ತವಾದೀತೇ ?"

- ಎಂದು ಅವರನ್ನು ಕೆಣಕುವಂತೆ ಕೇಳಿದ ಮದಕರಿನಾಯಕ.

"ಅಪರಾಧಿ ಯಾರಾದರೇನು - ಅಪರಾಧ ಒಂದೇ. ಅಪರಾಧಕ್ಕೆ ಶಿಕ್ಷೆ ಒಂದೇ."

"ಆಯಿತು ನಾಳೆ ಸಭೆ ಸೇರಿಸುತ್ತೇವೆ. ನೀವೇ ಈ ಶಿಕ್ಷೆಯನ್ನು ವಿಧಿಸಿ."

- ಕಟ್ಟಪ್ಪಣೆ ಮಾಡುವಂತೆ ಹೇಳಿದ ಮದಕರಿನಾಯಕ.

"ನಾವು ಕೇವಲ ಸಲಹೆಕೊಡಬೇಕಾದ ಜನ, ಅಷ್ಟೇ. ಅಪ್ಪಣೆ ಮಾಡಬೇಕಾದವರು ತಾವು."

"ಹಿಂದೆ ಅರಮನೆಯ ಬೊಕ್ಕಸಕ್ಕೆ ಕನ್ನಹಾಕಿದ ಅಪರಾಧ ಮಾಡಿದವರ ಬಗ್ಗೆ ಶಿಕ್ಷೆವಿಧಿಸಿದವರು ತಾವೇ ಅಲ್ಲವೇ? ಆಗ ಆ ಶಿಕ್ಷೆ ಅತಿಯಾಯಿತು ಎಂದಾಗ, 'ತೀರ್ಪು ಕೊಡುವವರು ನಾವು, ನೀವು ಬೇಕಾದರೆ ಬದಲಿಸಬಹುದು' ಎಂದು ಹೇಳಿದ್ದಿರಿ - ನೆನಪಿದೆಯೇ? ಆಗಲೂ ದುರ್ಗಕ್ಕೆ ನೀವು ಪ್ರಧಾನಿಗಳು; ಈಗಲೂ ನೀವೇ ದುರ್ಗಕ್ಕೆ ಪ್ರಧಾನಿಗಳು. ನಿಮ್ಮ ಅಧಿಕಾರವನ್ನಾರೂ ಕಸಿದುಕೊಂಡಿಲ್ಲ. ಆದ್ದರಿಂದ ತಾವು ಶಿಕ್ಷೆ ವಿಧಿಸಬೇಕು. ನೀವು ಕೊಟ್ಟಿದ್ದನ್ನು ನಾವು ಕೇಳುತ್ತೇವೆ. ಪ್ರಧಾನಿಗಳ ಮಾತು ದುರ್ಗದರಸುಗಳಿಗೆ ಎಂದೂ ವೇದವಾಕ್ಯ. ಅಲ್ಲದೆ ಹಿರಿಯರಾದ ತಮ್ಮನ್ನು ಉಲ್ಲಂಘಿಸಿ ಕೆಲಸ ಮಾಡಬಾರದು ಎಂದು. ನಮ್ಮನ್ನು ಸಿಂಹಾಸನಕ್ಕೆ ತಂದು ಸ್ವರ್ಗಸ್ಥರಾದ ಹಿರಿಯ ನಾಗತಿಯರು ಹೇಳಿಹೋಗಿದ್ದಾರೆ. ಅವರ ಮಾತು ನಮಗೆ ಅನುಲ್ಲಂಘನೀಯ. ಆದ್ದರಿಂದ ನಾಳೆ ಮುಂಜಾನೆ ದಳವಾಯಿಗಳ ಸಭೆಯಲ್ಲಿ ತಾವೇ ಕುಳಿತು ವಿಚಾರಣೆ ಮಾಡಿ, ಏನು ತೀರ್ಮಾನ ಕೊಡುತ್ತೀರೋ ಕೊಡಿ."

-ನರಸಪ್ಪಯ್ಯನವರಿಗೆ, ಕೈಕಾಲುಗಳನ್ನೆಲ್ಲಾ ಅಲುಗಲಾಸ್ಪದವಿಲ್ಲದೆ ಬಿಗಿದು ಕಟ್ಟಿದ ಹಾಗೆ ಹೇಳಿದ ಮದಕರಿನಾಯಕ.

ಆ ಮಾತಿಗೆ ಕೂಡಲೇ ಉತ್ತರ ಕೊಡದೆ ನಾಯಕರ ಮುಖ ನೋಡಿದರು, ನರಸಪ್ಪಯ್ಯ.

ವಿಚಿತ್ರಕಾಂತಿಯಿಂದ ದಹಿಸುತ್ತಿದ್ದ ಕಣ್ಣುಗಳೆರಡನ್ನು ಬಿಟ್ಟರೆ, ಮದಕರಿನಾಯಕರ ಮುಖ ಭಾವಶೂನ್ಯವಾಗಿತ್ತು – ಬಿಸಿಲು ನೆಕ್ಕಿದ ಬಂಡೆಯಂತೆ.

"ಆಯಿತು - ತಮ್ಮಾಜ್ಞೆ ಪಾಲಿಸುತ್ತೇನೆ"

- ಎಂದಷ್ಟೇ ಹೇಳಿ –

"ಅಪ್ಪಣೆಯಾದರೆ ನಾನಿನ್ನು ಬರುತ್ತೇನೆ" - ಎಂದರು. ನರಸಪ್ಪಯ್ಯ.

"ತಮಗೆ ಶ್ರಮಕೊಟ್ಟೆವು - ಮನ್ನಿಸಬೇಕು" ಎಂದ ಮದಕರಿನಾಯಕ.

* * *

ಸತ್ತು ಸೆಟೆದ ಮೌನ –

ಹಿಂಡಿದರೂ ಹನಿರಕ್ತ ಬರದಂತೆ ಬಿಳುಚಿಕೊಂಡ ದಳವಾಯಿಗಳ ಮುಖಗಳು. ಒಂದೇ ರಾತ್ರಿಯಲ್ಲಿ ಅಷ್ಟು ವರ್ಷಗಳು ಬದುಕಿದ ವಯಸ್ಸ ಮುಪ್ಪಾಗಿ ಹೆಗಲೇರಿ, ಬೆನ್ನೆಲುಬನ್ನು ಬಗ್ಗಿಸಿದಂಥ ಪ್ರಧಾನಿ ನರಸಪ್ಪಯ್ಯನವರು, ಹೆಪ್ಪುಗಟ್ಟಿದ ಕ್ರೌರ್ಯವೇ ಮನುಷ್ಯರೂಪ ತಳೆದಂತೆ, ಹತ್ತು ಹೆಜ್ಜೆಗೊಬ್ಬರಂತೆ ನಿಂತ ಕೊತ್ವಾಲಚಾವಡಿಯ ಸಿಪಾಯಿಗಳು.

"ಅಪ್ಪಣೆಯಾದರೆ, ಅಪರಾಧಿಗಳನ್ನು ಹಾಜರು ಮಾಡುತ್ತೀನಿ."

- ಮುಟ್ಟಿದರೆ ಸಿಡಿಯುವಂತಿದ್ದ ಮೌನವನ್ನು ಕೆಣಕಲು ಹೆದರಿ ಧ್ವನಿ ತಗ್ಗಿಸಿದಂತೆ ಕೇಳಿದ ಕಾಶಣ್ಣನಾಯಕ.

"ಬರಮಾಡಿ."

ನರಸಪ್ಪಯ್ಯನವರು ಹೇಳಿದುದನ್ನು ಕೇಳಿ, ಕಾಶಣ್ಣನಾಯಕ, ತನ್ನ ಸಿಪಾಯಿಗಳತ್ತ ತಿರುಗಿ ನೋಡಿ, ಮಾತಿನಲ್ಲಿ ಮಾಡಬೇಕಾದ ಆಜ್ಞೆಯನ್ನು ಕಣ್ಸನ್ನೆಯಲ್ಲೇ ಮಾಡಿದ.

ನಾಲ್ಕು ಜನ ಬಿಚ್ಚು ಗತ್ತಿ ಹಿಡಿದ ಸಿಪಾಯಿಗಳು, ನವಾಬರ ಅಂಚೆಹರಿಕಾರ ನಾರಾಯಣಯ್ಯನನ್ನು ತಂದು ನಿಲ್ಲಿಸಿದರು.

ನರಸಪ್ಪಯ್ಯ ನೋಡಿದರು –

ಆ ನೋಟವನ್ನು ನಾರಾಯಣಯ್ಯ ನೋಡಲಾಗದೆ ತಲೆಬಾಗಿದುದಿರಲಿ, ಆತನ ಮುಖದ ಮೇಲಿನ ಹುರಿಮೀಸೆಯೂ ಅಲ್ಲಿರಲು ಹೇಸಿದಂತೆ ಇಳಿಬಿದ್ದಿತು, ಆತನ ಕಳೆಗೆಟ್ಟ ಮುಖದಲ್ಲಿ.

"ಅಪರಾಧಿಗಳಿಗೆ ತಾವು ಮಾಡಿದ ಅಪರಾಧ ಏನೆಂದು ತಿಳಿದಿದೆಯೇ ?"

- ತಮ್ಮದಲ್ಲ ಬೇರೆ ಯಾರದೋ ಎಂಬಂತಿದ್ದ ಧ್ವನಿಯಲ್ಲಿ ಕೇಳಿದರು, ನರಸಪ್ಪಯ್ಯ.

ಆ ಮಾತು ಕೇಳಿ, 'ತಿಳಿದಿದೆ' ಎಂಬಂತೆ, ಮೌನವಾಗಿ ತಲೆಯಾಡಿಸಿದ ನಾರಾಯಣಯ್ಯ.

"ನೀವು ಮಾಡಿರುವುದು ಬೇಹುಗಾರಿಕೆಯ ಘೋರ ಅಪರಾಧವಷ್ಟೇ ಅಲ್ಲ, ವಿಶ್ವಾಸದ್ರೋಹದ ವಿಷಬೆರೆತ ಗೂಢಚಾರಿಕೆ. ಇದಕ್ಕಾವ ಶಿಕ್ಷೆ ಎಂಬುದು ಕೊತ್ವಾಲಚಾವಡಿಯ ದಳವಾಯಿಗಳಿಗೆ ತಿಳಿದಿದೆ. ನವಾಬರ ಆಸ್ಥಾನದಲ್ಲಿದ್ದವರು; ನಿಮಗೂ ಗೊತ್ತಿರಬೇಕು...."

ನಾರಾಯಣಯ್ಯ ಏನೊಂದೂ ಮಾತಾಡಲಿಲ್ಲ. ಪ್ರಧಾನಿಗಳ ಆ ಮಾತಿಗೆ ಒಪ್ಪಿದಂತೆ ತಲೆಬಾಗಿದ.

“ನಿಮ್ಮ ಮೇಲಿನ ಆಪಾದನೆಯನ್ನು ಸ್ಥಿರಗೊಳಿಸಲು ಕೊತ್ವಾಲಚಾವಡಿಯವರು ಬೇಕಾದ ಸಾಕ್ಷಿಗಳನ್ನು ಹಾಜರುಮಾಡಲು ಸಿದ್ಧರಾಗಿದ್ದಾರೆ. ಅವರನ್ನು ಕೇಳುವುದೇನಾದರೂ ಇದ್ದರೆ - ಕರೆಸುತ್ತೇವೆ.”

“ಅದರ ಅಗತ್ಯವಿಲ್ಲ.”

“ಅಂದರೆ - ನೀವು ಮಾಡಿದ ಅಪರಾಧವನ್ನು ನೀವು ಒಪ್ಪಿಕೊಂಡಂತೆ.”

ಆ ಮಾತಿಗೆ ನಾರಾಯಣಯ್ಯನ ಸಮ್ಮತಿಸೂಚಕವಾದ ಮೌನವೇ ಉತ್ತರವಾಯಿತು.

“ಹಾಗಿದ್ದರೆ ಈ ವಿಚಾರಣೆಯನ್ನು ಮುಗಿಸಬಹುದು.”

- ತಾವಲ್ಲ, ತಾವು ಕುಳಿತ ಪೀಠವೇ ಹೇಳಿದಂತೆ ಹೇಳಿದರು, ನರಸಪ್ಪಯ್ಯ –

“ಕೊತ್ವಾಲಚಾವಡಿಯ ದಳವಾಯಿಗಳು ಮುಂದಿನ ಕಾರ್ಯ ನಡೆಸಬಹುದು. ಡಂಗೂರ-ಮೆರವಣಿಗೆ-ಶೂಲದ ಬನ - ಈ ಕಾನೂನು ಜಾರಿಯಾಗಿದೆ. ವಿಚಾರಣೆ ಮುಗಿಯಿತು. ಎಲ್ಲರಿಗೂ ನಮಸ್ಕಾರ”

- ಎಂದಷ್ಟೇ ಹೇಳಿ, ತಾವು ಕುಳಿತ ಆಸನದ ಕೈಪಿಡಿಯ ಆಸರೆಯನ್ನು ಬಲವಾಗಿ ಹಿಡಿದು, ಮೇಲೆದ್ದು ನೆರೆದವರೆಲ್ಲರಿಗೂ ಕೈಮುಗಿದು, ತಮ್ಮ ಆಸನದಿಂದ ಕೆಳಗಿಳಿದ ನರಸಪ್ಪಯ್ಯ, ಅಲ್ಲಿದ್ದ ಯಾರೊಂದಿಗೂ ಏನೂ ಮಾತನಾಡದೆ, ಯಾರಿಗೂ ಮುಖ ತೋರಿಸದೆ, ತಾನಾಗಿಯೇ ಬಾಗುತ್ತಿದ್ದ ಬೆನ್ನನ್ನು ಆದಷ್ಟು ನೆಟ್ಟಗೆ ನಿಲ್ಲಿಸಲು ಯತ್ನಿಸುತ್ತಾ, ಬಾಗಿಲತ್ತ ನಡೆದು, ಬಾಗಿಲ ಬಳಿಯಿದ್ದ ತಮ್ಮ ಚಾವಡಿಯ ಆಳುಗಳಿಗೆ –

“ಮೇನೆಯನ್ನು ತರಲು ಹೇಳು” – ಎಂದರು.

ಕುಳಿತ ಸಭೆ ನೋಡುತ್ತಲೇ ಇತ್ತು. ಬಾಗಿಲಿನತ್ತ ಬಂದ ಮೇನೆಯೊಳಗೆ ಕುಳಿತುಕೊಂಡ ನರಸಪ್ಪಯ್ಯ –

“ಮನೆಗೆ ಬಿಡಿ” - ಎಂದಷ್ಟೇ ಹೇಳಿ, ಮೇನೆಯ ಬಾಗಿಲನ್ನು ಮುಚ್ಚಿಕೊಂಡರು.

“’ಧೋ’....’ಉಧೋ’.... ’ರಾಸ್ತಾ’....” ಎಂದು ಕೂಗುತ್ತಾ ಬೋಯಿಗಳು ಮೇನೆಯನ್ನು ಹೊತ್ತು ನಡೆದರು.

* * *

ಸಭೆ ಮುಗಿದು ಒಂದು ತಾಸಾಗಿರಬಹುದು.

ಸಭೆಯಲ್ಲಿ ನಡೆದುದನ್ನು ಪರಶುರಾಮನಾಯಕನಿಂದ ಕೇಳುತ್ತಾ, ಅರಮನೆಯಲ್ಲಿ ಮದಕರಿನಾಯಕ ಕುಳಿತಿರುವಾಗಲೇ, ಬಾಗಿಲ ಬಳಿಯ ಆಳು ಮುಖ ತೋರಿಸಿದ –

“ಏನು ?”- ಎಂದು ಪರಶುರಾಮನಾಯಕ ಕೇಳಿದ.

“ಪ್ರಧಾನಿಗಳ ಚಾವಡಿಯ ಕರಣಿಕರು, ಮಹಾಸ್ವಾಮಿಯವರನ್ನು ನೋಡಲು ಬಂದಿದ್ದಾರೆ.” - ಆಳು ಹೇಳಿದ.

“ಒಳಗೆ ಬಿಡು”

- ಎಂದು ಅಣ್ಣನ ಮುಖವನ್ನೇ ನೋಡುತ್ತಾ ಹೇಳಿದ ಪರಶುರಾಮನಾಯಕ.

ಒಂದೆರಡು ಕ್ಷಣದಲ್ಲಿಯೇ ಒಳಬಂದ, ಪ್ರಧಾನಿಗಳ ಚಾವಡಿಯ ಕರಣಿಕ, ನಾಯಕರಿಬ್ಬರಿಗೂ ಗೌರವಪೂರ್ವಕವಾಗಿ ವಂದಿಸಿ –

“ಈ ಓಲೆಯನ್ನು ತಮಗೆ ಕೊಟ್ಟು ಬರಲು ಪ್ರಧಾನಿಗಳ ಅಪ್ಪಣೆಯಾಯಿತು”

- ಎಂದು ಹೇಳಿ, ಮೊಹರು ಮಾಡಿದ ಥೈಲಿಯೊಂದನ್ನು ಪರಶುರಾಮನಾಯಕನ ಕೈಗೆ ಕೊಟ್ಟ.

“ಪ್ರಭುಗಳು ಓಲೆಯನ್ನು ಪರಿಶೀಲಿಸುವವರೆಗೂ ಹೊರಗಿರು”

- ಎಂದು ಕರಣಿಕನಿಗೆ ಆಪ್ಪಣೆಮಾಡಿ, ಆತ ಹೊರಗೆ ಹೋದ ಬಳಿಕ, ಥೈಲಿಯ ಮುದ್ರೆಯನ್ನೊಡೆದು, ಅದರೊಳಗಿದ್ದ ಪತ್ರವನ್ನು ಹೊರತೆಗೆದು ಮದಕರಿನಾಯಕನತ್ತ ಚಾಚಿದ, ಪರಶುರಾಮನಾಯಕ.

“ಅದೇನೋ – ನೀನೇ ಓದಿ ಹೇಳು, ಪರಶುರಾಮಣ್ಣ” – ಎಂದ ಮದಕರಿನಾಯಕ.

ಗಟ್ಟಿಯಾಗಿ ಅವನ್ನು ಓದಿ ಹೇಳುವ ಮೊದಲು ತಾನೊಮ್ಮೆ ಅದನ್ನು ಓದಿದ ಪರಶುರಾಮನಾಯಕ, ಅಷ್ಟೇನೂ ದೊಡ್ಡದಲ್ಲದ ಕಾಗದವನ್ನು ಓದುತ್ತಿದ್ದ ಹಾಗೇ ಪರಶುರಾಮನಾಯಕನ ಮುಖ ವಿವರ್ಣವಾಗಿ, ಕಾಗದವನ್ನು ಹಿಡಿದ ಕೈಬೆರಳುಗಳು ನಡುಗಿದವು.

ಅದನ್ನು ಗಮನಿಸಿದ ಮದಕರಿನಾಯಕ –

“ಏನು ವಿಷಯ ?” – ಎಂದು ಕುತೂಹಲ ಕೆದರಿ ಕೇಳಿದ.

“ಪ್ರಧಾನಿಗಳು ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟಿದ್ದಾರೆ.”

- ನಸುಕಂಪಿಸುತ್ತಿದ್ದ ಧ್ವನಿಯಲ್ಲಿ ಹೇಳಿದ, ಪರಶುರಾಮನಾಯಕ.

“ಪತ್ರವನ್ನೋದು.”

“ಶ್ರೀಮನ್ಮಹಾನಾಯಕಾಚಾರ್ಯ ಕಾಮಗೇತಿ ಕಸ್ತೂರಿ ಇತ್ಯಾದಿ ಬಿರುದಾಂಕಿತರಾದ ಶ್ರೀ ಕಸ್ತೂರಿರಂಗಪ್ಪನಾಯಕರಾದ ರಾಜಾ ಬಿಚ್ಚುಗತ್ತಿ ಮದಕರಿನಾಯಕರ ಚರಣಗಳಲ್ಲಿ ಪ್ರಧಾನಿ ನರಸಪ್ಪಯ್ಯನ ಬಿನ್ನಹ –

"ನಮ್ಮಿಂದ ಆದಷ್ಟು ಉಂಡ ಉಪ್ಪಿಗೆ ದ್ರೋಹ ಬಗೆಯದಂತೆ ಸನ್ನಿಧಾನಕ್ಕೆ ಸೇವೆಮಾಡಿದೆವು. ನಮಗೂ ವಯಸ್ಸಾಯಿತು. ಬುದ್ಧಿಯೂ ಮಂದವಾಗಿ, ಸ್ವಾಮಿಕಾರ್ಯದಲ್ಲಿ ನಮ್ಮಿಂದ ಮೈಮರೆವಿನ ಅಪಚಾರವಾಯಿತು. ಅದನ್ನು ಕ್ಷಮಿಸುವುದೂ, ಬಿಡುವುದೂ ಪ್ರಭು ಚಿತ್ತಕ್ಕೆ ಸೇರಿದ ಮಾತು. ಮುಂದೆ ತಮ್ಮ ಕಾರ್ಯ ತಪ್ಪಾಗದಂತೆ ನಡೆಯುವ ಏಕೈಕ ಭಾವನೆಯಿಂದ, ಈ ರಾಜೀನಾಮೆಪತ್ರವನ್ನು ಕಳಿಸಿದ್ದೇವೆ. ಇದನ್ನು ಒಪ್ಪಿಸಿಕೊಂಡು, ನಮ್ಮ ವಯಸ್ಸಿಗೆ ಸರಿಯಾದ ಜಪ, ತಪ, ಪೂಜಾಕಾರ್ಯಗಳಲ್ಲಿ ತೊಡಗಲು ಅಪ್ಪಣೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಇಂತು ವಿಜ್ಞಾಪಿಸಿಕೊಳ್ಳುವ,

ತಮ್ಮ ವಿಧೇಯ,

ಕಳ್ಳಿ ನರಸಪ್ಪಯ್ಯ"

ಪರಶುರಾಮನಾಯಕ, ಅಲ್ಪಕಂಪನವಿದ್ದ ಧ್ವನಿಯಲ್ಲಿ ಮೃದುವಾಗಿ ಓದಿ ಹೇಳಿದ ಕಾಗದದ ವಿವರವನ್ನು ಕೇಳಕೇಳುತ್ತಾ ಮದಕರಿನಾಯಕನ ಮುಖದ ಮೇಲೆ ಬಗೆಬಗೆಯ ಭಾವಛಾಯೆಗಳು ಸುಳಿದುಹೋಗಿ, ಕೊನೆಗೆ ಮೋಡ ಕಟ್ಟಿದ ಮುಗಿಲಿನಂತಾಗಿ –

"ಆ ಕಾಗದವನ್ನಿಲ್ಲಿ ಕೊಡು" – ಎಂದು ಕೇಳಿದ ಮದಕರಿನಾಯಕ.

ಮರುಮಾತಾಡದೆ, ಪರಶರಾಮನಾಯಕ ಕಾಗದವನ್ನು, ಮದಕರಿನಾಯಕನ ಕೈಗೆ ಕೊಟ್ಟ. ಆ ಕಾಗದವನ್ನು ನೋಡಿದ ನಾಯಕ. ಬರಹ ಸ್ಪಷ್ಟವಾಗಿದ್ದರೂ, ಅಕ್ಷರಗಳು ನಡುಗುವ ಕೈಯಲ್ಲಿ ಬರೆದಂತೆ ಅಂದ ಕಳೆದುಕೊಂಡಿದ್ದವು. ಅಪ್ರಯತ್ನವಾಗಿಯೇ ಅವನ ಕೈ, ಆ ಕಾಗದವನ್ನು ಮುಷ್ಟಿಯಲ್ಲಿ ಬಿಗಿಯಾಗಿ ಹಿಡಿದು, 'ಮುಂದೇನು ಮಾಡುವುದು?' ಎನ್ನುವಂತೆ, ಪರಶುರಾಮನಾಯಕನತ್ತ ನೋಡಿದ.

"ಈ ಕಾಗದವನ್ನು ಒಪ್ಪುವ ಮೊದಲು ತಾವು ಒಮ್ಮೆ ನರಸಪ್ಪಯ್ಯನವರನ್ನು ನೋಡುವುದು ಲೇಸು" – ಎಂದ ಪರಶುರಾಮನಾಯಕ.

"ಅದು ಅಗತ್ಯವೇ ?"

"ರಾಜ್ಯದ ಹಿತದೃಷ್ಟಿಯಿಂದ ತುಂಬಾ ಅಗತ್ಯ. ದುರ್ಗದಲ್ಲಿ ಈ ಬೇಹುಗಾರಿಕೆಯ ಹೊಗೆ ಹಬ್ಬಿರುವಾಗ ಪ್ರಧಾನಿಗಳು ರಾಜೀನಾಮೆ ಕೊಟ್ಟರು. ಅವರನ್ನು ನೋಡದೆ ನಾಯಕರು ಅದನ್ನು ಅಂಗೀಕರಿಸಿದರು ಎಂಬ ಸುದ್ದಿ ಜನಜನಿತವಾಗುವುದು ಒಳ್ಳೆಯದಲ್ಲ."

"ಅವರನ್ನು ನಾವು ರಾಜೀನಾಮೆ ಕೊಡಿ ಎಂದು ಕೇಳಲಿಲ್ಲ."

"ಈ ದಿನ ನಡೆದದ್ದು ನವಾಬರ ಅಂಚೆಹರಿಕಾರರ ವಿಚಾರಣೆಯಾದರೂ, ವಾಸ್ತವವಾಗಿ ಪ್ರಧಾನಿಗಳದೇ ವಿಚಾರಣೆ. ನಮ್ಮ ಆಸ್ಥಾನದಲ್ಲಿ ಅಂಚೆಹರಿಕಾರರ ನೇಮಕವಾದದ್ದು, ಪ್ರಧಾನಿಗಳ ಸಲಹೆಯಂತೆ, 'ಪ್ರಧಾನಿಗಳು ನವಾಬರಲ್ಲಿ ಪಕ್ಷಪಾತಿಗಳು' ಎಂಬ ಮಾತು ಊರ ಜನಕ್ಕಲ್ಲದಿದ್ದರೂ ಹಿರಿಯರಿಗೆಲ್ಲಾ ತಿಳಿದಿರುವ ವಿಚಾರ, ಅಂಚೆಹರಿಕಾರರು ತಪ್ಪು ನಡೆದುಕೊಂಡಿದ್ದರೆ, ಅದಕ್ಕೆ ಪ್ರಧಾನಿಗಳು ಅವರಿಗೆ ಸಲಹೆ ಕೊಟ್ಟದ್ದೂ ಕಾರಣ ಎನ್ನುವುದು, ಸ್ವಲ್ಪ ರಾಜಕಾರಣ ತಿಳಿದವರೂ ಅರ್ಥಮಾಡಿಕೊಳ್ಳಬಹುದಾದ ವಿಷಯ. ಪ್ರಧಾನಿಗಳ ಹಾಗೇ ಮನಸ್ಸಿದ್ದ ಬೇರೆ ಜನವೂ ಇರಬಹುದು. ಇಲ್ಲದಿದ್ದರೂ, ಈ ಘಟನೆಯ ಬೆನ್ನಲ್ಲೇ ಅವರು ರಾಜೀನಾಮೆ ಕೊಟ್ಟು, ನೀವು ಅದನ್ನು ಅಂಗೀಕರಿಸಿದರೆ, 'ಇಷ್ಟಕ್ಕೇ ನೀವು ಕಾದಿದ್ದಿರಿ' ಎಂದು ಜನ ಅರ್ಥಮಾಡಿಕೊಳ್ಳಲು ಕಾರಣವಾಗುತ್ತದೆ. ಪ್ರಧಾನಿಗಳಿಗೂ ಹಿತೈಷಿಗಳಾದ ಜನ, ದುರ್ಗದಲ್ಲಷ್ಟೇ ಅಲ್ಲ, ಈ ರಾಜ್ಯದಲ್ಲಿ ಸಾಕಷ್ಟು ಇದ್ದಾರೆ. ಅಂಥವರು ನಮ್ಮ ವರ್ತನೆಯನ್ನು ತಪ್ಪು ತಿಳಿದು, ಅಸಮಾಧಾನ ಮತ್ತಷ್ಟು ವಿಶಾಲವಾಗಿ ಹಬ್ಬಲು ಕಾರಣವಾಗಿ, ರಾಜ್ಯದ ಆರೋಗ್ಯ ಕೆಡುತ್ತದೆ. ಆದ್ದರಿಂದ ತಾವು ಯೋಚನೆ ಮಾಡಬೇಕು - ರಾಜ್ಯದ ಹಿತದೃಷ್ಟಿಯಿಂದ."

- ತನ್ನ ಅನಿಸಿಕೆಯನ್ನು ವಿವರಿಸಿ ಹೇಳಿದ ಪರಶುರಾಮನಾಯಕ.

"ಈ ಮಾತನ್ನು ಪ್ರಧಾನಿಗಳೂ ಯೋಚಿಸಬೇಕಾಗಿತ್ತಲ್ಲವೇ ?"

"ಅವರ ದೃಷ್ಟಿಯಿಂದ ಅವರು ಮಾಡಿದುದು ಸರಿ. ತಮ್ಮ ಅದೂರದೃಷ್ಟಿಯ ಫಲವಾಗಿ, ರಾಜ್ಯಕ್ಕೆ ಕೆಡಕಾಗುವಂಥ ಕೆಲಸವಾದಾಗ, ತಾವಿದ್ದ ಹುದ್ದೆಗೆ ರಾಜೀನಾಮೆ ಕೊಡಬೇಕಾದದ್ದು ಸ್ವಾಮಿನಿಷ್ಠರ ಕರ್ತವ್ಯ. ಅದನ್ನವರು ಮಾಡಿದ್ದಾರೆ. ಅವರ ನಡತೆಯಲ್ಲಿ ಯಾವ ಲೋಪ ಕಾಣುವುದೂ ಸಾಧ್ಯವಿಲ್ಲ."

"ಉಪ್ಪು ತಿಂದವರು – ನೀರು ಕುಡಿದರು. ಅದಕ್ಕೆ ನಾವೇನು ಮಾಡಬೇಕು? ಬೇಡವಾದ ಪ್ರಧಾನಿಗಳನ್ನು 'ಇರು' ಎಂದು ನಾವು ಬೇಡಿಕೊಳ್ಳಬೇಕೇ ?"

"ನಿಮಗೆ ಬೇಕೋ - ಬೇಡವೋ, ಆದರೆ ಹತ್ತುಜನರ ದೃಷ್ಟಿಯಲ್ಲಿ ಪ್ರಧಾನಿಗಳು ಒಪ್ಪುವ ಹಾಗೆ ಕೆಲಸ ಮಾಡಿದಂತೆಯೇ ನಾವೂ ಮಾಡಬೇಕು. ಜನ ನಮ್ಮಲ್ಲಿ ತಪ್ಪು ಕಂಡು ಹಿಡಿಯಲು ಅವಕಾಶ ಕೊಡಬಾರದು."

"ಅದಕ್ಕೇನು ಮಾಡಬೇಕು ಅನ್ನುತ್ತೀಯಾ - ನರಸಪ್ಪಯ್ಯನ ಮರಿ !"

-ಕೊಂಚ ಆಸಹನೆಯಿಂದ ಕೇಳಿದ ಮದಕರಿನಾಯಕ.

"ಅವರು ಬಿಗಿಯಾದಾಗ ನಾವು ಸಡಿಲವಾಗಬೇಕು. ನನ್ನ ಮಾತು ಕೇಳುತ್ತೀರಾ -?"

- ಪ್ರಾರ್ಥಿಸುವಂತೆ ಕೇಳಿದ ಪರಶುರಾಮನಾಯಕ.

“ಅದೇನು – ಹೇಳು, ಎಂದಿದ್ದರೂ, ಯಾರು ಬಂದರೂ ಕೇಳುವುದಷ್ಟೇ ನಮ್ಮ ಕೆಲಸ.”

“ನನ್ನನ್ನು ನೀವು ದಂಡಿಸಿದರೂ ಚಿಂತೆಯಿಲ್ಲ. ದಯವಿಟ್ಟು ನಾನು ಹೇಳಿದಷ್ಟು ಮಾಡಿ-
”

“ಏನು ಮಾಡಬೇಕು ?”

“ಮೊದಲು ಪ್ರಧಾನಿಗಳು ಅಂಚೆಹರಿಕಾರರ ಬಗ್ಗೆ ಕೊಟ್ಟ ತೀರ್ಪನ್ನು ತಡೆಹಿಡಿದು ಬದಲಿಸಿ, ಅವರನ್ನು ಮರ್ಯಾದೆಯಿಂದ ಶ್ರೀರಂಗಪಟ್ಟಣಕ್ಕೆ ಕಳಿಸಿ - ಈ ಕಾರಣಕ್ಕೆ ಕಳಿಸಬೇಕಾಯಿತು ಎಂದು ನವಾಬರಿಗೆ ಕಾಗದ ಬರೆಸಿ. ಇಲ್ಲವೇ ಈ ಅಪಮಾನದ ಆಜ್ಞೆ ಜಾರಿಗೆ ಬಂದರೆ, ಬೇರೆಲ್ಲೋ ಹಾರುತ್ತಿರುವ ಗಿಡುಗ ನಮ್ಮ ಮೇಲೇ ಬಂದು ಎರಗಲು ಕಾರಣವಾಗುತ್ತದೆ. ನಾವೀಗ ನವಾಬರನ್ನು ನೇರವಾಗಿ ಎದುರಿಸುವುದಕ್ಕಿಂತ, ಅವರನ್ನು ದೂರವಿಟ್ಟು ಸಾಧಿಸಬೇಕಾದ ಕೆಲಸ ಬಹಳವಿದೆ. ನಮಗೆ ಬೇಕಾದ್ದು ಅಂಚೆಹರಿಕಾರರ ಅಪಮಾನವಲ್ಲ, ನಮ್ಮನ್ನು ಸದಾ ಸಂಶಯ ದೃಷ್ಟಿಯಿಂದ ನೋಡುತ್ತಿರುವ ಗೂಬೆ ನಮ್ಮ ಮನೆಯಿಂದ ತೊಲಗಿದರೆ ಸಾಕು. ನಮಗೆ ನಮ್ಮ ಕೆಲಸಕ್ಕೆ ಹೆಚ್ಚಿನ ಸ್ವಾತಂತ್ರ್ಯ ಬರುತ್ತದೆ; ನವಾಬರಿಗೂ ಪರೋಕ್ಷವಾಗಿ ಎಚ್ಚರಿಕೆ ಹೇಳಿದಂತಾಗುತ್ತದೆ. ಸದ್ಯಕ್ಕೆ ಆ ಪ್ರಸಂಗ ಅಷ್ಟಕ್ಕೆ ಮುಗಿಯಲಿ”

- ಮಾತನ್ನು ಮಧ್ಯದಲ್ಲಿ ನಿಲ್ಲಿಸಿ, ನಾಯಕರತ್ತ ನೋಡಿದ ಪರಶುರಾಮನಾಯಕ.

“ಮುಂದೆ - ?”

“ಪ್ರಧಾನಿಗಳನ್ನು ಕರೆಸಿಕೊಂಡು, 'ಅವರ ರಾಜೀನಾಮೆ ನಮಗೆ ಇಷ್ಟವಿಲ್ಲ, ಅವರಿರುವುದು ಬೇಕು. ಈ ತಪ್ಪು ಅವರದಲ್ಲ' ಎಂಬಂತೆ ಮಾತನಾಡಿ.”

“ಹಾಗೆಂದು ಅವರು ರಾಜೀನಾಮೆ ಹಿಂತೆಗೆದುಕೊಳ್ಳಲು ಒಪ್ಪಿದರೆ - ಮರೆಯಬೇಡ, ಪರಶುರಾಮಣ್ಣ - ನರಸಪ್ಪಯ್ಯ ಕಡಿಮೆ ನೀರಿನಲ್ಲಿ ಮುಳುಗುವ ಮನುಷ್ಯರಲ್ಲ.”

“ಆಗ- ಏನು ಮಾಡಬೇಕೆಂದು ಯೋಚಿಸೋಣ. ಒಪ್ಪಲಿ, ಬಿಡಲಿ – ಈಗಂತೂ ಪ್ರಧಾನಿಗಳು ರೆಕ್ಕೆ ಕತ್ತರಿಸಿದ ಹಕ್ಕಿ. ಅಧಿಕಾರದಲ್ಲಿ ಇರುತ್ತೇನೆ ಎಂದರೆ, ನಮ್ಮ ಸವಾರಿಗೆ ಅವರನ್ನೇ ಕುದುರೆಯನ್ನಾಗಿ ಮಾಡಿಕೊಳ್ಳೋಣ. ಇರಲು ಒಪ್ಪದಿದ್ದರೆ ಹತ್ತು ಜನಕ್ಕೆ 'ಈ ತಪ್ಪು ನಮ್ಮದಲ್ಲ' ಎಂದು ತಿಳಿಯುವ ರೀತಿಯಲ್ಲಿ ಅವರ ರಾಜೀನಾಮೆಯನ್ನು ಒಪ್ಪಿಕೊಳ್ಳೋಣ. ದಯವಿಟ್ಟು ನನ್ನ ಮಾತು ಕೇಳಿ - ಫಲಬಿಡುವ ಕಾಲಕ್ಕೆ ಮರ ಕಡಿಯಬೇಡಿ. ಈಗ ಗಾಳಿ ನಮ್ಮ ಕಡೆಗೆ ಬೀಸುತ್ತಿದೆ” – ಎಂದು ಬೇಡಿದ ಪರಶುರಾಮನಾಯಕ.

ಅಷ್ಟು ಹೊತ್ತು ಯೋಚಿಸಿ, ಬಳಿಕ –

“ನೀನು ಹೇಳುವುದೂ ಸರಿಯೇ. ಆದರೂ ಇಂದಿನಿಂದ ನೀನೇ ನಮ್ಮ ಪ್ರಧಾನಿ” – ಎಂದ ಮದಕರಿನಾಯಕ.

“ನಾನು ಏನೂ ಅಲ್ಲ, ನಿಮ್ಮ ತಮ್ಮ ಆ ಭಾಗ್ಯವನ್ನು ಉಳಿಸಿಕೊಡಿ. ನನ್ನ ಮಾತು ಒಪ್ಪಿಗೆಯಾಯಿತೇ ?... ಕರಣಿಕರನ್ನು ಕರೆಸಲೇ ?” ಎಂದು ಕೇಳಿದ ಪರಶುರಾಮನಾಯಕ.

“ಆಯಿತು, ದಾಳ ಹಾಕು. ಗರ ಏನು ಬೀಳುತ್ತದೆಯೋ ನೋಡೋಣ” - ಎಂದಷ್ಟೇ ಹೇಳಿದ ಮದಕರಿನಾಯಕ.

“ಸರಿ-”

- ಎಂದು ಹೇಳಿ, ಕೈಚಪ್ಪಾಳೆತಟ್ಟಿ, ಹೊರಗಿದ್ದ ಆಳನ್ನು ಕರೆದು-

“ಪ್ರಧಾನಿಗಳ ಚಾವಡಿಯ ಕರಣಿಕರನ್ನು ಕರೆ.”- ಎಂದು ಹೇಳಿದ ಪರಶುರಾಮನಾಯಕ.

ಆ ಮಾತಿನಂತೆ ಒಳಬಂದ ಕರಣಿಕನಿಗೆ-

“ಪ್ರಧಾನಿಗಳಿಗೆ 'ತಮ್ಮ ಕಾಗದ ಮುಟ್ಟಿತು, ನಾವೇ ಬಂದು ಅವರನ್ನು ಕಾಣುತ್ತೇವೆ” ಎಂದು ಹೇಳು. ಈ ಮಾತನ್ನು ನನ್ನ ಮೂಲಕ ಪ್ರಭುಗಳೇ ತಿಳಿಸಿದರೆಂದು ಹೇಳು. 'ಯಾವುದಕ್ಕೂ ಅವಸರ ಮಾಡಬಾರದು' – ಈ ಮಾತನ್ನು ಹೀಗೇ ಹೇಳಬೇಕು”

- ಎಂದು ಹೇಳಿದ ಪರಶುರಾಮನಾಯಕ.

“ಅಪ್ಪಣೆ” – ಎಂದು ಹೇಳಿ, ಕೈಮುಗಿದು ಹೋದ ಕರಣಿಕ.

* * *

ಪರಶುರಾಮನಾಯಕ ಮಾಡುವ ಪ್ರಯತ್ನ ಮಾಡಿದ. ಹತ್ತಾರು ವಿಧದಲ್ಲಿ ವಾದಮಾಡಿ, ಪ್ರಧಾನಿಯಾಗಿ ಮುಂದುವರಿಯಲು ನರಸಪ್ಪಯ್ಯನವರನ್ನು ಒಪ್ಪಿಸಲು ಯತ್ನಿಸಿದ. ಆದರೆ ಅವರು ಯಾವ ವಾದಕ್ಕೂ ಮಣಿಯಲಿಲ್ಲ. ಎಲ್ಲಕ್ಕೂ ಅವರದೊಂದೇ ಉತ್ತರ –

“ಅಂಚೆಹರಿಕಾರರ ಪ್ರಸಂಗ ಬೀದಿಹಗರಣವಾಗಿ, ನನ್ನಿಂದ ತಪ್ಪಾಯಿತೋ ಇಲ್ಲವೋ ಅಂತೂ 'ನರಸಪ್ಪಯ್ಯ ಪ್ರಧಾನಿಪದವಿಗೆ ತಕ್ಕ ಮನುಷ್ಯನಲ್ಲ' ಎಂಬ ಹೆಸರು ನನಗೆ ಅಂಟಿಹೋಯಿತು. ನಾವು ಹೇಳಿದ ಮಾತನ್ನು ದೊಡ್ಡ ಜನ 'ಸರಿಯೆ ?' ಎಂದು ಯೋಚಿಸಲು ಕಾರಣವಾಯಿತು. 'ತನ್ನ ಬೆನ್ನ ಹಿಂದೆ ಏನು ನಡೆಯುತ್ತಿದೆ ಎಂಬುದನ್ನೇ ತಿಳಿದುಕೊಳ್ಳಲಾರದ ಈ ಮುದುಕನಿಗೆ ಇನ್ನೂ ಪ್ರಧಾನಿಯಾಗಿ ಮುಂದುವರಿಯುವ ಚಪಲ - ಮುಪ್ಪಿನ ಕಾಲಕ್ಕೆ ಮೂರನೇ ಹೆಂಡತಿಯನ್ನು ಬಯಸಿದಂತೆ' ಎಂದು ಜನ ಹಿಂದೆ ತಾತ್ಸಾರವಾಗಿ ಆಡಿ ಕೊಳ್ಳಲು

ಅವಕಾಶವಾಯಿತು. ಉಳಿದವರ ಮಾತು ಹೇಳುವುದೇನು – ನನ್ನಲ್ಲೇ ನನಗೆ ನಂಬಿಕೆ ಕೆಟ್ಟು ಹೋಯಿತು. ಆದ್ದರಿಂದ ಒಪ್ಪದ ಈ ಪದವಿಯ ಅಲಂಕಾರ ನನಗೆ ಬೇಡ. ಇಷ್ಟಾಗಿಯೂ, ಪ್ರಭುಗಳು ನನ್ನಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಕ್ಕೆ ನಾನು ಕೃತಜ್ಞ. ಅಷ್ಟಕ್ಕೆ ನನ್ನನ್ನು ಬಿಟ್ಟು ಬಿಡಿ. ಯಾರು ಕೇಳಿದರೂ ನನ್ನದಿಷ್ಟೇ ಮಾತು."

ನಾಯಕರು ಕರೆಸಿದ ದಳವಾಯಿಗಳ, ನಗರಪ್ರಮುಖರ ರಹಸ್ಯಸಭೆಯಲ್ಲಿ, ನಾಯಕರೇ ಪ್ರಧಾನಿಗಳ ರಾಜೀನಾಮೆ ಪ್ರಸಂಗವನ್ನು ವಿವರಿಸಿ –

"ಪ್ರಧಾನಿಗಳಿಗೆ ನಮ್ಮ ಬೇಡಿಕೆ ಪಥ್ಯವಾಗಲಿಲ್ಲ. ನಾವೇನು ಮಾಡಬೇಕೋ ಹಿರಿಯರು ಹೇಳಬೇಕು"

-ಎಂದು ಕೇಳಿದಾಗ, ನಾಯಕರ ಮಾತಿಗೆ ದಳವಾಯಿಗಳು ಧ್ವನಿ ಕೂಡಿಸಿದಾಗಲೂ, ಅದೇ ಮಾತನ್ನು ಹೇಳಿ ನರಸಪ್ಪಯ್ಯ-

"ಪ್ರಭುಗಳು ನಮ್ಮಲ್ಲಿ ನಾವು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಿನ ಔದಾರ್ಯ ತೋರಿದ್ದಾರೆ. ಇನ್ನು ನಮ್ಮನ್ನು ಈ ಪದವಿಯ ಹೊರೆಯಿಂದ ಬಿಡುಗಡೆ ಮಾಡದೆ, ಏನು ಕೊಟ್ಟರೂ ಅದು ಯೋಗ್ಯತೆಗೆ ಪ್ರತಿಫಲವಾಗುವುದಿಲ್ಲ, ಅಪಾತ್ರನಿಗೆ ಅನ್ನವಿಟ್ಟಂತಾಗುತ್ತದೆ. ಅರ್ಹತೆಯಿಲ್ಲದೆ ಉಂಡ ಅನ್ನ ವಿಷವಾಗುತ್ತದೆ. ಆದ್ದರಿಂದ ಈ ವಯಸ್ಸಿನಲ್ಲಿ ನಮ್ಮ ಮನಸ್ಸಿಗೆ ಆ ನೋವು ಕೊಡಬಾರದು"

-ಎಂದು ವಿನಯಪೂರ್ವಕವಾಗಿದ್ದರೂ, ದೃಢನಿಶ್ಚಯವಿದ್ದ ಧ್ವನಿಯಲ್ಲಿ ಹೇಳಿದರು.

ಆ ಮಾತನ್ನು ಕೇಳಿ, ನಾಯಕರು ಅಸಹಾಯಕತೆಯ ದೃಷ್ಟಿಯಿಂದ ಸಭೆಯತ್ತ ನೋಡಿದಾಗ, ನರಸಪ್ಪಯ್ಯನವರ ಹಟ ಅತಿರೇಕಕ್ಕೆ ಹೋಯಿತು ಎಂದು ಬಹುಮಂದಿಗೆ ಅನಿಸಿ, ಅವರ ಭಾವನೆಗೆ ಧ್ವನಿಕೊಟ್ಟಂತೆ, ದಳವಾಯಿಗಳ ಹಿರಿಯನಾದ ಚಪ್ಪೇಚಾವಡಿಯ ದಳವಾಯಿ ಚಿಕ್ಕ ಪರಶುರಾಮನಾಯಕ –

"ನಿಮ್ಮ ಮಾತು ನಿಮಗೇ ಒಪ್ಪಿಗೆಯಾಗಬೇಕು, ಪ್ರಧಾನಿಗಳೇ. ದೇವರೂ ಒಪ್ಪೋ ಮಾತಲ್ಲ ಇದು. ಪ್ರಭುಗಳು ಕೇಳಿದಾಗ ತಲೆಕೊಡುವ ಪ್ರಮಾಣಮಾಡಿ ಉಪ್ಪು ತಿಂದವರು ನಾವು ಯಾರೂ ಸರ್ವಜ್ಞರಲ್ಲ. ಒಂದಲ್ಲ ಒಂದು ತಪ್ಪು ಮಾಡದ ಮನುಷ್ಯ ಯಾರು? ಅದನ್ನು ಹಡೆದ ತಾಯಿಯ ಹಾಗೆ 'ಮರೀತೀವಿ' ಅಂತ ಪ್ರಭುಗಳೇ ಕೇಳಿಕೊಂಡರೂ ಹೀಗೆ ಹಟಹಿಡಿಯುವುದು ನೀತಿಯೂ ಅಲ್ಲ, ನಿಯತ್ತೂ ಅಲ್ಲ. ಮಾಡಬಾರದ ತಪ್ಪು ಮಾಡಿದ ಹಲಾಲುಕೋರರನ್ನು 'ಅವರಿಗೆ ಬೀದೀಲಿ ಅವಮರ್ಯಾದೆ ಮಾಡಿದರೆ, ನಮ್ಮ ಪ್ರಧಾನಿಗಳಿಗೆ ಕೆಟ್ಟ ಹೆಸರು ಬರುತ್ತದೆ' ಅಂತ ಹೇಳಿ, 'ಮರ್ಯಾದೆಯಾಗಿ ಕಳಿಸಿಕೊಡಿ. ಪ್ರಧಾನಿಗಳ ಚಾವಡಿಯ ತಪ್ಪು ಹೊರಬಂದರೆ ನಿಮ್ಮ

ತಲೆ ತೆಗೀತೀನಿ' ಅಂತ ಕೊತ್ವಾಲಚಾವಡಿಗೆ ಅಪ್ಪಣೆ ಮಾಡಿದಮೇಲೂ, ಅವರ ಮಾತಿಗೆ ಮರ್ಯಾದೆ ಕೊಡದಿರೋದು, ನೀವು ಪೂಜೆ ಮಾಡೋ ದೇವರಿಗೆ ಪ್ರೀತಿಯಾ ಅಂತ ನೀವೇ ಕೇಳಿಕೊಳ್ಳಿ. ಮನುಷ್ಯರಿಗಲ್ಲ, ದೇವರಿಗೆ ಉತ್ತರ ಕೊಡಿ"

-ಎಂದು ಖಡಾಖಂಡಿತವಾಗಿ ಹೇಳಿದ.

ಅಷ್ಟೇ ಖಂಡಿತವಾಗಿ ಅಲ್ಲದಿದ್ದರೂ, ಬೇರೆ ರೀತಿಯಲ್ಲಿ, ಉಳಿದ ದಳವಾಯಿಗಳೂ ನರಸಪ್ಪಯ್ಯನವರ ನಿರ್ಧಾರವನ್ನು ಕದಲಿಸಲು ಯತ್ನಿಸಿದರು.

ಆದರೆ ನರಸಪ್ಪಯ್ಯನವರು ಮಾತ್ರ ಅದಾವುದಕ್ಕೂ ಒಪ್ಪಲಿಲ್ಲ –

"ದುಗ್ಗಾಣಿಗೆ ದುರ್ಗಿವರಹದ ಬೆಲೆ ಕೊಟ್ಟರೆ, ದುಗ್ಗಾಣಿಗೆ ಬೆಲೆ ಬರುವುದಿಲ್ಲ, ದುರ್ಗಿವರಹಕ್ಕೆ ಬೆಲೆ ಕಡಿಮೆಯಾಗುತ್ತದೆ. ಪ್ರಧಾನಿಗಳು ಮಾಡಿದ ತಪ್ಪು ಅಂತ ಪ್ರಭುಗಳು ನಮ್ಮನ್ನು ಮನ್ನಿಸಿದರೆ, ಅದನ್ನು ನಾವೂ ಒಪ್ಪಿದರೆ, ಅದರಿಂದ ಪ್ರಭುಗಳಿಗೆ ಕೀರ್ತಿ ಬರುವುದಿಲ್ಲ. 'ದೊಡ್ಡವರಿಗೊಂದು ನ್ಯಾಯ, ಬಡವರಿಗೊಂದು ನ್ಯಾಯ' ಎಂಬ ಅಪಕೀರ್ತಿ ಬರುತ್ತದೆ. ಇನ್ನೇನಾಗದಿದ್ದರೂ ನಮ್ಮಿಂದ ಪ್ರಭುಗಳಿಗೆ, ಅವರ ನ್ಯಾಯದೃಷ್ಟಿಗೆ ಈ ಅಪಖ್ಯಾತಿ ಬೇಡ. ಹತ್ತು ಜನ ಹಿರಿಯರು ಸೇರಿದ್ದೀರ - ನಿಮ್ಮೆದುರು ಪ್ರಭುಗಳು ಒಪ್ಪಿಸಿಕೊಳ್ಳಬೇಕು"

- ಎಂದು ಹೇಳಿ, ತಮ್ಮ ಕೈಯಲ್ಲಿದ್ದ ಪ್ರಧಾನಿಪದವಿಯ ಲಾಂಛನವಾಗಿದ್ದ ಮುದ್ರೆ ಉಂಗುರವನ್ನು ತೆಗೆದು ನಾಯಕರಿಗೆ ಒಪ್ಪಿಸಿ –

"ನಮಗಿನ್ನು ಬರಲು ಅಪ್ಪಣೆಯಾಗಬೇಕು" - ಎಂದು ಹೇಳಿದರು.

ಆ ಒತ್ತಾಯಕ್ಕೆ ಮಣಿದಂತೆ ನಾಯಕರು ಆ ಉಂಗುರವನ್ನು ಸ್ವೀಕರಿಸಿ-

"ನೀವು ಹಿರಿಯರು, ಪದವಿಗೆ ದೂರವಾದಿರಿ ಎಂದು ನಮ್ಮ ಹೃದಯಕ್ಕೆ ದೂರವಾಗ ಬೇಡಿ. ನಿಮಗೆ ಬೇಡವಾದರೂ ನಮಗೆ ನಿಮ್ಮ ಸಲಹೆಯ ಅಗತ್ಯವಿದೆ"

-ಎಂದು ಹೇಳಿದರು.

"ನಿಮ್ಮ ಔದಾರ್ಯಕ್ಕೆ ನಾನು ಕೃತಜ್ಞ. ನನಗಿನ್ನು ಅಪ್ಪಣೆ ಕೊಡಿ"

- ಎಂದು ಹೇಳಿ ಕೈಮುಗಿದು, ಸಭೆಗೂ ಕೈಮುಗಿದು ಹೊರಟುಹೋದರು ನರಸಪ್ಪಯ್ಯ.

"ಮನುಷ್ಯನಿಗೆ ಬೆನ್ನೆಲುಬಿದ್ದ ಹಾಗೆ ಅಷ್ಟಿಷ್ಟು ಅಹಂಕಾರವಿರಬೇಕು. ಇಷ್ಟು ದುರಹಂಕಾರವಿರಬಾರದು"

-ಎಂದು ತಗ್ಗಿದ ಧ್ವನಿಯಲ್ಲಿ ಹೇಳಿದ, ಚಪ್ಪೇಚಾವಡಿ ದಳವಾಯಿ ಸಣ್ಣಪರಶುರಾಮನಾಯಕ.

ಹಾಗೆ ಆ ಸಭೆ ಮುಗಿಯಿತು.

* * *

ಸಭೆ ಮುಗಿದಬಳಿಕ, ಮದಕರಿನಾಯಕ, ತಮ್ಮ ಪರಶುರಾಮನಾಯಕನನ್ನು ಕೇಳಿದ-

"ಈ ಸಭೆ ಸಾಧಿಸಿದ್ದೇನು? ನರಸಪ್ಪಯ್ಯನವರಿಗೆ ಇಲ್ಲದ ದೊಡ್ಡಸ್ತಿಕೆ ಕೊಟ್ಟ ಹಾಗಾಯಿತು.''

"ಊಹೂ, ನಾನು ಅಂದುಕೊಂಡ ಉದ್ದೇಶ ಸಫಲವಾಯಿತು"

-ಎಂದ ಪರಶುರಾಮನಾಯಕ.

"ಏನು ಉದ್ದೇಶ ?"

"ದಳವಾಯಿಗಳು ಹೇಳಿದ್ದು ಕೇಳಲಿಲ್ಲವೇ - 'ನಾಯಕರು ಹಡೆದ ತಾಯಿ, ನರಸಪ್ಪಯ್ಯ ದುರಹಂಕಾರಿ' ಎಂದದ್ದು ಇವೊತ್ತು ದಳವಾಯಿಗಳು ಹೇಳಿದ ಮಾತನ್ನು ನಾಳೆ ದುರ್ಗದ ಜನ ಆಡುತ್ತಾರೆ. ಇನ್ನು 'ನೀವು ತಪ್ಪು ಮಾಡಿದಿರಿ' ಎಂದು ಹೇಳಲು ನರಸಪ್ಪಯ್ಯನವರ ನಾಲಗೆಗೆ ಶಕ್ತಿ ಬರುವುದಿಲ್ಲ. ನಮಗೆ ಬೇಕಾದದ್ದು ನರಸಪ್ಪಯ್ಯನವರಲ್ಲ ಜನರ ಪ್ರೀತಿ. ಅದನ್ನು ಗಳಿಸಿದ್ದಾಯಿತು. ಮುಂದಿನ ಆಟಕ್ಕೆ ತಕ್ಕ ವೇಷ ಕಟ್ಟಬೇಕು"

-ಎಂದ ಪರಶುರಾಮನಾಯಕ.

"ಅಂತೂ ಗುರುವಿಗೇ ತಿರುಮಂತ್ರ ಹೇಳಿದ ಶಿಷ್ಯ ನೀನು"

-ಎಂದು ಮೆಚ್ಚುಗೆಯಿಂದ ತಮ್ಮನ ಬೆನ್ನು ತಟ್ಟಿದ ಮದಕರಿನಾಯಕ.

* * *

ಅರಮನೆಯಿಂದ ಮನೆಗೆ ಹಿಂತಿರುಗಿದ ನರಸಪ್ಪಯ್ಯನವರೂ ಅದೇ ಮಾತನ್ನೇ ಹೇಳಿಕೊಂಡರು –

"ಗುರುವಿಗೇ ತಿರುಮಂತ್ರ ಹೇಳಿಕೊಟ್ಟ ಶಿಷ್ಯ, ಪರಶುರಾಮನಾಯಕ, ಚೆನ್ನಾಗಿ ಚದುರಂಗದಾಟವಾಡಿ, ಪೇದೆಯಿಂದ ಪ್ರಧಾನಿಯನ್ನು ಕಿತ್ತು, ಪೇದೆಯನ್ನು ಪ್ರಧಾನಿಯಾಗಿ ಮಾಡಿದ."

ತಮಗೆ ತಾವೇ ಹೇಳಿಕೊಳ್ಳಬೇಕೆಂದು ನರಸಪ್ಪಯ್ಯ ಆಡಿಕೊಂಡ ಮಾತು. ಸ್ವಲ್ಪ ಗಟ್ಟಿಯಾಗಿ, ಅವರ ಹೆಂಡತಿ ಭಾಗೀರಥಿಬಾಯಿಗೂ ಕೇಳಿಸಿ –

"ಇದೇನು ಮಾತನಾಡಿಕೊಳ್ಳುತ್ತಿದ್ದೀರ, ನೀವೊಬ್ಬರೇ ?" – ಎಂದು ಕೇಳಿದಳು.

“ಏನೂ ಇಲ್ಲ ಕೂಡಲಿಲ್ಲ, ಕೆಟೆಯಲಿಲ್ಲ, ಮಾತು ಮಾತೇ ಕಲೆತು ಗರತಿ ಬೀದಿಸೂಳೆಯಾದ ಕಥೆ ಯಾಕೋ ನೆನಪಿಗೆ ಬಂದಿತು”

- ಎಂದಷ್ಟೇ ಹೇಳಿದರು ನರಸಪ್ಪಯ್ಯ, ಹಿಡಿದಿಟ್ಟ ಆಕ್ರೋಶದಿಂದ ಬಿಗಿದ ಧ್ವನಿಯಲ್ಲಿ.

೧೭

ಒಂದು ಕಲ್ಲಿಗೆ ಎರಡು ಹಕ್ಕಿ ಬಿದ್ದ ಹಾಗೆ –

ದುರ್ಗದಿಂದ ನವಾಬರ ಅಂಚೆಹರಿಕಾರನನ್ನು ಓಡಿಸುವ ಪ್ರಯತ್ನ ಫಲಿಸಿದಂತೆಯೇ, ಆ ತಂತ್ರದ ಜಾಲಕ್ಕೆ ಬಲಿಯಾಗಿ ಪ್ರಧಾನಿ ನರಸಪ್ಪಯ್ಯ, ತಾನಾಗಿಯೇ ಅಧಿಕಾರದಿಂದ ನಿವೃತ್ತರಾಗಿ, ಆತನ ಸ್ಥಾನದಲ್ಲಿ ಪರಶುರಾಮನಾಯಕ ಪ್ರಧಾನಿಯಾಗಿ, ಮರಾಠರಿಗೆ ಒತ್ತಾಸೆಯಾಗಿ ನಿಂತು, ಹೈದರಾಲಿಯನ್ನು ಮುರಿಯಲು ದುರ್ಗದ ಸೇನೆಯನ್ನು ಕಟ್ಟುವ ನಾಯಕರ ಪ್ರಯತ್ನಕ್ಕೆ ದಾರಿ ಸುಗಮವಾಯಿತು.

ಪರಶುರಾಮನಾಯಕ ಮಾಡಿದ ತಂತ್ರ ನಿರೀಕ್ಷಿಸಿದ ಫಲ ಕೊಟ್ಟಿತು ಎನ್ನುವುದಕ್ಕೆ ಸಾಕ್ಷಿಯಾಗಿ, ಶ್ರೀರಂಗಪಟ್ಟಣದಿಂದ ಹೈದರಾಲಿಯ ಪತ್ರ ಬಂದಿತು.

“ನಮ್ಮ ಚಾಕರರು ನಮ್ಮ ಕೆಲಸ ಮಾಡುವ ಉತ್ಸಾಹದಲ್ಲಿ ತಮ್ಮ ವಿರುದ್ಧ ಬೇಹುಗಾರಿಕೆಯ ಅಪರಾಧ ಮಾಡಿದರೂ, ತಾವು ಸಣ್ಣವರ ದುಡುಕುವರ್ತನೆಯನ್ನು ಮನಸ್ಸಿಗೆ ತಂದುಕೊಳ್ಳದೆ, ನಮ್ಮ ಪರಸ್ಪರ ಬಾಂಧವ್ಯಕ್ಕೆ ಕೆಟ್ಟ ಹೆಸರು ಬರದ ರೀತಿಯಲ್ಲಿ ವರ್ತನೆ ಮಾಡಿದ್ದು ನಿಮ್ಮ ಔದಾರ್ಯಕ್ಕೆ, ಸ್ನೇಹಭಾವಕ್ಕೆ ಶೋಭಾಯಮಾನವಾದದ್ದು. ಇತಃಪರ ನಮ್ಮ ನೌಕರಮಾನೇರು ಉಭಯತ್ರರಿಗೂ ಕೆಟ್ಟ ಹೆಸರು ತರದ ರೀತಿಯಲ್ಲಿ ನಡೆದುಕೊಳ್ಳದ ಹಾಗೆ ಬಂದೋಬಸ್ತು ಮಾಡಿ, ತಪ್ಪಿತಸ್ಥರಿಗೆ ನೀವು ಮಾಡಬೇಕಾಗಿದ್ದ ಶಿಕ್ಷೆಯನ್ನು ನಾವೇ ಮಾಡಿದ್ದೇವೆ. ನೀವು ಇವತ್ತಿನ ಸ್ನೇಹವನ್ನು ಮುಂದೆಯೂ ಇಟ್ಟುಕೊಂಡು ನಮ್ಮ ರಾಜ ಕಾರ್ಯಕ್ಕೆ ಬೆಂಬಲವಾಗಿ ನಿಲ್ಲಬೇಕು”

- ಎಂದು ಹೈದರಾಲಿ ಬರೆಸಿದ ಕಾಗದವನ್ನು ಓದಿ, ಮದಕರಿನಾಯಕರು-

“ನವಾಬರು ಹೀಗೇ ಖುಷಿಯಾಗೇ ಇರಲಿ, ನಮ್ಮ ಕೆಲಸ ನಾವು ಮಾಡೋಣ”

-ಎಂದು ಉತ್ಸಾಹದಿಂದ ಹೇಳಿದರು.

ಅನುಮಾನಕ್ಕೆ ಕಾರಣರಾದವರನ್ನು ನಯವಾಗಿ ಅವರ ಅಧಿಕಾರಸ್ಥಾನದಿಂದ ದೂರ ಮಾಡಿ, ನಂಬಿಕೆಗೆ ಪಾತ್ರರಾದವರನ್ನು ಆಸ್ಥಾನಕ್ಕೆ ನೇಮಿಸಿಕೊಂಡು, ಹೈದರಾಲಿಯ ವಿರುದ್ಧವಾಗಿ

ನುಗ್ಗುವ ನಿಜಾಮ - ಮರಾಠರ ಸೇನೆಗೆ ನೆರವಾಗಲು ಅಗತ್ಯವಾದ ಸೇನೆಯನ್ನು ಕಟ್ಟುತ್ತಿರುವಾಗಲೇ –

ಒಂದು ದಿನ ಬೆಳಗ್ಗೆ 'ಶಿವಶಿವಾ, ಗುರು ಕೋರಾನ್ನದಲ್ಲಿ ಭಿಕ್ಷ' ಎಂದು ಭಿಕ್ಷೆ ಬೇಡಿಕೊಂಡು ಮುಖ ಕಾಣದಷ್ಟು ವಿಭೂತಿ ಬಳಿದುಕೊಂಡು, ತಲೆಗಿಂತಲೂ ದೊಡ್ಡದಾದ ಕಾವಿಯ ಪೇಟ ಧರಿಸಿದ ಜಂಗಮನೊಬ್ಬ, ದಳವಾಯಿ ಕಾಶಣ್ಣನಾಯಕನ ಮನೆಬಾಗಿಲಿಗೆ ಬಂದು, ಆತನ ಹೆಂಡತಿ ವೀರಮ್ಮ ಕೊಟ್ಟ ಅಕ್ಕಿಯ ಭಿಕ್ಷೆಯನ್ನು ಸ್ವೀಕರಿಸಿ-

"ಅವ್ವಾ, ನಾವು ಮಲೆಮಾದೇಶ್ವರನ ಬೆಟ್ಟದಿಂದ ಶ್ರೀಶೈಲಕ್ಕೆ ಯಾತ್ರೆ ಹೊರಟವರು. ಹತ್ತು ಮನೆ ಭಿಕ್ಷೆ ಕೊಡುವಷ್ಟನ್ನು ಒಬ್ಬರು ಕೊಟ್ಟಿರಿ. ಶಿವ ತೃಪ್ತನಾದ. ನಿಮ್ಮ ಕೈ ನೋಡಿ, ಶಿವ ಹೇಳಿಸಿದ ಮಾತನ್ನು ಹೇಳುತೇವೆ. ನಿಮ್ಮ ಮೊಕದಲ್ಲಿ ಮಾಲಕ್ಷ್ಮಿ ಕಳೆ ಇದೆ. ಮನೆಗೆ ಭಾಗ್ಯಲಕ್ಷ್ಮೀ ಬರೋ ಶಕುನ ಕಾಣುತಿದೆ"

- ಎಂದು ಹೇಳಿ, ಹೆಗಲ ಮೇಲಿದ್ದ ಕಾವಿಶಾಟಿಯನ್ನು ಜಗಲಿಯ ಮೇಲೆ ಹಾಸಿಕೊಂಡು ಕುಳಿತು –

"ಕಾಸು ಕೇಳೋಲ್ಲ, ಕಾಳು ಕೇಳೋಲ್ಲ. ಕೊಡೋ ಭಿಕ್ಷೆ ಮೊದಲೇ ಕೊಟ್ಟುಬಿಟ್ಟಿರಿ. ಕಂಡದ್ದು ಹೇಳು ಮಗನೇ - ಅಂತ ಗುರುವಿನ ಆಜ್ಞೆ ಆಗಿದೆ. ಕೇಳಬೇಕು" – ಎಂದು ಹೇಳಿದ.

ಬೆಳಗಿನ ಮನೆಗೆಲಸವೂ ಮುಗಿದಿದ್ದುದರಿಂದ ಸ್ತ್ರೀಸಹಜವಾದ ಭವಿಷ್ಯಾಸಕ್ತಿ ಕೆರಳಿ –

"ಅದೇನು ಹೇಳ್ತಿರೋ ಬೇಗ ಹೇಳಿ, ಅಯ್ಯನೋರೆ. ಕೈ ನೋಡುತೀರಾ ?"

- ಎಂದು ಕೇಳಿದಳು ವೀರವ್ವ.

"ಕೈ, ಮುಖ ನೋಡಿ ಹೇಳೋದು ಸಾಮುದ್ರಿಕ. ಅದೆಲ್ಲಾ ಕಲಿತೋರು ನಾವಲ್ಲ. ಗುರುಭಕ್ತಿಯೊಂದೇ ನಮಗೆ ಗೊತ್ತಿರೋ ವಿದ್ಯೆ, ನೀವು ಹಂಗೇ ಕೂತು, ನಿಮ್ಮ ಮನೆ ದೇವರ ಧ್ಯಾನ ಮಾಡಿ. ನಿಮ್ಮ ದೇವರೇ ನಮ್ಮ ಬಾಯಿಂದ ಹೇಳಿಸಿದ್ದನ್ನು ಹೇಳತೀವಿ"

- ಎಂದ ಜಂಗಮಯ್ಯ.

ಆತನ ಮಾತು ಕೇಳಿ ವೀರವ್ವ ಕಣ್ಣು ಮುಚ್ಚಿ ಉಚ್ಚಂಗಮ್ಮನನ್ನು ಧ್ಯಾನಮಾಡುತ್ತಾ ಕುಳಿತಳು. ಆ ವೇಳೆಗೆ ಚಾವಡಿಗೆ ಹೋಗಲೆಂದು ಹೊರಬಂದ ಕಾಶಣ್ಣನಾಯಕನ ಅವಸರದ ಕೆಲಸವಿಲ್ಲದಿದ್ದುದರಿಂದ, ಆಳು ಕುದುರೆ ತರುವುದನ್ನೇ ಕಾಯುತ್ತಾ ಕಂಭಕ್ಕೆ ಒರಗಿ, 'ಆ ಜಂಗಮಯ್ಯ ಏನು ಹೇಳುತ್ತಾನೋ ಕೇಳೋಣ' ಎಂದು ಕಾದು ನಿಂತ.

ಕಣ್ಣು ಮುಚ್ಚಿ ಕುಳಿತ ಜಂಗಮಯ್ಯ ಕಾಶಣ್ಣನಾಯಕ ಬಂದದ್ದೂ ಅರಿವಿಲ್ಲದಂತೆ –

"ನೀವು ಪೂಜೆಮಾಡುವ ತಾಯಿ ಹೇಳುತಾಳೆ - 'ಮಗನೆ, ಈ ಮನೆ ಹೊರಗಾವಲಿಗೆ ನಂದಿ ಇದಾನೆ, ಒಳಕಾವಲಿಗೆ ವೀರಭದ್ರ ಇದಾನೆ. ಮಾತಾಯಿ ಪಾರ್ವತಿಗೆ ನಮ್ಮಪ್ಪ ಮಾದೇಶ್ವರ ಹೇಳುತ್ತಾನೆ- ಈ ಮನೆಯಾಗೆ ಗಂಗೆ ಉಕ್ಕಿದಂಗೆ ಸಂಪತ್ತು ಉಕ್ಕುತ್ತದೆ, ಮೋಟುಮರ ಚಿಗರುತದೆ, ಕಡಿದ ಕೈಯಾಗೆ ಕತ್ತಿ ಆಡತದೆ. ಗಂಡಸಾಳೊ ಮನೆ, ಗರತಿ ಬಾಳೋ ಮನೆಗೆ ಯಾವತ್ತೂ ಕೇಡಿಲ್ಲ. ಕುಂತು ಕೇಳಿದರೆ ಮುಂದಿನ ಮಾತು ಹೇಳುತ್ತಿದ್ದೆ. ನಿಂತು ಕೇಳಿದರೆ ನಮ್ಮ ನಾಲಗೇನೂ ನಿಂತಿತು...."

- ಎಂದು ತಟಕ್ಕನೆ ಕಣ್ಣುಬಿಟ್ಟು, ಕಂಭಕ್ಕೊರಗಿ ನಿಂತ ಕಾಶಣ್ಣನಾಯಕನನ್ನು ನೋಡಿ –

"ಶಿವ ಹೇಳಿದ್ದು ಸತ್ಯ. ಧಣಿಗಳು ನಿಂತು, ಆಡೋ ಮಾತು ನಿಲ್ಲಿಸಿಬಿಟ್ಟಿರಿ. ಶಾಸ್ತ್ರ ಕುಂತು ಕೇಳಬೇಕು ನಮ್ಮಪ್ಪಾ" - ಎಂದ ಜಂಗಮಯ್ಯ ಮಾತು ನಿಲ್ಲಿಸಿ.

ಆತನ ಮಾತನ್ನು ಆಸಕ್ತಿಯಿಂದ ಕೇಳುತ್ತಿದ್ದ ವೀರವ್ವ, ಗಂಡ ಹೊರಬಂದು ನಿಂತುಕೊಂಡದ್ದನ್ನು ನೋಡಿ –

"ಒಳಗಿರಬಾರದಿತ್ತಾ. ಏನೋ ಹೇಳುತ್ತಿದ್ದರು ಅಯ್ಯನೋರು. ಹೊರಗೆ ಬಂದು ಕೆಡಿಸಿ ಬಿಟ್ಟಿರಿ. ಆಯಿತು - ನಾಳೆ ನಿಧಾನವಾಗಿ ಬನ್ನಿ ಅಯ್ಯನೋರೆ"

- ಎಂದು ಹೇಳಿ, ಎದ್ದು ನಿಂತ ಜಂಗಮಯ್ಯನಿಗೆ ಹೇಳಿದಳು –

- "ಹಂಗೆ ಕೂತುಕೊಳ್ಳಿ, ಕಾಣಿಕೆ ತಂದುಕೊಡ್ತೀನಿ."

"ಅವ್ವಾ, ನೀವು ಕೊಡೋದು ಕೊಟ್ಟಿರಿ. ದಿನಾ ಬರೋ ಭಿಕ್ಷದೋರು ನಾವಲ್ಲ. ಊರಾಗೆ ಒಂದು ದಿನ ಇರಾಕೇ ಗುರುವಿನ ಅಪ್ಪಣೆ. ಮತ್ತೆ ಅಪ್ಪಣೆಯಾದಾಗ ಬರ್ತೀನಿ"

-ಎಂದು ಹೇಳಿ, ನೆಲದ ಮೇಲಿರಿಸಿದ ತನ್ನ ಜೋಳಿಗೆಯನ್ನು ಹೆಗಲಿಗೆ ಹಾಕಿಕೊಂಡು, ಕಾಶಣ್ಣನಾಯಕನಿಗೂ ಕೈಮುಗಿದು –

"ಸಕಲರಿಗೂ ಒಳ್ಳೇದು ಮಾಡು, ಶಿವಾ. ಕೂಳಿಟ್ಟ ಮನೇಲಿ ಹಾಲುಕ್ಕಿ ಹರಿಯಲಿ. ಜೇನುಂಡು ತಣಿಯಲಿ. ಮಲೆಮಾದೇಶ್ವರಾ ಶರಣು, ಪರ್ವತಮಲ್ಲಿಕಾರ್ಜುನಾ ಶರಣು"

-ಎಂದು ಹೇಳಿ, ಜಂಗಮಯ್ಯ ಹೊರಟುಬಿಟ್ಟ.

ಆ ಜಂಗಮಯ್ಯ ಅಷ್ಟು ದೂರ ಹೋಗುವವರೆಗೂ ಸುಮ್ಮನಿದ್ದ ವೀರವ್ವ –

"ಆವಯ್ಯ ಹೇಳಿದ್ದು ಕೇಳಿಸಿಕೊಂಡ್ರಾ. ಚಂದಾಗಿ ಹೇಳುತಿದ್ದ, ಮತ್ಯಾವಾಗ ಬರ್ತಾನೋ. ನೀವೊಳ್ಳೆ ಶಿವಪೂಜೇಲಿ ಕರಡಿ ಬಿಟ್ಹಂಗೆ ಬಂದುಬಿಟ್ರಿ - ಹಾಸಿಗೇಲಿರೋ ತಂಗಣಿ ಹಂಗೆ -ಈ ಕೊತ್ವಾಲಚಾವಡಿ ಜನ ಮಲಗಾಕೂ ಬಿಡೋಲ್ಲ, ಎದ್ದಿರೋಕೂ ಬಿಡೋಲ್ಲ"

- ಎಂದು ಗೊಣಗುತ್ತಾ ಒಳಗೆ ಹೋದಳು.

ಆಕೆ ಒಳಗೆ ಹೋಗುವವರೆಗೂ ಸುಮ್ಮನಿದ್ದ ಕಾಶಣ್ಣನಾಯಕ –

“ನಾನು ಬರ್ತೀನಿ- ಕದ ಹಾಕಿಕೋ”

-ಎಂದು ಹೆಂಡತಿಗೆ ಹೇಳಿ, ಕುದುರೆಯನ್ನು ತಂದ ಆಳಿಗೆ –

“ಅಲ್ಲಿ ಹೋಗೋ ಜಂಗಮಯ್ಯನಿಗೆ ಚಾವಡಿ ಹತ್ತಿರ ಬಾ ಅಂತ ಹೇಳು, ಶಾಸ್ತ್ರ ಚನ್ನಾಗಿ ಹೇಳ್ತಾನೆ. ಕೇಳೋಣ” - ಎಂದು ಹೇಳಿದ.

ಆ ಮಾತನ್ನು ಜಂಗಮಯ್ಯನಿಗೆ ಹೇಳಲು ಓಡಿದ ಆಳು, ಆತನೊಂದಿಗೆ ಏನೋ ಮಾತನಾಡಿ, ಹಿಂದಕ್ಕೆ ಬಂದು –

“ಚಾವಡಿ, ಕಟ್ಟೆ-ಕಛೇರಿಗೆ ಬರೋಕೆ ಅವರ ಗುರುವಿನ ಅಪ್ಪಣೆ ಇಲ್ಲವಂತೆ. ಮನೆಬಾಗಿಲಿಗೆ ಬಂದಾಗ ಶಿವ ಹೇಳಿಸಿದರೆ ಹೇಳುತಾರಂತೆ. ಇಲ್ಲಾಂದ್ರೆ ಅವರಿರೋ ತಾವಕೇ ಹೋಗಬೇಕಂತೆ”

– ಎಂದು ಹೇಳಿದ.

“ಆಯ್ತು. ಆ ಜಂಗಮಯ್ಯ ಎಲ್ಲಿದ್ದಾರೋ ಕೇಳಿಕೊಂಡು, ಬಾ. ಸಮಯ ಸಿಕ್ಕರೆ ಕೇಳಿದರಾಯ್ತು” - ಎಂದು ಹೇಳಿ, ಕುದುರೆಯನ್ನು ಹತ್ತಿದ, ಕಾಶಣ್ಣನಾಯಕ.

* * *

“ಅಯ್ಯನೋರು ಬೆಳಿಗ್ಗೆ ಮನೆಯೋರಿಗೆ ಹೇಳಿದ ಶಾಸ್ತ್ರಶಕುನ ಚೆನ್ನಾಗಿತ್ತು. ಈಗ ನಮಗೇನು ಹೇಳೀರಿ.”

- ಲಿಂಗಣ್ಣವರ್ತಿಹೊಂಡದ ಬಳಿಯ ಮಾವಿನಮರವೊಂದರ ಅಡಿಯಲ್ಲಿ, ಇರುಳ ಚಳಿಯನ್ನು ನಿವಾರಿಸಿಕೊಳ್ಳಲು ಬೆಂಕಿ ಹಾಕಿಕೊಂಡು, ಕೈ ಕಾಯಿಸುತ್ತಾ ಕುಳಿತ ಜಂಗಮಯ್ಯನನ್ನು ನಗುತ್ತಾ ಕೇಳಿದ ಕಾಶಣ್ಣನಾಯಕ.

“ಅಂಬರದಲ್ಲಾಡೋ ಅರಗಿಳಿಯೇ, ಹೇಳುವಂಥಾವನಾಗು - ಕುಂತು ಕೇಳೋರಿಗೆ ಮಾದೇಶ್ವರ ಏನಪ್ಪಣೆ ಮಾಡಿದ?”

-ಎಂದು ಕೈ ಉಜ್ಜಿಕೊಳ್ಳುತ್ತಾ ಜಂಗಮಯ್ಯ ಗಂಭೀರವಾಗಿ ಹೇಳಿದ –

“ಕೇಳುವಂಥವನಾಗು ಗುಡ್ಡದ ನವಿಲೆ - ಜಿಂಕೆ ಹೋದ ವಾಸನೆ ಹುಲಿಗೆ ಸಿಕ್ಕಿದೆ. ಪೊದೆ ಬಿಟ್ಟು ಹೊರಗೆ ಬರಬೇಡ.”

“ಹಾಗಂದರೆ ?” – ತಟಕ್ಕನೆ ಎಚ್ಚರವಾಗಿ ಕೇಳಿದ ಕಾಶಣ್ಣನಾಯಕ.

“ಆಟ ಆಡೋ ಕೈ ಎರಡಾದರೆ, ನೋಡೋ ಕಣ್ಣು ನೂರು - ಶಿವಾ.”

- ಇನ್ನೂ ಒಗಟು ಹೇಳುವಂತೆಯೇ ಹೇಳಿದ ಜಂಗಮಯ್ಯ.

"ಅದೇನು – ಬಿಡಿಸಿ ಹೇಳಿ."

"ಹುಷಾರಾಗಿರಿ. ಅತ್ತಕಡೆ ಹುತ್ತದ ಮೇಲೆ ಹೆಡೆಯಾಡಿಸೋ ಸರ್ಪ."

"ಈ ನಾಟಕದ ಮಾತು ಸಾಕು- ಇರೋ ವಿಷಯ ಏನು ಹೇಳಿ ?"

- ಸ್ವಲ್ಪ ಅಸಹನೆಯಿಂದ ಕೇಳಿದ ಕಾಶಣ್ಣನಾಯಕ.

"ಸ್ವಲ್ಪ ತಡಿ, ಶಿವಾ - ನಾಲ್ಕು ನಾಲ್ಕು ದಿನ ಅಭ್ಯಾಸ ಮಾಡಿಕೊಂಡು ಬಂದಿದ್ದೀನಿ. - ಹೀಗೆ ಮಾತಾಡೋದನ್ನ...."

- ಎಂದು ನಕ್ಕು ಹೇಳಿ, ಬಳಿಕ ಗಂಭೀರವಾಗಿ –

"ದುರ್ಗದೋರು ಮರಾಠರ ಜೊತೆಗೆ ಮಾಡಿಕೊಂಡಿರೋ ಮಾತು ನವಾಬರಿಗೆ ಗೊತ್ತಾಗಿದೆ. ಮಂಕು ನಿಜಾಮ - ಬಳ್ಳಾರಿಗೆ ಮುತ್ತಿಗೆಹಾಕಿದರೆ ಅಲ್ಲಿ ಕಾಣೋದು ಹೈದರಾಲಿ ಸೇನೆ. ಮುತ್ಠಾಳ ಮುರಾರಿರಾಯ, ನಿಮ್ಮನ್ನು ನಂಬಿದ ಹಾಗೇ ರಾಯದುರ್ಗದ ಪಾಳಯಗಾರರನ್ನು ನಂಬಿ ಸಹಾಯ ಕೇಳಿದ. ರಾಯದುರ್ಗದ ಪಾಳಯಗಾರ ತನ್ನ ಕಿವಿ ಕೇಳಿದ ಮಾತನ್ನ ಹೈದರಾಲಿಯವರಿಗೆ ಮುಟ್ಟಿಸಿ, 'ದುರ್ಗದವರು ಮರಾಠರಿಗೆ ಪಿತೂರಿಯಾಗಿದ್ದಾರೆ, ಹುಷಾರಾಗಿರಿ' ಎಂದು ಹೇಳಿದಾನೆ. ನಿಮ್ಮ ಸೇನೆ ದುರ್ಗ ಬಿಟ್ಟು ಬಳ್ಳಾರಿ ಕಡೆ ಹೊರಟರೆ, ಸಿರಾದ ಕಡೆಯಿಂದ ನವಾಬರ ಸೇನೆ ದುರ್ಗಕ್ಕೆ ಮುತ್ತಿಗೆಹಾಕುತ್ತೆ. ಹೈದರಾಲಿಯವರು ಬಹಳ ಬಲವಾಗಿ ಫೌಜು ಕಟ್ಟಿದಾರೆ - ಈ ಸಲ ಮರಾಠೆಯವರನ್ನು ಮುರಿಯಲೇಬೇಕು ಅಂತ. ಆದ್ದರಿಂದ ನೀವು ಎಚ್ಚರವಾಗಿರಿ. ದುರ್ಗದ ಸೇನೆ ದುರ್ಗದ ಕಾವಲಿಗಿರಲಿ. ಇಷ್ಟರಲ್ಲೇ ನವಾಬರಿಂದ ಆಮಂತ್ರಣ ಬರುತ್ತದೆ - ನೀವು ನಾಟಕ ಕಟ್ಟಿದ ಸ್ನೇಹ ನಿಜವೋ, ಸುಳ್ಳೋ ಅಂತ ನೋಡಲು. ಈ ಯುದ್ಧದ ಫಲಾಫಲ ನೋಡಿಕೊಂಡು, ಆಮೇಲೆ ಹೇಗೆ ಬೇಕೋ ಹಾಗೆ ಮಾಡಿ, ಸದ್ಯಕ್ಕೆ ಇಷ್ಟೇ ಶಿವಾ- ದಕ್ಷಿಣದಿಕ್ಕಿನ ಹಕ್ಕಿಮರಿಯೇ ಶಕುನ"

- ಆತ ಗಂಭೀರವಾಗಿ ಹೇಳಿದ.

ಆತ ಹೇಳಿದುದನ್ನೆಲ್ಲಾ ಎಚ್ಚರವಾಗಿ ಕೇಳಿದ ಕಾಶಣ್ಣನಾಯಕ –

"ಅಂದರೆ- ನವಾಬರಿಗಿನ್ನೂ ನಮ್ಮಲ್ಲಿ ಪೂರ್ಣನಂಬಿಕೆ ಬಂದಿಲ್ಲ. ನಾವು ಕಟ್ಟಿದ ನಾಟಕ ಸಾರ್ಥಕವಾಗಲಿಲ್ಲ ?" – ಎಂದು ಕೇಳಿದ.

"ನವಾಬರು ಯಾರನ್ನೂ ಅಷ್ಟು ಸುಲಭವಾಗಿ ನಂಬೋದಿಲ್ಲ. ಅಪನಂಬಿಕೆಯೇ ಅವರ ಬ್ರಹ್ಮಾಸ್ತ್ರ. ನಮ್ಮ ಸರ್ದಾರಖಾನರು ಹೇಳಿದ ಕಥೆ ಹೇಳ್ತೀನಿ. ಕೇಳಿರಿ; ನಾಯಕರಿಗೂ ಇದನ್ನು ಹೇಳಿರಿ. ಕಥೆ ಅಂದರೆ ಇದು ಕಥೆಯಲ್ಲ, ನಡೆದದ್ದು. ನಮ್ಮ ನವಾಬರಿಗೆ ಊರಿನಲ್ಲಿರಲಿ,

ದಂಡಿನಲ್ಲಿರಲಿ, ಸಂಜೆ ಆಯಿತು ಅಂದರೆ ಪಾನಕಪೂಜೆ ಆಗಲೇಬೇಕು. ಹೀಗೇ ಒಂದು ಸಲ, ಕುಡಿದು, ಕುಡಿದದ್ದು ಹೆಚ್ಚಾಗಿ ಮಲಗಿದ್ದರಂತೆ. ಅವರ ಖಾಸಾದೋಸ್ತ್ ಗುಲಾಂ ಆಲಿ, ಅವರ ಪಕ್ಕದಲ್ಲೇ ಇದ್ದನಂತೆ. ಕುಡಿದು ಮಲಗಿದ್ದ ನವಾಬರು ಇದ್ದಕ್ಕಿದ್ದ ಹಾಗೆ ಬೆಚ್ಚಿ ಬಿದ್ದು ಎದ್ದು ಕಠಾರಿಗೆ ಕೈಹಾಕಿದರಂತೆ. 'ಹೀಗೇಕೆ ಮಾಡಿದಿರಿ. ಕೆಟ್ಟ ಕನಸು ಬಿತ್ತೇ ?' ಅಂತ ಗುಲಾಂ ಆಲಿಯವರು ಕೇಳಿದ್ದಕ್ಕೆ 'ನೋಡು ದೋಸ್ತ್. ಒಳ್ಳೆ ಕನಸು ಬೀಳಬೇಕು ಅಂದರೆ ಅವನು ಫಕೀರನಾಗಿರಬೇಕು. ನನ್ನಂಥವರ ಕನಸಿನಲ್ಲಿ ಕಾಣೋದೆಲ್ಲಾ ಬರೀ ಪಿತೂರಿಗಾರರು, ಕೊಲೆಗಾರರು!' ಎಂದರಂತೆ ನವಾಬರು. ನಿದ್ರೆಯಲ್ಲೂ ಪಿತೂರಿ ಕಾಣೋ ನವಾಬರನ್ನ ಎಚ್ಚರವಾಗಿರುವಾಗ ನಂಬಿಸೋದು ಅಷ್ಟು ಸುಲಭ ಅಲ್ಲ. ನಂಬಿಸಿ ಮೋಸ ಮಾಡಿಯೇ ರಾಜ್ಯ ಕಟ್ಟಿದೋರು ಅವರು. ಅವರ ಮುಂದೆ ನೀವು-ನಿಮ್ಮ ನಾಯಕರು ಹಸುಗೂಸುಗಳು. ಈ ಮಾತನ್ನು ನಿಮ್ಮ ನಾಯಕರಿಗೂ ಹೇಳಿ, ಹೊಸ ಪ್ರಧಾನಿಗಳು-ನಾಯಕರ ತಮ್ಮ-ಅವರಿಗೂ ಹೇಳಿ"

- ಎಂದು ಗಂಭೀರವಾಗಿ ಹೇಳಿ, ಮರುಗಳಿಗೆಯೇ ಧ್ವನಿಯನ್ನು ಬದಲಾಯಿಸಿ –

"ಎಲೆಮರೆಯಾಗಿರೋ ಮಾದೇಶ್ವರಾ, ಗುಡ್ಡದ ಗಿಳೀನ ಅಂಬರದಲ್ಲಾಡೋ ಗಿಡುಗನಿಂದ ಕಾಪಾಡು, ಶಿವಾ" – ಎಂದು ಹೇಳಿದ ಜಂಗಮಯ್ಯ.

ಆ ಮಾತನ್ನು ಕೇಳಿದ ಕಾಶಣ್ಣನಾಯಕ, ಗಂಭೀರವಾಗಿ –

"ಮತ್ತೆ ಯಾವಾಗ ಅಯ್ಯನೋರ ದರ್ಶನ ?" ಎಂದು ಕೇಳಿದ.

"ಕರೆಸಿಕೊಂಡು ಬರೋಕೆ ನಾವು ಮದುವೆ ಬೀಗರಲ್ಲ. ಹಣ್ಣು ಬಿಟ್ಟಾಗ ಮರಕ್ಕೆ ಬರೋ ಹಕ್ಕಿ ನಾವು."

"ಆಯಿತು. ನಿಮ್ಮ ಉಪಕಾರ ನಾವು ಮರೆಯೋಲ್ಲ."

"ನಾವು ಯಾವತ್ತೂ ಮರೆಯದಂಥ ಉಪಕಾರ ಮಾಡಿದಾರೆ, ನಿಮ್ಮ ಧಣಿಗಳು. ಅವರಿಗಿಷ್ಟು ಹೇಳಿಬಿಡಿ" - ಎಂದು ಮಾತು ಮುಗಿಸಿದ ಜಂಗಮಯ್ಯ.

೧೮

ಜಂಗಮಯ್ಯ ಕಾಶಣ್ಣನಾಯಕನಿಗೆ ಹೇಳಿದ ಶಕುನ ಸುಳ್ಳಾಗಲಿಲ್ಲ.

'ನಿಜಾಮರ ಸೇನೆ ಬಳ್ಳಾರಿಯತ್ತ ಹೊರಟಿದೆ. ನಿಮ್ಮ ಸೇನೆ ಅವರಿಗೆ ಕುಮ್ಮಕ್ಕು ಕೊಡುವುದು'

- ಎಂದು ಮುರಾರಿರಾಯನ ಕಡೆಯಿಂದ ಗೂಢಚಾರರು ಪತ್ರ ತಂದ ಎರಡನೆಯ ದಿನವೇ, ರತ್ನಗಿರಿ ಪಾಳಯದಿಂದ ಹೈದರಾಲಿಯ 'ಹುಕುಂ' ಬಂದಿತು –

'ನಮ್ಮ ಸೇನೆ ಬಳ್ಳಾರಿಯ ಮಾರ್ಗದಲ್ಲಿದೆ. ನಿಮ್ಮ ಸ್ನೇಹ ನಿಜವಾದಲ್ಲಿ, ಕೂಡಲೇ ನೀವು ನಿಮ್ಮ ಸೇನೆಯೊಂದಿಗೆ ಹೊರಟು ಬಳ್ಳಾರಿಯ ಕಡೆ ಬರಬೇಕು.'

ಇಬ್ಬದಿಯಿಂದಲೂ ಬಂದ ನೆರವಿನ ಕರೆಗೆ ಏನು ಉತ್ತರ ಹೇಳುವುದು ಎಂದು ನಿರ್ಧರಿಸಲು ರಹಸ್ಯ ಸಭೆ ಸೇರಿ, ಆ ಸಭೆಯಲ್ಲಿ ಬಹುದೀರ್ಘ ಚರ್ಚೆ ನಡೆದು, ಕೊನೆಗೆ ನಾಯಕರು ಹೇಳಿದರು –

"ಇದು ನಮ್ಮ ಬಲದ ಪ್ರಶ್ನೆಯಷ್ಟೇ ಅಲ್ಲ, ಮರಾಠರ ಅದೃಷ್ಟ ಪರೀಕ್ಷೆಯೂ ಆಗಿದೆ. ಮರಾಠರಿಗೆ ನಾವು ದ್ರೋಹ ಬಗೆಯುವುದು ಬೇಡ. ನವಾಬರ ಕ್ರೋಧದ ಕಣ್ಣು ಸದ್ಯಕ್ಕೆ ನಮ್ಮತ್ತ ತಿರುಗುವುದೂ ಬೇಡ. ನವಾಬರ ಸಹಾಯಕ್ಕೆಂಬಂತೆ ನಮ್ಮ ಮೂರುಸಾವಿರ ಸೇನೆ ಹೋಗಲಿ. ನವಾಬರ ದಂಡು ಕಾಳಗ ಮಾಡಲಿ. ಅವರು ಗೆಲ್ಲುವ ಲಕ್ಷಣ ಕಂಡರೆ, ನಮ್ಮವರೂ ಅವರ ಜೊತೆಯಾಗಲಿ, ಮರಾಠರು ಗೆಲ್ಲುವ ಲಕ್ಷಣ ಕಂಡರೆ, ನಮ್ಮ ಸೇನೆ ನವಾಬರ ಬೆನ್ನನ್ನು ಇರಿದು, ಪುಣೆಯವರ ಗೆಲುವು ಸುಲಭವಾಗಲು ನೆರವಾಗಲಿ, ಯುದ್ಧದಲ್ಲಿ ಜಯಾಪಜಯ ಹೇಗೋ – ದುರ್ಗದ ರಕ್ಷಣೆಗೆ ನಮ್ಮ ಬಲ ಸಿದ್ಧವಾಗಿರಲಿ."

ಅದರಂತೆಯೇ 'ಸೇನೆಯನ್ನು ಯಾವ ಸಮಯದಲ್ಲಿ ಹೇಗೆ ಬಳಸಬೇಕು' ಎಂದು ದಳದ ಮುಖ್ಯಸ್ಥರಿಗೆ ರಹಸ್ಯ ಅಪ್ಪಣೆಯಾಗಿ, ದುರ್ಗದ ಸೇನೆ ಹೈದರಾಲಿಯ ಸಹಾಯಕ್ಕೆಂಬಂತೆ ದುರ್ಗವನ್ನು ಬಿಟ್ಟಿತು –

ಮನ್ಮಥ ಸಂವತ್ಸರದ ಕಾರ್ತಿಕ ಮಾಸದಲ್ಲಿ.

ಆದಷ್ಟು ನಿಧಾನವಾಗಿ ನಡೆದು, ದುರ್ಗದ ಸೇನೆ, ಬಳ್ಳಾರಿಯ ಬಳಿ ಹೈದರಾಲಿಯ ಸೇನೆಯನ್ನು ಕೂಡಿಕೊಂಡಾಗ –

ಜಂಗಮಯ್ಯ ಹೇಳಿದ ಶಕುನ ಸುಳ್ಳಾಗಲಿಲ್ಲ.

ಹೈದರಾಲಿ ಇನ್ನೂ ಶ್ರೀರಂಗಪಟ್ಟಣದಲ್ಲೇ ಇರುವನೆಂದು ತಿಳಿದು ಬಳ್ಳಾರಿಗೆ ಮುತ್ತಿಗೆ ಹಾಕಿದ ಧೂನ್ಸಾ – ಮುರಾರಿರಾಯನ ಸೇನೆ, ಕೋಟೆಯನ್ನು ಹಿಡಿಯಲು ಮೊಹರ್ಚೆಗಳನ್ನು ಕಟ್ಟಿ, ಫಿರಂಗಿಗಳನ್ನು ಏರಿಸುವುದರೊಳಗಾಗಿ, ಹೈದರಾಲಿಯ ನಾಯಕತ್ವದಲ್ಲಿ ಇರುಳೂ ವಿಶ್ರಾಂತಿ ಪಡೆಯದೆ ನುಗ್ಗಿದ ಸೇನೆ, ಮೈಮರೆತು ಮಲಗಿದ್ದ ಶತ್ರುಬಲದ ಮೇಲೆ ಪಾರಿವಾಳದ ಗೂಡಿನ ಮೇಲೆ ಎರಗುವ ಗಿಡುಗನ ಹಿಂಡಿನಂತೆ ಎರಗಿ, ಧೂನ್ಸಾನ ಸೇನೆಯನ್ನು ಧೂಳೀಪಟ ಮಾಡಿ, ಬಳ್ಳಾರಿಯನ್ನು ಕೈವಶಮಾಡಿಕೊಂಡು, ಓಡುತ್ತಿದ್ದ ನಿಜಾಮನ ಪಡೆಯನ್ನು ಬೆನ್ನಟ್ಟಿ, ದಾರಿಯಲ್ಲಿ

ಕುರುಗೋಡು, ಕೆಂಚನಗುಡ್ಡ, ಆದವಾನಿ, ಕರ್ನೂಲುಗಳನ್ನು ತಮ್ಮದಾಗಿ ಮಾಡಿಕೊಂಡು, ನಿಜಾಮನ ಸೇನೆಯನ್ನು ಓಡಿಸಿ, ಮುರಾರಿರಾಯನನ್ನು ಮುರಿಯಲು, ಆತನ ಅತ್ಯಂತ ಪ್ರಬಲ ದುರ್ಗವಾದ ಗುತ್ತಿಕೋಟೆಗೆ ಮುತ್ತಿಗೆ ಹಾಕಿತು -ಮಾರ್ಗಶಿರ ಮಾಸದಲ್ಲಿ.

ಬಂಡೆಗಲ್ಲು ಎಂದು ನಂಬಿದ ನಿಜಾಮನ ಸೇನೆ ಮಂಜಿನ ಕೋಡಿನಂತೆ ಕರಗಿಹೋಗಿ ಏಕಾಕಿಯಾದ ಮುರಾರಿರಾವ್ ಘೋರ್ಪಡೆ ಅಭೇದ್ಯವೆನಿಸಿದ ಗುತ್ತಿಕೋಟೆಯನ್ನು ಸೇರಿ, ಹೈದರಾಲಿಯನ್ನು ಎದುರಿಸಿದ.

ಎರಡು ತಿಂಗಳು ಯುದ್ಧ ನಡೆಯಿತು. ಎಷ್ಟು ಸೆಣಸಿದರೂ, ಕೋಡುಗಲ್ಲಿನಂತೆ ನಿಂತ ಗುತ್ತಿಕೋಟೆಯನ್ನು ಯುದ್ಧದಲ್ಲಿ ವಶಪಡಿಸಿಕೊಳ್ಳಲು ಸಾಧ್ಯವಾಗದಿದ್ದರೂ, ಕೆಳದುರ್ಗವನ್ನು ಹಿಡಿದ ಹೈದರಾಲಿಯ ಸೇನೆ, ಕೈಗೆ ಸಿಗದೆ ಮರವನ್ನೇರಿದ ಬೇಟೆಯನ್ನು ಅದು ಬಳಲಿಬಿದ್ದ ಬಳಿಕ ಹರಿದು ತಿನ್ನುವ ಸೀಳುನಾಯಿಗಳ ಪಡೆಯಂತೆ, ಎತ್ತಕಡೆಯಿಂದಲೂ ಗುತ್ತಿಕೋಟೆಗೆ ನೆರವು ಬರದಂತೆ ಸುತ್ತಲ ಸೀಮೆಯನ್ನು ಸುಡುತ್ತಾ, ಹಳ್ಳಿಗಳನ್ನು ಸಾಲುಮಸಣವಾಗಿಸುತ್ತಾ ಬೀಡುಬಿಟ್ಟಿತು - ದುರ್ಗದ ಮೇಲಿನಿಂದ ಹಾರಿಸುವ ತೋಪುಗಳ ಹೊಡೆತಕ್ಕೆ ಸಿಗದಷ್ಟು ದೂರದಲ್ಲಿ.

ಪುಷ್ಯ, ಮಾಘಮಾಸಗಳು ಕಳೆದು, ಫಾಲ್ಗುಣಮಾಸದ ಬಿಸಿಲು ಬೆಂಕಿಯಾಗಿ ಉರಿಯಿತು.

ಮೇಲುದುರ್ಗದಲ್ಲಿದ್ದ ಮುರಾರಿರಾಯನಿಗೆ ಮದ್ದು ಗುಂಡುಗಳ ಅಭಾವವಿಲ್ಲದಿದ್ದರೂ, ಬೇಸಗೆ ಬಲಿತಂತೆ, ಬೆಟ್ಟದ ಮೇಲಿನ ಹೊಂಡಗಳು ಬತ್ತಿ, ತಿನ್ನುವ ಅನ್ನ ಗಂಟಲೊಳಗಿಳಿಯಲು ಕುಡಿಯಲು ನೀರಿಲ್ಲದಂತಾಗಿ, ಬೇರೆ ದಾರಿ ಕಾಣದೆ ಹೈದರಾಲಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲು, ತನ್ನ ದಿವಾನ ಪಾಲಿಖಾನನನ್ನು ಕಳಿಸಿದ – ಒಪ್ಪಂದಕ್ಕೆ ಬಂದರೆ ಮುತ್ತಿಗೆಯನ್ನು ಎಬ್ಬಿಸುತ್ತೇನೆ ಎಂದ ಹೈದರಾಲಿಯ ಮಾತನ್ನು ನಂಬಿ.

ಸಂಧಾನಕ್ಕೆ ಬಂದ ಪಾಲಿಖಾನ್ ಊಟಕ್ಕಿಂತಲೂ ಹೆಚ್ಚಾಗಿ ನೀರು ಕುಡಿಯಲು ಆತುರ ತೋರಿದ್ದನ್ನು ಗಮನಿಸಿದ ಚಾಣಾಕ್ಷ ಹೈದರಾಲಿ, ಸಂಧಿಮಾತಿನ ನಂತರದ ಔತಣದಲ್ಲಿ ಪಾಲಿಖಾನನಿಗೆ ನೀರಿನೊಂದಿಗೆ ಮದ್ಯವನ್ನು ಕುಡಿಸಿ, ಬೆಟ್ಟದ ಮೇಲಿನ ಹೊಂಡಗಳು ಬತ್ತಿರುವ ಸುದ್ದಿಯನ್ನು ತಿಳಿದುಕೊಂಡು, ಸಂಧಾನದ ಮಾತು ಮುರಿದು, ಯುದ್ಧವನ್ನು ಮುಂದುವರೆಸಿದ.

ಒಂದು ಸಣ್ಣ ಅಡ್ಡಮಳೆ ಬಂದಿದ್ದರೂ, ಹೈದರಾಲಿಯ ನಿರೀಕ್ಷೆ ವಿಫಲವಾಗುತ್ತಿತ್ತು. ಆದರೆ ಮುರಾರಿರಾಯನಿಗೆ ಆತ ನೆಚ್ಚಿದ ನಿಜಾಮನಂತೆಯೇ ಮಳೆರಾಯನೂ ಮೋಸಮಾಡಿದ. ಹೈದರಾಲಿಯ ಸೇನೆ ಗುಂಡುಗಳ ಮಳೆಗರೆಯದಿದ್ದರೂ, ಮುಗಿಲು ಬೇಸಿಗೆಯ ಬಿಸಿಲಿನ

ಉರಿಮಳೆ ಕರೆಯಿತು. ವಜ್ರವೈಡೂರ್ಯಗಳನ್ನು ಕೊಡುವ ಗುತ್ತಿಯ ಗುಡ್ಡಸಾಲು ಹನಿನೀರನ್ನೂ ಕರುಣಿಸದ ಕೃಪಣವಾಯಿತು.

ನೀರಿಲ್ಲದೆ ಗಂಟಲಾರಿದ ಸೈನಿಕರಿರಲಿ, ಹೆಂಗಸರು, ಮಕ್ಕಳು ಕೋಟೆಯ ಗೋಡೆಯ ಮೇಲೆ ಸಾವಿರಾರುಮಂದಿ ನಿಂತು ಜಲಭಿಕ್ಷೆ ಬೇಡಿದರು. ನೀರಿಲ್ಲದೆ ಸತ್ತ ಸಾವಿರಾರು ಜನರ ಹೆಣಗಳನ್ನು ಕೋಟೆಯಿಂದ ಹೊರಗೆಸೆದರು.

ನೀರಿಲ್ಲದೆ ಚೀರಿದ ಹೆಂಗಸರು, ಮಕ್ಕಳ ಕೂಗಿಗೆ ಬೆಟ್ಟದ ಬಂಡೆಯೆಷ್ಟು ಕರಗದ ಕಗ್ಗಲ್ಲಾಗಿ ನಿಂತಿದ್ದಿತೋ ಅದಕ್ಕಿಂತಲೂ ಬಿರುಸಾಗಿತ್ತು ಹೈದರಾಲಿಯ ಹೃದಯ.

ಮುರಾರಿರಾಯ ನೂರು ಬಗೆಯ ಸಂಧಾನದ ಬೇಡಿಕೆ ಕಳಿಸಿದ.

ಆ ಎಲ್ಲ ಬೇಡಿಕೆಗಳಿಗೂ ಹೈದರಾಲಿಯ ಹೃದಯದ ಕಾರ್ಗಲ್ಲು ಒಂದೇ ಉತ್ತರ ನೀಡಿತು-

'ಸೋತು ಶರಣಾಗಿ, ನಿಶ್ಶಸ್ತ್ರವಾಗಿ ಬಾ. ಆಮೇಲೆ ಮುಂದಿನ ಮಾತು.'

ದಿನದಿನವೂ ತನ್ನ ಜನ, ಹೆಂಗಸರು, ಮಕ್ಕಳು ನೀರಿಲ್ಲದೆ, ಅನ್ನ ತಿನ್ನುವ ತ್ರಾಣವೂ ಇಲ್ಲದೆ, ಬರಡು ಬೆಂಡಾಗಿ ಸಾಯುವುದನ್ನು ನೋಡಲಾಗದೆ, ಹೈದರಾಲಿಯ ಸೇನೆಗಿಂತ, ಬಿಸಿಲಿನ ಕ್ರೋಧಕ್ಕೆ ಸೋತು ಮುರಾರಿರಾಯ ಶರಣಾಗತನಾದ.

"ಮಾತಿಗೆ ಬಂದರೆ ಮುತ್ತಿನಂತೆ ನೋಡಿಕೊಳ್ಳುತ್ತೇನೆ"

– ಎಂದ ಹೈದರಾಲಿ, ಮಾತಿಗೆ ಬಂದ ಮುರಾರಿರಾಯನನ್ನು ಸೆರೆಹಿಡಿದು, ತನ್ನ ಸೇನೆಯ ಒಂದು ತುಕಡಿಯೊಂದಿಗೆ ಕಬ್ಬಾಳುದುರ್ಗಕ್ಕೆ ಅಟ್ಟಿದ.

ಬಿಸಿಲು ಸುಟ್ಟು, ಸೋತಿತು - ಗುತ್ತಿಯ ದುರ್ಗ.

ಅದಕ್ಕಾಗಿ ಹೈದರಾಲಿ ಕಣ್ಣೀರಿಡಲಿಲ್ಲ. ಅದಕ್ಕೆ ಪ್ರತಿಯಾಗಿ ಅಲ್ಲಿಯ ಎರಡುಸಾವಿರ ಸೂಳೆಯರನ್ನು ಪಟ್ಟಣಕ್ಕೆ ಸಾಗಿಸಿದ.

* * *

ತನ್ನ ಸೈನಿಕರು ತಂದು ಹೇಳಿದ ಆ ಕಥೆಯನ್ನು ಕೇಳಿ ಮದಕರಿನಾಯಕರ ಕಣ್ಣಲ್ಲಿ ನೀರಾಡಿತು.

"ಕೊಲ್ಲಬೇಕು. ಹೈದರನನ್ನು ಹೀಗೇ ಕೊಲ್ಲಿ ನೀರಿಲ್ಲದೆ, ನೆರಳಿಲ್ಲದಂತೆ ಮಾಡಿ ಕೊಲ್ಲಬೇಕು" - ಎಂದು ಅವರ ಹೃದಯ ಹಟತೊಟ್ಟಿತು.

ಗುತ್ತಿಯನ್ನು ಗೆದ್ದು, ಸುತ್ತಲ ಮರಾಠರ ಸೀಮೆಯನ್ನು ಸವರಲು ಹೊರಟ ಹೈದರಾಲಿ; ಅಲ್ಲಿಂದಲೇ, ಮದುಕರಿನಾಯಕನಿಗೆ 'ಫರ್ಮಾನು' ಕಳಿಸಿದ –

"ಈ ಬೇಸಿಗೆಯಲ್ಲೇ ಮಡಕಾಶಿರಾ ಹಿಡಿದು, ಶಿವರಾಮ ಭಾವೂನ ಶಿರ ಕಳಿಸಿ, ಸ್ನೇಹ ಸ್ಥಿರಮಾಡಿಕೊಳ್ಳಬೇಕು. ನಿಮ್ಮ ನೆರವಿಗೆ ಬೇಕಾದರೆ, ನಮ್ಮ ಸೀರ್ಯದ ಸುಭಾದಾರರನ್ನು ಕೇಳಿ. ಮುರಾರಿರಾಯನ ಗತಿಯೇ ಶಿವರಾಮಭಾವುವಿಗೂ ಆಗಬೇಕು - ನಮ್ಮ ನಿಮ್ಮ ಸ್ನೇಹ ಶಾಶ್ವತವಾಗಬೇಕೆಂದಿದ್ದರೆ."

ಆ ಅಪ್ಪಣೆಯನ್ನು ಕೇಳಿದ ಮದಕರಿನಾಯಕ ಏನು ಮಾಡುವುದೆಂದು, ಯೋಚಿಸಿ, ಹೈದರಾಲಿಯ ಸೇನೆ ಅತ್ತಕಡೆ ಬರದಂತೆ –

"ನಿಮಗೆ ನಾವೇ ಮಡಕಶಿರಾ ಹಿಡಿದು ಕೊಡುತ್ತೇವೆ"

- ಎಂದು ಸುದ್ದಿ ಕಳಿಸಿ, ಒಂದು ಸಾವಿರ ಅಶ್ವಬಲದೊಂದಿಗೆ, ಚಳ್ಳಕೆರೆ, ನಿಡಗಲ್ಲು, ಪಾವಗಡಗಳ ಮಾರ್ಗವಾಗಿ, ಮಡಕಶಿರಾ ತಲುಪಿ, ಶಿವರಾಮಭಾವುಗೆ ಸುದ್ದಿ ಕಳಿಸಿದ –

"ಗುತ್ತಿಯಲ್ಲಾದದ್ದುನ್ನು ನೀವು ಕೇಳಿದೀರ, ನಿಮ್ಮ ಕಥೆಯ ಹಾಗಾಗಬಾರದು. ನಮ್ಮನ್ನು ನಂಬಿ ಶರಣಾಗಿ, ನಾವು ಶತ್ರುಗಳಲ್ಲ, ಮಿತ್ರರು" – ಎಂದು.

ಸುತ್ತಮುತ್ತಲ ದುರ್ಗಗಳೆಲ್ಲಾ ಹೈದರಾಲಿಯ ವಶವಾಗಿ, ಒಂಟಿ ನಡುಗಡ್ಡೆಯಂತೆ ನಿಂತಿದ್ದ ಮುರಾರಿರಾಯನ ಸೋದರಳಿಯ ಶಿವರಾಮಭಾವು ಮದಕರಿನಾಯಕನ ಮಾತನ್ನು ನಂಬಿ, ಕೋಟೆಯ ಬಾಗಿಲು ತೆಗೆಸಿದ.

ತನ್ನ ಸೇನೆಯೊಂದಿಗೆ ಮಡಕಶಿರಾ ಕೋಟೆಯನ್ನು ಪ್ರವೇಶಮಾಡಿದ ಮದಕರಿನಾಯಕ, ನಂಬಿದ ಶಿವರಾಮಭಾವುವಿಗೆ ಮೋಸಮಾಡದೆ –

"ನಿಮ್ಮ ಆಪ್ತಮಿತ್ರ - ಪರಿವಾರದೊಂದಿಗೆ ನೀವು ಪುಣೆ ಸೇರಿಕೊಳ್ಳಿ. ಸಮಯ ಬಂದಾಗ ನಮಗೆ ನೆರವಾಗಿ"

- ಎಂದು ಹೇಳಿ, ರಾತ್ರಿಯ ವೇಳೆ, ಶಿವರಾಮಭಾವು ಮತ್ತವನ ಪರಿವಾರವನ್ನು ಮಡಕಶಿರಾದಿಂದ ಹೊರಸಾಗಿಸಿ, ಹೈದರನಿಗೆ-

'ಯುದ್ಧವಿಲ್ಲದೆಯೇ ಮಡಕಶಿರಾ ನಮ್ಮದಾಯಿತು. ನಮ್ಮ ಸೇನೆ ಬರುವ ಸುದ್ದಿ ಕೇಳಿ, ಶಿವರಾಮಭಾವು ತನ್ನ ಹೆಂಡತಿ, ಮಕ್ಕಳೊಂದಿಗೆ ತಲೆತಪ್ಪಿಸಿಕೊಂಡು ಪರಾರಿಯಾದ'

-ಎಂದು ಸುದ್ದಿ ಕಳಿಸಿ, ಚಿತ್ರದುರ್ಗ ಸೇರಿದ.

ತನ್ನ ಮಾತನ್ನು ಹೈದರಾಲಿ ನಂಬುವನೆಂದು ಮದಕರಿನಾಯಕ ನಿರೀಕ್ಷಿಸಲಿಲ್ಲ.

ಹೈದರಾಲಿ, ಶಿವರಾಮಭಾವು ಕೈತಪ್ಪಿಸಿಕೊಂಡ ಸುದ್ದಿಯನ್ನು ಕೇಳಿ ಹಲ್ಲುಕಡಿದು –

'ಆಗಲಿ – ಶಿವರಾಮಭಾವುವಿನ ತಲೆಗೆ ಬೆಲೆ- ನಿನ್ನ ತಲೆ'

-ಎಂದು ತನಗೆ ತಾನೇ ಹೇಳಿಕೊಂಡ.

’ಬರಲಿ, ಬರಲಿ ಬಂದರೆ ಹೈದರಾಲಿಯ ತಲೆ ನಮಗೆ ಬಲಿ’
- ಎಂದು ಮದಕರಿನಾಯಕನೂ ನಿಶ್ಚಯ ಮಾಡಿಕೊಂಡ.

* * *

ದುರ್ಮುಖಿನಾಮ ಸಂವತ್ಸರ ಹಾಗೆ ಕಳೆದು, ಹೇವಿಳಂಬಿನಾಮ ಸಂವತ್ಸರ ಬಂದಿತು. ಹೊಸ ವರ್ಷದ ಉಡುಗೊರೆಯಾಗಿ, ಮದಕರಿನಾಯಕರಿಗೆ ಬಂದಿತು – ಹೈದರಾಲಿಯ ಕರೆಯೋಲೆ.

ಸಮರಾಗಮನ



ಶ್ರೀ ಉತ್ಸವಾಂಬ ಮಹಾದ್ವಾರ
(ಸಿಹಿನೀರು ಹೊಂಡದ ಬಾಗಿಲು)



ಶ್ರೀ ಉತ್ಸವಾಂಬಾ ದೇವಾಲಯ

೧

"ಹೋಷಿಯಾರ್...."

ಬೇಸಿಗೆಕಾಲದ ನಡುಹಗಲಿನ ಜಡಮೌನವನ್ನು ಚೂರಿಯಿಂದ ಸೀಳಿದಂತೆ ಕೇಳಿಬಂದಿತು. ಕಾವಲುಗೋಪುರದ ಮೇಲಿನ ಅಟ್ಟಣೆಯಲ್ಲಿ ನಿಂತ ಕಾವಲುಸೈನಿಕನ ಚುರುಕುಗೊಳಿಸುವ ಕರೆ.

ಆ ಕೂಗನ್ನು ಕೇಳುತ್ತಿದ್ದಹಾಗೇ ಕಾವಲುಮನೆಯೊಳಗಿದ್ದ ಇಂಗಳದಾಳು ಉಕ್ಕಡದ ದಫೇದಾರ ಪರಶುರಾಮನಾಯಕ, ತನ್ನ ಸುತ್ತಲಿದ್ದ ಕಾವಲುಸೈನಿಕರಿಗೆ ಸಿದ್ಧವಾಗಿರಲು ಹೇಳಿ, ಹೊರಬಂದು ನೋಡಿದ.

ಇಬ್ಬದಿಯ ಸಾಲು ಹುಣಿಸೆಮರಗಳ, ಬಿಸಲಿಗೆ ಸುಟ್ಟು ಕರಿಕಾಗಿ ನೆಲಕ್ಕೆ ಬಿದ್ದಂತಿದ್ದ ನೆರಳುಗಳು ವಕ್ರವಕ್ರವಾಗಿ ಬಿದ್ದಸೀರ್ಯದ ರಾಜಮಾರ್ಗ, ಅಲ್ಲಲ್ಲಿ ಬಿಸಿಲು ಬಿದ್ದೆಡೆಯಲ್ಲಿ, ಬಿಸಿಲಿನ ತಾಪವನ್ನು ತಾಳಲಾರದೆ, ಸಣ್ಣ ನುಣ್ಣನೆಯ ಮಸಿಧೂಳಿನ ನಿಟ್ಟುಸಿರು ಬಿಡುತ್ತಾ ಗುಡ್ಡಗಳ ಓರೆಕೋರೆಗಳನ್ನು ಅನುಸರಿಸಿ ವಕ್ರವಾಗಿ ಹರಿದಿತ್ತು.

ಪರಶುರಾಮನಾಯಕ ನೆತ್ತಿಯ ಮೇಲೆ ಬೀಳುತ್ತಿದ್ದ ಬಿಸಿಲಿಗೆ ಹಣೆಯ ಮೇಲೆ ಕೈಯನ್ನು ಅಡ್ಡವಿಟ್ಟು, ಕಾಣುವಷ್ಟು ದೂರವನ್ನು ನೋಡಿದಂತೆಯೇ, ಹಾಗೆಯೇ ಕಿವಿಯನ್ನೂ ಚುರುಕು ಮಾಡಿ –

"ಏನಲಾ ಅದು ?"

- ಎಂದು ಅಟ್ಟಣೆಯ ಮೇಲಿನ ಕಾವಲುಸಿಪಾಯಿಯನ್ನು ಕೇಳಿದ.

"ದೂರದಾಗೆ ಹತ್ತಾರು ಕುದುರೆಗಳು ಬರ್ತಿರೋ ಧೂಳು ಕಾಣ್ತಿದೆ."

"ಇನ್ನೇನೂ ಕಾಣೋದಿಲ್ವಾ - ನಿಧಾನವಾಗಿ ನೋಡಿ, ಇಷಾರೆ ಕೊಡು"

- ಎಂದು ಅವನಿಗೆ ಹೇಳಿ, ಕಾವಲುಮನೆಯೊಳಗಿದ್ದವರಿಗೆ-

"ಆಳು, ಕುದುರೆಗಳು ಬರ್ತಿವೆಯಂತೆ. ಕೋವಿ ಸಿದ್ಧವಾಗಿರಲಿ"

- ಎಂದು ಹೇಳಿ, ತನ್ನ ಭುಜಕ್ಕೆ ನೇತುಹಾಕಿಕೊಂಡಿದ್ದ ಕೋವಿಯನ್ನು ತೆಗೆದು, ಅಗತ್ಯ ಬಿದ್ದರೆ ಕೂಡಲೇ ಹಾರಿಸಲು ಸಿದ್ಧವಾಗಿದೆಯೋ ಇಲ್ಲವೋ ಎಂದು ನೋಡಿಕೊಳ್ಳುತ್ತಾ-

"ಅಪನಿಹೊಟ್ಟು, ಅರಳೆಕರಕು, ಮದ್ದು-ಗುಂಡು ಎಲ್ಲಾ ಸರಿಯಾಗಿ ನೋಡಿಕೊಂಡು ತುಂಬಿದ್ದೀಯಾ? ಬ್ಯಾರೆಯೋರಿಗೂ ತಯಾರಾಗಿರೋಕೆ ಹೇಳು"

- ಎಂದು ತನ್ನ ಹಿಂದಿದ್ದ ಮತ್ತೊಬ್ಬ ಸೈನಿಕನನ್ನು ಕೇಳಿದ.

"ಎಲ್ಲಾ ಅಚ್ಚುಕಟ್ಟಾಗಿದೆ" – ಎಂದ ಆತ.

ಅವರಿಬ್ಬರು ಅಷ್ಟು ಮಾತಾಡುವ ವೇಳೆಗೆ, ಅಟ್ಟಣೆಯ ಮೇಲೆ ನಿಂತವನು –

"ಹತ್ತಾರು ಕುದ್ರೆ ಬರ್ತಿರೋ ಹಂಗಿದೆ - ಆ ಧೂಳಿನಾಗೆ ಇನ್ನೂ ಅಷ್ಟು ಜನ ಇರೋ ಹಂಗೆ ಕಾಣ್ತದೆ. ಆದ್ರೂ ಬರಿ ಜನ, ದಂಡೇನೂ ಇದ್ದಂಗಿಲ್ಲ" – ಎಂದು ಹೇಳಿದ.

"ಅದ್ದೆಂಗಾರ ಇರ್ಲಿ - ನಿನ್ನ ಎಚ್ಚರ ನಿನಗಿರಲಿ"

- ಎಂದು ಹೇಳಿ, ಪರಶುರಾಮನಾಯಕ, ಬಂದವರನ್ನು ತಡೆಯಲು ಸಿದ್ಧವಾಗಿರುವಂತೆ ಕಾವಲುಸೈನಿಕರಿಗೆ ಅಪ್ಪಣೆಮಾಡಿದ.

ಆತನ ಮಾತಿನಂತೆ, ಇಪ್ಪತ್ತು ಜನ ಸೈನಿಕರು ಇತ್ತಂಡವಾಗಿ, ರಸ್ತೆಯ ಇಬ್ಬದಿಯಲ್ಲೂ ಬಂದವರಿಗೆ ಕೂಡಲೇ ಕಾಣದಂತೆ ತಿರುವಿನ ಮರಗಳ ಮರೆಯಲ್ಲಿ ನಿಂತರು. ನಾಲ್ಕುಜನ ಆಳೆತ್ತರದ ಭರ್ಜಿಗಳನ್ನು ಕತ್ತರಿಯಾಕಾರದಲ್ಲಿ ರಸ್ತೆ ಗಡ್ಡವಿಟ್ಟು ನಿಂತರು.

ಸ್ವಲ್ಪ ಹೊತ್ತಿನೊಳಗಾಗಿಯೇ ನಾಲ್ವರು ಅಶ್ವಾರೋಹಿ ಸೈನಿಕರು ಸೀರ್ಯದತ್ತಣಿಂದ ಬಂದು, ರಸ್ತೆಗೆ ಅಡ್ಡವಾಗಿದ್ದ ಭರ್ಜಿಗಳನ್ನು ನೋಡಿ, ಕುದುರೆಗಳಿಂದ ಕೆಳಗಿಳಿದು –

"ರಾಸ್ತಾ ಖುಲ್ಲಾ ಕರೋ"

- ಎಂದು ಜಬರದಸ್ತಿನಿಂದ ಹೇಳಿದ ಒಬ್ಬ ಹುರಿಕಟ್ಟಾದ ಮೈಯ ಸಿಪಾಯಿ, ಮೀಸೆಯ ಮೇಲೆ ಕೈಆಡಿಸುತ್ತಾ.

"ಪಹಿಲೆ ಹತಿಯಾರ್ ನೀಚೇ ಡಾಲೋ"

- ಎಂದು ಆ ಸೈನಿಕನಿಗಿಂತ ಒಗರಾಗಿ ಹೇಳಿ –

"ಕಾಟಂಣ, ಕರಿಯಣ್ಣ, ಓಭಣ್ಣ, ತ್ಯಾರಣ್ಣ.... ಇವರ ಆಯುಧ ತೆಗೆದುಕೊಂಡು, ಝಡತಿ ಮಾಡಿ" – ಎಂದು ತನ್ನ ಬೆನ್ನ ಹಿಂದೆ ನಿಂತ ಕಾವಲಭಟರಿಗೆ ಅಪ್ಪಣೆಮಾಡಿ –

"ಹೊರಗಿನ ಸಿಪಾಯಿಗಳಿಗೆ ಇಲ್ಲಿ ಪ್ರವೇಶವಿಲ್ಲ. ನಿಮ್ಮ ರಹದಾರಿ ಎಲ್ಲಿ ?"

- ಎಂದು ಕೇಳಿದ ಪರಶುರಾಮನಾಯಕ.

"ನೆನಪಿರಲಿ-ನಾವು ಸೀರ್ಯದ ಸುಭಾದಾರರ ಸವಾರರು."

- ಎಚ್ಚರಿಸುವ ಧ್ವನಿಯಲ್ಲಿ ಹೇಳಿದ ಮತ್ತೊಬ್ಬ ಸಿಪಾಯಿ.

"ಇದು ಸೀರ್ಯದ ಸೀಮೆಯಲ್ಲ, ಪಾಳೆಯಗಾರರ ರಾಜ್ಯ. ಮೊದಲು ಆಯುಧ ಒಪ್ಪಿಸಿ, ಮುಂದೆ ಮಾತಾಡಿ, ಪತ್ರ ತೋರಿಸಿ. ಇಲ್ಲ - ದುರ್ಗದಿಂದ ಪರವಾನಗಿ ಬರೋವರೆಗೂ ಇಲ್ಲಿರಬೇಕು. ಹೆಚ್ಚು ಮಾತಿಗೆ ಅಗತ್ಯವಿಲ್ಲ."

"ಶ್ರೀರಂಗಪಟ್ಟಣದ ನವಾಬರ ವಕೀಲರ ಅಂಗರಕ್ಷಕರು ನಾವು. ಹಿಂದೆ ಸವಾರಿ ಬರುತ್ತಾ ಇದೆ."

"ಹಿಂದೆಯಾದರೂ ಬರಲಿ ಹಿಂದಕ್ಕಾದರೂ ಹೋಗಲಿ, ನಮಗದರ ಯೋಚನೆಯಿಲ್ಲ. ಸಿಪಾಯಿ ಜನ ಆದರೆ ಹುಕುಂ ಹೇಗೆ ಪಾಲಿಸಬೇಕು ಅನೋದನ್ನ ಕಲಿತು ಬರಬೇಕು."

- ತನ್ನೆದುರು ನಿಂತವರನ್ನು ಮೆಟ್ಟಿ ತುಳಿದಂತೆ ಹೇಳಿದ ಪರಶುರಾಮನಾಯಕ –

"ಮೊದಲು ಆಯುಧ ಒಪ್ಪಿಸಿ. ಆಮೇಲೆ ಉಳಿದ ಮಾತು."

"ಇದರ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ...."

- ಎಚ್ಚರಿಸುವಂತೆ ಹೇಳಿದ ನವಾಬನ ಸಿಪಾಯಿ.

"ಕತ್ತಿಗಿಂತ ನಾಲಗೆ ಉದ್ದ ಮಾಡಿದರೆ, ಕೈಗೆ ಕೋಳ ಜಡಿಸಬೇಕಾದೀತು."

ಪರಶುರಾಮನಾಯಕ ಆ ಮಾತು ಹೇಳುತ್ತಿದ್ದ ಹಾಗೇ, ಹತ್ತಾರು ಕೋವಿಗಳು, ಆತನ ಬೆನ್ನ ಹಿಂದೆ ಮೇಲೆದ್ದು ನಿಂತವು.

ಆ ನಾಲ್ವರು ಸೈನಿಕರು ಒಬ್ಬನ ಮುಖ ಮತ್ತೊಬ್ಬರು ನೋಡಿಕೊಂಡು, ಬೆವರಿಳಿಯುತ್ತಿದ್ದ ಮುಖ ಒರೆಸಿಕೊಂಡು, ಕಾದ ಕೈಗಳಿಗೆ ತಮ್ಮ ಶಸ್ತ್ರ ಒಪ್ಪಿಸಿ ನಿಂತರು - ಮುಖ, ಕಣ್ಣು ಕೆಂಪಗೆ ಮಾಡಿಕೊಂಡು.

ಅಷ್ಟಾಗುವ ವೇಳೆಗೆ ಮೇನೆಗಳನ್ನು ಹೊತ್ತ ಬೋವಿಗಳ ಕೂಗು, ಮತ್ತಷ್ಟು ಕುದುರೆಗಳ ಖುರಪುಟದ ಸದ್ದು ಕೇಳಿಸಿತು. ಪರಶುರಾಮನಾಯಕ ಮುಂದೇನೂ ಮಾತನಾಡದೆ, ಕತ್ತರಿಯಂತೆ ರಸ್ತೆಗೆ ಅಡ್ಡವಾದ ಭರ್ಜಿಗಳ ಹಿಂದೆ, ಎದೆ ಸೆಟಿಸಿಕೊಂಡು ಬಂಡೆಗಲ್ಲಿನಂತೆ ನಿಂತ.

ಹಿಂದೆ ಬಂದ ಮೇನೆ, ಕುದುರೆಯ ಜನ, ತಮಗಿಂತ ಮುಂದೆ ಬಂದವರು ನಿಶ್ಶಸ್ತ್ರವಾಗಿ ನಿಂತ ರೀತಿಯನ್ನು ನೋಡಿ, ತನ್ನ ಉಡುಪಿನ ವೈಖರಿಯಿಂದ ದಳಪತಿಯಂತೆ ಕಾಣುತ್ತಿದ್ದ ಒಬ್ಬಾತ ಮುಂದೆ ಬಂದು –

"ದುರ್ಗದ ರಾಜಾಸಾಹೇಬರ ಭೇಟಿಗೆ ನವಾಬರ ವಕೀಲರು ಬಂದಿದ್ದಾರೆ. ಬಿಸಲಿನ ಪ್ರಯಾಣದಲ್ಲಿ ಬಹಳ ಬಳಲಿದ್ದಾರೆ. ಕಾಯಿಸಬೇಡಿ" - ಎಂದು ಹೇಳಿದ ಪರಶುರಾಮನಾಯಕನಿಗೆ.

"ನವಾಬ್ ಸಾಹೇಬರ ಕಛೇರಿಯ ರಹದಾರಿ ತೋರಿಸಿ. ಅದನ್ನು ದುರ್ಗಕ್ಕೆ ಕಳಿಸಿ, ಅಲ್ಲಿಂದ ಪರವಾನಗಿ ಬಂದಮೇಲೆ ನೀವು ಮುಂದಕ್ಕೆ ಹೋಗಬಹುದು."

"ಅಲ್ಲಿಯವರೆಗೆ ?"

"ಮರದ ನೆರಳಿದೆ. ಬೇಕಾದರೆ ಕುಡಿಯಲು ನೀರು ಕೊಡುತ್ತಾರೆ. ತಡಮಾಡಿದಷ್ಟೂ ನಿಮಗೇ ಆಯಾಸ." – ಪರಶುರಾಮನಾಯಕ ನಿರ್ದಾಕ್ಷಿಣ್ಯವಾಗಿ ಉತ್ತರ ಕೊಟ್ಟ.

ಆ ಮಾತಿಗೆ ಪ್ರತ್ಯುತ್ತರ ಕೊಡದೆ, ಆ ದಳಪತಿ ಮೇನೆಯ ಬಳಿ ಹೋಗಿ, ಏನನ್ನೋ ಹೇಳಿ, ಅವರು ಕೊಟ್ಟ ಕಾಗದವೊಂದನ್ನು ತಂದು ಪರಶುರಾಮನಾಯಕನಿಗೆ ತೋರಿಸಿದ.

ಕಾಗದದ ಮೇಲಿನ ಮೊಹರನ್ನು ಸೂಕ್ಷ್ಮವಾಗಿ ನೋಡಿ, ಅದು ತನಗೆ ಚಿರಪರಿಚಿತವಾದ ನವಾಬರ ಆಸ್ಥಾನದ ಮುದ್ರೆ ಎಂದು ಮನಸ್ಸಿಗೆ ಖಚಿತ ಮಾಡಿಕೊಂಡು –

"ನಿಮ್ಮ ಸಿಪಾಯಿಗಳ ಶಸ್ತ್ರಗಳನ್ನು, ನಮ್ಮ ಸಿಪಾಯಿಗಳಿಗೆ ಒಪ್ಪಿಸಿ, ವಕೀಲ ಸಾಹೇಬರಿಗೆ ಕಾಯಲು ಹೇಳಿ, ಕೂಡಲೇ ಈ ಸುದ್ದಿಯನ್ನು ಕೋಟೆಗೆ ಮುಟ್ಟಿಸಿ, ಪರವಾನಗಿ ತರಿಸುತ್ತೇನೆ" – ಎಂದ ಪರಶುರಾಮನಾಯಕ.

"ಸಿಪಾಯಿಗಳು ಶಸ್ತ್ರ ಒಪ್ಪಿಸುವ ರಿವಾಜಿಲ್ಲ."

"ಹಾಗೆಂದರೆ ನಿಮ್ಮನ್ನು ಶತ್ರುಗಳೆಂದು ಭಾವಿಸಬೇಕಾದೀತು, ಮುಂದಿನ ಜವಾಬ್ದಾರಿ ನಿಮ್ಮದು. ಸ್ನೇಹಿತರಾಗಿದ್ದರೆ ನಮ್ಮ ರಾಜ್ಯದ ಹುಕುಂ ನಡೆಸಿ, ಶಸ್ತ್ರ ಒಪ್ಪಿಸಿ. ಅಪ್ಪಣೆ ಬಂದ ಮೇಲೆ ಅದನ್ನು ನಿಮಗೆ ಕೊಡಲು ಬಂದೀತು" - ಎಂದಷ್ಟೇ ಹೇಳಿದ ಪರಶುರಾಮನಾಯಕ.

ದಳದ ಮುಖ್ಯಸ್ಥ ಮತ್ತೊಮ್ಮೆ ಮೇನೆಯ ಬಳಿ ಹೋಗಿ ಮಾತಾಡಿಕೊಂಡು ಬಂದು-

"ಬೇಗ ಪರವಾನಗಿ ತರಿಸಿ, ಸಾಹೇಬರಿಗೆ ಆಯಾಸವಾಗಿದೆ"

- ಎಂದು ಪರಶುರಾಮನಾಯಕನಿಗೆ ಹೇಳಿ, ತನ್ನ ಕಡೆಯ ಸಿಪಾಯಿಗಳಿಗೆ –

"ಹತಿಯಾರ್ ಹವಾಲೆ ಕರೋ"- ಎಂದಪ್ಪಣೆ ಮಾಡಿದ.

ಉಳಿದ ಸೈನಿಕರು ತಮ್ಮ ಶಸ್ತ್ರಗಳನ್ನು ಒಪ್ಪಿಸುತ್ತಿದ್ದಾಗ ಪರಶುರಾಮನಾಯಕ, ದಳಪತಿಯ ಶಸ್ತ್ರವನ್ನು ತಾನೇ ಇಸಿದುಕೊಂಡು –

"ವಿಶ್ರಾಂತಿ ತೆಗೆದುಕೊಳ್ಳಿ"

- ಎಂದಷ್ಟೇ ಹೇಳಿ, ತನ್ನ ಹಿಂದಿದ್ದ ಇಬ್ಬರನ್ನು ಕರೆದು, ತನ್ನ ಕೈಯಲ್ಲಿದ್ದ ಸೀರ್ಯದ ಸುಭೇದಾರರ ರಹದಾರಿಯನ್ನು ಅವರ ಕೈಗೆ ಕೊಟ್ಟು –

"ಸೀರ್ಯದಿಂದ ನವಾಬ್ ಸಾಹೇಬರ ವಕೀಲರು ಬಂದಿದ್ದಾರೆ. ಉಕ್ಕಡದವರಿಗೆ ಏನಪ್ಪಣೆ ಎಂದು ಕೊತ್ವಾಲಚಾವಡಿಯಿಂದ ಅಪ್ಪಣೆ ತೆಗೆದುಕೊಂಡು ಬನ್ನಿ"- ಎಂದು ಅಪ್ಪಣೆ ಮಾಡಿದ.

ಆ ಸೈನಿಕರಿಬ್ಬರೂ ಕುದುರೆಗಳನ್ನೇರಿ ದುರ್ಗದತ್ತ ದೌಡಾಯಿಸಿದರು.

ಬೋವಿಗಳು ಮೇನೆಯನ್ನು ಮರದ ನೆರಳಿನಲ್ಲಿ ಇಳಿಸಿದ ಬಳಿಕ ಅದರಲ್ಲಿದ್ದ ನವಾಬರ ವಕೀಲ, ಮೇನೆಯಿಂದ ಹೊರಬಂದು, ದುರ್ಗದ ಬೆಟ್ಟದತುದಿಯೂ ಕಾಣದಂತೆ, ಉನ್ನತವಾಗಿ, ವಿಸ್ತಾರವಾಗಿ ಹಬ್ಬಿದ ಕುಂಚಿಗನಹಾಳು ಬೆಟ್ಟದ ಸಾಲನ್ನು ನೋಡುತ್ತಾ, ಪರಶುರಾಮನಾಯಕನತ್ತ ನೋಡಿ –

"ನಿನ್ನ ಹೆಸರೇನು ?" – ಎಂದು ಕೇಳಿದ.

"ಹೆಸರು ಹೇಳಲು ಪರವಾನಗಿ ಇಲ್ಲ. ಸಾಹೇಬರು ವಿಶ್ರಾಂತಿ ತೆಗೆದುಕೊಳ್ಳಬೇಕು"

- ಎಂದಷ್ಟೇ ಹೇಳಿದ ಪರಶುರಾಮನಾಯಕ.

"ಇಲ್ಲಿ ಹವಾ ಬಹಳ ಗರಂ ಇದೆ"

- ಎಂದು ನವಾಬರ ವಕೀಲ ರೇಶಿಮೆ ಕರವಸ್ತ್ರದಿಂದ ಮುಖದ ಬೆವರು ಒರೆಸಿಕೊಂಡ.

೨

"ಶ್ರೀಮನ್ಮಹಾನಾಯಕಾಚಾರ್ಯ ಕಾಮಗೇತಿ ಕಸ್ತೂರಿ ರಂಗಪ್ಪನಾಯಕರ ರಾಜಾ ಮದಕರಿನಾಯಕರು ಸಂಸ್ಥಾನ ಚಿತ್ರದುರ್ಗ ಮೊಹಬರ್ ಹೂ ಅಜಿತರ್ಫ್ ನವಾಬ್ ಸಾಹೇಜ್ ಹೈದರಲ್ಲೀಖಾನ್ ಬಹದ್ದೂರ್ ಸಂಸ್ಥಾನ ಶ್ರೀರಂಗಪಟ್ಟಣ ಸಲ್ಲಾಂ ಬಾ ವಜಾ ಸಲ್ಲಾಂ ಮೊಹದಿಲ್ಲ ಮಕಷದು ಅಂಕಿದರ್ವಿವಿಲ್ಲಾ ಯಿಲ್ಲಾದಿ ಚೈತ್ರ ಶುದ್ಧ ದಶುಮಿ ಮೊಕ್ಕಾಂ ಶಿರಾದಲ್ಲಿ ಖುಷಿ ತಿಳಿದು ಸಾಹೇಬ್ ತಮ್ಮಾಷಾದ್ ಮಾನೆ ದರಹಮೇಷಾ ಕಲಮೀ ಮಾಡುತ್ತಾ ಬರಬೇಕು.

“ದಿಗರು ತಮ್ಮ ಭೇಟಿಯಾಗಿ ಬಹಳ ದಿನವಾಯಿತು. ನಿಮ್ಮ ಕಡೆಯಿಂದ ಲಾಗಾಯ್ತಿನಿಂದ ಗುತ್ತಿ ಮಡಕಶಿರಾ ಕೋಟೆ ಲಡಾಯಿನಲ್ಲೂ ಫತಾ ಮುಟ್ಟಿ ಯಶ ತೆಗೆದುಕೊಂಡು ಇದ್ದೇವೆ. ಮೊಕ್ತಾ ಹೇಳುವ ಮಾತೂ ಇದೆ. ಶಿವಾಯಿ ಕಪ್ಪಕಾಣಿಕೆ ಬಿಟ್ಟು ಕೊಡುತ್ತೇವೆ. ಶಿರಾ ವಗೈರೆ ಶೀಮೆ ನಿಮಗೆ ಕೊಡುವ ಮನಸ್ಸೂ ಇದೆ. ಶಿವಾಯಿ ನಿಮ್ಮಲ್ಲಿ ಮೊಖ್ತಾ ಹೇಳಬೇಕಾದ ಮಾತುಗಳೂ ಇವೆ. ಆದ್ದರಿಂದ ನೀವು ನಿಮ್ಮ ಗಡಿಶೀಮೆ ಹಿರಿಯೂರಿನವರೆಗೆ ಬಂದಲ್ಲಿ, ನಾವೂ ಒಂದು ಹರದಾರಿ ಮುಂದೆ ಬಂದು ಕರೆದುಕೊಂಡು ಹೋಗುತ್ತೇವೆ. ಬರುವುದು.

“ತಮಗೆ ನಮ್ಮ ಖುಷಿ ಎಂದು ಒಂದು ದೊಡ್ಡ ಆನೆ, ಎರಡು ಕುದುರೆ ಇತರ ಸರಂಜಾಮು ದೇಖಿಲ್ ಖಿಲ್ಲತ್ತು ವಗೈರೆ ಸಹಿತ ಕಳಿಸಿರುತ್ತೆ. ವಿಶ್ವಾಸವಿಟ್ಟು ತೆಗೆದುಕೊಂಡು, ಮೊಖ್ತಾ ಭೇಟಿಗೆ ಬರುವ ದಿನ ತಿಳಿಸುವುದು.”

ಕರಣಿಕರು ನಿಧಾನವಾಗಿ ನವಾಬರು ಕಳಿಸಿದ ಕಾಗದವನ್ನು ಓದಿದರು.

ಗುತ್ತಿಯ ಕೋಟೆ –

ಗಂಟಲು ಬತ್ತಿ, ಎದೆ ಬೆಂದು, ನೀರು ಬೇಕೆಂದು ಕೇಳಲೂ ತ್ರಾಣವಿಲ್ಲದೆ, ಕೋಟೆಯ ಮೇಲೆ ಪ್ರೇತಗಳಂತೆ ನಿಂತ ಹೆಣ್ಣು ಗಂಡು, ಮಕ್ಕಳು-ಮರಿಗಳ ಮೂಕ ಆಕ್ರಂದನ; ಕಾದು ಕೆಂಡವಾದ ಕಾರ್ಗಲ್ಲಕೋಡಿಗೆ ಕಣ್ಣೀರಿನ ರುದ್ರಾಭಿಷೇಕ,

ಮಡಕಶಿರಾ -

’ಮಡಕಶಿರಾದವರ ಶಿರವನ್ನು ತಂದೊಪ್ಪಿಸಿ.’

ಹೊಗಳುತ್ತಲೇ ಹೀಯಾಳಿಸುವಂತಿದ್ದ ಆ ಮಾತುಗಳನ್ನು ಕೇಳಕೇಳುತ್ತಲೇ ನಾಯಕರ ಕೆಳಹಲ್ಲು, ಮೇಲ್ತುದುಟಿಯ ಕೊನೆಯನ್ನು ಕಚ್ಚಿ, ಕಣ್ಣುಗಳಿಗೆ ರಕ್ತವೇರಿ, ನಿಶ್ಯಬ್ದವಾಗಿ ಕುಳಿತ ಸಭೆಯನ್ನು ನೋಡಿದರು.

ಸದ್ದಡಗಿದ ಸಭೆಯಲ್ಲಿ ನವಾಬರ ಆಳುಗಳು ನಾಯಕರ ಇದಿರು ತಂದೊಡ್ಡಿದ ಬೆಳ್ಳಿಯ ಹರಿವಾಣದಲ್ಲಿದ್ದ ರತ್ನಾಭರಣಗಳನ್ನು ನೋಡಿದರು, ನಾಯಕರು.

ಕಂಡ ಕಣ್ಣುಗಳನ್ನು ಅಣಕಿಸುವಂತೆ ಕಾಂತಿಬೀರುತ್ತಿದ್ದ, ಆ ಆಭರಣಗಳನ್ನು ಕೈಯಿಂದ ಮುಟ್ಟಲೂ ಆಗದೆ ಮುಟ್ಟಿದ ಶಾಸ್ತ್ರ ಮಾಡಿದ ಬಳಿಕ, ನಾಯಕರ ಕಡೆಯ ಆಳುಗಳು ಅದನ್ನು

ಅಲ್ಲಿಂದ ತೆಗೆದೊಯ್ದ ಬಳಿಕ, ಅವು ಕಣ್ಣೆದುರು ಇರುವವರೆಗೂ ಉಸಿರಾಡಲೂ ತಡೆಯಾದಂತಿದ್ದ ನಾಯಕರು –

"ನವಾಬರ ವಿಶ್ವಾಸಕ್ಕೆ ನಾವು ಕೃತಜ್ಞರಾಗಿದ್ದೇವೆ"

- ಎಂದಷ್ಟೇ ಹೇಳಿ, ಪ್ರಧಾನಿ ಪೀಠದಲ್ಲಿ ಕುಳಿತ ಪಂಶುರಾಮನಾಯಕನ ಕಡೆ ಹತ್ತಿರ ಕರೆಯುವಂತೆ ನೋಡಿದರು.

ಆ ನೋಟದ ಸೂಚನೆಯನ್ನು ಅರ್ಥಮಾಡಿಕೊಂಡ ಪರಶುರಾಮನಾಯಕ, ನಾಯಕರ ಹತ್ತಿರ ಬಂದು ನಿಂತ.

"ನಮಗೆ ಮೈಯಲ್ಲಿ ಆರೋಗ್ಯವಿಲ್ಲ. ಸಭೆಯನ್ನು ಬೇಗ ಬರಖಾಸ್ತು ಮಾಡಿ"

- ಎಂದು ತಗ್ಗಿದ, ನಸುಕಂಪಿಸುವ ಧ್ವನಿಯಲ್ಲಿ ಹೇಳಿದರು.

ಆ ಮಾತುಗಳ ಹಿಂದಿನ ಮನೋಭಾವವನ್ನು ಅರ್ಥಮಾಡಿಕೊಂಡ ಪರಶುರಾಮನಾಯಕ –

"ಪ್ರಭುಗಳಿಗೆ ದೇಹಾಲಸ್ಯವಾಗಿದೆ. ಅದನ್ನೇ ಅಪ್ಪಣೆ ಮಾಡಿದರು. ನವಾಬರ ವಕೀಲರು ಮುಖತಃ ಏನಾದರೂ ಹೇಳುವುದಿದೆಯೇ ?" – ಎಂದು ಕೇಳಿದ.

"ಇದೇನು ದುರ್ವಿಧಿ. ನವಾಬರ ಪತ್ರ ಬಂದಾಗಲೇ ರಾಜಾಸಾಹೇಬರಿಗೆ ದೇಹಾಲಸ್ಯವಾಯಿತಲ್ಲಾ...." - ಎಂದ ನವಾಬರ ವಕೀಲ.

"ದೇಹಾಲಸ್ಯ ಯಾರ ಕೈಯ ಮಾತು. ಅದು ಪ್ರಭುಗಳ ಅಪೇಕ್ಷೆಯಂತೆ, ನವಾಬ ಸಾಹೇಬರ ಅಪ್ಪಣೆಯಂತೆ ಬಂದು ಹೋಗುವುದಲ್ಲ. ಪ್ರಕೃತಿನಿಯಮಕ್ಕೆ ನಾವು ಸೋಲಬೇಕು."

"ದೈವೇಚ್ಛೆ, ನವಾಬ ಸಾಹೇಬರ ಪತ್ರಕ್ಕೆ ತಮ್ಮ ಉತ್ತರ...."

"ತಾವು ಬಿಡದಿಯಲ್ಲಿ ವಿಶ್ರಾಂತಿ ತೆಗೆದುಕೊಳ್ಳಿ. ಪ್ರಭುಗಳೊಂದಿಗೆ ಸಮಾಲೋಚನೆ ಮಾಡಿ, ಉತ್ತರ ಬರೆಸಿಕೊಡುತ್ತೇನೆ." - ನಯವಾಗಿ ಹೇಳಿದ ಪರಶುರಾಮನಾಯಕ.

"ತಮ್ಮನ್ನು ನಾವು ಕಾಣಲು ಮತ್ತೆ ಅವಕಾಶವಾಗುತ್ತದೆಯೋ ಇಲ್ಲವೋ. ಆದರೆ – ನಮಗೆ ಸಂತೋಷವಾಗುತ್ತದೆ. ಆಗದಿದ್ದರೆ ಬೇಸರ ಮಾಡಿಕೊಳ್ಳಬಾರದು. ಸಂತೋಷವಾಗಿದ್ದು ನಮ್ಮ ಆತಿಥ್ಯವನ್ನು ಸ್ವೀಕರಿಸಿ"

- ಎಂದಷ್ಟೇ ಹೇಳಿ, ನಾಯಕರು ಎದ್ದು ನಿಂತರು – ಓಲಗ ಮುಗಿಸಿದಂತೆ.

ನಾಯಕರೊಂದಿಗೆ ಸಭೆಯೂ ಎದ್ದು ನಿಂತಿತು.

* * *

"ನವಾಬರ ಈ ಪತ್ರಕ್ಕೇನು ಉತ್ತರ ಕೊಡಬೇಕು, ಹೇಳಿ."

- ಅರಮನೆಯ ಆಪ್ತಾಲೋಚನಾಮಂದಿರದಲ್ಲಿ ನೆರೆದಿದ್ದವರನ್ನು ಗಂಭೀರಧ್ವನಿಯಲ್ಲಿ ಕೇಳಿದರು, ನಾಯಕರು.

ಅಂದಿನ ಆಪ್ತಾಲೋಚನಾಸಭೆ ಎಂದಿನಂತೆ ದುರ್ಗದ ಪ್ರಧಾನಿಗಳು, ದಳವಾಯಿಗಳಿಗಷ್ಟೇ ಸೀಮಿತವಾಗಿರಲಿಲ್ಲ. ಚೈತ್ರಮಾಸದಲ್ಲಿ ಚಿತ್ರದುರ್ಗದಲ್ಲಿ ನಡೆಯುವ 'ಸಿಡಿ', 'ಭೇಟಿ' ಮೊದಲಾದ ದೇವತಾಕಾರ್ಯಗಳಿಗೆಂದು ಆಹ್ವಾನಿತರಾಗಿ ಬಂದಿದ್ದ ರಾಜಬಂಧುಗಳು, ಗಡಿಸೀಮೆಯ ಹಿರಿಯರೂ ಆದ ಹೊಸದುರ್ಗದ ದೊಡ್ಡ ಮದಕರಿನಾಯಕರು, ಜಾನಕಲ್ಲಿನ ಭರಮಣ್ಣ ನಾಯಕರು, ನಾಯಕನಹಟ್ಟಿಯ ಮಲ್ಲಪ್ಪನಾಯಕರು, ಜರಿಮಲೆಯ ಬೊಮ್ಮಣ್ಣನಾಯಕರು, ಗುಡಿಕೋಟೆಯ ನಾಯಕರು, ಮತ್ತೋಡಿನ ಹಾಲಪ್ಪನಾಯಕರು, ಕಡಪಾದ ನವಾಬರ ವಕೀಲ ಶಿವರಾಮಪಂತ್, ಚಿತ್ರದುರ್ಗಕ್ಕೆ ಮತ್ತೆ ಪ್ರವೇಶಮಾಡಿದ ಪುಣೆಯ ಪೇಶ್ವೆಗಳ ವಕೀಲರಾದ ಪುರುಷೋತ್ತಮಪಂತ್, ಸಾರ್ವಭೌಮರಾವ್, ಚಪ್ಪೇಚಾವಡಿಯ ದಳವಾಳವಾಯಿಗಳಾಗಿದ್ದು ವಯಸ್ಸಿನ ಕಾರಣದಿಂದ ನಿವೃತ್ತರಾದ ಹುಚ್ಚಪ್ಪನಾಯಕರ ಮಗ ಸಣ್ಣ ಪರಶುರಾಮಪ್ಪ ನಾಯಕ, ಉಳಿದ ದಳವಾಯಿಗಳು, ದಂಡಿನ ಹಿರಿಯ ಸೈನ್ಯಾಧಿಕಾರಿಗಳಾದ ಕುತುಬುದ್ದೀನ್ ಖಾನ್, ಸಲಬತ್‌ಖಾನ್, ಜಗದಾಳಿ ವೆಂಕೋಜಿ, ಮುರಾರಿರಾವ್, ಜಾನೋಜಿಪಂತ್, ಪುರಭಯ್ಯಪಡೆಗಳ ಮುಖ್ಯಸ್ಥರಾದ ಶಿವಪ್ರಸಾದ್ ಸಿಂಗ್, ರಾಮಸಿಂಗ್, ಮುಲಕಿಕಾರ್ಖಾನೆಯ ದಿವಾನ್ ಕಾಳೋಜಿ, ಭಕ್ಷಿ ಚನ್ನ ಮಲ್ಲಪ್ಪ, ಕುಂಭಿಪಾಲನಾಯಕ, ಬಾಲನಾಯಕ, ಬಾಣದ ಓಬನಾಯಕ - ಮೊದಲಾದ ಎಲ್ಲ ಗಣ್ಯರೂ ಗಂಭೀರ ಚಿಂತೆಯ ವಿವಿಧ ಚಿತ್ರಗಳಂತೆ. ನಾಯಕರು ಏನು ಹೇಳುವರೋ ಕೇಳಬೇಕೆಂದು ಕಾದು ಕುಳಿತಿದ್ದರು.

ಆದರೆ ಎಂದಿನಂತೆ ಈ ಬಾರಿ ನಾಯಕರು ಹೇಳಲಿಲ್ಲ. ಕೇಳಿದರು –

"ಈ ಸಭೆಯಲ್ಲಿ ಮುನಷಿಗಳು ಓದಿದ ನವಾಬರ ಪತ್ರವನ್ನು ತಾವೆಲ್ಲರೂ ಕೇಳಿದ್ದೀರ. ಅವರು ಮೆಹರ್ಬಾನಗಿರಿಯೆಂದು ನಮಗೆ ಕಳಿಸಿದ ಕಾಣಿಕೆಗಳನ್ನು ನೋಡಿದೀರ - ಅವರ ಕಾಣಿಕೆಗಳು ನೋಟಕ್ಕೆ ಮಾತ್ರ; ಮುಖ್ಯವಾದದ್ದು ಅವರ ಖರೀತ. ಅದಕ್ಕೇನು ಉತ್ತರ ಕೊಡಬೇಕು?"

- ಸಭೆಯಲ್ಲಿ ನೆರೆದ ಒಬ್ಬೊಬ್ಬರ ಮುಖವನ್ನೂ ಸೂಕ್ಷ್ಮವಾಗಿ ನೋಡುತ್ತಾ ನಾಯಕರು ಕೇಳಿದರು.

"ನಮಗೆ ನವಾಬರು ಏನು ಹೇಳುತ್ತಾರೆ, ಕೇಳುತ್ತಾರೆ ಎನ್ನುವುದು ಮುಖ್ಯವಲ್ಲ, ಪ್ರಭುಗಳ ನಿರ್ಧಾರವೇ ನಮ್ಮ ನಿರ್ಧಾರ. ಇದು ಎಂದಿನಿಂದಲೂ ನಡೆದುಬಂದ ಪದ್ಧತಿ. ತಮ್ಮ ಮಾತಿಗಾಗಲಿ,

ತಮ್ಮ ನಿರ್ಧಾರಕ್ಕಾಗಲಿ ನಾವು ಎಂದೂ ವಿರುದ್ಧವಾಗಿ ನಡೆದಿಲ್ಲ; ನುಡಿದಿಲ್ಲ. ತಮ್ಮ ನಾಲಗೆಯಾಡಿದ ಮಾತಿಗೆ ತಲೆಯ ಪಣವಿಟ್ಟು ನಡೆಯುವುದಷ್ಟೇ ನಾವು ಕಲಿತಿರುವ ವಿದ್ಯೆ. ಹೀಗಿರುವಾಗ, ಈಗ ನಮ್ಮನ್ನು ಕೇಳುವುದೇನು? ತಮ್ಮ ಅಪ್ಪಣೆಯಾದಂತೆ ನಡೆಯಲು ನಾವು ಸಿದ್ಧ"

- ಎಂದು ಬಹುಮಂದಿಯ ಅಭಿಪ್ರಾಯಕ್ಕೆ ನುಡಿಕೊಟ್ಟಂತೆ ಹೇಳಿದ, ಚಪ್ಪೇಚಾವಡಿಯ ದಳವಾಯಿ ಚಿಕ್ಕಪರಶುರಾಮನಾಯಕ.

"ಆದರೆ ಇಂದಿನ ಸ್ಥಿತಿ ಎಂದಿನಂತಹದಲ್ಲ. ಹಿಂದೆ ಪುಣೆಯ ಶ್ರೀಮಂತರು ಬಲಿಷ್ಠರಾಗಿದ್ದು ನವಾಬರು ನಮ್ಮ ನೆರವನ್ನು ಕೇಳುವ ಸ್ಥಿತಿಯಲ್ಲಿದ್ದರು. ಈಗ ಕಾಲ ಬದಲಾಗಿದೆ. ಪುಣೆಯ ಪೇಶ್ವೆ - ಸರದಾರರ ಅಂತಃಕಲಹ ಅವರನ್ನು ಸಾಕಷ್ಟು ದುರ್ಬಲಗೊಳಿಸಿದೆ. ತುಂಗಭದ್ರಾನದಿಯ ಕೆಳಗಿನರಾಜ್ಯ ಈಗ ನವಾಬರ ಸೇನೆಯ ನಾಟ್ಯರಂಗವಾಗಿದೆ. ನವಾಬರನ್ನು ಎದುರಿಸಿ ನಿಲ್ಲಬಹುದಾಗಿದ್ದ ಹರಪನಹಳ್ಳಿಯವರು, ರಾಯದುರ್ಗದವರು ತಮ್ಮ ಸೇನೆಯನ್ನು ನವಾಬರ ಊಳಿಗಕ್ಕೆ ಒಪ್ಪಿಸಿ, ಅವರ ಸೇನೆಯಲ್ಲಿ ತಮ್ಮ ಕತ್ತಿ ಮಸೆಯುತ್ತಾ ಕುಳಿತಿದ್ದಾರೆ. ಅವರ ಮಾತು ಬಿಡಿ - ಅವರು ಎಂದಿದ್ದರೂ ನಮ್ಮ ವೈರಿಗಳೇ. ಆದರೆ ನಮ್ಮ ಹಿತೈಷಿಗಳಾಗಿದ್ದ ಕನಕಗಿರಿಯವರು, ಜರಿಮಲೆಯವರು, ಗುಡಿಕೋಟೆಯವರು – ನವಾಬರ ಸೇನೆಯಿಂದ, ಕೃತ್ರಿಮ ಸಂಧಾನದಿಂದ ಪರಾಜಿತರಾಗಿ ನಮ್ಮಲ್ಲಿ ಬಂದು ಸೇರಿದ್ದಾರೆ - ನವಾಬರ ಕ್ರೋಧಕ್ಕೆ ತೈಲವನ್ನೆರೆದು. ನಮ್ಮ ಸುತ್ತಮುತ್ತಲಿನ ದುರ್ಗಗಳಲ್ಲಿ ಕಿಲ್ಲೇದಾರರಾಗಿದ್ದ ಮರಾಠಾಸರದಾರರೂ ಇಂದು ನಮ್ಮ ಪಾಲಿಗೆ ಉಳಿದಿಲ್ಲ. ಈಗ ನವಾಬರ ಮಾರಿಗಣ್ಣು ಬಯಸುವ ಬಲಿಯ ಕೋಣವಾಗಿ ಉಳಿದಿರುವುದು - ನಮ್ಮ ಸಂಸ್ಥಾನವೊಂದೇ. ನಮ್ಮ ಸುತ್ತ ಹೀಗೆ ಮುಳ್ಳುಬೇಲಿ ಬಿಗಿದು, ನಮ್ಮ ಯೋಗಕ್ಷೇಮವನ್ನು ವಿಚಾರಿಸಲು ಬಂದಿದ್ದಾರೆ -ನವಾಬರು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ನವಾಬರು ಈ ಕರೆ ಕಳಿಸಿದ್ದಾರೆ. ಇದೆಲ್ಲವೂ ತಮಗೆ ತಿಳಿಯದ ವಿಷಯವೇನೂ ಅಲ್ಲ. ಆದರೂ ತಮ್ಮ ಇಂದಿನ ಮಾತಿಗೆ, ಯೋಚನೆಗೆ, ನಿರ್ಧಾರಕ್ಕೆ ನೆರವಾಗಲೆಂದು - ಈ ಮಾತುಗಳನ್ನು ನಾವು ನೆನಪಿಸುತ್ತಿದ್ದೇವೆ. ಇದೆಲ್ಲವನ್ನೂ ಪರ್ಯಾಲೋಚಿಸಿ ಉತ್ತರ ಕೊಡಿ - ನವಾಬರ ಪತ್ರಕ್ಕೆ ಏನು ಉತ್ತರ ಕೊಡಬೇಕು ?"

"ಮರಾಠಾ ಸರದಾರರು ದುರ್ಬಲರಾಗಿದ್ದಾರೆ ಎಂದು ನವಾಬರು ತಿಳಿದಿರಬಹುದು. ಆದರೆ ನಾವು ಪ್ರಭುಗಳಿಗೆ ಆಶ್ವಾಸನೆ ಕೊಡುತ್ತೇವೆ - ಇಂದಿಗೂ ಮರಾಠರ ಸೇನೆ ನವಾಬರಿಗೆ ಸಿಂಹ ಸ್ವಪ್ನ. ನಮ್ಮ ಹರಿಪಂತ್, ಪರಶುರಾಮಭಾವೂ ಮೊದಲಾದ ಸರದಾರರು ಚಿತ್ರದುರ್ಗದವರ ಸ್ನೇಹವನ್ನು ಮರೆತಿಲ್ಲ. ಆ ಬಗ್ಗೆ ನಾವು ಭರವಸೆ ಕೊಡುತ್ತೇವೆ - ನಿಮ್ಮ ಸಹಾಯಕ್ಕೆ ನಾವು ಸಿದ್ಧ."

- ಪೇಶ್ವೆಯವರ ವಕೀಲ ಪುರುಷೋತ್ತಮರಾಯ ಹೇಳಿದ.

"ಪುಣೆಯ ಶ್ರೀಮಂತರಲ್ಲಿ ನಮಗೆ ಅಪನಂಬಿಕೆಯಿಲ್ಲ. ಆದರೆ ನಮ್ಮ ಹಿಂದಿನ ಪ್ರಧಾನಿಗಳು ಹೇಳುತ್ತಿದ್ದರು- 'ಪುಣೆ ನಮಗೆ ದೂರ, ಶ್ರೀರಂಗಪಟ್ಟಣ ನಮಗೆ ಹತ್ತಿರ' ಎಂದು. ಈಗ ಮರಾಠಾ ಸರದಾರರು ತಮ್ಮ ರಾಜ್ಯದ ಅಳಿವು ಉಳಿವಿಗಾಗಿ ಅತ್ತ ಇಂಗ್ಲೀಷರು, ಇತ್ತ ನವಾಬರೊಂದಿಗೆ ಹೋರಾಡುತ್ತಿದ್ದಾರೆ. ನಿಜಾಮರ ನೆರವು ನಾಯಿಯ ತಲೆಯ ಮೇಲಿನ ಬುತ್ತಿಯಿದ್ದಂತೆ. ಅವರನ್ನು ನಂಬಿ ಬದುಕಿದವರಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಈಗ ನವಾಬರು ಶ್ರೀರಂಗಪಟ್ಟಣದಷ್ಟೂ ದೂರವಿಲ್ಲ; ಸೀರ್ಯದಷ್ಟು ಹತ್ತಿರ ಬಂದು ಕುಳಿತಿದ್ದಾರೆ - ಹಿಂದೆಂದಿಗಿಂತಲೂ ಬಲಿಷ್ಠರಾಗಿ. ಆದ್ದರಿಂದ ಅವರ ಕಾಗದವನ್ನು ಹಿಂದಿನಷ್ಟು ಹಗುರವಾಗಿ ಕಾಣುವಂತಿಲ್ಲ. ಇದನ್ನು ಯೋಚಿಸಿ ಹೇಳಿ."

- ತಾವು ಹಿಂದಾಡಿದ ಮಾತನ್ನೇ ಮತ್ತಷ್ಟು ಮುಂದುವರೆಸಿ ಹೇಳಿದರು ನಾಯಕರು.

"ನವಾಬರು ಅಷ್ಟು ಬಲಿಷ್ಠರಾಗಿದ್ದರೆ, ಈ ಸ್ನೇಹಪತ್ರವನ್ನು ಕಳಿಸುವ ಅಗತ್ಯವೇನಿತ್ತು?"

-ದೊಡ್ಡ ಮದಕರಿನಾಯಕರು ಕೇಳಿದರು.

"ಸೇನೆಯಂತೆ ಸ್ನೇಹವೂ ನವಾಬರ ಒಂದು ಸಮರತಂತ್ರ." - ನಾಯಕರು ಹೇಳಿದರು.

"ಅದು ನಿಜ. ಆ ಎರಡು ತಂತ್ರಗಳ ಬಳಕೆಯಲ್ಲೂ ನವಾಬರು ನಿಸ್ಸೀಮರು. ಅದು ಎಲ್ಲರಿಗೂ ತಿಳಿದ ವಿಷಯವೇ. ಇಂದು ನಮ್ಮ ಆಸ್ಥಾನಕ್ಕೆ ಬಂದಿರುವ ಪತ್ರವೂ, ನಮ್ಮ ಬಗ್ಗೆ ನವಾಬರು ಹೂಡಲೆಳಸುವ ಸಮರತಂತ್ರದ ಮೊದಲ ಮಿಂಚು. ಇದು ವಿಶ್ವಾಸದ ಓಲೆಯಲ್ಲ, ದ್ರೋಹದ ಮಾರಿಬಲೆ !"

– ಅದುವರೆಗೂ ಮೌನವಾಗಿದ್ದ ಪ್ರಧಾನಿ ಪರಶುರಾಮನಾಯಕ ಹೇಳಿದ.

"ಪ್ರಧಾನಿಗಳ ಮಾತು ಸತ್ಯ. ನವಾಬರು ಕಣ್ಣಿಗೆ ಬಹುಹಿತವಾಗಿ ಕಾಣುವ ಹಾಗೆ ಹರಡಿದ ನುಣುಪುಮಾತಿನ ಕಳ್ಳಉಸುಗಿನ ಮೇಲೆ ಪ್ರಭುಗಳು ನಂಬಿ ಹೆಜ್ಜೆ ಇಡಬಾರದು ಎಂಬುದು ನಮ್ಮ ಅಭಿಪ್ರಾಯ." - ದಳವಾಯಿ ಬಾಣದ ಓಬನಾಯಕ ಹೇಳಿದ.

"ಅಂದರೆ - ನಾವು ನವಾಬರ ಭೇಟಿಗೆ ಹೋಗಬಾರದು...."

- ಸ್ವಲ್ಪ ಅನಿಶ್ಚಯತೆಯಿದ್ದ ಧ್ವನಿಯಲ್ಲಿ ಕೇಳಿದರು, ನಾಯಕರು.

"ನಮ್ಮ ಸೇನೆಯ ಸಾಮರ್ಥ್ಯ ಎಷ್ಟೆಂದು ನವಾಬರಿಗೆ ಗೊತ್ತಿದೆ. ಆದ್ದರಿಂದಲೇ ಈ ನಯವಂಚನೆಯ ಖರೀತ ಬರೆಸಿದ್ದಾರೆ. ಆದ್ದರಿಂದ ತಾವು ಅವರ ಭೇಟಿಗೆ ಹೋಗಬಾರದೆಂಬುದೇ ನಮ್ಮ ಅಭಿಪ್ರಾಯ"

- ಚಪ್ಪೇಚಾವಡಿಯ ದಳವಾಯಿ ಚಿಕ್ಕ ಪರಶುರಾಮನಾಯಕ ಹೇಳಿದ.

"ನವಾಬರು ಬಯಸಿರುವುದು ನಮ್ಮ ಭೇಟಿಯಲ್ಲ, ನಮ್ಮ ತಲೆಯ ಬೇಟೆ ಎಂದು ನಮಗೂ ಅರ್ಥವಾಗಿದೆ...." ನಾಯಕರು ಮಾತನ್ನು ತೂಗುತ್ತಾ ಹೇಳಿದರು.

"ಅದಕ್ಕೇ ತಾವು ಈ ಕಾಗದಕ್ಕೆ ಕುರುಡುಕವಡೆಯ ಕಿಮ್ಮತ್ತನ್ನೂ ಕೊಡಬಾರದು."

- ಹತ್ತಾರು ಜನ ಒಟ್ಟಿಗೇ ಹೇಳಿದರು.

"ಕೊಡಬಾರದು, ನಿಜ. ಆದರೆ ಅದರ ಪರಿಣಾಮ ಏನಾದೀತೆಂದು ಸ್ವಲ್ಪ ಯೋಚಿಸಿ. ಸ್ನೇಹದ ನಿರಾಕರಣೆ ಎಂದರೆ ಸೇನೆಗೆ ಆಹ್ವಾನ. ಇಷ್ಟು ದಿನ ದುರ್ಗದ ಸೇನೆ ಹಲವಾರು ಯುದ್ಧಗಳಲ್ಲಿ ಭಾಗವಹಿಸಿದೆ. ನಾವು ಗೆದ್ದಿದ್ದೇವೆ. ಸೋತಿದ್ದೇವೆ - ರಕ್ತಪಾತಕ್ಕೆ ಹೆದರದೆ. ಇಂದೂ ನಮಗೆ ರಕ್ತದೋಕುಳಿಯಾಟದ ಭಯವಿಲ್ಲ. ತಮಗೂ ಇಲ್ಲ ಎಂದು ನಾವು ಬಲ್ಲೆವು. ಆದರೆ ಒಂದು ಮಾತು ಯೋಚಿಸಿ - ಹಿಂದೆ, ಬಹುಹಿಂದೆ - ನಮ್ಮ ಪೂರ್ವಿಕರ ಕಾಲದಲ್ಲಿ ಒಂದುಬಾರಿ ಮಾತ್ರ, ಚಿತ್ರದುರ್ಗ ನೇರವಾಗಿ ಶತ್ರುದಾಳಿಯ, ಮುತ್ತಿಗೆಯ ಬೇಗೆಯನ್ನು ಅನುಭವಿಸಿತ್ತು – ಸಾಳುವ ನರಸಿಂಹರಾಯನ ಕಾಲದಲ್ಲಿ. ಅಂದಿನಿಂದ ಇಂದಿನವರೆಗೆ - ಬಹಳ ಜನ ನಮ್ಮ ಶಕ್ತಿ ಪರೀಕ್ಷೆ ಮಾಡಿದ್ದಾರೆ. ಆದರೆ ನಡೆದ ಯುದ್ಧಗಳೆಲ್ಲವೂ ದುರ್ಗದಾಚೆಗೆ ನಡೆದವೇ ವಿನಾ - ನೇರವಾಗಿ ಎಂದೂ ದುರ್ಗದ ಕೋಟೆಗೆ ಯುದ್ಧದ ರಕ್ತಸ್ನಾನವಾಗಿಲ್ಲ. ಈ ಬಾರಿ ನಾವು ನವಾಬರ ಆಮಂತ್ರಣವನ್ನು ನಿರಾಕರಿಸಿದರೆ, ಯುದ್ಧ ಮಾರಿ ಮನೆಬಾಗಿಲಿಗೇ ಬರುತ್ತಾಳೆ. ದುರ್ಗದ ಸೇನೆಯಷ್ಟೇ ಅಲ್ಲ, ದುರ್ಗದ ನಾಗರೀಕರು, ಹೆಂಗಸರು, ಮಕ್ಕಳೂ ಆ ಕಾಳ್ಗಿಚ್ಚಿನಲ್ಲಿ ಬೇಯಬೇಕಾಗಿ ಬರುವುದು ಖಂಡಿತ. ನವಾಬರ ಮಾತು ಎಷ್ಟು ಬೆಣ್ಣೆಯಂತೆ ಮೃದುವೋ, ಅವರ ಹೃದಯ ಕೃಷ್ಣಸರ್ಪದಷ್ಟು ವಿಷಪೂರ್ಣ. ಗುತ್ತಿಕೋಟೆಯ ಕತೆಯನ್ನು ತಾವೆಲ್ಲಾ ಕೇಳಿದ್ದೀರ...." – ನಾಯಕರು ಹೇಳಿದರು.

"ಅವರ ರಾಜ್ಯದಾಹ, ರಕ್ತದ ಹಸಿವು ಎಷ್ಟು ದಾರುಣ ಎಂದು ನಮಗೆ ಚೆನ್ನಾಗಿ ಅನುಭವವಾಗಿದೆ.''

- ಹೈದರಾಲಿಯ ದಾಳಿಗೆ ರಾಜ್ಯವನ್ನು ಕಳೆದುಕೊಂಡ ಜರಿಮಲೆ ಬೊಮ್ಮಣ್ಣನಾಯಕರು ಹೇಳಿದರು.

"ಆ ಅನುಭವ ನಮಗೂ ಆಗಬೇಕೆ ?"

- ನಾಯಕರು ನೆರೆದವರನ್ನು ಪರೀಕ್ಷಿಸುವಂತೆ ಕೇಳಿದರು –

"ಊರ ಹೊರಗಿನ ಮಸಣ – ನಗರದಲ್ಲೂ ತನ್ನ ಉರಿಗಾಲು ಚಾಚಬೇಕೇ ?"

"ಸಮರದ ಆಗುಹೋಗುಗಳನ್ನು ನಾವು ಯಾರೂ ಕಾಣದವರಲ್ಲ, ಹಾಗೆಂದು ಬರಬಹುದಾದ ಭೀತಿಗಂಜಿ, ಗುಮ್ಮನ ಕಥೆಗೆ ಹೆದರಿದ ಮಕ್ಕಳ ಹಾಗೆ, ನವಾಬರ ಕೋರಿಕೆಯೇ

ಹುಲಿಯೆಂಬಂತೆ ಹೆದರಿ, ದುರ್ಗದವರನ್ನು ಚಿನ್ನದ ಹರಿವಾಣದಲ್ಲಿಟ್ಟು ಅವರ ಪಾದತಲಕ್ಕೆ ಒಪ್ಪಿಸಬೇಕೇ? ನಮ್ಮನ್ನಾಳುವ ಪ್ರಭುಗಳನ್ನು ನವಾಬರ ಅಪ್ಪಣೆಯ ಆಳಾಗಿ ಮಾಡಬೇಕೇ ? ಅಂಥ ದುರ್ಗ ಇದ್ದರೆಷ್ಟು, ಹೋದರೆಷ್ಟು? ಅದಾಗದ ಮಾತು. ಪುಡಿದುರ್ಗಗಳನ್ನು ಹುಡಿ ಹಾರಿಸಿದ ನವಾಬರು ತಮ್ಮ ಸೇನೆಯ ಪೊಗರನ್ನು ಪರೀಕ್ಷಿಸಿಕೊಳ್ಳಬೇಕು ಎಂದಿದ್ದರೆ, ಅದರ ಕಿಮ್ಮತ್ತು ಎಷ್ಟು ಎಂದು ತೋರಿಸಲು ನಾವು ಸಿದ್ಧವಾಗಿದ್ದೇವೆ. ನಮ್ಮವು ಬಂಡೆಗಲ್ಲಿನಲ್ಲಿ ಬೆಳೆದ ತಲೆಗಳು, ಸುಳಿಗಾಳಿಗೆ ಹಾರುವ ತರಗೆಲೆಗಳಲ್ಲ”

- ಬಾಣದ ಓಬನಾಯಕ ತನ್ನ ಮೀಸೆ ಹುರಿಮಾಡಿ ಹೇಳಿದ.

“ತನ್ನ ತಲೆ ಎಷ್ಟು ಗಟ್ಟಿ ಎಂದು ನವಾಬರು ನೋಡಿಕೊಳ್ಳಬೇಕಾದರೆ, ದುರ್ಗದ ಕೋಟೆಗೆ ಹಣೆ ಗಟ್ಟಿಸಿ ನೋಡಿಕೊಳ್ಳಲಿ.”

- ದೊಡ್ಡ ಮದಕರಿನಾಯಕರು ಕತ್ತಿಯ ಮೇಲೆ ಕೈಯಿಟ್ಟು ಹೇಳಿದರು.

“ಹಿಂದೆ ಯಾವಾಗಲೂ ಖಾವಂದರು, ನವಾಬರ ಖರೀತಕ್ಕೆ ಬದಲು ಹೇಳುವಾಗ ನಮ್ಮನ್ನಿಷ್ಟು ಪರೀಕ್ಷೆ ಮಾಡಿದ್ದಿಲ್ಲ. ತಾವೇ ಮಾಡಬೇಕಾದ ಯೋಚನೆ ಮಾಡಿ, ಹೀಗಾಗಬೇಕು ಎಂದು ಅಪ್ಪಣೆಯಾಗುತ್ತಿತ್ತು. ಈಗ ಹಾಗಿದ್ದಂತಿಲ್ಲ. ಏನೇನೋ ಮಾತು ಹೇಳಿ ನಮ್ಮ ಪರೀಕ್ಷೆ ಮಾಡುತ್ತಿದ್ದಾರೆ. ನಮ್ಮ ನಿಷ್ಠೆಯಲ್ಲಾಗಲಿ, ಪರಾಕ್ರಮದಲ್ಲಾಗಲಿ ಸಂಶಯವಿದ್ದಲ್ಲಿ, ಖಾವಂದರು ನವಾಬರ ಭೇಟಿಗೆ ಹೋಗುವ ಮಾತು ಬಿಟ್ಟು, ನಮಗೆ ಸೀರ್ಯಾ ತೆಗೆದುಕೊಳ್ಳಲು ಅಪ್ಪಣೆಯಾಗಬೇಕು. ಆಗ ನಾವು ನಮ್ಮ ತಾಖತ್, ನಮ್ಮ ಹತಾರಗಳ ಹಿಡಿತ ಎಷ್ಟು ಎಂದು ತೋರಿಸುತ್ತೇವೆ. ನಾವು ಬದುಕಿದ್ದು ಖಾವಂದರು ಲಡಾಯಿಗೆ ಯೋಚನೆ ಮಾಡಬಾರದು.”

- ಅದುವರೆಗೂ ಸುಮ್ಮನಿದ್ದ ಸಲಬತ್‌ಖಾನ್ ಸಿಡಿದೆದ್ದು ಹೇಳಿದ –

“ನಮ್ಮ ತಲೆ, ತಲವಾರ್ ಎರಡೂ ಪಾದಸೇವೆಗೆ ಸಿದ್ಧವಾಗಿದೆ. ಹುಕುಂ ಆಗಲಿ.”

“ಅದು ನಿಜ. ಈಗ ದುಸರಾ ಮಾತಿಗೆ ಸಮಯವಿಲ್ಲ. ರಾಜಾಸಾಹೇಬರು ನವಾಬರ ಕೃತ್ರಿಮಸಂಧಾನದ ಬಗ್ಗೆ ಯೋಚಿಸೋ ಅಗತ್ಯವಿಲ್ಲ. ನಮ್ಮ ಕತ್ತಿಗಳೆಲ್ಲಾ ನವಾಬರ ಸೇನೆಯ ರಕ್ತದ ರುಚಿ ನೋಡಲು ಆತುರಪಡುತ್ತಿವೆ. ಆದ್ದರಿಂದ ರಾಜಾಸಾಹೇಬರು ನವಾಬರ ಭೇಟಿಗೆ ಬರುವುದಿಲ್ಲ ಎಂದು ಹೇಳಿಕಳಿಸಿ, ಮುಂದೆ ಅವರ ಯೋಗಕ್ಷೇಮ ವಿಚಾರಿಸಿಕೊಳ್ಳಲು ನಮಗೆ ಅಪ್ಪಣೆಯಾಗಬೇಕು. ನಮ್ಮ ಕತ್ತಿಗಳ ಬಾಯೊಣಗಿಸಬಾರದು”

- ಎಂದು ಹೇಳಿದ ಶಿವಪ್ರಸಾದ್ ಸಿಂಗ್.

“ರಕ್ತದ ಹಸಿವು ನಿಮ್ಮ ಖಡ್ಗಗಳಿಗಿರುವಷ್ಟೇ ನಮ್ಮ ಕತ್ತಿಗೂ ಇದೆ. ಒಂದು ಪುರುಷಾಯುಷ್ಯಕ್ಕೆ ಸಾಲುವಷ್ಟು ರಕ್ತ ಕುಡಿದಿದ್ದರೂ, ಅದರ ರಕ್ತತೃಷೆಯಿನ್ನೂ ಹಿಂಗಿಲ್ಲ.

ಇಲ್ಲಿರುವವರೆಲ್ಲಾ ಯುದ್ಧ ಮದರು ಎಂದು ನಮಗೆ ಗೊತ್ತಿದೆ. ಆದರೆ ನಮ್ಮ ಕತ್ತಿಗಳ ರಕ್ತತೃಷೆಗೆ, ನಮ್ಮ ಪ್ರಜೆಗಳ ಕಣ್ಣೀರು ಬೆಲೆಯಾಗಬಾರದು ಎಂದು ಇಷ್ಟು ಹೊತ್ತು ಮಾತಾಡಿದೆವು. ನಿಮ್ಮ ಸಾಹಸವನ್ನು ಪರೀಕ್ಷೆ ಮಾಡುವುದಷ್ಟೇ ನಮ್ಮ ಕಾರ್ಯವಲ್ಲ. ಆದ್ದರಿಂದ ಬರಬಹುದಾದ ಮಾರಿಯುದ್ಧದಲ್ಲಿ ಈ ರಾಜ್ಯದ ಮಕ್ಕಳಾದ ಪ್ರಜೆಗಳ ದೃಷ್ಟಿಯಿಂದಲೂ ಚಿಂತಿಸಿ, ಹೇಳಿ ಎಂದು ನಾವು ಕೇಳುತ್ತಿದ್ದೇವೆ." - ನಾಯಕರು ಹೇಳಿದರು.

"ಅಂದರೇನು - ನಿಮ್ಮ ತಲೆಯನ್ನು ನವಾಬರಿಗೆ ಬಲಿಕೊಟ್ಟರೆ, ದುರ್ಗ ಯುದ್ಧದ ಬೇಗೆಯಿಂದ ಪಾರಾಗಬಹುದು ಎಂದು ಯೋಚನೆಯೇ ?"

- ಪ್ರಧಾನಿ ಪರಶುರಾಮನಾಯಕ ಕೇಳಿದ.

"ಆ ಯೋಚನೆ ಮಾಡಿದರೆ ತಪ್ಪೆ?"

"ತಪ್ಪಲ್ಲ ಅನಗತ್ಯ. ನವಾಬರಿಗೆ ಬೇಕಾಗಿರುವುದು ನಿಮ್ಮ ಸಖ್ಯವೂ ಅಲ್ಲ, ನಿಮ್ಮ ತಲೆಯೂ ಅಲ್ಲ - ಈ ರಾಜ್ಯ. ಅದು ತಮಗೂ ಗೊತ್ತು, ನಮಗೂ ಗೊತ್ತು. ಒಂದು ತಲೆಯಿಂದ ಈ ರಾಜ್ಯ ಉಳಿಯುವುದಾಗಿದ್ದರೆ, ಇದು ರಾಜ್ಯತೃಷೆಯಲ್ಲದೆ, ವೈಯಕ್ತಿಕ ದ್ವೇಷವಾಗಿದ್ದರೆ, ಉಳಿದ ಯೋಚನೆ ಮಾಡಬಹುದಾಗಿತ್ತು. ನೀವು ಭೇಟಿಗೆ ಹೋಗಿ, ಬಿಡಿ - ದುರ್ಗಕ್ಕಂತೂ ನವಾಬರ ಪಿಡುಗು ತಪ್ಪಿದ್ದಲ್ಲ. ಆದ್ದರಿಂದ ಕೊನೆಯದಾಗಿ ನಾವು ಹೇಳುವುದಿಷ್ಟೆ : ಏನಾದರೂ ನೆಪವೊಡ್ಡಿ ಪ್ರಭುಗಳು ನವಾಬರ ದರ್ಶನಕ್ಕೆ ಹೋಗಕೂಡದು. ಅವರು ಕೊಟ್ಟ ಕಾಣಿಕೆ, ಖಿಲ್ಲತ್ತುಗಳಿಗೆ ದುಗ್ಗಾಣಿಯಷ್ಟು ಕೊಟ್ಟು ಕಳಿಸಿ. ನಾವು ಯುದ್ಧಕ್ಕೆ ಸಿದ್ಧರಾಗಬೇಕು."

– ಪ್ರಧಾನಿ ಪರಶುರಾಮನಾಯಕ ಹೇಳಿದ.

"ಉಳಿದವರದೂ ಇದೇ ಮಾತೇ ?"

"ನಿಜ –ನವಾಬರಿಗೆ ಇಷ್ಟವಿದ್ದರೆ ಕೊಟ್ಟ ಕಾಣಿಕೆ ಖಿಲ್ಲತ್ತು ತೆಗೆದುಕೊಂಡು ಹೋಗಲಿ. ಇಲ್ಲವೇ ರಣಭೇರಿ ಹೊಡಿಸಲಿ." - ಬಾಣದ ಓಬನಾಯಕ ಹೇಳಿದ.

"ಹಾಗಿದ್ದರೆ ಸರಿ. ಇಲ್ಲಿ ನೆರೆದ ಯಾರೂ ದುರ್ಗದವರ ದುಡುಕುತನದಿಂದ ನಮ್ಮ ಮನೆಗೆ ಯುದ್ಧ ತಂದುಕೊಂಡೆವು ಎಂದು ಹೇಳದಿದ್ದರೆ ಆಯಿತು. ಇದು ಕೇವಲ ದುರ್ಗದವರೊಬ್ಬರೇ ಎದುರಿಸುವ ಯುದ್ಧವಾಗಿದ್ದರೆ, ನವಾಬರಿಗೆ ಉತ್ತರ ಕಳಿಸಲು ನಮಗೆ ಯಾವ ತೊಡಕೂ ಇರುತ್ತಿರಲಿಲ್ಲ. ಆದರೆ, ನಮ್ಮನ್ನು ಲಕ್ಷ್ಯವಾಗಿಟ್ಟುಕೊಂಡು ಹೂಡಿದ ಯುದ್ಧ ನಮ್ಮ ನೆರೆಹೊರೆಯ ಮಿತ್ರರ ಮನೆಗೂ ಹಬ್ಬುತ್ತದೆ. ನಮ್ಮ ಕಾರಣದಿಂದಾಗಿ, ನಮ್ಮವರೆಲ್ಲರ ರಾಜ್ಯಕ್ಕೂ ಸಾವಿನ ಎಳ್ಳುಸಕ್ಕರೆ ಹಂಚಿದಂತಾಗುತ್ತದೆ. ಆದ್ದರಿಂದ ಇದು ನಮ್ಮ ತೀರ್ಮಾನವಾಗದೆ ನಿಮ್ಮೆಲ್ಲರದೂ

ಆಗಬೇಕು. ಹಾಗಾದರೆ, ನಮ್ಮ ತೀರ್ಮಾನ ನಿಮ್ಮೆಲ್ಲರಿಗೂ ಒಪ್ಪಿಗೆಯಿದ್ದರೆ ಪ್ರಧಾನಿಗಳು ಹೇಳಿದ ಹಾಗೆ ಉತ್ತರ ಬರೆಸಲು ಬಂದೀತು"

-ಎಂದು ಹೇಳಿ ನೆರೆದವರೆಲ್ಲರ ಮುಖ ನೋಡುತ್ತಾ ಹೇಳಿದರು ನಾಯಕರು-

"ನಮ್ಮ ನೆಂಟರು, ದಳವಾಯಿಗಳು ಅಷ್ಟೇ ಅಲ್ಲ - ಯಾರಿಗಾದರೂ ನಾವು ನವಾಬರ ಭೇಟಿಗೆ ಹೋಗುವುದರಿಂದ ಒಳಿತಾಗಬಹುದು ಎನ್ನುವ ಯೋಚನೆಯಿದ್ದರೆ ಹೇಳಬೇಕು."

ಯಾರೊಬ್ಬರೂ ಆ ಮಾತಾಡಲಿಲ್ಲ.

ಅದಕ್ಕೆ ಪ್ರತಿಯಾಗಿ –

ಎಲ್ಲರ ಮುಖದಲ್ಲೂ ನವಾಬರನ್ನು ಎದುರಿಸುವ ದೃಢನಿರ್ಧಾರದ ಮುದ್ರೆಯಿತ್ತು.

"ಆಯಿತು. ನಿಮ್ಮ ನಿರ್ಧಾರವೇ ನಮ್ಮ ನಿರ್ಧಾರ"

– ಎಂದು ಮಾತು ಮುಗಿಸಿದರು, ನಾಯಕರು.

೩

"ಅಣ್ಣಾ ನೀವಿಂದು ಆಪ್ತಾಲೋಚನಾಸಭೆಯಲ್ಲಿ ನಡೆದುಕೊಂಡ ರೀತಿಯೇ ನನಗೆ ಅರ್ಥವಾಗಲಿಲ್ಲ."

- ಕುತೂಹಲ, ಸಂದಿಗ್ಧತೆಗಳು ತುಂಬಿದ್ದ ಧ್ವನಿಯಲ್ಲಿ ಕೇಳಿದ ಪರಶುರಾಮನಾಯಕ.

"ಹಾಗಂದರೇನು - ನಮ್ಮ ಇಂದಿನ ವರ್ತನೆಯಲ್ಲಿ ಅಂತಹ ವಿಚಿತ್ರವನ್ನೇನು ಕಂಡೆ ?"

- ಪರಶುರಾಮನಾಯಕನ ಮುಖವನ್ನು ಪರೀಕ್ಷಿಸುತ್ತಾ ಕೇಳಿದ ಮದಕರಿನಾಯಕ.

"ಇಷ್ಟು ದಿನ, ನಾವೇನು ಹೇಳಿದರೂ ನಿರ್ಧಾರ ತೆಗೆದುಕೊಳ್ಳುತ್ತಿದ್ದವರು ನೀವು. ನಿಮ್ಮ ನಿರ್ಧಾರ ನಮಗೆ ಅಪ್ಪಣೆಯಾಗುತ್ತಿತ್ತು. ಆದರೆ ಈ ಬಾರಿ ಹಾಗೆ ಮಾಡದೆ, ಎಲ್ಲವನ್ನೂ ನಮ್ಮ ನಿರ್ಧಾರಕ್ಕೆ ಬಿಟ್ಟರಿ. ಅದೂ ನವಾಬರೊಂದಿಗಿನ ಯುದ್ಧದಂತಹ ಮುಖ್ಯಪ್ರಸಂಗದಲ್ಲಿ. ಇದು ವಿಚಿತ್ರವಲ್ಲವೇ ?"

"ಇದು ಇಷ್ಟು ಮುಖ್ಯಪ್ರಸಂಗವಾದದ್ದರಿಂದಲೇ ನಾವು ಉಳಿದವರು ನಿರ್ಧಾರ ಕೈಕೊಳ್ಳಲಿ ಎಂದು ಬಿಟ್ಟಿದ್ದು. ಅದಕ್ಕಿಂತಲೂ ಮಿಗಿಲಾಗಿ ನಮಗೆ, ಯಾರ ಮನಸ್ಸು ಹೇಗೆ ಎಂಬುದು ತಿಳಿಯುವುದು ಅಗತ್ಯವಾಗಿತ್ತು."

"ತಿಳಿಯಿತೇ ?"

"ನಾವು ನಿರೀಕ್ಷಿಸಿದಂತೆಯೇ ಎಲ್ಲರೂ ಹೇಳಿದರು. ಆದರೆ ಒಬ್ಬರು ಮಾತ್ರ ತುಟಿ ಎರಡು ಮಾಡಲಿಲ್ಲ."

"ಯಾರು ?" – ಚಕಿತನಾಗಿ ಕೇಳಿದ ಪರಶುರಾಮನಾಯಕ.

"ನೀನು ಗಮನಿಸಿರಬಹುದು ಎಂದಿದ್ದೆ ಪರಶುರಾಮಣ್ಣ - ಆದರೆ ಅದು ನಿನ್ನ ಕಣ್ಣಿಗೆ ಬೀಳದಿದ್ದುದು ಪರಮಾಶ್ಚರ್ಯ."

"ಯಾರಿರಬಹುದು - ?"

-ಎಂದು ಅಷ್ಟು ಹೊತ್ತು ಯೋಚಿಸಿ, ಅರ್ಥವಾಗದೆ-

"ಅದಾರು - ನೀವೇ ಹೇಳಿ ?" – ಎಂದು ಕೇಳಿದ ಪರಶುರಾಮನಾಯಕ.

"ಮತ್ತೋಡಿನ ಹಾಲಪ್ಪನಾಯಕರು."

"ಓ-ಅವರೇ. ಅವರು ಎಂದು ತಾನೇ ನಮ್ಮ ವ್ಯವಹಾರದಲ್ಲಿ ಆಸಕ್ತಿವಹಿಸಿದ್ದರು? ಹಿರೇಮದಕರಿನಾಯಕರ ಮೊಮ್ಮಗನಾಗಿಯೂ, ಅವರು ನಮಗೆ ದೂರದವರಂತೆಯೇ ಇದ್ದಾರೆ. ಅವರು ಲಿಂಗಧಾರಣೆ ಮಾಡಿಸಿಕೊಂಡದ್ದು ದೂರವಾಗಿರಲು ಮತ್ತೊಂದು ಕಾರಣವಾಯಿತು. 'ಬೃಹನ್ಮಠದ ಜಗದ್ಗುರುಗಳಿಗೆ ಬೇಸರ ಮಾಡಿದವರು ಬದುಕುವ ಮಕ್ಕಳೇ - ಹಾಲು ಕುಡಿದ ಮಕ್ಕಳೇ ಬದುಕುವುದಿಲ್ಲ, ಇನ್ನು - ವಿಷ ಕುಡಿದ ಮಕ್ಕಳು ಬದುಕುತ್ತಾರೆಯೇ ?' ಎಂದು ಅವರಿವರ ಮುಂದೆ ಆಡಿಕೊಂಡ ಮಾತೂ ನಮ್ಮ ಕಿವಿಗೆ ಬಿದ್ದಿದೆ."

"ಅಷ್ಟೇ ಅಲ್ಲ ಪರಶುರಾಮಣ್ಣ. ತಂದೆಯನ್ನು ಯುದ್ಧದಲ್ಲಿ ಸೋಲಿಸಿ, ಸೆರೆಯಲ್ಲಿಟ್ಟವರು ಚಿತ್ರದುರ್ಗದವರು ಎನ್ನುವ ಹಳೆಯ ದ್ವೇಷವನ್ನು ಇನ್ನೂ ಅವರು ಮರೆತಿಲ್ಲ."

"ಅದನ್ನು ನೆನಪಿನಲ್ಲಿಟ್ಟ ಅವರು ಮಗಳಿಗೆ ಉಡುಗೊರೆ ಎಂದು, ತಾನು ಗೆದ್ದ ರಾಜ್ಯವನ್ನು ಅಳಿಯನಿಗೆ ಕೊಟ್ಟಿದ್ದನ್ನು ಮರೆತುಬಿಟ್ಟಿದ್ದಾರಲ್ಲಾ, ಅದು ಆಶ್ಚರ್ಯ. ಮಲ್ಲವ್ವನಾಗತಿಯವರು ಕೈಹಿಡಿಯದಿದ್ದರೆ, ಮತ್ತೋಡು ಸಿದ್ಧಪ್ಪನಾಯಕರು ದುರ್ಗದ ಸೆರೆಯಲ್ಲಿಯೇ ತಮ್ಮ ಆಯುಷ್ಯದ ಕೊನೆಯ ಕ್ಷಣವನ್ನು ಎಣಿಸಬೇಕಾಗುತ್ತಿತ್ತು – ಎನ್ನುವುದನ್ನು ಅವರಿಗೆ ನೆನಪಿಸಬೇಕೇನೋ – ಬಿಡಿ - ಅದಾವ ರಾಜಾಧಿರಾಜರು ಎಂದು ಅವರನ್ನು ಲೆಕ್ಕದಲ್ಲಿಡಬೇಕು. ನೀವು ಹೇಳಿ – ಇವತ್ತಿಗೆ ಮೂರು ದಿನದಲ್ಲಿ ಮತ್ತೋಡುನಾಯಕರಿಗೆ ಹಳೆಯ ನೆನಪು ಮಾಡಿಸುತ್ತೇನೆ – ತಮ್ಮದು ಎಂದು ಹೇಳಿಕೊಳ್ಳಲು ರಾಜ್ಯವಿಲ್ಲದ ಹಾಗೆ ಮಾಡಿ." –

-ತಾತ್ಸಾರದಿಂದ ಹೇಳಿದ ಪರಶುರಾಮನಾಯಕ.

"ಮತ್ತೋಡಿನವರ ರಾಜ್ಯ, ದಂಡು-ದಾಳಿಗಳಿಗೆ ನಾವು ಹೆದರುತ್ತಿಲ್ಲ. ಪಟ್ಟಕ್ಕೆ ಬಂದ ದಿನದಿಂದಲೂ ನಾವು ಅವರ ವರ್ತನೆಯನ್ನು ನೋಡುತ್ತಿದ್ದೇವೆ. 'ನಿಮ್ಮ ಊರು ಕತ್ತಿಗಳಿಗಲ್ಲ

ಹೆಸರಾಗಿರುವುದು, ಹೆಂಗಸರ ಕೈಬಳೆಗಳಿಗೆ’ ಎಂದು ಯಾವತ್ತೂ ಹೇಳುತ್ತಿದ್ದೆವು. ಆದರೆ ಅವರು ನಮಗೆ ವಿರೋಧಿಗಳಾದರೆ ಗಂಟಲುಗಾಣವಾಗಬಹುದು. ನಮ್ಮ ದಂಡಿಗೆ ಬೇಕಾದ ಕಬ್ಬಿಣದ ಅದುರು ಸಾಗಿಬರುವ ದಾರಿ - ಅವರಿಗೆ ಬಹುಸಮೀಪ. ಅಲ್ಲದೆ ನಮ್ಮಲ್ಲಿ ದ್ವೇಷ ಮೂಡಿದರೆ, ನವಾಬರಿಗೆ ನಮ್ಮ ರಾಜ್ಯದ ಒಂದು ಕಡೆಯ ಬಾಗಿಲು ತೆರೆದಂತಾಗುತ್ತದೆ ಎಂದು ಸುಮ್ಮನಿದ್ದೇವೆ. ಇಲ್ಲವಾದರೆ ಜಾನಕಲ್ಲು, ಹೊಸದುರ್ಗಗಳಿಗೆ ಮತ್ತೋಡು ಎಷ್ಟು ದೂರ ? ಅದಕ್ಕೆಂದೇ ಈ ದಿನ ಉಳಿದೆಲ್ಲರಿಗಿಂತಲೂ ಮುಖ್ಯವಾಗಿ, ಅವರನ್ನು ಲಕ್ಷ್ಯದಲ್ಲಿಟ್ಟುಕೊಂಡೇ ನಾವು ಮಾತನಾಡಿದ್ದು ಅವರು ಬಾಯಲ್ಲಾದರೂ ನಿಮ್ಮೊಂದಿಗೆ ನಾವಿದ್ದೇವೆ ಎನ್ನುತ್ತಾರೇನೋ ಎಂದು ನೋಡಿದೆವು. ಆದರೆ ಅವರು ಕುತ್ತಿಗೆಗೆ ಬಾವು ಬಂದವರ ಹಾಗೆ ಬಿಗಿದುಕೊಂಡೇ ಕೂತಿದ್ದು ಹೋದರು. ಅವರ ಕಡೆ ಸ್ವಲ್ಪ ಲಕ್ಷ್ಯ ಕೊಡಬೇಕು, ಪರಶುರಾಮಣ್ಣ. ಹೊಸದುರ್ಗದ ದೊಡ್ಡ ಮದಕರಿನಾಯಕರಿಗೆ, ಜಾನಕಲ್ಲು ಭರಮಣ್ಣನಾಯಕರಿಗೆ, ಅವರ ಮೇಲೆ ಕಣ್ಣಿಡುವಂತೆ ಹೇಳು. ಹಾಗೇ ಇವತ್ತಿನ ಸಭೆಯಲ್ಲಾದ ತೀರ್ಮಾನದ ಬಗ್ಗೆ ಯಾರೇನು ಮಾತಾಡುತ್ತಾರೆ ಎಂಬುದರ ಕಡೆ ಸ್ವಲ್ಪ ಗಮನವಿರಲಿ.”

- ತನ್ನ ಹೃದಯದ ಭಾವನೆಯನ್ನು ವಿವರಿಸಿ ಹೇಳಿದ, ಮದಕರಿನಾಯಕ.

“ಕಾಶಣ್ಣನಾಯಕರು ಮಲಗಿ ನಿದ್ರಿಸುತ್ತಿಲ್ಲ, ಅಣ್ಣ. ದುರ್ಗದಲ್ಲೀಗ ಹಳೆಯ ನೀರಿಗಿಂತ ಹೊಸ ನೀರು ಹೆಚ್ಚಾಗಿದೆ. ಅತ್ತಿತ್ತ ನವಾಬರಿಂದ ಸೋತವರೆಲ್ಲಾ ಆಶ್ರಯಕ್ಕೆಂದು ನಮ್ಮಲ್ಲಿಗೆ ಬರುತ್ತಿದ್ದಾರೆ. ನಮ್ಮ ಸೇನೆಯ ಸಂಖ್ಯಾಬಲವೂ ದಿನದಿನಕ್ಕೆ ಹೆಚ್ಚಾಗುತ್ತಿದೆ -”

“ಅದು ನವಾಬರ ಕಣ್ಣಿಗೆ ಕಿಚ್ಚೂ ಆಗುತ್ತಿದೆ. ಹೊಸ ನೀರು-ಹಳೆಯ ನೀರು ಎಲ್ಲಾ ಕಲೆತು ರಾಡಿಯಾದರೆ, ಕುಡಿದು ಬದುಕುವುದು ನಮಗೆ ಕಷ್ಟವಾಗುತ್ತದೆ. ಅಂದಹಾಗೆ, ನಮ್ಮ ಹಳೆಯ ಪ್ರಧಾನಿಗಳು ಹೇಗಿದ್ದಾರೆ, ಪರಶುರಾಮಣ್ಣ?”

-ಎಂದು ಉಳಿದ ಮಾತಿನ ನಡುವೆ ತಟಕ್ಕನೆ ನರಸಪ್ಪಯ್ಯನವರನ್ನು ಜ್ಞಾಪಿಸಿಕೊಂಡು ಕೇಳಿದ, ಮದಕರಿನಾಯಕ.

“ಅವರನ್ನು ಮರೆತರಾದೀತೇ ? ಆಗಾಗ ನಾನೇ ಅವರ ಮನೆಗೆ ಹೋಗಿ ಯೋಗಕ್ಷೇಮ ವಿಚಾರಿಸಿಕೊಂಡು, ಆಗಾಗ ನಮ್ಮ ಕೆಲಸದಲ್ಲಿ ಅವರ ಸಲಹೆ ಕೇಳುವುದನ್ನು ಮಾಡುತ್ತಿದ್ದೇನೆ”

- ಪರಶುರಾಮನಾಯಕ ಹೇಳಿದ.

“ಅವರು ಈಗ ಹೇಗಿದ್ದಾರೆ?”

“ಹೊರಗೆ ನೋಡಲು ಎಂದಿನಂತೆಯೇ ಇದಾರೆ. ಆದರೂ ಅಷ್ಟು ದೀರ್ಘಕಾಲ ಪ್ರಧಾನಿಯಾಗಿ, ನಾಯಕರ ಬಲಗೈಯಾಗಿ ದುರ್ಗವನ್ನು ಆಳಿದವರು, ಈ ಇಳಿವಯಸ್ಸಿನಲ್ಲಿ

ಸಾಮಾನ್ಯ ನಂತಿರಬೇಕಾಗಿ ಬಂದಿರುವುದು, ಒಳಗೇ ಅವರ ಹೃದಯವನ್ನು ಕೊರೆಯುತ್ತಿದೆ. ಅದನ್ನು ದೇವತಾರ್ಚನೆಯಲ್ಲಿ ಮರೆಯಲು ಯತ್ನಿಸುತ್ತಿದ್ದಾರೆ. ಹೀಗೇ ಮಾತಿಗೆ ಮಾತು ಬಂದಾಗ, 'ನಮ್ಮ ಕಾಲ, ಕೆಲಸ ಮುಗಿಯಿತು. ತೀರ್ಥಯಾತ್ರೆಗೆ ಹೋಗಿಬರಬೇಕು. ಹುಟ್ಟಿದ್ದು ಸಾರ್ಥಕ ಮಾಡಿಕೊಳ್ಳಬೇಕು' ಎನ್ನುತ್ತಾರೆ. ಅವರು ಈ ವಯಸ್ಸಿನಲ್ಲಿ ಪೇಟೆಪ್ರಾಣದೇವರ ಗುಡಿಗೆ, ಕೋಟೆಯಾಚೆಯ ವೆಂಕಟರಮಣಸ್ವಾಮಿಯ ದೇವಸ್ಥಾನಕ್ಕೆ ನಡೆದುಕೊಂಡು ಹೋಗುವುದನ್ನು ನೋಡಿದಾಗ ನನಗೆ ಕರುಳು ಇರಿದ ಹಾಗಾಗುತ್ತದೆ."

- ವ್ಯಥೆ ತುಂಬಿದ ಧ್ವನಿಯಲ್ಲಿ ಹೇಳಿದ ಪರಶುರಾಮನಾಯಕ.

"ಅವರು ನಡೆದೇಕೆ ಹೋಗಬೇಕು, ಪರಶುರಾಮಣ್ಣ. ಅವರು ಪ್ರಧಾನಿಪದವಿ ಬಿಟ್ಟ ಮಾತ್ರಕ್ಕೆ, ಅವರಿಗೆ ಕೊಟ್ಟ ಮರ್ಯಾದೆಗಳನ್ನು ಹಿಂತೆಗೆದುಕೊಳ್ಳಲು ನಾವೇನೂ ಹೇಳಲಿಲ್ಲವಲ್ಲ. ಯಾರಾದರೂ ಅವರಿಗೆ ಅಂಥ ಅಪಚಾರ ಮಾಡಿದರೆ ?"

- ಮಿಡುಕಿ ಕೇಳಿದ, ಮದಕರಿನಾಯಕ.

"ನಾವಾರೂ ಹಿಂತೆಗೆದುಕೊಳ್ಳಲಿಲ್ಲ. ಅವರೇ ಬೇಡವೆಂದುಬಿಟ್ಟರು. 'ಗಂಡನೇ ಹೋದ ಮೇಲೆ ತಾಳಿ - ಬಳೆಗಳೇಕೆ, ಪದವಿಯೊಂದಿಗೆ ಬಂದಿದ್ದವೆಲ್ಲಾ ಅದರೊಂದಿಗೇ ಹೋಗಲಿ' ಎಂದುಬಿಟ್ಟರು. 'ಈ ವಯಸ್ಸಿನಲ್ಲಿ ನೀವು ನಡೆಯುವುದೇ?' ಎಂದದ್ದಕ್ಕೆ, 'ಇಷ್ಟು ದಿನ ನನಗೆ ಕಾಲಿದ್ದದ್ದೇ ಮರೆತುಹೋಗಿತ್ತು. ಈಗ ಅದು ನೆನಪಿಗೆ ಬಂದಿದೆ. ಮೇನೆಯಲ್ಲ, ಕಾಲೇ ಶಾಶ್ವತ' ಎಂದುಬಿಟ್ಟರು. ಅವರು ಆ ಮಾತಾಡಿದಾಗ, ಅದನ್ನು ಕೇಳಿ ನನ್ನ ಕರುಳು ಹಿಂಡಿದಂತಾಯಿತು. ಅಷ್ಟೇ ಅಲ್ಲ - ತಮ್ಮ ಹಳೆಯ ದಳವಾಯಿ, ಅಧಿಕಾರಿ ಸ್ನೇಹಿತರನ್ನು ನೋಡಲು, ಮಾತಾಡಲು ಕೊತ್ವಾಲಚಾವಡಿಗೆ ಅನುಮತಿಗೆ ಹೇಳಿಕಳಿಸುತ್ತಾರೆ."

"ಏಕೆ ? ಸ್ನೇಹಿತರನ್ನು ನೋಡಲು, ಮಾತಾಡಲು ಕೊತ್ವಾಲಚಾವಡಿಯ ಅನುಮತಿ ಬೇಕು ಎಂದು ಯಾರಾದರೂ ಮುತ್ಸಾಳರು ಅವರಿಗೆ ಹೇಳಿದರೇ – ಪರಶುರಾಮಣ್ಣ, ಯಾರು ಈ ಅಪಚಾರ ಮಾಡಿದರು? ದುರ್ಗದ ಪ್ರಧಾನಿಗಳಾಗಿದ್ದವರನ್ನು ಹೇಗೆ ನಡೆಸಿಕೊಳ್ಳಬೇಕೆಂಬುದು ಮರೆತುಹೋಗಿದೆಯೇ ನಮ್ಮ ಜನಕ್ಕೆ ?" – ನೊಂದು ಕೇಳಿದ ಮದಕರಿನಾಯಕ.

"ನಾವು ಯಾರೂ ಮರೆತಿಲ್ಲ, ಅಣ್ಣ. ಆದರೆ ಅದನ್ನು ಯಾರೂ ನೆನಪಿಸುವುದೂ ಅವರಿಗೇ ಬೇಡವಾಗಿದೆ. ಮಾತಿನಲ್ಲಿ ಯಾರಾದರೂ ಮರೆತು 'ಪ್ರಧಾನಿಗಳೇ' ಎಂದರೆ, ತಟಕ್ಕನೆ – 'ನನ್ನ ಹೆಸರು ಅದಲ್ಲ, ನರಸಪ್ಪಯ್ಯ' ಎನ್ನುತ್ತಾರೆ; ಆ ಮಾತಾಡಿದವರು ತಮಗೆ ಅಪಮಾನ ಮಾಡಿದ ಹಾಗೆ."

“ಅತ್ಯಂತ ಸ್ವಾಭಿಮಾನಿಗಳು ನರಸಪ್ಪಯ್ಯನವರು. ಅವರು ಹಾಗೆ ನಡೆದುಕೊಳ್ಳುವುದು ಅವರ ಗುಣಕ್ಕೆ ಸರಿ. ಆದರೆ ನಾವು ಅವರನ್ನು ಮರೆತಿಲ್ಲ ಎಂಬಂತೆ ಅವರನ್ನು ನೋಡಿಕೊಳ್ಳಬೇಕಾದುದು ನಮ್ಮ ಕರ್ತವ್ಯ, ಪರಶುರಾಮಣ್ಣ. 'ರಾಜಕೀಯವಿರಸ-ನಮ್ಮನ್ನು ಅವರು ಸಲ್ಲಿಸಿದ ಸೇವೆಯ ಬಗ್ಗೆ ಕುರುಡಾಗಿಸಿಲ್ಲ, ನಾವು ಕೃತಘ್ನರಲ್ಲ' ಎಂಬುದನ್ನು ಅವರಿಗೆ ನೆನಪಿಗೆ ತರುವಂತೆ ನಾವು ವರ್ತಿಸಬೇಕು. ಅರಮನೆಯ ಎಲ್ಲ ಸಭೆ-ಸಮಾರಂಭಗಳಿಗೂ ಅವರಿಗೆ ಆಹ್ವಾನ ಹೋಗುತ್ತಿದೆಯೇ, ಪರಶುರಾಮಣ್ಣ?”

“ಹೋಗುತ್ತಿದೆ, ಆದರೆ ಅವರು ಬರುತ್ತಿಲ್ಲ.”

“ಅದು ಒಳಿತಾಗಲಿಲ್ಲ... ಒಳಿತಾಗಲಿಲ್ಲ.... ನಾವೊಮ್ಮೆ ಅವರನ್ನು ನೋಡಬೇಕು, ಪರಶುರಾಮಣ್ಣ, ಇಷ್ಟು ದಿನ ಅವರನ್ನು ನೋಡದೆ ಬಿಟ್ಟುದೇ ನಮ್ಮ ತಪ್ಪಾಯಿತು.”

- ತೀವ್ರ ಪಶ್ಚಾತ್ತಾಪವಿದ್ದ ಧ್ವನಿಯಲ್ಲಿ ಹೇಳಿದ, ಮದಕರಿನಾಯಕ.

“ನೀವು ಅವರನ್ನು ಮರೆತಿಲ್ಲ ಎಂಬುದನ್ನು ನಾನು ಹಲವಾರು ಬಾರಿ, ಹಲವಾರು ರೀತಿಯಲ್ಲಿ ಹೇಳಿದ್ದೇನೆ. ನೀವೇ ಒಮ್ಮೆ ಅವರನ್ನು ನೋಡಬೇಕೆಂದರೆ – ಕಷ್ಟ.”

“ಏಕೆ ?”

“ಅವರು ಅರಮನೆಗೆ ಬರುವುದಿಲ್ಲ. ನಾಯಕರೇ ಅವರ ಮನೆಗೆ ಹೋಗುವುದು ಸೂಕ್ತವಲ್ಲ.”

“ಈ ಎರಡಕ್ಕೂ ಭಂಗಬರದ ರೀತಿಯಲ್ಲೊಂದು ಅವಕಾಶ ಕಲ್ಪಿಸು.”

“ಆಯಿತು, ಪ್ರಯತ್ನಿಸುತ್ತೇನೆ” - ಎಂದು ಹೇಳಿದ ಪರಶುರಾಮನಾಯಕ.

“ಮರೆಯಬೇಡ; ಹಾಗೇ ಮತ್ತೋಡಿನ ನಮ್ಮ ನೆಂಟರನ್ನೂ, ನಾಳೆ, ನಾಳಿದ್ದು ನವಾಬರ ವಕೀಲರನ್ನು ದುರ್ಗದಿಂದ ರವಾನೆಮಾಡು. ನಾವಿನ್ನು ಅವರನ್ನು ನೋಡುವುದಿಲ್ಲ. ನೋಡಬೇಕು ಎಂದರೆ ಇಲ್ಲ ಎನ್ನಲು ಕಾರಣ ಗೊತ್ತಲ್ಲ....”

“ಗೊತ್ತಿಲ್ಲದೆ ಏನು? 'ನಾಯಕರ ಮೈಗೆ ಹುಷಾರಿಲ್ಲ' - ಅವರ ಎಲ್ಲ ಪ್ರಶ್ನೆಗೂ ಅದೇ ಉತ್ತರ” – ಎಂದು ನಗುತ್ತಾ ಹೇಳಿದ ಪರಶುರಾಮನಾಯಕ.

* * *

ನಾಯಕರ ಪರವಾಗಿ ಪರಶುರಾಮನಾಯಕ ಕೊಟ್ಟ ಉತ್ತರವನ್ನು ಕೇಳಿ, ದುರ್ಗದವರು ನವಾಬರಿಗೆ ಕೊಟ್ಟ ಕಾಣಿಕೆಗಳನ್ನು ಸ್ವೀಕರಿಸಿ 'ದುರ್ದಾನ' ತೆಗೆದುಕೊಂಡವರಂತೆ, ಹೊರಟು ಹೋದ, ಹೈದರಾಲಿಯ ವಕೀಲ - ತನ್ನ ಪರಿವಾರದೊಂದಿಗೆ.

೪

ಜನ - ಜನ - ಜನ –

ಹೊರಗೆ –

ಎಲ್ಲೆಲ್ಲಿ ನೋಡಿದರೂ ಬಗೆಬಗೆಯ ಬಣ್ಣದ, ರೀತಿಯ ಹಬ್ಬದ ಬಟ್ಟೆಗಳನ್ನು ಧರಿಸಿ, ವಿಶಾಲವಾದ ರಾಜಮಾರ್ಗವೂ ಕಿರುಓಣಿಯನ್ನಾಗಿ ಮಾಡಿದಷ್ಟು ಕಿಕ್ಕಿರಿದ ಜನ; ಹೆಂಗಸರು, ಗಂಡಸರು, ಮಕ್ಕಳು – ಚಿತ್ರದುರ್ಗದಲ್ಲಿ. ಮಾರ್ಗದ ಇಬ್ಬದಿಯಲ್ಲೂ ಬಗೆಬಗೆಯ ಮಣಿಸರಕಿನ ಸಾಮಾನುಗಳು, ಬಟ್ಟೆಗಳು, ಮಕ್ಕಳ ಆಟದ ಸಾಮಾನುಗಳು; ಬೀದಿಯಲ್ಲೇ ಒಲೆಹೂಡಿ, ಮೂಗನ್ನು ಕೆರಳಿಸಿ, ನಾಲಗೆಯಲ್ಲಿ ನೀರೂರಿಸುವ ಬಿಸಿ ತಿಂಡಿಗಳನ್ನು ಕಬ್ಬಿಣದ ಬಾಣಲೆಗಳಲ್ಲಿ ಕರಿಯುತ್ತಿರುವ ತಿಂಡಿಯ ಅಂಗಡಿಗಳು; ಜನರಿಂದ ಭಿಕ್ಷೆಬೇಡುವ ಭಿಕ್ಷುಕರು; ಜನರ ಜೇಬಿನ ಹಣ ಹೊರತರಿಸುವ ಬಗೆಬಗೆಯ ಮನರಂಜನೆಯನ್ನೊದಗಿಸುವ ಆಟಗಾರರು; ದುರ್ಗದ ಹಲವಾರು ದೇವತೆಗಳಿಗೆ ತಾವು ಹರಕೆ ಕಟ್ಟಿದ ಕಾಣಿಕೆಗಳನ್ನು ಒಪ್ಪಿಸಲು ಬಂದ ಭಕ್ತರು; ಕೆಲಸವಿದ್ದವರು, ಇಲ್ಲದಿದ್ದವರು, ದುರ್ಗವನ್ನು ನೋಡಲು ಬಂದವರು, ನೋಡಬಂದವರನ್ನು ನೋಡುತ್ತಾ ಹಲರೀತಿಯಲ್ಲಿ ತಮ್ಮ ಕಣ್ಣು-ಮನಸ್ಸುಗಳನ್ನು ತೃಪ್ತಿಪಡಿಸಿಕೊಳ್ಳುತ್ತಾ, ಏನೊಂದೂ ಕೆಲಸವಿಲ್ಲದಿದ್ದರೂ, ಕೈತುಂಬಾ ಕೆಲಸವಿದ್ದವರಂತೆ ಗಡಿಬಿಡಿಯಾಗಿ, ಅಕ್ಕಪಕ್ಕದವರ ಮೈಸವರಿಕೊಂಡು ಓಡಾಡುವವರು; ಹೆಚ್ಚು ಜನ ಕಿಕ್ಕಿರಿದು, ಗದ್ದಲವಾಗದಿರಲಿ ಎಂದು ಕಾವಲು ಕಾಯುತ್ತಾ ಓಡಾಡುವ ಸಶಸ್ತ್ರರಾಜಭಟರು –

ಏಕನಾಥೇಶ್ವರಿಯ 'ಸಿಡಿ'ಗೆಂದು ಬಂದು, ನೆಂಟರಿಷ್ಟರ ಮನೆಗಳಲ್ಲಿ ಬೀಡುಬಿಟ್ಟ ಜನ –

ಮನೆಯೊಳಗೆ –

ಎಷ್ಟು ಜನವೋ, ಅಷ್ಟೂ ಬಗೆಯ ಸದ್ದು –

- ಈ ಎಲ್ಲ ಸದ್ದು ಗದ್ದಲಗಳ ನಡುವೆಯೂ, ಸುತ್ತ ಹಬ್ಬದ ಗಾಢನೀರವತೆಯಲ್ಲಿ, ಏಕಾಂಗಿಯಾಗಿ ನಿಂತವನಂತೆ ಮನೆಯ ಮುಂದಣ ಜಗುಲಿಯ ಕಂಭವನ್ನೊರಗಿ ನಿಂತು, ನೋಡುತ್ತಿದ್ದರು -ನರಸಪ್ಪಯ್ಯ.

ಯಾವುದೊಂದೂ ಭಾವವಿಲ್ಲದೆ, ನೋಡುವ ಅವರ ಕಣ್ಣುಗಳಿಗೆ ಮನೆಯ ಮುಂದೆ ಹರಿಯುತ್ತಿದ್ದ ಜನವಾಹಿನಿ - ನಿರ್ಜನ ಬೀದಿಯಂತಿತ್ತು. ಮಲಗಿದವರನ್ನೂ ಎಚ್ಚರಿಸುವ ಜನಶಬ್ದ

ಅವರ ಕಿವಿಗಳಿಗೆ ಸೋಕಿದಂತಿರಲಿಲ್ಲ. ಅವರ ಮೈ ಕಂಭವನ್ನೊರಗಿ ನಿಂತಿತ್ತು. ಮನಸ್ಸಾವುದೋ ನಿಶ್ಶಬ್ದ ಜಲದಲ್ಲಿ ಯಾವ ಗುರಿಯೂ ಇಲ್ಲದೆ ತೇಲಾಡುತ್ತಿತ್ತು.

ನಿಂತಿದ್ದರು ನರಸಪ್ಪಯ್ಯ –

ನಿಂತಿರುವುದೂ ನೆನಪಿಲ್ಲದವರಂತೆ;

ತಮ್ಮತ್ತ ನೋಡುವವರ ಪರಿವೆಯೂ ಇಲ್ಲದಂತೆ.

ಅವರ ಪಾಡಿಗೇ ಅವರನ್ನು ಬಿಟ್ಟಿದ್ದರೆ, ಹಾಗೇ ಇದ್ದು ಬಿಡುತ್ತಿದ್ದರೇನೋ –

ದೇವಾಲಯದಿಂದ ಪೂಜೆ ಮುಗಿಸಿಕೊಂಡು, ಮನೆಯ ಮುಂದೆ ನಿಲ್ಲಿಸಿದ ಮೇನೆಯಿಂದಿಳಿದು ಬಂದ ಭಾಗೀರಥೀಬಾಯಿ, ಮನೆಯ ಮುಂದೆ ನಿಂತ ತಮ್ಮ ಪತಿಯನ್ನು ಗಮನಿಸಿ –

"ಭಂಡಾರ ಹಚ್ಚಿಕೊಳ್ಳಿ"

-ಎಂದು ಹೇಳಿ, ಕೈಯಲ್ಲಿ ಪ್ರಸಾದವಿದ್ದ ಸಣ್ಣ ಬೆಳ್ಳಿಯ ತಟ್ಟೆಯನ್ನು ಅವರ ಕಣ್ಣ ಮುಂದೆ ಒಡ್ಡಿ, ಎಚ್ಚರಿಸದಿದ್ದರೆ.

ಆ ಮಾತು ಕೇಳಿ ಇಹಲೋಕಕ್ಕಿಳಿದು ಬಂದ ನರಸಪ್ಪಯ್ಯ –

"ಪ್ರಸಾದವೇ – ಕೊಡು"

– ಎಂದಷ್ಟೇ ಹೇಳಿ, ತಮ್ಮ ಕಣ್ಣೆದುರಿನ ತಟ್ಟೆಯಲ್ಲಿದ್ದ ಭಂಡಾರವನ್ನು ಭ್ರೂಮಧ್ಯದಲ್ಲಿ ಧರಿಸಿ, ಒಂದು ಹೂವನ್ನು ತೆಗೆದುಕೊಂಡು, ಯಾಂತ್ರಿಕವಾಗಿ ಕಣ್ಣಿಗೊತ್ತಿಕೊಂಡು, ಕಿವಿಯ ಸಂದಿನಲ್ಲಿಟ್ಟುಕೊಂಡು –

"ಪೂಜೆಯೆಲ್ಲಾ ಚೆನ್ನಾಗಿ ನಡೆಯಿತೆ ?" – ಎಂದು ಕೇಳಿದರು.

"ಅದಕ್ಕೇನು ಕಡಮೆ. ನೋಡಿದಷ್ಟೂ ಸಾಲದು - ಅಷ್ಟು ಲಕ್ಷಣವಾಗಿತ್ತು ಪೂಜೆ. ಯಾವುದಕ್ಕೇನೂ ಕಡಿಮೆಯಾಗಲಿಲ್ಲ. ಆದರೆ ಒಂದೇ ಬೇಸರ -"

- ಭಾಗೀರಥೀಬಾಯಿ ನಸು ಅಸಮಾಧಾನದ ಛಾಯೆಯಿದ್ದ ಧ್ವನಿಯಲ್ಲಿ ಹೇಳಿದಳು.

ಬೇಸರ –

ಆ ಮಾತು ಕೇಳಿ, ನರಸಪ್ಪಯ್ಯನವರ ಮೈ ಚುರುಕಾಗಿ ಕೇಳಿದರು-

"ಏನು ಬೇಸರವಾಯಿತು ?"

"ಹೋಗುವಾಗ ನಿಮ್ಮನ್ನಷ್ಟು ಕರೆದೆ – ಯಾವುದಕ್ಕೆ ಹೋಗದಿದ್ದರೂ ಬೇಡ. ವರ್ಷಾವಧಿ ಹಬ್ಬದ ದಿನ, ದೇವಸ್ಥಾನಕ್ಕೆ ಬನ್ನಿ ಅಂತ. ನನ್ನ ಮಾತು ನೀವು ಕೇಳಲಿಲ್ಲ."

"ಅದಕ್ಕೇನಾಯಿತು ?"

“ಅಲ್ಲಿ ಬಂದಿದ್ದವರೆಲ್ಲಾ ’ಏನು ಒಬ್ಬರೇ ಬಂದಿರಲ್ಲಾ, ಯಜಮಾನರು ಏಕೆ ಬರಲಿಲ್ಲ ?’ ಎಂದು ಕೇಳುವವರೇ, ನಿಮಗೆ ಬರೋಲ್ಲ ಅನ್ನೋದು ಸುಲಭವಾಯ್ತು. ಅಷ್ಟು ಜನಕ್ಕೆ ಉತ್ತರ ಕೊಡೋದು ಎಷ್ಟು ಕಷ್ಟ....”

“ಅಷ್ಟೇ ತಾನೇ.”

-ಅದುವರೆಗೂ ಇದ್ದ ಚುರುಕುತನ ಕಡಿಮೆಯಾಗಿ, ಮತ್ತೆ ಜಡವಾದ ಧ್ವನಿಯಲ್ಲಿ ಕೇಳಿದರು, ನರಸಪ್ಪಯ್ಯ

“ಅವರಿವರು ಕೇಳಿದ್ದರೆ, ನಾನೂ ನಿಮ್ಮ ಹಾಗೇ ಹೇಳಬಹುದಾಗಿತ್ತು. ಆದರೆ ನಾಯಕರ ತಾಯಿಯವರೇ ಕೇಳಿದರು...”

“ಅರಮನೆಗೂ ನಮಗೂ ಋಣಾನುಸಂಬಂಧ ಕಡಿದುಹೋಯಿತು. ಆ ಮಾತು ಬಿಡು”

- ಹರಿತವಾಗಿ ಹೇಳಿದರು, ನರಸಪ್ಪಯ್ಯ.

“ಹೀಗೆ ಮಾತಾಡೋರಿಗೆ ಯಾರೇನು ಹೇಳೋದು - ಹೀಗೇ ಒಂದು ಸಣ್ಣ ಮಾತಿಗೆ ಇದ್ದೊಬ್ಬ ಮಗನನ್ನು ಮನೆ, ಊರು ಬಿಡಿಸಿಬಿಟ್ಟು, ಹಬ್ಬಹರಿದಿನ ಅಂದರೆ ಕಣ್ಣೀರು ಹಾಕೋ ಹಾಗೆ ಮಾಡಿದಿರಿ....ಎಲ್ಲಿದ್ದಾನೋ- ಹೇಗಿದಾನೋ –?”

ಆ ಮಾತು ಕೇಳಿ, ನರಸಪ್ಪಯ್ಯನವರ ಧ್ವನಿ ಮತ್ತಷ್ಟು ಬಿರುಸಾಗಿ –

“ಬೀದೀಲಿ ನಿಂತೇನು ಪುರಾಣ. ಮಾತು ಕೇಳದಿದ್ದ ಮೇಲೆ ಮಗನಾದರೂ ಒಂದೇ ದೊರೆಯಾದರೂ ಒಂದೇ. ಈಗ ಆ ಹಳೆಯದೆಲ್ಲ ಅಗತ್ಯವಿಲ್ಲ. ಒಳಗೆ ಹೋಗು”

-ಎಂದರು ಅಪ್ಪಣೆ ಮಾಡುವಂತೆ.

“ಆಯಿತು – ಯಾವತ್ತೂ ನನ್ನದಿಷ್ಟೇ ನೀವು ಹೇಳಿದಷ್ಟು ಕೇಳುವುದು. ನನ್ನ ಹತ್ತಿರ ಹೀಗೆ ಮಾತಾಡಿದಿರಿ. ಅದೇನೋ ಮಲ್ಲವ್ವನಾಗತಿಯರು ನಿಮ್ಮನ್ನು ನೋಡಬೇಕು ಅಂದರು. ಆಕೆಗೂ ಹೀಗೇ ಹೇಳಬೇಡಿ - ಅವರು ಬಂದರೆ.”

- ಕಣ್ಣಲ್ಲಿ ಜಿನುಗಿದ ನೀರನ್ನು ಒರೆಸಿಕೊಳ್ಳುವ ಪ್ರಯತ್ನವನ್ನೂ ಮಾಡದೆ ಹೇಳಿದಳು ಭಾಗೀರಥೀಬಾಯಿ.

“ಯಾವ ಮಲ್ಲವ್ವನಾಗತಿಯವರು ?”

“ಮತ್ತೋಡುನಾಯಕರ ತಾಯಿ.”

“ಕಾರಣ ಏನಂತೆ ?”

“ಏನು ಅಂತ ಹೇಳಲಿಲ್ಲ. ’ನಿಮ್ಮ ಯಜಮಾನರನ್ನು ನೋಡಬೇಕು, ಯಾವಾಗ ಬಿಡುವಾಗಿರುತ್ತಾರೆ ?’- ಎಂದು ಕೇಳಿದರು. ’ಯಾವಾಗಲೂ ಅವರಿಗೆ ಬಿಡುವೆ. ನಿಮ್ಮ ಅನುಕೂಲ

ಅನಾನುಕೂಲ ನೋಡಿಕೊಂಡು ಬನ್ನಿ' - ಎಂದು ಹೇಳಿದೆ. ಅವರೇ ಬರುತ್ತಾರೋ, ನಿಮ್ಮನ್ನೇ ಕರೆಸಿಕೊಳ್ಳುತ್ತಾರೋ - ನೀವು ಏನು ಹೇಳುತ್ತೀರೋ ಹೇಳಿ, ನಿಮ್ಮಿಷ್ಟ ಬಂದಹಾಗೆ ಮಾಡಿ"

-ಎಂದು ಮನೆಯೊಳಗೆ ಹೋದಳು, ಭಾಗೀರಥೀಬಾಯಿ.

"ನಾವು ಬೇಡವೆಂದರೂ, ಈ ಅರಮನೆಯ ಸೊಂಕು ನಮ್ಮನ್ನು ಬಿಡುವುದಿಲ್ಲ. 'ನಮ್ಮ ಯಜಮಾನರು ಈಗ ಯಾರನ್ನೂ ನೋಡುವುದಿಲ್ಲ' ಎನ್ನುವುದಕ್ಕೇನಾಗಿತ್ತು ? ಈ ಹೆಣ್ಣು-ಬುದ್ಧಿಯ ಹಣೆಬರಹವೇ ಇಷ್ಟು. ಬೇಡ ಎಂದರೆ ಹೋದಳು, ಬೇಡವಾದ ಸುದ್ದಿ ತಂದಳು – ಆದಷ್ಟು ಬೇಗ ಈ ಊರು ಬಿಡುವುದೇ ಸರಿ"

- ಎಂದು ತಮಗೆ ತಾವೇ ಗೊಣಗಿಕೊಂಡರು, ನರಸಪ್ಪಯ್ಯ. ಮನೆಯ ಮುಂದೆ ನಿಂತಿದ್ದ ಮೇನೆಯವನನ್ನು ನೋಡಿ –

"ಬಾಡಿಗೆ ಎಷ್ಟು ಕೊಡಬೇಕು ?" – ಎಂದು ಕೇಳಿದರು.

"ನಾವು ಬಾಡಿಗೆ ಕೇಳಲಿಕ್ಕೆ ನಿಂತ್ಕೊಳಲಿಲ್ಲ, ಬುದ್ಧಿ, ಬರ್ತೀವೀಂತ ಹೇಳಿ ಹೋಗೋಣಾಂತ ನಿಂತ್ಕಂಡಿದೀವಿ. ನೀವು ಅವ್ವಾವರ ಹತ್ತಿರ ಏನೋ ಮಾತಾಡ್ತಾ ಇದ್ದಿರಿ."

- ಮೇನೆಯ ಆಳೊಬ್ಬ ಹೇಳಿದ.

"ಬಾಡಿಗೆ ಬೇಡ. ಹಾಗಾದರೆ ಇದು ಯಾರ ಮನೆಯ ಮೇನೆ ?"

"ಅರಮನೆಯದು ಬುದ್ಧಿ. ಅವ್ವಾ ಅವರನ್ನು ಕರಕೊಂಡೋಗಿ ಬಿಟ್ಟು ಬನ್ನಿ ಅಂತ ಅಪ್ಪಣೆ ಆಯ್ತು, ಬಂದ್ವಿ. ನಾವಿನ್ನು ಬರ್ತೀವಿ, ಬುದ್ಧಿ"

- ಎಂದು ಮೊದಲು ಮಾತನಾಡಿದ ಮೇನೆಯಾಳು ಹೇಳಿದ. ಉಳಿದವರೂ ನರಸಪ್ಪಯ್ಯನವರಿಗೆ ನಮಸ್ಕರಿಸಿ, ಬರಿದಾದ ಮೇನೆಯನ್ನು ಹೊತ್ತುಕೊಂಡು ಹೋದರು, 'ದಾರಿ....ದಾರಿ' ಎಂದು ಕೂಗುತ್ತಾ.

'ಅರಮನೆಯ ಮೇನೆ.'

ಆ ಮಾತು ಕೇಳಿದ ನರಸಪ್ಪಯ್ಯ ಕಾಣದೆ ಹಾವು ಮೆಟ್ಟಿದವರಂತೆ ಮಿಡುಕುತ್ತಾ ಮನೆಯೊಳಗೆ ಹೋಗಿ –

"ಲೇ - ಭಾಗೀರಥೀ....ಅರಮನೆ ಮೇನೇಲಿ ಬರೋಕೆ ನಿನಗೆ ಯಾರು ಹೇಳಿದರು?"

- ಎಂದು ಚಾವಟಿಯಿಂದ ಬಾರಿಸುವಂತೆ ಕೇಳಿದರು.

"ಏನು ಆಗಬಾರದ್ದಾಯಿತು ಅಂತ ಹಾಗೆ ಕೂಗೀರ. ಅಮ್ಮನೋರ ದೇವಸ್ಥಾನದಲ್ಲಿ ರಾಜಮಾತೆಯವರೇ ಮಾತನಾಡಿಸಿದರು ಅಂತ ಹೇಳಲಿಲ್ವೆ ? ಅವರೇ ಹೇಳಿದರು - 'ಈ ಚೈತ್ರಮಾಸದ ಉರಿಬಿಸಲಿನಲ್ಲಿ ಹೇಗೆ ಹೋಗ್ತೀರಿ. ಮೇನೆ ಕಳಸ್ತೀನಿ, ಹೋಗಿ' ಅಂತ. ಬೇಡಾಂತ

ನಾನೆಷ್ಟು ಹೇಳಿದರೂ ಕೇಳದೆ ಕಳಿಸಿದರು, ಬಂದೆ. ಅದೇನು ಮಾಡಬಾರದ ಕೆಲಸ ಮಾಡಿದ ಹಾಗಾಯಿತು ಅಂತ ಅಷ್ಟು ಅಬ್ಬರಿಸುತ್ತಿದ್ದೀರ. ಅವರು ಹೇಳಿದ್ದಕ್ಕೆ ಬೇಡ ಅನ್ನಬೇಕಾಗಿತ್ತೇನು ?" – ಎಂದು ಒಳಗಿನಿಂದಲೇ ಕೇಳಿದಳು, ಭಾಗೀರಥೀಬಾಯಿ.

"ಹೌದು - ಬೇಡ ಎನ್ನಬೇಕಾಗಿತ್ತು. ಅವರು ಕಳಿಸಿದರು, ನೀನು ತಂದೆ – ಈ ಅರಮನೆಯ ಹಂಗು. ಇನ್ನು ಮುಂದೆ ಕೊಟ್ಟರೆ ಬೇಡ ಎನ್ನಬೇಕು"

– ಎಂದು ಕಟ್ಟಪ್ಪಣೆ ಮಾಡಿದಂತೆ ಹೇಳಿ, ತಮಗೆ ತಾವೇ –

"ಮತ್ತೇಕೆ ಆರಂಭವಾಯಿತೋ, ಇಷ್ಟು ದಿನ ತಣ್ಣಗಿದ್ದ ಅರಮನೆಯ ಶನಿಕಾಟ. ಬರಲಿ.... ಬರಲಿ....ಹೇಗೆ ಹೇಗೆ ಬರುತ್ತದೋ ಬರಲಿ...." - ಎಂದು ಹೇಳಿಕೊಂಡರು.

ಆ ಯೋಚನೆ – ಮನದೊಳಗೇ ಕುದಿಯುತ್ತಿದ್ದ ನರಸಪ್ಪಯ್ಯನವರ ನಾಲಗೆಗೆ ಹಬ್ಬದ ಹೋಳಿಗೆಯೂಟ ರುಚಿಯಾಗುವಂತೆ ಮಾಡಲಿಲ್ಲ.

ಏನೋ ಅಪಶಕುನ ಕಂಡವರಂತಿದ್ದರು.

* * *

ಹೇಗೆ ಬರುವುದೋ ಎಂದು ನರಸಪ್ಪಯ್ಯನವರ ಚಿಂತೆ, ನಾಯಕರ ಅತಿಥಿಗೃಹವಾದ 'ಗೌರಿ ವಿಲಾಸ'ದ ಕರಣಿಕರ ರೂಪದಲ್ಲಿ ಆ ಸಂಜೆ ಬಂದು-

"ಮತ್ತೋಡಿನ ಮಲ್ಲವ್ವನಾಗತಿಯರು ತಮ್ಮನ್ನು ನೋಡಬಯಸುತ್ತಾರೆ. ಸಮಯ ತಿಳಿಸಬೇಕು" - ಎಂದು ಆತ ಕೇಳಿದ.

"ಅವರಿಗೆ ನಮ್ಮಲ್ಲೇನು ಕೆಲಸ? ನರಸಪ್ಪಯ್ಯ ಈಗ ದುರ್ಗದ ಪ್ರಧಾನಿಯಲ್ಲ, ನಮಗೂ ಅರಮನೆಗೂ ಸಂಬಂಧವಿಲ್ಲ, ಎಲ್ಲಿಗೂ ಬರುವುದಿಲ್ಲ ಎಂದು ತಿಳಿಸಿಬಿಡಿ"

-ಕಡ್ಡಿ ಮುರಿದು ತುಂಡು ಮಾಡಿದಂತೆ ಹೇಳಿದರು, ನರಸಪ್ಪಯ್ಯ

"ತಾವು ಆ ಕಡೆ ಬರುತ್ತಿಲ್ಲ ಎನ್ನುವ ವಿಷಯ ಅರಿಕೆ ಮಾಡಿಕೊಂಡೆ."

"ಹಾಗಿದ್ದ ಮೇಲೆ ಇನ್ನೇನು ?"

"ಅವರಿಗೆ ನಿಮ್ಮನ್ನು ನೋಡಲೇಬೇಕಾದ ಕೆಲಸವಿದೆಯಂತೆ. ಅವರೇ ತಮ್ಮಲ್ಲಿಗೆ ಬರುತ್ತಾರಂತೆ" - ಕರಣಿಕ ಹೇಳಿದ.

"ಅದಾಗದ ಮಾತು. ನಾಗತಿಯರು ಸಾಮಾನ್ಯನಾದ ನನ್ನಲ್ಲಿಗೆ ಬರುವುದು ಕ್ರಮಲೋಪ. ಅದಕ್ಕೆ ಅವಕಾಶವಿಲ್ಲ ಎನ್ನಿ."

"ಅದನ್ನು ಸೂಕ್ಷ್ಮವಾಗಿ ತಿಳಿಸಿಯಾಯಿತು. ಆದರೂ 'ಹೇಳಿದಷ್ಟು ಮಾಡಿ' ಎಂದು ಅಪ್ಪಣೆಯಾಯಿತು. ಈ ಸಲ ಅವರು ತಮ್ಮನ್ನು ನೋಡಲೇಬೇಕೆಂದು ಬಂದಿದ್ದಾರಂತೆ. ಆದ್ದರಿಂದ 'ಸಮಯ ಕಲ್ಪಿಸಿಕೊಳ್ಳಬೇಕು, ನಿರಾಶೆ ಮಾಡಬಾರದು ಎಂದು ಹೇಳಿ' ಎಂದು ಅಪ್ಪಣೆಯಾಯಿತು. ನಾನೇನು ಹೇಳಬೇಕು - ಅವರಿಗೆ ?"

-ಎಂದು ಕೈಮುಗಿದು ಕೇಳಿದ ಕರಣಿಕ.

"ನೋಡದಿದ್ದರೆ ಆಗುವುದಿಲ್ಲ ಎಂದು ಹೇಳಿದರೇ ?"

"ಹಾಗೇ ಇತ್ತು - ಅವರ ಮಾತಿನ ರೀತಿ."

"ಸರಿ. ಅವರು ನಾಳೆ ಅಪರಾಹ್ನ ಬಿಸಿಲಿಳಿಸಿಕೊಂಡು ಬರಲಿ"

-ಎಂದು ಅನಿವಾರ್ಯವಾಗಿ ತಲೆಬಾಗಿದಂತೆ ಹೇಳಿ –

"ಈ ಮಾತು ಅವರಿಗೆ ಹೇಳುವ ಮೊದಲು, ಮಲ್ಲವ್ವನಾಗತಿಯರು ನಮ್ಮ ಮನೆಗೆ ಬರುವ ವಿಷಯವನ್ನು ಪ್ರಧಾನಿ ಪರಶುರಾಮನಾಯಕರಿಗೆ ತಿಳಿಸಿ. ಅವರು ಆಗಬಹುದು ಎಂದು ಹೇಳಿದ ಮೇಲೆ, ನಾಗತಿಯವರಿಗೆ ಸುದ್ದಿ ಕೊಡಿ. ಹಾಗೇ ನಾವು ಮಲ್ಲವ್ವನಾಗತಿಯವರೊಂದಿಗೆ ಮಾತಾಡುವಾಗ, ಅವರ ಕಡೆಯವರೊಬ್ಬರು ನಾಗತಿಯವರ ಜೊತೆ ಬರಬೇಕು. ಇಷ್ಟಕ್ಕೆ ಪ್ರಧಾನಿಗಳು ಒಪ್ಪಿದರೆ, ಆಮೇಲೆ ಮಲ್ಲವ್ವನಾಗತಿಯವರಿಗೂ ಎಲ್ಲಾ ಹೇಳಿ, ಆಗಲೂ ಅವರು ಬರುತ್ತೇವೆ ಎಂದರೆ ಬರಲು ಹೇಳಿ"

- ಶಾಸನ ಮಾಡುವ ಧ್ವನಿಯಲ್ಲಿ ಹೇಳಿದರು ನರಸಪ್ಪಯ್ಯ.

"ಆಯಿತು, ತಾವು ಅಪ್ಪಣೆ ಮಾಡಿದಂತೆ ಹೇಳುತ್ತೇನೆ."

"ಈ ವಿಷಯದಲ್ಲಿ ಎಲ್ಲಿ ಲೋಪವಾದರೂ ನಾವು-ಅಲ್ಲ - ನಾನು ಮಲ್ಲವ್ವನಾಗತಿಯರನ್ನು ನೋಡುವುದು ಸಾಧ್ಯವಿಲ್ಲ. ಎಲ್ಲಾ ನಾನು ಹೇಳಿದಂತೆಯೇ ನಡೆಯಬೇಕು."

"ಅಪ್ಪಣೆ" – ಎಂದಷ್ಟೇ ಹೇಳಿದ ಕರಣಿಕ.

"ಸರಿ, ನೀವಿನ್ನು ಬರಬಹುದು."

-ಎಂದು ಕರಣಿಕನನ್ನು ಕಳಿಸಿ, ಹಾಗೇ ಯೋಚಿಸುತ್ತಾ ಕುಳಿತರು ನರಸಪ್ಪಯ್ಯ–

'ಏಕಿರಬಹುದು, ಮಲ್ಲವ್ವನಾಗತಿಯವರು ನನ್ನನ್ನಿಷ್ಟು ಅವಸರವಾಗಿ ನೋಡಲು ಕಾರಣವೇನಿರಬಹುದು ?'

ಮಲ್ಲವ್ವನಾಗತಿ-

ಹಿರೇ ಮದಕರಿನಾಯಕರ ಮಗಳು, ಮತ್ತೋಡು ಪಾಳಯಗಾರನಾದ ಹಾಲಪ್ಪನಾಯಕನ ತಾಯಿ.

ದುರ್ಗದ ಇತಿಹಾಸದಲ್ಲಿ ಅದೊಂದು ವಿಚಿತ್ರ ಘಟನೆ –

ಹಿರೇ ಮದಕರಿನಾಯಕರ ಕಾಲದಲ್ಲಿ ಮತ್ತೋಡಿನ ನಾಯಕರಾಗಿದ್ದ ಹಾಲಪ್ಪನಾಯಕರು ತೀರಿಕೊಂಡು, ಅವರ ಇಬ್ಬರು ಮಕ್ಕಳಾದ ದೊಡ್ಡಾಲನಾಯಕ, ಸಿದ್ದಪ್ಪನಾಯಕರಲ್ಲಿ ಸಿಂಹಾಸನಾಧಿಕಾರಕ್ಕಾಗಿ ಯುದ್ಧವಾಯಿತು. ಆ ಯುದ್ಧದಲ್ಲಿ ಹಿರಿಯಮಗ ದೊಡ್ಡಾಲನಾಯಕ ಹಿರೇ ಮದಕರಿನಾಯಕರ ನೆರವು ಕೇಳಿದ. ಹಿರೇ ಮದಕರಿನಾಯಕರು ದೊಡ್ಡಾಲನಾಯಕನ ನೆರವಿಗೆ ನಿಂತು, ಆಗ ನಡೆದ ಯುದ್ಧದಲ್ಲಿ ಸಿದ್ಧಪ್ಪನಾಯಕನನ್ನು ಸೆರೆ ಹಿಡಿದು ತಂದು ಚಿತ್ರದುರ್ಗದ ರಾಜಕಾರಾಗೃಹದಲ್ಲಿಟ್ಟಿದ್ದರು. ಅದೇನು ಕರ್ಮಧರ್ಮಸಂಯೋಗವೋ, ಮಲ್ಲವ್ವ ರಾಜಪುತ್ರಿ, ಸಿದ್ಧಪ್ಪನಾಯಕರ ಮೇಲೆ ಮನಸ್ಸಾಗಿ, ಮಗಳ ಮೇಲಿನ ವ್ಯಾಮೋಹದಿಂದ ಹಿರೇ ಮದಕರಿನಾಯಕರು, ಆಕೆಯನ್ನು ಸಿದ್ಧಪ್ಪನಾಯಕನಿಗೆ ಕೊಟ್ಟು ವಿವಾಹಮಾಡಿದುದೇ ಅಲ್ಲದೆ, ಆ ವೇಳೆಗೆ ಸಿಂಹಾಸನಾಧಿಕಾರಿಯಾಗಿದ್ದ ದೊಡ್ಡಾಲನಾಯಕನನ್ನು ಕೆಳಗಿಳಿಸಿ, ಸಿದ್ಧಪ್ಪನಾಯಕನಿಗೆ ಮತ್ತೋಡಿನ ಪಟ್ಟ ಕಟ್ಟಿದರು. ಮತ್ತೋಡು ನಾಯಕರ ಪತ್ನಿಯಾದ ಮಲ್ಲವ್ವನಾಗತಿ, ಲಿಂಗಧಾರಣೆ ಮಾಡಿಸಿಕೊಂಡು ಪತಿಯಂತೆ ವೀರಶೈವಳಾದಳು. ಇವರು ನಾಯಕರು, ಅವರು ವೀರಶೈವರು - ಇದು ಒಂದಾಗಬೇಕಾಗಿದ್ದ ಎರಡು ಮನೆತನಗಳನ್ನು ಎರಡಾಗಿ ಮಾಡಿತು. ಮಲ್ಲವ್ವನಾಗತಿ ದುರ್ಗದ ಅರಮನೆಯ ಮಗಳಾಗಿಯೂ ಊಟ, ಉಪಚಾರ ಮಾಡುವುದನ್ನು ನಿಲ್ಲಿಸಿದಳು. ಇದು ಹಿರೇ ಮದಕರಿನಾಯಕರಿಗೆ ಬೇಸರವಾದರೂ ಮಗಳ ಮೇಲಿನ ಮೋಹದಿಂದ, ಮಗಳು ಇದ್ದಲ್ಲಿ ಸುಖವಾಗಿರಲಿ ಎಂದುಬಿಟ್ಟರು – ತಾವೂ ಅಲ್ಲಿಗೆ ಹೋಗಿ ಬರುವುದನ್ನು ನಿಲ್ಲಿಸಿ. ಅದೊಂದು ರೀತಿಯಲ್ಲಿ ಅವರಿಗೆ ಕೊರಗಾಗಿದ್ದರೆ, ಪಟ್ಟಕ್ಕೆ ಬರುವವರೆಗೂ ವಿಧೇಯನಂತಿದ್ದ ಸಿದ್ಧಪ್ಪನಾಯಕ, ಪಟ್ಟಕ್ಕೆ ಬಂದ ನಂತರ ದುರ್ಗದವರ ಬಗ್ಗೆ ಅಸಮಾಧಾನವನ್ನೇ ಬೆಳೆಸಿಕೊಂಡ – ಸೋಲಿಸಿ, ಸೆರೆಯಲ್ಲಿಟ್ಟಿದ್ದನ್ನು ಮರೆಯದೆ. ಆದರೆ ಆ ಕಿನಿಸು ಅಂತರಂಗದಲ್ಲಿತ್ತೇ ಹೊರತು ಪ್ರಕಟವಾಗಿರಲಿಲ್ಲ. ಸಿದ್ಧಪ್ಪನಾಯಕ ತೀರಿಕೊಂಡು ಅವನ ಮಗ ಹಾಲಪ್ಪನಾಯಕ ಪಟ್ಟಕ್ಕೆ ಬಂದ ಬಳಿಕಲೂ ಒಳಗಿನ ಕಿಡಿಯನ್ನು ಆರಿಸುವ ಪ್ರಯತ್ನ ಮಾಡದೆ, ತಂದೆಯ ಕಾಲದ ವೈಮನಸ್ಯವನ್ನೇ ಮುಂದುವರೆಸಿದ್ದ. ಇದು ತಿಳಿದಿದ್ದರೂ ಮಲ್ಲವ್ವನಾಗತಿಯ ಮುಖ ನೋಡಿಕೊಂಡು ಚಿತ್ರದುರ್ಗದವರು ಸುಮ್ಮನಿದ್ದರು. ಹೀಗಾಗಿ ನೆಂಟಸ್ತಿಕೆ ತೋರಿಕೆಯದಾಯಿತೇ ವಿನಾ, ಸಹಜವಾಗಲಿಲ್ಲ. ಈಗಲೂ ಹಾಗೆಯೇ ಇದ್ದಿತು - ಬೂದಿಯೊಳಗಿನ ಕೆಂಡದಂತೆ.

ಹೀಗಿರುವಾಗ –

'ಆಕೆ ತಮ್ಮ ಮನೆಗೆ ಏಕೆ ಬರಬೇಕು ? ತನ್ನಿಂದ ಆಕೆಗೆ ಏನಾಗಬೇಕು ?'

ಅದನ್ನು ಚಿಂತಿಸುತ್ತಾ, ಚಿಂತಿಸುತ್ತಾ ಮದುವೆಗೆ ಮೊದಲು ತಾವು ನೋಡಿದ ಮಲ್ಲವ್ವ, ಮದುವಣಗಿತ್ತಿ, ಮದುವೆಯಾದ ಮೇಲೆ ಗಂಡನ ತಪ್ಪನ್ನು ಮನ್ನಿಸಬೇಕೆಂದು ತಂದೆಯ ಕಾಲಿಗೆ ಬಿದ್ದ ಮಲ್ಲವ್ವನಾಗತಿ - ನೂರಾರು ನೆನಪುಗಳು ಮರುಕಳಿಸಿ ಕಣ್ಮುಂದೆ ನಿಂತವು.

ನುಗ್ಗಿ ಬಂದ ಹಳೆಯ ನೆನಪುಗಳೆಲ್ಲವನ್ನೂ ಬಲವಂತವಾಗಿ ಬದಿಗೊತ್ತಿದರು, ನರಸಪ್ಪಯ್ಯ

ಅವರ ಆ ಎಲ್ಲಾ ಪ್ರಯತ್ನವನ್ನೂ ಮೀರಿ –

ಚಿಂತೆ-ನೆನಪುಗಳು ಬೇಡಬೇಡವೆಂದರೂ ಬಂದು ಕಾಡಿ –

- ಆ ಯೋಚನೆಯಲ್ಲೇ ಅವರಿಗೆ,

ಅರ್ಥವಾಗದ ಯಾವುದೋ ವಿಚಿತ್ರ ಸುಳಿಯೊಂದು ತಮ್ಮನ್ನು ಯಾವುದೋ ಕಾಣದ ಲೋಕಕ್ಕೆ ಸೆಳೆದೊಯ್ಯುತ್ತಿರುವಂತೆ ಅನಿಸಿ –

“ನನ್ನ ಹಣೆಯಲ್ಲಿ ಇನ್ನೂ ಏನೇನು ಬರೆದಿದೆಯೋ, ಆಗಲಿ”

-ಎಂದು ಸಮಾಧಾನ ಹೇಳಿಕೊಂಡರೂ, ಮಾತಿನ ಸಮಾಧಾನ ಮನಸ್ಸಿನಲ್ಲಿ ಮೂಡಲಿಲ್ಲ.

ಮರುದಿನ ಇಳಿ ಅಪರಾಹ್ನದ ವೇಳೆಯಲ್ಲಿ, ಬಂಗಾರದ ಪಂಚಕಲಶದ ರಾಜಲಾಂಛನವನ್ನು ಹೊತ್ತ ಮೇನೆ ನರಸಪ್ಪಯ್ಯನವರ ಮನೆಯ ಮುಂದೆ ಬಂದು ಇಳಿಯಿತು - ರಾಜಭಟರ ರಕ್ಷಣೆಯಲ್ಲಿ.

ಮಲ್ಲವ್ವನಾಗತಿಯ ಸ್ವಾಗತಕ್ಕೆಂದು ಓರಣವಾದ ಮನೆಯ ಮುಂಬಾಗಿಲಿನಲ್ಲಿ ಭಾಗೀರಥಿ ಬಾಯಿಯೇ ಮುಂದಾಗಿ ಹೋಗಿ, ತಲೆಯ ಮೇಲೆ ಮುಖ ಕಾಣಿಸದಂತೆ ಸೆರಗಿನ ಮುಸುಗು ಧರಿಸಿದ ಮಲ್ಲವ್ವನಾಗತಿಯನ್ನು ಕಂಡು, ಮನೆಯೊಳಗೆ ಆಕೆಯನ್ನು ಕರೆತಂದು, ಮನೆಯ ಹಜಾರದಲ್ಲಿ ಆಕೆ ಕೂಡಲೆಂದು ಸಿದ್ಧಪಡಿಸಿದ ಆಸನದಲ್ಲಿ ಕುಳ್ಳಿರಿಸಿ, ಕುಡಿಯಲು ಪಾನಕ ತಂದುಕೊಟ್ಟು –

“ತಾವೇ ಮನೆಗೆ ಬಂದದ್ದು ನಮ್ಮ ಭಾಗ್ಯ. ಪಾನಕ ಕುಡಿದು ದಣಿವಾರಿಸಿಕೊಂಡು ಮುಂದಿನ ಮಾತಾಡಬಹುದು” – ಎಂದು ಹೇಳಿದಳು.

ಆ ಉಪಚಾರ ಮುಗಿದ ಬಳಿಕ –

"ನಾನು ಒಳಗಿರುತ್ತೇನೆ. ಏನು ಬೇಕಾದರೂ ಕೇಳಿ. ಸಂಕೋಚ ಮಾಡಿಕೊಳ್ಳಬಾರದು"

-ಎಂದು ಹೇಳಿ ಭಾಗೀರಥೀಬಾಯಿ ಒಳಮನೆಗೆ ಹೋದಳು.

ಆ ಬಳಿಕ, ಉಳಿದ ಮಾತು ಆರಂಭಿಸುವ ಮುನ್ನವೇ ನರಸಪ್ಪಯ್ಯ –

"ಪ್ರಧಾನಿಗಳ ಕಡೆಯವರು ಯಾರು ಬಂದಿದ್ದಾರೆ ?" – ಎಂದು ಕೇಳಿದರು.

"ಇದೇನು ಮಾತು, ಪ್ರಧಾನಿಗಳೇ -" ಮಲ್ಲವ್ವನಾಗತಿ ಏನೋ ಹೇಳಹೋದಳು.

"ಈ ಮನೆಯಲ್ಲಿ ಮಾತನಾಡುವ ಮೊದಲು ನೀವು ನೆನಪಿನಲ್ಲಿಡಬೇಕಾದುದು 'ನಾನೀಗ ದುರ್ಗದ ಪ್ರಧಾನಿಯಲ್ಲ' ಎಂಬುದನ್ನು 'ನಾನಿನ್ನೂ ಪ್ರಧಾನಿ' ಎಂಬ ಭ್ರಮೆ ತಮಗಿದ್ದರೆ ಯಾವ ಮಾತೂ ಬೇಡ."

-ಮೃದುವಾದ ಧ್ವನಿಯಲ್ಲಿಯೇ ನಿರ್ದಾಕ್ಷಿಣ್ಯವಾಗಿ ಹೇಳಿದರು ನರಸಪ್ಪಯ್ಯ.

"ಇದೆಲ್ಲಾ ಏನು ನಡೆಯುತ್ತಿದೆ - ನನಗೊಂದೂ ಅರ್ಥವಾಗುತ್ತಿಲ್ಲ. ನಿಮ್ಮನ್ನು ನಾನು ಕಾಣಲು, ನನ್ನನ್ನು ನೀವು ಕಾಣಲು ಮೂರನೆಯವರ ಪರವಾನಿಗೆ, ಪಂಚಾಯಿತಿಕೆ ಬೇಕೇ ?"

"ಆ ಪ್ರಶ್ನೆಗೆ ಉತ್ತರ ಕೊಡಲು ನನಗೆ ಇಷ್ಟವಿಲ್ಲ. ತಾವು ಬಂದದ್ದೇಕೆ ತಿಳಿಸಿ – ರಾಜಕೀಯ ವಿಷಯವಿದ್ದರೆ ದಯವಿಟ್ಟು ಈಗಿನ ಪ್ರಧಾನಿ ಪರಶುರಾಮನಾಯಕರಲ್ಲಿ ಮಾತಾಡಿ. ಅದು ಬಿಟ್ಟು ಬೇರೆ ಮಾತೇನಿದೆ - ನಮ್ಮ ನಿಮ್ಮ ನಡುವೆ ?"

"ನೀವು ಪ್ರಧಾನಿಗಳು ಎಂದು ನಾವು ನಿಮ್ಮಲ್ಲಿಗೆ ಬಂದಿಲ್ಲ. ಮಗಳ ಹಾಗೆ ಬಂದಿದ್ದೇನೆ. ಆಡುವ ಮಾತೂ ಹೆತ್ತ ಕರುಳಿನ ಮಾತು. ಆ ಮಾತನ್ನೆಲ್ಲಾ ಮೂರನೆಯವರು ಕೇಳಿಸಿಕೊಳ್ಳಬೇಕೇ?" – ನೊಂದು ಕೇಳಿದಳು ಮಲ್ಲವ್ವನಾಗತಿ.

"ಆ ಸ್ನೇಹ, ವಿಶ್ವಾಸ, ನಂಬಿಕೆ, ಮರ್ಯಾದೆ ಎಲ್ಲಾ ಹಳೆಯ ಕಾಲದ ಮಾತಾಯಿತು. ಅವನ್ನು ಬಿಡಿ. ಈಗ ನಿಮ್ಮೊಂದಿಗೆ ಪ್ರಧಾನಿಗಳು ಯಾರನ್ನು ಕಳಿಸಿದ್ದಾರೆ ?"

– ನರಸಪ್ಪಯ್ಯ ಕೇಳಿದರು.

"ಯಾರ ಅಗತ್ಯವೂ ಇಲ್ಲ. ನೀವು ಹೋಗಿ ಬನ್ನಿ. ನಿಮಗೆ ಯಾವ ಅಡ್ಡಿ ಆತಂಕಗಳೂ ಇಲ್ಲ ಎಂದು ಹೇಳಿ ಕಳಿಸಿದರು."

"ಅದಾಗದು, ನಾಯಕರು ನಮಗೆ ಕೊಡುವ ಸ್ವಾತಂತ್ರ್ಯ ಎಷ್ಟು ಅಪಾಯಕಾರಿಯಾದದ್ದು ಎಂದು ನನಗೀಗ ಅರ್ಥವಾಗಿದೆ. ಆದ್ದರಿಂದ ಅವರು ಕೊಡುವ ಸ್ವಾತಂತ್ರ್ಯವೂ ಬೇಡ, ದಾಕ್ಷಿಣ್ಯವೂ ಬೇಡ. ನನ್ನ ಮಾತನ್ನು ಕೇಳಿ, ತಮಗೂ ಅದು ಕ್ಷೇಮ."

-ಎಂದು ಹೇಳಿ, ನರಸಪ್ಪಯ್ಯ ಕೈಚಪ್ಪಾಳೆ ತಟ್ಟಿ, ಹೊರಗಿದ್ದ ಆಳನ್ನು ಕರೆದು –

"ಈಗಿಂದೀಗಲೇ ಪ್ರಧಾನಿಯವರ ಚಾವಡಿಯವರೆಗೆ 'ಯಾರಾದರೊಬ್ಬರು ಕೂಡಲೇ ಬರ ಬೇಕು' ಎಂದು ಹೇಳು"

-ಎಂದು ಅಪ್ಪಣೆ ಮಾಡಿ ಕಳಿಸಿ –

"ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ" - ಎಂದು ಮಲ್ಲವ್ವನಾಗತಿಗೆ ಹೇಳಿದರು.

ನರಸಪ್ಪಯ್ಯನವರಾಡಿದ ಒಂದೊಂದು ಮಾತೂ ಅರ್ಥವಾಗದ ಸಮಸ್ಯೆಯೆಂಬಂತೆ ಮಲ್ಲವ್ವನಾಗತಿಗೆ ಕಂಡು, ಆ ದಿಗ್ಭ್ರಾಂತಿಯಲ್ಲೇ-

"ಏಕೋ ಎಲ್ಲವೂ ಸೋಜಿಗವಾಗಿ ಕಾಣುತ್ತಿದೆ. ಯಾರೊಬ್ಬರೂ ಹಿಂದಿನಂತಿಲ್ಲ. ನಮ್ಮವರು, ನಮ್ಮ ಅಪ್ಪಾಜಿಗೆ ಎದುರು ಬಿದ್ದಾಗಲೇ ಅರಮನೆ ನಮಗೆ ಪರಕೀಯವಾಗಿ, ತೋರಿಕೆಯ ಬಾಂಧವ್ಯ ಮಾತ್ರ ಉಳಿಯಿತು. ಆದರೂ ನಾವು ಬರಲು-ಹೋಗಲು, ನಾವು ಮಕ್ಕಳಾಗಿದ್ದಾಗಿನಿಂದ ನಮ್ಮನ್ನು ಕಂಡವರೊಂದಿಗೆ ಬೇಕಾದಾಗ ಮಾತಾಡಲು ಯಾವ ಅಡ್ಡಿಯೂ ಇರಲಿಲ್ಲ. ಈಗ ಅದಕ್ಕೂ ಆತಂಕ ಬಂದಿತು. ನಾವು ಮನಬಿಚ್ಚಿ ಮಾತನಾಡಬಹುದಾದ, ದುರ್ಗದಲ್ಲಿ ಹಳೆಯ ತಲೆಯಾಗಿ ಉಳಿದಿರುವವರು ನೀವೊಬ್ಬರು. ನೀವೂ ಈಗ ಹೊರಗಿನವರಂತೆ ಮಾತಾಡುತ್ತಿದ್ದೀರ - ಇದೇನು ದುರ್ಭಾಗ್ಯ !"

– ಎಂದು ನೊಂದು ನುಡಿದಳು ಮಲ್ಲವ್ವನಾಗತಿ –

"ಹೆತ್ತ ಮನೆ, ಹೊಕ್ಕ ಮನೆ - ಎಲ್ಲವೂ 'ಶಿವಾ, ಎಂದಿಗೆ ನಿನ್ನ ಪಾದಕ್ಕೆ ಸೇರಿಸಿಕೊಳ್ಳುತ್ತೀಯ?' ಎಂದು ಬೇಡುವ ಕಾಲಕ್ಕೆ, ಬಾಯಿಗೆ ಬೀಗಬಿದ್ದಂತಾಯಿತು. ಹೀಗಾದ ಮೇಲೆ ನಾವಿನ್ನು ಬದುಕಿರಬಾರದು. ಬದುಕು - ಹೊರಲಾಗದ ಭಾರವಾಯಿತು ನಮ್ಮ ಪಾಲಿಗೆ."

ಎದೆಯೊಳಗಿನ ತಳಮಳಿಸುವ ಯಾತನೆಯೇ ಬಿಟ್ಟ ನಿಟ್ಟುಸಿರೆಂಬಂತೆ ಕೇಳಿ ಬಂದ ಮಲ್ಲವ್ವನಾಗತಿಯ ಮಾತುಗಳನ್ನು ಕೇಳಿ, ನರಸಪ್ಪಯ್ಯನವರ ಕರುಳನ್ನು ಉರಿಗೈಯಿಂದ ಹಿಸುಕಿದಂತಾಗಿ, ಆ ಮಾತನಾಡಿದ ಮಲ್ಲವ್ವನಾಗತಿಯನ್ನು ಹಾಗೇ ನೋಡುತ್ತಾ ಕುಳಿತುಬಿಟ್ಟರು. -ಆಕೆಯ ಮಾತಿಗೆ ಮರುನುಡಿಯಾಡಲು ತೋಚದೆ.

* * *

ಒಂದು ಕಾಲಕ್ಕೆ - ಏಕೆ, ತಾನೇ ಕಂಡ ಹಾಗೆ - ಸೌಂದರ್ಯಕ್ಕೆ ಇಟ್ಟ ಹೆಸರೆಂಬಂತೆ ಇದ್ದ ಮಲ್ಲವ್ವನಾಗತಿ, ಇಂದು ಅದರ ಕರಿನೆರಳು. ದುಃಖದ ನಾಯಿ-ಕಾಗೆಗಳು ಕಿತ್ತು, ಕುಕ್ಕಿ, ಎಳೆದಾಡಿ, ತಿಂದು ಉಳಿಸಿದ, ಲಾವಣ್ಯದ ಹೃದಯವಿದ್ರಾವಕ ಶವದಂತೆ ಕಂಡಳು ಮಲ್ಲವ್ವನಾಗತಿ.

ಆಕೆ ಅರಮನೆಯಲ್ಲಿ ಮಲ್ಲಿಗೆಯ ಬಳ್ಳಿಯಂತೆ ಬೆಳೆಯುತ್ತಿದ್ದಾಗ ನರಸಪ್ಪಯ್ಯನವರೂ ಅರಮನೆಯ ಆಪ್ತರಾಗಿದ್ದರು. ದೊರೆ-ಪ್ರಧಾನಿಯ ನಡುವಿನ ಬಾಂಧವ್ಯ ಕೇವಲ ಯಜಮಾನ-ಸಂಬಳದವರ ಸಂಬಂಧವಾಗದೆ, ಹಂದರಕ್ಕೆ ಹಬ್ಬಿದ ಬಳ್ಳಿಯಂತೆ ಅತ್ಯಂತ ಅನ್ಯೋನ್ಯವಾಗಿದ್ದು ತಂದೆ-ತಾಯಿ, ಆಪ್ತ ಪರಿವಾರದವರು, ಬಿಸಿಲು-ಗಾಳಿಯಲ್ಲದೆ ಉಳಿದವರು ಕಣ್ಣೆತ್ತಿ ನೋಡಲೂ ಅಸಾಧ್ಯವಾಗಿದ್ದ ಈ ರಾಜಕುಮಾರಿ, ಪ್ರಧಾನಿಯನ್ನು 'ತಾತಯ್ಯ' ಎಂದು ಕರೆದಿದ್ದಳು. ತಂದೆ, ತಾಯಿಯರಂತೆಯೇ ನರಸಪ್ಪಯ್ಯನವರಲ್ಲಿ ತನ್ನ 'ಬೇಕು-ಬೇಡ'ಗಳನ್ನು ತೋಡಿಕೊಂಡಿದ್ದಳು. ಅಷ್ಟೆಷ್ಟೇಕೆ - ರಾಜಬಂದಿಯಾಗಿದ್ದ ಮತ್ತೋಡಿನ ಸಿದ್ಧಪ್ಪನಾಯಕನನ್ನು ಉತ್ಸವವೊಂದರ ಸಂದರ್ಭದಲ್ಲಿ ಕಂಡು, ಮೋಹಿಸಿ, ಮದುವೆಯ ಮಾತು ಬಂದಾಗ ಅವರಲ್ಲದೆ ಬೇರೆ ಯಾರ ಕೈಲೂ ನಾನು ತಾಳಿ ಕಟ್ಟಿಸಿಕೊಳ್ಳುವುದಿಲ್ಲ' ಎನ್ನುವ ಮಾತನ್ನಾಕೆ ಹಡೆದವರ ಮುಂದೂ ಹೇಳದೆ, ನರಸಪ್ಪಯ್ಯನವರ ಮುಂದೆ ಹೇಳಿ, 'ನನ್ನನ್ನು ಹೇಗಾದರೂ ಬದುಕಿಸಿ' ಎಂದು ಕೇಳಿಕೊಂಡಿದ್ದಳು. ಉಳಿದವರು ಆಡಿದರೆ ತಲೆ ಕತ್ತರಿಸುವ ಅಪರಾಧವಾಗಬಹುದಾಗಿದ್ದ ಈ ಸುಡುಸುದ್ದಿಯನ್ನು ಬಹು ನಯವಾಗಿ ಅರಸರ ಕಿವಿಗೆ ಹಾಕಿ, 'ಸೋತ ಸೆರೆಯಾಳಿಗೆ ಮಗಳನ್ನು ಕೊಡುವ ಈ ನಾಚಿಕೆಗೇಡಿನ ಮಾತು ಬೇಡವೇ ಬೇಡ' ಎಂದು ವೈರಿದರ್ಶನವಾದ ಮುಳ್ಳುಹುದಿಯಂತೆ ಕಣೆಗೆದರಿ ನಿಂತ ಹಿರೇಮದಕರಿನಾಯಕರ ಮನವನ್ನು ತಾನೇ ಒಲಿಸಿ 'ಈ ಮಾತಿಗೆ ಬೇಡವೆಂದು ಹಟ ಹಿಡಿದು, ಇರುವ ಒಬ್ಬ ಮಗಳ ಬಾಳನ್ನು ಬೆಂಕಿಯಿಟ್ಟ ಬಣವೆಯನ್ನಾಗಿ ಮಾಡಬೇಡಿ; ಮಗಳ ಬಯಕೆಯೂ ತೀರಲಿ - ಗಡಿನಾಡಿನವರಾದ ಮತ್ತೋಡಿನವರು ನಮ್ಮ ನೆಂಟರಾಗಿ, ದುರ್ಗಕ್ಕೆ ಮತ್ತೋಡು ಸುತ್ತುಕೋಟೆಯಾಗಲಿ' – ಎಂದೆಲ್ಲಾ ಹೇಳಿ ಅವರ ಮನವೊಲಿಸಿ, ಆಗುಹೋಗುಗಳ ಎಲ್ಲ ಹೊಣೆಗಾರಿಕೆಯನ್ನು ತನ್ನ ನೆತ್ತಿಯ ಮೇಲೆ ಹೊತ್ತು, ಎಲ್ಲರೂ ಆಗದ ಕೆಲಸ ಎಂದೇ ಭಾವಿಸಿದ ಆ ವಿವಾಹಕಾರ್ಯವನ್ನು, ಯಾರೊಬ್ಬರ ಪ್ರತಿಷ್ಠೆಗೂ ಕುಂದು ಬರದ ರೀತಿಯಲ್ಲಿ ನಿಂತು ನೆರವೇರಿಸಿದ್ದರು. ಮದುವೆಯೇನೋ ಆಯಿತು, ಆದರೆ ಅದರ ಫಲಿತಾಂಶ ನರಸಪ್ಪಯ್ಯ ನಿರೀಕ್ಷಿಸಿದಂತೆ ಆಗಲಿಲ್ಲ. ಆಪ್ತನಾಗಬೇಕಾಗಿದ್ದ ಸಿದ್ಧಪ್ಪನಾಯಕ ಮದುವೆಯಾಗಿ, ಮತ್ತೋಡಿನ ರಾಜ್ಯ ತನಗೆ ದೊರೆತ ಮೇಲೆ, ಹೊಸ ನೆಂಟಸ್ತಿಕೆಗಿಂತ ಹಳೆಯ ಹಗೆತನವನ್ನೇ ಸಾಧಿಸಿ, ದುರ್ಗದವರ ಪಾಲಿಗೆ, ಗಂಟಲಿಗೆ ಬಿದ್ದ ಬಿಸಿತುಪ್ಪವಾಗಿದ್ದ. ಅದಕ್ಕಾಗಿ ಹಿರೇ ಮದಕರಿನಾಯಕರು ನರಸಪ್ಪಯ್ಯನವರನ್ನು ದೂರಲಿಲ್ಲ. 'ನಮ್ಮ ಹಣೆಯಲ್ಲಿ, ನಮ್ಮ ಮಗಳ ಹಣೆಯಲ್ಲಿ ಬರೆದಿದ್ದು ಇಷ್ಟೇ ಸುಖ. ಹೋಗಲಿ, ಏನಾದರಾಗಲಿ - ಆಕೆಯ ಕುಂಕುಮಭಾಗ್ಯ ಸ್ಥಿರವಾಗಿರಲಿ' ಎಂದುಕೊಂಡು ಸುಮ್ಮನಾಗಿದ್ದರು. ಯಾರೂ ದೂರದಿದ್ದರೂ ಅದು - ನರಸಪ್ಪಯ್ಯನವರ ಪ್ರಧಾನಿಗಿರಿಯ ಜಾಣ್ಮೆಗೆ ಸೋಲಿನ ಪ್ರಥಮ ಅನುಭವ. ಹಿರೇಮದಕರಿನಾಯಕರ ಉದಾರ ಮನೋಭಾವ, ಅಚಲ

ನಂಬಿಕೆಗಳಿಲ್ಲದಿದ್ದಲ್ಲಿ ಆಗಲೇ ಅವರು ಅರಮನೆಯಿಂದ ದೂರವಾಗಬೇಕಾಗಿತ್ತು. ನರಸಪ್ಪಯ್ಯನವರೇ ಆ ಮಾತನಾಡಿದಾಗ- 'ಮಕ್ಕಳ ಸುಖ ನಾವಿಬ್ಬರೂ ಕೇಳಿಕೊಂಡು ಬರಲಿಲ್ಲ. ನಿಮ್ಮ ಮಗ ನಿಮ್ಮಿಂದ ದೂರವಾದ. ಮಗಳು ನಮ್ಮಿಂದ ದೂರವಾದಳು. ನಾವಿಬ್ಬರೂ ಸಮಾನ ದುಃಖಿಗಳು. ಆಯಿತು - ಸುಖವನ್ನು ಹಂಚಿಕೊಂಡಂತೆ ಈ ದುಃಖವನ್ನೂ ಹಂಚಿಕೊಳ್ಳೋಣ' ಎಂದು ಹಿರೇಮದಕರಿನಾಯಕರು ತಾವೇ ಸಂತೈಸುವ ಮಾತಾಡಿ, ಅವರನ್ನು ದೂರಮಾಡುವ ಬದಲು ಮತ್ತಷ್ಟು ಹತ್ತಿರಕ್ಕೆ ಕರೆದುಕೊಂಡಿದ್ದರು. ಆ ಪ್ರೀತಿಗೆಂಬಂತೆ ಇಮ್ಮಡಿಯ ಉತ್ಸಾಹದಿಂದ ಮುಪ್ಪು ಮೈಯನ್ನಡರಿದರೂ ಅದಾವುದನ್ನೂ ಲೆಕ್ಕಿಸದೆ ದುಡಿದಿದ್ದರು – ನರಸಪ್ಪಯ್ಯ.

ಈಗ - ನವಾಬರ ಸ್ನೇಹ ಬೆಳಸುವ ತಮ್ಮ ರಾಜಕೀಯ ಜಾಣೆ - ಮತ್ತೆ ತಲೆ ಎತ್ತಲಾಗದಂಥ ಪರಾಭವದ ಬಂಡೆಗಲ್ಲನ್ನು ಎಳೆದಿತ್ತು, ಅವರ ನೆತ್ತಿಯ ಮೇಲೆ.

'ಆಯಿತು, ಹೋಗುವ ಕಾಲ ಬಂದಾಗ ಹೀಗೆಯೇ, ಪ್ರವಾಹದ ಭೀತಿಗೆಂದು ಅಂಜಿ ತಬ್ಬಿದ ಮರವೂ ಹೆಬ್ಬಾವು ಆಗುತ್ತದೆ. ನಮಗಿನ್ನು ಈ ರಾಜಕೀಯದ ನಿತ್ಯಭೀತಿಯ ಸರಸವೇ ಬೇಡ'

- ಎಂದು ದೂರವಾಗಿದ್ದಾಗ, ಎರಡನೆಯ ಆಘಾತದಿಂದ ಇನ್ನೂ ಬುದ್ಧಿ ಚೇತರಿಸಿಕೊಳ್ಳಲು ಹೆಣಗಾಡುತ್ತಿರುವಾಗಲೇ, ಜೀವನದ ಮೊದಲಸೋಲು ತನ್ನ ಇರುವಿಕೆಯ ಕುರುಹನ್ನು ಹೆಡೆಬಿಚ್ಚಿ ತೋರಿಸಬೇಕೇ - ಮಲ್ಲವ್ವನಾಗತಿಯ ರೂಪದಲ್ಲಿ ಬಂದು.

ಆ ಎಲ್ಲಾ ನೆನಪುಗಳ ಕಹಿಗೇ ನಾಲಿಗೆ ಹೇಸುತ್ತಿರುವಾಗಲೇ, ಮನೆ ಬಿಟ್ಟು ಹೋದ ಮಗನ ನೆನಪೂ, ಅವರ ನೆನಪಿನಾಳದಲ್ಲಿ ಸುರುಳಿ ಬಿಚ್ಚಿತು.

ಮಗ-

ಒಬ್ಬನೇ ಮಗ -

ತನ್ನ ವಂಶದ ಕೊನೆಯ ಕುಡಿ ಎಂದು ಬಹು ಪ್ರೀತಿಯಿಂದ ಸಾಕಿ ಬೆಳೆಸಿದ ಮಗ, 'ರೂಪದಲ್ಲಿ ತಾಯಿ, ಬುದ್ಧಿಯಲ್ಲಿ ತಂದೆ' ಎನಿಸಿಕೊಂಡು ಎಲ್ಲರಿಗೂ ಅಚ್ಚುಮೆಚ್ಚಾಗಿ ಬೆಳೆದ ಶ್ರೀಪತಿ -ಮನೆ, ಅರಮನೆಯವರು ತೋರಿಸಿದ ಪ್ರೀತಿ, ಊರ ಜನಗಳು ಪ್ರಧಾನಿಗಳ ಮಗ ಎಂದು ತೋರಿಸಿದ ಗೌರವ - ಎಲ್ಲವನ್ನೂ ಧಾರಾಳವಾಗಿ ಉಂಡು, ದೇವರ ಗೂಳಿಯಂತೆ ಬೆಳೆದವನು ರಾಯದುರ್ಗದ ನಾಯಕಸಾನಿಯ ಕೈಯ ಅರಗಿಳಿಯಾಗಿ, ಹರಪನಹಳ್ಳಿಯವರ ಕೈಗೊಂಬೆಯಾಗಿ, ಕೊತ್ವಾಲಚಾವಡಿಯವರ ಕೈಗೆ ಸಿಕ್ಕುಬಿದ್ದು ಸೆರೆಮನೆ ಸೇರಿದಾಗ –

ಅಷ್ಟು ದಿನದ ಪ್ರೀತಿ ಇದ್ದಕ್ಕಿದ್ದಂತೆಯೇ ವಿಷವಾಗಿ, ಮಗ ಕಣ್ಣಿರಿವ ಮುಳ್ಳಾಗಿ, ನರಸಪ್ಪಯ್ಯನವರೇ ದೊರೆಗಳಿಗೆ ಹೇಳಿದ್ದರು –

'ಉಳಿದವರಿಗೆ ವಿಧಿಸಿದ ಶಿಕ್ಷೆಯನ್ನು ಅವನಿಗೂ ವಿಧಿಸಿಬಿಡಿ' – ಎಂದು.

ಆದರೂ-

'ನಿಮ್ಮ ಒಬ್ಬನೇ ಮಗ. ಪ್ರಾಯದ ಹಿಂದುಮುಂದು ನೋಡದೆ ಹಾಯುವ ಮಣಕು ಬುದ್ಧಿ. ಒಂದು ಸಲ ಕ್ಷಮಿಸಿದರೆ ಮತ್ತೆ ಬುದ್ಧಿ ಕಲೀತಾನೆ'

-ಎಂದು ಹೇಳಿ ದೊರೆಗಳೇ ಕ್ಷಮಿಸಿದ್ದರೂ, ತಮ್ಮ ತಲೆಗಂಟಿದ ಕಲಂಕವನ್ನು ದಿನವೂ ಮನೆಯಲ್ಲಿ ನೋಡಲಾಗದೆ –

'ಈ ಮನೆ, ರಾಜ್ಯ ಬಿಟ್ಟು ಎಲ್ಲಿಯಾದರೂ ತೊಲಗಿಹೋಗು. ಮತ್ತೆ ಈ ರಾಜ್ಯದಲ್ಲಿ ಎಲ್ಲಿಯಾದರೂ ನಿನ್ನ ತಲೆ ಕಂಡರೆ, ಅದನ್ನು ಕತ್ತರಿಸಿ ತರಲು ಹೇಳುತ್ತೇನೆ'

- ಎಂದು ಕಟ್ಟಪ್ಪಣೆ ಮಾಡಿ, ದೊರೆಗಳ ಸಾಂತ್ವನ, ಮಡದಿಯ ಕಣ್ಣೀರು ಎರಡಕ್ಕೂ ಬೆಲೆಕೊಡದೆ ನಾಯಿಯಂತೆ ಮನೆಯಿಂದ ಹೊರಗಟ್ಟಿದ್ದರು ನರಸಪ್ಪಯ್ಯ, ಕೊನೆಗೊಂದು ಮಾತು ಹೇಳಿ –

'ಎಲ್ಲಿಯಾದರೂ ಹಾಳಾಗಿಹೋಗು. ಆದರೆ ಎಲ್ಲೂ ನನ್ನ ಮಗ ಎಂದು ಮಾತ್ರ ಹೇಳಿಕೊಂಡು, ಬದುಕಿರುವವರನ್ನು ಸತ್ತಕೂಟಲೆ ಮಾಡಬೇಡ. ಅಷ್ಟೇ ಮಗನಾಗಿ ನೀನು ನನಗೆ ಮಾಡಬೇಕಾದ ಉಪಕಾರ' – ಎಂದು.

ಮಗ ಮನೆಬಿಟ್ಟು ಹೋಗಿದ್ದ; ಎಲ್ಲಿ ಹೋದನೋ, ಏನಾದನೋ –

ಮರೆಯಬೇಕೆನಿಸಿದರೂ ಮರೆಯಲಾಗದ ಮಗನ ನೆನಪಿನ ನಂಜುಮುಳ್ಳಿನ ನೋವನ್ನು ಹೊರಗಾರಿಗೂ ತೋರಗೊಡದೆ, ಆ ನೋವಿನ ಹೊರೆ ಹೊತ್ತೇ ಬಾಳ ದಾರಿಯನ್ನು ಸವೆಸಿದ್ದರು – ನರಸಪ್ಪಯ್ಯ, ದುರ್ಗವೇ ತನ್ನ ಮಗ ಎಂಬಂತೆ.

ಈಗ –

ತನ್ನ ಪಾಲಿಗೆ ಮಗನೂ ಇಲ್ಲ, ದುರ್ಗವೂ ಇಲ್ಲ.

ಮಾಡಿದ ಸಾಧನೆ ಎಲ್ಲವೂ ವಿಫಲವಾಗಿ, ಬದುಕು ಮುಳ್ಳಿನ ಹಾಸಿಗೆಯಾಗಿ, ಯಾರ ಕಣ್ಣಿಗೂ ಬೀಳದೆ, ಯಾರ ನೆನಪಿಗೂ ಬಾರದೆ, ಉರಿ ಸೋಕಿದ ಕರ್ಪೂರದಂತೆ ಕರಗಿ ಹೋಗಬೇಕು ಎಂದು ಬಯಸುತ್ತಿದ್ದ ಕಾಲದಲ್ಲಿ –

ಸತ್ತು ಹೋದವನು ಹಾಗೇ ಹೋಗದೆ ಪಿಶಾಚಿಯಾಗಿ ಬಂದು ಕಾಡುವಂತೆ –

ಮತ್ತೆ ಕಾಡುತ್ತಿವೆ- ಹಳೆಯ ನೆನಪುಗಳು, ಮಮತೆಗಳು, ನೋವುಗಳು.

ಮಾಂಸದಾಸೆಗೆ ಮುಳ್ಳುಹಂದಿಯನ್ನು ಬೇಟೆಯಾಡಹೋಗಿ, ಮೈಯೆಲ್ಲಾ ಮುಳ್ಳು ಕಣೆಗಳ ನಂಜುಗಾಯ ಮಾಡಿಕೊಂಡು ನರಳುವ ವೃದ್ಧ ವ್ಯಾಘ್ರನಂತಾಗಿದ್ದರು, ನರಸಪ್ಪಯ್ಯ.

* * *

ತಾನಾಡಿದ ಮಾತಿಗೆ ಉತ್ತರ ಕೊಡದೆ, ಹಳೆಯ ಬಳಕೆಯ ಮಮತೆಯ ಮಾತನ್ನೂ ಆಡದೆ, ನೋಡಿದವರ ಮೈಯಲ್ಲೂ ಚಳಿಹುಟ್ಟಿಸುವ ಮಂಜಿನ ಗೊಂಬೆಯಂತೆ ಕುಳಿತ ನರಸಪ್ಪಯ್ಯನವರನ್ನು ನೋಡಿ, ಮಲ್ಲವ್ವನಾಗತಿಗೆ ಇರಿಸು, ಮುರಿಸಾಗಿ ಕೇಳಿದಳು –

"ನಾವು ತಪ್ಪು ಮಾತಾಡಿದೆವೇ ? ನಮ್ಮದು ತಪ್ಪಾಗಿದ್ದರೆ ಕ್ಷಮಿಸಬೇಕು"

"ತಪ್ಪು – ಊಹೂ – ನೀವು ಮಾಡಲಿಲ್ಲ. ಜೀವನದಲ್ಲಿ ಒಂದೂ ತಪ್ಪು ಹೆಜ್ಜೆ ಇಡಬಾರದು ಎಂದುಕೊಂಡಿದ್ದ ನಾನು ಇಟ್ಟ ಹೆಜ್ಜೆಗಳೆಲ್ಲಾ ತಪ್ಪು ಹೆಜ್ಜೆಗಳೇ ಆಗಿ, ನನ್ನ ಇದುವರೆಗಿನ ಬದುಕೇ ಒಂದು ಬಹುದೊಡ್ಡ ತಿದ್ದಿಕೊಳ್ಳಲಾಗದ ತಪ್ಪಾಗಿಹೋಯಿತು."

- ನಿಟ್ಟುಸಿರಿಟ್ಟು ಹೇಳಿದರು ನರಸಪ್ಪಯ್ಯ –

"ಮುಂದಾದರೂ ತಪ್ಪಾಗದಂತೆ ನೋಡಿಕೊಳ್ಳಬೇಕು ಎಂದಿದ್ದೇನೆ. ಅಷ್ಟನ್ನಾದರೂ ನಡೆಸಿಕೊಡುತ್ತಾನೋ ಇಲ್ಲವೋ, ನಾವು ದಿನವೂ ಪೂಜಿಸುವ ಪ್ರಾಣದೇವರು."

"ಯಾರಿಗೆ ನೀವೇನು ಅನ್ಯಾಯ ಮಾಡಿದಿರಿ - ಅಂತ ಹಾಗನ್ನುತ್ತೀರಿ. ನೀವು ಹೀಗಾಡುವುದು ಕಿರಿಯರಿಗೆ ಶ್ರೇಯಸ್ಸಲ್ಲ."

"ಯಾರು ಹಿರಿಯರು, ಯಾರು ಕಿರಿಯರು; ಒಳಿತಾವುದು, ಕೆಡಕಾವುದು – ಯಾವುದೂ ನಮಗೀಗ ಅರ್ಥವಾಗುತ್ತಿಲ್ಲ. ಒಂದು ಕಾಲಕ್ಕೆ 'ಎಲ್ಲವೂ ನನಗೆ ತಿಳಿದಿದೆ, ತಿಳಿದುಕೊಳ್ಳುವ ಶಕ್ತಿ ನನಗಿದೆ' ಎಂದುಕೊಂಡಿದ್ದೆ. ನನ್ನ ಬುದ್ಧಿಯಲ್ಲೇ ನನಗೀಗ ವಿಶ್ವಾಸ ತಪ್ಪಿ ಹೋಗಿದೆ. ಆದ್ದರಿಂದಲೇ ಈಗ ನಾನು ಯಾರೊಂದಿಗೂ ಬೆರೆಯುತ್ತಿಲ್ಲ; ಯಾವ ಮಾತಿನಲ್ಲೂ ತಲೆ ಹಾಕುತ್ತಿಲ್ಲ. ನಿಮಗಿನ್ನೂ ನನ್ನಲ್ಲಿ ವಿಶ್ವಾಸವಿದೆ, ಬಂದಿದ್ದೀರ. ಎರಡು ಗಳಿಗೆ ತಡೆಯಿರಿ. ಪ್ರಧಾನಿಗಳ ಚಾವಡಿಯಿಂದ ಕರಣಿಕರು ಬಂದಮೇಲೆ ಹೇಳಬೇಕೆಂದುಕೊಂಡುಬಂದ ಮಾತನ್ನು ಹೇಳಿ" – ಎಂದರು ನರಸಪ್ಪಯ್ಯ.

"ಹೇಗೆ ಹೇಳುವುದು - ನಾವಾಡುವ ಮಾತು ನಮ್ಮಲ್ಲೇ ಇರಬೇಕು ಎಂದು ನಮಗೆ ಆಸೆಯಿತ್ತು. 'ಮೂರನೆಯವರೊಬ್ಬರು ಆ ಮಾತು ಕೇಳಿಸಿಕೊಳ್ಳುತ್ತಾರೆ' ಎಂದು ಹೇಳಿ, ನಮ್ಮ ನಾಲಗೆಯನ್ನೇ ಕಡಿದುಬಿಟ್ಟಿರಿ. ಹೇಗೆ ಮಾತಾಡಲಿ ?"

"ಈಗ ಮಾತನಾಡಿದ ಹಾಗೇ ಮಾತನಾಡಿ. ಅದರಲ್ಲೇನೂ ತಪ್ಪಿಲ್ಲ."

"ಇದು ಸಂಸಾರದ ಮಾತು. ಮೂರನೆಯವರಿಗೆ ತಿಳಿಯಬೇಕೇ ? ಹಾಗೆ ಮಾತಾಡಿದರೆ ನಗೆಪಾಟಲಾಗುವುದಿಲ್ಲವೇ ?"

“ವಿನಾಕಾರಣ ಸಂಶಯಕ್ಕೆ ಕಾರಣವಾಗುವುದಕ್ಕಿಂತ ನಗೆಪಾಟಲಾಗುವುದು ಹೆಚ್ಚಿನ ಕೆಡುಕಲ್ಲ. ನಿಮಗೆ ತಿಳಿಯದು - ನಾವು ದೊರೆಗಳ ಅಪನಂಬಿಕೆಗೆ ಪಾತ್ರರಾದ ಬಳಿಕ, ನಾವು ಮಾಡುವುದೆಲ್ಲವೂ ಸಂಶಯಕ್ಕೆ ಕಾರಣವಾಗುತ್ತದೆ. ದೊರೆಗಳಿಗೀಗ ನಮ್ಮಲ್ಲಿ ನಂಬಿಕೆಯಿಲ್ಲ, ನಿಮ್ಮಲ್ಲೂ ನಂಬಿಕೆಯಿಲ್ಲ. ಹಾಗಿರುವಾಗ ನಾವಿಬ್ಬರು ಒಟ್ಟಿಗೆ ಕಲೆಯುವುದೇ ಸಂಶಯಕ್ಕೆ ಆಸ್ಪದವಾಗುತ್ತದೆ. ಇನ್ನು ನಾವಿಬ್ಬರೇ ಬಹಳ ಹೊತ್ತು ಏಕಾಂತದಲ್ಲಿ ಮಾತಾಡಿದಿವಿ ಅಂದರೆ, ಅದು ಮತ್ತಷ್ಟೂ ಸಂದೇಹಕ್ಕೆ ದಾರಿಕೊಡುತ್ತದೆ. ಉಚ್ಚ ಎನಿಸಿಕೊಳ್ಳುವುದಕ್ಕಿಂತ ಹುಚ್ಚ ಎನಿಸಿಕೊಳ್ಳುವುದು ಎಷ್ಟೋ ಲೇಸು. ಅಲ್ಲದೆ, ಪ್ರಧಾನಿ ಪರಶುರಾಮನಾಯಕರು ಬುದ್ಧಿವಂತರು. ನಮ್ಮ ನಿಮ್ಮ ಮಾತು - ಅಂದಮೇಲೆ ನಾಲಿಗೆ ಅಭದ್ರವಾದವರನ್ನು ಖಂಡಿತವಾಗಿಯೂ ಕಳಿಸುವುದಿಲ್ಲ. ಅರಸರು ಅಪ್ರಸನ್ನವಾಗುವಂಥ ಮಾತೇನೂ ಇಲ್ಲವಲ್ಲ....”

“ಊಹೂ – ಇದು ನಮ್ಮ ದುಃಖದ ವಿಷಯ.”

“ಹಾಗಿದ್ದರೆ ಚಿಂತಿಸಬೇಡಿ. ಮನಬಿಚ್ಚಿ ಮಾತಾಡಿ. ನೀವು ಆಡಿದ ಯಾವ ಮಾತೂ ಹೊರಗೆ ಹಬ್ಬುವುದಿಲ್ಲ”

-ಎಂದು ಮಲ್ಲವ್ವನಾಗತಿಗೆ ಭರವಸೆಕೊಟ್ಟರು ನರಸಪ್ಪಯ್ಯ.

* * *

ಅವರಿಬ್ಬರೂ ಆ ಮಾತಾಡುತ್ತಿರುವಾಗಲೇ, ಮನೆಯ ಹೊರಗೆ ಮೇನೆಯ ಬೋಯಿಗಳ ಸದ್ದು ಕೇಳಿಸಿ, ಹೊರಗಡೆಯಿದ್ದ ಆಳು ಆತುರವಾಗಿ ಒಳಗೆ ಬಂದು –

“ಪ್ರಧಾನಿಗಳೇ ಬಂದರು” - ಎಂದು ಹೇಳಿದ.

“ಏನು – ಪ್ರಧಾನಿಗಳೇ - ! ?”

-ಎಂದು ಆಳಾಡಿದ ಮಾತು ಕೇಳಿ ನಿಬ್ಬೆರಗಾಗಿ, ನರಸಪ್ಪಯ್ಯ ಆತುರಾತುರವಾಗಿ ಎದ್ದು ತಲೆಬಾಗಿಲ ಬಳಿ ಹೋಗುವ ವೇಳೆಗೆ, ಪರಶುರಾಮನಾಯಕನೇ ತಲೆಬಾಗಿಲಿನಲ್ಲಿ ಕಾಣಿಸಿಕೊಂಡು-

“ನಾನು ಬರಬಹುದೇ ?” – ಎಂದು ಕೇಳಿದ.

“ಇದೇನಿದು - ನೀವೇ ಬಂದುಬಿಟ್ಟಿರಿ. ಇದೇನು ಆಕಸ್ಮಿಕವೋ - ಅಥವಾ....”

“ಆಕಸ್ಮಿಕವೇನೂ ಇಲ್ಲ. ನೀವು ಹೇಳಿಕಳಿಸಿದಿರಿ, ನಾನು ಬಂದೆ....”

-ಎಂದು ಹೇಳಿ ತನ್ನನ್ನು ಕಂಡು ಮೇಲೆದ್ದ ಮಲ್ಲವ್ವನಾಗತಿಗೆ –

“ತಾವು ಏಳಬಾರದು, ಕುಳಿತುಕೊಳ್ಳಿ. ನಾನು ನಿಮ್ಮಿಬ್ಬರಿಗಿಂತಲೂ ಕಿರಿಯ; ನನ್ನ ಪದವಿಗೆ ಮನೆಯಲ್ಲೂ ಗೌರವ ಕೊಡುವಷ್ಟು ಹಿರಿಯನಲ್ಲ”

- ಎಂದು ಹೇಳಿ, ನರಸಪ್ಪಯ್ಯನವರತ್ತ ತಿರುಗಿ-

“ನಾವೇ ಬಂದದ್ದು ಬೇಸರವಾಯಿತೇ ?” – ಎಂದು ಕೇಳಿದ ಪರಶುರಾಮನಾಯಕ.

“ಯಾರಾದರೂ ಕರಣಿಕರು ಬಂದಿದ್ದರೆ ಸಾಕಾಗಿತ್ತು” – ನರಸಪ್ಪಯ್ಯ ಹೇಳಿದರು.

“ಅದೇನು ಮಾತು, ನರಸಪ್ಪಯ್ಯನವರೇ, ದುರ್ಗದ ದೊಡ್ಡ ತಲೆ ನೀವು. ನಿಮ್ಮನ್ನು ನೋಡಬಂದಿರುವವರೂ, ನಮಗೆ ಸೋದರತ್ತೆಯ ವಾವೆಯವರು; ಮತ್ತೋಡಿನ ರಾಜಮಾತೆಯವರು. ನಿಮ್ಮಿಬ್ಬರ ನಡುವಣ ಮಾತು ಕೇಳಲು ಮೂರನೆಯವರ ಅಗತ್ಯವಿರಲಿಲ್ಲ. ಆದರೂ ನಮ್ಮಲ್ಲಿ ಅಪನಂಬಿಕೆಪಟ್ಟು, ಮಾತಿಗೆ ಸಾಕ್ಷಿಯಾಗಿ ಒಬ್ಬನಿರಲಿ ಎಂದು ಕರಣಿಕನಿಗೆ ಹೇಳಿಕಳಿಸಿದಿರಿ. ನೀವು ದೊಡ್ಡವರು ಹೇಗೆ ಮಾಡಿದರೂ ಸರಿ. ಆದರೆ ನಾವು ಹಾಗೆ ಮಾಡಿದರೆ, ಆಡುವ ನಾಲಗೆಗೆ ಅಂಕುಶವಿಲ್ಲದ ಹಾಗಾಗುತ್ತದೆ. ಆದಾಗಕೂಡದು. ಅಪ್ಪಾ -ನೀವು ಏನು ಮಾತಾಡಬೇಕಿದ್ದರೂ, ಒಳಗೆ ಹೋಗಿ, ನರಸಪ್ಪಯ್ಯನವರೊಂದಿಗೆ ಮಾತಾಡಿ. ಬೇರಾರೂ ಆ ಮಾತು ಕೇಳದಂತೆ ನಾವೇ ಇಲ್ಲಿ ಕಾವಲು ಕಾಯುತ್ತೇವೆ. ನಾವು ಬಂದಿರುವುದು ನಿಮ್ಮ ಮಾತು ಕೇಳಲಿಕ್ಕಲ್ಲ ನರಸಪ್ಪಯ್ಯನವರ ತೃಪ್ತಿಗಾಗಿ. ಈ ಮಾತಿನಲ್ಲಿ ಇಲ್ಲದ ಕಪಟ, ರಾಜಕೀಯಚೂಪುಗಾರಿಕೆಯನ್ನು ಕಾಣಬಾರದು. ಉತ್ಸವಾಂಬೆಯ ಸಾಕ್ಷಿಯಾಗಿ ಹೇಳುತ್ತೇನೆ - ನಿಮ್ಮ ನಿಮ್ಮ ಮಾತು ನಿಮ್ಮಲ್ಲೇ ಇರಲಿ. ನರಸಪ್ಪಯ್ಯನರೇ, ನಿಮಗೆ ನಮಸ್ಕರಿಸಿ ಕೇಳುತ್ತೇನೆ - ದಯವಿಟ್ಟು ನಮ್ಮ ಅಂತಃಕರಣವನ್ನು ಶಂಕಿಸಬೇಡಿ. ಇರು ಎಂದರೆ ಇರುತ್ತೇನೆ; ಹೋಗು ಎಂದರೆ ಹೋಗುತ್ತೇನೆ. ಏನು – ಹೇಳಿ ?”

– ಎಂದು ಇಬ್ಬರಿಗೂ ಕೈಮುಗಿದು ಹೇಳಿದ ಪರಶುರಾಮನಾಯಕ.

ಆತನಾಡಿದ ಮಾತು ಕೇಳಿ ಇಬ್ಬರಿಗೂ ಬಾಯಿ ಕಟ್ಟಿದಂತಾಗಿ, ಅಷ್ಟು ಹೊತ್ತು ಇಬ್ಬರೂ ಮೌನವಾಗಿದ್ದರು. ಕೊನೆಗೆ ನರಸಪ್ಪಯ್ಯನವರೇ ಮೌನವನ್ನು ಮುರಿದು-

“ಕುಳಿತುಕೊಳ್ಳಿ. ನೀವೇ ಬಂದದ್ದು ಮತ್ತಷ್ಟು ಒಳಿತಾಯಿತು”

-ಎಂದು ಪರಶುರಾಮನಾಯಕರಿಗೆ ಹೇಳಿ, ಆತ ಕುಳಿತ ಬಳಿಕ –

“ನಾಗತಿಯವರು ಬಂದ ಕಾರ್ಯವೇನೋ ತಿಳಿಸಬೇಕು”

-ಎಂದು ಹೇಳಿ, ನಿರ್ಲಿಪ್ತರಂತೆ ಕುಳಿತುಕೊಂಡರು.

ತಾನು ಆಡಬೇಕೆಂದಿದ್ದ ಮಾತನ್ನು ಹೇಗೆ ಆಡುವುದೆಂದು ಯೋಚಿಸಿ, ಕೊನೆಗೊಂದು ನಿರ್ಧಾರಕ್ಕೆ ಬಂದು –

“ನಾವು ಹೇಳುವ ಮಾತನ್ನು ತಾವು ಸಮಾಧಾನವಾಗಿ ಕೇಳಬೇಕು. ಬೇಡದ ಮಾತು ಎಂದು ಮೊದಲಿಗೇ ಮುರಿದುಬಿಡಬಾರದು”

-ಎಂದು ಹೇಳಿ, ಬಳಿಕ ಮತ್ತೇನೋ ಯೋಚಿಸಿ-

“ಭಾಗೀರತವ್ವನವರನ್ನು ಕರೆಯಿರಿ. ಅವರು ಕೇಳಬೇಕಾದ ಮಾತು ಇದು”

– ಎಂದಳು ಮಲ್ಲವ್ವನಾಗತಿ.

“ನಮ್ಮ ಮಾತುಕಥೆಗಳಿಗೆ ಅವಳು ಏಕೆ ಬೇಕು ? ಆಕೆಗೂ ಈ ಮಾತಿಗೂ ಏನು ಸಂಬಂಧ?”

- ಅನೀರಿಕ್ಷಿತವಾದ ಮಾತನ್ನು ಕೇಳಿ, ಚಕಿತರಾಗಿ ಕೇಳಿದರು ನರಸಪ್ಪಯ್ಯ

“ಸಂಬಂಧ ಇದೆ. ಅವರನ್ನು ಕರೆಯಿರಿ.”

“ಇವತ್ತಿನ ಮಾತುಕಥೆ ಎಲ್ಲಾ ಹೇಗೆಹೇಗೋ ಸುಳಿಸುತ್ತುತ್ತಿದೆ. ಆಯಿತು - ಈ ಸಣ್ಣ ಕಾರಣಕ್ಕೆ ಮಾತೇಕೆ ತಡವಾಗಬೇಕು”

- ಎಂದು ಹೇಳಿ ನರಸಪ್ಪಯ್ಯ ಒಳಗಿದ್ದ ಹೆಂಡತಿಯನ್ನು ಕರೆದು, ತನ್ನ ಕರೆಯಂತೆ ಬಂದ ಆಕೆಗೆ ಹೇಳಿದರು –

“ನೀನೂ ಇಲ್ಲಿರಬೇಕಂತೆ, ನಾಗತಿಯವರ ಅಪೇಕ್ಷೆ. ಕುಳಿತುಕೋ.”

’ಈ ಗಂಡಸರ ಮಾತಿನಲ್ಲಿ ತನಗೇನು ಸ್ಥಾನ’ ಎಂದು ಯೋಚಿಸುತ್ತಾ, ’ಏನಾದರಾಗಲಿ, ಹೇಳಿದಷ್ಟು ಮಾಡಿದರಾಯಿತು’ ಎಂದುಕೊಂಡು ಭಾಗೀರಥಿಬಾಯಿ ನಡುಮನೆಯ ಬಾಗಿಲಿನ ಪಕ್ಕದಲ್ಲಿ ಅಷ್ಟುದೂರ ಕುಳಿತಳು.

ಆಕೆ ಬಂದು ಕುಳಿತಮೇಲೆ ಮಲ್ಲವ್ವನಾಗತಿಗೆ ವಾತಾವರಣ ತಿಳಿಯಾದಂತಾಗಿ-

“ಅವ್ವಾ, ನಿಮಗೇ ಕೇಳ್ತೀನಿ. ಎಷ್ಟಾದರೂ ನಿಮ್ಮದು ಹೆತ್ತ ಕರುಳು. ನಿಮ್ಮ ಮಗ ಮನೆಗೆ ಬಂದರೆ ಸೇರಿಸಿಕೊಳ್ಳಿರಾ, ಅವ್ವಾ ?”

-ಎಂದು ಬಾಗೀರಥೀಬಾಯಿಯತ್ತ ಮುಖ ಮಾಡಿ ಕೇಳಿದಳು, ನರಸಪ್ಪಯ್ಯನವರ ಕಡೆ ದೃಷ್ಟಿಯನ್ನೂ ಬೀರದೆ.

ಮಗ –

ನಿರ್ಮಲ ನೀಲಾಕಾಶದಲ್ಲಿ ಬರಸಿಡಿಲು ಬಡಿದಂತೆ ಕೇಳಿಸಿತು ಆ ಮಾತು ನರಸಪ್ಪಯ್ಯನವರಿಗೆ - ಒಂದು ಕ್ಷಣಕಾಲ.

ಮರುಗಳಿಗೆಯೇ, ಆ ಅನಿರೀಕ್ಷಿತ ಆಘಾತದಿಂದ ಚೇತರಿಸಿಕೊಂಡು –

“ಮಗ - ಇನ್ನೂ ಬದುಕಿದ್ದಾನೆಯೋ ಆ ವಂಶೋದ್ಧಾರಕ ಧೂಮಕೇತು ?”

-ಎಂದು ಕರ್ಕಶವಾಗಿ ಕೇಳಿದರು.

"ಶ್ರೀಪತಿರಾಯರು ಬದುಕಿದ್ದಾರೆ. ಲಗ್ನವಾಗಿದ್ದಾರೆ. ಹೆಂಡತಿ-ಮಕ್ಕಳೂ ಇದ್ದಾರೆ. ಮೆಚ್ಚಿಕೊಳ್ಳುವಂಥ ಸೊಸೆ, ನೋಡಿದರೆ ತಬ್ಬಿಕೊಳ್ಳಬೇಕು ಎನಿಸುವಷ್ಟು ಲಕ್ಷಣವಾದ ಮಕ್ಕಳು. ಇಬ್ಬರು ಗಂಡು...."

"ಸಾಕು - ಆ ಬಗ್ಗೆ ಬೇರಾವ ವಿವರವೂ ನನಗೆ ಬೇಕಿಲ್ಲ. ಈ ಸುದ್ದಿಯನ್ನು ಹೇಳುವುದಕ್ಕೆಂದೇ ನಾಗತಿಯವರು ಇಲ್ಲಿಯವರೆಗೆ ಬಂದಿದ್ದು ? ಆಯಿತು - ಈ ದೊಡ್ಡ ಸುದ್ದಿ ಹೇಳಿ, ಮತ್ತೆ ಕಣ್ಣಿಗೆ ನಿದ್ರೆ ಹತ್ತದಷ್ಟು ಉಪಕಾರ ಮಾಡಿದಿರಿ. ಇಷ್ಟೇ ಮಾತಾದರೆ -ಮಾತು ಸಾಕು"

-ಬೇಡದ ವಸ್ತುವನ್ನು ತುಂಡುತುಂಡಾಗಿ ಕತ್ತರಿಸುವಂತೆ ಹೇಳಿದರು ನರಸಪ್ಪಯ್ಯ.

"ಅದೇನು ಮಾತಾಡ್ತೀರಿ....ಅವ್ವಾ. ನನ್ನ ಮಗ ಬದುಕಿದ್ದಾನೆಯೇ - ಹೇಗಿದಾನೆ, ನೀವು ನೋಡಿದಿರಾ?"

-ಎಷ್ಟೋ ವರ್ಷಗಳ ಬಳಿಕ ಇಲ್ಲವೆಂದೇತಿಳಿದಿದ್ದ ಮಗನ ಮಾತು ಕೇಳಿ, ಭಾಗೀರಥೀ ಬಾಯಿಯ ಮಾತೃಹೃದಯ ಚಂದ್ರನನ್ನು ಕಂಡ ಕಡಲಂತೆ ಉಕ್ಕಿ-

"ಒಳ್ಳೆ ದಿನ-ಒಳ್ಳೆ ಸುದ್ದಿ ತಂದಿರಿ, ಹಾಲು ತಂದುಕೊಡ್ತೀನಿ. ಕುಡಿದು ಮಾತಾಡಿ"

-ಎಂದು ಕಣ್ಣೀರು-ಸಂತೋಷಗಳು ಪರಸ್ಪರ ಸ್ಪರ್ಧಿಸುತ್ತಿದ್ದ ಧ್ವನಿಯಲ್ಲಿ ಹೇಳಿದಳು.

"ತೆಗೆದುಕೊಂಡು ಬಾ, ತೆಗೆದುಕೊಂಡು ಬಾ - ನಾಗತಿಯವರಿಗಷ್ಟು ಹಾಲು; ನಮಗಿಷ್ಟು ವಿಷ ! ಈ ಮಾತಿಗಿನ್ನು ನೀನು ಇರುವುದು ಬೇಡ. ಒಳಗೆ ಹೋಗು"

-ಎಂದು ಆಕೆಯ ಮುಖಕ್ಕೇ ರಪ್ಪಳಿಸುವಂತೆ ಹೇಳಿ, ಮಲ್ಲವ್ವನಾಗತಿಯತ್ತ ತಿರುಗಿ –

"ನಮ್ಮ ಪಾಲಿಗೆ ಮಕ್ಕಳು ಯಾರೂ ಇಲ್ಲ. ಇಲ್ಲದಿದ್ದವರ ಸುದ್ದಿ ನನಗೆ ಅಗತ್ಯವಿಲ್ಲ."

-ಎಂದು ನಿಷ್ಟುರವಾಗಿ ಹೇಳಿದರು ನರಸಪ್ಪಯ್ಯ.

"ನೀವು ಹೀಗೆ ಹೇಳುತ್ತೀರಿ ಎಂದು ನಮಗೆ ಗೊತ್ತಿತ್ತು. ಅದಕ್ಕೇ ಹಡೆದ ತಾಯಿ ಎದುರಿಗಿರಲಿ ಎಂದು ಕೇಳಿದ್ದು."

"ಹಡೆದ ತಾಯಿ, ಅದಕ್ಕೆ ಕಾರಣನಾದ ತಂದೆ – ಇಬ್ಬರೂ ಭಾಗ್ಯವಂತರು ! ಆ ಮಗನ ಸುಖ ಮೂರು ಜನ್ಮಕ್ಕೆ ಆಗುವಷ್ಟು ಆಯಿತು, ಇನ್ನು ಬೇಡ"

- ಮೊದಲು ಬಿರುಸಾಗಿದ್ದು ಬಳಿಕ ಹರಿತವಾಗುತ್ತಿದ್ದ ಧ್ವನಿಯಲ್ಲಿ ಹೇಳಿದರು ನರಸಪ್ಪಯ್ಯ.

"ಮಗ ಬೇಡವಾದರೆ ಬಿಡಿ. ಮಾತು ಕೇಳಲೇನು ಕಷ್ಟ. ಅವ್ವಾ - ಅವರಿಗೆ ಬೇಡವಾಗಿದ್ದರೆ ಬೇಡ – ನನಗೆ ಹೇಳಿ"

- ಎಂದು ಬೇಡುವ ಧ್ವನಿಯಲ್ಲಿ ಕೇಳಿದಳು, ಭಾಗೀರಥೀಬಾಯಿ.

"ಮುಚ್ಚು ಬಾಯಿ. ನನಗೆ ಬೇಡವಾದ ಮಾತು ನಿನಗೆ ಬೇಕಾ ? ನೀನು ಏನಾಗಬೇಕೂಂತ ಇದ್ದೀಯ - ನನ್ನ ಹೆಂಡತಿಯೇ, ಆ ಹಲಾಲುಕೋರ ಮಗನ ತಾಯಿಯೇ? ಹೆಂಡತಿಯಾಗಬೇಕೆಂದಿದ್ದರೆ ಕಣ್ಣೆದುರಿನಿಂದ ಹೋಗು; ತಾಯಿಯಾಗಬೇಕೆಂದಿದ್ದರೆ ಹೊಸ್ತಿಲಾಚೆ ನಿಂತು ಮುಂದಿನ ಮಾತಾಡು. ಹೂ – ಹೇಳು - ಈಗೇನು ಮಾಡುತ್ತೀಯ ?"

-ಮರಣದಂಡನೆ ವಿಧಿಸುವಂತೆ ಕೇಳಿದರು ನರಸಪ್ಪಯ್ಯ.

"ಇಷ್ಟು ವರ್ಷ ಆಯಿತು....ವಯಸ್ಸಾಯಿತು....ಆದರೂ...."

"ಆದರೂ ಎಲ್ಲಾ ವ್ಯರ್ಥವಾಯಿತು - ನೀನು ಆ ನಾಯಿಕುನ್ನಿಯನ್ನು ಹಡೆದು, ಅಷ್ಟು ಉಪಕಾರ ಮಾಡಿದೆಯಲ್ಲಾ ಕೈ ಹಿಡಿದ ಭಾಗ್ಯಕ್ಕೆ ಸಾಕು - ಈ ಜನ್ಮಕ್ಕಿಷ್ಟು ಸಾಕು – ಎರಡು ಕಡೆಯ ವಂಶವನ್ನೂ ಉದ್ಧಾರಮಾಡಿದೆ."

"ನೀವು ಮನುಷ್ಯರಲ್ಲ, ಕಟುಕರ ಕತ್ತಿಯಾಗಿ ಹುಟ್ಟಬೇಕಾಗಿತ್ತು. ಅದಕ್ಕಾದರೂ ನನ್ನದು, ತನ್ನದು ಎನ್ನುವುದಿರುತ್ತದೆಯೇನೋ. ನಿಮಗೆ ಅದೂ ಇಲ್ಲ. ಮಗ-ಮೃಗ ಎರಡೂ ಒಂದೇ ನಿಮಗೆ"

-ಎಷ್ಟೋ ವರ್ಷಗಳು ಹೃದಯದಲ್ಲಿ ಹೂತಿದ್ದ ಕ್ರೋಧ ಮತ್ತೆ ಕಾಣಿಸಿಕೊಂಡು ಕಿಡಿಗಾರುವಂತೆ ಹೇಳಿದಳು ಭಾಗೀರಥೀಬಾಯಿ.

"ಮಗ-ಮೃಗ, ನೀನು ಹಡೆದದ್ದು, ಎಂಥದು ಎನ್ನುವುದು ನಿನಗೇ ತಿಳಿದಿರಬೇಕು. ಹೊರಗಿನವರ ಮುಂದೆ ನಿನ್ನ ಹರಕುನಾಲಗೆ ಹರಡಬೇಡ. ಇನ್ನು ಒಳಗೆ ಹೋಗು ಎಂದರೆ ಹೋಗಬೇಕು. ಎದ್ದೇಳು -"

-ಎಂದು ಹೆಂಡತಿಗೆ ಮಾತು ಮುಗಿಸಿದಂತೆ ಹೇಳಿ, ಕಣ್ಣು ಕೆಕ್ಕರಿಸಿ ನೋಡಿದರು ನರಸಪ್ಪಯ್ಯ.

ತನ್ನತ್ತ ತಿರುಗಿದ ಗಂಡನ ಕಣ್ಣುಗಳಲ್ಲಿ ಹೊತ್ತಿ ಉರಿಯುತ್ತಿದ್ದ ಕ್ರೋಧಾಗ್ನಿಯ ಝಳವನ್ನು ಸಹಿಸಲಾರದೆ, ಕೆಂಡದ ಮೇಲೆ ಬಿದ್ದ ಹೂವಿನಂತೆ ಸುರುಟಿಕೊಳ್ಳುತ್ತಾ –

"ಅವ್ವಾ – ನೀವು ನನ್ನ ಮಗನನ್ನು ನೋಡಿದ್ದರೆ....ಮತ್ತೆ ನೋಡಿದರೆ....ನಾನು.. ಕೇಳಿದೆ ಎಂದು ಹೇಳವ್ವಾ...."

- ಎಂದಷ್ಟೇ ಬಿಕ್ಕಿ ಬಿಕ್ಕಿ ಅಳುತ್ತಾ ಹೇಳಿ, ಎದ್ದು ಒಳಗೆ ಹೋದಳು ಭಾಗೀರಥೀಬಾಯಿ, ಬಿರುಗಾಳಿಗೆ ಸಿಕ್ಕಿದ ತರಗೆಲೆಯಂತೆ ತೂಗಾಡುತ್ತಾ.

ಅದನ್ನು ನೋಡಿದ ಮಲ್ಲವ್ವನಾಗತಿಯ ಕಣ್ಣು ಕಣ್ಣೀರಿನ ಕಾಸಾರವಾಯಿತು. ಗಂಡಸಾದ ಪರಶುರಾಮನಾಯಕನ ಹೃದಯವೂ ಆ ತಾಯಿಗಾಗಿ ಮರುಗಿ –

"ನರಸಪ್ಪಯ್ಯನವರೇ....ನೀವಿಷ್ಟು ಕಠಿಣರಾಗಬಾರದು. ಹಡೆದ ಕರುಳು...." -- ಎಂದೇನೋ ಹೇಳ ಹೋದ.

"ಆ ಕರುಳು ಹಡೆದದ್ದು ಮನೆ ಉರಿಸುವ ಕೊಳ್ಳಿಯನ್ನು ಮಗನನ್ನಲ್ಲ. ನನ್ನನ್ನು ಕ್ಷಮಿಸಿ - ಇದು ನನ್ನ ಗೃಹಕೃತ್ಯದ ವ್ಯವಹಾರ. ಅದಕ್ಕೂ ಬೇರೆಯವರಿಂದ ಬುದ್ಧಿ ಹೇಳಿಸಿಕೊಳ್ಳುವಷ್ಟು ನನ್ನ ಬುದ್ಧಿ ಸತ್ತು ಹೋಗಿಲ್ಲ."

-ತಟಕ್ಕನೆ ಹಿಮಶೀತಲವಾದ ದೃಷ್ಟಿಯಿಂದ ಪರಶುರಾಮನಾಯಕನ ನೋಡುತ್ತಾ, ಹೇಳಿದರು ನರಸಪ್ಪಯ್ಯ–

"ಈ ಮಾತಿನಲ್ಲಿ ಮಧ್ಯೆ ಬರಲು ದುರ್ಗದ ಪ್ರಧಾನಿಗಳಿಗೂ ಅಧಿಕಾರವಿಲ್ಲ."

ಅವರಾಡಿದ ಮಾತು, ಶಬ್ದವನ್ನೇ ಕೊಂದಂತಾಗಿ ಅಷ್ಟು ಹೊತ್ತು ಮನೆಯೊಳಗೆ ಮೌನ ವ್ಯಾಪಿಸಿತು – ಎಲ್ಲೋ ಬಿಕ್ಕಿಬಿಕ್ಕಿ ಅಳುತ್ತಿದ್ದ ಸದ್ದು ವಿನಾ.

ಕರುಳನ್ನು ಮಿಡಿಯುತ್ತಿದ್ದ ಆ ಸದ್ದನ್ನು ಕೇಳಲಾಗದೆ ಮಲ್ಲವ್ವನಾಗತಿ ಕೆರಳಿ ಕೇಳಿದಳು –

"ನೀವು ಮನುಷ್ಯರಲ್ಲ, ಬಂಡೆಗಲ್ಲಾಗಿ ಹುಟ್ಟಬೇಕಿತ್ತು. ಚಿಕ್ಕಪ್ರಾಯದಲ್ಲಿ ಏನೋ ಸಣ್ಣ ತಪ್ಪುಮಾಡಿದ ಎಂದು ಇಷ್ಟು ದೂರ ಹಡೆದ ಮಗನ ಮೇಲೆ ಹಗೆ ಸಾಧಿಸುವುದೇ ? ಬಿಡಿ - ನರಸಪ್ಪಯ್ಯನವರೇ, ದೇವರೂ ನಿಮ್ಮ ನಡತೆಯನ್ನು ಒಪ್ಪುವುದಿಲ್ಲ. ಇಂಥ ಮಾತಾಡುವ ಬಾಯಲ್ಲಿ ದೇವರ ಹೆಸರು ಹೇಗೆ ಹೇಳುತ್ತೀರಿ. ಮಗ ನಿಮಗೆ ಬೇಡವಾದರೆ ಬಿಡಿ. ಆದರೆ ಹೆತ್ತ ಕರುಳನ್ನು ಹೀಗೆ ಗರಗಸಕ್ಕೆ ಒಡ್ಡಬಾರದು. ತಪ್ಪಿಗೆ ಶಿಕ್ಷೆಯಿದೆ; ಪಾಪಕ್ಕೆ ಪ್ರಾಯಶ್ಚಿತ್ತವಿದೆ. ನಿಮ್ಮ ಮಗ ಎರಡನ್ನೂ ಅನುಭವಿಸಿದ್ದಾನೆ. ಆಯಿತು - ನಿಮಗದು ಬೇಡ. ನೀರು ಕೊಡಬೇಡಿ, ನೆರಳು ಕೊಡಬೇಡಿ. 'ಹೇಗಿದ್ದಾನೆ ?' ಎಂದು ಕೇಳಿ, 'ಎಲ್ಲಿಯಾದರೂ ಚೆನ್ನಾಗಿರಲಿ' ಎನ್ನುವಷ್ಟು ಮನುಷ್ಯತ್ವವಾದರೂ ಬೇಡವೇ ? ಮಗ – ತಪ್ಪು ಮಾಡಿದ. ತಪ್ಪು ಯಾರು ಮಾಡಲಿಲ್ಲ ? ನಾನು ಮಾಡಲಿಲ್ಲವೇ ? ಆಗ ನೀವು ಅಪ್ಪಾಜಿಯವರಿಗೆ ಮಾಡಿದ ಉಪದೇಶವೇನು, ಈಗ ಮಗನ ವಿಷಯದಲ್ಲಿ ನಡೆದುಕೊಳ್ಳುತ್ತಿರುವ ರೀತಿಯೇನು ? ಹಿಡಿದ ಹಟಕ್ಕೆ ದುರ್ಯೋಧನ ತನ್ನ ಕುಲವನ್ನೇ ಕೊಂದಹಾಗೆ ನೀವೂ ನಿಮ್ಮ ವಂಶವನ್ನು ಬಲಿಕೊಡಬೇಡಿ. ನೀವು ಮಾಡಿದ ಉಪಕಾರದ ಋಣ ನನ್ನ ತಲೆಯ ಮೇಲಿದೆ. ಅದಕ್ಕೇ -ಬೇಕೆಂದರೆ ಹೇಳಿ – ಕಾಲಿಗೆ ಬಿದ್ದು ಕೇಳಿಕೊಳ್ಳುತ್ತೇನೆ - ಮಗನನ್ನು ಮರೆತರೂ ಭಿಕ್ಷಾನ್ನ ಎತ್ತಿಕೊಂಡು ಬದುಕುತ್ತಿರುವ ಮಕ್ಕಳನ್ನಾದರೂ ತಂದು ಸಾಕಿಕೊಳ್ಳಿ. ಅವರೇನೂ ನಿಮಗೆ ವಿಷ ಹಾಕಲಿಲ್ಲವಲ್ಲ. ಅಷ್ಟಾದರೂ

ಉಪಕಾರ ಮಾಡಿ - ಪ್ರಧಾನಿಗಳ ವಂಶದಲ್ಲಿ ಹುಟ್ಟಿದವರು, ನಿಲ್ಲಲು ನೆರಳಿಲ್ಲ, ಮಲಗಲು ಮನೆಯಿಲ್ಲ - ಛೀ ಛೀ - ಇಂಥ ಕಷ್ಟ ಮನುಷ್ಯರಿಗಲ್ಲ, ಮರಕ್ಕೂ ಬರಬಾರದು, ಅದೂ ಬೆಂದು ಹೋಗುತ್ತದೆ....ಅಷ್ಟಾದರೂ ಉಪಕಾರ ಮಾಡುತ್ತೀರೋ ಇಲ್ಲಾವೋ ಹೇಳಿ-"

ಮಲ್ಲವ್ವನ ಗತಿ ಹೇಳಿದ ಮಾತಿನಿಂದ ಕೊಂಚವೂ ವಿಚಲಿತರಾಗದೆ ಕೇಳಿದರು ನರಸಪ್ಪಯ್ಯ –

"ನನ್ನ ಮಗ ಈ ಮಾತು ಹೇಳಿ ಎಂದು ನಿಮ್ಮನ್ನು ಕಳಿಸಿಕೊಟ್ಟನೇ ?"

"ನಿಮ್ಮ ಮಗ - ನಿಮ್ಮ ಮಗನೇ. ಅವನು ಕೇಳಲಿಲ್ಲ; ನಾನೇ ಕೇಳಿಕೊಳ್ಳುತ್ತೇನೆ ಎಂದು ಹೇಳಿ ಬಂದೆ – ತಂದೆಗೆ ಬದಲು ತಂದೆಯಾಗಿ ನನ್ನ ಪಾಲಿಗೆ ನೀವಿದ್ದೀರಿ ಎಂದು. ಈಗ ಆ ನಂಬಿಕೆಯನ್ನು ಸುಳ್ಳು ಮಾಡಿಬಿಟ್ಟಿರಿ. ತವರಿಲ್ಲದ ವಿಧವೆಯನ್ನಾಗಿ ಮಾಡಿದಿರಿ ನೀವು - ಯಾವತ್ತೋ ಅಲ್ಲ, ಇವತ್ತು ನನ್ನ ಪಾಲಿಗೆ ತಂದೆತಾಯಿ ಸತ್ತರು"

- ಎಂದು ಮಲ್ಲವ್ವನಾಗತಿ ದುಃಖತಪ್ತ ಧ್ವನಿಯಲ್ಲಿ ಹೇಳಿ –

"ನೀವು ಕರೆಸಲಿಲ್ಲ. ನಾನು ಬರಬಾರದಾಗಿತ್ತು. ಬಂದೆ - ಬಂದಹಾಗೇ ಹೋಗುತ್ತೇನೆ- ಬರಿಗೈಭಿಕಾರಿಯಾಗಿ" – ಕುಳಿತಿದ್ದವಳು ಮೇಲೆದ್ದು ನಿಂತಳು.

ಅದುವರೆಗೂ ಸುಮ್ಮನಿದ್ದ ಪರಶುರಾಮನಾಯಕ –

"ಅವ್ವಾ, ನೀವು ಕುಳಿತುಕೊಳ್ಳಿ. ದುರ್ಗದಲ್ಲಿ ನರಸಪ್ಪಯ್ಯನವರ ಮನೆಯೊಂದೇ ಅಲ್ಲ ಇರುವುದು ನಿಮ್ಮ ಪಾಲಿಗೆ ನಿಮ್ಮ ತವರಿನವರು ನಾವಿನ್ನೂ ಬದುಕಿದ್ದೇವೆ. ಅದೇನು ಮಾತೋ ಹೇಳಿ – ನಮ್ಮ ಮನೆಯ ಲಕ್ಷ್ಮಿ ಕಣ್ಣೀರು ಹಾಕಿಕೊಂಡು ಹೋಗುವುದು ನಮಗೆ ಲಕ್ಷಣವಲ್ಲ. ನಿಮ್ಮ ಮಾತು ನಡೆಸಲು ನಾವಿನ್ನೂ ಬದುಕಿದ್ದೇವೆ" - ಎಂದು ಹೇಳಿದ.

"ಪರಶುರಾಮನಾಯಕರೇ, ನನ್ನ ಮಗನ ವಿಷಯ ನಿಮಗೆ ತಿಳಿಯದು. ಮಾತು ಕೇಳಲು ಬಂದಿದ್ದೀರಿ, ಕೇಳಿ ಹೋಗಿ"

- ನರಸಪ್ಪಯ್ಯ, ಛಳಿಗೆ ತಣ್ಣಗಾಗಿ ಸೆಟೆದುಕೊಂಡ ಹೆಣದಂತಿದ್ದ ಧ್ವನಿಯಲ್ಲಿ ಹೇಳಿದರು-

"ನೀವು ಬರದೆ, ಕರಣಿಕರು ಬಂದಿದ್ದರೇ ಚೆನ್ನಾಗಿತ್ತು."

"ನಾನು ಬಂದದ್ದೇ ಒಳ್ಳೆಯದಾಯಿತು. ಕರಣಿಕ ನಿಮ್ಮ ಮಾತಿನ ಉರಿಗೆ ಸಿಕ್ಕು ಬೂದಿಯಾಗುತ್ತಿದ್ದ. ನಾವಾಗುವ ಹೊತ್ತಿಗೆ ಈ ಬೆಂಕಿಯ ತಾಪವನ್ನು ತಡೆದುಕೊಂಡೆವು. ನಿಮ್ಮ ಮಗನ ವಿಷಯ ಹೇಳಿದಿರಿ ನೀವು. ನಮಗದು ತಿಳಿಯದ ವಿಷಯವಲ್ಲ. ಪ್ರಧಾನಿಗಳ ಚಾವಡಿಯ ಕಡತಗಳಲ್ಲಿ ಕೊತ್ವಾಲಚಾವಡಿ ಕಳಿಸಿದ ವರದಿ ಇನ್ನೂ ಇದೆ. ಅದನ್ನು ನೋಡಿದ್ದೇನೆ. ನಿಮಗೆ

ಆಗದವರು ಆ ಬಗ್ಗೆ ಹೇಳಿದ ಮಾತೂ ನಮ್ಮ ಕಿವಿಗೆ ಬಿದ್ದಿವೆ. ಆದ್ದರಿಂದ ಅದನ್ನು ವಿವರಿಸಿ, ನಿಮ್ಮ ಮನಸ್ಸನ್ನು ಕಹಿಯಾಗಿ ಮಾಡಿಕೊಳ್ಳುವ ಅಗತ್ಯವಿಲ್ಲ"

- ಎಂದು ನರಸಪ್ಪಯ್ಯನವರಿಗೆ ಹೇಳಿ, ಮಲ್ಲವ್ವನಾಗತಿಯತ್ತ ತಿರುಗಿ –

"ಅವ್ವಾ, ಆ ಸಂಸಾರವನ್ನು ದುರ್ಗಕ್ಕೆ ಕಳಿಸಿ. ಮುಂದಿನದನ್ನು ನಮಗೆ ಬಿಡಿ"

- ಎಂದು ಹೇಳಿದ, ಪರಶುರಾಮನಾಯಕ.

"ನನ್ನ ಮಗನ ವಿಷಯ ನಿಮಗೆ ತಿಳಿದಿದ್ದರೆ, ಅವನ ವಿಷಯದಲ್ಲಾಗಿರುವ ರಾಜಾಜ್ಞೆಯ ವಿಷಯವೂ ನಿಮಗೆ ತಿಳಿದಿರಬೇಕು. 'ಈ ರಾಜ್ಯದ ಗಡಿಯೊಳಗೆ ಕಾಲಿಟ್ಟರೆ ಅವನ ತಲೆ ಕತ್ತರಿಸಬೇಕು' ಎಂದು ರಾಜಾಜ್ಞೆಯಾಗಿದೆ."

"ಪ್ರಧಾನಿಯಾಗಿ ನೀವು ಮಾಡಿದ ಆಜ್ಞೆಯ ವಿಷಯವೂ ನನಗೆ ತಿಳಿದಿದೆ. ಈಗ ಪ್ರಧಾನಿಯಾಗಿ ನಾನದನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ. ದುರ್ಗದ ಮಕ್ಕಳು ಕಂಡವರ ಸೀಮೆಯಲ್ಲಿ ತಿರುಪೆ ಬೇಡುವುದು ನಮಗೆ ಕೀರ್ತಿಯಲ್ಲ. ಅವರಿಗೆ ಬೇಕಾದ ರಹದಾರಿಪತ್ರ ಕಳಿಸಿಕೊಡುತ್ತೇನೆ. ಅವರನ್ನು ಕಳಿಸಿ, ಅವ್ವ"

-ಎಂದು ನಿರ್ಧಾರದ ಧ್ವನಿಯಲ್ಲಿ ಮಲ್ಲವ್ವನಾಗತಿಗೆ ಹೇಳಿ-

"ನರಸಪ್ಪಯ್ಯನವರೇ, ಈ ವಿಷಯದಲ್ಲಿ ನಾನು ದುಡುಕಿದ್ದರೆ ನನ್ನನ್ನು ಕ್ಷಮಿಸಿ. ನಿಮ್ಮ ಮಗ ಸಂಸಾರಸಮೇತ ದುರ್ಗಕ್ಕೆ ಬರಲಿ"

- ಎಂದು ನರಸಪ್ಪಯ್ಯನವರಿಗೆ ಹೇಳಿದ, ಪರಶುರಾಮನಾಯಕ.

"ಬರಲಿ - ದುರ್ಗದ ಪ್ರಧಾನಿಗಳ ಆಜ್ಞೆಗೆ ಬೇಡ ಎನ್ನಲು ನಾನು ಯಾರು ? ಆದರೆ, ದಯವಿಟ್ಟು ಅವನನ್ನು ನನ್ನ ಮುಂದೆ ತಂದು ನಿಲ್ಲಿಸುವ ಕೆಲಸ ಮಾತ್ರ ಮಾಡಬೇಡಿ."

"ಬೇಡಿ – ಅವರಿಗೆ ತೋರಿಸಬೇಡಿ. ಹಡೆದ ತಾಯಿ - ನನಗೊಂದು ಸಲ ನನ್ನ ಮಗ, ಮೊಮ್ಮಕ್ಕಳ ಮುಖ ತೋರಿಸಿ. ಅದನ್ನು ನೋಡಿ ಮನಸ್ಸು ತಣ್ಣಗೆ ಮಾಡಿಕೊಂಡು ನಾನು ಭಾವಿಗೆ ಬೀಳುತ್ತೇನೆ. ಆಮೇಲೆ ಬೇಕಾದರೆ, ಅವರು ಈ ಮನೆಯನ್ನು ಮಹರಾಯರಾಗಿ ಆಳಿಕೊಂಡಿರಲಿ. ಊರಿನಲ್ಲಿಲ್ಲವಾದರೆ ಕಾಡಿನಲ್ಲಾದರೂ ನನ್ನ ಮಗನ ಮುಖ ತೋರಿಸಿ"

- ಎಂದು ಮನೆಯೊಳಗಿನಿಂದ ಬಂದು ಭಾಗೀರಥಿಬಾಯಿ ಅಳುತ್ತಾ ಬೇಡಿದಳು.

"ನೀವೇನೂ ಚಿಂತೆ ಮಾಡಬೇಡಿ, ತಾಯಿ. ಬಿಸಲಿಗೆ ಬಂಡೆಯೂ ಸಿಡಿಯುತ್ತದೆ. ಮಗನ ಮುಖ ನೋಡಿದಾಗ ನಿಮ್ಮ ಯಜಮಾನರ ಹೃದಯವೂ ಕರಗಬಹುದು. ಭಗವಂತ ಯಾರಿಗೆ ಯಾವ ಕಾಲಕ್ಕೆ ಏನು ಬುದ್ಧಿ ಕೊಡುತ್ತಾನೆ ಎಂದು ಯಾರು ಬಲ್ಲರು"

- ಎಂದು ಪರಶುರಾಮನಾಯಕ ಭಾಗೀರಥೀಬಾಯಿಯನ್ನು ಸಂತೈಸಿದ.

“ನನ್ನ ತವರಿನ ಕೀರ್ತಿಯನ್ನು ಕಾಪಾಡಿದಿರಿ. ಈ ಉಪಕಾರ ಮರೆಯುವುದಿಲ್ಲ”

-ಎಂದು ಮಲ್ಲವ್ವನಾಗತಿಯೂ ತನ್ನ ಕೃತಜ್ಞತೆಯನ್ನರ್ಪಿಸಿದಳು.

“ಹೆಂಗಸರ ಕಣ್ಣೀರಿಗೆ ಕರಗುವವರು ಪ್ರಪಂಚಕ್ಕೆ ಒಳ್ಳೆಯವರಾಗಬಹುದು, ಪರಶುರಾಮನಾಯಕರೇ, ಆದರೆ ಒಂದು ರಾಜ್ಯದ ಪ್ರಧಾನಿಯಾಗುವುದು ಸಾಧ್ಯವಿಲ್ಲ. ಅದನ್ನು ಮರೆಯಬೇಡಿ”

-ಎಂದು ಒಣಗಿದ ಧ್ವನಿಯಲ್ಲಿ ಹೇಳಿ, ತಮ್ಮನ್ನೇ ನೋಡುತ್ತಿದ್ದ ಎರಡು ಹೆಣ್ಣು ಜೀವಗಳಿಗೂ ಹೇಳುವಂತೆ ಹೇಳಿದರು-

“ಹೆಣ್ಣಿನ ಕಣ್ಣೀರು ಎಂದೂ ಯಾರಿಗೂ ಉಪಕಾರ ಮಾಡಲಿಲ್ಲ. ಕೃತ, ತ್ರೇತ, ದ್ವಾಪರ ಯುಗಗಳು ಕೆಟ್ಟದ್ದೇ ಹೆಣ್ಣಿನ ಕಣ್ಣೀರಿನಿಂದ. ಇನ್ನು ನನ್ನ ಮನೆಯದೇನು ಲೆಕ್ಕ. ಎಲ್ಲರಿಗೂ ಒಳ್ಳೆಯತನದ ಸ್ಪರ್ಧೆಯಲ್ಲಿ ಗೆಲ್ಲುವ ಉತ್ಸಾಹ. ನಾನೊಬ್ಬನೇಕೆ ದೂರ ನಿಂತು ಕೆಟ್ಟವನಾಗಲಿ. ಆಯಿತು - ನನ್ನ ಮೇಲೆ ರಾಜಾಜ್ಞೆ ನಡೆಯಿತು, ಈ ಮನೆಯಲ್ಲಿ ಪ್ರಧಾನಿಗಳ ಆಜ್ಞೆ ಕೊಡೆಬಿಚ್ಚಿತು. ಇನ್ನು ನಮ್ಮ ಪಾಲಿಗೆ ಉಳಿದದ್ದು - ಪೇಟೆಪ್ರಾಣದೇವರ ಗುಡಿಯ ಜಗುಲಿಯಷ್ಟೆ. ಬರುತ್ತೇನೆ, ನಮಸ್ಕಾರ.”

ಅಷ್ಟು ಹೇಳಿ ನರಸಪ್ಪಯ್ಯ, ಉಟ್ಟ ಉಡುಪಿನಲ್ಲೇ ಮನೆಯಾಚೆ ಹೊರಟರು.

“ಎಲ್ಲಿಗೆ ಹೋಗುತ್ತೀರಿ ?” – ಹೆದರಿ ಕೇಳಿದಳು ಭಾಗೀರಥೀಬಾಯಿ.

“ಅದಕ್ಕೂ ನಿನ್ನಾಜ್ಞೆ ಬೇಕೇ ? ಇನ್ನೆಷ್ಟು ಸಣ್ಣವನನ್ನಾಗಿ ಮಾಡುತ್ತೀರ ನೀವು. ಬದುಕಿಗೆ ಹೆದರುವಷ್ಟು ಹೇಡಿತನ ನಮಗಿನ್ನೂ ಬಂದಿಲ್ಲ. ಒಂದು ಮಾತು, ಪರಶುರಾಮನಾಯಕರೇ, ಕೆಲವು ವೇಳೆ ಬೇಡದಿದ್ದ ಔದಾರ್ಯವೂ ಭಿಕ್ಷಾನ್ನವಾಗುತ್ತದೆ”

- ಎಂದಷ್ಟೇ ಹೇಳಿ, ಹೊರಹೊರಟರು ನರಸಪ್ಪಯ್ಯ.

ಅವರು ಹೋದ ದಿಕ್ಕನ್ನೇ ನೋಡುತ್ತಾ, ಮಾತು ಸತ್ತವರಂತೆ ಮೂಕವಿಸ್ಮಿತರಾಗಿ ನಿಂತರು – ಮೂವರೂ.

* * *

ನರಸಪ್ಪಯ್ಯನವರ ಮನೆಯಿಂದ ತಡವಾಗಿ ಹಿಂದಿರುಗಿದ ತಾಯಿಯನ್ನು, ಮಗ ಹಾಲಪ್ಪನಾಯಕ ಕೇಳಿದ-

“ಅವ್ವಾ - ನೀನು ಹೋದ ರಾಯಭಾರ ಏನಾಯಿತು ?- ಮಗನನ್ನು ಮನೆಯಲ್ಲಿ ಸೇರಿಸಿ ಕೊಳ್ಳಲು ಒಪ್ಪಿದರೇ ನರಸಪ್ಪಯ್ಯ ?”

“ದೇವರು ನರಸಪ್ಪಯ್ಯನವರ ಹೃದಯವನ್ನು ಏತರಿಂದ ಮಾಡಿದ್ದಾನೋ ನಾನು ಕಾಣೆ. ಪುಣ್ಯಕ್ಕೆ ಪರಶುರಾಮನಾಯಕರು ಅಡ್ಡನಿಂತು ಶ್ರೀಪತಿರಾಯರು ಮತ್ತೆ ಮನೆಯ ಮುಖ ಕಾಣುವ ಹಾಗಾಯಿತು”

- ಎಂದ ಮಲ್ಲವ್ವನಾಗತಿ ಸಮಾಧಾನದ ನಿಟ್ಟುಸಿರಿಟ್ಟು ಹೇಳಿದಳು –

“ತಾಯಿಮಕ್ಕಳನ್ನು ಕೂಡಿಸಿದ ಪುಣ್ಯ ಕಟ್ಟಿಕೊಂಡರು; ನನ್ನ ತವರುಮನೆ ತನ್ನ ಕೀರ್ತಿ ಉಳಿಸಿಕೊಂಡಿತು.”

“ಬೆಳೆಯಲಿ, ಬೆಳೆಯಲಿ - ನಿಮ್ಮ ತವರಿನವರ ಪುಣ್ಯದ ಗಂಟು, ಇನ್ನಷ್ಟು ದೊಡ್ಡದಾಗಿ ಬೆಳೆಯಲಿ”

-ಎಂದು ತಾಯಿಗೆ ಹೇಳಿ –

“ಭಾರ ಹೆಚ್ಚಾಗದೆ ಬೆನ್ನು ಎಂದೂ ಮುರಿಯುವುದಿಲ್ಲ”

-ಎಂದು ತನಗೆ ತಾನೇ ಹೇಳಿಕೊಂಡ ಹಾಲಪ್ಪನಾಯಕ.

* * *

“ಸರಿಯೋ ತಪ್ಪೋ– ನಾನಿಷ್ಟು ಮಾಡಿದೆ”

- ಎಂದು ಪರಶುರಾಮನಾಯಕ, ನರಸಪ್ಪಯ್ಯನವರ ಮನೆಯಲ್ಲಿ ನಡೆದುದೆಲ್ಲವನ್ನೂ ಮದಕರಿನಾಯಕನಿಗೆ ವಿವರಿಸಿ ಹೇಳಿದ.

“ಸರಿಯೋ - ತಪ್ಪೋ ? ಎಲ್ಲದಕ್ಕೂ ಒಂದು ಅಳತೆ-ತಕ್ಕಡಿ ಕಂಡುಹಿಡಿದಿದ್ದಾರೆ. ಇದಕ್ಕೆ ಮಾತ್ರ ಯಾರೂ ಕಂಡುಹಿಡಿದ ಹಾಗಿಲ್ಲ. ಅದಕ್ಕೇನು ಮಾಡುವುದು ? ಕಣ್ಣು ಕಾಣುವಷ್ಟು ದೂರ ನೋಡಿದ ಹಾಗೆ, ಬುದ್ಧಿಗೆ ಎಟುಕುವಷ್ಟು ಯೋಚನೆ ಮಾಡಿದರಾಯಿತು. ನೀನು ಮಾಡಿದ್ದೇನೂ ತಪ್ಪು ಕೆಲಸವಲ್ಲ. ತಂದೆ-ಮಕ್ಕಳನ್ನು ಕೂಡಿಸುವ ಕೆಲಸ ಮಾಡಿದೆ. ಅದು ಧರ್ಮದ ಕೆಲಸ. ಅದಕ್ಕೇಕೆ ಯೋಚನೆ ?”

“ಆದರೆ ನರಸಪ್ಪಯ್ಯನವರು ಹಾಗೆಂದುಕೊಳ್ಳಲಿಲ್ಲ. ಅವರ ಮನೆವಾರ್ತೆಯ ವಿಷಯದಲ್ಲಿ ನಾನು ತಲೆಹಾಕಿದೆ ಎಂಬ ಅಸಮಾಧಾನವನ್ನೇ ತೋರಿಸಿದರು. ತಂದೆ ಎನ್ನಿಸಿಕೊಂಡವರು ಇಷ್ಟು ಕಲ್ಲುಮನಸ್ಸಿನವರಾಗಬಾರದು. ನಾನು ಮಾಡಿದ ಒಳ್ಳೆಯ ಕೆಲಸವೂ ತಪ್ಪು ಎನ್ನುವ ಹಾಗೆ ಮಾತಾಡಿದರು'' - ಚಿಂತೆ-ವ್ಯಥೆಗಳಿದ್ದ ಧ್ವನಿಯಲ್ಲಿ ಹೇಳಿದ ಪರಶುರಾಮನಾಯಕ.

"ನಮಗೂ ಇಷ್ಟು ವಯಸ್ಸಾಯಿತು. ಎಷ್ಟೋ ಜನರನ್ನು ನಾವೂ ನೋಡಿದೆವು. ಆದರೆ ನರಸಪ್ಪಯ್ಯನವರಂಥ ಇನ್ನೊಬ್ಬರನ್ನು ನೋಡಲಿಲ್ಲ. ನಮ್ಮ ಬುದ್ಧಿಯೆಲ್ಲಾ ನೀರಿನ ಮೇಲೆ ತೇಲುವ ಹಾವಸೆ; ಅವರದು ಮಾತ್ರ ಬಹಳ ಆಳದಲ್ಲಿ ಆಡುವ ಮೀನು. ನಮಗೆ ಹಗಲಾಗಿ ಕಂಡದ್ದು ಅವರಿಗೆ ಇರುಳಾಗಿ ಕಾಣುತ್ತದೆ. ಆದ್ದರಿಂದ ನಮಗೆ ಅರ್ಥವಾಗದ ಜನದಿಂದ ಆದಷ್ಟು ದೂರ ಇರುವುದೇ ಒಳ್ಳೆಯದು. ಈಗಂತೂ ಇರುಕಿನಲ್ಲಿ ಸಿಕ್ಕಿಹಾಕಿಕೊಂಡ ಹಾಗಾಯಿತು. ಮುಂದೆ ಅವರ ಯಾವ ಮಾತಿಗೂ ಮಧ್ಯಸ್ಥಿಕೆಗೆ ಹೋಗಬೇಡ. ಅವರಿಗೆ ಹೇಗೆ ಬೇಕೋ ಹಾಗಿರಲಿ"

- ಎಂದು ಮಾತು ಮುಗಿಸಿದಂತೆ ಹೇಳಿ –

"ಈಗ ನೀನು ಮಾಡಬೇಕಾದ ಕೆಲಸ ಬೇಕಾದಷ್ಟಿದೆ. ಬಂದ ದಾರಿಗೆ ಸುಂಕವಿಲ್ಲ ಎಂದು ಹೇಳಿದ ಹಾಗೆ ನವಾಬರ ವಕೀಲರನ್ನು ಕಳಿಸಿ, ಹುತ್ತದೊಳಗಿದ್ದ ಹಾವನ್ನು ಹೊಗೆ ಹಾಕಿ ಎಬ್ಬಿಸಿದ ಹಾಗಾಗಿದೆ. ಅದರ ಯೋಚನೆ ಮಾಡು. ನರಸಪ್ಪಯ್ಯನವರ ಸಂಸಾರದ ಚಿಂತೆ ಅವರು ಮಾಡಲಿ"

- ಎಂದು ಹೇಳಿ, ನರಸಪ್ಪಯ್ಯನವರ ಸಂಸಾರದ ಮಾತನ್ನು ಮರೆತುಬಿಡಲು ಹೇಳಿದ ಮದಕರಿನಾಯಕ.

ಆದರೆ ಆ ಅಣ್ಣ ತಮ್ಮಂದಿರು ಮರೆಯಲು ಬಿಡಲಿಲ್ಲ- ನರಸಪ್ಪಯ್ಯನವರ ಸಂಸಾರದ ಪ್ರಶ್ನೆ.

ಅದು ಕೊಡವಿಕೊಂಡರೆ ಹೋಗುವ ಧೂಳಾಗದೆ, ಕೆರೆದುಕೊಂಡಷ್ಟೂ ಹೆಚ್ಚಾಗುವ ನವೆಯಾಯಿತು.

೬

ಆ ಮಾತಾದ ಐದನೆಯ ದಿನ ಮಧ್ಯಾಹ್ನ ಅಲಂಕೃತವಾದ ಎತ್ತುಗಳಿಂದ ಎಳೆಯಲ್ಪಟ್ಟ ಸವಾರಿ ಗಾಡಿಯೊಂದು ಬಂದು, ನರಸಪ್ಪಯ್ಯನವರ ಮನೆಯ ಮುಂದೆ ನಿಂತಿತು.

ಸಾಕಷ್ಟು ವಯಸ್ಸಾದ ಮನುಷ್ಯನೊಬ್ಬ, ಆ ಗಾಡಿಯಿಂದ ಕೆಳಗಿಳಿದು, ಮನೆಯ ತಲೆ ಬಾಗಿಲವರೆಗೂ ಬಂದು, ಮುಚ್ಚಿದ ಬಾಗಿಲನ್ನು ಕೂಡಲೇ ತಟ್ಟಿ ಕರೆಯಲು ಹಿಂಜರಿದು, ನಾಲ್ಕಾರು ಬಾರಿ, ಮನೆಯ ಮುಂದಿನ ಜಗಲಿಯ ಕೈಸಾಲೆಯಲ್ಲಿ ಅಡ್ಡಾಡಿ, ತೆರೆದ ಕಿಟಕಿಗಳಲ್ಲಿ ಇಣುಕಿ ನೋಡಿ, ಕೊನೆಗೆ ಒಂದು ನಿರ್ಧಾರಕ್ಕೆ ಬಂದಂತೆ ತಲೆಬಾಗಿಲನ್ನು ತಟ್ಟಿದ.

ಮೊದಲು ಮೆಲ್ಲಗೆ – ಆಮೇಲೆ ಗಟ್ಟಿಯಾಗಿ –

ಹಾಗೆ ನಾಲ್ಕೈದುಬಾರಿ ಬಾಗಿಲು ತಟ್ಟಿದಮೇಲೆ –

"ಯಾರದು, ಯಜಮಾನರು ಊಟಕ್ಕೆ ಕುಳಿತಿದ್ದಾರೆ"

-ಎಂದು ಮನೆಯೊಳಗಿನಿಂದಲೇ ಭಾಗೀರಥೀಬಾಯಿ ಹೇಳಿದ್ದು ಕೇಳಿಸಿತು.

ಆ ಧ್ವನಿಯನ್ನು ಕೇಳಿ, ಆತನ ಮುಖ ಬಗೆಬಗೆಯ ಭಾವತರಂಗವಾಗಿ, ಉತ್ತರ ಕೊಡದೆ ಮತ್ತೆ ಬಾಗಿಲು ತಟ್ಟಿದ, ಇನ್ನಷ್ಟು ಗಟ್ಟಿಯಾಗಿ.

"ಇದೇನು ಅನ್ನ ಕಂಟಕ ಜನ, ಊಟ ಮಾಡುತ್ತಿದ್ದಾರೆ ಎಂದರೆ ಕೆಲಸವಿದ್ದರೆ ಸ್ವಲ್ಪ ಹೊತ್ತು ಸುಮ್ಮನಿರಬೇಕು. ಇಲ್ಲದಿದ್ದರೆ ಹೋಗಬೇಕು - ಇದೇನು ಬಾಗಿಲು ಬಡಿಯಾಟ"

– ಎಂದು ಗೊಣಗಿಕೊಳ್ಳುತ್ತಲೇ ಬಂದು, ಭಾಗೀರಥೀಬಾಯಿ ಬಾಗಿಲು ತೆರೆದು ಹೊರಗೆ ನಿಂತಾತನನ್ನು ನೋಡಿದಳು.

ನೋಡಿದಳು –

ಯಾರೋ ಅಪರಿಚಿತ ಮನುಷ್ಯ, ನರೆತು ಹಂಜಿಬುಟ್ಟಿಯಂತಾದ ತಲೆ. ಬತ್ತಿಹೋದ ಕೆನ್ನೆಗಳನ್ನು ತುಂಬಿ ಬೆಳೆದ ಗಿರ್ಜಾಮೀಸೆ. ದಪ್ಪವಾಗಿ ಬೆಳೆದ ಅರೆನೆರೆತ ಹುಬ್ಬುಗಳಡಿಯ ತಳಕ್ಕಿಳಿದುಹೋದ ಕಣ್ಣುಗಳು - ಆ ಮುಖದಲ್ಲಿ ಎದ್ದು ಕಾಣುವುದೆಲ್ಲಾ ಮೂಗೊಂದೇ. ಬಗಲುಗಸೆ ಅಂಗಿಯನ್ನು ಧರಿಸಿ, ಕಚ್ಚೆ ಪಂಚೆಯನ್ನುಟ್ಟು, ಬಡಕಲಾಗಿ, ಎತ್ತರವಾಗಿದ್ದ ಆ ಮನುಷ್ಯನನ್ನು ನೋಡಿದ ಭಾಗೀರಥೀಬಾಯಿಯ ಕಣ್ಣುಗಳು 'ಈತ ತಮಗೆ ಅಪರಿಚಿತ' ಎಂದು ಹೇಳಿದರೂ, ಆಕೆಯ ಹೃದಯ ಹಾಗೆನ್ನುತ್ತಿಲ್ಲ. ಮಸುಕಾದ ಕನ್ನಡಿಯಲ್ಲಿ, ಮಬ್ಬು ಬೆಳಕಿನಲ್ಲಿ ಕಂಡ ಪ್ರತಿಬಿಂಬದಂತೆ 'ಎಂದೋ, ಎಲ್ಲಿಯೋ ನೋಡಿದ ಹಾಗಿದೆ' ಎಂದಾಕೆಯ ಹೃದಯ ಹೇಳಿ, ಏನೂ ಮಾತಾಡಲು ತೋಚದೆ, ಬಂದಾತನನ್ನು ಸುಮ್ಮನೆ ನಿಂತು ನೋಡಿದಳು.

ಆಕೆ ಕಣ್ಣಿಗೆ ಬೀಳುತ್ತಿದ್ದ ಹಾಗೇ –

"ಅಮ್ಮ" -ಎಂದು ಕರೆದು, ಆತ ಆಕೆಯ ಕಾಲುಗಳೆರಡನ್ನೂ ಹಿಡಿದು ನಮಸ್ಕರಿಸಿದ.

"ಬಿಡಪ್ಪಾ, ನನಗೆ ಯಾಕೆ ನಮಸ್ಕಾರ ಮಾಡ್ತೀಯ...."

- ಎಂದು ಭಾಗೀರಥೀಬಾಯಿ ತನ್ನ ಕಾಲುಗಳನ್ನು ಹಿಂದಕ್ಕೆ ತೆಗೆದುಕೊಂಡರೂ, ಆತನ ಧ್ವನಿ ಬಹುಸೂಕ್ಷ್ಮವಾಗಿ ಆಕೆಯ ಕರುಳ ತಂತಿಯನ್ನು ಮಿಡಿದಂತಾಗಿ –

"ಯಾರಪ್ಪಾ ನೀನು ?"

- ಎಂದು ಗೊಂದಲವಿದ್ದ ಧ್ವನಿಯಲ್ಲಿ ಕೇಳಿದಳು.

"ನಾನು....ನಾನು....ನನ್ನ ಗುರುತು ಸಿಗಲಿಲ್ವೇನಮ್ಮಾ....ನಾನು ನಿನ್ನ ಮಗ - ಶ್ರೀಪತಿ"

- ಎಂದು ಕಂಪಿಸುತ್ತಿದ್ದ ಧ್ವನಿಯಲ್ಲಿ ಹೇಳಿದ ಬಂದಾತ.

"ಶ್ರೀಪತಿ....ಶ್ರೀಪತಿ....ನನ್ನ ಮಗ....ಹೊರಗ್ಯಾಕೆ ನಿಂತಿದ್ದೀಯ, ಒಳಗೆ ಬಾ....ಎಷ್ಟು ವರ್ಷ ಆಯಿತೋ - ನಿನ್ನ ನೋಡಿ, ಶ್ರೀಪತಿ...." - ಎಂದು ಕಣ್ಣಲ್ಲಿ ನೀರು ತುಂಬಿ ತೊದಲಿದಳು ಭಾಗೀರಥೀಬಾಯಿ.

"ಒಳಗೆ ಬರಬೇಡ. ಅಲ್ಲೇ ನಿಲ್ಲು."

- ಒಳಗೆ ಬರಬೇಕೋ ಬೇಡವೋ ಎಂದು ಚಿಂತಿಸುತ್ತಿದ್ದಾತನ ಮುಖಕ್ಕೆ ಹೊಡೆದಂತೆ ಹೇಳಿದರು, ಆ ವೇಳೆಗೆ ಭಾಗೀರಥಿಬಾಯಿಯ ಬೆನ್ನು ಹಿಂದೆ ನಿಂತಿದ್ದ ನರಸಪ್ಪಯ್ಯ, ನಿಂತಾತನನ್ನು ದುರುಗುಟ್ಟಿ ನೋಡುತ್ತಾ.

ಆ ಧ್ವನಿಯ ಕರ್ಕಶತೆಗೆ ಹೆದರಿ ಹೊರಗೆ ನಿಂತಿದ್ದಾತ, ಇನ್ನೆರಡು ಹೆಜ್ಜೆ ಹಿಂದೆ ಸರಿದ.

"ಇದೇನು....ಹೀಗ್ಯಾಕೆ ಮಾತಾಡ್ತಿರಿ....ಅವನು.. ಅವನು ಶ್ರೀಪತಿ...ನಿಮ್ಮ ಮಗ"

- ದಿಗ್ಭ್ರಾಂತಳಾಗಿ ತೊದಲಿದಳು, ಭಾಗೀರಥೀಬಾಯಿ.

"ಅದೆಲ್ಲಾ ಕೇಳಿಸಿತು. ನನ್ನ ಮಗ ನನ್ನ ಪಾಲಿಗೆ ಎಂದೋ ಸತ್ತುಹೋದ. ಅವನ ಪ್ರೇತ ಮನೆಯೊಳಗೆ ಬರುವುದು ನನಗೆ ಬೇಕಿಲ್ಲ. ನೀನು ಒಳಗೆ ನಡಿ"

- ಎಂದು ಬಲವಂತವಾಗಿ, ನಿರ್ದಾಕ್ಷಿಣ್ಯವಾಗಿ ಭಾಗೀರಥೀಬಾಯಿಯನ್ನು ಒಳಗೆ ದಬ್ಬಿ, ಬೀದಿಯಲ್ಲಿ ನಿಂತಿದ್ದ ಗಾಡಿಯವನಿಗೆ –

"ಗಾಡಿಯಿಂದ ಇಳಿಸಬೇಡ. ಹಾಗೇ ಪ್ರಧಾನಿಗಳ ಚಾವಡಿಗೆ ಹೊಡೆದುಕೊಂಡು ಹೋಗಿ, ಅವರು ಏನು ಹೇಳುತ್ತಾರೋ ಹಾಗೆ ಮಾಡು" - ಎಂದು ಅಪ್ಪಣೆ ಮಾಡುವಂತೆ ಹೇಳಿದರು, ನರಸಪ್ಪಯ್ಯ

ಆ ಅಪ್ಪಣೆಯನ್ನು ಕೇಳಿ ಹೊರನಿಂತಿದ್ದ ಶ್ರೀಪತಿ, ದಿಕ್ಕು ಕಾಣದವನಂತಾಗಿ –

"ನೀವು....ನೀವು....ಬರಹೇಳಿದಿರಿ....ಎಂದರು..." - ಎಂದು ತೊದಲಿದ.

"ನಾನು ಬರಹೇಳಲಿಲ್ಲ, ಹಾಗೆ ಹೇಳಿದವರು ಪ್ರಧಾನಿಗಳು, ಅವರ ಹತ್ತಿರವೇ ಹೋಗು. ಅವರು 'ಇರು', ಎಂದರೆ ಇರು. 'ಹೋಗು' ಎಂದರೆ ಹೋಗು. ಆದರೆ ಇಲ್ಲಿದ್ದರೂ ಎಲ್ಲಾದರೂ ಇರು. ಈ ಮನೆಯ ಮುಂದೆ ನಿನ್ನ ನೆರಳು ಬೀಳುವುದು ಬೇಡ"

-ಎಂದು ರಪರಪನೆ ಕೆನ್ನೆಗೆ ಹೊಡೆದಂತೆ ಹೇಳಿ, ತೆರೆದ ಬಾಗಿಲನ್ನು ಮುಚ್ಚಿ, ಅಗಳಿಹಾಕಿ, ಮುಚ್ಚಿದ ಬಾಗಿಲಿಗೆ ಅಳುತ್ತಾ ಜೋತುಬಿದ್ದಿದ್ದ ಹೆಂಡತಿಯ ಕಡೆಗೆ ಕ್ರೂರವಾಗಿ ನೋಡಿ –

"ಮುಚ್ಚಿದ್ದ ಬಾಗಿಲು ತೆಗೆದರೆ, ನೀನೂ ಮಗನ ಜೊತೆಗೆ ಹೊರಗೆ ಹೋಗಬೇಕಾದೀತು. ಕೆಟ್ಟ ಕನಸು ಬಿತ್ತು, ಮರೆತುಬಿಡು"

- ಎಂದು ಕಟ್ಟಪ್ಪಣೆ ಮಾಡಿ, ಮುಂದೆ ಮಾತನಾಡದೆ, ಹಾಗೇ ಬಾಗಿಲ ಬದಿಯ ಗೋಡೆಗೆ ಒರಗಿ ನಿಂತರು ನರಸಪ್ಪಯ್ಯ - ಕಾಠಿಣ್ಯತೆಯ ಕಲ್ಲುವಿಗ್ರಹದಂತೆ ಹೃದಯದಾಳದಲ್ಲೆಲ್ಲೋ ಸುಳಿಯುತ್ತಿದ್ದ ಮೃದುಭಾವನೆಗಳನ್ನು ನಿರ್ದಾಕ್ಷಿಣ್ಯವಾಗಿ ತುಳಿದು.

ಬಿಕ್ಕಿಬಿಕ್ಕಿ ಅಳುವ ಶಬ್ದವಲ್ಲದೆ ಬೇರಾವ ಶಬ್ದವೂ ಇರಲಿಲ್ಲ – ಅಷ್ಟು ಹೊತ್ತು.

ಆ ಬಳಿಕ –

ಕರುಳಿರಿನ ದಾರುಣಮೌನದ ಕೆಲಕ್ಷಣಗಳ ಬಳಿಕ –

ಬೀದಿಯಲ್ಲಿ ಗಾಡಿ ಹೋಗುವ ಸದ್ದಾಗಿ –

"ಶ್ರೀಪತೀ..."

-ಎಂದು ಚೀರಿ, ಬಾಗಿಲಿಗೇ ಜೋತು ಕುಸಿದುಬಿದ್ದಳು, ಭಾಗೀರಥೀಬಾಯಿ.

* * *

"ಮಲ್ಲವ್ವನಾಗತಿಯವರು ಹೇಳಿಕಳಿಸಿದ ಸುದ್ದಿಯನ್ನು ನಿಜ ಎಂದು ನಂಬಿ ಬಂದೆವು. ಆದರೆ ನಮ್ಮ ಮನೆಯ ಬಾಗಿಲು ನಮಗೆ ತೆರೆಯಲಿಲ್ಲ. ಮುಂದೇನು ಮಾಡಬೇಕೋ – ನೀವೇ ಹೇಳಬೇಕು? ನಮ್ಮ ಮನೆ, ನಮ್ಮ ಊರಿಗೆ ಬಂದರೂ ಈ ಯಾಚಕವೃತ್ತಿ ಮಾತ್ರ ನನಗೆ ತಪ್ಪಲಿಲ್ಲ. ನಿಮ್ಮ ಬಾಗಿಲಿಗೇ ಅಟ್ಟಿದರು. ನೀವೇ ಹೇಳಿ - ನಾನೇನು ಮಾಡಬೇಕು ?"

- ನಂಜು, ನೋವು, ನಿರಾಶೆಗಳು ತುಂಬಿ ಹೊಗೆಯಾಡುತ್ತಿದ್ದ ಧ್ವನಿಯಲ್ಲಿ, ತನ್ನನ್ನು ನೋಡಿದ ಪರಶುರಾಮನಾಯಕನನ್ನೇ ಕೇಳಿದ ಶ್ರೀಪತಿರಾಯ.

ತನ್ನ ಉದಾರತೆ, ಕರುಣೆಗಳು ಹೀಗೆ ತಿರುಗುಬಾಣವಾಗಿ ತನ್ನ ಕಣ್ಣೆದುರು ಬಂದು ಕೆಕ್ಕರಿಸಿ ನೋಡುತ್ತಾ ನಿಂತುದನ್ನು ಕಂಡು ಪರಶುರಾಮನಾಯಕ ದಿಕ್ಕುತೋಚದವನಾದ.

'ಮುಂದೇನು ಮಾಡಲಿ ?' ಎಂದು ಕೇಳಿದ ಶ್ರೀಪತಿರಾಯನಿಗೆ ಏನು ಹೇಳಬೇಕೆಂದು ಅಷ್ಟು ಹೊತ್ತು ಆತನಿಗೂ ತೋಚಲಿಲ್ಲ.

ತಂದೆಯೇ 'ಬೇಡ' ಎಂದ ಮಗನನ್ನು 'ಇರು' ಎನ್ನುವುದೇ, 'ಹೋಗು' ಎಂದು ಹೇಳುವುದೇ ?

ಆ ಯೋಚನೆಯೊಂದಿಗೆ ಕಣ್ಣೀರಿಡುತ್ತಿದ್ದ ಮಲ್ಲವ್ವನಾಗತಿ, ಭಾಗೀರಥೀಬಾಯಿಯವರ ಮುಖಗಳು ನೆನಪಿಗೆ ಬಂದಂತೆಯೇ, ಕ್ರೋಧದ ಪಶು – ರಸಹೀರಿ ಹಿಪ್ಪೆ ಮಾಡಿದಂತಾದ ನರಸಪ್ಪಯ್ಯನವರ ಮುಖವೂ ನೆನಪಿಗೆ ಬಂದು –

ಅದರೊಂದಿಗೆ-

'ನರಸಪ್ಪಯ್ಯನವರು ಆಳದಲ್ಲಿ ಆಡುವ ಮೀನು, ಈಗಂತೂ ಇಷ್ಟಾಯಿತು. ಮುಂದೆ ಅವರ ಸಂಸಾರದ ವಿಷಯದಲ್ಲಿ ಮಧ್ಯಸ್ಥಿಕೆಗೆ ಹೋಗಬೇಡ'

– ಎಂದು ಹೇಳಿದ ಮದಕರಿನಾಯಕನ ಮಾತೂ ನೆನಪಾಗಿ –

'ಏನು ಮಾಡುವುದು ?' - ಎಂದು ಚಿಂತಿಸಿದ ಪರಶುರಾಮನಾಯಕ.

'ಇರು' ಎಂದು ಹೇಳಿದರೆ - ಮೊದಲೇ ಅಪಮಾನಿತರಾದಂತಿದ್ದ ನರಸಪ್ಪಯ್ಯನವರನ್ನು ಮತ್ತೊಮ್ಮೆ ಕಣ್ಣು ತಿವಿದು ಕೆರಳಿಸಿದಂತೆ, 'ಹೋಗು' ಎಂದರೆ – ತನ್ನನ್ನು ನೆಚ್ಚಿ ಬಂದವರನ್ನು ನಡುನೀರಿನಲ್ಲಿ ಕೈಬಿಟ್ಟಂತೆ.

ಹೇಗೆ ಹೇಗೆ ಯೋಚಿಸಿದರೂ. ಕಾಲಿಗೆ ತೊಡರಾಗಿ ಸುತ್ತಿಕೊಳ್ಳುವ ಬಳ್ಳಿಯಂತಿದ್ದ ಆ ಸಮಸ್ಯೆಯನ್ನು, ತಾನಾಗಿಯೇ ತಂದು ತನ್ನ ಮೇಲೆ ಹೇರಿಕೊಂಡದ್ದಕ್ಕಾಗಿ ತನ್ನ ಮೇಲೇ ಬೇಸರವಾಯಿತು - ಪರಶುರಾಮನಾಯಕನಿಗೆ. ಆದರೆ ಆ ಬಂಜೆಬೇಸರದಿಂದ ಏನು ಸಾರ್ಥಕ ? ತಾನೇನು ಹೇಳುವೆನೋ ಎಂದು, ಮಿಕಿಮಿಕಿ ತನ್ನನ್ನೇ ನೋಡುತ್ತಾ ಕುಳಿತ ಶ್ರೀಪತಿರಾಯನಿಗೆ ಏನು ಹೇಳಬೇಕೆಂದು ಅರ್ಥವಾಗದೆ, ತೊಳಲಾಡುತ್ತಲೇ –

"ನೀವೇನು ಒಬ್ಬರೇ ಬಂದಿದ್ದೀರೋ, ಸಂಸಾರಸಮೇತ ಬಂದಿದ್ದೀರೋ ?" – ಎಂದು ಕೇಳಿದ ಪರಶುರಾಮನಾಯಕ.

"ಒಬ್ಬನೇ ಬಂದಿದ್ದರೆ, ನನ್ನ ಮನೆಬಾಗಿಲು ಮುಚ್ಚಿದಾಗಲೇ ಹೊರಟುಹೋಗುತ್ತಿದ್ದೆ ನನ್ನ ಹೆಂಡತಿ, ಎರಡು ಸಣ್ಣ ಮಕ್ಕಳ ಸಮೇತ ಬಂದಿದ್ದೇನೆ - ಮಲ್ಲವ್ವನಾಗತಿಯವರನ್ನು ನಿಮ್ಮನ್ನು ನಂಬಿಕೊಂಡು. ಇಲ್ಲಿಗೆ ಬರದಿದ್ದರೇ ಒಂದು ತರಹ ಮರ್ಯಾದೆಯಾಗಿರುತ್ತಿತ್ತು. ಈಗ ಕೈ ತೋರಿಸಿ ಅವಲಕ್ಷಣ ಎನ್ನಿಸಿಕೊಂಡಹಾಗಾಯಿತು. ಅಷ್ಟೇ ನಮ್ಮ ಹಣೆಬರಹ. ಮುಂದೇನು ಮಾಡುವುದು ಹೇಳಿ - ನಮ್ಮ ಹಣೆಯಲ್ಲಿ ಬರೆದಿದ್ದಂತಾಗಲಿ. ಬೇಡದವರ ಮನೆಗೆ ಹೋಗುವುದು ಬೇಡ ಎಂದಳು ನನ್ನ ಹೆಂಡತಿ. ಅವಳ ಮಾತು ಕೇಳಲಿಲ್ಲ – ಆಯಿತು, 'ಛೀ' ಅಂದರೆ, ಅವಳ ಕೈಲೂ ಅನಿಸಿಕೊಳ್ಳುವುದು"

- ಎಂದು ಒಂದು ಪ್ರಶ್ನೆಗೆ ಉತ್ತರ ಕೊಡುವ ಬದಲು, ಅದನ್ನೊಂದು ಸಮಸ್ಯೆಯ ಸರಮಾಲೆಯಾಗಿ ಮಾಡಿ, ತನಗಾದ ಅಪಮಾನಕ್ಕೆ ಪರಶುರಾಮನಾಯಕನೇ ಕಾರಣ ಎನ್ನುವ ಒಳಧ್ವನಿಯಿದ್ದ ರೀತಿಯಲ್ಲಿ ಹೇಳಿದ ಶ್ರೀಪತಿರಾಯ.

ಆತ ಹೇಳಿದುದನ್ನೆಲ್ಲಾ ಕೇಳಿ, ಪರಶುರಾಮನಾಯಕನನ್ನು ಕಾಡುತ್ತಿದ್ದ ಸಮಸ್ಯೆ ಮತ್ತಷ್ಟು ಜಟಿಲವಾಗಿ, ಯಾವ ಒಂದು ನಿರ್ಧಾರಕ್ಕೂ ಕೂಡಲೇ ಬರಲಾಗದೆ, ಹೊಳೆಗೆ ಸಿಕ್ಕ ಹುಲ್ಲೆಸಳಿನಂತೆ-

"ಆಯಿತು – ನಮ್ಮನ್ನು ನೆಚ್ಚಿಕೊಂಡು ಬಂದಿದ್ದೀರಿ. ನಮ್ಮನ್ನು ನಂಬಿ ಬಂದು ನೀವು ಕಷ್ಟಕ್ಕೆ, ಅಪಮಾನಕ್ಕೆ ತಲೆತಗ್ಗಿಸಬೇಕಾಗಿಲ್ಲ. ನೀವಿಲ್ಲಿರಲು ಬೇಕಾದ ಎಲ್ಲ ಅನುಕೂಲವನ್ನೂ ಮಾಡಿಕೊಡುತ್ತೇವೆ. ಹಾಯಾಗಿ ನಾಲ್ಕು ದಿನ ಎಲ್ಲ ಕಷ್ಟವನ್ನು ಮರೆತು ಇರಿ. ಮುಂದಕ್ಕೆ ನಿಮ್ಮ ತಂದೆಯವರ ಮನಸ್ಸು ಹೇಗೆ ತಿರುಗುತ್ತದೆಯೋ ನೋಡೋಣ"

- ಎಂದು ಹೇಳಿ, ತನ್ನ ಚಾವಡಿಯ ಕರಣಿಕನೊಬ್ಬನನ್ನು ಕರೆದು –

"ನಮ್ಮ ಅತಿಥಿಗೃಹಗಳಲ್ಲಿ, ಇವರ ವಾಸಕ್ಕೆ ಅನುಕೂಲವಾದೊಂದು ಮನೆಯಲ್ಲಿ ಇವರನ್ನು ಇಳಿಸಿ, ಇವರ ಅನುಕೂಲಕ್ಕೆ ಏನು ಬೇಕೋ ಆ ವ್ಯವಸ್ಥೆಯನ್ನು ಮಾಡು. ಹಾಗೇ ಅರಮನೆಯ ಉಗ್ರಾಣದಿಂದ ಇವರಿಗೆ ಬೇಕಾದ ಪದಾರ್ಥಗಳೆಲ್ಲವನ್ನೂ ಒದಗಿಸುವಂತೆ ಹೇಳು"

- ಎಂದು ಆತನಿಗೆ ಹೇಳಿ, ಶ್ರೀಪತಿರಾಯನಿಗೆ-

"ನಿಮ್ಮ ಖರ್ಚು ವೆಚ್ಚಕ್ಕೆ ಹಣ ಬೇಕಾದರೆ ದಾಕ್ಷಿಣ್ಯ ಮಾಡಿಕೊಳ್ಳಬೇಡಿ - ಕೇಳಿ, ಕೊಡಿಸುತ್ತೇನೆ" – ಎಂದು ಹೇಳಿದ ಪರಶುರಾಮನಾಯಕ.

"ಅಂದರೆ - ಹಂಗಿನ ಊಟ ಮಾಡಿಕೊಂಡು ಇರು ಎನ್ನುತ್ತೀರಾ ? ಅಂಥ ಜೀವನ ಬೇಸರವಾಗಿಯೇ ನಾವು ಮಲ್ಲವ್ವನಾಗತಿಯವರ ಆಶ್ರಯವನ್ನು ಬೇಡಿದ್ದು."

"ಅಂದರೆ -?"

"ಏನಾದರೊಂದು ಉದ್ಯೋಗ ಕೊಟ್ಟು, ನನ್ನ ಹೆಂಡತಿಮಕ್ಕಳ ಕಣ್ಣಲ್ಲಿ 'ನಾನು ದುಡಿಯುವ ಗಂಡಸು' ಎನ್ನುವ ಹಾಗೆ ಮಾಡಿ. ಹೈದರಾಲಿಯ ದಾಳಿಯಲ್ಲಿ ನಮಗಷ್ಟು ದಿನ ಆಶ್ರಯ ಕೊಟ್ಟ ಮುರಾರಿರಾಯರು ಕಾಡುಪಾಲಾದಾಗಿನಿಂದ ನಾನು ಈ ದುರ್ಗತಿ ಅನುಭವಿಸುತ್ತಿದ್ದೇನೆ. ನಮಗೆ ಬಹು ಆಪ್ತರಾಗಿದ್ದ ಮುರಾರಿರಾಯರಿಗೆ ಮೋಸ ಮಾಡಿದ ನೀಚ ನವಾಬನ ಕೈಕೆಳಗಿನವರಲ್ಲಿ ಕೆಲಸ ಮಾಡಲು ನನಗೆ ಇಚ್ಛೆಯಿಲ್ಲ. ಈಗ ಎಲ್ಲೆಲ್ಲೂ ಆತನದೇ ದರ್ಬಾರು. ಸೆಟ್ಟಿ, ಸಾಹುಕಾರರ ಅಂಗಡಿಯಲ್ಲಿ ಲೆಕ್ಕ ಬರೆದು ನನಗೆ ಅಭ್ಯಾಸವಿಲ್ಲ. ಹಾಗಾಗಿ, ಈ ಎರಡು ವರ್ಷ ಕಾಲ ಊರು – ಸೀಮೆ ಅಲೆದು, ಕೊನೆಗೆ ಮತ್ತೋಡಿಗೆ ಬಂದೆವು. ನಾಯಕರೇನೋ ನಮಗೆ ಆಶ್ರಯ ಕೊಡುತ್ತೇವೆ ಎಂದರು. ಆದರೆ ಮಲ್ಲವ್ವನಾಗತಿಯವರು ನಮಗೆ ಈ ದಾರಿ ಹಿಡಿಸಿದರು. ನೀವೂ ಹಂಗಿನ ಊಟ ಮಾಡಿಕೊಂಡು, ಅರಮನೆಗೆ ಭಾರವಾಗಿರಿ ಎನ್ನುತ್ತೀರಾ ?"

- ಬೇಸರದ ಧ್ವನಿಯಲ್ಲಿ ಹೇಳಿದ ಶ್ರೀಪತಿರಾಯ.

"ಹಾಗಾದರೇನು ಮಾಡಬೇಕು ಎನ್ನುತ್ತೀರಿ ?"

"ಯಾರಿಗೂ ಭಾರವಾಗಿ ಬದುಕದಂತೆ ಒಂದು ಉದ್ಯೋಗ ಕೊಡಿ. ತಿಂದ ಅನ್ನ ಹೃದಯಕ್ಕೆ ಭಾರವಾಗದ ಹಾಗೆ ಬದುಕುತ್ತೇನೆ."

“ಆಯಿತು, ಸದ್ಯಕ್ಕೆ ನಾವು ಹೇಳಿದ ಹಾಗಿರಿ. ಮುಂದೆ ನೀವು ಹೇಳಿದ ವಿಚಾರವನ್ನು ಮಾಡೋಣ. ದಣಿದು ಬಂದಿದ್ದೀರ. ಹೋಗಿ ವಿಶ್ರಾಂತಿ ತೆಗೆದುಕೊಳ್ಳಿ”

-ಎಂದಷ್ಟೇ ಹೇಳಿದ ಪರಶುರಾಮನಾಯಕ, ಹೇಗಾದರೂ ಆ ಮಾತನ್ನು ಮುಗಿಸುವ ಆತುರದಿಂದ.

“ಸರಿಯೇ. ನಿಂತ ಕಾಲಮೇಲೆ ಹೀಗೆ ಮಾಡಿ ಎಂದು ಕೇಳಲು ನನಗೂ ಬಾಯಿಲ್ಲ. ಈಗಲೋ – ಇನ್ನು ಹತ್ತು ದಿನದ ಮೇಲೋ - ಅಂತೂ ಮರ್ಯಾದೆಯಿಂದ ಬದುಕಲು ದಾರಿ ಮಾಡಿ ಕೊಡಿ” – ಎಂದು ಹೇಳಿ, ಕೈಮುಗಿದ ಶ್ರೀಪತಿರಾಯ.

ಅಷ್ಟಾದಬಳಿಕ, ಸದ್ಯಕ್ಕೆ ಆ ಸಮಸ್ಯೆ ಬಗೆಹರಿಯಿತು ಎಂದುಕೊಂಡ, ಪರಶುರಾಮನಾಯಕ.

ಆದರೆ ಅಷ್ಟು ಸುಲಭವಾಗಿ ಬಗೆಹರಿದುಹೋಗಲು ಬಂದಿರಲಿಲ್ಲ – ಆ ಸಮಸ್ಯೆ.

೭

ಪ್ರಧಾನಿಗಳ ಚಾವಡಿಗೆ ಚಾವಡಿಯೇ ಲಘುಭೂಕಂಪವಾದಂತೆ ನಡುಗಿತು –

“ನರಸಪ್ಪಯ್ಯನವರೇ ಖುದ್ದಾಗಿ ಪ್ರಧಾನಿಗಳನ್ನು ಕಾಣಲು ಬಂದಿದ್ದಾರೆ. ಒಳಗೆ ಬರಲು ಅಪ್ಪಣೆ ಕೇಳುತ್ತಾರೆ”

- ಎಂಬ ದ್ವಾರಪಾಲಕ ಹೇಳಿದ ಸುದ್ದಿಯನ್ನು, ಕರಣಿಕನೊಬ್ಬ, ಯಾವುದೋ ಕಾಗದ ಪತ್ರಗಳನ್ನು ನೋಡುತ್ತಿದ್ದ ಪರಶುರಾಮನಾಯಕನಿಗೆ ಮುಟ್ಟಿಸಿದಾಗ.

ಆ ಮಾತನ್ನು ಕೇಳಿದ ತನ್ನ ಕಿವಿಯನ್ನೇ ನಂಬುವುದು ಕಷ್ಟವಾಯಿತು – ಪರಶುರಾಮನಾಯಕನಿಗೆ.

ಮನೆಯಿಂದಲೇ ತಮ್ಮ ಪ್ರಧಾನಿಪದವಿಗೆ ರಾಜೀನಾಮೆಪತ್ರ ಕಳಿಸಿದ ನರಸಪ್ಪಯ್ಯ, ಅಂದಿನಿಂದ ಇಂದಿನವರೆಗೆ ಎಂದೂ ಪ್ರಧಾನಿಗಳ ಚಾವಡಿಯತ್ತ ಸುಳಿದಿರಲಿಲ್ಲ. ಮನೆಯಲ್ಲಾದರೂ ಆ ದಿಕ್ಕಿಗೆ ತಲೆ ಇಟ್ಟು ಮಲಗಿದ್ದರೋ ಇಲ್ಲವೋ.

ಅಂಥವರು –

ತಾವಾಗಿಯೇ ಪ್ರಧಾನಿಗಳನ್ನು ಕಾಣಲು ಚಾವಡಿಗೆ ಬಂದಿದ್ದಾರೆ.

ಕರಣಿಕ ಹೇಳಿದ ಆ ಸುದ್ದಿಯನ್ನು ಕೇಳಿದ ಪರಶುರಾಮನಾಯಕ, ತನ್ನ ಆಸನದಿಂದ ಸಿಡಿದೆದ್ದು, ಚಾವಡಿಯ ಮುಖದ್ವಾರದವರೆಗೂ ಹೋಗಿ, ಬಿಸಲಿನಲ್ಲಿ ನಿಂತ ನರಸಪ್ಪಯ್ಯನವರನ್ನು ನೋಡಿ –

“ಹಿರಿಯರನ್ನು ಬಿಸಲಿನಲ್ಲಿ ನಿಲ್ಲಿಸಿ ಕಾಯಿಸಿದ ಮುಠ್ಠಾಳ ಯಾರು? ಸಂಜೆ ಅವನಿಗೆ ನಮ್ಮನ್ನು ನೋಡುವಂತೆ ಹೇಳು”

- ಎಂದು ಬಳಿಯಲ್ಲಿದ್ದ ಕರಣಿಕನಿಗೆ ಚಮ್ಮಟಿಗೆಯಿಂದ ಜಡಿದಂತೆ ಹೇಳಿ –

“ನಮ್ಮ ತಪ್ಪನ್ನು ಕ್ಷಮಿಸಬೇಕು - ಒಳಗೆ ಬನ್ನಿ. ಈ ಬಿಸಲಿನಲ್ಲಿ ಇಷ್ಟು ದೂರ ತಾವು ಬರಬೇಕಾಗಿತ್ತೆ? ಏನಾದರೂ ಕೆಲಸವಿದ್ದಿದ್ದರೆ, ಹೇಳಿಕಳಿಸಿದ್ದರೆ ನಾನೇ ಬರುತ್ತಿದ್ದೆನಲ್ಲ”

- ಎಂದು ಪಶ್ಚಾತ್ತಾಪ-ಕ್ಷಮಾಯಾಚನೆಯ ಧ್ವನಿಯಲ್ಲಿ, ಕೈಮುಗಿದು ಕೇಳಿದ ಪರಶುರಾಮನಾಯಕ.

“ನಾನು ಬಂದದ್ದರಿಂದ ತಮಗೇನೂ ತೊಂದರೆಯಾಗಲಿಲ್ಲವಲ್ಲ”

- ಎಂದು ಒಳಬಂದು, ಮುಖದಿಂದ ಬಸಿಯುತ್ತಿದ್ದ ಬೆವರನ್ನು ಕರವಸ್ತ್ರದಿಂದ ಒರಸಿಕೊಳ್ಳುತ್ತಾ ಕೇಳಿದರು ನರಸಪ್ಪಯ್ಯ.

“ತೊಂದರೆಯೇ – ಎಂದಿಗೂ ಇಲ್ಲ. ತಾವು ಬಂದದ್ದು ಈ ಚಾವಡಿಗೆ ಹೋದ ಜೀವ ಮತ್ತೆ ಬಂದಹಾಗಾಯಿತು. ಒಳಗೆ ಬನ್ನಿ.”

ಆ ಮಾತಿಗೆ ಉತ್ತರವಾಗಿ, ತಮಗೆ ಚಿರಪರಿಚಿತವಾದ ಪ್ರಧಾನಿಗಳ ಚಾವಡಿಯಲ್ಲಿ ಅತ್ತಿತ್ತ ನೋಡದೆ, ಅವರನ್ನು ಕಂಡು ಎದ್ದು ನಿಂತು ಕೈಮುಗಿದವರನ್ನೂ ನೋಡದಂತೆ, ನೇರವಾಗಿ ಪ್ರಧಾನಿಗಳ ಕೊಠಡಿಗೇ ನಡೆದು, ಕೊಠಡಿಯೊಳಗೆ ಬಂದ ಬಳಿಕ ಹಾಗೇ ಒಮ್ಮೆ ನೋಡಿದರು - ಪ್ರಧಾನಿಗಳ ಅಂತಸ್ತಿಗೆ ಉಚಿತವಾದ ರೀತಿಯಲ್ಲಿ ಅಲಂಕೃತವಾದ ಕೊಠಡಿಯನ್ನು.

ಹೊರಗೆ ಬೆಟ್ಟದ ಬಂಡೆಗಳೂ ಬೆವರುವಷ್ಟು ಬೇಸಿಗೆಯ ಬಿಸಿಲಿದ್ದರೂ, ವಿಶಾಲವಾದ, ಹೊರಗೆ ತಣ್ಣೀರಿನಲ್ಲಿ ತೊಯ್ದ ಲಾಮಂಚದ ತೆರೆ ಕಟ್ಟಿದ ವಿಶಾಲ ವಾತಾಯನಗಳು, ವಿಶಾಲವಾದ ಕೊಠಡಿಯನ್ನು ತಣ್ಣಗಿರಿಸಿದ್ದವು. ನೆಲಕ್ಕೆ ಹಾಸಿದ ರತ್ನಗಂಬಳಿ, ಗೋಡೆಯ ಮೇಲೆ ಹಿಂದಿನ ದುರ್ಗದ ದೊರೆಗಳ ಗಾಜಿನ ಚಿತ್ರಗಳು, ಗೋಡೆಗೆ ಅಲ್ಲಲ್ಲಿ ತಗಲಿಸಿದ ದೀಪದ ಗಾಜಿನ ವಿವಿಧಾಕೃತಿಯ ರಚನೆಗಳು, ಸುತ್ತಲೂ ದಂತದ ಕೆತ್ತನೆಯ ಕೆಲಸವಿದ್ದು ಬೆನ್ನು ಒರಗುವಲ್ಲಿ ಮೃದುವಾದ ಮಖಮಲ್ಲಿನ ಮೆತ್ತೆಯಿದ್ದ ಒರಗುದಿಂಬು, ವಿಶಾಲವಾದ ಬಿಳಿಯ ರೇಶಿಮೆ ಬಟ್ಟೆಯ ಮೇಲೆ ವ್ಯಾಘ್ರಾಜಿನವನ್ನು ಹಾಸಿದ ಮೆತ್ತೆ, ಅದರ ಎರಡೂ ಪಕ್ಕದಲ್ಲಿ ಮಖಮಲ್ಲಿನ ಗೌಸು ಹೊದ್ದ ದಿಂಡುಗಳು, ಬೆನ್ನಿನ ಮೇಲುಭಾಗದಲ್ಲಿ ಗೋಡೆಗೆ ಜೋಡಿಸಿದ ಚಿನ್ನದ ಮೆರುಗುಕೊಟ್ಟ, ಅಲ್ಲಲ್ಲಿ

ಮುತ್ತು, ಮಾಣಿಕ್ಯಗಳನ್ನು ಕೂಡಿಸಿದ ಹನುಮದ್ಗರುಡದ ಸಂಕೇತ, ಅದರ ರಕ್ಷಣೆಗೆಂಬಂತೆ, ಅದರ ಕೆಳಗೆ, ಆ ವಿಗ್ರಹದ ಇಬ್ಬದಿಯಲ್ಲೂ ಬಳ್ಳಿಯಂತೆ ಬಾಗಿನಿಂತ ಕತ್ತರಿಯಾಕಾರದಲ್ಲಿ ಜೋಡಿಸಿದ ಖಡ್ಗಗಳು, ಪ್ರಧಾನಿಗಳ ಆಸನದಲ್ಲಿ ಅಷ್ಟು ದೂರ ನಿಂತು ಗಾಳಿ ಹಾಕುವ ಇಬ್ಬರು ಸಮವಸ್ತ್ರ ಧರಿಸಿದ ಭಟರು - ಅವರಿಬ್ಬರೂ ದಷ್ಟಪುಷ್ಟ ಮೈಯವರಾದರೂ ಹುಟ್ಟಾಕಿವುಡಮೂಕರಾಗಿದ್ದವರು- ಕೋಣೆಯ ಇಬ್ಬದಿಯ ಗೋಡೆಗಳಲ್ಲೂ, ದುರ್ಗದ ಪ್ರಧಾನಿಗಳಿಗೆ ಹಲವಾರು ಪಾಳಯಗಾರರು, ನವಾಬರು, ಪೇಶ್ವೆಗಳು ಕೊಟ್ಟ ಉಡುಗೊರೆಗಳ ವಸ್ತುಗಳನ್ನಿರಿಸಿದ ಮಾಡಗಳು, ಗಿಡ ಮರ ಬಳ್ಳಿ ಹೂ ಹಕ್ಕಿಗಳನ್ನು ಅಂದವಾದ ವಿನ್ಯಾಸದಲ್ಲಿ ರಂಗುರಂಗಾಗಿ ಚಿತ್ರಿಸಿದ ಛಾವಣಿ, ಬಾಗಿಲನ್ನು ಕವಿದ ಚಿನ್ನದ ದಾರಗಳಲ್ಲಿ ನೆಯ್ದ ಹನುಮದ್ಗರುಡಲಾಂಛನವಿದ್ದ ಮಖಮಲ್ಲಿನ ತೆರೆ; ಪ್ರಧಾನಿಗಳ ಆಸನದ ಇಬ್ಬದಿಯಲ್ಲಿ, ಮತ್ತಿಬ್ಬರು ಕುಳಿತುಕೊಳ್ಳಲು, ಬೆನ್ನಿಗೆ ದಿಂಬು, ಪಕ್ಕಕ್ಕೆ ಲೋಡುಗಳು, ಮೆತ್ತೆ ಹಾಸಿದ ಸುಖಾಸನಗಳು, ಪ್ರಧಾನಿಗಳ ಆಸನದ ಬಳಿಯೇ, ಅವರ ಅಧಿಕಾರದ ಮೊಹರು, ರಹಸ್ಯ ಕಾಗದಪತ್ರಗಳಿದ್ದ ತಿಜೋರಿ, ಪಕ್ಕದಲ್ಲೊಂದು ಸಣ್ಣ ಪೀಠದ ಮೇಲೆ ಶಾಯಿಯ ಕುಡಿಕೆ, ಲೇಖಣಿಗಳು - ಎಲ್ಲವೂ ಹಲವರ್ಷಗಳ ಬಳಕೆಯಿಂದ ಪ್ರಧಾನಿಗಳಿಗೆ ಮೂಲೆಮೂಲೆಯೂ ಪರಿಚಿತವಾದ ಕೊಠಡಿ ಅದು. ಅದು ಆ ಸ್ಥಾನದಲ್ಲಿ ಅವರಿದ್ದಾಗ ಹೇಗಿದ್ದಿತೋ ಈಗಲೂ ಹಾಗೆಯೇ ಇದ್ದಿತು. ಆದರೆ ಪ್ರಧಾನಿಗಳ ಆಸನದ ಬಳಿ ನಿಂತ ವ್ಯಕ್ತಿ ಮಾತ್ರ ತಾವಲ್ಲ, ಪರಶುರಾಮನಾಯಕ.

ಕೋಣೆಯನ್ನು ಪ್ರವೇಶಿಸಿದ ನರಸಪ್ಪಯ್ಯನವರನ್ನು ಪರಶುರಾಮನಾಯಕ –

"ಕುಳಿತುಕೊಳ್ಳಬೇಕು"

-ಎಂದು ಹೇಳುವವರೆಗೂ, ಆ ಮಾತು ಹೇಳಿದ ಪರಶುರಾಮನಾಯಕ ಕುಳಿತುಕೊಳ್ಳುವವರೆಗೂ ನಿಂತಿದ್ದು, ಬಳಿಕ ಆತ ತೋರಿದ ಆಸನದಲ್ಲಿ ಕುಳಿತರು ನರಸಪ್ಪಯ್ಯ.

ತನ್ನ ಪಕ್ಕದಲ್ಲಿ ಗಾಳಿಹಾಕುತ್ತಾ ನಿಂತಿದ್ದ ಆಳಿಗೆ, ನರಸಪ್ಪಯ್ಯನವರಿಗೆ ಗಾಳಿ ಬೀಸಲು ಸನ್ನೆ ಮಾಡಿ-

"ಹಿರಿಯರು ಇಷ್ಟು ದೂರ ಬಂದದ್ದೇಕೋ, ಅಪ್ಪಣೆ ಮಾಡಬೇಕು"

-ಎಂದು ಕೇಳಿದ ಪರಶುರಾಮನಾಯಕ.

"ಬಹಳ ದಿನಗಳಿಂದ ನಮಗೆ ಮಂತ್ರಾಲಯ, ಪಂಡರಾಪುರ, ಕೊಲ್ಲಾಪುರ ಮೊದಲಾದ ಕಡೆಗೆ ತೀರ್ಥಯಾತ್ರೆ ಹೋಗಬೇಕು ಎಂಬ ಆಸೆಯಿತ್ತು. ಇಷ್ಟು ದಿನ ಏನೋ ಕಾರಣದಿಂದ ಅದಕ್ಕೆ ಅವಕಾಶವಾಗಲಿಲ್ಲ. ಈಗ ಆ ಬಯಕೆ ತೀರಿಸಿಕೊಳ್ಳಬೇಕೆಂಬ ಮನಸ್ಸಾಗಿದೆ. ಅದಕ್ಕೆ ಅಗತ್ಯವಾದ ರಹದಾರಿಪತ್ರಗಳನ್ನು ಕೊಡಿಸಿಕೊಡಬೇಕು" - ಎಂದು ಕೇಳಿದರು, ನರಸಪ್ಪಯ್ಯ.

ಅವರ ಈ ಅನಿರೀಕ್ಷಿತ ಕೋರಿಕೆಯನ್ನು ಕೇಳಿ ಚಕಿತನಾದ ಪರಶುರಾಮನಾಯಕ-

"ಇದೇನು, ಇದ್ದಕ್ಕಿದ್ದ ಹಾಗೇ ಈ ನಿರ್ಧಾರ ಮಾಡಿದಿರಿ - ಅದೂ ಈ ಉರಿಬೇಸಿಗೆಯಲ್ಲಿ"

-ಎಂದು ಕೇಳಿದ.

"ಬೇಸಿಗೆಯ ಬಿಸಿಲೇನು ಎಲ್ಲ ಕಡೆಯೂ ಇದ್ದದ್ದೆ. ಆದರೆ ಮನಸ್ಸಿಗೆ ನೆಮ್ಮದಿಯಿದ್ದರೆ, ಹೊರಗಿನ ತಾಪ ಅಷ್ಟು ಕಾಡುವುದಿಲ್ಲ. ದುರ್ಗದಲ್ಲೀಗ ನನಗೆ ಒಳಗೂ-ಹೊರಗೂ, ಹಗಲೂ-ಇರುಳೂ ಬೇಸಿಗೆಯೇ. ಆದ್ದರಿಂದ ತಮಗೇನೂ ಅಭ್ಯಂತರವಿಲ್ಲದಿದ್ದರೆ, ಅಗತ್ಯವಾದ ರಹದಾರಿ ಕೊಡಿಸಿಕೊಡಿ."

ನರಸಪ್ಪಯ್ಯ ಶಾಂತವಾಗಿ ಆಡಿದ ಮಾತು - ಪರಶುರಾಮನಾಯಕನನ್ನು ಕೆಂಡದಂತೆ ಸುಟ್ಟಿತು.

"ತಮ್ಮ ಮಾತು ಕೇಳಿದರೆ, ತಮಗೇಕೋ ನಮ್ಮ ಮೇಲೆ ಅಸಮಾಧಾನವಿರುವಂತೆ ಕಾಣುತ್ತದೆ. ತಿಳಿದೋ ತಿಳಿಯದೆಯೋ ನಮ್ಮಿಂದ ತಪ್ಪಾಗಿದ್ದರೆ ಹಿರಿಯರು ಕ್ಷಮಿಸಬೇಕು."

"ಕೆಂಡ ಮುಟ್ಟಿ, 'ತಿಳಿಯದೆ ಮುಟ್ಟಿದೆ. ಸುಡಬೇಡ' ಎಂದರೆ ಹೇಗಾಗುತ್ತದೆ. ಅದು ಬಿಡಿ - ನಮ್ಮ ಹಣೆಯಬರಹ. ಸದ್ಯಕ್ಕೆ ನಾನು ಕೇಳಿದಷ್ಟನ್ನು ನಡೆಸಿಕೊಡಿ – ಅದಕ್ಕೆ ಯಾವ ಅಭ್ಯಂತರವೂ ಇಲ್ಲದಿದ್ದರೆ. ಅದು ಕೂಡದು, ಈ ಕುದಿನೀರಿನಲ್ಲೇ ನಾವು ಬೇಯಬೇಕು ಎಂಬುದು ತಮ್ಮಿಚ್ಛೆಯಾದರೆ ಹಾಗೂ ಹೇಳಬಹುದು."

"ತಾವು ಹಿರಿಯರು, ತಾವು ತೀರ್ಥಯಾತ್ರೆ ಹೋಗುವುದು ನಮಗೆ ಶ್ರೇಯಸ್ಕರ. ಆದರೆ ಸಂತೋಷವಾಗಿ ಹೋಗಿ ಬನ್ನಿ. ನಮ್ಮ ಮೇಲೆ ಮುನಿಸಿಕೊಂಡು ಹೋದರೆ ನಮಗೆ ಒಳ್ಳೆಯದಾಗುವುದಿಲ್ಲ. ಅಲ್ಲದೆ - ಈ ಹೊತ್ತಿನಲ್ಲಿ ಚಿತ್ರದುರ್ಗದಲ್ಲಿ ತಮ್ಮಂಥ ಹಿರಿಯರು ಇರಬೇಕಾದ ಅಗತ್ಯವಿದೆ."

"ನಮ್ಮ ಹಿರಿಯತನ, ಅಗತ್ಯ - ಆ ಮಾತುಗಳನ್ನೆಲ್ಲಾ ಆಡಬೇಡಿ. ಕಾಲು ಗಟ್ಟಿಯಾದ ಮೇಲೆ ಕೋಲೇಕೆ ಬೇಕು ? ಆ ಮಾತುಗಳನ್ನು ಬಿಡಿ. ನಮಗೆ ಹೊರಡಲು ಅನುಮತಿ ಕೊಡಿಸಿಕೊಡಿ. ಹಾಗೆಂದು ಕೇಳುತ್ತಿದ್ದೇನೆ. ಕೊಡುವುದೂ ಬಿಡುವುದೂ ನಿಮ್ಮ ಇಷ್ಟ. ಹೋಗಕೂಡದು ಎಂದು ಹೇಳುವ ಅಧಿಕಾರವೂ ತಮಗಿದೆ."

- ಹರಿತವಾಗಿ ಹೇಳಿದರು ನರಸಪ್ಪಯ್ಯ.

"ಅಧಿಕಾರ ಯಾರಿಗೂ ಶಾಶ್ವತವಲ್ಲ. ಆದ್ದರಿಂದ ಅದನ್ನು ಬಿಟ್ಟು, ನಮ್ಮಲ್ಲಿ ಹಿಂದಿದ್ದ ಅಭಿಮಾನದಿಂದ ಹೇಳಿ - ಈಗೇಕೆ ಈ ತೀರ್ಥಯಾತ್ರೆಯ ಆತುರ ?"

“ಅದಕ್ಕೂ ತಾವೇ ಕಾರಣ. ಮುಖವೆತ್ತಿ ಓಡಾಡಲು ಅವಕಾಶವಿಲ್ಲದೆಡೆಯಲ್ಲಿದ್ದು ನಮಗೆ ಅಭ್ಯಾಸವಿಲ್ಲ.” - ಖಂಡಿತವಾಗಿ ಹೇಳಿದರು ನರಸಪ್ಪಯ್ಯ.

“ಅಂತಹುದು ಈಗೇನಾಯಿತು ?”

“ಕಾಗೆ ಹೊಕ್ಕ ಮನೆಯೊಳಗೆ ಯಾರೂ ವಾಸ ಮಾಡುವುದಿಲ್ಲ, ಪ್ರಧಾನಿಗಳೇ. ಈಗ ದುರ್ಗ ನಮ್ಮ ಪಾಲಿಗೆ ಹಾಗಾಯಿತು. ನಮಗೆ ಬೇಡವಾದವರು ಇಲ್ಲಿಗೆ ಬಂದರು, ಆ ಬಗ್ಗೆ ನಾವು ಮಾಡಿದ ಆಜ್ಞೆ ನಾವು ಬದುಕಿದ್ದಾಗಲೇ ರದ್ದಾಯಿತು. ನಮ್ಮ ಸಂಸಾರದ ಮಾತು ರಾಜಾಜ್ಞೆಗೆ ಅಡಿಯಾಳಾಯಿತು. ಇನ್ನು ಉಳಿದಿರುವುದೊಂದೇ - ಕತ್ತು ಹಿಡಿದು ತಳ್ಳಿಸಿಕೊಂಡು ಹೋಗುವುದು. ಅದಾಗುವ ಮೊದಲು ಹೋಗಬೇಕು ಎಂದು ನನ್ನಾಸೆ. ಆದ್ದರಿಂದ ನನ್ನ ಬಗ್ಗೆ ತಮಗೆ ಸ್ವಲ್ಪವಾದರೂ ಅಭಿಮಾನವಿದ್ದರೆ, ಕೂಡಲೇ ರಹದಾರಿಪತ್ರ ಕೊಡಿಸಿ ಕೊಡಿ.”

“ಅಂತೂ ನಿಮ್ಮ ಮಗ....”

“ಮಗ- ನನ್ನ ಮಗ ಸತ್ತು ಎಷ್ಟೋ ವರ್ಷವಾಯಿತು. ಈಗ ಬಂದಿರುವುದು ನಮ್ಮನ್ನು ಕಾಡುವ ಮಗನ ಪಿಶಾಚಿ! ನಮ್ಮಾಜ್ಞೆಗೆ ಹೆದರಿ, ಆ ಭೂತ ಗಡಿಯಾಚೆ ಎಲ್ಲೋ ಮುಖ ಮರೆಸಿಕೊಂಡಿತ್ತು. ಈಗ ಎದುರಿಗೆ ಬಂದು, ಹಲ್ಲುಕಿರಿದು 'ಏನಾಯಿತು ನಿನ್ನಪ್ಪಣೆ' ಎಂದು ಹಂಗಿಸಿ ಕೇಳುವ ಕಾಲ ಬಂದಿತು. ಆಯಿತು - ಅದು ನಾವು ಮಾಡಿದ ಕರ್ಮಕ್ಕೆ ಅನುಭವಿಸಬೇಕಾದ ಪ್ರಾಯಶ್ಚಿತ್ತ. 'ಈ ವಯಸ್ಸಿನಲ್ಲಿ ನಾನು ದಿನವೂ ಮುಳ್ಳಿನ ಮೇಲೆ ಮಲಗಿರಬಾರದು, ಜನಕ್ಕೆ ಮುಖ ತೋರಿಸದೆ ಮನೆಯೊಳಗೇ ಅವಿತುಕೊಂಡಿರಬಾರದು' ಎಂಬಷ್ಟಾದರೂ ವಿಶ್ವಾಸ ನಿಮಗೆ ನಮ್ಮಲ್ಲಿದ್ದಲ್ಲಿ, ಈ ರಹದಾರಿ ಕೊಡಿಸಿಕೊಡಿ. ಆ ಬಗ್ಗೆ ಇನ್ನು ಚರ್ಚೆ ಬೇಡ - ಆಗುತ್ತದೆ, ಇಲ್ಲ - ಎರಡರಲ್ಲೊಂದು ಹೇಳಿ.”

- ಖಡಾಖಂಡಿತವಾದ ಧ್ವನಿಯಲ್ಲಿ ಪಟ್ಟುಹಿಡಿದು ಕೇಳಿದರು ನರಸಪ್ಪಯ್ಯ.

“ಹೊಟ್ಟೆಯಲ್ಲಿ ಹುಟ್ಟಿದ ಮಗನ ಮೇಲೆ ಇಷ್ಟು ಮುನಿಸೇ ?”

“ಈ ಅಡ್ಡಮಾತೇಕೆ ? ಇಷ್ಟು ವರ್ಷ ದುರ್ಗಕ್ಕೆ ದುಡಿದ ನಾನು ಸಣ್ಣವನಾದೆ, ದ್ರೋಹಿಯಾಗಿ ತಲೆಮರೆಸಿಕೊಂಡಿದ್ದವನು ನಿಮಗೆ ಹಿತವಾದ. ಆಯಿತು - ಅದು ನಿಮ್ಮ ಇಷ್ಟ. ನಿಮಗೆ ಬೇಕಾದ್ದು ನೀವು ಆರಿಸಿಕೊಂಡಿರಿ. ನಿಮಗೆ ನಾನು ನೀತಿ ಹೇಳುವುದಿಲ್ಲ, ನೀವೂ ನನಗೆ ನೀತಿ ಹೇಳಬೇಡಿ. ರಹದಾರಿ ಕೊಡಿಸಲು ಆಗುತ್ತದೆಯೋ - ಇಲ್ಲವೋ ಹೇಳಿ”

- ಎಂದು ಹೊರಡಲು ಸಿದ್ಧವಾದಂತೆ ಕೇಳಿದರು ನರಸಪ್ಪಯ್ಯ.

“ದೊಡ್ಡವರು ಕ್ಷಮಿಸಬೇಕು. ನಿಮ್ಮ ಅಪೇಕ್ಷೆಗೆ ಇದಿರಾಡುವಷ್ಟು ಹಿರಿತನ ನಮಗೆ ಬಂದಿಲ್ಲ. ನಿಮ್ಮ ಮಗನಂತೆಯೇ ಇಷ್ಟು ದಿನ ನನ್ನನ್ನು ಕಂಡಿರಿ. ಆ ವಿಶ್ವಾಸ, ಸಲುಗೆಯಿಂದ

ತೋಚಿದ ಎರಡು ಮಾತಾಡಿದೆ. ತಪ್ಪಾಗಿದ್ದರೆ ಕ್ಷಮಿಸಬೇಕು. ತಾವು ಹೋಗಲೇಬೇಕು ಎಂದು ತೀರ್ಮಾನ ಮಾಡಿಕೊಂಡಿದ್ದರೆ, ತಮಗೆ ಬೇಕಾದ ರಹದಾರಿಯಷ್ಟೇ ಅಲ್ಲ- ಬೇರೇನು ಬೇಕೋ, ಹೇಳಿದರೆ ಎಲ್ಲಕ್ಕೂ ವ್ಯವಸ್ಥೆ ಮಾಡುತ್ತೇನೆ."

-ಹಾವಿನೊಂದಿಗೆ ಸರಸವಾಡಲು ಅಂಜಿದವನಂತೆ ಹೇಳಿದ ಪರಶುರಾಮನಾಯಕ.

"ಉಳಿದದ್ದೇನೂ ಬೇಡ, ರಹದಾರಿಯೊಂದು ಸಾಕು."

"ಕಾಲ ಚೆನ್ನಾಗಿಲ್ಲ, ಎಲ್ಲ ರಾಜ್ಯಗಳಲ್ಲೂ ನವಾಬರ, ಪೇಶ್ವೆಯವರ ದಾಳಿಯಿಂದಾಗಿ ಅರಾಜಕತೆ ಹೆಚ್ಚಿದೆ. ಮನೆಮಾರು ಕಳೆದುಕೊಂಡ ಸಜ್ಜನರೂ ಕಳ್ಳಕಾಕರಾಗಿದ್ದಾರೆ. ಹಾಗಿರುವಾಗ ತಾವು ಸಂಸಾರ ಸಮೇತ ಯಾತ್ರೆ ಹೊರಟಿದ್ದೀರ. ತಮ್ಮ ರಕ್ಷಣೆಗೆ ಬೇಕಾದರೆ ಅಷ್ಟು ಜನರ ವ್ಯವಸ್ಥೆ ಮಾಡುತ್ತೇನೆ."

"ನಾನೀಗ ದುರ್ಗದ ಪ್ರಧಾನಿಯಲ್ಲ. ದೇಶದಲ್ಲಿ ಓಡಾಡುವವರಿಗೆಲ್ಲಾ ನೀವು ರಕ್ಷಣೆ ಕೊಡಲು ಸಾಧ್ಯವೇ ? ಹತ್ತು ಜನಕ್ಕಾದುದು ನಮಗೂ ಆಗುತ್ತದೆ. ನಮಗಾಗಿ ಹೆಚ್ಚಿನ ಶ್ರಮವೇನೂ ತೆಗೆದುಕೊಳ್ಳಬೇಡಿ, ರಹದಾರಿಪತ್ರ ಕೊಡಿಸಿಕೊಡಿ. ಅಷ್ಟು ಮಾಡಿದರೆ ಸಾಕು, ಬಹಳ ಹೊತ್ತು ಮಾತನಾಡಿ ತಮಗೆ ತೊಂದರೆ ಕೊಟ್ಟೆ ಕ್ಷಮಿಸಬೇಕು"

-ಎಂದು ಹೇಳಿ, ಮಾತು ಮುಗಿಸಿದಂತೆ ಎದ್ದು ನಿಂತರು ನರಸಪ್ಪಯ್ಯ.

"ಇಲ್ಲಿಂದ ಹೊರಡಲು ಇಷ್ಟು ಆತುರವೇಕೆ ? ದಯವಿಟ್ಟು ಸ್ವಲ್ಪ ಹೊತ್ತು ಕುಳಿತುಕೊಳ್ಳಿ. ತಾಂಬೂಲ ತರಿಸಿಕೊಡುತ್ತೇನೆ. ನೀವದನ್ನು ಸೇವಿಸುವುದರೊಳಗಾಗಿ ನಿಮಗೆ ಅಗತ್ಯವಾದ ರಹದಾರಿ ಪತ್ರವನ್ನು ಸಿದ್ಧಪಡಿಸಿ ತರಲು ಕರಣಿಕರಿಗೆ ಹೇಳುತ್ತೇನೆ"

-ಎಂದು ಪ್ರಾರ್ಥಿಸುವಂತೆ ಕೇಳಿದ ಪರಶುರಾಮನಾಯಕ.

ಆತನ ಬಾಯಿಂದ ಬಂದ ತಾಂಬೂಲದ ಮಾತು ಕೇಳಿ, ನರಸಪ್ಪಯ್ಯನವರ ಮುಖದ ಮೇಲೆ ವಿಷಾದದ ಮೋಡ ಕವಿದು, ನೀರಸವಾದ ನಗೆ ನಕ್ಕು ಹೇಳಿದರು-

"ನಿಮ್ಮ ವಿಶ್ವಾಸವನ್ನು ನಾನು ಎಂದೂ ಮರೆಯುವುದಿಲ್ಲ. ಆದರೆ ನನಗೀಗ ತಾಂಬೂಲದ ಅಗತ್ಯವಿಲ್ಲ. ಪ್ರಧಾನಿ ಪದವಿಯನ್ನು ಬಿಟ್ಟ ದಿನವೇ ಆ ಶ್ರೀಮಂತಿಕೆಯ ದುರಭ್ಯಾಸಕ್ಕೂ ತಿಲಾಂಜಲಿ ಕೊಟ್ಟೆ-ಮೂಗಿಲ್ಲದವನಿಗೆ ಮೀಸೆಯ ಅಲಂಕಾರವೇಕೆ ಬೇಕು ಎಂದು. ನನಗಾಗಿ ಏನೂ ಶ್ರಮ ತೆಗೆದುಕೊಳ್ಳಬೇಡಿ. ಯಾರಿಗೂ ಆತುರಪಡಿಸಬೇಡಿ. ಆದಷ್ಟು ಬೇಗ, ನಿಮಗೆ ಅನುಕೂಲವಾದಾಗ ರಹದಾರಿಪತ್ರ ಕಳಿಸಿಕೊಡಿ. ನಾನಿನ್ನು ಬರುತ್ತೇನೆ, ನಮಸ್ಕಾರ."

ಆ ಮಾತಿನಿದಿರು ಬೇರೇನೂ ಮಾತನಾಡಲಾಗದೆ, ಎದ್ದು ನಿಂತು ನರಸಪ್ಪಯ್ಯನವರಿಗೆ, ತಾನೂ ಎದ್ದುನಿಂತು ಕೈಮುಗಿದ ಪರಶುರಾಮನಾಯಕ.

“ಬರುತ್ತೇನೆ, ನಮಸ್ಕಾರ”

-ಎಂದಷ್ಟೇ ಹೇಳಿ, ನರಸಪ್ಪಯ್ಯ ಕೊಠಡಿಯಿಂದ ಹೊರಬಿದ್ದು, ತನಗೆ ಕೈ ಮುಗಿಯುತ್ತಿದ್ದ ಪ್ರಧಾನಿ ಚಾವಡಿಯ ಜನರು ಕಣ್ಣಿಗೇ ಬೀಳದವರಂತೆ ನಡೆದು ಹೊರಟುಹೋದರು.

ಅದರೊಂದಿಗೆ ಬಾಗಿಲವರೆಗೂ ಬಂದ ಪರಶುರಾಮನಾಯಕ, ಉರಿಬಿಸಿಲಿನಲ್ಲಿ ಕೊಡೆ ಹಿಡಿದು ಯಾರೋ ಸಾಮಾನ್ಯರಂತೆ ಹೋಗುತ್ತಿದ್ದ ದುರ್ಗದ ಹಿಂದಿನ ಪ್ರಧಾನಿ ನರಸಪ್ಪಯ್ಯನವರನ್ನು ನೋಡಿ ಕರುಳಿನಲ್ಲಿ ಕತ್ತರಿಯಾಡಿಸಿದಂತಾಗಿ ವ್ಯಥೆಪಟ್ಟ,

ಜನಸಂಚಾರವಿಲ್ಲದ, ಬಿಸಲಿನಲ್ಲಿ ಬೇಯುತ್ತಿದ್ದ ಬರಿಬೀದಿಯಲ್ಲಿ ನರಸಪ್ಪಯ್ಯನವರನ್ನು ಹಿಂಬಾಲಿಸುತ್ತಿದ್ದ ಅವರ ಕರಿನೆರಳು-ಪರಶುರಾಮನಾಯಕನ ಹೃದಯದಲ್ಲಿ ಅರ್ಥವಾಗದ ಭೀತಿಯನ್ನು ಮೂಡಿಸಿ, ಆ ಭೀತಿಯಲ್ಲಿ ಬಿಸಿಲು ಮಂಕಾಯಿತು.

* * *

ಅಲಂಕೃತವಾದ ಎತ್ತುಗಳಿಂದ ಹೂಡಿದ, ಮೆತ್ತನೆಯ ಮೃದುವಾದ ಹಾಸಿಗೆ, ದಿಂಬುಗಳಿಂದ ಸಜ್ಜಾದ 'ಸವಾರಿಯ ಗಾಡಿಯಲ್ಲಿ, ಅಡಿಗೆಯವರು, ಪರಿಚಾರಿಕೆಯ, ಚಿಲ್ಲರೆ ಕೆಲಸದ ಹೆಣ್ಣು ಗಂಡಾಳುಗಳು ಕುಳಿತ ಹತ್ತಾರು ಬಂಡಿಗಳ ಜೊತೆಗೆ, ಹಿಂದೆ ಮುಂದೆ ಸಮವಸ್ತ್ರ ಧರಿಸಿದ ಸಶಸ್ತ್ರ ಅಶ್ವಾರೋಹಿಗಳ ಕಾಪಿನಲ್ಲಿ, ದಾರಿಯುದ್ದಕ್ಕೂ ಗ್ರಾಮಮುಖಂಡರಿಂದ ಮರ್ಯಾದೆ ಸ್ವೀಕರಿಸುತ್ತಾ ಚಿತ್ರದುರ್ಗದ ಕೀರ್ತಿಯನ್ನು ಹೋದೆಡೆಯಲ್ಲೆಲ್ಲಾ ಮೆರೆಸುವಂತೆ, ಪುಣ್ಯ ಕ್ಷೇತ್ರಗಳ ಜನ ದುರ್ಗದ ನಾಯಕರ ಭಕ್ತಿ-ಶ್ರದ್ಧೆಗಳನ್ನು ಹಾಡಿ ಹೊಗಳುವಂತೆ ಪೂಜೆ-ದಾನಗಳನ್ನು ನಡೆಸುತ್ತಾ, ಪಯಣ ಹೋಗಬೇಕಾಗಿದ್ದ, ದುರ್ಗದ ಪ್ರಧಾನಿಗಳಾಗಿದ್ದ ನರಸಪ್ಪಯ್ಯ-

'ಬೀಳ್ಕೊಡುಗೆಯ ಯಾವ ಸಮಾರಂಭವೂ ಇಲ್ಲದೆ, ಅಷ್ಟು ದಿನ ತೆರೆದಿದ್ದ ಮನೆಗೆ ಬಾಗಿಲನ್ನು ಮುಚ್ಚಿ, ಬೀಗಮುದ್ರೆ ಹಾಕಿ' ಎಂದು ಬರುತ್ತೀರ ? ಎಂದು ಕೇಳಿದವರಿಗೆ 'ಬಂದಾಗ' ಎಂದಷ್ಟೇ ಹೇಳಿ, ನಾಡಾಡಿಯಂತೆ ಮಾಮೂಲು ಸವಾರಿಗಾಡಿಯಲ್ಲಿ, ಅಳುತ್ತಾ ತಲೆತಗ್ಗಿಸಿ ಕುಳಿತ ಭಾಗೀರಥೀಬಾಯಿಯೊಂದಿಗೆ ದುರ್ಗವನ್ನು ಬಿಟ್ಟರು

-ಎಂಬುದನ್ನು ಪರಶುರಾಮನಾಯಕನಿಂದ ಕೇಳಿದ ಮದಕರಿನಾಯಕ-

“ಹೋಗುವಾಗಲೂ ನಮಗೊಂದು ಮಾತು ಹೇಳಿ ಹೋಗಲಿಲ್ಲ; ಯಾವುದೂ ಕೇಳಿದರೂ 'ಬೇಡ' ಎಂದು ನಮ್ಮ ಸಂಬಂಧ ಕಡಿದುಕೊಂಡವರಂತೆ ಹೋದರು. ಈ ಬಾರಿಯ 'ಭೇಟಿ' ಹಬ್ಬ ನಮ್ಮ ಪಾಲಿಗೆ ವಿಯೋಗವಾಯಿತು. ಅಗಲಿದವರು ಕೂಡದೆ, ಕೂಡಿದವರು ಅಗಲಿದಂತೆ ಆಯಿತು. ಅವರು ಅರಮನೆಗೆ ಬರದಿದ್ದರೂ, 'ಹಿರಿಯ ತಲೆ, ಸಮಯ ಬಂದಾಗ

ಸಲಹೆ ಕೇಳಬಹುದು' ಎಂಬ ನಂಬಿಕೆ ಇದ್ದವರು. ನಮಗೆ ಬೇಕಾದ ಸಮಯದಲ್ಲಿ ಇಲ್ಲದ ಹಾಗಾಯಿತು... ಹೀಗಾಗಬಾರದಿತ್ತು."

-ಎಂದು ತೀವ್ರ ಪಶ್ಚಾತ್ತಾಪ ಕುದಿಯುತ್ತಿದ್ದ ಧ್ವನಿಯಲ್ಲಿ ಹೇಳಿ, ದೀರ್ಘವಾದ ನಿಟ್ಟುಬಿಟ್ಟು ಬಳಿಕ ಮೃದುವಾಗುತ್ತಿದ್ದ ಎದೆಯನ್ನು ಕರಗಲು ಬಿಡದೆ, ಗಟ್ಟಿ ಮಾಡಿಕೊಂಡು-

"ಹೋದವರು ಹೋಗಲಿ, ಬಂದದ್ದು ಬರಲಿ, ಉತ್ಸವಾಂಬೆಯ ಕೃಪೆ, ನಮ್ಮೀ ಎರಡು ತೋಳು-ಇರುವವರೆಗೂ ನಾವು ಚಿಂತೆ ಮಾಡುವುದಿಲ್ಲ"

-ಎಂದು ತನಗೆ ತಾನೇ ಹೇಳಿಕೊಂಡಂತೆ ಹೇಳಿದ.

೮

ತುರುವೇಕೆರೆಯ ಬಳಿ-

ಹುಲ್ಲುಗಾವಲಿನ ಬಯಲು. ಅದರ ಒಂದು ಭಾಗದಲ್ಲಿ ಬೃಹದಾಕಾರದ ರೆಕ್ಕೆ ಮುಚ್ಚಿ ಕುಳಿತ ಬಿಳಿಯ ಹಕ್ಕಿಯಂತೆ ಕಾಣುವ ಆ ಹಕ್ಕಿಯ ತಲೆಕುಚ್ಚಿನಂತೆ ತೋರುವ ಗಂಡಭೇರುಂಡ ಧ್ವಜವನ್ನು ಧರಿಸಿದ ಹೈದರಾಲಿಯ ಗುಡಾರ. ಆ ಗುಡಾರದೆದುರಿನ ವಿಶಾಲವಾದ ಬಯಲಿನ ಮಧ್ಯದಲ್ಲಿ ನಿಲ್ಲಿಸಿದ ಎತ್ತರವಾದ ಮರದ ಕಂಭ. ಆ ಕಂಭದ ತುದಿಗೆ, ನೇತುಹಾಕಿದ ಪುರುಷಾಕಾರದ ದೊಡ್ಡ ಬಟ್ಟೆಯ ಗೊಂಬೆ, ಬಯಲಿನ ಮೂರು ಪಾರ್ಶ್ವದಲ್ಲೂ ಶಿಸ್ತಿನಿಂದ ನಿಂತ ಬಣ್ಣಬಣ್ಣದ ಸಮವಸ್ತ್ರ ಧರಿಸಿದ ಸೈನಿಕರು, ಅವರ ದಳಪತಿಗಳು, ಗುಡಾರದ ಮುಂದೆ ನಿಂತ ಸೇನೆಯ ಸರದಾರರು, ದರ್ಬಾರಿನ ಪ್ರಮುಖರು ಎಲ್ಲರ ಕಣ್ಣೂ ಆ ಮೈದಾನದ ಸುತ್ತ ಬಿಳಿಯ ಕುದುರೆಯನ್ನೇರಿ ದೌಡಾಯಿಸುತ್ತ ಬಂದ ಹೈದರಾಲಿಯತ್ತ.

ಚಪಲಗತಿಯಲ್ಲಿ ಚಲಿಸುವ ಕುದುರೆಯನ್ನೇರಿ ಬಂದ ಹೈದರಾಲಿ, ಆ ಕಂಭದ ಬಳಿಗೆ ಬರುತ್ತಿದ್ದ ಹಾಗೇ, ಲಗಾಮು ಹಿಡಿದೆಳೆದು ಕುದುರೆಯನ್ನು ನಿಲ್ಲಿಸಿ, ಮಿಂಚಿನ ವೇಗದಿಂದ ತನ್ನ ತೋಳಲ್ಲಿ ತೂಗಾಡುತ್ತಿದ್ದ ಬಂದೂಕನ್ನೆತ್ತಿ, ಅದರ ಕಣ್ಣಿನಿಂದ ಲಕ್ಷ್ಯವನ್ನು ದೃಷ್ಟಿಸಿ ನೋಡಿ, ಬಂದೂಕದ ಕುದುರೆಯನ್ನೆಳೆದ.

'ಢಂ' ಎಂಬ ಸದ್ದಿನೊಡನೆ ಕೋವಿಯ ಬಾಯಿನಿಂದ ಗುಂಡು ಹಾರುತ್ತಿದ್ದಂತೆಯೇ, ಗುಂಡು ತಗುಲಿದ ಕಂಭದ ತುದಿಗೆ ತೂಗುತ್ತಿದ್ದ ಗೊಂಬೆ ಅತ್ತಿತ್ತ ಹೊಯ್ದಾಡಿತು.

ತೂಗುತ್ತಿದ್ದ ಗೊಂಬೆಯನ್ನು ಕಿಗ್ಗಣ್ಣಿಂದ ನೋಡುತ್ತಾ, ಕುದುರೆಯಿಂದಿಳಿದು ಆ ವೇಳೆಗೆ ತನ್ನ ಬಳಿ ಬಂದ ಸೈನಿಕನ ಕೈಗೆ ಕುದುರೆಯನ್ನೊಪ್ಪಿಸಿ –

“ಆ ಗೊಂಬೆಯನ್ನಿಳಿಸಿ ತರಲು ಹೇಳು”

-ಎಂದು ಹೇಳಿ, ತನ್ನ ಗುಡಾರದತ್ತ ನಡೆದು, ತನಗಾಗಿ ಇರಿಸಿದ ಆಸನದಲ್ಲಿ ಕುಳಿತು, ಯಾರೊಂದಿಗೂ ಮಾತನಾಡದೆ ಮುಖದ ಮೇಲಿನ ಸಣ್ಣ ಬೆವರನ್ನು ಒರೆಸಿಕೊಂಡು, ಆ ವೇಳೆಗೆ ಕಂಭವನ್ನೇರಿ, ಅದರ ಮೇಲಿದ್ದ ಗೊಂಬೆಯನ್ನಿಳಿಸಿದ ಸೈನಿಕನೊಬ್ಬ, ಅದನ್ನು ನವಾಬನ ಮುಂದೆ ತಂದು ತೋರಿಸಿದ.

ಗೊಂಬೆ ಬಟ್ಟೆಯದಾದರೂ ಅದರ ಮುಖ ಮೇಣದಲ್ಲಿ ಮಾಡಿದ್ದು, ತಲೆಯ ಮೇಲೆ ಕಿರೀಟದಂತೆ ಮುಂಡಾಸನ್ನು ಧರಿಸಿ, ಕೆನ್ನೆ ಮುಚ್ಚುವಷ್ಟು ಗಲ್ಲಿಮೀಸೆಯನ್ನು, ಹುಬ್ಬುಗಳ ನಡುವೆ ಕೆಂಬಣ್ಣದಲ್ಲಿ ಕುಂಕುಮದ ಬೊಟ್ಟನ್ನು ಚಿತ್ರಿಸಿದ ಮುಖ - ಲಕ್ಷ್ಯವಿಟ್ಟು ನೋಡಿದರೆ ಮದಕರಿನಾಯಕನ ಮುಖದಂತಿತ್ತು. ಆ ಮುಖದ ಹಣೆಯ ಮೇಲಿದ್ದ ಕುಂಕುಮದ ಬೊಟ್ಟನ್ನು ಗುಂಡಿನಗಲದ ತೂತು ಮಾಡಿ ಗುಂಡು ಒಳಹೊಕ್ಕಿತ್ತು.

ಅದನ್ನು ನೋಡಿದ ಹೈದರಾಲಿಯ ಮುಖದ ಮೇಲೆ ಅಪಾರ, ವಿಚಿತ್ರತೃಪ್ತಿ ಮೂಡಿ, ಕಣ್ಣು ಹೊಳೆದು –

“ನಮ್ಮ ಗುರಿಗಾರಿಕೆಯಿನ್ನೂ ಚೂಟಿ ತಪ್ಪಿಲ್ಲ, ಅಲ್ಲವೇ ಪೂರ್ಣಯ್ಯ?”

-ಎಂದು ಹೇಳಿದ ಹೈದರಾಲಿ, ಆ ಮಾತಾಡಿದ ಬಳಿಕ, ಬೆನ್ನಿನಲ್ಲಿ ಆಯಾಸ ಕಂಡಂತಾಗಿ, ಪಕ್ಕದಲ್ಲಿದ್ದ ಪರಿಚಾರಕನಿಗೆ –

“ಸ್ವಲ್ಪ ಬೆನ್ನು ನೀವು. ಇದೊಂದು ಹಾಳು ನೋವು – ಇರುವುದಿಲ್ಲ, ಹೋಗುವುದಿಲ್ಲ; ಮದಕರಿನಾಯಕನ ಹಾಗೇ ನಮ್ಮನ್ನು ಸತಾಯಿಸುತ್ತಿದೆ”

- ಎಂದು ಅಲ್ಪ ಅಸಮಾಧಾನವಿದ್ದ ಧ್ವನಿಯಲ್ಲಿ ಹೇಳಿದ.

“ತಾವು ಸ್ವಲ್ಪ ದಿನ ವಿಶ್ರಾಂತಿ ತೆಗೆದುಕೊಳ್ಳಬೇಕು - ಬೆನ್ನಿನ ಹುಣ್ಣು ಪೂರ್ಣ ವಾಸಿಯಾಗುವವರೆಗೂ – ಎಂದು ಹಕೀಮರು ಹೇಳಿದ್ದಾರೆ. ಆದರೆ ತಾವು ಅವರ ಮಾತಿಗೆ ಬೆಲೆಯನ್ನೇ ಕೊಡುವುದಿಲ್ಲ. ಈಗ ಈ ಶ್ರಮದ ಅಗತ್ಯವಿರಲಿಲ್ಲ” - ಎಂದ ಪೂರ್ಣಯ್ಯ.

“ಆ ಹಾಳು ಹಕೀಮರು, ಪಂಡಿತರ ಮಾತು ಬಿಡಿ. ಅವರಿಗೆ ಮುಲಾಮುಪಟ್ಟಿ ಹಚ್ಚುವುದು ಗೊತ್ತೇ ಹೊರತು ಹಣೆಯಲ್ಲಿ ಬರೆದಿರುವುದೇನು ಗೊತ್ತು. ಅವರಿಗೆ ಅರ್ಥವಾಗದ ರೋಗಕ್ಕೆ ಹತ್ತೆಂಟು ಹೆಸರಿಟ್ಟು, ನೂರಾರು ಔಷಧಿ ಕುಡಿಸುತ್ತಾರೆ”

-ಎಂದು ತಾತ್ಸಾರವಿದ್ದ ಧ್ವನಿಯಲ್ಲಿ ಹೇಳಿ –

"ಅತ್ತ ಮರಾಠರು, ಇತ್ತ ಇಂಗ್ಲೀಷಿನವರು - ಮಧ್ಯೆ ಗಂಟಲಲ್ಲಿ ಸಿಕ್ಕಿಕೊಂಡ ಮುಳ್ಳಿನಂತೆ ಈ ಮದಕರಿನಾಯಕ - ಇವರನ್ನು ಮುಗಿಸಿದಮೇಲೆ, ಹಕೀಮರ ಕೈಗೆ ಕೆಲಸ. ಒಂದು ಕೆಂಪು ಗುಳ್ಳೆ ಕಾಣಿಸಿಕೊಂಡರೆ ಏನೋ ದೆವ್ವ ಕಂಡವರ ಹಾಗಾಡುತ್ತಾರೆ. ಅವರ ಮಾತು ಬಿಡಿ...."

- ಎಂದು ಅಷ್ಟಕ್ಕೇ ಆ ಮಾತನ್ನು ಮರೆತಂತೆ-

"ಅದೇನೋ ಮತ್ತೋಡುನಾಯಕ ವಿಷಯ ಹೇಳಬೇಕು ಎಂದಿದ್ದನಲ್ಲ, ಅದೇನು ಹೇಳಿ"

- ಎಂದು ಕೇಳಿದ ಹೈದರಾಲಿ, ಸುತ್ತ ನಿಂತವರನ್ನು ಅಷ್ಟು ದೂರ ನಿಲ್ಲುವಂತೆ ಹರಿತವಾದ ಕ್ರೂರನೋಟದಿಂದಲೇ ಅಪ್ಪಣೆ ಮಾಡಿ.

"ಅವನು ಖಾವಂದರನ್ನು ಕಾಣಬೇಕೆಂದು ಬಂದಿದ್ದಾನೆ."

"ಬಂದಿದ್ದಾನೆ, ಬರುತ್ತಲೇ ಇದ್ದಾನೆ. ಅವಳ ಹಳೆಯ ಕಥೆ ಕೇಳಿ ಕೇಳಿ ಸಾಕಾಗಿದೆ ನಮಗೆ. 'ನಮ್ಮಪ್ಪನನ್ನು ಸೆರೆಯಲ್ಲಿಟ್ಟಿದ್ದರು. ಅಪಮಾನ ಮಾಡಿದರು. ಆ ಸೇಡು ತೀರಿಸಿಕೊಳ್ಳಬೇಕು' – ಇಷ್ಟೇ ತಾನೇ ? ಅಥವಾ ಹೊಸದೇನಾದರೂ ಮಾತಿದೆಯೇ ?"

- ಕೊಂಚ ಅಸಮಾಧಾನವಿದ್ದ ಧ್ವನಿಯಲ್ಲಿ ಹೇಳಿದ ಹೈದರಾಲಿ-

"ನಮ್ಮ ಹತ್ತಿರ ಈ ಚೂಪುಗಾರಿಕೆಯ ಆಜೂಜುವಾರಿ ಮಾಡಿದರೆ ಸಾಲದು. ಒಂದು ಸಲ – ಈ ದುರ್ಗದವರ ಕಥೆ ಮುಗಿಸಬೇಕು - ಅಂತಹುದೇನಾದರೂ ಹೇಳುವುದಿದ್ದರೆ, ಅವನ ಮಾತು ನಿಮ್ಮ ಮನಸ್ಸಿಗೆ ಕಾರ್ಯಸಾಧಕ ಎಂದು ತೋರಿದರೆ ಮಾತ್ರ ಕರೆದುಕೊಂಡು ಬನ್ನಿ. ಇಲ್ಲಿ ನವಾಬನಿಗೆ ಸಲಾಮು ಮಾಡಿದರೆ ದುರ್ಗ ಧೂಳೀಪಟವಾಗುವುದಿಲ್ಲ."

"ಈ ಬಾರಿ ಅವನು ಹೇಳುವ ಮಾತಿನಲ್ಲಿ ಸ್ವಲ್ಪ ಅರ್ಥವಿದೆ. ಕಾರ್ಯಸಾಧನೆಯ ಲಕ್ಷಣವಿದೆ. ಕಾಲ ಕೂಡಿಬಂದಹಾಗೆ ಕಾಣುತ್ತೆ."- ಪೂರ್ಣಯ್ಯ ಹೇಳಿದ.

"ಹಾಗಿದ್ದರೆ ಬಂದು ನೋಡಲು ಹೇಳಿ"

- ಎಂದು ಹೈದರಾಲಿ ಎದ್ದು ಒಳಗುಡಾರದತ್ತ ನಡೆದ.

* * *

ಬಿರುಗಾಳಿ ಬೀಸುವ ಮುನ್ನಿನ, ಮೋಡಕಟ್ಟಿ ಉಗ್ರಮೌನ ಧರಿಸಿದ ಕಾರ್ಗಾಲದ ಮುಗಿಲಿನಂತಿತ್ತು, ಆ ಸಂಜೆ ಸೇರಿದ ದಳವಾಯಿಗಳ ಅವಸರದ ಸಭೆ.

"ನಡೆದದ್ದೇನೋ ಸಭೆಗೆ ವರದಿಯಾಗಲಿ."

- ಬಹು ಪ್ರಯತ್ನಪೂರ್ವಕವಾಗಿ ತಡೆಹಿಡಿದ ಕ್ರೋಧವೇ ಸಣ್ಣಗೆ ಗುಡುಗಿದಂತೆ ಹೇಳಿದರು, ನಾಯಕರು.

"ಸರ್ಕಾರ್, ಇವತ್ತು ಮುಸವನಹಾಳುಕಣಿವೆಯಲ್ಲಿ ನಾವು ದನ ಮೇಯಿಸಿಕೊಂಡು ಇದ್ದಾಗ, ಮತ್ತೋಡು ಹಾಲಪ್ಪನಾಯಕರು ಖುದ್ದಾಗಿ ಭಾರಿ ದಂಡಿನೊಡನೆ ನಮ್ಮ ಗಡಿಯೊಳಗೆ ನುಗ್ಗಿ ಬಂದು ನಮ್ಮ ದನಕರುಗಳನ್ನು, ಆಳುಕಾಳುಗಳನ್ನು ಅಕಾರಣವಾಗಿ ಸೆರೆ ಹಿಡಿದುಕೊಂಡು ಹೋದರು. ನಾನು ಗುಡ್ಡ ಬಿದ್ದು ಅವರ ಕೈಯಿಂದ ತಪ್ಪಿಸಿಕೊಂಡು ಸುದ್ದಿ ಕೊಡಲು ಬಂದೆ." – ಭಯದಿಂದ ನಡುಗುತ್ತಿದ್ದ ಗೊಲ್ಲರ ನಾಯಕ ಹೇಳಿದ.

"ನಮ್ಮವರೇನು ಬಳೆ ತೊಟ್ಟವರಂತೆ ಮತ್ತೋಡಿನವರಿಗೆ ಹಸು ಕರು ಒಪ್ಪಿಸಿದರೇನು ?"

"ಸರ್ಕಾರ್ - ಕ್ಷಮಿಸಬೇಕು. ದುರ್ಗದ ಜನ ಅಂಥ ನಾಮುರ್ದಾಗಳಲ್ಲ. ನಮ್ಮವರೆಲ್ಲಾ ಬರೀ ದೊಣ್ಣೆ, ಕೋಲು, ಕೊಡಲಿ, ಮಚ್ಚು ಇಟ್ಟುಕೊಂಡಿದ್ದ ದನಕಾಯುವವರು. ಅವರೆಲ್ಲಾ ಕತ್ತಿ, ಕೋವಿ ತಗೊಂಡು ಬಂದವರು. ಆದರೂ ನಮ್ಮವರು ಆದಷ್ಟು ಹೋರಾಡಿದರು. ಹೋರಾಡಿದವರಲ್ಲಿ ಅಷ್ಟು ಜನ ಸತ್ತರು, ಮಿಕ್ಕವರು ಸೆರೆಯಾದರು. ಕೈಲಿ ಕತ್ತಿ-ಕೋವಿ ಇಲ್ಲದಿದ್ದರೂ, ಜೀವಕ್ಕೆ ಜೀವ ತೆಗೆದುಕೊಳ್ಳದೆ ನಮ್ಮ ಜನ ಬಿಡಲಿಲ್ಲ, ಸರ್ಕಾರ್. ಆದರೇನು ಮಾಡುವುದು, ಮತ್ತೋಡು ನಾಯಕರು ಮೋಸ ಮಾಡಿದರು. ಅದು ಸಾಲದು ಅಂತ ಆಡಬಾರದ ಮಾತು ಆಡಿದರು....ಆ ಮಾತು ಕೇಳಿ....ನನ್ನ ಕೈಯಲ್ಲಿ ಕೋವಿ ಇರಲಿಲ್ಲ, ಸರ್ಕಾರ್ ಆ ನಾಮರ್ದಾ ಉಳಿದುಕೊಂಡ."

- ಸಿಟ್ಟಿನಿಂದ ಕುದಿಯುತ್ತಾ ಹೇಳಿದ ಗೊಲ್ಲನಾಯಕ.

"ಏನು ಹೇಳಿದರು ?"

"ಅಂಥವರು, ದೊರೆಗಳಾದವರು ಆಡಬಾರದ ಮಾತು, ಮಾಸ್ವಾಮಿ....ಆ ಮಾತು ಹೇಳೋಕೆ ನನಗೆ ಬಾಯಿ ಬರೋಲ್ಲ."

"ಆಡಿದ್ದು ಮತ್ತೋಡವರು. ನಿನ್ನದೇನೂ ತಪ್ಪಿಲ್ಲ. ಅದೇನು ಆಡಿದರೋ ಹೇಳು."

"ಅವರು ಹೇಳಿದರು - 'ಲೋ - ನಿಮ್ಮ ನಾಯಕರಿಗೆ ಗಂಡಸುತನ ಇದ್ದರೆ, ಅವರೇ ಬಂದು ದನಕರು ಬಿಡಿಸಿಕೊಂಡು ಹೋಗಲಿ' ಅಂದರು ಮಾಸ್ವಾಮಿ. ಆ ಮಾತು ಕೇಳಿ, ಆ ಮಾತಾಡಿದ ನಾಲಗೇನ ಕತ್ತರಿಸದೆ ಬಂದ ನನ್ನನ್ನು ಮಾಫ್ ಮಾಡಬೇಕು. ತಮಗೆ ಸುದ್ದಿ ಕೊಡಬೇಕೂಂತ ತಲೆತಪ್ಪಿಸಿಕೊಂಡು ಬಂದೆ. ಇಲ್ಲಿದೆ ಬದುಕಿ ಈ ಷಂಡಮುಖ ತೋರಿಸ್ತಿರಲಿಲ್ಲ."

- ನಾಯಕರಿಗೆ ಕೈಮುಗಿದು ಹೇಳಿದ ಗೊಲ್ಲನಾಯಕ, ತಾನು ಬದುಕಿರುವುದೇ ತನಗೆ ಹೊಲಸಂಟಿದಂತೆ ಎಂಬಂತೆ.

ಗೊಲ್ಲನಾಯಕ ಹೇಳಿದ ಮಾತನ್ನು ಕೇಳುತ್ತಿದ್ದ ಹಾಗೇ ಸಿಡಿಲು ಕಡೆದ ಕಾರ್ಗಾಲದ ಕಡಲಲೆಗಳಂತೆ ಹೊಯ್ದಾಡಿತು - ಕ್ರೋಧೋದ್ದೀಪಿತವಾದ ದಳವಾಯಿಗಳ ಸಭೆ.

"ಆ ಪೊಗರಿನ ಮಾತನ್ನು ಅರಗಿಸಿಕೊಳ್ಳುವುದು ಆಡಿದಷ್ಟು ಸುಲಭವಲ್ಲ ಎಂದು ತೋರಿಸಿಕೊಡಲು ನಮಗೆ ಅಪ್ಪಣೆಯಾಗಬೇಕು"

- ಎಂದು ಒರೆಯಿಂದೆಳೆದ ಕತ್ತಿಯಂತೆ ನಿಂತು ಹೇಳಿದ ಬಾಣದ ಓಬನಾಯಕ.

"ಮತ್ತೋಡುನಾಯಕನ ಅಪ್ಪ ಸಿದ್ಧಪ್ಪನಾಯಕನ ಸೊಕ್ಕು ಇಳಿಸಿದ ಶಕ್ತಿ, ಇನ್ನೂ ನಮ್ಮ ತೋಳುಗಳಲ್ಲಿದೆ. ಅವರಿಗೆ ಉತ್ತರ ಹೇಳಲು ನನಗೆ ಅಪ್ಪಣೆಯಾಗಬೇಕು."

-ಚಪ್ಪೇಚಾವಡಿಯ ದಳವಾಯಿ ಚಿಕ್ಕಪರಶುರಾಮನಾಯಕ ಹೇಳಿದ.

"ಮತ್ತೋಡಿನ ಕೈಬಳೆಗಳನ್ನು, ಆ ನಾಯಕರಿಗೇ ತೊಡಿಸಿ, ಎಳೆಸಿಕೊಂಡು ಬರಲು ನಮ್ಮನ್ನು ನೇಮಿಸಬೇಕು."

-ಠಾಣ್ಯದ ಚಾವಡಿಯ ಕಾಟಣ್ಣನಾಯಕ, ಕೆಣಕಿದ ಕಾಡುಹಂದಿಯಂತೆ ಹೇಳಿದ.

"ಸರ್ಕಾರ್ – ನಮಗೆ ಹುಕುಂ ಆಗಬೇಕು. ದುರ್ಗದ ದನಗಳೊಂದಿಗೆ ಮತ್ತೋಡು ನಾಯಕನನ್ನು ಹೊಡೆದುಕೊಂಡು ಬಂದು ಅರಮನೆಯ ಗೋಶಾಲೆಯಲ್ಲಿ ಕಟ್ಟಿ, ಹುಲ್ಲು ಮೇಯಿಸದಿದ್ದರೆ ನನ್ನ ಹೆಸರು ಶಿವಪ್ರಸಾದ್‌ಸಿಂಗ್ ಅಲ್ಲ."

-ಶಿವಪ್ರಸಾದ್‌ಸಿಂಗ್ ಶಪಥ ಮಾಡಿ ಹೇಳಿದ.

"ದುರ್ಗದ ನಾಯಕರ ಹೆಸರಾಡಿದ ಅವರ ನಾಲಗೆಯನ್ನು ಕತ್ತರಿಸಿ, ದುರ್ಗದ ಬೀದಿ ನಾಯಿಗಳಿಗೆ ಔತಣ ಮಾಡಿಸದಿದ್ದರೆ ನಾನು ಹಡೆದ ತಾಯಿಗೆ ದ್ರೋಹ ಬಗೆದಂತೆ. ನನ್ನನ್ನು ಬಿಡಿ - ಬೇಟೆಯಾಡಿ ಬರುತ್ತೇನೆ"

-ಎಂದು ಮೀಸೆಯನ್ನು ಹುರಿಮಾಡಿ ಹೇಳಿದ ಜಾನೋಜಿಪಂತ್.

"ಖುದಾಕೆ ಖಸಂ. ಖುರಾನ್-ಏ-ಷರೀಫ್‌ನ ಮೇಲೆ ಆಣೆಮಾಡಿ ಹೇಳುತ್ತೇನೆ – ನಮಗೆ ಹುಕುಂ ಕೊಡಬೇಕು - ಈ ನಮಕ್‌ಹರಾಂ ದಗಲುಬಾಜಿಗಳಿಗೆ 'ತೋಬಾ, ತೋಬಾ' ಎನ್ನುವ ಹಾಗೆ ಮಾಡದಿದ್ದರೆ ನನ್ನ ಈ ತಲವಾರ್‌ಗೆ ಸೀರೆ ಉಡಿಸುತ್ತೇನೆ."

-ಸರ್ದಾರ್ ಸಲಬತ್‌ಖಾನ್ ಒರೆಯಲ್ಲಿದ್ದ ಕತ್ತಿ ಎಳೆದು ಹೇಳಿದ.

"ಮಾತು ಸಾಕು."

- ಕುದಿಕುದಿದು ಹೆಪ್ಪುಗಟ್ಟಿ ಕಿಡಿಗಾರುತ್ತಾ ಬಿಸಿಹೊಗೆಯಾಡುವ ತಪ್ತಲಾವಾರಸದಂತೆ ಹೇಳಿದ ನಾಯಕರು-

"ಈ ಹೊತ್ತಿನಲ್ಲಿ ಇಲ್ಲಿರುವ ಹಿರಿಯರಿಗೆ ನೆನಪಿರಬಹುದು - ನಾವು ಪಟ್ಟಕ್ಕೆ ಬಂದ ಹೊಸತರಲ್ಲಿ, 'ದುರ್ಗವನ್ನು ನಾಗತಿಯವರು ಆಳುತ್ತಿದ್ದಾರೆ' ಎಂಬ ಸದರದಿಂದ ನಮ್ಮ ಹಸುಗಳನ್ನು ರಾಯದುರ್ಗದ ಪಾಳೆಯಗಾರ ಹಿಡಿದಾಗ, ನಮ್ಮನ್ನು ಈ ಪೀಠಕ್ಕೆ ತಂದ ನಾಗತಿಯವರು ಆ ಪಾಳಯಗಾರನ ಪುಂಡುತನಕ್ಕೆ ಹೆಣ್ಣಾಗಿ ಹೆದರಲಿಲ್ಲ. ತಾವು ಹೆಣ್ಣಲ್ಲ, ಮೈ ತಳೆದ ಉತ್ಸವಾಂಬೆ ಎಂಬ ರೀತಿಯಲ್ಲಿ ಆ ಪುಡಿಪಾಳಯಗಾರನ ಪೊಗರಿಗೆ ತಾವೇ ಕತ್ತಿಯ ಉತ್ತರ ಕೊಟ್ಟು ಅವನ ಸದ್ದಡಗಿಸಿದರು. ಆಗ ರಾಯದುರ್ಗದ ಪಾಳಯಗಾರ ಮಾಡಿದ್ದನ್ನು ಈಗ ಮತ್ತೋಡು ಹಾಲಪ್ಪನಾಯಕ ಮಾಡಿದ್ದಾನೆ. ಆ ಗೋಗ್ರಹಣ ಹೇಗೆ ನಾಗತಿಯವರಿಗೆ ಸವಾಲಾಗಿತ್ತೋ ಹಾಗೇ ಈ ಗೋಗ್ರಹಣ ನಮಗೇ ಮೀಸಲಾದ ಸವಾಲು. ಆಗ ಅವರು ತಾವು ಹೆಣ್ಣು ಎಂದು ದಳವಾಯಿಗಳನ್ನು ಯುದ್ಧಕ್ಕೆ ಬಿಡಲಿಲ್ಲ. ಹೆಣ್ಣಾಗಿ ಆ ತಾಯಿ ತೋರಿದ ಛಲ, ಗಂಡಾಗಿ, ಅವರ ಮಕ್ಕಳಾದ ನಮ್ಮಲ್ಲೂ ಇಲ್ಲ ಎಂದುಕೊಂಡಿದ್ದೀರಾ....

"ರಾಯದುರ್ಗದ ಪಾಳೆಯಗಾರ ಮಾಡಿದಂತೆಯೇ ಈಗ ಮತ್ತೋಡಿನ ನಾಯಕ ನಮ್ಮ ಹೆಸರು ಎತ್ತಿ, ನಮ್ಮ ಮರ್ಯಾದೆಯ ಮುಂದಲೆಗೆ ಕೈಹಾಕಿದ್ದಾನೆ. ಅದಕ್ಕೆ ತಕ್ಕ ಉತ್ತರ ಕೊಡುವುದು ನಮ್ಮ ಗಂಡಸುತನ ಮಾಡಬೇಕಾದ ಕೆಲಸ. ಆ ಶಕ್ತಿ ನಮಗಿದೆ. ನೀವು ನಮ್ಮ ಹಿಂದಿರಿ - ಸಾಕು. ನಾಳೆಯೇ ದುರ್ಗದಿಂದ ನಾಲ್ಕುಸಾವಿರ ಅಶ್ವಸೇನೆ ಹೊರಡಲಿ. ನಮ್ಮ ಹಸುಕರುಗಳೊಂದಿಗೆ ಮತ್ತೋಡು ಹಾಲಪ್ಪನಾಯಕನನ್ನು ಹೊಡೆದುಕೊಂಡು ಬಂದು, ಅವನ ತಂದೆಯವರಿದ್ದ ಸೆರೆಮನೆಯಲ್ಲೇ ಅವನನ್ನಿಟ್ಟು, ಅರಮನೆಯ ದಾಸಿಯರಿಂದ ಅವನಿಗೆ ಸೀರೆ ಕುಬಸದ ಬಾಗಿನ ಕೊಡಿಸದಿದ್ದರೆ, ನಾವು ದುರ್ಗದ ದೊರೆಗಳಲ್ಲ. ಈ ತುಂಬಿದ ಸಭೆಯಲ್ಲಿ ನಾವು ಪ್ರಮಾಣ ಮಾಡಿ ಹೇಳುತ್ತೇವೆ – ಇಷ್ಟು ಮಾಡುವವರೆಗೂ ಮತ್ತೆ ನಾವು ಕೈಯಿಂದ ಹಾಲು ಮುಟ್ಟುವುದಿಲ್ಲ. ಮತ್ತೋಡಿನವರನ್ನು ಹಿಡಿತರದೆ ದುರ್ಗದಲ್ಲಿ ಮುಖ ತೋರಿಸುವುದಿಲ್ಲ. ಈ ರಾತ್ರಿ ಯಾರಿಗೂ ಮಲಗಲು ಪರವಾನಗಿ ಇಲ್ಲ. ಹಗಲು ಹರಿಯುವ ಹೊತ್ತಿಗೆ ನಮ್ಮ ಸೇನೆ ಮತ್ತೋಡಿನ ದಾರಿಯಲ್ಲಿರಬೇಕು. ಅದಕ್ಕೆ ಬೇಕಾದ ಸಿದ್ಧತೆ ಮಾಡಿ. ಹಸು ಹಿಡಿದು ಕೌರವ ಕೆಟ್ಟ; ಮತ್ತೋಡಿನವನು ಮತಿಗೆಟ್ಟ - ಪ್ರಧಾನಿಗಳೇ, ದಳವಾಯಿಗಳಿಗೆ ರಣವೀಳ್ಯ ಕೊಡಿಸಿ"

- ಎಂದು ಮಾತು ಮುಗಿಸಿದಂತೆ ಹೇಳಿದರು.

* * *

ನಡುರಾತ್ರಿಯಾದರೂ, ಹೃದಯದಲ್ಲಿ ಕುದಿಯುತ್ತಿದ್ದ ಕ್ರೋಧದಲ್ಲಿ ನಿದ್ರೆ ಬರದೆ, ಮಲಗಿದ ಹಾಸಿಗೆ ಶರಶಯ್ಯೆಯಾಗಿ, ಅರಮನೆಯ ಅಂತಃಪುರ ಮುಳ್ಳಿನ ಪಂಜರವಾಗಿ, ಅರಮನೆಯಿಂದ ಹೊರಬಂದು, ಶೃಂಗಾರವನದಲ್ಲಿ ಅತ್ತಿಂದಿತ್ತ ಸುತ್ತಾಡುತ್ತಿದ್ದ ಮದಕರಿನಾಯಕ.

ಹೋದತ್ತ – ಬಂದತ್ತ, ಮತ್ತೋಡಿನ ನಾಯಕನಾಡಿದ 'ನಿಮ್ಮ ನಾಯಕರಿಗೆ ಗಂಡಸುತನ ಇದ್ದರೆ ಬಂದು ಬಿಡಿಸಿಕೊಂಡು ಹೋಗಲಿ'- ಎಂದು ಗೊಲ್ಲರ ಮುಂದಾಡಿದ ಪೊಗರಿನ ಕೆಣಕು ಮಾತು, ತಿರುಗಿದತ್ತ ಅವನ ಎದೆಯನ್ನು ಇರಿಯುತ್ತಿತ್ತು: ಪ್ರತೀಕಾರದ ಬಗೆಬಗೆಯ ಭಾವನೆಗಳು ಅವನ ಮಿದುಳನ್ನು ಮಥಿಸುತ್ತಿದ್ದವು.

'ಬಿಡಬಾರದು....ಬಿಡಬಾರದು, ಮತ್ತೆಂದೂ ಆ ನಾಲಗೆ ಸಡಿಲವಾಗದಂತೆ ಜಡಿದು ಬುದ್ಧಿ ಕಲಿಸಬೇಕು.'

– ಉಳಿದೆಲ್ಲ ಭಾವನೆಗಳನ್ನು ಮೆಟ್ಟಿ ತುಳಿದು. ಅದೊಂದು ಭಾವನೆಯೇ ಭೂತಾಕಾರ - ತಳೆದು ಅವನ ಉರಿವ ಕಣ್ಣೆದಿರು ನಿಂತಂತಿತ್ತು.

ಆ ಭಾವನೆಯ ಬೆಂಕಿಯನ್ನು ತಲೆಯಲ್ಲಿ ಹೊತ್ತು ಸುತ್ತಾಡುತ್ತಿರುವಾಗಲೇ, ಅವನ ಹಿಂದೆ ಯಾರದೋ ಹೆಜ್ಜೆ ಸದ್ದು ಕೇಳಿದಂತಾಗಿ, ತಟಕ್ಕನೆ ನಿಂತು, ಸೊಂಟದಲ್ಲಿದ್ದ ಕಠಾರಿಯ ಮೇಲೆ ಕೈಹಾಕಿ, ಸದ್ದು ಬಂದತ್ತ ನೋಡಿ –

"ಯಾರದು ?" – ಎಂದು ಕೇಳಿದ.

"ಪ್ರಭುಗಳ ಏಕಾಂತಕ್ಕೆ ಭಂಗ ತಂದದ್ದಕ್ಕೆ ಕ್ಷಮಿಸಬೇಕು. ನಾನು ಅರಮನೆಯ ಕಾವಲು ಪಡೆಯ ನಾಯಕ."

"ಇಲ್ಲಿಗೆ ಬಂದದ್ದೇಕೆ ?"

"ಕೊತ್ವಾಲಚಾವಡಿಯ ದಳವಾಯಿ ಕಾಶಣ್ಣನಾಯಕರು ತಮ್ಮನ್ನು ಕಾಣಲು ಬಂದಿದ್ದಾರೆ. ಅದನ್ನು ಸನ್ನಿಧಾನಕ್ಕೆ ಅರಿಕೆ ಮಾಡಬೇಕೆಂದು ಅಪ್ಪಣೆಯಾಯಿತು - ಬಂದೆ."

'ಕೊತ್ವಾಲಚಾವಡಿಯ ಕಾಶಣ್ಣನಾಯಕ - ಈ ಅಪರಾತ್ರಿಯಲ್ಲಿ - ಏಕಿರಬಹುದು ?'

-ಎಂದು ಚಿಂತಿಸುತ್ತಲೇ –

"ಅವರನ್ನಿಲ್ಲಿಗೆ ಬರಮಾಡು. ಮತ್ತಾರೂ ಇತ್ತ ಸುಳಿಯದಂತೆ ಎಚ್ಚರವಾಗಿರು"

- ಎಂದು ಅಪ್ಪಣೆ ಮಾಡಿದ ಮದಕರಿನಾಯಕ.

"ಅಪ್ಪಣೆ" – ಎಂದು ಹೇಳಿ ಹೋದ ಕಾವಲುಪಡೆಯ ನಾಯಕ.

ಅವನು ಹೋದ ಅನತಿಕಾಲದಲ್ಲಿಯೇ ಕಾಶಣ್ಣನಾಯಕ, ನಾಯಕರ ಬಳಿ ಬಂದು –

"ಹೊತ್ತಲ್ಲದ ಹೊತ್ತಿನಲ್ಲಿ ಬಂದು ತೊಂದರೆ ಕೊಟ್ಟೆ, ಕ್ಷಮಿಸಬೇಕು" - ಎಂದು ಹೇಳಿದ.

“ಅವಸರದ ಕೆಲಸವಿಲ್ಲದೆ ಬರುವವರಲ್ಲ ನೀವು. ಆದ್ದರಿಂದ ಕ್ಷಮೆ ಕೇಳಬೇಕಾದದ್ದಿಲ್ಲ. ವಿಷಯವೇನೋ ಹೇಳಿ.”

“ನಾಳೆ ಸೇನೆಯೊಂದಿಗೆ ಪ್ರಭುಗಳು ಯುದ್ಧಕ್ಕೆ ಹೊರಡಬಾರದು.”

“ಏಕೆ?”

- ಅನಿರೀಕ್ಷಿತವಾದ ಆ ಬೇಡಿಕೆಯನ್ನು ಕೇಳಿ, ಚಕಿತನಾಗಿ ಕೇಳಿದ ಮದಕರಿನಾಯಕ.

“ಈ ಗೋಗ್ರಹಣ ಬರೀ ಒಂದು ನೆಪ-ತಮ್ಮನ್ನು ದುರ್ಗದಿಂದ ಹೊರಬರುವಂತೆ ಮಾಡಿ, ಸೆರೆಹಿಡಿಯಲು, ಹಾಲಪ್ಪನಾಯಕ ಹೈದರಾಲಿಯವರೊಂದಿಗೆ ಹೂಡಿದ ತಂತ್ರ. ತಮ್ಮನ್ನು ಹೆಸರೆತ್ತಿ ಕೆಣಕಿದುದೂ ಆ ತಂತ್ರದ ಒಂದು ಭಾಗ, ಈ ಯುದ್ಧದಲ್ಲಿ ಮತ್ತೋಡುನಾಯಕ ಬರೀ ನೆಪಮಾತ್ರದ ಗೊಂಬೆ. ಅವರಿಗೆ ಬೇಕಾದದ್ದು ನಮ್ಮ ಹಸುವಲ್ಲ - ನೀವು ನಿಮ್ಮನ್ನು ದುರ್ಗದಿಂದ ಹೊರಹೊರಡಿಸಲೆಂದೇ ಈ ಕೆಣಕುಮಾತಿನ ಸಂಚು, ನೀವು ಮತ್ತೊಡುನಾಯಕನ ಅಲ್ಪಬಲ ಮುರಿಯಲು ಹೊರಟಾಗ, ನಿಮ್ಮ ಮೇಲೆ ಆಕಸ್ಮಿಕ ದಾಳಿ ಮಾಡಿ, ಸೇನೆಯನ್ನು ಸೋಲಿಸಿ, ನಿಮ್ಮನ್ನು ಸೆರೆಹಿಡಿಯಲು ಹೈದರಾಲಿಯವರು ಮೊಕ್ದುಂಸಾಹೇಬ್, ಮೊಹಿಯುದ್ದೀನ್ ಸಾಹೇಬ್ ಅವರೊಂದಿಗೆ ಹತ್ತು ಸಾವಿರ ಫೌಜು ಕಳಿಸಿದ್ದಾರಂತೆ. ಆದ್ದರಿಂದ ತಾವು ಈ ಬಲೆಯೊಳಗೆ ಬೀಳಬಾರದು.”

-ಕಾಶಣ್ಣನಾಯಕ ವಿವರಿಸಿ ಹೇಳಿದ.

“ಈ ಸುದ್ದಿಯನ್ನು ನಿಮಗೆ ಕೊಟ್ಟವರು ಯಾರು - ಈ ಸುದ್ದಿ ಬಂದದ್ದು ಯಾವಾಗ ?”

“ಸರ್ದಾರ್‌ಖಾನರ ಕಡೆಯ ನಮ್ಮ ಮನುಷ್ಯ ಬಂದು ಬಹುಗುಟ್ಟಾಗಿ ಈ ಸುದ್ದಿ ತಿಳಿಸಿದ. ಈಗ ಅರ್ಧತಾಸಿನ ಕೆಳಗೆ. ಆ ಸುದ್ದಿ ಕೇಳುತ್ತಿದ್ದ ಹಾಗೇ ನಿಮ್ಮನ್ನು ಎಚ್ಚರಿಸಲು ಬಂದೆ.”

“ಸರ್ದಾರ್‌ಖಾನರಿಗೆ ನಮ್ಮ ಕೃತಜ್ಞತೆ ತಿಳಿಸಿ. ಆದರೆ ನಾವು ಈ ಬಾರಿ ಯುದ್ಧಕ್ಕೆ ಹೋಗದೆ ಗತ್ಯಂತರವೇ ಇಲ್ಲ.”

-ದೃಢನಿರ್ಧಾರದ ಧ್ವನಿಯಲ್ಲಿ ಹೇಳಿದ ಮದಕರಿನಾಯಕ.

“ಹೀಗೇಕೆ ಮಾಡುತ್ತೀರಿ, ಪ್ರಭು. ಇದು ಮೋಸದ ಉರುಲು ಎಂದು ತಿಳಿದೂ ತಿಳಿದೂ. ನಿಮ್ಮ ತಲೆಯೊಡ್ಡುವುದು ಏಕೆ? ನಿಮಗೇನಾದರೂ ಪ್ರಮಾದವಾದರೆ, ಅದು ದುರ್ಗಕ್ಕೇ ಗಂಡಾಂತರ.”

“ಇರಬಹುದು, ಕಾಶಣ್ಣನಾಯಕರೇ. ಆದರೆ ಸಾವೂ ಕೂಡ ನಾವು ನಮ್ಮ ಶಪಥದಿಂದ ಹಿಮ್ಮೆಟ್ಟುವಂತೆ ಮಾಡಲಾರದು ಪ್ರಮಾಣ ಮಾಡಿದ್ದಾಯಿತು. ಈಗ ಹಿಂದೆ ಹೋಗಲು ದಾರಿಯಿಲ್ಲ. ಆಯಿತು - ನಮ್ಮ ಅದೃಷ್ಟ ಪರೀಕ್ಷೆ ಹೀಗೆ ನಡೆಯಬೇಕು ಎಂದಿದ್ದರೆ ನಡೆಯಲಿ. ’ನಾಯಕರು

ಆಡಿದ ಮಾತಿನಂತೆ ನಡೆಯಲಿಲ್ಲ' ಎಂಬ ಅಪಖ್ಯಾತಿ ನಮ್ಮ ಸಾವಿನ ನಂತರವೂ ನಮ್ಮ ಬೆನ್ನಟ್ಟುವುದು ಬೇಡ. ಈ ವಿಷಯ ಸ್ವಲ್ಪ ಮುಂಚಿತವಾಗಿ ತಿಳಿದದ್ದು ಒಳ್ಳೆಯದಾಯಿತು. ಪ್ರಧಾನಿ ಪರಶುರಾಮನಾಯಕರಿಗೆ ಈ ವಿಷಯ ತಿಳಿಸಿ. ನಮ್ಮ ವ್ಯೂಹದಲ್ಲಿ ಹೇಗೆ ಬೇಕೋ ಹಾಗೆ ಬದಲಾವಣೆ ಮಾಡೋಣ. ಆದರೆ ನಾವು ಯುದ್ಧಕ್ಕೆ ಹೋಗುವುದಂತೂ ನಿಶ್ಚಯ" – ಅದೇ ಕೊನೆಯ ಮಾತೆಂಬಂತೆ ಹೇಳಿದ ಮದಕರಿನಾಯಕ.

ಆ ಮಾತಿನಿದಿರು ಕಾಶಣ್ಣನಾಯಕನಿಗೂ ಬೇರೇನೂ ಮಾತಾಡಲಾಗಲಿಲ್ಲ.

"ಆಯಿತು - ನಿಮ್ಮ ಮಾತಿಗೆ ಪ್ರತಿ ಹೇಳುವಷ್ಟು ಶಕ್ತಿ ನನಗಿಲ್ಲ. ಪ್ರಧಾನಿಗಳಿಗೆ ಹೇಳಿ, ಮುಂದಿನ ಮಾರ್ಗ ಯೋಚಿಸುತ್ತೇನೆ. ಆದರೂ ತಾವು ಎಚ್ಚರವಾಗಿರಬೇಕು. ದುರ್ಗದ ದೇವಿಯ ಕತ್ತಿನ ತಾಳಿ ನೀವು. ಅದನ್ನು ಮಾತ್ರ ಮರೆಯಬೇಡಿ. ನಾನಿನ್ನೂ ಮಾಡಬೇಕಾದ ಕೆಲಸ ಬಹಳವಿದೆ, ಬರುತ್ತೇನೆ" – ಎಂದು ಕೈಮುಗಿದ ಕಾಶಣ್ಣನಾಯಕ.

"ಹೋಗಿ ಬನ್ನಿ"

- ಎಂದು ಹೇಳಿ, ಆತನನ್ನು ಬೀಳ್ಕೊಟ್ಟು, ಆತ ಕಣ್ಣು ಮರೆಯಾದಬಳಿಕ –

'ಬರಲಿ, ಬರಲಿ, ಯಾರು ಯಾರು ಬರುತ್ತಾರೋ `ಬರಲಿ. ಬಂದವರನ್ನು ಎದುರಿಸುವ ನಮ್ಮ ಗಂಡುತನವೊಂದು ಆಚಲವಾಗಿರಲಿ'

- ಎಂದು ತನಗೆ ತಾನೇ ಹೇಳಿಕೊಂಡ ಮದಕರಿನಾಯಕ ಸುತ್ತ ನೋಡಿದ –

ಸುತ್ತಲೂ –

ಕತ್ತಲೆಯ ದೈತ್ಯಹಕ್ಕಿ ಇಟ್ಟ ಬೃಹದಾಕಾರದ ತತ್ತಿಗಳಂತಿದ್ದ, ನಿಶ್ಚಲವಾಗಿ ಮಲಗಿದ ಬಂಡೆಗಳು.

ಇರುಳ ತಂಗಾಳಿಯಲ್ಲಿ, ಸುತ್ತ ಕಿಕ್ಕಿರಿದ ತಣ್ಣಗಿದ್ದ ಬಂಡೆಗಳಿಂದ ಎಂಥದೋ ಶಕ್ತಿಧಾರೆ ಹರಿದುಬಂದು ಮದಕರಿನಾಯಕನ ತೋಳುಗಳಲ್ಲಿ ತುಂಬಿದಂತಾಗಿ, ಹೊಸ ಚೈತನ್ಯ ಮೂಡಿ, ಅರಮನೆಯತ್ತ ದೃಢನಿರ್ಧಾರದ ಹೆಜ್ಜೆ ಹಾಕಿದ.

೬

ಮೂಡಣದ ದಿಕ್ಕಂಚಿನಲ್ಲಿ ಬೆಂಕಿಬಿದ್ದು, ಆ ಬೆಂಕಿಯ ಕೆಂಬೆಳಕು ಬೇಸಿಗೆಯ ಬೆಳಗಿನ ಮುಗಿಲನೀಲಿಯಲ್ಲಿ ಓಕುಳಿಯನ್ನು ಚೆಲ್ಲಾಡಿತು.

ಮುಗಿಲಲ್ಲಿ ಮುಂಜಾವಿನ ಬೆಳಕು ಕಾಣಿಸಿದರೂ, ಮುಸುವನಕಣಿವೆಯಲ್ಲಿ ಹಬ್ಬಿದ ಮಬ್ಬು ಕರಗದೆ, ರಾತ್ರಿಯ ಚಳಿ ಸುಳಿಗಾಳಿಯೊಂದಿಗೆ ವಿಶಾಲವಾದ ಹುಲ್ಲು ಬಯಲಿನಲ್ಲಿ ಹಗುರವಾಗಿ ಹರಡಿ, ಹಿತವಾಗಿದ್ದ ಹೊದ್ದ ಕಂಬಳಿಯನ್ನು ಮೈಯಿಂದ ತೆಗೆಯಲೂ ಮನಸ್ಸಾಗದೆ, ತಮ್ಮ ಪಾಲಿಗಿನ್ನೂ ಹಗಲಾಗದಂತೆ ಮಲಗಿದ್ದ ಸೈನಿಕರಿಗೆ ಹಗಲಾದದ್ದು ತಿಳಿದದ್ದು – ಕಾವಲಿನ ಸೈನಿಕರು ತುತ್ತೂರಿಯನ್ನೂದಿ ಎಚ್ಚರಿಸಿದಾಗಲೇ. ಆ ಸೈನಿಕರ ಕಾವಲಿನಲ್ಲಿ ಹಿಂಡುಹಿಂಡಾಗಿ ಮಲಗಿದ, ಸಾವಿರಾರು ದನಕರುಗಳಿದ್ದ ತುರುಮಂದೆ 'ಬಾ....'- 'ಅಂಬಾ' ಎಂದು ಕೂಗಿ, ಹಕ್ಕಿಗಳ ಕಲರವಕ್ಕೆ ಧ್ವನಿಕೂಡಿಸಿ, ಎದ್ದು ನಿಂತು ಮೈ ಕೊಡವಿದವು.

"ದನಗಳಿಗೆ ಎಚ್ಚರವಾದರೂ ನಿಮಗೆ ಬೆಳಗಾಗಲಿಲ್ವೇ - ಎದ್ದೇಳೋ ಸೋಮಾರಿ ನನಮಕ್ಕಳಾ. ಹೊತ್ತೇರುವ ಹೊತ್ತಿಗೆ ಹಿಂಡು ಕಣಿವೆ ದಾಟಬೇಕು ಅಂತ ಅಪ್ಪಣೆಯಾದದ್ದು ಮರೆತುಹೋಯಿತಾ ? ಎದ್ದು ಹಿಂಡು ಅಟ್ಟಿಕೊಂಡು ಹೊರಡಿ. ನಿಮ್ಮ ಬೆಳಗಿನ ಕೆಲಸವೆಲ್ಲಾ ದಾಟಿದಮೇಲೆ" – ಎಂದು ಅಶ್ವಾರೋಹಿಗಳಾದ ದಳಪತಿಗಳು ಎಚ್ಚರಿಸಿದರು.

ಆ ಮಾತಿನೊಂದಿಗೆ ಇದು ಬರಿ ಬೆಳಗಲ್ಲ, ಯುದ್ಧಸಮಯದ ಬೆಳಗು ಎಂದು ಅರಿವಾದ ಸೈನಿಕರು ಅವಸರವಸರವಾಗಿ ಮೇಲೆದ್ದು –

"ಲಡಾಯಿಗೆ ಬಂದೋರನ್ನ ದನಕಾಯೋ ಕೆಲಸಕ್ಕೆ ಹಚ್ಚಿದರು. ಎಬ್ಬಿಸಿರೋ ಮಂದೇನ, ಅಟ್ಟಿರೋ"

- ಎಂದು ಒಬ್ಬರಿಗೊಬ್ಬರು ಕೂಗಿ ಹೇಳುತ್ತಾ, 'ಹೇ....ಹೇ....' ಎಂದು ಬೊಬ್ಬಿರಿದು, ಕೋಲುಗಳಿಂದ ತಿವಿದು, ತಾಯ ಮೊಲೆಹಾಲುಣ್ಣುತ್ತಿದ್ದ ಕರುಗಳನ್ನು ಬಡಿಗೆಯಿಂದ ಹೊಡೆದು, ಇನ್ನೂ ಮೈಮುರಿದು ಗೋಣಾಡಿಸುತ್ತಿದ್ದ ಹೋರಿಗಳನ್ನು ಚಾವಟಿಯಿಂದ ಹೊಡೆದು, ಕಟಕಟ ಸದ್ದು ಮಾಡಿ, ಅತ್ತಿತ್ತ ಸರಿದಾಡುತ್ತಿದ್ದ ಮಂದೆಯನ್ನು ರಸ್ತೆಗೆ ಸೇರಿಸಿ, ಮುಸುವನ ಕಣಿವೆಯ ಘಾಟುರಸ್ತೆಯಲ್ಲಿ ನಿಧಾನವಾಗಿ ಮಂದೆ ನಡೆಸಿದರು. ಸೆಗಣಿ ಹಾಕುತ್ತಾ, ಗಂಜಲ ಹುಯ್ಯುತ್ತಾ, ಮೈಮೇಲೆ ಬಿದ್ದ ಪೆಟ್ಟಿಗೆ ಸೆಟೆಯುತ್ತಾ, ತನ್ನ ಇಚ್ಛೆಗೆ ವಿರುದ್ಧವಾಗಿ ಹಿಂಡು – ಕಣಿವೆಯ ಏರುದಾರಿಯಲ್ಲಿ ನಡೆಯಿತು.

ಸೇನೆಯ ಸಂಚಾರಕ್ಕೆ ಯೋಗ್ಯವಲ್ಲದ, ನಡುನಡುವೆ ಕಲ್ಲು, ಕೊರಕಲುಗಳಿದ್ದ, ಇಬ್ಬದಿಯಲ್ಲೂ ಗುಡ್ಡಸಾಲು ಹಬ್ಬಿದ ಘಾಟುರಸ್ತೆಯಲ್ಲಿ, ಯಾರ ಆತುರವೂ ಕೆಲಸಕ್ಕೆ ಬಾರದೆ, ತನ್ನ ಇಚ್ಛೆಗೇ ಕಾಲವನ್ನು ಬಗ್ಗಿಸಿಕೊಂಡು ಮಂದಗತಿಯಲ್ಲಿ ಮುಂದೆ ನಡೆಯಿತು, ದುರ್ಗದ ಸಾವಿರಾರು ದನಗಳ ಹಿಂಡು.

ಮುಂದೆ ಇನ್ನೂರು ಮಂದಿ ಕೋವಿ ಕತ್ತಿ, ಭಲ್ಲೆ, ಭರ್ಜಿಗಳನ್ನು ಧರಿಸಿದ ಅಶ್ವಾರೋಹಿ ಸೈನಿಕರು, ಅವರ ಹಿಂದೆ ತುರುಮಂದೆ ಎರಡು ಪಕ್ಕದಲ್ಲೂ ದನಗಳು ಅಡ್ಡದಾರಿಗೆ ಬೀಳದಂತೆ ಕಣ್ಣಿಗೆ ಇಂಪಾಗಿ ಹೊಟ್ಟೆಯ ಹಸಿವನ್ನು ಕೆರಳಿಸುವ ಹಸಿರನ್ನೂ ಮೇಯಲು ಬಿಡದೆ ಪಶುವಿಗಿಂತ ಕೀಳಾಗಿ ವರ್ತಿಸಿ, ಅವಾಚ್ಯ ಶಬ್ದಗಳಿಂದ ಬೈಯುತ್ತಾ, ಕೋಲಿನಿಂದ ಹೊಡೆದು ಮುಂದಟ್ಟುವ ಪದಾತಿಗಳು, ಅವುಗಳ ಹಿಂದೆ ಮತ್ತೆ ಇನ್ನೂರು ಮಂದಿ ಯುದ್ಧ ಸನ್ನದ್ಧ ಅಶ್ವಾರೋಹಿ ಸೈನಿಕರು –

ವೇಗವಾಗಿ ನಡೆಯಬಯಸುವ ಕುದುರೆ, ನಿಧಾನವಾಗಿ ಕಾಲುಹಾಕುವ ತುರುಮಂದೆ, ಎರಡರ ನಡೆಯನ್ನು ಒಂದು ಹದಕ್ಕೆ ತಂದು ನಡೆಸುವ ಸೈನಿಕರು –

ಹಾಗಾಡಿ, ಹೀಗಾಡಿ ತಡೆಯಲಾಗದೆ ಮಲಮೂತ್ರ ವಿಸರ್ಜನೆಗೆ ಕುಳಿತವರನ್ನು ಕುಹಕ ಮಾತುಗಳಿಂದ ಛೇಡಿಸಿ, ತಮಗೆ ಅಭ್ಯಾಸವಿಲ್ಲದ ದನಕಾಯುವ ಕೆಲಸವನ್ನು ಒಲ್ಲದ ಮನಸ್ಸಿನಿಂದ ಮಾಡುತ್ತಾ, ಅಪರಿಚಿತವಾದ ಇಕ್ಕಟ್ಟಾದ ರಸ್ತೆಯಲ್ಲಿ ಒಂದನ್ನೊಂದು ಉಜ್ಜುತ್ತಾ, ಕೊಂಬಿನಿಂದ ಹಾಯುತ್ತಾ ಎಡವುತ್ತಾ ಮುಗ್ಗರಿಸುತ್ತಾ ನಡೆಯುವ ಹಿಂಡನ್ನು ಬಲಾತ್ಕಾರವಾಗಿ ಮುಂದೊತ್ತುತ್ತಾ, ಮತ್ತೋಡಿನ ಸೈನಿಕರು ಮುಸುವನಕಣಿವೆಯ ನೆತ್ತಿಯನ್ನು ಏರುವ ಹೊತ್ತಿಗೆ, ಬೆಳಗಿನ ತಂಗಾಳಿ ಎಲ್ಲೋ ಗಿಡಮರಗಳಲ್ಲಿ ಮೈಮರೆಸಿಕೊಂಡು ಬೇಸಿಗೆಯ ಬಿಸಿಲು ಮೈಗೆ ಚುರುಕು ಮುಟ್ಟಿಸುತ್ತಿತ್ತು.

ನಿಧಾನವಾಗಿ ನಡೆವ ದನ, ಮುಸುಗುಟ್ಟುವಂತೆ ಮಾಡುವ ಬಿಸಿಲು, ಎಲ್ಲಕ್ಕೂ ಕಾರಣವಾದ ಯುದ್ಧವನ್ನು ಶಪಿಸುತ್ತಾ ಸೇನೆ ಕಣಿವೆಯ ನೆತ್ತಿಯನ್ನೇರಿದಾಗ –

"ಢಾಂ"

- ಎಂದು ಹಗಲನ್ನು ಕಂಗೆಡಿಸುವಂತೆ ಸಿಡಿದ ತೋಫಿನ ಸದ್ದು ಕೇಳಿ, ಮುಂಚೂಣಿಯಲ್ಲಿದ್ದ ಅಶ್ವಾರೋಹಿಗಳ ಮೇಲೆ ಎದುರಿನಿಂದ, ಇಬ್ಬದಿಯಿಂದ ಪಟಪಟಿಸುವ ಗುಂಡಿನೇಟು ಬಿದ್ದು ರಣಕೇಕೆಯ 'ಕಡಿಯಿರೋ, ಕೊಲ್ಲಿರೋ', 'ಹಸು ಕದಿಯೋಕೆ ಬಂದಿದ್ದಾರೆ- ಕಳ್ಳನನ್ನ ಮಕ್ಕಳು . ಇವರಮ್ಮನ್....' - ಎಂದು ಕೂಗುತ್ತಾ ಮುನಿದ ಮಾರಿಯ ಪಿಶಾಚಪಡೆಯಂತೆ ಮುನ್ನುಗ್ಗಿದ ದುರ್ಗದ ಸೈನಿಕರ ಅನಿರೀಕ್ಷಿತ ಪ್ರಬಲಾಘಾತಕ್ಕೆ ಸಿಕ್ಕು, ಇನ್ನೂರು ಮಂದಿಯ ದಳ ತತ್ತರಿಸಿ, ಏರಿದ ಕುದುರೆಗಳು ಸತ್ತು, ಕುಳಿತವರು ಕುಳಿತಂತೆಯೇ ಗುಂಡೇಟು ತಗಲಿ ಸೆಟೆದು ಕೆಳಗುರುಳಿ ಮನುಷ್ಯರ, ಕುದುರೆಗಳ ಮೈ ರಕ್ತದ ಕಾರಂಜಿಯಾಗಿ ಹಗಲು ಬಗೆಬಗೆಯ ರಣಧ್ವನಿಗಳಿಂದ ವಿಕೃತವಾಯಿತು.

ಅನಿರೀಕ್ಷಿತವಾಗಿ ತೋಫಿನ ಭಯಂಕರ ಸದ್ದು ಕೇಳಿದ ದನಗಳ ಹಿಂಡು ಬೆದರಿ, ಭೀತಿಯಿಂದ ಕೂಗುತ್ತಾ ಚೆಲ್ಲಾಪಿಲ್ಲಿಯಾಗಿ ಅಡ್ಡ ಬಂದವರನ್ನು ಇರಿದು, ತುಳಿದು, ಹಿಂದೋಡಿ, ಹಿಂದೆ ಬರುತ್ತಿದ್ದ ಸೈನಿಕರ ಮೇಲೆ ನುಗ್ಗಿದವು.

ಆ ದನಗಳ ಅನಿರೀಕ್ಷಿತ ತುಳಿತಕ್ಕೆ ಸಿಕ್ಕ ಸೇನಾದಳ ಏನಾಯಿತೆಂದು ಅರಿತು, ಯುದ್ಧ ಸಿದ್ಧವಾಗುವುದರೊಳಗಾಗಿ, ಬೆದರಿ ಹಿನ್ನುಗ್ಗಿ ಬಂದ ದನಗಳ ಹಿಂಡಿನ ತುಳಿತಕ್ಕೆ ಸಿಕ್ಕು ದಿಗ್ಭ್ರಾಂತರಾಗಿದ್ದಾಗಲೇ, ಕಣಿವೆಯ ಇಬ್ಬದಿಯಿಂದ ಬಿಚ್ಚುಗತ್ತಿ, ರಣಗೊಡಲಿ, ಭಲ್ಲೆ ಭರ್ಜಿಗಳನ್ನು ಹಿಡಿದು ರಣಕೇಕೆಹಾಕುತ್ತಾ ಮೇಲೆಬಿದ್ದ ದುರ್ಗದ ಬೇಡಪಡೆಯ ಪ್ರಬಲ ಆಘಾತದಿಂದ ನುಚ್ಚು ನೂರಾಗಿ, ಕಣಿವೆಯ ದಾರಿ, - ಕತ್ತರಿಸಿದ ಕೈಕಾಲು, ರಕ್ತಕಾರುವ ರುಂಡ ಮುಂಡಗಳು, ಅರೆಪೆಟ್ಟು ತಿಂದು ಹುಚ್ಚಾಗಿ ಅಲೆವ ಕುದುರೆಗಳು, ಹೆದರಿ ಓಡುವ ದನಕರುಗಳಿಂದ ಕಿಕ್ಕಿರಿದು, ಸಾಯುತ್ತಿರುವವರನ್ನು ಸಾಯಲು ಬಿಟ್ಟು, ಬದುಕಿದ್ದವರು ಜೀವ ಉಳಿಸಿಕೊಳ್ಳಲು, ಇದ್ದವರು ಕುದುರೆಗಳಮೇಲೆ, ಇಲ್ಲದವರು ತಮ್ಮ ಕಾಲುಗಳನ್ನೇ ನಂಬಿ ಓಡಲು ಆರಂಭಿಸಿದರು; ರಾತ್ರೋರಾತ್ರಿ ಮೋಟಾಲದಕಣಿವೆಯ ಮಾರ್ಗವಾಗಿ ಬಂದು ಮುಸುವನ ಕಣಿವೆಯ ಬಾಗಿಲನ್ನು ಸೇರಿದ್ದ ದುರ್ಗದ ಸಹಸ್ರ ಅಶ್ವದಳ, ಐನೂರು ಮಂದಿಯ ಬೇಡಪಡೆ, ಸಣ್ಣ ಪರಶುರಾಮಪ್ಪನಾಯಕನ ಮುಂದಾಳತ್ವದಲ್ಲಿ ಓಡುವವರ ಬೆನ್ನಟ್ಟಿ, ಕೈಗೆ ಸಿಕ್ಕವರನ್ನು ಕಡಿಯುತ್ತಾ, ಕೊಚ್ಚುತ್ತಾ ಓಡುವ ಕುದುರೆಗಳ ಖುರಪುಟದ ಸದ್ದು, ದನಕರುಗಳ ಗೊರಸಿನ ಸದ್ದು, ಗಾಯಗೊಂಡ ಕುದುರೆಗಳ ಹೇಷಾರವ, ಪೆಟ್ಟು ತಿಂದವರ ಚೀರಾಟ, ಗೆದ್ದವರ ರಣಕೇಕೆ - ಇಬ್ಬದಿಯ ಗುಡ್ಡಸಾಲಿನಿಂದಲೂ ಮಾರ್ದನಿಸಿ ಬಯಲು ವಿಚಿತ್ರ ಸದ್ದುಗಳ ಬೀಡಾಯಿತು; ಸಿಡಿವ ಕೋವಿಗಳ ಬಾಯಿಂದ ಹೊರಬಿದ್ದ ಹೊಗೆ ಬೇಸಿಗೆಯ ಬಿಸಿಲನ್ನು ಮಂಕಾಗಿಸಿತು.

ಇತ್ತ ಮುಸುವನಘಾಟಿನಲ್ಲಿ ಮತ್ತೋಡಿನ ಸೇನೆ ಪೆಟ್ಟು ತಿಂದು ಪಲಾಯನ ಮಾಡುತ್ತಿರುವಾಗ, ಹೊಸದುರ್ಗದ ಕಡೆಯಿಂದ ದೊಡ್ಡಮದಕರಿನಾಯಕನ ನೇತೃತ್ವದಲ್ಲಿ ಬಂದ ದಂಡು, ಮತ್ತೋಡಿನವರ ಮೂಲಬಲದ ಮೇಲೆ ದಾಳಿ ಮಾಡಿತು. ಅದೇ ವೇಳೆಗೆ ಎರಡು ಸಾವಿರ ಅಶ್ವಬಲ, ಒಂದು ಸಾವಿರ ಬಾರುಕಂದಾಜ್, ಹುಜೂರುತೋಫಖಾನೆ, ಜಂಜಾಲು ಬಾಣದಾರರು, ಸುರಪುರದ ಬೇಡಸೇನೆ, ಧನ್‌ಸಿಂಗ್, ಶಿವಪ್ರಸಾದ್‌ಸಿಂಗ್ ನಾಯಕತ್ವದಲ್ಲಿ ನುಗ್ಗಿದ ಪುರುಭಯ್ಯಾಜನರ ಸೇನೆ ಮೂರು ದಿಕ್ಕಿನಿಂದ ಮುತ್ತಿ, ಎತ್ತಕಡೆಯೂ ಮತ್ತೋಡಿನವರಾಗಲಿ, ಅವರ ನೆರವಿಗೆ ಬಂದ ನವಾಬರ ಸೇನೆಯಾಗಲಿ ನುಣುಚಿಕೊಂಡು ಹೋಗಲು ಸಂದುಕೊಡದೆ ಮುನ್ನುಗ್ಗಿದರು. ಶತ್ರುಸೇನೆಗೆ ಮೂರು ಕಡೆ – ತಪ್ಪಿಸಿಕೊಂಡು ಹೋಗಲಾಗದ ಬೆಟ್ಟ ಸಾಲು; ನಾಲ್ಕನೆಯ ದಿಕ್ಕಿನಲ್ಲಿ - ಅಡ್ಡನಿಂತ ತೋಫುಖಾನೆ.

ರಣವೇಷಧರಿಸಿ, ಶ್ವೇತಾಶ್ವವನ್ನೇರಿ ಸೇನೆಯನ್ನು ಮುನ್ನಡೆಸಿಕೊಂಡು ಬಂದ ಮದಕರಿನಾಯಕ ಶತ್ರುಸೇನಾಸಮೂಹದ ಸುಳಿವು ಕಾಣುತ್ತಿದ್ದಹಾಗೇ ತೋಫಖಾನೆಯ ಗೋಲಂದಾಜರಿಗೆ ತೋಪು ಹಾರಿಸಲು ಅಪ್ಪಣೆಮಾಡಿದ, ಉರಿಗಾರುತ್ತಾ ಸಿಡಿಲಿನಂತೆ ಸಿಡಿದ ತೋಪುಗಳ ಶಬ್ದಕ್ಕೆ ಗುಡ್ಡ ಮಾರ್ದನಿಸಿ, ತೋಫು ಕಾರಿದ ಹೊಗೆಗೆ ಹಗಲು ಕತ್ತಲಾಗಿ, ಧಾವಿಸುವ ಕುದುರೆ, ಕಾಲ್ಗಳಗಳ ಧೂಳು ಕಣಿವೆ-ಕಂದರ-ಬಯಲನ್ನು ಕವಿದು, ಬೇಡಪಡೆಯ ರಣಕೇಕೆ ದಿಕ್ಕುಗಳ ಕಿವಿಯನ್ನು ಕಿವುಡಾಗಿಸಿತು.

ಅತ್ಯಂತ ಅನಿರೀಕ್ಷಿತವಾಗಿ ಯಾವ ಕಡೆಯಲ್ಲೂ ತಪ್ಪಿಸಿಕೊಳ್ಳಲು ಸಂದು ಕೊಡದೆ, ಏಕಕಾಲಕ್ಕೆ ಮೇಲೆಬಿದ್ದ ದುರ್ಗದ ಸೇನೆಯ ತೋಪು, ಕೋವಿ, ಕತ್ತಿಗಳ ಏಟಿಗೆ ಮತ್ತೋಡು ನಾಯಕನ ಸೇನೆ; ನವಾಬರ ಸೇನೆ ತೋಳಗಳ ಹಿಂದಿನ ಧಾಳಿಗೆ ಸಿಕ್ಕ ಕುರಿಮಂದೆಯಂತಾಯಿತು.

ಹಸುವನ್ನು ಹಿಡಿಯಲು ಬಂದು ಹುಲಿಯ ಬಾಯಿಗೆ ಸಿಕ್ಕಂತಾದ ನವಾಬರ ಸೇನೆ, ಓಡುವುದಕ್ಕೆ ದಾರಿಕಾಣದೆ, ಅನಿರೀಕ್ಷಿತವಾದ ಸಿಡಿಲಾಘಾತದಿಂದ ಉಸಿರು ತಿರುಗಿಸಿಕೊಳ್ಳಲೂ ಆಗದೆ ಸಿಕ್ಕತ್ತ ನುಗ್ಗಿ, ಎತ್ತ ಹೋದರಲ್ಲಿ ಕತ್ತಿ- ಕೋವಿಗಳಿಗೆ ಬಲಿಯಾಗಿ, ರಣಭೂಮಿ ಹೆಣಭೂಮಿಯಾಯಿತು.

ಯಾರ ಕೈಗತ್ತಿಗೂ ಬಿಡುವಿಲ್ಲದಿದ್ದಾಗ, ಮದಕರಿನಾಯಕನ ಕೈಯ ಪರಿಘಾಯುಧ ಚಕ್ರಾಕಾರವಾಗಿ ಸುತ್ತುತ್ತಿತ್ತು - ತಿರುಗಿದತ್ತ ತಲೆಯೊಂದನ್ನು ರಣಮಾರಿಗೆ ಬಲಿಕೊಡುತ್ತಾ. ಉಳಿದ ಸೇನೆ ಅತ್ತಿತ್ತ ಚದುರಿದ ಶತ್ರುಸೇನೆಗೆ ದುರ್ಗದ ಗುಂಡೇಟಿನ ರುಚಿ ತೋರಿಸುತ್ತಿರುವಾಗ, ಮದಕರಿನಾಯಕನ ಕಣ್ಣೆಲ್ಲಾ ಸೇನಾಮಧ್ಯದಲ್ಲಿದ್ದ ಮತ್ತೋಡು ಹಾಲಪ್ಪನಾಯಕ, ಮೊಕ್ದುಂ ಸಾಹೇಬ್, ಮೊಹಿಯುದ್ದೀನ್ ಸಾಹೇಬ್ - ಇವರ ಮೇಲಿತ್ತು.

"ಬದುಕುವಾಸೆ ಇರುವವರು ಹಿಂದೆ ನಿಲ್ಲಿ, ಪ್ರಾಣದ ಹಂಗುಬಿಟ್ಟವರು ನಮ್ಮೊಂದಿಗೆ ಬನ್ನಿ"

- ಎಂದು ರಣಘೋಷ ಕೂಗಿ, ಸೇನಾಮಧ್ಯಕ್ಕೆ ನುಗ್ಗಿದ ಮದಕರಿನಾಯಕ, ಶತ್ರುರಕ್ತ ಸ್ನಾನ ಮಾಡಿ ಕೆಂಬಣ್ಣವಾದ ಶ್ವೇತಾಶ್ವವನ್ನೇರಿ.

ತಮ್ಮತ್ತ ನುಗ್ಗಿ ಬರುವ ಮದಕರಿನಾಯಕನನ್ನು ಕಂಡು, 'ಗೆಲ್ಲುವುದಕ್ಕೆ ನಾಯಕರನ್ನು ಕೊಲ್ಲುವುದೊಂದೇ ದಾರಿ' ಎಂದು ನಿರ್ಧರಿಸಿದ ನವಾಬರ ಸರದಾರರ ಪಠಾಣಪಡೆಯ ಅನಿರೀಕ್ಷಿತ ಆಘಾತದಿಂದ ಸಾವರಿಸಿಕೊಂಡು ದುರ್ಗದ ಸೇನೆಯ ಮೇಲೆ ಪ್ರತಿದಾಳಿ ಮಾಡಿತು.

ನಾಯಕರತ್ತ ನುಗ್ಗಿದ ಶತ್ರುಸೇನೆಯನ್ನು ಕಂಡು, ನಾಯಕರ ಖಾಸಾ ಬೇಡಪಡೆಯವರು, ಪುರಭಯ್ಯಾ ಜನರ ಅಶ್ವಬಲ ನಾಯಕರನ್ನು ಮಧ್ಯದಲ್ಲಿಟ್ಟುಕೊಂಡು ಪಠಾಣ ಸೇನೆಯ ಮೇಲೆ

ದಾಳಿ ಮಾಡಿತು. ಎರಡು ಕಡೆಯವರೂ ಜೀವದ ಹಂಗುತೊರೆದು ಹೋರಾಡಿದರು. ಕುದುರೆ, ಆಳುಗಳ ಕಾಲು ತಳಿದ ಧೂಳು, ಬಂದೂಕದ ಶಬ್ದ, ಬಗೆಬಗೆಯ ಭಾಷೆಗಳ ಆರ್ತನಾದ, ಬೈಗಳು, ಪ್ರೋತ್ಸಾಹದ ಮಾತುಗಳು, ರಣಾವೇಶದ ಕೇಕೆ, ಮೂಗು-ಗಂಟಲನ್ನು ಕಟ್ಟಿಸುವ ಸುಟ್ಟ ಮದ್ದಿನ ಘಾಟುಹೊಗೆ; ತನ್ನವರಾರು ಶತ್ರುವಾರು ಎಂಬುದು ತಿಳಿಯದೆ ಕಡಿದು ಕೊಚ್ಚುವ ರಣೋನ್ಮಾದ, ರಕ್ತದ ಅಮಲು; ಹೆಜ್ಜೆ ಜಾರಿಸುವ ನೆತ್ತರ ಗೆಸರು, ಕಾಲೊಡಕಾಗುವ ಕಡಿದು ಬಿದ್ದ ಬಗೆಬಗೆಯ ಅಂಗಾಂಗಗಳು, ನೆಲಕ್ಕೆ ಬಿದ್ದ ಆಯುಧಗಳು - ಹೀಗೆ ಹಿಂದುಮುಂದು ಕಾಣದಂತಾದ ರಣಭೂಮಿಯಲ್ಲಿ ಮದಕರಿನಾಯಕನ ಕುದುರೆ, ಮತ್ತೋಡು ಹಾಲಪ್ಪನಾಯಕನನ್ನು ಹುಡುಕಿಕೊಂಡು ಅಲೆಯಿತು - ಅವನ ಕೈಯ ಪರಿಘಾಯುಧ ಚಕ್ರಾಕಾರವಾಗಿ ಸುತ್ತುತ್ತಾ, ಸೋಕಿದೆಡೆ ರಕ್ತದ ಕಾರಂಜಿಯನ್ನು ಚಿಮ್ಮಿಸುತ್ತಾ. ಲೆಕ್ಕವಿಡಲಾಗದಷ್ಟು ಕೈಕಾಲು ತಲೆಗಳನ್ನು ಕತ್ತರಿಸಿ, ರಕ್ತಸ್ನಾನ ಮಾಡಿ ರುದ್ರಾವತಾರನಾದ ಮದಕರಿನಾಯಕನಿದಿರು ನಿಲ್ಲಲಾಗದೆ, ತಪ್ಪಿಸಿಕೊಳ್ಳಲಾಗದೆ, ಸಾಕಷ್ಟು ಪೆಟ್ಟು ತಿಂದ ಮತ್ತೋಡು ಹಾಲಪ್ಪನಾಯಕ ಬಗೆಬಗೆಯ ಶಸ್ತ್ರಾಘಾತದಿಂದಾದ ಗಾಯಗಳಿಂದ ರಕ್ತ ಕಾರುತ್ತಿದ್ದ ಕುದುರೆಯಿಂದ ಕೆಳಗುರುಳಿಬಿದ್ದ.

ಅದನ್ನು ಕಂಡಕೂಡಲೇ ಕುದುರೆಯಿಂದ ಧುಮುಕಿ, ಆತನ ಎದೆ ಮೆಟ್ಟಿನಿಂತು, ತನ್ನ ಬಳಿ ಯಾರೂ ಸುಳಿಯದಂತೆ ಪರಿಘಾಯುಧವನ್ನು ತಿರುಗಿಸುತ್ತಾ-

"ಕಣ್ಣು ಬಿಟ್ಟು ನೋಡೋ, ನನ್ನ ಗಂಡಸುತನವನ್ನು ನೋಡಬೇಕೆಂದ ಕುನ್ನಿ!"

- ಎಂದು ರಣೋನ್ಮಾದದಿಂದ ಅಬ್ಬರಿಸಿದ, ಮದಕರಿನಾಯಕ.

ಆ ವೇಳೆಗೆ ದುರ್ಗದ ಸೇನೆ, ಮೊಕ್ದುಂಸಾಹೇಬ್, ಮೊಹಿಯುದ್ದೀನ್ ಸಾಹೇಬರನ್ನು ಕೈಸೆರೆಹಿಡಿದು ತಂದರು.

ತಮ್ಮ ನಾಯಕನ ಪತನವನ್ನು ಕಂಡ ಮತ್ತೋಡು ನವಾಬರ ಸೇನೆ ಸೋಲೊಪ್ಪಿ ಶರಣಾಗತವಾಯಿತು.

ಜಯಘೋಷದ ಕೇಕೆಹಾಕಿ, ಸೋತು ಕೈಸೆರೆಯಾದ ಶತ್ರುನಾಯಕರನ್ನು ಹೆಡೆಮುರಿ ಕಟ್ಟಿ ಪಲ್ಲಕ್ಕಿಯಲ್ಲಿಟ್ಟು ದುರ್ಗದತ್ತ ಸಾಗಿಸಿತು – ದುರ್ಗದ ಸೇನೆ, ರಕ್ತಸ್ನಾನ ಮಾಡಿ ಕಂಡವರ ಕಣ್ಣಲ್ಲಿ ಭೀತಿಯನ್ನು ಕವಿಸುತ್ತಿದ್ದ ಮದಕರಿನಾಯಕನ ಮುಂದಾಳತ್ವದಲ್ಲಿ.

ವಿಜಯೀಸೇನೆಯ ಕಾವಲುಕಟ್ಟಿನಲ್ಲಿ ದುರ್ಗಕ್ಕೆ ಮರಳಿತು - ಶತ್ರು ಸೆರೆಹಿಡಿದ ದುರ್ಗದ ತುರುಮಂದೆ.

ಗೆದ್ದು ಬಂದ ಸೇನೆಯನ್ನು ಕಂಡ ದುರ್ಗದ ಹೆಣ್ಣು-ಗಂಡು, ಮಕ್ಕಳು ಕೇಕೆಹಾಕಿ ಕುಣಿದಾಡಿದರು.

* * *

ಆ ದಿನ ನಡೆದ ವಿಜಯೋತ್ಸವವನ್ನು ಕಣ್ಣಾರೆ ಕಂಡ, ಪೇಶ್ವೆಯವರ ವಕೀಲರ ಪತ್ರಲೇಖಕ ಭೀಮೋಜಿಪಂತ್ ಪುಣೆಗೆ ಕಾಗದ ಬರೆದದ್ದು ಈ ರೀತಿ –

"ವಿಜಯಾನಂತರ ಷಹರು ಕೊತ್ವಾಲನಿಗೆ ಹುಕುಂ ಆದದ್ದು : 'ಭಗವಂತನ ಅನುಗ್ರಹದಿಂದ ಶತ್ರು ಜಯವಾಯಿತು. ಊರಿನಲ್ಲಿ ದೊಡ್ಡ ದೊಡ್ಡ ದೇವಸ್ಥಾನಗಳು, ಶ್ರೀ ಗೋಪಾಲ ಕೃಷ್ಣಸ್ವಾಮಿ, ಶ್ರೀ ವೆಂಕಟೇಶ್ವರಸ್ವಾಮಿ, ಶ್ರೀ ಸಿದ್ಧೇಶ್ವರಸ್ವಾಮಿ, ಶ್ರೀ ಹಿಡಿಂಬೇಶ್ವರ ಸ್ವಾಮಿ, ಶ್ರೀ ಏಕನಾಥೇಶ್ವರಸ್ವಾಮಿ, ಶ್ರೀ ಮುಕ್ತಿ ಶಿವಾಲಯದ ಗಣೇಶ, ಶ್ರೀ ಬಲದೇವರ ಸ್ವಾಮಿ, ಪೇಟೆಯ ಮುಖ್ಯ ಪ್ರಾಣ, ಶ್ರೀ ಉಚ್ಚಂಗಮ್ಮ ಸ್ವಾಮಿ ಮುಂತಾದ ದೇವಸ್ಥಾನಗಳಿಗೆ ಪೂಜೆ ಮಾಡಿಸಿ ಇಪ್ಪತ್ತೊಂದು ಕುಶಾಲು ತೋಪು ಹೊಡಿಸುವುದು. ದರೋಬಸ್ತು ಷಹರು ಅಲಂಕಾರ ಮಾಡಿಸುವುದು' ಎಂದು ಹುಕುಂ ಆಯಿತು.

"ದರೋಬಸ್ತು ಬೀದಿ ತಮಾಮು ಮಹಲುಗಳು ಇವುಗಳಿಗೆ ಸುಣ್ಣ ಹಚ್ಚಿಸಿ ನಾಲ್ಕು ಪೇಟೆಗಳಿಗೂ ತೋರಣ ಕಟ್ಟಿಸಿ ಶೃಂಗಾರವಾಗಿ ಷಹರಿನ ದರೋಬಸ್ತು ಜನ ಹೆಂಗಸರು ಸಹಿತವಾಗಿ ಅಲಂಕಾರ ಮಾಡಿಕೊಂಡು ಆರತಿ ಮಾಡುವುದಕ್ಕೆ ನಿಂತರು.

"ಈ ಸಮಯದಲ್ಲಿ ರಾಜಾಸಾಹೇಬರು ಬಂದದ್ದು, ಖುದ್ದು ಛತ್ರಿ ಅಂಬಾರಿ ಮೇಲೆ ಬಂದರು. ತಮ್ಮ ಪರಶುರಾಮಪ್ಪನವರಿಗೆ ಬೆಳ್ಳಿ ಅಂಬಾರಿ, ಸಾಹೇಬ್‌ಜ್ಯಾದೆ ಭರಮಪ್ಪನಾಯಕರಿಗೆ ಬೆಳ್ಳಿ ಅಂಬಾರಿ, ದೊಡ್ಡ ಮೆದಿಕರಿನಾಯಕರಿಗೆ ಬೆಳ್ಳಿ ಅಂಬಾರಿ, ಇನ್ನೂ ಮೇಲಾದ ಜನಗಳಿಗೆ ಅಂದರೆ ಮನಸ್ಸೂಬದಾರರು, ದಿವಾನ್, ಬಕ್ಷಿ ಸರದಾರ್ ವಗೈರೆ ಅಹಲೇಕಾದ್ರಿಗೆ ಸಹ ಐವತ್ತು ಅಂಬಾರಿಯ ಆನೆ ಎರಡು ಬಾಜೂಕ್ಕೂ ಬಂದರು.

"ರಾಜಾಸಾಹೇಬರು ಇವರ ಹಿಂದೆ ಬೆಳ್ಳಿ ಕಟ್ಟಿನ ಬಾಲೆದವರು, ಏಳುನೂರು ಮುಕ್ಕಣ್ಣ ಸುತ್ತು ಪಂಚಕಲಶ ಭಾಲೆ, ಎಡಭರ್ಜಿ, ಬಲಭರ್ಜಿ ಸವಾರರು ಮತ್ತು ಚೋಪದಾರರು ಭೈರಕದವರು ಮತ್ತು ನಕೀಬರು ಊಳಿಗದವರು ಮತ್ತು ತಾಫೋದವರು ಜೋಡಿ ಇಪ್ಪತ್ತೈದು ಭಾವಾಭಟ್ಟಂಗಿ ಮಾಡುವವರು - ಈ ರೀತಿ ಬರುತ್ತಿರುವಾಗ್ಗೆ ನೋಡುವ ಜನಗಳಿಗೆ ಭೂಲೋಕಕ್ಕೆ ಇಂದ್ರನ ಸಭಾ ಬರುತ್ತೋ ಹ್ಯಾಗೋ ಎಂದು ತೋರತ್ತಲಿತ್ತು. ಆರತಿ ಮಾಡುವವರಿಗೆ ಸಾವಿರ ರೂಪಾಯಿ ಆರತಿಯಲ್ಲಿ ಹಾಕುತ್ತಾ ಬಂದರು.

"ಸಾವಿರ ಮಷಾಲು ಮಹತಾಬು ಹೆಚ್ಚಿರುವುದು ನೋಡಿದರೆ ರಾತ್ರೆ ಸೂರ್ಯಪ್ರಕಾಶದ ಹಾಗೆ ಕಾಣಿಸಿತು."

* * *

ಇರುಳು ಹಗಲಾಯಿತು –

ವಿಜಯೋತ್ಸವ ನಡೆದ ಚಿತ್ರದುರ್ಗದಲ್ಲಿ,
ಹಗಲು ಇರುಳಾಯಿತು –
ಈ ಸುದ್ದಿಯನ್ನು ಕೇಳಿದ ಹೈದರಾಲಿಯ ಬಿಡಾರದಲ್ಲಿ.

೧೦

"ಯಾ ಅಲ್ಲಾ - ಕೆತನಿ ಬೆ ಇಜತ್ ಕಿ ಬಾತ್"

- ಕೈಯಲ್ಲಿದ್ದ ಪಾನಪಾತ್ರೆಯನ್ನು ರೊಯ್ಯನೆ ಒಗೆದು, ಪಕ್ಕದಲ್ಲಿದ್ದ ಹಬಸಿಯವನ ಕೈಯಲ್ಲಿದ್ದ ಚಾವಟಿಯನ್ನು ಸೆಳೆದುಕೊಂಡು, ಮತ್ತೊಡು ಕಡೆಯಿಂದ ಸೋಲಿನ ವಾರ್ತೆಯನ್ನು ತಂದವನನ್ನು ಸುತ್ತಿಸಿ-ಸುತ್ತಿಸಿ ಹೊಡೆದು, ಕಣೆ ತಾಗಿದ ವನವರಾಹದಂತೆ ಕ್ರೋಧೋದ್ದೀಪಿತ ನೇತ್ರಗಳಿಂದ ಕಿಡಿಗಾರುತ್ತಾ ಹೇಳಿದ ಹೈದರಾಲಿ –

"ಈ ಅಪಮಾನಕಲಂಕವನ್ನು ದುರ್ಗದವರ ರಕ್ತದಲ್ಲಿ ತೊಳೆಯುವವರೆಗೂ ನಾನು ಶ್ರೀರಂಗಪಟ್ಟಣಕ್ಕೆ ಹಿಂದಿರುಗುವುದಿಲ್ಲ, ಬಿಲ್‌ಖುಲ್ ಬೇರೆ ಮಾತಿಲ್ಲ. ಎಳೆದುಕೊಂಡು ಹೋಗಿರೋ - ಈ ಸೋಲಿನ ವಾರ್ತೆಯನ್ನು ಬದುಕಿತಂದ ಬದ್ಮಾಷ್‌ಗೆ ಐವತ್ತು ಚಡಾವಿನ ಪೆಟ್ಟಿನ ಕಾಣಿಕೆ ಕೊಡಿ - ಈ ಸುಟ್ಟಮೋರೆಯವನಿಗೆ."

ಸಿಟ್ಟಿನಿಂದ ಸೆಟೆದುನಿಂತು ನೆಲಕ್ಕೆ ಕಾಲಪ್ಪಳಿಸಿ ಹೈದರಾಲಿ ಹೇಳಿದ ಮಾತನ್ನು ಕೇಳಿದ ಗುಡಾರದೊಳಗಿದ್ದ ನರ್ತಕಿಯರು ಮುಖ ಮುಚ್ಚಿ ಓಡಿದರು. ವಾದ್ಯ ನುಡಿಸುತ್ತಿದ್ದವರು ಆದಷ್ಟು ದೂರ ಹಿಂದೆ ಸರಿದರು. ಹತ್ತಿರದಲ್ಲಿದ್ದ ನವಾಬರ ಆಪ್ತರಿಗೂ ಮುಖ ಕಪ್ಪಿಟ್ಟು ಹೋಗಿತ್ತು – ಆ ಸೋಲಿನ ಸುದ್ದಿಯನ್ನು ಕೇಳಿ.

"ಲೌಂಡೀಕೆ....ಇತನಿ ಹಿಮ್ಮತ್....ತೋರಿಸುತ್ತೇನೆ - ಹೈದರಾಲಿಯೊಂದಿಗೆ ಆಟವಾಡುವುದೆಂದರೇನೆಂದು, ಇವತ್ತೇ, ಈಗಲೇ ನಮ್ಮ ಸೇನೆ ಕೂಚ್ ಮಾಡಿ ಚಿತ್ರದುರ್ಗಕ್ಕೆ ಬೇಡಿ ಹಾಕಬೇಕು. ಸೇನೆಗೆ ಹುಕುಂ ಕೊಟ್ಟು, ಬೆಳಗ್ಗೆಯೇ ಕೂಚುನಗಾರಿ ಹೊಡೆಸಿರಿ. ಇಷ್ಟು ದಿನ ನಾವು ಬದುಕಿದ್ದು ಇವತ್ತು ವ್ಯರ್ಥವಾಯಿತು."

ಉಕ್ಕಿಬರುತ್ತಿದ್ದ ಸಿಟ್ಟಿನಿಂದ ವಟಗುಟ್ಟುತ್ತಾ, ಬಿರುಗಣ್ಣಿನಿಂದ ಸುತ್ತಲವರನ್ನು ನೋಡುತ್ತಾ ಅಪ್ಪಣೆ ಮಾಡಿದ ಹೈದರಾಲಿ.

ಯಾರೊಬ್ಬರಿಗೂ ಆ ಮಾತಿಗೆ ಬದಲು ಹೇಳುವ ಧೈರ್ಯವಿರಲಿಲ್ಲ. ಭೀತಿಮಿಶ್ರಿತ ಮೌನ ನವಾಬರ ಆಪ್ತರ ನಾಲಗೆಯನ್ನು ಬಿಗಿದಿತ್ತು.

ಆಗೊಮ್ಮೆ ಈಗೊಮ್ಮೆ ಬಳಿ ಇದ್ದವರ ಮುಖವನ್ನು ಸುಡುಗಣ್ಣುಗಳಿಂದ ನೋಡುತ್ತಾ, ಪಂಜರಬದ್ಧ ವ್ಯಾಘ್ರನಂತೆ ಅತ್ತಿಂದಿತ್ತ ಆಡ್ಡಾಡಿದ ಹೈದರಾಲಿ. ಸಿಟ್ಟು, ದ್ವೇಷ, ಅಪಮಾನದ ಭಾವನೆಗಳಿಂದ ಗಳಿಗೆಗೊಂದು ರೀತಿಯಲ್ಲಿ ಭಯಾನಕವಾಗುತ್ತಿದ್ದ ಅವನ ಮುಖ ನೋಡುವ ಶಕ್ತಿಯೂ ಸುತ್ತಲಿನವರಿಗಿದ್ದಂತಿರಲಿಲ್ಲ. ಆ ಭಾವನೆಯಲ್ಲೇ ಅವರು, ಒಬ್ಬರ ಮುಖ ಮತ್ತೊಬ್ಬರು ನೋಡಿಕೊಂಡರು.

ಬಹಳ ಹೊತ್ತಿನ ಬಳಿಕ, ಪೂರ್ಣಯ್ಯ, ಅತ್ತಿತ್ತ ಚೆದುರಿದ ತನ್ನ ಧೈರ್ಯವನ್ನು ಪ್ರಯತ್ನ ಪೂರ್ವಕವಾಗಿ ಒಂದುಗೂಡಿಸಿಕೊಂಡು, ವಿನಮ್ರ ಧ್ವನಿಯಲ್ಲಿ –

"ಹೂಜೂರ್, ನಮ್ಮದೊಂದು ಮಾತಿದೆ" – ಎಂದ.

"ಗೋಲಿ ಮಾರೋ ತುಮ್ಹಾರಿ ಬಾತ್... ಇದು ಮಾತಿನ ಹೊತ್ತೆ ?"

- ಎಂದು ಮಾತನ್ನು ಕೊಡಲಿಯಿಂದ ಕಡಿದವನಂತೆ ಹೇಳಿದ ಹೈದರಾಲಿ –

"ಮಾತು....ಮಾತು....ಮಾತು ಮಾತಿಗೆ ಬಗ್ಗುವವನಲ್ಲ ಈ ಮದಕರಿನಾಯಕ ಗೋಲಿಯಿಂದ ಹೊಡದೇ ಹೇಳಬೇಕು ಅವನಿಗೆ. ಅದಕ್ಕೆ ಸರಿಯಾದ ಮಾತೋ, ಮಂತ್ರವೋ ನಿಮ್ಮಲ್ಲಿದ್ದರೆ ಹೇಳಿ ; ಇಲ್ಲದಿದ್ದರೆ ಬಾಯಿ ಮುಚ್ಚಿಕೊಂಡಿರಿ."

- ಎಂದು ಹಲ್ಲುಕಡಿಯುತ್ತಾ, ಬೆನ್ನು ಸೆಟೆಸಿ ಹೇಳಿ, ತಟಕ್ಕನೆ ಬೆನ್ನಿನಲ್ಲಿ ಕಾಣಿಸಿಕೊಂಡ ನೋವಿನಿಂದ ಸಣ್ಣಗೆ ನರಳುತ್ತಾ –

"ಬೇಡದ ಹೊತ್ತಿನಲ್ಲಿಯೇ ಬರುತ್ತದೆ, ಈ ಹುಳು ಶನಿಬೆನ್ನು ನೋವು"

- ಎಂದು ಸುತ್ತಲೂ ನೋಡಿ –

"ಎಲ್ಲಾ ಎಲ್ಲಿ ಹಾಳಾಗಿಹೋದರು ?.... ಇಲ್ಲಿದ್ದ ಷರಾಬಿನ ಬಟ್ಟಲೇನಾಯಿತು ?.... ಕುಣಿಯುವ ರಂಡೆಯರೆಲ್ಲಾ ಮದಕರಿನಾಯಕನ ಹತ್ತಿರ ಹೋದರೇ? ಎಲ್ಲಿದ್ದಾರೋ ಅವರನ್ನು ಕರೆಸಿ....ಕುಡಿಯಲು ಕೊಡಿ" – ಎಂದು ಕೂಗಿದ ಹೈದರಾಲಿ.

ಹೈದರನ ಗಮನ ಬೇರೆತ್ತಲೋ ಹರಿದುದನ್ನು ಕಂಡ ಪೂರ್ಣಯ್ಯ 'ಇದು ಮಾತಿಗೆ ಸಮಯವಲ್ಲ' ಎಂದು ತಿಳಿದು ಸುಮ್ಮನಾದ.

ಆಳೊಬ್ಬನು ತಂದುಕೊಟ್ಟ ಷರಾಬನ್ನು, ಆತುರವಾಗಿ ಹೀರುತ್ತಾ –

"ಹೀಗೇ - ಹೀಗೇ ಕುಡಿಯಬೇಕು - ಆ ಮದಕರಿನಾಯಕನ ರಕ್ತವನ್ನು."

-ಎಂದು ಹೈದರಾಲಿ ತನಗೆ ತಾನೇ ವಟಗುಟ್ಟಿಕೊಂಡ, ಕೆಂಡದ ಮೇಲೆ ಬಿದ್ದ ಭತ್ತದ ಕಾಳು ಅರಳಾಗಿ ಸಿಡಿಯುವಂತೆ .-

ಷರಾಬು ಕುಡಿ ಕುಡಿದು, ತಟಕ್ಕನೆ ನಿಲ್ಲಿಸಿ, ಲೋಕಕ್ಕೇ ಹೇಳುವಂತೆ ತನಗೆ ತಾನೇ ಹೇಳಿಕೊಂಡ –

"ಗಂಡು - ಗಂಡು ಎನ್ನಬೇಕು ಮದಕರಿನಾಯಕನನ್ನು....ನಾನೇ ರಾಜ ಎಂಬ ಅವನ ಸೊಕ್ಕೊಂದಿಲ್ಲದಿದ್ದರೆ ಇಂಥ ನೂರು ಹದ್ದುಗಳಿಗಿಂತ ಒಬ್ಬ ಗರುಡ ಸಾಕು....ಊಹೂಂ... ಅದು ಸಾಧ್ಯವಿಲ್ಲ....ಹೈದರಾಲಿ-ಮದಕರಿನಾಯಕ ಇಬ್ಬರಿಗೂ ಇಲ್ಲಿ ಸ್ಥಳವಿಲ್ಲ....ಯಾರಾದರೊಬ್ಬರು ಮಾತ್ರ ಇರಬೇಕು - ನಾನು - ಇಲ್ಲ- ಅವನು- ?....ಏ....ಔರ್ ಥೋಡಾ ಷರಾಬ್ ಪಿಲಾವ್...."

* * *

ಮತ್ತೆ ಹಗಲಾಯಿತು. ರಾತ್ರಿಯ ಪಾನದ ಅಮಲು ಇಳಿದರೂ ಹೈದರಾಲಿಯ ತಲೆಯನ್ನು ಕವಿದ ರೋಷದ, ಪ್ರತೀಕಾರತೃಷೆಯ ಅಮಲು ಇಳಿದಿರಲಿಲ್ಲ. ಆ ಗುಂಗಿನಲ್ಲಿಯೇ, ತನ್ನ ಸುತ್ತ ನೆರೆದ ಪೂರ್ಣಯ್ಯ, ಕೃಷ್ಣರಾವ್, ಬರ್ಕಿ ಶ್ರೀನಿವಾಸರಾವ್, ಗುರ್ರುಂಕೊಂಡ ಮೀರ್ ಸಾಹೇಬರು ಮೊದಲಾದ ಆಪ್ತರು ಸೇರಿದ ಗೋಷ್ಠಿಯಲ್ಲಿ ಮತ್ತೆ ದುರ್ಗದ ಮೇಲೆ ದಂಡೆತ್ತಿ ಹೋಗುವ ಮಾತಾಡಿದ. ಆಗಲೂ ಪೂರ್ಣಯ್ಯ ಹೇಳಿದ –

"ನಮ್ಮ ಸೇನೆಯೇನೋ ಬಲವಾಗಿದೆ. ಆದರೂ ಇದು ಯುದ್ಧಕ್ಕೆ ಸಮಯವಲ್ಲ. 'ದುರ್ಗದವರು ಈಗ ದುರ್ಬಲರಾಗಿದ್ದಾರೆ' ಎಂದ ಮತ್ತೋಡುನಾಯಕನ ಮಾತನ್ನು ನಂಬಿ ನಾವು ಮೋಸಹೋದೆವು. ಖಾವಂದರ ಭಾವಮೈದುನರಿಬ್ಬರೂ ಈಗ ದುರ್ಗದಲ್ಲಿ ಸೆರೆಯಾಳುಗಳಾಗಿದ್ದಾರೆ. ಈಗ ಮೊದಲು ಅವರನ್ನು ಸುರಕ್ಷಿತವಾಗಿ ಹಿಂದಕ್ಕೆ ಕರೆಸಿಕೊಳ್ಳುವ ಯೋಚನೆ ಮಾಡಬೇಕು. ಸಿಟ್ಟಿನಲ್ಲಿ ತಾವದನ್ನು ಮರೆಯಬಾರದು. ಮರೆತರೆ ಅವರ ಜೀವಕ್ಕೆ ಅಪಾಯ."

ಆ ಮಾತು ಕೇಳಿದ ಹೈದರಾಲಿ ಹಿಂದಿನ ರಾತ್ರಿಯಂತೆ ರೇಗಲಿಲ್ಲ. ಪೂರ್ಣಯ್ಯ ಆಡಿದ ಮಾತನ್ನು ಕೇಳಕೇಳುತ್ತಾ ಅವನ ಬುದ್ಧಿಯಂತ್ರಕ್ಕೂ ಕೀಲಿಕೊಟ್ಟಂತಾಗಿ ನಿಧಾನವಾಗಿ ಚಿಂತಿಸಿ ಹೇಳಿದ –

"ನೀವು ಹೇಳಿದ್ದು ನಿಜ. ನಮಗೆ ಮೋಸವಾಯಿತು. ಆದರೆ ಅದು ಆದದ್ದು ಹೇಗೆ ?"

"ಮತ್ತೋಡಿನ ಪಾಳಯಗಾರರ ಕಣ್ಣು ದ್ವೇಷದಲ್ಲಿ ಕುರುಡಾಗಿತ್ತು. ಅವರ ದ್ವೇಷದ ಮಾತನ್ನು ನಾವು ನಂಬಬಾರದಾಗಿತ್ತು ?" – ಬರ್ಕಿ ಶ್ರೀನಿವಾಸರಾಯ ಹೇಳಿದ.

"ನಾವು ಹೇಳಿದ್ದು ಅದಲ್ಲ -"

"ಮತ್ತೇನು ?"

- ಹೈದರಾಲಿಯ ಮಾತಿನ ಹೊಲಬು ತಿಳಿಯದೆ ಕೇಳಿದ ಪೂರ್ಣಯ್ಯ.

"ಮತ್ತೊಡು ನಾಯಕರೊಬ್ಬರೇ ಅಲ್ಲ ಪೂರ್ಣಯ್ಯ, ನಾವೂ ಕುರುಡಾಗಿದ್ದೆವು. ಮೋಸವಾಯಿತು, ನಿಜ. ಆದದ್ದು ಹೇಗೆ ?"

"ಅಂದರೆ -?"

"ನಿಮ್ಮ ಬುದ್ಧಿ ಏನು ಹುಲ್ಲು ಮೇಯಲು ಹೋಗಿದೆಯೇ ? ನಮ್ಮ ಸೇನೆ ಮತ್ತೋಡಿನವರ ಮದತ್ ಮಾಡಲು ಹೋಗುತ್ತದೆ ಎನ್ನುವುದು ನಮಗಷ್ಟೇ ತಿಳಿದಿದ್ದ ಮಾತು. ಆ ಮಾತು ಮದಕರಿನಾಯಕನಿಗೆ ಗೊತ್ತಾದದ್ದು ಹೇಗೆ? ಇಲ್ಲವಾದರೆ ನಮ್ಮ ಹತ್ತು ಸಾವಿರ ಫೌಜನ್ನು ಎದುರಿಸಲು ಸಿದ್ಧವಾಗಿ ಬರುತ್ತಿದ್ದನೇ ದುರ್ಗದ ನಾಯಕ ? ಯೋಚಿಸಿ ನೋಡಿ -ನನಗೇನೋ ಅಡ್ಡವಾಸನೆ ಹೊಡೆಯುತ್ತಿದೆ. ನಮ್ಮವರಾರೋ ಸೆಗಣಿ ತಿಂದು ಅವರಿಗೆ ಪಿತೂರಿಯಾಗಿ ಸುದ್ದಿ ಕೊಟ್ಟಿರಬೇಕು. ಇಲ್ಲವಾಗಿದ್ದರೆ ನಾವಿಟ್ಟ ಬೋನಿಗೆ ಮದಕರಿನಾಯಕ ಬೀಳಬೇಕಾಗಿತ್ತು....ಇದು ಮೊದಲ ಸಲ ಅಲ್ಲ, ದುರ್ಗದ ನಾಯಕನನ್ನು ನಾವು ನೋಡಬೇಕು ಎಂದು ಸ್ನೇಹದ ಮಾತಾಡಿದಾಗಲೆಲ್ಲಾ, ಅವನು ನುಣುಚಿಕೊಂಡದ್ದು ಏಕೆ ? ಮೊದಲೆಲ್ಲಾ ನಾವು ಹೇಳಿಕಳಿಸಿದಾಗ ತನ್ನ ಸೇನೆಯೊಂದಿಗೆ ಬರುತ್ತಿದ್ದ ಮದಕರಿನಾಯಕ ಈಗೇಕೆ ಬರುತ್ತಿಲ್ಲ ?.... ಇನ್ನೂ ನಾವು ಮೈಮರೆತು ಕುಳಿತರೆ ನಮ್ಮ ಕಾರ್ಯ ಎಂದೂ ಜಯವಾಗುವುದಿಲ್ಲ. ದುರ್ಗದವರ ಶಕ್ತಿಪರೀಕ್ಷೆ ಮಾಡುವ ಮೊದಲು ನಾವು ನಿಂತ ನೆಲದ ಶೋಧನೆ ಮಾಡಬೇಕು."

- ತನ್ನ ಸುತ್ತ ನೆರೆದಿದ್ದವರನ್ನು ಹುಡುಕುಗಣ್ಣಿನಿಂದ ನೋಡುತ್ತಾ ಹೇಳಿದ ಹೈದರಾಲಿ.

ಹೈದರಾಲಿಯಾಡಿದ ಮಾತನ್ನು ಕೇಳಿಸುತ್ತ ನೆರೆದವರ ಮುಖವೂ ಗಂಭೀರವಾಯಿತು.

"ನಾವು ಹಾಕಿದಾಗಲೆಲ್ಲಾ ತಪ್ಪುಗರವೇ ಬಿದ್ದರೆ, ಅದು ನಮ್ಮ ಕೈಯ ತಪ್ಪಲ್ಲ, ದಾಳದಲ್ಲೇ ಏನೋ ದೋಷವಿರಬೇಕು - ಅಲ್ಲವೇ ?"

ಹೈದರಾಲಿ ಕೇಳಿದ ಪ್ರಶ್ನೆಗೆ ಕೂಡಲೇ ಅಲ್ಲವೆಂದು ಹೇಳಲು ಯಾರಿಗೂ ಧೈರ್ಯವಾಗಲಿಲ್ಲ.

"ಇರಬೇಕು – ಇರಬೇಕು...ಎರಡು ದಿನ ಅವಕಾಶ ಕೊಡಿ."

- ಪೂರ್ಣಯ್ಯ ಚಿಂತಿಸುತ್ತಾ ಹೇಳಿದ.

"ಇರಬೇಕು ಏನು - ಇದೆ. ಯಾರ ಮುಲಾಜೂ ನೋಡಬೇಡಿ. ತಿಂದ ಸೆಗಣಿಯ ವಾಸನೆ ಯಾರ ಬಾಯಿಂದ ಬರುತ್ತಿದೆಯೋ ಪತ್ತೆಹಚ್ಚಿ - ಮೊದಲು ಅದು ಮಾಡಿ."

"ಮಾಡುತ್ತೇನೆ - ಅದು ನಿಂತ ಕಾಲಲ್ಲೇ ಆಗುವ ಕೆಲಸವಲ್ಲ. ಸ್ವಲ್ಪ ಕಾಲಾವಕಾಶ ಕೊಡಿ. ನಮ್ಮಲ್ಲೇ ಅಂತರಂಗಶತ್ರುಗಳಿದ್ದರೆ ಪತ್ತೆಹಚ್ಚುತ್ತೇವೆ. ಎಲ್ಲರ ಜಾತಕವನ್ನೂ ಶೋಧನೆ

ಮಾಡಿಸುತ್ತೇನೆ. ಈಗ ಮೊದಲು ತಮ್ಮ ಭಾವಮೈದುನಂದಿರಿಬ್ಬರನ್ನು ದುರ್ಗದಿಂದ ಬಿಡಿಸಿ ತರುವ ಯೋಚನೆ ಮಾಡಬೇಕು. ಯುದ್ಧದಿಂದ ಆ ಕೆಲಸ ಆಗುವುದಿಲ್ಲ -"

"ಯುದ್ಧದಿಂದ ಆಗುವುದಿಲ್ಲ - ಮತ್ತೇನು ಮಾಡಬೇಕು ?"

"ಸ್ನೇಹಮುಖದ ಸಮಯೋಪಾಯ."

"ಬಿಡಿಸಿ ಹೇಳಿ ನಿಮ್ಮ ಮಾತನ್ನು."

"ನನ್ನ ಮಾತನ್ನು ಕೇಳಿ ಖಾವಂದರು ಸಿಟ್ಟಾಗಬಾರದು. ಮದಕರಿನಾಯಕರಿಗೆ ತಮ್ಮ ಭಾವಮೈದುನಂದಿರನ್ನು ಬಿಟ್ಟು ಕಳಿಸುವಂತೆ ಕಾಗದ ಬರೆದು ವಕೀಲರನ್ನು ಕಳಿಸೋಣ."

"ನಮ್ಮ ಮಾತು ಕೇಳಿ ನಮ್ಮ ಭಾವಮೈದುನಂದಿರನ್ನು ಮದಕರಿನಾಯಕ ಬಿಟ್ಟು ಕಳಿಸುತ್ತಾನೆ ಎಂದು ನಿಮಗನಿಸುತ್ತದೆಯೇ, ಪೂರ್ಣಯ್ಯ ?"

- ಹೈದರಾಲಿ ಪೂರ್ಣಯ್ಯನ ಮುಖವನ್ನೇ ನೋಡುತ್ತಾ ಕೇಳಿದ.

"ದಾಳದ ಪರೀಕ್ಷೆ ಮಾಡಬೇಕು ಎಂದಿರಲ್ಲವೇ, ಖಾವಂದ್, ಅದಕ್ಕಿದು ಅವಕಾಶ."

"ಹಾಗಿದ್ದರೆ ನಡೆಯಲಿ ನಿಮ್ಮ ಬುದ್ಧಿ ಪರೀಕ್ಷೆ, ನಮ್ಮ ಅದೃಷ್ಟ ಪರೀಕ್ಷೆ."

"ಎರಡೂ ನಡೆಯಲಿ. ಆದರೆ ತಮಗೆ ಈ ಸಮಯದಲ್ಲಿ ಸ್ವಲ್ಪ ತಾಳ್ಮೆ ಇರಬೇಕು."

"ತಾಳುತ್ತೇನೆ, ಕಾಯುತ್ತೇನೆ - ಸ್ನೇಹದಂತೆ ತಾಳ್ಮೆಯೂ ಒಂದು ಯುದ್ಧ ತಂತ್ರ ಅಲ್ಲವೇ ಪೂರ್ಣಯ್ಯ" – ಎಂದ ಹೈದರಾಲಿ.

೧೧

ನವಾಬರ ಖಾಸಾಗುಡಾರದ ತೆರೆಬಾಗಿಲು ಮುಚ್ಚಿ, ಸುತ್ತಲೂ ಬಿಚ್ಚುಗತ್ತಿಯವರ ಕಾವಲು ನಿಂತಿತು. ಪೂರ್ಣಯ್ಯ, ಹಕೀಮರಿಬ್ಬರಿಗಲ್ಲದೆ ಬೇರಾರಿಗೂ ಪ್ರವೇಶವಿರಲಿಲ್ಲ. ನವಾಬರಿಗೆ ಅತ್ಯಂತ ಆಪ್ತರಾದವರು, ಬಂಧುಗಳು - ಯಾರಿಗೂ ನವಾಬರನ್ನು ನೋಡಲು ಅನುಮತಿ ದೊರೆಯಲಿಲ್ಲ. ಅವರು ಕೇಳಿದ ಪ್ರಶ್ನೆಗೆ ಸಮರ್ಪಕವಾದ ಉತ್ತರವೂ ದೊರೆಯಲಿಲ್ಲ. ನವಾಬರಿಗೆ ಅಗತ್ಯವಾದ ಊಟೋಪಚಾರಗಳೂ ಪೂರ್ಣಯ್ಯನ ಇದಿರಿನಲ್ಲೇ ನಡೆಯಬೇಕು. ಮಾಮೂಲಾಗಿದ್ದ ನೃತ್ಯ, ಪಾನಗೋಷ್ಠಿಗಳೂ ರದ್ದಾಗಿ, ಸೇನೆಯಲ್ಲೆಲ್ಲಾ 'ನವಾಬರು ತೀವ್ರ ಅಸ್ವಸ್ಥರಾಗಿದ್ದಾರೆ' ಎಂಬ ಸುದ್ದಿ ಹೊಗೆಯಂತೆ ಹಬ್ಬಿ, ನವಾಬರ ಆಪ್ತೇಷ್ಟರೆಲ್ಲರೂ ಕಳವಳಕ್ಕೀಡಾದರು.

ದಿನಗಳೆದಂತೆ ಸುದ್ದಿ ಹೊಗೆ ದಟ್ಟವಾಗಿ, ಕಳವಳ ಕಾವಳವಾಗಿ ಕವಿಯಿತು- ದಂಡಿನ ಪಾಳಯವನ್ನು, ಚಿಂತೆಯ ಮುದ್ರೆ ಧರಿಸಿದ ಪೂರ್ಣಯ್ಯನ ಬಾಯಿ ಬಿಗಿದಿತ್ತು.

ಮೂರು ದಿನ ಹಾಗೆ ಕಳೆಯಿತು. ನಾಲ್ಕನೆಯ ದಿನ ಪೂರ್ಣಯ್ಯನ ಗುಡಾರದಲ್ಲಿ ಸೇನೆಯ ಪ್ರಮುಖರೆಲ್ಲಾ ನೆರೆದರು - ಆತನೇ ಕಳಿಸಿದ ಕರೆಗೆ ಉತ್ತರವಾಗಿ.

"ನವಾಬರು ಹೇಗಿದ್ದಾರೆ? ಇದ್ದಕ್ಕಿದ್ದ ಹಾಗೇ ಅವರಿಗೆ ಏನಾಯಿತು ?"

- ಸಭೆಗೆ ಬಂದವರೆಲ್ಲಾ ದುಗುಡ ತುಂಬಿದ ಧ್ವನಿಯಲ್ಲಿ ಕೇಳಿದ ಮೊದಲ ಪ್ರಶ್ನೆಯೇ ಅದು.

ಕೃಷ್ಣರಾಯ, ಬರ್ಕಿ ಶ್ರೀನಿವಾಸರಾಯ, ಲಂಗ್ಡೇ ಗುಲಾಂ ಅಲಿಖಾನ್, ಬಹದೂರ್‌ಖಾನ್, ಮೀರ್ ಅಲಿ ರಜಾಖಾನ್, ಸರ್ದಾರ್‌ಖಾನ್, ಅಲಿ ಜಮಾನ್‌ಖಾನ್ ಗಾಢವಾದ ಚಿಂತೆ ಕಳವಳಗಳು ಹೆಪ್ಪುಗಟ್ಟಿದ ಅವರೆಲ್ಲರ ಕಣ್ಣುಗಳಲ್ಲೂ ಅದೇ ಪ್ರಶ್ನೆ.

"ನಾನೇನು ಹೇಳಲಿ ? ನಮ್ಮ ದುರ್ದೈವ, ಹುಣ್ಣಿನ ಮೇಲೆ ಬೊಕ್ಕೆ ಎದ್ದ ಹಾಗಾಯಿತು. ರಂಗನಾಥಸ್ವಾಮಿಯ ಕೃಪೆ ಹೇಗಿದೆಯೋ ಅರ್ಥವಾಗುತ್ತಿಲ್ಲ. ನಂಜುಂಡೇಶ್ವರನೂ ನಮ್ಮ ಕೈಬಿಟ್ಟನೋ ಏನೋ" – ಎಂದ ಪೂರ್ಣಯ್ಯ, ಚಿಂತೆ ತುಂಬಿತುಳುಕುವ ಧ್ವನಿಯಲ್ಲಿ.

"ಹಾಗೆಂದರೇನು - ನವಾಬರಿಗೆ ಏನಾಗಿದೆ ?"

"ಇದು ನಮ್ಮನಮ್ಮಲ್ಲಿಯೇ ಇರಬೇಕಾದ ಗುಟ್ಟಿನ ಮಾತು. ಅದನ್ನು ನಿಮಗೆ ಹೇಳಬೇಕು, ಆದರೆ ಹೇಳಲೂ ನನಗೆ ಧೈರ್ಯವಾಗುತ್ತಿಲ್ಲ."

"ಏಕೆ ?"– ಗುಲಾಂ ಅಲಿಖಾನ್ ಹೇಳಿದ –

"ನಮ್ಮಲ್ಲಿ ಯಾರ ಮೇಲಾದರೂ ಅಪನಂಬಿಕೆ ಇದ್ದಲ್ಲಿ ಅವರನ್ನು ಹೊರಕ್ಕೆ ಕಳಿಸಿ, ಉಳಿದವರ ಮುಂದೆ ಇದ್ದ ಮಾತು ಹೇಳಿ."

"ನನಗೆ ಯಾರಲ್ಲೂ ಅಪನಂಬಿಕೆಯಿಲ್ಲ...."

"ನಮ್ಮ ನಿಷ್ಠೆಯಲ್ಲಿ ನಮಗೂ ಅಪನಂಬಿಕೆಯಿಲ್ಲ. ಅದೇನಿದೆಯೋ ಹೇಳಿ."

- ಪೂರ್ಣಯ್ಯ ಮಾತು ಮುಗಿಸುವ ಮುನ್ನವೇ ಹೇಳಿದ ತೋಷಿಖಾನೆ ಕೃಷ್ಣರಾಯ.

ತಲೆಯ ಮೇಲಿದ್ದ ರುಮಾಲನ್ನು ಅತ್ತಿತ್ತ ಸರುಗಿಸಿ, ಮತ್ತೆ ಸರಿಯಾಗಿಟ್ಟುಕೊಂಡು, ಮೈಮೇಲೆ ಹೊದ್ದ ಪಟ್ಟಿಯಾಗಿ ಮಡಚಿದ ಉತ್ತರೀಯವನ್ನು ಹಿಂದೆ ಮುಂದೆ ಎಳೆದಾಡುತ್ತಾ, ಆ ಕೆಲಸ ಮಾಡುತ್ತಲೇ ಸುತ್ತಲಿದ್ದವರನ್ನು ಸೂಕ್ಷ್ಮವಾಗಿ ನೋಡುತ್ತಾ –

"ಈಚೆಗೆ ನವಾಬರ ಆರೋಗ್ಯಸ್ಥಿತಿ ಹೇಗಿದೆಯೆಂದು ಆಪ್ತರಾದ ನಿಮಗೆಲ್ಲರಿಗೂ ಗೊತ್ತು. ಅದಾವ ಸೀಮೆಯ ಖಾಯಿಲೆಯೋ ಆಗಾಗ ಅವರ ಬೆನ್ನಲ್ಲಿ ಕೆಂಪಾಗಿ ಊತ ಕಾಣಿಸಿಕೊಳ್ಳುತ್ತದೆ.

ಎರಡು ದಿನ ಇರುತ್ತದೆ, ಹೋಗುತ್ತದೆ, ಮತ್ತೆ ಬರುತ್ತದೆ. ಹಕೀಮರ ಮುಲಾಮುಪಟ್ಟಿ, ಪಂಡಿತರ ಕುಪ್ಪಿಮಾತ್ರೆಯ ಔಷಧಿ - ಯಾವುದಕ್ಕೂ ಹಿಡಿತಕ್ಕೆ ಸಿಗದೆ ಆಟ ಆಡಿಸುತ್ತಿರುವ ಈ ಕಳ್ಳನೋವಿಗೆ ಹಕೀಂ ನಂಜುಂಡೇಶ್ವರನ ಹರಕೆಯೂ ಮದ್ದಾಗಲಿಲ್ಲ. ಇದರ ಮಧ್ಯೆ ಯಾರೋ ತಲೆ ಕೆಟ್ಟವರು 'ಇದು ಅರಸುಹುಣ್ಣಿನ ಲಕ್ಷಣ' ಎಂದು ಹೇಳಿ ನವಾಬರ ತಲೆ ಕೆಡಿಸಿದ್ದಾರೆ. ಅದರಿಂದ ಅವರ ಮೈಗಿಂತ ಹೆಚ್ಚಾಗಿ ಮನಸ್ಸಿಗೆ ಗಾಯವಾಗಿದೆ. ಮನಸ್ಸಿನ ರೋಗಕ್ಕೆ ಮದ್ದನ್ನು ಮಹದೇವನೂ ಕೊಡಲಾರ. ಹೀಗಿರುವಾಗ ಗಾಯದ ಮೇಲೆ ಬರೆ ಎಳೆದಂತಾಗಿದೆ - ನವಾಬರ ಖಾಸಾ ಭಾವಮೈದುನಂದಿರಿಬ್ಬರೂ ಮದಕರಿನಾಯಕರಿಗೆ ಸೆರೆಸಿಕ್ಕಿರುವುದು...."

- ಎಂದು ನಿಧಾನವಾಗಿ ಮಾತುಮಾತನ್ನೂ ಎಳೆಯುತ್ತಾ ಹೇಳಿದ ಪೂರ್ಣಯ್ಯ,

"ಯುದ್ಧದಲ್ಲಿ ಜಯಾಪಜಯ ಎಲ್ಲರಿಗೂ ಇದ್ದದ್ದೆ - ಸೋತ ಸೋಲಿನ ಅಪಮಾನವನ್ನು ಗೆದ್ದು ತೀರಿಸಿಕೊಂಡರಾಯಿತು. ಸೋಲು-ಗೆಲುವು ನಿತ್ಯಯುದ್ಧ ಜೀವಿಗಳಾದ ನವಾಬರಿಗೇನೂ ಹೊಸದಲ್ಲ. ಚಿನಕುರುಳಿ ಲಡಾಯಿನಲ್ಲಿ ಖುದ್ದಾಗಿ ನವಾಬರೇ ತಲೆತಪ್ಪಿಸಿಕೊಂಡು ಓಡಬೇಕಾಗಿ ಬರಲಿಲ್ಲವೇ ? ಅದಕ್ಕಿಂತ ದೊಡ್ಡದೇ ಇದು ?"

-ಬರ್ಕಿ ಶ್ರೀನಿವಾಸರಾಯ ಕೇಳಿದ.

"ಅದು ಸೋಲಾಯಿತು. ಇದು ಸೋಲಷ್ಟೇ ಅಲ್ಲ, ಅಪಮಾನ -"

"ಅದಕ್ಕೆ ಗೆಲುವೊಂದೇ ಔಷಧ. ಬಿಡಿ - ಎಂತೆಂಥವರೋ ನವಾಬರ ಮುಂದೆ ಮಣ್ಣು ಮುಕ್ಕಿಹೋದರು. ಅದರಲ್ಲಿ ಈ ಮದಕರಿನಾಯಕ ಯಾವ ಲೆಕ್ಕ ?"

-ತಾತ್ಸಾರವಾಗಿ ಕೇಳಿದ ಗುಲಾಂ ಅಲಿಖಾನ್.

"ದುರ್ಗ ನಾವು ಹಿಡಿಯಬಹುದು. ಆದರೆ ನವಾಬರ ಭಾವಮೈದುನಂದಿರು...."

"ಅವರನ್ನೇನು ಮಾಡಿಯಾನು - ಈ ಪಾಳೇಗಾರ. ಅವನ ನಸೀಬು ಚೆನ್ನಾಗಿತ್ತು – ಇವರು ಸೆರೆಯಾಳಾದರು. ಸೆರೆಯಲ್ಲಿರುವ ಅವರ ಮೈಮುಟ್ಟಿದರೆ ಅವನ ವಂಶದ ಒಂದು ಪಿಳ್ಳೆಯೂ ಹೆಸರು ಹೇಳಲು ಉಳಿಯಲಾರದು."

-ಅಲಿ ಜಮಾನ್ ಖಾನ್ ಹೇಳಿದ, ದ್ವೇಷದಿಂದ ಉರಿಗಾರುತ್ತಾ.

"ಅದೆಲ್ಲಾ ಆದರೂ ನವಾಬರ ಭಾವಮೈದುನಂದಿರು ಬದುಕಿ ಬರಲಾರರು; ಅವರಿಗೇನಾದರೂ ಅಪಮಾನವಾದರೆ, ಅದನ್ನು ಯಾವ ಗೆಲುವೂ ಅಳಿಸಲಾರದು ಅಲ್ಲವೇ ?"

– ಪೂರ್ಣಯ್ಯ ಕೆದಕಿ ಕೇಳಿದರು.

"ಊಹೂ – ಮದಕರಿನಾಯಕ ಅಷ್ಟು ಧೈರ್ಯ ಮಾಡಲಾರ."

- ಬರ್ಕಿ ಶ್ರೀನಿವಾಸರಾಯ ತನ್ನ ನಂಬಿಕೆಯೇ ನಿಜವೆಂಬಂತೆ ಹೇಳಿದ.

"ಮದಕರಿನಾಯಕನ ವಿಷಯ ನಿಮಗೆ ಗೊತ್ತಿಲ್ಲ, ರಾವ್‌ಜಿ. ಅವನು ಮಹಾ ಲುಚ್ಚಾ ಮನುಷ್ಯನಂತೆ. ಮಹಾ ದುರಹಂಕಾರಿ, ಸೊಕ್ಕಿನವನು, ಎಲ್ಲಕ್ಕಿಂತ ಹೆಚ್ಚಾಗಿ ಮಹಾರಕ್ತ ಪಿಪಾಸಿ, ನರರಾಕ್ಷಸ ಎಂದು ನಾವು ಕೇಳಿದ್ದೇವೆ. ಶತ್ರುಗಳ ತಲೆ ಕಡಿಸುವುದು, ಅವರ ರಕ್ತದಲ್ಲಿ ಸ್ನಾನ ಮಾಡುವುದು, ಆಗದವರ ಹೆಂಡಿರುಮಕ್ಕಳನ್ನು ಬೀದಿಯಲ್ಲಿ ಬೆತ್ತಲೆ ಮೆರವಣಿಗೆ ಮಾಡಿಸುವುದು - ಇದೆಲ್ಲಾ ದುರ್ಗದಲ್ಲಿ ದಿನಾ ನಡೆಯುವ ಕೆಲಸವಂತೆ. ಅಂಥವನು, ಅನಾಯಾಸ ಕೈಗೆ ಸಿಕ್ಕ ನವಾಬರ ಭಾವಮೈದುನಂದಿರ ಕಿವಿ, ಮೂಗು ಕೊಯ್ಯಿಸಿ, ಬೀದೀಲಿ ಮೆರವಣಿಗೆ ಮಾಡಿಸಿ, ಈ ಸುದ್ದಿಯನ್ನು ಮಹಾಸಾಧನೆಯೆಂಬಂತೆ ಸೀಮೆಯಲ್ಲೆಲ್ಲಾ ಡಂಗೂರ ಹೊಡೆಸಿದರೆ ನವಾಬರು ಮತ್ತೆ ತಲೆ ಎತ್ತಿ ತಿರುಗಬಹುದೇ, ಸುತ್ತ ಶತ್ರುಗಳಿರುವ ಸೀಮೆಯಲ್ಲಿ? ದುಶ್ಯಾಸನನ ಕೈಯಲ್ಲಿ ದ್ರೌಪದಿ ಸಿಕ್ಕಿಹಾಕಿಕೊಂಡಂತಾಗಿದೆ – ನಮ್ಮ ಖಾಸಾ ಜನ – ಆ ಕಲ್ಲೆದೆಯ ನಾಯಕನ ಕೈಗೆ ಸಿಕ್ಕು."

- ಎದೆಗೆಡಿಸುವ ರಕ್ತವರ್ಣಗಳಲ್ಲಿ ಮದಕರಿನಾಯಕನನ್ನು ಚಿತ್ರಿಸುತ್ತಾ ಹೇಳಿದ ಪೂರ್ಣಯ್ಯ

"ಇದು ತಾವು ಕಂಡ ಮಾತೋ, ಕೇಳಿದ ಮಾತೋ ?"

-ಸುಮ್ಮನೆ ಕುಳಿತು ಮದಕರಿನಾಯಕನ ಬಗ್ಗೆ ಪೂರ್ಣಯ್ಯ ಆಡಿದ ಮಾತನ್ನು ಸಹಿಸಲಾಗದೆ ಕೇಳಿದ ಸರ್ದಾರ್‌ಖಾನ್, ಪೂರ್ಣಯ್ಯನಾಡಿದ ಒಂದೊಂದು ಮಾತನ್ನೂ ಕೇಳುತ್ತಾ ಕೇಳುತ್ತಾ ಆತನ ಮುಖ ಕೆಂಪೇರಿ.

"ನಾವು ಕಂಡಿಲ್ಲ, ಕೇಳಿದ್ದೀವಿ." – ಪೂರ್ಣಯ್ಯ ಬಹು ಲಘುವಾಗಿ ಹೇಳಿದ.

"ಹಾಗಿದ್ದರೆ ತಾವು ಕೇಳಿರುವುದು ತಪ್ಪು...."

"ಅಂದರೆ ನಮಗಿಂತ ನಿಮಗೆ ಅವರ ವಿಷಯ ಗೊತ್ತು - ನೀವೇನು ಕಂಡಿದ್ದೀರ ಹೇಳಿ. ನಮ್ಮ ಮಾತು ತಪ್ಪಾಗಿದ್ದರೆ, ತಿದ್ದಿಕೊಳ್ಳುತ್ತೇನೆ."

-ಸವಾಲು ಹಾಕಿ ಕೆಣಕಿ ಕೇಳಿದ ಪೂರ್ಣಯ್ಯ.

"ನಿಜಗಲ್ಲಿನ ಯುದ್ಧದಲ್ಲಿ ನಾನು ಬದುಕಿ ಬಂದಿರುವುದೇ ನನ್ನ ಮಾತಿಗೆ ಸಾಕ್ಷಿ. ಮದಕರಿನಾಯಕರು ಇಲ್ಲದಿದ್ದರೆ ಪೇಶ್ವೆ ಮಾಧವರಾಯರು ನನ್ನ ಮೂಗು ಕತ್ತರಿಸಿ ಮೆರವಣಿಗೆ ಮಾಡಿಸುತ್ತಿದ್ದರು. ನೀವು ಹೇಳಿದಂಥ ಅಲ್ಪ ಮನುಷ್ಯರಲ್ಲ ಅವರು. ಸೋತವರ ಮೇಲೆ ಎಂದೂ ಅವರು ಕೈ ಎತ್ತುವವರಲ್ಲ ಎಂಬುದನ್ನು ನಾನೇ ಕಣ್ಣಾರೆ ಕಂಡಿದ್ದೇನೆ. ಅವರು ನಮ್ಮ ಶತ್ರುಗಳಿರಬಹುದು. ಆದರೆ ನೀವು ಹೇಳಿದಂತೆ ಲುಚ್ಚಾ ಅಲ್ಲ."

– ಕೊಂಚ ಉದ್ರಿಕ್ತನಾಗಿ ಹೇಳಿದ ಸರ್ದಾರ್‌ಖಾನ್, ತನ್ನ ಮಿತ್ರನ ನಿಂದೆಯನ್ನು ಕೇಳಲಾರದೆ.

ಸರ್ದಾರ್‌ಖಾನ್ ಹೇಳಿದುದನ್ನು ಕೇಳಿ, ಪೂರ್ಣಯ್ಯನ ಮನಸ್ಸಿನಲ್ಲಿ ಬೇಟೆಯನ್ನು ಹಿಡಿದ ತೃಪ್ತಿಯ ಭಾವ ಮೂಡಿದರೂ, ಅದನ್ನು ಹೊರಗೆ ತೋರಿಸಿಕೊಳ್ಳದೆ –

"ಆಯಿತು - ಹೇಳಿಕೆಯ ಮಾತಿಗಿಂತ ಕಂಡವರ ಮಾತನ್ನೇ ನಂಬುತ್ತೇನೆ. ಮದಕರಿ, ನಾಯಕರು ನಿಮ್ಮ ಜೀವ ಉಳಿಸಿದವರು...."

- ಎಂದು ಮಾತನ್ನು ಅರ್ಧದಲ್ಲೇ ತಡೆದ ಪೂರ್ಣಯ್ಯ.

"ಅದು ನಿಜ-"

"ಆಯಿತು. ನವಾಬರು ನಿಮಗೆ ಉಪ್ಪಿಟ್ಟ ಧಣಿ."

"ಅದನ್ನು ನಾವೆಂದೂ ಮರೆತಿಲ್ಲ."

"ನವಾಬರ ಭಾಗ್ಯ. ಹಾಗಿದ್ದರೆ ನೀವು ನವಾಬರನ್ನು ಬದುಕಿಸಬಹುದು."

"ಅದಕ್ಕೇನು ಮಾಡಬೇಕು ?"

"ನವಾಬರಿಂದ ಮದಕರಿನಾಯಕರಿಗೆ ಒಂದು ಪತ್ರ ಬರೆಸಿಕೊಡುತ್ತೇನೆ – 'ನಮ್ಮ ಭಾವಮೈದುನಂದಿರನ್ನು ಬಿಟ್ಟು ಕಳಿಸಿ' ಎಂದು. ನೀವು ನವಾಬರ ವಕೀಲರಾಗಿ ಹೋಗಿ, ಆ ಕೆಲಸ ನೆರವೇರಿಸಿಕೊಂಡು ಬರುತ್ತೀರಾ, ಸರ್ದಾರ್‌ಖಾನ್‌ಜಿ? ಹಾಗೆ ಮಾಡಿದರೆ, ನಿಮ್ಮ ಸ್ನೇಹಿತರ ಕೆಟ್ಟ ಹೆಸರೂ ಹೋಗುತ್ತದೆ; ನವಾಬರ ಹೃದಯವನ್ನು ಹರಿದು ತಿನ್ನುತ್ತಿರುವ ರೋಗವೂ ಗುಣವಾಗುತ್ತದೆ. ತಮ್ಮ ಭಾವಮೈದುನಂದಿರನ್ನು ನೋಡದೆ ಊಟ ಮಾಡುವುದಿಲ್ಲ ಎಂದು ಹಾಸಿಗೆ ಹಿಡಿದು ಮಲಗಿದ್ದಾರೆ - ನಿಮ್ಮ ಅನ್ನದಾತ. ಈ ಸ್ಥಿತಿ ಅವರ ರೋಗಕ್ಕೆ ಮಾರ್ಗವೆಂದು ಹಕೀಮರೂ ಹೇಳುತ್ತಿದ್ದಾರೆ. ಆದರೆ ನವಾಬರಿಗೆ ಈಗ ಊಟವೂ ಬೇಕಿಲ್ಲ, ಔಷಧವೂ ಬೇಕಿಲ್ಲವಾಗಿದೆ. ಅವರನ್ನು ಉಳಿಸಿಕೊಡುವುದು ನಿಮ್ಮಿಂದ ಸಾಧ್ಯವಾದೀತೇ, ಸರ್ದಾರ್‌ಖಾನ್‌ಜಿ?"

-ಮಾತುಮಾತಿನಲ್ಲಿ ಸರ್ದಾರ್‌ಖಾನನ ಹೃದಯವನ್ನು ಬಗೆದು ನೋಡುತ್ತಾ ಕೇಳಿದ ಪೂರ್ಣಯ್ಯ.

ಎತ್ತೆತ್ತಲೋ ತಿರುಗುತ್ತಿದ್ದ ಮಾತು, ತನ್ನ ಕುತ್ತಿಗೆಗೇ ಉರುಲಾದುದನ್ನು ಕಂಡು, ಸರ್ದಾರ್‌ಖಾನ್‌ಗೆ ತನ್ನ ಉತ್ಸಾಹ-ಉದ್ರೇಕ ಅತಿರೇಕಕ್ಕೆ ಹೋದ ಮುಠ್ಠಾಳತನವೆನಿಸಿತು. ಆದರೆ ಮಾತು ಆಡಿದ್ದಾಗಿತ್ತು; ಹಿಂದಕ್ಕೆ ಹೋಗುವಂತಿರಲಿಲ್ಲ. ಮುಂದೆ ಏನಾಗಬಹುದೆಂದು ಊಹಿಸಲೂ ಆತನಿಗೆ ಸಾಧ್ಯವಾಗಲಿಲ್ಲ.

"ಏಕೆ ಯೋಚನೆ ಮಾಡುತ್ತೀರ, ಖಾನ್‌ಜಿ ? ನಿಮ್ಮ ಮಾತಿನಲ್ಲಿ, ನಿಮ್ಮ ಸ್ನೇಹಿತರಲ್ಲಿ ನಿಮಗೇ ನಂಬಿಕೆ ಇಲ್ಲವೇ ? ನಿಮಗೆ ಉಪ್ಪಿಟ್ಟವರ ಬಗ್ಗೆ ಅಷ್ಟು ವಿಶ್ವಾಸವಿಲ್ಲವೇ ?"

-ಕೆಣಕಿ ಕೇಳಿದ ಪೂರ್ಣಯ್ಯ.

ಆತನ ಪ್ರಶ್ನೆಗೆ ಸರ್ದಾರ್‌ಖಾನ್ ಏನು ಉತ್ತರ ಕೊಡುತ್ತಾನೆಂದು ನೆರೆದವರೆಲ್ಲರೂ ಸರ್ದಾರ್‌ಖಾನನ ಮುಖವನ್ನೇ ನೋಡಿದರು.

ಅತ್ತಿತ್ತ ಅಲುಗಲಾಗದ ಬಲೆಯಲ್ಲಿ ಸಿಲುಕಿಕೊಂಡವನಂತೆ ಸರ್ದಾರ್‌ಖಾನ್ –

"ಆಯಿತು, ಖಾವಂದರ ಅಪ್ಪಣೆಯಾದರೆ ಅವರು ಹೇಳಿದ ಕೆಲಸ ಮಾಡುತ್ತೇನೆ. ಇದರ ಮೇಲೆ ಅಲ್ಲಾನ ಇಚ್ಛೆ ಹೇಗಿದೆಯೋ ನೋಡೋಣ" – ಎಂದಷ್ಟೇ ಹೇಳಿದ.

"ನೀವು ಈ ಮಾತು ಹೇಳಿದ್ದು ಕೇಳಿ ನನಗೆ ಹಾಲು ಕುಡಿದಷ್ಟು ಸಂತೋಷವಾಯಿತು. ವಿಷಯವನ್ನು ಹುಜೂರು ಸನ್ನಿಧಾನದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ನೀವು ಸಿದ್ಧವಾಗಿರಿ"

– ಎಂದ ಪೂರ್ಣಯ್ಯ.

* * *

ಆ ಸಂಜೆ ಪೂರ್ಣಯ್ಯ ಹೇಳಿದುದನ್ನು ಕೇಳಿದ ಹೈದರಾಲಿ –

" 'ತಲೆ ಎಂದರೆ ಪೂರ್ಣಯ್ಯನ ತಲೆ' ಎಂದು ಜನ ಹೇಳುವುದು ಸುಳ್ಳಲ್ಲ. ಅಂತೂ ಈಗ ರೋಗವೂ ಒಂದು ಯುದ್ಧ ತಂತ್ರವಾಯಿತು"

- ಎಂದು ತೃಪ್ತಿಯ ನಗೆ ನಕ್ಕು ಕೇಳಿದ –

"ನಿಮ್ಮ ತಲೆ, ನಮ್ಮ ನಸೀಬು ಎರಡೂ ಒಂದಾಗಿರುವಾಗ ನಮ್ಮನ್ನು ಗೆಲ್ಲುವುದು. ಯಾರಿಗೂ ಸಾಧ್ಯವಿಲ್ಲ. ನೋಡೋಣ - ನೀವು ಒಡ್ಡಿದ ಈ ಬೋನಿನಲ್ಲಿ ಯಾರು ಯಾರು ಬೀಳುತ್ತಾರೋ....ಇಂಥ ಬೋನುಗಳನ್ನು ಇನ್ನೂ ಎಷ್ಟು ಇಟ್ಟಿದ್ದೀರ ನಿಮ್ಮ ತಲೆಯಲ್ಲಿ ಪೂರ್ಣಯ್ಯ?"

"ಈಗ ಹೇಗೆ ಹೇಳುವುದು ಹೊತ್ತು ಬಂದಾಗ ದೇವರು ದಾರಿ ತೋರಿಸುತ್ತಾನೆ"

-ಎಂದ ಪೂರ್ಣಯ್ಯ

"ಹಾಗಿದ್ದರೆ, ನಿಮ್ಮ ದೇವರಿಗೆ ದಿನಾ ಚೆನ್ನಾಗಿ ಪೂಜೆ ಮಾಡಿ, ಹಾಲು, ಮೊಸರು, ಜೇನುತುಪ್ಪ ಚೆನ್ನಾಗಿ ಕುಡಿಸಿ. ನಿಮ್ಮ ದೇವರು ಚೆನ್ನಾಗಿ ತಿಂದಷ್ಟೂ ನಮ್ಮ ಕೆಲಸ ಹಗುರವಾಗುತ್ತದೆ"

- ಎಂದು ನಗುತ್ತಾ ಹೇಳಿದ ಹೈದರಾಲಿ –

"ಸರ್ದಾರ್‌ಖಾನ್ – ನೋಡೋಣ - ಇದೆಷ್ಟು ಹೆಡೆಯ ಹಾವೋ ?"

ಮುಂಜಾವಿನ ತಣ್ಣನೆಯ ಎಳೆಬಿಸಲಿನಲ್ಲಿ, ತಾನು ಹಿಡಿದುಕೊಟ್ಟ ಮೊಲದೊಂದಿಗೆ ಬೇಟೆಯಾಡುತ್ತಿರುವುದನ್ನು ತೃಪ್ತಿ ತುಂಬಿದ ಕಣ್ಣುಗಳಿಂದ ನೋಡುತ್ತಾ ಮಲಗಿದ ತಾಯಿಹುಲಿಯಂತೆ, ತನ್ನ ಮಗ ಭರಮಣ್ಣನಾಯಕ ಖಡ್ಗ ವಿದ್ಯಾಪರಿಣತನೊಬ್ಬನೊಂದಿಗೆ ಕತ್ತಿಕಾಳಗವಾಡುತ್ತಾ, ಆ ವಿದ್ಯೆಯನ್ನು ಕಲಿಯುತ್ತಿರುವುದನ್ನು ಪ್ರೀತಿ-ಹೆಮ್ಮೆಗಳು ತುಂಬಿದ ಕಣ್ಣುಗಳಿಂದ ನೋಡುತ್ತಾ, ಆಗಾಗ ಪ್ರೋತ್ಸಾಹದ ಮಾತುಗಳನ್ನಾಡುತ್ತಾ ಕುಳಿತಿದ್ದ ಮದಕರಿನಾಯಕನಿಗೆ ಅಲ್ಲಿಗೆ ಪರಶುರಾಮನಾಯಕ ಬಂದದ್ದಾಗಲಿ, ತನ್ನನ್ನು ಕರೆದದ್ದಾಗಲಿ ಕೂಡಲೇ ಕೇಳಿಸಲಿಲ್ಲ. ಎರಡೆರಡು ಬಾರಿ ಕರೆದು ಎಚ್ಚರಿಸಿದಬಳಿಕ, ಅದು ಕೇಳಿಸಿ –

"ಏನು ಪರಶುರಾಮಣ್ಣ?" – ಎಂದು ಇನ್ನೂ ತನ್ನ ಹೆಮ್ಮೆಯ ಗುಂಗಿನಲ್ಲಿಯೇ ಕೇಳಿದ.

"ಸೀರ್ಯದಿಂದ ನವಾಬರ ವಕೀಲರು ಬಂದಿದ್ದಾರೆ."

ಸೀರ್ಯ, ನವಾಬರು-

ಆ ಎರಡು ಮಾತುಗಳನ್ನು ಕೇಳಿ ಬೇರಾವುದೋ ಲೋಕದಲ್ಲಿದ್ದ ಮದಕರಿನಾಯಕ ತನ್ನ ಸುತ್ತಲ ವಾಸ್ತವಿಕ ಜಗತ್ತಿಗೆ ಇಳಿದುಬಂದು, ಕೇಳಿದ –

"ಏನಂದೆ ?"

"ಸೀರ್ಯದಿಂದ ನವಾಬರ ವಕೀಲರು ಬಂದಿದ್ದಾರೆ"

- ಆಡಿದ ಮಾತನ್ನೇ ಮತ್ತೊಮ್ಮೆ ಆಡಿದ ಪರಶುರಾಮನಾಯಕ.

"ಅಷ್ಟೇ ತಾನೇ – ನವಾಬರ ಭಾವಮೈದುನಂದಿರು ನಮ್ಮ ಸೆರೆಯಲ್ಲಿರುವಾಗ ನವಾಬರ ವಕೀಲರು ಬರದೆ, ದಂಡು ಬಂದೀತೇ ? ಬರಲಿ ಬಿಡು"

- ಎಂದು ತಾತ್ಸಾರವಾಗಿ ಹೇಳಿದ ಮದಕರಿನಾಯಕ.

"ವಕೀಲರು ಯಾರು ಎಂದು ನೀವು ಕೇಳಲಿಲ್ಲ."

"ಕೇಳಬೇಕಾಗಿತ್ತೇ - ಯಾರಾದರೂ ಬರಲಿ. ಯಾರು ಬಂದರೂ ಏನು ಹೇಳಬೇಕೆಂದು ನಾವಾಗಲೇ ನಿಶ್ಚಯ ಮಾಡಿಕೊಂಡಿದ್ದೇವಲ್ಲಾ- ನವಾಬರ ವಕೀಲರಲ್ಲ, ನವಾಬರೇ ಬರಲಿ."

"ಆ ಮಾತನ್ನಷ್ಟು ತಾತ್ಸಾರವಾಗಿ ತಳ್ಳಿಹಾಕುವಂತಿಲ್ಲ, ಅಣ್ಣ- ವಕೀಲರಾಗಿ ಬಂದಿರುವವರು ಬೇರೆ ಯಾರೂ ಅಲ್ಲ.- ಸಾಕ್ಷಾತ್ ಸರ್ದಾರ್‌ಖಾನರು."

"ಆ – ಏನೆಂದೆ ! ?" – ಮೆಟ್ಟಿಬಿದ್ದು ಕೇಳಿದ ಮದಕರಿನಾಯಕ.

"ಸರ್ದಾರ್‌ಖಾನರು"

ಆ ಮಾತನ್ನು ಕೇಳಿ, ನಾಲಗೆಯ ಮೇಲೆ ಉಗುಳಲಾಗದೆ ಅಂಟಿಕೊಂಡ ಕೆಂಡವನ್ನು ಇಟ್ಟಂತಾಗಿ –

"ಸರ್ದಾರ್‌ಖಾನ್ ! -- ಯಾವ ಸರ್ದಾರ್‌ಖಾನರು ? ಸರಿಯಾಗಿ ಕೇಳಿದೆಯಾ, ಪರಶುರಾಮಣ್ಣ" – ಎಂದು ದುಗುಡ ತುಂಬಿದ ಧ್ವನಿಯಲ್ಲಿ ಕೇಳಿದ ಮದಕರಿನಾಯಕ.

"ಸರಿಯಾಗಿ ವಿಚಾರಿಸಿ ಕೇಳಿದೆ. ನಮ್ಮ ಸ್ನೇಹಿತರೇ, ನಿಜಗಲ್ಲಿನ ಕಿಲ್ಲೇದಾರರಾಗಿದ್ದವರೇ - ಅದೇ ಸರ್ದಾರ್‌ಖಾನರು."

"ಎಲ್ಲರನ್ನೂ ಬಿಟ್ಟು ಅವರನ್ನೇ ಕಳಿಸಬೇಕಾಗಿತ್ತೆ ? ಈ ನವಾಬ - ತಲೆ ಹಿಡಿದರೂ ಬಾಲವೇ ತಲೆಯಾಗಿ ಕಚ್ಚುವ ಹಾವು!"

-ಎಂದು ಕಹಿಯಾಗಿ ಹೇಳಿ-

"ಅವರನ್ನು ಎಲ್ಲಿ ಇಳಿಸಿದ್ದೀಯ ? ಅವರ ಜೊತೆಗೆ ಬೇರೆ ಯಾರು ಬಂದಿದ್ದಾರೆ ? ಅವರು ನಮ್ಮ ಆಪ್ತಮಿತ್ರರು ಎಂಬುದು ಯಾರಿಗೂ ತಿಳಿಯದ ಹಾಗೆ ಎಚ್ಚರಿಕೆ ವಹಿಸಿದೆಯೋ - ಇಲ್ಲವೋ? ರೀತಿ-ರಿವಾಜುಗಳು ಈಗ ಮೊದಲಿಗಿಂತ ಮತ್ತಷ್ಟು ಕಟ್ಟುನಿಟ್ಟಾಗಿ ನಡೆಯಬೇಕು. ಅವರ ಜೊತೆಗೆ ಬಂದವರಿಗೆ ನಮ್ಮ ಸ್ನೇಹದ ಸುಳಿವೂ ತಿಳಿಯಬಾರದು."

"ಈ ರಾಜಕೀಯದ ಪ್ರಥಮಾಕ್ಷರವನ್ನು ನನಗೆ ಹೇಳಿಕೊಡಬೇಕೇ, ಅಣ್ಣ. ನಾನು ನರಸಪ್ಪಯ್ಯನವರ ಶಾಲೆಯಲ್ಲಿ ಕಲಿತವನು."

"ಏನು ಕಲಿತಿದ್ದೀಯೋ, ಬಿಟ್ಟಿದ್ದೀಯೋ - ಅದಕ್ಕೆಲ್ಲಾ ಇದು ಪರೀಕ್ಷಾಕಾಲ. ನಾನೆಷ್ಟು ಎಚ್ಚರವಾಗಿದ್ದರೂ ಸಾಲದು. ಒಂದು ಸಲ ನಾವು ಅವರ ಜೀವ ಉಳಿಸಿದ್ದಕ್ಕೆ, ಹಲವು ಬಾರಿ ದುರ್ಗವನ್ನು ಉಳಿಸಿದವರು - ಸರ್ದಾರ್‌ಖಾನ್, ಅವರ ಕ್ಷೇಮಚಿಂತನೆ ನಮ್ಮ ಆದ್ಯ ಕರ್ತವ್ಯ."

- ಪರಶುರಾಮನಾಯಕನನ್ನು ಎಚ್ಚರಿಸುತ್ತಾ, ಆತಂಕದಿಂದ ಬಿಗಿದ ಧ್ವನಿಯಲ್ಲಿ ಹೇಳಿದ ಮದಕರಿನಾಯಕ.

"ಆ ಬಗ್ಗೆ ನೀವು ಚಿಂತಿಸುವುದು ಬೇಡ. ನಾನು ಅವರನ್ನು ನೋಡಲು ಕೂಡಾ ಹೋಗಿಲ್ಲ. ಮಾಮೂಲಿ ವಕೀಲರೊಂದಿಗೆ ಹೇಗೆ ನಡೆದುಕೊಳ್ಳಬೇಕೋ ಹಾಗೆ, ಅಷ್ಟೇನು -ಅದಕ್ಕಿಂತ ಒಂದು ಗುಂಜಿ ತೂಕ ಕಡಿಮೆಯಾಗಿಯೇ ನೋಡಿಕೊಂಡಿದ್ದೇನೆ - ಅವರು ನಮಗೆ ಬೇಡವಾದ ಅತಿಥಿಗಳು ಎಂಬಂತೆ."

"ಒಳ್ಳೆಯದನ್ನೇ ಮಾಡಿದೆ. ಯಾವ ಪರೀಕ್ಷೆಗೆಂದು ಸರ್ದಾರ್‌ಖಾನ್‌ರನ್ನು ನಮ್ಮ ಬಳಿ ಕಳಿಸಿದ್ದಾರೋ ಏನೋ. 'ನವಾಬ ಬಹಳ ಆಳದ ನೀರಿನಲ್ಲಿ ಆಡುವ ಹುಲಿಮೀನು' ಎಂದು

ಸರ್ದಾರ್‌ಖಾನರ ಮನುಷ್ಯ ಹೇಳಿದುದು ಸುಳ್ಳಲ್ಲ. ಈ ಕಾರಣಕ್ಕಾಗೇ ನರಸಪ್ಪಯ್ಯನವರೂ 'ನವಾಬರೊಂದಿಗೆ ದ್ವೇಷ ಬೇಡ' ಎಂದು ನಮ್ಮನ್ನು ಎಚ್ಚರಿಸುತ್ತಿದ್ದುದು"

- ಎಂದು ಹೇಳಿ, ಆ ಮಾತಿನಿಂದ ಮರೆತ ಯಾವುದೋ ಮಾತು ನೆನಪಾದಂತೆ –

"ಅಂದಹಾಗೆ ಈಚೆಗೆ ನರಸಪ್ಪಯ್ಯನವರ ವರ್ತಮಾನ ಏನಾದರೂ ಗೊತ್ತಾಯಿತೇ, ಪರಶುರಾಮಣ್ಣ?" – ಎಂದು ಕೇಳಿದ ಮದಕರಿನಾಯಕ.

"ಊಹೂ – ಅವರು ಎಲ್ಲಿದ್ದಾರೋ, ಏನು ಮಾಡುತ್ತಿದ್ದಾರೋ - ಸುದ್ದಿಯೇ ಇಲ್ಲ."

"ಅವರ ಮಗನ ವಿಷಯ ಏನಾಯಿತು ?"

"ಯಾರು - ಶ್ರೀಪತಿರಾಯನೇ ?"

"ಹೂಂ."

"ನಮ್ಮ ಚಾವಡಿಯಲ್ಲೇ ಕೆಲಸಕ್ಕಿಟ್ಟುಕೊಂಡಿದ್ದೇನೆ."

"ಆ ಮನುಷ್ಯ ಹೇಗೆ – ಮರಿನರಸಪ್ಪಯ್ಯನೋ ?"

"ಮರಿಯೂ ಅಲ್ಲ, ಕುರಿಯೂ ಅಲ್ಲ. ಹುಲಿಯಂಥ ತಂದೆ ಇದ್ದಾಗಲೇ ಸ್ವೇಚ್ಛೆಯಾಗಿ ಬೆಳೆದವನು. ಆಮೇಲೆ ದೇವರ ಗೂಳಿಯ ಹಾಗೆ ಊರೂರು ಸುತ್ತಿಕೊಂಡಿದ್ದವನು. ಹೆಂಡತಿ ಮಕ್ಕಳಿದ್ದರೂ ಎಲ್ಲೋ ಕಲಿತ ಅಫೀಮಿನ ಚಟ. ಬೀದಿಹೆಂಗಸರ ಸೆರಗಿನ ಹಿಂದೆ ಅಡ್ಡಾಡುವ ಚಟ ಇನ್ನೂ ತಪ್ಪಿಲ್ಲ. ಪುಣ್ಯಕ್ಕೆ ಅದನ್ನೆಲ್ಲಾ ನೋಡಲು ನರಸಪ್ಪಯ್ಯನವರಿಲ್ಲ. ನಾನೂ ಹೇಳಿದಷ್ಟು ಹೇಳಿ ಹಾಳಾಗಿಹೋಗಲಿ ಎಂದು ಸುಮ್ಮನಿದ್ದೇನೆ."

"ಈ ಚಟಗಳಿಗೆಲ್ಲಾ ಆತನಿಗೆ ಹಣ ಎಲ್ಲಿಂದ ಬರುತ್ತೆ ?"

"ಕೂಡಿಸಿ ಊಟ ಹಾಕಬೇಕಾದ ಮನೆತನದ ಹುಡುಗ. ನಾನೇ ಕೈ ಸ್ವಲ್ಪ ಧಾರಾಳ ಮಾಡಿದ್ದೇನೆ. ಆದರೂ ತೀರಾ ಹೆಸರು ಕೆಡಿಸಿಕೊಳ್ಳದ ಹಾಗೆ ಎಚ್ಚರವಾಗಿದ್ದೇನೆ. ಯಾವುದು ಏನಾದರಾಗಲಿ - ಹೇಳಿದಷ್ಟು ಕೆಲಸವನ್ನು, ಕೈಲಾದಷ್ಟು ಮಾಡಿಕೊಂಡು ಹೋಗುತ್ತಾನೆ. ಇರು ಎಂದಿದ್ದೇವೆ - ಇದ್ದಾನೆ, ಅಷ್ಟೆ."

"ಅಷ್ಟೇ ಆದರೆ ಹೋಗಲಿ ಬಿಡು. ಈಗ ಮುಂದಿರುವ ಕೆಲಸದ ಯೋಚನೆ ಮಾಡು. ನವಾಬರ ವಕೀಲರಾಗಿ ಸರ್ದಾರ್ಖಾನರು ಏನು ಹೇಳಿಕಳಿಸಿದರು ?"

- ಕೇಳಿದಷ್ಟಕ್ಕೇ ಶ್ರೀಪತಿರಾಯನ ವಿಷಯ ಮರೆತು ಕೇಳಿದ ಮದಕರಿನಾಯಕ.

"'ನವಾಬರ ಪತ್ರ ತಂದಿದ್ದೇವೆ. ನಾಯಕರನ್ನು ನೋಡಬೇಕು' ಎಂದು ಹೇಳಿಕಳಿಸಿದರು. 'ನಿಮಗೆ ತಿಳಿಸಿ ಮುಂದಿನ ವ್ಯವಸ್ಥೆ ಮಾಡುತ್ತೇನೆ' ಎಂದು ಹೇಳಿಕಳಿಸಿದೆ."

“ಸರಿ. ಅವರನ್ನು ಬಹಳ ಕಾಯಿಸುವುದು ಬೇಡ. ’ನಾಳೆ ನೋಡುತ್ತೇವೆ’ ಎಂದು ಹೇಳಿ ಕಳಿಸು. ಯಾರಿಗೂ ಗುಮಾನಿ ಬರದ ರೀತಿಯಲ್ಲಿ, ಸರ್ದಾರ್‌ಖಾನರನ್ನು ಆದಷ್ಟು ಚೆನ್ನಾಗಿ ನೋಡಿಕೊ, ಪರಶುರಾಮಂಣ. ನವಾಬರ ಕಡೆಯವರೆಂದು ಅವರಿಗೆ ಹೆಚ್ಚಿನ ಮರ್ಯಾದೆ ತೋರಿಸದಿದ್ದರೂ, ಯಾರಿಂದಲೂ, ಯಾವ ರೀತಿಯಲ್ಲೂ ಅವರಿಗೆ ಅಪಮಾನವಾಗದಂತೆ ನೋಡಿಕೊ. ಈಚೆಗೆ ನಮ್ಮ ಜನಕ್ಕೆ ನವಾಬರ ಜನ ಎಂದರೆ ತಾತ್ಸಾರ ಹೆಚ್ಚಿದೆ”

– ಎಂದು ಎಚ್ಚರಿಸಿದ ಮದಕರಿನಾಯಕ.

* * *

ವಂಧಿಮಾಗಧರು ಪರಾಕು ಹೇಳುತ್ತಿರಲು ನೋಡುವವರ ಕಣ್ಣು ಕುಕ್ಕಿಸುವಂಥ ಸುವರ್ಣ, ರಜತ ರಾಜಲಾಂಛನಗಳನ್ನು ಹಿಡಿದವರು ಮುಂದೆ ನಡೆಯುತ್ತಿರಲು, ಶ್ವೇತಛತ್ರದಡಿಯಲ್ಲಿ ಆ ಎಲ್ಲ ವೈಭವಗಳಿಗೆ ಮಕುಟವಿಟ್ಟಂಥ ರಾಜೋಚಿತ ವಸ್ತ್ರಾಭರಣಗಳನ್ನು ಧರಿಸಿದ ಮದಕರಿನಾಯಕರು ಸಭಾಪ್ರವೇಶಮಾಡಿ, ಎದ್ದು ನಿಂತು ಗೌರವ ತೋರಿದ ಸಭಾಸದರಿಂದ ಗೌರವ ಸ್ವೀಕಾರಮಾಡಿ, ಇಬ್ಬದಿಯಲ್ಲಿ ನಿಂತ ಭಟರು ಬೆಳ್ಳಿಹಿಡಿಯ ಚಾಮರವನ್ನು ಬೀಸುತ್ತಿರಲು, ರಾಜಾಸನಾಸೀನರಾಗಿ, ವಂದಿಸಿದ ಸಭೆಗೆ ಪ್ರತ್ಯಭಿವಂದನೆ ಮಾಡಿ, ಮುಂದಿನ ಸಭಾಕಾರ್ಯವನ್ನು ನಡೆಸುವಂತೆ ಪ್ರಧಾನಿಗಳನ್ನ ನೋಡಿ, ಹಾಗೇ ಸಭೆಯ ಸುತ್ತಲೂ ಕಣ್ಣುಹಾಯಿಸಿದರು.

ಹಾಗೇ ನೋಡಿದಾಗ ಹೈದರಾಲಿಯ ವಕೀಲನಾಗಿ ಬಂದ ಸರ್ದಾರ್‌ಖಾನ್ ಕಣ್ಣಿಗೆ ಬಿದ್ದು ಬೇಡವೆಂದರೂ ಮುಖದ ಮೇಲೆ ಮಂದಹಾಸ ಮೂಡಿ, ಆತನನ್ನು ಆಲಿಂಗಿಸಿಕೊಳ್ಳಬೇಕೆಂಬ ಪ್ರೀತಿ ಉಕ್ಕಿಬಂದರೂ ಅದನ್ನು ಪ್ರಯತ್ನ ಪೂರ್ವಕವಾಗಿ ತಡೆದು ಕುಳಿತರು, ನಾಯಕರು.

ವಿಪ್ರವೃಂದದಿಂದ ರಾಜಾಶೀರ್ವಾದ ಮೊದಲಾದ ಸಾಂಪ್ರದಾಯಿಕ ಗೌರವಗಳು ಸಂದು, ಅವರಿತ್ತ ದೇವತಾಪ್ರಸಾದವನ್ನು ನಾಯಕರು ಸ್ವೀಕರಿಸಿದ ಬಳಿಕ, ಪ್ರಧಾನಿ ಪರಶುರಾಮ ನಾಯಕ ಎದ್ದು ನಿಂತು ನಮಸ್ಕರಿಸಿ –

“ಸೀರ್ಯದಿಂದ ಹೈದರಾಲಿಖಾನ್ ಸಾಹೇಬರವರ ವಕೀಲರು ಕಾಣಿಕೆಗಳೊಡನೆ ತಮ್ಮನ್ನು ಕಾಣಲು ಬಂದಿದ್ದಾರೆ” – ಎಂದು ಹೇಳಿದ.

ಪರಶುರಾಮನಾಯಕ ಆ ಮಾತು ಹೇಳುತ್ತಿದ್ದ ಹಾಗೇ ನವಾಬರ ವಕೀಲರ ಕಡೆಯ ಭಟರು ಬೆಳ್ಳಿಯ ಹರಿವಾಣಗಳಲ್ಲಿ ತಮ್ಮ ಮುಂದೆ ತಂದೊಪ್ಪಿಸಿದ ಕಾಣಿಕೆಗಳನ್ನು ನೋಡುತ್ತಾ ಆ

ರತ್ನಾಭರಣಗಳ ಕಾಣಿಕೆಯೊಂದಿಗಿದ್ದ ಗುಲಾಬಿಹೂಗಳ ಪುಷ್ಪಗುಚ್ಛವೊಂದನ್ನು ದಿಟ್ಟಿಸಿ ನೋಡಿ, ಅದನ್ನು ಕೈಗೆ ತೆಗೆದುಕೊಂಡು –

"ನಮಗೆ ಬಹು ಪ್ರಿಯವಾದ ಗುಲಾಬಿ ಹೂವುಗಳಿವು"

- ಎಂದೊಮ್ಮೆ ಕಂಪು ಬೀರುವ ಗುಲಾಬಿಯ ವಾಸನೆಯನ್ನು ಮೂಸಿ –

"ಇದನ್ನು ನಮ್ಮ ಖಾಸಾಕೋಣೆಗೆ ತಲುಪಿಸು, ಮಿಕ್ಕ ಕಾಣಿಕೆಗಳು ಭಂಡಾರಕ್ಕೆ ಸೇರಲಿ"

- ಎಂದಷ್ಟೇ ಹೇಳಿ, ಮಿಕ್ಕ ಕಾಣಿಕೆಗಳನ್ನು ಕೈಮುಟ್ಟಿ ಸ್ವೀಕರಿಸಿದಂತೆ ಮಾಡಿ, ಆ ಹರಿವಾಣಗಳು ತಮ್ಮ ಎದುರಿನಿಂದ ಹೋದ ಬಳಿಕ, ಸರ್ದಾರ್‌ಖಾನ್‌ನತ್ತ ನೋಡಿ, ನಾಯಕರು –

"ನವಾಬ್ ಸಾಹೇಬರು ಕುಶಲವೇ ? ಅವರ ಕುಟುಂಬವರ್ಗ ಕ್ಷೇಮದಿಂದಿದೆಯೇ ?"

-ಎಂದು ಕುಶಲಪ್ರಶ್ನೆ ಮಾಡಿದರು.

"ಖುದಾನ ಕೃಪೆಯಿಂದ ನವಾಬ್ ಸಾಹೇಬರು, ಅವರ ಕುಟುಂಬ-ಆಪ್ತವರ್ಗ ಎಲ್ಲಾ ಕ್ಷೇಮದಿಂದಿದ್ದಾರೆ. ನವಾಬ್ ಸಾಹೇಬರು ತಮಗೆ ತಲುಪಿಸುವಂತೆ ಹೇಳಿ, ಈ ಪತ್ರವನ್ನು ಕಳಿಸಿದ್ದಾರೆ"

- ಸರ್ದಾರ್‌ಖಾನ್ ನಾಯಕರಿಗೆ ವಂದಿಸಿ ತನ್ನ ಬಳಿಯಲ್ಲಿದ್ದ ನವಾಬರ ಕಾಗದವಿದ್ದ ಕಿನಕಾಪಿನ ಥೈಲಿಯನ್ನು ತಾನೇ ನಾಯಕರತ್ತ ನಡೆದು ಒಪ್ಪಿಸಿದ.

ತನ್ನ ಕೈ ಮುಟ್ಟಿದ ಸರ್ದಾರ್‌ಖಾನನ ಕೈಯನ್ನು, ಕಾಗದ ತೆಗೆದುಕೊಳ್ಳುವ ನೆಪದಿಂದ ಪ್ರೀತಿಯಿಂದ ನೇವರಿಸಿ-

"ಈ ಪತ್ರಕ್ಕಾಗಿ ನಮ್ಮ ಕೃತಜ್ಞತೆಗಳು" – ಎಂದಷ್ಟೇ ಹೇಳಿ, ಕಾಗದವಿದ್ದ ಥೈಲಿಯನ್ನು, ತಮ್ಮ ಬಳಿ ಬಂದ ಪ್ರಧಾನಿಯ ಕೈಗಿತ್ತು, ಸ್ವಸ್ಥಾನಕ್ಕೆ ಮರಳಿದ ಸರ್ದಾರ್‌ಖಾನ್‌ನತ್ತ ನೋಡಿ –

"ಇದೇನು ನಮಗೆ ಬರೆದ ಆಪ್ತಪತ್ರವೋ, ಸಭೆಯಲ್ಲೇ ಓದಿಸಬಹುದೋ ?"

-ಎಂದು ಕೇಳಿದರು ನಾಯಕರು.

"ಸಭೆಯಲ್ಲೇ ಓದಿಸಬಹುದು. ತಮಗೆ ಖುಷಿತಂದ ಜವಾಬನ್ನು ಕಾಗದ ಬರೆಸಿದರೂ ಆದೀತು, ಸಭೆಯಲ್ಲೇ ಹೇಳಿದರೂ ಆದೀತು. ತಾವಿಬ್ಬರೂ ದೊಡ್ಡವರು. ತಮ್ಮಿಬ್ಬರ ಸಂಬಂಧ ಹಾಲು-ಸಕ್ಕರೆಯಂತಾಗಬೇಕೆಂಬುದಷ್ಟೇ ನನ್ನಂಥ ನೌಕರಜನರ ಚಿಂತೆ"

-ಎಂದ ಸರ್ದಾರ್‌ಖಾನ್.

"ಒಳ್ಳೆಯವರು ಬಯಸಿದ್ದು ಸುಳ್ಳಾಗುವುದಿಲ್ಲ"

- ಎಂದಷ್ಟೇ ಹೇಳಿ, ಪರಶುರಾಮನಾಯಕನತ್ತ ತಿರುಗಿ –

"ಪತ್ರವನ್ನೋದಿಸಿ" – ಎಂದು ಹೇಳಿದರು ನಾಯಕರು.

ಪ್ರಧಾನಿಗಳ ಕೈಯಿಂದ ಪಡೆದ ಪತ್ರವನ್ನು ಕರಣಿಕರೊಬ್ಬರು ಸಭೆಗೆ ಓದಿ ಹೇಳಿದರು –

"ಶ್ರೀಮನ್ಮಹಾನಾಯಕಾಚಾರ್ಯ ಕಾಮಗೇತಿ ಕಸ್ತೂರಿರಂಗಪ್ಪನಾಯಕರ ಮದಕರಿನಾಯಕರು ಸಂಸ್ಥಾನ ಚಿತ್ರದುರ್ಗ ಮೊಹಬರ್ ಹೂ ಅಜಿತರ್ಫ್‌ನವಾಬ್ ಸಾಹೇಬ್ ಹೈದರಲ್ಲಿಖಾನ್ ಬಹದ್ದೂರ್ ಸಂಸ್ಥಾನ ಶ್ರೀರಂಗಪಟ್ಟಣ ಸಲ್ಲಾಂ ಬಾವಜಾ ಸಲ್ಲಾಂ ಮೊಹವಿಲ್ಲ ಮಕಷದು ಅಂಕಿ ದರ್ರಿವಿಲ್ಲಾ ಭಾಪಜಿಲ್ಲಾ ಯಿಲ್ಲಾ ಹೀ ವೈಶಾಖ ಶುದ್ಧ ದಶಮೀ ಮೊಕ್ಕಾಂ ಶಿರಾದಲ್ಲಿ ಖುಷಿ ತಿಳಿದು ಸಾಹೇಬ್ ತಮ್ಮಾಷಾದ್ ಮಾನೆದರ ಹಮೇಷ ಕಲಮೀ ಮಾಡುತ್ತಾ ಬರಬೇಕು.

"ದಿಗರ್ ನಮ್ಮ ಭಾವಮೈದುನರಾದ ಮುಖ್ದುಂಸಾಹೇಬ್, ಮೋಹಿದೀನ್ ಸಾಹೇಬರು ಹತ್ತು ಸಾವಿರ ಫೌಜು ನಿಶಿ ಬೂದಿಹಾಳು ಚರಾಯದಲ್ಲಿರುವಾಗ್ಗೆ ಮತ್ತೋಡು ಹಾಲಪ್ಪನಾಯಕ ತಮಗೆ ಆಗದವನಾಗಿ ಮುಖ್ದುಂ ಸಾಹೇಬ್ ಮೋಹಿದೀನ್ ಸಾಹೇಬರಿಗೆ ಹೇಳಿಕೊಂಡದ್ದು: 'ನಮ್ಮ ದನಗಳು ನಮ್ಮ ಸರಹದ್ದಿನಲ್ಲಿ ಮೇಯುತ್ತಾ ಇರುವಲ್ಲಿ ಚಿತ್ರದುರ್ಗದವರು ಜಬರ್‌ದಸ್ತಿನಿಂದ ತೆಗೆದುಕೊಂಡು ಹೋಗಿದ್ದಾರೆ, ತಮ್ಮ ಸವಾರಿಯು ಸರಹದ್ದಿಗೆ ಬಂದಲ್ಲಿ ನಮ್ಮ ದನಗಳನ್ನು ನಾವು ತೆಗೆದುಕೊಂಡು ಬರುತ್ತೇವೆ' ಎಂದು ಗೈರ್ ವಾತಾ ಆರ್ಜಿ ಮಾಡಿ ಅದೂನೂ ನಮ್ಮ ತಿಳಿಸದೇ ಫೌಜು ಸ್ವಾಧೀನದಲ್ಲಿರದೆ ತಮ್ಮ ಶೀಮೆಗೆ ಬಂದ ದನಗಳ ತಿರುಗಿಸಿದ್ದಕ್ಕೆ ತಮಗೆ ಕೋಪ ಬಂದು ಲಡಾಯಿ ಮಾಡುವಾಗ್ಗೆ ಪಡಾವು ಸಿಕ್ಕಿದರಂತೆ ನಮ್ಮ ಭಾವಮೈದುನರೆಲ್ಲಾ - ತಮ್ಮವರೇ ಇದ್ದಾರೆ. ನಮ್ಮ ನಿಮ್ಮ ಋಣಾನುಬಂಧ ಪೂರ್ವದಿಂದಲೂ ಇರಲಿಕ್ಕೆ ಇಂಥಾದ್ದು ಬರಲಿಕ್ಕಿಲ್ಲ. ನಮ್ಮಲ್ಲಿಗೆ ಸಾಹೇಬ್ ಮನಸೂಬ್‌ದಾರರಿಗೆ ಕಳುಹಿಸಿ ಕೊಡುವಂತೆ ಮಾಡಿಸಬೇಕು ನವಾಬ್ ಸಾಹೇಬರ ಮೊಹರು ಇದೆ."

ಪತ್ರವಾಚನವನ್ನು ಮುಗಿಸಿ, ಪತ್ರವನ್ನು ಪ್ರಧಾನಿಗಳ ಕೈಗಿತ್ತ.

ಪತ್ರವಾಚನವನ್ನು ಗಂಭೀರ ಮುಖಮುದ್ರೆಯಿಂದ ಕೇಳಿದ ನಾಯಕರು, ಏನೊಂದೂ ಮುಖವಿಕಾರ ಮಾಡದೆ –

"ನವಾಬರ ಸಂಸ್ಥಾನದಲ್ಲಿ ಅವರಿಗೆ ತಿಳಿಯದೆ ಮರದ ಎಲೆಯೂ ಅಲ್ಲಾಡುವುದಿಲ್ಲ ಎಂದು ನಾವು ಕೇಳಿದ್ದೇವೆ, ನಿಜವೇ ?" – ಎಂದು ಕೇಳಿದರು.

"ತಮ್ಮ ಸಂಸ್ಥಾನದ ಆಗುಹೋಗುಗಳ ಬಿಗಿ ಹೇಗಿಟ್ಟುಕೊಳ್ಳಬೇಕೆಂಬುದು ರಾಜರುಗಳಿಗೆ ತಿಳಿದ ಕರ್ತವ್ಯವೇ ಆಗಿರುತ್ತೆ."

"ಅದು ನ್ಯಾಯವೇ ಆದರೂ ಅವರ ಹತ್ತು ಸಾವಿರ ಸೇನೆ, ನಮ್ಮ ಗಡಿ ದಾಟಿ ಹಸು ಕರು ಹಿಡಿದು, ವಿನಾಕಾರಣ ಲಡಾಯಿ ಮಾಡಿದ್ದು ತಮಗೆ ತಿಳಿಯದೆಂದು ಪತ್ರದಲ್ಲಿ ಬರೆಸಿದ್ದಾರಲ್ಲಾ."

“ಪತ್ರ ಹೇಗೆ ಬರೆಸಬೇಕೆಂಬುದು ಅವರ ಮರ್ಜಿ, ಅದಕ್ಕೆ ಹೇಗೆ ಉತ್ತರ ಕೊಡಬೇಕು ಎಂಬುದು ತಮ್ಮ ಖುಷಿ. ಪತ್ರದಿಂದ ನಮ್ಮ ಖಾವಂದರ ಅಭಿಪ್ರಾಯ ತಮಗೆ ಅರ್ಥವಾಗಿದೆ. ಅದಕ್ಕೆ ತಮ್ಮ ಮರ್ಜಿ ಇದ್ದ ಹಾಗೆ ಉತ್ತರ ಬರೆಸಬಹುದು.”

- ಸರ್ದಾರ್‌ಖಾನ್ ಗಂಭೀರವಾಗಿ ಹೇಳಿದ.

“ಈ ಯುದ್ಧದಿಂದ ನಮಗೆಷ್ಟು ನಷ್ಟವಾಗಿದೆ ಎಂದು ನವಾಬ್ ಸಾಹೇಬರಿಗೆ ಗೊತ್ತೇ ?”

“ನಷ್ಟಕ್ಕೆ ಕಾರಣ ಮತ್ತೋಡು ನಾಯಕರು ಎಂದು ಬಾದಷಹರು ಹೇಳಿದ್ದಾರಲ್ಲಾ.”

“ನಿಮ್ಮ ಕುಮ್ಮಕ್ಕಿಲ್ಲದಿದ್ದರೆ ಮತ್ತೋಡಿನವರಿಗೆ ನಮ್ಮ ಹಸು ಹಿಡಿಯುವುದಿರಲಿ, ಹುಲ್ಲು ಮುಟ್ಟುವಷ್ಟು ಧೈರ್ಯವೂ ಬರುತ್ತಿರಲಿಲ್ಲ. ದೈವಾನುಗ್ರಹದಿಂದ ನಮಗೆ ಜಯವಾಯಿತು. ನವಾಬರ ಭಾವಮೈದುನರು ನಮಗೆ ಸೆರೆಸಿಕ್ಕಿದರು. ಈಗ ನವಾಬರು ಈ ರೀತಿ ಕಾಗದ ಬರೆಸಿದರು. ಹಾಗಾಗದೆ ಬೇರೆ ರೀತಿಯಾಗಿದ್ದಲ್ಲಿ ನಿಮ್ಮ ನವಾಬರೇನು ಮಾಡುತ್ತಿದ್ದರು ?”

- ಕೊಂಚ ಬಿಗುವಿದ್ದ ಧ್ವನಿಯಲ್ಲಿ ಹೇಳಿದರು ನಾಯಕರು.

“ಅದು ತಮ್ಮ ಅವರ ಊಡೆಗೆ ಬಿಟ್ಟ ವಿಚಾರ. ನಾವು ನವಾಬರು ಹೇಳಿದಷ್ಟನ್ನು ಅರಿಕೆ ಮಾಡಲು ಬಂದವರು. ತಾವು ಹೇಳಿದ್ದನ್ನು ಅವರಿಗೆ ಒಪ್ಪಿಸುತ್ತೇವೆ.”

“ಆಯಿತು, ತಾವು ನಿಶ್ಚಿಂತವಾಗಿರಿ. ಈ ಬಗ್ಗೆ ನಮ್ಮ ಆಪ್ತರೊಂದಿಗೆ ವಿಚಾರಿಸಿ ಸೂಕ್ತ ಉತ್ತರ ನಾಳೆ ಕೊಡುತ್ತೇವೆ.”

“ತಮ್ಮ ಚಿತ್ರ - ಮಿತ್ರರು ಮಿತ್ರರಾಗಿರಬೇಕೆಂಬುದಷ್ಟೇ ನಮ್ಮ ಅಪೇಕ್ಷೆ.”

- ಯಾವ ಏರಿಳಿತವೂ ಇಲ್ಲದ ಧ್ವನಿಯಲ್ಲಿ ಹೇಳಿದ ಸರ್ದಾರ್‌ಖಾನ್.

“ನಿಮ್ಮ ಅಪೇಕ್ಷೆಯನ್ನು ನಾವು ಮರೆಯುವುದಿಲ್ಲ”

- ಎಂದು ಸರ್ದಾರ್‌ಖಾನ್‌ರಿಗೆ ಉತ್ತರವಿತ್ತ ನಾಯಕರು, ಅಂದಿನ ಓಲಗ ಮುಗಿಸಲು ಪ್ರಧಾನಿಗಳಿಗೆ ಸೂಚನೆ ನೀಡಿದರು.

ಆ ಸೂಚನೆಯಂತೆ ನೆರೆದ ಸಭಿಕರೆಲ್ಲರಿಗೂ ಪುಷ್ಪ, ಗಂಧ, ವೀಳ್ಯಗಳನ್ನು ಕೊಟ್ಟ ಬಳಿಕ ಅಂದಿನ ಸಭೆ ಬರಖಾಸ್ತಾಯಿತು.

೧೩

ಓಲಗ ಮುಗಿಸಿಕೊಂಡು ತಮ್ಮ ಕೊಠಡಿಗೆ ಹಿಂದಿರುಗಿದ ಮದಕರಿನಾಯಕ, ದಾಸದಾಸಿಯರ ನೆರವಿನಿಂದ ಓಲಗದ ಉಡುಪನ್ನು ಬಿಚ್ಚಿ, ನಿತ್ಯದುಡುಗೆಯನ್ನು ಧರಿಸಿದ ಬಳಿಕ,

ಸೇವಕರನ್ನು ಹೊರಗೆ ಕಳಿಸಿ, ಆತನ ಕಣ್ಣಿಗೆ ಕಾಣುವಂತೆ, ಪುಷ್ಪಕರಂಡದಲ್ಲಿರಿಸಿದ ಗುಲಾಬಿ ಹೂಗಳ ಗುಚ್ಛವನ್ನು ಕೈಗೆ ತೆಗೆದುಕೊಂಡು, ಅದನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಹೂವುಗಳ ತೊಟ್ಟುಗಳನ್ನು ಕಟ್ಟಿದ ಎಲೆಗಳ ಮಧ್ಯದಲ್ಲಿ ಕಂಡೂ ಕಾಣದಂತಿದ್ದ ನೀಲಿಯ ಬಣ್ಣದ ಕಾಗದವನ್ನು ನೋಡಿ, ಕಟ್ಟಿದ ದಾರವನ್ನು ಸಡಲಿಸಿ, ಎಚ್ಚರದಿಂದ ಕಾಗದವನ್ನು ಹೊರತೆಗೆದು ನೋಡಿದ.

ಕಿರುಬೆರಳಿನ ಅರ್ಧದಷ್ಟು ಸಣ್ಣದಾದ, ಈರುಳ್ಳಿಯ ಪೊರೆಯಷ್ಟು ನವಿರಾದ ಚೀನಿಕಾಗದದಲ್ಲಿದ್ದುದು ಎರಡೇ ಸಾಲು ಸೂಜಿಯಲ್ಲಿ ಕೊರೆದಷ್ಟು ಸಣ್ಣ ಬರಹ –

'ನಮ್ಮ ಗುಟ್ಟು ಬಯಲಾಗಿ ಸಂಬಂಧ ಮುಗಿಯಿತು. ಮತ್ತೆ ತಮ್ಮನ್ನು ನೋಡುತ್ತೇವೆಂಬ ಆಸೆ ನಮಗಿಲ್ಲ. ಇದುವರೆಗಿನ ವಿಶ್ವಾಸಕ್ಕೆ ಸಾವಿರ ಸಲಾಂಗಳು. ಉಳಿದ ವಿಷಯ ತಮ್ಮ ಮರ್ಜಿ ಬಂದಂತೆ ಮಾಡಿ. ಖುದಾ ಹಾಫೀಜ್.'

ಆ ಕಾಗದವನ್ನು ಕಷ್ಟಪಟ್ಟು ಓದಿದ ಮದಕರಿನಾಯಕನಿಗೆ, ಆ ಕಾಗದ ಸಾರಿದ ರುದ್ರ ಸಂದೇಶ ಮನವರಿಕೆಯಾಗಿ, ಹೃದಯವನ್ನಾರೋ ಹಿಡಿದು ಹೊಸಕಿದಂತಾಗಿ, ಮುಂದೇನು ಮಾಡಬೇಕೆಂದು ಚಿಂತಿಸುತ್ತಾ, ಅತ್ತಿಂದಿತ್ತ ತಿರುಗಾಡಿದ.

ಆತ ಹಾಗೆ ಚಿಂತಿಸುತ್ತಾ ತಿರುಗಾಡುತ್ತಿರುವಾಗಲೇ ಅಲ್ಲಿಗೆ ಬಂದ ಪರಶುರಾಮನಾಯಕ, ವಿವರ್ಣವಾದ ನಾಯಕರ ಮುಖವನ್ನು ನೋಡಿ –

"ಅಣ್ಣಾ, ಏನಾಯಿತು ?" – ಎಂದು ಕೇಳಿದ.

ಆ ಪ್ರಶ್ನೆಗೆ ಉತ್ತರವಾಗಿ, ಮದಕರಿನಾಯಕ ಏನೊಂದೂ ಮಾತಾಡದೆ, ತನ್ನ ಕೈಯಲ್ಲಿ ಮುಚ್ಚಿಟ್ಟುಕೊಂಡಿದ್ದ ಕಾಗದವನ್ನು ಪರಶುರಾಮನಾಯಕನ ಕೈಗಿತ್ತ.

ಆ ಪತ್ರವನ್ನೋದಿದ ಪರಶುರಾಮನಾಯಕನ ಮುಖದ ಬಣ್ಣವೂ ಇಳಿದುಹೋಗಿ –

"ಇದು ಹೇಗಾಯಿತು ? ಈ ರಹಸ್ಯವನ್ನು ಹೊರಗೆಡಹಿದ ದ್ರೋಹಿಗಳಾರು ?"

-ಎಂದು ಚಿಂತಾಕ್ರಾಂತನಾಗಿ ಕೇಳಿದ.

"ನನಗೊಂದೂ ಅರ್ಥವಾಗುತ್ತಿಲ್ಲ, ಪರಶುರಾಮಣ್ಣ. ವಿಷಯ ತಿಳಿಯಿತಲ್ಲ. ಈಗೇನು ಮಾಡಬೇಕೆನ್ನುತ್ತೀಯ? ದುರ್ವಿಧಿ ನಮ್ಮ ಗೆಲುವಿನ ಸಂತೋಷಕ್ಕೂ ಕಣ್ಣೀರಿನ ಕಹಿ ಬೆರೆಸಿತು. ನಮಗೆ ನೆರವು ನೀಡಿ ಸರ್ದಾರ್‌ಖಾನರು ತಮ್ಮ ಕುತ್ತಿಗೆಗೆ ತಾವೇ ಉರಲು ಹಾಕಿ ಕೊಂಡಂತಾಯಿತು."

"ಆಗಬಾರದ್ದು ಆಯಿತು. ಈಗೇನು ಮಾಡುವುದು ?"

"ನಾನೂ ಅದನ್ನೇ ಯೋಚಿಸುತ್ತಿದ್ದೇನೆ, ಪರಶುರಾಮಣ್ಣ. ಒಂದು ಮಾತಂತೂ ಖಚಿತ - ಆದದ್ದಾಗಲಿ, ಸರ್ದಾರ್‌ಖಾನರನ್ನು ನವಾಬನ ಕತ್ತಿಗೆ ಬಲಿಕೊಡುವುದಿಲ್ಲ."

- ದೃಢನಿಶ್ಚಯ ಮಾಡಿದಂತೆ ಹೇಳಿದ ಮದಕರಿನಾಯಕ.

"ಅದಕ್ಕೆ ದಾರಿ ?"

"ದೇವರು ತೋರಿಸುತ್ತಾನೆ. ನೀನೂ ಯೋಚಿಸು. ನಾವೂ ಆಲೋಚನೆ ಮಾಡುತ್ತೇವೆ - ಹೇಗೂ ನಾಳಿನ ಓಲಗ ಸೇರುವವರೆಗೂ ಸಮಯವಿದೆ. ಸರ್ದಾರ್‌ಖಾನರು ಬಂದಿದ್ದಾರೆ ಎಂದು ಕೇಳಿದಾಗಿನಿಂದಲೂ ಅವರನ್ನು ನೋಡಬೇಕೆಂದು ನನಗಾಸೆಯಿತ್ತು. ಆದರೆ ಈ ಕಾಗದ ಆ ಬಯಕೆಗೆ ಕಂಟಕವಾಯಿತು. ಸರ್ದಾರ್‌ಖಾನರ ಗುಟ್ಟು ಬಯಲಾಗಿದೆ ಎಂದಮೇಲೆ, ಅವರ ಜೊತೆಗೆ ಬಂದವರೆಲ್ಲಾ ನವಾಬರ ಗೂಢಚಾರರೇ. ಆದ್ದರಿಂದ ಯಾವ ಕಾರಣಕ್ಕಾಗಿಯೂ ನಾವು ಅವರನ್ನು ಏಕಾಂತವಾಗಿ ಭೇಟಿಮಾಡಲು ಸಾಧ್ಯವಿಲ್ಲ. ಅವರ ತಲೆಯನ್ನು ಉಳಿಸಿಕೊಳ್ಳುವ ಯೋಚನೆ ಮಾಡುವವರೆಗೂ ನಮ್ಮವರು ಯಾರೂ ಅವರನ್ನು ಕಾಣುವುದು ಬೇಡ. ಹಾಗೇ ಅವರಿರುವ ಅತಿಥಿಗೃಹಕ್ಕೆ ಬಲವಾದ ಕಾವಲು ಹಾಕಿಸಿ, ಅವರ ಕಡೆಯವರು ಯಾರೂ ನಗರದಲ್ಲಿ ಓಡಾಡಲು, ಯಾರನ್ನಾದರೂ ನೋಡಲು ಅವಕಾಶವಾಗದಂತೆ ಎಚ್ಚರವಹಿಸು. ಆಯಿತು, ನೀನೂ ಆಲೋಚನೆ ಮಾಡು. ಏನಾದರೂ ದಾರಿ ಕಂಡರೆ, ಎಷ್ಟೇ ಹೊತ್ತಾದರೂ ಬಂದು ನನಗೆ ತಿಳಿಸು. ಏನಿದ್ದರೂ ನಾಳಿನ ಓಲಗದ ವೇಳೆಗೆ ಎಲ್ಲವೂ ನಿರ್ಧಾರ ವಾಗಬೇಕು" – ಎಂದು ಹೇಳಿದ ಮದಕರಿನಾಯಕ.

"ಆಯಿತು" – ಎಂದಷ್ಟೇ ಉತ್ತರವಿತ್ತು ಹೋದ ಪರಶುರಾಮನಾಯಕ.

ಆತ ಹೋದ ಬಳಿಕ ಮುಂದೇನು ಮಾಡುವುದೆಂದು ಚಿಂತಿಸುತ್ತಾ, ಅತ್ತಿಂದಿತ್ತ ಶತಪಥ ಹಾಕಲಾರಂಭಿಸಿದ – ಮದಕರಿನಾಯಕ.

* * *

ನಾಯಕರಿತ್ತ ಮಾತಿನಂತೆ ಮರುದಿನ ಮತ್ತೆ ಓಲಗ ನೆರೆಯಿತು. ಹಿಂದಿನ ದಿನ ನಡೆದ ಓಲಗದಲ್ಲಿ ಇದ್ದ ಜನರೆಲ್ಲರೂ ಇದ್ದರು. ಹೆಚ್ಚಿನವರೆಂದರೆ - ಸೆರೆಯಿಂದ ಹೊರಬಂದು, ತುಂಬಿದ ಓಲಗದಲ್ಲಿ ಯಾರ ಮುಖವನ್ನೂ ಕಣ್ಣೆತ್ತಿ ನೋಡಲಾಗದೆ ತಲೆತಗ್ಗಿಸಿ ಕುಳಿತ ಮೊಕ್ದುಂ ಸಾಹೇಬ್, ಮೋಹಿಯುದ್ದೀನ್ ಸಾಹೇಬರು. ಅವರ ಮುಂದಿನ ಭವಿಷ್ಯವೇನೆಂದು ನಿರ್ಧರಿತವಾಗಬೇಕಾಗಿದ್ದ ಸಭೆಯಲ್ಲಿ - ಮೋಡಕಟ್ಟಿ, ಗಾಳಿಯಾಡದೆ ಆಡುವ ಉಸಿರಾಟಕ್ಕೂ ತಡೆಯಾಗುವಂಥ ಮಳೆಗಾಲದ ಹಗಲಿನಂಥ ಗಂಭೀರ, ನಿಸ್ತೇಜ, ಕಾತರಪೂರ್ಣ ವಾತಾವರಣವಿತ್ತು- ಅಲ್ಲಲ್ಲಿ ನಿಂತ ದಾಸದಾಸಿಯರು ಗಾಳಿ ಬೀಸುತ್ತಿದ್ದರೂ,

ಎಲ್ಲರ ಕಣ್ಣೂ - ಆಸನದಲ್ಲಿ ಗಂಭೀರ ಮುಖಮುದ್ರೆಯಿಂದ ಕುಳಿತ ನಾಯಕರತ್ತ.

ಎಲ್ಲರ ಮನಸ್ಸಿನಲ್ಲೂ ಒಂದೇ ಪ್ರಶ್ನೆ–

'ಹೈದರಾಲಿಯವರ ಪತ್ರಕ್ಕೆ ನಾಯಕರೇನು ಉತ್ತರ ಕೊಡುವರು ?'

ಎಂದಿನಂತೆ ಆಪ್ತರ ಗೋಷ್ಠಿಯಲ್ಲಿ ನವಾಬರ ಪತ್ರಕ್ಕೆ ಉತ್ತರ ಕೊಡುವ ಬಗ್ಗೆ ಯಾವ ಚರ್ಚೆಯೂ ನಡೆದಿರಲಿಲ್ಲವಾದುದರಿಂದ, ನಾಯಕರ ಆಪ್ತರಿಗೂ 'ಅವರೇನು ನಿರ್ಧಾರ ಮಾಡಿದ್ದಾರೋ ?' ಎಂದು ತಿಳಿಯುವ ಕಾತರವಿತ್ತು.

ಆ ಭಾವನೆಯಿಂದ ತಮ್ಮತ್ತಲೇ ನೋಡುತ್ತಿದ್ದ ಸಭಾಸದರೆಲ್ಲರ ಮುಖವನ್ನೂ ನೋಡುತ್ತಾ ದೃಢಗಂಭೀರ ಧ್ವನಿಯಲ್ಲಿ ಹೇಳಿದರು, ನಾಯಕರು –

"ನಿನ್ನೆಯ ದಿನದ ಓಲಗದಲ್ಲಿ ಓದಿದ ಹೈದರಾಲಿಖಾನ್‌ನವಾಬರ ಪತ್ರದ ವಿಷಯ ತಮಗೆಲ್ಲರಿಗೂ ತಿಳಿದಿದೆ. ಆ ಬಗ್ಗೆ ನಾವೂ ಸಾಕಷ್ಟು ಚಿಂತೆಮಾಡಿ ಒಂದು ನಿರ್ಧಾರಕ್ಕೆ ಬಂದಿದ್ದೇವೆ.

"ಹೈದರಾಲಿಖಾನರು ಮತ್ತೋಡಿನ ಯುದ್ಧ ತಮಗೆ ತಿಳಿಯದಂತೆ ನಡೆದ ಅಚಾತುರ್ಯ, ಮತ್ತೋಡು ಹಾಲಪ್ಪನಾಯಕರ ಮೋಸದ ಮಾತಿಗೆ ತಮ್ಮ ಭಾವಮೈದುನರು ಮರುಳಾದದ್ದು – ಈ ದುರ್ಘಟನೆಗೆ ಕಾರಣವಾಯಿತು ಎಂದು ಬರೆದಿದ್ದಾರೆ. ಹಾಗೇ ನಮಗೂ ಅವರಿಗೂ ಸ್ನೇಹಸಂಬಂಧವಲ್ಲದೆ ಬೇರೆ ಬಗೆಯ ಭಾವನೆಯೇ ಇಲ್ಲವೆಂದು ಹೇಳಿದ್ದಾರೆ. ನವಾಬರು ವಯಸ್ಸಿನಲ್ಲಿ, ಸಂಸ್ಥಾನದ ಅಂತಸ್ತಿನಲ್ಲಿ ನಮಗಿಂತ ಹಿರಿಯರು. ಅವರ ಮಾತನ್ನು ನಾವು ನಂಬುತ್ತೇವೆ. ಅವರ ಅಪೇಕ್ಷೆಯಂತೆ, ನವಾಬರ ಭಾವಮೈದುನರನ್ನು ಯುದ್ಧಾಪರಾಧದ ದೋಷದಿಂದ, ನಮ್ಮ ಸೆರೆಯಿಂದ ಮುಕ್ತಿಗೊಳಿಸಿದ್ದೇವೆ. ಈ ಗಳಿಗೆಯಿಂದ ಅವರು ಸ್ವತಂತ್ರರು. ನವಾಬರು ಬಯಸಿದಂತೆ ಆ ಸರ್ದಾರರಿಬ್ಬರನ್ನೂ ಯುಕ್ತ ಮರ್ಯಾದೆಯೊಂದಿಗೆ ಸೀರ್ಯಕ್ಕೆ ಕಳುಹಿಸಿಕೊಡುತ್ತೇವೆ. ಆದ ಸೋಲಿನ ಅಪಮಾನವನ್ನು ಅವರು ಮರೆತು, ನಾವೆಷ್ಟು ಸ್ನೇಹಭಾವದಿಂದ ಅವರನ್ನು ಕಳುಹಿಸಿಕೊಡುತ್ತಿದ್ದೇವೆಯೋ, ಆ ಸ್ನೇಹ ಭಾವ ಮತ್ತಷ್ಟು ವೃದ್ಧಿಯಾಗುವಂತೆ, ಅವರಿಬ್ಬರೂ ನವಾಬರಲ್ಲಿ ತಿಳಿಸಬೇಕು; ಹಾಗೆ ತಿಳಿಸುತ್ತಾರೆ ಎಂದು ನಂಬಿದ್ದೇವೆ.

"ಈ ಸ್ನೇಹದ ದಾರಿಯಲ್ಲಿ, ನವಾಬರಿಗಿಂತ ಒಂದು ಹೆಜ್ಜೆ ಮುಂದೆ ಹೋಗಬೇಕೆಂಬುದು ನಮ್ಮ ಬಯಕೆ.

"ನಮ್ಮ ಆಸ್ಥಾನದಲ್ಲಿ ಶ್ರೀರಂಗಪಟ್ಟಣದ ವಕೀಲರೊಬ್ಬರು ಇರಬೇಕೆಂಬುದು ನವಾಬರ ಬಹುದಿನದ ಅಪೇಕ್ಷೆಯಾಗಿತ್ತು. ಹಿಂದೆ ನಮ್ಮ ಆಸ್ಥಾನಕ್ಕೆ ಬಂದ ನವಾಬರವರ ಅಂಚೆಹರಿಕಾರರು ತಪ್ಪಿನಡೆದಿದ್ದರಿಂದ, ಅವರನ್ನು ಇಲ್ಲಿಂದ ಕಳುಹಿಸಬೇಕಾಗಿಬಂದಿತೆಂಬುದು ತಮಗೆ ಎಲ್ಲರಿಗೂ ತಿಳಿದ ವಿಷಯ. ಈಗ ಪರಸ್ಪರ ಸ್ನೇಹ ವರ್ಧಿಸುತ್ತಿರುವ ಈ ಸಮಯದಲ್ಲಿ ನಾವು ನವಾಬರ

ಪ್ರತಿನಿಧಿಗಳಾಗಿ ಬಂದಿರುವ ಸರ್ದಾರ್ಖಾನರನ್ನು ನಮ್ಮ ಆಸ್ಥಾನದಲ್ಲಿ ನವಾಬರ ಪ್ರತಿನಿಧಿಗಳೆಂದು ಅಂಗೀಕರಿಸಿ, ಅವರು ಇಲ್ಲಿ ನಿಂತು, ತಮ್ಮ ಕಾರ್ಯ ನಿರ್ವಹಿಸಬೇಕೆಂದು ನಿರ್ಧರಿಸಿದ್ದೇವೆ. ಈ ವಿಷಯವನ್ನು ಪ್ರತ್ಯೇಕ ಪತ್ರದ ಮುಖಾಂತರ ನವಾಬರಿಗೂ ತಿಳಿಸಲಾಗುವುದು. ನವಾಬರ ಭಾವಮೈದುನಂದಿರೂ ಈ ವಿಷಯವನ್ನು ತಿಳಿಸಬೇಕು.

"ಇದಕ್ಕೆ ಸಂಬಂಧಿಸಿದಂತೆ ಅಗತ್ಯವಾದ ವ್ಯವಸ್ಥೆಗಳನ್ನು ಪ್ರಧಾನಿಗಳು ಮಾಡಬೇಕು. ಬಂಧನದಿಂದ ಮುಕ್ತರಾದ ಸರ್ದಾರರಿಬ್ಬರೂ ಸರ್ದಾರ್‌ಖಾನರ ವಿನಾ ನವಾಬರಲ್ಲಿಗೆ ತೆರಳಿ ಪರಸ್ಪರ ವಿಶ್ವಾಸ ಬೆಳೆಯಲು ಕಾರಣರಾಗಬೇಕು.

"ಇದು ನಾವು ಮಾಡಿರುವ ತೀರ್ಮಾನ."

ಗಟ್ಟಿಯಾಗಿ ಉಸಿರಾಡುವ ಸದ್ದನ್ನೂ ಮಾಡದೆ ಸಭೆಯು ನಾಯಕರಾಡಿದ ಮಾತನ್ನು ಆಲಿಸಿತು. ನಾಯಕರು ತಮ್ಮ ಮಾತನ್ನು 'ನಿರ್ಧಾರ' ಎಂದು ಆಡಿದ್ದರಿಂದ, ಉಳಿದಾರಿಗೂ ಆ ಬಗ್ಗೆ ಚಕಾರವೆತ್ತಲು ಧೈರ್ಯವಾಗಲಿಲ್ಲ.

ಉಳಿದೆಲ್ಲರೂ ಮೌನವಾಗಿ ಕುಳಿತಿದ್ದಾಗ ಸರ್ದಾರ್‌ಖಾನ್ ಎದ್ದು ನಿಂತು ಹೇಳಿದ-

"ನವಾಬರ ಪತ್ರಕ್ಕೆ ರಾಜಾಸಾಹೇಬರು ತೋರಿಸಿದ ಗೌರವದಿಂದ ನಮಗೆ ತುಂಬಾ ಸಂತೋಷವಾಗಿದೆ. ನವಾಬರ ಪರವಾಗಿ ಆ ಬಗ್ಗೆ ನಾವು ರಾಜಾಸಾಹೇಬರಿಗೆ ನಮ್ಮ ಕೃತಜ್ಞತೆಯನ್ನು ಅರ್ಪಿಸುತ್ತೇವೆ. ಆದರೆ ನಮ್ಮ ಮನವಿಯೊಂದನ್ನು ರಾಜಾಸಾಹೇಬರು ಕೇಳುವ ಕೃಪೆ ಮಾಡಬೇಕು."

"ಹೇಳಿ ?"

"ತಾವು ಅಪ್ಪಣೆ ಕೊಡಿಸಿದ ಉಳಿದೆಲ್ಲ ಮಾತೂ ನನಗೆ ಮಾನ್ಯ. ಆದರೆ ನಾವಿಲ್ಲಿ ಪ್ರತಿನಿಧಿಯಾಗಿ ನಿಲ್ಲಲು ನವಾಬ್ ಸಾಹೇಬರ ಪರವಾನಗಿ ಇಲ್ಲವಾದ್ದರಿಂದ ಆ ಒಂದು ವಿಷಯದಲ್ಲಿ ತಮ್ಮ ನಿರ್ಧಾರವನ್ನು ಬದಲಿಸಬೇಕೆಂದು ಪ್ರಾರ್ಥಿಸುತ್ತೇನೆ."

-ವಿನಯಪೂರ್ಣವಾದ ಗಂಭೀರ ಧ್ವನಿಯಲ್ಲಿ ಹೇಳಿದ ಸರ್ದಾರ್‌ಖಾನ್.

"ನಮ್ಮದು ಒಂದು ನಿರ್ಧಾರ. ಅದರಲ್ಲಿ ಅರ್ಧ, ಕಾಲುಭಾಗ ಎಂದು ವಿಭಾಗವಿಲ್ಲ. ತಮಗೆ ಬೇಕಾದುದನ್ನು ಅಂಗೀಕರಿಸಿ, ಬೇಡವಾದುದನ್ನು ಬಿಡುವಂತಹುದಲ್ಲ - ನಮ್ಮ ನಿರ್ಧಾರ. ಒಪ್ಪಿದರೆ ಎಲ್ಲದಕ್ಕೂ ಒಪ್ಪಬೇಕು; ನಿರಾಕರಿಸಿದರೆ ಒಟ್ಟಿಗೇ ನಿರಾಕರಿಸಬೇಕು. ಏನು ಮಾಡುತ್ತೀರೋ - ಹೇಳಿ ?"

- ಸರ್ದಾರ್‌ಖಾನನ ಮಾತಿನಿಂದ ನಸು ಅಸಮಾಧಾನವಾದಂತೆ ಧ್ವನಿಯನ್ನು ಸ್ವಲ್ಪ ಬಿರುಸು ಮಾಡಿ ಹೇಳಿದರು ನಾಯಕರು, 'ಪ್ರತ್ಯುತ್ತರಕ್ಕೆ ಅವಕಾಶವಿಲ್ಲ' ಎಂಬಂತೆ.

ಆ ಮಾತನ್ನು ಕೇಳಿ ಸರ್ದಾರ್‌ಖಾನ್ ತಲೆತಗ್ಗಿಸಿ ಕುಳಿತು. ಅದನ್ನು ನೋಡಿದ ನಾಯಕರೇ

"ಸರ್ದಾರ್‌ಖಾನರು ನವಾಬರ ಆಶ್ರಿತರು, ಸೇನಾಧಿಕಾರಿಗಳು. ಆದರೆ ಇಲ್ಲಿರುವ ಮೊಕ್ದುಂ ಸಾಹೇಬರು, ಮೊಹಿಯುದ್ದೀನ್ ಸಾಹೇಬರು ಸೇನೆಯ ನೌಕರಿಯಲ್ಲಿ ಸರ್ದಾರ್‌ಖಾನ್‌ರಿಗಿಂತ ದೊಡ್ಡವರು; ಅದಕ್ಕಿಂತ ಹೆಚ್ಚಾಗಿ ನವಾಬರ ಭಾವಮೈದುನರು. ಒಳ ಹೊರಗೆ ನವಾಬರ ಮನಸ್ಸು ಹೇಗೆ ಎಂದು ಬಲ್ಲವರು. ಆದ್ದರಿಂದ ಅವರೇ ಹೇಳಬಹುದು - 'ನಮ್ಮ ನಿರ್ಧಾರ ಸಮ್ಮತವೋ ಅಲ್ಲವೋ' ಎಂದು"

-ಎಂದು ಹೈದರಾಲಿಯ ಭಾವಮೈದುನರತ್ತ ಚೂರಿನೋಟದಿಂದ ನೋಡಿ ಕೇಳಿದರು.

'ಮುಟ್ಟುವುದಿರಲಿ, ಹತ್ತಿರ ಬಂದರೆ ಸುಡುತ್ತೇನೆ' ಎಂಬಂತಿದ್ದ ನಾಯಕರ ನೋಟವನ್ನು ಎದುರಿಸುವ ಧೈರ್ಯ ನವಾಬರ ಭಾವಮೈದುನರಿಗೆ ಬರಲಿಲ್ಲ.

"ಈಗಲೇ ನಾವು ಹೇಳುವುದಕ್ಕೆ ಅಸಹಾಯರು, ರಾಜಾಸಾಹೇಬರು ತಮ್ಮ ಮರ್ಜಿ ಬಂದಂತೆ ಮಾಡಬಹುದು. ಇದರ ಮೇಲೆ ನವಾಬರ ಹುಕುಂ ಹೇಗಾಗುತ್ತದೋ ಹಾಗೆ ಮಾಡಬಹುದು"

- ಎಂದು ಹೇಳಿದ, ಆ ಇಬ್ಬರಲ್ಲಿ ಹಿರಿಯನಾದ ಮೋಹಿಯುದ್ದೀನ್ ಸಾಹೇಬ್.

"ಅಂದರೆ -ನಮ್ಮ ನಿರ್ಧಾರಕ್ಕೆ ತಮ್ಮ ಕಬೂಲಿ ಇದೆಯೋ - ಇಲ್ಲವೋ ? ಕಬೂಲ್ ಇದ್ದಲ್ಲಿ ಸರ್ದಾರ್‌ಖಾನರು ಇಲ್ಲಿದ್ದು, ತಾವು ಹೋಗಬಹುದು. ಇಲ್ಲವಾದಲ್ಲಿ - ತಮ್ಮ ಇಷ್ಟ."

- ಇಲಿಯೊಂದಿಗೆ ಸರಸವಾಡುವ ಬೆಕ್ಕಿನಂತೆ ಲಘುವಾದ ಧ್ವನಿಯಲ್ಲಿ ಹೇಳಿದರು ನಾಯಕರು.

ಆ ಮಾತಿನ ಇಂಗಿತವನ್ನರಿತ ಮೋಹಿಯುದ್ದೀನ್ ಸಾಹೇಬ್ ಮತ್ತೆ ಮಾತಾಡಲಿಲ್ಲ, ಮೌನವಾಗಿ ಸರ್ದಾರ್‌ಖಾನನತ್ತ ನೋಡಿದ- 'ನಮ್ಮ ಬಿಡುಗಡೆ-ಬಂಧನ - ನಿನ್ನ ಕೈಯಲ್ಲಿದೆ' ಎಂಬಂತೆ.

"ಈ ಬಗ್ಗೆ ನಾವು ಪರಸ್ಪರ ಯೋಚಿಸಿ, ಉತ್ತರ ಕೊಡುವಷ್ಟು ಕಾಲಾವಕಾಶ ಉಂಟೆ ?"

- ಸುಳಿಗೆ ಸಿಕ್ಕವನಂತೆ ಕೇಳಿದ ಸರ್ದಾರ್‌ಖಾನ್.

"ನಿಮಗೆ, ನಿಮ್ಮ ತೀರ್ಮಾನ ತಿಳಿಸಲು ಬೇಕಾದಷ್ಟು ಕಾಲಾವಕಾಶ ಉಂಟು. ಆದರೆ ಬಂದಿಗಳು ಹೊರಗಿನವರೊಂದಿಗೆ ಮಾತನಾಡಲು ಅವಕಾಶ ಕೊಡುವ ಸಂಪ್ರದಾಯ ನಮ್ಮಲ್ಲಿಲ್ಲ. ಆದ್ದರಿಂದ ತಾವು ಬೇಕಾದರೆ ಇಲ್ಲೇ ಇದ್ದು ಯೋಚಿಸಬಹುದು, ಸೀರ್ಯಕ್ಕೆ ಬೇಕಾದರೂ ಹೋಗಿ, ಖುದ್ದಾಗಿ ನವಾಬರೊಂದಿಗೆ ಮಾತಾಡಿಕೊಂಡು ಬರಬಹುದು."

- ನಿರ್ವಿಕಾರಧ್ವನಿಯಲ್ಲಿ ಹೇಳಿದರು ನಾಯಕರು.

ನಾಯಕರಾಡಿದ ಆ ಮಾತನ್ನು ಕೇಳಿ, ಹೈದರಾಲಿಯ ಕಡೆಯವರೆಲ್ಲರ ಗಂಟಲೂ ಕಟ್ಟಿಹೋಯಿತು. ಅನತಿಕಾಲ ಯಾರೊಬ್ಬರ ಬಾಯಿಂದ ಏನೊಂದೂ ಮಾತೂ ಹೊರಡಲಿಲ್ಲ. ಮುಟ್ಟಿದರೆ ಪುಡಿಯಾಗುವಷ್ಟು ನವಿರಾಗಿ, ಭೀತಿ ಹುಟ್ಟಿಸುವಂತಿದ್ದ ಮೌನದಲ್ಲಿ ನಾಯಕರೊಬ್ಬರು ಮಾತ್ರ ಯಾವ ಚಿಂತೆಯೂ ಇಲ್ಲದಂತೆ ಯಾರೊಬ್ಬರ ಮುಖವನ್ನೂ ನೋಡದೆ ಕುಳಿತಿದ್ದರು.

ಕೊನೆಗೆ ಮೋಹಿಯುದ್ದೀನ್ ಸಾಹೇಬನೇ ನೀರವತೆಯನ್ನು ಮುರಿವ ಧೈರ್ಯ ಮಾಡಿ ಹೇಳಿದ –

"ರಾಜಾಸಾಹೇಬರ ಮರ್ಜಿ ಇದ್ದಂತಾಗಲಿ."

"ಅಂದರೆ - ಸರ್ದಾರ್‌ಖಾನರು ಇಲ್ಲಿರಬಹುದು ತಾನೇ ?"

"ತಮ್ಮ ಖುಷಿ ಇದ್ದಂತಾಗಲಿ. ಅದಕ್ಕೆ ಬದಲು ಹೇಳುವಷ್ಟು ಶಕ್ತಿ ನಮಗಿಲ್ಲ"

- ಸೋಲೊಪ್ಪಿದ ಧ್ವನಿಯಲ್ಲಿ ಹೇಳಿದ ಮೋಹಿಯುದ್ದೀನ್ ಸಾಹೇಬ್.

"ಸರಿ - ಪ್ರಧಾನಿಗಳು ನವಾಬರ ಭಾವಮೈದುನರನ್ನು, ನವಾಬರ ವಕೀಲರೊಂದಿಗೆ ಬಂದವರೊಂದಿಗೆ ಅವರ ಯೋಗ್ಯತಾನುಸಾರ ಮರ್ಯಾದೆಮಾಡಿ ನವಾಬ್ ಸಾಹೇಬರಿಗೆ ನಮ್ಮ ಪರವಾಗಿ ಉಡುಗೊರೆಗಳನ್ನು ಕೊಟ್ಟು, ಅವರ ಪತ್ರಕ್ಕೆ ಉತ್ತರವನ್ನು ಬರೆದು ಕಳಿಸಬೇಕು"

- ಎಂದು ಹೇಳಿ, ಓಲಗಮುಕ್ತಾಯದ ಸೂಚನೆಯಿತ್ತರು, ನಾಯಕರು.

* * *

ನವಾಬರ ಭಾವಮೈದುನಂದಿರು, ಸರ್ದಾರ್‌ಖಾನ್‌ನೊಂದಿಗೆ ಬಂದವರು ನಾಯಕರಿತ್ತ ಉಡುಗೊರೆ, ಉಪಚಾರಗಳನ್ನು ಸ್ವೀಕರಿಸಿ ಸೀರ್ಯಕ್ಕೆ ಪ್ರಯಾಣ ಮಾಡಿದ ಬಳಿಕ, ನಾಯಕರ ಕರಗನುಸಾರವಾಗಿ ಏಕಾಂತದಲ್ಲಿ ಅವರನ್ನು ಭೇಟಿಮಾಡಿದ ಸರ್ದಾರ್‌ಖಾನ್, ಪರಸ್ಪರ ಆಲಿಂಗನ, ಕುಶಲಪ್ರಶ್ನೆಯ ಸಾಂಪ್ರದಾಯಿಕ ಮಾತುಗಳನ್ನಾಡಿ ಮುಗಿದ ಬಳಿಕ –

"ನೀವು ನನಗೆ ಎರಡು ಬಾರಿ ಜೀವದಾನ ಮಾಡಿದಿರಿ. ಮೊದಲ ಬಾರಿಯದು ನನಗೆ ಸಂತೋಷ ತಂದಿತ್ತು. ಆದರೆ ಈ ಬಾರಿಯದು ಸಂತೋಷಕ್ಕಿಂತ ಮಿಗಿಲಾಗಿ ನನಗೆ ಚಿಂತೆ, ವ್ಯಥೆಯನ್ನುಂಟುಮಾಡಿದೆ. ತಾವು ಈ ಕಾರ್ಯ ಮಾಡಬಾರದಾಗಿತ್ತು. ನನ್ನ ಜೀವ ಉಳಿಸಹೋಗಿ ನಿಮಗೆ ಆಪತ್ತು ತಂದುಕೊಂಡಿರಿ. ನಾನು ಬರೆದ ಕಾಗದದ ಉದ್ದೇಶ ಇದಾಗಿರಲಿಲ್ಲ"

-ಎಂದು ದುಗುಡ ತುಂಬಿದ ಧ್ವನಿಯಲ್ಲಿ ಹೇಳಿದ –

"ಮಲಗಿದ್ದ ಹುಲಿಯನ್ನು ಹೊಡೆದೆಬ್ಬಿಸಿದಂತಾಯಿತು - ನೀವು ಮಾಡಿದ್ದು."

"ನೀವು ತಪ್ಪು ತಿಳಿದುಕೊಂಡಿದ್ದೀರಿ, ಸರ್ದಾರ್‌ಖಾನ್. ನೀವು ಹೇಳುವ ಹುಲಿ ಎಂದೂ ಮಲಗಿರಲಿಲ್ಲ. ನಿಮ್ಮನ್ನು ಅವರ ಚಿತ್ರಹಿಂಸೆಯ ಕಾರಾಗೃಹಕ್ಕೆ ಕಳಿಸಿದ್ದರೂ ಅದು ಮಲಗುತ್ತಿರಲಿಲ್ಲ. ನಾವೇನಾದರೂ ಹಾಗೆ ಮಾಡಿದ್ದರೆ, ನಮಗೆ ಉಪಕಾರ ಮಾಡಿದವರನ್ನು ತಿಳಿದೂ ತಿಳಿದೂ ನರಕಯಾತನೆಯ ಸಾವಿನ ಬಾಯಿಗೆ ಒಪ್ಪಿಸಬೇಕಾಗಿತ್ತು. ನಾವೆಲ್ಲಾ ಯೋಚನೆ ಮಾಡಿಯೇ ಈ ನಿರ್ಧಾರ ಮಾಡಿದೆವು."

"ನಿಮ್ಮ ನಿರ್ಧಾರದಿಂದ ನನ್ನ ಜೀವ ಉಳಿಯಿತು, ನಿಜ. ಆದರೆ ಅದಕ್ಕೆ ನೀವೆಷ್ಟು ಬೆಲೆ ಕೊಡಬೇಕಾಗುತ್ತದೆ ಎಂದು ಯೋಚಿಸಿದ್ದೀರಾ? ನನ್ನನ್ನು ಕಳಿಸಿದ್ದರೆ ನನ್ನ ಜೀವ ಉಳಿಯುತ್ತಿರಲಿಲ್ಲ. ಆದರೆ ಸದ್ಯಕ್ಕಂತೂ ನಿಮ್ಮ ಮೇಲೆ ಹಗೆತನ ಸಾಧಿಸಲು ನವಾಬರಿಗೆ ಕಾರಣವಿರುತ್ತಿರಲಿಲ್ಲ."

"ನಮ್ಮ ಮೇಲೆ ಹಗೆತನ ಸಾಧಿಸಲು ನವಾಬರಿಗೆ ಕಾರಣವೂ ಬೇಕೇ - ನಾವು ಬದುಕಿರುವುದು, ದುರ್ಗ ಸ್ವತಂತ್ರವಾಗಿ ಉಳಿದಿರುವುದೊಂದೇ ಕಾರಣ ಸಾಲದೇ ? ನಮಗಿಲ್ಲದ ಭ್ರಮೆ ನಿಮಗೇಕೆ, ಸರ್ದಾರ್‌ಖಾನ್ ಇವತ್ತಲ್ಲ, ನಾಳೆ - ಈ ಕಾರಣಕ್ಕಲ್ಲ, ಮತ್ತೊಂದು ಕಾರಣಕ್ಕಾಗಿ, ನಮಗೂ-ನವಾಬರಿಗೂ ಲಡಾಯಿ ತಪ್ಪಿದ್ದಲ್ಲ. ನಾವೀಗ ಹೀಗೆ ಮಾಡಿದ್ದರಿಂದ ನಮಗೆ ಉಪಕಾರ ಮಾಡಿದವರನ್ನು ಉಳಿಸಿಕೊಂಡಷ್ಟಾದರೂ ತೃಪ್ತಿ ನಮಗೆ ದೊರೆಯಿತು. ನೀವಿನ್ನು ನಿಶ್ಚಿಂತರಾಗಿ, ನಮ್ಮ ಸ್ನೇಹಿತರಾಗಿರಿ."

- ಮದಕರಿನಾಯಕ ಸ್ನೇಹದಿಂದ ಸ್ನಿಗ್ಧವಾದ ಧ್ವನಿಯಲ್ಲಿ ಹೇಳಿದ –

"ನಿಮ್ಮ ನವಾಬರ ಹಾಗೆ ಸ್ನೇಹಕ್ಕಿಂತ ಸ್ವಾರ್ಥ ಮೇಲು ಎಂದು ತಿಳಿದವರಲ್ಲ ನಾವು. ಈ ಶಕುನಿರಾಜಕಾರಣದಲ್ಲಿ ಮಾನವೀಯತೆಗೆ ಬಹು ಅಲ್ಪ ಬೆಲೆ ಎಂಬುದು ನಮಗೆ ಗೊತ್ತು. ದಿನದಿನಕ್ಕೆ ನಮ್ಮ ದೇಹವೂ ಆ ಗಾಣಕ್ಕೆ ಸಿಕ್ಕು ರಸ ಕಳೆದುಕೊಳ್ಳುತ್ತಿದೆ. ಆದರೆ ನಮ್ಮನ್ನು ಹಿಂಡುತ್ತಿರುವ ಗಾಣವೂ ನಾಚುವಂಥ ಗಾಣವಾಗಿಲ್ಲ ನಾವು. ಆದಷ್ಟು....ಆದಷ್ಟು....ಆ ಜೀವರಸವನ್ನು ಉಳಿಸಿಕೊಳ್ಳಲು ಯತ್ನಿಸುತ್ತಿದ್ದೇವೆ."

"ಅದರಿಂದ ನೀವು ಸಾಧಿಸುವುದೇನು, ರಾಜಾಸಾಹೇಬ್. ಏನು ಗಳಿಸಿಕೊಳ್ಳುತ್ತೀರ - ?"

"ಹೆಚ್ಚೇನೂ ಇಲ್ಲ – 'ಮನುಷ್ಯ' ಎಂದು ಯಾರಾದರೂ ಕರೆದಾಗ, ಯಾರನ್ನು ಕರೆದದ್ದು ಎಂದು ಅತ್ತಿತ್ತ ಹುಡುಕಿ ನೋಡುವಂಥ ದುಃಸ್ಥಿತಿ ನಮಗೆ ಬರಬಾರದು ಎಂಬುದಷ್ಟೇ ನಾವು ಬಯಸುವ ಸಾಧನೆ. ಎಷ್ಟೋ ರಾಜ್ಯ, ರಾಜರುಗಳು, ನಮಗಿಂತ, ನವಾಬರಿಗಿಂತ ಲಕ್ಷಪಾಲು ಹಿರಿಯರಾದ ರಾಜಾಧಿರಾಜ, ಚಕ್ರವರ್ತಿಗಳು ಆಗಿಹೋದರು; ಆಸೇತುಹಿಮಾಚಲಪರ್ಯಂತ ಕಟ್ಟಿದಂಥ ರಾಜ್ಯಗಳು ನಾಮಾವಶೇಷವಾಗಿ ಹೋದವು - ನಾವು ಕೇಳಿದಂತೆ. ಉಳಿದಿರುವುದು -

ಮನುಷ್ಯರ, ಸ್ನೇಹ, ವಿಶ್ವಾಸ, ಕೃತಜ್ಞತೆ ಇವಷ್ಟೇ. ನಾವು ಬಯಸುವುದೂ ಇಷ್ಟೇ -ಸರ್ದಾರ್‌ಖಾನ್ : ನಮ್ಮನ್ನು ನಾಳಿನ ಜನ ರಾಜಾಧಿರಾಜ ಎಂದು ಹೊಗಳದಿದ್ದರೂ ಚಿಂತೆಯಿಲ್ಲ; ನರರಾಕ್ಷಸ ಎಂದು ಕರೆಯದಿದ್ದರೆ ಸಾಕು. ಆದರೆ ಆ ಪ್ರಯತ್ನವಾದರೂ ಸಾರ್ಥಕವಾಗುತ್ತದೆಯೋ ಇಲ್ಲವೋ ನಮಗೆ ಗೊತ್ತಿಲ್ಲ - ನಾವು ಸುತ್ತುತ್ತಿರುವ ಈ ವಿಚಿತ್ರ ಸುಳಿಯಲ್ಲಿ."

"ನಿಮ್ಮದು ಬಹು ವಿಚಿತ್ರ ಬಯಕೆ, ರಾಜಾಸಾಹೇಬ್."

-ಮದಕರಿನಾಯಕನ ಮಾತಿಗೆ ಏನು ಉತ್ತರ ಕೊಡಬೇಕೆಂದು ತೋಚದೆ ಹೇಳಿದ, ಸರ್ದಾರ್‌ಖಾನ್.

"ನಿಮಗೆ ಬೇಸರ ತರುತ್ತದೆಯೇ ನಮ್ಮ ಬಯಕೆ ?"

"ಊಹೂ – ಆ ದಿನ ನಿಜಗಲ್ಲಿನಲ್ಲಿ ಒಬ್ಬ ನಿಜವಾದ ಯೋಧನನ್ನು ಕಂಡಿದ್ದೆ. ಈ ದಿನ ಒಬ್ಬ ಸಾಚಾಮನುಷ್ಯನನ್ನು ಕಾಣುತ್ತಿದ್ದೇನೆ. ಅಲ್ಲಾನೇ ನಿಮ್ಮನ್ನು, ನಿಮ್ಮಂಥವರನ್ನು ಕಾಪಾಡಬೇಕು. ನನಗನಿಸುತ್ತದೆ - ನೀವು ರಾಜರಾಗಬಾರದಿತ್ತು, ಫಕೀರರಾಗಬೇಕಾಗಿತ್ತು."

"ನಾವು - ಫಕೀರರಾಗುವುದು ! ಎಂಥ ವಿಚಿತ್ರ ಹಾರೈಕೆ ನಿಮ್ಮದು, ಸರ್ದಾರ್‌ಖಾನ್. ಇದ್ದ ಮೂವರು ಹೆಂಡಿರು ಸಾಲದು ಎಂದು ಮತ್ತಿಬ್ಬರು ಹೆಂಗಸರ ಸ್ನೇಹ ಮಾಡಿದ ನಾವು ಫಕೀರರಾದರೆ, ಆ ಮಾತಿಗೆ ಬೆಲೆಯೇ ಹೋದೀತು. ಅದು ಸಾಧ್ಯವಿಲ್ಲದ ಮಾತು, ಸರ್ದಾರ್ ಖಾನ್." - ಹಗುರವಾಗಿ ನಗುತ್ತಾ ಹೇಳಿದ ಮದಕರಿನಾಯಕ.

"ಹೆಂಗಸರನ್ನು ಕಟ್ಟಿಕೊಂಡಿದ್ದೀರಿ, ರಾಜ್ಯವನ್ನು ಆಳುತ್ತಿದ್ದೀರಿ - ಹಾಗಿದ್ದೂ ಮನುಷ್ಯರಾದರಷ್ಟೇ ಸಾಕು ಎನ್ನುತ್ತೀರಲ್ಲಾ, ವಿಚಿತ್ರ ಬಯಕೆ ನಮ್ಮದೇ - ನಿಮ್ಮದೇ ?"

"ನಿಮಗೆ ಗೊತ್ತಿರಬಹುದು, ಸರ್ದಾರ್‌ಖಾನ್. ಈ ರಾಜಪದವಿ ನಾವು ಬಯಸದೆ, ನಮ್ಮನ್ನು ಹುಡುಕಿಕೊಂಡು ಬಂದಿತು. ಆಗ ನಮಗೆ ರಾಜರಾಗುವುದು ಎಂದರೇನೆಂದೇ ತಿಳಿದಿರಲಿಲ್ಲ, ರಾಜರಾದೆವು. ಹಾಗೇ ಹೆಂಡಂದಿರೂ, ಹೆಂಗಸರೂ ಬಯಸಿಯೋ, ಬಯಸದೆಯೋ ನಮ್ಮ ಹೆಗಲೇರಿದವು - ನಾವೀಗ ಮಾಡುತ್ತಿರುವ ಯುದ್ಧಗಳಂತೆ. ಈಗ ಯಾವುದನ್ನು ಬಿಡಲೂ ಸಾಧ್ಯವಿಲ್ಲ. ಬಿಟ್ಟರೂ ಅವು ನಮ್ಮನ್ನು ಬಿಡುವುದಿಲ್ಲ. ಈ ರಾಜ ಪದವಿ, ಅದರೊಂದಿಗೆ ಬಂದ ಯುದ್ಧಗಳು, ಹೆಂಗಸರು, ಗಂಡಸರು – ಎಲ್ಲಾ ಸೇರಿ ನಮಗೆ 'ಮನುಷ್ಯ' ಎಂದರೇನು ಎಂಬುದನ್ನು ಕಲಿಸಿದವು. ಅದರೊಂದಿಗೇ 'ಶಿಲಾಶಾಸನವನ್ನೂ ಅಳಿಸಬಹುದು, ಆದರೆ ಜೀವನದಲ್ಲಿ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡುವುದು ಸಾಧ್ಯವಿಲ್ಲ' ಎನ್ನುವ ಪಾಠವನ್ನು ಬದುಕು ನಮಗೆ ಕಲಿಸಿತು. ಬಂದದ್ದನ್ನು ಬಿಡಬಾರದು, ಕಲಿತದ್ದನ್ನು ಮರೆಯಬಾರದು – ಹೀಗೆ ನಡೆದಿದೆ ನಮ್ಮ ಬದುಕಿನ ವ್ಯಾಯಾಮ. ಅದೆಷ್ಟು ಸಾರ್ಥಕವಾಗುವುದೋ ನೋಡಬೇಕು."

-ವಿಚಿತ್ರ ಕಳಕಳಿ ತುಂಬಿದ ಧ್ವನಿಯಲ್ಲಿ ಹೇಳಿದ ಮದಕರಿನಾಯಕ.

ನಾಯಕರಾಡಿದ ಮಾತು, ಸರ್ದಾರ್‌ಖಾನನ ಹೃದಯವನ್ನು ವಿಚಿತ್ರವಾಗಿ ಕಲಕಿ –

"ಹೀಗೆ ಮಾತಾಡುವವರನ್ನು ನಾನು ಕಂಡಿಲ್ಲ, ರಾಜಾಸಾಹೇಬ್. ನಾನೇನು ಹೇಳಲಿ - ಮತ್ತೊಮ್ಮೆ ಖುದಾನಲ್ಲಿ ನಿಮ್ಮನ್ನು ಕಾಪಾಡುವಂತೆ ಪ್ರಾರ್ಥಿಸುತ್ತೇನೆ"

-ಎಂದು ಹೃದಯದಾಳದಿಂದ ಮೂಡಿಬಂದ ಗೌರವಮಿಶ್ರಿತ ಪ್ರೇಮದ ಭಾವನೆಯಲ್ಲಿ ಹೇಳಿದ.

"ಸ್ನೇಹಿತರು ನೀವು, ಹಾಗೆಂದು ಹರಸಿ, ಪ್ರಾಮಾಣಿಕವಾದ ಪ್ರಾರ್ಥನೆಗೆ ದೇವರು ಇಲ್ಲವೆಂದು ಎಂದೂ ಹೇಳುವುದಿಲ್ಲವಂತೆ"

-ಎಂದು ಸರ್ದಾರ್‌ಖಾನನ ಹೆಗಲ ಮೇಲೆ ಕೈಹಾಕಿ ಹೇಳಿದ ಮದಕರಿನಾಯಕ.

"ಅದನ್ನೂ ಹಾರೈಸುತ್ತೇನೆ, ನಿಮ್ಮ ಖಡ್ಗಕ್ಕೆ ಗೆಲುವನ್ನೂ ಹಾರೈಸುತ್ತೇನೆ"

-ಎಂದು ಹೃದಯತುಂಬಿ ಹೇಳಿದ ಸರ್ದಾರ್‌ಖಾನ್-

"ನನಗೀಗ ಅರ್ಥವಾಗುತ್ತಿದೆ - ನಿಮ್ಮಂಥವರ ಗೆಲುವು ಮನುಷ್ಯತ್ವದ ಗೆಲುವು, ಯುದ್ಧ ವಿಜಯಕ್ಕಿಂತ ಇದು ದೊಡ್ಡದು. ಆದರೆ ನಿಮ್ಮಂಥ ರಾಜರು ಗೆದ್ದಿದ್ದನ್ನು ನಾನು ಕೇಳಿಲ್ಲ."

-ಎಂದ ಮದಕರಿನಾಯಕ.

"ಇರಬಹುದು. ಆದರೆ ಮನುಷ್ಯನಿನ್ನೂ ಭೂಮಿಯ ಮೇಲಿದ್ದಾನೆ...."

"ಈ ಮಾತು ಬಿಡಿ – ಈಗ ನಿಮಗೆ ನಮ್ಮಿಂದೇನಾಗಬೇಕೋ ಹೇಳಿ, ದುರ್ಗದ ರಾಜ್ಯ ನಿಮಗೆ ಸಾಕಷ್ಟು ಋಣಿಯಾಗಿದೆ."

"ಊಹೂ - ಸಾಲಕ್ಕಿಂತ ಹೆಚ್ಚಾಗಿ ಬಡ್ಡಿಯನ್ನೇ ಕೊಟ್ಟಿದ್ದೀರ. ಇನ್ನೇನೂ ನಾನು ಕೇಳಲಾರೆ..."

- ಎಂದ ಸರ್ದಾರ್‌ಖಾನ್ ಮುಕ್ತಹೃದಯದಿಂದ ಹಾರೈಸುವ ಧ್ವನಿಯಲ್ಲಿ ಹೇಳಿದ –

"ಕೇಳುವುದಿಷ್ಟೇ - ಖುದಾ ನಿಮಗೆ ಒಳ್ಳೆಯದು ಮಾಡಲಿ - ಬರಲಿರುವ ದಿನಗಳಲ್ಲಿ."

೧೪

ಬರಲಿರುವ ದಿನಗಳು-

ಆ ದಿನಗಳು ಹೇಗೆ ಬಂದಾವೋ, ಏನು ತಂದಾವೋ ಎಂದು ನಾಯಕರೊಂದಿಗೆ ಅವರ ಆಪ್ತರೂ ಚಿಂತಿಸುತ್ತಿರುವಾಗಲೇ, ಹೈದರಾಲಿಯ ಭಾವಮೈದುನಂದಿರು ಸೀರ್ಯವನ್ನು ತಲುಪಿದ

ಮೂರೇ ದಿನಗಳಲ್ಲಿ, ಅಶ್ವಾರೋಹಿ ಅಂಚೆಮುತ್ಸದ್ದಿಯೊಂದಿಗೆ ಹೈದರಾಲಿ ನಾಯಕರಿಗೆ ಬರೆಸಿದ ಪತ್ರ ಬಂದು ಕೈಸೇರಿತು.

ಆ ಪತ್ರದಲ್ಲಿ ಹೈದರಾಲಿ ತೋರಿದ್ದು - ಕೃತಜ್ಞತೆಯನ್ನಲ್ಲ, ತನ್ನ ಹೃದಯಹೀನತೆಯನ್ನು.

"ನಮ್ಮ ಭಾವಮೈದುನರನ್ನು ಬಿಟ್ಟು ಕಳಿಸಬೇಕು ಎಂದು ನಾವು ವಿಶ್ವಾಸದಿಂದ ಕಾಗದ ಬರೆಸಿದರೆ, ಬಹಳ ಉಪಕಾರ ಮಾಡಿದಂತೆ ಅವರನ್ನು ಕಳಿಸಿ, ಆ ಬಳಿಕ ನಮ್ಮ ಮಗು ಕತ್ತರಿಸಿದಂತೆ ನಮ್ಮ ಪರವಾನಗಿ ಇಲ್ಲದೆಯೇ ನಮ್ಮ ಸರ್ದಾರನನ್ನು ನಿಮ್ಮ ಆಸ್ಥಾನದಲ್ಲಿ ಚಾಕರಿಗೆ ಸೇರಿಸಿಕೊಂಡಿರಿ. ಇದು ನಮ್ಮ ಸ್ನೇಹಿತರು ಮಾಡುವ ಕೆಲಸವಲ್ಲ.

"ಹಿಂದಿನಿಂದಲೂ ಎಷ್ಟೋ ಬಾರಿ ನಾವು ನಿಮಗೆ ಭೇಟಿಗೆ ಬರಲು ಕಾಗದ ಬರೆಸಿದ್ದರೂ ಬರಲಿಲ್ಲ. ಅದಕ್ಕೆ ತಕ್ಕ ಕಾರಣವನ್ನೂ ಕೊಡಲಿಲ್ಲ. ಈಗಲೂ ಆದದ್ದೆಲ್ಲವನ್ನೂ ಮರೆತು ಈ ಸ್ನೇಹಪತ್ರ ಬರೆಸಿದ್ದೇನೆ. ಪರಸ್ಪರ ಸ್ನೇಹವೃದ್ಧಿ ಮಾಡುವ ಜರೂರು ಇದ್ದಲ್ಲಿ ರಾಜಾ ಸಾಹೇಬರು ನಮ್ಮ ಭೇಟಿಗೆ ಬರಬೇಕು. ಇಲ್ಲದಿದ್ದರೆ ಸ್ನೇಹ ಉಳಿಯುವುದಿಲ್ಲ. ರಾಜಾ ಸಾಹೇಬರು ಬರುವುದಕ್ಕೆ ಮರ್ಜಿ ಇಲ್ಲದಿದ್ದರೆ, ತಮ್ಮ ತಮ್ಮ ಪರಶುರಾಮನಾಯಕನವರನ್ನು ಸಾಹೇಬ್ ಜ್ಯಾದೆ ಭರಮಣ್ಣ ನಾಯಕರನ್ನು ಸಹಾ ಕೆಲವು ಫೌಜು ಕೊಟ್ಟು ಕಳುಹಿಸಬೇಕು. ಈ ಮೇರೆಗೆ ಆದರೆ ಸ್ನೇಹ ವೃದ್ಧಿವೃದ್ಧಿಯಾಗುತ್ತೆ. ಇಲ್ಲದ ಪಕ್ಷಕ್ಕೆ ಸ್ನೇಹ ಹ್ಯಾಗೆ ಸಿದ್ಧಿಗೆ ಬಂದೀತು. ಇದರ ಮೇಲೆ ತಮ್ಮ ಮರ್ಜಿ ಇದ್ದ ಹಾಗೆ ಮಾಡಬಹುದು."

ತುಂಬಿದೋಲಗದಲ್ಲಿ ಪತ್ರವಾಚಕನು ಓದಿದ ಹೈದರಾಲಿಯ ಪತ್ರವನ್ನು ಕೇಳಿ, ಸಭೆ ಬರಸಿಡಿಲು ಬಡಿದಂತೆ ಸ್ತಬ್ಧವಾಗಿ ನಾಯಕರ ಮುಖವನ್ನು ನೋಡಿತು.

ನಾಯಕರ ಮುಖ ಉರಿಸೋಕಿದ ಒಣಹುಲ್ಲಿನ ಮೆದೆಯಂತೆ ಉರಿಯುತ್ತಿತ್ತು. ಕಣ್ಣುಗಳು ಕ್ರೋಧೋದ್ದೀಪಿತವಾಗಿ ಸಿಡಿದೊಡೆಯುವುದೇನೋ ಎಂಬಷ್ಟು ಉಗ್ರವಾಯಿತು. ಆ ಮಾತುಗಳನ್ನಾಡಿದ ನಾಲಗೆಯನ್ನು ಕತ್ತರಿಸಲು ಸೊಂಟದಲ್ಲಿನ ಖಡ್ಗದತ್ತ ಅವರ ಕೈ ದುಡುಕಿತು. ಇದಿರು ನಿಂತವನ ಮೈಯ ನೆತ್ತರನ್ನು ಹನಿಹನಿಯಾಗಿ ಹಸಿದು ಹೀರುವಂತೆ ನೋಡುತ್ತಾ –

"ಇಷ್ಟೆಯೇ - ಮತ್ತೇನು ಅಪ್ಪಣೆಯಾಯಿತು, ನಿಮ್ಮ ನವಾಬರದು ?"

-ಎಂದು ಇದಿರು ನಿಂತ ನವಾಬರ ಅಂಚೆಮುತ್ಸದ್ದಿಯನ್ನು ಕೇಳಿದರು.

ಆ ನೋಟವನ್ನು ನೋಡಿ, ಆ ಧ್ವನಿಯನ್ನು ಕೇಳಿ ಪತ್ರ ತಂದ ಹೈದರಾಲಿಯ ಅಂಚೆಮುತ್ಸದ್ದಿಯ ನಾಲಗೆ ಒಣಗಿ, ಒಣಗಿದ ನಾಲಗೆಯಿಂದ ತುಟಿಗಳನ್ನು ನೇವರಿಸಿಕೊಳ್ಳುತ್ತಾ-

"ಮೊಖ್ತಾನೂ ಇದೇ ಅಪ್ಪಣೆ ಆಯಿತು - ಭೆಟ್ಟಿಗೆ ಬಂದ ಶಿವಾಯಿ ಆಗುವುದಿಲ್ಲ. ಖುದ್ದು ದಯಮಾಡಿಸಬೇಕು, ಮರ್ಜಿ ಇಲ್ಲದಿದ್ದರೆ ತಮ್ಮ ತಮ್ಮಾವರನ್ನು, ಸಾಹೇಬ್‌ಜಾದೆಯವರ ಸಹಾ ಕಳಿಸಬೇಕು. ಇಲ್ಲದೆ ಇದ್ದರೆ ಸ್ನೇಹ ನಿಲ್ಲುವುದಿಲ್ಲ" - ಎಂದು ಹೇಳಿದ.

"ಅಷ್ಟೇ -" - ಘಟ್ಟಿಸಿ ಕೇಳಿದರು ನಾಯಕರು.

“ಅಷ್ಟೆ ರಾಜಾಸಾಹೇಬ್, ಅವರು ಹೇಳಿದ ಮಾತು ಹೇಳುವವರು ನಾವು.”

“ಇದಕ್ಕೆ ನಮ್ಮ ಉತ್ತರ ಬೇಕು-”

“ಜೀ, ರಾಜಾಸಾಹೇಬ್.”

“ನಿಮ್ಮ ನವಾಬರಿಗೆ ಮನುಷ್ಯರಸ್ನೇಹ ಏನೆಂದು ಅರ್ಥವಾಗುವುದಿಲ್ಲ. ಹೇಳಿಕಳಿಸಿದ ಕೂಡಲೇ ಅವರ ಮುಂದೆ ಓಡಿಹೋಗಿ ನಿಲ್ಲಲು ದುರ್ಗದವರು- ಹರಪ್ಪನಹಳ್ಳಿ, ರಾಯದುರ್ಗದವರ ಹಾಗೆ ನವಾಬರು ಸಾಕಿದ ನಾಯಿಗಳು ಎಂದು ತಿಳಿದಿದ್ದಾರೇನೋ – ಬಿಲ್ಕುಲ್ ಅದಾಗುವುದಿಲ್ಲ. ನಮ್ಮ ತಮ್ಮಂದಿರು, ನಮ್ಮ ಮಕ್ಕಳು - ನವಾಬರ ಊಳಿಗ ಮಾಡಲು ಹುಟ್ಟಿದವರಲ್ಲ. ನಿಮ್ಮ ನವಾಬರಿಗೆ ಗಂಡಸುತನವಿದ್ದಿದ್ದರೆ ಈ ಪತ್ರದೊಂದಿಗೆ ಅವರ ಭಾವ ಮೈದುನರನ್ನೇ ಕಳಿಸಬೇಕಾಗಿತ್ತು. ಆಗ ತಕ್ಕ ಉತ್ತರ ಹೇಳುತ್ತಿದ್ದೆವು. ಇತಃಪರ ನಮಗೂ ನಿಮ್ಮ ನವಾಬರಿಗೂ ಗೋಲಿಸ್ನೇಹವೇ ವಿನಾ ಬೇರೆ ಸ್ನೇಹವಿಲ್ಲ. ಇದೇ ನಮ್ಮ ಉತ್ತರವೆಂದು ನಿಮ್ಮ ನವಾಬರಿಗೆ ತಿಳಿಸಿ”

– ಎಂದು ಚಾವಟಿಯಿಂದ ಜಡಿದಂತೆ ಹೇಳಿ –

“ರಾಜದೂತರನ್ನು ಕೊಲ್ಲಬಾರದು; ಉಳಿದಿರಿ. ನಮ್ಮ ಕಣ್ಣೆದುರಿನಿಂದ ನವಾಬರ ನಾಯಿಗಳನ್ನು ತೊಲಗಿಸಿ. ಅವರ ಮುಖ ನೋಡಿದರೂ ನಮ್ಮ ಕಣ್ಣಿಗೆ ಹೇಸಿಗೆ ತಗಲಿದಂತಾಗುತ್ತದೆ. ಎಳೆದೊಯ್ದು ಸೆರೆಯಲ್ಲಿಡಿ” – ಎಂದಪ್ಪಣೆ ಮಾಡಿದರು ನಾಯಕರು.

ನಾಯಕರ ಆಜ್ಞೆಯಾಗುತ್ತಿದ್ದಂತೆಯೇ, ಬಿಚ್ಚುಗತ್ತಿಯ ಭಟರಿಬ್ಬರು ನವಾಬನ ಅಂಚೆಮುತ್ಸದ್ದಿಯ ಇಬ್ಬದಿಯಲ್ಲಿ ನಿಂತು, ಓಲಗದಿಂದ ತೊಂಡುದನವನ್ನು ಹೊಡೆದುಕೊಂಡು ಹೋಗುವ ಗೊಲ್ಲರಂತೆ ಕರೆದುಕೊಂಡು ಹೋದರು.

ಆತ ಹೊರಹೋದ ಬಳಿಕ, ನಾಯಕರು ಸಭೆಯತ್ತ ನೋಡಿ –

“ಇನ್ನು ಸ್ನೇಹದ ಕಾಲ ಮುಗಿದು ಸಮರಕಾಲ ಸನ್ನಿಹಿತವಾಯಿತು. ಇದಲ್ಲದೆ – ಬೇರೆ ಮಾತೇನಾದರೂ ಇದೆಯೇ ?” – ಎಂದು ಕೇಳಿದರು.

ಮಸೆದ ಕತ್ತಿಗಳಂತಿದ್ದ ದುರ್ಗದ ದಳವಾಯಿಗಳ ನೋಟವೇ ಅವರ ಮಾತಿಗಿಂತ ಮಿಗಿಲಾಗಿ ಉತ್ತರ ಹೇಳಿದವು. ಅವರೆಲ್ಲರ ನಾಲಗೆಯಂತೆ ದಳವಾಯಿ ಸಣ್ಣ ಪರಶುರಾಮಪ್ಪನಾಯಕ ಹೇಳಿದ –

“ದುರ್ಗದ ಹೆಂಗಸರಾರೂ ಖೋಜಾಗಳನ್ನು ಹಡೆದಿಲ್ಲ.”

“ಆ ಮಾತನ್ನು ನವಾಬನ ನಾಲಗೆ ಸೋತು, ನೀರು ಕೇಳುತ್ತಾ ಆಡಬೇಕು, ಸಿದ್ಧರಾಗಿ.”

-ಎಂದರು ನಾಯಕರು ಸಿಡಿಲೇ ಪಡಿನುಡಿಯಿತೋ ಎಂಬಂತೆ.

* * *

ತುಂಬಿದ ಸಭೆಯಲ್ಲಿ ನಾಯಕರು ಮಾಡಿದ ಆಜ್ಞೆಯನ್ನು ಕೇಳಿದ ಚಿತ್ರದುರ್ಗ ಕೆಣಕಿದ ಜೇನುಹುಟ್ಟಿನಂತಾಯಿತು. ಉಸಿರು ಬಿಡಲೂ ಅವಕಾಶವಿಲ್ಲದಂತೆ ರಣಸಿದ್ಧತೆಗಳು ನಡೆದವು.

ಆ ದಿನ ಓಲಗದಿಂದ ಹೊರಬಂದ ದಳವಾಯಿಗಳೆಲ್ಲರ ಮುಖದ ಮೇಲೂ ದೃಢನಿರ್ಧಾರದ ವೀರಮುದ್ರೆಯಿತ್ತು. ತಮ್ಮ ಸತ್ವ ಪರೀಕ್ಷೆಯ ಸಮಯ ಹತ್ತಿರವಾಯಿತೆಂದು ಅರ್ಥವಾದ ದಳವಾಯಿಗಳು, ತಮ್ಮತಮ್ಮೊಳಗೇ ಅನಗತ್ಯವಾದ ಚರ್ಚೆಗೆ ತೊಡಗದೆ, ಗುಂಪು ಕಲೆತು ಮಾತುಕಥೆಯಾಡದೆ, ಓಲಗದಿಂದ ನೇರವಾಗಿ ತಮ್ಮ ತಮ್ಮ ಚಾವಡಿಗಳಿಗೆ ತೆರಳಿ, 'ಮಧ್ಯಾಹ್ನದ ಊಟಕ್ಕೆ ಮನೆಗೆ ಬರುವುದಿಲ್ಲ' ಎಂದು ತಮ್ಮ ಮನೆಗಳಿಗೆ ಹೇಳಿಕಳಿಸಿ, ಮಾಮೂಲಿನಂತೆ ನಿಧಾನವಾಗಿ ಕೆಲಸ ಮಾಡುತ್ತಿದ್ದ ಕರಣಿಕರನ್ನು ಕೆಂಗಣ್ಣಿನಿಂದ ಚುರುಕಾಗಲು ಎಚ್ಚರಿಸಿ, ಯಾವ ಕೆಲಸಕ್ಕೆ ಯಾರನ್ನು ನೇಮಿಸಬೇಕೆಂದು ನಿರ್ಧಾರ ಮಾಡಿ, ಆ ಕೆಲಸಕ್ಕೆ ಅವರನ್ನು ಕಳಿಸಿ, ಸ್ವಯಂ ತಮಗೆ ನಿಗಧಿಯಾದ ಕಾರ್ಯದಲ್ಲಿ ತೊಡಗಿದರು.

ಓಲಗದಿಂದ ಪ್ರಧಾನಿಗಳ ಚಾವಡಿಗೆ ಬಂದ ಪ್ರಧಾನಿ ಪರಶುರಾಮನಾಯಕ, ಹತ್ತು ಜನ ಕರಣಿಕರನ್ನು ಕರೆಸಿ –

“ವಿಷಯವಿಷ್ಟೆ - ಸೂಕ್ತ ಒಕ್ಕಣೆಗಳೊಂದಿಗೆ, ಮೊಳಕಾಲ್ಮುರುವಿನವರಿಗೆ ಸಾವಿರಸೇನೆ, ಅದಕ್ಕೆ ತಕ್ಕ ಸರಂಜಾಮು, ಹಾಗೇ ಕಣಕುಪ್ಪೆಗೆ ಸಾವಿರ, ದೊಡ್ಡರಿಗೆ ಐನೂರು, ಬಸವನ ಕೋಟೆಗೆ ಇನ್ನೂರು, ಮಾಯಿಕೊಂಡಕ್ಕೆ ಐನೂರು, ಅಣಜಿಗೆ ಮುನ್ನೂರು, ದಾವಣಗೆರೆಗೆ ನೂರು, ಹೊಳಲ್ಕೆರೆಗೆ ಮುನ್ನೂರು, ರಾಮಗಿರಿಗೆ ಇನ್ನೂರು, ಹೊಸದುರ್ಗಕ್ಕೆ ಸಾವಿರ, ಗುಡಿಕೋಟೆಗೆ ಸಾವಿರ, ಜರಿಮಲೆಗೆ ಎರಡುಸಾವಿರ, ಹಿರಿಯೂರಿಗೆ ಸಾವಿರ, ನಾಯಕನಹಟ್ಟಿಗೆ ಇನ್ನೂರು - ಇಷ್ಟು. ಹೀಗೆ ನಿಮ್ಮ ನಿಮ್ಮ ಸೇನೆಗಳೊಂದಿಗೆ 'ಅಲ್ಲಿ ಭೋಜನ ಮಾಡಿ ದುರ್ಗದಲ್ಲಿ ಬಂದು ಕೈತೊಳೆಯುವುದು - ಹೀಗೆ ವ್ಯವಸ್ಥೆ ಮಾಡಿ ಕಳಿಸತಕ್ಕದ್ದು' ಎಂದು ಕಾಗದಗಳನ್ನು ಬರೆಯಿರಿ” - ಎಂದು ಅಪ್ಪಣೆ ಮಾಡಿದ.

ಕರಣಿಕರು ಬರೆದ ಕಾಗದ ಓದಿಸಿ ಕೇಳಿ, ಅದು ಸರಿಯಾಗಿದೆ ಎಂದು ಮನಸ್ಸಿಗೆ ನೆಮ್ಮದಿ ಮಾಡಿಕೊಂಡು, ಬರೆದ ಪತ್ರಗಳನ್ನು ಥೈಲಿಗಳಲ್ಲಿಟ್ಟು ಮೊಹರು ಮಾಡಿಸಿ, ಅಂಚೆಯ ಹರಿಕಾರರಿಗೆ-

"ಇವತ್ತು ಸಾಯಂಕಾಲ ಗಡಿಗಳನ್ನು ಮುಟ್ಟಬೇಕು. ಕೂಡಲೇ ಅಲ್ಲಿಯ ನಾಯಕರಾದಿಗಳ ಭೇಟಿ ಮಾಡಿ, ಜನ ತೆಗೆದುಕೊಂಡು, ನಾಳೆ ಬೆಳಗ್ಗೆ ಅಲ್ಲಿಂದ ಹೊರಟು ಸಂಜೆಯ ವೇಳೆಗೆ ಇಲ್ಲಿಗೆ ಮುಟ್ಟಬೇಕು"

-ಎಂದು ಕಟ್ಟಪ್ಪಣೆ ಮಾಡಿ ಕಳಿಸಿಕೊಟ್ಟ ಪರಶುರಾಮನಾಯಕ, ದುರ್ಗದ ಮಿತ್ರರಾದ ಪುಣೆಯ ಪೇಶ್ವೆಗಳಿಗೆ, ಕಡಪ, ಕರ್ನೂಲು, ಆದವಾನಿ, ಹಾವನೂರಿನ ಸಂಸ್ಥಾನೀಕರಿಗೆ –

"ನವಾಬ ಹೈದರಲ್ಲೀಖಾನನು ನಮ್ಮ ಮೇಲೆ ಭಾರಿ ದಂಡು ಕಟ್ಟಿಕೊಂಡು ಲಡಾಯಿ ಮಾಡಲು ಬರುತ್ತಿದ್ದಾನೆ. ಈ ವೇಳೆಯಲ್ಲಿ ಸಂಸ್ಥಾನದ ಹಿತೈಷಿಗಳಾದ ತಾವು, ನಮಗೆ ಸಾಧ್ಯವಾದಷ್ಟು ದಂಡಿನ ಕುಮ್ಮಕ್ಕು ಮಾಡಿ, ಸರದಾರರು ಸಾಧ್ಯವಾದಷ್ಟು ಸೇನೆ ಕಳಿಸಿ ಕೊಟ್ಟಲ್ಲಿ, ನಮ್ಮ ಸೀಮೆಗೆ ಬಂದಲಾಗಾಯಿತು ಅವರ ಖರ್ಚುವೆಚ್ಚ ನಾವು ನೋಡಿಕೊಳ್ಳುತ್ತೇವೆ. ತಾವು ಮಿತ್ರರೆಂದು ಕಾಗದ ಬರೆಸಿದ್ದೇವೆ. ಮದತ್ ಮಾಡಬೇಕು"

-ಎಂದು ಕೋರಿಕೆಯ ಪತ್ರಗಳನ್ನು ಬರೆಸಿ, ಅವುಗಳನ್ನು ಉಚಿತ ಮರ್ಯಾದೆಗಳ ಸಹಿತ ಜಾಸೂದ ಜನರೊಂದಿಗೆ ಕಳಿಸಿದ.

ದಳವಾಯಿಗಳು ತಮ್ಮ ಚಾವಡಿಗಳಲ್ಲಿ ಕೆಲಸದಲ್ಲಿ ನಿರತರಾಗಿರುವಾಗ, ಓಲಗ ಮುಗಿಸಿಕೊಂಡು ಅರಮನೆಗೆ ಹೋದ ನಾಯಕರು ಊಟ ಮಾಡಿ, ಎಂದಿನಂತೆ ವಿಶ್ರಾಂತಿಯನ್ನು ತೆಗೆದುಕೊಳ್ಳದೆ ಪ್ರಧಾನಿಗಳ ಚಾವಡಿಗೆ ಬಂದು ಕುಳಿತು, ಉಳಿದ ಚಾವಡಿಯ ದಳವಾಯಿಗಳನ್ನು ಕರೆಸಿ, ಅದುವರೆಗೆ ಅವರು ಮಾಡಿದ ಕೆಲಸಗಳ ವಿವರ ತಿಳಿದುಕೊಂಡು, ಬಳಿಕ –

"ನಾವು ಯಾರ ಅಧಿಕಾರವನ್ನೂ ಅತಿಕ್ರಮಿಸಿ ಅಪ್ಪಣೆ ಮಾಡುತ್ತಿಲ್ಲ. ನಾವು ಮಾಡಿದ ಅಪ್ಪಣೆಯಲ್ಲಿ ಹೆಚ್ಚು ಕಡಮೆಯಿದ್ದಲ್ಲಿ ದಳವಾಯಿಗಳು ಹೆದರದೆ ತಿದ್ದಿ ಹೇಳಬೇಕು"

- ಎಂದು ಹೇಳಿ, ಕೋಟೆಯ ಒಳ ಹೊರಗಿನ ವಿವರಗಳಿದ್ದ ನಕ್ಷೆಯನ್ನು ಎದುರಿಗೆ ತರಿಸಿಟ್ಟುಕೊಂಡು ನೋಡುತ್ತಾ-

"ಇದು ನಾವು ಯೋಚಿಸಿರುವ ರಕ್ಷಣಾವ್ಯವಸ್ಥೆ. ರಣಮಂಡಲ ಬತೇರಿ, ಪಂಚಗುಡ್ಡದ ಮೇಲೆ ಇರುವ ಬತೇರಿ, ನೆಲ್ಲಿಕಾಯಿ ಶಿದ್ದಪ್ಪನ ಗುಡ್ಡದ ಬತೇರಿ, ಮುಕ್ತಿ ಶಿವಾಲಯದ ಬತೇರಿ, ಹಿಡಿಂಬೇಶ್ವರನ ಗಡದ ಬತೇರಿ, ಸಾವಂತ್ರಿಗುಡ್ಡದ ಬತೇರಿ - ಇಲ್ಲೆಲ್ಲಾ ಒಂದೊಂದು ಬತೇರಿಗೂ ಐದರಂತೆ, ಹದಿನೆಂಟು ಥೈಲಿ ಮದ್ದಿನ ತೋಪುಗಳನ್ನು ಇಡಿಸಬೇಕು. ಆಯಾ ಬತೇರಿಯ ಮೇಲೆ ಐನೂರು ಗೋಲಿ, ಗರ್ಬಜಾಯ್, ನವಕರ್ನಾಟಕಮಟ್ಟಿನ ಥೈಲಿ ಮೊದಲಾದ ಸರಂಜಾಮು ಸಿದ್ಧವಾಗಬೇಕು. ತೋಪುಗಳನ್ನು ಗಾಡಿಯ ಮೇಲಿಟ್ಟು, ಅದಕ್ಕೆ ಅಗತ್ಯವಾದ ಆನೆ ಮೊದಲಾದ

ಸರಂಜಾಮು ಕಡಮೆಯಾಗದಂತೆ ನೋಡಿಕೊಳ್ಳಬೇಕು. ಹಗಲು ರಾತ್ರಿ ಬತೇರಿಗಳ ಮೇಲೆ ಕಾವಲುಕಟ್ಟು ಇರತಕ್ಕದ್ದು.

"ದರ ಬತೇರಿ ಒಂದಕ್ಕೆ ಐದು ಕುರಿ ಪ್ರಕಾರ ಆಹುತಿ ಕೊಟ್ಟು ಪೂಜೆ ಮಾಡಿಸಬೇಕು. ಇದಲ್ಲದೆ ಖಿಲ್ಲೆ, ಖಿಲ್ಲೆಯ ಮೇಲಣ ಬತೇರಿಗಳ ಮೇಲೆ ಒಂದೊಂದು ಬದಸ್ತೂರು ತೋಪು ಇಡಿಸಬೇಕು. ಅದಕ್ಕೆ ಬೇಕಾದ ಸರಂಜಾಮು ಸಿದ್ಧ ಇಟ್ಟುಕೊಂಡು, ಪ್ರತಿ ತೋಪಿಗೂ ಪೂಜೆ ಮಾಡಿಸಿ, ಕುರಿ ಬಲಿ ಕೊಡತಕ್ಕದ್ದು.

"ಲಾಲಗಡದ ಬತೇರಿ ಬಹಳ ದೊಡ್ಡದು. ಆ ಬತೇರಿಗೆ ಹನ್ನೆರಡು ತೋಪು ಇಡಿಸಬೇಕು. ಅದಕ್ಕೆ ಅಗತ್ಯವಾದ ಗೋಲಿ, ಮದ್ದು ಗಜ ವಗ್ಯೆರೆ ಸಿದ್ಧಪಡಿಸಿ, ತೋಪುಗಳಿಗೆ ಆಹುತಿ ಕೊಟ್ಟು, ಫಿರಂಗಿಗೆ ಒಬ್ಬರಂತೆ ಗೋಲಂದಾಜರು ಸಿದ್ಧವಾಗಿರಬೇಕು.

"ಒಂದೊಂದು ಬತೇರಿಗೂ ಸಾವಿರ ಮಹತಾಬ್ ಇಡಿಸುವುದು, ಮಹತಾಬು ಬಿಡುವುದಕ್ಕೆ ಕಂಭ ನಿಲ್ಲಿಸಬೇಕು. ಫತ್ತೇದರ್ವಾಜ ಬತೇರಿಗೆ (ಸಿದ್ದಯ್ಯನ ಬಾಗಿಲು) ಇಂಥ ಮಹಾದ್ವಾರದ ಬತೇರಿಗಳಿಗೆ ದರ ಬತೇರಿಗೂ ಅರವತ್ತು ತೋಪುಟಾನೆ ಏರಿಸಿ, ಅದಕ್ಕೆ ಅಗತ್ಯವಾದ ಸಲಕರಣೆ ಸಿದ್ಧವಾಗಿಡಬೇಕು. ಇವೆಲ್ಲಕ್ಕೂ ಅಗತ್ಯವಾದ ಬಲಿಪೂಜೆ ನಡೆಯಬೇಕು.

"ಇದಲ್ಲದೆ, ಚಾಜಿನಮರಡಿಬತೇರಿ, ಶೆಂಟಿಖಾನೆ ಬತೇರಿಗೂ ತೋಪುಗಳನ್ನಿರಿಸಿ, ಗೋಲಂದಾಜರನ್ನು ನೇಮಕ ಮಾಡಬೇಕು. ಒಂದೊಂದು ಬತೇರಿಗೂ ಸಾವಿರ ಮಹತಾಬು ಇಡಬೇಕು."

-ಎಂದು ಅಪ್ಪಣೆ ಮಾಡಿ, ಗೋಲಂದಾಜರಿಗೆ ಹುಕುಂ ಬಜಾಯಿಸಿ, ಇವರ ನೆರವಿಗೆ ಅಗತ್ಯವಾದ ಐದುನೂರು ಕಾಮಾಟಿಗರನ್ನು ಕೊಟ್ಟು, ಬಂದೋಬಸ್ತಿಗೆ ನೂರು ಜನ ಚೋಪದಾರರನ್ನು ನೇಮಿಸಿದರು.

ಇದಾದ ಬಳಿಕ, ಬಾಣದಾರರು ಎಷ್ಟಿದ್ದಾರೆ ಎಂದು ಲೆಕ್ಕ ತೆಗೆದುಕೊಂಡು-

"ಸಾವಿರ ಬಾಣದಾರರಿಗೆ, ಒಬ್ಬೊಬ್ಬರಿಗೆ ಹತ್ತು ಬಾಣದ ಮೇರೆಗೆ ಕೊಟ್ಟು ಒಂದೊಂದು ಬಾಣಕ್ಕೆ ಬತ್ತಿ, ರಂಜಕ ವಗ್ಯೆರೆ ನೆಟ್ಟಗೆ ಮಾಡಿ, ಫತ್ತೆದರ್ವಾಜ ಖಿಲ್ಲೆಯ ಮೇಲೆ ಹಾಜರಿರ ಬೇಕು. ಒಂದು ಸಾವಿರ ಕೊಂತಲ ಬಾಣ ಸಿದ್ಧವಾಗಿರಬೇಕು"

-ಎಂದು ನೇಮಕ ಮಾಡಿದರು ನಾಯಕರು.

ನಾಯಕರ ಆಜ್ಞೆಯನ್ನು ಕಾರ್ಯಗತಗೊಳಿಸಲು, ಅದಕ್ಕೆ ಸಂಬಂಧಿಸಿದ ಜನ ಹೋದ ಬಳಿಕ, ದುರ್ಗದ ನಕ್ಷೆಯನ್ನು ಎಚ್ಚರಿಕೆಯಿಂದ ನೋಡುತ್ತಾ-

"ಪಶ್ಚಿಮ ದಿಕ್ಕು ನಾವು ಬಹಳ ಎಚ್ಚರವಾಗಿರಬೇಕಾದ ಜಾಗ. ಆದ್ದರಿಂದ ಹೆಬ್ಬುಲಿ ಕಲ್ಲಿನ ದಿಕ್ಕಿನ ಮೂರು ಬತೇರಿಗಳ ಮೇಲೆ, ದುಂಡು ನಾಗರಸುತ್ತಿನ ಬತೇರಿ ಮೇಲೆ ತೋಪುಗಳನ್ನು ಇಡಿಸಬೇಕು. ಇದಲ್ಲದೆ ವನಕೆ ಖಂಡಿ[2] ಬಾಗಿಲ ಮೇಲಿನ ಎರಡು ಬತೇರಿ ಮೇಲೆ ಮೂವತ್ತೆರಡು ತೋಪು ಇರಿಸುವುದು. ಅಲ್ಲಿಯೇ ಸಿಹಿನೀರು ಹೊಂಡ ಇದೆ. ಷಹರಿಗೆ ಅದೇ ನೀರು. ಆದ್ದರಿಂದ ಶತ್ರುಜನ ಬರದಂತೆ, ಆಗಾಗ ತೋಪು ಹಾರಿಸುತ್ತಾ ಇರಬೇಕು. ಅಲ್ಲಿಗೆ ತಕ್ಕ ಶಿಸ್ತಂಜಾದು, ಗೋಲಂದಾಜರು ಇರತಕ್ಕದ್ದು. ಹೊಂಡದ ಮೇಲಿನ ಶಿರಿಯಪ್ಪನ ಕಲ್ಲಿನ ಬತೇರಿ ಮೇಲೆ, ಮತ್ತು ಅದರ ಬಳಿಯ ಎರಡು ಬಾಗಿಲ ಬಳಿ 'ಲಂಚಾಡಿ' ತೋಪು ಇಡಿಸುವುದು. ಅದಕ್ಕೆ ಅಗತ್ಯವಾದ ಸರಂಜಾಮು, ಗೋಲಂದಾಜರು ಸದಾ ಸಿದ್ಧವಾಗಿರಬೇಕು"

- ಎಂದು ಕಟ್ಟುಮಾಡಿ, ದುರ್ಗದ ಹೊರವಲಯವನ್ನು ನಿರೀಕ್ಷಿಸುತ್ತಾ-

"ಹೆಬ್ಬುಲಿಕಲ್ಲಿನಿಂದ ಧವಳಪ್ಪನ ಗುಡ್ಡದವರೆಗಿನ ಪಶ್ಚಿಮದ ಕಣಿವೆಗೆ ಐನೂರು ಪೇದೆ, ಕಂದಾಜು, ಐವತ್ತು ಸರಗೋಲಿ, ನೂರುಜನ ಬಾಣದಾರರು, ಎರಡು ತೋಪುಗಳನ್ನು ಕೋಟೆಯ ಟೀಕಡಿಯ ಮೇಲಿಟ್ಟು, ಅತ್ತಕಡೆ ದಂಡು ಬಾರದಂತೆ ಒಬ್ಬ ಸವಾರನನ್ನಿಟ್ಟು ಬಂದೋಬಸ್ತು ಮಾಡಬೇಕು. ಅಲ್ಲದೆ ಮುರುಗೀಮಠದ ಉಕ್ಕಡ ಹಿಡಿದು, ತಮಟೆಕಲ್ಲು ಕಣಿವೆ ವಗ್ಯೆರೆಗೆ, ಒಂದಕ್ಕೆ ಐದುನೂರು ಜನ ಬಾರು, ಐವತ್ತು ಕಂದಾಜು ಸರಗೊಲಿಜನ, ನೂರುಜನ ಬಾಣದಾರರು, ಎರಡೆರಡು ತೋಪು ಇಟ್ಟು, ಒಬ್ಬ ಸರದಾರನನ್ನು ಅಲ್ಲಿ ನೇಮಕ ಮಾಡಬೇಕು. ಹಾಗೇ ರಂಗಪ್ಪನಹಳ್ಳಿ ಕಣಿವೆಗೆ ಒಬ್ಬ ಸರದಾರನ ನೇಮಕವಾಗಬೇಕು.

"ಅಲ್ಲಿಂದ ಉತ್ತರಕ್ಕೆ ಗೋನೂರು ಕಣಿವೆಗೊಬ್ಬ ಸರದಾರ ನೇಮಕವಾಗಬೇಕು. ಪೂರ್ವಕ್ಕೆ ದ್ಯಾಮವ್ವನಹಳ್ಳಿಕಣಿವೆಗೆ, ಸಕಲ ಸರಂಜಾಮುಸಮೇತ ಒಬ್ಬ ಸರದಾರ, ಆಗ್ನಿಯ ದಿಕ್ಕಿಗೆ ಇಂಗಳದಹಾಳುಕಣಿವೆಯಿಂದ ಶಿದ್ದವ್ವನಹಳ್ಳಿ ಕಣಿವೆ ಹಿಡಿದು, ಮೇಲೆ ಗುಡ್ಡದವರೆಗೆ ದೊಡ್ಡ ಕಣಿವೆಗೆ ಸಾವಿರ ಪೇದೆ, ಇನ್ನೂರು ಸರಗೋಲಿ ಬಾಣದಾರರು, ನಾಲ್ಕು ತೋಪು, ಅದರ ಸರಂಜಾಮು ವಗ್ಯೆರೆ ಕೊಟ್ಟು, ಇಬ್ಬರು ಸರದಾರರನ್ನು ನೇಮಕ ಮಾಡಬೇಕು. ಅಲ್ಲಿಂದ ದಕ್ಷಿಣಕ್ಕೆ ಮೋಟಾಲದಕಣಿವೆಗೆ ಇನ್ನೂರುಪೇದೆ, ಬಾರುಕಂದಾಜು, ಐವತ್ತು ಸರಗೋಲಿ ಜನ, ನೂರುಜನ ಬಾಣದಾರರು, ಎರಡು ತೋಪು, ಅದರ ಸರಂಜಾಮು ವಗ್ಯೆರೆಸಹಿತ ಒಬ್ಬ ಸರದಾರ ಕಾವಲಿಗೆ ಇರಬೇಕು"

---

[2] ಒನಕೆಯ ಆಕಾರದಲ್ಲಿರುವ ಒಬ್ಬರು ಮಾತ್ರ ತೆವಳಿಬರುವ ಈ ಗುಪ್ತದ್ವಾರಕ್ಕೆ 'ವನಕೆ ಖಂಡಿ' ಎಂಬ ಹೆಸರು. 'ಒನಕೆ ಓಬವ್ವ' ನ ಪ್ರಸಂಗಾನಂತರ ಇದಕ್ಕೆ ಈ ಹೆಸರು ಬಂದಿದ್ದಲ್ಲ.

- ಎಂದು ಹೇಳಿ, ಗಡಿಠಾಣ್ಯದ ಚಾವಡಿಯ ದಳವಾಯಿಗಳಿಗೆ –

"ನಿಮ್ಮ ಸುಪರ್ದಿಗೆ ಸೇರಿದ ಕಣಿವೆಗಳಲ್ಲಿ ಏನಾದರೂ ಕಾಗದಪತ್ರ ಬಂದರೆ, ನೆಟ್ಟಗೆ ಅದನ್ನು ಹುಜೂರಿಗೆ ಮುಟ್ಟಿಸಬೇಕು. ಪ್ರಧಾನಿಗಳ ಚಾವಡಿಯಿಂದ ನಿರೂಪ ಹೋದರೆ ಹೊರಬಿಡಬಹುದು. ಹಾಗಲ್ಲದೆ ಬೇರೆಯವರ ಕಾಗದ ಹೋದರೆ ಅದನ್ನು ತಂದು ಪ್ರಧಾನಿಗಳ ಚಾವಡಿಗೆ ಕೊಡಬೇಕು. ಹಗಲು ರಾತ್ರಿ ರಸ್ತೆಗೆ ಅಡ್ಡಮರವಿಟ್ಟು ಸಾಂಡಣಿಸವಾರರು ಹೊಸದಾಗಿ ಕಾಗದಪತ್ರ ತಂದರೆ ಅಟಕಾವು ಮಾಡಿ, ಆ ಕಾಗದಪತ್ರಗಳನ್ನು ಪ್ರಧಾನಿಗಳ ಚಾವಡಿಗೆ ಒಪ್ಪಿಸಬೇಕು. ಫೌಜೇನಾದರೂ ಬಂದರೆ- ಹುಕುಂ ಕಾಯದೆ ಹೊಡೆಯಬೇಕು. ಬೇಹುಷಾರಿಯಾದರೆ ತಲೆದಂಡ - ತಿಳಿಯುವುದು"

- ಎಂದು ನಡುನಡುವೆ ಸಂಬಂಧಪಟ್ಟ ದಳವಾಯಿಗಳಿಂದ ಸಲಹೆಪಡೆದು, ಕೋಟೆಯ ಒಳಹೊರಗಿನ ಬಂದೋಬಸ್ತಿಗೆ ಅಗತ್ಯವಾದ ಅಪ್ಪಣೆಗಳನ್ನು ಮಾಡಿದ ನಾಯಕರು –

"ದುರ್ಗದ ರಕ್ಷಣೆಗೆ ಹೊರಗಿನ ನಮ್ಮವರಿಂದ ಸೇನಾಜಮಾವಣೆಯಾದಬಳಿಕ ಸೂಕ್ತ ಕಂಡ ರೀತಿಯಲ್ಲಿ ತಮ್ಮೆಲ್ಲರೊಂದಿಗೆ ಪರ್ಯಾಲೋಚನೆ ಮಾಡಿ ಅಗತ್ಯವಾದ ಆಜ್ಞೆಗಳನ್ನು ಕೊಡುತ್ತೇವೆ" – ಎಂದು ಹೇಳಿದರು.

ಇಷ್ಟೆಲ್ಲಾ ವಿವರವಾಗಿ ಪರಿಶೀಲನೆ ಮಾಡಿ, ಪ್ರತ್ಯೇಕಪ್ರತ್ಯೇಕವಾಗಿ ವ್ಯವಸ್ಥೆ ಮಾಡುವ ವೇಳೆಗೆ, ಮಧ್ಯರಾತ್ರಿಯ ವೇಳೆಯಾಗಿತ್ತು. ಉರಿದು ತೈಲ ತೀರಿ ನಂದುತ್ತಾ ಬಂದ ದೀಪಗಳ ಕ್ಷೀಣಕಾಂತಿಯ ಆರೆಗತ್ತಲಿನಲ್ಲಿ ಕಗ್ಗಲ್ಲಿನಲ್ಲಿ ಕೊರೆದಂತೆ ಕಾಣುತ್ತಿದ್ದ ನೆರೆದೆಲ್ಲರ ಮುಖಗಳನ್ನು ನೋಡಿ –

"ಈ ದಿನ ಇಷ್ಟು ಸಾಕು ಎಂದು ತೋರುತ್ತದೆ. ನಾಳೆಯ ದಿನ ಪ್ರಾತಃಕಾಲ ಕೋಟೆಯ ತನಿಖೆಗೆ ಅಗತ್ಯವಾದ ದಳವಾಯಿಗಳು, ಅಧಿಕಾರಿಗಳು ಅರಮನೆಗೆ ಬರಬೇಕು"

-ಎಂದು ಹೇಳಿ, ಆ ರಾತ್ರಿಯ ಸಭೆ ಮುಗಿಸಿ, ಮೇಲೆದ್ದರು ನಾಯಕರು.

ನಾಯಕರಿಂದ ಅನುಮತಿ ಪಡೆದು, ನೆರೆದ ದಳವಾಯಿಗಳೆಲ್ಲಾ ಹೋದ ಬಳಿಕ, ಉಳಿದ ಪ್ರಧಾನಿ ಪರಶುರಾಮನಾಯಕನೊಂದಿಗೆ, ನಾಯಕರು ಅರಮನೆಗೆ ಹೋಗಲು ಚಾವಡಿಯಿಂದ ಹೊರಬಂದರು.

ಇಬ್ಬದಿಯಲ್ಲೂ ಹತ್ತು ಹತ್ತು ಮಂದಿ ದೀವಟಿಗೆ ಹಿಡಿದವರು ದಾರಿ ತೋರಲು ಸಿದ್ಧವಾಗಿ ನಿಂತಿರಲು, ಆಳುಗಳು ತಂದು ನಿಲ್ಲಿಸಿದ ಕುದುರೆಗಳನ್ನು ಅವರಿಬ್ಬರೂ ಏರುತ್ತಿರುವಾಗ ಶಾಂತಿಸಮಯದಲ್ಲಿ ಮಾಮೂಲಾಗಿ ನಾಯಕರನ್ನು ಹಿಂಬಾಲಿಸುತ್ತಿದ್ದ ಇಬ್ಬರು ಅಂಗರಕ್ಷಕ ಸೈನಿಕರಿಗೆ ಪ್ರತಿಯಾಗಿ ಶಸ್ತ್ರಸನ್ನದ್ಧರಾದ ಇಪ್ಪತ್ತು ಮಂದಿ ಆಯ್ದ ಭಟರು ಅವರನ್ನು ಸುತ್ತುವರಿದು

ನಿಂತು, ಪ್ರಮಾಣಬದ್ಧವಾಗಿ ತುಂಬಿ ಬೆಳೆದ ತರುಣಪುರುಷತ್ವವನ್ನು ಉಕ್ಕಿನಲ್ಲಿ ನಿರ್ಮಿಸಿದಂತಿದ್ದ ಯುವಕ ದಳಪತಿಯೊಬ್ಬನು ನಾಯಕರಿದಿರು ಬಂದು ನಿಂತು, ಅವರಿಗೆ ವಂದನೆಯನ್ನರ್ಪಿಸಿದ.

ಹಿಂದೆಂದೂ ನೋಡಿದ ನೆನಪಿರದ ಆ ತರುಣಯೋಧನನ್ನು ನೋಡಿ, ಅವನ ದೇಹ ಸೌಷ್ಠವದ ಪುರುಷಸೌಂದರ್ಯಕ್ಕೆ ಮರುಳಾದ ನಾಯಕರು-

“ನೀನಾರು ?” – ಎಂದು ಕೇಳಿದರು.

“ನನ್ನ ಹೆಸರು ವೀರನಾಯಕ. ಆದರೆ ನನ್ನನ್ನು 'ಗುದಗತ್ತಿ' ಎಂದು ಕರೆಯುತ್ತಾರೆ. ಪ್ರಭುಗಳೂ ನನ್ನನ್ನು ಹಾಗೆಂದೇ ಕರೆಯಬೇಕು”

- ಎಂದು ಗಂಡುತನ ತೂಗುತ್ತಿದ್ದ ಧ್ವನಿಯಲ್ಲಿ ಹೇಳಿದ ಆ ಯುವಕ ಯೋಧ.

“ಗುದಗತ್ತಿ – ಇದೆಂತಹ ವಿಚಿತ್ರ ಹೆಸರು, ಆನೆಯನ್ನು ಕಾಳಗವಾಡಲು ಉಪಯೋಗಿಸುವ ಕತ್ತಿಯ ಹೆಸರಲ್ಲವೇ ಅದು ?”

– ಚಕಿತನಾಗಿ ಕೇಳಿದರು ನಾಯಕರು.

“ನಿಜ, ಆದರೂ ನನ್ನನ್ನು ಹಾಗೆಂದು ಕರೆಯುತ್ತಾರೆ”

-ಎಂದಷ್ಟೇ ಹೇಳಿದ ಆ ತರುಣ.

“ಈ ಹುಡುಗ ಹೋದ ಬಾರಿಯ ದಸರಾ ಉತ್ಸವದ ಸಂಬಂಧದಲ್ಲಿ ನಡೆದ ಕುಮಾರ ಚಾವಡಿಯ ತರುಣರ ಸ್ಪರ್ಧೆಗಳಲ್ಲಿ ಆನೆಯೊಂದಿಗೆ ಹೋರಾಡಿ ಗೆದ್ದಂದಿನಿಂದಲೂ ಆ ಹೆಸರು ಈತನಿಗೆ ಬಂದಿದೆ. ಬರೀ ಆನೆಗಾಳಗವೇ ಅಲ್ಲ, ಖಡ್ಗ ಯುದ್ಧ, ಅಶ್ವಾರೋಹಣ, ವಿವಿಧಾಯುಧ ಪ್ರಯೋಗ ಮೊದಲಾದ ಎಲ್ಲ ರಣವಿದ್ಯೆಗಳಲ್ಲಿ ಈ ತರುಣ ನಮ್ಮ ಕುಮಾರಚಾವಡಿಯ ಕಿರೀಟ.”

- ಪರಶುರಾಮನಾಯಕ ಆ ತರುಣನ ಪರಿಚಯವನ್ನು ನಾಯಕರಿಗೆ ಮಾಡಿಕೊಟ್ಟ.

“ಹಾಗೇ - ಮತ್ತೇಕೆ ಇಷ್ಟು ದಿನ ಈತನನ್ನು ನಾವು ನೋಡಲಿಲ್ಲ ?”

-ನಾಯಕರು ಕೇಳಿದರು.

“ಈ ಬಾರಿಯ ವಿಜಯದಶಮಿಯ ಉತ್ಸವದಲ್ಲಿ ಈತನನ್ನು ಸಂಪೂರ್ಣವಾಗಿ ತಯಾರಿ ಮಾಡಿ ತಮಗೆ ಒಪ್ಪಿಸಬೇಕು ಎಂದಿದ್ದರು ಕುಮಾರಚಾವಡಿಯ ದಳವಾಯಿಗಳು. ಆದರೆ -ಈಗ ದಸರಾ ನಡೆಯುವ ಮೊದಲೇ ಈ ಯುದ್ಧ ಸಂದರ್ಭ ಒದಗಿದ್ದರಿಂದ, ಈತನನ್ನು ಹೊರತಂದು ತಮ್ಮ ಹೊಸ ಅಂಗರಕ್ಷಕಪಡೆಯ ನಾಯಕನನ್ನಾಗಿ ನೇಮಿಸಿದ್ದಾರೆ.”

“ಇದೆಲ್ಲಾ ನಡೆದದ್ದು ಯಾವಾಗ ?” - ಆಶ್ಚರ್ಯದಿಂದ ಕೇಳಿದರು ನಾಯಕರು.

“ತಾವು ಓಲಗದಲ್ಲಿ ಸಮರಘೋಷಣೆ ಮಾಡಿದ ಬಳಿಕ, ಈ ಸಮಯಕ್ಕೆ ತಕ್ಕ ಅಂಗರಕ್ಷಕ ಪಡೆ ಇರಬೇಕೆಂದು ನಾನು ದಳವಾಯಿಗಳಿಗೆ ಸೂಚಿಸಿದಾಗ ಎಲ್ಲರೂ ಒಮ್ಮತದಿಂದ ಹೇಳಿದ

ಹೆಸರು ಈತನದು. ಈತ ತಾನೇ ಆಯ್ದ ತರುಣ ಅಂಗರಕ್ಷಕ ಪಡೆಯೊಂದಿಗೆ ಈಗ ತಮ್ಮ ಕಣ್ಣೆದುರು ನಿಂತಿದ್ದಾನೆ. ಒಪ್ಪಿಸಿಕೊಳ್ಳಬೇಕು" - ಎಂದು ಹೇಳಿದ ಪರಶುರಾಮನಾಯಕ.

ಆತ ಹೇಳಿದುದೆಲ್ಲವನ್ನೂ ಕೇಳಿ ನಾಯಕರು ತನ್ನೆದುರು ನಿಂತ ತರುಣ ಗುದಗತ್ತಿಯನ್ನು, ತಮ್ಮ ಸುತ್ತುವರಿದು ಅಶ್ವಾರೋಹಿಗಳಾಗಿ ನಿಂತ ಅಂಗರಕ್ಷಕರನ್ನು ನೋಡಿದರು.

ಅವರು ಏರಿದ ಕಟ್ಟು ಮಸ್ತಾದ ಕುದುರೆಗಳಂತೆಯೇ ಅದನ್ನೇರಿದ ಯೋಧರೂ – ಸಾವಿರದಲ್ಲೊಬ್ಬನಂತೆ ಹುಡುಕಿ ಆರಿಸಿದ ಯುವಯೋಧರು.

ನಾಯಕರು ಅವರತ್ತ ನೋಡಿದರೂ ಅವರು ನಾಯಕರ ನೋಡಲಿಲ್ಲ. ಚಿರತೆಯ ಚರ್ಮದ ಜೀನುಹಾಕಿದ, ಅಚ್ಚಕಪ್ಪು ಬಣ್ಣದ ಯುದ್ಧಾಶ್ವಗಳನ್ನೇರಿ, ಸಮರದ ಸಮವಸ್ತ್ರ ಧರಿಸಿದ ಆ ಭಟರು ಕುಶಲರೂವಾರಿ ಕಡೆದ ಯೋಧವಿಗ್ರಹದಂತಿದ್ದರು.

ಅವರೆಲ್ಲರನ್ನೂ ನೋಡಿ, ಬಳಿಕ ಮತ್ತೊಮ್ಮೆ ಗುದಗತ್ತಿಯತ್ತ ನೋಡಿದರು ನಾಯಕರು –

ಕುಶಲ ಅಕ್ಕಸಾಲಿ ಆರಿಸಿದ ಮುತ್ತುಗಳಂತಿದ್ದ ಯೋಧರಲ್ಲಿ ಎದ್ದು ಹೊಳೆವ ಆಣಿಮುತ್ತಿನಂತಿದ್ದ - ಗುದಗತ್ತಿ.

ತನ್ನತ್ತ ನೋಡಿದ ನಾಯಕರಿಗೆ ತಲೆಬಾಗಿ, ಕೈಯಲ್ಲಿದ್ದ ಖಡ್ಗವನ್ನು ಅವರ ಕಾಲಬಳಿ ಎಂಬಂತೆ ಎದುರಿಗೆ ಅಡ್ಡವಾಗಿ ಹಿಡಿದು –

"ಮಾ ಸ್ವಾಮಿಯವರು ನಮ್ಮ ಸೇವೆಯನ್ನು ಒಪ್ಪಿಸಿಕೊಳ್ಳಬೇಕು"

-ಎಂದು ವಿನಯತುಂಬಿದ ಧ್ವನಿಯಲ್ಲಿ ಹೇಳಿದ ಗುದಗತ್ತಿ.

ಮಾಟವಾದ ಹುಬ್ಬು, ಮೂಗು, ತುಟಿ, ಗಡ್ಡ ಒಂದೊಂದೂ ಪ್ರಮಾಣಬದ್ಧವಾಗಿ ಬೆಳೆದ ಪುರುಷಶಕ್ತಿಯ ಸಂಕೇತಗಳಂತಿದ್ದರೆ, ತುಟಿಯ ಮೇಲೆ ತಿದ್ದಿ ಬೆಳೆಸಿದ ಚಿಗುರುಮೀಸೆ ಆ ಪುರುಷತ್ವದ ಪರಾಕು ಹೇಳುವ ಭಟರಾಜನಂತಿತ್ತು.

ನೋಡಿದರು-

ನೋಡಿದಷ್ಟೂ ಆತನ ಬಗ್ಗೆ ಮೆಚ್ಚುಗೆ ಬೆಳೆದು, ತಮ್ಮ ಸೊಂಟದಲ್ಲಿದ್ದ ರತ್ನಖಚಿತವಾದ, ಒರೆಯಲ್ಲಿದ್ದ ಚಿನ್ನದ ಹಿಡಿಕೆಯ ಹದಮಾಡಿದ ಉಕ್ಕಿನ ಕಠಾರಿಯನ್ನು ಅತನಿಗೆ ಕೊಟ್ಟು, ಹೇಳಿದರು ನಾಯಕರು –

"ಇದು ನಮ್ಮ ಒಪ್ಪಿಗೆಯ ಕುರುಹಾಗಿ ನಿನ್ನಲ್ಲಿರಲಿ."

ಆ ಕಠಾರಿಯನ್ನು ವಿನಯದಿಂದ ಸ್ವೀಕರಿಸಿದ ಗುದಗತ್ತಿ, ಅದನ್ನು ದೇವರ ಪ್ರಸಾದವೆಂಬಂತೆ ತಲೆ, ಕಣ್ಣುಗಳಿಗೊತ್ತಿಕೊಂಡು-

"ಮಾ ಸ್ವಾಮಿ, ಇಂದಿನಿಂದ ಈ ಕಠಾರಿ ಮಾಡುವ ಕೆಲಸವನ್ನು ನಾನು ಮಾಡುತ್ತೇನೆ"

-ಎಂದು ಹೇಳಿ, ಅಂಗರಕ್ಷಕ ದಳದತ್ತ ತಿರುಗಿ-

“ಸನ್ನಿಧಾನಕ್ಕೆ ತಲ್ವಾರ್ ಒಪ್ಪಿಸಿ”

-ಎಂದು ಕೂಗಿ ಹೇಳಿದ.

ಆ ಕೂಗು ಕೇಳುತ್ತಿದ್ದ ಹಾಗೆ, ಅಶ್ವಾರೋಹಿಗಳಾಗಿದ್ದ ಯೋಧರೆಲ್ಲರೂ ಮಿಂಚಿನ ವೇಗದಲ್ಲಿ ತಮ್ಮ ಸೊಂಟದ ಒರೆಗಳಲ್ಲಿದ್ದ ಖಡ್ಗಗಳನ್ನು ಹಿರಿದೆಳೆದು, ಖಡ್ಗವನ್ನು ನಾಯಕರತ್ತ ಚಾಚಿ, ತಲೆಬಾಗಿ ವಂದಿಸಿದರು.

ಸುತ್ತ ಬೆಳಗುತ್ತಿದ್ದ ಪಂಜುಗಳ ಕಾಂತಿಯಲ್ಲಿ ಆ ಮಸೆದ ಖಡ್ಗಗಳು, ಮೊಟ್ಟೆಯೊಡೆದು ಹೊರಚಿಮ್ಮಿದ ಹಾವಿನಮರಿಗಳಂತೆ, ಕಾರ್ಗಾಲದ ಮುಗಿಲ ಬಸಿರಿಂದ ಹೊರಚಿಮ್ಮಿದ ಮರಿಮಿಂಚುಗಳಂತೆ ಥಳಥಳಿಸಿದವು.

ಅದನ್ನು ನೋಡಿದ ಗುದಗತ್ತಿ ಮತ್ತೊಮ್ಮೆ ನಾಯಕರಿಗೆ ವಂದಿಸಿ, ತನ್ನ ಅಶ್ವವನ್ನೇರಿ, ಆ ದಳದ ಮುಂದೆ ನಿಂತು, ದಳ ಮುಂದೆ ನಡೆಯುವಂತೆ ಕತ್ತಿಯನ್ನು ಬೀಸಿ –

“ಹೋಷಿಯಾರ್ ಸೆ ಚಲೊ” – ಎಂದು ಅಪ್ಪಣೆ ಮಾಡಿದ.

ಮಿಂಚುಗಳ ಸುತ್ತುಕಾವಲಿನಲ್ಲಿ, ಪಂಜುಗಳು ತೋರಿದ ದಾರಿಯಲ್ಲಿ ನಾಯಕರು, ಪರಶು ರಾಮನಾಯಕನೊಂದಿಗೆ ಅರಮನೆಯತ್ತ ನಡೆದರು.

೧೫

ಹೊರಗೆ ಮುಗಿಲಿನಲ್ಲಿ ಮುಂಜಾವಿನ ಮುಂಬೆಳಕು ಮೂಡಿದ್ದರೂ, ವಾತಾಯನದ ತೆರೆಗಳು ಮುಚ್ಚಿದ್ದ, ನಾಯಕರ ತಂದೆ ಭರಮಣ್ಣನಾಯಕನ ಕೊಠಡಿಯಲ್ಲಿ ಇನ್ನೂ ಅರೆಗತ್ತಲೆಯೇ ಇತ್ತು.

ಇರುಳೆಲ್ಲಾ ಸಂಧಿವಾತದ ನೋವಿನಲ್ಲಿ ನರಳಿ ನಿದ್ರೆ-ಎಚ್ಚರಗಳ ನಡುವೆ ತೂಗಾಡುತ್ತಾ, ಮುಂಜಾವಿನ ತಂಗಾಳಿಗೆ ಎಚ್ಚರವಾಗಿ, ಮೈಗೆ ಹೊದಿಸಿದ ಶಾಲನ್ನು ಅತ್ತ ಸರಿಸಿ, ಕೈಯುಜ್ಜಿಕೊಂಡು ದೇವರ ಸ್ಮರಣೆ ಮಾಡುತ್ತಾ, ತನ್ನನ್ನು ಪ್ರಾತರ್ವಿಧಿಗಳಿಗೆ ಕರೆದೊಯ್ಯಲು ಬರುವ ನಿಂಗವ್ವನನ್ನೇ ಕಾಯುತ್ತಿದ್ದ ಭರಮಣ್ಣನಾಯಕ, ಆಕೆಗಿಂತ ಮುಂಚಿತವಾಗಿ, ಸವಾರಿಯ ಉಡುಪು ಧರಿಸಿ ಹೆಜ್ಜೆ ಸದ್ದಾಗದಂತೆ ತನ್ನ ಬಳಿ ಬಂದು ಕಾಲು ಮುಟ್ಟಿದ ಮದಕರಿನಾಯಕನನ್ನು ಕಂಡು-

“ಇದೇನಪ್ಪಯ್ಯ, ಇಷ್ಟು ಹೊತ್ತಿಗೇ....” - ಎಂದು ಆಶ್ಚರ್ಯದಿಂದ ಕೇಳಿದ.

"ಕೋಟೆ ತನಿಖೆ ಮಾಡಲು ಹೋಗಬೇಕು, ಅಪ್ಪಾಜಿ. ದಳವಾಯಿಗಳು ಬಂದು ಕಾಯುತ್ತಿದ್ದಾರೆ. ನಾನು ಕಾಲು ಮುಟ್ಟಿ ನಿಮಗೆ ಎಚ್ಚರವಾಯಿತೋ - ಏನೋ....ರಾತ್ರಿ ಚೆನ್ನಾಗಿ ನಿದ್ದೆ ಬಂದಿತೇ. ಅಪ್ಪಾಜಿ; ನೋವು ಹೇಗಿದೆ?....ನಿನ್ನೆ ರಾತ್ರಿ ಮಲಗುವ ಮೊದಲು ನಿಮ್ಮನ್ನು ನೋಡಲಾಗಲಿಲ್ಲ...."

-ಎಂದು ಪ್ರೀತಿ, ಗೌರವಗಳು ತುಂಬಿದ ಧ್ವನಿಯಲ್ಲಿ ಹೇಳಿದ ಮದಕರಿನಾಯಕ.

"ಕೋಟೆ ತನಿಖೆಗೆ....ಇಷ್ಟು ಬೇಗ.... ಇನ್ನೂ ಹಗಲಾದ ಹಾಗೇ ಇಲ್ಲ."

"ಹಗಲಾಗಲಿನ್ನೂ ಸ್ವಲ್ಪ ಹೊತ್ತು ಬೇಕು. ನೀವು ಇನ್ನಷ್ಟು ಹೊತ್ತು ಮಲಗಿ, ಅಪ್ಪಾಜಿ."

"ನಾನು ಎದ್ದಿದ್ದರೂ ಒಂದೇ, ಮಲಗಿದ್ದರೂ ಒಂದೇ. ಅದು ಬಿಡು, ಇಷ್ಟು ಹೊತ್ತಿಗೆ ಮುಂಚೆಯೇ ಹೊರಟಿದ್ದು ಏಕೆ ?"

-ಭರಮಣ್ಣನಾಯಕ ಕುತೂಹಲ ಕೆರಳಿದ ಧ್ವನಿಯಲ್ಲಿ ಕೇಳಿದ.

"ಮನೆಬಾಗಿಲಿಗೇ ಯುದ್ಧ ಬಂದಿದೆ, ಆಪ್ಪಾಜಿ."

"ಆ - ಹಾಗಂದರೇನು ?"

- ಮಲಗಿದ್ದ ಭರಮಣ್ಣನಾಯಕ ಮೈಯ ನೋವನ್ನೂ ಗಮನಿಸದೆ ಸೆಟೆದು ಕುಳಿತು ಕೇಳಿದ.

"ಹೈದರಾಲಿಯವರು, ದುರ್ಗದ ಮೇಲೆ ದಂಡೆತ್ತಿ ಬರುತ್ತಿದ್ದಾರೆ, ಅಪ್ಪಾಜಿ. ನಿನ್ನೆ ಓಲಗದಲ್ಲಿ ಯುದ್ಧ ನಿರ್ಧಾರವಾಯಿತು. ನಿಮಗೆ ಎಲ್ಲವನ್ನೂ ಅವ್ವ ತಿಳಿಸಲಿಲ್ಲವೇ ?"

"ನಿಮ್ಮವ್ವ ಏನೋ ಹೇಳುತ್ತಿದ್ದಳು. ಆದರೆ ಪಂಡಿತರು ಕೊಟ್ಟ ಮಾತ್ರೆ ನುಂಗಿದರೆ ಎಚ್ಚರವಾಗಿದ್ದರೂ ನಿದ್ರೆ ಬಂದಹಾಗಿರುತ್ತದೆ. ಆ ಹಾಳು ಗುಳಿಗೆಯಲ್ಲಿ ಅದೇನು ಹಾಕಿರುತ್ತಾರೋ? ಹೇಳಿದ್ದು, ಕೇಳಿದ್ದು ಒಂದೂ ತಿಳಿಯುವುದಿಲ್ಲ. ಆ ನವಾಬನಿಗೆ ಯಾವ ಕೇಡು ಗಾಲಕ್ಕೆ ಈ ಕೆಟ್ಟಬುದ್ಧಿ ಬಂತು...."

"ಏಕೆ ಬಂತೋ ಅವರ ಅದೃಷ್ಟವೇ ಹೇಳಬೇಕು - ನಾವಂತೂ ಸಿದ್ಧರಾಗಬೇಕಲ್ಲಾ...."

"ಬಿಟ್ಟೋರುಂಟಾ - ದುರ್ಗದ ಮೇಲೆ ದಂಡು ತರೋರನ್ನ ? ಅವರನ್ನು ಹಡೆದವ್ರು, ಅವರು ಹೆತ್ತವರು - ಇಬ್ಬರೂ ಶಪಿಸೋಹಂಗೆ ಹಡೆಮೆಟ್ಟಿಸಬೇಕು, ದುರ್ಗಾಂದರೇನು ಆಟದ ಕೋಟೆ ಅಂತ ತಿಳಿದುಕೊಂಡಿದಾನೇನೋ ಆ ನವಾಬ. ಅವನನ್ನು ಹಿಡಿದುಕೊಂಡು ಬಂದು ಏಕನಾಥಮ್ಮನ ಗುಡಿಮುಂದಿನ ದೀಪದ ಕಂಭಕ್ಕೆ ಕಟ್ಟಿಸಿ, ಬಾರುಕೋಲಲ್ಲಿ ಹೊಡೆಸಬೇಕು – ಮೈ ನರನರಾನೂ ನೀರು ಕೇಳೋ ಹಂಗೆ"

- ಎಂದು ಹೃದಯದಲ್ಲಿ ಉಕ್ಕಿಬಂದ ಸಿಟ್ಟನ್ನು, ಅದರೊಂದಿಗೇ ಬಂದ ತೊದಲು-ನೋವುಗಳ ನಡುವೆ ಸಾಭಿನಯವಾಗಿ ಹೇಳಿ, ಸಿಟ್ಟಿನಷ್ಟೇ ಉಗ್ರವಾದ ನೋವನ್ನು ತಾಳಲಾಗದೆ, ನರಳುತ್ತಲೇ –

"ಈ ರೋಗ ಹಡೆದವಳು ಮುಂದೆಯಾಗಾ - ಕಾಲಕ್ಕೆ ಬರೋ ಮುಪ್ಪು ಬರಲಿ, ಈ ರೋಗ ಯಾಕೆ ಬರಬೇಕು ನನಗೆ. ಅಪ್ಪಯ್ಯ, ಲಡಾಯಿ ಬಂದ ಹೊತ್ತಿನಲ್ಲಿ ಹಿಂಗೆ ಮಲಗಿದ್ರೆ ಆಗೋದಿಲ್ಲ. ಕೇಳಿದ ಜನ ನಗುತದೆ - 'ಯುದ್ಧ ಬಂದಾಗ ಮಲಗಿದಾನೆ - ಸರದಾರ' ಅಂತ. ಹಂಗಾಗಬಾರದು – ಎಂಥದಾದರೂ ಔಷ್ಧ ಕೊಡಸು - ಮೈ ಎರಡು ದಿನ ಇದ್ದರೂ ಸಾಕು. ಏಕನಾಥವ್ವ, ಉಚ್ಚಂಗಮ್ಮನಿಗೆ ಹತ್ತು ಹತ್ತು ನವಾಬನ ಕಡೆಯೋರ ತಲೆ ತಂದು ಒಪ್ಪಿಸಿ, ಆಮೇಲೆ ಮಲಗಿಕೋತೀನಿ - ಇಲ್ಲಾದರೆ ಇಲ್ಲಿ - ಅಲ್ಲಾದರೆ ಅಲ್ಲಿ. ಈ ಶನಿಹಾಸಿಗೆಯಿಂದ ನನ್ನ ಬಿಡಿಸಿಬಿಡು, ಅಪ್ಪಯ್ಯ, ಗಂಡಾಗಿ ಹುಟ್ಟಿ, ಲಡಾಯಿ ಸುದ್ದೀನ ಮಲಗಿ ಕೇಳಲಾರೆ"

- ಎಂದು ಕಾತರತೆ ತುಂಬಿದ ಧ್ವನಿಯಲ್ಲಿ ಹೇಳಿದ ಭರಮಣ್ಣನಾಯಕ.

ಆ ಮಾತು ಕೇಳಿ, ತನ್ನ ತಂದೆಯ ವೀರಹೃದಯದ ಬಯಕೆ ಅರ್ಥವಾದ ಮದಕರಿನಾಯಕ, ಆ ಮಾತಿಗೆ ಏನೂ ಉತ್ತರ ಕೊಡಲಾಗದೆ ನಿಂತುಬಿಟ್ಟಿದ್ದನ್ನು ನೋಡಿ –

"ಯಾಕಪ್ಪಯ್ಯ, ಹಿಂಗೆ ಸುಮ್ಮನೆ ನಿಂತುಬಿಟ್ಟೆ. ಸೀಮೆ ಆಳೋ ಸರದಾರ ನೀನು -ಇಷ್ಟು ಮಾಡಿಸಲಿಕ್ಕಾಗೋದಿಲ್ಲವಾ ನಿನಗೆ ? ನಿನ್ನಪ್ಪನಾಗಿ ನಾನು. ಯಾವತ್ತೂ ಏನೂ ಕೇಳಲಿಲ್ಲ - ಇದೊಂದು ಮಾತು ನಡೆಸೋಕಾಗೋದಿಲ್ಲವಾ ?"

- ಮೈಯೆಲ್ಲಾ ಬಯಕೆಯಾಗಿ ಕೇಳಿದ ಭರಮಣ್ಣನಾಯಕ.

ಆ ಮಾತನ್ನು ಕೇಳಿ, ಒಳಗೆ ಎದೆ ಸುಡುತ್ತಿದ್ದರೂ, ಹೊರಗೆ ಮುಖದ ಮೇಲೆ ನಗು ತೋರಿಸುತ್ತಾ-

"ನೀವು ಹಡದೋರು ನಾವಿದೀವಿ, ಆಪ್ಪಾಜಿ, ನೀವೆಲ್ಲಾ ಕಟ್ಟಿದ ಕೋಟೆ ಕಾಪಾಡಲಿಕ್ಕೆ. ಅದರ ಚಿಂತೆ ನಿಮಗೆ ಯಾಕೆ ? ಹಗಲೂ-ಇರುಳೂ ನಮ್ಮನ್ನು ಹರಸುತ್ತಾ ಇರಿ. 'ನವಾಬ ಬಂದ' ಅನ್ನೋ ಸುದ್ದಿ ನಿಮ್ಮ ಕಿವಿಗೆ ಬೀಳುವಷ್ಟರಲ್ಲಿ 'ಅವನು ಹೋದ' ಅಂತನ್ನೋ ಸುದ್ದೀನ ನಾನೇ ಬಂದು ಹೇಳ್ತೀನಿ" - ಎಂದು ಹೇಳಿದ, ಮದಕರಿನಾಯಕ.

"ನೀನು ಬಂದು ಹೇಳೋವರೆಗೂ ನಾನು ಪಂಡಿತರು ಕೊಟ್ಟ ಗುಳಿಗೇ ನುಂಗಿ ಮಲಗಿರಲಾ ? ಗಂಡಸಾಗಿ, ನಾಯಕನಾಗಿ ಹುಟ್ಟಿ, ಕೊನೆಗಾಲಕ್ಕೆ ನನಗಿಷ್ಟೇನಾ ಗತಿ ?"

- ಅಸಹಾಯಕತೆಯ ಕಣ್ಣೀರು ತುಂಬಿ, ಸೋತುಹೋದ ಧ್ವನಿಯಲ್ಲಿ ಕೇಳಿದ ಭರಮಣ್ಣನಾಯಕ.

ಆ ಮಾತಿಗೆ ಮದಕರಿನಾಯಕನಿಗೆ ಏನೂ ಹೇಳಲಾಗಲಿಲ್ಲ, ಸುಮ್ಮನೆ ನಿಂತುಬಿಟ್ಟ.

"ಯುದ್ಧದ ಕೆಲಸಕ್ಕೆ ಹೊರಟೋರನ್ನ ನೀವು ಮಾತಿನ ಲಡಾಯಿನಲ್ಲೇ ತಡೆದುಬಿಟ್ಟರೆ ಹೇಗೆ ? ಆಶೀರ್ವಾದ ಮಾಡಿ ಕಳಿಸಿ"

- ಎಂದು ಆ ವೇಳೆಗೆ ಅಲ್ಲಿಗೆ ಬಂದ ನಿಂಗವ್ವ, ತಂದೆಯ ಮಾತಿನಲ್ಲಿ ಮದಕರಿನಾಯಕ ಮರೆತುಹೋದ ಕರ್ತವ್ಯವನ್ನು ನೆನಪಿಗೆ ತಂದಳು.

"ನೀನು ಬಂದೆಯಾ? ಮಾತಿನ ಲಡಾಯಿಯಲ್ಲಿ ನಿನ್ನ ಎದುರಿಸೋರು ಯಾರು ? ಹೋಗಿ ಬಾ, ಅಪ್ಪಯ್ಯ. ನಾನು ಹೇಳಿದ್ದನ್ನು ಮರೆಯಬೇಡ. ಪಂಡಿತರನ್ನು ಕರೆಸಿ, ಕಟ್ಟುನಿಟ್ಟಾಗಿ ಹೇಳು. ಈ ಕೈ ಕತ್ತಿ ಹಿಡಿಯೋ ಹಾಗಾಗಲಿ"

-ಎಂದು ಮತ್ತೊಮ್ಮೆ ನಮಸ್ಕರಿಸಿದ ಮಗನ ತಲೆಯನ್ನು, ಮೈಯನ್ನು ನೇವರಿಸಿ ಆಶೀರ್ವದಿಸಿದ, ಭರಮಣ್ಣನಾಯಕ.

ತನ್ನ ತಲೆ, ಮೈಗಳನ್ನು ಪ್ರೀತಿಯಿಂದ ನೇವರಿಸಿದ ತಂದೆಯ ವಯೋಜೀರ್ಣವಾದ, ವ್ಯಾಧಿಯಿಂದ ದುರ್ಬಲವಾದ ಕೈಗಳನ್ನು ಅಕ್ಕರೆಯಿಂದ ಹಿಡಿದು ಕಣ್ಣಿಗೊತ್ತಿಕೊಂಡು-

"ಉಳಿದೆಲ್ಲ ಚಿಂತೆಯನ್ನು ಬಿಟ್ಟು, ನಿಮ್ಮ ಆರೋಗ್ಯದ ಯೋಚನೆ ಮಾಡಿ"

- ಎಂದು ಹೇಳಿ, ಹತ್ತಿರ ನಿಂತ ತಾಯಿಯ ಪಾದ ಮುಟ್ಟಿ ನಮಸ್ಕರಿಸಿದ.

"ಸುದ್ದಿಯಾಗಿ ಬಂದದ್ದು ಸುದ್ದಿಯಾಗೇ ಹೋಗಲಿ. ನಾನು ಇಷ್ಟು ದಿನ ಮಾಡಿದ ಪೂಜೆ ಸಾರ್ಥಕವಾಗಲಿ. ಹೋಗಿ ಬಾ, ಅಪ್ಪಯ್ಯ, ದಂಡು-ದಾಳಿ ಬಂದರೆ ಮೈ ದಣಿಸೋದು ಇದ್ದೇ ಇದೆ. ಈಗಲೇ ಭಾಳ ದಣಿವು ಮಾಡಿಕೋಬೇಡ"

- ಎಂದಳು ನಿಂಗವ್ವ, ತಾಯ್ತನದಿಂದ ತೊಯ್ದು ಮೃದುವಾದ ಧ್ವನಿಯಲ್ಲಿ.

"'ಆರಸೆದ್ದು ದುಡಿದರೆ ಆಳೆದ್ದು ದುಡಿದ' ಅಂತನ್ನೋ ಗಾದೆ ನೀನೇ ಹೇಳುತ್ತಾ ಇರಲಿಲ್ಲವಾ, ಅವ್ವಾ. ನಾನು ಮೈ ದಣಿಸಲು ಅಳುಕಿದರೆ ದಂಡಿನ ಜನ ಮಲಗಿ ನಿದ್ದೆ ಮಾಡ್ತಾರೆ. ಅದಕ್ಕೆ ನಾನೇ ಹೊರಟಿದ್ದು - ಇನ್ನು ಕೈತುಂಬ ಕೆಲಸ. ಅಪ್ಪಾಜಿಯನ್ನು ಸರಿಯಾಗಿ ನೋಡಿಕೋ"

-ಎಂದು ಹೇಳಿ, ಆಕೆಯ ಆಶೀರ್ವಾದದ ರಕ್ಷೆಯನ್ನು ತೊಟ್ಟು, ಅಲ್ಲಿಂದ ಹೊರ ಹೊರಟ ಮದಕರಿನಾಯಕ.

* * *

'ರಣಮಾರಿ ಮನೆಬಾಗಿಲಿಗೇ ಬರುತ್ತಿದ್ದಾಳೆ.'

'ಸ್ವಯಂ ನಾಯಕರೇ ಕೋಟೆಯ ಸಿದ್ಧತೆಯ ಪರೀಕ್ಷೆಗೆ ಬರುತ್ತಾರೆ.'

ಈ ಮಾತುಗಳು ಸಮರಸಿದ್ಧತೆಯ ಹೊಣೆಹೊತ್ತ ದಳವಾಯಿಗಳಲ್ಲಷ್ಟೇ ಅಲ್ಲ, ಸೇನೆಗೆ ಸೇರಿದ ಪ್ರತಿಯೊಬ್ಬರ ನರನಾಡಿಗಳಲ್ಲೂ ಹೊಸ ಬಿಸಿರಕ್ತದಂತೆ ಮಿಂಚಿನ ವೇಗದಿಂದ ಹರಿದು, ಯಾರೊಬ್ಬರೂ 'ಮೇಲಿನಿಂದ ಅಪ್ಪಣೆಯಾಗಲಿ' ಎಂದು ಕಾಯದೆ, ನಿದ್ರೆ, ನೀರಡಿಕೆಗೂ ಸಮಯ ವ್ಯರ್ಥ ಮಾಡದೆ, ತಮತಮಗೆ ಗೊತ್ತಾದ ಕೆಲಸಗಳನ್ನು ಮಾಡಲಾರಂಭಿಸಿದರು. ಕಲ್ಲುಗೆಲಸದವರು, ಕಾಮಾಟಿಗರು, ಗಾರೆಕೆಲಸದವರು, ಸುಣ್ಣಗೆಲಸದವರು, ಕೋಟೆಯ ಕಲ್ಲುಗಳ ಸಣ್ಣ ಬಿರುಕಿನಲ್ಲಿ ಬೆಳೆದ ಹುಲ್ಲು, ಹುಲುಗಿಡಗಳನ್ನು ಕತ್ತರಿಸುವವರು ಹಗಲಿರುಳೂ ದುಡಿದು, ಕೋಟೆಯ ಕಲ್ಲಿನ ಗೋಡೆಗಳನ್ನು ಬಿಗಿಮಾಡಿ, ಗಾರೆ ಸಮೆದುಹೋದ ಕಡೆ ಸರಿಪಡಿಸಿ, ಬುರುಜು ಬತೇರಿ, ಗೋಡೆಯ ತೆನೆಗಳ ಮೇಲಿನ ಕೋವಿಯ ಕಿಂಡಿಗಳನ್ನು ಸರಿ ಪಡಿಸಿ, ಸುಣ್ಣ ಬಳಿಸಿ, ನೋಡಿದವರಿಗೆ ಕೋಟೆ - ಇಂದು ಕಟ್ಟಿದಂತೆ ಕಾಣುವ ಹಾಗೆ ಮಾಡಿದರು. ತೋಫಿನ ಗಾಡಿಗಳು ಓಡಾಡುವ ದಾರಿಯಲ್ಲಿನ ಹಳ್ಳ, ದಿಣ್ಣೆಗಳನ್ನು ಸಮಮಾಡಿ ಸುಗಮಗೊಳಿಸಿದರು. ಕಂದಕಗಳ ಹೂಳು ತೆಗೆಸಿ, ಅದಕ್ಕೆ ನೀರು ಹರಿಯುವ ದಾರಿಯನ್ನು ನೇರ್ಪಡಿಸಿ, ಕಂದಕಗಳಲ್ಲಿ ಹೊಸದಾಗಿ ಚೂಪಾದಮೊನೆಯ ಬಿದಿರು ತುಂಡುಗಳನ್ನು ನೆಟ್ಟು, ಅವು ಶತ್ರುಸೇನೆ ಕಂದಕ ದಾಟಲು ದುರ್ಗಮವಾಗುವಂತೆ ವ್ಯವಸ್ಥೆ ಮಾಡಿದ್ದೇ ಅಲ್ಲದೆ, ಕಂದಕದ ಸುತ್ತಲ ಕೋಟೆಯ ಮೇಲಿನ ಬುರುಜು, ಬತೇರಿಗಳಲ್ಲಿ ಫಿರಂಗಿಗಳ ಜೊತೆಗೆ, ಶತ್ರುಸೇನೆಯ ಮೇಲೆ ಕಲ್ಲಿನ ಮಳೆಗರೆಯಲು ಭಾರಿ ಕಲ್ಲುಗುಂಡುಗಳನ್ನೊಗೆಯುವ ಚರ್ಮದ ಪಟ್ಟಿಗಳಿದ್ದ ದೊಡ್ಡ ಕವಣೆ ಕಂಭಗಳನ್ನು ನೆಡಿಸಿ, ಕಾದ ಮರಳು, ಎಣ್ಣೆ ಅಂಬಲಿಗಳನ್ನು ಸುರಿಯಲು ಬೇಕಾದ ಸಿದ್ಧತೆಗಳನ್ನು ಮಾಡಿದರು. ಬಡಗಿಗಳು, ಕಮ್ಮಾರರೊಂದಿಗೆ ಸೇರಿ, ತೋಫಿನ ಗಾಡಿಗಳು ಮದ್ದು ಗುಂಡು ಮೊದಲಾದ ಸರಕುಗಳನ್ನು ಸಾಗಿಸುವ ಬಂಡಿಗಳು, ಮತ್ತಿಯಮರದ, ಕಬ್ಬಿಣದ ಮೊನೆಯಾದ, ಮುಂಗೈಗಾತ್ರದ ಮುಳ್ಳುಗಳನ್ನು ಕೀಲಿಸಿದ ಕಬ್ಬಿಣದ ತಗಡನ್ನು ಹೊದಿಸಿದ ಬಾಗಿಲುಗಳನ್ನು ಹೊಚ್ಚ ಹೊಸದಾಗಿ ಕಾಣುವಂತೆ ಬಿಗಿಪಡಿಸಿ, ಅರಗಳಿಂದ ಮುಳ್ಳಿನ ಮೊನೆಗಳನ್ನು ಉಜ್ಜಿ ಹರಿತ ಮಾಡಿದರು. ಚಮ್ಮಾರರು ಸೇನೆಗೆ ಬೇಕಾದ ಚಡಾವು, ಮದ್ದು ಗುಂಡಿನ ಚೀಲ, ನೀರಿನ ತಿತ್ತಿ, ಕುದುರೆಗಳ ಲಗಾಮು, ಜೀನುಗಳನ್ನು - ಹಳೆಯದನ್ನು ದುರಸ್ತಿ ಮಾಡಿ, ಹೊಸವನ್ನು ತಯಾರಿಸಲು ಅಹರ್ನಿಶಿ ದುಡಿಯತೊಡಗಿದರು. ಕುರಿಗಳನ್ನು ಕಡಿದು, ಆ ಮಾಂಸವನ್ನು ಮಸಾಲೆ ಹಾಕಿ ಹದಗೊಳಿಸಿ. ರೊಟ್ಟಿಯೊಂದಿಗೆ ತಿನ್ನಲು ಅನುಕೂಲವಾಗುವಂತೆ ಹಗ್ಗದ ಗಾತ್ರದ ಎಳೆಗಳನ್ನಾಗಿ ಮಾಡಿ ಬಿಸಲಿನಲ್ಲಿ ಒಣಗಿಸಲು ತೊಡಗಿದರು. ಸೈನಿಕರು ಇದ್ದಲ್ಲಿಗೇ ರೊಟ್ಟಿ, ಬೆಣ್ಣೆ, ನೀರುಗಳನ್ನು ಸರಬರಾಜು ಮಾಡಲು ಅಗತ್ಯವಾದ ಸಿದ್ಧತೆಗಳನ್ನು ಮಾಡಿದರು. ದವಸದ ಕಣಜ, ಹಗೇವುಗಳಲ್ಲಿರುವ ಸಂಗ್ರಹ ಎಷ್ಟಿದೆಯೆಂದು ತನಿಖೆಮಾಡಿ, ಸುತ್ತ ಮುತ್ತಲ ಹಳ್ಳಿಗಳಿಂದ

ಬೇಕಾದಷ್ಟನ್ನು ತರಿಸಿಕೊಳ್ಳಲು ವ್ಯವಸ್ಥೆ ಮಾಡಿದರು. ಗಂಧಕದ, ರಂಜಕದ ಮದ್ದಿನ ಕಣಜಗಳ ದಾಸ್ತಾನು ಎಷ್ಟಿದೆಯೆಂದು ನೋಡಿದ್ದೇ ಅಲ್ಲದೆ, ಹೊಸದಾಗಿ ತರಲು ಮಂದಿ, ಗಾಡಿಗಳನ್ನು ನೇಮಿಸಿದರು. ಕತ್ತಿ, ಭರ್ಜಿ, ಭಲ್ಲೆ, ಪರಿಘ, ಕುಂತ, ಕಠಾರಿ, ಎಸೆಗಠಾರಿಗಳಲ್ಲದೆ ಆನೆ, ಕುದುರೆಗಳ ಮೇಲೆ ಕುಳಿತು ಪ್ರಯೋಗಿಸುವ ವಿವಿಧ ಶಸ್ತ್ರಾಸ್ತ್ರಗಳನ್ನು ಸಾಣೆಹಿಡಿದು ಹರಿತಗೊಳಿಸಿದರು. ಪರಿಣತರು ಕೋವಿ, ತೋಫುಗಳನ್ನು ಪರೀಕ್ಷೆ ಮಾಡಿ, ಅಗತ್ಯವಾದ ದುರಸ್ತಿ ಮಾಡಿ, ಯುದ್ಧ ಸಮಯದಲ್ಲಿ ಅವು ನಿರುಪಯೋಗವಾಗದಂತೆ ಸರಿಪಡಿಸಿದರು. ಕಿಟ್ಟನದಾಳಿನಿಂದ ಗುಂಡು, ಕೋವಿ, ಫಿರಂಗಿಗಳನ್ನು ತಯಾರಿಸಲು ಬೇಕಾದ ಕಬ್ಬಿಣ ಹೊಳೆಯಂತೆ ಹರಿದುಬಂದು, ಕಾಮನಭಾವಿಯ ಸುತ್ತಿನ ಕೋಟೆಯಲ್ಲಿದ್ದ ಇನ್ನೂರ್ ಕಾರ್ಖಾನೆ - ಪರಿಣತಿಪಡೆದ ತಾಂತ್ರಿಕಜ್ಞರ ಮೇಲ್ವಿಚಾರಣೆಯಲ್ಲಿ ಹೊಸ ಹೊಸ ತೋಫು, ಕೋವಿಗಳನ್ನು ತಯಾರಿಸತೊಡಗಿತು. ಮದ್ದು ಬೀಸುವಕಲ್ಲುಗಳಿಗಂತೂ ಬಿಡುವೇ ಇರಲಿಲ್ಲ. ದರ್ಜಿಗಳು, ಚಮ್ಮಾರರು ಸೈನಿಕರ ಉಡುಗೆತೊಡುಗೆಗಳನ್ನು ಸಿದ್ಧಪಡಿಸತೊಡಗಿದರು. ಸೇನೆಯ ವಿವಿಧ ದಳಗಳು ದಿನದಿನವೂ ಕವಾಯತು ಮಾಡಿ ಯುದ್ಧ ಸಿದ್ಧರಾದರು. ಪಶುವೈದ್ಯರು, ಹಕೀಮರು, ಪಂಡಿತರು ಸಮರಕಾಲದಲ್ಲಿ ಒದಗಬಹುದಾದ ಬಗೆಬಗೆಯ ಗಾಯಗಳ, ರೋಗಗಳ ಚಿಕಿತ್ಸೆಗೆ ಅಗತ್ಯವಾದ ತೈಲಗಳು, ಮುಲಾಮುಗಳು, ಕಷಾಯ, ಆಸವ, ಭಸ್ಮಗಳನ್ನು ತಯಾರಿಸತೊಡಗಿದರು.

ಕೋಟೆಯಲ್ಲಿದ್ದ ಎಣ್ಣೆ, ತುಪ್ಪಗಳ ಸಂಗ್ರಹದಿಂದ ಹಿಡಿದು ಒಗ್ಗರಣೆಯ ಸಾಸಿವೆ, ಬಟ್ಟೆ ಹೊಲಿಯುವ ಸೂಜಿಯವರೆಗೆ ಒಂದೊಂದು ಪದಾರ್ಥವೂ ಎಷ್ಟೆಷ್ಟಿದೆ ಎಂದು ನಾಯಕರೇ ಖುದ್ದು ಪರೀಕ್ಷೆ ಮಾಡಿ, 'ದ್ರವ್ಯಸಂಗ್ರಹ ಸಾಕಷ್ಟಿದೆ' ಎಂದು ಮನಸ್ಸಿಗೆ ನೆಮ್ಮದಿ ಮಾಡಿಕೊಂಡರು.

ಕೋಟೆ-ಪೇಟೆಗಳಲ್ಲಿ ಡಂಗೂರದವರು ಯುದ್ಧಸಮಯದಲ್ಲಿ ನಾಗರಿಕರು, ಸೈನಿಕರು ಯಾವ ಯಾವ ನಿಯಮಗಳನ್ನು ಪಾಲಿಸಿ, ಹೇಗೆ ನಡೆದುಕೊಳ್ಳಬೇಕು ಎಂದು ದಳವಾಯಿಗಳ ಅಪ್ಪಣೆಯನ್ನು ಸಾರಿ ಹೇಳಿದರು. ಇದರಂತೆಯೇ ಶತ್ರುಸೇನೆ ದುರ್ಗಕ್ಕೆ ಮುತ್ತಿಗೆಹಾಕಿದಾಗ ನಗರದ ಸಮೀಪದ ಹಳ್ಳಿಯ ಜನರೂ ಯಾವ ನಿಯಮಗಳನ್ನು ಪಾಲಿಸಬೇಕೆಂದು ಆ ಗ್ರಾಮಗಳ ಪಟೇಲರುಗಳು ಹಳ್ಳಿಗಳಲ್ಲಿ ಡಂಗೂರ ಸಾರಿಸಿದರು.

ಒಂದು ಕಡೆ ದುರ್ಗದಲ್ಲಿ ಯುದ್ಧಸಿದ್ಧತೆ ನಡೆಯುತ್ತಿರುವಾಗಲೇ, ಪ್ರಧಾನಿಗಳು ಓಲೆ ಕಳುಹಿಸಿದ ನಾಯಕರುಗಳು ತಮ್ಮ ಸೇನಾಸಮೇತರಾಗಿ ದುರ್ಗಕ್ಕೆ ಬಂದು, ತಮತಮಗೆ ಗೊತ್ತಾದ ಎಡೆಯಲ್ಲಿ ಬೀಡುಬಿಟ್ಟರು.

ಕೊತ್ವಾಲಚಾವಡಿ, ತಳವಾರಚಾವಡಿಗಳು ಹಗಲಿರುಳೂ ತಮ್ಮ ತಮ್ಮ ಸಮವಸ್ತ್ರ ಧರಿಸಿ, ಬೇರೆ ಬೇರೆ ವೇಷಧರಿಸಿ ನಗರರಕ್ಷಣೆಯಲ್ಲಿ ಪಿತೂರಿಯ ಬಿರುಕು ಕಾಣಿಸಿಕೊಳ್ಳದಂತೆ ಕಾವಲು ಕಾಯತೊಡಗಿದರು.

ದೇವಾಲಯ, ಮಸೀದಿಗಳಲ್ಲಿ ದುರ್ಗಕ್ಕೆ ಸಮರದಲ್ಲಿ ದೈವರಕ್ಷೆಯನ್ನು ಕೋರಿ ಬಗೆಬಗೆಯ ದೇವತಾಕಾರ್ಯಗಳು ನಡೆಯಲಾರಂಭಿಸಿದವು.

ನಾಯಕರಿಂದ ಹಿಡಿದು ಒಣಗಲುಹಾಕಿದ ಮಸಾಲೆಮಾಂಸ, ಚೊಕ್ಕಗೊಳಿಸಿದ ದವಸಗಳನ್ನು ತಿನ್ನಲು ಬರುವ ಹದ್ದು, ಕಾಗೆ, ಗುಬ್ಬಚ್ಚಿ, ಇಲಿ, ಅಳಿಲು, ನಾಯಿಗಳನ್ನು ಓಡಿಸುವ ಚಿಳ್ಳೆ-ಪಳ್ಳೆಯವರೆಗೂ-ಎಲ್ಲರಲ್ಲೂ ದಿನಗಳೆದಂತೆ ಸಮರದ ಕಾವು ಏರುತ್ತಾಹೋಯಿತು. ಅರಮನೆಯಿಂದ ಹಿಡಿದು ಪಡಖಾನೆಯವರೆಗೆ ಎಲ್ಲಿಗೆ ಹೋದರೂ ಯುದ್ಧದ ಮಾತೇ. ಎಲ್ಲರ ಬಾಯಲ್ಲ ಅದೇ ಸುದ್ದಿಯನ್ನು ತಮಗೆ ತಿಳಿದಂತೆ ಹೇಳುವ ಉತ್ಸಾಹ, ಉದ್ವೇಗ, ಆತಂಕ, ಭೀತಿ, ಅನುಮಾನ – ಎದೆಗಳಲ್ಲಿ ಬಗೆಬಗೆಯ ಭಾವತುಮುಲ.

ಹಗಲು ಉರಿವ ಬಿಸಿಲಿನಲ್ಲಿ, ಇರುಳು ದೀವಟಿಗೆಗಳ ಬೆಳಕಿನಲ್ಲಿ ಬೇಸರ, ಬಸವಳಿಕೆ ಕಾಣದೆ ದುಡಿದ ದುರ್ಗ-ಒಂದು ವಾರವೆನ್ನುವುದರೊಳಗಾಗಿ ಸಮರಸನ್ನದ್ದ ಯೋಧನಂತೆ ಎದೆ ಸೆಟೆಸಿನಿಂತು, ಬಾವುಟದ ಬತೇರಿಯ ಮೇಲಿನ ಕುಸುಂಬಿವರ್ಣದ ಹನುಮದ್ಗರುಡಧ್ವಜ 'ಗಂಡೆದೆ ಇದ್ದರೆ ಬಾ' ಎಂದು ಶತ್ರುವನ್ನು ತೋಳು ಬೀಸಿ ಕರೆದಂತೆ ಗಾಳಿಯಲ್ಲಾಡಿತು.

* * *

ದುರ್ಗದಲ್ಲಿ ಈ ಸಮರಸಿದ್ಧತೆಗಳು ನಡೆಯುತ್ತಿರುವಾಗಲೇ, ಅರಮನೆಯ ಆಪ್ತಾಲೋಚನಾಮಂದಿರದಲ್ಲಿ ನಾಯಕರು ತಮ್ಮ ಆಹ್ವಾನದಂತೆ ಬಂದ ನಾಯಕನಹಟ್ಟಿ, ಜರಿಮಲೆ, ಗುಡಿ ಕೋಟೆ, ಹಿರಿಯೂರಿನ, ಪಾಳೆಯಗಾರರು, ಹೊಸದುರ್ಗದ ದೊಡ್ಡಮದಕರಿನಾಯಕ, ದುರ್ಗದ ದಳವಾಯಿಗಳು, ಸರದಾರರು. ಮನಸೂಬದಾರರೊಂದಿಗೆ ಯುದ್ಧತಂತ್ರದ ಬಗ್ಗೆ ಚರ್ಚೆ ನಡೆಸಿದರು.

ಸಭೆಯಲ್ಲಿ ನೆರೆದ ಎಲ್ಲರಿಗೂ ಒಂದು ಮಾತು ಅರ್ಥವಾಗಿತ್ತು –

'ಇಷ್ಟು ವರ್ಷಗಳ ಕಾಲ ಚಿತ್ರದುರ್ಗದ ಸೇನೆ ಹಲವಾರು ಸಮರಗಳಲ್ಲಿ ಭಾಗವಹಿಸಿ, ಸೋಲು-ಗೆಲುವಿನ ಬೇವು-ಬೆಲ್ಲವನ್ನು ಮೆದ್ದಿತ್ತು. ಆದರೆ ಇಷ್ಟು ವರ್ಷ ನಡೆದ ಯುದ್ಧವೆಲ್ಲವೂ ದುರ್ಗದಾಚೆ ನಡೆದಿತ್ತೇ ಆಗಲಿ, ಎಂದೂ, ಯಾವ ಸೇನೆಯೂ ಚಿತ್ರದುರ್ಗಕ್ಕೆ ಮುತ್ತಿಗೆ ಹಾಕುವ ಸಾಹಸ ಮಾಡಿರಲಿಲ್ಲ. ಈ ಬಾರಿ ಯುದ್ಧ ಮನೆಬಾಗಿಲಿಗೇ ಬಂದಿತ್ತು.

'ಈ ಸಮಯದಲ್ಲಿ ಹೇಗೆ ಮಾಡುವುದು ?' –

'ನವಾಬರ ದಂಡನ್ನು ಗಡಿಯಲ್ಲಿ ತಡೆದು ಹೋರಾಡುವುದೇ, ದುರ್ಗದವರೆಗೂ ಬರಲು ಬಿಟ್ಟು ಎದುರಿಸುವುದೇ ?'

ಎಲ್ಲರೂ ಆ ಬಗ್ಗೆ ಯೋಚಿಸಿ, ಎಲ್ಲರ ಯೋಚನೆಗೆ ರೂಪುಗೊಟ್ಟಂತೆ ದೊಡ್ಡ ಮದಕರಿನಾಯಕ ಹೇಳಿದ –

"ನಮ್ಮ ಸೇನೆ ಸಮರಸನ್ನದ್ಧವಾಗಿರುವ ವಿಷಯದಲ್ಲಿ ಪ್ರಭುಗಳು ಯಾವ ಸಂಶಯವನ್ನೂ ಪಡಬೇಕಾಗಿಲ್ಲ. ಯುದ್ಧ ದುರ್ಗದ ಒಳಗಾಗಲಿ, ಹೊರಗಾಗಲಿ – ನವಾಬನಿಗೆ ಬುದ್ಧಿ ಕಲಿಸುವಷ್ಟು ಶಕ್ತವಾಗಿದೆ ನಮ್ಮ ಸೇನೆ. ಆದರೆ ನಮ್ಮ ಸೇನಾಬಲ ನವಾಬನ ಬಲದಷ್ಟು ದೊಡ್ಡದಲ್ಲ. ಅಲ್ಲದೆ ಅವನಿಗೆ ಹರಪನಹಳ್ಳಿ, ರಾಯದುರ್ಗದವರ ಬೆಂಬಲವೂ ಇದೆ. ಬಯಲು ಯುದ್ಧದಲ್ಲಿ ನವಾಬರ ಸೇನೆ ಪಳಗಿದೆ. ಆದರೂ ದುರ್ಗ ಹಿಡಿಯುವ ಶಕ್ತಿ ಅವರಿಗಿಲ್ಲ. ಆದ್ದರಿಂದ ಮೈದಾನದಲ್ಲಿ ಅವರನ್ನು ಎದುರಿಸುವ ಯೋಚನೆ ಅಷ್ಟು ಸಾಧುವೆಂದು ಕಾಣುವುದಿಲ್ಲ. ನಮಗೆ ದುರ್ಗದ ರಕ್ಷಣೆ ಇದೆ. ಹೈದರಾಲಿ ಹತ್ತು ವರ್ಷ ಹೆಣಗಿದರೂ ನಮ್ಮ ಕೋಟೆಯ ಕಲ್ಲನ್ನೂ ಅಲುಗಿಸಲಾರ. ಆದ್ದರಿಂದ ನಾವು ದುರ್ಗದ ಒಳಗಿದ್ದುಕೊಂಡೇ ನವಾಬನ ಸೇನೆಯನ್ನು ಎದುರಿಸುವುದು ಒಳಿತು. ಹೇಗೂ ನಮಗೆ ಪೇಶ್ವೆಗಳ ಸೇನೆ ಸಹಾಯಕ್ಕೆ ಬರುತ್ತಿದೆ. ಅದು ಬರುವವರೆಗೂ ನಾವು ದುರ್ಗವನ್ನು ಉಳಿಸಿಕೊಂಡರೆ ಪೇಶ್ವೆಗಳ ಸೇನೆ ಬಂದ ಬಳಿಕ, ನವಾಬನನ್ನು ಅಡಕತ್ತರಿಯಲ್ಲಿ ಸಿಕ್ಕಿಸಿಕೊಂಡಂತೆ ಸಿಕ್ಕಿಸಿಕೊಂಡು ಸೋಲಿಸುವುದು ಸುಲಭ. ಆದ್ದರಿಂದ ಸದ್ಯಕ್ಕೆ ಇದೇ ಸೂಕ್ತವೆಂದು ತೋರುತ್ತದೆ."

ಉಳಿದವರೂ ಆತನ ಮಾತಿಗೆ ಸಮ್ಮತಿಸಿದಂತೆ ತಲೆಯಾಡಿಸಿದರು.

ಆ ಸೂಚನೆ ನಾಯಕರಿಗೂ ಒಪ್ಪಿಗೆಯಾಗಿ, ಯಾರು ಯಾರ ನಾಯಕತ್ವದಲ್ಲಿ ಎಷ್ಟೆಷ್ಟು ಸೇನೆ, ಕೋಟೆಯ ಯಾವ ದಿಕ್ಕಿನ ರಕ್ಷಣೆಗೆ ನಿಲ್ಲುವುದು ಎಂದು ಸಮಾಲೋಚನೆ ಮಾಡಿ ತೀರ್ಮಾನಿಸಿ, ಬಂದ ಹಿರಿಯರಿಗೆಲ್ಲಾ ಉಚಿತ ಉಡುಗೊರೆಗಳ ಮರ್ಯಾದೆ ಮಾಡಿ, ದಳವಾಯಿಗಳಿಗೆ –

"ದಂಡಿನ ಜನಕ್ಕೆ, ಯುದ್ಧದಲ್ಲಿ ಮಡಿದವರ ಹೆಂಡಿರು-ಮಕ್ಕಳಿಗೆ ಸಂಬಳ ಕೊಡುತ್ತೇವೆ. ಕುದುರೆ ಬಿದ್ದವರಿಗೆ ಕುದುರೆ ಕೊಡುತ್ತೇವೆ. ಶತ್ರುಜನರ ತಲೆ ತಂದವರಿಗೆ ಐದು ದುರ್ಗಿ ವರಹ, ಗೋಲಿಯಿಂದ ಹೊಡೆದವರಿಗೆ ಐದು ರುಪಾಯಿ, ಕೋಟೆ ಮೇಲಿಂದ ಗೋಲಿ ಹೊಡೆದವರಿಗೆ ಒಂದು ರುಪಾಯಿ, ಭಲ್ಲೆ ಭರ್ಜಿಯಿಂದ ಹೊಡೆದವರಿಗೆ ಕಾಲುಗಗ್ಗರ, ಜೋಮಾಲೆ ಇನಾಂ ಕೊಡುತ್ತೇವೆ. ಇದನ್ನು ದಂಡಿನಲ್ಲಿ ಸಾರಿಸಿ"

- ಎಂದು ಅಪ್ಪಣೆ ಮಾಡಿದರು.

ಡಂಗೂರದವರು ದಂಡಿನಲ್ಲಿ ಸಾರಿದ ಆ ವಾರ್ತೆಯನ್ನು ಕೇಳಿ, ದುರ್ಗದ ಯೋಧರು 'ನವಾಬರ ಸೇನೆ ಎಂದು ಬಂದೀತೋ' – ಎಂದು ಉತ್ಸಾಹದಿಂದ ಸೀರ್ಯದ ದಿಕ್ಕನ್ನೇ ನೋಡುತ್ತಾ ನಿಂತರು.

೧೬

"ಇದೊಳ್ಳೆ ಯುದ್ಧ ತಂದು ಗಂಟುಹಾಕಿದೆ, ಅಪ್ಪಯ್ಯ - ನಮಗೆ ? ದಂಡು ಬರಲಿಲ್ಲ, ದಾಳಿಯಾಗಲಿಲ್ಲ. ಆದರೂ ಕತ್ತಲಾಯಿತೆಂದರೆ ಊರಲ್ಲಿ ಜನ ತಿರುಗಾಡುವುದಕ್ಕಿಲ್ಲ. ಜನ ಏನು ಊರಲ್ಲಿರಬೇಕೋ, ಎಲ್ಲಿಯಾದರೂ ಓಡಿಹೋಗಬೇಕೋ ?"

ಹಗಲೆದ್ದು, ಎಂದಿನಂತೆ ರಣಸಿದ್ಧತೆಯ ಕಾರ್ಯಗಳನ್ನು ಕಣ್ಣಾರೆ ನೋಡಿ ಬರಲೆಂದು ಹೋಗಿದ್ದ ಮದಕರಿನಾಯಕ ಬಿಸಲಿನಲ್ಲಿ ಕೋಟೆ ಸುತ್ತಿ ಬಳಲಿ ಅರಮನೆಗೆ ಕಾಲಿಡುತ್ತಿದ್ದ ಹಾಗೇ, ಎಂದಿನಂತೆ ವಿಶ್ವಾಸದಿಂದ 'ಬಳಲಿದೆಯಾ ?', 'ಆಯಾಸವಾಯಿತೆ ?', 'ಕುಡಿಯಲು ತಣ್ಣಗೆ ಪಾನಕ ತರಿಸಿಕೊಡಲೆ ?' ಎಂದು ಕೇಳುತ್ತಿದ್ದ ತಾಯಿ ನಿಂಗವ್ವ, ಅದಾವ ಮಮತೆಯ ಮಾತೂ ಆಡದೆ, ದಣಿವಾರಿಸಿಕೊಳ್ಳಲೂ ಬಿಡದೆ, ತದ್ವಿರುದ್ಧವಾಗಿ ಮುಖ ಕಾಣುತ್ತಿದ್ದ ಹಾಗೇ ಮುಖಕ್ಕೆ ಹೊಡೆದಂತೆ ಆಡಿದ ಮಾತುಗಳನ್ನು ಕೇಳಿ ಮದಕರಿನಾಯಕನ ಮೈರಕ್ತ ಕುದಿದು, ಕಣ್ಣು ಕೆಂಪೇರಿ, ಬಳಲಿದ ಮೈ ಬಾಣ ಬಿಡಲು ಹೆದೆಯೇರಿಸಿದ ಬಿಲ್ಲಿನಂತಾಯಿತು. ಕೆಣಕಿದ ಹಾವಿನಂತೆ ನಾಲಗೆ ತಕ್ಕ ಉತ್ತರ ಕೊಡಲು ತವಕಿಸಿತು.

ಆ ಮಾತಾಡಿದವರು ಬೇರೆ ಯಾರಾದರೂ ಆಗಿದ್ದಿದ್ದರೆ ಮದಕರಿನಾಯಕ ಏನು ಉತ್ತರ ಕೊಡುತ್ತಿದ್ದನೋ –

ಆದರೆ ಆ ಮಾತಾಡಿದವಳು ತಾಯಿ !

ಯಾವುದೋ ಸಿಟ್ಟಿನಲ್ಲಿ ಕೆಂಪೇರಿದ ಆಕೆಯ ಮುಖವನ್ನು ಕಂಡು, ಮದಕರಿನಾಯಕನ ಮೈಯನ್ನು ಏರಿದ ಸಿಟ್ಟು ಅಷ್ಟೇ ಬೇಗನೆ ಇಳಿದುಹೋಗಿ, ಅತ್ತಿತ್ತ ತುಯ್ದಾಡುತ್ತಿದ್ದ ಬುದ್ಧಿಯನ್ನು ಪ್ರಯತ್ನಪೂರ್ವಕವಾಗಿ ಹತೋಟಿಗೆ ತಂದುಕೊಂಡು, ದಣಿದ ಮೈಗೆ ಆಸರೆಯನ್ನು ಬಯಸಿ ಅತ್ತಿತ್ತ ನೋಡಿ, ಯಾವ ಆಸನವೂ ಕಾಣದೆ ಹತ್ತಿರವಿದ್ದ ಕಂಭಕ್ಕೇ ಒರಗಿ ನಿಂತು, ಕೈಗಳಿಂದಲೇ ಮುಖದ ಮೇಲಿನ ಬೆವರನ್ನು ಒರೆಸಿಕೊಂಡು –

"ಏನಾಯಿತವ್ವಾ, ನನ್ನಿಂದ ಏನು ಅಪರಾಧವಾಯಿತು ?" – ಎಂದು ಕೇಳಿದ.

ನಿಂಗವ್ವನ ತಾಯಕಣ್ಣಿಗೂ, ಮಗನ ಮುಖದಲ್ಲಾದ ಶೀಘ್ರಭಾವಪರಿವರ್ತನೆ, ದಣಿದು ಕಂಭಕ್ಕೊರಗಿದ ಮೈಯನ್ನು ಕಂಡು, ಆಕೆಯ ಹೃದಯದಲ್ಲಿದ್ದ ಸಿಟ್ಟೂ ಪಶ್ಚಾತ್ತಾಪದಿಂದ ತಣ್ಣಗಾಗಿ-

"ದಣಿದು ಬಂದಿದ್ದೀಯ, ಅಪ್ಪಯ್ಯ, ಸ್ವಲ್ಪ ಸುಧಾರಿಸಿಕೊ. ಆಮೇಲೆ ಏನಾಯಿತೆಂದು ಹೇಳುತ್ತೇನೆ" – ಎಂದಳು.

"ನಿನ್ನ ಮುಖ ಸಿಟ್ಟಿನಿಂದ ದುಮುಗುಟ್ಟುತ್ತಿರುವಾಗ ನನ್ನ ಮನಸ್ಸಿಗೆ ಶಾಂತಿ ಹೇಗೆ ಬಂದೀತು, ಅವ್ವಾ ? ನನ್ನ ದಣಿವು ದಿನವೂ ಇದ್ದದ್ದೇ. ನಿನ್ನ ಈ ಅಪರೂಪದ ಸಿಟ್ಟಿಗೇನು ಕಾರಣ ಹೇಳು ? ಅದನ್ನು ಕೇಳಿ, ಅದನ್ನು ನಿವಾರಿಸಿದಮೇಲೆ ನನಗೆ ಶಾಂತಿ, ನೆಮ್ಮದಿ."

"ಆದಷ್ಟು ಆತುರದ ದೊಡ್ಡ ಮಾತಲ್ಲ, ಅಪ್ಪಯ್ಯ...."

- ತೀವ್ರ ಪಶ್ಚಾತ್ತಾಪವಿದ್ದ ಧ್ವನಿಯಲ್ಲಿ ಹೇಳಿದಳು, ನಿಂಗವ್ವ.

"ದೊಡ್ಡದೊ. ಚಿಕ್ಕದೋ - ನಮ್ಮ ತಾಯಿಗೆ ಬೇಸರಪಡಿಸುವ ಯಾವ ಮಾತೂ ನನಗೆ ಸಣ್ಣದಲ್ಲ. ಅದೇನಾಯಿತು ಹೇಳು, ಅವ್ವಾ ?"

"ನಿನ್ನೆ ಶುಕ್ರವಾರವಲ್ಲವೇ...."

"ಶುಕ್ರವಾರವೇ....ಇರಬಹುದು. ನನಗೀಗ ವಾರ, ತಿಥಿ ಯಾವುದೂ ನೆನಪಿಗೆ ಬರುವುದಿಲ್ಲ, ಅವ್ವಾ, ನೀನು ನಿನ್ನೆ ಶುಕ್ರವಾರ ಎಂದೆಯಲ್ಲ, ಸರಿ. ಶುಕ್ರವಾರ - ಏನಾಯಿತು ?"

"ನನ್ನ ಖಾಸಾ ಊಳಿಗದ ಸೂರವ್ವ ಇದ್ದಾಳಲ್ಲಾ....ಅವಳ ಮಗುವಿಗೆ ಮೈಯಲ್ಲಿ ಚೆನ್ನಾಗಿರಲಿಲ್ಲ. 'ಮಗುವಿಗೆ ಭೀತಿಜ್ವರ, ಅಮ್ಮನವರಿಗೆ ಪೂಜೆ ಮಾಡಿಸಿ, ಮಗುವಿಗೆ ಭಂಡಾರ ತಂದಿಡು ಸರಿಹೋಗುತ್ತದೆ' ಎಂದು ಅದಾರೋ ಹೇಳಿದರಂತೆ. ಅದಕ್ಕೇ ಆಕೆ ನಿನ್ನೆ ಸಂಜೆ ಹಣ್ಣು ಕಾಯಿ ಕಾಣಿಕೆ ಕೊಟ್ಟು, ಗಂಡನನ್ನು ಉಚ್ಚಂಗಮ್ಮನ ಗುಡಿಗೆ ಕಳಿಸಿದ್ದಳು. ಯಾವಾಗಲೂ ಶುಕ್ರವಾರ, ಮಂಗಳವಾರ ಅಂದರೆ ಗುಡಿಯಲ್ಲಿ ನೂಕುನುಗ್ಗಲು - ನಿನಗೇ ಗೊತ್ತಲ್ಲ. ಈಗಂತೂ ಇದ್ದದ್ದೂ ಹೆಚ್ಚಿಗೆ. ನಿನ್ನೆ ಪೂಜೆಗೆ ಯಾರುಯಾರೋ ದೊಡ್ಡವರೆಲ್ಲಾ ಬಂದಿದ್ದರಂತೆ. ಅವರ ಪೂಜೆ ತೀರದೆ, ಈ ಬಡವನನ್ನು ಮಾತನಾಡಿಸುವವರು ಯಾರು ? ಎಲ್ಲರದೂ ಆದಮೇಲೆ ಇವನಿಗೆ ಅವಕಾಶ ಸಿಕ್ಕಿತು. ಎಲ್ಲವನ್ನೂ ಅರ್ಚಕರಿಗೆ ಹೇಳಿ ಪೂಜೆ ಮಾಡಿಸಿಕೊಂಡು ಪ್ರಸಾದ ತೆಗೆದುಕೊಂಡು ಬುರುಜಿನಹಟ್ಟಿಯ ಕೊನೆಯಲ್ಲಿದ್ದ ಮನೆಗೆ ಬರುವ ಹೊತ್ತಿಗೆ ಬಹಳಷ್ಟು ಹೊತ್ತಾಗಿತ್ತಂತೆ. ಜನವಿಲ್ಲದ ಬೀದಿಯಲ್ಲಿ ಒಬ್ಬನೇ ಬರುವ ಅವನನ್ನು ಕಂಡು ತಳವಾರಚಾವಡಿಯವರು 'ಮನೆಯಲ್ಲಿರಬೇಕಾದ ಹೊತ್ತಿನಲ್ಲಿ ಹೊರಗೆಲ್ಲಿ ಅಲೆಯುತ್ತಿದ್ದೀಯಾ?' ಎಂದು ಗದರಿಸಿ, ಏನು ಹೇಳಿದರೂ ಕೇಳದೆ, 'ನಿನ್ನ ಪೂಜೆಪುರಾಣವೆಲ್ಲಾ ಬೆಳಗಾದಮೇಲೆ ತಳವಾರರಿಗೆ ಹೇಳು. ಇಷ್ಟು ಹೊತ್ತಿನಲ್ಲಿ ಹೊರಗೆ ಅಡ್ಡಾಡುವವರನ್ನು ಹಿಡಿದಿಡಬೇಕು ಅಂತ

ನಮಗೆ ಅಪ್ಪಣೆಯಾಗಿದೆ' ಎಂದು ಹೇಳಿ, ತಳವಾರಚಾವಡಿಗೆ ಎಳೆದು ಕೊಂಡು ಹೋದರಂತೆ. ಪಾಪ- ಬಡಪಾಯಿ ಸೂರವ್ವ ರೋಗದ ಮಗುವನ್ನು ಕಟ್ಟಿಕೊಂಡು ಮನೆಗೆ ಬರದ ಗಂಡನ ಚಿಂತೆಮಾಡುತ್ತಾ ರಾತ್ರಿಯೆಲ್ಲಾ ಅತ್ತುಕರೆದು, ಬೆಳಿಗ್ಗೆ ಎದ್ದವಳೇ ಓಡಿಬಂದು 'ಅವ್ವಾ, ಗುಡಿಗೆ ಹೋದ ನನ್ನ ಗಂಡ ಮನೆಗೆ ಬರಲಿಲ್ಲ. ನೀವೇ ನನ್ನ ಗಂಡನನ್ನು ಹುಡುಕಿಸಿಕೊಡಿ' ಎಂದು ಕಾಲಿಗೆ ಬಿದ್ದಳು. ನಾನೂ ಅರಮನೆಯ ಆಳು ಬಿಟ್ಟು ಊರೆಲ್ಲಾ ಹುಡುಕಿಸಿದ ಮೇಲೆ, 'ಸೂರವ್ವನ ಗಂಡ ತಳವಾರಚಾವಡಿಯಲ್ಲಿದ್ದಾನೆ' ಎಂದು ಪತ್ತೆಹಚ್ಚಿ ಕೊಂಡು ಬಂದು ಹೇಳಿದ. ನಾನು ಕಳಿಸಿದ ಆಳು ಎಂದು ತಳವಾರಚಾವಡಿಯವರು ಸೂರವ್ವನ ಗಂಡನನ್ನು ಇಲ್ಲಿಗೇ ಕರೆದುಕೊಂಡು ಬಂದು, ನಾನೇ ಅವರಿಗೆ ಸಮಾಧಾನ ಹೇಳಿದಮೇಲೆ ಬಿಟ್ಟು ಹೋದರು. ಆ ಗಂಡ-ಹೆಂಡತಿ ಪಟ್ಟಪಾಡು ಕೇಳಿ ನನ್ನ ಮನಸ್ಸಿಗೆ ಇನ್ನಿಲ್ಲದಷ್ಟು ಬೇಸರವಾಯಿತು, ಅಪ್ಪಯ್ಯಾ. ಅದಕ್ಕೇ ನಿನ್ನ ಮುಖ ಕಾಣುತ್ತಿದ್ದ ಹಾಗೇ ಕೇಳಿದೆ. ಇದೇನು ಕಟ್ಟಪ್ಪಣೆ, ಅಪ್ಪಯ್ಯಾ ? ಗುಡಿಗೆ ಹೋಗುವುದು ತಪ್ಪೇ ? ಕೈಯಲ್ಲಿದ್ದ ಹಣ್ಣು, ಕಾಯಿ, ಭಂಡಾರ ನೋಡಿಯಾದರೂ ನಂಬಬೇಡವೇ ? ಸಣ್ಣ ಪುಟ್ಟವರಿಗೆ ಹೀಗಾದರೆ ಅವರೆಷ್ಟು ನೊಂದುಕೊಂಡು ಶಪಿಸುತ್ತಾರೆ, ಹೇಳು ? ಅವರನ್ನು ಅಯ್ಯೋ ಅನ್ನಿಸಿದರೆ ಈ ದುರ್ಗ ಉಳಿದೀತಾ, ನಾವು ಉಳಿದೇವಾ - ನೀನೇ ಹೇಳು ?"

- ಎಂದು ಎದೆಯಲ್ಲಿದ್ದ ದುಗುಡವನ್ನೆಲ್ಲಾ ಧಾರಾಕಾರವಾಗಿ ತೋಡಿಕೊಂಡು ಹೇಳಿದಳು ನಿಂಗವ್ವ, ಮಾತಿನೊಂದಿಗೆ ಕಣ್ಣಿನಲ್ಲಿ ಬಂದ ಕಂಬನಿಯನ್ನು ಒರಸಿಕೊಂಡು.

ನಡುವೆ ಒಂದೂ ಮಾತಾಡದೆ ಮದಕರಿನಾಯಕ, ತನ್ನ ತಾಯಿಯಾಡಿದ ಮಾತನ್ನೆಲ್ಲಾ ಕೇಳಿ, ಬಳಿಕ ಸಮಾಧಾನದುಸಿರುಬಿಟ್ಟು –

"ಇಷ್ಟೇ ತಾನೇ – ನಾನೇನೋ ಅನಾಹುತವಾಯಿತು ಎಂದುಕೊಂಡಿದ್ದೆ. ಇದು ಬಹಳ ಸಣ್ಣ ವಿಷಯ" – ಎಂದು ಹೇಳಿದ.

"ಸಣ್ಣ ವಿಷಯ - ನನಗೆ, ನಿನಗೆ ಇದು ಸಣ್ಣ ವಿಷಯ. ಆದರೆ ಜ್ವರ ಬಂದ ಮಗುವನ್ನು ತೊಡೆಯ ಮೇಲೆ ಹಾಕಿಕೊಂಡು, ಗಂಡನನ್ನು ಕಾಣದೆ, ಇರುಳೆಲ್ಲಾ ಭಯದಲ್ಲಿ ಕಣ್ಣೀರಿಟ್ಟ ಆ ಬಡಪಾಯಿ ಹೆಣ್ಣಿಗಲ್ಲ. ಬಡವರ ದುಃಖ ನಮಗಿಷ್ಟು ತಾತ್ಸಾರವಾಗಬಾರದು. ಅಪ್ಪಯ್ಯ." – ಮಗನನ್ನು ದಂಡಿಸುವಂತೆ ಹೇಳಿದಳು, ನಿಂಗವ್ವ.

"ಅಪ್ಪಾ - ಬಡವರೆಂದರೆ ನನಗೆಂದೂ ತಾತ್ಸಾರವಿಲ್ಲ, ಅವ್ವ. ಅವರೂ ನಮ್ಮ ಹಾಗೇ ಮನುಷ್ಯರು. ನನಗೂ ಗೊತ್ತು. ಆದರೇನು ಮಾಡುವುದು, ಈಗ ಯುದ್ಧ ಹತ್ತಿರ ಬಂದಿದೆ ಅಂತ 'ರಾತ್ರಿ ಹತ್ತು ತಾಸಾದ ಬಳಿಕ ಊರಿನ ಬೀದಿಗಳಲ್ಲಿ ಯಾರೂ ಒಂಟಿಯಾಗಿ ತಿರುಗಬಾರದು. ಹಾಗೆ ತಿರುಗಿದವರನ್ನು ತಳವಾರಚಾವಡಿಯಲ್ಲಿಟ್ಟು ಬೆಳಿಗ್ಗೆ ವಿಚಾರಿಸಿಬಿಡಬೇಕು' ಎಂದು ನಾವೇ

ಕಾನೂನುಕಟ್ಟಳೆ ಮಾಡಿ, ಊರಿನಲ್ಲೆಲ್ಲಾ ಡಂಗೂರ ಹೊಡೆಸಿದ್ದೇವೆ. ಇದು ಎಲ್ಲರಿಗೂ ಅನ್ವಯಿಸುವ ಆಜ್ಞೆ. ಅದಕ್ಕೆ ತಪ್ಪಿ ನಡೆದವರು ಶಿಕ್ಷೆಗೆ ಗುರಿಯಾಗುತ್ತಾರೆ. ಇದರಲ್ಲಿ ತಳವಾರಚಾವಡಿಯವರದೇನು ತಪ್ಪು? ಯುದ್ಧ ಕಾಲದಲ್ಲಿ ಇಂಥದ್ದೆಲ್ಲಾ ಆಗುತ್ತದೆ, ಅವ್ವಾ."

- ತಾಯಿಗೆ ಕಾನೂನನ್ನು ಸಮಾಧಾನವಾಗಿ ವಿವರಿಸಿ ಹೇಳಿದ ಮದಕರಿನಾಯಕ.

ಆದರೆ ಆತನ ಮಾತಿನ ತರ್ಕ ನಿಂಗವ್ವನಿಗೆ ಸಮಾಧಾನಕೊಡಲಿಲ್ಲ.

"ನೀನು ಬೇಕಾದ ಕಾನೂನುಕಟ್ಟಳೆ ಮಾಡು, ಅಪ್ಪಯ್ಯ. ಆದರೆ ಆ ಕಟ್ಟಳೆ ಕುರುಡಾಗಬಾರದು. ಜನ ನೀವು ಮಾಡಿದ ಕಟ್ಟಳೆಯನ್ನು ಪ್ರೀತಿಯಿಂದ ಒಪ್ಪಬೇಕು. ಅದು ಬಿಟ್ಟು ಬಲವಂತ ಮಾಘಸ್ನಾನವಾದರೆ ಹೇಗೆ ? ಈ ಊರು, ಕೋಟೆ ಉಳಿಯುವುದು ಜನರ ಪ್ರೀತಿಯಿಂದ; ನಿನ್ನ ಕಾನೂನು ಕಟ್ಟಳೆಯಿಂದಲ್ಲ...."

"ನಿಜ, ಅವ್ವಾ, ಅದಕ್ಕೆ ನಾವೇನು ಮಾಡಬೇಕು ಹೇಳಿ ?"

"ಕಟ್ಟಳೆ ಮಾಡುವ ಜನ, ಅದನ್ನು ಪಾಲಿಸಬೇಕಾದವರ ಕಷ್ಟಸುಖ ವಿಚಾರಿಸಿಕೊಂಡು, ಅವರು ಪ್ರೀತಿಯಿಂದ ಪಾಲಿಸುವಂಥ ಕಟ್ಟಳೆ ಮಾಡಬೇಕು. ಅದು ಬಿಟ್ಟು ಅಧಿಕಾರ ನಮ್ಮ ಕೈಯಲ್ಲಿದೆ ಎಂದು ನಿಮಗೆ ಸರಿತೋರಿದ ಅಪ್ಪಣೆ ಮಾಡಿದರೆ ಹೇಗೆ ? ದೇವರು ನಿನಗೆ ಅಧಿಕಾರ ಕೊಟ್ಟಿದಾನೆ - ಈಗಂತೂ ಯುದ್ಧಕಾಲ, ನಿನಗೆ ಬೇಕಾದ ಅಪ್ಪಣೆ ಮಾಡಬಹುದು. ಅದನ್ನು ಜಾರಿಗೆ ತರಲು ನಿನ್ನ ಕೈಯಲ್ಲಿ ಸೇನೆ, ಸರಂಜಾಮು ಎಲ್ಲಾ ಇದೆ. ಆದರೂ ಬಡವರ ಕಷ್ಟ ಮರೆತು ಕಟ್ಟಳೆ ಮಾಡಬೇಡ. ನೀನು ಜನರ ಕಷ್ಟ ಸುಖ ನೋಡಿ ಅಪ್ಪಣೆ ಮಾಡ ಬೇಕು; ಅವರೂ ಆ ಅಪ್ಪಣೆಯ ಹಿಂದಿರುವ ನೀತಿ-ಪ್ರೀತಿಯನ್ನು ಅರ್ಥಮಾಡಿಕೊಳ್ಳಬೇಕು. ಹಾಗಾದಾಗ ನೀನು ಮಾಡಿದ ಕಟ್ಟಳೆಯೂ ಉಳಿಯುತ್ತದೆ, ಜನರೂ ಶಪಿಸುವುದಿಲ್ಲ. ಯುದ್ಧ ಕಾಲ ಅಂತ ಜನರನ್ನು ಮರೆತು, ಬರೀ ದಂಡಿನ ದಳವಾಯಿಗಳನ್ನು ಕೇಳಿ ಅಪ್ಪಣೆ ಮಾಡಿ ಬಿಟ್ಟರೆ ಆಯಿತಾ ? ಈಗ ಹೊರಗಿನ ಶತ್ರು ಬರುತ್ತಿದ್ದಾನೆ; ಜನ ನಿನ್ನವರಾಗಿದ್ದರೆ ಅವನನ್ನು ಗೆಲ್ಲಬಹುದು. ಅದು ಬಿಟ್ಟು ನಿನ್ನ ಜನವೇ ನಿನಗೆ ತಿರುಗಿಬಿದ್ದರೆ ಹೇಗೆ? ಜನಾನ ಮೈಮೇಲೆ ಹಾಕಿಕೊಂಡ ದಳವಾಯಿ ಮುದ್ದಣ್ಣನ ಕಥೆ ಏನಾಯಿತು? ನಿನಗೆ ಪ್ರೀತಿ ಇಲ್ಲದಿದ್ದರೆ ನನ್ನ ತಾಯ್ತನ ಉಳಿದೀತಾ? ಜನ ಮೆಚ್ಚದಿದ್ದರೆ ನಿನ್ನ ಅರಸುತನ ಉಳಿದೀತಾ ? ಯೋಚನೆ ಮಾಡು, ಅಪ್ಪಯ್ಯ. ಏನೋ ಅಂದುಬಿಟ್ಟೆ ಅಂತ ಮನಸ್ಸಿಗೆ ಬೇಸರ ಮಾಡಿ ಕೊಳ್ಳಬೇಡ. ನನ್ನ ಮಾತು ಸರಿ ಅನಿಸಿದರೆ ಹಾಗೆ ಮಾಡು, ಇಲ್ಲವಾದರೆ ಬಿಡು" - ಎಂದು ತನ್ನ ಅನಿಸಿಕೆಯನ್ನು ವಿವರಿಸಿ ಹೇಳಿದಳು ನಿಂಗವ್ವ.

ತನ್ನ ತಾಯಿಯಾಡಿದ ಒಂದೊಂದು ಮಾತನ್ನೂ ನಿಧಾನವಾಗಿ ಕೇಳಿದ ಮದಕರಿನಾಯಕ, ಆಕೆಯಾಡಿದ ಮಾತನ್ನು ಮೆಲುಕುಹಾಕಿ, ತೂಗಿನೋಡಿ, ಅದು ಸರಿ ಎನಿಸಿ –

"ನೀನು ಹೇಳುವುದು ನಿಜ, ಅವ್ವಾ, ನನ್ನಿಂದ ತಪ್ಪಾಯಿತು. ತಿದ್ದಿಕೊಳ್ಳುತ್ತೇನೆ. ಮಗ ಮಾಡಿದ ತಪ್ಪನ್ನು ಮನ್ನಿಸಿಬಿಡು. ನೀನು ನೋಡುವಷ್ಟು ದೂರ ನೋಡುವಷ್ಟು ಕಣ್ಣಿನ ಶಕ್ತಿ ನಿನ್ನ ಮಗನಿಗಿರಲಿಲ್ಲ" – ಎಂದು ಹೇಳಿದ, ಚಿಂತೆ-ಪಶ್ಚಾತ್ತಾಪಗಳಿದ್ದ ಧ್ವನಿಯಲ್ಲಿ.

"ದೇಶವಾಳೋ ದೊರೆ ನೀನು. ನಿನಗೆ ಬುದ್ಧಿ ಹೇಳುವಷ್ಟು ದೊಡ್ಡವಳಲ್ಲ ನಾನು. ನನ್ನದೆಲ್ಲಾ ಬರೀ ಹೆಂಗರುಳಿನ ಮಾತು ; ಮಿದುಳಿನ ಮಾತಲ್ಲ...."

- ತನ್ನ ಮಾತಿನಿಂದ ಮಗನಿಗೆಲ್ಲಿ ಬೇಸರವಾಯಿತೋ ಎಂದು ಅಳುಕುತ್ತಾ ಹೇಳಿದಳು, ನಿಂಗವ್ವ.

"ಊಹೂ - ನೂರುಮಿದುಳು ಕಾಣದ ಸೂಕ್ಷ್ಮವನ್ನು ಒಂದು ಕರುಳು ಕಾಣುತ್ತದೆ ಕಣವ್ವ. ಅಧಿಕಾರದ ಮದ ನೆತ್ತಿಗೆ ಹತ್ತಿದಾಗ ಕರುಳಿನಕಣ್ಣು ಕುರುಡಾಗುತ್ತದೆ. ಹಾಗಾದಾಗಲೇ ಮನುಷ್ಯ ಎಡವಿ ಬೀಳುವುದು. ನಿಮ್ಮ ಮಾತಿನಲ್ಲಿ ಏನೂ ತಪ್ಪಿಲ್ಲ, ಅವ್ವ, ಆಯಿತು ಈಗಾದ ತಪ್ಪು ತಿದ್ದಿಕೋತೀನಿ, ಮುಂದೆಯೂ ಅಷ್ಟೇ ಅವ್ವಾ, ಇವತ್ತಿನ ಹಾಗೇ ನಮ್ಮಿಂದ ತಪ್ಪಾದಾಗ ನಿರ್ದಾಕ್ಷಿಣ್ಯವಾಗಿ ಹೇಳಿ, ಆತಂಕವಿಲ್ಲದೆ ಮಾತಾಡುವ ಶಕ್ತಿ ಇರುವುದು ನಿಮ್ಮೊಬ್ಬರಿಗೇ. ಉಳಿದವರಿಗೆಲ್ಲಾ ನಾನು ನಾಯಕ ಎಂಬ ದಾಕ್ಷಿಣ್ಯ, ಭಯ. ಅದಕ್ಕೆ ಕಟ್ಟು ಬಿದ್ದು ನಾನೇನು ಹೇಳಿದರೂ ಸರಿ ಎನ್ನುತ್ತಾರೆ. ಅವರು ಹಾಗೆ ಅಂದು ಅಂದು, ನನಗೆ, 'ನಾನು ತಪ್ಪು ಮಾಡುವುದೇ ಇಲ್ಲ' ಎಂಬ ದೊಡ್ಡಸ್ತಿಕೆ ಬಂದುಬಿಟ್ಟಿದೆ. ನೀವಿವತ್ತು ನಿಜವಾದ ತಾಯಿ ಮಾಡಬೇಕಾದ ಕೆಲಸ ಮಾಡಿದಿರಿ, ಅವ್ವಾ. ಯಾವತ್ತೂ ನಿಮ್ಮ ಮಾತು ಮರೆಯುವುದಿಲ್ಲ"

- ಎಂದು, ತಾಯಿಗೆ ಭಾಷೆಕೊಡುವ ಧ್ವನಿಯಲ್ಲಿ ಹೇಳಿದ ಮದಕರಿನಾಯಕ –

"ಕುರುಡಾಗಿದ್ದ ನನಗೆ ನೀವು ಇವತ್ತು ಕಣ್ಣು ಕೊಟ್ಟಿರಿ, ಅವ್ವಾ."

ಆ ಮಾತು ಹೇಳುತ್ತಲೇ ಮದಕರಿನಾಯಕ ತನ್ನ ತಾಯಿಯ ಕಾಲನ್ನು ಮುಟ್ಟಿ ನಮಸ್ಕರಿಸಿದ.

ಮಗನ ನಡತೆಯನ್ನು ಕಂಡು, ಆ ತಾಯ ಹೃದಯದಲ್ಲಿ ಪ್ರೀತಿ ಉಕ್ಕಿ ಬಂದಂತೆಯೇ, 'ದಣಿದು ಬಂದ ಮಗನನ್ನು ಉಪಚರಿಸದೆ, ಹೊತ್ತಿಗಾಗಿ ಕಾಯದೆ, ಆತುರವಾಗಿ ದಂಡಿಸಿದೆನೆಲ್ಲಾ' ಎಂದು ಪಶ್ಚಾತ್ತಾಪವೂ ಆಗಿ, ಮಮತೆಯಿಂದ ಮಗನ ನೆತ್ತಿಯನ್ನು ನೇವರಿಸಿ –

"ನಾನು ಮಾತಾಡಿದುದು ಸರಿಯೋ ತಪ್ಪೋ, ಆ ತಾಯಿಯೇ ಹೇಳಬೇಕು. ಅದೇನಾದರಾಗಲಿ - ಬಿಸಲಿನಲ್ಲಿ ಬಂದವನನ್ನು ದಂಡಿಸಿದ ನಾನು ಸರಿಯಾದ ತಾಯಿಯಾಗಲಿಲ್ಲ. ಹೋಗಲಿಬಿಡು. ಹೆಂಗಸರ ಬುದ್ಧಿಯೇ ಹೀಗೆ - ಚಿಂತೆಗಿಂತ ಮಾತು ಮುಂದು. ಅದರಲ್ಲೂ ನನಗೂ ವಯಸ್ಸಾಯಿತು. ಕಕ್ಕುಲಾತಿ ಹೆಚ್ಚಾಗಿ, ಹೊತ್ತು-ಗೊತ್ತು ನೋಡುವ ವಿವೇಕ

ಕಡಮೆಯಾಯಿತು. ಹೊಟ್ಟೆಯಲ್ಲಿದ್ದುದನ್ನು ಇಟ್ಟುಕೊಳ್ಳಲಾಗದೆ ಅಂದುಬಿಟ್ಟೆ. ಬೇಸರ ಮಾಡಿಕೊಳ್ಳಬೇಡ, ಅಪ್ಪಯ್ಯ, ಒಳಗೆ ಬಾ – ಏನಾದರೂ ತಣ್ಣಗೆ ಕುಡಿದು, ಸುಧಾರಿಸಿಕೊಂಡು ಊಟ ಮಾಡುವಿಯಂತೆ. ನಿನಗೆ ಈಗಾಗಲೇ ಸಾವಿರ ಯೋಚನೆ ಅದರಲ್ಲಿ ಇದೇನೂ ದೊಡ್ಡದಲ್ಲ, ನಾನು ಏನೋ ಹೇಳಿದೆ ಅಂತ ತೀರಾ ತಲೆಕೆಡಿಸಿಕೊಳ್ಳಬೇಡ"

- ಎಂದಳು ನಿಂಗವ್ವ, ಒಳಗೆ ನಡೆಯುತ್ತಾ.

ಮದಕರಿನಾಯಕ ಬೇರೇನೂ ಮಾತಾಡದೆ ತಾಯಿಯನ್ನು ಹಿಂಬಾಲಿಸಿದ.

* * *

'ನಿನಗೆ ಈಗಾಗಲೇ ಸಾವಿರ ಚಿಂತೆ. ಅದರಲ್ಲಿ ಇದನ್ನು ಹಚ್ಚಿಕೊಂಡು ತಲೆಕೆಡಿಸಿಕೊಳ್ಳಬೇಡ.'

- ಎಂದು ನಿಂಗವ್ವ ಹೇಳಿದ್ದರೂ ಆಕೆಯಾಡಿದ್ದ ಮಾತು ಮದಕರಿನಾಯಕನ ಹೃದಯ ದಾಳವನ್ನು ಮುಟ್ಟಿತ್ತು.

'ತಾಯಿಯಾಡಿದ ಮಾತು ಎಷ್ಟು ನಿಜ –

'ಕಾನೂನುಕಟ್ಟಳೆ ಮಾಡುವಾಗ - ಅದನ್ನು ಪಾಲಿಸಬೇಕಾದ ಜನರ ಮನಸ್ಸು ಹೇಗೆ ಎಂದು ತಿಳಿಯದೆ, ಅವರ ಕಷ್ಟ-ಸುಖ, ಅನುಕೂಲ-ಅನಾನುಕೂಲ ಅರಿತುಕೊಳ್ಳದೆ, ಅವರು ಪ್ರೀತಿಯಿಂದ ಒಪ್ಪಿ ನಡೆಯುವ ಹಾಗೆ ಮಾಡದಿದ್ದರೆ ಅಂಥ ಕಾನೂನು-ಕಟ್ಟಳೆ ಉಳಿದೀತೇ ?'

ತನ್ನ ತಾಯಿ ಆಡಿದ ಮಾತು, ಮುಗ್ಧ ಹೃದಯದ ಮಾತಾದರೂ ಎಷ್ಟು ಮಹತ್ವಪೂರ್ಣವಾದ ಸತ್ಯ ಎನ್ನುವುದು, ಆಕೆಯಾಡಿದ ಮಾತುಗಳನ್ನು ಚಿಂತಿಸಿದಷ್ಟೂ ಮತ್ತಷ್ಟು ಬಲವಾಗಿ ಅವನಿಗೆ ಮನವರಿಕೆಯಾಯಿತು.

ಯುದ್ಧ - ಸೇನೆಯ, ಕೋಟೆಯ ಬಲಪರೀಕ್ಷೆಯಷ್ಟೇ ಅಲ್ಲ, ಜನರ ನಿಷ್ಠೆಯ ಪರೀಕ್ಷೆಯೂ ಅಹುದು. ಜನಕ್ಕೆ ಬೇಡವಾದುದು – ನೆಲಕ್ಕೇ ಬೇಡವಾದ ಗಿಡದಂತೆ ಉರುಳುವುದು ಖಂಡಿತ. ಅದಕ್ಕೆ ನಿಂಗವ್ವನೇ ದಳವಾಯಿ ಮುದ್ದಣ್ಣನ ಸರ್ವಾಧಿಕಾರದ ನಿದರ್ಶನವನ್ನು ಕೊಟ್ಟಿದ್ದಳು.

'ನಿಜ, ನಿಜ, ಅವ್ವನ ಮಾತು ನೂರಕ್ಕೆ ನೂರರಷ್ಟು ಸತ್ಯ. ಯುದ್ಧ ಸಮಯವೆಂದು ಹತ್ತಾರು ಅಪ್ಪಣೆ ಮಾಡುವಾಗ, ಜನರ ನಿತ್ಯಜೀವನವಿಧಿಯನ್ನು ನಿಯಂತ್ರಿಸುವ ಕಟ್ಟಾಜ್ಞೆಗಳನ್ನು ಹೊರಡಿಸುವಾಗ ನಾನೇಕೆ ಈ ಚಿಂತೆ ಮಾಡಲಿಲ್ಲ ?

'ಬುದ್ಧಿವಂತನಾದ ಪರಶುರಾಮನಾಯಕನೇಕೆ ಈ ಮಾತು ಹೇಳಲಿಲ್ಲ. ವಯೋವೃದ್ದರೂ ಜ್ಞಾನವೃದ್ಧರೂ ಆದ ದಂಡಿನ ದಳವಾಯಿಗಳೇಕೆ ನಮಗೆ ಜನರ ನೆನಪು ಮಾಡಿಕೊಡಲಿಲ್ಲ-?

'ತನ್ನ ಅಧಿಕಾರದ ವಾಹನವನ್ನೇ ಹೊರುವವರ ಹಿತಚಿಂತನೆಯನ್ನೇ ಮಾಡದೆ, ಹಾಲಿಂಗಿದ ಹಸುವನ್ನು ಚಾವಟಿಯಿಂದ ಜಡಿದು ಮೊಲೆ ಹಿಂಡುವ ಕಟುಕಗವಳಿಗನ ಕೆಲಸ ನಾನು ಮಾಡಿದೆನಲ್ಲಾ – ತಪ್ಪಾಯಿತು - ನನ್ನಿಂದ, ನನ್ನ ಮಾತನ್ನು ಕುರುಡಾಗಿ ಪಾಲಿಸಿದ ಪ್ರಧಾನಿ, ದಳವಾಯಿಗಳು ಎಲ್ಲರಿಂದಲೂ ತಪ್ಪಾಯಿತು.

'ಸರಿಪಡಿಸಬೇಕು, ಆದಷ್ಟು ಬೇಗ ಈ ತಪ್ಪನ್ನು ಸರಿಪಡಿಸಬೇಕು.

'ನಮಗೆ ಬೇಕಾದ. ಅನಿವಾರ್ಯವಾದ ಈ ಯುದ್ಧ ನಮ್ಮ ಜನಕ್ಕೆ ಬೇಕೋ ಬೇಡವೋ ತಿಳಿಯಬೇಕು. ಆದಷ್ಟು ಬೇಗ, ಈಗಾದ ತಪ್ಪನ್ನು ಸರಿಪಡಿಸಿಕೊಳ್ಳಬೇಕು. ಇದೇನೂ ಸಣ್ಣ ಯುದ್ಧವಲ್ಲ, ಒಂದೆರಡು ದಿನದಲ್ಲಿ ಮುಗಿಯುವುದೂ ಅಲ್ಲ. ಬರಲಿರುವ ವೈರಿಯೂ ಎಷ್ಟು ಪ್ರಬಲನೋ ಅಷ್ಟೇ ಕ್ರೂರಿ. ಆದ್ದರಿಂದ ಈ ದಾಳಿಯಲ್ಲಿ ಸೇನೆ ಎಷ್ಟು ನುಗ್ಗಾಗುವುದೋ, ಜನವೂ ಅಷ್ಟೇ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಬೇಕಾಗುತ್ತದೆ. ನಮ್ಮ ಛಲಕ್ಕೆ, ಅಭಿಮಾನಕ್ಕೆ, ದುಮ್ಮಾನಕ್ಕೆ ಅವರ ಒಪ್ಪಿಗೆ ಇಲ್ಲದೆಯೇ, ಅವರ ಪ್ರೇಮಪೂರ್ಣವಾದ ಬೆಂಬಲವಿಲ್ಲದೆಯೇ, ಅವರ ಹೆಗಲುಗಳ ಮೇಲೆ ಈ ಉರಿನೊಗವನ್ನು ಹೇರುವುದು ತಪ್ಪು. ಭಕ್ತಿಯಿದ್ದರೆ ದೇವರು, ವಿಶ್ವಾಸವಿದ್ದರೆ ದೊರೆ, ನಿಷ್ಠೆಯಿದ್ದರೆ ರಾಜ್ಯ - ಇಲ್ಲವೇ - ಎಲ್ಲವೂ ವಿಫಲ. ಆದಷ್ಟು ಬೇಗ ಜನರ ಹೃದಯವೇನೆಂದು ತಿಳಿದುಕೊಳ್ಳಬೇಕು'

- ಎಂದು ನಿಶ್ಚಯಿಸಿ, ಪ್ರಧಾನಿ ಪರಶುರಾಮನಾಯಕನನ್ನು ಕರೆಸಿ, ನಡೆದದ್ದೆಲ್ಲವನ್ನೂ ಆತನಿಗೆ ವಿವರಿಸಿ ಹೇಳಿ –

"ನಾಳೆ ದುರ್ಗದ ನಗರಪ್ರಮುಖರ ಸಭೆ ಕೂಡಿಸು, ಪರಶುರಾಮಣ್ಣ. ಇನ್ನೂ ಕಾಲವಿರುವಾಗಲೇ, ನಾವು ಮಾಡಿದ ತಪ್ಪನ್ನು ತಿದ್ದಿಕೊಳ್ಳೋಣ. ಇದು ಸಣ್ಣ ಮಾತೆಂದು ಮರೆತು, ಬಳಿಕ ಪಶ್ಚಾತ್ತಾಪ ಪಡುವುದು ಬೇಡ" – ಎಂದು ಹೇಳಿದ ಮದಕರಿನಾಯಕ.

ಆತನ ಯೋಚನೆ ಪರಶುರಾಮನಾಯಕನಿಗೂ ಸೂಕ್ತವಾಗಿ ಕಂಡು –

"ಆಯಿತು, ನಾಳೆಯೇ ನಗರಪ್ರಮುಖರ ಸಭೆ ಸೇರಿಸುತ್ತೇನೆ. ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಲು ಬಕ್ಷಿ ಚನ್ನಮಲ್ಲಪ್ಪನವರಿಗೆ ಹೇಳುತ್ತೇನೆ"

-ಎಂದು ಹೇಳಿ –

“ಇದು ಅವ್ವ ತೋರಿದ ದಾರಿಯಲ್ಲ, ಅಣ್ಣ, ತಾಯಿ ಉಚ್ಚಂಗವ್ವನೇ ತೋರಿದ ಬೆಳಕಿನ ಹಾದಿ” – ಎಂದು ನುಡಿದ.

೧೭

ನಾಯಕರ ಅಪ್ಪಣೆಯಂತೆ ಪ್ರಧಾನಿಗಳು ಅವಸರದಲ್ಲಿ ಕರೆದ ಪುರಪ್ರಮುಖರ ಸಭೆಯ ಉದ್ದೇಶವೇನೆಂಬುದು, ಸಭೆಗೆ ಪುರಪ್ರಮುಖರನ್ನು ಆಹ್ವಾನಿಸಿದ ಬಕ್ಷಿ ಚನ್ನ ಮಲ್ಲಪ್ಪನಿಗೂ ಅರ್ಥವಾಗಲಿಲ್ಲ; ಆ ಆಹ್ವಾನವನ್ನು ಸ್ವೀಕರಿಸಿದ ಪುರಪ್ರಮುಖರಿಗೂ ಅರ್ಥವಾಗಲಿಲ್ಲ.

ಯುದ್ಧಸಿದ್ಧತೆಗಳು ಭರದಿಂದ ನಡೆಯುತ್ತಿರುವಾಗ, 'ಈ ಸಭೆಯಲ್ಲಿ ಕಾಲವ್ಯಯವೇಕೆ ?' ಎಂದೇ ಬಹಳಷ್ಟು ಜನ ಯೋಚಿಸಿದರು. ಆದರೂ ನಾಯಕರ ಅಪ್ಪಣೆ, ಪ್ರಧಾನಿಗಳ ಆಹ್ವಾನ - ಇಲ್ಲವೆನ್ನಲಾಗಲಿ, ಹೀಗೇಕೆ ಎಂದು ಚರ್ಚಿಸಲಾಗಲಿ ಯಾರಿಗೂ ಧೈರ್ಯ ಬರಲಿಲ್ಲ. 'ಆಯಿತು. ಅವರು ಕರೆದಿದ್ದಾರೆ - ಹೋಗುವುದು ನಮ್ಮ ಕರ್ತವ್ಯ. ಮುಂದೆ ಅವರು ಹೇಗೆ ಹೇಳುತ್ತಾರೋ ಹಾಗಾಗಲಿ' ಎಂದು ನಿರ್ಧಾರ ಮಾಡಿಕೊಂಡೇ, ಗೊತ್ತಾದ ವೇಳೆಗೆ ಎಲ್ಲರೂ ಸಭಾಂಗಣದಲ್ಲಿ ನೆರೆದು ನಾಯಕರು ಬರುವುದನ್ನೇ ಕಾಯುತ್ತಾ ಕುಳಿತರು.

ರಾಜೋಚಿತವಾದರೂ ಸರಳವಾದ ಉಡುಗೆಯನ್ನು ಧರಿಸಿ, ಅಷ್ಟೇ ಮಿತವಾದ ರಾಜ ಲಾಂಛನಗಳೊಂದಿಗೆ, ಓಲಗವನ್ನು ಪ್ರವೇಶಿಸಿದ ನಾಯಕರು, ಸಭಾಸದರ ಮುಜುರೆಯನ್ನು ಸ್ವೀಕರಿಸಿ, ಆಸನಾಸೀನರಾಗಿ, ಎದುರು ಕುಳಿತ ಪಟ್ಟಣಶೆಟ್ಟರು, ಪೇಟೆಯ ವರ್ತಕಮುಖ್ಯರು, ವಿವಿಧ ಕೋಮುಗಳ ಹಿರಿಯರು, ಪುರಪ್ರಮುಖರು, ನಗರದ ಹಿರಿಯ ತಲೆಗಳು -ತಮ್ಮತ್ತಲೇ ನೋಡುತ್ತಿದ್ದ ಎಲ್ಲರನ್ನೂ ನೋಡಿ –

“ಈ ದಿನ ನಾವು ತಮ್ಮೆಲ್ಲರನ್ನೂ ಸಭೆಗೆ ಕರೆಸಿದ ಉದ್ದೇಶವನ್ನು ಪ್ರಧಾನಿಗಳು ತಿಳಿಸುವರು. ತಾವೆಲ್ಲರೂ ಪಟ್ಟಣದ ಹಿರಿಯರು ; ನಮ್ಮಲ್ಲಿ, ಈ ರಾಜ್ಯದಲ್ಲಿ ವಿಶ್ವಾಸಿಗಳು. ಆದುದರಿಂದ ಪ್ರಧಾನಿಗಳು ತಿಳಿಸುವ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು ಎಂಬುದನ್ನು ನಿರಾತಂಕವಾಗಿ ಮುಕ್ತ ಮನಸ್ಸಿನಿಂದ ಹೇಳಬೇಕು” – ಎಂದು ಹೇಳಿದರು.

ನಾಯಕರ ಮಾತಿನ ಸೂಚನೆಯಂತೆ ಪ್ರಧಾನಿ ಪರಶುರಾಮನಾಯಕ ಎದ್ದು ನಿಂತು-

“ಹಿರಿಯರೇ, ಈಗ ನಮ್ಮ ರಾಜ್ಯ ಶತ್ರುದಾಳಿಯನ್ನು ಎದುರಿಸಲು ಸಿದ್ಧವಾಗುತ್ತಿದೆ ಎಂಬ ವಿಷಯ ತಮ್ಮೆಲ್ಲರಿಗೂ ತಿಳಿದಿದೆ. ಈ ಆಪತ್ತಿನ ಸಮಯದಲ್ಲಿ ದುರ್ಗದ ರಕ್ಷಣೆಗಾಗಿ ದಳವಾಯಿಗಳ ಸಲಹೆಯಂತೆ ಕೆಲವು ಕಟ್ಟುಪಾಡುಗಳನ್ನು ಮಾಡಿ, ಅದನ್ನು ಡಂಗೂರ ಸಾರಿಸುವುದರ ಮೂಲಕ

ನಿಮಗೆಲ್ಲರಿಗೂ ತಿಳಿಸಲಾಗಿದೆ. ಯುದ್ಧ ಕಾಲದ ಕೆಲವು ಕಟ್ಟು ಪಾಡುಗಳು, ನಿಮ್ಮ ನಿತ್ಯಜೀವನದ ವ್ಯವಹಾರಗಳಿಗೆ ಕೆಲವು ಅಡೆತಡೆಯನ್ನುಂಟುಮಾಡಿ, ಅದರಿಂದ ಹಲವರಿಗೆ ತೊಂದರೆಯಾಗಿದೆ ಎಂದು ಸನ್ನಿಧಾನಕ್ಕೆ ದೂರು ಬಂದಿದೆ. ನಾವು ಕಟ್ಟುಪಾಡುಗಳನ್ನು ಮಾಡಿದುದು ಕೇವಲ ದಳವಾಯಿಗಳ ಸಲಹೆಯಂತೆ; ದುರ್ಗದ ರಕ್ಷಣೆಯ ದೃಷ್ಟಿಯಿಂದ. ಈ ಕಟ್ಟುಪಾಡುಗಳಿಂದ ವಿನಾಕಾರಣ ನಾಗರಿಕರಾರಿಗೂ ತೊಂದರೆಯಾಗಬೇಕೆಂಬುದು ಪ್ರಭುಗಳ ಉದ್ದೇಶವಲ್ಲ. ಆದ್ದರಿಂದ, ಈ ಯುದ್ಧ ಸಮಯದ ನಿಯಮಗಳಿಂದ ನಿಮ್ಮ ನಿತ್ಯಜೀವನ ನಿರಾತಂಕವಾಗಿ ನಡೆಯಲು ಏನು ತೊಂದರೆಯಾಗಿದೆ ? ದುರ್ಗದ ಹಿತರಕ್ಷಣೆಯನ್ನು ಮಾಡಿಕೊಂಡು, ನಿಮಗೂ ತೊಂದರೆಯಾಗದಂತೆ ಆ ನಿಯಮಗಳನ್ನು ಯಾವ ರೀತಿ ಬದಲಿಸಬಹುದು ? – ಎನ್ನುವ ವಿಚಾರದಲ್ಲಿ ನಿಮ್ಮ ನಿಸ್ಸಂಕೋಚವಾದ ಅಭಿಪ್ರಾಯವನ್ನು ತಿಳಿಯಬೇಕೆಂಬುದು ಪ್ರಭುಗಳ ಅಪೇಕ್ಷೆ. ಆದ್ದರಿಂದ ದುರ್ಗದ ಹಿರಿಯರೂ, ಹಿತೈಷಿಗಳೂ ಆದ ತಾವು ಯೋಚನೆ ಮಾಡಿ ನಿಮ್ಮ ಮುಕ್ತಾಭಿಪ್ರಾಯವನ್ನು ತಿಳಿಸಬೇಕು”

- ಎಂದು ಅಂದಿನ ಸಭೆಯ ಉದ್ದೇಶವನ್ನು ವಿವರಿಸಿ ಹೇಳಿದ.

ಪ್ರಧಾನಿಗಳಾಡಿದ ಮಾತನ್ನು ನಿಶ್ಶಬ್ದವಾಗಿ ಆಲಿಸಿದ ಸಭೆ, ಆ ಬಳಿಕಲೂ ಸ್ವಲ್ಪ ಹೊತ್ತು ನಿಶ್ಶಬ್ದವಾಗಿದ್ದು, ಪ್ರಧಾನಿಗಳ ಮಾತಿಗೆ, ನಾಯಕರ ಅಪೇಕ್ಷೆಗೆ ಹೇಗೆ-ಏನು ಉತ್ತರ ಕೊಡ ಬೇಕೆಂದು ಯೋಚಿಸುತ್ತಾ ಒಬ್ಬರ ಮುಖವನ್ನು ಮತ್ತೊಬ್ಬರು ನೋಡುತ್ತಾ ಕುಳಿತಿದ್ದು ಯಾರೊಬ್ಬರಿಗೂ ಏನು ಹೇಳಬೇಕೆಂದು ತಿಳಿಯದೆ ಮೂಗುಬ್ಬಸದಲ್ಲಿದ್ದು, ಬಳಿಕ ನಗರದ ವರ್ತಕರಲ್ಲಿ ಮುಖ್ಯಸ್ಥರಲ್ಲೊಬ್ಬರಾದ ಕಾಶಿವಿಶ್ವನಾಥಶೆಟ್ಟರು –

“ಮಹಾಸ್ವಾಮಿ, ಇಲ್ಲಿ ಸೇರಿರುವ ಜನರಲ್ಲಿ ಬಹುಮಂದಿ ವರ್ತಕಜನ, ಇನ್ನುಳಿದವರು ಹಲವಾರು ಕೋಮುಗಳ ಮುಖಂಡರು, ಹಲವಾರು ಕೇರಿಗಳ ಹಿರಿಯರು. ಯುದ್ಧ ಸಮಯವಾಗಲಿ, ಶಾಂತಿಸಮಯವಾಗಲಿ ಪ್ರಭುಗಳ ಅಪೇಕ್ಷೆಯಂತೆ ನಡೆಯಬೇಕಾದದ್ದು ನಮ್ಮ ಕರ್ತವ್ಯ. ಈಗ ಬಂದಿರುವುದು ಲಡಾಯಿ ಹೊತ್ತು. ಈ ಹೊತ್ತಿನಲ್ಲಿ ಪ್ರಭುಗಳು – ಪ್ರಧಾನಿಗಳು, ದಳವಾಯಿಗಳೊಂದಿಗೆ ಯೋಚಿಸಿ, ದುರ್ಗದ ರಕ್ಷಣೆಗೆ ಏನು ಕಟ್ಟುಪಾಡು ಬೇಕೋ ಅದನ್ನು ಮಾಡಿದ್ದೀರಿ. ಅದನ್ನು ಪಾಲಿಸಬೇಕಾದದ್ದು ನಮ್ಮ ಕರ್ತವ್ಯ. ಹಾಗಿರುವಾಗ ಈ ವಿಷಯದಲ್ಲಿ ನಮ್ಮನ್ನು ಕೇಳತಕ್ಕದ್ದೇನಿದೆ? ರಕ್ಷಣೆ, ಶಿಕ್ಷೆ ಎಲ್ಲದರಲ್ಲೂ ಪ್ರಭುಗಳು ಸಮರ್ಥರು. ಆದ್ದರಿಂದ ಈ ವಿಷಯದಲ್ಲಿ ನಮ್ಮ ಅಭಿಪ್ರಾಯ ಕೇಳುವ ಅಗತ್ಯವಿಲ್ಲ ಎಂದು ನಮಗೆ ತೋರುತ್ತದೆ. ತಾವು ಹೇಳಿದಂತೆ ನಡೆಯಲು ನಾವು ಸಿದ್ಧರಿದ್ದೇವೆ”

-ಎಂದು ಹೇಳಿದರು.

ಕಾಶಿವಿಶ್ವನಾಥಶೆಟ್ಟರು ಹೇಳಿದ ಮಾತು. ಉಳಿದವರ ಮಾತಿಗೂ ದಾರಿ ತೋರಿಸಿದಂತಾಗಿ, ಮಠದ ವೆಂಕಟಕೃಷ್ಣದೀಕ್ಷಿತರು ಹೇಳಿದರು –

"ಮಹಾಪ್ರಭು, ನಾವು ಕೋವಿ ಕತ್ತಿ ನೋಡಿದವರೇ ಆಗಲಿ, ಇವೊತ್ತಿನವರೆಗೆ ಅದನ್ನು ಕೈಯಲ್ಲಿ ಮುಟ್ಟಿದವರೂ ಅಲ್ಲ. ನಾವೇನಿದ್ದರೂ ಭಗವಂತನಲ್ಲಿ ತಮ್ಮ ರಾಜ್ಯದ ಕ್ಷೇಮ ಕೋರಿ ಪ್ರಾರ್ಥನೆ, ಪೂಜೆ, ಹೋಮ-ಹವನ, ಜಪ-ತಪ ಮಾಡುವವರು. ಹಾಗಿರುವಾಗ ಈ ವಿಷಯದಲ್ಲಿ ನಮ್ಮನ್ನು ಕೇಳುವುದೇನಿದೆ ? ತಾವು ಪ್ರಭುಗಳು, ನಾವು ಪ್ರಜೆಗಳು. ಮಂತ್ರ ತಂತ್ರದ ವಿಷಯ ಕೇಳಿದರೆ ಹೀಗಲ್ಲ ಹೀಗೆ ಎಂದು ಹೇಳಲು ನಮಗೆ ಶಾಸ್ತ್ರಪಾಂಡಿತ್ಯವಿದೆಯೇ ವಿನಾ ದರ್ಭೆಯೇ ಬ್ರಹ್ಮಾಸ್ತ್ರವಾದ ನಮಗೆ ಯುದ್ಧ ಸಮಯದಲ್ಲಿ ಏನು ಸಲಹೆ ಕೊಡಲು ಸಾಧ್ಯ ? ರಾಜ್ಯ ರಕ್ಷಣೆಗಾಗಿ ತಾವು ಹೇಳಿದ ದೇವತಾಕಾರ್ಯವನ್ನು ನಿಷ್ಠರಾಗಿ ಆಚರಿಸುತ್ತೇವೆಂದು ಭರವಸೆಯನ್ನು ಮಾತ್ರ ಸನ್ನಿಧಾನಕ್ಕೆ ನಾವು ಕೊಡುತ್ತೇವೆ. ಅದು ಬಿಟ್ಟು ಬೇರೆ ಏನು ಮಾತಿದ್ದರೂ ಪ್ರಭುಗಳೇ ಅಪ್ಪಣೆ ಮಾಡಬೇಕು. ಅದನ್ನು ಪಾಲಿಸುತ್ತೇವೆ. ಅಷ್ಟು ವಿನಾ, ರಕ್ಷಣೆಯ ವಿಷಯದಲ್ಲಿ ದಳವಾಯಿಗಳು ಮಾಡಿದ ನಿಯಮಗಳಿಗೆ ತಿದ್ದುಪಡಿ ಹೇಳುವಷ್ಟು ಶಕ್ತಿ ನಮಗಾರಿಗೂ ಇಲ್ಲ. ಆಜ್ಞೆ ರಾಜಕರ್ತವ್ಯ, ಅದರ ಪರಿಪಾಲನೆ ಪ್ರಜಾ ಕರ್ತವ್ಯ. ಅದಕ್ಕೆ ನಮ್ಮಲ್ಲಿ ಯಾರಿಂದಲೂ ಲೋಪ ಬರುವುದಿಲ್ಲವೆಂದು, ಪ್ರಭುಗಳ ಆರಾಧ್ಯದೈವವಾದ ಚಂದ್ರಮೌಳೇಶ್ವರನ ಸಾಕ್ಷಿಯಾಗಿ ಹೇಳುತ್ತೇವೆ. ನನಗೆ ತಿಳಿದಮಟ್ಟಿಗೆ ಇಲ್ಲಿ ಸೇರಿದ ಇತರರ ಅಭಿಪ್ರಾಯವೂ ಇದೇ ಎಂದು ನಂಬಿದ್ದೇನೆ. ಆದ್ದರಿಂದ ನಮ್ಮನ್ನು ಕರೆಸಿದ ಉದ್ದೇಶವೇನೆಂದು ಪ್ರಭುಗಳೇ ವಿವರಿಸಿ ಮಾರ್ಗದರ್ಶನ ಮಾಡಬೇಕು."

ಉಳಿದವರೂ ಆ ಮಾತು ಸರಿ ಎಂದು ಹೇಳುವಂತೆ ಪ್ರಭುಗಳತ್ತ ನೋಡಿದರು.

"ಸಭೆಗೆ ತಮ್ಮನ್ನು ಕರೆಸಿದ ಉದ್ದೇಶವೇನೆಂದು ಈಗಾಗಲೇ ಪ್ರಧಾನಿಯವರು ತಿಳಿಸಿದ್ದಾರೆ. ತಾವೆಲ್ಲಾ ತಲೆತಲಾಂತರಗಳಿಂದ ಇಲ್ಲಿ ಬಾಳಿದ ಜನ. ಇಷ್ಟು ವರ್ಷಗಳ ಕಾಲ ನೀವು ದುರ್ಗದ ಪ್ರಜೆಗಳಾಗಿ, ದುರ್ಗ ನಿಮಗೆ ಆಸರೆಯಾಗಿ ನಡೆದು ಬಂದಿದೆ. ಹಿಂದೆ ಎಷ್ಟೋ ಯುದ್ಧಗಳು ನಡೆದದ್ದು ನಿಮಗೆ ತಿಳಿದಿದೆ. ಆದರೆ ದುರ್ಗದ ಭಾಗ್ಯ, ನಿಮ್ಮ ಪುಣ್ಯ – ಇದುವರೆಗೂ ಯಾವ ಶತ್ರುವೂ ದುರ್ಗದ ಮೇಲೆ ದಾಳಿ ಮಾಡಿರಲಿಲ್ಲ. ಹಾಗಾಗಿ ಇಷ್ಟು ವರ್ಷ, ಯುದ್ಧ ನಡೆದ ಸಮಯದಲ್ಲಿ ನೀವು ಅಷ್ಟಿಷ್ಟು ಕಷ್ಟ ಕಾರ್ಪಣ್ಯ ಅನುಭವಿಸಿದರೂ ಯುದ್ಧ ನಿಮಗೆ ಕೇಳಿಕೆಯ ಮಾತಾಗಿತ್ತೇ ಆಗಲಿ, ನಿಜವಾದ 'ಯುದ್ಧ'ದ ಬಿಸಿ ನಿಮಗೇ ನೇರವಾಗಿ ತಟ್ಟಿರಲಿಲ್ಲ. ಅದರ ಬೇಗೆ ಎಷ್ಟು ಭಯಂಕರವೆಂದು ನಿಮಗೆ ಮನವರಿಕೆಯಾಗಿರಲಿಲ್ಲ. ಕೆಂಡವನ್ನು ನೋಡುವುದಕ್ಕೂ, ಮುಟ್ಟುವುದಕ್ಕೂ ಇರುವ ವ್ಯತ್ಯಾಸ ನಿಮಗೆ ತಿಳಿದಿದೆ. ಯುದ್ಧವೂ ಹಾಗೇ. ನಾವು ಯುದ್ಧದ ಕಾಳ್ಗಿಚ್ಚಿನಿಂದ ಸುಟ್ಟು ಹೋದ ನಗರಗಳನ್ನು ಕಣ್ಣಾರೆ ನೋಡಿದ್ದೇವೆ. ಯುದ್ಧದಲ್ಲಿ ಯಾರೇ ಗೆಲ್ಲಲಿ-

ಸೋಲಲಿ-ಯುದ್ಧ ಮುಟ್ಟಿದುದನ್ನು ಮಸಣವಾಗಿ ಮಾಡುತ್ತದೆ. ಮನೆಮನೆಯಲ್ಲೂ ಸಾವಿನ ಉರಿ ಸೋಕಿ, ಪಟ್ಟಣದ ಬೀದಿಗಳಲ್ಲಿ ಮೃತ್ಯುವಿನ ಮೆರವಣಿಗೆ ನಡೆಯುತ್ತದೆ. ಮನೆಗಳು ಮುರಿದು ಮಣ್ಣಾಗುತ್ತವೆ, ಅನ್ನ ಬಂಗಾರವಾಗುತ್ತದೆ, ಕುಡಿಯುವ ನೀರಿಗೂ ಸಾಲು ನಿಂತು ಕಾಯಬೇಕಾಗುತ್ತದೆ. ಗುತ್ತಿಕೋಟೆ ಬಿದ್ದದ್ದೇ ಸಾವಿರಾರು ಜನ ನೀರಿಲ್ಲದೆ ಸತ್ತದ್ದರಿಂದ. ಇದನ್ನು ನೀವೆಲ್ಲರೂ ಕೇಳಿರಬೇಕು. ಹಾಗೇ ಹೊರಗಿನ ಶತ್ರು ನಿಮಗೊಂದು ರೀತಿಯಲ್ಲಿ ಮೃತ್ಯುವಾದರೆ, ನಿಮ್ಮನ್ನು ರಕ್ಷಿಸುವ ನಾವೂ ನಿಮ್ಮನ್ನು, ದುರ್ಗದ ರಕ್ಷಣೆಯ ದೃಷ್ಟಿಯಿಂದಲೇ ನೂರಾರು ಕಠಿಣ ನಿಯಮಗಳ ಮುಳ್ಳುಪಂಜರದಲ್ಲಿ ಬಂದಿಗಳನ್ನಾಗಿಡಬೇಕಾಗುತ್ತದೆ. ನಿಮ್ಮ ವ್ಯಾಪಾರ, ವ್ಯವಹಾರ, ಊಟ, ಉಪಚಾರ, ಕೊನೆಗೆ ಓಡಾಟ-ಉಸಿರಾಟಗಳು ಹೀಗೇ ಮಾಡಬೇಕು ಎಂದು ಹೇಳಬೇಕಾಗುತ್ತದೆ. ಅದಕ್ಕೆ ಮೀರಿ ನಡೆದವರನ್ನು ನಿರ್ದಾಕ್ಷಿಣ್ಯವಾಗಿ ದಂಡಿಸಬೇಕಾಗುತ್ತದೆ. ಆದ್ದರಿಂದ ಯುದ್ಧ ಕೇವಲ ಸಿಪಾಯಿಗಳ ಹೊಡೆದಾಟ, ರಾಜರ ಕಚ್ಚಾಟ ಎಂದು ತಿಳಿಯದೆ, 'ನಿಮ್ಮ ಮನೆಬಾಗಿಲಿಗೇ, ನಿಮ್ಮ ಜೀವದ ಕಂದಾಯ ಕೇಳಲು ಬಂದ ಸಾವಿನ ಸುಂಕದವರು' ಎಂಬ ದೃಷ್ಟಿಯಿಂದ ಯೋಚಿಸಿ ಹೇಳಿ - ಈ ಯುದ್ಧ, ಇದಕ್ಕಾಗಿ ನಾವು ಮಾಡಿದ ನಿಯಮಗಳು ನಿಮಗೆ ಒಪ್ಪಿಗೆಯೇ ?"

- ನಾಯಕರು ನಾಗರಿಕರ ಮೇಲಾಗುವ ಯುದ್ಧದ ಪರಿಣಾಮಗಳನ್ನು ವಿವರಿಸಿ ಹೇಳಿದರು. ಅದನ್ನು ಕೇಳಿದ ಬಳಿಕ, ಪಟ್ಟಣಶೆಟ್ಟಿ ಚನ್ನಮಲ್ಲಪ್ಪ ಎದ್ದು ನಿಂತು ಹೇಳಿದ –

"ಮಹಾಸ್ವಾಮಿ, ತಾವು ಅಂದಂತೆ ನಾವು ಸಿಪಾಯಿಗಳಲ್ಲ. ನಮ್ಮ ಪಾಲಿಗೆ ಯುದ್ಧ ಕೇಳಿದ ಕತೆ. ಅಂಥದು ಈಗ ಮನೆಬಾಗಿಲಿಗೇ ಬಂದಿದೆ; ನಾವು, ತಾವು - ಯಾರೂ ಬೇಕು ಎಂದು ಕೇಳಲಿಲ್ಲ. ಆದರೂ ಬಂದಿದೆ. ಅದಕ್ಕೆ ನಾವೀಗ ಏನು ಮಾಡಬೇಕು ?"

"ಯುದ್ಧ ಇನ್ನೂ ಬಂದಿಲ್ಲ, ಬರುತ್ತಾ ಇದೆ. ನವಾಬರ ಸೇನೆ ವೇದಾವತಿಯ ಬಳಿ ಬರುತ್ತಿದೆ ಎಂದು ನಮಗೆ ಸುದ್ದಿ ಬಂದಿದೆ. ಆದ್ದರಿಂದ ಇನ್ನೂ ಹೆಚ್ಚೆಂದರೆ ನಾಲ್ಕೈದು ದಿನಗಳ ಅವಕಾಶವಿದೆ. ಆದ್ದರಿಂದ ನೀವು ನಿಮ್ಮ ನಗನಾಣ್ಯ, ಹೆಂಗಸರುಮಕ್ಕಳು, ದನಕರು ಸಮೇತ ಈ ಯುದ್ಧ ಭೂಮಿಯಿಂದ ದೂರವಾಗಿ ಹೋಗಿ. ದೇವರ ದಯೆಯಿಂದ ನಮಗೆ ಜಯವಾದರೆ, ಮತ್ತೆ ಎಂದಿನಂತೆ ಇಲ್ಲಿ ಬಂದಿರಿ. ಇಲ್ಲ - ಆ ಕಾಲಕ್ಕೆ ದೇವರು ನಿಮಗೆ ಹೇಗೆ ಬುದ್ಧಿ ಕೊಡುತ್ತಾನೋ ಹಾಗೆ ಮಾಡಿ. ನಿಮ್ಮ ಬಗ್ಗೆ ನಾವು ತಪ್ಪು ತಿಳಿಯುವುದಿಲ್ಲ. ನಿಮ್ಮ ಬಗ್ಗೆ ನಮ್ಮ ಪ್ರೇಮ ಕಡಿಮೆಯಾಗುವುದಿಲ್ಲ. ಯುದ್ಧದ ಕಷ್ಟ-ನಿಷ್ಠೂರ ನಮಗೇ ಇರಲಿ."

-ಯಾವ ಭಾವವಿಕಾರವೂ ಇಲ್ಲದ ನಿರ್ಮಲ ಮನಸ್ಸಿನಿಂದ ಹೇಳಿದರು, ನಾಯಕರು.

“ಮಹಾಸ್ವಾಮಿಗಳ ಮಾತು ನಮಗೆ ಅರ್ಥವಾಯಿತು. ನಾವೆಲ್ಲಿಗೆ ಹೋಗಬೇಕು ಎಂದು ತಮ್ಮ ಅಪ್ಪಣೆ ?”

“ಯಾವುದಾದರೂ ದೂರದ ಊರಿನ ನಿಮ್ಮ ನೆಂಟರಿಷ್ಟರ ಮನೆಯಲ್ಲಿದ್ದು ಅಷ್ಟು ದಿನ ಕಾಲಹಾಕಿ. ನಿಮಗೇನಾದರೂ ರಕ್ಷಣೆ ಬೇಕಾದರೆ ನಾವು ಕೊಡುತ್ತೇವೆ.”

“ನಾವು ಹಣವಿದ್ದವರು, ಬಂಧುಬಳಗವಿದ್ದವರು, ಬೇಕಾದರೆ ರಕ್ಷಣೆಗೆ ಬಾಡಿಗೆಯ ಜನವನ್ನೂ ಕರೆದುಕೊಂಡು ಹೋಗಬಹುದು, ಮಹಾಸ್ವಾಮಿ. ಆದರೆ ಕಷ್ಟವೆಂದು ಬರಗಾಲ ಬಂದಾಗ ಸೀಮೆಗೆ ಸೀಮೆಯೇ ಗುಳೇಹೋಗುವ ಹಾಗೆ, ಈಗಲೂ ನಾವು ಹಾಗೆ ಮಾಡಲು ಸಾಧ್ಯವೇ ?”

-ಕಾಶಿವಿಶ್ವನಾಥಶೆಟ್ಟರು ಕೇಳಿದರು.

“ಅನುಕೂಲವಿದ್ದವರು ಕಳೆದುಕೊಳ್ಳುವುದನ್ನಾದರೂ ಉಳಿಸಿಕೊಳ್ಳುವ ಯತ್ನಮಾಡಿ”

- ನಾಯಕರು ಹೇಳಿದರು.

“ಇಲ್ಲದಿದ್ದವರು ?”

“ಅವರು - ನಮ್ಮ ಹಾಗೆ ಬಂದದ್ದನ್ನು ಅನುಭವಿಸಬೇಕು. ಅದು ಅನಿವಾರ್ಯವಲ್ಲವೇ...”

- ನಾಯಕರು ಮಾತನ್ನು ಮುಂದುವರೆಸಿ ಏನು ಹೇಳುತ್ತಿದ್ದರೋ ಏನೋ, ಆದರೆ ಅವರ ಮಾತಿನ ನಡುವೆಯೇ ವೃದ್ಧ ಪಟ್ಟಣಶೆಟ್ಟಿ ಚನ್ನ ಮಲ್ಲಪ್ಪ ಮುಖ ಕೆಂಪಗೆ ಮಾಡಿಕೊಂಡು ಎದ್ದು ನಿಂತು –

“ನನ್ನ ಅವಿನಯವನ್ನು ಮಹಾಸ್ವಾಮಿಗಳು ಕ್ಷಮಿಸಬೇಕು - ಮಾತಿನ ಮಧ್ಯೆಯೇ ಎದ್ದುನಿಂತೆ. ತಾವು ನಮ್ಮನ್ನು ನಂಬಿದಹಾಗಿಲ್ಲ, ಪರೀಕ್ಷೆ ಮಾಡುತ್ತಿದ್ದೀರ. ನಾವು ನಮ್ಮ ಅಜ್ಜ ಮುತ್ತಜ್ಜಂದಿರ ಕಾಲದಿಂದ ಈ ಊರಿನ ನೀರು ಕುಡಿದು, ಈ ಸಂಸ್ಥಾನದ ಉಪ್ಪು ತಿಂದು ಬೆಳೆದವರು. ಇವತ್ತು-ನಿನ್ನೆ ಇಲ್ಲಿಗೆ ಬಂದು ಸೇರಿಕೊಂಡ ಹಸುವಿನ ಕೆಚ್ಚಲ ಉಣ್ಣೆಗಳಲ್ಲ. 'ಹೋಗಿ' ಎನ್ನುತ್ತೀರ ಮಹಾಸ್ವಾಮಿ, ಎಲ್ಲಿಗೆ ಹೋಗಬೇಕು ? - ಹರಪನಹಳ್ಳಿಗೆ ಹೋಗಬೇಕೇ, ರಾಯದುರ್ಗಕ್ಕೆ ಹೋಗಬೇಕೇ, ತರೀಕೆರೆಗೆ ಹೋಗಬೇಕೇ, ಹತ್ತಿರದ ಮತ್ತೋಡಿಗೆ ಹೋಗಬೇಕೇ? ನಿಮಗೆ ಶತ್ರುಗಳಾದ ಆ ರಾಜರ ಸೀಮೆಗೆ ಹೋಗಿ, ಅಲ್ಲಿ ನಿಮ್ಮನ್ನು ಹೀಯಾಳಿಸಿ, ಅವರಿಗೆ ಪರಾಕು ಹೇಳಿ ಬದುಕಬೇಕೆ? ನಾವೇನು ನಾಯಿ-ನರಿಗಳಿಗೆ ಹುಟ್ಟಿದ ಜನವೇ? ಅದಾಗುವುದಿಲ್ಲ ಮಹಾಸ್ವಾಮಿ. ಬದುಕಿದರೆ ನಿಮ್ಮ ಜೊತೆಗೆ ಬದುಕುತ್ತೇವೆ; ಸತ್ತರೆ ನಿಮ್ಮ ಜೊತೆ ಸಾಯುತ್ತೇವೆ. ಸಾವೇನೂ ಯುದ್ಧದಲ್ಲೇ ಬರುವುದಿಲ್ಲ, ಸುಪ್ಪತ್ತಿಗೆಯ ಮೇಲೆ ಮಲಗಿದ್ದವರನ್ನೂ ಬಿಡುವುದಿಲ್ಲ.

ಆದ್ದರಿಂದ ಎಲ್ಲಿದ್ದರೂ ಬರುವ ಸಾವು ನಮಗಿಲ್ಲೇ ಬರಲಿ. ಹೊರಗಿನ ಸೀಮೆಗೆ ಹೋಗಿ, ಪರರಿಂದ ಹೆದರಿ ಓಡಿಬಂದವರು ಎಂದು ಹೀನಾಯವಾಗಿ ಮೂತಿ ತಿವಿಸಿಕೊಂಡು ಹುಟ್ಟಿದ ಮನೆಗೆ, ಊರಿಗೆ ಕೆಟ್ಟ ಹೆಸರು ತಂದು ಬದುಕುವುದು ನಮಗೆ ಸರ್ವಥಾ ಇಷ್ಟವಿಲ್ಲ. ನೀರು-ನಿಡಿ ಎಂದಿರಿ, ದುರ್ಗದಲ್ಲಿ ನೀರಿಗೆ ಎಂದೂ ಬರಗಾಲವಿಲ್ಲ. ಊಟ-ತಿಂಡಿಗೆ ಕಷ್ಟ ಎಂದಿರಿ – ಬರೀ ದವಸಧಾನ್ಯವಷ್ಟೇ ಅಲ್ಲ ಮಹಾಸ್ವಾಮಿ, ದಿನವಲ್ಲ-ವಾರವಲ್ಲ, ಒಂದು ವರ್ಷ ಲಡಾಯಿ ನಡೆಯಲಿ, ಸೇನೆಗೆ ಬೇಕಾಗುವಷ್ಟು ಹಣ ನಾವು ಕೊಡುತ್ತೇವೆ. ನಮ್ಮ ದುರ್ಗ ಉಳಿಸಲು ನಮ್ಮ ಹೆಂಡಂದಿರಿಗೆ ಅರಶಿನದಕೊನೆಯ ತಾಳಿ ಕಟ್ಟಿದರೂ ಚಿಂತೆಯಿಲ್ಲ. ಸೇನೆಗೆ ಬೇಕೆಂದರೆ ನಮ್ಮ ಮನೆ ತೊಟ್ಟಿಲ ಕೂಸಿಗೂ ನೀರು ಕುಡಿಸಿ ಸೈನಿಕರಿಗೆ ಹಾಲು ಬೆಣ್ಣೆ ಸರಬರಾಯಿ ಮಾಡುತ್ತೇವೆ. ಇನ್ನು ಕಟ್ಟುಪಾಡು ಎಂದಿರಿ, ಅದೇನು ಬೇಕೋ ನೀವು ಮಾಡಿ - ತಪ್ಪಿದವರನ್ನು ನಿಮ್ಮ ತಳವಾರ ಚಾವಡಿ ಶಿಕ್ಷಿಸಬೇಕಾಗಿಲ್ಲ. ನಮ್ಮ ಮಕ್ಕಳಾದರೂ ಸರಿ - ಅವರ ಕೈಕಾಲು ನಾವೇ ಕತ್ತರಿಸಿ, ತಮ್ಮ ಅಪ್ಪಣೆ ನಡೆಯುವ ಹಾಗೆ ಮಾಡುತ್ತೇವೆ. ನಾವು ಊರು ಬಿಟ್ಟು ಹೋಗುವುದಿಲ್ಲ ; ನಮ್ಮ ಮನೆಬಾಗಿಲು ಮುಚ್ಚುವುದಿಲ್ಲ; ನಮ್ಮ ದೇವರನ್ನು ಭಾವಿಯಲ್ಲಿ ಮುಳುಗಿಸಿಡುವುದಿಲ್ಲ. ಇದು ಪಟ್ಟಣಶೆಟ್ಟಿಯಾಗಿ ನನ್ನ ಮಾತು, ಮಾತಲ್ಲ ಸ್ವಾಮಿ - ತಮ್ಮ ಪಾದಗಳಲ್ಲಿ ನನ್ನ ಶಪಥ. ನಮಗೆ ದೊರೆ ಬೇರೆಯಲ್ಲ, ದೇವರು ಬೇರೆಯಲ್ಲ. ಆದ್ದರಿಂದ ಯಾವನೋ ಪರದೇಶಿಗೆ ಹೆದರಿ ತಲೆಮರೆಸಿಕೊಂಡು ಹೋಗುವ ಮಾತು ಬಿಟ್ಟು, ಬೇರೆ ಏನು ಮಾತಿದ್ದರೂ ಹೇಳಿ – ನಡೆಸದಿದ್ದರೆ ನಮ್ಮನ್ನು ಶೂಲಕ್ಕೇರಿಸಬಹುದು. ನನ್ನ ಮಾತಿಗೆ ಸ್ವಾಮಿ ಸಂಪಿಗೆ ಸಿದ್ಧೇಶ್ವರನೇ ಸಾಕ್ಷಿ"

-ಎಂದು ಉದ್ರಿಕ್ತರಾಗಿ ಹೇಳಿ, ಸಭೆಯತ್ತ ತಿರುಗಿ-

"ಏನಪ್ಪಗಳಿರಾ – ತಾಯಿಹಾಲು ಕುಡಿದು ಬದುಕಿದವರು. ಈ ಮಾತಿಗೆ ನಿಮ್ಮ ಒಪ್ಪಿಗೆಯುಂಟೋ-ಇಲ್ಲವೋ ?"

- ಎಂದು ಭಾವೋದ್ವೇಗದಿಂದ ಕಂಪಿಸುತ್ತಿದ್ದ ಧ್ವನಿಯಲ್ಲಿ ಕೇಳಿದರು.

ಆ ಮಾತು ಕೇಳಿದ ಸಭೆ ಒಟ್ಟಿಗೇ ಎದ್ದು ನಿಂತು ಹೇಳಿತು –

"ಪಟ್ಟಣಶೆಟ್ಟರ ಮಾತೇ ನಮ್ಮ ಮಾತು. ಅದಕ್ಕೆ ಪ್ರತಿ ಇಲ್ಲ."

ಆ ಮಾತನಾಡಿದವರ ಕೈಯಲ್ಲಿ ಕತ್ತಿ, ಕೋವಿಗಳಿರಲಿಲ್ಲ; ಧ್ವನಿಯಲ್ಲಿ ಮಾತ್ರ ಧೀರಯೋಧ ನಿರ್ಧಾರವಿತ್ತು.

ಪಟ್ಟಣಶೆಟ್ಟರ ಮಾತನ್ನು ಕೇಳಿ ನಾಯಕರೂ ಅಷ್ಟು ಹೊತ್ತು ಅವಾಕ್ಕಾಗಿ ಕುಳಿತು, ಬಳಿಕ ಹೃದಯದ ಭಾವಾವೇಗವನ್ನು ಹತೋಟಿಗೆ ತಂದುಕೊಂಡು ಹೇಳಿದರು –

"ನಿಮ್ಮಲ್ಲಿ, ನಿಮ್ಮ ನಿಷ್ಠೆಯಲ್ಲಿ ಅಪನಂಬಿಕೆಯಿಂದ ನಾವೀ ಮಾತನ್ನು ಆಡಲಿಲ್ಲ. ಯುದ್ಧದ ಕಟ್ಟುಪಾಡಿನಿಂದ ತೊಂದರೆಯಾಯಿತು ಎಂದು ಕೆಲವರು ಆಡಿಕೊಂಡರಂತೆ...."

"ದುರ್ಗದಲ್ಲಿ ಹುಟ್ಟಿ ಹಾಗಾಡಿದವರು ನಾಯಿ-ನರಿಗಳಿಗೆ ಹುಟ್ಟಿದವರು. ಅವರ ಮಾತು ನಮಗೆ ಬೇಡ. ನಮಗೂ ಅಷ್ಟಿಷ್ಟು ಕಷ್ಟವಾಗಬಹುದು, ಮಹಾಸ್ವಾಮಿ. ದೇವರ ರಥ ಹೋಗುವಾಗ ಒಂದೆರಡು ಇರುವೆ ಸತ್ತರೆ ಅಪಶಕುನವಾಯಿತು ಎಂದು ರಥವನ್ನು ಯಾರೂ ನಿಲ್ಲಿಸುವುದಿಲ್ಲ. ಆಡುವವರು ಆಡಲಿ, ದೇವರ ತೇರು ಮುಂದೆ ನಡೆಯಲಿ"

- ಎಂದರು ವಿಶ್ವೇಶ್ವರ ದೀಕ್ಷಿತರು.

"ರಾಜಾಸಾಹೇಬ್, ತಾವು 'ಬಾ' ಎಂದು ಹೇಳಿ ಕರೆದದ್ದಲ್ಲ - ಈ ಯುದ್ಧ. ನಮ್ಮ ರಾಜ್ಯದ ಮೇಲೆ ಕೆಟ್ಟ ದೃಷ್ಟಿ ಇಟ್ಟು ನವಾಬ ಬಂದಿದಾನೆ. ನಮ್ಮ ಮನೆ, ದೇವರು, ಧರ್ಮ ಉಳಿಸಿಕೊಳ್ಳುವುದು ನಮ್ಮ ಕರ್ತವ್ಯ. ಇದು ಧರ್ಮಯುದ್ಧ ಜಿಹಾದ್ ಎಂದು ಅಪ್ಪಣೆ ಕೊಡಿಸಿದಾರೆ - ಹಜರತ್ ಪೈಗಂಬರರು. ಅವರ ಮಾತನ್ನು ತಲೆಯ ಮೇಲೆ ಹೊತ್ತವರು ನಾವು. ಎಂದೂ ನಮಕ್ ಹರಾಮ್ ಆಗುವುದಿಲ್ಲ. ಆದವರು ಮುಸಲ್ಮಾನರಲ್ಲ, ಹರಾಂ ಜನ"

– ಎಂದು ಹೇಳಿದರು ದುರ್ಗದ ಖಾಜಿ ಸಾಹೇಬರು.

ಅವರೆಲ್ಲರ ಮಾತು ಕೇಳಿ, ನಾಯಕರ ಹೃದಯ ತುಂಬಿಬಂದು-

"ನಾವಿನ್ನೇನೂ ಹೇಳಲು ಸಾಧ್ಯವಿಲ್ಲ. ನಿಮ್ಮ ಈ ವಿಶ್ವಾಸವನ್ನು ಉಳಿಸಿಕೊಳ್ಳುವ ಶಕ್ತಿಯನ್ನು ತಾಯಿ ಕೊಡಲಿ ಎಂದು ಪ್ರಾರ್ಥಿಸುತ್ತೇವೆ. ನಿಮ್ಮ ಪ್ರೀತಿಯೇ ನಮ್ಮ ತೋಳಬಲ"

- ಎಂದು ತಾಯಿಯ ಪ್ರೀತಿಗೆ ತಲೆಬಾಗಿದ ಮಗುವಿನಂತೆ ಹೇಳಿ, ಪ್ರಧಾನಿಗಳತ್ತ ತಿರುಗಿ-

"ಪ್ರಧಾನಿಗಳೇ, ಈ ನಮ್ಮ ಪರಮ ಆಪ್ತರಿಗೆ ತಕ್ಕ ಉಡುಗೊರೆಗಳನ್ನು ತರಿಸಿಕೊಡಿ"

- ಎಂದು ನುಡಿದರು.

ಆ ಮಾತನ್ನು ಕೇಳಿದ ಪಟ್ಟಣಶೆಟ್ಟಿ ಚನ್ನಮಲ್ಲಪ್ಪ –

"ಮಹಾಸ್ವಾಮಿ, ಉಡುಗೊರೆಗಳನ್ನು ಲಡಾಯಿನಲ್ಲಿ ಗೆದ್ದು ಬಂದ ಸಿಪಾಯಿಗಳಿಗೆ ಕೊಡಿ. ನಮಗೆಲ್ಲಾ ತಮ್ಮ ಪ್ರೀತಿಯೇ ಉಡುಗೊರೆ. ಇದು ನಾವು ಕೊಡುವ ಕಾಲ, ತೆಗೆದುಕೊಳ್ಳುವ ಕಾಲವಲ್ಲ - ಮನ್ನಿಸಬೇಕು"

- ಎಂದು ಕೈಮುಗಿದು ಹೇಳಿದರು.

"ಎಪ್ಪತ್ತೇಳು ಪಾಳೆಯಗಾರರ ಮಿಂಡ. ಎಪ್ಪತ್ತಾರು ಪಾಳೆಯಗಾರರು ನಾವು; ಎಪ್ಪತ್ತೇಳನೆಯವರು ನೀವು, ಖಾವಂದ್. ಇದು ಮದಕರಿನಾಯಕ - ಪೇಶ್ವೆ ಮಾಧವರಾಯರಿಂದ ಪಡೆದ ಬಿರುದಿನ ಅರ್ಥ."

ರಾಯದುರ್ಗದ ಪಾಳಯಗಾರ ಕೃಷ್ಣಪ್ಪನಾಯಕ, ಉರಿಯುವ ಬೆಂಕಿಗೆ ಗಾಳಿ ಬೀಸಿದಂತೆ ಹೇಳಿದ ಮಾತು, ತನ್ನ ಅಂಚೆಮುತ್ಸದ್ದಿಯ ಅಪಮಾನಕರ ಬಂಧನದಿಂದ ಕ್ರೋಧೋನ್ಮತ್ತನಾದ ಹೈದರಾಲಿಯ ಹೃದಯದಲ್ಲಿ ಎಂದೂ ಮರೆಯಲಾಗದ ಮುಳ್ಳಿರಿತವಾಗಿ ಕೊರೆಯುತ್ತಿತ್ತು.

ಹಗಲಿನ ಎಚ್ಚರದಲ್ಲಿ, ಓಲಗದಲ್ಲಿ, ಮಂತ್ರಾಲೋಚನಾಸಭೆಯಲ್ಲಿ, ಸೇನೆಯ ಕವಾಯಿತಿನ ವೀಕ್ಷಣೆಯಲ್ಲಿ, ಸಂಜೆಯ ಪಾನಗೋಷ್ಠಿಯಲ್ಲಿ, ಇರುಳು ಅಂದು ಮನಮೆಚ್ಚಿಸಿದ ವಿಲಾಸಿನಿಯ ತೋಳಪ್ಪುಗೆಯಲ್ಲಿ ಮಲಗಿರುವಾಗ, ನಿದ್ರೆ ಮಿದುಳಿನಾಳದಲ್ಲಿ ಕೆರಳಿಸಿದ ಕನಸುಗಳಲ್ಲಿ –

'ನೀನು ಎಪ್ಪತ್ತೇಳನೆಯವನು. ಎಪ್ಪತ್ತೇಳು ಪಾಳಯಗಾರರ ಮಿಂಡ ಮದಕರಿನಾಯಕ'

- ಎಂಬ ಮಾತು ಬಗೆಬಗೆಯ ವಿಕೃತಾಕಾರ ತಳೆದು, ಹೈದರಾಲಿಯ ಅಂದಿನವರೆಗಿನ ಬದುಕನ್ನು ಹಂಗಿಸುತ್ತಿತ್ತು, ಅಣಕಿಸುತ್ತಿತ್ತು, ಕೆರಳಿಸುತ್ತಿತ್ತು; ನೋಡಿ ವಿಕಟವಾಗಿ ನಗುತ್ತಿತ್ತು.

ಸಾಮಾನ್ಯಸೈನಿಕನಾಗಿ ಆರಂಭವಾಗಿ, ವಿಶಾಲ ಮೈಸೂರು ರಾಜ್ಯದ ಸರ್ವಾಧಿಕಾರಿಯಾಗಿ ಅತ್ತ ಆಂಗ್ಲರನ್ನು, ಇತ್ತ ಮರಾಠರನ್ನು, ನಡುವಣ ಪಾಳಯಗಾರ, ಸುಭಾದಾರ, ಸರ್ದಾರರನ್ನು ಬೆದರಿಸಿ ನಡುಗಿಸಿದ ಹೈದರಾಲಿಯ ಸರಿಸುಮಾರು ಎಪ್ಪತ್ತು ವರ್ಷಗಳ ಜೀವನವನ್ನೇ ನಿರರ್ಥಕಗೊಳಿಸುವ ಸಿಡಿಮದ್ದಿನಂತಿತ್ತು ಆ ಮಾತು.

ಹೈದರಾಲಿಯ ಕರೆಗೆ, ಕೈಸನ್ನೆಗೆ ಬರುವ ಕುನ್ನಿಯಂತೆ ಬಂದ ರಾಯದುರ್ಗದ ಪಾಳಯಗಾರನಾಡಿದ ಮಾತಿಗೆ, ಹರಪನಹಳ್ಳಿಯ ಪಾಳಯಗಾರ ತಲೆದೂಗಿ, ತಾಳಹಾಕಿ ಆಡಿದ ಮಾತಿನ ನಂಜೂ ಬೆರೆತು, ಹೃದಯದಲ್ಲಿ ಹುಗಿಯಲಾಗದ ಆ ಅಪಮಾನ- ಹೈದರನಿಂದ ಆ ಪಾಳಯಗಾರರು ತಮ್ಮ ಕೃತಜ್ಞತೆಯ ಬಗ್ಗೆ ನಿರೀಕ್ಷಿಸಿದ ಮೆಚ್ಚುಗೆಯ ಮಾರುತ್ತರ ದೊರಕದಂತೆ ಮಾಡಿ, ಅದಕ್ಕೆ ಪ್ರತಿಯಾಗಿ –

"ನಿಮ್ಮ ಬದುಕಿನಿಂದ ನೀವು, ನಿಮ್ಮ ಬಗ್ಗೆ ದುರ್ಗದ ನಾಯಕ ಆಡಿದ ಮಾತು ಸತ್ಯ ಎಂದು ತೋರಿಸಿದಿರಿ. ಇನ್ನು ನಮ್ಮ ಬಗ್ಗೆ ಆಡಿದ ಮಾತು – ಅದು ಪೊಗರಿನ ಪೊಳ್ಳು ಮಾತು ಎಂದು ಲಡಾಯಿಯಲ್ಲಿ ತೋರಿಸುತ್ತೇವೆ. ನಿಮ್ಮಲ್ಲಿ ಇನ್ನೆಷ್ಟು ಗಂಡಸುತನ ಉಳಿದಿದೆಯೋ ತೋರಿಸಿ.

ನಾವಿದ್ದೇವಲ್ಲಾ - ಈಗಲಾದರೂ ನಿಮ್ಮ ಕೈಗಳಿಗೆ ಕತ್ತಿ ಎತ್ತುವ ಶಕ್ತಿ ಬರುತ್ತದೆಯೇನೋ ನೋಡೋಣ" – ಎಂದು ಅವರನ್ನೇ ಹಂಗಿಸುವಂತೆ ಮಾಡಿತು.

ಆದರೆ ಅಷ್ಟು ಮಾತಿನಿಂದಲೇ ಹೈದರಾಲಿಯ ರೋಷ ತೀರಿರಲಿಲ್ಲ. ಹೊರಗೆ ಸಾವಿರ ಮಾತಾಡಿದರೂ, ಒಳಗೆ ಮಾತ್ರ ಆ ಅಪಮಾನದ ನುಡಿಗಿಚ್ಚು ಅವನ ಹೃದಯವನ್ನು ಹಗಲಿರುಳೂ ಸುಡುತ್ತಿತ್ತು; ಬೈಗಳಾಗಿ, ಬಾರುಕೋಲಿನ ಪೆಟ್ಟಾಗಿ, ಚಡಾವಿನ ಏಟಾಗಿ ಸುತ್ತಮುತ್ತಲಿದ್ದವರ ಹೃದಯದಲ್ಲೆಲ್ಲಾ ಆ ಮಾತು ಮಾರ್ದನಿಸುತ್ತಿತ್ತು; ಆಗೊಮ್ಮೆ-ಈಗೊಮ್ಮೆ ಕಾಡಿಸುವ ಬೆನ್ನರೋಗಕ್ಕಿಂತ ಬಲವಾದ ನೋವಾಗಿ, ಅವನು ನಿಂತ ನೆಲ, ಕುಳಿತ ಆಸನ, ಮಲಗಿದ ಶಯ್ಯೆಯನ್ನು ಮುಳ್ಳಿನ ಪಂಜರವಾಗಿ ಮಾಡಿತ್ತು.

'ಮುಗಿಸಿಬಿಡಬೇಕು, ಒಂದೇ ಒಂದು ಬಿರುಗಾಳಿಯ ದಾಳಿಗೆ, ದುರ್ಗವನ್ನು ಧೂಳೀಪಟ ಮಾಡಿ, ಮದಕರಿನಾಯಕನ ರಕ್ತದಲ್ಲಿ ಸ್ನಾನಮಾಡಿ ಈ ಕಲಂಕದ ಹೊಲಸನ್ನು ತೊಳೆದುಕೊಳ್ಳಬೇಕು' – ಎಂದು ಹಾರೈಸುತ್ತಿತ್ತು, ಅವನ ಅಪಮಾನತಪ್ತ ಹೃದಯ.

'ಪ್ರಚಂಡಪ್ರಳಯದಲ್ಲಿ ತೇಲಿಹೋಗುವ ಹೆಮ್ಮರನಂತಾಗಬೇಕು - ಚಿತ್ರದುರ್ಗ' – ಎಂಬ ಪ್ರಬಲೇಚ್ಛೆಯಿಂದಲೇ ತನ್ನೆಲ್ಲ ಸೇನಾಬಲವನ್ನು ಒಟ್ಟುಗೂಡಿಸಿದಂತೆ, ಸಮರ ಪರಿಣತರಾದ ದಳಪತಿಗಳನ್ನು ಕಲೆಹಾಕಿದ.

ಬೇಸಿಗೆಯಲ್ಲಿ ಸಣ್ಣಧೂಳಿನ ಸುಳಿಗಾಳಿಯಾಗಿ, ಬರಬರುತ್ತಾ ವೇಗ, ಗಾತ್ರವನ್ನು ಬೆಳೆಸಿಕೊಂಡು, ಸೂರ್ಯನ ಕಣ್ಣಿಗೂ ಕತ್ತಲು ಕವಿಸುವ ಸುಂಟರಗಾಳಿಯಂತೆ ಬೆಳೆದ ಹೈದರಾಲಿಯ ಸೇನಾಸಮೂಹ - ಚಿತ್ರದುರ್ಗದತ್ತ ಧಾವಿಸಲು ಸಿದ್ಧವಾಯಿತು.

ಕಣ್ದಿಟ್ಟಿ ಹೋಗುವವರೆಗೂ ಸುತ್ತಲೂ ಕಲೆತ ಲಕ್ಷಲಕ್ಷ ಅಶ್ವಾರೋಹಿಗಳ ಪಡೆ, ಫಿರಂಗಿಯ ಗಾಡಿಗಳು, ಆನೆ, ಒಂಟೆಗಳು, ಸೇನೆಗೆ ಅಗತ್ಯವಾದ ಸಾಮಾನುಗಳನ್ನು ಸಾಗಿಸುವ ಸಹಸ್ರಾರು ಬಂಡಿಗಳು, ಸೇನೆಯ ಮಧ್ಯೆ ಅಶ್ವಾರೋಹಿಗಳಾಗಿ, ಗಜಾರೋಹಿಗಳಾಗಿ, ಪಲ್ಲಕ್ಕಿಗಳಲ್ಲಿ ಕುಳಿತು, ಸೇನೆಗೆ ಬಗೆಬಗೆಯ ಸಿದ್ಧತೆಯ ಅಪ್ಪಣೆ ಸಾರುವ ಸರ್ದಾರರು, ಸೇನೆಯ ಸಹಾಯಕರು, ತನ್ನ ಸುತ್ತ ನಿಂತ ರಣತಂತ್ರಚತುರರಾದ ಆಪ್ತರು - ಬರಿಗಣ್ಣಿನಿಂದ ಕೊನೆಗಾಣದೆ, ದುರ್ಬಿನಿನಿಂದ ನೋಡಬೇಕಾದಷ್ಟು ವಿಶಾಲವಾಗಿ ಸೀರ್ಯದ ಬಯಲಿನಲ್ಲಿ ಬೀಡು ಬಿಟ್ಟ ಸೇನಾಸಮೂಹವನ್ನು ವೀಕ್ಷಿಸಿದ ಹೈದರಾಲಿಯ ಹೃದಯದಲ್ಲೊಂದು ಬಗೆಯ ಪಿಶಾಚ-ತೃಪ್ತಿ ಮೂಡಿ –

'ನಾಯಕ, ಇನ್ನೆರಡು ದಿನ ನಾಯಕ, ಆಮೇಲೆ ನಿನ್ನ ರಾಜ್ಯ ಅನಾಯಕ !'

- ಎಂದು ತನಗೆ ತಾನೇ ಹೇಳಿಕೊಂಡು, ಸೇನಾಪ್ರಯಾಣಕ್ಕೆ ಎಲ್ಲವೂ ಸಿದ್ಧವಾಗಿದೆ ಎಂಬುದನ್ನು ಸವಿವರವಾಗಿ ಅರಿತುಕೊಂಡು, ಕೂಚುನಗಾರಿಯನ್ನು ಹೊಡೆಸಲು ಅಪ್ಪಣೆ

ಮಾಡಿದರೂ, ಹಿಂದೆ ತನ್ನ ಮಿತ್ರನಾಗಿ ಯುದ್ಧದಲ್ಲಿ ತನ್ನ ಸೇನೆಯೊಂದಿಗೆ ಭಾಗವಹಿಸಿದ ಮದಕರಿನಾಯಕನ ರಣಶೌರ್ಯ-ತಂತ್ರಗಳನ್ನು ಕಣ್ಣಾರೆ ಕಂಡಿದ್ದ ಹೈದರಾಲಿ, ಯುದ್ಧಕ್ಕೆ ಹೊರಡುವ ಮೊದಲೇ ತನ್ನ ಸೇನಾಸರ್ದಾರರಿಗೆ ಎಚ್ಚರಿಸಿದ –

“ನಮ್ಮ ಸೇನೆ ದೊಡ್ಡದು, ಅವರದು ಚಿಕ್ಕದು ಎಂದು ಬೇಹುಷಾರಿಯಾಗಿರಬೇಡಿ. ಮೈಯೆಲ್ಲಾ ಕಣ್ಣಾಗಿ ಸೇನೆ ಮುಂದುವರಿಯಬೇಕು. ದುರ್ಗದವರಲ್ಲಿ ಎಷ್ಟು ಸಾಹಸವಿದೆಯೋ, ಅಷ್ಟೇ ತಂತ್ರಗಾರಿಕೆಯೂ ಇದೆ. ನಾವೀಗ ಹೋಗುತ್ತಿರುವುದು – ನಮಗೆ ಅಪರಿಚಿತವಾದ, ಅವರಿಗೆ ಚಿರಪರಿಚಿತವಾದ ಪ್ರದೇಶಕ್ಕೆ; ಜೊತೆಗೆ ಗುಡ್ಡಗಾಡು. ಉತ್ಸಾಹಕ್ಕಿಂತ ಎಚ್ಚರಿಕೆ ಹೆಚ್ಚಾಗಿರಲಿ.”

ಆ ಎಚ್ಚರಿಕೆಯ ಮಾತನ್ನು ಮನಸ್ಸಿನಲ್ಲಿಟ್ಟುಕೊಂಡೇ ಸೀರ್ಯದಿಂದ ಚಿತ್ರದುರ್ಗದತ್ತ ಹೊರಟಿತು - ಹೈದರಾಲಿಯ ಸೇನಾಪ್ರವಾಹ.

ಎಚ್ಚರಿಕೆ ಇದ್ದರೂ ಭಯೋತ್ಪಾದನೆಯಿಂದ ತನ್ನ ಕೆಲಸ ಸುಲಭವಾಗಬಹುದು ಎಂದು ಭಾವಿಸಿದ ಹೈದರಾಲಿ ತನ್ನ ದಂಡಿನವರಿಗೆ –

’ದಾರಿಯಲ್ಲಿ ಸಿಕ್ಕ ಯಾವ ಹಳ್ಳಿಯನ್ನೂ ಸುಮ್ಮನೆ ಹಾದು ಹೋಗಬೇಡಿ. ಹಳ್ಳಿಹಳ್ಳಿಯಲ್ಲೂ ಕೊಲೆ, ಸುಲಿಗೆ, ಅಗ್ನಿ ಕಾಂಡಗಳು ನಡೆದು - ಬರುತ್ತಿರುವುದು ಬರೀ ಸೇನೆಯಲ್ಲ, ಎದುರಿಗೆ ಬಂದದ್ದನ್ನು ಸುಟ್ಟು ಬೂದಿ ಮಾಡಿ ಗಾಳಿಗೆ ತೂರುವ ಕಾಳ್ಗಿಚ್ಚು ಎಂಬುದು ಹೆಜ್ಜೆಹೆಜ್ಜೆಗೂ ಮದಕರಿನಾಯಕನಿಗೆ ಮನವರಿಕೆಯಾಗಬೇಕು’ – ಎಂದು ಅಪ್ಪಣೆ ಮಾಡಿದ್ದ. . ಆ ಅಪ್ಪಣೆ - ಹೈದರಾಲಿಯ ಸೇನೆಯ ಪಾಲಿಗೆ, ಹಸಿದ ಚಿರತೆಗಳಿಗೆ ಹುಲ್ಲೆಗಳ ಹಿಂಡಿನ ಮೇಲೆ ಕೆರಳಿಸಿ ಬಿಟ್ಟಂತಾಗಿತ್ತು. ಆ ರಕ್ತತೃಷೆಯಿಂದ ನಾಲಗೆ ಚಪ್ಪರಿಸುತ್ತಲೇ ಮುಗಿಲು ನಡುಗುವಷ್ಟು ಬಗೆಬಗೆಯ ಶಬ್ದ ಮಾಡುತ್ತಾ ಮುನ್ನಡೆಯಿತು ಹೈದರಾಲಿಯ ಸೇನೆ.

ಹಾಗೆ ನಡೆದು ವೇದಾವತಿ ನದಿಯನ್ನು ದಾಟಿ, ದುರ್ಗದ ಸೀಮೆಯನ್ನು ಪ್ರವೇಶಿಸಿದಾಗ - ಕಗ್ಗಾಡನ್ನು ಮುರಿದೊಟ್ಟಲು ಭೋರ್ಗರೆದು ಬಂದ ಬಿರುಗಾಳಿ –

ಕಂಡದ್ದೇನು -?

ಬಿರುಗಾಳಿಯ ಆರ್ಭಟವನ್ನು ಉಡುಗಿಸಿ ಸದ್ದಡಗಿಸುವ ಬರಿ ಬಯಲು, ಮಸಣಮೌನ; ಮದಿಸಿದ ಕಾಡಾನೆಗಳ ಹಿಂಡಿನಂತೆ ಮುಗಿಲಂಗಳದಲ್ಲಿ ತೇಲಾಡುತ್ತಾ ಬರುವ ಮುಂಗಾರ ಮೋಡಮಾಲೆ ಕೆಲಹೊತ್ತು ಹಗಲನ್ನು ನಿಸ್ತೇಜಗೊಳಿಸಿದರೆ, ಮರುಗಳಿಗೆಯೇ ಮೈಯ ನೆತ್ತರನ್ನು ಬೆವರಾಗಿಸಿ ಹೀರುವ ಬಿಸಿಲ ಝಳ; ಕಣ್ಣೋಟ ಹೋಗುವವರೆಗೂ ಹರಡಿದ ಕಪ್ಪು ಮಣ್ಣಿನ ಧೂಳನ್ನು ಕಣ್ಣು ಮೂಗುಗಳಲ್ಲಿ ಗಿಡಿಯುವ ಭೋರ್ಗಾಳಿ; ದೂರದಲ್ಲೆಲ್ಲೋ ಬರಲಿರುವ ಅಸ್ಪಷ್ಟ

ಚಿತ್ರದಂತೆ, ದಿಗಂತದ ನೀಲಿಯಲ್ಲಿ ಕರಗಿ ಅಸ್ಪಷ್ಟವಾಗಿ ಕಾಣುವ ಬೆಟ್ಟಗಳ ಸಾಲು; ರಸ್ತೆಯ ಇಬ್ಬದಿಯಲ್ಲಿ ಬೆಳೆದ ಸಾಲುಮರಗಳ ಕರಿನೆರಳು; ಆಗೊಮ್ಮೆ ಈಗೊಮ್ಮೆ ಮರಗಳ ಹಸಿರಲ್ಲಿ ಹುದುಗಿದ್ದು, ಮುಗಿಲತ್ತ ಹಾರಿ ಮತ್ತೆ ಕಣ್ಮರೆಯಾಗುವ ಹಕ್ಕಿಗಳು; ಮುಂಗಾರು ಬೆಳೆ ಕೊಯ್ಲಾಗಿ, ಹಿಂಗಾರುಮಳೆಗಾಗಿ ಕಾದು ಬಿರಿದು ನಿಂತ ಬೋಳುನೆಲ –

ಬರುವವನನ್ನು 'ಬಾ' ಎನ್ನದೆ, ಹಿಂದಕ್ಕೆ 'ಹೋಗು' ಎನ್ನುವಂಥ ಆಷಾಢಮಾಸದ ಪ್ರಕೃತಿ.

ರಸ್ತೆಯ ಇಕ್ಕೆಲದಲ್ಲೂ ಹತ್ತಾರು ಹಳ್ಳಿಗಳು - ಹೆಸರಿಗೆ ಹಳ್ಳಿಗಳು - ಜನವಿಲ್ಲ, ದನವಿಲ್ಲ, ಜೀವದ ಕುರುಹೇ ಇಲ್ಲ; ಬಾಗಿಲು ತೆರೆದು ಬಿಕೋ ಎನ್ನುವ ಮನೆಗಳು; ಜನಶೂನ್ಯವಾದ ಬೀದಿಗಳು; ಪಶುವಿರದ ಬಯಲು; ದನ, ಕುರಿ, ಕೋಳಿಗಳಿರಲಿ ನಾಯಿಗಳು ಕೂಡ ಇಲ್ಲದ ನಿರ್ಜೀವತೆ; ಆ ನಿರ್ಜನತೆಯನ್ನು ಮತ್ತಷ್ಟು ಗಾಢವಾಗಿಸುವ ಮೌನ; ಹುಲ್ಲುಬಣವೆಗಳಿಲ್ಲದ ಹಿತ್ತಲುಗಳು, ಬರಿದಾದ ಕಣಜಗಳು; ಏರಿ ಕಡಿದು ಬರಿದಾಗಿ ಬಿರುಕುಬಿಟ್ಟ ನೆಲದ ಕೆರೆಗಳು-

ಸಮರೋತ್ಸಾಹದಿಂದ ಮುನ್ನುಗ್ಗುವ ನವಾಬರ ಸೇನೆಯನ್ನು ಈ ನಿರ್ಜನ ನೀರವತೆಯೇ ಒಂದು ರೀತಿ ಕಂಗೆಡಿಸಿದರೆ, ರಾಜಮಾರ್ಗದಲ್ಲಿ ಸುಗಮವಾಗಿ ಸಂಚರಿಸಲಾಗದಂತೆ ಅಡ್ಡಡ್ಡಲಾಗಿ ತೋಡಿದ ಕೊರಕಲುಗಳು, ದಾರಿಗಡ್ಡವಾಗಿ ಉರುಳಿಸಿದ ಬಂಡಿಗಳು, ಮರಗಳು-'ದುರ್ಗವಿರಲಿ, ದುರ್ಗದ ದಾರಿಯೂ ಹೆಜ್ಜೆ ಹೆಜ್ಜೆಗೂ ಶ್ರಮಿಸಿ, ಮುನ್ನಡಿಯಿಡಬೇಕಾದ ದುರ್ಗಮಪಥ' ಎಂಬ ಮುನ್ನೆಚ್ಚರಿಕೆಯನ್ನು ನೀಡಿತು - ಹೈದರಾಲಿಯ ಸೇನೆಗೆ.

ತನ್ನ ಪ್ರಚಂಡ ಸೇನೆಯ ಇದಿರು ದುರ್ಗದ ಸೀಮೆಯ ಜನ ಕಂಗಾಲಾಗಿ ಕಾಲಿಗಡ್ಡ ಬೀಳುವರೆಂದು ಭಾವಿಸಿದ್ದ ಹೈದರಾಲಿಯ ಹೃದಯದಲ್ಲಿ ಹೆಜ್ಜೆ ಹೆಜ್ಜೆಗೂ ಎದುರಾದ ಈ ನಿರ್ಜನ, ನೀರವ ಆತಂಕ, ಭೀತಿಯನ್ನು ಮೂಡಿಸಿತು. ದಾರಿಯ ಹಳ್ಳಿಗಳನ್ನು ಸುಲಿದು ತಿಂದು ಕೊಬ್ಬಲು ಹಾರೈಸಿದ್ದ ಸೇನೆ ಈ ಜನವಿಹೀನ ಪ್ರತಿಭಟನೆಯನ್ನು ಕಂಡು ಎದೆ ಗೆಟ್ಟಿತು. ತನ್ನ ಸಂಖ್ಯಾಬಲವೇ ತನ್ನ ಪ್ರಚಂಡಶಕ್ತಿ ಎಂದು ನಂಬಿದ್ದ ಹೈದರಾಲಿಯ ಹೃದಯದಲ್ಲಿ ಬೀಳುಬಿದ್ದ ಹಳ್ಳಿಗಳ ನಿರ್ಜನತೆ ಭೀತಿ ಕವಿಸಿದರೆ, ಜನವಿಹೀನ ಹಳ್ಳಿಗಳ ಕೆಸರು, ಕಸ, ಹೊಲಸುಗಳು ತುಂಬಿದ ಕುಡಿಯುವ ನೀರಿನ ಭಾವಿಗಳು, ಸೇನೆಯ ಜನಗಳಿಗಿರಲಿ, ಕುದುರೆ, ಆನೆ, ಒಂಟೆ, ಎತ್ತು, ಕೋಣಗಳಿಗೂ ನೀರಿಲ್ಲದೆ ಬಾಯಾರಿ ಬಳಲಿ, ನೆಲ ಕಚ್ಚಿ ಮಲಗುವಂತೆ ಮಾಡಿದವು. ಬಂಡಿಗಳಲ್ಲಿ ತುಂಬಿ ತಂದ ಹಳಸಲು ನೀರನ್ನು ಗಂಟಲು ತೇವ ಆರುವುದಕ್ಕೆಷ್ಟೋ ಅಷ್ಟೇ ಕುಡಿದು, ಕುಡಿದಷ್ಟೂ ಬೆಳೆದ ಬಾಯಾರಿಕೆಯಲ್ಲಿ ಬಳಲುತ್ತಾ, ಹಗಲಿನಲ್ಲಿ ಒಂದು ಬಗೆಯ ಚಿಂತೆ, ಇರುಳು ಮತ್ತೊಂದು ಬಗೆಯ

ಭೀತಿಯಲ್ಲಿ ಕಳೆದು ಎರಡು ದಿನಗಳಲ್ಲಿ ಮುಟ್ಟುತ್ತೇನೆ ಎಂದಿದ್ದ ದುರ್ಗದ ಗಡಿಯನ್ನು ಮುಟ್ಟಲು ಹೈದರಾಲಿಯ ಸೇನೆಗೆ ಹತ್ತು ದಿನ ಬೇಕಾಯಿತು.

ಚಿತ್ರದುರ್ಗ ಹತ್ತಿರವಾಯಿತು- ಹತ್ತಿರವಾದಷ್ಟೂ ದೂರವಾದಂತೆ ಕಂಡಿತು, ಮರಡಿ ಹಳ್ಳಿಯನ್ನುದಾಟಿ, ಇಂಗಳದಾಳು ಕಣಿವೆಯ ಬಳಿ ತಲುಪಿ, ಅದರ ಹಿಂದೆ ಬೆಟ್ಟವೇ ಅಭೇದ್ಯವಾದ ಕೋಟೆಯ ಸಾಲಿನಂತೆ ನಿಂತ ಕುಂಚಿಗನಾಳು ಬೆಟ್ಟದ, ಸುತ್ತ ಹರಡಿದ ಹಸಿರು ಹೊದ್ದ ಬೋಳುಮಲೆಮಾಲೆಯನ್ನು ಕಂಡಾಗ. ಚಿತ್ರದುರ್ಗ ಹತ್ತಿರವಾದ ಹಾಗೆ, ಇದಿರಾದ ಅಡೆ ತಡೆಗಳನ್ನು ಸರಿಪಡಿಸುತ್ತಾ, ನಡಗೆಯನ್ನು ಚುರುಕು ಮಾಡಿದ ಹೈದರಾಲಿಯ ಸೇನೆಗೆ -ತನ್ನಿದಿರು ಕಬಂಧಬಾಹುಗಳನ್ನು ಚಾಚಿದ ಕುಂಚಿಗನಾಳು ಬೆಟ್ಟ, ಅದರಿದಿರು ಅದರ ಮರಿಯಂತೆ ನಡುವಣ ಕೊಳ್ಳದಿಂದೀಚೆ ಹಬ್ಬಿದ ಇಂಗಳದಾಳು ಗುಡ್ಡಪಂಜ್ತಿ - ಎದೆ ಹಿಡಿದು ಹಿಂದಕ್ಕೆ ದಬ್ಬಿದಂತಾಯಿತು.

ಕಣಿವೆಯ ಕಿರಿದಾದ ತಿರುವುಗಳ ಏರುದಾರಿಯನ್ನು ಹತ್ತಲಾರದೆ ತನ್ನ ಗಾತ್ರವೇ ತನಗೆ ಹೊರಲಾಗದ ಹೊರೆಯಾದಂತೆ ಮುಕ್ಕಿರಿಯುತ್ತಿದ್ದ ಸೇನೆಯನ್ನು, ಆದಷ್ಟು ಬೇಗ ಅಪಾಯಕಾರಿಯಾದ ಕಣಿವೆಯನ್ನು ಸಂಜೆಗತ್ತಲು ಕವಿವ ಮೊದಲು ದಾಟಿಸಲು ಪ್ರಯತ್ನಿಸುತ್ತಿದ್ದ ಸೇನೆಯ ವಿಭಿನ್ನ ಭಾಗಗಳ ಅಧಿಕಾರಿಗಳು ತಮಗೆ ಸಾಧ್ಯವಿದ್ದ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿರುವಾಗಲೇ, ಅದುವರೆಗೂ ಬಿಕೋ ಎನ್ನುತ್ತಿದ್ದ ನಿರ್ಜನವಾದ ಬಂಡೆಗಳ ಮೇಲೆ ಬಂಡೆಗಳನ್ನು ಪೇರಿಸಿದಂತಿದ್ದ, ಇಂಗಳದಾಳಿನ ಗುಡ್ಡಗಳ ಬಂಡೆಬಂಡೆಗೂ, ಮಬ್ಬು ಸಂಜೆಯ ತಂಗಾಳಿಯಲ್ಲಿ ಜೀವಬಂದಂತಾಗಿ ಸಹಸ್ರಕಂಠಗಳ ರಣಕೇಕೆಯ ವಿಕರಾಳಧ್ವನಿ ನಾಲ್ದೆಸೆಯಿಂದಲೂ ಮಾರ್ದನಿಸಿ ಕೇಳಿಬಂದು, ಆ ಕೂಗೇ ಬೆಟ್ಟದ ಬಂಡೆಗಳನ್ನು ಘಟ್ಟಿಸಿ, ಸಹಸ್ರಸಹಸ್ರ ಶಬ್ದ ಶಲಾಕೆಗಳಾಗಿ ಸಿಡಿದಂತೆ, ರೊಯ್ಯೆಂದು ಬೀಸಿಬಂದ ಕವಣೆಗಲ್ಲುಗಳ ಮಳೆ ಬಿದ್ದು, ಪ್ರಯಾಣದಿಂದ ದಣಿದ ಹೈದರಾಲಿಯ ಸೇನೆ ಬಗೆಬಗೆಯ ನೋವು, ಭೀತಿಗಳ ಸಾವಿರ ಬಗೆಯ ಶಬ್ದಗಳ ಸಮುದ್ರವಾಗಿ, ಹಿಂದೆ ಸರಿಯಲಾಗದೆ, ಮುಂದೆ ಹೋಗಲಾಗದೆ, ಪೆಟ್ಟು ತಿಂದ ಹೆಬ್ಬಾವಿನಂತೆ ಹೊಯ್ದಾಡುತ್ತಿರುವಾಗಲೇ, ಮುಸುಗುತ್ತಿದ್ದ ಕತ್ತಲಿನಲ್ಲಿ ಕರಿಯ ಕಂಬಳಿಗಳನ್ನು ಹೊದ್ದ, ಕಗ್ಗೊಲೆಗೆ ಹೆಸರಾದ ಚಿತ್ರದುರ್ಗದ ಬೇಡಪಡೆ ಹೈದರಾಲಿಯ ಸೇನೆಯ ಮೇಲೆ ಬಿದ್ದು, ಆ ಬೇಡಪಡೆಯ ಗಂಡುಗೊಡಲಿ, ಕತ್ತಿ, ಕಠಾರಿ, ಭರ್ಜಿಗಳು ತಮಗಡ್ಡವಾದವರನ್ನು ಕತ್ತರಿಸಿ ಕೆಡಹಿದವು.

ಅತ್ಯಂತ ಅನಿರೀಕ್ಷಿತವಾದ ಈ ಪಿಶಾಚದಾಳಿಗೆ ಸಿಕ್ಕ ಹೈದರಾಲಿಯ ಸೇನೆ ಕಂಗೆಟ್ಟು, ಶತ್ರು ಪಡೆಯನ್ನು ರಣಸನ್ನದ್ಧವಾಗಿ ಎದುರಿಸಲು ಹೊತ್ತು ಸಿಕ್ಕದೆ, ಗಿಡಗಗಳು ಎರಗಿದ ಪಾರಿವಾಳಗಳ

ಗುಂಪಿನಂತೆ ಚೆಲ್ಲಾಪಿಲ್ಲಿಯಾಗಿ ಚದುರಿಹೋಯಿತು. ಶತ್ರುಗಳನ್ನು ಎದುರಿಸುವುದಿರಲಿ, ದಿಕ್ಕಾಪಾಲಾಗಿ ಓಡಿಹೋಗುತ್ತಿದ್ದವರನ್ನು ತಡೆದು ಶತ್ರುವನ್ನು ಎದುರಿಸುವಂತೆ ಮಾಡುವುದಕ್ಕೆ, ಬಗೆಬಗೆಯ ಯುದ್ಧಗಳಲ್ಲಿ ಪಳಗಿದ ಹೈದರಾಲಿಯ ಸರ್ದಾರರು ತಮ್ಮೆಲ್ಲ ಶಕ್ತಿಯನ್ನೂ ವಿನಿಯೋಗಿಸಬೇಕಾಯಿತು.

ಹಾಗೂ-ಹೀಗೂ ಹೆಣಗಾಡಿ ಹೈದರಾಲಿಯ ಸೇನೆ ಸಮರಸನ್ನದ್ಧವಾಗುವ ವೇಳೆಗೆ ಒಂದು ತಾಸು ವೇಳೆ ಹಿಡಿದು, ಆ ಸೇನೆಯ ಸಹಸ್ರಾರು ಕೋವಿಗಳು ಸಿಡಿಯಲಾರಂಭಿಸುತ್ತಿದ್ದ ಹಾಗೇ, ಅವರ ಮೇಲೆ ಬಿದ್ದ ದುರ್ಗದ ಬೇಡಪಡೆ ಕತ್ತಲಲ್ಲಿ ಕರಗಿಹೋಗಿ, ಕೋವಿಯ ಗುಂಡುಗಳು ಬಂಡೆಗಲ್ಲುಗಳಿಗೆ ಬಡಿದು, ಬರಿಗಾಳಿಯಲ್ಲಿ ಸಿಡಿದು, ತಮ್ಮ ಪ್ರತಿದಾಳಿಯ ವಿಫಲತೆಯನ್ನು ಸಾರಿ ಹೇಳಿದವು.

ಇಷ್ಟಾಗುವ ವೇಳೆಗೆ ಸಂಜೆಸರಿದು, ಸೇನೆಯ ಹೃದಯದಲ್ಲಿ ಕವಿದ ಭೀತಿಯಂತೆ ಕಂದರದಲ್ಲಿ ಕತ್ತಲು ಹಬ್ಬಿತು. ನವಾಬನ ಸೇನೆಯನ್ನು ಹಂಗಿಸುವಂತೆ ಆಕಾಶದಲ್ಲಿ ನಕ್ಷತ್ರಗಳು ಹೊಳೆದವು. ಎದುರಿನ ಬೆಟ್ಟ ಸಾಲು ಭೀತಿಯ ಹುತ್ತದಂತೆ ಕಾಣಿಸಿ, ಬಗೆಬಗೆಯ ನೋವು ನರಳಿಕೆಯ ಮೃಗ-ಮಾನವರ ಸದ್ದು ಇರುಳಗಾಳಿಯಲ್ಲಿ ತೊಗಲುಬಾವಲಿಯ ರೆಕ್ಕೆಯ ಸದ್ದಿನಂತೆ ಕೇಳಿಸಿ, ಆ ಸದ್ದೂ ಭೀತಿಗೆ ಆಹಾರವಾಗಿ, ಬೆದರಿ ಕಂಗೆಟ್ಟು ನಿಂತಿತು - ಹೈದರಾಲಿಯ ಸೇನೆ, ಕುಂಚಿಗನಾಳು ಕಂದರದಲ್ಲಿ.

ಬಗೆಬಗೆಯ ಭೀತಿಯೇ ಕತ್ತಲಾಗಿ, ಮಡುಗಟ್ಟಿ ನಿಂತಂತಿತ್ತು - ಕುಂಚಿಗನಾಳು ಕಂದರ. ಸುತ್ತ ನಾಲ್ಕು ದಿಕ್ಕುಗಳಲ್ಲಿಯೂ ಆ ಭೀತಿಯ ಬಾವುಟದಂತೆ ಕಪ್ಪಗೆ ಕಾಣಿಸುವ ವಿವಿಧ ಆಕಾರದ ಕಲ್ಲಲ್ಲಿ ಕಡೆದ ಭಯದ ವಿಗ್ರಹದಂಥ ಬೆಟ್ಟಗಳು, ಮದ್ದಿನ ಘಾಟುವಾಸನೆ ತುಂಬಿ ಉಸಿರಾಡಲು ಭಾರವಾದ ಗಾಳಿ, 'ಈ ಭಯದ ನಾಡಿನಲ್ಲಿ ಮುಂದೆ ನಡೆಯುವುದೇ - ಹಿಂದೆ ಸರಿಯುವುದೇ - ಇದ್ದಲ್ಲೇ ಇರುವುದೇ?'- ಯಾವುದನ್ನೂ ನಿರ್ಧರಿಸಲು ಅಸಾಧ್ಯವಾದ, ಆತಂಕಕಾರಿಯಾದ ವಾತಾವರಣ.

'ಈ ಹೊತ್ತಿನಲ್ಲಿ ಸೇನೆಗೆ ಏನು ಅಪ್ಪಣೆ ಮಾಡುವುದು ?'

-ಎಂದು ದಿಕ್ಕುತೋಚದ ಸೇನೆಯ ಮುಖ್ಯಸ್ಥರು ಹೈದರಾಲಿಯನ್ನೇ ಕೇಳಿದರು –

“ಖಾವಂದ್, ಈಗೇನು- ಹುಕುಂ ಮಾಡಬೇಕು.”

ಸರ್ದಾರರುಗಳಿಗೆ ಅನಿರೀಕ್ಷಿತ ದಾಳಿಯಿಂದ ಬುದ್ಧಿಭ್ರಂಶವಾಗಿದ್ದರೆ, ಅಸಹಾಯಕನಾಗಿ ನಿಂತು, ತನ್ನ ಸೇನೆಯ ಕಗ್ಗೊಲೆಯನ್ನು ಕಣ್ಣಾರೆ ಕಂಡ ಹೈದರಾಲಿ ರೋಷೋನ್ಮತ್ತನಾಗಿ ಆ ಸಿಟ್ಟಿಗೆ

ಕಂಡಕಂಡವರನ್ನೆಲ್ಲಾ ಬಲಿಕೊಡಬೇಕೆಂಬಷ್ಟು ಉದ್ವಿಗ್ನನಾಗಿ, ತನ್ನನ್ನು ಪ್ರಶ್ನಿಸಿದ ಸರ್ದಾರರನ್ನು ತನಗೆ ತಿಳಿದೆಲ್ಲ ಭಾಷೆಗಳ ಅವಾಚ್ಯಶಬ್ದಗಳನ್ನು ಬಳಸಿ ಬೈದು ತನ್ನ ಸಿಟ್ಟನ್ನು ತೀರಿಸಿಕೊಂಡ.

ಆದರೆ ನವಾಬನ ಬೈಗಳ ಮಾತು ಸರ್ದಾರರಿಗೆ ಮಾರ್ಗದರ್ಶನವಾಗಲಿಲ್ಲ. ಆ ಸರ್ದಾರರಲ್ಲ ನವಾಬನಿಗೆ ಆಪ್ತನಾದ ಲಂಗ್ಡೇಗುಲಾಂ ಅಲಿಖಾನ್ ಧೈರ್ಯ ತಂದುಕೊಂಡು –

"ಖಾವಂದ್, ನೀವೀಗ ನಮ್ಮನ್ನು ಬೈದರೆ, ಅವರಿವರನ್ನು ಶೂಲಕ್ಕೇರಿಸಿದರೆ ಸಮಸ್ಯೆ ಪರಿಹಾರವಾಗುವುದಿಲ್ಲ. ದುರ್ಗದ ದಂಡಿನವರ ಈ ಅನಿರೀಕ್ಷಿತ ದಾಳಿಯಿಂದ ಕಂಗೆಟ್ಟಿರುವ ಸೇನೆಗೆ ನಿಮ್ಮ ಕ್ರೋಧದಿಂದ ದಾರಿ ಏನೂ ಕಾಣುವುದಿಲ್ಲ. ಈಗ ಆದದ್ದಾಯಿತು. ದುರ್ಗದ ಜನ ಹೀಗೆ ಮೋಸಮಾಡುತ್ತಾರೆ ಎಂದು ನಾವೂ ಮುಂಚೆಯೇ ಎಚ್ಚರ ವಹಿಸಿ ಸಂಜೆಯ ಹೊತ್ತು ಬಯಲಿನಲ್ಲೇ ಬಿಡಾರ ಮಾಡಬೇಕಾಗಿತ್ತು. ಆ ಕೆಲಸ ಮಾಡಲಿಲ್ಲ. ಅದು ಸೇನೆಯ ತಪ್ಪಲ್ಲ, ನಮ್ಮ ತಪ್ಪು, ನಮಗೆ ಬೇಕಾದ ಶಿಕ್ಷೆ ವಿಧಿಸಿ. ಸೇನೆ ಈಗ ಏನು ಮಾಡಬೇಕು, ಹೇಳಿ" – ಎಂದು ಹೇಳಿದ.

ಗುಲಾಂ ಅಲಿಖಾನ್ ಹೇಳಿದ ಮಾತು ಕೇಳಿ ಹೈದರಾಲಿಯ ನೆತ್ತಿಯನ್ನೇರಿದ ಕ್ರೋಧದ ಅಮಲು ಇಳಿದು –

"ತಪ್ಪು ನಿಮ್ಮದಷ್ಟೇ ಅಲ್ಲ, ನಮ್ಮದೂ ಇದೆ. ದಾರಿಯಲ್ಲಿ ಯಾರೂ ಅಟಕಾವು ಮಾಡಲಿಲ್ಲ ಎಂದು 'ದುರ್ಗದ ಜನ ನಾಮರ್ದರು' ಎಂದು ತಿಳಿದು ನಾವು ದುಡುಕಿದ್ದು ತಪ್ಪಾಯಿತು. ಈ ಕತ್ತಲಲ್ಲಿ ಸೇನೆ ಮುಂದೆ ಹೋದರೆ ಮತ್ತೇನು ವಿಪತ್ತು ಕಾದಿದೆಯೋ ? ಆದ್ದರಿಂದ ಇದ್ದಲ್ಲಿಯೇ ಇರಲು ಹೇಳಿ. ಆದರಿಷ್ಟೇ: ದಂಡಿನಲ್ಲಿ ಎಲ್ಲೂ ದೀವಟಿಗೆ ಹೊತ್ತಿಸಬಾರದು. ನಾಲ್ಕು ಕಡೆಯಲ್ಲೂ ನಮ್ಮ ಸೈನಿಕರು ಎಚ್ಚರವಾಗಿದ್ದು ಶತ್ರು ಕಾಣಲಿ ಬಿಡಲಿ, ರಾತ್ರಿಯೆಲ್ಲಾ ಆಗಾಗ ಕೋವಿ ಹಾರಿಸುತ್ತಲೇ ಇರಬೇಕು. ಇವತ್ತು ರಾತ್ರಿ ನಾವು, ಸೇನೆ ಉಪವಾಸವಿದ್ದರೂ ಚಿಂತೆಯಿಲ್ಲ, ಅಡುಗೆಯ ಒಲೆ ಎಲ್ಲೂ ಉರಿಯಬಾರದು. ಹಾಗೆಯೇ ಸೇನೆಯವರಾರಿಗೂ ಸೇಂದಿ, ಶರಾಬು, ಭಂಗಿ ಕೊಡಕೂಡದು – ಎಂದು ಕಟ್ಟಪ್ಪಣೆ ಮಾಡಿ. ಅಷ್ಟಕ್ಕಿಂತ ಹೆಚ್ಚಾಗಿ ಈಗ ಮತ್ತೇನೂ ಮಾಡುವುದು ಸಾಧ್ಯವಿಲ್ಲ. ಹಗಲು ಹರಿಯುತ್ತಿದ್ದ ಹಾಗೇ ಸೇನೆ ಮುಂದೆ ಸಾಗಬೇಕು. ಆದ್ದರಿಂದ ಯಾರಿಗೂ ಮಲಗಲು ಡೇರಾ ಹಾಕಬೇಡಿ. ಜನಾನಾದವರು ಅವರ ಮೇನೆಗಳಲ್ಲೇ ಮಲಗಲಿ. ಸೂಳೆಯರ ಗಾಡಿಯ ಹತ್ತಿರ ಹೋದವರಿಗೆ ಕೈಕಾಲು ಕತ್ತರಿಸುತ್ತೇವೆ ಎಂದು ಹುಕುಂ ಜಾರಿಮಾಡಿ. ಈ ರಾತ್ರಿ ಯಾರೂ ಮಲಗತಕ್ಕದ್ದಲ್ಲ. ಬೆಳಕಾದ ಮೇಲೆ ಈಗ ನಷ್ಟ ಎಷ್ಟಾಗಿದೆಯೆಂದು ತಿಳಿದು ಉಳಿದದ್ದನ್ನು ಬಂದೋಬಸ್ತು ಮಾಡಿ, ಸೇನೆಗೆ ಮುಂದೆ ಹೊರಡಲು ಹುಕುಂ ಮಾಡಲಾಗುತ್ತದೆ. ಈ ಅಪ್ಪಣೆಯಲ್ಲಿ ಯಾರಿಗೂ ವಿನಾಯ್ತಿಯಿಲ್ಲ ಎಂದು ನಿರ್ದಾಕ್ಷಿಣ್ಯವಾಗಿ ಹೇಳಿ" – ಎಂದು ಕಟ್ಟಪ್ಪಣೆ ಮಾಡಿದ.

ಹೈದರಾಲಿಯ ಅಪ್ಪಣೆಯಂತೆ ಆತನ ಸೇನೆ, ಕುಂಚಿಗನಾಳು ಕಣಿವೆಯಲ್ಲಿ, ಕ್ಷಣಕ್ಷಣಕ್ಕೂ ಬಗೆಬಗೆಯ ಭೀತಿಯನ್ನು, ಆಘಾತವನ್ನು ನಿರೀಕ್ಷಿಸುತ್ತಾ, ಮುಂಗಾರಿನ ಸಂಜೆಯಲ್ಲಿ ಸಿಡಿಲು ಮಿಂಚುಗಳಿಗೆ ಹೆದರಿ ಮನೆಯೊಳಗೆ ಅವಿತ ಹಸುಳೆಯಂತೆ ಆ ರಾತ್ರಿ ಕಳೆಯಿತು.

ಆ ರಾತ್ರಿ ಎಷ್ಟು ಕುಡಿದರೂ ತಲೆಗೆ ಅಮಲೇರದೆ ಹೈದರಾಲಿಯ ಮಿದುಳು ಚಿತ್ರದುರ್ಗದವರ ಬಗ್ಗೆ ಬಗೆಬಗೆಯ ಸೇಡಿನ ಕನಸು ಕಾಣುತ್ತಾ, ಹಗಲಾಗುವುದನ್ನೇ ಹಾತೊರೆಯುತ್ತಾ, ತಲೆಗೆ ದೊರೆತಷ್ಟು ಆಸರೆಯ ಅಡಿಯಲ್ಲಿ ಮಲಗಿ ಕಾಯುತ್ತಿದ್ದ – ಇರುಳೆಲ್ಲಾ ಕೇಳಿಬರುತ್ತಿದ್ದ ಕೋವಿಯ ಶಬ್ದ ಕಾವಲುಸಿಪಾಯಿಗಳ ಎಚ್ಚರಿಕೆಯ ಕರ್ಕಶ ನೀಳ್ದನಿಯನ್ನು ಕೇಳುತ್ತಾ.

೧೯

ಹಗಲಾಯಿತು-

ಮೂಡಲ ಹೊಂಬೆಳಕು - ಕುಂಚಿಗನಾಳು ಕಣಿವೆಯಲ್ಲಿ ಹೆಪ್ಪುಗಟ್ಟಿದ ಕತ್ತಲ ಮೇಲೆ ತನ್ನ ರಕ್ತಛಾಯೆಯನ್ನು ತೆಳುವಾಗಿ ಲೇಪಿಸಿತು.

ಇರುಳೆಲ್ಲಾ ನಿದ್ರೆ ಮಾಡದೆ ಕಳೆದು, ನೇಸರು ಮೂಡುವುದನ್ನೇ ಕಾದು ಕೆಂಗಣ್ಣಾದ ಹೈದರಾಲಿಯ ಕಣ್ಣಿಗೆ ಕುಂಚಿಗನಾಳುಬೆಟ್ಟದ ಹಿಂದಿದ್ದ ಚಿತ್ರದುರ್ಗ ಕಾಣಲಿಲ್ಲ. ಅದಕ್ಕೆ ಪ್ರತಿಯಾಗಿ ಅವನ ಕಣ್ಣಿಗೆ ಕಂಡದ್ದು – ಹಿಂದಿನಿರುಳು ದುರ್ಗದ ಪಡೆ ಅವನ ಸೇನೆಯ ಮೇಲೆ ನಡೆಸಿದ ಕಗ್ಗೊಲೆಯ ಕರಾಳದೃಶ್ಯ.

ಆ ನೋಟ-

ಪಿಶಾಚಪಡೆ ಇರುಳುಂಡ ರಣದೌತಣದ ಉಳಿದೆಂಜಲಂತೆ ಕಂಡು, ನೋಡಿದ ಹೈದರಾಲಿಯ ಕಣ್ಣನ್ನು ತಿವಿಯಿತು.

ಕಡಿದುಬಿದ್ದ ಆನೆ, ಕುದುರೆ, ಎತ್ತು, ಕೋಣಗಳು ; ಛಿನ್ನ-ವಿಚ್ಛಿನ್ನವಾಗಿ ರಕ್ತದ ಕೆಸರಿನಲ್ಲಿ ನೋಡುವ ಕಣ್ಣಿಗೆ ಹಗಲಿನಲ್ಲೂ ಕತ್ತಲೆ ಕವಿಸುವ ಸೈನಿಕರ ರುಂಡಮುಂಡಗಳು; ಉರುಳಿಬಿದ್ದ ಬಂಡಿಗಳು; ಚೆಲ್ಲಾಡಿದ ಸೇನೆಯ ಆಹಾರ ಪದಾರ್ಥಗಳು; ದಿಕ್ಕು ತಪ್ಪಿ ನೋವಿನಿಂದ ಹುಚ್ಚಾಗಿ ಅಲೆವ ಗಾಯಗೊಂಡ ಸವಾರರಿಲ್ಲದ ಕುದುರೆಗಳು; ಹೆದರಿ, ಮೈಮುದುರಿ ಇದ್ದಲ್ಲಿಯೇ ಕೆಸರಿನಲ್ಲಿ ಹೂತ ಬಂಡಿಯಂತೆ ಕುಸಿದ ಸೇನೆ –

ಶಿಸ್ತಿಗೆ ಹೆಸರಾದ ಹೈದರಾಲಿಯ ಸೇನೆ ಅಸ್ತವ್ಯಸ್ತವಾಗಿ ಯಾರೊಬ್ಬರಿಗೂ ಮುಂದೇನು ಮಾಡಬೇಕೆಂದು ತೋಚದೆ ಸೇನೆಯ ಪ್ರಮುಖರ ಕಣ್ಣೆಲ್ಲಾ ಬೋಳುಮರವೊಂದರ ಕೆಳಗೆ ಬಿಡಾರ ಮಾಡಿದ ಹೈದರಾಲಿಯತ್ತಲೇ ನೋಡುತ್ತಿತ್ತು.

ಆ ಹಗಲು-

ಎಂಥ ಕರಾಳ, ಬೀಭತ್ಸ ಹಗಲು !

ಹಗಲು ಹರಿಯುತ್ತಿದ್ದ ಹಾಗೇ ಬಾನಂಗಳದಲ್ಲಿ ತಮ್ಮ ಚಿಲಿಪಿಲಿ ಸದ್ದಿನೊಂದಿಗೆ ಹೊಸ ಹಗಲಿನ ಉತ್ಸಾಹವನ್ನು ಚಿಮ್ಮಿಸಬೇಕಾಗಿದ್ದ ಗುಬ್ಬಚ್ಚಿ, ಗಿಳಿ-ಗೊರವಂಕಗಳ ಚಿಲಿಪಿಲಿ ಉಲುಹಿನ ಬದಲು ರಾತ್ರಿಯ ಯುದ್ಧದ ಹಳಸಲು ಮಾಂಸದ ಎಂಜಲನ್ನು ತಿನ್ನಲು ಮರಗಳ ಮೇಲೆ, ಬಂಡೆಗಳ ಮೇಲೆ ಹಿಂಡುಹಿಂಡಾಗಿ ಕುಳಿತು ಕರ್ಕಶಧ್ವನಿಯಲ್ಲಿ ತಮ್ಮ ಬಳಗವನ್ನು ಕರೆಯುತ್ತಿದ್ದ ಕಾಗೆಗಳು, ಮುಗಿಲೆತ್ತರದಲ್ಲಿ ಸಿಳ್ಳು ಹಾಕುತ್ತಾ, ಹಾರಾಡುತ್ತಿದ್ದ ಹದ್ದುಗಳನ್ನು ಕಂಡು ಹೈದರಾಲಿಯ ಹೃದಯದಲ್ಲಿ ಹಿಂದಿನ ರಾತ್ರಿ ನಡೆದ ಸಮರದ ನೆನಪುಗಳ ಕಹಿ ಕಡೆದುಬಂದು, ಆ ಕಹಿಕ್ರೋಧದಲ್ಲಿ ತಾನೇನು ಮಾಡುತ್ತಿದ್ದೇನೆ ಎಂಬ ಅರಿವಿಲ್ಲದೆಯೇ ತನ್ನ ಬಳಿಯಿದ್ದ ಕೋವಿಯನ್ನು ಕೈಗೆತ್ತಿಕೊಂಡು, ದುರ್ಗದ ಸೈನಿಕರ ಮೇಲೆ ಸೇಡು ತೀರಿಸುವಂತೆ –

“ಸುವ್ವರ್, ಸೈತಾನ್‌ಕೆ ಬಚ್ಚೆ”

- ಎಂದು ವಟಗುಟ್ಟುತ್ತಾ ಹತ್ತಿರದ ಬಂಡೆಯ ಮೇಲಿದ್ದ ಕಾಗೆಗಳತ್ತ ಕೋವಿಯನ್ನು ತಿರುಗಿಸಿ, ಗುಂಡು ಹಾರಿಸಿದ.

ಆ ಏಟಿಗೆ ಸಿಲುಕದೆ ’ಕ್ರಾ....ಕ್ರಾ....’ ಎಂದು ಕೂಗುತ್ತಾ ಹಾರಿದ ಕಾಗೆಗಳನ್ನು ಕಂಡು ಹೈದರಾಲಿಗೆ ಕಪ್ಪು ಕಂಬಳಿ ಹೊದ್ದ ದುರ್ಗದ ಬೇಡಪಡೆಯೇ ತನ್ನನ್ನು ಅಣಕಿಸಿದಂತಾಗಿ, ಸಿಟ್ಟು ಹುರಿ ಹೊಸೆದ ಛಲವಾಗಿ, ಬರಿದಾದ ಕೋವಿಯನ್ನು ದೂರ ಬಿಸುಟು, ಹಲ್ಲು ಕಡಿಯುತ್ತಾ ’ತುಮ್ಹೆ ಕಭೀ ಜಿಂದಾ ನಹಿ ಛೋಡುಂಗಾ’ ಎಂದು ಹೇಳಿಕೊಳ್ಳುತ್ತಲೇ, ಸೊಂಟದಲ್ಲಿದ್ದ ಕಠಾರಿಯನ್ನು ಹಿಡಿದೆಳೆದು, ಕಿಗ್ಗಣ್ಣು ಮಾಡಿ, ಗುರಿ ನೋಡಿ, ಅಷ್ಟು ದೂರದಲ್ಲಿದ್ದ ಕಾಗೆಯೊಂದರತ್ತ ಎಸೆದ.

ಶರವೇಗದಿಂದ, ಕಾಗೆಯ ಹಾರುವ ಜಾಡನ್ನರಿತು ಎಸೆದ ಕಠಾರಿ – ಮಿಂಚಿನ ವೇಗದಿಂದ ತನ್ನತ್ತ ಬಂದ ಕಠಾರಿಯಿಂದ ತಪ್ಪಿಸಿಕೊಳ್ಳಲೆತ್ನಿಸಿದ ಕಾಗೆಯ ರೆಕ್ಕೆಯನ್ನು ಕತ್ತರಿಸಿ ಕೆಡಹಿತು. ನೆಲಕ್ಕುರುಳಿದ ಕಾಗೆಯನ್ನು ಕಂಡು, ಹೈದರಾಲಿಯ ಹೃದಯದಲ್ಲಿ ಪಿಶಾಚತೃಪ್ತಿ ಮೂಡಿ, ’ನನ್ನ ಮೇಲೆ ಷರಾರತ್ ಮಾಡುವವರೆಲ್ಲರಿಗೂ ಇದೇ ಗತಿ’ ಎಂದು ತನಗೆ ತಾನೇ ಹೇಳಿಕೊಂಡಮೇಲೆ ಅಷ್ಟು ಹೊತ್ತಿನವರೆಗೂ ಬಿಗಿದಿದ್ದ ಅವನ ನರಗಳು ಸಡಿಲವಾಗಿ ಸುತ್ತಲ

ಪರಿಸರದ ಪ್ರಜ್ಞೆ ಬಂದು, ಉಸಿರು ಬಿಡದೆ, ತಾನು ಮಾಡುತ್ತಿದ್ದುದನ್ನು ನೋಡುತ್ತಿದ್ದ ಹಬಸಿ ಅಂಗರಕ್ಷಕನತ್ತ ತಿರುಗಿ –

"ಸೇನೆಯವರೆಲ್ಲಾ ಇನ್ನೂ ಸೂಳೆಯರ ಕನಸು ಕಾಣುತ್ತಾ ಮಲಗಿದ್ದಾರೇನು ? ಇನ್ನೂ ಏಕೆ ಹೊರಟಿಲ್ಲ? ಕೊರಡಾದಿಂದ ಜಡಿದು ಎಬ್ಬಿಸು - ಅವರನ್ನು, ಸರ್ದಾರರನ್ನಿತ್ತ ಕರೆ" ಎಂದು ಅಬ್ಬರಿಸಿ ಹೇಳಿದ.

ರೋಷದ ಪಂಜಿನಂತೆ ಉರಿಯುತ್ತಲೇ ಎದ್ದ ಹೈದರಾಲಿಯ ಬಳಿ ಬರಲೂ ಹೆದರಿ ನಿಂತಿದ್ದ ಸರದಾರರು, ಆ ಅಪ್ಪಣೆಯನ್ನು ಕೇಳಿ ನವಾಬನ ಬಳಿ ಬಂದು ಸಲಾಂ ಮಾಡಿದರು. ಬಳಿ ಬಂದರೂ ಯಾರೊಬ್ಬರಿಗೂ ನವಾಬನನ್ನು ಮಾತನಾಡಿಸುವ ಧೈರ್ಯವಾಗದೆ ಆತನ ಮುಖವನ್ನೇ ನೋಡುತ್ತಾ ನಿಂತರು. ಹಿಂದಿನ ರಾತ್ರಿಯ ಅನಿರೀಕ್ಷಿತ ದಾಳಿಯ ಬಳಿಕ, ಹೈದರಾಲಿ ಏನು ಅಪ್ಪಣೆ ಮಾಡುವನೆಂದು ಯಾರಿಗೂ ತಿಳಿದಿರಲಿಲ್ಲ, ಹೈದರಾಲಿಯೂ ಆ ಬಗ್ಗೆ ಯೋಚಿಸಿರಲಿಲ್ಲ. ಸರ್ದಾರರ ಮುಖವನ್ನು ನೋಡಿದ ಹೈದರಾಲಿ, ಆಷಾಢಮಾಸದ ಚಳಿ ಗಾಳಿಯ ಹಗಲಿನಲ್ಲಿ, ಬಾಯ್ದೆರೆದ ಹೆಬ್ಬಾವಿನಂತಿದ್ದ ಕಣಿವೆಯ ದಾರಿಯನ್ನು ನೋಡುತ್ತಾ - ದುರ್ಗದ ಪರಿಸರದ ಬಗ್ಗೆ ಬೇಹುಗಾರರು ತಂದೊಪ್ಪಿಸಿದ ವಾರ್ತೆಗಳನ್ನೆಲ್ಲಾ ಜ್ಞಾಪಿಸಿಕೊಂಡು, ಆ ಯೋಚನೆ ಮಾಡಿ ಕೊನೆಗೊಂದು ನಿರ್ಧಾರಕ್ಕೆ ಬಂದು –

"ಸೇನೆಯೆಲ್ಲಾ ಈ ಕಣಿವೆಯ ದಾರಿಯಲ್ಲೇ ಹೋಗುವುದು ಬೇಡ. ತೋಫಿನ ಗಾಡಿಗಳು, ಯುದ್ಧ ಸಾಮಗ್ರಿಗಳನ್ನು ಹೊತ್ತ ಗಾಡಿಗಳು, ಹೇರಿನ ಎತ್ತುಗಳು, ಆನೆಗಳು, ಜನಾನಾದ ಮೇನೆಗಳು ಕಣಿವೆಯ ದಾರಿಯಲ್ಲಿ ಸಾಕಷ್ಟು ಸೇನೆಯೊಡನೆ ಹೋಗಲಿ, ಶತ್ರು ಕಾಣಲಿ ಬಿಡಲಿ, ಕೋವಿ ಹಾರಿಸುವುದನ್ನು ಮಾತ್ರ ನಿಲ್ಲಿಸಬಾರದು. ಹೆಜ್ಜೆಹೆಜ್ಜೆಗೂ ಶತ್ರುವನ್ನು ನಿರೀಕ್ಷಿಸುತ್ತಾ, ದಾಳಿ ಮಾಡಲು ಸೇನೆ ಸಿದ್ಧವಾಗಿಯೇ ಇರಬೇಕು. ಬಲವಾದ ಅಡ್ಡಿ ಬಂದಲ್ಲಿ ಹಾರಿಸಲು ತೋಪುಗಳನ್ನು ಸಿದ್ಧವಾಗಿಟ್ಟುಕೊಂಡಿರಬೇಕೆಂದು ಹೇಳಿ, ಅನಿರೀಕ್ಷಿತ ದಾಳಿಗೆ ಅವಕಾಶಕೊಡಬೇಡಿ. ಹೆಚ್ಚಿನ ಸಂಖ್ಯೆಯ ಸೈನ್ಯ ಉತ್ತರಾಭಿಮುಖವಾಗಿ ನಡೆದು, ಗುಡ್ಡದ ಸಾಲನ್ನು ಬಳಸಿ, ಗೋಣೂರಿನ ಕಡೆಯಿಂದ ದುರ್ಗದ ಸರಹದ್ದನ್ನು ಪ್ರವೇಶಿಸಲಿ.

"ರಾಯದುರ್ಗದವರ ಸೇನೆಯೊಂದಿಗೆ ನಮ್ಮ ಫೌಜೂ, ಬುದ್ಧಿವಂತನಮರಡಿಯ ಬಳಿ ಈ ದುರ್ಗದ ಪೂರ್ವಕ್ಕೆ ಡೇರೆ ಹಾಕಬೇಕು. ಹರಪನಹಳ್ಳಿಯವರ ಸೇನೆಯೊಂದಿಗೆ ಸಾಕಷ್ಟು ಸೇನೆ ಪಶ್ಚಿಮದಲ್ಲಿ ಚೋಳಗುಡ್ಡದ ಬಳಿ ಡೇರೆ ಹಾಕಬೇಕು. ಹೊಳಲಕೆರೆ ರಸ್ತೆ, ಮಾಯಕೊಂಡದ ರಸ್ತೆ ಎರಡೂ ಕಡೆಯಿಂದ ದುರ್ಗದವರಿಗೆ ಸಹಾಯ ಬರದಂತೆ ದಂಡು ನಿಲ್ಲಿಸಬೇಕು.

"ನಾವು, ಖುದ್ದಾಗಿ ಸಾಹೇಬ್‌ಜಾದೆಯವರೊಂದಿಗೆ ಗೋಣೂರಿನ ಕಡೆ ದಂಡು ನಿಲ್ಲಿಸಿ, ಉತ್ತರದ ದಿಕ್ಕಿನಲ್ಲಿ ಇಳಿಯುತ್ತೇವೆ. ಮೂರು ದಿಕ್ಕಿನಲ್ಲ, ದುರ್ಗದತ್ತ ನರಪಿಳ್ಳೆಯೂ ಸುಳಿಯದಂತೆ ಸೇನೆಯ ಬಂದೋಬಸ್ತು ಮಾಡಿ. ನಾಯಕನ ಕೋಟೆಗೆ ನಮ್ಮ ಸೇನೆ ಪ್ರತಿ ಕೋಟೆಯಾಗಿ, ಅವರು ಉಸಿರಾಡಲಾಗದಂತೆ ಗಂಟಲು ಹಿಸುಕಿದ ಹಾಗೆ ನಮ್ಮ ದಂಡು ನಿಲ್ಲಬೇಕು. ನಮ್ಮ ಫೌಜಿನ ಅಬ್ಬರಕ್ಕೆ ದುರ್ಗದ ಕಿಲ್ಲೆ ಪುಡಿಪುಡಿಯಾಗಿ ಉದುರಬೇಕು.

"ಹೆಚ್ಚು ಮಾತು ಬೇಡ. ನೂರು ಲಡಾಯಿ ನೋಡಿರೋ ನುರಿತ ಸರ್ದಾರರು ನೀವು ಇಂಥ ಎಷ್ಟೋ ಕಿಲ್ಲೆ ನಮ್ಮ ಕಾಲಿಗೆ ಬಿದ್ದಿವೆ. ಗುತ್ತಿ, ನಂದಿ, ಮಧುಗಿರಿ ಕೋಟೆಗಳ ಮುಂದೆ ಇದ್ಯಾವ ಕೋಟೆ ? ನಾವು ಹೇಳುವುದಿಷ್ಟೆ - ಅಲಬತ್ ದುರ್ಗದ ಮೇಲೆ ನಮ್ಮ ಝುಂಡಾ ಉಡಾಯಿಸಬೇಕು, ಜಿಂದಾ ಯಾ ಮುರ್ದಾ ಮದಕರಿನಾಯಕ್ ಮೇರೆ ಪಾವ್ ಪರ್ ಪಡ್‌ನಾ. ಅದು ಬಿಟ್ಟು ದುಸರಾ ಮಾತಿಲ್ಲ. ಅಷ್ಟೇ - ಕೂಚ್ ನಗಾರಿ ಬಜಾವೋ, ದೌಡ್‌ನೇಕೋ ಫೌಜ್‌ಕೋ ಹುಕುಂ ಕರೋ, ಮೇರಿ ಸೂರತ್ ಕ್ಯಾ ದೇಖ್ತೆ ಹೋ – ದೇಖೋ ದುರ್ಗ್‌ಕ ತರಫ್. ಪೀಛೇ ನಹಿ ದೇಖ್‌ನಾ, ಆಗೆ ಬಡೋ, ಯಾದ್ ರಖೋ – ಏ ಹಮಾರಾ ಇಜ್ಜತ್‌ಕಿ ಲಡಾಯಿ ಹೈ. ಇನ್ನು ನಾವು ಶ್ರೀರಂಗಪಟ್ಟಣದ ಕಡೆ ನೋಡುವುದು – ದುರ್ಗದ ಬೆಟ್ಟದ ಮೇಲೆ ನಿಂತೇ"

- ಎಂದು ಹೇಳಿ, ಮೈಕೊಡವಿಕೊಂಡು, ಪೊರೆ ಕಳಚಿಕೊಂಡ ಹಾವಿನಂತೆ ಎದ್ದು ನಿಂತ ಹೈದರಾಲಿ.

ಹೈದರಾಲಿಯ ಮಾತು ಮುಗಿಯುವುದಕ್ಕೆ ಕಾದಿದ್ದಂತೆ, ಅದುವರೆಗೂ ನಿಶ್ಶಬ್ದವಾಗಿದ್ದ ಬಗೆಬಗೆಯ ರಣವಾದ್ಯಗಳು ಮೊಳಗಿ ಕುಂಚಿಗನಾಳುಗುಡ್ಡದ ಕಂದರ ಬಗೆಬಗೆಯ ಶಬ್ದಗಳ ಸಮುದ್ರವಾಯಿತು. ಸೇನೆ ಚಲಿಸಿದಂತೆ, ನಿಧಾನವಾಗಿ ಸೇನೆಯ ಕಾಲತುಳಿತದ ಧೂಳು ಮುಗಿಲನ್ನು ಕವಿದು, ಹಗಲು ಸಂಜೆಯಂತೆ ಮಂಕಾಯಿತು.

೨೦

"ಮದಕರಿನಾಯಕರಿಗೆ ಜಯವಾಗಲಿ –

"ಕಣಿವೆಮಾರಮ್ಮನಿಗೆ ಜಯವಾಗಲಿ-

"ಉಚ್ಚಂಗಮ್ಮನಿಗೆ ಜಯವಾಗಲಿ."

ಹಗಲು ಹರಿವ ಮೊದಲೇ ಮುಗಿಲು ಹರಿದಂತೆ ಕೇಳಿಬಂದ ನೂರಾರು ಕಂಠಗಳ ಜಯಘೋಷವನ್ನು ಕೇಳಿ ಪದ್ಮವ್ವನಾಗತಿಯ ತೋಳತೆಕ್ಕೆಯಲ್ಲಿ ಮಲಗಿದ್ದ ಮದಕರಿನಾಯಕ,

ತನ್ನನ್ನು ತಬ್ಬಿದ ಮೃದುವಾದ ತೋಳನ್ನು ಕಿತ್ತೊಗೆದು, ಮಂಚದಿಂದ ಸಿಡಿದೆದ್ದು, ಅಂತಃಪುರದ ಕಿಟಕಿಯ ಬಳಿ ನಿಂತು, ಹಸಿದ ಕರು ತಾಯ ಮೊಲೆಹಾಲನ್ನು ಜಗ್ಗಿ ಜಗ್ಗಿ ಕುಡಿಯುವಂತೆ, ಹೊರಗಿನಿಂದ ಕೇಳಿಬರುತ್ತಿದ್ದ ಜಯಘೋಷಧ್ವನಿಯನ್ನು ಕೇಳಿ, ಮೈತುಂಬಿಬಂದು, ನಿಂತಲ್ಲಿ ನಿಲ್ಲಲಾಗದೆ, ಉಟ್ಟ ಉಡುಪಿನ ಮೇಲೊಂದು ಶಾಲು ಹೊದ್ದು ಅಂತಃಪುರದಿಂದ ಹೊರಗೆ ಧಾವಿಸಿ, ಇದಿರಾದ ಪರಿಚಾರಕನಿಗೆ 'ಅರಮನೆಯ ಬೊಕ್ಕಸದಲ್ಲಿರುವ ವರಹಥೈಲಿಗಳನ್ನು ತೆಗೆಸಿಕೊಂಡು ಕೂಡಲೇ ಬರುವಂತೆ ಬಕ್ಷಿಗಳಿಗೆ ಹೇಳು' ಎಂದು ಹೇಳಿ, ಅವನ ಪ್ರತ್ಯುತ್ತರಕ್ಕಾಗಲಿ, ಬೇರಾವ ಕಾರ್ಯಕ್ಕಾಗಲಿ ನಿಲ್ಲದೆ, ದಾಪುಗಾಲು ಹಾಕುತ್ತಾ, ಜಯಘೋಷ ಕೇಳಿಬರುತ್ತಿದ್ದ ಸಂಪಿಗೆ ಸಿದ್ಧೇಶ್ವರನ ದೇವಾಲಯದ ಬಳಿಯ ಅರಮನೆಯ ಬಯಲಿನತ್ತ ನಡೆದ.

ಆತುರಾತುರವಾಗಿ ಅರಮನೆಯಿಂದ ಹೊರಬಂದ ನಾಯಕರನ್ನು ಕಂಡ ಕಾವಲುಪಡೆಯವರು ಯಾರ ಅಪ್ಪಣೆಗೂ ಕಾಯದೆ ನಾಯಕರನ್ನು ಹಿಂಬಾಲಿಸಿದರು.

ಯಾವ ರಾಜಲಾಂಛನವೂ ಇಲ್ಲದೆ, ಉಟ್ಟ ಉಡುಪಿನಲ್ಲೇ ಮಗುವಿನ ಅಳು ಕೇಳಿದ ತಾಯಂತೆ ತಮ್ಮತ್ತ ಧಾವಿಸಿಬಂದ ನಾಯಕರನ್ನು ಕಂಡು, ಹಿಂದಿನ ರಾತ್ರಿಯ ಜಯದಿಂದ ಮತ್ತೇರಿದ ಸೈನಿಕರ ಉತ್ಸಾಹ-ಆನಂದ ಇಮ್ಮಡಿ, ಮುಮ್ಮಡಿಯಾಗಿ, ಆ ಸೇನೆ ಸುತ್ತಮುತ್ತಲ ಬಂಡೆಗಳೂ, ಗುಡಿಗೋಪುರಗಳೂ ಮೇಲೆದ್ದು ಕುಣಿವಂತೆ 'ಮಾ ಸ್ವಾಮಿಗಳಿಗೆ ಜಯವಾಗಲಿ - ಮದಕರಿನಾಯಕರಿಗೆ ಜಯವಾಗಲಿ' ಎಂದು ಕೂಗಿ ಕೇಕೆಹಾಕಿತು. ಸಂಪಿಗೆ ಸಿದ್ಧೇಶ್ವರನ ದೇವಾಲಯದ ಬಯಲನ್ನೆಲ್ಲಾ ಕಿಕ್ಕಿರಿದ ಸೇನೆ, ಬೀಸುಗಾಳಿಗೆ ಬಾಗುವ ತೆನೆಭಾರವಾದ ಭತ್ತದ ಗದ್ದೆಯಂತೆ ನಾಯಕರಿಗೆ ಅಡ್ಡಬಿದ್ದು ನಮಸ್ಕರಿಸಿ ಮೇಲೆದ್ದು ನಿಂತಿತು.

ಆ ಬಯಲಿನಲ್ಲಿ ನಾಯಕರ ಮುಖ ಕಾಣುತ್ತಿದ್ದ ಹಾಗೇ ಇಂಗಳದಾಳು ಕಣಿವೆ ಉಕ್ಕಡದ ದಫೇದಾರ, 'ಕಣಿವೆಮಾರಮ್ಮನ ಪಡೆ'ಯ ದಳಪತಿಯಾದ ಪರಶುರಾಮನಾಯಕ ನಾಯಕರತ್ತ ಓಡಿಬಂದು, ಅಡ್ಡಬಿದ್ದು –

"ಮಾ ಸ್ವಾಮಿ, ನಮ್ಮ ಪಾದಕಾಣಿಕೆಯನ್ನು ಒಪ್ಪಿಸಿಕೊಳ್ಳಬೇಕು" - ಎಂದು ಹೇಳಿದ.

ಎದೆತುಂಬಿ, ಕಣ್ಣುತುಂಬಿ ನೋಡಿದ ಮದಕರಿನಾಯಕ - ತನ್ನ ಸೈನಿಕರನ್ನು; ಪೌರುಷದ ಪದಕಗಳಂತೆ ಅವರ ಮೈಯನ್ನು ಅಲಂಕರಿಸಿ ನೆತ್ತರು ಕಾರುತ್ತಿದ್ದ ಗಾಯಗಳನ್ನು; ರಕ್ತದಲ್ಲಿ ತೊಯ್ದ ಅವರ ವಸ್ತ್ರಗಳನ್ನು; ನೆತ್ತರು ಕರೆಗಟ್ಟಿ ಮಂಕಾದ ಅವರ ಕೈಯ ಅಸ್ತ್ರಗಳನ್ನು; ಬಯಲಿನಲ್ಲಿ ರಾಶಿರಾಶಿಯಾಗಿ ಒಟ್ಟಿದ, ಹೈದರಾಲಿಯ ಸೇನೆಯಿಂದ ಲೂಟಿಮಾಡಿ ತಂದ ಬಗೆಬಗೆಯ ಶಸ್ತ್ರಾಸ್ತ್ರಗಳನ್ನು; ಅದೆಲ್ಲದರ ನಡುವೆ ಗೋಪುರಾಕಾರವಾಗಿ ಪೇರಿಸಿದ ಶತ್ರುಸೈನಿಕರ ರುಂಡಗಳ ನಾಲ್ಕಾರು ರಾಶಿಗಳನ್ನು,

ಇರುಳೆಲ್ಲಾ ಜೀವದ ಹಂಗುತೊರೆದು ಯುದ್ಧಮಾಡಿ, ಹತ್ತಾರು ಕಡೆ ಗಾಯವಾಗಿ ಮೈ ತೋಯುವಷ್ಟು ರಕ್ತ ಕಳೆದುಕೊಂಡಿದ್ದರೂ ಇನಿತೂ ದಣಿವಿಲ್ಲದಂತೆ, ಪುಟಿಯುವ ರಣೋತ್ಸಾಹದ ಚಿಲುಮೆಗಳಂತಿದ್ದ ಆ ಸೈನಿಕರನ್ನು ನೋಡಿ ಮದಕರಿನಾಯಕನ ಕಣ್ಣಲ್ಲಿ ಹೆಮ್ಮೆಯ ನೀರು ತುಂಬಿ, ಗಂಟಲು ಬಿಗಿದು ಮಾತನಾಡಲಾಗದೆ, 'ತಾನು ನಾಯಕ- ಅವರು ಸೈನಿಕರು' ಎಂಬುದನ್ನು ಮರೆತು ಹತ್ತಿರವಿದ್ದ ನಾಲ್ಕು ಜನರನ್ನು ಬಿಗಿದಪ್ಪಿ, ಅವರ ಮೈ-ಕೈಗಳನ್ನು ನೇವರಿಸುತ್ತಾ ನಿಂತ.

ನಾಯಕರು ಆ ಒಬ್ಬಿಬ್ಬರ ಮೈ ನೇವರಿಸಿದ್ದು - ಸೈನಿಕರೆಲ್ಲರಿಗೂ ತಮ್ಮ ಮೈಯನ್ನೇ ನೇವರಿಸಿದಷ್ಟು ಸಂತೋಷವಾಗಿ, ಗಂಟಲು ಕೂತು, ಸ್ವರ ಹೊರಡದಂತಾಗುವವರೆಗೂ ಜಯಘೋಷ ಕೂಗಿದರು; ಹೊದ್ದ ಕಂಬಳಿ, ಕೈಯಲ್ಲಿದ್ದ ಶಸ್ತ್ರಗಳನ್ನು ಮುಗಿಲತ್ತ ತೂರಿಹಿಡಿದು ಕುಣಿದಾಡಿದರು.

ಆ ವೇಳೆಗೆ ಅರಮನೆಯ ಬೊಕ್ಕಸದವರು ಹತ್ತಾರು ದೊಡ್ಡ ಬೆಳ್ಳಿಯ ಹರಿವಾಣಗಳಲ್ಲಿ ಹೊನ್ನಿನ ವರಹಗಳನ್ನು ತುಂಬಿ ತಂದರು. ಆ ಹರಿವಾಣಗಳನ್ನು ಸೇನೆಯ ಮುಂದಿರಿಸಿಸಿ, ಮದಕರಿನಾಯಕ ಹೆಮ್ಮೆ-ಹರ್ಷಗಳಿಂದ ಬಿಗಿದ ಧ್ವನಿಯಲ್ಲಿ ಹೇಳಿದ –

"ಎಲ್ಲರೂ ಒಬ್ಬೊಬ್ಬರಾಗಿ ಬಂದು, ನಿಮ್ಮ ಕೈಹಿಡಿಯುವಷ್ಟು ಹೊನ್ನು ತೆಗೆದುಕೊಳ್ಳಿ."

ನಾಯಕರು ಬಾಯಿಬಿಟ್ಟು ಹೇಳಿದರೂ, ಯಾವೊಬ್ಬ ಸೈನಿಕನೂ ಹೊನ್ನು ತುಂಬಿದ ಹರಿವಾಣಗಳು ಬರಲಿಲ್ಲ. ಅತ್ತಕಡೆ ನೋಡಲೂ ಇಲ್ಲ. ಅದನ್ನು ಕಂಡು ಅಚ್ಚರಿಯಾಗಿ ಕೇಳಿದ –

"ಏಕೆ – ಇದು ನಿಮಗೆ ಬೇಡವೇ ? ನಿಮ್ಮ ಸಾಹಸಕ್ಕೆ ಇದು ನಮ್ಮ ಪ್ರೀತಿಯ ಕಾಣಿಕೆ. ತೆಗೆದುಕೊಳ್ಳಿ. ಬೇಡವೆಂದು ಹೇಳಿ ನಮ್ಮನ್ನು ಬಡವರನ್ನಾಗಿ ಮಾಡಬೇಡಿ."

ಮದಕರಿನಾಯಕ ಅಷ್ಟು ಒತ್ತಾಯಮಾಡಿ ಹೇಳಿದಾಗ, ಆ ದಳದ ಮುಂದಾಳಾದ ಪರಶುರಾಮನಾಯಕ ಕೈಮುಗಿದು ಹೇಳಿದ –

"ಮಹಾಸ್ವಾಮಿಯವರು ನಮ್ಮನ್ನು ಮಾಫ್ ಮಾಡಬೇಕು. ಈ ಸಲ ನಾವು ಹೊನ್ನು ಮುಟ್ಟುವುದಿಲ್ಲ ಎಂದು ಕಣಿವೆಮಾರಮ್ಮನ ಹೆಸರಿನಲ್ಲಿ ಪ್ರಮಾಣಮಾಡಿದ್ದೇವೆ."

"ಏಕೆ ?"

-ಚಕಿತನಾಗಿ ಕೇಳಿದ ಮದಕರಿನಾಯಕ.

"ಮಾ ಸ್ವಾಮಿಯವರಿಗೆ ನೆನಪಿದೆಯೋ, ಇಲ್ಲ – ಯುದ್ಧದ ಗದ್ದಲದಲ್ಲಿ ಮರೆತು ಹೋಗಿದೆಯೋ – ಮಾ ಸ್ವಾಮಿಯವರು ಪಟ್ಟಕ್ಕೆ ಬಂದದ್ದು ಆಷಾಢ ಶುದ್ಧ ದ್ವಾದಶಿ ದಿನ. ಇವತ್ತು ಆಷಾಢ ಶುದ್ಧ ದಶಮಿ. ಮಾಮೂಲಿನಂತೆ ನಾವು ನಾಳಿದ್ದು ಮಾ ಸ್ವಾಮಿಯವರಿಗೆ ಪಟ್ಟಗಾಣಿಕೆ ಕೊಡಬೇಕಾಗಿತ್ತು. ಎರಡು ದಿನ ಮೊದಲೇ ಈ ನವಾಬನ ಸೇನೆ ಬಂತು. ಕಣಿವೆಮಾರಮ್ಮನ ಕೃಪೆ

– ಇವತ್ತು ನಾವು ಗೆದ್ದು ತಂದದ್ದೆಲ್ಲಾ ನಮ್ಮ ಪಡೆಯ ಜನ ಕೊಟ್ಟ ಪಟ್ಟಗಾಣಿಕೆ ಅಂತ ಸೈನಿಕರ ಸೇವೆ ಒಪ್ಪಿಸಿಕೊಳ್ಳಬೇಕು. ನಿನ್ನೆ ನವಾಬನ ಸೇನೆ ಮೇಲೆ ಬೀಳೋಕೆ ಮೊದಲೇ, ಕಣಿವೆಮಾರಮ್ಮನಿಗೆ ಹಣ್ಣು ಕಾಯಿ ಮಾಡಿಸಿ, ಗೆದ್ದು ಬಂದರೆ ಪ್ರಭುಗಳಿಗೆ ಈ ಪಟ್ಟಗಾಣಿಕೆ ಒಪ್ಪಿಸುತ್ತೀವಿ' ಅಂತ ಆಕೆ ಪಾದಗಳಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೆವು. ತಾಯಿ ನಮ್ಮ ಮಾತು ನಡೆಸಿಕೊಟ್ಟಳು. ತಾವೂ ಬೇಡ ಅನ್ನದೆ ಒಪ್ಪಿಸಿಕೊಳ್ಳಬೇಕು. ಎಲ್ಲರಿಗಿಂತ ಮೊದಲು ಮಾ ಸ್ವಾಮಿಯವರಿಗೆ ಪಟ್ಟ ಕಾಣಿಕೆ ಕೊಟ್ಟ ಭಾಗ್ಯ ನಮ್ಮದಾಗಬೇಕು. ಇದು ಮಾರಮ್ಮನಿಗೆ ನಮ್ಮ ಬಲಿ ; ತಮಗೆ ಪಟ್ಟಗಾಣಿಕೆ"

-ಎಂದು ತಮ್ಮ ನಡತೆಯನ್ನು ವಿವರಿಸಿ ಹೇಳಿದ ಪರಶುರಾಮನಾಯಕ.

ಆ ಮಾತನ್ನು ಕೇಳಿದ ಮದಕರಿನಾಯಕನಿಗೆ ತನ್ನ ಸೈನಿಕರ ಪ್ರೀತಿಗೆ ಉತ್ತರವಾಗಿ ಏನು ಹೇಳಲೂ ತೋಚದೆ, ಪರಶುರಾಮನಾಯಕನನ್ನು ಬಿಗಿದಪ್ಪಿ-

"ನಾವೇನು ಹೇಳಬೇಕು - ಈ ನಿಮ್ಮ ವಿಶ್ವಾಸಕ್ಕೆ. ಹೇಳುವುದಿಷ್ಟೆ : ನಾವು ಬದುಕಿರುವಷ್ಟು ದಿನವೂ ನಿಮ್ಮ ಪ್ರೀತಿಯನ್ನು ಮರೆಯುವುದಿಲ್ಲ; ನಿಮ್ಮ ಪ್ರೀತಿಗೆ ನಮ್ಮ ಜೀವ ಮೀಸಲು"

- ಎಂದು ರುದ್ಧ ಕಂಠದಿಂದ ಹೇಳಿದ.

ಆ ಮಾತು ಕೇಳಿ ಸೇನೆ ಮತ್ತೊಮ್ಮೆ ನಾಯಕರ ಹೆಸರಿನ ಜಯಘೋಷ ಕೂಗಿತು. ಅದನ್ನು ಒಪ್ಪಿದಂತೆ ಗುಡ್ಡ, ಬುರುಜು, ಬತೇರಿ, ಗುಡಿ, ಗೋಪುರಗಳು ಆ ಜಯಘೋಷವನ್ನು ಮಾರ್ದನಿಸಿದವು.

೨೧

ಇಂಗಳದಾಳು ಕಣಿವೆ ಉಕ್ಕಡದ 'ಕಣಿವೆಮಾರಮ್ಮನ ಪಡೆ'ಯವರು ನಾಯಕರಿಗೆ ಮುಂಗಡವಾಗಿ ಅರ್ಪಿಸಿದ ಪಟ್ಟಗಾಣಿಕೆಯ ವಾರ್ತೆ ಮಿಂಚಿನ ವೇಗದಲ್ಲಿ ನಗರದಲ್ಲಿ, ದುರ್ಗದಲ್ಲಿ ಕಿಕ್ಕಿರಿದ ಸೇನಾವಾಹಿನಿಯಲ್ಲಿ ಹರಡಿ, ಕೇಳಿದವರೆಲ್ಲರ ಹೃದಯದಲ್ಲಿ ರಣೋತ್ಸಾಹವನ್ನು, ಗೆಲುವಿನ ಸಂಭ್ರಮವನ್ನು ಮೂಡಿಸಿತು. ನಗರದ ಪುರಪ್ರಮುಖರು, ಸೇನಾನಾಯಕರು, ಸೈನಿಕರು ಹಿಂಡುಹಿಂಡಾಗಿ ಬಂದು ಸಂಪಿಗೆಸಿದ್ಧೇಶ್ವರನ ದೇವಾಲಯದ ಮುಂದಿನ ಬಯಲಿನಲ್ಲಿ ರಾಶಿಯಾಗಿ ಬಿದ್ದ ನವಾಬನ ಸೈನಿಕರ ರುಂಡಗಳನ್ನು, ಶಸ್ತ್ರಾಸ್ತ್ರಗಳ ರಾಶಿಯನ್ನು ನೋಡಿ. ಸೊಕ್ಕಿ ದುರ್ಗದ ಮೇಲೆ ದಂಡೆತ್ತಿ ಬಂದ ಹೈದರಾಲಿಗೆ ಮೊದಲ ತುತ್ತಿಗೇ ನೊಣ ನುಂಗಿಸಿದ ದುರ್ಗದ ಸೈನಿಕರ ಸಾಹಸವನ್ನು ಹಾಡಿ ಹೊಗಳಿದರು. ಕೆಲವರು ಉತ್ಸಾಹಿಗಳು ಆ ರುಂಡಗಳನ್ನು ಮಾಲೆ ಮಾಡಿ, ಸಂಪಿಗೆಸಿದ್ಧೇಶ್ವರನ ದೇವಾಲಯದ ಹೊರದ್ವಾರದ ಇಬ್ಬದಿಯಲ್ಲಿದ್ದ ದೈತ್ಯಾಕಾರದ

ಹಿಡಿಂಬ, ಹಿಡಿಂಬಿಯರ ಗಾರೆಯ ವಿಗ್ರಹಗಳ ಕತ್ತಿಗೆ ಹಾರ ಹಾಕಿದರು. ರಕ್ತಸಿಕ್ತವಾದ ಕತ್ತಿ, ಕೋವಿಗಳನ್ನು ಹಿಡಿದು ಕೋಲುಹುಯ್ಯುತ್ತಾ ಯುದ್ಧದ ಲಾವಣಿಗಳನ್ನು ಹಾಡಿ ಕುಣಿದರು. ರುಂಡಗಳಿಂದ ಲಗ್ಗೆಚೆಂಡಾಟವಾಡಿದರು. ಕತ್ತಿ, ಭರ್ಜಿಗಳ ತುದಿಗೆ ತಲೆಗಳನ್ನು ಸಿಕ್ಕಿಸಿ ಮೆರೆದರು. ಸಂಪಿಗೆಸಿದ್ಧೇಶ್ವರ, ಹಿಡಿಂಬೇಶ್ವರ, ಏಕನಾಥೇಶ್ವರಿಯ ದೇವಾಲಯಗಳಲ್ಲಿ ವಿಜಯ ಪೂಜೆ ಮಾಡಿಸಿ, ಕಾಣಿಕೆಯೊಪ್ಪಿಸಿ, ತಮ್ಮ ನೆಚ್ಚಿನ ನಾಯಕನಿಗೆ ತಾವೂ ಅಂಥ ಪಟ್ಟಗಾಣಿಕೆ ಕೊಡುವ ಭಾಗ್ಯಕರುಣಿಸು ಎಂದು ಬೇಡಿದರು. ಕತ್ತರಿಸಿದ ಅರಿರುಂಡಗಳ ಮೇಲೆ ದೀಪ, ಕರ್ಪೂರ ಹೊತ್ತಿಸಿ ದೇವರಿಗೆ ವೀರಾರತಿ ಬೆಳಗಿದರು. ಸುತ್ತಲ ಗುಡ್ಡದ ಬಂಡೆಗಳು ಗದಗದಿಸುವಂತೆ ನಾಯಕರ, ದುರ್ಗದ ಹೆಸರು ಹೇಳಿ ಜಯಘೋಷ ಮಾಡಿದರು. ಮಾಂಸದಾಸೆಗೆ ಬಂದು, ಮನುಷ್ಯರಿಗೆ ಹೆದರಿ ದೂರದ ಬಂಡೆಗಳ ಮೇಲೆ ಕಾದು ಕುಳಿತ ಹದ್ದು, ಕಾಗೆಗಳೂ ತಾವೂ ಆ ಹರ್ಷೋತ್ಸಾಹದಲ್ಲಿ ಪಾಲುಗೊಂಡಂತೆ ತಮ್ಮ ದನಿಗೂಡಿಸಿದವು.

ಬೆಟ್ಟದ ಮೇಲೆ ಜನ ಹೀಗೆ ಹುಚ್ಚಾಗಿ ಕುಣಿಯುತ್ತಿರುವಾಗಲೇ –

ನಗರದ ನರನಾಡಿಗಳಾದ ಬೀದಿ, ಕೇರಿ, ಓಣಿಗಳಲ್ಲಿ ಉತ್ಸಾಹದ ಬಿಸಿನೆತ್ತರು ವೇಗವಾಗಿ ಹರಿಯುತ್ತಿರುವಾಗಲೇ-

ಅತ್ತ –

ದುರ್ಗದ ಪೂರ್ವದಿಗಂತದಲ್ಲಿ ಸಣ್ಣದಾಗಿ ಧೂಳಿನ ಮೋಡವೊಂದು ಕಾಣಿಸಿಕೊಂಡು, ಹೊತ್ತೇರಿದಂತೆ ಕೆಂಧೂಳಿನ ಮೋಡವೂ ದಟ್ಟವಾಗಿ, ಬೃಹತ್ತಾಗಿ ಬೆಳೆದು, ಮಧ್ಯಾಹ್ನದ ವೇಳೆಗೆ ಮುಗಿಲನ್ನೆಲ್ಲಾ ವ್ಯಾಪಿಸಿ, ನಗರದಲ್ಲಿ ನಡುಹಗಲಿನಲ್ಲೇ ಸಂಜೆಗತ್ತಲನ್ನು ಕವಿಸಿತು.

ಆ ಧೂಳಿನ ಮೋಡದೊಂದಿಗೇ, ಮೊದಲು ಬಹು ಅಸ್ಪಷ್ಟವಾಗಿ, ಕ್ಷೀಣವಾಗಿ, ಬರ ಬರುತ್ತಾ ಕೇಳಿದ ಕಿವಿಗಳನ್ನು ನಡುಗಿಸುವ ಬಿರುನಿನಾದವಾಗಿ, ಬಗೆಬಗೆಯ ರಣವಾದ್ಯಗಳು, ಬಂಡಿಗಾಲಿಗಳು, ಕುದುರೆಗಳ ಖುರಪುಟ, ಸೈನಿಕರ ಕೇಕೆಯ ಸದ್ದು ಕೇಳಿಬಂದು ಬೀದಿಗಳಲ್ಲಿ ಜನ ಆಡುವ ಮಾತು ಅವರಿಗೇ ಕೇಳಿಸದಷ್ಟು ಸೇನಾಸಮುದ್ರಘೋಷವಾಗಿ, ಹೃದಯದಲ್ಲಿದ್ದ ಉತ್ಸಾಹವನ್ನು ಉಡುಗಿಸಿ, 'ನವಾಬನ ಸೇನೆ ಬಂತು - ನವಾಬನ ಸೇನೆ ಬಂತು' ಎಂದು ಒಬ್ಬರು ಮತ್ತೊಬ್ಬರಿಗೆ ಹೇಳುತ್ತಾ, ಹತ್ತಿರವಾಗುತ್ತಿದ್ದ ಹೈದರಾಲಿಯ ಸೇನೆಯನ್ನು ನೋಡಲು, ಬೆಟ್ಟದ ಏರುಜಾಗಗಳನ್ನು, ತೆಂಗಿನ ಮರಗಳನ್ನು ಹತ್ತಿನಿಂತು ನೋಡಿದರು.

ಅಂದು –

ದುರ್ಗದತ್ತ ಹೈದರಾಲಿಯ ಸೇನಾಗಮನವನ್ನು ನಿರೀಕ್ಷಿಸುತ್ತಿದ್ದ ನಾಯಕರೂ ಪ್ರಧಾನಿ, ದಳವಾಯಿಗಳೊಂದಿಗೆ ಲಾಲ್ ಬತೇರಿಯ ಮೇಲೆ ಕುಳಿತು, ದುರ್ಬೀನು ಹಾಕಿಕೊಂಡು ನೋಡಿದರು –

ಪೂರ್ವೋತ್ತರ ದಿಕ್ಕುಗಳ ಕಣಿವೆ ಮಾರ್ಗಗಳಲ್ಲಿ ದುರ್ಗದತ್ತ ಧಾವಿಸಿ ಬರುತ್ತಿದ್ದ ಹೈದರಾಲಿಯ ಸೇನೆಯನ್ನು,

ಅದು ಸೇನೆಯಲ್ಲ, ಸೇನಾಸಮುದ್ರ –

ಅಲೆಅಲೆಯಾಗಿ –

ವಿವಿಧ ವರ್ಣಗಳ ಸಮವಸ್ತ್ರ ಧರಿಸಿದ ಬಗೆಬಗೆಯ ಆಯುಧ ಹಿಡಿದ ಪದಾತಿಪಡೆಗಳು, ಅಶ್ವಾರೋಹಿಗಳು, ತುಕಡಿಗಳ ಬಣ್ಣ ಬಣ್ಣದ ಬಾವುಟ ಹೊತ್ತವರು, ಸೇನೆಯೊಂದಿಗೆ ಬಂದ ಸಾಮಂತರು. ಧ್ವಜಪತಾಕೆಗಳನ್ನು ಹಿಡಿದವರು, ಸರ್ದಾರರನ್ನು ಹೊತ್ತ ಪಲ್ಲಕ್ಕಿಗಳು, ಕೋಣಗಳು ಎಳೆಯುತ್ತಿದ್ದ ತೋಫಿನ ಬಂಡಿಗಳು, ಯುದ್ಧಕ್ಕೆ ಅವಶ್ಯಕವಾದ ಸಾಮಗ್ರಿಗಳನ್ನು ಹೊತ್ತ ಬಂಡಿಗಳು, ಸವಾರಿಗಾಡಿಗಳು, ಸಬರದ ಎತ್ತುಗಳು, ಜನಾನಾದವರನ್ನು ಹೊತ್ತ ಮೇನೆಗಳು, ಮೊಳಗುತ್ತಿದ್ದ ರಣವಾದ್ಯಗಳನ್ನು ಹೊತ್ತ ಆನೆ, ಒಂಟೆಗಳು-

ಎಲ್ಲವೂ ಸಹಸ್ರ ಸಹಸ್ರ ಸಂಖ್ಯೆಯಲ್ಲಿ –

ಬಗೆಬಗೆಯ ಸದ್ದು ಮಾಡುತ್ತಾ, ಧೂಳು ಕವಿಸುತ್ತಾ.

ಕಣ್ಣು ಕಾಣಿಸುವಷ್ಟು ದೂರ ; ಎತ್ತ ನೋಡಿದರತ್ತ-

ತೂಬು ಮುರಿದ ಕಾರ್ಗಾಲದ ಕೆರೆಯ ಪ್ರವಾಹ, ಸಿಕ್ಕಿದ ಸಂದುಗಳಲ್ಲಿ ಸೀಳುಸೀಳಾಗಿ ಭೋರ್ಗರೆಯುತ್ತಾ ಹರಿದು ಬಂದು ಬಯಲಿನಲ್ಲಿ ಹರಡಿ, ಮಡುಗಟ್ಟಿನಿಂತಂತೆ –

ಚಿತ್ರದುರ್ಗದ ಮೂರು ದಿಕ್ಕಿನಲ್ಲಿ ಹರಡಿ, ಹೈದರಾಲಿಯ ಸೇನಾಸಾಗರ ಸುತ್ತುಗಟ್ಟಿ ಬಿಡಾರ ಹೂಡಿತು.

ಇರುಳೆಲ್ಲಾ ಸಹಸ್ರ ಸಹಸ್ರ ಸಂಖ್ಯೆಯ ಪಂಜುಗಳು, ಸೇನೆಯ ಬೀಡುಬಿಡುವ, ಸಹಸ್ರ ಬಗೆಯ ಸದ್ದುಗಳೊಂದಿಗೆ ಉರಿದು, ಕೊಳ್ಳಿಯ ದೆವ್ವಗಳು ಹಿಂಡುಹಿಂಡಾಗಿ ಕಟಕಟ ಸದ್ದು ಮಾಡುತ್ತಾ ದುರ್ಗದ ಸುತ್ತಲೂ ಅಲೆದಂತೆ ಭಾಸವಾಯಿತು.

ಇರುಳು ಕಳೆದು ಹಗಲಾಗುತ್ತಿದ್ದ ಹಾಗೆಯೇ-

ದುರ್ಗದ ಮೂರು ದಿಕ್ಕಿನಲ್ಲೂ ರೆಕ್ಕೆ ಮುಚ್ಚಿ ಕುಳಿತ, ವಿವಿಧ ಗಾತ್ರದ, ರಾಕ್ಷಸಾಕಾರದ ರಣಹದ್ದುಗಳ ಹಿಂಡು ನೆರೆದಂತೆ ಹೈದರಾಲಿಯ ಸೇನೆಯ ಗುಡಾರಗಳು ಬೆಳಗನ್ನು ಬೀಭತ್ಸವಾಗಿಸಿದವು. ಈಶಾನ್ಯದಿಗ್ಭಾಗದಲ್ಲಿ ಆ ಪಿಶಾಚಪಡೆಯ ಮೇಲೆತ್ತಿದ ತೋಳಿನಂತೆ ನಿಂತ

ಧ್ವಜಸ್ತಂಭದ ಮೇಲೆ, ಹಾರುತ್ತಿದ್ದ ಮೈಸೂರು ಸಂಸ್ಥಾನದ ಗಂಡಭೇರುಂಡ ಲಾಂಛನ ಹೊತ್ತ ಬಾವುಟ, ಹೈದರಾಲಿ 'ಇಗೋ ನಾನಿಲ್ಲಿದ್ದೇನೆ' ಎಂದು ಕತ್ತು ಸೆಟೆಸಿ ಹೇಳುವಂತಿತ್ತು.

ಎಂತಹ ಗಂಡೆದೆಯನ್ನೂ ಬೆದರಿಸುವಂತಿದ್ದ ಆ ಪ್ರಚಂಡ ಸೇನಾವಾಹಿನಿಯನ್ನು, ಅದು ಕಾಲಿಟ್ಟ ಗಳಿಗೆಯಿಂದ ನಿಂತು ನೋಡುತ್ತಿದ್ದ ಮದಕರಿನಾಯಕನನ್ನು, ಅವನ ಬಳಿಯಲ್ಲೇ ಇದ್ದ ಸರ್ದಾರ್‌ಖಾನ್-

"ಈ ಅಗಾಧ ಸೇನೆಯನ್ನು ನೋಡಿ ನಿಮಗೇನೆನಿಸುತ್ತದೆ, ರಾಜಾಸಾಹೇಬ್ ?"

-ಎಂದು ಕೇಳಿದ.

"ಅನಿಸುವುದೇನು ?"

- ತಾತ್ಸಾರ ತುಂಬಿದ ಧ್ವನಿಯಲ್ಲಿ ಕೇಳಿದ ಮದಕರಿನಾಯಕ.

"ಕಡಮೆ ಕಡಮೆ ಎಂದರೂ ಮೂರು-ನಾಲ್ಕು ಲಕ್ಷ ಫೌಜಿರಬೇಕು. ಅದನ್ನು ಕಂಡು ನಿಮಗೆ ಆತಂಕವಾಗುವುದಿಲ್ಲವೇ ?"

"ನೂರು ಬೀದಿನಾಯಿಗಳಿಗೆ ಹುಲಿ ಹೆದರುತ್ತದೆಯೇ, ಸರ್ದಾರ್‌ಖಾನ್ ? ಇಷ್ಟು ಸೇನೆ ಇತ್ತು, ನಿಮ್ಮ ನವಾಬ ದುರ್ಗದ ಮುಖ ನೋಡಿದ. ಇಲ್ಲವಾದಲ್ಲಿ ವೇದಾವತಿಯ ದಂಡೆಯಲ್ಲೇ ನವಾಬರ ಗೋರಿಯಾಗುತ್ತಿತ್ತು !"

- ನಿರ್ವಿಕಾರವಾದ ಧ್ವನಿಯಲ್ಲಿ ಹೇಳಿದ ಮದಕರಿನಾಯಕ.

"ನವಾಬರ ಸೇನಾಬಲವನ್ನು ನೀವು ಬಹಳ ತಾತ್ಸಾರವಾಗಿ ಕಾಣುತ್ತಿದ್ದೀರಾ, ರಾಜಾ ಸಾಹೇಬ್. ಅಷ್ಟು ಅಲಕ್ಷ್ಯ ಮಾಡಬೇಡಿ. ಮರಾಠರನ್ನು, ನಿಜಾಮರನ್ನು, ಆಂಗ್ಲರನ್ನು ಎದುರಿಸಿ ನಿಂತ ಸೇನೆ ಅದು."

"ಅವರೆಲ್ಲರನ್ನೂ ಎದುರಿಸಿ ಉಳಿದದ್ದು - ನಿಮ್ಮ ನವಾಬರ ಬಲವಲ್ಲ, ನಸೀಬು ; ಗೆದ್ದಾಗ ತಲೆ, ಸೋತಾಗ ಕಾಲು ಹಿಡಿವ ಕುಟಿಲ ಕುತ್ಸಿತ ಬುದ್ಧಿ, ಸರ್ದಾರ್‌ಖಾನ್. ಇಷ್ಟು ದೊಡ್ಡ ಸೇನೆ ನೋಡುವುದು ನಮಗೇನೂ ಹೊಸದಲ್ಲ. ಆನವಟ್ಟಿ ಕಾಡಿನಲ್ಲಿ ಹೈದರಾಲಿಯವರು ದಿಕ್ಕಾಪಾಲಾಗಿ ಓಡಿದಾಗ ಪೇಶ್ವೆಯವರ ಮೂರುಲಕ್ಷ ಸೇನೆಯನ್ನು ನಾವು ನೋಡಿರುವುದಷ್ಟೇ ಅಲ್ಲ, ಮರಾಠರ ಕರಾಳಖಡ್ಗದಿಂದ ನಿಮ್ಮ ನವಾಬರ ತಲೆಯನ್ನು ಉಳಿಸಿದವರು ನಾವು. ಈಗ ಇದಕ್ಕೆ ಅಂಜಬೇಕೇ? ನೋಡುತ್ತಿರಿ - ಈ ದುರ್ಗದ ಬಯಲಿನಲ್ಲಿ ನಿಮ್ಮ ನವಾಬರ ಸೇನೆ ಏನಾಗುತ್ತದೆಂದು."

"ಏನಾಗುತ್ತದೆ ?"

"ಕೆಂಡವನ್ನು ಮುತ್ತಿದ ಇರುವೆಯ ಹಿಂಡಾಗುತ್ತದೆ - ನವಂಬರ ಸೇನೆ. ಹರಪನಹಳ್ಳಿ, ರಾಯದುರ್ಗದವರನ್ನು ನಂಬಿ ಚಿತ್ರದುರ್ಗ ಬೆಲ್ಲದ ಅಚ್ಚು ಎಂದು ತಿಳಿದು, ಜೊಲ್ಲು ಸುರಿಸುತ್ತಾ ಹಿಂಡುಗಟ್ಟಿಕೊಂಡು ಬಂದಿದ್ದಾರೆ. ಆದರೆ ಚಿತ್ರದುರ್ಗ ಬೆಲ್ಲದಚ್ಚಲ್ಲ -ಸರ್ದಾರ್ ಖಾನ್, ಬಂಡೆಗಲ್ಲು. ಕಲ್ಲು ಕಡಿಯಲೆತ್ನಿಸಿ ಹಲ್ಲು ಕಳೆದುಕೊಂಡವರ ಹಾಗಾಗುತ್ತಾರೆ, ಹೈದರಾಲಿ. ಆ ದಿನ ಬಹಳ ದೂರವಿಲ್ಲ. ಸೇನೆ ಬಂದಿದೆ – ಯುದ್ಧ ಆರಂಭವಾಗಲಿ ನಮ್ಮ ಮಾತು ಸುಳ್ಳಲ್ಲವೆಂದು ನಿಮಗೇ ಅರ್ಥವಾಗುತ್ತದೆ"

- ಎಂದು ಮದಕರಿನಾಯಕ ಅಪಾರ ಆತ್ಮವಿಶ್ವಾಸವಿದ್ದ ಬಿಗಿಧ್ವನಿಯಲ್ಲಿ ಹೇಳಿದ.

"ನಿಮ್ಮದು ಪ್ರಚಂಡ ಆತ್ಮವಿಶ್ವಾಸ, ರಾಜಾಸಾಹೇಬ್. ಅದು ಸುಳ್ಳಾಗದಿರಲಿ ಎಂದು ದಿನವೂ ಖುದಾನನ್ನು ಪ್ರಾರ್ಥಿಸುತ್ತೇನೆ"

-ಎಂದು ದೇವರನ್ನು ಪ್ರಾರ್ಥಿಸುವ ಧ್ವನಿಯಲ್ಲೇ ಹೇಳಿದ, ಸರ್ದಾರ್‌ಖಾನ್.

* * *

"ಇನ್ಷಾಲ್ಲಾ, ಇದು ಬರೀ ದುರ್ಗವಲ್ಲ - ರಣದುರ್ಗ !"

ಅಡಿಯಿಂದ ಮುಡಿಯವರೆಗೆ ಬುರುಜು ಬತೇರಿಗಳ ವೀರಾಭರಣ, ಕೋಟೆಯ ಸಾಲು ಸಾಲು ಮಾಲೆಯನ್ನು ಧರಿಸಿ, ಮುಡಿಯಲ್ಲಿ ಹನುಮದ್ಗರುಡಧ್ವಜ ವಿರಾಜಿಸುತ್ತಿದ್ದ ಝಂಡಾ ಬತೇರಿಯ ಮಕುಟವನ್ನು ಧರಿಸಿ, ನೋಡುವ ಕಣ್ಣಿನಲ್ಲಿ ಭೀತಿ ಕವಿಸುವ ಚಿತ್ರದುರ್ಗದ ದಕ್ಷಿಣೋತ್ತರವಾಗಿ ಅಖಂಡವಾಗಿ ಹಬ್ಬಿದ ಸಪ್ತಶಿಖರಾಲಂಕೃತವಾದ ಬೃಹತ್ ಶಿಲಾವೃತ ಶೈಲಮಾಲೆಯನ್ನು - ಮಲ್ಲಾಪುರದ ಕೆರೆಯ ಬಳಿಯ ತನ್ನ ಬಿಡಾರದ ಸನಿಹದ ದಿಬ್ಬವೊಂದರ ಮೇಲೆ ತನ್ನ ಆಪ್ತರೊಂದಿಗೆ ಆಸನಾಸೀನನಾಗಿ ಕುಳಿತು ದುರ್ಬೀನು ಹಾಕಿಕೊಂಡು ನೋಡುತ್ತಿದ್ದ ಹೈದರಾಲಿಯ ಬಾಯಿಂದ ತನ್ನಷ್ಟಕ್ಕೆ ತಾನೇ ಭಯಮಿಶ್ರಿತ ಮೆಚ್ಚುಗೆಯ ಮಾತು ಹೊರಹೊಮ್ಮಿ ತನ್ನ ಸಮೀಪದಲ್ಲಿದ್ದ ಪೂರ್ಣಯ್ಯ, ಬರ್ಕಿ ಶ್ರೀನಿವಾಸರಾಯರಿಗೆ –

"ಚಿತ್ರದುರ್ಗ, ಕೋಟೆಗಳಲ್ಲೆಲ್ಲಾ ಬಹದ್ದೂರ್‌ಕೋಟೆ ಎಂದು ನಾವು ಕೇಳಿದ್ದೇವೆ. ಆದರೆ ಕೇಳಿಕೆಯ ಮಾತಿಗಿಂತ ನೂರುಪಟ್ಟು ದುರ್ಗಮವಾಗಿದೆ ಈ ದುರ್ಗ. ಈ ದುರ್ಗಕ್ಕೆ ಹೇಳಿ ಮಾಡಿಸಿದ ಗಂಡುದೊರೆ ಮದಕರಿನಾಯಕ. ನೀವೂ ದುರ್ಬೀನಿನಲ್ಲಿ ನೋಡಿ, ಪೂರ್ಣಯ್ಯ - ಕೆಂಪುಕಲ್ಲಿನ ಬತೇರಿಯ ಮೇಲೆ ಗುಡ್ಡಕ್ಕೆ ಕೋಡು ಮೂಡಿದಂತೆ ನಿಂತಿರುವ ಮದಕರಿನಾಯಕನನ್ನು, ಇಷ್ಟು ಹತ್ತಿರ, ಇಷ್ಟು ಭಾರಿ ಫೌಜು ಬಂದಿದ್ದರೂ, ನಮ್ಮ ಬಿಸಾತೇ ಇದ್ದ ಹಾಗಿಲ್ಲ ಇಲ್ಲಿಯ ಜನಕ್ಕೆ. ಬರುಜು ಬತೇರಿಗಳ ಮೇಲೇರಿಸಿದ ತೋಪುಗಳು, ಕೋಟೆಸಾಲಿನ

ಮೇಲೆ ಓಡಾಡುವ ಸಿಪಾಯಿಗಳು - ಇಷ್ಟು ಬಿಟ್ಟರೆ ದುರ್ಗದಲ್ಲಿ ಯುದ್ಧದ ಲಕ್ಷಣವೇ ಕಾಣುವುದಿಲ್ಲ. ಗಂಡುಜನ, ಗಂಡುಕೋಟೆ."

-ಎಂದು ಸಿಟ್ಟು, ಮೆಚ್ಚುಗೆ, ಆಕ್ರೋಶಗಳು ಸಮಸಮವಾಗಿ ಬೆರೆತ ಧ್ವನಿಯಲ್ಲಿ ಹೇಳಿದ ಹೈದರಾಲಿ.

ಹೈದರಾಲಿ ದುರ್ಗವನ್ನು, ಮದಕರಿನಾಯಕನನ್ನು ಮೆಚ್ಚಿ ಮಾತನಾಡಿದುದು-ದುರ್ಗದ ಸೆರೆಯಾಳಾಗಿ, ಮದಕರಿನಾಯಕನ ಕರುಣೆಯ ಕೂಸಾಗಿ ಬದುಕಿ ಬಂದ ಮೋಹಿಯುದ್ದೀನ್ ಸಾಹೇಬನಿಗೆ ಹೊಟ್ಟೆಯಲ್ಲಿ ಹಾಗಲಕಾಯಿ ಕಿವುಚಿದಂತಾಗಿ –

"ಗಿಡಗ ಗುಬ್ಬಚ್ಚಿಯನ್ನು ಹೊಗಳಿದ ಹಾಗಿದೆ"

-ಎಂದು ಕಿನಿಸಿನಿಂದ ನುಡಿದ.

ಕೈಯಲ್ಲಿದ್ದ ದುರ್ಬೀನನ್ನು ಪೂರ್ಣಯ್ಯನ ಕೈಗೆ ಕೊಟ್ಟು, ಮಾತನಾಡಿದ ಮೋಹಿಯುದ್ದೀನ್ ಸಾಹೇಬನ ಮುಖವನ್ನು ಕನಿಕರ ತುಂಬಿದ ಕಣ್ಣುಗಳಿಂದ ನೋಡುತ್ತಾ –

"ತಾಖತ್ತು ತೋಳಿನಲ್ಲಿರಬೇಕು, ಮಾತಿನಲ್ಲಲ್ಲ. ಈ ದುರ್ಗ ಗುಬ್ಬಚ್ಚಿಯೋ ಗಿಡಗವೋ ನಮಗಿಂತ ನಿಮಗೆ ಚೆನ್ನಾಗಿ ಗೊತ್ತಿರಬೇಕು. ಆಯಿತು - ಈಗ ಮತ್ತೊಮ್ಮೆ ಆ ಮಾತನ್ನು ಪರೀಕ್ಷಿಸುವ ಅವಕಾಶ ಬಂದಿದೆ. ಮೊದಲ ಪರೀಕ್ಷೆ ನಿಮ್ಮಿಂದಲೇ ಆಗಲಿ. ಬೆದರಿಕೆಗಾಗಲಿ, ಬೈಗಳಿಗಾಗಲಿ ಈ ಕೋಟೆಯ ಕಲ್ಲೂ ಅಲ್ಲಾಡುವ ಹಾಗೆ ನಮಗೆ ಅನಿಸುವುದಿಲ್ಲ"

-ಎಂದು ಹಗುರವಾದ ಧ್ವನಿಯಲ್ಲಿ, ಆ ಮಾತು ಕೇಳಿದ ಮೋಹಿಯುದ್ದೀನ್ ಸಾಹೇಬನ ಮುಖ ಕೆಂಪೇರುವಂತೆ ಹೇಳಿ, ಮತ್ತೆ ಪೂರ್ಣಯ್ಯನತ್ತ ತಿರುಗಿ –

"ನಿಮಗೇನನಿಸುತ್ತದೆ, ಪೂರ್ಣಯ್ಯ?"

-ಎಂದು ಕೇಳಿದ ಹೈದರಾಲಿ.

ಕೆಲವು ನಿಮಿಷಗಳ ಕಾಲ ದುರ್ಬಿನಿನಲ್ಲಿ ಕೋಟೆಯನ್ನು ನೋಡಿದ ಪೂರ್ಣಯ್ಯ ಏನೊಂದೂ ಮಾತನಾಡದೆ, ದುರ್ಬೀನನ್ನು ಬರ್ಕಿ ಶ್ರೀನಿವಾಸರಾಯನ ಕೈಗೆ ಕೊಟ್ಟ. ಅವನಾದಬಳಿಕ ಸಾಹೇಬ್‌ಜಾದೆ ಟೀಪು, ಅಲಿ ರಜಾಖಾನ್, ಗುಲಾಂ ಅಲಿಖಾನ್ ಮೊದಲಾದ ಸರ್ದಾರರು ಒಬ್ಬೊಬ್ಬರಾಗಿ ಒಂದೊಂದು ದೃಷ್ಟಿಯಿಂದ ಕೋಟೆಯನ್ನು ವೀಕ್ಷಿಸಿದ ಬಳಿಕ ಸಾಹೇಬ್‌ಜಾದ ಟೀಪು –

"ಕಾವೇರಿನದಿ ರಕ್ಷಣೆಯೊಂದಿದೆ ಅನ್ನುವುದನ್ನು ಬಿಟ್ಟರೆ ಶ್ರೀರಂಗಪಟ್ಟಣಕ್ಕೆ ಚಿತ್ರದುರ್ಗ ಯಾವುದರಲ್ಲೂ ಕಡಿಮೆಯಿಲ್ಲ. ಜಂಗೀ ಸರಂಜಾಮು ಭಾರಿಯಾಗಿರುವ ಹಾಗಿದೆ. ಗಡವೂ ಕುಫಲ್‌ಗಡ. ನಮ್ಮ ಗಂಡಸುತನ ತೋರಿಸುವುದಕ್ಕೆ ಸರಿಯಾದ ದುರ್ಗ ಎಂದರೆ ಇದೇ. ಇದನ್ನು

ಗೆದ್ದರೇ ನಾವು ಗಂಡಸರು; ಇಲ್ಲ - ನಮ್ಮ ಹೆಸರು ಉಳಿಯುವುದಿಲ್ಲ. ಹುಕುಂ ಮಾಡಿ, ಅಬ್ಬಾ ಹುಜೂರ್. ಒಂದು ಕೈನೋಡಿಬಿಡೋಣ" – ಎಂದ ಯೌವನದ ಉತ್ಸಾಹದಿಂದ.

ಟೀಪುವಿನ ಮಾತು ಕೇಳಿ, ಹೈದರಾಲಿ 'ನಿಮ್ಮ ಅಭಿಪ್ರಾಯವೇನು ?' ಎಂದು ಕೇಳುವಂತೆ ಉಳಿದ ಸರ್ದಾರರ ಮುಖ ನೋಡಿದ.

"ಇಷ್ಟು ದೂರ ಬಂದದ್ದಾಯಿತು. ಯುದ್ಧ ಮಾಡುವುದಂತೂ ತಪ್ಪಿದ್ದಲ್ಲ. ಆದರೂ ಏಕಾಏಕಿ ಹಲ್ಲಾ ಮಾಡುವುದಕ್ಕೆ ನುಗ್ಗುವುದಕ್ಕಿಂತ ಮುಂಚೆ, ದುರ್ಗದವರ ತೋಪುಗಳು ಎಷ್ಟು ದೂರ ಹಾರುತ್ತವೆ ಎಂದು ತಿಳಿಯುವುದಕ್ಕೆ - ಮೊದಲು ಸ್ವಲ್ಪ ಸೇನೆ ನುಗ್ಗಿಸಿ. ಅದರ ಅಳತೆ ಬಲಾಬಲ ತಿಳಿದುಕೊಂಡು ಮುಂದೆ ಹೇಗೆ ಯುದ್ಧ ಮಾಡಬೇಕು ಎಂದು ಯೋಚಿಸುವುದು ವಿಹಿತ" - ಎಂದು ಬರ್ಕಿ ಶ್ರೀನಿವಾಸರಾಯ ಸಲಹೆ ಮಾಡಿದ.

ಹೈದರಾಲಿಗೂ ಆ ಸಲಹೆ ಸೂಕ್ತವೆಂದು ಕಂಡು –

"ಇದು ಯುದ್ಧ ಬಲ್ಲವರ ಮಾತು. ನಮಗೂ ಇದು ಕಬೂಲಿ. ಈ 'ಅಂದಾಜು ಯುದ್ಧ'ಕ್ಕೆ ಯಾರು ದಳಪತಿಗಳಾಗುತ್ತೀರೋ - ಹೇಳಿ"

- ಎಂದು ತನ್ನ ಸೊಂಟದಲ್ಲಿದ್ದ ರತ್ನಖಚಿತ ಹಿಡಿಕೆಯ ಕಠಾರಿಯನ್ನು ಹೊರತೆಗೆದು, ನೆಲದ ಮೇಲೆ ಹಾಕಿ –

"ದುರ್ಗದ ಸೈನಿಕರ ಮೊದಲ ತಲೆ ತಂದ ಸರ್ದಾರರಿಗೆ ಇದು ನಮ್ಮ ಇನಾಂ. ಯಾರಿಗೆ ಬೇಕೋ ಕೈಗೆತ್ತಿಕೊಳ್ಳಿ. ನಾಯಕನ ಮೇಲೆ ಜಿದ್ದಿರುವವರಿಗೆ ಮೊದಲ ಅವಕಾಶ"

- ಎಂದು ಮೋಹಿಯುದ್ದೀನ್ ಸಾಹೇಬ್, ಮೊಖ್ದುಂಸಾಹೇಬರ ಮುಖ ನೋಡುತ್ತಾ ಹೇಳಿದ.

ಆ ಇಬ್ಬರೂ ನವಾಬನ ನೋಟ, ಮಾತಿನಲ್ಲಿದ್ದ ಸವಾಲಿಗೆ ಸೋಲಲಾಗದೆ, ಇಬ್ಬರೂ ಒಟ್ಟಾಗಿ ನೆಲದ ಮೇಲಿದ್ದ ಕಠಾರಿಯತ್ತ ನಡೆದರು - ಬಲಿಗೂಟದತ್ತ ನಡೆವ ಕೋಣಗಳಂತೆ.

ಆ ಇಬ್ಬರನ್ನೂ ನೋಡುತ್ತಾ ಹೇಳಿದ ಹೈದರಾಲಿ –

"ಅಬ್ ಷುರು ಹುವಾ - ಹಮಾರೆ ಕಿಸ್ಮತ್‌ಕಾ ಖೇಲ್."


ಆ ಮಾತಿಗೆ ತಾಳ ಹಾಕಿದಂತೆ ಫೌಜಿನಲ್ಲಿ ಕಹಳೆ ನಗಾರಿಗಳು ಮೊಳಗಿದವು.

ರಕ್ತರಂಜಿತ ರವಿ



ಸಿದ್ದಯನ ಬಾಗಿಲು

(ಶ್ರೀ ಸಂಪಿಗೆ ಸಿದ್ಧೇಶ್ವರಸ್ವಾಮಿ ಮಹಾದ್ವಾರ)



ಒಂಟಿಕಾಲು ಬಸವಣ್ಣನ ದೇವಸ್ಥಾನ

೧

ಹಗಲಿನ ಆ ನಗಾರಿಯ ಧ್ವನಿಗೆ ಉತ್ತರವಿತ್ತಂತೆ-

ಆ ರಾತ್ರಿ-

ಲಕ್ಷ ಲಕ್ಷ ಹೊತ್ತಿ, ಬೆಳಗುವ ಹಣತೆಗಳಿಂದ ಅಲಂಕೃತವಾದ ಶ್ರೀ ಉತ್ಸವಾಂಬೆಯ ದೇವಾಲಯ - ಬೆಳಕಿನ ಮುತ್ತುಗಳಿಂದ ನಿರ್ಮಿಸಿದ ದೀಪಮಂದಿರದಂತೆ ಕಂಗೊಳಿಸುತ್ತಿತ್ತು; ಆಷಾಢಮಾಸದ ಮಬ್ಬು ಬೆಳದಿಂಗಳ ರಾತ್ರಿಯಲ್ಲಿ.

ಆ ಬೆಳಕಿಗೆ ಮಿರುಗುಕೊಟ್ಟಂತೆ ಕೇಳಿಬರುತ್ತಿತ್ತು –

ಗಂಟೆ, ಜಾಗಟೆ, ಶಂಖ, ಚೌಡಿಕೆ ಮೊದಲಾದ ಪೂಜಾವಾದ್ಯಗಳ ಮಂಗಳ ಮಂಜುಳ ನಿನಾದ.

ದೇವಿಯ ಮೇಲಣ ಭಕ್ತಿ ಉಕ್ಕಿಹರಿದಂತೆ ಜನಭರಿತವಾಗಿತ್ತು – ದೇವಾಲಯದ ಮುಂದಣ ರಾಜವೀಧಿ.

ಬೀದಿಯಿಂದ ದೇವಾಲಯದ ಮುಖಮಂಟಪದವರೆಗೂ ಇಬ್ಬದಿಯಲ್ಲಿ ದೀವಟಿಗೆಗಳನ್ನು ಹಿಡಿದವರೊಂದಿಗೆ ಸಶಸ್ತ್ರ ಸೈನಿಕರು ನಿಂತು, ದೇವಿಯ ನಿಗ್ರಹಾನುಗ್ರಹಶಕ್ತಿಯೇ ಮೈತಳೆದಂತಿದ್ದರು.

ದೇವಿಯ ಗರ್ಭಗೃಹದ ಮುಂಭಾಗದಲ್ಲಿ ಕೆಂಪು ರೇಶಿಮೆಯ ಮಗುಟ ಉಟ್ಟು, ಅದೇ ವರ್ಣದ ಶಲ್ಯವನ್ನು ಮೈಮೇಲೆ ಹೊದ್ದು, ನೆತ್ತಿಯ ಮೇಲೆ ಮುತ್ತಿನೆಳೆಗಳಿಂದ ಅಲಂಕೃತವಾದ ರಕ್ತವರ್ಣದ ಮುಂಡಾಸನ್ನು ಧರಿಸಿದ ನಾಯಕರು ತಮ್ಮೀರ್ವರು ಮಡದಿಯರು, ಮಗ ಭರಮಣ್ಣನಾಯಕ, ಸೋದರಪ್ರಧಾನಿ ಪರಶುರಾಮನಾಯಕ, ಮಿತ್ರ ನಾಯಕ ಪರಿವಾರದವರೊಂದಿಗೆ ಕೈಮುಗಿದು ನಿಂತಿದ್ದರು - ದೈವೀ ಅನುಗ್ರಹವನ್ನು ಬೇಡುವ ಪುರುಷ ಪೌರುಷದಂತೆ.

ಗರ್ಭಗುಡಿಯೊಳಗೆ –

ಮಗ ಗಂಡುಗೊಡಲಿಯ ಪರಶುರಾಮನೊಂದಿಗೆ ನಿಂತ ಶ್ರೀ ರೇಣುಕಾ ಉತ್ಸವಾಂಬೆಗೆ ಪ್ರಧಾನ ಅರ್ಚಕರು ಸಹಸ್ರನಾಮಪೂರ್ವಕವಾಗಿ ಕುಂಕುಮಾರ್ಚನೆ ಮಾಡುತ್ತಿದ್ದರು. ಮತ್ತಿಬ್ಬರು ಪುಷ್ಪಾರ್ಚನೆ ಮಾಡುತ್ತಿದ್ದರು.

ದಿವ್ಯದುಕೂಲವನ್ನು ಧರಿಸಿ, ಅಡಿಯಿಂದ ಮುಡಿಯವರೆಗೆ, ದೀಪಗಳ ಬೆಳಕಿನಲ್ಲಿ ನಕ್ಷತ್ರಾಲಂಕಾರದಂತೆ ಕಂಗೊಳಿಸುವ ನವರತ್ನಾಭರಣಗಳನ್ನು ಧರಿಸಿ, ಅವಿಚ್ಛಿನ್ನ ಕುಂಕುಮಾರಾಧನೆಯಿಂದ ರಕ್ತಾಲಂಕೃತಳಾದಂತೆ ಕಾಣುತ್ತಿದ್ದ ದೇವಿಯ ರುದ್ರ-ಮಂಗಳಮೂರ್ತಿ ಯಾವ ಗಳಿಗೆಯಲ್ಲಾದರೂ ಮೇಲೆದ್ದು ಬರಬಹುದೇನೋ ಎಂಬಷ್ಟು ಜೀವಂತವಾಗಿ ಕಂಗೊಳಿಸುತ್ತಿತ್ತು.

ಗರ್ಭಗುಡಿಯೊಳಗೆ ದೇವಿಯ ಕುಂಕುಮಪೂಜೆ ನಡೆಯುತ್ತಿರುವಾಗಲೇ, ಹೊರಗೆ ಸುಖನಾಸಿಯಲ್ಲಿ ನಿಂತ ಸುವಾಸಿನಿಯರು ಭಕ್ತಿ ತುಂಬಿತುಳುಕುವ ಸುಮಧುರ ಧ್ವನಿಯಲ್ಲಿ ಹಾಡುತ್ತಿದ್ದರು –

“ಕಂಡ ನಿನ್ನಯ ಶ್ರೀಪಾದವಾ | ಶ್ರೀ ಉತ್ಸವಾಂಬಾ |
ಚಂಡದೈತ್ಯರ ಚೆಂಡಾಡಿದ ಸಿರಿಪಾದವಾ ||
ವರಮುನಿಯ ಕರಪಿಡಿದು
ಪರಶುರಾಮನ ಜನನಿ ಎನಿಸಿ |
ತರಿದೆ ಖಳರಾಜರೆಲ್ಲರನು
ಭರಂ ಮೂಜಗ ಕೊಂಡಾಡೆ ||
ಧಗಧಗಿಸುವ ಉರಿಗಣ್ಣ ತೆರೆದು
ಜಗಜಗಿಸಿ, ಎದಿರಾಂತ ರಾಕ್ಷಸರನೆ ತರಿದು |
ಮುದದಿ ಭಕ್ತಜನವ ಕಾಪಾಡು-
ಸದಯೆ, ನೀ ಬೇಡಿದ ವರ ನೀಡಿ ||

ವರದೆ ಕರುಣಿಸು ಶಕ್ತಿಯ-
ಭರದೆ ರಿಪುಜನರ ಶಿಕ್ಷಿಸುವ |
ಪುರವ ಕಾಪಾಡು ಪುರಹರನ ರಾಣಿ
ಕರಮುಗಿದು ಬೇಡುವೆ ಪರಮಕಲ್ಯಾಣಿ||"

ಒಂದೆಡೆ ಮುತ್ತೈದೆಯರು ದೇವೀಸ್ತೋತ್ರಗಳನ್ನು ಸುಶ್ರಾವ್ಯವಾಗಿ ಹಾಡುತ್ತಿರುವಾಗ, ಮತ್ತೊಂದೆಡೆ ದ್ವಿಜರು ಧೀರಗಂಭೀರ ಧ್ವನಿಯಲ್ಲಿ ಶ್ರೀನವದುರ್ಗಾಸ್ತವಪೂರ್ವಕವಾದ ನಾರಾಯಣೀಸ್ತೋತ್ರವನ್ನು ಪಠಿಸುತ್ತಿದ್ದರು –

"ಹಂಸಯುಕ್ತ ವಿಮಾನಸ್ಥೇ ಬ್ರಹ್ಮಾಣೀರೂಪಧಾರಿಣಿ |
ಕೌಶಾಂಭಃಕ್ಷರಿಕೇ ದೇವಿ ನಾರಾಯಣಿ ನಮೋಽಸ್ತುತೇ ||೧||

ತ್ರಿಶೂಲಚಂದ್ರಾಹಿಧರೇ ಮಹಾವೃಷಭವಾಹಿನಿ |
ಮಾಹೇಶ್ವರೀಸ್ವರೂಪೇಣ ನಾರಾಯಣಿ ನಮೋಽಸ್ತುತೇ ||೨||[3]

ಮಯೂರಕುಕ್ಕುಟವೃತೇ ಮಹಾಶಕ್ತಿ ಧರೇಽನಘೇ |
ಕೌಮಾರೀರೂಪಸಂಸ್ಥಾನೇ ನಾರಾಯಣಿ ನಮೋಽಸ್ತುತೇ ||೩||

ಶಂಖಚಕ್ರಗದಾಶಾರ್ಙ್ಗಗೃಹೀತ ಪರಮಾಯುಧೇ |
ಪ್ರಸೀದವೈಷ್ಣವೀರೂಪೇನಾರಾಯಣಿ ನಮೋಽಸ್ತುತೇ || ೪ ||[4]

[3] ೧. ಹೇ ನಾರಾಯಣಿ, ಬ್ರಹ್ಮಾಣಿಯ ರೂಪದಿಂದ ಹಂಸಯುಕ್ತವಾದ ವಿಮಾನದಲ್ಲಿ ಕುಳಿತಿರುವವಳೆ, ಕಮಂಡಲುವಿನಿಂದ ದರ್ಭೋದಕವನ್ನು ಪ್ರೋಕ್ಷಿಸುತ್ತ ಶತ್ರುಗಳನ್ನು ನಾಶಮಾಡುವ ದೇವಿಯೆ, ನಿನಗೆ ನಮಸ್ಕಾರ.

೨. ಹೇ ನಾರಾಯಣಿ, ತ್ರಿಶೂಲ-ಚಂದ್ರ-ಸರ್ಪಗಳನ್ನು ಧರಿಸಿ ಮಾಹೇಶ್ವರೀರೂಪದಿಂದ ಮಹಾವೃಷಭವಾಹಿನಿಯಾಗಿರುವ ನಿನಗೆ ನಮಸ್ಕಾರ.

[4] ೩. ಹೇ ನಾರಾಯಣಿ, ನವಿಲು-ಕೋಳಿಗಳಿಂದ ಆವೃತಳಾಗಿರುವವಳೆ, ಮಹಾಶಕ್ತಿಯನ್ನು ಧರಿಸಿರುವವಳೆ, ಪಾಪರಹಿತಳೆ, ಕೌಮಾರೀ ರೂಪದಲ್ಲಿರುವವಳೆ, ನಿನಗೆ ನಮಸ್ಕಾರ.

೪. ಹೇ ನಾರಾಯಣಿ, (ನಮ್ಮಲ್ಲಿ) ಪ್ರಸನ್ನಳಾಗು. ಶಂಖ ಚಕ್ರ ಗದೆ ಶಾರ್ಙ್ಗ ಧನುಸ್ಸು -ಮುಂತಾದ ಪರಮಾಯುಧಗಳನ್ನು ಧರಿಸಿದ ವಿಷ್ಣುವಿನ ಶಕ್ತಿಸ್ವರೂಪಳಾದ ನಿನಗೆ ನಮಸ್ಕಾರ.

ಗೃಹೀತೋಗ್ರಮಹಾಚಕ್ರ ದಂಷ್ಟ್ರೋದ್ಧೃತವಸುಂಧರೇ |
ವರಾಹರೂಪಿಣಿ ಶಿವೇ ನಾರಾಯಣಿ ನಮೋಽಸ್ತುತೇ ||೫||

ನೃಸಿಂಹರೂಪೇಣೋದ್ರೇಣ ಹಂತುಂ ದೈತ್ಯಾನ್ ಕೃತೋದ್ಯಮೇ |
ತ್ರೈಲೋಕ್ಯತ್ರಾಣಸಹಿತೇ ನಾರಾಯಣಿ ನಮೋಽಸ್ತುತೇ ||೬||[5]

ಕಿರೀಟನಿ ಮಹಾವಜ್ರೇ ಸಹಸ್ರನಯನೋಜ್ಜ್ವಲೇ |
ವೃತ್ರಪ್ರಾಣಹರೇ ಚೈಂದ್ರಿ ನಾರಾಯಣಿ ನಮೋಽಸ್ತುತೇ ||೭||

ಶಿವದೂತೀಸ್ವರೂಪೇಣ ಹತದೈತ್ಯಮಹಾಬಲೇ |
ಘೋರರೂಪೇ ಮಹಾರಾವೇ ನಾರಾಯಣಿ ನಮೋಽಸ್ತುತೇ ||೮||[6]

ದಂಷ್ಟ್ರಾಕರಾಲವದನೇ ಶಿರೋಮಾಲಾವಿಭೂಷಣೇ |
ಚಾಮುಂಡೇ ಮುಂಡಮಥನೇ ನಾರಾಯಣಿ ನಮೋಽಸ್ತುತೇ ||೯||

ಲಕ್ಷ್ಮೀಲಜ್ಜೇ ಮಹಾವಿದ್ಯೇ ಶ್ರದ್ಧೇ ಪುಷ್ಟಿ ಸ್ವಧೇ ಧ್ರುವೇ |

---

[5] ೫. ಹೇ ನಾರಾಯಣಿ, ವರಾಹರೂಪವನ್ನು ಧರಿಸಿ ಮಹಾಚಕ್ರವನ್ನು ಹಿಡಿದು ಕೋರೆದಾಡೆಗಳಿಂದ (ನೀರಿನಲ್ಲಿ ಮುಳುಗಿದ್ದ) ಭೂಮಿಯನ್ನು ಮೇಲಕ್ಕೆತ್ತಿದವಳೆ, ಮಂಗಳಸ್ವರೂಪಳೆ, ನಿನಗೆ ನಮಸ್ಕಾರ.
೬. ಹೇ ನಾರಾಯಣಿ, ಉಗ್ರವಾದ ನರಸಿಂಹರೂಪದಿಂದ ರಾಕ್ಷಸರನ್ನು ಸಂಹರಿಸಲುದ್ಯುಕ್ತಳಾದ ಮತ್ತು ತ್ರಿಲೋಕಸಂರಕ್ಷಣದಲ್ಲಿ ನಿರತಳಾದ ನಿನಗೆ ನಮಸ್ಕಾರ.

[6] ೭. ಹೇ ನಾರಾಯಣಿ, ಕಿರೀಟವನ್ನೂ ಮಹಾವಜ್ರಾಯುಧವನ್ನೂ ಧರಿಸಿರುವ, ಸಹಸ್ರ ನಯನಗಳಿಂದ ಪ್ರಜ್ವಲಿಸುತ್ತಿರುವ, ವೃತ್ರಾಸುರನ ಪ್ರಾಣಹರಣ ಮಾಡಿದ ಇಂದ್ರಾಣೀರೂಪಳಾದ ನಿನಗೆ ನಮಸ್ಕಾರ.
೮. ಹೇ ನಾರಾಯಣಿ, ಶಿವದೂತಿಯ ರೂಪದಿಂದ ದೈತ್ಯರ ಮಹಾಸೈನ್ಯವನ್ನು ನಾಶ ಮಾಡಿದವಳೆ, ಘೋರರೂಪಿಯೆ, ಮಹಾನಾದಳೆ, ನಿನಗೆ ನಮಸ್ಕಾರ.

ಮಹಾರಾತ್ರಿ ಮಹಾಮಾಯೇ ನಾರಾಯಣಿ ನಮೋಽಸ್ತುತೇ ||೧೦||[7]

ಮೇಧೇ ಸರಸ್ವತಿ ವರೇ ಭೂತಿ ಭಾಭ್ರವಿ ತಾಮಸಿ |
ನಿಯತೇ ತ್ವಂ ಪ್ರಸೀದೇಶೇ ನಾರಾಯಣಿ ನಮೋಽಸ್ತುತೇ ||೧೧||

ಸರ್ವಸ್ವರೂಪೇ ಸರ್ವೇಶೇ ಸರ್ವಶಕ್ತಿ ಸಮನ್ವಿತೇ |
ಭಯೇಭ್ಯಸ್ತ್ರಾಹಿ ನೋ ದೇವಿ ದುರ್ಗೇ ದೇವಿ ನಮೋಽಸ್ತುತೇ ||೧೨||[8]

ಏತತ್ತೇ ವದನಂ ಸೌಮ್ಯಂ ಲೋಚನತ್ರಯಭೂಷಿತಮ್ |
ಪಾತು ನಃ ಸರ್ವಭೀತಿಭ್ಯಃ ಕಾತ್ಯಾಯಿನಿ ನಮೋಽಸ್ತುತೇ ||೧೩||

ಜ್ವಾಲಾಕರಾಲ ಮತ್ಯುಗ್ರಮಶೇಷಾಸುರಸೂದನಮ್ |
ತ್ರಿಶೂಲಂ ಪಾತು ನೋ ಭೀತೇರ್ಭದ್ರಕಾಲಿ ನಮೋಽಸ್ತುತೇ ||೧೪||[9]

---

[7] ೯. ಹೇ ನಾರಾಯಣಿ, ಚಾಮುಂಡಾಂಬಿಕೆ, ಕೋರೆದಾಡೆಗಳಿಂದ ಭಯಂಕರವಾದ ಮುಖವುಳ್ಳವಳೆ, ನರಶಿರಸ್ಸುಗಳ ಮಾಲೆಯಿಂದ ಅಲಂಕೃತಳಾದವಳೆ, ಮುಂಡಾಸುರ ಸಂಹಾರಿಯೆ, ನಿನಗೆ ನಮಸ್ಕಾರ.
೧೦. ಹೇ ನಾರಾಯಣಿ, ಲಕ್ಷ್ಮೀಸ್ವರೂಪಳೂ ಲಜ್ಜಾಸ್ವರೂಪಳೂ ಬ್ರಹ್ಮವಿದ್ಯಾಸ್ವರೂಪಳೂ ಶ್ರದ್ಧಾಸ್ವರೂಪಳೂ ಪುಷ್ಟಿಸ್ವರೂಪಳೂ ಸ್ವಧಾಮಂತ್ರಸ್ವರೂಪಳೂ ನಿತ್ಯಳೂ ಮಹಾಪ್ರಳಯ ಕಾಲದ ರಾತ್ರಿ ಸ್ವರೂಪಳೂ ಮಹಾಮಾಯೆಯೂ ಆದ ನಿನಗೆ ನಮಸ್ಕಾರ.

[8] ೧೧. ಹೇ ನಾರಾಯಣಿ, ಪ್ರಸನ್ನಳಾಗು! ಮೇಧಾಸ್ವರೂಪಳೂ ಸರಸ್ವತೀಸ್ವರೂಪಳೂ ಸರ್ವಶ್ರೇಷ್ಠಳೂ ಸತ್ವಾದಿಗುಣತ್ರಯಯುಕ್ತಳೂ ಈಶ್ವರಿಯೂ ಆದ ನಿನಗೆ ನಮಸ್ಕಾರ.
೧೨. ಸರ್ವರೂಪಳೆ, ಸರ್ವೇಶ್ವರಿಯೆ, ಸರ್ವಶಕ್ತಿಯುತಳೆ, ದುರ್ಗಾದೇವಿಯೆ, ನಮ್ಮನ್ನು ಸರ್ವಭಯಗಳಿಂದಲೂ ಕಾಪಾಡು. ನಿನಗೆ ನಮಸ್ಕಾರ.

[9] ೧೩. ಹೇ ಕಾತ್ಯಾಯಿನಿ, ತ್ರಿಲೋಚನದಿಂದ ಭೂಷಿತವೂ ಸೌಮ್ಯವೂ ಆದ ಈ ನಿನ್ನ ವದನವು ನಮ್ಮನ್ನು ಸಕಲ ಭಯಗಳಿಂದಲೂ ಕಾಪಾಡಲಿ. ನಿನಗೆ ನಮಸ್ಕಾರ.
೧೪. ಹೇ ಭದ್ರಕಾಳಿ, ಜ್ವಾಲೆಗಳಿಂದ ಭಯಂಕರವೂ ಅತ್ಯುಗ್ರವೂ ಸಂಪೂರ್ಣ. ಅಸುರ ಸಂಹಾರಿಯೂ ಆದ ನಿನ್ನ ತ್ರಿಶೂಲವು ನಮ್ಮನ್ನು ಭಯದಿಂದ ಪಾರುಮಾಡಲಿ. ನಿನಗೆ ನಮಸ್ಕಾರ.

ಹಿನಸ್ತಿ ದೈತ್ಯತೇಜಾಂಸಿ ಸ್ವನೇನಾಪೂರ್ಯ ಯಾ ಜಗತ್ |
ಸಾ ಘಂಟಾ ಪಾತು ನೋ ದೇವಿ ಪಾಪೇಭ್ಯೋಃ ನಃ ಸುತಾನಿವ ||೧೫||

ಅಸುರಾಸೃಗ್ವಸಾಪಂಕಚರ್ಚಿತಸ್ತೇ ಕರೋಜ್ಜ್ವಲಃ |
ಶುಭಾಯ ಖಡ್ಗೋ ಭವತು ಚಂಡಿಕೇ ತ್ವಾಂ ನತಾವಯಮ್" ||೧೬||[10]

ಈ ಎಲ್ಲ ಸ್ತೋತ್ರಪ್ರಾರ್ಥನೆಗಳಿಗೆ ಮೈದುಂಬಿಸುವಂತೆ ದೇವಾಲಯದ ಮಹಾದ್ವಾರದ ಬಳಿ ಪಂಚಮಹಾವಾದ್ಯಗಳು ಮೊಳಗುತ್ತಾ, ನಗಾರಿ-ನೌಬತ್ತುಗಳು ಲಯಬದ್ಧವಾಗಿ ದುಮುದುಮಿಸುತ್ತಿದ್ದವು.

ಆ ನಾನಾ ಪುಷ್ಪಗಳ, ಸುಗಂಧದ್ರವ್ಯಗಳ ಪರಿಮಳಮಯವಾದ ಅರೆಗತ್ತಲಿನ ಗಂಭೀರ ವಾತಾವರಣದಲ್ಲಿ ಮಧುರ ಮಂಗಳ ಮಾತೃಸ್ತೋತ್ರವನ್ನು ಕೇಳುತ್ತಾ, ಅರ್ಚಕರು ಮಂದ್ರ ಧ್ವನಿಯಲ್ಲಿ ಹೇಳುತ್ತಿದ್ದ ತಾಯಿಯ ಸಹಸ್ರನಾಮಗಳನ್ನು ಆಲಿಸುತ್ತಾ, ಕರೆ ಕೇಳಿ ಎದ್ದು ಬರುವಂತಿದ್ದ ಉತ್ಸವಾಂಬೆಯ ದಿವ್ಯಮೂರ್ತಿಯನ್ನು ನೋಡುತ್ತಾ ಮದಕರಿನಾಯಕನ ಹೃದಯದಲ್ಲಿ ಭಕ್ತಿ-ಪ್ರೇಮಗಳು ತುಂಬಿಬಂದು, ಎದೆಯುಬ್ಬಿ, ಕಂಗಳಲ್ಲಿ ಬಾಷ್ಪವಾರಿ ತುಳುಕಿ, ಮೈಮರೆತು ಪ್ರಾರ್ಥಿಸಿದ –

"ತಾಯಿ, ನಿನ್ನ ಪವಿತ್ರ ಕೀರ್ತಿಯನ್ನು ಲೋಕಕ್ಕೆ ಸಾರಿದ ನಿನ್ನ ಮಗ ಪರಶುರಾಮನ ಗಂಡುಗೊಡಲಿಯ ಶಕ್ತಿಯನ್ನು ನನ್ನ ತೋಳುಗಳಿಗೆ ಅನುಗ್ರಹಿಸು....ಅಂದಿನ ಕಾರ್ತ್ಯವೀರ್ಯಾರ್ಜುನ ಇಂದು ಹೈದರಾಲಿಯಾಗಿ ಬಂದಿದ್ದಾನೆ. ಈ ನಿನ್ನ ಮಗನ ತಲೆ ನಿನಗಲ್ಲದೆ ಬೇರಾರಿಗೂ ಬಾಗದಂತೆ ಅನುಗ್ರಹ ಮಾಡು. ಅಂದು ನಿನ್ನ ಮಗ - ತನ್ನ ಪರಶುವನ್ನು ಶತ್ರುರಕ್ತದಲ್ಲಿ ತೊಳೆದು ನಿನ್ನ ಕೀರ್ತಿಯನ್ನು ಮೆರೆಸಿದಂತೆ, ಇಂದು 'ನಿನ್ನ ಕ್ಷೇತ್ರವನ್ನು ತನ್ನ ಕಾಲಿನ ಧೂಳಿನಿಂದ ಕಳಂಕಿತಗೊಳಿಸಿದ ನವಾಬನ ಪಶುಸೇನೆಯ ರುಧಿರದಿಂದ, ಈ ದುರ್ಗಕ್ಕೆ ರಕ್ತಾಭಿಷೇಕ ಮಾಡಿ, ಈ ಕಳಂಕವನ್ನು ತೊಳೆದುಬಂದು ನಿನ್ನ ಪಾದದರ್ಶನ ಮಾಡುತ್ತೇನೆ. ಇಲ್ಲವೇ ರಣಾಂಗಣದಲ್ಲಿ

[10] ೧೫. ಹೇ ದೇವಿ, ಯಾವ ನಿನ್ನ ಘಂಟೆಯು ತನ್ನ ಧ್ವನಿಯಿಂದ ಜಗತ್ತನ್ನೆಲ್ಲ ತುಂಬಿಸಿ ರಾಕ್ಷಸರ ತೇಜಸ್ಸನ್ನೆಲ್ಲ ನಾಶ ಮಾಡುತ್ತದೆಯೋ ಅದು ನಮ್ಮನ್ನು - ತಾಯಿ ತನ್ನ ಮಕ್ಕಳನ್ನು ಕಾಪಾಡುವಂತೆ - ಕಾಪಾಡಲಿ.

೧೬. ಹೇ ಚಂಡಿಕೆ, ಅಸುರರ ರಕ್ತದಿಂದ ಮತ್ತು ಕೊಬ್ಬಿನ ಕೆಸರಿನಿಂದ ಲೇಪಿತವಾಗಿ ತೇಜೋಮಯವಾಗಿರುವ ನಿನ್ನ ಖಡ್ಗವು ನಮಗೆ ಶುಭವನ್ನುಂಟುಮಾಡಲಿ. ನಿನಗೆ ಬಾಗುತ್ತೇನೆ.

ಅರಿರುಂಡಗಳ ಚಂಡಾಡಿ, ರಕ್ತಸ್ನಾನ ಮಾಡಿ ನಿನ್ನ ಚರಣಗಳಿಗೆ ನನ್ನ ತಲೆಯ ಹೂವನ್ನು ಒಪ್ಪಿಸುತ್ತೇನೆ. ಈ ಎರಡರಲ್ಲಿ ಯಾವುದು ನಿನಗೆ ಪ್ರೀತಿಯೋ ಅದನ್ನು ಒಪ್ಪಿಸಿಕೊ... ನಾನು ಬೇಡುವುದು ಇಷ್ಟೇ - ತಾಯಿ, ಕೊಡು ನಿನ್ನ ಭಂಡಾರ ರಕ್ಷೆ : ಕರವಾಳ ಭಿಕ್ಷೆ."

ಹಾಗೆಂದು ಬೇಡಿ ದೀರ್ಘದಂಡಪ್ರಣಾಮ ಮಾಡಿದ ಮದಕರಿನಾಯಕ.

ನಾಯಕರು ಹಾಗೆ ಬೇಡುತ್ತಾ ಮಲಗಿರುವಾಗಲೇ, ಪೂಜೆ ಮುಗಿಸಿ ಮಂಗಳಾರತಿ ಮಾಡುತ್ತಿದ್ದ ಅರ್ಚಕರು ಮೈದುಂಬಿದಂತೆ ಕೂಗಿದರು –

"ಹೂ ಕೊಟ್ಟಳು....ತಾಯಿ ಹೂ ಕೊಟ್ಟಳು....ಬಲಗಡೆಯಿಂದ ಹೂ ಕೊಟ್ಟಳು...."

ಅರ್ಚಕರಾಡಿದ ಆ ಮಾತನ್ನು ಕೇಳಿ, ದೇವಾಲಯದಲ್ಲಿ ಕಿಕ್ಕಿರಿದು ನೆರೆದವರ ಹೃದಯಗಳಲ್ಲಿ ಮಿಂಚು ಸಂಚರಿಸಿದಂತಾಗಿ, ಒಳಗೆ-ಹೊರಗೆ ಹೊತ್ತಿ ಉರಿಯುತ್ತಿದ್ದ ದೀಪಗಳ ಬೆಳಕು ಅವರ ಮೈಯಲ್ಲಿ ತುಂಬಿ, ಗಂಟೆ-ಜಾಗಟೆ-ನಗಾರಿಗಳನ್ನು ಮೊಳಗಿಸುತ್ತಾ ದೇವಿಯ, ನಾಯಕರ ನಾಮದ ಜಯಘೋಷ ಮಾಡಿದರು-

"ಉಚ್ಚಂಗಮ್ಮನಿಗೆ ಜಯವಾಗಲಿ-

"ಮದಕರಿನಾಯಕರಿಗೆ ಜಯವಾಗಲಿ !"

ಆ ಕೂಗು ಕೇಳಿ ಮೇಲೆದ್ದು ನಿಂತ ಮದಕರಿನಾಯಕ, ತನ್ನಿದಿರು ಹಿಡಿದ ಮಂಗಳಾರತಿಯನ್ನು ಸ್ವೀಕರಿಸಿ, ಅರ್ಚಕರಿತ್ತ ಭಂಡಾರವನ್ನು ಲಲಾಟದಲ್ಲಿ ಧರಿಸುವ ವೇಳೆಗೆ, ಮುಖ್ಯ ಆರ್ಚಕರು ದೇವಿಯೊಂದಿಗೇ ಪೂಜಿಸಿದ ನಾಯಕರ ರಣಖಡ್ಗವನ್ನು ನಾಯಕರ ಕೈಗಿತ್ತು ವಂದಿಸಿದ ಮದಕರಿನಾಯಕನನ್ನು ಆಶೀರ್ವದಿಸುತ್ತಾ –

"ವಿಜಯೀಭವ. ತಾಯಿ ಸುಳ್ಳಾಡುವುದಿಲ್ಲ. ನೀವು ಬಯಸಿದ ಬೇಡಿಕೆ ಹುಸಿಯಾಗುವುದಿಲ್ಲ" - ಎಂದು ಹೇಳಿದರು.

ಅರ್ಚಕರಿತ್ತ ಖಡ್ಗವನ್ನು ಬೊಗಸೆಯಲ್ಲಿ ಹಿಡಿದು ಮದಕರಿನಾಯಕ ದೇವಿಗೆ ವಂದಿಸಿ, ಧೀರ ನಿಲುವಿನಲ್ಲಿ ನಿಂತು ಹೇಳಿದ –

"ತಾಯಿ - ನಿನ್ನ ಮಾತು, ನನ್ನ ಮಾತು - ಎರಡೂ ಸುಳ್ಳಾಗುವುದಿಲ್ಲ. ನೀನು ಅನುಗ್ರಹಿಸಿದ ಖಡ್ಗಕ್ಕೆಂದೂ ಸೋಲಿಲ್ಲ. ಈ ಮಾತಿಗೆ ನನ್ನ ತಲೆ ಮೀಸಲು."

* * *

ಶ್ರೀ ಉತ್ಸವಾಂಬೆಯ ದೇವಾಲಯದಲ್ಲಿ ನಡೆದ ಪೂಜೆಯೆಲ್ಲವನ್ನೂ ಮುಗಿಸಿಕೊಂಡು, ರಾಜ ಪರಿವಾರ ಅರಮನೆಗೆ ಹಿಂದಿರುಗಿದಬಳಿಕ ಉಟ್ಟ ಮಡಿಯನ್ನು ಬದಲಿಸದೆ, ತನ್ನೊಂದಿಗಿದ್ದ ಮಗ ಭರಮಣ್ಣನಾಯಕನಿಗೆ –

"ಭರಮಣ್ಣ, ನೀನೂ ಉಟ್ಟ ಮಡಿಯನ್ನು ಬದಲಿಸಬೇಡ. ಅದಕ್ಕೆ ಮೊದಲು ನಾವು ಮಾಡಬೇಕಾದ ಮತ್ತೊಂದು ಪೂಜೆಯಿದೆ"

- ಎಂದು ಹೇಳಿ, ದಾಸಿಯರು ತಂದಿತ್ತ ಪೂಜಾದ್ರವ್ಯಗಳ ಹರಿವಾಣವನ್ನು ರೇಶಿಮೆಯ ಬಟ್ಟೆಯಲ್ಲಿ ಗಂಟುಕಟ್ಟಿ ತನ್ನ ಹೆಗಲಿಗೆ ಹಾಕಿಕೊಂಡು, ಮಗನೊಂದಿಗೆ ಅರಮನೆಯಿಂದ ಹೊರಬಂದು ಸುಬ್ರಹ್ಮಣ್ಯಸ್ವಾಮಿಯ ದೇವಾಲಯದವರೆಗೂ ನಡೆದು, ತಮ್ಮೊಂದಿಗೆ ಬಂದ ಇಬ್ಬರು ಅಂಗರಕ್ಷಕರಿಗೆ ಮತ್ತಾರೂ ಅತ್ತಕಡೆ ಬರದಂತೆ ಕಾವಲಿರಲು ಹೇಳಿ, ಅವರ ಕೈಯಲ್ಲಿದ್ದ ದೀವಟಿಗೆಯೊಂದನ್ನು ತನ್ನ ಕೈಯಲ್ಲಿ ಹಿಡಿದು, ಮಗನೊಂದಿಗೆ ದೇವಾಲಯವನ್ನು ಪ್ರವೇಶಿಸಿ, ಸುಬ್ರಹ್ಮಣ್ಯಸ್ವಾಮಿಗೆ ವಂದಿಸಿ, ಮಗನಿಗೂ ನಮಸ್ಕರಿಸಲು ಹೇಳಿ, ಅದಾದ ಬಳಿಕ, ಪೂಜಾಮೂರ್ತಿಯ ಹಿಂದಿದ್ದ ಕತ್ತಲು ಕವಿದು ನಿಶ್ಶಬ್ದವಾಗಿ ಬಾಯ್ದೆರೆದಿದ್ದ ಗುಹೆಯೊಂದನ್ನು ಪ್ರವೇಶಿಸಿ –

"ಭರಮಣ್ಣ, ಹೆದರಬೇಡ - ನನ್ನ ಹಿಂದೆ ಬಾ, ಏನೂ ಭಯವಿಲ್ಲ"

- ಎಂದು ಹೇಳಿ, ಮುಂದೆ ನಡೆದ ಮದಕರಿನಾಯಕ.

'ಎಲ್ಲಿಗೆ', 'ಏಕೆ' ಎಂದು ಕೇಳದೆ ಕುಮಾರ ಭರಮಣ್ಣ ನಾಯಕ ಗುಹಾಮಾರ್ಗದಲ್ಲಿ ದೀವಟಿಗೆಯ ಬೆಳಕಿನಲ್ಲಿ ತನ್ನ ತಂದೆಯನ್ನು ಹಿಂಬಾಲಿಸಿದ.

ಮೊದಲು ತಲೆ ಎತ್ತಿ, ಜೊತೆಜೊತೆಗೆ ನಡೆಯುವಷ್ಟು ವಿಸ್ತಾರವಾಗಿದ್ದ ಆ ಗುಹಾಮಾರ್ಗ ಬರಬರುತ್ತಾ, ಕಿರಿದಾಗಿ, ಭರಮಣ್ಣ ನಾಯಕ ತಂದೆಯನ್ನು ಹಿಂಬಾಲಿಸಿ ಮತ್ತಷ್ಟು ದೂರ ನಡೆದಬಳಿಕ ಎತ್ತರವೂ ಕಿರಿದಾಗಿ, ಮೊದಲು ನಡುಬಗ್ಗಿಸಿ ಅಷ್ಟು ದೂರ, ಬಳಿಕ ತೆವಳುತ್ತಾ ಮತ್ತಷ್ಟು ದೂರ ನಡೆದರು. ಅಷ್ಟು ದೂರ ಬಂದಬಳಿಕ ಇದ್ದಕ್ಕಿದ್ದಂತೆಯೇ ಗವಿಯ ದಾರಿ ಮುಗಿದು ನೆತ್ತಿಯ ಮೇಲೆ ಮಬ್ಬು ಬೆಳದಿಂಗಳಲ್ಲಿ ಮಂಕಾಗಿ ನಕ್ಷತ್ರಗಳು ಮಿನುಗುತ್ತಿದ್ದ ಮುಗಿಲತುಂಡು ಕಾಣಿಸಿ, ಮುಂದಕ್ಕೆ ದಾರಿಯೇ ಇಲ್ಲದೆ ಕಾಲ ಬಳಿ ತಳಕಾಣದ ಕತ್ತಲು ತುಂಬಿದ ಕಮರಿಯೊಂದು ಬಾಯ್ಬಿಟ್ಟು ಬೆದರಿಸಿತು. ಅಷ್ಟೇನೂ ಅಗಲವಲ್ಲದ ಕಮರಿಯ ಆಚೆ ಒಂದು ಹಾಸುಬಂಡೆ. 'ಹೆದರಬೇಡ. ನಾನು ಮಾಡಿದ ಹಾಗೆ ಮಾಡು' ಎಂದು ಮಗನಿಗೆ ಹೇಳಿ, ದೀವಟಿಗೆ ಹಿಡಿದೇ ಕಮರಿಯನ್ನು ಲಂಘಿಸಿ, ತನ್ನ ಮಗನೂ ಕಮರಿಯನ್ನು ಹಾರಿ ಬರುವವರೆಗೂ ಕಾದಿದ್ದ ಮದಕರಿನಾಯಕ, ಹಾರಿಬಂದ ಮಗನನ್ನು ತಬ್ಬಿಹಿಡಿದು, 'ಮುಂದಿನದು ಇಳಿವು ದಾರಿ.

ನಯಗಲ್ಲು. ಹುಷಾರಾಗಿ ನಡೆಯಬೇಕು' ಎಂದು ಎಚ್ಚರಿಕೆ ಹೇಳಿ, ಒಂದು ಕೈಯಲ್ಲಿ ದೀವಟಿಗೆ ಹಿಡಿದು, ಮತ್ತೊಂದು ಕೈಯಲ್ಲಿ ಮಗನಿಗೆ ಆಸರೆಕೊಟ್ಟು, ನಿಧಾನವಾಗಿ, ಎಚ್ಚರವಾಗಿ, ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ಮದಕರಿನಾಯಕ ಮುಂದೆ ನಡೆದ.

ಅಷ್ಟು ದೂರ ಬಯಲಿನಲ್ಲಿ, ಬೋಳುಬಂಡೆಯ ಇಳಕಲು ದಾರಿಯಲ್ಲಿ ಹೆಜ್ಜೆ ಹೆಜ್ಜೆಗೂ ಮಗನಿಗೆ ಎಚ್ಚರ ಹೇಳುತ್ತಾ ನಡೆದ ಮದಕರಿನಾಯಕ, ಆ ಬಂಡೆಯಂಚಿನ ಬಳಿ ನಿಂತು, ದೀವಟಿಗೆಯ ಬೆಳಕಿನಲ್ಲಿ ಸುತ್ತಲೂ ನೋಡಿದ. ವಿವಿಧಾಕಾರದ ಬೋಳುಬಂಡೆಗಳು ನಾಲ್ದೆಸೆಯಲ್ಲೂ ಕಿಕ್ಕಿರಿದು, ನೆತ್ತಿಯಮೇಲಿನ ಆಕಾಶವಲ್ಲದೆ ಬೇರೇನೂ ಕಾಣುತ್ತಿರಲಿಲ್ಲ. ಎತ್ತಕಡೆಯೂ ಹೋಗುವ ಮಾರ್ಗವಿದ್ದಂತಿರಲಿಲ್ಲ. ದಿಬ್ಬಂಧನ ಮಾಡಿದಂತಿದ್ದ ಆ ಶಿಲಾಸಮೂಹದಲ್ಲಿ, ಜಿರ್‌ಜಿರ್ ಎನ್ನುವ ಮಿಡತೆಗಳ ಮೌನವನ್ನು ಹೆಪ್ಪುಗಟ್ಟಿಸುವ ಸದ್ದಲ್ಲದೆ ಮತ್ತಾವ ಸದ್ದೂ ಕೇಳಿಸದ ಆ ಮೌನದಲ್ಲಿ, ಹೊರಗಿನ ಚಳಿ ಮೈಯ ನೆತ್ತರನ್ನು ತಣ್ಣಗಾಗಿಸಿ, ಅಂಗಾಂಗಗಳಲ್ಲಿ ದುರ್ಬಲತೆಯನ್ನು ಕವಿಸುವ ವಾತಾವರಣದಲ್ಲಿ 'ಮುಂದೇನು ಮಾಡಬೇಕು' ಎಂದು ತಿಳಿಯದೆ ಕುಮಾರ ಭರಮಣ್ಣನಾಯಕ ತೊಳಲಾಡುತ್ತಿರುವಾಗಲೇ –

"ಹೆದರಿಕೆಯಾಗುತ್ತಿದೆಯೇ ಭರಮಣ್ಣ?"

- ಎಂದು ರಾತ್ರಿಯ ತಂಗಾಳಿಯಷ್ಟು ಮೃದುವಾದ ಧ್ವನಿಯಲ್ಲಿ ಕೇಳಿದ ಮದಕರಿನಾಯಕ.

ಆ ಇರುಳಿನ ವಿಚಿತ್ರ ವಾತಾವರಣದಲ್ಲಿ ಚಿರಪರಿಚಿತವಾದ ತಂದೆಯ ಧ್ವನಿಯೂ ಅಪರಿಚಿತ ಕಂಠದಂತೆ ಕೇಳಿಸಿ, ಆ ಮಾತು 'ಧೋ' ಎನ್ನುವ ಮೌನದ ಗಭೀರತೆಯನ್ನು ಹೆಚ್ಚಿಸಿದರೂ, ಹೃದಯದಲ್ಲಿ ನೆತ್ತರು ಮಿಡಿವ ಅಸ್ತವ್ಯಸ್ತವಾದರೂ, ಅದನ್ನು ತೋರಗೊಡದೆ –

"ಭಯವೇಕೆ ಅಪ್ಪಾಜಿ, ನೀವಿದ್ದೀರಲ್ಲ!".

- ಎಂದ ಭರಮಣ್ಣನಾಯಕ, ಇಳಕಲು ದಾರಿಯಲ್ಲಿ ನಿಧಾನವಾಗಿ ಹೆಜ್ಜೆಯೂರಿ ನಡೆದು, ನೋಯುತ್ತಿದ್ದ ಮೊಳಕಾಲುಗಳನ್ನು ನೀವಿಕೊಳ್ಳುತ್ತಾ.

"ನಾನಿಲ್ಲದಿದ್ದರೆ - ನೀನೊಬ್ಬನೇ ಆಗಿದ್ದಿದ್ದರೆ - ಭಯವಾಗುತ್ತಿತ್ತೇ ?"

'ಆಗುತ್ತಿತ್ತು' ಎಂದು ತಟಕ್ಕನೆ ಹೇಳಬೇಕೆನಿಸಿದರೂ, ಮರುಗಳಿಗೆಯೇ ಆ ಅನಿಸಿಕೆಯೇ ಅಸಹ್ಯವಾಗಿ –

"ನೀವಿಲ್ಲದಿದ್ದರೇನು, ನನ್ನ ತೋಳುಗಳಿಲ್ಲವೇ, ಅಪ್ಪಾಜಿ. ಅವಿರುವಾಗ ಭಯವೇಕೆ ?"

-ಎಂದು ಪಿಸುದನಿಯಲ್ಲೇ ಉತ್ತರ ಕೊಟ್ಟ ಭರಮಣ್ಣನಾಯಕ.

"ತೋಳುಗಳು ಹೆಂಗಸಿಗೂ ಇರುತ್ತದೆ, ಭರಮಣ್ಣ, ಬರೀ ತೋಳಿದ್ದರೆ ಆಯಿತೇ ?"

“ಆದರೆ ನಾನು ಹೆಂಗಸಲ್ಲ ಅಪ್ಪಾಜಿ, ಗಂಡಸು.”

“ಹೌದೇ - ಹಾಗಿದ್ದರೆ ಬಾ. ನಿನ್ನ ಗಂಡಸುತನಕ್ಕಿದು ಪರೀಕ್ಷಾಸಮಯ”

-ಎಂದು ಹೇಳಿ, ತಟಕ್ಕನೆ ಕೈಯಲ್ಲಿದ್ದ ದೀವಟಿಗೆಯನ್ನು ಕಾಲಿನತ್ತ ತಗ್ಗಿಸಿ –

“ನೋಡು” – ಎಂದ ಮದಕರಿನಾಯಕ.

ಭರಮಣ್ಣನಾಯಕ ನೋಡಿದ –

ಕಾಲಂಚಿನಲ್ಲಿಯೇ ಭೂಮಿ ಬಾಯಿರಿದಂಥ ಅಗಲವಾದ, ಪಂಜಿನ ಬೆಳಕನ್ನು ಕುರುಡಾಗಿಸುವಷ್ಟು ದಟ್ಟವಾದ ಕತ್ತಲು ತುಂಬಿದ ಕಮರಿ. ಅದರ ಬಾಯಿ ಮಾತ್ರ ಕಾಣುತ್ತಿದೆ. ತಳವೆಲ್ಲೋ - ?

“ಈ ಕಮರಿಯೊಳಗೆ ನಾನು ಹಾರುತ್ತೇನೆ. ನನ್ನ ಹಿಂದೆ ನೀನೂ ಹಾರಬೇಕು. ಹಾರಿ, ಕಾಲು ನೆಲ ಸೋಕಿದಬಳಿಕ, ಕಾಲು ಬಂಡೆಯನ್ನು ಕಚ್ಚಬೇಕು. ಅತ್ತಿತ್ತ ಹೊಯ್ದಾಡಿದರೆ ನನಗೆ ನೀನೂ ಇಲ್ಲ, ನಿನಗೆ ನಾನೂ ಇಲ್ಲ. ನಡುವೆ ಬಂಡೆಯ ತುದಿ. ಅದರ ಇಬ್ಬದಿಯಲ್ಲ ಕೊರಕಲು, ಹಾರುತ್ತೀಯೋ ಅಥವಾ ಇಲ್ಲೇ ನಿಲ್ಲುತ್ತೀಯೋ ?”

-ಕೆಣಕಿದಂತೆ ಕೇಳಿದ ಮದಕರಿನಾಯಕ.

“ನೀವು ಹಾರಬಹುದಾದರೆ ನಾನು ಹಾರುತ್ತೇನೆ, ಅಪ್ಪಾಜಿ. ನಿಮಗಿಲ್ಲದ ಭಯ ನನಗಿಲ್ಲ.”

- ಸವಾಲಿಗೆ ಉತ್ತರ ಕೊಟ್ಟಂತೆ ಹೇಳಿದ ಭರಮಣ್ಣನಾಯಕ.

“ಸರಿ, ಹಾಗಿದ್ದರೆ ಈ ದೀವಟಿಗೆ ತಗೊ, ಕೊಂಚ ಬೆಳಕು ತೋರಿಸು.”

- ಎಂದು ಹೇಳಿ, ತನ್ನ ಕೈಯಲ್ಲಿದ್ದ ದೀವಟಿಗೆಯನ್ನು ಮಗನ ಕೈಗೆ ಕೊಟ್ಟು, ಅದರ ಬೆಳಕಿನಲ್ಲಿ ಕಮರಿಯನ್ನು ನೋಡುತ್ತಾ ಉಸಿರೆಳೆದು ಎದೆಯಲ್ಲಿ ಹಿಡಿದು, ಮೈ ಹಗುರ ಮಾಡಿಕೊಂಡು ದುಮುಕಿದ ಮದಕರಿನಾಯಕ - ಕಗ್ಗತ್ತಲಿನ ಆಳಕ್ಕೆ.

ಕ್ಷಣಕಾಲ ಪ್ರಪಂಚದ ಚಲನೆಯೇ ನಿಂತಂಥ ಮೌನ. ಬಳಿಕ ಎಷ್ಟೋ ಆಳದಲ್ಲಿ ’ದೊಪ್ಪೆಂದು’ ಬಿದ್ದ ಶಬ್ದ. ಮತ್ತೆ ಮೌನ. ಕುಮಾರ ಭರಮಣ್ಣನಾಯಕನ ಹೃದಯ ಬಾಯಿಗೆ ಬಂದಂತಾಯಿತು - ಆ ಕ್ಷಣದಲ್ಲಿ.

ಒಂದು ಕ್ಷಣ –

ಎಷ್ಟೋ ಹೊತ್ತು ಎನಿಸಿದ ಆ ಒಂದು ಕ್ಷಣ –

ಬಳಿಕ –

“ದೀವಟಿಗೆಯನ್ನು ಕೆಳಗೆ ಹಾಕಿ, ನಾನು ಕೂಗಿದಮೇಲೆ ಹಾರು”

- ಎಂದು ಎಲ್ಲೋ ಪಾತಾಳದಾಳದಲ್ಲಿ ಮದಕರಿನಾಯಕ ಹೇಳಿದ್ದು ಕೇಳಿಸಿತು.

ತನ್ನ ತಂದೆ ಹೇಳಿದಂತೆಯೇ ಮಾಡಿದ ಭರಮಣ್ಣನಾಯಕ. ಕಮರಿಗೆಸೆದ ದೀವಟಿಗೆ ಕೆಳಗೆ ಬೀಳುತ್ತಲೇ ಆರಿಹೋಗಿ, ಎಲ್ಲೆಲ್ಲೂ ಕತ್ತಲಾವರಿಸಿ, ಎದೆಗೆಡಿಸುವ ಕತ್ತಲಿನಲ್ಲೇ ಅಸ್ಪಷ್ಟವಾಗಿ ಮದಕರಿನಾಯಕ –

"ಹೂ – ಹಾರು" – ಎಂದದ್ದು ಕೇಳಿಸಿತು.

ಆ ಮಾತು ಕೇಳಿ ಭರಮಣ್ಣನಾಯಕನಿಗೆ ಕ್ಷಣಕಾಲ ಸಾವು ಬಂದು ತನ್ನನ್ನು ಕರೆದಂತಾತಾಯಿತು. ಮರುಗಳಿಗೆಯೇ ತಾನಾರೆಂಬುದನ್ನು ನೆನಪಿಸಿಕೊಂಡು-

"ಬಂದೆ" – ಎಂದು ಹೇಳಿ, ದೇವರನ್ನು ಸ್ಮರಿಸಿ ಕತ್ತಲಾಳಕ್ಕೆ ಜಿಗಿದ.

ಹಾರಿದುದಷ್ಟೇ ನೆನಪು – ಬಳಿಕ ತನ್ನ ತಂದೆಯ ತೋಳುಗಳು ತನ್ನನ್ನು ತಬ್ಬಿ ಹಿಡಿದ ಅರಿವಾಯಿತು ಭರಮಣ್ಣನಾಯಕನಿಗೆ ಮರುಗಳಿಗೆ ತಂದೆಯ ಬಿಸಿಯುಸಿರು ಮೈಯನ್ನು ನೇವರಿಸಿ-

"ಇಲ್ಲಿ ದೀವಟಿಗೆ ಹೊತ್ತಿಸುವಂತಿಲ್ಲ: ಭರಮಣ್ಣ. ನನ್ನ ಬೆನ್ನಮೇಲೆ ಭುಜ ಹಿಡಿದು ಮಲಗಿಕೋ. ಒಬ್ಬರು ತೆವಳುವಷ್ಟೇ ಜಾಗ ಇಲ್ಲಿರುವುದು. ಎಚ್ಚರಿಕೆ - ಅತ್ತಿತ್ತ ಹೆದರಿ ತುಯ್ದಾಡಬೇಡ"

- ಎಂದು ಹೇಳಿ, ಮಗನನ್ನು ಬೆನ್ನ ಮೇಲೆ ಮಲಗಿಸಿಕೊಂಡು ಮದಕರಿನಾಯಕ ಬಂಡೆಯ ಕಿರಿದಾದ ಅಂಚಿನ ಮೇಲೆ ತೆವಳಲಾರಂಭಿಸಿದ.

ತನ್ನ ತಂದೆಯ ಬೆನ್ನನ್ನು ಹಲ್ಲಿಯಂತೆ ಕಚ್ಚಿ ಹಿಡಿದ ಭರಮಣ್ಣನಾಯಕನಿಗೆ, ಆ ಕತ್ತಲೆಯಲ್ಲಿ ದಿಕ್ಕಾವುದು, ಹೊತ್ತೆಷ್ಟಾಯಿತು - ಎನ್ನುವುದಾವುದೂ ತಿಳಿಯದೆಹೋಯಿತು. ದೂರದಲ್ಲೆಲ್ಲೋ ನೀರು ತೊಟಕುವ ಶಬ್ದ ಕೇಳುತ್ತಿತ್ತು. ಬಂಡೆಯ ಯಾವುದೋ ಸೀಳಿನಲ್ಲಿ ಮೈ ಕೊರೆಯುವಂತೆ ತಣ್ಣಗೆ ಬೀಸಿದ ಗಾಳಿ ಮೈಯನ್ನು ಸೀಳುತ್ತಿತ್ತು.

ಹಾಗೆ ಅಷ್ಟು ಹೊತ್ತು ಸಾಗಿದಬಳಿಕ, ಬಂಡೆ ವಿಶಾಲವಾದಂತಾಗಿ, ಮದಕರಿನಾಯಕ ಮಗನಿಗೆ-

"ಎದ್ದು ನಿಂತುಕೊ, ಇನ್ನೇನೂ ಭಯವಿಲ್ಲ"

- ಎಂದು ಹೇಳಿ, ಕತ್ತಲಿನಲ್ಲಿ ಭರಮಣ್ಣನಾಯಕ ತಡವರಿಸುತ್ತಾ ಬೆನ್ನಿನಿಂದ ಇಳಿದ ಬಳಿಕ, ಸೊಂಟದಲ್ಲಿಟ್ಟುಕೊಂಡಿದ್ದ ಚಕಮಕಿಯ ಕಲ್ಲನ್ನು ಕುಟ್ಟಿ ಕಿಡಿಮಾಡಿ, ಅದರ ಕಿಡಿಯಲ್ಲಿ ದೀವಟಿಗೆಯನ್ನು ಹೊತ್ತಿಸಿ, ಬೆಳಕುಮಾಡಿ, ಆ ಬೆಳಕಿನಲ್ಲಿ ಏದುಸಿರುಬಿಡುತ್ತಾ –

"ಸ್ವಲ್ಪ ಹೊತ್ತು ಇಲ್ಲಿಯೇ ನಿಂತಿರು" - ಎಂದು ಹೇಳಿ, ತಾನೊಬ್ಬನೇ ಮುಂದೆ ನಡೆದ.

ತನ್ನ ತಂದೆಯ ಕೈಯಲ್ಲಿದ್ದ ದೀವಟಿಗೆಯ ಮಂದಪ್ರಕಾಶದಲ್ಲಿ ಭರಮಣ್ಣನಾಯಕ ನೋಡಿದ –

ಅದೊಂದು ವಿಸ್ತಾರವಾದ ಹತ್ತಾರು ಶಿಲಾಸ್ತಂಭಗಳಿದ್ದ ಹಜಾರ. ಒಂದೊಂದು ಸ್ತಂಭಕ್ಕೂ ಕಬ್ಬಿಣದ ಹಿಡಿಕೆಗಳಲ್ಲಿ ಪಂಜುಗಳಿನ್ನಿಟ್ಟಿದ್ದರು.

ಮದಕರಿನಾಯಕ ತನ್ನ ಹೆಗಲ ಮೇಲಿದ್ದ ಗಂಟನ್ನು ತೆಗೆದು ಅದರೊಳಗಿದ್ದ ಬಿಗಿಯಾದ ಮುಚ್ಚಳವಿದ್ದ ತಂಬಿಗೆಯನ್ನು ತೆಗೆದುಕೊಂಡು, ಅದರಲ್ಲಿದ್ದ ಎಣ್ಣೆಯನ್ನು ಒಂದೊಂದಾಗಿ ಪಂಜುಗಳಿಗೆ ಹಾಕಿ ಅವನ್ನು ಪ್ರಯತ್ನಪೂರ್ವಕವಾಗಿ ಹೊತ್ತಿಸಿ, ಅವು ಉರಿದು ಹಜಾರದಲ್ಲಿ ಚೆನ್ನಾಗಿ ಬೆಳಕಾದ ಬಳಿಕ. ಮಗನನ್ನು ತನ್ನ ಬಳಿ ಕರೆದು, ಪಂಜಿನ ಬೆಳಕನ್ನು ಎತ್ತಿಹಿಡಿದು

"ಅಲ್ಲಿ ನೋಡು ಭರಮಣ್ಣ, ನಾವು ಬಂದಿದ್ದು ಈ ತಾಯಿಯ ಪೂಜೆಗಾಗಿ" – ಎಂದು ಹೇಳಿದ.

ತನ್ನ ತಂದೆ ತೋರಿಸಿದತ್ತ ಭರಮಣ್ಣನಾಯಕ ನೋಡಿದ –

ನೋಡಿದವರ ಎದೆ ನಡುಗಿಸುವಂತಿತ್ತು-

ಆಳೆತ್ತರದ, ಕೆದರಿದ ಜಟೆಯ, ಬೆಳ್ಳನೆಯ ಕೋರೆದಾಡೆಗಳು ಹೊಳೆಯುತ್ತಿದ್ದ ಭೀಷಣ ಮುಖಮುದ್ರೆಯ ಸುವರ್ಣನಿರ್ಮಿತವಾದ ವೀರಭದ್ರಮೂರ್ತಿ, ಪಂಜಿನ ಬೆಳಕಿನಲ್ಲೂ ಥಳಥಳಿಸುವ ಕೆಂಪಿನ ದೊಡ್ಡ ಕಣ್ಣುಗಳ, ವಿಶಾಲವಾದ ಯೋಧವಕ್ಷಸ್ಥಲದ, ರುಂಡಮಾಲೆಗಳನ್ನು ಧರಿಸಿದ, ಒಂದು ಕೈಯಲ್ಲಿ ಹಿಡಿದ ಖಡ್ಗ, ಮತ್ತೊಂದು ಕೈಯಲ್ಲಿ ನಿಂತನಾಯಿಯ ನೆತ್ತರು ನೆಕ್ಕುತ್ತಿರುವ, ಬ್ರಹ್ಮಕಪಾಲವನ್ನು ಹಿಡಿದು ನಿಂತ ವೀರಭದ್ರನ ಭವ್ಯಮೂರ್ತಿಯನ್ನು ನೋಡಿಯೇ, ಆ ಗುಹೆಯ ತಂಪಿನಲ್ಲೂ ಭರಮಣ್ಣನಾಯಕನ ಮೈ ಬೆವರಿಟ್ಟಿತು. ಆ ವಿಗ್ರಹದ ಇಬ್ಬದಿಯಲ್ಲೂ ಎರಡು ರಣಭೈರವಿಯರ ಉಗ್ರಮೂರ್ತಿಗಳು. ಆ ಮೂರ್ತಿಗಳ ಇಬ್ಬದಿಯಲ್ಲೂ ಮೂರಡಿ ಎತ್ತರದ ದೊಡ್ಡ ನಂದಾದೀವಿಗೆಗಳು. ಆ ದೀವಿಗೆಗಳಿಗೆ ಎಣ್ಣೆ ಹಾಕಿ, ಕೈಯಲ್ಲಿದ್ದ ದೀವಟಿಗೆಯಿಂದ ಬೆಳಕು ಹೊತ್ತಿಸಿ, ಆ ಮೂರ್ತಿಯ ಇದಿರು ನೇರವಾಗಿ ನಡೆದು, ಅಷ್ಟೇ ಭವ್ಯ-ಭೀಕರವಾಗಿದ್ದ ಮಹಿಷಾಸುರಮರ್ದಿನಿಯ ಬಂಗಾರದ ವಿಗ್ರಹವನ್ನು ಮಗನಿಗೆ ತೋರಿಸಿ, ಆ ದೇವಿಯ ಮುಂದಿದ್ದ ನಂದಾದೀವಿಗೆಗಳನ್ನು ಹೊತ್ತಿಸಿ, ಸಾಕಷ್ಟು ಬೆಳಕು ತುಂಬಿದ ಪೂಜಾಮಂದಿರವನ್ನು ಮಗನಿಗೆ ತೋರಿಸಿದ ಮದಕರಿನಾಯಕ.

ಭರಮಣ್ಣನಾಯಕ ನೋಡಿದ-

ಪೂಜಾಮಂದಿರದ ಒಂದು ಪಾರ್ಶ್ವದಲ್ಲಿ - ಪರಶಿವನ ಎದೆಯ ಮೇಲೆ ನಿಂತು, ರುಂಡಗಳ ಆಭರಣ ಧರಿಸಿ, ಕೆದರಿದ ಬೆಂಕಿಯಂಥ ಜಟೆ ಹೊತ್ತು, ನೆತ್ತರು ಬಯಸಿ ಹೊರಚಿಮ್ಮಿದ ನಾಲಗೆಯನ್ನು ಚಾಚಿದ ಮಹಾಕಾಳಿ, ಆಕೆಯ ಭೂತಗಣಗಳು.

ಮತ್ತೊಂದು ಬದಿಯಲ್ಲಿ - ಸತಿಯ ಶವ ಹೊತ್ತು, ರುದ್ರಗಣಗಳ ನಡುವೆ ಪ್ರಳಯ ತಾಂಡವದಲ್ಲಿ ನಿರತನಾದ ಪರಮೇಶ್ವರ.

ಇವೆಲ್ಲದರ ಮಧ್ಯೆ – ಅವೆಲ್ಲದರ ರೌದ್ರಸ್ವರೂಪವನ್ನೂ ಭಟ್ಟಿ ಇಳಿಸಿದಂತಿದ್ದ ಹಿರಣ್ಯಕಶಿಪುವನ್ನು ತೊಡೆಯ ಮೇಲೆ ಮಲಗಿಸಿಕೊಂಡು, ಅವನ ಉದರವನ್ನು ಬಗೆದು, ಕರುಳುಗಳ ಮಾಲೆಯನ್ನು ಹಿಡಿದೆಳೆದು ಕುಳಿತ ಉಗ್ರನಾರಸಿಂಹಮೂರ್ತಿ.

ಗೋಡೆಗಳ ಬಳಿ ಒರಗಿಸಿಟ್ಟ ಬೃಹದಾಕಾರದ ರಣಾಯುಧಗಳು-

ಆ ಎಲ್ಲ ದೇವತೆಗಳಿಗೂ ಹಿಂದೊಮ್ಮೆ ನರಬಲಿ ಕೊಟ್ಟಿದ್ದರ ಕುರುಹಾಗಿ ಮೂಲೆಗಳಲ್ಲಿ ನೆಲದ ಮೇಲೆ ಬಿದ್ದಿದ್ದ ಬರೀ ಅಸ್ತಿ ಮಾತ್ರವಾದ ರುಂಡಗಳು, ಚೆಲ್ಲಾಪಿಲ್ಲಿಯಾದ ಕೈಕಾಲುಗಳ ಎಲುಬುಗಳು; ಕಣ್ಣು ಕಪಟಗಳ ಹಿಕ್ಕೆಯ ವಾಸನೆ; ಎಲ್ಲಿಂದಲೋ ನುಸುಳಿಬಂದು ಮೈಯನ್ನು ಸೂಜಿಯಂತೆ ಚುಚ್ಚುವ ತಂಗಾಳಿ; ಹತ್ತಿರದಲ್ಲೆಲ್ಲೋ ಬಂಡೆಗಳ ಮೇಲೆ ಹರಿವ ಝರಿಯ ತಣ್ಣನೆಯ ಶಬ್ದ.

ಅದೆಲ್ಲವನ್ನೂ ನೋಡಿ, ಕ್ಷಣಕಾಲ ಭರಮಣ್ಣನಾಯಕನ ಹೃದಯವೂ ಭೀತಿಯಿಂದ ಕಂಪಿಸಿತು.

“ಇದು ವೀರೇಶ ಕಟಾಂಜಲಿ. ನಮ್ಮ ಪೂರ್ವಿಕರು ಯುದ್ಧ ಸಮಯದಲ್ಲಿ ಪೂಜಿಸಿ, ಪ್ರಾರ್ಥಿಸಿ, ಅನುಗ್ರಹಪಡೆದ ದೇವತೆಗಳು ಇವರು. ಚಿತ್ರದುರ್ಗ ಹುಟ್ಟಿದ್ದು ಉಳಿದು ಬೆಳೆದದ್ದು ಈ ದೇವತೆಗಳ ಅನುಗ್ರಹದಿಂದ. ನಮ್ಮ ಹಿರಿಯರು ಆಪತ್ತಿನ ಸಮಯಕ್ಕೆಂದು ಸಂಗ್ರಹಿಸಿದ ಅಪಾರ ಸಂಪತ್ತು, ಅಕ್ಷಯನಿಧಿ ಈ ಶಿಲಾತಲದಲ್ಲಿದೆ. ಪಟ್ಟಾಭಿಷಿಕ್ತ ದೊರೆಗಲ್ಲದೆ ಬೇರಾರಿಗೂ ಇದರ ಇರುವಿನ ಸುಳಿವೂ ತಿಳಿಯದು. ನೀನಿನ್ನೂ ಪಟ್ಟಾಭಿಷಿಕ್ತನಾಗುವ ಮೊದಲೇ ನಾನು ಸಮರವನ್ನು ಎದುರಿಸಬೇಕಾಗಿ ಬಂದದ್ದರಿಂದ ನಿನಗಿದನ್ನು ತೋರಿಸಿದೆ. ಇದು ನಿನಗೊಬ್ಬನಿಗಲ್ಲದೆ ಮತ್ತಾರಿಗೂ ತಿಳಿಯಬಾರದು....ಬಾ, ಮೊದಲು ಪೂಜೆ ಮುಗಿಸೋಣ. ಆಮೇಲೆ ಮುಂದಿನ ಮಾತು”

- ಎಂದು ಹೇಳಿ, ಮದಕರಿನಾಯಕ ನೀರಿನ ಸದ್ದು ಕೇಳಿ ಬರುತ್ತಿದ್ದ ದಿಕ್ಕಿನಲ್ಲಿ ಮಗನೊಂದಿಗೆ ನಡೆದು, ತಣ್ಣೀರಿನಲ್ಲಿ ಮಿಂದುಬಂದು, ತಂದಿದ್ದ ಗಂಟನ್ನು ಬಿಚ್ಚಿ, ಅದರಲ್ಲಿದ್ದ ಅರಶಿನ-ಕುಂಕುಮ-ಮಂತ್ರಾಕ್ಷತೆ-ಕೆಂಪು ಹೂಗಳಿಂದ ಕ್ರಮವಾಗಿ ಎಲ್ಲಾ ದೇವತೆಗಳಿಗೂ ಪೂಜೆ ಮಾಡಿ, ಪೂಜಾನಂತರದಲ್ಲಿ, ಕೈಯಲ್ಲಿದ್ದ ಕಠಾರಿಯಿಂದ ತನ್ನ ತೋಳನ್ನೇ ಕತ್ತರಿಸಿಕೊಂಡು,

ಬೆಳ್ಳಿಯ ಪಾತ್ರೆಯಲ್ಲಿ ಆ ರಕ್ತವನ್ನು ಹಿಡಿದು, ತನ್ನೊಂದಿಗೆ ತಂದಿದ್ದ ಹಸಿರು ಮದ್ದನ್ನು ಗಾಯಕ್ಕೆ ಲೇಪಿಸಿ, ರಕ್ತ ಹರಿಯುವುದು ನಿಂತಬಳಿಕ, ಬೆಳ್ಳಿಯ ಪಾತ್ರೆಯಲ್ಲಿದ್ದ ರಕ್ತವನ್ನು ಎಲ್ಲಾ ದೇವತೆಗಳಿಗೂ ನೈವೇದ್ಯ ಮಾಡಿ, ಆರತಿ ಬೆಳಗಿ, ನಮಸ್ಕರಿಸಿ, ಅವರ ಪ್ರಸಾದವೆಂಬಂತೆ ರಕ್ತವನ್ನು ತನ್ನ ಹಣೆಗಿಟ್ಟುಕೊಂಡು, ಮಗನ ಹಣೆಗೂ ಇಟ್ಟು, ಪೂಜೆ ಮಾಡಿದ ಹೂವುಗಳ ಪ್ರಸಾದ ತೆಗೆದುಕೊಂಡು, ನಂದಾದೀವಿಗೆಯಲ್ಲಿದ್ದ ದೀಪಗಳಲ್ಲದೆ, ಉಳಿದೆಲ್ಲಾ ದೀವಟಿಗೆಗಳನ್ನು ನಂದಿಸಿ, ಕೈಯಲ್ಲೊಂದು ದೀವಟಿಗೆಯನ್ನು ಮಾತ್ರ ಹಿಡಿದು-

"ನಡಿ ಭರಮಣ್ಣ, ಮನೆಗಿನ್ನು ಹಿಂದಿರುಗೋಣ" – ಎಂದು ಹೇಳಿದ ಮದಕರಿನಾಯಕ.

"ಯಾವುದೋ ಸ್ವಪ್ನ ಲೋಕದಲ್ಲಿದ್ದವನಂತೆ ಭರಮಣ್ಣನಾಯಕ ತಂದೆಯನ್ನು ಹಿಂಬಾಲಿಸಿದ.

ಬಂದ ದಾರಿ ಬೇರೆ - ಹಿಂದಿರುಗಿದ ದಾರಿಯೇ ಬೇರೆ.

ಗುಹಾಮಾರ್ಗವನ್ನು ದಾಟಿ, ಹೊರಗೆ ಬಂದಾಗ ಭರಮಣ್ಣನಾಯಕನಿಗೆ ಮೊದಲು ಕಂಡದ್ದು – ಅರಮನೆಯ ಹಿಂದಿನ ಕಹಳೆಬತೇರಿ. ಕೇಳಿಸಿದ್ದು - ಪ್ರಾತಃಕಾಲದ ದೇವಾಲಯಗಳ ಪೂಜಾವಾದ್ಯಗಳ ನಿನಾದದೊಂದಿಗೆ ಬೆರೆತ ರಣಭೇರಿಯ ಕರೆ.

* * *

ಆ ರಣಧ್ವನಿಯನ್ನು ಕೇಳಿ ಬೆಳಗಿನಝಾವದ ಛಳಿಯಲ್ಲೂ ಮದಕರಿನಾಯಕನ ಮೈರಕ್ತ, ಬಿಸಿಯಾಗಿ, ಅವಸರವಸರವಾಗಿ ಅರಮನೆಯೊಳಗೆ ನಡೆದು, ತನ್ನ ಹಿಂದೆ ಬಂದ ಕುಮಾರ ಭರಮಣ್ಣನಾಯಕನ ಕೈಗೆ ಪೂಜಾದ್ರವ್ಯಗಳ ಗಂಟನ್ನು ಕೊಟ್ಟು-

"ಇದನ್ನು ನಿಮ್ಮಜ್ಜಿಗೆ ಕೊಡು, ಭರಮಣ್ಣ – ನಮ್ಮವರೆಲ್ಲರಿಗೂ ಪ್ರಸಾದ ಕೊಡಲಿ"

-ಎಂದು ಹೇಳಿ, ಇದಿರಾದ ಪರಿಚಾರಕನಿಗೆ-

"ನಮ್ಮ ಯುದ್ಧದ ಉಡುಪು ತರಲು ಹೇಳು"

-ಎಂದು ನುಡಿದು, ತಮ್ಮ ಖಾಸಾಕೊಠಡಿಯತ್ತ ನಡೆದು, ಅಲ್ಲಿ ಬಾಗಿಲ ಬಳಿ ಕಾದಿದ್ದ ಅರಮನೆಯ ಬಕ್ಷಿಗಳಿಗೆ –

"ಪ್ರಧಾನಿಗಳು ಬಂದಿದ್ದಾರೆಯೇ ? ಇನ್ನೂ ಬರದಿದ್ದರೆ ಅವಸರವಾಗಿ ಬರಲು ಹೇಳಿ"

-ಎಂದು ಅಪ್ಪಣೆ ಮಾಡಿದ.

"ಈಗಾಗಲೇ ಪ್ರಧಾನಿಗಳು ಬಂದಿದ್ದಾರೆ, ಪ್ರಭು" – ಎಂದ ಅರಮನೆಯ ಬಕ್ಷಿ.

"ಹಾಗಿದ್ದರೆ ಅವರನ್ನು ಇಲ್ಲಿಗೇ ಬರಹೇಳಿ"

- ಎಂದು ನುಡಿದು, ಪರಿಚಾರಕರು ಅವಸರವಾಗಿ ತಂದ ರಣದುಡುಗೆಯನ್ನು ಧರಿಸಲಾರಂಭಿಸಿದ, ಮದಕರಿನಾಯಕ.

ನಾಯಕರು ಉಡುಗೆಯನ್ನು ಧರಿಸುತ್ತಿರುವಾಗಲೇ ಪರಶುರಾಮನಾಯಕ ಅವಸರ ವಾಗಿ ಅಲ್ಲಿಗೆ ಬಂದು, ಕೈಮುಗಿದ.

ಆತನನ್ನು ನೋಡಿದ ಕೂಡಲೇ ಉಳಿದಾವ ಉಪಚಾರದ ಮಾತಿಗೂ ವೇಳೆ ವ್ಯಯಮಾಡದೆ-

"ನವಾಬನ ಸೇನೆಯದೇನು ಸುದ್ದಿ, ಪರಶುರಾಮಣ್ಣ?"

- ಎಂದು ಆತುರವಾಗಿ ಪ್ರಶ್ನಿಸಿದ ಮದಕರಿನಾಯಕ.

"ಈ ಹಗಲು ಅವರು ದುರ್ಗದ ಮೇಲೆ ದಾಳಿ ಮಾಡುವ ಸೂಚನೆಗಳಿವೆ ಎಂದು ಗೂಢಚಾರರು ತಿಳಿಸಿದರು. ನಮ್ಮ ಸೇನೆ ಅವರನ್ನು ಎದುರಿಸಲು ಸಿದ್ಧವಾಗುತ್ತಿದೆ."

ಪರಶುರಾಮನಾಯಕ ಹೇಳಿದುದನ್ನು ಕೇಳಿ, ಉಡುಪು ಧರಿಸುತ್ತಲೇ ಯೋಚಿಸಿದ ಮದಕರಿನಾಯಕ –

"ನವಾಬನ ಯುದ್ಧ ತಂತ್ರ ನಮಗೆ ಗೊತ್ತು, ಪರಶುರಾಮಣ್ಣ. ಈ ದಿನವೇ, ನಮ್ಮ ಬಲ ಎಷ್ಟಿದೆಯೆಂದು ತಿಳಿದುಕೊಳ್ಳದೆ ನವಾಬರು ನಮ್ಮ ಮೇಲೆ ಪೂರ್ಣಪ್ರಮಾಣದ ದಾಳಿ ಮಾಡುವುದಿಲ್ಲ. ಆದ್ದರಿಂದ ನಮ್ಮ ದಳವಾಯಿಗಳಿಗೆ ದುಡುಕಬಾರದು ಎಂದು ಹೇಳು. ಮೂರು ಮೊಳದ ತೋಫುಗಳಲ್ಲದೆ, ದೊಡ್ಡ ತೋಪುಗಳನ್ನು ಹಾರಿಸಬಾರದು. ಶತ್ರುಸೇನೆ ನಮ್ಮ ಕೋವಿಗಳ ಏಟಿನ ಅಳತೆಯೊಳಗೆ ಬರುವವರೆಗೂ, ಸೈನಿಕರಿಗೆ 'ಗುಂಡುಹಾರಿಸಿ ವ್ಯರ್ಥ ಮಾಡಬಾರದು' ಎಂದು ಹೇಳು. ಕಾಲಾಳುಗಳು, ಕುದುರೆದಳ ದಾಳಿಗೆ ಮೂರು ದಿಕ್ಕಿನಲ್ಲಿ ಸಿದ್ಧವಾಗಿರಲು ಅಪ್ಪಣೆಮಾಡು. ಪೂರ್ವದಿಕ್ಕಿನಿಂದಲೇ ಅವರ ದಾಳಿ ಆರಂಭವಾಗಬಹುದು. ಆದ್ದರಿಂದ ರಂಗಯ್ಯನ ಬಾಗಿಲ ಬಳಿ ಶತ್ರುದಾಳಿಯನ್ನು ಎದುರಿಸಲು ನಮ್ಮ ಸೇನೆ ಸಿದ್ಧವಾಗಿರಲಿ. ಇಷ್ಟು ಸಿದ್ಧತೆ ನೀವು ಮಾಡುವ ವೇಳೆಗೆ ನಾವು ಅಲ್ಲಿರುತ್ತೇವೆ. ಮುಂದೆ ಸಮಯ ನೋಡಿಕೊಂಡು ಅಪ್ಪಣೆ ಮಾಡಲು ಬರುತ್ತದೆ"

-ಎಂದು ಪರಶುರಾಮನಾಯಕನಿಗೆ, ದಳವಾಯಿಗಳಿಗೆ ಹೇಳಬೇಕಾದ ಸೂಚನೆಗಳನ್ನು ಕೊಟ್ಟು, ಕಳಿಸಿ, ಯುದ್ಧ ವಸ್ತ್ರಗಳನ್ನು ಧರಿಸಿ, ಕೋಣೆಯಿಂದ ಹೊರಬಂದು, ತನ್ನನ್ನು ಕಾಣಲು ಬಂದ ತಾಯಿಗೆ ನಮಸ್ಕರಿಸಿ –

"ಅವ್ವಾ, ಈ ದಿನ ಚೆನ್ನಾಗಿ ಆಶೀರ್ವದಿಸಿ. ಇಷ್ಟು ದಿನ ಕಾದ ಯುದ್ಧ ಇಂದು ಆರಂಭವಾಗಲಿದೆ'' – ಎಂದು ಬೇಡಿದ.

ಯುದ್ಧದ ಹೆಸರು ಕೇಳಿಯೇ, ಅದಕ್ಕೆ ಹೊರಡಲು ಸಿದ್ಧನಾದ ಮಗನನ್ನು ನೋಡಿ, ನಿಂಗವ್ವನ ಕಣ್ಣಲ್ಲಿ ನೀರು ತುಂಬಿ ಬಂದರೂ, ಅದು ಹೊರಬರದಂತೆ ತಡೆಹಿಡಿದು, ನಸು ಕಂಪಿಸುತ್ತಿದ್ದ ಧ್ವನಿಯಲ್ಲಿ –

"ನನ್ನ ಆಶೀರ್ವಾದ ನಿನಗೆ ಯಾವತ್ತೂ ಇದೆ, ಅಪ್ಪಯ್ಯ. ಆದರೂ ಇವತ್ತು ಕುಂತಿದೇವಿ ಅರ್ಜುನನಿಗೆ ಮಾಡಿದ ಆಶೀರ್ವಾದ ಮಾಡುತ್ತೇನೆ. ಗೆದ್ದು ಬಾ. ಕುಲದ ಹೆಸರು ಕೆಡದಂತೆ ಕಾಪಾಡು"

-ಎಂದು ಹೇಳಿ, ಕೈಯಲ್ಲಿದ್ದ ಹಾಲಿನ ಬಟ್ಟಲನ್ನು ಮಗನಿಗೆ ಕೊಟ್ಟು –

"ಇದನ್ನು ಕುಡಿ ಅಪ್ಪಯ್ಯ, ನಿನ್ನ ಪಾಲಿಗಿದು ಅಮೃತವಾಗಲಿ"

-ಎಂದು ಹೇಳಿ, ಏನೋ ಯೋಚಿಸಿ –

"ನಿನ್ನ ಕೈಹಿಡಿದವರಿಗೆ ಹೇಳಿ ಹೋಗುವುದಿಲ್ಲವೇ, ಅಪ್ಪಯ್ಯ?"

- ಎಂದು ಕೇಳಿದಳು, ನಿಂಗವ್ವ.

"ಅವರಿಗೆ ಹೆಚ್ಚು ಹೇಳುವುದೇನಿದೆ, ಅವ್ವ. 'ಸಂಜೆ ಗೆದ್ದು ಬರುತ್ತೇವೆ. ಆರತಿ ಸಿದ್ಧ ಮಾಡಿಟ್ಟುಕೊಂಡಿರಿ' ಎಂದು ನೀವೇ ಹೇಳಿಬಿಡಿ. ಈಗ ನನಗೆ ಅದಾವುದಕ್ಕೂ ಬಿಡುವಿಲ್ಲ"

-ಎಂದು ತಾಯಿ ಕೊಟ್ಟ ಹಾಲನ್ನು ಒಂದೇ ಗುಟುಕಿಗೆ ಕುಡಿದು, ಬರಿ ಬಟ್ಟಲನ್ನು ಆಕೆಯ ಕೈಗಿತ್ತು –

"ಅಪ್ಪಯ್ಯನಿಗೂ ಹೇಳಿಬಿಡಿ, ಅವ್ವ. ಹೇಳದೆ ಹೋದ ಎಂದು ಬೇಸರಪಟ್ಟಾರು. 'ಇವತ್ತು ನಡೆಯುವುದು ಚಿಲ್ಲರೆ ಯುದ್ಧ. ಬಂದು ಆಶೀರ್ವಾದ ಮಾಡಿಸಿಕೊಳ್ಳುತ್ತೇನೆ' ಎಂದು ಹೇಳಿ. ಅವರ ಬದಲು ನಿಮಗೇ ಮತ್ತೊಮ್ಮೆ ನಮಸ್ಕಾರ ಮಾಡುತ್ತೇನೆ"

- ಎಂದು ತನ್ನ ತಾಯಿಗೆ ಮತ್ತೊಮ್ಮೆ ನಮಸ್ಕರಿಸಿ, ಆಕೆಯ ಪಾದಧೂಳನ್ನು ನೆತ್ತಿಗೆ ಹಚ್ಚಿಕೊಂಡು ಅರಮನೆಯಿಂದ ಹೊರಬಂದು, ಗುದಗತ್ತಿಯ ನಾಯಕತ್ವದಲ್ಲಿ ತನಗಾಗಿ ಕುದುರೆ ಹಿಡಿದು ಕಾಯುತ್ತಿದ್ದ ಅಂಗರಕ್ಷಕರ ಮುಜುರೆಯನ್ನು ಸ್ವೀಕರಿಸಿ, ಅಶ್ವವನ್ನೇರಿ ಕುದುರೆಯನ್ನು ಕೆಳದುರ್ಗದತ್ತ ವೇಗವಾಗಿ ಓಡಿಸಿದ.

ಮದಕರಿನಾಯಕ ಅರಮನೆಯ ಹೊರಬಾಗಿಲನ್ನು ದಾಟುತ್ತಿದ್ದ ಹಾಗೇ, ಕಹಳೆಯ ಬತೇರಿಯ ಮೇಲಿನಿಂದ ಕಹಳೆ ನೀಳನಿಯಲ್ಲಿ ಕೂಗಿ, ಎಲ್ಲರಿಗೂ ನಾಯಕರ ಆಗಮನದ ವಾರ್ತೆಯನ್ನು ಸಾರಿ ಹೇಳಿತು. ಆ ಸುದ್ದಿಯನ್ನು ಒತ್ತಿ ಒತ್ತಿ ಹೇಳಿದಂತೆ ಹತ್ತಾರು ಕಡೆಗಳಿಂದ ನಗಾರಿಗಳ ಸದ್ದು ನಿನದಿಸಿ, ನಾಗರಿಕರಿಗೆ ನಾಯಕರ ಆಗಮನದೊಂದಿಗೆ ಸಮರಾಗಮನದ ವಾರ್ತೆಯನ್ನೂ ಸಾರಿದವು.

೨

"ಢಂ...ಢಂ...ಢಮರ್..."

ಬೆಟ್ಟಕ್ಕೆ ಬೆಟ್ಟ ಘಟ್ಟಿಸಿದಂತೆ ತೋಫುಗಳು ಗುಂಡು ಹಾರಿಸಿದ ಸದ್ದು ಕೇಳಿ, ಮುಗಿಲಿನಲ್ಲಿ ಹತ್ತಾರು ಕಡೆಯಿಂದ ಮೇಲೆದ್ದು ಬಂದ ಕಪ್ಪು ಹೊಗೆಯ ಮೋಡ ದುರ್ಗದ ಮೇಲಿನ ಮುಗಿಲನ್ನು ಆವರಿಸಿ, ನಕ್ಷತ್ರಗಳು ಸಿಡಿದಂತೆ ಗುಂಡುಗಳು ಕೆಂಡದ ಮಳೆಗರೆಯುತ್ತಿದ್ದಂತೆಯೇ, ನೆಲ ಹಲ್ಲುಕಡಿದಂತೆ ಸಹಸ್ರಾರು ಅಶ್ವಗಳ ಖುರಪುಟಗಳ ಧ್ವನಿಯೊಂದಿಗೆ ಕೋವಿಗುಂಡುಗಳು ಸಿಡಿದ ಸದ್ದು ಕೇಳಿ, ನೆಲಮುಗಿಲು ಕಂಗೆಡುವಂತೆ ರಣವಾದ್ಯಗಳ, ಸೈನಿಕರ ವೀರಕೇಕೆಗಳ ಸದ್ದು ಬೊಬ್ಬಿರಿವ ಕಡಲಲೆಯಂತೆ ಕೋಟೆಯ ಗೋಡೆಗಳನ್ನು ಘಟ್ಟಿಸುತ್ತಿದ್ದಂತೆಯೇ, ರಂಗಯ್ಯನ ಬಾಗಿಲಿನ ಮೇಲೆ ನಿಂತು ನವಾಬನ ಸೇನೆಯ ಬರವನ್ನು ನಿರೀಕ್ಷಿಸುತ್ತಿದ್ದ ನಾಯಕರು ಕೆಂಪುವಸ್ತ್ರವನ್ನು ಬೀಸಿ - ಕೋಟೆಯ ಬಾಗಿಲನ್ನು ತೆರೆದು ತಮ್ಮ ಸೇನೆ ಹೊರನುಗ್ಗಲು ಸನ್ನೆ ಮಾಡಿದರು.

ರಂಗಯ್ಯನ ಬಾಗಿಲಿನ ಎದುರಿನ ಅಗಳತೆಯ 'ತಳ್ಳುಸೇತುವೆ'ಯನ್ನು ಆಳುಗಳು ತಳ್ಳಿ, ದಾರಿಮಾಡಿಕೊಡುತ್ತಿದ್ದ ಹಾಗೇ ಆರು ಸಹಸ್ರ ಸಂಖ್ಯೆಯ ದುರ್ಗದ ಸೇನೆ ತೂಬು ಕಿತ್ತ ಕೆರೆಯ ನೀರಿನಂತೆ ದುರ್ಗದತ್ತ ಬರುತ್ತಿದ್ದ ನವಾಬನ ಸೇನೆಯನ್ನು ಎದುರಿಸಲು ದಿಕ್ತಟಗಳು ಬೆಚ್ಚುವಂತೆ ರಣಘೋಷ ಕೂಗುತ್ತಾ ಮುನ್ನುಗ್ಗಿತು.

ಮಲ್ಲಾಪುರದ ಕಡೆಯಿಂದ ನುಗ್ಗಿ ಬರುವ ನವಾಬನ ಸೇನೆ-

ರಂಗಯ್ಯನ ಬಾಗಿಲತ್ತಣಿಂದ ಮುನ್ನುಗ್ಗಿದ ದುರ್ಗದ ಸೇನೆ-

ಕ್ಷಣಕಾಲ ಎರಡಾಗಿ ಕಂಡ ಸೇನೆಗಳು. ಒಂದನ್ನೊಂದು ಸಂಧಿಸುತ್ತಿದ್ದಂತೆಯೇ ಕಡಲು ಕಡಲಿಗೆ ಡಿಕ್ಕಿ ಹೊಡೆದು ಒಂದಾಗಿ ಮಾರ್ಮೊರೆವಂತೆ, ಚಿತ್ರದುರ್ಗದ ಹೊರಬಯಲು ಹೋರಾಡುವ ಸೇನಾಸಮುದ್ರವಾಗಿ, ಅಲೆಯಲೆಯನ್ನು ಘಟ್ಟಿಸಿದಂತೆ ಇಬ್ಬಣಗಳೂ ಬೆರೆತು, ಕಣ್ಣು ಕಾಣುವಷ್ಟು ದೂರವೂ ಹೊಯ್ದಾಡುವ ಸೇನಾವಾಹಿನಿ ಅಖಂಡವಾಗಿ ಕಾಣಿಸಿತು.

ಸೇನಾಸಮುದ್ರ –

ಎಷ್ಟು ಬಗೆ ಬಣ್ಣಗಳ, ಎಷ್ಟು ಬಗೆ ಶಬ್ದಗಳ, ಹೊಳೆಹೊಳೆವ ಸಹಸ್ರ ಸಹಸ್ರ ಆಯುಧಗಳ, ಕೆಂಡ ಕಾರುವ ಕೋವಿಗಳ, ಕೆರಳಿ-ಕೆನೆಯುವ ಕುದುರೆಗಳ, ರಣವಾದ್ಯಗಳ, ರಣೋನ್ಮತ್ತ ಸೈನಿಕರ

ಸಮರಘೋಷಗಳ ಆ ಎಲ್ಲಾ ಶಬ್ದಗಳು ಒಂದರಲ್ಲೊಂದು ವಿಕರಾಳವಾಗಿ ಬೆರೆತು ಭೂಮಿಯನ್ನು ನಡುಗಿಸುವ ಶಬ್ದಗಳ ಸಮುದ್ರಘೋಷ – ನೆಲದ ಮೇಲೆ.

ಸಿಡಿವ ತೋಫುಗಳಿಂದ, ಕೋವಿಗಳಿಂದ ಹೊಮ್ಮಿ ಹರಡಿದ ದಟ್ಟ ಹೊಗೆಯ ಕಾರ್ಮೋಡ, ಸಿಡಿವ ಗುಂಡುಗಳಿಂದ ಸುರಿವ ಅಗ್ನಿವರ್ಷ, ಮಾಗಿಯ ಸೋನೆ ಸುರಿದಂತೆ ಮುಗಿಲಿಂದ ನಿಧಾನವಾಗಿ ನೆಲಕ್ಕಿಳಿದ ಇದ್ದಿಲು, ಗಂಧಕ, ರಂಜಕಗಳ ಮಸಿಧೂಳು, ಹೋರಾಡುವ ಸೇನೆಯ ಪದಾಘಾತದಿಂದೆದ್ದು ಎಲ್ಲೆಡೆ ಹಬ್ಬಿದ ಕೆಂಬಣ್ಣದ ಧೂಳುಮೋಡ – ಆಕಾಶದಲ್ಲಿ.

ಆ ಸದ್ದು- ಧೂಳಿಗೆ ನಗರದ ಜನಕ್ಕೆ ಒಬ್ಬರಾಡುವ ಮಾತು ಮತ್ತೊಬ್ಬರಿಗೆ ಕೇಳಿಸಲಿಲ್ಲ. ಬೀದಿಗಳು ನಿರ್ಜನವಾದವು. ಮನೆಬಾಗಿಲುಗಳು ಮುಚ್ಚಿ, ಒಳಗಿನಿಂದ ಹೆದರಿದ ಹೆಂಗಸರು-ಮಕ್ಕಳ ಅಳುವಿನ ಧ್ವನಿ ಕೇರಿಕೇರಿಯಲ್ಲಿ ಕೇಳಿಬಂತು. ಜನ ಕಿಕ್ಕಿರಿದಿರುತ್ತಿದ್ದ ಅಂಗಡಿ ಮುಂಗಟ್ಟುಗಳು ಬರಿದಾಗಿ, ಆ ಬರಿದನ್ನು ನೋಡುವ ಕಣ್ಣುಗಳಲ್ಲೂ ಬಗೆಬಗೆಯ ಭೀತಿಯ ಶೂನ್ಯತೆ ತುಂಬಿತು. ತೋಫುಗಳ ಶಬ್ದಕ್ಕೆ ಗೋಡೆಗಳು ನಡುಗಿ ಮನೆಗೆ ಹೊದಿಸಿದ ನಾಡ ಹೆಂಚುಗಳು ಹಕ್ಕಿಗಳಂತೆ ಹಾರಿದವು. ಬೆಟ್ಟದ ಬಂಡೆಗಳು ರಣಘೋಷವನ್ನು ಮಾರ್ದನಿಸಿ, ಗವಿಗಳೂ ರಣಘೋಷ ಮಾಡುತ್ತಿರುವಂತೆ ತೋರಿತು. ತೋಪುಗಳ ಸದ್ದಿಗೆ ಹೊಂಡಗಳ ನಿಂತ ನೀರು ಕಲಕಿ ತೆರೆತೆರೆಯಾಗಿ ತುಳುಕಾಡಿತು.

ಆ ಸದ್ದು, ಧೂಳುಗಳಲ್ಲಿ ದುರ್ಗದ ನಾಗರಿಕರಿಗೆ ಹಗಲಾದದ್ದು – ಮಧ್ಯಾಹ್ನವಾದದ್ದು ಸಂಜೆಯಾದದ್ದು ಯಾವುದೂ ತಿಳಿಯಲಿಲ್ಲ.

ಅವರಿಗೆ ಕಂಡದ್ದು – ಕಪ್ಪು ಹೊಗೆಯ ಕಾರ್ಮೋಡ.

ಅವರಿಗೆ ಕೇಳಿಸಿದ್ದು - ಭಯೋತ್ಪಾದಕವಾದ, ಹೃದಯವಿದ್ರಾವಕವಾದ, ಹಲಬಗೆಯ ಸದ್ದುಗಳು ಬೆರೆತ ಸಮರಘೋಷ.

ಅಷ್ಟೆ –

ದುರ್ಗದಾಚೆ ನಡೆಯುತ್ತಿದ್ದ ಯುದ್ಧ ಏನಾಯಿತು, ಯಾರಿಗೆ ಗೆಲುವಾಯಿತು. ಯಾರಿಗೆ ಸೋಲಾಯಿತು ಎನ್ನುವುದು ನಾಗರಿಕರಿಗಿರಲಿ, ಕೋಟೆಯ ಮೇಲೆ ನಿಂತ ಸೈನಿಕರಿಗೂ ತಿಳಿಯಲಿಲ್ಲ.

ಏನಾಯಿತು ಎಂದು ಅವರಿಗೆ ತಿಳಿದದ್ದು –

ಸಂಜೆಯ ವೇಳೆಗೆ 'ದೀನ್' – 'ದೀನ್' ಎಂದು ಕೂಗುತ್ತಿದ್ದ ನವಾಬನ ಸೇನೆಯ ಸದ್ದು ಕ್ಷೀಣವಾಗಿ, 'ಉಘೇ' – 'ಉಘೇ' – 'ಮದಕರಿನಾಯಕರಿಗೆ ಜಯವಾಗಲಿ' – 'ಉಚ್ಚಂಗಮ್ಮನಿಗೆ ಜಯವಾಗಲಿ' ಎಂಬ ಸೇನಾಘೋಷ ಮುಗಿಲು ಹರಿದಂತೆ ಕೇಳಿಬಂದಾಗಲೇ.

'ದುರ್ಗಕ್ಕೆ ಗೆಲುವಾಯಿತು –

'ಮೊದಲ ದಿನದ ಯುದ್ಧದಲ್ಲಿ ದುರ್ಗಕ್ಕೆ ಜಯವಾಯಿತು'

- ಕೋಟೆಗೋಡೆಗಳ ಮೇಲೆ ಸಹಸ್ರಾರು ದೀವಟಿಗೆಗಳು ಹೊತ್ತಿ ಉರಿದು, ನಗರಕ್ಕೆ ಗೆಲುವಿನ ಬೆಳಕಿನ ಸಂದೇಶ ಸಾರಿದವು.

ಆ ಜಯಘೋಷವನ್ನು ಕೇಳಿ –

ಕೋಟೆಯ ಸಾಲಿನ ಮೇಲೆ ದೀವಟಿಗೆಗಳು ಹೊತ್ತಿ ಉರಿದಂತೆಯೇ, ಮನೆಮನೆಯ ಮುಂದೂ ದೀಪಗಳು ಹೊತ್ತಿ ಉರಿದು ದಿನವಿಡೀ ನಿಶ್ಚೇತನವಾಗಿದ್ದ ನಗರಕ್ಕೆ ಹೊಸ ಜೀವ ಬಂದಂತಾಯಿತು.

ರಂಗಯ್ಯನ ಬಾಗಿಲ ಬಳಿಯಿದ್ದ ಸೈನಿಕರು, ಹಗಲು ಸೇನೆ ದಾಟಿದ ಬಳಿಕ ಹಿಂದಕ್ಕೆ ಎಳೆದು, ಅಗಳತೆಯ ತಳ್ಳುಸೇತುವೆಯನ್ನು ಮತ್ತೆ ಮುಂದಕ್ಕೆ ತಳ್ಳಿ ವಿಜಯೀಸೇನಾಗಮನಕ್ಕೆ ಹಾದಿಯನ್ನು ಸುಗಮಗೊಳಿಸಿ, ಇಬ್ಬದಿಯಲ್ಲೂ ದೀವಟಿಗೆಗಳನ್ನು ಹಿಡಿದು ನಿಂತು, ಹೈದರಾಲಿಯ ಸೇನೆಯ ಸೊಕ್ಕು ಮುರಿದು, ಆಯುಧಗಳ ತುದಿಗೆ ಶತ್ರುರುಂಡಗಳನ್ನು ಸಿಕ್ಕಿಸಿಕೊಂಡು ಜಯಘೋಷ ಕೂಗುತ್ತಾ ಬರುತ್ತಿದ್ದ ದುರ್ಗದ ಸೈನಿಕರನ್ನು ಸ್ವಾಗತಿಸಿದರು.

ಉತ್ಸವಾಂಬೆಯ ದೇವಾಲಯದ ಇದುರಿನ ಮಂಟಪದಲ್ಲಿ, ರಜತಪೀಠದಲ್ಲಿ ಕುಳಿತು, ಗೆದ್ದು ಬಂದ ತನ್ನ ಸೈನಿಕರಿಗೆ, ಸಂಪ್ರದಾಯದಂತೆ ಮೆಚ್ಚುಗಾಣಿಕೆಯನ್ನು ಕೊಡುತ್ತಿದ್ದ, ಗೆಲುವಿನ ಆನಂದದಿಂದ ಬೀಗುತ್ತಿದ್ದ ಮದಕರಿನಾಯಕ ಸ್ವಲ್ಪ ಹೊತ್ತಿನ ಬಳಿಕ, ಏನೋ ಜ್ಞಾಪಿಸಿಕೊಂಡವನಂತೆ, ತನ್ನ ಬಳಿಯಿದ್ದ ಪ್ರಧಾನಿ ಪರಶುರಾಮನಾಯಕ, ದೊಡ್ಡ ಮದಕರಿನಾಯಕರನ್ನು ಹತ್ತಿರ ಕರೆದು-

"ಮೆಚ್ಚುಗಾಣಿಕೆ ಕೊಡುವ ಈ ಕೆಲಸವನ್ನು ನೀವು ಮುಂದುವರಿಸಿ. ನಾವಿಷ್ಟರಲ್ಲೇ ಬರುತ್ತೇವೆ"

-ಎಂದು ಹೇಳಿ, ಮೇಲೆದ್ದು ಹೊರಬಂದು, ಆಳು ತಂದು ನಿಲ್ಲಿಸಿದ ಕುದುರೆಯನ್ನೇರಿ, ಇಬ್ಬರು ಭಟರು ಪಂಜು ಹಿಡಿದು ದಾರಿ ತೋರುತ್ತಿರಲು, ಅಂಗರಕ್ಷಕರೊಡನೆ ರಂಗಯ್ಯನ ಬಾಗಿಲತ್ತ ಸಾಗಿ, ಬಾಗಿಲ ಬಳಿ, ಕುದುರೆಯಿಂದ ಕೆಳಗಿಳಿದು ನಿಂತು, ಅರೆಗತ್ತಲಿನಲ್ಲಿ ಮರದ, ಗಳುವಿನ, ಶಸ್ತ್ರಗಳನ್ನೇ ಗಳುಗಳನ್ನಾಗಿ ಮಾಡಿಕೊಂಡು ಡೋಲಿಗಳಲ್ಲಿ ಹೊತ್ತು ತರುತ್ತಿದ್ದ, ಯುದ್ಧದಲ್ಲಿ ಕೈ, ಕಾಲು, ಕಣ್ಣು, ಕಿವಿ, ಮೂಗುಗಳನ್ನು ಕಳೆದುಕೊಂಡು, ಮೈಗಾದ ಗಾಯದ ನೋವಿನಿಂದ ನರಳುತ್ತಿದ್ದ ಸೈನಿಕರ ಸಾಲಿನ ಬಳಿಸಾರಿ, ಒಬ್ಬೊಬ್ಬರಿಗೂ ಏನಾಗಿದೆ ಎಂದು ವಿಚಾರಿಸಿ, ನೊಂದವರನ್ನು ಹಿತವಚನಗಳಿಂದ ಸಂತೈಸಿ, ಒಬ್ಬೊಬ್ಬರ ಮೈಯನ್ನೂ ಮಮತೆಯಿಂದ

ನೇವರಿಸಿ, ಅವರನ್ನು ಹೊತ್ತ ಸೈನಿಕರಿಗೆ ಅವರಿಗೆ ನೋವಾಗದಂತೆ ಕೊಂಡೊಯ್ಯಲು ಹೇಳಿ, ಆ ಗಾಯಾಳುಗಳನ್ನು ಹೊತ್ತ ಡೋಲಿಗಳ ಸಾಲನ್ನೇ ನೋಡುತ್ತಾ ನಿಂತಿದ್ದು, ತನಗೆ ತಾನೇ ಹೇಳಿಕೊಂಡಂತೆ ಹೇಳಿದ –

"ಇಂದಿನ ಗೆಲುವಿನ ಕೀರ್ತಿ ನಿಮ್ಮದು - ದುರ್ಗ ನಿಮಗೆ ಋಣಿ."

ಆ ಮಾತನ್ನು ಕೇಳಿಸಿಕೊಂಡ ಗುದಗತ್ತಿಯೂ ತನಗೆ ತಾನೇ ಹೇಳಿಕೊಂಡ –

"ಇದ್ದರಿರಬೇಕು - ಇಂಥ ಧಣಿ."

ಅತ್ತ ಉತ್ಸವಾಂಬೆಯ ದೇವಾಲಯದ ಬಳಿ ದೀವಟಿಗೆಗಳ ಜಾತ್ರೆ ನೆರೆದು, ಇರುಳು ಹಗಲಾಗಿ ನೆರೆದ ಜನ 'ಮದಕರಿನಾಯಕರಿಗೆ ಜಯವಾಗಲಿ' ಎಂದು ಕೂಗುತ್ತಿತ್ತು.

ಆದರೆ ಇತ್ತ –

ನಾಲ್ಕಾರು ದೀವಟಿಗೆಗಳ ಅರೆಗತ್ತಲಿನಲ್ಲಿ ನಿಂತ ಮದಕರಿನಾಯಕನಿಗೆ ಅತ್ತಕಡೆ ಲಕ್ಷ್ಯವೇ ಇರಲಿಲ್ಲ.

ಕೊನೆಯ ಡೋಲಿ ಹೋಗುವವರೆಗೂ ಅಲ್ಲಿಯೇ ನಿಂತಿದ್ದು, ಬಳಿಕ ಗುದಗತ್ತಿಗೆ –

"ಚಿಕಿತ್ಸಾ ಶಿಬಿರದ ಕಡೆ ದಾರಿ ತೋರಿಸಲು ದೀವಟಿಗೆಯವರಿಗೆ ಹೇಳು"

-ಎಂದು ಹೇಳಿದ.

ಅದರಂತೆಯೇ ದೀವಟಿಗೆಯವರು, ಕರಾವಿನಕಟ್ಟೆಯ ಕೂಡಲೀ ಶೃಂಗೇರಿ ಮಠದ ಬಳಿಯಲ್ಲಿ ತಡಿಕೆಗಳಿಂದ ನಿರ್ಮಿಸಿದ ವಿಶಾಲವಾದ ಶಿಬಿರದತ್ತ ಓಡಿದರು.

ಅವರನ್ನು ಹಿಂಬಾಲಿಸಿದ ಮದಕರಿನಾಯಕ.

ಮೇಲೆ ದಪ್ಪವಾದ ಬಿದಿರಿನ ತಡಿಕೆಯ ಛಾವಣಿ, ಪಾರ್ಶ್ವದಲ್ಲಿ ಬಿದಿರಿನ ತಡಿಕೆಯ ಮರೆಯಿದ್ದ ಚಿಕಿತ್ಸಾ ಶಿಬಿರದಲ್ಲಿ, ಈಚಲುಗರಿಯ, ಆಪುಹುಲ್ಲಿನ ಚಾಪೆಗಳ ಮೇಲೆ, ಹುರಿಯ ಮಂಚಗಳ ಮೇಲೆ ನೂರಾರು ಮಂದಿ ಗಾಯಗೊಂಡ ಸೈನಿಕರು ಮಲಗಿದ್ದರು. ಇಡೀ ಶಿಬಿರ – ಆ ಗಾಯಾಳುಗಳ ನೋವಿನ ನರಳಿಕೆಯ ಸದ್ದಿನಿಂದ, ಅವರಿಗೆ ಆರೈಕೆ ಮಾಡುವ 'ದೇಶಾಬಾಗ್' ಸ್ತ್ರೀಸೈನ್ಯದ ಹೆಂಗಸರು ಸಾಂತ್ವನದ ಮಾತುಗಳ ಧ್ವನಿಯಿಂದ ತುಂಬಿತ್ತು. ಗಾಯಗಳಿಗೆ, ವಿಷಸಿಕ್ತವಾದ ಶಸ್ತ್ರಾಘಾತದಿಂದ ಬಗೆಬಗೆಯಾಗಿ ಗಾಯಗೊಂಡು ಸಾವು-ಬದುಕುಗಳ ನಡುವೆ ಹೊಯ್ದಾಡುತ್ತಿದ್ದ ಸೈನಿಕರಿಗೆ ಅಗತ್ಯವಾದ ಹಸಿರುಮದ್ದನ್ನು ನೂರಾರು ಜನ, ವೈದ್ಯರ ಸಲಹೆಯಂತೆ ಅರೆಯುತ್ತಿದ್ದರು. ನೂರಾರು ಮಂದಿ ಹೆಣ್ಣುಮಕ್ಕಳು, ಆ ಸೈನಿಕರ ಗಾಯಗಳನ್ನು ತೊಳೆದು ಮದ್ದಿನ ಪಟ್ಟಿ ಕಟ್ಟುತ್ತಿದ್ದರು. ಎಷ್ಟೋ ಮಂದಿ ವೈದ್ಯರ ಸಲಹೆಯಂತೆ ಮುರಿದ ಎಲುಬುಗಳಿಗೆ ಹಸಿರುಮದ್ದಿನ ಲೇಪಹಾಕಿ, ಮುರಿದ ಭಾಗದ ಇಬ್ಬದಿಯಲ್ಲೂ ತೆಳುವಾದ ಹಲಗೆಯನ್ನು ಇಟ್ಟು,

ಬಟ್ಟೆಯಿಂದ ಬಿಗಿಯುತ್ತಿದ್ದರು. ನೂರಾರು ಉರಿಯುವ ಒಲೆಗಳ ಮೇಲಿದ್ದ ಮಡಿಕೆಗಳಲ್ಲಿ ರೋಗಿಗಳಿಗೆ ಅಗತ್ಯವಾದ ಕಷಾಯ. ಆಹಾರಕ್ಕೆ ಬೇಕಾದ ಹಾಲು, ಗಂಜಿ, ಬಿಸಿನೀರು ಕುದಿಯುತ್ತಿದ್ದವು.

ಸ್ವಯಂ ನಾಯಕರೇ ಬಂದುದನ್ನು ಕಂಡು ಎದ್ದು ನಿಂತ ವೈದ್ಯರು, ಶುಶ್ರೂಷೆಯ ಹೆಂಗಸರಿಗೆ –

"ಯಾರೂ ನಿಮ್ಮ ಕೆಲಸ ಬಿಟ್ಟು ಏಳಕೂಡದು. ನಮಗಿಂತ ನಮ್ಮ ಸೈನಿಕರ ಯೋಗಕ್ಷೇಮ ಮುಖ್ಯ. ಅತ್ತಕಡೆ ಗಮನ ಕೊಡಿ"

– ಎಂದು ಹೇಳಿ ಶಿಬಿರದ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದವರಿಂದ ರೋಗಿಗಳಿಗೆ ಅಗತ್ಯವಾದ ಹಾಸಿಗೆ, ಹೊದಿಕೆ, ಆಹಾರ, ಮದ್ದುಗಳು ದೊರೆಯುತ್ತಿದೆಯೇ – ಎಂದು ವಿಚಾರಿಸಿ-

"ನಿಮಗೇನು ಬೇಕೋ ತಿಳಿಸಿ. ಬೆಳಿಗ್ಗೆ ಪ್ರಧಾನಿಯವರನ್ನೇ ಇತ್ತ ಕಳಿಸುತ್ತೇವೆ. ಯಾವುದಕ್ಕೂ ಹಣದ, ಸಾಮಗ್ರಿಯ ಕೊರತೆಯಾಗದಂತೆ ನಾವು ನೋಡಿಕೊಳ್ಳುತ್ತೇವೆ. ಆರೈಕೆಯಲ್ಲಿ ಎಳ್ಳಷ್ಟೂ ಕೊರತೆಯಾಗದಂತೆ ನೀವು ನೋಡಿಕೊಳ್ಳಿ. ನಿಮ್ಮ ಅಲಕ್ಷ್ಯದಿಂದ ಯಾರಾದರೂ ಸತ್ತರೆ ಅಂಥವರಿಗೆ ಕಠಿಣಶಿಕ್ಷೆ ವಿಧಿಸಲಾಗುತ್ತದೆ"

- ಎಂದು ಎಚ್ಚರಿಕೆಯ ಮಾತನ್ನೂ, ಅಗತ್ಯವಿದ್ದ ಕಡೆ ಮೆಚ್ಚುಗೆಯ ಮಾತುಗಳನ್ನೂ ಹೇಳಿ, ಶಿಬಿರದಲ್ಲೆಲ್ಲಾ ಸುತ್ತಾಡಿ ನೋಡಿ, ಹತ್ತಾರುಮಂದಿಗೆ ಸಮಾಧಾನದ ಮಾತು ಹೇಳಿ, ಶಿಬಿರದಿಂದ ಹೊರಬಂದು, ಶಿಬಿರದ ಕಾವಲುಪಡೆಯ ನಾಯಕನನ್ನು ಕರೆಸಿ –

"ಗಾಯಗೊಂಡವರ ಹೆಸರು, ಸ್ಥಳ ತಿಳಿದುಕೊಂಡು ಅವರ ಮನೆಯವರಿಗೆ ಸುದ್ದಿ ಮುಟ್ಟಿಸಿ. ಹಾಗೇ ಗಾಯಾಳುಗಳ ಕೈ-ಮೈಮೇಲಿದ್ದ ಸಣ್ಣಪುಟ್ಟ ಒಡವೆಯನ್ನೋ, ಹಣವನ್ನೋ ಯಾರೂ ಕದಿಯದ ಹಾಗೆ ನೋಡಿಕೊಂಡು ಅವರ ಮನೆಯವರಿಗೆ ಅದನ್ನು ಮುಟ್ಟಿಸಿ. ಸಾಧ್ಯವಾದರೆ ನಾವೇ ದಿನಕ್ಕೊಮ್ಮೆ ಇತ್ತಕಡೆ ಬರುತ್ತೇವೆ. ಯಾರಾದರೂ ಬೇಹುಷಾರಿಯಿಂದ ನಡೆದುಕೊಂಡರೆ, ತುಡುಗುತನ ಮಾಡಿದರೆ ಆಜ್ಞೆಗೆ ಕಾಯದೆ ಸೂಕ್ತ ಶಿಕ್ಷೆ ವಿಧಿಸಿ. ಇಲ್ಲಿ ನಡೆವ ಅಪರಾಧಕ್ಕೆ ಯಾವ ಕಾರಣದ ವಿನಾಯಿತಿಯೂ ದೊರೆಯುವುದಿಲ್ಲ. ಎಚ್ಚರವಾಗಿರಿ"

-ಎಂದು ಕಟ್ಟಪ್ಪಣೆ ಮಾಡಿ, ಶಿಬಿರದಿಂದ ಹೊರಬಂದು ಮೇಲುದುರ್ಗದತ್ತ ಹೊರಟ ಮದಕರಿನಾಯಕ, ಅಷ್ಟು ದೂರ ಗಾರೆ-ಬಾಗಿಲಿನ ರಾಜಮಾರ್ಗದಲ್ಲಿ ಹೋದವನು, ಏನನ್ನೋ ಜ್ಞಾಪಿಸಿಕೊಂಡು, ತಟಕ್ಕನೆ ಕುದುರೆಯನ್ನು ಲಗಾಮು ಹಿಡಿದು ನಿಲ್ಲಿಸಿ, ಗುದಗುತ್ತಿಯನ್ನು ಹತ್ತಿರ ಕರೆದು –

"ಮುಖ್ಯವಾದ ಮಾತನ್ನೇ ಮರೆತುಬಿಟ್ಟಿದ್ದೆವು, ಗುದಗತ್ತಿ. ಕೂಡಲೇ ಒಬ್ಬರನ್ನು ಕೊತ್ವಾಲಚಾವಡಿಯ ಕಾಶಣ್ಣನಾಯಕರ ಬಳಿ ಕಳಿಸಿ, ಈ ಕೂಡಲೇ ಸಾವಿರ ಮಂದಿ ಯುದ್ಧ ಭೂಮಿಗೆ ಹೋಗಿ, ಸತ್ತ ಸೈನಿಕರಿಗೆ ಸಮಾಧಿ ಮಾಡಲು ಹೇಳು. ವೀರರ ಹೆಣ ನಾಯಿನರಿಗಳ ಪಾಲಾಗಬಾರದು. ಸಮಾಧಿ ಮಾಡುವ ವಿಷಯದಲ್ಲಿ ನಮ್ಮವರು, ಶತ್ರು ಪಕ್ಷದವರು ಎಂದು ನೋಡಬೇಕಾಗಿಲ್ಲ. ಶತ್ರುತ್ವ ಬದುಕಿರುವವರೆಗೆ, ಬದುಕಿದವರಿಗೆ ಮಾತ್ರ; ಸಾವು ಸೋಕಿದ ಬಳಿಕ ಯಾರಿಗೆ ಯಾರೂ ಶತ್ರುಗಳಲ್ಲ. ಈ ಮಾತನ್ನು ಮರೆಯಬಾರದು ಎಂದು ಕಾಶಣ್ಣನಾಯಕರಿಗೆ ಹೇಳಬೇಕು"

-ಎಂದು ಹೇಳಿದ ಮದಕರಿನಾಯಕ.

ಆ ಅಪ್ಪಣೆಯನ್ನು ಕೇಳಿದ ಅಶ್ವಾರೋಹಿ ಅಂಗರಕ್ಷಕಪಡೆಯ ಇಬ್ಬರು ಸೈನಿಕರು ಗುದಗತ್ತಿಯ ಅಪ್ಪಣೆಯಂತೆ ಕೊತ್ವಾಲಚಾವಡಿಯ ಕಡೆ ಧಾವಿಸಿದ ಬಳಿಕ, ಮದಕರಿ ನಾಯಕ ಅರಮನೆಯತ್ತ ಕುದುರೆಯನ್ನು ನಡೆಸಿದ.

ಅರಮನೆಗೆ ಹಿಂತಿರುಗಿದಬಳಿಕ, ಆತುರವಾಗಿ ಕಾಯುತ್ತಿದ್ದ ತಾಯಿಗೆ ಯುದ್ಧದ ವಿಷಯ ತಿಳಿಸಿ, ಕೈಕಾಲು ತೊಳೆದು ಭೋಜನಕ್ಕೆ ಕುಳಿತ. ರೋಗಿಗಳ ಶಿಬಿರವನ್ನು ನೋಡಿಬಂದ ಅವನಿಗೆ ಊಟ ರುಚಿಯಾಗಲಿಲ್ಲ. ಹೆಚ್ಚು ಮಾತನಾಡದೆ ಊಟ ಮುಗಿಸಿ ಮಲಗಲು ಹೋದ. ಮೈ ಸಾಕಷ್ಟು ದಣಿದಿತ್ತು. ಮೃದುವಾದ ಶಯ್ಯೆ, ಅದರ ಒಂದು ಬದಿಯಲ್ಲಿ ತನ್ನನ್ನೇ ಕಾದು ಒರಗಿದ್ದ ಸುಂದರಳಾದ ಮಡದಿ ಮದಕರಿಯನಾಯಕನ ಮೈಯನ್ನು ಮಂಚದತ್ತ ಸೆಳೆದರೂ, ಏಕೋ ಮಲಗಲು ಮನಸ್ಸಾಗದೆ, ಮೇಲೆದ್ದು ಮೈಮೇಲೆ ಶಾಲು ಹೊದೆದುಕೊಂಡು, ತನ್ನ ವರ್ತನೆಯನ್ನು ಆಶ್ಚರ್ಯದಿಂದ ನೋಡಿದ ಬಂಗಾರವ್ವನಾಗತಿಯ ಕೆನ್ನೆಯನ್ನು ಮೃದುವಾಗಿ ನೇವರಿಸಿ –

"ನನಗಾಗಿ ಕಾಯಬೇಡ. ನಿದ್ರೆ ಬಂದರೆ ಮಲಗಿಬಿಡು"

- ಎಂದು ಹೇಳಿ ಅಂತಃಪುರದಿಂದ, ಅರಮನೆಯಿಂದ ಹೊರಬಂದು ತನ್ನನ್ನು ಹಿಂಬಾಲಿಸಿದ ಅಂಗರಕ್ಷಕರನ್ನೂ ಗಮನಿಸದೆ, ಮಬ್ಬು ಬೆಳದಿಂಗಳಲ್ಲಿ ತುಪ್ಪದಕೊಣದ ಬತೇರಿಯನ್ನು ಹತ್ತಿ ನಿಂತು, ಹಗಲಿನ ರಣಭೂಮಿಯನ್ನು ನೋಡಿದ.

ಆ ಹಗಲು ಸಹಸ್ರ ಸಹಸ್ರ ಜನ-ಜಾನುವಾರುಗಳಿಂದ ಕಿಕ್ಕಿರಿದು ಬಗೆಬಗೆಯ ಶಬ್ದಗಳ ಸಮುದ್ರವಾಗಿದ್ದ ಬಯಲು –

ಈಗ –

ನಿರ್ಜನ, ನಿಶ್ಶಬ್ದ –

ಜೀವವನ್ನು ನುಂಗಿ ನಿಶ್ಚಲವಾಗಿ ಮಲಗಿದ ಮೃತ್ಯುವಿನಂತೆ.

ಬಯಲಿನಲ್ಲಿ ಚಲಿಸುತ್ತಿದ್ದ ನೂರಾರು ದೀವಟಿಗೆಗಳು, ಬಹು ಕ್ಷೀಣವಾಗಿ ಕೇಳಿಬರುತ್ತಿದ್ದ ಜನರ ಮಾತಿನ ಸದ್ದು, ದೂರದಲ್ಲೆಲ್ಲೋ ಊಳಿಡುತ್ತಿದ್ದ ನರಿಗಳ ಕೂಗು, ಕತ್ತೆಕಿರುಬಗಳ ಗುಟುರೆ - ಆ ಬಯಲಿನ ನಿರ್ಜನ ನೀರವತೆಯನ್ನು ಮತ್ತಷ್ಟು ಅಸಹ್ಯವಾಗಿ, ಭಯಾನಕವಾಗಿ ಮಾಡಿತ್ತು.

ಆಕಾಶದಲ್ಲಿ ಆಷಾಢಮಾಸದ ಮೋಡದ ಮರೆಯಲ್ಲಡಗಿ, ಕ್ಷೀಣಕಾಂತಿಯಿಂದ ಆಗೊಮ್ಮೆ-ಈಗೊಮ್ಮೆ ಹೊರಬರುತ್ತಿದ್ದ ಚಂದ್ರನೂ - ಚಂದ್ರನಂತೆ ಕಾಣದೆ, ಚಂದ್ರನ ಪ್ರೇತದಂತೆ ಕಾಣುತ್ತಿದ್ದ. ದಿಗಂತದಂಚಿನಲ್ಲಿದ್ದ ಕುಂಚಿಗನಾಳುಬೆಟ್ಟದ ಸಾಲು - ಆ ಕ್ಷೀಣಬೆಳದಿಂಗಳಲ್ಲಿ ಮಹಾಸ್ಮಶಾನದಲ್ಲಿ ಒಟ್ಟಿದ ಬೂದಿಯ ಬೃಹತ್‌ರಾಶಿಯಂತೆ ಕಾಣುತ್ತಿತ್ತು.

ಅದನ್ನು ನೋಡನೋಡುತ್ತಾ ಮದಕರಿನಾಯಕನ ಕಣ್ಣಲ್ಲಿ ಸತ್ತವರಿಗಾಗಿ ನೀರು ಒಸರಿದಂತೆಯೇ, ತಾನು ಬಯಸದ ಯುದ್ಧವನ್ನು ಮನೆಬಾಗಿಲಿಗೆ ತಂದು ಮಸಣದ ಹರಿಕಾರನಾದ ಹೈದರಾಲಿಯನ್ನು ನೆನೆದು, ಅವನ ಬಗ್ಗೆ ಕಹಿಕ್ರೋಧ ಉಕ್ಕಿಬಂದು, ಬಹುದೂರದಲ್ಲಿ ಮಂಕುದೀಪಗಳು ಮಿನುಗುತ್ತಿದ್ದ ಹೈದರಾಲಿಯ ಸೇನಾಬಿಡಾರವನ್ನು ಕೆಕ್ಕರಿಸಿ ನೋಡುತ್ತಾ-

"ಕುನ್ನಿ ! ಇನ್ನೆಷ್ಟು ಕಣ್ಣೀರ ಕಡಲನ್ನು ಕುಡಿದು ಇಂಗಬೇಕು - ನಿನ್ನ ರಾಕ್ಷಸೀ ರಾಜ್ಯದಾಹ. ನಿನ್ನ ಪಾಪಕ್ಕೆ ತಕ್ಕ ಶಿಕ್ಷೆ ನರಕದಲ್ಲಿ ಸೃಷ್ಟಿಯಾಗಿಲ್ಲ. ನೀನು ನರಳಬೇಕು, ಬದುಕಿದ್ದೂ ನರಳಬೇಕು; ನಿನ್ನ ಮೈಯ ಹನಿ ರಕ್ತವೂ ಹೊತ್ತಿ ಉರಿದು, ಬಯಸಿ ಭಿಕ್ಷೆ ಬೇಡಿದರೂ ಸಾವು ಬರದೆ, ನೋವಿನಲ್ಲಿ ನರನರಳುತ್ತಾ, ಕಣಕಣವಾಗಿ ಕರಗಬೇಕು. ನಿನ್ನಂಥವನಿಗೆ ಒಂದು ದಿನ, ಒಂದು ಕ್ಷಣಕ್ಕೆ ಸಾವು ಬಂದರೆ, ಅದು ಬದುಕಿಗೇ ಬಗೆದ ಮಹಾ ದ್ರೋಹ"

- ಎಂದು ಮಂಕಾದ ನಕ್ಷತ್ರಗಳಿಗೆ, ಚಂದ್ರನಿಗೆ, ಗುಡ್ಡದ ಬಂಡೆಗಳಿಗೆ, ಬಯಲಲ್ಲಿ ಭಿಕಾರಿಗಳಂತೆ ಅಲೆಯುತ್ತಿದ್ದ ಪಂಜುಗಳಿಗೆ ಹೇಳುವಂತೆ ತನಗೆ ತಾನೇ ಹೇಳಿಕೊಂಡ.

* * *

ಇತ್ತ ದುರ್ಗದ ಮೇಲೆ ಮದಕರಿನಾಯಕನ ಹೃದಯ ಹೀಗೆ ಮರುಗುತ್ತಿರುವಾಗ –

ಅತ್ತ-

ಮಲ್ಲಾಪುರದ ಬಳಿಯ ತನ್ನ ಬಿಡಾರದಲ್ಲಿ, ಸಂಜೆ ಸೋತುಬಂದವರಿಗೆ ಚಾವಟಿ, ಚಡಾವು, ಅವಾಚ್ಯ ಬೈಗಳ ಶಿಕ್ಷೆ ಮಾಡಿಯೂ ಸೋಲಿನಿಂದಾದ ಕಹಿ ಕರಗದೆ, ಕ್ರೋಧ ಶಮನವಾಗದೆ, ಉಪಶಮನಕ್ಕೆಂದು ಕುಡಿದ ಪಾನೀಯದಿಂದ ಮತ್ತಷ್ಟು ಪ್ರಕ್ಷುಬ್ಧನಾಗಿ, ತನ್ನೆದುರು ತಲೆ ತಗ್ಗಿಸಿ ಕುಳಿತ ಮೋಹಿಯುದ್ದೀನ್, ಮೊಖ್ದುಂಸಾಹೇಬರಿಗೆ –

“ನಿಮಗೆ, ನಿಮ್ಮ ಬೀಬಿಯರ ಲಂಗಾ ತೊಡಿಸಿ, ಲಷ್ಕರಿನಲ್ಲಿ ಮೆರವಣಿಗೆ ಮಾಡಿಸಬೇಕು. ಒಂದು ಸಲವಲ್ಲ, ಎರಡು ಸಲ - ಸೋತು ಬದುಕಿ ಬರಲು ನಿಮಗೆ ನಾಚಿಕೆಯಾಗಲಿಲ್ಲವೇ ? ಬೇಷರಮ್ ಕಹೀಕಾ, ನಾಮರ್ದಾ - ಸಬ್ ನಾಮರ್ದೆ ಹೈಂ. ಮರ್ದ್ ಕಹನಾ ಮದಕರಿಕೋ ಮರ್ದ್ ಕಹನಾ. ದುಸರಾ ಏಕ್ ಮರ್ದ್ ಹೈ ಹಮಾರೆ ಫೌಜ್‌ಮೆ ! ಚಲೇ ಜಾವ್... – ನಿಕಲ್ ಜಾವ್....ಮೇರೇ ಸಾಮ್‌ನೇ ಸೇ”

- ಎಂದು ಫೂತ್ಕರಿಸಿ, ಕೈಯ ಬಟ್ಟಲಲ್ಲಿದ್ದ ಪಾನೀಯವನ್ನು ಅವರ ಮುಖದ ಮೇಲೆ ರಾಚಿ-

“ಕಲ್ ಸುಬ್ಹ ಓ ಹರಪನಹಳ್ಳಿ, ರಾಯದುರ್ಗಕೆ ಕುತ್ತೇಕೋ ಹಮಾರೆ ಸಾಮ್ನೆ ಹಾಜರ್ ಕರೋ”

-ಎಂದು ಅಪ್ಪಣೆ ಮಾಡಿ, ಶಪಥ ಮಾಡಿದಂತೆ ಹೇಳಿದ ಹೈದರಾಲಿ –

“ಇಸ್ ದುನಿಯಾ ಮೆ ಸಿರಫ್ ಏಕ್ ಆದ್ಮಿಕೆ ಲಿಯೆ ಜಗಾ ಹೈ - ತುಮ್ ಯಾ ಹಮ್.... ದೇಖೇಂಗೆ ಕೌನ್ ಬಚೇಗಾ....ಇವತ್ತಿನವರೆಗೂ ನಡೆದದ್ದು ಬರೀ ಸವಾಲ್-ಜವಾಬ್. ನಾಳಿನಿಂದ ನಿಜವಾದ ಯುದ್ಧ.”

೨

ಮರುದಿನ ಪ್ರಾತಃಕಾಲ –

ನಡುಬೇಸಿಗೆಯ ಸೂರ್ಯನಂತೆ ಏಳುತ್ತಲೇ ಕಿಡಿಗಾರುತ್ತಾ ಎದ್ದ ಹೈದರಾಲಿ, ಸಾಹೇಬ್ಜಾದೆ ಟೀಪು, ಗುಲಾಂ ಅಲಿಖಾನ್, ಪೂರ್ಣಯ್ಯ, ಬರ್ಕಿ ಶ್ರೀನಿವಾಸರಾಯ, ತೋಷಿಖಾನೆ ಕೃಷ್ಣರಾಯ ಮೊದಲಾದ ಆಪ್ತರಿಗೆ, ಹರಪನಹಳ್ಳಿ, ರಾಯದುರ್ಗ ಮೊದಲಾದ ಸಾಮಂತ ಪಾಳೆಯಗಾರರಿಗೆ ಖಾಸಾ ಡೇರೆಗೆ ಬರಲು ಹೇಳಿಕಳಿಸಿ, ಅಶಾಂತಚಿತ್ತದಿಂದ ಅವರು ಬರುವುದನ್ನೇ ಕಾಯುತ್ತಾ ಕುಳಿತ.

ಒಬ್ಬೊಬ್ಬರಾಗಿ ಸಭೆಗೆ ಆಹ್ವಾನಿತರಾದವರೆಲ್ಲಾ ಬಂದು ಉಚಿತಾಸನಗಳಲ್ಲಿ ಕುಳಿತಬಳಿಕ, ಹೈದರಾಲಿ –

“ಇಲ್ಲಿರುವವರೆಲ್ಲಾ ದೊಡ್ಡ ಸರದಾರರು, ಭಾರೀ ಪಾಳಯಗಾರರು. ಘೋಷಾದಲ್ಲಿ ಗುಟುರೆಹಾಕಿ ದೆಹಲಿ ಸಿಂಹಾಸನ ಅಲ್ಲಾಡಿಸೋ ಗಂಡುಜನ. ಆದರೂ ದುರ್ಗದವರು ನಮಗೆ ಇಂಗಳದಾಳಿನಲ್ಲಿ ಇಂಗು ತಿನ್ನಿಸಿದರು; ನಿನ್ನೆ ಮಣ್ಣು ಮುಕ್ಕಿಸಿದರು. ಕೃಷ್ಣಪ್ಪ ನಾಯಕರೇ,

ಬಸಪ್ಪನಾಯಕರೇ, ಮದಕರಿನಾಯಕ - ಪೇಶ್ವೇದಂಡಿನಲ್ಲಿ ನಿಮ್ಮ ಮಿಂಡನೆಂದು ಹೊಗಳಿಸಿಕೊಂಡದ್ದು ಸುಳ್ಳಲ್ಲ ಎಂದು ತೋರಿಸಿದ. ಈಗ ನೀವೇನು ಹೇಳುತ್ತೀರಿ? ನಿಮ್ಮಂಥ ಸಾವಿರ ಸಾಮಂತರ ಬದಲು ಮದಕರಿಯಂಥ ಒಬ್ಬ ಮಿತ್ರ ಇದ್ದಿದ್ದರೆ ದೆಹಲಿಯ ಲಾಲ್‌ಕಿಲಾದ ಮೇಲೆ ಮೈಸೂರಿನ ನಿಶಾನೆ ಏರಿಸುತ್ತಿದ್ದೆ. ನಿಮ್ಮನ್ನು ನಂಬಿ ಈ ಅವಮಾನಕ್ಕೆ ನಾವು ತಾಳಿ ಕಟ್ಟಿದ ಹಾಗಾಯಿತು. ಈಗೇನು ಹೇಳುತ್ತೀರಿ? ದುರ್ಗದ ಬಾಗಿಲಿಗೆ ನಿಮ್ಮ ಹೆಣ ತೂಗುಹಾಕಿಸಿ, ಮದಕರಿಯ ಸ್ನೇಹ ಬೆಳೆಸಬೇಕೋ - ಅಥವಾ - ಇನ್ನಾದರೂ ನಿಮಗಿರುವ ಮೀಸೆ ತೆಂಗಿನ ಗುಂಜಲ್ಲ ಎಂದು ತೋರಿಸುತ್ತೀರೋ ?”

- ಸುತ್ತಿಸಿ ಸುತ್ತಿಸಿ ಚಾವಟಿಯಿಂದ ಜಡಿದಂತೆ ಕೇಳಿದ.

ಆ ಮಾತು ಕೇಳಿ, ಕೇಳಿದವರ ಗಂಟಲು ಒತ್ತಿ, ನೀರು ಬಯಸಿತು. ಆದರೆ ಆ ಮಾತಿನಿಂದ ಅಳುಕದಿದ್ದವರು ಇಬ್ಬರೇ - ಸಾಹೇಬ್‌ಜಾದೆ ಟೀಪು ಮತ್ತು ಬಕ್ಷಿ ಪೂರ್ಣಯ್ಯ. ಹೈದರಾಲಿ ಸಿಟ್ಟಾದಾಗ ಇದಿರು ನಿಂತು ಮಾತನಾಡುವ ಧೈರ್ಯವಿದ್ದುದು ಅವರಿಬ್ಬರಿಗೇ. ಈಗಲೂ ಹೈದರಾಲಿ ಕಿಡಿಗಾರುತ್ತಿದ್ದಾಗ, ಟೀಪುವೇ ಎದ್ದು ನಿಂತು, ಎದೆ ಸೆಟೆಸಿ ಹೇಳಿದ –

“ಅಬ್ಬಾಹುಜೂರ್ - ತಾವು ವಿನಾಕಾರಣ ಸಿಟ್ಟಾಗಿದ್ದೀರಿ. ಇಂಗಳದಾಳಿನಲ್ಲಿ ನಡೆದದ್ದು ಕೃತ್ರಿಮ. ನಿನ್ನೆ ನಡೆದದ್ದು ಅಂದಾಜು ಯುದ್ಧ-ಶಕ್ತಿಪರೀಕ್ಷೆಯಲ್ಲ. ನಮ್ಮ ನಾಲ್ಕು ಲಕ್ಷ ಫೌಜು, ಸಾವಿರ ತೋಫಿನ ಇದಿರು ಚಿತ್ರದುರ್ಗ ಯಾವ ಲೆಕ್ಕ ? ಈಗಲೂ ಹುಕುಂ ಕೊಡಿ. ಇಷ್ಟು ಸೇನೆ ಖುದ್ದಾಗಿ ದಾಳಿ ಮಾಡಿದರೆ ಚಿತ್ರದುರ್ಗ ಮೂರು ದಿನದಲ್ಲೇ ಮಣ್ಣುಪಾಲಾಗುತ್ತದೆ. ಹಾಗೆ ಮಾಡದಿದ್ದರೆ ನನಗೆ ಟೀಪು ಎಂದು ಕರೆಯಬೇಡಿ.”

ಆ ಮಾತನ್ನು ಕೇಳಿದ ಹೈದರಾಲಿ –

“ಷಹಜಾದೆ - ನೀನು ಹುಲಿಯ ಮರಿ. ಅದರ ಹಾಗೇ ಮಾತಾಡಿದೆ. ಮರಿಯ ಮಾತು - ಬಲಿತ ಬುದ್ಧಿಯ ಮಾತಲ್ಲ. ನಮ್ಮ ಹತ್ತಿರ ನೀನು ಹೇಳಿದಷ್ಟು ತೋಪುಗಳಿವೆ. ಮದ್ದು ಗುಂಡುಗಳಿಗೂ ಬರಗಾಲವಿಲ್ಲ. ಆದರೆ ಲಾಲಿಸಾಹೇಬರನ್ನು ಕೇಳು - ತೋಫಿಗೆ ದುರ್ಗ ಉರುಳುತ್ತದೇನೋ ?” – ಎಂದು ಫ್ರೆಂಚ್ ಸರ್ದಾರ ಲಾಲಿಸಾಹೇಬನತ್ತ ನೋಡಿದ.

ಲಾಲಿ ಭಾರತಕ್ಕೆ ಬಂದ ಫ್ರೆಂಚ್ ಸೇನಾಧಿಕಾರಿಗಳಲ್ಲೆಲ್ಲಾ ತುಂಬಾ ಪ್ರಖ್ಯಾತನಾದವನು. ದಕ್ಷಿಣ ಭಾರತದಲ್ಲಿ ಫ್ರೆಂಚ್ ಸಾಮ್ರಾಜ್ಯ ಕಾಲೂರಲು ಕಾರಣಕರ್ತನಾದವನು. ಫ್ರೆಂಚ್ ಸೇನೆಯೊಂದಿಗೇ ಅಲ್ಲದೆ, ನಿಜಾಮನ ಸೇನೆಯಲ್ಲೂ ನೂರಾರು ಯುದ್ಧಗಳಲ್ಲಿ ಸೈನ್ಯಾಧಿಕಾರಿಯಾಗಿ, ತನ್ನ ವೈಯಕ್ತಿಕ ಸಾಹಸ, ರಣತಂತ್ರಗಳಿಂದ ನೂರಾರು ಜಯಗಳಿಗೆ ದಾರಿ ಮಾಡಿದವನು. ತೋಫು, ರೈಫಲ್ ಮೊದಲಾದ ಆಧುನಿಕ ಶಸ್ತ್ರಾಸ್ತ್ರಗಳ ಪ್ರಯೋಗದಲ್ಲಿ

ಹೈದರಾಲಿಯ ಪಡೆಯನ್ನು ತರಬೇತಿ ಮಾಡಿ, ಹೈದರಾಲಿಯ ಸೇನೆ ಎಂದರೆ ಇಂಗ್ಲೀಷರೂ ಬೆದರುವಂತೆ ಮಾಡಿದ ರಣಮೇಧಾವಿ. ಎಂತಲೇ ಹೈದರಾಲಿ ಆತನ ಹೆಸರು ಹೇಳುತ್ತಿದ್ದ ಹಾಗೇ, ಆತ ಏನು ಅಭಿಪ್ರಾಯ ವ್ಯಕ್ತಪಡಿಸುವನೋ ಎಂದು ಕೇಳಲು ಎಲ್ಲರ ಕಿವಿಗಳೂ ಕುತೂಹಲದಿಂದ ನಿಮಿರಿದವು.

ಹೈದರಾಲಿಯ ಮಾತು ಕೇಳಿದ, ಕೆಂಪು ಉಣ್ಣೆ ಬಟ್ಟೆಯ ಸಮವಸ್ತ್ರ ಧರಿಸಿ, ಎದೆಯಮೇಲೆ ತಾನು ಪಡೆದ ಕೀರ್ತಿಯ ಬಂಗಾರ, ಬೆಳ್ಳಿ, ಕಂಚಿನ ಪದಕಗಳನ್ನು ಸಾಲಾಗಿ ಧರಿಸಿದ, ಸಾಕಷ್ಟು ವಯಸ್ಸಾದರೂ ದೇಹದ ಬಿಗಿತಪ್ಪದ, ಆರಡಿ ಎತ್ತರದ ಲಾಲಿಸಾಹೇಬ ಎದ್ದು ನಿಂತು ನವಾಬರಿಗೆ ಮುಜುರೆ ಮಾಡಿ –

"ಖಾವಂದ್, ತಮ್ಮ ಅಪ್ಪಣೆಯಂತೆ ನಾನು ನಿನ್ನೆಯ ದಿನ ಕೋಟೆಯ ಸುತ್ತಲೂ ತೋಪು ಹೂಡುವ ಜಾಗ ಯಾವುದು ಎಂದು ತಿರುಗಾಡಿ ನೋಡಿಬಂದೆ. ಒಂದೊಂದು ಕಡೆಯ ದಿಣ್ಣೆಯನ್ನೂ ಹತ್ತಿ ಯಂತ್ರಸಹಾಯದಿಂದ ಪರೀಕ್ಷೆ ಮಾಡಿದೆ. ನಮ್ಮ ಒಂದೊಂದು ತೋಫಿನ ಶಕ್ತಿ ಎಷ್ಟು, ಯಾವ ತೋಫಿನ ಗುಂಡು ಎಷ್ಟು ದೂರ ಹೋಗುತ್ತದೆ, ತೋಫಿನ ಬಾಯನ್ನು ಯಾವ ಮಟ್ಟದಲ್ಲಿ ನಿಲ್ಲಿಸಬೇಕು - ಎನ್ನುವುದನ್ನು ನಾನು ಬಲ್ಲೆ. ಹಾಗೂ ನಾಲ್ಕು ಕಡೆ ತೋಫು ಹೂಡಿಸಿ ಗುಂಡು ಹಾರಿಸಿ ನೋಡಿದೆ. ಆದರೆ ಈ ಕೋಟೆಯನ್ನು ಕಟ್ಟಿದವರು ಬಹಳ ನಿಪುಣರು. ಇಷ್ಟು ತಂತ್ರೋಕ್ತವಾಗಿ ಕಟ್ಟಿದ ಕೋಟೆಯನ್ನು ಇಡೀ ಭಾರತದಲ್ಲೇ ನಾನು ಕಂಡಿಲ್ಲ. ತೋಫಿನ ಬಾಯಿ ಕೊಂಚ ಮೇಲು ಮಾಡಿದರೆ ಗುಂಡು ಆಕಾಶಕ್ಕೆ ಹೋಗುತ್ತದೆ; ತಗ್ಗಿಸಿದರೆ ಅಗಳತಿಗೆ ಬೀಳುತ್ತದೆ; ಸಮವಾಗಿಟ್ಟು ಉಡಾಯಿಸಿದರೆ ನಮ್ಮ ಸೇನೆಗೇ ಪೆಟ್ಟು ಬೀಳುತ್ತದೆ. ಸಾಹೇಬ್‌ಜಾದೆಯವರು ಹೇಳಿದಂತೆ ನಮ್ಮ ಬಳಿ ಬೇಕಾದಷ್ಟು ತೋಫು ಇದೆ. ಆದರೆ ಪ್ರಕೃತದಲ್ಲಿ ಅವುಗಳಿಂದ ನಮಗೇನೂ ಉಪಯೋಗ ಕಾಣುವುದಿಲ್ಲ. ಮದ್ದು ಗುಂಡು ಹಲಾಕಾಗುತ್ತದೆ"- ಎಂದು ವಿವರಿಸಿ ಹೇಳಿದ.

"ನಮ್ಮ ಸೇನೆ ಕೋಟೆಗೆ ಮತ್ತಷ್ಟು ಹತ್ತಿರ ಹೋದರೆ...." – ಟೀಪು ಕೇಳಿದ.

"ದುರ್ಗದವರ ತೋಪುಗಳು ನಮ್ಮನ್ನು ಚಿಂದಿಮಾಡುತ್ತವೆ. ಸದ್ಯಕ್ಕೆ ನಮ್ಮ ತೋಫುಗಳನ್ನು - ದುರ್ಗದವರನ್ನು ಬೆದರಿಸಲು ಬಳಸಬಹುದೇ ವಿನಾ ಯುದ್ಧ ಕಾರ್ಯಕ್ಕೆ ಪ್ರಯೋಜನಕ್ಕೆ ಬರುವುದಿಲ್ಲ. ಬರೀ ಸೇನೆಗೆ ಭಾರ ಎನ್ನಿ...."

- ಹೈದರಾಲಿ ನಿರಾಶನಾಗಿ ಕೇಳಿದ.

"ಹಾಗೆಂದೂ ನಾನು ಹೇಳುವುದಿಲ್ಲ. ನಮ್ಮ ಸೇನೆ ಮತ್ತಷ್ಟು ಮುಂದುವರಿದು, ಆಯಕಟ್ಟಿನ ಜಾಗಗಳನ್ನು ಹಿಡಿದರೆ ಆಗ ನಮ್ಮ ತೋಪುಗಳು ತಮ್ಮ ಕೆಲಸ ಮಾಡುತ್ತವೆ. ಅಲ್ಲಿಯವರೆಗೆ ದುರ್ಗದವರನ್ನು ಬೆದರಿಸಲು ನಮ್ಮ ತೋಫನ್ನು ಬಳಸಬಹುದು."

- ಲಾಲಿಸಾಹೇಬ ತನ್ನ ಖಚಿತವಾದ ತಜ್ಞಾಭಿಪ್ರಾಯ ತಿಳಿಸಿದ.

ಲಾಲಿಯ ತಜ್ಞಾಭಿಪ್ರಾಯದ ವಿರುದ್ಧ ಮಾತನಾಡಲು ಯಾರಿಗೂ ಬಾಯಿ ಬರಲಿಲ್ಲ. ಅದನ್ನು ಕೇಳಿದ ಟೀಪು –

"ತೋಫುಗಳು ಇಲ್ಲದಿದ್ದರೇನು, ನಮ್ಮ ಫೌಜೇನೂ ಸಣ್ಣದಲ್ಲ. ನಾಲ್ಕು ಲಕ್ಷ ಪೌಜು ಏಕ್‌ದಂ ಮೂರು ಕಡೆಯಿಂದಲೂ ನುಗ್ಗಿದರೆ ಕೋಟೆ ನಿಲ್ಲುತ್ತದೆಯೇ ?" – ಎಂದು ಕೇಳಿದ.

"ಹಾಗೆ ನುಗ್ಗಿದರೆ ದುರ್ಗದ ಒಬ್ಬರಿಗೆ ನಮ್ಮವರ ನೂರು ಪ್ರಾಣ ಬಲಿಕೊಡಬೇಕಾದೀತು. ಕೋಟೆಯ ರಕ್ಷಣೆ ಇರುವವರ ಮೇಲೆ ಬಯಲಿನಲ್ಲಿ ನಿಂತು ದಾಳಿ ಮಾಡುವ ಬೇವಕೂಫ್ ಕೆಲಸ ಯಾರಾದರೂ ಬಿನ್ ಹುಕುಂ ಮಾಡಿದರೆ ಅಂಥವರಿಗೆ ನಾಲಿಗೆ ಕತ್ತರಿಸಬೇಕಾದೀತು. ಹುಷಾರ್ !"

-ಎಂದು ನೆರೆದೆಲ್ಲರಿಗೂ ಎಚ್ಚರಿಸುವಂತೆ ಹೇಳಿ ಪೂರ್ಣಯ್ಯನತ್ತ ತಿರುಗಿ –

"ತಲವಾರ್‌ನ ಮಾತು ಮುಂದಾಗಲಿ, ಈಗ ನಿಮ್ಮ ತಲೆ ಏನು ಹೇಳುತ್ತದೆ. ಪೂರ್ಣಯ್ಯ?"

-ಎಂದು ಕೇಳಿದ ಹೈದರಾಲಿ.

"ಇದು ಆತುರಕ್ಕೆ ಮುಗಿಯುವ ಯುದ್ಧವಲ್ಲ; ಅಧಿಕ ಸೇನಾಬಲಕ್ಕೆ ಬೀಳುವ ಕೋಟೆಯಲ್ಲ - ಚಿತ್ರದುರ್ಗ, ಬಂಡೆಗಲ್ಲನ್ನು ಉಜ್ಜಿ ಉಜ್ಜಿ ಪುಡಿ ಮಾಡುವಂತೆ, ಎಚ್ಚರವಾಗಿದ್ದು ಸೂಕ್ತ ಕಾಲಕ್ಕೆ ಕಾಯುವುದೊಂದೇ ಮಾರ್ಗ. ಕಾಲವೇ ನಮ್ಮ ಸಮರಾಸ್ತ್ರವಾಗಬೇಕು. ಎಲೆ ಹಣ್ಣಾಗಿ ಉದುರಿದಂತೆ ಸವೆದು ಸೋತು ದುರ್ಗ ನಮ್ಮದಾಗಬೇಕು. ಅದಿಷ್ಟು ದಿನದಲ್ಲಾಗುತ್ತದೆ ಎಂದು ಹೇಳಲು ನಾನು ಜ್ಯೋತಿಷಿಯಲ್ಲ. ನಾನು ಯೋಚಿಸಿದ್ದೇನೆ. ನನ್ನ ಯೋಚನೆ ನಿಮಗೂ ಒಪ್ಪಿಗೆಯಾದರೆ ಸದ್ಯಕ್ಕೆ ಒಂದು ಕೆಲಸ ಮಾಡಬಹುದು."

- ಒಂದೊಂದು ಮಾತನ್ನೂ ತೂಗಿ ಹೇಳಿದಂತೆ ಹೇಳಿದ ಪೂರ್ಣಯ್ಯ.

"ಏನು ನಿಮ್ಮ ಯೋಚನೆ ?"

"ಆದದ್ದಾಯಿತು. ಮತ್ತೊಂದು ಬಾರಿ ಸಂಧಾನ ಪ್ರಯತ್ನ ಮಾಡಿ ನೋಡಬಾರದೇಕೆ ?"

ಪೂರ್ಣಯ್ಯನಾಡಿದ ಅನಿರೀಕ್ಷಿತವಾದ ಮಾತನ್ನು ಕೇಳಿ, ನೆರೆದಿದ್ದವರೆಲ್ಲರೂ ಚಕಿತರಾದರು. ಆ ಮಾತು ಕೇಳಿದ ಹೈದರಾಲಿಗೇ ತನ್ನ ಕಿವಿಯನ್ನು ನಂಬಲಾಗದೆ-

"ಏನು ಹೇಳಿದಿರಿ ?" – ಎಂದು ಕೇಳಿದ.

"ಈ ಹಂತದಲ್ಲೂ ಮತ್ತೊಂದು ಬಾರಿ ಸಂಧಾನಪ್ರಯತ್ನ ಮಾಡಬಹುದು ಎಂದು ನನಗೆ ತೋರುತ್ತದೆ."

ಪೂರ್ಣಯ್ಯ ಹೇಳಿದ ಮಾತಿಗೆ ಹೈದರಾಲಿ ಉತ್ತರ ಕೊಡುವ ಮೊದಲೇ ಟೀಪು ನಕ್ಕು ಹೇಳಿದ –

“ಬಹಳ ಚೆನ್ನಾಗಿದೆ ನಿಮ್ಮ ಸಲಹೆ, ಪೂರ್ಣಯ್ಯನವರೇ - ಮನೆಯ ಮುಂದೆ ಹೆಣ ಹಾಕಿಕೊಂಡವರನ್ನು ಮದುವೆಗೆ ಹೆಣ್ಣು ಕೇಳಲು ಹೋದಹಾಗೆ. ಇದು ಆಗುಹೋಗುವ ಮಾತಲ್ಲ. ಈ ಹೊತ್ತಿನಲ್ಲಿ ನಾವು ಸಂಧಾನದ ಮಾತಾಡಿದರೆ ಮದಕರಿನಾಯಕನ ಪೊಗರು ಮತ್ತಷ್ಟು ಹೆಚ್ಚುತ್ತದೆ. ಅದು ಬಿಟ್ಟು ಬೇರೇನಿದ್ದರೂ ಹೇಳಿ.”

“ಷಹಜಾದಾರವರು ಹೇಳಿದುದು ನಿಜ. ನಾಲ್ಕು ಲಕ್ಷ ಸೇನೆ ಇಟ್ಟುಕೊಂಡು ಮದಕರಿನಾಯಕನೊಂದಿಗೆ ಸಂಧಾನದ ಮಾತನಾಡಿದರೆ ನಾವು ತಲೆ ಎತ್ತಿ ತಿರುಗುವುದೇ ಕಷ್ಟವಾಗುತ್ತದೆ.” – ರಾಯದುರ್ಗದ ಕೃಷ್ಣಪ್ಪನಾಯಕ ಹೇಳಿದ.

“ನಿಮಗೆ ಎತ್ತಿ ತಿರುಗಾಡಲು ತಲೆ ಇದ್ದದ್ದು ಯಾವಾಗ ? ಸ್ವಲ್ಪ ಬಾಯಿ ಬಿಗಿಹಿಡಿಯುವುದನ್ನು ಕಲಿಯಿರಿ. ಯುದ್ಧದಲ್ಲಿ ಗಂಡಸುತನವಿಲ್ಲ, ಬುದ್ಧಿಯಿಲ್ಲ, ಚಾಲೂಕಿಲ್ಲ, ನಿಮ್ಮನ್ನು ನಂಬಿ ಕೆಟ್ಟವರು ನಾವು. ನಿಮ್ಮ ಬದಲು ಮದಕರಿನಾಯಕನ ಸ್ನೇಹ ಉಳಿಸಿಕೊಂಡಿದ್ದರೆ, ಈ ವೇಳೆಗೆ ಮರಾಠರನ್ನು ನುಂಗಿ ನೀರುಕುಡಿದು ದೆಹಲಿಯತ್ತ ಕೈಚಾಚಬಹುದಿತ್ತು. ನಿಮ್ಮ ಮಾತು ಬೇಡ. ಪೂರ್ಣಯ್ಯ, ನಿಮ್ಮ ಅಭಿಪ್ರಾಯವೇನೋ ವಿವರಿಸಿ ಹೇಳಿ.”

– ಪೂರ್ಣಯ್ಯನಿಗೆ ಎದುರಾಡಿದವರನ್ನು ಗದರಿಸಿ ಹೇಳಿದ ಹೈದರಾಲಿ.

“ನಿನ್ನೆಯ ಯುದ್ಧದಲ್ಲಿ ನಮ್ಮ ಜನ ಸೋತು ಬಂದರು, ನಿಜ. ಆದರೆ ನಿನ್ನೆ ಒಂದು ದಿನಕ್ಕೇ ಯುದ್ಧ ಮುಗಿಯಲಿಲ್ಲ. ಸಾವಿರ ಜನ ಸತ್ತಿರಬಹುದು - ನಾಲ್ಕು ಲಕ್ಷದ ಫೌಜಿಗೆ ಆದಾವ ಲೆಕ್ಕವೂ ಅಲ್ಲ. ನಮ್ಮಂತೆಯೇ ಇದು ಮದಕರಿನಾಯಕನಿಗೂ ತಿಳಿದಿದೆ. ಅಷ್ಟೇ ಅಲ್ಲ, 'ನವಾಬರು ಹಟ ಹಿಡಿದರೆ, ಹತ್ತುವರ್ಷವಾದರೂ ದುರ್ಗ ತೆಗೆದುಕೊಳ್ಳದೆ ಹೋಗುವುದಿಲ್ಲ' ಎನ್ನುವ ನಿಮ್ಮ ಛಲ ಗುತ್ತಿಕೋಟೆ ಯುದ್ಧದಲ್ಲಿ ನಾಯಕನಿಗೆ ಅರ್ಥವಾಗಿದೆ. ಇಷ್ಟು ದಿನ ದುರ್ಗದ ಮೇಲೆ ಯಾರೂ ನೇರವಾಗಿ ದಾಳಿ ಮಾಡಿದ್ದಿಲ್ಲ. ಇಷ್ಟು ಸೇನೆಯೊಂದಿಗೆ, ಈಗ ನಾವು ಮುತ್ತಿಗೆ ಹಾಕಿದ್ದೇವೆ. ದುರ್ಗದ ಎಲ್ಲಾ ಹೊರದಾರಿಗಳನ್ನು ಬಂದುಮಾಡಿ, ಯಾವ ಕಡೆಯಿಂದಲೂ ಅವರಿಗೆ ಯಾವ ಸಹಾಯವೂ ಬರದಹಾಗೆ ಬೇಲಿ ಬಿಗಿದಿದ್ದೇವೆ. ಏನಿದ್ದರೂ, ದುರ್ಗದ ಒಳಗಿದ್ದಷ್ಟೇ ಮದಕರಿನಾಯಕನ ಬಂಡವಾಳ. ಅದು ಎಷ್ಟಿದ್ದರೂ, ಅದನ್ನು ನಂಬಿ ಎಷ್ಟು ದಿನ ಬದುಕಲು ಸಾಧ್ಯ? ಒಂದು ದಿನದ ಗೆಲುವಿನ ಹಿಗ್ಗು-ಹೆಮ್ಮೆ ಎಷ್ಟು ದಿನ ಇರಲು ಸಾಧ್ಯ ? ಮದಕರಿನಾಯಕ ಗಂಡು, ಯುದ್ಧಕ್ಕೆ ಬರುತ್ತೇವೆ ಎಂದಾಗ ಹೆದರಲಿಲ್ಲ. ಆದರೆ ಆತ ಅವಿವೇಕಿ ಎಂದು ನಾನು ತಿಳಿದಿಲ್ಲ. ಯೋಚಿಸಿದರೆ ಆತನಿಗೂ ಎಂದಿದ್ದರೂ ಇದು ಸೋಲುವ ಯುದ್ಧ ಎಂದು ಅರ್ಥವಾಗುತ್ತದೆ. ನನಗನಿಸುತ್ತದೆ - ಕಳ್ಳಿನರಸಪ್ಪಯ್ಯನವರೇ ಪ್ರಧಾನಿಯಾಗಿದ್ದಿದ್ದರೆ ಈ ಯುದ್ಧವಾಗುತ್ತಿರಲಿಲ್ಲ. ಅವರಿಲ್ಲ- ಈಗಿರುವುದೆಲ್ಲ ಹುಡುಗುಪಾಳಯ-ದುಡುಕಿದ್ದಾರೆ. ಯೋಚಿಸಲು ನಾವು ಮತ್ತೊಂದು

ಅವಕಾಶಕೊಟ್ಟರೆ ಮದಕರಿನಾಯಕನ ಬುದ್ಧಿ ಬದಲಾಗಬಹುದೇನೋ - ಯಾರು ಬಲ್ಲರು ? ಇದು ಯುದ್ಧ, ಮದುವೆಯಲ್ಲ. ಬೀಗತನದ ಬಿಗುಮಾನಕ್ಕೆ ಇಲ್ಲಿ ಅವಕಾಶವೇ ಇಲ್ಲ. ಸಂಧಾನದ ಮಾತಾಡಿದರೆ ಒಂದು ದಿನ ಹೋದೀತು, ಹತ್ತು ಮಾತು ಖರ್ಚಾದೀತು. ನಾವು ಕಳೆದುಕೊಳ್ಳುವುದೇನೂ ಇಲ್ಲ. ಮಾತು ಎರಡು ದಿನ ಎಳೆದರೆ - ನಾವು ಅವರ ಕೊರಳಸುತ್ತಿನ ಕುಣಿಕೆಯನ್ನು ಮತ್ತಷ್ಟು ಬಿಗಿಮಾಡಬಹುದು. ಅತ್ತ ವಕೀಲರು ಹೋಗಲಿ - ಇತ್ತ ನಮ್ಮವರು ದುರ್ಗದ ಸುತ್ತ ಬಂದೋಬಸ್ತು ಬಿಗಿ ಮಾಡಲಿ." – ಸಾವಧಾನವಾಗಿ ತನ್ನ ಮಾತನ್ನು ವಿವರಿಸಿ ಹೇಳಿದ ಪೂರ್ಣಯ್ಯ.

ಸಭೆ ಸದ್ದು ಮಾಡದೆ ಪೂರ್ಣಯ್ಯನ ಮಾತು ಕೇಳಿತು. ಆ ಮಾತನ್ನು ಕೇಳಿ, ಅಷ್ಟು ಹೊತ್ತು ಮೌನವಾಗಿದ್ದ ಹೈದರಾಲಿ, ಪೂರ್ಣಯ್ಯನಾಡಿದ ಒಂದೊಂದು ಮಾತನ್ನೂ ಮೆಲುಕು ಹಾಕಿ –

"ನೀವು ಹೇಳಿದ್ದು ನಿಜ, ಪೂರ್ಣಯ್ಯ. ಈ ಲವಂಡೀಕೆ ಮದಕರಿನಾಯಕ ನಮ್ಮನ್ನು ಸತಾಯಿಸಿದಷ್ಟು ಬೇರೆ ಯಾರೂ ಸತಾಯಿಸಿಲ್ಲ. ಎರಡು ದಿನ ಹೋಗಲಿ, ಎರಡು ಸಾವಿರ ಸಾಯಲಿ - ಈ ನಾಯಕನ ಕಥೆ ಮುಗಿಸಿಯೇ ಮುಂದಿನ ಮಾತು. ವಕೀಲರನ್ನು ಕಳಿಸಿ. ಕಾಗದ ಬರೆಸಿ, ಆದರಿಷ್ಟೆ - ಅದು ಬೇಡಿಕೆಯಲ್ಲ, ಎಚ್ಚರಿಕೆಯಾಗಬೇಕು. ಅವರು ಒಪ್ಪಬಾರದು, ಬಿಡಬಾರದು - ಹಾಗಿರಬೇಕು. ನಮ್ಮ ಇಜ್ಜತ್‌ಗೆ ಏನೂ ಲೋಪ ಬರಕೂಡದು. ಹಾಗಿರಬೇಕು ಕಾಗದ. ಹಾಗೆ ಜಬರ್‌ದಸ್ತಾಗಿ ಕಾಗದ ಬರೆಸಿ, ಸರಿಯಾಗಿ ಮಾತಾಡುವಂಥವರನ್ನು ಕಳಿಸಿ. ನಮ್ಮ ಭಾವಮೈದುನರಂಥ ಮಣ್ಣುಮಡ್ಡಿಯ ತಲೆಯವರನ್ನು ಮಾತ್ರ ಕಳಿಸಬೇಡಿ. ಮಾತಿನ ಸಂದಿನಲ್ಲಿ ಮನಸ್ಸಿನ ಇಷಾರೆ ಹಿಡಿಯುವವರನ್ನು ಕಳಿಸಿ" - ಎಂದು ಹೇಳಿದ.

ಹೈದರಾಲಿಯೇ ಅಷ್ಟು ಹೇಳಿದ ಬಳಿಕ, ಉಳಿದವರೇನೂ ಮಾತನಾಡಲಿಲ್ಲ.

ಅಲ್ಲಿಗೆ ಸಭೆ ಮುಗಿಯಿತು ಎಂದು ಅರ್ಥ ಮಾಡಿಕೊಂಡು ಎಲ್ಲರೂ ಹೋದಬಳಿಕ, ತಾನೂ ಹೋಗಲು ಸಿದ್ಧವಾದ ಪೂರ್ಣಯ್ಯನನ್ನು ಹೈದರಾಲಿ ಇರುವಂತೆ ಸೂಚಿಸಿ, ಬಿಡಾರ ಬರಿದಾದಬಳಿಕ-

"ಕಳ್ಳಿನರಸಪ್ಪಯ್ಯ ಈಗೆಲ್ಲಿದ್ದಾರೆ ? ಅವರ ಸುದ್ದಿ ಏನಾದರೂ ಗೊತ್ತಾಯಿತೇ ?"

- ಎಂದು ಕೇಳಿದ.

"ಅವರು ಪ್ರಧಾನಿಯಾಗಿ ಯಾತ್ರೆ ಹೋಗಿದ್ದಿದ್ದರೆ ಇಷ್ಟು ಹೊತ್ತಿಗೆ ಅವರು ಎಲ್ಲಿದ್ದರೂ ಸಮಾಚಾರ ಬರುತ್ತಿತ್ತು. ಆದರೂ ಅವರನ್ನು ಹುಡುಕಿಸುವ ಪ್ರಯತ್ನ ಬಿಟ್ಟಿಲ್ಲ."

"ಬಿಡಬೇಡಿ, ಎಲ್ಲಿದ್ದರೂ ಹುಡುಕಿಸಿ ಹಿಡಿದುಕೊಂಡು ಬರಬೇಕು. ಅವರು ನಮ್ಮ ಬಂದೋಬಸ್ತಿನಲ್ಲಿದ್ದರೆ, ಸಮಯ ಬಂದಹಾಗೆ ಅವರನ್ನು ಉಪಯೋಗಿಸಬಹುದು."

“ಕಳ್ಳಿನರಸಪ್ಪಯ್ಯನವರು ನಮ್ಮ ಕೈಗೆ ಸಿಕ್ಕಿದರೂ, ಅವರು ದುರ್ಗಕ್ಕೆ ದ್ರೋಹ ಬಗೆಯುವ ಜಾತಿಯಲ್ಲ.”

“ಅವರು ನಮ್ಮ ಕೈಗೆ ಸಿಗಲಿ. ಆಮೇಲೆ ಮುಂದಿನ ಮಾತು. ದುರ್ಗಕ್ಕೆ ಹೋಗುವ ನಮ್ಮ ವಕೀಲರಿಗೆ ನರಸಪ್ಪಯ್ಯನವರ ಮಗ ಏನು ಬದುಕಿದ್ದಾನೋ, ಭಂಗಿ ಕುಡಿದು ಸತ್ತನೋ – ಅವನ ಸುದ್ದಿಯೇ ತಿಳಿಯಲಿಲ್ಲ- ಸಾಧ್ಯವಾದರೆ ಹುಷಾರಾಗಿ ತಿಳಿದುಕೊಂಡು ಬರಲು ಹೇಳಿ. ಈಗ ಸದ್ಯಕ್ಕೆ ದುರ್ಗದಲ್ಲಿ ನಮ್ಮ ಕೈಯಲ್ಲಿರುವ ಎಳೆ ಅದೊಂದೇ. ಅದನ್ನು ಉಳಿಸಿಕೊಳ್ಳಬೇಕು.”

“ಆಯಿತು, ಅದಕ್ಕೆ ತಕ್ಕ ವ್ಯವಸ್ಥೆ ಮಾಡುತ್ತೇನೆ. ಅದಾವುದನ್ನೂ ನಾನು ಮರೆತಿಲ್ಲ”

-ಎಂದು ಹೇಳಿದ ಪೂರ್ಣಯ್ಯ.

“ಹಾಗೆಯೇ – ಆ ನಮಕ್ ಹರಾಮ್ ಸರ್ದಾರ್‌ಖಾನನ ರೋಗ ನಮ್ಮಲ್ಲಿ ಮತ್ತಾರಿಗೂ ಬಂದಿಲ್ಲವಲ್ಲ ?”

“ಆ ಬಗ್ಗೆಯೂ ನಾನು ಎಚ್ಚರದಿಂದಿದ್ದೇನೆ.”

“ನಿಮ್ಮ ಕಣ್ಣು ಮುಚ್ಚದಿದ್ದರೆ ನಮಗೆ ಯಾವ ಭಯವೂ ಇಲ್ಲ. ನಿಮ್ಮ ಬುದ್ಧಿ ಖುದಾ ನಮ್ಮ ಕೈಗೆ ಕೊಟ್ಟ ಕತ್ತಿ” - ಎಂದು ಹೇಳಿ, ಪೂರ್ಣಯ್ಯನ ಬೆನ್ನು ತಟ್ಟಿದ ಹೈದರಾಲಿ.

೪

ಆ ದಿನ ಪ್ರಾತಃಕಾಲ –

ಹೊತ್ತು ಹುಟ್ಟುವ ವೇಳೆಗೇ ರಂಗಯ್ಯನ ಬಾಗಿಲ ಮೇಲೆ ನಿಂತು, ದಳವಾಯಿಗಳೊಂದಿಗೆ ದುರ್ಬೀನು ಹಿಡಿದು ಹೈದರಾಲಿಯ ಶಿಬಿರದ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದ ಚಪ್ಪೇಚಾವಡಿ ದಳವಾಯಿ ಸಣ್ಣ ಪರಶುರಾಮಪ್ಪನಾಯಕನಿಗೆ, ಆ ಪಾಳಯದಲ್ಲಿ ಯುದ್ಧಸನ್ನಾಹದ ಲಕ್ಷಣಗಳು ಕಾಣದೆ 'ಇದೇನು ಸೋಜಿಗ'ವೆಂದು ನೋಡುತ್ತಿರುವಾಗಲೇ ಹೈದರಾಲಿಯ ಶಿಬಿರದತ್ತಣಿಂದ, ಶಾಂತಿಸೂಚಕವಾದ ಶ್ವೇತಧ್ವಜವನ್ನು ಹಿಡಿದ ಅಶ್ವಾರೋಹಿಯನ್ನು ಮುಂದುಮಾಡಿಕೊಂಡು, ಅಶ್ವಾರೋಹಿ ಸೈನಿಕರ ರಕ್ಷಣೆಯಲ್ಲಿ ಎರಡು ಪಾಲಕಿಗಳು ಬರುತ್ತಿರುವುದು ಕಾಣಿಸಿ –

“ಈ ಸುದ್ದಿಯನ್ನು ತಿಳಿಸಿ, ಮುಂದೇನು ಮಾಡಬೇಕೆಂದು ಪ್ರಧಾನಿಗಳ ಚಾವಡಿಯಿಂದ ಅಪ್ಪಣೆಯನ್ನು ತೆಗೆದುಕೊಂಡು ಬಾ”

-ಎಂದು ಹೇಳಿ, ಅಶ್ವಾರೋಹಿ ಸೈನಿಕನೊಬ್ಬನನ್ನು ಕಳಿಸಿ, ನಿಧಾನವಾಗಿ ದುರ್ಗಕ್ಕೆ ಹತ್ತಿರವಾಗುತ್ತಿದ್ದ ಆ ಗುಂಪನ್ನೇ ನೋಡುತ್ತಾ ನಿಂತ.

ಆ ಗುಂಪು ರಂಗಯ್ಯನ ಬಾಗಿಲ ಬಳಿ ಸಮೀಪಿಸುವ ವೇಳೆಗೆ, ಪ್ರಧಾನಿಗಳ ಚಾವಡಿಯಿಂದ, ಖುದ್ದಾಗಿ ಪ್ರಧಾನಿ ಪರಶುರಾಮನಾಯಕನೇ –

'ನವಾಬರ ಕಡೆಯ ವಕೀಲರು ಬಂದರೆ, ಅವರು ತಂದ ರಹದಾರಿ ಕಾಗದವನ್ನು ನೋಡಿ, ಅವರನ್ನು ಒಳಗೆ ಬಿಡಬೇಕು. ಅವರೊಂದಿಗೆ ಬಂದ ಸೈನಿಕರನ್ನು ದುರ್ಗದೊಳಗೆ ಬಿಡಕೂಡದು. ಅವರ ಶಸ್ತ್ರಗಳನ್ನು ವಶಪಡಿಸಿಕೊಂಡು ನಜರುಬಂದಿಗಳಾಗಿ ಇಟ್ಟುಕೊಳ್ಳಬೇಕು. ವಕೀಲರನ್ನು ವಿಚಾರಿಸಿ, ಖಾಸಾಸನ್ನಿಧಾನಕ್ಕಲ್ಲದೆ ಬೇರಾರಿಗಾದರೂ ಕಾಗದ ತಂದಿದ್ದರೆ ಅದನ್ನು ವಶಪಡಿಸಿಕೊಳ್ಳಬೇಕು. ವಕೀಲರನ್ನು ಗೌರವದಿಂದ ಕಂಡು, ಕೊತ್ವಾಲಚಾವಡಿಯವರ ಕಾವಲಿನಲ್ಲಿ ಪ್ರಧಾನಿಗಳ ಚಾವಡಿಗೆ ಕಳಿಸಬೇಕು'

-ಎಂದು ಅಪ್ಪಣೆಯನ್ನು ಕಳಿಸಿದ್ದ.

ಪ್ರಧಾನಿಗಳ ಚಾವಡಿಯಿಂದ ಆ ಅಪ್ಪಣೆ ಬರುವವರೆಗೂ ಹೈದರಾಲಿಯ ಕಡೆಯಿಂದ ಬಂದವರನ್ನು ಕಿಲ್ಲೆಯ ಹೊರಗೇ ನಿಲ್ಲಲು ಹೇಳಿ, ಅಪ್ಪಣೆ ಬಂದಬಳಿಕ ಅವರು ಅಗಳತೆಯನ್ನು ದಾಟಲು ತಳ್ಳುಸೇತುವೆಯನ್ನು ಹಾಕಿಸಿ, ಒಳಬರಲು ಬಿಟ್ಟು, ಪ್ರಧಾನಿಗಳ ಅಪ್ಪಣೆಯಂತೆ, ಕುದುರೆಯ ಮೇಲೆ ಬಂದ ಸೈನಿಕರನ್ನು ನಿಶ್ಶಸ್ತ್ರಗೊಳಿಸಿ, ಪಲ್ಲಕ್ಕಿಯಲ್ಲಿದ್ದ ನವಾಬನ ಪ್ರತಿನಿಧಿಗಳಿಗೆ ಪ್ರಧಾನಿಗಳ ಆಜ್ಞೆಯನ್ನು ತಿಳಿಸಿ, ಅವರನ್ನು ಕೊತ್ವಾಲಚಾವಡಿಯವರ ಕಾವಲಿನಲ್ಲಿ ಪ್ರಧಾನಿಗಳ ಚಾವಡಿಗೆ ಕಳಿಸಿದ ಸಣ್ಣ ಪರಶುರಾಮಪ್ಪನಾಯಕ.

ರಾಜಮಾರ್ಗದ ಇಬ್ಬದಿಯಲ್ಲೂ ಇದ್ದ ನಾಗರಿಕರು, 'ಯುದ್ಧ ಸಮಯದಲ್ಲಿ ಇದೇನು ಸೋಜಿಗ' – ಎಂದು ಅಚ್ಚರಿಯಿಂದ ನೋಡುತ್ತಿರಲು, ನವಾಬನ ವಕೀಲರನ್ನು ಹೊತ್ತ ಪಲ್ಲಕ್ಕಿಗಳು ನಿಧಾನವಾಗಿ ನಡೆದು, ಪ್ರಧಾನಿಗಳ ಚಾವಡಿಯನ್ನು ಸೇರಿ, ಚಾವಡಿಯ ಹೊರಗೆ ಪಲ್ಲಕ್ಕಿಗಳನ್ನು ಇಳಿಸಿದರು. ಪಲ್ಲಕ್ಕಿಗಳನ್ನು ಹೊತ್ತು ತಂದವರನ್ನು ಪ್ರಧಾನಿಗಳ ಚಾವಡಿಯ ಕಾವಲುಪಡೆಯುವರು ತಮ್ಮ ಸುಪರ್ದಿಗೆ ತೆಗೆದುಕೊಂಡ ಬಳಿಕ, ಚಾವಡಿಯ ಕರಣಿಕರು ವಕೀಲರನ್ನು ಇದಿರುಗೊಂಡು ಪ್ರಧಾನಿಗಳ ಬಳಿ ಕರೆದೊಯ್ದರು.

ತನ್ನ ಕೊಠಡಿಗೆ ಬಂದ ನವಾಬನ ವಕೀಲರನ್ನು ಕಂಡು, ತನ್ನ ಆಸನದಿಂದೆದ್ದು ನಮಸ್ಕರಿಸಿ –"ಕುಳಿತುಕೊಳ್ಳಿ, ನಾನು ಪ್ರಧಾನಿ ಪರಶುರಾಮನಾಯಕ. ತಾವಾರೋ, ಬಂದ ಕಾರಣವೇನೋ ತಿಳಿಸಬೇಕು"

-ಎಂದು ಕೇಳಿದ ಪರಶುರಾಮನಾಯಕ, ಬಂದವರು ಕುಳಿತ ಬಳಿಕ, ತಾನೂ ಕುಳಿತು.

ಆ ಇಬ್ಬರಲ್ಲಿ ಒಬ್ಬರು, ತೆಳುವಾದ ಮೈಕಟ್ಟಿನ, ದೀರ್ಘ ನಿಲುವಿನ, ಬಿಳಿಯ ಕಸೆಯಂಗಿ, ಜರಿಯ ಮುಂಡಾಸು ಧರಿಸಿದವರು –

“ನಾನು ಮಾನ್ವಿ ಶ್ರೀನಿವಾಸರಾಯ. ಇವರು ಕಡಪಾ ಸುಬ್ಬರಾಯರು. ನಾವಿಬ್ಬರೂ ನವಾಬರ ವಕೀಲರು. ಹುಜೂರ್ ಸನ್ನಿಧಾನದಿಂದ ಖುದ್ ಪಾಳೆಯಗಾರರ ಸನ್ನಿಧಾನಕ್ಕೆ ಮುಟ್ಟಿಸಲು ಪತ್ರ ತಂದಿದ್ದೇವೆ. ಅದಕ್ಕೆ ತಾವು, ತಮ್ಮ ಸನ್ನಿಧಾನದ ಸಮಯ ತಿಳಿದು, ಭೇಟಿಗೆ ಅವಕಾಶ ಮಾಡಿಕೊಡಬೇಕು”

-ಎಂದು ತಾನು ಬಂದ ಕಾರ್ಯವನ್ನು ತಿಳಿಸಿದ.

“ಈ ಭೇಟಿಯ ಉದ್ದೇಶ ಏನೆಂದು ನಾವು ಕೇಳಬಹುದೆ ? ಯುದ್ಧಕ್ಕೆ ಸಿದ್ಧವಾಗಿ ಬಂದು, ಲಡಾಯಿ ಆರಂಭವಾದಬಳಿಕ ನವಾಬರು ಪತ್ರ ಬರೆಸಿದ ಕಾರಣವೇನು ?”

“ಯುದ್ಧ - ಸ್ನೇಹ - ದೊಡ್ಡವರ ಮರ್ಜಿಗೆ ಬಿಟ್ಟದ್ದು. ನಾವು ಹೇಳಿದಷ್ಟನ್ನು ಮಾಡುವ ನೌಕರ ಜನ. ನವಾಬ್ ಸಾಹೇಬರ ಅಪ್ಪಣೆಯಾಯಿತು. ಇಲ್ಲಿಗೆ ಬಂದಿದ್ದೇವೆ. ಇನ್ನು ಮುಂದಿನದು ತಮಗೂ, ತಮ್ಮ ರಾಜಾಸಾಹೇಬ್‌ರವರ ಖುಷಿಗೆ ಸೇರಿದ್ದು. ತಾವು ಹೇಳಿದ ಹಾಗೆ ಕೇಳುತ್ತೇವೆ”

- ಎಂದ, ಎಷ್ಟು ಎತ್ತರವೋ ಅಷ್ಟೇ ಧಡೂತಿಯಾಗಿದ್ದ ’ಕಡಪಾ ಸುಬ್ಬರಾಯ’ ಎಂದು ಪರಿಚಯ ಮಾಡಿಸಿದ ಮನುಷ್ಯ.

“ನಿಂತ ಕಾಲಮೇಲೇ ಮಹಾಸ್ವಾಮಿಯವರ ಭೇಟಿ ಮಾಡಬೇಕೆಂದರೆ ಕಷ್ಟ. ಈ ವೇಳೆಯಲ್ಲಿ ಅವರು ಎಲ್ಲಿರುತ್ತಾರೆಂದೇ ನನಗೆ ತಿಳಿಯದು. ನಮ್ಮವರು ತಮ್ಮ ವಸತಿ-ಉಪಚಾರಗಳಿಗೆ ತಕ್ಕ ವ್ಯವಸ್ಥೆ ಮಾಡುತ್ತಾರೆ. ತಾವು, ಇನ್ನೂ ಆಗಿಲ್ಲವಾದರೆ ಬೆಳಗಿನ ಉಪಹಾರ, ಮಧ್ಯಾಹ್ನದ ಊಟಕ್ಕೆ ನಮ್ಮ ಆತಿಥ್ಯ ಸ್ವೀಕರಿಸಿ, ವಿಶ್ರಾಂತಿ ತೆಗೆದುಕೊಳ್ಳಿ, ಅವಸರದ ಕೆಲಸವಾದರೆ ಇವತ್ತು ಅಪರಾಹ್ನ, ಇಲ್ಲವೇ ನಾಳೆ ಪ್ರಾತಃಕಾಲ ಮಹಾಸ್ವಾಮಿಗಳನ್ನು ಭೇಟಿ ಮಾಡಲು ಏರ್ಪಾಟು ಮಾಡುತ್ತೇನೆ. ತಮ್ಮ ಅವಕಾಶ, ಅನುಕೂಲ ತಿಳಿಸಬೇಕು.”

- ವಿನಯವಿದ್ದರೂ, ಅದರಿಂದ ಸಡಿಲವಾಗದ ಧ್ವನಿಯಲ್ಲಿ ಹೇಳಿದ ಪರಶುರಾಮನಾಯಕ.

“ಎಷ್ಟಾದರೂ ನಾವು ನಮ್ಮ ಕಾರ್ಯಕ್ಕಾಗಿ ಬಂದವರು. ಆದ್ದರಿಂದ ತಮಗೆ ಹೇಗೆ ಅನುಕೂಲವೋ ಹಾಗೆ ಮಾಡಬಹುದು. ತಾವು ಹೇಳಿದಂತೆ ಕೇಳಬೇಕೆಂದು ನಮಗೆ ಅಪ್ಪಣೆಯಾಗಿದೆ.” - ಮಾನ್ವಿ ಶ್ರೀನಿವಾಸರಾಯ ಹೇಳಿದ.

“ನಿಮ್ಮಷ್ಟೇ ನಾವೂ ಪರಾಧೀನ. ತಾವು ವಿಶ್ರಾಂತಿ ತೆಗೆದುಕೊಳ್ಳಿ. ನಮ್ಮ ಚಾವಡಿಯವರು ತಮಗೆ ಬೇಕಾದ ಎಲ್ಲಾ ಅನುಕೂಲ ಮಾಡಿಕೊಡುತ್ತಾರೆ. ಊಟ-ತಿಂಡಿಯಲ್ಲಿ ವಿಶೇಷ ನೇಮ-ನಿಷ್ಠೆ

ಏನಾದರೂ ಇದ್ದರೆ ಹೇಳಿ. ಅದಕ್ಕೆ ತಕ್ಕಂತೆ ಬೇಕಾದ ವ್ಯವಸ್ಥೆ ಮಾಡಿಸಿಕೊಳ್ಳಿ. ಶತ್ರುಗಳ ಮನೆ ಎಂದು ತಿಳಿಯಬಾರದು. ಇಲ್ಲಿರುವವರೆಗೂ ನೀವು ನಮ್ಮ ಅತಿಥಿಗಳು, ಯಾವ ಸಂಕೋಚವನ್ನೂ ಮಾಡಿಕೊಳ್ಳಬೇಡಿ. ನಾವೂ ಆದಷ್ಟು ಬೇಗ ನಿಮ್ಮ ಕಾರ್ಯ ಮುಗಿಸಿಕೊಡುವ ಪ್ರಯತ್ನ ಮಾಡುತ್ತೇವೆ”

- ಎಂದು ಹೇಳಿ, ಕೈಚಪ್ಪಾಳೆ ತಟ್ಟಿ, ಹೊರಗಿದ್ದ ಆಳನ್ನು ಕರೆದು –

“ನಮ್ಮ ಚಾವಡಿಯಲ್ಲಿ ಬಿಡುವಾಗಿರುವ ಇಬ್ಬರು ಬ್ರಾಹ್ಮಣ ಕರಣಿಕರನ್ನು ಕರೆದುಕೊಂಡು ಬಾ” – ಎಂದು ಅಪ್ಪಣೆ ಮಾಡಿದ ಪರಶುರಾಮನಾಯಕ.

ಪರಶುರಾಮನಾಯಕನ ಅಪ್ಪಣೆಯಂತೆ ಬಂದ ಇಬ್ಬರು ಕರಣಿಕರಲ್ಲಿ – ಒಬ್ಬಾತ ಶ್ರೀಪತಿರಾಯ.

ಮಾಜಿ ಪ್ರಧಾನಿಗಳ ಮಗನೆಂಬ ಕಾರಣಕ್ಕಾಗಿ, ಕೆಲಸ ಮಾಡದೆಯೇ ಸಂಬಳ ತೆಗೆದುಕೊಳ್ಳುತ್ತಿದ್ದ, ’ಕಾಮ್‌ಕು ಚಕ್ಕರ್, ಖಾನೇಕು ಹಾಜರ್’ ಎಂದು ಚಾವಡಿಯ ನೌಕರರಲ್ಲಿ ನಗೆಪಾಟಲಿಗೀಡಾಗಿದ್ದ ಸೋಮಾರಿ ಶ್ರೀಪತಿರಾಯ, ನವಾಬನ ವಕೀಲರ ಉಸ್ತುವಾರಿಗೆ ಬಂದದ್ದು ನೋಡಿ, ಪರಶುರಾಮನಾಯಕನಿಗೆ ಕೊಂಚ ಬೇಸರವೇ ಆಗಿ, ಶ್ರೀಪತಿರಾಯನ ಜೊತೆಗೆ ಬಂದವನಿಗೆ –

“ನಿಮ್ಮ ಜೊತೆಗೆ ಇವರಲ್ಲದೆ ಬೇರೆ ಯಾರೂ ಸಿಗಲಿಲ್ಲವೇ, ವೆಂಕಟಕೃಷ್ಣಯ್ಯ ?”

-ಎಂದು ಕೊಂಚ ಕಹಿಯಾದ ಧ್ವನಿಯಲ್ಲಿ ಕೇಳಿದ.

“ಉಳಿದವರಿಗೆ ಕೈತುಂಬ ಕೆಲಸ. ಇವರು - ಶ್ರೀಪತಿರಾಯರ ವಿಚಾರ ತಮಗೆ ತಿಳಿದಿದೆ. ಎಲ್ಲ ಕೆಲಸವನ್ನೂ ನಾನು ನೋಡಿಕೊಳ್ಳುತ್ತೇನೆ. ಇವರು ನನ್ನ ಜೊತೆಗಿದ್ದರೆ ಸಾಕು”

-ಎಂದ ವೆಂಕಟಕೃಷ್ಣಯ್ಯ.

“ಜೊತೆಗಿದ್ದರೇ ಸಾಲದು, ಹೇಳಿದಷ್ಟು ಕೆಲಸ ಎಚ್ಚರದಿಂದ ಮಾಡಬೇಕು, ಶ್ರೀಪತಿರಾಯರೇ. ನವಾಬರ ವಕೀಲರ ದೇಖರೇಖೆಯಲ್ಲಿ ಏನಾದರೂ ಪುಕಾರು ಬಂದರೆ ನಿಮ್ಮಿಂದ ನಮಗೆ ಕೆಟ್ಟ ಹೆಸರು ಬರುತ್ತದೆ. ಇವರನ್ನು ನಮ್ಮ ಅತಿಥಿಗೃಹದಲ್ಲಿರಿಸಿ, ಇವರಿಗೇನು ಬೇಕೋ ವ್ಯವಸ್ಥೆ ಮಾಡಿ, ಹೋಗಿ”

- ಎಂದು ಎಚ್ಚರಿಸಿ, ಅವರಿಬ್ಬರೂ ಹೊರಗೆ ಹೋದಬಳಿಕ, ವಕೀಲರತ್ತ ತಿರುಗಿ –

“ನವಾಬರ ಪತ್ರವನ್ನು ನಮ್ಮ ವಶಕ್ಕೆ ಕೊಡುತ್ತೀರೋ, ಮಹಾಸ್ವಾಮಿಯವರಿಗೇ ಕೊಡುತ್ತೀರೋ ?” - ಎಂದು ಕೇಳಿದ ಪರಶುರಾಮನಾಯಕ.

“ಖುದ್ದಾಗಿ, ರಾಜಾಸಾಹೇಬರಿಗೇ ಸವಿವರವಾಗಿ ವಿಷಯ ಹೇಳಬೇಕೆಂದು ಅಪ್ಪಣೆಯಾಗಿದೆ. ಪತ್ರವೇನೂ ಇಲ್ಲ.” - ಮಾನ್ವಿ ಶ್ರೀನಿವಾಸರಾಯ ಹೇಳಿದ,

“ಆಯಿತು. ಪ್ರಭುಗಳ ಕಿವಿ ಕೇಳಬೇಕಾದ ಮಾತು, ನಿಮ್ಮ ಮನದಲ್ಲೇ ಇರಲಿ. ನಿಮಗೆ ಅಪ್ಪಣೆಯಾದ ಹಾಗೆ ಮಾಡಿ. ತಾವಿನ್ನು ಅತಿಥಿಗೃಹಕ್ಕೆ ದಯಮಾಡಿಸಬಹುದು. ಪ್ರಭುಗಳ ದರ್ಶನವಾದಬಳಿಕ, ನಾವೇ ಬಂದು ನಿಮ್ಮನ್ನು ಭೇಟಿ ಮಾಡುತ್ತೇವೆ”

- ಎಂದು ಹೇಳಿ, ಕೈಮುಗಿದು, ಅವರೊಂದಿಗೆ ಕೊಠಡಿಯ ಹೊರಗಿನವರೆಗೂ ಬಂದು, ಅವರ ಉಸ್ತುವಾರಿ ನೋಡಿಕೊಳ್ಳಲು ನೇಮಿತರಾದ ಕರಣಿಕರಿಗೆ, ’ಇವರನ್ನು ಅತಿಥಿಗೃಹಕ್ಕೆ ಕರೆದುಕೊಂಡು ಹೋಗಿ’ ಎಂದು ಹೇಳಿ, ಅವರು ಕಣ್ಣು ಮರೆಯಾಗುವವರೆಗೂ ಹೊರಬಾಗಿಲ ಬಳಿಯೇ ನಿಂತಿದ್ದು ಅವರು ಕಣ್ಣುಮರೆಯಾದಬಳಿಕ, ಆಳೊಬ್ಬನನ್ನು ಕರೆದು –

“ಕೂಡಲೇ ಕಾಶಣ್ಣನಾಯಕರಿಗೆ, ನವಾಬರ ವಕೀಲರು ಬಿಡದಿಯಲ್ಲಿಳಿದುಕೊಂಡಿರುವ ವಿಷಯ ತಿಳಿಸು” - ಎಂದು ಅಪ್ಪಣೆ ಮಾಡಿದ.

* * *

ರಾಜಪ್ರತಿನಿಧಿಗಳಿಗೆ ಉಚಿತವಾದ ರೀತಿಯಲ್ಲಿ ಅಲಂಕೃತವಾದ ಬಿಡಾರದಲ್ಲಿ ವಕೀಲರಿಬ್ಬರನ್ನು ಇಳಿಸಿದಬಳಿಕ, ವೆಂಕಟಕೃಷ್ಣಯ್ಯ –

“ತಾವು ಕೈಕಾಲು ತೊಳೆದುಕೊಳ್ಳಲು ಬಿಸಿನೀರಿದೆ. ಬಳಿಕ ನಿಮಗೆ ಕುಡಿಯಲು ಹಾಲೋ, ಪಾನಕವೋ - ಯಾವುದು ಆಗಬಹುದು ಎಂದು ಹೇಳಿದರೆ, ಅದಕ್ಕೆ ವ್ಯವಸ್ಥೆ ಮಾಡುತ್ತೇನೆ”

-ಎಂದು ಹೇಳಿದ.

“ಹಾಲು, ಪಾನಕ ಯಾವುದಾದರೂ ನಡೆಯುತ್ತದೆ. ಅದಕ್ಕೆ ಮೊದಲು ನನಗೆ ಸ್ನಾನ, ಸಂಧ್ಯಾವಂದನೆಯಾಗಬೇಕು. ಅವಸರದಲ್ಲಿ ಹೊರಟಿದ್ದರಿಂದ ಅದಕ್ಕೆ ಅವಕಾಶವಾಗಲಿಲ್ಲ. ತಮಗೆ ತೊಂದರೆಯಾಗದಿದ್ದರೆ ಯಾರಾದರೂ ವೈಷ್ಣವರ ಮನೆಯಿಂದ ಅಷ್ಟು ಗೋಪಿ ಚಂದನ, ಮುದ್ರೆಯ ಪೆಟ್ಟಿಗೆ ತರಿಸಿಕೊಟ್ಟರೆ ತುಂಬಾ ಉಪಕಾರವಾಗುತ್ತೆ. ಸುಬ್ಬರಾಯರದು ಎಲ್ಲಾ ಮುಗಿದಿದೆ. ಅವರಿಗೇನು ಬೇಕೋ ನೋಡಿಕೊಳ್ಳಿ”

- ಎಂದು ಹೇಳಿದ ಮಾನ್ವಿ ಶ್ರೀನಿವಾಸರಾಯ.

ನವಾಬರ ವಕೀಲರು ಗೋಪಿಚಂದನ, ಮುದ್ರೆಯ ಪೆಟ್ಟಿಗೆಯನ್ನು ಕೇಳಿದ್ದು ವೆಂಕಟಕೃಷ್ಣಯ್ಯನನ್ನು ಚಿಂತೆಗೀಡುಮಾಡಿ –

"ನಾನು ಸ್ಮಾರ್ತ, ನನ್ನ ಬಳಿ ಅದಿಲ್ಲ. ನನ್ನ ಜೊತೆಯ ಶ್ರೀಪತಿರಾಯ ಮಾಧ್ವ. ಆತನ ಬಳಿ ಇದ್ದರೆ ತರಿಸಿಕೊಡುತ್ತೇನೆ"

- ಎಂದು ಹೇಳಿ ಹೊರಬಂದು, ಆಳುಗಳಿಗೇನೋ ಕೆಲಸ ಹೇಳುತ್ತಿದ್ದ ಶ್ರೀಪತಿರಾಯನಿಗೆ-

"ನವಾಬರ ವಕೀಲರಿಗೆ ಮುದ್ರೆ, ಗೋಪಿಚಂದನ ಬೇಕಂತೆ. ನಿನ್ನ ಮನೆಯಲ್ಲಿಟ್ಟಿದ್ದೀಯೋ ಅಥವಾ ಹೆಂಡತಿಯ ತಾಳಿಯನ್ನು ಸೂಳೆಗೆ ಕೊಟ್ಟ ಹಾಗೆ ಅದನ್ನು ರಾಯರ ಮಠಕ್ಕೆ ದಾನ ಮಾಡಿದ್ದೀಯೋ ?" – ಎಂದು ಕೇಳಿದ ವೆಂಕಟಕೃಷ್ಣಯ್ಯ.

"ಹೆಂಡತಿಗೇ ಅನ್ನ ಹಾಕಲಾರದವನು - ನಿನಗೇಕೆ ಸೂಳೆಯ ಸುದ್ದಿ ? ನಾನು ನೀತಿ ಬಿಟ್ಟವ ನಿರಬಹುದು, ಜಾತಿ ಬಿಟ್ಟವನಲ್ಲ. ಮುದ್ರೆ, ಗೋಪಿಚಂದನ ತಂದು ಕೊಡುತ್ತೇನೆ"

-ಎಂದು ಖಾರವಾಗಿ ಉತ್ತರ ಕೊಟ್ಟು, ಉತ್ತರಾದಿಮಠದ ಬಳಿಯಲ್ಲಿದ್ದ ತನ್ನ ಮನೆಗೆ ಹೊರಟ ಶ್ರೀಪತಿರಾಯ.

"ಅವು ಇವತ್ತು, ಈಗಲೇ ಬೇಕು - ನಾಳೆಗಲ್ಲ. ದಾರಿಯಲ್ಲಿ ಗರಡಿಮನೆಯ ಹತ್ತಿರ ಪಾರಿವಾಳದ ಜೂಜು ನೋಡುತ್ತಾ ನಿಂತುಬಿಡಬೇಡ"

- ಎಂದು ಎಚ್ಚರಿಸಿದ ವೆಂಕಟಕೃಷ್ಣಯ್ಯ.

ಅವರಿಬ್ಬರೂ ಆ ಮಾತನಾಡುತ್ತಿರುವಾಗಲೇ ಹೊರಬಂದು ಆ ಮಾತುಗಳನ್ನು ಕೇಳಿಸಿಕೊಂಡ ಮಾನ್ವಿ ಶ್ರೀನಿವಾಸರಾಯ –

"ನಿಮಗೆ ನಿಮ್ಮ ಸಹೋದ್ಯೋಗಿಯ ಬಗ್ಗೆ ಒಳ್ಳೆ ಅಭಿಪ್ರಾಯವಿದ್ದಂತಿಲ್ಲ"

-ಎಂದು ಹೇಳಿದ.

"ಸದಭಿಪ್ರಾಯ-ದುರಭಿಪ್ರಾಯ - ಅಭಿಪ್ರಾಯವೇ ಇಲ್ಲ. ಹಿಂದಿನ ಪ್ರಧಾನಿಗಳ ಮಗ ಎಂದು ಚಾವಡಿಗೆ ಭಾರವಾಗಿ ಸಂಬಳ ತಿನ್ನುತ್ತಿದ್ದಾನೆ...."

-ಎಂದು ಶ್ರೀಪತಿರಾಯನ ಬಗ್ಗೆ ಏನೋ ದೂರು ಹೇಳಹೊರಟ ವೆಂಕಟಕೃಷ್ಣಯ್ಯ ತಟಕ್ಕನೆ ತಾನು ಯಾರ ಮುಂದೆ ಮಾತಾಡುತ್ತಿದ್ದೇನೆ ಎಂಬ ಎಚ್ಚರ ತಂದುಕೊಂಡು, ಮಾತನ್ನು ಮಧ್ಯದಲ್ಲಿಯೇ ಕಡಿದು –

"ಇದು ನಮ್ಮಿಬ್ಬರ ನಡುವೆ ದಿನವೂ ನಡೆವ ಸ್ನೇಹಕಲಹ. ತಮಗೆ ಸ್ನಾನಕ್ಕೆ ಸಿದ್ಧತೆ ಮಾಡುತ್ತೇನೆ"

-ಎಂದು ಹೇಳಿ ಅಲ್ಲಿಂದ ಹೊರಟುಹೋದ.

"ನಿಮ್ಮ-ನಿಮ್ಮ ಸ್ನೇಹದ ವಿಷಯ ನನಗೇಕೆ ?"

- ಎಂದು ಹೇಳಿ ಮಾನ್ವಿ ಶ್ರೀನಿವಾಸರಾಯನೂ ಒಳಗೆ ಹೋದ.

* * *

ಆ ದಿನ ಅಪರಾಹ್ನ ಕಾಲದಲ್ಲಿ ಸಭಾಂಗಣದಲ್ಲಿ ನಾಯಕರು, ಪ್ರಧಾನಿ ಪರಶುರಾಮನಾಯಕ, ಸಾಹೇಬ್‌ಜಾದೆ ಭರಮಣ್ಣನಾಯಕ ಮತ್ತು ಅತ್ಯಂತ ಆಪ್ತರಾದ ದಳವಾಯಿಗಳು, ರಕ್ತ ಸಂಬಂಧಿಗಳೊಂದಿಗೆ, ನವಾಬರ ವಕೀಲರಿಗೆ ಭೇಟಿಗೆ ಅವಕಾಶವಿತ್ತು, ನವಾಬರ ಯೋಗಕ್ಷೇಮ ವಿಚಾರಿಸಿ-

"ನಮಗೇ ಹೇಳಬೇಕೆಂದು ನವಾಬರು ತಮ್ಮೊಂದಿಗೆ ಏನೋ ಸುದ್ದಿ ಕಳಿಸಿದ್ದಾರೆಂದು ಪ್ರಧಾನಿಗಳು ತಿಳಿಸಿದರು. ಅದೇನು ವಿಷಯವೋ ತಿಳಿಸಬೇಕು"

- ಎಂದು ಗಂಭೀರ ಧ್ವನಿಯಲ್ಲಿ ಹೇಳಿದರು - ತಮ್ಮಿರ್ವರ ನಡುವೆ ಯುದ್ಧ ಪ್ರಸಂಗವೇ ನಡೆದಿಲ್ಲವೇನೋ ಎಂಬಂತೆ.

"ಹೇಳುತ್ತೇವೆ - ಆದರೆ ನಾವು ಹೇಳುವುದು ನಮ್ಮ ಮಾತಲ್ಲ, ನವಾಬರು ನಮಗೆ ಹೇಳಬೇಕೆಂದು ಅಪ್ಪಣೆ ಮಾಡಿದ ಮಾತು. ಆ ಮಾತಿನಲ್ಲಿ ತಮಗೇನಾದರೂ ಅತೃಪ್ತಿ ಕಂಡರೆ ನಮ್ಮ ಮಾತನ್ನು ಅನ್ಯಥಾ ಭಾವಿಸಬಾರದು." ಮಾನ್ವಿ ಶ್ರೀನಿವಾಸರಾಯ ಹೇಳಿದ.

"ಅರ್ಥವಾಯಿತು ನಾಲಿಗೆ ನಿಮ್ಮದು, ಮಾತು ನವಾಬರದು. ಅದೇನೋ ಹೇಳಿ."

"ತಾವು ಅಷ್ಟು ಹೇಳಿದರೆ ನಾವು ಧನ್ಯರು. ಸುಬ್ಬರಾಯರೇ, ನವಾಬರು ಹೇಳಿದುದನ್ನು ರಾಜಾಸಾಹೇಬರಿಗೆ ಶೃತಪಡಿಸಿ"

- ಎಂದು ಮಾನ್ವಿ ಶ್ರೀನಿವಾಸರಾಯ ತಮ್ಮ ಪಕ್ಕದಲ್ಲಿ ಕುಳಿತಿದ್ದ ಕಡಪಾ ಸುಬ್ಬರಾಯನ ನೋಡಿದ.

ಅದನ್ನು ಕಂಡ ಸುಬ್ಬರಾಯ ಎದ್ದು ನಿಂತು, ನಾಯಕರಿಗೆ ಕೈಮುಗಿದು –

"ತಮ್ಮ ಸನ್ನಿಧಾನದಲ್ಲಿ ನಾವು ಹೇಳಬೇಕೆಂದು ಜಂಗ್‌ಬಹಾದೂರ್, ಹೈದರಲ್ಲಿಖಾನ್ ಸಾಹೇಬರು, ಸರ್ವಾಧಿಕಾರಿ ಶ್ರೀರಂಗಪಟ್ಟಣ ಇವರ ಹುಕುಂ ಆದದ್ದು –

"'ಚಿತ್ರದುರ್ಗ ಸಿಂಹಾಸನಾಧೀಶ್ವರರಾದ ರಾಜಾಮದಕರಿನಾಯಕರಿಗೆ ಸಲಾಂಗಳು.

"'ನಮಗೆ ತಮ್ಮ ಭೇಟಿ ಅಪೇಕ್ಷಾ ಬಹಳ ಇತ್ತು. ಆದ್ದರಿಂದ ಎರಡುಮೂರು ಬಾರಿ ಕಾಗದಗಳನ್ನು ಬರೆಸಿ ಕಳಿಸಿದರೂ ತಾವು ಬರೋಣವಾಗಲಿಲ್ಲ. ಸಲಸಲಕ್ಕೂ ಅನಾರೋಗ್ಯದ ನೆಪ ಹೇಳಿದಿರಿ. ಆದ್ದರಿಂದ ಜಮೆಫೌಜುನಿಶಿ ನಾವೇ ಬರಬೇಕಾಯಿತು. ಈಗಲಾದರೂ ಭೇಟಿಗೆ ಬರಲೇಬೇಕು - ಕಲಂ ಒಂದು.

“’ಇವತ್ತಿನವರೆಗೆ ನಿಮ್ಮ ಉದ್ದಿಶ್ಯ ಲಷ್ಕರು ಜಮಾಯಿಸಿ ಇದೆ. ಇದರ ಖರ್ಚು ಆರುಲಕ್ಷ ವರಹಾ ಆಗುತ್ತೆ. ಈ ಐವೇಜು ನಗದು ಕೊಡಬೇಕು- ಕಲಂ ಎರಡು.

“’ಸಾಹೇಬ್‌ಜಾದೆ, ತಮ್ಮ ಪರಶುರಾಮನಾಯಕ ಸಹಿತಾ ದಂಡಿನ ಹಮರಹಾ ಕೆಲವು ಫೌಜುನಿಶಿ ಇರಬೇಕು’ -ಕಲಂ ಮೂರು.

“’ಈ ಮೇರೆಗೆ ಮೂರು ಕಲಂಗೆ ರುಜು ಬಿದ್ದಲ್ಲಿ ದೌಲತ್ತು ಬಹರ್ ಇಟ್ಟು ದಂಡು ಕೂಚು ಮಾಡಿ ಹೋಗುತ್ತೇವೆ. ಸ್ನೇಹ ಅಭಿವೃದ್ಧಿ ಆಗುತ್ತೆ. ಇಲ್ಲದಿದ್ದ ಪಕ್ಷದಲ್ಲಿ ಖಿಲ್ಲೆ ತೋಪಿನಿಂದ ಕಿತ್ತು ಬಿಡುತ್ತೇವೆ.’

“ -ಈ ಮೇರೆಗೆ ಖಾವಂದರ ಹುಕುಂ ಆಗಿದೆ. ತಾವೂ ಖಾವಂದರು ಇದ್ದೀರಿ. ಹುಕುಂ ಪ್ರಕಾರ ವಿಜ್ಞಾಪನೆ ಮಾಡಿದ್ದೇನೆ. ಈ ಮೂರೂ ಕಲಂಗೆ ಆಜ್ಞೆಯಾದರೆ, ಅದೇ ಮೇರೆಗೆ ಖಾವಂದರಿಗೆ ವರದಿ ಮಾಡುತ್ತೇವೆ”

-ಎಂದು ಗಿಳಿಪಾಠ ಒಪ್ಪಿಸುವಂತೆ, ಯಾವ ಏರಿಳಿತವೂ ಇಲ್ಲದ ಧ್ವನಿಯಲ್ಲಿ ಹೇಳಿದ.

ನವಾಬನ ಉದ್ಧಟತನದ ಮುಖವಾಣಿಯಂತೆ ಕಡಪಾಸುಬ್ಬರಾಯ ಹೇಳಿದುದನ್ನು ಕೇಳಿ, ಸಭೆಯಲ್ಲಿ ಎಲ್ಲರ ಮುಖವೂ ಸಿಟ್ಟೇರಿ, ಕಣ್ಣುಗಳು ಕಿಡಿಗಾರಿ, ಕೈಗಳು ಕತ್ತಿಯತ್ತ ಹರಿದವು.

ಆ ಮಾತುಗಳನ್ನು ಕೇಳಿ, ನಾಯಕರ ಕಣ್ಣುಗಳು ತಿದಿಯೊತ್ತಿದ ಕುಲುಮೆಯ ಉರಿಯಂತೆ ಉಗ್ರವಾದರೂ, ಮನದೊಳಗೆ ಕ್ರೋಧಾಗ್ನಿ ರಾಳಹಾಕಿದ ಪಂಜಿನಂತೆ ಪ್ರಜ್ವಲಿಸಿದರೂ, ಮುಖಭಾವದಲ್ಲಾಗಲಿ, ಮಾತಿನಲ್ಲಾಗಲಿ ಅದನ್ನು ತೋರ್ಪಡಿಸದೆ, ಶರಪ್ರಯೋಗಕ್ಕೆ ಮುನ್ನ ಬಿಗಿದ ಬಿಲ್ಲಿನ ಹುರಿಯಂಥ ಧ್ವನಿಯಲ್ಲಿ –

“ನಿಮ್ಮ ನವಾಬರು ಬಹಳ ದೊಡ್ಡವರು. ನಮ್ಮ ಮೇಲಿನ ಅವರ ಪ್ರೇಮ ಅಪಾರವಾದದ್ದು. ನಮ್ಮ ಬಗ್ಗೆ ಅವರಿಗಿರುವ ಸ್ನೇಹಕ್ಕಂತೂ ಸರಿಸಾಟಿಯೇ ಇಲ್ಲ. ನಿಮ್ಮ ನವಾಬರಿಗೆ ನಾವು ಬಿದನೂರು, ಬಂಕಾಪುರ, ಸವಣೂರು ಗೆದ್ದು ಕೊಟ್ಟೆವು. ಆನವಟ್ಟಿ ಕಾಡಿನಲ್ಲಿ ನಿಮ್ಮ ನವಾಬರು ಪೇಶ್ವೆಯವರಿಗೆ ಹೆದರಿ ಗಿಡದೊಳಗೆ ಅವಿತಾಗ, ಅವರನ್ನು ಕಾಪಾಡಿದೆವು. ಆ ಉಪಕಾರಕ್ಕೆ ಪ್ರತ್ಯುಪಕಾರವಾಗಿ ನಿಮ್ಮ ನವಾಬರು ನಮ್ಮ ಆಜನ್ಮವೈರಿಗಳಾದ ಹರಪನಹಳ್ಳಿ, ರಾಯದುರ್ಗದವರ ಬೆಂಗಾವಲಾಗಿ ನಿಂತು, ನಮ್ಮ ಸೀಮೆಯ ಎರಡು ಕೆರೆಗ್ರಾಮಗಳನ್ನು ಅವರಿಗೆ ದಾನ ಕೊಟ್ಟರು. ಪ್ರಪಂಚದಲ್ಲಿ ನಮಗೆ ಅಂಥ ಮಿತ್ರರು ಬೇರೆಲ್ಲಿ ದೊರೆತಾರು ? ಅವರಿಗೆ ನಾವು ನಿಜವಾಗಿಯೂ ಕೃತಜ್ಞರಾಗಿರಬೇಕು.

“ನಿಮ್ಮ ನವಾಬರು ಎರಡುಮೂರು ಬಾರಿ ನಮ್ಮನ್ನು ಸೆರೆಹಿಡಿಯಬೇಕೆಂದು ಕೃತ್ರಿಮ ಸ್ನೇಹದ ಕಾಗದ ಬರೆಸಿದರು. ಅದೂ ನಿಮ್ಮ ನವಾಬರು ನಮಗೆ ಮಾಡಿದ ಮಹದೋಪಕಾರ.

“ಮೈಸೂರು ಸಂಸ್ಥಾನಾಧೀಶ್ವರರು ನಿಮ್ಮ ನವಾಬರನ್ನು ನಂಬಿದರು. ಅದಕ್ಕೀಗ ಅವರು ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಾರೆ. ಕೆಳದಿಯ ಚನ್ನಬಸವನಾಯಕರು ನಂಬಿದರು. ಅದರ ಫಲವನ್ನೀಗ ಅವರು ಕಬ್ಬಾಳ್‌ದುರ್ಗದ ಕತ್ತಲಿನಲ್ಲಿ ಅನುಭವಿಸುತ್ತಿದ್ದಾರೆ. ಗುತ್ತಿಯ ಮುರಾರಿರಾಯರು ನಿಮ್ಮ ನವಾಬರನ್ನು ನಂಬಿ ಬಂದರು. ಅದರ ಸುಖವನ್ನೀಗ ಕಬ್ಬಾಳು ದುರ್ಗದ ಕಗ್ಗವಿಯಲ್ಲಿ ಸ್ಮರಿಸಿ ಕೊಂಡಾಡುತ್ತಿದ್ದಾರೆ.

“ಬಹಳ ದೊಡ್ಡವರು - ನಿಮ್ಮ ನವಾಬರು. ನಂಬಿದವರನ್ನು ಉದ್ಧಾರ ಮಾಡುವ ಮಹನೀಯರು. ಅವರ ಕೀರ್ತಿಪ್ರವಚನವನ್ನು ಕರಾಚಾರಿ ನಂಜರಾಜಯ್ಯ, ದೇವರಾಜಯ್ಯ, ಖಂಡೇರಾಯರಿಂದಲೇ ಕೇಳಬೇಕು. ದಿನವೂ ಗುತ್ತಿಕೋಟೆಯ ಸೂಳೆಯರು ಶ್ರೀರಂಗ ಪಟ್ಟಣದ ಬೀದಿಗಳಲ್ಲಿ ನವಾಬರ ಪ್ರತಾಪಗೀತೆಯನ್ನು ಹಾಡುತ್ತಾರಂತೆ - ನಿಜವೇ ?

“ನಾಲಗೆಯಲ್ಲಿ ಜೇನು, ಹೃದಯದಲ್ಲಿ ಹಾಲಾಹಲ - ಇದು ಹೈದರಾಲಿಯವರ, ದಿಕ್ತಟಗಳಲ್ಲಿ ಮೊಳಗುತ್ತಿರುವ ಕೀರ್ತಿಪ್ರತಾಪ. ಇವರನ್ನು ನಾವು ನಂಬಬೇಕು - ಅಲ್ಲವೇ ?

“ ನಂಬಿಕೆ - ನಿಮ್ಮ ನವಾಬರ ಬಾಯಲ್ಲಿ ಬಿದ್ದು ಆ ಶಬ್ದ ಕೊಳೆತು ನಾರುತ್ತಿದೆ –

“ಭೇಟಿಗೆ ಬರಬೇಕೇ – ಅಗತ್ಯವಾಗಿ... ಹೇಳಿ, ಲಡಾಯಿಯಲ್ಲಿ ನಮ್ಮಿಬ್ಬರ ಭೇಟಿ ಆಗುತ್ತೆ.

“ನಮ್ಮ ಮಗ ಸಾಹೇಬ್‌ಜಾದೆ ಭರಮಣ್ಣನಾಯಕ, ಸೋದರ ಪರಶುರಾಮನಾಯಕರನ್ನು ನವಾಬರ ಸೇವೆಗೆ ಕಳಿಸಬೇಕೇ ? ಅವರ ತಾಯಂದಿರು ಅವರನ್ನು ಹಡೆದದ್ದು, ನಿಮ್ಮ ನವಾಬರ ಊಳಿಗ ಮಾಡಲಲ್ಲ; ಅವರ ಗೋರಿಯ ಮೇಲೆ ಗೆಲುವಿನ ಪತಾಕೆ ಹಾರಿಸುವುದಕ್ಕೆ. ಈ ಮಾತನ್ನು ಅವರಿಗೆ ಸ್ಪಷ್ಟವಾಗಿ ಹೇಳಿ.

“ಇನ್ನು ಆರುಲಕ್ಷ ವರಹಾ ಖರ್ಚು ಕೊಡಬೇಕೇ - ಏನು ಉದ್ಧಾರ ಮಾಡಿದ್ದಾರೆಂದು ? ’ಇಲ್ಲಿಗೆ ನಿಮ್ಮ ಸೇನೆಯೊಂದಿಗೆ ಬನ್ನಿ’ ಎಂದು ನಾವೇನು ಆಹ್ವಾನ ಪತ್ರಿಕೆ ಕಳಿಸಿದ್ದೆವೇ ? ನಮ್ಮನ್ನು ಉಳಿಸಿ, ಉದ್ಧಾರ ಮಾಡಲೆಂದು ಬಂದಿದ್ದಾರೆಯೋ - ನಿಮ್ಮ ನವಾಬರು ? ಭಗವಂತನ ಲೆಕ್ಕದಲ್ಲಿ ನಿಮ್ಮ ನವಾಬರ ಖರ್ಚು ಯಾವ ಖಾತೆಗೆ ಜಮಾ ಆಗಿದೆಯೋ ನೋಡಲು ಹೇಳಿ. ಖರ್ಚು ಕೊಡಬೇಕೇ ? - ಭಿಕ್ಷೆ ಕೇಳಿದ್ದರೆ ಕೊಡುತ್ತಿದ್ದೆವು.

“ಇಷ್ಟು ಸಾಲದು ಎಂದು ಎರಡೇ ದಿನದಲ್ಲಿ ದುರ್ಗವನ್ನು ತೋಫಿನಿಂದ ಉಡಾಯಿಸುತ್ತೇನೆ ಎಂದು ಹೆದರಿಸಿದ್ದಾರೆ. ದುರ್ಗದಲ್ಲಿರುವವರು ಹೆಂಗಸರು-ಮಕ್ಕಳಲ್ಲ, ಗಂಡಸರು. ನಿಮ್ಮಲ್ಲಿ ಗುಂಡು ಹೆಚ್ಚಾಗಿದ್ದರೆ ಖರ್ಚುಮಾಡಿ. ದುರ್ಗದ ಜನ ಹೊಸ ತರಹದ ದೀಪಾವಳಿ ನೋಡುತ್ತಾರೆ. ನವಾಬರಿಗೆ ಹೇಳಿ - ಬೆದರಿಕೆಯ ಬೆಂಕಿಗೆ ಕರಗಲು ಚಿತ್ರದುರ್ಗ ಮೇಣದಿಂದ ಕಟ್ಟಿದ್ದಲ್ಲ,

“ಇನ್ನು ಯುದ್ಧ - ಅದಕ್ಕೆ ಬಂದಿದ್ದೀರಿ. ನಡೆಯಲಿ - ಜಯಾಪಜಯ ದೈವಾಧೀನ. ಗೆದ್ದರೆ ರಾಜ್ಯ ನವಾಬರದು; ಸೋತರೆ ಸುಂದರವಾದ ಗೋರಿ ಕಟ್ಟಿಸುತ್ತೇನೆ ಎಂದು ಹೇಳಿ.

“ಮುಗಿಯಿತಲ್ಲ - ನಿಮ್ಮ ನವಾಬರ ಪ್ರಶ್ನೆಗೆ ಉತ್ತರ. ಇನ್ನೇನಾದರೂ ಹೇಳಿ-ಕೇಳುವುದಿದೆಯೇ ?”

-ಎಂದು ಸಾಲುಗುಡುಗಿನ ಮೊಳಗಿನಂತೆ ಹೇಳಿ, ಸುಡುಗಣ್ಣುಗಳಿಂದ ನವಾಬರ ವಕೀಲರನ್ನು ನೋಡಿದರು.

ಆ ಮಾತು ಕೇಳಿ ಸಭೆ ಗರಬಡಿದಂತೆ ನಿಶ್ಶಬ್ದವಾಗಿತ್ತು. ನವಾಬರ ವಕೀಲರ ಮೈ ಮುಖಗಳಿಂದ ಬೆವರು ಬಸಿಯುತ್ತಿತ್ತು.

ನಾಯಕರ ಮಾತಿನ ಬಳಿಕ ಮತ್ತಾರೂ ಮಾತನಾಡಲಿಲ್ಲ.

ನಾಯಕರೇ –

“ಪ್ರಧಾನಿಗಳೇ, ನವಾಬರ ಪ್ರಶ್ನೆಗೆ ಉತ್ತರ ಕೊಟ್ಟಾಯಿತು. ಇನ್ನು ಇವರನ್ನು ಬೀಳ್ಕೊಡಿ”

- ಎಂದು ಹೇಳಿ, ಮೇಲೆದ್ದು, ಮಗನ ಹೆಗಲಮೇಲೆ ಕೈಹಾಕಿಕೊಂಡು ಅರಮನೆಯೊಳಗೆ ನಡೆದರು, ಮರಿಯೊಂದಿಗೆ ಗುಹಾಪ್ರವೇಶ ಮಾಡುವ ಹೆಬ್ಬುಲಿಯಂತೆ.

* * *

“ರಾಜ್ಯದಾಹ, ರಕ್ತದಾಹ, ಮಲಗಿದ ಕಾಳೋರಗನನ್ನು ಕೆಣಕುವ ಉನ್ಮತ್ತ ದುರಹಂಕಾರ; ಕುನ್ನಿಗಳ ಸೇನೆಯನ್ನು ಕಟ್ಟಿಕೊಂಡು ಬಂದು, ಬರೀ ಬೊಗಳುವಿಕೆಯಿಂದಲೇ ಬೆದರಿಸುವ ಬೀದಿನಾಯಿಯ ಅಬ್ಬರದ ಆಟಾಟೋಪ! ಯುದ್ಧವೆಂದರೇನೆಂದು ಕಂಡಂತಿಲ್ಲ - ಕಪಟದಿಂದಲೇ ಕೊಬ್ಬಿದ ನವಾಬ; ತೋರಿಸುತ್ತೇನೆ - ಪರಶುರಾಮಣ್ಣ, ಯುದ್ಧವೆಂದರೇನೆಂದು. ಅದೆಷ್ಟು ತೋಫುಗಳಿವೆಯೋ, ಅದೆಷ್ಟು ಮದ್ದು ಗುಂಡುಗಳಿವೆಯೋ, ಆನೆ, ಕುದುರೆ, ಕಾಲಾಳುಗಳು ಅದೆಷ್ಟಿವೆಯೋ - ಎಲ್ಲಾ ಬರಲಿ. ಅವೆಲ್ಲವನ್ನೂ ದುರ್ಗದ ಮಾರಿಗೆ ಬಲಿಕೊಟ್ಟು, ನವಾಬನ ಸೊಕ್ಕಡಗಿಸದಿದ್ದರೆ ನನ್ನ ಹೆಸರು ಮದಕರಿಯಲ್ಲ - ಬೇರೇನಾದರೂ ಕರೆ. ಇಷ್ಟು ದಿನ ನಡೆದದ್ದು ಯುದ್ಧವಲ್ಲ, ಯುದ್ಧವೆಂಬ ನಾಟಕ. ನಮ್ಮೆಲ್ಲ ಸೇನೆಗೂ ಸಜ್ಜಾಗಿರಲು ಹೇಳು -ನಾಳೆ ಆರಂಭವಾಗುವುದು - ಬರೀ ಯುದ್ಧವಲ್ಲ, ಉಗ್ರರಣತಾಂಡವ, ದಿನಕ್ಕೆ ಸಾವಿರ ತಲೆಯ ಬಲಿಯನ್ನು ರಣಕಾಳಿಗೆ ತಂದೊಪ್ಪಿಸಿ, ತಮ್ಮ ಹೆಸರು ಉಳಿಸಿಕೊಳ್ಳುವಂತೆ ಹೇಳು – ನಮ್ಮ ಖಾಸಾಬೇಡಪಡೆಗೆ, ಕಲಿಸುತ್ತೇನೆ-ಕಲಿಸುತ್ತೇನೆ - ಈ ನವಾಬನಾಯಿಗೆ 'ಯುದ್ಧ' ಎಂಬ ಮಾತಿನ ಅರ್ಥವನ್ನು”

- ಎಂದು, ಸಭೆಯ ಬಳಿಕ ತನ್ನನ್ನು ಕಾಣಲು ಬಂದ ಪರಶುರಾಮನಾಯಕನಿಗೆ ಹೇಳಿದ ಮದಕರಿನಾಯಕ – ಉರಿಬೇಸಿಗೆಯ ನಡುಹಗಲ ಮಾರ್ತಾಂಡನಂತೆ ದಹದಹಿಸಿ ಪ್ರಜ್ವಲಿಸುತ್ತಾ.

ಆ ಮಾತು, ಆ ಮಾತನ್ನಾಡಿದ ರೀತಿ, ಆ ರುದ್ರಮುಖಮುದ್ರೆ, ಕೆಂಪೇರಿ ಕಿಡಿಗಾರುವ ಕಣ್ಣುಗಳನ್ನು ಕಂಡು ಪರಶುರಾಮನಾಯಕನಿಗೂ ಮರುಮಾತಾಡಲು ಅಂಜಿಕೆಯಾಯಿತು. ಅನಿರೀಕ್ಷಿತವಾಗಿ ಹೆಡೆಕೆದರಿದ ಕಾಳೋರಗವನ್ನು ಕಂಡ ಕಪ್ಪೆಯಂತೆ ದಿಗ್ಭ್ರಾಂತನಾಗಿ ನಿಂತ – ಆ ದಿನ ಮೊಟ್ಟಮೊದಲ ಬಾರಿಗೆ ಮದಕರಿನಾಯಕನನ್ನು ನೋಡಿದವನಂತೆ.

“ನನ್ನ ಮುಖ ನೋಡುತ್ತಾ ನಿಲ್ಲಬೇಡ, ಪರಶುರಾಮಣ್ಣ - ಸಾವಿರ ಕೆಲಸ ಮಾಡಬೇಕಾದ ಹೊತ್ತಿನಲ್ಲಿ. ಈ ಕ್ಷಣದಿಂದಲೇ ಸಕಲರೂ ಯುದ್ಧಸಿದ್ಧರಾಗಬೇಕೆಂದು ನಮ್ಮೆಲ್ಲ ದಳವಾಯಿಗಳಿಗೂ ಹೇಳು. ಊರಿನಲ್ಲೂ ಡಂಗೂರ ಹೊಡೆಸಿ ಪುರಜನರು ಎಚ್ಚರವಾಗಿರಲು ಹೇಳು. ಯಾವ ರೂಪ, ಎಷ್ಟು ಬಗೆಯ ಕರಾಳ ಆಕಾರ ತಾಳಿ ಪ್ರತ್ಯಕ್ಷವಾಗುತ್ತಾಳೋ -ನಾಳೆ ರಣಕಾಳಿ. ಅವಳನ್ನು ಸ್ವಾಗತಿಸಲು, ಆ ರಣಕಾಳಿಗೆ ನವಾಬನ ಸೇನೆಯ ನರಬಲಿ ಕೊಡಲು ಸಿದ್ಧವಾಗಿರಬೇಕು – ನಮ್ಮೆಲ್ಲ ಸೇನೆ. ಇಂದಿನಿಂದ ನಮಗೂ, ನಿಮಗೂ ಹಗಲಿರುಳೂ ಸಮವಸ್ತ್ರವೊಂದೇ ಉಡುಪು; ಕತ್ತಿಯೇ ನಮ್ಮ ಮಡದಿ.”

- ಎಂದು ಹೇಳುತ್ತಲೇ, ತಾನುಟ್ಟ ಆಸ್ಥಾನದ ಉಡುಗೆಯನ್ನು ಕಳಚಿ, ಆಳಿನ ಕೈಗಿತ್ತ ಮದಕರಿನಾಯಕ.

* * *

ತನ್ನ ಮಾತಿಗೆ ವಕೀಲರು ತಂದ ಉತ್ತರವನ್ನು ನಾಲ್ಕಾರು ಬಾರಿ ಹೇಳಿಸಿ ಕೇಳಿದ ಹೈದರಾಲಿಯೂ ಅಷ್ಟೇ ಕ್ರೋಧೋನ್ಮತ್ತನಾಗಿದ್ದ. ಪ್ರತಿಸಲಹೆ ಕೊಡಲು ಬಂದವರನ್ನು ಬಾರು ಕೋಲು ಬೀಸಿ, ದೂರ ಸರಿಸಿ ಅಪ್ಪಣೆ ಮಾಡಿದ-

“ನಾಳೆ ಹಗಲಾಗುತ್ತಿದ್ದ ಹಾಗೇ ನಮ್ಮೆಲ್ಲ ತೋಫುಗಳೂ ಸಿದ್ಧವಾಗಿರಬೇಕು. ಚಾರೋ ತರಫ್ ಆಗ್ ಲಗಾಕೆ ದುರ್ಗ್ ಕೊ ಗೋಲಿ ಉಡಾಕೆ ಮಟ್ಟೀಮೆ ಮಿಲಾದೋ, ಕಲ್ ಸಬೇರೆ ಹಂ ಸೂರಜ್ ಕೋ ನಹಿ, ಜಲ್ತೆ ದುರ್ಗಕೋ ದೇಖ್ಯಾ ಹೈ. ಇತನಿ ಹಿಮ್ಮತ್ -ಪುಡಿಪಾಳೇಗಾರ – ನಮಗೇ ಸವಾಲ್ ಹಾಕುತ್ತಾನೆ. ಲೌಂಡೀಕೆ - ದಿಖಾತಾ ಹೂ ತುಮ್‌ಕೊ ಹೈದರಲ್ಲಿ ಕಾ ತಾಖತ್.”

ಒಂದು ಕೈಯಲ್ಲಿ ಬಾರುಕೋಲು, ಮತ್ತೊಂದು ಕೈಯಲ್ಲಿ ಒರೆಬಿಚ್ಚಿದ ಖಡ್ಗವನ್ನು ಹಿಡಿದು ದ್ವೇಷದ ದಾವಾಗ್ನಿಯಂತೆ ಉರಿಯುತ್ತಿದ್ದ ಹೈದರಾಲಿಯ ಮಾತಿಗೆ ಪ್ರತಿಯಾಡಲು ಯಾರಿಗೂ ಧೈರ್ಯ ಬರಲಿಲ್ಲ. ಎಲ್ಲ ಸರದಾರರೂ ಮೈಗೆ ಬೆಂಕಿ ಬಿದ್ದವರಂತೆ ಮೈಲು ಗಟ್ಟಳೆ ಹರಡಿದ

ಸೇನೆಯಲ್ಲಿ ಪಂಜಿನ ಬೆಳಕಿನಲ್ಲಿ ಕುದುರೆಯ ಮೇಲೆ ಸುತ್ತಾಡಿ ಹಗಲಿನ ದಾಳಿಯ ಅಪ್ಪಣೆ ಮಾಡಿದರು. ಸಾವಿರಾರು ಬಡಗಿಗಳು ಉಸಿರಾಡಿಸಿಕೊಳ್ಳಲೂ ಬಿಡುವಿಲ್ಲದಂತೆ ದುಡಿದು, ತೋಪುಗಳನ್ನು ಏರಿಸುವ ಮೊಹರ್ಚೆಗಳನ್ನು ನಿರ್ಮಿಸಿದರು. ಚಾವಟಿ ಹಿಡಿದು ಸುತ್ತಾಡುತ್ತಿದ್ದ ಹಬಸಿಯವರು ಸಿದ್ಧವಾಗುತ್ತಿದ್ದ ಸೈನಿಕರ ಕೈಕಾಲುಗಳಿಗೆ ವೇಗವನ್ನು ತುಂಬಿದರು. ಸೇನಾಸಿದ್ಧತೆಯ ಸಾವಿರ ಬಗೆಯ ಶಬ್ದಗಳು ಇರುಳ ಮೌನವನ್ನು ಪುಡಿಪುಡಿ ಮಾಡಿ ಮನುಷ್ಯರಿರಲಿ, ಹಕ್ಕಿಗಳೂ ಮರದಲ್ಲಿ ಮಲಗಲು ಬಿಡಲಿಲ್ಲ.

ಇತ್ತ ಹೈದರನ ಪಾಳಯದಲ್ಲಿ ಸಾವಿರಾರು ದೀವಟಿಗೆಗಳು ಉರಿದಂತೆ, ಅತ್ತ ದುರ್ಗದಲ್ಲೂ ಸಹಸ್ರ ಸಹಸ್ರ ದೀವಟಿಗೆಗಳು ಉರಿದು, ಲಕ್ಷ ದೀಪೋತ್ಸವದ ಕಾಂತಿಯಲ್ಲಿ ಇರುಳು ಹಗಲಾಗಿ, ಆ ವೈಪರೀತ್ಯಕ್ಕೆ ಬೆದರಿದಂತೆ ಆಕಾಶದಲ್ಲಿ ನಕ್ಷತ್ರಗಳು ನಡುಗಿದವು.

ಇರುಳಿನ ಕತ್ತಲು ಕರಗಿ, ಮುಂಜಾವಿನ ಮುಂಬೆಳಕಾಗುವ ಮೊದಲೇ-

ಏಕಕಾಲಕ್ಕೆ ದಿಕ್ಕು ದಿಕ್ಕುಗಳಿಂದ ನೂರಾರು ಧೂಮಕೇತುಗಳು ಮುಗಿಲಂಗಳದಲ್ಲಿ ಕಿಕ್ಕಿರಿದು ಹೊಯ್ದಾಡಿದಂತೆ; ಆಕಾಶಪಥದಿಂದ ಕಳಚಿದ ನೂರಾರು ಗ್ರಹಗಳು, ಒಂದನ್ನೊಂದು ಘಟ್ಟಿಸಿ, ಸಹಸ್ರ ಸಿಡಿಲ ಶಬ್ದದೊಂದಿಗೆ ಸಿಡಿದು ಬೆಂಕಿಯ ಮಳೆಗರೆದಂತೆ; ರಾತ್ರಿಯ ಕತ್ತಲು ಕರಗಿ, ಮುಂಗಾರು ಮಳೆಯಂತೆ ಧಾರಾಕಾರವಾಗಿ ಸುರಿದಂತೆ; ನಕ್ಷತ್ರಗಳು ಬಣ್ಣ ಬಣ್ಣದ ಕಿಡಿಗಳ ಮಳೆಯಾಗಿ ಸುರಿದಂತೆ –

ಹೈದರಾಲಿಯ ಪಾಳಯದ ಯುದ್ಧ ಮುಖದ ಗೋಲಂದಾಜರು ಹಾರಿಸಿದ ತೋಫುಗಳಿಂದ ಗುಂಡುಗಳು ಹಾರಿ, ತೋಫುಗಳ ಘರ್ಜನೆಯನ್ನು ಗಿರಿ, ಕಂದರ, ಗವಿಗಳು ಇಮ್ಮಡಿ, ಮುಮ್ಮಡಿ ಶಬ್ದಗಳಿಂದ ಪ್ರತಿಧ್ವನಿಸಿ, ನೆಲ-ಮುಗಿಲು ತಲ್ಲಣಿಸಿ ಹೊಯ್ದಾಡಿತು – ಆ ಪ್ರಚಂಡ ಶಬ್ದಾಘಾತಕ್ಕೆ ಸಿಲುಕಿ.

ಮರಗಳು ಮುರಿದುಬಿದ್ದವು. ಮನೆಗೋಡೆಗಳು ಕಂಪಿಸಿದವು, ಮುಚ್ಚಿದ ಬಾಗಿಲು ಬೆಚ್ಚಿ ಬೆಚ್ಚಿದ ಪಕ್ಷಿಗಳ ರೆಕ್ಕೆಗಳಂತೆ ಪಟಪಟನೆ ಬಡಿದುಕೊಂಡವು. ಮನೆಯ ಹೆಂಚುಗಳು ತರಗೆಲೆಗಳಂತೆ ಹಾರಾಡಿದವು. ಸಾವಿರಾರು ಹಕ್ಕಿಗಳು ಮುಗಿಲಲ್ಲಿ ದಿಕ್ಕುಕಾಣದೆ ಹಾರಾಡಿ ಹೆದರಿ ಚೀರಿದವು. ಗೋದಲಿಯಲ್ಲಿ ಕಟ್ಟಿದ ಹಸು, ಕರುಗಳು ಹೆದರಿ ಹಗ್ಗ ಕಡಿದುಕೊಂಡು ದಿಕ್ಕಾಪಾಲಾಗಿ ಓಡಿದವು. ಬೀದಿನಾಯಿಗಳು ಭೂತಗಳನ್ನು ಕಂಡಂತೆ ಊಳಿಟ್ಟವು. ಬೀದಿಗಳಲ್ಲಿ ತಿರುಗುತ್ತಿದ್ದ ಜನ

ಕಣ್ಣು ಕಂಡ ಕಡೆ, ಕಾಲು ತೋರಿಸಿದ ಕಡೆ ಓಡಿ, ಒಬ್ಬರೊಬ್ಬರಿಗೆ ಡಿಕ್ಕಿ ಕೊಟ್ಟು ಮುಗ್ಗರಿಸಿಬಿದ್ದರು. ಬಂಡೆಗಳು ಸಿಡಿದು ಪುಡಿಧೂಳನ್ನು ಕಕ್ಕಿದವು. ಕಂದಕ, ಹೊಂಡಗಳಲ್ಲಿದ್ದ ನೀರು ದೈತ್ಯಕಡೆಗೋಲಿನ ಮಥನಕ್ಕೆ ಸಿಕ್ಕಂತೆ ತೆರೆತೆರೆಯಾಗಿ ಹೊಯ್ದಾಡಿ, ತುಂತುರಾಗಿ ಸಿಡಿದವು. ಮುಗಿಲಂಗಳದಲ್ಲಿ ಕತ್ತಲು, ಬೆಳಕು, ಬೆಂಕಿ ಒಂದನ್ನೊಂದು ಪ್ರಚಂಡರವದೊಂದಿಗೆ ಸ್ಪರ್ಧಿಸಿ, ಅದನ್ನು ಕಂಡ ಕಣ್ಣುಗಳು ಕುರುಡಾದವು. ಆ ಸದ್ದು ಕೇಳಿದ ಕಿವಿ ಕಿವುಡಾದವು. ಮನೆಯಲ್ಲಿ ಮಕ್ಕಳುಮರಿ ಹೆದರಿ ಚೀರಿದರು. ಹೆಂಗಸರು ಬೆದರಿ ಕಿವಿಗಳಲ್ಲಿ ಹತ್ತಿ ಸಿಕ್ಕಿಸಿಕೊಂಡು ಕಂಬಳಿ ಹೊದ್ದು ಮಲಗಿದರು. ನಿಂತಲ್ಲೇ ಎಷ್ಟೋ ಜನ ಮಲಮೂತ್ರವಿಸರ್ಜನೆ ಮಾಡಿಕೊಂಡರು. ಬಸಿರು ಹೆಂಗಸರಿದ್ದ ಹಲವು ಮನೆಗಳಲ್ಲಿ ಗರ್ಭಪಾತವಾಯಿತು. ಅಲ್ಲಲ್ಲಿ ಹುಲ್ಲುಮೆದೆ, ಜೋಪಡಿಗಳಿಗೆ ಉರಿಬಿದ್ದು, ನೆಲುವಿನಿಂದಲೂ ಉರಿ, ಹೊಗೆ ಎದ್ದು ನೂರು ಕೆನ್ನಾಲಗೆ ಚಾಚಿದವು. ಮನೆಯೊಳಗಿದ್ದವರು ಹೊರಗೆ, ಹೊರಗಿದ್ದವರು ಒಳಗೆ ಓಡಿ, ಬೀದಿ-ಕೇರಿಗಳು ಭಯ ದಿಗ್ಭ್ರಾಂತ ಜನರಿಂದ ತುಂಬಿಹೋಗಿ, ಸಾವಿರ ಬಗೆಯ ಶಬ್ದಗಳಲ್ಲಿ ತಮ್ಮ ಭಯವನ್ನು ಕಿರುಚಿ ಹೇಳಿದರು : ’ಅಯ್ಯೋ ಪ್ರಳಯವಾಯಿತು, ದುರ್ಗ ಧೂಳಾಗಿ ಹೋಯಿತು’ - ಎಂದು ಬಾಯಿ ಬಡಿದುಕೊಂಡರು ; ನಂಜು ಹೊಗೆ ಸೋಕಿ ಕಣ್ಣೀರಿಟ್ಟರು.

ಬೆಂಕಿ, ಹೊಗೆ, ಧೂಳು, ಗೋಳು –

’ಪ್ರಳಯವಾಯಿತು –

’ದುರ್ಗ ಧೂಳಿಯಾಯಿತು.’

- ತನ್ನ ಶಿಬಿರದ ಮುಂದೆ ಕೆಕ್ಕರಿಸಿದ ಕಣ್ಣುಗಳಿಂದ ದುರ್ಗವನ್ನೇ ನೋಡುತ್ತಾ ನಿಂತ ಹೈದರಾಲಿಯೂ ತನಗೆ ತಾನೇ ಆ ಮಾತನ್ನು ಹೇಳಿಕೊಂಡ.

ಹಾಗೆ ಹೇಳಿಕೊಳ್ಳುತ್ತಲೇ, ಹಬ್ಬಿದ ಹೊಗೆಗಪ್ಪು ಕರಗಿ, ದುರ್ಗ ಮಸಣವಾದುದನ್ನು ನೋಡಲು ತಾಸುಗಟ್ಟಲೆ ರಣಮಾರಿಗೆ ನಿಲುಸೇವೆಯ ಹರಕೆಹೊತ್ತವನಂತೆ ನಿಂತು ನೋಡಿದ –

ಆಗಸದಲ್ಲಿ ಹೊಗೆ ಹಬ್ಬಿದಂತೆ ಅವನ ಹೃದಯ ಹಿಗ್ಗಿತು; ಗುಂಡು ಆಸ್ಫೋಟನವಾದಾಗ ಉತ್ಸಾಹದಿಂದ ನೆತ್ತರ ಚಲನೆ ವೇಗವಾಯಿತು; ಗುಂಡುಗಳು ಸಿಡಿದು ಕೆಂಡದ ಮಳೆಗರೆದಾಗ ಅವನ ಕಣ್ಣಲ್ಲಿ ಪಿಶಾಚತೃಪ್ತಿಯ ಹೊಳಪು ಮಿನುಗಿ, ಹೊಗೆ ಹಬ್ಬಿ ದುರ್ಗ ಕಾಣದಂತಾದಾಗ –

“ಮದಕರಿ, ಆಜ್ ಮೇರೆ ಘುಸ್ಸಾಕೆ ಆಗ್‌ಮೆ ತುಮ್ಹೆಭಿ ಧುವಾ ಹೋಗಯಾ. ಮಟ್ಟಿಮೆ ಮಿಲ್‌ಗಯಾ ತೇರಿ ಬಾತ್‌ಕೆ ಹಿಮ್ಮತ್” - ಎಂದು ತನಗೆ ತಾನೇ ಹೇಳಿಕೊಂಡ.

ಹಾಗೇ ತನಗೆ ತಾನೇ ವಟಗುಟ್ಟಿಕೊಳ್ಳುತ್ತಾ ನಿಂತು ನೋಡಿದ ಹೈದರಾಲಿ-ಊಟ, ವಿಶ್ರಾಂತಿಯ ಯೋಚನೆಯನ್ನೂ ಮರೆತು.

ನೋಡುತ್ತಲೇ ಇದ್ದ–

ಹಲತಾಸು ಕಳೆದು, ಬರಬರುತ್ತಾ ಹೊಗೆ ಕರಗಿ, ಹೊಗೆಯಲ್ಲಿ ಅಡಗಿದ ಬಿಸಿಲು ದುರ್ಗದ ಮೇಲೆ ಬಿದ್ದಾಗ ನೋಡಿದ –

ಸಾವಿರ ತೋಫು ಹಾರಿಸಿಯಾಗಿತ್ತು. 'ಸವಾಲಾಕ್' ಗೋಲಿ ಚೆಲ್ಲಾಡಿತ್ತು-

ಆದರೂ –

ಇದ್ದಂತೆಯೇ ಇತ್ತು ಚಿತ್ರದುರ್ಗದ ಕೋಟೆ - ಹೈದರಾಲಿಯನ್ನು ಹಂಗಿಸುವಂತೆ, 'ಇಷ್ಟೇನೇ ನಿನ್ನ ಸೇನೆಯ ಪರಾಕ್ರಮ' ಎಂದು ಕೇಳುವಂತೆ ; ಗಾಳಿಯೊಂದಿಗೆ ಚೆಲ್ಲಾಟವಾಡುತ್ತಿತ್ತು - ಝುಂಡಾಬತೇರಿಯ ಮೇಲಿನ ಕುಸುಂಬಿವರ್ಣದ ಹನುಮದ್ಗರುಡಧ್ವಜ.

ಅದನ್ನು ಕಂಡು, ಹಗಲಿನ ಬೆಳಕಿನಲ್ಲಿಯೂ ಹೈದರಾಲಿಯ ಮುಖ ಕಪ್ಪಿಟ್ಟು, ಕಣ್ಣಲ್ಲಿ ಅಪಮಾನದ ಕತ್ತಲು ಕವಿದು, ಕಣ್ಣಿಂದಲೇ ದುರ್ಗವನ್ನು ನುಂಗುವಂತೆ ನೋಡುತ್ತಾ ನಿಂತಿರುವಾಗ, ಹೈದರಾಲಿಯ ಬಳಿ ಬಂದ ಲಾಲಿಸಾಹೇಬ ಹೇಳಿದ –

"ಹುಜೂರ್, ತಾವು ನನ್ನ ಮಾತು ನಂಬಲಿಲ್ಲ. ಗೋಲಿ, ಗುಂಡು ಎಲ್ಲಾ ವ್ಯರ್ಥವಾಯಿತು. ವಿನಾಕಾರಣ ಕೋಟೆಯ ಕಂದಕಕ್ಕೆ ನಮ್ಮ ಜನಗಳ ಬಲಿಕೊಟ್ಟಂತಾಯಿತು. ಈ ದುರ್ಗವನ್ನು ಹಿಡಿಯಲು ಹಿಮ್ಮತ್‌ಗಿಂತ ಹಿಕ್ಮತ್ ಹೆಚ್ಚು ಪ್ರಯೋಜನಕಾರಿ."

ಸೋಲಿನ ಮೇಲೆ ಸೋಲು, ಅಪಮಾನದ ಮೇಲೆ ಅಪಮಾನ –

ಏನೊಂದೂ ಮಾತನಾಡದೆ, ಹೈದರಾಲಿ ಹತಾಶನಾಗಿ ನಿಂತಿರುವಾಗಲೇ ಅವಸರವಸರವಾಗಿ ಬಂದ ಪೂರ್ಣಯ್ಯ –

"ತಾವಿಷ್ಟು ನಿರಾಶರಾಗುವ ಅಗತ್ಯವಿಲ್ಲ. ನಮ್ಮ ಜಾಸೂದರೊಂದು ಒಳ್ಳೆಯ ಸುದ್ದಿ ತಂದಿದ್ದಾರೆ' – ಎಂದು ಹೇಳಿದ ಉತ್ಸಾಹದಿಂದ.

"ಏನು ಒಳ್ಳೆಯ ಸುದ್ದಿ ? ತೋಫಿನ ಶಬ್ದ ಕೇಳಿ ಮದಕರಿನಾಯಕ ಎದೆಯೊಡೆದು ಸತ್ತನೇ? ಅದೊಂದೇ ನಾವು ಕೇಳಬಯಸುವ ಒಳ್ಳೆಯ ಸುದ್ದಿ. ಉಳಿದಾವುದೂ ನಮ್ಮ ಪಾಲಿಗೆ ಒಳ್ಳೆಯ ಸುದ್ದಿಯಲ್ಲ" – ಎಂದು ಒಗರಾಗಿ ಹೇಳಿದ ಹೈದರಾಲಿ.

"ತಾವು ಸ್ವಲ್ಪ ಸಮಾಧಾನ ತಂದುಕೊಂಡರೆ, ಆ ಸುದ್ದಿಯನ್ನು ಇಂದಲ್ಲ ನಾಳೆ ಕೇಳುತ್ತೀರ. ಈಗ ನಾನು ತಂದಿರುವ ಸುದ್ದಿಯನ್ನು ಹೇಳಲು ಅವಕಾಶ ಕೊಡಿ"

-ಎಂದು ಹೇಳಿದ ಪೂರ್ಣಯ್ಯ.

"ಸುದ್ದಿ....ಸುದ್ದಿ....ಬರೀ ಸುದ್ದಿ....ಗೆದ್ದ ಮಾತು ಬಂದು ಹೇಳುವವರು ಯಾರೂ ಇಲ್ಲ. ನೀವೂ ಒಂದು ಸುದ್ದಿ ತಂದಿದ್ದೀರಿ - ಅದೇನೋ ಹೇಳಿ ?"

-ಎಂದು ಅಸಹನೆಯಿಂದ ಕೇಳಿದ ಹೈದರಾಲಿ.

"ಇಲ್ಲಿ ಯುದ್ಧ ನಡೆಯುತ್ತಿರುವಾಗ ನಮ್ಮ ಬೇಹುಗಾರರು ಕೋಟೆಯ ಸುತ್ತಲೂ ಹೋಗಿ ನೋಡಿಕೊಂಡು ಬಂದಿದ್ದಾರೆ. ಕೋಟೆಯ ವಾಯವ್ಯ ಭಾಗದ ಬಳಿ ಗೋವಿಂದನ ಕಟ್ಟೆ ಎಂಬ ಜಾಗವಿದೆ. ಅಲ್ಲಿ ಕೋಟೆಗೆ ಕಂದಕವಿಲ್ಲ. ಕೋಟೆಯೂ ಅಷ್ಟು ಬಲವಾಗಿಲ್ಲ. ಬೆಟ್ಟದ ಆಸರೆ ಇದೆ ಎಂದು ದುರ್ಲಕ್ಷ ಮಾಡಿದ್ದಾರೆ. ನಮ್ಮ ಸೇನೆಯೆಲ್ಲಾ ಇತ್ತಕಡೆ ಇರುವುದರಿಂದ ಆ ಭಾಗದಲ್ಲಿ ಸೇನೆಯ ಜಮಾವಣೆಯೂ ಅಷ್ಟಾಗಿ ಕಂಡುಬರುವುದಿಲ್ಲ. ಈ ರಾತ್ರಿ ನಮ್ಮ ಸೇನೆ ಅತ್ತಕಡೆ ಹೋಗಿ ಮೊಹರ್ಚೆ ಹಾಕಿ, ತೋಪು ಹಾರಿಸಿದರೆ ನಮ್ಮ ಸೇನೆ ಕೋಟೆಯೊಳಗೆ ನುಗ್ಗ ಬಹುದು. ನಮ್ಮ ಸೇನೆ ದೊಡ್ಡದು - ಅವರದು ಸಣ್ಣ ಸೇನೆ. ಒಂದು ಕಡೆ ಕೋಟೆಯೊಳಗೆ ನುಗ್ಗಿದರೆ ದುರ್ಗಕ್ಕೆ ಮೂಗು ಹಿಡಿದ ಹಾಗಾಗಿ, ನಮಗೆ ಜಯ ಸುಲಭವಾಗುತ್ತದೆ"

-ಎಂದು ಪೂರ್ಣಯ್ಯ ಬೇಹುಗಾರರು ತಂದ ಸುದ್ದಿಯನ್ನು ವಿವರಿಸಿದ.

ಆ ಮಾತನ್ನು ಕೇಳಿ, ಕತ್ತಲಲ್ಲಿ ತೊಳಲಾಡುತ್ತಿದ್ದ ಹೈದರಾಲಿಗೆ ಆಶಾಕಿರಣವೊಂದು ಕಂಡಂತಾಗಿ-

"ಒಳ್ಳೆ ಸುದ್ದಿ ಹೇಳಿದಿರಿ, ಪೂರ್ಣಯ್ಯ. ನಮ್ಮ ಸರ್ದಾರರಿಗೆ ಇತ್ತ ಕಡೆ ಯುದ್ಧದ ಜೋರು ಕಡಮೆ ಮಾಡಬಾರದೆಂದು ಹೇಳಿ. ಇನ್ನಷ್ಟು ಮದ್ದುಗುಂಡು ವ್ಯರ್ಥವಾದರೂ ಚಿಂತೆಯಿಲ್ಲ. ಇಲ್ಲಿ ಯುದ್ಧದ ಆರ್ಭಟ ನಡೆಯುತ್ತಿರುವಾಗಲೇ, ನಮ್ಮ ಕಡೆಯ ಎರಡು ಸಾವಿರ ಸೇನೆ, ತೋಫು ಮತ್ತಿತರ ಸಲಕರಣೆಯೊಂದಿಗೆ ದುರ್ಗದವರಿಗೆ ಗೊತ್ತಾಗದಂತೆ ಅತ್ತ ಕಡೆ ಹೋಗಿ, ಕತ್ತಲಾದಮೇಲೆ ಮೊಹರ್ಚೆ ಕಟ್ಟಿ, ತೋಫು ಹಾರಿಸಿ ಯುದ್ಧ ನಡೆಸಲಿ. ಏನಾದದ್ದಾಗಲಿ - ಈ ದಿನ ನಾವು ಶಪಥ ಮಾಡಿದಂತೆ ದುರ್ಗದೊಳಗೆ ನುಗ್ಗಲೇಬೇಕು. ಗೆದ್ದು ಬಂದವರಿಗೆ, ಅವರು ತಂದ ಒಂದು ತಲೆಗೆ ಹತ್ತು ಹೊನ್ನು ಕೊಡುತ್ತೇವೆಂದು ಹೇಳಿ."

- ಎಂದು ಹೇಳಿದ ಹೈದರಾಲಿ.

ಸೇನೆಯಲ್ಲಿ ಈ ಹಲ್ಲೆಯ ಸುದ್ದಿ ಹರಡದಂತೆ, ತುಕಡಿಗೆ ಹತ್ತು - ಇಪ್ಪತ್ತರಂತೆ ಇರುಳು ಯುದ್ಧದಲ್ಲಿ ಪಳಗಿದ ಕಟ್ಟಾಳುಗಳನ್ನು ಆಯ್ದು, ಆ ಸೇನೆ ಸರಿದ ಸುದ್ದಿ ದುರ್ಗದವರಿಗೆ ಕಾಣುವುದಿರಲಿ, ಹೈದರನ ಪಾಳಯದಲ್ಲೇ ಹರಡದಂತೆ ತೋಫಿನ ಹೊಗೆಗತ್ತಲಿನಲ್ಲಿ ಆ ಸೇನೆಯನ್ನು ನಡೆಸಿ, ಸಂಜೆ ಮಬ್ಬು ಕವಿದ ಬಳಿಕ, ಸೈನಿಕರು ಲಗ್ಗೆಗೆ ಸಿದ್ಧರಾಗಿ, ಬಡಗಿಗಳು, ಆಯಕಟ್ಟಿನ ಸ್ಥಳ ಆಯ್ದು ತೋಫು ಏರಿಸಲು ಮೊಹರ್ಚೆಯನ್ನು ಕಟ್ಟಲಾರಂಭಿಸಿದರು.

* * *

ಗೋವಿಂದನಕಟ್ಟೆ ಜೋಗಿಯ ಮರಡಿಗೂ, ಚಿತ್ರದುರ್ಗಕ್ಕೂ ಮಧ್ಯೆ ವಾಯವ್ಯಭಾಗದಲ್ಲಿ ದಟ್ಟವಾದ ಕಾಡಿದ್ದ ಇಕ್ಕಟ್ಟಾದ ದುರ್ಗಮಸ್ಥಳ, ಹಗಲಿನಲ್ಲೂ ಹುಲಿ, ಚಿರತೆಗಳು ಸಂಚರಿಸುವ ವಿಪಿನಪ್ರಾಂತ. ಅತ್ತಕಡೆ ಶತ್ರುಸೇನೆ ಬರಲು ಮಾರ್ಗವಾಗಲಿ, ಸೇನೆ ಬಿಡಾರ ಹೂಡಲು ಬಯಲಾಗಲಿ ಇರದಿದ್ದುದರಿಂದ, ಅತ್ತಕಡೆ ಬಲವಾದ ಕೋಟೆಯನ್ನು ಕಟ್ಟಿರಲಿಲ್ಲವಾದರೂ, ಅದು ಕೋಟೆಯ ದುರ್ಬಲ ಭಾಗವೆಂಬುದನ್ನರಿತ ದಳವಾಯಿಗಳು, ಆ ಭಾಗದಲ್ಲಿ ಪುರುಭಯ್ಯಾಜನರ ಐನೂರು ಮಂದಿ ಸೈನಿಕರ ಪಡೆಯನ್ನು ಶಿವಪ್ರಸಾದ್‌ಸಿಂಗ್‌ನ ನಾಯಕತ್ವದಲ್ಲಿ ಕಾವಲಿಟ್ಟಿದ್ದರು. ದಿನವಿಡೀ ದುರ್ಗದ ಪೂರ್ವ, ಉತ್ತರ ಭಾಗಗಳಲ್ಲಿ ನಡೆದ ಘೋರಸಂಗ್ರಾಮ ಅತ್ತ ತನ್ನ ಕಿರುಬೆರಳನ್ನೂ ಚಾಚಿರಲಿಲ್ಲ. ಅತ್ತಕಡೆ ಶತ್ರುಸೇನೆ ಸುಳಿದ ಅಸ್ಪಷ್ಟ ಕುರುಹೂ ಕಂಡಿರಲಿಲ್ಲ. ಎಂತಲೇ ಆ ಭಾಗದ ಕಾವಲಿಗೆ ನಿಯಮಿತರಾದ ಪುರುಭಯ್ಯಾಜನರಪಡೆ ಸಂಜೆಯಾಗುತ್ತಿದ್ದ ಹಾಗೇ, ಊಟ ಮುಗಿಸಿ, ಸಂಜೆ ಬೆಳೆದು ಕತ್ತಲು ಬಲಿತಂತೆ ಯುದ್ಧದ ಚಿಂತೆಯನ್ನು ಮರೆತು, ಇರುಳುಗಾವಲಿಗೆ ನಾಲ್ಕಾರು ಮಂದಿಯನ್ನು ನೇಮಿಸಿ, ಮಲಗುವ ಸಿದ್ಧತೆಯಲ್ಲಿದ್ದರು.

ನಡುರಾತ್ರಿಯ ವೇಳೆಗೆ, ಕೋಟೆಯ ಮೇಲೆ ಕಂಬಳಿ ಹೊದ್ದು ಗಸ್ತು ತಿರುಗುತ್ತಿದ್ದವರಿಗೆ ಜನರ ಕಳ್ಳಓಡಾಟದ ನಸುಸದ್ದು ಕೇಳಿಸಿ - ಕಣ್ಣಲ್ಲಿ ಕವಿಯುತ್ತಿದ್ದ ನಿದ್ರೆಯ ಮಬ್ಬು, ಮೈಯನ್ನು ಆವರಿಸುತ್ತಿದ್ದ ಚಳಿಯನ್ನು ಕೊಡವಿಕೊಂಡು ಇಬ್ಬರು ಓಡಿಹೋಗಿ ಸನಿಹದ ಗುಡಾರದಲ್ಲಿ ನಿದ್ರಿಸುತ್ತಿದ್ದ ತಮ್ಮ ನಾಯಕ ಶಿವಪ್ರಸಾದ್‌ಸಿಂಗ್‌ನನ್ನು ಎಬ್ಬಿಸಿ –

“ಕೋಟೆಯಾಚೆ ಜನ ಜಮಾಯಿಸುತ್ತಿರೋ ಹಾಗಿದೆ. ಸದ್ದಿನ ಸುಳಿವು ನೋಡಿದರೆ ಶತ್ರುಸೇನೆಯೆಂದೇ ಕಾಣುತ್ತದೆ” – ಎಂದು ಹೇಳಿದರು

ಆ ಸುದ್ದಿಯನ್ನು ಕೇಳುತ್ತಿದ್ದಹಾಗೇ ಶಿವಪ್ರಸಾದ್‌ಸಿಂಗ್, ತಣ್ಣೀರು ಮೈಮೇಲೆ ಬಿದ್ದವನಂತೆ ಎಚ್ಚೆತ್ತು, ಗಸ್ತಿನವರೊಂದಿಗೆ ತಾನೂ ಕೋಟೆಯನ್ನು ಹತ್ತಿ ಆಲಿಸಿದ.

ಕಾಡಿನಲ್ಲಿ ಎಷ್ಟೇ ಎಚ್ಚರವಾಗಿ ನಡೆದರೂ ಸಾವಿರಾರು ಜನರು ಗುಸುಪಿಸು ಮಾತನಾಡುವ ಸದ್ದು, ದೂರದಲ್ಲೆಲ್ಲೋ ಬಂಡಿಯೊಂದು ಅತ್ತಕಡೆ ಬರುತ್ತಿರುವ ಚಕ್ರದ ಧ್ವನಿ, ಹತ್ತಿರ ಬಂದ ಎತ್ತು – ಮನುಷ್ಯರ ವಾಸನೆ ಹಿಡಿದು ಕಾಡಿನಲ್ಲಡಗಿದ ಹುಲಿಗಳ ಘರ್ಜನೆ ಕೇಳಿಸಿ, ತಟಕ್ಕನೆ ಕೋಟೆಯಿಂದ ಕೆಳಗೆ ಧುಮುಕಿ, ತನ್ನೊಂದಿಗೆ ಕಾವಲಿಗೆ ನಿಯಮಿತರಾಗಿದ್ದ ರಾಮಸಿಂಗ್ ಧನಸಿಂಗ್, ಲಕ್ಷ್ಮಣಸಿಂಗ್ ಮೊದಲಾದವರನ್ನು ಎಬ್ಬಿಸಿ, ಪಿಸುದನಿಯಲ್ಲಿ ಅವರಿಗೆ ಸುದ್ದಿ ಕೊಟ್ಟು, ಶಿವಪ್ರಸಾದ್‌ಸಿಂಗ್ ಹೇಳಿದ –

“ಏನೂ ಸದ್ದಾಗದಂತೆ ನಮ್ಮ ಜನ ಎದ್ದು ಲಡಾಯಿಗೆ ಸಿದ್ಧವಾಗಿ. ಕಳ್ಳಗಿಂಡಿಯಿಂದ ಕೋಟೆಯ ಹೊರಗೆ ಬಂದು, ಶತ್ರುಗಳು ಜಮಾಯಿಸಲು, ತೋಫು ಏರಿಸಲು ಮೊಹರ್ಚೆ ಹಾಕದ

ಹಾಗೆ ತಡೆಯಬೇಕು. ಕೂಡಲೇ ದಳವಾಯಿ ಸಣ್ಣಪರಶುರಾಮಪ್ಪನಾಯಕರಿಗೆ ಈ ಸುದ್ದಿ ಮುಟ್ಟಿಸಿ ಮತ್ತಷ್ಟು ಸೇನೆ ಕಳಿಸಲು ಒಬ್ಬ ಆಳನ್ನು ಓಡಿಸಿ”

ಆತನ ಅಪ್ಪಣೆಯಂತೆ ಪುರುಭಯ್ಯಾಜನರ ಪಡೆ ಯುದ್ಧಸನ್ನದ್ದರಾಗಿ, ಕಳ್ಳಗಿಂಡಿಯೊಳಗಿನಿಂದ ಸಣ್ಣಗೆ ಹರಿವ ನೀರಿನಂತೆ ನುಸುಳಿ, ಶತ್ರುಸೇನೆ ಅತ್ತಕಡೆ ಬರುವುದನ್ನೇ ಕಾಯ ತೊಡಗಿದರು.

ಆಳೊಬ್ಬನು ಸುದ್ದಿಯನ್ನು ಮುಟ್ಟಿಸಲು ದಳವಾಯಿಗಳ ಬಳಿ ಓಡಿದ.

ಕೋಟೆಯ ಹೊರಭಾಗದಲ್ಲಿ ಯಾವ ಪ್ರತಿಭಟನೆಯನ್ನೂ ನಿರೀಕ್ಷಿಸದ ಹೈದರಾಲಿಯ ಸೈನಿಕರು, ತಾವೂ ಆದಷ್ಟು ಸದ್ದಾಗದಂತೆ ಬಂದು ಜಮಾಯಿಸಿ, ಬಡಗಿಗಳು ಮೊಹರ್ಚೆ ಕಟ್ಟಿ, ತೋಫು ಏರಿಸಿ, ಗೋಲಂದಾಜರು ತೋಫು ಹಾರಿಸುವುದನ್ನೇ ಕಾಯುತ್ತಾ ನಿಂತರು.

ಸದ್ದಾಗಬಾರದೆಂಬ ಕಾರಣಕ್ಕಾಗಿಯೇ ಮೊಹರ್ಚೆ ಕಟ್ಟಲು ಬೇಕಾದ ಮರ, ದಿಮ್ಮಿಗಳನ್ನು ಆಳುಗಳ ಕೈಲಿ ಹೊರಿಸಿಕೊಂಡು ಬಂದ ಬಡಗಿಗಳು, ಕೆಲಸಗಾರರಿಗೆ ಸೂಚನೆ ಕೊಡುತ್ತಿದ್ದ ಹಾಗೇ, ಕೆಲಸಗಾರರು ತೋಫಿನ ಭಾರವನ್ನು ಹೊರಬಲ್ಲ ದಿಮ್ಮಿಗಳನ್ನು ಹೂಳಲು ಗುಂಡಿ ತೆಗೆಯಲಾರಂಭಿಸಿದರು.

ಅವರು ಗುಂಡಿ ತೆಗೆವ ಸದ್ದು ಹತ್ತಿರದಲ್ಲೇ ಅವಿತ ದುರ್ಗದ ಸೈನಿಕರ ಕಿವಿಗೆ ಬೀಳುತ್ತಿತ್ತು; ಅದರಂತೆಯೇ ದೂರದಲ್ಲಿ ಬರುತ್ತಿರುವ ತೋಫಿನ ಗಾಡಿಯ ಚಕ್ರಗಳ ಸದ್ದೂ.

ಸದ್ದು ಮಾಡಬಾರದೆಂದು ಗಾಡಿಗೆ ಹೂಡಿದ ಕೋಣಗಳ ಬಾಯಿಗೆ ಬಟ್ಟೆ ಬಿಗಿದಿದ್ದರೂ, ಚಕ್ರದ ಅಚ್ಚುಗಳಿಗೆ ಎಷ್ಟೇ ಕೀಲೆಣ್ಣೆ ಸುರಿದಿದ್ದರೂ, ಏರುತಗ್ಗಿನ ಕಾಡುದಾರಿಯಲ್ಲಿ ತೋಫಿನ ಗಾಡಿಯ ಚಕ್ರಗಳು ಉರುಳುವಾಗ ’ಕರ್....ಕಿರ್. .’ ಎಂದು ಸಣ್ಣ ಸದ್ದು ಮಾಡುತ್ತಿತ್ತು. ಆ ಸದ್ದೂ ಕಾಡಿನಲ್ಲಿ ಕೇಳುತ್ತಿದ್ದ ಮಿಡತೆಗಳ ’ಜಿರ್-ಜಿಟ್’ ಎಂಬ ಸದ್ದಿನಲ್ಲಿ ಅಡಗಿಹೋಗುತ್ತಿತ್ತು – ದುರ್ಗದ ಸೈನಿಕರು ಮುನ್ನೆಚ್ಚರಿಕೆ ವಹಿಸದಿದ್ದರೆ. ನೆಲದ ಮೇಲೆ, ನೆಲಕ್ಕೆ ಕಿವಿ ಹಚ್ಚಿ, ಸಣ್ಣ ಸದ್ದನ್ನೂ ಆಲಿಸುತ್ತಿದ್ದ ದುರ್ಗದ ಸೈನಿಕರಿಗೆ ಶತ್ರುಸೇನೆ ಏನ್ನು ಸಣ್ಣ ಸದ್ದು ಮಾಡಿದರೂ, ಅನಿವಾರ್ಯವಾಗಿ ಮಾಡಿದ ಸಣ್ಣ ಸದ್ದುಗಳೂ ಸ್ಪಷ್ಟವಾಗಿ ಶತ್ರುಸೇನೆಯ ಚಲನವಲನದ ಸುಳಿವನ್ನು ನೀಡುತ್ತಿದ್ದವು.

ಹೈದರಾಲಿಯ ಸೇನೆಯವರು ಮೊಹರ್ಚೆಯನ್ನು ಕಟ್ಟುವುದರಲ್ಲಿ ನಿರತರಾಗಿದ್ದಾಗ, ಕತ್ತಲಿನಲ್ಲಿ ನಿಧಾನವಾಗಿ ಚಲಿಸುತ್ತಿದ್ದ ತೋಫಿನಗಾಡಿ ಮೊಹರ್ಚೆಯ ಬಳಿ ಬಂದದ್ದು ಚಕ್ರದ ಸದ್ದಿನಿಂದ, ಸೈನಿಕರ ಪಿಸುಮಾತುಗಳಿಂದ ತಿಳಿಯಿತು.

ಅತ್ತ ಹೈದರಾಲಿಯ ಸೈನಿಕರು ಮೊಹರ್ಚೆಯನ್ನು ಕಟ್ಟುವ ದಾಳಿಗೆ ತಮ್ಮ ಕೋವಿ, ಖಡ್ಗ ಮೊದಲಾದ ಅಸ್ತ್ರಗಳನ್ನು ಸಿದ್ಧಪಡಿಸುತ್ತಿದ್ದಾಗ ಪುರುಭಯ್ಯಾಜನರ ಪಡೆಯ ನಾಯಕ

ಶಿವಪ್ರಸಾದ್‌ಸಿಂಗ್, ತನ್ನ ಕಡೆಯವರನ್ನು ಸದ್ದಿಲ್ಲದೆ ಶತ್ರುಸೇನೆ ಹಿಂತಿರುಗಲು ದಾರಿ ಸಿಗದಂತೆ ಅಡ್ಡಗಟ್ಟಿ, ದಾಳಿಮಾಡಲು ರಣಕೇಕೆಹಾಕಿದ ಆ ಸದ್ದು ಕೇಳುತ್ತಿದ್ದ ಹಾಗೇ, ಅವರ ಪಡೆಯ ಐದುನೂರು ಮಂದಿ ಭಟರೂ ಕಾಡು ಕದಲಿ ಗದಗದ ನಡುಗುವಂತೆ ಒಂದೇ ಬಾರಿಗೆ ರಣಕೇಕೆಹಾಕಿ ನವಾಬನ ಸೈನಿಕರ ಮೇಲೆ ಬಿದ್ದು ಕಗ್ಗೊಲೆಯನ್ನಾರಂಭಿಸಿದರು.

ಇದ್ದಕ್ಕಿದ್ದ ಹಾಗೇ ಕೇಳಿಬಂದ ಆ ರಣಾಕ್ರಂದನ, ಅನಿರೀಕ್ಷಿತವಾದ ಉಗ್ರದಾಳಿಗೆ ಬಲಿಯಾದ ಹೈದರಾಲಿಯ ಸೈನಿಕರು ಸಾವರಿಸಿಕೊಂಡು, ಕತ್ತಲಲ್ಲಿ ಶತ್ರು ಯಾರೆಂದು ತಡಕಾಡುತ್ತಿರುವಾಗಲೇ, ಸಮೀಪದ ಲಾಲ್‌ಬತೇರಿಯಿಂದ ಸಾವಿರಾರು ಮತಾಪುಗಳು ಉರಿದು, ಇರುಳು ಹಗಲೆನ್ನುವಷ್ಟು ಬೆಳಕಾಗಿ, ಆ ಬೆಳಕಿನೊಂದಿಗೆ ರಣಕೇಕೆ ಹಾಕುತ್ತಾ ಓಡಿಬರುತ್ತಿರುವ ಸೈನಿಕರ ಕಾಲಸದ್ದೂ ಕೇಳಿಬಂದು, ಅಪರಿಚಿತವಾದ ಕಾಡಿನಲ್ಲಿ ತಪ್ಪಿಸಿಕೊಳ್ಳಲು ದಾರಿಕಾಣದೆ ಕಂಗೆಟ್ಟು, ಬದುಕುವಾಸೆ ಬಿಟ್ಟು ಹೋರಾಡಲಾರಂಭಿಸಿದರು.

ಕಟ್ಟಿದ ಮೊಹರ್ಚೆ ಮುರಿದುಬಿದ್ದು, ತೋಫನ್ನು ಎಳೆತಂದ ಕೋಣಗಳು ಕಡಿದು ತುಂಡು ತುಂಡಾಗಿ ನೆಲಕ್ಕುರುಳಿ, ಒಂದೆರಡು ತಾಸು ಕಳೆಯುವುದರೊಳಗಾಗಿ, ಹೈದರಾಲಿಯ ಎರಡು ಸಾವಿರ ಮಂದಿಯ ಸೇನೆ, ನೂರಿನ್ನೂರು ಜನ ದುರ್ಗದ ಭಟರ ಬಲಿ ತೆಗೆದುಕೊಂಡರೂ ನಾಮಾವಶೇಷವಾಯಿತು. ಆ ಸೋಲಿನ ಸುದ್ದಿಯನ್ನು ಹೈದರಾಲಿಯ ಪಾಳಯಕ್ಕೆ ಮುಟ್ಟಿಸಲೂ ಒಬ್ಬ ಸೈನಿಕನಾದರೂ ಉಳಿಯಲಿಲ್ಲ.

ಆದರೆ ಸೈನಿಕ ಹೇಳಬೇಕಾದ ಪರಾಜಯದ ದುರಂತವಾರ್ತೆಯನ್ನು–

ಲಾಲ್‌ಬತೇರಿಯಿಂದ ಹಾರಿದ ಉಜ್ವಲಪ್ರಕಾಶದ ಮತಾಪುಗಳು, ಮಲಗಿದ ಹೈದರಾಲಿಯ ಸೇನೆ ಬೆಚ್ಚಿಬಿದ್ದು ಮೇಲೇಳುವಂತೆ ಮಾಡಿದ ರಣಕೇಕೆ ಹೇಳಿ –

ಗೆಲುವನ್ನು ನಿರೀಕ್ಷಿಸುತ್ತಿದ್ದ ಹೈದರಾಲಿಯ ಹೃದಯದಲ್ಲಿ ಘೋರ ನಿರಾಶೆಯ ಕತ್ತಲು ಕವಿದು, ಗಂಟಲಲ್ಲಿ ಗೊಟ್ಟವಿಟ್ಟು ಬೇವಿನ ರಸ ಕುಡಿಸಿದಂತಾಗಿ, ಕೆಂಡದ ಮೇಲೆ ಹೊರಳಿಸಿದಂತೆ ಹೊಯ್ದಾಡಿ –

"ಸುವರ್‌ಕೆ ಬಚ್ಚೆ - ಅಲ್ಲಿ ಕೋಟೆ ಹಲ್ಲಾಕ್ಕೆ ದಾರಿ ಸಾಫ್ ಇದೆ ಎಂದು ಸುಳ್ಳು ಹೇಳಿದ ಜಾಸೂದ್, ಸೂಳೆಮಗನಿಗೆ ಸಾವಿರ ಚಡಾವಿನೇಟು ಹೊಡೆಯಿರಿ. ಪೂರ್ಣಯ್ಯ - ಇನ್ನು ನೀವೂ ಅಷ್ಟೆ, ಕಂಡದ್ದು ಹೇಳಿ - ಕೇಳಿದ್ದನ್ನು ಬಂದು ಹೇಳಬೇಡಿ. ಚಿಲ್ಲರೆ ಮಾತಿಗೆ ಎರಡು ಸಾವಿರ ಸೇನೆ. ಒಂದು ತೋಫು ಮದಕರಿನಾಯಕನಿಗೆ ಇನಾಂ ಕೊಟ್ಟ ಹಾಗಾಯಿತು."

- ಎಂದು ಕನಲಿದ.

ಹೈದರಾಲಿ ಸೋಲಿನ ನಂಜು ನುಂಗಿ, ನಡುಮುರಿದ ಹಾವಿನಂತೆ ವ್ಯರ್ಥಕ್ರೋಧದಿಂದ ಚಡಪಡಿಸುತ್ತಿದ್ದರೆ –

ಆ ಇಳಿ ಇರುಳಿನಲ್ಲೇ ದಳವಾಯಿಗಳ ಚಾವಡಿಗೆ ಉಟ್ಟ ವಸ್ತ್ರದಲ್ಲೇ ಬಂದ ನಾಯಕರು ಯುದ್ಧದಲ್ಲಾದ ಗೆಲುವಿನ ವಾರ್ತೆಯನ್ನು ಕೇಳಿ, ತಮ್ಮ ಸೈನಿಕರ ಸಾಹಸಕ್ಕೆ ಹಿಗ್ಗುತ್ತಾ, ಅರಮನೆಯಿಂದ ಪನ್ನೀರು, ಸುತ್ತುವೀಳ್ಯ, ಉಡುಗೊರೆಗಳನ್ನು ತರಿಸಿ, ನಿಂತು ವಿಜಯವಾರ್ತೆಯನ್ನು ಹೇಳಿದ ಶಿವಪ್ರಸಾದ್‌ಸಿಂಗ್ ಮೊದಲಾದವರನ್ನು ಬಲವಂತವಾಗಿ ಕುಳ್ಳಿರಿಸಿ, ತಾವೇ ಕೈಯಾರ ಬಂಗಾರದ ಪನ್ನೀರುದಾನಿಯಿಂದ ಅವರ ಮೇಲೆ ಪನ್ನೀರು ಚಿಮುಕಿಸಿ, ಪುರುಭಯ್ಯಾಜನರ ಪಡೆಯ ನಾಲ್ವರು ಸರದಾರರಿಗೂ ಹೊನ್ನ ಹರಿವಾಣದಲ್ಲಿ ವೀಳ್ಯದೊಂದಿಗೆ ಬಂಗಾರದ ಖಡೆ, ತೋಡ, ಮುತ್ತಿನ ಹಾರ, ಜರಿಯ ವಸ್ತ್ರಗಳ ಬಹುಮಾನವನ್ನು ಹಿಡಿದು-

"ಇಂದು ದುರ್ಗವನ್ನು ರಕ್ಷಿಸಿದ ಧೀರರು ನೀವು ನಿಮ್ಮ ಸಾಹಸಕ್ಕಿದು ಅಲ್ಪಕಾಣಿಕೆ. ತೆಗೆದುಕೊಳ್ಳಿ"

- ಎಂದು ಹೆಮ್ಮೆ ಪ್ರೀತಿಗಳು ತುಂಬಿತುಳುಕುವ ಧ್ವನಿಯಲ್ಲಿ ಹೇಳಿದರು.

ಆದರೆ ಶಿವಪ್ರಸಾದ್‌ಸಿಂಗ್ ಆಗಲಿ, ಅವನೊಂದಿಗಿನ ಉಳಿದ ಮೂವರಾಗಲಿ ಅದನ್ನು ಮುಟ್ಟದೆ –

"ಮಹಾರಾಜಾಸಾಬ್, ತಮ್ಮ ಹೃದಯ ನಿಮ್ಮ ರಾಜ್ಯದಷ್ಟೇ ದೊಡ್ಡದು. ವೀರಾಭಿಮಾನ, ಔದಾರ್ಯ ಈ ಪರ್ವತದಷ್ಟೇ ಉನ್ನತವಾದದ್ದು. ತಾವು ಪ್ರೀತಿಯಿಂದ ಇದನ್ನೆಲ್ಲಾ ಕೊಡುತ್ತಿದ್ದೀರಿ. ಆದರೆ ತೆಗೆದುಕೊಳ್ಳಲು ನಮಗೆ ಮನಸ್ಸು ಒಪ್ಪುವುದಿಲ್ಲ. ನಮ್ಮನ್ನು ಮಾಫ್ ಮಾಡಬೇಕು. ನಮ್ಮ ಮಾತನ್ನು ತಪ್ಪು ತಿಳಿಯದೆ ಕ್ಷಮಿಸಬೇಕು"

-ಎಂದು ಕೈಮುಗಿದು ಬೇಡಿದ ಶಿವಪ್ರಸಾದ್‌ಸಿಂಗ್.

"ಏಕೆ – ಇದು ನಿಮ್ಮ ಸಾಹಸಕ್ಕೆ ಕಡಿಮೆಯಾಯಿತೆ ?"

-ನಾಯಕರು ಕೇಳಿದರು.

"ಇಲ್ಲ ಮಹಾಸ್ವಾಮಿ. ಇದು ನಮಗೆ ಅತಿ ಹೆಚ್ಚಾಯಿತು."

-ಶಿವಪ್ರಸಾದ್‌ಸಿಂಗ್ ಹೇಳಿದ.

"ಏಕೆ ?"

"ಮಹಾಸ್ವಾಮಿ, ನಾವು ಉತ್ತರದೇಶದಿಂದ ಚಾಕರಿ ಹುಡುಕಿಕೊಂಡು ಬಂದ ಸೈನಿಕಜನ. ಇಷ್ಟು ವರ್ಷ ನಮಗೆ ಹಾಲು, ಬೆಣ್ಣೆ ಕೊಟ್ಟು ಸಾಕಿದಿರಿ. ತಿಂಗಳುತಿಂಗಳೂ ಸಂಬಳ ಕೊಟ್ಟಿರಿ. ತಾವು ನಮ್ಮನ್ನು ನೇಮಿಸಿಕೊಂಡದ್ದೇ ಈ ಚಾಕರಿ ಮಾಡಲಿ ಎಂದು. ಇದರಲ್ಲಿ ನಾವು ಹೆಚ್ಚಿನದನ್ನು

ಮಾಡಿದ್ದೇನು ? ಲಡಾಯಿನಲ್ಲಿ ಸೋತಿದ್ದರೆ ಸಾಯುತ್ತಿದ್ದೆವು. ನೀವು ಮಾಡಿದ ಪುಣ್ಯ ದೊಡ್ಡದು, ನಮಗೆ ಜಯವಾಯಿತು. ನಮ್ಮ ದೇಶದಲ್ಲಿ ಸೇವಕ ಜನ ಮಾಡಿದ ಕೆಲಸಕ್ಕೆ ಇನಾಂ ತೆಗೆದುಕೊಳ್ಳುವ ರಿವಾಜಿಲ್ಲ. ಭಾಟಾಭಟಂಗಿಯವರು, ತಾಫೆದವರು ಮಾತ್ರ ಇನಾಮು, ಏಕ್‌ನಾಮು ತೆಗೆದುಕೊಳ್ಳುತ್ತಾರೆ. ಆದ್ದರಿಂದ ಇದಾವುದೂ ನಮಗೆ ಬೇಡ. ನಿಮ್ಮ ಖುಷಿಯೇ ನಮಗೆ ಭಾರಿ ಇನಾಮು. ನಮ್ಮ ಮೇಲೆ ಈ ಖುಷಿ ಹೀಗೇ ಇರಲಿ, ಮಹಾರಾಜ"

- ಎಂದು ಎಲ್ಲರ ಪರವಾಗಿ ಶಿವಪ್ರಸಾದ್‌ಸಿಂಗ್ ಹೇಳಿದ.

ಆ ಮಾತು ಕೇಳಿ ನಾಯಕರಿಗೆ ಅವರ ಬಗ್ಗೆ ಮತ್ತಷ್ಟು ಅಭಿಮಾನ ಉಕ್ಕಿ ಬಂದು –

"ಇಂದಿನಿಂದ ನೀವು ನಮ್ಮ ಸಿಪಾಯಿಗಳಲ್ಲ, ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು. ಹಬ್ಬಹರಿದಿನಗಳಲ್ಲಿ ನಾವು ನಮ್ಮ ಮಕ್ಕಳಿಗೆ ಉಡುಗೊರೆ ಕೊಡುತ್ತೇವೆ. ಹಾಗೇ ನಿಮಗೂ ಇದನ್ನು ಕೊಡುತ್ತಿದ್ದೇವೆ. ಬೇಡ ಎಂದರೆ ತಾಯಿಗಾಗುವಷ್ಟು ಬೇಸರವಾಗುತ್ತದೆ. ಆದ್ದರಿಂದ ತೆಗೆದು ಹಾಕಿಕೊಳ್ಳಿ. ನೀವು ಧರಿಸಿದ್ದನ್ನು ಕಣ್ಣಾರೆ ನೋಡಿ ನಾವು ಸಂತೋಷಪಡುತ್ತೇವೆ"

-ಎಂದು ಹೇಳಿದರು.

ಆ ಮಾತಿಗೆ ಬೇಡವೆಂದು ಹೇಳಲಾಗದೆ, ನಾಯಕರು, ತಮ್ಮನ್ನು ಮಕ್ಕಳು ಎಂದು ಕರೆದದ್ದನ್ನು ಕೇಳಿ, ಅಭಿಮಾನ ಉಕ್ಕಿ ಬಂದು, ಕಣ್ಣಲ್ಲಿ ನೀರು ತುಂಬಿ –

"ಮಹಾರಾಜಾ, ನೀವು ನಮ್ಮ ಮಕ್ಕಳು ಎಂದಿರಿ, ಗಾಡಿಎತ್ತಿಗೆ ಬಂಗಾರದ ಕಿರೀಟ ಹಾಕಿದಿರಿ. ಆದರೆ ನಮ್ಮದೊಂದು ಮಾತಿದೆ. ಅದನ್ನು ನಡೆಸಿಕೊಟ್ಟರೆ ಇದನ್ನು ತೆಗೆದು ಕೊಳ್ಳುತ್ತೇವೆ"

- ಎಂದ ಶಿವಪ್ರಸಾದ್‌ಸಿಂಗ್ ಗದ್ಗದಕಂಠದಲ್ಲಿ,

"ಒಂದು ಮಾತಲ್ಲ, ಹತ್ತು ಕೇಳಿ - ನಡೆಸಿಕೊಡುತ್ತೇವೆ."

"ಹಾಗಿದ್ದರೆ ಮಹಾರಾಜಾ, ಇವತ್ತಿನಿಂದ ನಾವು ನಾಲ್ಕು ಜನಕ್ಕೆ ನಿಮ್ಮ ಕುದುರೆ, ಆನೆಯ ಮುಂದೆ ಅಪ್ಪಣೆಯಾಗಬೇಕು. ಲಡಾಯದಲ್ಲಿ ಬಿದ್ದರೆ ನಿಮ್ಮ ಕಣ್ಣಮುಂದೆ ಬಿದ್ದು ವೀರ ಸ್ವರ್ಗ ಕಾಣಬೇಕು. ಈ ವಚನ ಕೊಟ್ಟರೆ ತಾವು ಕೊಟ್ಟಿದ್ದನ್ನು ತೆಗೆದುಕೊಳ್ಳುತ್ತೇವೆ; ಹಾಗಾದರೆ ನೀವು ನಮ್ಮನ್ನು ಮಕ್ಕಳು ಎಂದು ಕರೆದದ್ದು ಸಾರ್ಥಕವಾಗುತ್ತದೆ"

- ಎಂದು ಬೇಡಿದ ಶಿವಪ್ರಸಾದ್‌ಸಿಂಗ್.

ಆ ವಿಚಿತ್ರ ಬೇಡಿಕೆಯನ್ನು ಕೇಳಿ, ನಾಯಕರಿಗೆ ಅವರ ಬಗ್ಗೆ ಅಭಿಮಾನ ಉಕ್ಕಿಬಂದು ಹನಿಗಣ್ಣಾಗಿ –

"ಆಯಿತು, ಇಂದಿನಿಂದ ನೀವು ನಮ್ಮ ಮಕ್ಕಳು. ನಾವು ಊಟ ಮಾಡುವ ಆಹಾರ ನಿಮಗೆ ಕಳಿಸುತ್ತೇವೆ. ನಿಮಗೆ ಬೇಕಾದ ಹಾಲು-ಬೆಣ್ಣೆ ಅರಮನೆಯಿಂದ ಬರುವಂತೆ ವ್ಯವಸ್ಥೆ

ಮಾಡುತ್ತೇವೆ. ಇಷ್ಟು ದಿನ ನಮಗೆ ಒಬ್ಬರೇ ಮಕ್ಕಳು ಎಂದಿದ್ದೆವು. ನಮ್ಮ ಅಂಗರಕ್ಷಕ ಪಡೆಯನಾಯಕ ಗುದಗತ್ತಿ 'ನಾನು ಎರಡನೆಯವನು' ಎಂದಿದ್ದ. ಈಗ ನೀವು ನಾಲ್ಕು ಜನ ನಮ್ಮ ಮಕ್ಕಳಾದಿರಿ. ನಮಗೆ ಒಬ್ಬನೇ ಮಗನೆಂದು ನಮ್ಮ ತಾಯಿ ಕೊರಗುತ್ತಿದ್ದರು. ಈಗ ಅವರಿಗೆ ಹೇಳುತ್ತೇವೆ -'ಅವ್ವಾ, ನಮಗೆ ಆರು ಜನ ಮಕ್ಕಳು' ಎಂದು"

-ಎಂದು ಹೇಳಿ, ಆ ನಾಲ್ವರಿಗೂ ಕೈಯಾರೆ ಪನ್ನೀರು ಚಿಮುಕಿಸಿ, ಮುತ್ತಿನ ಹಾರ ಹಾಕಿ, ಜರಿಯ ವಸ್ತ್ರ ಹೊದಿಸಿ, ಉಡುಗೊರೆಗಳನ್ನು ಕೊಟ್ಟರು.

ಅದನ್ನು ಸ್ವೀಕರಿಸಿದ ಆ ನಾಲ್ವರೂ ನಾಯಕರಿಗೆ ನಮಸ್ಕರಿಸಲು ಹೋದಾಗ, ನಾಯಕರು ಅದನ್ನು ತಡೆದು ಆ ನಾಲ್ವರಿಗೂ ವೀರಾಲಿಂಗನವಿತ್ತು. ನೆತ್ತಿಯನ್ನು ಮಮತೆಯಿಂದ ನೇವರಿಸಿದರು.

ನಾಯಕರನ್ನು ಆಲಿಂಗಿಸಿದ ವೀರರ ಕಣ್ಣಿಂದ ಆನಂದಾಶ್ರು ಹರಿಯಿತು.

ನಾಯಕರ ಕಣ್ಣುಗಳಿಂದಲೂ ಸಂತೋಷಬಾಷ್ಪ ಸುರಿಯುತ್ತಿತ್ತು.

ಅದನ್ನು ನಿಂತು ನೋಡಿದ ಚಪ್ಪೆಚಾವಡಿ ದಳವಾಯಿ ಸಣ್ಣಪರಶುರಾಮಪ್ಪನಾಯಕ ತಾನೂ ಕಣ್ಣೀರಿಟ್ಟು –

"ಇಂಥ ದೊರೆ, ಇಂಥ ಸಿಪಾಯಿಗಳಿರುವವರೆಗೆ ಸೋಲಿನ ನೆರಳೂ ದುರ್ಗದ ಬಳಿ ಸುಳಿಯುವುದಿಲ್ಲ"

-ಎಂದು ತನಗೆ ತಾನೇ ಹೇಳಿಕೊಂಡ.

೬

'ಎರಡೇ ದಿನ ಅವಧಿ –

'ಆ ಅವಧಿಯೊಳಗೆ ನನ್ನ ಷರತ್ತುಗಳಿಗೆ ಒಪ್ಪದಿದ್ದರೆ ಸಾವಿರ ತೋಫು ಉಡಾಯಿಸಿ, ಸವಾಲಾಕ್ ಗೋಲಿಹಾರಿಸಿ, ದುರ್ಗ ಧೂಳೀಪಟ ಮಾಡಿಬಿಡುತ್ತೇನೆ.'

ಹಾಗೆಂದು ಹೇಳಿದ ಹೈದರಾಲಿಯ ಮಾತು ಮುಕ್ಕಾಗಿತ್ತು. ತಿರುವಿದ ಮೀಸೆ ಪೆಟ್ಟು ತಿಂದ ನಾಯಿಬಾಲದಂತೆ ಮುದುರಿಕೊಂಡಿತ್ತು. ದುರ್ಗದ ಸೇನೆಯಲ್ಲಿ ಸಾವಿರ, ಎರಡುಸಾವಿರ ಜನ ಸತ್ತಿರಬಹುದು. ಆದರೆ ಅದಕ್ಕೆ ನಾಲ್ಕು ಪಟ್ಟು ಜನ ಹೈದರಾಲಿಯ ಸೇನೆಯಲ್ಲಿ ಸತ್ತಿದ್ದರು.

ಎರಡು ದಿನ – ಎರಡು ತಿಂಗಳಾದರೂ ಹೇಳಿಕೊಳ್ಳುವಂತಹುದಿರಲಿ, ಹೆಸರಿಗೆ ಮಾತ್ರವಾದರೂ ಒಂದು ಹುಲುಗಾಳಗದಲ್ಲಾದರೂ ಜಯ ಲಭಿಸದೆ, ದುರ್ಗದ ಸುತ್ತಲ ಬಯಲಿನಲ್ಲೇ ಹೈದರಾಲಿಯ ಸೇನೆ ತುಕ್ಕು ಹಿಡಿಯುತ್ತಿತ್ತು. ಹಗಲಿರುಳೂ – ದುರ್ಗದ

ದುರ್ಗಮಕೋಟೆ ನವಾಬನ ಸೇನೆಯ ಶಕ್ತಿಯನ್ನು ಹಂಗಿಸಿ ಹೀಗಳೆಯುತ್ತಿತ್ತು. ಸೇನೆಗೆ ಬೇಕಾದ ಆಹಾರ-ಪದಾರ್ಥ, ಕುದುರೆಗಳಿಗೆ ಬೇಕಾದ ಹುಲ್ಲು ಹುರುಳಿ ಬರುವ ಸೀರ್ಯ, ರಾಯದುರ್ಗ, ಹರಪನಹಳ್ಳಿಯ ದಾರಿ ಹೈದರಾಲಿಯ ವಶದಲ್ಲಿಲ್ಲದಿದ್ದರೆ ಅವನ ಸೇನೆ ಹಸಿದು, ಕೆಳದುರ್ಗದ ಹೊಂಡಗಳ ನೀರು ಕುಡಿದು ನೆಲ ಹಿಡಿಯಬೇಕಾಗುತ್ತಿತ್ತು. ನವಾಬನ ಸೇನೆಗೆ ತಿಂದು, ಉಂಡು, ಕುಡಿಯಲು ಕೊರತೆಯಿರಲಿಲ್ಲ. ಆದರೆ ನವಾಬನ ಏಕೈಕಲಕ್ಷ್ಯವಾದ ಚಿತ್ರದುರ್ಗದ ಕೋಟೆಯ ಒಂದು ಕಲ್ಲೂ ಮುಕ್ಕಾಗದೆ - ತಿಂದ ಅನ್ನ ಅರಗದಂತೆ ಹೈದರಾಲಿಯ ಗಂಟಲ ಮುಳ್ಳಾಗಿತ್ತು. ಲೆಕ್ಕವಿಲ್ಲದಷ್ಟು ಅವನ ಕ್ರೋಧದ ಬೈಗುಳನ್ನು ಕೇಳಿದ ಜಾಸೂದರು ಹಗಲಿರುಳೂ ಚಿತ್ರದುರ್ಗದ ಗುಡ್ಡ ಸುತ್ತಿ ಸುತ್ತಿ ಒಂದೂ ಐಬಿನ ಜಾಗ ಕಾಣದೆ ಸುಸ್ತಾದರು.

ಅತ್ತೆಯ ಮೇಲೆ ತೀರಿಸಲಾಗದ ಸಿಟ್ಟನ್ನು ಕೊತ್ತಿಯ ಮೇಲೆ ತೀರಿಸುವ ಹೇಡಿ ಸೊಸೆಯಂತೆ ದುರ್ಗದ ಮೇಲೆ ಸಾಧಿಸಲಾಗದ ಸಿಟ್ಟನ್ನು ನವಾಬ ಸುತ್ತಮುತ್ತಲ ಸೀಮೆಯ ಮೇಲೆ ತೀರಿಸಿಕೊಳ್ಳುತ್ತಿದ್ದ. ದಿನದಿನವೂ ಅವನ ಸೈನಿಕರು ದುರ್ಗದ ಸುತ್ತಮುತ್ತಲ ಹಳ್ಳಿಗಳಿಗೆ ನುಗ್ಗಿ, ಕೈಗೆ ಸಿಕ್ಕವರನ್ನು ಮಕ್ಕಳುಮರಿ ಎನ್ನದೆ ಕತ್ತರಿಸಿ, ಕೈಗೆ ಸಿಕ್ಕ ಹೆಣ್ಣನ್ನು - ಮುದುಕಿಯಾಗಿರಲಿ, ಮಕ್ಕಳ ತಾಯಾಗಿರಲಿ - ಬಿಡದೆ ಅತ್ಯಾಚಾರ ಮಾಡಿ, ಕಣ್ಣಿಗೆ ಕಂಡದ್ದಕ್ಕೆ ಬೆಂಕಿ ಹೊತ್ತಿಸಿ, ಸಿಕ್ಕಷ್ಟನ್ನೇ ಲೂಟಿ ಮಾಡಿ, ಯಾವ ಹಳ್ಳಿಯಲ್ಲೂ ಜನ ಇರಲು ಬಿಡದೆ, 'ಇವನು ನವಾಬನಲ್ಲ, ನರಕಾಸುರ!' ಎಂಬ ಕುಖ್ಯಾತಿಯನ್ನು ಮಾತ್ರ ಗಳಿಸಿತ್ತು - ಕೋಟೆಯ ಒಂದು ಕಲ್ಲನ್ನೂ ಸಡಿಲಿಸಲಾಗದ ನವಾಬನ ನರಸತ್ತ ಸೇನೆ.

ಈ ಮಾರಣಕಾರ್ಯದಲ್ಲಿ ಮಗ್ನವಾಗಿರುವಾಗಲೇ ನವಾಬನ ಶನಿಗಣ್ಣು ಮದಕರಿನಾಯಕನ ಹುಟ್ಟೂರಾದ ಜಾನಕಲ್ಲಿನ ಮೇಲೆ ಬಿದ್ದು, ಹತ್ತುಸಾವಿರ ಸೇನೆಯೊಂದಿಗೆ ಜಾನಕಲ್ಲಿನ ಮೇಲೆ ದಾಳಿಮಾಡಿ, ಅಲ್ಲಿದ್ದ ಸಣ್ಣ ಕಾವಲುಪಡೆಯನ್ನು ಕೊಂದದ್ದೇ ಅಲ್ಲದೆ, ಹೆಂಗಸರು, ಗಂಡಸರು, ಮಕ್ಕಳನ್ನು ಕೊಲ್ಲದೆ ಅವರ ಮೂಗು-ಕಿವಿ ಕೊಯ್ದು ಮಾನಭಂಗ ಮಾಡಿ, ತೋಟತುಡಿಕೆಗಳನ್ನು ನಾಶಮಾಡಿ, ಮುತ್ತಿನಂತಿದ್ದ ಹಳ್ಳಿಯನ್ನು ಹಾಳುಗೆಡವಿ, ಗುಡ್ಡದ ತುದಿಯಲ್ಲಿದ್ದ ಬತೇರಿಯ ಮೇಲೆ ಸತ್ತವರ ರಾಶಿಯನ್ನೊಟ್ಟಿ, ಉರಿಹೊತ್ತಿಸಿ, ತನ್ನ ದ್ವೇಷದ ಉರಿಪತಾಕೆ ಹಾರಿಸಿದ - ಹೈದರಾಲಿ.

ಹೈದರಾಲಿಯ ಸೇನೆ ಜಾನಕಲ್ಲಿನ ಮೇಲೆ ದಾಳಿ ಮಾಡಿದಾಗ, ಹೇಗೋ ಬದುಕಿ ಉಳಿದ ಒಬ್ಬಿಬ್ಬರು ಹೇಗೋ ತಪ್ಪಿಸಿಕೊಂಡು, ಕಾಡುಬಿದ್ದು, ಗುಡ್ಡದ ಕಳ್ಳದಾರಿಗಳಲ್ಲಿ ನಡೆದು, ಮದಕರಿನಾಯಕನಿಗೆ ಹೈದರಾಲಿಯ ಸೇನೆ ಜಾನಕಲ್ಲಿನ ಮೇಲೆ ನಡೆಸಿದ ಅಮಾನುಷ ಅತ್ಯಾಚಾರದ ಸುದ್ದಿಯನ್ನು ಮುಟ್ಟಿಸಿದರು.

’ಹೈದರಾಲಿ ಜಾನಕಲ್ಲಿನ ಮೇಲೆ ದಾಳಿ ಮಾಡಿದ –

’ಹೆಂಗಸರು, ಮುದುಕರು, ಮಕ್ಕಳೆಂದು ನೋಡದೆ ಸಿಕ್ಕವರ ಮೂಗು, ಕಿವಿ ಕತ್ತರಿಸಿಸಿದ-

’ತಾನು ಹುಟ್ಟಿ ಬೆಳೆದ ಅರಮನೆಯಲ್ಲಿ ನವಾಬನ ಸೈನಿಕರು ಮಲ-ಮೂತ್ರವಿಸರ್ಜನೆ ಮಾಡಿದರು –

’ತಾನು ವ್ಯಾಯಾಮ ಮಾಡಿದ ಗರಡಿಮನೆಯ ಮೇಲಿನ ಬತೇರಿಯಲ್ಲಿ ಸತ್ತವರನ್ನು, ಬದುಕಿದವರನ್ನು ಗುಂಪುಹಾಕಿ ಸುಟ್ಟು, ಅವರ ಬೂದಿಯನ್ನು ಶಂಕರನಾರಾಯಣದೇವರ ಕೆರೆಯ ನೀರಿನಲ್ಲಿ ಕದಡಿದರು.’ –

- ಈ ಒಂದೊಂದು ಮಾತೂ - ಕೇಳಿದ ಕಿವಿಗೆ ಕಾದ ಸೀಸದ ರಸ ಹೊಯ್ದಂತಾಗಿ ಮದಕರಿನಾಯಕ ಹೆಡೆ ತುಳಿದ ಹಾವಿನಂತೆ ಫೂತ್ಕರಿಸುತ್ತಾ ಸಿಡಿದೆದ್ದ.

ಆ ಮಾತುಗಳನ್ನು ಕೇಳುತ್ತಿದ್ದಾಗ, ಪರಿಚಿತವಾದ ನೂರಾರು ಮುಖಗಳು ನೆನಪಿಗೆ ಬಂದು-

’ನಮ್ಮ ಗರಡಿಗೇ ಒಳ್ಳೇ ಹೆಸರು ತರಬೇಕು’ ಎಂದ ವೃದ್ಧ ಜೆಟ್ಟಿಯ ಮಮತೆಯ ಮಾತು ನೆನಪಾಗಿ –

ತಾನು ದುರ್ಗದ ದೊರೆಯಾದ ಸುದ್ದಿ ಕೇಳಿ, ಬೀದಿಗಳನ್ನೆಲ್ಲಾ ಸಾರಿಸಿ, ರಂಗೋಲಿ ಬರೆದು, ಮನೆಮನೆಗೂ ತಳಿರುತೋರಣ ಕಟ್ಟಿ, ಹಳ್ಳಿಯನ್ನೆಲ್ಲಾ ಮದುವೆಯ ಮಂಟಪದಂತೆ ಸಿಂಗರಿಸಿ, ಹಾಡಿ ನಲಿದಾಡಿ ಹರಸಿದ ಹೆಂಗಸರ ಮುಖಗಳು ಕಣ್ಣಿನ ಮುಂದೆ ಸುಳಿದು –

ಕಣ್ಣಲ್ಲಿ ತುಂಬಿದ ನೀರು ಬತ್ತಿ, ಬೆಂಕಿಯಾಗಿ, ಉರಿಗಾರುವ ಕಣ್ಣುಗಳಿಂದ ಸುದ್ದಿ ತಂದವರನ್ನು ನೋಡುತ್ತಾ-

“ಜಾನಕಲ್ಲಿನ ಒಂದು ತಲೆಗೆ, ನವಾಬನ ಸೇನೆಯ ನೂರು ತಲೆಯ ಬಲಿ ತೆಗೆದುಕೊಳ್ಳದಿದ್ದರೆ ನಾನು ನಿಂಗವ್ವನ ಮಗನಲ್ಲ, ಲಡಾಯಿ ಮುಗಿಯಲಿ- ಆದ ನಷ್ಟಕ್ಕೆ ನೂರುಪಟ್ಟು ತುಂಬಿಸಿಕೊಡುತ್ತೇನೆ. ಈಗ ಅಷ್ಟಕ್ಕಿಂತ ಹೆಚ್ಚೇನೂ ಹೇಳಲಾರೆ”

- ಎಂದಷ್ಟೇ ಹೇಳಿ, ಅವರನ್ನು ಕಳಿಸಿ, ತನ್ನೊಂದಿಗೆ ಕಣ್ಣೀರು ಕರೆಯುತ್ತಾ ಆ ಸುದ್ದಿಯನ್ನು ಕೇಳಿದ ಪರಶುರಾಮನಾಯಕನಿಗೆ-

“ಪರಶುರಾಮಣ್ಣ, ಇವತ್ತು ಯಾವ ವಾರ ?” ಎಂದು ಕೇಳಿದ.

“ಇವತ್ತು ಸೋಮವಾರ.”

“ಸೋಮವಾರ - ಇನ್ನೆಂದಿಗೂ ನಾವಿದನ್ನು ಮರೆಯುವುದಿಲ್ಲ”

-ಎಂದು ಹೇಳಿ –

"ನಮ್ಮ ಖಾಸಾ ಬೇಡಪಡೆಯನಾಯಕ ವೀರಭದ್ರನಾಯಕನಿಗೆ ಇದ್ದಕ್ಕಿದ್ದಂತೇ ಬರಬೇಕೆಂದು ಹೇಳಿಕಳಿಸು"

- ಎಂದು ಹೆಪ್ಪುಗಟ್ಟಿದ ಕ್ರೋಧ ಕಿಡಿಗಾರುತ್ತಿದ್ದ ಧ್ವನಿಯಲ್ಲಿ ಹೇಳಿ, ಉಕ್ಕಿಬರುತ್ತಿದ್ದ ಸಿಟ್ಟು-ದುಃಖವನ್ನು ತಡೆಯಲು ತುಟಿಗಳನ್ನು ಕಚ್ಚಿ ಹಿಡಿದು ಅತ್ತಿಂದಿತ್ತ ಶತಪಥ ಹಾಕ ತೊಡಗಿದ.

ಮದಕರಿನಾಯಕನ ಕರೆ ಮಿಂಚಿನವೇಗದಲ್ಲಿ ವೀರಭದ್ರನಾಯಕನ ಕಿವಿ ಮುಟ್ಟಿ, ಸುದ್ದಿ ಮುಟ್ಟಿದಷ್ಟೇ ವೇಗವಾಗಿ ವೀರಭದ್ರನಾಯಕ ಬಂದು, ನಾಯಕರಿಗೆ ಕೈಮುಗಿದು –

"ಮಹಾಸ್ವಾಮಿ – ಏನು ಕಾರ್ಯವೋ ಅಪ್ಪಣೆಯಾಗಬೇಕು" - ಎಂದು ಕೇಳಿದ.

ವೀರಭದ್ರನಾಯಕನ ಆರಡಿಯನ್ನು ಮೀರಿದ ಎತ್ತರ, ಉಕ್ಕಿನಲ್ಲಿ ಎರಕಹೊಯ್ದಂತಿದ್ದ ಮಿಡಿದರೆ ಗಂಡಸುತನ ಸಿಡಿಯುವ, ಸತತ ವ್ಯಾಯಾಮದಿಂದ ಹುರಿಗೊಂಡ ಮೈ, ಕೈ, ಎದೆ, ತೋಳು, ತೊಡೆ, ಅವನ ಪೌರುಷಕ್ಕೆ ಕಟ್ಟಿದ ತೋರಣದಂತಿದ್ದ ಗಿರ್ಜಾಮೀಸೆ, ಶತ್ರುರಕ್ತದಲ್ಲಿ ಅದ್ದಿ ತೆಗೆದಂತಿದ್ದ ಅವನ ಕೆಂಪು ಬಣ್ಣದ ಮುಂಡಾಸು, ಒರಟು ಮಾಸಲು ಬಿಳುಪು ಬಣ್ಣದ ಕಸೆಯಂಗಿ, ಕಪ್ಪು ಚೆಡ್ಡಿ, ಹೆಗಲಮೇಲೆ ಮಡಚಿಹೊದ್ದ ಕರಿಯ ಕಂಬಳಿ, ಕೈಯ ಗಂಡುಗೊಡಲಿ, ಸೊಂಟದ ಪಟ್ಟಿಯಲ್ಲಿ ಸಿಕ್ಕಿಸಿದ ಕಠಾರಿ, ಇದೆಲ್ಲಕ್ಕೂ ಮಿರುಗು ಕೊಟ್ಟಂಥ ಮೈಯ ಕಪ್ಪು ಬಣ್ಣ – ಒಂದೊಂದನ್ನೂ ದಿಟ್ಟಿಸಿ ನೋಡುತ್ತಾ, ಅಂದೇ ಅವನನ್ನು ನೋಡಿದವನಂತೆ-

"ನಿನ್ನ ಹೆಸರೇನು ?" – ಎಂದು ಕೇಳಿದ ಮದಕರಿನಾಯಕ.

"ಹೀಗೇಕೆ ಕೇಳುತ್ತೀರಿ, ಮಾ ಸ್ವಾಮಿ. ನಿಮಗೆ ನನ್ನ ಹೆಸರು ತಿಳಿಯದೇ - ವೀರಭದ್ರ ನಾಯಕ."

"ಅದು ಗೊತ್ತು – ಅದು ನಿನಗೆ ನಿಮ್ಮಪ್ಪ ಇಟ್ಟ ಹೆಸರು."

"ಮತ್ತೆ-"

-ನಾಯಕರ ಮಾತೇ ಅರ್ಥವಾಗದೆ ಕೇಳಿದ ವೀರಭದ್ರನಾಯಕ.

ಅವನ ಮಾತೇ ಕಿವಿಗೆ ಬೀಳಿಸಿಕೊಳ್ಳದವನಂತೆ ತನ್ನ ಮಾತನ್ನು ಮುಂದುವರಿಸಿ ಹೇಳಿದ ಮದಕರಿನಾಯಕ-

"ಹೈದರಾಲಿಯ ಸೇನೆ ಜಾನಕಲ್ಲಿನಮೇಲೆ ಬಿದ್ದು ಮಾಡಿದ ಕಗ್ಗೊಲೆಯ ಸುದ್ದಿ ಕೇಳಿದೆಯಾ, ವೀರಭದ್ರನಾಯಕ?"

"ಅಷ್ಟಿಷ್ಟು ಕಿವಿಗೆ ಬಿತ್ತು, ಮಾ ಸ್ವಾಮಿ."

"ಕೇಳಿದಷ್ಟೇ ಸಾಕು. ಹೆಚ್ಚು ಹೇಳಿ, ಬಾಯಿ ಹೊಲಸು ಮಾಡಿಕೊಳ್ಳಲು ನಮಗೆ ಇಚ್ಛೆ ಇಲ್ಲ. ಇವತ್ತು ಸೋಮವಾರ. ಇವತ್ತಿನಿಂದ ಪ್ರತಿ ಸೋಮವಾರ ರಾತ್ರಿ ಕಾಳಿಯ ಪೂಜೆ ಮಾಡಿ, ಹೈದರನ

ಸೇನೆಗೆ ಕೇಳಿಸುವಂತೆ ಕೇಕೆ ಹೊಡೆದು, ಆ ಸೇನೆಯ ಮೇಲೆ ನಡುರಾತ್ರಿ ಕಗ್ಗೊಲೆಬಿದ್ದು ನೂರು ತಲೆ ತರಿದು, ಕಿವಿ-ಮೂಗುಗಳನ್ನು ದಂಡಿನಲ್ಲಿ ಬಿಟ್ಟು, ತಲೆ ಬುರುಡೆಗಳನ್ನು ತಂದು, ಆ ತಲೆಗಳ ಮೇಲೆ ಕರ್ಪೂರ ಹೊತ್ತಿಸಿ ಅಮ್ಮನವರಿಗೆ ಮಂಗಳಾರತಿ ಮಾಡಬೇಕು. 'ಇದು ಜಾನಕಲ್ಲಿನ ಸೇಡು' ಎಂದು ನವಾಬನಿಗೆ ಅರ್ಥವಾಗಬೇಕು. ಈ ಹೊತ್ತು ಮೊದಲು - ನವಾಬ ದುರ್ಗದ ಗಡಿಯಿಂದ ಹೋಗುವವರೆಗೂ, ಇಲ್ಲವೇ ನಾವು ದುರ್ಗಕ್ಕೆ ನಮ್ಮ ಬಲಿ ಒಪ್ಪಿಸುವವರೆಗೂ ಪ್ರತಿ ಸೋಮವಾರವೂ ತಪ್ಪದೆ ಈ ಆಹುತಿ ಕೊಡಬೇಕು."

ಕಗ್ಗೊಲೆಯ ಸುದ್ದಿ ಕೇಳಿ, ಮೊಲದ ವಾಸನೆ ಹಿಡಿದ ಬೇಟೆಯ ನಾಯಿಯಂತೆ ಕೆಂಗಣ್ಣುಗಳನ್ನರಳಿಸಿ-

"ಇದಾವ ಮಹಾಕಾರ್ಯ - ನಮಗೊಪ್ಪಿಸಿ. ಸ್ವಾಮಿಕಾರ್ಯ, ದೇವರ ಕಾರ್ಯ – ಹರಕೆ ತೀರಿಸುತ್ತೇವೆ. ತಲೆ ತರುವುದೇನು, ದಾಡಿ - ತಲೆಗಳ ತೋರಣ ಕಟ್ಟುತ್ತೇವೆ – ಅಮ್ಮನವರ ಗುಡಿಗೆ."

"ಒಂದು ವಾರ ಇದು ತಪ್ಪಿದರೂ 'ವೀರಭದ್ರನಾಯಕ' ಎಂದಲ್ಲ, 'ನವಾಬನ ನಾಯಿ' ಎಂದು ನಿನ್ನನ್ನು ಕರೆಯುತ್ತೇವೆ."

-ಎಚ್ಚರಿಕೆ ಕೊಡುವ ಧ್ವನಿಯಲ್ಲಿ ಹೇಳಿದ ಮದಕರಿನಾಯಕ.

"ಆಯಿತು ಎಂದೆನಲ್ಲ, ಮಾ ಸ್ವಾಮಿ. ಮಾತಿಗೆ ತಪ್ಪಿದರೆ ನವಾಬನ ನಾಯಿಯಲ್ಲ, ಅವನ ಹೊಲತಿ ಸೂಳೆಗೆ ಹುಟ್ಟಿದವರು ಎಂದು ಹೇಳಿ, ಕರೆಯಿರಿ. ಇಷ್ಟು ಅಪ್ಪಣೆಯಾಯಿತಲ್ಲ. ಇವತ್ತಿನ ಕೆಲಸ ತೀರಿಸಿ ಬಂದು ಮಾಸ್ವಾಮಿಯವರ ಮುಖ ನೋಡುತ್ತೇನೆ"

-ಎಂದು ಕೈಮುಗಿದ ವೀರಭದ್ರನಾಯಕ.

"ನೀನು ಬಂದು ಹೇಳಬೇಕಾದ ಅಗತ್ಯವಿಲ್ಲ. ನಾವೇ ನಿಮ್ಮೊಂದಿಗಿರುತ್ತೇವೆ."

"ಅಣ್ಣಾ - ಇದೇನು ದುಡುಕು ತೀರ್ಮಾನ ?"

- ಮದಕರಿನಾಯಕನ ಅನಿರೀಕ್ಷಿತವಾದ ಮಾತನ್ನು ಕೇಳಿ, ದಿಗ್ಭ್ರಾಂತನಾಗಿ ಕೇಳಿದ, ಅದುವರೆಗೂ ಸುಮ್ಮನೆ ಮಾತು ಕೇಳಿಸಿಕೊಳ್ಳುತ್ತಾ ನಿಂತಿದ್ದ ಪರಶುರಾಮನಾಯಕ.

"ಇದು ದುಡುಕು ನಿರ್ಧಾರವಲ್ಲ. ನವಾಬ ಜಾನಕಲ್ಲಿಗೆ ಕೈಹಾಕಿದ್ದು - ನಮ್ಮ ನಾಗತಿಯರ ಸೆರಗು ಎಳೆದಂತೆ, ಅಲ್ಲ - ನಮ್ಮನ್ನು ಹಡೆದವರಿಗೆ ಕೆಣಕಿದಂತೆ. ಅದರ ಪ್ರತೀಕಾರ ನಮ್ಮ ಕೈಯಿಂದಲೇ ಆಗಬೇಕು," - ದೃಢನಿಶ್ಚಯದ ಧ್ವನಿಯಲ್ಲಿ ಹೇಳಿದ ಮದಕರಿನಾಯಕ.

"ಅಣ್ಣಾ – ನೀವು ದುರ್ಗದ ಜೀವ...."

“ಜಾನಕಲ್ಲು ನಮ್ಮ ಜೀವ ನಮ್ಮನ್ನು ಹಡೆದದ್ದು ಜಾನಕಲ್ಲು ; ಪಡೆದದ್ದು ಚಿತ್ರದುರ್ಗ. ಇದಕ್ಕೆ ನಾಯಕನಾದೆ ಎಂದು ನನ್ನ ಹುಟ್ಟೂರನ್ನು ಮರೆಯಲೇ ಪರಶುರಾಮಣ್ಣ? ಅದು ಆಗದ ಮಾತು. ಹುಟ್ಟೂರಿನ ಋಣ ತೀರಿಸದೆ, ನಾನು ಭಾರತದ ಸಾರ್ವಭೌಮನಾದರೂ ಬಂದ ಭಾಗ್ಯವೇನು ? ಅದಾವ ಮಾತೂ ಬೇಡ. ಇವತ್ತು ನಡುರಾತ್ರಿಯ ವೇಳೆಗೆ ನಾವು ಕಾಳಿಕಾಂಬಾ ಗುಡಿಯ ಬಳಿ ಬಂದಿರುತ್ತೇವೆ”

-ಎಂದು ಹೇಳಿದ ಮದಕರಿನಾಯಕ.

“ನಿಮ್ಮ ಕೆಲಸವನ್ನು ನನಗೆ ಒಪ್ಪಿಸಿ, ಅಣ್ಣ. ನಾನೂ ನಿಮ್ಮಂತೆಯೇ ಜಾನಕಲ್ಲಿನ ಮಗ.”

-ಎಂದು ಬೇಡಿದ ಪರಶುರಾಮನಾಯಕ.

“ನಾನು ಹಿರಿಯ, ಬದುಕಿದ್ದೇನೆ. ನಾವು ಬದುಕಿರುವವರೆಗೆ ಈ ಕಾರ್ಯ ನಮ್ಮದು. ಆಮೇಲೆ ನಿಮ್ಮ ಸರದಿ. ಹೋಗು ವೀರಭದ್ರನಾಯಕ. ಆರಿಸಿದ ಜನರನ್ನು ಸಿದ್ಧವಾಗಿರಲು ಹೇಳು”
- ಎಂದು ಹೇಳಿ –

“ವೀರಭದ್ರನಾಯಕನಿಗೆ ವೀಳ್ಯ ತರಿಸಿಕೊಡು, ಪರಶುರಾಮಣ್ಣ”

-ಎಂದು ಹೇಳಿದ ಮದಕರಿನಾಯಕ ಆ ಮಾತನ್ನು ಮುಕ್ತಾಯಮಾಡಿದಂತೆ.

ಬಿಗಿದ ತನ್ನಣ್ಣನ ಮುಖವನ್ನು ಕಂಡು, ಆ ಮಾತಿಗೆ ಬದಲಾಡಲು ಆಗದೆ, ಪರಶುರಾಮನಾಯಕ ಆಳಿಗೆ ವೀಳ್ಯವನ್ನು ತರಲು ಅಪ್ಪಣೆ ಮಾಡಿದ.

ವೀರಭದ್ರನಾಯಕ ಹೆಚ್ಚೇನೂ ಮಾತನಾಡದೆ, ನಾಯಕರೇ ಕೊಟ್ಟ ವೀಳ್ಯವನ್ನು ತೆಗೆದುಕೊಂಡು –

“ಇವತ್ತು ರಾತ್ರಿ ಕಾಳಿಕಾಮ್ಮನೋರ ಗುಡಿ ಹತ್ತಿರ ಕಾದಿರುತ್ತೀವಿ, ಮಾ ಸ್ವಾಮಿ. ಮನಸ್ಸಿನಲ್ಲಿ ಕೊರಗೋದು ಬೇಡ. ಸಂದು ಸಿಕ್ಕಿದರೆ ಹೈದರಾಲಿ ಹೆಂಡಿರು ಕಣ್ಣೀರು ಹಾಕೊ ಹಾಗೆ ಮಾಡ್ತೀವಿ. ಅಪ್ಪಣೆ ಕೊಡಿ”

-ಎಂದು ಹೇಳಿ, ವೀಳ್ಯವನ್ನು ತನ್ನ ಸೊಂಟದಲ್ಲಿದ್ದ ಸಂಚಿಯಲ್ಲಿಟ್ಟುಕೊಂಡು ಕೈಮುಗಿದು ಹೋದ.

“ಈ ಸುದ್ದಿಯನ್ನು ಅಪ್ಪ, ಅವ್ವನ ಮುಂದೆ ಹೇಳಬೇಡ, ಪರಶುರಾಮಣ್ಣ, ನಮ್ಮ ಬೇಡ ಪಡೆಯವರು ಇಕ್ಕುಳ ಹಾಕಿ ಕೀಳಿಸಿದರೂ ಬಾಯಿ ಬಿಡುವುದಿಲ್ಲ, ನೀನೂ ಅಷ್ಟೆ. ನಮ್ಮಿಬ್ಬರಲ್ಲೇ ಇರಬೇಕು - ಈ ಮಾತು”

- ಎಂದು ಹೇಳಿ, ಅರಮನೆಯಲ್ಲಿರಲು ಆಗದಿದ್ದವನಂತೆ ಅರಮನೆಯಿಂದ ಹೊರಬಂದ.

ಪರಶುರಾಮನಾಯಕನೂ ಮದಕರಿನಾಯಕನನ್ನು ಹಿಂಬಾಲಿಸಿದ.

ಅರಮನೆಯಿಂದ ಹೊರಬಂದು, ಸಂಪಿಗೆಸಿದ್ಧೇಶ್ವರನ ದೇವಾಲಯದ ಕಡೆಯ ಮಾರ್ಗದಲ್ಲಿ ನಡೆಯುತ್ತಾ, ಅರಮನೆಯ ಮಹಾದ್ವಾರದ ಮುಂದಿನ ಕಾವಲುಗಾರನ ಮನೆಯ ಎದುರು ಭಾಗಗಳಲ್ಲಿದ್ದ ಬೃಹದಾಕಾರದ ಬಂಡೆಯೊಂದನ್ನು ನೋಡಿ, ತಟಕ್ಕನೆ ಏನೋ ಹೊಳೆದಂತೆ ಅದನ್ನೇ ನೋಡುತ್ತಾ ನಿಂತುಬಿಟ್ಟ.

ಅದನ್ನು ಕಂಡ ಪರಶುರಾಮನಾಯಕ –

“ಅದೇನಣ್ಣ, ಎಂದೂ ನೋಡದವರ ಹಾಗೆ ನೋಡುತ್ತಿದ್ದೀರಲ್ಲ - ದಿನವೂ ನೋಡುವ ಆ ಬಂಡೆಯನ್ನು” – ಎಂದು ಕೇಳಿದ.

“ಆ ಬಂಡೆಯನ್ನೇನೋ ದಿನವೂ ನೋಡುತ್ತಿದ್ದೆ. ಆದರೆ ಇವತ್ತು ಅದನ್ನು ನೋಡಿ, ಏನೋ ಒಂದು ಯೋಚನೆ ಬರುತ್ತಿದೆ.”

“ಏನು ಯೋಚನೆ ?”

“ಆ ಬಂಡೆಯನ್ನು ಚೆನ್ನಾಗಿ ನೋಡು, ಪರಶುರಾಮಣ್ಣ.”

ಪರಶುರಾಮನಾಯಕ ನೋಡಿದ - ಸುತ್ತಲೂ ತಗ್ಗಿದ್ದು ನಡುವೆ ಬೃಹದಾಕಾರದ ಆನೆಯ ಬೆನ್ನಿನಂತಿದ್ದ ಅಷ್ಟು ದೂರಕ್ಕೂ ಎದ್ದು ಕಾಣುತ್ತಿದ್ದ ವಿಶಾಲವಾದ ಬಂಡೆಯನ್ನು.

“ಬಂಡೆಯನ್ನು ನೋಡಿದೆಯಾ, ಪರಶುರಾಮಣ್ಣ?”

“ನೋಡಿದೆ.”

“ಆ ಬಂಡೆಯ ಮೇಲೆ ಒಂದು ಕಲ್ಲಿನ ಬೋನು ಕಟ್ಟಿಸಬೇಕು,”

“ಬೋನು ಎಂದರೆ - ?”

“ತಿಳಿಯಲಿಲ್ಲವೇ ಪರಶುರಾಮಣ್ಣ, ಹುಲಿ ಇಡುವ ಪಂಜರ. ಅದು ಮರದ್ದು ಇದು ಕಲ್ಲಿನದು - ಮತ್ತಷ್ಟು ವಿಶಾಲವಾದದ್ದು.”

“ಆಯಿತು. ಕಟ್ಟಿಸಿ ಅದರಲ್ಲಿ ಏನು ಇಡುತ್ತೀರಾ ?”

“ಆ ಸೊಕ್ಕಿನ ನಾಯಿ ಹೈದರಾಲಿಯನ್ನು, ಕಲ್ಲಿನಲ್ಲಿ ದೊಡ್ಡದಾದ ಬೋನು ಕಟ್ಟಿಸಿ, ಅದರಲ್ಲಿ ನವಾಬನನ್ನು ಬಿಟ್ಟು, ನೀರು ನೆಕ್ಕಿ ಕುಡಿಯಲು, ಕಲ್ಲಿನ ದೋಣೆಯನ್ನು ಕೊರೆಸಿ, ಬೆಳಿಗ್ಗೆ-ಸಂಜೆ ನೂರುಜನ ನಿಂತು ನೋಡುವಾಗ, ಅವನು ತಿನ್ನಲು ಮಾಂಸದ ತುಣುಕುಗಳನ್ನು ಹಾಕಬೇಕು. ಹಸಿದ ನವಾಬ ನಾಯಿಯಂತೆ ಎಲುಬು ಕಡಿದು, ನೀರನ್ನು ನೆಕ್ಕಿ ಕುಡಿಯುವುದನ್ನು ಜಾನಕಲ್ಲಿನ ನಮ್ಮ ಜನ ನೋಡಿ ಸಂತೋಷಪಡಬೇಕು. ಅವರ ನಗು ಸ್ವರ್ಗಕ್ಕೆ ಕೇಳಿಸಿ,

ಸ್ವರ್ಗದಲ್ಲಿರುವ ಜಾನಕಲ್ಲಿನವರ ಆತ್ಮಕ್ಕೆ ತೃಪ್ತಿಯಾಗಬೇಕು. ಈ ಬೋನಿನ ಕೆಲಸ ಆರಂಭಿಸಲು ನಾಳೆಯೇ ಕಲ್ಲುಕಾಮಾಟಿಗರಿಗೆ ಹೇಳು"

-ಎಂದು ಉತ್ಸಾಹ-ಆಕ್ರೋಶಗಳು ಸಮಸಮನಾಗಿ ಬೆರೆತ ಧ್ವನಿಯಲ್ಲಿ ಹೇಳಿದ ಮದಕರಿನಾಯಕ –

"ಇವತ್ತು ರಾತ್ರಿ ತಂದ ನವಾಬನ ಸೈನಿಕರ ರಕ್ತವನ್ನು ಆ ಬಂಡೆಯ ಮೇಲೆ ಚೆಲ್ಲಿ, ನಾಳೆ ಬೆಳಿಗ್ಗೆ ಭೂಮಿಪೂಜೆ ಮಾಡಿಸುತ್ತೇವೆ. ಏನೋ ಸಿಟ್ಟಿನಲ್ಲಾಡಿದ ಕನಸಿನ ಮಾತು ಎಂದು ಇದನ್ನು ಮರೆತುಬಿಡಬೇಡ, ಪರಶುರಾಮಣ್ಣ. ನಾಳೆಯಿಂದ ಈ ಕಾರ್ಯ ಆರಂಭವಾಗಬೇಕು."

"ಆಯಿತು, ಅಣ್ಣ ನಿಮ್ಮ ಇಚ್ಛೆಗೆ ನಾನೆಂದು ಎದುರಾಡಿದ್ದೇನೆ"

-ಎಂದು ಹೇಳಿದ ಪರಶುರಾಮನಾಯಕ.

ಅವನ ಮಾತೇ ಕಿವಿಗೆ ಬೀಳದವನಂತೆ, ಆ ಬಂಡೆಯ ಮೇಲೆ ನಿರ್ಮಾಣವಾಗಲಿರುವ ಬೃಹದಾಕಾರದ ಶಿಲೆಯ ಬೋನನ್ನು ಕನಸಿನಕಣ್ಣಿನಿಂದ ನೋಡುತ್ತಾ, ನಿಂತಲ್ಲಿಯೇ ನೆಲಕ್ಕೆ ಕಾಲುಕೀಲಿಸಿದವನಂತೆ ನಿಂತುಬಿಟ್ಟ - ಮದಕರಿನಾಯಕ.

"ಆ ನವಾಬ ಬೋನಿನಲ್ಲಾದರೂ ಬೀಳಲಿ, ಆಕಾಶದಲ್ಲಾದರೂ ಹಾರಿ ನೆಗೆದು ಬೀಳಲಿ. ನನ್ನಣ್ಣನ ಕೂದಲೂ ಕೊಂಕದಂತೆ ಇದೊಂದು ಯುದ್ಧ ಮುಗಿದರೆ ಸಾಕು, ತಾಯಿ, ಮುಂದಿನ ನೂರು ಜನ್ಮದಲ್ಲೂ ನಿನ್ನ ಪಾದಸೇವಕನಾಗಿ ಬಾಳುತ್ತೇನೆ."

-ಎಂದು ಪರಶುರಾಮನಾಯಕ, ದೂರದಲ್ಲಿ ಕಾಣುತ್ತಿದ್ದ ಏಕನಾಥೇಶ್ವರಿಯ ದೇವಾಲಯದತ್ತ ಕೈಮುಗಿದು, ತನಗೆ ತಾನೇ ಹೇಳಿಕೊಂಡ.

* * *

ಆ ದಿನ ರಾತ್ರಿ –

ಕಹಳೆಬತೇರಿಯಲ್ಲಿ ನಡುರಾತ್ರಿ ಸೂಚಿಸುವ ವೇಳೆಗೆ, ಮದಕರಿನಾಯಕ, ಬೇಡಪಡೆಯವರಂತೆಯೇ ಉಡುಪು ಧರಿಸಿ, ಮೇಲುದುರ್ಗದಿಂದ ಕೆಳಗಿಳಿದು, ಕಾಮನಸುತ್ತಿನ ಕೋಟೆಯ ಎದುರು, ಆ ರಸ್ತೆಯಾಚೆಗೆ ಕೊಂಚ ತಗ್ಗಿನಲ್ಲಿದ್ದ ಕಾಳಿಕಾಂಬಾ ಮಂದಿರವನ್ನು ಬೇಡವೆಂದರೂ ಬೆನ್ನು ಬಿಡದ ಅಂಗರಕ್ಷಕಪಡೆಯ ನಾಯಕ ಗುದಗತ್ತಿಯೊಂದಿಗೆ ಪ್ರವೇಶಿಸಿ, ಪೂಜಾನಂತರ ಕಾಳಿಕಾದೇವಿಗೆ ಹರಕೆಯ ಕುರಿಯನ್ನು ಬಲಿಕೊಟ್ಟು, ಅದರ ತಲೆಯ ಬುರುಡೆಯ ಮೇಲೆ ಕರ್ಪೂರ ಹೊತ್ತಿಸಿ, ಮಂಗಳಾರತಿ ಬೆಳಗಿ, ಹಣೆಗೆ ರಕ್ತ ಪ್ರಸಾದವನ್ನು ಹಚ್ಚಿಕೊಂಡು, 'ಸಿದ್ಧವಾಗಿದ್ದೀರಾ ?' ಎಂಬಂತೆ ದೇವಾಲಯದ ಮುಂದೆ ನೆರೆದ ಬೇಡಪಡೆಯನ್ನು ನೋಡಿದ.

"ಮಾ ಸ್ವಾಮಿ – ತಮ್ಮ ಸೇವೆಗೆ ನಾವು ಸಿದ್ಧವಾಗಿದ್ದೇವೆ"

-ಎಂದು ಹೇಳಿದ ವೀರಭದ್ರನಾಯಕ.

ಮದಕರಿನಾಯಕ ನೋಡಿದ –

ಬೇಡಪಡೆಯ ಒಬ್ಬೊಬ್ಬ ಭಟರೂ ಕೃಷ್ಣಶಿಲೆಯಲ್ಲಿ ನಿರ್ಮಿಸಿದ ಭೈರವನ ವಿಗ್ರಹದಂತಿದ್ದರು.

ನಾಯಕರು ತಮ್ಮತ್ತ ನೋಡಿದಾಗ ಎಲ್ಲರೂ ತಮ್ಮ ಕೈಯಲ್ಲಿದ್ದ ಕತ್ತಲಿನಲ್ಲೂ ಹರಿತವಾಗಿ ಹೊಳೆವ ಗಂಡುಗೊಡಲಿಗಳನ್ನು ನಾಯಕರ ಪಾದದ ಬಳಿ ಇಟ್ಟು, ಕೈಗೆ ತೆಗೆದುಕೊಂಡು, ಒಟ್ಟಾಗಿ-

"ಅಪ್ಪಣೆಯಾಗಬೇಕು"

- ಎಂದು ಬೇಡಿದರು, ವಿನಯದೊಂದಿಗೆ ಕರ್ಕಶತೆಯೂ ಬೆರೆತ ಧ್ವನಿಯಲ್ಲಿ.

"ಹಾಗಿದ್ದರೆ ಹೇಳಿ - 'ಮಾ ಕಾಳಿಗೆ ಜಯವಾಗಲಿ, ಜಾನಕಲ್ಲಿಗೆ ಜಯವಾಗಲಿ'"

- ಮದಕರಿನಾಯಕ ಏರುಧ್ವನಿಯಲ್ಲಿ ಹೇಳಿದ.

ಆ ಮಾತುಗಳನ್ನು ಮುನ್ನೂರು ಕಂಠಗಳಲ್ಲಿ ಮುಗಿಲ ನಕ್ಷತ್ರಗಳು ನಡುಗುವಂತೆ ಹೇಳಿ, 'ಲೆ....ಲೆ....ಲೆ....ಕೇ... ಹೂ....' ಎಂದು ದಿಕ್ತಟಗಳ ಎದೆತಟ್ಟಿ ಎಚ್ಚರಿಸುವಂತೆ ಕೇಕೆ ಹಾಕಿದರು, ಬೇಡಪಡೆಯ ಭಟರು.

ಕ್ಷಣಕಾಲ ನೆಲ ಮುಗಿಲುಗಳನ್ನು ಬೆಚ್ಚಿಸಿದ ಕೇಕೆ, ತಟಕ್ಕನೆ ಸದ್ದು ಕಡಿದಂತೆ ನಿಂತು ಹೋಗಿ, ಬೇಡಪಡೆ – ಸದ್ದಿನಿತೂ ಮಾಡದೆ, ಹುಲಿಯನ್ನು ಅರಸಿಕೊಂಡು ಹೊರಟ ಬೇಟೆ ನಾಯಿಗಳಂತೆ, ಅಷ್ಟು ಜನವೂ ಒಂದು ಮೈಯಾಗಿ, ಮದಕರಿನಾಯಕ ಅದರ ಮುಖವಾಗಿ, ಮುನ್ನುಗ್ಗಿತು.

ಶ್ರಾವಣಮಾಸದ ಮುಂಗಾರಿನ ಕಾರ್ಮೋಡಗಳು ಆಕಾಶದಲ್ಲಿ ದಟ್ಟವಾಗಿ ಹಬ್ಬಿ ಕತ್ತಲನ್ನು ಮತ್ತಷ್ಟು ಕಗ್ಗತ್ತಲಾಗಿ ಮಾಡಿದ್ದವು. ದಟ್ಟವಾಗಿ ಕವಿದ ಮೋಡಗಳ ಸೀಳಿನಾಳದಲ್ಲೆಲ್ಲೋ ಮಿನುಗುವ ನಕ್ಷತ್ರವನ್ನು ಬಿಟ್ಟರೆ ಬೇರಾವ ಬೆಳಕೂ ಇರಲಿಲ್ಲ. ಮಲಗಿದ ನಗರವನ್ನಾವರಿಸಿದ ಮೌನ - ನಗರದಾಚೆ ಮತ್ತಷ್ಟು ದಟ್ಟವಾಗಿತ್ತು. ದೂರದಲ್ಲೆಲ್ಲೋ ಊಳಿಡುವ ನರಿಯ ಕೂಗು, ನಗರದಲ್ಲಿ ಆಗಾಗ ಬೊಗಳುವ ನಾಯಿಗಳ ಧ್ವನಿಯನ್ನು ಬಿಟ್ಟರೆ ಮತ್ತಾವ ಧ್ವನಿಯೂ ಇರಲಿಲ್ಲ. ಕಗ್ಗತ್ತಲಿನಲ್ಲಿ, ನಿಡುಮೌನದಲ್ಲಿ, ಕತ್ತಲೆಯ ತತ್ತಿಗಳಂತೆ ಕಪ್ಪು ಕಂಬಳಿ ಹೊದ್ದ ಬೇಡಪಡೆ - ಗಿಡ, ಸಣ್ಣ ಪೊದೆಗಳೊಂದಿಗೆ ಕರಗುತ್ತಾ, ಅಡ್ಡಾಡುತ್ತಿದ್ದವರ ಕಣ್ಣಿಗೆ ಬೀಳದಂತೆ ನೆಲದ ಮೇಲೆ ಮಲಗಿ ತೆವಳುತ್ತಾ, ಕಾಡುಮೃಗಗಳು ನುಗ್ಗದಂತೆ ಅಡ್ಡವಾಗಿ, ಹಾಕಿದ್ದ ಮುಳ್ಳುಬೇಲಿಯನ್ನು ಸದ್ದಾಗದಂತೆ ಅತ್ತಿತ್ತ ಸರಿಸಿ, ಕಂಡಿ ಮಾಡಿಕೊಂಡು, ಒಬ್ಬೊಬ್ಬರಾಗಿ ಒಳಗೆ ನುಸುಳಿದರು. ಹತ್ತಾರುಜನ

ದೀವಟಿಗೆ ಹಿಡಿದು ಸುತ್ತುತ್ತಿದ್ದ ಕಾವಲುಗಾರರನ್ನು ಹಿಂಬದಿಯಿಂದ ಸಮೀಪಿಸಿ, ತಟಕ್ಕನೆ ಅವರ ಮುಖದ ಮೇಲೆ ಕಂಬಳಿ ಮುಚ್ಚಿ ದೀವಟಿಗೆಗಳನ್ನು ನಂದಿಸಿ, ಬೆಳಕು ಸತ್ತಮೇಲೆ, ಕತ್ತಲಿನಲ್ಲಿ ಸತ್ತವರೂ ಬೆಚ್ಚಿ ಬಿದ್ದು ಏಳುವಷ್ಟು ಕರ್ಕಶವಾಗಿ ಕೇಕೆಹಾಕಿ, ಆ ಸದ್ದು ಕೇಳಿ ಬೆದರಿ ಎಚ್ಚೆತ್ತ ಸೈನಿಕರು ಮೇಲೇಳಲೂ ಅವಕಾಶಕೊಡದಂತೆ ಮಿಂಚಿನ ವೇಗದಲ್ಲಿ, ಒಂದೇ ಏಟಿಗೆ ಹರಿತವಾದ ಗಂಡುಗೊಡಲಿಯಿಂದ ಅವರ ತಲೆಗಳನ್ನು ಕತ್ತರಿಸಿ, 'ಇದೇನಾಯಿತು?' ಎಂದು ಸೇನೆಗೆ ತಿಳಿಯುವ ಮೊದಲೇ, ಬಂದ ದಾರಿಯಲ್ಲಿ ಹಿಂದಿರುಗಿ ಕತ್ತಲಿನಲ್ಲಿ ಕರಗಿಹೋದರು.

ದೀವಟಿಗೆಗಳ ಬೆಳಕಿನ, ಎಚ್ಚರಿಕೆ ಕೂಗುವ ಕಾವಲುಗಾರರಿಲ್ಲ –

ಎರಡು ಕ್ಷಣ ಭೂಮಿ ಬಿರಿಯುವ ಕೇಕೆ –

ಮರುಗಳಿಗೆಯೇ ಹೆಪ್ಪಿಟ್ಟ ಮೌನ ; ಆ ಮೌನವನ್ನು ಮುರಿಯುವ ನೋವು, ನರಳಿಕೆಯ ಗೋಳಾಟ, ಚೀರಾಟ.

'ಕಾವಲುಗಾರರೆಲ್ಲಿ ? - ದೀವಟಿಗೆಯವರೆಲ್ಲಿ ?'

-ಎಂದು ಕೂಗುತ್ತಾ, ಕತ್ತಲಲ್ಲಿ ಹುಡುಕಿ ತಡಕಿ, ಎಲ್ಲೋ ಆರಿಬಿದ್ದ ಪಂಜುಗಳನ್ನು ಹೊತ್ತಿಸಿ ನೋಡಿದಾಗ ಎಚ್ಚೆತ್ತ ನವಾಬನ ಸೈನಿಕರಿಗೆ, ಸರ್ದಾರರಿಗೆ ಕಂಡದ್ದು – ರುಂಡ ಹೋಗಿ, ರಕ್ತದಲ್ಲಿ ತೇಲಾಡುತ್ತಿದ್ದ ಮುಂಡಗಳು; ಕಿವಿ, ಮೂಗುಗಳನ್ನು ಕಳೆದುಕೊಂಡು ಮೂಕ ಪಶುಗಳಂತೆ ಗೋಳಿಡುತ್ತಿದ್ದ ಸೈನಿಕರು.

ದೀವಟಿಗೆಗಳ ಬೆಳಕಿನ ಅರೆಗತ್ತಲಲ್ಲಿ ಆ ಬೀಭತ್ಸದೃಶ್ಯವನ್ನು ಕಂಡು ಎಚ್ಚೆತ್ತವರ ಎದೆಯಲ್ಲೂ ಭೀತಿ ಕವಿದು, ಭೂತವನ್ನು ಕಂಡವರಂತೆ ಚೀರಲಾರಂಭಿಸಿದರು.

ಯಾರು ಮಾಡಿದರು ?

ಹೇಗೆ ಮಾಡಿದರು ?

ಎಲ್ಲಿಂದ ಬಂದರು ?

ಬಂದವರು ಎಲ್ಲಿ -?

ಅವರ ಮಂಕುಬಡಿದ ಮಿದುಳು ಕೇಳಿದ ಹತ್ತಾರು ಪ್ರಶ್ನೆಗಳಿಗೆ ಉತ್ತರ ಕೊಟ್ಟಂತೆ, ದುರ್ಗದ ಒಡಲಾಳದಿಂದ –

"ಲೆ....ಲೆ....ಲೆ....ಕೇ....ಹೂ...."

- ಎಂಬ ರಣಕೇಕೆ ಕೇಳಿಬಂದು, ಆ ಕೇಕೆಯ ಭಯಾನಕತೆಗೆ ಬೆದರಿ, ಎಚ್ಚೆತ್ತವರೂ ಮುಸುಗಿಟ್ಟು ಮುದುರಿದರು, ಪಿಶಾಚಿಗಳ ಉನ್ಮತ್ತ ರುದ್ರ ರಕ್ತಪಿಪಾಸೀರವವನ್ನು ಕೇಳಿದವರಂತೆ.

'ದೀವಟಿಗೆ ಹೊತ್ತಿಸಿದರೇನೋ –

ಆರಿಸಿದರೇನೋ ?’

ಬೆಳಕು-ಕತ್ತಲೆ ಎರಡಕ್ಕೂ ಹೆದರಿ ಗದಗದ ನಡುಗಿತು ನವಾಬನ ಸೇನೆ.

ನವಾಬನ ಸೇನೆ ನಡುಗುತ್ತಿತ್ತು- ಇತ್ತ.

ಅತ್ತ-

ಕಡಿದುತಂದ ನೆತ್ತರು ಸೋರುತ್ತಿದ್ದ ತಲೆಗಳನ್ನು ಜುಟ್ಟು-ದಾಡಿ ಹಿಡಿದು, ಕಾಳಿಕಾಂಬೆಯ ದೇವಾಲಯದ ಮುಂದೆ ರಾಶಿ ಹಾಕಿ, ಕುಣಿದು ಕೇಕೆಹಾಕಿತು – ಬೇಡಪಡೆ.

ಆ ತಲೆಗಳ ಮೇಲೆ ಕರ್ಪೂರ ಹೊತ್ತಿಸಿ, ಕಾಳಿಕಾದೇವಿಗೆ ಸಾಲು ಮಂಗಳಾರತಿ ಮಾಡಿ, ಶತ್ರುರಕ್ತದ ಕುಂಕುಮವನ್ನು ಹಣೆಗಿಟ್ಟುಕೊಂಡು ವೀರಭದ್ರನಾಯಕ, ಅದನ್ನು ನಿಂತು ನೋಡುತ್ತಿದ್ದ ಮದಕರಿನಾಯಕರಿಗೆ ಹೇಳಿದ –

“ಮಾ ಸ್ವಾಮಿ-ನೂರು ತಲೆ ಕೇಳಿದ್ದಿರಿ. ಮುನ್ನೂರಕ್ಕೂ ಕಡಮೆ ಇದ್ದರೆ, ನಮ್ಮ ತಲೆ ಕತ್ತರಿಸಿ ಕೂಡಿಸಿ ಲೆಕ್ಕ ಸರಿಮಾಡಿಕೊಡುತ್ತೇವೆ.”

“ಅದರ ಅಗತ್ಯವಿಲ್ಲ. ಆದರೆ ಇವತ್ತಿಗೇ ಇದು ಮುಗಿಯಲಿಲ್ಲ. ಪ್ರತಿ ಸೋಮವಾರವೂ ರಾತ್ರಿ ಕಾಳಿಕಾಂಬೆಗಿಷ್ಟು ಬಲಿಯಾಗಬೇಕು. ಒಂದು ವಾರವೂ ತಪ್ಪಕೂಡದು. ಬೊಕ್ಕಸದವರಿಗೆ ಅಪ್ಪಣೆ ಮಾಡುತ್ತೇವೆ - ತಲೆಗೆ ಹತ್ತು ವರಹ ಕೊಡುತ್ತಾರೆ.... ಈಗ ಹೇಳಿ - ’ಕಾಳಿಗೆ ಜಯ ವಾಗಲಿ, ಜಾನಕಲ್ಲಿಗೆ ಜಯವಾಗಲಿ.’”

“ಕಾಳಿಗೆ ಜಯವಾಗಲಿ –

“ಜಾನಕಲ್ಲಿಗೆ ಜಯವಾಗಲಿ-

“ಮದಕರಿನಾಯಕರಿಗೆ ಜಯವಾಗಲಿ !”

- ಮುಗಿಲು ಮುಟ್ಟಿ ಮಾರ್ದನಿಸುವಂತೆ ಜಯಘೋಷ ಮಾಡಿತು, ಬೇಡಪಡೆ.

ಆ ಕೂಗನ್ನು ಕೇಳಿ, ಮಾಗಿಯ ಚಳಿ ಹಿಡಿದಂತೆ ನಡುಗಿತು ನವಾಬನ ಸೇನೆ - ಹಿಂದೆಂದೂ ಕಂಡು-ಕೇಳಿಯೂ ಅರಿಯದ ಬೀಭತ್ಸ ಹತ್ಯಾಕಾಂಡವನ್ನು ಕಂಡು.

* * *

ಅಂದಿನಿಂದ –

ಪ್ರತಿ ಸೋಮವಾರ, ನಡುರಾತ್ರಿಯಾಯಿತೆಂದರೆ ನವಾಬನ ಸೇನೆ ಭೂತದರ್ಶನವಾದಂತೆ ನಡುಗಲಾರಂಭಿಸಿತು. ವಾರವಾರಕ್ಕೆ ಕಿವಿ ಮೂಗು ಕಳೆದುಕೊಂಡವರ

ಸಂಖ್ಯೆ ಹೆಚ್ಚಲಾರಂಭಿಸಿತು. ಕಾಳಿಯ ದೇವಾಲಯದ ಬಳಿ ತಲೆಯೋಡುಗಳ ರಾಶಿ ವಾರವಾರಕ್ಕೂ ಮೇಲೇರಲಾರಂಭಿಸಿತು.

ಆದರೆ ಬುದ್ಧಿವಂತನ ಮರಡಿಯಿಂದ ಹಿಡಿದು ಚೋಳಘಟ್ಟದವರೆಗೂ ಅಖಂಡವಾಗಿ ಹರಡಿದ ನವಾಬನ ಅಸಂಖ್ಯ ಸೇನಾಸಮೂಹದಲ್ಲಿ ಎಂದು-ಎಲ್ಲೆಂದು ಕಾವಲು ಕಾಯುವುದು ?

ಅವರಿಗೆ ಗೊತ್ತಿದ್ದುದಿಷ್ಟೆ –

ಪ್ರತಿ ಸೋಮವಾರ ರಾತ್ರಿ ಕೇಳಿಬರುತ್ತಿದ್ದ ಕರ್ಣಕಠೋರ ಕರ್ಕಶ ರಣಕೇಕೆ.

ಹಗಲು ಕಾಣುತ್ತಿದ್ದುದು –

ತಲೆ ಕಳೆದುಕೊಂಡ ಮುಂಡಗಳು; ಕಿವಿ, ಮೂಗು ಕೊಯ್ದಿಸಿಕೊಂಡು ಗೋಳಿಡುವವರು.

ಕಟ್ಟಳೆ ತಪ್ಪದಂತೆ ನಡೆಯುತ್ತಿದ್ದ ಈ ಹತ್ಯಾಕಾಂಡವನ್ನು ಕಂಡು, ಅದನ್ನು ತಡೆಯಲಾಗದ ಹೈದರಾಲಿ ಹಣ್ಣೆಂದುಕೊಂಡು ಕೆಂಡವನ್ನು ನುಂಗಿದವನಂತೆ ಚಡಪಡಿಸಲಾರಂಭಿಸಿದ –

'ಮುಂದೆ ನುಗ್ಗಲು- ದಾರಿಯಿಲ್ಲ,

ಹಿಂಜರಿಯಲು - ಹೇಸಿಗೆ.'

- ಈ ಮೂಗುಬ್ಬಸದಲ್ಲೇ ಮೂರು ತಿಂಗಳು ಕಳೆಯಿತು.

ನವಾಬ ಗೆಲ್ಲಲಿಲ್ಲ –

ನಾಯಕ ಸೋಲಲಿಲ್ಲ.

೭

ಸೋಲಲಿಲ್ಲ, ಗೆಲ್ಲಲಿಲ್ಲ –

ಆದರೂ ಅಕ್ಕಸಾಲಿಯ ಒರೆಗಲ್ಲಿಗೆ ಸಿಕ್ಕ ಚಿನ್ನದಂತೆ ಸಣ್ಣಗೆ ಕರಗುತ್ತಿತ್ತು – ನವಾಬನ ಸೇನೆ. ಹೈದರಾಲಿಯ ನಸೀಬು, ಪೂರ್ಣಯ್ಯನ ಬುದ್ಧಿ ಎರಡೂ ಸೋತು ಸೊರಗಿದಂತಿತ್ತು - ಚಿತ್ರದುರ್ಗದ ಬಂಡೆಗಲ್ಲುಗಳ ಬರಡುಗಡಸುತನದ ಇದಿರು.

ಕಣ್ಣಿರಿಯುವ ಕೋಟೆಯನ್ನು ಎದುರಿಗಿಟ್ಟುಕೊಂಡು, ಲಕ್ಷ ಲಕ್ಷ ಸೇನೆಯ ಬಲ ತೋಳಿನಲ್ಲಿದ್ದೂ ಸುಮ್ಮನಿರುವುದು ಹೇಗೆ? ಗುರಿ ತಿಳಿಯದ ಹುಡುಗ 'ಹತ್ತು ಕಲ್ಲೇಟಿನಲ್ಲಿ ಒಂದಾದರೂ ತಗಲಿ ಹಣ್ಣು ಬೀಳಲಿ' ಎಂದು ದಿಕ್ಕರಿಯದೆ ಕಲ್ಲುಗಳನ್ನು ಬೀಸುವಂತೆ, ಬಾಯಿ ಗದ್ದಲದಿಂದ ಬಲಶಾಲಿಯನ್ನು ಬೆದರಿಸುವ ಬಾಯಾಳಿಯಂತೆ, ತೋಪುಗಳು ದಿನದಿನವೂ

ಗುಡ್ಡದತ್ತ ಗುಂಡುಗಳನ್ನು ಕಾರಿ, ಮುಗಿಲಾಳದಲ್ಲೆಲ್ಲೋ ಹೊಗೆ, ಕೆಂಡ ಕಾರಿ ಅಬ್ಬರ ಮಾಡಿ ಸುಮ್ಮನಾಗುತ್ತಿದ್ದವು. ಕುದುರೆಯಾಳುಗಳು ನೂಲೇಣಿ ಹೊತ್ತ ಪದಾತಿಗಳನ್ನು ಬೆಂಬಲವಾಗಿಟ್ಟುಕೊಂಡು ಕೋವಿ ಹಾರಿಸುತ್ತಾ ಕೋಟೆಯತ್ತ ನುಗ್ಗಿ ಹತ್ತು ಜನರನ್ನು ಕೊಂದು, ನೂರು ಜನ ಸತ್ತು ಹಿಂದಿರುಗುತ್ತಿದ್ದರು. ಆ ಯುದ್ಧವೆಲ್ಲಾ ಹಗಲು ಹದ್ದು -ಕಾಗೆಗಳಿಗೆ, ಇರುಳು ನರಿಗಳಿಗೆ ಆಹಾರವಾಗುತ್ತಿತ್ತೇ ಆಗಲಿ, ಕೋಟೆಯಲ್ಲಿ ಸಂದು ಮಾಡುವುದಿರಲಿ, ಹತ್ತು ಹೆಜ್ಜೆ ಮುಂದೆ ಸರಿಯಲೂ ಸಾಧ್ಯವಾಗಿರಲಿಲ್ಲ ಮೂರು ತಿಂಗಳಾಗಿದ್ದರೂ.

ದಿನದಿನವೂ ಈ ವಿಫಲಸಮರದ ಕಹಿಯುಂಡು, ಹೈದರಾಲಿಗೆ ಹಗಲು - ಹೊರೆಯಾದರೆ, ರಾತ್ರಿ: ದು-ಸ್ವಪ್ನಗಳ ಉರಿಮಂಚವಾಗಿತ್ತು. ಹಲವಾರು ಸಮರಗಳಲ್ಲಿ ಹೈದರಾಲಿಗೆ ಜಯ ತಂದುಕೊಟ್ಟ ಸರ್ದಾರರೂ ಚಿತ್ರದುರ್ಗದ ಕೋಟೆಯನ್ನು ಗೆಲ್ಲುವುದು ಹೇಗೆ ಎಂದು ದಾರಿ ತೋರಲು ಸಮರ್ಥರಾಗಲಿಲ್ಲ. ಕೈಗೆ ಸಿಕ್ಕ ಹಳ್ಳಿಗರ ಚರ್ಮ ಸುಲಿಸಿ, ಚಿತ್ರಹಿಂಸೆ ಮಾಡಿದರೂ ಯಾರೊಬ್ಬರೂ ದುರ್ಗದೊಳಗೆ ನುಗ್ಗುವ ಕಳ್ಳದಾರಿಯನ್ನು ತೋರಿಸಲಿಲ್ಲ. ಕಣ್ಣು ಕೋರೈಸುವಷ್ಟು ಬಂಗಾರದ ನಾಣ್ಯಗಳನ್ನು ರಾಶಿರಾಶಿಯಾಗಿ ಒಟ್ಟಿ ತೋರಿಸಿದರೂ ಯಾರೊಬ್ಬರೂ ದುರ್ಗದ ಐಬುಜಾಗವನ್ನು ತೋರಿಸಲಿಲ್ಲ.

ಅದಕ್ಕೆ ಪ್ರತಿಯಾಗಿ –

ಹೈದರಾಲಿಯ ಸೇನೆಯ ಸುಲಿಗೆಯಿಂದ ಸಂತ್ರಸ್ತರಾದ ಹಳ್ಳಿಗಾಡಿನ ಜನ ಸುತ್ತ ಮುತ್ತಲ ಗುಡ್ಡಗಳಲ್ಲಿ ತಲೆಮರೆಸಿಕೊಂಡು, ಹೊತ್ತು ಸಿಕ್ಕಾಗ, ಆದಷ್ಟು ಜನರ ಕೊಲೆ ಮಾಡುತ್ತಿದ್ದರು. ಸೇನೆಯ ಚಾಕರಿಗೆಂದು ಹಿಡಿದುಕೊಂಡು ಬಂದವರು, ಒಂದೆರಡು ದಿನ ಚಾಕರಿ ಮಾಡಿ, ಬಳಿಕ ಕೈಗೆ ಸಿಕ್ಕಷ್ಟನ್ನು ಲೂಟಿ ಮಾಡಿಕೊಂಡು ಕಣ್ಣು ಮರೆಯಾಗುತ್ತಿದ್ದರು. ಇದರೊಂದಿಗೆ ಪ್ರತಿ ಸೋಮವಾರರಾತ್ರಿಯೂ ತಪ್ಪದೆ ನಡೆಯುತ್ತಿದ್ದ ಕಗ್ಗೊಲೆ - ಬದುಕಿದವರು ಸೋಮವಾರದ ಜಪ ಮಾಡುವಂತಾಗಿತ್ತು. ಇದರ ಜೊತೆಗೆ ಆಗಾಗ ಬಂದು ಸುರಿವ ಹಿಂಗಾರುಮಳೆ ಹೈದರಾಲಿಯ ಸೈನಿಕರ ಉತ್ಸಾಹವನ್ನು ಮತ್ತಷ್ಟು ತಣ್ಣಗಾಗಿಸುತ್ತಿತ್ತು. ಇದೆಲ್ಲದರೊಂದಿಗೆ ವಿಫಲತೆಯನ್ನು ಗಂಟಲಿಗೆ ಗಿಡಿಯುವಂತೆ ಮೂಗು ಕಟ್ಟಿಸುವ ಆನೆ, ಕುದುರೆ, ಎತ್ತು, ಕೋಣ, ಸೈನಿಕರ ಮಲಮೂತ್ರವಿಸರ್ಜನೆಯ ಗಬ್ಬುವಾಸನೆ ಹಗಲಿರುಳೂ ಕಾಡಿ, ಹೈದರಾಲಿ ತನ್ನ ಖಾಸಾಬಿಡಾರವನ್ನು ಹತ್ತು ಕಡೆ ಬದಲಾಯಿಸಿದ. ಕೆಲಸವಿಲ್ಲದ ಸರ್ದಾರರು ಕಂಠಮಟ್ಟ ಕುಡಿದು ನವಾಬನ ಬಯ್ಗಳಕಹಿಯನ್ನು, ಸುತ್ತಲ ದುರ್ಗಂಧವನ್ನು ಮರೆಯಲು ಯತ್ನಿಸಿದರು. ಸೇನೆಯೊಂದಿಗೆ ಬಂದ ಸೂಳೆಯರು ಹಗಲಿರುಳೂ ಮೈಸಮೆಸಿ ಮೂಳೆಚಕ್ಕಳವಾದರು. ಸೇನೆಯಲ್ಲಿ ಕಾಣಿಸಿಕೊಂಡ ಹತ್ತಾರು ಬಗೆಯ ಜಾಡ್ಯಗಳು ಹಕೀಮರ, ಪಂಡಿತರ ಔಷಧಿಯ

ಸಂಗ್ರಹವನ್ನು ಕರಗಿಸಿದವು. ದಿನಗಳೆದಂತೆ ಉಳಿದೆಲ್ಲ ರೋಗಗಳಿಗಿಂತ ಮಿಗಿಲಾಗಿ ವಿಫಲತೆಯ ಜಡತೆ ಸೇನೆಯಲ್ಲಿ ಕವಿದು, ಮಳೆಗಾಲದ ಮಂಕು ಎಲ್ಲರ ಕಣ್ಣುಗಳಲ್ಲೂ ಕಾಣುವಂತಾಯಿತು. ದಿನದಿನಕ್ಕೆ ಸೇನೆಗೆ ಕೊಡುತ್ತಿದ್ದ ಊಟ, ಕುಡಿತಗಳ ಪ್ರಮಾಣ ಕಡಿಮೆಯಾಗಿ, ಎಷ್ಟೋ ಜನ ಸೈನಿಕರಿಗೆ ಪಾಳಯ ಸೆರೆಮನೆಯಂತಾಗಿ, ಎತ್ತಲಾದರೂ ತಲೆತಪ್ಪಿಸಿಕೊಂಡು ಹೋಗಲು ಯತ್ನಿಸಿ, ಇರುಳುಕಾವಲು ಪಡೆಯವರ ಗುಂಡೇಟಿಗೆ ಬಲಿಯಾದರು. ಇಂಥವರ ಸಂಖ್ಯೆ ಹೆಚ್ಚಿದಂತೆ ಹೈದರಾಲಿಯ ಬಾರುಕೋಲಿನ ಆಳ್ವಿಕೆ ಮತ್ತಷ್ಟೂ ಬಿಗಿಯಾಗಿ, ಬಿರುಸಾಯಿತು. ಹೊರಗೆ ಬಿಗಿ ಹೆಚ್ಚಿದಷ್ಟೂ ಒಳಗೆ ಅಶಾಂತಿ ಬಲಿಯಿತು. ಇದನ್ನು ಬಲಿಯಲು ಬಿಟ್ಟರೆ ಚಿತ್ರದುರ್ಗದ ಸೇನೆಯಲ್ಲ, ಬಯಲೇ ತನ್ನ ಸೇನೆಯ ಬಲಿತೆಗೆದುಕೊಳ್ಳುವುದೆಂಬ ಭೀತಿ ಮೂಡಿತು – ಹೈದರಾಲಿಯ ಹೃದಯದಲ್ಲಿ.

'ಇದೆಲ್ಲ ಜಾಡ್ಯ, ಜಡತೆ ಮಾಯವಾಗಿ, ಮತ್ತೆ ಸೇನೆಯಲ್ಲಿ ಮೊದಲಿನ ಲವಲವಿಕೆ ಮೂಡ ಬೇಕಾಗಿದ್ದರೆ ಇದ್ದ ಒಂದೇ ಒಂದು ದಾರಿ - ಗೆಲುವು ; ಅಂತಿಮ ಜಯವಲ್ಲ, ಸಣ್ಣ ಗೆಲುವಾದರೂ ಸಾಕು' - ಎಂದು ಹೈದರಾಲಿ ದಿನಕ್ಕೆ ಸಾವಿರದೆಂಟುಬಾರಿ ಮದಕರಿನಾಯಕನ, ಚಿತ್ರದುರ್ಗದ ಹೆಸರನ್ನು ಶಪಿಸುತ್ತಾ, ದಿನದಿನವೂ ದಟ್ಟವಾಗಿ ಕವಿಯುತ್ತಿದ್ದ ಕತ್ತಲಲ್ಲಿ ಒಂದಾದರೂ ಬೆಳಕಿನ ಕಿರಣ ಕಾಣುವುದೇನೋ ಎಂದು ಪರಿತಪಿಸುತ್ತಾ, ಸಿಟ್ಟು, ಸೆಡವು, ಛಲ ಸೋತು ಜಡವಾದ ಧ್ವನಿಯಲ್ಲಿ ಪೂರ್ಣಯ್ಯನನ್ನು ಕೇಳಿದ –

"ಪೂರ್ಣಯ್ಯ, ನಮ್ಮ ನಸೀಬು ಕೈಕೊಟ್ಟಿತು. ನಿಮ್ಮ ಬುದ್ಧಿಯೂ ಕುದುರೆಯ ಲದ್ದಿಯಾಯಿತೇ ?"

"ಇಲ್ಲ, ಖಾವಂದ್, ಇದು ಕಲ್ಲುಭೂಮಿ. ಬಿತ್ತಿದ ಬೀಜ ಬೆಳೆಯುವುದು ಬಹಳ ನಿಧಾನ"

ಪೂರ್ಣಯ್ಯನೂ ಚಿಂತೆ ತುಂಬಿದ ಧ್ವನಿಯಲ್ಲಿ ಹೇಳಿದ –

"ಆದರೆ ಬಿತ್ತಿದ ಬೀಜ ವಿಫಲವಾಗುವುದಿಲ್ಲ."

"ನಮ್ಮ ಗೋರಿಯ ಮೇಲೆ ಫಲ ಕೊಡುತ್ತದೆಯೇ - ನೀವು ಹಾಕಿದ ಗಿಡ ?"

"ನವಾಬರು ಅಷ್ಟು ನಿರಾಶರಾಗಬಾರದು."

"ನಿರಾಶರಾಗಬಾರದು. ದಿನದಿನವೂ ದುರ್ಗಕ್ಕೆ ಸೇನೆಯ ಬಲಿಕೊಡುತ್ತಾ, 'ಆಕಾಶದಿಂದ ಅರಗಿಳಿ ಬಂದು ಚಿತ್ರದುರ್ಗವನ್ನು ತಂದು ನಮ್ಮ ಜೋಳಿಗೆಗೆ ಹಾಕುತ್ತದೆ' ಎಂದು ನಂಬಿ, ಹಗಲೂ ರಾತ್ರಿ ನಾಚು ನೋಡುತ್ತಾ ಕುಳಿತುಕೊಳ್ಳಬೇಕೇ ?"

- ನಿರಾಶೆಯ ನಂಜು ತುಂಬಿದ ಧ್ವನಿಯಲ್ಲಿ ಕೇಳಿದ, ಹೈದರಾಲಿ.

"ನಿಮ್ಮ ಹಾಗೇ ನಾವೂ ಕಾಯುತ್ತಿದ್ದೇವೆ, ಖಾವಂದ್- ಆಕಾಶದಿಂದ ಅರಗಿಳಿಯನ್ನಲ್ಲ ಪಾರಿವಾಳವನ್ನು, ತಡವಾಗಿರಬಹುದು. ಆದರೆ ಮಾನ್ವಿ ಶ್ರೀನಿವಾಸರಾಯರು ಪಡಪೋಶಿ ಕೆಲಸ ಮಾಡುವವರಲ್ಲ, ಅಲ್ಲದೆ- ದುರ್ಗದ ಕೊತ್ವಾಲಚಾವಡಿಯ ಜನ, ಅದರ ದಳವಾಯಿ ಕಾಶಣ್ಣನಾಯಕ ಬಹಳ ಸಮರ್ಥರು ಎಂದು ಕೇಳಿದ್ದೇನೆ. ದುರ್ಗದೊಳಗಿನಿಂದ ಸುದ್ದಿ ತರಿಸುವುದು ಮರಳಿನಲ್ಲಿ ಎಣ್ಣೆ ತೆಗೆಯುವಂಥ ಕೆಲಸ. ಅದು ಗೊತ್ತಿರುವುದರಿಂದಲೇ ನಿಧಾನವಾದರೂ ನಾನು ನಿರಾಶನಾಗಿಲ್ಲ. ಕೆಲಸ ಆಗುತ್ತದೆ. ನನ್ನನ್ನು ನಂಬಿ ತಾವು ನಾಚ್ ನೋಡುತ್ತಿರಿ; ಆಕಾಶ ನೋಡುವ ಕೆಲಸ ನನಗೆ ಬಿಡಿ"

-ಎಂದು ಹೈದರಾಲಿಯ ಹೃದಯದಲ್ಲಿ ನಂಬಿಕೆಯನ್ನು ತುಂಬುತ್ತಾ ಹೇಳಿದ ಪೂರ್ಣಯ್ಯ

* * *

ಪೂರ್ಣಯ್ಯನ ನಿರೀಕ್ಷೆ ಸುಳ್ಳಾಗಲಿಲ್ಲ.

ಹೈದರಾಲಿಯ ಸೇನೆ ಸಾವು-ನೋವುಗಳಲ್ಲಿ ಸಿಲುಕಿ, ಬೇಯುತ್ತಿರುವಾಗಲೇ ಒಂದು ದಿನ ಸಂಜೆ, ತನ್ನ ಡೇರೆಯ ಹೊರಗೆ ಕುಳಿತಿದ್ದ ಮಾನ್ವಿ ಶ್ರೀನಿವಾಸರಾಯ ಪಾಳಯದ ಮೇಲೆ ಸುತ್ತುತ್ತಿದ್ದ ಪಾರಿವಾಳವೊಂದನ್ನು ಕಂಡು ವಿಶಿಷ್ಟ ರೀತಿಯಲ್ಲಿ ಶಿಳ್ಳೆ ಹಾಕಿದ.

ಆ ಶಿಳ್ಳೆಯ ಸದ್ದನ್ನು ಕೇಳಿದ ಪಾರಿವಾಳ ಮೂರುನಾಲ್ಕು ಬಾರಿ ಆಕಾಶದಲ್ಲಿ ಸುತ್ತು ಹೊಡೆದು, ಕ್ರಮೇಣ ಕೆಳಗಿಳಿದು ಬಂದು, ಶಿಳ್ಳೆಹಾಕುತ್ತಿದ್ದ ಶ್ರೀನಿವಾಸರಾಯನ ಚಾಚಿದ ಮುಂಗೈಮೇಲೆ ಕುಳಿತುಕೊಂಡಿತು. ಮುಂಗೈಮೇಲೆ ಕುಳಿತ ಪಾರಿವಾಳವನ್ನು ಕಂಡು, ಅನಿರೀಕ್ಷಿತವಾಗಿ ಮಾಣಿಕ್ಯ ಸಿಕ್ಕಷ್ಟು ಸಂತೋಷದಿಂದ, ಅದನ್ನು ಬೊಗಸೆಯಲ್ಲಿ ಮೃದುವಾಗಿ ಹಿಡಿದು ಮುತ್ತಿಟ್ಟು, ಕತ್ತು ರೆಕ್ಕೆಗಳನ್ನು ಮಮತೆಯಿಂದ ಸವರಿ, ಬಳಿಕ ಅದರ ಕಾಲಿಗೆ ಕಟ್ಟಿದ ಸಣ್ಣ ಬಟ್ಟೆಯ ಚೀಲವನ್ನು ಎಚ್ಚರದಿಂದ ಬಿಚ್ಚಿಕೊಂಡು, ತನ್ನ ಡೇರೆಯೊಳಗೆ ಹೋಗಿ, ಅದರಲ್ಲಿದ್ದ ಪಾರಿವಾಳದ ಗೂಡಿನೊಳಗೆ ಅದನ್ನು ಬಿಟ್ಟು, ಬಟ್ಟೆಯ ಚೀಲದಲ್ಲಿದ್ದ ಕಾಗದವನ್ನು ತೆಗೆದು ಓದಿದ:

'ಪಶ್ಚಿಮಕ್ಕೆ ಸೀನೀರು ಹೊಂಡದ ಬಳಿ ಕೋಟೆ ಐಬು. ಹೊಂಡ ಹಿಡಿದರೆ ದುರ್ಗ ಸಿಕ್ಕಂತೆ. ಕುಡಿಯಲು ನೀರಿಲ್ಲದೆ ಗುತ್ತಿ ಕೋಟೆ ಕಥೆ ಆಗುತ್ತೆ. ಹಣದ ತೊಂದರೆ ಬಹಳ. ಅದಿಲ್ಲದೆ ಜನ ಒದಗುವುದಿಲ್ಲ. ಕೆಲಸ ಕಠಿಣ. ಪಳಗಿದ ಜನ, ಹಣ, ಅಫೀಮು ಬೇಕು.'

ಆ ಕಾಗದವನ್ನು ಓದಿಕೊಂಡ ಶ್ರೀನಿವಾಸರಾಯ, ಪೂರ್ಣಯ್ಯನ ಬಿಡಾರಕ್ಕೆ ಓಡಿದ. ಆತ ತಂದ ಕಾಗದವನ್ನು ಓದಿದ ಪೂರ್ಣಯ್ಯನಿಗೂ ಕತ್ತಲಲ್ಲಿ ತಡವರಿಸುತ್ತಿದ್ದವನಿಗೆ ಬೆಳಕು

ಕಂಡಹಾಗಾಗಿ, ಅದು ಹೈದರಾಲಿಯ ಪಾನಗೋಷ್ಠಿಯ ವೇಳೆ ಎಂದು ತಿಳಿದಿದ್ದರೂ, ಹೈದರಾಲಿಯನ್ನು ಕಾಣಲು ಹೋದ.

ಅರಮನೆಯ ಪ್ರತಿಕೃತಿಯಂತಿದ್ದ ತನ್ನ ಖಾಸಾ ಬಿಡಾರದಲ್ಲಿ, ದಾಸಿಯರು ತಂದಿತ್ತ ಪಾನೀಯವನ್ನು ಸೇವಿಸುತ್ತಾ, ನಡೆಯುತ್ತಿದ್ದ ನೃತ್ಯವನ್ನು ನೋಡುತ್ತಿದ್ದ ಹೈದರಾಲಿ, ವಿಶೇಷ ಅವಸರದ ಕಾರಣವಿಲ್ಲದೆ ಆ ಸಮಯದಲ್ಲಿ ಅಲ್ಲಿಗೆ ಪೂರ್ಣಯ್ಯ ಬರುವುದಿಲ್ಲವೆಂಬುದನ್ನು ಊಹಿಸಿ, ಬಾಯ ಬಳಿ ಎತ್ತಿದ ಪಾನೀಯದ ಬಟ್ಟಲನ್ನು ಹಾಗೇ ತಡೆಹಿಡಿದು –

"ನಾಚ್ ಬಂದ್ ಕರೋ"

- ಎಂದು ಚಾವಟಿಯಿಂದ ಹೊಡೆದಂತೆ ಹೇಳಿ, ಆತುರವಾಗಿ –

"ಏನು ಸುದ್ದಿ ಪೂರ್ಣಯ್ಯ?"

-ಎಂದು ಕೇಳಿದ.

"ನೀವು ಬಯಸುತ್ತಿದ್ದ ಹಾಗೆ ಆಕಾಶದಿಂದ ಅರಗಿಳಿ ಬಂದಿದೆ. ಆ ವಿಷಯ ಖಾವಂದರಲ್ಲಿ ಮಾತನಾಡಬೇಕು" – ಎಂದು ಹೇಳಿದ ಪೂರ್ಣಯ್ಯ.

ಆ ಮಾತು ಕೇಳಿದ ಹೈದರಾಲಿ, ಒಂದು ಕಡೆಯಲ್ಲಿ ಕುಳಿತಿದ್ದ ನರ್ತಕಿಯರ ಗುಂಪಿನ ನಾಯಕಿಗೆ –

"ಈ ಸೂಳೇರನ್ನೆಲ್ಲಾ ಇಲ್ಲಿಂದ ತೊಲಗಿಸಿಕೊಂಡು ಹೋಗು. ಮತ್ತೆ ಹುಕುಂ ಆಗೋವರೆಗೂ ಈ ಕಡೆ ಯಾರೂ ಬರಬಾರದು"

-ಎಂದು ಕರ್ಕಶವಾದ ಧ್ವನಿಯಲ್ಲಿ ಅಪ್ಪಣೆ ಮಾಡಿ, ನರ್ತಕಿಯರ ಗುಂಪೆಲ್ಲಾ ಅವಸರವಸರವಾಗಿ ಅಲ್ಲಿಂದ ಹೋದಬಳಿಕ ಪೂರ್ಣಯ್ಯನನ್ನು ಹತ್ತಿರ ಕರೆದು –

"ಕ್ಯಾ ಖಬರ್?" – ಎಂದು ಕೇಳಿದ.

ಪೂರ್ಣಯ್ಯ ಹೈದರಾಲಿಯ ಹತ್ತಿರ ಹೋಗಿ, ಆತನೊಬ್ಬನಿಗೆ ಮಾತ್ರ ಕೇಳಿಸುವಂತೆ ಪಾರಿವಾಳ ತಂದ ಸುದ್ದಿಯನ್ನು ತಿಳಿಸಿ –

"ಮುಂದಿನದು ನಿಮ್ಮ ಕೆಲಸ." - ಎಂದು ಹೇಳಿದ.

ಆ ಸುದ್ದಿಯನ್ನು ಕೇಳುತ್ತಿದ್ದ ಹಾಗೆ –

"ಬಹೂತ್ ದಿನ್ ಕೆ ಬಾರ್ ಏಕ್ ಖುಷ್ ಖಬರ್ ಸುನೆ. ನಸೀಬ್ ನನ್ನ ಕೈಬಿಡಲಿಲ್ಲ"

-ಎಂದು ಹೇಳಿ ಬಾಗಿಲ ಬಳಿ ಕಾಯುತ್ತಿದ್ದ ಸೈನಿಕನಿಗೆ –

"ಲಾಲಿಸಾಹೇಬ್, ಗುಲಾಂ ಅಲಿಖಾನ್, ಸಾಹೇಬ್‌ಜಾದೇ ಟೀಪುಸಾಹೇಬ್, ಹರಪನಹಳ್ಳಿ, ರಾಯದುರ್ಗದ ಪಾಳೆಯಗಾರರು ಎಲ್ಲರಿಗೂ ಹೇಗಿದ್ದರೆ ಹಾಗೆ ಬಂದು ಹಾಜರಾಗಬೇಕೆಂದು ಹೇಳು"

-ಎಂದು ಅಪ್ಪಣೆ ಮಾಡಿ ಓಡಿಸಿದ.

ಆ ಸುದ್ದಿ ಬಂದ ಸ್ವಲ್ಪ ಹೊತ್ತಿನಲ್ಲೇ ಹೈದರಾಲಿ ಕರೆಕಳಿಸಿದ ಸರ್ದಾರರೆಲ್ಲರೂ ಅವಸರ ಅವಸರವಾಗಿ ಬಂದು, ಎಲ್ಲರೂ ಬಂದಾದಬಳಿಕ ಹೈದರಾಲಿ, ಅವರಿಗೆ ಬೇಹುಪತ್ರದ ವಾರ್ತೆಯನ್ನು ತಿಳಿಸಿ –

"ಲಾಲಿಸಾಹೇಬ್, ರಾತ್ರೋರಾತ್ರಿ ಇಪ್ಪತ್ತು ಫಿರಂಗಿ, ಹತ್ತು ಸಾವಿರ ಕತ್ತಿ-ಖಡ್ಗದವರು, ಹನ್ನೆರಡು ಸಾವಿರ ಜನ ಬಂದೂಕಿನವರು ಈಗಿಂದೀಗಲೇ ಚೋಳಗುಡ್ಡದ ಬಳಿ ಜಮಾಯಿಸಿ, ಸರಿಯಾದ ಜಾಗ ನೋಡಿಕೊಂಡು ತೋಫು ಏರಿಸಿ ಸಿದ್ಧವಾಗಿರಬೇಕು. ಹಗಲಾಗುತ್ತಿದ್ದ ಹಾಗೇ ಏಕ್‌ದಂ ತೋಪು ಹಾರಿಸಿ, ಕಿಲ್ಲೆಗೆ ಲಗ್ಗೆ ಹಾಕಬೇಕು. ಯಾರಾದರೂ ಸೋತು ಸೇನೆಗೆ ಹಿಂದಕ್ಕೆ ಓಡಿಬಂದರೆ ಅವರನ್ನು ಗುಂಡಿಟ್ಟು ಹೊಡೆಯಿರಿ. ಲಡಾಯಿ ಶುರು ಆಗೋ ಹೊತ್ತಿಗೆ ನಾವೇ ಖುದ್ದಾಗಿ ಅಲ್ಲಿಗೆ ಬಂದು ನಿಮ್ಮ ದುರ್ದಮಿ ನೋಡುತ್ತೇವೆ. ಹತ್ತು ಸಾವಿರಕ್ಕೆ ಹತ್ತು ಸಾವಿರ ಸತ್ತರೂ ಸರಿಯೇ, ಅವರ ಹೆಣದ ಮೇಲೆ ಹತ್ತಿ ಕಿಲ್ಲೆ ಹಿಡಿಯಬೇಕು. ಕತ್ತಲಲ್ಲಿ, ಮೇಲುದುರ್ಗದವರಿಗೆ ಗೊತ್ತಾಗದ ಹಾಗೆ ಎಲ್ಲಾ ಜಟಾಪಟ್ಟು ಆಗಬೇಕು."

– ಎಂದು ಹುಕುಂ ಮಾಡಿದ.

ಹೈದರಾಲಿಯ ಅಪ್ಪಣೆ ಕೇಳಿದ ಸರ್ದಾರರು, ಪಾಳೇಗಾರರು ತಮ್ಮ ತಮ್ಮ ಪಾಲಿನ ಕರ್ತವ್ಯ ನಿರ್ವಹಿಸಲು ಹೊರಟುಹೋದರು.

ಅವರೆಲ್ಲರೂ ಹೋದಬಳಿಕ ಹೈದರಾಲಿ, ದಾಸಿಯನ್ನು ಕರೆದು ಪಾನೀಯ ತರಿಸಿಕೊಂಡು ಮನಸ್ಸಿನಕಣ್ಣಿನಿದಿರು ಗುತ್ತಿಕೋಟೆಯ ಮೇಲೆ 'ನೀರು, ನೀರು' ಎಂದು ಚೀರುತ್ತಿದ್ದ ದೃಶ್ಯವನ್ನು ಕಾಣುತ್ತಾ, ಆ ನೆನಪಿನೊಂದಿಗೆ ಮತ್ತಷ್ಟು ರುಚಿಯಾದ ಪಾನೀಯವನ್ನು ಕುಡಿಯುತ್ತಾ-

"ಕುಡಿಯಲು ನೀರಿಲ್ಲದೆ ಸಾಯಲಿ, ಈ ಬೆಟ್ಟಕ್ಕೆ ಹುಟ್ಟಿದ ಜನ."

-ಎಂದು ಶಪಿಸಿದ.

* * *

ಉಚ್ಚಂಗಮ್ಮನಹೊಂಡ - ಸೀನೀರು ಹೊಂಡ – ಎಂದು ಜನ ಕರೆಯುವ ಜಲಾಶಯ, ಬೆಟ್ಟದ ಮೇಲೆ ಗೋಪಾಲಸ್ವಾಮಿಯಹೊಂಡ ತುಂಬಿ, ಹೆಚ್ಚಾಗಿ ನೀರು ಹರಿದು. ತಗ್ಗಿನಲ್ಲಿಯೇ

ನಿಂತು, ಚಿತ್ರದುರ್ಗದ ಕೋಟೆಯ ಉತ್ತರಭಾಗಕ್ಕೆ ಪ್ರಕೃತಿಯೇ ನಿರ್ಮಿಸಿದ ಅಗಳತಿಯಾಗಿತ್ತು. ದುರ್ಗದ ಪಶ್ಚಿಮದಲ್ಲಿ ಹುಲಿಗೊಂದಿಯಹಳ್ಳದಲ್ಲಿ ಹರಿವ ನೀರೂ ಅದಕ್ಕೆ ಬಂದು ಸೇರಿ, ಆ ಅಗಳತಿಯಲ್ಲಿ ಎಂದೂ ನೀರು ಬತ್ತದಂತೆ ಮಾಡಿತ್ತು. ಕೆಳದುರ್ಗದ ಬುರುಜಿನಹಟ್ಟಿ, ಮುಚ್ಚಿಗರ ಕೇರಿ, ಸಿದ್ಧಯ್ಯನಬಾಗಿಲುಬೀದಿ, ಅದರ ಆಸುಪಾಸಿನ ಜನ ತಮ್ಮ ನಿತ್ಯ ಜೀವನಕ್ಕೆ ಬೇಕಾದ ಕುಡಿಯುವ ನೀರನ್ನು ಹತ್ತಿರವಿದ್ದವರು ಕೊಡಗಳಲ್ಲಿ, ದೂರವಿದ್ದವರು ಅಡ್ಡೆ-ಗಾಡಿಗಳಲ್ಲಿ ಅಲ್ಲಿಂದ ಕೊಂಡೊಯ್ಯುತ್ತಿದ್ದರು. ಆ ಹೊಂಡದಲ್ಲಿ ಹೆಚ್ಚಾದ ನೀರು ಭೂಗರ್ಭದಲ್ಲಿ ಅಳವಡಿಸಿದ ಮಾರ್ಗವಾಗಿ ಹರಿದು, ಭರಮಣ್ಣನಾಯಕರ ಕಾಲದಲ್ಲಿ ಕೋಟೆಯಾಚೆ ಕಟ್ಟಿಸಿದ 'ಸಂತೆಹೊಂಡ'ದಲ್ಲಿ ಶೇಖರವಾಗುತ್ತಿತ್ತು.

ಉಚ್ಚಂಗಮ್ಮನ ಹೊಂಡಕ್ಕೆ ಕಲ್ಲುಪಾವಟಿಗೆಗಳನ್ನು ಕಟ್ಟಿಸಿ, ಜನ ಸುಲಭವಾಗಿ ಇಳಿದು ನೀರು ತೆಗೆದುಕೊಂಡು ಹೋಗಲು ವ್ಯವಸ್ಥೆ ಮಾಡಿದ್ದಂತೆಯೇ, ಅದರ ಪಕ್ಕದಲ್ಲಿ ಕುಲ ದೇವತೆಯ ಹೆಸರನ್ನು ಧರಿಸಿದ, ಸುಂದರವೂ, ದುರ್ಗಮವೂ ಆದ ಉಚ್ಚಂಗಮ್ಮನ ಹುಲಿಬಾಗಿಲಿದ್ದು ಹೊಂಡಕ್ಕೆ ಹೊಂದಿಕೊಂಡಂತೆಯೇ ಉದ್ದಕ್ಕೂ ಕೋಟೆಯ ಗೋಡೆಯನ್ನು ಕಟ್ಟಿದ್ದರು. ಆ ಆಗಳತಿಯ ನೀರು ಜನ ಬಳಸುವ ನೀರಾದ್ದರಿಂದ, ಅಲ್ಲಿ ಉಳಿದ ಆಗಳತಿಗಳಲ್ಲಿ ಮಾಡಿದಂತೆ ರಣಸಿದ್ಧತೆ ಮಾಡಿರಲಿಲ್ಲ. ಹೊಂಡದ ಒಂದು ಬದಿಯಲ್ಲಿ ಕೋಟೆ, ಮತ್ತೊಂದು ಬದಿಯಲ್ಲಿ ಎತ್ತರವಾದ ಮಣ್ಣಿನ ಏರಿ ಕಂದಕಕ್ಕೆ ಕಾವಲಾಗಿತ್ತು.

ದುರ್ಗದ ಪಶ್ಚಿಮಭಾಗದಲ್ಲಿ ದುರ್ಗಕ್ಕೆ ರಕ್ಷಣೆಯಾಗಿ ಕಿರುಬನಕಲ್ಲು, ಅಂಕಲಿಮಠದ ಬೆಟ್ಟ, ಧವಳಪ್ಪನ ಗುಡ್ಡಗಳ ರಕ್ಷಣೆಯಿದ್ದುದರಿಂದ ಆ ಭಾಗದಲ್ಲಿಯ ಕೋಟೆ ಉಳಿದ ಕಡೆಯ ಕೋಟೆಯಷ್ಟು ಬಿಗಿಯಾಗಿರಲಿಲ್ಲ. ದುರ್ಗದ ಜನಕ್ಕೆ ಅಗತ್ಯವಾದ ಸೀನೀರುಹೊಂಡವನ್ನು ರಕ್ಷಿಸಲು ಅದರ ಬೆಂಬದಿಯಲ್ಲೇ ಇದ್ದ ಶಿರಿಯಪ್ಪನಬತೇರಿ, ಬಸವನ ಬತೇರಿಗಳ ಮೇಲೆ ತೋಫನ್ನಿರಿಸಿ, ಅದರ ರಕ್ಷಣೆಗೆ ಅಗತ್ಯವಾದಷ್ಟು ಸೇನೆಯನ್ನಿಟ್ಟಿದ್ದರು. ಕಂದಕದ ಹೊರಸುತ್ತಿನ ಏರಿಕೋಟೆ - ಹೊಳಲಕೆರೆಯ ಕಡೆಯಿಂದ ಬರುವ ರಾಜಮಾರ್ಗಕ್ಕೆ ಕಾಣದಷ್ಟು ಎತ್ತರವಾಗಿದ್ದುದರಿಂದ, ಕೋಟೆಯನ್ನು ಚೆನ್ನಾಗಿ ಬಲ್ಲವರಿಗಲ್ಲದೆ, ಉಳಿದವರಿಗೆ 'ಆ ಕಡೆಯ ಕೋಟೆ, ಕಂದಕ ದುರ್ಗದ ಜೀವನಕ್ಕೆ ಜೀವನಾಡಿ' ಎಂದು ತಿಳಿಯುವುದು ಸಾಧ್ಯವಿರಲಿಲ್ಲ. ಎಂತಲೇ ಕೋಟೆಯ ಪೂರ್ವ, ಉತ್ತರ ಭಾಗಗಳಿಗಿದ್ದಷ್ಟು ರಕ್ಷಣಾವ್ಯವಸ್ಥೆ ಇತ್ತಕಡೆಗಿರಲಿಲ್ಲ. ಈಗ ದುರ್ಗದೊಳಗಿದ್ದ ಬೇಹುಗಾರರಿಂದಾಗಿ ಈ ದುರ್ಬಲಸ್ಥಳದ ವಿಷಯ ಹೈದರಾಲಿಗೆ ತಿಳಿದು, ಅವನ ಹಸಿದ ಹುಲಿಗಣ್ಣು ಅತ್ತ ತಿರುಗಿತು.

ಹೈದರಾಲಿಯ ಹುಕುಂನಂತೆ ಲಾಲಿಸಾಹೇಬ, ರಾತ್ರೋರಾತ್ರಿ ತನ್ನ ಫಿರಂಗಿಯ ತುಕಡಿಯನ್ನು ಕತ್ತಲೆಯಲ್ಲೇ ಅತ್ತಕಡೆ ನಡೆಸಿ, ದುರ್ಗದ ಆಗ್ನೆಯ ಭಾಗದಲ್ಲಿ ಹುಲಿಗೊಂದಿಯ ಹಳ್ಳದ ದಂಡೆಯ ಬಳಿಯಿದ್ದ ಬರಗೇರಮ್ಮನ ಗುಡಿಯಮೇಲೆ ಹತ್ತು ತೋಪುಗಳನ್ನು ಏರಿಸಿ, ಅದರ ಇಬ್ಬದಿಯಲ್ಲೂ ಮೊಹರ್ಚೆಯನ್ನು ಕಟ್ಟಿಸಿ, ಮತ್ತಷ್ಟು ತೋಪುಗಳನ್ನು ಮದ್ದು ಗುಂಡು ತುಂಬಿ ಸಿದ್ಧವಾಗಿರಿಸಿ, ಹಗಲಾಗುವುದನ್ನೇ ಕಾದುನಿಂತ. ಅವನ ಆ ತುಕಡಿಯ ಹಿಂದೆ ಚೋಳಘಟ್ಟದ ಆಸರೆ ಪಡೆದು ಹತ್ತು ಸಾವಿರ ಜನರ ಸೇನೆ ದಾಳಿಗೆ ಸಿದ್ಧವಾಗಿ ನಿಂತಿತು.

ಇನ್ನೂ ಹಗಲಾಗಲು ಅಷ್ಟು ಹೊತ್ತಿದೆ ಎನ್ನುವಾಗಲೇ, ಮಿನುಗುತ್ತಿದ್ದ ನಕ್ಷತ್ರಗಳು ಕಾಣದಂತಾಗಿ ಆಕಾಶದಲ್ಲಿ ಕಟ್ಟಿದ ಕತ್ತಲು ಕೊಂಚ ತಿಳಿಯಾಗುತ್ತಿದ್ದಂತೆಯೇ ಲಾಲಿ ಕಾಯುತ್ತಿದ್ದ ಗೋಲಂದಾಜರಿಗೆ ತೋಪುಗಳನ್ನು ಉಡಾಯಿಸಲು ಅಪ್ಪಣೆ ನೀಡಿದ.

ಏಕಕಾಲಕ್ಕೆ ಹಾರಿಸಿದ ತೋಫಿನ ಹೊಡೆತಕ್ಕೆ ಕಂದಕದ ಮಣ್ಣಿನ ಏರಿಯು ಅಲ್ಲಲ್ಲಿ ಕುಸಿದು ಬಿದ್ದ ಹಾಗೇ, ಇನ್ನೂ ಕತ್ತಲು ಕವಿದಿದ್ದ ಗುಡ್ಡದ ಬಂಡೆಗಳು, ಹೈದರನ ಸೇನೆಯವರು ಹೊತ್ತಿಸಿದ ಮತಾಪುಗಳ ಬೆಳಕಿನಲ್ಲಿ ಬಗೆಬಗೆಯ ಲೋಹವರ್ಣದಿಂದ ಹೊಳೆದು, ಕರಗುತ್ತಿದ್ದ ಕತ್ತಲೆಯನ್ನು ತೋಫಿನ ಹೊಗೆ ಮತ್ತೆ ದಟ್ಟವಾಗಿಸಿ, ಏಕಕಾಲಕ್ಕೆ ಬಂದೂಕುಗಳನ್ನು ಉಡಾಯಿಸುತ್ತಾ, 'ದೀನ್', 'ದೀನ್' ಎಂದು ಕೂಗುತ್ತಾ ಏರಿಯ ಸಂದುಗಳಿಂದ ನುಗ್ಗಿ, ಅಷ್ಟೇನೂ ಆಳವಾಗಿರದ ಕಂದಕದಲ್ಲಿ ಈಸುಬಿದ್ದು ಕೋಟೆಗೆ ಲಗ್ಗೆ ಹಾಕಿದರು.

ಅತ್ತಕಡೆಯಿಂದ ಸೇನೆಯನ್ನೇ ನಿರೀಕ್ಷಿಸದಿದ್ದ ಚಿತ್ರದುರ್ಗದ ಸೇನೆ, ಕೋಟೆಗೆ ಹಲ್ಲಾ ಹಾಕಲು ಬಂದವರ ಮೇಲೆ ಕೋವಿಗಳನ್ನು ಹಾರಿಸಿ, ಕಾದ ಮರಳು, ಕುದಿಯುವ ಅಂಬಲಿಗಳನ್ನು ಸುರಿದು, ನೂಲೇಣಿ ಹಾಕಿ, ಹತ್ತಲೆತ್ನಿಸಿದವರನ್ನು ಕಡಿದು ಹೋರಾಡಿದರು.

ಇತ್ತ ಕಡೆ - ಸಮರಸನ್ನದ್ಧರಾದ ಹೈದರಾಲಿಯ ಭಾರಿ ಸೇನೆ –

ಅತ್ತ - ಅನಿರೀಕ್ಷಿತ ದಾಳಿಯನ್ನೆದುರಿಸಿದ ದುರ್ಗದ ಅಲ್ಪಸೇನೆ –

-ಎರಡರ ನಡುವೆ ಒಂದೆರಡು ತಾಸುಗಳ ಪರ್ಯಂತ ಜಿದ್ದಿನ ಯುದ್ಧ ನಡೆಯಿತು.

ಅತ್ತಕಡೆಯಿಂದ ತೋಫಿನ ಸದ್ದು ಕೇಳುತ್ತಿದ್ದಂತೆಯೇ ದುರ್ಗದ ದಳವಾಯಿಗಳಿಗೆ, ಮದಕರಿನಾಯಕನಿಗೆ ದುರ್ಗಕ್ಕೊದಗಿದ ಆಪತ್ತಿನ ಅರಿವಾಗಿ –

"ಅತ್ತಕಡೆ ನಮ್ಮ ಕೋಟೆ ಬಲವಿಲ್ಲ. ಗೆದ್ದರೆ ಜನಬಲದಿಂದ, ನಮ್ಮ ಪೌರುಷದಿಂದ ಗೆಲ್ಲಬೇಕು. ಹೊಂಡ ಹೋದರೆ ಕೋಟೆ ಉಳಿಯುವುದಿಲ್ಲ. ಬದುಕುವಾಸೆ ಇರುವವರು ಹಿಂದೆ ನಿಲ್ಲಿ, ಉಳಿದವರು ನಮ್ಮೊಂದಿಗೆ ಹೊರಡಿ"

-ಎಂದು ದಳವಾಯಿಗಳಿಗೆ ಅಪ್ಪಣೆ ಮಾಡಿದವನೇ ಮದಕರಿನಾಯಕ ತನ್ನ ಖಾಸಾ ಬೇಡಪಡೆ. ತನ್ನ ರಕ್ಷಣೆಯ ಮೀಸಲು ಹೊತ್ತ ಪುರುಭಯ್ಯಾ ಜನರ ಪಡೆಯೊಂದಿಗೆ ಹೊರಟು, ಬಸವನಬತೇರಿಯ ಮಾರ್ಗವಾಗಿ ಕೋಟೆಯಿಂದ ಕೆಳಗಿಳಿದು, ಸಿಹಿನೀರು ಹೊಂಡದ ಸಮೀಪದಲ್ಲಿದ್ದ ವ್ಯಾಸರಾಯರ ಮಠದ ಮೇಲೆ ದುರ್ಗದ ಧ್ವಜವನ್ನೇರಿಸಿ, ಖಡ್ಗ ಧರಿಸಿ ನಿಂತ.

ನಾಯಕರೊಂದಿಗೆ ಬಂದ ಪುರುಭಯ್ಯಾಜನರ ಪಡೆ, ಖಾಸಾಬೇಡಪಡ, ಕೋಟೆಯ ಬಾಗಿಲು ದಾಟಿ, ಮಣ್ಣಿನೇರಿಯನ್ನೇರಿ, ಅತ್ತ ನುಗ್ಗುತ್ತಿದ್ದ ಹೈದರನ ಸೇನೆಯ ಮೇಲೆ ಬಿದ್ದು ಕೊಚ್ಚಲಾರಂಭಿಸಿದವು. ಮತ್ತೊಂದು ಕಡೆ - ಹನುಮನ ಬಾಗಿಲು ಕಡೆಯಿಂದ ನುಗ್ಗಿ ಬಂದ ದುರ್ಗದಸೇನೆ ಫಲ್ಗುಣೇಶ್ವರನ ಗುಡಿಯ ಬಳಿ ಕೋಟೆಗೆ ಪ್ರತಿಕೋಟೆಯಾಗಿ ನಿಂತು, ಬಿರುಕುಬಿಟ್ಟ ಕಿಲ್ಲೆಯನ್ನೇರಿ ಬರುವ ಶತ್ರುಸೇನೆಯ ತಲೆ ತರಿಯಲಾರಂಭಿಸಿತು.

ಇತ್ತಕಡೆ ಮದಕರಿನಾಯಕ ವ್ಯಾಸರಾಯಮಠದ ಮೇಲೆ ನಿಂತು, ಕೋವಿ ಹಾರಿಸುತ್ತಾ, ತನ್ನ ಸೈನಿಕರ ಹೃದಯದಲ್ಲಿ ಧೈರ್ಯ ತುಂಬುತ್ತಿರುವಾಗ, ಅತ್ತ ಹೈದರಾಲಿಯೂ ಮತ್ತಷ್ಟು ಸೇನೆಯೊಂದಿಗೆ ಬಂದು, ತನ್ನ ಕಡೆಯವರನ್ನು ಹುರಿದುಂಬಿಸಲು ಯತ್ನಿಸಿದ.

ಶತ್ರುಸೈನ್ಯದ ಮಧ್ಯದಲ್ಲಿ ಹೈದರಾಲಿಯ ಖಾಸಾ ಹಸಿರು ನಿಶಾನೆಯನ್ನು ಕಾಣುತ್ತಿದ್ದಂತೆಯೇ ದುರ್ಗದ ಸೈನಿಕರಲ್ಲಿ ಮತ್ತಷ್ಟು ರಣೋತ್ಸಾಹವೇರಿ, ಇಮ್ಮಡಿ ಹುರುಪಿನಿಂದ ಶತ್ರುಗಳನ್ನು ಸದೆಬಡಿಯಲಾರಂಭಿಸಿದರು. ಏರಿದ ಬಿಸಿಲಿನಲ್ಲಿ ಸಾವಿರಾರು ಖಡ್ಗಗಳು ಮಿಂಚುಗಳಂತೆ ಹೊಳೆಯುತ್ತಿದ್ದವು. ಕೋವಿಗಳ ಗುಂಡಿನ ಚಟಪಟ ಸದ್ದು, ತೋಫಿನ ಘರ್ಜನೆ, ಸೈನಿಕರ ರಣಕೇಕೆ - ದುರ್ಗದ ಬಂಡೆಗಳನ್ನು ಘಟ್ಟಿಸಿ, ಪುಟನೆಗೆದು ಚೋಳಘಟ್ಟವನ್ನು ಘಟ್ಟಿಸಿ, ಬೆಟ್ಟಗಳೆರಡರ ನಡುವಿನ ಬಯಲು - ಹೋರಾಡುವ ಕುದುರೆ, ಕಾಲಾಳುಗಳಿಂದ ಕಿಕ್ಕಿರಿದು ಬಯಲೇ ಎದ್ದು ನೆತ್ತರ ಹೊಗೆ ಕಾರುತ್ತಾ ಕುದಿಯುತ್ತಿರುವಂತೆ ಕಾಣಿಸಿತು.

'ಆದದ್ದಾಗಲಿ – ಇಂದು ದುರ್ಗವನ್ನು ಗೆಲ್ಲಲೇಬೇಕು' ಎಂಬ ಹಟತೊಟ್ಟ ಹೈದರಾಲಿಯ ಸೇನೆ, ಮುರಿದ ಕೋಟೆಯನ್ನೇರಿ, ಆಳವಿಲ್ಲದ ಕಂದಕವನ್ನೂ ಈಸಿ, ಸಿಹಿನೀರುಹೊಂಡವನ್ನು ರಕ್ತದ ಹೊಳೆಯನ್ನಾಗಿ ಮಾಡಿ, ದುರ್ಗದ ಸೈನಿಕರು ಕಡಿದು ಕೆಡವಿದ ತಮ್ಮವರ ಹೆಣಗಳನ್ನೇ ಮೆಟ್ಟಲಾಗಿ ಮಾಡಿಕೊಂಡು ಕೋಟೆಯನ್ನು ಪ್ರವೇಶಿಸಿ, ಶಿರಿಯಪ್ಪನ ಬತೇರಿಯನ್ನು ಹಿಡಿದು ಅದರ ಮೇಲೆ ಹೈದರಾಲಿಯ ಝಂಡಾ ಏರಿಸಿ, ಜಯಘೋಷ ಕೂಗಿದರು.

ದುರ್ಗದ ಬತೇರಿಯ ಮೇಲೆ ಹೈದರಾಲಿಯ ಧ್ವಜ –

ಅದನ್ನು ನೋಡುತ್ತಿದ್ದ ಹಾಗೇ ಮದಕರಿನಾಯಕನಿಗೆ ಎಲ್ಲಿಲ್ಲದ ಕ್ರೋಧಾವೇಶ ಮೈತುಂಬಿ, ಕೈಯಲ್ಲಿದ್ದ ಕೋವಿಯನ್ನು ಬಿಸುಟು, ಪರಿಘಾಯುಧವನ್ನು ಹಿಡಿದು –

"ಆ ಧ್ವಜ ಮುರಿಯಬೇಕು, ಇಲ್ಲವೇ - ನಮ್ಮ ತಲೆ ಬೀಳಬೇಕು, ಇವತ್ತು ಉಳಿದಿರುವುದಿಷ್ಟೆ"

- ಎಂದು ಹೇಳಿ, ವ್ಯಾಸರಾಯರಮಠದ ಮೇಲಿನಿಂದ ಧುಮುಕಿ, ಕೆಣಕಿದ ವನವರಾಹದಂತೆ ಅತ್ತ ನುಗ್ಗಿದ.

ನಾಯಕರೇ ಮುನ್ನುಗ್ಗಿದುದನ್ನು ಕಂಡ ಪುರುಭಯ್ಯಾ ಜನ, ಖಾಸಾಬೇಡಪಡೆ, ಹಜರತ್ತು ಮುಕ್ಕಣ್ಣ ಭಾಲೇದವರು, ಖಾಸಾಬಿರಾದಾರಿಯವರು-

"ನಾವು ಬದುಕಿದ್ದು ನಿಮ್ಮನ್ನು ಶತ್ರುವಿಗೆ ಬಿಟ್ಟುಕೊಡುವುದಿಲ್ಲ. ಶತ್ರುಸೇನೆ ಎಷ್ಟೇ ಇದ್ದರೂ ಸರಿಯೇ, ಅವರನ್ನು ಹೊಡೆದು ನವಾಬನ ನಿಶಾನಿಗೆ ಉರಿಹಚ್ಚಿ ಬರದಿದ್ದರೆ ನಮ್ಮ ಕೈಗೆ ಬಳೆತೊಡಿಸಿ, ನಾಯಿದೊಣೆಯಲ್ಲಿ ಅನ್ನ ಹಾಕಿಸಿ. ಖುದ್ ಹೈದರಾಲಿಯೇ ಬಂದರೂ, ಅವನ ಹೆಣ ತೆಗೆದುಕೊಂಡು ಬಂದು ನಿಮ್ಮ ಮುಖ ತೋರಿಸುತ್ತೇವೆ"

- ಎಂದು ಪಣತೊಟ್ಟು, ಐದುಸಾವಿರ ಮಂದಿ ಒಂದೇ ಬಾರಿಗೆ ರಣಕೇಕೆ ಹಾಕಿ, ವೀರಾವೇಶದಿಂದ ಶತ್ರುಸೇನೆಯತ್ತ ನುಗ್ಗಿದರು- ತೋಳಗಳ ಹಿಂದಿನಂತೆ.

ಅವರ ಹಿಂದೆ ಮದಕರಿನಾಯಕನೂ ಹರಿಣಗಳ ಹಿಂಡಿನ ಮೇಲೆ ಬೀಳುವ ಚಿರತೆಯಂತೆ ರಣಘೋಷ ಕೂಗುತ್ತಾ ಮುನ್ನುಗ್ಗಿದ; ಹತ್ತುಕಡೆ ಹೊತ್ತಿ ಉರಿನಾಲಗೆ ಚಾಚಿದ ಮಾರಿಕ್ರೋಧದಂತೆ ಎಂಟಲಗುಗಳ ಪರಿಘಾಯುಧವನ್ನು ಚಕ್ರಾಕಾರವಾಗಿ ತಿರುಗಿಸುತ್ತಾ.

ಬಂಡೆಗಳಿಂದ ಬಂಡೆಗಳಿಗೆ ಜಿಗಿದು, ನುಸುಳುದಾರಿಯಲ್ಲಿ ಮುಂಗಾರು ಮಳೆನೀರಿನಂತೆ ನುಗ್ಗಿ, ಶಿರಿಯಪ್ಪನ ಬತೇರಿಯತ್ತ ಧಾವಿಸಿ, ಒಬ್ಬೊಬ್ಬರೂ ಹತ್ತು ಮಂದಿ ಸೈನಿಕರಂತೆ ಅಡ್ಡವಾದವರ ಕೈಮೈಮುಖ ನೋಡದೆ ಕೊಚ್ಚುತ್ತಾ, ಕೇಳಿದ ಕಿವಿ ಕಿವುಡಾಗಿ, ಎದೆಯ ಶಕ್ತಿ ಉಡುಗಿ, ತೋಳು ತೊಯ್ದ ಬಟ್ಟೆಯಂತೆ ಜೋತುಬಿದ್ದು, ಕೋಟೆ ಗೆಲ್ಲಲು ಹೊರಟ ಹೈದರಾಲಿಯ ಸೇನೆ, ಅಪರಿಚಿತವಾದ ನೂರಾರು ಬಂಡೆಗಳ ಸಂದಿನಲ್ಲಿ ಸಿಕ್ಕು ನುಗ್ಗು ನುರಿಯಾಯಿತು. ನೂಲೇಣಿ ಹಾಕಿ ಕೋಟೆ ಹತ್ತಲೆತ್ನಿಸುತ್ತಿದ್ದವರು ಮೇಲಿನಿಂದ ಉರುಳಿದ ಬಂಡೆಗಳ ಅಡಿಯಲ್ಲಿ ಸಿಕ್ಕಿ ಪುಡಿಪುಡಿಯಾದರು.

ಹೈದರಾಲಿಯ ಕಡೆಯವರಿಗೆ ದುರ್ಗವನ್ನು ಗೆಲ್ಲುವ ಆಸೆ –

ದುರ್ಗದವರಿಗೆ ಮೇಲೇರಿ ಬಂದ ಒಬ್ಬೊಬ್ಬರನ್ನೂ ಜೀವಸಹಿತ ಉಳಿಸಬಾರದೆಂಬ ರೊಚ್ಚು –

ಹಾಗೆ ಒಂದೆರಡು ತಾಸಾಗುವುದರೊಳಗಾಗಿ, ನಾಯಕರ ಖಾಸಾಬೇಡಪಡೆ, ಪುರುಭಯ್ಯಾಜನರ ಪಡೆ ಎದುರಿನ ಶತ್ರುವಿನ ವಿನಾ ಅಕ್ಕ ಪಕ್ಕದಲ್ಲಿ ಸಾಯುತ್ತಿದ್ದವರನ್ನೂ

ನೋಡದೆ, ನವಾಬನ ಸೈನಿಕರನ್ನು ಸಿಕ್ಕಲ್ಲಿ ತರಿದಟ್ಟಿ, ಗುಂಪುಗುಂಪಾಗಿ ಬಂದವರ ಮೇಲೆ ಬಂಡೆಗಲ್ಲುರುಳಿಸಿ, ಏರಿ ಬರುವ ಸಂದುಗಳಿಗೆ ಬಂಡೆಗಳನ್ನು ಹೊರಳಿಸಿ ಅಡ್ಡಗಟ್ಟಿ, ಮುಂದೊತ್ತಿಬರುವ ನವಾಬನ ಸೇನೆ ಮುಂದೆ ಏರುವ-ಹಿಂದೆ ಸರಿಯುವ ದಾರಿಗಾಣದೆ ಕಂಗೆಟ್ಟು ದಿಕ್ಕಾಪಾಲಾಗಿ ಚೆದರಿ, ಕೋಟೆಯನ್ನು ಏರಿಬರುತ್ತಿದ್ದವರು ಹಿಂದೆ ಓಡಲು ಯತ್ನಿಸಿದರು.

ಸುಮಾರು ಅರ್ಧತಾಸು ಕಾಲ ಶಿರಿಯಪ್ಪನಬತೇರಿಯ ಮೇಲೆ ಹಾರಿದ ಹೈದರಾಲಿಯ ಬಾವುಟ ಧಗ್ಗನೆ ಹೊತ್ತಿ ಉರಿದು, ಹೊಗೆಯಾಗಿ ಕರಗಿ, ಆದರೆಡೆಯಲ್ಲಿಯೇ ದುರ್ಗದ ಹನುಮದ್ಗರುಡಧ್ವಜ ಗರಿಬಿಚ್ಚಿ ಹಾರಾಡಿತು.

ದುರ್ಗದ ಸೇನೆಯ ಆ ಉನ್ಮತ್ತ ಪ್ರತ್ಯಾಘಾತವನ್ನು ತಡೆಯಲಾಗದೆ ಜೀವ ಉಳಿಸಿಕೊಂಡು ತಮ್ಮ ಪಾಳಯದತ್ತ ಓಡಿಬರುತ್ತಿದ್ದ ಸೈನಿಕರನ್ನು ನವಾಬನ ಸೈನಿಕರೇ ಗುಂಡಿಟ್ಟು ಕೊಂದು, ಅವರಲ್ಲಿ ಮತ್ತೆ ಉತ್ಸಾಹ ಮೂಡಿಸಲು ಯತ್ನಿಸಿದರು.

ಸೋತವರನ್ನು ಓಡಲು ಬಿಡದೆ ಅವರ ಬೆನ್ನು ಹತ್ತಿ ಕಡಿದು, ಬರಗೇರಮ್ಮನ ಗುಡಿಯ ಮೇಲೆ ಏರಿಸಿದ ನವಾಬನ ತೋಪುಗಳನ್ನು ಕಿಕ್ಕಿರಿದು ನೆರೆದ ಅವನ ಸೇನೆಯತ್ತಲೇ ತಿರುಗಿಸಿ ಉಡಾಯಿಸಿದರು – ಪುರುಭಯ್ಯಾ ಜನ. ಆ ತೋಫಿನೇಟಿಗೆ ಹೈದರಾಲಿಯ ಸೇನೆ ತತ್ತರಿಸಿ ಬಿರುಗಾಳಿಗೆ ಸಿಕ್ಕ ತರಗೆಲೆಯಂತೆ ದಿಕ್ಕುದಿಕ್ಕಿಗೆ ಚೆದರಿಹೋಯಿತು.

ಯುದ್ಧ ತನ್ನತ್ತಲೇ ತಿರುಗಿದುದನ್ನು ಕಂಡ ನವಾಬ ರೋಷ, ನಿರಾಶೆಯಿಂದ ತಲೆಯ ಮೇಲಿದ್ದ ಪಗಡಿಯನ್ನು ನೆಲಕ್ಕೆ ಬಿಸುಟು, ಹತ್ತಿರದಲ್ಲಿದ್ದ ಹರಪನಹಳ್ಳಿಯ ಪಾಳಯಗಾರ ಬಸಪ್ಪನಾಯಕನನ್ನು ಸುಡುವಂತೆ ನೋಡುತ್ತಾ-

"ನಾಮರ್ದಾ ಜನ - ನಿಮ್ಮನ್ನು ಗಂಡು ಅಂತ ಹಡೆದವರು ಯಾರು ? ನಿಮ್ಮನ್ನು ನಂಬಿ ನಮ್ಮ ಫೌಜ್‌ನ ಇಜ್ಜತ್ ದುರ್ಗದ ಬಯಲಿನಲ್ಲಿ ಹುಲ್ಲುಕಡ್ಡಿಗೆ ಹರಾಜಾಗಿ ಹೋಯಿತು. ನೀವಿದ್ದರೂ ಒಂದೇ - ಸತ್ತರೂ ಒಂದೇ. ನಿಮ್ಮ ಮಾತು ನಂಬಿ ಮದಕರಿಯ ದ್ವೇಷ ಕಟ್ಟಿಕೊಂಡು ನಾವು ಬೇವಕೂಫ್ ಆದೆವು'

-ಎಂದು ಹೇಳಿ, ಶಿರಿಯಪ್ಪನ ಬತೇರಿಯ ಮೇಲೆ ಹಾರುತ್ತಿದ್ದ ಹನುಮದ್ಗರುಡಧ್ವಜದ ಬಳಿ, ರಕ್ತಸಿಕ್ತ, ವಸ್ತ್ರಗಳನ್ನು ಧರಿಸಿ, ಸಂಜೆಯ ರಕ್ತವರ್ಣದ ಮುಗಿಲಿಗೆ ಅಡ್ಡವಾಗಿ, ಕೆಂಪು ಬಣ್ಣದ ಯೋಧವಿಗ್ರಹದಂತೆ ನಿಂತಿದ್ದ ಮದಕರಿನಾಯಕನನ್ನು ನೋಡಿ ಹೇಳಿದ –

"ನೀನು ನನ್ನ ದುಷ್ಮನ್ ಆದರೂ ನಿನ್ನ ಮರ್ದುಮಿಗೆ ನನ್ನ ಸಲಾಂ."

ಆ ಮಾತು ತನಗೆ ಕೇಳಿಸಿತು ಎಂಬಂತೆ ಮದಕರಿನಾಯಕ ತನ್ನ ಕೈಯಲ್ಲಿದ್ದ ಪರಿಘಾಯುಧವನ್ನು ಹಿಡಿದು ಬೀಸಿದ.

ಅದರೊಂದಿಗೇ ತನ್ನೊಂದಿಗಿದ್ದ ದಳವಾಯಿಗಳಿಗೆ ಹೇಳಿದ –

"ಇವತ್ತಿನ ಲಡಾಯಿನಲ್ಲಿ ಕೋಟೆ ಎಲ್ಲೆಲ್ಲಿ ಶಿಥಿಲವಾಗಿದೆಯೋ ಅದನ್ನೆಲ್ಲಾ ಸಾವಿರಾರು ಕಾಮಾಟಿಗರನ್ನು ಬಿಟ್ಟು ಕಟ್ಟಿಸಬೇಕು. ಹೊಂಡದಲ್ಲಿ ಬಿದ್ದ ಹೆಣಗಳನ್ನು ತೆಗೆಸಬೇಕು. ಹೆಣ, ರಕ್ತ ಬಿದ್ದ ನೀರು ಮತ್ತೆ ಶುದ್ಧವಾಗುವವರೆಗೆ ಈ ಕಡೆಯ ಜನಕ್ಕೆ ಮೇಲುಬೆಟ್ಟದ ಹೊಂಡಗಳಿಂದ, ರಾಮದೇವರ ಒಡ್ಡಿನಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಿ. ಇತಃಪರ - ಇತ್ತ ಕಡೆ ನಮ್ಮ ಜನ ಬೇಹುಷಾರಾಗಿರಬಾರದು. ದೇವರ ದಯೆ - ಇವತ್ತು ನಮಗೆ ಗೆಲುವಾಯಿತು. ಆದರೆ ಅದೃಷ್ಟ ಯಾರಿಗೂ ಶಾಶ್ವತವಲ್ಲ. ನಮ್ಮ ಹುಷಾರಿನಲ್ಲಿ ನಾವಿರಬೇಕು."

ಹಾಗೇ ಆ ರಾತ್ರಿ ಕೊತ್ವಾಲಚಾವಡಿಯ ದಳವಾಯಿ ಕಾಶಣ್ಣನಾಯಕನನ್ನು ಕರೆಸಿ ಕೊಂಡು ಹೇಳಿದ-

"ಈ ಕಡೆ ನಮ್ಮ ಕೋಟೆಯ ಐಬು, ಇಷ್ಟು ದಿನ ಇಲ್ಲದ್ದು ಈಗ ನವಾಬನಿಗೆ ತಿಳಿದದ್ದು ಹೇಗೆ? ನಿಮ್ಮ ಚಾವಡಿಯ ಜನಕ್ಕೆ ಸ್ವಲ್ಪ ಕಿವಿ ಹಿಂಡಿ - ಚುರುಕಾಗಲಿ."

* * *

ಆ ದಿನ ಕೋಟೆಯನ್ನು ಹಿಡಿದೇಬರುತ್ತೇನೆಂದು ಹೋದ ಹೈದರಾಲಿಯ ಸೇನೆ, ಸೋತು ನುಗ್ಗುನುರಿಯಾಗಿ ಹಿಂತಿರುಗಿದ್ದರೂ ಪೂರ್ಣಯ್ಯನ ಒಂದು ಯೋಜನೆ ಮಾತ್ರ ಸಫಲವಾಗಿತ್ತು. ಸೇನೆ ಕೋಟೆಯೊಳಗೆ ನುಗ್ಗಿ ದಾಳಿ ಮಾಡಿದ ಗದ್ದಲದಲ್ಲಿ, ಹೈದರಾಲಿಯ ಸೇನೆಯ ಚೋರಪಹರಿಯ ನಾಯಕನಾದ ಅಬ್ದುಲ್‌ಖಯಾಮ್‌ನನ್ನು ಸಾಕಷ್ಟು ಹಣ, ಅಫೀಮಿನೊಂದಿಗೆ ಚಿತ್ರದುರ್ಗವನ್ನು ಬಲ್ಲ ರಾಯದುರ್ಗ, ಹರಪನಹಳ್ಳಿಯ ಹತ್ತು ಜನರನ್ನು ದುರ್ಗದೊಳಗೆ ತೂರಿಸುವ ಕಾರ್ಯದಲ್ಲಿ ಪೂರ್ಣಯ್ಯ ಯಶಸ್ವಿಯಾಗಿದ್ದ.

ಹೈದರಾಲಿಯ ಸೇನೆಯನ್ನು ಹಿಮ್ಮೆಟ್ಟಿಸಿದ ದುರ್ಗದ ಸೇನೆಗೆ ತಮ್ಮ ಕೋಟೆಯಲ್ಲಾದ ಈ ಸಣ್ಣ ಬಿರುಕು ಅರಿವಿಗೆ ಬರಲಿಲ್ಲ.

೮

ಉಚ್ಚಂಗಮ್ಮನ ಹೊಂಡದ ಯುದ್ಧದಲ್ಲಿ ಮದಕರಿನಾಯಕನಿಗೆ ಜಯವಾಗಿತ್ತು. ಆ ಗೆಲುವು ಜನತೆಗೆ, ಸೇನೆಗೆ ಎಷ್ಟು ಉತ್ಸಾಹದಾಯಕವಾಗಿತ್ತೋ, ಆ ಸಮರದಲ್ಲಾದ ಸೇನೆಯ ಸಾವು ಅಷ್ಟೇ ಚಿಂತೆಗೆ ಕಾರಣವಾಗಿತ್ತು.

ತಮ್ಮ ಸೇನೆಗಿಂತ ಮೂರು ಪಟ್ಟು ದೊಡ್ಡದಾದ ಶತ್ರುಸೇನೆಯನ್ನು ಮಣ್ಣುಮುಕ್ಕಿಸುವ ವೀರಪ್ರಯತ್ನದಲ್ಲಿ ಚಿತ್ರದುರ್ಗದ ಸೇನೆಯ ಎರಡು ಸಾವಿರ ಜನ ಸತ್ತು, ದುರ್ಗದ ಸೇನೆ ಬೆಳೆದರೂ ಬಡಕಲಾದ ಶಿಶುವಿನಂತಿತ್ತು. ದಿನದಿನವೂ ನಡೆಯುತ್ತಿದ್ದ ಯುದ್ಧದ ಸಾವು-ನೋವುಗಳು ಸೇನೆಯನ್ನು ಸಾಕಷ್ಟು ಬಳಲಿಸಿತ್ತು. ಹೈದರಾಲಿಯ ಸೇನೆ - ಹಳೆನೀರು ಹರಿದು ಹೋದರೂ ಹೊಸನೀರು ಹರಿದುಬಂದು ತುಂಬುವ ಹಳ್ಳದ ಆಸರೆಯಿದ್ದ ಹೊಂಡದಂತಿದ್ದರೆ, ದುರ್ಗದ ಸೇನೆ ಹೊಸನೀರಿನ ಆಸರೆಯಿಲ್ಲದೆ ಬೇಸಿಗೆಯ ಬಿಸಿಲ ಝಳಕ್ಕೆ ದಿನದಿನವೂ ಬತ್ತುವ ಕೆರೆಯಂತಿತ್ತು. ಸಾಲುಗೆಲುವುಗಳಿಂದ ಲಭಿಸಿದ ಪ್ರಚಂಡ ಆತ್ಮವಿಶ್ವಾಸ, ಉತ್ಸಾಹವಿಲ್ಲದಿದ್ದರೆ ದಿನದಿನದ ಸವೆತದಿಂದ ದುರ್ಗ ಎಂದೋ ಹುಡಿಯಾಗಿಹೋಗುತ್ತಿತ್ತು. ಈ ಮಾತು ನಾಯಕರಿಗೇ ಅಲ್ಲದೆ ದಳವಾಯಿಗಳಿಗೂ ಅರ್ಥವಾಗಿತ್ತು. ಆ ಹೊತ್ತಿನಲ್ಲಿ ಮದಕರಿನಾಯಕನಿಗಿದ್ದ ಏಕೈಕ ಆಶಾಕಿರಣ - ಮರಾಠರ ನೆರವು.

ಇಂದಲ್ಲ, ನಾಳೆ ಪೇಶ್ವೆಯವರ ಪ್ರಬಲವಾದ ದಂಡು ದುರ್ಗದ ನೆರವಿಗೆ ಒದಗಿಬಂದು, ಹೊರಗೆ ಮರಾಠರ ಹೊಡೆತ, ಒಳಗಿನಿಂದ ದುರ್ಗದ ಸೇನೆಯ ಪ್ರಹಾರ – ಈ ಕತ್ತರಿಯೇಟಿನಲ್ಲಿ ಸಿಕ್ಕು ಹೈದರಾಲಿಯ ಸೇನೆ ಸೋತು ಶರಣಾಗತವಾಗುವುದೊಂದೇ ಉಳಿದಿದ್ದ ಮಾರ್ಗ.

ಪುಣೆಯಿಂದ ಸೇನಾಸಹಾಯದ ಭರವಸೆಯೇನೋ ಬಂದಿತ್ತು. ಆದರೆ ಎಂದು ?

ಸ್ವಯಂ ಯಾದವೀಕಲಹದಲ್ಲಿ, ಬ್ರಿಟಿಷರೊಂದಿಗೆ ಯುದ್ಧದಲ್ಲಿ ನಿರತನಾದ ಪುಣೆಯ ಪೇಶ್ವೆ ಆ ಪ್ರಶ್ನೆಗೆ ಖಚಿತವಾದ ಉತ್ತರ ಕೊಡುವ ಸ್ಥಿತಿಯಲ್ಲಿರಲಿಲ್ಲ.

'ನಮ್ಮನ್ನು ನಂಬಿ, ಖಂಡಿತ ನಿಮಗೆ ಸೇನಾಸಹಾಯ ಕಳಿಸುತ್ತೇವೆ. ಹೈದರಾಲಿಯನ್ನು ಮೂಲೋತ್ಪಾಟನ ಮಾಡುವ ಕಾರ್ಯದಲ್ಲಿ ನಿಮ್ಮಷ್ಟೇ ನಮಗೂ ಆಸಕ್ತಿಯಿದೆ. ನೀವು ನಮಗೆ ನೀಡಿದ ನೆರವಿನ ನೆನಪೂ ಇದೆ. ನಾವು ವಿಶ್ವಾಸದ್ರೋಹಿಗಳಲ್ಲ. ಇತ್ತಕಡೆ ಕೈಬಿಡುವಾಗುತ್ತಿದ್ದ ಹಾಗೇ ನಮ್ಮ ಸೇನೆ ನಿಮ್ಮ ಬೆಂಬಲಕ್ಕೆ ಬರುತ್ತದೆ. ಅದುವರೆಗೂ ಕಷ್ಟ ಸಹಿಸಿಕೊಳ್ಳಿ'

- ಎಂದು ಖುದ್ದಾಗಿ ನಾನಾಫಡ್ನವೀಸನೇ ಜಾಸೂದರ ಮೂಲಕ ಪತ್ರ ಕಳಿಸಿದ್ದ.

'ಬೇಗ, ಆದಷ್ಟು ಬೇಗ ಆ ಕಾಲ ಬರಲಿ'

-ಎಂದು, ಸಂಖ್ಯಾಬಲದಿಂದ ಸಾಧಿಸಲಾಗದ ಗೆಲುವನ್ನು ಆತ್ಮವಿಶ್ವಾಸದಿಂದ, ರಣ ತಂತ್ರದಿಂದ, ಶತ್ರುಮುಖವನ್ನು ಕಂಡು ಪುಟಿದೇಳುವ ಪೌರುಷದ ಬಲದಿಂದ, ಕೋಟೆಯ ಭದ್ರತೆಯಿಂದ ಸಾಧಿಸುತ್ತಾ, ನಾಲ್ಕೈದು ತಿಂಗಳಕಾಲ ದುರ್ಗದ ಸುತ್ತಲೂ ಬೀಡುಬಿಟ್ಟ ಹೈದರಾಲಿಗೆ ಒಂದು ಕಿರುಗಾಳಗದಲ್ಲೂ ಗೆಲುವುಕೊಡದೆ, ದಿನದಿನವೂ ಆ ಶತ್ರುಸೇನೆಯರನ್ನು ಆದಷ್ಟು ಜನ ಸಂಹರಿಸುತ್ತಾ ಕಾಲದೂಡುತ್ತಿದ್ದರು - ದುರ್ಗದ ದಂಡನಾಯಕರು.

ಬಿಸಿಲಿಗೆ ಬಿದ್ದ ಹಿಮಶೈಲದಂತೆ, ದಿನದಿನಕ್ಕೆ ತನ್ನ ಸೇನೆಯ ಬಲ ಕ್ಷೀಣಿಸಿ, ಸೈನಿಕರಲ್ಲಿ ದಿನದಿನಕ್ಕೆ ಆತ್ಮವಿಶ್ವಾಸ ಕುಗ್ಗುತ್ತಿದ್ದ ಆ ಪರಿಸ್ಥಿತಿಯಲ್ಲಿ 'ಕಾಲ ತನ್ನ ವೈರಿ' ಎಂಬ ಅರಿವೂ ಹೈದರಾಲಿಗೂ ಇಲ್ಲದಿರಲಿಲ್ಲ. ಮರಾಠರು ಚಿತ್ರದುರ್ಗದ ನೆರವಿಗೆ ಬರುವ ಸ್ಪಷ್ಟಸೂಚನೆ ಕಾಣದಿದ್ದರೂ, ಮರಾಠರ ಪರಿಸ್ಥಿತಿಯ ಬಗ್ಗೆ ದಿನದಿನವೂ ವರದಿ ಬರುತ್ತಿದ್ದರೂ, 'ದಿನದಿನದ ಸೋಲು - ತನ್ನ ಪಾಲಿಗೆ ಮೃತ್ಯು' ಎಂಬುದು ಮನವರಿಕೆಯಾಗಿ, ಆದಷ್ಟು ಬೇಗ ಯುದ್ಧ ಮುಗಿಸಲು ಚಿಂತಿಸಿ, ಸಿಹಿನೀರುಹೊಂಡದ ಲಡಾಯಿಯಲ್ಲಿ ಸೋಲಾಗಿ ಆ ಪೆಟ್ಟಿನಿಂದ ತನ್ನ ಸೇನೆ, ಸರ್ದಾರರು ಕೊಂಚ ಸಾವರಿಸಿಕೊಂಡಬಳಿಕ, ಒಂದು ದಿನ ತನ್ನ ಪ್ರಮುಖ ಸರ್ದಾರರನ್ನೆಲ್ಲಾ ಆಪ್ತಾಲೋಚನೆಗೆ ಕರೆಸಿ, ಪರಿಸ್ಥಿತಿಯನ್ನು ವಿವರಿಸಿ ಹೇಳಿದ –

"ಈ ದುರ್ಗ ನಮಗೆ ಸೋಲುವ ಲಕ್ಷಣ ಕಾಣುತ್ತಿಲ್ಲ. ದಿನದಿನವೂ ಗೆಲ್ಲುತ್ತಿರುವ ನಾಯಕನೊಂದಿಗೆ ಮತ್ತೆ ಸಂಧಾನದ ಮಾತಾಡುವುದೂ ಹಾಸ್ಯಾಸ್ಪದವಾಗುತ್ತದೆ. ಏನಿದ್ದರೂ ಆ ನಾಯಕ ನಮ್ಮೊಂದಿಗೆ ಸಂಧಾನಕ್ಕೆ ಬರುವಂತೆ ಮಾಡಬೇಕು. ಅದಕ್ಕೊಂದೇ ದಾರಿ -ಒಂದು ದಿನದ ಯುದ್ಧದಲ್ಲಿ ಲಕ್ಷ ಸೇನೆ ಸತ್ತರೂ ಚಿಂತೆಯಿಲ್ಲ, ಲಡಾಯಿನಲ್ಲಿ ನಾಯಕನನ್ನು ಸೋಲಿಸಲೇಬೇಕು. ಇದಕ್ಕೇನು ಮಾಡಬೇಕು ಎಂದು ಯಾರಾದರೂ ಹೇಳುತ್ತೀರಾ ?"

-ಎಂದು ಕೇಳಿ, ಸುತ್ತ ನೆರೆದವರನ್ನು ನೋಡಿದ.

ಹೈದರಾಲಿಯ ಸುತ್ತ ನೆರೆದ ಸರ್ದಾರರು –

ಮೋಹಿಯುದ್ದೀನ್ ಸಾಹೇಬ್, ಮೊಖ್ದುಂಸಾಹೇಬ್, ಗುಲಾಂ ಅಲಿಖಾನ್, ಬರ್ಕಿ ಶ್ರೀನಿವಾಸರಾಯ, ತೋಷಿಖಾನೆ ಕೃಷ್ಣರಾಯ, ಸಾಹೇಬ್‌ಜಾದೆ ಟೀಪು, ಲಾಲಿಸಾಹೇಬ, ಬಕ್ಷಿ ಪೂರ್ಣಯ್ಯ-

ಹೈದರಾಲಿಯ ಮೂಗಿಗೆ ಮೊಸರಿನ ವಾಸನೆ ತೋರಿಸಿ, ಚಿತ್ರದುರ್ಗದತ್ತ ಕರೆತಂದ ಹರಪನಹಳ್ಳಿ ಬಸಪ್ಪನಾಯಕ, ರಾಯದುರ್ಗದ ಕೃಷ್ಣಪ್ಪನಾಯಕ –

ಎಲ್ಲರೂ ಹೈದರಾಲಿಯ ಮಾತು ಕೇಳಿದರು. ಅದಕ್ಕೆ ಉತ್ತರ ಕೊಡಲು ಯಾರೊಬ್ಬರಿಗೂ ಧೈರ್ಯ ಬರಲಿಲ್ಲ.

ನಾಲಗೆ ಸತ್ತಂತೆ ಕುಳಿತ ಅವರನ್ನು ಕಂಡು, ಹೈದರಾಲಿಯ ಹೃದಯದಲ್ಲಿ ರೋಷ ಉಕ್ಕಿ ಬಂದು-

"ಯಾರಿಗೂ 'ನಾವು ದುರ್ಗದ ಮೇಲೆ ಹಲ್ಲಾ ಮಾಡುತ್ತೇವೆ' ಎಂದು ಹೇಳುವ ಗಂಡಸುತನವಿಲ್ಲ. ಯಾಕೆ ಬಾಯಿ ಬಿಡುವುದಿಲ್ಲ ? ಬಸಪ್ಪನಾಯಕ, ಕೃಷ್ಣಪ್ಪನಾಯಕ-ನಿಮ್ಮ ನಾಲಗೆಗೇನು ನಾಗರಹಾವು ಕಚ್ಚಿದೆಯೇ ? ಶ್ರೀರಂಗಪಟ್ಟಣದಲ್ಲಿ ಅಷ್ಟು ಬಡಾಯಿ ಕೊಚ್ಚಿದಿರಿ.

ಈಗ ಇದ್ದಕ್ಕಿದ್ದ ಹಾಗೇ ನೀವು ಖೋಜ್ಹಾ ಆದಿರೇನು ? ನೀವು ಬಾಯಿ ಬಿಡುವುದಿಲ್ಲ – ನಾವೇ ಹುಕುಂ ಮಾಡುತ್ತೇವೆ. ಸೀನೀರುಹೊಂಡದ ಲಡಾಯಿಯಲ್ಲಿ ಹರಪನಹಳ್ಳಿ ನಾಯಕರ ಹೇಡಿತನ ನೋಡಿದೆವು. ಈಗ ನಿನ್ನ ಸರದಿ ಕೃಷ್ಣಪ್ಪನಾಯಕ, ನಿನ್ನ ಸೇನೆ ಇರುವ ಬುದ್ಧಿವಂತನ ಮರಡಿಯ ಜಾಗ- ಮೈದಾನ. ಅತ್ತಕಡೆ ಕೋಟೆಗೆ ಕಂದಕವೂ ಇಲ್ಲ. ನಿನ್ನ ಸೇನೆಗೆ ನಮ್ಮ ಸೇನೆಯ ಮದತ್ ಕೊಡುತ್ತೇವೆ. ಆಕಾಶ ಬೀಳಲಿ, ಭೂಮಿ ಬಿರಿಯಲಿ - ನಾಳೆ ನಿಮ್ಮ ಸೇನೆ ದುರ್ಗದ ಮೇಲೆ ಹಲ್ಲಾ ಮಾಡಲೇಬೇಕು. ಕಳ್ಳಯುದ್ಧ ಮಾಡಲಿಕ್ಕೆ ಹೋಗಿ ಮೂರು ಮೂರು ಸಲ ಮೂಗು ಮುಕ್ಕಾಯಿತು. ಈ ಸಲ ಗಂಡುಲಡಾಯಿ - ರಾಜಾರೋಷವಾಗಿ, ಹಾಡಹಗಲು ದುರ್ಗಕ್ಕೆ ಹಲ್ಲಾ ಹಾಕಲೇಬೇಕು, ಗೆಲ್ಲಲೇಬೇಕು, ಕೋಟೆ ಉಳಿಯಬಾರದು. ಸೋತು ಬಂದರೆ ನಿನ್ನ ಜನಾನಾನ ಶ್ರೀರಂಗಪಟ್ಟಣಕ್ಕೆ ಕಳಿಸುತ್ತೇವೆ. ಎಚ್ಚರ ಇರಲಿ.”

ನವಾಬನಾಡಿದ ಮಾತು ಕೇಳಿ ಕೃಷ್ಣಪ್ಪನಾಯಕನಿಗೆ ತನ್ನ ತಲೆಯ ಮೇಲೆ ಮುಗಿಲು ಕಡಿದುಬಿದ್ದಂತಾದರೂ, ಆ ಅಪ್ಪಣೆಯಿಂದ ತಪ್ಪಿಸಿಕೊಳ್ಳುವ ದಾರಿ ಕಾಣದೆ –

“ನಿಮ್ಮ ಸೇನೆ, ನಮ್ಮ ಪರಾಕ್ರಮ ಇರುವಾಗ ನಾಳೆ ದುರ್ಗ ಉಳಿಯುವುದಿಲ್ಲ.”

-ಎಂದು ಹೇಳಿ, ರಣವೀಳ್ಯ ಸ್ವೀಕರಿಸಿದ, ಹೆದರಿಕೆಯಲ್ಲಿ ಹಿಂದು-ಮುಂದೆ ನೋಡದೆ ಹಾವು ಹಿಡಿಯಲೇಬೇಕಾಗಿ ಬಂದವನಂತೆ.

ಒಮ್ಮೆ ಆ ನಿರ್ಧಾರವಾದ ಬಳಿಕ –

ಲಾಲಿ ಮೊದಲಾದ ತಜ್ಞರೊಂದಿಗೆ ವಿಚಾರವಿನಿಮಯ ಮಾಡಿ, ಹತ್ತು ಸಾವಿರ ಸೇನೆಯೊಂದಿಗೆ ರಾಯದುರ್ಗದ ಕೃಷ್ಣಪ್ಪನಾಯಕ, ಕಂದಕದ ಆಸರೆ ಇಲ್ಲದ ಲಾಲ್‌ಕೋಟೆ ಬಾಗಿಲ ಮುಂದಿನ ಬಯಲಿನಲ್ಲಿ ಯುದ್ಧಸಿದ್ಧತೆ ನಡೆಸಿದ.

ಹಾಡುಹಗಲಿನಲ್ಲಿ ಕೋಟೆಯ ಇದಿರೇ ನವಾಬನ ಸೇನೆ ತೋಫು ಏರಿಸಲು ಮೊಹರ್ಚೆ ಕಟ್ಟುತಿರುವುದನ್ನು, ಸಮುದ್ರದಂತೆ ಶತ್ರುಸೇನೆ ಜಮಾಯಿಸುತ್ತಿರುವುದನ್ನು ನೋಡಿದ ಕೋಟೆಯ ಮೇಲಿನ ಪಹರೆ ಸೈನಿಕರು ಕೂಡಲೇ ಸುದ್ದಿಯನ್ನು ನಾಯಕರಿಗೆ ಮುಟ್ಟಿಸಿದರು.

ಆ ಸುದ್ದಿ ಕೇಳುತ್ತಿದ್ದ ಹಾಗೇ ಮದಕರಿನಾಯಕ ತನ್ನ ಖಾಸಾಸೇನೆಯೊಂದಿಗೆ ಲಾಲ್ ಬತೇರಿಯ ಕೋಟೆಯ ಬಳಿ ಬಂದಿಳಿದು, ಜರಿಮಲೆ, ಗುಡಿಕೋಟೆ, ಹರತಿ, ನಾಯಕನಹಟ್ಟಿಯ ನಾಯಕರುಗಳ ಐದು ಸಾವಿರ ಸೇನೆಯನ್ನು ಕೋಟೆಯ ರಕ್ಷಣೆಗೆ ನೇಮಿಸಿ, ಅತ್ತಕಡೆಯ ಕೋಟೆ ಬತೇರಿಗಳ ಮೇಲೆ ಏರಿಸಿದ ತೋಪುಗಳನ್ನು ಉಡಾಯಿಸಲು ಗೋಲಂದಾಜರಿಗೆ ಅಪ್ಪಣೆ ಮಾಡಿದ.

ಇತ್ತ ದುರ್ಗದ ಸೇನೆಯ ತೋಪುಗಳು ಹಾರಿ ನವಾಬನ ಸೇನೆಯ ಮೇಲೆ ಕೆಂಡದ ಮಳೆ ಕರೆಯುತ್ತಿರಲು, ಅತ್ತ ನವಾಬನ ಸೇನೆಯವರೂ ತೋಫು ಹಾರಿಸಲಾರಂಭಿಸಿದರು. ಇಬ್ಬದಿಯಿಂದಲೂ ಮದ್ದಿನ ಬಾಣಗಳವರ್ಷ ಆರಂಭವಾಯಿತು. ತೋಪು, ಗುಂಡುಗಳು ಕಕ್ಕಿದ ಹೊಗೆಗತ್ತಲಿನಲ್ಲಿ ಹಗಲು ಇರುಳಾಗಿ, ಇಬ್ಬಣದವರೂ ಬೆಳಕಿಗಾಗಿ ಸಾವಿರಾರು ಮತಾಪುಗಳನ್ನು ಹೊತ್ತಿಸಿ, ಅದರ ಕಣ್ಣುಕೋರೈಸುವ ಬೆಳಕಿನಲ್ಲಿ ಯುದ್ಧ ಮುಂದುವರಿಸಿದರು. ಆ ದಿನದ ಯುದ್ಧದಲ್ಲಿ ಗೆದ್ದೇ ಗೆಲ್ಲಬೇಕೆಂದು ಹಟತೊಟ್ಟ ಕೃಷ್ಣಪ್ಪನಾಯಕನ ಸೇನೆ, ಸಾವುನೋವಿಗೆ ಹೆದರದೆ ರಣಕೇಕೆಹಾಕುತ್ತಾ, ಕೋಟೆಯನ್ನು ಹತ್ತಲು ಅಗತ್ಯವಾದ ನಿಚ್ಚಣಿಗೆಗಳನ್ನು ಹೊತ್ತು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಕೋಟೆಯತ್ತ ನುಗ್ಗಿತು.

ಕಣ್ಣು ಕಾಣುವಷ್ಟು ದೂರವೂ ಬುದ್ಧಿವಂತನಮರಡಿಯ ಬಯಲನ್ನು ತುಂಬಿದ, ಕಾರ್ಗಾಲದ ಕಡಲಲೆಗಳ ಮಾಲೆಯಂತೆ ನುಗ್ಗಿ ಬರುವ ಆ ಶತ್ರುಸೇನಾಸಮೂಹವನ್ನು ಕಂಡು, ದಳವಾಯಿ ಪರಶುರಾಮಪ್ಪನಾಯಕ ಮೊದಲಾದವರು-

"ಮಹಾಸ್ವಾಮಿ, ಆ ಸೇನೆ ಕೋಟೆಯ ಹತ್ತಿರ ಬರಲು ಬಿಟ್ಟರೆ ಹಲ್ಲಾ ತಡೆಯುವುದು ಕಷ್ಟವಾಗುತ್ತದೆ. ಬೇಕಾದದ್ದಾಗಲಿ, ಆ ಸೇನೆ ಕೋಟೆಯ ಹತ್ತಿರ ಬರದಂತೆ ತಡೆಯಬೇಕು. ಅದಕ್ಕೆ ಒಂದೇ ದಾರಿ - ಕೋಟೆಯ ಬಾಗಿಲು ತೆಗೆಸಿ, ಆ ಸೇನೆಯ ಮೇಲೆ ಬೀಳಲು ನಮಗೆ ಅಪ್ಪಣೆಯಾಗಬೇಕು. ನಮಗೆ ಹತ್ತರಷ್ಟಿದ್ದರೂ ಆ ಸೇನೆಯನ್ನು ಹೊಡೆದು ಬರುತ್ತೇವೆ. ಹೈದರಾಲಿ ಮರಡಿ ಮೇಲೆ ಡೇರಾ ಹಾಕಿಸಿಕೊಂಡು ನೋಡುತ್ತಿದ್ದಾನೆ. ಇಲ್ಲಿ ನಿಂತು ನೀವೂ ನೋಡುತ್ತಿರಿ. ತೋಫು, ಕೋವಿಯ ಮದ್ದು ಗುಂಡು ಹಲಾಕಾಗುವುದು ಬೇಡ. ಕೈಗೆ ಕೈ, ಕತ್ತಿಗೆ ಕತ್ತಿ ಮಿಲಾಯಿಸಿ ಶತ್ರುಸೇನೆಯನ್ನು ಹೊಡೆದು ಬರುತ್ತೇವೆ. ನಾವು ಬಯಲಿಗೆ ನುಗ್ಗದೆ ಅವರ ತೋಫುಗಳನ್ನು ತಡೆಯುವುದು ಸಾಧ್ಯವಿಲ್ಲ. ಅವರ ಹತ್ತಿರ ಮದ್ದು ಗುಂಡಿನ ಅಪಾರ ಸಂಗ್ರಹ ಇದೆ. ಹೀಗೇ ಲಡಾಯಿ ಮಾಡುತ್ತಾ ಇದ್ದರೆ ಕೋಟೆ ಉಳಿಯುವುದಿಲ್ಲ. ಬಯಲು ಯುದ್ಧಕ್ಕೆ ನಮಗೆ ಅಪ್ಪಣೆಯಾಗಬೇಕು" - ಎಂದು ಬೇಡಿದರು.

ಅವರ ಪ್ರಾರ್ಥನೆಯನ್ನು ಕೇಳಿ ಮದಕರಿನಾಯಕನೂ ಆಲೋಚಿಸಿದ. ದಳವಾಯಿಗಳ ಪ್ರಾರ್ಥನೆಯಲ್ಲಿ ತಥ್ಯವಿತ್ತು. ಶತ್ರುಗಳು ದುರ್ಗದವರ ಬಲವನ್ನೆದುರಿಸುತ್ತಾ ಹಲ್ಲಾ ಹತ್ತುವ ಯೋಚನೆ ಮಾಡುತ್ತಿರುವಾಗ, ಆಕಸ್ಮಿಕ ಬಯಲುದಾಳಿ ಫಲಪ್ರದವಾಗಬಹುದು ಎಂದು ಯೋಚನೆ ಮಾಡಿ, ತನ್ನ ಬಳಿಯಿದ್ದ ದಂಡನಾಯಕರಿಗೆ-

"ಆಯಿತು – ಕೋಟೆಬಾಗಿಲು ತೆಗೆಸುತ್ತೇವೆ. ಉಚ್ಚಂಗಮ್ಮನ ತಾಳಿ ನಿಮ್ಮ ಕೈಲಿದೆ. ಅದನ್ನು ಹೇಗೆ ಉಳಿಸುತ್ತೀರೋ ನೋಡಿ. ಆ ಅದೃಷ್ಟಪರೀಕ್ಷೆಯೂ ನಡೆದು ಹೋಗಲಿ"

- ಎಂದು ಹೇಳಿ, ಕೋಟೆಬಾಗಿಲಿನವರಿಗೆ, ಬಾಗಿಲು ತೆರೆಯಲು ಅಪ್ಪಣೆ ಮಾಡಿದ.

ಕೋಟೆಯ ಮೇಲಿನಿಂದ ತೋಫಿಗೆ ತೋಪು, ಬಾಣಕ್ಕೆ ಬಾಣ ಉತ್ತರ ಕೊಡುತ್ತಿರಲು, ತೆರೆದ ಕೋಟೆಯ ಬಾಗಿಲಿನಿಂದ ನುಗ್ಗಿದ ಐದುಸಾವಿರ ಸೇನೆ ತೂಬು ಕಡಿದ ಕೆರೆಯ ನೀರಿನ ಪ್ರವಾಹದಂತೆ ರಣಘೋಷ ಕೂಗುತ್ತಾ ಶತ್ರುಸೇನೆಯನ್ನು ಅಪ್ಪಳಿಸಿತು.

ದುರ್ಗದಿಂದ ಹೊರನುಗ್ಗಿದ ಸೇನೆ, ಹೆಜ್ಜೆಗೆ ಹತ್ತು ತಲೆಬಿದ್ದರೂ ಲೆಕ್ಕಿಸದೆ, ದಳವಾಯಿಗಳ ಸೂಚನೆಯಂತೆ ಮೊದಲು ತೋಪುಗಳಿದ್ದ ಮೊಹರ್ಚೆಗಳತ್ತ ನುಗ್ಗಿ, ಮೊಹರ್ಚೆಗಳನ್ನು ಮುರಿದು, ತೋಫುಗಳನ್ನು ಉರುಳಿಸಿ, ದುರ್ಗದತ್ತ ತೋಫುಗಳು ಗುಂಡು ಕಾರುವುದನ್ನು ತಪ್ಪಿಸಿ ಬಳಿಕ ಶತ್ರುಸೇನೆಯ ಮೇಲೆ ಮುಗಿಬಿದ್ದರು. ತೋಫುಗಳು ನೆಲಕ್ಕುರುಳಿದುದು ಶತ್ರುಸೇನೆಯ ಅರ್ಧ ಕೈ ಮುರಿದಂತಾದರೆ, ಮೈಮೇಲೆ ಏರಿಬಂದ ದುರ್ಗದ ಸೇನೆಯನ್ನು ಹೊಡೆಯಲು ಆವರೆಗೂ ಸತತವಾಗಿ ಕಾರ್ಯನಿರತವಾಗಿದ್ದ ಕೋವಿಗಳೂ ನಿರುಪಯೋಗಿಯಾಗಿ, ನವಾಬನ ಸೇನೆಯೂ ಕೋವಿಗಳನ್ನು ಬಿಸುಟು, ಶಸ್ತ್ರಾಸ್ತ್ರಗಳಿಂದಲೇ ಹೋರಾಡ ಬೇಕಾಯಿತು. ದುರ್ಗದ ಸೇನೆಗೆ ಕೋಟೆಯ ಬಾಗಿಲು ತೆಗೆಸುವಾಗ ನಾಯಕರು ಹೇಳಿದ 'ಉಚ್ಚಂಗಮ್ಮನ ತಾಳಿ ನಿಮ್ಮ ಕೈಯಲ್ಲಿದೆ' ಎಂಬ ಮಾತು, ಅವರ ತೋಳಲ್ಲಿ ಸಿಂಹಬಲ ತುಂಬಿ, ಹೋರಾಡತೊಡಗಿದರು.

ಕುಲದೇವತೆಯ ತಾಳಿಯ ಭಾಗ್ಯವನ್ನು ಉಳಿಸಿಕೊಳ್ಳುವ ವೀರರ ಪಡೆ ಒಂದು ಕಡೆ - ನವಾಬನ ಚಡಾವಿನೇಟಿಗೆ ಹೆದರಿ, ಹಂಗುತೊರೆದು ಹೋರಾಡುವ ಸೇನೆ ಮತ್ತೊಂದು ಕಡೆ–

ಕಡಲಿಗೆ ಕಡಲು ಘಟ್ಟಿಸಿದಂತೆ, ಬೆಟ್ಟಕ್ಕೆ ಬೆಟ್ಟ ಡಿಕ್ಕಿಹೊಡೆದಂತೆ, ಎರಡು ಪಡೆಗಳೂ ಹೋರಾಡಿದವು. ಬಣ್ಣ ಬಣ್ಣದ ಸಮವಸ್ತ್ರಧರಿಸಿದ ಪಡೆಗಳು ಒಂದರೊಡನೊಂದು ಬೆರೆತು ಹೊಯ್ದಾಡುವಾಗ ಕಾಮನಹಬ್ಬದ ಓಕುಳಿ ಸಮುದ್ರದಂತೆ ಮಡುಗಟ್ಟಿ ತೆರೆಹೊಯ್ದಂತೆ ಕಾಣಿಸಿತು. ರಣವಾದ್ಯಗಳ ಘೋಷ, ರಣಕೇಕೆಗಳ ಚೀರು, ಕುದುರೆಗಳ ಹೇಷಾರವ, ಆನೆಗಳ ಘೀಂಕಾರ, ಶಸ್ತ್ರಾಸ್ತ್ರಗಳ ಸಂಘಟನೆಯ ಶಬ್ದ - ಬಯಲನ್ನು ತುಂಬಿ, ಗುಡ್ಡದ ಗವಿಗಹ್ವರಗಳಿಂದ ಮಾರ್ದನಿಸಿ, ಬಗೆಬಗೆಯ ಶಬ್ದಗಳೇ ಹೋರಾಡುತ್ತಿರುವಂತೆ ಭಾಸವಾಯಿತು. ನೆಲ-ನೆತ್ತರಿನಿಂದ ತೊಯ್ದು ಕೆಸರಾಗಿ, ಕಡಿದುರುಳಿದ ರುಂಡ-ಮುಂಡಗಳು ತುಂಬಿಹೋಗಿ, ಗಾಯಗೊಂಡು ನೋವಿನಿಂದ ಹುಚ್ಚಾದ ಸವಾರರಿಲ್ಲದ ಆನೆ, ಕುದುರೆಗಳು ದಿಕ್ಕು ಕಂಡತ್ತ ಅಲೆದು, ಸಿಕ್ಕಿದವರನ್ನು ತುಳಿದು, ಹೋರಾಡುವ ಸೈನಿಕರ ಮಧ್ಯೆ ನುಗ್ಗಿ, ಹತ್ತಾರು ಕಡೆ ರಕ್ತದ ಚಿಲುಮೆ ಚಿಮ್ಮುವ ಮಾರಿಯ ಕೋಣಗಳಂತೆ ಕಂಡವು.

ಹೀಗೆ ಎರಡು ಪಡೆಗಳೂ ಜಿದ್ದಾಜಿದ್ದಿಯಿಂದ ಹೋರಾಡುತ್ತಿರುವಾಗಲೇ, ದುರ್ಗದ ಕಳ್ಳದಾರಿಯಿಂದ ಹೊರಬಂದು, ಜೋಗಿಮಟ್ಟಿಯ ಕಡೆಯಿಂದ ಇಳಿದ ಮೂರುಸಾವಿರ ಸೈನಿಕರು

ಶತ್ರುಸೇನೆಯನ್ನು ಹಿಂಬದಿಯಿಂದ ಹೊಡೆಯಲಾರಂಭಿಸಿದರು. 'ಬೀಸಿಗೊಂದು ತಲೆ, ಏಟಿಗೊಬ್ಬ ಆಳು' ಎಂದು ಹಟತೊಟ್ಟು ಹೊಯ್ಯುತ್ತಾ, ಅತ್ಯಂತ ಅನಿರೀಕ್ಷಿತವಾಗಿ ಹಿಂಬದಿಯಿಂದ ನುಗ್ಗಿ ಬಂದ ದುರ್ಗದ ಸೇನೆಯ ಹೊಡೆತಕ್ಕೆ ಸಿಕ್ಕು ನವಾಬನ ಸೇನೆ – ರಣ ಗರಿಯಲ್ಲಿ ಸಿಕ್ಕ ಗೋಟಿನಂತೆ ಪುಡಿಪುಡಿಯಾಯಿತು. ಇಬ್ಬದಿಯ ಹೊಡೆತವನ್ನು ತಡೆಯ ಲಾಗದೆ ತೋಫು, ಕೋವಿಗಳನ್ನು ಕಳೆದುಕೊಂಡ ನವಾಬನ ಸೇನೆ ನುಗ್ಗುನುರಿಯಾಗಿ ಸೋತು, ಪಲಾಯನ ಮಾಡಲೂ ದಾರಿಕಾಣದೆ, ಹೆದರಿ ಬಾಯಲ್ಲಿ ಹುಲ್ಲು ಕಚ್ಚಿ, ಬೆತ್ತಲೆ ಯಾಗಿ ನಿಂತು ಪ್ರಾಣಭಿಕ್ಷೆ ಬೇಡಿದರು. ಹುಲ್ಲು ಕಚ್ಚಿದವರನ್ನು, ಬೆತ್ತಲೆ ನಿಂತವರನ್ನು ಬಿಟ್ಟು ಕತ್ತಿ ಹಿಡಿದವರ ತಲೆ ಕತ್ತರಿಸುತ್ತಾ ದುರ್ಗದ ಸೇನೆ ನವಾಬನ ಡೇರೆಯಿದ್ದ ಬುದ್ಧಿವಂತನಮರಡಿಯತ್ತ ನುಗ್ಗಿತು.

ಆ ಹೊತ್ತಿನಲ್ಲಿ ನವಾಬನಿಗೆ ಪ್ರಾಣರಕ್ಷಣೆಗೆ ಕಂಡದ್ದು ಒಂದೇ ಮಾರ್ಗ - ಪಲಾಯನ.

ಹೈದರಾಲಿ ಪಲಾಯನ ಮಾಡಿದ್ದನ್ನು ಕಂಡು, ಅವನ ಸೇನೆ ಧೈರ್ಯಗುಂದಿ, ಕೈಲಿದ್ದ ಶಸ್ತ್ರಗಳನ್ನು ಬಿಸುಟು ಪ್ರಾಣಭಿಕ್ಷೆ ಬೇಡಿದರು.

'ಹೊಡೆಯಿರಿ, ಕೊಲ್ಲಿರಿ' ಎಂದು ಕೂಗುತ್ತಿದ್ದ ರಾಯದುರ್ಗದ ಕೃಷ್ಣಪ್ಪನಾಯಕ ತನ್ನ ಗುರುತು ಕಾಣಿಸದಂತೆ ತಲೆಯ ಮೇಲಿದ್ದ ರಾಜಮುಂಡಾಸನ್ನು ಕಿತ್ತು ಬಿಸುಟು, ಕತ್ತು-ಕೈಗಳಲ್ಲಿದ್ದ ಉಡುಗೆಗಳನ್ನು ಕಳಚಿ ಒಗೆದು, ಕೈಗೆ ಸಿಕ್ಕ ಕುದುರೆಯೊಂದನ್ನು ಹತ್ತಿಕೊಂಡು ಓಡುತ್ತಿದ್ದ ನವಾಬನ ಕುದುರೆಯನ್ನು ಹಿಂಬಾಲಿಸಿದ.

ಲಾಲ್‌ಕೋಟೆಯ ಮೇಲೆ ನಿಂತು ಓಡುತ್ತಿದ್ದ ನವಾಬನನ್ನು ಮದಕರಿನಾಯಕನ ಪಕ್ಕದಲ್ಲಿ ನಿಂತು ನೋಡಿದ ಗುದಗತ್ತಿ ಹಲ್ಲುಕಚ್ಚಿ ಹೇಳಿದ –

"ಆ ನವಾಬನನ್ನು ಬಿಡಬಾರದಾಗಿತ್ತು. ಅವನ ತಲೆ ತಂದಿದ್ದರೆ ಇವತ್ತಿನ ಜಯ ಸಾರ್ಥಕವಾಗುತ್ತಿತ್ತು. ಹಾವಿನ ಹೆಡೆಕತ್ತರಿಸಿದಂತಾಗಿ ಯುದ್ಧ ಇವತ್ತಿಗೇ ಮುಗಿಯುತ್ತಿತ್ತು."

"ನವಾಬನ ನಸೀಬು ಚೆನ್ನಾಗಿದೆ, ಉಳಿದುಕೊಂಡ. ಆಯಿತು - ಇವತ್ತಿಗೇ ಯುದ್ಧ ಮುಗಿಯಲಿಲ್ಲ - ಗುದಗತ್ತಿ, ಅದಕ್ಕೆ ಅವಕಾಶವೂ ಬರುತ್ತದೆ. ಬಂದಾಗ ನಿನ್ನ ಕೈ ಚುರುಕು ತೋರಿಸುವಿಯಂತೆ. ಅಂತೂ ಇವತ್ತು ತಾಯಿ ಉತ್ಸವಾಂಬೆಯ ತಾಳಿಯ ಭಾಗ್ಯ ನಮಗೆ ಜಯ ತಂದುಕೊಟ್ಟಿತು. ಸತ್ತವರ ಸಾವು ವ್ಯರ್ಥವಾಗಲಿಲ್ಲ."

- ಎಂದು ಹೇಳಿದ ಮದಕರಿನಾಯಕ ಜಯಘೋಷ ಕೂಗುತ್ತಾ, ಕತ್ತರಿಸಿದ ಅರಿರುಂಡಗಳನ್ನು ಹಿಡಿದುಕೊಂಡು ಕಾಲಭೈರವನ ಪಡೆಯಂತೆ ಹಿಂತಿರುಗುತ್ತಿದ್ದ ದುರ್ಗದ ದಂಡನ್ನು ಕಂಡು.

* * *

ಪಲಾಯನ ಮಾಡುವ ನವಾಬನನ್ನು ಕಂಡು ಗುದಗತ್ತಿಯ ಬಾಯಲ್ಲಿ ತಾನಾಗಿ ಮೂಡಿದ ಮಾತಿನ ಬಲವನ್ನು ಪರೀಕ್ಷಿಸುವ ಸಂದರ್ಭ ಮರುದಿನವೇ ಒದಗಿಬಂತು.

ಆ ದಿನ ಪ್ರಾತಃಕಾಲ –

ಗುದಗತ್ತಿ ಪ್ರಧಾನಿ ಪರಶುರಾಮನಾಯಕರೊಡನೆ ರಂಗಯ್ಯನಬಾಗಿಲ ಮೇಲೆ ನಿಂತು, ಬುದ್ಧಿವಂತನ ಮರಡಿಯ ಬಳಿ ನಡೆಯುತ್ತಿದ್ದ ಸೇನಾಚಟುವಟಿಕೆಯನ್ನು ವೀಕ್ಷಿಸುತ್ತಿದ್ದಾಗ, ಬೀಡುಬಿಟ್ಟ ಪಾಳಯದಲ್ಲಿ ಛತ್ರಿ, ಚಾಮರಗಳ ಮರ್ಯಾದೆಯೊಡನೆ ಪಾಲಕಿಯಲ್ಲಿ ಕುಳಿತು ಅಟ್ಟಹಾಸದಿಂದ ಹೋಗುತ್ತಿದ್ದವನೊಬ್ಬನನ್ನು ಕಂಡು, ಅದು ನವಾಬನೇ ಇರಬೇಕೆಂದು ಭಾವಿಸಿದ ಗುದಗತ್ತಿಗೆ, ಹಿಂದಿನ ದಿನ ತಾನಾಡಿದ ಮಾತು ನೆನಪಾಗಿ. ತೋಳಲ್ಲಿ ಉತ್ಸಾಹ ಉಕ್ಕಿಬಂದು-

“ಅಲ್ಲಿ ನೋಡಿ ಮಾ ಸ್ವಾಮಿ, ನವಾಬ ಹೋಗುತ್ತಿದ್ದಾನೆ”

- ಎಂದು ಹೇಳಿದ.

ಗುದಗತ್ತಿ ತೋರಿಸಿದತ್ತ ನೋಡಿದ ಪರಶುರಾಮನಾಯಕನೂ ಪಾಲಕಿಯನ್ನು ಕಂಡು-

“ಇರಬಹುದು, ನಿನ್ನೆ ಸತ್ತವರ ಸಂಖ್ಯೆ ಎಷ್ಟು ಎಂದು ಕೇಳುವುದಕ್ಕೆ ರಾಯದುರ್ಗದವರ ಹತ್ತಿರ ಹೋಗುತ್ತಿರಬಹುದು, ಹೋಗಲಿ ಬಿಡು”

-ಎಂದು ತಾತ್ಸಾರವಾಗಿ ಹೇಳಿದ.

ಹಾಗೆ ಹೇಳಿಬಿಟ್ಟರೆ ನಾನು 'ಗುದಗತ್ತಿ' ಎಂದು ಕರೆಸಿಕೊಂಡು ಸಾರ್ಥಕವಾದದ್ದೇನು ? ನಿನ್ನೆ ನಾನು ಮಹಾಸ್ವಾಮಿಯವರಿಗೆ ಹೇಳಿದ್ದೆ- 'ನಾನಿದ್ದಿದ್ದರೆ ನವಾಬನನ್ನು ಜೀವಸಹಿತ ಹೋಗಲು ಬಿಡುತ್ತಿರಲಿಲ್ಲ' ಎಂದು. ನನ್ನ ಮಾತು ಏಕನಾಥೇಶ್ವರಿಗೆ ಕೇಳಿಸಿರಬೇಕು. ಅದಕ್ಕೇ ಇವತ್ತು ಮತ್ತೆ ನವಾಬನನ್ನು ತೋರಿಸಿದಳು.”

- ಎಂದು ಉತ್ಸಾಹದಿಂದ ಹೇಳಿದ ಗುದಗತ್ತಿ.

“ಆಯಿತು. ನವಾಬನನ್ನು ನೋಡಿದೆ - ಏನಾಯಿತು ? ಅಮ್ಮನವರನ್ನೇ ಕಂಡ ಹಾಗಾಯಿತೇನು ?” – ಎಂದು ನಗುತ್ತಾ ಹೇಳಿದ ಪರಶುರಾಮನಾಯಕ,

“ಹಾಗಲ್ಲ - ನಿನ್ನೆ ಮಹಾಸ್ವಾಮಿಯವರಿಗೆ ಹೇಳಿದ್ದೆ : 'ಅವಕಾಶ ಸಿಕ್ಕರೆ ನವಾಬನ ತಲೆ ತಂದು ಪಾದಕ್ಕೆ ಒಪ್ಪಿಸುತ್ತೇನೆ' ಎಂದು - ಈಗ ತಾವು ದೊಡ್ಡ ಮನಸ್ಸು ಮಾಡಬೇಕು.”

-ಉತ್ಸಾಹದಿಂದ ಪುಟಿಯುತ್ತಾ ಹೇಳಿದ ಗುದಗತ್ತಿ.

“ಏನು ಮಾಡಬೇಕು ?”

-ಕುತೂಹಲ ಕೆರಳಿ ಕೇಳಿದ ಪರಶುರಾಮನಾಯಕ.

“ನನ್ನ ಕುದುರೆಗೆ ಚಾಲೂಕು ಸಾಲದು. ತಮ್ಮ ಖಾಸಾ ಕುದುರೆ 'ಭವಾನಿ', ನಿಮ್ಮ ಪಟ್ಟಾಗತ್ತಿ ಕೊಟ್ಟು, ಕೋಟೆಬಾಗಿಲು ತೆಗೆಸಿಕೊಡಿ. ನವಾಬನ ತಲೆ ತಂದೊಪ್ಪಿಸದಿದ್ದರೆ ನನ್ನ ಹೆಸರು ಗುದಗತ್ತಿಯಲ್ಲ.”

“ನಿನ್ನ ಉತ್ಸಾಹ ಮೆಚ್ಚಬೇಕಾದ್ದೆ. ಆದರೆ ಆಗದ ಹುಚ್ಚು ಕೆಲಸ ಮಾಡಬೇಡ. ತನ್ನ ಸೇನೆಯ ಮಧ್ಯದಲ್ಲಿರುವ ನವಾಬನ ತಲೆಗಡಿದು ತರುವುದು ಯಾರಿಂದಲೂ ಆಗದ ಕೆಲಸ. ನಿನ್ನ ಉತ್ಸಾಹಕ್ಕೆ ಸೋತು, ಶತ್ರುಗಳಿಗೆ ನಿನ್ನ ತಲೆ ಒಪ್ಪಿಸಿ, ನಾಯಕರಿಂದ ಮೂರ್ಖ ಎನಿಸಿಕೊಳ್ಳಲು ನನಗಿಚ್ಛೆ ಇಲ್ಲ.”

- ಪರಶುರಾಮನಾಯಕ ಗುದಗತ್ತಿಯ ಉತ್ಸಾಹದ ಮೇಲೆ ತಣ್ಣೀರು ಹಾಕುತ್ತಾ ಹೇಳಿದ.

“ತಂದರೆ ನವಾಬನ ತಲೆ ತರುತ್ತೇನೆ. ಸತ್ತರೆ ನಾನೊಬ್ಬ ಸಾಯುತ್ತೇನೆ. ದಸರಾ ಉತ್ಸವದಲ್ಲಿ ನನ್ನ ಕೌಶಲ್ಯ ನೋಡಿದ್ದೀರ. ಅದೆಲ್ಲಾ ಆಟದ ಮಾತು. ಈಗ ಅದಕ್ಕೆ ಪರೀಕ್ಷಾ ಸಮಯ. ಇಲ್ಲವೆಂದು ಹೇಳಿ, ನಾನು ಬದುಕಿಯೂ ಸತ್ತಂತೆ ಮಾಡಬೇಡಿ. ನಿಮ್ಮ ಕುದುರೆ, ಕತ್ತಿ ಹೋಗುತ್ತದೆ ಎಂದು ಚಿಂತೆಯಾದರೆ ಬೇಡ, ಕೋಟೆಬಾಗಿಲು ತೆಗೆಯಲು ಅಪ್ಪಣೆ ಮಾಡಿ. ನನ್ನ ಅದೃಷ್ಟ ಪರೀಕ್ಷೆ ಮಾಡಿ ನೋಡಿಯೇಬಿಡುತ್ತೇನೆ.”

-ಎಂದು, ಪರಶುರಾಮನಾಯಕನ ಕಾಲು ಹಿಡಿದು ಬೇಡಿದ ಗುದಗತ್ತಿ.

ಅವನಾಡಿದ ಮಾತು ಕೇಳಿ, ಅದರ ಹಿಂದಿನ ಉತ್ಕಟತೆ ಅರಿವಾಗಿ –

“ಆಯಿತು. ನನ್ನ ಕುದುರೆ, ಕತ್ತಿ ಹೋದರೆ ಹೋಗಲಿ. ನಿನ್ನ ಸಾಹಸವನ್ನಾದರೂ ನೋಡುತ್ತೇನೆ.”

- ಎಂದು ಹೇಳಿ ಪರಶುರಾಮನಾಯಕ, ತನ್ನ ಸನಿಹದಲ್ಲಿದ್ದ ಆಳಿಗೆ, ತನ್ನ ಕುದುರೆಯನ್ನು ಗುದಗತ್ತಿಗೆ ಕೊಡಿಸುವಂತೆ ತಿಳಿಸಿ, ತನ್ನ ಸೊಂಟದಲ್ಲಿದ್ದ ಪಟ್ಟದ ಕತ್ತಿಯನ್ನು ಬಿಚ್ಚಿಕೊಟ್ಟು –

“ಹೋಗಿ ಬಾ. ನಿನಗೆ ಜಯವಾಗಲಿ - ದುರ್ಗಕ್ಕೆ ಗೆಲುವಾಗಲಿ.”

- ಎಂದು ಹೃತ್ಪೂರ್ವಕವಾಗಿ ಹಾರೈಸಿದ.

ತನ್ನ ಕೈಗೆ ಪರಶುರಾಮನಾಯಕ ಕೊಟ್ಟ ಪಟ್ಟದಕತ್ತಿಯನ್ನು ತೆಗೆದುಕೊಂಡು, ಅದನ್ನು ಒರೆಯಿಂದ ಹೊರತೆಗೆದು ಕೈಯಲ್ಲಿ ಹಿಡಿದು, ಹತ್ತಾರು ಬಾರಿ ಬಗೆಬಗೆಯಾಗಿ ಆಡಿಸಿ ನೋಡಿ ಮನಸ್ಸಿಗೆ ತೃಪ್ತಿ ಮಾಡಿಕೊಂಡು –

“ಒರೆ ನಿಮ್ಮಲ್ಲೇ ಇರಲಿ, ಮಹಾಸ್ವಾಮಿ, ನವಾಬನ ತಲೆಯೊಂದಿಗೆ ಕತ್ತಿಯನ್ನು ತಂದು ಕೊಡುತ್ತೇನೆ”

- ಎಂದು ಹೇಳಿ, ಮಿಂಚಿನಂತೆ ಹೊಳೆದು ಬಳಕುತ್ತಿದ್ದ ಬರಿಗತ್ತಿಯನ್ನೇ ಸೊಂಟದ ಪಟ್ಟಿಗೆ ಸಿಕ್ಕಿಸಿಕೊಂಡು, ಕೋಟೆಯ ಬಾಗಿಲಿನಿಂದ ಕೆಳಗಿಳಿದು, ಆಳು ಕೊಟ್ಟ ಕುದುರೆಯ ಬೆನ್ನು ಚಪ್ಪರಿಸಿ, ತೆರೆದ ಕೋಟೆಯ ಬಾಗಿಲಿನಿಂದ ಕುದುರೆಯೊಂದಿಗೆ ಹೊರನಡೆದು ಕೋಟೆಯ ಬಾಗಿಲ ಅಕ್ಕಪಕ್ಕದಲ್ಲಿದ್ದ ರಾಮಾಂಜನೇಯರಿಗೆ, ಕೋಟೆಯ ಬಾಗಿಲಿನಿಂದ ಕಾಣುತ್ತಿದ್ದ ಉತ್ಸವಾಂಬೆಯ ಮಂದಿರಕ್ಕೆ ಕೈಮುಗಿದು, ಕುದುರೆಯನ್ನೇರಿ, ಲಗಾಮನ್ನು ಸಡಿಲ ಬಿಟ್ಟು ಕುದುರೆಯ ಕತ್ತು ಚಪ್ಪರಿಸಿ–

“ನೀನು ಕುದುರೆಯಲ್ಲ, ಗಾಳಿಮರಿ. ಹಾಗೆ ಹೋಗಬೇಕು”

-ಎಂದು ಹೇಳಿ, ಗುದಗತ್ತಿ ಕುದುರೆಯನ್ನು ಓಡಿಸಿದ.

ಭವಾನಿ ಜಾತಿಕುದುರೆ, ಅದರ ಮೇಲೆ ಕುಳಿತವನು ಅಶ್ವಹೃದಯವನ್ನು ಬಲ್ಲ ಸವಾರ. ಕುದುರೆ, ಆಳು ಒಂದೇ ಆದಂತೆ ಶರವೇಗದಿಂದ ಧಾವಿಸಿತು ಕುದುರೆ - ಲಗಾಮುಹಿಡಿದ ಕೈ ತೋರಿಸಿದ ಗುರಿಯತ್ತ.

ಕೋಟೆಯ ಮೇಲೆ ನಿಂತ ಪರಶುರಾಮನಾಯಕ ದುರ್ಬೀನು ಹಿಡಿದು ನೋಡುತ್ತಿರುವ ಹಾಗೇ ವೇಗವಾಗಿ ಓಡಿದ ಕುದುರೆ ಮಸುಕು ಚಿತ್ರವಾಗಿ ಭೂತನತೋಪನ್ನು ದಾಟಿ, ಎಡಕ್ಕೆ ತಿರುಗಿ, ಬುದ್ಧಿವಂತನಮರಡಿಯ ಬಳಿಯ ಸೇನೆಕಿಕ್ಕಿರಿದ ಪಾಳೆಯದೊಳಗೆ ಹೊಕ್ಕು 'ಇದಾವ ಕುದುರೆ, ಇವನೆಲ್ಲಿಯವನು?' ಎಂದು ಸೈನಿಕರು ನೋಡುತ್ತಿರುವಂತೆಯೇ ಗುದಗತ್ತಿ, ಪಾಲಕಿಯ ಬಳಿ ಹೋಗಿ, ಮಿಂಚಿನ ವೇಗದಲ್ಲಿ ಸೊಂಟದಿಂದ ಖಡ್ಗವನ್ನು ಸೆಳೆದು, ಪಾಲಕಿಯಲ್ಲಿದ್ದವನ ತಲೆಯನ್ನು ಒಂದೇ ಬೀಸು ಏಟಿಗೆ ಕತ್ತರಿಸಿ, ರಕ್ತಕಾರುತ್ತಾ ಕೆಳಗೆ ಬಿದ್ದ ಆತನ ರುಂಡವನ್ನು ಕುದುರೆಯಿಂದ ಇಳಿಯದೆಯೇ, ಹಸ್ತಲಾಘವದಿಂದ ಹಿಡಿದು, ಸೈನಿಕರು 'ಹೋ' 'ಹೋ' ಎಂದು ಚೀರುತ್ತಿರುವಾಗಲೇ, ಕುದುರೆಯನ್ನು ಹಿಂದೆ ತಿರುಗಿಸಿ, ದುರ್ಗದತ್ತ ದೌಡಾಯಿಸಿದ.

ಆದ ಅನರ್ಥವನ್ನು ತಿಳಿದು ನವಾಬನ ಸೈನಿಕರು ಗುದಗತ್ತಿಯತ್ತ ಕೋವಿ ಹಾರಿಸಿದರು. ಹತ್ತಾರು ಮಂದಿ ಕುದುರೆ ಹತ್ತಿ ಅವನನ್ನು ಹಿಂಬಾಲಿಸಿದರು. ಸುತ್ತಲೂ ಹಾರಿಬರುತ್ತಿದ್ದ ಗುಂಡಿನೇಟು ಕುದುರೆಗೆ ತಗುಲದಂತೆ, ಕುದುರೆಯನ್ನು ವಕ್ರಗತಿಯಲ್ಲಿ ವೇಗವಾಗಿ ಓಡಿಸುತ್ತಾ, ಅಡ್ಡ ಬಂದವರ ಮೇಲೆ ಕುದುರೆಯನ್ನು ಹಾಯಿಸಿ, ಒಂದು ಕೈಯಲ್ಲಿ ತಲೆ, ಮತ್ತೊಂದು ಕೈಯಲ್ಲಿ ಮಿಂಚುತ್ತಿರುವ ಕತ್ತಿಯನ್ನು ಚಕ್ರಾಕಾರವಾಗಿ ತನಗಾರೂ ಅಡ್ಡವಾಗದಂತೆ ತಿರುಗಿಸುತ್ತಾ, ಬಾಯಲ್ಲಿ ಲಗಾಮನ್ನು ಕಚ್ಚಿ ಹಿಡಿದು, ಕುದುರೆಯನ್ನು ದುರ್ಗಾಭಿಮುಖವಾಗಿ ಓಡಿಸಿದ ಗುದಗತ್ತಿ.

ಆ ಸಾಹಸಕಾರ್ಯವನ್ನು ನೋಡಿ ಮೆಚ್ಚಿದ ದುರ್ಗದ ಸೈನಿಕರು ಕೇಕೆಹಾಕಿ ಕುಣಿದರು, ಕೆಲವರು ಗುದಗತ್ತಿಯನ್ನು ಹಿಂಬಾಲಿಸುತ್ತಿದ್ದ ಶತ್ರುಸೈನಿಕರತ್ತ ಕೋವಿ ಹಾರಿಸಿದರು. ಕೋವಿಗಳು

ತನ್ನ ಜಯದ ಸಲಾಮುತೋಫಿನಂತೆ ಮೊಳಗುತ್ತಿರಲು, ಗುದಗತ್ತಿ ಕೋಟೆಯ ಬಳಿ ಬಂದು, ತನಗಾಗಿ ಕೋಟೆಯ ಬಾಗಿಲ ಬಳಿ ಕಾಯುತ್ತಿದ್ದ ಪರಶುರಾಮನಾಯಕನ ಕಾಲ ಬಳಿ ಕೈಯಲ್ಲಿದ್ದ ತಲೆಯನ್ನು ಒಗೆದು –

“ಒಪ್ಪಿಸಿಕೊಳ್ಳಿ.”

- ಎಂದು ಹೇಳಿ, ಕುದುರೆಯಿಂದ ಕೆಳಗಿಳಿದು, ಆಯಾಸದಿಂದ ಬೆವರಿ ಬುಸುಗುಟ್ಟುತ್ತಿದ್ದ ಕುದುರೆಯ ಬೆನ್ನು ಚಪ್ಪರಿಸಿ, ಅದರ ಕತ್ತನ್ನು ತಬ್ಬಿ ಮುತ್ತಿಟ್ಟು –

“ನನ್ನ ಮಾತು ಉಳಿಯಿತೇ, ಮಹಾಸ್ವಾಮಿ.”

-ಎಂದು ಕೇಳಿದ.

“ಶಭಾಸ್, ಗುದಗತ್ತಿ.”

-ಎಂದು ಹೇಳಿ, ಪರಶುರಾಮನಾಯಕ ತನ್ನ ಕಾಲ ಬಳಿ ಬಿದ್ದ ತಲೆಯನ್ನು ಎತ್ತಿ ಹಿಡಿದು, ಕಾತರನಾಗಿ ನೋಡಿದ –

ಗುದಗತ್ತಿ ಅಷ್ಟು ಸಾಹಸದಿಂದ ಕತ್ತರಿಸಿ ತಂದ ತಲೆ –

ನವಾಬನದಾಗಿರಲಿಲ್ಲ, ಯಾರೋ ಸರ್ದಾರನದಾಗಿತ್ತು.

“ಈ ತಲೆ ನವಾಬನದಲ್ಲ, ಗುದಗತ್ತಿ - ಬೇರೆ ಯಾರದೋ. ಆದರೂ ನಿನ್ನ ಸಾಹಸಕ್ಕಿದು ನನ್ನ ಕಾಣಿಕೆ, ತಗೋ.”

- ಎಂದು ಕತ್ತಿನಲ್ಲಿದ್ದ ಮುತ್ತಿನ ಹಾರವನ್ನು ಗುದಗತ್ತಿಗೆ ಮೆಚ್ಚುಗಾಣಿಕೆಯಾಗಿ ಕೊಟ್ಟ.

“ನವಾಬನದಲ್ಲ – ”

- ನಿರಾಶೆಯಿಂದ ಮೈಯಲ್ಲಿ ತುಂಬಿದ್ದ ಎಲ್ಲ ಉತ್ಸಾಹವೂ ಬತ್ತಿಹೋದ ಧ್ವನಿಯಲ್ಲಿ ಹೇಳಿದ ಗುದಗತ್ತಿ, -

“ಹಾಗಿದ್ದರೆ ಈ ಕಾಣಿಕೆಗೆ ನಾನು ಅರ್ಹನಲ್ಲ, ನವಾಬನ ತಲೆ ತಂದಾಗ ತೆಗೆದುಕೊಳ್ಳುತ್ತೇನೆ. ನಾಯಿಯನ್ನು ಕತ್ತರಿಸಿದವರಿಗೇಕೆ ಉಡುಗೊರೆ ?”

-ಎಂದು ಖಿನ್ನನಾಗಿ ತಲೆತಗ್ಗಿಸಿ ನುಡಿದು-

“ವೃಥಾ ನಿಮ್ಮ ಕುದುರೆಯನ್ನು ದಣಿಸಿದೆ”

- ಎಂದು ತಲೆತಗ್ಗಿಸಿಕೊಂಡು ಕೋಟೆಯೊಳಗೆ ನಡೆದ.

ತನ್ನ ಸಾಹಸ ಗುದಗತ್ತಿಗೆ ತೃಪ್ತಿಯನ್ನು ನೀಡಲಿಲ್ಲ.

ಆದರೆ ಅದನ್ನು ಕೇಳಿದ ಹೈದರಾಲಿ –

“ಇಂಥ ಹತ್ತು ಜನ ನನ್ನ ಸೇನೆಯಲ್ಲಿದ್ದಿದ್ದರೆ ಇಷ್ಟು ದಿನ ದುರ್ಗ ಉಳಿಯುತ್ತಿರಲಿಲ್ಲ. ಮದಕರಿಯ ಹುಡುಗ ಹುಲಿಯಮರಿ. ನಮಗೆ ಸಿಕ್ಕವರೆಲ್ಲಾ ಕತ್ತೆಯ ಮಕ್ಕಳು....ಅಂತೂ ನನ್ನ ನಸೀಬು ಇನ್ನೂ ಗಟ್ಟಿಯಾಗಿದೆ”

- ಎಂದು ಪರೋಕ್ಷವಾಗಿ ಪ್ರಶಂಸೆಯನ್ನು ಮಾಡಿ, ತನ್ನ ತಲೆಯನ್ನು ಮುಟ್ಟಿ ನೋಡಿಕೊಂಡ.

ದುರ್ಗದಲ್ಲೆಲ್ಲಾ ವಾಯುವೇಗದಿಂದ ಗುದಗತ್ತಿಯ ಸಾಹಸದ ಸುದ್ದಿ ಹರಡಿ, ಜನ ಗುಂಪು ಗುಂಪಾಗಿ ಬಂದು ಕತ್ತರಿಸಿದ ಸರ್ದಾರನ ತಲೆಯನ್ನು ನೋಡಿ, ಗುದಗತ್ತಿಯನ್ನು, ಕೊಂಡಾಡಿದರು. ಅದನ್ನು ನೋಡಬಂದ ಮದಕರಿನಾಯಕ, ಖಿನ್ನನಾದ ಗುದಗತ್ತಿಯ ಬೆನ್ನು ತಟ್ಟಿ ಹೇಳಿದ-

“ನವಾಬನ ನಸೀಬು ಚೆನ್ನಾಗಿದೆ, ಉಳಿದುಕೊಂಡ. ಚಿಂತಿಸಬೇಡ ಗುದಗತ್ತಿ. ಇನ್ನೂ ಯುದ್ಧ ಮುಗಿದಿಲ್ಲ. ನಿನಗೆ ಮತ್ತೊಂದು ಅವಕಾಶ ಸಿಗುತ್ತದೆ - ನವಾಬನ ಅದೃಷ್ಟ ಕೆಟ್ಟ ದಿನ.”

೯

ಅದೃಷ್ಟ –

ಮದಕರಿನಾಯಕನ ಅದೃಷ್ಟ –

ಹೈದರಾಲಿಯ ಅದೃಷ್ಟ –

ಇಬ್ಬರ ಅದೃಷ್ಟವೂ – ಒಬ್ಬರ ಅದೃಷ್ಟ, ಮತ್ತೊಬ್ಬರ ಅದೃಷ್ಟದೊಂದಿಗೆ – ಕಣ್ಣು ಮುಚ್ಚಾಲೆಯಾಟವಾಡುತ್ತಿತ್ತು - ದಿನದಿನವೂ ಇಬ್ಬಣಗಳಿಂದಲೂ ತಲೆಗಳ ಬಲಿಯ ಪಣ ತೆಗೆದುಕೊಳ್ಳುತ್ತಾ.

ಹೈದರಾಲಿ –

ಮಾಡಿದ ಯುದ್ಧಗಳಲ್ಲೆಲ್ಲಾ ಅಪಜಯವನ್ನು ಅನುಭವಿಸಿ, ಯುದ್ಧದಲ್ಲಿ ದುರ್ಗವನ್ನು ಗೆಲ್ಲುವ ಆಸೆ ಕೈಬಿಟ್ಟು, ಪ್ರತಿ ಸೋಮವಾರವೂ ದುರ್ಗದ ಕಾಳಿಗೆ ನೂರಾರು ಸೈನಿಕರ ತಲೆಯ ಮೀಸಲು ಕಾಣಿಕೆ ಒಪ್ಪಿಸಿ, ಇಂದಲ್ಲ ನಾಳೆ ತನ್ನ ಅದೃಷ್ಟಚಕ್ರದ ಗತಿ ಬದಲಿಸಿ, ದುರ್ಗದಲ್ಲಿ ಬಿತ್ತಿದ ಸಂಚಿನ ಬೀಜ ಫಲಿಸಿ, ದುರ್ಗವನ್ನು ಬಲಿ ತೆಗೆದುಕೊಳ್ಳುವ ತನ್ನ ಆಸೆ ಎಂದು ಫಲಿಸುತ್ತದೋ ಎಂದು ಕಾಯುತ್ತಿದ್ದರೆ –

ಮದಕರಿನಾಯಕ –

ದಿನದಿನವೂ ಮರಾಠರಿಂದ ಸೇನೆಯ ಸಹಾಯ ಬರುವುದನ್ನೇ ನಿರೀಕ್ಷಿಸುತ್ತಾ, ಎಷ್ಟು ಬೇಗ ಆ ದಿನ ಬಂದೀತೋ, ಎಂದು ಹೈದರಾಲಿಯ ತಲೆಯನ್ನು ದುರ್ಗದ ರಣಕಾಳಿಗೆ ಬಲಿಗೊಟ್ಟು, ಅವನ ರಕ್ತದಲ್ಲಿ, ತನ್ನಿಂದ, ತನ್ನ ಕಡೆಯವರಿಂದಾದ ಕಗ್ಗೊಲೆಯ ಪಾತಕದ ಕಲಂಕವನ್ನು ತೊಳೆದುಕೊಳ್ಳುವುದು ಸಾಧ್ಯವಾದೀತೋ ಎಂದು ಕಾಯುತ್ತಿದ್ದ.

ಅವರಿಬ್ಬರು ಹಾಗೆ ಕಾಯುತ್ತಿದ್ದರೆ –

ಹಲವಾರು ತಿಂಗಳುಗಳಿಂದ ಎಡೆಬಿಡದೆ ನಡೆಯುತ್ತಿದ್ದ ಯುದ್ಧದಲ್ಲಿ ಯುದ್ದಕ್ಕೂ, ರೋಗಕ್ಕೋ, ಮತ್ತಾವ ಸಂಕಷ್ಟಕ್ಕೂ ಮನೆಗೊಬ್ಬ ಗಂಡನ್ನು ಬಲಿಕೊಟ್ಟು, ಹಗಲಿರುಳು ಮದ್ದಿನ ವಾಸನೆ ಕುಡಿದು ಬಗೆಬಗೆಯ ಮೂಗು, ಗಂಟಲುಗಳ ಬೇನೆಯಿಂದ ನರಳುತ್ತಾ, ನಿಗಧಿಯಾದ ಹೊತ್ತುಗಳಲ್ಲಿ ಹೊಂಡಗಳಿಂದ ಹೊತ್ತುತಂದ ಮದ್ದಿನ ನುಸಿ ತುಂಬಿದ ನೀರನ್ನು ಕಾಸಿ, ಸೋಸಿ ಕುಡಿದು, ಹಬ್ಬ ಹರಿದಿನಗಳನ್ನು ಮರೆತು, ಹಗೇವುಗಳಲ್ಲಿ ಎಂದೋ ಶೇಖರಿತವಾಗಿದ್ದು ಈಗ ಅನಿವಾರ್ಯವಾಗಿ ಹೊರಬಂದು ಮುಗ್ಗಲುಹಿಡಿಯಬಂದ ಅಕ್ಕಿ, ರಾಗಿ, ಜೋಳ, ಸಿಕ್ಕಿದ ಸೊಪ್ಪು, ಗೆಡ್ಡೆಗಳಿಂದ ಹೇಗೋ ಹೊಟ್ಟೆ ತುಂಬಿಸಿಕೊಂಡು, ಪೇಟೆಯಲ್ಲಿ ಬೇಕಾದ ಪದಾರ್ಥ ಸಿಗದೆ, ಸಿಕ್ಕಿದ್ದನ್ನೇ ತಂದು, ಸಿಕ್ಕಷ್ಟರಿಂದಲೇ ಸಂತುಷ್ಟರಾಗಿ 'ಮರಾಠರ ಸೇನೆ ಬರುತ್ತದೆ. ಅದು ಬರುತ್ತಿದ್ದಹಾಗೇ ನವಾಬನ ಸೇನೆ ನಿರ್ನಾಮವಾಗುತ್ತದೆ' ಎಂದು ನಂಬಿ ದುರ್ಗದ ಜನ ಆ ಗೆಲುವಿನ ದಿನವನ್ನು ಕಾಯುತ್ತಿದ್ದರು.

ಸಿಹಿನೀರುಹೊಂಡದ ಲಡಾಯಿನಲ್ಲಿ ಹೇಗೋ ದುರ್ಗದೊಳಗೆ ನುಸುಳಿ, ಶ್ರೀಪತಿರಾಯನ ನೆರವಿನಿಂದ ತಲೆಮರೆಸಿಕೊಂಡು, ಅಷ್ಟಿಷ್ಟು ಸುದ್ದಿ ಸಂಗ್ರಹಿಸುತ್ತಾ, ಏನೋ ಕಾರಣಕ್ಕಾಗಿ ಯುದ್ಧವನ್ನು - ನಾಯಕರನ್ನು ನಿಂದಿಸಹೋಗಿ, ಜನರಿಂದ ತಪರಾಕಿಗೆ ಹೊಡೆಸಿಕೊಂಡ ಅಬ್ದುಲ್‌ಖಯ್ಯಾಮನೂ, ಎಷ್ಟೆಷ್ಟು ಪ್ರಯತ್ನಿಸಿದರೂ, ಯಾರೊಬ್ಬರಲ್ಲೂ ದ್ರೋಹದ ಬೀಜ ಬಿತ್ತಲು ಸಾಧ್ಯವಾಗದೆ, ಬಿಗಿಯಾದ ಕೊತ್ವಾಲಚಾವಡಿಯವರ ಕೈಯಿಂದ ತಪ್ಪಿಸಿಕೊಂಡು ಉಳಿದದ್ದೇ ಭಾರಿ ಅದೃಷ್ಟ ಎಂದು ನಂಬಿ, ಪಾರಿವಾಳದ ಮೂಲಕ ನವಾಬನಿಗೂ ಸುದ್ದಿ ಕಳಿಸಿದ್ದ –

"ಮರಾಠರೂ ಬರುತ್ತಾರೆ ಎಂದು ದುರ್ಗದವರು ನಂಬಿ ಇರುವವರೆಗೂ ನಮ್ಮ ಆಟ ನಡೆಯುವುದಿಲ್ಲ. ಜನ ಅವರಿಗಾಗಿ ಕಾಯುತ್ತಿದ್ದಾರೆ. ಪುಣೆಯ ಕಡೆ ನಿಗಾ ಇರಲಿ" -ಎಂದು.

ಅಬ್ದುಲ್‌ಖಯ್ಯಾಂ ಕಳಿಸಿದ ಆ ಸುದ್ದಿ ಕಿವಿಗೆ ಬಿದ್ದ ದಿನದಿಂದ ಹೈದರಾಲಿ ದುರ್ಗದ ಸುತ್ತಲ ಚೋರಪಹರೆ ವ್ಯವಸ್ಥೆಯನ್ನು ಮತ್ತಷ್ಟು ಬಿಗಿಮಾಡಿ, ಪುಣೆಯ ದಾರಿಯತ್ತ ಸಾವಿರ ಕಣ್ಣು ತಿರುಗಿಸಿ, ಹಗಲಿರುಳು ಎಚ್ಚರದಿಂದ ಕಾಯುತ್ತಿದ್ದ.

ಹಾಗಿರುವಾಗಲೇ –

ಒಂದು ದಿನ, ಹಗಲಳಿದು ಕತ್ತಲು ಕಾಲಿಡುವ ಮಬ್ಬು ವೇಳೆಯಲ್ಲಿ, ಚೋಳಗಟ್ಟದ ಕಡೆಯಿಂದ ಇಬ್ಬರು ಬಡಕಲು ಮೈಯವರು, ಹೆಗಲಮೇಲೆ ತುಂಡುಗಂಬಳಿ, ಮರ್ಯಾದೆ ಮುಚ್ಚಲು ಲಂಗೋಟಿ ಇಷ್ಟೇ ಉಡುಪು ಧರಿಸಿ, ಕಟ್ಟಿಗೆ ಹೊರೆ ಹೊತ್ತು ಬರುತ್ತಿದ್ದವರು, ಗಸ್ತು ತಿರುಗುತ್ತಿದ್ದ ನವಾಬನ ಸಿಪಾಯಿಗಳ ಕಣ್ಣಿಗೆ ಕಂಡು, ಸಿಪಾಯಿಗಳನ್ನು ಕಂಡೂ ಕಾಣದಂತೆ ಹೋಗುತ್ತಿದ್ದ ಅವರಿಬ್ಬರನ್ನು ತಡೆದು-

"ನೀವು ಯಾರೋ, ಎಲ್ಲಿಂದ ಬರುತ್ತಿದ್ದೀರಿ, ಎಲ್ಲಿಗೆ ಹೋಗುತ್ತಿದ್ದೀರಿ ?"

-ಎಂದು ಕೋವಿಯನ್ನು ಅವರ ಎದೆಗೆ ಗುರಿಯಿಟ್ಟೇ ಜಬರದಸ್ತಾಗಿ ಕೇಳಿದರು ನವಾಬನ ಸೈನಿಕರು.

ಆ ಸೈನಿಕರು, ಅವರ ಕೈಯ ಕೋವಿಯನ್ನು ಕಂಡೇ ಹೆದರಿ, ಅವರಿಬ್ಬರೂ ಭಯ ತುಂಬಿದ ಧ್ವನಿಯಲ್ಲಿ-

"ನಮ್ಮನ್ನು ಮಾಫ್ ಮಾಡಬೇಕು, ಸಾಹೇಬ್ರೇ - ನಾವು ಗರೀಬ ಜನ, ಮನೇಲಿ ಗಂಜಿ ಕಾಸೋಕೆ ಸೌದೆ ಇರಲಿಲ್ಲ. ತರೋಕೆ ಹೋಗಿದ್ದಿವಿ. ಕಾಡಿನಲ್ಲಿ ಒಣಸೌದೆ ಸಿಗುವುದು ತಡವಾಗಿ ಕತ್ತಲಾಯಿತು. ಸಿಕ್ಕಷ್ಟು ತಗೊಂಡು ನಮ್ಮ ಹಟ್ಟಿಗೆ ಹೋಗ್ತಾ ಇದೀವಿ"

-ಎಂದು ಹೇಳಿದರು.

"ನಿಮ್ಮದು ಯಾವ ಹಳ್ಳಿ ?"

"ಹಳ್ಳಿ ಅಂತ ಎಲ್ಲಿ ಬಂತು ಸಾಹೇಬರೆ, ನಿಮ್ಮ ದರ್ಬಾರಿನಲ್ಲಿ. ಇಲ್ಲೇ ಹತ್ತು ಸಂಸಾರ ಹುಲಿಗೊಂದಿ ತಾವ ಗುಡ್ಲು ಕಟ್ಟಿಕೊಂಡು, ಗೆಡ್ಡೆ-ಗೆಣಸಿನ ಗಂಜಿ ಕಾಸಿ ಕುಡೀತಾ ಇದೀವಿ. ಸುತ್ತಮುತ್ತ ಸೌದೆಗೂ ಬರಗಾಲ ಬಂದೋಯ್ತು - ಮನೆಹಾಳುಪಾಳೇಗಾರ ನವಾಬರ ದ್ವೇಷ ಕಟ್ಟಿಕೊಂಡು"

- ಎಂದು ಹೇಳಿದ ಒಬ್ಬ.

"ನಾವು ಇಲ್ಲೇ ಸುತ್ತೋ ಜನ. ಇಲ್ಲೆಲ್ಲಾ ನಿಮ್ಮ ಗುಡಿಸಲು ನಮ್ಮ ಕಣ್ಣಿಗೆ ಬಿದ್ದೇ ಇಲ್ಲವಲ್ಲ."

"ಹಂಗೆಲ್ಲಾ ಜನದ ಕಣ್ಣಿಗೆ ಬಿದ್ದಿದ್ರೆ ಬದುಕ್ತಿದ್ವಾ, ಸಾಹೇಬ್ರೆ. ಹೀಗೇ ಗವಿ, ಕಲ್ಲು ಪೊಟರೇಲಿ ಜಾನುವಾರಿನ ಹಂಗೆ ಇದೀವಿ - ಯಾರ ಕಣ್ಣಿಗೂ ಬೀಳದೆ."

"ಸಂಜೆ ಆದಮೇಲೆ ಯಾರೂ ಓಡಾಡಬಾರು ಅಂತ ಹುಕುಂ ಆಗಿರೋದು ನಿನಗೆ ಗೊತ್ತಿಲ್ವೇನೋ, ಗುಲಾಂ. ಆ ಮಾತೆಲ್ಲಾ ಇರ್ಲಿ. ನಿನ್ನ ಕಟ್ಟಿಗೆ ಹೊರೆ ಇಳ್ಸಿ, ಅದನ್ನು ಬಿಚ್ಚು– ಅದರಲ್ಲಿ ಕಟ್ಟಿಗೇನೇ ಇದ್ಯೋ ಮತ್ತೇನಿದ್ಯೋ ನೋಡೋಣ"

- ಎಂದು ಅಪ್ಪಣೆ ಮಾಡಿದ ಒಬ್ಬ ಸೈನಿಕ.

"ನೋಡ್ಕೊಳ್ಳಿ ಸಾಹೇಬ್ರೆ. ಕಟ್ಟಿಗೆ ಅಲ್ಲಿ ಇನ್ನೇನು ಬಂಗಾರ ಸಿಕ್ಕದಾ - ಈ ಲಡಾಯಿನಲ್ಲಿ ಬೆಂದುಹೋಗಿರೋ ಭೂಮೀಲಿ"

-ಎಂದು ಹೇಳಿ ಇಬ್ಬರೂ ತಮ್ಮ ತಲೆಯ ಮೇಲಿದ್ದ ಕಟ್ಟಿಗೆಯ ಹೊರೆಗಳನ್ನು ಇಳಿಸಿ, ಅದನ್ನು ಕಟ್ಟಿದ ಕಾಡುಬಳ್ಳಿಯ ಕಟ್ಟನ್ನು ಬಿಚ್ಚಿತೋರಿಸಿದರು.

ಒಬ್ಬ ಸೈನಿಕ ಕೈಯಲ್ಲಿದ್ದ ಕೋವಿಯಿಂದಲೇ ಕಟ್ಟಿಗೆಯನ್ನೆಲ್ಲಾ ಕಿತ್ತಾಡಿ ನೋಡಿದ.

ಒಣಪುರಲೆ ಕಟ್ಟಿಗೆಯ ತುಂಡುಗಳಲ್ಲದೆ ಬೇರೇನೂ ಕಾಣಲಿಲ್ಲ. ಒಬ್ಬ ಸೈನಿಕ ಅದನ್ನು ನೋಡುತ್ತಿರುವಾಗಲೇ, ಮತ್ತೊಬ್ಬ ಅವರಿಗೆ –

"ನಿಮ್ಮ ಕಚಡಾ ಕಂಬಳಿ ತೆಗೆದು ಕೊಡವಿ. ಅದ್ರಾಗೇನಿದೆಯೋ ನೋಡೋಣ"

-ಎಂದು ಹೇಳಿದ.

ಅದರಂತೆಯೇ ಇಬ್ಬರೂ ತಮ್ಮ ಹೆಗಲ ಮೇಲಿದ್ದ ಕಂಬಳಿಗಳನ್ನು ತೆಗೆದು ಕೊಡವಿದರು. ಅವುಗಳಲ್ಲೂ ಏನೂ ಕಾಣಲಿಲ್ಲ. ಆ ಬಳಿಕ ಮತ್ತೊಬ್ಬ ಅವರಿಗೆ ಹೇಳಿದ –

"ನಿಮ್ಮ ಪುಡುಗೋಸೀಲಿ ಏನಿದೆಯೋ ? ಇರಬೇಕಾದದ್ದಿದೆಯೋ ಮತ್ತೇನಾದರೂ ಇದೆಯೋ - ನಮ್ಮ ಕಡೆ ಬೆನ್ನು ಮಾಡಿಕೊಂಡು ನಿಮ್ಮ ಲಂಗೋಟಿ ಬಿಚ್ಚಿ."

ಆ ಮಾತು ಕೇಳಿದರೂ ಲಂಗೋಟಿ ಬಿಚ್ಚಲು ಇಬ್ಬರೂ ಹಿಂದೆಮುಂದೆ ನೋಡಿದರು.

ಅದನ್ನು ನೋಡಿದ ಒಬ್ಬ ಸೈನಿಕ –

"ಚೋಡ್‌ದೊ ಯಾರ್. ಆ ತಿರುಬೋಕಿ ತಿಕಾನ ಯಾಕೆ ನೋಡಬೇಕು. ಈಗ ಕಾಣ್ತಿರೋ ಅಷ್ಟೇ ಸಾಲ್ದಾ. ಗಬ್ಬು ನನ್ನಮಕ್ಕಳು, ತಿಕ ತೊಳೆದು ಎಷ್ಟು ದಿನ ಆಯ್ತೋ, ಇಲ್ಲಿಗೇ ನಾತ ಬಡಿಯುತ್ತೆ"

- ಎಂದು ಹೇಳಿದರೂ, ಮತ್ತೊಬ್ಬ ಅದನ್ನು ಕೇಳದೆ –

"ಈ ನಮಕ್ ಹರಾಂ ಜನ ಪುಡುಗೋಸೀಲಿ ಏನು, ತಿಕದಾಗೂ ಏನಾದ್ರೂ ಬಚ್ಚಿಟ್ಟುಕೊಂಡಿರ್ತಾರೆ. ಗಲೀಜ್ ಕೆಲಸ ಅಂತ ಬಿಟ್ರೆ, ನಾಳೆ ಏನಾದ್ರೂ ಹೆಚ್ಚುಕಡಿಮೆ ಆದ್ರೆ ನಮ್ಮ ತಲೆಗೆ ಬರ್ತದೆ. ಅದಾಗೋಕಿಲ್ಲ. ಬಿಚ್ಚೋ ನಿನ್ನ ಪುಡುಗೋಸೀನ ?"

- ಎಂದು ಜೋರು ಮಾಡಿ, ತಾನೇ ಕಟ್ಟಿಗೆಯೊಂದನ್ನು ತೆಗೆದುಕೊಂಡು, ಒಬ್ಬನ ಲಂಗೋಟಿಯನ್ನು ಕಿತ್ತೆಸೆದ.

ಲಂಗೋಟಿಯ ಬಟ್ಟೆಯನ್ನು ಉಡುದಾರಕ್ಕೆ ಗಂಟುಹಾಕಿದ್ದುದರಿಂದ, ಬಟ್ಟೆ ಒಂದು ಕಡೆ ಮಾತ್ರ ಬಿಚ್ಚಿಕೊಂಡು ಇಳಿಬಿತ್ತು ; ಅದರೊಂದಿಗೇ ಸಣ್ಣ ಕಾಗದದ ಉಂಡೆಯೊಂದು. ಅದನ್ನು ನೋಡುತ್ತಿದ್ದ ಹಾಗೇ, ಮತ್ತೊಬ್ಬ ಅಲ್ಲಿಂದ ತಪ್ಪಿಸಿಕೊಂಡು ಓಡಲು ಯತ್ನಿಸಿದ.

ಓಡಲು ಯತ್ನಿಸಿದವನತ್ತ ಛಂಗನೆ ಹಾರಿ, ಅಡ್ಡಗಾಲು ಕೊಟ್ಟು ಅವನನ್ನು ಕೆಡವಿ –

"ಹರಾಮ್‌ಖೋರ್, ನಮಗೇ ಮೋಸ ಮಾಡ್ತೀಯ - ನಿಮ್ಮಪ್ಪನಂಥವರನ್ನು ಕಂಡಿದೀನಿ"

- ಎಂದು ಹೇಳಿ, ಅವನ ಎದೆ ಮೆಟ್ಟಿನಿಂತು, ಕಟ್ಟಿಗೆಯ ಹೊರೆಯನ್ನು ಕಟ್ಟಿದ ಬಳ್ಳಿಗಳಿಂದಲೇ ಅವರ ಕೈಕಾಲುಗಳನ್ನು ಬಿಗಿದು ಕಟ್ಟುವ ವೇಳೆಗೆ, ಅವನ ಸಂಗಡಿಗ ಬೆತ್ತಲೆಯಾಗಿ ನಿಂತವನ ಮುಖಕ್ಕೆ ಹೊಡೆದು –

"ಪುಡುಗೋಸೀಲಿ ಕಾಗದ ಬಚ್ಚಿಟ್ಟುಕೊಂಡು ಕಳ್ಳಾಟ ಆಡ್ತೀಯಾ, ಮಾದರ್‌ಚೋದ್, ಇವತ್ತು ನಿನಗೆ ನಿಮ್ಮಪ್ಪ, ತಾತನ ಲಂಗೋಟೀಲಿ ಮುತ್ತಾತ ತೋರಿಸ್ತೀನಿ"

- ಎಂದು ಬೈಯುತ್ತಾ, ಅವನು ಅಲ್ಲಾಡದಂತೆ ಉಡುದಾರವನ್ನೇ ಬಿಗಿಯಾಗಿ ಹಿಡಿದು ಎಳೆದು ನಿಲ್ಲಿಸಿ, ಕೆಳಗೆ ಬಿದ್ದ ಕಾಗದದ ಉಂಡೆಯನ್ನು ಕಿಸೆಯಲ್ಲಿಟ್ಟುಕೊಂಡು, ಅವನಿಗೂ ಕೈಕಾಲು ಬಿಗಿದು, ಇಬ್ಬರನ್ನೂ ಕಾಲಿನಿಂದ ಒದೆಯುತ್ತಾ ಕಲ್ಲು-ಮುಳ್ಳು ತುಂಬಿದ ನೆಲದ ಮೇಲೆ, ಸೌದೆಯ ತುಂಡಿನಂತೆ ಉರುಳಿಸುತ್ತಲೇ ಹತ್ತಿರವಿದ್ದ ತುಕಡಿಯ ಸರ್ದಾರನ ಶಿಬಿರಕ್ಕೆ ಕೊಂಡೊಯ್ದು ಅವರನ್ನೂ ಕಾಗದವನ್ನೂ ಸರ್ದಾರನ ವಶಕ್ಕೆ ಒಪ್ಪಿಸಿದರು.

ಅವರು ಕರೆತಂದ ಇಬ್ಬರನ್ನು ಡೇರೆಯ ಕಂಭಕ್ಕೆ ಬಿಗಿಯಲು ಹೇಳಿ, ಕಾಗದದ ಉಂಡೆಯನ್ನು ಎಚ್ಚರವಾಗಿ ಬಿಚ್ಚಿ ನೋಡಿದ. ಅಕ್ಷರ ಬರದ ಆತನಿಗೆ ಕಾಗದದಲ್ಲಿದ್ದುದು ಏನೆಂಬುದು ಅರ್ಥವಾಗದಿದ್ದರೂ, ಅದರ ತುದಿ, ಅಡಿಯಲ್ಲಿದ್ದ ಮೊಹರನ್ನು ನೋಡಿ, ಅದಾವುದೋ ಮಹತ್ವದ ಪತ್ರವಿರಬೇಕೆಂದು ಊಹಿಸಿ, ಕುದುರೆಸವಾರನೊಬ್ಬನನ್ನು ಕರೆದು –

"ಈ ಕಾಗದಾನ ಈ ಕೂಡಲೇ ಪೂರ್ಣಯ್ಯನವರಿಗೆ ಮುಟ್ಟಿಸಿ, ಅದು ಹೇಗೆ ಸಿಕ್ಕಿತು ಎಂದು ತಿಳಿಸಿ, ಮುಂದೇನು ಮಾಡಬೇಕೆಂದು ಅಪ್ಪಣೆ ತೆಗೆದುಕೊಂಡು ಬಾ. ನೀನು ಬರುವಷ್ಟರಲ್ಲಿ ಇವರ ಮೈಚಳಿ ಬಿಡಿಸಿ, ಎಲ್ಲಿಂದ ಬಂದರೋ ತಿಳಿದುಕೋತೀನಿ"

-ಎಂದು ಅಪ್ಪಣೆ ಮಾಡಿ ಓಡಿಸಿದ.

* * *

ಚೋಳಘಟ್ಟದ ಕಡೆಯ ಚೋರಪಹರೆಯ ಸವಾರ ತಂದುಕೊಟ್ಟ ಕಾಗದವನ್ನು ತೆಗೆದುಕೊಂಡು, ಅದು ಸಿಕ್ಕ ಸಂದರ್ಭವನ್ನು ಅವನಿಂದ ತಿಳಿದು-

"ಮುಂದೆ ಅಪ್ಪಣೆ ಆಗೋವರೆಗೂ ಅವರಿಬ್ಬರನ್ನೂ ಬಿಡಕೂಡದು. ಸಿಕ್ಕಾಪಟ್ಟೆ ಹೊಡೆದು ಚಿತ್ರಹಿಂಸೆ ಮಾಡಿ ಪ್ರಾಣ ತೆಗೆಯಬಾರದು. ಈ ಕಾಗದ ನೋಡಿಕೊಂಡು ಮುಂದೆ ನಾನೇ ಅವರೊಂದಿಗೆ ಮಾತನಾಡಬೇಕಾದ ಸಂದರ್ಭ ಒದಗಬಹುದು"

- ಎಂದು ಆ ಸವಾರನಿಗೆ ಹೇಳಿಕಳಿಸಿ, ಅವನು ಹೋದ ಬಳಿಕ, ಪೂರ್ಣಯ್ಯ ಆ ಕಾಗದವನ್ನು ಬಿಚ್ಚಿ ನೋಡಿದ –

ಕಾಗದದ ಮೇಲಿನ ಮೊಹರನ್ನು ನೋಡುತ್ತಿದ್ದಂತೆಯೇ ಅದು ಪೇಶ್ವೆಯವರ ಆಸ್ಥಾನದಿಂದ ಬಂದ ಕಾಗದ ಎಂಬುದು ಅರಿವಾಗಿ ಕುತೂಹಲ ಕೆರಳಿ, ಕಾಗದವನ್ನು ಓದಿ ನೋಡಿದ - ಖುದ್ದಾಗಿ ಪ್ರಧಾನಿ ನಾನಾಫಡ್ನವೀಸನೇ ಬರೆದ ಕಾಗದ ಅದಾಗಿತ್ತು.

ಆ ಪತ್ರದಲ್ಲಿ ನಾನಾಫಡ್ನವೀಸನು ದುರ್ಗದ ನಾಯಕರಿಗೆ-

"ನಿಮ್ಮಿಂದ ನಮ್ಮ ಸೇನೆಯ ಸಹಾಯ ಕೋರಿ, ಮೇಲಿಂದಮೇಲೆ ಬರೆದ ಪತ್ರಗಳು ಕೈಸೇರಿ, ಅಲ್ಲಿನ ವಿಷಯವೆಲ್ಲವೂ ತಿಳಿಯಿತು. ನಿಮ್ಮ ಕಡೆಯಿಂದ ಬಂದ ಸಾರ್ವಭೌಮರಾಯರೂ ಖುದ್ದಾಗಿ ಎಲ್ಲಾ ವಿಷಯಗಳನ್ನು ತಿಳಿಸಿದರು. ಇಲ್ಲಿಯ ವಿದ್ಯಮಾನಗಳ ಬಿಕ್ಕಟ್ಟಿನಿಂದಾಗಿ ನಿಮಗೆ ಸಹಾಯ ಮಾಡಲು ವಿಳಂಬವಾಯಿತು. ಈ ಬಗ್ಗೆ ಅನ್ಯಥಾ ಭಾವಿಸಬಾರದು. ನಮಗೆ ನೆರವಾದ ನಿಮ್ಮ ಬಗ್ಗೆ ಭ್ರಾತೃಭಾವನೆಯಲ್ಲದೆ, ಬೇರೆ ಭಾವನೆಯಿಲ್ಲ. ಇಷ್ಟು ದಿನ ನಿಮಗೆ ಸಹಾಯಮಾಡದೆ ಹೋದುದಕ್ಕಾಗಿ ಕ್ಷಮಿಸಿ. ಈಗ ತಮ್ಮ ಸಹಾಯಕ್ಕೆ ಗೋಪಾಲಹರಿ ಮತ್ತು ನಾನಾಜಿ ಫಾಕಡ್ಯಾ ಈ ಸರದಾರರ ಸಂಗಡ, ಮೂವತ್ತು ಸಾವಿರ ಕುದುರೆಸೇನೆ, ಅದಕ್ಕೆ ಅಗತ್ಯವಾದ ತೋಫಖಾನೆ, ಬಾಕಿ ಸರಂಜಾಮು ಎಲ್ಲಾ ಕಳುಹಿಸಲಾಗಿದೆ. ಸೇನೆ ಅಲ್ಲಿಗೆ ತಲುಪವವರೆಗೂ, ಲಡಾಯಿ ಮಾಡುತ್ತಾ ಇರುವುದು. ಆ ಬಳಿಕ ನೀವೂ ಅವರೂ ಕೂಡಿ, ಹೈದರಲ್ಲಿಯನ್ನು ಹಿಡಿದು ಪುಣೆಗೆ ರವಾನಿಸಬೇಕು"

-ಎಂದು ಬರೆದಿತ್ತು.

ಆ ಕಾಗದವನ್ನು ಓದಿ, ಹೊರಗೆ ಕವಿದ ಕತ್ತಲೆಲ್ಲವೂ ಮೊತ್ತವಾಗಿ ಬಂದು ಪೂರ್ಣಯ್ಯನ ಹೃದಯದಲ್ಲಿ ತುಂಬಿದಂತಾಗಿ, 'ಮುಂದೇನು ಮಾಡುವುದು ?' ಎಂದು ಚಿಂತಿಸುತ್ತಾ ಕುಳಿತ.

ಮರಾಠರ ಜಾಸೂದರುತಂದ ಕಾಗದ, ಅಕಸ್ಮಾತ್ ತಮ್ಮ ಜೋರಪಹರೆಯವರಿಗೆ ಸಿಗದೆ, ಮದಕರಿನಾಯಕನ ಕೈಸೇರಿದ್ದರೆ - ?

ಭವಿಷ್ಯವನ್ನು ಚಿಂತಿಸಲೂ ಪೂರ್ಣಯ್ಯನ ಮನಸ್ಸು ಹೆದರಿತು.

'ಮುಂದೆ ಹೇಗೆ- ?'

ಹೃದಯದಲ್ಲಿ ಕವಿದ ಭೀತಿ, ಚಿಂತೆಗಳ ಕತ್ತಲೆಯ ಹೊರೆ ಹೊತ್ತು, ಯೋಚಿಸುತ್ತಾ ಕುಳಿತೇ ಇದ್ದ ಪೂರ್ಣಯ್ಯ.

ದುರ್ಗದ ಮೇಲೆ ಆಗಸದಲ್ಲಿ ಕತ್ತಲು ಕವಿದು, ನಕ್ಷತ್ರಗಳು ಮಿನುಗುತ್ತಿದ್ದವು. ಕೋಟೆಯ ಕೆಳಗೆ ಬಯಲಿನಲ್ಲಿ ಹಾಕಿದ ಸೇನೆಯ ಗುಡಾರಗಳಲ್ಲಿ ಸಾಲಾಗಿ, ಗಾಯಾಳುಸೈನಿಕರಿಗಾಗಿ ನಿರ್ಮಿಸಿದ ಬಿದಿರುತಡಿಕೆಯ ಶಿಬಿರಗಳಲ್ಲಿ, ಮನೆ-ಮಹಲುಗಳಲ್ಲಿ, ಬಿಡದಿ-ಬಿಡಾರಗಳಲ್ಲಿ ಸಾವಿರಾರು ದೀಪಗಳು ಮಂಕಾಗಿ ಕ್ಷೀಣ ಹಳದಿಯ ಕಾಂತಿಯಿಂದ ಬೆಳಗುತ್ತಿದ್ದವು - ಮಿಣುಕುಹುಳುಗಳು ದುರ್ಗದ ಮೇಲಿಳಿದು ಕುಳಿತಂತೆ. ಸ್ಮಶಾನದಲ್ಲೂ ಹತ್ತಾರು ಚಿತೆಗಳು ಮುಗಿಲತ್ತ ಕೆನ್ನಾಲಗೆ ಚಾಚಿ ಉರಿಯುತ್ತಿದ್ದವು.

ಆದರೆ ಅದನ್ನು ನೋಡುತ್ತಾ, ಹಿಡಿಂಬೇಶ್ವರನ ಬತೇರಿಯ ಮೇಲೆ ಕುಳಿತ ಮದಕರಿನಾಯಕನ ಹೃದಯದಲ್ಲಿ ಮಾತ್ರ ದಟ್ಟ ಕತ್ತಲೆ ಕವಿದಿತ್ತು. ಹೊರಗಿದ್ದ ಸಹಸ್ರ ಸಹಸ್ರ ಬೆಳಕಿನ ಕುಡಿಗಳಲ್ಲಿ ಒಂದಾದರೂ ಅವನ ಹೃದಯದಲ್ಲಿ ನಂದಿಹೋಗಿದ್ದ ಆಸೆಯ ಹಣತೆಯನ್ನು ಹೊತ್ತಿಸಿರಲಿಲ್ಲ.

ದೂರ, ಬಹುದೂರ –

ಕಣ್ಣು ಕಾಣುವಷ್ಟು ವಿಸ್ತಾರವೂ ವ್ಯಾಪಿಸಿದ ಹೈದರಾಲಿಯ ಸೇನೆಯ ಬಿಡಾರಗಳಲ್ಲಿ ಉರಿಯುತ್ತಿದ್ದ, ಅತ್ತಿಂದಿತ್ತ ಚಲಿಸುತ್ತಿದ್ದ ದೀವಟಿಗೆಗಳು ಮದಕರಿನಾಯಕನ ಹೃದಯದಲ್ಲಿ ಕವಿದ ಕತ್ತಲನ್ನು ಅಣಕಿಸುತ್ತಿರುವಂತಿತ್ತು; ಕತ್ತಲೆಯೇ ಬಾಯ್ತೆರೆದು ತನ್ನ ಕುಡಿಬೆಳಕಿನ ಹಲ್ಲುಗಳನ್ನು ಹೊರತೋರಿ ಹಂಗಿಸಿದಂತಿತ್ತು - ಶತ್ರುಪಾಳಯದ ಬೆಳಕಿನ ಮಿನುಗುಗಳು.

ಎಷ್ಟು ಹೊತ್ತಾದರೂ, ಅಕ್ಕಪಕ್ಕದಲ್ಲಿದ್ದವರೊಂದಿಗೆ ಒಂದೂ ಮಾತನಾಡದೆ, ಬಂಡೆಯ ಮೇಲಿನ ಮತ್ತೊಂದು ಬಂಡೆಯಂತೆ ಕುಳಿತ ಅಣ್ಣನನ್ನು ಮಾತನಾಡಿಸಲೂ ಪರಶುರಾಮನಾಯಕನಿಗೆ ಧೈರ್ಯವಾಗಲಿಲ್ಲ. ಅಷ್ಟು ದೂರದಲ್ಲಿ ನಿಂತಿದ್ದ ಅಂಗರಕ್ಷಕರೂ ಗಟ್ಟಿಯಾಗಿ ಉಸಿರು ಬಿಡದೆ ನಿಂತಿದ್ದರು, ತಮಗೂ ಉಸಿರಾಡಲು ತ್ರಾಣವಿಲ್ಲದವರಂತೆ.

ಹಾಗೆ ಮೌನವಾಗಿ ಎಷ್ಟೋ ಹೊತ್ತು ಕುಳಿತ ಬಳಿಕ, ಪರಶುರಾಮನಾಯಕನೇ ಧೈರ್ಯ ತಂದುಕೊಂಡು –

"ಆ ಸಣ್ಣ ಮಾತು - ಇನ್ನೆಷ್ಟು ಹೊತ್ತು ಅದರ ಯೋಚನೆ ಮಾಡುತ್ತೀರಿ, ಅಣ್ಣ, ಮರೆತುಬಿಡಿ. ಹೊತ್ತು ಸಾಕಷ್ಟಾಯಿತು"

-ಎಂದು ತಗ್ಗಿದ ಧ್ವನಿಯಲ್ಲಿ ಹೇಳಿದ.

"ಸಣ್ಣ ಮಾತೇ – ಅದು ಸಣ್ಣ ಮಾತೇ ? ನೀನೇ ನಾನಾಗಿ ಯೋಚಿಸಿ ಹೇಳು, ಪರಶುರಾಮಣ್ಣ, ಆ ತಾಯಿ ಆಡಿದ್ದು ಸಣ್ಣ ಮಾತೇ ? ಜ್ಞಾಪಿಸಿಕೋ - ಆ ಮಾತಿನ ಹಿಂದಿನ

ನೋವನ್ನು, ನೆನಪಿದೆಯೋ ಅಥವಾ ಮಾಮೂಲಿ ಎಂದು ಮರೆತುಬಿಟ್ಟೆಯೋ ? ನಾನಂತೂ ಮರೆಯಲಾರೆ - ಆ ಮಾತನ್ನು."

- ಕರುಳನ್ನು ಕಿತ್ತು ಎಳೆಎಳೆಯಾಗಿ ಹಿಂಜಿದಂತೆ ಹೇಳಿದ ಮದಕರಿನಾಯಕ.

ಆ ಮಾತು –

ಅದನ್ನು ಪರಶುರಾಮನಾಯಕನೂ ಮರೆತಿರಲಿಲ್ಲ.

ಆ ದಿನ ಸಂಜೆ –

ಕತ್ತಲು ಕವಿದ ಬಳಿಕ ಮದಕರಿನಾಯಕ ತನ್ನ ತಮ್ಮನೊಂದಿಗೆ, ಸಾಮಾನ್ಯ ಜನರ ಸ್ಥಿತಿ-ಗತಿಯನ್ನರಿಯಲು, ಸಾಮಾನ್ಯರ ಉಡುಪು ತೊಟ್ಟು, ಮನೆಗಳಿಗಿಂತ ಹೆಚ್ಚಾಗಿ ಮನೆಗಳ ಪಾಳುಗಳೇ ತುಂಬಿದ್ದ ಬುರುಜಿನಹಟ್ಟಿಯ ಒಳಗೇರಿಯ ಮನೆಯೊಂದರ ಮುಂದೆ ಹೋಗುತ್ತಿದ್ದಾಗ ಮಂಕುದೀಪ ಉರಿಯುತ್ತಿದ್ದ ಮನೆಯೊಂದರಿಂದ ಕೋಪಗೊಂಡ ಹೆಣ್ಣೊಬ್ಬಳು–

'ನನ್ಯಾಕೆ ಹೊಡೀತೀಯೋ ಕೊಬ್ಬಿದೋನೆ. ನಾನೇನು ಬೇಕಂತ ನಿನಗೆ ಮುಗ್ಗಲು ರಾಗಿ ಗಂಜಿ ಹಾಕಿದ್ನಾ, ನಿಮ್ಮ ದೊರೆ ಕೊಟ್ಟದ್ದು - ಮಾಡಿ ಹಾಕಿದೆ. ಬ್ಯಾಡಾಂದ್ರೆ-ಸಣ್ಣಕ್ಕಿ ಅನ್ನ, ಬೆಣ್ಣೆ ಕಾಯಿಸಿದ ತುಪ್ಪಾನ ದಿನಾ ತಿಂದು, ನಮಗೆಲ್ಲಾ ಹೊತ್ತಿಗಿಷ್ಟು ಅಂತ ತೂಕದ ಕೂಳು ಹಾಕ್ತಾನಲ್ಲೋ ನಿಮ್ಮ ಘನಂದಾರಿ ಪಾಳೆಗಾರ - ಅವನ್ನ ಕೇಳು - ನನ್ನ ಮನೆಗ್ಯಾಕೆ ಇಂಥ ಮುಗ್ಗಲು ರಾಗಿ ಕೊಟ್ಟೇಂತ. ಮಕ್ಕಳುಮರೀಗೆ ಗೆಡ್ಡೆ ಬೇಯಿಸಿ ಕೊಟ್ಟು, ನಾನು ಗಂಜಳ ದಂಥ ತಣ್ಣೀರು ಕುಡ್ದು, ಏನೋ ಲಡಾಯಿಗೆ ಹೋಗೋ ಗಂಡಸು ಅಂತ ಇದ್ದದ್ದು ಮಾಡಿ ಹಾಕಿದರೆ, ನನ್ನೆ ಹೊಡೆಯಾಕೆ ಬರ್ತಿಯಾ - ದನ ತಿನ್ನೋ ಮುದ್ದೆ ನಂಗೆ ಹಾಕ್ತೀಯಾಂತ. ನಿಮ್ಮ ಪಾಳೇಗಾರರ ಅರಮನೇಲಿ ನಾಯಿ ಬೆಕ್ಕಿಗೂ ಇಂಥ ಗಬ್ಬು ಕಾಳು ಬೇಯಿಸಿ ಹಾಕೋಲ್ಲ, ನಮಗೆ ಮಾತ್ರ ಇಂಥಾದ್ದು. ಆರು ತಿಂಗಳಾಯ್ತು – ಅಕ್ಕಿ ಮಕ ನೋಡಿ. ನಮ್ಮ ದೊರೆ ಅಂತೋನು-ಇಂತೋನು- ಇಂದ್ರ-ಚಂದ್ರನಂತೋನು ಅಂತೀಯಲ್ಲ. ಲಡಾಯಿನಲ್ಲಿ ದುಡಿಯೋ ಜನಕ್ಕೆ ಇಂಥ ಸೆಗಣೀನ ತಿನ್ನೋಕೆ ಕೊಡ್ತಾನಲ್ಲಾ, ನೀನು ಗಂಡಸಾಗಿದ್ರೆ ಹೋಗಿ ಕೇಳು - ನೀವೂ ಇಂಥಾದ್ದೇ ತಿನ್ತೀರಾಂತ, ಆ ತಾಖತ್ತಿಲ್ಲ, ನನ್ನ ಮೇಲೆ ತೋರಿಸ್ತಾನೆ - ಗಂಡಸುತನಾನ. ಅನ್ನ ಕೊಡಲಿಕ್ಕಾಗದ ರಾಜ, ಹೆಂಡತೀನ ಹೊಡೆಯೋ ಸರ್ದಾರ - ಚಂದಾಗದೆ – ಈ ರಾಜ್ಯಭಾರ'

- ಎಂದು ಚಾಟಿಯಿಂದ ಹೊಡೆದಂತೆ ಹೇಳಿದ್ದು ಅದಕ್ಕೆ ಉತ್ತರವಾಗಿ ಗಂಡ –

'ನನಗೆ ಬೇಕಾದ್ರೆ ಸೆಗಣಿ ಹಾಕು ತಿನ್ತೀನಿ. ನಮ್ಮ ದೊರೇನ ಮಾತ್ರ ಬೈಬೇಡ. ಆರಮನೇಲಿ ಅವರೇನು ತಿನ್ತಾರೋ ನೀನು ನೋಡಿದ್ಯಾ? ನನ್ನ ಧಣಿ - ಅವರೆಷ್ಟು ದುಃಖ ಉಣ್ತಿದಾರೋ ಏನೋ-

ಈ ನವಾಬನ ದಾಳೀಲಿ. ಅಂಥ ಮಾರಾಯನ್ನ ಬೈದು ನರಕಕ್ಕೆ ಹೋಗಬೇಡ; ನನ್ನ ಸಾವಿರ ಮಾತು ಅನ್ನು, ಆ ಮಾರಾಯನ ಮಾತೆತ್ತಬೇಡ'

-ಎಂದು ಹೇಳಿದ್ದು, ಅದನ್ನು ಕೇಳಿ –

'ಮಾತೆತ್ತೋದೇನು – ಊರಿಗೇ ಸಾರಿ ಹೊಗಳ್ತೀನಿ, ನಿಮ್ಮ ದೊರೇನ – ಕಾಯಿಲೆ ಬಿದ್ದಿರೋ ಕೂಸಿಗೆ ಗಂಜಿ ಕಾಸಲಿಕ್ಕೆ ಒಂದಿಡಿ ಅಕ್ಕಿ ಕೊಡಿಸು – ಮತ್ತೆ'

- ಎಂದು ಅವನ ಹೆಂಡತಿ ಹೇಳಿದ್ದು, ಎಲ್ಲವನ್ನೂ ಕೇಳಿಸಿಕೊಂಡ ಮದಕರಿನಾಯಕ ತಗ್ಗಿಸಿದ ತಲೆಯನ್ನು ಎತ್ತದೆ, ಅಲ್ಲಿಂದ ಮುಂದೆ ನಡೆದು, ದಿಕ್ಕು ಕಾಣದವನಂತೆ ಎತ್ತೆತ್ತಲೋ ಸುತ್ತಿ, ಕೊನೆಗೆ ಬಂದು, ಹಿಡಿಂಬೇಶ್ವರನ ಗುಡಿಯ ಬತೇರಿಯನ್ನು ಹತ್ತಿ, ಕುಳಿತುಬಿಟ್ಟಿದ್ದ ದುರ್ಗವನ್ನೇ ನೋಡುತ್ತಾ.

ದುರ್ಗದ ಮನೆಗಳಲ್ಲಿ ಉರಿಯುತ್ತಿದ್ದ ಒಂದೊಂದು ದೀಪವೂ ಆ ಮಾತನ್ನೇ ಆತನಿಗೆ ತಿವಿದು ಹೇಳುವಂತಿತ್ತು.

ಆ ಮಾತುಗಳನ್ನು ನೆನಪಿಸಿಕೊಳ್ಳುತ್ತಲೇ ಹೇಳಿದ, ಮದಕರಿನಾಯಕ –

"ನಾನು ಆ ಮಾತನ್ನು ಮರೆಯಲಾರೆ, ಪರಶುರಾಮಣ್ಣ. ಮರೆತರೆ ನಾನು ದೊರೆಯೂ ಅಲ್ಲ, ಮನುಷ್ಯನೂ ಅಲ್ಲ. ಏನು ಕಷ್ಟ ತಂದುಬಿಟ್ಟಿತು - ಈ ಯುದ್ಧ, ನಮ್ಮ ಜನಕ್ಕೆ."

ದುಃಖ ಕುದಿಯುತ್ತಿದ್ದ ಆ ಮಾತುಗಳನ್ನು ಕೇಳಿ ಪರಶುರಾಮನಾಯಕ, ಮುಂದೆ ಮಾತನಾಡಲಾಗದೆ ಸುಮ್ಮನಾದ.

ಎಲ್ಲರೂ ಹಾಗೆ ನಿಶ್ಶಬ್ದವಾಗಿ ಕುಳಿತಾಗ, ಕೆಳಗೆ ಕೋಟೆಯೊಳಗೆಲ್ಲೋ ಸೈನಿಕರು ಕೋಲು ಹಾಕುತ್ತಾ ಹಾಡುವ ಹಾಡು, ಗಾಳಿಯಲ್ಲಿ ನಿಧಾನವಾಗಿ ತೇಲಿಬಂತು –

"ಇನ್ನಿಂಥ ಮದುವೆ ಈ ಭೂಮಿ ಕಾಣಲಿಲ್ಲ
ಮೂಲೋಕದೊಡೆಯ ಮಾದೇವನೂ ನೋಡಿ ಬೆರಗಾದನಲ್ಲ ||

ಹಾದಿಬೀದೀಗೆಲ್ಲ ಬಾಳೆ ಸಿಂಗಾರ ಹೂವಿನಾ ಚಪ್ಪರಾ
ಮನೆಮನೆಯ ಬಾಗಿಲಿಗು ಗಂಧದೆಣ್ಣೆಯ ದೀಪ ಶೃಂಗಾರ |
ಆರತಿಯ ಹಿಡಿದ ನಾರಿಯರ ಸೌಂದರ್ಯ ವಯ್ಯಾರ
ಗರಿಬಿಚ್ಚಿದ್ದಾಂಗೆ ನವಿಲು, ರಂಭೆ ಊರ್ವಸಿಯ ಪರಿವಾರ ||

ಉಣ್ಣೋಕೆ ಸಣ್ಣಕ್ಕಿ ಕುಡಿಯೋಕೆ ನೊರೆಹಾಲು
ಮಲಗೋಕೆ ಪಲ್ಲಂಗ ಮನೆಮಂದಿಗೆಲ್ಲ |

ಮಾರಾಯ ಮದಕರಿಯ ಮದುವೆಯ ಕೀರುತಿ
ಕಸ್ತೂರಿ ಹಂಗೆ ಹರಡೀತು ಲೋಕಕೆಲ್ಲ ||

ಮಲ್ಲಿಗೆ ಹೂವಂಥ ಹಾಲನ್ನ, ಜೇನಂಥ ಕಜ್ಜಾಯವನ್ನ
ನೀಡೋಕೆ ನೀರೆಯರು ಬಡಿಸೋಕೆ ಹೊನ್ನ ಹರಿವಾಣ |
ಕೈ ತೊಳೆಯೋಕೆ ಪನ್ನೀರು ವರಸೋಕೆ ಪಟ್ಟೆವಸ್ತ್ರ
ಚಿಗುರೆಲೆಯ ವೀಳ್ಯ, ಗಂಧ, ಮೇಲೆ ಕೈಗಿಷ್ಟು ಗದ್ಯಾಣ ||"

ಸೈನಿಕರು ನಿಧಾನವಾಗಿ ಕೋಲು ಹಾಕುತ್ತಾ, ಉತ್ಸಾಹ ಏರಿದಂತೆ ಧ್ವನಿಯನ್ನು ಎತ್ತರಿಸುತ್ತಾ ಹಾಡುತ್ತಿದ್ದರು - ಯಾರೋ ಮದಕರಿನಾಯಕನ ಮದುವೆಯ ಸಮಯದಲ್ಲಿ ಕಟ್ಟಿದ ಹಾಡನ್ನು.

ಹಾಡುವವರಿಗೆ ಹಾಲಾಗಿದ್ದ ಹಾಡು, ಕೇಳುವ ಕಿವಿಗೆ ಹಾಲಾಹಲವಾಗಿ, ಮದಕರಿನಾಯಕ ಉರಿಸೋಕಿದಂತೆ ಸಿಡಿದೆದ್ದು, ಸರಸರನೆ ಅರಮನೆಯತ್ತ ನಡೆದ - ಬೆನ್ನ ಹಿಂದೆ ಕೇಳಿಬರುತ್ತಿದ್ದ ಹಾಡಿನ ಸ್ವರದಿಂದ ತಪ್ಪಿಸಿಕೊಂಡು ಓಡುವವನಂತೆ, ತನ್ನ ಬೆನ್ನ ಹಿಂದೆ ಧಾವಿಸುತ್ತಿದ್ದ ತಮ್ಮ ಪರಶುರಾಮನಾಯಕ, ಅಂಗರಕ್ಷಕರು, ಯಾರದೂ ಪರಿವೆಯಿಲ್ಲದಂತೆ.

ಹಿಂದೆ ಬಂದ ತಮ್ಮನಿಗೆ 'ಇರುತ್ತೀಯಾ' ಎಂದು ಕೇಳದೆ, 'ಹೋಗು' ಎಂದು ಹೇಳದೆ, ಯಾರೋ ಅಟ್ಟಿಸಿಕೊಂಡುಬಂದಂತೆ, ಬೆನ್ನಮೇಲೆ ಬೆಟ್ಟ ಹೊತ್ತವನಂತೆ, ಮುಖದ ಮೇಲೆ ದುಗುಡ ಕಟ್ಟಿಕೊಂಡು ಬಂದ ಮಗನನ್ನು ನೋಡಿ, ಆತನಿಗಾಗಿ ಕಾಯುತ್ತಿದ್ದ ನಿಂಗವ್ವ –

"ಇದೇನಪ್ಪಯ್ಯ ಹೀಗಿದೀಯ ? ಏನಾದರೂ ಆಗಬಾರದ್ದಾಯಿತೇ ?"

- ಎಂದು ಆತಂಕದಿಂದ ಕೇಳಿದಳು.

"ಆಗಬಾರದ್ದು ಏನೂ ಆಗಲಿಲ್ಲ. ಆಗಬೇಕಾದದ್ದೂ ಏನಾಗಲಿಲ್ಲ ಅವ್ವ."

-ಮಾತನಾಡಲು ಮನಸ್ಸೇ ಇಲ್ಲದವನಂತೆ ಮಗ ಉತ್ತರ ಕೊಟ್ಟುದನ್ನು ಕೇಳಿ, ನೊಂದು-

"ಈ ಹಾಳು ಶನಿಕಾಟ ಯಾವತ್ತು ತಪ್ಪುತ್ತದೆಯೋ – ಏನಾದರಾಗಲಿ, ಬಾಳ ಹೊತ್ತಾಯಿತು. ಕೈಕಾಲು ತೊಳೆದು ಊಟಕ್ಕೇಳು" - ಎಂದು ಹೇಳಿದಳು ನಿಂಗವ್ವ.

ಆಕೆಯ ಮಾತನ್ನು ಕೇಳಿ, ಯಾಂತ್ರಿಕವಾಗಿ ಅಂತಃಪುರಕ್ಕೆ ಹೋಗಿ, ಉಟ್ಟ ಉಡುಗೆಯನ್ನು ಬಿಚ್ಚಿ, ಪರಿಚಾರಕ ಕೊಟ್ಟದ್ದನ್ನು ಧರಿಸಿ, ಕೈಕಾಲು ತೊಳೆದು, ಭೋಜನಶಾಲೆಗೆ ಬಂದು, ಊಟಕ್ಕೆ ಕುಳಿತುಕೊಳ್ಳಲಿದ್ದವನು ಹಾಗೇ ನೋಡಿದ –

ಆತನಿಗಾಗಿ ಬೆಳ್ಳಿಯ ಹೂಬಳ್ಳಿಗಳ ಅಂಚಿದ್ದ ಕರಿಮರದ ಮಣೆ, ಅದರ ಮುಂದೆ ವಿಶಾಲವಾದ ಬೆಳ್ಳಿಯ ಅಡ್ಡಣಿಗೆಯ ಮೇಲೆ, ಹೊಳೆವ ಹೊನ್ನ ಹರಿವಾಣ, ಅದರಲ್ಲಿ ಬಡಿಸಿದ ಬಿಸಿಯಾಗಿ ಹೊಗೆಯಾಡುತ್ತಿದ್ದ ಪಲ್ಯಗಳು, ಖಾರದ ಪುಡಿಗಳು, ಉಪ್ಪಿನಕಾಯಿ, ಮೇಲೆ ಬಡಿಸಿದ ತುಪ್ಪದ ನರುಗಂಪು ಸೂಸುವ ಮಲ್ಲಿಗೆಯ ಮೊಗ್ಗಿನ ರಾಶಿಯಂತಿದ್ದ ಅನ್ನ, ಮಣೆಯ ಪಕ್ಕದಲ್ಲಿಟ್ಟ ನೀರಿನ ಬೆಳ್ಳಿಯ ತಂಬಿಗೆ, ಬಟ್ಟಲು - ಎಲ್ಲವನ್ನೂ ಹಿಂದೆಂದೂ ನೋಡದವನಂತೆ ನೋಡಿ, ಹೊಟ್ಟೆಯಲ್ಲೇನೋ ತೊಳಸಿಕೊಂಡು ಬಂದಂತಾಗಿ, ಹತ್ತಿರದಲ್ಲಿದ್ದ ದಾಸಿಗೆ-

"ಇದನ್ನೆಲ್ಲಾ ತೆಗೆದುಬಿಡು" - ಎಂದು ಹೇಳಿದ.

"ಏನಪ್ಪಯ್ಯಾ, ಊಟ ಬೇಡವೇ ? ಫಲಹಾರ ಮಾಡುತ್ತೀಯಾ ?"

– ಮಗನ ಊಟದ ಉಸ್ತುವಾರಿ ನೋಡಿಕೊಳ್ಳಲು ನಿಂತ ನಿಂಗವ್ವ ಕೇಳಿದಳು.

"ಅದೇನೂ ಇಲ್ಲ, ಅವ್ವ. ಇದನ್ನೆಲ್ಲಾ ತೆಗೆಸಿಬಿಡು. ಇಲ್ಲಿ ಕಂಚಿನ ತಣಿಗೆ ಇಲ್ಲವೇ ? ಇದ್ದರೆ ತರಿಸು - ಹಾಗೇ ಅಪ್ಪಾ- ನೀನು ಊಟಕ್ಕೆ ಮಾಡಿಕೊಂಡ ಮುದ್ದೆ ಇದೆಯಾ ?"

-ಎಂದು ಕೇಳಿದ ಮದಕರಿನಾಯಕ.

"ಕಂಚಿನ ತಣಿಗೆಯೇನೋ ಇದೆ. ಈಗ್ಯಾಕೆ ಅದರ ನೆನಪಾಯಿತು, ಅಪ್ಪಯ್ಯಾ ?"

"ಅವ್ವಾ - ಎಲ್ಲಕ್ಕೂ ಏಕೆ ಏಕೆ ಎಂದು ಕೇಳಬೇಡ. ಇದ್ದರೆ ತಂದು ಇಡಿಸು. ಮುದ್ದೆ ಇದ್ದರೆ ಹಾಕಿಸು."

– ಕೊಂಚ ಒರಟಾಗಿ ಹೇಳಿದ ಮದಕರಿನಾಯಕ.

"ಇಷ್ಟು ಹೊತ್ತಿನಲ್ಲಿ ಮುದ್ದೆ ಎಲ್ಲಿರುತ್ತೆ, ಅಪ್ಪಯ್ಯಾ? ಅರಮನೆಯಲ್ಲಿ ಮುದ್ದೆ ತಿನ್ನುವವರು ಯಾರು ? ನಾನೇನೋ ಅಕ್ಕಿ ತಿಂದರೆ ವಾಯು ಅಂತ ಮುದ್ದೆ ಮಾಡಿಸ್ಕೋತೀನಿ."

"ಅದೇನೂ ಮಿಕ್ಕಿಲ್ಲವೆ ?"

"ಇದ್ದರೂ – ತಣ್ಣಗಾಗಿ ಕಲ್ಲಾಗಿರಬೇಕು."

"ಕಲ್ಲೇ ಮುಳ್ಳೋ – ಇದ್ದರೆ ತಂದು ಅದನ್ನೇ ಬಡಿಸು"

- ಎಂದು ಹೇಳಿ, ತನಗಾಗಿ ಇರಿಸಿದ ಮಣೆಯನ್ನು ಅತ್ತ ಕಾಲಿನಿಂದ ದಬ್ಬಿ, ನೆಲದ ಮೇಲೆ ಕುಳಿತು ಹೇಳಿದ, ಮದಕರಿನಾಯಕ.

"ಇವತ್ತು ಯಾಕೋ ವಿಚಿತ್ರವಾಗಿ ಆಡ್ತಿದೀಯ, ಅಪ್ಪಯ್ಯ. ನಿನಗೆ ಹೇಗೆ ಪ್ರೀತಿಯೋ ಹಾಗೆ ಮಾಡು"

- ಎಂದಷ್ಟೇ ಹೇಳಿ, ನಿಂಗಪ್ಪ ದಾಸಿಯರಿಗೆ ಹೇಳಿ, ಕಂಚಿನ ತಣಿಗೆಯನ್ನು ತರಿಸಿ, ತನಗಾಗಿ ಮಾಡಿಕೊಂಡು ಉಳಿದಿದ್ದ ಮುದ್ದೆಯನ್ನು ಹಾಕಿ-

"ತುಪ್ಪ ಬಿಸಿ ಮಾಡಿಸಿ ತರೀನಿ" – ಎಂದಳು.

"ತುಪ್ಪ, ಮೇಲೋಗರ - ಅದ್ಯಾವುದೂ ಬೇಡ, ಅವ್ವಾ. ಇದ್ದದ್ದು ಎಸರೋ, ಚಟ್ಟಣಿಯೋ ಏನಿದ್ದರೂ ಕೊಡು. ಇಲ್ಲದಿದ್ದರೆ ಒಂದು ಹಸಿಮೆಣಸಿನಕಾಯಿ ಕೊಡು. ನನಗಷ್ಟೇ ಸಾಕು"

-ಎಂದ ಮದಕರಿನಾಯಕ.

ಆ ಮಾತು ಕೇಳಿದ ನಿಂಗವ್ವನ ಕಣ್ಣಲ್ಲಿ ತಟಕ್ಕನೆ ನೀರು ತುಂಬಿ-

"ಊಟ ಬೇಸರ ಆಗೋ ಅಂಥ ಕೆಲಸ ಏನಾಯಿತು - ಹೇಳು. ಹೇಳದಿದ್ದರೆ, ಏಕನಾಥಮ್ಮನವರ ಆಣೆ"

- ಎಂದಳು, ಆರಿದ ಮುದ್ದೆಯನ್ನು ಮುರಿಯುತ್ತಿದ್ದ ಮಗನ ಕೈ ಹಿಡಿದು.

"ಏನು ಮುಖ ಇಟ್ಟುಕೊಂಡು ಹೇಳಲಿ, ಅವ್ವಾ- ಊರಲ್ಲಿ ಜನ ಮುಗ್ಗಿದ ರಾಗಿ, ಅಂಬಲಿ ತಿನ್ನೋ ಕಾಲ ಬಂತು - ನಿನ್ನ ಮಗ ರಾಜನಾಗಿ, ಖಾಯಿಲೆ ಬಿದ್ದ ಮಕ್ಕಳಿಗೆ ಗಂಜಿ ಕಾಸೋಕೂ ಸಲೀಸಾಗಿ ಅಕ್ಕಿ ಸಿಗ್ತಾ ಇಲ್ಲ. ನನ್ನ ಅರಸನನ್ನಾಗಿ ಮೆರೆಸಿದ ಜನ ತೂಕದ ಊಟ ಮಾಡುವ ಕಾಲ ತಂದುಬಿಟ್ಟೆ. ನಾನು ಯಾವ ಜನ್ಮದಲ್ಲಿ ಪಾಪಮಾಡಿ, ಇಂಥ ದೊರೆಯಾಗಿ ಹುಟ್ಟಿದೆ, ಅವ್ವಾ"

- ಎಂದು ಅದುವರೆಗೂ ತಡೆದ ಕಂಬನಿಯನ್ನು ಹರಿಯಬಿಟ್ಟು ಗದ್ಗದಕಂಠದಿಂದ ಹೇಳಿದ ಮದಕರಿನಾಯಕ.

ಆ ಮಾತಿಗೆ ನಿಂಗವ್ವ ಕೂಡಲೇ ಏನೂ ಉತ್ತರ ಕೊಡಲಿಲ್ಲ.

ಮಾತಿಗೆ ತಣಿಯದ ದುಃಖದ ನೆರೆ ತನ್ನಷ್ಟಕ್ಕೆ ತಾನೇ ಇಳಿದುಹೋಗಲಿ ಎಂದು ಸ್ವಲ್ಪ ಹೊತ್ತು ಸುಮ್ಮನಿದ್ದು ಬಳಿಕ –

"ಅಪ್ಪಯ್ಯಾ, ಇವತ್ತು ನೀನೇನು ನೋಡಿದೆಯೋ, ಏನು ಕೇಳಿದೆಯೋ ನನಗೆ ಗೊತ್ತಿಲ್ಲ. ಆದರೆ ಜನರ ಕಷ್ಟ ಹೆಚ್ಚಿದೆ ಅಂತ ನಾನೂ ಕೇಳಿದೇನೆ. ಈಗೆರಡು ದಿನದ ಹಿಂದೆ, ಅಮ್ಮನವರ ದೇವಸ್ಥಾನದಲ್ಲಿ ಎಡೆಗೆ ಮುಗ್ಗಲು ಅಕ್ಕಿ ಅನ್ನ ಮಾಡಿದ್ದರು. ಕೇಳಿದ್ದಕ್ಕೆ, 'ಎಲ್ಲರಿಗೂ ಇದೇ ಕೊಡೋದು' ಅಂತ ಅರ್ಚಕರು ಹೇಳಿದರು. 'ದೇವರಿಗೆ ಅಂಥ ಎಡೆ ಇಡಬೇಡಿ, ಅರಮನೆಯಿಂದ ಅಕ್ಕಿ ಕಳಿಸುತ್ತೀವಿ' ಅಂತ ಹೇಳಿಬಂದೆ. ಅವತ್ತು ನನಗೂ ತಿಂದ ಅನ್ನ ಗಂಟಲಲ್ಲಿ ಇಳಿಯಲಿಲ್ಲ; ಕುಡಿದ ನೀರೂ ಕಹಿಯಾಯಿತು. ಆದರೆ ಏನು ಮಾಡ್ತಿ, ಅಪ್ಪಯ್ಯ - ಯುದ್ಧ, ಬರಗಾಲ ಅಂದ್ರೆ ಇದೆಲ್ಲಾ ಆಗಬೇಕಾದದ್ದೆ. ನಾನೂ ಬರಗಾಲದಲ್ಲಿ ಜನ ಕತ್ತಾಳಿಗಡ್ಡೆ ಬೇಯಿಸಿಕೊಂಡು ತಿಂದು, ಹುಣಸೇಬೀಜದ ಅಂಬಲಿ ಕುಡಿದದ್ದನ್ನು ಕೇಳಿದೀನಿ. ಆದ್ರೆ ಏನು ಮಾಡ್ತೀಯಾ - ನೀನು 'ಬಾ' ಅನ್ನಲಿಲ್ಲ, ಆದರೂ ಯುದ್ಧ ಬಂತು. ಅದೂ ಅಷ್ಟು ಇಷ್ಟಕ್ಕೆ ಮುಗಿತೇ? ಏಳೆಂಟು ತಿಂಗಳಾಯ್ತು - ಇನ್ನೂ ಶನಿಮುಂಡೇಮಗ ಸಾಲ ಕೊಟ್ಟೋನ ಹಾಗೆ ಕೂತೇ ಇದಾನೆ –

ಮನೆಬಾಗಿಲಲ್ಲಿ. ಈ ಯುದ್ಧ ಮುಗೀಬೇಕು; ಜನಕ್ಕೆ ಬಂದಿರೋ ಕಷ್ಟ ತೀರಬೇಕು. ಅದುವರೆಗೂ ಅತ್ತೋರು ಅಳಲೇಬೇಕು, ಸತ್ತೋರು ಸಾಯಲೇಬೇಕು. ಬೇಡಾಂದ್ರೆ ಬಿಡುತ್ತೆಯೇ ?"

- ದುಃಖೋದ್ರಿಕ್ತನಾದ ಮಗನಿಗೆ ಸಮಾಧಾನದ ಮಾತು ಹೇಳಿದಳು ನಿಂಗವ್ವ.

"ಹಾಗಂತ 'ಜನ ಹೆಣವಾಗಲಿ, ಊರು ಸ್ಮಶಾನವಾಗಲಿ, ನಾನು ಮಾತ್ರ ಧಿಮ್ಮಾಲೆರಂಗ' ಅಂತ ಬಿಗಿದುಕೊಂಡು, ಸಿಂಹಾಸನದ ಮೇಲೆ ಕಲ್ಲಿನಗೊಂಬೆ ಹಾಗೆ ಕೂತಿರಬೇಕೇ ?"

"ನೀನು ಹಾಗೆ ಮಾಡಿದೀಯಾ, ಅಪ್ಪಯ್ಯಾ ? ರಾಜ ಅಂತ ನೀನು ಬೇರೆಯೋರ ಹಾಗೆ ಆಳನ್ನು ಯುದ್ಧಕ್ಕೆ ಬಿಟ್ಟು, ಸುಪ್ಪತ್ತಿಗೆ ಮೇಲೆ ಮಲಗ್ತಾ ಇಲ್ಲವಲ್ಲ. ಎಲ್ಲರ ಹಾಗೆ ನೀನೂ ಕತ್ತಿಗೆ ದಿನವೂ ತಲೆಕೊಡುತಾನೇ ಇದೀಯಾ. ನಿನ್ನ ಹೆಂಡಂದಿರು ದಿನಾ ಬೆಳಗಾಗೆದ್ದು 'ತಾಳಿ ಉಳಿಸಿಕೊಡು' ಅಂತ ದೇವರನ್ನ ಬೇಡಿಕೋತಾರೆ. ನೀನು ಅರಮನೆ ಬಿಟ್ಟು ಹೋದರೆ, ಮತ್ತೆ ಮನೆಗೆ ಬರೋವರೆಗೂ ತೋಫಿನ ಶಬ್ದ, ಕೋವಿ ಶಬ್ದ ಕೇಳಿದಾಗೆಲ್ಲ ನಮಗೂ ಪ್ರಾಣ ಮೂಗಿನ ತುದೀಲಿ ಬಂದು ಕೂತಿರ್ತದೆ - ದಿನಬೆಳಗಾದರೆ ಊರ ದೇವರಿಗೆಲ್ಲಾ ಹರಸಿಕೊಳ್ತೀವಿ. ನಿನ್ನ ಹೆಂಡಿರು ಎಷ್ಟು ವ್ರತ, ನೇಮ ಮಾಡ್ತಾ ಇದಾರೆ ಅಂತ ನೋಡಿದೀಯಾ, ಕೇಳಿದೀಯಾ ? ಅವರೂ ಅಳ್ತಾರೆ - ಅವರಿಗೂ ಹೇಳೀನಿ : 'ಅವ್ವಾ, ಕಿರೀಟ ಇಟ್ಟು ಕೊಂಡೋನ್ನ ಕೈಹಿಡಿದೋರು ಕದನ ಬಂತೂಂತ ಕಣ್ಣೀರು ಹಾಕಬಾರದು. ನಗುನಗುತಾ ಕೆಂಡಕ್ಕೋ, ಹೊಂಡಕ್ಕೋ ಬೀಳೋಕೆ ಸಿದ್ಧವಾಗಿರಬೇಕು - ಅರಿಶಿನ-ಕುಂಕುಮದ ಬಟ್ಟಲು ಕೈಲಿ ಹಿಡಿದುಕೊಂಡು' ಅಂತ. ಗಂಡ ದೊರೆಯಾಗಬೇಕು, ಗಂಡಾಂತರ ನಮಗೆ ಬೇಡಾಂದ್ರೆ ಆಗ್ತದಾ ? ಹುಟ್ಟಿದೋನು ಒಂದು ದಿನ ಸಾಯಬೇಕು - ಹಾಗೇ ಬದುಕಿರೋವರೆಗೂ ಹುಟ್ಟಿಗೆ ತಕ್ಕ ಹಾಗೆ ಬದುಕಬೇಕು – ಇದಿಷ್ಟೇ ಕಣಪ್ಪಯ್ಯ, ನಾನಿಷ್ಟು ವರ್ಷ ಬದುಕಿ ಕಲಿತದ್ದು. ಅರಸಾದೋನು ಆಳಬೇಕು ; ಅಳಬಾರದು. ಅಳೋ ಸಮಯ ಬಂದರೂ ಅದು ಮನಸ್ಸಿನಾಗಿರಬೇಕು – ಕಣ್ಣಲ್ಲಿ, ಮೊಕದಲ್ಲಿ ಕಾಣಬಾರದು. ನೀನು ಎದೆಗೆಟ್ಟು ಬಿಟ್ಟರೆ ದೇಶದ ಬೆನ್ನೆಲುಬೇ ಮುರಿದುಹೋಗುತ್ತೆ, ಅಪ್ಪಯ್ಯ. ಯುದ್ಧದಲ್ಲಿ ಗೆಲ್ಲೋ ಯೋಚನೆ ಮಾಡು. ಅದಕ್ಕೆ ತಲೆ ತಪ್ಪಿಸಿಕೋಬೇಡ. ಬೇರೆ ಚಿಲ್ಲರೆ ಮಾತಿಗೆಲ್ಲಾ ಮನಸ್ಸು ಸೋಲಲಿಕ್ಕೆ ಬಿಡಬೇಡ. ಮನಸ್ಸಿಗೇನೂ ತಿಳ್ಕೊಬೇಡ. ನಾನ್ಯಾವತ್ತೂ ಇಷ್ಟು ಮಾತಾಡಿರಲಿಲ್ಲ. ಇವತ್ತು ನಿನ್ನ ದುಃಖ ನೋಡಿ ತಡೀಲಿಲ್ಲ, ಆಡಿಬಿಟ್ಟೆ"

- ಎಂದ ನಿಂಗವ್ವ, ಮದಕರಿನಾಯಕನಿಗೆ ಸಮಾಧಾನ ಹೇಳುವುದಕ್ಕಿಂತ ಹೆಚ್ಚಾಗಿ, ತನ್ನ ಹೃದಯವನ್ನೇ ಹಗುರ ಮಾಡಿಕೊಂಡಳು.

ಆಕೆಯ ಮಾತನ್ನು ಹಾಗೆಯೇ ಕೇಳಿದ ಮದಕರಿನಾಯಕ.

ಆಕೆಯ ಮಾತಿನೊಂದಿಗೆ –

ಹಿಂದೆ ಓಬವ್ವನಾಗತಿ ಹೇಳಿದ, ನರಸಪ್ಪಯ್ಯ ಹೇಳಿದ ಮಾತುಗಳು ನೆನಪಾದವು.

ಸಂದರ್ಭ ಬೇರೆ ; ಮಾತು ಬೇರೆ ; ಅರ್ಥ ಒಂದೇ-

'ಅರಸಾದವನ ಹೃದಯ ಉಕ್ಕಾಗಿರಬೇಕು.'

"ಆಯಿತು, ಅವ್ವಾ, ಏನೋ ಮಾತು ಕೇಳಿ ಸಂಕಟ ಆಯಿತು. ಇನ್ನು ಯಾರ ಮುಂದೆ ಹೇಳಿಕೊಳ್ಳಲಿ ? ನಿನ್ನ ಮುಂದೆ ಹೇಳಿಕೊಂಡೆ – ಎಷ್ಟೋ ಸಮಾಧಾನ ಆಯ್ತು"

-ಎಂದು ಭಾರವಿಳಿದ ಧ್ವನಿಯಲ್ಲಿ ಹೇಳಿದ ಮದಕರಿನಾಯಕ.

"ನನ್ನ ಮಾತು ಕೇಳಿ ನಿನಗೆ ಸಮಾಧಾನ ಆಯ್ತು, ಅಪ್ಪಯ್ಯ. ಆದರೆ ನೀನು ಸಮಾಧಾನ ಮಾಡಬೇಕಾದೋರೂ ಇದಾರೆ."

"ಯಾರು?"

"ನಿನ್ನ ಹೆಂಡಂದಿರು, ನೀನು ಕಟ್ಟಿಕೊಂಡ ಹೆಂಗಸರು. ನಿನ್ನ ಚಿಂತೇಲಿ ಅವರನ್ನು ಅಯ್ಯೋ ಅನ್ನಿಸಬೇಡ. ಹಗಲಾಗಿ ನೀನು ಅರಮನೆ ಬಿಟ್ಟು ಹೋಗುತ್ತಿದ್ದ ಹಾಗೇ ಮತ್ತೆ ನಿನ್ನ ಮುಖ ನೋಡ್ತೀವಾಂತ ಮೈಯೆಲ್ಲಾ ಕಣ್ಣಾಗಿ ಕಾದಿರುತ್ತವೆ - ಆ ಜೀವಗಳು. ಅವರಿಗೆ ನೀನಲ್ಲದೆ ಬೇರೆ ಯಾರು ಸಮಾಧಾನ ಹೇಳಬೇಕು? ನೀನು ರಾಜ್ಯಾನೂ ಆಳಬೇಕು, ಸಂಸಾರಾನೂ ಆಳಬೇಕು. ಹೋಗಿ ನೋಡು - ಅವರು ಮಲಗಿದ್ದಾರೋ, ಎದ್ದಿದ್ದಾರೊ. ಅಲ್ಲಿಗೂ ದುಮುಗುಟ್ಟುತ್ತಾ, ಅಮ್ಮ ಮೈಮೇಲೆ ಬಂದವರ ಹಾಗೆ ಹೋಗಬೇಡ"

-ಎಂದು ಹೇಳಿದಳು, ನಿಂಗವ್ವ.

"ಅಂತೂ ಇಷ್ಟು ವಯಸ್ಸಾದರೂ ಇನ್ನೂ ನಾನು ನಿನಗೆ ಹುಡುಗನಾಗಿಯೇ ಕಾಣ್ತಿದೀನಿ, ಅಲ್ಲವೇ ಅವ್ವಾ ? ಎಲ್ಲಾ ನೀನು ಹೇಳಿಕೊಡಬೇಕು."

"ಹೇಳಿಕೊಡೋದೇನೂ ಇಲ್ಲ, ಅಪ್ಪಯ್ಯ - ಮರೆತ ಮಾತು ಜ್ಞಾಪಿಸೋದಷ್ಟೇ ನನ್ನ ಕೆಲಸ."

"ಆಯಿತು ಅವ್ವಾ, ನೀನು ಜ್ಞಾಪಿಸಿದ ಮಾತನ್ನು ಮರೆಯುವುದಿಲ್ಲ"

-ಎಂದು ಹೇಳಿ ಮದಕರಿನಾಯಕ ಊಟದ ಶಾಸ್ತ್ರ ಮುಗಿಸಿ ಮೇಲೆದ್ದ.

* * *

ಅಂತಃಪುರಕ್ಕೆ ಬಂದು ನೋಡಿದ –

ಪದ್ಮವ್ವನಾಗತಿ, ಬಂಗಾರವ್ವನಾಗತಿ - ಇಬ್ಬರ ಶಯ್ಯಾಗೃಹಗಳಲ್ಲೂ ದೀಪಗಳು ಉರಿಯುತ್ತಲೇ ಇದ್ದವು.

ಅದನ್ನು ನೋಡಿ ಮದಕರಿನಾಯಕ ಮೊದಲು ಬಂಗಾರವ್ವನಾಗತಿಯ ಶಯ್ಯಾಗೃಹವನ್ನು ಪ್ರವೇಶಿಸಿ, ತನ್ನನ್ನು ಕಂಡು ಹಾಸಿಗೆಯಿಂದ ಎದ್ದ ಆಕೆಯನ್ನು ತಬ್ಬಿಕೊಂಡು, ಮುತ್ತಿಟ್ಟು –

"ದೀಪ ಆರಿಸಿಬಿಡು, ಬಾ - ಹಿರಿಯವಳ ಅಂತಃಪುರಕ್ಕೆ ಹೋಗೋಣ" – ಎಂದು ಹೇಳಿದ,

ಆ ಮಾತಿಗೆ 'ಏಕೆ ?' ಎಂದು ಕೇಳದೆ, ಬಂಗಾರವ್ವನಾಗತಿ ದೀಪವನ್ನಾರಿಸಿ, ಗಂಡನೊಂದಿಗೆ ಪದ್ಮವ್ವನಾಗತಿಯ ಶಯ್ಯಾಗೃಹದತ್ತ ನಡೆದಳು.

ಬಂಗಾರವ್ವನಾಗತಿಯೊಡನೆ ತನ್ನ ಶಯ್ಯಾಗೃಹಕ್ಕೆ ಬಂದ ಪತಿಯನ್ನು ಕಂಡು ಪದ್ಮವ್ವನಾಗತಿ ದಿಗ್ಭ್ರಾಂತಳಾಗಿ 'ಇದೇನು ?' ಎಂಬಂತೆ ನೋಡುತ್ತಿರುವಾಗಲೇ, ಮದಕರಿನಾಯಕ ಬಂಗಾರವ್ವನಾಗತಿಯೊಡನೆ ಪದ್ಮವ್ವನಾಗತಿಯ ಶಯ್ಯೆಯ ಬಳಿ ಹೋಗಿ –

"ಕುಳಿತುಕೋ ಬಾ. ನಾಚಬೇಡ. ನೋಡು – ಈಗ ಯುದ್ಧ ಕಾಲ, ಎಲ್ಲಾ ಉಳಿತಾಯ ಮಾಡಬೇಕು. ಇವತ್ತಿನಿಂದ ಎರಡು ಶಯ್ಯೆಗಳಲ್ಲಿ ದೀಪ ಉರಿಯುವುದು ಬೇಡ. ಒಂದರಲ್ಲಿ ಉರಿದರೆ ಸಾಕು. ನಿಮ್ಮಿಬ್ಬರಿಗೂ ನಾನು ಒಬ್ಬನಾದೆ. ನನ್ನ ಹಾಸಿಗೆಯಲ್ಲಿ ನಿಮ್ಮಿಬ್ಬರಿಗೂ ಸ್ಥಳವಿದೆ; ಬರೀ ಹಾಸಿಗೆಯಲ್ಲಲ್ಲ – ಹೃದಯದಲ್ಲೂ"

-ಎಂದು ಹೇಳಿ, ಬಂಗಾರವ್ವನಾಗತಿಯನ್ನು ಶಯ್ಯೆಯ ಮೇಲೆ ಬಿಟ್ಟು ಪದ್ಮವ್ವನಾಗತಿಯನ್ನು ತಬ್ಬಿ, ಊದಿ ದೀಪವಾರಿಸಿ ಆಕೆಯನ್ನು ಶಯ್ಯೆಯತ್ತ ಕರೆದೊಯ್ಯುತ್ತಾ ಹೇಳಿದ –

"ಇನ್ನು ಇರುವಷ್ಟು ದಿನ - ಹೀಗೆ ಮೂವರೂ ಒಂದಾಗಿ ಇರೋಣ."

ಆ ಮಾತಿಗೆ ಸಮ್ಮತಿಸೂಚಕವೆಂಬಂತೆ ಅವನ ಎರಡು ಕೆನ್ನೆಗಳಿಗೂ ಮೃದುವಾದ ಬಿಸಿ ತುಟಿಗಳ ಮುತ್ತಿನ ಕಾಣಿಕೆ ಸಂದಾಯವಾಯಿತು.

೧೧

ಹಗಲಾಗುತ್ತಿದ್ದಂತೆಯೇ ಪೂರ್ಣಯ್ಯ ತಂದ ವಾರ್ತೆಯನ್ನು ಕೇಳಿ ಹೈದರಾಲಿಗೆ ಹಗಲಿನಲ್ಲೇ ಕತ್ತಲು ಕವಿದಂತಾಯಿತು. ಮುಂದೇನು ಮಾಡುವುದೆಂದು ಆಪ್ತರೊಂದಿಗೆ ಆಲೋಚಿಸಿದ. ಇಷ್ಟು ದಿನ ದುರ್ಗದ ಸೇನೆಯಿಂದ ಸಾಲುಸೋಲಗಳನ್ನು ಅನುಭವಿಸಿ, ಸೋತು ಸೊರಗಿದ ಸೇನೆಯ ಮೇಲೆ ಮರಾಠರೂ ದಾಳಿ ಮಾಡಿದರೆ, ತನ್ನ ಸೇನೆಗೆ ದುರ್ಗದ ಬಯಲು ಸ್ಮಶಾನಭೂಮಿಯಾಗುವುದೆಂಬ ವಿಷಯದಲ್ಲಿ ಹೈದರಾಲಿಗಾಗಲಿ, ಅವನೊಂದಿಗೆ

ಸಮಾಲೋಚನೆಯಲ್ಲಿ ಬೆರೆತ ಸೇನೆಯ ಹಿರಿಯ ಅಧಿಕಾರಿಗಳಿಗಾಗಲಿ ಯಾವ ಸಂಶಯವೂ ಉಳಿದಿರಲಿಲ್ಲ. ಆ ಕಗ್ಗತ್ತಲಿನಲ್ಲಿ ಮಿನುಗಿದ ಒಂದೇ ಒಂದು ರಜತರೇಖೆ - ಪೇಶ್ವೆಯವರ ಪತ್ರ ಮದಕರಿ ನಾಯಕನ ಕೈಸೇರದೆ, ತನ್ನ ಕೈಸೇರಿತ್ತೆಂಬುದು.

ಆದರೆ ಅದರಿಂದೇನು ಫಲ - ?

ಸುದ್ದಿ ತಿಳಿಯದೆ ದುರ್ಗದವರು ಕೆಲವು ದಿನ ಕಾದು, ನಿರಾಶರಾಗಿ ತೊಳಲಾಡಬಹುದು. ಆದರೆ ಅವರ ಸಹಾಯಕ್ಕೆ ಸೇನೆ ಬರುವುದು ಖಚಿತವಾಗಿರುವಾಗ, ತನಗೆ ಕಾಗದ ಸಿಕ್ಕಿ ಅದರಿಂದಾದ ಮಹದುಪಕಾರವೇನು ?

ಕೆಲವು ದಿನಗಳ ಬಿಡುವು - ಅಷ್ಟೆ.

ಆ ಬಳಿಕ –

ಹಸಿದ ಸೀಳುನಾಯಿಗಳಂತೆ ಬರುವ ಮರಾಠರ ಸೇನೆ, ಇಷ್ಟು ದಿನದ ದಾಳಿಯ ಸಾವು ನೋವುಗಳನ್ನೆದುರಿಸಿ ರೊಚ್ಚಿಗೆದ್ದ ದುರ್ಗದ ಸೇನೆ –

ಇವೆರಡರ ನಡುವೆ ತನ್ನ ಸೇನೆ-

ಸುತ್ತಲೂ ಹೊತ್ತಿ ಉರಿವ ಕಾಳ್ಗಿಚ್ಚಿನ ನಡುವೆ ತಪ್ಪಿಸಿಕೊಳ್ಳಲು ದಾರಿ ಕಾಣದೆ ಸುಡುವ ಬೆಂಕಿಗೆ ಸಿಕ್ಕು ಸಿಡಿವ ಕಾಡುಮೃಗಗಳ ಹಿಂಡಿನ ಚಿತ್ರ ಹೈದರಾಲಿಯ ಕಣ್ಣಮುಂದೆ ಮೂಡಿ, ಮುಂಚಿತವಾಗಿ ತಿಳಿದ ಸುದ್ದಿಯನ್ನು ತನ್ನ ಉಳಿವಿಗಾಗಿ ಹೇಗೆ ಬಳಸಿಕೊಳ್ಳಬಹುದು ಎಂದು ಯೋಚಿಸಿದ.

ಆತನೊಂದಿಗೆ ಯೋಚಿಸಿದ ಎಲ್ಲರಿಗೂ ಕಂಡದ್ದು ಎರಡೇ ದಾರಿ-

ಮರಾಠರ ಸೇನೆ ದುರ್ಗದ ನೆರವಿಗೆ ಬರುವ ಮುನ್ನವೇ, ತನ್ನೆಲ್ಲ ಸೇನಾಶಕ್ತಿಯನ್ನು ಪ್ರಯೋಗಿಸಿ ದುರ್ಗವನ್ನು ಗೆದ್ದು ಮರಾಠರ ಸಹಾಯವನ್ನು ವಿಫಲಗೊಳಿಸುವುದು. ಇಲ್ಲವೇ - ಮರಾಠರ ಸೇನಾಸಹಾಯದ ಸುದ್ದಿ ಮದಕರಿನಾಯಕನಿಗೆ ತಿಳಿವ ಮೊದಲೇ ಹೇಗಾದರೂ ಸಂಧಾನ ಮಾಡಿಕೊಂಡು, ನೆರವಿಗೆ ಬಂದ ಮರಾಠರನ್ನು ನಿರಾಶೆಗೊಳಿಸುವುದು.

ಇದೆರಡಲ್ಲದೆ ಮೂರನೆಯ ದಾರಿ ಕಾಣದೆ, ಹಗಲಿಡೀ ಆಪ್ತಾಲೋಚಕರೊಂದಿಗೆ ಯೋಚಿಸಿದ ಹೈದರಾಲಿ ಕೊನೆಗೊಂದು ನಿರ್ಧಾರಕ್ಕೆ ಬಂದ.

ಬಾತಮಿ ಕುದುರೆಸವಾರರನ್ನು ಓಡಿಸಿ, ಮರಾಠರ ಸೇನೆ ಎಷ್ಟು ದೂರದಲ್ಲಿದೆ ಎನ್ನುವುದನ್ನು ತಿಳಿದುಕೊಳ್ಳುವುದು. ಈ ಕಡೆ ತಮ್ಮೆಲ್ಲ ಸೇನಾಬಲವನ್ನು ಒಟ್ಟಾಗಿ ಮೂರು ದಿಕ್ಕಿನಲ್ಲೂ ಪ್ರದರ್ಶಿಸಿ, ದುರ್ಗದವರಲ್ಲಿ ತಮ್ಮ ಮೇಲೆ ಹೈದರಾಲಿಯ ಸಮಸ್ತ ಸೇನಾಪ್ರವಾಹವೇ ಒಟ್ಟಾಗಿ ನುಗ್ಗಿ ಬರುವುದೆಂಬ ಭೀತಿ ಮೂಡಿಸಿ, ಆ ಭೀತಿಯ ವಾತಾವರಣದಲ್ಲಿ ಸಂಧಾನದ

ಮಾತಾಡಿ, ಅದಕ್ಕೆ ಮದಕರಿನಾಯಕನನ್ನು ಒಪ್ಪಿಸಿ, ಯುದ್ಧದಿಂದ ಆಗದಿದ್ದುದನ್ನು ಚತುರ ಸಂಧಾನದಿಂದ ಸಾಧಿಸಬೇಕು.

ಉಳಿದೆಲ್ಲ ದಾರಿಗಳನ್ನು ಚಿಂತಿಸಿ ಉಪಯೋಗವಿಲ್ಲವೆಂದು ಬಿಟ್ಟು, ಕೊನೆಗೆ ಈ ನಿರ್ಧಾರಕ್ಕೆ ಬಂದ ಹೈದರಾಲಿ ಮಾಡಿದ ಯೋಜನೆಯನ್ನು ಕೂಡಲೇ ಕಾರ್ಯರೂಪಕ್ಕೆ ತರಲು ನಿರ್ಧರಿಸಿ, ಇದು ಕೇವಲ ಪ್ರದರ್ಶನವಲ್ಲ - ಅಂತಿಮ ಹೋರಾಟದ ಪ್ರಖರ ಪ್ರಯತ್ನವೆಂಬುದು ದುರ್ಗದವರಿಗೆ ಕಾಣುವಂತೆ ತನ್ನ ಸೇನೆ ಬೀಡುಬಿಟ್ಟ ಮೂರು ದಿಕ್ಕುಗಳಲ್ಲೂ ತೋಪುಗಳನ್ನು ಏರಿಸಲು ಮೊಹರ್ಚೆ, ದಬೆದಬೆಗಳನ್ನು ನಿರ್ಮಿಸಲು ಬಡಗಿ, ಕಾಮಾಟಿಕರಿಗೆ ಅಪ್ಪಣೆ ಮಾಡಿ, ನೂರಾರು ತುಕಡಿಗಳ ಸರದಾರರಿಗೆ ದುರ್ಗದ ಸುತ್ತಲೂ ತಮ್ಮ ಸೇನೆಯನ್ನು ಜಮಾಯಿಸಿ ಸಮರಸನ್ನದ್ಧವಾಗಿ ನಿಲ್ಲಿಸುವಂತೆ ಹುಕುಂ ಮಾಡಿದ.

ಹೈದರಾಲಿಯ ಹುಕುಂ ಹೊರಟದ್ದೇ ತಡ –

ಸಹಸ್ರಾರು ರಣವಾದ್ಯಗಳು ದಿಕ್ತಟಗಳನ್ನು ಬಿರಿಯಿಸುವಂತೆ ಮೊರೆದು, ಪಲ್ಲಕ್ಕಿಗಳಲ್ಲಿ ಕುಳಿತ ಅಶ್ವಾರೋಹಿಗಳಾದ ನೂರಾರು ಮಂದಿ ಸರ್ದಾರರು, ಅವರ ಉಪಅಧಿಕಾರಿಗಳು, ತೋಫುಗಳ ತುಕಡಿಯ ಅಧಿಕಾರಿಗಳು ಮೂರು ದಿಕ್ಕಿನಲ್ಲೂ ಕಿಕ್ಕಿರಿದ ಹೈದರಾಲಿಯ ಸೇನೆಯನ್ನು ರಣಸನ್ನದ್ಧವಾಗಿ ಮಾಡಲು ಅಪ್ಪಣೆಗಳನ್ನು ಕೂಗುತ್ತಾ, ಅತ್ತಿಂದಿತ್ತ ಸಂಚರಿಸಲಾರಂಭಿಸಿದರು.

ಲಕ್ಷಲಕ್ಷಸೇನೆಯ ಸಿದ್ಧತೆಯ ಕಲಕಲರವ - ರಣವಾದ್ಯಗಳ ಘೋಷದೊಂದಿಗೆ ಬೆರೆತು, ದಿಕ್ಕು ದಿಕ್ಕುಗಳಿಂದ ತಾಡಿಸಿದ ಶಬ್ದ ತರಂಗದ ಘಟ್ಟನೆಯಿಂದ ಹೊಯ್ದಾಡಿ, ದುರ್ಗದ ದಳವಾಯಿಗಳು, ಸೇನಾನಾಯಕರು ನೆರವಿಗೆ ಬಂದ ಆಪ್ತಪಾಳೆಯಗಾರರು, ದೊಡ್ಡ ಮದಕರಿನಾಯಕ ಮೊದಲಾದ ಬಂಧುಗಳು ಗಡಬಡಿಸಿ ಮೇಲೆದ್ದು, ವಿವಿಧ ದಿಕ್ಕಿನಲ್ಲಿದ್ದ ಬತೇರಿಗಳ ಮೇಲೆ ನಿಂತು ನೋಡಿದರು –

ಸುತ್ತಲೂ ನಡೆಯುತ್ತಿದ್ದ ನಯನಭಯಂಕರವಾದ, ಎಂಥ ಧೀರನ ಎದೆಯನ್ನೂ ಕ್ಷಣಕಾಲ ತಲ್ಲಣಿಸುವಂತೆ ಮಾಡುವ ಹೈದರಾಲಿಯ ಸೇನೆಯ ಪ್ರಚಂಡ ಸಮರಸಿದ್ಧತಾಕಾರ್ಯವನ್ನು.

ಅವರು ನೋಡುತ್ತಿರುವಂತೆಯೇ –

ದುರ್ಗದ ಸುತ್ತಲೂ ತೋಫುಗಳನ್ನು ಹೊರುವ ಮೊಹರ್ಚೆ-ದಬೆದಬೆಗಳು ಎದ್ದು ನಿಂತು, ವಿವಿಧ ವರ್ಣದ ಸಮರವಸ್ತ್ರಗಳನ್ನು ಧರಿಸಿದ ಕಾಲಾಳು, ಕುದುರೆಯ ದಳಗಳು, ದಾಳಿಗೆ ಸನ್ನದ್ಧವಾಗಿ ನಿಂತು, ಕೋಟೆಯ ಬಾಗಿಲುಗಳನ್ನು ಗುದ್ದಿ ಕೆಡಹುವ ಕಬ್ಬಿಣದ ಮೊಗವಾಡಗಳನ್ನು ಧರಿಸಿದ ನೂರಾರು ಆನೆಗಳು ಘೀಳಿಟ್ಟು, ಲಕ್ಷಲಕ್ಷ ಕೋವಿಗಳು ಬೆಳಗಿನ ಬಿಸಿಲಿನಲ್ಲಿ

ಮೃತ್ಯುಕಿರಣಗಳಂತೆ ಹೊಳೆದು, ಸೇನೆಗೆ ಬಗೆಬಗೆಯ ಸೂಚನೆ ಕೊಡುವ ಸರ್ದಾರರು ಕೆನೆಯುವ ಕುದುರೆಗಳ ಮೇಲೆ ಅತ್ತಿಂದಿತ್ತ ಸಂಚರಿಸಿ, ಬಣ್ಣಬಣ್ಣದ ನಿಶಾನೆಗಳು ಆಕಾಶದ ನೀಲಿಯ ಇದಿರು ಹಾರಾಡಿ, ತೋಫಿನ ಉಡವಣೆಯ ಸದ್ದಿನೊಂದಿಗೇ ಕೋಟೆಯತ್ತ ಮುನ್ನುಗ್ಗುವ ಅಶ್ವಾರೋಹಿ ಪಡೆಗಳು, ಅವರ ಹಿಂದೆ ಕೋಟೆಗೆ ಹಲ್ಲಾ ಹತ್ತಲು ನಿಚ್ಚಣಿಗೆ, ನೂಲೇಣಿಗಳನ್ನು ಹಿಡಿದವರು, ಬಗೆಬಗೆಯ ಶಸ್ತ್ರಾಸ್ತ್ರ ಧರಿಸಿದ ಕಾಲ್ದಳಗಳು ಲಗ್ಗೆಗೆ ಸನ್ನದ್ಧವಾಗಿ, ಬಾರಿಬಾರಿಗೂ ದುರ್ಗದ ಎದೆಬಿರಿಯುವಂತೆ ಕರ್ಕಶರವದ ರಣವಾದ್ಯಗಳು ಮೊರೆದು-

ಆ ಪ್ರಚಂಡ ರಣಸಿದ್ಧತೆಯ ಇದಿರು-

ಚಿತ್ರದುರ್ಗದ ಕೋಟೆ - ಸಿಡಿಲೇಟಿಗೆ ಕಾದು ನಿಂತ ಒಂಟಿಮರದಂತೆ ಕಾಣಿಸಿತು.

ಪ್ರಧಾನಿ ಪರಶುರಾಮನಾಯಕ ಮೊದಲಾದ ಆಪ್ತರೊಂದಿಗೆ, ಮೂರು ದಿಕ್ಕನ್ನೂ ವೀಕ್ಷಿಸಲು ಅನುಕೂಲವಾಗಿದ್ದ ಝುಂಡಾಬತೇರಿಯ ಮೇಲೆ ನಿಂತು ಮದಕರಿನಾಯಕ ನೋಡಿದ-

ರುದ್ರರಣಮಾರಿಯ ದಾಳಿಯ ಮೊದಲ ಭೀಕರ ಹಲ್ಮಸೆತದಂತಿದ್ದ ಹೈದರಾಲಿಯ ಸೇನಾಸಿದ್ಧತೆಯನ್ನು,

ದುರ್ಗದಾಚೆ ಕಾಣುತ್ತಿದ್ದ ಆ ದೃಶ್ಯವನ್ನು ನೋಡಿದ ಮದಕರಿನಾಯಕ ಹಾಗೇ ಕಣ್ಣನ್ನು ತಗ್ಗಿಸಿ, ಕೋಟೆಯ ಕೆಳಭಾಗದಲ್ಲಿದ್ದ ದುರ್ಗದ ಪೇಟೆಬೀದಿಗಳನ್ನು ನೋಡಿದ –

ತೋಫು, ಗುಂಡುಗಳ ಹೊಡೆತಕ್ಕೆ ಸಿಕ್ಕು ನುಗ್ಗು ನುರಿಯಾಗಿ, ಬೋಳುನೆತ್ತಿಯ, ಬಿರಿದು ಬಾಯ್ಬಿಟ್ಟ ಗೋಡೆಗಳು, ಹಾರಿಹೋದ ಕಿಟಕಿ, ಬಾಗಿಲ ಮನೆಗಳು –

ರಣವಾದ್ಯಗಳ ಮಾರಿಮೊರೆತವನ್ನು ಕೇಳಿ, ಹೆದರಿ ಕಂಗಾಲಾಗಿ ಬೀದಿಗೆ ಬಂದು ದಿಕ್ಕರಿಯದೆ ಅಲೆದಾಡುವ ಸಾವಿರಾರು ಜನಸಮೂಹ –

ತಲೆ ಕತ್ತರಿಸಿ, ಬೋಳುಗೂಟದಂತೆ ನಿಂತ ರಂಗಯ್ಯನಪೇಟೆ, ಸಿದ್ದಯ್ಯನಪೇಟೆಯ ತೆಂಗಿನ ಸಾಲುಮರಗಳು –

ದಿನದಿನದ ಸಮರದಲ್ಲಿ ನೊಂದು ಮಲಗಿದ ಸಾವಿರಾರು ಸೈನಿಕರ ನೂರಾರು ಶಿಬಿರಗಳು-

ಏಳುಸುತ್ತಿನ ಕೋಟೆಯ ಸಾಲುಸಾಲಿನ ಮೇಲೂ ಸಾಲಾಗಿ ಸಾವನ್ನು ಎದುರಿಸಲು ಸಿದ್ಧವಾಗಿ ನಿಂತ ಸೇನೆ, ಒಂದೊಂದು ಬತೇರಿಯ ಮೇಲೂ ಸನ್ನದ್ದವಾದ ತೋಫುಗಳು –

ಹೊರಕೋಟೆಯ ಮೇಲೆ ಏರಿಬರುವ ಸೈನಿಕರನ್ನು ತಡೆಗಟ್ಟಲು ಹೊತ್ತಿ ಉರಿಯುತ್ತಿದ್ದ ಬೃಹದಾಕಾರದ ಒಲೆಗಳ ಮೇಲೆ ಬಿಸಿಯಾಗಿ ಹೊಗೆಯಾಡುತ್ತಿದ್ದ ಮರಳು, ಅಂಬಲಿ, ಕಾದೆಣ್ಣೆಯ ಕಡಾಯಿಗಳು –

ಕೋವಿಗಿಂಡಿಗಳಿಂದ ಇಣುಕುವ ಸಹಸ್ರಾರು ಕೋವಿಗಳು –

ಅಷ್ಟು ಎತ್ತರಕ್ಕೂ ಕೇಳಿಬರುತ್ತಿದ್ದ ಮದ್ದನ್ನು ಅರೆಯುವ ಬೃಹದಾಕಾರದ ಬೀಸುಗಲ್ಲಿನ ಗರ್ಗರ ಶಬ್ದ –

ಬೀದಿಗಳಲ್ಲಿ ಕಿಕ್ಕಿರಿದ ಜನಜಂಗುಳಿಯನ್ನು ಹತೋಟಿಯಲ್ಲಿಡಲು ಕಹಳೆಗಳನ್ನೂದುತ್ತಾ ಸಂಚರಿಸುತ್ತಿದ್ದ ಕೊತ್ವಾಲಚಾವಡಿಯ ಸಶಸ್ತ್ರ ಸೈನಿಕರು-

ಶತ್ರುಶಿಬಿರದಲ್ಲಿ ರಣವಾದ್ಯಗಳು ಮೊರೆದಂತೆ, ತಾವೂ ರಣವಾದ್ಯ ಮೊಳಗಿಸಿ, ರಣಕೇಕೆ ಹಾಕುತ್ತಿದ್ದ ಸೈನಿಕರು –

ತನ್ನ ನೆತ್ತಿಯ ಮೇಲೆ, ಗಾಳಿಯಲ್ಲಿ ತುಯ್ದಾಡುತ್ತಿದ್ದ ಕುಸುಂಬಿವರ್ಣದ ಹನುಮದ್ಗರುಡಧ್ವಜ –

ದುರ್ಗವನ್ನು ಹರಸುವ ದೇವತಾಹಸ್ತಗಳಂತೆ ಬೆಳಗುವ ದೇವಾಲಯಗಳ ಗೋಪುರಗಳ ಮೇಲೆ ಹೊಳೆವ ಹೊನ್ನ ಕಳಶಗಳು; ಆ ದೇವಾಲಯಗಳಿಂದ ಮೂಡಿಬರುತ್ತಿದ್ದ ಗಂಟೆ, ಜಾಗಟೆ, ಶಂಖಗಳ ಧ್ವನಿ –

ಆ ಎಲ್ಲ ಸಾವಿರಾರು ಸದ್ದುಗಳ ನಡುವೆಯೂ, ಕಿವಿಯನ್ನು ಕೊರೆಯುವ ಸೂಜಿಧ್ವನಿ –

'ಮುಗ್ಗಲು ರಾಗಿ ಅಂಬಲಿ, ರೋಗದಿಂದ ನರಳುವ ಕೂಸಿಗೆ ಗಂಜಿಕಾಸಿ ಕೊಡಲೂ ಇಲ್ಲದ ಅಕ್ಕಿ…

'ಅನ್ನ ಕೊಡದ … ಅರಸು, ಹೆಂಡತೀನ ಹೊಡೆಯೋ ಸರ್ದಾರ.'

'ಅಮ್ಮನವರ ಎಡೆಗೂ ಮುಗ್ಗಲು ಅಕ್ಕಿ ಕೊಟ್ಟಿದ್ದರು, ಅಪ್ಪಯ್ಯ.'

ಅತ್ತಿಂದಿತ್ತ ಸುಳಿಗಾಳಿಗೆ ಸಿಕ್ಕಿದವನಂತೆ ಹೊಯ್ದಾಡಿದ ಮದಕರಿನಾಯಕ. ಅವನ ಕಾಲನ್ನು ನಿಂತ ಬಂಡೆ ನುಂಗುತ್ತಿತ್ತು ; ನೆತ್ತಿಯನ್ನು ಆಕಾಶ ತನ್ನತ್ತ ಸೆಳೆಯುತ್ತಿತ್ತು ; ನಡುವೆ ಮೈ - ಗಾಳಿ ಬೀಸಿದತ್ತ ತೂಗುವ ಹುಲ್ಲಿನಂತಾಗಿತ್ತು.

“ಕಚ್ಚಲಾಗದ ನಾಯಿ - ಬೊಗಳಿ ಬೆದರಿಸಲು ಸಿದ್ಧವಾಗುತ್ತಿರುವಂತಿದೆ – ಹೈದರಾಲಿಯ ಇವತ್ತಿನ ಧಿಮಾಕು. ಇದಕ್ಕೆ ನೀವು ಹೆದರಬಾರದು, ರಾಜಾಸಾಹೇಬ್. ನಮ್ಮ ಸೇನೆ ಬರುತ್ತಿದ್ದಂತೆಯೇ - ಈ ನವಾಬ ಏನಾಗುತ್ತಾನೆಂದು ನೋಡುತ್ತಿರಿ. ಚಿನಕುರಳಿ ಲಡಾಯಿನಲ್ಲಿ ಫಕೀರನ ವೇಷ ಹಾಕಿಕೊಂಡು ತಲೆ ಉಳಿಸಿಕೊಂಡದ್ದನ್ನು ಮರೆತುಬಿಟ್ಟಿದ್ದಾನೆ ಅಂತ ಕಾಣುತ್ತದೆ. ಮತ್ತೆ ಅದೇ ಅವಸ್ಥೆ ಕಾದಿದೆ ಅವನಿಗೆ - ನಮ್ಮ ಸೇನೆ ಬಂದಾಗ.”

- ನಿಶ್ಯಬ್ದವಾಗಿ, ಸುತ್ತೆಲ್ಲವನ್ನೂ ನೋಡುತ್ತಾ ನಿಂತ ಮದಕರಿನಾಯಕನಲ್ಲಿ ಉತ್ಸಾಹ ತುಂಬಲು ಹೇಳಿದ, ಪೇಶ್ವೆಯವರ ವಕೀಲ ಪುರುಷೋತ್ತಮರಾಯ.

"ನಿಮ್ಮ ಸೇನೆ - ಬರುತ್ತದೆಯೇ ? ಸೇನೆಯಲ್ಲ, ಅದರ ಸುದ್ದಿಯೂ ಇಲ್ಲ – ಎಂಟು ತಿಂಗಳಾದರೂ, ಇನ್ನು ಆ ಮಾತೇಕೆ ಆಡಿ ಹೃದಯದ ಕಹಿಯನ್ನು ಇನ್ನಷ್ಟು ಹೆಚ್ಚಿಸುತ್ತೀರಿ, ಪುರುಷೋತ್ತಮರಾವ್. ನವಾಬ ನಂಬಿಕೆಗೆ ಯೋಗ್ಯನಲ್ಲ ಎಂದುಕೊಂಡಿದ್ದೆವು; ನಿಮ್ಮ ಶ್ರೀಮಂತರೂ ನಮಗೆ ಅದೇ ಪಾಠ ಕಲಿಸಿದರು."

-ಎದೆತುಂಬಿದ ನಿರಾಶೆಯ ನಂಜು ಹನಿಹನಿಯಾಗಿ ತೊಟಕುತ್ತಿದ್ದ ಧ್ವನಿಯಲ್ಲಿ ಹೇಳಿದ ಮದಕರಿನಾಯಕ.

"ನಾವು ಮರಾಠಿ ಜನ, ಅಂಥ ನಮಕ್ ಹರಾಮರಲ್ಲ."

"ಇರಬಹುದು. ನೀವು ನಮಕ್ ಹರಾಮರಲ್ಲ. ಆದರೇನು ಮಾಡುವುದು – ನಮ್ಮ ಅದೃಷ್ಟ ನಿಮ್ಮ ಕೈಲಿ ಈ ಆಟ ಆಡಿಸುತ್ತಿದೆ. ನಡೆಯಲಿ, ಯಾವುದು ಹೇಗಾಗಬೇಕೋ ಹಾಗಾಗಲಿ. ಆದರಿನ್ನು ಪೊಳ್ಳುಭರವಸೆ ಕೊಡುವುದನ್ನು ಮಾತ್ರ ಸಾಕುಮಾಡಿ."

-ಯಾವುದೋ ನಿರ್ಧಾರಕ್ಕೆ ಬಂದಂತೆ ಹೇಳಿದ ಮದಕರಿನಾಯಕ.

"ನಿಮ್ಮ ಮಾತು ಕೇಳಿದರೆ - ನೀವು ಅಂತಿಮ ತೀರ್ಮಾನಕ್ಕೆ ಬಂದಹಾಗಿದೆ. ದುಡುಕ ಬೇಡಿ, ರಾಜಾಸಾಹೇಬ್ - ನಮ್ಮ ಕುಲದೇವತೆ ತುಳಜಾಭವಾನಿಯ ಆಣೆಯಾಗಿಯೂ ಹೇಳುತ್ತೇನೆ- ಖಂಡಿತವಾಗಿಯೂ ಶ್ರೀಮಂತರ ಸೇನೆ ಬಂದೇ ಬರುತ್ತದೆ."

"ಬರುತ್ತದೆ – ನವಾಬರೊಂದಿಗೆ ದುರ್ಗದ ರಾಜ್ಯ ಹಂಚಿಕೊಳ್ಳಲು – ನಮ್ಮ ಸಮಾಧಿಯ ಮೇಲೆ"

- ಎಂದಷ್ಟೇ ಹೇಳಿ, ಮಾತನಾಡದೆ ನಿಂತಿದ್ದ ತನ್ನ ತಮ್ಮನತ್ತ ತಿರುಗಿ –

"ಈಗ ಮಾತಿಗೆ ಸಮಯವಿಲ್ಲ - ನಮ್ಮ ದಾರಿ ನಾವು ನಿರ್ಧರಿಸಿಕೊಳ್ಳಬೇಕು. ದಳವಾಯಿಗಳಿಗೆ, ಸೇನೆಯ ಹಿರಿಯರಿಗೆ ಹೇಳಿಕಳಿಸಿ"

-ಎಂದು ಹೇಳಿ, ಅಗಲುವ ಮುನ್ನ ಆಪ್ತಬಂಧುವನ್ನು ಆಲಂಗಿಸಿಕೊಳ್ಳುವವನಂತೆ ಧ್ವಜಸ್ತಂಭವನ್ನು ಕ್ಷಣಕಾಲ ತಬ್ಬಿ ಹಿಡಿದು, ಹಾರುತ್ತಿದ್ದ ಧ್ವಜವನ್ನು ಕಣ್ತುಂಬ ನೋಡಿ, ಯಾರೊಂದಿಗೂ ಏನೂ ಮಾತಾಡದೆ ದೃಢವಾದ ಹೆಜ್ಜೆಗಳಿಂದ ಬತೇರಿಯ ಪಾವಟಿಗೆಗಳನ್ನಿಳಿದು, ತಾರಾಮಂಡಲದತ್ತ ನಡೆದ – ಮದಕರಿನಾಯಕ.

* * *

ದುರ್ಗದ ಒಳ-ಹೊರಗೆ ಯುದ್ಧ ಸಿದ್ಧತೆಯ ಕಲಕಲರವ ಅಲೆಅಲೆಯಾಗಿ ಮೊರೆಯುತ್ತಿರುವಾಗ –

ನಾಯಕರ ಆಪ್ತಾಲೋಚನಾಮಂದಿರದಲ್ಲಿ ನಾಯಕರು ಪ್ರಧಾನಿ ಪರಶುರಾಮನಾಯಕ, ಚಪ್ಪಚಾವಡಿಯ ದಳವಾಯಿ ಸಣ್ಣ ಪರಶುರಾಮಪ್ಪನಾಯಕ, ಹೊಸದುರ್ಗದ ದೊಡ್ಡ ಮದಕರಿನಾಯಕ, ಜರಿಮಲೆಯ ಬೊಮ್ಮಣ್ಣನಾಯಕ, ಗುಡಿಕೋಟೆಯ ಜಟಂಗಿರಾಯ, ನಾಯಕನಹಟ್ಟಿಯ ಮಲ್ಲಪ್ಪನಾಯಕ ಮೊದಲಾದ ಹಿರಿಯರೊಂದಿಗೆ ಮುಂದಿನ ಮಾರ್ಗ ನಿರ್ಧರಿಸಲು ಸಭೆ ಸೇರಿದ್ದರು.

ಅಲ್ಲಿ ನೆರೆದ ಎಲ್ಲರೂ, ದುರ್ಗದ ಹೊರವಲಯದಲ್ಲಿ ನಡೆದ ಪ್ರಚಂಡರಣಸಿದ್ಧತೆಯನ್ನು ಕಣ್ಣಾರೆ ಕಂಡು, 'ಅಂತಿಮ ಸಮರ ಸನ್ನಿಹಿತವಾಗಿದೆ' ಎಂದು ಅರಿತವರು. ಎಂತಲೇ ನಾಯಕರು ಯಾರಿಗೂ ಸಭೆಯ ಉದ್ದೇಶವನ್ನು ವಿವರಿಸುವ ಅಗತ್ಯವಿರಲಿಲ್ಲ. ಹಾಗೆಯೇ 'ಮುಂದೇನು ?' ಎಂದು ನಾಯಕರು ಕೇಳಿದಾಗ, ಏನು ಉತ್ತರ ಹೇಳಬೇಕೆಂದು ಸಭೆಗೆ ಬರುವಾಗಲೇ ಎಲ್ಲರೂ ನಿರ್ಧರಿಸಿಕೊಂಡು ಬಂದಿದ್ದರು. ಆ ನಿರ್ಧಾರ ಅವರ ಮುಖಮುದ್ರೆಗಳಲ್ಲಿ ಸ್ಪಷ್ಟವಾಗಿತ್ತು. ಎಂತಲೇ ಪ್ರಧಾನಿ ಪರಶುರಾಮನಾಯಕ ಸಭೆ ಸೇರಿದ ಕಾರಣವನ್ನು ವಿವರಿಸಲು ಎದ್ದು ನಿಲ್ಲುತ್ತಿದ್ದಂತೆಯೇ, ಉಳಿದೆಲ್ಲರ ಮುಖ, ನೋಡಿ ಅವರ ಸಮ್ಮತಿ ಪಡೆದಂತೆ ದೊಡ್ಡ ಮದಕರಿನಾಯಕ, ಬಂಡೆಗಲ್ಲಿನಂತೆ ಎದ್ದು ನಿಂತು ಹೇಳಿದ –

"ಪ್ರಧಾನಿಗಳು ಈ ಸಭೆ ಸೇರಿಸಿದ ಕಾರಣ ನಮಗೆಲ್ಲಾ ತಿಳಿದಿದೆ. ಕಿವಿ ಕೇಳುವುದನ್ನು ಕೇಳಿದ್ದೇವೆ; ಕಣ್ಣು ಕಾಣುವುದನ್ನು ನೋಡಿದ್ದೇವೆ; ನಮ್ಮನಮ್ಮಲ್ಲಿ ಮಾತಾಡಿಕೊಂಡಿದ್ದೇವೆ. ಈ ಸ್ವಾತಂತ್ರ್ಯವನ್ನು ಪ್ರಭುಗಳು ಮನ್ನಿಸಬೇಕು. ಎಲ್ಲರ ಪರವಾಗಿ ಹೇಳುತ್ತೇನೆ - ಜಯ, ಅಪಜಯ – ಉತ್ಸವಾಂಬೆಯ ಚಿತ್ರ. ಆದರೆ ಈಗ ಪಾಳೆಯಗಾರರಲ್ಲಿ - ನವಾಬರನ್ನು ನಡುಗಿಸಿ ನಿಂತಿರುವುದು - ಚಿತ್ರದುರ್ಗದ ಗಂಡುಕೋಟೆಯೊಂದೇ ಆ ಕೀರ್ತಿಯನ್ನು ಕಳೆದುಕೊಳ್ಳಲು ನಾವಾರೂ ಸಿದ್ಧರಾಗಿಲ್ಲ. ಆರು ತಿಂಗಳಲ್ಲಿ ಆಗಬೇಕಾದದ್ದು ಅರೆತಾಸಿನಲ್ಲಿ ಮುಗಿದು ಹೋಗಲಿ – ಯುದ್ಧವೊಂದೇ ನಮಗೆ ಒಪ್ಪಿಗೆಯಾಗಿರುವ ಮಾತು. ಇಷ್ಟು ದಿನ ನಮ್ಮ ಸೈನಿಕರು ಸತ್ತರು. ಈಗ ನಮಗೂ ವೀರಸ್ವರ್ಗಕ್ಕೆ ಲಗ್ಗೆ ಹಾಕಲು ಪ್ರಭುಗಳು ಆವಕಾಶ ಕೊಡಬೇಕು. ಗೆದ್ದರೂ, ಸೋತರೂ - ದುರ್ಗದ ಕೀರ್ತಿಯನ್ನು ಲೋಕ ಸೂರ್ಯಚಂದ್ರರಿರುವವರೆಗೂ ಕೊಂಡಾಡಬೇಕು. ಅಂಥ ಘನಚಕ್ರಲಡಾಯಿಗೆ ನಮಗೆ ಅಪ್ಪಣೆಯಾಗಬೇಕು."

ದೊಡ್ಡ ಮದಕರಿನಾಯಕ ಆಡಿದ ಮಾತುಗಳನ್ನಾಲಿಸಿ, ನಾಯಕರು ಏನೋ ಉತ್ತರ ಹೇಳಬೇಕೆಂದಿರುವಷ್ಟರಲ್ಲೇ, ಮುಚ್ಚಿದ ಸಭಾಭವನದ ಬಾಗಿಲು ತೆರೆದು, ಬಕ್ಷಿ ಚನ್ನಮಲ್ಲಪ್ಪ ಕಾಣಿಸಿಕೊಂಡು –

"ಮಾತಿನ ಮಧ್ಯೆ ಬಂದದ್ದಕ್ಕೆ ಪ್ರಭುಗಳು ಮನ್ನಿಸಬೇಕು"

-ಎಂದು ಕೈಮುಗಿದು ತಗ್ಗಿದ ಧ್ವನಿಯಲ್ಲಿ ಹೇಳಿದ.

“ಏನಾಗಬೇಕಿತ್ತು ?” - ಅಸಹನೆಯಿಂದ ಕೇಳಿದರು ನಾಯಕರು.

“ನವಾಬರ ವಕೀಲರು ಬಿಳಿ ಬಾವುಟ ಹಿಡಿದುಕೊಂಡು ಬಂದು, ’ಒಳಗೆ ಬಂದು ತಮ್ಮನ್ನು ಕಾಣಲು ಅಪ್ಪಣೆ ಬೇಕು’ ಎಂದು ಕೇಳುತ್ತಿದ್ದಾರೆಂದು ರಂಗಯ್ಯನ ಬಾಗಿಲ ಕಡೆಯವರು ಸುದ್ದಿ ಕಳಿಸಿದ್ದಾರೆ. ಏನು ಹೇಳಿಕಳಿಸಬೇಕು ಎಂದು ಅಪ್ಪಣೆಯಾದರೆ ಹಾಗೆ ಮಾಡುತ್ತೇನೆ”

- ಬಕ್ಷಿ ಚನ್ನ ಮಲ್ಲಪ್ಪ ಬೇಡಿದ.

- ರಣಸಿದ್ಧತೆಗಳ ಮಧ್ಯದಲ್ಲಿ ಸಂಧಾನದ ಸೂಚನೆ –

ಅದೂ ನವಾಬನಿಂದಲೇ !

ಆ ಮಾತು ಕೇಳಿ ಸಭೆ ಚಕಿತವಾಯಿತು.

ಆ ಮಾತು ಕೇಳಿದ ನಾಯಕರು ಕ್ಷಣಕಾಲ ಯೋಚಿಸಿ, ಬಳಿಕ –

“ನಮ್ಮ ನಿರ್ಧಾರ ಏನೆಂದು ಈಗಾಗಲೇ ಇತ್ಯರ್ಥವಾದ ಹಾಗಾಗಿದೆ. ಈ ಮಧ್ಯೆ ನವಾಬ ಈ ಸಂಧಾನದ ಮಾತಿಗೆ ಜನ ಕಳಿಸಿದಾನೆ. ನವಾಬ ಶುದ್ಧ ನಮಕ್ ಹರಾಮ್ : ನಂಬಿಸಿ ಮೋಸ ಮಾಡುವುದರಲ್ಲಿ ನವಾಬನನ್ನು ಮೀರಿಸಿದವರಿಲ್ಲ. ಇದೆಲ್ಲರಿಗೂ ತಿಳಿದಿದೆ. ಆದ್ದರಿಂದ ಈಗೇನು ಮಾಡುವುದೋ ನೀವೇ ಹೇಳಬೇಕು. ಈ ಬಾರಿಯ ನಿರ್ಧಾರ ನಿಮಗೆ ಬಿಟ್ಟದ್ದು”

-ಎಂದು ಹೇಳಿದರು.

“ಮಾತೇನೂ ಕತ್ತಿಗೆ ಅಡ್ಡವಲ್ಲ. ತಾವಾಗಿ ಸಂಧಾನಕ್ಕೆ ಬಂದವರನ್ನು ಬೇಡ ಎನ್ನುವುದೇಕೆ? ಬರಲಿ - ನಿಧಾನವಾಗಿ ಮಾತುಕಥೆಯಾಡೋಣ. ಮಾತು ಎಳೆದಷ್ಟೂ ನಮಗೆ ಸಿದ್ಧತೆಗೆ ಸಮಯ ಸಿಗುತ್ತೆ. ಹೀಗೆ ಮಾಡುವುದು ಸೂಕ್ತ ಎಂದು ನಮಗೆ ತೋರುತ್ತದೆ”

-ಎಂದು ಪರಶುರಾಮನಾಯಕ ಹೇಳಿದ.

ಎಲ್ಲರೂ ಮೌನವಾಗಿ ಕುಳಿತು ಆ ಮಾತುಗಳನ್ನು ಮೆಲಕುಹಾಕಿದ ಬಳಿಕ, ಉಳಿದೆಲ್ಲದರ ಪರವಾಗಿ ದೊಡ್ಡ ಮದಕರಿನಾಯಕ –

“ಪ್ರಧಾನಿಗಳು ಹೇಳುವ ಮಾತಿನಲ್ಲಿ ತಪ್ಪೇನಿಲ್ಲ. ವಕೀಲರು ಬಂದು ಮಾತಾಡಿಕೊಂಡು ಹೋಗಲಿ. ನಾವು ಎತ್ತಿದ ಕತ್ತಿ ಇಳಿಸುವುದು ಬೇಡ. ಒಪ್ಪಿಗೆಯಾಗುವ ಮಾತಿನಲ್ಲಿ ಯುದ್ಧ ಮುಗಿದರೆ ಮುಗಿಯಲಿ; ಇಲ್ಲ, ಅವರ ದಾರಿ ಅವರಿಗೆ, ನಮ್ಮ ದಾರಿ ನಮಗೆ”

-ಎಂದು ಹೇಳಿದ.

“ನೀವು ಹೇಳಿದಂತೆಯೇ ಆಗಲಿ”

- ಎಂದು ಹೇಳಿದ ನಾಯಕರು, ಬಕ್ಷಿ ಚನ್ನಮಲ್ಲಪ್ಪನಿಗೆ –

"ನವಾಬರ ವಕೀಲರನ್ನು ಒಳಗೆ ಬಿಡುವಂತೆ ಕೋಟೆಬಾಗಿಲಿನವರಿಗೆ ಹೇಳಿ. ಅವರು ಬಂದುಹೋದಬಳಿಕ ಮುಂದಿನ ಮಾತು."

-ಎಂದು ಸಭೆಗೆ ತಿಳಿಸಿದರು.

ಆ ಮಾತಿನೊಂದಿಗೆ ಸಭೆ ಕದಲಿ, ಪ್ರಧಾನಿ ಪರಶುರಾಮನಾಯಕ, ನವಾಬನ ವಕೀಲರ ಬಗ್ಗೆ ವ್ಯವಸ್ಥೆ ಮಾಡಲು ಹೋದ.

೧೨

"ನವಾಬರು ಅದೇನು ಫರ್ಮಾನ್ ಕಳಿಸಿದ್ದಾರೋ ಓದಿಹೇಳಿ."

- ಹರಿತವಾದ ವ್ಯಂಗ್ಯ ತುಂಬಿದ ಧ್ವನಿಯಲ್ಲಿ ನಾಯಕರು ಹೇಳಿದರು - ಆಪ್ತರು ನೆರೆದ ಓಲಗದಲ್ಲಿ.

"ಇದು ಫರ್ಮಾನಲ್ಲ, ಸ್ನೇಹಪತ್ರ - ಪರಾಂಬರಿಸಬೇಕು."

- ವಿನಯ ತುಂಬಿದ ಧ್ವನಿಯಲ್ಲಿ ಹೇಳಿದ ನವಾಬರ ವಕೀಲ ಮಾನ್ವಿ ಶ್ರೀನಿವಾಸರಾಯ, ತನ್ನತ್ತ ನೋಡುತ್ತಿದ್ದ ನಾಯಕರ ಚೂರಿಗಣ್ಣುಗಳ ನೋಟದ ಇರಿತವನ್ನು ಪ್ರತಿನೋಟದಿಂದ ಇದಿರಿಸಲಾಗದೆ, ತಲೆತಗ್ಗಿಸಿ.

"ಅದೇನೋ - ನೀವು ಓದಿ, ನಾವು ಕೇಳಿದ ಮೇಲೆ ನಿರ್ಧರಿಸಬೇಕಾದ ವಿಷಯ ಅದು, ಮೊದಲು ಪತ್ರ ಓದಿ"

- ಶ್ರೀನಿವಾಸರಾಯನ ಮುಖಕ್ಕೆ ಹೊಡೆದಂತೆ ಹೇಳಿದರು ನಾಯಕರು.

"ನಾವೇ ಓದಬೇಕೇ, ತಮ್ಮವರ ಕೈಗೆ ಪತ್ರ ಕೊಡಲೇ ?"

- ಶ್ರೀನಿವಾಸರಾಯ ನಿರ್ವಿಕಾರವಾದ ಧ್ವನಿಯಲ್ಲಿ ಕೇಳಿದ.

"ನೀವೇ ಓದಿ, ನೀವು ಓದಿದರೆ ನವಾಬರೇ ಹೇಳಿದಂತಾಗುತ್ತದೆ. ನವಾಬರ ಪವಿತ್ರ ಕಾಗದವನ್ನು ಅವರಿವರು ಮುಟ್ಟುವುದೇಕೆ ?"

-ನಾಯಕರು ಹೇಳಿದರು, ನವಿರಾಗಿ ಛೇಡಿಸುವಂತೆ.

"ತಮ್ಮ ಅಪ್ಪಣೆಯಂತೇ ಆಗಲಿ"

- ಎಂದು ಹೇಳಿ, ಕಿನಕಾಪಿನ ಥೈಲಿಯಲ್ಲಿದ್ದ ಪತ್ರವನ್ನು ಹೊರತೆಗೆದು, ಸದ್ದಡಗಿದ ಸಭೆಯಲ್ಲಿ ಓದಿದ ಶ್ರೀನಿವಾಸರಾಯ –

"ಶ್ರೀಮನ್ಮಹಾನಾಯಕಾಚಾರ್ಯ ಕಾಮಗೇತಿ ಕಸ್ತೂರಿ ರಂಗಪ್ಪನಾಯಕರ ರಾಜಾ ಮದಕರಿನಾಯಕರು_"

"ಆ ಮಾಮೂಲಿ ಒಕ್ಕಣೆ, ಒಗ್ಗರಣೆಯ ಮಾತು ಬಿಟ್ಟು, ಮುಖ್ಯ ವಿಷಯ ಓದಿ."

-ಪತ್ರವಾಚನವನ್ನು ಮಧ್ಯದಲ್ಲಿ ಕತ್ತರಿಸಿ ಹೇಳಿದರು ನಾಯಕರು.

"ಅಪ್ಪಣೆ –

" 'ನಾವು ಕ್ಷುಲ್ಲಕ ಜನದ ಮಾತು ಕೇಳಿ ತಮ್ಮ ಮೇಲೆ ಲಡಾಯಿಗೆ ಬಂದದ್ದು ವಿಹಿತವಾಗಲಿಲ್ಲ. ನಾವು ಫೌಜು ತೆಗೆದುಕೊಂಡು ಬಂದದ್ದು ಮನೆ ತೆಗೆದುಕೊಳ್ಳಲಿಕ್ಕಲ್ಲ- ನೀವು, ನಾವು ಬಾರಿ ಬಾರಿ ಖಾಯಿಷ್ ಮಾಡಿದರೂ ಭೇಟಿಗೆ ಬರದಿದ್ದ ಕಾರಣ. ತಮ್ಮ ಮರ್ದುಮಿ, ಪ್ರತಾಪ, ಲಡಾಯಿ ನೋಡಿ ಭಾಳ ಖುಷ್ ಆಯಿತು. ಇತಃಪರ ನಮ್ಮ ನಿಮ್ಮ ನಡುವೆ ದೋಸ್ತಿಯೇ ಶಿವಾಯಿ ಜಿದ್ದಿನ ಮಾತಿಲ್ಲ. ಮಹಾರಾಜರು ಯಶೋವಂತರಿದ್ದೀರಿ. ನಾವು ನಿಮ್ಮ ಹಾಗೆ ಲಡಾಯಿ ಮಾಡುವವರನ್ನು ಎಲ್ಲಿಯೂ ನೋಡಿರಲಿಲ್ಲ. ಈಗಲೂ ತಾವು ಜಿದ್ದು ಮಾಡದೆ, ಒಂಭತ್ತು ಲಕ್ಷ ವರಹ ಐವೇಜು ಕೊಟ್ಟು, ನಿಮ್ಮ ತಮ್ಮಂದಿರಿಗೆ ಸಹಾ ನಮ್ಮ ಭೇಟಿಗೆ ಕಳುಹಿಸಿಕೊಟ್ಟಲ್ಲಿ ಕೂಚುಮಾಡಿ ಹೋಗುತ್ತೇವೆ. ತಮ್ಮ ಮನೋಗತ ಹೇಗಿದೆಯೋ ತಿಳಿಸುವುದು.'

"ಪತ್ರ ಇಷ್ಟೆ – ಮುಂದಿನದನ್ನು ರಾಜಾಸಾಹೇಬರು ಅಪ್ಪಣೆ ಮಾಡಬೇಕು"

- ಎಂದು ಪತ್ರವಾಚನ ಮುಗಿಸಿದ ಮಾನ್ವಿ ಶ್ರೀನಿವಾಸರಾಯ.

ಪತ್ರದಲ್ಲಿದ್ದ ಮಾತನ್ನು ಕೇಳಿ, ಅದನ್ನು ಓದಿದವನ ಮುಖಕ್ಕೆ ಉಗಿದು, ಓದಿದ ನಾಲಗೆಯನ್ನು ಹರಿದು ಕಿತ್ತು, ನಿಂತ ನಿಲುವಿನಲ್ಲಿ ಸಿಗಿದುಹಾಕಬೇಕೆಂಬಷ್ಟು ಸಿಟ್ಟು ನರನಾಡಿಗಳಲ್ಲಿ ಕುದಿವ ಲಾವಾರಸದಂತೆ ಹರಿದು. ಕುಳಿತ ಆಸನ ಅಗ್ನಿಪೀಠವಾಗಿ, ಕಣ್ಣಲ್ಲಿ ಕ್ರೋಧ ಕೂರ್ನೋಟವಾಗಿ ಉರಿದು, ಮೈಯಲ್ಲಿ ನೆರೆನೀರಿನಂತೆ ಏರಿದ ರೋಷದಲ್ಲಿ ಮಾತು ಹೊರಡದೆ, ಆ ಸಿಟ್ಟು ಹೊರಗಾಣದಿರುವಂತೆ ಹಿಡಿದ ಮುಷ್ಟಿಯ ಬಿಗಿಗೆ ಆಸನದ ಕೈಪಿಡಿ ಮುರಿದು, ಮೌನದ ಬೆಂಕಿಯಲ್ಲಿ ಸುಡುವಂತೆ ನಾಯಕರು ನೋಡಿದರು – ಶ್ರೀನಿವಾಸರಾಯನನ್ನು. ಆತ ಮನುಷ್ಯನಲ್ಲದೆ, ಮೇಣದ ಬೊಂಬೆಯಾಗಿದ್ದರೆ ಕರಗಿಹೋಗಬೇಕಾಗಿತ್ತು ಹಾಗಿತ್ತು ಆ ನೋಟ.

ಲಟ್ಟೆಂದು ಮುರಿದ ಆಸನದ ಕೈಪಿಡಿಯ ಸದ್ದನ್ನು ಕೇಳಿ, ಕೆರಳಿ ಫೂತ್ಕರಿಸುವಂತಿದ್ದ ಆ ಕಣ್ಣುಗಳನ್ನು ನೋಡಿ ಮಾನ್ವಿ ಶ್ರೀನಿವಾಸರಾಯನ ಮೈ ಬೆವರಿ ನೀರಿಟ್ಟು, ಹಸಿದ ಹುಲಿಗಳ ನಡುವೆ ಸಿಕ್ಕ ಜಿಂಕೆಯಂತೆ ನಡುಗುತ್ತಾ-

"ನಾನು ಓದಿದ್ದು ನವಾಬರ ಪತ್ರ"

-ಎಂದು ತೊದಲಿದ.

“ಪ್ರಭುಗಳಿಗದು ಮನವರಿಕೆಯಾಗಿದೆ. ವಿಚಾರ ಮಾಡಿ ಉತ್ತರ ಹೇಳುತ್ತಾರೆ. ಅಲ್ಲಿಯವರೆಗೆ ನೀವು ಬಿಡದಿಯಲ್ಲಿ ವಿಶ್ರಾಂತಿ ತೆಗೆದುಕೊಳ್ಳಿ....ಬಕ್ಷಿಗಳೇ - ಇವರಿಗೆ ದಾರಿ ತೋರಿಸಿ”

-ಎಂದು ಪರಿಸ್ಥಿತಿ ಪ್ರಕೋಪಕ್ಕೆ ಹೋಗದಂತೆ ತಡೆದು ಹೇಳಿದ ಪರಶುರಾಮನಾಯಕ. ಆತ ಅಷ್ಟು ಹೇಳಿದ್ದೇ ಸಾಕೆಂಬಂತೆ, ನೆಲಕ್ಕೆ ತಲೆಬಾಗುವಷ್ಟು ಬಗ್ಗಿ ನಮಸ್ಕಾರ ಮಾಡಿ, ದುರ್ದಾನ ತೆಗೆದುಕೊಂಡವನಂತೆ ಮಾನ್ವಿ ಶ್ರೀನಿವಾಸರಾಯ ಬಕ್ಷಿಗಳನ್ನು ಹಿಂಬಾಲಿಸಿ, ಹೊರಗೆ ಹೋದ.

ಶ್ರೀನಿವಾಸರಾಯ ಕಣ್ಣುಮರೆಯಾದರೂ, ಸೂರ್ಯ ಮೋಡದ ಹಿಂದೆ ಮರೆಯಾದರೂ ಮೈ ಬೆವರಿಸುವ ಬೇಸಿಗೆಯ ತಾಪದಂತಿತ್ತು – ಸಭೆಯ ವಾತಾವರಣ.

“ನಿಮ್ಮ ಮಾತು - ಅವನ ಮೈ ತೊಗಲನ್ನು ಉಳಿಸಿತು. ಉತ್ತರ ಕೊಡಬೇಕೇ ಆ ಪತ್ರಕ್ಕೆ ಆ ವಕೀಲನನ್ನು ಸಿಗಿದು, ಅವನ ಹೆಣವನ್ನು ರಂಗಯ್ಯನಬಾಗಿಲಮೇಲೆ ಶೂಲದ ಕಂಭಕ್ಕೆ ನೇತುಹಾಕಿಸಿ. ಅದೇ ನಮ್ಮ ಉತ್ತರ. ವಕೀಲರ ಮರೆಯಲ್ಲಿ ನಿಂತು ಮಾತಾಡುತ್ತಾನೆ, ಗಂಡಸಾಗಿದ್ದರೆ – ಎದುರಿಗೆ ನಿಂತು ಆ ಮಾತಾಡಬೇಕಿತ್ತು; ನವಾಬನ ಕಾಲು ಕತ್ತರಿಸಿ, ಅವನ ಬಾಯೊಳಗಿಟ್ಟು, ಮತ್ತೆಂದೂ ಬಾಯಿಬಿಡದಂತೆ ಮಾಡುತ್ತಿದ್ದೆವು ; ಆಡಿದ ಒಂದೊಂದು ಮಾತಿಗೆ, ಒಂದೊಂದು ಬೊಗಸೆ ರಕ್ತ ಕಕ್ಕಿಸುತ್ತಿದ್ದೆವು.”

-ಅಷ್ಟು ಹೊತ್ತು ತಡೆದ ಕ್ರೋಧ ಮಾತಿನ ಕೆಂಡದುಂಡೆಗಳಂತೆ ಸಿಡಿದವು, ನಾಯಕರ ಮುಖದಿಂದ.

“ಇದು ಸಿಟ್ಟಿಗೆ ಸಮಯವಲ್ಲ, ಪ್ರಭುಗಳು ಶಾಂತರಾಗಿ ವಿಚಾರ ಮಾಡಬೇಕು.”

– ಎಳ್ಳನಿತೂ ಉದ್ರೇಕವಿಲ್ಲದ ಧ್ವನಿಯಲ್ಲಿ ಹೇಳಿದ ಪರಶುರಾಮನಾಯಕ.

“ನೀವೇನು ಪ್ರಧಾನಿಗಳಾಗಿ ಮಾತಾಡುತ್ತಿದ್ದೀರೋ, ನಮ್ಮ ತಮ್ಮಂದಿರಾಗಿಯೇ ?”

“ಎರಡು ಅಧಿಕಾರವೂ ತಮ್ಮಿಂದಲೇ ನಮಗೆ ಬಂದಿದೆ. ತಾವು ಕೊಟ್ಟ ಪದವಿಯ, ಸೋದರಿಕೆಯ ಕೀರ್ತಿಯನ್ನು ಉಳಿಸಿಕೊಳ್ಳಬೇಕೆಂದೇ ಹೇಳುತ್ತಿದ್ದೇನೆ. ತಾವೊಂದು ತೀರ್ಮಾನಕ್ಕೆ ಬರುವ ಮುನ್ನ, ನಾನು ತಮ್ಮೊಂದಿಗೆ ಏಕಾಂತದಲ್ಲಿ ಮಾತನಾಡಲು ಅವಕಾಶ ಕೊಡಬೇಕು. ಉಳಿದವರಲ್ಲೂ ನಮ್ಮದಿಷ್ಟೇ ಪ್ರಾರ್ಥನೆ. ಎಲ್ಲರೂ ಕೂಡಿ ನಡೆಸಿಕೊಡಬೇಕು.”

-ವಿನಮ್ರವಾಗಿ ಪ್ರಾರ್ಥಿಸುವಂತೆ ಕೇಳಿದ ಪರಶುರಾಮನಾಯಕ.

ಆ ಮಾತಿಗೆ ಮಾತಿನ ಉತ್ತರಕೊಡದೆ ನಾಯಕರು ಸೋದರನ ಮುಖವನ್ನು ನೋಡಿದರು.

ಪರಶುರಾಮನಾಯಕನೂ ಅಣ್ಣನ ಮುಖ ನೋಡಿ –

"ಎಂದೂ ನಾವು ಪ್ರಧಾನಿಯಾಗಿ ಪ್ರಭುಗಳನ್ನು, ತಮ್ಮನಾಗಿ ಅಣ್ಣಂದಿರನ್ನು ಏತಕ್ಕೂ ಕೇಳಿಲ್ಲ. ಇದೊಂದು ಬಾರಿ ನಮ್ಮ ಮಾತು ನಡೆಸಿಕೊಡಬೇಕು"

- ಎಂದು ಯಾಚಿಸುವವನಂತೆ ಕೇಳಿದ.

ಆ ಮಾತಿಗೆ ಯಾವ ಉತ್ತರವನ್ನೂ ಕೊಡದೆ, ಆಸನದಿಂದೆದ್ದು. ಇದುರಿಗೆ ಬಂದ ರಾಜಲಾಂಛನ ಹಿಡಿದವರನ್ನು –

"ನೀವೂ ನಮ್ಮ ದಾರಿಗೆ ಅಡ್ಡವಾಗಿ ನಿಲ್ಲುತ್ತೀರಾ - ತೊಲಗಿರಾಚೆ"

-ಎಂದು ಗದ್ದರಿಸಿ, ಬೆದರಿ ದೂರ ಸರಿದು ನಿಂತ ಅವರನ್ನು ನೋಡದೆ ನಡೆದರು, ನಾಯಕರು.

ಆ ಮಾತಿಗೆ, ಆ ಮಾತಾಡುತ್ತಾ ನಡೆದ ಕಾಲಸದ್ದಿಗೆ ಸಭಾಭವನ ಕಂಪಿಸಿತು.

* * *

ಅತ್ತಿಂದಿತ್ತ, ಇತ್ತಿಂದತ್ತ, ಹೊಸದಾಗಿ ಇಕ್ಕಟ್ಟಾದ ಬೋನಿಗೆ ಬಿದ್ದ ವ್ಯಾಘ್ರದಂತೆ, ಅಷ್ಟು ಹೊತ್ತು ಮೌನವಾಗಿ ಓಡಾಡುತ್ತಿದ್ದ ಮದಕರಿನಾಯಕ, ತನ್ನೊಳಗೆ ತುಂಬಿದ್ದ ಕ್ರೋಧವೆಲ್ಲವನ್ನೂ ಕೊಡಹುವಂತೆ ಮೈಕೊಡಹಿ, ದೃಢವಾಗಿ ಪರಶುರಾಮನಾಯಕನ ಇದಿರು ನಿಂತು ಕೇಳಿದ –

"ಏನು ನಿನ್ನ ಮಾತು ?"

"ನಾನು ಹೇಳಬೇಕಾಗಿರುವುದು - ನೀವು ಸಿಟ್ಟಾಗಿರುವಾಗ ಹೇಳುವಂಥ ಮಾತಲ್ಲ. ನವಾಬನ ಕಾಗದದ ಚೇಳು ಕಡಿದ ವಿಷ ನಿಮ್ಮ ಮೈಯಿಂದ ಇಳಿದುಹೋಗಲಿ. ಆಮೇಲೆ ಹೇಳುತ್ತೇನೆ. ಸಿಟ್ಟು - ನಮ್ಮ ಮಾತಿಗೆ ಬಹು ದೊಡ್ಡ ಆತಂಕ."

"ಹಾಗಿದ್ದರೆ ನನ್ನನ್ನು ಹೊತ್ತುಕೊಂಡು ಹೋಗಿ ಹೊಂಡದಲ್ಲಿ ಹಾಕಿ ಹತ್ತು ದಿನ ಬಿಡು. ಆಮೇಲೆ ಬಂದು ಮಾತಾಡುವಿಯಂತೆ."

"ನಿಮ್ಮ ಸಿಟ್ಟು ಇಳಿಸಲು ಅದಕ್ಕಿಂತ ಉತ್ತಮ ಉಪಾಯ ನನಗೆ ಗೊತ್ತಿದೆ"

- ಎಂದು ಹೇಳಿ, ಪರಶುರಾಮನಾಯಕ ಅರಮನೆಯೊಳಗೆ ಹೋಗಿ, ಅಂತಃಪುರದಲ್ಲಿದ್ದ ತಮ್ಮ ತಾಯಿ ನಿಂಗವ್ವನನ್ನು ಅಲ್ಲಿಗೆ ಬಲವಂತವಾಗಿ ಕರೆತಂದು, ಆಸನದಲ್ಲಿ ಕೂಡಿಸಿ-

"ನಮ್ಮಿಬ್ಬರ ನಡುವೆ ಮಾತಾಡುವಾಗ ನೀನಿಲ್ಲಿರು, ಅವ್ವ, ಇಲ್ಲದಿದ್ದರೆ ಅಣ್ಣ ನನ್ನನ್ನು ಸಿಟ್ಟಿನಲ್ಲಿ ಉರಿಸಿ ಬೂದಿಮಾಡಿಬಿಟ್ಟಾರು"

- ಎಂದು ಹೇಳಿದ.

ಅನಿರೀಕ್ಷಿತವಾಗಿ ಅಲ್ಲಿಗೆ ಬಂದ ತಾಯನ್ನು ಕಂಡು ಮದಕರಿನಾಯಕ, ಚಕಿತನಾಗಿ –

"ರಾಜಕಾರಣದ ಮಾತಿಗೆ ಅವ್ವನನ್ನೇಕೆ ಕರೆದುಕೊಂಡು ಬಂದೆ ?" – ಎಂದು ಕೇಳಿದ.

"ಹಿಂದಿನ ಕಾಲದಲ್ಲಿ ಋಷಿಗಳು ಮಾತಾಡುವಾಗ ತಮ್ಮ ಮಾತಿನಲ್ಲಿ ಸಿಟ್ಟು ಬಂದರೆ, ಅದರಿಂದ ಯಾರಿಗೂ ಅಪಾಯವಾಗದಿರಲಿ ಎಂದು ದರ್ಭೆಯ ಹುಲ್ಲನ್ನು ಅಡ್ಡ ಇಟ್ಟುಕೊಂಡು ಮಾತಾಡುತ್ತಿದ್ದರಂತೆ. ದರ್ಭೆಗೆ ಮಾತ್ರ ಋಷಿಗಳ ಸಿಟ್ಟಿನ ಉರಿಯನ್ನು ಸಹಿಸಿಕೊಳ್ಳುವ ಶಕ್ತಿ ಇತ್ತಂತೆ. ಹಾಗೇಂತ ಕೇಳಿದ್ದೆ. ಈಗ ಅವ್ವ ನಮ್ಮಿಬ್ಬರ ಮಧ್ಯದ ದರ್ಭೆ. ಆಕೆ ನಡುವೆ ಇರುವಾಗ ನನಗೇನೂ ಭಯವಿಲ್ಲ. ಮಾತಾಡಬಹುದು" - ಎಂದ ಪರಶುರಾಮನಾಯಕ.

ಆ ಸಂದರ್ಭದ ಪೂರ್ವಾಪರಗಳನ್ನೇನೂ ತಿಳಿಯದ ನಿಂಗವ್ವ –

"ಅರಮನೆ, ದೇವಸ್ಥಾನ ಎರಡು ಬಿಟ್ಟು ಮೂರನೇ ಯಾವುದನ್ನೂ ಕಾಣದ ನನ್ನನ್ನೇಕೆ ಈ ಮಾತಿಗೆ ಎಳೆದುಕೊಂಡು ಬಂದೆ, ಪರಶುರಾಮಣ್ಣ ? ಇದೇನು ರಾಜ್ಯದ ಮಾತೋ, ಅಣ್ಣ ತಮ್ಮಂದಿರ ಜಗಳಾನೋ ?" – ಎಂದು ಮುಗ್ಧಳಾಗಿ ಕೇಳಿದಳು.

"ಇದು ಯಾವದು ಅಂತ ಹೇಳೋದೇ ಕಷ್ಟ. ಎರಡೂ ಅಷ್ಟು ಒಂದಕ್ಕೊಂದು ಹೆಣೆದುಕೊಂಡುಬಿಟ್ಟಿದೆ. ನಮ್ಮಿಬ್ಬರನ್ನು ಹಡೆದವಳು ನೀನು. ಈಗ ನೀನೇ ಈ ಮಾತನ್ನು ತೀರ್ಮಾನ ಮಾಡಬೇಕು." - ಪರಶುರಾಮನಾಯಕ ಹೇಳಿದ.

"ಏನು ತೀರ್ಮಾನ ಮಾಡಬೇಕಪ್ಪಾ ? ಪ್ರಧಾನಿಯಾಗಿ ನಿನ್ನ ಮಾತನ್ನು ಅಪ್ಪಯ್ಯ ಕೇಳೋದಿಲ್ಲ ಅಂದನಾ ?"

"ಬಂದಿರೋ ಕಷ್ಟ ಅದಲ್ಲ, ಅವ್ವ. ರಾಜನಾಗಿ ಅಣ್ಣ ಅಪ್ಪಣೆ ಮಾಡಿದರೆ, ಬೇಡವಾದರೆ 'ನಿನ್ನ ಪ್ರಧಾನಿಪದವಿ ನೀನೇ ಇಟ್ಟುಕೋ' ಎಂದು ಎಲ್ಲಾದರೂ ಹೋದೇನು....ಪ್ರಧಾನಿ ಪದವಿ ಈ ಮುಂಡಾಸಿನಂತೆ - ಇಟ್ಟುಕೊಂಡರೆ ಇರುತ್ತದೆ, ಬಿಸಾಕಿದರೆ ಹೋಗುತ್ತದೆ. ಆದರೆ ಸೋದರಿಕೆ ಹಾಗೆ ಬೇಡ ಎಂದರೆ ಬಿಟ್ಟು ಹೋಗುತ್ತದೆಯೇ, ಅವ್ವಾ ? ನೀನು ಉಚ್ಚಂಗಮ್ಮನ ಗುಡಿಗೋಪುರದ ಮೇಲೆ ನಿಂತುಕೊಂಡು 'ಮದಕರಿನಾಯಕ ನನ್ನ ಮಗನಲ್ಲ' ಎಂದು ಹೇಳು, ಊರು ಬೇಕಾದರೆ ಅದನ್ನು ನಂಬುತ್ತದೆ - ನಿನ್ನ ಹೆತ್ತಕರುಳು ಒಪ್ಪುವುದಿಲ್ಲ, ಅಲ್ಲವೇ ? ಇದೂ ಹಾಗೆಯೇ – ಅಣ್ಣ ಸಿಟ್ಟಾದರೆ, ಮಾತು ಕೇಳದಿದ್ದರೆ, 'ನೀನು ನನ್ನ ತಮ್ಮನೇ ಅಲ್ಲ' ಅಂದರೆ ಕರುಳುಬಳ್ಳಿ ಕಡಿದುಹೋಗುತ್ತದೆಯೇ ? ಅದಕ್ಕೇ ನಮ್ಮಿಬ್ಬರನ್ನೂ ಹಡೆದ ತಾಯಿ ನೀನು - ನೀನು ಕೂತು ನ್ಯಾಯ-ಅನ್ಯಾಯ ವಿಚಾರ ಮಾಡಿ, ಯಾರ ಮಾತು ಸರಿ ಅಂತ ಹೇಳು."

"ಇವನಾಡುವ ಮಾತೇನು, ಅಪ್ಪಯ್ಯಾ ?" – ಮದಕರಿನಾಯಕನನ್ನು ಕೇಳಿದಳು ನಿಂಗವ್ವ.

"ಅವನ ಮಾತೇನೋ ನನಗೂ ಗೊತ್ತಿಲ್ಲ. ಅವನೇ ಹೇಳಬೇಕು. ಅದೇನು ಹೇಳು ತಾನೋ ಹೇಳಲಿ" – ಎಂದ ಮದಕರಿನಾಯಕ, ತಾಯಿಯ ಇದಿರು ಸ್ವಲ್ಪ ಶಾಂತನಾಗಿ.

"ಆಯಿತು, ಅದೇನು ವಿಷಯಾನೋ ನೀನೇ ಹೇಳು, ಪರಶುರಾಮಣ್ಣ. ನೀನು ಹೇಳಿದ್ದು ಕೇಳಿ ನನಗೆ ತಿಳಿದದ್ದು ಹೇಳುತ್ತೀನಿ."

"ಇದೇನೂ ಅಂಥ ದೊಡ್ಡ ಮಾತಲ್ಲ, ಅವ್ವ - ಜುಜುಬಿ ಮಾತು. ಹಿಂದೆ 'ಈ ರಾಜ್ಯ ಆಳೋಕೆ ನಿನ್ನ ಮಗ ಬೇಕು' ಅಂತ ಓಬವ್ವನಾಗತಿಯವರು ಕೇಳಿದಾಗ ನೀನು 'ಇಲ್ಲ' ಅಂದೆಯಾ, ಅವ್ವಾ ?"

"ಈ ವಂಶದಲ್ಲಿ ಹುಟ್ಟಿ ಹಾಗೆಂದರೆ ಆದೀತಾ, ಅಪ್ಪಾ. ಆಲದಮರ ಬಿಳಲುಬಿಡೋದೇ ತನಗೆ ಆಸರೆ ಆಗಿರಲಿ ಅಂತ. ವಂಶಕ್ಕೆ ಬಂಧುಗಳೂ ಹಾಗೆ."

"ಅದು ಸರಿಯಾದ, ವಿವೇಕವಿದ್ದವರ ಮಾತು. ಆಗ ರಾಜ್ಯ ಒಬ್ಬ ಮಗನನ್ನು ಆಳಲು ಕೇಳಿತು - ಕೊಟ್ಟೆ. ಈಗ ರಾಜ್ಯ ಉಳಿಯಲು ಇನ್ನೊಬ್ಬ ಮಗ ಬೇಕು ಎಂದು ಕೇಳುತ್ತಿದೆ. ಆಗ 'ಹೂ' ಅಂದವಳು ಈಗ 'ಬೇಡ' ಎನ್ನುತ್ತೀಯಾ, ಅಪ್ಪಾ ? ಧರ್ಮ ಒಬ್ಬರಿಗೊಂದು, ಇನ್ನೊಬ್ಬರಿಗೊಂದು ಆಗುತ್ತದೆಯೇ ; ಶೆಟ್ಟಿಯ ಸೇರಿನ ಹಾಗೆ - ಕೊಡೋಕೆ ಒಂದು, ತೆಗೆದುಕೊಳ್ಳೋಕೆ ಇನ್ನೊಂದು ಆದಹಾಗೆ."

-ಪರಶುರಾಮನಾಯಕ ಸವಾಲುಹಾಕಿದಂತೆ ಕೇಳಿದ.

ವಿಷಯವೇನೆಂದೇ ತಿಳಿಯದೆ ನಿಂಗವ್ವ ಆ ಮಾತಿಗೆ ಏನೊಂದೂ ಉತ್ತರ ಕೊಡದೆ, ತನ್ನಿಬ್ಬರು ಮಕ್ಕಳ ಮುಖವನ್ನು ಪ್ರಶ್ನಾರ್ಥಕದೃಷ್ಟಿಯಿಂದ ನೋಡಿದಳು.

ಆಕೆಗೆ ಆಗದ ಮಾತಿನ ಅರ್ಥ ಮದಕರಿನಾಯಕನಿಗಾಗಿ, ಸಿಟ್ಟಿನಲ್ಲಿ ಸೆಟೆದು ನಿಂತು-

"ಹೊಟ್ಟೆಗೆ ಬೆಂಕಿ ಹಾಕೋ ಈ ಮಾತು ಕೇಳೋಕೆ ಕರೆದುಕೊಂಡು ಬಂದೆಯಾ, ಅವ್ವನ್ನ. ಅವ್ವನಲ್ಲ, ಅವರವ್ವ ಬಂದು ಹೇಳಿದರೂ ನಾನಿದಕ್ಕೆ ಒಪ್ಪುವುದಿಲ್ಲ"

– ಎಂದು ದೃಢನಿರ್ಧಾರದ ಧ್ವನಿಯಲ್ಲಿ ಹೇಳಿದ.

"ನಿನ್ನ ಮಾತಿಗೆ ಈ ರಾಜ್ಯ ಅಲ್ಲಾಡಬಹುದು. ಅಣ್ಣ, ಆದರೆ ಸೂರ್ಯ, ಚಂದ್ರರೂ ರಾಜಾಂತ ಹೇಳಿ ನಿನ್ನ ಮಾತು ಕೇಳಿಕೊಂಡು ಹುಟ್ಟಿ ಮುಳುಗೋದಿಲ್ಲ. 'ನಿನ್ನ ರಾಜ್ಯ ಭೂಮಿ, ನಮ್ಮ ರಾಜ್ಯ ಆಕಾಶ' ಅಂತ ತಮ್ಮ ಕೆಲಸ ತಾವು ಮಾಡುತ್ತವೆ."

"ಕಳ್ಳಿನರಸಪ್ಪಯ್ಯನವರ ಹತ್ತಿರ ಕಲಿತ ಈ ಜಾಣಮಾತು ಬಿಟ್ಟು ಬಿಡು, ಪರಶುರಾಮಣ್ಣ. ನಾನು ಕುರಿಯಲ್ಲ, ಮದಕರಿ. ಅವ್ವ ಈ ರಾಜ್ಯಕ್ಕೆ ಒಪ್ಪಿಸಿದ್ದು ನನ್ನನ್ನ - ನಿನ್ನನ್ನಲ್ಲ. ನಿನಗೂ ಇದಕ್ಕೂ ಸಂಬಂಧವಿಲ್ಲ. ಇದರ ಕಿರೀಟ ಹೊತ್ತುಕೊಂಡಾಗಲೇ ಈ ರಾಜ್ಯಕ್ಕೆ ನನ್ನ ತಲೆ ಕೊಟ್ಟೆ. ಆಗ ಒಂದು

ತರಹ, ಈಗ ಇನ್ನೊಂದು ತರಹ. ಈ ಮಾತಿನಲ್ಲಿ ನೀನು ದೊಡ್ಡೋನಾಗೋಕೆ ಬರಬೇಡ. ಹಿರಿಯರು ಹೇಳಿದ ಹಾಗೆ ಕೇಳಿಕೊಂಡಿರು. ಅವನಿಗೆ ಅಷ್ಟು ಹೇಳು, ಅವ್ವಾ."

-ಎಂದ ಮದಕರಿನಾಯಕ - ತಾಯಿಯನ್ನು ಬೇಡುವಂತೆ, ತಮ್ಮನಿಗೆ ಅಪ್ಪಣೆ ಮಾಡುವಂತೆ.

"ಯಾರಿಗೆ ಏನಾದರೂ ಹೇಳೋ ಮೊದಲು, ವಿಷಯ ಏನು ಹೇಳಿ. ಕಣ್ಣು ಕಟ್ಟಿ 'ಇದೇನು ಹೇಳು' ಅಂತ ಕೇಳಿದರೆ, ಹೇಳಲಿಕ್ಕೆ ನನಗೇನು ಯಕ್ಷಿಣಿವಿದ್ಯೆಗೊತ್ತೆ? ಅದೇನೋ ಹೇಳಿ, ಆಮೇಲೆ ಯಾರಿಗೆ ಏನು ಬೇಕೋ ಅದನ್ನು ನಾನು ಹೇಳುತ್ತೇನೆ."

- ನಿಂಗವ್ವ ಇಬ್ಬರನ್ನೂ ತನ್ನ ಹತೋಟಿಗೆ ತೆಗೆದುಕೊಂಡು ಹೇಳಿದಳು.

ತಾಯಿಯ ಪ್ರಶ್ನೆಗೆ ಏನೊಂದೂ ಉತ್ತರ ಕೊಡದೆ, ಮದಕರಿನಾಯಕ ಮೌನವಾಗಿ ಸೆಟೆದು ನಿಂತಿದ್ದ. ಅದನ್ನು ಕಂಡು ಪರಶುರಾಮನಾಯಕನೇ ಆ ದಿನ ಆಸ್ಥಾನದಲ್ಲಿ ನಡೆದದ್ದು ಅದರ ರಾಜಕೀಯ ಹಿನ್ನೆಲೆ, ನವಾಬನ ಸಂಧಾನದ ನಿರಾಕರಣೆಯಿಂದಾಗುವ ಸಾಧಕ-ಬಾಧಕ ಎಲ್ಲವನ್ನೂ ತಾಯಿಯ ಹೃದಯಕ್ಕೆ ತಟ್ಟುವಂತೆ ಹೇಳಿದ. ಆದರೆ ಹೇಳದೆ ಬಿಟ್ಟದ್ದು - ನವಾಬ 'ನಿಮ್ಮ ತಮ್ಮನನ್ನು ಕಳುಹಿಸಿಕೊಡಬೇಕು' ಎಂದು ಹಾಕಿದ ಷರತ್ತನ್ನು ಮಾತ್ರ.

ಪರಶುರಾಮನಾಯಕ ಹೇಳಿದುದೆಲ್ಲವನ್ನೂ ಕೇಳಿದ ನಿಂಗವ್ವ, 'ಪರಶುರಾಮನಾಯಕನ ಮಾತಿನಲ್ಲಿ ಸಿಟ್ಟಾಗುವಂಥದೇನಿದೆ ?' ಎಂದೇ ಅರ್ಥವಾಗದೆ –

"ಪರಶುರಾಮಣ್ಣ ಹೇಳುವುದರಲ್ಲಿ ತಪ್ಪೇನಿದೆ, ಅಪ್ಪಯ್ಯ ? ಈ ಪೀಡೆ ಮನೆಬಾಗಿಲಿನಲ್ಲಿ ಉರಿಮಾರಿಯಾಗಿ ಕುಳಿತು, ಉದ್ಯಾನವಾಗಿದ್ದ ಊರು ಕಾಡಾಗಿ ಹೋಯಿತು. ಅವನು ಕೇಳುವುದಷ್ಟು ಹಣ ತಾನೇ - ಅದನ್ನವನ ಹುಲಿಬಾಯಿಗೆ ಹುಯ್ದು ಕಳಿಸಿಬಿಡು - ಇನ್ನಾದರೂ ಜನ ನೆಮ್ಮದಿಯಾಗಿ ಬದುಕಿಕೊಳ್ಳಲಿ. ನಿನ್ನೆ ನೀನೇ ಜನ ಮುಗ್ಗಲುರಾಗಿ ಗಂಜಿ ಕುಡೀತಾರೆ ಅಂತ ಕಣ್ಣೀರಿಟ್ಟೆಯಲ್ಲಾ, ಅವರ ದುಃಖಕ್ಕಿಂತ ದುಡ್ಡು ಹೆಚ್ಚಿನದೆ ? ಇಷ್ಟು ದಿನ ಹೋರಾಡಿ, ಇಷ್ಟು ಜನರನ್ನು ಬಲಿಕೊಟ್ಟು, ಈಗ ಅವನ ಮಾತಿಗೆ ಒಪ್ಪೋದು ಹೇಗೆ ಅಂತ ನಿನಗೆ ಬಿಗುಮಾನವೇನೋ? ಕಾಲ ಕೆಟ್ಟಾಗ ಭೀಮಸೇನ ಸಟ್ಟುಗ ಹಿಡಿಯಲಿಲ್ಲವೇ? ಶನಿ ಕಾಡಿದಾಗ ನಳಮಹಾರಾಯ ಹೆಂಡತಿ ಸೀರೇನ ಹೊದ್ದು ಕೊಂಡು, ಕಂಡೋರ ಕುದುರೆ ಸಾರಥಿ ಆಗಿ ಕಾಲಹಾಕಲಿಲ್ಲವೇ? ಅವರೆಲ್ಲರಿಗಿಂತ ನಾವು ದೊಡ್ಡರಾ ? ಈಗ ನಮಗೆ ಕೆಟ್ಟ ಕಾಲ. ಇಷ್ಟಕ್ಕೇ ಮುಗೀಲಿ, ಮತ್ತೆ ಒಳ್ಳೆ ದಿನ ಬಂದಾಗ ಚಕ್ರಬಡ್ಡಿ ಸಮೇತ ಇದೆಲ್ಲಾ ಕಕ್ಕಿಸುವಿಯಂತೆ"

-ಎಂದು ಮದಕರಿನಾಯಕನಿಗೆ ಸಮಾಧಾನ ಹೇಳಿದಳು.

“ನಿನ್ನ ಮಗ ಹೇಳೋದೆಲ್ಲಾ ಹೇಳಿದ, ಆದರೆ ಹೇಳಬೇಕಾದದ್ದನ್ನೇ ಬಿಟ್ಟ. ನವಾಬ ಬರೀ ದುಡ್ಡು ಕೇಳುತ್ತಾ ಇಲ್ಲಾ, ಅವ್ವಾ. 'ನಿನ್ನ ತಮ್ಮನ್ನ ನನಗೆ ಒತ್ತೆ ಇಡು' ಅಂತ ಕೇಳ್ತಿದಾನೆ – ನನ್ನ ಕಿರೀಟದ ಮೇಲೆ ತನ್ನ ಚಡಾವು ಹೊರಿಸೋ ಹಾಗೆ, ಅದಕ್ಕೂ ಒಪ್ಪಬೇಕೇನವ್ವಾ ?”

-ಸಿಡಿದು ಕೇಳಿದ ಮದಕರಿನಾಯಕ.

“ಏನೆಂದೆ ?”

-ಮದಕರಿನಾಯಕನ ಮಾತೇ ಅರ್ಥವಾಗದಂತೆ ಕೇಳಿದಳು. ನಿಂಗವ್ವ.

“ನಾವು ಈ ಒಪ್ಪಂದ ಪಾಲಿಸ್ತೀವಿ ಅನ್ನೋಕೆ ಪರಶುರಾಮಣ್ಣನನ್ನು ನವಾಬನ ಹತ್ತಿರ ವೋಲು ಇಡಬೇಕಂತೆ, ಸಾಹುಕಾರರ ಸಾಲಕ್ಕೆ ರೈತರು ತಮ್ಮ ಮಕ್ಕಳನ್ನ ಜೀತಕ್ಕೀಡುತ್ತಾರಲ್ಲಾ ಹಾಗೆ. ಇದಕ್ಕೂ ಒಪ್ಪಿಕೋಬೇಕು ಅನ್ತೀಯಾ ?”

“ಆ - ಹಾಗಂತ ಕೇಳಿದಾನಾ, ಎಕ್ಕಡದ ನಾಲಗೆಯ ನವಾಬ ?”

-ಮದಕರಿನಾಯಕ ಹೇಳಿದ ಮಾತನ್ನು ಕೇಳಿ, ಎಂದೂ ಕೆಟ್ಟ ಮಾತು ಆಡದ ನಿಂಗವ್ವನೂ ಸಿಡಿದು ಕೇಳಿದಳು.

“ಕೇಳಿದಾನೋ ಇಲ್ಲವೋ – ಈ ನಿನ್ನ ಸತ್ಯಹರಿಶ್ಚಂದ್ರ ಮಗನನ್ನೇ ಕೇಳು. ಬರೀ ಹಣ ಕೇಳಿದ್ರೆ ನನ್ನ ಹೆಂಡಂದಿರ ತಾಳಿನಾದ್ರೂ ಮಾರಿ, ಕೊಟ್ಟು ಕಳಿಸ್ತಾ ಇದ್ದೆ – ಜನರ ಕಷ್ಟಕ್ಕಿಂತ ಅದು ದೊಡ್ಡದಾ ?”

“ಈ ಮಾತು ನಿಜವೇ, ಪರಶುರಾಮಣ್ಣ ?”

“ಅದು ಸುಳ್ಳಲ್ಲ. ಆದರೆ ನೀನೂ ಅಣ್ಣನ ಹಾಗೆ ಕರುಳಿನ ಮಮತೇಲಿ ಬುದ್ಧಿ, ತಾಳ್ಮೆ ಕಳಕೋಬೇಡ, ಅವ್ವಾ. ನವಾಬ ಕೇಳುತ್ತಿರುವುದು ನನ್ನ ತಲೆಯನ್ನಲ್ಲ, ನನ್ನನ್ನು ಒತ್ತೆ ಇಡಿ ಅಂತ. ಯೋಚನೆ ಮಾಡು, ಅವ್ವಾ. ಈ ಯುದ್ಧ ಆರಂಭವಾದ ದಿನದಿಂದ ಈ ಊರಿನಲ್ಲಿ ಎಷ್ಟು ಸಾವಿರ ಜನ ಸತ್ತಿದಾರೆ; ಎಷ್ಟು ಸಾವಿರ ಜನ ಹೆಂಡಂದಿರು ತಮ್ಮ ಗಂಡಂದಿರನ್ನು ಕಳೆದುಕೊಂಡಿದಾರೆ; ಎಷ್ಟು ಮಕ್ಕಳು ತಬ್ಬಲಿ ಆಗಿದಾರೆ. ಆದರೂ ಇವತ್ತು ಲಡಾಯಿಗೆ ಕಳಿಸಿಕೊಡಿ ಅಂದಾಗ ಯಾರಾದರೂ ತಾಯಿ, ಹೆಂಡತಿ, ಮಕ್ಕಳು ಇಲ್ಲಾಂತ ಅಂದಿದಾರಾ? ಏಕನಾಥಮ್ಮನಿಗೆ ಎಡೆ ಕೊಡೋ ಹಾಗೆ ಮನೆಗೊಬ್ಬ ಮಗನನ್ನು ಕಳಿಸಿಕೊಟ್ಟರಲ್ಲಾ ಆ ತಾಯಂದಿರು, ಅವರೇನಾದ್ರೂ ಹೀಗೆ ಯೋಚನೆ ಮಾಡಿದ್ರಾ? ಈ ನಿನ್ನ ರಣಧೀರ ಮಗ ಎಷ್ಟು ಜನರ ತಲೆ ಕಡಿದಿದಾನೋ, ಆಗ ಅವರೂ ನಿನ್ನಂಥ ತಾಯಿ ಹಡೆದ ಮಕ್ಕಳು ಅಂತ ಯೋಚನೆ ಮಾಡಿದನಾ ? ಎಲ್ಲರೂ ಹಾಗೆ ಯೋಚನೆ ಮಾಡಿದ್ರೆ - ದುರ್ಗದಲ್ಲಿ ತಾಯಂದಿರ ದಂಗೆ ಆಗ್ತಿತ್ತು; ಹೆಂಡಿರು, ಮಕ್ಕಳು ಸೇನೆಗೆ ಅಡ್ಡವಾಗಿ ಮಲಗೋರು. ಅದನ್ನು ಯಾಕೆ ಅಣ್ಣ ಯೋಚನೆ ಮಾಡೋಲ್ಲ? ಇವತ್ತು ನನ್ನೊಬ್ಬನ್ನ

ಉಳಿಸಿಕೊಳ್ಳಲಿಕ್ಕೆ ನವಾಬನ ಮಾತಿಗೆ ಇಲ್ಲಾಂದ್ರೆ, ನಾಳೆ ನಿನ್ನಂಥ ಹಡೆದ ಹತ್ತು ಸಾವಿರ ಮಕ್ಕಳು ಸತ್ತು, ಅವರ ಮನೇಲಿ ಕಣ್ಣೀರ ಕೋಡಿ ಹರಿಯುತ್ತೆ. ಅಷ್ಟು ಜನದ ಜೀವಕ್ಕಿಂತ ನನ್ನೊಬ್ಬನ ಜೀವ ದೊಡ್ಡದಾಯಿತಾ ? ನನ್ನನ್ನು ಹಡೆದದ್ದು ತಾಯ ಬಸಿರು, ಅವರನ್ನು ಹಡೆದದ್ದು ಮಣ್ಣಿನ ಮಡಕೆಯೇ - ಅವ್ವಾ? ಅಣ್ಣಾ, ಇತರರಿಗೆ ಉಪದೇಶ ಮಾಡೋ ಮೊದಲು ನಮ್ಮ ನಾಲಗೆ ಚೊಕ್ಕಟವಾಗಿಟ್ಟುಕೊಂಡಿರಬೇಕಲ್ಲವಾ? ದುರ್ಗದ ದೊರೆಯಾಗಿ, ಕಂಡೋರ ಮಕ್ಕಳನ್ನ ಯುದ್ಧಕ್ಕೆ ಕಳಿಸೋ ಧೀರ ತನ್ನ ಮಗನ್ನ, ತಮ್ಮನ್ನ 'ನಿಮ್ಮ ಮನೆ ಹೆಂಗಸರ ಸೀರೆ ಹಿಂದಿರಿ' ಅಂತ ಹೇಳಿದ್ರೆ, ಕೇಳಿದ ಜನ ಆಡಿಕೊಂಡು ನಗೋಲ್ವೆ ? ನಮ್ಮ ಮಾತು ಸವಕಲು ದುಗ್ಗಾಣಿ ಆಗ್ತದೆ ಅಷ್ಟೆ. ಅಣ್ಣನಿಗೆ ಇಂಥ ಅಪಖ್ಯಾತಿ ಬಂದರೆ ನಾನು ಇವನಿಗೆ ತಮ್ಮನಾಗಿ ಹುಟ್ಟಿದ್ದಕ್ಕೇನು ಸಾರ್ಥಕ ? ತಮ್ಮ ತಲೇನ ಕತ್ತಿಬಾಯಿಗೆ ಕೊಟ್ಟು, ತೋಫಿನ ಗುಂಡಿಗೆ ಎದೆ ಕೊಟ್ಟು, ಸೇನೆಗೆ ಹಿಂದೆ ಬನ್ನಿ ಅಂತ ಕರೆದದ್ದು ದುರ್ಗದ ಅರಸರ ಕೀರ್ತಿ; ಕೂಲಿಜನದ ಕೈಲಿ ಲಡಾಯಿ ಮಾಡಿಸಿದ್ದಲ್ಲ. ಇವತ್ತಿನವರೆಗೂ ನಮ್ಮಣ್ಣ ದುರ್ಗದ ದೊರೆಯಾಗಿ ಆ ಕೀರ್ತಿಗೆ ಕಳಂಕ ತಂದಿಲ್ಲ. ಈಗ ನವಾಬ ತಮ್ಮನ ತಲೆ ಕೇಳಲಿಲ್ಲ, ಒತ್ತೆ ಇಡು ಅಂದ. ಅಷ್ಟಕ್ಕೇ ಹಿಂಜರಿದು ಹಿಂದಿನ ಆ ತಲೆ, ಮುಂದಿನ ಮೂರು ತಲೆ ಅಣ್ಣನ ಹೆಸರು ಹೇಳಿಕೊಂಡು ನಾಚಿ ತಲೆತಗ್ಗಿಸೋಕೆ ನಾನು ದಾರಿ ಮಾಡಿಕೊಟ್ರೆ, ನಿನ್ನಂಥ ತಾಯಿಗೆ ನಾನು ಮಗನಾಗಿ, ಇಂಥ ಅಣ್ಣನಿಗೆ ತಮ್ಮನಾಗಿ ಹುಟ್ಟಿದ್ದಕ್ಕೇನು ಸಾರ್ಥಕ? ಶೂರ್ಪನಖಿ ಮೂಗನ್ನ ಲಕ್ಷ್ಮಣ ಕುಯ್ದ ಅಂತ ರಾವಣ ಲಂಕೇಲಿ ಹುಟ್ಟಿದೋರನ್ನೆಲ್ಲಾ ಮುಂಡೇರನ್ನ ಮಾಡಿದ ಹಾಗೆ ನವಾಬ ತಮ್ಮನ್ನ ಕೇಳಿದ ಅಂತ ನಮ್ಮಣ್ಣ ದುರ್ಗದ ತಾಯಂದಿರನ್ನ ತಬ್ಬಲಿ ಮಾಡೋದು - ಯಾವ ದೇವರು ಒಪ್ಪೋ ಮಾತು ? ನನ್ನ ತಾಯಿಯಾಗಿ ಅಲ್ಲ, ಈ ದುರ್ಗದ ಹೆಣ್ಣು ಮಗಳಾಗಿ ನಿನ್ನ ಮಗನಿಗೆ ಬುದ್ಧಿ ಹೇಳು."

- ತನ್ನ ಎದುರಿಗಿದ್ದ ಅಣ್ಣ ತಾಯಿಯನ್ನು ಸವಾಲುಹಾಕಿದಂತೆ ಕೇಳಿದ ಪರಶುರಾಮನಾಯಕ.

ಆ ಮಾತಿನ ಅಪ್ರತಿಹತವಾದ ತರ್ಕಕ್ಕೆ ಏನೂ ಉತ್ತರ ಹೇಳಲಾಗದೆ, ಮದಕರಿನಾಯಕ ತಲೆತಗ್ಗಿಸಿ ನಿಂತುಬಿಟ್ಟ. ನಿಂಗವ್ವನೂ ಅಷ್ಟು ಹೊತ್ತು ಏನೂ ಮಾತಾಡಲಿಲ್ಲ. ಆಕೆಯ ಕಣ್ಣಲ್ಲಿ ತುಂಬಿದ ನೀರು - ಆಕೆಯ ಹೃದಯವನ್ನು ಹಿಂಡುತ್ತಿದ್ದ ಮೂಕ ನೋವಿಗೆ ನಾಲಗೆಯಾಯಿತು.

ಅವರಿಬ್ಬರೂ ಸುಮ್ಮನಿದ್ದುದನ್ನು ಕಂಡು ಪರಶುರಾಮನಾಯಕನೇ ಹೇಳಿದ –

"ಅವ್ವಾ - ನಾನು ದುರ್ಗದ ಜನರ ಪ್ರಾಣ ಉಳಿಸಲು ನವಾಬನ ಹತ್ತಿರ ಹೋಗುತ್ತೇನೆ. ಆದರೆ ನಾನು ಮಾರಿಯ ಗುಡಿಗೆ ಹೋಗುವ ಕೋಣವಲ್ಲ. ನವಾಬ ನನ್ನನ್ನು ಕೊಲ್ಲುವ ಕೆಟ್ಟ ಯೋಚನೆ ಮಾಡಿದರೆ - ಮೊದಲು ಅವನ ಹೆಂಡಿರ ತಾಳಿ ಕಡಿದು, ಆಮೇಲೆ ನನ್ನ ತಲೆ

ಕೊಡುತ್ತೇನೆ. ಇರಲಿ - ಹೋಗಲಿ, ಹಡೆದ ನಿಮಗೆ, ಹುಟ್ಟಿದೋರಿಗೆ ಅಪಕೀರ್ತಿ ತಂದು ಕುರಿಯಾಗಿ ಸಾಯೋಲ್ಲ."

"ನಿನ್ನ ಮಾತಿಗೆ ನಾನು ಏನು ಹೇಳಲೋ, ಪರಶುರಾಮಣ್ಣ? ಎಲ್ಲಾ ಸರಿ - ನಿನ್ನ ಮಾತಿಗೆ ಹೂ ಅಂದು ನಾಳೆ ನಿನ್ನ ಹೆಂಡತಿ, ಮಕ್ಕಳ ಮುಖ ಹೇಗೆ ನೋಡಲೋ ?"

- ಕಂಬನಿಗರೆಯುತ್ತಾ ಕೇಳಿದಳು ನಿಂಗವ್ವ.

"ನನ್ನ ಹೆಂಡತಿ ನನಗೆ ಗೊತ್ತು, ಅವ್ವಾ - 'ನಿನ್ನ ಮಾಂಗಲ್ಯ ಹೆಚ್ಚ, ಲಕ್ಷ ಜನದ ಮಾಂಗಲ್ಯ ಹೆಚ್ಚೋ?' – ಅಂತ ಕೇಳಿದ್ದರೆ, ಅಣ್ಣನ ಹಾಗೆ, ನಿನ್ನ ಹಾಗೆ ಅವಳು ಹಿಂದು ಮುಂದು ನೋಡುವುದಿಲ್ಲ; ಕಣ್ಣೀರು ಹಾಕುವುದಿಲ್ಲ. 'ನೀವು ಮುಂದೆ ಹೋಗಿ, ನಿಮ್ಮ ಹಿಂದೆ ನಾನೂ ಸ್ವರ್ಗಕ್ಕೆ ಬರ್ತೀನಿ. ಮುಂದಿನ ಮೂರು ಮೂರು ಜನ್ಮದಲ್ಲೂ ಇಷ್ಟು ಜನರ ತಾಳಿ ಉಳಿಸಿದ ಪುಣ್ಯ ನಮ್ಮಿಬ್ಬರನ್ನೂ ಕಾಪಾಡಲಿ' ಅನ್ತಾಳೆ. ನನ್ನ ಮಾತು ಸಟೆ ಅನಿಸಿದರೆ ಕೇಳಿ ನೋಡು, ನಿನಗೆ ತಕ್ಕ ಸೊಸೆ ಅವಳು - ಹುಟ್ಟಿದ ಮನೆಗೆ, ಕೊಟ್ಟ ಮನೆಗೆ ಕೆಟ್ಟ ಹೆಸರು ತರೋ ಹೀನಸುಳಿಯಲ್ಲ. ನಾನು ನವಾಬನಿಗೆ ಹೆದರಿ ಕೂತರೆ ನನ್ನ ಮಕ್ಕಳೂ ಹಂಗಿಸ್ತಾರೆ. ಅದೆಲ್ಲಾ ಬಿಡು - ಈ ನಿನ್ನ ಧೀರಮಗನಿಗೆ, ದುರ್ಗದ ಅರಸನ ಹಾಗೆ ನಡೆದುಕೊ ಅಂತ ಹೇಳು" – ಎಂದ ಪರಶುರಾಮನಾಯಕ.

ಆ ಮಾತು ಕೇಳಿ ನಿಂಗವ್ವ ಮದಕರಿನಾಯಕನ ಮುಖ ನೋಡಿದಳು.

ಮದಕರಿನಾಯಕ, ತನ್ನತ್ತ ತಿರುಗಿದ ತಾಯಿಯ ಮುಖ ನೋಡದೆ, ತಮ್ಮನನ್ನೊಮ್ಮೆ ಆಪಾದಮಸ್ತಕಪರ್ಯಂತ ನೋಡಿ –

"ನನಗಿಂತ ಚಿಕ್ಕವನಾಗಿ ಹುಟ್ಟಿ, ನನ್ನನ್ನೇ ಸಣ್ಣವನನ್ನಾಗಿ ಮಾಡಿದೆ. ನಿನಗೆ ಉತ್ತರ ಹೇಳುವ ಶಕ್ತಿ ನನಗಿಲ್ಲ, ಪರಶುರಾಮಣ್ಣ. ಇದು ನನಗೆ, ಎಲ್ಲರಿಗೂ ಸೋಲುವ ಕಾಲ"

- ಎಂದಷ್ಟೇ ಹೇಳಿ, ಅಲ್ಲಿ ನಿಲ್ಲದೆ ಹೊರಗೆ ಹೊರಟುಹೋದ.

ನಿಂಗವ್ವ ತನ್ನ ಮಗನನ್ನು ತಬ್ಬಿ, ಮಾತನಾಡದೆ ಕಂಬನಿಗರೆದಳು - ಆ ನೀರಿನೊಂದಿಗೆ ತನ್ನ ಬಾಳೇ ಹನಿಹನಿಯಾಗಿ ಬರಿದಾಗುತ್ತಿರುವಂತೆ.

೧೩

ಮರುದಿನ ಮತ್ತೆ ನೆರೆದ ಸಭೆ - ಚಳಿಮಂಜು ಕವಿದ ಶಿಶಿರಋತುವಿನ ಹಗಲಿನಂತಿತ್ತು. ಸಭೆಯಲ್ಲಿ ಜನರಿದ್ದರೂ ನಿರ್ಜನವಾದಂತಿತ್ತು. ಯಾರಿಗೂ ಗಟ್ಟಿಯಾಗಿ ಉಸಿರಾಡಲೂ ತ್ರಾಣವಿದ್ದಂತಿರಲಿಲ್ಲ.

ಯುದ್ಧವೋ-ಶಾಂತಿಯೋ - ನಿರ್ಧಾರವಾಗಬೇಕಾದ ನಿರ್ಣಾಯಕ ಸಭೆ ಅದು. ಆದರೆ ಅದರಲ್ಲಿ ಜೀವವೇ ಇರದೆ, ಹಳತಾಗಿ, ಮಾಸಿ, ಬಣ್ಣಗೆಟ್ಟ ಚಿತ್ರದಂತಿತ್ತು.

ಸಭೆಯಲ್ಲಿದ್ದವರನ್ನೊಮ್ಮೆ ತಣ್ಣಗೆ ಮಂಜಿನಂತೆ ಕೊರೆವ ನೋಟದಿಂದ ನೋಡಿ-

"ನವಾಬರ ವಕೀಲರು ಸಭೆಗೆ ಬಂದಿದ್ದಾರೋ ?"

-ಎಂದು ಕೇಳಿದರು ನಾಯಕರು, ಆತ ಇದ್ದುದನ್ನು ಕಂಡೂ ಕಾಣದವರಂತೆ.

"ಬಂದಿದ್ದಾರೆ" – ಎಂದ ಪ್ರಧಾನಿ ಪರಶುರಾಮನಾಯಕ.

"ಹಾಜರಾಗಿದ್ದೇನೆ, ರಾಜಾಸಾಹೇಬ್"

- ಎಂದು ಮಾನ್ವಿ ಶ್ರೀನಿವಾಸರಾಯನೂ ಎದ್ದು ನಿಂತು, ಕೈಮುಗಿದು ಹೇಳಿದೆ.

ನಿಂತು ಕೈಮುಗಿದ ಆತನಿಗೆ ಕುಳಿತುಕೊಳ್ಳಲೂ ಹೇಳದೆ, ನಿಲ್ಲಲೇ ಬಿಟ್ಟು –

"ನಿಮ್ಮ ನವಾಬರು ಕಳುಹಿಸಿದ ಸಂಧಾನಸೂಚನೆಯ ಬಗ್ಗೆ ನಮ್ಮ ಆಪ್ತರೊಂದಿಗೆ ದೀರ್ಘವಾಗಿ ಯೋಚನೆ ಮಾಡಿ, ಬಹು ಪ್ರಯತ್ನ ಪಟ್ಟು ಅವರಿಗೆ 'ಸಂಧಾನದ ಬೇಡಿಕೆ ನವಾಬರಿಂದಲೇ ಬಂದಿರುವುದರಿಂದ, ನಮ್ಮೊಂದಿಗೆ ಶಾಂತಿಯಿಂದ ಸಹಬಾಳ್ವೆ ನಡೆಸುವ ಅವಕಾಶವನ್ನು ಕೊಡಬೇಕು' ಎಂದು ಹೇಳಿ ಅವರನ್ನು ಒಪ್ಪಿಸಿ. ಈ ಮಾತನ್ನು ನಿಮ್ಮ ಮೂಲಕ ನವಾಬರಿಗೆ ಹೇಳುತ್ತಿದ್ದೇವೆ. ಅವರಿಗೆ ತಿಳಿಸಿ- ಸಂಧಾನ ಕೋರಿದವರು ಅವರು, ನಾವಲ್ಲ. ಈ ಮಾತು ನೆನಪಿರಬೇಕು.

"ನಮ್ಮ ಜನ ಹೇಳುತ್ತಾರೆ - 'ನವಾಬರದು ಸ್ಥಿರಚಿತ್ತವಲ್ಲ. ಒಂದು ಗಳಿಗೆ ಸ್ನೇಹ, ಮರುಗಳಿಗೆ ಯುದ್ಧ - ಹೀಗೆ ಗಳಿಗೆಗೊಮ್ಮೆ ಬುದ್ಧಿ ಬದಲಾಯಿಸಿ ಮಾತಾಡುತ್ತಾರೆ. ರಾಜರಿಗೆ ಇರಬೇಕಾದದ್ದು ಒಂದು ನಾಲಗೆ. ಅದು ಯಾರು ಹೇಳಿದರೆ ಹಾಗೆ, ಹೇಗೆ ಹೊತ್ತು ಬಂದರೆ ಹಾಗೆ, ತಾಳ ಬದಲಾಯಿಸಿದಂತೆ ಹೆಜ್ಜೆ ಬದಲಿಸುವ ನಾಯಕಸಾನಿಯಾಗಬಾರದು' - ಎಂದು. ಇವತ್ತಿನ ಮಾತಿನೊಂದಿಗೆ ಯುದ್ಧ ಮುಗಿಯಬೇಕು. ಹಾಗಲ್ಲದೆ ಬುದ್ಧಿ ಬದಲಾಯಿಸಿದಲ್ಲಿ – ಕಾವೇರಿಯ ದಂಡೆಯಲ್ಲಿ, ಕತ್ತಿಯ ರೂಬು-ರೂಬು ಅವರ ಭೇಟಿ ಮಾಡುತ್ತೇವೆ. ಈ ಮಾತು ನಿಮ್ಮ ನವಾಬರಿಗೆ ಒಪ್ಪಿಗೆ ಇದ್ದಲ್ಲಿ ಆ ಪ್ರಕಾರ ಕರಾರುಪತ್ರ ಬರೆದು ಕೊಟ್ಟು, ಅವರ ಸಾಹುಕಾರರು ರಾಘವೇಂದ್ರನಾಯಕ, ಆಂದಾನಪ್ಪ, ಶಂಕರಶೆಟ್ಟಿ ಇವರೊಂದಿಗೆ ಆ ಪ್ರಮಾಣಪತ್ರವನ್ನು ನಮ್ಮಲ್ಲಿಗೆ ಕಳಿಸಬೇಕು.

"ಆ ಪತ್ರ ಬಂದ ಬಳಿಕ ನಿಮ್ಮ ನವಾಬರು ಕೇಳಿದ ಐವೇಜು ಹಣವನ್ನು ಕೊಡುತ್ತೇವೆ. ಅದೂ ಒಂದು ಗಂಟಿನಲ್ಲಲ್ಲ - ನಾಳೆ ನಿಮ್ಮ ಸಾಹುಕಾರರು ಬಂದಾಗ ಮೊದಲ ಕಂತಿನ ಮೂರು ಲಕ್ಷ ; ನವಾಬರು ದಂಡುಕೂಚು ಹೊರಟ ಬಳಿಕ, ಮೊದಲ ಮಜಲಿಗೆ ಮತ್ತೆ ಮೂರು ಲಕ್ಷ ಹಣ

ಮುಟ್ಟಿಸುತ್ತೇವೆ ; ಎರಡನೇ ಮಜಲಿಗೆ ಉಳಿದ ನಾಲ್ಕು ಲಕ್ಷ ಹಣ ನಮ್ಮ ತಮ್ಮಂದಿರ ಮಾರಿಫತ್ತು ಕಳಿಸುತ್ತೇವೆ.

"ಇದು ನಿಮ್ಮ ನವಾಬರಿಗೆ ಒಪ್ಪಿಗೆ ಇದ್ದಲ್ಲಿ, ನಾಳೆ ನಾವು ಹೇಳಿದ ಪ್ರಕಾರ ಸಾಹುಕಾರರ ಮುಖಾಂತರ ಪ್ರಮಾಣಪತ್ರ ಕಳಿಸಬೇಕು.

"ಈ ಮಾತಿನಲ್ಲಿ ಚೌಕಾಸಿಗಾಗಲಿ, ಕರಾರು ಬದಲಿಸಲಿಕ್ಕಾಗಲಿ, ಹಿಂದೆ-ಮುಂದೆ ಎಳೆದಾಡುವುದಕ್ಕಾಗಲಿ ನಾವು ಸಿದ್ಧರಿಲ್ಲ. ನಾಳೆ ನಿಮ್ಮ ನವಾಬರ ಸಾಹುಕಾರರೊಂದಿಗೆ ಪ್ರಮಾಣಪತ್ರ ಬರದಿದ್ದಲ್ಲಿ ಮುಂದೆ ಒದಗುವ ಎಲ್ಲದಕ್ಕೂ ನಿಮ್ಮ ನವಾಬರೇ ಹೊಣೆ. ಇದು ನಮ್ಮ ಅಂತಿಮ ತೀರ್ಮಾನ - ತಿಳಿಸಿ. ನಿಮ್ಮ ಆರೋಗ್ಯಕ್ಕೆ ದುರ್ಗದ ನೀರು ಒಗ್ಗುವುದಿಲ್ಲ. ಸಭೆ ಮುಗಿಯುತ್ತಿದ್ದಂತೆಯೇ ನಿಮ್ಮ ಶಿಬಿರಕ್ಕೆ ಪ್ರಯಾಣ ಮಾಡಬಹುದು"

- ಎಂದು ವಕೀಲ ಮಾನ್ವಿ ಶ್ರೀನಿವಾಸರಾಯನ ಎದೆಯ ಫಲಕದ ಮೇಲೆ ಕಬ್ಬಿಣದ ಕಂಟದಿಂದ ಕೊರೆಯುವಂತೆ ಹೇಳಿ –

"ಪ್ರಧಾನಿಗಳೇ, ವಕೀಲರ ಪ್ರಯಾಣಕ್ಕೆ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಡಿ"

-ಎಂದು ಪರಶುರಾಮನಾಯಕನಿಗೆ ಹೇಳಿ, ಆ ಮಾತಿನೊಂದಿಗೇ 'ಸಭೆ ಬರಖಾಸ್ತಾಯಿತು' ಎಂದು ತಿಳಿಸುವಂತೆ ಮೇಲೆದ್ದ ನಾಯಕರು ಮುಜುರೆಯನ್ನೊಪ್ಪಿಸುತ್ತಿದ್ದ ಯಾರ ಮುಖವನ್ನೂ ನೋಡದೆ, ಸಭೆಯಿಂದ ನಿರ್ಗಮಿಸಿದರು.

ನಾಯಕರು ಹೇಳಿದ ಮಾತನ್ನು ಕೇಳಿ, ಮಾನ್ವಿ ಶ್ರೀನಿವಾಸರಾಯನ ಮುಖ ಓಕುಳಿಯಲ್ಲಿ ಅದ್ದಿದಂತಾಗಿತ್ತು. ನಿಂತ ತನ್ನತ್ತ ನೋಡುತ್ತಿದ್ದ ದುರ್ಗದ ದಂಡನಾಯಕರು, ಆಪ್ತರ ಮುಖವನ್ನು ನೋಡಲಾಗದವನಂತೆ, ಅಲ್ಲಿ ನಿಂತರೆ ಉಸಿರುಕಟ್ಟುವುದೇನೋ ಎಂದು ಬಯಲಿನ ಗಾಳಿಯನ್ನು ಬಯಸಿದಂತೆ ಸಭೆಯಿಂದ ಹೊರಗೆ ಹೋದ.

ಅಲ್ಲಿಂದ ಹೊರಟ ಶ್ರೀನಿವಾಸರಾಯ ತನ್ನ ಕಾವಲಿನ ಅಶ್ವಾರೋಹಿಗಳೊಂದಿಗೆ ಕೂರ್ನೋಟ, ತಾತ್ಸಾರ, ದ್ವೇಷದಿಂದ ನೋಡುತ್ತಿದ್ದ ನೂರಾರು ಜನರ ಕಣ್ಣುಗಳ ಚಾವಟಿಯ ಏಟಿನಿಂದ ನಡೆಗೆ ಚುರುಕಾದವನಂತೆ ಆದಷ್ಟು ವೇಗವಾಗಿ ರಂಗಯ್ಯನಬಾಗಿಲು ದಾಟಿ, ಮಲ್ಲಾಪುರದ ದಾರಿ ಹಿಡಿದ.

* * *

ಓಲಗದಲ್ಲಿ ಶಾಂತಿಯಮಾತು ಮುಗಿಸಿಕೊಂಡು ಹೊರಬಂದ ಮದಕರಿನಾಯಕನ ಚಿತ್ತ-ಅಶಾಂತಿಯ ಸರ್ಪಗಳು ಬುಸುಗುಟ್ಟುವ ಹಾವಿನ ಹೇಳಿಗೆಯಾಗಿತ್ತು.

ಅಣ್ಣನ ಹೃದಯದಲ್ಲಾಗುತ್ತಿದ್ದ ಹೊಯ್ದಾಟವನ್ನು ಗಮನಿಸಿ ಆತನೊಂದಿಗೆ ಮಾತನಾಡಿದ ಪರಶುರಾಮನಾಯಕನೊಂದಿಗೆ 'ಇನ್ನು ಆಡುವ ಮಾತೇನೂ ಉಳಿದಿಲ್ಲ' ಎಂದಷ್ಟೇ ಹೇಳಿ, ಅಂಗರಕ್ಷಣೆಗೆಂದು ಬಂದ ಬೆಂಗಾವಲ ಭಟನನ್ನು ದೂರವಿರಲು ಹೇಳಿ, ಅರಮನೆಯಿಂದ ಹೊರಬಂದ.

ಅರಮನೆಯ ಪಾವಟಿಗೆಗಳನ್ನು ಇಳಿದು ತಾರಾಮಂಡಲದತ್ತ ನಡೆಯುತ್ತಿದ್ದಾಗ, ಮೊದಲು ಆತನ ಕಣ್ಣಿಗೆ ಬಿದ್ದದ್ದು -ಕಾವಲುಮನೆಯ ಎದುರಿನ ಕಲ್ಲುದಿಬ್ಬದ ಬಳಿ ತಾನು ನಿರ್ಮಿಸಲು ಬಯಸಿದ 'ಹೈದರಾಲಿಯಬೋನಿ'ಗೆ ಬೇಕಾದ ಕಲ್ಲುಕಂಭಗಳನ್ನು ಕಟೆಯುತ್ತಿದ್ದ ಕಲ್ಲುಕುಟಿಗರು. ಅವರು ಕಲ್ಲನ್ನು ಆಕಾರಗೊಳಿಸಲು ಬಳಸುತ್ತಿದ್ದ ಚಾಣ, ಸುತ್ತಿಗೆಗಳ 'ಕೊಟ ಕೊಟ' ಶಬ್ದ ಮದಕರಿನಾಯಕನ ಹೃದಯವನ್ನು ಚೇಳಿನಂತೆ ಕುಟುಕಿ, ಮತ್ತೆ ಅತ್ತ ಕಡೆ ನೋಡದೆ ತಲೆತಗ್ಗಿಸಿ ಮುಂದೆ ನಡೆದ.

ಬರಿಗಾಲಿನಿಂದ ನಡೆಯುತ್ತಿದ್ದ ದೊರೆಗಾಗಿ ಆಳುಗಳು, ಆತ ದಿನವೂ ಏರುತ್ತಿದ್ದ ಅಶ್ವವನ್ನು ವೇಗವಾಗಿ ತಂದು ಆತನ ಬಳಿ ನಿಲ್ಲಿಸಿದರು. ಅದನ್ನು ಹಿಂಬಾಲಿಸಿಯೇ ಶ್ವೇತಚ್ಛತ್ರವನ್ನು ಹಿಡಿದವನೂ ಓಡೋಡಿ ಬಂದ.

ಸಂಪಿಗೆಸಿದ್ಧೇಶ್ವರನ ದೇವಾಲಯದ ಇದಿರು ನಿಂತ ಮದಕರಿನಾಯಕ ಕುದುರೆಯಾಳಿಗೆ ಅದನ್ನು ಲಾಯಕ್ಕೆ ಕೊಂಡೊಯ್ಯಲು ಹೇಳಿ, ತನ್ನ ಬಳಿ ನಿಂತ ಬಿಳಿಗೊಡೆಯನ್ನು ಹಿಡಿದ ಆಳನ್ನು ಹಾಗೇ ನೋಡಿದ –

ಸಮವಸ್ತ್ರ ಧರಿಸಿದ ಆಳು, ವಿಶಾಲವಾಗಿ ಹರಡಿದ ಬಿಳಿಯ ಕೊಡೆ, ಅದರ ತುದಿಗಳಿಗೆ ತೂಗುಬಿಟ್ಟ ಮುತ್ತಿನ ಗೊಂಚಲುಗಳು, ಹೊನ್ನ ಹಿಡಿಕೆ, ಕೊಡೆಯ ಮೇಲಿನ ಮಿರುಮಿರುಗುವ ಮೊನಚು ತುದಿಯ ಮಿಸುನಿಯ ಕಳಶ –

ಅದೆಲ್ಲವನ್ನೂ ಅಂದೇ ಹೊಸದಾಗಿ ನೋಡಿದವನಂತೆ ನೋಡಿ ಅವನ ನಾಲಗೆ ಬೇವಿನ ಎಲೆಯಾಗಿ-

'ಇದನ್ನು ನವಾಬನ ಪಾಳಯಕ್ಕೆ ಕಳಿಸಿ'

-ಎಂದು ಹೇಳಬೇಕೆನಿಸಿತು. ಆದರೆ ಮಾತನಾಡುವ ಶಕ್ತಿಯೇ ಏಕೋ ಉಡುಗಿ ಹೋದಂತಿತ್ತು.

ಹಾಗಾಗಿ ಮಾತನಾಡದೆ ನಿಂತಲ್ಲಿಯೇ ನಿಂತು, ತನ್ನ ಬೆನ್ನ ಬಳಿಯ ಸಂಪಿಗೆಸಿದ್ಧೇಶ್ವರನ ದೇವಾಲಯ, ಅದರ ಬದಿಯ ಕಲ್ಲುಮಠ, ಇದುರಿಗೆ ಕಾಣುತ್ತಿದ್ದ ತುಲಾಭಾರಸ್ತಂಭ, ಗಾಳಿಗೋಪುರಗಳು, ಆ ಗೋಪುರಗಳಾಚೆ ಮಲಗಿದ ಆನೆಯ ಬೆನ್ನಮೇಲೆ ಕುಳಿತಂತಿದ್ದ

ಹಿಡಿಂಬೇಶ್ವರನ ದೇವಾಲಯ, ಅಷ್ಟು ದೂರಕ್ಕೆ ಕಾಣುತ್ತಿದ್ದ ಉಯ್ಯಾಲೆ ಕಂಭ, ಕನಕವ್ವ ನಾಗತಿಯ ದೀಪದಕಂಭ, ಅದರ ಮೇಲೆ, ಏರಿಯ ಮೇಲೆ ಗೋಪುರ ಮಾತ್ರ ಕಾಣುತ್ತಿದ್ದ ಏಕನಾಥೇಶ್ವರಿಯ ದೇವಾಲಯ, ಆ ಎಲ್ಲದರ ಮೇಲೆ ಹಡಗಿನಾಕಾರದ ಬೃಹತ್ ಶಿಲಾಖಂಡದ ಮೇಲೆ ನಿರ್ಮಿತವಾದ ಝುಂಡಾಬತೇರಿ, ಅದರ ಮೇಲೆ ಹೇಮಸ್ತಂಭದಂತೆ ಕಾಣುತ್ತಿದ್ದ ಹಿತ್ತಾಳೆಯ ತಗಡಿನ ಕವಚ ಹಾಕಿದ, ಮುಗಿಲು ಮುಟ್ಟಲು ನಿಮಿರಿನಿಂತಂತಿದ್ದ ಧ್ವಜಸ್ತಂಭದ ತುದಿಯಲ್ಲಿ ಬೀಸುಗಾಳಿಯೊಂದಿಗೆ ಸೆಣಸಿ ಹೊಯ್ದಾಡುತ್ತಿದ್ದ ಹನುಮದ್ಗರುಡಧ್ವಜ - ಎಲ್ಲವನ್ನೂ ನೋಡಿದ.

ನೋಟಮಾತ್ರದಿಂದಲೇ ದಿನದಿನವೂ ಅವನ ಹೃದಯದಲ್ಲಿ ಹರ್ಷ-ಹೆಮ್ಮೆಯನ್ನು ಮೂಡಿಸುತ್ತಿದ್ದ ಆ ಕಟ್ಟಡಗಳು –

ಇಂದು –

ಏಕೋ ಅನಾಥವಾಗಿ ನಿಂತು –

'ನಮ್ಮ ಈ ಸ್ಥಿತಿಗೆ ಕಾರಣವಾದ ಅಪರಾಧಿ ನೀನೇ'

-ಎಂದು ಹೇಳಿದಂತಾಗಿ, ಮತ್ತೊಮ್ಮೆ ಅವುಗಳನ್ನು ಕಣ್ಣೆತ್ತಿ ನೋಡಲೂ ಆಗದೆ, ನೋಟವನ್ನು ಬೇರತ್ತ ಹರಿಸಿದ.

ಹೆಚ್ಚು ಜನಸಂಚಾರವಿದ್ದ ಮೇಲುದುರ್ಗದ ಆ ಪ್ರಮುಖ ಭಾಗದಲ್ಲಿ ಓಡಾಡುತ್ತಿದ್ದ ಜನ – ಪಲ್ಲಕ್ಕಿಯಾಗಲಿ, ಕುದುರೆಯಾಗಲಿ, ಅಂಗರಕ್ಷಕ ಪಡೆಯಾಗಲಿ ಇಲ್ಲದೆ ಬೆಳ್ಗೊಡೆಯ ಆಳೊಬ್ಬನೊಂದಿಗೆ, ಅದೂ ಆ ಕೊಡೆಯ ನೆರಳಿನಲ್ಲಿ ನಡೆಯದ ತಮ್ಮ ಅರಸನನ್ನು ಕಂಡು, ಅಚ್ಚರಿಯಿಂದ ನೋಡುತ್ತಾ ನಿಂತರು.

ಆ ಜನದ ಪರಿವೆಯೂ ಇರಲಿಲ್ಲ ಮದಕರಿನಾಯಕನಿಗೆ. ಅಷ್ಟು ದೂರದಿಂದಲೇ ಕೈ ಮುಗಿಯುತ್ತಿದ್ದ, ಅಡ್ಡ ಬಿದ್ದ ಜನರನ್ನು ನೋಡಿಯೂ ನೋಡದವನಂತೆ ಮುಂದೆ ನಡೆದು, ನಡುಪ್ರದೇಶದಲ್ಲಿ ಹಾಗೇ ನಿಂತು ನೋಡಿದ –

ಬಲಬದಿಯಲ್ಲಿ ದುರ್ಗದಿಂದ ಕೆಳಗಿಳಿಯುವ ಅಜ್ಜಿಯ ಬಾಗಿಲು. ಎಡಬದಿಯಲ್ಲಿ 'ಚಿನ್ನದ ಮನೆ' ಎಂದು ಹೆಸರಿದ್ದ ಬೊಕ್ಕಸದ ಚಾವಡಿ, ಟಂಕಸಾಲೆಯಿದ್ದ ಬೃಹತ್ ಭವನ.

ಅದನ್ನು ನೋಡುತ್ತಿದ್ದ ಹಾಗೆಯೇ ನವಾಬನು ಕೇಳಿದ, ತಾನು ಕೊಡಲು ಒಪ್ಪಿದ ಐವೇಜಿನ ನೆನಪಾಗಿ, ಯಾಂತ್ರಿಕವಾಗಿ ಬೊಕ್ಕಸದ ಚಾವಡಿಯತ್ತ ನಡೆದ.

ನಾಯಕರು ತಮ್ಮ ಚಾವಡಿಯತ್ತ ಬರುತ್ತಿರುವುದನ್ನು ಕಂಡ ಬೊಕ್ಕಸದ ಚಾವಡಿಯ ಸಶಸ್ತ್ರಭಟರು ಆ ಸುದ್ದಿಯನ್ನು ಬೊಕ್ಕಸದ ಚಾವಡಿಯ ದಳವಾಯಿಗೆ ಮುಟ್ಟಿಸಿ, ಆತ ಓಡೋಡುತ್ತಾ ಭವನದ ಬಾಗಿಲಿಗೆ ಬಂದು, ನಾಯಕರಿಗೆ ಕೈಮುಗಿದು –

"ಒಳಗೆ ಬರಬೇಕು, ಮಹಾಸ್ವಾಮಿ" - ಎಂದು ಬೇಡಿದ.

ಯಾಂತ್ರಿಕವಾಗಿ ಒಳಗೆ ನಡೆದು ತಾಮ್ರ, ಬೆಳ್ಳಿ, ಬಂಗಾರಗಳನ್ನು ಕರಗಿಸುವ ಕುಲುಮೆಗಳ ಶಬ್ದವನ್ನು ಕೇಳಿ, ಕರಗಿದ ಲೋಹವನ್ನು ನಾಣ್ಯವಾಗಿ ಪರಿವರ್ತಿಸುವ ಕೆಲಸಗಾರರ ಮನೆಗಳತ್ತ ಕಣ್ಣು ಹಾಯಿಸಿ, ಹಾಗೇ ಬೊಕ್ಕಸದ ಚಾವಡಿಯ ದಳವಾಯಿಯ ಕಛೇರಿಗೆ ಬಂದು, ಆತ ತೋರಿಸಿದ ಆಸನದಲ್ಲಿ ಕುಳಿತು-

"ಬೊಕ್ಕಸದಲ್ಲಿ ನಗದು ಹಣ ಎಷ್ಟಿದೆ, ದಳವಾಯಿಗಳೇ ?"

- ಎಂದು ಕೇಳಿದ ಮದಕರಿನಾಯಕ.

"ಕರಾರುವಾಕಾಗಿ ಹೇಳಬೇಕಾದರೆ ಸ್ವಲ್ಪ ಹೊತ್ತು ಹಿಡಿಯುತ್ತದೆ, ಮಹಾಸ್ವಾಮಿ. ಸ್ಥೂಲವಾಗಿ ಬೇಕಾದರೆ ಕೂಡಲೇ ವಿಚಾರಿಸಿ ತಿಳಿಸುತ್ತೇನೆ" - ಎಂದ ಬೊಕ್ಕಸದ ದಳವಾಯಿ.

"ದುಡ್ಡು ದುಗ್ಗಾಣಿಗಳ ಲೆಕ್ಕವೇನೂ ಬೇಡ. ಎಷ್ಟು ವರಹ ಇರಬಹುದು - ಅಷ್ಟು ಹೇಳಿ. ನಾವೇನೂ ಬೊಕ್ಕಸದ ತನಿಖೆಗೆ ಬಂದಿಲ್ಲ. ಅದಕ್ಕೀಗ ಸಮಯವೂ ಇಲ್ಲ. ದುಂಡು ಸಂಖ್ಯೆ ಹೇಳಿದರೆ ಸಾಕು."

"ಅಪ್ಪಣೆ ಮಹಾಸ್ವಾಮಿ"

-ಎಂದು ಹೇಳಿದ ದಳವಾಯಿ, ಲೆಕ್ಕಪತ್ರಗಳನ್ನು ಬರೆಯುತ್ತಿದ್ದ ಮುಖ್ಯ ಕರಣಿಕನ ಬಳಿಗೆ ಹೋಗಿ, ಪಿಸುದನಿಯಲ್ಲಿ ಕೇಳಿ, ಆತ ಆತುರವಾಗಿ ಕಡತ ನೋಡಿ ಹೇಳಿದ ಮಾತನ್ನು ಕೇಳಿಸಿಕೊಂಡು ಬಂದು –

"ಬೊಕ್ಕಸದಲ್ಲೀಗ ನಗದು ನಾಲ್ಕು ಲಕ್ಷ ಚಿಲ್ಲರೆ ಇದೆ. ಅದು ದಿನದ ಖರ್ಚಿಗಾಗಿ ಇಟ್ಟು ಕೊಂಡದ್ದು. ಆಪತ್ಸಮಯದ ಸಂಗ್ರಹದಲ್ಲಿ ಎಷ್ಟಿದೆ ಎನ್ನುವುದನ್ನು ಬೇಕಾದರೆ ರಹಸ್ಯದ ಕಡತಗಳನ್ನು ನೋಡಿ, ಅರಮನೆಗೆ ಸುದ್ದಿ ಕಳಿಸುತ್ತೇನೆ" - ಎಂದು ಹೇಳಿದ.

"ಸದ್ಯಕ್ಕಿಷ್ಟು ಸಾಕು, ಆದರಿಂದು ಆ ನಗದು ಹಣದಿಂದ ವೆಚ್ಚವೇನೂ ಮಾಡುವುದು ಬೇಡ."

-ಎಂದು ಹೇಳಿ, ನಮಸ್ಕರಿಸಿದ ಬೊಕ್ಕಸದ ದಳವಾಯಿಯ ನಮಸ್ಕಾರವನ್ನು ಸ್ವೀಕರಿಸಿ, ಚಿನ್ನದ ಮನೆಯಿಂದ ಹೊರಬರುತ್ತಿದ್ದ ಹಾಗೇ ಹಿಡಿಂಬೇಶ್ವರನ ದೇವಾಲಯದ ಬಂಡೆಯ ತಳಭಾಗದಲ್ಲಿ ರಾಜಬಂದಿಗಳ ಸೆರೆಮನೆ ಕಂಡು, ಅದರಲ್ಲಿ ಕೊಳೆಯುತ್ತಿದ್ದ ಮತ್ತೋಡು ಹಾಲಪ್ಪ ನಾಯಕನ ನೆನಪಾಗಿ, 'ಈ ಯುದ್ಧಕ್ಕೆ ಬೀಜ ಹಾಕಿದ ವೈರಿನಂಟ' ಎಂಬುದು ಸ್ಮೃತಿಗೆ ಬರುತ್ತಿದ್ದಂತೆಯೇ ಮೈಯಲ್ಲಿ ಬಿರುಗಾಳಿಯಂತೆ ಕ್ರೋಧ ಕವಿದುಬಂದು, 'ಅತ್ತಕಡೆ ನಡೆದು

ಸೆರೆಯಲ್ಲಿದ್ದ ಹಾಲಪ್ಪನಾಯಕನನ್ನು ಹೊರಗೆಳೆದುತಂದು ತಾರಾಮಂಡಲದ ಬಯಲಿನಲ್ಲಿ ಶೂಲಕ್ಕೇರಿಸಬೇಕು' ಎನಿಸಿತು.

ಮರುಗಳಿಗೆಯೇ ಆ ಮುಖದರ್ಶನ ಮಾಡುವ ಕಾರ್ಯವೂ ಕಣ್ಣಿಗೆ ಬೇಡಿಯಾಗಿ, ತಮ್ಮ ಪಕ್ಕದಲ್ಲಿ ನಿಂತಿದ್ದ ಬೊಕ್ಕಸದಚಾವಡಿಯ ದಳವಾಯಿಯತ್ತ ತಿರುಗಿ –

"ಆ ಸೆರೆಮನೆಯಲ್ಲಿ ರಾಜಬಂದಿಗಳಿಗೆ ದಿನವೂ ಊಟಕ್ಕೇನು ಹಾಕುತ್ತಾರೆ ?"

-ಎಂದು ಕೇಳಿದ ಮದಕರಿನಾಯಕ.

"ರಾಜಬಂದಿಗಳಿಗೆ ಅರಮನೆಯಿಂದ ಆಹಾರ ಕಳಿಸುತ್ತಾರೆ, ಮಹಾಸ್ವಾಮಿ."

"ಹೌದೇ - ಹಾಗಿದ್ದರೆ 'ಇಂದಿನಿಂದ, ಈ ಹೊತ್ತಿನಿಂದ ಅದನ್ನು ನಿಲ್ಲಿಸಿ, ಅವರಿಗೆ ಮುಗ್ಗಲು ರಾಗಿಯ ಮುದ್ದೆ ಉಪ್ಪು, ದಿನಕ್ಕೆರಡು ತಂಬಿಗೆ ನೀರು - ಅಷ್ಟಲ್ಲದೆ ಮತ್ತೇನೂ ಕೊಡಕೂಡದೆಂದು ನಮ್ಮ ಆಜ್ಞೆಯಾಗಿದೆ' ಎಂದು ತಿಳಿಸಿ. ಹಾಗೇ ಅವರಿಗೆ ಸಾಂಪ್ರದಾಯಿಕವಾಗಿ ಕೊಡುತ್ತಿರುವ ವಿಶೇಷ ಸವಲತ್ತುಗಳನ್ನೆಲ್ಲವನ್ನೂ ನಿಲ್ಲಿಸಿ, ಕೈಕಾಲುಗಳಿಗೆ ನಿಲುಬೇಡಿ ಹಾಕಿ, ರಾತ್ರಿ ಹಾಸಿಕೊಳ್ಳಲು ಒಂದು ಕಂಬಳಿಯ ತುಂಡಷ್ಟು ಕೊಟ್ಟರೆ ಸಾಕು, ಹೊದೆಯಲು ಮತ್ತೆ ಎರಡನೆಯ ಕಂಬಳಿ ಕೊಡುವ ಅಗತ್ಯವಿಲ್ಲ. ಈಗಲೇ ನಮ್ಮ ಆಜ್ಞೆಯನ್ನು ಬಂದೀಖಾನೆಯ ಅಧಿಕಾರಿಗಳಿಗೆ ಮುಟ್ಟಿಸಿ ಬಂದು, ನಮಗೆ ವರದಿ ಮಾಡಿ"

- ಎಂದು ಬಿರುಸಾದ ಧ್ವನಿಯಲ್ಲಿ ಅಪ್ಪಣೆ ಮಾಡಿ, ಬೊಕ್ಕಸದಚಾವಡಿಯ ದಳವಾಯಿ ಓಡುತ್ತಾ ಹೋಗಿ, ಕಾರಾಗೃಹದ ಅಧಿಕಾರಿಗೆ ಆ ಅಪ್ಪಣೆಯನ್ನು ಮುಟ್ಟಿಸಿ ಬರುವವರೆಗೂ ಕಾದಿದ್ದು ಆತ ಬಂದು 'ಅಪ್ಪಣೆ ಜಾರಿಯಾಯಿತು' ಎಂದು ಹೇಳಿದ ಬಳಿಕ, ಕೆಳದುರ್ಗದತ್ತ ನಡೆಯದೆ, ಚಿನ್ನದ ಮನೆಯ ಪಕ್ಕದ ಹಾದಿಯಲ್ಲಿ, ಜೋಡಿಹೊಂಡದ ದಾರಿಯಲ್ಲಿ ನಡೆದು
ಮುಂದೆ ಸಾಗಿ, ಏನೋ ಯೋಚಿಸುತ್ತಾ, ಹಾಗೇ ಬದಿಯ ಗುಡ್ಡವನ್ನೇರಿ ಓಬವ್ವನಾಗತಿ ಯವರ ಸಮಾಧಿಯ ಹತ್ತಿರ ಹೋಗಿ, ಅದರ ಎದುರಿನ ಬಂಡೆಯ ಮೇಲೆ ಕುಳಿತು, ಆ ಸಮಾಧಿಯನ್ನು ನೋಡಿದ.

ಆ ಸಮಾಧಿಯನ್ನು ನೋಡುತ್ತಾ, ತಾನು ಪಟ್ಟಕ್ಕೆ ಬಂದ ವರ್ಷವೇ ರಾಯದುರ್ಗದವರು ಚಿತ್ರದುರ್ಗದ ಹಸುಗಳನ್ನು ಹಿಡಿದರೆಂಬ ಸುದ್ದಿಯನ್ನು ಕೇಳಿ ಮಹಿಷಾಸುರನ ಗುಟುರೆಯನ್ನು ಕೇಳಿ, ಕೆರಳಿದ ರಣದುರ್ಗೆಯಂತೆ ಸೇನಾವಾಹಿನಿಯೊಂದಿಗೆ ಮುನ್ನುಗ್ಗಿ ರಾಯದುರ್ಗದ ಪಾಳೆಯಗಾರನ ಎದೆಮೆಟ್ಟಿ, ಅರಿರುಂಡಮುಂಡಗಳನ್ನು ದಿಗ್ಬಲಿ ನೀಡಿ, ಗೆದ್ದು ಬಂದು ಚಿತ್ರದುರ್ಗದ ಕೀರ್ತಿಪಳವಿಗೆಯನ್ನು ದಿಗಂತದಲ್ಲಿ ಜಾಜ್ವಲ್ಯಮಾನವಾಗಿ ಮೆರೆಸಿದ ಆ

ಮಹಾತಾಯಿಯ ನೆನಪಾಗಿ, ಆಕೆಯ ಸಮಾಧಿಯ ಇದಿರು ಕುಳಿತ ತಾನು ಅದರ ಬಳಿ ಹರಿವ ಹುಳುವಿಗಿಂತಲೂ ಅಲ್ಪನಂತೆ ಕಂಡು, ತಲೆತಗ್ಗಿಸಿ ಕುಳಿತುಬಿಟ್ಟ ಮದಕರಿನಾಯಕ –

"ಅವ್ವಾ, ಕೀರ್ತಿಲಕ್ಷ್ಮಿಯಂತೆ ಆಳಿದ ನೀವೆಲ್ಲಿ - ನವಾಬನಿಗೆ ತಮ್ಮನನ್ನು ಒತ್ತೆಯಿಡಲು ಒಪ್ಪಿದ ನಾನೆಲ್ಲಿ ? ಅವ್ವಾ - ನಿಮಗೆ ತಕ್ಕ ಮಗ ನಾನಾಗಲಿಲ್ಲ"

-ಎಂದು ನಿಟ್ಟುಸಿರುಬಿಡುತ್ತಾ, ತನಗೆ ತಾನೇ ಹೇಳಿಕೊಂಡು, ಮತ್ತೊಮ್ಮೆ ಆ ಸಮಾಧಿಯನ್ನು ನೋಡಲೂ ಆಗದೆ, ದೃಷ್ಟಿಯನ್ನು ಬೇರತ್ತ ಹಾಯಿಸಿದ.

ಅವನ ದೃಷ್ಟಿ ಹರಿದತ್ತಲೆಲ್ಲಾ ತೋಪುಗಳನ್ನು ಹೊತ್ತು ನಿಂತ ಬುರುಜು-ಬತೇರಿಗಳು, ಮದ್ದಿನ ಮನೆಗಳು, ಧಾನ್ಯದ ಕಣಜಗಳು, ಅಜಗರದಂತೆ ಹರಿದ ಕೋಟೆಯ ಸಾಲುಸಾಲುಗಳು ಕಂಡು, ಎಲ್ಲವೂ ತಮ್ಮ ಜೀವಸತ್ವವನ್ನು ಕಳೆದುಕೊಂಡು –

'ನಮ್ಮ ಕೀರ್ತಿಯನ್ನು ಬರಿದುಮಾಡಿ, ಹೆಮ್ಮೆಯನ್ನು ಹುಲ್ಲುಕಡ್ಡಿಯನ್ನಾಗಿ ಮಾಡಿದೆಯಲ್ಲಾ!'

- ಎಂದು ನಿಟ್ಟುಸಿರುಬಿಟ್ಟಂತೆ ಅನಿಸಿ, ಯಾವುದನ್ನೂ ನೋಡಲು ಸಾಧ್ಯವಾಗದೆ, ಕಣ್ಣು ಮುಚ್ಚಿ, ತಲೆತಗ್ಗಿಸಿ ಕುಳಿತುಬಿಟ್ಟ.

ಬಹುಕಾಲ ಹಾಗೆ, ಮೈಯ ಶಕ್ತಿ ಸೋರಿಹೋದಂತೆ ಬರಡಾಗಿ ಕುಳಿತಿರುವಾಗ, ತಾನು ಕುಳಿತ ಗುಡ್ಡದ ಕೆಳಭಾಗದಲ್ಲಿ ಹೆಂಗಸೊಬ್ಬಳು ಏರುಧ್ವನಿಯಲ್ಲಿ ಹೇಳುತ್ತಿರುವ ಮಾತು ಕೇಳಿಸಿ, ಅದೇನು ಮಾತೆಂದು ಯಾವ ಕುತೂಹಲವೂ ಇಲ್ಲದೆ ಕೇಳಿದ.

ಆ ಹೆಣ್ಣು ಕಾವೇರಿದ ಧ್ವನಿಯಲ್ಲಿ ಹೇಳುತ್ತಿದ್ದಳು-

"ಅದೇನು ಆಕಾಶ ಕಡಕೊಂಡು ಬಿದ್ದ ಸುದ್ದಿ ಹಂಗೆ ಹೇಳ್ತೀಯ - ನವಾಬನಿಗೆ ಹಣ ಕೊಟ್ಟು ಹಿಂದಕ್ಕೆ ಕಳಿಸ್ತಾರೇಂತ. ಏನು ಮೂರು ಲಕ್ಷ ವರಹ ತಗೊಂಡೋದ್ರೆ, ನವಾಬ ಏನು ದುರ್ಗಾನ ಕಿತ್ತುಕೊಂಡು ಹೋದ್ನಾ ? ಕೋಟೆಕೊತ್ತಲ ಕಿತ್ತು ಹೆಗಲ ಮೇಲೆ ಹೊತ್ತು ಕೊಂಡು ಹೋದ್ನಾ ? ಪುಡಿಗಾಸು ಹೋದ್ರೆಹೋಯ್ತು - ಮೈಮೇಲೆ ಬಂದ ಮಾರಮ್ಮ ಮೀಸಲು ಕಾಸು ತಗೊಂಡ್ಹೋದ್ಹಾಗೆ. ಹೋಗ್ಲಿ ಕೋಟೆ ಇದೆ, ಜನ ಇದಾರೆ. ಮತ್ತೆ ಸೇನೆ ಕಟ್ಟಿ, ಜಿದ್ದಿನಿಂದ ಗೆದ್ದು ಸೋತ ನವಾಬನ ಮೀಸೆ ಬೋಳಿಸಿ, ದಂಡಿನಾಗೆ ಅವನ ಮೆರವಣಿಗೆ ಮಾಡಿಸ್ತಾರೆ – ನಮ್ಮ ರಾಜರು. ಇಂಥ ಹತ್ತು ಯುದ್ಧದಾಗೆ ಸೋತ್ರೂ ಹಿಡಿದ ಜಿದ್ದು ಬಿಡೋರಲ್ಲ – ನಮ್ಮ ನಾಯಕರು. ಹೋಗೋ ನಿನ್ನ - ಒಂದು ನಕ್ಷತ್ರ ಬಿದ್ರೆ ಆಕಾಶ ಹಾಳಾಯ್ತಾ: ಒಂದೆಲೆ ಬಿದ್ರೆ ಮರ ಬೋಳಾಯ್ತಾ? ನಮ್ಮ ದುರ್ಗ ಅರಳಿಮರ ಇದ್ದಾಂಗೆ ; ಒಂದೆಲೆ ಬಿದ್ರೆ ಹತ್ತೆಲೆ ಚಿಗ್ರುತದೆ. ನನ್ನ ಮುಂದೆ ಹೇಳಿದ ಮಾತನ್ನ, ಇನ್ನ್ಯಾರ ಮುಂದಾದ್ರೂ ಆಡೀಯ. ದಂಡಿನ ಕಾಳೆ ಊದೋ ಗಂಡಸು, ಇಂಥ ಮಾತಾ

ಆಡೋದು ? ಹೋಗ್ಹೋಗು - ಇಂಥ ಮಾತೆಲ್ಲಾ ನಾನಂಬಾಕಿಲ್ಲ....ಹೋಗ್ಲಿ - ಅದೇನು ಕಿತ್ಕಂಡು ಹೋಗ್ತಾನೋ ನವಾಬ ಇವತ್ತು ತಗೊಂಡ್ಹೋಗ್ಲಿ; ಇವತ್ತಲ್ಲ, ಇನ್ನಾರು ತಿಂಗಳಿಗೆ, ಇನ್ನಾರು ವರ್ಷಕ್ಕಾದ್ರೂ ದುರ್ಗದ ಕೋಟೆ ಬಾಗಿಲ್ಗೆ ಇದೇ ನವಾಬನ ಬಾಯ್ಲೇ 'ತೋಬಾ-ತೋಬಾ' ಅಂತ ನಮ್ಮ ನಾಯಕರು ಅನ್ನಿಸದಿದ್ರೆ ಈ ಕೋಟೆಬಾಗಿಲ ಹನುಮಪ್ಪನಿಗೆ ನನ್ನ ತಲೆ ಕೊಡ್ತೀನಿ. ದುರ್ಗದಾಗೆ ಗಂಡ್ಸಾಗಿ ಹುಟ್ಟಿ ಇಂಥ ಮಾತಾಡೋಕೆ ನಿಂಗೆ ನಾಚೆ ಆಗೋಲ್ವಾ?"

ಆ ಹೆಣ್ಣಾಡಿದ ಮಾತನ್ನು ಕೇಳಿ, ಮದಕರಿನಾಯಕನ ತಣ್ಣಗಾಗುತ್ತಿದ್ದ ಮೈಯಲ್ಲಿ ಹೊಸ ಬಿಸಿರಕ್ತ ಸಂಚರಿಸಿದಂತಾಗಿ ಮೈಕೊಡವಿಕೊಂಡದ್ದು ಮಂಕಾದ ತನ್ನ ಕಣ್ಣುಗಳಲ್ಲಿ ಹೊಸ ದೃಷ್ಟಿಶಕ್ತಿ ಬಂದಂತಾಗಿ ಸುತ್ತಲೂ ನೋಡಿದ –

ಆ ಹೆಂಗಸು ಹೇಳಿದುದು ನಿಜ –

ತನ್ನ ಸುತ್ತಲೂ ದುರ್ಗದ ಕೋಟೆ, ಕೊತ್ತಲ, ತೋಪು, ಫಿರಂಗಿ, ತೆನೆಗಿಂಡಿಗಳಲ್ಲಿ ಇಣುಕುವ ಕೋವಿಗಳು, ಕೋಟೆಯ ಸಾಲಿನ ಮೇಲೆ ಎದೆ ಸೆಟೆಸಿ ಸುತ್ತುವ ಸೈನಿಕರು –

- ಎಲ್ಲವೂ ಇದ್ದಂತೆಯೇ ಇದೆ.

ಕೋಟೆಯ ಒಂದು ಕಲ್ಲ ಸಡಿಲವಾಗಿಲ್ಲ, ಒಂದು ತೋಫು ಇದ್ದಲ್ಲಿಂದ ಕೆಳಗಿಳಿದಿಲ್ಲ, ಆ ಅಜ್ಞಾತ ಹೆಣ್ಣಿನ ಹೃದಯದಲ್ಲಿ ಪುಟಿಯುತ್ತಿರುವ ಅಪಾರ ಆತ್ಮವಿಶ್ವಾಸದ ಚಿಲುಮೆ ಬತ್ತಿಲ್ಲ, ಇಷ್ಟು ದಿನಗಳ ಯುದ್ಧ ನಡೆದರೂ ನಾಯಕನ ಗೆಲುವಿನ ಬಗ್ಗೆ ಭರವಸೆ ಕುಗ್ಗಿಲ್ಲ-

ಏನಾಗಿದೆ – ?

ಆಗಿರುವುದೆಲ್ಲಾ ಇಷ್ಟೆ :

ಅಷ್ಟು ಸೇನೆ ಸತ್ತಿದೆ; ಕಷ್ಟನಿಷ್ಟುರಗಳು ಕಾಡಿವೆ; ಅದಕ್ಕಿಂತಲೂ ಮಿಗಿಲಾದ ನಷ್ಟ ಅನುಭವಿಸಿದ ನವಾಬ ಅಷ್ಟು ಹಣ ಕೇಳಿ, ಹೋಗಲು ಸಿದ್ಧವಾಗಿದ್ದಾನೆ ; ಅವನ ಹಿಂದೆ ಹೋಗುವುದು ಹಣ ಅಷ್ಟೆ,

ಆ ಹೆಂಗಸು ಹೇಳಿದ ಮಾತು ಎಷ್ಟು ನಿಜ –

'ಒಂದು ನಕ್ಷತ್ರ ಬಿದ್ದರೆ ಆಕಾಶ ಹಾಳಾಗಲಿಲ್ಲ, ಒಂದೆಲೆ ಬಿದ್ದರೆ ಮರ ಬೋಳಾಗಲಿಲ್ಲ. ಚಿತ್ರದುರ್ಗ - ಅಶ್ವತ್ಥ ವೃಕ್ಷವಿದ್ದ ಹಾಗೆ ; ಒಂದಲೆ ಬಿದ್ದರೆ ಹತ್ತೆಲೆ ಚಿಗುರುತ್ತದೆ.'

ಎಷ್ಟು ನಿಜ ಆ ಮಾತು –

ಆ ಹೆಣ್ಣು ಹೆಂಗಸು ಯೋಚಿಸಿದ ಹಾಗೆ ತಾನೇಕೆ ಯೋಚಿಸಲಿಲ್ಲ ? –

'ದುರ್ಗದ ಮೇಲೆ ಹಲ್ಲುಮಸೆದವರು ಅದೆಷ್ಟೋ ಜನ - ಅವರು ಹೋದರು - ಚಿತ್ರದುರ್ಗ ಅಚ್ಚಳಿಯದೆ ಉಳಿದಿದೆ; ಉಳಿಯುತ್ತದೆ.

’ಆ ಹೆಂಗಸು ಹೆದರಲಿಲ್ಲ –

’ನಾನು - ನಾಯಕ, ಹೆದರಬೇಕೇ ?’

ತಾನು ಹುಟ್ಟಿದ ವಂಶಕ್ಕೆ ಹೆಸರು ತರುವ ಯೋಚನೆ ಅಲ್ಲ ಇದು ಎನಿಸಿತು.

’ಬಂದದ್ದು ಬರಲಿ, ಹೋದದ್ದು ಹೋಗಲಿ-

ಇರುವವರೆಗೂ ಜಯದ ಭರವಸೆ ಇದ್ದೇ ಇದೆ – ಇಂಥ ಜನ ಇರುವವರೆಗೂ.’

ಆ ಹೊಸ ಭರವಸೆಯ ದೃಷ್ಟಿಯಿಂದ ಓಬವ್ವನಾಗತಿಯ ಸಮಾಧಿಯತ್ತ ನೋಡಿದ –

ಆ ಸಮಾಧಿಯೂ ಅದೇ ಮಾತನ್ನಾಡಿದಂತಾಯಿತು.

“ಅವ್ವಾ - ನಿಮ್ಮೆದಿರು ಸೋತಂತೆ ತಲೆತಗ್ಗಿಸಿ ಕುಳಿತು, ನಿಮ್ಮ ನೆನಪಿಗೇ ಅಪಮಾನ ಮಾಡಿದೆ; ನೀವು ನನ್ನಲ್ಲಿಟ್ಟ ನಂಬಿಕೆಗೆ ದ್ರೋಹ ಮಾಡಿದೆ. ಕ್ಷಮಿಸಿ, ಅವ್ವಾ - ಮತ್ತೆ ಗೆದ್ದು ಬಂದು ನಿಮ್ಮನ್ನು ನೋಡುತ್ತೇನೆ”

- ಎಂದು ಹೇಳಿ, ಸಮಾಧಿಗೆ ನಮಸ್ಕರಿಸಿ, ಸಮಾಧಿಯ ಧೂಳನ್ನು ಭಂಡಾರದಂತೆ ಹಣೆಗೆ ಇಟ್ಟುಕೊಂಡು, ಮೇಲೆದ್ದು ಅರಮನೆಯ ಕಡೆ ಹೊರಟವನು, ತನ್ನಲ್ಲಿ ಹೊಸ ಚೈತನ್ಯ ತುಂಬಿದ ಹೆಣ್ಣಿನ ಬಗ್ಗೆ ಕುತೂಹಲ ಮೂಡಿ, ಆಕೆ ಯಾರೋ ನೋಡಬೇಕೆಂದು ಅತ್ತಕಡೆ ನಡೆದ.

ಸಮಾಧಿಯ ದಿಬ್ಬದಿಂದ ಕೆಳಗಿಳಿದು, ಎರಡು ಹೆಜ್ಜೆ ನಡೆದರೆ ತಣ್ಣೀರು ದೊಣೆ. ಆದರಿಂದ ಸ್ವಲ್ಪ ಕೆಳಗೆ, ಕಳ್ಳಗಿಂಡಿಯ ಬಳಿಯಲ್ಲೊಂದು ಗುಡಿಸಲು. ಆ ಗುಡಿಸಲಿನ ಮುಂದೆ, ಆಡುತ್ತಿದ್ದ ಮಗುವನ್ನು ಬಂಡೆಯ ಮೇಲೆ ಬಿಟ್ಟು, ಮಾತನಾಡುತ್ತಾ ಕುಳಿತಿದ್ದ ಗಂಡಹೆಂಡಿರನ್ನು ನೋಡಿದ.

ಅಕಾಲದಲ್ಲಿ ಅನಿರೀಕ್ಷಿತವಾಗಿ ಯಾವ ಸುಳಿವೂ ಕೊಡದೆ ತಮ್ಮತ್ತ ಬಂದ ನಾಯಕರನ್ನು ನೋಡುತ್ತಿದ್ದ ಹಾಗೇ,ಅವರಿಬ್ಬರೂ ಆತುರವಾಗಿ ಎದ್ದು ಅಡ್ಡ ಬಿದ್ದು ನಮಸ್ಕಾರ ಮಾಡಿದರು.

ಆ ದಂಪತಿಗಳನ್ನು ವಾತ್ಸಲ್ಯ ತುಂಬಿದ ಕಣ್ಣುಗಳಿಂದ ನೋಡುತ್ತಾ –

“ನೀನು ಯಾರು, ನಿನ್ನ ಹೆಸರೇನಪ್ಪ, ಏನು ಉದ್ಯೋಗ ಮಾಡುತ್ತಿದ್ದೀಯ ?”

-ಎಂದು ಕೇಳಿದ ಮದಕರಿನಾಯಕ.

“ಮಾಸ್ವಾಮಿ, ನಾನು ಕಾಳೆಬತೇರಿ ಚಾಕರಿಯವನು. ಮದ್ದ ಹನುಮಾಂತ. ಇವಳು ನನ್ನ ಹೆಂಡತಿ, ಓಬಿ.”

ಓಬಿ-

ಆ ಹೆಸರನ್ನು ಕೇಳುತ್ತಿದ್ದಹಾಗೇ ಮದಕರಿನಾಯಕನಿಗೆ ಓಬವ್ವನಾಗತಿಯ ನೆನಪಾಗಿ, ಸತ್ತ ಸಾಕುತಾಯಿಯೇ ಆ ಹೆಣ್ಣಿನ ರೂಪದಲ್ಲಿ ಬಂದು ತನ್ನೆದೆಯಲ್ಲಿ ಹೊಸ ಚೈತನ್ಯ ತುಂಬಿದಂತೆ ಅನಿಸಿ, ಆಕೆಯ ಬಗ್ಗೆ ಅಭಿಮಾನ ಮೂಡಿ –

"ಇದೇ ಊರಿನ ಮಗಳಾ ಅವ್ವಾ, ನೀನು ?" – ಎಂದು ಕೇಳಿದ.

ನಾಯಕರು ನೇರವಾಗಿ ತನ್ನನ್ನೇ ಮಾತನಾಡಿಸಿದುದನ್ನು ಕಂಡ ಆ ಹೆಣ್ಣು ಕೊಂಚ ನಾಚಿ, ತಲೆತಗ್ಗಿಸಿ –

"ಗುಡಿಕೋಟೆ ನನ್ನ ತವರು, ಮಾಸ್ವಾಮಿ. ಆದ್ರೆ ಹುಟ್ಟಿ ಬೆಳೆದದ್ದೆಲ್ಲಾ ಇಲ್ಲೆ – ಕಾಳೆ ಬತೇರೀಲಿ ಕೆಲಸ ಮಾಡ್ತಿದ್ದ ಚನ್ನಪ್ಪ- ನಮ್ಮಪ್ಪ. ಅಷ್ಟು ವರ್ಷ 'ದೇಶಾಬಾಗ್' ದಂಡಿನಲ್ಲಿದ್ದೆ. ಈಚೆಗೆ ಮದ್ವೆ ಆಗಿ, ಇವರ ಕೈ ಹಿಡಿದು ಇಲ್ಲಿದೀನಿ"

-ಎಂದು ಭಕ್ತಿ, ಗೌರವಗಳು ತುಂಬಿದ ಧ್ವನಿಯಲ್ಲಿ ಹೇಳಿದಳು ಓಬವ್ವ.

ಆ ಮಾತು ಕೇಳಿ, ಮದಕರಿನಾಯಕ ಮತ್ತೊಮ್ಮೆ ಆಕೆಯನ್ನು ನೋಡಿದ –

ಎಣ್ಣೆಗಪ್ಪು ಬಣ್ಣದ, ದೃಢಕಾಯದ ಹೆಣ್ಣು. ಹೆಣ್ಣು ಹುಟ್ಟು, ಗಂಡುಠೀವಿ. 'ದೇಶಾಬಾಗ್' ಪಡೆಯಲ್ಲಿ ಪಡೆದ ಸಂಸ್ಕಾರವಿರಬೇಕು - ಆ ನಿಲುವು.

ತಾನು ಕೇಳಿದ, ಆಕೆಯಾಡಿದ್ದ ಮಾತು ನೆನಪಾಗಿ, ಆಕೆಯ ಬಗ್ಗೆ ಒಂದು ಬಗೆಯ ಕೃತಜ್ಞತಾಪೂರ್ವಕವಾದ ಮಮತೆ ಮೂಡಿ –

"ಸ್ವಲ್ಪ ಹತ್ತಿರ ಬಾ, ತಾಯಿ" - ಎಂದು ಮದಕರಿನಾಯಕ ಹೇಳಿದ.

"ಮಾಸ್ವಾಮಿ, ನಾನು ಚಲುವಾದಿ ಹೆಂಗಸು."

- ಹತ್ತಿರ ಬರಲು ಹಿಂಜರಿದು ಹೇಳಿದಳು ಓಬವ್ವ.

"ನೀನು ಚಲುವಾದಿಯಲ್ಲ, ಛಲವಾದಿ. ನೀನು ನಿನ್ನ ಗಂಡನಿಗೆ ಹೇಳುತ್ತಿದ್ದ ಮಾತುಗಳು ಓಬವ್ವನಾಗತಿಯವರ ಸಮಾಧಿಯ ಹತ್ತಿರ ಕುಳಿತಿದ್ದಾಗ ನಮ್ಮ ಕಿವಿಗೆ ಬಿತ್ತು. ಆ ನಿನ್ನ ಮಾತಿಗೆ ನಮ್ಮ ಮನ್ನಣೆಯ ಕುರುಹಾಗಿ ಇದನ್ನಿಟ್ಟುಕೊ"

- ಎಂದು ಆಕೆಯನ್ನು ಹತ್ತಿರ ಕರೆದು, ಆಕೆಯ ಕೈಗೆ ತನ್ನ ಕತ್ತಿನಲ್ಲಿದ್ದ ಮುತ್ತಿನ ಹಾರ ಹಾಕಿ-

"ನಿನಗೆ ಎಂದು, ಏನು ಬೇಕಿದ್ದರೂ, ಯಾವ ಹೊತ್ತಿನಲ್ಲಾದರೂ ಸರಿಯೇ – ಈ ಹಾರ ತೋರಿಸು, ನಮ್ಮ ಹತ್ತಿರ ಬಿಡುತ್ತಾರೆ, ನಮ್ಮ ಬಳಿ ಬಾ"

-ಎಂದು ಹೇಳಿದ ಮದಕರಿನಾಯಕ.

"ಸಣ್ಣ ಮಾತಿಗೆ ಬಾಳ ದೊಡ್ಡ ಕಾಣಿಕೆ ಕೊಟ್ಟಿರಿ, ಮಾಸ್ವಾಮಿ. ನಿಮ್ಮ ಪ್ರೀತಿ ಮರೆಯಾಕಿಲ್ಲ"

-ಎಂದು ಹೇಳಿ, ಉಕ್ಕಿ ಬಂದ ಪ್ರೀತಿಯಲ್ಲಿ, ಎಲ್ಲವನ್ನೂ ಮರೆತು ನಾಯಕರ ಕಾಲುಮುಟ್ಟಿ ನಮಸ್ಕಾರ ಮಾಡಿದಳು, ಓಬವ್ವ.

"ಏ – ಮಾತಿನಾಗೆ ಮಾಸ್ವಾಮಿಯೋರನ್ನ ಮುಟ್ಟಿಬಿಟ್ಟೆಯಲ್ಲ, ಎಲ್ಡು ಒಳ್ಳೇ ಮಾತಾಡಿದರೂಂತ ನಿನ್ನ ಜಾತಿ ಮರೆತುಬಿಟ್ಯಾ?" - ಎಂದು ಗದರಿಸಿಕೊಂಡ ಮದ್ದ ಹನುಮ.

"ಮುಠ್ಠಾಳ- ಇನ್ನೊಮ್ಮೆ ಈ ತಾಯಿಯನ್ನು ಹೀಗೆ ದಂಡಿಸಬೇಡ...ನಮ್ಮನ್ನು ಮುಟ್ಟಿದ್ದಕ್ಕೆ ನೀನೇನೂ ಚಿಂತೆಮಾಡಬೇಡ, ತಾಯಿ. ದೇವರಿಗೆ, ದೊರೆಗೆ, ದಂಡಿಗೆ ಜಾತಿ ಇಲ್ಲ. ಜಾತಿ ಮಾತೆಲ್ಲಾ ಮನೆಯಲ್ಲಿ, ಮಠದಲ್ಲಿ. ನಿನ್ನ ಮಗನನ್ನು ನಿನ್ನ ಹಾಗೇ ಬೆಳಸು. ದಂಡಿನವರ ಮಕ್ಕಳಿಗೆ ಕೊಡೋ ಹಾಲು, ಬೆಣ್ಣೆ ನಿನ್ನ ಮಗನಿಗೂ ಕೊಡುವ ಹಾಗೆ ಅಪ್ಪಣೆ ಮಾಡುತ್ತೇವೆ. ಮರೆತರೆ ಬಂದು ಜ್ಞಾಪಿಸು"

- ಎಂದು ಹೇಳಿ, ಮಮತೆಯಿಂದ ಅವರತ್ತ ನೋಡುತ್ತಲೇ, ಅರಮನೆಯತ್ತ ಹಿಂತಿರುಗಿದ ಮದಕರಿನಾಯಕ - ಹೃದಯದಲ್ಲಿ ಮೂಡಿದ ಹೊಸ ಉತ್ಸಾಹದಿಂದ, ದೃಢವಾದ ಹೆಜ್ಜೆಗಳನ್ನು ಹಾಕುತ್ತಾ.

ಹಾಗೆ ಹೋಗುತ್ತಿರುವಾಗಲೇ, ಚಿನ್ನದ ಮನೆಯನ್ನು ದಾಟುತ್ತಿರುವಾಗ, ನವಾಬನಿಗೆ ಕೊಡಬೇಕಾದ ಹಣದ ಜ್ಞಾಪಕ ಬಂದು, ಹೊಸದೇನೋ ಯೋಚನೆ ಹೊಳೆದು, ನಡಗೆಯನ್ನು ಮತ್ತಷ್ಟು ವೇಗಗೊಳಿಸಿದ.

* * *

ಹಗಲೆದ್ದು ಒಲ್ಲದ ಮನಸ್ಸಿನಲ್ಲಿ ತಾಯಿಯ ಬಲವಂತಕ್ಕೆ ಅಷ್ಟು ಹಾಲು ಕುಡಿದ ಮಗ ಓಲಗದಿಂದ ಹಿಂತಿರುಗಿ ಅರಮನೆಯೊಳಗೂ ಬರದೆ, ಯಾರಿಗೂ ಹೇಳದೆ ಎತ್ತಲೋ ಹೋಗಿ, ಊಟದ ಹೊತ್ತು ಮೀರಿದರೂ ಆರಮನೆಗೆ ಹಿಂತಿರುಗದಿದ್ದುದನ್ನು ಕಂಡು, ಹಿಂದಿನ ದಿನದ ಮಾತನ್ನು ನೆನಸಿಕೊಂಡು ನಿಂಗವ್ವ ಕಂಗಾಲಾಗಿದ್ದಳು. ಅಂತಃಪುರದಲ್ಲ ಗೊಂದಲವಾಗಿತ್ತು. ಪರಶುರಾಮನಾಯಕನೂ ಮನೆಗೆ ಹೋಗದೆ ತನ್ನ ಅಣ್ಣ ಬರುವುದನ್ನೇ ನಿರೀಕ್ಷಿಸುತ್ತಾ, ಅವನನ್ನು ಹುಡುಕಲು ಆಳುಗಳನ್ನು ಕಳಿಸುವುದು ಅನುಚಿತ ಎಂದರಿತು, ಉಳಿದವರಿಗೆ ಧೈರ್ಯ ಹೇಳಿ, ಆದರೆ ತಾನೇ ಅಧೀರನಾಗಿ ಕುಳಿತಿದ್ದ. ಯಾರೊಬ್ಬರೂ ಊಟ ಮಾಡದೆ ಕಾತರರಾಗಿ ಕಾಯುತ್ತಿದ್ದರು.

ಎಲ್ಲಿ ಹೋಗಿದ್ದಾನೋ, ಯಾವಾಗ ಬರುತ್ತಾನೋ, ಹೇಗೆ ಬರುತ್ತಾನೋ ? – ಎಂದು ಏನೇನೋ ನೂರೆಂಟು ಚಿಂತೆ ಮಾಡುತ್ತಿದ್ದ ಪರಶುರಾಮನಾಯಕನಿಗೆ ಅರಮನೆಗೆ ಹಿಂತಿರುಗಿದ ಅಣ್ಣನ ಗೆಲುಮುಖವನ್ನು ಕಂಡು ಹೋದ ಜೀವ ಬಂದಂತಾಗಿ-

“ಎಲ್ಲಿಗೆ ಹೋಗಿಬಿಟ್ಟಿದ್ದೆಯಣ್ಣ? ಊಟದ ನೆನಪೂ ಬರಲಿಲ್ಲವೇ ? ಅವ್ವನಂತೂ ಕಾದು, ಕೊರಗಿ, ಕಂಗಾಲಾಗಿದ್ದಾಳೆ. ಅತ್ತಿಗೆಯರೂ ಕಣ್ಣೀರು ಹಾಕುತ್ತಾ ಕುಳಿತಿದ್ದಾರೆ. ಯಾರೊಬ್ಬರಿಗೂ ಊಟವಿಲ್ಲ” – ಎಂದು ಕೇಳಿದ.

“ಊಟ – ಅದೇನು ದಿನಾ ಇದ್ದದ್ದೆ. ಒಂದು ದಿನ ತಡವಾದರೆ ಸೂರ್ಯ ಮುಳುಗುವುದೇನೂ ತಡವಾಗುವುದಿಲ್ಲ. ಊಟದ ಮಾತು ಹಾಗಿರಲಿ. ಮೊದಲು ಅರಮನೆಯ ಜವಾಹಿರಿಖಾನೆಯ ಬಕ್ಷಿಗಳನ್ನು ಕರೆಸು” - ಎಂದು ಹೇಳಿದ ಮದಕರಿನಾಯಕ.

“ಮೊದಲು ಊಟ ಆಗಲಿ. ಆಮೇಲೆ ಅವರನ್ನು ಕರೆಸಿದರೆ ಆಗದೆ ?”

“ಊಹೂ– ಹೆಣ ಮನೆಯಲ್ಲಿಟ್ಟುಕೊಂಡು ಯಾರಾದರೂ ಊಟ ಮಾಡುತ್ತಾರೆಯೇ, ಪರಶುರಾಮಣ್ಣ? ಮೊದಲು ಅಂದುಕೊಂಡ ಕೆಲಸ ಆಗಲಿ. ಆಮೇಲೆ ನಿರ್ಮಲವಾದ ಮನಸ್ಸಿನಿಂದ ಊಟ ಮಾಡುತ್ತೇನೆ. ಜವಾಹಿರಿಖಾನೆಯ ಬಕ್ಷಿಗಳಿಗೆ ಮೊದಲು ಹೇಳಿ ಕಳಿಸು” – ಎಂದ ಮದಕರಿನಾಯಕ, ಹತ್ತಿರದಲ್ಲಿದ್ದ ಆಸನವೊಂದರಲ್ಲಿ ಕುಳಿತು.

“ನೀನು ಬಂದೆಯಲ್ಲಾ - ಅದೇ ಪಂಚಭಕ್ಷ್ಯ ಪರಮಾನ್ನ ಉಂಡಹಾಗಾಯಿತು. ಊಟ ಬೇಡವಾದರೆ ಬೇಡ, ಒಂದು ಲೋಟ ಹಾಲು ಕುಡಿ. ಆಮೇಲೆ ಅದೇನು ಕೆಲಸವೋ ಮಾಡು” – ಎಂದಳು ನಿಂಗವ್ವ.

“ಆಯಿತು – ಕೊಡು.”

-ಎಂದಷ್ಟೇ ಹೇಳಿ, ಪರಶುರಾಮನಾಯಕ ಹೇಳಿಕಳಿಸಿದ ಜವಾಹಿರಿಖಾನೆಯ ಬಕ್ಷಿ ಬರುವುದನ್ನೇ ಕಾದು ಕುಳಿತ ಮದಕರಿನಾಯಕ.

ಆತ ಹಾಲು ಕುಡಿದು, ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುವ ವೇಳೆಗೆ, ಓಡುತ್ತಾ ಹೋದ ಆಳು, ಓಡಿಸಿಕೊಂಡೇ ಆರಮನೆಯ ಜವಾಹಿರಿಖಾನೆಯ ಬಕ್ಷಿಯನ್ನು ಕರೆದುಕೊಂಡು ಬಂದ.

“ಜವಾಹಿರಿಖಾನೆಯ ಬಾಗಿಲು ತೆಗಿಯಿರಿ, ಬಕ್ಷಿಗಳೆ”

-ಎಂದು ಹೇಳಿ, ತಮ್ಮ ಪರಶುರಾಮನಾಯಕನನ್ನು ತನ್ನೊಂದಿಗೆ ಕರೆದುಕೊಂಡು ಹೊರಟ ಮದಕರಿನಾಯಕ.

ಅವಸರವಾಗಿ ಬಂದ ಕರೆಯನ್ನು ಕೇಳಿ ಏನು ಅಚಾತುರ್ಯವಾಗಿದೆಯೋ ಎಂದು ಭೀತನಾಗಿದ್ದ ಬಕ್ಷಿ, ಆ ಕೊಠಡಿಯ ಬೀಗಕ್ಕೆ ಹಾಕಿದ್ದ ಮೊಹರು ಸರಿಯಾಗಿದೆ – ಎಂದು ತಾನು ಮೊದಲು ಖಚಿತ ಮಾಡಿಕೊಂಡು, ಬಳಿಕ ಅದನ್ನು ನಾಯಕರಿಗೂ ತೋರಿಸಿ, ಜವಾಹಿರಿಖಾನೆಯ ಕೊಠಡಿಯ ಬಾಗಿಲನ್ನು ತೆರೆದ.

ಬಕ್ಷಿಯ ಬೆನ್ನ ಹಿಂದೆಯೇ, ತಮ್ಮನೊಂದಿಗೆ ಕೊಠಡಿಯನ್ನು ಪ್ರವೇಶಿಸಿದ ಮದಕರಿನಾಯಕ –

"ನಮಗೆ ನವಾಬರು, ಪೇಶ್ವೆಗಳು ಕೊಟ್ಟ ಉಡುಗೊರೆಗಳ ಪೆಠಾರಿಯನ್ನು ತೆಗೆದು, ಅದರೊಳಗಿರುವುದನ್ನೆಲ್ಲಾ ಹೊರಗೆ ತೆಗೆದಿರಿಸಿ" - ಎಂದು ಹೇಳಿದ.

ಅದರಂತೆಯೇ ಬಕ್ಷಿ ಆ ದೊಡ್ಡ ಪೆಠಾರಿಗೆ ಹಾಕಿದ್ದ ಬೀಗಮುದ್ರೆಯನ್ನು ಪರೀಕ್ಷಿಸಿ ನೋಡಿ, ಅದು ಇರಬೇಕಾದ ಹಾಗೆಯೇ ಇದೆಯೆಂದು ನೆಮ್ಮದಿ ಮಾಡಿಕೊಂಡು, ತನ್ನ ಕೈಯಲ್ಲಿದ್ದ ಬೀಗದಕೈಗಳ ಗೊಂಚಲಿನಿಂದ, ಆ ಪೆಠಾರಿಯ ದೊಡ್ಡ ಬೀಗದಕೈಯನ್ನು ಆರಿಸಿ ಬೀಗ, ಬಾಗಿಲು ತೆರೆದು ರೇಶಿಮೆ, ಮಖಮಲ್ಲಿನ ಗಂಟುಗಳಲ್ಲಿ, ಕಿನಕಾಪಿನ ಥೈಲಿಗಳಲ್ಲಿದ್ದ ಉಡುಗೊರೆಯ ಒಡವೆಗಳನ್ನೆಲ್ಲಾ ತೆಗೆದು, ಬಳಿಯಿದ್ದ ರೇಶಿಮೆಯ ವಸ್ತ್ರ ಹಾಸಿದ ಪೀಠದ ಮೇಲೆ ಇಡುತ್ತಾ ಹೋದ.

ಮುತ್ತಿನ ಮಾಲೆಗಳು, ನವರತ್ನದ ಮಾಲೆಗಳು, ನವರತ್ನ ಖಚಿತವಾದ ಚಿನ್ನದ ಕಡಗಗಳು, ಉಂಗುರಗಳು, ಪದಕಗಳು, ಶಿರಪೇಶ್‌ಗಳು, ಕರ್ಣಕುಂಡಲಗಳು, ಮುಂಡಾಸಿಗೆ ಇಡುವ ಒಡವೆಗಳು, ನವರತ್ನ ಖಚಿತವಾದ ಚಿನ್ನದ ಒರೆಯಲ್ಲಿದ್ದ ಕತ್ತಿ, ಕಠಾರಿಗಳು-

ಜವಾಹಿರಿಖಾನೆಯ ಅರೆಗತ್ತಲಿನಲ್ಲಿ ಬಣ್ಣ ಬಣ್ಣದ ಕಿಡಿನಕ್ಷತ್ರಗಳಂತೆ ಮಿನುಗುವ ಆ ಉಡುಗೊರೆಗಳೆಲ್ಲವನ್ನೂ ತಾತ್ಸಾರ ತುಂಬಿದ ದೃಷ್ಟಿಯಿಂದ ನೋಡಿ –

"ಇವುಗಳ ಬೆಲೆ ಎಷ್ಟಾಗಬಹುದು ಹೇಳಬಲ್ಲಿರಾ, ಬಕ್ಷಿಗಳೇ ?"

-ಎಂದು ಕೇಳಿದ ಮದಕರಿನಾಯಕ.

"ಮಹಾಸ್ವಾಮಿ, ಇವು ಅಮೂಲ್ಯ ನವರತ್ನಾಭರಣಗಳು. ಬಂಗಾರವೇ ಎಷ್ಟು ತೂಕವಿದೆಯೆಂದು ತಿಳಿಯದು. ಆದ್ದರಿಂದ ಇದರ ಬೆಲೆಕಟ್ಟಲು ನಾನು ಅಶಕ್ತ. ಪರಿಣತರಾದ ಜವಾಹಿರಿ ವರ್ತಕರೇ ಹೇಳಬೇಕು. ಹರಳುಗಳಲ್ಲಿ, ಆ ಅಂಗೈ ಅಗಲದ ಪಚ್ಚೆ ಇದೆಯಲ್ಲಾ - ಅಂಥದಕ್ಕೆ ಏನು ಬೆಲೆಕಟ್ಟುವುದೂ ಅಸಾಧ್ಯ. ಕೊಳ್ಳುವವರ ಖಾಯಿಷ್, ಅವರ ಶ್ರೀಮಂತಿಕೆಯೇ ಅವುಗಳ ಬೆಲೆ" - ಎಂದು ಹೇಳಿದ ಬಕ್ಷಿ.

"ಅವನ್ನೀಗ ನಾವು ಮಾರಲು ಹೊರಟಿಲ್ಲ. ಆದ್ದರಿಂದ ವಿವರವಾದ ಪರೀಕ್ಷೆ, ಬೆಲೆ ಕಟ್ಟುವುದೇನೂ ಬೇಡ. ಅರಮನೆಗೆ ನಗ-ನಾಣ್ಯ ಕೊಂಡು ನಿಮಗೆ ಅನುಭವವಿದೆಯಲ್ಲಾ-ಅದರ ಮೇಲೆ ಹೇಳಿ, ಇವುಗಳ ಅಂದಾಜು ಬೆಲೆ ಎಷ್ಟಾಗಬಹುದು ?"

"ಏಳೆಂಟು ಲಕ್ಷವಾದರೂ ಆಗಬಹುದು - ಕೆಲವು ಅತ್ಯಮೂಲ್ಯವಾದವುಗಳನ್ನು ಬಿಟ್ಟು."

"ಸರಿ - ಹಾಗಿದ್ದರೆ, ಪಟ್ಟಣಶೆಟ್ಟರಿಗೆ ಹೇಳಿಕಳಿಸಿ. ಇವುಗಳಲ್ಲಿ ಎಷ್ಟು ಅಗತ್ಯವೋ ಅಷ್ಟನ್ನು ಅಡವಾಗಿಯೋ, ಬೆಲೆಗೋ ತೆಗೆದುಕೊಂಡು, ಈ ರಾತ್ರಿಯೊಳಗಾಗಿ ನಮಗೆ ಮೂರುಲಕ್ಷ ವರಹ

ತಂದುಕೊಡಬೇಕೆಂದು ಅವರಿಗೆ ಹೇಳಿ. ಈ ಕೆಲಸ ಈಗಿಂದೀಗಲೇ ಆಗಬೇಕು. ಜವಾಹಿರಿಖಾನೆಗೆ ಬೀಗಮುದ್ರೆ ಹಾಕಿ, ಹೊರಡಿ. ಕೆಲಸ ಮಾಡಿಕೊಂಡು ಬಂದು, ನಮಗೆ ಅರಿಕೆ ಮಾಡಿ" – ಎಂದು ಹೇಳಿ, ಮದಕರಿನಾಯಕ ಅಲ್ಲಿಂದ ಹೊರಬಂದ.

ಆ ಕೊಠಡಿಗೆ ಬಕ್ಷಿಗಳು ಬೀಗಮುದ್ರೆ ಹಾಕಿ ಹೋದ ಬಳಿಕ, ಪರಶುರಾಮನಾಯಕ ಕೇಳಿದ-

"ಅಣ್ಣ ಬೊಕ್ಕಸದಲ್ಲಿ ಅಷ್ಟು ಹಣ ಇಲ್ಲವೇ ?"

"ಇದೆ."

"ಹಾಗಿದ್ದರೆ ಇದನ್ನು ಮಾರುವ ಯೋಚನೆ ಏಕೆ ? ಇವು ಉಡುಗೊರೆಗಳು. ವಂಶಪಾರಂಪರ್ಯವಾಗಿ ಇರಬೇಕಾದವು."

"ಉಡುಗೊರೆಗಳೇ – ಯಾರು ಕೊಟ್ಟದ್ದು ? ನವಾಬರು, ಮರಾಠರು. ಇಬ್ಬರೂ ನಮ್ಮನ್ನು ನಂಬಿಸಿ ಮೋಸಮಾಡಿದರು. ಅಂಥವರು ಕೊಟ್ಟ ಉಡುಗೊರೆಗಿಂತ ಮೈಮೇಲಿನ ಗಾಯದ ಗುರುತುಗಳಿವೆಯಲ್ಲಾ, ಅವು ಹೆಚ್ಚು ಅಮೂಲ್ಯವಾದವು. ಆ ಮಿತ್ರದ್ರೋಹಿಗಳನ್ನು ನೆನಪಿಸಲು ಅವು ಇರುವಾಗ ಇವೇಕೆ ? ಜನಕ್ಕೆ, ದಂಡಿಗೆ ಬೇಕಾದ ಹಣ - ಬೊಕ್ಕಸದಲ್ಲಿರುವುದು. ಅದು ಮೀಸಲು ಹಣ. ಯಾರಿಗೆ ಸಲ್ಲಬೇಕೋ ಅವರಿಗದು ಸಲ್ಲಲಿ. ಹಾವನ್ನು ಹೊಡೆದು ಹದ್ದಿಗೆ ಹಾಕುವುದರಲ್ಲಿ ಯಾವ ದೋಷವೂ ಇಲ್ಲ. ಯಾವ ಚಿಂತೆಯನ್ನೂ ಮಾಡಬೇಕಾಗಿಲ್ಲ. ಅಲ್ಲಿರುವುದು ಕಸಕ್ಕಿಂತ ಕಡೆ. ಆದಷ್ಟು ಬೇಗ ತೊಲಗಿ ಹೋಗಲಿ....ಊಟಕ್ಕೆ ತಡವಾಯಿತು ಎಂದೆಯಲ್ಲಾ ಬಾ - ನೀನೂ ನನ್ನ ಜೊತೆಗೆ. ಅವ್ವ ಮಾಡಿದ ಅಚ್ಚುಕಟ್ಟಾದ ಎಸರು, ಮುದ್ದೆಯನ್ನು ತಿಂದು, ಮಿಕ್ಕದ್ದನ್ನೆಲ್ಲಾ ಮರೆತುಬಿಡೋಣ"

- ಎಂದು ಹಗುರವಾಗಿ ಹೇಳಿ, ತಮ್ಮನ ಹೆಗಲ ಮೇಲೆ ಕೈಹಾಕಿಕೊಂಡು ಒಳಗೆ ನಡೆಯುತ್ತಾ, ಏನೋ ಜ್ಞಾಪಿಸಿಕೊಂಡು –

"ಇನ್ನೆರಡುಮೂರು ದಿನ ಅಷ್ಟೆ - ನಾವಿಬ್ಬರೂ ಜೊತೆಗಿರುವುದು. ಇರುವಷ್ಟು ದಿನವೂ ಎಲ್ಲರೂ ಜೊತೆಗೆ ಊಟ ಮಾಡೋಣ. ನಿನ್ನ ಮನೆಯಲ್ಲಿ ಒಲೆ ಹೊತ್ತಿಸಬಾರದು ಎಂದು ಹೇಳಿಬಿಡು"

- ಎಂದು ಇದ್ದಕ್ಕಿದ್ದ ಹಾಗೇ ಬಿಗಿದ ಕಂಠದಲ್ಲಿ ಹೇಳಿದ, ಮದಕರಿನಾಯಕ.

ಆ ಮಾತನ್ನು ಹೇಳುತ್ತಿರುವಾಗ ಪರಶುರಾಮನಾಯಕನ ಹೆಗಲ ಮೇಲೆ ಹಾಕಿದ ಮದಕರಿ ನಾಯಕನ ತೋಳು, ಅವನನ್ನು ಮತ್ತಷ್ಟು ಬಿಗಿಯಾಗಿ ತಬ್ಬಿತು.

ಆ ಮಾತು ಕೇಳಿ –

ಅದರ ಹಿಂದಿನ ಅಪಾರ ಮಮತೆ ಹೃದಯವನ್ನು ತಟ್ಟಿ –
ಪರಶುರಾಮನಾಯಕನ ಕಣ್ಣು ಒದ್ದೆಯಾಯಿತು.

೧೪

'ನವಾಬರಿಗೂ-ನಾಯಕರಿಗೂ ಸಂಧಾನವಾಯಿತು. ಯುದ್ಧ ಮುಗಿಯಿತು.'

ಚಿತ್ರದುರ್ಗದ ಹಾದಿ-ಬೀದಿಗಳಲ್ಲಿ, ಓಣಿ-ಕೇರಿಗಳಲ್ಲಿ, ಗುಡಿಸಲು-ಮನೆ-ಮಹಲುಗಳಲ್ಲಿ, ಸೇನೆಯ ಬಿಡಾರಗಳಲ್ಲಿ, ಗುಡಿ-ಮಠಗಳಲ್ಲಿ, ಛತ್ರ-ಪಡಖಾನೆಗಳಲ್ಲಿ –

ಹತ್ತು ಜನ ಸೇರುವ ಎಲ್ಲ ಕಡೆಯೂ ಇದೇ ಮಾತು.

ಆ ಮಾತಿಗೆ ಒಬ್ಬೊಬ್ಬರದು ಒಂದೊಂದು ರೀತಿಯ ಪ್ರತಿಕ್ರಿಯೆ-ಸಂತೋಷ, ಸಮಾಧಾನ, ನಿರಾಶೆ, ನಿಟ್ಟುಸಿರು, ಕಿಡಿಗೋಪ, ಸುಡುಮಾತು, ಸಂಕಟ, ಮೂಕವ್ಯಥೆ - ಎಷ್ಟೆಷ್ಟು ಬಗೆಯ ಜನವೋ ಅಷ್ಟಷ್ಟೂ ಬಗೆಯ ಪ್ರತಿಕ್ರಿಯೆ.

ಕೆಲವರಿಗೆ ಗ್ರಹಣವಿಮೋಚನೆಯ ಕಾಲ ಹತ್ತಿರವಾದಂತೆ ಅನಿಸಿದರೆ, ಮತ್ತೆ ಕೆಲವರಿಗೆ ಮೃತ ಆಪ್ತರ ಉತ್ತರಕ್ರಿಯೆಯ ಕಾಲ ಸಮೀಪಿಸಿದಷ್ಟು ಏರುದುಃಖ.

ಎಷ್ಟೋ ಜನ ಆ ಸುದ್ದಿ ಕೇಳಿಯೇ ಯುದ್ಧ ಮುಗಿದಂತೆ ನಿರಾತಂಕವಾಗಿ ಉಸಿರಾಡಿದರು.

ಆದರೆ ಮಾರ್ಗಶಿರ ಮಾಸದ ಚಳಿ. ಆ ಎಲ್ಲ ಭಾವಕಲ್ಲೋಲಕ್ಕೂ ಒಂದು ಬಗೆಯ ಮಬ್ಬುಕವಿಸಿದಂತಿತ್ತು.

ಊರಿನಂತೆಯೇ ಅರಮನೆಯೂ-

ಒಬ್ಬರಿಗೊಬ್ಬರು ತಮತಮಗೆ ತಿಳಿದಂತೆ ಸಂಧಾನದ ವಿವರಗಳ ಬಗ್ಗೆ ಮಾತನಾಡಿಕೊಳ್ಳುತ್ತಿರುವಾಗಲೇ, ನವಾಬನ ಸೇನಾಪಾಳಯದಲ್ಲಿ ಶಾಂತಿಸೂಚಕವಾದ ಶ್ವೇತಧ್ವಜ ಹಾರಿ, ವಕೀಲ ಮಾನ್ವಿ ಶ್ರೀನಿವಾಸರಾಯನ ನೇತೃತ್ವದಲ್ಲಿ ಮದಕರಿನಾಯಕ ಬಯಸಿದಂತೆ ಶ್ರೀರಂಗಪಟ್ಟಣದ ಮೂರು ಜನ ಸಾಹುಕಾರರು ನವಾಬರ ಪ್ರಮಾಣಪತ್ರದೊಂದಿಗೆ ದುರ್ಗದತ್ತ ಹೊರಟರು.

ಆ ಸೂಚನೆ ತಿಳಿಯುತ್ತಿದ್ದ ಹಾಗೇ ಮದಕರಿನಾಯಕ, ಪರಶುರಾಮನಾಯಕನಿಗೆ ಸಭೆ ಸೇರಿಸಲು ಸೂಚನೆಯಿತ್ತು, ಸಭೆಗೆ ಹೊರಡುವ ಮುನ್ನ ಜವಾಹಿರಿಖಾನೆಯ ಬಕ್ಷಿಯನ್ನು ಕರೆಸಿ –

"ಹಣ ಸಿದ್ಧವಾಯಿತೆ ?" – ಎಂದು ಕೇಳಿದ.

"ನಿನ್ನೆ ರಾತ್ರಿಯೇ ಸಿದ್ಧವಾಯಿತು, ಮಹಾಸ್ವಾಮಿ."

“ಆ ಉಡುಗೊರೆಗಳಿಗೆ ಎಷ್ಟು ಬೆಲೆ ಸಿಕ್ಕಿತು ?”

“ಅವಕ್ಕೆ ಬೆಲೆಕಟ್ಟಲು ಯಾರೂ ಮುಂದಾಗಲಿಲ್ಲ, ಮಹಾಸ್ವಾಮಿ.”

“ಮತ್ತೆ- ಬೊಕ್ಕಸದಿಂದ ತರಿಸಿದಿರಾ?”- ಕಿಡಿಗೆದರಿದ ಧ್ವನಿಯಲ್ಲಿ ಕೇಳಿದ ಮದಕರಿನಾಯಕ.

“ಇಲ್ಲ ಮಹಾಸ್ವಾಮಿ, ತಮ್ಮ ಅಪ್ಪಣೆಯಾದಂತೆ, ವಿಷಯವನ್ನು ಪಟ್ಟಣಶೆಟ್ಟರಲ್ಲಿ ಅರಿಕೆ ಮಾಡಿಕೊಂಡೆ. ಅದಕ್ಕವರು, ’ಹಿಂದೆ ಯುದ್ಧ ಆರಂಭವಾಗುವ ಮೊದಲು ಮಹಾಸ್ವಾಮಿಗಳು ನಮ್ಮ ರಕ್ಷಣೆಯ ವಿಚಾರ ಮಾಡಿದಾಗ, ನಾವು ಅವರಿಗೆ ಒಂದು ವರ್ಷ ಯುದ್ಧಕ್ಕೆ ಆಗುವ ವೆಚ್ಚವನ್ನು ಕೊಡುತ್ತೇವೆ ಎಂದು ಮಾತು ಕೊಟ್ಟಿದ್ದೆವು. ಅದರಂತೆಯೇ ಹಣ ಜೋಡಿಸಿಕೊಂಡು ಕಾದೆವು, ಪ್ರಭುಗಳು ಕೇಳಲಿಲ್ಲ. ಈಗ ಅವರಿಗೆ ಬಂದ ಉಡುಗೊರೆಗಳನ್ನು ಅಡವಿಟ್ಟುಕೊಂಡು ಸಾಲ ಕೊಡುವಷ್ಟು ಧನಪಿಶಾಚಿ ನಮಗಾರಿಗೂ ಹಿಡಿದಿಲ್ಲ. ತಾಯಿಯ ಹಾಲಿಗೆ ಮಕ್ಕಳು ಬೆಲೆ ಕೊಡಬೇಕೇ? ಈ ರಾತ್ರಿ ಅವಕಾಶ ಕೊಡಿ. ನಾಳೆ ಹಗಲಾಗುವುದರೊಳಗೆ ಹಣ ಕೂಡಿಸಿ, ಅರಮನೆಗೆ ತಲುಪಿಸುತ್ತೇವೆ’ ಎಂದು ಹೇಳಿದರು. ಅದರಂತೆಯೇ ಇವತ್ತು ಪ್ರಾತಃಕಾಲವೇ ಖುದ್ದಾಗಿ ಪಟ್ಟಣಶೆಟ್ಟರೇ ಹಣವನ್ನು ಆಳುಗಳೊಂದಿಗೆ ಹೊರಸಿಕೊಂಡು ಬಂದು ತಲುಪಿಸಿದರು. ಹಣ ಥೈಲಿಗಳಲ್ಲಿ ತುಂಬಿ, ಯಾವ ಥೈಲಿಯಲ್ಲಿ ಎಷ್ಟಿದೆ ಎಂದು ಚೀಟಿ ಅಂಟಿಸಿ, ಸಭಾಂಗಣದ ಹಿಂದಿನ ಒಳಕೋಣೆಯಲ್ಲಿ ಇಡಿಸಿದೇನೆ. ಪ್ರಭುಗಳ ಅಪ್ಪಣೆಯಾದಾಗ ಅದನ್ನು ತಂದು ಸಭೆಯಲ್ಲಿ ಒಪ್ಪಿಸುತ್ತೇನೆ.”

- ಎಂದು ಹೇಳಿದ ಜವಾಹಿಖಾನೆಯ ಬಕ್ಷಿ.

“ಈ ಮಾತನ್ನು ನಮಗೆ ಮೊದಲೇ ಏಕೆ ಹೇಳಲಿಲ್ಲ ? ಪಟ್ಟಣಶೆಟ್ಟರನ್ನು ನಮ್ಮಲ್ಲಿಗೆ ಕರೆತರಬೇಕಾಗಿತ್ತು” - ಎಂದ ಮದಕರಿನಾಯಕ.

“ನಾನೂ ಅವರಿಗೆ ಅದನ್ನು ಹೇಳಿದೆ, ಮಹಾಸ್ವಾಮಿ. ಆದರೆ ಅವರು ’ಈ ಸಣ್ಣ ವಿಷಯಕ್ಕೆ ಬೆಳಗಾಗುತ್ತಿದ್ದ ಹಾಗೇ ಪ್ರಭುಗಳಿಗೆ ತೊಂದರೆ ಕೊಡಬೇಡಿ. ಈ ಗಡಿಬಿಡಿಯೆಲ್ಲಾ ಮುಗಿದ ಮೇಲೆ ನಾವೇ ಅವರನ್ನು ಕಂಡು ಮುಂದಿನ ಸೇವೆ ಏನಾಗಬೇಕೆಂದು ಅಪ್ಪಣೆ ಪಡೆಯುತ್ತೇವೆ’ ಎಂದು ಹೇಳಿ ಹೋದರು.”

ದುರ್ಗದ ವರ್ತಕರ ಔದಾರ್ಯವನ್ನರಿತ ಮದಕರಿನಾಯಕನ ಹೃದಯ ಕೃತಜ್ಞತಾಪೂರ್ವಕವಾಗಿ –

"ಆಯಿತು - ಅವರು ನಮ್ಮ ಸೇವೆಮಾಡಬೇಕೋ, ನಾವು ಅವರ ಸೇವೆಮಾಡಬೇಕೋ - ಕಾಲ ಬಂದಾಗ ಹೇಳೋಣ. ಆದರೆ ಅವರಿಗೆ ನಮ್ಮ ಕೃತಜ್ಞತೆಗಳನ್ನು ತಿಳಿಸಿ. ಆ ಉಡುಗೊರೆಗಳನ್ನು ಮಾತ್ರ ಪ್ರತ್ಯೇಕವಾಗಿಡಿ"

-ಎಂದು, ಆ ವೇಳೆಗೆ 'ಸಭೆ ಕಲೆತಿದೆ' ಎಂಬ ಸೂಚನೆ ದರ್ಬಾರುಬಕ್ಷಿಯಿಂದ ಬಂದದ್ದರಿಂದ ಸಭೆಯತ್ತ ನಡೆದ.

* * *

ಸಭೆಯಲ್ಲಿ ನವಾಬನ ವಕೀಲ ಮಾನ್ವಿ ಶ್ರೀನಿವಾಸರಾಯ ಹೈದರಾಲಿ ಬರೆದುಕೊಟ್ಟ ಪ್ರಮಾಣ ಪತ್ರವನ್ನು ಪ್ರಧಾನಿಗಳ ಕೈಗೆ ಕೊಟ್ಟ.

"ಈ ಪ್ರಮಾಣಪತ್ರಕ್ಕೆ ಖಾತರಿಯಾಗಿ ಮೂವರು ಸಾಹುಕಾರರು ತಾವು ಅಪೇಕ್ಷಿಸಿದಂತೆ ಬಂದಿದ್ದಾರೆ" – ಎಂದು ಹೇಳಿದ.

ಆತ ಆ ಮಾತು ಹೇಳುತ್ತಿದ್ದಂತೆಯೇ ಶ್ರೀರಂಗಪಟ್ಟಣದ ಸಾಹುಕಾರರಾದ ರಾಘವೇಂದ್ರ ನಾಯಕ, ಅಂದಾನಪ್ಪ, ಶಂಕರಶೆಟ್ಟಿ ಎದ್ದು ನಿಂತು ನಾಯಕರಿಗೆ ಕೈಮುಗಿದರು.

"ಇಂದಿನಿಂದ ಇವರು ನಮ್ಮ ಅತಿಥಿಗಳಾಗಿರಲಿ. ಇವರ ಯೋಗಕ್ಷೇಮಕ್ಕೆ ತಕ್ಕ ವ್ಯವಸ್ಥೆ ಮಾಡಿಸುತ್ತೇವೆ"

-ಎಂದ ನಾಯಕರು, ಪ್ರಧಾನಿಯತ್ತ ತಿರುಗಿ –

"ನವಾಬರ ವಕೀಲರಿಗೆ ಮೊದಲ ಕಂತಿನ ಹಣ ಮುಟ್ಟಿಸಿ" - ಎಂದು ಹೇಳಿದರು.

ಅವರ ಸೂಚನೆಯಂತೆಯೇ ಆಸ್ಥಾನ ಸೇವಕರು, ಬೆಳ್ಳಿಯ ಹರಿವಾಣಗಳಲ್ಲಿ ನೂರಾರು ಥೈಲಿಗಳಲ್ಲಿ ತುಂಬಿದ್ದ ಹಣವನ್ನು ತಂದು ಸಭೆಯ ಮುಂದಿಟ್ಟರು.

"ಹಣ ಎಣಿಸಿಕೊಳ್ಳುತ್ತೀರೋ-ಥೈಲಿಯ ಲೆಕ್ಕ ನೋಡುತ್ತೀರೋ- ಬಿಚ್ಚಿ ಎಣಿಸಬೇಕೊ?"

- ನವಿರಾದ ವ್ಯಂಗ್ಯವಿದ್ದ ಧ್ವನಿಯಲ್ಲಿ ನಾಯಕರು ಕೇಳಿದರು.

"ತಾವು ಹೇಳಿದಷ್ಟೇ ಸಾಕು. ಎಣಿಸುವ ಅಗತ್ಯವಿಲ್ಲ"- ಮಾನ್ವಿ ಶ್ರೀನಿವಾಸರಾಯ ಹೇಳಿದ.

"ಹಾಗಿದ್ದರೆ ಕರಾರಿನ ಮೊದಲಿನ ಕಲಂ ಇತ್ಯರ್ಥವಾದಂತಾಯಿತು. ಇನ್ನು ನವಾಬರ ದಂಡು ಕೂಚುಮಾಡಿ ಒಂದು ದಿನದ ಮಜಲು ಮುಟ್ಟಿದ ಬಳಿಕ ಮುಂದಿನ ಮಾತು. ನಾವು ಆಡಿದ ಮಾತಿಗೆ ತಪ್ಪುವವರಲ್ಲ, ತಪ್ಪಿ ನಡೆದವರನ್ನು ಬಿಡುವವರೂ ಅಲ್ಲ – ಎಂಬುದನ್ನು ನವಾಬರಿಗೆ ನಮ್ಮ ನಮಸ್ಕಾರಗಳೊಂದಿಗೆ ತಿಳಿಸಿ."

"ಅಪ್ಪಣೆ – ತಮ್ಮಲ್ಲಿ ನವಾಬರದು ಸಣ್ಣದೊಂದು ಪ್ರಾರ್ಥನೆ ಇದೆ"

- ಮಾನ್ವಿ ಶ್ರೀನಿವಾಸರಾಯ ಹೇಳಿದ.

"ಏನು ?"

"ನವಾಬರ ಸರ್ದಾರರಾದ ಸರ್ದಾರ್ ಖಾನರು ಈಗ ತಮ್ಮ ಆಶ್ರಯದಲ್ಲಿದ್ದಾರೆ. ಅವರನ್ನು ನಮ್ಮ ವಶಕ್ಕೆ ಕೊಡಬೇಕು."

ಆ ಮಾತು ಕೇಳುತ್ತಿದ್ದಂತೆಯೇ ಹೃದಯಕ್ಕೆ ಮುಳ್ಳು ಇರಿದಂತಾಗಿ-

"ನಿಮ್ಮ ನವಾಬರಿಗೆ ಶಾಂತಿ, ನಮ್ಮ ಸ್ನೇಹ ಬೇಕಿದ್ದರೆ ಸರ್ದಾರ್ಖಾನರನ್ನು ಮರೆತು ಬಿಡಿ ಎಂದು ಹೇಳಿ. ಆ ಕಾರಣ ಮುಂದುಮಾಡಿಕೊಂಡು ಇಂದು ಏರಿಸಿದ ಬಿಳಿನಿಶಾನೆಯನ್ನೇನಾದರೂ ನವಾಬರು ಇಳಿಸಿದಲ್ಲಿ, ಇಳಿಸಿದ ನಿಶಾನೆಯೊಂದಿಗೇ ಕರಾರು ಸತ್ತು ಹೋಯಿತು ಎಂದು ತಿಳಿದು, ನಂಬಿಸಿ ಪಡೆದ ಹಣವನ್ನು ಹಿಂದಕ್ಕೆ ಪಡೆಯಲು ನಾವು ಸಿದ್ಧರಾಗಬೇಕಾಗುತ್ತದೆ. ನಿನ್ನೆಯ ದಿನವೇ ನಾವು 'ನಿಮ್ಮ ನವಾಬರಿಗೆ ಒಂದೇ ನಾಲಗೆ ಇರಬೇಕು' ಎಂದು ಹೇಳಿದ್ದನ್ನು ಅವರಿಗೆ ನೀವು ಹೇಳಲಿಲ್ಲವೇ ?"

- ಎಂದು ಕ್ರುದ್ಧರಾಗಿ ಕೇಳಿದರು ನಾಯಕರು.

- "ಕರಾರು ಬೇರೆ, ಇದು ಬೇರೆ. ಇದಕ್ಕೆ ನೀವು ಒಪ್ಪಿ, ಬಿಡಿ - ಅದು ನಿಮ್ಮ ಚಿತ್ತ. ಸರ್ದಾರ್ಖಾನರು ಉಪ್ಪಿಟ್ಟ ಧಣಿಗೆ ದ್ರೋಹಮಾಡಿದವರು. ನೀವಾದರೂ ಅವರ ಬಗ್ಗೆ ಎಚ್ಚರವಾಗಿರಿ."

"ನಾವು ಸದಾ ಎಚ್ಚರವಾಗಿರುತ್ತೇವೆ ಎಂದು ನವಾಬರಿಗೆ ಹೇಳಿ, ಮತ್ತೇನಾದರೂ ಹೇಳುವುದಿದೆಯೇ ?"

"ಇಲ್ಲ - ನಮ್ಮ ಸಾಹುಕಾರರನ್ನು ನಿಮ್ಮವರಂತೆಯೇ ನಡೆಸಿಕೊಳ್ಳಬೇಕು. ಅವರು ಯುದ್ಧ ಬಂದಿಗಳಲ್ಲ ; ಕರಾರಿಗೆ ಸಾಕ್ಷಿಗಳು."

"ಆಯಿತು. ನಮ್ಮ ತಮ್ಮಂದಿರನ್ನು ನಿಮ್ಮ ನವಾಬರು ಹೇಗೆ ನಡೆಸಿಕೊಳ್ಳುತ್ತಾರೋ ಹಾಗೇ, ಅಷ್ಟೇ ವಿಶ್ವಾಸದಿಂದ ನಿಮ್ಮವರನ್ನು ನಾವು ನಡೆಸಿಕೊಳ್ಳುತ್ತೇವೆಂದು ನವಾಬರಿಗೆ ಹೇಳಿ, ಮತ್ತೇನು?"

"ಮತ್ತೇನೂ ಇಲ್ಲ. ತಮಗೂ, ರಾಜ್ಯಕ್ಕೂ ಸದಾ ಕ್ಷೇಮಕೋರಿ ನವಾಬರು ದಿನಾ ಪ್ರಾರ್ಥನೆ ಸಲ್ಲಿಸುತ್ತಾರೆ" – ಎಂದು ಕೈಮುಗಿದ ಮಾನ್ವಿ ಶ್ರೀನಿವಾಸರಾಯ.

ಆ ಮಾತೇ ಕಿವಿಗೆ ಬೀಳದವರಂತೆ ಪ್ರಧಾನಿ ಪರಶುರಾಮನಾಯಕನಿಗೆ –

"ನವಾಬರ ವಕೀಲರು ಹಣದೊಂದಿಗೆ ಕ್ಷೇಮವಾಗಿ ಅವರ ಪಾಳಯ ಸೇರಲು ಬೇಕಾದ ವ್ಯವಸ್ಥೆ ಮಾಡಿ"

- ಎಂದು ಹೇಳಿ, ಎದ್ದು ನಿಂತ ಸಭೆಗೆ ವಂದಿಸಿ, ಓಲಗದಿಂದ ನಾಯಕರು ನಿರ್ಗಮಿಸಿದರು.

* * *

ಓಲಗ ಮುಗಿಸಿಕೊಂಡು ಬಂದ ಮದಕರಿನಾಯಕ ಸೂತಕ ಕಳೆದುಕೊಂಡವನಂತೆ ಸ್ನಾನಮಾಡಿ, ಬೇರೆ ಉಡುಪು ಧರಿಸಿ ಬರುವ ವೇಳೆಗೆ ಅರಮನೆಯ ಬಕ್ಷಿ ಕಾಣಿಸಿಕೊಂಡು-

"ಸರ್ದಾರ್‌ಖಾನರು ತಮ್ಮನ್ನು ಕಾಣಲು ಬಂದಿದ್ದಾರೆ" – ಎಂದು ತಿಳಿಸಿದ.

ಯುದ್ಧ-ಸಂಧಿಯ ಮಾತುಗಳ ಗಡಿಬಿಡಿಯಲ್ಲಿ ಮದಕರಿನಾಯಕ ಸರ್ದಾರ್‌ಖಾನರನ್ನು ಕಂಡು ಬಹಳದಿನವಾಗಿತ್ತು. ಎಂತಲೇ ಸಂತೋಷದಿಂದಲೇ ಆತನನ್ನು ಕಾಣಲು ದಿವಾನ್ ಖಾನೆಗೆ ಹೋದ.

ಪರಸ್ಪರ ವಂದಿಸಿ, ಕುಶಲಸಮಾಚಾರಗಳನ್ನು ವಿಚಾರಿಸಿಯಾದಬಳಿಕ ಸರ್ದಾರ್‌ಖಾನನೇ ತಾನು ಬಂದ ವಿಷಯವನ್ನೆತ್ತಿಕೊಂಡು –

"ನೀವು ನವಾಬರ ಮಾತನ್ನು ನಂಬಿ, ಮೂರುಲಕ್ಷ ಹಣ ಕಳಿಸಿದಿರಿ ಎಂದು ತಿಳಿಯಿತು. ಈ ವಿಷಯದಲ್ಲಿ ನೀವು ಆತುರ ಮಾಡಿದಿರೇನೋ ಎಂದೆನಿಸುತ್ತದೆ, ನನಗೆ. ಭಾರಿ ಯುದ್ಧದ ಸಿದ್ಧತೆಯನ್ನು ಮಾಡಿಕೊಂಡ ನವಾಬರು ಅನಿರೀಕ್ಷಿತವಾಗಿ ಈ ಸಂಧಿಯ ಮಾತನ್ನು ಎತ್ತಿದ್ದೇಕೆ?- ಅದೂ ತಾವಾಗಿಯೇ, ಆಕಾರಣವಾಗಿ, ನವಾಬರು ಬಹುದೂರ ಆಲೋಚನೆ ಮಾಡದೆ ಯಾವ ಕೆಲಸವನ್ನೂ ಮಾಡುವವರಲ್ಲ. ಇದ್ದಕ್ಕಿದ್ದ ಹಾಗೇ ಭಾರಿ ಲಡಾಯಿಯ ಭಯ ಹುಟ್ಟಿಸಿದರು; ಇದ್ದಕ್ಕಿದ್ದ ಹಾಗೇ ಸಂಧಿಗೆ ಬಂದರು ; ನೀವು ಹೇಳಿದ್ದಕ್ಕೆ ಒಪ್ಪಿಕೊಂಡರು. ಇದರಲ್ಲೇನೋ ದುರಭಿಸಂಧಿ ಇರಲೇಬೇಕು"

- ಎಂದು ಹೇಳಿದ, ತನ್ನ ಮನದ ಸಂಶಯಕ್ಕೆ ಮಾತಿನ ರೂಪಕೊಟ್ಟು.

"ಇರಬಹುದು. ಈಗ ಆದದ್ದೇನು - ಮೂರು ಲಕ್ಷ ಹಣ ವೃಥಾ ಹೋಯಿತೆಂದು ನಿಮ್ಮ ಅನಿಸಿಕೆಯೇ ? ಹಣದ ಬದಲು ನವಾಬರ ಮೂವರು ವರ್ತಕರು ನಮ್ಮ ವಶದಲ್ಲಿ ಇದ್ದಾರೆ. ನಮ್ಮ ತಮ್ಮ ಇನ್ನೂ ಇಲ್ಲೇ ಇದ್ದಾರೆ. ನವಾಬರು ಏನಾದರೂ ಕುತಂತ್ರ ಮಾಡಬಹುದೆಂದೇ ನಾವು ಮಜಲಿಗಿಷ್ಟು ಎಂದು ಕರಾರು ಹಾಕಿದ್ದು. ನವಾಬರು ಮಾತಿಗೆ ತಪ್ಪಿ ನಡೆದುಕೊಂಡರೆ ಅವರು ಮೋಸದಿಂದ ಪಡೆದ ಹಣ ಹೇಗೆ ಕಕ್ಕಿಸಬೇಕು ಎಂದು ನಮಗೆ ಗೊತ್ತಿದೆ. ನಮ್ಮ ನಿರೀಕ್ಷೆಯಂತೆ ಮರಾಠರು ನಮ್ಮ ಸಹಾಯಕ್ಕೆ ಬಂದಿದ್ದರೆ, ನಾವು ಸಂಧಿಯ ಮಾತಿಗೆ ಒಪ್ಪುತ್ತಲೇ ಇರಲಿಲ್ಲ. ಆಗ ಪರಿಸ್ಥಿತಿಯೇ ಬೇರಾಗುತ್ತಿತ್ತು. ಈಗಲೂ ಆದದ್ದೇನು - ಮೂರು ಲಕ್ಷ ಹಣ ತಾನೇ ಹೋದದ್ದು."

"ಊಹೂ – ನನಗೇನೋ ನೀವು ದುಡುಕಿ ಜಯದ ಅವಕಾಶವನ್ನೇ ಕಳೆದುಕೊಂಡಿರಿ ಎಂದೇ ಅನಿಸುತ್ತಿದೆ. ಅಂಥ ಭೀತಿ ಇಲ್ಲದಿದ್ದರೆ ನವಾಬರು ಆತುರದ ಸಂಧಿಯ ಮಾತಾಡುತ್ತಿರಲಿಲ್ಲ. ನೀವು ನಾಲ್ಕು ದಿನ ಹಿಗ್ಗಾಮುಗ್ಗಾ ಎಳೆದು, ನವಾಬರ ಬೆದರಿಕೆಯ ಸತ್ಯಾಸತ್ಯತೆಯನ್ನು ಪರೀಕ್ಷಿಸಬೇಕಾಗಿತ್ತು."

ಸರ್ದಾರ್‌ಖಾನ್ ಹೇಳಿದುದನ್ನು ಕೇಳಿ, ಮದಕರಿನಾಯಕ ಅಷ್ಟು ಹೊತ್ತು ಯೋಚಿಸಿ –

"ಆದರೆ ಕಾಯಲು ನಮಗೆ ಯಾವ ಕಾರಣವೂ ಕಾಣಲಿಲ್ಲ. ಏಳು ತಿಂಗಳಾದರೂ ಪುಣೆಯಿಂದ ಯಾವ ಸುದ್ದಿ ಬರಲಿಲ್ಲ. ಈಚೆಗೆ ನಿಮ್ಮ ಮನುಷ್ಯನಿಂದಲೂ ಏನೊಂದೂ ಸುದ್ದಿಯಿಲ್ಲ. ನಮ್ಮ ಕಡೆ ಜನಹಾನಿಯೂ ಸಾಕಷ್ಟಾಗಿತ್ತು. ಈ ವರ್ಷದ ಮಳೆಗಾಲವೂ ನಮಗೆ ಅನುಕೂಲವಾಗಲಿಲ್ಲ. ಸುತ್ತಲೂ ಇಂಥ ವಾತಾವರಣ ಇದ್ದಾಗ, ನಾವು ಯಾವ ಕಾರಣಕ್ಕಾಗಿ, ಏನನ್ನು ನಂಬಿ ಸಿಕ್ಕ ಈ ಅವಕಾಶವನ್ನು ಬಿಡಬೇಕಾಗಿತ್ತು, ಹೇಳಿ? ಮನೆಬಾಗಿಲಿಂದ ಈ ಪೀಡೆ ಒಮ್ಮೆ ತೊಲಗಿದರೆ, ನಾವೂ ಅಷ್ಟು ಶ್ರಮಪರಿಹಾರ ಮಾಡಿಕೊಂಡು, ಮೈ ಗಟ್ಟಿ ಮಾಡಿಕೊಳ್ಳೋಣ ಎಂದು ಒಲ್ಲದ ಮನಸ್ಸಿನಿಂದ ಒಪ್ಪಬೇಕಾಯಿತು. ಯಾವುದು ಹೇಗಾದರಾಗಲಿ – ನಿಮ್ಮ ಮನುಷ್ಯನಂತೂ ಒಂದು ದಿನವೂ ಸುದ್ದಿ ಕಳಿಸಲಿಲ್ಲ. ನಾವು ಆತನನ್ನು ಬಹಳ ನಂಬಿದ್ದೆವು. ಎಲ್ಲರೂ ಕೈಬಿಟ್ಟರು ; ನಮ್ಮ ಬುದ್ಧಿ ತಿಳಿದಷ್ಟು ಮಾಡಿದೆವು"

- ಎಂದು ಸ್ವಲ್ಪ ನಿರಾಶೆಯ ನಂಜಿದ್ದ ಧ್ವನಿಯಲ್ಲಿ ಹೇಳಿದ.

"ಪುಣೆಯವರ ಬಗ್ಗೆ ನಾನೇನೂ ಹೇಳಲಾರೆ. ಆದರೆ ನಮ್ಮ ಮನುಷ್ಯನ ಬಗ್ಗೆ ನಮಗೂ ಚಿಂತೆಯಾಗಿದೆ. ಆದರಿಷ್ಟೆ- ನವಾಬರು ಮತ್ತೆ ನಮ್ಮನ್ನು ಕೇಳಿದ್ದು ಆತ ಇನ್ನೂ ನವಾಬರ ಕೈಗೆ ಸಿಕ್ಕಿಲ್ಲ ಎಂಬುದಕ್ಕೆ ಸಾಕ್ಷಿ. ಆದರೆ ಆತನ ಬಗ್ಗೆ ನಿಮಗಿಷ್ಟು ಭರವಸೆ ಕೊಡುತ್ತೇನೆ -ಆತ ಜೀವಂತವಾಗಿದ್ದರೆ ಇವತ್ತಲ್ಲ, ನಾಳೆ ತಮಗೆ ಆತನಿಂದ ಖಂಡಿತವಾಗಿಯೂ ಸುದ್ದಿ ಬರುತ್ತದೆ."

- ತನ್ನ ಮನುಷ್ಯನ ಬಗ್ಗೆ ಅಪಾರವಿಶ್ವಾಸವಿದ್ದ ಧ್ವನಿಯಲ್ಲಿ ಹೇಳಿದ ಸರ್ದಾರ್‌ಖಾನ್.

"ಆಯಿತು, ನಿಮ್ಮ ನಂಬಿಕೆಯೇ ನಿಜವಾಗಲೆಂದು ನಾವೂ ಹಾರೈಸುತ್ತೇವೆ. ಈಗ ಏನಾದರಾಗಲಿ, ಹಿಂದಂತೂ ಆತನಿಂದ ನಮಗೆ ಸಾಕಷ್ಟು ಸಹಾಯವಾಗಿದೆ. ಈಗ ಆದದ್ದಾಯಿತಲ್ಲ -ನವಾಬರ ಪಾಳಯದಲ್ಲೇನು ನಡೆಯುತ್ತಿದೆಯೋ ನೋಡೋಣ, ಬನ್ನಿ. ಅವರ ವಕೀಲರು ಹೇಳಿದ ಮಾತು ನಿಜವಾಗಿದ್ದರೆ ಈ ವೇಳೆಗೆ ಅವರು ಬಿಡಾರ ಕೀಳುವ ಸೂಚನೆಗಳು ಕಾಣಬೇಕು" - ಎಂದ ಮದಕರಿನಾಯಕ.

"ಬಿಡಾರವನ್ನೇನೋ ಅವರು ಕೀಳುತ್ತಾರೆ - ಅದರಲ್ಲಿ ನನಗೆ ಅನುಮಾನವಿಲ್ಲ. ಆದರೆ ಅವರು ಇಲ್ಲಿಂದ ಎತ್ತಕಡೆ ಹೋಗುತ್ತಾರೆಯೋ ನೋಡಬೇಕು - ಅವರು ದಂಡು ತೆಗೆದುಕೊಂಡು

ಸೀರ್ಯದ ಕಡೆ ಹೊರಟರೆ ಸಂಧಿಯ ಮಾತನ್ನು ನಂಬಿ. ಇಲ್ಲದಿದ್ದರೆ, ಎಚ್ಚರವಾಗಿರಿ. ಹಾಗೂ ಸೀರ್ಯದ ಕಡೆ ಹೋದಂತೆ ನಟಿಸಿ, ಅಡ್ಡಮಾರ್ಗವಾಗಿ ಮತ್ತೊಂದು ದಾರಿ ಹಿಡಿದರೆ ಅವರ ಈ ಆತುರದ ಸಂಧಿ ನಮಗಂತೂ ಅಪಾಯದ ಸೂಚನೆಯೆಂದೇ ಕಾಣುತ್ತದೆ. ಅದನ್ನು ಹೇಳಬೇಕೆಂದೇ ಬಂದೆ" - ಸರ್ದಾರ್‌ಖಾನ್ ಹೇಳಿದ.

"ನಿಮ್ಮ ಎಚ್ಚರಿಕೆಯ ಮಾತನ್ನು ನಾವು ಮರೆಯುವುದಿಲ್ಲ. ನಿಮ್ಮ ಹಿತಚಿಂತನೆಗಾಗಿ ವಂದನೆಗಳು. ನಿಮಗೆ ಬಿಡುವಿದ್ದರೆ ಬನ್ನಿ. ಇಲ್ಲೇ ಹತ್ತಿರದ ತುಪ್ಪದಕೊಣದ ಬತೇರಿಯ ಮೇಲೆ ಸ್ವಲ್ಪ ಹೊತ್ತು ನಿಂತು, ನವಾಬರ ಪಾಳಯದಲ್ಲೇನಾಗುತ್ತಿದೆಯೋ ನೋಡಿ ಬರೋಣ"

-ಎಂದು ಹೇಳಿದ ಮದಕರಿನಾಯಕ.

"ಉಂಡು ತಿಂದು ಮಲಗುವುದಲ್ಲದೆ ನನಗಿಲ್ಲಿ ಬೇರೇನು ಕೆಲಸವಿದೆ, ರಾಜಾಸಾಹೇಬ್: ನಿಮ್ಮೊಂದಿಗೆ ಬರುತ್ತೇನೆ"

- ಎಂದು ಸರ್ದಾರ್‌ಖಾನ್ ಮದಕರಿನಾಯಕನನ್ನು ಹಿಂಬಾಲಿಸಲು ಸಿದ್ಧನಾದ.

ಅವರಿಬ್ಬರೂ ಅರಮನೆಯಿಂದ ಹೊರಹೊರಟು, ಶ್ವೇತಚ್ಛತ್ರದವನು, ಇಬ್ಬರು ಅಂಗರಕ್ಷಕರೊಡನೆ ತುಪ್ಪದಕೊಣದ ಬತೇರಿಯ ಕಡೆಗೆ ಹೊರಡಲು, ಶೃಂಗಾರವನದ ಬಾಗಿಲ ಬಳಿ ಬರುತ್ತಿರುವಾಗ, ನಾಯಕರ ಖಾಸಾಬೇಡಪಡೆಯನಾಯಕ ವೀರಭದ್ರನಾಯಕ, ನಾಯಕರಿಗೆ ಕಾಣಿಸಿಕೊಂಡು ದೂರದಿಂದಲೇ ಕೈಮುಗಿದ.

ಮೈತಾಳಿಬಂದ ಕಾಲಭೈರವನಂತಿದ್ದ ವೀರಭದ್ರನಾಯಕನನ್ನು ನೋಡಿ, ಹಿಂದೆಂದೂ ಆತನನ್ನು ನೋಡದ ಸರ್ದಾರ್‌ಖಾನ್ –

"ಈತ ಯಾರು, ರಾಜಾಸಾಹೇಬ್ ? ಕಾಡಿನಿಂದ ತಪ್ಪಿಸಿಕೊಂಡು ಬಂದಿರುವ ಹುಲಿ ಇದ್ದ ಹಾಗಿದ್ದಾನೆ"

- ಎಂದು ಕೇಳಿದ, ವೀರಭದ್ರನಾಯಕನ ಬಗ್ಗೆ ಭೀತಿ-ಮೆಚ್ಚುಗೆಯೆರಡೂ ತುಂಬಿದ ಧ್ವನಿಯಲ್ಲಿ,

"ಈತ ನಮ್ಮ ಖಾಸಾ ಬೇಡಪಡೆಯ ಮುಖಂಡ - ವೀರಭದ್ರನಾಯಕ"

-ಎಂದು ಹೇಳಿ, ಪರಿಚಯ ಮಾಡಿಸಿ –

"ಈಗೇನು ಬಂದದ್ದು ವೀರಭದ್ರನಾಯಕ ?"

-ಎಂದು ಪ್ರಶ್ನೆ ಮಾಡಿದ ಮದಕರಿನಾಯಕ.

"ನೂರೆಂಟು ಗಡಿಬಿಡಿಯಲ್ಲಿ ಮಾಸ್ವಾಮಿಯವರು ಮರೆತುಬಿಟ್ಟ ಹಾಗೆ ಕಾಣದೆ – ಇವತ್ತು ಸೋಮವಾರ" – ವೀರಭದ್ರನಾಯಕ ಹೇಳಿದ.

"ಹೌದೇ - ಮರೆತುಬಿಟ್ಟಿದ್ದೆ....ಆದರೆ ಈಗ ರಾಜಿಯ ಮಾತಾಗಿದೆಯಲ್ಲ ವೀರಭದ್ರನಾಯಕ."

"ಆ ಮಾತು ನಾನೂ ಕೇಳಿದೆ, ಮಾಸ್ವಾಮಿ. ಇವತ್ತು ಭಾರಿ ಶಿಕಾರಿ ಮಾಡಲು ಈಗೊಂದು ವಾರದಿಂದ ನಮ್ಮ ಜನ ಹಗಲೂ ರಾತ್ರಿ ದುಡಿದಿದ್ದರು. ಇವತ್ತೇ ರಾಜಿ ಮಾತು ಮುಗಿಸಿ ನಮ್ಮ ಕೈ ಕಟ್ಟಿಬಿಟ್ಟಿರಿ. ನಮ್ಮ ಜನ ಎಲ್ಲಾ ಬಾಯಲ್ಲಿಟ್ಟ ಬೆಣ್ಣೇನ ಕಿತ್ತುಕೊಂಡ ಮಕ್ಕಳಂಗೆ ಕಣ್ಣೀರು ಹಾಕ್ತಿದಾರೆ, ಮಾಸ್ವಾಮಿ. ಅವರ ದುಃಖ, ಸಂಕಟ ನೋಡಲಾರದೆ ನಾನೇ ನಿಮ್ಮನ್ನು ಕಂಡು ಬೇಡಿಕೊಳ್ಳೋಣಾಂತ ಬಂದೆ - ಮಾಸ್ವಾಮಿ. ನಾಳೆ ಬೆಳಿಗ್ಗೆ ಬೇಕಾದ್ರೆ ನನ್ನ ಶೂಲಕ್ಕೇರಿಸಿಬಿಡಿ - ಅಪ್ಪಣೆ ಮೀರಿ ನಡೆದೋನು ಅಂತ. ಆದ್ರೆ ಇವತ್ತು ಮಾತ್ರ -ತಾವು ಬರದಿದ್ದರೂ ಬ್ಯಾಡ – ನಮಗೆ ಬೇಡಾಂದು ನಮ್ಮ ಕೈ ಕಡಿದುಬಿಡಬ್ಯಾಡಿ, ಪಾದಕ್ಕೆ ಬಿದ್ದು ಬೇಡಿಕೋತೀನಿ"

-ಎಂದು ದೀನನಂತೆ ಅಂಗಲಾಚಿ, ನಾಯಕರ ಪಾದದ ಬಳಿ ನೆಲದ ಮೇಲೆ ಅಡ್ಡ ಬಿದ್ದ.

"ಮೇಲಕ್ಕೇಳು ವೀರಭದ್ರನಾಯಕ."

"ಹಾಂಗಾಗೋಕಿಲ್ಲ ಬುದ್ಧಿ, ಹೂಂದ್ರೆ ನಾನು ಮ್ಯಾಲಕ್ಕೇಳೋದು, ಇಲ್ಲಾಂದ್ರೆ - ನನ್ನ ತಲೆ ತುಳಿದುಕೊಂಡು ಹೋಗಿಬಿಡಿ. ನಾನೂ ಕಾಳಿಕಾಮ್ಮನೋರಿಗೆ ನಿಂಗೆ ಕೊಟ್ಟ ಮಾತು ತಪ್ಪಿತೂಂತ ಹೇಳಿ, ನನ್ನ ತಲೆ ಕತ್ತರಿಸಿಕೊಟ್ಟು ಬುಡ್ತೀನಿ"

– ಮಲಗಿಕೊಂಡೇ ದೃಢನಿರ್ಧಾರದ ಧ್ವನಿಯಲ್ಲಿ ಹೇಳಿದ ವೀರಭದ್ರನಾಯಕ.

ಅಷ್ಟು ಹೊತ್ತು ಮದಕರಿನಾಯಕನಿಗೆ ಏನು ಉತ್ತರ ಹೇಳಲೂ ತೋಚಲಿಲ್ಲ. ಸುಮ್ಮನೆ ನಿಂತುಬಿಟ್ಟ.

ಆತ ಸುಮ್ಮನಿದ್ದುದನ್ನು ಕಂಡು ವೀರಭದ್ರನಾಯಕ, ತಾನು ಬಂದ ಕೆಲಸ ಆಗಲಿಲ್ಲ ಎಂದು ತಿಳಿದುಕೊಂಡು-

"ಆಯ್ತು ಮಾಸ್ವಾಮಿ - ನಾನು ಬರ್ತೀನಿ. ಇನ್ನು ನಿಮ್ಮ ಮೊಕ ಕಾಣೋ ಋಣ ಇವತ್ತಿಗೆ ತಪ್ಪಿ ಹೋಯಿತು"

- ಎಂದು ಹೇಳಿ ಮೇಲೆದ್ದು, ಕೈಯಲ್ಲಿದ್ದ ಗಂಡುಗೊಡಲಿಯನ್ನು ನಾಯಕರ ಪಾದದ ಬಳಿ ಇಟ್ಟು ನಮಸ್ಕಾರ ಮಾಡಿ –

"ಅಪ್ಪಣೆ ಆದ್ರೆ ಬರ್ತೀನಿ. ರಾಜಕಾರ್ಯಕ್ಕೆ ಹೊರಟೋರನ್ನ ತಡೆದೆ. ಮಾಫ್ ಮಾಡಿ ಬಿಡಿ, ಮಾಸ್ವಾಮಿ"

- ಎಂದು ಹೇಳಿ, ಅಲ್ಲಿಂದ ಹೊರಡಲು ಸಿದ್ಧನಾದ, ಕೆಂಗಣ್ಣುಗಳಲ್ಲಿ ಹರಿಯುತ್ತಿದ್ದ ಕಂಬನಿಯನ್ನು ಹೊದ್ದ ಹಚ್ಚಡದ ತುದಿಯಿಂದ ಒರೆಸಿಕೊಂಡು.

ವೀರಭದ್ರನಾಯಕನ ದೈನ್ಯಾವಸ್ಥೆಯನ್ನು ಕಂಡು, ಮಕ್ಕಳಂತೆ ಅವರನ್ನು ಪ್ರೀತಿಸಿದ ಮದಕರಿನಾಯಕನಿಗೂ ದುಃಖವಾಗಿ, ಆತ 'ಆಡಿದ ಮಾತಿನಂತೆ ನಡೆದುಕೊಳ್ಳುವ ಗಂಡು' ಎಂದು ತಿಳಿದಿದ್ದುದರಿಂದ, ಆತನ ಬೇಡಿಕೆಯನ್ನು ನಿರಾಕರಿಸಿ, 'ಹೋಗು' ಎಂದು ಹೇಳಲಾಗದೆ, ಇಕ್ಕಟ್ಟಿಗೆ ಸಿಕ್ಕಿ ತೊಳಲಾಡುತ್ತಾ –

"ಒಂದು ನಿಮಿಷ ನಮಗೆ ಯೋಚಿಸಲು ಅವಕಾಶಕೊಡು, ವೀರಭದ್ರನಾಯಕ"

- ಎಂದು ಬೇಡಿಕೊಳ್ಳುವವನಂತೆ ಕೇಳಿದ.

"ಹೂ ಅನ್ನೋದಾದ್ರೆ ಹೇಳಿ ಬುದ್ಧಿ, ಕ್ಷಣ ಅಲ್ಲ, ದಿನಾ ಎಲ್ಲಾ ಒಂಟಿಕಾಲಲ್ಲಿ ನಿಂತುಕೋತೀನಿ"

- ಕಮರಿಹೋಗುತ್ತಿದ್ದ ಆಸೆ ಚಿಗುರುತ್ತಿದ್ದ ಧ್ವನಿಯಲ್ಲಿ ಹೇಳಿದ ವೀರಭದ್ರನಾಯಕ.

ಅದುವರೆಗೂ ಅವರಿಬ್ಬರ ನಡುವೆ ನಡೆದ ಮಾತುಗಳನ್ನು ಮೌನವಾಗಿ ಕೇಳುತ್ತಿದ್ದ ಸರ್ದಾರ್‌ಖಾನ್ ಕೇಳಿದ –

"ವಿಷಯ ಏನು ಎಂದು ನಾನು ಕೇಳಬಹುದೇ, ರಾಜಾಸಾಹೇಬ್ ?"

"ನಿಮ್ಮ ಮುಂದೆ ಹೇಳಬಾರದ ರಹಸ್ಯವೇನೂ ಅಲ್ಲ, ಸರ್ದಾರ್‌ಖಾನ್"

-ಎಂದು ಹೇಳಿ, ಸೂಕ್ಷ್ಮವಾಗಿ ಹೈದರಾಲಿ ಜಾನಕಲ್ಲಿನ ಮೇಲೆ ನಡೆಸಿದ ದಾಳಿಯ ದಿನದಿಂದ, ಅದಕ್ಕೆ ಪ್ರತೀಕಾರವಾಗಿ ಪ್ರತಿ ಸೋಮವಾರ ಮಾಡುತ್ತಿದ್ದ ಕೆಲಸವನ್ನು ತಿಳಿಸಿ –

"ಇವತ್ತು ಸೋಮವಾರ, ಇವತ್ತೇ ಸಂಧಾನದ ಮಾತೂ ಮುಗಿದಿದೆ. ಈಗೇನು ಮಾಡಬೇಕೆಂಬುದೇ ನಮಗೆ ಬಂದಿರುವ ಧರ್ಮಸಂಕಟ. ಮಾತಿಗೆ ತಪ್ಪಲೇ, ಮಗನನ್ನು ಕಳೆದುಕೊಳ್ಳಲೇ - ಏನು ಮಾಡಲಿ ಹೇಳಿ ?" – ಎಂದು ಕೇಳಿದ ಮದಕರಿನಾಯಕ.

ಅದನ್ನು ಕೇಳಿದ ಸರ್ದಾರ್‌ಖಾನ್ ಹೇಳಿದ –

"ಇವತ್ತೇನೋ ವಿಶೇಷ ಎಂದು ಹೇಳುತ್ತಿದ್ದಾನೆ - ನಿಮ್ಮ ಮನುಷ್ಯ. ಅದೇನೋ ಕೇಳಿ, ಆಮೇಲೆ ಮುಂದಿನ ತೀರ್ಮಾನ ಮಾಡಿ."

"ಅದೇನು ಹೇಳು, ವೀರಭದ್ರನಾಯಕ. ಇವರು ಸರ್ದಾರ್‌ಖಾನ್. ನಮಗೆ ನಮ್ಮ ತಮ್ಮ ಪರಶುರಾಮನಾಯಕರಿದ್ದ ಹಾಗೆ. ಇವರ ಮುಂದೆ ಹೇಳಬಾರದ ರಹಸ್ಯವೇನೂ ಇಲ್ಲ."

"ಮಾಸ್ವಾಮಿ – ಈಗೊಂದು ವಾರದಿಂದ ನಾವು ನೂರೈವತ್ತು ಜನ ಹಗಲು ರಾತ್ರಿ ದುಡಿದು, ಕತ್ತರಿಬಾಗಿಲಿನಿಂದ ಬುದ್ಧಿವಂತನ ಮರಡಿವರೆಗೂ ಸುರಂಗ ತೋಡಿ, ಮದ್ದಿಟ್ಟಿದೀವಿ. ಬತ್ತಿ ಹತ್ತಿಸಿದರೆ ಸಾಕು - ನಾವು ಯಾರೂ ಆ ಕಡೆ ಹೋಗಬೇಕಾಗಿಲ್ಲ, ಬುದ್ಧಿವಂತನ ಮರಡಿತನಕ ಇರೋ ನವಾಬನ ಸೇನೆಯ ಸೊಂಟ ಮುರಿದು ಹೋಗ್ತದೆ. ಮತ್ತೀಕಡೆ ದಿಕ್ಕಿಗೆ ತಲೆಯಿಟ್ಟು

ಮಲಗ್ಬಾರ್ದು ನವಾಬ. ಹಂಗೆ ಬುದ್ಧಿ ಕಲಿಸಬೇಕೂಂತ ಅಮ್ಮನೋರ ಎದುರಿಗೆ ಪ್ರಮಾಣ ಮಾಡಿ, ದುಡಿದಿದೀವಿ. ಈಗ ನೀವು ಬ್ಯಾಡಾಂದ್ರೆ ಬೇಡ. ಅಮ್ಮನೋರಿಗೆ ಕೊಡೋ ತಲೆ ತಪ್ಪಿಸಾಕಿಲ್ಲ. ನನ್ನ ತಲೆ ಕೊಟ್ಟು, 'ನಮ್ಮವ್ವ, ಇವತ್ತಿಗೆ ನಮ್ಮ ಹರ್ಕೆ ತೀರ್ತು' ಅಂತ ಹೇಳ್ತೀನಿ" - ತನ್ನ ಯೋಜನೆಯನ್ನು ವಿವರಿಸಿ ಹೇಳಿದ ವೀರಭದ್ರನಾಯಕ.

ಅದನ್ನು ಕೇಳಿದ ಮದಕರಿನಾಯಕನಿಗೂ ತಾನು ಸಂಧಾನದ ಮಾತನ್ನು ಮುಂದೂಡಬೇಕಾಗಿತ್ತು ಎನಿಸಿತು.

ಆದರೆ ಮಾತು ಮುಗಿದಾಗಿತ್ತು. ಈಗೇನು ಮಾಡುವುದು ?

ಮದಕರಿನಾಯಕ ಸುಮ್ಮನೆ ನಿಂತಿದ್ದನ್ನು ಕಂಡ ಸರ್ದಾರ್‌ಖಾನ್ ಯೋಚನೆ ಮಾಡಿ –

"ಇವರ ಮಾತಿಗೆ ಬೇಡ ಅನ್ನಬೇಡಿ, ರಾಜಾಸಾಹೇಬ್. ಇವರ ಕೆಲಸ ಇವರು ಮಾಡಲಿ. ನಿಮ್ಮ ಪಾಡಿಗೆ ನೀವಿರಿ. ನವಾಬರ ಶಾಂತಿಯ ಕೋರಿಕೆ ನಿಜವಾದರೆ, 'ವಚನಭಂಗವಾಯಿತು' ಎಂದು ಸೇನೆ ತಿರುಗಿಸಿ ನಿಲ್ಲುತ್ತಾರೆ. ಇಲ್ಲವಾದರೆ, ಕಂಡದ್ದನ್ನು ನೋಡಿಯೂ ನೋಡದಂತೆ ಹೋಗುತ್ತಾರೆ - ತಮ್ಮ ಯೋಜನೆಯಂತೆ. ಇದು ನವಾಬರ ವಚನದ ಅಗ್ನಿ ಪರೀಕ್ಷೆ. ನಡೆದು ಹೋಗಲಿ" - ಎಂದು ಹೇಳಿದ.

"ಆದರೆ ಕೊಟ್ಟ ಮಾತು ಮುರಿದ ಪಾಪ...."

- ಅತ್ತಿತ್ತ ತುಯ್ದಾಡುತ್ತಾ ಹೇಳಿದ ಮದಕರಿನಾಯಕ.

"ಅದು ಪಾಪವೇ ಆದರೆ, ಅದಕ್ಕೆ ಪ್ರಾಯಶ್ಚಿತ್ತವಾಗಿ ನನ್ನ ತಲೆ ಕೊಡುತ್ತೇನೆ. ಈ ಮಾತಿನ ಭಾರ ನನ್ನ ಮೇಲೆ ಬಿಟ್ಟುಬಿಡಿ. ನಾನು ಹೇಗಿದ್ದರೂ ನಿರುಪಯೋಗಿ, ನನ್ನ ತಲೆಗೇನೂ ಬೆಲೆಯಿಲ್ಲ"- ಸರ್ದಾರ್‌ಖಾನ್ ಹೇಳಿದ.

"ಸಾಹೇಬರು ಹೇಳೋ ಹಂಗೆ ಮಾಡಿ, ಮಾಸ್ವಾಮಿ. ಅವರ ಜೊತೆಗೆ ನನ್ನದೂ ತಲೆ ತೆಗೆದುಬಿಡಿ – ಮಾತಿಗೆ ಮೀರಿ ನಡೆದ ಅಂತ. ಇವತ್ತು ಮಾತ್ರ ನಮ್ಮ ಕೈ ತಡೀಬ್ಯಾಡಿ. ಈಗಲ್ಲ, ರಾತ್ರಿಗೆ ಕೊಣದ ಮೇಲೆ ನಿಂತು ನೋಡಿ - ಕಾಳಿಕಾಮ್ಮನೋರ ದೀಪಾವಳಿ"

- ಎಂದು ಉತ್ಸಾಹದಿಂದ ಬೇಡಿದ ವೀರಭದ್ರನಾಯಕ.

- "ಆಯಿತು – ನಿಮ್ಮಿಷ್ಟ ಬಂದಹಾಗೆ ಮಾಡಿ. ತಪ್ಪಾದರೆ ಆ ಪಾಪ ನಮ್ಮ ತಲೆ ತಿನ್ನಲಿ"

-ಎಂದು ಹೇಳಿದ ಮದಕರಿನಾಯಕ, ಸರ್ದಾರ್ಖಾನ್‌ನತ್ತ ತಿರುಗಿ –

"ಈಗ ಬತೇರಿಗೆ ಹೋಗಿ ಮಾಡುವುದೇನು-ರಾತ್ರಿ ನೋಡೋಣ. ಇವತ್ತು ಅರಮನೆಯ ಅತಿಥಿಗೃಹದಲ್ಲೇ ಉಳಿದುಕೊಳ್ಳಿ"

-ಎಂದು ಸರ್ದಾರ್‌ಖಾನನಿಗೆ ಹೇಳಿ, ತುಪ್ಪದಕೊಣದ ಬತೇರಿಗೆ ಹೋಗುವ ಯೋಚನೆಯನ್ನು ಬಿಟ್ಟು ಮತ್ತೆ ಅರಮನೆಯತ್ತ ಹಿಂತಿರುಗಿದ.

“ಸಾಹೇಬ್ರೆ, ನೀವು ಯಾರೋ. ಅಂತೂ ಇವತ್ತು ನಮ್ಮ ಮಾತು, ತಲೆ ಕಾಪಾಡಿದ್ರಿ, ಅಮ್ಮನೋರೇ ನಿಮ್ಮ ರೂಪವಾಗಿ ಬಂದು ನಮ್ಮ ಮಾತು ಉಳಿಸಿಕೊಟ್ಟರು”

- ಎಂದು ಸರ್ದಾರ್‌ಖಾನನಿಗೆ ನಮಸ್ಕಾರ ಮಾಡಿದ ವೀರಭದ್ರನಾಯಕ.

* * *

ಆ ದಿನ –

ಸರಿರಾತ್ರಿಯ ವೇಳೆಗೆ, ಕೊರೆಯುವ ಛಳಿಯಲ್ಲಿ ಮದಕರಿನಾಯಕ ತುಪ್ಪದಕೊಣದ ಬತೇರಿಯ ಮೇಲೆ ಸರ್ದಾರ್‌ಖಾನ್, ಪರಶುರಾಮನಾಯಕನೊಂದಿಗೆ ನಿಂತು, ಬುದ್ಧಿವಂತನ ಮರಡಿಯತ್ತಲೇ ನೋಡುತ್ತಿದ್ದ.

ಸನಿಹದ ಕಹಳೆಯ ಬತೇರಿಯ ಜಾವಗಹಳೆಯಾಳು 'ಮಧ್ಯರಾತ್ರಿಯಾಯಿತು' ಎಂದು ಸೂಚಿಸುವ ಕಹಳೆಯನ್ನು ಊದಿ, ಕಹಳೆಯ ಸದ್ದು ಕರಗುತ್ತಿದ್ದಂತೆಯೇ, ಬೆಟ್ಟದ ಬಂಡೆ ಬಂಡೆಗಳೂ ಕೆರಳಿ ಚೀತ್ಕರಿಸಿದಂತೆ, ಬೆಟ್ಟದ ಬುಡದ ಕಾಳಿಕಾಂಬಾ ದೇವಸ್ಥಾನದಡಿಯಿಂದ-

“ಲೆ...ಲೆ...ಲೆ...ಕೇ- ಹೂ...”

- ಎಂಬ ನೂರೈವತ್ತು, ಇನ್ನೂರು ಗಡಸು ಗಂಡು ಕಂಠಗಳ ರಣಕೇಕೆ ಕೇಳಿಬಂದು, ಇರುಳ ಮೌನವನ್ನು ಕದಡಿ ಹೊಯ್ದಾಡಿಸಿತು.

ಮರುಗಳಿಗೆಯೇ ಆ ಕೇಕೆಗಿಂತ ಭೀಕರವಾದ ಮೌನ ಎಲ್ಲೆಡೆ ವ್ಯಾಪಿಸಿತು.

ಅಷ್ಟು ಹೊತ್ತು ಮೌನ –

ಆ ಬಳಿಕ –

ಇದ್ದಕ್ಕಿದ್ದಂತೆಯೇ ಸಹಸ್ರ ತೋಫುಗಳು ಏಕಕಾಲಕ್ಕೆ ಆಸ್ಫೋಟಿಸಿದಂತೆ ಬೆಟ್ಟಕ್ಕೆ ಬೆಟ್ಟವೇ ನಡುಗುವಷ್ಟು ಸದ್ದಾಗಿ, ಕಗ್ಗತ್ತಲೆಯನ್ನು ಬಗೆಬಗೆ ಬಣ್ಣದ ರುದ್ರಾಗ್ನಿಯ ಸಹಸ್ರ ಸಹಸ್ರ ಜಿಹ್ವೆಗಳು ಮುಗಿಲೆತ್ತರಕ್ಕೇರಿ ನೆಕ್ಕಿ, ಕೆಂಡದುಂಡೆಗಳ ಮಳೆಗರೆದು, ತುಂಡು ತುಂಡಾಗಿ ಕತ್ತರಿಸಿದ ಕತ್ತಲೆಯ ತುಣುಕುಗಳಂತೆ, ಲಕ್ಷಲಕ್ಷ ಇಂಥದೆಂದು ಗುರುತು ಸಿಗದ ಭಿನ್ನ ವಿಚ್ಛಿನ್ನವಾದ ವಿವಿಧಾಕಾರದ ವಸ್ತುಗಳು, ಆ ಕಣ್ಣುಕೋರೈಸುವಷ್ಟು ಪ್ರಖರವಾದ ಕೆಂಗಾಂತಿಯಲ್ಲಿ ಮುಗಿಲೆತ್ತರಕ್ಕೂ ತುಯ್ದು ಉಗ್ಗಿದಂತೆ ಚೆಲ್ಲಾಪಿಲ್ಲಿಯಾಗಿ ಶರವೇಗದಿಂದ ಸಿಡಿದು ಆಕಾಶದಗಲಕ್ಕೂ ಏರುತ್ತಾ, ಬೀಳುತ್ತಾ, ಅದರೊಂದಿಗೆ ಹೆದರಿದ ಮಾನವರ-ಪಶುಗಳ ಆರ್ತನಾದ ಭೂಮಿಯೇ ಸಾವಿರ ಬಾಯ್ದೆರೆದು

ಬೆದರಿ ಚೀರುವಂತೆ ಕೇಳಿಸಿ, ಆ ರುದ್ರ ದೃಶ್ಯವನ್ನು ಕಂಡು, ಆ ಪ್ರಚಂಡ ಆರ್ತನಿನಾದವನ್ನು ಕೇಳಿ, ಯುದ್ಧ-ಸಾವುಗಳಿಗೆ ಚಿರಪರಿಚಿತನಾದ ಮದಕರಿನಾಯಕನ ಮೈಯೂ ಒಮ್ಮೆ ಕಂಪಿಸಿ, ಮರುಗಳಿಗೆಯೇ ರಕ್ತಚಲನೆ ನಿಂತಂತೆ ಸ್ತಬ್ಧವಾಯಿತು.

ಸರ್ದಾರ್‌ಖಾನನೂ ಬೆದರಿದ ಮಗುವಿನಂತೆ ನೋಡಿದ- ಆ ಭೀಕರ ದೃಶ್ಯವನ್ನು.

ಪರಶುರಾಮನಾಯಕನಂತೂ ಹಾವನ್ನು ಕಂಡ ಕಪ್ಪೆಯಂತಾಗಿದ್ದ.

ಇರುಳಾಗಸದ ಮೋಡಗಳಿಗೆ ರುದ್ರರಕ್ತಕಾಂತಿಯನ್ನು ಲೇಪಿಸಿದ ಸಹಸ್ರ ಸಹಸ್ರ ಜಿಹ್ವೆಯ ಜ್ವಾಲೆ ಕೊಂಚ ತಣ್ಣಗಾಗುತ್ತಿದ್ದಂತೆ, ಭೂ-ವ್ಯೋಮಗಳನ್ನು ಕಂಗೆಡಿಸಿದ ಘೋರರವದುಬ್ಬರ ನಸು ತಗ್ಗುತ್ತಿದ್ದಂತೆಯೇ –

ಬೆಟ್ಟದಡಿಯ ಕಾಳಿಕಾಂಬಾ ದೇವಸ್ಥಾನದತ್ತಣಿಂದ ಮತ್ತೊಮ್ಮೆ–

“ಲೆ... ಲೆ...ಲೆ...ಕೇ- ಹೂ...”

- ಎಂಬ ಕಂಠಗಳ ಭೀಷಣ ರಣಕೇಕೆ, ಬಿರಿದುಂಡ ಕರಾಳಕಾಳಿಯ ತೇಗಿನಂತೆ ಕೇಳಿಸಿ ದಶದಿಕ್ಕುಗಳಿಂದಲೂ ಮತ್ತೆ ಮತ್ತೆ ಮಾರ್ದನಿಸಿ ಸ್ತಬ್ಧವಾಗಿ, ಮೃತ್ಯುಮೌನ ಕವಿಯಿತು –

ಕಂಡದ್ದು, ಕೇಳಿದ್ದು ಎಲ್ಲವೂ ಸ್ವಪ್ನವೇನೋ ಎಂಬಂತೆ.

ಮತ್ತೆ-

ಮತ್ತಷ್ಟು ಗಾಢವಾಗಿ ಕಗ್ಗತ್ತಲು ಕವಿಯಿತು.

ಅಷ್ಟು ಹೊತ್ತೂ ಮೂಕನಂತಿದ್ದ ಮದಕರಿನಾಯಕ, ಮತ್ತೆ ಮಾತು ಬಂದವನಂತೆ-

“ಈ ಪ್ರಶ್ನೆಗೆ ನವಾಬರೇನು ಉತ್ತರಿಸುತ್ತಾರೋ, ನೋಡಬೇಕು”

- ಎಂದು ತೃಪ್ತಿ-ಸಂದೇಹಗಳೆರಡೂ ಇದ್ದ ಧ್ವನಿಯಲ್ಲಿ ಹೇಳಿದ.

* * *

ನವಾಬ ಹೈದರಾಲಿ –

ಮಲಗಿದ್ದವನು ಇದ್ದಕ್ಕಿದ್ದ ಹಾಗೇ ಕೇಳಿಬಂದ ಆ ಭಯಂಕರ ಆಸ್ಫೋಟನೆಯ ಸದ್ದನ್ನು ಕೇಳಿ, ಕಿವಿ ಕಿವುಡಾಗಿ, ಬೆನ್ನ ಮೇಲಿನ ಗುಳ್ಳೆ ಸಿಡಿದಂತಾಗಿ, ಕರುಳು ಕುದಿದದ್ದು ನಾಲಗೆಯ ತುದಿಯವರೆಗೂ ಬಂದು, ಹೊದ್ದ ಹೊದಿಕೆಯನ್ನೇ ಅಲ್ಲದೆ - ಹಾಸಿಗೆಯನ್ನೇ ತೆಗೆದು ಹೊದ್ದುಕೊಂಡು-

“ಮದಕರಿ – ಇದನ್ನು ಮರೆಯುವುದಿಲ್ಲ. ದುರ್ಗವನ್ನು ಒಂದು ದಿನ ಹೀಗೇ ಸಿಡಿಸುತ್ತೇನೆ-

“ಇವತ್ತು – ನಿನ್ನ ಸರದಿ ; ನಾಳೆ - ನನ್ನದು. ಆಟ ಇನ್ನೂ ಮುಗಿದಿಲ್ಲ”
- ಎಂದು ಹಲ್ಲುಕಡಿದು ಹೇಳಿದ.

೧೫

ಚರೆಗುಂಡುಗಳಿಂದಾದ ಗಾಯಗಳಿಂದ ಸೋರುವ ನೆತ್ತರನ್ನು ಆಗಾಗ ನೆಕ್ಕುತ್ತಾ, ರೋಷ ಭೀತಿಗಳಿಂದ ಗುರುಗುಟ್ಟುತ್ತಾ ತನ್ನ ಪೊದೆಯತ್ತ ಓಡುವ ಚಿರತೆಯಂತೆ ಹೈದರಾಲಿಯ ಸೇನೆ - ದುರ್ಗದ ಬಯಲನ್ನು ಆದಷ್ಟು ವೇಗವಾಗಿ ಬರಿದುಮಾಡಿ, ಹತ್ತಾರು ಸೀಳುಗಳಾಗಿ ಹೊರಟಿತು.

ಮರಾಠರ ಸೇನೆ ತುಂಗಭದ್ರಾ ನದಿಯನ್ನು ದಾಟುವ ಮೊದಲೇ, ತನ್ನ ಸೇನೆ ಅತ್ತಕಡೆ ಬರುವ ಮರಾಠರ ಸೇನೆಯನ್ನು ಆಯಕಟ್ಟಿನ ಸ್ಥಳದಲ್ಲಿ ಇದುರಿಸಿ, ಅದು ದುರ್ಗದತ್ತ ಬರದಂತೆ ತಡೆದು, ಅವರ ಉದ್ದೇಶವನ್ನು ವಿಫಲಗೊಳಿಸಿ, ಮತ್ತೆ ಮಿಂಚಿನ ವೇಗದಿಂದ ಹಿಂದಿರುಗಿ, ಅಷ್ಟು ಶೀಘ್ರವಾಗಿ ಮರು ಮುತ್ತಿಗೆಯನ್ನು ನಿರೀಕ್ಷಿಸದಿದ್ದ ಯುದ್ಧದಲ್ಲಿ ಆ ವೇಳೆಗೆ ಸಾಕಷ್ಟು ಜರ್ಝರಿತವಾಗಿದ್ದ ಚಿತ್ರದುರ್ಗವನ್ನು ಕಬಳಿಸುವುದು - ಹೈದರಾಲಿಯ ಯೋಜನೆಯಾಗಿತ್ತು. ಆದ್ದರಿಂದಲೇ ವೇಗದ ನಡೆಗೆ ಅಡ್ಡವಾಗಬಹುದಾದ ಆನೆ, ದೊಡ್ಡ ತೋಫಿನ ಗಾಡಿಗಳನ್ನು ತನ್ನ ಖಾಸಾಸೇನೆಯೇ ಅತ್ತ ಹೋಗುತ್ತಿದೆಯೆಂಬ ಭ್ರಾಂತಿ ಚಿತ್ರದುರ್ಗದವರಲ್ಲಿ ಮೂಡಿಸುವಂತೆ ಸಿರಾದತ್ತ ಕಳಿಸಿ, ಅವರು ವೇದಾವತಿಯನ್ನು ದಾಟಿ, ಬೀಡುಬಿಟ್ಟು, ಅವಸರದ ಕರೆಗೆ ಬರುವಂತೆ ವ್ಯವಸ್ಥೆಯಿಂದಿರಲು ಗುಲಾಂ ಅಲಿಖಾನ್‌ನಿಗೆ ಅಪ್ಪಣೆಮಾಡಿ, ಮಿಂಚಿನ ದಾಳಿಗೆ ಹೆಸರಾದ ತನ್ನ ಹತ್ತು ಸಹಸ್ರ ಅಶ್ವಬಲವನ್ನು ನೇರವಾದ ಸೀಬಾರದ ಕಣಿವೆಯ ಮಾರ್ಗವನ್ನು ಬಿಟ್ಟು ಕತ್ತಲೆಯ ಆಸರೆಯಲ್ಲಿ ಗುಡ್ಡದರಂಗವ್ವನಹಳ್ಳಿಯ ಅಡ್ಡದಾರಿಯಲ್ಲಿ ಓಡಿಸಿದ. ಮತ್ತಷ್ಟು ಸೇನೆ ಹೊಳಲಕೆರೆಯತ್ತಣಿಂದ ಬಳಸುಮಾರ್ಗದಲ್ಲಿ ನಡೆದು ಹರಿಹರದ ಬಳಿ ತುಂಗಭದ್ರಾನದಿಯನ್ನು ದಾಟಿ ಸವಣೂರಿನ ಬಳಿ ಹೈದರಾಲಿಯ ಸೇನೆಯನ್ನು ಕೂಡಿಕೊಳ್ಳಲು ಸಾಹೇಬ್‌ಜಾದೆ ಟೀಪುಸಾಹೇಬ್‌ನ ನೇತೃತ್ವದಲ್ಲಿ ನಡೆಯಿತು -ಬಿದನೂರಿಗೆ ಹೋಗುವಂತೆ.

ಹೈದರಾಲಿಯ ಸೇನೆ ಮೊದಲ ಮಜಲನ್ನು ತಲುಪಿದ ಬಳಿಕ, ಮದಕರಿನಾಯಕ ಕೊಡುವುದಾಗಿ ಹೇಳಿದ್ದ ಎರಡನೆಯ ಕಂತಿನ ಮೂರು ಲಕ್ಷ ವರಹವನ್ನು ಪಡೆದುಕೊಂಡು, ಮಾರನೆಯ ದಿನ ಉಳಿದ ನಾಲ್ಕು ಲಕ್ಷ ವರಹಗಳೊಡನೆ ಬರುವ ಪರಶುರಾಮನಾಯಕನಿಗಾಗಿ ತನ್ನೊಡನೆ ಉಳಿದ ಸಹಸ್ರಸೇನೆಯೊಂದಿಗೆ ಬುದ್ಧಿವಂತನಮರಡಿಯ ಬಳಿಯಲ್ಲೇ ಬಿಡಾರ ಮಾಡಿ, ಕಾದು ಕುಳಿತ – ಬರ್ಕಿ ಶ್ರೀನಿವಾಸರಾಯ.

* * *

ಹಗಲು ಹರಿಯುತ್ತಿದ್ದಂತೆಯೇ ನಾಲ್ದೆಸೆಗಳನ್ನೂ ಕವಿದ ಕೆಂಧೂಳಿನ ಮೋಡದಲ್ಲಿ ಹೈದರಾಲಿಯ ಯಾವ ಸೇನೆ, ಎತ್ತಕಡೆ ಹೋಗುತ್ತಿದೆ - ಎಂದು ಅರ್ಥವಾಗದೆ ಬೇಹುಗಾರರು ತರುವ ಸುದ್ದಿಯನ್ನೇ ಕಾದು ಕುಳಿತ ಮದಕರಿನಾಯಕ.

ದುರ್ಗದ ಸುತ್ತಲೂ ಕೆಂಧೂಳಿನ ಮೋಡ ಕವಿದಂತೆಯೇ, ಹೈದರಾಲಿಗೆ ಮೂರನೆಯ ಕಂತಿನ ಹಣದೊಂದಿಗೆ ಪರಶುರಾಮನಾಯಕನನ್ನು ಮಾರನೆಯ ದಿನವೇ ಕಳುಹಿಸಬೇಕೆಂಬ ಕರುಳು ಹಿಂಡುವ ವ್ಯಥೆ - ಅರಮನೆಯಲ್ಲಿ, ದುರ್ಗದಲ್ಲಿ, ದಂಡಿನಲ್ಲಿ ದುಃಖದ ಕಾರ್ಮೋಡವನ್ನು ಕವಿಸಿತು. ಏಳೆಂಟು ತಿಂಗಳಿಂದ ಎಡಬಿಡದೆ ಕಾಡಿದ ಶತ್ರುಸೇನೆಯ ಗ್ರಹಣ ತೊಲಗಿತೆಂಬ ಸಮಾಧಾನವಾಗಲಿ, ಹಿಂದಿನ ರಾತ್ರಿ ಬುದ್ಧಿವಂತನಮರಡಿಯ ಬಳಿ ಬಿಡಾರ ಮಾಡಿದ ನವಾಬನ ಸೇನೆಯನ್ನು ನಡುಮುರಿದಂತೆ ತಳಿಸುರಂಗವಿಟ್ಟು ಸಿಡಿಸಿದ ಮದ್ದಿನ ಆಸ್ಫೋಟನದಿಂದ ಛಿದ್ರವಿಚ್ಛಿದ್ರಗೊಳಿಸಿದ ಸಂತೋಷವಾಗಲಿ- ಆ ದುಃಖದ ಕತ್ತಲನ್ನು ಕರಗಿಸುವ ಕಿಡಿ ಬೆಳಕೂ ಆಗಲಿಲ್ಲ.

ಆ ವಿಯೋಗದ ವ್ಯಥೆ ಸಹಸ್ರರೂಪು ಧರಿಸಿ ಆಳಿನಿಂದ ಹಿಡಿದು ಅರಸನವರೆಗೆ ಎಲ್ಲರ ಕರುಳನ್ನು, ಒಬ್ಬೊಬ್ಬರನ್ನು ಒಂದೊಂದು ಬಗೆಯಲ್ಲಿ ಹಿಂಡುತ್ತಿತ್ತು. ಅರಮನೆ ಸಂಕಟದಿಂದ ಕುದಿಯುತ್ತಿದ್ದರೆ, ಪರಶುರಾಮನಾಯಕನ ಮನೆ - ಕಣ್ಣೀರ ಕಾಸಾರವಾಗಿತ್ತು.

ತನ್ನ ಪತಿ ಹೈದರಾಲಿಗೆ ಒತ್ತೆಯಾಳಾಗಿ ಹೋಗುವನೆಂಬ ದುರ್ವಾರ್ತೆಯನ್ನು ಕೇಳಿದ ಗಳಿಗೆಯಿಂದ ಆತನ ಮಡದಿ ಸಿದ್ದವ್ವ, ರೆಕ್ಕೆಗಳನ್ನು ಕತ್ತರಿಸಿದ ಹಕ್ಕಿಯಂತೆ ಕಣ್ಣೀರಲ್ಲಿ ಕರಗುತ್ತಾ, ಕೊರಗುತ್ತಾ, ಸೊರಗುತ್ತಾ, ಊಟ-ತಿಂಡಿಯಿರಲಿ, ಬದುಕುವಾಸೆಯನ್ನೇ ಬಿಟ್ಟು ಮನೆದೇವರ ಮುಂದೆ ಮಲಗಿಬಿಟ್ಟಿದ್ದಳು- ಯಾರೆಷ್ಟು ಬಗೆಯಲ್ಲಿ ಸಂತೈಸಿದರೂ, ಆ ಮಾತುಗಳು ಆಕೆಯ ದುಃಖಕ್ಕೆ ಮದ್ದಾಗದೆ.

ಗಂಡ ಪರಶುರಾಮನಾಯಕ, ಅತ್ತೆ, ನಿಂಗವ್ವ, ಆಕೆಯ ತಾಯಿ-ತಂದೆ, ಓರಗಿತ್ತಿಯರಾದ ಪದ್ಮವ್ವನಾಗತಿ, ಬಂಗಾರವ್ವನಾಗತಿ, ಬಂಧು-ಬಳಗದವರು ಕೊನೆಗೆ ಮದಕರಿನಾಯಕನೇ ಪರಿಪರಿಯಾಗಿ ತಿಳಿಸಿಹೇಳಿದರೂ ತಾಯಿಯೊಂದಿಗೆ ಮಕ್ಕಳೂ ಅತ್ತು ಸೊರಗಿ ಕಂಗೆಟ್ಟರೂ, ಆಕೆ ಯಾರೊಂದಿಗೂ ಮಾತಾಡಿರಲಿಲ್ಲ. ಮಲಗಿದೆಡೆಯಿಂದ ಕದಲಿರಲಿಲ್ಲ. ಏಳುವಳು, ಕುಳಿತುಕೊಳ್ಳುವಳು, ಹಣೆ ಹಣೆ ಘಟ್ಟಿಸಿ ಕೆರಳಿ-ಹೊರಳಿ ಹೊಯ್ದಾಡುವಳು, ಬಳಲಿ ಬೆಂಡಾಗಿ ಕೊರಡಿನಂತೆ ಬೀಳುವಳು. ಅವಳೆದುರಿನ ಉತ್ಸವಾಂಬೆಯ ಪೂಜಾಮೂರ್ತಿಯ ಮೈಮೇಲಿನ

ಒಡವೆಗಳ ಹರಳುಗಳೂ ಆಕೆಯ ದುಃಖವನ್ನು ಸಹಿಸಲಾರದೆ ಕರೆದ ಕಣ್ಣೀರ ಹನಿಗಳಂತೆ ಕಾಣುತ್ತಿದ್ದವು. ಆ ಮೂರ್ತಿಯ ಇದಿರು ಹೊತ್ತಿಸಿದ ನಂದಾದೀಪದ ಬೆಳಕಿನ ಕುಡಿಗಳು ಆಕೆಯ ಹೃದಯದಲ್ಲಿ ಹೊತ್ತಿದ ದುಃಖದ ಬೆಂಕಿಯ ನಾಲಗೆಗಳಂತೆ ಕಾಣುತ್ತಿದ್ದವು. ಪೂಜಾಮಂದಿರವನ್ನು ಆವರಿಸಿದ ಅರೆಗತ್ತಲು, ಆಕೆಯ ಹೃದಯದ ನೋವು ಮೋಡವಾಗಿ ಆ ಮಂದಿರವನ್ನು ಕವಿದಂತಿತ್ತು. ಆ ಮಬ್ಬನ್ನು ಮತ್ತಷ್ಟು ಅಸಹನೀಯವಾಗಿ ಮಾಡುವ ಮೂಕರೋದನ.

ಪರಶುರಾಮನಾಯಕ ಹೈದರಾಲಿಯ ಸಂಧಿಯ ಕರಾರಿನ ವಿಷಯ, ಅದಕ್ಕೆ ತಾನು ಒಪ್ಪಿದುದನ್ನು ತಿಳಿಸಿದಾಗ ಸಿದ್ದವ್ವ 'ಬೇಡ' ಎನ್ನಲಿಲ್ಲ, ಸಿಟ್ಟಾಗಲಿಲ್ಲ, ಅವರಿವರನ್ನು ಶಪಿಸಲಿಲ್ಲ. ಆ ಸುದ್ದಿಯನ್ನು ಕೇಳಕೇಳುತ್ತಾ ಆಕೆಯ ನಾಲಗೆ ಸೇದಿಹೋದಂತಾಗಿತ್ತು.

ಆ ಬಳಿಕ ಆಕೆ ಮಾತಾಡಿದ್ದು ಒಂದೇ ಒಂದು ಬಾರಿ –

ಅತ್ತೆ ನಿಂಗವ್ವ –

'ಸಿದ್ದವ್ವ, ನಿನ್ನ ಗಂಡನ್ನ ತೋಫಿನ ಬಾಯಿಗೆ ಕೊಡುತ್ತಿಲ್ಲ, ಹುಲಿಯ ಗವಿಗೆ ಕಳಿಸುತ್ತಿಲ್ಲ, ನವಾಬನ ಜೊತೆಯಲ್ಲಿ ಹೋಗಿ ಇದ್ದು ಬರುತ್ತಾನೆ. ಅಲ್ಲಿ ಆತನ ಜೀವಕ್ಕೆ ಅಪಾಯವಾದರೆ, ನನ್ನ ಮಗ ಹೈದರಾಲಿಯ ತಲೆಯನ್ನೇ ತಂದು ನಿನ್ನ ಕಾಲಮೇಲೆ ಹಾಕುತ್ತಾನೆ'

– ಎಂದು ಸಮಾಧಾನ ಹೇಳಿದಾಗ, ಆಕೆ –

'ಅತ್ತೆವ್ವಾ, ನವಾಬನದಲ್ಲ, ಮತ್ತೆ ಸಾವಿರ ತಲೆ ತಂದುಕೊಟ್ಟಾರು- ನಮ್ಮವರ ತಲೆಯ ಬದಲಿಗೆ. ಅವರು ಅಂಥ ಶೂರರೇ. ಆದರೆ ಸಾವಿರ ಹೆಣ್ಣು ದೇವರ ವಿಗ್ರಹ ತಂದು ನಿಮ್ಮ ಮುಂದಿಟ್ಟರೂ ಉಚ್ಚಂಗಮ್ಮ ಅಂತ ಒಪ್ಪೋತಿರಾ, ಅವ್ವ. ಕಂಡದ್ದಕ್ಕೆಲ್ಲ ಕೈಮುಗಿಯೋದಾದ್ರೆ ಉಚ್ಚಂಗಮ್ಮ ಅಂತ ಯಾಕೆ ಬೇಕು; ಸಾವಿರ ಜನ ಗಂಡಸರಿದ್ದರೂ ಗಂಡ ಇದ್ದ ಹಾಗಾದೀತಾ, ಅತ್ತೆವ್ವಾ ?'

-ಎಂದು ಕೇಳಿದಾಗ ಆ ಅಭೇದ್ಯವಾದ ತರ್ಕಕ್ಕೆ ತಕ್ಕ ಉತ್ತರ ಕೊಡಲಾಗದೆ ಸೋತು, ಆ ಸೋಲೇ ಸಿಟ್ಟಾಗಿ –

'ದಂಡಿನಲ್ಲಿ ದುಡಿಯೋ ಗಂಡಸರ ಪ್ರಾಣ ಶಾಶ್ವತವಾ ? ನಿನ್ನ ಗಂಡನಿಗೆ ಈ ಗತಿ ಬರೋ ಬದಲು ಗುಂಡು ತಗಲಿದ್ರೆ ಏನು ಮಾಡ್ತಿದ್ದಿ?'- ಎಂದು ನಿಂಗವ್ವ ಕೇಳಿದಾಗ –

'ಹಿಂಗೆ ಅಳ್ತಿರಲಿಲ್ಲ, ಅವ್ವ - ಊರಿಗೆ ಅರಶಿನ ಕುಂಕುಮ ಹಂಚಿ, ಹೊಂಡಕ್ಕೆ ಬೀಳ್ತಿದ್ದೆ. ಇನ್ನೂ ಹಾಗೆ ಮಾಡು ಅಂತ ಅವರು ಹೇಳಲಿ - ಹಾಗಾದಮೇಲೆ ಅವರು ಎಲ್ಲಿಗಾದರೂ ಹೋಗಲಿ. ಅದಕ್ಕಾದರೂ ನಿಮ್ಮ ಮಗನನ್ನು ಒಪ್ಪಿಸಿ. ಮತ್ತೆ ಕಣ್ಣಲ್ಲಿ ನೀರು ಹಾಕಿದರೆ, ನನ್ನ ಹಡೆದೋರ

ಮುಖಕ್ಕೆ ಮಸಿ ಬಳೀರಿ. ಆದ್ರೆ ಅವರು ಇದ್ದೂ 'ಇದಾರೊ, ಇಲ್ಲವೋ' ಅಂತ ಹಗಲೂ ಇರುಳೂ ಚಿಂತೆಯ ಕೆಂಡದಲ್ಲಿ ನಾನು ಬೇಯಲಾರೆ'

- ಎಂದು ಸಿದ್ದವ್ವ ಹೇಳಿದಾಗ, ನಿಂಗವ್ವ ಮಾತು ಸೋತು ನಿರುತ್ತರಳಾಗಿದ್ದಳು.

ಆ ಮಾತಿನೊಂದಿಗೆ ಹೊತ್ತಿದ ಉರಿ ಪರಶುರಾಮನಾಯಕ ಹೊರಡುವ ದಿನ ಹತ್ತಿರ ಬಂದರೂ ನಂದಿರಲಿಲ್ಲ –

ಪೂಜಾಮಂದಿರದ ನಂದಾದೀವಿಗೆಯಂತೆ ಉರಿಯುತ್ತಲೇ ಇತ್ತು.

ಹಾಗಿದ್ದ ಸಿದ್ದವ್ವ –

ಆಕೆಯ ಸುತ್ತ ಎಣ್ಣೆ ತೀರುತ್ತಾ ಬಂದು ಮಂಕಾದ ದೀಪದ ಕುಡಿಗಳಂತೆ ಕಂಬನಿಗರೆಯುತ್ತಾ ಕುಳಿತ ಆಕೆಯ ಮಕ್ಕಳು –

ಆ ದೃಶ್ಯವನ್ನು ನಾಲ್ಕಾರು ಬಾರಿ ನೋಡಿದ ಮದಕರಿನಾಯಕನ ಹೃದಯದಲ್ಲಿ ಅಸಹಾಯಕಕ್ರೋಧ ದಹಿಸಿ ಹೊಗೆ ತುಂಬಿ –

"ಇಷ್ಟು ಸಾವಿರ ಜನರನ್ನಾಳುವ ದೊರೆ ನಾನು. ಆದರೆ ಒಬ್ಬ ಹೆಂಗಸಿನ ಕಣ್ಣೀರನ್ನು ಒರೆಸುವ ಶಕ್ತಿ, ಬರಲಿಲ್ಲವಲ್ಲಾ. ನಾನೆಂಥ ನಿರ್ಭಾಗ್ಯ"

- ಎಂದು ತನ್ನನ್ನು ತಾನೇ ಶಪಿಸಿಕೊಂಡ; ಅಷ್ಟೆಲ್ಲಕ್ಕೂ ಕಾರಣವಾದ ತನ್ನ ದುರ್ವಿಧಿಯನ್ನು ನಿಂದಿಸಿದ ; ತಡೆಹಿಡಿದ ದುಃಖ ಆಸ್ಫೋಟನವಾಗುವ ಕಾಲ ಸನ್ನಿಹಿತವಾದಂತೆ –

'ಈ ಹಾಳು ಕಾಲಕ್ಕೇ ಕಾಲುಬಿದ್ದು ಹೋಗಬಾರದೇ ?"

- ಎಂದು ಅಪ್ರತಿಹತವಾಗಿ ಹತ್ತಿರ ಬರುತ್ತಿದ್ದ ಕಾಲವನ್ನು 'ಕಟುಕ, ಕೊಲೆಪಾತಕ' ಎಂದು ಹೀಗಳೆದ.

ಆದರೆ ಕಾಲಕ್ಕೆ ಮದಕರಿನಾಯಕನ ಮಾತನ್ನು ಕೇಳುವ ಕಿವಿಯೂ ಇರಲಿಲ್ಲ ಹೃದಯವೂ ಇರಲಿಲ್ಲ. ಅದು ಹತ್ತಿರವಾಗುತ್ತಾ, ಆಗುತ್ತಾ, ತಾನೂ ಯಾರೊಂದಿಗೂ ಮಾತನಾಡುವುದನ್ನು ಬಿಟ್ಟು, ಮೈ ಸೋಲುವಷ್ಟು ತಣ್ಣೀರಿನಲ್ಲಿ ಮಿಂದು, ಮಡಿಯುಟ್ಟು, ಶಸ್ತ್ರಾಗಾರದಿಂದ ತನ್ನ ಪರಿಘಾಯುಧವನ್ನು ತರಿಸಿ, ಪೂಜಾಮಂದಿರದಲ್ಲಿಟ್ಟು, ಶಕ್ತಿಯನ್ನು ಆವಾಹನೆ ಮಾಡುವಂತೆ ದೇವರ ಬದಲು ಆ ಆಯುಧವನ್ನೇ ಪೂಜಿಸುತ್ತಾ ಕುಳಿತುಬಿಟ್ಟ.

ಅಣ್ಣ ಮದಕರಿನಾಯಕ ಆಯುಧೋಪಾಸನೆಯಲ್ಲಿ ನಿರತನಾಗಿದ್ದಾಗ, ತಮ್ಮ ಪರಶುರಾಮನಾಯಕ ತನ್ನ ಮನೆಯಲ್ಲಿ ಮಿಂದು ಮಡಿಯುಟ್ಟು, ದೇವರನ್ನು ಪೂಜಿಸಿ, ಉಟ್ಟ ಮಡಿಯನ್ನು ಬದಲಿಸಿ, ಪೂಜಾಗೃಹದಲ್ಲೇ ಮಲಗಿದ್ದ ಮಡದಿಯನ್ನು ಹೂವನ್ನು ಎತ್ತುವಷ್ಟು ಮೃದುವಾಗಿ ಎತ್ತಿ, ಎದೆಗಪ್ಪಿಕೊಂಡು, ಆಕೆಯ ಕಣ್ಣೀರಿನಿಂದ ಕರೆಗಟ್ಟಿದ ಕಪೋಲ, ಬತ್ತಿದ ತುಟಿ,

ಕಾಂತಿಹೀನವಾದ ಕಣ್ಣುಗಳು, ಎಣ್ಣೆ-ಬಾಚಣಿಗೆಯನ್ನು ಕಾಣದೆ ಕೆದರಿದ ಮುಂಗೂದಲು. ತನ್ನ ದೇಹಸ್ಪರ್ಶದಿಂದ ಅಪ್ರಯತ್ನವಾಗಿ ನಿಮಿರಿದ ವಕ್ಷಸ್ಥಲ, ತನ್ನನ್ನು ಬಳಸಿದ ತೋಳುಗಳು, ಆ ಕೈಯ ಬೆರಳುಬೆರಳುಗಳನ್ನೂ ಮುತ್ತಿಟ್ಟು, ದೇವರ ಮುಂದಿದ್ದ ಕುಂಕುಮದ ಭರಣಿಯಿಂದ ತಾನೇ ಕುಂಕುಮವನ್ನು ತೆಗೆದು ಆಕೆಯ ಹಣೆಗಿಟ್ಟು, ಏನೊಂದೂ ಮಾತನಾಡದೆ, ತನ್ನ ಮುಖವನ್ನೇ ಕಂಬನಿ ಜಿನುಗುವ ಕೆಣ್ಣುಗಳಿಂದ ನೋಡುತ್ತಾ, ಬಿಡಲಾರೆನೆಂಬಂತೆ ತಬ್ಬಿದ ಮಡದಿಯ ನೆತ್ತಿಯನ್ನು ನೇವರಿಸಿ-

"ಹೆದರಬೇಡ, ಕಂಗಾಲಾಗಬೇಡ, ನಾನಿಟ್ಟ ಕುಂಕುಮವನ್ನು ಅಳಿಸುವ ಶಕ್ತಿ ನವಾಬನಿಗಿರಲಿ, ದೇವರಿಗೂ ಬರುವುದಿಲ್ಲ - ನಾನು ಹೇಳದೆ. ಹುಲಿಯ ಹಾಗೆ ಹೋಗಿ ನವಾಬನ ಸೊಕ್ಕು ಮುರಿದು, ಪಾರಿವಾಳದ ಹಾಗೆ ಹಾರಿಬರುತ್ತೇನೆ. ನಿನ್ನ ಮುಂಗೈಯ ಮೇಲೆ ಆಡಲು. ಆದರೆ ನನಗದು ಸಾಧ್ಯವಾಗಬೇಕಾದರೆ ನಿನ್ನ ಕಣ್ಣಲ್ಲಿ ನಗು ಮಿಂಚಬೇಕು. ನೋಡು, ನವಾಬನ ಕಠಾರಿಗಿಂತ ಹರಿತ- ನಿನ್ನ ಕಣ್ಣೀರು. ನಿನ್ನ ಬಾಡಿದ ಮುಖ ನನ್ನ ಶಕ್ತಿಯನ್ನೆಲ್ಲಾ ಹಿಂಡಿ ಬಿಡುತ್ತದೆ – ಕಲ್ಲುಗಾಣದಂತೆ; ಆದ್ದರಿಂದ ಅಳಬೇಡ, ಸೋತ ಮುಖ ಮಾಡಬೇಡ. ಶ್ರೀರಂಗಪಟ್ಟಣದಲ್ಲಿ ದಿನದಿನವೂ ಇಂಥ ಮುಖವನ್ನು ನೆನಪಿಸಿಕೊಳ್ಳಲೇ ನಾನು ? 'ನಾಯಕರ ಹೆಣ್ಣು ನಾಗರಹಾವು' ಎನ್ನುತ್ತಾರೆ. ನೀನು ಹಾವಲ್ಲ, ಹೂವಿಗಿಂತ ಮೃದುವಾಗಿಬಿಟ್ಟೆ. ಇದು ಬೇಡ. ಹುಡುಗರನ್ನು ನಗುನಗುತ್ತಾ, ಆಟವಾಡಿಸಿ ಬೆಳಸು. ನೀನೂ ಅಷ್ಟೆ, ನಾನು ಮತ್ತೆ ಬಂದಾಗ ಹಸೆಗೆ ಬಂದ ದಿನ ಇದ್ದೆಯಲ್ಲಾ ಹಾಗಿರಬೇಕು. ಇಲ್ಲವಾದರೆ ನಿನ್ನ ಗುರುತೇ ನನಗೆ ಸಿಕ್ಕದೆ ಹೋದೀತು, ನಾನು ಬರುತ್ತೇನೆ"

-ಎಂದು ಮತ್ತೊಮ್ಮೆ ಆಕೆಯನ್ನು ಬರಸೆಳೆದು ಮುತ್ತಿಟ್ಟು. ಮಾತನಾಡದೆ ಕಾಲಿಗೆರಗಿದ ಮಡದಿಯನ್ನು ಹರಸಿ, ಮಕ್ಕಳನ್ನು ಸಂತೈಸಿ, ಅಣ್ಣನನ್ನು ಕಾಣಲು ಅರಮನೆಯತ್ತ ಹೊರಟ – ಮತ್ತೆ ಮನೆಯ ಕಡೆ ತಿರುಗಿ ನೋಡದೆ.

ಅರಮನೆಗೆ ಬಂದಾಗ –

ಕಂಬನಿಗರೆಯುತ್ತಿದ್ದ ಮಡದಿ, ಮಕ್ಕಳನ್ನು ಬಿಟ್ಟು ಬಂದ ತನ್ನನ್ನು ಯಾರಾದರೂ ಸಂತೈಸಬೇಕು ಎಂದು ಅವನ ಹೃದಯ ಬಯಸುತ್ತಿತ್ತು.

ಆದರೆ - ಅಲ್ಲಿಯೂ ಅವನನ್ನು ಸಂತೈಸುವವರಿಲ್ಲ ; ಆತನೇ ಎಲ್ಲರಿಗೂ ನಗುನಗುತ್ತಾ ಸಂತೈಸಬೇಕಾಯಿತು.

ತಾಯಿ ನಿಂಗವ್ವ, ಅತ್ತಿಗೆಯರಾದ ಪದ್ಮವ್ವನಾಗತಿ, ಬಂಗಾರವ್ವನಾಗತಿಯರಿಗೆ ಸಮಾಧಾನ ಹೇಳಿ, 'ಚಿಕ್ಕಪ್ಪಾಜೀ' ಎಂದು ಕಣ್ಣುತೇವ ಮಾಡಿಕೊಂಡು ಬಂದು ತಬ್ಬಿದ ಕುಮಾರ ಭರಮಣ್ಣನಾಯಕನನ್ನು ತಬ್ಬಿಕೊಂಡು –

"ಸಿಟ್ಟು ಬಂದಾಗ, ನೋವಾದಾಗ ಹುಲಿಯಮರಿ ಅಳುವುದಿಲ್ಲ. ಕಾಡು ನಡುಗುವಂತೆ ಘರ್ಜಿಸುತ್ತದೆ. ಅಂಥ ಹುಲಿಯಮರಿಯಾಗದೆ ಹೆಂಗಸರ ಹಾಗೆ ಕಣ್ಣೀರಿಡುತ್ತೀಯಲ್ಲಾ? ಲಗ್ಗೆಯ ಮಗ್ಗಿ ಹೇಳುತ್ತಿದ್ದ ಸಿಪಾಯಿ, ಇಷ್ಟು ಬೇಗ ಮರೆತುಬಿಟ್ಟೆಯಾ - ಬಂಗಾರವ್ವ ಅತ್ತಿಗೆಯವರು ಕಲಿಸಿದ ಪಾಠವನ್ನು? ನಿನ್ನ ಇಂಥ ಮುಖ ನೋಡಿದರೆ ನಿನ್ನ ಅಪ್ಪಾಜಿ 'ಇವನು ನನ್ನ ಮಗನಲ್ಲ' ಎನ್ನುತ್ತಾರೆ ಬಿಡು"

– ಎಂದು ಹೇಳಿ ಅವನ ಮೈದಡವಿ, ತಾಯಿಯನ್ನು –

"ಅಣ್ಣ ಎಲ್ಲಿದ್ದಾರೆ, ಆವ್ವಾ ?"

- ಎಂದು ಕೇಳಿದ ಪರಶುರಾಮನಾಯಕ.

"ಬೆಳಗಿನಿಂದ ದೇವರಮನೆ ಸೇರಿಬಿಟ್ಟಿದಾನೆ" – ಎಂದಳು ನಿಂಗವ್ವ.

"ಏನು ವರ ಕೇಳ್ತಿದಾರೊ - ಅಣ್ಣನವರು ?"

-ಎಂದು ದೇವರಮನೆಯತ್ತಲೇ ನಡೆದು, ಕೆಂಪು ರೇಶಿಮೆಯ ಮಗುಟ, ಅದೇ ಬಣ್ಣದ ವಸ್ತ್ರ ಹೊದ್ದು ದೇವರ ಬದಲು ಪರಿಘಾಯುಧವನ್ನು ಪೂಜಿಸುತ್ತಿದ್ದ ಅಣ್ಣನನ್ನು ಕಂಡು, ಬೆರಗಾಗಿ ಪರಶುರಾಮನಾಯಕ ಕೇಳಿದ –

"ಇದೇನು ಹೊಸ ಪೂಜೆ, ಮದಕೇರಣ್ಣ ?"

ತಮ್ಮನ ಧ್ವನಿಯನ್ನು ಕೇಳಿ, ತಿರುಗಿ ನೋಡಿ, ಆತನಾಡಿದ ಮಾತನ್ನು ಕೇಳಿಸಿಕೊಂಡು, ಮೇಲೆದ್ದ ಮದಕರಿನಾಯಕ ಹೇಳಿದ –

"ಇವತ್ತಿನಿಂದ ಇದೇ ನನ್ನ ದೇವರು, ಪರಶುರಾಮಣ್ಣ."

"ಏಕೆ – ಇಷ್ಟು ದಿನ ಪೂಜೆಮಾಡಿದ ದೇವರುಗಳು ಬೇಡವಾದವೇ ?"

-ಚಕಿತನಾಗಿ ಕೇಳಿದ ಪರಶುರಾಮನಾಯಕ.

"ಅವು ಹರಸೋ ದೇವರುಗಳು. ಇದು ನವಾಬನ ತಲೆ ಕತ್ತರಿಸೋ ದೇವರು. ಇವತ್ತಿನಿಂದ ನವಾಬನ ಕಥೆ ಕೊನೆಯಾಗುವವರೆಗೆ ಇದಕ್ಕೆ ಪೂಜೆ"

-ಎಂದ ಮದಕರಿನಾಯಕ ದೃಢನಿರ್ಧಾರದ ಧ್ವನಿಯಲ್ಲಿ.

"ಹಾಗಿದ್ದರೆ ಹಳೆ ಮಾತು ಮರೆತುಬಿಟ್ಟೆಯಾ ?"

"ಯಾವುದು ?"

"ಅರಮನೆಯ ಮುಂದೆ ಕಲ್ಲಿನ ಬೋನಿನಲ್ಲಿ ನವಾಬನನ್ನು ಹಿಡಿದು ಕೊಡುವುದು. ಆ ಯೋಚನೆ ಬಿಡಬೇಡಣ್ಣಾ- ನಾನು ಹೈದರಾಲಿಯನ್ನು ಹಿಡಿದು ತರುತ್ತೇನೆ : ನೀನು ಅವನನ್ನು ಕಲ್ಲಿನ ಪಂಜರದಲ್ಲಿ ಸರಪಳಿಗೆ ಕಟ್ಟಿಹಾಕು. ಅವನಿಗೆ ಒಂದು ದಿನ, ಒಂದು ಗಳಿಗೆಯ ಸಾವು ಈ ದುರ್ಗ ಪಟ್ಟ ಕಷ್ಟಕ್ಕೆ ಪರಿಹಾರವಲ್ಲ"

-ಎಂದ ಪರಶುರಾಮನಾಯಕ, ಸೇಡಿನ ಕಿಚ್ಚೇ ತನ್ನೊಡಲಿಂದ ನುಡಿಯಾಗಿ ಹೊರ ಬಂದಂತೆ.

ಸುತ್ತಲೂ ಆಪತ್ತಿನ ಮೋಡ ಕಟ್ಟುತ್ತಿರುವ ಸಮಯದಲ್ಲೂ, ವಿಚಲಿತವಾಗದ ತಮ್ಮನ ಆತ್ಮವಿಶ್ವಾಸವನ್ನು ಕಂಡು, ಆ ತಮ್ಮನ ಬಗ್ಗೆ ಹೆಮ್ಮೆ ಮೂಡಿ ಬಂದು –

"ಆದೂ ಆಗಲಿ- ದುರ್ಗದ ಜನಕ್ಕಷ್ಟು ಖುಷಿಯಾಗಲಿ, ಆಮೇಲೆ ಈ ಆಯುಧದ ಕೆಲಸ. ಒಂದೇಟಿಗೆ, ಒಂದೇ ಒಂದು ಏಟಿಗೆ ನವಾಬನ ತಲೆ ನುಚ್ಚುನೂರಾಗಿ, ನಾಲ್ಕು ದಿಕ್ಕುಗಳಿಗೂ ಚೆಲ್ಲಾಡಬೇಕು – ಅದು ನನ್ನ ಬಯಕೆ. ಅದನ್ನು ಆಡಿಯೇನು ಫಲ - ಕಾಲ ಬರಲಿ"

-ಎಂದು ಔಡುಗಚ್ಚಿ ಹೇಳಿದ ಮದಕರಿನಾಯಕ.

ಅವರಿಬ್ಬರೂ ಆ ಮಾತಾಡುತ್ತಿರುವಾಗಲೇ, ದೂರದಲ್ಲೆಲ್ಲೋ ತೋಫಿನ ಸದ್ದು ಕೇಳಿ, ಕಹಳೆಬತೇರಿಯ ಮೇಲಿನಿಂದ ಆ ಸದ್ದಿಗೆ ಉತ್ತರವೆಂಬಂತೆ ಕಹಳೆ ಕೂಗಿತು.

ಆ ಸದ್ದು –

'ಹೈದರಾಲಿಯ ಸೇನೆ ಎರಡು ದಿನದ ಮಜಲು ಮುಟ್ಟಿತು' – ಎಂಬುದಕ್ಕೆ ಸಂಕೇತ.

ಆ ಸದ್ದನ್ನು ಕೇಳುತ್ತಿದ್ದಂತೆಯೇ ಪರಶುರಾಮನಾಯಕ ಚುರುಕಾಗಿ-

"ಅಣ್ಣ, ಇನ್ನು ತಡವಾದರೆ ಜನ 'ನಾವು ಅಳುತ್ತಾ ಕೂತಿದ್ದೇವೆ' ಎಂದು ತಿಳಿದಾರು. ನೀನು ಉಡುಪು ಬದಲಿಸು. ನಾನು ಅಪ್ಪಾಜಿಯವರಿಗೆ ನಮಸ್ಕರಿಸಿ ಬರುತ್ತೇನೆ"

-ಎಂದವನೇ, ತನ್ನ ತಂದೆ ಮಲಗಿದ್ದ ಕೊಠಡಿಯತ್ತ ಹೋಗಿ, ಮಲಗಿದ್ದ ಆತನನ್ನು ಮೃದುವಾಗಿ ಮುಟ್ಟಿ, ಕೇಳಿದ –

"ಅಪ್ಪಾಜಿ – ಎಚ್ಚರವಾಗಿದ್ದೀರಾ ?"

"ಎಚ್ಚರವಾಗೋಕೆ, ಮಲಗಿದ್ದು ಯಾವಾಗ ? ನಿನ್ನೆ ರಾತ್ರಿ ವೈದ್ಯರಿಗೆ 'ನಿದ್ರೆಗುಳಿಗೆ ಬೇಡ ನೋವು ತಗ್ಗಿಸೋಕೆ ಮದ್ದು ಕೊಡಿ' ಎಂದು ಹೇಳಿ, ನೀನು ಬರೋದನ್ನೇ ಕಾಯುತ್ತಿದ್ದೆ"

-ಎಂದ ಮಲಗಿದ್ದ ಭರಮಣ್ಣನಾಯಕ, ಏಳಲು ಯತ್ನಿಸುತ್ತಾ.

"ಹಾಗೇ ಮಲಗಿಕೊಳ್ಳಿ, ಅಪ್ಪಾಜಿ - ಆಯಾಸ ಮಾಡಿಕೊಳ್ಳಬೇಡಿ. ಆಶೀರ್ವಾದ ಮಾಡಿ, ಹೋಗಿ ಬರುತ್ತೇನೆ"

-ಎಂದು ಹೇಳಿ, ತಂದೆಯ ಪಾದಗಳನ್ನು ಮುಟ್ಟಿ ನಮಸ್ಕರಿಸಿದ ಪರಶುರಾಮನಾಯಕ.

ಒಂದು ಕ್ಷಣಕಾಲ ಭರಮಣ್ಣನಾಯಕ ಏನೂ ಮಾತಾಡಲಿಲ್ಲ. ಕ್ಷಣಕಾಲ, ಗಂಟಲಿಗೆ ಬಂದ ಏನನ್ನೋ ನುಂಗಿಕೊಳ್ಳುವಂತೆ ಸುಮ್ಮನಿದ್ದು, ಬಳಿಕ –

"ದುರ್ಗದ ಮರ್ಯಾದೆ ನಿನ್ನ ಕೈಲಿದೆ, ಅಪ್ಪಯ್ಯ. ನವಾಬ ನಗದ ಹಾಗೆ ಇರಬೇಕು. ಅವನು, ಅವನ ಮಗನಿಗೆ ನಿನ್ನನ್ನು ತೋರಿಸಿ, 'ಗಂಡಸುತನದ ಪಾಠ ಇವನಿಂದ ಕಲಿತುಕೋ' ಅನ್ನೋ ಹಾಗಿರಬೇಕು. ಹಾಗಿದ್ದು ಬಾ"

-ಎಂದು ಹೇಳಿ, ನಡುಗುತ್ತಿದ್ದ ಕೈಬೆರಳುಗಳಿಂದ ಮಗನ ನೆತ್ತಿಯನ್ನು ನೇವರಿಸಿದ.

"ನಿಮಗೆ ಕೆಟ್ಟ ಹೆಸರು ತರೋಲ್ಲ, ಅಪ್ಪಾಜಿ."

-ಎಂದಷ್ಟೇ ಹೇಳಿ, ಮತ್ತೊಮ್ಮೆ ತಂದೆಯ ಕಾಲುಗಳನ್ನು ಮುಟ್ಟಿ, ಕಣ್ಣಿಗೆ ಒತ್ತಿಕೊಂಡು –

"ಬರ್ತೀನಿ, ಅಪ್ಪಾಜಿ"

-ಎಂದು ಹೇಳಿ, ಹೊರಹೊರಟ ಪರಶುರಾಮನಾಯಕ.

ಬೆನ್ನ ಹಿಂದೆ ಗೊರಗೊರ ಸದ್ದಾಯಿತು. ಗಂಟಲು ತುಂಬಿದ ಕಫದ್ದೋ, ಮತ್ತೇತರದೊ ?

ಆ ಬಗ್ಗೆ ಪರಶುರಾಮನಾಯಕ ಚಿಂತಿಸುವ ಯತ್ನ ಮಾಡಲಿಲ್ಲ.

ಅವಸರವಸರವಾಗಿ ತಂದೆಯ ಕೋಣೆಯಿಂದ ಹೊರಬಂದು, ತನ್ನ ತಾಯಿ, ಅತ್ತಿಗೆಯರಿಗೆ ವಂದಿಸಿ, ಅವರ ಆಶೀರ್ವಾದ ಪಡೆದು, ಆ ವೇಳೆಗೆ ಉಡುಪು ಧರಿಸಿ ಬಂದ ಮದಕರಿನಾಯಕನನ್ನು ಬಿಗಿದಪ್ಪಿ, ನಮಸ್ಕರಿಸಿ. ತನ್ನಣ್ಣನಿಗಿಂತ ಮುಂದಾಗಿ, ಪರಶುರಾಮನಾಯಕ ಅರಮನೆಯಿಂದ ಹೊರನಡೆದ.

* * *

ಹಿಂದೆ ಮುಂದೆ ಅಂಗರಕ್ಷಕರ ಪಡೆಯಲ್ಲಿ, ರಾಜಲಾಂಛನಗಳನ್ನು ಹಿಡಿದವರೊಡನೆ, ಮುಂದೆ ಹನುಮದ್ಗರುಡಧ್ವಜ ಹಿಡಿದವರು ನಡೆಯುತ್ತಿರಲು –

'ರಾಜಗೋಪಾಲ'ವೆಂಬ ಶ್ವೇತಾಶ್ವವನ್ನೇರಿದ ಮದಕರಿನಾಯಕ, ಕೃಷ್ಣವರ್ಣದ ತನ್ನ ಕುದುರೆ 'ಭವಾನಿ'ಯನ್ನೇರಿದ ಪರಶುರಾಮನಾಯಕ –

ಇಬ್ಬದಿಯಲ್ಲೂ ಕಿಕ್ಕಿರಿದು ನೋಡುವ ಜನ –

ಪ್ರೀತಿ, ಅಭಿಮಾನ, ಗೌರವ, ಕ್ರೋಧ, ಪ್ರತೀಕಾರ ತೃಷೆಗಳು ತುಂಬಿ ಕೈಮುಗಿಯುತ್ತಿದ್ದ ದುರ್ಗದ ಗಂಡಸರು; ಕಿಟಕಿ, ಬಾಗಿಲು, ಕಂಭಗಳ ಹಿಂದೆ ತುಟಿಯಲ್ಲಿ ಸೆರಗುಕಚ್ಚಿ ಕಂಬನಿಗರೆವ ಹೆಂಗಸರು –

ಎಲ್ಲರನ್ನೂ ನೋಡಿಯೂ ನೋಡದಂತೆ –

ಮಾರ್ಗಮಧ್ಯದಲ್ಲಿ ಶ್ರೀಉತ್ಸವಾಂಬೆಯ ಮಂಗಳಾರತಿ, ಭಂಡಾರ, ಪ್ರಸಾದ ಸ್ವೀಕರಿಸಿ, ರಂಗಯ್ಯನ ಬಾಗಿಲತ್ತ ನಡೆದರು.

ರಂಗಯ್ಯನ ಬಾಗಿಲ ಬಳಿ ಬಂದಾಗ –

ಇಬ್ಬದಿಯಲ್ಲೂ ಸಮವಸ್ತ್ರಧರಿಸಿ, ಅಶ್ವಾರೋಹಿಗಳಾಗಿ ನಿಂತ ಸೈನಿಕರು 'ಕತ್ತಿಸಲಾಮಿ'ನ ಗೌರವವನ್ನು ನೀಡುತ್ತಿರಲು, ಗಡಗಡಿಸುತ್ತಾ ತೆರೆದ ಬಾಗಿಲನ್ನು ದಾಟಿ, ಕ್ಷಣಕಾಲ ಸೋದರರಿಬ್ಬರೂ ಒಬ್ಬರನ್ನೊಬ್ಬರು ನೋಡುತ್ತಿದ್ದು ಆಲಂಗಿಸಿದರು.

"ಹೋಗಿಬರುತ್ತೇನೆ, ಅಣ್ಣ" - ಎಂದ ಪರಶುರಾಮನಾಯಕ.

"ಹೋಗಿ ಬಾ, ಪರಶುರಾಮಣ್ಣ, ನಾನು ಪೂಜಿಸಿದ ಪರಿಘಾಯುಧ ನಿನ್ನ ರಕ್ಷಣೆಗಿದೆ ಎಂಬುದನ್ನು ಮರೆಯಬೇಡ" - ಎಂದು ಹೇಳಿದ ಮದಕರಿನಾಯಕ.

"ನಿಮ್ಮ ಪರಿಘಾಯುಧವೂ ಇದೆ, ಇದೂ ನನ್ನ ಒಡನಾಡಿಯಾಗಿರುತ್ತದೆ, ಮದಕೇರಣ್ಣ"

- ಎಂದು ಬಲದೋಳನ್ನು ಕೊಡವಿ, ನೇರವಾಗಿ ಕೈಗಿಳಿದ ಲಕಲಕಿಸುವ ಕಠಾರಿಯನ್ನು ತೋರುತ್ತಾ ಹೇಳಿದ ಪರಶುರಾಮನಾಯಕ.

ತಮ್ಮನ ಕೈಯಲ್ಲಿದ್ದ ಕಠಾರಿಯನ್ನು ಬಿಸಲಿಗೆ ಹಿಡಿದು ನೋಡಿ, ಅದರ ಅಲಗಿನ ಹರಿತವನ್ನು ಪರೀಕ್ಷಿಸುವವನಂತೆ, ಕೈಬೆರಳಾಡಿಸಿದ – ಅದರ ಅಲುಗಿನ ಮೇಲೆ, ಕೈಬೆರಳು ಕಠಾರಿಯ ಅಲಗನ್ನು ಸೋಕುತ್ತಿದ್ದಂತೆಯೇ ಮದಕರಿನಾಯಕನ ಬೆರಳಿಂದ ರಕ್ತ ಚಿಮ್ಮಿತು.

"ಅಣ್ಣಾ - !"

-ಎಂದ ಪರಶುರಾಮನಾಯಕ, ಅಣ್ಣನ ಕೈಯಲ್ಲಿ ರಕ್ತವನ್ನು ಕಂಡು ಮಿಡುಕುತ್ತಾ, ಕಠಾರಿಯನ್ನು ಹಿಂತೆಗೆದುಕೊಂಡು.

"ಅನಾಹುತವೇನೂ ಆಗಲಿಲ್ಲ. ಇದು ನಿನಗೆ ರಕ್ಷೆಯಾಗಿರಲಿ"

- ಎಂದು ಬೆರಳ ರಕ್ತದಿಂದ ತಮ್ಮನಿಗೆ ತಿಲಕವಿಟ್ಟು –

"ನೀನು ಈಗ ವಿಶ್ರಾಂತಿ ತೆಗೆದುಕೋ, ನಾವು ಕೋಟೆಯ ಮೇಲಿರುತ್ತೇವೆ. ನಾವು ಸದಾ ನಿನ್ನ ಬೆನ್ನ ಹಿಂದಿರುತ್ತೇವೆ ಎಂಬುದನ್ನು ಮರೆಯಬೇಡ"

- ಎಂದು ಹೇಳಿದ ಮದಕರಿನಾಯಕ, ಕರುವನ್ನಗಲುವ ಹಸುವಿನಂತೆ, ಭಾರವಾದ ಹೃದಯದಿಂದ ಹಿಂದೆ ನಡೆದು, ಕೋಟೆಯನ್ನೇರಿ, ತಮ್ಮನನ್ನು ಕರೆದೊಯ್ಯಲು ಬರುವ ನವಾಬನ ಸೇನೆಯನ್ನೇ ಇದಿರು ನೋಡುತ್ತಾ ನಿಂತ.

* * *

ಮದಕರಿನಾಯಕನ ಕಣ್ಣು ಪೂರ್ವಾಭಿಮುಖವಾಗಿ ನೋಡುತ್ತಿತ್ತು-

ಅಷ್ಟು ದೂರದಲ್ಲಿ ಕುದುರೆಗಳ ಗೊರಸಿನ ಧೂಳಿನ ಮೋಡದ ಮಧ್ಯೆ, ಹೊಳೆಯುತ್ತಿರುವ ಪಲ್ಲಕ್ಕಿ ಹೊನ್ನಕಳಶ ಕಾಣಿಸಿತು.

ಕ್ಷಣಕ್ಷಣಕ್ಕೂ ಹತ್ತಿರವಾಗುತ್ತಿದ್ದ ಅದನ್ನು ಮದಕರಿನಾಯಕ ನೋಡುತ್ತಿರುವಾಗಲೇ-

ತನ್ನ ತಮ್ಮನಿಂದ ದೂರವಾಗುವ ಕಾಲವೂ ಹತ್ತಿರವಾಗುತ್ತಿದೆ ಎಂದರಿವಾಗುತ್ತಿರುವಾಗಲೇ –

ಅವನ ಬೆನ್ನ ಹಿಂದೆ –

“ಮಾಸ್ವಾಮೀ....ಮಾಸ್ವಾಮೀ....”

-ಎಂದು ಉದ್ರಿಕ್ತ ಧ್ವನಿಯಲ್ಲಿ ಕೂಗಿದುದು ಕೇಳಿಸಿ, ತಟಕ್ಕನೆ ತಿರುಗಿ ನೋಡಿದ –

ಉತ್ಸವಾಂಬಾ ದೇವಾಲಯದತ್ತಣಿಂದ ಕುದುರೆಗಳೆರಡು ನಾಗಾಲೋಟದಲ್ಲಿ ಧಾವಿಸಿ ಬರುತ್ತಿರುವುದು ಕಂಡು, ’ಇದೇನು ?’ ಎಂದು ಆತ ಯೋಚಿಸುತ್ತಿರುವಷ್ಟರಲ್ಲೇ, ಕುದುರೆಗಳು ಹತ್ತಿರವಾಗಿ, ಕುದುರೆಯ ಮೇಲಿದ್ದವರು ಕುದುರೆಗಳಿಂದ ಧುಮುಕಿ, ಹಾರುಗಾಲುಗಳಿಂದ ಪಾವಟಿಗೆಗಳನ್ನೇರುತ್ತಾ ನಾಯಕರತ್ತ ನುಗ್ಗಿದರು.

ಆ ಇಬ್ಬರಲ್ಲಿ ಒಬ್ಬಾತನ ಗುರುತು ಮದಕರಿನಾಯಕನಿಗೆ ತಟಕ್ಕನೆ ಸಿಕ್ಕಿತು - ಪೇಶ್ವೆಯವರ ವಕೀಲ ಪುರುಷೋತ್ತಮರಾಯ. ಮತ್ತೊಬ್ಬ ಯಾರೋ ಹೊಸಬ.

ನಾಯಕರ ಮುಖ ಕಾಣುತ್ತಿದ್ದಂತೆಯೇ ಪುರುಷೋತ್ತಮರಾಯ-

“ಮಹಾಪ್ರಭು, ಪೇಶ್ವೆಗಳಿಂದ ಪತ್ರ ಬಂದಿದೆ. ಸೇನೆ ಸಹಾಯಕ್ಕೆ ಬರುತ್ತಿದೆ. ದಂಡು ಈಗಾಗಲೇ ಕೃಷ್ಣಾನದಿಯನ್ನು ದಾಟಿದೆ. ಪ್ರಧಾನಿಗಳನ್ನು ನವಾಬರಿಗೆ ಒಪ್ಪಿಸಬೇಡಿ. ಹಿಂದಕ್ಕೆ ಕರೆಸಿ”

- ಎಂದು ಏದುಸಿರಿಡುತ್ತಾ ಹೇಳಿ, ತನ್ನ ಕೈಯಲ್ಲಿದ್ದ ಪತ್ರವನ್ನು ಮದಕರಿನಾಯಕನ ಕೈಗೆ ಕೊಟ್ಟ,

ಆ ಮಾತನ್ನು ಕೇಳುತ್ತಿದ್ದ ಹಾಗೇ, ಮದಕರಿನಾಯಕ ಓಲೆಯನ್ನು ಕೈಯಲ್ಲಿ ಹಿಡಿದೇ, ಕೋಟೆಯ ಕೆಳಗಿದ್ದವರಿಗೆ-

“ಕೂಡಲೇ ಪ್ರಧಾನಿಗಳನ್ನು ಒಳಗೆ ಕರೆತಂದು ಕೋಟೆಬಾಗಿಲು ಹಾಕಿಸಿ”

-ಎಂದು ಉಕ್ಕೇರುತ್ತಿದ್ದ ಉತ್ಸಾಹದಿಂದ ಕೂಗಿ ಹೇಳಿ, ತನ್ನ ಬಳಿಯಲ್ಲಿದ್ದವರಿಗೆ –

“ಆ ಸೇನೆ ಕೋಟೆಯ ಬಳಿ ಬರಲು ಬಿಡದ ಹಾಗೆ ತೋಪು ಹಾರಿಸಿ”

- ಎಂದಪ್ಪಣೆ ಮಾಡಿ –

"ನೀವೀಗ ಹೇಳಿದ ಸಂತೋಷದ ಸುದ್ದಿಗೆ, ಈ ಸುದ್ದಿ ತಂದವರಿಗೆ ಒಂದೊಂದು ಅಕ್ಷರಕ್ಕೆ ನೂರು ವರಹ ಕೊಡುತ್ತೇವೆ" - ಎಂದು ಹೇಳಿದ.

ಆ ಮಾತು ಕೇಳುತ್ತಿದ್ದಹಾಗೆ ಕೋಟೆಯ ಬಾಗಿಲವರು, ಕೋಟೆಯ ಮುಂದಿನ ಡೇರೆಯಲ್ಲಿ ಕುಳಿತಿದ್ದ ಪರಶುರಾಮನಾಯಕನಿಗೆ ಸುದ್ದಿ ತಿಳಿಸಿ, ಆತನೂ, ಆತನೊಂದಿಗೆ ಇದ್ದವರೂ ಕೋಟೆಯೊಳಗೆ ಬರುತ್ತಿದ್ದ ಹಾಗೇ, ಇಪ್ಪತ್ತಾಳುಗಳು ಕೋಟೆ ನಡುಗುವಷ್ಟು ಸದ್ದಿನೊಂದಿಗೆ, ತೆರೆದ್ದಿದ ಕೋಟೆಬಾಗಿಲುಗಳನ್ನು ಮುಚ್ಚಿ, ಲಾಳಮುಂಡಿಗೆಗಳನ್ನು ಎಳೆದು, ಬಾಗಿಲನ್ನು ಬಿಗಿ ಮಾಡಿದರು.

ಬಾಗಿಲು ಮುಚ್ಚುತ್ತಿದ್ದಂತೆಯೇ, ಕೋಟೆಯ ಬಳಿಯ ಬತೇರಿಯ ಮೇಲಿದ್ದ ತೋಫಿಗೆ ಗೋಲಂದಾಜರು ಕೊಳ್ಳಿ ಇಟ್ಟರು.

ದುರ್ಗದತ್ತ ಬರುತ್ತಿದ್ದ ನವಾಬರ ಸೈನಿಕರು ಆ ತೋಫಿನ ಸದ್ದು ಕೇಳಿ, ಅದು ಕರೆದ ಅನಿರೀಕ್ಷಿತ ಬೆಂಕಿಯ ಮಳೆಗೆ ಸಿಕ್ಕು ಬೆದರಿ, ಕವಣೆ ಕಲ್ಲೇಟು ಬಿದ್ದ ಹಕ್ಕಿಗಳ ಹಿಂಡಿನಂತೆ ಚೆದರಿ ಚೆಲ್ಲಾಪಿಲ್ಲಿಯಾಗಿ ತಮ್ಮ ಪಾಳಯದತ್ತ ಓಡಿದರು.

ಅತ್ಯಂತ ಅನಿರೀಕ್ಷಿತವಾಗಿ ನಡೆದ ಆ ಘಟನೆಗಳ ಅರ್ಥ ತಿಳಿಯದೆ 'ಏನಾಯಿತೋ' ಎಂದು ತಿಳಿಯಲು ಪರಶುರಾಮನಾಯಕ, ಅಣ್ಣನಿದ್ದ ಕೋಟೆಯ ಮೇಲ್ಭಾಗಕ್ಕೆ ಓಡಿ –

"ಅಣ್ಣಾ – ಏನಾಯಿತು ?"

-ಎಂದು ಏದುಸಿರಿಡುತ್ತಾ ಕೇಳಿದ.

"ಉತ್ಸವಾಂಬೆಯ ಕೃಪೆ, ಪರಶುರಾಮಣ್ಣ. ನೀನು ನವಾಬರ ಒತ್ತೆಯಾಳಾಗುವ ಆವಶ್ಯಕತೆ ಇಲ್ಲ. ಮರಾಠರ ಸೇನೆ ನಮ್ಮ ಸಹಾಯಕ್ಕೆ ಬರುತ್ತಿದೆ"

- ಎಂದು ಹೇಳಿ, ತನ್ನ ಕೈಯಲ್ಲಿದ್ದ ಓಲೆಯನ್ನು ಪರಶುರಾಮನಾಯಕನ ಕೈಗೆ ಕೊಟ್ಟ, ಮದಕರಿನಾಯಕ.

ಆತುರಾತುರವಾಗಿ ಪರಶುರಾಮನಾಯಕ ಆ ಪತ್ರವನ್ನು ಓದಿಕೊಂಡ.

"ಗಟ್ಟಿಯಾಗಿ ಓದು" – ಎಂದು ಆತುರ ಮಾಡಿದ ಮದಕರಿನಾಯಕ.

ಪರಶುರಾಮನಾಯಕ ಆರಂಭದ ಒಕ್ಕಣೆಗಳನ್ನು ಬಿಟ್ಟು, ಮುಖ್ಯಭಾಗಗಳನ್ನು ಓದಿ ಹೇಳಿದ –

"ನಿಮ್ಮ ಕುಮ್ಮಕ್ಕಿಗೆ ಗೋಪಾಲಹರಿ ಸರದಾರರಿಗೆ ಐವತ್ತು ಸಾವಿರ ಕುದುರೆ, ಹನ್ನೆರಡು ತೋಫುಗಳು, ಐನೂರು ಬಾಣಸರ ಕೊಟ್ಟು, ಭಾರಿ ಸರಂಜಾಮು ನಿಶಿ ಕಳುಹಿಸಿಕೊಟ್ಟಿದೆ. ಕೂಚು ದರಕೂಚು

ಬಂದಿದ್ದಾರೆ. ನೀವೂ, ಗೋಪಾಲಹರಿಯವರೂ ಕೂಡಿ, ಹೈದರಾಲಿಗೆ ಹೊಡೆದು, ನವಾಬರನ್ನು ಜೀವಸಹಿತ ಹಿಡಿದು ಪುಣೆ ನಗರಕ್ಕೆ ಕಳುಹಿಸುವುದು."

ಪರಶುರಾಮನಾಯಕ ಆ ಪತ್ರವನ್ನು ಓದಿದ ಬಳಿಕ, ಪುರುಷೋತ್ತಮರಾಯನೊಂದಿಗೆ ಬಂದ ಮತ್ತೊಬ್ಬ ಸವಾರ –

"ದಂಡು ಕೃಷ್ಣಾನದಿಯನ್ನು ದಾಟಿ, ಕಪೋತನಗುಡ್ಡದ ಬಳಿ ಬಂದು ಇಳಿದಿದೆ. 'ಕೂಚು ದರಕೂಚು ಮಾಡಿ, ಇನ್ನೆಂಟು ದಿನದಲ್ಲಿ ನಮ್ಮ ಸೇನೆ ನಿಮ್ಮ ಸಹಾಯಕ್ಕೆ ಬರುತ್ತದೆ'- ಎಂದು ಗೋಪಾಲಹರಿ ಸರ್ದಾರರು ತಮಗೆ ಸುದ್ದಿ ಮುಟ್ಟಿಸುವಂತೆ ಹೇಳಿದರು"

-ಎಂದು ನಾಯಕರಿಗೆ ಮುಜುರೆ ಮಾಡಿ ಹೇಳಿ –

"ಸುದ್ದಿ ಮುಟ್ಟಿಸಲು ತಡವಾಯಿತು, ಮಾಫ್ ಮಾಡಬೇಕು" - ಎಂದು ಬೇಡಿದ.

"ಮಾಫ್ ಮಾಡುವುದೇ - ಮುತ್ತಿನಲ್ಲಿ ನಿನ್ನ ಉಡಿ ತುಂಬುತ್ತೇವೆ"

-ಸಂತೋಷ ಚಿಲುಮೆಯಾಗಿ ಚಿಮ್ಮುತ್ತಿದ್ದ ಧ್ವನಿಯಲ್ಲಿ ಹೇಳಿದ ಮದಕರಿನಾಯಕ.

"ತಡವಾಗಿ, ಆರು ಲಕ್ಷ ಹಣ ವ್ಯರ್ಥವಾಯಿತು"

- ಎಂದು ಪಶ್ಚಾತ್ತಾಪದಿಂದ ಹೇಳಿದ ಪುರುಷೋತ್ತಮರಾಯ.

"ಆರುಲಕ್ಷ ಹಣ ಹೋದರೆ ಹೋಯಿತು - ಆರುಕೋಟಿ ವರಹ ಕೊಟ್ಟರೂ ಸಿಗದ ನಮ್ಮ ತಮ್ಮ ಉಳಿದುಕೊಂಡ. ನಿಮ್ಮವರ ಸಹಾಯ ಬರಲಿ ಹೋದದ್ದಕ್ಕೆ ಮೂರರಷ್ಟು ಕಕ್ಕಿಸುತ್ತೇನೆ - ನವಾಬನಿಂದ"

-ಎಂದು ಹೇಳಿ, ತಮ್ಮನನ್ನು ಬಿಗಿದಪ್ಪಿಕೊಂಡು –

"ಈ ಸಂತೋಷದ ಸುದ್ದಿಯನ್ನು ಊರಿನಲ್ಲೆಲ್ಲಾ ಡಂಗುರ ಸಾರಿಸಿ. ದೇವಸ್ಥಾನಗಳಲ್ಲೆಲ್ಲಾ ವಿಶೇಷ ಪೂಜೆ ನಡೆಯಲಿ. ಮನೆಮನೆಗೂ ಸಕ್ಕರೆ ಹಂಚಿಸಿ. ಗಾಳಿವೇಗದಲ್ಲಿ ಈ ಸಂತೋಷ ಸುದ್ದಿಯನ್ನು ಅರಮನೆಗೆ ಮುಟ್ಟಿಸಿ, ಕುಶಾಲು ತೋಫು ಹಾರಿಸಲು ಹೇಳಿ"

-ಎಂದು ಅಪ್ಪಣೆ ಮಾಡಿದ ಮದಕರಿನಾಯಕ.

ಆ ಅಪ್ಪಣೆಯನ್ನು ಕೇಳಿದ ಅಶ್ವಾರೋಹಿ ಸೈನಿಕರು ಜಯಘೋಷ ಕೂಗುತ್ತಲೇ ಅರಮನೆಯತ್ತ ದೌಡಾಯಿಸಿದರು.

ಉಳಿದವರು ಊರು ಕೇರಿಗೆಲ್ಲಾ ಈ ಸುದ್ದಿ ಸಾರಲು ಹೊರಟರು.

ಕೋಟೆಯ ಮೇಲೆ ನಿಂತೇ, ತಮ್ಮನನ್ನು ತಬ್ಬಿಕೊಂಡು, ಇದುರಿಗೆ ಕಾಣುತ್ತಿದ್ದ ಉತ್ಸವಾಂಬೆಯ ದೇವಾಲಯಕ್ಕೆ ಕೈಮುಗಿದು –

"ತಾಯಿ, ನಿನ್ನ ಅನುಗ್ರಹ - ಬಿಸಿಲು ಬೆಳದಿಂಗಳಾಯಿತು"

-ಎಂದು ಭಕ್ತಿ-ಕೃತಜ್ಞತೆಗಳಿಂದ ಭಾರವಾದ ಧ್ವನಿಯಲ್ಲಿ ಹೇಳಿದ ಮದಕರಿನಾಯಕ.

೧೬

ಬಿಸಿಲು ಬೆಳದಿಂಗಳಾಯಿತು; ಸಿಡಿಲು ಹೂಮಳೆಗರೆಯಿತು; ದುರ್ಗದ ಹಾದಿಬೀದಿಗಳಲ್ಲಿ ಸಂತೋಷದ ಹಾಲಿನ ಹೊಳೆ ಹರಿಯಿತು; ಜಯಘೋಷದ ಧ್ವನಿ ನೆಲದಿಂದೆದ್ದು ಮುಗಿಲನ್ನು ಮುತ್ತಿಟ್ಟಿತು; ದಂಡಿನಲ್ಲಿ ದುಡಿದ ಸೈನಿಕರಿಗೆ ಮನೆಮನೆಯವರೂ ಹೋಳಿಗೆ ತುಪ್ಪದ ಊಟ ಮಾಡಿಸಿ, ನಕ್ಕುನಲಿದರು; ಹಗಲಿರುಳೂ ದೇವಾಲಯಗಳಿಂದ ವಿಶೇಷ ಪೂಜೆಯ ಘಂಟೆ, ಜಾಗಟೆ, ಶಂಖ, ಚೌಡಿಕೆ, ತಾಳ, ತಮಟೆ, ಉರುಮೆ, ನಗಾರಿ, ಕಹಳೆಗಳು ಮೊಳಗಿ ಬೆಟ್ಟದ ಬಂಡೆಬಂಡೆಗಳೂ ಕುಣಿಯುವಂತೆ ಮಾಡಿದವು; ಇರುಳು ಕೋಟೆಯ ಸಾಲುಗಳ ಮೇಲೆ, ಬುರುಜು ಬತೇರಿಗಳ ಮೇಲೆ ದೀಪಗಳು ಉರಿದು, ಪಂಜುಗಳು ಕುಣಿದು, ಸ್ವರ್ಗಕ್ಕೆ ಸಂತೋಷದ ಸಂದೇಶ ಸಾರಿದವು.

ಊರಿನ ಉತ್ಸಾಹದಲ್ಲಿ ಅರಮನೆಯೂ ಪಾಲುಗೊಂಡಿತು.

ನಾಯಕರು ತಮ್ಮನೆರವಿಗೆ ಬಂದ ಜರಿಮಲೆ, ಗುಡಿಕೋಟೆ, ನಾಯಕನಹಟ್ಟಿ, ಸುರಪುರ, ಕನಕಗಿರಿಯ ಹಿರಿಯರಿಗೆ ವಿಶೇಷ ಭೋಜನ ಏರ್ಪಡಿಸಿ, ಸಮರದಲ್ಲಿ ವಿಶೇಷ ಸಾಹಸ ತೋರಿದವರೆಲ್ಲರಿಗೂ ಖಡೆ, ತೋಡ, ಹೊಸ ವಸ್ತ್ರಗಳ ಉಡುಗೊರೆ ನೀಡಿದರು. ತಮ್ಮ ಸೇನೆಯ ವೀರರಿಗೂ ವಿಶೇಷ ಮನ್ನಣೆಗಳನ್ನು ನೀಡಿದರು.

ಆ ಔತಣ, ಉಡುಗೊರೆಗಳಿಂದ ತೃಪ್ತರಾದವರು –

"ಇದ್ದರಿರಬೇಕು ಮೆದಕೇರಿಯಂಥ ಭೂಪ
ಸ್ವರ್ಗದಿಂದ ಭೂಲೋಕಕ್ಕೆ ಬಂದ ದಿವ್ಯದೀಪ
ದೇವೇಂದ್ರನೂ ಹಿಗ್ಗಿ ತಗ್ಗಿ ಕೊಂಡಾಡಿದನು, ಕಲಿಯೆಂದರಿತನು
ಸರಿಸಾಟಿ ಯಾರಿಲ್ಲ ಮೆದಕರಿಗೆ, ಇವ ಕಲಿಯುಗದ ಕಾಮಧೇನು"

- ಎಂದು ಮದಕರಿನಾಯಕನ ಶೌರ್ಯ, ಔದಾರ್ಯಗಳನ್ನು ಹಾಡಾಗಿ ಹೊಗಳಿದರು.

ಹೀಗೆ ಎಲ್ಲರೂ ಎರಡು ದಿನ ಉತ್ಸವ, ಉತ್ಸಾಹಗಳಲ್ಲಿ ನಲಿದಾಡುತ್ತಿರುವಾಗಲೇ ಒಂದು ದಿನ, ಬಹುದಿನಗಳ ಕಾಲದಿಂದ ನಾಪತ್ತೆಯಾಗಿದ್ದ 'ಆತ'ನ ಕಡೆಯಿಂದ ಮನೆಮನೆಗೆ ಕಣಿ ಹೇಳುತ್ತಾ ಬಂದ ಕೊರವಂಜಿಯೊಬ್ಬಳು, ಕೊತ್ವಾಲಚಾವಡಿಯ ದಳವಾಯಿ ಕಾಶಣ್ಣನಾಯಕನ ಮನೆಗೆ ಬಂದು, ಅವನ ಹೆಂಡತಿ ವೀರಮ್ಮನಿಗೆ ಕಣಿ ಹೇಳುವ ವ್ಯಾಜದಲ್ಲಿ, ಅಲ್ಲಿಯೇ ಇದ್ದ ಕಾಶಣ್ಣನಾಯಕನಿಗೆ ಸಂಕೇತಭಾಷೆಯಲ್ಲಿ 'ಹೈದರಾಲಿಯ ದಂಡು ತುಂಗ ಭದ್ರೆಯನ್ನು ದಾಟಿ,

ಚಿತ್ರದುರ್ಗದ ನೆರವಿಗೆ ಬರುತ್ತಿರುವ ಗೋಪಾಲಹರಿಯ ಸೇನೆಯನ್ನು ಎದುರಿಸಲು ಹೊರಟಿದೆ' – ಎಂಬ ಸುದ್ದಿಯನ್ನು ಮುಟ್ಟಿಸಿದಳು. ಆ ಸುದ್ದಿ ತನ್ನ ಕಿವಿಗೆ ಬಿದ್ದಿದ್ದೇ ತಡ, ಕಾಶಣ್ಣನಾಯಕ ಆ ವಾರ್ತೆಯನ್ನು ಮದಕರಿನಾಯಕನಿಗೆ ಮುಟ್ಟಿಸಿದ.

ಆ ವಾರ್ತೆಯನ್ನು ಕೇಳಿದ ನಾಯಕರು ಮುಂದೇನು ಮಾಡುವುದೆಂದು ನಿರ್ಧರಿಸಲು ತನ್ನ ನೆರವಿಗೆ ಬಂದಿದ್ದ ಜರಿಮಲೆ, ಗುಡಿಕೋಟೆ, ನಾಯಕನಹಟ್ಟಿ, ಕನಕಗಿರಿಯ ನಾಯಕರನ್ನು, ದೊಡ್ಡಮದಕರಿನಾಯಕ ಮೊದಲಾದ ದುರ್ಗದ ಹಿರಿಯ ದಂಡನಾಯಕರನ್ನು ಸಭೆ ಸೇರಿಸಿದರು. ಹೈದರಾಲಿಯ ರಣತಂತ್ರವನ್ನು ಬಲ್ಲ ಸರ್ದಾರ್‌ಖಾನನೂ ಆ ಸಭೆಗೆ ಆಹ್ವಾನಿತನಾಗಿದ್ದ.

ಆ ಹಿರಿಯರೆಲ್ಲರೂ ನೆರೆದ ಸಭೆಯಲ್ಲಿ, ತಮಗೆ ಬಂದ ವರ್ತಮಾನವನ್ನು ತಿಳಿಸಿ –

"ನೆರೆದ ಹಿರಿಯರು ಈ ಸಮಯದಲ್ಲಿ ನಾವೇನು ಮಾಡುವುದು ಎಂದು ದಾರಿ ತೋರಬೇಕು" – ಎಂದು ಕೇಳಿದರು, ನಾಯಕರು.

"ಈಗ ನಾವು ಮಾಡುವುದೇನಿದೆ? ಮರಾಠೆಯವರು ಪ್ರಬಲರು. ಹೈದರಾಲಿಗೂ ಅವರಿಗೂ ಲಡಾಯಿಬಿದ್ದರೆ, ಮರಾಠರು ಹಿಂದಿನ ಹಾಗೆ ಹೈದರಾಲಿಯನ್ನು ಶ್ರೀರಂಗಪಟ್ಟಣದವರೆಗೂ ಅಟ್ಟಿಸಿಕೊಂಡು ಹೋಗಿ ಹೊಡೆಯುತ್ತಾರೆ. ಪುಣೆಯವರೂ ನವಾಬನ ಉಪಟಳದಿಂದ ಸಾಕಷ್ಟು ನೋವು ಅನುಭವಿಸಿದ್ದಾರೆ. ದೊಡ್ಡ ರಾಜ್ಯ ಕಳೆದುಕೊಂಡಿದ್ದಾರೆ. ಅವರೇನೂ ಸುಲಭಕ್ಕೆ ನವಾಬನನ್ನು ಬಿಡುವುದಿಲ್ಲ; ಮತ್ತೆ ಫಕೀರನ ವೇಷ ಹಾಕಿಸಿಯೇ ಕೈಬಿಡುವುದು. ಆದ್ದರಿಂದ ದೂರದ ಸೀಮೆಯಲ್ಲಿ ಅವರಿಬ್ಬರಿಗೂ ಯುದ್ಧವಾದರೆ ನಮಗೆ ಅನುಕೂಲ. ಅವರಿಬ್ಬರ ನಡುವಿನ ಕದನ ಇತ್ಯರ್ಥವಾಗುವವರೆಗೂ ನಾವೇನೂ ನಮ್ಮ ಸೀಮೆಯ ಬಗ್ಗೆ ಚಿಂತೆ ಮಾಡಬೇಕಾಗಿಲ್ಲ. ಹೈದರಾಲಿ ಸೋತರೆ ಪೀಡೆಯೇ ಬಗೆಹರಿಯಿತು. ಒಂದು ವೇಳೆ ಹಾಗಾಗದೆ ಯುದ್ಧ ಮರಾಠರಿಗೆ ಪ್ರತಿಕೂಲವಾದರೆ, ಅವನು ಮರಾಠರ ಪೆಟ್ಟಿನಿಂದ ಸುಧಾರಿಸಿಕೊಂಡು, ಮತ್ತೆ ದಂಡು ಕಟ್ಟುವವರೆಗೂ ನಮಗೆ ಚಿಂತೆಯಿಲ್ಲ. ಹೇಗಿದ್ದರೂ, ಮತ್ತೆ ಅವರಿಬ್ಬರಿಗೂ ಯುದ್ಧವಾದರೆ ನಮಗೆ ಸುಧಾರಿಸಿಕೊಳ್ಳಲು ಅವಕಾಶ ಸಿಕ್ಕಹಾಗಾಗುತ್ತದೆ. ಪರರಾಜ್ಯಗಳಿಂದ ಬಂದವರು. ಆರೆಂಟು ತಿಂಗಳಿಂದ ಮನೆಮಠ, ಹೆಂಡಿರುಮಕ್ಕಳ ಮುಖ ನೋಡಿಲ್ಲ. ಅವರೂ ನಾಲ್ಕು ದಿನ ಹೋಗಿ ಬರಲಿ. ದುರ್ಗದವರಿಗೂ ಇಷ್ಟು ದೊಡ್ಡ ಸೇನೆಯ ಭಾರ, ಇಷ್ಟು ತಿಂಗಳ ಕಾಲ ಬಿದ್ದು ಹೆಗಲು ಸೋತುಹೋಗಿದೆ. ವಿರಾಮ ದೊರೆತರೆ ದುರ್ಗದವರೂ ಚೇತರಿಸಿಕೊಳ್ಳಲು ಅನುಕೂಲವಾಗುತ್ತದೆ."

-ಎಂದು ದೊಡ್ಡ ಮದಕರಿನಾಯಕ, ಎಲ್ಲ ದೃಷ್ಟಿಯಿಂದಲೂ ವಿಚಾರಮಾಡಿ ಹೇಳಿದ.

ಉಳಿದವರೂ ಬಹುಮಟ್ಟಿಗೆ ಆತನ ಅಭಿಪ್ರಾಯವನ್ನು ಅನುಮೋದಿಸಿದರು.

ಆದರೆ ಸರ್ದಾರ್‌ಖಾನ್ –

"ನಿಮ್ಮ ಅಭಿಪ್ರಾಯ ಸರಿಯಾದದ್ದೆ. ಆದರೆ ಇಷ್ಟು ಆತುರದಲ್ಲಿ ಬಂದ ಸೇನೆಯನ್ನೆಲ್ಲಾ ಕಳಿಸಿಬಿಡುವುದು ಸೂಕ್ತವಾಗಲಾರದು. ಹೈದರಾಲಿಯವರಿಗೂ ಮರಾಠರಿಗೂ ದ್ವೇಷವಿರುವುದು ನಿಜ; ಅವರಿಬ್ಬರಿಗೂ ಯುದ್ಧವಾಗುವುದೂ ನಿಜ. ಆದರೆ ಆ ಯುದ್ಧ ಯಾರೊಬ್ಬರ ಗೆಲುವಿನಲ್ಲಿ ಇತ್ಯರ್ಥವಾಗುತ್ತದೆಯೋ ಅಥವಾ ಅವರವರಲ್ಲಿ ಸಂಧಿಯಾಗಿ ನಮ್ಮ ಕಡೆ ಬಂದ ಮರಾಠರ ಸೇನೆ ಹಿಂದಕ್ಕೆ ಹೋಗಿ, ಹೈದರಾಲಿಯವರು ಇತ್ತ ಕಡೆಗೇ ನುಗ್ಗಿ ಬರುತ್ತಾರೋ ಈಗಲೇ ಹೇಗೆಂದು ಖಚಿತವಾಗಿ ಹೇಳುವುದು ಕಷ್ಟ. ನಾನು ಹೈದರಾಲಿಯವರನ್ನು ಚೆನ್ನಾಗಿ ಬಲ್ಲೆ; ಅಷ್ಟೇ ಮಟ್ಟಿಗೆ ಮರಾಠಾ ಸರದಾರರನ್ನೂ ಬಲ್ಲೆ. ಪೇಶ್ವೆಯವರ ಅಭಿಪ್ರಾಯ ಹೇಗೇ ಇರಬಹುದು. ಆದರೆ ಮರಾಠಾ ಸರದಾರರಲ್ಲಿ, ರಾಜ್ಯಕ್ಕಿಂತ ಲೂಟಿಗೆ ಲಡಾಯಿ ಮಾಡುವವರು ಹೆಚ್ಚು. ಹೈದರಾಲಿಯವರಿಗೆ ರಾಜ್ಯದಾಹ, ಪುಣೆಯವರಿಗೆ ಹಣದ ವ್ಯಾಮೋಹ. ಇಲ್ಲದಿದ್ದರೆ, ಚಿನಕುರುಳಿ ಲಡಾಯಿಯಲ್ಲಿ ಹೈದರಾಲಿಯವರನ್ನು ಸಂಪೂರ್ಣ ಸೋಲಿಸಿ, ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದವರು ಮೂವತ್ತುಲಕ್ಷ ರೂಪಾಯಿಗಳ ವ್ಯಾಮೋಹಕ್ಕೆ ಬಲಿಯಾಗಿ, ಹೈದರಾಲಿಯವರನ್ನು ಉಳಿಯಗೊಡುತ್ತಿರಲಿಲ್ಲ. ಅಲ್ಲದೆ ಮರಾಠಾ ಸರ್ದಾರರಲ್ಲಿ ಐಕಮತ್ಯವೂ ಅಷ್ಟಾಗಿ ಇಲ್ಲ. ಅವರವರಲ್ಲೇ ಜಿದ್ದಾಜಿದ್ದಿ ಇದೆ. ನಾನು ಈ ಮಾತು ಹೇಳಿದೆ ಎಂದು ಪುರುಷೋತ್ತಮರಾಯರಾಗಲಿ, ಉಳಿದವರಾಗಲಿ ಬೇಸರಪಟ್ಟುಕೊಳ್ಳಬಾರದು. ಸ್ವಲ್ಪ ಕಾಲ ಎಲ್ಲ ಮಿತ್ರಸೇನೆ ದುರ್ಗವನ್ನು ಖಾಲಿಮಾಡದೆ, ಕಾದು ನೋಡುವುದು ಒಳಿತು"

-ಎಂದು ತನ್ನ ಖಚಿತ ಅಭಿಪ್ರಾಯವನ್ನು ಸೂಚಿಸಿದ.

ದುರ್ಗದ ಹಿರಿಯರೆಲ್ಲಾ ಒಂದು ದಿಕ್ಕಿನಲ್ಲಿ ಯೋಚನೆ ಮಾಡಿದಾಗ, ಹೈದರಾಲಿಯ ಸರ್ದಾರನಾಗಿದ್ದವನೊಬ್ಬ ಅವರೆಲ್ಲರ ಅಭಿಪ್ರಾಯಕ್ಕೆ ವಿರುದ್ಧವಾಗಿ ಹೇಳಿದುದು, ಅನೇಕರಿಗೆ ಹಿಡಿಸಲಿಲ್ಲ. ಮದಕರಿನಾಯಕನಿಗೂ ಸರ್ದಾರ್‌ಖಾನನಿಗೂ ಇದ್ದ ಮೈತ್ರಿಯನ್ನು ತಿಳಿದ ಬಹುಮಂದಿ 'ಈ ಎರಡು ಅಭಿಪ್ರಾಯಗಳಲ್ಲಿ ಯಾವುದು ಒಳ್ಳೆಯದೆಂದು ನಾಯಕರೇ ತೀರ್ಮಾನ ಮಾಡಲಿ' ಎಂದು ಸುಮ್ಮನಿದ್ದರೆ, ಮದಕರಿನಾಯಕನ ಖಾಸಾಮಾವ ಎನಿಸಿಕೊಂಡ ಜರಿಮಲೆ ಬೊಮ್ಮಣ್ಣನಾಯಕನಿಗೆ ಸರ್ದಾರ್‌ಖಾನನ ಮಾತು ಅತಿಯಾಯಿತು ಎಂದು ತೋರಿ –

"ನಾವು ಯಾರೂ ಕಾಣದ ಹೈದರಾಲಿಯವರನ್ನು ಇವರೊಬ್ಬರು ಮಾತ್ರ ಕಂಡಿದಾರೆಯೇ? ಸರ್ದಾರ್‌ಖಾನರು ಎಷ್ಟಾದರೂ ಹೈದರಾಲಿಯ ಕೃಪಾಶ್ರಯದಲ್ಲಿ ಬೆಳೆದವರು. ಅವರಿಗೆ ಹೈದರಾಲಿ ದೊಡ್ಡವರಾಗಿ, ಪ್ರಬಲವಾಗಿ ಕಾಣುವುದು ಸಹಜವೇ. ಕುರುಚಲುಗಿಡದಡಿಯಲ್ಲಿ ನಿಂತವರಿಗೆ ತೇಗದ ಮರದ ಎತ್ತರ ಹೇಗೆ ಕಾಣುತ್ತದೆ. ಅವರು

ಕಂಡಿರುವುದು ನವಾಬರೊಬ್ಬರನ್ನು, ಅವರೇ ಸೂರ್ಯಚಂದ್ರ ಎಂದು ತಿಳಿದುಕೊಂಡಿದಾರೆ. ದುರ್ಗದ ಎದುರಿಗೇ ಸೋತು ಸಲಾಮು ಹಾಕಿದ ನವಾಬ ಮರಾಠರನ್ನು ಗೆಲ್ಲುತ್ತಾನೆಯೇ – ಅದು ಭ್ರಾಂತಿ. ಆದರೆ ಸರ್ದಾರ್‌ಖಾನರಿಗೆ ಇಷ್ಟು ದಿನ ದುರ್ಗದಲ್ಲಿದ್ದೂ ಹೈದರಾಲಿಯ ಛಳಿ ಬಿಟ್ಟಿಲ್ಲ. ಅದಕ್ಕೇ ಹೀಗೆ ಮಾತಾಡುತ್ತಿದ್ದಾರೆ. ನವಾಬನ ಹೆಸರು ನೆನಪಾದರೆ ದುರ್ಗದ ಋಣ ಮರೆತು ಹೋಗುತ್ತದೆ" – ಎಂದು ಸರ್ದಾರ್‌ಖಾನ್‌ನನ್ನು ಮೂದಲಿಸುವಂತೆ ಹೇಳಿದ.

ಆ ಮೂದಲಿಕೆಯ ಮಾತನ್ನು ಕೇಳಿ, ಸರ್ದಾರ್‌ಖಾನನ ಮುಖ ಕೆಂಪಾಯಿತು.

"ಜರಿಮಲೆನಾಯಕರು ದೊಡ್ಡವರು, ಎರೆಡೆರೆಡುಸಲ ಹೈದರಾಲಿಯವರ ಕೈಲಿ ಏಟು ತಿಂದವರು. ಸೊಂಡೂರು, ರಾಮನದುರ್ಗದಂಥ ಕೋಟೆಗಳನ್ನು ನಾವು ಹೈದರಾಲಿಯವರಿಗೆ ಒಪ್ಪಿಸಿಲ್ಲ. ನಿಜ, ಆದ್ದರಿಂದ ನಿಮಗಿರುವಷ್ಟು ಹೈದರಾಲಿಯವರ ಪರಿಚಯ ನನಗಿಲ್ಲ. ನನ್ನ ಮಾತು ಬೇಡವಾದರೆ ಇಲ್ಲಿಂದ ಎದ್ದು ಹೋಗುತ್ತೇನೆ."

-ಎಂದು ಹೇಳಿದ ಸರ್ದಾರ್‌ಖಾನ್, ಬೊಮ್ಮಣ್ಣನಾಯಕನ ಸವಾಲಿಗೆ ಜವಾಬುಕೊಟ್ಟ ಹಾಗೆ.

ಸರ್ದಾರ್‌ಖಾನ್ ತನ್ನ ಸೋಲಿನ ಸುದ್ದಿ ಎತ್ತಿ, ತುಂಬಿದ ಸಭೆಯಲ್ಲಿ ಮೂತಿ ತಿವಿದದ್ದು ಬೊಮ್ಮಣ್ಣನಾಯಕನಿಗೆ ಅಸಹನೀಯವಾಗಿ –

"ದುರ್ಗದ ದರಬಾರಿನಲ್ಲಿ ಹೈದರಾಲಿಯ ಹೊಗಳುಭಟ್ಟಂಗಿಗಳಿಗೆ ಏನು ಕೆಲಸ ? ಇದು ದುರ್ಗದ ಹಿತೈಷಿಗಳ ಸಭೆ."

-ಎಂದು ಸರ್ದಾರ್‌ಖಾನನ ಮುಖಕ್ಕೆ ಹೊಡೆದ ಹಾಗೆ ಹೇಳಿದ.

ಅವರಿಬ್ಬರ ನಡುವಿನ ಮಾತು ವಿರಸದ ಮಟ್ಟಕ್ಕೆ ಮುಟ್ಟಿದುದನ್ನು ಕಂಡ ನಾಯಕರು

"ಒಬ್ಬರಿನ್ನೊಬ್ಬರನ್ನು ದೂಷಿಸಲು ಈ ಸಭೆಯನ್ನು ಕರೆದಿಲ್ಲ. ಅಭಿಪ್ರಾಯ ತಿಳಿಯಲು ಸೇರಿಸಿದ್ದೇವೆ. ಇಲ್ಲಿ ಯಾರೂ ಹಿರಿಯರಿಲ್ಲ, ಯಾರೂ ಕಿರಿಯರೂ ಇಲ್ಲ. ನಮ್ಮ ನಮ್ಮಲ್ಲಿ ಅಂಥ ಭಾವನೆ ಬೇಡ."

-ಎಂದು ತೊಡಕಾಗುತ್ತಿದ್ದ ಮಾತನ್ನು ನೇರ್ಪಡಿಸಲು ಹೇಳಿದರು.

"ಹಾಗೆಂದರೆ ಹೇಗಾದೀತು. ನಮಗೂ ತಮಗೂ ಇರುವ ಸಂಬಂಧವೇ ಬೇರೆ. ಸರ್ದಾರ್‌ಖಾನರಿಗೂ ತಮಗೂ ಇರುವ ಸಂಬಂಧವೇ ಬೇರೆ. ವಜ್ರದ್ದಾದರೂ ಮೂಗುತಿ ಮೂಗಿಗಿಂತ ಮಹತ್ವದ್ದಲ್ಲ. ಈ ತಾರತಮ್ಯವನ್ನು ಯಾರಿಗೆ ಯಾರೂ ಹೇಳಿಕೊಡದಿದ್ದರೂ, ದೊಡ್ಡವರ ನಡುವೆ ಕುಳಿತು ಮಾತನಾಡುವವರು ಅದನ್ನು ಅರ್ಥಮಾಡಿಕೊಳ್ಳಬೇಕು. ಬಡಿಸುವ ಸಟ್ಟುಗ ಅಡುಗೆಮನೆಯಲ್ಲಿರಬೇಕೇ ಹೊರತು, ಓಲಗದಲ್ಲಿ ಅದಕ್ಕೇನು ಕೆಲಸ ?"

- ಸರ್ದಾರ್‌ಖಾನನಿಗಿಂತ ತಾನು ಹಿರಿಯ ಎಂದು ಸಾಧಿಸಲು ಹಟತೊಟ್ಟಂತೆ ಹೇಳಿದ ಬೊಮ್ಮಣ್ಣನಾಯಕ.

ಬೊಮ್ಮಣ್ಣನಾಯಕ, ಸರ್ದಾರ್‌ಖಾನನ ಬಗ್ಗೆ ಆಡಿದ ಮಾತು ಅತಿಯಾಯಿತೆಂದು ನಾಯಕರಿಗಷ್ಟೇ ಅಲ್ಲ, ಉಳಿದವರಿಗೂ ಅರ್ಥವಾಗಿ –

"ಮಾತು ಜಾಡು ತಪ್ಪುತ್ತಿದೆ. ಯಾರು ದೊಡ್ಡವರು ಎಂದು ತೀರ್ಮಾನಮಾಡಲು ನಾವು ಬಂದವರಲ್ಲ ಇಲ್ಲಿಗೆ. ಆಡಬೇಕಾದ ಮಾತನ್ನು ಮೊದಲು ಆಡಿ ಮುಗಿಸಿ. ಆಮೇಲೆ ಮೂಗು, ಮೂಗುತಿಯ ವಿಚಾರ ಮಾಡೋಣ."

- ಎಂದು ಹೇಳಿದ ದೊಡ್ಡ ಮದಕರಿನಾಯಕ, ಉಳಿದೆಲ್ಲರ ಪರವಾಗಿ.

"ಹಾಗಿದ್ದರೆ ನಾವು ಹೇಳುತ್ತೇವೆ - ಹೈದರಾಲಿಯ ಭಯ ಅಷ್ಟು ಬೇಡ. ದಣಿದ ಸೇನೆ ಊರಿಗೆ ಹೋಗಿ ಸುಧಾರಿಸಿಕೊಂಡು ಬರಲು ಅವಕಾಶ ಕೊಡಿ. ಇಲ್ಲವಾದರೆ ಮತ್ತೆ ಯುದ್ಧ ಪ್ರಸಂಗ ಬಂದರೆ ದಣಿದ ಸೇನೆ ಶತ್ರುವನ್ನು ಎದುರಿಸುವುದು ಕಷ್ಟವಾಗುತ್ತದೆ. ಇಲ್ಲಿಗೆ ಬಂದು ಎಂಟು ತಿಂಗಳಾಯಿತು. ನಾವು ಮನೆ-ಮಠ, ದೇವರು-ದಿಂಡರು, ಹೊಲ-ಹೊಲಬುಗಳ ಚಿಂತೆ ಮಾಡಬೇಡವೇ ? ಗುಡಿಕೋಟೆನಾಯಕರು ನಮ್ಮ ಸರೀಕರು, ಅವರು ಹೇಳಲಿ - ನಮ್ಮ ಮಾತು ಸರಿಯೋ, ತಪ್ಪೋ ?"

- ಎಂದು ಬೊಮ್ಮಣ್ಣನಾಯಕ ಮಾತನ್ನು ಗುಡಿಕೋಟೆಯ ಜಟಂಗಿರಾಯನತ್ತ ತಿರುಗಿಸಿದ.

"ಎಲ್ಲರಿಗೂ ಅವರವರ ಮನೆ-ಮಠ, ದೇವರು-ದಿಂಡರು ಇರುವುದು ನಿಜ. ಹಾಗೇ ಅದರ ಅಳಿವು-ಉಳಿವು ದುರ್ಗವನ್ನು ಅವಲಂಬಿಸಿರುವುದೂ ಸತ್ಯ. ಆದ್ದರಿಂದ ದುರ್ಗದ ಯೋಚನೆ ಮೊದಲು ಮಾಡಿ, ಆಮೇಲೆ ನಮ್ಮ ಚಿಂತೆ ಮಾಡೋಣ" - ಎಂದ ಜಟಂಗಿರಾಯ.

ಜಟಂಗಿರಾಯ ತನ್ನ ಪರವಾಗಿ ಮಾತನಾಡದೆ ಇದ್ದುದನ್ನು ಕಂಡು ಬೊಮ್ಮಣ್ಣನಾಯಕನಿಗೆ ಆತನ ಮೇಲೂ ಮುನಿಸು ಮೂಡಿ –

"ನಿಜ - ನಿಮ್ಮ ಮೊಮ್ಮಕ್ಕಳು ತಾನೇ ನಾಳೆ ದುರ್ಗದ ದೊರೆಗಳಾಗುವವರು. ಆದ್ದರಿಂದ ನೀವು ದುರ್ಗದ ಚಿಂತೆ ಮೊದಲು ಮಾಡುವುದೇ ನ್ಯಾಯ."

-ಎಂದು ಜಟಂಗಿರಾಯನ ಮೇಲೂ ತನ್ನ ನಾಲಗೆಯನ್ನು ಹರಿಬಿಟ್ಟ.

ಅಲ್ಲಿಯವರೆಗೂ ನಡೆದ ಮಾತುಕಥೆಗಳನ್ನು ಕೇಳುತ್ತಿದ್ದ ನಾಯಕರಿಗೆ, ಬೊಮ್ಮಣ್ಣನಾಯಕ ಆಡಿದ ಕಿನಿಸಿನ ಮಾತು ಅಸಹನೀಯವಾಗಿ –

"ನಿಮ್ಮ ಅಭಿಪ್ರಾಯ - ನಿಮ್ಮ ಸೇನೆಗೆ ವಿಶ್ರಾಂತಿ ಬೇಕು - ಅಲ್ಲವೇ ? ಎಲ್ಲರಿಗಿಂತ ಹೆಚ್ಚು ದಣಿದವರು ನೀವು, ವಿಶ್ರಾಂತಿ ಬಯಸಬೇಕಾದದ್ದು ಸಹಜವೇ. ನಿಮಗೆ ಹೋಗಬೇಕು ಎನಿಸಿದ್ದರೆ ಹೇಳಿ – ಅಗತ್ಯವಾಗಿ, ಔತಣ ಮುಗಿಸಿಕೊಂಡು, ನಿಮ್ಮ ಸೈನಿಕರಿಗೆ ಕೊಡುವ ವಸ್ತ್ರ-ಉಡುಗೊರೆ ತೆಗೆದುಕೊಂಡು ಹೋಗಬಹುದು. ಹೋಗಬೇಕು ಎನ್ನುವವರನ್ನು ತಡೆಯಲು ನಮಗಿಷ್ಟವಿಲ್ಲ. ಈಗೇನು ಹೇಳಿ - ತಾವು ಹೋಗಬೇಕೋ, ತಮ್ಮ ಸೇನೆ ಹೋಗಿ ಬರಬೇಕೋ – ಈ ಮಹತ್ವದ ಮಾತನ್ನು ಮುಗಿಸಿ, ಆಮೇಲೆ ಬೇರೆ ಚಿಂತೆ ಮಾಡೋಣ. ನಿದ್ದೆಯ ಚಿಂತೆ ಇದ್ದವರಿಗೆ ಯುದ್ಧದ ಚಿಂತೆ ಏಕೆ ?" – ಎಂದು ನಿಷ್ಟುರವಾಗಿ ಹೇಳಿದರು.

"ನಾವು ಹೋಗಬೇಕು ಎಂದು ಹೇಳಲಿಲ್ಲ. ನಮ್ಮ ಸೇನೆಯ ಜನ ಆಡಿಕೊಂಡ ಮಾತು ಹೇಳಿದೆ."

ತನ್ನ ಅಳಿಯನೇ ತನಗೆ ವಿರುದ್ಧವಾದುದನ್ನು ಕಂಡು ಬೊಮ್ಮಣ್ಣನಾಯಕ ಕೊಂಚ ಮೆತ್ತಗಾಗಿ ಹೇಳಿದ.

"ನಿಮ್ಮ ಸೇನೆಯ ವಿಷಯ ನೀವು ಮುಚ್ಚಿಡದೆ ಹೇಳಿದ್ದು ಒಳ್ಳೆಯದಾಯಿತು. ನಿಮ್ಮ ಸೈನಿಕರಿಗೆ ಹೋಗಲು ನಮ್ಮ ಅಪ್ಪಣೆಯಾಗಿದೆ ಎಂದು ಹೇಳಿ. ಮತ್ತೇನಿದೆ ?"

"ಮನೆಯಲ್ಲಿ ಮಾಡಬೇಕಾದ ದೇವರ ಕಾರ್ಯವೂ ಇದೆ."

"ಅದಕ್ಕೆ ನೀವು ಹೋಗಬೇಕೇ ?"

"ನಾವೋ, ನಮ್ಮ ಮಕ್ಕಳೋ - ಯಾರು ಹೋದರೂ ಆಗುತ್ತದೆ."

"ಸರಿ – ಯಾರು ಹೋಗಬೇಕೋ ನೀವೇ ತೀರ್ಮಾನ ಮಾಡಿಕೊಳ್ಳಿ. ಹೋಗಬೇಕಾದವರು ಸಂತೋಷವಾಗಿ ಹೋಗಿ, ಮೈಕೈಮಾಲೀಷ್ ಮಾಡಿಸಿಕೊಂಡು, ಎಣ್ಣೆನೀರು ಮಿಂದು, ದೇವರಿಗೆ ಎಡೆಯೊಪ್ಪಿಸಿ ಬನ್ನಿ. ಅದರಲ್ಲೇನೂ ಆತುರ ಮಾಡಿಕೊಳ್ಳುವುದು ಬೇಡ. ನಮ್ಮ ಪಾಲಿನ ಕಷ್ಟ ನಮ್ಮದು, ನಮ್ಮ ಚಿಂತೆ ನಾವು ಮಾಡುತ್ತೇವೆ. ಉಳಿದವರಲ್ಲೂ ನಮ್ಮದಿಷ್ಟೇ ಪ್ರಾರ್ಥನೆ: ಬಲವಂತವಾಗಿ ಯಾರೂ ಇಲ್ಲಿ ನಿಲ್ಲಬೇಡಿ. ದುರ್ಗ ನಮ್ಮದು ಎಂದುಕೊಂಡವರು ಇರಿ. ಇಲ್ಲಿ ತೈಲಾಭ್ಯಂಜನಕ್ಕೇನೂ ಕೊರತೆ ಮಾಡುವುದಿಲ್ಲ"

-ಎಂದರು ನಾಯಕರು.

ನಾಯಕರು ಮಾತಾಡಿದ ಆ ಧೋರಣೆ ಉಳಿದವರ ಬಾಯಿಕಟ್ಟಿಸಿತು. ಯಾರೂ ಹೋಗುವ ಮಾತಾಡಲಿಲ್ಲ. ಅಷ್ಟು ಜನರ ಮಧ್ಯೆ ತಾನು ಏಕಾಂಗಿಯಾದದ್ದು ಬೊಮ್ಮಣ್ಣನಾಯಕನಿಗೆ ಸಹಿಸಲಾಗದ ಅವಮಾನವಾದಂತಾಗಿ, ಸಭೆಯಲ್ಲಿ ಕುಳಿತಿರಲು ಸಾಧ್ಯವಾಗದೆ –

"ನಮಗೆ ಕೊಂಚ ವಿಶ್ರಾಂತಿಗೆ ಅಪ್ಪಣೆಯಾಗಬೇಕು" - ಎಂದು ಕೇಳಿದ.

"ಅಗತ್ಯವಾಗಿ ವಿಶ್ರಾಂತಿ ತೆಗೆದುಕೊಳ್ಳಿ. ಪಲ್ಲಂಗ, ಸುಪ್ಪತ್ತಿಗೆಗಳು ಸಿದ್ಧವಾಗಿ ಕಾಯುತ್ತಿವೆ" - ಎಂದರು ನಾಯಕರು, ಲಘುವಾದ ಧ್ವನಿಯಲ್ಲಿ.

ಆ ಮಾತು ಕೇಳಿದ ಬೊಮ್ಮಣ್ಣನಾಯಕ ಮರುಮಾತಾಡದೆ, ಸಭೆಗೆ ವಂದಿಸಿ, ಅಲ್ಲಿಂದ ಹೊರಟುಹೋದ. ಆತ ಹೋದ ಬಳಿಕ ಗರಬಡಿದಂತೆ ಸ್ವಲ್ಪ ಹೊತ್ತು ಸ್ತಬ್ಧವಾಗಿದ್ದ ನಾಯಕರು, ತಲೆಯಿಂದ ಆ ವಿಚಾರವನ್ನು ಕೊಡವಿ, ಯುದ್ಧದ ವಿಚಾರಕ್ಕೆ ಬಂದು ಪುರುಷೋತ್ತಮರಾಯನತ್ತ ತಿರುಗಿ –

"ಸರ್ದಾರ್‌ಖಾನರ ಮಾತಿನ ಬಗ್ಗೆ ನಿಮ್ಮ ಅಭಿಪ್ರಾಯವೇನು – ಮುಕ್ತಮನಸ್ಸಿನಿಂದ ತಿಳಿಸಿ" – ಎಂದು ಕೇಳಿದರು.

ಕೊಂಚ ಹೊತ್ತು ಯೋಚಿಸಿ, ಪುರುಷೋತ್ತಮರಾಯ ಹೇಳಿದ –

"ಸರ್ದಾರ್‌ಖಾನರ ಮಾತಿನಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ. ಉಪೇಕ್ಷೆ ಮಾಡುವಂಥ ಸಲಹೆ ಅದಲ್ಲ. ನಮ್ಮವರ ದೌರ್ಬಲ್ಯ ನಮಗೂ ಗೊತ್ತು. ತಿಳಿದೂ ಇಲ್ಲವೆಂದರೆ ನಿಮಗೆ ದ್ರೋಹ ಮಾಡಿದಂತಾಗುತ್ತದೆ. ಎಲ್ಲರೂ ಒಪ್ಪಿದರೆ ಒಂದು ಕೆಲಸ ಮಾಡಬಹುದು."

"ಏನು ?"

"ಗೋಪಾಲಹರಿಯವರ ನೆರವಿಗಾಗಿ ತಮ್ಮ ಸೇನೆಯನ್ನಷ್ಟು ಕಳಿಸಿ. ಅಲ್ಲಿಯ ಸುದ್ದಿ ಬರುವಂತೆ ವ್ಯವಸ್ಥೆ ಮಾಡಿ. ಎಷ್ಟು ಕಡಿಮೆಯೆಂದರೂ ಕೆಲವು ತಿಂಗಳಷ್ಟಾದರೂ ನಮಗೆ ಕಾಲಾವಕಾಶ ದೊರಕುತ್ತದೆ. ಆ ವೇಳೆಯಲ್ಲಿ ಇಲ್ಲಿಯ ಬಲವನ್ನು ಬಿಗಿಮಾಡಿಕೊಳ್ಳೋಣ. ಸೇನೆಗೂ ಅಷ್ಟು ವಿಶ್ರಾಂತಿ ಬೇಕು. ಅದೂ ಆಗಲಿ- ಯಾವುದಕ್ಕೂ ದುಡುಕದೆ, ಇಲ್ಲದ್ದಕ್ಕೆ ಚಿಂತಿಸದೆ, ಬಂದದ್ದನ್ನು ಎದುರಿಸಲು ಸಿದ್ಧರಾಗೋಣ. ದೊರೆತಷ್ಟು ಸಮಯದಲ್ಲಿ ಗಡಿಗಳನ್ನು ಭದ್ರಪಡಿಸಿಕೊಂಡು ಕಾದುನೋಡೋಣ. ನನಗೇನೋ ಮರಾಠಾ ಸರ್ದಾರರು ಈ ಬಾರಿ ನಮ್ಮ ಕೈಬಿಡುವುದಿಲ್ಲ ಎಂದು ನಂಬಿಕೆ ಇದೆ. ಅಷ್ಟು ಬೇಕಾದರೆ ಪರಶುರಾಮಭಾವುಗೆ ಹೇಳಿಕಳಿಸಬಹುದು. ನಿಮ್ಮಿಂದ ಉಪಕೃತರಾದ ಶಿವರಾಮಭಾವುರವರೂ ನಿಮ್ಮ ನೆರವಿಗೆ ಬರಲು ಕಾತರರಾಗಿದ್ದಾರೆ. ಒಳ್ಳೆಯದಾಗಲಿ ಎಂದು ಹಾರೈಸೋಣ ; ಕೆಟ್ಟದ್ದಕ್ಕೆ ಎಚ್ಚರವಾಗಿ ಇರೋಣ" – ಎಂದು ಹೇಳಿದ ಪುರುಷೋತ್ತಮರಾಯ.

ಆ ಮಾತು ಎಲ್ಲರಿಗೂ ಒಪ್ಪಿಗೆಯಾಗಿ, ಅಂದಿನ ಸಭೆ ಮುಗಿಯಿತು.

* * *

ಸಭೆ ಮುಗಿಯಿತು –

ಆದರೆ ಸಭೆಯಲ್ಲಿ ಮದಕರಿನಾಯಕನ ಹೃದಯದಲ್ಲಿ ಹೊತ್ತಿದ ಹೊಗೆ ಆರಿರಲಿಲ್ಲ. ಜರಿಮಲೆಯ ಬೊಮ್ಮಣ್ಣನಾಯಕರ ವರ್ತನೆ ಅವನನ್ನು ಕೆಣಕಿತ್ತು.

ಆತ ಆಡಿದ ಮಾತು, ನಡೆದುಕೊಂಡ ರೀತಿ, ಎದೆಯೊಳಗಿನ ಕಿನಿಸನ್ನು ಪ್ರದರ್ಶಿಸಿದ ಆತನ ಪದವಿಗೆ ಯೋಗ್ಯವಲ್ಲದ ರೀತಿ – ಎಲ್ಲವೂ ಮದಕರಿನಾಯಕ ಜರಿಮಲೆಯ ಬೊಮ್ಮಣ್ಣನಾಯಕನನ್ನು ಹೊಸ ದೃಷ್ಟಿಯಿಂದ ನೋಡುವಂತೆ ಮಾಡಿತ್ತು.

ಎಲ್ಲಕ್ಕಿಂತ ಹೆಚ್ಚಾಗಿ ಆತ ಜಟಂಗಿರಾಯನ ಮೇಲೆ ಅಕಾರಣವಾಗಿ ವಿಷಕಕ್ಕಿದ್ದು.

ಅದನ್ನು ಯೋಚಿಸುತ್ತಿದ್ದಂತೆ –

ಹಿಂದೊಂದು ದಿನ ಬಂಗಾರವ್ವನಾಗತಿ ಉಯ್ಯಾಲೆಯ ಮೇಲೆ ತೂಗಿಕೊಳ್ಳುತ್ತಾ, ದಾಸಿಯ ಕೈಲಿ ಹೇಳಿಸಿದ ಮೂದಲಿಕೆಯ ಹಾಡು ಮದಕರಿನಾಯಕನಿಗೆ ನೆನಪಾಗಿ, ಯೋಚಿಸಿದ-

'ಇನ್ನೂ ಆ ದ್ವೇಷ ಉಳಿದಿದೆಯೇ ಬಂಗಾರವ್ವನಾಗತಿಯಲ್ಲಿ ?

'ಆಕೆ ಆ ವಿಷಬೀಜವನ್ನು ತನ್ನ ತಂದೆಯ ಹೃದಯದಲ್ಲಿ ಬಿತ್ತಿದ್ದಾಳೆಯೇ ?'

ಆ ದಿನ ಆದ ಬಳಿಕ ಬಂಗಾರವ್ವನಾಗತಿ ಮತ್ತೆಂದೂ ಹಾಗೆ ವರ್ತಿಸಲಿಲ್ಲ. ಅಷ್ಟೇ ಅಲ್ಲ - ಪದ್ಮವ್ವನಾಗತಿಯ ಮಗನನ್ನು ತನ್ನ ಮಗನಂತೆಯೇ ಕಂಡಿದ್ದಳು.

ಈಗ-

ಯುದ್ಧ ಸಮಯದಲ್ಲಿ –

'ಆಕೆಯ ಬುದ್ಧಿಯೇ ಕೆಟ್ಟು ತಂದೆಯ ತಲೆ ಕೆಡಿಸಿದ್ದಾಳೋ ಅಥವಾ ತಂದೆಯೇ ಮಗಳ ನೆತ್ತಿಗೆ ಮದ್ದು ತಿಕ್ಕಿದ್ದಾನೆಯೋ ?'

ಹೊರಯುದ್ಧದ ಸಮಯದಲ್ಲಿ –

ಅಂತಃಪುರದಲ್ಲಿ ಈ ಅಂತಃಕಲಹದ ವಿಷಬೀಜಾಂಕುರ -!

'ಊಹೂ, ಬಿಡಬಾರದು, ಮೊಳಕೆಯಲ್ಲೇ ಮುರಿದುಬಿಡಬೇಕು'

- ಎಂದುಕೊಂಡು ಓಲಗ ಮುಗಿಸಿಕೊಂಡವನು, ನೇರವಾಗಿ ಬಂಗಾರವ್ವನಾಗತಿಯ ಅಂತಃಪುರದತ್ತಲೇ ಹೊರಟ.

ಮದಕರಿನಾಯಕ ಅಂತಃಪುರದ ಬಾಗಿಲ ಬಳಿ ಸೇರಿದಾಗ, ಒಳಗೆ ಯಾರೋ –

"ಇಷ್ಟು ವರ್ಷ ಸಂಸಾರಮಾಡಿ, ಗಂಡನನ್ನು ಹೇಗೆ ಆಳಬೇಕು ಎಂದು ತಿಳಿದುಕೊಂಡಿಲ್ಲ. ನೀನಿಂಥ ಪೆದ್ದ ಹೆಂಗಸು ಎಂದೇ ಅರಸರ ಮಾವ, ಭಾವಮೈದುನರು ಹತ್ತರಲ್ಲಿ ಹನ್ನೊಂದನೆಯವರಾಗಿದ್ದಾರೆ. ಎಲ್ಲಾ ಮಾತಿಗೂ ಹೊರಗಿನವರು; ಮನೆಯವರಾದ ನಮ್ಮನ್ನು

ಯಾವುದಕ್ಕೂ ಕೇಳುವುದಿಲ್ಲ. ಅರಸನ ಹೆಂಡತಿಯಾದವಳು ಪರಿಚಾರಗಿತ್ತಿಯ ಹಾಗಿದ್ದರೆ ಅವಳನ್ನು ಹಡೆದವರನ್ನು, ಆಕೆಯ ಬೆನ್ನು ಬಿದ್ದವರನ್ನು ಅರಮನೆಯ ನಾಯಿಯೂ ಮೂಸುವುದಿಲ್ಲ. ಇನ್ನಾದರೂ ಈ ದಡ್ಡತನ ಬಿಟ್ಟು, ನೀನು ಈ ರಾಜ್ಯಕ್ಕೆ ನಾಗತಿ ಅನ್ನೋ ಹಾಗೆ ನಡೆದುಕೋ. ನಿನ್ನ ಕೈಹಿಡಿದವರಿಗೂ ಅದು ಅರ್ಥವಾಗಲಿ."

- ಎಂದು ಸಿಟ್ಟಿನಿಂದ ಹಂಗಿಸುವ ಧ್ವನಿ ಕೇಳಿಬಂದು, ಅಂತಃಪುರದ ಹೊರಗಿದ್ದ ದಾಸಿಗೆ ಉಸಿರು ಬಿಡದಂತೆ ಕೈಸನ್ನೆ ಮಾಡಿ, ನಿಂತಲ್ಲಿಯೇ ನಿಂತು, ಒಳಗಿನಿಂದ ಕೇಳಿಬರುತ್ತಿದ್ದ ಮಾತು ಹೇಗೆ ಮುಂದುವರಿಯುವುದೋ ಕೇಳಬೇಕೆಂದುಕೊಂಡು, ಕಿವಿಯಗಲಿಸಿ ಕೇಳುತ್ತಾ ನಿಂತ.

ಆತ ಹಾಗೆ ಕೇಳುತ್ತಿರುವಾಗಲೇ ಬಂಗಾರವ್ವನಾಗತಿ ತಪ್ತವಾದ ಧ್ವನಿಯಲ್ಲಿ –

"'ನಮ್ಮ ಸಂಸಾರದ ವಿಷಯದಲ್ಲಿ ನೀವು ತಲೆಹಾಕುವುದುಬೇಡ' ಅಂತ ನೂರು ಸಲ ಹೇಳಿದ್ದಾಗಿದೆ. ನಾವುಂಟು, ನಮ್ಮ ಸಂಸಾರವುಂಟು; ನಾವು ಹೇಗೆ ನಡೆದುಕೊಳ್ಳಬೇಕೆಂದು ಹೇಳಲು ಈ ಮನೆಯಲ್ಲಿ ನನ್ನ ಕೈಹಿಡಿದವರು, ಅವರಿಗಿಂತ ಹಿರಿಯರಾದವರು ಇದ್ದಾರೆ. ಇದರಲ್ಲಿ ನೀವು ಮೂಗುಚಾಚುವುದು ಬೇಡ. ಅಪ್ಪಾಜಿಯವರಿಗೂ ಇದೇ ಮಾತನ್ನು ನಾನು ಹೇಳಿದ್ದೇನೆ" – ಎಂದು ಉತ್ತರ ಕೊಟ್ಟಿದ್ದು ಕೇಳಿಸಿತು.

"ಹೂ- ಎಲ್ಲರಿಗೂ ಬುದ್ಧಿ ಹೇಳುವಷ್ಟು ದೊಡ್ಡವಳಾಗಿಬಿಟ್ಟೆ ನೀನು. ಹೀಗೇ ಇರು -ನಾಳೆ ಗುಡಿಕೋಟೆಯವರ ಮಗಳ ಮಗ ರಾಜನಾಗಿ, ನೀನು ಅವರಿಬ್ಬರ ಪರಿಚಾರಿಕೆ ಮಾಡಿಕೊಂಡಿರಬೇಕಾಗುತ್ತದೆ. ನಿನ್ನ ಹಣೆಯಲ್ಲಿ ಅಷ್ಟೇ ಬರೆದಿದ್ದರೆ ಅದನ್ನೇ ಅನುಭವಿಸು. ನಿನ್ನ 'ಪರಿಚಾರಿಕೆ ರಾಜ್ಯ' ಉಳಿಸಲು ನಾವು ಯಾಕೆ ನಮ್ಮ ಜನರ ಬಲಿ ಕೊಡಬೇಕು ? ನಮ್ಮ ದಾರಿ ಹಿಡಿದು ನಾವೂ ಹೋಗುತ್ತೇವೆ. ಈ ರಾಜ್ಯ ಇದ್ದರೆಷ್ಟು, ಹೋದರೆಷ್ಟು."

- ಮತ್ತಷ್ಟು ಏರಿದ ಸಿಟ್ಟಿನಲ್ಲಿ ಹೇಳಿದ ಮದಕರಿನಾಯಕನ ಭಾವಮೈದುನನ ಧ್ವನಿ ಕೇಳಿಸಿತು.

"ನಿಮ್ಮಿಂದಲೇ ಈ ರಾಜ್ಯ, ಕಿರೀಟ ಉಳಿದಿದೆ ಅಂತ ತಿಳಿದುಕೊಂಡಿದ್ದರೆ- ಹೋಗಿ, ಈ ದುರ್ಗ ರಕ್ಷಿಸಿಕೊಳ್ಳೋಕೆ ನಮ್ಮ ಕೈ ಹಿಡಿದೋರು ಸಮರ್ಥರಾಗಿದ್ದಾರೆ."

- ಕಡ್ಡಿ ಮುರಿದಷ್ಟು ಖಡಾಖಂಡಿತವಾಗಿ ಹೇಳಿದಳು, ಬಂಗಾರವ್ವನಾಗತಿ.

"ಇದೇ ನಿನ್ನ ಕೊನೆಯ ಮಾತೇ ?"

"ಇವತ್ತಿಗೂ ಅಷ್ಟೇ, ಇನ್ನು ಸಾವಿರ ಸಲ ಕೇಳಿದರೂ ಅಷ್ಟೆ. ಇರುವುದು ನಿಮ್ಮ ಧರ್ಮ ಅಂತ ಇದ್ದರೆ ಇರಿ, ಇಲ್ಲವಾದರೆ ಹೋಗಿ."

- ಕೆನ್ನೆಗೆ ಹೊಡೆದಷ್ಟು ನಿಷ್ಠುರವಾಗಿ ಹೇಳಿದಳು ಬಂಗಾರವ್ವನಾಗತಿ.

“ಇನ್ನು ನಿನ್ನ ಹಣೆಬರಹ. ಇದ್ದಾದರೂ ಇರು, ಹೊಂಡಕ್ಕಾದರೂ ಬೀಳು - ಇನ್ನು ನಿನ್ನ ಸುದ್ದಿಗೆ ನಾವ್ಯಾರೂ ಬರುವುದಿಲ್ಲ. ನಿಮಗೂ-ನಮಗೂ ಇದ್ದ ಸಂಬಂಧ ಕಡಿದುಹೋದ ಹಾಗೆಂದೇ ತಿಳಿದುಕೋ.”

“ಹೊಂಡವೋ-ಕೆಂಡವೋ - ನನ್ನ ಹಣೆಯಲ್ಲಿ ಬರೆದದ್ದು ನನಗೆ. ನನಗೆ ಯಾರು ಬಂದರೇನು, ಹೋದರೇನು, ನನ್ನ ಕೈಹಿಡಿದವರೊಬ್ಬರು ಕೈಬಿಡದಿದ್ದರೆ ಸಾಕು. ಆ ಭಾಗ್ಯ ಮಾತ್ರ ಕೆಡಿಸೋಕೆ ಬರಬೇಡಿ - ಬೆನ್ನಲ್ಲಿ ಬಿದ್ದ ಪುಣ್ಯಾತ್ಮರು”

- ಎಂದು ತಾತ್ಸಾರ ತುಂಬಿದ ಧ್ವನಿಯಲ್ಲಿ ಹೇಳಿದಳು ಬಂಗಾರವ್ವನಾಗತಿ.

“ಬರುವುದಿಲ್ಲ, ಇನ್ನೆಂದೂ ಬರುವುದಿಲ್ಲ”

- ಎಂದು ಹೇಳಿ, ಅಂತಃಪುರದೊಳಗೆ ಮಾತಾಡುತ್ತಿದ್ದಾತ, ಸಿಟ್ಟಿನಲ್ಲಿ ಧಪಧಪ ಕಾಲು ಹಾಕುತ್ತಾ ಹೊರಬಂದು, ಬಾಗಿಲ ಬಳಿ ನಿಂತ ಮದಕರಿನಾಯಕನನ್ನು ಕಂಡು, ಪೊದೆಮರೆಯಲ್ಲಿ ಉರಿಯುವ ವ್ಯಾಘ್ರನೇತ್ರವನ್ನು ನೋಡಿ, ಬೆದರಿ ಅತ್ತಿತ್ತ ನೋಡಿ, ಏನೊಂದೂ ಮಾತಾಡದೆ, ತಲೆತಗ್ಗಿಸಿಕೊಂಡು ಹೊರಟುಹೋದ.

ಹೆದರಿ ಬಿಲದೊಳಗೆ ನುಸುಳುವ ಹುಳುವನ್ನು ನೋಡುವವನಂತೆ ತನ್ನ ಭಾವಮೈದುನ ಮಲ್ಲಿಕಾರ್ಜುನನಾಯಕನತ್ತ ನೋಡಿ, ಮದಕರಿನಾಯಕ ಒಳಗೆ ಪ್ರವೇಶಿಸಿ ನೋಡಿದ –

ಅಂತಃಪುರದ ನಡುವೆ – ಕೆಂಡದಲ್ಲಿ ಕಡೆದ ವಿಗ್ರಹದಂತೆ ಕೆಂಪೇರಿ, ತಡೆಹಿಡಿದ ರೋಷದ ಒತ್ತಡದಿಂದ ಏದುಸಿರುಬಿಡುತ್ತಾ ನಿಂತ ಬಂಗಾರವ್ವನಾಗತಿಯನ್ನು,

ಬಂಗಾರವ್ವನಾಗತಿಯೂ ಒಳ ಬಂದ ತನ್ನ ಗಂಡನನ್ನು ನೋಡಿದಳು. ಆತನ ಗಂಡುಗಾಡಿಯನ್ನು ಎದೆಯಲ್ಲಿ ತುಂಬಿಕೊಳ್ಳುವಂತೆ ನೋಡಿ, ಮರುಗಳಿಗೆಯೇ ಅವನತ್ತ ನುಗ್ಗಿ ಬಂದು, ಬಿಗಿದಪ್ಪಿ ಎದೆಯಲ್ಲಿ ಮುಖ ಹುದುಗಿಸಿ ಬಿಕ್ಕಿಬಿಕ್ಕಿ ಅಳಲಾರಂಭಿಸಿದಳು.

ಅಷ್ಟು ಹೊತ್ತು ಏನೊಂದೂ ಮಾತನಾಡದೆ ಮದಕರಿನಾಯಕ, ದುಃಖದಿಂದ ನಸು ಕಂಪಿಸುತ್ತಿದ್ದ ಮಡದಿಯ ಬೆನ್ನನ್ನು ಮಮತೆಯಿಂದ ನೇವರಿಸಿ, ಆಕೆಯನ್ನು ಮತ್ತಷ್ಟು ಬಿಗಿಯಾಗಿ, ತನ್ನ ಮೈಯೊಳಗೇ ಹುದುಗಿಸಿಕೊಳ್ಳುವಂತೆ ತಬ್ಬಿ ಹಿಡಿದು ನಿಂತಿದ್ದ. ಅಷ್ಟು ಹೊತ್ತು ಬಂಗಾರವ್ವನಾಗತಿ ಮಾತನಾಡಲಿಲ್ಲ; ಆಕೆಯನ್ನು ಮಾತನಾಡಿಸುವ ಪ್ರಯತ್ನವನ್ನು ಮದಕರಿನಾಯಕನೂ ಮಾಡಲಿಲ್ಲ.

ಸ್ವಲ್ಪ ಹೊತ್ತಾದ ಬಳಿಕ, ಕೆಳಗಿನ ಉರಿ ಕಡಿಮೆಯಾದಂತೆ ಉಕ್ಕಿದ ಹಾಲು ತಗ್ಗುವಂತೆ ದುಃಖೋದ್ವೇಗಗಳಿಂದ ಕಂಪಿಸುತ್ತಿದ್ದ ಬಂಗಾರವ್ವನಾಗತಿಯ ದೇಹದ ಕಂಪನ ತಗ್ಗಿ, ಗಂಡನ

ಎದೆಯೊಳಗೆ ಹುದುಗಿಸಿದ ಮುಖವನ್ನು ಹೊರತೆಗೆದು, ಏನನ್ನೋ ಯಾಚಿಸುವ, ಕಾಂತಿ ಹೀನವಾದ ಕಣ್ಣುಗಳಿಂದ ಆತನ ಮುಖವನ್ನೇ ನೋಡುತ್ತಾ-

"ಈ ಮಾನಗೇಡಿ ಮಾತು ನಿಮ್ಮ ಕಿವಿಗೂ ಬಿದ್ದಿತೇ ?"

-ಎಂದು ಕೇಳಿದಳು, ನಿಟ್ಟುಸಿರಿನಷ್ಟು ಕ್ಷೀಣವಾದ ಧ್ವನಿಯಲ್ಲಿ.

"ಮಾನಗೇಡಿ ಮಾತು – ನೀನಾಡಿದ್ದು ಮೆಚ್ಚಿ ಮುತ್ತಿನಹಾರ ಕೊಡಬೇಕಾದಂಥ ಮಾತು. ಈಗ ಮುತ್ತಿನಹಾರ ಇಲ್ಲ, ಇರುವುದಿಷ್ಟೆ": - ಎಂದು ಆಕೆಯನ್ನು ಮನಸಾರೆ ಚುಂಬಿಸಿ-"

"ನೀನಿನ್ನು ಹೇಳುವುದೇನೂ ಉಳಿದಿಲ್ಲ. ಕೇಳುವುದನ್ನೆಲ್ಲಾ ನಾವು ಕೇಳಿಯಾಯಿತು. ಆದ್ದರಿಂದ ಏನೂ ಹೇಳಬೇಡ. ನಿನ್ನಂಥವಳು ಮಡದಿಯಾದದ್ದು ನನ್ನ ಪುಣ್ಯ"

-ಎಂದ ಮದಕರಿನಾಯಕ ಅಭಿಮಾನ, ಪ್ರೀತಿಗಳು ತುಂಬಿ ತುಳುಕುವ ಧ್ವನಿಯಲ್ಲಿ.

"ಈ ಹೊಲೆಮಾತು ಹೀಗೆ ನಿಮ್ಮ ಕಿವಿಗೆ ಬಿದ್ದಿದ್ದೇ ಒಳ್ಳೆಯದಾಯಿತು. ಹೇಳಲು ನನಗೆ ಬಾಯಿ ಬರುತ್ತಿರಲಿಲ್ಲ; ಮುಖವೂ ಇರುತ್ತಿರಲಿಲ್ಲ. ಆದರಿಷ್ಟೆ - ನಮ್ಮ ತವರವರ ಬಗ್ಗೆ ಹುಷಾರಾಗಿರಿ. ಈ ಮಾತು ನಮ್ಮವರ ಬಗ್ಗೆಯೇ ನಾನು ಹೇಳಬೇಕಾಗಿ ಬಂದದ್ದು ನನ್ನ ದೌರ್ಭಾಗ್ಯ."

- ತಲೆತಗ್ಗಿಸಿ ಹೇಳಿದಳು, ಬಂಗಾರವ್ವನಾಗತಿ.

"ಸುರಪುರದ ರಾಣಿಯ ತಲೆ ಕಡಿದು, ಅರಮನೆ ಲೂಟಿ ಮಾಡಿ, ಆ ರಕ್ತಕಳಂಕಿತ ಹಣದಿಂದ ನಿರ್ಮಾಣವಾದದ್ದು- ನಿಮ್ಮ ತವರವರ ರಾಜ್ಯ. ಆದರೆ ಆ ರಾಜ್ಯದಾಹ, ರಕ್ತದಾಹ ಅಲ್ಲಿಗೇ ತೀರಿತು ಎಂದುಕೊಂಡಿದ್ದೆ. ಆ ಕಸಿರು ಇನ್ನೂ ಅಷ್ಟು ಉಳಿದುಕೊಂಡಿದೆ, ಅವರ ವಂಶದವರ ರಕ್ತದಲ್ಲಿ. ಹೋಗಲಿಬಿಡು - ಅವರು ಮಾಡಿದ ಪಾಪ-ಪುಣ್ಯ ಅವರಿಗೆ. ಆ ಸೋಂಕು ನಿನ್ನ ರಕ್ತದಲ್ಲಿ ಬರಲಿಲ್ಲವಲ್ಲ - ಅದೇ ನನ್ನ ಭಾಗ್ಯ" – ಎಂದು ಹೇಳಿದ ಮದಕರಿನಾಯಕ.

"ನನ್ನ ರಕ್ತದಲ್ಲಿ ಏನಿತ್ತೋ-ಏನೋ, ನಿಮ್ಮ ಕೈಹಿಡಿದು ಪುಟಕ್ಕಿಟ್ಟ ಹಾಗಾಯಿತು."

"ಅಷ್ಟು ಹೇಳುವುದೇನು - 'ಬಂಗಾರವ್ವ' ಎಂಬ ಹೆಸರು ಸಾರ್ಥಕವಾಯಿತು ಎನ್ನು ನಿನ್ನಂಥ ಹೆಂಡಿರಿರುವಾಗ ದುರ್ಗಕ್ಕೆ ಯಾವ ಕೇಡೂ ತಟ್ಟುವುದಿಲ್ಲ."

"ತಟ್ಟುವುದೂ ಬೇಡ. ನನಗೆ ರಾಜ್ಯ ಬೇಡ, ಕೋಶ ಬೇಡ, ದೇವರು ಕೊಡದಿದ್ದ ಮಕ್ಕಳೂ ಬೇಡ; ತಂದೆ, ತವರು ಯಾವುದೂ ಬೇಡ - ನಿಮ್ಮ ತೋಳಿನಲ್ಲಿ ಹೀಗೆ ಹಾಯಾಗಿ ಕಣ್ಣು ಮುಚ್ಚುವಷ್ಟು ಭಾಗ್ಯ ನನಗೆ ಸಾಕು"

- ಎಂದ ಬಂಗಾರವ್ವನಾಗತಿ, ಮತ್ತೇನನ್ನೋ ಜ್ಞಾಪಿಸಿಕೊಂಡು –

"ನನ್ನ ತವರವರ ಬಗ್ಗೆ ಅಷ್ಟು ಎಚ್ಚರವಾಗಿರಿ. ನನ್ನ ಅಣ್ಣಂದಿರು ನಿಮಗೆ ತೋಳುಗಳಾಗಬೇಕಿತ್ತು. ಆ ಭಾಗ್ಯ ನಾನು ಕೇಳಿಕೊಂಡು ಬರಲಿಲ್ಲ. ನನ್ನ ತವರವರೇ ನಿಮಗೆ ಅನ್ಯರಾದರು" – ಎಂದು ನಿಟ್ಟುಸಿರಿಟ್ಟು ಹೇಳಿದಳು.

"ಅದೆಲ್ಲಾ ಚಿಂತೆ ಬಿಡು. ನಾನು ಕೈಹಿಡಿದದ್ದು - ನಿನ್ನನ್ನು, ನಿನ್ನ ತವರನ್ನಲ್ಲ. ಆದರೂ ಇಷ್ಟು ಬೇಗ ಅವರ ಬಣ್ಣ ತಿಳಿದದ್ದು ಒಳಿತಾಯಿತು. ಬಂದದ್ದೆಲ್ಲಾ ಬರಲಿ, ಬಂಗಾರವ್ವನ ನಗುವೊಂದಿರಲಿ."

- ಎಂದವಳನ್ನು ಮತ್ತಷ್ಟು ಗಾಢವಾಗಿ ಆಲಂಗಿಸಿ ಹೇಳಿದ ಮದಕರಿನಾಯಕ.

೧೭

ಆ ದಿನ, ಸಭೆಯಲ್ಲಾದ ವಿರಸ ಅಷ್ಟಕ್ಕೇ ಮುಕ್ತಾಯವಾಗುತ್ತದೆ- ಎಂದು ನಂಬಿದ್ದ ಮದಕರಿನಾಯಕ. ಆದರದು ಅಷ್ಟಕ್ಕೇ ಮುಗಿಯಲಿಲ್ಲ.

ಸಮಾಲೋಚನಾಸಭೆಯಾದ ಮರುದಿನ ನಾಯಕರು, ಯುದ್ಧದಲ್ಲಿ ಭಾಗವಹಿಸಿ, ದುರ್ಗವನ್ನು ರಕ್ಷಿಸಿದ ವೀರಸೈನಿಕರಿಗೆ, ಅವರ ದಳವಾಯಿಗಳಿಗೆ ಯಥೋಚಿತವಾದ ಉಡುಗೊರೆ ಕೊಟ್ಟು ಸನ್ಮಾನಿಸಲು ಬಹಿರಂಗ ಸಭೆಯನ್ನು ಏರ್ಪಡಿಸಿ, ತನ್ನ ನೆರವಿಗೆ ಬಂದವರಿಗೆಲ್ಲಾ ಆಹ್ವಾನ ಕಳಿಸಿದಾಗ, ಆಹ್ವಾನಿತರಾದವರೆಲ್ಲರೂ ಬಂದರೂ, ಜರಿಮಲೆಯ ಪಾಳಯಗಾರ ಬೊಮ್ಮಣ್ಣನಾಯಕ, ಆತನ ಇಬ್ಬರು ಮಕ್ಕಳು, ಸೇನೆಯ ದಂಡನಾಯಕರು – ಯಾರೊಬ್ಬರೂ ಬರಲಿಲ್ಲ. ಹಾಲಿನಲ್ಲಿ ಹುಳಿ ಹಿಂಡಿದಂತೆ 'ಅಂತರಂಗದಲ್ಲಿ ಅವಮಾನ, ಬಹಿರಂಗದಲ್ಲಿ ಸನ್ಮಾನ. ನಮಗಿದು ಬೇಕಿಲ್ಲ. ನಿಮ್ಮ ಹಿತೈಷಿಗಳು ಯಾರಿದ್ದಾರೋ ಅವರಿಗೆ ಸನ್ಮಾನ ಮಾಡಿ. ನಮ್ಮ ಕೆಲಸ ತೀರಿತು. ಮನೆಗೆ ಹಿಂದಿರುಗಲು ಅಪ್ಪಣೆಕೊಡಿ' – ಎಂದು ಆಹ್ವಾನವನ್ನು ತಿರಸ್ಕರಿಸಿ, ಮುಖಮುರಿದಂತೆ ಪ್ರತ್ಯುತ್ತರ ಹೇಳಿಕಳಿಸಿದರು.

ಅಷ್ಟೇ ಅಲ್ಲ – ಕಿಕ್ಕಿರಿದು ನೆರೆದ ಸನ್ಮಾನಸಭೆಯಲ್ಲಿ ಜರಿಮಲೆಯವರೊಬ್ಬರ ಮುಖವೂ - ಕೊನೆಗೆ ಕುದುರೆಲದ್ದಿ ಎತ್ತುವ ಆಳೂ- ಕಾಣದೆ, ಮದಕರಿನಾಯಕನಿಗೆ ತುಂಬಿದೋಲಗದಲ್ಲಿ ಮುಖಭಂಗವಾದಂತಾಗಿ, ಸಭೆಯ ಸಂತೋಷವೆಲ್ಲವೂ ಈ ದುಮ್ಮಾನದಲ್ಲಿ ಉಡುಗಿಹೋಗಿ, ಸಭೆ ಮುಗಿದ ಬಳಿಕ –

"ನಮ್ಮವರೇ ನಮಗೆ ಹೀಗೆ ಮಾಡಿದರಲ್ಲಾ"

-ಎಂದು ವ್ಯಥೆಪಟ್ಟ ಪರಶುರಾಮನಾಯಕನಿಗೆ –

“ತಾವಿಲ್ಲದಿದ್ದರೆ ದುರ್ಗ ಮುಳುಗಿಹೋಗುತ್ತದೆ ಎಂದು ತಿಳಿದುಕೊಂಡಿದ್ದಾರೆ, ಇವರು. ಆಯಿತು - ಹೋಗಲಿ, ಇನ್ನು ಹೋಗುವವರಿಗೆ ವೀಳ್ಯಕೊಡುವ ಅಗತ್ಯವೂ ಇಲ್ಲ. 'ಉಡುಗೊರೆ ಬೇಡ' ಎಂದವರು ಬರಿಗೈಯಲ್ಲಿ ಹೋಗಲಿ.”

- ಎಂದು ರೋಸಿಹೋಗಿ, ನಿರ್ದಾಕ್ಷಿಣ್ಯವಾಗಿ ಹೇಳಿದ.

“ಹೀಗಾಗಬಾರದಾಗಿತ್ತು, 'ನಮ್ಮ ಮನೆಯಲ್ಲಿ ಬಿರುಕಿದೆ' ಎಂದು ಬಹಿರಂಗವಾಗಬಾರದಾಗಿತ್ತು. ಹೊರಗಿನವರ ಇದಿರು ನಾವು ತಲೆತಗ್ಗಿಸುವಂತಾಯಿತು. ಸಭೆಯಲ್ಲಾದುದು ಸಣ್ಣ ವಿಷಯ. ನೀವು ನಿಮ್ಮ ಮಾವನವರಿಗೆ ಸಮಾಧಾನ ಹೇಳಬೇಕಾಗಿತ್ತು”

- ಎಂದ ಪರಶುರಾಮನಾಯಕ, ವಿಷಾದದ ಧ್ವನಿಯಲ್ಲಿ.

“ಅದಕ್ಕೆ ನಾವೂ ಸಿದ್ಧವಾಗಿದ್ದೆವು, ಪರಶುರಾಮಣ್ಣ ಆದರೆ ಜರಿಮಲೆಯವರ ಅಸಮಾಧಾನದ ಬೇರು ಬಹಳ ಆಳಕ್ಕಿಳಿದಂತಿದೆ.”

- ಎಂದು ಅಂತಃಪುರದಲ್ಲಿ ತಾನು ಕೇಳಿದುದನ್ನು ಸೂಕ್ಷ್ಮವಾಗಿ ತಿಳಿಸಿ –

“ಅತ್ತಿತ್ತಲಲ್ಲ, ಸಿಂಹಾಸನದ ಮೇಲೇ ಅವರ ಕಣ್ಣು ಬಿದ್ದಂತಿದೆ. ಯುದ್ಧದ ಗಡಿಬಿಡಿಯಲ್ಲಿ ನಾವು ಎಲ್ಲ ಸೂಕ್ಷ್ಮವನ್ನು ವಿಚಾರಿಸುವುದಾಗಲಿಲ್ಲ. ಈಗ ಅನಿಸುತ್ತದೆ - ಇವರ ಬಗ್ಗೆ ನಾವು ಎಚ್ಚರವಾಗಿರಬೇಕು. 'ನಮ್ಮ ಮಾವ, ಭಾವಮೈದುನಂದಿರೊಂದಿಗೆ ಯುದ್ಧ ಕಾಲದಲ್ಲಿ ಯಾರು ಹೆಚ್ಚು ಹೊಕ್ಕಾಡುತ್ತಿದ್ದರು? - 'ಎಂದು ಪತ್ತೆಹಚ್ಚಲು ಕಾಶಣ್ಣನಾಯಕರಿಗೆ ಹೇಳು. ಅವರ ಓಡಾಟದ ಬಗ್ಗೆ ನಮಗೆ ಪೂರ್ಣವಿವರ ಬೇಕು.”

-ಎಂದು ಹೇಳಿದ ಮದಕರಿನಾಯಕ.

“ಇದೇನು ನಾಚಿಕೆಗೇಡಿನ ವಿಷಯ, ಅಣ್ಣ, ನಮ್ಮವರ ಮೇಲೇ ನಾವು ಬೇಹುಗಾರಿಕೆ ಮಾಡಬೇಕೇ ?” – ವಿಷಾದ ತುಂಬಿದ ಧ್ವನಿಯಲ್ಲಿ ಹೇಳಿದ ಪರಶುರಾಮನಾಯಕ.

“ಅದು ನಮ್ಮ ದುರಾದೃಷ್ಟ, ನಾವು ಹೆಣ್ಣು ಕೊಟ್ಟವರು, ನಾವು ಹೆಣ್ಣು ತಂದವರು ಯಾರೂ ನಮಗೆ ನೆಂಟರಾಗಿ, ಬೆಂಗಾವಲಾಗಿ ನಿಲ್ಲಲಿಲ್ಲ. ಮೂಲಪುರುಷ ಮತ್ತಿತಿಮ್ಮಣ್ಣನಾಯಕರ ಕಾಲದಲ್ಲೇ ಹರಪನಹಳ್ಳಿಯ ಅಳಿಯ ದಾದನಾಯಕ ದುರ್ಗಕ್ಕೆ ವೈರಿಯಾಗಿ, ಮನೆದೇವತೆಗೆ ನಾವು ಎರವಾಗಿ, ಆ ಅಳಿಯನನ್ನು ಸೋಲಿಸಿ, ಬರೀ ಉತ್ಸವ ವಿಗ್ರಹ ತಂದು ತೃಪ್ತಿಪಟ್ಟುಕೊಳ್ಳಬೇಕಾಯಿತು. ನಮ್ಮ ಭಾಗ್ಯ ದೊಡ್ಡದು – ಉಚ್ಚಂಗಿದುರ್ಗದ ತಾಯಿ ನಾಯಕನಹಟ್ಟಿಯ ಕೆರೆಯಲ್ಲಿ ಪ್ರತ್ಯಕ್ಷವಾಗಿ ನಮಗೆ, ಊರವರಿಗೆ ಪೂಜಿಸಲು ದೇವರು, ಗುಡಿ ಆದ ಹಾಗಾಯಿತು. ಆ ದಿನದಿಂದ ಈ ದುರ್ವಿಧಿ ನಮ್ಮ ಬೆನ್ನು ಹತ್ತಿದೆ, ಈಗಲೂ ಬಿಟ್ಟಿಲ್ಲ.

ತರೀಕೆರೆಯವರಾದರು, ಮತ್ತೋಡಿನವರಾದರು, ಈಗ ಜರಿಮಲೆಯವರ ಸರದಿ. ಇವರದೂ ನಡೆಯಲಿ, ಸದ್ಯ ನಮಗೆ ಮಗಳನ್ನು ಕೊಡದೆ ತಾಯಿ ಕಾಪಾಡಿದಳು"

- ಎಂದು ಖೇದದ ನಿಟ್ಟುಸಿರಿಟ್ಟು ಹೇಳಿ –

"ಈಗ ಅದೆಲ್ಲಾ ಚಿಂತಿಸಿ ಫಲವಿಲ್ಲ. ನಮ್ಮವರು-ತಮ್ಮವರು ಎಂಬ ದಾಕ್ಷಿಣ್ಯಕ್ಕೆ ಇದು ಕಾಲವೂ ಅಲ್ಲ, ಕಾಶಣ್ಣನಾಯಕರಿಗೆ ನಾವು ಹೇಳಿದುದನ್ನು ಹೇಳು. ದುರ್ಗಕ್ಕಿಂತ ದೊಡ್ಡವರು ಯಾರೂ ಇಲ್ಲ" – ಎಂದ ಮದಕರಿನಾಯಕ.

"ಈಗ ಹೇಗೂ ಅವರು ಊರಿಗೆ ಹೊರಟಿದ್ದಾರೆ. ಈಗ ಅವರ ಪೂರ್ವೋತ್ತರ ತಿಳಿದು ಮಾಡುವುದೇನಿದೆ, ಅಣ್ಣ?"

"ದುರ್ಗಕ್ಕಿನ್ನೂ ಗಂಡಾಂತರದ ದಿನಗಳು ಕಳೆದಿಲ್ಲ, ಪರಶುರಾಮಣ್ಣ. ಆದ್ದರಿಂದ ಇಲ್ಲಿರುವವರಿಗಿಂತ ಹೊರಗೆ ಹೋಗುವವರ ಬಗ್ಗೆಯೇ ನಾವು ಹೆಚ್ಚು ಎಚ್ಚರವಾಗಿರಬೇಕು. ಸ್ವಲ್ಪ ಅನುಮಾನ ಬಂದರೂ ಸರಿಯೆ- ತಂದೆಯೋ, ಮಕ್ಕಳೋ ಇಲ್ಲಿದ್ದು ಉಳಿದವರು ಹೋಗಲಿ."

"ಇದೇನು ಮಾತು, ಅಣ್ಣ. ಹೈದರಾಲಿ ನಮ್ಮನ್ನು ಒತ್ತೆ ಕೇಳಿದ ಹಾಗೆ ನೀವೂ ನಿಮ್ಮ ಸ್ವಂತ ಸಂಬಂಧಿಕರೊಂದಿಗೆ ನಡೆದುಕೊಳ್ಳುವುದೆ ? ನಮ್ಮಬಗ್ಗೆ ಜನ ಏನು ಅಂದುಕೊಂಡಾರು?"

"ಅಂದುಕೊಂಡವರು ದುರ್ಗ ಉಳಿಸುವುದಿಲ್ಲ. ನಾವು ಹೇಳಿದಷ್ಟು ಮಾಡು ಪರಶುರಾಮಣ್ಣ. ಗರುಡಗೆರೆ ಇಲ್ಲದವನು ಹಾವಿನೊಡನೆ ಸರಸಕ್ಕೆ ಹೋಗುವುದಿಲ್ಲ – ಹಾಗೇ ಇವರೂ. ಒಳಗೇನೋ ಇಲ್ಲದಿದ್ದರೆ ನಮ್ಮನ್ನಿಷ್ಟು ಧಿಕ್ಕರಿಸಿ ನಡೆಯುವಷ್ಟು ದೊಡ್ಡಸ್ತಿಕೆ ಬರುತ್ತಿರಲಿಲ್ಲ. ಬಂದ ಅಪಖ್ಯಾತಿ ನಮಗೆ ಬರಲಿ."

"ನೀವು ಹೀಗೆ ಮಾಡಿದರೆ ಬೇರೆಯವರು ಹಾಗಿರಲಿ, ಅತ್ತಿಗೆಯವರು ಏನು ಅಂದುಕೊಂಡಾರು ?"

"ಬಂಗಾರವ್ವನೇ – ತಪ್ಪಿ ಈ ತಂದೆಗೆ ಮಗಳಾದಳು. ಇವರ ಬುದ್ಧಿ ಹೇಗೆಂದು ನಮಗಿಂತ ಅವಳಿಗೇ ಚೆನ್ನಾಗಿ ತಿಳಿದಿದೆ. ಆದ್ದರಿಂದ ನೀನು ಅದಾವುದನ್ನೂ ಚಿಂತಿಸಬೇಕಾಗಿಲ್ಲ. ನಾವು ಹೇಳಿದಷ್ಟು ಮಾಡು. ಮೊದಲು ಕಾಶಣ್ಣನಾಯಕರನ್ನು ವಿಚಾರಿಸು. ಅವರಿಂದ ಸುದ್ದಿ ಬರುವವರೆಗೆ ತಂದೆ-ಮಕ್ಕಳು ಇಲ್ಲಿರಲಿ."

-ಎಂದು ಅಂತಿಮ ನಿರ್ಧಾರ ಮಾಡಿದಂತೆ ಹೇಳಿದ, ಮದಕರಿನಾಯಕ.

"ನಿಮ್ಮ ಚಿತ್ತ" – ಎಂದಷ್ಟೇ ಹೇಳಿದ ಪರಶುರಾಮನಾಯಕ.

* * *

ಮದಕರಿನಾಯಕ ಅಪೇಕ್ಷಿಸಿದಂತೆ ಪರಶುರಾಮನಾಯಕ, ಕಾಶಣ್ಣನಾಯಕನನ್ನು ಅದೇ ದಿನ ತನ್ನ ಚಾವಡಿಗೆ ಕರೆಸಿಕೊಂಡು, ನಾಯಕರು ಹೇಳಿದ ವಿಷಯವನ್ನು ಆತನಿಗೆ ತಿಳಿಸಿ –

"ಅವಸರವಾಗಿ ಅವರ ಬಗ್ಗೆ ವರದಿ ಬೇಕಂತೆ" – ಎಂದು ಹೇಳಿದ.

ತಾನು ಹೇಳಿದುದನ್ನು ಕೇಳಿ ಕಾಶಣ್ಣನಾಯಕ ಚಕಿತನಾಗುತ್ತಾನೆ ಎಂದು ನಿರೀಕ್ಷಿಸಿದ್ದ ಪರಶುರಾಮನಾಯಕ. ಆದರೆ ಕೊತ್ವಾಲಚಾವಡಿ ದಳವಾಯಿ ಕಾಶಣ್ಣನಾಯಕ ಚಕಿತನಾಗುವ ಬದಲು, ಮಾತಿಗಿದ್ದ ಎಂಥದೋ ಆತಂಕ ತೊಲಗಿದಂತೆ ಸಮಾಧಾನದ ನಿಟ್ಟುಸಿರುಬಿಟ್ಟು ಹೇಳಿದ-

"ಜರಿಮಲೆಯವರ ವಿಷಯ ನಾನೇ ತಮ್ಮಲ್ಲಿ ಅರಿಕೆಮಾಡಿಕೊಳ್ಳಬೇಕು ಎಂದಿದ್ದೆ. ಆದರೆ ಪ್ರಭುಗಳ ಖಾಸಾ ಮಾವಂದಿರು, ಅವರ ಬಗ್ಗೆ ನಾವು ಮೇಲೆ ಬಿದ್ದು ಹೇಳುವುದು ಹೇಗೆ ಎಂದು ಸುಮ್ಮನಿದ್ದೆವು. ಈಗ ನಮಗೂ ಸಮಾಧಾನವಾಯಿತು."

ಆ ಮಾತು ಕೇಳಿ ಪರಶುರಾಮನಾಯಕ ಕ್ಷಣಕಾಲ ಅವಾಕ್ಕಾಗಿ, ಕೇಳಿದ –

"ಅದೇನು ವಿಷಯ, ದಳವಾಯಿಗಳೇ ?"

"ಅವರ ರೀತಿ ಚೆನ್ನಾಗಿಲ್ಲ, ಮಹಾಸ್ವಾಮಿ. ಬೊಮ್ಮಣ್ಣನಾಯಕರು ತಾವೇ ದುರ್ಗದ ರಕ್ಷಣೆಯ ಹೊಣೆಹೊತ್ತವರಂತೆ ಅವರಿವರಿಂದ ತಮ್ಮ ಸೇನೆಗೆ ಅಗತ್ಯವಾದಂತೆ 'ಐಬು ಜಾಗ ಯಾವುದು, ಕಳ್ಳಗಿಂಡಿಗಳು ಯಾವ ಕಡೆ, ಹಾಗೆ-ಹೀಗೆ' ಎಂದು ನೂರೆಂಟು ನೆಪ ಹೇಳಿ ಏನೇನೋ ವಿಚಾರಿಸುತ್ತಿದ್ದರಂತೆ. ಆ ಸುದ್ದಿ ಬಂದಾಗ ನಾವು, ಅವರಿಗೆ ಅನುಮಾನ ಬರದ ಹಾಗೆ ಆದಷ್ಟು ಜನಕ್ಕೆ ಎಚ್ಚರಿಕೆ ಹೇಳಿದ್ದಾಯಿತು. ಆದರೆ ಗದ್ದಲದ ದಿನಗಳಲ್ಲಿ ಅವರು ಯಾರಿಂದ ಏನು ತಿಳಿದುಕೊಂಡರೆಂದು ಹೇಳುವುದು ಕಷ್ಟ. ಅಲ್ಲದೆ ನಾಯಕರ ಮಾವಂದಿರ ಓಡಾಟದ ಮೇಲೆ ಬಿಗಿ ಕಾವಲು ನಮಗೂ ಕಷ್ಟವಾಯಿತು. ಈ ವಿಷಯ ನಿಮ್ಮಲ್ಲಿ ಅರಿಕೆ ಮಾಡಿಕೊಳ್ಳಬೇಕೆಂದಿದ್ದೆ. ಈಗ ದೊಡ್ಡವರಿಂದಲೇ ಅಪ್ಪಣೆ ಬಂದದ್ದು ಒಳ್ಳೆಯದಾಯಿತು. 'ಚೋಟುದ್ದ ನಾಲಗೆ, ಮಾರುದ್ದ ಮಾತು' ಅಂತ ತಾವು ಹೇಳಬಾರದು. ಜರಿಮಲೆ ಜನ ಅಷ್ಟು ನಂಬಿಕೆಗೆ ಅರ್ಹರಲ್ಲ. ಮೊದಲಾಗಿದ್ದರೆ, ಅವರಷ್ಟರನ್ನೂ ಜಾಲಾಡಬಹುದಾಗಿತ್ತು, ಆದರೆ ಈಗ ಅವರೆಲ್ಲಾ ಊರಿಗೆ ಹೊರಟು ನಿಂತಿದ್ದಾರೆ. ಈಗ ಹೇಗೆ ಮಾಡಬೇಕು ಎಂದರೆ ಹಾಗೆ ಮಾಡುತ್ತೇನೆ."

ಕಾಶಣ್ಣನಾಯಕ ಅಷ್ಟು ವಿವರವಾಗಿ ಹೇಳಿದುದನ್ನು ಕೇಳಿಯೂ ಪರಶುರಾಮನಾಯಕ ಕೇಳಿದ –

"ಈಗ ಆಗಿಹೋದದ್ದರ ಬಗ್ಗೆ ಚಿಂತಿಸಿ ಫಲವಿಲ್ಲ. ನಿಮಗೀಗ ಯಾರ ಬಗ್ಗೆ ಹೆಚ್ಚು ಅನುಮಾನ – ತಂದೆಯೋ, ಮಕ್ಕಳೋ ?"

“ಆಡಿದ ಮಾತನ್ನು ತಾವು ತಪ್ಪು ತಿಳಿದುಕೊಳ್ಳಬಾರದು.”

“ಇಲ್ಲ, ಹೇಳಿ.”

“ನಮಗೇನೋ ತಂದೆಯವರ ಮೇಲೇ ಸ್ವಲ್ಪ ಗುಮಾನಿ. ’ದೊರೆಗಳ ಮಾವ’ ಎಂಬ ಅಧಿಕಾರ ಚಲಾಯಿಸಿ ಹೆಚ್ಚು ಜನರ ಜೊತೆ ಓಡಾಡುತ್ತಿದ್ದವರೂ ಅವರೇ, ಜನ ಬಾಯಿಬಿಡುತಿದ್ದುದೂ ಅವರಿಗೇ. ಈ ವಿಷಯ ಪ್ರಭುಗಳಿಗೆ ತಿಳಿಸಿ.”

-ಎಂದ ಕಾಶಣ್ಣನಾಯಕ ಹೇಳಿದ –

“ಹಾಗೇ ’ಇಷ್ಟು ದಿನ ಹೇಳದ ಅಪರಾಧವನ್ನು ಕ್ಷಮಿಸಬೇಕು’ ಎಂದು ಹೇಳಿ.”

“ಹೇಳುತ್ತೇನೆ, ಮತ್ತೇನಾದರೂ ಹೇಳುವುದಿದೆಯೇ ?”

- ಪರಶುರಾಮನಾಯಕ, ಕೇಳಿದ.

“ಇನ್ನೊಂದು ಮಾತು - ತಮಗೆ ಹೇಳಬೇಕು, ಮಹಾಸ್ವಾಮಿ. ನಿಮ್ಮ ಚಾವಡಿಯ ಶ್ರೀಪತಿರಾಯರು - ಕಳ್ಳಿನರಸಪ್ಪಯ್ಯನವರ ಮಕ್ಕಳು - ಅವರ ಸಹವಾಸವೂ ಚೆನ್ನಾಗಿಲ್ಲ - ’ಯಾರಿಗೆ ಆಫೀಮು ಬೇಕಾದರೂ ಶ್ರೀಪತಿರಾಯರ ಹತ್ತಿರ ಸಿಗುತ್ತೆ’ ಎಂಬ ಮಾತು ಕಿವಿಗೆ ಬಿತ್ತು. ಅವರನ್ನಷ್ಟು ಬಿಗಿ ಮಾಡಬೇಕು. ಇಂಥ ಕೆಟ್ಟ ಚಟದ ಜನಕ್ಕೆ ಸಣ್ಣವರ ಸಹವಾಸ ಹೆಚ್ಚು. ಮೊದಲಿನಿಂದಲೂ ಅವರ ಚಾಳಿ ಚೆನ್ನಾಗಿಲ್ಲ ಎಂದೇ ಹಡೆದವರಿಂದ ದೂರವಾದರು. ಆದರೆ ಈಗಲೂ ಬುದ್ಧಿ ಬಂದಿಲ್ಲ.”

“ಆತನಿಗದೊಂದು ಕೆಟ್ಟ ಚಟ. ಅದಲ್ಲದೆ ಬೇರಾವ ದುರ್ಗುಣವೂ ನಮಗೆ ತಿಳಿದಂತೆ ಆತನಲ್ಲಿ ಕಂಡುಬಂದಿಲ್ಲ. ಏನೋ ದೊಡ್ಡ ಮನೆಯಲ್ಲಿ ಹುಟ್ಟಿ, ಬಹಳ ಕಷ್ಟ ಪಟ್ಟವರು ಎಂದು ನಾವೂ ಸುಮ್ಮನಿದ್ದೇವೆ. ಅವರ ಈ ವಿಷಯ ನಮಗೂ ಗೊತ್ತು. ಆದರೆ ಬುದ್ಧಿ ಹೇಳಿ ಉಪಯೋಗವಿಲ್ಲ. ನಾವೇ ಅವರಿಗೆ ವಾರಕ್ಕಿಷ್ಟು ಅಫೀಮು ಕೊಡಿ ಎಂದು ಗಾಂಜಾ, ಅಫೀಮು ಮಾರುವವರಿಗೆ ಹೇಳಿದ್ದೇವೆ. ಹೇಳಿದ ಕೆಲಸ ಮಾಡುತ್ತಾರೆ. ಇಲ್ಲ - ದಂ ಹೊಡೆದು ಮಲಗಿರುತ್ತಾರೆ, ಇರಲಿ ಬಿಡಿ.”

- ಎಂದು ಶ್ರೀಪತಿರಾಯನ ಬಗ್ಗೆ ಕನಿಕರದಿಂದ ಹೇಳಿದ ಪರಶುರಾಮನಾಯಕ.

“ಈ ನಿಶಾವಸ್ತುಗಳ ಬಾಬು ಮಹಾಸ್ವಾಮಿಯವರಿಗೆ ಗೊತ್ತಿಲ್ಲ. ಅವರೇ ಕುಡಿದು ಕೆಟ್ಟರೆ ಅವರ ಹಣೆಬರಹ ಎನ್ನಬಹುದು. ಆದರೆ ತಾನು ಕೆಟ್ಟ ಕೋತಿ ಮನ ಕೆಡಿಸಿತು ಅನ್ನೋ ಹಾಗೆ ಬೇರೆಯವರಿಗೂ ಚಟ ಅಂಟಿಸುತ್ತಾರೆ, ಚಟ ಕಲಿತವರು. ಅದೇ ಭಾರಿ ಅಪಾಯ. ಅವರನ್ನು ನೀವಷ್ಟು ಬಿಗಿ ಮಾಡಬೇಕು. ಪ್ರಧಾನಿಚಾವಡಿಯವರ ಮನೆ ಭಂಗಿಮಠ ಆಗ ಬಾರದು” – ಕಾಶಣ್ಣನಾಯಕ ಹೇಳಿದ.

"ಆಯಿತು, ಮತ್ತೇನಿದೆ - ?"

"ಇವತ್ತಿಗಿಷ್ಟು ಮಹಾಸ್ವಾಮಿ, ಇವತ್ತಿನವರೆಗೆ ನಮ್ಮ ಜನಕ್ಕೆಲ್ಲಾ ಹೊರಕಾವಲ ಕೆಲಸವೇ ಹೆಚ್ಚಾಗಿತ್ತು. ಇನ್ನು ಊರೊಳಗೆ ಬಿಗಿ ಮಾಡಲು ಬಿಡುವು ಸಿಕ್ಕಿತು. ಈ ಏಳೆಂಟು ತಿಂಗಳಲ್ಲಿ ದುರ್ಗದಲ್ಲಿ ಏನೇನು ಕಸ, ಕಸಿರು ಬಂದು ಸೇರಿಕೊಂಡಿದೆಯೋ - ನೋಡಿ, ಸಮಯ ಬಂದಾಗ ತಿಳಿಸುತ್ತೇನೆ. ಸದ್ಯಕ್ಕಂತೂ ಜರಿಮಲೆನಾಯಕರ ವಿಷಯ ಪ್ರಭುಗಳಿಗೆ ತಿಳಿಸಿ, ತಡಮಾಡ ಬೇಡಿ" - ಎಂದು ಹೇಳಿದ ಕಾಶಣ್ಣನಾಯಕ.

* * *

ಕಾಶಣ್ಣನಾಯಕ ಹೇಳಿದುದನ್ನು ಆ ದಿನವೇ ಮದಕರಿನಾಯಕನಿಗೆ ವರದಿಮಾಡಿದ, ಪರಶುರಾಮನಾಯಕ. ಆತ ಹೇಳಿದುದನ್ನು ಕೇಳಿ ಮದಕರಿನಾಯಕ ಯೋಚಿಸಿ, ಏನೋ ನಿರ್ಧಾರಕ್ಕೆ ಬಂದಂತೆ –

"ಆಯಿತು – ಇದಕ್ಕೆ ತಕ್ಕ ವ್ಯವಸ್ಥೆ ಮಾಡುತ್ತೇವೆ" – ಎಂದು ಹೇಳಿದ.

ಅವರಿಬ್ಬರೂ ಮಾತಾಡುತ್ತಿರುವಾಗಲೇ, 'ಜರಿಮಲೆಯ ಬೊಮ್ಮಣ್ಣನಾಯಕರ ಹಿರಿಯ ಮಗ ಮಲ್ಲಿಕಾರ್ಜುನನಾಯಕ, ನಾಯಕರನ್ನು ಕಾಣಲು ಬಂದಿದ್ದಾರೆ' ಎಂಬ ವಿಷಯ ಬಕ್ಷಿಗಳಿಂದ ತಿಳಿದು –

"ಅವರನ್ನು ಕರೆತನ್ನಿ" – ಎಂದು ಹೇಳಿದ ಮದಕರಿನಾಯಕ.

ಬಕ್ಷಿಗಳೊಂದಿಗೆ ಬಂದ ಮಲ್ಲಿಕಾರ್ಜುನನಾಯಕ, ನಾಯಕರು ತೋರಿಸಿದ ಆಸನದಲ್ಲಿ ಕುಳಿತು –

"ನಾಳೆ ಮುಂಜಾನೆ ನಾವು ಹೊರಡುತ್ತೇವೆ. ಅನುಮತಿ ಕೊಡಬೇಕು" - ಎಂದು ಕೇಳಿದ.

"ಇಷ್ಟು ದಿನ ಯುದ್ಧದ್ದೇ ಗದ್ದಲವಾಯಿತು. ನಿಮ್ಮ ಯೋಗಕ್ಷೇಮ ವಿಚಾರಿಸಿಕೊಂಡು, ತಕ್ಕ ಆದರಾತಿಥ್ಯ ಮಾಡುವುದೂ ಆಗಲಿಲ್ಲ. ಈಗ ಇಷ್ಟು ಬೇಗ ಹೋಗುತ್ತೇವೆ ಎನ್ನುತ್ತೀರ, ಏಕೆ – ಎರಡು ದಿನ ಇದ್ದರಾಗದೆ ?"

- ಎಂದು ಸಹಜ ವಿಶ್ವಾಸವಿದ್ದ ಧ್ವನಿಯಲ್ಲಿ ಕೇಳಿದ ಮದಕರಿನಾಯಕ.

"ಆತಿಥ್ಯ, ಉಪಚಾರ ಸಾಕಷ್ಟಾಯಿತು. ಮತ್ತೆ ಬರುವುದೂ ಇದೆ, ಆಗ ಎರಡು ದಿನ ಹೆಚ್ಚಾಗಿ ನಿಂತರಾಗುತ್ತದೆ. ಈಗ ಹೋಗುವುದು ಅನಿವಾರ್ಯವಾಗಿದೆ, ಕ್ಷಮಿಸಿ – ಅಪ್ಪಣೆ ಕೊಡಬೇಕು" – ಎಂದು ಕೊಂಚ ಗಡುಸಾದ ಧ್ವನಿಯಲ್ಲೇ ಹೇಳಿದ ಮಲ್ಲಿಕಾರ್ಜುನನಾಯಕ.

“ಎಂದಿದ್ದರೂ ಹೋಗುವವರೇ. ನಗುನಗುತ್ತಾ ಹೋಗಿದ್ದರೆ ಚೆನ್ನಾಗಿತ್ತು. ಏನೋ ಸಣ್ಣ ಕಾರಣಕ್ಕೆ ಮಾವನವರಿಗೆ ನಮ್ಮ ಬಗ್ಗೆ ಅಸಮಾಧಾನವಾಗಿದೆ. ದೊಡ್ಡವರು ನಮ್ಮ ಬಗ್ಗೆ ಬೇಸರಪಟ್ಟುಕೊಂಡು ಹೋಗುವುದು ನಮಗೆ ಶ್ರೇಯಸ್ಕರವಲ್ಲ. ನಮ್ಮ ಉಪಚಾರಕ್ಕಾಗಿ ನಿಮ್ಮ ಕಾರ್ಯಕ್ಕೂ ತೊಂದರೆಯಾಗಬಾರದು. ತಾವೆಲ್ಲಾ ಹೋಗಿ ಬನ್ನಿ, ಮಾವನವರು ನಾಲ್ಕು ದಿನ ಇಲ್ಲಿದ್ದು ಬಳಿಕ ಬರುತ್ತಾರೆ. ಅವರನ್ನು ಬೇಸರದ ಹೊತ್ತಿನಲ್ಲಿ ಕಳಿಸಲು ನಮಗೆ ಇಚ್ಛೆಯಿಲ್ಲ” – ಎಂದು ಆ ಮಾತು ಅಲ್ಲಿಗೆ ಮುಗಿಯಿತು ಎಂಬಂತೆ ಹೇಳಿ –

“ನೀವು ಜರಿಮಲೆ ಸೇರಿದ ಕೂಡಲೇ ಅಲ್ಲಿನ ವಿಷಯಗಳಿಗೆ ಪತ್ರ ಕಳುಹಿಸಿ. ನಿಮ್ಮ ಸುಖಪ್ರಯಾಣಕ್ಕೆ ಬೇಕಾದ ಸಿದ್ಧತೆಗಳನ್ನೆಲ್ಲಾ ಪ್ರಧಾನಿಗಳು ಮಾಡುತ್ತಾರೆ”

-ಎಂದ ಮದಕರಿನಾಯಕ.

“ಅಪ್ಪಾಜಿಯವರೂ ನಮ್ಮೊಂದಿಗೆ ಹೊರಡಲು ಆತುರವಾಗಿದ್ದಾರೆ....”

“ಆತುರ ಯಾರಿಗಿರುವುದಿಲ್ಲ. ಅವರನ್ನು ಒಪ್ಪಿಸುವ ಭಾರ ನಮಗೆ ಬಿಡಿ. ಈಗ ಅವರು ’ಹೋಗುತ್ತೇವೆ’ ಎಂದರೂ ನಾವು ಬಿಡುವುದಿಲ್ಲ. ಇರುವ ಬೇಸರ ಕಳೆದುಕೊಂಡು ನಗು ನಗುತ್ತಾ ನಮಗೆ ಆಶೀರ್ವಾದ ಮಾಡಿ ಬರುತ್ತಾರೆ.”

“ಅವರ ಆರೋಗ್ಯ ಅಷ್ಟು ಚೆನ್ನಾಗಿಲ್ಲ.”

“ಅವರ ಮಗಳೇ ಅವರ ಯೋಗಕ್ಷೇಮ ನೋಡಿಕೊಳ್ಳುತ್ತಾರೆ. ಆ ಬಗ್ಗೆ ನೀವೇನೂ ಚಿಂತಿಸುವುದು ಬೇಡ. ನಿಮಗಿಂತ ಅವರ ಚಿಂತೆ ನಮಗೆ ಹೆಚ್ಚಾಗಿದೆ. ಆದ್ದರಿಂದ ಆ ವಿಷಯ ಬಲವಂತ ಮಾಡಬೇಡಿ. ನಮ್ಮ ಮಾತಿಗೂ ಮಮತೆಗೂ ಅಷ್ಟು ಬೆಲೆ ಕೊಡಿ. ನೀವಿನ್ನು ಹೋಗಿ ಬನ್ನಿ” – ಎಂದು ಮಾತನ್ನು ಮುಗಿಸಿದಂತೆ ಹೇಳಿದ ಮದಕರಿನಾಯಕ.

ಆ ಮಾತಿಗೆ ಬೇರೇನೂ ಹೇಳಲಾಗದೆ –

“ಆಯಿತು – ನೀವುಂಟು, ಅಪ್ಪಾಜಿಯವರುಂಟು. ಅವರು ಒಪ್ಪಿದರೆ ಇರಲಿ, ನಮ್ಮದೇನೂ ಅಭ್ಯಂತರವಿಲ್ಲ. ಹೊರಡಲು ಸಿದ್ಧತೆ ಮಾಡಿಕೊಂಡು, ಹೋಗುವ ಮೊದಲು ಮತ್ತೊಮ್ಮೆ ತಮ್ಮನ್ನು ಕಂಡು ಹೋಗುತ್ತೇನೆ”

- ಎಂದು ಮಲ್ಲಿಕಾರ್ಜುನನಾಯಕ, ಎಂಥದೋ ಅತೃಪ್ತಿಯ ಕ್ಷೀಣಛಾಯೆ ಇದ್ದ ಧ್ವನಿಯಲ್ಲಿ ಹೇಳಿ, ನಾಯಕರಿಗೆ, ಪರಶುರಾಮನಾಯಕರಿಗೆ ಕೈಮುಗಿದ.

“ಹೋಗಿ ಬನ್ನಿ” – ಎಂದು ಹೇಳಿದ ಮದಕರಿನಾಯಕ.

* * *

ಆ ಮಾತಿನಂತೆ ಮಲ್ಲಿಕಾರ್ಜುನ ನಾಯಕ ಹೋದ, ಮತ್ತೆ ಬರಲಿಲ್ಲ. ತನ್ನ ತಮ್ಮ ಬಸವನಾಯಕ ಮತ್ತು ತಮ್ಮ ಸೇನೆಯೊಂದಿಗೆ ಆ ದಿನವೇ ದುರ್ಗದಿಂದ ಪ್ರಯಾಣ ಮಾಡಿದ.

ಅವರೆಲ್ಲರೂ ಪ್ರಯಾಣ ಮಾಡಿದ ಬಳಿಕ ಆ ಸುದ್ದಿಯನ್ನು ತಂದು ಹೇಳಿದ ಪರಶುರಾಮನಾಯಕನಿಗೆ –

"ನಮ್ಮ ಮಾವಂದಿರ ಆರೋಗ್ಯ ಚೆನ್ನಾಗಿಲ್ಲ, ಪರಶುರಾಮಣ್ಣ. ಅವರನ್ನು ಎಚ್ಚರದಿಂದ ನೋಡಿಕೊಳ್ಳಿ. ಖುದ್ದಾಗಿ ಕಾಶಣ್ಣನಾಯಕರೇ ಅವರ ಯೋಗಕ್ಷೇಮ ವಿಚಾರಿಸಲಿ" – ಎಂದು ಹೇಳಿದ ಮದಕರಿನಾಯಕ, ಆಡಬಾರದ ಮಾತನ್ನು ಆಡಲೇಬೇಕಾಗಿಬಂದಂಥ ಭಾರವಾದ ಧ್ವನಿಯಲ್ಲಿ.

೧೮

ತಾತ್ಕಾಲಿಕವಾಗಿಯಾದರೂ ಚಿತ್ರದುರ್ಗಕ್ಕೆ ಹಿಡಿದಿದ್ದ ಗ್ರಹಣಬಿಟ್ಟು, ಕ್ರಮೇಣ ದುರ್ಗವನ್ನು ಕವಿದ ಯುದ್ಧ ಪರಿಸ್ಥಿತಿಯ ಕಾವಳ ಕರಗಿ, ಹೊರಗಿನಿಂದ ಬಂದವರು ಹೋಗಿ, ಯುದ್ಧ ಸಮಯದ ಕಟ್ಟು-ಕಾಯಿದೆಗಳು ಸಡಿಲವಾಗಿ ದಿನಗಳೆದಂತೆ ಜನ ತಮ್ಮ ಹಳೆಯ ಪರಿಚಿತ ಜೀವನ ನಡೆಸಲು ಅನುಕೂಲವಾಗಿ, ಸುಡುಮದ್ದಿನ ಘಾಟು ಇರದ ಸ್ವಚ್ಛ ಗಾಳಿ, ಹೊಗೆ ಮಬ್ಬಿರದ ಬೆಳಕು, ಇದ್ದಲು ನುಸಿ- ಸುಟ್ಟ ಮದ್ದಿನ ಧೂಳಿರದ ನೀರನ್ನು ಕುಡಿಯಲು ಅವಕಾಶವಾಯಿತು. ಗುರಿಗಿಂತ ವಿನಾಶವನ್ನೇ ಗುರಿಯಾಗಿಟ್ಟು, ಅಡ್ಡಾದಿಡ್ಡಿಯಾಗಿ ಹಾರಿದ ಶತ್ರುಗಳ ತೋಫಿನ ಸಿಡಿತದಲ್ಲಿ ಭಗ್ನವಾದ ಮನೆಗಳನ್ನು, ಗುಳಿಬಿದ್ದು ಕೊರಕಲಾದ ರಸ್ತೆಗಳನ್ನು ಮತ್ತೆ ಮೊದಲಿನ ಸ್ಥಿತಿಗೆ ತರಲು ಜನ ತರಾತುರಿಯಲ್ಲಿ ದುರಸ್ತಿನ ಕಾರ್ಯ ಆರಂಭಿಸಿದರು.

ಮನೆಗಳು ದುರಸ್ತಿಯಾಗಬಹುದು –

ಆದರೆ ಮುರಿದ ಮನ –?

ಒಂದು ವರ್ಷದಷ್ಟು ಕಾಲ ನಡೆದ ಸತತ ಸಮರದ ಸಮಯದಲ್ಲಿ ಸರ್ವಾಧಿಕಾರ ನಡೆಸಿದ ಸಾವು ಮನೆಮನೆಗೂ ಕಾಲಿಟ್ಟು, ಒಂದಲ್ಲ ಒಂದು ರೀತಿಯಲ್ಲಿ, ಒಂದೆರಡು ಜೀವಗಳ ಕಪ್ಪ ತೆಗೆದುಕೊಂಡು ಯುದ್ಧದ ಮಾಸದ ಕಲೆಯನ್ನು ಉಳಿಸಿಹೋಗಿತ್ತು. ಜನಜೀವನವೇ ಮತ್ತೆಂದೂ ಹಿಂದಿನ ಸ್ಥಿತಿಗೆ ಬರದಷ್ಟು ಕಲಕಿ ಬಗ್ಗಡವಾಗಿತ್ತು. ಕೋಟೆಯಲ್ಲಿ, ಪೇಟೆಯಲ್ಲಿ, ದಂಡಿನಲ್ಲಿ, ಕೇರಿಕೇರಿಗಳಲ್ಲಿ - ಉಳುಮೆ ಕಾಣದ ಭೂಮಿಯಲ್ಲಿ ಬೆಳೆದ ಕಳೆಯಂತೆ ಹೊಸ ಜನ ಕಾಣುತ್ತಿತ್ತು. ಹತ್ತಾರು ಕಡೆಗಳಿಂದ ಯುದ್ಧದ ವಿವಿಧ ಕಾರ್ಯಗಳಿಗೆಂದು ಬಂದು ನೆರೆದ ಜನ

ಯುದ್ಧ ಮುಗಿದು, ಸೇನೆ ಹೋಗಿದ್ದರೂ ನಗರದಲ್ಲಿ ಉಳಿದಿದ್ದರು. ಏಳೆಂಟು ತಿಂಗಳ ಕಾಲ ನಡೆದ ಯುದ್ಧದಲ್ಲಿ ಚಿತ್ರದುರ್ಗಕ್ಕೆ ಬಂದ ಜನ, ಆ ಅವಧಿಯಲ್ಲಿ ಜೀವನಕ್ಕೆ ವಿವಿಧೋಪಾಯಗಳನ್ನು ಕಲ್ಪಿಸಿಕೊಂಡು ದುರ್ಗದಲ್ಲೇ ಬೇರುಬಿಟ್ಟು, ಯುದ್ಧದಲ್ಲಿ ಸತ್ತ ಎಷ್ಟೋ ಮಂದಿ ಸೈನಿಕರ ಹೆಂಡಿರೊಂದಿಗೆ ತಮ್ಮ ಕುಲಾಚಾರದಂತೆ ಕೂಡಿಕೆಯ ವಿವಾಹವಾಗಿ, ದುರ್ಗದವರೇ ಆಗಿದ್ದರು. ದಂಡಿನಲ್ಲೂ ಅಷ್ಟೆ - ಅಧಿಕಾರಸ್ಥಾನಗಳಲ್ಲಿದ್ದ ಎಷ್ಟೋ ಮಂದಿ ಮೃತರಾಗಿ, ಹೊಸಬರು ಅವರ ಸ್ಥಳಕ್ಕೆ ಬಂದಿದ್ದರು. ಹತ್ತಿಪ್ಪತ್ತು ಜನವಾಗಿದ್ದರೆ -ಅಂಥವರ ವಿವರ ತಿಳಿಯಲು ಸಾಧ್ಯವಾಗುತ್ತಿತ್ತು. ಈಗ ಸತ್ತವರ ಸ್ಥಾನವನ್ನು ಮರುಗಳಿಗೆಯೇ ತುಂಬಬೇಕಾಗಿದ್ದುದರಿಂದ, ಆತುರಾತುರದ ನೇಮಕಗಳೂ ನೂರಾರು ಆಗಿದ್ದವು. ಅಂಥವರು ಯಾರು, ಹೇಗೆ ಎಂದು ಅವರ ಪೂರ್ವೋತ್ತರಗಳನ್ನು ಖಚಿತಪಡಿಸಿಕೊಳ್ಳುವಷ್ಟು ವ್ಯವಧಾನವೂ ಸಮರಸಮಯದಲ್ಲಿ ತಳವಾರಚಾವಡಿ, ಕೊತ್ವಾಲಚಾವಡಿಯವರಿಗಿರಲಿಲ್ಲ. ಯಾರು-ಯಾರೋ, ಯಾರು-ಎಲ್ಲಿಯವರೋ, ಯಾರು-ಹೇಗೋ- ಎಲ್ಲವೂ ಗೋಜು ಗೊಂದಲ; ಸಿಕ್ಕುಸಿಕ್ಕಾದ ದಾರದ ಹಾಗಾಗಿತ್ತು- ದುರ್ಗದ ಜನ, ಅವರು ಹೇಳಿದ ಮಾತೇ ಅವರ ಪ್ರಾಮಾಣಿಕತೆಗೆ ಸಾಕ್ಷಿ – ಅದು ಬಿಟ್ಟು, ಬೇರೆ ಮೂಲ ಹುಡುಕುವುದೆಲ್ಲಿ, ಬೇರೆ ಸಾಕ್ಷಿ ತರುವುದೆಲ್ಲಿ ? ಕಾಲವೇ ಜರಡಿಯಾಡದೆ ಯಾರು ಹೇಗೆಂದು ನಿರ್ಧರಿಸುವುದು ಬಿಗಿ ಶಿಸ್ತಿಗೆ ಹೆಸರಾದ ಕೊತ್ವಾಲಚಾವಡಿಗೂ ಸಾಧ್ಯವಿರಲಿಲ್ಲ, ಜೊತೆಗೆ ಕಾಲದ ಅಭಾವ.

ಒಂದು ಯುದ್ಧ ಕಂಡಹಾಗೆ ಮುಗಿದಿತ್ತು –

ಮತ್ತೊಂದು ಯುದ್ಧದ ಮೋಡ ದಿಗಂತದಂಚಿನಲ್ಲಿ ಇಣುಕುತ್ತಿತ್ತು.

ಈ ಸಂಧಿಸಮಯ ಸಿಹಿನೀರುಹೊಂಡದ ಯುದ್ಧ ಸಮಯದಲ್ಲಿ, ದುರ್ಗದೊಳಗೆ ನುಸುಳಿದ ಹೈದರಾಲಿಯ ಚೋರಪಹರೆಯ ನಾಯಕ ಅಬ್ದುಲ್‌ಖಯ್ಯುಮ್‌ನ ಗುಂಪಿಗೆ ಬೇರುಬಿಟ್ಟು ಹರಡಲು ಅನುಕೂಲವಾದ ಸಮಯವಾಗಿತ್ತು. ಚಿತ್ರದುರ್ಗದೊಳಗೆ ಬೇಹುಗಾರಿಕೆಯ ಜಾಲವನ್ನು ಹರಡುವ ಉದ್ದೇಶದಿಂದಲೇ ಅಗತ್ಯವಾದ ಹಣ, ಇತರ ಸಲಕರಣೆಗಳೊಂದಿಗೆ ಒಳಬಂದ ಅವರಿಗೆ ಬೇರುಬಿಡಲು ಶ್ರೀಪತಿರಾಯ ಭೂಮಿಯನ್ನು ಸಾಕಷ್ಟು ಹದಗೊಳಿಸಿದ್ದ.

ಪ್ರಧಾನಿಗಳ ಚಾವಡಿಯ ಕರಣಿಕನಾಗಿ, ಹಿಂದಿನ ಪ್ರಧಾನಿಗಳಾಗಿದ್ದ ಕಳ್ಳಿನರಸಪ್ಪಯ್ಯನವರ ಮಗನೆಂಬ ಕಾರಣದಿಂದಾಗಿ ಶ್ರೀಪತಿರಾಯನಿಗೆ ದುರ್ಗದಲ್ಲಿ ಹಿರಿ-ಕಿರಿಯರ ಮನೆಗಳಲ್ಲಿ ಓಡಾಡಲು ಅಡ್ಡಿಯಿರಲಿಲ್ಲ. ನಾಯಕರಿಂದ ಹಿಡಿದು ಸಾಮಾನ್ಯ ನಾಗರಿಕನವರೆಗೆ ಯಾರಿಗೂ ಶ್ರೀಪತಿರಾಯನ ಬಗ್ಗೆ ಗೌರವವಿರಲಿಲ್ಲವಾದರೂ ತಾತ್ಸಾರವಿರಲಿಲ್ಲ.

'ತಂದೆಯಿಂದ ಪರಿತ್ಯಕ್ತ' ಎಂಬ ಕನಿಕರವೂ ಇತ್ತು. ಆತ ಬೆಳೆಸಿಕೊಂಡ ದುಶ್ಚಟಗಳ ಬಗ್ಗೆ ಬೇಸರವಿದ್ದರೂ 'ದಾರಿತೋರುವವರಿಲ್ಲದೆ, ಆಶ್ರಯವಿಲ್ಲದೆ, ಶ್ರೀಮಂತನಾಗಿ ಹುಟ್ಟಿಯೂ ಭಿಕಾರಿಯಂತೆ ಊರೂರು ಅಲೆದು ಬದುಕಿದವನು' ಎಂಬ ಕಾರಣಕ್ಕಾಗಿ 'ದೊಡ್ಡವರು ಕೆಡಬಾರದು, ಹಾಗೆ ಕೆಟ್ಟವರನ್ನು ಕಾಡಬಾರದು' ಎಂಬ ಮರುಕವಿತ್ತು. ಎಲ್ಲರಿಗೂ ಅವನು ಕಳ್ಳಿನರಸಪ್ಪಯ್ಯನವರ ಮಗ ಎಂದು ಗೊತ್ತಿದ್ದರೂ, ಆತನ ಬುದ್ಧಿ, ಚಾಣಾಕ್ಷತೆ ಇವನಲ್ಲಿ ಇಲ್ಲವೆಂದೇ ತಿಳಿದಿದ್ದರು. 'ಪೆದ್ದ, ಸೋಮಾರಿ, ಅಂಥ ತಂದೆಯ ಹೊಟ್ಟೆಯಲ್ಲಿ ಹುಟ್ಟಬಾರದವನು. ಅರಸಾಗಿ ಆಳಬೇಕಾದವನು ಆಳಾಗಿ ಬಾಳಬೇಕಾಗಿಬಂತಲ್ಲ' ಎಂದು ಶ್ರೀಪತಿರಾಯನ ಬಗ್ಗೆ ಪ್ರಧಾನಿಯಿಂದ ಹಿಡಿದು, ಸಾಮಾನ್ಯನವರೆಗೆ ಎಲ್ಲರೂ ಕೊಂಚ ಉದಾರವಾಗಿಯೇ ನಡೆದುಕೊಳ್ಳುತ್ತಿದ್ದರು. ನರಸಪ್ಪಯ್ಯನವರಿಗೆ ಆಪ್ತರಾಗಿದ್ದವರಂತೂ ಆತನ ಬಗ್ಗೆ ಅಗತ್ಯಕ್ಕಿಂತ ಹೆಚ್ಚು ಉದಾರವಾಗಿದ್ದರು. ಯಾರ ಮನೆಯ ಬಾಗಿಲೂ ಅವನ ಪಾಲಿಗೆ ಮುಚ್ಚಿರಲಿಲ್ಲ – ಊರು ಬಿಟ್ಟ ದಿನದಿಂದ ಮುಚ್ಚಿದ ನರಸಪ್ಪಯ್ಯನವರ ಮನೆಯ ಬಾಗಿಲಿನ ವಿನಾ.

ಮುಚ್ಚಿದ ನರಸಪ್ಪಯ್ಯನವರ ಮನೆ ಬಾಗಿಲು-

'ಅದು ತೆರೆಯುವುದೆಂದು ?

'ಯಾತ್ರೆಗೆಂದು, ಮಡದಿಯೊಂದಿಗೆ ನಾಡಾಡಿಯಂತೆ ಹೋದ ಅವರು ಹಿಂತಿರುಗುವುದೆಂದು ?

'ಅವರೆಲ್ಲಿದ್ದಾರೆ - ಯಾವಾಗ ಬರುತ್ತಾರೆ ?'

ಮುಚ್ಚಿದ ಆ ಮನೆಯ ಬಾಗಿಲನ್ನು ಕಂಡವರೆಲ್ಲರಿಗೂ, ನರಸಪ್ಪಯ್ಯನವರ ನೆನಪಾಗಿ, ಅವರ ಚಿಂತೆ ಕಾಡುತ್ತಿತ್ತು.

ದುರ್ಗದಲ್ಲಿ ಯುದ್ಧ ನಡೆದಾಗ, ಆ ಕಾಲದಲ್ಲಿ ನಡೆದ ಯುದ್ಧ ಸಂಧಾನಗಳ ಚಕಮಕಿಯ ಸಮಯದಲ್ಲಿ ಎಷ್ಟು ನೂರು ಬಾರಿ ನೆನೆದುಕೊಂಡರೋ ನರಸಪ್ಪಯ್ಯನವರ ಹೆಸರನ್ನು, ದುರ್ಗದ ಜನ. ಆ ಸಮಯದಲ್ಲಿ ನಾಯಕರು, ಪ್ರಧಾನಿ ಪರಶುರಾಮನಾಯಕ ಎಷ್ಟೇ ಚಾಣಾಕ್ಷತನದಿಂದ ನಡೆದುಕೊಂಡರೂ 'ಇಂಥ ಹೊತ್ತಿನಲ್ಲಿ ನರಸಪ್ಪಯ್ಯನವರು ಇರಬೇಕಾಗಿತ್ತು' ಎಂದೇ ಎಷ್ಟೋ ಮಂದಿ ಆಡಿಕೊಂಡರು. ಯುದ್ಧದ ಕಾವೇರಿದಾಗ 'ನರಸಪ್ಪಯ್ಯನವರಿದ್ದಿದ್ದರೆ ಇಂಥ ಸ್ಥಿತಿ ಬರುತ್ತಿರಲಿಲ್ಲ' ಎಂದುಕೊಳ್ಳುತ್ತಿದ್ದರು. ಗೆಲುವು ದೊರೆತು, ಬೆಳಕಾದಾಗ - 'ಅವರಿದ್ದಿದ್ದರೆ ನೋಡಿ ಎಷ್ಟು ಸಂತೋಷಪಡುತ್ತಿದ್ದರು. ನಾಯಕರು, ಪ್ರಧಾನಿಗಳು – ಇಬ್ಬರೂ ಅವರ ಕೈಯಲ್ಲಿ ಪಳಗಿದವರು. ಅವರು ಇದ್ದಿದ್ದರೆ, ಮಾಡಿದ ಕೆಲಸ ಸಾರ್ಥಕವಾಯಿತು ಎಂದು ಹಿಗ್ಗುತ್ತಿದ್ದರು.

ಅಗತ್ಯವಾದ ಹೊತ್ತಿನಲ್ಲೇ ಆ ಹಿರಿಯ, ಪಳಗಿದ ತಲೆಯ ಲಾಭ ದುರ್ಗಕ್ಕೆ ತಪ್ಪಿಹೋಯಿತು' ಎಂದು ನರಸಪ್ಪಯ್ಯನವರನ್ನು ನೆನೆಸಿಕೊಂಡು, ಬಹುಮಂದಿ ಚಿಂತಿಸಿದರು.

ಆ ಕಾರಣಕ್ಕಾಗಿ ದುರ್ಗದ ಜನ 'ನರಸಪ್ಪಯ್ಯ ಮತ್ತೆ ಎಂದು ಬಂದಾರೋ, ಬರುವುದೇ ಇಲ್ಲವೋ -?' ಎಂದು ಕೊರಗುತ್ತಿದ್ದರೆ, 'ನರಸಪ್ಪಯ್ಯನವರು ನವಾಬನ ಪಕ್ಷಪಾತಿಗಳು' ಎಂದು ತಿಳಿದಿದ್ದ, ದುರ್ಗದಲ್ಲಿ ಪಾಪಾಸುಕಳ್ಳಿಯಂತೆ ಬೆಳೆದ, ಹೈದರಾಲಿಯ ಗೂಢಚಾರಪಡೆಯ ಸೂತ್ರಧಾರಿಯಾಗಿದ್ದ ಅಬ್ದುಲ್‌ಖಯೂಮ್‌ನೂ 'ಅವರಿದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು' ಎಂದು ಯೋಚಿಸುತ್ತಿದ್ದ- ಮತ್ತೊಂದು ಕಾರಣಕ್ಕಾಗಿ.

ಅವನ ದೃಷ್ಟಿಯಲ್ಲಿ ನರಸಪ್ಪಯ್ಯ ದುರ್ಗದ ರಕ್ಷಕರಾಗಿ ಕಂಡಿರಲಿಲ್ಲ –

ತಮ್ಮ ಪಾಲಿಗೆ ದುರ್ಗದ ಕೋಟೆಯ ಬಾಗಿಲ ಬೀಗದ ಕೀಲಿಕೈಯಾಗಿ ಕಂಡಿದ್ದರು.

'ಈ ನಫ್ಟ್‌ಟಾಲ್ ಮಗನ ಬದಲಾಗಿ ಆ ತಂದೆ ಇರುತ್ತಿದ್ದರೆ, ಮಗನ ಬದಲು ಅವರು ನಮಗೆ ಆಶ್ರಯವಾಗಿದ್ದರೆ ತೋಪು, ಕೋವಿ, ಮದ್ದು-ಗುಂಡು ಇಲ್ಲದೆ, ದುರ್ಗವನ್ನು ಕಬಳಿಸಬಹುದಾಗಿತ್ತು. ಈ ಚಿಲ್ಲರೆ ಜನರ ಸಹವಾಸ ಬಿಟ್ಟು, ದೊಡ್ಡ ದೊಡ್ಡ ತಲೆಗಳನ್ನು ಬಲೆಗೆ ಹಾಕಿಕೊಳ್ಳಬಹುದಾಗಿತ್ತು..'

- ಇದು ದುರ್ಗದಾಚೆಗೆ ಫಕೀರನ ವೇಷ ಹಾಕಿಕೊಂಡು, ದುರ್ಗದವರೆಲ್ಲರೂ ಪವಾಡ ಪುರುಷನೆಂದೇ ನಂಬಿದ ಅಷರಫ್ ಷಾವಲಿಯ ಸೇವಾವೃತ್ತಿ ಮಾಡುತ್ತಿದ್ದ ಅಬ್ದುಲ್ ಖಯೂಮ್‌ನ ಚಿಂತೆ.

ಶ್ರೀಪತಿರಾಯನೂ ಮುಚ್ಚಿದ ತಲೆಬಾಗಿಲಿನ, ತಂದೆಯ ಮನೆಯ ಚಿಂತೆ ಮಾಡುತ್ತಿದ್ದ - ಆ ಮನೆಯಲ್ಲಿ ನರಸಪ್ಪಯ್ಯ ಬಿಟ್ಟು ಹೋಗಿರಬಹುದಾದ ಸಂಪತ್ತಿಗಾಗಿ. ಆದರೆ ನರಸಪ್ಪಯ್ಯನವರ ಮಗನೇ ಆದರೂ ಶ್ರೀಪತಿರಾಯನಿಗೆ ಆ ಮನೆಯ ಪ್ರವೇಶಕ್ಕೆ ಪರಶುರಾಮನಾಯಕ ಅವಕಾಶಕೊಟ್ಟಿರಲಿಲ್ಲ. ಅಷ್ಟೇ ಅಲ್ಲ- 'ಆ ಮನೆಯನ್ನು ಸುರಕ್ಷಿತವಾಗಿ ಕಾಪಾಡುವುದು ತನ್ನ ಸ್ವಂತ ಹೊಣೆಗಾರಿಕೆ' ಎಂದು ಭಾವಿಸಿ, ಆ ಮನೆಗೆ ಹಗಲಿರುಳೂ ಬಿಗಿ ಕಾವಲು ಹಾಕಿಸಿದ್ದ. ಎಂಥ ದಾರುಣ ಯುದ್ಧದ ಸಮಯದಲ್ಲೂ ಆ ಮನೆಯ ಕಾವಲು ಮಾತ್ರ' ಎಂದೂ ಸಡಿಲವಾಗಿರಲಿಲ್ಲ.

ಅದನ್ನು ಕಂಡು ಶ್ರೀಪತಿರಾಯ –

"ಹೋದೋನು ಹೋದ, ಮುಂಡೇಮಗ. ಮನೆ ಬೀಗದ ಕೈ ನನಗೆ ಕೊಟ್ಟು ಹೋಗಿದ್ದರೆ ನಾನೇನು ಗೋಡೆ, ಬಾಗಿಲು ತಿನ್ನುತ್ತಿದ್ದೆನೇ ? ಅವನು ಸತ್ತರೆ ಆ ಮನೆ ನನ್ನದಲ್ಲವೇ ? ಊರು ಬಿಟ್ಟು ಹೋದವನು ಬೀಗದ ಕೈ ಒಂದು ಕೊಟ್ಟು ಹೋಗಿದ್ದರೆ ಅವನಜ್ಜನ ಗಂಟೇನು ಹೋಗುತ್ತಿತ್ತು ? ಇದ್ದೂ ಕಾಡಿಸಿದ. ಹೋಗಿಯೂ ಕಾಡಿಸಿದ"

- ಎಂದು ಸಾವಿರ ಬಾರಿ ತನ್ನ ತಂದೆಯನ್ನು ಶಪಿಸಿ –

“ಅರಮನೆಯಂಥ ಮನೆ ಇಟ್ಟುಕೊಂಡು ದರಬೇಶಿ ಬದುಕೋ ಹಾಗೆ ಮಾಡಿ ಹೋಗಿದ್ದಾನೆ. ಬರಲಿ - ನನ್ನ ಕೈಯಾರ ಅವನ ಕತ್ತು ಮುರಿದು, ಜನಿವಾರದಲ್ಲಿರೋ ಬೀಗದಕೈ ಕಿತ್ತುಕೋತೀನಿ” – ಎಂದು ಅಫೀಮಿನ ಅಮಲಿನಲ್ಲಿ ತನ್ನ ಹೆಂಡತಿಯ ಮುಂದೆ ಆಡಿದ್ದ.

ಹೀಗೆ ಒಂದಲ್ಲ ಒಂದು ಕಾರಣಕ್ಕಾಗಿ ಎಲ್ಲರೂ ನರಸಪ್ಪಯ್ಯ ಬರುವುದನ್ನೇ ಕಾಯುತ್ತಿದ್ದರು.

ಹೀಗೆ ಎಲ್ಲರೂ ಕಾಯುತ್ತಿದ್ದ ನರಸಪ್ಪಯ್ಯ –

ಇಂಥದೆಂದು ಗೊತ್ತುಗುರಿಯಿಲ್ಲದೆ, ಹೆಂಡತಿ ಬಯಸಿದ ಪುಣ್ಯಕ್ಷೇತ್ರಗಳಿಗೆ ಹೋಗಿ, ಅಲ್ಲಿ ಆಕೆ ಸಾಕೆನಿಸುವಷ್ಟು ದಿನ ಇದ್ದು, ಕಂಡ ದೇವರ ಸೇವೆಯನ್ನೆಲ್ಲಾ ಮಾಡುತ್ತಿದ್ದರು.

ತಾನು ಬೇಡವಾದ –

ತನಗೆ ಬೇಡವಾದ –

ಚಿತ್ರದುರ್ಗದಿಂದ ಆದಷ್ಟು ದೂರ ಹೋಗಿದ್ದರು.

ಆದರೆ –

ಎಲ್ಲಿ ಹೋದರೂ, ಯಾವ ದೇವರ ಸೇವೆ ಮಾಡಿದರೂ ಬಹುದೀರ್ಘಕಾಲ ನಡೆದ ದುರ್ಗದ ಸಂಗ್ರಾಮದ ವಾರ್ತೆ ಒಂದಲ್ಲ ಒಂದು ರೀತಿಯ ಮಾತಾಗಿ ಆತನ ಕಿವಿಗೆ ಬಿದ್ದು, ಯಾವ ದೇವರ ಸೇವೆಯಿಂದಲೂ ಆತನ ಮನಸ್ಸಿಗೆ ಬೇಡಿದ ಶಾಂತಿ ಸಿಗದೆ, ಅದಕ್ಕೆ ಪ್ರತಿಯಾಗಿ ತಾನೇನೋ ಕರ್ತವ್ಯಚ್ಯುತಿ ಮಾಡುತ್ತಿದ್ದೇನೆ ಎಂಬ ಭಾವನೆ ಮೂಡಿ, ದಿನಗಳೆದಂತೆ ಆ ಭಾವನೆ ಬಲಿತು –

’ದುರ್ಗದ ಅದೃಷ್ಟ ಅಳಿವು - ಉಳಿವಿನ ತಕ್ಕಡಿಯಲ್ಲಿ ತೂಗುತ್ತಿದೆ. ಅವರು ಮರಾಠರನ್ನು ನಂಬಿದ್ದಾರೆ. ಇತ್ತ ನವಾಬ ಮರಾಠರನ್ನು ನುಂಗಲು ಬಂದಿದ್ದಾನೆ. ನವಾಬನದು ಜಿದ್ದಿನ ಬುದ್ಧಿ, ಮರಾಠರು ಆರು ಕೊಟ್ಟರೆ ಅತ್ತೆಕಡೆ, ಮೂರು ಕೊಟ್ಟರೆ ಸೊಸೆಕಡೆ. ಅವರನ್ನು ನಂಬಿ ಉಳಿದವರಿಲ್ಲ’ – ಎಂಬ ಮಾತು ಕೇಳಿ-

’ಏನೋ ಹಟಕ್ಕೆ ದುರ್ಗ ಬಿಟ್ಟು ಬಂದು. ನಾನು, ತಿಂದ ಅನ್ನಕ್ಕೆ ಅಪರಾಧ ಮಾಡಿದೆ’

-ಎಂಬ ಭಾವನೆ ಬಲಿತು, ಅದನ್ನು ಭರಿಸಲಾಗದೆ, ಸವದತ್ತಿಯಲ್ಲಿ ಎಲ್ಲಮ್ಮನ ಸೇವೆ ಮಾಡುತ್ತಿದ್ದಾಗ - ’ಕೇಳಲಿ, ಬಿಡಲಿ, ದುರ್ಗದಲ್ಲೇ ತನಗಿನ್ನು ಕೆಲಸ’ ಎಂಬ ನಿರ್ಧಾರಕ್ಕೆ ಬಂದು, ಹೆಂಡತಿಗೆ –

"ಹೊರಗಿನ ಎಲ್ಲಾ ದೇವರ ಸೇವೆ ಮಾಡಿದ್ದು ಸಾಕಾಯಿತು. ಇನ್ನು ಮುಗ್ಗು ಹಿಡಿದು ಹೋದ ಮನೆದೇವರ ಪೂಜೆ ಮಾಡೋಣ"

- ಎಂದು ಹೇಳಿ, ಎತ್ತಿನ ಬಂಡಿಯನ್ನು ದುರ್ಗದತ್ತ ತಿರುಗಿಸಿದರು.

ಗಂಡ ಆ ಮಾತು ಹೇಳಿದಾಗ ಭಾಗೀರಥಿಬಾಯಿಗೆ 'ಯಾವ ದೇವರ ಪೂಜಾಫಲವೋ, ತಂದೆಗೆ ಮಗನ ನೆನಪಾಯಿತು' ಎನಿಸಿ –

"ಇಷ್ಟು ದಿನಕ್ಕಾದರೂ ಮಗನ ಜ್ಞಾಪಕ ಬಂತಲ್ಲ, ಹೋಗೋಣ"

-ಎಂದು ಉತ್ಸಾಹದಿಂದ ಹೇಳಿದಳು.

"ಇಷ್ಟು ದಿನ ಆಯಿತು, ಇಷ್ಟು ದೇವರ ಸೇವೆ ಮಾಡಿದೆ - ಇನ್ನೂ ನಿನಗೆ ಮಗನ ವ್ಯಾಮೋಹ ಹೋಗಲಿಲ್ಲವೇನು ? ಅದಕ್ಕಲ್ಲ - ನಾನು ದುರ್ಗಕ್ಕೆ ಹೋಗುತ್ತಿರುವುದು"

- ಎಂದು ಮಗನ ಹೆಸರು ಕೇಳುತ್ತಿದ್ದ ಹಾಗೇ ನಿಷ್ಠುರವಾಗಿ ಹೇಳಿದರು ನರಸಪ್ಪಯ್ಯ.

"ಹಾಗಿದ್ದರೆ - ಹೋಗುವುದೇಕೆ ?"

- ನಿರಾಶಳಾಗಿ ಕೇಳಿದಳು, ಭಾಗೀರಥಿಬಾಯಿ.

"ಎಲ್ಲಾ ದೇವರ ಪೂಜೆ ಮಾಡಿದ್ದಾಯಿತು- ಕೊನೆಗಾಲದಲ್ಲಿ ಅನ್ನ ನೀರು ಕೊಟ್ಟು ನಮ್ಮನ್ನು ತಲೆತಲಾಂತರದಿಂದ ಸಾಕಿದ ದುರ್ಗದ ಸೇವೆ ಮಾಡುವುದಕ್ಕೆ. ಅಲ್ಲಿ ಹುಟ್ಟಿದ ಮೈ, ಅಲ್ಲಿಯೇ ಬೂದಿಯಾಗಬೇಕು. ಆ ಋಣ ತೀರಿಸುವುದಕ್ಕೇ ಹೋಗುತ್ತಿರುವುದು. ಮತ್ತೇನೂ ಬೇರೆ ಆಸೆ ಇಟ್ಟುಕೊಳ್ಳಬೇಡ" - ಎಂದು ನಿರ್ದಾಕ್ಷಿಣ್ಯವಾಗಿ ಹೇಳಿದರು ನರಸಪ್ಪಯ್ಯ.

"ದುರ್ಗ ಬಿಟ್ಟು ವರ್ಷದ ಮೇಲೆ ಎಷ್ಟೋ ತಿಂಗಳು ಕಳೆದುಹೋಯಿತು. ನಿಮ್ಮನ್ನು ಯಾರು ನೆನೆಸಿಕೊಂಡಿದಾರೆ. 'ಬಾ' ಅಂತ ಯಾರು ನಿಮಗೆ ಕಹಳೆ ಹಿಡಿಸಿ ಕರೆಸಿದಾರೆ ? ಕರೆಯದವರ ಮನೆಗೆ ಹೋಗೋದೇಕೆ ? ಮಗ ಬೇಡ ಅಂದವರಿಗೆ ದುರ್ಗ ಯಾಕೆ ಬೇಕು – ಎಲ್ಲಾ ಹಂಗು, ಹರಕೆ ಮರೆತವರಿಗೆ ಇದೊಂದು ವ್ಯಾಮೋಹ ಯಾಕೆ ?"

- ನಿರಾಶೆಯ ಕಹಿಯಿಂದ ಕೇಳಿದಳು ಭಾಗೀರಥಿಬಾಯಿ.

"ಇದು ವ್ಯಾಮೋಹ ಅಲ್ಲ, ಕರ್ತವ್ಯ. ನಿನಗೆ ಬರುವುದು ಬೇಡವಾಗಿದ್ದರೆ, ಎಲ್ಲಿರುತ್ತೀಯೋ ಹೇಳು - ಇರಲಿಕ್ಕೆ ವ್ಯವಸ್ಥೆ ಮಾಡ್ತೀನಿ. ಆದರೆ ನಾನೇನು ಮಾಡಬೇಕು ಅಂತ ಮಾತ್ರ ಹೇಳಬೇಡ."

- ಯಾವುದಕ್ಕೂ ಬಾಗದ ಉಕ್ಕಿನ ಕಂಭದಂತೆ ಹೇಳಿದರು ನರಸಪ್ಪಯ್ಯ.

ನರಸಪ್ಪಯ್ಯ ಹಾಗೆ ಹೇಳಿದಾಗ, ಭಾಗೀರಥಿಬಾಯಿಗೆ ಮಾಡಲು ತಿಳಿದಿದ್ದ ದಾರಿಯೊಂದೇ –

ಬೇಡವೆಂದರೂ ಬಂದ ಕಣ್ಣೀರನ್ನು ಗಂಡನಿಗೆ ಕಾಣದ ಹಾಗೆ ಒರೆಸಿಕೊಂಡು, ಗಾಡಿ ಹತ್ತುವುದು.

ಈಗಲೂ ಹಾಗೆಯೇ ಮಾಡಿದಳು. ಗಾಡಿ ದುರ್ಗದತ್ತ ಹೊರಟಿತು.

* * *

ಅತ್ತಿತ್ತಣಿಂದ ಬಂದ ಸುಳಿಗಾಳಿಯ ಸೀಳುಗಳನ್ನೆಲ್ಲಾ ತನ್ನತ್ತ ಸೆಳೆದುಕೊಂಡು, ಭೋರ್ಗರೆಯುತ್ತಾ ಇದಿರಾದುದನ್ನೆಲ್ಲಾ ತರಗೆಲೆಯಂತೆ ತೂರಿ ಮುನ್ನುಗ್ಗುವ ಬಿರುಗಾಳಿಯಂತೆ ಹೈದರಾಲಿಯ ಸೇನೆ, ಕೃಷ್ಣಾನದಿಯನ್ನು ದಾಟಿ, ಹರಿಪಂತ್ ಮತ್ತು ಮಾನಾಜಿ ಫಾಕಡ್ಸಾರ ನಾಯಕತ್ವದಲ್ಲಿ ಬರುತ್ತಿದ್ದ ಮರಾಠರ ಸೇನೆಯನ್ನು ಎದುರಿಸಲು, ಆಯಕಟ್ಟಿನ ಸ್ಥಳಗಳನ್ನು ಆಕ್ರಮಿಸಿ ಕಾಯುತ್ತಾ ಕುಳಿತಿತ್ತು-ಕುರಿಮಂದೆ ಬರುವ ಗುಡ್ಡದ ನಡುವಿನ ಹಾದಿಯಲ್ಲಿ ಸಂಜೆಯ ಮಬ್ಬಿನಲ್ಲಿ ಬಂಡೆಯಡಿಯ ಗವಿಯಲ್ಲಿ ಉರಿಗಣ್ಣಿನಿಂದ ಕಾಯುತ್ತಾ ಕುಳಿತ ಚಿರತೆಯಂತೆ.

ಮರಾಠರ ಸೇನೆ ಬರುವ ಜಾಡು ಮುಂಚಿತವಾಗಿಯೇ ತಿಳಿದದ್ದು - ಹೈದರಾಲಿಗೆ ಇಬ್ಬಗೆಯಲ್ಲಿ ಲಾಭದಾಯಕವಾಗಿತ್ತು. ಮೊದಲನೆಯದು - ತಾನು ಆಯ್ದ ಸ್ಥಳದಲ್ಲಿ ಮರಾಠರ ಸೇನೆಯ ಮೇಲೆ ದಾಳಿ ಮಾಡುವ ಸದವಕಾಶ. ಎರಡನೆಯದು - ಮಾನಾಜಿ ಫಾಕಡ್ಸಾ ಮರಾಠರ ಸೇನೆಯೊಂದಿಗೆ ಬರುತ್ತಿರುವುದು.

ರಘೋತ್ತಮರಾಯನಿಂದ ಪೇಶ್ವ ನಾರಾಯಣರಾಯನ ಕೊಲೆಯಾದಬಳಿಕ ಆರಂಭವಾದ ಯಾದವೀಕಲಹದಲ್ಲಿ ಮಾನಾಜಿ ಫಾಕಡ್ಸಾ ಹೈದರಾಲಿಯ ಆಪ್ತನಾಗಿದ್ದ ರಘೋತ್ತಮರಾಯನ ಬಣಕ್ಕೆ ಸೇರಿದವನು. ರಘೋತ್ತಮರಾಯನನ್ನು ಅವನ ಬೆಂಬಲಿಗರನ್ನು ಸದೆ ಬಡಿಯಲು ನಿರ್ಧರಿಸಿ, ಪ್ರಧಾನಿ ನಾನಾ ಫಡ್ನವೀಸ್ ಕೈಗೊಂಡ ಉಗ್ರ ಕಾರ್ಯಕ್ರಮದಲ್ಲಿ, ಮಾನಾಜಿ ಫಾಕಡ್ಸಾನೂ ನಿರ್ನಾಮವಾಗಬೇಕಿತ್ತು. ಆದರೆ ರಘೋತ್ತಮರಾಯನ ಸೋಲು ಖಚಿತವೆಂದು ತಿಳಿಯುತ್ತಿದ್ದ ಹಾಗೇ, ಸಮಯಸಾಧಕತನದಲ್ಲಿ ಬಹು ನಿಪುಣನಾದ ಮಾನಾಜಿ, ಸೂಕ್ತ ಸಮಯದಲ್ಲಿ ಪಕ್ಷ ಬದಲಿಸಿ, ನಾನಾ ಫಡ್ನವೀಸನ ಗುಂಪನ್ನು ಸೇರಿ, ತನ್ನ ತಲೆ ಉಳಿಸಿಕೊಂಡಿದ್ದ. ಆದರೂ ಅಂತರಂಗದಲ್ಲಿ ಮಾನಾಜಿ ಫಾಕಡ್ಸಾ, ರಘೋತ್ತಮರಾಯನ ಗೆಲುವನ್ನೇ ಹಾರೈಸುತ್ತಿದ್ದ - ತನ್ನ ರೊಟ್ಟಿಗೆ ಅವನಿಂದ ಹೆಚ್ಚು ಬೆಣ್ಣೆ ದೊರಕುವುದೆಂದು ತಿಳಿದು.

ಮಾನಾಜಿಯ ಬಗೆಗಿನ ಈ ರಹಸ್ಯ ವಿಷಯ ಹೈದರಾಲಿಗೆ, ತನ್ನೊಂದಿಗಿದ್ದ ರಘೋತ್ತಮರಾಯನ ವಕೀಲ ಬಾಜೀರಾವ್ ಬರ್ವೆಯಿಂದ ತಿಳಿದಿತ್ತು. ಇದು ತಿಳಿದಿದ್ದುದರಿಂದ ಸಮಯ ಬಂದಲ್ಲಿ ಮರಾಠಾ ಸರ್ದಾರರಲ್ಲೇ ಒಡಕುಂಟುಮಾಡಿ, ಇತ್ತಂಡವಾದ ಮರಾಠರನ್ನು

ಸೋಲಿಸಲು ಸಂಚಿನ ಸನ್ನಾಹವನ್ನು ಮಾಡಿಕೊಂಡಿದ್ದ ಹೈದರಾಲಿ. ಈ ಉದ್ದೇಶಕ್ಕಾಗಿಯೇ ಅವನ ಬೀಡಿನಿಂದ ಬಹುದೂರದವರೆಗೂ, ಮರಾಠರು ಬರುವ ಮಾರ್ಗದಲ್ಲಿ, ಹೈದರಾಲಿಯ ಚೋರ ಪಹರೆಯವರು ಸುತ್ತಾಡುತ್ತಿದ್ದರು.

ಹಾಗೆ ಸುತ್ತಾಡುತ್ತಿರುವಾಗಲೇ, ಒಂಟಿಯಾಗಿ ಬರುತ್ತಿದ್ದ ನರಸಪ್ಪಯ್ಯನವರ ಗಾಡಿ ಹೈದರಾಲಿಯ ಚೋರಪಹರೆಯ ಸರ್ದಾರ್ ಮುಸ್ತಫಾಖಾನನ ಕಣ್ಣಿಗೆ ಬಿದ್ದು ಗಾಡಿಯನ್ನು ತಡೆದು ಒಳಗಿರುವವರು ಯಾರು ಎಂದು ನೋಡಿದ –

ಗಾಡಿಯಲ್ಲಿದ್ದವರು ಮೂವರೇ – ನರಸಪ್ಪಯ್ಯ, ಭಾಗೀರಥಿಬಾಯಿ, ಅವರ ಪರಿಚಾರಿಕೆಯ ಬ್ರಾಹ್ಮಣ.

ಅದನ್ನು ನೋಡಿ, 'ಯಾರೋ ಪ್ರಯಾಣಿಕರು, ಎಲ್ಲಿಗೋ ಹೋಗುತ್ತಿದ್ದಾರೆ. ಇವರನ್ನೇಕೆ ತಡೆಯಬೇಕು' ಎನಿಸಿದರೂ, ತನ್ನ ವೃತ್ತಿಯಲ್ಲಿ ಪಳಗಿದ ಮುಸ್ತಫಾಖಾನ್ ಕೇಳಿದ –

"ಗಾಡಿಯಲ್ಲಿರುವವರು ಯಾರು ? ಎಲ್ಲಿಗೆ ಹೋಗುತ್ತಿದ್ದೀರಿ, ರಹದಾರಿಪತ್ರ ಇದೆಯೇ ?"

ಯುದ್ಧ ಸರ್ವವ್ಯಾಪಿಯಾದ ಆ ಸಮಯದಲ್ಲಿ, ಅಂಥ ತಡೆಪ್ರಶ್ನೆಗಳಿಗೆ ಪಳಗಿದ ನರಸಪ್ಪಯ್ಯ, ತನ್ನನ್ನು ಪ್ರಶ್ನಿಸಿದವರು ಸೈನಿಕರು ಎಂದು ತಿಳಿದರೂ, ಅಳುಕದೆ –

"ನಾವು ಸವದತ್ತಿಗೆ ಹೋಗಿದ್ದ ಯಾತ್ರಿಕರು. ಹರಿಹರೇಶ್ವರನ ದರ್ಶನಕ್ಕಾಗಿ ಹರಿಹರಕ್ಕೆ ಹೋಗುತ್ತಿದ್ದೇವೆ" – ಎಂದು ಉತ್ತರ ಕೊಟ್ಟರು.

"ರಹದಾರಿ ಇದೆಯೇ ?" – ಮುಸ್ತಫಾಖಾನ್ ಕೇಳಿದ.

"ದಿನಕ್ಕೊಬ್ಬ ಅರಸರು ಬದಲಾಗುತ್ತಿರುವ ಈ ಕಾಲದಲ್ಲಿ ಯಾರಿಂದ ರಹದಾರಿಪತ್ರ ತರಬೇಕು - ಬಿಟ್ಟು ಬಂದ ಎಲ್ಲಮ್ಮನಿಂದ ತರಬೇಕಾಗಿತ್ತೇ, ಹೋಗಬೇಕಾಗಿರುವ ಹರಿಹರೇಶ್ವರನಿಂದ ತರಿಸಿಕೊಳ್ಳಬೇಕಾಗಿತ್ತೆ ? ನಮ್ಮ ಬಗ್ಗೆ ಅನುಮಾನವಿದ್ದರೆ ಗಾಡಿ ಝಡತಿ ಮಾಡಬಹುದು. ಅದಕ್ಕೆ ಮೊದಲು - ಝಡತಿ ಮಾಡುವ ನೀವು ಯಾರು ಎಂದು ಹೇಳಿ ?"

-ತನಗೆ ಸ್ವಾಭಾವಿಕವಾಗಿದ್ದ ಠೀವಿಯಿಂದ ಕೇಳಿದರು ನರಸಪ್ಪಯ್ಯ.

"ಮುದುಕ – ನಿನಗೆ ಗತ್ತು ಬಹಳ. ಮಾತ್ರ ಜೋರು. ಆದರೆ ಅದಾವುದೂ ನವಾಬನ ಸೈನಿಕರ ಮುಂದೆ ನಡೆಯುವುದಿಲ್ಲ. ಕೇಳಿದ್ದಕ್ಕೆ ಉತ್ತರ ಕೊಡಬೇಕು, ಹೇಳಿದಷ್ಟು ಕೇಳಬೇಕು."

- ತಾನು ಶಸ್ತ್ರಧಾರಿಯಾದ ಸೈನಿಕ, ತನ್ನ ಬೆಂಬಲಕ್ಕೆ ಮತ್ತಷ್ಟು ಜನ ಇದ್ದಾರೆ ಎಂದು ತಿಳಿದೂ ಒಗರಿನಿಂದ ಉತ್ತರ ಕೊಟ್ಟ ನರಸಪ್ಪಯ್ಯನವರ ಮಾತಿನಿಂದ ಕೆರಳಿ, ಹೇಳಿದ ಮುಸ್ತಫಾಖಾನ್ –

"ಝಡತಿ ಮಾಡಬಹುದಲ್ಲವೇ - ಹಾಗಿದ್ದರೆ ಗಾಡಿ ಬಿಟ್ಟು ಕೆಳಗಿಳಿ."

ಆ ಏಕವಚನಪ್ರಯೋಗ, ತಾತ್ಸಾರದ ಧ್ವನಿಯಿಂದ ನರಸಪ್ಪಯ್ಯನವರ ನರ ಬಿಗಿದರೂ, ’ಕ್ಷುದ್ರ ಸೈನಿಕರೊಂದಿಗೆ ವಾಗ್ವಾದವೇಕೆ’ ಎಂದು ಗಾಡಿಯಲ್ಲಿದ್ದ ಹೆಂಡತಿ, ಪರಿಚಾರಕರಿಗೆ –

“ಕೆಳಗಿಳಿಯಿರಿ. ಆದಷ್ಟು ಬೇಗ ಇವರ ತನಿಖೆಯ ಪೀಡೆ ಕಳೆದುಹೋಗಲಿ”

- ಎಂದು ಹೇಳಿ, ರಸ್ತೆಯ ಬದಿಯ ಮರದ ನೆರಳಲ್ಲಿ ನಿಂತು, ನರಸಪ್ಪಯ್ಯ ಹೇಳಿದರು-

“ನೀವು ಏನನ್ನು ನೋಡಲೂ ನಮ್ಮ ಅಡ್ಡಿಯೇನೂ ಇಲ್ಲ. ಆದರೆ ಪೆಟ್ಟಿಗೆಯಲ್ಲಿ ಹೆಂಗಸರ ಒಡವೆ, ಖರ್ಚಿನ ಹಣವಿದೆ. ನವಾಬರ ಸೈನಿಕರು ಅಲ್ಪಕ್ಕೆ ಆಸೆಪಟ್ಟು, ದಾರಿಗಳ್ಳರ ಹಾಗೆ ನಡೆದುಕೊಂಡರೆ ಮುಂದೆ ಪಶ್ಚಾತ್ತಾಪಪಡಬೇಕಾದೀತು.”

ಆ ಮಾತು ಕೇಳಿ ಮೈರಕ್ತ ಬಿಸಿಯಾದ ಮುಸ್ತಫಾಖಾನ್, ತನ್ನ ಸೈನಿಕರಿಂದ ಗಾಡಿಯನ್ನು, ಗಾಡಿಯವನನ್ನು ಪರೀಕ್ಷೆ ಮಾಡಿ ನೋಡಿಸಿ, ಸಂಶಯಕ್ಕೆ ಆಸ್ಪದವಾವುದೂ ಕಾಣದೆ, ನರಸಪ್ಪಯ್ಯನವರು ತಾವಾಗಿಯೇ ಕೊಟ್ಟ ಬೀಗದಕೈಯಿಂದ, ಗಾಡಿಯಿಂದ ಕೆಳಗಿಳಿಸಿದ ಪೆಟ್ಟಿಗೆಯ ಬಾಗಿಲನ್ನು ತೆಗೆದು, ಒಳಗಿದ್ದುದೆಲ್ಲವನ್ನೂ ಪರೀಕ್ಷೆಮಾಡಿ ನೋಡಿದ. ಪೆಟ್ಟಿಗೆಯೊಳಗಿದ್ದುದು – ಬಟ್ಟೆ ಬರೆ, ಸಣ್ಣಪುಟ್ಟ ಒಡವೆ, ದೇವರ ಪ್ರಸಾದದ ಪೊಟ್ಟಣಗಳು, ಆಹ್ನಿಕದ ಪಾತ್ರೆಗಳು, ಗೋಪಿಚಂದನದ ಉಂಡೆ, ದ್ವಾದಶ ಮುದ್ರೆಗಳ ಗೊಂಚಲು ಇದ್ದ ಬೆತ್ತದ ಪೆಟ್ಟಿಗೆ, ಹಣವಿದ್ದ ಸಣ್ಣ ಕಬ್ಬಿಣದ ಪೆಟ್ಟಿಗೆ - ಅಷ್ಟೆ.

ಅದೆಲ್ಲವನ್ನೂ ನೋಡಿ, ಎಲ್ಲವನ್ನೂ ಪೆಟ್ಟಿಗೆಯಲ್ಲಿ ತುರುಕಿ, ಬೀಗಹಾಕಿ, ನರಸಪ್ಪಯ್ಯನವರ ಬಳಿ ಬಂದು –

“ನಿಮ್ಮ ಮೈಮೇಲೆ ಏನಿದೆ ತೋರಿಸಿ ?”

-ಎಂದು ಕೇಳಿದ ಮುಸ್ತಫಾಖಾನ್.

“ಬಟ್ಟೆ ತೆಗೆದರೆ – ಜುಟ್ಟು, ಜನಿವಾರವಲ್ಲದೆ ಬೇರೇನೂ ಇಲ್ಲ. ಬೇಕೆಂದರೆ ಬಟ್ಟೆಯನ್ನು ತೆಗೆಯುತ್ತೇನೆ”

- ಎಂದು ನಿರ್ಭಯವಾಗಿ ಉತ್ತರ ಕೊಟ್ಟರು ನರಸಪ್ಪಯ್ಯ, ಮಂಜಿನಂತಹ ತಣ್ಣನೆಯ ಧ್ವನಿಯಲ್ಲಿ.

“ಅದರ ಅಗತ್ಯವಿಲ್ಲ”

-ಎಂದಷ್ಟೇ ಹೇಳಿ, ಮುಸ್ತಫಾಖಾನ್ ನರಸಪ್ಪಯ್ಯನವರ ಪಕ್ಕದಲ್ಲಿ ನಿಂತ ಭಾಗೀರಥಿ ಬಾಯಿಯತ್ತ ನೋಡಿದ.

ಆಕೆಯ ಮೈಮೇಲೆ ಬ್ರಾಹ್ಮಣ ಮುತ್ತೈದೆಯ ಮೈಮೇಲೆ ಇರಬೇಕಾದ ಆಭರಣಗಳಲ್ಲದೆ ಹೆಚ್ಚಿನದೇನೂ ಇರಲಿಲ್ಲ. ಆದರೂ ಆ ಆಭರಣಗಳನ್ನು ಸೂಕ್ಷ್ಮವಾಗಿ ನೋಡುತ್ತಿದ್ದಾಗ,

ಭಾಗೀರಥಿಬಾಯಿ ಕುತ್ತಿಗೆಯಲ್ಲಿ ಧರಿಸಿದ್ದ ಅಡ್ಡಿಕೆಯ ಪದಕದಲ್ಲಿ ಕೆಂಪು ಹರಳುಗಳ ಗುಂಡು ಸುತ್ತಿನ ನಡುವೆ ಇದ್ದ ಹನುಮದ್ಗರುಡವಿಗ್ರಹ ಕಣ್ಣಿಗೆ ಬಿದ್ದು, ತಟಕ್ಕನೆ ಅವನ ಕಣ್ಣು ಚುರುಕಾಗಿ –

"ಆ ಹಾರ ಸ್ವಲ್ಪ ತೆಗೆದುಕೊಡಿ"

-ಎಂದು ಗೌರವವಾಗಿಯೇ ಭಾಗೀರಥಿಬಾಯಿಯನ್ನು ಕೇಳಿದ.

ನರಸಪ್ಪಯ್ಯನವರ ಚುರುಕು ಕಣ್ಣೂ ಮುಸ್ತಫಾಖಾನನ ಕಣ್ಣನ್ನು ಹಿಂಬಾಲಿಸಿ, ಅವನು ಕಂಡದ್ದನ್ನು ಕಂಡು –

"ತೆಗೆದುಕೊಡಿ" – ಎಂದು ಹೆಂಡತಿಗೆ ಹೇಳಿದರು.

ಭಾಗೀರಥಿಬಾಯಿ ಗಂಡನ ಮಾತಿನಂತೆ, ತನ್ನ ಕುತ್ತಿಗೆಯಲ್ಲಿದ್ದ ಅಡ್ಡಿಕೆಯನ್ನು ತೆಗೆದು ಗಂಡನ ಕೈಗೆ ಕೊಟ್ಟಳು. ಆತ ಅದನ್ನು ಮುಸ್ತಫಾಖಾನನ ಕೈಗೆ ಕೊಟ್ಟ. ತನ್ನ ಕೈಸೇರಿದ ಅಡ್ಡಿಕೆಯ ಪದಕವನ್ನು ಚೆನ್ನಾಗಿ ಬಿಸಲಿನ ಬೆಳಕಿನಲ್ಲಿ ನೋಡಿ, 'ಅದಾವುದೋ ದೇವತಾವಿಗ್ರಹವಲ್ಲ, ಚಿರಪರಿಚಿತವಾದ ಚಿತ್ರದುರ್ಗದ ನಾಯಕರ ರಾಜಲಾಂಛನವಾದ ಹನುಮದ್ಗರುಡ ವಿಗ್ರಹ' ಎಂದು ಖಚಿತಮಾಡಿಕೊಂಡು, 'ಇಂಥ ಪದಕ ಧರಿಸುವವರು ಮಾಮೂಲಿ ಜನರಲ್ಲ, ದುರ್ಗದ ಅರಮನೆಗೆ ಹತ್ತಿರವಾದವರು' ಎಂದು ನಿಶ್ಚಯಿಸಿ, ಅಡ್ಡಿಕೆಯನ್ನು ಕೈಯಲ್ಲಿ ಹಿಡಿದೇ, ನರಸಪ್ಪಯ್ಯನವರತ್ತ ತಿರುಗಿ-

"ನೀವು ಯಾರು ? ಇಲ್ಲಿಯೇ ಹೇಳಿದರೆ ಸರಿ - ಇಲ್ಲವಾದರೆ ನವಾಬರ ಡೇರಾಕ್ಕೆ ಕರೆದುಕೊಂಡು ಹೋಗಬೇಕಾಗುತ್ತದೆ' – ಎಂದು ಹೇಳಿದ.

"ಏಕೆ ಆ ಪದಕ ಧರಿಸುವುದು ಅಪರಾಧವೇ ?"

"ಇದು ಚಿತ್ರದುರ್ಗದ ಪಾಳಯಗಾರರ ರಾಜಲಾಂಛನವಲ್ಲವೇ ?"

"ಹೌದು 'ದುರ್ಗದವರಿಗೂ ನವಾಬರಿಗೂ ಸಂಧಿಯಾಗಿ, ಈಗ ಅವರು ಮಿತ್ರರಾಗಿದ್ದಾರೆ' ಎಂದು ಕೇಳಿದ್ದೇನೆ. ಆದ್ದರಿಂದ ಇದನ್ನು ಧರಿಸಿದವರನ್ನು ತಡೆಯುವುದು ಅಪರಾಧವಾಗಬಹುದು."

"ಅದನ್ನು ಹೇಳಬೇಕಾದವರು ನಾವಲ್ಲ - ನವಾಬರು. ನೀವು ಯಾರು ಎಂದು ನನಗೆ ಹೇಳಲು ಇಷ್ಟವಿಲ್ಲದಿದ್ದರೆ, ಗಾಡಿಯನ್ನು ನವಾಬರ ದಂಡಿನ ಕಡೆ ತಿರುಗಿಸಿ. ಈ ಮುದ್ರೆ ಧರಿಸಿದವರಿಗೆ ನಾವು ತೋರಿಸಬಹುದಾದ ಮರ್ಯಾದೆ ಅಷ್ಟೆ"

- ಎಂದು ಹೇಳಿ, ತನ್ನ ಸೈನಿಕರಿಗೆ ಗಾಡಿಗೆ ಕಾವಲಾಗಿರಲು ಹೇಳಿದ, ಮುಸ್ತಫಾಖಾನ್.

ಆತನೊಂದಿಗೆ ಹೆಚ್ಚು ಮಾತಾಡುವುದು ಉಪಯೋಗವಿಲ್ಲವೆಂದರಿತ ನರಸಪ್ಪಯ್ಯ, ಹೆಂಡತಿ-ಪರಿಚಾರಕರನ್ನು ಗಾಡಿಯಲ್ಲಿ ಕೂಡಲು ಹೇಳಿ, ಗಾಡಿಯಾಳು ಪೆಟ್ಟಿಗೆಯನ್ನು ಗಾಡಿಯಲ್ಲಿಟ್ಟ ಬಳಿಕ, ತಾವೂ ಗಾಡಿ ಹತ್ತಿ ಕುಳಿತರು.

ಸೈನಿಕರು ತೋರಿಸಿದ ದಾರಿಯಲ್ಲಿ ಗಾಡಿ ಚಲಿಸಿತು.

೧೯

ಒಬ್ಬ ಮುದಿ ಬ್ರಾಹ್ಮಣನೊಂದಿಗೆ ತನ್ನನ್ನು ನೋಡಲು ಬಂದ ಮುಸ್ತಫಾಖಾನನನ್ನು ನೋಡಿ ಹೈದರಾಲಿ –

“ಇದೇನು ಭಾರಿ ಹುಲಿ ಹಿಡಿದೆ ಅನ್ನೋಹಾಗೆ ಈ ಮುದುಕನನ್ನು ಇಲ್ಲಿಗೆ ಹಿಡಿದುಕೊಂಡು ಬಂದೆ”

- ಎಂದ, ನರಸಪ್ಪಯ್ಯನವರನ್ನು ತಾತ್ಸಾರವಾಗಿ ನೋಡುತ್ತಾ.

“ಹುಲಿಯೋ, ಇಲಿಯೋ- ಆದರೆ ಇವರ ಹೆಂಡತಿಯ ಕತ್ತಿನಲ್ಲಿ ಇದಿತ್ತು”

-ಎಂದು ಹೇಳಿ ಮುಸ್ತಫಾಖಾನ್, ತನ್ನ ಕೈಯಲ್ಲಿದ್ದ ಅಡ್ಡಿಕೆಯನ್ನು ನವಾಬನಿಗೆ ತೋರಿಸಿದ.

“ಅದೇನೋ ನೋಡಿ”

- ಎಂದು ಆ ಅಡ್ಡಿಕೆಯನ್ನು ತಾನು ಕೈಯಿಂದಲೂ ಮುಟ್ಟದೆ, ಪಕ್ಕದಲ್ಲಿದ್ದ ಪೂರ್ಣಯ್ಯನಿಗೆ ಹೇಳಿದ, ಹೈದರಾಲಿ.

ಆತನ ಮಾತಿನಂತೆ, ಪೂರ್ಣಯ್ಯ ಆ ಪದಕವನ್ನು ಸೂಕ್ಷ್ಮವಾಗಿ ನೋಡುತ್ತಿರುವಾಗಲೇ, ಅಲ್ಲಿಗೆ ಯಾವುದೋ ಪತ್ರದೊಂದಿಗೆ ಬಂದ ನಾರಾಯಣಯ್ಯ ಅಲ್ಲಿ ಇದ್ದ ನರಸಪ್ಪಯ್ಯನವರನ್ನು ನೋಡಿ, ಚಕಿತನಾಗಿ –

“ದುರ್ಗದ ಪ್ರಧಾನಿಗಳು - ಕಳ್ಳಿ ನರಸಪ್ಪಯ್ಯನವರು ! ನೀವು ಎಲ್ಲಿಂದ ಬಂದಿರಿ ?”

-ಎಂದು ಕೇಳಿದ.

ದುರ್ಗದ ಪ್ರಧಾನಿ, ಕಳ್ಳಿ ನರಸಪ್ಪಯ್ಯ –

ಆ ಮಾತು ಕೇಳುತ್ತಿದ್ದ ಹಾಗೇ ಹೈದರಾಲಿ, ಪೂರ್ಣಯ್ಯ ಇಬ್ಬರೂ ಚಕಿತರಾಗಿ, ತಮ್ಮ ಮುಂದೆ ನಿಂತ ನರಸಪ್ಪಯ್ಯನವರನ್ನು ಹೊಸ ದೃಷ್ಟಿಯಿಂದ ನೋಡಿದರು.

ಪೂರ್ಣಯ್ಯ ತಟಕ್ಕನೆ ಎದ್ದು ನಿಂತು ಕೈಮುಗಿದು –

"ಇಷ್ಟು ಹೊತ್ತು ನಿಲ್ಲಿಸಿದ್ದು ಅಪರಾಧವಾಯಿತು, ಕುಳಿತುಕೊಳ್ಳಿ"

-ಎಂದು ಹೇಳಿ, ಮುಸ್ತಫಾಖಾನನತ್ತ ತಿರುಗಿ –

"ಇವರ ಕಡೆಯ ಬೇರೆ ಯಾರಿದ್ದಾರೆ ? ಅವರನ್ನು ಗೌರವದಿಂದ ಕರೆದುಕೊಂಡು ಹೋಗಿ, ಅತಿಥಿಗಳ ಡೇರಾದಲ್ಲಿಳಿಸು. ಬೇಹುಷಾರಿಯಿಂದ ನಡೆದುಕೊಂಡರೆ, ಬಹುಮಾನದ ಬದಲು ನವಾಬರ ಬಾರುಕೋಲಿಗೆ ಅಪ್ಪಣೆಕೊಡಬೇಕಾದೀತು"

- ಎಂದು ಅಧಿಕಾರ ಚಲಾಯಿಸುವ ಧ್ವನಿಯಲ್ಲಿ ಹೇಳಿದ.

"ನಮ್ಮ ಬಗ್ಗೆ ಹೆಚ್ಚಿನ ಗೌರವ ಅನಗತ್ಯ. ನಾನು ದುರ್ಗದ ಪ್ರಧಾನಿಯಲ್ಲ – ಎಂದೋ ಆಗಿದ್ದವನು. ಈಗ ಬರೀ ನರಸಪ್ಪಯ್ಯ."

"ದುರ್ಗಕ್ಕೆ ಮಾಜಿಯೋ, ಹಾಲಿಯೋ – ನರಸಪ್ಪಯ್ಯನವರು ನಮ್ಮ ಪಾಲಿಗೆ ದುರ್ಗದ ಪ್ರಧಾನಿ ಕಳ್ಳಿ ನರಸಪ್ಪಯ್ಯನವರೇ - ನಿಮ್ಮೊಂದಿಗಿರುವವರಾರು ?"

-ಎಂದು ಕೇಳಿದ ಪೂರ್ಣಯ್ಯ.

"ನನ್ನ ಹೆಂಡತಿ, ಪರಿಚಾರಕ – ಅಷ್ಟೆ."

- ನಿಂತೇ ಹೇಳಿದರು ನರಸಪ್ಪಯ್ಯ.

"ಹಾಗಿದ್ದರೆ ಅವರನ್ನು ನಮ್ಮ ಖಾಸಾಡೇರೆಗೆ ಕರೆದುಕೊಂಡು ಹೋಗಿ. ನೀವು ಹಿರಿಯರು, ನಿಂತು ಮಾತಾಡಬಾರದು, ಕುಳಿತು ಮಾತಾಡಬೇಕು"

- ಎಂದು ವಿನಯದಿಂದ ಹೇಳಿದ ಪೂರ್ಣಯ್ಯ.

"ನಾವು ಯಾತ್ರಾರ್ಥಿಗಳು. ಆದಷ್ಟು ಬೇಗ ಕಳಿಸಿದರೆ ಉಪಕಾರವಾಗುತ್ತದೆ."

"ಇಂದು ನಮ್ಮಲ್ಲಿದ್ದು ದಣಿವಾರಿಸಿಕೊಳ್ಳಿ. ಕಂಡ ಕೂಡಲೆ ಹೊರಡುವ ಮಾತು ಬೇಡ. ಬಹುದಿನದಿಂದ ನಿಮ್ಮನ್ನು ಕಾಣುವ ಅಪೇಕ್ಷೆ ಇತ್ತು, ಸ್ವಾಮಿ ರಂಗನಾಥನ ದಯದಿಂದ ನಮ್ಮ ಬಯಕೆ ಫಲಿಸಿತು. ನಾರಾಯಣಯ್ಯ, ಇವರನ್ನು ನಮ್ಮ ಬಿಡಾರಕ್ಕೆ ಕರೆದುಕೊಂಡು ಹೋಗಿ, ಸ್ನಾನ, ಊಟ, ವಿಶ್ರಾಂತಿಯಾದ ಬಳಿಕ ಮುಂದಿನ ಮಾತು"

- ಎಂದು ಹತ್ತಿರವೇ ಇದ್ದ ನಾರಾಯಣಯ್ಯನಿಗೆ ಹೇಳಿದ ಪೂರ್ಣಯ್ಯ.

ಅನಿವಾರ್ಯವಾದುದಕ್ಕೆ ತಲೆಬಾಗಿದಂತೆ ನರಸಪ್ಪಯ್ಯ –

"ತಮ್ಮ ವಿಶ್ವಾಸ ಹೇಗಿದ್ದರೆ ಹಾಗಾಗಲಿ."

- ಎಂದು ಹೇಳಿ ನಮಸ್ಕರಿಸಿ, ನಾರಾಯಣಯ್ಯನನ್ನು ಹಿಂಬಾಲಿಸಲು ಸಿದ್ಧವಾದರು.

ಆಗ ಪೂರ್ಣಯ್ಯನಿಗೆ ತನ್ನ ಕೈಯಲ್ಲಿದ್ದ ಅಡ್ಡಿಕೆಯ ನೆನಪಾಗಿ –

"ನಿಮ್ಮ ಮನೆಯವರ ಒಡವೆ. ತೆಗೆದುಕೊಳ್ಳಿ." - ಎಂದು ಹೇಳಿದ.

"ಅದು ನಿಮ್ಮಲ್ಲಿಯೇ ಇರಲಿ, ಇನ್ನದರ ಅಗತ್ಯ ನಮಗಿಲ್ಲ" - ಎಂದು ನೀರಸವಾದ ಧ್ವನಿಯಲ್ಲಿ ಹೇಳಿ, ನಾರಾಯಣಯ್ಯನನ್ನು ಹಿಂಬಾಲಿಸಿದರು ನರಸಪ್ಪಯ್ಯ.

ನರಸಪ್ಪಯ್ಯ ಹೋದ ಬಳಿಕ ಹೈದರಾಲಿ, ಉತ್ಸಾಹದಿಂದ ಅಲ್ಲಿಯೇ ನಿಂತಿದ್ದ ಮುಸ್ತಫಾಖಾನ್‌ಗೆ –

"ನೀನು ಹಿಡಿದದ್ದು ಭಾರಿ ಹುಲಿ - ನಮಗೆ ಬೇಕಾದ ಹುಲಿ. ನರಸಪ್ಪಯ್ಯ ಸಿಕ್ಕಿದ್ದು ದುರ್ಗವೇ ಸಿಕ್ಕಹಾಗಾಯಿತು"

- ಎಂದು ಹೇಳಿ, ನರಸಪ್ಪಯ್ಯ ಬಿಟ್ಟುಹೋದ ಅಡ್ಡಿಕೆಯನ್ನು ಕೈಯಲ್ಲೇ ಹಿಡಿದು ಏನನ್ನೋ ಯೋಚಿಸುತ್ತಿದ್ದ ಪೂರ್ಣಯ್ಯನಿಗೆ ಹೇಳಿದ –

"ಈ ಹುಲಿಯನ್ನು ಪಳಗಿಸುವ ಜವಾಬ್ದಾರಿ ನಿಮ್ಮದು, ಪೂರ್ಣಯ್ಯ."

ಆ ಮಾತು ಕೇಳಿ ಪೂರ್ಣಯ್ಯ–

"ಇದೇನು ಹುಲಿಯೋ - ಹಾವೋ, ನನಗಿನ್ನೂ ಅರ್ಥವಾಗಿಲ್ಲ."

- ಚಿಂತೆ ತುಂಬಿದ ಧ್ವನಿಯಲ್ಲಿ ಹೇಳಿದ.

"ಹಾಗಂದರೇನು ?"

- ಪೂರ್ಣಯ್ಯನ ಮಾತು ಅರ್ಥವಾಗದೆ ಕೇಳಿದ ಹೈದರಾಲಿ.

"ಹಿಡಿದರೆ ಹುಲಿ ಪಳಗುತ್ತದೆ ಹುಜೂರ್, ಕಾಳಿಂಗಸರ್ಪ ಹಾಗಲ್ಲ- ಹಿಡಿದರೆ ಕೊಲ್ಲುತ್ತದೆ, ಇಲ್ಲ ತಾನೇ ಸಾಯುತ್ತದೆ, ಬಂಧನದಲ್ಲಂತೂ ಇರುವುದಿಲ್ಲ. ಏನಾದರಾಗಲಿ, ನರಸಪ್ಪಯ್ಯ ನಮಗೆ ಸಿಕ್ಕಿರುವ ವಿಷಯ ಯಾರಿಗೂ ತಿಳಿಯಕೂಡದು. ಆ ಬಗ್ಗೆ ಬಿಗಿವ್ಯವಸ್ಥೆ ಮಾಡಿ."

ಆಗಲೂ ಹೈದರಾಲಿಗೆ ಪೂರ್ಣಯ್ಯನ ಮಾತು ಅರ್ಥವಾಗಲಿಲ್ಲ.

"ಇದೇನು ಒಗಟೆ ಹೇಳಿದ ಹಾಗೆ ಹೇಳ್ತೀರ, ಪೂರ್ಣಯ್ಯ, ಅರ್ಥವಾಗೋ ಹಾಗೆ ."

"ನನಗೇ ಇನ್ನೂ ಅರ್ಥವಾಗಿಲ್ಲ. ಅರ್ಥವಾದಮೇಲೆ ಹೇಳುತ್ತೇನೆ. ಮೊದಲು ನರಸಪ್ಪಯ್ಯನವರನ್ನು ವಿಚಾರಿಸಿಕೊಂಡು ಬರುತ್ತೇನೆ"

- ಎಂದು ಹೇಳಿ, ವಂದಿಸಿ, ಆತುರವಾಗಿ ಅಲ್ಲಿಂದ ಹೊರಟ ಪೂರ್ಣಯ್ಯ,

"ಆ ಅಡ್ಡಿಕೆ ನಮಗಿನ್ನು ಬೇಡ. 'ಅಮ್ಮನವರಿಗೆ ಅರ್ಪಿಸಿಬಿಡು' ಎಂದು ಕೊಲ್ಲಾಪುರದಲ್ಲೇ ಹೇಳಿದೆ. ನೀನು ಕೇಳಲಿಲ್ಲ. 'ಅದೃಷ್ಟ ಇದ್ದರೆ ಸೊಸೆ ಹಾಕಿಕೊಳ್ಳುತ್ತಾಳೆ. ಇಲ್ಲ ಉಚ್ಚಂಗಮ್ಮನಿಗೆ ಒಪ್ಪಿಸಿದರಾಯಿತು' ಎಂದೆ. ಈಗ ದೇವರಿಗೆ ಸೇರಬೇಕಾದದ್ದು ನಾಯಿಯ ಕುತ್ತಿಗೆಗೆ ಬಿತ್ತು"

- ಎಂದು ಕೆನ್ನೆಗೆ ಹೊಡೆದಂತೆ, ಪೂರ್ಣಯ್ಯನ ಬಿಡಾರದಲ್ಲಿ ಮಂಕುಬಡಿದಂತೆ ಕುಳಿತಿದ್ದ ಭಾಗೀರಥಿಬಾಯಿಗೆ ಹೇಳಿದರು, ನರಸಪ್ಪಯ್ಯ.

"ಈಗೇನಾಯಿತು ?...."

- ಅಂಜುತ್ತಾ ಕೇಳಿದಳು, ಭಾಗೀರಥಿಬಾಯಿ.

"ಏನಾಯಿತು ಎಂಬುದು ಇನ್ನು ಮೇಲೆ ತಿಳಿಯಬೇಕು. ನಿನ್ನ ಕೈಯ ಉಂಗುರ ಮರೆಯಬೇಡ"

- ಎಂದಷ್ಟೇ ಹೇಳಿ, ಅತ್ತಿಂದಿತ್ತ ಓಡಾಡತೊಡಗಿದರು ನರಸಪ್ಪಯ್ಯ.

ಆತ ಹಾಗೆ ಓಡಾಡುತ್ತಿರುವಾಗಲೇ ಅಲ್ಲಿಗೆ ಬಂದು, ಅದನ್ನು ನೋಡಿದ ಪೂರ್ಣಯ್ಯ –

"ಇದೇನು ಹೀಗೆ ಓಡಾಡುತ್ತಿದ್ದೀರಿ. ನೆಮ್ಮದಿಯಾಗಿ ಕುಳಿತುಕೊಳ್ಳಿ, ನರಸಪ್ಪಯ್ಯ. ಈ ಗಳಿಗೆಯಿಂದ ನಿಮಗೆ ನಾನು ಪರಕೀಯನಲ್ಲ. ಬೆನ್ನಲ್ಲಿ ಬಿದ್ದವನು ಎಂದು ತಿಳಿದುಕೊಳ್ಳಿ"

- ಎಂದು ಹೇಳಿದ.

"ಗಾಡಿಯಲ್ಲಿ ಕುಳಿತು ಕುಳಿತು ಸಾಕಾಗಿದೆ, ಪೂರ್ಣಯ್ಯನವರೇ - ಅದಿರಲಿ, ನವಾಬರ ಸೇನೆ ದುರ್ಗದಲ್ಲಿತ್ತು ಎಂದು ಕೇಳಿದ್ದೆ ಈಗ ನೋಡಿದರೆ ಇಲ್ಲಿದ್ದೀರಲ್ಲಾ? ದುರ್ಗದ ಕಥೆ ಏನಾಯಿತು ? ನಾವು ದುರ್ಗ ಬಿಟ್ಟು ಬಹಳ ದಿನವಾಯಿತು. ದುರ್ಗ ನಮ್ಮ ಮನೆ. ಆದ್ದರಿಂದ ಆ ವಿಷಯ ತಿಳಿದುಕೊಳ್ಳಲು ತುಂಬಾ ಕುತೂಹಲ, ಅಡ್ಡಿ ಇಲ್ಲದಿದ್ದರೆ ಹೇಳಿ"

- ಎಂದು ಓಡಾಡುತ್ತಲೇ ಕೇಳಿದರು ನರಸಪ್ಪಯ್ಯ,

"ನಾನೇನು ಹೇಳಲಿ, ನಿಮ್ಮ ನಾಯಕರದು ಶುದ್ಧ ಹುಡುಗುಬುದ್ಧಿ, ನವಾಬರನ್ನು ಎದುರಿಸಿ ಬದುಕುತ್ತೇವೆ ಎಂದು ತಿಳಿದಿದ್ದಾರೆ. ನೀವು ಹಿರಿಯರು. ಅವರಿಗೆ ಸರಿಯಾಗಿ ಬುದ್ಧಿ ಹೇಳಬೇಕು."

"ನನ್ನ ಪ್ರಶ್ನೆಗೆ ಇದು ಉತ್ತರವಾಗಲಿಲ್ಲ, ಪೂರ್ಣಯ್ಯನವರೇ, ದುರ್ಗದ ಕಥೆ ಏನಾಯಿತು ಹೇಳಿ ?"

"ಈಗ ಹೇಗೂ ನೀವು ನಮ್ಮವರು. ನಿಮ್ಮ ಮುಂದೆ ಮರೆಮಾಚುವುದೇನಿದೆ ? ನಿಮ್ಮ ನಾಯಕರು ಮರಾಠರನ್ನು ನಂಬಿ ಕುಳಿತಿದ್ದಾರೆ. ಆದರೆ ನಾನು ಹೇಳುತ್ತೇನೆ – ಮರಾಠರಿಂದ ಅವರಿಗೆ ಅನುಕೂಲ ಆಗುವುದಿಲ್ಲ."

"ಏಕೆ?"

"ಮರಾಠರನ್ನು ಪಳಗಿಸುವುದು ಹೇಗೆಂದು ನಮಗೆ ಗೊತ್ತಿದೆ. ದುರ್ಗದ ಕಡೆ ಹೋಗುವ ಮರಾಠರು ಖಂಡಿತವಾಗಿಯೂ ತುಂಗಭದ್ರಾ ದಾಟುವುದಿಲ್ಲ, ಇಲ್ಲಿ ಮರಾಠರ ವಿಷಯ

ಇತ್ಯರ್ಥವಾದರೆ ದುರ್ಗದ ಹಣೆಬರಹವೂ ಇತ್ಯರ್ಥವಾದಂತೆ. ಆದದ್ದಾಗಲಿ- ದುರ್ಗ ತಮ್ಮದಾಗಲೇಬೇಕು ಎಂದು ನವಾಬರು ಪಟ್ಟು ಹಿಡಿದಿದ್ದಾರೆ. ಅವರ ಸ್ವಭಾವ ನಿಮಗೆ ಕೇಳಿ ಗೊತ್ತಿರಬೇಕು. ದುರ್ಗ ಅವರ ಕೈವಶವಾಗುವುದಂತೂ ಖಂಡಿತ. ನಿಮ್ಮಂಥ ಅರಿತು, ನುರಿತ ಹಿರಿಯರು ಮನಸ್ಸು ಮಾಡಿದರೆ ವೃಥಾ ನರಹತ್ಯೆ, ರಕ್ತಪಾತ ತಪ್ಪಿ ಹರಪನಹಳ್ಳಿ, ರಾಯದುರ್ಗದವರ ಹಾಗೆ ಚಿತ್ರದುರ್ಗದವರೂ ಇರಬಹುದು. ನೀವು 'ಕಡಮೆ ಮಾತು, ಶೀಘ್ರ ತೀರ್ಮಾನದ ಮನುಷ್ಯರು' ಅಂತ ಕೇಳಿದ್ದೆ. ಈಗ ನೀವು ಮಾತಾಡಿದ್ದು ನೋಡಿದರೆ ಅದು ನಿಜ ಎಂದು ಕಾಣುತ್ತದೆ. ಅದಕ್ಕೇ ನಾನೂ ಮನಬಿಚ್ಚಿ ಹೇಳುತ್ತಿದ್ದೇನೆ -"

"ಹೇಳಿ – ನಾವೇನು ಮಾಡಬೇಕು ?"

- ನಿರ್ವಿಕಾರವಾದ ಧ್ವನಿಯಲ್ಲಿ ಕೇಳಿದರು ನರಸಪ್ಪಯ್ಯ.

"ಊಟ ವಿಶ್ರಾಂತಿಯಾದಬಳಿಕ ನಿಧಾನವಾಗಿ ಮಾತನಾಡೋಣ."

"ಅವೆರಡಕ್ಕೂ ಮನಶ್ಶಾಂತಿ ಬೇಕು. ಆದ್ದರಿಂದ ಇದ್ದ ವಿಷಯ ಹೇಳಿಬಿಡಿ. ಆಮೇಲೆ ಬೇಕಾದಷ್ಟು ವಿಶ್ರಾಂತಿ ತೆಗೆದುಕೊಂಡರಾಯಿತು."

"ಹಿರಿಯರ ಮಾತಿಗೆ ನಾನು ಎದುರಾಡುವುದಿಲ್ಲ. ನಮ್ಮ ನಾರಾಯಣಯ್ಯ ಹೇಳುತ್ತಿದ್ದ - ನಿಮಗೆ ಮರಾಠರಿಗಿಂತ ನಮ್ಮ ನವಾಬರಲ್ಲಿ ಬಹಳ ಅಭಿಮಾನವಂತೆ ?"

"ಅದು ಅಭಿಮಾನದ ಮಾತಲ್ಲ. ನಮ್ಮ ಬುದ್ಧಿಗೆ ಸರಿ ಎಂದು ಕಂಡ ಮಾತು."

"ನಿಮ್ಮ ಬುದ್ಧಿ ಕಂಡದ್ದು ಸರಿ. ಈಗಲೂ ನಿಮ್ಮ ನಾಯಕರಿಗೆ ಆ ಮಾತು ಹೇಳಿ. ಕಾಲಹರಣ ಕಾಳವಿಷಪ್ರಾಶನ - ನವಾಬರ ವಿಷಯದಲ್ಲಿ. ಖುದ್ದಾಗಿ ಆ ಮಾತು ಹೇಳಲು ಸಂಕೋಚವಾದರೆ ಒಂದು ಪತ್ರ ಬರೆದುಕೊಡಿ. ಅದನ್ನು ನಾವು ಅವರಿಗೆ ತಲುಪಿಸುತ್ತೇವೆ"

- ಪೂರ್ಣಯ್ಯ ಹೇಳಿದ.

"ಕಾಗದ ಕಳಿಸುವುದು ಮುಂದಿನ ಮಾತು. ಒಂದು ಮಾತು ಕೇಳುತ್ತೇನೆ – ದಯವಿಟ್ಟು ಹೇಳಿ. ಇಲ್ಲಿ ಮರಾಠರು ಗೆದ್ದರೆ - ?"

"ಅದು ಸಾಧ್ಯವಿಲ್ಲ."

"ಹೇಗೆ - ಹಿಂದೆ ಮರಾಠರು ನವಾಬರನ್ನು ಎಷ್ಟೋ ಬಾರಿ ಸೋಲಿಸಿದ್ದಾರೆ."

"ಅದು ಹಳೆಯ ಮಾತಾಯಿತು. ಈಗ ಮರಾಠರು ಮೊದಲಿನ ಹಾಗೆ ಒಂದಾಗಿಲ್ಲ. ಅಷ್ಟೇಕೆ, ಈಗ ದುರ್ಗಕ್ಕೆ ಬರುತ್ತಿರುವ ಸರ್ದಾರರಲ್ಲೇ ಒಬ್ಬರು ನಮ್ಮವರು."

"ಇದು ನಿಜವೇ ?"

"ನೀವು ನಮ್ಮವರಾಗಬೇಕು ಎಂದು ನಮ್ಮ ಆಶೆ. ಆದ್ದರಿಂದ ನಿಮಗೇಕೆ ಸುಳ್ಳು ಹೇಳಲಿ. ನಾನು ಹೇಳುವುದು ಸತ್ಯ. ನನ್ನ ಮಾತು ನಂಬಿ. ನೀವು ಮುಂದೂ ದುರ್ಗದ ಪ್ರಧಾನಿಗಳಾಗಬೇಕು. ನೀವಾದಬಳಿಕ ನಿಮ್ಮ ಮಕ್ಕಳು...."

"ನನ್ನ ಮಗ ತಮಗೆ ಪರಿಚಯವೇ ?"

- ಮುಂದುವರಿಯುತ್ತಿದ್ದ ಮಾತನ್ನು ತಟಕ್ಕನೆ ಕತ್ತರಿಸಿದಂತೆ ಕೇಳಿದರು ನರಸಪ್ಪಯ್ಯ.

"ಇದೆ."

"ಈಗಲೂ –?"

"ಈಗಲೂ. ಮೊದಲು ಮತ್ತೋಡಿನವರ ಮೂಲಕ ನಿಮ್ಮ ಮಕ್ಕಳ ಸ್ನೇಹವಾಯಿತು, ಈಗ ತಂದೆಯವರದು. ನಿಮಗೆ ತಕ್ಕ ಮಗ ಶ್ರೀಪತಿರಾಯರು."

"ಆ ಮಾತು ಕೇಳಿ ತುಂಬಾ ಸಂತೋಷವಾಯಿತು. ದಯವಿಟ್ಟು ಒಂದು ಲೋಟ ನೀರು ತರಿಸಿಕೊಡುತ್ತೀರಾ, ಬಾಯಾರಿಕೆಯಾಗುತ್ತಿದೆ"

- ಎಂದು ಪೂರ್ಣಯ್ಯನವರಿಗೆ ಹೇಳಿ, ಹೆಂಡತಿಯತ್ತ ತಿರುಗಿ –

"ಕೇಳಿದೆಯಾ - ನಿನ್ನ ಮಗ ದುರ್ಗದ ಮುಂದಿನ ಪ್ರಧಾನಿ. ನಮ್ಮ ವಂಶ ಉದ್ಧಾರವಾಯಿತು. ಅಂಥ ಮಗನನ್ನು ಹಡೆದ ನಿನ್ನ ಹೊಟ್ಟೆ ತಣ್ಣಗಿರಲಿ"

- ಎಂದರು ನರಸಪ್ಪಯ್ಯ.

"ಆ ಬಗ್ಗೆ ಸಂಶಯವೇ ಬೇಡ."

-ಭರವಸೆ ಕೊಡುವ ಧ್ವನಿಯಲ್ಲಿ ಹೇಳಿದ ಪೂರ್ಣಯ್ಯ.

"ಸಂಶಯವಿಲ್ಲ, ಸಂತೋಷವಾಯಿತು. ಅದಕ್ಕೆ ಹಾಲು ತರಿಸಿಕೊಡಿ ಎಂದು ಕೇಳಬೇಕೆಂದಿದ್ದೆ. ಆದರೆ ಬಾಯಾರಿಕೆ, ನೀರು ತರಿಸಿಕೊಡಿ. ಕುಡಿದು ಆಮೇಲೆ ಮುಂದಿನ ಮಾತಾಡೋಣ"

- ಎಂದು ಹೇಳಿ, ಹತ್ತಿರದಲ್ಲೇ ಇದ್ದ ಆಸನದಲ್ಲಿ ಕುಳಿತರು ನರಸಪ್ಪಯ್ಯ, ಬಳಲಿದವರಂತೆ.

"ಛೇ...ಛೇ... ನಿಮ್ಮನ್ನು ಮಾತಿನಲ್ಲಿ ಬಳಲಿಸಿದ್ದು ತಪ್ಪಾಯಿತು -"

- ಎಂದು ಹೇಳಿ, ಕೈಚಪ್ಪಾಳೆ ತಟ್ಟಿ, ಅದಕ್ಕೆ ಉತ್ತರವಾಗಿ ಬಂದ ಪರಿಚಾರಕನಿಗೆ –

"ಬೇಗ ಒಂದು ಲೋಟ ನೀರು ತಂದುಕೊಡು. ನೀರಾದಮೇಲೆ ಹಾಲು ತಂದುಕೊಡು."

-ಎಂದು ಅಪ್ಪಣೆ ಮಾಡಿದ ಪೂರ್ಣಯ್ಯ,

"ಒಂದಲ್ಲ, ಎರಡು ಲೋಟ ತರಿಸಿ."

-ಎಂದು ಆಯಾಸವಾದಂತೆ, ಆಸನದ ಬೆನ್ನಿಗೆ ಒರಗಿ ಕಣ್ಣು ಮುಚ್ಚಿದರು ನರಸಪ್ಪಯ್ಯ.

ಪೂರ್ಣಯ್ಯನ ಅಪ್ಪಣೆಯಂತೆ ಪರಿಚಾರಕ ಓಡಿಹೋಗಿ, ಎರಡು ಬೆಳ್ಳಿಯ ಬಟ್ಟಲಲ್ಲಿ ನೀರು ತಂದ. ಅದನ್ನು ಕಂಡ ನರಸಪ್ಪಯ್ಯ ತಾವೊಂದು ಬಟ್ಟಲು ಕೈಗೆ ತೆಗೆದುಕೊಂಡು –

"ಇನ್ನೊಂದನ್ನು ನಮ್ಮಾಕೆಗೆ ಕೊಡಿ. ಆಕೆಗೂ ನನ್ನಷ್ಟೇ ದಣಿವಾಗಿದೆ. ಕೇಳಲು ಸಂಕೋಚ ಪಡುತ್ತಾಳೆ" – ಎಂದು ಹೇಳಿ –

"ಭಾಗೀರಥೀ, ಸಂತೋಷವಾಗಿ ಕುಡಿ. ನಾವು ಮಾಡಿದ ಯಾತ್ರೆ ಸಾರ್ಥಕವಾಯಿತು"

- ಎಂದು ಹೇಳಿ, ಕೈಯಲ್ಲಿದ್ದ ನೀರಿನ ಬಟ್ಟಲನ್ನು ನೋಡುತ್ತಾ –

"ಏನೋ ಕಸ ಬಿದ್ದ ಹಾಗಿದೆ"

-ಎಂದು ನೀರಿನ ಬಟ್ಟಲಲ್ಲಿ, ಉಂಗುರವಿದ್ದ ಕೈಬೆರಳೆರಡನ್ನದ್ದಿ, ಕಸ ಹುಡುಕಿದಂತೆ ಕಲಕಿ, ಬಳಿಕ, ಕೈಬೆರಳನ್ನು ತೆಗೆದು –

"ಶ್ರೀಹರಿ - ನಿನಗೆ ಪ್ರೀತಿಯಾಗಲಿ"

-ಎಂದು ಹೇಳಿ, ಬಟ್ಟಲಲ್ಲಿದ್ದ ನೀರನ್ನು ಗಟಗಟ ಕುಡಿದು ಮುಗಿಸಿ, ಹೆಂಡತಿಯತ್ತ ನೋಡಿ –

"ಬಂದ ಕೆಲಸ ಆಯಿತು. ನೀನೂ ನನ್ನ ಜೊತೆಗೆ ಬರುತ್ತೀಯೋ, ಮಗನ ಜೊತೆ ಇರುತ್ತೀಯೋ - ನಿನ್ನ ಇಷ್ಟ. ಶ್ರೀಕೃಷ್ಣ ಕೃಷ್ಣ"

-ಎಂದು ಹೇಳಿ ಕಣ್ಣು ಮುಚ್ಚಿದರು.

ಪೂರ್ಣಯ್ಯ ನೋಡುತ್ತಲೇ ಇದ್ದ –

ನರಸಪ್ಪಯ್ಯನವರ ಕೈಯಲ್ಲಿದ್ದ ಬರಿದಾದ ಬಟ್ಟಲು ಜಾರಿ ಕೆಳಗೆ ಬಿದ್ದು ಕೈ ಕಳಚಿಕೊಂಡಂತೆ ಜೋತುಬಿತ್ತು. ನರಸಪ್ಪಯ್ಯನವರ ಕೈಬೆರಳಿನಲ್ಲಿದ್ದ ಉಂಗುರ ಬಟ್ಟಲಿನಿಂದ ಕೆಳಗೆ ಬಿತ್ತು, ಅದರ ಮೇಲಿದ್ದ ಹರಳು ಮತ್ತೊಂದು ಕಡೆ ಬಿತ್ತು.

ಮಿಂಚಿನ ವೇಗದಲ್ಲಿ ಪೂರ್ಣಯ್ಯ ಉಂಗುರ ತೆಗೆದುಕೊಂಡು ನೋಡಿದ ಮಣಿಯಿದ್ದ ಭಾಗದಲ್ಲಿ ಸಣ್ಣ, ಬರಿದಾದ, ಬಿಳಿ ಚೂರ್ಣದ ಧೂಳಿದ್ದ ಗೂಡು ಕಾಣಿಸಿತು.

ಅವನದನ್ನು ಮಂತ್ರಮುಗ್ಧನಾದವನಂತೆ ನೋಡುತ್ತಿರುವಾಗಲೇ, ಅವನ ಬೆನ್ನ ಹಿಂದೆ -

"ಗುರುರಾಯ - ನಿನ್ನ ಪಾದಕ್ಕೆ ಒಪ್ಪಿಸಿಕೋ, ತಂದೆ"

-ಎಂದು ಭಾಗೀರಥಿಬಾಯಿ ನಿಟ್ಟುಸಿರಿನಷ್ಟು ನವಿರಾದ ಧ್ವನಿಯಲ್ಲಿ ಹೇಳಿದ್ದು ಕೇಳಿಸಿ, ಮೆಟ್ಟಿಬಿದ್ದು ತಿರುಗಿ ನೋಡಿದ ಪೂರ್ಣಯ್ಯ –

ಕುಳಿತೆಡೆಯಲ್ಲೇ ಕುಸಿದುಬಿದ್ದಿದ್ದಳು ಭಾಗೀರಥಿಬಾಯಿ.

ಅದನ್ನು ಕಂಡು ಪೂರ್ಣಯ್ಯ ಮೈಯಲ್ಲಿ ಬಿರುಗಾಳಿ ಹೊಕ್ಕವನಂತೆ ಗಡಗಡ ನಡುಗಿದ. ಆತನ ಮುಖದಿಂದ ಬೆವರು ಬಸಿಯುತ್ತಿತ್ತು.

೨೦

ಯುದ್ಧದ ಕಾವು ಕಡಮೆಯಾಗಿ, ದುರ್ಗದ ವಾತಾವರಣ ಒಂದು ಹದಕ್ಕೆ ಬರುತ್ತಿರುವಾಗಲೇ, ಹೈದರಾಲಿಯ ಸೈನ್ಯ ದುರ್ಗದ ಸುತ್ತ ಬೀಡುಬಿಟ್ಟ ಸಮಯದಲ್ಲಿ, ಅವನ ಸೇನೆ ದುರ್ಗದ ಸುತ್ತಮುತ್ತಲ ಪ್ರದೇಶಗಳಲ್ಲಿ ನಡೆಸಿದ ವಿನಾಶಕೃತ್ಯಗಳು, ಆ ಕಾಲದಲ್ಲಿ ಹಳ್ಳಿಗರು ಅನುಭವಿಸಿದ ಬಗೆಬಗೆಯ ಹಿಂಸೆ, ಅತ್ಯಾಚಾರ, ನಷ್ಟದ ವಾರ್ತೆಗಳು ನಾಲ್ಕು ದಿಕ್ಕಿನಿಂದಲೂ ಬಂದು ಕಿವಿಮುಟ್ಟಿ, ಮನೆ-ಮಠ, ಎತ್ತು-ಕರು, ಉಳುವ ನೇಗಿಲುಗಳನ್ನು ಕಳೆದುಕೊಂಡು ಗುಡ್ಡಗಾಡಿನಲ್ಲಿ ಕಾಡುಪ್ರಾಣಿಗಳಂತೆ ಬದುಕಿ, ಭರಿಸಿದ ನೋವಿನ ಸುದ್ದಿಯನ್ನು ಕಿವಿಯಾರ ಕೇಳಿ, ಒಮ್ಮೆ ಹಸಿರು ಬಂಗಾರವನ್ನು ಹೊತ್ತು ಬೀಗುತ್ತಿದ್ದ ತೆಂಗು, ಅಡಿಕೆಯ ತೋಟಗಳು ಗೋಳುಕರೆವ ರುದ್ರಭೂಮಿಯಾದದ್ದನ್ನು ಜಾನಕಲ್ಲಿಗೆ ಹೋದಾಗ ಕಣ್ಣಾರೆ ಕಂಡು, ಬರಿ ಮಾತಿನಿಂದ ಪರಿಹಾರವಾಗದ ಈ ಬಡಜನರ ಬವಣೆ ನೀಗಲು, ಮತ್ತೆ ಅವರು ಮನುಷ್ಯರಾಗಿ ಬದುಕಲು ಏನು ಮಾಡಬೇಕು ಎಂದು ಚಿಂತಿಸಲಾರಂಭಿಸಿದ ಮದಕರಿನಾಯಕ.

ಆ ಜನಕ್ಕೆ ದುರ್ಗದ ವಿಜಯ ಹೃದಯಕ್ಕೆ ತಂಪೆರೆದರೂ, ನಿತ್ಯದ ಬಾಳು ಕೆಂಡದ ಹಾಸಿಗೆಯಾಗಿತ್ತು.

ಅವರ ಬಾಳು ಮತ್ತೆ ಹಿಂದಿನಂತಾಗಲು ಬೇಕಾದದ್ದು –

ಹಣ, ದನಕರು, ಮತ್ತೆ ಬೆಳೆ ಬರುವವರೆಗೆ ಬದುಕಲು ಆಹಾರ,

ಬರಿ ಉಪಚಾರದ ಬಾಯಮಾತಲ್ಲ - ಹಣ.

ಆ ಕೆಲಸವನ್ನು ಹೇಗೆ ಮಾಡುವುದೆಂದು ಮದಕರಿನಾಯಕ ಚಿಂತಿಸುತ್ತಿರುವಾಗಲೇ, ಒಂದು ದಿನ –

'ನಗರದಿಂದ ಶ್ರೀರಂಗಪಟ್ಟಣಕ್ಕೆ ಮೂವತ್ತು ಲಕ್ಷ ವರಹ ಹಣ ಚನ್ನಗಿರಿಯ ಮಾರ್ಗವಾಗಿ, ಐದುನೂರು ಜನ ಸೈನಿಕರ ರಕ್ಷಣೆಯಲ್ಲಿ ಹೋಗುತ್ತಿದೆ'

- ಎಂಬ ವಾರ್ತೆ, ಹೊಳಲಕೆರೆಯ ಕಡೆಯಿಂದ ಬಂದ ಗೂಢಚಾರರ ಮೂಲಕ ಮದಕರಿನಾಯಕನಿಗೆ ತಿಳಿದುಬಂದು –

'ಆದದ್ದಾಗಲಿ, ಆ ಬೊಕ್ಕಸದ ಗಾಡಿಯನ್ನು ದುರ್ಗಕ್ಕೆ ಹೊತ್ತು ತರಬೇಕು'

-ಎಂಬ ನಿರ್ಧಾರ ಮಾಡಿದ.

ಆ ವಿಷಯವಾಗಿ ಯೋಚಿಸುತ್ತಿರುವಾಗಲೇ ಸಮರಸಮಯದಲ್ಲಿ ಹೈದರಾಲಿಯ ಸೇನೆಗೆ ಬೇಕಾದ ಆಹಾರಸಾಮಗ್ರಿಗಳ ಸರಬರಾಜು ನಿರಂತರವಾಗಿ ಮಲೆನಾಡಿನ ಕಡೆಯಿಂದ ನಡೆಯಿತೆಂಬ ವಿಷಯವೂ ನೆನಪಿಗೆ ಬಂದು –

'ನಮ್ಮ ಸೀಮೆಯನ್ನು ಹೈದರಾಲಿ ಸುಲಿದು, ಹೀರಿ, ಸಿಪ್ಪೆ ಮಾಡಲು ನೆರವಾದವರು ಮಲೆನಾಡಿನವರು. ಈಗ ಅವರಿಂದಲೇ ನಮಗಾದ ನಷ್ಟವನ್ನು ತುಂಬಿಕೊಳ್ಳಬೇಕು. ದುರ್ಗದ ಜನ ಮತ್ತೆ ಬದುಕಲು ಬೇಕಾದ ಧನ, ಆಹಾರವನ್ನು ಆ ಸೀಮೆಯಿಂದಲೇ ವಸೂಲು ಮಾಡಬೇಕು'

- ಎಂದು ಆಲೋಚನೆ ಮಾಡಿ, ಆ ಕಾರ್ಯವನ್ನು ಹೇಗೆ ಮಾಡಬೇಕೆಂದು ಆಪ್ತರಲ್ಲಿ ಪರ್ಯಾಲೋಚನೆ ಮಾಡಿದ.

"ಹೈದರಾಲಿಯ ಸೇನೆ, ಸರಂಜಾಮೆಲ್ಲಾ ಈಗ ಮರಾಠರನ್ನು ಎದುರಿಸಲು ತುಂಗಭದ್ರೆಯಾಚೆಗೆ ಹೋಗಿದೆ. ಇಲ್ಲಿ ಹಣದ ರಕ್ಷಣೆಗಿರುವುದು ಪುಡಿಸೇನೆ. ನಮ್ಮ ಏಟಿಗೆ ಅದು ತಡಿಯುವುದಿಲ್ಲ. ಜನಕ್ಕೆ ಜನ, ಮನೆಗೆ ಮನೆ, ಹಳ್ಳಿಗೆ ಹಳ್ಳಿಗಳನ್ನು ಬಲಿ ತೆಗೆದುಕೊಂಡು, ನಮ್ಮವರಿಗಾದ ರಕ್ತಸ್ನಾನವನ್ನು ಹೈದರಾಲಿಗೆ ಬೆಂಬಲವಾಗಿ ನಿಂತ ಮಲೆನಾಡವರಿಗೆ ಮಾಡಿಸಬೇಕು. ನಾವು ಉಂಡ ಯುದ್ಧದ ರುಚಿಯನ್ನು ಕೊಬ್ಬಿದ ಮಲೆನಾಡವರೂ ನೋಡಲಿ"

-ಎಂದು ದುರ್ಗದ ದಳವಾಯಿಗಳು, ಆ ಪ್ರತೀಕಾರದ ಯೋಚನೆಯ ಬಗ್ಗೆ ಉತ್ಸಾಹ ತೋರಿಸಿದರು.

ಮದಕರಿನಾಯಕನಿಗಿದ್ದುದು ರಕ್ತತೃಷೆಯಲ್ಲ - ತನ್ನ ಜನ ಬದುಕಲು ಬೇಕಾದ ಧನ, ಧಾನ್ಯ.

ಎಂತಲೇ –

"ಹಳ್ಳಿಗರನ್ನು ಕೊಲೆಮಾಡಿ, ಮನೆಮಠಗಳಿಗೆ ಬೆಂಕಿಹಚ್ಚಿ, ಜನಗಳು ಬದುಕಿಬಾಳುವ ಹಳ್ಳಿಗಳು ನಾಯಿನರಿಗಳ ಪಾಲಾಗುವುದು ನಮಗಿಷ್ಟವಿಲ್ಲ, ನವಾಬನ ಸೇನೆ ಹೆದರಿಸಿತು- ಬದುಕುವ ಸಲುವಾಗಿ, ಅವರು ಕೇಳಿದ್ದನ್ನು ನಮ್ಮ ಹಳ್ಳಿಗಳು ಕೊಟ್ಟವು. ನವಾಬನ ಸೇನೆ, ನಮ್ಮ ಹಳ್ಳಿಗಳನ್ನು ಸ್ಮಶಾನ ಮಾಡಿರುವುದನ್ನು ನೀವು ನೋಡಿದ್ದೀರ. ರಕ್ತದಲ್ಲಿ ಕೈ ತೊಳೆದು ಅಭ್ಯಾಸವಾದರೂ, ಬೆತ್ತಲೆಯಾದ ಭೂಮಿಯನ್ನು ಕಂಡು ಕಣ್ಣೀರಿಟ್ಟಿದ್ದೀರ. ನಾವೂ ಅಂಥ ನರಕದ ನಾಯಿಗಳಾಗಬೇಕೇ? ಆ ಹಳ್ಳಿಗಳಲ್ಲೂ, ನಮ್ಮ ಹಳ್ಳಿಗರ ಜನರ ನೆಂಟರಿಷ್ಟರಿದ್ದಾರೆ, ಆಪ್ತಮಿತ್ರರಿದ್ದಾರೆ. ಆದ್ದರಿಂದ ನಿರಪರಾಧಿಗಳ ಹತ್ಯೆ ನಮ್ಮ ಉದ್ದೇಶವಲ್ಲ. ನಮ್ಮ ಸೇನೆ ಮನುಷ್ಯತ್ವವನ್ನು ಮರೆತ ಡಕಾಯಿತರಾಗುವುದು ನಮಗೆ ಇಷ್ಟವಿಲ್ಲ. ಆದ್ದರಿಂದ ನಮ್ಮ

ಸೇನೆಯವರು ಹಳ್ಳಿಹಳ್ಳಿಗಳಿಗೂ ಹೋಗಿ, ಅವರಿಗೆ ತಿಳಿಹೇಳಿ, ಅವರ ಆಗತ್ಯಕ್ಕೆ ಬೇಕಾದುದನ್ನು ಬಿಟ್ಟು, ಒಪ್ಪಿಕೊಟ್ಟುದನ್ನು ತರಲಿ. ನಮ್ಮ ಸೇನೆಯ ಶಸ್ತ್ರಾಸ್ತ್ರ ಮುಖ್ಯವಾಗಿ ಬೆದರಿಸಲು, ಪುಂಡಾಟ ಮಾಡಿದವರನ್ನು ಮಟ್ಟಹಾಕಲು. ಈ ಶಿಸ್ತಿಗೆ ಒಪ್ಪಿದವರು ಮಾತ್ರ ನಮ್ಮೊಂದಿಗೆ ಹೊರಡಲಿ"

- ಎಂದು ಖಚಿತವಾಗಿ ತನ್ನ ಅಭಿಪ್ರಾಯವನ್ನು ದಳವಾಯಿಗಳಿಗೆ ವಿವರಿಸಿ ಹೇಳಿದ. ನಾಯಕರ ಮಾತಿನ ಹಿಂದಿದ್ದ ಹೃದಯವಂತಿಕೆಯನ್ನು ಒಪ್ಪಿಕೊಂಡು –

"ಅಗತ್ಯಬಿದ್ದಲ್ಲದೆ ಕತ್ತಿ-ಕೋವಿಗಳನ್ನು ಬಳಸುವುದಿಲ್ಲ, ತಲೆ ಕಡಿಯುವುದಿಲ್ಲ. ನಮ್ಮ ಸೇನೆಯವರನ್ನು ಈ ಮಾತಿಗೆ ಒಪ್ಪಿಸಿ, ಪ್ರಮಾಣಮಾಡಿಸಿಯೇ ಕರೆದುಕೊಂಡು ಹೋಗಿ, ನೀವು ನಮಗೆ ಒಪ್ಪಿಸಿದ ಕೆಲಸ ಮಾಡಿಕೊಂಡು ಬರುತ್ತೇವೆ. ಆದರೆ ನಮ್ಮದೊಂದು ಪ್ರಾರ್ಥನೆ" – ಚಪ್ರೇಚಾವಡಿ ದಳವಾಯಿ ಸಣ್ಣಪರಶುರಾಮಪ್ಪನಾಯಕ ಹೇಳಿದ.

"ಏನು?"

"ಈ ಕೆಲಸವೇನಿದ್ದರೂ ನಮಗೆ ಬಿಡಬೇಕು. ತಾವು ಮಾತ್ರ ಕೋಟೆ ಬಿಟ್ಟು ಹೊರಗೆ ಬರಬಾರದು. ಶತ್ರುಸೇನೆಯೇನೂ ಬಹಳ ದೂರವಿಲ್ಲ. ತಮ್ಮನ್ನು ಕೋಟೆಯಿಂದ ಹೊರಗೆ ಕರೆಸಿಕೊಳ್ಳಬೇಕೆಂದು ನವಾಬ ಸಾವಿರ ಸಂಚು ಮಾಡಿದ. ನೀವಿದ್ದರೆ ದುರ್ಗ. ಆದ್ದರಿಂದ ಈ ಕೆಲಸ ನಮಗೆ ಒಪ್ಪಿಸಿ, ತಾವು ನಿಶ್ಚಿಂತರಾಗಿ ಇಲ್ಲಿಯ ಕಾರ್ಯ ನೋಡಿಕೊಂಡಿರಬೇಕು."

"ಎಲ್ಲ ಕೆಲಸಕ್ಕೂ ಕಂಡವರ ತಲೆಯನ್ನು ಶತ್ರುಗಳಿಗೆ ಒಪ್ಪಿಸುವುದು ದುರ್ಗದ ನಾಯಕರ ಸಂಪ್ರದಾಯವಲ್ಲ. ಅರಸು ಮುಂದೆ - ಆಳು ಹಿಂದೆ - ಇದು ನಡೆದು ಬಂದ ರೀತಿ. ಅಲ್ಲದೆ ನವಾಬನ ದಂಡೇನೂ ಭೇತಾಳ ಪಡೆಯಲ್ಲ. ಬಂದರೆ ಅವರಿಗೂ ಒಂದು ಕೈ ಪೆಟ್ಟಿನ ರುಚಿ ತೋರಿಸಿ ಬರುತ್ತೇವೆ. ನೀವು ಚಿಂತಿಸುವ ಕಾರಣವಿಲ್ಲ. ನವಾಬನ ಬೊಕ್ಕಸ ಹಿಡಿದು ತರುವ ಕಾರ್ಯ ನಮಗಿರಲಿ. ಮಿಕ್ಕ ಕೆಲಸ ನೀವು ವಹಿಸಿಕೊಳ್ಳಿ. ಇಂಥ ಅವಕಾಶ ದಿನವೂ ಬರುವಂಥದಲ್ಲ. ನವಾಬ ನಮ್ಮನ್ನು ವಂಚಿಸಿ ಸುಲಿದ ಆರು ಲಕ್ಷಕ್ಕೆ ಐದು ಪಟ್ಟು ಕಕ್ಕಿಸುವ ಅವಕಾಶವೂ ಸಿಕ್ಕಿರುವಾಗ ಇದಕ್ಕೆ ಹೋಗಬೇಕಾದವರು ನಾವೇ, ನೀವಲ್ಲ. ನವಾಬ ಮೋಸ ಮಾಡಿದ್ದು ನಮಗೆ, ಅದರ ಪ್ರತೀಕಾರವೂ ನಮ್ಮಿಂದಲೇ ಆಗಬೇಕು. ತಡ ಮಾಡಬೇಡಿ"

- ಎಂದು ಕೊನೆಯ ಮಾತೆಂಬಂತೆ ನಾಯಕರು ಆಡಿದ್ದರಿಂದ ಉಳಿದೆಲ್ಲ ದಳವಾಯಿಗಳೂ ಅವರ ಮಾತಿಗೆ ಒಪ್ಪಲೇಬೇಕಾಯಿತು.

ಶಿಸ್ತಿನ ಲಡಾಯಿಗೆ ಹೆಸರಾದ, ಯುದ್ಧ ಸಮಯದಲ್ಲಿ ಕಣಿವೆಗಳ ಕಾವಲು ಕಾರ್ಯಕ್ಕೆ ನಿಯಮಿತರಾಗಿದ್ದ 'ಉಚ್ಚಂಗಮ್ಮನ ಪಡೆ', 'ಬರಗೇರಮ್ಮನ ಪಡೆ', 'ಕಣಿವೆಮಾರಮ್ಮನ ಪಡೆ', 'ತಿಪ್ಪಲುಗಟ್ಟೆದಮ್ಮನ ಪಡೆ'ಯಿಂದ ಎರಡು ಸಾವಿರ ಮಂದಿ ಆಯ್ದ ಸೈನಿಕರು

ಚಿಕ್ಕಪರಶುರಾಮನಾಯಕನ ನೇತೃತ್ವದಲ್ಲಿ ಮಲೆನಾಡಿನವರಿಂದ 'ಪುಂಡುಗಂದಾಯ' ವಸೂಲಿಮಾಡಿ ಕೊಂಡು ಬರಲು ಹೊರಟರೆ, ತನ್ನ ಅಂಗರಕ್ಷಕ ಪಡೆಯ ನಾಯಕ ಗುದಗತ್ತಿ, ಆರಸರ ಮುಂದೆ ಯುದ್ಧ ಮಾಡುವ ವಚನ ಪಡೆದ ಪುರುಭಯ್ಯಾಜನರ ಪಡೆಯ ನಾಯಕರಾದ ಶಿವಪ್ರಸಾದ್‌ಸಿಂಗ್, ರಾಮ್‌ಸಿಂಗ್, ಲಕ್ಷ್ಮಣ್ ಸಿಂಗ್, ಧನಸಿಂಗ್, ಖಾಸಾಬೇಡಪಡೆಯ ವೀರಭದ್ರನಾಯಕ ಇವರೊಂದಿಗೆ ಐನೂರು ಜನರ ಸೇನೆಯೊಂದಿಗೆ ನವಾಬನ ಬೊಕ್ಕಸವನ್ನು ಹಿಡಿಯಲು ಮದಕರಿನಾಯಕನೇ ಹೊರಟ.

ಮದಕರಿನಾಯಕನ ಸೇನೆ ಶೀಬಾರದ ಕಣಿವೆಯನ್ನು ದಾಟಿ ಮಾಯಕೊಂಡದ ಮಾರ್ಗವಾಗಿ ಹೊರಟರೆ, ಚಿಕ್ಕ ಪರಶುರಾಮನಾಯಕನ ಸೇನೆ ಹೊಳಲಕೆರೆ, ದುಮ್ಮಿ ಮಾರ್ಗವಾಗಿ ಹೊರಟು ಮಲೆನಾಡನ್ನು ಪ್ರವೇಶ ಮಾಡಿತು.

* * *

"ನಮಗೆ ಬೇಕಾದದ್ದು - ನಿಮ್ಮ ತಲೆಯಲ್ಲ, ನಿಮ್ಮ ಹೆಂಗಸರ ಶೀಲವೂ ಅಲ್ಲ – ನಮ್ಮ ಜನ ಬದುಕಲು ದವಸ, ಧಾನ್ಯ, ದನಕರು : ಹೈದರಾಲಿ ಸುಟ್ಟ ಸೀಮೆಗೆ ಜೀವತುಂಬಲು ಹಣ. ಒಪ್ಪಿಕೊಟ್ಟರೆ ಸಂತೋಷದಿಂದ ತೆಗೆದುಕೊಂಡು 'ನೀವು ನಮ್ಮ ನೆಂಟರು' ಎಂದು ಹೇಳಿ ಹೋಗುತ್ತೇವೆ. ಇಲ್ಲವೆಂದರೆ ಆಗುವ ರಕ್ತಪಾತಕ್ಕೆ ನೀವೇ ಹೊಣೆ."

- ಮೊದಲೊಬ್ಬ ಸೈನಿಕನ ಮೂಲಕ ಗ್ರಾಮದ ಮುಖ್ಯಸ್ಥರಿಗೆ ಈ ಕಾಗದ.

ಆ ಕಾಗದದ ಬೆನ್ನ ಹಿಂದೆ ದುರ್ಗದ ದಂಡು.

ಮಲೆನಾಡಸೀಮೆಯ ಜನ ಇಂಥ ವಿಚಿತ್ರದಾಳಿಯನ್ನು ಹಿಂದೆಂದೂ ಕೇಳಿರಲಿಲ್ಲ, ಕಂಡಿರಲಿಲ್ಲ.

ಎಷ್ಟೋ ಹಳ್ಳಿಗಳವರು ತಾವಾಗಿಯೇ ಒಪ್ಪಿ ಸೇನೆ ಬೇಡಿದುದನ್ನು ಮನೆಮನೆಯಿಂದಲೂ ವಸೂಲು ಮಾಡಿ, ತಂದು ಒಪ್ಪಿಸಿದರು. ಆ ದವಸಧಾನ್ಯಗಳನ್ನು ಕೊಂಡೊಯ್ಯಲು ಗಾಡಿ-ಎತ್ತುಗಳನ್ನು ಕೊಟ್ಟರು. ಆದರೆ ನವಾಬನ ಸೇನೆಯಿದ್ದ ಚನ್ನಗಿರಿ, ಸಂತೇಬೆನ್ನೂರು, ಬಸವಾಪಟ್ಟಣದವರು ಈ ಮಾತಿಗೆ ಒಪ್ಪದೆ 'ದುರ್ಗದವರು ತಿರುಪೆ ಬೇಡಲು ಬಂದಿದ್ದಾರೆ' ಎಂದು ಹಂಗಿಸಿ, 'ಗಂಡಸುತನ ಇದ್ದರೆ ತೆಗೆದುಕೊಂಡು ಹೋಗಲಿ' ಎಂದು ಬಿಗಡಾವು ಮಾಡಿ ಯುದ್ಧಕ್ಕೆ ಸಿದ್ಧರಾದರು.

ಒಪ್ಪಿ ನೆರವಾದ ಹಳ್ಳಿಗರು ದುರ್ಗದ ಸೇನೆಯೊಂದಿಗೆ ಹಾಲನ್ನ ಊಟಮಾಡಿದರೆ, ಪುಂಡಾಟ ಮಾಡಿದವರು - ಆಡಿದ ಮಾತಿಗೆ ತಲೆದಂಡ ಒಪ್ಪಿಸಿ, ಒಂದಕ್ಕೆ ನಾಲ್ಕರಷ್ಟು ದಂಡ ತೆತ್ತು,

ದುರ್ಗದ ಸೇನೆಯ ಮಾತಿನ ಹಿಂದಿನ ಕತ್ತಿಯ ಪೆಟ್ಟಿನ ಪ್ರಖರತೆಯನ್ನು ಮನವರಿಕೆ ಮಾಡಿಕೊಂಡರು.

ಮಲೆನಾಡಿನ ಸರಹದ್ದಿನ ಹಳ್ಳಿಹಳ್ಳಿಗಳಲ್ಲಿಯೂ ದುರ್ಗದ ಸೇನೆಯ ಶೌರ್ಯ, ಔದಾರ್ಯಗಳು ಕತೆಯಾಗಿ ಹರಡಿ, ಸಾವಿರಾರು ಬಂಡಿಗಳು ದುರ್ಗದತ್ತ ನಡೆದಾಗ –

ಅತ್ತ-

ಈ ವಾರ್ತೆ 'ಅಮಾನುಷ ಲೂಟಿ' ಎಂಬ ರೀತಿಯಲ್ಲಿ ಹೈದರಾಲಿಯನ್ನು ಮುಟ್ಟಿ, ಅದರೊಂದಿಗೆ ಗೂಢಚಾರರಿಂದ 'ಸ್ವಯಂ ಮದಕರಿನಾಯಕನೇ ತನ್ನ ಸೇನೆಯೊಂದಿಗೆ, ನಗರದಿಂದ ಶ್ರೀರಂಗಪಟ್ಟಣಕ್ಕೆ ಹೋಗುತ್ತಿರುವ ಬೊಕ್ಕಸವನ್ನು ಹಿಡಿಯಲು ಹೊರಟಿದ್ದಾನೆ' ಎಂಬ ಸುದ್ದಿಯೂ ತಿಳಿದು –

'ಹುಲಿ ಬಯಲಿಗೆ ಬಂದಿದೆ. ಅದನ್ನು ಷಿಕಾರಿ ಮಾಡಲು ಇದೇ ಸಮಯ'

-ಎಂದು, ಈ ಕಾರ್ಯವನ್ನು ಅವರಿವರಿಗೆ ಒಪ್ಪಿಸದೆ ಸಾಹೇಬ್‌ಜಾದೆಟೀಪುವಿಗೆ ಒಪ್ಪಿಸಿ-

"ಇದು ನಿನ್ನ ಮರ್ದಾನಿಯತ್‌ನ ಪರೀಕ್ಷೆ. ಗೆದ್ದರೆ ಬಾ, ಸೋತರೆ ಮುಖ ತೋರಿಸ ಬೇಡ"

- ಎಂದು ಮಗನಿಗೆ ಕಟ್ಟುಮಾಡಿ, ಇಪ್ಪತ್ತು ಸಾವಿರ ಸೇನೆಯೊಂದಿಗೆ ಆತನನ್ನು, ಮದಕರಿನಾಯಕನನ್ನು 'ಜಿಂದಾ ಯಾ ಮುರ್ದಾ' ಹಿಡಿದು ತರಲು ಓಡಿಸಿದ, ಹೈದರಾಲಿ.

ತನ್ನ ಸಾಹಸಪ್ರದರ್ಶನಕ್ಕೆ ಇಂಥದೊಂದು ಸಮಯ ಬಂದೀತೇ ಎಂದು ಕಾಯುತ್ತಿದ್ದ ಟೀಪು - ಪೂರ್ಣೋತ್ಸಾಹದಿಂದ ಬೊಕ್ಕಸದ ರಕ್ಷಣೆಗೆ, ಮದಕರಿನಾಯಕನ ಮರ್ದನಕ್ಕೆ ಹೊರಟ.

* * *

ಆದಷ್ಟು ಸೇನಾನಷ್ಟವಿಲ್ಲದೆ ಬೊಕ್ಕಸವನ್ನು ವಶಪಡಿಸಿಕೊಳ್ಳಬೇಕೆಂದು ಮಾಯಕೊಂಡದತ್ತಣಿಂದ ಮದಕರಿನಾಯಕನ ಸೇನೆ ಹೊರಟಿತು. 'ಆ ಕಾರ್ಯ ಅಷ್ಟೇನೂ ಕಷ್ಟವಾಗದು' ಎಂದೇ ಲೆಕ್ಕ ಹಾಕಿದ್ದ ಮದಕರಿನಾಯಕ.

ಆದರೆ ನಗರದಿಂದ ಹೊರಟ ಬೊಕ್ಕಸದ ಗಾಡಿಯ ಮೇಲೆ ಮದಕರಿನಾಯಕನೊಬ್ಬನಿಗೇ ಕಣ್ಣು ಬಿದ್ದಿರಲಿಲ್ಲ. ಅಲ್ಪಸೇನಾಸಂರಕ್ಷಣೆಯೊಂದಿಗೆ ಹೊರಟ ಈ ಹಣವನ್ನು ಲಪಟಾಯಿಸಲು ತರೀಕೆರೆಯವರೂ, ಲೂಟಿ, ಸುಲಿಗೆಗೆಂದೇ ಎತ್ತೆತ್ತಲೂ ಅಲೆಯುತ್ತಿದ್ದ ಮರಾಠಾ ಸರದಾರರಿಗೂ ಅದರ ಮೇಲೆ ಕಣ್ಣು ಬಿದ್ದಿತ್ತು. ದುರ್ಗದ ದಂಡು, ಮಲೆನಾಡಿನ ಹಳ್ಳಿಗಳಿಂದ 'ಪುಂಡುಗಂದಾಯ' ವಸೂಲು ಮಾಡುತ್ತಿದ್ದ ಪ್ರಕ್ಷುಬ್ಧ ಪರಿಸ್ಥಿತಿಯೇ ಅವರಿಗೆ ಅನುಕೂಲವಾಗಿ, ಹೈದರಾಲಿಯ ಬೊಕ್ಕಸದ ಬಂಡಿಗಳು ಹೊದಿಗ್ಗೆರೆಯನ್ನು ಸೇರುವ

ವೇಳೆಗೆ, ಇಬ್ಬರೂ ಒಟ್ಟಾಗಿ ಕಲೆತು ಬೊಕ್ಕಸದ ಬಂಡಿಗಳೊಂದಿಗಿದ್ದ ಸೇನೆಯ ಮೇಲೆ ಮುಗಿಬಿದ್ದು ದಂಡನ್ನು ಸಂಹರಿಸಿ, ಬೊಕ್ಕಸವನ್ನು ಲೂಟಿ ಮಾಡಿ, ಬರಿಗಾಡಿಗಳನ್ನು ಉಳಿಸಿ ತೆರಳಿದರು.

ಬೊಕ್ಕಸವನ್ನು ಬೇಟೆಯಾಡಲು ಬಂದಾಗ ಮದಕರಿನಾಯಕ ಕಂಡದ್ದು –

ಮೃತರಾದ ಸೈನಿಕರು, ಸತ್ತ ಕುದುರೆಗಳು, ಬರಿದಾದ ಬಂಡಿಗಳು - ಅಷ್ಟೆ.

ಅದನ್ನು ಕಂಡು ಆತನ ಹೃದಯದಲ್ಲಿ ನಿರಾಶೆ ಮೂಡಿದಾಗಲೇ, 'ಲೂಟಿಯಾದ ಹಣ ಬಹುದೂರ ಹೋಗಿಲ್ಲ, ತ್ಯಾವಣಿಗೆ, ಹೊದಿಗ್ಗೆರೆಗಳಲ್ಲಿ ಹುದುಗಿದೆ' ಎಂಬ ವಾರ್ತೆ ತಿಳಿದು. ಆ ಹಳ್ಳಿಗಳ ಮೇಲೆ ದಾಳಿ ಮಾಡಿದ.

ನಿರಾಶೆಯಿಂದ ಉಕ್ಕಾದ ಮದಕರಿನಾಯಕನ ಆಯ್ದ ಭಟರ, ವಜ್ರನಿರ್ಧಾರದ ದಾಳಿಗೆ ಪಕ್ಕಾದ ಆ ಹಳ್ಳಿಗಳು ಚುಕ್ಕಾಚೂರಾಗಿ, ಮದಕರಿನಾಯಕ ಹುದುಗಿಸಿಟ್ಟ ಹಣವನ್ನು ತೆಗೆಸಲು ಮನೆಮನೆಯನ್ನೂ ಲೂಟಿಮಾಡಲಾರಂಭಿಸಿದ. ಅಡ್ಡ ಬಂದವರನ್ನು ತುಂಡರಿಸಿ ಕಡಿದು, ಹಳ್ಳಿಹಳ್ಳಿಗಳಲ್ಲೂ ಹೆಣಗಳ ಬಣವೆಯನ್ನೊಟ್ಟಿಸಿದ - ತೀವ್ರನಿರಾಶೆಯ ಆಘಾತದಲ್ಲಿ ತನ್ನಲ್ಲಿದ್ದ ಎಲ್ಲ ಮಾನವೀಯ ಭಾವನೆಗಳನ್ನು ಮರೆತು, ಲೂಟಿಯ ಹಣವೋ, ಹಳ್ಳಿಗರು ಆಪತ್ಕಾಲಕ್ಕೆಂದು ಬಚ್ಚಿಟ್ಟುಕೊಂಡ ಹಣವೋ - ಯಾವುದನ್ನೂ ನೋಡಲಿಲ್ಲ.

ಸಿಕ್ಕ ನಗನಾಣ್ಯಗಳನ್ನು ಮೂಟೆಗಟ್ಟಿ, ಕುದುರೆಗಳ ಮೇಲೆ ಹೊರುತ್ತಾ, ಅಡ್ಡವಾದವರನ್ನು ತರಿದೊಟ್ಟುವ ರಭಸದಲ್ಲಿ ಮದಕರಿನಾಯಕ ತೊಡಗಿರುವಾಗಲೇ ನವಾಬನ ಇಪ್ಪತ್ತು ಸಾವಿರ ಸೇನೆ ಟೀಪುವಿನ ನಾಯಕತ್ವದಲ್ಲಿ ತನ್ನ ಮೇಲೆ ದಾಳಿಗೆ ಬರುತ್ತಿರುವ ಸುದ್ದಿಯನ್ನು ಕೇಳಿದ ಮದಕರಿನಾಯಕ, ಮೊದಲು ಲೂಟಿ ಮಾಡಿದ ಹಣವನ್ನು ಆಯ್ದ ಸೈನಿಕರೊಂದಿಗೆ ದುರ್ಗದತ್ತ ಓಡಿಸಿ, 'ಅದರೊಂದಿಗೆ ತಾವೂ ಹೋಗಬೇಕು' ಎಂದು ಸೈನಿಕರು ಕಾಲಿಗೆ ಬಿದ್ದು ಬೇಡಿಕೊಂಡರೂ –

"ನವಾಬನ ಮಗನಿಗೆ ಬೆನ್ನು ತೋರಿಸಿ ಓಡಿ ಶತ್ರುಪಾಳಯದಲ್ಲಿ 'ಹೇಡಿ' ಎಂದು ಕರೆಸಿಕೊಳ್ಳುವುದಿಲ್ಲ. ಅಪ್ಪ ಸಿಗಲಿಲ್ಲ. ಮಗನಿಗಾದರೂ ನಮ್ಮ ಕತ್ತಿಯ ರುಚಿ ತೋರಿಸಿಯೇ ಬರುತ್ತೇನೆ"

- ಎಂದು ಹಟಹಿಡಿದು, 'ತನ್ನೊಂದಿಗೆ ಬದುಕುವ-ಸಾಯುವ' ವೀರನಿರ್ಧಾರವನ್ನು ಕೈಕೊಂಡ ಸೈನಿಕರೊಂದಿಗೆ, ಟೀಪುವಿನ ಸೇನೆ ಬರುವ ದಾರಿಯಲ್ಲಿ, ಆಯಕಟ್ಟಿನ ಸ್ಥಳದಲ್ಲಿ ಅವಿತು ಕಾಯತೊಡಗಿದ.

'ಮದಕರಿನಾಯಕನನ್ನು ಜಿಂದಾ ಯಾ ಮುರ್ದಾ ಹಿಡಿದೇ ತರುತ್ತೇನೆ' ಎಂದು ಶಪಥ ತೊಟ್ಟ ಟೀಪುವೂ, ತನ್ನೆಲ್ಲ ಸೇನೆಯೂ ಒಟ್ಟಿಗೆ ಬರಲು ಕಾಯದೆ, ಐನೂರು ಮಂದಿ

ಅಶ್ವಾರೋಹಿಗಳೊಂದಿಗೆ ಮದಕರಿನಾಯಕನ ಬೇಟೆಗೆ ಹೊರಟಿದ್ದ - ನಾಯಕನ ಸೇನೆ ಇದ್ದ ಹೊದಿಗ್ಗೆರೆಯತ್ತ.

ಟೀಪು ಹೊದಿಗ್ಗೆರೆಯನ್ನು ಸೇರುವ ವೇಳೆಗೆ, ಮದಕರಿನಾಯಕ ದುಮ್ಮಿಯ ಗುಡ್ಡದ ಮರೆಯನ್ನು ಸೇರಿದ್ದ. ಆ ಸುದ್ದಿಯನ್ನು ಹಳ್ಳಿಗರಿಂದ ತಿಳಿದ ಟೀಪು ಇದ್ದಷ್ಟು ಸೇನೆಯೊಂದಿಗೇ ಮದಕರಿನಾಯಕನ ಬೆನ್ನಟ್ಟಿದ.

ಅಲ್ಲಿಂದ ಅವರಿಬ್ಬರ ನಡುವೆ ಕಣ್ಣುಮುಚ್ಚಾಲೆಯಾಟ ಆರಂಭವಾಯಿತು –

ತನ್ನ ಸೇನೆ ಮುಂದೆ ನಡೆಯುತ್ತಿದೆ ಎಂಬ ಭ್ರಾಂತಿಯನ್ನು ದುಮ್ಮಿಯತ್ತ ಬಂದ ಟೀಪುವಿನ ಸೇನೆಗೆ ಮೂಡಿಸಿ. ಅದು ಮುನ್ನಡೆಯಲು ದಾರಿಮಾಡಿಕೊಟ್ಟು, ಮುಂದೆ ಓಡುತ್ತಿದ್ದ ಕುದುರೆಗಳ ಧೂಳನ್ನು ಟೀಪುವಿನ ಸೇನೆ ಬೆನ್ನಟ್ಟಿದಾಗ ಮದಕರಿನಾಯಕ ಹಿಂಬದಿಯಿಂದ ಟೀಪುವಿನ ಸೇನೆಯ ಮೇಲೆ ಬಿದ್ದು ಕೊಚ್ಚಲಾರಂಭಿಸಿದ.

ಮುಂದೆ ನಡೆಯುತ್ತಿದ್ದ ಟೀಪುವಿನ ಸೇನೆ, ಹಿಂದಿನಿಂದಾದ ದಾಳಿಯನ್ನು ತಡೆದು, ಎದುರಿಸಲು ಬಿದ್ದ ಪೆಟ್ಟಿನಿಂದ ಸಾವರಿಸಿಕೊಂಡು ಸಿದ್ಧವಾಗುತ್ತಿರುವ ವೇಳೆಗೆ, ಮದಕರಿ ನಾಯಕ ತನ್ನ ಕೈಯ ಪರಿಘಾಯುಧವನ್ನು ಚಕ್ರಾಕಾರವಾಗಿ ತಿರುಗಿಸುತ್ತಾ, ಅಡ್ಡವಾದವರನ್ನು ನುಚ್ಚುನೂರಾಗುವಂತೆ ಹೊಯ್ಯುತ್ತಾ, ಸೇನೆಯನ್ನು ಭೇದಿಸಿಕೊಂಡು ಸೇನೆಯ ಮುಂಭಾಗದಲ್ಲಿದ್ದ ಟೀಪುವಿನತ್ತ ತನ್ನ ಕುದುರೆಯನ್ನು ನುಗ್ಗಿಸಿದ.

ರಣಮಾರಿಯ ನಾಲಗೆಯಂತೆ ನೆತ್ತರು ಕಾಣುತ್ತಿದ್ದ ಪರಿಘಾಯುಧವನ್ನು ಹಿಡಿದು ತನ್ನತ್ತ ನುಗ್ಗಿದ ಮದಕರಿನಾಯಕನನ್ನು ಎದುರಿಸಲು ಟೀಪು ಸಿದ್ಧನಾಗುವ ವೇಳೆಗೆ, ಶರವೇಗದಿಂದ ಸೇನೆಯನ್ನು ಕತ್ತರಿಸಿಕೊಂಡು ಮುನ್ನುಗ್ಗುತ್ತಿದ್ದ ಮದಕರಿನಾಯಕ, ಟೀಪುವಿನ ಹತ್ತಿರವೇ ಸುಳಿದು, ಅವನ ನೆತ್ತಿಯನ್ನು ಬಲಿತೆಗೆದುಕೊಳ್ಳಲು ಪರಿಘಾಯುಧವನ್ನು ಬೀಸಿದ. ಆ ಏಟನ್ನು ತಪ್ಪಿಸಿಕೊಳ್ಳಲು ಟೀಪು ತನ್ನ ಕುದುರೆಯನ್ನು ಹಿಂದಕ್ಕೆ ಜಗ್ಗಿದ್ದರಿಂದ ಅವನ ತಲೆಗೆ ಬೀಳಬೇಕಾದ ಪೆಟ್ಟು ಜಾರಿ, ಪರಿಘಾಯುಧವನ್ನು ಬೀಸಿದ ವೇಗಕ್ಕೆ ಟೀಪುವಿನ ನೆತ್ತಿಯ ಮೇಲಿದ್ದ ರುಮಾಲು ಹಾರಿಹೋಗಿ, ಮದಕರಿನಾಯಕನ ಕುದುರೆ ಮುಂದೆ ನುಗ್ಗಿತು. ರುಮಾಲು ಹೋದದ್ದು ತಲೆ ಹೋದಷ್ಟೇ ಅಪಮಾನವೆಂದು ಭಾವಿಸಿದ ಟೀಪು, ರೋಷದಲ್ಲಿ ತಾಳ್ಮೆ ತಪ್ಪಿ, ಸುತ್ತ ಏನಾಗುತ್ತಿದೆ ಎಂಬುದನ್ನೂ ನೋಡದೆ, ಕುದುರೆಯನ್ನು ಮುಂದೆ ಓಡಿಸಿದ.

ಮುಂದೆ ಮದಕರಿನಾಯಕನ ಶ್ವೇತಾಶ್ವ, ಅದರ ಹಿಂದೆ ಟೀಪುವಿನ ಕೃಷ್ಣವರ್ಣದ ಕುದುರೆ –

ಬಿರುಗಾಳಿ - ಬಿರುಗಾಳಿಯನ್ನು ಬೆನ್ನಟ್ಟಿದಂತೆ ಓಡಿದವು ಕುದುರೆಗಳು.

ಟೀಪು ಮದಕರಿನಾಯಕನನ್ನು ಒಂಟಿಯಾಗಿ ಬೆನ್ನಟ್ಟಿದುದನ್ನು ಕಂಡ ಅವನ ಸೇನೆ ಸಾವು ನೋವನ್ನು ಲೆಕ್ಕಿಸದೆ, ಟೀಪುವನ್ನು ಉಳಿಸಿಕೊಳ್ಳಲು, ಸಾಧ್ಯವಾದರೆ ಮದಕರಿನಾಯಕನನ್ನು ಹಿಡಿಯಲು ನುಗ್ಗಿತು.

ಆ ಸೇನೆ ಟೀಪುವಿನೊಂದಿಗೆ ಸೇರಿದರೆ ಗೆಲುವು ಅಸಾಧ್ಯವೆಂದರಿತ ಮದಕರಿನಾಯಕ, ತನ್ನ ಕುದುರೆಯನ್ನು ಶರವೇಗದಿಂದಲೇ ಓಡಿಸುತ್ತಾ, ಟೀಪುವನ್ನು ಮುಗಿಸಲು ಪರಿಘಾಯುಧವನ್ನು ತೊಡೆಯಡಿಯಲ್ಲಿ ಹಿಡಿದು, ಸೊಂಟದಲ್ಲಿದ್ದ ಎಸೆಕಠಾರಿಯನ್ನು ಕಿತ್ತು, ಕ್ಷಣಕಾಲ ತನ್ನ ಕುದುರೆಯನ್ನು ನಿಲ್ಲಿಸಿ, ಹಾಗೇ ಹಿಂದಿರುಗಿ, ಗುರಿಯಿಟ್ಟು ಟೀಪುವಿನತ್ತ ರೊಯ್ಯನೆ ಬೀಸಿ, ಅಷ್ಟೇ ವೇಗವಾಗಿ ಕುದುರೆಯನ್ನು ಮುಂದೆ ಓಡಿಸಿದ.

ಸುಯ್ಯನೆ ಗಾಳಿಯಲ್ಲಿ ತನ್ನತ್ತ ತೂರಿಬಂದ ಕಠಾರಿಯ ಪೆಟ್ಟಿನಿಂದ ತಪ್ಪಿಸಿಕೊಳ್ಳಲು, ವೇಗವಾಗಿ ಮುಂದೆ ಓಡುತ್ತಿದ್ದ ಕುದುರೆಯನ್ನು ಲಗಾಮು ಜಗ್ಗಿ ತಡೆಹಿಡಿದ ಟೀಪು. ಲಗಾಮು ಎಳೆದ ವೇಗಕ್ಕೆ ಮುಂದೋಡುತ್ತಿದ್ದ ಕುದುರೆ ತಲೆಯನ್ನು ಮೇಲೆತ್ತಿ, ಮದಕರಿನಾಯಕ ಟೀಪುವಿನತ್ತ ಎಸೆದ ಕಠಾರಿ ಅವನೆದೆಯನ್ನು ಭೇದಿಸದೆ, ಅವನ ಕುದುರೆಯ ಕಣ್ಣಿನೊಳಗೆ ನಾಟಿತು. ತುದಿಯವರೆಗೂ ತನ್ನೊಂದು ಕಣ್ಣಲ್ಲಿ ಹೊಕ್ಕ ಕಠಾರಿಯ ಇರಿತಕ್ಕೆ ಕುದುರೆ, ಕಣ್ಣಿಂದ ರಕ್ತಕಾರುತ್ತಾ ಬೆದರಿ, ನೋವಿನಲ್ಲಿ ಹುಚ್ಚಾಗಿ ತನ್ನ ಬೆನ್ನ ಮೇಲಿದ್ದ ಸವಾರನನ್ನು ಕೊಡಹಿತು. ಕುದುರೆಯನ್ನು ವೇಗವಾಗಿ ಓಡಿಸಲು ಕುದುರೆಯ ಬೆನ್ನ ಮೇಲೆ ಲಘುವಾಗಿ ಕುಳಿತಿದ್ದ ಟೀಪು, ಎತ್ತಿ, ಎಸೆದಂತೆ ಒಂದೆಡೆಗೆ ಬಿದ್ದ.

ಅವನು ಬಿದ್ದದ್ದನ್ನು ಕಂಡ ಮದಕರಿನಾಯಕ, ಟೀಪುವೇ ಉರುಳಿದನೆಂದು ನಂಬಿ, ತನ್ನ ಕುದುರೆಯನ್ನು ಹೊಳಲಕೆರೆಯಾಚೆಯ ಘಾಟುದಾರಿಯಲ್ಲಿ ಅಡ್ಡ ತಿರುಗಿಸಿ, ತನಗೆ ಪರಿಚಿತವಾದ ಗುಡ್ಡಗಳ ನಡುಹಾದಿಯಲ್ಲಿ ವೇಗವಾಗಿ ಸಾಗಿ ಕಣ್ಮರೆಯಾದ.

ಕೆಳಗೆ ಬಿದ್ದ ಟೀಪು ಸಾವರಿಸಿಕೊಂಡು ಮೇಲೆದ್ದು ಗಾಯಗೊಂಡ ಕುದುರೆಯನ್ನು ಬಿಟ್ಟು, ಮತ್ತೊಂದು ಕುದುರೆಯನ್ನು, ಅದರ ಮೇಲೆ ಕುಳಿತ ಸೈನಿಕನನ್ನು ಕೆಳದಬ್ಬಿ ಏರುವಷ್ಟರಲ್ಲಿ, ಮದಕರಿನಾಯಕನ ಕುದುರೆ ಇರಲಿ, ಅದರ ಕಾಲಧೂಳೂ ಕಾಣದೆ, ಅಣಕಿಸಿ ಹಲ್ಲು ಕಿಸಿದಂತೆ ಕಂಡ ಬೆಟ್ಟಸಾಲನ್ನು ಕಂಡು ಭಗ್ನ ಕ್ರೋಧದಿಂದ ತುಟಿಗಳಿಂದ ನೆತ್ತರೊಸರುವಂತೆ ಹಲ್ಲುಗಳನ್ನು ಕಟಕಟನೆ ಕಡಿಯುತ್ತಾ, ತನ್ನ ಕೆಂಗಣ್ಣುಗಳಿಂದ ಬೆಟ್ಟವನ್ನೇ ನುಂಗುವಂತೆ ನೋಡುತ್ತಾ –

“ಮೇರೇ ಬದ್ನಸೀಬ್, ಮೇರೆ ಹಾತ್ ಸೆ ತುಂ ಜಿಂದಾ ಬಚ್‌ಗಯಾ - ಔರ್ ಏಕ್ ಐಸೇಹಿ ಮೋಖಾ ಮಿಲೇತೋ ತುಮ್ಹಾ ಕಭೀ ಜಿಂದಾ ನಹಿ ಛೋಡೂಂಗಾ....ಫಿರ್ ಏಕ್ ಮೋಖಾ....ಏಕ್ ಹಿ ಏಕ್ ಮೋಖಾ - ”

- ಎಂದು ಖುದಾನಲ್ಲಿ ಪ್ರಾರ್ಥಿಸುವಂತೆ ಕತ್ತಿಯನ್ನು ಬಿಗಿದ ಮುಷ್ಟಿಯಲ್ಲಿ ಮೇಲೆತ್ತಿ ಹಿಡಿದು, ತನ್ನಲ್ಲಿ ತಾನೇ ಹೇಳಿಕೊಂಡ.

* * *

ಆ ರಾತ್ರಿ ಟೀಪುವಿನ ಸೇನೆಯನ್ನು ಸಾಕಷ್ಟು ಹೈರಾಣ ಮಾಡಿ ತಪ್ಪಿಸಿಕೊಂಡು ಬಂದ ಗುದಗತ್ತಿಯಿಂದ ಟೀಪು ಬದುಕಿ ಉಳಿದ ವಾರ್ತೆಯನ್ನು ಕೇಳಿದ ಮದಕರಿನಾಯಕನಿಗೆ, ಅಂದಿನ ತನ್ನ ಸಾಹಸ, ಗೆಲುವೂ ಎಲ್ಲವೂ ಕಹಿಯಾಗಿ –

"ಇವತ್ತು ನಿನ್ನ ಅದೃಷ್ಟ ನೆಟ್ಟಗಿತ್ತು ಟೀಪು, ಬದುಕಿ ಉಳಿದೆ. ಇನ್ನೊಂದು ಅವಕಾಶ ಸಿಗಲಿ – 'ಮದಕರಿಯ ಗುರಿ ತಪ್ಪುವುದಿಲ್ಲ' ಎಂದು ತೋರಿಸುತ್ತೇನೆ"

- ಎಂದು ತನಗೆ ತಾನೇ ಹೇಳಿಕೊಂಡು, ಸ್ವಲ್ಪ ಹೊತ್ತು ಸುಮ್ಮನಿದ್ದು ಬಳಿಕ ಹೇಳಿದ –

"ಅವಕಾಶ ಸಿಗುವುದೇನು - ಮರಾಠರ ಸೇನೆಯ ನೆರವೊಂದು ಬರಲಿ, ಅಟ್ಟಿಸಿಕೊಂಡು ಹೋಗಿ ತಲೆ ಕಡಿದು ಬರುತ್ತೇನೆ - ಇವನದು, ಇವನಪ್ಪನದು"

೨೧

ಮರಾಠರ ಸೇನೆ ಬರುತ್ತದೆ –

ಆ ಬಯಕೆಯಿಂದ ದಿನದಿನವೂ ಆ ಸೇನೆ ಬರುವ ಸೀಬಾರದ ಕಣಿವೆಯತ್ತ ಎದುರು ನೋಡುತ್ತಿದ್ದ, ಬಯಕೆಗಣ್ಣುಗಳನ್ನಗಲಿಸಿ ಮದಕರಿನಾಯಕ.

ಮದಕರಿನಾಯಕ ಕಾಯುತ್ತಿದ್ದ –

ಅವನಂತೆಯೇ ದುರ್ಗದಲ್ಲಿದ್ದ ಹೈದರಾಲಿಯ ಗೂಢಚಾರಪಡೆಯ ನಾಯಕನಾಗಿ ಫಕೀರನ ವೇಷ ಹಾಕಿಕೊಂಡು ಅಷರಫ್‌ಷಾವಲಿಯವರ ಶಿಷ್ಯನಂತಿದ್ದ ಅಬ್ದುಲ್‌ಖಯ್ಯುಮನೂ.

ಆ ಇಬ್ಬರೂ ಹಾಗೆ ಕಾಯುತ್ತಿರುವಾಗ –

ಹರಿಹರದ ಕಡೆಯಿಂದ ಬ್ರಾಹ್ಮಣನೊಬ್ಬನು ಬಂದು, ತಾನೇ ಕೊತ್ವಾಲಚಾವಡಿಯ ದಳವಾಯಿ ಕಾಶಣ್ಣನಾಯಕನನ್ನು ಭೇಟಿಯಾಗಿ –

"ದುರ್ಗದ ಹಿಂದಿನ ಪ್ರಧಾನಿಗಳಾಗಿದ್ದ ಕಳ್ಳಿನರಸಪ್ಪಯ್ಯನವರು ಪ್ರಧಾನಿ ಪರಶುರಾಮನಾಯಕರಿಗೆ ಬರೆದ ಕಾಗದವೊಂದು ರಹಸ್ಯವಾಗಿ ಬಂದು ನಮ್ಮ ಕೈಸೇರಿದೆ. ಆ ಕಾಗದವನ್ನು ಪ್ರಧಾನಿಗಳಿಗೆ ತಲುಪಿಸಬೇಕು. ಅಪ್ಪಣೆಯಾದರೆ, ಅವಕಾಶ ದೊರಕಿಸಿಕೊಟ್ಟರೆ

ನಾನೇ ಪತ್ರವನ್ನು ಅವರಿಗೆ ಕೊಡುತ್ತೇನೆ. ಅದು ಅಗತ್ಯವಿಲ್ಲವೆಂದರೆ ಪತ್ರವನ್ನು ತಮ್ಮ ಕಡೆಯೇ ಒಪ್ಪಿಸುತ್ತೇನೆ" – ಎಂದು ಬೇಡಿದ.

ಅತ್ಯಂತ ಅನಿರೀಕ್ಷಿತವಾಗಿ ಕಳ್ಳಿನರಸಪ್ಪಯ್ಯನವರಿಂದ ಬಂದ ಸುದ್ದಿಯನ್ನು ಕೇಳಿ, ಆತ ಕೊಟ್ಟ ಲಕೋಟೆಯನ್ನು ತೆಗೆದುಕೊಂಡು ನೋಡಿ, ಅದರ ಮೇಲಿದ್ದ ಪ್ರಧಾನಿಗಳ ವಿಳಾಸ, ಆ ಅಂಟಿಸಿದ ಲಕೋಟೆಯ ಹಿಂಭಾಗದ ಮೇಲಿದ್ದ ಕಳ್ಳಿನರಸಪ್ಪಯ್ಯನವರ ಕೈ ಉಂಗುರದ 'ಕಂಸ' ಎಂಬ ಅಕ್ಷರಗಳಿದ್ದ ಅರಗಿನ ಮುದ್ರೆಯನ್ನು ನೋಡಿ, ಅದನ್ನು ತಾನೇ ಒಡೆದು ನೋಡದೆ, ಆ ಬ್ರಾಹ್ಮಣನೊಂದಿಗೇ ಪ್ರಧಾನಿಗಳ ಚಾವಡಿಗೆ ಹೋಗಿ, ಪರಶುರಾಮನಾಯಕರನ್ನು ಕಂಡು, ಬ್ರಾಹ್ಮಣ ಹೇಳಿದ ವಿಷಯವನ್ನೆಲ್ಲಾ ತಿಳಿಸಿ, ಕಾಗದವಿದ್ದ ಲಕೋಟೆಯನ್ನು ಪ್ರಧಾನಿಗಳ ಕೈಗೆ ತಲುಪಿಸಿದ.

ಆ ಕಾಗದವನ್ನು ಒಡೆದು ಓದುವ ಮೊದಲು, ಆ ಪತ್ರವನ್ನು ತಂದ ಬ್ರಾಹ್ಮಣನನ್ನು ತನ್ನ ಸಮ್ಮುಖಕ್ಕೆ ಕರೆಸಿಕೊಂಡು –

"ನೀವು ಯಾರು ? ಈ ಕಾಗದ ನಿಮ್ಮ ಕೈಗೆ ಹೇಗೆ ಬಂತು ?"

- ಎಂದು ಕೇಳಿದ ಪ್ರಧಾನಿ ಪರಶುರಾಮನಾಯಕ.

"ನಾನು ಹರಿಹರದವನು. ನನ್ನ ಹೆಸರು ಕೃಷ್ಣಾಚಾರಿ. ನಾನು ಸಂಸಾರಸಮೇತ ರಾಣಿಬೆನ್ನೂರಿನ ಹತ್ತಿರ ಇರೋ ಎಲ್ಲಮ್ಮನ ಗುಡ್ಡಕ್ಕೆ ದೇವರ ದರ್ಶನಕ್ಕೆ ಹೋಗಿದ್ದಾಗ, ಹೀಗೇ ಒಬ್ಬ ದಿಕ್ಕು ದೆಸೆಯಿಲ್ಲದ, ವಯಸ್ಸಾದ ಬ್ರಾಹ್ಮಣರ ಪರಿಚಯವಾಯಿತು. ಹೀಗೇ ಆತನೊಂದಿಗೆ ಮಾತಾಡುತ್ತಿದ್ದಾಗ ಅವರು ತಮ್ಮ ಕಷ್ಟಸುಖ ಹೇಳಿಕೊಂಡು, 'ನನ್ನ ಹತ್ತಿರ ಹೀಗೊಂದು ಕಾಗದವಿದೆ. ಇದನ್ನು ನೀವು ಚಿತ್ರದುರ್ಗಕ್ಕೆ ತಲುಪಿಸಿದರೆ ಪುಣ್ಯ ಬರುತ್ತದೆ. ನಿಮ್ಮ ಖರ್ಚಿಗೆ ಹತ್ತು ವರಹ ಕೊಡುತ್ತೇನೆ. ಆದರೆ ಕೆಲಸ ಗುಟ್ಟಾಗಿ ನಡೆಯಬೇಕು. ನಾನಿಲ್ಲಿಂದ ಬಿಟ್ಟು ಬರುವ ಹಾಗಿಲ್ಲ' ಎಂದು ಹೇಳಿ, 'ಈ ಕಾಗದ ತಲುಪಿಸಿದರೆ ದುರ್ಗದ ಪ್ರಧಾನಿಗಳು ಇನಾಂ ಕೊಡುತ್ತಾರೆ' ಎಂದೆಲ್ಲಾ ಹೇಳಿ, ನಮ್ಮ ಮನೆದೇವರಾದ ಎಲ್ಲಮ್ಮನ ಹೆಸರಿನ ಪ್ರಮಾಣ ಮಾಡಿಸಿಕೊಂಡು ಈ ಕಾಗದ ಕೊಟ್ಟರು. 'ನಿಮ್ಮವರು ಯಾರೋ, ಅವರೂ ಬ್ರಾಹ್ಮಣರು, ಕಷ್ಟದಲ್ಲಿದ್ದಾರೆ' ಎಂದು ಈ ಕೆಲಸ ಮಾಡಲಿಕ್ಕೆ ನಾನು ಒಪ್ಪಿಕೊಂಡೆ. ಆತನಂತೂ ನನಗೆ ಹತ್ತು ವರಹ ಕೊಟ್ಟರು, ಮುಂದಿನದು ತಮ್ಮ ಚಿತ್ತ"

-ಎಂದು ಆ ಬ್ರಾಹ್ಮಣ ಹೇಳಿದ.

ಆತ ಹೇಳಿದುದೆಲ್ಲವನ್ನು ಕೇಳಿದ ಪರಶುರಾಮನಾಯಕ –

"ನೀವಿಲ್ಲಿರಿ. ನಿಮಗೆ ಅವರು ಕೊಟ್ಟ ಮಾತನ್ನು ನಾವು ತಪ್ಪಿಸುವುದಿಲ್ಲ"

- ಎಂದು ಹೇಳಿ, ತಾನೂ ಒಮ್ಮೆ ಲಕೋಟೆಯ ಮೇಲಿದ್ದ ಅರಗಿನ ಮುದ್ರೆಯಲ್ಲಿದ್ದ ನಕಾಶೆಯಲ್ಲಿ ಬಿಡಿಸಿದ ಕಳ್ಳಿನರಸಪ್ಪಯ್ಯನವರ ಮುದ್ರೆಯನ್ನು ನೋಡಿ, ಅದು ಅವರದೇ ಎಂದು ಖಚಿತಮಾಡಿಕೊಂಡು, ಲಕೋಟೆಯನ್ನು ಒಡೆದು ಕಾಗದವನ್ನು ನೋಡಿದ.

ಆ ಕಾಗದದಲ್ಲಿದ್ದುದಿಷ್ಟೆ –

"ನಮ್ಮ ದುರ್ದೈವದಿಂದ ನಾವು ಸವದತ್ತಿಯಿಂದ ಬರುತ್ತಿರುವ ಮಾರ್ಗದಲ್ಲಿ ಸವಣೂರಿನ ಬಳಿ ಹೈದರಾಲಿಯ ಸೇನೆಯವರ ಕೈಗೆ ಸಿಕ್ಕು ಅವರ ಬಂದಿಗಳಾಗಿದ್ದೇವೆ. ನಮ್ಮನ್ನು ನವಾಬರ ಸೈನಿಕರು ಹಿಡಿದ ದಿನವೇ ನನ್ನ ಕುಟುಂಬದವರು ವರದಾನದಿಗೆ ಬಿದ್ದು ಪ್ರಾಣಾರ್ಪಣ ಮಾಡಿದರು. ನಮಗೂ ಇನ್ನು ದುರ್ಗದ ದರ್ಶನವಾಗುವ ಭರವಸೆ ಇಲ್ಲ. ಈ ಕಾಗದವೇ ನಮ್ಮ ಕೊನೆಯ ನಮಸ್ಕಾರವೂ ಆಗಬಹುದು, ಆಯಿತು- ದೈವಚಿತ್ತಕ್ಕೆ ಯಾರು ಹೊಣೆ ? ನಮ್ಮ ಮನೆಯನ್ನು ನಿರ್ಭಾಗ್ಯ ಚಿರಂಜೀವ ಶ್ರೀಪತಿರಾಯನಿಗೆ ಒಪ್ಪಿಸಿ, ಅವನ ತಾಯಿಗೆ ದೇಶಾಂತರ ಸಂಸ್ಕಾರ ಮಾಡುವಂತೆ ತಿಳಿಸಿ. ಮಹಾಸ್ವಾಮಿಯವರಿಗೂ, ರಾಜಪರಿವಾರದವರಿಗೂ ನಮ್ಮ ಪ್ರಣಾಮಗಳನ್ನು ತಿಳಿಸಿ. ನಮ್ಮ ಹಣೆಯಲ್ಲಿ ಬರೆದದ್ದು ನಮಗಾಯಿತು. ನಿಮಗೆಲ್ಲಾ ಶ್ರೇಯಸ್ಸು ಕೋರುತ್ತೇನೆ. ಈ ಪತ್ರ ನಿಮಗೆ ತಲುಪಿದರೆ, ಇದನ್ನು ನಿಮಗೆ ತಲುಪಿಸಿದವರಿಗೆ ನಿಮ್ಮ ಚಿತ್ತಕ್ಕೆ ಬಂದಷ್ಟು ಇನಾಂ ಕೊಡಿ.

ಇಂತು ನಿಮ್ಮ ಶ್ರೇಯೋಭಿಲಾಷಿ –

ಕಳ್ಳಿನರಸಪ್ಪಯ್ಯ."

ಆ ಕಾಗದವನ್ನು ಓದಿ ಪರಶುರಾಮನಾಯಕನ ತಲೆಯ ಮೇಲೆ ಗುಡ್ಡ ಜರಿದು ಬಿದ್ದಂತಾಯಿತು.

'ದುರ್ಗದ ಮಾಜಿ ಪ್ರಧಾನಿ - ದುರ್ಗದ ಆಜನ್ಮ ವೈರಿಗಳಾದ ನವಾಬನ ಬಂದಿ.'

ಆ ಹೊತ್ತಿನಲ್ಲೂ ಆತ ಚಿತ್ತಸ್ಥೈರ್ಯ ಕಳೆದುಕೊಳ್ಳದೆ, ಚಾವಡಿಯ ಹಳೆಯ ಕಡತಗಳಲ್ಲಿದ್ದ ನರಸಪ್ಪಯ್ಯನವರ ಅಕ್ಷರದೊಂದಿಗೆ ತಾಳೆ ನೋಡಿ, ಅದು ಅವರ ಅಕ್ಷರವೇ ಎಂದು ಖಚಿತಮಾಡಿಕೊಂಡು, ತಮ್ಮ ಚಾವಡಿಯ ಕರಣಿಕರಿಗೆ ಆ ಪತ್ರ ತಂದ ಬ್ರಾಹ್ಮಣನಿಗೆ ಇಪ್ಪತ್ತು ವರಹ ಹಣ ಕೊಟ್ಟು, ಇರುವಷ್ಟು ದಿನ ಊಟ, ವಸತಿ ಏರ್ಪಾಟು ಮಾಡುವಂತೆ ಅಪ್ಪಣೆಮಾಡಿ, ಶ್ರೀಪತಿರಾಯನನ್ನು ಕರೆಸಿ, ಆತನಿಗೆ ಆ ಕಾಗದ ತೋರಿಸಿ –

"ಹೀಗಾಗಬಾರದಿತ್ತು – ಆದದ್ದಾಯಿತು, ನೀವು ದುಃಖಪಡಬೇಡಿ. ಮುಂದಿನ ಕಾರ್ಯ ನಿಮ್ಮ ಜನರನ್ನು ವಿಚಾರಿಸಿ ಹೇಗೆ ಬೇಕೋ ಹಾಗೆ ಮಾಡಿ. ಅದಕ್ಕೆ ಬೇಕಾದ ಖರ್ಚುವೆಚ್ಚ ನಮ್ಮ ಚಾವಡಿಯಿಂದ ಕೊಡಿಸುತ್ತೇನೆ"

– ಎಂದು ಕಣ್ಣೀರು ಹಾಕುತ್ತಿದ್ದ ಶ್ರೀಪತಿರಾಯನಿಗೆ ಸಮಾಧಾನ ಹೇಳಿ, ಕಾಶಣ್ಣನಾಯಕರಿಗೆ ಹೇಳಿದ –

“ಇವತ್ತಿನಿಂದ ಪ್ರಧಾನಿಗಳ ಮನೆಯನ್ನು ಇವರ ಸುಪರ್ದಿಗೆ ಕೊಡಿ, ಅವರ ತಾಯಿಯವರ ಶ್ರಾದ್ಧ ಕಾರ್ಯ ಅಲ್ಲಾಗಲಿ.”

ಕಣ್ಣೀರು ಹಾಕುತ್ತಲೇ ಶ್ರೀಪತಿರಾಯ, ದಳವಾಯಿ ಕಾಶಣ್ಣನಾಯಕರೊಂದಿಗೆ, ತನ್ನದಾಗಿದ್ದೂ ಇಷ್ಟು ದಿನ ತನ್ನ ಪಾಲಿಗೆ ಇಲ್ಲವಾಗಿದ್ದ ಮನೆಗೆ ಹೋದ.

ಬಹುದಿನಗಳಿಂದ ಮುಚ್ಚಿದ ನರಸಪ್ಪಯ್ಯನವರ ಮನೆಯ ಬಾಗಿಲು ತೆರೆಯಿತು- ಭಾಗೀರಥಿಬಾಯಿಯ ಸಾವಿನ ಸುದ್ದಿ ಕೇಳಿ ಕಂಬನಿಗರೆಯುತ್ತಿದ್ದ ನೆರೆಹೊರೆಯವರ ರೋದನ ಧ್ವನಿಯೊಂದಿಗೆ.

ಆ ವಾರ್ತೆಯನ್ನು ತಂದ ಬ್ರಾಹ್ಮಣನಿಗೆ –

“ನಮ್ಮ ತಾಯಿಯ ದಿನ-ಕಾಲ ಮುಗಿಸಿಕೊಂಡು ಹೋಗಿ”

-ಎಂದು ಹೇಳಿ, ತನ್ನ ಮತೀಯ ಬ್ರಾಹ್ಮಣರನ್ನು ಕರೆಸಿ, ಮುಂದೇನು ಮಾಡಬೇಕೆಂದು ವಿಚಾರಿಸಿ, ಮನೆಯಲ್ಲಿ ತುಂಬಿದ ಕಸ-ಧೂಳನ್ನು ಹೊಡೆಸಿ ತನ್ನ ಸಂಸಾರವನ್ನು ಅಲ್ಲಿ ಹೂಡಿದ.

ಅರಮನೆಯಿಂದ ಹಿಡಿದು, ಮಠದ ಬ್ರಾಹ್ಮಣರವರೆಗೆ ಭಾಗೀರಥಿಬಾಯಿಯ ಸಾವಿನ ಸುದ್ದಿ, ನರಸಪ್ಪಯ್ಯನವರ ಬಂಧನದ ಸುದ್ದಿ ಕೇಳಿ, ಮರುಗದಿದ್ದವರೇ ಇಲ್ಲ. ಎಲ್ಲರೂ ಬಂದು ಶ್ರೀಪತಿರಾಯನಿಗೆ ಸಮಾಧಾನ ಹೇಳಿ ಹೋದರು.

ಸುದ್ದಿ ಕೇಳಿದವರೆಲ್ಲಾ ಕಂಬನಿ ಇಟ್ಟರು, ದುಃಖಪಟ್ಟರು.

ಅವರೆದುರಿಗೆ ತಾನೂ ಕಂಬನಿಗರೆದು ದುಃಖಪಟ್ಟ ಶ್ರೀಪತಿರಾಯ –

ರಾತ್ರಿ ಕತ್ತಲಾಗುತ್ತಿದ್ದಂತೆಯೇ ಮನೆ ಬಾಗಿಲು ಹಾಕಿಸಿ, ಬೀಗಮುದ್ರೆ ಮಾಡಿದ ಪೆಠಾರಿಗಳ ಬಾಗಿಲುಗಳನ್ನೆಲ್ಲಾ ತೆಗೆದು ಶೋಧಿಸಿದ - ಬೆಳ್ಳಿ, ಬಂಗಾರಗಳಿಗಿಂತಲೂ ಹೆಚ್ಚಾಗಿ ತನ್ನ ಕಾರ್ಯಕ್ಕೆ ನೆರವಾಗುವ ಪದಾರ್ಥಗಳು ಏನು ಸಿಗುತ್ತದೆಯೋ ಎಂದು. ಕೊನೆಗೆ ದೇವರ ಮಂಟಪದಲ್ಲಿ ಸಾಲಿಗ್ರಾಮಗಳನ್ನಿಟ್ಟಿದ್ದ ಸಂಪುಟದಲ್ಲಿ ಸಿಕ್ಕಿತು – ನರಸಪ್ಪಯ್ಯ ತಮ್ಮ ರಹಸ್ಯ ಕಾಗದಪತ್ರಗಳಿಗೆ ಬಳಸುತ್ತಿದ್ದ ಮತ್ತೊಂದು ಮುದ್ರೆಯುಂಗುರ.

ಆ ಉಂಗುರವನ್ನು ಕಂಡು ಅದನ್ನು ಕೈಬೆರಳಿಗಿಟ್ಟುಕೊಂಡು, ತಾನು ದುರ್ಗದ ಪ್ರಧಾನಿಯಾದ ಕನಸು ಕಂಡ ಶ್ರೀಪತಿರಾಯ.

ಹಾಗೇ ಅವರ ಕಾಗದಪತ್ರದಲ್ಲಿ, ಎಷ್ಟೋ ದಿನಗಳ ಹಿಂದೆ ಬರೆದು ಮರೆತ ದುರ್ಗದ ದಂಡಿನಲ್ಲಿದ್ದು, ನರಸಪ್ಪಯ್ಯನವರು ಹಲವಾರು ಕಾರಣಗಳಿಗಾಗಿ ಕೆಂಪು ಶಾಯಿಯಲ್ಲಿ ಬರೆದ ಹೆಸರಿನ ಪಟ್ಟಿ –

’ಕುಂಭಿಪಾಲನಾಯಕ, ಮುಲ್ಕಿ ಕಾರ್ಖಾನೆ ಬಕ್ಷಿ ಕಾಳೋಜಿ, ಜಗದಾಳಿ ವೆಂಕೋಜಿ, ಮದ್ದಿನಮನೆಯ ನರಸನಾಯಕ, ಸಲಬತ್‌ಖಾನ್’

ಹೀಗೆ ಇನ್ನೂ ಹತ್ತಾರು ಹೆಸರುಗಳು - ಒಂದು ಸಣ್ಣ ಕರಡು ಕಾಗದದ ತುಂಡಿನಲ್ಲಿ.

ಅವೆಲ್ಲವನ್ನೂ ಮರೆಯದಂತೆ ನೆನಪಿನಲ್ಲಿಟ್ಟುಕೊಂಡ ಶ್ರೀಪತಿರಾಯ - ’ಆ ಹೆಸರುಗಳು ನರಸಪ್ಪಯ್ಯನವರ ಪಟ್ಟಿಯಲ್ಲಿ ಏಕೆ ನಮೂದಾದವು ?’ ಎಂದು ತಿಳಿಯುವ ಸಲುವಾಗಿ, ಆ ಹೆಸರುಗಳ ಹಿಂದೆ ಸಣ್ಣದೊಂದು ಕಳ್ಳಗಿಂಡಿಯಿದ್ದಂತೆನಿಸಿ, ಆ ಹೆಸರುಗಳು ಅದುವರೆಗೂ ಮುಚ್ಚಿದಬಾಗಿಲಿನ ಬೀಗದಕೈಗಳಂತೆ ಕಂಡು, ಅವರ ಬಗ್ಗೆ ಹೆಚ್ಚು ತಿಳಿಯಲು ಉತ್ಸುಕನಾದ. ತಾಯಿಯ ’ದಿವಸ-ಕಾರ್ಯ’ಗಳ ಕೆಲಸವಿಲ್ಲದಿದ್ದರೆ, ಅಂದೇ ಆ ಬಗ್ಗೆ ಪ್ರಯತ್ನಿಸುತ್ತಿದ್ದನೇನೋ. ಆದರೆ ಆ ಕೆಲಸಗಳು ಮುಗಿಯುವವರೆಗೂ ಬೇರೇನೂ ಮಾಡುವಂತಿರಲಿಲ್ಲವಾದರೂ, ಸಮಯ ಸಾಧಿಸಿ, ಆ ಹೆಸರುಗಳ ಪಟ್ಟಿಯನ್ನು ಅಬ್ದುಲ್ ಖಯ್ಯೂಮನಿಗೆ ತಲುಪಿಸಿದ.

ಆ ಕರಡುಕಾಗದದ ತುಂಡನ್ನು ನೋಡಿ ಅಬ್ದುಲ್‌ಖಯ್ಯೂಮ್‌ಗೆ ಗುಪ್ತನಿಧಿ ಸಿಕ್ಕಷ್ಟು ಸಂತೋಷವಾಗಿ ಹೇಳಿಕೊಂಡ –

’ಇಷ್ಟು ದಿನ ವಲಿಸಾಹೇಬರ ಸೇವೆ ಮಾಡಿದ್ದು ಸಾರ್ಥಕವಾಯಿತು. ಖುದಾ ಹಮಾರಾ ಸಾತ್ ಹೈ.’

* * *

ಹಾಲು ಸಿಕ್ಕಿದ್ದು – ಬೆಕ್ಕಿಗೆ ಸಂತೋಷ, ಮನೆಯಾಕೆಗೆ ದುಃಖ.

ನರಸಪ್ಪಯ್ಯನವರ ಬಗ್ಗೆ ಬಂದ ವಾರ್ತೆ ಅದೇ ಇಬ್ಬಗೆಯ ಪರಿಣಾಮ ಬೀರಿತು.

ಆ ಸುದ್ದಿಯನ್ನು ಕೇಳಿದ ಶ್ರೀಪತಿರಾಯ, ತನ್ನನ್ನು ಪ್ರೀತಿಸುತ್ತಿದ್ದ ತಾಯಿಗಾಗಿ ಕಣ್ಣೀರಿಟ್ಟರೂ, ಆಜನ್ಮವೈರಿಯಂತೆ ತನ್ನೊಂದಿಗೆ ನಡೆದುಕೊಂಡ ತಂದೆಯ ಬಂಧನದ ವಾರ್ತೆ ಅವನಿಗೆ ವ್ಯಥೆಗಿಂತ ಹೆಚ್ಚಾಗಿ ಸಂತೋಷವನ್ನೇ ಮೂಡಿಸಿತು.

“ಇರೋ ಅಷ್ಟು ದಿನವೂ ನನ್ನನ್ನು ಕಾಡಿಸಿದ. ಈಗ ಅದರ ಫಲ ಅನುಭವಿಸಲಿ”

-ಎಂದು ನೀಳುಸಿರುಬಿಟ್ಟ, ತಲೆ ಹಗುರವಾದಂತೆ.

ಆದರೆ ಅದೇ ವಾರ್ತೆ ಮದಕರಿನಾಯಕನಿಗೆ, ಪರಶುರಾಮನಾಯಕನಿಗೆ, ಚಪ್ಪೇಚಾವಡಿ ದಳವಾಯಿ ಸಣ್ಣ ಪರಶುರಾಮಪ್ಪನಾಯಕನಿಗೆ ದುಃಖದೊಂದಿಗೆ ಚಿಂತೆಗೂ ಕಾರಣವಾಗಿತ್ತು, - ಆ ವಿಷಯ ಚರ್ಚಿಸಲು ಸಭೆ ಸೇರಿದಾಗ.

"ನರಸಪ್ಪಯ್ಯ ಮೊದಲೇ ನವಾಬರ ಅಭಿಮಾನಿಗಳು. ಈಗ ಅವರು ನವಾಬರ ಕೈಗೇ ಸಿಕ್ಕಿದರು. ಈ ಜೊತೆ ದುರ್ಗಕ್ಕೇನು ವಿಪತ್ತು ತಂದೀತೋ"

- ಎಂದು ಮದಕರಿನಾಯಕ ಚಿಂತಿಸಿದರೆ –

"ನರಸಪ್ಪಯ್ಯ ನವಾಬರ ಅಭಿಮಾನಿಗಳಾಗಿರಬಹುದು. ಆದರೆ ದುರ್ಗಕ್ಕೆಂದೂ ದ್ರೋಹ ಬಗೆಯುವವರಲ್ಲ. ಆ ಬಗ್ಗೆ ನಿಮಗೆ ಯೋಚನೆ ಬೇಡ. ಆದರೆ ವೃದ್ಧಾಪ್ಯದಲ್ಲಿ ಅವರು ಈ ಕಷ್ಟ-ವಿಯೋಗವನ್ನು ಅನುಭವಿಸಬೇಕಾಗಿ ಬಂತಲ್ಲ. ಅಂಥವರಿಗೆ ಹೀಗಾಗಬಾರದಿತ್ತು"

-ಎಂದು ವ್ಯಥೆಪಟ್ಟ ಪರಶುರಾಮನಾಯಕ.

"ನಿನ್ನ ಮಾತೇ ನಿಜವೋ, ನಮ್ಮ ಅನಿಸಿಕೆಯೇ ನಿಜವೋ - ಅಂತೂ ಇದು ಒಳ್ಳೆಯ ಸುದ್ದಿಯಲ್ಲ. ಏನಾದರಾಗಲಿ ನಾವಿನ್ನು ಮೈಯೆಲ್ಲಾ ಕಣ್ಣಾಗಿ ಬಾಳಬೇಕಾದ ಕಾಲ ಬಂತು. ಕಾಶಣ್ಣನಾಯಕರಿಗೆ ಈಗಲೇ ಹೊರಲಾಗದಷ್ಟು ಕೆಲಸ. ಈಗ ಅವರ ಮೇಲಿನ ಹೊರೆ ಮತ್ತಷ್ಟು ಹೆಚ್ಚಾಯಿತು. ಅದೃಷ್ಟ ನಮ್ಮೊಂದಿಗೆ ಮತ್ತೇನು ಆಟವಾಡುವ ಸಂಚು ಹೂಡಿದೆಯೋ ಆ ತಾಯಿಗೇ ಗೊತ್ತು, ಅಂತೂ ಒಳಹೊರಗೂ, ಹಗಲಿರುಳೂ ಕಣ್ಣು ಬಿಟ್ಟುಕೊಂಡೇ ಓಡಾಡಬೇಕೆಂದು ಅವರಿಗೆ ಹೇಳು"

- ಎಂದು ತಮ್ಮನಿಗೆ ಸಲಹೆ ಮಾಡಿದ ಮದಕರಿನಾಯಕ.

"ಮರಾಠರು ಆ ಹೈದರಾಲಿಯ ಕಥೆ ಮುಗಿಸಿದರೆ ಇದೆಲ್ಲ ಚಿಂತೆಯೂ ಕೊನೆಯಾಗುತ್ತದೆ"

- ಎಂದು ಚಪ್ಪೇಚಾವಡಿ ದಳವಾಯಿ ಸಣ್ಣ ಪರಶುರಾಮಪ್ಪನಾಯಕ ಹೇಳಿದ.

"ಯಾವುದು ಹೇಗೆ ಮುಗಿಯುತ್ತದೆಯೋ – ನಮಗಂತೂ ನರಸಪ್ಪಯ್ಯನವರ ಬಂಧನ ಅಪಶಕುನದಂತೆಯೇ ಕಾಣುತ್ತದೆ"

-ಎಂದು ಚಿಂತೆ ತುಂಬಿದ ಧ್ವನಿಯಲ್ಲಿ ಹೇಳಿದ ಮದಕರಿನಾಯಕ, ವಾತಾಯನದಿಂದಾಚೆಗೆ ಕಾಣುತ್ತಿದ್ದ ಬತೇರಿ, ಕೋಟೆಸಾಲನ್ನು ನೋಡುತ್ತಾ.

"ದುರ್ಗದ ಅದೃಷ್ಟದ ಬಗ್ಗೆ ಅಷ್ಟು ಅಪನಂಬಿಕೆಪಡುವುದು ಬೇಡ. ಮರಾಠರು ಸೋಲುವುದಿಲ್ಲ" – ಎಂದು ಸಮಾಧಾನ ಹೇಳಿದ, ಸಣ್ಣ ಪರಶುರಾಮಪ್ಪನಾಯಕ.

"ಅಂತೂ ಅವರ ಸೋಲು-ಗೆಲುವನ್ನು ಅವಲಂಬಿಸಿದೆ – ನಮ್ಮ ಭವಿಷ್ಯ"

-ಎಂದು ಪರಶುರಾಮನಾಯಕ ಹೇಳಿದಾಗ, ಮದಕರಿನಾಯಕ ಕೊನೆಗೊಂದು ನಿರ್ಧಾರಕ್ಕೆ ಬಂದಂತೆ ಹೇಳಿದ –

“ನಮಗೇನೋ ನಮ್ಮ ಭವಿಷ್ಯ - ಮರಾಠರನ್ನಲ್ಲ, ನಮ್ಮ ತೋಳಬಲವನ್ನೇ ಅವಲಂಬಿಸಿದೆ ಎಂದೇ ತೋರುತ್ತದೆ.”

* * *

ದುರ್ಗದ ವಿಧಿ ಅದಾವ ವಿಷಘಳಿಗೆಯಲ್ಲಾಡಿಸಿತ್ತೋ - ಆ ಮಾತನ್ನು, ಮದಕರಿನಾಯಕನ ಬಾಯಿಂದ.

ಅಷ್ಟು ನೆಚ್ಚಿದ ಮರಾಠರು ದುರ್ಗದ ನೆರವಿಗೆ ಬರಲಿಲ್ಲ –

ಲಕ್ಷ್ಮೇಶ್ವರದ ಬಳಿಯ ರಾರಾವಿಯಲ್ಲಿ ಹೈದರಾಲಿಯ ಸೇನೆಗೂ, ಮರಾಠರಿಗೂ ನಡೆದ ಯುದ್ಧದಲ್ಲಿ ಮರಾಠರ ಸೇನಾನಾಯಕರಲ್ಲಿ ಒಬ್ಬನಾದ ಮಾನಾಜಿಘಾಕಡ್ಸಾ ಹೈದರಾಲಿಯಿಂದ ಹತ್ತು ಲಕ್ಷ ವರಹ ಲಂಚ ತಿಂದು, ಮರಾಠರಿಗೆ ದ್ರೋಹಬಗೆದು, ಅವರ ಸೇನೆಯ ಸೋಲಿಗೆ ಕಾರಣನಾದ.

ಹೈದರಾಲಿಯ ಸೇನೆಯಲ್ಲಿದ್ದ ಸರ್ದಾರ್ ಖಾನನ ಮನುಷ್ಯ ದುರ್ಗದ ಪಾಲಿಗೆ ವಿದ್ಯುದಾಘಾತವಾದ ಈ ವಾರ್ತೆಯನ್ನು ತಂದು ಮುಟ್ಟಿಸಿ, ಆ ವಾರ್ತೆಯ ಆಘಾತದಿಂದ ದುರ್ಗದವರು ಚೇತರಿಸಿಕೊಳ್ಳುತ್ತಿರುವ ವೇಳೆಗೇ –

ಹರಪನಹಳ್ಳಿಯವರ ಸೇನೆ ಜರಿಮಲೆ, ಗುಡಿಕೋಟೆಗಳ ಮೇಲೆ ದಾಳಿ ಮಾಡಿದ ಸುದ್ದಿ, ರಾಯದುರ್ಗದ ಕೃಷ್ಣಪ್ಪನಾಯಕ ಮೊಳಕಾಲ್ಮುರುವನ್ನು ಆಕ್ರಮಿಸಿದನೆಂಬ ಸುದ್ದಿ –

ಕಾರ್ಗಾಲದಲ್ಲಿ ಮೇಲಿಂದ ಮೇಲೆಅಪ್ಪಳಿಸುವ ಸಿಡಿಲಿನಂತೆ, ನಾಲ್ಕೂ ಕಡೆಯಿಂದ ಕೇಳಿ ಬಂದು, ಆ ಎಲ್ಲ ಆಘಾತವನ್ನೂ ಮೀರಿಸುವ ಬರಸಿಡಿಲಿನ ಪೆಟ್ಟಿನಂತೆ ’ಹೈದರಾಲಿಯ ವಿಜಯೀಸೇನೆ, ದುರ್ಗದತ್ತ ಧಾವಿಸಿ ಬರುತ್ತಿದೆ’ ಎಂಬ ವಾರ್ತೆ ಮಾಯಕೊಂಡದ ಕಡೆಯಿಂದ ಬಂದು, ಕೆಟ್ಟ ಕನಸು ಕಂಡು ಬೆದರಿ ಮೇಲೆದ್ದವನಂತೆ ಚಿತ್ರದುರ್ಗ ಬೆಚ್ಚಿ ಮೇಲೆದ್ದು, ಆ ವಾರ್ತಾಘಾತದಿಂದಾದ ದಿಗ್ಭ್ರಾಂತಿಯಿಂದ ಚೇತರಿಸಿಕೊಂಡು ಮೈಕೊಡವಿ, ಮತ್ತೆ ತನ್ನನ್ನು ತಾನು ರಕ್ಷಿಸಿಕೊಳ್ಳಲು ಸಿದ್ಧವಾಗತೊಡಗಿತು; ಮೈಮನಸ್ಸುಗಳನ್ನು ಗಟ್ಟಿ ಮಾಡಿಕೊಂಡಿತು.

ಮತ್ತೆ ಯುದ್ಧ –

ಚಳಿಗಾಲವೆಂದು ನಂಬಿ ಕಂಬಳಿ ಹೊದ್ದು ಮಲಗಿದವನ ಮೈಗೆ ಬೆಂಕಿ ಹೊತ್ತಿದಂತಾಯಿತು.

ಅಷ್ಟು ದಿನ ಸಡಲಿಸಿದ ಯುದ್ಧದ ಕಠಿಣ ಶಾಸನಗಳನ್ನು ಮತ್ತೆ ನಗರದಲ್ಲಿ ಜಾರಿಗೆತಂದು, ದುರ್ಗದ ನಾಗರಿಕರು ಮತ್ತೆ ಅದಕ್ಕೆ ಮೈಮನಸ್ಸುಗಳನ್ನು ಸರಿಹೊಂದಿಸಿಕೊಳ್ಳುತ್ತಿರುವಷ್ಟರಲ್ಲಿಯೇ,

ಶೀಬಾರದ ಕಣಿವೆಯ ಮಾರ್ಗವಾಗಿ ಹೈದರಾಲಿಯ ಸೇನೆ, ತನ್ನ ಬಿರುಸಿನ ವೇಗದ ಆಗಮನದ ಸದ್ದಿಗೇ ದುರ್ಗವನ್ನು ನಡುಗಿಸುತ್ತಾ ಚೋಳಘಟ್ಟದ ಬಳಿಯಲ್ಲಿ ಬಿಡಾರ ಹೂಡಿ, ಮತ್ತೆ ಮೂರು ದಿಕ್ಕಿನಲ್ಲಿಯೂ ಕೋಟೆಕಟ್ಟಿ ನಿಂತಿತು.

ಶಿರಿಯಪ್ಪನ ಬತೇರಿಯಮೇಲೆ ಪ್ರಧಾನಿ, ದಳವಾಯಿಗಳೊಂದಿಗೆ ನಿಂತು, ಹೈದರಾಲಿಯ ಸೇನೆ ಬೀಡುಬಿಡುವುದನ್ನು ನೋಡಿದ ಮದಕರಿನಾಯಕ ಹೇಳಿದ –

"ಈಗ ನಿಜವಾಗಿಯೂ ನಮ್ಮ ಸತ್ವಪರೀಕ್ಷೆಯ ಸಮಯ: ಹಿಂದಾದದ್ದು ಆಟ -ಈಗಿನದೇ ಯುದ್ಧ."

ಆ ಮಾತನ್ನಾಡಿದ ಮದಕರಿನಾಯಕನ ಧ್ವನಿ ದೃಢವಾಗಿ, ಮಿಡಿದರೆ ಸಿಡಿಲಿನ ಸದ್ದನ್ನು ಸೂಸುವ ಇಬ್ಬದಿಯಿಂದಲೂ ಬಿಗಿಹಿಡಿದೆಳೆದ ಉಕ್ಕಿನ ತಂತಿಯಂತಿತ್ತು. ಆ ಮಾತನಾಡುವಾಗ, ಎದೆಯಲ್ಲಿ ತುಂಬಿ ಬಂದ ರೋಷದಿಂದ ಎದೆಯುಬ್ಬಿ, ಧರಿಸಿದ ಅಂಗರೇಖಿನ ಗುಂಡಿಗಳು ಚಟಚಟ ಸಿಡಿದವು.

ಆತನ ಹೊರಗಣ್ಣು –

ದುರ್ಗದ ಹೊರವಲಯದಲ್ಲಿ ರಣಮಾರಿಗೆ ಬಲಿಕೊಡಲೆಂದು ಹಾಕಿದ ವಿವಿಧ ಬಣ್ಣದ ಅನ್ನದ ರಾಶಿಗಳಂತೆ ಕಾಣುವ ಶತ್ರುಗುಡಾರಗಳನ್ನು ನೋಡುತ್ತಿದ್ದರೆ,

ಒಳಗಣ್ಣು-

ಅರಮನೆಯ ಪಾರ್ಶ್ವದಲ್ಲಿ ಕಲ್ಲುಕುಟಿಗರು ಕಟ್ಟುತ್ತಿದ್ದ ಹೈದರಾಲಿಯ ಪಂಜರವನ್ನು ಕಂಡಿತು.

ಆ ಇಬ್ಬಗೆಯ ನೋಟವನ್ನು ಕಾಣುತ್ತಲೇ –

"ನವಾಬನಿಗೆ ನಮ್ಮ ಕೋಟೆಯ ಯಾವ ಭಾಗ ದುರ್ಬಲವೆಂದು ಗೊತ್ತಾಗಿದೆ. ಆದ್ದರಿಂದ ನಮ್ಮವರೂ ಇತ್ತಕಡೆ ಶತ್ರುಬಲವನ್ನು ಮುರಿಯಲು ಸಕಲಸಿದ್ಧತೆ ಮಾಡಿಕೊಳ್ಳಬೇಕು"

-ಎಂದು ತನ್ನ ಸುತ್ತಲಿದ್ದ ದಳವಾಯಿಗಳಿಗೆ ಅಪ್ಪಣೆ ಮಾಡಿದ ಮದಕರಿನಾಯಕ.

ದಾಳಿಮಾಡಬಂದ ಹೈದರಾಲಿಗೆ –

ಅವನ ಬಲವನ್ನು ಎದುರಿಸಲು ಸಿದ್ಧರಾದವರಿಗೆ –

ಇಬ್ಬರಿಗೂ ಕಾಯುವಷ್ಟು ತಾಳ್ಮೆಯಿದ್ದಂತಿರಲಿಲ್ಲ.

ಹಿಂದಿನ ಬಾರಿಯಂತೆ ಲಗುಬಿಗಿಯ ಪರೀಕ್ಷೆ, ಸಂಧಾನದ ಪ್ರಯತ್ನ – ಯಾವ ಬಗೆಯ ಪೀಠಿಕೆಯೂ ಇಲ್ಲದೆ, ಹಿಂದಿನ ಬಾರಿಗಿಂತಲೂ ದ್ವಿಗುಣಿತ ವೇಗದಲ್ಲಿ ರಣಯಂತ್ರ ಚಲಿಸಲಾರಂಭಿಸಿತು. ಹೈದರಾಲಿಯ ದಂಡಿನವರು ತೋಪುಗಳನ್ನೇರಿಸಲು ಮೊಹರ್ಚೆಗಳನ್ನು

ಕಟ್ಟಲಾರಂಭಿಸಿದಂತೆಯೇ, ದುರ್ಗದವರೂ ಸಿದ್ದಯ್ಯನಬಾಗಿಲಿನಿಂದ ಹಿಡಿದು ಲಾಲ್‌ಕೋಟೆ ಬಾಗಿಲಿನವರೆಗಿದ್ದ ಬತೇರಿಗಳ ಮೇಲೆ ತೋಪುಗಳನ್ನೇರಿಸಿ, ಅವುಗಳಿಗೆ ಕುರಿಯ ಬಲಿಕೊಟ್ಟು, ಮದ್ದು ತುಂಬಿದಂತೆಯೇ, ಕೋಟೆ ಉದ್ದಕ್ಕೂ ದೊಡ್ಡ ದೊಡ್ಡ ಬಂಡೆಗಳು ಉರುಳಲು ಸಿದ್ಧವಾಗಿ, ಕಾದೆಣ್ಣೆ, ಕುದಿವ ಅಂಬಲಿ, ಕಾದ ಮರಳನ್ನು ಶತ್ರುಗಳ ಮೇಲೆ ಕಕ್ಕಲು ಭಾರಿ ಭಾರಿ ಕಡಾಯಿಗಳ ಅಡಿಯ ದೈತ್ಯಾಕಾರದ ಒಲೆಗಳಲ್ಲಿ ಬೆಂಕಿ ಉರಿಯಲಾರಂಭಿಸಿತು -ದುರ್ಗದ ಹೃದಯದಲ್ಲಿದ್ದ ದ್ವೇಷದ ದಾವಾನಲದಂತೆ ; ಕೋಟೆಯೇ ರೋಷದ ಉರಿಗಾರುತ್ತಿರುವಂತೆ.

೨೨

"ನಮ್ಮಲ್ಲಿಯ ಮದ್ದುಗುಂಡೆಲ್ಲಾ ಇವತ್ತೇ ಸುಟ್ಟರೂ ಚಿಂತೆಯಿಲ್ಲ. ಕೋಟೆ ಪುಡಿಪುಡಿಯಾಗಲೇಬೇಕು. ಇವತ್ತು ರಾತ್ರಿ ಕೋಟೆಗೆ ಲಗ್ಗೆ ಹಾಕಿ ಹಿಡಿಯಲೇಬೇಕು. ಸೋತು ಹಿಂತಿರುಗಿ ಬಂದ ಸೈನಿಕರಿಗೆ ಗುಂಡಿನಿಂದ ಹೊಡೆಯಿರಿ. ಬೆನ್ನು ತೋರಿಸಿ ಬಂದ ಸರ್ದಾರರಿಗೆ ಇದೇ ನಾವು ಕೊಡುವ ಇನಾಮು"

-ಎಂದು ಹೇಳಿ, ತನ್ನ ಡೇರೆಯ ಮುಂದೆ ಕಂಭ ಹೂಳಿಸಿ, ಅದರ ಬದಿಯಲ್ಲಿ ತನ್ನೆರಡು ಚಡಾವುಗಳನ್ನು ಇಟ್ಟು, ಅಪ್ಪಣೆ ಮಾಡಿದ ಹೈದರಾಲಿ, ಮುನಿಸಿನ ಮಾರಿಯೇ ಮೈತಾಳಿದಂತೆ.

ಆ ಅಪ್ಪಣೆಯನ್ನು ಆಕಾಶಕ್ಕೂ ತಿಳಿಸುವಂತೆ ತೋಪುಗಳು ಘರ್ಜಿಸಿದವು.

ಆ ತೋಫುಗಳು ಉರಿಮಳೆಗರೆದು ಕವಿಸಿದ ಕತ್ತಲನ್ನು ಚೂರುಚೂರಾಗಿ ಸೀಳುವಂತೆ. ದುರ್ಗದತ್ತಣಿಂದಲೂ ತೋಫುಗಳು ಮೊಳಗಿ, ತೋಫುಗಳನ್ನು ಹೊತ್ತ ಮರದ ಮೊಹರ್ಚೆಗಳ ಮೇಲಿನಿಂದ ತೋಫುಗಳು ಕಳಚಿಬಿದ್ದು, ಮೊಹರ್ಚೆಗಳು ಉರಿಯಲಾರಂಭಿಸಿದವು – ಹೈದರಾಲಿಯ ಪಾಳಯದಲ್ಲಿ, ಹೈದರಾಲಿಯ ಶಿಬಿರದ ತೋಪುಗಳ ಹೊಡೆತಕ್ಕೆ ಸಿಕ್ಕು ಬೆಟ್ಟದ ಬಂಡೆಗಳು ಬಿರಿದು ಶಿಲಾವರ್ಷವಾಯಿತು. ಹಗಲು ಕಾಣದಂತೆ ಘಾಟುಹೊಗೆ ಹಬ್ಬಿ, ಎರಡು ಕಡೆಯಲ್ಲೂ ಕುಡಿದ ನೀರು ಕಹಿಯಾಗಿ, ತಿಂದ ಅನ್ನ ಹೊಟ್ಟೆಯಲ್ಲಿ ನಿಲ್ಲದೆ, ಕಣ್ಣಿದ್ದೂ ಕುರುಡರಂತೆ ತಡವರಿಸಿದರು. ಧೂಮಾವೃತ ಮುಗಿಲಿನಲ್ಲಿ ನಡುಹಗಲಸೂರ್ಯ ಗ್ರಹಣಗ್ರಸ್ತನಂತೆ ಕಾಣಿಸಿದ. ಹಗಲಿನ್ನೂ ಇರುವಾಗಲೇ ದೀಪಗಳು, ದೀವಟಿಗೆಗಳು ಹೊತ್ತಿ ಉರಿಯಲಾರಂಭಿಸಿದವು. ಹಗಲಿನಲ್ಲೂ ಮತಾಪುಗಳು ಸಹಸ್ರ ಸಂಖ್ಯೆಯಲ್ಲಿ ಉರಿದು, ಕತ್ತಲನ್ನು ಹಗಲಾಗಿಸಿ, ತೋಫುಗಳಿಗೆ ಮಾರ್ಗದರ್ಶನ ಮಾಡಿದವು.

ಒಂದೆಡೆ ತೋಪುಗಳ ಯುದ್ಧ ನಡೆಯುತ್ತಿದ್ದಂತೆಯೇ, ಅದರ ಬೆನ್ನಲ್ಲಿ ಹೈದರಾಲಿಯ ಸೈನಿಕರು ಕೋಟೆಗೆ ಲಗ್ಗೆ ಹಾಕಲು ಬೇಕಾದ ನಿಚ್ಚಣಿಗೆ ಮೊದಲಾದ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳತೊಡಗಿದರು.

ಹಗಲು ಬರೀ ತೋಪುಗಳ ಘರ್ಜನೆಯನ್ನು ಕೇಳಿದ ದುರ್ಗದ ದಳವಾಯಿಗಳೂ 'ಇದು ಇರುಳು ಲಗ್ಗೆ ಹತ್ತುವುದಕ್ಕೆ ಸೂಚನೆ' ಎಂದರಿತು, ಅದನ್ನೆದುರಿಸಲು ತಮ್ಮ ಸೇನೆಯನ್ನು ಸಿದ್ಧಗೊಳಿಸಿದರು.

ಸಿದ್ದಯ್ಯನಬಾಗಿಲಿನಿಂದ ಹಿಡಿದು ಲಾಲ್ ಕಿಲಾದರ್ವಾಜಾದವರೆಗೂ, ತನ್ನ ಸೈನಿಕರಲ್ಲಿ ವೀರಾವೇಶವನ್ನು ತುಂಬುತ್ತಾ, ಪರಿಘಾಯುಧ ಹಿಡಿದು ಪರಶುರಾಮನಂತೆ ರೋಷ ಕಷಾಯಿತನೇತ್ರನಾಗಿ ಸುತ್ತುತ್ತಿದ್ದ ಮದಕರಿನಾಯಕನೂ ತನ್ನ ದಂಡನಾಯಕರಿಗೆ ಹೇಳಿದ –

"ಕೋಟೆಯ ರಕ್ಷಣೆಗಾಗಿ ನಮ್ಮವರ ಹೆಣಗಳ ಕೋಟೆಯೇ ಬಿದ್ದರೂ ಸರಿಯೇ, ಕೋಟೆಯನ್ನು ಬಿಟ್ಟುಕೊಡಬಾರದು. ಸ್ವರ್ಗಕ್ಕಲ್ಲದೆ ಮನೆಗೆ ಹಿಂದಿರುಗಬಾರದು. ಶತ್ರುವನ್ನು ಹಿಮ್ಮೆಟ್ಟಿಸಿಯಲ್ಲದೆ ಯಾರೂ ಮುದ್ದೆ ಮುಟ್ಟಬಾರದು. ನಮ್ಮ ಹೆಣ ಕಾಣದೆ ಯಾರೂ ಹಿಮ್ಮೆಟ್ಟಬಾರದು."

ಇಬ್ಬಣಗಳೂ ಇರುಳುಗಾಳಗಕ್ಕಾಗಿ ಸಿದ್ಧವಾದವು.

ಕತ್ತಲಾಗುತ್ತಿದ್ದಂತೆಯೇ ಹೈದರಾಲಿಯ ಸೇನೆ ಪಳಗಿದ ಸರ್ದಾರರ ನಾಯಕತ್ವದಲ್ಲಿ ರಣಕೇಕೆ ಕೂಗುತ್ತಾ, ಮತಾಪು, ಬಾಣಗಳನ್ನು ಹೊತ್ತಿಸುತ್ತಾ ಕೋಟೆಯತ್ತ ನುಗ್ಗಿತು.

ದುರ್ಗದತ್ತಲೂ ಮತಾಪುಗಳು ಹೊತ್ತಿ, ದುರ್ಗದತ್ತಣಿಂದ ಹಾರಿದ ಮದ್ದಿನ ಬಾಣಗಳು. ಮುಗಿಲಂಗಳದಲ್ಲಿ ಹಾರಿ, ನೆಲದ ಮೇಲೆ ಜನ ಹೋರಾಡುತ್ತಿರಲು, ಆಕಾಶದಲ್ಲಿ ಧೂಮ ಕೇತುಗಳ ಯುದ್ಧ ನಡೆದಂತೆ ಕಂಡಿತು. ಸತ್ತವರ ಲೆಕ್ಕವಿಡದೆ ಹೈದರಾಲಿಯ ಸೈನಿಕರು ಬೆಂಕಿಯುಗುಳುವ ಕೋವಿಗಳ ಕಾವಲಿನಲ್ಲಿ ಕೋಟೆಗೆ ಲಗ್ಗೆ ಹಾಕಲು ಯತ್ನಿಸಿದರು. ಕೋಟೆಯ ಮೇಲಿನ ತೆನೆಗಿಂಡಿಗಳಿಂದಲೂ ಕೋವಿಗಳು ಹಾರಿ, ಕಾದ ಅಂಬಲಿ, ಕಾದು ಚಟ ಪಟಗುಟ್ಟುವ ಮರಳು, ಕುದಿಯುವ ಎಣ್ಣೆ - ಕೋಟೆಯ ಬಳಿ ಸಾರಿದವರ ಮೇಲೆ ಧಾರಾಕಾರವಾಗಿ ಸುರಿದು, ಸೈನಿಕರನ್ನು ಬೇಯಿಸಿದಂತೆಯೇ, ಗಡಗಡ ಸದ್ದು ಮಾಡುತ್ತಾ ಉರುಳಿದ ಬಂಡೆ ಗುಂಡುಗಳು ಸಿಕ್ಕವರನ್ನು ನುಚ್ಚುನುರಿ ಮಾಡಿದವು.

ಇರುಳಿಡೀ ಹೋರಾಟ ನಡೆದರೂ ಇಬ್ಬದಿಯಲ್ಲೂ ಸಾವಿರಾರು ಜನ ಸತ್ತರೂ, ಹೈದರಾಲಿಯ ಸೇನೆಗೆ ಲಗ್ಗೆ ಹಾಕುವುದು ಸಾಧ್ಯವಾಗಲಿಲ್ಲ. ಇದರೊಂದಿಗೆ ಗುಪ್ತಮಾರ್ಗಗಳಿಂದ ನುಗ್ಗಿ ಬಂದ ದುರ್ಗದ ಸೇನೆಯವರು, ಹೈದರನ ಸೇನೆಯೊಳಗೇ ನುಗ್ಗಿ, ವೀರಾವೇಶದಿಂದ

ಕಗ್ಗೋಲೆ ಕಡಿಯಲಾರಂಭಿಸಿದರು. ಕೋಟೆಯತ್ತಣಿಂದ ಮಾತ್ರ ಪ್ರತಿಭಟನೆಯನ್ನು ನಿರೀಕ್ಷಿಸಿದ ಹೈದರಾಲಿಯ ಸೇನೆ ಚಲ್ಲಾಪಿಲ್ಲಿಯಾಗಿ ತಮ್ಮವರು ಯಾರು, ಶತ್ರುಪಕ್ಷದವರು ಯಾರು ಎಂದು ತಿಳಿಯದೆ, ಕಂಡವರನ್ನು ಕಡಿದು, ಕಡಿದಷ್ಟೂ ಬೆಳೆಯುತ್ತಿದ್ದ ದುರ್ಗದ ಸೇನೆಯನ್ನು ಎದುರಿಸಲಾಗದೆ, ದಿಕ್ಕಾಪಾಲಾಗಿ ಓಡಲಾರಂಭಿಸಿದರು. ದುರ್ಗದ ಸೈನಿಕರು ಕಂದಕದಲ್ಲಿ ಈಸುಬಿದ್ದು ಕೋಟೆಗೆ ಏಣಿಹಾಕುತ್ತಿದ್ದವರನ್ನು ಕೊಚ್ಚಿದರು. ಬಗೆಬಗೆಯ ರಣಕೇಕೆ, ಆರ್ತಾಲಾಪ ನೆಲಮುಗಿಲನ್ನಾವರಿಸಿ ಮನುಷ್ಯರಿರಲಿ, ಕಾಡುಮೃಗಗಳೂ ಹೆದರಿ ಹತ್ತಾರು ಹರಿದಾರಿಗಳಾಚೆ ಓಡಿ ಕಾಡಿನಲ್ಲಿ ಅವಿತುಕೊಂಡವು.

ಹಾಗೆ ಹೋರಾಡುತ್ತಿರುವಾಗಲೇ ಹಗಲಾಯಿತು –

ಹಗಲಾಗುತ್ತಿದ್ದ ಹಾಗೆ ತನ್ನ ಪ್ರಯತ್ನ ವಿಫಲವಾದದ್ದು ಹೈದರಾಲಿಗೆ ಮನವರಿಕೆಯಾಗಿ –

"ದುರ್ಗ್ ಲೋಗ್ ಇನ್‌ಸಾನ್ ನಹಿ, ಸೈತಾನ್ ಹೈ, ಲಾಖೋಮೇ ಏಕ್ ಐಸಾ ಖಿಲ್ಲಾ" - ಎಂದು ನಿರಾಶೆಯ ನಂಜುನಿಟ್ಟುಸಿರಿಟ್ಟ.

ಹಗಲು ಹರಿದು, ಕೈಕಾಲು ಕತ್ತರಿಸಿ, ನೆತ್ತರು ಕಾರುತ್ತಿದ್ದರೂ ಕತ್ತಿಬೀಸುವುದನ್ನು ಬಿಡದ ದುರ್ಗದ ಸೈನಿಕರನ್ನು ಕಂಡು, ರುಂಡಮುಂಡಗಳ ಕುಯಿಲು ಮಾಡಿದ ನೆಲದಂತಿದ್ದ ರಣಭೂಮಿಯನ್ನು ನೋಡಿದ ಪೂರ್ಣಯ್ಯ –

"ಇದು ಮದ್ದು ಗುಂಡಿಗೆ ಮಣಿಯುವ ಸೈತಾನಲ್ಲ, ಖಾವಂದ್ ಇದಕ್ಕೆ ಮಂತ್ರವೈದ್ಯವೇ ಆಗಬೇಕು. ಹೀಗೆ ಯುದ್ಧ ಮಾಡುವುದರಿಂದ ವೃಥಾ ಪ್ರಾಣಹಾನಿಯಲ್ಲದೆ, ಜಯ ಸಾಧಿಸುವುದಿಲ್ಲ, ರಾಯದುರ್ಗದವರೂ ಹರಪನಹಳ್ಳಿಯವರೂ ನಮ್ಮನ್ನು ಬಂದು ಕೂಡಿಕೊಳ್ಳುವವರೆಗೆ ನಾಲ್ಕು ದಿನ ಯುದ್ಧಕ್ಕೆ ವಿರಾಮ ಕೊಡಿ. ಅಷ್ಟರೊಳಗಾಗಿ ಮತ್ತೇನು ಮಾಡ ಬಹುದೋ ಯೋಚಿಸೋಣ" – ಎಂದು ಸಲಹೆ ಮಾಡಿದ.

ಆತನ ಸಲಹೆಯನ್ನೇ ಬರ್ಕಿ ಶ್ರೀನಿವಾಸರಾಯ, ತೋಷಿಖಾನೆ ಕೃಷ್ಣರಾಯ, ಗುಲಾಂ ಅಲಿಖಾನ್ ಮೊದಲಾದ ಹೈದರಾಲಿಯ ಆಪ್ತರೂ ಪುಷ್ಟೀಕರಿಸಿದರು.

"ಮಂತ್ರವೋ, ಮಾಟವೋ - ಅದೇನು ಮಾಡುತ್ತೀರೋ ಮಾಡಿ. ಈ ದುರ್ಗ ನಮ್ಮದಾಗ ಬೇಕು, ಇಲ್ಲ - ಇಲ್ಲಿ ನಮ್ಮ ಗೋರಿಯಾಗಬೇಕು. ಮತ್ತೆ ಸ್ನೇಹ, ಸಂಧಾನದ ಮಾತಾಡುವುದಿಲ್ಲ - ಈ ನಾಯಕನೊಂದಿಗೆ"

-ಎಂದು ಹೇಳಿದ ಹೈದರಾಲಿ, ಮತ್ತೇನೋ ಯೋಚಿಸಿ-

"ದುರ್ಗ್ ಮೇ ಹಮಾರಾ ಕುತ್ತಾ ಕ್ಯಾ ಕಾಮ್ ಕರ್ತಾಹೈಂ ? ಗಲ್ಲಿಮೆ ಕಚಡಾ ಖಾಕೆ ಫಿರ್ತಾ ಹೈ ಕ್ಯಾ ?"

-ಎಂದು ಕಟುವಾಗಿ ಕೇಳಿದ.

* * *

ದುರ್ಗದಲ್ಲಿಯ ನವಾಬನ ನಾಯಿಗಳು-

ಹೈದರಾಲಿ ಹೇಳಿದ ಹಾಗೆ ಕಚಡಾ ತಿಂದುಕೊಂಡು ಗಲ್ಲಿಗಳಲ್ಲಿ ಅಲೆಯುತ್ತಿರಲಿಲ್ಲ, ಒಳಗೊಳಗೇ ತಮ್ಮಿಂದಾದ ಕೆಲಸ ಮಾಡುತ್ತಿದ್ದರು.

ಶ್ರೀಪತಿರಾಯ ತನಗೆ ಕರಡುಕಾಗದದಲ್ಲಿ ದೊರಕಿದ ಹೆಸರುಗಳ ಹಿಂದಿನ ರಹಸ್ಯವೇನು ಎಂದು ಶೋಧನೆಗೆ ತೊಡಗಿದ್ದಾಗ. ಅಷರಫ್ ಪಾ ವಲಿಯೊಂದಿಗಿದ್ದ ಅಬ್ದುಲ್‌ಖಯ್ಯೂಂ ಆ ಪಟ್ಟಿಯಲ್ಲಿದ್ದ ಸಲಬತ್‌ಖಾನನ ಮೇಲೆ ಕಣ್ಣಿಟ್ಟಿದ್ದ. ಹಾಗೆಯೇ ದುರ್ಗದ ನೂರಾರು ಜನರ ಕಣ್ಣಿಗೆ ಸಂತನಂತೆ ಕಾಣುತ್ತಿದ್ದ ಅಷರಫ್ ಷಾ ವಲಿಯ ಮೇಲೂ, ಆತನ ಮಾತು ಹಿಂದೂಗಳಿಗೆ ಪ್ರಿಯವಾದ ಹಾಗೆ, ದುರ್ಗದ ಮುಸ್ಲಿಮರಿಗೆ 'ಖುರಾನಿನ ಸೂರಾಗಳಷ್ಟು ಪವಿತ್ರ' ಎಂಬುದನ್ನು ಅರ್ಥಮಾಡಿಕೊಂಡಿದ್ದ ಖಯ್ಯೂಮ್, ಯಾವುದಕ್ಕೂ ಲಕ್ಷ್ಯ ಕೊಡದೆ, ಸದಾ ಧ್ಯಾನನಿರತನಾಗಿದ್ದು ಅಗತ್ಯವಾದಾಗ ಬಂದ ಭಕ್ತರಿಗೆ 'ಖುದಾ ಭಲಾಕರೇಂ' ಎಂದಷ್ಟೇ ಹೇಳುತ್ತಿದ್ದ ಈ ಸಂತ 'ಬಕರಾ'ನನ್ನು ಹೇಗೆ ತನ್ನ ಬಲೆಗೆ ಕೆಡವಿಕೊಳ್ಳುವುದು ಎಂದು, ಅವಕಾಶ ದೊರೆತಾಗಲೆಲ್ಲ ಆ ಸಂತನ ಹೃದಯದಲ್ಲಿದ್ದ 'ಮುಸ್ಲಿಂತನ'ವನ್ನು ಎಚ್ಚರಿಸುತ್ತಾ, ಯೋಚಿಸುತ್ತಿರುವಾಗ ಅಷ್ಟು ದಿನ ಶಾಂತವಾಗಿದ್ದ ದುರ್ಗದಲ್ಲಿ ಮತ್ತೆ ತೋಫುಗಳ ಗರ್ಜನೆ ಕೇಳಿದಾಗ, ಧ್ಯಾನಮಾಡುತ್ತಾ ಕುಳಿತಿದ್ದ ಆ ಮುದುಕ ಕಣ್ಣು ಬಿಟ್ಟು –

"ಫಿರ್ ಜಂಗ್ ಷುರು ಹುವಾ ಕ್ಯಾ, ಬೇಟಾ ? ಈ ಕೊಲೆ ನಿಲ್ಲುವುದು ಯಾವಾಗ ? ನಮಾಜು ಮಾಡುವುದನ್ನು ಬಿಟ್ಟು ಕೊಲ್ಲೋಕೆ ಹೋಗ್ತಾರಲ್ಲಾ ಈ ಜನ, ಈ ಭೂಮಿ ಯಾರಿಗೆ ಶಾಶ್ವತ ಅಂತ ತಿಳಿದು ಹೀಗೆ ಯುದ್ಧ ಮಾಡ್ತಾರೆ ? ಇವರಿಗೆ ಬುದ್ಧಿ ಬರೋದು ಯಾವಾಗ ?" – ಎಂದು ನಿಟ್ಟುಸಿರಿಟ್ಟು ಕೇಳಿದ.

"ಹಜರತ್, ನೀವು ಈ ಲೋಕದಲ್ಲೇ ಇಲ್ಲ. ಇಲ್ಲಿ ನಡೆದಿರೋ ವಿಷಯ ನಿಮಗೆ ಗೊತ್ತಿಲ್ಲ."

- ಬಹು ನಯವಾಗಿ ಹೇಳಿದ ಅಬ್ದುಲ್ ಖಯ್ಯೂಮ್.

"ಐಸಾ ಹೈಕ್ಯಾ? ನಾನು ಮುದುಕ ಆಗಿಬಿಟ್ಟೆ. ನನಗೇನೂ ಗೊತ್ತಿಲ್ಲ. ಏನು ವಿಷಯ ನೀನೇ ಹೇಳು."

"ತಾವು ಖುರಾನ್-ಏ-ಷರೀಫ್ ಓದಿದೀರಲ್ಲಾ, ಹಜರತ್ ?"

"ಹೂ, ಎಂದೋ ಓದಿದ್ದೆ. ಇದಕ್ಕೂ ಖುರಾನ್-ಏ-ಷರೀಫ್ ಗೂ ಏನು ಸಂಬಂಧ ?"

"ಅದೇ ನಿಮಗೆ ಅರ್ಥವಾಗಿಲ್ಲ. ಈಗ ನಡೆದಿರೋದು ಖುರಾನ್-ಏ-ಷರೀಫ್‌ನಲ್ಲಿ ಹೇಳಿದೆಯಲ್ಲಾ ಆ ಜೆಹಾದ್."

"ಜೆಹಾದ್ - ಧರ್ಮಯುದ್ಧ. ಈ ಯುದ್ಧದಲ್ಲಿ ಧರ್ಮ ಎಲ್ಲಿ ಬಂತು ? ಜನ ಜನಾನ ಕೊಲ್ಲಬೇಕೂಂತ ಹೇಳಿದಾರಾ ಪೈಗಂಬರ್‌ರವರು ?"

"ಕಾಫಿರರನ್ನು ಕೊಲ್ಲೋದು ಯುದ್ಧ ಅಲ್ಲ, ಧರ್ಮಯುದ್ಧ. ಪೈಗಂಬರರ ದಿವ್ಯವಾಣೀನ ಕೇಳದಿದ್ದಾಗ ಪೈಗಂಬರರೇ ಅಪ್ಪಣೆ ಕೊಡಿಸಿದ್ದಾರೆ - 'ಮಕ್ಕಾ ಮದೀನಾದಿಂದ ಹಿಡಿದು ಅರಬಸ್ತಾನ್, ಕಾಬೂಲ್, ಕಂದಹಾರ್, ಹಿಂದೂಸ್ತಾನ್ - ಸಾರೆ ಜಹಾಂ ಮುಸಲ್ಮಾನ್ ಆಗಬೇಕು. ದುನಿಯಾಭರ್ 'ಅಲ್ಲಾ ಹೋ ಅಕ್ಬರ್' ಆವಾಜ್ ಬರಬೇಕು. ಅಲ್ಲೀವರೆಗೂ ಮುಸಲ್ಮಾನ್, ಕಾಫಿರರನ್ನು ಕೊಂದರೆ ಅದು ಯುದ್ಧ ಅಲ್ಲ, ಕೊಲೆ ಅಲ್ಲ -ಜೆಹಾದ್'. ಈಗ ನಡೀತಾ ಇರೋದು ಅದೇ. ಖುದಾ ಹಾಫೀಜ್, ಹಾಗಾಗಲೇಬೇಕು. ಹಜರತ್ ಪೈಗಂಬರರ ಮಾತು ಸುಳ್ಳಾಗಬಾರದು. ಅಲ್ಲಾ ಬಿಟ್ಟು ದೇವರಿಲ್ಲ : ಪೈಗಂಬರ್ ಬಿಟ್ಟು ಪ್ರವಾದಿ ಇಲ್ಲ."

"ಅದು ಸಚ್ಚಾ ಬಾತ್."

"ಹಜರತ್ ಪೈಗಂಬರರ ಮಾತು ನಡೆಸೋಕೇ ಹೈದರಾಲಿ ನವಾಬರು, ಈ ಕಾಫಿರ್ ನಾಯಕನ ಮೇಲೆ ಲಡಾಯಿ ಮಾಡ್ತಿದಾರೆ. ಹಮಾರೆ ಬದ್ನಸೀಬ್, ನಮ್ಮ ಜನಾನೇ ದುಡ್ಡಿನಾಸೆಗೆ ಕಾಫಿರ್‌ನ ಗುಲಾಮರಾಗಿ, ಖುರಾನ್-ಏ-ಷರೀಫ್‌ಗೆ ನಮಕ್ ಹರಾಂ ಆಗಿದಾರೆ. ಈ ದುರ್ಗ ಉಳಿದಿರೋದು ನಮ್ಮ ಮುಸಲ್ಮಾನ್ ಸರ್ದಾರ್‌ರಿಂದ. ಅವರು ಬೇಡ ಅಂದರೆ ಯುದ್ಧ ನಿಂತುಹೋಗುತ್ತೆ; ಹೈದರಾಲಿ ನವಾಬರು ರಕ್ತ ಸುರಿಸಿದ್ದು ಸಾರ್ಥಕ ಆಗುತ್ತೆ; ಹಜರತ್ ಪೈಗಂಬರರು ಹೇಳಿದ್ದು ಸತ್ಯ ಆಗುತ್ತೆ. ಇಲ್ಲದಿದ್ದರೆ ಹಜರತ್ ಪೈಗಂಬರರಿಗೆ ಮುಸಲ್ಮಾನರೇ ದ್ರೋಹಮಾಡಿದ ಹಾಗಾಗುತ್ತೆ. ಈ ಮಾತು ತಮ್ಮಂಥ ವಲಿಗಳು, ಮುಲ್ಲಾಗಳು, ಖಾಜಿಗಳು ಹೇಳಬೇಕು. ನನ್ನಂಥ ಫಕೀರ ಹೇಳಿದರೆ ಯಾರು ಕೇಳ್ತಾರೆ ?"

"ಏ ಕ್ಯಾ - ಹಮಾರಾ ಮುಸಲ್ಮಾನ್ ಆದ್ಮಿ ಕಾಫಿರ್ ಸೆ ಷಾಮಿಲ್ ಹೋಕರ್ ಸಚ್ಚಾ ಮುಸಲ್ಮಾನ್ ಕಾ ದುಷ್ಮನ್ ಹೋಗಯಾ ಹೈ- ಕ್ಯಾ ? ಹಜರತ್ ಪೈಗಂಬರ್ ಕೆ ಬಾತ್ – ಖುದಾಕೆ ಬಾತ್, ಸಚ್ಚಾ ಮುಸಲ್ಮಾನ್ ಇಸ್ ಬಾತ್ ಪರ್ ಅಮಲ್ ನಹಿ ಕರ್‌ನಾ."

- ಅಷರಫ್ ಷಾ ವಲಿ ಹಿಂದುಮುಂದೆ ತಿಳಿಯದೆ ಹೇಳಿದ.

"ಹೌದು ಹಜರತ್, ಮುಸಲ್ಮಾನ್ ಸಚ್ಚಾ ಮುಸಲ್ಮಾನ್ ಆಗಬೇಕು. ಇಲ್ಲದೆ ಹೋದ್ರೆ ಏನಿದೆ? ಈ ಮಾತು ತಾವು ಹೇಳಬೇಕು. ಸಾರೆ ಜಹಾಂ ಖುದಾದಾದ್ ಸಲ್ತನತ್ ಹೋಗಾ – ಆಪ್

ಜೈಸೆ ಬಡೆ ಲೋಗ್ ಇಸ್ ಕಾಮ್ ಮೆ ಮದತ್ ದೇನಾ. ಇಲ್ಲಾಂದ್ರೆ ಇಸ್ಲಾಂನ ಚಾಂದ್ ತಾರಾ ಹರೇ ನಿಶಾನಿ ಕಾಫಿರ್ ಲೋಗ್ ಕಾ ಲಂಗೋಟಿ ಹೋ ಜಾತಾ ಹೈ. ನೀವಿದ್ದೂ ಹೀಗಾಗಬೇಕೇ ?"

- ರೊಚ್ಚಿನಿಂದ ಕೇಳಿದ ಖಯ್ಯೂಮ್.

"ತೋಬಾ, ತೋಬಾ. ಐಸಾ ಕಭಿ ನಹಿ ಹೋನಾ."

"ಹಾಗಂತ ಬಾಯಲ್ಲಿ ಅಂದ್ರೆ ಆಗೋಲ್ಲ- ದುರ್ಗದ ಖಾಜಿ ಜಮಾಲ್ ಸಾಹೇಬರಿಗೆ ಹೇಳಬೇಕು, ಮುಸಲ್ಮಾನ್ ಸರದಾರರಿಗೆ ಹೇಳಬೇಕು. ಆಗ ಹಜರತ್ ಪೈಗಂಬರರ ಮಾತು ಏನೂಂತ ನಮ್ಮ ಜನಕ್ಕೆ ಗೊತ್ತಾಗುತ್ತೆ. ಇಲ್ಲಾಂದ್ರೆ ಹಜರತ್ ಪೈಗಂಬರರು ಹೇಳಿದ್ದು ಸುಳ್ಳಾಗುತ್ತೆ, ಖುದಾದಾದ್‌ಸಲ್ತನತ್ ಕಟ್ಟೋಕೆ ಪೈಗಂಬರರೇ ಅವತಾರಮಾಡಿರೋ ಹಾಗೆ ಇರುವ ಹೈದರಾಲಿ ನವಾಬರು ಷಯೀದ್[11] ಆದರೆ, ಪೈಗಂಬರರ ಮಾತು ಝೂಟಾ ಆಗುತ್ತೆ."

"ಹಾಗಂತ ಖುರಾನ್-ಏ-ಷರೀಫ್‌ನಲ್ಲಿ ಹೇಳಿದೆಯೇನು ?"

"ಬೇಕಾದ್ರೆ ತೆಗೆದು ತೋರಿಸಲೇ ?"

"ಓದೋಕೆ ನನಗೆ ಕಣ್ಣು ಕಾಣೋದಿಲ್ಲ. ನೀನು ಸಚ್ಚಾ ಮನುಷ್ಯ. ನೀನು ಹಾಗಿದೇಂತ ಹೇಳಿದ್ರೆ ಸರಿ. ನಾವೀಗ ಏನು ಮಾಡಬೇಕು ? ಜನ ಸಾಯಬಾರದು, ಹಜರತ್ ಪೈಗಂಬರರ ಮಾತು ಸುಳ್ಳಾಗಬಾರದು - ಅದು ಹೇಗೆ ಮಾಡಬೇಕು ?"

"ಏನೂ ಇಲ್ಲ - ಖಾಜಿ ಜಮಾಲ್ ಸಾಹೇಬರಿಗೆ ಹೇಳಿ – ಖುರಾನ್-ಏ-ಷರೀಫ್ ಹೀಗೆ ಹೇಳಿದೇಂತ. ಅವರು ಒಪ್ಪಿದರೆ ಬೇರೆ ದೊಡ್ಡ ಮುಸಲ್ಮಾನ್ ಜನ ದುಸರಾ ಮಾತಾಡೋಲ್ಲ. ನಮ್ಮ ಜನ ಈ ನಾಯಕನಿಗೆ ಮದತ್ ಮಾಡೋದು ನಿಂತರೆ ಜನ ಸಾಯೋದೂ ತಪ್ಪುತ್ತೆ, ಪೈಗಂಬರರ ಮಾತೂ ಉಳಿಯುತ್ತೆ."

"ಐಸಾ ಕ್ಯಾ ? ಹಾಗಿದ್ರೆ ಖಾಜಿ ಸಾಹೇಬರು ಬಂದಾಗ ಹೇಳು. ನಾವು ಅವರಿಗೆ ಸಚ್ಚಾ ಬಾತ್ ಹೇಳ್ತಿವಿ. ಅವರು ಒಪ್ಪಿದ್ರೆ ಬೇರೆ ಜನ ದುಸರಾ ಮಾತಾಡೋದಿಲ್ಲ. ಅಂತೂ ಈ ತೋಫಿನ ಆವಾಜು, ಕೊಲೆ, ರಕ್ತಪಾತ ನಿಲ್ಲಬೇಕು."

"ನೀವಷ್ಟು ಅಪ್ಪಣೆ ಕೊಟ್ಟರೆ ಇವತ್ತೇ ಖಾಜಿ ಸಾಹೇಬರಿಗೆ ಹೇಳ್ತೀನಿ."

- ಎಂದ ಅಬ್ದುಲ್ ಖಯ್ಯೂಮ್, ತನ್ನ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಷ್ಟು ತೃಪ್ತಿಯ ಧ್ವನಿಯಲ್ಲಿ.

"ಅಚ್ಛಾ - ಜೈಸೆ ಖುರಾನ್-ಏ-ಷರೀಫ್ ಮೆ ಹೈ-ವೈಸೆ ಕಾಮ್ ಕರೊ."

- ಎಂದ ಮುಗ್ಧಸಂತ ಅಷರಫ್, ಷಾ ವಲಿ.

---

[11] ಹುತಾತ್ಮ

ಆತ ಅಷ್ಟು ಹೇಳಿದ್ದೇ ಸಾಕೆಂದು, ಅಬ್ದುಲ್ ಖಯ್ಯೂಂ ಭಿಕ್ಷೆ ಬೇಡುವವನ ಹಾಗೆ ದುರ್ಗಕ್ಕೆ ಹೋಗಿ, ಖಾಜಿ ಸಾಹೇಬರಿಗೆ, ಅಷರಫ್ ಷಾ ವಲಿಯವರ ಮಾತು ಮುಟ್ಟಿಸಿದ.

ಆ ಮಾತಿನಂತೆಯೇ ಖಾಜಿ ಜಮಾಲ್ ಸಾಹೇಬರು ಬಂದು ಅಷರಫ್ ಷಾ ವಲಿಯನ್ನು ಕಂಡು 'ಏನು ಸಮಾಚಾರ ?' ಎಂದು ಭಕ್ತಿಯಿಂದ ಕೇಳಿದರು.

ಗಿಳಿಪಾಠ ಒಪ್ಪಿಸುವ ಹಾಗೆ ಅಷರಫ್ ಷಾ ವಲಿ, ಅಬ್ದುಲ್ ಖಯ್ಯೂಮ್ ಹೇಳಿದುದನ್ನು ಹೇಳಿ –

"ಆಪ್ ಖಾಜಿ ಸಾಹೇಬ್ ಹೈ. ಇತ್ನಿ ದಿನ್ ಏ ಬಾತ್ ಹಮಾರೆ ಲೋಗೋಂಕೋ ಬೋಲ್‌ನೆ ಭೂಲ್ ಗಯಾ ಕ್ಯಾ ? ಹಜರತ್ ಪೈಗಂಬರರ ಮಾತು, ಖುರಾನ್-ಏ-ಷರೀಫ್‌ನ ಮಾತು – ಝೂಟಾ ಆದ್ರೆ ನೀವು ಖಾಜಿ ಅಲ್ಲ, ನಾನು ವಲಿ ಅಲ್ಲ, ಖುದಾಕೆ ನಾಮ್ ಲೇಕರ್ ಬೋಲೋ - ಪೈಗಂಬರ್ ಕೆ ಬಾತ್ ಸುಳ್ಳಾಗಬಾರದು, ಖುರಾನ್-ಏ-ಷರೀಫ್ ಖುದಾನ ಮಾತು – ಅದಕ್ಕೆ ಮುಸಲ್ಮಾನ್ ಜನ ದ್ರೋಹ ಬಗೆದು, ಕಾಫಿರ್ ಜನಕ್ಕೆ ಮದತ್ ಕೊಡಬಾರದು. ಹಾಗಿದ್ರೆ ನಾವು ಈ ಜಾಗ ಬಿಟ್ಟು ದೇಶಾಂತರ ಹೋಗ್ತೇವೆ. ಖುದಾದಾದ್ ಸಲ್ತನತ್ ಕಟ್ಟೋಕೆ ಹೊರಟ ಹಜರತ್ ಪೈಗಂಬರ್ ಕಾ ಕಾಮ್ ಖರಾಬ್ ಆಗ್ತದೆ. ಇದಕ್ಕೇನು ಹೇಳ್ತೀರಿ ?" – ಎಂದು ಕೇಳಿದ.

ಹಜರತ್ ಪೈಗಂಬರ್, ಖುರಾನ್-ಏ-ಷರೀಫ್, ಖುದಾದಾದ್ ಸಲ್ತನತ್

- ಈ ಮಾತುಗಳ ಇದಿರು ಖಾಜಿ ಸಾಹೇಬರು ನಿರುತ್ತರರಾಗಿ, ಹೇಳಿದರು –

"ಹಮಾರಿ ಬೇವಕೂಫಿ ಮಾಫ್‌ಕರ್ನಾ ವಲಿಸಾಹೇಬ್. ನೀವು ಹೇಳಿದ ಹಾಗೆ ಮಾಡ್ತೀನಿ."

"ಬರೀ ಹೇಳಿದರೆ ಸಾಲದು. ಕಿತಾಬು ಮುಟ್ಟಿ ಪ್ರಮಾಣ ಮಾಡಬೇಕು"

-ಎಂದ ಅಬ್ದುಲ್ ಖಯ್ಯೂಮ್.

"ಐಸಾ ಕರೋ – ತುಮ್ ಸಚ್ಚಾ ಮುಸಲ್ಮಾನ್ ಹೈ ತೊ -"

-ಎಂದು ಅಷರಫ್ ಷಾ ವಲಿಯೂ ಧ್ವನಿ ಕೂಡಿಸಿದ.

"ಖುರಾನ್-ಏ-ಷರೀಫ್ ಕೆ ಕಸಂ - ಇವತ್ತೇ ನಿಮ್ಮ ಮಾತನ್ನು, ನಮ್ಮ ಜನರನ್ನು ಕರೆಸಿ ಹೇಳಿ, ತಾಕೀತು ಮಾಡ್ತೀನಿ"

-ಎಂದು ಒಪ್ಪಿಕೊಂಡು ಹೇಳಿಹೋದರು, ಖಾಜಿ ಜಮಾಲ್ ಸಾಹೇಬ್.

'ಮೀನು ಬುಟ್ಟಿಗೆ ಬಿತ್ತು' ಎಂದುಕೊಂಡ ಅಬ್ದುಲ್ ಖಯ್ಯೂಮ್.

ಆ ದಿನ ಸಂಜೆ ಮಸೀದಿಯಲ್ಲಿ ಮುಸಲ್ಮಾನ್ ಸರದಾರರೆಲ್ಲರೂ ನಮಾಜಿಗೆ ಕಲೆತಾಗ, ಖಾಜಿ ಸಾಹೇಬರು ಅಷರಫ್ ಷಾ ವಲಿಯವರು ಹೇಳಿದ ಮಾತನ್ನು ಹೇಳಿದರು – ಅಧಿಕಾರ ವಾಣಿಯಿಂದ.

"ಆಪ್ ಲೋಗ್ ಸಚ್ಚಾ ಮುಸಲ್ಮಾನ್ ಹೈ ತೋ ಖುರಾನ್-ಎ-ಷರೀಫ್ ಪಕಡ್‌ಕೆ ಖಸಂ ಖಾವ್. ನಹೀ ತೋ ಆಫ್ ಮುಸಲ್ಮಾನ್ ನಹಿ ಕಂಬಖ್ ಕಾಫಿರ್, ಮತ್ತೆ ಮಸೀದೀಲಿ ಕಾಲಿಡಬಾರದು."

ನಮಾಜಿಗೆಂದು ಬಂದ ಮುಸಲ್ಮಾನ್ ಸರ್ದಾರರು, ಮಸೀದಿ ಕಡಿದು ನೆತ್ತಿಯ ಮೇಲೆ ಬಿದ್ದವರಂತೆ, ಅನ್ಯಥಾ ದಾರಿ ಕಾಣದೆ, ಖಾಜಿಗಳ ಮಾತಿನ ಪ್ರಕಾರ ಪವಿತ್ರಗ್ರಂಥ ಖುರಾನ್-ಎ-ಷರೀಫ್ ಅನ್ನು ಮುಟ್ಟಿ ಪ್ರಮಾಣ ಮಾಡಿದರು –

"ಇವತ್ತಿನಿಂದ ನಾವು ಇಸ್ಲಾಂ ಸೇವಕರು, ನಾಯಕರ ಗುಲಾಮರಲ್ಲ."

"ಈ ಮಾತನ್ನು ಗುಟ್ಟಾಗಿ ಸೇನೇಲಿರೋ ನಮ್ಮ ಜನಕ್ಕೆ ಹೇಳಬೇಕು. ಐನ್ ವಖ್ತ್[12] ನಲ್ಲಿ ಪೈಗಂಬರ್ ಕಾರ್ಯ ಮಾಡಬೇಕು. ಈ ಮಾತು ನಮ್ಮಲ್ಲೇ ಇರಬೇಕು. ಹೊರಗೆ ಈ ಮಾತಿನ ಗಂಧವೂ ತಿಳಿಯಬಾರದು" - ಎಂದ ಅಬ್ದುಲ್ ಖಯ್ಯೂಮ್.

ಎಲ್ಲರೂ ಅದಕ್ಕೆ ಒಪ್ಪಿದಮೇಲೆ, ಫಕೀರ ವೇಷದ ಅಬ್ದುಲ್ ಖಯ್ಯೂಮ್ ಹೇಳಿದ –

"ಈಗ ಹೇಳಿ - ಅಲ್ಲಾ ಹೋ ಅಕ್ಬರ್."

ಯಂತ್ರಗಳಂತೆ ಅಲ್ಲಿ ನೆರೆದ ಮುಸ್ಲಿಂ ಸರದಾರರೆಲ್ಲಾ ಹೇಳಿದರು –

"ಅಲ್ಲಾ ಹೋ ಅಕ್ಬರ್. "

* * *

ನಮಾಜು ಮುಗಿಸಿಕೊಂಡು ಹೊರಬಂದಮೇಲೆ ಅಬ್ದುಲ್ ಖಯ್ಯೂಮ್ ಸಲಬತ್‌ಖಾನನನ್ನು, ಆತನ ಬಗ್ಗೆ ತನಗೇನೋ ರಹಸ್ಯ ತಿಳಿದಿರುವ ಧೋರಣೆಯಲ್ಲಿ ಕೇಳಿದ –

"ಕಳ್ಳಿನರಸಪ್ಪಯ್ಯ ನಿಮಗೆ ಮಾಡಿದ ಉಪಕಾರ ಮರೆತುಬಿಟ್ಟಿರಾ ?"

ಅನಿರೀಕ್ಷಿತವಾಗಿ ಆ ಮಾತನ್ನು ಕೇಳಿದ ಸಲಬತ್‌ಖಾನ್ ಬೆಚ್ಚಿ ಬಿದ್ದು ಕೇಳಿದ –

"ಈಗ, ಆ ಮಾತೇಕೆ ?"

---

[12] ಸರಿಯಾದ ಹೊತ್ತಿನಲ್ಲಿ.

“ಕಳ್ಳಿನರಸಪ್ಪಯ್ಯನವರು ನವಾಬರ ಬಂದಿಯಾಗಿರೋ ವಿಷಯ ನಿಮಗೆ ಗೊತ್ತಲ್ಲ. ಅವರು ಬದುಕಬೇಕೂಂದರೆ, ನೀವೀಗ ಅವರಿಗೆ ಮದತ್ ಮಾಡಬೇಕು. ಮಾಡಿದರೆ, ಅವರ ಜೀವ ಉಳಿಯುತ್ತದೆ. ಅವರು ಮತ್ತೆ ದುರ್ಗದ ಪ್ರಧಾನಿ ಆಗುತ್ತಾರೆ. ನೀವೂ ಜಮೀನು, ಜಾಗೀರಿ ತಗೊಂಡು ಹಾಯಾಗಿರಬಹುದು. ಇಲ್ಲಾಂದ್ರೆ ಅವರು ನಾಯಕರಿಗೇ ನಿಮ್ಮ ವಿಷಯ ಕಾಗದ ಬರೀತಾರಂತೆ.”

-ಸುಳ್ಳಿನ ಮೇಲೆ ಸುಳ್ಳು ಪೇರಿಸುತ್ತಾ ಹೇಳಿದ ಅಬ್ದುಲ್ ಖಯ್ಯೂಮ್.

ಆ ಮಾತಿನ ಬೆದರಿಕೆಗೆ ಬೆದರಿ –

“ನೀವು ಯಾರು ?”

-ಎಂದು ಕೇಳಿದ ಸಲಬತ್‌ಖಾನ್.

“ನಾನು ನವಾಬರ ಕಡೆ ಮನುಷ್ಯ. ನನಗೆ ನವಾಬರ ಫೌಜಿನಿಂದ ನರಸಪ್ಪಯ್ಯಾಜಿ ಸುದ್ದಿ ಕಳಿಸಿದಾರೆ. ನೀವು ಮಾಡಿದ ತಕ್ಸೀರೇನು ?”

- ಸ್ವಲ್ಪ ಜಬರ್‌ದಸ್ತಿನಿಂದ ಕೇಳಿದ ಖಯ್ಯೂಮ್.

“ಏನೋ ಕಷ್ಟ ಇತ್ತು ಅಂತ ದಂಡಿಗೆ ಕೊಡೋ ಹಣ ಖರ್ಚುಮಾಡಿಕೊಂಡುಬಿಟ್ಟೆ. ನರಸಪ್ಪಯ್ಯನವರಿಗಿದು ಗೊತ್ತಾಯ್ತು. ಹಿಡಿತರಿಸಿ ’ಹೀಗ್ಯಾಕೆ ಮಾಡಿದೆ ?’ ಅಂತ ಕೇಳಿದರು. ಇದ್ದದ್ದು ಹೇಳಿ ಅವರ ಕಾಲಮೇಲೆ ಬಿದ್ದು ’ಮತ್ತೆ ಹೀಗೆ ಮಾಡೋಲ್ಲಾ ಮರ್ಯಾದೆ ಕಳೀಬೇಡಿ’ – ಅಂತ ಬೇಡಿಕೊಂಡೆ. ದೊಡ್ಡ ಮನುಷ್ಯರು ನರಸಪ್ಪಯ್ಯಾಜಿ, ನನ್ನ ಮಾನ, ಪ್ರಾಣ ಕಾಪಾಡಿದರು.”

“ಈಗ ನೀವು ಅವರ ಮಾನ, ಪ್ರಾಣ ಕಾಪಾಡಬೇಕು. ಅದನ್ನೇ ಜ್ಞಾಪಿಸಲು ನನಗೆ ಸುದ್ದಿ ಕಳಿಸಿದರು. ಈಗೇನು ಮಾಡ್ತೀರಾ ?”

“ಅವರು ಹೇಳಿದ ಹಾಗೆ ಕೇಳ್ತೀನಿ”

-ಎಂದ ಸಲಬತ್‌ಖಾನ್.

“ಸರಿ – ಅವರಿಗೆ ಈ ವಿಷಯ ತಿಳಿಸುತ್ತೀನಿ. ಆದ್ರೆ ಖುರಾನಿಗೂ ದ್ರೋಹಮಾಡಬೇಡಿ, ನರಸಪ್ಪಯ್ಯಾಜಿಗೂ ಮೋಸಮಾಡಬೇಡಿ – ಎರಡೂ ಒಂದೇ ಕೆಲಸ. ಈ ಮಾತು ನಮ್ಮಿಬ್ಬರಲ್ಲೇ ಇರಬೇಕು”

-ಎಂದು ಹೇಳಿದ ಅಬ್ದುಲ್ ಖಯ್ಯೂಮ್, ಅಪ್ಪಣೆ ಮಾಡುವಂತೆ.

ಸಲಬತ್‌ಖಾನ್ ಎಲ್ಲಕ್ಕೂ ಒಪ್ಪಿದಂತೆ ತಲೆಬಗ್ಗಿಸಿದ.

* * *

ನರಸಪ್ಪಯ್ಯನವರ ಪಟ್ಟಿಯಲ್ಲಿದ್ದ ಒಂದು ಹೆಸರಿನ ರಹಸ್ಯ ತಿಳಿದದ್ದು – ಉಳಿದ ಹೆಸರುಗಳ ಹಿಂದಿನ ರಹಸ್ಯ ತಿಳಿಯಲು ದಾರಿತೋರಿತು.

ಅದುವರೆಗೂ ಅಜೇಯವಾಗಿ, ಅಭೇದ್ಯವಾಗಿದ್ದ ದುರ್ಗದಲ್ಲಿ ಹತ್ತಾರು ಕಳ್ಳಗಿಂಡಿಗಳನ್ನು ಕಂಡಷ್ಟು ಹರ್ಷವಾಗಿ, ಅಬ್ದುಲ್ ಖಯ್ಯೂಮ್ ಪಾರಿವಾಳದ ಕಾಲಿಗೆ ಚೀಟಿ ಕಟ್ಟಿ ಸುದ್ದಿ ಕಳಿಸಿದ –

'ಮರ ಚಿಗುರಿ, ಹೂ ಬಿಟ್ಟಿದ - ಹಣ್ಣಾಗುವ ಕಾಲ ಹತ್ತಿರವಾಗಿದೆ.'

೨೩

ಕಾಶಣ್ಣನಾಯಕ ಕೆಣಕಿದ ಕರಡಿಯಂತಾಗಿದ್ದ.

"ಯಾರು ಈ ಸುದ್ದಿ ಹುಟ್ಟಿಸಿದವರು - ಒಬ್ಬ ತಂದೆಗೆ ಹುಟ್ಟಿದವರು ಮಾಡಿದ ಕೆಲಸವಲ್ಲ ಇದು."

ಅರೆಗತ್ತಲಿನಲ್ಲಿದ್ದ ಕೊತ್ವಾಲಚಾವಡಿಯ ಮೂಲೆಮೂಲೆಯನ್ನೂ ಮೊನಚುನೋಟದಿಂದ, ತಾನು ಕೇಳಿದ ಸುದ್ದಿಯನ್ನು ಹುಟ್ಟಿಸಿದವರನ್ನು ಹುಡುಕುವವನಂತೆ ನೋಡಿ, ಕಡೆಗೆ ತನ್ನೆದುರು ನಿಂತವನನ್ನೂ ಎದೆಬಿರಿಯುವಂತೆ ನೋಡುತ್ತಾ ಕೇಳಿದ –

"ಅದೇನು ಮಾತಾಡ್ತಿದಾರೆ - ಇನ್ನೊಂದ್ಸಲ ಹೇಳು."

"ಇಷ್ಟೆ ಬುದ್ಧಿ – 'ಮರಾಠೆಯೋರನ್ನ ನಂಬಬೇಡಿ. ಸಹಾಯ ಮಾಡ್ತೀವೀಂತ ಬಂದೋರು ನವಾಬನ ಸೆಗಣಿ ತಿಂದು, ಹೊರಗಿಂದ ಹೊರಗೇ ಓಡಿಹೋದರು. ಕೋಟೆಯೊಳಗಿರೋ ಮರಾಠೆಯೋರು ಇನ್ನೂ ಕಂತ್ರಿ ಜನ. ನಾಯಕರ ಸೆಗಣಿ ತಿಂದು ಅವರಿಗೇ ಮಣ್ಣು ಮುಕ್ಕಿಸುತ್ತಾರೆ' ಅಂತ ಊರಿನ ತುಂಬ ಜನ ಗುಸಪಿಸಾಂತ ಈ ಮಾತಾಡಿಕೋತಾವರೆ – ಈ ಸುದ್ದಿ ಎಲ್ಲಿಂದ ಬಂತೋ, ಯಾರು ಹುಟ್ಟಿದರೋ, ಅಂತೂ ಊರಿನಾಗೆಲ್ಲಾ ಈ ಕೆಟ್ಟ ವಾಸನೆ ಹರಡ್ಯೈತೆ. ಮರಾಠಿಯೋರನ್ನ ಕಂಡರೆ, ಕಸ ಕಂಡ ಹಾಗೆ ಕಾಡ್ತಾರೆ – ಈ ಸುದ್ದಿ ಕೇಳಿದ ಜನ."

- ಸುದ್ದಿ ತಂದ ತಳವಾರಚಾವಡಿಯ ಆಳು ಹೇಳಿದ.

"ಈ ಸುದ್ದಿ ಹುಟ್ಟಿಸಿದೋರನ್ನ ನಾಲ್ಕು ಬೀದಿ ಸೇರೋ ಕಡೇಲಿ ನಿಲ್ಲಿಸಿ, ಎಕ್ಕಡದಲ್ಲಿ ಹೊಡೀಬೇಕು."

– ದುರ್ಗದ ಹೊರಗೆ ನವಾಬನ ನರಕಾಸುರನೃತ್ಯ ನಡೆಯುತ್ತಿರುವಾಗ, ದುರ್ಗದೊಳಗೆ ಈ ಪಿಸುಮಾತಿನ ಪಿಶುಣಪ್ರಚಾರವನ್ನು ಕೇಳಿ, ತಿದಿಯೊತ್ತಿದ ಕುಲುಮೆಯಂತೆ ಉರಿಗಾರುತ್ತಾ ಹೇಳಿದ ಕಾಶಣ್ಣನಾಯಕ.

"ಅಷ್ಟೇ ಏನು ಬುದ್ಧಿ ಆ ಮಾತು ಹುಟ್ಟಿಸಿದೋರು ಯಾರೂಂತ ಗೊತ್ತಾದ್ರೆ, ಅವರ ನಾಲಗೆ ಕತ್ತರಿಸಿ, ನಾಯಿಗೆ ಎಕ್ಕಡ ಮಾಡಿಸಬಹುದು. ಆದ್ರೆ - ಯಾರೂಂತ ಗೊತ್ತಾಗೋಕಲ್ಲ ? ನಾವೂ ಹತ್ತಿಪ್ಪತ್ತು ಜನಾನ ಹಿಡಕೊಂಡು, ಚೆನ್ನಾಗಿ ಕಾಯಿಸಿ ಬಾಯಿ ಬಿಡಿಸಿದೆವು. ಆದರೇನು – ಎಲ್ಲಾ ಕೇಳಿ ಮಾತಾಡೋರೆ ಹೊತ್ತು, ಇಂಥೋರೆ ಈ ಸುದ್ದಿ ಹೇಳ್ದೋರೂಂತ ಯಾರಿಗೂ ಗೊತ್ತಿಲ್ಲ. ಎಲ್ಲೋ ಬಿಲದಾಗೆ ಸತ್ತ ಇಲಿವಾಸನೆ ಹಂಗೆ ಊರು ತುಂಬಾ ಈ ಸುದ್ದಿ ಹರಡಿದೆ, ಅದರ ತುದಿ-ಬುಡ ಸಿಕ್ಕಲಿಲ್ಲಾಂತಾನೇ ತಮಗೆ ಸುದ್ದಿ ಮುಟ್ಟಿಸಿದೆವು - ನಮ್ಮ ಚಾವಡಿ ದಳವಾಯಿಗಳ ಅಪ್ಪಣೆ ಪ್ರಕಾರ. ಈಗ ನೀವು ಹ್ಯಾಗೆ ಮಾಡೋಕೂಂತ ಹೇಳಿದ್ರೆ, ಹಾಗ್ಮಾಡ್ತೀವಿ."

- ತಳವಾರಚಾವಡಿಯ ಆಳು ಅಸಹಾಯಕತೆ ತುಂಬಿದ ಧ್ವನಿಯಲ್ಲಿ ಹೇಳಿದ.

ಆ ಕೂಡಲೇ ಏನು ಹೇಳಬೇಕೆಂದು ಕಾಶಣ್ಣನಾಯಕನಿಗೂ ತಿಳಿಯಲಿಲ್ಲ. ಆ ಕೂಡಲೇ ಏನು ಪರಿಹಾರ ಹೇಳಲೂ ಸಾಧ್ಯವಾಗದೆ –

"ಈ ಮಾತಾಡೋರ್ನ ಮೈ ನೀರು ಕೇಳೋ ಹಂಗೆ ಬಾರಿಸಿ, ಮತ್ತೆ ಬಾಯಿಬಿಡದ ಹಂಗೆ ಮಾಡಿ. ನಾನು ಪ್ರಧಾನಿಗಳು, ಅವರು ಬೇಕೂಂದ್ರೆ ಮಹಾಸ್ವಾಮಿಯವರ ಹತ್ತಿರ ಮಾತಾಡ್ತೀನಿ - ಹೆಂಗೆ ಮಾಡಬೇಕೂಂತ. ನೀವೂ ಈ ಸುದ್ದಿ ಎಲ್ಲೆಲ್ಲಿ ಕಿವಿಗೆ ಬಿದ್ದರೆ ಅಲ್ಲಲ್ಲಿ -ಅದುಮಿಬಿಡಿ. ಅಂತೂ ಒಳ್ಳೇ ಐನಾತಿ ಹೊತ್ತಿನಲ್ಲಿ ಈ ಮನೆಮುರಿಯೋ ಮಾತು ಹುಟ್ಟಿಸಿದಾರೆ, ಲೌಡಿಮಕ್ಕಳು. ನಮ್ಮ ಚಾವಡಿಯವರಿಗೂ ಎಚ್ಚರಿಕೆ ಹೇಳ್ತೀವಿ – ನೀವೂ ಮೈ ಎಲ್ಲಾ ಕಣ್ಣಾಗಿ ಹುಡುಕಿ, ಬೇಕಾದದ್ದಾಗಲಿ ಇದರ ತಳ ಸೋಸಿಬಿಡಬೇಕು"

-ಎಂದು ತಳವಾರಚಾವಡಿಯ ಆಳಿಗೆ ಅಪ್ಪಣೆ ಮಾಡಿ, ಈ ಚಿಂತೆಯ ಹೊರೆ ಹೊತ್ತು ಪ್ರಧಾನಿ ಪರಶುರಾಮನಾಯಕನನ್ನು ಕಾಣಲು ಹೋದ ಕಾಶಣ್ಣನಾಯಕ.

ಬಿಟ್ಟರೆ ಮನೆ ಸುಡುವ, ಆರಿಸಿದರೆ ಹೊಗೆಯಾಗಿ ಹಬ್ಬುವ ಬೆಂಕಿಯಂಥ ಈ ಸುದ್ದಿಯನ್ನು ಕೇಳಿ ಪರಶುರಾಮನಾಯಕನೂ ಬಹಳ ಹೊತ್ತು ಯೋಚನೆ ಮಾಡಿದ.

'ಇದ್ದಲ್ಲಿಯೇ ಸದ್ದಾಡದೆ ಸತ್ತುಹೋಗುವಂಥ ಪಾಷಾಣಪ್ರಯೋಗ ಮಾಡಬೇಕು- ಈ ಸುದ್ದಿಗೆ.

'ದಂಡಪ್ರಯೋಗವೇನೋ ಒಂದು ದಾರಿ. ಆದರೆ ಅದಕ್ಕೆ ಬಲಿಯಾಗುವವರು – ಕೇಳಿದ ಸುದ್ದಿಯನ್ನಾಡುವ ನಿರಪರಾಧಿಗಳು. ಆ ದಂಡಪ್ರಯೋಗದಿಂದ ಜನರಲ್ಲಿ ಭೀತಿ ಹುಟ್ಟಬಹುದೇ ಹೊರತು, ಸುದ್ದಿ ಸಾಯುವುದಿಲ್ಲ. ಹೊರಗಾಡುವ ಮಾತು ಒಳಗೇ ಹಬ್ಬುತ್ತದೆ.

'ಕೇಳಿಯೂ ಕೇಳಿಸದ ಹಾಗಿದ್ದರೆ –

'ಈ ಸುದ್ದಿಗೆ ಮತ್ತಷ್ಟು ರೆಕ್ಕೆ ಪುಕ್ಕ ಹುಟ್ಟಿಕೊಂಡು ಅಪಾಯ ಮತ್ತಷ್ಟು ಹೆಚ್ಚುತ್ತದೆ.

'ಏನು ಮಾಡಬೇಕು - ? ಈ ವಿಷವಾರ್ತೆಗೆ ಏನು ಮದ್ದು ?'

- ಈ ಯೋಚನೆಯನ್ನು ಮಾಡಮಾಡುತ್ತಾ ಪರಶುರಾಮನಾಯಕನ ತಲೆಯೂ ಕೆಣಕಿದ ಕಣಜದ ಗೂಡಾಯಿತು - ಕೈಗೆ ಸಿಗದೆ, ಮೈ ಮೆತ್ತಗೆ ಮಾಡುವ ಈ ಗಾಳಿಮಾತಿನೊಂದಿಗೆ ಹೊಯ್ದಾಡಿ.

"ಸಿಂಬಳದೊಳಗೆ ಸೇರಿಕೊಂಡ ನುಣುಪು ಮೈಯ ಕ್ರಿಮಿಯಂಥ ಈ ಸುದ್ದಿಯ ಹಿಂದೆ ಯಾವುದೋ ಬಹು ಜಾಣತಲೆ ಅವಿತುಕೊಂಡಿದೆ, ಕಾಶಣ್ಣನಾಯಕರೇ. ಆ ತಲೆ ಹುಡುಕುವ ಪ್ರಯತ್ನ ಚುರುಕಾಗಿ ನಡೆಯಬೇಕು. ಅದು ಬಯಲಿಗೆ ಬರುವವರೆಗೂ, ನಮ್ಮಲ್ಲಿಯ ಮರಾಠ ಸರದಾರರಿಗೂ, ದಂಡಿನ ಹಿರಿಯರಿಗೂ 'ಇಂಥ ಸುದ್ದಿಗೆ ಮನಸ್ಸುಸೋಲಬೇಡಿ' ಎಂದು, ಅವರು ನಮ್ಮನ್ನು ಕೇಳುವ ಮೊದಲು ನಾವೇ ಹೇಳಬೇಕು. ಆ ಮಾತು ತುದಿ ನಾಲಗೆಯದಲ್ಲ, ಹೃತ್ಪೂರ್ವಕವಾಗಿ ಬಂದದ್ದು ಎಂಬುದು ಅವರಿಗೆ ಮನವರಿಕೆಯಾಗಬೇಕು. ಅದನ್ನು ಹೇಗೆ ಮಾಡಬಹುದು ಎಂದು ಪ್ರಭುಗಳೊಂದಿಗೆ ಯೋಚಿಸುತ್ತೇನೆ. ಅದುವರೆಗೂ ನೀವು ಮಾಡುವ ಕೆಲಸ ಮಾಡಿ. ಇದು ಎಷ್ಟು ಬೇಗ ಸತ್ತರೆ ಅಷ್ಟೂ ಒಳ್ಳೆಯದು"

-ಎಂದಷ್ಟೇ ಹೇಳಿ ಕಾಶಣ್ಣನಾಯಕನನ್ನು ಕಳಿಸಿದ ಪರಶುರಾಮನಾಯಕ.

ಆ ವಾರ್ತೆಯನ್ನು ಕೇಳಿ ತಮ್ಮನಷ್ಟೇ ತಲೆಕೆಡಿಸಿಕೊಂಡ ಮದಕರಿನಾಯಕ –

"ಸದ್ಯಕ್ಕಿಷ್ಟು ಮಾಡೋಣ, ಪರಶುರಾಮಣ್ಣ. ನಮ್ಮಲ್ಲಿರುವ ಮರಾಠಾ ಸರದಾರರನ್ನೆಲ್ಲಾ ಕರೆಸಿಕೊಂಡು, 'ಈ ವಿಷವೇಳೆಯಲ್ಲಿ ಇಂಥ ಮಾತಿಗೆ ನೀವಾರೂ ಕಿವಿಕೊಡಬಾರದು. ನಿಮ್ಮಲ್ಲಿ ನಮ್ಮ ನಂಬಿಕೆ ಅಚಲವಾಗಿದೆ' ಎಂದು ನಾವೇ ಹೇಳುತ್ತೇವೆ. ತತ್ಕಾಲಕ್ಕೆ ಅದಕ್ಕಿಂತ ಬೇರೆ ದಾರಿಯೇನೂ ನಮಗೆ ಕಾಣುತ್ತಿಲ್ಲ" – ಎಂದು ಹೇಳಿದ.

ಹೇಳುವುದಷ್ಟೇ ಅಲ್ಲ, ಆ ಮಾತಿನಂತೆಯೇ ಮರುದಿನವೇ, ದುರ್ಗದಲ್ಲಿಯ ಮರಾಠಾ ಸರದಾರರನ್ನು ಅರಮನೆಗೆ ಕರೆಸಿಕೊಂಡು, ಅವರ ಮನಮುಟ್ಟುವಂತೆ, ಹೃದಯ ತಟ್ಟುವಂತೆ ತನಗೆ ಮರಾಠಾ ಸರದಾರರಲ್ಲಿ, ಅವರ ಸೈನಿಕರಲ್ಲಿ ತನಗಿರುವ ನಂಬಿಕೆಯನ್ನು ಬಾಯಿಬಿಟ್ಟು ಹೇಳಿದ.

ನಾಯಕರು ತಮ್ಮಲ್ಲಿ ತೋರಿದ ವಿಶ್ವಾಸವನ್ನು ಕಂಡು ಮರಾಠಾ ಸರದಾರರಿಗೂ ಎದೆ ಕರಗಿ –

"ಈ ಮಾತು ಕೇಳಿ ನಮ್ಮ ಮನಸ್ಸಿಗೆ ನೋವಾಗಿದ್ದುದು, ನಿಜ. ಆದರೆ ನಾವೀಗ ಪ್ರಮಾಣ ಮಾಡಿ ಹೇಳುತ್ತೇವೆ - ಇನ್ನಿಂಥ ಮಾತನ್ನು ಯಾರು ಹೇಳಿದರೂ ನಂಬುವುದಿಲ್ಲ. ಅಂಥ ಮಾತಿಗೆ ಕಿವಿಯನ್ನೇ ಕೊಡುವುದಿಲ್ಲ. ನಿಮ್ಮಲ್ಲಿ ನಮಗೆಷ್ಟು ವಿಶ್ವಾಸವಿದೆ ಎಂಬುದನ್ನು ಇಲ್ಲಲ್ಲ

ಯುದ್ಧರಂಗದಲ್ಲಿ ನಿಮಗೆ ಮನವರಿಕೆ ಮಾಡಿಕೊಡುತ್ತೇವೆ. ಅಷ್ಟೇ ಅಲ್ಲ – ಈ ಸುದ್ದಿ ಹರಡುವವರು ಯಾರು ಎಂದು ನಮಗೇನಾದರೂ ತಿಳಿದುಬಂದರೆ, ಅವರ ತಲೆಯನ್ನು ತಂದು ನಿಮ್ಮ ಪಾದಕ್ಕೆ ಒಪ್ಪಿಸುತ್ತೇವೆ"

-ಎಂದು ತಮ್ಮ ಕುಲದೇವತೆಯ ಆಣೆ ಮಾಡಿ ಹೇಳಿದರು.

ಅವರು ಆ ಮಾತಾಡಿದ ಬಳಿಕ, ಎರಡು ದಿನ ಆ ಸುದ್ದಿ ಸತ್ತುಹೋದಂತೆ ಕರಗಿ, ಮೂರನೆಯ ದಿನ ಮತ್ತಷ್ಟು ವಿಕೃತರೂಪತಾಳಿ ಹರಡಿತು –

'ನಾಯಕರಿಗೆ ಮರಾಠರಲ್ಲೇ ನಂಬಿಕೆ. ಮುಸಲ್ಮಾನರಲ್ಲಿ ನಂಬಿಕೆ ಇಲ್ಲ. ಅದಕ್ಕೆ ಮರಾಠಾ ಸರ್ದಾರರನ್ನು ಗುಟ್ಟಾಗಿ ಕರೆಸಿಕೊಂಡು ಮಾತಾಡಿದರು. ಹೈದರಾಲಿ ಮುಸಲ್ಮಾನ್. ಆದ್ದರಿಂದ ದುರ್ಗದ ಮುಸಲ್ಮಾನರು ನವಾಬರಿಗೆ ಷಾಮೀಲಾಗಿದ್ದಾರೆ. ಅವರನ್ನು ಯಾರೂ ನಂಬಬೇಡಿ.'

ಆ ಸತ್ತ ವಾರ್ತೆ ಮತ್ತೊಂದು ಬಗೆಯಾಗಿ ತಳೆದುಬಂದ ಪಿಶಾಚಸ್ವರೂಪ ನಾಯಕರ ಆಪ್ತರನ್ನು ಮತ್ತಷ್ಟು ಚಿಂತೆಗೀಡುಮಾಡಿತು.

ದುರ್ಗದ ಸೇನೆಯಲ್ಲಿ ಹತ್ತಾರು ಜನ ಹಿರಿಯ ಮುಸಲ್ಮಾನ್ ಸೇನಾಧಿಕಾರಿಗಳಿದ್ದರು. ಸವಣೂರು, ಕಡಪಾ ನವಾಬರ ಕಡೆಯಿಂದ ಬಂದ ಮೂರು ಸಾವಿರ ಮಂದಿ ಪಠಾಣ ಸೈನಿಕರಿದ್ದರು. ಅವರೊಂದಿಗೆ ನಾಲ್ಕಾರು ಸಾವಿರ ಜನ ನಾಗರಿಕರು. ಆ ಜನ ತಾವು ಪರಜಾತಿಯವರಲ್ಲವೆಂಬಂತೆ ಅಯ್ಯಣ್ಣನಪೇಟೆಯ ಬುರುಜಿನ ಬಳಿ, ಉತ್ತರಾದಿಮಠದ ಅಗ್ರಹಾರವಿದ್ದ ಆಸುಪಾಸಿನಲ್ಲಿ, ಸಿದ್ದಯ್ಯನಪೇಟೆಯ ಹಿಂದಿನ ಒಳಗೇರಿಗಳಲ್ಲಿ ಒಂದಕ್ಕೊಂದು ಹೆಣೆದುಕೊಂಡ ಬಳ್ಳಿಗಳಂತೆ, ಯಾವ ಜಾತಿ ಮತ ಭೇದವೂ ಇಲ್ಲದೆ ಮನೆಮಾಡಿಕೊಂಡಿದ್ದರು. ಉತ್ತರಾದಿಮಠದ ಪಕ್ಕದಲ್ಲಿಯೇ ಅವರ ಮಸೀದಿ ಇತ್ತು. 'ಇದು ಬ್ರಾಹ್ಮಣರ ಬೀದಿ', 'ಇದು ಸಾಬರ ಕೇರಿ' – ಎಂದು ಗುರುತಿಸಲಾಗದಷ್ಟು ಮಟ್ಟಿಗೆ ಒಂದಾಗಿ ಬಾಳುವೆ ನಡೆಸಿದ್ದರು. ಮುಸ್ಲಿಮರ ಮೊಹರಂನಲ್ಲಿ, ಹಿಂದೂಗಳ ಕಾಮನ ಹಬ್ಬದಲ್ಲಿ - ಎಲ್ಲ ಜಾತಿಯವರೂ ಬೆರೆತು ಉತ್ಸವ ಮಾಡುತ್ತಿದ್ದರು. 'ಈರ-ಪೀರ' ಎಂದು ತಮ್ಮ ದೇವರುಗಳ ಹೆಸರನ್ನು ಕೂಡಿಸಿ ಕರೆಯುತ್ತಿದ್ದರು. ಅಷ್ಟು ಅನ್ಯೋನ್ಯವಾಗಿದ್ದವರಲ್ಲಿ – ಈಗ ಈ ಪಿಸುಮಾತಿನ ಪಿಶಾಚಿ, ಮದ್ದಿನ ಮನೆಯೊಳಗೆ ಕೊಳ್ಳಿ ಹಿಡಿದುಕೊಂಡು ಹೋದವನಂತೆ ಪ್ರವೇಶಮಾಡಿತ್ತು.

ಹೊರಗೆ ಹೈದರಾಲಿಯ ಮಾರಿಸೇನೆ –

ಒಳಗೆ ಈ ಅಪಪ್ರಚಾರದ ಉರಿಬೇನೆ –

- ಇದನ್ನು ಕೇಳಿ, ಇದು ಮಾಡಬಹುದಾದ ಭಯಂಕರ ಪರಿಣಾಮವನ್ನು ಊಹಿಸಿ ಮದಕರಿನಾಯಕನಿಗೆ ತನ್ನ ಕರುಳಕುಡಿಗೇ ಕಿಡಿ ಹೊತ್ತಿಸಿದಷ್ಟು ಉಗ್ರವ್ಯಥೆಯಾಗಿ, ಸಿಕ್ಕವರ ತಲೆ ಚೆಂಡಾಟವಾಡಬೇಕೆಂಬಷ್ಟು ಆಕ್ರೋಶ ಮೂಡಿತು.

ಆದರೆ –

ಯಾರ ತಲೆ ಕಡಿಯುವುದು, ಯಾರ ಶನಿನಾಲಗೆಯನ್ನು ಸುಡುವುದು ?

ಬೇರೇನೂ ಮಾಡಲು ತೋಚದೆ, ಪರಶುರಾಮನಾಯಕನಿಗೆ –

"ಈ ದಿನ ಸಂಜೆ ಸೇನೆಯ, ನಗರದ ಎಲ್ಲ ಕೋಮುಗಳ ಹಿರಿಯರನ್ನೆಲ್ಲಾ ಉತ್ಸವಾಂಬಾ ದೇವಸ್ಥಾನದ ಮುಂಭಾಗದಲ್ಲಿ ಸಭೆ ಸೇರಬೇಕೆಂದು ಹೇಳು. ಸೇನೆಯವರು, ಪುರಜನರು ಯಾರು ಬಂದರೂ ತಡೆಯಬೇಡಿ. ನಾವೇ ನಮ್ಮ ಜನರೊಂದಿಗೆ ಮಾತಾಡುತ್ತೇವೆ. ಅದು ಬಿಟ್ಟು ಈಗ ಬೇರೆ ದಾರಿಯೇ ಇಲ್ಲ" – ಎಂದು ಹೇಳಿದ.

ನಾಯಕರ ಆಜ್ಞೆಯನ್ನು ಡಂಗೂರದವರು ಕೇರಿಕೇರಿಗೂ ಸಾರಿಹೇಳಿದರು.

* * *

ಆ ದಿನ ಸಂಜೆ –

ಉತ್ಸವಾಂಬಾ ದೇವಾಲಯದ ಎದುರಿನ ಮೂರು ರಸ್ತೆಗಳು ಕೂಡುವ ಪ್ರದೇಶದಲ್ಲಿ ಕಿಕ್ಕಿರಿದು ನೆರೆಯಿತು - ಚಿತ್ರದುರ್ಗದ ಜನ; ದಂಡಿನ ದಳವಾಯಿಗಳು, ಪುರಪ್ರಮುಖರು, ಮಠ-ಮಸೀದಿಗಳ ಹಿರಿಯರು, ಕೇರಿಕೇರಿಯ ಹಿರಿಯರು, ಗರಡಿಗಳವರು –

ಮೂರು ಮುಖ್ಯ ಬೀದಿಗಳೂ ಮುಕ್ಕಿರಿಯುವಷ್ಟು ಜನ ಸೇರಿದರು.

ಸಿದ್ದಯ್ಯನಬಾಗಿಲಿನಿಂದ, ರಂಗಯ್ಯನಬಾಗಿಲಿನಿಂದ, ಗಾರೆಯಲಾಗಿಲಿನಿಂದ ಉತ್ಸವಾಂಬಾ ದೇವಾಲಯದವರೆಗೆ ಸೈನಿಕರು ಸಾಲುದೀವಟಿಗೆ ಹಿಡಿದು ನಿಂತು, ಉತ್ಸವಾಂಬಾ ದೇವಾಲಯದ ಮಹಾದ್ವಾರದ ಮೇಲಿನ ಮೂರುಪ್ಪರಿಗೆಗಳಲ್ಲೂ ಸಹಸ್ರಾರು ಹಣತೆಗಳು ಹೊತ್ತಿ, ನಾಯಕರ ಮಾತು ಕೇಳಬಂದ ಜನತೆಗೆ ದೀಪ ಸ್ವಾಗತ ನೀಡಿದವು.

ಮಿತಪರಿವಾರದೊಂದಿಗೆ ಬೆಟ್ಟದಿಂದಿಳಿದು, ದೇವಾಲಯದ ಪಾರ್ಶ್ವದ ಸರಳವೇದಿಕೆಯ ಮೇಲಿರಿಸಿದ ರಾಜಾಸನದಲ್ಲಿ ಕುಳಿತ ನಾಯಕರು ತಮ್ಮನ್ನು ಕಾಣುತ್ತಿದ್ದಂತೆಯೇ ಜಯಘೋಷ ಮಾಡಿದ ಜನತೆಗೆ, ಎದ್ದುನಿಂತು ಹೇಳಿದರು –

"ಜಯಘೋಷಕ್ಕಿದು ಸಮಯವಲ್ಲ, ಆ ದಿನ ಬರುವವರೆಗೂ ತಾಳ್ಮೆಯಿಂದಿರಿ. ನಿಮ್ಮೆಲ್ಲರ ಹರಕೆಯೊಂದಿದ್ದರೆ, -ಆ ದಿನ ದೂರವಿಲ್ಲ, ಹೊರಗೆ ಶತ್ರು ಹಲ್ಲುಮನೆಯುತ್ತಿರುವಾಗ, ಅವನನ್ನು

ಸೀಮೆಯ ಗಡಿಯಿಂದಾಚೆಗೆ ಓಡಿಸುವವರೆಗೂ ರಣಘೋಷಕ್ಕಲ್ಲದೆ, ಜಯ ಘೋಷಕ್ಕೆ ಕಾರಣವಿಲ್ಲ.

"ನಿಮ್ಮವನಾಗಿ, ನೀವು ಒಪ್ಪಿದ ಅರಸನಾಗಿ, ಇಲ್ಲಿ ನೆರೆದ ಹಿರಿಯರಿಗೆ ಕಿರಿಯನಾಗಿ, ಕಿರಿಯರಿಗೆ ಬಂಧುವಾಗಿ, ತಾಯಂದಿರ ಸೋದರನಾಗಿ ನಿಮ್ಮಲ್ಲಿ ನಮ್ಮ ವ್ಯಥೆಯನ್ನು ತೋಡಿಕೊಳ್ಳಬೇಕು ಎಂದು ಬಂದಿದ್ದೇವೆ. ಶಾಂತವಾಗಿ ಆ ಮಾತುಗಳನ್ನು ಕೇಳಿ.

"ಈ ದುರ್ಗಕ್ಕೆ ನಾವು ಅರಸು, ನಿಜ. ಆದರೆ ಅದರ ನಿಜವಾದ ಒಡೆಯರು ನೀವು. ನಿಮ್ಮ ಪ್ರೀತಿಯೇ ನಮ್ಮ ಸಿಂಹಾಸನ. ಅಷ್ಟಕ್ಕಿಂತ ಹೆಚ್ಚಿನ ಬೆಲೆ ಅರಸುತನಕ್ಕಾಗಲಿ, ಸಿಂಹಾಸನಕ್ಕಾಗಲಿ ಇಲ್ಲ. ನಿಮ್ಮ ಪ್ರೀತಿಗಿಂತ ಹೆಚ್ಚಿನ ಹಿರಿಮೆಯನ್ನು ನಾವು ಅಪೇಕ್ಷಿಸುವುದಿಲ್ಲ.

"ಈಗ ದುರ್ಗ ಕಳೆದೊಂದು ವರ್ಷಗಳ ಶತ್ರುದಾಳಿಯಿಂದ ಜರ್ಜರಿತವಾಗಿದ್ದರೂ, ಶತ್ರುವಿಗೆ ತಲೆಬಾಗದೆ, ಎದೆಮೆಟ್ಟಿ ನಿಂತಿದೆ - ನೀವು ಅದರ ಬೆನ್ನೆಲುಬಾಗಿರುವುದರಿಂದ. ನೀವಿಲ್ಲ - ನಾವೂ ಇಲ್ಲ; ಈ ರಾಜ್ಯವೂ ಇಲ್ಲ. ಈ ಸಮರದಲ್ಲಿ ಸೋತರೆ – ನಮ್ಮ ಅರಸು ತನವೊಂದು ಹೋದೀತು. ಆದರೆ ನೀವೆಲ್ಲರೂ ನವಾಬರ ಗುಲಾಮರಾಗುವಿರಿ. ಎದೆಸೆಟೆಸಿ ಬದುಕಿದ ಜನ ತಲೆಬಗ್ಗಿಸಿ, ನಡುಬಾಗಿಸಿ, ನಿಮ್ಮ ಮನೆಯಲ್ಲೇ ನೀವು ಊಳಿಗದಾಳುಗಳಂತೆ ಬಾಳ್ವೆ ಮಾಡಬೇಕಾಗುತ್ತದೆ. ನಮ್ಮನ್ನು ಗೆಲ್ಲುವವನು ಹಿಂದುವಾಗಲಿ, ಮುಸ್ಲಿಮನಾಗಲಿ, ನಿಮ್ಮ ನೆತ್ತಿಯನ್ನು ತುಳಿಯುವುದು-ಶತ್ರುವಿನ ಜೋಡು, ಅವನ ಜಾತಿಯಲ್ಲ - ಈ ಮಾತನ್ನು ಮರೆಯಬೇಡಿ.

"ಉದ್ದೇಶಪೂರ್ವಕವಾಗಿಯೇ ಈ ಮಾತನ್ನು ನಾವಿಂದು ಹೇಳುತ್ತಿದ್ದೇವೆ. ದುರ್ಗ ಹೊರಗಿನ ವೈರಿಯೊಂದಿಗೆ ಹೋರಾಡುತ್ತಿದೆ. ಆ ವೈರಿ ಮುಸಲ್ಮಾನ್ ನವಾಬರಷ್ಟೇ ಅಲ್ಲ - ಹರಪನಹಳ್ಳಿ, ರಾಯದುರ್ಗದ ಪಾಳಯಗಾರರೂ ಇದ್ದಾರೆ.

"ನಾವೆಲ್ಲರೂ ಒಂದಾಗಿ ಶತ್ರುವನ್ನು ಎದುರಿಸಬೇಕಾದ ಈ ಹೊತ್ತಿನಲ್ಲಿ, ಯಾರೋ ಬಹು ಸಣ್ಣಜನ ನಮ್ಮನಮ್ಮಲ್ಲಿ 'ಹಿಂದೂ-ಮುಸ್ಲಿಂ' ಎಂಬ ಭೇದಭಾವನೆಯ ವಿಷಬೀಜ ಬಿತ್ತುತ್ತಿದ್ದಾರೆ ಎಂದು ಕೇಳಿದೆವು. ನಿಮ್ಮ ಕಿವಿಗೂ ಈ ಕೆಟ್ಟ ಮಾತು ಬಿದ್ದಿರಬೇಕು. ನಾವು ಪೂಜಿಸುವ, ನಮ್ಮ ಬೆನ್ನ ಹಿಂದಿರುವ ತಾಯಿಯ ಸಾಕ್ಷಿಯಾಗಿ ಹೇಳುತ್ತೇವೆ - ನಮ್ಮಲ್ಲಿ ಎಂದೂ ಆ ಭೇದಭಾವನೆ ಬಂದಿಲ್ಲ. ಆ ಭೇದದ ಮಾತು ನಮ್ಮೆದೆಯಲ್ಲಿ ಮೂಡಿದಾಗ ನಮ್ಮ ನಾಲಗೆಯನ್ನು ಕತ್ತರಿಸಿ ನಿಮ್ಮ ಮುಂದಿಡುತ್ತೇವೆ ; ಈ ಮಾತಿಗೆ ತಪ್ಪುವುದಿಲ್ಲ.

"ನಿಮ್ಮನ್ನಿಂದು ನಾವು ಬೇಡುವುದಿಷ್ಟೆ - ನೀವು ಹಿಂದು ಅಲ್ಲ, ಮುಸಲ್ಮಾನರಲ್ಲ, ನಾಯಕರಲ್ಲ, ಬ್ರಾಹ್ಮಣರಲ್ಲ - ಎಲ್ಲಾ ಈ ತಾಯಿಯ ಮಕ್ಕಳು. ಇಷ್ಟು ದಿನ ನೀವು ಹೀಗೆ ಬಾಳಿದಿರಿ, ಮುಂದೂ ಹಾಗೆ ಬಾಳಬೇಕೆಂಬುದಷ್ಟೇ ನಮ್ಮ ಮನವಿ.

"ಸಾವಿರ ತೋಫು ಸೋಲಿಸಲಾಗದ ಈ ದುರ್ಗವನ್ನು ಈ ಅಲ್ಪಜಾತಿಯ ಮಾತು ಸೋಲಿಸದಿರಲಿ. 'ನೂರುಸಾವಿರ ಸೇನೆಗೆ ಸೋಲದ ದುರ್ಗ ಮೂರು ಮಾತಿಗೆ ಹೋಯಿತು' ಎಂಬ ಅಪಖ್ಯಾತಿ ಬರದಿರಲಿ.

"ಆದ್ದರಿಂದ ನಿಮ್ಮನ್ನೊಂದೇ ಪ್ರಶ್ನೆ ಕೇಳಲು ನಾವಿಲ್ಲಿಗೆ ನಿಮ್ಮನ್ನು ಕರೆಸಿರುವುದು, ಮನಬಿಚ್ಚಿ ಹೇಳಿ - ನೀವು ಹಿಂದುಗಳೋ, ಮುಸ್ಲಿಮರೋ, ಬ್ರಾಹ್ಮಣರೋ, ನಾಯಕರೋ – ಅಥವಾ ನೀವೆಲ್ಲಾ ಜಾತಿಮತಭೇದವಿಲ್ಲದ ಈ ಚಿತ್ರದುರ್ಗದ ಮಕ್ಕಳೋ ?"

ಅರಸರ ಅಪ್ಪಣೆಯಂತಲ್ಲದೆ, ತಾಯಿ ತನ್ನ ಮಕ್ಕಳಿಗೆ ಕೇಳಿದ ಪ್ರಶ್ನೆಯಂತೆ ನಾಯಕರು ಕೇಳಿದ ಪ್ರಶ್ನೆಗೆ, ಕಿಕ್ಕಿರಿದು ನೆರೆದ ಜನತೆ ಕ್ಷಣಕಾಲ ಸುಮ್ಮನಿದ್ದು, ಬಳಿಕ ಒಕ್ಕೊರಲಿನಲ್ಲಿ ಉತ್ತರಕೊಟ್ಟಿತು –

"ನಾವು ಚಿತ್ರದುರ್ಗದ ಮಕ್ಕಳು."

"ಹಾಗಿದ್ದರೆ ಈ ತಾಯಿಯ ಮಕ್ಕಳಾದ ನೀವು ನಮಗಿಷ್ಟೇ ಮಾತುಕೊಡಿ – ನಿಮ್ಮಲ್ಲಿ ಒಡಕು ತರುವ ಹೀನರ ತಲೆ ಕತ್ತರಿಸಿ ನಮಗೆ ತಂದೊಪ್ಪಿಸುತ್ತೀರಾ – ನಿಮ್ಮೆದುರಿಗಿರುವ ತಾಯಿಸಾಕ್ಷಿಯಾಗಿ ಹೇಳಿ."

ಸವಾಲು ಹಾಕಿದಂತೆ ಕೇಳಿದ ನಾಯಕರ ಮಾತು ಕೇಳಿ, ಸಾವಿರಾರು ಜನ ಎದ್ದು ನಿಂತು ಹೇಳಿದರು-

"ತಾಯಿ ಉಚ್ಚಂಗಮ್ಮನ ಸಾಕ್ಷಿ - ಅಂಥ ನೀಚರ ತಲೆ ತಂದೊಪ್ಪಿಸುತ್ತೇವೆ. ಅವರು ನಮ್ಮ ಮಕ್ಕಳಾಗಿರಲಿ, ಬೆನ್ನಲ್ಲಿ ಬಿದ್ದವರಾಗಿರಲಿ – ಈ ಮಾತಿಗೆ ತಪ್ಪುವುದಿಲ್ಲ."

ಆ ಮಾತನ್ನು ಕೇಳಿದ ನಾಯಕರ ಹೃದಯದಲ್ಲಿ ತಮ್ಮ ಪ್ರಜೆಗಳ ವಾತ್ಸಲ್ಯ ತುಂಬಿ-

"ನಿಮ್ಮ ಮಾತು ತಾಯಿಗೆ ಒಪ್ಪಿಗೆಯಾಯಿತು. ಈ ತಾಯಿಯ ಸಾಕ್ಷಿಯಾಗಿ ನಾವೂ ಹೇಳುತ್ತೇವೆ - ದುರ್ಗಕ್ಕೆ ದ್ರೋಹ ಬಗೆಯುವವರು ನಮ್ಮ ಮಕ್ಕಳಾಗಲಿ, ಬೆನ್ನಲ್ಲಿ ಬಿದ್ದವರಾಗಲಿ, ಹತ್ತಿರದ ಬಂಧುಗಳಾಗಲಿ - ಅವರು ನಿಮ್ಮ ಪ್ರೇಮಕ್ಕೆ ದ್ರೋಹ ಬಗೆದರೆ, ಈ ನೆಲಕ್ಕೆ ಮೋಸ ಮಾಡಿದರೆ, ಅವರನ್ನು ಎಳೆದುತಂದು ಈ ತಾಯಿಯ ಎದುರಿನಲ್ಲೇ ದುರ್ಗಕ್ಕೆ ಬಲಿಕೊಡುತ್ತೇವೆ. ಈ ಮಾತಿಗೆ - ನಮ್ಮ ಮಕ್ಕಳ ತಲೆಯೇ ಸಾಕ್ಷಿ"

- ಎಂದು ತನ್ನ ಪಕ್ಕದಲ್ಲಿದ್ದ ಕುಮಾರ ಭರಮಣ್ಣನಾಯಕನ ನೆತ್ತಿಯ ಮೇಲೆ ಕೈಯಿಟ್ಟು ಹೇಳಿದರು.

ತಂದೆಯ ಮಾತಿಗೆ ಒಪ್ಪಿದಂತೆ ಕುಮಾರ ಭರಮಣ್ಣನಾಯಕ ಎದ್ದು ನಿಂತು ಸಭೆಗೆ ವಂದಿಸಿದ.

ಆ ತಂದೆಮಕ್ಕಳನ್ನು ಕಂಡು –

ದುರ್ಗದ ಜನ ತುಂಬು ಉತ್ಸಾಹದಿಂದ ಜಯಘೋಷ ಮಾಡುತ್ತಾ ಕೂಗಿ ಕೂಗಿ ಹೇಳಿದರು-

"ದುರ್ಗಕ್ಕೆ ಜಯವಾಗಲಿ, ದುರ್ಗದ ದ್ರೋಹಿಗಳ ತಲೆ ತಾಯಿ ಉಚ್ಚಂಗಮ್ಮನಿಗೆ ಬಲಿಯಾಗಲಿ."

* * *

ಸಭೆಯನ್ನು ಮುಗಿಸಿಕೊಂಡು ಬಂದ ಬಳಿಕ ಮದಕರಿನಾಯಕ, ಪರಶುರಾಮನಾಯಕನನ್ನು ಕೇಳಿದ –

"ಇಂದಿನ ಸಭೆ ಹೇಗಾಯಿತು, ಪರಶುರಾಮಣ್ಣ?"

"ಸಭೆ ಚೆನ್ನಾಯಿತು, ಜನದ ಮನಸ್ಸಿಗೆ ನಿಮ್ಮ ಮಾತು ಮುಟ್ಟಿತು."

"ಅದು ನಮಗೂ ಅರ್ಥವಾಯಿತು. ಆದರೆ ಇದರಿಂದ ಈ ಸಭೆ ಸೇರಿಸಿದ ಉದ್ದೇಶ ಸಾರ್ಥಕವಾಗುತ್ತದೆ ಎಂದು ನಿನಗನಿಸುತ್ತದೆಯೇ, ಪರಶುರಾಮಣ್ಣ?"

- ಇನ್ನೂ ಚಿಂತೆ ತೊಲಗದ ಭಾರವಾದ ಧ್ವನಿಯಲ್ಲಿ ಕೇಳಿದ ಮದಕರಿನಾಯಕ.

"ನಿಮ್ಮ ಪ್ರಶ್ನೆಗೆ – ನಾನಲ್ಲ, ಭವಿಷ್ಯ ಉತ್ತರ ಹೇಳಬೇಕು. ಇಷ್ಟಕ್ಕಿಂತ ಹೆಚ್ಚಾಗಿ ನೀವಾಗಲಿ, ನಾನಾಗಲಿ ಮಾಡುವುದೇನೂ ಇರಲಿಲ್ಲ. ನೀವು ಮಾಡುವ ಪ್ರಯತ್ನ ಮಾಡಿದಿರಿ. ಆದರೆ ಕಟುಕನ ಎದೆ – ಕುರಿಯ ಕಣ್ಣೀರಿಗೆ ಮರುಗುತ್ತದೆಯೇ, ಅಣ್ಣಾ?"

"ಮರುಗಬೇಕು, ಇಲ್ಲವೇ ಮರುಗದಿದ್ದವರ ತಲೆ ಈ ನೆಲಕ್ಕೆ ಬಲಿಯಾಗಬೇಕು".

– ದೃಢನಿರ್ಧಾರದ ಶಪಥ ತೊಟ್ಟಂತೆ ಹೇಳಿದ ಮದಕರಿನಾಯಕ.

* * *

ಆ ದಿನ ರಾತ್ರಿ –

ದುರ್ಗದ ಮೂಲೆಮೂಲೆಯಲ್ಲಿ, ಮನೆಮನೆಯಲ್ಲ, ಮನಮನದಲ್ಲೂ ನಾಯಕರಾಡಿದ ಮಾತು ಮಾರ್ದನಿಸಿ, ದುರ್ಗವನ್ನು ಶತ್ರುಗಳಿಂದ, ಒಳಸಂಚುಗಾರರಿಂದ ರಕ್ಷಿಸುವ ನಿರ್ಧಾರವನ್ನು ಗಂಡಸರು, ಹೆಂಗಸರು, ಮಕ್ಕಳು ಮಾಡಿದರು.

ಆ ಸುದ್ದಿಯನ್ನು ಕೇಳಿದ ಅಬ್ದುಲ್‌ಖಯ್ಯೂಂ, ಹೆದರಿದ ತನ್ನವರಿಗೆ ನಗುತ್ತಾ ಹೇಳಿದ –

"ಹುಲಿ, ಇಲೀನ ಹಿಡಿಯೋಕೆ ಬೋನು ಕಂಡುಹಿಡಿದಿದೆ. ನೀರಿನಾಗಿರೋ ಮೀನಿಗೂ ಬಲೆ ಇದೆ. ಸೊಳ್ಳೇಗೂ ಕೂಡ ಬಲೆ ಇದೆ. ಆದರೆ ಗಾಳಿಯನ್ನು ಹಿಡಿಯೋ ಬಲೆಯನ್ನ ಮದಕರಿನಾಯಕನಲ್ಲ, ಖುದಾನೂ ಕಂಡುಹಿಡಿದಿಲ್ಲ. ಮಾತಾಡೋರು ಸಾವಿರ ಮಾತಾಡಲಿ. ನಿಮ್ಮ ಕೆಲಸ ನೀವು ಮಾಡಿ."

೨೪

'ನಿಂತ ನೆಲದಡಿಯಲ್ಲೇ ಕಾಣದ ಬಿಲದಲ್ಲಿ ವಿಶ್ವಾಸದ್ರೋಹದ ಹಾವು ಸಂಚರಿಸುತ್ತಿದೆ - ಎಚ್ಚರವಾಗಿರಿ.'

ಅಂದಿನ ಸಭೆಯಲ್ಲಿ ನಾಯಕರು ಹೇಳಿದ ಮಾತು ದುರ್ಗದ ಎಲ್ಲರ ಹೃದಯದಲ್ಲೂ ಮಿಡಿಯುತ್ತಿತ್ತು. ಹೊರಗಿನ ಶತ್ರುವನ್ನು ಎದುರಿಸುವ ನಿರ್ಧಾರ ಮಾಡಿದಂತೆಯೇ, ಒಳಗಳ್ಳರನ್ನು ಹಿಡಿದು ತಲೆತರಿಯಲು ಜನ ನಿಶ್ಚಯಮಾಡಿದ್ದರು. ಕೊತ್ವಾಲಚಾವಡಿ, ತಳವಾರಚಾವಡಿಯ ಜನರು ಕಣ್ಣಿಗೆ ಎಣ್ಣೆ ಹಾಕಿಕೊಂಡು, ದುರ್ಗದ ಸಂದುಸಂದನ್ನು ಕಾಯುತ್ತಿದ್ದಂತೆಯೇ, ಜನರೂ ತಮ್ಮ ಮನೆ, ಮನಗಳನ್ನು ಉಕ್ಕಾಗಿ ಮಾಡಿ, ತಾವು ತಾವೇ ಗುಂಪುಗಳನ್ನು ಮಾಡಿಕೊಂಡು, ಚಾವಡಿಯ ಪಹರೆಯವರೊಂದಿಗೆ ಕೋಲು, ದೊಣ್ಣೆಗಳನ್ನು ಹಿಡಿದು, ರಾತ್ರಿಯ ಹೊತ್ತು ಗಸ್ತು ತಿರುಗಲಾರಂಭಿಸಿದರು. ಎಲ್ಲರ ಕಣ್ಣು ಕಿವಿಗಳೂ ಚುರುಕಾಗಿದ್ದವು.

ಚಿತ್ರದುರ್ಗ ತನ್ನ ಭಾಗ್ಯವನ್ನು ಕಾಯ್ದುಕೊಳ್ಳಲು ಎಚ್ಚರವಾಗಿದ್ದ ದಿನಗಳಲ್ಲಿಯೇ –

ಒಂದು ದಿನ ರಾತ್ರಿ –

ಹನುಮನ ಬಾಗಿಲು ಬಳಿಯ ತನ್ನ ಮನೆಯಲ್ಲಿ ಮಗುವನ್ನು ಮಲಗಿಸಿ, ತನ್ನ ಕಾರ್ಯವನ್ನು ಮುಗಿಸಿಕೊಂಡು ಬರುವ ಗಂಡನಿಗಾಗಿ ಬಿಸಿಯಾಗಿ ಅಡುಗೆ ಮಾಡುತ್ತಿದ್ದ ಓಬವ್ವ ಕುಡಿಯುವ ನೀರು ತೀರಿಹೋಗಿರುವುದನ್ನು ಕಂಡು ಹತ್ತಿರದಲ್ಲೇ ಇದ್ದ ತಣ್ಣೀರು ದೊಣೆಯಿಂದ ನೀರು ತರಲು ಬಿಂದಿಗೆಯನ್ನು ತೆಗೆದುಕೊಂಡು ಹೋದಳು. ಚಿರಪರಿಚಿತವಾದ ಆ ಪ್ರದೇಶದಲ್ಲಿ ಕತ್ತಲು ಕವಿದಿದ್ದರೂ ಓಬವ್ವನಿಗೆ ದೀಪ ಬೇಕಿರಲಿಲ್ಲ : ಬಾಗಿಲ ಬಳಿಯ ಹನುಮನ ಗುಡಿಯಲ್ಲಿ ಬೆಳಗುತ್ತಿದ್ದ ಸಣ್ಣ ಹಣತೆಯ ಬೆಳಕೇ, ಆಕಾಶದಲ್ಲಿ ಮಿನುಗುತ್ತಿದ್ದ ನಕ್ಷತ್ರಗಳ ಬೆಳಕೇ ಸಾಕಾಗಿತ್ತು. ಬಿಂದಿಗೆಯಲ್ಲಿ ನೀರು ತುಂಬಿದ ಓಬವ್ವ, ಗುಡಿಯ ಹಣತೆಯಲ್ಲಿ ಎಣ್ಣೆ ಎಷ್ಟಿದೆಯೋ ನೋಡಬೇಕೆಂದು ಗುಡಿಯ ಹತ್ತಿರ ಹೋದಳು.

ಗುಡಿಯ ಬಳಿಯೇ ಹನುಮನ ಬಾಗಿಲು, ಅದರ ಸನಿಹದಲ್ಲೇ ದುರ್ಗದ ಕೋಟೆಯ ಒಳ ಹೊರಗೆ ಅಗತ್ಯಬಿದ್ದಾಗ ಜನರು ಸಂಚರಿಸುವ ಬಂಡೆಗಳಡಿಯ ಗುಪ್ತಮಾರ್ಗವೊಂದಿತ್ತು. 'ಹಣತೆಯಲ್ಲಿ ಸಾಕಷ್ಟು ಎಣ್ಣೆ ಇದೆ' ಎಂದು ನಂಬಿಕೆ ಮಾಡಿಕೊಂಡ ಬಳಿಕ ಅತ್ತಕಡೆ ಬಂದಾಗ ಯಾವಾಗಲೂ ಮಾಡುತ್ತಿದ್ದಂತೆಯೇ ಕಳ್ಳಗಂಡಿಯ ಬಳಿ ಹೋಗಿ ನೋಡಿದಳು.

ಬೆಟ್ಟದ ಮೇಲೆ ಬೀಸಿದ ಗಾಳಿ- ಒಂದಾಳು ತೆವಳಿಕೊಂಡು ಬರುವಷ್ಟು ಕಿರಿದಾದ ಕಳ್ಳಗಂಡಿಯಲ್ಲಿ ಸುಯ್ಯೆಂದು ಸದ್ದು ಮಾಡುತ್ತಾ ಸುಳಿಯುತ್ತಿತ್ತು. ಪರಿಚಿತವಾದ ಆ ಗಾಳಿಸದ್ದಿನೊಂದಿಗೇ ಮತ್ತೇನೋ ಅಪರಿಚಿತವಾದ ಶಬ್ದ ಕೇಳಿ, ಕಾಡುಮೃಗ ಯಾವುದಾದರೂ ಬರುತ್ತಿದೆಯೇನೋ ಎಂಬ ಭಾವನೆಯಿಂದ ಸದ್ದು ಮಾಡದೆ, ಕಳ್ಳಗಂಡಿಗೆ ಮತ್ತಷ್ಟು ಹತ್ತಿರವಾಗಿ, 'ಈ ಹೊಸ ಸದ್ದಾವುದು ?' ಎಂದು ಕುತೂಹಲದಿಂದ ಕೇಳಿದಳು.

ಒಂದೆರಡು ಕ್ಷಣಕಾಲ ಕಳ್ಳಗಂಡಿಯಾಚೆ ಸಣ್ಣಪುಟ್ಟ ಕಲ್ಲುಗಳು ಉರುಳುವ ಸದ್ದು ಕೇಳಿ ಬಂದು, ಕುತೂಹಲ ಮತ್ತಷ್ಟು ಹೆಚ್ಚಿ, ಬೇರೆ ಸದ್ದಾವುದೂ ತನ್ನ ಏಕಾಗ್ರತೆಗೆ ಭಂಗ ತರದಿರುವಂತೆ, ಒಂದು ಕಿವಿಯನ್ನು ಮುಚ್ಚಿಕೊಂಡು, ಮತ್ತೊಂದು ಕಿವಿಯನ್ನು ಕಳ್ಳ ಗಂಡಿಯ ಹತ್ತಿರಕ್ಕೊಯ್ದು ಕೇಳಿದಳು.

ಎಂಥದೋ ಪಿಸುದನಿಯ ಸದ್ದು–

ಮನುಷ್ಯರದೋ, ತನ್ನ ಬೇಟೆಗಾಗಿ ಅವಿತು ನಿಂತ ಮೃಗದ ಉಸಿರಿನ ಸದ್ದೋ ?

ಕಿರುಬನ ಕಲ್ಲಿಗೆ ಹತ್ತಿರವಾಗಿದ್ದ ಆ ಸರಹದ್ದಿನಲ್ಲಿ, ಓಬವ್ವ ಎಷ್ಟೋ ಬಾರಿ ಸದ್ದಾಗದೆ ಕಾದುಕುಳಿತ ಚಿರತೆಗಳ ಉಸಿರಿನ ಸದ್ದನ್ನು ಕೇಳಿದ್ದಳು.

ತಡೆತಡೆದು ಬರುವ ಚಿರತೆಯ ಉಸಿರಿನ ಸದ್ದು- ಬಹು ಕ್ಷೀಣವಾದ ಗರಗಸ ಕೊಯ್ಯುವ ಸದ್ದಿನಂತಹುದು.

ಈ ಸದ್ದು ಹಾಗಿಲ್ಲ–

ಮತ್ತೇನು -?

ಓಬವ್ವ ಹಾಗೆ ಆಲಿಸುತ್ತಿರುವಾಗಲೇ, ಕಳ್ಳಗಂಡಿಯ ಹೊರಗಿನಿಂದ ಉಸಿರಿನಷ್ಟೇ ಹಗುರಾದ, ಆದರೆ ಮತ್ತಷ್ಟು ಬಿರುಸಾದ—

"ಬೇವಕೂಫ್" – ಹೋಷಿಯಾರ್‌ಸೆ ಆಗೆ ಚಲೋ. ರಾತ್‌ಕ ವಖ್ತ್‌ಮೆ ಚೋಟೀಸಿ ಫತ್ತರ್‌ಕಾ ಆವಾಜ್ ಬಿ ಗೋಲಿಕೆ ಆವಾಜ್ ಜೈಸೆ ಸುನ್‌ಗ್ತಾ ಹೈ."

- ಪಿಸುದನಿಯ ಮಾತು, ಮನುಷ್ಯರ ಮಾತು, ಉರ್ದುಭಾಷೆಯ ಮಾತು.

'ದೇಶಾಬಾಗ್' ಹೆಣ್ಣುಮಕ್ಕಳ ಪಡೆಯಲ್ಲಿ ತರಬೇತಿ ಪಡೆದ ಓಬವ್ವನ ಕಿವಿಗೆ ಆ ಮಾತು, ತೋಫಿನ ಧ್ವನಿಯಷ್ಟು ಸ್ಪಷ್ಟವಾಗಿ ಕೇಳಿ, ಮೈಗೂದಲು ನಿಮಿರಿ, ನರನರವೂ ಬಿಗಿದು, ಕಳ್ಳದಾಳಿಯ ಘಾಟುವಾಸನೆ ಮೂಗಿಗೆ ಬಡಿದು. ನಿಶ್ಯಬ್ದವಾಗಿ ನಿಂತು, ಹಾಗೇ ಸುತ್ತಲೂ ಕಣ್ಣಾಡಿಸಿ ನೋಡಿದಳು- ಕೋಟೆಸಾಲಿನ ಮೇಲೆ ಪಹರೆಯವರು ಯಾರೂ ಕಾಣಲಿಲ್ಲ; ಕೂಗಿನಳತೆಯೊಳಗೆ ಸೈನಿಕರಾರೂ ಕಾಣಲಿಲ್ಲ.

ಕಳ್ಳಗಂಡಿಯ ಬಳಿಯ ಸದ್ದು ಹತ್ತಿರವಾಗುತ್ತಿತ್ತು.

ಕ್ಷಣಕಾಲ ಯೋಚಿಸಿದಳು –

ಮರುಗಳಿಗೆಯೇ ಧೀರ ನಿರ್ಧಾರವೊಂದು ಆಕೆಯ ಮೈಯನ್ನು ಉಕ್ಕಾಗಿಸಿ, ಹೆಜ್ಜೆ ಸಪ್ಪಳವಾಗದಂತೆ ಮುಂಗಾಲುಗಳ ಮೇಲೆ ತನ್ನ ಮನೆಯತ್ತ ಓಡಿ, ಗಂಡ ಬಂದಿದ್ದಾನೇನೋ ಎಂದು ನೋಡಿದಳು - ಗಂಡನಿನ್ನೂ ಬಂದಿರಲಿಲ್ಲ; ತೊಟ್ಟಿಲಲ್ಲಿ ಮಗು ಮಲಗಿತ್ತು. ನೋಡಿದಳು - ಗಂಡನ ಆಯುಧ ಯಾವುದೂ ಕಣ್ಣಿಗೆ ಬೀಳಲಿಲ್ಲ. ಕಣ್ಣಿಗೆ ಬಿದ್ದದ್ದು -ಭತ್ತ ಕುಟ್ಟುವ ಒನಕೆಯೊಂದೇ. ಅದನ್ನೇ ಹಿಡಿದು ಕಳ್ಳಗಂಡಿಯತ್ತ ಧಾವಿಸಿದಳು - ಜಿಂಕೆಯತ್ತ ಧಾವಿಸುವ ಬೇಟೆಯ ನಾಯಿಯಂತೆ. ಓಡುತ್ತಲೇ ಗುಡಿಯ ಹನುಮನಿಗೆ ನಮಸ್ಕರಿಸಿ, ಕಳ್ಳಗಂಡಿಯತ್ತ ಹರಿವ ನೀರಿನಂತೆ ಸರಿದು, ಒನಕೆಯನ್ನು ಕೈಯಲ್ಲಿ ಹಿಡಿದು ಕೂತಳು -- ಉಸಿರು ಬಿಗಿಹಿಡಿದು.

"ಹೋಷಿಯಾರ್ ಸೆ ಚಲೋ - ಏಕ್ ಕೆ ಪೀಛೇ ಏಕ್."

- ಕಳ್ಳಗಂಡಿಯೊಳಗಿನಿಂದ ಪಿಸುದನಿ ಕೇಳಿಸಿತು.

ಓಬವ್ವನ ಕೈಯ ಒನಕೆ – ಪರಶುವಿನಂತೆ ಸೆಟೆದು ನಿಂತಿತ್ತು. ಕಣ್ಣು – ಕಳ್ಳಗಂಡಿಯಲ್ಲಿ ಕವಿದ ಕತ್ತಲನ್ನು ಕತ್ತರಿಸಿ ನೋಡುತ್ತಿತ್ತು.

ಆಕೆ ಹಾಗೆ ನೋಡುತ್ತಿರುವಾಗಲೇ –

ತೆವಳಿಬಂದ ತಲೆಯೊಂದು ಕಾಣಿಸಿತು.

ಕಳ್ಳಗಂಡಿಯಾಚೆ ತಲೆ ಕಂಡದ್ದೇ ತಡ, ಕೈಯಲ್ಲಿದ್ದ ಒನಕೆ ರೊಯ್ಯನೆ ಬೀಸಿತು – ಅದರತ್ತ.

ಸದ್ದಿಲ್ಲ –

ಒಡೆದ ತಲೆಯಿಂದ ಸಿಡಿದ ನೆತ್ತರು ಚಿಲ್ಲನೆ ಚಿಮ್ಮಿ ಆಕೆಯ ಮೈ ಮುಖವನ್ನು ತೋಯಿಸಿತು. ಒಂದು ಕೈಯಲ್ಲಿ ಒನಕೆ ಹಿಡಿದು ಮತ್ತೊಂದು ಕೈಯಲ್ಲಿ ನೆತ್ತಿಯ ಜುಟ್ಟು ಹಿಡಿದು, ಆ ಮೈಯನ್ನು ಒಳಗೆಳೆದಳು. ಅದು ಅಷ್ಟು ದೂರ ಹಾರಿಬಿತ್ತು. ಅದೆತ್ತ ಬಿತ್ತೆಂದು ನೋಡಲೂ ಹೊತ್ತಿಲ್ಲ. ಆ ಮೈಯ ಹಿಂದೆಯೇ ಮತ್ತೊಂದು ತಲೆ ಕಾಣಿಸಿ, ಅದರ ಮೇಲೂ ಒನಕೆ

ಯಂತ್ರಚಾಲಿತವಾದಂತೆ ಎರಗಿತು. ಮತ್ತೊಮ್ಮೆ ನೆತ್ತರ ಚಿಲುಮೆ ಚಿಮ್ಮಿ ಓಬವ್ವಗೆ ರಕ್ತಸ್ನಾನ ಮಾಡಿಸಿತು.

ರಕ್ತಸ್ನಾನ - ಓಬವ್ವಗೆ ತಾನು ಮನುಷ್ಯಳೆಂಬ ಪರಿವೆ ತಪ್ಪಿ ಹೋಗಿತ್ತು.

ಆಕ್ರೋಶ-ಉದ್ವೇಗಗಳಲ್ಲಿ ಎದೆ ಕಮ್ಮಾರನ ತಿದಿಯಂತೆ ಬುಸುಗುಟ್ಟುತ್ತಿತ್ತು.

ಒನಕೆ ಹಿಡಿದ ಕೈ, ಸಿಡಿದ ತಲೆಯನ್ನೆಳೆಯುವ ಕೈ- ಯಂತ್ರದಂತೆ ಚಲಿಸುತ್ತಿತ್ತು.

'ರೊಯ್' ಎಂದು ಬೀಸುವ ಒನಕೆ, ಸಿಡಿವ ತಲೆ, ಚಿಮ್ಮುವ ರಕ್ತಧಾರೆ, ಆ ಮೈಯನ್ನು ಬಿಸುಡುವ ಕೈ–

ಕಾಲದ ಪರಿವೆ, ಮನುಷ್ಯತ್ವದ ಅರಿವು – ಎಲ್ಲವೂ ಮರೆತು, ಹೆಣ್ಣು ಓಬವ್ವ – ಕೆಣಕಿದ ಕಾಳಿಯಂತಾಗಿದ್ದಳು.

* * *

ಸರದಿಯನ್ನು ಮುಗಿಸಿಕೊಂಡು ಬಂದ ಮದ್ದ ಹನುಮಪ್ಪ ನೋಡಿದ –

ಮನೆಯಲ್ಲಿ ಹೆಂಡತಿಯಿಲ್ಲ, ತೊಟ್ಟಿಲಲ್ಲಿ ಎದ್ದ ಮಗು ಅಳುತ್ತಿತ್ತು. ಅಡುಗೆಯ ಮನೆಯೊಳಗೆ ಇಣುಕಿದ – ಅಲ್ಲ ಓಬವ್ವನಿಲ್ಲ, ನೀರಿನ ಬಿಂದಿಗೆಯೂ ಇಲ್ಲ. ನೀರಿಗೆ ಹೋಗಿರಬೇಕೆಂದು ಊಹಿಸಿ, ತಣ್ಣೀರುದೊಣೆಯತ್ತ ಹೋದ.

ನೋಡಿದ –

ಕತ್ತಲಿಗೆ ಕಣ್ಣು ಒಗ್ಗಿ ನೋಡಿದ –

ಸುತ್ತ ಹೆಣಗಳ ರಾಶಿ – ನಡುವೆ ನೆತ್ತರಿನಲ್ಲಿ ಮಿಂದು, ಒನಕೆಯನ್ನು ಬೀಸುತ್ತಿರುವ ಓಬವ್ವ.

ಕ್ಷಣಾರ್ಧದಲ್ಲಿ ವಿಷಯವೇನೆಂದು ಅರ್ಥವಾಗಿ ಒಂದು ಗಳಿಗೆ ಗರಬಡಿದವನಂತೆ ನಿಂತ ಮದ್ದ ಹನುಮಪ್ಪ.

ಮರುಗಳಿಗೆಯೇ –

ಚೇತರಿಸಿಕೊಂಡು, ಮನೆಯತ್ತ ಓಡಿ, ಗೂಟಕ್ಕೆ ತಗಲುಹಾಕಿದ ಕಹಳೆಯನ್ನು ಸೆಳೆದುಕೊಂಡು, ಹೊರಬಂದು 'ಯುದ್ಧಗಾಳೆ[13]'ಯನ್ನೂದಿದ - ಮೈಯಲ್ಲಿದ್ದ ಶಕ್ತಿಯನ್ನೆಲ್ಲಾ ಬಿಟ್ಟು,

ಅದರೊಂದಿಗೆ ದುರ್ಗದಲ್ಲಿ ನಾಲ್ಕಾರು ಕಹಳೆ ಕೂಗುವ ಸದ್ದು ಕೇಳಿಸಿತು.

---

[13] ರಣಕಹಳೆಯ ಗ್ರಾಮ್ಯರೂಪ.

ಆ ಸದ್ದು ಇರುಳಿನಲ್ಲಿ ಕರಗುತ್ತಿದ್ದ ಹಾಗೇ, ಇರುಳ ಮೊಟ್ಟೆಯೊಡೆದು ನೂರಾರು ಬೆಳಕಿನ ಹಾವಿನ ಮರಿಗಳು ಕೋಟೆಯ ಸಾಲಿನ ಮೇಲೆ ಹೊತ್ತಿ, ನೂರಾರು ಹೆಜ್ಜೆಗಳು ಹನುಮನ ಬಾಗಿಲತ್ತ ಓಡಿದವು.

ದೀವಟಿಗೆಗಳ ಬೆಳಕಿನಲ್ಲಿ ಕಳ್ಳಗಂಡಿಯಾಚೆ ಅವಿತಿದ್ದ ಶತ್ರುಸೇನೆ ಕಂಡು, ಹತ್ತಾರು ಕಡೆಗಳಿಂದ ಅವರ ಮೇಲೆ ಬಂಡೆಗಳನ್ನುರುಳಿಸಿ, ಕೋಟೆಯ ಮೇಲಿನಿಂದ ಧುಮುಕಿ, ಬಂಡೆಗಳ ಹಿಂದೆ ಅವಿತು ನಿಂತ ನವಾಬನ ಸೈನಿಕರನ್ನು ಕೊಚ್ಚಲಾರಂಭಿಸಿದರು.

ಮೌನದಲ್ಲಿ ಮಲಗಿದ್ದ ದುರ್ಗ ನೂರು ಬಗೆಯ ಶಬ್ದಗಳ ಕೆಣಕಿದ ಜೇನುಹುಟ್ಟಾಯಿತು.

ರಾತ್ರಿಯಲ್ಲಿ, ಅಷ್ಟು ಸಮೀಪದಲ್ಲಿ ಅಪಾಯಕಹಳೆಯ ಕೂಗನ್ನು, ಯುದ್ಧದ ಸದ್ದನ್ನು ಕೇಳಿ, ಮಲಗಿದ್ದ ಮದಕರಿನಾಯಕ ಹಾಸಿಗೆಯಿಂದ ಸಿಡಿದೆದ್ದು, ಶಯ್ಯಾಗೃಹದಲ್ಲೇ ಮಡದಿಯರೊಂದಿಗಿದ್ದ ಪರಿಘಾಯುಧವನ್ನು ಹಿಡಿದು, ರಣಶಬ್ದ ಹೆಚ್ಚಾಗಿ ಕೇಳಿಬರುತ್ತಿದ್ದ ಹನುಮನ ಬಾಗಿಲತ್ತ ಧಾವಿಸಿದ - ದೀವಟಿಗೆಯವರು, ಅಂಗರಕ್ಷಕರು ಯಾರು ಬರುವುದನ್ನೂ ಕಾಯದೆ.

ಅಂಗರಕ್ಷಕಪಡೆ ದೀವಟಿಗೆಯವರು ನಾಯಕರನ್ನು ಅಷ್ಟೇ ವೇಗವಾಗಿ ಹಿಂಬಾಲಿಸಿದರು.

ಮದಕರಿನಾಯಕ ಕೋಟೆಯ ಬಾಗಿಲ ಬಳಿ ಬರುವ ವೇಳೆಗೆ ಯುದ್ಧ ಮುಗಿದು ಹೋಗಿತ್ತು. ಕಳ್ಳತನದಲ್ಲಿ ಒಳನುಗ್ಗಲು ಬಂದ ಶತ್ರುಸೇನೆ ಆದಷ್ಟು ಹೋರಾಡಿ, ಬದುಕಿದವರಿಗಿಂತ ಸತ್ತವರೇ ಹೆಚ್ಚಾಗಿ, ಉಳಿದ ಹಲಕೆಲವರು ಅಲ್ಲಿಂದ ತಪ್ಪಿಸಿಕೊಂಡು ಹೋಗಲು ಸಾಧ್ಯವಾಗದೆ, ಸೆರೆಯಾಳುಗಳಾಗಿದ್ದರು.

ಸುತ್ತಲೂ ಹೊತ್ತಿ ಉರಿವ ದೀವಟಿಗೆಗಳ ಬೆಳಕಿನಲ್ಲಿ, ರಕ್ತಸ್ನಾನ ಮಾಡಿ ಮೈಮರೆತು, ಯುದ್ಧ ಮುಗಿದಿದ್ದರೂ ಹತ್ತಿರ ಯಾರೂ ಸುಳಿಯದಂತೆ ಒನಕೆಯನ್ನು ಬೀಸುತ್ತಾ ನಿಂತ ಓಬವ್ವ; ಅಳುತ್ತಿದ್ದ ಕೂಸನ್ನು ಹಿಡಿದು ಪವಾಡವನ್ನು ಕಂಡ ಮುಗ್ಧನಂತೆ ನಿಂತ ಮದ್ದ ಹನುಮಪ್ಪ ; ನೆತ್ತರು ಸೂಸುತ್ತಾ, ಚೆಲ್ಲಾಪಿಲ್ಲಿಯಾಗಿ ಬಿದ್ದ ಹೆಣಗಳ ರಾಶಿ; ಬಾಯಲ್ಲಿ ಹುಲ್ಲು ಕಚ್ಚಿನಿಂತ ಸೆರೆಯಾಳುಗಳು- ಎಲ್ಲವನ್ನೂ ನೋಡಿ, ತನ್ನ ಸೈನಿಕರು, ತೊದಲುತ್ತಿದ್ದ ಮದ್ದ ಹನುಮಪ್ಪ ಹೇಳಿದ ಮಾತುಗಳಿಂದ ನಡೆದುದೇನೆಂದು ಊಹಿಸಿದ ಮದಕರಿನಾಯಕ, ಬಳಿಯಲ್ಲಿದ್ದ ಗುದಗತ್ತಿಗೆ –

“ಈಕೆ ದುರ್ಗವನ್ನು ಕಾಪಾಡಿದ ರಣದುರ್ಗೆ, ಮುತ್ತೈದೆಯರನ್ನು ಕರೆಸಿ, ಆಕೆಗೆ ಆರತಿ ಮಾಡಿ, ಇಳಿ ತೆಗೆಸಿ”

- ಎಂದಪ್ಪಣೆ ಮಾಡಿ, ಓಬವ್ವನ ಕೃತಜ್ಞತೆ, ಅಭಿಮಾನಗಳ ಕಂಬನಿ ತುಂಬಿದ ಕಣ್ಣುಗಳಿಂದ ನೋಡುತ್ತಾ –

"ಓಬವ್ವಾ - ಮಹಾತಾಯಿ. ಇಷ್ಟು ದಿನ ನೀನು ಒಂದು ಮಗುವಿಗೆ ತಾಯಿಯಾಗಿದ್ದೆ. ಇಂದು ದುರ್ಗದ ತಾಯಿಯಾದೆ" ಎಂದು ಆಕೆಗೆ ವಂದಿಸಿ –

"ಆವೇಶ ಇಳಿಯುವವರೆಗೂ ಯಾರೂ ಆಕೆಯನ್ನು ಮುಟ್ಟಬೇಡಿ"

-ಎಂದು ಸುತ್ತಲವರಿಗೆ ಹೇಳಿ –

"ಸೆರೆಸಿಕ್ಕವರನ್ನು ಕೊತ್ವಾಲಚಾವಡಿಗೆ ಕರೆತನ್ನಿ. ಈ ಕಳ್ಳದಾರಿಯನ್ನು ಅವರಿಗೆ ತಿಳಿಸಿದ ದ್ರೋಹಿ ಯಾರೋ ತಿಳಿಯೋಣ" - ಎಂದಪ್ಪಣೆ ಮಾಡಿ, ಮದ್ದ ಹನುಮಪ್ಪನಿಗೆ –

"ಹಗಲು ನಮ್ಮನ್ನು ಬಂದು ಕಾಣು."

-ಎಂದು ಹೇಳಿ, ಅಂಗರಕ್ಷಕರೊಂದಿಗೆ ಕೊತ್ವಾಲಚಾವಡಿಗೆ ನಡೆದ, ಆ ವೇಳೆಗೆ ಅರಮನೆಯ ಆಳೊಬ್ಬ ತಂದಿತ್ತ ಶಾಲನ್ನು ಮೈಮೇಲೆ ಹೊದ್ದು.

೨೫

"ತಲೆ....ತಲೆ....ರಾಜದ್ರೋಹಿಯ ತಲೆ....ದೇಶದ್ರೋಹಿಯ ತಲೆ....ಕತ್ತರಿಸಿ, ದುರ್ಗಕ್ಕೆ ಆ ತಲೆಯ ಬಲಿಕೊಡಿ."

ಕ್ರೋಧೋದ್ದೀಪಿತವಾದ ಜನತೆ, ಹಲ್ಕಡಿದು, ಕೆಂಗಣ್ಣು ಕಿಸಿದು, ಹೆಣವನ್ನು ಕಂಡು, ಹತ್ತಿರ ಹೋಗಲಾಗದ ಸುತ್ತಲೂ ನೆರೆದು, ರಕ್ತಪಿಪಾಸೆಯಿಂದ ಚೀರುತ್ತಿರುವಂತೆ ಕೂಗುತ್ತಿದ್ದರು - ಕೊತ್ವಾಲಚಾವಡಿಯ ಸುತ್ತಲೂ ನೆರೆದು.

ಚಾವಡಿಯ ಒಳಗೆ –

ಮದಕರಿನಾಯಕ ಭೂತವನ್ನು ಕಂಡವನಂತೆ ಬಿಳುಪೇರಿ, ಸುತ್ತಲಿದ್ದವರಿಗೆ ಮುಖ ತೋರಿಸಲಾಗದವನಂತೆ ತಲೆತಗ್ಗಿಸಿ, 'ಕಾಲಡಿಯ ಭೂಮಿ ಬಾಯ್ದೆರಿದು ತನ್ನನ್ನು ನುಂಗಬಾರದೇ' ಎನ್ನುವಂತೆ ಕುಳಿತಿದ್ದ.

"ನಿಜ ಬೊಗಳು, ಸುಳ್ಳಾಡಿದರೆ ನರನರವನ್ನೂ ಹಿಂಜಿ, ಕಾಲಿನ ಚರ್ಮ ಸುಲಿಸಿ, ಕೆಂಡದ ಮೇಲೆ ನಿಲ್ಲಿಸಿ, ನೆತ್ತಿಯ ಮೇಲೆ ಕುದಿದೆಣ್ಣೆ ಸುರಿಸಿ ಸ್ನಾನ ಮಾಡಿಸುತ್ತೇವೆ. ಬಾಯಿಗೆ ಬಂದದ್ದು ಬೊಗಳಬೇಡ - ತೊತ್ತಿನ ಮಗನೆ."

- ತನ್ನೆದುರು, ಮೈಯಲ್ಲಾದ ಚೂರಿಯ ಸೀಳುಗಾಯಗಳಿಂದ ರಕ್ತ ಹರಿಸುತ್ತಾ, ಸುಟ್ಟ ದಾಡಿ-ಮೀಸೆಗಳಿಂದ ಕರಿಕಾದ ಬೆಂದ ಮುಖ ಹೊತ್ತು, ಇದ್ದೂ ಸತ್ತವನಂತಿದ್ದ, ದುರ್ಗದ ಸೈನಿಕರು ಕಳ್ಳಗಂಡಿ ಕಾಳಗದ ಕಳವಿನಿಂದ ಹಿಡಿದು ತಂದ ನವಾಬನ ಸೈನಿಕರ ಮುಖ್ಯಸ್ಥನನ್ನು ಕೇಳಿದ - ನಿದ್ರೆಗೆಟ್ಟು, ರೋಷದಿಂದ ಕೆಂಪೇರಿದ ಕಣ್ಣುಗಳಿಂದ ಕಿಡಿ ಸೂಸುತ್ತಾ ಕಾಶಣ್ಣನಾಯಕ.

"ಮೇರೆ ಮಾ-ಬಾಪ್‌ಕೆ ಖಸಂ, ಮೇಲೆ ಬಚ್ಚಾಕೆ ಖಸಂ, ಖುದಾಕೆ ಖಿಸಂ - ನಿಜ ಹೇಳ್ತೀನಿ. ಜರಿಮಲೆ ಪಾಳೇಗಾರರ ಮಕ್ಕಳೇ ಈ ದಾರಿಯ ವಿಷಯ ಹೇಳಿದ್ದು... ಅವರಪ್ಪನೂ ಇದರಲ್ಲಿ ಷಾಮೀಲಾಗಿದ್ದಾರೆ."

- ಹತ್ತಾರು ಬಾರಿ ಹೇಳಿದ ಮಾತನ್ನೇ ಮತ್ತೊಮ್ಮೆ ಹೇಳಿದ ನವಾಬನ ಸಿಪಾಯಿ.

"ಅರಮನೆ ಹೆಸರಿಗೆ ಹೊಲಸು ಬಳಿಯೋ ಈ ಮಾತನ್ನೇ ಮತ್ತೆ ಹೇಳ್ತೀಯಾ, ಹಂದಿಗೆ ಹುಟ್ಟಿದವನೆ"

- ಎಂದು ಕೈಯಲ್ಲಿದ್ದ ಮುಳ್ಳುಚಾವಟಿಯನ್ನು ಬೀಸಿ ಬೀಸಿ, ಸುತ್ತುವ ಚಾವಟಿಯೊಂದಿಗೆ ಸುತ್ತುವ ಸಿಪಾಯಿಯನ್ನು ಮತ್ತೊಮ್ಮೆ ಚಾವಡಿ ನಡುಗುವಂತೆ ಕೇಳಿದ ಕಾಶಣ್ಣನಾಯಕ.

ಆ ಚಾವಟಿಯ ಏಟಿಗೆ ಬುಗುರಿಯಂತೆ ಸುತ್ತಿ ಕೆಲಕ್ಕೆ ಬಿದ್ದ ಸಿಪಾಯಿ, ಚಾವಡಿಯ ಕಲ್ಲು ಗೋಡೆಯ ಕರಗುವಂತೆ ಚೀರುತ್ತಾ, ತೂರಾಡುತ್ತಾ –

"ನಿಜ....ನಿಜ....ನಾನು ಹೇಳೋ ಮಾತು ನಿಜ. ಜರಿಮಲೆ ಪಾಳೇಗಾರ್ರನ್ನೇ ಕರೆಸಿ, ಅವರೆದುರಿಗೇ ಹೇಳ್ತೀನಿ.... ನನಗೆ ಮಾಡಿದ ಶಿಕ್ಷನ ಅವರಿಗೂ ಕೊಟ್ಟು ಕೇಳಿ -ನಾನು ಹೇಳಿದ್ದು ಸತ್ಯಾನೋ - ಸುಳ್ಳೋ ಅಂತ. ಹೊಡೀಬ್ಯಾಡಿ.... ಇನ್ನು ನನ್ನ ಹೊಡೀ ಬ್ಯಾಡಿ....ಕೊಂದುಬಿಡಿ....ಒಂದು ದಪಾ ನನ್ನ ಕೊಂದುಬಿಡಿ....ನಾನು ಹೇಗಿದ್ರೂ ಬದುಕೊಲ್ಲ... ಇನ್ನೆಷ್ಟು ಹಿಂಸೆ ಕೊಡ್ತೀರ....ಹುಜೂರ್ ನನ್ನ ತಲೆ ಕಡಿಯಾಕೆ ಅಪ್ಪಣೆ ಮಾಡಿ."

- ನಾಯಕರ ಕಾಲಿನತ್ತ ಮೈಚಾಚಿ ಆರ್ತಸ್ವರದಲ್ಲಿ ಅಂಗಲಾಚಿದ –

"ಮತ್ತೆ ನನ್ನ ಗಾಯಕ್ಕೆ ಕಾರದಪುಡಿ ಹಾಕಿಸಬ್ಯಾಡ್ರಿ, ಖಾವಂದ್."

ತನ್ನ ಕಾಲ ಬಳಿ ಆ ಸಿಪಾಯಿಯ ಕೈ ತನ್ನ ಕಾಲಿಗೆ ಸೋಕದಂತೆ, ತಟಕ್ಕನೆ ಅದನ್ನು ಹಿಂದಕ್ಕೆಳೆದುಕೊಂಡು, ತನ್ನ ಕಾಲಬಳಿ ಬಿದ್ದ ಸಿಪಾಯಿಯ ಛಿದ್ರವಿಚ್ಛಿದ್ರವಾಗಿ, ನಖ ಶಿಖಾಂತವಾಗಿ ರಕ್ತ ಸೋರುತ್ತಿದ್ದ ದೇಹವನ್ನು ಎಲ್ಲ ಬೆಳಕೂ ಸತ್ತ ಕಣ್ಣುಗಳಿಂದ ನೋಡುತ್ತಾ-

"ಈ ಚಿತ್ರಹಿಂಸೆಯನ್ನು ಸಾಕುಮಾಡಿ, ಕಾಶಣ್ಣನಾಯಕ. ನಾವಿನ್ನು ಇದನ್ನು ನೋಡಲಾರೆವು.

- ಎಂದು ಹೇಳಿ, ಕುಳಿತಾಸನದಿಂದ ಎದ್ದುನಿಂತು, ಸುತ್ತ ಬೀಸುವ ಬಿರುಗಾಳಿಗೆ ಸಿಕ್ಕವನಂತೆ ತೂರಾಡುತ್ತಾ, ನಿಲ್ಲಲಾಗದೆ, ಆಸನದ ಎರಡೂ ಕೈಪಿಡಿಗಳನ್ನು ಕೈಗಳಿಂದ ಬಿಗಿಯಾಗಿ ಹಿಡಿದು, ಕುಸಿದುಬೀಳುವೆನೆನ್ನುವ ಮೈಯನ್ನು ಶತಪ್ರಯತ್ನಮಾಡಿ ನೆಟ್ಟಗೆ ನಿಲ್ಲಿಸಿ, ತನ್ನ ನಾಲಗೆಯೇ ಸೀಳಿ ರಕ್ತ ಸೋರುತ್ತಿರುವುದೇನೋ ಎಂಬಷ್ಟು ವ್ಯಥೆ ತುಂಬಿ, ನಿರ್ಜೀವವಾದ ಧ್ವನಿಯಲ್ಲಿ ಹೇಳಿದ –

"ಆಳುಗಳನ್ನು ಕಳಿಸಿ, ಜರಿಮಲೆ ಪಾಳೆಯಗಾರರನ್ನು ಇಲ್ಲಿಗೆ ಕರೆಸಿ - ಇವನಿನ್ನೂ ಬದುಕಿರುವಾಗಲೇ ಈ ಮಾತು ಇತ್ಯರ್ಥವಾಗಲಿ."

ಆ ಮಾತುಗಳ ಹಿಂದೆ ತುಡಿಯುತ್ತಿದ್ದ ಅಪಮಾನದ ಉರಿಯಲ್ಲಿ ಬೆಂದು ಬಳಲುತ್ತಿದ್ದ ನಾಯಕರ ಮಾತನ್ನು ಕೇಳಿ, ತನಗೇ ಕಶಾಘಾತವಾದವನಂತೆ ಮಿಡುಕಿದ ಕಾಶಣ್ಣನಾಯಕ –

"ಅವರ ವಿಚಾರಣೆಯೂ ಇಲ್ಲಿಯೇ ಆಗಬೇಕೇ ಮಹಾಸ್ವಾಮಿ....ಜರಿಮಲೆ ನಾಯಕರು ತಮ್ಮ...." - ಎಂದು ಅಂಗಲಾಚುವವನಂತೆ ಕೇಳಿದ.

"ಮಾತು ಸಾಕು, ಹೇಳಿದಷ್ಟು ಕೇಳಿ. ದುರ್ಗದ ದ್ರೋಹಿಗಳಿಗೂ ನಮಗೂ ಯಾವ ನಂಟೂ ಇಲ್ಲ. ನಿಮ್ಮಾಳುಗಳನ್ನು ಕಳಿಸುತ್ತೀರೋ, ನಾವೇ ಹೋಗಬೇಕೋ ? ಹೇಳಿದಷ್ಟು ಕೇಳುವುದು ಕೊತ್ವಾಲಚಾವಡಿಯವರ ಕೆಲಸ."

- ಮದಕರಿನಾಯಕ ಹೇಳಿದ - ನುಡಿನುಡಿಯೂ ಸುತ್ತಿಗೆಯ ಏಟುತಿಂದ, ಕಾದ ಕಬ್ಬಿಣದಂತೆ ಕಿಡಿ ಸೂಸುತ್ತಿರಲು.

ಆ ಮಾತಿನಲ್ಲಿದ್ದ ಕಾಠಿಣ್ಯಕ್ಕೆ ಕಾಶಣ್ಣನಾಯಕನೂ ಬೆದರಿ, ಬಿಳುಪೇರಿ –

"ಅಪ್ಪಣೆ, ಮಾ ಸ್ವಾಮಿ."

-ಎಂದಷ್ಟೇ ಹೇಳಿ ತನ್ನ ಬಳಿ ಇದ್ದ ಚಾವಡಿಯ ದಫೇದಾರನತ್ತ. ದೊರೆಗಳಾಡಿದ ಮಾತನ್ನು ತನ್ನ ಬಾಯಿಂದ ಹೇಳಲೂ ಹೆದರಿ, ಆ ಅಪ್ಪಣೆಯನ್ನು ಪಾಲಿಸುವಂತೆ ನೋಡಿದ.

ಉಸಿರಡಗಿ ಗೊಂಬೆಯಂತೆ ಚಾವಡಿಯ ದಫೇದಾರ ಸೂರನಾಯಕ ಅಲ್ಲಿಂದ ತೆರಳಿದ.

ಚಾವಡಿಯ ಬಾಗಿಲಾಚೆ ಹೋಗುತ್ತಿದ್ದ ಅವನನ್ನು ನೋಡಿ, ಆಸನದಲ್ಲಿ ಕುಸಿದು ಕುಳಿತ ಮದಕರಿನಾಯಕ, ದೈತ್ಯದೇಹದ ಕಾಶಣ್ಣನಾಯಕನೂ ನೀರು ಹಿಂಡಿದ ಬಟ್ಟೆಯಂತೆ ಒಂದೆಡೆಯಲ್ಲಿ ಮುದುರಿ ಕುಳಿತ. ಸಿಪಾಯಿಯ ನೋವಿನಿಂದ ನರಳುವ ಸದ್ದು – ಚಾವಡಿಯನ್ನು ವ್ಯಾಪಿಸಿದ ಗಾಢಮೌನವನ್ನು ಸಣ್ಣಗೆ ನಡುಗಿಸುತ್ತಿತ್ತು.

ಹೊರಗೆ –

ಚಾವಡಿಯ ಸೈನಿಕರ ಕುದುರೆಗಳ ಸದ್ದು, ಗಾಯಗೊಂಡು ಪಟಪಟಿಸುವ ಹಕ್ಕಿಯ ರೆಕ್ಕೆಯ ಸದ್ದಿನಂತೆ ಕೇಳಿಸಿ, ಬರಬರುತ್ತಾ ಕ್ಷೀಣವಾಗಿ, ಚಾವಡಿಯ ಮೌನವನ್ನು ಮತ್ತಷ್ಟು ವಿಕರಾಳಗೊಳಿಸಿ, ಚಾವಡಿ - ಪ್ರೇತಗಳ ನೆರಳು ಕವಿದಂತಿತ್ತು.

ಅಷ್ಟು ಹೊತ್ತು ಮೌನ, ನರಳಿಕೆಯ ಸದ್ದು ಕೆಣಕುವ ಅಸಹ್ಯ ಮೌನ –

ತಲೆತಗ್ಗಿಸಿ ಕುಳಿತ ಮದಕರಿನಾಯಕ, ಭೂತಾಗಮನವನ್ನು ನಿರೀಕ್ಷಿಸಿದಂತೆ ಬೆದರಿ ಕುಳಿತ ಕಾಶಣ್ಣನಾಯಕ –

ಕ್ಷಣಕ್ಷಣಕ್ಕೂ ಕಾವೇರಿ ದುರ್ಭರವಾಗುತ್ತಿದ್ದ ಮೌನ –

ಅಷ್ಟು ಹೊತ್ತಾದ ಬಳಿಕ, ಎಷ್ಟೋ ಯುಗಗಳು ಕಳೆದಂತೆ ಅಷ್ಟು ಹೊತ್ತಾದ ಬಳಿಕ-

ದೂರದಿಂದ ಕ್ಷೀಣವಾಗಿ ಕೇಳಿಸುತ್ತಿದ್ದ ಕುದುರೆಗಳ ಖುರಪುಟದ ಸದ್ದು – ಕ್ರಮೇಣ ಹತ್ತಿರ ಹತ್ತಿರ ಬರುವ ಕೆನ್ನಾಲಗೆಯ ಬೇತಾಳಪಾದಶಬ್ದದಂತೆ ಹತ್ತಿರವಾಗಿ, ಚಾವಡಿಯ ಹೊರಗೆ ನಿಂತು, ಹೋದ ಚಾವಡಿಯ ಸೈನಿಕರಿಬ್ಬರೂ ಒಳಗೆ ಬಂದು, ಮಾತನಾಡದೆ ನಿಂತರು.

ಅವರ ಆಗಮನವನ್ನೇ ನಿರೀಕ್ಷಿಸುತ್ತಿದ್ದ ಮದಕರಿನಾಯಕ, ಹಿಡಿದಿಟ್ಟ ಉಸಿರನ್ನು ಗಟ್ಟಿಯಾಗಿ ಬಿಟ್ಟು ಕೇಳಿದ –

“ಜರಿಮಲೆಯ ಪಾಳೆಯಗಾರರೆಲ್ಲಿ ?”

“ಅವರು....ಅವರು....ಅವರ... ಬಿಡಾರದಲ್ಲಿಲ್ಲ....ಮಹಾಸ್ವಾಮಿ.”

- ತೊದಲುತ್ತಾ ಹೇಳಿದ ದಫೇದಾರ ಸೂರನಾಯಕ.

“ಬಿಡಾರದಲ್ಲಿಲ್ಲ - ಮತ್ತೆಲ್ಲಿ ಹೋಗಿದ್ದಾರೆ ?....ಅವರ ಬಿಡಾರಕ್ಕೆ ಕಾವಲಿದ್ದವರ ಕಣ್ಣು ಇಂಗಿತ್ತೇನು, ನಾಲಿಗೆ ಸತ್ತಿತ್ತೇನು - ಅವರು ಹೇಳಲಿಲ್ಲವೇ, ಪಾಳೆಯಗಾರರು ಎತ್ತ ಹೋದರೆಂದು?”

“ಹೇಳಿದರು, ಪ್ರಭು....”

“ಎಲ್ಲಿಗೆ ಹೋಗಿದ್ದಾರೆ?”

“ಮಾ ಸ್ವಾಮಿಗಳ ಅರಮನೆಗೆ.”

- ಒಳಗೇ ಮುಳುಗಿ ಸಾಯಲು ಯತ್ನಿಸುತ್ತಿದ್ದ ಧ್ವನಿಯನ್ನು ಹೊರತಂದು ಹೇಳಿದ ದಫೇದಾರ.

“ಅರಮನೆಗೆ – ನಮ್ಮ ಅರಮನೆಗೆ-”

-ಬರಸಿಡಿಲಂತೆ ಸಿಡಿದು ಕೇಳಿದ ಮದಕರಿನಾಯಕ –

“ಅಲ್ಲಿಗೇ ಹೋಗಿ, ಅವರನ್ನೇಕೆ ಎಳೆದುಕೊಂಡು ಬರಲಿಲ್ಲ ? ಅರಮನೆಯ ಹೆಸರು ಕೇಳಿ ಹೆದರಿಕೆಯಾಯಿತೇನು ?... ಅರಮನೆಗೆ ಹೋಗಿದ್ದಾರೆ -”

- ಎಂದು ಹಲ್ಲುಕಡಿದು ಹೇಳಿ, ಕುಳಿತ ಆಸನದಿಂದ, ಒರೆಯಿಂದ ಹೊರಗೆಳೆದ ಕರವಾಳದಂತೆ ಮೇಲೆದ್ದು –

“ಅರಮನೆಗೆ ಹೋದವರನ್ನು ಅರಸರೇ ಕರೆತರಬೇಕು. ಕಾಶಣ್ಣನಾಯಕ – ನಿಮ್ಮ ಕೈಯಲ್ಲಿರುವ ಚಾವಟಿಯನ್ನಿತ್ತ ಕೊಡಿ”

- ಎಂದು ಹೇಳಿ, ಆತ ಅದನ್ನು ಕೊಡಲೂ ಕಾಯದೆ ನಿರ್ಜೀವವಾದ ಆತನ ಕೈಯಿಂದ ಚಾವಟಿಯನ್ನು ಕಸಿದುಕೊಂಡು, ಒಮ್ಮೆ ಅದರ ಬಲವನ್ನು ಪರೀಕ್ಷಿಸುವಂತೆ ಝುಳಪಿಸಿ, ಕೊತ್ವಾಲಚಾವಡಿಯಿಂದ ಹೊರಗೆ ನಡೆದು, ಅರಮನೆಯತ್ತ ಹೊರಟ ಮದಕರಿನಾಯಕ -ಸತಿಯ ಸಾವಿನ ಕ್ರೋಧದಿಂದ ಬಿರಿದ ರುದ್ರನ ಫಾಲಾಗ್ನಿ ನೇತ್ರಗಳಿಂದ ಮೈದಾಳಿ ಬಂದು, ದಕ್ಷಬ್ರಹ್ಮನ ಶಿರವನ್ನರಸಿ ಹೊರಟ ವೀರಭದ್ರನಂತೆ.

* * *

“ಇದೊಂದು ಸಲ....ಇದೊಂದು ಸಲ... ನನ್ನ ತಲೆಯನ್ನುಳಿಸಿಬಿಡು, ಬಂಗಾರಿ....’ನೀನು ಮಗಳಲ್ಲ, ತಾಯಿ’ ಎಂದು ನಿನ್ನ ಕಾಲಿಗೆ ಬೀಳುತ್ತೇನೆ.”

ಚಾವಡಿಯಿಂದ ಕೈಯಲ್ಲಿ ಮುಳ್ಳುಚಮ್ಮಟಿಗೆ ಹಿಡಿದು, ಕುದುರೆಯ ಬೆನ್ನೇರಿ, ಉಗ್ರಾವತಾರ ತಾಳಿ ಅರಮನೆಯನ್ನು ಬಿರುಗಾಳಿಯಂತೆ ಪ್ರವೇಶಿಸಿ, ಬೊಮ್ಮಣ್ಣನಾಯಕ ಎಲ್ಲಿರಬಹುದೆಂದು ದಾರಿಯಲ್ಲೇ ಊಹಿಸಿ, ಬಂಗಾರವ್ವನಾಗತಿಯ ಅಂತಃಪುರದ ಬಳಿ ಬಂದ ಮದಕರಿನಾಯಕನಿಗೆ, ಅಂತಃಪುರದ ಬಾಗಿಲ ಬಳಿ ಬರುತ್ತಿದ್ದ ಹಾಗೆಯೇ, ಮಾರಿಯ ವಧಸ್ತಂಭದ ಮುಂದೆ ನಿಂತ ಮೇಕೆಯಂತೆ ಚೀರುತ್ತಿದ್ದ ತನ್ನ ಮಾವನ ಮಾತು ಕೇಳಿಸಿ, ಮೈಯಲ್ಲಿದ್ದ ರಕ್ತವೆಲ್ಲವೂ ಮುಖಕ್ಕೇರಿ, ಆ ರಕ್ತ, ಕಣ್ಣುಗಳಲ್ಲಿ ಉರಿಯಾಗಿ ಹೊರಹೊಮ್ಮಿ ಅಂತಃಪುರದೊಳಗೆ ಪ್ರವೇಶಿಸಿ, ಕ್ಷಣಕಾಲ ನಿಂತು ನೋಡಿದ ಮದಕರಿನಾಯಕ –

ಬಂಗಾರವ್ವನಾಗತಿ ಭೂತದರ್ಶನವಾದಂತೆ ಬಿಳುಪೇರಿ, ಕಳೆಸತ್ತ ಕಣ್ಣುಗಳಿಂದ ಶೂನ್ಯವನ್ನು ನೋಡುತ್ತಾ ನಿಂತಿದ್ದಳು.

ತಾನು ಮಾಡಿದ ಪಾಪದ ಭಾರಕ್ಕೆ ಕುಸಿದುಬಿದ್ದವನಂತೆ, ಮಗಳ ಪಾದದಡಿ ಹಿಡಿಯಷ್ಟಾಗಿ ಭೀತಿಯಿಂದ ನಡುಗುತ್ತಾ ಕುಳಿತಿದ್ದ ಬೊಮ್ಮಣ್ಣನಾಯಕ.

ನೋಡಿದ –

ನೋಡಿಯೇ ನೋಡಿದ –

ನೋಡಿದಷ್ಟೂ ಸಾಲದೆಂಬಂತೆ ನೋಡಿದ ಮದಕರಿನಾಯಕ, ದಹದಹಿಸುವ ಕಣ್ಣುಗಳಿಂದ –

ಬೆಳಕಳಿದ ದೀಪದಂತಿದ್ದ ತನ್ನ ಮಡದಿಯನ್ನು,

ಹೆದರಿದ ಹಿಸುಣತನವೇ ಮೈಯುಡುಗಿ ಮುದುರಿ ಹಿಡಿಯಷ್ಟಾಗಿದ್ದ, ಮಾಡಿದ ಪಾಪದಷ್ಟೇ ಕಪ್ಪೇರಿದ್ದ ಮುಖದ- ಮಾವ ಬೊಮ್ಮಣ್ಣನಾಯಕನನ್ನು,

ಬಾಗಿಲ ಬಳಿ ಮದಕರಿನಾಯಕನ ಹೆಜ್ಜೆ ಸದ್ದಾಗುತ್ತಿದ್ದ ಹಾಗೇ, ಅತ್ತ ಬೆದರಿ ನೋಡಿ, ರುದ್ರಾಕ್ಷನಾಗಿ, ಕಶಾಧಾರಿಯಾಗಿ ನಿಂತ ಮದಕರಿನಾಯಕನನ್ನು ನೋಡಿ –

"ಬಂಗಾರೀ...."

-ಎಂದು ಹೆದರಿ ಚೀರಿದ ಬೊಮ್ಮಣ್ಣನಾಯಕ, ಕುಳಿತಂತೆಯೇ ಹಿಂದೆ ಹಿಂದೆ ಸರಿಯುತ್ತಾ.

ಬಂಗಾರವ್ವನಾಗತಿಯೂ ಆ ಮಾತನ್ನು ಕೇಳಿ, ಮೈಮೇಲೆ ಎಚ್ಚರ ಬಂದಂತೆ, ಕುರುಡಾದ ಕಣ್ಣಿಗೆ ಕಾಣುವ ಬೆಳಕು ಬಂದಂತೆ, ಬಾಗಿಲತ್ತ ನೋಡಿದಳು - ನೋಡನೋಡುತ್ತಾ ಆಕೆಯ ದೇಹ ಕಂಪಿಸಿ, ಅಪ್ರಯತ್ನವಾಗಿ ಆಕೆಯ ಕಣ್ಣುಗಳಿಂದ ನೀರು ಹರಿದು ಕೆನ್ನೆಗಳ ಮೇಲೆ ಇಳಿಯಿತು - ಹನಿಹನಿಯಾಗಿ ಸೂತ್ರ ಕಿತ್ತ ಮುತ್ತಿನ ಹಾರದಂತೆ.

ಮದಕರಿನಾಯಕನೂ ಬಗೆಬಗೆಯ ಭಾವಗಳ ತೆರೆ ಹೊಯ್ಯುವ ಬಂಗಾರವ್ವನಾಗತಿಯ ಮುಖವನ್ನೂ, ಆಕೆಯ ಕಣ್ಣುಗಳಿಂದ ಹರಿವ ನೀರನ್ನೂ ನೋಡಿ, ಏನೇನೋ ಸವಿನೆನಪುಗಳು ಮೂಡಿ, ಮೃದುವಾಗಲೆಳಸುತ್ತಿದ್ದ ಹೃದಯವನ್ನು, ಹಲ್ಲುಗಳನ್ನೊತ್ತಿ ತುಟಿಗಳನ್ನು ಬಿಗಿದುಕೊಂಡು, ಕಲ್ಲುಮಾಡಿ, ತನ್ನೆದುರು ನಿಂತಿರುವವಳು ತನ್ನ ಹೆಂಡತಿ ಎಂಬುದನ್ನು ಮರೆತು –

"ನಾಗತಿಯವರು, ರಾಜಾಜ್ಞೆಗೆ ಅಪರಾಧಿಯನ್ನು ವಶಪಡಿಸಬೇಕು"

-ಎಂದು ಸ್ಮಶಾನದಲ್ಲಿ ಬೀಸುವ ಗಾಳಿಯಂತಿದ್ದ ಧ್ವನಿಯಲ್ಲಿ ಕೇಳಿದ.

ಆ ಮಾತಿಗೆ ಬಂಗಾರವ್ವನಾಗತಿ ಕೂಡಲೇ ಏನೂ ಉತ್ತರ ಕೊಡದೆ, ಒಮ್ಮೆ ರೋಷ ಭೀಷಣಕಷಾಯಿತನೇತ್ರನಾಗಿದ್ದ ಪತಿಯನ್ನು, ಮತ್ತೊಮ್ಮೆ ಭೀತಿಯ ಆಕಾರ ತಳೆದು, ದೀನ ನೇತ್ರನಾಗಿ ಕಾಲಡಿ ಕುಳಿತ ತಂದೆಯನ್ನು ನೋಡಿದಳು - ಮೂರ್ತಿವೆತ್ತ ಮೂಕ ಅಸಹಾಯಕತೆಯಂತೆ.

ನಿಟ್ಟುಸಿರು - ಆಕೆಯ ಎದೆಯನ್ನೆಲ್ಲಾಡಿಸಿ, ಕಣ್ಣುಗಳನ್ನು ಕಂಗೆಡಿಸಿ, ತುಂಬಿದ ನೀರನ್ನು ಇಂಗಿಸಿತು.

ಮಾತೊಂದೂ ಆಕೆಯ ಬಾಯಿಂದ ಹೊರಬರಲಿಲ್ಲ.

"ರಾಜಾಜ್ಞೆ ಕೇಳಿಸಿತೇ ?" - ಅಸಹನೆಯ ಏರುಧ್ವನಿಯಲ್ಲಿ ಕೇಳಿದ ಮದಕರಿನಾಯಕ.

"ಬಂಗಾರೀ-"

- ಎಂದು ಮತ್ತೊಮ್ಮೆ ಬೆದರಿ ಚೀರಿದ ಬೊಮ್ಮಣ್ಣನಾಯಕ –

"ನಿನ್ನ ಹಡೆದಪ್ಪನನ್ನು ಕಟುಕರ ಕೈಲಿ ಕೊಡಬೇಡ."

ಆಗಲೂ ಬಂಗಾರವ್ವನಾಗತಿಯ ಮುಖದಿಂದ ಮಾತುಗಳು ಹೊರಡಲಿಲ್ಲ.

"ಹೊತ್ತು ಮೀರುತ್ತಿದೆ - ನೀವೇನು ದುರ್ಗದ ನಾಗತಿಯಾಗುತ್ತೀರೋ, ದೇಶದ್ರೋಹಿಗಳ ಮಗಳಾಗುತ್ತೀರೋ - ಬೇಗ ಹೇಳಿ ? ರಾಜಾಜ್ಞೆ ಅಂತಃಪುರದ ಬಾಗಿಲು ಕಾಯುವ ಆಳಲ್ಲ."

- ಕೈಯಲ್ಲಿದ್ದ ಉಕ್ಕಿನ ಮುಳ್ಳುಗಳ ಚಾವಟಿಯನ್ನು ನೋಡಿ, ಮತ್ತೆ ಕಣ್ಣೆತ್ತಿ ಬಂಗಾರವ್ವನಾಗತಿಯತ್ತ ನೋಡಿ, ಕೇಳಿದ ಮದಕರಿನಾಯಕ.

ಆಗಲೂ ಬಂಗಾರವ್ವನಾಗತಿಯ ಮುಖದಿಂದ ಮಾತು ಹೊರಡಲಿಲ್ಲ, ಕಣ್ಣೆವೆಗಳು ಕವಣೆ ಏಟು ತಿಂದ ಹಕ್ಕಿಯಂತೆ ಚಡಪಡಿಸಿದವು.

"ನೀವೇನು ದುರ್ಗವನ್ನಾಳುವ ನಾಗತಿಯವರೋ, ಜರಿಮಲೆಯವರ ಪಾಪದರಮನೆಯ ಊಳಿಗದಾಳುಗಳೋ? ಮಡದಿಯಾಗಿ ದುರ್ಗಕ್ಕೆ ದೀಪವಾಗುತ್ತೀರೋ, ಮಗಳಾಗಿ ದುರ್ಗವನ್ನು ಸುಡುವ ಶವಾಗ್ನಿಯಾಗುತ್ತೀರೋ - ಬೇಗ ಹೇಳಿ. ನೀವೇನು ಸಾವಿರ ಜನರ ತಾಯಿಯೋ, ಒಂದು ಹುಳುವಿನ ಮಗಳೋ ? ದುರ್ಗಕ್ಕೆ ನಮ್ಮ ತಮ್ಮನನ್ನು ಬಲಿಕೊಡಬೇಕಾಗಿ ಬಂದಾಗ ಅವರ ಕೈಹಿಡಿದವರು ನಡೆದ ರೀತಿ ನೆನಪಿದೆಯೇ ನಿಮಗೆ ?"

- ಕೈಯಲ್ಲಿ ಚಾವಟಿ ಹಿಡಿದು, ಆ ಚಾವಟಿಯಿಂದ ಹೊಡೆದಂತೆಯೇ ಬಂಗಾರವ್ವನಾಗತಿಯನ್ನು ಕೇಳಿದ ಮದಕರಿನಾಯಕ.

ಆ ಮಾತುಗಳ ಕ್ರೂರ ಕಶಾಘಾತವನ್ನು ಭರಿಸಲಾಗದವಳಂತೆ ತಂದೆಯಿಂದ ಅಷ್ಟು ದೂರ ಸರಿದು ನಿಂತಳು ಬಂಗಾರವ್ವನಾಗತಿ.

"ಅಯ್ಯೋ – ನೀನೂ ನನ್ನ ಕೈಬಿಟ್ಟೆಯಾ, ಬಂಗಾರೀ...."

- ಸುಳಿಗೆ ಸಿಕ್ಕು ಮುಳುಗುತ್ತಿರುವವನಂತೆ ಕೂಗಿದ ಬೊಮ್ಮಣ್ಣನಾಯಕ.

ಆ ಮಾತು ಕೇಳಿ, ಬಂಗಾರವ್ವನಾಗತಿಯ ಮೈ ಒಮ್ಮೆ ಮಂಜು ಬಿರುಗಾಳಿ ಸೋಕಿದಂತೆ ಥರಥರ ಕಂಪಿಸಿ, ಬಳಿಕ ದೃಢವಾಗಿ, ಬಾಯಿಬಿಟ್ಟು ಹೇಳಿದಳು –

"ಆ ಚಾವಟಿಯನ್ನು ನನ್ನ ಕೈಗೆ ಕೊಡಿ."

ಮದಕರಿನಾಯಕ ಮರುಮಾತಾಡದೆ, ತನ್ನ ಕೈಯಲ್ಲಿದ್ದ ಚಾವಟಿಯನ್ನು ಬಂಗಾರವ್ವ ನಾಗತಿಯ ಕೈಗೆ ಕೊಟ್ಟ.

ಕೈಗೆ ಚಾವಟಿ ಬರುತ್ತಿದ್ದ ಹಾಗೇ ಬಂಗಾರವ್ವ ನಾಗತಿಯ ಕಣ್ಣು ಕೆಂಡವಾದವು. ಧ್ವನಿ, ಉರಿವ ಉಕ್ಕಿನ ಸಲಾಕೆಯಾಗಿ ಹೇಳಿದಳು –

"ದೇಶದ್ರೋಹಿಗಳಿಗೆ ಅರಮನೆಯಲ್ಲಿ ಸ್ಥಾನವಿಲ್ಲ."

ಆ ಮಾತನ್ನು ಕೇಳಿದ ಬೊಮ್ಮಣ್ಣನಾಯಕ, ಅರಮನೆ ಅರಗಿನಮನೆಯಾಗಿ ಉರಿದು, ತನ್ನನ್ನು ಸುಟ್ಟಂತೆ –

"ಬಂಗಾರೀ" – ಎಂದು ಚೀರಿ, ಪ್ರಜ್ಞೆ ತಪ್ಪಿದ.

ಅರಮನೆಯೆಲ್ಲಾ ಅದಿರುವಂತೆ ಕೂಗಿದ ಬೊಮ್ಮಣ್ಣನಾಯಕನ ಧ್ವನಿಯನ್ನು ಕೇಳಿ, ಅತ್ತಕಡೆ ಓಡಿಬಂದ ನಿಂಗವ್ವ - ಮಸೆದ ಕತ್ತಿಯಂತೆ ನಿಂತ ಮಗ, ಚಾವಟಿ ಹಿಡಿದ ಸೊಸೆ, ಕುಸಿದುಬಿದ್ದ ಬೊಮ್ಮಣ್ಣನಾಯಕನನ್ನು ನೋಡಿದಳು.

ನೋಡುತ್ತಿದ್ದಂತೆಯೇ ಆಕೆಯ ಕಣ್ಣಲ್ಲಿ ನೀರು ತುಂಬಿತು.

ನಿಂಗವ್ವ ಕಣ್ಣಿಗೆ ಬೀಳುತ್ತಿದ್ದಂತೆಯೇ ಬಂಗಾರವ್ವನಾಗತಿ ಕೈಯಲ್ಲಿ ಹಿಡಿದ ಚಾವಟಿಯನ್ನು ಬಿಟ್ಟು, ಓಡಿಹೋಗಿ, ನಿಂಗವ್ವನನ್ನು ತಬ್ಬಿಕೊಂಡು, ಆಕೆಯ ಎದೆಯಲ್ಲಿ ಮುಖ ಮರೆಸಿಕೊಂಡು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು – ರುದ್ರತಾಂಡವಕ್ಕೆ ನಡುಗಿದ ಧರೆಯಂತೆ ಆಕೆಯ ಮೈ ಕಂಪಿಸುತ್ತಿರಲು.

ನಿಂಗವ್ವ ಏನೊಂದೂ ಮಾತಾಡಲಿಲ್ಲ. ತಬ್ಬಿಕೊಂಡ ಸೊಸೆಯನ್ನು ಮತ್ತಷ್ಟು ಬಿಗಿಯಾಗಿ ತಬ್ಬಿಕೊಂಡಳು.

ಮದಕರಿನಾಯಕ ಅವರಿಬ್ಬರನ್ನು ನೋಡಿಯೂ ನೋಡದವನಂತೆ, ಅಲ್ಲಿಲ್ಲದ ಯಾರೋ ಮೂರನೆಯವರಿಗೆ ಹೇಳುವಂತೆ –

"ಬರುವ ಸೈನಿಕರಿಗೆ ದೇಶದ್ರೋಹಿಯನ್ನು ಒಪ್ಪಿಸಿ"

-ಎಂದು ಹೇಳಿ, ಮೈಯನ್ನೊಮ್ಮೆ ಕೊಡವಿ, ಅಂತಃಪುರದಿಂದ ಹೊರಬಂದು, ಸಹಿಸಲಾಗದ ಆಯಾಸವನ್ನು ಪರಿಹರಿಸಿಕೊಳ್ಳಲೆಂಬಂತೆ ಗೋಡೆಗೆ ಮೈಯಾನಿಸಿ ನಿಂತ.

ಏಕೋ - ಆತನಿಗೆ ಅರಿವಾಗದಂತೆಯೇ ಕಣ್ಣಲ್ಲಿ ಕಂಬನಿ ಮೂಡಿತು.

ಆ ಕಂಬನಿಗೆ ನಾಚಿದಂತೆ ಅಲ್ಲಿಂದ ವೇಗವಾಗಿ ಹೊರನಡೆದ.

ಅರಮನೆಯನ್ನು ರುದ್ರಮೌನ ವ್ಯಾಪಿಸಿತು.

೨೭

ನಡುಮಧ್ಯಾಹ್ನದ ರಣಗುಟ್ಟುವ ಬಿಸಲಿನಲ್ಲಿ, ಕತ್ತಿಗಳನ್ನು ಹೂಡಿದ, ಕೆಂಪು ಕಣಗಿಲೆ, ದಾಸವಾಳ ಮೊದಲಾದ ಕೆಂಪು ಹೂಮಾಲೆಗಳ ಅಲಂಕಾರದಿಂದ ಭಯಂಕರವಾದ ಗಾಡಿಯ ಮೇಲೆ ನಿಲ್ಲಿಸಿದ ಕೆಂಬಣ್ಣದ ಶೂಲಗಂಭದ ತುದಿಯ ಕೊಕ್ಕೆಗೆ ಸಿಕ್ಕು, ನೆತ್ತರ ಹನಿಗಾರುತ್ತಾ ತೂಗಾಡುವ ಜರಿಮಲೆಯ ಬೊಮ್ಮಣ್ಣನಾಯಕನ ರುಂಡವನ್ನು ತಂದು, ಕೊತ್ವಾಲಚಾವಡಿಯ ಸೈನಿಕರು ಉತ್ಸವಾಂಬಾದೇವಾಲಯದ ಎದುರಿನ ಕೂಡುರಸ್ತೆಯಲ್ಲಿ ನಿಲ್ಲಿಸಿ, ಕಹಳೆಯೂದಿ, ತಮಟೆಗಳನ್ನು ಬಾರಿಸಿ, ದುರ್ಗಕ್ಕೆ ಸಾರಿ ಹೇಳಿದರು –

"ನೋಡ್ರಪ್ಪಾ ನೋಡ್ರಿ - ದುರ್ಗಕ್ಕೆ ದ್ರೋಹಬಗೆದೋರ ಗತೀನ."

ನಡುಹಗಲನ್ನು ಕಂಗೆಡಿಸುವ ಉಗ್ರವಾದ್ಯರವವನ್ನು, ಅಷ್ಟೇ ಉಗ್ರವಾದ ವಾರ್ತೆಯನ್ನು ಕೇಳಿದ ಜನ ಊಟ ವಿಶ್ರಾಂತಿಯನ್ನು ಮರೆತು, ಹಿಂಡುಹಿಂಡಾಗಿ ಬಂದು ನೋಡಿದರು.

ಮಧ್ಯಾಹ್ನದ ಸೂರ್ಯನ ತಾಪವನ್ನು ಮೀರಿಸುವಂತಿತ್ತು - ಆ ಸಮರಭೀಕರವಾದ ನೋಟ.

ಕೇರಿಕೇರಿಗಳಿಂದ, ಮನೆ-ಗುಡಿಸಲುಗಳಿಂದ ಒಬ್ಬೊಬ್ಬರಾಗಿ, ಇಬ್ಬರಾಗಿ, ಹತ್ತಾಗಿ ಬಂದು ಕಿಕ್ಕಿರಿದು ನೋಡಿ ಬೈದರು, ಹೀಯಾಳಿಸಿದರು, ಶೇಕರಿಸಿ ಉಗುಳಿದರು, ನೋಡಲೂ ಅಸಹ್ಯವಾಗಿ ಕಣ್ಣು ಮುಚ್ಚಿಕೊಂಡರು.

ಶೂಲಸ್ತಂಭವಿದ್ದ ಬಂಡಿಯ ಸುತ್ತ, ಗರಡಿಮನೆಗಳ ಪಡ್ಡೆ ಹುಡುಗರ ಗುಂಪು ತಂಡತಂಡವಾಗಿ, ಕ್ರೋಧೋತ್ಸಾಹದಿಂದ ಕುಣಿಯುತ್ತಾ ಗೆಜ್ಜೆ ಕಟ್ಟಿದ ಕೋಲು ಹೊಯ್ಯುತ್ತಾ-

"ಬನ್ನಪ್ಪ ನೋಡ್ರಣ್ಣ ಜರಿಮಲೆನಾಯ್ಕನ ರುಂಡ್ಯನ
ದುರ್ಗದ ರಣಚಂಡಿಯಾಟದ ಕಾಲ್ಚೆಂಡ್ಯನ |
ಎಪ್ಪತ್ತೆಂಟು ಪಾಳೇಗಾರರ ಮಿಂಡಗೆ,
ಮದಕರಿ ಭೂನೆಗೆ ಕೈ ಕೊಟ್ಟ ಭಂಡ್ಯನ
ಈ ಜರಿಮಲೆನಾಯ್ಕನ ರುಂಡ್ಯನ ||

ಮೆತ್ತೆಯಾಗೆ ಬೆಚ್ಚಗಿದ್ದು | ಹಾಸಿಗೆಯಾಗೆ ಸೇರಿಕೊಂಡು |
ರಕ್ತ ಹೀರೋ ತಗಣಿಹಂಗೆ |
ದುರ್ಗದಾಗೆ ಸೇರಿಕೊಂಡು, ಬೀಗತನವ ಮಾಡಿಸಿಕೊಂಡು
ಮಗಳ ತಾಳಿ ಮುರಿಯೋಕೆ ಹೋದ ಷಂಡ್ಯನ
ಈ ಜರಿಮಲೆನಾಯ್ಕನ ರುಂಡ್ಯನ ||

ಅರಮನೆಯಾಗೆ ಸೇರಿಕೊಂಡು | ಹಾಲುಬೆಲ್ಲ ತಿಂದುಕೊಂಡು |
ಇಕ್ಕಿದ ಕೈಗೆ ಇಕ್ಕುಳವಾದ |
ಮರೆವು ಮೋಸ ತಿಳಿಯದಂಥ | ಮದಕರಿರಾಯಗೆ ಮೋಸಮಾಡ್ದ
ಮಾವನೆನಿಸಿಕೊಂಡ ಪುಂಡ್ಪನ
ಈ ಜರಿಮಲೆನಾಯ್ಕನ ರುಂಡ್ಪನ ||

ಭಾರತದಾಗಿನ ಶಕುನಿರಾಯ | ತಂತ್ರದಾಗಿನ ಕರಟಕರಾಯ |
ನಾಚಿ ತಲೆಯ ತಗ್ಗಿ ಸೋ ಹಂಗೆ |
ಉಚ್ಚಂಗವ್ವ ಏಕನಾಥಿ | ಬೆಟ್ಟದ ಮೇಲಿನ ಸಂಪಿಗೆಸಿದ್ಧ
ಅಚ್ಚರಿಪಟ್ಟು ಬೆಟ್ಟೋ ಹಂಗೆ
ಮಾಡಿದಂಥ ಜಗಭಂಡನ
ಈ ಜರಿಮಲೆನಾಯ್ಕನ ರುಂಡ್ಪನ ||"

-ರಾಗರಾಗವಾಗಿ, ಹಾಡಿನ ಅಮಲೇರಿದಂತೆ ಧ್ವನಿಯೂ ಏರಿ ರಭಸವಾಗಿ, ಒಂದು ತಂಡ ದುಮುದುಮಿಸುತ್ತಿರಲು –

ಮತ್ತೊಂದು ತಂಡ –

"ನಗಾರಿ ಮೇಲೆ ಕೈಹೊಡೆದು ಹಾರಿಸೋ ಗುಂಡು
ನೆಗೆನೆಗೆದು ಹೇಳು ಮದಕರಿನಾಯಕನೊಬ್ಬನೇ ಗಂಡು |
ಹೆದರಲಿಲ್ಲವೋ ಬಂದರೂ ನಾಲ್ಕಾರು ಲಕ್ಷ ದಂಡು
ಎದೆತಟ್ಟಿ ನುಗ್ಗಿ ಸದೆಬಡಿದನೋ ಅರಿಜನರ ತಂಡು ||

ಅರಿರಾಯರ್ಹೆಂಡಿರು ಗೋಳಾಡುತಾರೆ | ಬಂತು ನಮಗೆಂಥ ತಾಪ |
ಅರಿಯದೆ ಕೆಣಕಿ ಕರ್ಪೂರವಾದರೋ | ತಾಳಿಗೆ ತಟ್ಟಿ ದುರ್ಗಿಯ ಶಾಪ ||
ಮೂಲ್ರೋಕ ಕೊಂಡಾಡುತ್ತೈತೆ ಮದಕರಿಯ ಪ್ರತಾಪ |
ಹತ್ತಿಸಿದ್ಹಾಂಗೆ ನೂರಾರ್ಮತಾಪು | ಉರಿದಾಂಗೆ ಸಾಲುದೀಪ ||"

- ತಮ್ಮ ನೆಚ್ಚಿನ ನಾಯಕರ ಪರಾಕ್ರಮವನ್ನು ತಮ್ಮ ಹೃದಯಗಳನ್ನೇ ಹೂವಾಗಿ ಮಾಡಿ ತೂರಾಡುತ್ತಾ ಕರೆಯುತ್ತಿರಲು –

ಮೂರನೆಯ ತಂಡವೊಂದು –

“ಬೆಟ್ಟದಾಗೆ ಬೆಳ್ಳಿಯ ನವಿಲು
ಬಯಲಿನಾಗೆ ಹೂವಿನ ಹೊಸಲು
ಉಕ್ಕಿ, ಸೊಕ್ಕಿ
ಮದಕರಿ ಹೆಸರ ಮೆರೆಸಿದ್ದಾಂಗೆ |

ಕೋಲಿಗೆ ಗೆಜ್ಜೆ | ಕಾಲಿಗೆ ಗೆಜ್ಜೆ
ಕತ್ತು ಕಂಕಣಕೆ ಸರಗೆಜ್ಜೆ
ಕಟ್ಟಿ ದುರ್ಗದೋರು ಹಾಡಿ ಕುಣಿತಾರೆ –
’ನಮ್ಮ ದೊರೆಗಿಲ್ಲ ಸರಿದೊರೆ
ಭೂಮಿ ಮತ್ತೆ ಹಡೆಯಲಿಲ್ಲ ಇಂಥ ದೊರೆ’ ||”

-ಎಂದು ಉತ್ಸಾಹಕ್ಕೆ ತಕ್ಕಂತೆ ಹಾಡಿನ ತಾಳ, ಲಯವನ್ನು ಹೊಂದಿಸಿಕೊಂಡು, ಕುಣಿತದ ವೇಗವನ್ನು ಏರಿಳಿಸಿ ಕುಣಿದಾಡಿದರು.

ಆ ಗುಂಪುಗಳು ಹಾಗೆ ನರ್ತಿಸುತ್ತಿರಲು, ಹಾಡುತ್ತಿರಲು, ನೂರಾರು ಹೆಂಗಸರು, ಕೈಯ ನೆಟಿಕೆ ಮುರಿದು, ಔಡುಗಚ್ಚಿ, ಕುಪಿತರುದ್ರಕನ್ನಿಕೆಯರಂತೆ ಹಾಡಿದರು –

“ಹಾಕೋ ಹಾಕೋ ಆ ಹಾಳುಮೋರೆಗಿಷ್ಟು ಹಿಡಿಶಾಪ
ಜರಿಮಲೆಯ ಅರಮನೆಯಲ್ಲಿನ್ನೆಂದು ಉರಿಯದಿರಲಿ ದೀಪ ||”

ಆ ಬಗೆಬಗೆಯ ಹಾಡು, ಭರ್ತ್ಸನೆ, ಕುಣಿತಗಳ ಬಿರುಗಾಳಿಗೆ ಸಿಕ್ಕು ತಲೆತೂಗಿದಂತೆ, ಶೂಲ ಸ್ತಂಭದ ಮೇಲಿನ ಬೊಮ್ಮಣ್ಣನಾಯಕನ ತಲೆ ಗಾಳಿಯಲ್ಲಿ ಅತ್ತಿಂದಿತ್ತ ತೂಗಾಡುತ್ತಿತ್ತು.

ಆ ನೆತ್ತಿಯ ಮೇಲೆ ಚೀರಿ ಹಾರುತ್ತಿದ್ದ ಹದ್ದು, ಕಾಗೆಗಳೂ ದುರ್ಗದ ಜನರೊಂದಿಗೆ ತಮ್ಮ ಧ್ವನಿ ಕೂಡಿಸಿದವು.

* * *

ಆದರೆ ಈ ಎಲ್ಲ ಬಗೆಯ ಹಾಡು, ಕುಣಿತಗಳಿಗೆ ಕಾರಣವಾಗಿದ್ದ ಮದಕರಿನಾಯಕ, ದೂರದಿಂದ ಕೇಳಿಬರುತ್ತಿದ್ದ ಆ ಅಸ್ಪಷ್ಟ ಶಬ್ದಗಳನ್ನು ಕೇಳುತ್ತಾ, ಯಾರಿಗೂ ಮುಖ ತೋರಿಸಲಾಗದವನಂತೆ, ಕಡೂರಿಯ ಮೃದುವಾದ, ಬೆಚ್ಚನೆಯ ತೊಡೆಗಳಲ್ಲಿ ಮುಖ ಮರೆಸಿಕೊಂಡು ಆಗಾಗ 'ಬಂಗಾರೀ....ಬಂಗಾರೀ... ದುರ್ವಿಧಿ ಇದೇನು ಘೋರವನ್ನು ಮಾಡಿಸಿತು - ನನ್ನ ಕೈಯಿಂದ' ಎಂದು ನಿಡುಸುಯ್ಯುತ್ತಾ, ತಂದೆಯ ದುರಂತಮರಣದಿಂದಾದ ದುಃಖ-ಅಪಮಾನಗಳ ದಾವಾಗ್ನಿಯಲ್ಲಿ ಸಿಕ್ಕು ಬೇಯುತ್ತಿದ್ದ ಮಡದಿಯನ್ನು ನೆನೆಸಿಕೊಂಡು, ಕಡೂರಿಯ ತೊಡೆಗಳನ್ನು ಕಂಬನಿಯಿಂದ ತೋಯಿಸಿದ್ದ.

ಆ ಕಂಬನಿಗಳ ಬಿಸಿ ಸೋಕಿ, ಕರಗಿದ ಅಂತಃಕರಣವೇ ಹನಿಹನಿಯಾಗಿ ಹರಿದಂತೆ ಆಕೆಯ ಕಣ್ಣುಗಳಲ್ಲೂ ನೀರು ಹರಿಯುತ್ತಿತ್ತು. ತೊಡೆಯ ಮೇಲಿದ್ದವನು ತನ್ನ ನಲ್ಲನಲ್ಲ, ಮಗು ಎಂಬಷ್ಟು ಮಮತೆಯಿಂದ, ತೊಡೆಯ ಮೇಲೆ ಮುಖಮುಚ್ಚಿ ಮಲಗಿದ, ಆಗಾಗ ನಸು ಕಂಪಿಸುತ್ತಿದ್ದ ಮದಕರಿನಾಯಕನ ಮೈಯನ್ನು ಮೃದುವಾಗಿ ನೇವರಿಸುತ್ತಿದ್ದಳು-ಏನೊಂದೂ ಮಾತಾಡದೆ.

ಹಾಗೇ ಎಷ್ಟು ಹೊತ್ತಾಯಿತೋ –

ನಾಗವ್ವ ತಂದಿಟ್ಟ ಹಾಲು, ಉಪಹಾರಗಳು ತಣ್ಣಗಾಗಿ ಜೀವ ಕಳೆದುಕೊಂಡಿದ್ದವು, ಯಾರೊಬ್ಬರೂ ಅದನ್ನು ಮುಟ್ಟದೆ.

ಹಾಗೇ ಹೊತ್ತು ಸರಿಯಿತು.

ಹಗಲಳಿದು, ಸಂಜೆಯಾಗಿ, ಕತ್ತಲು ಕವಿದು ನಾಗವ್ವ ಕೊಠಡಿಯಲ್ಲಿ ದೀಪವನ್ನು ಹೊತ್ತಿಸಿ ತಂದಿಟ್ಟು, ಆ ಬೆಳಕೂ ಅಸಹ್ಯವಾದಂತೆ ಹೇಳಿದ ಮದಕರಿನಾಯಕ –

"ಆ ದೀಪವನ್ನೆಲ್ಲಾದರೂ ತೆಗೆದುಕೊಂಡು ಹೋಗಿ ಹೊಂಡಕ್ಕೆ ಹಾಕು. ನನ್ನ ಬಾಳಿಗಿಂದು ಕತ್ತಲೆಯೇ ಬೇಕಾದ ಸಂಗಾತಿ."

ಕಡೂರಿ ನಾಗವ್ವನಿಗೆ ದೀಪವನ್ನು ಅಲ್ಲಿಂದ ತೆಗೆದುಕೊಂಡು ಹೋಗುವಂತೆ ಸೂಚಿಸಿದಳು.

ಒಳ, ಹೊರಗೆ –

ಎಲ್ಲೆಡೆಯೂ ಕತ್ತಲು ತುಂಬಿತು.

ಎಷ್ಟೋ ಹೊತ್ತಾದ ಬಳಿಕ ಕಡೂರಿ ಪಾರಿಜಾತದ ಹೂವಿನಷ್ಟು ಕೋಮಲವಾದ ಧ್ವನಿಯಲ್ಲಿ ಕೇಳಿದಳು –

"ಅರಮನೆಗಿಂದು ಹೋಗುವುದಿಲ್ಲವೇ ?"

"ಹೇಗೆ ಹೋಗಲಿ, ಕಡೂರಿ. ಹೋಗಿ ಬಂಗಾರಿಗೆ, ಅವಳ ತಂದೆಯ ತಲೆಯನ್ನು ಕತ್ತರಿಸಲು ಅಪ್ಪಣೆಮಾಡಿದ ಈ ಪಿಶಾಚಮುಖವನ್ನು ಹೇಗೆ ತೋರಿಸಲಿ ?"

-ಅಸಹಾಯಕನಾಗಿ, ದಾರಿಕಾಣದ ಹಸುಳೆಯಂತೆ ಕೇಳಿದ ಮದಕರಿನಾಯಕ.

"ಆದರೂ ಹೋಗದಿದ್ದರಾಗುತ್ತದೆಯೇ ? ಚಾವಡಿಯಿಂದ ಬಂದವರು ಅತ್ತಕಡೆ ಹೋಗಿಯೇ ಇಲ್ಲ."

"ಇಲ್ಲ - ಅಲ್ಲಿ ಹೋಗಲು ಸಾಧ್ಯವಿಲ್ಲೆಂದು ಇಲ್ಲಿಗೆ ಬಂದೆ - ಇನ್ನೆಲ್ಲೂ ಹೋಗಲು ತಾವು ಕಾಣದೆ. ನಿನಗೂ ನಾನಿಲ್ಲಿರುವುದು ಬೇಸರವೇ - 'ಮಾವನ ತಲೆ ಕಡಿಸಿದ ಕೊಲೆಗಡುಕ' ಎಂದು; ನಿನಗೂ ನನ್ನನ್ನು ಮುಟ್ಟಲು ಹೇಸಿಗೆಯಾಗುತ್ತಿದೆಯೇ ?"

"ಛಿ - ಇದೇನು ಮಾತಾಡುತ್ತೀರಿ, ದೊರೆ - ನೀವು ನನಗೆ ಬೇಸರವೇ, ನಿಮ್ಮ ಮೈ ನನಗೆ ಹೇಸಿಗೆಯೇ ? ಇನ್ನೊಮ್ಮೆ ಆ ಮಾತಾಡಿ ನನ್ನನ್ನು ಕೊಲ್ಲಬೇಡಿ. ನಿಮ್ಮನ್ನು ಸುಡುತ್ತಿರುವ ಬೆಂಕಿ ಎಂಥದು ಎಂದು ನಾನೂ ಬಲ್ಲೆ. ಆ ಬೆಂಕಿಯನ್ನಾರಿಸಲು ನನಗೆ ಶಕ್ತಿಯಿಲ್ಲ. ಯಾರಿಗೂ ಆ ಶಕ್ತಿ ಇಲ್ಲ - ಇರಿ - ಇಲ್ಲೇ ಇರಿ - ದುರ್ಗಕ್ಕೆ ನೀವೀಗ ಬೇಕು. ಇಲ್ಲವಾಗಿದ್ದಿದ್ದರೆ, ನನ್ನೆದೆಯೊಳಗೇ ನಿಮ್ಮನ್ನು ಕರಗಿಸಿಕೊಂಡುಬಿಡುತ್ತಿದ್ದೆ."

- ತನ್ನ ತೊಡೆಯ ಮೇಲಿದ್ದವನನ್ನು ತಬ್ಬಿ ಹೇಳಿದಳು ಕಡೂರಿ.

ಆ ಮಮತೆಯ ಮಾತು ಕೇಳಿ, ಬೇರಾವುದೋ ನೆನಪಾಗಿ, ಆ ಮಾತಿನಿಂದ ಮದಕರಿನಾಯಕನ ಹೃದಯ ಶಾಂತವಾಗದೆ ಮತ್ತಷ್ಟು ತಪ್ತವಾಗಿ ಹೇಳಿದ –

"ನನ್ನನ್ನು ಈ ಹೊತ್ತಿನಲ್ಲಿ ಸಂತೈಸಲು ನೀನಾದರೂ ಇದೀಯ, ಕಡೂರಿ. ಆದರೆ ಬಂಗಾರಿಯನ್ನು ಸಂತೈಸುವವರಾರು ? ತಾಯಿ ಇಲ್ಲದ ತಬ್ಬಲಿ. ಇವತ್ತವಳಿಗೆ ತಂದೆಯ ಇಲ್ಲವಾದ - ಕೈಹಿಡಿದ ಗಂಡ - ಹೀಗೆ ಬಿದ್ದಿದಾನೆ."

ಆ ಮಾತಿಗೆ ಕಡೂರಿ ಏನೂ ಉತ್ತರ ಕೊಡಲಾಗಲಿಲ್ಲ. ತನ್ನೆದೆಯಲ್ಲಿ ಮದಕರಿನಾಯಕನ ಮುಖವನ್ನು ಬಿಗಿಯಾಗಿ ತಬ್ಬಿಹಿಡಿದು, ತನ್ನ ಮೃದುವಾದ ತುಟಿ, ಕೆನ್ನೆಗಳಿಂದ ಆತನ ನೆತ್ತಿಯನ್ನು ನೇವರಿಸುತ್ತಾ ಹೇಳಿದಳು –

"ಹೀಗಾಗಬಾರದಾಗಿತ್ತು....ಬಂಗಾರವ್ವನಾಗತಿಗೆ ಹೀಗಾಗಬಾರದಾಗಿತ್ತು."

* * *

"ಹೀಗಾಗಬಾರದಾಗಿತ್ತು, ಹೀಗಾಗಬಾರದಾಗಿತ್ತು –

“ಇಷ್ಟು ದೂರ ಬಂದ ನನ್ನ ಬಾಳು, ಇಷ್ಟು ಘೋರ, ಅಸಹನೀಯ ಅಣಕವಾಗಬಾರದಿತ್ತು. ಹೇಗೆ ತೋರಿಸಲಿ, ನಿಮಗೆ ನನ್ನ ಮುಖವನ್ನು ಇನ್ನು ಹೇಗೆ ತೋರಿಸಲಿ ?”

- ಎಂದು ಅಂತಃಪುರದ ಕತ್ತಲೆಯಲ್ಲಿ ಒಂಟಿಯಾಗಿ ಕುಳಿತ ಬಂಗಾರವ್ವನಾಗತಿಯೂ ತನಗೆ ತಾನೇ ಹೇಳಿಕೊಂಡಳು.

“ಬದುಕಬಾರದು, ನಾನಿನ್ನು ಬದುಕಬಾರದು. ಹುಟ್ಟಿದ ಮನೆಗೆ ಹೊರಗಾದೆ; ಬಂದ ಮನೆಗೆ ಹೊರೆಯಾದೆ; ಕಂಡವರಿಗೆ ಕನಿಕರದ, ಅಪಹಾಸ್ಯದ, ತಾತ್ಸಾರದ, ಮೂಕದ್ವೇಷದ ವಿಷಪುತ್ಥಳಿಯಾದೆ.

“ಆಯಿತು-

“ಇವತ್ತಿಗೆ ನನ್ನ ಬಾಳಿನ ಈ ನಾಟಕ ಮುಗಿಯಿತು”

-ಎಂದುಕೊಂಡು, ವಾತಾಯನದಿಂದ ಹೊರಗೆ ಕತ್ತಲೆಯಾಗಿರುವುದನ್ನು ಕಂಡು, ಅರಮನೆ ಮೌನದಲ್ಲಿರುವುದು ಅರಿವಾಗಿ, ಕುಳಿತೆಡೆಯಿಂದ ಮೇಲೆದ್ದಳು – ಏನೋ ನಿರ್ಧಾರಕ್ಕೆ ಬಂದಂತೆ.

“ನಿನ್ನ ದುಃಖ ಸಂಕಟ ನನಗೆ ಗೊತ್ತು, ಬಂಗಾರವ್ವ. ನಾನಿಲ್ಲಿಯೇ ಇದ್ದೇನೆ. ಕಾಲವೊಂದೇ ಈ ನೋವಿಗೆ ಮದ್ದು. ಏನೂ ಯೋಚಿಸದೆ ಸುಮ್ಮನೆ ಮಲಗಿಕೋ, ತಾಯಿ. ನಿನಗೆ ನಿದ್ರೆ ಬರುವುದಿಲ್ಲ, ನನಗೆ ಗೊತ್ತು. ನನಗೂ ನಿದ್ರೆ ಬರುವುದಿಲ್ಲ. ನೀನಲ್ಲಿ ಮಲಗಿರು, ನಾನಿಲ್ಲಿ ಕುಳಿತಿರುತ್ತೇನೆ”

-ಎಂದು ಕತ್ತಲಿನಲ್ಲೇ ನಿಂಗವ್ವ, ದೃಢವಾದರೂ ಕೋಮಲವಾದ, ಯೋಚನೆ ಇದ್ದರೂ ಅಪ್ಪಣೆ ಮಾಡುವಂತೆ ತಗ್ಗಿದ ಧ್ವನಿಯಲ್ಲಿ ಹೇಳಿದಳು.

ಆ ಧ್ವನಿಯನ್ನು ಕೇಳಿ, ಬಂಗಾರವ್ವನಾಗತಿಯ ಹೃದಯದಲ್ಲಿ ಹುದುಗಿದ್ದ ದುಃಖ, ದಿಗ್ಗನೆ ಉರಿದೆದ್ದು ಕತ್ತಲಿನಲ್ಲೇ ತಡಕುತ್ತಾ ಹೋಗಿ, ಅತ್ತೆ ನಿಂಗವ್ವನನ್ನು ತಬ್ಬಿಕೊಂಡು –

“ಅವ್ವಾ - ಈ ಮಾನಗೇಡಿಯನ್ನು ಕಾಯಲು ಕಾವಲು ಕುಳಿತಿದ್ದೀರಾ, ಆವ್ವಾ ?”

-ಎಂದು ಕೇಳಿ, ಬಿಕ್ಕುತ್ತಾ ಹೇಳಿದಳು –

“ಬಿಡಿ - ನನ್ನನ್ನು ಸಾಯಲು ಬಿಡಿ, ಬದುಕಿ ನಾನಾರಿಗೂ ಮುಖ ತೋರಿಸಲಾರೆ.”

“ನೀನಿಂಥ ಹುಚ್ಚು ಮಾತಾಡುತ್ತೀಯ ಎಂದು ನನಗೆ ಗೊತ್ತಿತ್ತು. ಆಗಬಾರದ್ದು ಆಗಿ ಹೋಯಿತು. ಇನ್ನದಕ್ಕೆ ಚಿಂತಿಸಿ ಫಲವಿಲ್ಲ. ನೀನಿಲ್ಲಿ ಹೀಗಿದೀಯ, ಹಗಲು ಮನೆ ಬಿಟ್ಟು ಹೋದ ಮದಕೇರಣ್ಣ ಇನ್ನೂ ಮನೆಗೆ ಬಂದಿಲ್ಲ. ಅವನಾವ ಕತ್ತಲೆಯಲ್ಲಿ ತಡಕಾಡುತ್ತಿದ್ದಾನೋ – ಅವನು ಬರುವವರೆಗೂ ನೀನು ನನ್ನ ಅಧೀನ. ಅವನು ಬರಲಿ, ಆಮೇಲೆ ಮುಂದಿನ ಮಾತು. ನೀನೀಗ

ಹೋಗಿ ಸುಮ್ಮನೆ ಮಲಗಿಕೊ. ನನಗೆ ಗೊತ್ತು - ನಿನಗೆ ನಿದ್ರೆ ಬರುವುದಿಲ್ಲ. ಆದರೂ ಮಲಗಿಕೋ – ಮನಸ್ಸು ಉರಿಯುತ್ತಿರುವಾಗ ಮೈಗಷ್ಟು ವಿಶ್ರಾಂತಿ ಕೊಡು"

- ಎಂದಳು ನಿಂಗವ್ವ.

"ಮೈ-ಮನಸ್ಸು-ವಿಶ್ರಾಂತಿ-ನಿದ್ರೆ - ಎಲ್ಲವನ್ನೂ ನಮ್ಮಪ್ಪ ಎನಿಸಿಕೊಂಡವನು ಊಟಮಾಡಿಕೊಂಡು ಹೋಗಿಬಿಟ್ಟ, ಅವ್ವ. ನನಗೀಗ ಉಳಿದಿರುವುದೊಂದೇ - ಸದಾ ಎಚ್ಚತ್ತಿರುವ ನರಕ. ಅಷ್ಟೇ - ಆ ನರಕಕ್ಕೆ ನನ್ನ ಬಾಳು ಮೀಸಲಾಗಿಹೋಯಿತು. ನಾನು....ನಾನು..... ಅವರ ಕೈಹಿಡಿದು ಆಳುವ ಮಗನನ್ನು ಕೊಡಲಿಲ್ಲ, ಅವ್ವ; ಅಳಿಸಲಾಗದ ಕಳಂಕವನ್ನು ತಂದುಕೊಟ್ಟೆ - ತವರುಮನೆಯ ಬಳುವಳಿಯಾಗಿ. ಇನ್ನು ನನಗೆ ಬರಬೇಕಾದುದೊಂದೇ – ನಿದ್ರೆ, ಚಿರನಿದ್ರೆ. ಆದರೆ ನನಗೆ ಗೊತ್ತು - ನನ್ನಂಥ ಪಾಪಿಯನ್ನು ಮುಟ್ಟಲು ಮೃತ್ಯುವೂ ಹೇಸುತ್ತಾನೆ"

-ಎಂದಳು ಬಂಗಾರವ್ವನಾಗತಿ, ಬಿಕ್ಕುತ್ತಾ.

ಆಕೆಗಾಗಿ ನಿಂಗವ್ವನ ಹೃದಯವೂ ರೋದಿಸುತ್ತಿತ್ತು.

೨೭

ದುರ್ಗದಲ್ಲಿ ಕಣ್ಣೀರಿನ ಚಿಲುಮೆ ಚಿಮ್ಮುತ್ತಿತ್ತು - ಹಲವಾರು ಹೃದಯಗಳಲ್ಲಿ.

ಆ ಕಾರಣಕ್ಕಾಗಿಯೇ –

ಹೈದರಾಲಿಯ ಶಿಬಿರದಲ್ಲಿ ಹತ್ತಾರು ಹೃದಯಗಳೂ ಹೊತ್ತಿ ಉರಿಯುತ್ತಿದ್ದವು, ವಿಫಲತೆಯ ವಿಷತೈಲವನ್ನುಂಡು.

ಚಿತ್ರದುರ್ಗದಿಂದ ಬೇಹುಗಾರರು ತಂದ ಜರಿಮಲೆನಾಯಕನ ವಧೆ ಮತ್ತು ಅಪಮಾನಾಸ್ಪದವಾದ ರೀತಿಯಲ್ಲಿ ಆತನ ಶಿರದ ಬಹಿರಂಗಪ್ರದರ್ಶನದ ಘೋರವಾರ್ತೆ –

ಅದಕ್ಕಿಂತಲೂ ಮಿಗಿಲಾಗಿ, ತನ್ನೊಂದು ಒನಕೆಯಿಂದ ಚಿತ್ರದುರ್ಗವನ್ನು ಹೈದರಾಲಿಯ ಕಳ್ಳದಾಳಿಯಿಂದ ರಕ್ಷಿಸಿದ ವೀರರಮಣಿ ಓಬವ್ವನನ್ನು ಸಿಂಗರಿಸಿದ ಕುದುರೆಯ ಮೇಲೆ ಕೂಡಿಸಿ, ಸಕಲ ಮರ್ಯಾದೆಗಳಿಂದ, ಊರಿನ ಬೀದಿಬೀದಿಗಳಲ್ಲಿ 'ಓಬವ್ವ ತಾಯಿಗೆ ನಮಸ್ಕಾರ -ಜರಿಮಲೆ ದ್ರೋಹಿಗೆ ಧಿಕ್ಕಾರ' ಎಂಬ ಘೋಷಣೆ ಕೂಗುತ್ತಾ ಮೆರವಣಿಗೆ ಮಾಡಿಸಿ, ಮಾನ-ಮರ್ಯಾದೆ ಮಾಡಿದುದು, ಓಬವ್ವನ ಧೀರ, ಸಮಯೋಚಿತ ಸಾಹಸದಿಂದ ಉತ್ಸಾಹಿತರಾದ 'ದೇಶಾಬಾಗ್' ಹೆಂಗಸರು ದುರ್ಗದ ರಕ್ಷಣೆಗಾಗಿ ಸ್ತ್ರೀಸೇನೆಯನ್ನು ಸಿದ್ಧಗೊಳಿಸುತ್ತಿದ್ದುದು-

ಇದೆಲ್ಲವನ್ನೂ ಬಿಡಿಸಿ ಬಿಡಿಸಿ, ಸವಿವರವಾಗಿ ಕೇಳಿದ ಹೈದರಾಲಿ, ತನ್ನೊಂದಿಗೆ ಕುಳಿತ ಹರಪನಹಳ್ಳಿ, ರಾಯದುರ್ಗದ ಪಾಳೆಯಗಾರರನ್ನು, ಜರಿಮಲೆಯ ರಾಜಕುಮಾರರನ್ನು ಕಸ ನೋಡುವಂತೆ ನೋಡುತ್ತಾ –

"ನೀವೂ ಗಂಡಸರು. ಆ ಓಬವ್ವನ ಹತ್ತಿರ ಹೋಗಿ, ಗಂಡಸುತನದ ತಯಾರಿ ತೆಗೆದುಕೊಳ್ಳಿ. ನಿಮ್ಮಂಥ ನೂರು ಜನರ ಬದಲು ಅಂಥ ಒಬ್ಬ ಹೆಂಗಸು ನಮ್ಮ ಸೈನ್ಯದಲ್ಲಿದ್ದಿದ್ದರೆ ಚಿತ್ರದುರ್ಗ ಇಷ್ಟು ದಿನ ಉಳಿಯುತ್ತಿರಲಿಲ್ಲ. ದುರ್ಗವೇನು ಅದರ ಹೆಸರೂ ಉಳಿಯುತ್ತಿರಲಿಲ್ಲ" – ಎಂದು ತಾತ್ಸಾರವಾಗಿ ಹೇಳಿ –

"ನಾವು ತಪ್ಪು ಮಾಡಿದೆವು. ಮದಕರಿನಾಯಕರು, ಅವರ ಮಾವನಿಗೆ ಮಾಡಿದ ಶಿಕ್ಷೆಯನ್ನು ನಮ್ಮವರಿಗೂ ಒಬ್ಬಿಬ್ಬರಿಗೆ ಮಾಡಿದ್ದಿದ್ದರೆ ನಮ್ಮ ಸೇನೆ ಇಷ್ಟು ಸವೆಯುತ್ತಿರಲಿಲ್ಲ"

- ಎಂದು ತನ್ನ ಬಳಿಯೇ ಕುಳಿತ ಮೊಹಿಯುದ್ದೀನ್ ಸಾಹೇಬ್, ಮುಖ್ದುಂಸಾಹೇಬ್‌ರ ಮುಖ ಕೆಂಪೇರುವಂತೆ ಹೇಳಿ, ನಿರಾಶೆಯಿಂದ ಸುರುಟಿಹೋದ ಧ್ವನಿಯಲ್ಲಿ –

"ನಮ್ಮ ಸೇನೆಯಲ್ಲಿ ಆನೆ, ಕುದುರೆ, ತೋಫು, ಕೋವಿ, ಮದ್ದು ಗುಂಡು ಎಲ್ಲಾ ಇದೆ; ಆದರೆ ಗಂಡಸರೇ ಇದ್ದ ಹಾಗಿಲ್ಲ. ಸುಮ್ಮನೆ ಯಾಕೆ ಮೀಸೆ ಹೊತ್ತು, ಸೊಂಟಕ್ಕೆ ಭಾರವಾಗಿ ಕತ್ತಿ ಕಟ್ಟಿಕೊಂಡು ಕೂತಿದ್ದೀರಿ. ಅದನ್ನೆಲ್ಲಾ ಕಿತ್ತೊಗೆದು, ಆ ಹೆಂಗಸು - ಓಬವ್ವ - ಅವಳ ಹೆಸರಿನ ಜಪಾನಾದ್ರೂ ಮಾಡಿ, ನಿಮ್ಮ ಮೈಯಲ್ಲಿ ಅಷ್ಟು ತಾಖತ್ ಬರಬಹುದು. ಅವಳ ಒನಕೆ ಮುಂದೆ ನಿಮ್ಮ ಸರ್ದಾರ್‌ಗಿರೀನ, ಸಿಪಾಯಿಗಿರೀನ ನಿವಾಳಿಸಿ ಒಗೆಯಬೇಕು. ಅವಳ ಸೀರೆ ಒಗೆದರಾದರೂ ನಿಮಗಷ್ಟು ಗಂಡಸುತನ ಬರಬಹುದು"

-ಎಂದು ಮಾತುಮಾತಿಗೂ ಕೇಳಿದ ಕಿವಿಯಲ್ಲಿ ಕಾದೆಣ್ಣೆ ಸುರಿಯುತ್ತಾ ಹೇಳಿದ.

ಆ ಮಾತು ಕೇಳಲಾಗದೆ ಸುತ್ತ ಕುಳಿತವರು ತಲೆಬಾಗಿದರೆ, ಸಾಹೇಬ್‌ಜಾದೆ ಟೀಪುವಿನ ಮುಖ ತಪ್ತತಾಮ್ರವಾಗಿ, ಕಣ್ಣುಗಳು ಕೆಂಪೇರಿ, ಮೈಯ ರಕ್ತದಷ್ಟೇ ಕಾವೇರಿದ ಧ್ವನಿಯಲ್ಲಿ ಹೇಳಿದ-

"ಅಬ್ಬಾ ಹುಜೂರ್."

ಆ ಮಾತು ಕೇಳಿ, ಟೀಪುವಿನತ್ತ ತಿರುಗಿ ನೋಡಿ, ಛೇಡಿಸುವ ಧ್ವನಿಯಲ್ಲಿ ಕೇಳಿದ ಹೈದರಾಲಿ –

"ಈಗ ಸಾಹೇಬ್‌ಜಾದೆಯವರ ಸರದಿ. ನಿಮ್ಮದೇನು ಮರ್ದಾನ್‌ಗೀಯ ಮಾತು. ಒಂದುಸಲ ಅದನ್ನೂ ನೋಡಿಯಾಯಿತಲ್ಲ - ಮದಕರಿನಾಯಕನನ್ನು ಹಿಡಿಯಲು ಹೋಗಿ, ಅವಮರ್ಯಾದೆಯನ್ನು ಹಿಡಿದುಕೊಂಡು ಬಂದು, ನಮ್ಮ ಕೀರ್ತಿಗೆ ಕಿರೀಟ ಇಟ್ಟಿರಿ. ಈಗ ಮತ್ತೇನು ಮಾಡುವ ಯೋಚನೆ ?"

ತನ್ನ ತಂದೆಯಾಡಿದ ಮಾತನ್ನು ಕೇಳಿ ಟೀಪುವಿನ ಮುಖ, ನೆತ್ತರಿನಲ್ಲಿ ಅದ್ದಿದಂತಾಗಿ –

"ಲಡಾಯಿನಲ್ಲಿ ಒಂದು ಸಲ ನಾವು ಸೋತದ್ದು ನಿಜ. ನಿಮ್ಮ ನಮಕ್ ಹರಾಮ್ ಲಡಾಯಿಯಲ್ಲಿ, ಈ ನಾಮರ್ದಾಗಳನ್ನು ನಂಬಿ ನೀವು ಎಷ್ಟು ಸೇನೆ ಬಲಿ ಕೊಟ್ಟಿರೋ, ಎಷ್ಟು ಸಲ ಫತೆಝುಂಡಾ ಹಾರಿಸಿದಿರೋ – ಹೇಳಿ"

-ಎಂದು ನವಾಬನಿಗೇ ಸವಾಲು ಹಾಕಿದಂತೆ ಕೇಳಿದ.

ತುಂಬಿದ ಸರ್ದಾರರ ಸಭೆಯಲ್ಲಿ ಟೀಪು ಆಡಿದ ಮಾತನ್ನು ಕೇಳಿ, ಸಭೆ ಗರಬಡಿದಂತಾಯಿತು. ಹೈದರಾಲಿಯ ಹಿಂದೆ ನಿಂತಿದ್ದ ಬಾರುಕೋಲಿನವರು ಏನಪ್ಪಣೆಯಾಗುವುದೋ ಎಂದು ಕಾದರು. ಕುರುಚಲುಗಡ್ಡ ಬೆಳೆದ ಹೈದರಾಲಿಯ ಮುಖದ ಮೇಲೆ ಕೆಂಪು-ಬಿಳುಪುಗಳು ತೆರೆಯಾಡಿ, ಧ್ವನಿ ಗಂಭೀರವಾಗಿ ಹೇಳಿದ –

"ನೀವು ಪಡೆದುಕೊಂಡು ಬಂದಿರುವುದು ನಿಮ್ಮಮ್ಮನ ಸಡಿಲ ಬಾಯೊಂದನ್ನೇ. ಅದನ್ನು ಬಿಟ್ಟು - ಬೇರೆ ಮಾತೇನಾದರೂ ಇದ್ದರೆ ಹೇಳಿ."

"ಹೇಳುವುದೇನಿದೆ ? ಈ ಮೋಸ ಮಸಲತ್ತಿನ ಮಾತು ಬಿಡಿ. ಮದಕರಿ ಹುಟ್ಟಾ ಗಂಡು ಸಿಪಾಯಿ. ಆತನನ್ನು ಸೋಲಿಸುವುದನ್ನು ಸಿಪಾಯಿಗಳಿಗೆ ಬಿಡಿ. ಈ ನಾಮರ್ದ ನರಿಗಳನ್ನು ಬಿಡಾರದಿಂದ ಹೊರಗೆ ಹಾಕಿ. ಸೋತರೂ ಗೆದ್ದರೂ ಹೆಸರಾದರೂ ಉಳಿಯುತ್ತದೆ. ಹಗಲೂ ಇರುಳೂ ಈ ಹೇಡಿಮುಖಗಳನ್ನು ನೋಡುವ ಅಪಶಕುನ ತಪ್ಪುತ್ತದೆ."

- ಕೊಂಚವೂ ಅಳುಕದೆ ಹೇಳಿದ ಟೀಪು.

"ನೀವು ನಮ್ಮ ಸ್ನೇಹಿತರ ಅಪಮಾನ ಮಾಡುತ್ತಿದ್ದೀರ, ಸಾಹೇಬ್ ಜಾದೆ."

"ಸ್ನೇಹಿತರು - ಇವರು ಸ್ನೇಹಿತರೇ, ಅಬ್ಬಾ ಹುಜೂರ್ ? ಹುಲಿಯ ಹಿಂದೆ ಬರುವ ನರಿಗಳ ಹಿಂಡು, ನೀತಿಯಿಲ್ಲ, ನಿಯತ್ತಿಲ್ಲ - ಈ ಜನಕ್ಕೆ : ಜಾತಿಯ ಹಂಗಿಲ್ಲ, ದೇವರ ಭಯವಿಲ್ಲ. ಇವತ್ತು ನಿಮ್ಮ ಕೈ ಬಲವಾಗಿದೆ. ನಿಮ್ಮ ಬೆನ್ನ ಹಿಂದೆ ಬಾಲ ಅಲ್ಲಾಡಿಸುತ್ತಿದ್ದಾರೆ. ನಿಮ್ಮ ಕೈ ಸೋತಿತೋ - ನಾಳೆ, ನಿಮ್ಮನ್ನೇ ಮದಕರಿನಾಯಕನ ಕೈಗೆ ಒಪ್ಪಿಸಿ, ತಾವೇ ಯುದ್ಧ ಜಯಿಸಿದ ಭಾರೀ ಸರ್ದಾರರಂತೆ, ಮುಖಕ್ಕೆ ಹೊರೆಯಾದ ಮೀಸೆ ತಿರುಗಿಸುತ್ತಾರೆ. ಇಂಥ ನಮಕ್ ಹರಾಂ ಜನರನ್ನು ನಂಬಬೇಡಿ. ಈಗಾದ ಅಪಮಾನ ಸಾಕು. ನಮ್ಮನ್ನು ಬಿಡಿ. ಹೋರಾಡುತ್ತೇವೆ. ಗೆದ್ದರೆ ದುರ್ಗ ನಮ್ಮದು - ಇಲ್ಲವೇ, ಸಂಧಾನ ಮಾಡಿಕೊಳ್ಳಿ. ಇಂಥ ಸಾವಿರ ಜನಕ್ಕಿಂತ ಮದಕರಿನಾಯಕರಂಥ ಒಬ್ಬ ಸ್ನೇಹಿತರಿದ್ದರೂ ಸಾಕು. ನಾವು ಸ್ವರ್ಗ ಗೆಲ್ಲದಿರಬಹುದು, ಅಪಕೀರ್ತಿಯ ಕಾಲಿಗಂತೂ ಗೆಜ್ಜೆ ಕಟ್ಟುವುದಿಲ್ಲ. ಹಿಂದಾದದ್ದನ್ನು ಜ್ಞಾಪಿಸಿಕೊಳ್ಳಿ - ಅಬ್ಬಾ ಹುಜೂರ್, ಮದಕರಿನಾಯಕರು ನಮ್ಮ

ಸ್ನೇಹಿತರಾಗಿದ್ದಾಗ ನಾವು ಯಾವ ಯುದ್ಧದಲ್ಲೂ ಸೋಲಲಿಲ್ಲ, ಇವರನ್ನು ಕಟ್ಟಿಕೊಂಡು ಎಲ್ಲೂ ಗೆಲ್ಲಲಿಲ್ಲ."

-ಕತ್ತಿಯನ್ನು ಝಳಪಿಸುವಂತೆ ಝಳಝಳ ಮಾತನಾಡಿದ ಟೀಪು.

ಟೀಪು ಆಡಿದ ಮಾತು ಎಷ್ಟು ನಿಷ್ಠುರವಾಗಿತ್ತೋ ಅಷ್ಟೇ ಸತ್ಯವಾಗಿತ್ತು. ಆ ಮಾತುಗಳನ್ನು ಕೇಳಿ ಹೈದರಾಲಿಯ ಕಣ್ಣುಗಳಿಂದಲೂ ಕಿಡಿಗಾರದೆ ಮುಖ ಗಂಭೀರವಾಯಿತು.

ಆ ಮಾತಿಗೆ ಹೈದರಾಲಿ ಏನು ಉತ್ತರ ಹೇಳುವನೋ ಎಂದು ನೆರೆದ ಪಾಳಯಗಾರರೆಲ್ಲರೂ ಬಿಳುಪೇರಿದ ಮುಖಗಳಿಂದ ನವಾಬನತ್ತಲೇ ನೋಡಿದರು.

"ಸಾಹೇಬ್‌ಜಾದೆಯವರು ಅಷ್ಟು ಹೊತ್ತು ಸಭೆಯಿಂದ ಹೊರಗೆ ಹೋಗಬೇಕು"

-ಎಂದಷ್ಟೇ ಹೇಳಿದ ಹೈದರಾಲಿ.

"ಸಭೆಯಿಂದೇನು, ಎಲ್ಲಿಗೆ ಬೇಕಾದರೂ ಹೋಗುತ್ತೇವೆ. ಬೇಕಾದಾಗ ಹೇಳಿಕಳಿಸಿ, ಅಬ್ಬಾ ಹುಜೂರ್"

-ಎಂದು ಹೇಳಿ, ಟೀಪು, ಹೈದರಾಲಿಗೆ ಮುಜುರೆಮಾಡಿ. ಡೇರಾದಿಂದ ಹೊರಗೆ ನಡೆದ. ಆತ ಹೋದ ಬಳಿಕ ಸಭೆಯಲ್ಲಿ ವ್ಯಾಪಿಸಿದ ಗಂಭೀರ ಮೌನ ಒಬ್ಬೊಬ್ಬರನ್ನು ಒಂದೊಂದು ಬಗೆಯಲ್ಲಿ ಬೆದರಿಸಿತು.

ಅಷ್ಟು ಹೊತ್ತು ಸುಮ್ಮನಿದ್ದು ಬಳಿಕ –

"ಸಾಹೇಬ್‌ಜಾದೆಯವರು ಹೇಳಿದ್ದು ನುಂಗಲಾಗದ ಕೆಂಡದಂಥ ಮಾತು; ಆದರೆ ಸತ್ಯ. ನಿಮ್ಮನ್ನು ನಂಬಿಬಂದು ನಾವು ಸೇನೆ, ಮರ್ಯಾದೆ ಎರಡೂ ಕಳೆದುಕೊಂಡೆವು. ಮದಕರಿನಾಯಕ ಈಗ ನಮ್ಮ ವೈರಿ, ನಿಜ. ಆದರೆ ಎಂಥವರೂ ಶಾಭಾಸ್ ಎನ್ನಬೇಕಾದ ಧೀರ -ಆ ಕೀರ್ತಿ ನಿಮಗಾರಿಗೂ ಸಲ್ಲುವುದಿಲ್ಲ. ಆಯಿತು, ಇದು ಕೊನೆಯ ಅವಕಾಶ – ಗೆಲ್ಲುವ ಖಚಿತವಾದ ಉಪಾಯ ಇದ್ದರೆ ಹೇಳಿ. ಇಲ್ಲದಿದ್ದರೆ - ಮದಕರಿನಾಯಕರ ವಿಚಾರ ನಮಗೆ ಬಿಟ್ಟು ಹೋಗಿ. ಎಲ್ಲರನ್ನೂ 'ಲೌಂಡೀಕೆ' ಎಂದು ಕರೆದ ನಾವು, ನಾಳಿನ ಜನರ ಬಾಯಲ್ಲಿ, ಸೋತು ಆ ಮಾತು ಅನ್ನಿಸಿಕೊಳ್ಳಲು ತಯಾರಿಲ್ಲ"

- ಎಂದು ನೆರೆದೆಲ್ಲರ ತಲೆಯ ಮೇಲೂ ಕತ್ತಿಯನ್ನು ತೂಗುಬಿಟ್ಟಂತೆ ಹೇಳಿದ ಹೈದರಾಲಿ.

ಆ ಮಾತು ಕೇಳಿ ಪಾಳಯಗಾರರೆಲ್ಲರ ಜಂಘಾಬಲ ಉಡುಗಿಹೋಯಿತು.

ಬಹಳ ಹೊತ್ತು ಸುಮ್ಮನಿದ್ದ ಬಳಿಕ, ಜರಿಮಲೆಯ ಮಲ್ಲಿಕಾರ್ಜುನನಾಯಕ ಹೇಳಿದ –

"ಸೀನೀರುಹೊಂಡದ ಸ್ಥಳ ಕೋಟೆಯಲ್ಲೇ ಬಹಳ ದುರ್ಬಲವಾದ ಜಾಗ. ನವಾಬ್ ಸಾಹೇಬರು ನಮ್ಮ ಕಡೆಗೆ ಸಾಕಷ್ಟು ಸೇನೆ ಕೊಟ್ಟರೆ, ಕೋಟೆ ಹಿಡಿದುಕೊಡುತ್ತೇವೆ. ಇಲ್ಲ -

ಹೊಂಡದಲ್ಲಿ ಹೆಣವಾಗಿ ತೇಲುತ್ತೇವೆ. ನಮ್ಮಪ್ಪನ ತಲೆ ಹೊಯ್ಸಿದವನ ತಲೆ ತರದೆ ಹಿಂದಕ್ಕೆ ಬರುವುದಿಲ್ಲ."

ಅಷ್ಟು ಹೊತ್ತು ಯೋಚಿಸಿದಬಳಿಕ ಹೈದರಾಲಿ –

"ಗಲ್ಲಿನ ಶಿಕ್ಷೆ ವಿಧಿಸಿದವರಿಗೂ 'ನಿನ್ನ ಕಡೆ ಆಸೆ ಏನು ?' ಅಂತ ನಾವು ಕೇಳುತ್ತೇವೆ. ನಿಮ್ಮನ್ನು ಕೇಳಿದ್ದೂ ಹಾಗೇ. ಅದೆಷ್ಟು ಸೇನೆ ಬೇಕೋ ತೆಗೆದುಕೊಂಡು ಹೋಗಿ. ಸೋತರೆ ಮತ್ತೆ ಹಿಂದಿರುಗಿ ಬರಬೇಡಿ."

- ಸಭೆಯನ್ನು ಬರಖಾಸ್ತು ಮಾಡಿದಂತೆ ಹೇಳಿದ.

ಸಭೆಯಲ್ಲಿ ನೆರೆದವರೆಲ್ಲರೂ ಹೋದ ಬಳಿಕ, ತಾನೂ ಹೋಗುತ್ತಿದ್ದ ಪೂರ್ಣಯ್ಯನನ್ನು ತಡೆದು –

"ನಿಮ್ಮ ಕೆಲಸ ಎಲ್ಲಿಯವರೆಗೆ ಬಂತು ?"

– ಎಂದು ಕೇಳಿದ ಹೈದರಾಲಿ ಕೊಂಚ ಕಾತರವಿದ್ದ ಧ್ವನಿಯಲ್ಲಿ.

"ಖಾವಂದರು ಯೋಚಿಸಬೇಕಾಗಿಲ್ಲ. ಕಳ್ಳಿನರಸಪ್ಪಯ್ಯನವರ ಹೆಸರಿನಲ್ಲಿ ಕಾಗದಗಳು ಯಾರುಯಾರಿಗೆ ಹೋಗಬೇಕಾಗಿತ್ತೋ ಅವರಿಗೆ ತಲುಪಿದೆ."

"ನಮ್ಮ ಜನ, ಸರ್ದಾರರು...."

"ನಾಳಿದ್ದು ಮೊಹರಂನ ಕೊನೆಯ ದಿನ. ಅವತ್ತು ಅದೂ ಇತ್ಯರ್ಥವಾಗುತ್ತದೆ"

- ಪೂರ್ಣಯ್ಯ ಆತ್ಮವಿಶ್ವಾಸವಿದ್ದ ಧ್ವನಿಯಲ್ಲಿ ಹೇಳಿದ –

"ಅಬ್ದುಲ್ ಖಯ್ಯೂಮ್ ಸೋತದ್ದನ್ನು ನಾವು ಇವತ್ತಿನವರೆಗೂ ಕಂಡಿಲ್ಲ."

"ಎಲ್ಲದಕ್ಕೂ ಒಂದು ಕೊನೆ ಅನ್ನುವುದಿದೆ – ನಮ್ಮ ನಸೀಬು, ನಿಮ್ಮ ತಲೆ, ಖಯ್ಯೂಮನ ಕದೀಮತನ – ಎಲ್ಲಕ್ಕೂ, ನೋಡೋಣ - ನಿಮ್ಮೆಲ್ಲರ ಲೆಕ್ಕ ನಿಜವಾಗುವುದೋ, ಸಾಹೇಬ್ ಜಾದೆಯವರು ಹೇಳಿದ್ದು ಸತ್ಯವಾಗುತ್ತದೆಯೋ ?"

"ಸಾಹೇಬ್‌ಜಾದೆಯವರ ಮಾತನ್ನು ಖಾವಂದರು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳಬಾರದು."

- ಪೂರ್ಣಯ್ಯ ಸಂತೈಸುವಂತೆ ಹೇಳಿದ.

"ಸಾಹೇಬ್‌ಜಾದೆ ಹೇಳಿದ್ದು ಸತ್ಯ, ಪೂರ್ಣಯ್ಯ, ಗೆಲ್ಲಲಿ, ಸೋಲಲಿ – ಮದಕರಿನಾಯಕ ಮರ್ಯಾದೆಯಿಂದ ಕಾಣಬೇಕಾದ ಮನುಷ್ಯ, ಶತ್ರುವಾಗಲಿ-ಮಿತ್ರನಾಗಲಿ ಗೌರವದಿಂದ 'ಸಲಾಂ' ಹೇಳಬೇಕಾದವನು....ಹೂಂ - ನೋಡೋಣ, ನಾವೇನು ಫತೇತೋಫು

ಹಾರಿಸಬೇಕಾಗುತ್ತೋ, ನಾಯಕರ ಮೇಲಿನ ಗೆಲುವಿಗೆ ಕುಶಾಲುತೋಪು ಹಾರಿಸಬೇಕಾಗುತ್ತೋ.... ಅಂತೂ – ಎರಡಕ್ಕೂ ದಿನ ದೂರವಿಲ್ಲ" – ಎಂದು ಹೇಳಿ –

"ತಮ್ಮನನ್ನು ಕೊಡಲು ಇಲ್ಲ ಎನ್ನಲಿಲ್ಲ, ಮಾವನ ತಲೆ ಕಡಿಸಲು ಹಿಂದೆಮುಂದೆ ನೋಡಲಿಲ್ಲ. ಇಂಥ ರಾಜರು, ಪೂರ್ಣಯ್ಯ, ಲಾಖೋಮೆ ಏಕ್"

- ಎಂದು ಮದಕರಿನಾಯಕನ ಹೆಸರಿಗೆ ಹಿಲಾಲು ಹಿಡಿದವನಂತೆ ಹೇಳಿದ ಹೈದರಾಲಿ.

೨೮

"ವಿಧಿ ದೇವರ ರೂಪದಲ್ಲಿಯೂ ನಮ್ಮ ಅದೃಷ್ಟ ಪರೀಕ್ಷೆ ಮಾಡುತ್ತಿದೆಯೇ ? ದೇವರು, ಧರ್ಮ, ನೆಂಟಸ್ತಿಕೆ, ಸ್ನೇಹ, ಕೃತಜ್ಞತೆ - ಮನುಷ್ಯ ನಂಬಬಹುದಾದುದನ್ನೆಲ್ಲಾ ನಂಬಿದೆವು. ಯಾವುದಕ್ಕೂ ನಾವು ದ್ರೋಹಬಗೆಯಲಿಲ್ಲ. ಇಷ್ಟಾದರೂ ತಾಯಿಗೆ ನಮ್ಮ ಮೇಲೆ ಕರುಣೆ ಬರಲಿಲ್ಲ. ಇನ್ನೂ, ಇನ್ನೂ ಒರೆಗಿಟ್ಟು ನೋಡಬೇಕೆಂದಿದ್ದಾಳೆ. ಆಕೆಯ ಚಿತ್ತದಲ್ಲೇನಿದೆಯೋ ಹಾಗಾಗಲಿ."

-ಪ್ರವಾಹದಲ್ಲಿ ಈಸುತ್ತಿದ್ದವನು ಕೈಸೋತಂತೆ ಹೇಳಿದ ಮದಕರಿನಾಯಕ, ಪರಶುರಾಮನಾಯಕ ಹೇಳಿದುದನ್ನು ಕೇಳಿ.

"ನಾನೊಂದು ಮಾತು ಹೇಳಬಹುದೇ. ರಾಜಾಸಾಹೇಬ್."

- ಅಣ್ಣತಮ್ಮಂದಿರಾಡುತ್ತಿದ್ದ ಮಾತನ್ನು ಮೌನವಾಗಿ ಕೇಳುತ್ತಾ ಕುಳಿತಿದ್ದ ಸರ್ದಾರ್ ಖಾನ್ ಕೇಳಿದ.

"ಹೇಳಿ."

-ಸರ್ದಾರ್‌ಖಾನನತ್ತ ನೋಡಿ ಕೇಳಿದ ಮದಕರಿನಾಯಕ.

"ನಾನೂ ಮುಸಲ್ಮಾನ್. ಇಸ್ಲಾಂ ಧರ್ಮದಲ್ಲಿ, ಅದರ ವ್ರತ-ನೇಮಾನುಷ್ಠಾನಗಳಲ್ಲಿ ಸಂಪೂರ್ಣವಾಗಿ ನಂಬಿಕೆಯುಳ್ಳವನು. ದಿನವೂ ಗೊತ್ತಾದ ಹೊತ್ತಿಗೆ ನಮಾಜ್‌ಮಾಡುತ್ತೇನೆ. ನಾನು ಖಾಜಿಯಲ್ಲ, ಮುಲ್ಲಾ ಅಲ್ಲ, ಖುರಾನ್-ಏ-ಷರೀಫ್ ಅನ್ನು ಸಂಪೂರ್ಣವಾಗಿ ಓದಿದವನೂ ಅಲ್ಲ. ಆದರೆ ಅಂಥ ಪಂಡಿತರು ಹೇಳಿದುದನ್ನು ಕೇಳಿದ್ದೇನೆ. ಮೊಹರಂನ ಹನ್ನೊಂದನೆಯ ದಿನ 'ಪಂಜಾ' ತೊಳೆಯಬೇಕು ಎನ್ನುವುದು ವಾಡಿಕೆ. ಆದರೆ ಅದಕ್ಕೆ ಇಂಥ ಕೆರೆ, ಇಂಥ ಹೊಂಡವೇ ಆಗಬೇಕು ಎಂದು ಶಾಸ್ತ್ರದಲ್ಲಿಯೂ ಹೇಳಿಲ್ಲ. ಅಲ್ಲದೆ, ಇದು ಯುದ್ಧಸಮಯ. ಮಲ್ಲಾಪುರದ ಕೆರೆ ಇರುವುದು ಕೋಟೆಯ ಹೊರಗೆ, ನವಾಬರ ಬಿಡಾರದ ಬಳಿ. ಅಲ್ಲೇ ಹೋಗಿ ಪಂಜಾ

ತೊಳೆಯಬೇಕೆಂದು ಅಪ್ಪಣೆ ಕೇಳುವುದು, ನ್ಯಾಯವೂ ಅಲ್ಲ ನೀತಿಯೂ ಅಲ್ಲ – ಧರ್ಮವಂತೂ ಮೊದಲೇ ಅಲ್ಲ. ಆದ್ದರಿಂದ ಈ ಹೊತ್ತಿನಲ್ಲಿ ನೀವು ಸಡಿಲವಾಗಿ ವರ್ತಿಸಬಾರದು."

- ಸರ್ದಾರ್‌ಖಾನ್ ನಿರ್ದಾಕ್ಷಿಣ್ಯವಾಗಿ ಹೇಳಿದ.

ಆತ ಹೇಳಿದುದನ್ನೆಲ್ಲಾ ಕೇಳಿ ಮದಕರಿನಾಯಕ ಆಲೋಚಿಸುತ್ತಾ ಹೇಳಿದ –

"ಈಗ ದುರ್ಗದಲ್ಲಿ ನಮ್ಮ ಬಗ್ಗೆ ಒಂದು ಅಪಪ್ರಚಾರ ನಡೆಯುತ್ತಿದೆ. ಅದು ನಿಮಗೂ ಗೊತ್ತಿರಬೇಕು...."

"ಕೇಳಿದ ಕಿವಿಯನ್ನು ಗಲೀಜು ಮಾಡುವ ಆ ಹೊಲಸು ಮಾತನ್ನು ಕೇಳಿದೆ, ರಾಜಾ ಸಾಹೇಬ್. ಮುಸಲ್ಮಾನರಲ್ಲಿ ನಿಮಗೆ ನಂಬಿಕೆ ಇಲ್ಲವೆಂಬ ಮಾತು ತಾನೇ ?"

"ಹೂ. ಅದೇ ಅಂಥ ಅಪಪ್ರಚಾರ ನಮ್ಮ ಬಗ್ಗೆ ನಡೆಯುತ್ತಿರುವ ಹೊತ್ತಿನಲ್ಲಿ, ನನ್ನ ಸ್ಥಳದಲ್ಲಿ ನೀವೇ ಇದ್ದಿದ್ದರೇನು ಮಾಡುತ್ತಿದ್ದಿರಿ, ಸರ್ದಾರ್‌ಖಾನ್ ?"

-ಮದಕರಿನಾಯಕ ಕೇಳಿದ.

"ಏನು ಮಾಡುತ್ತಿದ್ದೆ ಹೊಲಸು ಮಾತಿಗೆ ಕಿವಿಗೊಡದೆ 'ಇದು ಯುದ್ಧ ಸಮಯ. ದುರ್ಗದಾಚೆ ಹೋಗಲು ಪಂಜಾಗಳಿಗಿರಲಿ, ದೇವರುಗಳಿಗೂ ಪರವಾನಗಿ ಇಲ್ಲ' ಎಂದೇ ಹೇಳುತ್ತಿದ್ದೆ. ಅಷ್ಟೇ ಅಲ್ಲ – 'ಹೈದರಾಲಿ ನವಾಬರು ಮುಸಲ್ಮಾನರಲ್ಲವೇ ? ಅವರ ದಂಡಿನ ಮುಸಲ್ಮಾನರು ಪಂಜಾ ತೊಳೆಯಲು ಕಾವೇರಿನದಿಗೆ ಹೋಗುತ್ತಾರೆಯೇ?' – ಎಂದೂ, ಅವರ ಬಾಯಿ ಮುಚ್ಚಿಸುವ ಹಾಗೆ ಕೇಳಿ, 'ನವಾಬರ ಸೈನಿಕರ ಹಾಗೆ ಇದ್ದಲ್ಲಿ ದೇವರ ಕೆಲಸ ಮಾಡಿಕೊಳ್ಳಿ' ಎಂದೇ ಹೇಳುತ್ತಿದ್ದೆ. ನೀವೂ ಅದೇ ಮಾತು ಹೇಳಿ"

- ಎಂದು ಖಡಾಖಂಡಿತವಾಗಿ ಹೇಳಿದ ಸರ್ದಾರ್‌ಖಾನ್.

"ನವಾಬರು ಮುಸಲ್ಮಾನರು. ಅವರು ಹೇಳಿದರೂ ಮುಸಲ್ಮಾನರು ತಪ್ಪು ತಿಳಿಯುವುದಿಲ್ಲ. ಆದರೆ ನಾನು ಹಿಂದು. ಈ ಎರಡು ವರ್ಷ ನಮ್ಮ ದೇವತೆಗಳಿಗೆ ನಡೆಯಬೇಕಾದ ಹಬ್ಬಹರಿದಿನಗಳು ನಡೆದಿಲ್ಲ. ಪ್ರತಿವರ್ಷವೂ ಅರಮನೆಯವರು ಮಾಡಲೇಬೇಕಾಗಿದ್ದ ಹಿರಿಯರ ಹಬ್ಬಕ್ಕೂ ನಾವು ಕಣಕುಪ್ಪೆಗೆ ಹೋಗಿ ಬರುವುದಾಗಲಿಲ್ಲ. ಆದರೆ ನಮ್ಮ ಜನ ನಮ್ಮ ಮಾತಿಗೆ ಪ್ರತಿ ಆಡಲಿಲ್ಲ. 'ದುರ್ಗದ ದೇವರಿಗೇ ಪೂಜೆ ತಪ್ಪಿದಾಗ ಮನೆದೇವರದೇನು ದೊಡ್ಡದು' ಎಂದುಕೊಂಡು ಹೇಗಿದ್ದರೆ ಹಾಗೆ ಮಾಡಿದರು. ಆದರೆ ಈ ಮಾತನ್ನು ಪರಧರ್ಮೀಯರಿಗೆ ಹೇಳುವುದು ಹೇಗೆ ?"

- ಚಿಂತೆ ತುಂಬಿದ ಧ್ವನಿಯಲ್ಲಿ ಕೇಳಿದ ಮದಕರಿನಾಯಕ.

“ಈ ದೇವರು-ಧರ್ಮಕ್ಕೆ ಬೆಂಕಿ ಹಚ್ಚಿ, ರಾಜಾಸಾಹೇಬ್. ಅವು ಕೊಂದರೆ ಸಾಯುವುದಿಲ್ಲ, ಬಿಟ್ಟರೆ ಬದುಕುವುದಿಲ್ಲ. ದುರ್ಗ, ದೇಶಕ್ಕಿಂತ ಅದು ದೊಡ್ಡದೆ ? ಈ ಮುಲಾಜೆಲ್ಲಾ ಬಿಟ್ಟು, ನಿಮ್ಮ ಮಾವನ ತಲೆ ಹೇಗೆ ಕಡಿಸಿದಿರೋ ಹಾಗೆ, ಈ ಮುಸಲ್ಮಾನ್ ಸರ್ದಾರರಿಗೂ ಹೇಳಿಕಳಿಸಿ. ಅವರು ದುರ್ಗದ ಉಪ್ಪುಂಡು ಬೆಳೆದವರಾಗಿದ್ದರೆ, ಆದಷ್ಟು ದೇವರ ಕೆಲಸ ಮುಗಿಸಿಕೊಳ್ಳಲಿ – ಇಲ್ಲ - ಅವರು ಪೂಜೆ ಮಾಡುವ ಪಂಜಾಕ್ಕೇ ಉರಲುಹಾಕಿಕೊಳ್ಳಲಿ.”

- ಸಿಟ್ಟೇರಿ ಹೇಳಿದ ಸರ್ದಾರ್‌ಖಾನ್.

“ಈ ಹೊತ್ತಿನಲ್ಲಿ ನಾನಲ್ಲ, ನೀವು ದುರ್ಗದ ನಾಯಕರಾಗಿರಬೇಕಾಗಿತ್ತು.....”

-ಮದಕರಿನಾಯಕ ಟೊಳ್ಳಾದ ಧ್ವನಿಯಲ್ಲಿ ಹೇಳಿದ.

“ನಾಯಕಗಿರಿ ಬೇಡ, ಎರಡು ದಿನ ಪ್ರಧಾನಿ ಪದವಿ ಕೊಡಿಸಿ- ಅವರಿಗೆ ಹಿಡಿದ ಗ್ರಹಚಾರ ಬಿಡಿಸುತ್ತೇನೆ. ನಿಮಗೆ ಎಲ್ಲವನ್ನೂ ಕೊಟ್ಟೇ ಅಭ್ಯಾಸವೇ ಹೊರತು, ತೆಗೆದುಕೊಳ್ಳುವುದು ಹೇಗೆಂದು ಅಭ್ಯಾಸವಾಗಿಲ್ಲ. ನವಾಬರನ್ನು ನೋಡಿ, ನೀವು ಇಂಥ ವಿಷಯದಲ್ಲಿ ಪಾಠ ಕಲಿಯಬೇಕು. ಅವರ ಬಾರುಕೋಲಿಗೇ ಖಾಜಿ, ಮುಲ್ಲಾ - ಎಲ್ಲಾ ತೆಪ್ಪಗಾಗುತ್ತಾರೆ.”

“ನವಾಬರು ಮಾಡುವುದನ್ನೆಲ್ಲಾ ನಾವು ಕಲಿತಿದ್ದರೆ, ಈ ಯುದ್ಧವೇ ನಡೆಯುತ್ತಿರಲಿಲ್ಲ. ಹೋಗಲಿ ಬಿಡಿ. ನಮ್ಮ ಪ್ರಧಾನಿಗಳೂ ನಿಮ್ಮ ಹಾಗೇ ಕಟ್ಟಪ್ಪಣೆಮಾಡಿ, ಈಗ ಧರ್ಮದ ವಿಷಯ ನಮ್ಮ ಮನೆಬಾಗಿಲಿಗೇ ಬಂದಿದೆ - ಇತ್ಯರ್ಥಕ್ಕಾಗಿ. ಆಗಲಿ, ನೀವು ಹೇಳಿದ ಮಾತನ್ನು ನಾವೂ ನಮ್ಮ ಸರ್ದಾರರಿಗೆ ಹೇಳುತ್ತೇವೆ. ಮುಂದೇನಾಗುವುದೋ- ನೋಡೋಣ. ಪರಶುರಾಮಣ್ಣ - ಸರ್ದಾರರನ್ನು ನಮ್ಮ ಬಳಿ ಕಳಿಸಿ”

-ಎಂದ ಮದಕರಿನಾಯಕ,

* * *

ಬೆಳ್ಳಗೆ ಕೊಕ್ಕರೆಯಂತೆ ಬಿಳುಪಾದ ಉಡುಪನ್ನು ಧರಿಸಿ. ತಲೆಯ ಮೇಲೆ ಅದೇ ಬಣ್ಣದ ಟೊಪ್ಪಿಗೆಯನ್ನಿಟ್ಟ ಖಾಜಿ ಜಮಾಲ್‌ಸಾಹೇಬ್-

ತಮ್ಮ ಸರ್ದಾರ ಪದವಿಯಧಿಕಾರವಾದ ಸಮವಸ್ತ್ರ ಧರಿಸಿದ ಸಲಬತ್‌ಖಾನ್, ಕುತುಬುದ್ದೀನ್‌ಖಾನ್, ಸಲಾಬತ್‌ಖಾನ್, ಮೋಹದೀನ್ ಖಾನ್, ಕಲ್ಯಾಣಿಖಾನ್ –

ನಾಯಕರಿಗೆ ಮುಜುರೆ ಸಲ್ಲಿಸಿ, ನಿಯಮಿತವಾದ ಆಸನಗಳಲ್ಲಿ ಕುಳಿತು ನಾಯಕರತ್ತ ನೋಡಿದರು.

"ನಿಮ್ಮ ವಿಷಯವನ್ನೆಲ್ಲಾ ಪ್ರಧಾನಿಗಳು ತಿಳಿಸಿದರು. ಅವರು ತಮಗೆ ಹೇಳಿದ ನಿರ್ಧಾರವನ್ನು, ಅದಕ್ಕೆ ಕೊಟ್ಟ ಕಾರಣಗಳನ್ನು ನಮಗೆ ಹೇಳಿದರು. ದುರ್ಗದ ಹಿರಿಯ ಜನ ನೀವು. ಈಗಿನ ವಿಷಮಸ್ಥಿತಿಯನ್ನೂ ಬಲ್ಲವರು. ನಾವೇನು ಹೇಳಬೇಕೋ - ಹೇಳಿ ?"

-ತೀರ್ಮಾನವನ್ನು ಅವರಿಗೇ ಬಿಟ್ಟಂತೆ ಹೇಳಿದ ಮದಕರಿನಾಯಕ.

"ವಿಷಯವೆಲ್ಲಾ ಖಾವಂದರಿಗೆ ತಿಳಿದಿದೆ. ನಾವು ತಮಗೆಷ್ಟು ನಿಷ್ಠರೋ, ನಮ್ಮ ಧರ್ಮಕ್ಕೂ ಅಷ್ಟೇ ನಿಷ್ಠರು. ಆ ಎರಡರ ಬಗ್ಗೆಯೂ ನಮ್ಮ ನಿಯತ್ತನ್ನು ಖಾವಂದರೂ ಸಂದೇಹಿಸಬಾರದು. ಅಷ್ಟೇ ನಮ್ಮ ಮನವಿ."

- ಎಲ್ಲರ ಪರವಾಗಿ ಖಾಜಿ ಜಮಾಲ್ ಸಾಹೇಬ್ ಹೇಳಿದರು.

"ತಾವು ಧರ್ಮಗುರುಗಳು. ನೀವು ಹಾಗೆ ಹೇಳುವುದು ಸರಿ. ಆದರೆ ಪರಿಸ್ಥಿತಿಯನ್ನರಿತ ನಮ್ಮ ಸರ್ದಾರರು ಏನು ಹೇಳುತ್ತಾರೆ ?"

"ಖಾವಂದರು ನಮ್ಮನ್ನು ಮಾಫ್ ಮಾಡಬೇಕು. ರಾಜ್ಯದ ವಿಷಯದಲ್ಲಿ ನಮಗೆ ನಿಮ್ಮ ಮಾತು ಆಖ್ಯೆರು. ಧರ್ಮದ ವಿಷಯದಲ್ಲಿ ಖಾಜಿಗಳು ಹೇಳಿದ ಹಾಗೆ ಕೇಳುವವರು ನಾವು. ಯುದ್ಧ ವಿಷಯದಲ್ಲಿ ತಮ್ಮ ಮಾತನ್ನು ನಾವೆಂದೂ ಮೀರಿ ನಡೆದಿಲ್ಲ. ಧರ್ಮದ ವಿಷಯದಲ್ಲೂ ಹಾಗೇ-"

-ಎಲ್ಲರೂ ಒಟ್ಟಿಗೆ ಮಾತನಾಡಿಕೊಂಡು ಬಂದು, ತಮ್ಮ ತೀರ್ಮಾನವನ್ನು ಸಲಬತ್‌ಖಾನನ ಬಾಯಲ್ಲಿ ಆಡಿಸಿದರು ಮುಸಲ್ಮಾನ್ ಸರ್ದಾರರು.

"ಅಂತೂ – ಈ ಹೊತ್ತಿನಲ್ಲೂ ಖಾಜಿಸಾಹೇಬರ ಮಾತೇ ನಿಮಗೆ ನಿಯಮ. ಆದರೆ ವಿಷಯ ತಿಳಿದುಕೊಳ್ಳಲು ಒಂದು ಮಾತು ಕೇಳುತ್ತೇವೆ. ಹೊರಗಿರುವ ನವಾಬರೂ ಮುಸಲ್ಮಾನರು. ಅವರ ಸೇನೆಯಲ್ಲೂ ಸಾಕಷ್ಟು ಮುಸಲ್ಮಾನರಿದ್ದಾರೆ. ಈ ಹೊತ್ತಿನಲ್ಲಿ ಅವರೇನು ಮಾಡುತ್ತಾರೆ ? ಅವರು ಮಾಡಿದ ಹಾಗೆ ನೀವು ಮಾಡಿದರಾಗದೆ ?"

-ಅಲಗಿನಿಂದ ಅವರೆದೆಯನ್ನು ಬಗೆದು, ಅದರ ಅಂತರಾಳವನ್ನು ಬೆದಕುವವನಂತೆ ಕೇಳಿದ ಮದಕರಿನಾಯಕ.

"ನವಾಬರು ಹುಟ್ಟಿನಿಂದ ಮುಸಲ್ಮಾನರು, ಆಚರಣೆಯಲ್ಲಲ್ಲ, ಅವರು ದಿನಾ ನಮಾಜು ಮಾಡುತ್ತಾರೆಯೇ - ಕೇಳಿ ನೋಡಿ. ನೆಟ್ಟಗೆ ಉರ್ದೂಭಾಷೆ ಮಾತಾಡಲು, ಬರೆಯಲು ಬರದವರು ಅವರು. ಆದ್ದರಿಂದ ಅವರು ನಮಗೆ ಮಾದರಿಯಲ್ಲ. ನಾವು ಸಚ್ಚಾ ಇಸ್ಲಾಂ ಜನ. ನಾವು ಇಲ್ಲಿರಲಿ, ದಿಲ್ಲಿಯಲ್ಲಿರಲಿ - ನಾವು ನಮಾಜು ಮಾಡುವುದು ಮಕ್ಕಾ ಇರುವ ದಿಕ್ಕಿಗೆ ತಿರುಗಿಕೊಂಡೇ. ನಿಮ್ಮ ದೇಶದಲ್ಲಿದ್ದೇವೆ ಎಂದು ನಮ್ಮ ಭಾಷೆಯನ್ನು ಬಲದಿಂದ ಎಡಕ್ಕೆ ಬರೆಯುವುದನ್ನು ಬಿಟ್ಟು, ನಿಮ್ಮ ಹಾಗೆ ಎಡದಿಂದ ಬಲಕ್ಕೆ ಬರೆಯುವುದಿಲ್ಲ. ಇಲ್ಲಿದ್ದೇವೆ ಎಂದು ನಮ್ಮ ಹೆಂಗಸರು ಘೋಷಾ

ಬಿಟ್ಟಿದ್ದಾರೆಯೇ ? ಆದ್ದರಿಂದ ನಮ್ಮ ಧರ್ಮದ ವಿಷಯ ಬಹಳ ಕಟ್ಟುನಿಟ್ಟು; ಪಂಜಾ ತೊಳೆಯುವ ವಿಷಯದಲ್ಲೂ ಅಷ್ಟೆ. ಒಂದು ಸಲ ನಮ್ಮ ಶಾಸ್ತ್ರದಲ್ಲಿ ಎಲ್ಲಿ ಪಂಜಾ ತೊಳೆಯಬೇಕೆಂದು ಹೇಳುತ್ತದೋ ಅಲ್ಲೇ ತೊಳೆಯ ಬೇಕು."

- ಧರ್ಮದ ವಿಷಯದಲ್ಲಿ ತಮ್ಮ ನಿರ್ಧಾರ ಅಚಲವೆಂಬಂತೆ ಹೇಳಿದರು, ಖಾಜಿ ಸಾಹೇಬರು.

"ಆದರೆ ಈಗ ಮಲ್ಲಾಪುರದ ಬಳಿ ನವಾಬರ ಸೇನೆ ಇದೆ."

"ಇರಲಿ - ಅವರು ನಮ್ಮ ಧರ್ಮಕಾರ್ಯಕ್ಕೆ ಅಡ್ಡಿ ಬಂದರೆ, ಅವರ ರಕ್ತದಲ್ಲಿ ಕೈತೊಳೆದು, ಮಲ್ಲಾಪುರದಲ್ಲಿ 'ಪಂಜಾ' ತೊಳೆದು ಬರುತ್ತೇವೆ. ನಮಗೆ ನವಾಬರ ಭಯವಿಲ್ಲ. ತಮ್ಮ ಅಪ್ಪಣೆಯಷ್ಟೇ ಬೇಕಾದದ್ದು." - ಸಲಬತ್‌ಖಾನ್ ಹೇಳಿದ.

"ಒಂದು ವೇಳೆ ನಾವು ಇದಕ್ಕೆ ಪರವಾನಗಿ ಕೊಡದಿದ್ದರೆ...."

"ಅದು ತಮ್ಮ ಚಿತ್ತ. ಖೈದಿಗೆ ಯಾವ ಸ್ವಾತಂತ್ರ್ಯವೂ ಇಲ್ಲ, ಹಾಗೇ ಧರ್ಮ ಸ್ವಾತಂತ್ರ್ಯವೂ ಇಲ್ಲ. ನಾವು ತಮ್ಮ ಸರ್ದಾರರಲ್ಲ, ಖೈದಿಗಳು ಎಂದು ಹೇಳುವುದಾದರೆ ತಮ್ಮ ಪಾದಕ್ಕೆ ಕತ್ತಿ ಒಪ್ಪಿಸಿ, ಖೈದಿಗಳಾಗಿ ದುರ್ಗದಲ್ಲಿರುತ್ತೇವೆ. ಹೇಗೆ ಮಾಡುವುದೂ ಖಾವಂದರ ಮರ್ಜಿ." - ಕುತುಬುದ್ದೀನ್‌ಖಾನ್ ಹೇಳಿದ.

"ಒಂದು ವೇಳೆ ಖಾಜಿ ಸಾಹೇಬರು ನಮ್ಮ ಮಾತಿಗೆ ಒಪ್ಪಿದರೆ...."

"ಪಾಪ-ಪುಣ್ಯ ಅವರಿಗೆ ಸೇರಿದ್ದು. ಧರ್ಮದ ವಿಷಯದಲ್ಲಿ ಅವರದೇ ಪರಮಾಧಿಕಾರ."

- ಸಲಬತ್‌ಖಾನ್ ಹೇಳಿದ.

"ಆಯಿತು - ತೀರ್ಮಾನವನ್ನು ಅವರಿಗೇ ಬಿಡುತ್ತೇವೆ. ಖಾಜಿ ಸಾಹೇಬರು ಹೇಳಬೇಕು."

- ಮೊನಚುನೋಟದಿಂದ ಖಾಜಿ ಸಾಹೇಬರನ್ನು ನೋಡುತ್ತಾ ಕೇಳಿದ ಮದಕರಿನಾಯಕ.

"ಖಾವಂದ್ ಧರ್ಮದ ವಿಷಯದಲ್ಲಿ ಸಂದರ್ಭ ಬಂದಹಾಗೆ ಮಾತಾಡಿ ನಮಗೆ ಅಭ್ಯಾಸವಿಲ್ಲ. ಯಾವಾಗಲೂ ಒಂದೇ ಮಾತು. ನಮಗೆ ದೇವರು ಒಬ್ಬನೇ, ಪೈಗಂಬರರು ಒಬ್ಬರೇ, ಧರ್ಮಗ್ರಂಥವೂ ಒಂದೇ, ಮಾತೂ ಒಂದೇ - ಈ ವಿಷಯದಲ್ಲಿ ನಮ್ಮ ನಾಲಗೆಯಲ್ಲಿ ಒಡಕಿಲ್ಲ." – ಅಂತಿಮ ತೀರ್ಮಾನವೆಂಬಂತೆ ಹೇಳಿದರು, ಖಾಜಿ ಜಮಾಲ್ ಸಾಹೇಬ್.

ಅವರ ಮಾತನ್ನು ಕೇಳಿ –

ಮದಕರಿನಾಯಕನಿಗೆ, ಹಿಂದೆ ಇಂಥದೇ ಧರ್ಮಪ್ರಸಂಗದಲ್ಲಿ ಶ್ರೀ ಮುರುಗೀಸ್ವಾಮಿಗಳು, ಕೂಡಲೀ ಶೃಂಗೇರಿ ಮಠದ ಶ್ರೀಗಳು ಹೇಳಿದ್ದ ಮಾತುಗಳೂ ನೆನಪಾಗಿ –

ಅದರೊಂದಿಗೇ –

'ದೇವರು, ಧರ್ಮಕ್ಕೆ ಬೆಂಕಿ ಹಚ್ಚಿ, ರಾಜಾಸಾಹೇಬ್ ; ದೇಶದ ಯೋಚನೆ ಮಾಡಿ'

-ಎಂದ ಸರ್ದಾರ್‌ಖಾನನ ಮಾತೂ ನೆನಪಾಗಿ –

'ದೇವರು ಧರ್ಮ- ಶಾಸ್ತ್ರ-

'- ಇವು ಮನುಷ್ಯನನ್ನು ಉಳಿಸಲು ಹುಟ್ಟಿದವೇ, ಅಥವಾ ಕೊಲ್ಲಲು ಹುಟ್ಟಿದವೇ ?'

- ಎಂಬ ಅನುಮಾನವಾಗಿ, ಅದೆಲ್ಲದರ ಬಗ್ಗೆಯೂ ಕ್ರೋಧ ಮೂಡಿದರೂ, ಇಂಥ ಮಾತಿಗಾಗಿಯೇ ಶ್ರೀ ಮುರುಗೀಸ್ವಾಮಿಗಳು ರಾಜ್ಯತ್ಯಾಗ ಮಾಡಿದುದು ನೆನಪಾಗಿ, ಹಾವನ್ನು ಹಿಡಿದುಕೊಂಡು ಅದನ್ನು ಹಿಡಿಯಲೂ-ಬಿಡಲೂ ಆಗದೆ ಹೆದರುವ ಹೇಡಿಯಂತಾಗಿ, ಮುಂದೇನು ಹೇಳಲೂ ತೋಚದೆ, ವಿಧಿಗೆ ತಲೆಬಾಗಿದವನಂತೆ –

"ಆಯಿತು - ನಿಮ್ಮ ಧರ್ಮದಂತೆ ನೀವು ನಡೆದುಕೊಳ್ಳಿ. ಪರವಾನಗಿ ಕೊಡಲು ಪ್ರಧಾನಿಗಳಿಗೆ ಹೇಳುತ್ತೇವೆ. ಆದರೆ ಇಂದಿನ ಜನವಲ್ಲ, ಮುಂದಿನ ಜನ ನಿಮ್ಮನ್ನು ನಿಂದಿಸದಂತೆ ನಡೆದುಕೊಳ್ಳಿ" – ಎಂದು ಹೇಳಿ ಎದ್ದು ನಿಂತ ಮದಕರಿನಾಯಕ.

"ಖುದಾ ಆಪ್‌ಕೋ ಭಲಾಕರೆಂ, ಆಪ್ ಕಭಿ ಸಲಾಮತ್ ರಹೋ".

-ಎಂದು ಹೇಳಿ ಕೈಎತ್ತಿ ಆಶೀರ್ವದಿಸಿದರು ಖಾಜಿ ಜಮಾಲ್‌ಸಾಹೇಬರು.

ಆ ಮಾತನ್ನು ಮದಕರಿನಾಯಕನ ಕಿವಿ ಕೇಳಿತು –

ಆದರೆ ಆತನ ಹೃದಯ ಹೇಳಿತು-

'ಇದು ನನಗೆ ಹೇಳಿದ ಮಾತಲ್ಲ. ಮನುಷ್ಯರ ಬಾಯಿಗೆ ಬಿದ್ದ ಧರ್ಮ - ಧರ್ಮವಲ್ಲ, ಸೂಳೆಗೇರಿಗೆ ಸೇರಿದ ಗರತಿ.'

ಹಾಗೆಂದುಕೊಳ್ಳುತ್ತಲೇ, ಅಲ್ಲಿಂದ ಮದಕರಿನಾಯಕ ಅಂತಃಪುರದೊಳಗೆ ನಡೆದ.

೨೯

ವಿಷಣ್ಣ ಮುಖಭಾವದಿಂದ, ಭಾರವಾಗಿ ಹೆಜ್ಜೆ ಹಾಕುತ್ತಾ ಬಂದ ಮಗನನ್ನು ನೋಡಿದ ನಿಂಗವ್ವ –

"ಏಕೆ ಮದಕೇರಣ್ಣ, ಹೀಗಿದೀಯ ? ಸಭೆಯಲ್ಲೇನಾಯಿತು ?"

-ಎಂದು ಕಳಕಳಿಯಿಂದ ಕೇಳಿದಳು.

"ಏನಾಯಿತೇ – ಆಗಬಾರದ್ದೆಲ್ಲಾ ಆಗುತ್ತಿದೆ. ಏನಾಗುತ್ತದೆಯೋ ಆಗಲಿ."

-ನಿರ್ವಿಣ್ಣನಾಗಿ ಹೇಳಿದ ಮದಕರಿನಾಯಕ.

ಮಗನ ಮಾತಿನ ಧ್ವನಿಯನ್ನು ಕೇಳಿಯೇ ನಿಂಗವ್ವನ ಕರುಳಲ್ಲಿ ಕತ್ತರಿಯಾಡಿಸಿದಂತಾಗಿ–

"ಏಕೋ ಗ್ರಹಚಾರ ಚೆನ್ನಾಗಿದ್ದಂತಿಲ್ಲ. ದಿನವೂ ಒಂದಲ್ಲ ಒಂದು – ಜೋಯಿಸರನ್ನಾದರೂ ಕರೆಸಿ ಕೇಳಬೇಕು" - ಎಂದಳು.

"ಜೋಯಿಸರನ್ನು ಕರೆಸಿ ಏನು ಕೇಳುತ್ತೀಯಾ, ಅವ್ವಾ ?"

"ನಿನ್ನ ಜಾತಕಬಲ ಹೇಗಿದೆಯೆಂದು ?"

"ನನ್ನ ಜಾತಕಫಲ ಹೇಳುವ ಜೋಯಿಸರಿರಬಹುದು ಅವ್ವಾ, ಆದರೆ ದುರ್ಗದ ಜಾತಕಫಲ ಹೇಳುವವರು ಯಾರಾದರೂ ಇದ್ದಾರೇನೋ ನೋಡು. ಬಿಡವ್ವ - ಈ ಧರ್ಮ, ಶಾಸ್ತ್ರ ಯಾವುದೂ ಬೇಡ. ಎಲ್ಲಾ ನಂಬಿದವರನ್ನು ನಡುನೀರಿನಲ್ಲಿ ಕೈಬಿಡುವವೇ - ಕಲ್ಲಾಗಿದ್ದರೂ, ಮಾತಾಡದ ಆ ತಾಯಿಯೇ ಸಾಕು. ನೋಡಿದರೆ - ತೋಳಿಗೆ ಬಲ ಬರುತ್ತದೆ. ಈ ತೋಳಿನಲ್ಲಿ ಬಲ ಇದ್ದರೆ ದುರ್ಗ ಉಳಿಯುತ್ತದೆ, ಇಲ್ಲ ಹೋಗುತ್ತದೆ. ಬಹುಶಃ ಹೋಗುವವರನ್ನು ತಡೆಯುವುದು ಆಕೆಗೂ ಸಾಧ್ಯವಿಲ್ಲವೋ, ಅದೇ ಆಕೆಯ ಇಚ್ಛೆಯೋ – ನನಗಂತೂ ಯಾವುದೂ ತಿಳಿಯುತ್ತಿಲ್ಲ...."

– ಎಂದು ಹೇಳಿ, ಮತ್ತೇನೋ ಚಿಂತಿಸಿ –

"ಅವ್ವಾ, ಆಕೆ ಹೇಗಿದ್ದಾಳೆ ?"

-ಎಂದು ಕೇಳಿದ ಮದಕರಿನಾಯಕ.

"ಯಾರು ?"

"ಜರಿಮಲೆಯವರ ಮಗಳು...."

- ಎಂದು ಮುಂದೇನೋ ಹೇಳಲಿದ್ದ ಮದಕರಿನಾಯಕನನ್ನು ಮಾತಿನ ಮಧ್ಯದಲ್ಲಿಯೇ ತಡೆದು –

"ಜರಿಮಲೆಯವರ ಮಗಳು - ಬಂಗಾರವ್ವನನ್ನು ಹಾಗೆಂದವರ ಬಾಯಲ್ಲಿ ಹುಳ ಬೀಳಲಿ. ಕರುಳಿಗೆ ಬೆಂಕಿ ಹಚ್ಚಿಕೊಂಡು, ಹೆತ್ತ ತಂದೆಯನ್ನು ನಿನ್ನ ಕೈಗೆ ಕಡಿಯಲು ಒಪ್ಪಿಸಿದಳಲ್ಲಾ, ಆಕೆಯನ್ನು 'ನನ್ನ ಹೆಂಡತಿ' ಎಂದು ಕರೆಯಲೂ ನಿನಗೆ ನಾಚಿಕೆ ಏನು ? ಎಂಥ ಮಗ ಹುಟ್ಟಿದೆಯಪ್ಪಾ, ನನ್ನ ಹೊಟ್ಟೆಯಲ್ಲಿ. ನಿನ್ನ ಹೆಂಡತಿ ಎಂದು ಕರೆಯಲು ನಿನಗಿಷ್ಟವಿಲ್ಲವಾದರೆ 'ನನ್ನ ಸೊಸೆ' ಎಂದು ಕರಿ, ಕಿರೀಟ ಇಟ್ಟಷ್ಟು ಸಂತೋಷಪಡ್ತೀನಿ. ಇನ್ನೊಂದು ಸಲ ಆಕೆಯ ಬಗ್ಗೆ ಕೆಟ್ಟ ಮಾತಾಡೀಯ ?"

-ಎಂದು ತಟಕ್ಕನೆ ರೇಗಿ ಹೇಳಿದಳು ನಿಂಗವ್ವ.

ಆಕೆ ಅಷ್ಟು ಸಿಟ್ಟಾದುದನ್ನು ಮದಕರಿನಾಯಕ ಹಿಂದೆಂದೂ ಕಂಡಿರಲಿಲ್ಲ.

"ತಪ್ಪಾಯಿತವ್ವ - ನನ್ನಿಂದ ನೂರು ತಪ್ಪಾಯಿತು, ಬಾಯಿ ಜಾರಿ ಆಡಿಬಿಟ್ಟೆ."

- ಸಹಜ ಪಶ್ಚಾತ್ತಾಪವಿದ್ದ ಧ್ವನಿಯಲ್ಲಿ ಹೇಳಿದ ಮದಕರಿನಾಯಕ –

"ಹೇಗಿದಾಳವ್ವಾ ಅವಳು ?"

"ನನ್ನ ಕೇಳಬೇಕೇ ? ಕೆಂಡದ ಮೇಲೆ ಬಿದ್ದ ಹೂವು ಹೇಗಿರುತ್ತದೆ - ಹೋಗಿ ನೋಡು – ಕರುಳಿದ್ದರೆ ಎರಡು ಮಾತಾಡಿಸು."

"ನಿಜ ಹೇಳಲೇ ಅವ್ವಾ, ಅವಳ ಮುಖ ನೋಡಲೂ ನನಗೆ ನಾಚಿಕೆಯಾಗುತ್ತದೆ – ಕೊಲೆಗಡುಕ ಮೋರೆ ಹೊತ್ತುಕೊಂಡು ಹೋಗಿ, ಹೇಗೆ ನೋಡಲವ್ವಾ ಅವಳನ್ನು ?"

- ಬೇಯುತ್ತಿದ್ದ ಧ್ವನಿಯಲ್ಲಿ ಕೇಳಿದ ಮದಕರಿನಾಯಕ.

ಆ ಮಾತಾಡಿದ ಮಗನ ಮುಖ ನೋಡಿ, ಅವನಾಡಿದ ಮಾತು ಹೃದಯದಿಂದ ಬಂದದ್ದು ಎಂದು ನಂಬಿಕೆಯಾಗಿ –

"ಹೇಗಾದರೂ ಆಗಲಿ - ನೀನೇ ಹೋಗಿ ಅವಳನ್ನು ನೋಡಬೇಕಪ್ಪ. ಈಗ ನೀನಲ್ಲದೆ, ಅವಳಿಗೆ ಇನ್ನಾರು ದಿಕ್ಕು" - ಎಂದಳು ನಿಂಗವ್ವ.

"ನೋಡಬೇಕವ್ವಾ, ಆದರೆ ಅವಳು ನನ್ನ ಮುಖ ನೋಡುತ್ತಾಳೆಯೇ, ನೋಡಿ ಹೇಸಿಕೊಂಡರೆ....ನೀನೂ ನನ್ನ ಜೊತೆ ಬಾ."

"ಊಹೂ – ಹೋಗು, ನೋಡು, ಮಾತಾಡಿಸು - ಬಾಯಲ್ಲ, ಹೃದಯಗಳು ಮಾತಾಡುವಾಗ ಮಧ್ಯೆ ಮೂರನೆಯವರಿರಬಾರದು."

"ಎಲ್ಲಿದಾಳೆ ?"

"ಇಷ್ಟು ದಿನ ಪದ್ಮವ್ವ ಜೊತೇಲಿದ್ದವಳು. ಇದಾದಾಗಿನಿಂದ ಅವಳ ಅಂತಃಪುರದಲ್ಲೇ ಇದಾಳೆ - ತುಂಬಿದೂರಿನಲ್ಲಿ ತಬ್ಬಲಿಯಾಗಿ. ಹೇಗಾದರೂ ಮಾಡಿ, ಇವತ್ತಾದರೂ ಅವಳಿಗೆ ಊಟ ಮಾಡಿಸು, ಮೂರು ದಿನದಿಂದ ಅನ್ನದ ಅಗಳು ಮುಟ್ಟಿಲ್ಲ."

- ಕಣ್ಣಲ್ಲಿ ಕಂಬನಿ ತುಂಬಿಕೊಂಡು ಹೇಳಿದಳು ನಿಂಗವ್ವ –

"ಆ ತಾಯಿ - ಮನುಷ್ಯರಿಗಿಂಥ ಕಷ್ಟ ಕೊಡಬಾರದು; ಕೊಟ್ಟರೆ, ಕಲ್ಲಿನ ಹೃದಯ ಕೊಡಬೇಕು."

ತಾಯಿಯಾಡಿದ ಮಾತನ್ನೇ ತಾನೂ ಮನಸ್ಸಿನಲ್ಲಿ ಹೇಳಿಕೊಳ್ಳುತ್ತಾ ಬಂಗಾರವ್ವ ನಾಗತಿಯ ಅಂತಃಪುರದತ್ತ ನಡೆದ, ಮದಕರಿನಾಯಕ.

* * *

ಮದಕರಿನಾಯಕ ಬಂಗಾರವ್ವನಾಗತಿಯ ಅಂತಃಪುರದೊಳಗೆ ಹೋಗಿ ನೋಡಿದಾಗ –

ಬಂಗಾರವ್ವನಾಗತಿ ಮಂಚದ ಮೇಲೆ ಮುಖ ಅಡಿಯಾಗಿ ಮಲಗಿದ್ದಳು.

ಮಂಚದ ಒಂದು ಪಕ್ಕಕ್ಕೆ ಜೋತುಬಿದ್ದ ತೋಳು, ಕೆದರಿದ ಕೂದಲು, ಜಾರಿದ ವಸ್ತ್ರ, ನೆಲದ ಮೇಲೆ ಬಿದ್ದ ಹೊದಿಕೆ, ಹಾಸಿಗೆಯಿಂದ ಅರ್ಧಜಾರಿದ ದಿಂಬು, ಕಿಟಕಿಗಳಿಗೆ ಹಾಕಿದ ತೆರೆ ಸರಿಸದೆ, ಹೊಸಗಾಳಿ ಬೀಸದೆ, ಹಳತಾದ ಗಾಳಿ, ಮಸಿಗಟ್ಟಿದ ದೀಪದಂತೆ ಮಂಕಾದ ಬೆಳಕು, ಎಲ್ಲವೂ ಜಡ, ಎಲ್ಲವೂ ಮೂಕ ; ಇದೆಲ್ಲದರ ಮೇಲೆ ಮಾಘಮಾಸದ ಚಳಿಯನ್ನೆಲ್ಲಾ ತಂದು ರಾಶಿ ಹಾಕಿದಂಥ, 'ಜೀವಂತ ವಸ್ತುವೊಂದು ಇಲ್ಲಿದೆಯೇ ?' ಎಂಬ ಅನುಮಾನ ಬರಿಸುವಂಥ, ಮಂಜುಗವಿದ ಕೊಳದ ತಣ್ಣೀರಿನಂಥ ವಾತಾವರಣ.

ಆ ವಾತಾವರಣದಲ್ಲಿ ಉಸಿರಿಡಲು, ಉಸಿರಾಡಲು ಕಷ್ಟವಾಗಿ, ನೆಲಕ್ಕೆ ಹಾಸಿದ, ಕಾಲಿಟ್ಟಾಗ ಧೂಳೇಳುವ ರತ್ನ ಗಂಬಳಿಯ ಮೇಲೆ ಹೂವಿನ ಮೇಲೆ ನಡೆಯುವಷ್ಟು, ಮಲಗಿದ ಮಡದಿಯ ಹೃದಯವನ್ನು ತುಳಿದು ನಡೆಯುತ್ತಿದ್ದೇನೋ ಎಂಬಂತೆ ಮೃದುವಾಗಿ ಮಂಚದತ್ತ ನಡೆದು, ಮೂವರು ಮಲಗುವಷ್ಟು ವಿಶಾಲವಾದ ಸುಪ್ಪತ್ತಿಗೆಯ ಮೂಲೆಯಲ್ಲಿ ಹಿಡಿಯಷ್ಟಾಗಿ ಮಲಗಿದ ಹೆಂಡತಿಯ ಪಕ್ಕದಲ್ಲಿ ಕುಳಿತು, ತಾನು ಬಂದದ್ದೂ ಅರಿವಾಗದ ಬಂಗಾರವ್ವ ನಾಗತಿಯನ್ನು, ಬಹು ಮೃದುವಾಗಿ ಮುಟ್ಟಿದ ಮದಕರಿನಾಯಕ - ಮೈ ಬೆಚ್ಚಗಿತ್ತು, ಆದರೆ ಮುಟ್ಟಿದಾಗ ಅಲುಗಾಡಲಿಲ್ಲ.

ಹಾಗೆಯೇ ಆ ಮೈಯನ್ನು ನೋಡನೋಡುತ್ತಾ ಗತವರ್ಷಗಳನ್ನು ಚಿಂತಿಸಿದ ಮದಕರಿನಾಯಕ –

ಆ ಮಾಸಲುದಂತದ ಬಣ್ಣದ ಮೈ ತನಗೆಷ್ಟು ಬಗೆಯ ಸುಖ ಕೊಟ್ಟಿತ್ತು –

ಅದಕ್ಕೆ ಪ್ರತಿಯಾಗಿ –

ತಾನಾಕೆಗೆ ಕೊಟ್ಟಿದ್ದೇನು ?

ಯೋಚಿಸುತ್ತಾ ಮೈಯನ್ನೆಲ್ಲಾ ಹಿಂಡಿದಂತಾಗಿ. ಹಾಗೇ ಸೆರಗುಜಾರಿದ ಬೆನ್ನಿನ ಮೇಲೆ ತಲೆಯಿಟ್ಟು, ಆಕೆಯ ಕೆದರಿದ ತಲೆಗೂದಲಿನಲ್ಲಿ ತನ್ನ ಮುಖವನ್ನು ಮರೆಮಾಡಿಕೊಂಡ ; ಬೆನ್ನು ಬಿಸಿ ಕೆಂಡದಂತಿತ್ತು.

ಆ ಬಿಸಿಗೆ ಕರಗಿದಂತೆ –

ಆತನ ಕಣ್ಣುಗಳಿಂದ ಹರಿದ ನೀರು, ಒಣಗಿದ ಕೂದಲುಗಳಲ್ಲಿಳಿದು, ಕೊರಳಿನ ಮೇಲೆ ಹರಿಯಿತು.

ಅಷ್ಟಾದರೂ ಬಂಗಾರವ್ವನಾಗತಿ ಮಿಸುಕಾಡಲಿಲ್ಲ. ತಾನೇ ಎದ್ದು ಪ್ರಯತ್ನ ಪೂರ್ವಕವಾಗಿ ತನ್ನೆರಡು ಕೈಗಳಿಂದಲೂ ಆಕೆಯನ್ನು ಮೇಲೆತ್ತಿಕೊಂಡು ತನ್ನೆದೆಗೆ ಒರಗಿಸಿಕೊಂಡು, ತೋಳುಗಳಿಂದ ಆಕೆಯನ್ನು ಬಿಗಿದು, ಆಕೆಯ ಕಣ್ಣಲ್ಲಿ ಕಣ್ಣಿಟ್ಟು ನೋಡಿ –

"ನನ್ನನ್ನು ಕ್ಷಮಿಸುವುದಿಲ್ಲವೇ, ಬಂಗಾರಿ ?"

- ಎಂದು ಕೇಳಿದ, ತಪ್ಪು ಮಾಡಿದ ಮಗು ತನ್ನನ್ನು ಹೊಡೆದು ಅಳುತ್ತಿರುವ ತಾಯನ್ನು ಕೇಳುವಂತೆ.

ಆ ದೇಹಸ್ಪರ್ಶದಿಂದ ತನ್ನಲ್ಲೂ ಜೀವಬಂದಂತಾಗಿ, ನಿಸ್ತೇಜವಾದ ಮುಖದಲ್ಲಿ ಮಂಕಾಗಿದ್ದ ಕಣ್ಣುಗಳಿಂದ ತನ್ನ ಪತಿಯನ್ನು ನೋಡುತ್ತಾ, ಮದಕರಿನಾಯಕನ ಬಲವಾದ ಬಾಹುಬಂಧನದಿಂದ ಬಿಡಿಸಿಕೊಳ್ಳಲೆತ್ನಿಸಿ, ಆಗದೆ, ಆ ಬಾಹುಗಳ ಮೇಲೆ ತನ್ನ ಮೈ ಭಾರವನ್ನು ಬಿಟ್ಟು –

"ಈ ಪಾಪಿಮೈ ಮುಟ್ಟಿ ನಿಮ್ಮ ಮೈ ಹೊಲಸು ಮಾಡಿಕೊಳ್ಳಬೇಡಿ. ಬಿಟ್ಟು ಬಿಡಿ ಹೀಗೇ ಸವೆದು ಸಾಯಲು ನನ್ನನ್ನು ಬಿಟ್ಟುಬಿಡಿ" - ಎಂದಳು ಬಂಗಾರವ್ವನಾಗತಿ.

ಆ ಮಾತು ಕೇಳಿ ವ್ಯಥೆಯುಕ್ಕಿಬಂದು, ಬಂಗಾರವ್ವನಾಗತಿಯನ್ನು ತನ್ನೆದೆಗೆ ಬಿಗಿದುಕೊಳ್ಳುತ್ತಾ.

"ನಾವಿಬ್ಬರೂ ಜೊತೆಯಾಗಿ ಹೋಗಲು ಕೈಹಿಡಿದವರು, ಬಂಗಾರಿ. ಒಬ್ಬಳೇ ಹೋಗುವ ಮಾತಾಡಿ ನನ್ನನ್ನು ಕೊಲ್ಲಬೇಡ"

-ಎಂದು ಬಿಗಿದ ಧ್ವನಿಯಲ್ಲಿ ಹೇಳಿದ, ಮದಕರಿನಾಯಕ.

"ಇನ್ನೂ....ಈಗಲೂ....ಇಷ್ಟಾದಮೇಲೂ....ನಿಮಗೆ ನಾನು ಬೇಕೇ ?"

"ಬೇಕು – ಹಿಂದೆಂದಿಗಿಂತಲೂ ಹೆಚ್ಚಾಗಿ ನೀನು ನನಗೆ ಬೇಕು, ಬಂಗಾರಿ. ನಿನ್ನ ಪ್ರೀತಿ ಇಲ್ಲದೆ ನಾನು ಬದುಕಲಾರೆ. ನಿನ್ನ ರಕ್ತ ಹೀರಿಯೂ ನಿನ್ನ ಪ್ರೀತಿ ಬೇಡುವ ಪಾತಕಿ ನಾನು. ಹಿಂದಿನಂತೆ ಈಗಲೂ ನನ್ನನ್ನು ಪ್ರೀತಿಸುತ್ತೀಯಾ, ಬಂಗಾರಿ - ಅರಸನಾಗಿ ನಾನು ನಿನಗೆ ಮಾಡಿದ ಅಪರಾಧವನ್ನು ಮರೆತು. ಆವೊತ್ತು ನಾನು ಕೇಳಬಾರದ್ದನ್ನು ಕೇಳಿದೆ ; ನೀನು ಕೊಟ್ಟೆ. ಇವತ್ತು - ನಿನ್ನ ಪ್ರೀತಿಯನ್ನು ಕೇಳಲೂ ನನಗೆ ಅಧಿಕಾರವಿಲ್ಲ. ಅರಸನಾಗಿ ನಿನ್ನ ಪ್ರೀತಿಗೆ ಎರವಾದೆ. ಆದರೂ ಬೇಡುತ್ತಿದ್ದೇನೆ - ಇಲ್ಲವೆಂದು ಹೇಳಿ ನನ್ನ ಉಳಿದ ಬದುಕನ್ನು ಭಾರವಾಗಿ ಮಾಡಬೇಡ, ಬಂಗಾರಿ. ಇದೊಂದು ಬಾರಿ ಔದಾರ್ಯ ತೋರಿಸು, ಬಂಗಾರಿ ಹೊರಹೋದ ನನ್ನನ್ನು ಒಳಗೆ ಬರಲು ಬಿಡು."

-ದೀನನಾಗಿ ಯಾಚಕನಂತೆ ಬೇಡಿದ, ಮದಕರಿನಾಯಕ.

"ನಾನೇನು ಮಾಡಲಿ ?"

-ಏನೂ ತಿಳಿಯದವಳಂತೆ ಕೇಳಿದಳು ಬಂಗಾರವ್ವನಾಗತಿ.

"ಸದ್ಯಕ್ಕೆ ಹೆಚ್ಚೇನನ್ನೂ ಕೇಳುವುದಿಲ್ಲ - ನಿನಗೂ ಕಣ್ಣೀರು ಹಾಕಲು ಕಾರಣವಿದೆ, ನನಗೂ ಇದೆ. ದೂರವಾಗಿದ್ದು ಕಂಬನಿಗರೆಯುವುದು ಬೇಡ. ಆ ದಿನ ಮೈ-ಮನಗಳನ್ನು ಹಂಚಿಕೊಂಡಂತೆ, ಈ ದಿನ ಕಣ್ಣೀರನ್ನು ಹಂಚಿಕೊಳ್ಳೋಣ. ಅಷ್ಟಕ್ಕೆ ಅವಕಾಶ ಕೊಡುತ್ತೀಯಾ ?"

"ಎಂಥ ಮಾತು - ನಾನು ನನ್ನ ನಾಚಿಕೆಗೇಡಿನ ಹುಟ್ಟಿಗಾಗಿ ಕಣ್ಣೀರು ಹಾಕುತ್ತಿದ್ದೇನೆ. ನೀವೇಕೆ ಕಣ್ಣೀರು ಹಾಕಬೇಕು ?"

"ನಿನಗಾಗಿಯಲ್ಲ – ನನಗಾಗಿ; ಮುಟ್ಟಿದ್ದನ್ನೆಲ್ಲಾ ಸುಡುವ ಕೊಳ್ಳಿಯಂತಾದ ನನ್ನ ಬಾಳಿಗಾಗಿ. ಸಾವಿರ ಕನಸು ಕಂಡೆ ಬಂಗಾರಿ - ಆದರೆ - ಪಡೆದದ್ದು ಬರೀ ನಿಟ್ಟುಸಿರು"

-ಎಂದು ಬಂಗಾರವ್ವನಾಗತಿಯ ಎದೆಯಲ್ಲಿ ಮುಖ ಮರೆಸಿಕೊಂಡ ಮದಕರಿನಾಯಕ.

ಆತನ ಕಣ್ಣೀರಿನಿಂದ ತೋಯುತ್ತಿದ್ದ ಎದೆಯಲ್ಲಿ ಆತನ ಮುಖವನ್ನು ಒತ್ತಿಹಿಡಿದು ಬಂಗಾರವ್ವನಾಗತಿ ಹೇಳಿದಳು –

"ಬರೀ ನಿಟ್ಟುಸಿರು-ಕಣ್ಣೀರಿನ ಮಾತಾಡಬೇಡಿ, ನನ್ನ ದೊರೆ. ಈ ದುರ್ಗ ಬಯಸುವುದು ನಿಮ್ಮ ಗೆಲುವಿನ ನಗುಮುಖವನ್ನು."

"ಅದನ್ನು ದುರ್ಗಕ್ಕೆ ಕೊಡುವ ಶಕ್ತಿ ಇಂದಿರುವುದು ನಿನಗೊಬ್ಬಳಿಗೇ."

"ಇದೆಯೇ....ಇದೆಯೇ...ಆ ಶಕ್ತಿ ನನಗಿದೆಯೇ ?"

"ಇದೆ, ಬಂಗಾರಿ – ತ್ಯಾಗಕ್ಕಲ್ಲದೆ ಭೋಗಕ್ಕೆ - ಶಕ್ತಿ ನೀಡುವ ಶಕ್ತಿ ಬರುವುದಿಲ್ಲ, ನೀನು ತ್ಯಾಗಮೂರ್ತಿ."

"ಅದೆಲ್ಲಾ ನನಗೆ ಅರ್ಥವಾಗದ ದೊಡ್ಡ ಮಾತು. ನನಗೆ ತಿಳಿದಿರುವುದಿಷ್ಟೇ – ನಾನು ನಿಮ್ಮವಳು, ಅಷ್ಟಾಗಿ ಇರುತ್ತೇನೆ. ಅಷ್ಟಾಗಿ ಇಟ್ಟುಕೊಳ್ಳಿ - ನಿಮಗೆ ಬೇಕು ಎನಿಸಿದರೆ."

"ಬೇಕು....ಬೇಕು....ಬೇಕು....ನಿನ್ನ ಮೈಯ ಶಕ್ತಿಯುಂಡೇ ನಾನು ಮತ್ತೆ ಗಂಡಸಾಗಬೇಕು."

"ಬೇಕೆನಿಸಿದ್ದನ್ನು ಒಪ್ಪಿಸಿಕೊಳ್ಳಿ"

-ಎಂದಳು ಬಂಗಾರವ್ವನಾಗತಿ, ಮದಕರಿನಾಯಕನ ಕಾತರಿಸಿದ ತುಟಿಗಳಿಗೆ ತನ್ನ ತುಟಿಯೊತ್ತಿ.

ಆ ಹೊತ್ತಿನಲ್ಲಿ ಅವರಿಬ್ಬರ ಕಣ್ಣುಗಳಿಂದ ಹರಿದ ನೀರು ತುಟಿಗಳಿಗೆ ಮತ್ತೆಂದೂ ಅಗಲದಂತೆ ಬೆಸುಗೆ ಹಾಕಿತು. ಎದೆಗೆ ಎದೆಯೊತ್ತಿ - ಆ ಬೆಸುಗೆಗೆ ಅಧಿಕಾರದ ಮುದ್ರೆಯೊತ್ತಿತು.

ಸ್ವಲ್ಪ ಹೊತ್ತಾದ ಬಳಿಕ ಮದಕರಿನಾಯಕ, ಬಂಗಾರವ್ವನಾಗತಿಗೆ ಹೇಳಿದ –

“ಕಿಟಕಿಯ ತೆರೆಗಳನ್ನು ತೆಗೆದುಬಿಡು, ಬಂಗಾರಿ. ಹೊಸ ಬೆಳಕು, ಹೊಸ ಗಾಳಿ ಹರಿದುಬರಲಿ ನಮ್ಮಿಬ್ಬರ ಬಾಳಿನಲ್ಲಿ-”

ಆತನ ಮಾತಿನಂತೆ ಬಂಗಾರವ್ವನಾಗತಿ ವಾತಾಯನದ ತೆರೆ ಸರಿಸಿದಳು-

ಹೊರಗಿನಿಂದ ಹರಿದುಬಂದ ಬೆಳಕು - ಹೊಸ ಹಗಲಿನ ಅರುಣೋದಯದ ಕೆಂಗಾಂತಿಯನ್ನು ಕಂಬನಿಯ ಕರೆಗಟ್ಟಿದ ಆಕೆಯ ಕಪೋಲಗಳ ಮೇಲೆ ಮೂಡಿಸಿತು.

೨೦

ಹೊಸ ಹಗಲು-

ಹೊಸ ಚೈತನ್ಯ, ಹೊಸ ಕಾಂತಿಗಳನ್ನು ಬಯಸಿದ ಹೊಸ ಬೆಳಕು –

ಮದಕರಿನಾಯಕನಿಗೆ ತಂದು ನೀಡಿದುದು –

ಬೆಳಕನ್ನಲ್ಲ –

ಎಲ್ಲ ಬೆಳಕನ್ನೂ ಉಡುಗಿಸುವ ಅಂಧಕಾರ ವಾರ್ತೆಯನ್ನು

ಒಲಿದು ಒಂದಾದ ಹೃದಯಗಳು ಸವಿತೆಕ್ಕೆಯ ಮಾದಕತೆಯನ್ನು ಅನುಭವಿಸುತ್ತಿರುವಾಗಲೇ, ದುರ್ಗದ ಉತ್ತರ ದಿಗ್ಭಾಗದಿಂದ ತೋಪುಗಳ ಘರ್ಜನೆ ಕೇಳಿಸಿ, ಆಕಾಶದಲ್ಲಿ ಗರಿಯಾಗಿ ತೇಲುತ್ತಿದ್ದವನು - ಸಿಡಿಲಿಗೆ ಢಿಕ್ಕಿ ಹೊಡೆದಂತಾಗಿ, ಹೊದ್ದ ಹೊದಿಕೆಯನ್ನು ಕೊಡವಿಕೊಂಡು ಮೇಲೆದ್ದು, ಹೆದರಿದ ಹಕ್ಕಿಯಂತೆ ತೋಫಿನ ಸದ್ದು ಕೇಳಿಬಂದ ದಿಕ್ಕನ್ನೇ ಬೆದರಿದ ಕಣ್ಣುಗಳಿಂದ ನೋಡುತ್ತಿದ್ದ ಬಂಗಾರವ್ವನಾಗತಿಯ ಹೃದಯದಲ್ಲಿ ಧೈರ್ಯ ತುಂಬುವಂತೆ, ಅವಳ ತುಟಿಗಳಿಗೆ ಮುತ್ತಿಟ್ಟು, ಅಂತಃಪುರದಾಚೆಗೆ ಧಾವಿಸಿದ.

ಹೊರಗೆ, ಕೋಟೆಯಾಚೆ ಹಾರುತ್ತಿದ್ದ ತೋಫುಗಳ ಗಡಗಡಾಟವನ್ನು ಗುಡ್ಡದ ಗವಿಗಳು ಮಾರ್ದನಿಸುತ್ತಿರಲು ಆತುರಾತುರವಾಗಿ ಸ್ನಾನ, ಪೂಜೆ ಮುಗಿಸಿ, ಭಂಡಾರ ಧರಿಸಿ, ಉಡುಗೆಯುಟ್ಟು, ಉಪಹಾರಕ್ಕೂ ಕಾಯದೆ, ತಾಯಿ ಕೊಟ್ಟ ಹಾಲಿನ ಬಟ್ಟಲನ್ನು ಕೈಯಲ್ಲಿ ಹಿಡಿದು ಅದನ್ನು ಕುಡಿಯುತ್ತಿರುವಾಗಲೇ, ಬೆಳಗಿನ ಉಪಹಾರ ಮಾಡುತ್ತಿದ್ದ ಮಗ ಭರಮಣ್ಣನಾಯಕನನ್ನು ನೋಡಿ, ಮೈ ಬಿಸಿಯಾಗಿ –

“ದಾಸಿಯರ ಬಳೆಯ ಸದ್ದಿನಲ್ಲಿ ಹೊರಗಿನ ತೋಫಿನ ಸದ್ದು ಕೇಳುತ್ತಿಲ್ಲವೇ ? ಶತ್ರುಗಳಿಗೆ ಗೋಲಿಯ ಊಟ ಮಾಡಿಸುವ ಹೊತ್ತಿನಲ್ಲಿ ನಿಧಾನವಾಗಿ ಉಪಹಾರ ಮಾಡಲು ನಾಚಿಕೆಯಾಗುತ್ತಿಲ್ಲವೇ, ಭರಮಣ್ಣ? ಹೊರಗಲ್ಲಿ ಜನ ಸಾಯುತ್ತಿದ್ದಾರೆ, ಇಲ್ಲಿ ನೀನು ನಿಧಾನವಾಗಿ

ನಾಲಗೆಯೊಂದಿಗೆ ಸರಸವಾಡುತ್ತಿದ್ದೀಯಾ ? ಎದ್ದೇಳು - ನಾನು ಉಡುಪು ಧರಿಸುವ ವೇಳೆಗೆ ನೀನು ಕುದುರೆ ಹತ್ತಿ ಸಿದ್ಧವಾಗಿರಬೇಕು"

- ಎಂದು ಮಗನಿಗೆ ಚಮ್ಮಟಿಗೆಯಿಂದ ಜಡಿದಂತೆ ಹೇಳಿ, ಸಮರವಸ್ತ್ರ ಧರಿಸಲು ವೇಗವಾಗಿ ಹೆಜ್ಜೆ ಹಾಕಿದ.

ಉಪಹಾರ ಮಾಡುತ್ತಿದ್ದ ಭರಮಣ್ಣನಾಯಕ ಆ ಮಾತು ಕೇಳಿ, ಕುದಿನೀರು ಮೈಮೇಲೆ ಬಿದ್ದವನಂತೆ, ತಿನ್ನುತ್ತಿದ್ದ ತಿಂಡಿಯನ್ನು ತಟ್ಟೆಯಲ್ಲೇ ಬಿಟ್ಟು, ಅಲ್ಲಿಂದ ಓಡಿದ ಗುಂಡಿನ ಸದ್ದು ಕೇಳಿದ ಚಿಗರೆಯಂತೆ.

ತಿಂಡಿ ತಿನ್ನುತ್ತಿದ್ದ ಮಗನನ್ನು ಅಷ್ಟು ನಿಷ್ಠುರವಾಗಿ ಮದಕರಿನಾಯಕ ಗದರಿಕೊಂಡುದನ್ನು ಕೇಳಿದ ನಿಂಗವ್ವ-

"ಇದು ತಿಂದು ಬೆಳೆಯಬೇಕಾದ ಪ್ರಾಯ. ಅದಕ್ಕೆ ಮಾಡಬಾರದ ಅಪರಾಧ ಮಾಡಿದ ಹಾಗೆ ಸಿಟ್ಟಾಗುವುದೇ ?"

-ಎಂದು ಕೇಳಿದಳು.

"ಎಲ್ಲರನ್ನೂ ತಿನ್ನಲು ಈ ಯುದ್ಧ ಬಂದಿರುವಾಗ, ಈಗಲೂ ತಿಂಡಿಯ ಚಪಲವೇ, ಅವ್ವಾ? ನಾಳೆ ಈ ದುರ್ಗವನ್ನು ಆಳುವವನು ಬೆಳೆಸಿಕೊಳ್ಳಬೇಕಾದ ಚಪಲವಲ್ಲ ಇದು. ಒಬ್ಬನೇ ಮೊಮ್ಮಗ ಎಂದು ಮುದ್ದು ಮಾಡಿ, ಸಿಂಹಾಸನಕ್ಕೆ ಮುದ್ದೆ ಗುಂಡನ್ನು ತರಬೇಡಿ. ದುರ್ಗದ ನಾಯಕರ ಮಗ ಫಿರಂಗಿಯ ಗುಂಡಿನ ಹಾಗಿರಬೇಕು."

- ಎಂದು ತಾಯಿಗೆ ಉತ್ತರ ಕೊಟ್ಟು, ಉಡುಪು ಧರಿಸಲು ಹೊರಟ ಮದಕರಿನಾಯಕ.

ಆತ ಉಡುಪು ಧರಿಸುತ್ತಿರುವಾಗಲೇ, ಅಲ್ಲಿಗೆ ಸಮರಸನ್ನದ್ಧನಾಗಿ ತನ್ನನ್ನು ಕಾಣಲು ಬಂದ ಪರಶುರಾಮನಾಯಕನನ್ನು ನೋಡಿ –

"ಇವತ್ತೇನು ಸುದ್ದಿಯನ್ನು ತಂದೆ, ಪರಶುರಾಮಣ್ಣ?"

- ಎಂದು ಕೇಳಿದ.

"ಸುದ್ದಿಯೇನು - ಕೇಳುತ್ತಲೇ ಇದೆಯಲ್ಲ."

"ಫಿರಂಗಿಯ ಸದ್ದು ತಾನೇ - ಅದು ಇದ್ದದ್ದೇ. ಕೇಳಿ ಕೇಳಿ ನಾಯಿ ಬಗಳುವಿಕೆಯಷ್ಟು ಅದು ಕಿವಿಗೆ ಒಗ್ಗಿ ಹೋಗಿದೆ. ಅದಲ್ಲದೆ ಮತ್ತೇನು ಸುದ್ದಿ?"

"ಸುದ್ದಿಯೇ - ಸುದ್ದಿಯಲ್ಲ, ಸುದ್ದಿಗಳು. ಚಿತ್ರದುರ್ಗವೀಗ ಸುದ್ದಿಗಳ ಸಂತೆಯಾಗಿದೆ; ಕೇಳುವ ಕಿವಿ ಕಿವುಡಾಗಬಾರದೇ ಎನಿಸುವಷ್ಟು ಸುದ್ದಿಗಳು ಹರಡಿವೆ. ಆದರೆ..."

"ಆದರೆ-"

- ಅರ್ಥಕ್ಕೇ ನಿಂತ ಮಾತಿನ ಅರ್ಥ ತಿಳಿಯದೆ ಕೇಳಿದ ಮದಕರಿನಾಯಕ.

"ಇದು ಹೇಳುವ ಸುದ್ದಿಯಲ್ಲ, ಅಣ್ಣ - ನೀವೇ ನೋಡಿ"

- ಎಂದು ಭಾರವಾದ ಧ್ವನಿಯಲ್ಲಿ ಹೇಳಿ, ಪರಶುರಾಮನಾಯಕ, ತನ್ನ ಬಳಿಯಿದ್ದ ಕರಡುಕಾಗದದ ತುಂಡೊಂದನ್ನು ಮದಕರಿನಾಯಕನ ಕೈಗಿತ್ತ, ಆತನ ಕೈಯಲ್ಲಿ ಕೆಂಡವನ್ನಿಡುವಷ್ಟು ಅಳುಕಿನಿಂದ.

ಆ ಕಾಗದವನ್ನು ಕೈಯಲ್ಲಿ ಹಿಡಿದು, ಕೇಳಿದ ಮದಕರಿನಾಯಕ –

"ಏನು ಹೇಳುತ್ತದೆ – ಈ ಕಾಗದ ?"

"ನಾವು ಹೀಗೇ ಎಂದು ಖಚಿತವಾಗಿ ನಂಬುವವರು ಯಾರೂ ಇಲ್ಲವೆಂದು."

"ಹಾಗೆಂದರೆ - ?"

"ನಾನೇ ಈ ದುರ್ವಾರ್ತೆಯನ್ನು ಹೇಳಬೇಕೆ, ಅಣ್ಣಾ, ಈ ಕಾಗದ ಬರೆದವರು ಕಳ್ಳಿ ನರಸಪ್ಪಯ್ಯನವರು."

- ನಾಲಗೆಯ ಮೇಲೆ ಹಾಲಾಹಲವಿದ್ದಂತೆ ಹೇಳಿದ ಪರಶುರಾಮನಾಯಕ.

"ಕಳ್ಳಿನರಸಪ್ಪಯ್ಯ !"

- ಸತ್ತವನು ಮೇಲೆದ್ದು ಬಂದುದನ್ನು ಕಂಡಷ್ಟು ಬೆಕ್ಕಸಬೆರಗಾಗಿ ಕೇಳಿದ ಮದಕರಿನಾಯಕ –

"ಇದ್ದಕ್ಕಿದ್ದ ಹಾಗೇ ಅವರೆಲ್ಲಿಂದ ಧುಮುಕಿದರು ?"

"ನವಾಬರ ಸೆರೆಯ ನರಕದಿಂದ."

"ಏನು ಬರೆದಿದ್ದಾರೆ ?"

"ಇಂಥವರಿಗೆಂದಿಲ್ಲ – ಎಲ್ಲರಿಗೂ, 'ನಾವು ಜೀವಂತವಾಗಿ ಉಳಿಯಬೇಕೆಂದು ಬಯಸುವ ಆಪ್ತರು ನವಾಬರಿಗೆ ನೆರವಾಗಿ' ಎಂದು ಬರೆದಿದ್ದಾರೆ."

"ಯಾರಿಗೆ ಬರೆದಿದ್ದಾರೆ ?"

- ತಟಕ್ಕನೆ ಧ್ವನಿ ಸೆಟೆದು ಕೇಳಿದ ಮದಕರಿನಾಯಕ.

"ಯಾರಿಗೆ ಬರೆದಿದ್ದಾರೋ, ಎಷ್ಟು ಜನಕ್ಕೆ ಬರೆದಿದ್ದಾರೋ, ಈ ಕಾಗದ ಈಗಾಗಲೇ ಯಾರುಯಾರ ಕೈಸೇರಿದೆಯೋ - ದೇವರಿಗೇ ಗೊತ್ತು."

"ಈ ಸುದ್ದಿ ನಿನಗೆ ಹೇಳಿದವರಾರು ?"

"ಶ್ರೀಪತಿರಾಯನ ಮನೆಯಲ್ಲಿ ಈ ಕಾಗದ ಬಿದ್ದಿತ್ತಂತೆ. ಇವತ್ತು ಬೆಳಗ್ಗೆ ಅದನ್ನು ನೋಡಿದವನೇ ಶ್ರೀಪತಿರಾಯ ದಳವಾಯಿ ಕಾಶಣ್ಣನಾಯಕರಿಗೆ ಈ ಕಾಗದ ತಂದುಕೊಟ್ಟ.

ಅವರು ಇದನ್ನು ನನಗೆ ತಲುಪಿಸಲು ಹೇಳಿದರು. ನಾನದನ್ನು ನೋಡುತ್ತಿದ್ದ ಹಾಗೆಯೇ ನಿಮ್ಮ ಬಳಿ ಬಂದೆ."

"ಅಂತೂ ಕಳ್ಳಿನರಸಪ್ಪಯ್ಯ ದುರ್ಗದ ಪಾಲಿಗೆ ನರಸರ್ಪಯ್ಯ ಆದರು. ಈ ಹಾವಿನ ವಿಷಕ್ಕೇನು ಮದ್ದು ಮಾಡುತ್ತಿದ್ದಾರೆ ಕಾಶಣ್ಣನಾಯಕರು ?"

- ಕಾಲಕೆಳಗಿನ ನೆಲ ಕಳ್ಳಲುಸುಗಾದಂತೆ ಕೇಳಿದ ಮದಕರಿನಾಯಕ.

"ತಂದವರು ಇಂಥವರು, ಇಂಥವರಿಗೆ ಪತ್ರ ಸೇರಿತು ಎಂದು ಗೊತ್ತಾದರೆ ಏನಾದರೂ ಮಾಡಬಹುದಿತ್ತು. ಆದರೆ ಅದಾವುದೂ ತಿಳಿಯದು. ಅಂತೂ ಅವರು ದುರ್ಗದ ಲಗು-ಬಿಗಿ ಬಲ್ಲವರೆಲ್ಲರ ಮೇಲೂ ಕಣ್ಣಿಟ್ಟು ಕಾಯುತ್ತಿದ್ದಾರೆ. ಅವರು ಮಾಡಬಹುದಾದುದಷ್ಟೇ -ಅಷ್ಟು ಮಾಡಿ, ಎಲ್ಲಿ ಅಪಸ್ವರ ಕೇಳಿಬರುವುದೋ ಎಂದು ಕೇಳಲು ಕಿವಿಯರಳಿಸಿ ಕುಳಿತಿದಾರೆ. ಯಾರುತಾನೇ ಇನ್ನೇನು ಮಾಡಬಹುದು ?"

- ಅಸಹಾಯಕತೆ ತುಂಬಿ, ಆ ಭಾರ ಹೊತ್ತು ಬಳಲಿದ ಧ್ವನಿಯಲ್ಲಿ ಹೇಳಿದ, ಪರಶುರಾಮನಾಯಕ.

"ಯಾತ್ರೆಗೆಂದು ಹೋದ ನರಸಪ್ಪಯ್ಯ, ಯಾತ್ರೆಗೆ ಬದಲು ಪರಲೋಕಯಾತ್ರೆಗೆ ಹೋಗಿದ್ದರೇ ಲೇಸಾಗುತ್ತಿತ್ತು."

- ಬಹು ಕಹಿಯಾಗಿ ಹೇಳಿದ ಮದಕರಿನಾಯಕ –

"ನಾವು ಅಂದುಕೊಂಡ ಬೇರಾವುದೇ ನಿಜವಾಗದಿದ್ದರೂ ಇದೊಂದು ಮಾತ್ರ ನಿಜವಾಯಿತು. ಆಗಬೇಕಾದದ್ದು ಆಗಲಿಲ್ಲ, ಆಗಬಾರದ್ದು ಆಯಿತು."

"ಯಾರೇ ಹೇಳಿದರೂ, ಈಗಲೂ ನನಗೆ ನರಸಪ್ಪಯ್ಯ ದ್ರೋಹ ಮಾಡಿದರೆಂದರೆ ನಂಬುವುದು ಕಷ್ಟವಾಗುತ್ತದೆ" - ತಲೆ ತೂಗಾಡಿಸುತ್ತಾ ಹೇಳಿದ ಪರಶುರಾಮನಾಯಕ.

"ನೀನು ನಂಬು, ಬಿಡು - ಈ ಪಾಪಾಸುಕಳ್ಳಿಯ ಕುಡಿಗಳು ಎಲ್ಲೆಲ್ಲಿ ಹರಡಿದೆಯೋ, ಅದನ್ನು ನಿನ್ನ ಚಾವಡಿಯ ಕಡತಗಳಲ್ಲಿ ಹುಡುಕಿ ಕಡಿದುಹಾಕು. ಈಗ ಮಾತಿಗೆ ವೇಳೆಯಿಲ್ಲ. ಯುದ್ಧದ ಚಿಂತೆ ನಮಗೆ, ದಳವಾಯಿಗಳಿಗೆ ಬಿಟ್ಟು, ನೀನೂ ಕಾಶಣ್ಣನಾಯಕರೂ ಈ ಕೆಲಸದಲ್ಲಿ ತೊಡಗಿ, ಆದರಿಷ್ಟೆ - ಈಗ ನ್ಯಾಯ-ಅನ್ಯಾಯ, ಅನುಮಾನ-ಪರಿಹಾರ - ಈ ತಕ್ಕಡಿ ತೂಗುವ ಚಿನಿವಾರ ಕೆಲಸವನ್ನು ಬಿಟ್ಟು, ಅಲ್ಪಸಂದೇಹ ಬಂದವರನ್ನೂ ತಲೆ ಕತ್ತರಿಸಿ, ದುರ್ಗದ ಬೀದಿಗೆ ತೋರಣ ಕಟ್ಟಿಸಿ. ದುರ್ಗ ಬದುಕಲು ಈಗ ಉಳಿದಿರುವುದು ಅದೊಂದೇ ದಾರಿ. ನಾವೇ ಇವರಿಗೇನು ಮಾಡಬೇಕು ಎಂದು ನಮ್ಮ ಹತ್ತಿರ ಈ ಪ್ರಶ್ನೆಯನ್ನು ತರಲೇ ಬೇಡಿ. ಈ ಮಾತನ್ನು

ಕಾಶಣ್ಣನಾಯಕರಿಗೂ ನಮ್ಮ ಅಪ್ಪಣೆ ಎಂದು ಹೇಳು. ಆ ಮಾತು ಬಿಡು – ಯುದ್ಧರಂಗದ ಸುದ್ದಿಯೇನು ?"

"ಅತ್ತ ಕಡೆಯಿಂದ ಚಿಂತಿಸುವಂಥ ಸುದ್ದಿಯೇನೂ ಬಂದಿಲ್ಲ. ಆದರೆ ದುರ್ಗದೊಳಗೇ ಎಲ್ಲ ಭಯಗಳೂ ಬಂದು ಗೂಡುಕಟ್ಟುತ್ತಿರುವಂತಿದೆ. ಏನೇನೋ ಮಾತು ಕಿವಿಗೆ ಬೀಳುತ್ತಿವೆ. ಆದರೆ ಆ ಬಗ್ಗೆ ನೀವು ಚಿಂತಿಸಬೇಕಾಗಿಲ್ಲ - ಕಾಶಣ್ಣನಾಯಕರಿರುವವರೆಗೆ"

– ಎಂದು ಹೇಳಿದ ಪರಶುರಾಮನಾಯಕ.

ಅಣ್ಣ ತಮ್ಮಂದಿರಿಬ್ಬರೂ ಆ ಮಾತಾಡುತ್ತಿರುವಾಗಲೇ, ನಾಯಕರ ಅಂಗರಕ್ಷಕ ಪಡೆಯ ಮುಖ್ಯಸ್ಥನಾದ ಗುದಗತ್ತಿ ಓಡಿಬಂದು, ಏದುಸಿರಿಡುತ್ತಾ ಹೇಳಿದ –

"ಮಾ ಸ್ವಾಮೀ – ಘಾತವಾಯಿತು"

ಆ ಮಾತಾಡಿದ ಆತನ ಮುಖ ಬಿಳುಪೇರಿ ಧ್ವನಿ ಕಂಪಿಸುತ್ತಿತ್ತು.

ಭೂತನರ್ತನ ಕಂಡರೂ ಬೆದರದ ಗುದಗತ್ತಿಯ ಮುಖ ಬಿಳುಪೇರಿ ಬೆವರಿಡುತ್ತಿರುವುದನ್ನು ನೋಡಿಯೇ ಮದಕರಿನಾಯಕ, ಪರಶುರಾಮನಾಯಕ ಇಬ್ಬರಿಗೂ ಹಗಲು ಮಂಕಾದಂತಾಗಿ-

"ಏನಾಯಿತು, ಗುದಗತ್ತಿ ?"

- ಎಂದು ಇಬ್ಬರೂ ಒಟ್ಟಿಗೇ ಕೇಳಿದರು.

"ಸರ್ವನಾಶವಾಯಿತು, ಮಹಾಸ್ವಾಮಿ - ಕಾಶಣ್ಣನಾಯಕರ ಕೊಲೆಯಾಯಿತು."

"ಆ – ಏನಂದೆ-"

- ಕಾಣದೆ ಹಾವು ತುಳಿದಂತೆ ಮೆಟ್ಟಿಬಿದ್ದು ಕೇಳಿದ ಮದಕರಿನಾಯಕ.

ಆ ಸುದ್ದಿಯನ್ನು ಕೇಳಿದ ಕಿವಿಯನ್ನೂ ನಂಬಲಾಗದವನಂತೆ, ಮೂಕನಾಗಿ ನೋಡಿದ ಪರಶುರಾಮನಾಯಕ.

"ನಿಜ - ಮಾ ಸ್ವಾಮಿ - ಕಾಶಣ್ಣನಾಯಕರ ಕೊಲೆಯಾಯಿತು."

"ಎಲ್ಲಿ, ಯಾವಾಗ, ಹೇಗೆ ?"

- ಒಟ್ಟಿಗೇ ಅಣ್ಣ ತಮ್ಮ - ಇಬ್ಬರೂ ಪ್ರಶ್ನಿಸಿದರು.

"ಈಗ ಒಂದು ತಾಸಿನ ಕೆಳಗೆ."

"ಎಲ್ಲಿ?"

"ಬುರುಜನಹಟ್ಟಿಯ ಕುರುಬರ ಕೇರಿಯ ಒಂದು ಖಾಲಿ ಮನೆಯಲ್ಲಿ."

"ಅಲ್ಲೇಕೆ ಹೋಗಿದ್ದರು – ದಳವಾಯಿಗಳು ?"

“ಕಳ್ಳಿನರಸಪ್ಪಯ್ಯನವರ ಕಾಗದಗಳನ್ನು ಹಂಚುತ್ತಿದ್ದವರನ್ನು ಹಿಡಿಯಲು.”

“ಆ ದಾರಿ ತೋರಿಸಿದವರಾರು ?”

“ಶ್ರೀಪತಿರಾಯರು.”

“ಶ್ರೀಪತಿರಾಯರೆಲ್ಲಿದ್ದಾರೆ ಈಗ ?”

“ಕಾಶಣ್ಣನಾಯಕರೊಂದಿಗೆ ಅವರೂ ಕೊಲೆಯಾಗಿದ್ದಾರೆ.”

“ಹಾಗಿದ್ದರೆ – ಈ ಸುದ್ದಿಯನ್ನು ಕೊಟ್ಟವರು ಯಾರು ?”

“ಕಾಶಣ್ಣನಾಯಕರು, ಶ್ರೀಪತಿರಾಯರು ಕೊಟ್ಟ ಕಾಗದವನ್ನು ಪ್ರಧಾನಿಗಳಿಗೆ ತಲುಪಿಸಿ ಕೊತ್ವಾಲಚಾವಡಿಯಲ್ಲಿದ್ದಾಗ ಶ್ರೀಪತಿರಾಯರು ಬಂದು, ಕಾಶಣ್ಣನಾಯಕರಿಗೆ 'ಬುರುಜನ ಹಟ್ಟಿಯ ಕುರುಬರ ಕೇರಿಯ ಮನೆಯೊಂದು ಹೈದರಾಲಿಯ ಗೂಢಚಾರರ ಬೀಡಾಗಿದೆ ಎಂದು ತಿಳಿಯಿತು. ಅಲ್ಲಿ ಹುಡುಕಿದರೆ ಅಪರಾಧಿಗಳು ಸಿಗಬಹುದು' ಎಂದು ಹೇಳಿದರಂತೆ. ಆ ತನಿಖೆಗೆ ಕಾಶಣ್ಣನಾಯಕರು ಅವರಿವರನ್ನು ಬಿಡದೆ, ತಾವೇ ಖುದ್ದಾಗಿ ಶ್ರೀಪತಿರಾಯರೊಂದಿಗೆ ಹೋದರಂತೆ - ತಮ್ಮ ಚಾವಡಿಯವರಿಗೆ, 'ಸ್ವಲ್ಪ ಹೊತ್ತು ಬಿಟ್ಟು ನಾವು ಹೋಗುವ ಸ್ಥಳಕ್ಕೆ ಬನ್ನಿ, ನಿಮ್ಮ ನೆರವು ಬೇಕಾಗಬಹುದು' ಎಂದು ಹೇಳಿ.

“ಆ ಮಾತಿನಂತೆಯೇ ಕೊತ್ವಾಲಚಾವಡಿಯ ಸಿಪಾಯಿಗಳು ಸ್ವಲ್ಪ ಹೊತ್ತಾದ ಬಳಿಕ, ತಮ್ಮ ದಳವಾಯಿಗಳು ಹೇಳಿದ ಮನೆಗೆ ಹೋದಾಗ, ಆ ಮನೆಯ ಬಾಗಿಲು ಹಾರುಹೊಡೆದಿದ್ದು, ಒಳಗೆ ಹೋಗಿ ನೋಡಿದಾಗ ರಕ್ತದ ಮಡುವಿನಲ್ಲಿ ಕತ್ತರಿಸಿ ಬಿದ್ದ ಕಾಶಣ್ಣನಾಯಕರ, ಶ್ರೀಪತಿರಾಯರ ಹೆಣಗಳನ್ನು ಕಂಡರಂತೆ. ಈಗ ಕೊತ್ವಾಲಚಾವಡಿಯವರು ಕುರುಬಗೇರಿಗೇ ಕಾವಲು ಹಾಕಿ, ಸುದ್ದಿಯನ್ನು ಇಬ್ಬರ ಸನ್ನಿಧಾನಕ್ಕೂ ಮುಟ್ಟಿಸುವಂತೆ ಅವಸರದ ಆಳನ್ನು ಕಳಿಸಿದರು. ಆ ಸುದ್ದಿ ಕಿವಿಗೆ ಬಿಳುತ್ತಿದ್ದ ಹಾಗೇ ನಾನಿಲ್ಲಿಗೆ ಓಡಿಬಂದೆ.”

ಅಷ್ಟು ಕೇಳುವವರೆಗೂ ಬಹು ಪ್ರಯಾಸದಿಂದ ಮೌನವಾಗಿದ್ದ ಮದಕರಿನಾಯಕ, ತಮ್ಮನತ್ತ ತಿರುಗಿ –

“ನಡೆ - ಅತ್ತ ನಾವೇ ಹೋಗಿ ನೋಡೋಣ. ಬೇಕಾದದ್ದಾಗಲಿ, ಕಾಶಣ್ಣನಾಯಕರ ಕೊಲೆಗಾರರು ತಪ್ಪಿಸಿಕೊಳ್ಳಬಾರದು. ಗುದಗತ್ತಿ, ನಮ್ಮ ಕುದುರೆ ತರಲು ಹೇಳು”

-ಎಂದು ಮದಕರಿನಾಯಕ ಅರಮನೆಯಿಂದ ಹೊರಟ.

ಪರಶುರಾಮನಾಯಕ ಆತನನ್ನು ಹಿಂಬಾಲಿಸಿದ.

* * *

ಬುರುಜನಹಟ್ಟಿಯ ಒತ್ತಾಗಿ ಕಟ್ಟಿದ ಮನೆಗಳ ನಡುವಿನ ಕಿರಿದಾದ ಓಣಿಗಳಲ್ಲೊಂದರಲ್ಲಿ ಬಸವನ ಬುರುಜಿನ ಬುಡಕ್ಕೆ ಹೊಂದಿಕೊಂಡಂತೆ, ಬಂಡೆಗಳ ಬುಡದಲ್ಲಿದ್ದ ಕುರುಬಗೇರಿ ಕೊತ್ವಾಲಚಾವಡಿಯ ಸಿಪಾಯಿಗಳಿಂದ ಸುತ್ತುವರಿಯಲ್ಪಟ್ಟು, ಮನೆಮನೆಯ ಮುಂದೂ ಬಿಚ್ಚುಗತ್ತಿಯಾಳು ಕಾವಲು ನಿಂತು, ಮನೆಬಾಗಿಲುಗಳು ಮುಚ್ಚಿ, ಭೀಷಣಮೌನ ಕೇರಿಯನ್ನು ವ್ಯಾಪಿಸಿತ್ತು. ಕೇರಿಗೆ ಹತ್ತಿರವಾದ ಆಸುಪಾಸಿನ ಮನೆಗಳೂ ಜನರಿದ್ದರೂ ನಿರ್ಜನವಾದಂತಿತ್ತು. ಓಣಿಯ ಪ್ರವೇಶಮಾರ್ಗದಲ್ಲಿ ನಿಂತ ಕೊತ್ವಾಲಚಾವಡಿಯ ದಫೇದಾರ ಸೂರನಾಯಕ, ನಾಯಕರು-ಪ್ರಧಾನಿಗಳನ್ನು ಕಾಣುತ್ತಿದ್ದ ಹಾಗೇ ಕುದುರೆಯಿಂದಿಳಿದು, ಅವರಿಗೆ ಮುಜುರೆ ಮಾಡಿದ.

"ಆ ಮನೆ ಎಲ್ಲಿದೆ ?"

-ಎಂದು ಕೇಳಿದ ಮದಕರಿನಾಯಕ.

ಆ ಮಾತಿಗೆ ಮರುಮಾತಾಡದೆ ಸೂರನಾಯಕ, ನಾಯಕರು-ಪ್ರಧಾನಿಗಳಿಬ್ಬರನ್ನೂ ದಳವಾಯಿ ಕಾಶಣ್ಣನಾಯಕ ಕೊಲೆಯಾದ ಮನೆಯತ್ತ ಕರೆದೊಯ್ದ.

ಆ ಮನೆ –

ಮೇಲಿನ ಸೂರು ಹಾರಿಹೋಗಿ, ತಡಿಕೆಯನ್ನು ತಲೆಗೆ ಕಟ್ಟಿಕೊಂಡು, ಅಲ್ಲಲ್ಲಿ ಬಿರಿದ ಗೋಡೆಗಳ ಮೇಲೆ ನಿಂತು 'ಬಿಕೋ' ಎನ್ನುತ್ತಿತ್ತು. ಬಾಗಿಲು ಹಾರುಹೊಡೆದಿತ್ತು.

ಆ ಮನೆಯ ಸುತ್ತ ಕಾವಲು ನಿಂತ ಸೈನಿಕರು, ನಾಯಕರಿಗೆ, ಪ್ರಧಾನಿಗಳಿಗೆ ಆ ಮನೆಯೊಳಗೆ ಪ್ರವೇಶಿಸಲು ದಾರಿಮಾಡಿಕೊಟ್ಟರು.

ಮನೆಯ ಮುಂದಿನ ಒತ್ತೆಕೊಟ್ಟು ನಿಲ್ಲಿಸಿದ ಕಂಭಗಳಿದ್ದ ಮೊಗಸಾಲೆಯನ್ನು ದಾಟಿಕೊಂಡು ಒಳಗೆ ಹೋಗುತ್ತಿದ್ದ ಹಾಗೇ, ಕಂಬಳಿಯನ್ನು ನೇಯುವ ಮಗ್ಗವಿದ್ದ ಸಣ್ಣ ಹಜಾರ. ಅದರ ಇಬ್ಬದಿಯಲ್ಲಿ ಗಾಳಿಗೆ ತೂರಲು ಮಾತ್ರ ಅವಕಾಶವಿದ್ದ ಮರದ ಸರಳಿನ ಸಣ್ಣ ಕಿಟಕಿಗಳಿದ್ದ ಕೋಣೆಗಳೆರಡು, ಆ ಹಜಾರದ ಹಿಂದೆಯೇ ಅಡಿಗೆಯ ಮನೆ. ಅದರ ಒಂದು ಪಾರ್ಶ್ವದಲ್ಲಿ ಹಸು-ಕರು ಕಟ್ಟುವ ಬರಿದಾದ ಗೋದಲಿ, ಮತ್ತೊಂದು ಪಾರ್ಶ್ವದಲ್ಲಿ ಕಂಬಳಿಯ ದಾರವನ್ನು ಹುರಿಮಾಡುವ ರಾಟೆಗಳು, ಹಿತ್ತಲಿನಲ್ಲಿ ಬಣ್ಣದ ಬಾನಿಗಳು, 'ಸರಿ' ಮಾಡುವ ಒಲೆಗಳು, ಕಂಬಳಿಯನ್ನು ಗಾಳಿಗೆ ಆರಹಾಕಲು ಕಟ್ಟಿದ ಹುರಿಯಿದ್ದ ಗೂಟಗಳು, ಮನೆತುಂಬ ಅರೆಗತ್ತಲು, ಗಾಳಿಯಾಡದೆ ಹಳಸಲಾದ ಮದ್ದಿನ ಘಾಟುವಾಸನೆ. ಆ ವಾಸನೆಯಲ್ಲಿ, ಹಸು ಕಟ್ಟುವ ಗೋದಲಿಯಲ್ಲಿ ಕತ್ತರಿಸಿಬಿದ್ದಿದ್ದವು ಕಾಶಣ್ಣನಾಯಕನ, ಶ್ರೀಪತಿರಾಯನ ದೇಹಗಳು.

ಇಬ್ಬರ ತಲೆಗಳೂ ತುಂಡಾಗಿ, ಮುಂಡದಿಂದ ಬೇರೆಯಾಗಿ, ಕಪ್ಪು ಬಣ್ಣಕ್ಕೆ ತಿರುಗುತ್ತಿದ್ದ ರಕ್ತದಲ್ಲಿ ಕೆಡೆದಿದ್ದವು. ಆ ರಕ್ತದ ಸಮೀಪದಲ್ಲಿ ಒಬ್ಬಿಬ್ಬರ ನಾಲ್ಕಾರು ಕಾಲ ಗುರುತುಗಳು, ಎರಡು ರಕ್ತಸಿಕ್ತವಾದ ಗಂಡುಗೊಡಲಿಗಳು, ಸೇದಿ ಬಿಸುಟ ಭಂಗಿಯ ಎರಡು ಚಿಲುಮೆಗಳು, ಒಂದೆರಡು ರಕ್ತದ ಕಲೆಯಿದ್ದ ಕಂಬಳಿಗಳು – ಅಷ್ಟು ವಿನಾ ಬೇರಾವುದೂ ಕಾಣಲಿಲ್ಲ.

ಅದೆಲ್ಲವನ್ನೂ ಒಮ್ಮೆ ನೋಡಿದ ಹಾಗೆ ಮಾಡಿ ಮದಕರಿನಾಯಕ, ಒಂದೇಟಿಗೆ ತುಂಡರಿಸಲ್ಪಟ್ಟ ಕಾಶಣ್ಣನಾಯಕನ ರುಂಡವನ್ನು ನೋಡಿದ –

ಗಂಡುಗೊಡಲಿಯ ಏಟಿಗೆ ಸಿಕ್ಕು ಮುಂಡದಿಂದ ತುಂಡಾದ ರುಂಡದ ಮೇಲಿದ್ದ ಮುಂಡಾಸು ಅಷ್ಟು ದೂರ ಹಾರಿಬಿದ್ದು, ನೆತ್ತಿಯ ಅರೆನೆರೆತ ಕೂದಲು ಬಿಚ್ಚಿ, ಹೊದರು ಹುಬ್ಬು ಬೆಳೆದ ಅಗಲವಾದ ಹಣೆ, ಗಿರ್ಜಾ ಮೀಸೆ, ಆ ಮೀಸೆಯ ಮೇಲಿನ ದಪ್ಪ ಹೊಳ್ಳೆಯ ಮೂಗು, ದುಂಡುಗೆನ್ನೆ, ತುಂಬಿದ ಗಲ್ಲ, ಅದನ್ನು ಹೊರಲೆಂದೇ ತುಂಬಿ ಬೆಳೆದ ಕತ್ತು – ಎಲ್ಲಾ ರಕ್ತದಲ್ಲಿ ತೊಯ್ದು ವಿಕಾರವಾಗಿದ್ದವು.

'ಎಷ್ಟು ವರ್ಷಗಳಿಂದ, ಎಷ್ಟು ನಿಷ್ಠೆಯಿಂದ, ಎಷ್ಟು ಎಚ್ಚರದಿಂದ, ಎಷ್ಟು ನಿಯತ್ತಿನಿಂದ ನಡೆದ ಮನುಷ್ಯ –

'ಆತನಿಗಿಂಥ ಸಾವು !'

ಅದನ್ನು ನೆನೆದು ಮದಕರಿನಾಯಕನ ಕಣ್ಣಲ್ಲಿ ನೀರು ತುಂಬಿದಂತೆಯೇ, ಮೈಯಲ್ಲಿ ರೋಷ ಹೆಡೆಯಪ್ಪಳಿಸಿ, ತಮ್ಮೊಡನಿದ್ದ ಕೊತ್ವಾಲಚಾವಡಿಯ ದಫೇದಾರನಿಗೆ –

"ಕೊಲೆಗಡುಕ ಯಾರೆಂದು ಸುಳಿವೇನಾದರೂ ಸಿಕ್ಕಿತೇನು ?"

-ಎಂದು ಗದ್ದರಿಸಿ ಕೇಳಿದ.

"ಇಲ್ಲ, ಮಾ ಸ್ವಾಮಿ."

"ಅಂದರೆ ಈ ಮನೆಯಲ್ಲಿ ಮನುಷ್ಯರೇ ಇರಲಿಲ್ಲವೇ ? ಇದು ಯಾರ ಮನೆ ? ಈ ಮನೆಯವನೇನಾದ ?"

"ಈ ಮನೆಯ ಗಂಡಸು, ಹಿಂದೆ ಸೀನೀರುಹೊಂಡದ ಲಡಾಯಿಯಾದಾಗ ಗುಂಡು ತಗುಲಿ ಸತ್ತನಂತೆ. ಅವನ ಹೆಂಡತಿ, ನಾಯಕನಹಟ್ಟಿಯ ಸೈನಿಕನೊಬ್ಬನನ್ನು ಕೂಡಿಕೆ ಮಾಡಿಕೊಂಡು ಅವನ ಜೊತೆಗೆ ಹೋದಳಂತೆ. ಅವತ್ತಿನಿಂದ ಮನೆ ಖಾಲಿ ಇತ್ತಂತೆ. ಈಗ ಎರಡು ದಿನದ ಹಿಂದೆ, ತಿರುಪೆಗೆ ಬಂದ ಇಬ್ಬರು ಗೋಸಾಯಿಗಳು ಇಲ್ಲಿದ್ದರಂತೆ – ನಿನ್ನೆ ರಾತ್ರಿ, ಇವತ್ತು ಬೆಳಿಗ್ಗೆಯೂ ಇದ್ದರಂತೆ - ಆದರೆ ನಾವು ಬಂದಾಗ ಮಾತ್ರ ಯಾರೂ ಇರಲಿಲ್ಲ – ಈ ಹೆಣಗಳು ಮಾತ್ರ ಇದ್ದವು."

- ದಫೇದಾರ ಸೂರನಾಯಕ ಶುಷ್ಕವಾದ ಧ್ವನಿಯಲ್ಲಿ ಹೇಳಿದ.

"ಆ ಗೋಸಾಯಿಗಳ ಗುರುತು ಏನಾದರೂ ಗೊತ್ತಂತೇನು, ಅಕ್ಕಪಕ್ಕದ ಮನೆಯವರಿಗೆ?"

"ಎಂಥದೋ ಉತ್ತರದ ಕಡೆ ಮಾತಾಡುತ್ತಿದ್ದರಂತೆ. 'ಮುಖದ ತುಂಬ ಗಡ್ಡ ಮೀಸೆ ಬೆಳೆದಿದ್ದರಿಂದ ಮುಖ ಗುರುತುಹಿಡಿಯುವುದು ಕಷ್ಟ. ಆದರೆ ಧ್ವನಿ ಕೇಳಿದರೆ ಪತ್ತೆ ಹಚ್ಚಬಹುದು' ಎನ್ನುತ್ತಾರೆ. ಅದಕ್ಕೆ ಆ ತಾಯ್ಗಂಡರು ನಮ್ಮ ಕೈಗೆ ಸಿಕ್ಕಬೇಕಲ್ಲಾ - ಬೆಳಿಗ್ಗೆ ದಳವಾಯಿಗಳೂ, ಶ್ರೀಪತಿರಾಯರೂ ಇಲ್ಲಿಗೆ ಬಂದದ್ದು ನೋಡಿದೆವು. ಆಗ ಮನೆಯಲ್ಲಿ ಬೈರಾಗಿಗಳಿದ್ದರಂತೆ."

"ಕೊಲೆಯಾದಾಗ ಏನೂ ಸದ್ದು ಗದ್ದಲ ಕೇಳಲಿಲ್ಲವೇ, ಮನೆ ಇಷ್ಟು ಹತ್ತಿರವಿರುವ ಜನಕ್ಕೆ?"

"ಏನೂ ಕೇಳಲಿಲ್ಲ ಎನ್ನುತ್ತಾರೆ, ಮಾ ಸ್ವಾಮಿ. ಆದರೆ ಇನ್ನೂ ಬಾಯಿಬಿಡಿಸಬೇಕು- ಅನುಮಾನದ ಮೇಲೆ ಹತ್ತು ಜನಾನ, ಅಕ್ಕಪಕ್ಕ ಮನೆಯೋರನ್ನು ಚಾವಡೀಲಿ ಕೂಡಿದೀವಿ."

"ಬಿಡಬೇಡಿ – ಈ ಒಂದು ತಲೆಗೆ ನೂರು ತಲೆ ಕತ್ತರಿಸಿದರೂ ಚಿಂತೆಯಿಲ್ಲ"

-ಎಂದು ಔಡುಗಚ್ಚಿ ಹೇಳಿದ ಮದಕರಿನಾಯಕ.

"ಬಿಟ್ಟರೆ - ನಾವು ಒಬ್ಬ ತಂದೆಗೆ ಹುಟ್ಟಿದವರಲ್ಲ, ಬುದ್ಧಿ, ಇಂಥೋರು ಅಂತ ಗೊತ್ತಾದ್ರೆ ಚಾವಡಿ ನಾಯಿಯಲ್ಲ, ನಾವೇ ಅವರ ರಕ್ತ ಕುಡೀತೀವಿ. ಬಿಡೋದಿಲ್ಲ."

-ಆಕ್ರೋಶ ತುಂಬಿದ ಧ್ವನಿಯಲ್ಲಿ ಹೇಳಿದ ದಫೇದಾರ ಸೂರನಾಯಕ.

ಅಷ್ಟಕ್ಕಿಂತ ಹೆಚ್ಚು ಹೇಳಲು ಅವನ ಬಳಿ ವಿಷಯವೂ ಇರಲಿಲ್ಲ.

ಕೇಳುವ ವಿಷಯ ಮದಕರಿನಾಯಕನಿಗೂ ಇರಲಿಲ್ಲ –

ಸುಮ್ಮನೆ ತಲೆತಗ್ಗಿಸಿ, ಆ ಮನೆಯಿಂದ ಹೊರಟ.

ಅದುವರೆಗೂ ಸುಮ್ಮನಿದ್ದ ಪರಶುರಾಮನಾಯಕ –

"ಪಾಪ – ಏನೋ ಸಹಾಯಮಾಡಲು ಹೋಗಿ ಶ್ರೀಪತಿರಾಯ ತನ್ನ ತಲೆದಂಡ ತೆತ್ತ. ಅವನ ಹೆಂಡತಿಮಕ್ಕಳ ಗತಿ ಏನೋ ?"

-ಎಂದು ಶ್ರೀಪತಿರಾಯನ ಸಾವಿನ ಬಗ್ಗೆ ಅನುಕಂಪವಿದ್ದ ಧ್ವನಿಯಲ್ಲಿ ಹೇಳಿದ –

"ನರಸಪ್ಪಯ್ಯನವರಿಗೆ ಒಬ್ಬನೇ ಮಗ"

"ಆ ವಂಶದ ಹಿರಿಯ ದುರ್ಗಕ್ಕೆ ಮಾಡಿದ ದ್ರೋಹಕ್ಕೆ ದೇವರೇ ವಿಧಿಸಿದ ಶಿಕ್ಷೆ ಇದು. ಆ ಬಗ್ಗೆ ನಮಗೆ ಪರಿತಾಪವಿಲ್ಲ. ಸಾವಿರ ಜನ ಶ್ರೀಪತಿರಾಯ ಸಿಗಬಹುದು, ಆದರೆ ಒಬ್ಬ

ಕಾಶಣ್ಣನಾಯಕ ಸಿಗಲಾರ. ಆತ ಸತ್ತು ನಮ್ಮ ಬಲಗೈ ಮುರಿದಂತಾಯಿತು. ಇವತ್ತಿನ ಹಗಲು ಕಾರ್ಗತ್ತಲಾಯಿತು"

-ಎಂದ ಮದಕರಿನಾಯಕ, ಕಂಬಳಿಗೇರಿಯ ಕೊಲೆನೆತ್ತರು ತುಂಬಿದ ಮನೆಯಿಂದ ಹೊರಗೆ ಬರುತ್ತಾ.

ಮನೆಯ ಹೊರಗೆ –

ಆಕಾಶದಿಂದ ಇಳಿಯುತ್ತಿದ್ದ ಸಿಡಿದ ತೋಫಿನ ಗುಂಡುಗಳ ಮದ್ದಿನ ಕಪ್ಪನುಸಿಯೊಳಗೆ ಹಗಲೂ ಕಪ್ಪಾಗಿತ್ತು.

ಒಳ ಹೊರಗೆ –

ಮದಕರಿನಾಯಕನ ಹೃದಯದಲ್ಲಿ ಕತ್ತಲು ಕವಿಯಿತು.

ಕವಿದ ಕತ್ತಲನ್ನು ಕಂಡು –

ಏಕೋ ತನ್ನನ್ನು ಮುತ್ತಲು ಸುತ್ತಲೂ ಕತ್ತಲಕಡಲು ಅಲೆಅಲೆಯಾಗಿ ಬರುತ್ತಿರುವಂತೆ, ಆ ಕತ್ತಲಾಳದಲ್ಲಿ ತಾನು ಕುಸಿಯುತ್ತಿರುವಂತೆ ಭಾಸವಾಯಿತು ಮದಕರಿನಾಯಕನಿಗೆ.

೩೧

ನಿಸ್ತೇಜವಾದ, ನಿರ್ವೀರ್ಯವಾದ ಬೆಳಕಿನ ಹೆಣದಂಥ ಹಗಲು –

ವಿದ್ರೋಹದ ಕರೆಕೊಟ್ಟ ಮಾಜಿಪ್ರಧಾನಿ, ಕೊಲೆಯಾದ ಕೊತ್ವಾಲಚಾವಡಿಯ ದಳವಾಯಿ –

ತನ್ನ ಬೆನ್ನೆಲುಬಿನ ಬಲವನ್ನೇ ಪರೀಕ್ಷಿಸುವಂಥ, ಎಂದೆಂದೂ ಊಹಿಸಲಾಗದಂಥ ಘಟನೆಗಳು –

ಆ ದುರ್ಘಟನೆಗಳ ಹೊರೆ ಹೊತ್ತು, ಸುತ್ತಲೂ ಅಂಗರಕ್ಷಕರಿದ್ದೂ ಏಕಾಕಿಯಾಗಿ, ತನ್ನಂತೆಯೇ ಮಾತು ಉಡುಗಿಹೋದ ಪರಶುರಾಮನಾಯಕನೊಂದಿಗೆ, ಮನೆ ಮುಂಗಟ್ಟುಗಳಿಂದ, ಕಿಟಕಿಗಳಿಂದ, ಅಂಗಡಿಗಳಿಂದ ನೋಡುತ್ತಾ ಕುಳಿತವರು ಎದ್ದು ನಿಂತು, ನಿಂತವರು ನಿಂತಲ್ಲೇ ಕೈಮುಗಿಯುತ್ತಿರಲು - ಸಿದ್ದಯ್ಯನಪೇಟೆಯಿಂದ ದುರ್ಗದತ್ತ ಕುದುರೆಯ ಮೇಲೆ ಕುಳಿತು ಹೋಗುತ್ತಾ, ನೀಲಕಂಠೇಶ್ವರನ ಗುಡಿಯನ್ನು ದಾಟಿ ಮುಂದೆ ಹೋಗುತ್ತಿರುವಾಗ, ಬಣ್ಣಬಣ್ಣದ ಬಟ್ಟೆಯನ್ನುಟ್ಟು ನಡೆಯುತ್ತಿದ್ದ ಮುಸಲ್ಮಾನ್ ಗಂಡಸರು, ಮಕ್ಕಳನ್ನು ನೋಡಿ, ಆ ದಿನ ಮೊಹರಂನ ಕಡೆಯ ದಿನವೆಂಬುದು ನೆನಪಾಗಿ, ಅದರೊಂದಿಗೇ ಆ ದಿನ 'ಪಂಜಾ' ತೊಳೆಯಲು

ಮಲ್ಲಾಪುರದ ಕೆರೆಗೆ ಹೋಗಲು ಪರವಾನಗಿ ಪಡೆದ ಮುಸಲ್ಮಾನ್ ಸರದಾರರ ನೆನಪೂ ಬಂದು, ತನ್ನ ಪಕ್ಕದಲ್ಲಿ ಕುದುರೆಯ ಮೇಲೆ ಕುಳಿತು ಬರುತ್ತಿದ್ದ ಪರಶುರಾಮನಾಯಕನತ್ತ ತಿರುಗಿ –

“ಸರ್ದಾರ್ ಸಾಹೇಬರುಗಳಿಗೆ ಮಲ್ಲಾಪುರಕ್ಕೆ ಹೋಗಲು ಪರವಾನಗಿ ಕೊಟ್ಟೆಯಾ, ಪರಶುರಾಮಣ್ಣ?”

- ಎಂದು ಕೇಳಿದ ಮದಕರಿನಾಯಕ.

“ಕೊಟ್ಟಿದ್ದಾಯಿತು – ಆದರೆ ಅದರಿಂದ ನಮ್ಮ ದಂಡಿನ ದಳವಾಯಿಗಳಿಗೆ ಬೇಸರವಾಗಿದೆ. ’ಯಾರಿಗೂ ಇಲ್ಲದ ಹಬ್ಬ ಇವರೊಬ್ಬರಿಗೆ ಮಾತ್ರ ಇದೆಯೇ ? ಹಿಂದೂಗಳಾದ ನಮಗೆ ಮಾತ್ರ ಹಬ್ಬವಿಲ್ಲ. ಮನೆ, ಮಠ, ದೇವರು ಎಲ್ಲವನ್ನೂ ಮರೆತ ನಮ್ಮ ಜನ ’ನಮಗೇನು ಹಬ್ಬ, ದೇವರಿಲ್ಲವೇ?’ ಎಂದು ಕೇಳಿದರೆ ಏನು ಹೇಳುವುದು ?’ ಎಂದು ಅವರು ಅಸಮಾಧಾನವಾಗಿದ್ದಾರೆ”

-ಎಂದು ತಗ್ಗಿದ ಧ್ವನಿಯಲ್ಲಿ ಹೇಳಿದ ಪರಶುರಾಮನಾಯಕ.

“ಅವರಿಗೂ ಅಸಮಾಧಾನವೇ - ಅವರೆಲ್ಲಿಗೆ ಹೋಗಬೇಕಂತೆ ? ಹೋಗಬೇಕು ಎಂದರೆ ಅವರಿಗೂ ರಹದಾರಿ ಕೊಟ್ಟು ಕಳಿಸು. ಹೋಗುವವರೆಲ್ಲಾ ಹೋಗಲಿ – ನಮಗೆ ಮಾತ್ರ -ಈ ದುರ್ಗದಿಂದ ಹೆಣವಾಗಿಯಲ್ಲದೆ ಹೋಗಬಾರದು ಎಂದು ಅಪ್ಪಣೆಯಾಗಿದೆ. ನಾವೂ ನಮಗೆ ರಹದಾರಿ ಕೊಡುವ ತಾಯಿಯನ್ನು ಕೇಳುತ್ತೇವೆ”

-ಎಂದು ನುಡಿದ ನಾಲಿಗೆ, ಕೇಳಿದ ಕಿವಿ ಎಲ್ಲವೂ ಕಹಿಯಾಗುವಂತೆ, ನಿರ್ಜೀವಸ್ವರದಲ್ಲಿ ಹೇಳಿ, ಕುದುರೆಯನ್ನು ಮುಂದೆ ನಡೆಸಿದ ಮದಕರಿನಾಯಕ.

ತನ್ನ ಅಣ್ಣ ಆಡಿದ ಮಾತನ್ನು ಕೇಳಿ, ಪರಶುರಾಮನಾಯಕನ ಹೃದಯದ ಮೇಲೆ ಮಂಜು ಗಡ್ಡೆ ಇಟ್ಟಂತಾಗಿ, ಆಡಬೇಕೆನ್ನುವ ಮಾತು ಮನಸ್ಸಿನಲ್ಲಿಯೇ ಸತ್ತಿತು.

ಇಬ್ಬರೂ ಹಾಗೇ ಮುಂದೆ ನಡೆದರು.

ಅಷ್ಟು ದೂರದಲ್ಲಿ ಉತ್ಸವಾಂಬೆಯ ದೇವಾಲಯ –

ಸುಣ್ಣ ಬಣ್ಣ ಬಳಿದು, ಬೆಳ್ಳಗಿರಬೇಕಾಗಿದ್ದ ದೇವಾಲಯದ ಮೂರಂತಸ್ತಿನ ಗೋಪುರವೂ ಮದ್ದಿನ ಇದ್ದಿಲು ನುಸಿ ಕುಳಿತು ಮಂಕಾಗಿತ್ತು – ಅದಕ್ಕೂ ಬೇಸರವಾದಂತೆ.

ಆ ದೇವಾಲಯದ ಬದಿಯ ಕಿರು ಓಣಿಯಲ್ಲಿ ಬಸವನ ಬತೇರಿಯತ್ತ ಏರಿ, ಎಡಪಾರ್ಶ್ವಕ್ಕೆ ತಿರುಗಿದರೆ ಮುಸ್ಲಿಮರು ಮೊಹರಂನಲ್ಲಿ ಕೂಡಿಸಿದ ’ಪಂಜಾ’ಗಳನ್ನಿಟ್ಟ ಹಜಾರ.

ಹಿಂದೂಗಳೂ, ಮುಸ್ಲಿಮರೂ ಹಿಂಡುಹಿಂಡಾಗಿ ಅಲ್ಲಿಗೆ 'ಸಕ್ಕರೆ ಓದಿಸಲು' ಹೋಗುತ್ತಿದ್ದರು. ಓಣಿಯ ಮುಂಭಾಗದಲ್ಲಿದ್ದ ಮುಸ್ಲಿಂ ಹಿರಿಯರು ನಾಯಕರಿಗೆ ಗೌರವಪೂರ್ವಕವಾಗಿ ಸಲಾಂ ಮಾಡಿದರು. ಅದಕ್ಕೆ ತಲೆಬಾಗಿ ವಂದಿಸಿ, ಮುಂದೆ ನಡೆದ.

ಉತ್ಸವಾಂಬಾ ದೇವಾಲಯದ ಮಹಾದ್ವಾರ 'ಬಾ' ಎಂದು ಆಹ್ವಾನಿಸಿದಂತೆ ಬಾಗಿಲು ತೆರೆದಿತ್ತು.

ಅಲ್ಲಿಯೇ ನಿಂತು, ಕುದುರೆಯಿಂದಿಳಿದು, ಮಹಾದ್ವಾರದಿಂದಾಚೆ, ಅಷ್ಟೆತ್ತರದ ಮೇಲೆ ಕಾಣುತ್ತಿದ್ದ ಗರ್ಭಗೃಹದೊಳಗಿನ ನಂದಾದೀಪದ ಬೆಳಕಿಗೇ ನಮಸ್ಕರಿಸಿ, ಮತ್ತೆ ಕುದುರೆ ಹತ್ತಿ ಮುಂದೆ ನಡೆದ, ಗಾರೆಬಾಗಿಲಿನತ್ತ ಮದಕರಿನಾಯಕ.

ಅಲ್ಲಿಂದ ಮುಂದೆ ಇಬ್ಬದಿಯಲ್ಲೂ ದುರ್ಗದ ದಂಡಿನ ಹಿರಿಯರ ಮನೆಗಳಿದ್ದ ಮಕರಂಬದ ಬೀದಿ; ಅಲ್ಲಿಂದ ಸ್ವಲ್ಪ ಮುಂದೆ, ಬಸವನ ಬತೇರಿಗೆ ಹೋಗುವ ಏರುಮಾರ್ಗದ ವಿಶಾಲ ದಿಬ್ಬದ ಮೇಲಿದ್ದ ಏಕನಾಥೇಶ್ವರಿಯ ಪಾದಗಟ್ಟೆ, ಅದರ ಎದುರಿಗೇ ಹನ್ನೆರಡು ಕಂಭಗಳ ಕೈಸಾಲೆಯಿದ್ದ ಮಾಜಿ ಪ್ರಧಾನಿ ನರಸಪ್ಪಯ್ಯನವರ ಮನೆ.

ಆ ಮನೆಯನ್ನು ನೋಡುತ್ತಿದ್ದ ಹಾಗೇ ಮದಕರಿನಾಯಕನಿಗೆ ಉತ್ಸವಾಂಬಾ ದೇವಾಲಯದ ಮುಂದೆ ನಿಂತು ಕೈಮುಗಿದಾಗ ಮನದೊಳಗೆ ಮೂಡಿದ್ದ ಶಾಂತಿ – ಬಿಸಿಲು ಬಿದ್ದ ಇಬ್ಬನಿಯಂತೆ ಕರಗಿಹೋಗಿ, ಕಹಿನೆನಪುಗಳ ಕಪ್ಪು ನೆರಳುಗಳು ಬೆನ್ನಟ್ಟಿ ಬಂದಂತಾಗಿ, ನಿಧಾನವಾಗಿ ನಡೆಯುತ್ತಿದ್ದ ಕುದುರೆಯನ್ನು ಓಡಿಸಿ ಗಾರೆಬಾಗಿಲನ್ನು ದಾಟಿ, ಬಾಗಿಲಾಚೆ, ಗುಡ್ಡದ ಏರಿನಲ್ಲಿ ಕಲ್ಲುಕಂಭದ ಮೇಲೆ ನಿಂತ ಒಂಟಿಕಲ್ಲು ಬಸವಣ್ಣನ ಗುಡಿಯತ್ತ ನೋಡಿದ.

ಬೆಟ್ಟದ ಕಿಕ್ಕಿರಿದ ಬಂಡೆಗಳ ಹಿನ್ನೆಲೆಯ ಮುಂದೆ ನಿಂತ ಒಂಟಿಕಲ್ಲು ಬಸವಣ್ಣನ ಗುಡಿ –

ಒಂಟಿಕಲ್ಲು ಬಸವಣ್ಣ –

ಅದನ್ನು ನೋಡಿ-

ತುಂಬಿದ ದುರ್ಗದಲ್ಲಿ ತಾನೂ ಒಂಟಿಯಾದಂತೆ ತೋರಿತು ಮದಕರಿನಾಯಕನಿಗೆ.

ಒಂಟಿಕಲ್ಲು ಬಸವಣ್ಣ –

ಒಂಟಿ ಮದಕರಿನಾಯಕ.

ದ್ರೋಹಿಯಾದ ಮಾಜಿ ಪ್ರಧಾನಿ, ಕೊಲೆಯಾದ ಕೊತ್ವಾಲಚಾವಡಿಯ ದಳವಾಯಿ, ಯುದ್ಧಸಮಯದಲ್ಲಿ ದುರ್ಗದ ಹೊರಗೆ ಹಬ್ಬ ಮಾಡಲು ಹೋಗುವ ಮುಸ್ಲಿಂ ಸೇನಾಧಿಕಾರಿಗಳು, ಅಸಮಾಧಾನಗೊಂಡ ದಳವಾಯಿಗಳು, ಹೊರಗೆ ತೋರಗೊಡದಿದ್ದರೂ ಒಳಗೇ ತಾನು ಮುಸ್ಲಿಂ ಸರದಾರರಿಗೆ ತೋರಿದ ಔದಾರ್ಯದಿಂದ ಬೇಸರಗೊಂಡ ತಮ್ಮ –

ಬರುಜು ಬತೇರಿಗಳು, ಕೋಟೆ ಸಾಲುಗಳು, ಅದನ್ನು ಹೊತ್ತ ಕಿಕ್ಕಿರಿದ ಕಲ್ಲುಬಂಡೆ, ಗವಿಗಳು-

ಅದರಿದಿರು ಒಂಟಿಕಲ್ಲು ಬಸವಣ್ಣನ ಗುಡಿ.

ಲಿಂಗವಿಲ್ಲದ, ಏಕಾಂಗಿಯಾದ, ಒಂದು ಕಾಲಿನಂತೆ ಒಂದು ಕಂಭದ ಮೇಲೆ ನಿಂತ ಬಸವಣ್ಣನ ಗುಡಿ –

ಸುತ್ತ ಅಂಗರಕ್ಷಕರು – ನೂರು ಅಂಗರಕ್ಷಕರಿಗಿಂತಲೂ ಮಿಗಿಲಾದ ತಮ್ಮ –

ಅವರೆಲ್ಲರ ನಡುವೆ –

ತನ್ನ ಕಾಲಮೇಲೇ ನಿಂತ ತಾನು ?

ಒಂಟಿಕಲ್ಲು ಬಸವಣ್ಣ –

ಒಂಟಿ ಮದಕರಿನಾಯಕ.

ಕರಿ ನೆರಳುಗಳು, ಅಸ್ಪಷ್ಟ, ಅವ್ಯಕ್ತ ಭೀತಿ ಮೂಡಿಸುವ ಪಿಸುದನಿಗಳು-

ರಕ್ತದ ಮಡುವಿನಲ್ಲಿ ಅನಾಥವಾಗಿ ಬಿದ್ದ, ಕೆದರಿದ ರಕ್ತ ಸಿಕ್ತ ಕೇಶದ ಕಾಶಣ್ಣನಾಯಕನ ತಲೆ-

'ನಾನು ಬದುಕಬೇಕೆಂದಿದ್ದರೆ ದುರ್ಗಕ್ಕೆ ದ್ರೋಹ ಬಗೆಯಿರಿ' ಎಂದು ಪರೋಕ್ಷವಾಗಿ ಹೇಳುವ ಮಾಜಿ ಪ್ರಧಾನಿಯ ಕರಡುಕಾಗದ-

ಉಂಗುಷ್ಟದಿಂದ ನಡುನೆತ್ತಿಯವರೆಗೂ ಸುರುಳಿ ಬಿಚ್ಚಿ, ಸೆಟೆದು ನಿಂತು ನಂಜು ಕಾರುವ ನಾಗರಹಾವು ಬೆನ್ನೆಲುಬಿನೊಳಗಿನಿಂದಲೇ ಮೈಯೆಲ್ಲಾ ಹರಿದಾಡಿದಂತಾಗಿ-

ಬಿಸಿಲಿನ ಬದಲು ಇದ್ದಿಲುಮಸಿಯ ನುಸಿಯನ್ನು ಕಕ್ಕುವ ಹಗಲು ತನ್ನೊಳಗೇ ತುಂಬಿದಂತಾಗಿ –

ಏರಿದ ಕುದುರೆಯನ್ನೇರಿ, ಕಡಿವಾಣವನ್ನೆಳೆದು ಹಾಗೇ ನಿಂತುಬಿಟ್ಟ ಮದಕರಿನಾಯಕ -

ಕತ್ತಲ ಬೋನಿನೊಳಗೆ ಸಿಕ್ಕ ಕಾಡುಮೃಗದಂತೆ.

ಎದೆಯೊಳಗೆ ಕಿಕ್ಕಿರಿದು, ಅಲುಗಾಡಲು ಎಡೆಯಿಲ್ಲದೆ ಮಿಡುಕುತ್ತಿರುವ ಆ ಕಹಿಭಾವನೆಗಳನ್ನು ಭರಿಸಲಾಗದೆ, ಸೂಜಿಗಲ್ಲಿನಂತೆ ತನ್ನ ದೃಷ್ಟಿಯನ್ನು ಸೆರೆಹಿಡಿದಿದ್ದ ಒಂಟಿಕಾಲು ಬಸವಣ್ಣನ ಗುಡಿಯನ್ನು ನೋಡಲಾಗದೆ, ಪ್ರಯತ್ನಪೂರ್ವಕವಾಗಿ ದೃಷ್ಟಿಯನ್ನು ಹೊರಳಿಸಿ, ಅತ್ತಕಡೆ ಬೆನ್ನು ಮಾಡಿ, ಇದಿರು ಬದಿಯನ್ನು ನೋಡಿದ.

ಇದಿರು ಬದಿಯಲ್ಲಿ -

ಅಲಂಕಾರವಾಗಿ ಕಟ್ಟಿದ ಕಮಾನು ಚಪ್ಪರಗಳ ಮೇಲೆ ಜಾಜಿ, ಮಲ್ಲಿಗೆಯ ಬಳ್ಳಿಗಳು ಹಬ್ಬಿದ್ದ ಚಪ್ಪರಗಳ ಅಡಿಯಲ್ಲಿ ಗಿಳಿಪಂಜರಗಳು ತೂಗುಬಿಟ್ಟ, ಗೊಂಚಲುಗೊಂಚಲಾಗಿ ಅರಳಿದ ಗುಲಾಬಿಯ ಗಿಡಗಳು ಬೆಳೆದ, ಫಲ-ಪುಷ್ಪ ವೃಕ್ಷಗಳ ಮರೆಯಲ್ಲಿ ಕಂಡೂ ಕಾಣದಂತಿದ್ದ ದ್ಯಾಮವ್ವನಾಗತಿಯ ಹಜಾರ.

ದ್ಯಾಮವ್ವನಾಗತಿಯ ಹಜಾರವೆಲ್ಲ ಅದು ; ಈಗ –

ಕಡೂರಿಯ ಮನೆ –

ನಾಯಕರ ವಿಲಾಸಗೃಹ.

ಆ ಮನೆಯೊಳಗೆ -

ಸದಾ ತನ್ನ ಕಣ್ಣುಗಳಿಗೊಪ್ಪುವಂತೆ ಶೃಂಗಾರ ಮಾಡಿಕೊಂಡು, ಬೇಕೆಂದಾಗ ತನ್ನನ್ನು ಹಾಡು-ನೃತ್ಯಗಳಿಂದ ರಂಜಿಸಲು ವಿವಿಧ ವಾದ್ಯಗಳನ್ನು ಸಿದ್ಧವಾಗಿಟ್ಟುಕೊಂಡು, ದುರ್ಗವನ್ನೆಲ್ಲಾ ಹಬ್ಬಿದ ಸುಟ್ಟ ಮದ್ದಿನ ಘಾಟುವಾಸನೆ ಬರದಂತೆ ನವಿರಾದ ಪರಿಮಳ ಬೀರುತ್ತ ಉರಿವ ಗಂಧದ ಕಡ್ಡಿಗಳನ್ನು ಉರಿಸುತ್ತಾ, ಬೇಕೆನಿಸಿದಾಗ ಮಲಗಲು ಅಪ್ಸರೆಯ ಗೊಂಬೆ ಹೊತ್ತ, ಸೊಳ್ಳೆಪರದೆಯ ಚಪ್ಪರದ ನಾಲ್ಕೂ ಮೂಲೆಯ ಕಂಭಗಳನ್ನು ಎತ್ತಿಹಿಡಿದ ಕಾಮಕಲಾವಿಲಾಸದ ಕೆತ್ತನೆಯ ಚಿತ್ರಗಳಿಂದ ಅಲಂಕೃತವಾದ ಮಂಚದ ಮೇಲೆ ಅಚ್ಚ ಬಿಳಿಯ ರೇಶಿಮೆಯ ಹಾಸು ಹೊದಿಸಿದ ಸುಪ್ಪತ್ತಿಗೆಯನ್ನು ಸಜ್ಜುಗೊಳಿಸಿ-

ಕಣ್ಣುಗಳಲ್ಲಿ, ಎಂಥ ಕಗ್ಗತ್ತಲಿನಲ್ಲೂ ಹೊಳೆಯುವ ಪ್ರೇಮತುಂಬಿದ ಬೆಳಕನ್ನು ಹೊತ್ತಿಸಿ –

ಧರಿಸಿದ ಕಾಶಿಪೀತಾಂಬರ, ನವರತ್ನಾಭರಣಗಳ ಕಾಂತಿಯಿಂದ ಹೊಳೆಯುತ್ತಾ, ಪ್ರಾಯ ಪ್ರಮತಪ್ರಮದಾಲಾವಣ್ಯಲತೆಗಳಂತೆ ಬಳುಕುತ್ತಾ –

ತನಗಾಗಿ ಚತುರ್ಭುಜೆಯಾದ ರತಿಯಂತೆ –

ತನಗಾಗೇ ಕಾದಿರುವ ಕಡೂರಿ, ನಾಗಿಯರು.

ಈ ಬದಿ –

ತನ್ನೊಳಗೆ ಹೆಡೆ ಎತ್ತಿದ ಏಕಾಂಗಿತನಕ್ಕೆ ಪ್ರತೀಕವೆಂಬಂತೆ ನಿಂತ ಒಂಟಿಕಾಲು ಬಸವಣ್ಣನ ಗುಡಿ.

ಆ ಬದಿ-

ತನಗಾಗಿ ಕಂಪುಸೂಸುವ ಸಹಸ್ರಕುಸುಮಗಳು ಅರಳಿರುವ ನಿತ್ಯವಸಂತದ ನಂದನದಂತಿರುವ ವಿಲಾಸಗೃಹ.

ಎತ್ತ ಹೋಗುವುದು –

ಆತ್ತಲೋ – ಇತ್ತಲೋ-

ಹಗಲಿನಲ್ಲೂ ಕತ್ತಲು ತುಂಬಿದಂತಿರುವ ದುರ್ಗದತ್ತಲೋ –

ಇರುಳಿನಲ್ಲಿ ಹಗಲಿನಂತೆ ಹೊಳೆವ ವಿಲಾಸಗೃಹದೆತ್ತಲೋ -?

ಅತ್ತ -

ಹುಬ್ಬುಗಂಟಿಕ್ಕಿ ಕಿಗ್ಗಣ್ಣಗಲಿಸಿ –

'ಬಂದರೆ ಬೆನ್ನ ಮೇಲೆ ಮತ್ತಷ್ಟು ಭಾರ ಹೊರಿಸುತ್ತೇನೆ – ಹೋಗು' ಎನ್ನುವಂತಿರುವ ದುರ್ಗ.

ಇತ್ತ-

'ದಣಿದ ಮೈಮನಗಳನ್ನು ಹಗುರಾಗಿಸಿ ಹೂವಿನ ಹಾಸಿಗೆಯ ಮೇಲೆ ಮಲಗಿಸುತ್ತೇನೆ, ಬಾ' ಎಂದು ತುಟಿಯ ಮೇಲೆ ಮೃದುಮಾದಕವಾದ ನಗೆಮಲ್ಲಿಗೆಯರಳಿಸಿ ಕರೆವ ಮದನಮಂದಿರ.

ಅತ್ತಲೋ, ಇತ್ತಲೋ – ಎಂದು ಹೊಯ್ದಾಡುತ್ತಾ, ಇಬ್ಬದಿಯನ್ನೂ ನೋಡುತ್ತಾ, ಕುದುರೆಯ ಮೇಲೆ ಕುಳಿತ ಮದಕರಿನಾಯಕ ಪ್ರಯತ್ನಪೂರ್ವಕವಾಗಿ, ಅತ್ತಿತ್ತ ಅಲೆವ ಕಣ್ಣನ್ನು ನೇರವಾಗಿ ನಿಲ್ಲಿಸಿ, ಎದುರಿಗೆ ಕುದುರೆಯ ಮೇಲೆ ಕಡೆದ ವಿಗ್ರಹದಂತೆ ಕುಳಿತ ಶಸ್ತ್ರಸನ್ನದ್ಧನಾದ ಅಂಗರಕ್ಷಕ ಪಡೆಯ ನಾಯಕ ಗುದಗತ್ತಿ, ಬೆನ್ನ ಬದಿಯಲ್ಲಿ ಮೈವೆತ್ತ ಕರ್ತವ್ಯ ಪ್ರಜ್ಞೆಯಂತೆ ಕುದುರೆಯ ಮೇಲೆ ಕುಳಿತ ಪ್ರಧಾನಿ ಪರಶುರಾಮನಾಯಕ - ಇಬ್ಬರನ್ನೂ ನೋಡಿ ಭಾರವಾದ ನಿಟ್ಟುಸಿರಿಟ್ಟು, ಬಿಗಿಹಿಡಿದ ಕಡಿವಾಣವನ್ನು ಸಡಲಿಸಿ, ಕುದುರೆಯನ್ನು ಮುಂದೆ ನಡೆಸಿದ.

ಮುಂದೆ ನಡೆದ ಅಶ್ವಾರೋಹಿಗಳ ಗುಂಪು, ಕಾಮನ ಬಾಗಿಲ ಬಳಿ ದುರ್ಗ ಪ್ರವೇಶಮಾಡಿ ಮೇಲೇರುತ್ತಿದ್ದಂತೆಯೇ ಮದ್ದು, ಗುಂಡು, ಫಿರಂಗಿಗಳನ್ನು ತಯಾರಿಸುವ 'ಇಸ್ಸೂರು' ಕಾರ್ಖಾನೆಯ ಬಳಿಯತ್ತಣಿಂದ ಬಗೆಬಗೆಯ ಲೋಹಶಬ್ದ ಕೇಳಿಸಿ, ಗಾಳಿಯಲ್ಲಿ ಹರಡಿ ಬೆರೆಯುತ್ತಿದ್ದ ಹಸಿಮದ್ದಿನ ಧೂಳಿನ ವಾಸನೆ ಮೂಗನ್ನು ತಟ್ಟಿ –

"ನಾನಿಲ್ಲಿಯೇ ಇದ್ದೇನೆ"

- ಎಂದು ಯುದ್ಧ-ಮದಕರಿನಾಯಕನಿಗೆ, ತಲೆತಟ್ಟಿ ಹೇಳಿದಂತಾಯಿತು.

"ಕಾರ್ಖಾನೆಯನ್ನಷ್ಟು ನೋಡಿಕೊಂಡು ಹೋಗೋಣ"

-ಎಂದು ತಮ್ಮನಿಗೆ ಹೇಳಿ, ಕುದುರೆಯನ್ನು 'ಇಸ್ಸೂರು' ಕಾರ್ಖಾನೆಯತ್ತ ತಿರುಗಿಸಿದ.

ಸುತ್ತಲೂ ಬಿಚ್ಚುಗತ್ತಿ, ಗುಂಡು ಕಾರಲು ಸಿದ್ಧವಾದ ಕೋವಿಗಳನ್ನು ಧರಿಸಿದ ಸೈನಿಕರ ಉಸ್ತುವಾರಿಯಲ್ಲೇ, ಇರುವೆಗಳಂತೆ ಕ್ಷಣಕಾಲವೂ ವಿಶ್ರಾಂತಿ ಇಲ್ಲದೆ ದುಡಿಯುತ್ತಿದ್ದ ಕೋವಿ, ಕತ್ತಿ, ಕಠಾರಿಗಳನ್ನು ತಯಾರಿಸುವ ಕಮ್ಮಾರರು, ಸಾಣೆಗಾರರು, ಕೋವಿಯ ಚಕಮಕಿ ಕಲ್ಲಿನ ಆಕಾರ ಸರಿಪಡಿಸಿ ಜೋಡಿಸುವವರು, ಕುಲುಮೆಗಳ ತಿದಿಯೊತ್ತುವವರು, ತೋಫಿನ ಎರಕ ಹೊಯ್ಯುವ

ಭಾರಿ ಕುಲುಮೆಯ ತಿದಿಯೊತ್ತುವ ಆಳುಗಳು, ಮದ್ದಿನ ಬೀಸುಕಲ್ಲಿನ ಬಳಿ ಹಲಬಗೆಯ ಕಾರ್ಯಗಳಲ್ಲಿ ತೊಡಗಿದವರು - ಇವರೆಲ್ಲರನ್ನೂ ನೋಡಿ, ಕಾರ್ಖಾನೆಯ ಬಕ್ಷಿ ಕಾಳೋಜಿ, ದಳವಾಯಿ ಕುಂಭಿಪಾಲನಾಯಕರಿಂದ ಆಗುತ್ತಿದ್ದ ಕೆಲಸದ ವಿವರ ತಿಳಿದು, ಅಗತ್ಯವಾದ ವಸ್ತುಗಳ ಸಂಗ್ರಹ ಸಾಕಷ್ಟಿದೆಯೇ ಎಂದು ವಿಚಾರಿಸಿ, ಎಲ್ಲವೂ ತೃಪ್ತಿಕರವಾಗಿ ನಡೆಯುತ್ತಿದೆ ಎಂದು ಮನವರಿಕೆ ಮಾಡಿಕೊಂಡು, ಅರಮನೆಯತ್ತ ನಡೆದ ಮದಕರಿನಾಯಕ.

ಅಂಗರಕ್ಷಕ ಪಡೆಯವರನ್ನು ಹೊರಗೆ ಬಿಟ್ಟು, ತಮ್ಮನೊಂದಿಗೆ ಅರಮನೆಯನ್ನು ಪ್ರವೇಶಿಸಿದ ಮದಕರಿನಾಯಕನಿಗೆ ಕಾಣಿಸಿಕೊಂಡ ನಿಂಗವ್ವ –

"ಇಷ್ಟು ಹೊತ್ತೇಕಾಯಿತಪ್ಪ ? ಬಟ್ಟೆ ಕಳಚಿ ಕೈಕಾಲು ತೊಳೆದು ಬಾ. ಖಾಜಿಸಾಹೇಬರು ಪೀರಲುದೇವರ ಪ್ರಸಾದ ಕಳಿಸಿದ್ದಾರೆ, ಕೊಡುತ್ತೇನೆ" – ಎಂದು ಹೇಳಿದಳು.

ಪೀರಲುದೇವರ ಪ್ರಸಾದ –

ಆ ಮಾತಿನೊಂದಿಗೆ ಮತ್ತೆ ಮರೆತ ಮಾತುಗಳೆಲ್ಲವೂ ಮದಕರಿನಾಯಕನಿಗೆ ನೆನಪಾಗಿ, ಸ್ವಲ್ಪ ಸಡಿಲವಾಗಿದ್ದ ಆತನ ಮುಖ ಮತ್ತೆ ಬಿಗಿದು, ಹೇಳಿದ –

"ಕೊಡು – ಯಾವ ಯಾವ ದೇವರು ನಮಗೆ ಏನೇನು ಪ್ರಸಾದ ಕೊಡುತ್ತಾರೋ ಕೊಡಲಿ."

೩೨

ಪೀರಲುದೇವರ ಪ್ರಸಾದ –

ಆ ರಾತ್ರಿ ಮದಕರಿನಾಯಕ ಮಲಗಲೂ ಅವಕಾಶಕೊಡಲಿಲ್ಲ.

ಅವೇಳೆಯಲ್ಲಿ ಅಂತಃಪುರದಲ್ಲಿ ಮಲಗಿದ ನಾಯಕರನ್ನು ಎಚ್ಚರಿಸುವ ಸಲುವಾಗಿ ಕಟ್ಟಿದ ಗಂಟೆಯನ್ನೂ ಹೊಡೆಯದೆ, ನಾಡಾಡಿಯ ಮನೆಬಾಗಿಲಿನಂತೆ ಅಂತಃಪುರದ ಬಾಗಿಲನ್ನು 'ದಬದಬ' ಬಡಿದುದನ್ನು ಕೇಳಿ, ನಾಗತಿಯರೊಂದಿಗೆ ಮಲಗಿದ ಮದಕರಿನಾಯಕ ಗಡಬಡಿಸಿ ಎದ್ದು, ತನ್ನಂತೆಯೇ ಎದ್ದು ಕುಳಿತು, ಅರೆನಿದ್ರೆ-ಭೀತಿ ತುಂಬಿದ ಕಣ್ಣುಗಳಿಂದ ತಮ್ಮತ್ತ ನೋಡುತ್ತಿದ್ದ ನಾಗತಿಯರತ್ತ ತಿರುಗಿ ಕೂಡ ನೋಡದೆ, ಅವಸರವಸರವಾಗಿ ಎದ್ದು ಹೋಗಿ ಬಾಗಿಲನ್ನು ತೆರೆದು, ಈ ಅಸಭ್ಯಗದ್ದಲಕ್ಕೆ ಕಾರಣವೇನೆಂದು ನೋಡಿದ.

ಆ ಬಾಗಿಲ ಎದುರಿಗೆ –

ಕಣ್ಣುಗಳು ಕೆಂಪಡರಿ, ಕರ್ಕಶವಾಗಿದ್ದ ಪರಶುರಾಮನಾಯಕನ ಮುಖ ಕಾಣಿಸಿ, ಅಪಾಯ ಸೂಚನೆಯ ಕಹಳೆಯ ಮೊಳಗಿನಂತಿದ್ದ ಆತನ ನೋಟದಿಂದಲೇ, 'ಆಗಬಾರದ್ದೇನೋ ಆಗಿದೆ' ಎಂದು ಊಹಿಸಿ, ಕಣ್ಣಲ್ಲಿ ತೂಗುತ್ತಿದ್ದ ನಿದ್ರೆ ಹಾರಿಹೋಗಿ, ಮಂಜುನೀರಿನಲ್ಲಿ ಮಿಂದಷ್ಟು ಎಚ್ಚರಿಕೆಯಾಗಿ –

"ಏನು ವಿಷಯ, ಪರಶುರಾಮಣ್ಣ?"

-ಎಂದು ಕೇಳಿದ ಮದಕರಿನಾಯಕ, ಬೆನ್ನ ಹಿಂದೆ ತೆರೆದಿದ್ದ ಅಂತಃಪುರದ ಬಾಗಿಲನ್ನು ಹೊರಗಿನಿಂದ ಮುಚ್ಚಿಕೊಂಡು, ಮಾತಾಡುವ ಮಾತು ನಾಗತಿಯರಿಗೆ ಕೇಳದಿರಲೆಂದು.

"ಸರ್ವನಾಶವಾಯಿತು. 'ಪಂಜಾ' ತೊಳೆಯಲು ಹೋದ ಮುಸ್ಲಿಂ ಸರ್ದಾರರೆಲ್ಲರೂ, ನವಾಬನಿಗೆ ಪಿತೂರಿಯಾದರು. ಹೋದವರೊಬ್ಬರೂ ಹಿಂದಿರುಗಿ ಬರಲಿಲ್ಲ."

ಆ ಮಾತು ಕೇಳಿ ಮೈಗೆ ಗುಂಡು ತಗಲಿದಂತೆ ಕ್ಷಣಕಾಲ ಹೊಯ್ದಾಡಿ –

"ಯಾವಾಗ ತಿಳಿಯಿತು, ಈ ಸುದ್ದಿ?"

-ಎಂದು ಕೇಳಿದ ಮದಕರಿನಾಯಕ.

"ಸಂಜೆ 'ಪಂಜಾ' ತೊಳೆಯಲು ಮಲ್ಲಾಪುರಕ್ಕೆ ಹೋದವರು, ರಾತ್ರಿ ಕೆಳದುರ್ಗದ ಕೋಟೆ ಬಾಗಿಲುಗಳಿಗೆ ಬೀಗಮುದ್ರೆಯಾಗುವವರೆಗೂ ಹಿಂದಿರುಗಲಿಲ್ಲವೆಂದು ಕೋಟೆಗಳ ಕಾವಲಿನ ದಫೇದಾರರು ಚಪ್ಪಚಾವಡಿ ದಳವಾಯಿಗಳಿಗೆ ಸುದ್ದಿ ಕೊಟ್ಟರಂತೆ. 'ಇದೇನಾಯಿತು?' ಎಂದು ಅವರು ಚಾವಡಿಗೆ ಬಂದು, ಸಣ್ಣಪುಟ್ಟ ಸೇನೆಯವರನ್ನು ಕರೆದು ವಿಚಾರಿಸಿದಾಗ, ಮುಸ್ಲಿಂ ಸರ್ದಾರರೆಲ್ಲರೂ ಹೋದಬಳಿಕ, ಕೋಟೆಯೊಳಗಿದ್ದ ಮುಸ್ಲಿಂ ಸೈನಿಕರಾರೂ ಸರದಿಯ ಕೆಲಸಕ್ಕೆ ಹಾಜರಾಗದಿರುವ ವಿಷಯ ತಿಳಿದುಬಂದಿತಂತೆ. ಮನೆಗಳಲ್ಲಿದ್ದ ಸೈನಿಕರಲ್ಲೊಬ್ಬನನ್ನು ಎಳೆತರಿಸಿ, ಕೊತ್ವಾಲಚಾವಡಿಯ ಕಂಭಕ್ಕೆ ಕಟ್ಟಿಸಿದಾಗ 'ಸರ್ದಾರರೆಲ್ಲರೂ ಈ ನೆಪದಲ್ಲಿ ಹೈದರಾಲಿಯನ್ನು ಸೇರಿರುವುದೇ ಅಲ್ಲದೆ, ಕೋಟೆಯೊಳಗಿನ ಮುಸ್ಲಿಂ ಸೈನಿಕರೂ ನವಾಬರ ವಿರುದ್ಧ ಕತ್ತಿ ಎತ್ತುವುದಿಲ್ಲ ಎಂದು ಕುರಾನು ಮುಟ್ಟಿ ಪ್ರಮಾಣಮಾಡಿದ್ದಾರೆ.' ಎಂಬ ವಿಷಯ ಬಯಲಿಗೆ ಬಂದು, ಚಪ್ಪೇಚಾವಡಿಯ ದಳವಾಯಿಗಳು ಹೆಚ್ಚಿನ ಅಪಾಯ ತಪ್ಪಿಸಲು, ನಗರದಲ್ಲಿರುವ ಮುಸ್ಲಿಂ ಸೈನಿಕರೆಲ್ಲರಿಂದ ಶಸ್ತ್ರಗಳನ್ನು ವಶಪಡಿಸಿಕೊಳ್ಳಬೇಕೆಂದು ಐದುನೂರು ಮಂದಿಗೆ ನೇಮಕಮಾಡಿದಾಗ, ಅವರಲ್ಲಿ ಕೆಲವರು ಮರಾಠಾ ಸೈನಿಕರೂ 'ನಮಗೆ ಸಂಬಳಸಾರಿಗೆ ಸರಿಯಾಗಿ ಸಂದಾಯವಾಗಿಲ್ಲ. ಊಟತಿಂಡಿಯ ಸರಬರಾಜೂ ಸರಿಯಾಗಿಲ್ಲ. ಆದರೂ ಹಗಲು ದಣಿದ ನಮಗೆ ಮಲಗಲೂ ಬಿಡುವುದಿಲ್ಲ. ಇಂಥ ಚಾಕರಿ ಯಾರಿಗೆ ಬೇಕು?' ಎಂದು ಹೇಳಿ, ತಾವೇ ತಮ್ಮಲ್ಲಿದ್ದ ಶಸ್ತ್ರಾಸ್ತ್ರ ಒಪ್ಪಿಸಿ ಹೊರಟು ಹೋದರಂತೆ. ಈ ಸುದ್ದಿಯನ್ನು ನಮಗೆ, ತಮಗೆ

ತಿಳಿಸಲು ಅವಸರದ ಆಳನ್ನು ಕಳಿಸಿ, ಉಳಿದ ದಳವಾಯಿಗಳಿಗೆಲ್ಲಾ ಕರೆಕಳಿಸಿ, ಚಪ್ಪೇಚಾವಡಿ ದಳವಾಯಿಗಳು, ನಮಗಾಗಿಯೇ ಅವರ ಚಾವಡಿಯಲ್ಲಿ ಕಾದಿದ್ದಾರೆ."

ಪೆಟ್ಟಿನ ಮೇಲೆ ಪೆಟ್ಟು ಬೀಳುವ ಸುತ್ತು ಚಾವಟಿ ಏಟಿನಂತೆ ಕಿವಿಗಳನ್ನು ಅಪ್ಪಳಿಸಿದ ಆ ವಿದ್ರೋಹದ ವಾರ್ತೆಯನ್ನು ಕೇಳಿ, ಮದಕರಿನಾಯಕನ ಮೈಯ ನರನರವೂ ನಡುಗಿ, ಹುಚ್ಚು ಬೆರಳುಗಳು ಸುತ್ತಿದ್ದ ಬಿರಟೆಗಳಿಂದ ಎಳೆದ ವೀಣೆಯ ತಂತಿಗಳಂತೆ ಕೆಲವು ಅತಿಯಾಗಿ ಬಿಗಿದು, ಕೆಲವು ಸಡಿಲವಾಗಿ, ಒಮ್ಮೆ ಕೆಂಡದ ಮಳೆ, ಮರುಗಳಿಗೆಯೇ ಹಿಮಪಾತಕ್ಕೆ ಸಿಕ್ಕಂತೆ ಹೊಯ್ದಾಡಿ, ಗೋಡೆಗೊರಗಿ ಚೇತರಿಸಿಕೊಂಡು, ಅಷ್ಟು ಹೊತ್ತು ಮೌನವಾಗಿದ್ದು ಬಳಿಕ ತಾನಲ್ಲದೆ ಬೇರೆ ಯಾರೋ ಮಾತಾಡಿದಂತೆ –

"ಇಷ್ಟೆಯೋ, ಇನ್ನೇನಾದರೂ ಇದೆಯೋ ?"

-ಎಂದು ಕೇಳಿದ ಮದಕರಿನಾಯಕ.

"ಇಷ್ಟಕ್ಕಿಂತ ಹೆಚ್ಚು ಇನ್ನೇನಾಗಬೇಕಾಗಿತ್ತು ?"

"ಆಗಬೇಕಾಗಿತ್ತು - ಕೋಟೆಗಳು ಕುಸಿಯಬೇಕಾಗಿತ್ತು, ಬತೇರಿಗಳು ಮುರಿಯಬೇಕಾಗಿತ್ತು, ಬುರುಜುಗಳು ಬಿರಿಯಬೇಕಾಗಿತ್ತು, ಕಂದಕ ಹುಚ್ಚು ಹೊಳೆಯಾಗಿ ಹರಿದು ಊರನ್ನು ಕೊಚ್ಚಬೇಕಾಗಿತ್ತು, ಕೋಟೆಗೋಡೆಗಳು ದುರ್ಗದ ಕೊರಲಿಗೆ ಉರುಲಾಗಬೇಕಾಗಿತ್ತು, ಉತ್ಸವಾಂಬೆಯ ಮಹಾದ್ವಾರದ ಗೋಪುರ ಮುರಿದು, ಸಿಡಿಕಂಭ ಸಿಡಿದು ಊರನ್ನು ಸುಡಬೇಕಾಗಿತ್ತು, ನಮ್ಮ ಕೈಕಾಲುಗಳಿಗೆ ಪಾರ್ಶ್ವವಾಯು ಬಡಿಯಬೇಕಾಗಿತ್ತು, ಆಕಾಶ ಭೂಮಿಯೊಂದಿಗೆ ಪಿತೂರಿಮಾಡಿ ಎಲ್ಲಾ ತಲೆಕೆಳಗಾಗಬೇಕಾಗಿತ್ತು, ಅಂಥದೇನೂ ಆಗಲಿಲ್ಲ - ಹತ್ತು, ಜನ ಸರ್ದಾರರು ದ್ರೋಹಮಾಡಿದರು, ಎರಡು ಮೂರು ಸಾವಿರ ಅಷ್ಟಿರಬೇಕಲ್ಲವೇ ನಮ್ಮ ಮುಸ್ಲಿಂ ಸೈನಿಕರ ಸಂಖ್ಯೆ ಪಿತೂರಿಯಾದರು, ಇನ್ನಷ್ಟು ಜನ ಮರಾಠ ಸೈನಿಕರು ಶಸ್ತ್ರ ಸನ್ಯಾಸ ಮಾಡಿದರು – ಅಷ್ಟೇ ತಾನೇ ಆದದ್ದು? ನಾವಿದ್ದೇವೆ, ನೀನಿದ್ದೀಯಾ, ಕೋಟೆ ಇದೆ, ದಳವಾಯಿಗಳಿದ್ದಾರೆ, ನಮಗೆ ದ್ರೋಹ ಮಾಡದ ಸೈನಿಕರೂ ಇದ್ದಾರೆ - ದುರ್ಗವಿನ್ನೂ ಸತ್ತಿಲ್ಲ, ಬದುಕಿದೆ. ಆಯಿತು, ಉಡುಪು ಧರಿಸಿ ಚಾವಡಿಗೆ ಬರುತ್ತೇವೆ"

-ಎಂದು ಚೆನ್ನಾಗಿ ಕಾಯ್ದು ಸುತ್ತಿಗೆಯ ಪೆಟ್ಟು ತಿಂದು, ತಣ್ಣೀರಿನಲ್ಲಿ ಮುಳುಗಿ ಗಟ್ಟಿಯಾದ ಕಬ್ಬಿಣದ ಒನಕೆಯಂತಿದ್ದ ದೃಢಧ್ವನಿಯಲ್ಲಿ ಹೇಳಿದ ಮದಕರಿನಾಯಕ.

ಆ ಮಾತಿಗೆ ಏನು ಉತ್ತರ ಕೊಡಲೂ ತೋರದೆ, ಪರಶುರಾಮನಾಯಕ ಬಿಸಿಯಾಗಿ ಬಂದವನು ಮಂಜಿನ ಕೊರಡಾಗಿ ನಿಂತ.

ತಮ್ಮನಿಗೆ ಅಷ್ಟು ಹೇಳಿ, ಅಂತಃಪುರದ ಬಾಗಿಲು ತೆರೆದು, ಇದ್ದಷ್ಟು ಉಡುಪನ್ನು ಆದಷ್ಟು ಬೇಗ ಧರಿಸುತ್ತಾ, ಬೆದರಿದ ಕಣ್ಣುಗಳಿಂದ ತನ್ನತ್ತ ನೋಡುತ್ತಿದ್ದ ನಾಗತಿಯರಿಗೆ –

“ಹೆದರುವಂಥದೇನೂ ಆಗಿಲ್ಲ. ಯುದ್ಧ ಸಮಯದ ಕೆಟ್ಟ ಸುದ್ದಿ. ಪರಶುರಾಮಣ್ಣ ಬಂದಿದ್ದಾನೆ. ದಳವಾಯಿಗಳ ಚಾವಡಿಗೆ ಹೋಗಿ ಬರುತ್ತೇವೆ. ಹಾಯಾಗಿ ಮಲಗಿ ನಿದ್ರೆ ಮಾಡಿ”

- ಎಂದು ಸಂತೈಸುವ ಧ್ವನಿಯಲ್ಲಿ ಹೇಳಿ, ಅಂತಃಪುರದಿಂದ ಹೊರಬಂದ ಮದಕರಿನಾಯಕ.

ಆತ ಹೊರಗೆ ಬರುವ ವೇಳೆಗೆ, ಅವರ ಮಾತಿನ ಸದ್ದು ಕೇಳಿ ಎದ್ದು ಅಲ್ಲಿಗೆ ಬಂದ ನಿಂಗವ್ವ –

“ಏನು ಸುದ್ದಿ, ಅಪ್ಪಯ್ಯ ? ಈ ಅವೇಳೆಯಲ್ಲಿ ಎಲ್ಲಿಗೆ ಹೊರಟೆ ?” – ಎಂದು ಕೇಳಿದಳು.

“ಅರಸಾದವರಿಗೆ ವೇಳೆ, ಅವೇಳೆ ಎಂಬುದಿದೆಯೇ, ಅವ್ವಾ ? ನವಾಬ ನೀನು ಹಡೆದದ್ದು ’ಹೆಣ್ಣೆ-ಗಂಡೋ-ನೋಡಬೇಕು’ ಎಂದು ಪಣತೊಟ್ಟಿದ್ದಾನಂತೆ. ಅದೇನು ಮಾತೋ ವಿಚಾರಿಸಿಕೊಂಡು ಬರುತ್ತೇವೆ. ಚಿಂತಿಸಬೇಕಾದ್ದಂಥದೇನೂ ಇಲ್ಲ”

- ಎಂದು ತಾಯಿಗೆ ಧೈರ್ಯದ ಮಾತು ಹೇಳಿ –

“ಬಾ, ಪರಶುರಾಮಣ್ಣ - ಹೋಗೋಣ. ಈಗ ಕಾಲದೊಂದಿಗೆ ನಾವು ಸ್ಪರ್ಧೆ ಹೂಡಬೇಕಾಗಿದೆ”

- ಎಂದು ಹೇಳಿ, ನಿಂತಿದ್ದ ಪರಶುರಾಮನಾಯಕನನ್ನು ತನ್ನೊಂದಿಗೆ ಎಳೆದುಕೊಂಡು ಹೊರಟ, ಮದಕರಿನಾಯಕ.

ಆ ವೇಳೆಗೆ ನಾಯಕರು ಅರಮನೆಯಿಂದ ಹೊರಗೆ ಹೋಗುವ ಸುದ್ದಿ ತಿಳಿದ ಅರಮನೆಯ ಕಾವಲುಪಡೆಯವರು ದೀವಟಿಗೆಯ ಆಳುಗಳನ್ನು ಕರೆತಂದು, ನಾಯಕರ ಕುದುರೆಯನ್ನು ಅರಮನೆಯ ಮುಂದೆ ನಿಲ್ಲಿಸಿದ್ದರು. ಗುದಗತ್ತಿಯ ನಾಯಕತ್ವದಲ್ಲಿ ಅಂಗರಕ್ಷಕ ಪಡೆ ಸಿದ್ಧವಾಗಿ ನಾಯಕರು ಬರುವುದನ್ನೇ ಕಾಯುತ್ತಿತ್ತು.

ಇಳಿಯಲು ಇನ್ನೂ ಎರಡು ಮೆಟ್ಟಿಲುಗಳಿವೆ ಎನ್ನುವಾಗಲೇ ಛಂಗನೆ ಹಾರಿ ಕುದುರೆಯ ಬೆನ್ನೇರಿ, ಆಳು ಕೊಟ್ಟ ಲಗಾಮನ್ನು ಹಿಡಿದು-

“ಚಪ್ಪೇಚಾವಡಿಗೆ -”

– ಎಂದಷ್ಟೇ ಹೇಳಿ, ಕುದುರೆಯ ಬೆನ್ನು ತಟ್ಟಿದ ಮದಕರಿನಾಯಕ.

ಕುದುರೆ ಓಡಿತು – ಅದರ ಮುಂದೆ ಗುದಗತ್ತಿಯ ಕುದುರೆ ; ಇಬ್ಬದಿಯಲ್ಲೂ ಅಂಗರಕ್ಷಕ ಪಡೆಯವರು, ಹಿಂದೆ ಪರಶುರಾಮನಾಯಕ.

ದೀವಟಿಗೆಯವರು ಕಾಲಿಗೆ ಗಾಲಿ ಕಟ್ಟಿಕೊಂಡವರಂತೆ ಓಡಿದರು – ಕೈಯಲ್ಲಿದ್ದ ದೀವಟಿಗೆಗಳ ಹೊಯ್ದಾಡುವ ಉರಿಬೆಳಕಿನಿಂದ, ಕೃಷ್ಣಪಕ್ಷದ ಕತ್ತಲೆಯನ್ನು ಚೆಲ್ಲಾಪಿಲ್ಲಿಯಾಗಿ ಚದುರಿಸುತ್ತಾ.

* * *

ಚಪ್ಪೇಚಾವಡಿಯಲ್ಲಿ –

ಆ ಚಾವಡಿಯ ದಳವಾಯಿ ಸಣ್ಣಪರಶುರಾಮಪ್ಪನಾಯಕನ ನೇತೃತ್ವದಲ್ಲಿ ಉಳಿದ ದಳವಾಯಿಗಳು, ತಮ್ಮ ಓಟಕ್ಕೆ ಬೇಟೆಗಾರ ಕೊಡುವ ಸೂಚನೆಯನ್ನು ಕಾಯುತ್ತಾ ಬೇಟೆಯ ಆತುರದಿಂದ ಕುತ್ತಿಗೆಗೆ ಹಾಕಿದ ಪಟ್ಟಿಯ ಸರಪಳಿಯನ್ನು ಜಗ್ಗಿ ಎಳೆಯುತ್ತಾ, ನಾಲಗೆ ಚಾಚಿ, ಬಿಸಿಯುಸಿರು ಬಿಡುತ್ತಿರುವ ಬೇಟೆಯ ನಾಯಿಗಳಂತೆ ಕಾದಿದ್ದರು - ನಾಯಕರು ಬರುವುದನ್ನೇ.

ಕೈಯಲ್ಲಿದ್ದ ಲಗಾಮನ್ನು ಒಂದೆಡೆ ಬಿಸುಟು, ರಿಕಾಪಿನಲ್ಲಿದ್ದ ಕಾಲನ್ನು ಹೊರತೆಗೆದು ಕುದುರೆಯಿಂದ ಧುಮುಕಿ, ಚಾವಡಿಯನ್ನು ಪ್ರವೇಶಿಸಿ, ತಮ್ಮನ್ನು ಕಂಡು ಏಳಲೆತ್ನಿಸಿದವರಿಗೆ 'ಈಗ ಅದೆಲ್ಲದರ ಅಗತ್ಯವಿಲ್ಲ' ಎಂದು ಹೇಳಿ, ತನಗಾಗಿ ಸಿದ್ಧಪಡಿಸಿದ ಆಸನದಲ್ಲಿ ಕುಳಿತು ಸಣ್ಣ ಪರಶುರಾಮಪ್ಪನಾಯಕನ ಕಡೆ ತಿರುಗಿ –

"ಹಳೆಯ ಸುದ್ದಿ ಎಲ್ಲಾ ಗೊತ್ತಾಯಿತು, ಹೊಸದೇನು ಹೇಳಿ-"

-ಎಂದು ಕೇಳಿದ ಮದಕರಿನಾಯಕ.

"ಹೊಸ ಸುದ್ದಿಯೆಂದರಿಷ್ಟೆ - ನಾಳೆ ನವಾಬರು ಉಚ್ಚಂಗಮ್ಮನ ಹೊಂಡದ ಬಳಿಯ ಕೋಟೆಯ ಮೇಲೆ ದಾಳಿ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಕಾಮಾಟಿಗರು, ಬಡಗಿಗಳು ಮೊಹರ್ಚೆಗಳನ್ನು ಬಲಪಡಿಸಿ, ತೋಪುಗಳನ್ನು ಏರಿಸುತ್ತಿದ್ದಾರೆ. ಹಗಲಾಗುವವರೆಗೂ ಕಾಯುತ್ತಾರೋ, ಅದಕ್ಕೆ ಮೊದಲೇ ಲಡಾಯಿ ಆರಂಭಿಸುತ್ತಾರೋ ತಿಳಿಯದು. ಅಂತೂ ತರಾತುರಿಯ ಸಿದ್ಧತೆಯಲ್ಲಿದ್ದಾರೆ ಎಂಬ ವಾರ್ತೆ ಬೇಹುಗಾರರಿಂದ ತಿಳಿಯಿತು. ಅತ್ತಕಡೆ ನಮ್ಮ ಸೇನೆ, ಬುರುಜಿನ ಮೇಲಿನ ತೋಪುಗಳು ತಯಾರಾಗಿರಬೇಕು - ಎಂದು ನಮ್ಮವರಿಗೆ ಹೇಳಿಕಳಿಸಿ, ತಾವು ಬರುವುದನ್ನೇ ಕಾಯುತ್ತಿದ್ದೆವು"

-ಎಂದ ಚಪ್ಪೇಚಾವಡಿ ದಳವಾಯಿ ಸಣ್ಣಪರಶುರಾಮಪ್ಪನಾಯಕ.

"ಕಾಯುವುದಕ್ಕೆ ಹೇಳಿ ತಡಮಾಡಿದಿರಿ. ಅವರು ಮೊಹರ್ಚೆಗಳನ್ನು ಬಿಗಿಮಾಡುತ್ತಿರುವಾಗಲೇ ನಮ್ಮವರು ತೋಫು ಉಡಾಯಿಸಿ, ಅವರ ಮೊಹರ್ಚೆ ಮುರಿಯಬೇಕಾಗಿತ್ತು. ಆಯಿತು - ಇನ್ನೂ ಹಗಲಾಗಿಲ್ಲ. ಈಗಲೇ ನಮ್ಮವರಿಗೆ ಆ ಸುದ್ದಿ ಕಳಿಸಿ.

ಎಂದೂ ಆಕ್ರಮಣಕಾರರಿಗೆ ಮೇಲುಗೈ ಆಗಬಾರದು. ಹಾಗೇ ಗುಪ್ತದ್ವಾರಗಳಿಂದ ನಮ್ಮ ಸೈನಿಕರು ಹೊರಟು, ನವಾಬರ ದಂಡಿನ ಮೇಲೆ ದಾಳಿ ಮಾಡಲಿ - ಈ ಕೂಡಲೇ ವಾರ್ತೆಯನ್ನು ಕಳಿಸಿ"

- ಎಂದು ಹೇಳಿ, ಚಪ್ಪೆಚಾವಡಿಯ ದಳವಾಯಿಗಳು ಆ ಮಾತನ್ನು ಕಾರ್ಯಗತ ಮಾಡುವವರೆಗೂ ಮೌನವಾಗಿದ್ದು ಬಳಿಕ –

"ಮುಂದಿನ ಸುದ್ದಿ ಏನು ?" – ಎಂದು ಕೇಳಿದ ಮದಕರಿನಾಯಕ.

"ಏನು ಹೇಳುವುದು – ನಂಬಿದವರು ನಮಗೆ ದ್ರೋಹ ಮಾಡಿದರು....ಮುಸಲ್ಮಾನರು..."

-ಬಾಣದ ಓಬಣ್ಣನಾಯಕ ಹಲ್ಲುಮಸೆಯುತ್ತಾ ಹೇಳಿದ.

"ಮುಸಲ್ಮಾನರು - ಕಳ್ಳಿನರಸಪ್ಪಯ್ಯ ಯಾವ ಜಾತಿ ? ಹಾಗೆ ನೋಡಿದರೆ ಮುಸಲ್ಮಾನರೇ ಮೇಲು, ತಮ್ಮ ಜಾತಿಧರ್ಮವನ್ನಾದರೂ ಉಳಿಸಿಕೊಂಡರು. ನಮ್ಮವರು ಅದಕ್ಕಿಂತಲೂ ನೀಚರು. ರಾಯದುರ್ಗದವರು, ಹರಪನಹಳ್ಳಿಯವರು, ಜರಿಮಲೆಯವರು, ಕಳ್ಳಿ ನರಸಪ್ಪಯ್ಯ – ಇವರು ಹಡೆದ ತಾಯಿಯ ಸೀರೆಯನ್ನೇ ಸಡಿಲಮಾಡಿದ ಭಂಡರು. ಇನ್ನು ಅವರ ಸುದ್ದಿ ಎತ್ತಬೇಡಿ. ಸತ್ತವರಿಗೆ ಹೆಸರಿಲ್ಲ. ನಿಮ್ಮ ದಾರಿ ಹೇಳಿ –?"

– ಕರ್ಕಶವಾಗಿ ಕೇಳಿದ ಮದಕರಿನಾಯಕ.

"ನಮ್ಮ ದಾರಿ - ಗೆದ್ದರೆ ಜಯ, ಸತ್ತರೆ ಸ್ವರ್ಗ."

- ಸಣ್ಣಪರಶುರಾಮಪ್ಪನಾಯಕ ಕೂರಲಗಿನಂತಿದ್ದ ಧ್ವನಿಯಲ್ಲಿ ಹೇಳಿದ –

"ಮನೆಯಿಂದ ಬರುವಾಗಲೇ, ಮನೆಯವರಿಗೆ ಈ ಮಾತು ಹೇಳಿ ಬಂದಿದ್ದೇವೆ : 'ನಾಳಿನ ಯುದ್ಧ ಇತ್ಯರ್ಥವಾಗುವವರೆಗೂ ಮನೆಗೆ ಬರುವುದಿಲ್ಲ' ಎಂದು."

"ನಾವೂ ಅಷ್ಟೆ – ಮನೆಯವರಿಗೆ, 'ಈಗ ಇಟ್ಟ ಕುಂಕುಮ ಅಳಿಸಿಕೊಳ್ಳಬೇಡಿ. ನಾವು ಮತ್ತೆ ಬಂದಾಗ ಹೊಸದಾಗಿ ಕುಂಕುಮ ನಾವೇ ಇಡುತ್ತೇವೆ' ಎಂದು."

- ಬಾಣದ ಓಬಣ್ಣನಾಯಕ ಹೇಳಿದ.

"ನೀವೆಲ್ಲಾ ಮುಂಜಾಗರೂಕತೆ ವಹಿಸಿದಿರಿ. ನಮ್ಮಿಂದಲೇ ತಡವಾಯಿತು. ಸರಿಯೇ, ನಮ್ಮವರಿಗೂ ಗೊತ್ತಿದೆ - 'ಅರಸು ಕಟ್ಟಿದ ತಾಳಿ ಗಾಳಿಗೊಡ್ಡಿದ ಸೊಡರು' ಅಂತ. ಅದನ್ನೊಂದು ಸಲ ಹೇಳಿ ಬರಬೇಕು. ಬರುತ್ತೇವೆ. ನೀವು ಸಿದ್ಧರಾಗಿ"

-ಎಂದು ಎಲ್ಲ ನಿರ್ಧಾರವನ್ನೂ ಮಾಡಿದಂತೆ ಹೇಳಿದ ಮದಕರಿನಾಯಕ.

"ನಾಳಿನ ಯುದ್ಧ ಹೇಗಾಗುವುದೋ ನಮಗಾರಿಗೂ ತಿಳಿಯದು. ಒಳಿತಾದರೆ ಒಳಿತು. ಕೆಟ್ಟದ್ದಕ್ಕೆ ಸಿದ್ಧವಾಗಿರಬೇಕು. ಯುದ್ಧ ಏನಾದರೂ ದುರ್ಗದ ಸಂಪತ್ತು ಶತ್ರುಗಳ ಕೈ ಸೇರಬಾರದು.

ಆ ವ್ಯವಸ್ಥೆ ಮಾಡಲು ನಮ್ಮನ್ನು, ಪ್ರಧಾನಿಗಳನ್ನು ಬಿಟ್ಟು, ಮಹಾಸ್ವಾಮಿಗಳು ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಂಡು, ಹಗಲಾಗುವ ವೇಳೆಗೆ ಸಿದ್ಧವಾಗಬೇಕು. ತಮ್ಮ ಖಾಸಾಬೇಡಪಡೆಯವರಿಗೆ, ಪುರುಭಯ್ಯಾಜನರಿಗೆ ಸುದ್ದಿ ಕಳಿಸಿದ್ದೇವೆ"

- ಎಂದ ಚಪ್ಪೇಚಾವಡಿದಳವಾಯಿ ಸಣ್ಣ ಪರಶುರಾಮಪ್ಪನಾಯಕ.

"ಹಾಗಿದ್ದರೆ ನಮಗಿನ್ನು ಇಲ್ಲಿ ಕೆಲಸವಿಲ್ಲ. ಅರಮನೆಗೆ ಹೋಗಿ ಸಿದ್ಧರಾಗುತ್ತೇವೆ"

-ಎಂದು ಹೇಳಿ, ಮೇಲೆದ್ದ ಮದಕರಿನಾಯಕ, ಏನೂ ಮಾತಾಡದೆ ಕುಳಿತಿದ್ದ ತಮ್ಮ ಪರಶುರಾಮನಾಯಕನತ್ತ ನೋಡಿ,

"ನೀವು ದೇಹ, ನಾವು ನಿಮ್ಮ ನೆರಳು" - ಎಂದಷ್ಟೇ ಹೇಳಿದ ಪರಶುರಾಮನಾಯಕ.

೨೨

'ನೀವು ಹಾಯಾಗಿ ಮಲಗಿ'

- ಎಂದು ಮದಕರಿನಾಯಕ ತನ್ನ ತಾಯಿ, ಮಡದಿಯರಿಗೆ ಹೇಳಿ ಬಂದಿದ್ದರೂ ಅವರಾರೂ ನಿದ್ರಿಸಿರಲಿಲ್ಲ.

ಅದಕ್ಕೆ ಪ್ರತಿಯಾಗಿ –

ಆತ ಮಾತನಾಡಿದ ರೀತಿಯಿಂದ ನಿದ್ದೆ ಸತ್ತ ಅವರೆಲ್ಲರೂ ಅಂತಃಪುರದ ಮೊಗಸಾಲೆಯಲ್ಲಿ, ಕುಮಾರ ಭರಮಣ್ಣನಾಯಕನನ್ನು ಎಬ್ಬಿಸಿ ತಮ್ಮೊಂದಿಗೆ ಕೂರಿಸಿಕೊಂಡು, ಅಲ್ಲಲ್ಲಿ ಹೊತ್ತಿಸಿದ ದೀಪಗಳು ಚೆಲ್ಲಿದ ನೆರಳು-ಬೆಳಕುಗಳ ಮಧ್ಯೆ ಚಪ್ಪೆಚಾವಡಿಯಿಂದ ಮದಕರಿನಾಯಕ ಹಿಂದಿರುಗುವುದನ್ನೇ ಕಾಯುತ್ತಿದ್ದರು - ಆಕಾಶದಲ್ಲಿ ಡೇಗೆಯ ಸಿಳ್ಳುಧ್ವನಿಯನ್ನು ಕೇಳಿ, ಗೂಡಿನೊಳಗೆ ಅವಿತುಕೊಂಡ ಪಾರಿವಾಳಗಳಂತೆ.

ಅರಮನೆಗೆ ಹಿಂದಿರುಗಿ, ತನಗಾಗಿ ಕಾದು ಕುಳಿತಿದ್ದ ಅವರನ್ನು ಕಂಡು-

"ಇನ್ನೂ ರಾತ್ರಿ ಬೇಕಾದಷ್ಟು ಹೊತ್ತು ಉಳಿದಿದೆ. ಈಗಲೇ ಎದ್ದು ಕುಳಿತದ್ದೇಕೆ ? ಹೊತ್ತು ಸಿಕ್ಕಾಗ ನಿದ್ರೆ ಮಾಡಬೇಕು. 'ಬೇಕು' ಎಂದರೂ ನಮಗೆ ಆ ಅವಕಾಶ ಸಿಗುತ್ತದೆಯೇ ? ಇವರಂತೂ ಪ್ರಾಯದವರು. ವಯಸ್ಸಾದವಳು - ನೀನಾದರೂ ಇವರಿಗೆ ಬುದ್ಧಿ ಹೇಳಬಾರದಾಗಿತ್ತೆ ? ಹಗಲು ಅರಳಬೇಕಾದ ಹೂವು ರಾತ್ರಿ ಅರಳಿದರೆ ಬೆಳಗಿನ ಪೂಜೆಗೆ ಬಾಡಿ ಹೋಗುತ್ತದೆ – ಊರಿಗೆ ಮುಂಚೆ ಅರಳಿ ನೆಲಕ್ಕೆ ಪೂಜೆಮಾಡಿದ ಪಾರಿಜಾತದ ಹಾಗೆ. ಬಾಡಿದ ಹೂವು ಪೂಜೆಗೂ ಬರುವುದಿಲ್ಲ, ಮುಡಿಯುವುದಕ್ಕೂ ಆಗುವುದಿಲ್ಲ"

- ಎಂದು ಬಹುಲಘುವಾದ ಧ್ವನಿಯಲ್ಲಿ ಹೇಳಿದ ಮದಕರಿನಾಯಕ.

"ಯಾರನ್ನು ಮರುಳು ಮಾಡುವುದಕ್ಕೆ ಈ ಮಾತಾಡುತ್ತಿದ್ದೀಯೆ ? ಎಲ್ಲಾ ಗೊತ್ತಿಲ್ಲದಿದ್ದರೂ, ನೀನಾಡಿಕೊಂಡ ಮಾತು ಅಷ್ಟಿಷ್ಟು ನನ್ನ ಕಿವಿಗೆ ಬಿದ್ದಿದೆ. ಅದನ್ನು ಇವರಿಗೂ ಹೇಳಿದ್ದೇನೆ. ಇದ್ದ ಮಾತು ಹೇಳು" - ಎಂದು ಕೇಳಿದಳು ನಿಂಗವ್ವ,

ಆ ಮಾತು ಕೇಳಿ ಮದಕರಿನಾಯಕ ತಾಯಿಗೆ ಏನು ಉತ್ತರ ಕೊಡಬೇಕೆಂದು ಅಷ್ಟು ಹೊತ್ತು ಯೋಚಿಸಿ, ಬಳಿಕ ಸತ್ಯ ಹೇಳುವುದೊಂದೇ ಉಳಿದಿರುವ ಮಾರ್ಗವೆಂದು ನಿರ್ಧರಿಸಿ –

"ಅವ್ವಾ - ನಿಮ್ಮ ನಿದ್ರೆಯ ವಿಷಯ ನಿಮಗೆ ಬಿಟ್ಟಿದ್ದು. ಆದರೆ ನನಗೆ ಈ ದಿನ ಅರಮನೆಯಲ್ಲಿ ನಿದ್ರೆಯಿಲ್ಲ. ನಾಳೆ - ಇಲ್ಲೋ, ದುರ್ಗದಲ್ಲೂ ಆ ತಾಯಿಗೇ ಗೊತ್ತು. ನಾನೀಗ ನಿಮ್ಮ ಆಶೀರ್ವಾದ ತೆಗೆದುಕೊಂಡು ಯುದ್ಧಭೂಮಿಗೆ ಹೊರಡಲು ಬಂದಿದ್ದೇನೆ...."

-ಎಂದು ತಾಯಿಗೆ ಹೇಳಿ, ಮಗನತ್ತ ತಿರುಗಿ –

"ನಮ್ಮ ಬಟ್ಟೆ, ಆಯುಧ ಕೊಡುವವರು ಮಲಗಿದ್ದಾರೋ ಏನೋ. ಹೋಗಿ ನೋಡಿ, ಅವರನ್ನು ಎಬ್ಬಿಸಿ – ನಮ್ಮ ವಸ್ತ್ರ, ಆಯುಧಗಳನ್ನು ತೆಗೆಸಿಕೊಂಡು ಬಾ ಭರಮಣ್ಣ"

-ಎಂದು ಹೇಳಿ, ಕುಮಾರ ಭರಮಣ್ಣನಾಯಕನನ್ನು ಆ ಕಾರ್ಯಕ್ಕೆ ಕಳಿಸಿದ.

ಆ ಮಾತನ್ನು ಕೇಳಿ ನಾಗತಿಯರಿಬ್ಬರ ಮುಖಗಳೂ ಸಂಜೆಯ ತಾವರೆಯಂತೆ ಬಾಡಿದವು. ನಿಂಗವ್ವ ಉದ್ವಿಗ್ನಳಾಗಿ –

"ಅಪ್ಪಯ್ಯಾ"

– ಎಂದು ಕೂಗುತ್ತಲೇ ಎದ್ದು ಮಗನನ್ನು ತಬ್ಬಿದಳು.

"ನೀನು ಹೀಗೆ ನನ್ನನ್ನು ತಬ್ಬಿ ಎಷ್ಟು ದಿನ ಆಗಿತ್ತವ್ವಾ. ಈಗಲಾದರೂ ಮತ್ತೊಮ್ಮೆ ಅದಕ್ಕೆ ಅವಕಾಶವಾಗಿ, ಮತ್ತೆ ನಿನ್ನ ಹೊಟ್ಟೆಯಲ್ಲಿ ಹುಟ್ಟಿ ಬಂದ ಹಾಗಾಯಿತು"

-ಎಂದು ತಾಯಿಯ ತಲೆಯನ್ನು ಮಮತೆಯಿಂದ ನೇವರಿಸಿ –

"ಅವ್ವಾ - ಇಲ್ಲಿರುವವರೆಲ್ಲಾ ನಿನಗಿಂತ ಕಿರಿಯರೇ, ನಾನು ಕೂಡ. ಇಂಥ ಯುದ್ಧಕ್ಕೆ ಎಷ್ಟು ಸಲ ಹೋಗಿ ಬಂದಿದ್ದೇನೆ. ನೀನೇ ಎಷ್ಟು ಸಲ ನಗುನಗುತ್ತಾ ಆಶೀರ್ವಾದ ಮಾಡಿ ಕಳಿಸಿದ್ದೀಯ. ಆದರೆ ಇವತ್ತೇಕೆ ಹೀಗೆ -? ಏನೂ ಆಗುವುದಿಲ್ಲ, ಆಗುವುದನ್ನಾರೂ ತಪ್ಪಿಸಲಿಕ್ಕಾಗುವುದಿಲ್ಲ. ದಳವಾಯಿಗಳು ಕಾಯುತ್ತಾ ಇರುತ್ತಾರೆ. ಬಿಡು-ಬಟ್ಟೆ ಹಾಕಿಕೊಂಡು, ಮತ್ತೆ ನಿನ್ನ ಹತ್ತಿರ ಬರುತ್ತೇನೆ"

-ಎಂದು ಹೇಳಿ, ಬಲವಂತವಾಗಿ ಆಕೆಯ ಬಾಹುಬಂಧನವನ್ನು ಬಿಡಿಸಿಕೊಂಡು, ತನ್ನ ಶಯ್ಯಾಗೃಹದತ್ತ ನಡೆದ.

ನಿಂಗವ್ವ ಇದ್ದಲ್ಲೇ ಕುಸಿದು ಕುಳಿತಳು.

ನಾಗತಿಯರಿಬ್ಬರೂ ತಮ್ಮ ನಾಯಕರನ್ನು ಹಿಂಬಾಲಿಸಿದರು.

ಆದರೆ ಶಯ್ಯಾಗೃಹದಲ್ಲಿ ಒಟ್ಟಾಗಿ ಕಲೆತ ಆ ಮೂವರಿಗೂ ಏನು ಮಾತಾಡಬೇಕೆಂಬುದೇ ತೋಚಲಿಲ್ಲ. ಕಾಟಾಚಾರದ ಮಾತಿನಿಂದ, ಆ ಮೌನದ ಗುಂಡನ್ನು ಸಿಡಿಸುವುದಕ್ಕಿಂತ ಅದನ್ನು ಹಾಗೇ ಬಿಡುವುದು ಮೇಲು ಎಂದುಕೊಂಡು ಮದಕರಿನಾಯಕನೂ ಮೌನವಾಗಿದ್ದ.

ಅವರು ಹಾಗಿರುವಾಗಲೇ, ಕುಮಾರ ಭರಮಣ್ಣನಾಯಕ ಆಳುಗಳ ಕೈಯಲ್ಲಿ ತಂದೆಯ ಸಮರವಸ್ತ್ರ, ಆಯುಧಗಳನ್ನು ತೆಗೆಸಿಕೊಂಡು ಬಂದ.

"ನೀನು ಸ್ವಲ್ಪ ಹೊತ್ತು ಹೊರಗಿರು, ಭರಮಣ್ಣ ಬಟ್ಟೆ ಹಾಕಿಕೊಂಡು ಕೂಗುತ್ತೇವೆ"

-ಎಂದು ಮಗನಿಗೆ ನಯವಾಗಿ ಹೇಳಿ, ಅವನೊಂದಿಗೆ ಆಳುಗಳನ್ನೂ ಹೊರಗೆ ಕಳಿಸಿ, ತಾನೇ ಶಯ್ಯಾಗೃಹದ ಬಾಗಿಲನ್ನು ಮುಂದೆ ಮಾಡಿ, ಮೌನದ ಮುದ್ದೆಗಳಂತಿದ್ದ ಮಡದಿಯರಿಗೆ –

"ಬಂಗಾರಿ, ಪದ್ಮಾಜಿ - ಇಷ್ಟು ದಿನ ಆಳುಗಳ ಕೈಲಿ ಬಟ್ಟೆ ಹಾಕಿಸಿಕೊಂಡು ಬೇಸರವಾಗಿದೆ. ಇವತ್ತು ನೀವೇ ತೊಡಿಸಿ. ಎಷ್ಟಾದರೂ ಹೆಂಗಸರ ಕೈಲಿ ಅಲಂಕಾರ ಮಾಡಿಸಿಕೊಂಡರೇ ಸೊಗಸು; ಅಲ್ಲವೇ - ಪದ್ಮಾಜಿ"

- ಎಂದು ಹೇಳಿದ ಮದಕರಿನಾಯಕ, ಸಣ್ಣಗೆ ನಗುತ್ತಾ –

"ನೀವು ಸುಂದರಿಯರು, ಹೇಗೆ ಅಲಂಕರಿಸಿಕೊಂಡರೂ ಸುಂದರವಾಗಿ ಕಾಣುತ್ತೀರ. ಆದರೆ ಕಗ್ಗಲ್ಲ ವಿಗ್ರಹದಂತಿರುವ ನಮ್ಮನ್ನು ನೋಡುವವರ ಕಣ್ಣಿಗೆ ಅಂದವಾಗಿ ಕಾಣುವಂತೆ ಅಲಂಕಾರ ಮಾಡಬೇಕು. ಆಗ ನಿಮ್ಮ ಜಾಣತನ ಗೊತ್ತಾಗುತ್ತದೆ."

ಸಮರ ಸಂದರ್ಭಕ್ಕೆ ಉಚಿತವಲ್ಲದ, ಲಘುಶೃಂಗಾರದ ಮಾತು ನಾಗತಿಯರನ್ನು ಸಂತೋಷಗೊಳಿಸುವ ಬದಲು ಅವರ ಕರುಳಲ್ಲಿ ಕುದಿಯುತ್ತಿದ್ದ ಸಂಕಟವನ್ನು ಪುಟವೇರಿಸಿ, ಸಮಯದ ದಾರುಣತೆಗೆ ಇರಿಯುವ ಮಿರುಗುಕೊಟ್ಟು, ಕಣ್ಣಲ್ಲಿ ತುಂಬಿಬಂದ ಕಂಬನಿಯನ್ನು ಮದಕರಿನಾಯಕನಿಗೆ ಕಾಣಿಸದಂತೆ, ಕೈಯಲ್ಲಿ ಹಿಡಿದ ಬಟ್ಟೆಯ ಮರೆಯಲ್ಲಿ ಮುಂಗೈಯಿಂದ ಒರೆಸಿಕೊಂಡು, ಮಾತನಾಡದೆ ಕರ್ತವ್ಯನಿರತರಾದರು.

ಮೃದುವಾಗಿ ಕಿತ್ತಳೆಹಣ್ಣಿನ ತೊಳೆಯ ಮೇಲಿನ ನವಿರಾದ ಸಿಪ್ಪೆಯನ್ನು ತೆಗೆಯುವಂತೆ ಬಂಗಾರವ್ವನಾಗತಿ ನಾಯಕರ ಅಂಗರೇಖನ್ನು ಬಿಚ್ಚಿ, ಬರಿದಾದ ಆತನ ಮೈಯನ್ನು ನೋಡಿದಳು-

ವ್ಯಾಯಾಮದಿಂದ ಶ್ವಾಸಕೋಶದ ಭಾಗಗಳು ತುಂಬಿ ಬಿಗಿಯಾಗಿ ಬೆಳೆದ ವಿಶಾಲವಾದ ವಕ್ಷಃಸ್ಥಳ; ಆ ಎದೆಗೆ ತಕ್ಕ ಪ್ರಮಾಣದ ಭುಜಭಾಗ; ಎಳ್ಳಷ್ಟೂ ಕೊಬ್ಬಿಲ್ಲದೆ ಮಾಂಸ ಖಂಡಗಳು ಪ್ರಮಾಣಬದ್ಧವಾಗಿ ತುಂಬಿಕೊಂಡ, ತೇಗದಲ್ಲಿ ಕೆತ್ತಿದಂಥ ತೋಳುಗಳು; ಹೆಣ್ಣಿನ ನಡುವನ್ನು ಒಂದು ಹಿಡಿಯಲ್ಲಿ ಹಿಡಿಯುವಷ್ಟು ಅಗಲವಾದ, ಉದ್ದವಾಗಿ, ದಪ್ಪನಾದ ದಂತದ ಕಾಂತಿಯ

ಉಗುರು ಬೆಳೆದು, ಉಂಗುರಗಳಿಂದ ಅಲಂಕೃತವಾದ ಬೆರಳುಗಳಿದ್ದ ಶಸ್ತ್ರಾಭ್ಯಾಸದಿಂದ ಒರಟಾದ ಕೈಗಳು; ತೆಳುವಾದ ಉಕ್ಕಿನ ಹಲಗೆಯಂಥ ಹೊಟ್ಟೆ ಕಣ್ತೆರೆದು ನೋಡುವುದೇನು, ಕಣ್ಣು ಮುಚ್ಚಿಕೊಂಡು ಕೈಬೆರಳಿನಿಂದ ಮುಟ್ಟಿನೋಡಿದರೂ ಅರ್ಥವಾಗುತ್ತದೆ - ಅದು ಬಲಿಷ್ಠ ಪುರುಷದೇಹವೆಂದು. ಹಾಗೇ ಕಣ್ಣು ಬಿಟ್ಟು ನೋಡಿದಾಗ ಆ ಮೈಯಿನ ಮಾಟ, ಇನ್ನೂ ಕೆಲವು ಹಸಿಯಾದ ಗಾಯಗಳು ಹೇಳುತ್ತವೆ – ಈತ ಪುರುಷನಷ್ಟೇ ಅಲ್ಲ, ಯೋಧನೆಂದು.

ಈ ಮೈಯನ್ನು ಬಂಗಾರವ್ವನಾಗತಿ ಎಷ್ಟು ಬಾರಿ ನೋಡಿದ್ದಳು –

ತಾನು ಬಯಸಿ, ಬಯಸಿ ರಸಹೀರಿ ಸವಿದ ಕಬ್ಬಿನಜಲ್ಲೆ ಅದು. ಆ ತೋಳು-ತಲೆದಿಂಬಾಗಿತ್ತು. ಆ ಕೈಬೆರಳುಗಳು ಕೂದಲಿನಲ್ಲಿ ಕೈಯಾಡಿ ಮುಂಗುರುಳಿನೊಂದಿಗೆ ಆಟವಾಡಿದ್ದವು. ಆ ಪಕ್ಷಃಸ್ಥಲ - ತನ್ನ ಒಲವಿನ ಕ್ರೀಡಾಂಗಣವಾಗಿತ್ತು. ಆ ಕೆನ್ನೆ, ತುಟಿ, ಗಲ್ಲ - ತಾನರಿಯದುದು ಯಾವುದಿದೆ - ಈ ದೇಹದಲ್ಲಿ ?

ಆಗ-

ಆ ಎಷ್ಟೋ ಸಲ –

ಅವು ಮೃದುವಾಗಿ, ಮೋಹಕವಾಗಿ, ತನ್ನ ಕರಾಂಗುಲಿಗಳ ಆಟಕ್ಕೆ ಹೇಗೆಂದರೆ ಹಾಗೆ ಬಾಗಿ, ಬಳುಕಿ, ಒಗ್ಗಿಕೊಳ್ಳುವ ಮೇಣದ ಬೊಂಬೆಯಂತಿತ್ತು. ಆ ದೇಹದ ಕಾಠಿಣ್ಯವೂ ಅದರ ಆಕರ್ಷಕತೆಯ ಪ್ರಧಾನಾಂಶವಾಗಿತ್ತು – ಚೆನ್ನಾಗಿ ಬಲಿತ ಹೆಣ್ಣಿನ ಪೃಷ್ಠಕಾಂತಿಯಂತೆ.

ಆಗೆಲ್ಲಾ ಹಾಗೆ ಕಂಡ ಈ ದೇಹ –

ಈಗ-

ಎಲ್ಲ ಮಾರ್ದವತೆಯೂ ಮಾಯವಾಗಿ, ಗಂಡಸುತನದ ಗಡುಸೇ ಆ ದೇಹದ ಒಂದೊಂದು ಅಂಗದಲ್ಲ, ರೇಖೆಯಲ್ಲ, ಬಾಗಿನಲ್ಲಿಯೂ ಕಂಡು, ಕಾಮಕೇಳಿಗಲ್ಲ, ಮಲ್ಲಯುದ್ಧಕ್ಕೆ ಸಜ್ಜಾದಂತಿದೆ; ಹೃದಯದಲ್ಲಿ ಒಡಮೂಡಿದ ಪೌರುಷಕ್ಕೆ ಹಿಡಿದ ಕನ್ನಡಿಯಂತಿದೆ – ಈ ಕಂಚಿನ ದೇಹ; ನೋಡಿದವರು 'ಗಂಡಸು ಎಂದರೆ ಹೀಗಿರಬೇಕು' ಎನ್ನುವಂತಿದೆ.

ಬಂಗಾರವ್ವನಾಗತಿಯ ಹೃದಯದಲ್ಲಿ ಮೂಡಿದಂಥ ಭಾವನೆಯನ್ನು ತೆರೆತೂಗಿದ ಈ ದೇಹ ಚಿರಪರಿಚಿತವಾದರೂ ವಿನೂತನವೆಂಬಂಥ ಭಾವ ಪದ್ಮವ್ವನಾಗತಿಯ ಹೃದಯದಲ್ಲೂ ಪ್ರತಿಧ್ವನಿಸುತ್ತಿತ್ತು.

ಆದರೆ ಆಕೆ ಬಂಗಾರವ್ವನಾಗತಿಗಿಂತ ಕೋಮಲ ಮನಸ್ಸಿನಾಕೆ. ಆಕೆಗೂ ಆ ದೇಹದ ಗಂಡುಗಾಡಿ ಎದೆಗೂಡಿನಲ್ಲಿ ದೀವಿಗೆಯಂತೆ ಮಿನುಗಿದರೆ, ಅದರೊಂದಿಗೆ ಆ ಮೈ-ಮುಖದಲ್ಲಿ ಕಾಣುವ ಗಾಯದ ಕಲೆ ಭವಿಷ್ಯದ ಬಗ್ಗೆ ಏನೇನೋ ಚಿಂತಿಸುವಂತೆ ಮಾಡಿ. ಕೈಬೆರಳಿಗೆ ಗಾಯದ

ಕಲೆ ಸೋಕಿದಾಗ ಹೃದಯದಲ್ಲಿ ಮುಳ್ಳು ಇರಿದಂತಾಗಿ, ಎಷ್ಟೆಷ್ಟು ಬೇಡವೆಂದರೂ ಸಾಧ್ಯವಾಗದೆ ಕಣ್ಣು ತೇವವಾಯಿತು.

ಆ ಇಬ್ಬರ ಮನಸೂ ಬಗೆಬಗೆಯಾಗಿ ಚಿಂತಿಸುತ್ತಾ, ಬಟ್ಟೆ ತೊಡಿಸುತ್ತಿರುವಾಗ, ಮದಕರಿನಾಯಕನ ಹೃದಯ ಶೂನ್ಯವಾಗಿರಲಿಲ್ಲ. ಆತನ ಹೃದಯವೂ ಹಳೆಯ ಸವಿನೆನಪುಗಳ ಜೇನುಹುಟ್ಟಾಗಿತ್ತು. ಆದರೂ ತನ್ನೆದೆಯಲ್ಲಿ ಮೂಡಿದ ಮೃದುಭಾವವೊಂದೂ ಕಣ್ಣಲ್ಲಾಗಲಿ, ಮುಖದಲ್ಲಾಗಲಿ ವ್ಯಕ್ತಪಡಿಸದೆ, ಒಳಗೆ ಮಧುರ ಜಲ ತುಂಬಿಯೂ ಹೊರಗೆ ಕಠಿಣವಾಗಿರುವ ನಾರಿಕೇಳದಂತಿದ್ದ.

ತೊಡೆಗೆ ಬಿಳಿ ರೇಶಿಮೆ ಸುರುವಾಲು ತೊಡಿಸಿ, ಮೈಗೆ ಜರತಾರಿಯ ಬೂಟಾಗಳನ್ನು ನೆಯ್ದ ತೆಳುಹಸಿರು ಬಣ್ಣದ ರೇಶಿಮೆಯ ಅಂಗರೇಖೆಯನ್ನು ತೊಡಿಸಿ, ಮಾಣಿಕ್ಯದ ಗುಂಡಿಗಳನ್ನು ಹಾಕಿ, ಸೊಂಟಕ್ಕೆ ತೆಳು ಹಳದಿಯ ವರ್ಣದ, ರೇಶಿಮೆಯ, ಅಂಚುಗಳಲ್ಲಿ ಮುತ್ತಿನ ಕುಚ್ಚಿದ್ದ ಕಟಿಬಂಧವನ್ನು ಬಿಗಿದು, ತಲೆಗೆ ಮುತ್ತಿನ ಮಾಲೆಗಳನ್ನು ಸುತ್ತು ಸುತ್ತಿಗೂ ಜೋಡಿಸಿದ ಮುಂಡಾಸನ್ನಿಡದೆ ಉಕ್ಕಿನ ಶಿರಸ್ತ್ರಾಣವನ್ನಿಟ್ಟು, ಸುರುವಾಲು, ಅಂಗರೇಖೆಯ ಮೇಲೆ ಕಬ್ಬಿಣದ ಜಾಳುತಂತಿಯ ಕವಚವನ್ನು ತೊಡಿಸಿ, ಸೊಂಟದಲ್ಲೆರಡು ಕಡೆ ಮಖಮಲ್ಲಿನ ಒರೆಗವಚವಿದ್ದ ಚಿನ್ನದ ಹಿಡಿಕೆಯಿದ್ದ ಕಠಾರಿಗಳನ್ನಿಟ್ಟು, ಹುಬ್ಬು-ಮೀಸೆಗಳ ಕೂದಲನ್ನು ಕೈಬೆರಳಿನಿಂದ ತಿದ್ದಿ, ಸ್ವಲ್ಪ ದೂರ ನಿಂತು ನೋಡಿ –

“ಅಲಂಕಾರ ಸರಿಯಾಯಿತೇ ?” – ಎಂದು ಕೇಳಿದಳು ಪದ್ಮವ್ವನಾಗತಿ, ಬಂಗಾರವ್ವನಾಗತಿ ಇನ್ನೂ ಆತನನ್ನು ನೋಡುತ್ತಿರುವಾಗಲೇ.

“ಕನ್ನಡಿಯಲ್ಲಿ ನೋಡಿಕೊಳ್ಳದೆ ಹೇಗೆ ಹೇಳಲಿ ?” – ಎಂದ ಮದಕರಿನಾಯಕ.

“ಕನ್ನಡಿ ತರುತ್ತೇನೆ”

-ಎಂದು ಬಂಗಾರವ್ವನಾಗತಿ, ಕನ್ನಡಿಯತ್ತ ಹೋಗಲು ಯತ್ನಿಸಿದಳು.

ಅದನ್ನು ಕಂಡು ಮದಕರಿನಾಯಕ –

“ಕನ್ನಡಿ ತರಲು ಎಲ್ಲಿಗೆ ಹೋಗುತ್ತಿದ್ದೀಯ, ಬಂಗಾರಿ. ನೀವು ಮಾಡಿದ ಅಲಂಕಾರವನ್ನು ನೋಡಿಕೊಳ್ಳಲು ಆ ಗಾಜಿನ ಕನ್ನಡಿ ಬೇಡ. ಹತ್ತಿರ ಬನ್ನಿ - ಒಂದಲ್ಲ, ನಾಲ್ಕು - ನಿಮ್ಮ ಕಣ್ಣಿನ ಕನ್ನಡಿಯಲ್ಲಿ ನೋಡಿಕೊಳ್ಳಬೇಕು”

-ಎಂದು ಹೇಳಿ, ಬಳಿಬಂದ ಅವರಿಬ್ಬರನ್ನೂ ತನ್ನ ತೋಳತೆಕ್ಕೆಯಲ್ಲಿ ತಬ್ಬಿಕೊಂಡು, ಇಬ್ಬರ ಮುಖಗಳನ್ನೂ ನೋಡಿದ.

ಹಾಗೇ ನೋಡುತ್ತಾ, ತನ್ನತ್ತ ನೋಡುತ್ತಿದ್ದ ಮುಖಗಳೆರಡಕ್ಕೂ ಮುತ್ತುಕೊಟ್ಟು –

“ಅಲಂಕಾರ ಒಪ್ಪಿಗೆಯಾಯಿತು. ಕೊಟ್ಟ ಕಾಣಿಕೆ ಸಾಕಾಯಿತೇ ?”

-ಎಂದು ಕೇಳಿದ ಮದಕರಿನಾಯಕ.

“ಊಹೂ – ಸಾಲದು....”

- ಪದ್ಮವ್ವನಾಗತಿ ಆ ಮಾತನ್ನು ಕೇಳಿ, ಎದೆಯಲ್ಲಿ ಉಕ್ಕಿ ಬಂದ ನೋವಿಗೆ ಮಾತಿನ ಬೀಗ ಹಾಕುವವಳಂತೆ ಹೇಳಿದಳು.

“ಆಯಿತು, ನಿಮಗೆ ಬೇಕೆನಿಸುವಷ್ಟು - ಈ ಭಂಡಾರವನ್ನು ಸೂರೆಹೊಡೆದುಬಿಡಿ”

- ಎಂದ ಮದಕರಿನಾಯಕ, ತನ್ನೊಳಗೆ ಮೂಡಿದ ನೋವನ್ನು ತಾನೂ ಹಗುರು ಮಾತಿನ ಹಿಂದೆ ಹುದುಗಿಸಲು ಯತ್ನಿಸಿ.

“ಅಕ್ಕ ಹೇಳಿದ್ದು ನಿಜ. ನೀವು ಕೊಟ್ಟಿದ್ದು ಸಾಲದು. ಆದರೆ ಮುಂದಿನ ಕಂತನ್ನು ಯುದ್ಧದಲ್ಲಿ ಗೆದ್ದು ಬಂದು ಕೊಡಿ”

- ಎಂದು ಹೇಳಿದಳು ಬಂಗಾರವ್ವನಾಗತಿ, ನೀರಿಡುವ ಕಣ್ಣು ಆತನಿಗೆ ಕಾಣಬಾರದೆಂಬಂತೆ ಮುಖ ತಗ್ಗಿಸಿ.

ಆ ಮಾತಿನ ಹಿಂದಿನ ಭಾವ ಅಲಗಿನಂತೆ ಮದಕರಿನಾಯಕನ ಹೃದಯವನ್ನಿರಿದು –

“ನಾಳಿನ ಮಾತು ಈಗೇಕೆ ? ಅವಕಾಶ ಸಿಕ್ಕಾಗ ಕೊಳ್ಳೆ ಹೊಡೆಯಬೇಕು. ನಾಳೆ ಎಂದರೆ - ನಾಳೆ....ನಾಳೆ....ನಾವೆಲ್ಲೋ - ನೀವೆಲ್ಲೋ ? ನಾಳೆ ಮತ್ತೆ ಯಾರು ಪಾಲಿಗೆ ಬರುತ್ತಾರೋ ? ನಾವು ಹೋಗುತ್ತಿರುವುದು ಯುದ್ಧಕ್ಕೆ”

- ಎಂದು ಮುಖವನ್ನು ಪಕ್ಕಕ್ಕೆ ತಿರುಗಿಸಿ ಹೇಳಿದ.

ಆ ಮಾತು ಕೇಳಿ ಪದ್ಮವ್ವನಾಗತಿ ಕುಸಿದು ಕುಳಿತಳು.

ಬಂಗಾರವ್ವನಾಗತಿಯ ಮುಖವೂ ಬಿಳುಪೇರಿ –

“ಇಲ್ಲಿಯಾದರೆ ಇಲ್ಲಿ - ಅಲ್ಲವಾದರೆ ನೀವಿದ್ದಲ್ಲಿ. ಸ್ವರ್ಗದ ಮುದಿಸೂಳೆಯರು ನಿಮ್ಮ ಮೈಯನ್ನು ಮುಟ್ಟಲು ಬಿಡುವುದಿಲ್ಲ; ನಾನೂ, ಅಕ್ಕ ನಿಮಗಿಂತ ಮುಂಚೆ ಆರತಿ ಹಿಡಿದು ಕಾದಿರುತ್ತೇವೆ”

-ಎಂದು ನವಿರಾದ ಉಕ್ಕಿನ ಎಳೆಯಂತಿದ್ದ ಧ್ವನಿಯಲ್ಲಿ ಹೇಳಿದಳು.

“ಇದು ದುರ್ಗದ ನಾಗತಿಯರಿಗೆ ತಕ್ಕ ಮಾತು. ನೀನೂ ಬಂಗಾರಿಯ ಹಾಗಿರಬೇಕು, ಪದ್ಮವ್ವೆ, ಕಣ್ಣೀರಿನಲ್ಲಿ ಕರಗುವ ಕಾಲ ಇದಲ್ಲ. ನಿಮ್ಮ ಕಣ್ಣೀರು ನಮ್ಮನ್ನು ಕರಗಿಸಿ, ದುರ್ಗದ ಕೋಟೆಬಾಗಿಲಿನ ಬೀಗಕ್ಕೆ ಬೀಗದ ಕೈಯಾಗಬಾರದು. ಏಳು - ನಗುನಗುತ್ತಾ ಕಳಿಸಿಕೊಡಿ.

ಇಲ್ಲವಾದರೆ ನೀವು ಮಾಡಿದ ಅಲಂಕಾರ - ನವರಾತ್ರಿಯ ಗೊಂಬೆಗೆ ಮಾಡಿದ ಅಲಂಕಾರವಾಗುತ್ತದೆ. ಏಳು, ನಾವು ಕಂಕಣಕಟ್ಟಿದ ನಾಗತಿತನಕ್ಕೆ ಅಪಮಾನವಾಗಬಾರದು"

-ಎಂದು ಕೊಂಚ ಬಿರುಸಾದ ಧ್ವನಿಯಲ್ಲಿ ಹೇಳಿದ ಮದಕರಿನಾಯಕ.

ಆ ಮಾತು ಕೇಳಿ, ಚಾವಟಿ ಏಟು ತಿಂದಂತೆ ತಟಕ್ಕನೆ ಮೇಲೆದ್ದ ಪದ್ಮವ್ವನಾಗತಿ –

"ಕಾಲಿತ್ತ ನೀಡಿ, ನಮಸ್ಕರಿಸುತ್ತೇನೆ" – ಎಂದಳು.

ಇಬ್ಬರು ನಾಗತಿಯರೂ ಬಿರುಮಳೆಯಲ್ಲಿ ತೊಯ್ದು ಬಾಗುವ ಬಳ್ಳಿಯಂತೆ ತಮ್ಮ ನಾಯಕನಿಗೆ ನಮಸ್ಕರಿಸಿ, ಆತ ಮೂಕ ನೇವರಿಕೆಯ ಆಶೀರ್ವಾದ ಮಾಡಿದಬಳಿಕ ಎದ್ದು ನಿಂತರು.

ಮದಕರಿನಾಯಕ ಅಲ್ಲಿಂದ ಹೊರಡಲು ಅನುವಾದಾಗ, ತಟಕ್ಕನೆ ಏನೋ ಜ್ಞಾಪಿಸಿಕೊಂಡಂತೆ, ಬಂಗಾರವ್ವನಾಗತಿ –

"ಸ್ವಲ್ಪ ತಡೆಯಿರಿ. ಎಲ್ಲಾ ಆಯಿತು, ಹಣೆಗೆ ಕುಂಕುಮವಿಡುವುದನ್ನು ಮರೆತುಬಿಟ್ಟೆ"

- ಎಂದು ತಡೆದು, ಆ ಮಾತು ಕೇಳಿ ನಿಂತ ಮದಕರಿನಾಯಕನ ಬಳಿಸಾರಿ, ರಕ್ತ ಚಿಮ್ಮುವಂತೆ ತನ್ನ ತುಟಿಯನ್ನು ಹಲ್ಲಿನಿಂದ ಕಡಿದುಕೊಂಡು, ನಾಲಗೆಯಿಂದ ತುಟಿಗಳೆರಡಕ್ಕೂ ನೆತ್ತರು ಸವರಿಕೊಂಡು, ತನ್ನ ನಾಯಕನನ್ನು ಬರಸೆಳೆದು ಅವನ ಹಣೆಗೆ ಮುತ್ತಿಟ್ಟು –

"ಹೋಗಿ ಬನ್ನಿ ಸ್ವಾಮಿ"

-ಎಂದು ಹೇಳಿ, ಮದಕರಿನಾಯಕನ ಕಾಲು ಮುಟ್ಟಿ ಅಲ್ಲಿಂದ ಓಡಿದಳು.

ಮದಕರಿನಾಯಕ ವೀರ ವಿಗ್ರಹದಂತೆ ನಿಂತು ನೋಡಿದ – ಕಣ್ಮರೆಯಾಗುತ್ತಿದ್ದ ಬಂಗಾರವ್ವನಾಗತಿಯನ್ನು.

ಪದ್ಮವ್ವನಾಗತಿ ಬೆರಗನ್ನು ಕಂಡವಳಂತೆ ಹೇಳಿದಳು-

"ನನಗಷ್ಟು ಬುದ್ಧಿ ಓಡಲಿಲ್ಲ, ಕ್ಷಮಿಸಿ ಸ್ವಾಮಿ. ಅದರಲ್ಲಿ ನನ್ನದೂ ಪಾಲಿದೆ."

"ಆಯಿತು - ನಿಮ್ಮ ಮಾತೇ ನಮಗೆ ಕುಂಕುಮರಕ್ಷೆ"

- ಎಂದು ಹೇಳಿ, ಎದೆ ತುಂಬಿ ಬಂದ ಏನನ್ನೋ ಭರಿಸಲಾಗದವನಂತೆ, ವೇಗವಾಗಿ ಅಂತಃಪುರದಿಂದ ಹೊರಗೆ ನಡೆದ.

ಪದ್ಮವ್ವನಾಗತಿ ಕುಸಿದು ಕೂತಳು - ಕಣ್ಣೀರಾಗಿ ಕರಗುತ್ತಾ.

* * *

ಮದಕರಿನಾಯಕ ಅಂತಃಪುರದಿಂದ ಹೊರಬರುತ್ತಿದ್ದ ಹಾಗೇ, ಆತನನ್ನೇ ನಿರೀಕ್ಷಿಸುತ್ತಿದ್ದ ನಿಂಗವ್ವನಿಗೆ ಮೊದಲು ಕಂಡದ್ದು - ಮಗನ ಹಣೆಯ ಮೇಲಿದ್ದ ರಕ್ತಮುದ್ರೆ.

ಒಲವಿನ ಮಡದಿಯರು ಸಮರಾಂಗಣಕ್ಕೆ ತೆರಳಲಿದ್ದ ತಮ್ಮ ಕುಂಕುಮದೊಡೆಯನಿಗೆ ಅರ್ಪಿಸಿದ ಆ ಕಾಣಿಕೆಯನ್ನು ನೋಡಿ, ನಿಂಗವ್ವನ ಹೃದಯದಲ್ಲುಕ್ಕಿ ಹೊರಬರಲೆತ್ನಿಸುತ್ತಿದ್ದ ದುಃಖ ನಾಚಿ ಮುಖ ಮರೆಸಿಕೊಂಡು, ಕಾಲಿಗೆ ನಮಸ್ಕರಿಸಿದ ಮಗನನ್ನು ಮನವಾರೆ ಆಶೀರ್ವದಿಸಿ-

"ಹೋಗಿ ಬಾ, ಅಪ್ಪಯ್ಯ. ಏನೋ ಎರಡು ಮಾತು ಕೇಳಬೇಕೆಂದಿದ್ದೆ. ಬೇಕಾದ ಹೊತ್ತಿನಲ್ಲಿ ಮಾತ್ರ ಮರೆತುಹೋಗ್ತದೆ. ಆಯ್ತು - ಆ ನವಾಬ ನಾಯಿಯನ್ನು ಹಿಡಿದು ತಂದು ಪಂಜರದಲ್ಲಿ ಕೂಡಿದಮೇಲೆ ಈಗೇನು ಹೇಳಬೇಕೆಂದಿದ್ದನೋ, ಮಾಡಬೇಕೆಂದಿದ್ದೆನೋ - ಎಲ್ಲಾ ಹೇಳಿ, ಮಾಡುತ್ತೇನೆ. ಇಲ್ಲಿರು, ಎಲ್ಲೇ ಇರು - ನೀನು ಅರಸನಾಗಿ ಬಾಳು, ನಿಮ್ಮಪ್ಪಯ್ಯನ ಕೀರ್ತಿ, ಹೆಸರು ಉಳಿಸು."

- ಎಂದು ಹೇಳಿದಳು, ತನ್ನ ಹೃದಯಭಂಡಾರದಲ್ಲಿದ್ದ ಮಮತೆಯನ್ನೆಲ್ಲಾ ಮಾತಿನ ಮುತ್ತಾಗಿ, ಮಗನ ನೆತ್ತಿಯ ಮೇಲೆ ಅಕ್ಷತೆ ಹಾಕುವಂತೆ.

ತಾಯಿಯ ಮಾತು ಕೇಳಿ, ಕಾಲು ಮುಟ್ಟಿ ಮೇಲೆದ್ದ ಮದಕರಿನಾಯಕ, ತಾಯ ಭುಜವನ್ನು ಎರಡೂ ಕೈಗಳಿಂದ ಹಿಡಿದು, ಅಷ್ಟು ಹೊತ್ತು ಆಕೆಯ ಮುಖವನ್ನೇ ನೋಡುತ್ತಿದ್ದು –

"ಆವ್ವಾ....ಅವ್ವಾ....ನನಗೂ ಯಾಕೋ ಇವತ್ತು ನಿನ್ನ ಹಾಗೇ ಆಡಬೇಕಾದ ಮಾತು ಮರೆತುಹೋಗ್ತಾ ಇದೆ- ಮಾತು ಹೋಗಲಿ - ನನ್ನ ಮನಸ್ಸು ನಿನಗೆ ಗೊತ್ತಲ್ಲ- ನಾನು ಯಾವತ್ತಾದರೂ ನಿನಗೆ ತಪ್ಪಿ ನಡೆದುಕೊಂಡಿದ್ದರೆ, ಅದನ್ನು ಮರೆತುಬಿಡು, ಅವ್ವಾ"

-ಎಂದ ರುದ್ಧ ಕಂಠದಲ್ಲಿ.

"ಅಪ್ಪಯ್ಯ, ಮಗನಾಗಿ, ಅರಸನಾಗಿ ನೀನೇನೂ ತಪ್ಪು ಮಾಡಿಲ್ಲ."

"ಅಷ್ಟು ಹೇಳಿದೆಯಲ್ಲವ್ವಾ, ಸಾಕು. ಇನ್ನು ನನ್ನ ಸಾಕಿದ ಊರೂ ಅಷ್ಟು ಹೇಳಿದರೆ, ಸ್ವರ್ಗಕ್ಕೆ ಲಗ್ಗೆ ಹಾಕಿ ಬರುತ್ತೇನೆ"

- ಎಂದು ಇನ್ನಲ್ಲಿ ಹೆಚ್ಚು ಹೊತ್ತು ನಿಂತರೆ, ತಡೆದಿದ್ದುದು ಎಲ್ಲಿ ಕಟ್ಟೆಯೊಡೆದು ಹೊರನುಗ್ಗಿತೋ ಎಂದು ಹೆದರಿ, ನಿಂಗವ್ವ ಕೈಯಾರ ಹಚ್ಚಿದ ಭಂಡಾರವನ್ನು ಹಣೆಯಲ್ಲಿ ಧರಿಸಿ, ಅಲ್ಲಿಂದ ಆತುರವಾಗಿ ತನ್ನ ತಂದೆಯ ಶಯ್ಯಾಗೃಹದತ್ತ ನಡೆದು ಅಫೀಮಿನ ಗುಳಿಗೆ ತಿಂದು, ಆ ಮಬ್ಬಿನಲ್ಲಿ ಏನೋ ಕೆಟ್ಟ ಕನಸು ಕಂಡು –

"ಲೇ....ಲೇ....ಕಬ್ಬಿನ ಗದ್ದೆಯಾಗೆ ಹಂದಿ ನುಗ್ಗಿದ್ರೆ ನೋಡಿ ಬೆದರಿಕೊಂಡು ಹೋಗ್ತೀರಾ, ನಾಮರ್ದಾ ನನಮಕ್ಕಳ – ನನ್ನ ಮಗ ಇದ್ದಿದ್ರೆ....ಸಿಗದ್ಹಾಕ್ತಿದ್ದ... ಸುಟ್ಹಾಕ್ತಿದ್ದ....ನನ್ನ ಮಗ

ಬರಲಿ....ನವಾಬನ ದಾಳಿ ಮುರಿದು....ಗಂಡಸು ಅಂದರೆ ಅವನು....ಮೀಸೆ ಬಿಟ್ಕೋರೆಲ್ಲಾ ಗಂಡಸರಾ....ಹೋಗ್ರಲೋ, ಪೊರಕೆ ಮುಖದೋರಾ...."

-ಎಂದು ಏನೋ ತಡವರಿಸುತ್ತಾ ತೊದಲುತ್ತಿದ್ದ ಆತನ ಪಾದಗಳಿಗೆ ನಮಸ್ಕರಿಸಿ, ಹೊರಬಂದು, ಹೋಗುತ್ತಲೇ ಎಲ್ಲರಿಗೂ ಕೇಳುವಂತೆ –

"ಮಗನನ್ನು ಮುದ್ದು ಮಾಡ್ತಾ ಕೂಡಿಸಿಕೋಬೇಡಿ. ಸಿದ್ಧೇಶ್ವರನ ಗುಡಿ ಹತ್ತಿರ ಕಾದಿರುತ್ತೇವೆ"

- ಎಂದು ಹೇಳಿ, ಹೊರಹೊರಟು, ತಟಕ್ಕನೆ ತನ್ನ ಬರಿಗೈ ನೆನಪಾಗಿ, ದೇವರ ಮನೆಯತ್ತ ನಡೆದು, ದೇವರ ಮನೆಯಲ್ಲಿ ಪೂಜೆ ಮಾಡಿಟ್ಟಿದ್ದ ಪರಿಘಾಯುಧವನ್ನು ಹಿಡಿದು, ಆಯುಧ ಹಿಡಿದ ಕೈಲೇ ಕುಲದೇವತೆ ಉತ್ಸವಾಂಬೆಗೆ ಮಣಿದು –

"ಅವ್ವಾ - ನಿನ್ನ ಆಶೀರ್ವಾದದಿಂದ ಈ ಆಯುಧ ಸಾವಿರವಾಗಲಿ"

-ಎಂದು ಬೇಡಿ, ಹೊರಬಂದು, ಏಕೋ ಬರಿದಾದಂತೆ ಕಾಣುತ್ತಿದ್ದ ಅರಮನೆಯಲ್ಲಿ ಬಿರಬಿರನೆ ನಡೆದು, ಹೊರಬಂದು, ಆಳಿತ್ತ ಚಡಾವನ್ನು ಧರಿಸಿ, ಮತ್ತೊಬ್ಬಾತ ಢಾಲನ್ನು ಬೆನ್ನಿಗೆ ಕಟ್ಟಿದ ಬಳಿಕ, ತನ್ನ ಕುದುರೆ 'ಕಾಟಮಲಿಂಗ'ನನ್ನು ಏರಿ, ಕಾದು ನಿಂತ ಅಂಗರಕ್ಷಕರೊಡನೆ ಕುದುರೆಯನ್ನು ಓಡಿಸಿದ.

ಹಾಗೆ ಕುದುರೆ ಓಡುವಾಗಲೂ, ಅರಮನೆಯ ಬದಿಯ ಕಲ್ಲರೆಯ ಮೇಲೆ ಬರಿಗಂಭಗಳಾಗಿ ನಿಂತಿದ್ದ ಕಲ್ಲುಬೋನಿನ ಅಸ್ತಿಪಂಜರ ಕಾಣಿಸಿ –

"ಬಹಳಕಾಲ ನಿನ್ನನ್ನು ಬರಿದಾಗಿ ಬಿಡುವುದಿಲ್ಲ"

-ಎಂದು ಹೇಳಿ, ಸಂಪಿಗೆ ಸಿದ್ಧೇಶ್ವರನ ದೇವಾಲಯದತ್ತ ಕುದುರೆಯನ್ನು ತಿರುಗಿಸಿದ –

ಮಾಘಮಾಸದ ಕೃಷ್ಣಪಕ್ಷದ ಕತ್ತಲು ಕವಿದ ಮುಗಿಲಿನಲ್ಲಿ ದುರ್ಗಾಧಿದೇವತೆಯ ಅಶ್ರುಬಿಂದುಗಳಂತೆ ನಕ್ಷತ್ರಗಳು ಹೊಳೆಯುತ್ತಿರಲು.

೩೪

ಕಹಳೆಬತೇರಿಯಿಂದ ಕಹಳೆ ಮೊಳಗಿತು.

ಆ ಕೂಗನ್ನು ಕೇಳುತ್ತಿದ್ದ ಹಾಗೇ ತಾರಾಮಂಡಲದಲ್ಲಿ, ದೀವಟಿಗೆಗಳ ಬೆಳಕಿನಲ್ಲಿ ನಾಯಕರಿಗಾಗಿ, ಕುದುರೆ ಏರಿ ಕಾಯುತ್ತಿದ್ದ ದಳವಾಯಿಗಳು, ಅಲ್ಲಿಗೆ ನಾಯಕರು ಬರುತ್ತಿದ್ದಂತೆ ತಾರಾಮಂಡಲದಲ್ಲಿದ್ದ ದೇವಾಲಯಗಳ ಅರ್ಚಕರುಗಳು ತಂದುಕೊಟ್ಟ ಪ್ರಸಾದ, ಕುಂಕುಮವನ್ನು

ಸ್ವೀಕರಿಸಿ, ಒಬ್ಬೊಬ್ಬರೂ ನಾಯಕರು ನೇಮಕ ಮಾಡಿದ ದಿಕ್ಕಿನತ್ತ ಹೊರಟರು. ಅಷ್ಟು ಹೊತ್ತು ಗುಂಪಾಗಿದ್ದ ದೀವಟಿಗೆಗಳೂ ಅತ್ತಕಡೆ ಚದುರಿ ಓಡಿದವು. ಚಪ್ಪೆಚಾವಡಿಯ ದಳವಾಯಿಗಳೊಬ್ಬರು ನಾಯಕನನ್ನು ಹಿಂಬಾಲಿಸಿದರು.

ಕಲ್ಲುಬಂಡೆಗಳ ಹಾದಿಯಲ್ಲಿ, ಕುದುರೆಗಳನ್ನು ಆದಷ್ಟು ವೇಗವಾಗಿ ಓಡಿಸಿಕೊಂಡು ಬಂದು, ಮದಕರಿನಾಯಕ, ತನ್ನ ಖಾಸಾ ಬೇಡಪಡೆಯವರು, ದೊರೆಗಿಂತ ಮುಂದೆ ತಮ್ಮ ತಲೆ ಕೊಡುವ ಪ್ರಮಾಣ ಮಾಡಿದ ಪುರುಭಯ್ಯಾ ಜನರ ಪಡೆಯ ಸರ್ದಾರರು ನೆರೆದಿದ್ದ ಉತ್ಸವಾಂಬಾ ದೇವಾಲಯದ ಮುಂಭಾಗದ ಕೂಡುರಸ್ತೆಯ ಬಳಿ ಬಂದು, ಕುದುರೆಯಿಂದಿಳಿದು, ಹಾರುಗಾಲಿನಿಂದ ಉತ್ಸವಾಂಬೆಯ ದೇವಾಲಯವನ್ನು ಪ್ರವೇಶಿಸಿ, ಅರ್ಚಕರು ಕೊಟ್ಟ ಮಂಗಳಾರತಿಯನ್ನು ಸ್ವೀಕರಿಸಿ, ಭಂಡಾರವನ್ನು ಧರಿಸಿ, ಬಂದಷ್ಟೇ ವೇಗವಾಗಿ, ದೇವಾಲಯದಿಂದ ಹೊರಬಂದು ಕುದುರೆಯನ್ನೇರಬೇಕು ಎನ್ನುವಷ್ಟರಲ್ಲೇ, ರಂಗಯ್ಯನ ಬಾಗಿಲತ್ತಣಿಂದ ನೂರು ಸಿಡಿಲು ಒಟ್ಟಿಗೇ ಹೊಡೆದಷ್ಟು ಭಯಂಕರವಾದ ಸದ್ದು ಕೇಳಿ, ಪೂರ್ವದಿಗ್ಭಾಗದಲ್ಲಿ ನೆಲದತ್ತಣಿಂದ ಸಿಡಿದ ಸಾವಿರ ಉರಿನಾಲಗೆಗಳು ಮುಗಿಲನ್ನು ನೆಲಕ್ಕೆ ಕುಕ್ಕಿದಂತಾಗಿ, 'ಇದೇನಾಯಿತು ?' ಎಂದು ನೋಡುತ್ತಿರುವಾಗಲೇ, ರಂಗಯ್ಯನ ಬಾಗಿಲತ್ತಣಿಂದ ಧಾವಿಸಿಬಂದ ಅಶ್ವಾರೋಹಿಯೊಬ್ಬನು –

"ನವಾಬನ ಸೈನಿಕರು ಕಂದಕದ ಕೆಳಗೆ ಸುರಂಗ ತೋಡಿ, ಮದ್ದಿಟ್ಟು ಸುಡಿಸಿದರು. ರಂಗಯ್ಯನಬಾಗಿಲಿನ ಬುರುಜು ನರುಗಾಯಿತು. ನೂರಾರು ಜನ ನಮ್ಮವರು ಆ ಬೆಂಕಿಗೆ ಸಿಕ್ಕಿ ಸತ್ತು, ಉಳಿದವರು ಕೋಟೆಬಾಗಿಲು ಕಾದುಕೊಳ್ಳಲು ಹೋರಾಡುತ್ತಿದ್ದಾರೆ"

-ಎಂಬ ಆಸ್ಫೋಟನದ ಸದ್ದಿಗಿಂತಲೂ ದಾರುಣವಾದ ವಾರ್ತೆಯನ್ನು ತಿಳಿಸಿ ಹೇಳಿದ –

"ಅತ್ತಕಡೆ ಕೋಟೆರಕ್ಷಣೆಗೆ ಸೇನೆ ಸಾಲದು."

ಆ ವಾರ್ತೆಯನ್ನು ಕೇಳಿದ ಮದಕರಿನಾಯಕ ಹಿಂದಿರುಗಿ ಉತ್ಸವಾಂಬೆಯ ದೇವಾಲಯದತ್ತ ನೋಡಿ –

'ಇನ್ನೂ ಕಲ್ಲಾಗಿಯೇ ಕುಳಿತಿರುತ್ತೀಯಾ, ತಾಯಿ. ನಿನ್ನ ಕಿವಿಗೆ ಕೇಳಲಿಲ್ಲವೇ ಈ ಸದ್ದು. ಎದ್ದೇಳು ರಣದುರ್ಗೆ - ನಿನಗಿದು ಮಲಗಲು ಸಮಯವಲ್ಲ'

-ಎಂದು ಮನಸ್ಸಿನಲ್ಲಿಯೇ ಹೇಳಿಕೊಂಡು, ಬಳಿಯಿದ್ದ ಚಪ್ಪಚಾವಡಿ ದಳವಾಯಿಗಳಿಗೆ-

"ರಂಗಯ್ಯನಬಾಗಿಲ ರಕ್ಷಣೆಗೆ ಅಗತ್ಯವಾದ ಸೇನೆಯನ್ನು ಕಳಿಸಿ. ನಾವು, ನವಾಬನ ಹುಲಿಗಣ್ಣುಬಿದ್ದಿರುವ ಸೀನೀರುಹೊಂಡದ ಕಿಲ್ಲೆಯ ರಕ್ಷಣೆಗೆ ಹೋಗುತ್ತೇವೆ"

- ಎಂದಪ್ಪಣೆ ಮಾಡಿ, ತನ್ನ ಮೀಸಲುಪಡೆ, ಪಣತೊಟ್ಟ ಸರ್ದಾರರೊಂದಿಗೆ ವೇಗವಾಗಿ, ಉಚ್ಚಂಗಮ್ಮನ ಬಾಗಿಲಿನತ್ತ ಕುದುರೆಯನ್ನು ಓಡಿಸಿದ.

***

ನಾಯಕರು ತಮ್ಮ ಮೀಸಲು ಪಡೆಯೊಡನೆ, ಉಚ್ಚಂಗಮ್ಮನ ಹೊಂಡದ ಬಳಿಯಿದ್ದ ಹುಲಿಮುಖದ ಕೋಟೆಬಾಗಿಲಿನ ಸಂರಕ್ಷಣೆಗೆಂದು ಧಾವಿಸುತ್ತಿರುವಾಗ, ಆ ಕೋಟೆಯ ಬಾಗಿಲತ್ತಣಿಂದ, ಹಲವಾರು ಮಂದಿ ಆಶ್ವಾರೋಹಿಗಳೊಂದಿಗೆ ಬಂದ, ರಕ್ತಸಿಕ್ತ ವಸ್ತ್ರಗಳನ್ನು ಧರಿಸಿ, ದೇಹದಲ್ಲಿ ಹತ್ತಾರು ಕಡೆ ಗಾಯಗಳಾಗಿದ್ದ ಪರಶುರಾಮನಾಯಕ ಹೇಳಿದ –

"ಅಣ್ಣಾ, ನೀವೀಗ ಅತ್ತಕಡೆ ಹೋಗಬೇಡಿ. ಆ ಕೋಟೆಬಾಗಿಲು ಉಳಿಸಿಕೊಳ್ಳುವ ಭಾಗ್ಯ ನಮಗಿಲ್ಲ. ಜರಿಮಲೆಯವರು ದ್ರೋಹ ಮಾಡಿ, ರಾತ್ರೋರಾತ್ರಿ ಹೆಬ್ಬುಲಿಕಲ್ಲು ಮಾರ್ಗದಿಂದ ಹನ್ನೆರಡು ಸಾವಿರ ಸೇನೆ, ಇಪ್ಪತ್ತು ತೋಪುಗಳೊಂದಿಗೆ ಬಂದು, ಕೋಟೆಯನ್ನು ಭೇದಿಸಿ ಒಳನುಗ್ಗಿದ್ದಾರೆ. ನಮ್ಮ ಸೈನಿಕರು, ಅವರನ್ನು ತಡೆಯಲು ಶತಪ್ರಯತ್ನ ಮಾಡುತ್ತಿದ್ದಾರೆ. ನೀವೀಗ ಅತ್ತಕಡೆ ಹೋಗುವುದರಿಂದ ಆಗುವ ಉಪಯೋಗವೇನೂ ಇಲ್ಲ. ಈಗ ಉಳಿದಿರುವುದೊಂದೇ ದಾರಿ - ಕೆಳದುರ್ಗದ ಆಶೆಯನ್ನು ಬಿಟ್ಟು, ಮೇಲುದುರ್ಗದ ರಕ್ಷಣೆಯಲ್ಲಿ ಶತ್ರುಗಳನ್ನು ಸದೆಬಡಿಯುವುದು. ಮೇಲುದುರ್ಗದ ಆಸರೆ ಇರುವವರೆಗೂ, ಹೈದರಾಲಿಯನ್ನು ಸೋಲಿಸುವ ಅವಕಾಶವಿದೆ. ಈಗ ನೀವು ದುಡುಕಿ ಏನಾದರೂ ಅಪಾಯವಾದರೆ, ಕೈಯಾರ ದುರ್ಗವನ್ನು ಶತ್ರುವಿಗೆ ಕಾಣಿಕೆ ಕೊಟ್ಟಂತಾಗುತ್ತದೆ."

ಆ ಮಾತು ಕೇಳಿ, ಮದಕರಿನಾಯಕ ಕಿಡಿಕಿಡಿಯಾಗಿ –

"ನಾವು ಶತ್ರುವಿಗೆ ಬೆನ್ನು ತೋರಿಸಬೇಕು ಎನ್ನುತ್ತೀಯಾ ?"

- ಎಂದು ಗದ್ದರಿಸಿ ಕೇಳಿದ.

"ಇದು ಬೆನ್ನು ತೋರಿಸುವ ಮಾತಲ್ಲ - ಆಯಕಟ್ಟಿನ ಸ್ಥಳದಲ್ಲಿ ನಿಂತು, ಶತ್ರುವನ್ನು ಸದೆಬಡಿಯಲು ಸಮಯ ಕಾಯುವುದು. ಹಗಲಾಗಲು ಇನ್ನು ಹೆಚ್ಚು ಹೊತ್ತು ಉಳಿದಿಲ್ಲ. ನೀವು ಗಾರೆಯ ಬಾಗಿಲ ಹಿಂದೆ ನಿಂತು, ಶತ್ರುವನ್ನೆದುರಿಸುವ ಸಿದ್ಧತೆ ಮಾಡಿ. ಅಲ್ಲಿಯವರೆಗೂ ಶತ್ರುವನ್ನು ತಡೆಯುವ ಹೊಣೆಗಾರಿಕೆಯನ್ನು ನಮಗೆ ಬಿಡಿ. ನೀವಿದ್ದರೆ ನಾವು, ದುರ್ಗ. ಹಟಕ್ಕೆ ಬಿದ್ದು ಅಪಜಯಕ್ಕೆ ಆಹ್ವಾನ ಕೊಡಬೇಡಿ"

-ಎಂದು ಬೇಡಿದ ಪರಶುರಾಮನಾಯಕ.

"ಕೆಳದುರ್ಗದ ರಕ್ಷಣೆ - ನವಾಬನಿಗೆ ನಗರದ ಪಸಾಯನ ದಾನ ಕೊಡುವುದೇ ?"

"ನವಾಬನ ಸೇನೆಗೂ ಅದು ಅಷ್ಟು ಸುಲಭವಲ್ಲ. ಕೃಪೆಯಿಟ್ಟು ತಾವೀಗ, ಹಿಂದೆ ಸರಿದು, ಗಾರೆಬಾಗಿಲಿನ ಹಿಂದೆ ನಿಲ್ಲಿ. ಕೆಳದುರ್ಗ ಒಳಸಂಚುಗಳಿಂದ ಶತಭಿದ್ರವಾಗಿದೆ."

ಹಿಂದೆ ಸರಿಯುವುದೋ –

ಮುಂದೆ ನುಗ್ಗುವುದೋ –

ಕ್ಷಣಕಾಲ, ಗರಬಡಿದಂತೆ ಹಿಂದೆ ಹೋಗಲು ಮನಸ್ಸಾಗದೆ, ಮುನ್ನುಗ್ಗಲು ಪರಶುರಾಮನಾಯಕ ದಾರಿಕೊಡದೆ, ಅತ್ತಿತ್ತ ತುಯ್ದಾಡುತ್ತಾ ನಿಂತಿದ್ದು, ಕೈಯಲ್ಲಿದ್ದ ಪರಿಘಾಯುಧವನ್ನೊಮ್ಮೆ ನೋಡಿ –

"ನಾಳೆ ನಿನಗೆ ರಕ್ತಾಭಿಷೇಕ."

- ಎಂದಷ್ಟೇ ಹೇಳಿ, ತನ್ನ ಪಡೆಯೊಡನೆ, ಗಾರೆಬಾಗಿಲತ್ತ ಸರಿದ.

ಮದಕರಿನಾಯಕನ ಪಡೆ, ಗಾರೆಬಾಗಿಲನ್ನು ದಾಟಿ, ಹಿಂದೆ ನಿಲ್ಲುತ್ತಿದ್ದಂತೆಯೇ, ಸಿದ್ದಯ್ಯನ ಬಾಗಿಲತ್ತಣಿಂದ ತೋಫುಗಳ ಸದ್ದು ಕೇಳಿಸಿ-

"ಆ ಬಾಗಿಲ ಆಯುಷ್ಯವೂ ತೀರಿತು. ಇನ್ನು ದುರ್ಗವನ್ನು ತಾಯಿ ಉತ್ಸವಾಂಬೆಯೇ ಕಾಪಾಡಬೇಕು"

- ಎಂದು, ನಗರದಲ್ಲಿದ್ದ ನಾಗರಿಕರನ್ನು, ಹೆಂಗಸರು-ಮಕ್ಕಳನ್ನು ನೆನೆದು, ಬೆಂಕಿಯುಸಿರು ಬಿಟ್ಟ ಮದಕರಿನಾಯಕ.

* * *

ಆದರೆ ದುರ್ಗದ ಜನ ಉತ್ಸವಾಂಬೆಯನ್ನೇ ನಂಬಿ ಕುಳಿತಿರಲಿಲ್ಲ.

ಅಂತಿಮ ಫಲವನ್ನು ಆಕೆಗೇ ಬಿಟ್ಟು - ಮನೆಮನೆಯೂ, ದುರ್ಗದ ಬೀದಿಗಳಲ್ಲಿ ನುಗ್ಗುವ ನವಾಬನ ಸೇನೆಯನ್ನೆದುರಿಸಲು ಸಿದ್ಧವಾಯಿತು.

ಬುರುಜನಹಟ್ಟಿ, ಕೆಳಗೋಟೆ, ಅಯ್ಯಣ್ಣನ ಪೇಟೆಯಲ್ಲಿದ್ದ ಜನ ಹೈದರಾಲಿಯ ಸೇನೆಯನ್ನು ಹೆಜ್ಜೆ ಹೆಜ್ಜೆಗೂ ಎದುರಿಸಲು ಸಿದ್ಧವಾಗಿದ್ದರು. ತಮ್ಮ ಮನೆಯಲ್ಲಿದ್ದ ಅಮೂಲ್ಯ ವಸ್ತುಗಳು, ನಗನಾಣ್ಯಗಳು, ಮನೆದೇವರುಗಳು, ಶತ್ರುಸೇನಾಸ್ಪರ್ಶದಿಂದ ಕಲಂಕಿತವಾಗದಂತೆ ಇದ್ದ ಬಿದ್ದಂಥ ಹೊಂಡಗಳಲ್ಲಿ, ಮನೆ ಭಾವಿಗಳಲ್ಲಿ, ಕಣಜಗಳಲ್ಲಿ ಅವಿಸಿಟ್ಟು, ರಸ್ತೆಗಳನ್ನು ಅಷ್ಟಾವಕ್ರವಾಗಿ ಕಡಿದು, ಬೀದಿಗಳಲ್ಲಿ ಗುಳಿಮಾಡಿ ಮದ್ದು ತುಂಬಿ, ಕೆಲಜನ ಅದಕ್ಕೆ ಕೊಳ್ಳಿಕೊಡಲು ಸಿದ್ಧರಾದರು. ಮನೆಯ ಸೂರುಗಳನ್ನೇರಿ, ಕೈಗೆ ಸಿಕ್ಕದ್ದರಿಂದ ಶತ್ರುವನ್ನು ತರಿಯುವ ನಿಶ್ಚಯ ಮಾಡಿದರು. ಗಾರೆ, ಕುಡುಗೋಲು, ಒನಕೆ, ಈಳಿಗೆಯಮಣೆ, ಚಾಕು, ಕಬ್ಬಿಣದ ಸಲಾಕೆ,

ಮರದ ಗೂಟ, ಗುಳ, ಸುತ್ತಿಗೆ, ಗರಗಸ – ಕೊನೆಗೆ ತಗಡಿನ ಹರಿತವಾದ ಚೂರುಗಳು ಹೊರಬಂದವು. ಮನೆಯ ಮಾಳಿಗೆಗಳ ಮೇಲೆ ಕುದಿವ ನೀರಿನ ಹಂಡೆಗಳು ನವಾಬನ ಸೇನೆಯನ್ನು ಕಾದು ಕುಳಿತವು. ಹುಡುಗರೂ ಜೇಬಿನಲ್ಲಿ ಕವಣೆಕಲ್ಲುಗಳನ್ನು, ಕೈಯಲ್ಲಿ ಅದನ್ನು ಹೊಡೆಯುವ ಕವಲುರೆಂಬೆಗಳನ್ನು ಹಿಡಿದು ನಿಂತರು.

ಗಂಡಸರು, ಯುವಕರು, ಹುಡುಗರು - ಹೀಗೆ ನಗರ ರಕ್ಷಣೆಗೆ ಸಿದ್ಧವಾದರೆ –

ಆ ಕಾರ್ಯದಲ್ಲಿ ಹೆಂಗಸರೂ ಹಿಂದೆ ಬೀಳಲಿಲ್ಲ.

ಓಬವ್ವನ ಒನಕೆ ಅವರ ಸ್ಫೂರ್ತಿಯಾಗಿ, ಒನಕೆ, ರುಬ್ಬುಗುಂಡುಗಳನ್ನು ಹೊತ್ತು ಎಷ್ಟೋ ಜನ ನಿಂತರೆ, ಅದಾವುದೂ ಇಲ್ಲದ ಹೆಂಗಸರು ಮನೆಯೊಳಗಿದ್ದ ಮೆಣಸಿನಪುಡಿಯ ಡಬ್ಬಿಗಳನ್ನು ಹಿಡಿದು, ನವಾಬನ ಸೈನಿಕರಿಗೆ ಖಾರದಪುಡಿಯ ಸ್ನಾನಮಾಡಿಸಲು ತಯಾರಾದರು. ಓಣಿ, ಕೇರಿಗಳಲ್ಲಿದ್ದ ಬಂಡಿಗಳು ರಸ್ತೆಗೆ ಅಡ್ಡವಾಗಿ ಬಿದ್ದು, ಎಕ್ಕಡ, ಚಡಾವು, ಪಾಪಾಸುಗಳ ತೋರಣ - ನವಾಬನನ್ನು ಸ್ವಾಗತಿಸಲು ಮನೆಮನೆಯ ಮುಂದೆ, ಬೀದಿಗೆ ಅಡ್ಡವಾಗಿ ತೂಗಾಡಿದವು. ಮಲಮೂತ್ರವಿಸರ್ಜನೆಯಿದ್ದ ಮಡಕೆಗಳೂ ಮುಂದಾದವು -ನವಾಬನ ಸೇನೆಯ ಮುಖಕ್ಕೆ ಆರತಿ ಎತ್ತಲು.

ಜನ ಹೀಗೆ ಸಿದ್ಧರಾಗಬೇಕೆಂದು ಯಾರೂ ಹೇಳಲಿಲ್ಲ. ಯಾರನ್ನು ಯಾರೂ ಬೇಡಿಕೊಳ್ಳಲಿಲ್ಲ. ಅವರವರ ಮನೆಗೆ ಅವರೇ ದಳವಾಯಿಗಳಾಗಿ ನಿಂತರು. ಗರಡಿಯ ಪಡ್ಡೆ ಹುಡುಗರ ಗುಂಪು ಕತ್ತಿಗಳನ್ನು ಮುಂದಿಟ್ಟುಕೊಂಡು, ನವಾಬನನ್ನು ಸ್ವಾಗತಿಸಲು ಕಾದರು.

ಒಂದು ಕಡೆ ಈ ಸಿದ್ಧತೆ ನಡೆದಂತೆ –

ಮತ್ತೊಂದು ಕಡೆ, ದುರ್ಗದ ಯುವಕರು, ವಿದ್ರೋಹಿಗಳೆಂದು ತಿಳಿದ - ಹಿಂದೂಗಳು, ಮುಸ್ಲಿಮರು, ಮರಾಠರು - ಯಾರೇ ಆಗಿರಲಿ, ಅವರ ತಲೆ ಕಡಿದು, ಅವರ ಮನೆಗಳಿಗೆ ಬೆಂಕಿ ಹೊತ್ತಿಸಿ, ಉರಿವ ಕೊಳ್ಳಿಗಳನ್ನು ಹಿಡಿದು –

"ದುರ್ಗಕ್ಕೆ ಬಂದ ನವಾಬ
ಅವನ್ಹೆಂಡ್ರು ಮಕ್ಕಳು ಹಾಳಾಗ |
ಹಿಂದು ಮುಸ್ಲಿಂ ಏಕ್ ಹೈ
ಹೈದರ್ ಸಬ್ ಕೊ ದುಷ್ಮನ್ ಹೈ ||"

-ಎಂದು ಹಾಡುತ್ತಾ, ರಣಕೇಕೆ ಹಾಡುತ್ತಾ ಕುಣಿದರು.

ಉಚ್ಚಂಗಮ್ಮನ ಕೋಟೆಬಾಗಿಲು, ಸಿದ್ದಯ್ಯನ ಬಾಗಿಲುಗಳನ್ನು ಮುರಿದು, ದುರ್ಗದೊಳಹೊಕ್ಕ ಹೈದರಾಲಿಯ ಸೇನೆಗೆ ಸಿಕ್ಕಿದ್ದು - ಈ ನಾಗರಿಕ ಸ್ವಾಗತ.

ವಿಜಯೋತ್ಸಾಹದಿಂದ ದುರ್ಗಪ್ರವೇಶ ಮಾಡಿದ ಸೇನೆ –

ತೋಪು, ಫಿರಂಗಿ, ಕತ್ತಿ, ಕೋವಿ, ಕಠಾರಿ, ಭಲ್ಲೆಗಳ ಸನ್ನದ್ಧ ಸೈನಿಕರನ್ನು ಎದುರಿಸಿ, ಆ ಕಲೆಯಲ್ಲಿ ಪರಿಣತವಾದ ಹೈದರಾಲಿಯ ಸೇನೆ –

ತಾನು ಹಿಂದೆಂದೂ ಕಂಡರಿಯದ ಈ ವಿಚಿತ್ರ ಸಾರ್ವತ್ರಿಕಪ್ರತಿಭಟನೆಯ ಇದಿರು ಕಂಗೆಟ್ಟಿತು.

ಹೆಜ್ಜೆಗೊಂದು ಅಡೆತಡೆ - ನೆತ್ತಿಯ ಮೇಲೆ ಕುದಿನೀರಿನ, ಬಿಸಿಕೆಂಡಗಳ, ಹಳೆ ಎಕ್ಕಡಗಳ, ಮಲಮೂತ್ರಗಳ ಅಭಿಷೇಕ –

ಗಂಡಸರು, ಯುವಕರು, ಬಲಿಷ್ಠರು - ಕೈಗೆ ಸಿಕ್ಕ ಆಯುಧಗಳಿಂದ, ನವಾಬನ ಸೇನೆಯನ್ನು ಊರೊಳಗೆ ನುಗ್ಗಿದ ಕತ್ತೆಕಿರುಬನನ್ನು ತದುಕಿದಂತೆ ತದುಕಿದರೆ –

ಹೆಜ್ಜೆಹೆಜ್ಜೆಗೆ, ಮನೆಮನೆಯ ಮುಂದೆ ಹೆಂಗಸರು ಮೆಣಸಿನಪುಡಿಯನ್ನು ಸೇನೆಯ ಕಣ್ಣಿಗೆ ತೂರಿ, ಖಾರದಪುಡಿಯಿಂದ ಕಣ್ಣು ಕುರುಡರಾದವರನ್ನು ಒನಕೆ, ಹಾರೆಗಳಿಂದ ಬಡಿದರು, ಬೈಯುತ್ತಾ, ಕ್ಯಾಕರಿಸಿ ಉಗುಳಿದರು.

ಇದರ ಮೇಲೆ ದಶದಿಕ್ಕುಗಳಿಂದಲೂ ಸುರಿವ ಕವಣೆಗಲ್ಲುಗಳ ಶಿಲಾವರ್ಷ-

ಅಕ್ಕಪಕ್ಕದ ಕೇರಿ ಓಣಿಗಳಿಂದ, ಬಿರುಗಾಳಿಯಂತೆ ನುಗ್ಗಿ ಬಂದು, ಕೈಗೆ ಸಿಕ್ಕವರನ್ನು ಕೆಡಹಿ, ಕೈಕಾಲು ಮುರಿದು, ಮತ್ತೊಂದು ಓಣಿಯಲ್ಲಿ ಮಾಯವಾಗುವ ಹುಡುಗರು –

ಮನೆಮನೆಯ ಮುಂದೆ, ಬೀದಿಗಡ್ಡವಾಗಿ ಕಟ್ಟಿದ ಪೊರಕೆ, ಎಕ್ಕಡಗಳ ತೋರಣ –

ಹಿಂದಿನ ಮೂರು ತಲೆ, ಮುಂದಿನ ಆರು ತಲೆಯನ್ನು ಉದ್ಧಾರಮಾಡುವ ಅವಾಚ್ಯ ಬೈಗಳು –

ಕುದುರೆಗಳು ಜಾರಿ ಕುಸಿದು ಬೀಳುವಂತೆ ಬೀದಿಯಲ್ಲಿ ಹರಡಿದ ರಾಗಿ, ರೊಯ್ಯನೆ ಬೀಸಿ ಬರುವ ಕೊಳ್ಳಿಗಳು –

ಹುಡುಗರು ಕೊಟ್ಟ ಪೆಟ್ಟುಗಳಿಂದ ಅರಚುತ್ತಾ ಬೊಗಳುತ್ತಾ ಸೇನೆಯಲ್ಲಿ ಅಡ್ಡಾದಿಡ್ಡಿಯಾಗಿ ಓಡಾಡುವ ನಾಯಿ, ಕತ್ತೆ, ಹಂದಿಗಳು –

ಇದಿಷ್ಟೂ ಸಾಲದೆಂಬಂತೆ, ನೂರು ಕಂಠಗಳಲ್ಲಿ –

"ದುರ್ಗಕ್ಕೆ ಬಂದ ನವಾಬ

ಅವನ್ಹೆಂಡ್ರು ಮಕ್ಕಳು ಹಾಳಾಗ |

ಇಂದು ಮುಸ್ಲಿಂ ಏಕ್ ಹೈ
ಹೈದರ್ ಸಬ್ ಕೊ ದುಷ್ಮನ್ ಹೈ ||"

- ಎಂದು ಮೈರಕ್ತ ಹೆಪ್ಪುಗಟ್ಟಿಸುವಂತೆ ಕೇಳಿಬರುವ ರಣಕೇಕೆಯೊಂದಿಗೆ ಬೆರೆತ ಯುದ್ಧಗೀತೆ.

ಈ ಎಲ್ಲ ಚಿತ್ರ ವಿಚಿತ್ರ ಅನಿರೀಕ್ಷಿತ ಪ್ರತಿಭಟನೆಯಿಂದ ಹೈದರಾಲಿಯ ವಿಜಯೀಸೇನೆ ಕಂಗಾಲಾಯಿತು.

ಒಂದು ದಿಕ್ಕಿನ ಪ್ರತಿಭಟನೆಯಲ್ಲ, ಒಂದು ಬಗೆಯ ಪ್ರತಿಭಟನೆಯಲ್ಲ –

ಕಾಡನ್ನೇ ಬೆದರಿಸುವ ಹೆಬ್ಬುಲಿಯನ್ನು ಬೆದರಿಸುತ್ತಾ ಅಕ್ಕಪಕ್ಕ, ಹಿಂದೆಮುಂದೆ ಬೆನ್ನಟ್ಟಿದ ಸೀಳುನಾಯಿಗಳ ದಾಳಿಯಂಥ ದಾಳಿ.

ನಿಶ್ಚಿತ ಗೊತ್ತುಗುರಿಯಿಲ್ಲದ ಈ ದಾಳಿಯಿಂದ ಬುದ್ಧಿಭ್ರಂಶನಾಗಿ, ತಾನೇ ಮೊದಲು ದುರ್ಗವನ್ನು ಪ್ರವೇಶಿಸಬೇಕೆಂಬ ಹಟದಿಂದ ಹೊರಟ ಮೋಹಿಯುದ್ದೀನ್ ಸಾಹೇಬ್ – ಕಣ್ಣು ಮೂಗುಗಳನ್ನಡರಿದ ಕಾರದಪುಡಿಯ ಘಾಟಿನಿಂದ ಸೀನುತ್ತಾ, ಮೈಮೇಲೆ ಬಿದ್ದ ಹೊಲಸಿನಿಂದ ಮುಳ್ಳುಹಂದಿಯಂತಾಗಿ, ಕವಣೆ ಕಲ್ಲೇಟುಗಳಿಂದ ತತ್ತರಿಸಿ –

"ಮನೆಮನೆಗೂ ನುಗ್ಗಿ ಹೊಡೀರಿ. ಜಾತಿ, ಮತ, ಹೆಂಗಸರು, ಗಂಡಸರು, ಮಕ್ಕಳು, ಮುದುಕರು ಯಾರನ್ನೂ ಬಿಡಬೇಡಿ. ಕೈಗೆ ಸಿಕ್ಕವರನ್ನು ಕತ್ತರಿಸಿ....ನಮಗೆ ಅಟಕಾವು ಮಾಡ್ತಾರಾ ? ಈ ದುರ್ಗದ ಬೀದೀಲಿ ರಕ್ತದಹೊಳೆ ಹರಿಸ್ತೀನಿ."

- ಎಂದು ಸೇನೆಗೆ ಅಪ್ಪಣೆ ಮಾಡಿದ.

ಸೇನೆಯೇನೋ ಮನೆಮನೆಗೂ ನುಗ್ಗಿತು. ಆದರೆ ಮನೆಯಲ್ಲಿದ್ದವರು ತಪ್ಪಿಸಿಕೊಂಡು ಹೋದ ಹಿತ್ತಲಬಾಗಿಲು, ಅವರನ್ನು ಹಿಂಬಾಲಿಸಿದ ಸೈನಿಕರಿಗೆ ಗಂಟಲಗಾಣವಾದವು. ಕಂಡ ಕಂಡಲ್ಲಿ ಜನ, ಹೈದರಾಲಿಯ ಸೈನಿಕರನ್ನು ಹುಚ್ಚು ನಾಯಿಯನ್ನು ಅಟ್ಟಿಸಿಕೊಂಡು ಹೋಗಿ ಹೊಡೆಯುವವರಂತೆ ಹೊಡೆದರು.

ಹೆಜ್ಜೆ ಹೆಜ್ಜೆಗೂ ನಡೆದ ಈ ಬೀದಿಕಾಳಗದಲ್ಲಿ –

ಸತ್ತವರ ಲೆಕ್ಕವಿಲ್ಲ. ಎಷ್ಟು ಜನ ನಾಗರಿಕರು ಸತ್ತರೋ, ಅಷ್ಟೇ ಜನ ಸೈನಿಕರೂ ಸತ್ತರು.

ಮೋಹಿಯುದ್ದೀನ್ ಸಾಹೇಬ್ ಬಯಸಿದಂತೆ ದುರ್ಗದ ಬೀದಿಬೀದಿಗಳಲ್ಲಿ ರಕ್ತದ ಹೊಳೆ ಹರಿಯಿತು. ಮನೆಮನೆಯ ಮುಂದೆ ಹೆಣಗಳ ಬಣವೆ. ಗಾಯಗೊಂಡ ಕತ್ತೆ ನಾಯಿಗಳೊಂದಿಗೆ

ಗಾಯಗೊಂಡ ಕುದುರೆಗಳೂ ಕಾಲಿಗೆ ಸಿಕ್ಕವರನ್ನು ತುಳಿಯುತ್ತಾ, ಕೆನೆಯುತ್ತಾ, ಹುಚ್ಚಾಗಿ ಹಿಂದೆ ಮುಂದೆ ಹೊಯ್ದಾಡಿದವು.

ಅಲೆಅಲೆಯಾಗಿ ನುಗ್ಗಿ ಬರುತ್ತಿತ್ತು ದುರ್ಗದೊಳಗೆ ಹೈದರಾಲಿಯ ಸೇನೆ –

ಹಿಂದೆ ಬಂದವರು ಮುಂದಿನವರನ್ನು ನೂಕಿದರು. ನೂಕಿದವರು ಮುಗ್ಗರಿಸಿದರು –

ಆದರೂ ಆ ಸೇನಾಪ್ರವಾಹ ನಾಗರಿಕರ ಪ್ರತಿಭಟನೆಯನ್ನು ಎದುರಿಸುತ್ತಾ, ಮುರಿಯುತ್ತಾ, ಪೆಟ್ಟು ತಿನ್ನುತ್ತಾ, ಕೊಲ್ಲುತ್ತಾ, ಕಡಿಯುತ್ತಾ ಮುಂದುವರಿಯಿತು.

ಶತ್ರುಸೈನಿಕರ ಕ್ರೋಧಕ್ಕೆ ಸಿಕ್ಕ ಅಂಗಡಿ ಮುಂಗಟ್ಟುಗಳು ಲೂಟಿಯಾದವು ; ಮನೆಯ ಪಾತ್ರೆ ಪಡಗಗಳು ಬೀದಿಯಲ್ಲಿ ಚೆಲ್ಲಾಡಿದವು ; ಎಷ್ಟೋ ಮನೆಗಳು ಹೊತ್ತಿ ಉರಿದವು.

ಅವುಗಳ ನಡುವೆಯೇ ಸಿದ್ದಯ್ಯನ ರಸ್ತೆಯಲ್ಲಿ ಮುಂದುವರೆಯಿತು, ಹೈದರಾಲಿಯ ಸೇನೆ –

ಆನೆ, ಕುದುರೆಗಳು - ತೋಫಿನ ಗಾಡಿಗಳು - ಸರಂಜಾಮಿನ ಗಾಡಿಗಳು-

ಸತ್ತವರನ್ನು, ಗಾಯಗೊಂಡವರನ್ನು ತುಳಿದುಕೊಂಡು ಉತ್ಸವಾಂಬಾ ದೇವಾಲಯವನ್ನು ದಾಟಿ, ಏಕನಾಥೇಶ್ವರಿಯ ಪಾದಗಟ್ಟೆಯ ಬಳಿ ಬೀಡುಬಿಟ್ಟಿತು –

ಗಾರೆಬಾಗಿಲಿನ ಮೇಲಿನಿಂದ ಸಿಡಿದ ತೋಫುಗಳ ಏಟಿಗೆ ತತ್ತರಿಸುತ್ತಾ.

೩೫

ಶಕವರ್ಷ ೧೭೦೦ನೇ ಹೇವಿಳಂಬಿ ಸಂವತ್ಸರದ ಮಾಘ ಬಹುಳ ಶುಕ್ರವಾರ -

ಆ ದಿನ –

ಹಗಲಾಗುತ್ತಿದ್ದಂತೆಯೇ ಉತ್ಸವಾಂಬಾ ದೇವಾಲಯದ ಮಹಾದ್ವಾರದ ಮೇಲಿನ ಮೂರುಪ್ಪರಿಗೆಯ ತುದಿಯ ಗೋಪುರದಲ್ಲಿ ತೂಗುಬಿಟ್ಟ ಬೃಹದಾಕಾರದ ಕಂಚಿನ ಗಂಟೆ ಮೊಳಗಿ, ನಾಯಕರ ಕುಲದೇವತೆ, ಚಿತ್ರದುರ್ಗದ ರಾಜ್ಯದೇವತೆಯಾದ ಉತ್ಸವಾಂಬಾದೇವಿಯ ಪೂಜಾಕಾರ್ಯ ಪ್ರಾರಂಭವಾದ ಮಂಗಳವಾರ್ತೆಯನ್ನು ನಗರಕ್ಕೆ ಸಾರಲಿಲ್ಲ.

ಅದಕ್ಕೆ ಪ್ರತಿಯಾಗಿ –

ತೋಫುಗಳ ಘರ್ಜನೆ, ಕೋವಿಗಳ ಪಟಪಟ ಶಬ್ದ, ಬಗೆಬಗೆಯ ಆಯುಧಗಳ ಸಂಘಟ್ಟನೆಯ ಧ್ವನಿ, ಗಾಯಗೊಂಡವರ ಆಕ್ರಂದನ, ಗೆದ್ದವರ ಜಯಘೋಷ, ರಣಕೇಕೆ; ಆನೆಗಳ ಕಾಲಿಗೆ ಕಟ್ಟಿದ ಗಗ್ಗರ, ಕೊರಳಿಗೆ ಕಟ್ಟಿದ ಗಂಟೆಗಳ ಲೋಹಶಬ್ದ, ಘೀಂಕಾರ; ಸಾವಿರಾರು

ಕುದುರೆಗಳ ಖುರಪುಟದ ಸದ್ದು ಹೇಷಾರವ - ತೆರೆತೆರೆ ಘಟ್ಟಿಸಿ ಭೋರ್ಗರೆವ ಸಾಗರ ಘೋಷದಂತೆ, ಎದೆ ತಲ್ಲಣಿಸುವ ಇಂಥದೆಂದು ಹೇಳಲಾಗದ ರುದ್ರಮೊರೆತ –

ಸುಟ್ಟಮದ್ದು ಸುಟ್ಟುರಿವ ಮನೆಗಳಿಂದ ಎದ್ದು ಬಂದ ಘಾಟುವಾಸನೆ –

ನುಗ್ಗುತ್ತಿರುವ ಸೇನೆಯ ಸಹಸ್ರ ಸದ್ದಿನ ಮಹಾಪೂರ - ನಗರದ ಬೀದಿಬೀದಿಗಳಲ್ಲಿ ತುಂಬಿಹರಿದು, ಬೆಟ್ಟದ ಬಂಡೆಗಳಿಗೆ ಬಡಿದು ಮಾರ್ದನಿಸಿತು.

ಅಪ್ರತಿಹತವಾದ ನೆರೆನೀರಿನಂತೆ ನುಗ್ಗಿ ಬರುತ್ತಿತ್ತು ಶತ್ರುಸೇನೆ –

ಗಾರಸುತ್ತಿನಕೋಟೆಯ ಮಹಾದ್ವಾರದ ಮೇಲೆ, ತೋಫಿಗೆ ಒರಗಿನಿಂತು, ಕಿಚ್ಚುಕಾರುವ ಕಣ್ಣುಗಳಿಂದ, ಆ ಸೇನಾಪ್ರವಾಹವನ್ನು ನೋಡಿದ ಮದಕರಿನಾಯಕ.

ಪೇಟೆಯತ್ತಣಿಂದ ಓಡಿಬಂದು, ದಿಡ್ಡಿಬಾಗಿಲುಗಳ ಮೂಲಕ ಒಳನುಸುಳಿದ ಸೈನಿಕರು ಕ್ಷಣಕ್ಷಣಕ್ಕೂ ರಣವಾರ್ತೆಯನ್ನು ತಂದು ನಾಯಕರಿಗೆ ಮುಟ್ಟಿಸುತ್ತಿದ್ದರು.

ಶತ್ರುಸೇನೆ, ಕೇರಿಕೇರಿಯನ್ನೂ ದಾಟಿದ ಸುದ್ದಿ ತಿಳಿದಂತೆ, ಮದಕರಿನಾಯಕನ ದೇಹ ಕ್ರೋಧಾಗ್ನಿಯಿಂದ ತಪ್ತವಾಗಿ, ಮುಟ್ಟಿದರೆ ಸುಡುವಷ್ಟು ಕಾವೇರಿತ್ತು, ಆತನ ಮುಖ ಮುದ್ರೆ, ಕಣ್ಣುಗಳೆರಡೂ ಕ್ರೋಧದ ಕೋವಿಗಳಾಗಿ, ಆತನ ಮುಖ- ಶತ್ರುಗಳನ್ನು ಕೊಲ್ಲುವ, ಸುಡುವ ಅಪ್ಪಣೆಗಳನ್ನು ಮಾಡುವ ತೋಫಾಗಿತ್ತು.

ಶತ್ರುಸೇನೆ ಉತ್ಸವಾಂಬೆಯ ದೇವಾಲಯದ ಬಳಿಸಾರುತ್ತಿದ್ದಂತೆಯೇ, ನಾಯಕರು, ಬಸವನ ಬುರುಜಿನ ಮೇಲೆ ಏರಿಸಿದ ತೋಫುಗಳಿಗೆ ಕೊಳ್ಳಿಕೊಡಲು ಆಜ್ಞೆಮಾಡಿದರು.

ಬಸವನ ಬುರುಜಿನ ಮೇಲಿನ ತೋಫು ಭೋರ್ಗರೆಯುತ್ತಾ ಬೆಂಕಿಯನ್ನು ಕಕ್ಕಿತು –

ಪೇಟೆಯತ್ತಲಲ್ಲ –

ಅದಕ್ಕೆ ಪ್ರತಿಯಾಗಿ, ಕೋಟೆಯತ್ತ.

ಕೆಕ್ಕರಿಸಿದ ಕಣ್ಣಿನಿಂದ, ತೋಫಿನೇಟಿಗೆ ಸಿಕ್ಕು ಛಿದ್ರವಿಚ್ಛಿದ್ರವಾಗಿ ಶಿಲಾವರ್ಷ ಕರೆದ ಬೆಟ್ಟವನ್ನು ನೋಡಿ –

ಕಾಲಕೆಳಗಿನ ಭೂಮಿ ಹೊಯ್ದಾಡಿದಂತಾಯಿತು ಮದಕರಿನಾಯಕನಿಗೆ; ಮನೆಮನೆಯೂ ರಣರಂಗವಾದ ಸುದ್ದಿಯನ್ನು ಕೇಳಿ, ಹರ್ಷೋದ್ಗಾರ ಮಾಡಿದ ಅವನ ಮುಖ ತನಗೇ ತೋಫಿನೇಟು ತಗಲಿದಂತೆ ಕಪ್ಪಿಟ್ಟಿತು.

ನಾಯಕರ ಬದಿಯಲ್ಲಿ ನಿಂತ ಯೋಧರ ರಣಗಾವೇರಿದ ಮೈ ಮಂಜಿನಗಡ್ಡೆಯಂತಾಯಿತು.

ತನ್ನತ್ತ ಸಿಡಿದ ತೋಫಿನ ಶಬ್ದಕ್ಕೆ, ಝುಂಡಾಬತೇರಿಯ ಮೇಲಿದ್ದ ಹನುಮದ್ಗರುಡ ಧ್ವಜ ಅತ್ತಿಂದಿತ್ತ ಹೊಯ್ದಾಡಿತು - ದುರ್ಗದ ಭಾಗ್ಯದಂತೆ.

ಅದನ್ನು ನೋಡಿ ಮದಕರಿನಾಯಕ, ತನ್ನ ಸುತ್ತ ನಿಂತವರನ್ನು ನೋಡಿದ –

ಎಲ್ಲರ ಮುಖಗಳೂ ನಿಸ್ತೇಜ; ಎಲ್ಲರ ಕಣ್ಣುಗಳೂ ಕ್ರೋಧದ ಉರಿಚಿಮ್ಮುವ ದೀವಟಿಗೆಗಳು.

ಅತ್ತ ನೋಡಿದ –

ನುಗ್ಗಿ ಬರುತ್ತಿತ್ತು –

ನೆಲವೆಲ್ಲವನ್ನೂ ಕವಿದು ಬೆಳೆದ ಬಿದಿರುಮಳೆಯಂತೆ ರಕ್ತಪಿಪಾಸುವಾಗಿ ಮೇಲೆದ್ದು ಹೊಳೆಯುವ ಲಕ್ಷ ಲಕ್ಷ ಶತ್ರುಶಸ್ತ್ರಾಸ್ತ್ರಗಳು –

ನಗರದ ಸದ್ದೆಲ್ಲವನ್ನೂ ನುಂಗಿ ಮೊರೆಯುವ ಶತ್ರುಸೇನೆಯ ಉನ್ಮತ್ತ ಜಯಘೋಷ –

ಅಜೇಯವಾಗಿ, ಅಪ್ರತಿಹತವಾಗಿ, ಬದುಕೆಲ್ಲವನ್ನೂ ತುಳಿದು ಮುಂದುವರಿಯುವ ಮೃತ್ಯುರಥ –

ಎದುರಾದುದೆಲ್ಲವನ್ನೂ ಕೊಚ್ಚಿ, ಕಸಗುಡಿಸಿ ಕರಗಿಸಿ, ತಾನೇತಾನಾಗಿ ಎಲ್ಲೆಲ್ಲೂ ನೆಲಸುವ ಪ್ರಳಯಪ್ರವಾಹದಂತೆ –

ಎಲ್ಲ ಪ್ರತಿಭಟನೆಯೂ ವಿಫಲವೆನಿಸುವಂಥ ಪ್ರಚಂಡ ಪ್ರಮತ್ತ ವಿಜಯೋನ್ಮತ್ತ ಸೇನಾವಾಹಿನಿ.

ಇದೆಲ್ಲವನ್ನೂ ಕ್ಷುಲ್ಲಕವನ್ನಾಗಿ ಮಾಡಿ, 'ನಿನ್ನೆಲ್ಲ ಸಾಹಸವೂ ಬಟ್ಟ ಬಯಲಾಯಿತು' ಎಂದು ಮದಕರಿನಾಯಕನನ್ನು ಹಂಗಿಸಿ ವಿಕಟಾಟ್ಟಹಾಸ ಮಾಡುವಂತೆ, ದೂರದಲ್ಲಿ ಸಿದ್ದಯ್ಯನಬಾಗಿಲ ಮೇಲೆ ಹಾರುತ್ತಿತ್ತು –

ಹೈದರಾಲಿಯ ಖುದಾದಾದ್ ರಾಜ್ಯದ ಹಸಿರು ನಿಶಾನಿ.

ಅದನ್ನು ನೋಡಿ, ನೋಡಿದ ನೋಟ ಕಣ್ಣು ತುಂಬಿ, ಎದೆತುಂಬಿ, ಅಡ್ಡವಾದುದೆಲ್ಲವನ್ನೂ ಸುಟ್ಟುರಿಸಿ ಕರಗಿಸುವ ನಿರಾಶೆಯ ಉರಿನೀರಿನಂತೆ ಹರಿದು-

ಮದಕರಿನಾಯಕನ ಮೈ ಮರಗಟ್ಟಿ, ಬುದ್ಧಿ ಹೆಳವಾಗಿ –

'ವಿಫಲ...ವಿಫಲ...

ರೋಷ, ಆವೇಶ, ಪ್ರತಿಭಟನೆ, ರಣೋತ್ಸಾಹ, ಪ್ರತಿಸಂಗ್ರಾಮಸಿದ್ಧತೆ - ಎಲ್ಲವೂ ವಿಫಲ -ಅಷ್ಟು ದಿನದ ಗೆದ್ದ ಗೆಲುವು, ಬದುಕಿದ ಬಾಳು –

-ಎಲ್ಲವೂ ವಿಫಲ'

-ಎಂಬ ಭಾವನೆ ಉರಿವ ಕೆಂಡದ ಕಾವು, ಕಾಂತಿಯನ್ನು ಉಡುಗಿಸುವ ಬೂದಿಯಂತೆ ಆತನ ಮೈ ತುಂಬಿತು.

'ಇನ್ನೇಕೆ ಯುದ್ಧ ಇನ್ನೇಕೆ ಬದುಕು' – ಎನಿಸಿತು.

'ಈಗಲೂ ಬಿಳಿ ಬಾವುಟ ಎತ್ತಿದರೆ, ಸತ್ತವರು ಸತ್ತರೂ ಉಳಿದವರಾದರೂ ಉಳಿದಾರು, ಇದ್ದಷ್ಟಾದರೂ ಇದ್ದೀತು' – ಎಂದೂ ಅನಿಸಿತು.

ಆ ನಿರಾಶೆ ಕವಿದ ಕಣ್ಣಿನಿಂದಲೇ ನೋಡಿದ –

ಸಿದ್ದಯ್ಯನಬಾಗಿಲ ಮೇಲೆ, ತನ್ನ ಬಾಳ ಪಾಳಿನ ಮೇಲೆ ಮೆಟ್ಟಿನಿಂತಂತೆ ವಿಜೃಂಭಿಸುವ ಶತ್ರುಪತಾಕೆಯನ್ನು,

ಆ ಹೊತ್ತಿನಲ್ಲಿ –

ಮದಕರಿನಾಯಕನ ಮಿದುಳಾಳದಲ್ಲಿ ಹೊಸದೇನೋ ಮಿಡಿದಂತಾಗಿ, ಬೆಟ್ಟದಡಿಯಿಂದ ನುಸುಳಿಬರುವ ಜಲದಂತೆ ಎಂದಿನದೋ, ಹಿಂದೆಂದಿನದೋ ನೆನಪು –

ಜಾನಕಲ್ಲು – ಜಯಕಾರ ಮನೆಮನೆಗೂ ಹೂತೋರಣ- ಆಳಿಗೊಂದು ಹೂಮಾಲೆ –

ಅದರ ನಡುವಿನಿಂದ –

ಇಬ್ಬದಿಯ ಜನರನ್ನು ಅತ್ತಿತ್ತ ಸರಿಸಿ ದಾರಿಮಾಡಿಕೊಂಡು ಹತ್ತಿರ ಬಂದು, ತನ್ನ ತೋಳ ಗಾತ್ರವಿದ್ದ ಮಲ್ಲಿಗೆಯ ಹೂವಿನ ಹಾರ ಹಾಕಿ, ಕೈಗೆರಡು ನಿಂಬೆಹಣ್ಣು ಕೊಟ್ಟು, ಹರ್ಷಾಶ್ರು ತುಂಬಿದ ಕಣ್ಣುಗಳಿಂದ ಅಲಂಕೃತನಾದ ತನ್ನನ್ನು ನೋಡುತ್ತಾ-

'ಮದಕೇರಣ್ಣಾ'

-ಗದ್ಗದ ಧ್ವನಿಯಲ್ಲಿ ಎಂದು ಹೇಳಿದ, ತನಗೆ ಕಸರತ್ತು ಕಲಿಸಿದ ವಯೋವೃದ್ಧನಾದ ಹಿರಿಯ ಜೆಟ್ಟಿಗೆ ಕೇಳಿದ್ದ –

'ಏನಜ್ಜಾ?'

'ನಾನು ಮಾತು ಬರದ ಮೂಳ. ನನಗೆ ಗೊತ್ತಿರೋ ಎರಡು ಮಾತು ಹೇಳ್ತಿನಿ - ಮರೀಬ್ಯಾಡ, ಮದಕೇರಣ್ಣ.'

'ಅದೇನು ಹೇಳಜ್ಜಾ?'

'ನೀನು ನಮ್ಮ ಗರಡಿ ಷಾಗಿರ್ದು. ದುರ್ಗಕ್ಕೆ ದೊರೆಯಾಗಲು ಹೋಗಿದೀಯಾ. ದೊರೆ ಎಂದರೆ ದಿನಾ ಕಾಳಗ. ಆ ಕಾಳಗದಾಗೆ ನೀನು ಯಾವತ್ತೂ ಶತ್ರುವಿಗೆ ಬೆನ್ನು ತೋರಿಸಿ, 'ಚಿತ್' ಆಗಬಾರ್ದು. ಸತ್ತರೂ ಗಂಡಾಗಿ ಸಾಯಬೇಕು; ಬದುಕಿದರೂ ಹಂಗೆ, ಯಾವತ್ತೂ ಈ ಗರಡಿಮನೆ ಮರ್ಯಾದೆ ಕಳೀಬ್ಯಾಡ, ನಾನಷ್ಟೇ ಕೇಳಿಕೊಳ್ಳೋದು. ಈ ಮುದುಕನ ಮಾತು ಯಾವತ್ತೂ ಮರೀಬಾರ್ದು, ಮರಿ. ಮರೆತೆಯಾ, ನಿನಗೆ ಹಾಕಿದ ಹಾರ ನಾಯಿಗೆ ಹಾಕಿದ ಹಾಗಾಗುತ್ತೆ.'

- ತನ್ನ ನೆತ್ತಿ, ತೋಳು, ಎದೆ ಸವರುತ್ತಾ, ಅಪ್ಪಣೆಯಂಥ ಮಾತಾದರೂ ಪ್ರೀತಿಯಿಂದ ಹೇಳಿದ ಆ ವೃದ್ಧ ಪೈಲ್ವಾನನಿಗೆ ತಾನೇನು ಹೇಳಿದ್ದೆ-

'ಊಹೂ, ನಿನ್ನ ಮಾತು ಯಾವತ್ತೂ ಮರೆಯೋಲ್ಲ, ಅಜ್ಜ, ನಮ್ಮ ಗರಡಿಗೆ ಕೆಟ್ಟ ಹೆಸರು ತರೋದಿಲ್ಲ.'

'ಅಷ್ಟು ಹೇಳಿದೆಯಲ್ಲಾ - ಬಿಂದಿಗೆ ಬಾದಾಮಿ ಹಾಲು ಕಡ್ಡಂಗಾಯ್ತು... ಗಂಡಾಗಿ ಬಾಳು, ಮಗಾ.'

ಆ ನೆನಪಿನೊಂದಿಗೇ –

ಹೈದರಾಲಿ ಕೊಯ್ಸಿಸಿದ ಜಾನಕಲ್ಲಿನ ಆಬಾಲವೃದ್ಧರ, ಹೆಂಗಸರ ರಕ್ತದ ಹನಿ ತೊಟಕುವ ಕಿವಿ, ಮೂಗು, ನಾಲಗೆಗಳು ನೋವಿನ ನಿಟ್ಟುಸಿರಿಡುತ್ತಾ, ನರಳುತ್ತಾ, ನೂರಾರು ಬಗೆಯಲ್ಲಿ ಹೇಳಿದಂತಾಗಿ –

ಮರಗಟ್ಟಿದ ಮೈಯಲ್ಲಿ ತಟಕ್ಕನೆ ಹೊಸಚೈತನ್ಯ ಮೂಡಿ, ಹೊಸಶಕ್ತಿಯ ವಿದ್ಯುದ್ವಾಹಿನಿ ಹರಿದು, ತನಗೆ ತಾನೇ ಹೇಳಿಕೊಂಡ –

'ಇಲ್ಲ, ಸೋಲುವುದಿಲ್ಲ. ಶತ್ರುವಿಗೆ, ನಿರಾಶೆಗೆ ಸೋಲುವುದಿಲ್ಲ.'

ಹಾಗೇ ತನ್ನೆದೆಯನ್ನು ತಿವಿಯುವಂತೆ ಹಾರುತ್ತಿದ್ದ ಹೈದರಾಲಿಯ ಬಾವುಟಕ್ಕೆ ಹೇಳಿದ-

'ದುರ್ಗದ ನೆಲದ ಮೇಲೆ ನೀನು ಹಾರಲು ಬಿಡುವುದಿಲ್ಲ. ನಾನು ಬದುಕಿರುವವರೆಗೂ ಬಿಡುವುದಿಲ್ಲ.'

ತನ್ನ ಹೃದಯದಲ್ಲಿ ಹೊಸದಾಗಿ ಹಸಿರಾದ ನೆನಪಿಗೇ ಹೇಳುವಂತೆ ಹೇಳಿಕೊಂಡ –

'ಮಾಫ್ ಮಾಡು, ಉಸ್ತಾದ್. ನಿಮ್ಮ ಗರಡಿಗೆ, ಹಡೆದು ಹಾಲುಣಿಸಿದ ಜಾನಕಲ್ಲಿಗೆ, ಕಿರೀಟವಿಟ್ಟು ಸಾಕಿದ ದುರ್ಗಕ್ಕೆ - ಬದುಕಿದ್ದೂ ಕೆಟ್ಟ ಹೆಸರು ತರುವುದಿಲ್ಲ.'

ಹಾಗೆಂದುಕೊಂಡು ನೋಡಿದ –

ಸುತ್ತ ನೆರೆದವರನ್ನು ನೋಡಿದಂತೆಯೇ, ಅಷ್ಟು ದೂರದಲ್ಲಿ ಕಾಣುತ್ತಿದ್ದ ದ್ಯಾಮವ್ವ ನಾಗತಿಯ ಹಜಾರವನ್ನು ನೋಡಿ, ನಿಟ್ಟುಸಿರಿಟ್ಟು, ದುರ್ಗಕ್ಕೆ ಕೈಮುಗಿದಂತೆ ಕೈಯಲ್ಲಿದ್ದ ಪರಿಘಾಯುಧವನ್ನು ಹಿಡಿದೆತ್ತಿ, ಅದರ 'ಅಲಗುಗಳು ಹರಿತವಾಗಿದೆಯೋ, ಅದಕ್ಕೂ ದ್ರೋಹದ ತುಕ್ಕು ಹಿಡಿದಿದೆಯೋ' – ಎಂದು ಪರೀಕ್ಷಿಸುವಂತೆ ಬಿಸಲಿನಲ್ಲಿ ತಿರುಗಿಸಿನೋಡಿದ –

ಮಬ್ಬಾದ ಬಿಸಲಿನಲ್ಲಿಯೂ ಪರಿಘಾಯುಧದ ಅಲಗುಗಳು ಬಿಸಲು ಸೋಕಿ ಎಳೆ ನೀಲಿಯ ಬೆಳಕನ್ನು ಚಿಮ್ಮಿದವು.

ಅದನ್ನು ಕಂಡು ಕ್ಷಣಕಾಲ ಹೊಯ್ದಾಡಿದ ಮದಕರಿನಾಯಕನ ಹೃದಯ ಶಿಲಾಸ್ತಂಭದಂತೆ ಸ್ಥಿರವಾಗಿ –

"ಸ್ವರ್ಗಕ್ಕೆ ಲಗ್ಗೆ ಹಾಕುವವರು ಸಿದ್ಧರಾಗಿ"

-ಎಂದು ಹೇಳಿದ, ಪರಿಘಾಯುಧದ ಅಲಗಿನಂತೆಯೇ ತಣ್ಣಗೆ, ಹರಿತವಾಗಿ ಹೊಳೆವ ಧ್ವನಿಯಲ್ಲಿ.

* * *

ಅತ್ತ ಅರಮನೆಯಲ್ಲಿ –

ನೂರಾರು ಜನರಿದ್ದೂ ನಿರ್ಜನ ಮೌನ ದಟ್ಟವಾಗಿ ಹಬ್ಬಿತ್ತು. ಅತ್ತಿಂದಿತ್ತ ಜನ ಓಡಾಡುತ್ತಿದ್ದರೂ, ಆ ಜನ ಜನದಂತಿರದೆ ನೆರಳುಗಳಂತಿದ್ದರು. ಎಲ್ಲರ ಕಣ್ಣುಗಳೂ, ಘಾಟುಹೊಗೆ ಸೋಕಿದಂತೆ ಉರಿಯುತ್ತಾ, ಕಣ್ಣೀರಿನಲ್ಲಿ ತಣ್ಣಗಾಗಲು ಬಯಸುತ್ತಿದ್ದವು.

ಆದರೆ ನಿಂಗವ್ವ – ಅರಮನೆಯ ಅಧಿಕಾರಿಗಳು, ಪರಿಚಾರಕರು, ದಾಸ, ದಾಸಿಯರು ಎಲ್ಲರಿಗೂ ಕಟ್ಟಪ್ಪಣೆ ಮಾಡಿದ್ದಳು –

"ಯಾರ ಕಣ್ಣಿನಲ್ಲಾದರೂ ನೀರು ಕಂಡರೆ, ಆ ಕಣ್ಣುಗಳನ್ನು ಸುಡಿ. ನಿಟ್ಟುಸಿರಿಟ್ಟವರಿಗೆ ಬಾರುಕೋಲಿನಿಂದ ಹೊಡೆಯಿರಿ."

ಅಷ್ಟು ಆಜ್ಞೆಮಾಡಿದ ಆಕೆಯ ಕೈಗಳು, ಯಾಂತ್ರಿಕವಾಗಿ ಕ್ಷಣಕಾಲವೂ ಬಿಡುವಿಲ್ಲದೆ ಹೂವಿನ ದಂಡೆಯನ್ನು ಕಟ್ಟುತ್ತಿದ್ದವು.

ಅಂತಃಪುರದಲ್ಲಿ –

ಹತ್ತಾರು ಮಂದಿ ದಾಸಿಯರು ಪದ್ಮವ್ವನಾಗತಿ, ಬಂಗಾರವ್ವನಾಗತಿಯರನ್ನು ಅಲಂಕಾರ ಮಾಡುತ್ತಿದ್ದರು.

ಹೊಳೆವ ಹಲಬಣ್ಣದ ಮಣಿಗಳನ್ನು ಚುಕ್ಕೆಯಾಗಿ, ಹೂವಾಗಿ, ನಕ್ಷತ್ರವಾಗಿ, ಬಳ್ಳಿಯಾಗಿ, ಬಂಗಾರದ ಎಳೆಗಳೊಂದಿಗೆ ನೆಯ್ದ ರಕ್ತವರ್ಣದ ಪೀತಾಂಬರವನ್ನುಟ್ಟು, ಅದೇ ವರ್ಣದ ರವಿಕೆಯನ್ನು ತೊಟ್ಟು, ಕಿವಿ, ಮೂಗು, ಕೆನ್ನೆ, ಕತ್ತುಗಳಿಗೆ ತೂಗುಬಿಟ್ಟ ಓಲೆ, ನೆತ್ತಿಯ ಮುತ್ತಿನಮಾಲೆ, ಅಡ್ಡಿಕೆ, ಬುಗಡಿ, ಚಳತುಂಬು, ತೋಳಬಂದಿ, ಕಡಗ, ರತ್ನ ಖಚಿತ ಕಂಕಣಗಳು ಮೊದಲಾದ ನವರತ್ನಾಭರಣಗಳನ್ನು ತೊಟ್ಟು, ಸೊಂಟಕ್ಕೆ ಬಂಗಾರದ ಒಡ್ಯಾಣವನ್ನು ಧರಿಸಿ, ಕಾಲಿಗೆ ಚಿನ್ನದ ಸಣ್ಣಗೆಜ್ಜೆಯ ನೂಪುರಗಳನ್ನು ಧರಿಸಿ, ಕಾಲ್ಬೆರಳುಗಳಿಗೆ ಉಂಗುರವಿಟ್ಟು, ಆ ಎಲ್ಲ ಆಭರಣಗಳಿಗೂ ಮುಕುಟವಿಟ್ಟಂತೆ ಹಣೆಯಲ್ಲಿ ಅಡ್ಡ ಕುಂಕುಮವಿಟ್ಟು, ಕಣ್ಣುಗಳಲ್ಲಿ ಹಣತೆಗಳನ್ನು ಉರಿಸುತ್ತಾ, ಜೋಡಿ ಸುಮಂಗಲೀ ಸ್ವರ್ಣ ವಿಗ್ರಹಗಳಂತೆ ಗಂಭೀರವಾಗಿ ಪೂಜಾಗೃಹದತ್ತ ನಡೆದು, ಬೆಳ್ಳಿಯ ಮಣೆಗಳ ಮೇಲೆ ಕುಳಿತು, ಸೋದರಿಯರಿಬ್ಬರೂ ಗದ್ಗದಕಂಠದಿಂದ ಪುರೋಹಿತರು ಹೇಳಿದ

ಮಂತ್ರಕ್ಕನುಗುಣವಾಗಿ, ನೂರು ಬೆಳಕಿನ ಕುಡಿಗಳಂತೆ ಹೊಳೆಯುತ್ತಿದ್ದ ಸರ್ವಾಭರಣಾಲಂಕೃತೆಯಾದ, ಸರ್ವಾಲಂಕಾರಭೂಷಿತೆಯಾದ ಕುಲದೇವತೆ ಉತ್ಸವಾಂಬೆಯನ್ನು ಅರಿಶಿನ, ಕುಂಕುಮ, ಪುಷ್ಪಗಳಿಂದ ಮನದಣಿಯೆ ಪೂಜೆ ಮಾಡಿದರು. ಕರ್ಪೂರದೀಪವೆತ್ತಿ, ಎರಡೆರಡು ಬಂಗಾರದ ನೀಲಾಂಜನಗಳು ಉರಿಯುತ್ತಿದ್ದ ಹೊನ್ನ ತಳಿಗೆಯಲ್ಲಿ ತಾಯಿಗೆ ಆರತಿಯನ್ನು ಮಾಡಿದರು. ಆ ಬಳಿಕ ಬಾಗಿನದ ಮೊರಗಳನ್ನು ಪೂಜಿಸಿ, ನೆರೆದ ಮುತ್ತೈದೆಯರಿಗೆ ತಟ್ಟೆ ತಟ್ಟೆ ಅರಿಶಿನ, ಕುಂಕುಮ ಕೊಟ್ಟು, ಸೀರೆ ಕುಪ್ಪಸದ ಖಣಗಳಿದ್ದ ಬಾಗಿನಗಳನ್ನು ದಾನಮಾಡಿ, ಅವರಿಗೆ ನಮಸ್ಕರಿಸಿ, ಆಶೀರ್ವಾದ ಪಡೆದರು. ಪುರೋಹಿತರು ತೆಗೆದಿತ್ತ ದೇವಿಯ ಪ್ರಸಾದವನ್ನು ಹಣೆಯಲ್ಲಿ ಧರಿಸಿದರು.

ನೂರಾರು ದೀಪಗಳಿಂದ ಬೆಳಗಿ, ಅಗರುಬತ್ತಿಗಳ ಧೂಮದಿಂದ ಪರಿಮಳಿತವಾಗಿದ್ದ ಪೂಜಾಗೃಹದಿಂದ ಹೊರಬಂದು, ಆ ವೇಳೆಗೆ ಸರಿಯಾಗಿ ಅಲ್ಲಿಗೆ ಬಂದು ಮಂಗಳಾರತಿಯನ್ನು ಸ್ವೀಕರಿಸಿದ ಅತ್ತೆ, ನಿಂಗವ್ವ, ಮಾವ ಭರಮಣ್ಣನಾಯಕನ ಅಡಿಗಳಿಗೆರಗಿದರು.

ಬಹುಹೊತ್ತಿನಿಂದ ತಡೆದ ಕಣ್ಣೀರೇ ಭರಮಣ್ಣನಾಯಕ ತನ್ನ ಸೊಸೆಯರಿಗೆ ತಳೆದ ಆಶೀರ್ವಾದಾಕ್ಷತೆಯಾದರೆ, ನಿಂಗವ್ವ ತಾನು ಕಟ್ಟಿದ ಹೂವನ್ನು ಕೈಯಾರೆ ಸೊಸೆಯರಿಗೆ ತಲೆಭಾರವಾಗುವಷ್ಟು ಮುಡಿಸಿ –

“ಅವ್ವಾ - ಹತ್ತತ್ತು ಜನ್ಮಕ್ಕೂ ಮುತ್ತೈದೆಯರಾಗಿರಿ”

-ಎಂದು ಆಶೀರ್ವದಿಸಿದಳು.

ಆ ಬಳಿಕ ತಮ್ಮ ಅಂತಃಪುರಕ್ಕೆ ಬಂದ ನಾಗತಿಯರು, ರಾಶಿರಾಶಿಯಾಗಿ ಒಟ್ಟಿದ ವಸ್ತ್ರಾಭರಣಗಳ ಮೇಲೆ –

“ತಾಯಿ ನಿನಗೆ ತೃಪ್ತಿಯಾಗಲಿ”

-ಎಂದು ಹೇಳಿ ಎರಡು ಹನಿ ನೀರು ಬಿಟ್ಟು, ನೆರೆದಿದ್ದ. ತಮ್ಮ ದಾಸ, ದಾಸಿಯರಿಗೆ-

“ನೀವೆಲ್ಲಾ ನಮಗೆ ಉಪಚಾರಮಾಡಿ, ಉದ್ಧಾರಮಾಡಿದಿರಿ. ನಿಮಗಿಷ್ಟಬಂದದ್ದನ್ನು ಆಯ್ದುಕೊಳ್ಳಿ”

-ಎಂದು ಹೇಳಿದರು, ಶಾಂತಸ್ವರದಲ್ಲಿ.

ಆ ವೇಳೆಗೆ ಬೆಟ್ಟದ ಮೇಲಿನ ದೇವಾಲಯಗಳಿಂದ ಆರ್ಚಕರು ಪ್ರಸಾದವನ್ನು ತಂದು ನಾಗತಿಯರಿಬ್ಬರಿಗೂ ನೀಡಿ, ಅವರು ಕೊಟ್ಟ ಕಾಣಿಕೆಯನ್ನು ಸ್ವೀಕರಿಸಿ, ಆಶೀರ್ವದಿಸಿದರು.

ಹೊರಗೆ ಮಂಗಳವಾದ್ಯಗಳು ಮೊರೆಯುತ್ತಿದ್ದವು.

ಅರಿಶಿನ ಕುಂಕುಮ ಮೊದಲಾದ ಮಂಗಲದ್ರವ್ಯಗಳನ್ನು ಹೊನ್ನ ಹರಿವಾಣದಲ್ಲಿ ಹಿಡಿದು ಸಾಲಾಗಿ ನಾರಿಯರು ನಿಂತಿದ್ದರು. ಹತ್ತಾರು ಮಂದಿ ಕಲಶ ಕನ್ನಡಿ ಹಿಡಿದ ಮುತ್ತೈದೆಯರು ಒಟ್ಟಾಗಿ ಪ್ರಾರ್ಥನೆಯ ಹಾಡುಗಳನ್ನು ಹಾಡುತ್ತಿದ್ದರು.

ತಾವೂ ಕೈಯಲ್ಲಿ ಹಣ್ಣಡಕೆ, ಸಿಂಗಾರಗಳಿಂದ ಅಲಂಕೃತವಾದ, ಬೆಳಗುವ ನೀಲಾಂಜನ, ಹೊನ್ನ ಕಲಶ, ಕನ್ನಡಿಗಳಿದ್ದ ಹೊನ್ನ ಹರಿವಾಣಗಳನ್ನು ಹಿಡಿದು, ಬಲಗಾಲು ಮುಂದಿಟ್ಟು ನಾಗತಿಯರಿಬ್ಬರೂ ಅರಮನೆಯಿಂದ ಹೊರಬಂದರು.

ಹೊರಬಂದರು-

ಮತ್ತೆ ಹಿಂದಿರುಗಿ ನೋಡಲಿಲ್ಲ.

ಅತ್ತಿತ್ತ, ಸುತ್ತ, ಎಡೆಯಿದ್ದಲ್ಲಿ ಜನ ಕಿಕ್ಕಿರಿದು ನಿಂತಿದ್ದರು. ಆದರೂ ಯಾರೂ ಜಯ ಘೋಷ ಕೂಗಲಿಲ್ಲ. ಆದರೆ ಕಣ್ಣೀರು ಕರೆಯದ ಕಣ್ಣುಗಳೊಂದೂ ಅಲ್ಲಿರಲಿಲ್ಲ.

ಅರಮನೆಯಿಂದ ಹೊರಟ ಮುತ್ತೈದೆಯರ ಪರಿವಾರ, ನಿಧಾನವಾಗಿ ಶೃಂಗಾರವನದ ಹೂಹಾಸಿದ ದಾರಿಯಲ್ಲಿ ಅರಿಶಿನ, ಕುಂಕುಮ, ಸಿಂಧೂರವನ್ನು ಗಾಳಿಗೆ ತೂರುತ್ತಿದ್ದ ಮುತ್ತೈದೆಯರೊಂದಿಗೆ ನಿಧಾನವಾಗಿ ನಡೆದು, ಗೋಪಾಲಸ್ವಾಮಿಯ ಹೊಂಡವನ್ನು ಬಳಸಿ, ಗರುಡಾಂಜನೇಯನ ಬಾಗಿಲ ಮಾರ್ಗವಾಗಿ ಮುಂದೆ ನಡೆದು, ಜೋಡಿಕೊಳವನ್ನು ಸೇರಿ, ಅಲ್ಲಿ ಒಡಹುಟ್ಟಿದ ಅಕ್ಕತಂಗಿಯರಂತೆಯೇ ಬಾಳಿದ ಇಬ್ಬರು ನಾಗತಿಯರೂ ಪರಸ್ಪರ ಆಲಿಂಗನ ಮಾಡಿಕೊಂಡು, ಅದುವರೆಗೂ ಜೊತೆಯಾಗಿದ್ದವರು ಬೇರೆಯಾಗಿ, ಇಬ್ಬರೂ ಒಂದೊಂದು ಕೊಳದ ದಂಡೆಯಲ್ಲಿ ಕುಳಿತು ಗಂಗಾಪೂಜೆ ಮಾಡಿ, ಎದ್ದು ನಿಂತು, ನೆರೆದ ಸುವಾಸಿನಿಯರೆಲ್ಲರಿಗೂ ನಮಸ್ಕರಿಸಿ, ಇಬ್ಬರೂ ಒಂದೇ ವೇಳೆಗೆ –

"ಏಳೇಳು ಜನ್ಮಕ್ಕೂ ಇವರೇ ನಮ್ಮ ದೊರೆಯಾಗಲಿ, ಉತ್ಸವಾಂಬೆಯೇ ನಮ್ಮ ದೇವತೆಯಾಗಲಿ"

- ಎಂದು ಕೈಜೋಡಿಸಿ ಬೇಡಿ, ಸುತ್ತಲ ಗುಡ್ಡ-ಬೆಟ್ಟ-ಬುರುಜು-ಬತೇರಿಗಳಿಗೆ ನಮಸ್ಕರಿಸಿ, ಸೆರಗನ್ನು ಸೊಂಟಕ್ಕೆ ಬಿಗಿದು –

"ಗಂಗವ್ವಾ - ನಿನ್ನ ಶ್ರೀಪಾದ ಸೇರಿಸಿಕೊ"

- ಎಂದು ಪಿಸುದನಿಯಲ್ಲಿ ಹೇಳಿ, ಏಕಕಾಲಕ್ಕೆ ಅಕ್ಕತಂಗಿಯರಿಬ್ಬರೂ ಮಿಂಚಿನ ಬಳ್ಳಿಗಳಂತೆ ಹೊಳೆಯುತ್ತಾ, ಹೊಂಡಗಳಿಗೆ ಹಾರಿದರು.

ಮಂಗಳವಾದ್ಯಗಳು ಭೋರ್ಗರೆದವು-

ಮುತ್ತೈದೆಯರು ತೂರಿದ ಅರಿಶಿನ, ಕುಂಕುಮ, ಸಿಂಧೂರಗಳು ಬಣ್ಣ ಬಣ್ಣದ ಮೋಡವಾಗಿ ಗಾಳಿಯಲ್ಲಿ ಬೆರೆತವು.

ಅದುವರೆಗೂ ತಡೆದಿದ್ದ ದುಃಖ - ಸಹಸ್ರ ಕಂಠಗಳಲ್ಲಿ ರೋದನಧ್ವನಿಯಾಗಿ ಹೊರಹೊಮ್ಮಿ, ಸುತ್ತಲ ಜನರಿರಲಿ, ಕಲ್ಲುಬಂಡೆಗಳೂ ಕಣ್ಣೀರಿಡುವಂತೆ ಮಾಡಿತು.

ನಿಂತ ನಾರಿಯರೆಲ್ಲರೂ –

"ತಾಯಿ, ನಿಮ್ಮ ಸೌಭಾಗ್ಯ ನಮಗೂ ಒದಗಿಬರಲಿ"

-ಎಂದು ಕೊಳಗಳಿಗೆ ಅಡ್ಡ ಬಿದ್ದು ನಮಸ್ಕರಿಸಿದರು.

ನಾಗತಿಯರನ್ನು ನುಂಗಿದ ನೀರು - ಹಳದಿ, ಕೆಂಬಣ್ಣವಾಗಿ, ಅಲೆಅಲೆಯಾಗಿ, ರಾಶಿ ರಾಶಿ ಹೂ ಹೊತ್ತು ತುಳುಕಾಡಿತು.

ಕಹಳೆಬತೇರಿಯ ಮೇಲಿನಿಂದ ಜೋಡಿಕಹಳೆಗಳು ಕೂಗಿ, ಸ್ವರ್ಗಕ್ಕೆ ಸತಿಯರ ಆಗಮನ ವಾರ್ತೆಯನ್ನು ಸಾರಿದವು.

* * *

ನಡುಹಗಲನ್ನು ದಾಟಿದ ಸೂರ್ಯ ಪಶ್ಚಿಮದತ್ತ ಇಳಿಯುತ್ತಿರಲು –

ದುರ್ಗದತ್ತಣಿಂದ ಗಾಳಿಯನ್ನು ಸೀಳಿ ಕೇಳಿಬಂದ ಜೋಡುಕಹಳೆಗಳು ಸಾರಿದ ವಾರ್ತೆಯನ್ನು, ಗಾರೆಯ ಬಾಗಿಲ ಬಳಿ ನಿಂತು ಕೇಳಿದ ಮದಕರಿನಾಯಕನ ಮೈ ಒಮ್ಮೆ ಬಿರುಗಾಳಿಯ ಹೊಡೆತಕ್ಕೆ ಸಿಕ್ಕಂತೆ ಕಂಪಿಸಿ, ಮತ್ತೆ ಸ್ಥಿರವಾಗಿ, ಉಕ್ಕಿನ ಕಂಭದಂತೆ ನಿಂತು ಹೇಳಿದ-

"ನಮ್ಮೊಂದಿಗೆ ಬರುವವರು ಸಿದ್ಧರಾಗಿ. ನಾವು ಬದುಕಿ ಬಂದರೆ ಉಂಟು - ಇಲ್ಲದಿದ್ದರೆ, ಕುಮಾರ ಭರಮಣ್ಣನಾಯಕರಿಗೆ ಪಟ್ಟಕಟ್ಟಿ. ನಮ್ಮೊಂದಿಗೆ ಬರುವವರು. ಯಾರೂ ಶತ್ರುವಿಗೆ ಬೆನ್ನು ಕೊಡಬಾರದು. ವೀರರಲ್ಲಿ ಅದು ನಮ್ಮ ಕೊನೆಯ ಮನವಿ."

ಅಷ್ಟು ಹೇಳಿ, ಕುದುರೆಯನ್ನೇರಿ, ಕೊನೆಯ ಬಾರಿಗೆ ಕಡೂರಿ, ನಾಗವ್ವಯರನ್ನು ನೆನೆದಂತೆ ದ್ಯಾಮವ್ವನಾಗತಿಯ ಹಜಾರದತ್ತ ನೋಡಿ, ದುರ್ಗದ ಕೋಟೆ, ಬುರುಜು, ಬತೇರಿಗಳಿಗೆ, ಝುಂಡಾಬತೇರಿಯ ಮೇಲೆ ಹಾರುತ್ತಿದ್ದ ಹನುಮದ್ಗರುಡಧ್ವಜಕ್ಕೆ ವಂದಿಸಿ –

"ಬಾಗಿಲನ್ನು ತೆಗೆದುಬಿಡಿ"

- ಎಂದು ಬಾಗಿಲ ಕಾವಲಿನವರಿಗೆ ಹೇಳಿದ ಮದಕರಿನಾಯಕ.

ಬಿಗಿಯಾಗಿ ಒತ್ತಿದ ಲಾಳಮುಂಡಿಗೆಗಳನ್ನು ಸರಿಸಿ. ಉಕ್ಕಿನ ತಗಡಿನ ಹೊದಿಕೆಯಿದ್ದ ಗಾರೆಕೋಟೆಬಾಗಿಲಿನ ಕದಗಳನ್ನು ಇಪ್ಪತ್ತಾಳುಗಳು ಎಳೆದು, ತೆಗೆದರು.

ಭಟ್ಟಂಗಿಗಳು ಏರುಧ್ವನಿಯಲ್ಲಿ ರಾಗರಾಗವಾಗಿ –

“ಜಯ ಜಯಾ –

ಭುವನದೊಳ್ ಚಿನ್ಮೂಲಾದ್ರಿ ರಾಜಧಾನಿಯೊಳ್-

ಸಾಮ್ರಾಜ್ಯ ಸ್ಥಿರಪಟ್ಟ ಭದ್ರ –

ಕರುಣಾಸಮುದ್ರ –

ಪರಸೈನ್ಯಛಿದ್ರ –

ವರಕಾಮಕೇತಿ ವಂಶಚಂದ್ರ –

ಕಲಿಯುಗದ ಶ್ರೀರಾಮಚಂದ್ರ –

ಖಾನಖಾನರನ್ನೆಲ್ಲ ಸದೆದು ಕಪ್ಪವ ತಂದೆ –

ನಿನ್ನ ಶೌರ್ಯಕೆಣೆಯಿಲ್ಲ –

ರಣರಂಗಮಲ್ಲ, ನಿನಗೆ ಸಮರಿಲ್ಲ –

ಕದನಪ್ರಚಂಡ –

ದೋರ್ದಂಡ –

ಭಲರೆ ಮೊನೆಗಾರ –

ಚಿನ್ಮೂಲಗಿರೀಶ –

ಚೆನ್ನಿಗವಿಲಾಸ –

ಮನ್ನೆಯರ ಲಲಾಮ –

ಅಮಿತಗುಣಧಾಮ –

ಜಯಾ ಜಯಾ –

ಹಗಲುಕಗ್ಗೊಲೆಮಾನ್ಯ ಕಡುಗಲಿ-

ಗಾದ್ರಿ ಮಲೆ ಹೆಬ್ಬುಲಿ –

ಎಪ್ಪತ್ತೆಂಟು ಪಾಳೆಯಗಾರರ ಮಿಂಡ –

ಛಪ್ಪನ್ನ ರಾಜ್ಯದೊಳು ಬಿರುದಾಂತ ಗಂಡ-

ಜಯ ಜಯಾ-

ಕಾಮಗೇತಿ ಕಸ್ತೂರಿ-

ರಣಕೇಸರಿ –

ಬಿಚ್ಚುಗತ್ತಿಯ ಭೂಪ-

ಸೂರ್ಯಸಮಪ್ರತಾಪ –

ಭಾರಿನಿಗಳಾಂಕ-

ಅರಿರಾಯ ಆತಂಕ –

ಮತ್ತ ಮದಕರಿಯ ಸುತ್ತೇಟಿನಲಿ ಕೊಂದ ಧೀರ –

ಅಸಹಾಯಶೂರ –

ಧೂಳಿಕೋಟೆವಜ್ಜೀರಾ –

ವೀರಾಧಿವೀರ-

ಕಸ್ತೂರಿ ಮದಕರಿನಾಯಕ-

ಜಯ ಜಯಾ, ಜಯ ಜಯಾ-

ಭೋ ಪರಾಕ್"

-ಎಂದು ಬಣ್ಣಬಣ್ಣದ ಪಾವುಡೆಗಳನ್ನು ಬೀಸುತ್ತಾ ಹಾಡಿದರು.

ಕಹಳೆಗಳು ಮೊಳಗಿದವು –

ನಗಾರಿಗಳು ಮುಗಿಲನ್ನು ಗದಗದಿಸುವಂತೆ ಗುದ್ದಿದವು –

ರಣಕೇಕೆಗಳು ಬಂಡೆಬಂಡೆಗಳಿಂದಲೂ ಮಾರ್ದನಿಸಿದವು –

ರಣಭೇರಿರವ ನೆತ್ತರನ್ನು ಕುದಿಸುತ್ತಿರಲು, ಕುದುರೆಯನ್ನೇರಿದ ಮದಕರಿನಾಯಕ ಪರಿಘಾಯುಧವನ್ನು ಬೀಸಿ, ತನ್ನ ಶ್ವೇತವರ್ಣದ ರಣಾಶ್ವವನ್ನು ಹೆಗಲು ತಟ್ಟಿ –

"ಉತ್ಸವಾಂಬೆಗೆ ಜಯವಾಗಲಿ"

-ಎಂದು ಕೂಗಿ ಹೇಳಿ, ರಿಕಾಪಿನಲ್ಲಿ ಕಾಲೂರಿ, ಲಗಾಮನ್ನು ಸಡಿಲಬಿಟ್ಟ.

ಕುದುರೆಯೂ ಜಯಘೋಷ ಮಾಡಿದಂತೆ ಕತ್ತೆತ್ತಿ ಹೇಷಾರವಮಾಡಿ ಮುನ್ನುಗ್ಗಿತು.

ಮುಂದೆ ಗುದಗತ್ತಿ –

ಅವನ ಹಿಂದೆ –

ದೊರೆಯ ಮುಂದೆ ಸಾಯುವ ಪಣತೊಟ್ಟ ಪುರುಭಯ್ಯಾ ಸರ್ದಾರರು –

ಅವರ ನಡುವೆ- ಮದಕರಿನಾಯಕ –

ಆತನ ಹಿಂದೆ –

ಗಂಡುಗೊಡಲಿಗಳ ಗಂಡರಾದ, ಕೇಳಿದವರ ಎದೆ ನಡುಗುವಂತೆ ಕರ್ಕಶಧ್ವನಿಯಲ್ಲಿ ರಣಕೇಕೆಹಾಕುವ ಖಾಸಾ ಬೇಡಪಡೆಯ ವೀರರು –

ಹರಿಣಗಳ ಹಿಂಡನ್ನಟ್ಟಿದ ಬೇಟೆಯ ಚಿರತೆಗಳಂತೆ ಮುನ್ನುಗ್ಗಿದರು.

* * *

ದುರ್ಗದ ಮೇಲೆ –

ಜನರಿದ್ದೂ ಇಲ್ಲದಂತೆ ಶೂನ್ಯವಾಗಿ, ವಿಶಾಲತೆ ವಿಷಣ್ಣತೆಯ ಮಡುವಾಗಿ, ನೋವು, ನರಳಿಕೆ, ನಿಟ್ಟುಸಿರುಗಳ ಕರಿ ನೆರಳುಗಳು ಕಿಕ್ಕಿರಿದು, ಅಸಹಾಯಕತೆಯ ಪ್ರೇತಗಳಂತೆ ಸುತ್ತಾಡುವ ಬರಡು ದೇಹಗಳು ವಿಫಲತೆಯ ತರಗೆಲೆಗಳಂತೆ ತೂರಾಡುತ್ತಾ, ಭಣಗುಡುವ ಅರಮನೆಯಲ್ಲಿ –

"ಶಿವಶಿವಾ, ಅರಮನೆ ಬರಿಮನೆಯಾಯಿತಲ್ಲಾ, ತಾಯಿ"

-ಎಂದು ನಿಂಗವ್ವ ಬಿಕ್ಕಿಬಿಕ್ಕಿ ಅಳುತ್ತಿದ್ದರೆ –

"ಈ ಹೊತ್ತಿನಾಗೆ ಕೈಲಿ ಬಂದೂಕ ಹಿಡಿಯೋ ಶಕೀನೂ ಇಲ್ಲದ ಹಂಗೆ ಮಾಡಿದೆಯಲ್ಲೋ, ಸುಡುಗಾಡು ಸಿದ್ದಾ"

-ಎಂದು ತೊದಲು ಭರಮಣ್ಣನಾಯಕ ಹುಯ್ಯಲಿಡುತ್ತಿದ್ದ.

ದುರ್ಗದ ಕೆಳಗೆ –

ದ್ಯಾಮವ್ವನಾಗತಿಯ ಹಜಾರದಲ್ಲಿ –

ಹೊರಗೆ –

ಪಂಜರದ ಬಾಗಿಲು ತೆರೆದರೂ ಹೊರಗೆ ಮುಗಿಲಲ್ಲಿ ಸುತ್ತುವ ಹದ್ದುಗಳ ಸೀಳುಧ್ವನಿ ಕೇಳಿ ಪಂಜರದಲ್ಲೇ ಚಡಪಡಿಸುತ್ತಿರುವ ಭೀತ ಗಿಳಿ, ಪಾರಿವಾಳಗಳು ; ಬಳ್ಳಿಯ ಮೇಲೆ ಬಿಡಿಸಿದ ಮೊಗ್ಗು; ಬಳ್ಳಿ ತನ್ನ ವಿಫಲತೆಗೆ ಕರೆದ ಕಂಬನಿಗಳಂತಿರುವ ಬಾಡಿ, ಬುಡದಲ್ಲಿ ಬಿದ್ದಿರುವ ಹೂವುಗಳು; ಅತ್ತು ಸಾಕಾಗಿ ಬತ್ತಿದಂತಿದ್ದ ನೀರು ಚಿಮ್ಮದ ಕಾರಂಜಿಗಳು; ಕತ್ತಲೆಯನ್ನು ಸ್ವಾಗತಿಸುವಂತೆ ತೆರೆದಿದ್ದ ಬಾಗಿಲುಗಳು.

ಒಳಗೆ –

ಸುಳಿದಾಡುವ ಕಣ್ಣೀರಿನ ಕಂಕಾಳಗಳಂತಿದ್ದ ಪರಿಚಾರಿಕೆಯರು; ಮುಸುಗಿಟ್ಟು, ಮೂಲೆ ಗುಂಪಾದ ತಂಬೂರಿಗಳು; ತಿರಸ್ಕೃತವಾದಂತೆ ಎಲ್ಲೆಲ್ಲೋ ಬಿದ್ದ ಕಾಲ ಗೆಜ್ಜೆಗಳು; ಬೆಳಕು ಹೊತ್ತಿಸುವ ಕೈಗೆ ವೃಥಾ ಕಾದು ಮಂಕಾದಂತಿದ್ದ ದೀಪದಾನಿಗಳು; ನುಸುಳುತ್ತಿರುವ ಸಂಜೆಯ ಚಳಿಗಾಳಿಗೆ ಮಂದವಾಗಿ ಚಲಿಸುವ ಅರೆಜೀವವಾದಂತಿದ್ದ ಬಾಗಿಲು-ಕಿಟಕಿಗಳ ತೆಳು ರೇಶಿಮೆಯ ತೆರೆಗಳು; ಓರಣ ಕಾಣದ ಅಲಂಕಾರವಸ್ತುಗಳು; ನಸುಗತ್ತಲನ್ನು ಮಂಕಾಗಿ ಪ್ರತಿಬಿಂಬಿಸುವ ಕನ್ನಡಿಗಳು.

ಅವುಗಳ ನಡುವೆ –

ಕಡೂರಿ-ನಾಗವ್ವ, ಅಕ್ಕ-ತಂಗಿಯರಿಬ್ಬರೂ, ಒಬ್ಬರನ್ನೊಬ್ಬರು ಅಪ್ಪಿ ಮಲಗಿದ್ದರು -ಮೈ ತುಂಬಿದ ವಿಷ, ಬುರುಗಾಗಿ ಕಟಿಬಾಯಿಗಳಿಂದ ಹೊರಸೂಸುತ್ತಿರಲು; ಮಂಚದ ಒಂದು ಬದಿಯಲ್ಲಿ ಬಿದ್ದ ಬರಿದಾದ ಬೆಳ್ಳಿಯ ಬಟ್ಟಲು - ಬರಿದಾದ ಅವರ ಜೀವನಕ್ಕೆ ಮೂಕ ಸಾಕ್ಷಿಯಾಗಿರಲು.

* * *

ಹೊರಗೆ ರಣಕಾಳಿಯ ಪಿಶಾಚನರ್ತನ ವಿಕಟಾಟ್ಟಹಾಸದೊಂದಿಗೆ ಪ್ರಚಂಡ ತಾಂಡವ ವೇಗದಿಂದ ನಡೆದಿತ್ತು.

ಹೊರಗಿನ ಯುದ್ಧ - ತನ್ನ ಬಿಡಾರದೊಳಗೆ, ನಿಸ್ತೇಜ ನೇತ್ರಗಳಿಂದ ದುರ್ಗದತ್ತಲೇ ನೋಡುತ್ತಿದ್ದ ಸರ್ದಾರ್‌ಖಾನನ ಹೃದಯದಲ್ಲಿ ನಡೆಯುತ್ತಿತ್ತು.

ಹೊರಗೆ ಕೇಳಿಬಂದ ಕೋವಿಯ ಸದ್ದು ತನಗೇ ತಗುಲಿದಂತೆ ಮಿಡುಕುತ್ತಿದ್ದ ಸರ್ದಾರ್‌ಖಾನ್.

'ಆಗಲಿಲ್ಲ, ನನಗೆ ಜೀವದಾನ ಮಾಡಿದವರಿಗೆ ನಾನೇನೂ ಮಾಡಲಾಗಲಿಲ್ಲ'

-ಎಂಬ ನಿರಾಶೆಯ ನೋವು ಹತ್ತು ಕಡೆಗಳಿಂದ ಆತನ ಹೃದಯದ ಮೇಲೆ ಕಶಾ ಪ್ರಹಾರ ಮಾಡುತ್ತಿತ್ತು.

'ಏನು ಮಾಡುವುದು, ಈಗೇನು ಮಾಡುವುದು ?'

-ಎಂದು ಸರ್ದಾರ್‌ಖಾನ್ ಚಿಂತಿಸುತ್ತಿರುವಾಗಲೇ, ಅವನ ಪರಿಚಾರಿಕೆಗೆಂದು ನಿಯಮಿತವಾಗಿದ್ದ ಮುಸ್ಲಿಂ ಆಳು, ಒಳಬಂದು, ತಗ್ಗಿದ ಧ್ವನಿಯಲ್ಲಿ –

"ಖಾವಂದ್, ನಮಾಜಿನ ವೇಳೆಯಾಯಿತು"

- ಎಂದು ಹೇಳಿದ.

ನಮಾಜು –

ಆ ಹೆಸರು ಕೇಳುತ್ತಿದ್ದಂತೆಯೇ ಹಾವು ಕಡಿದಂತೆ ಮೆಟ್ಟಿಬಿದ್ದ ಸರ್ದಾರ್‌ಖಾನ್ –

"ನಮಾಜು – ದುರ್ಗಕ್ಕೆ ದ್ರೋಹಬಗೆದ ಮುಸಲ್ಮಾನರಿಗೆ ಹೇಳು, ನಮಾಜುಮಾಡಲು. ನನ್ನ ಪಾಲಿಗೆ ಖುದಾ ಆಗಿದ್ದ ರಾಜಾಸಾಹೇಬರೊಂದಿಗೆ ಸಾಯುವುದೊಂದೇ ನಾನು ಮಾಡುವ ನಮಾಜು. 'ಅವರಿಗೆ ಕೊಟ್ಟ ಸಾವನ್ನು ನಮಗೆ ಕೊಡು' ಎಂದು ಬೇಡುವುದಷ್ಟೇ ನಾನು ಮಾಡುವ ಪ್ರಾರ್ಥನೆ. ದುರ್ಗಕ್ಕೆ ದ್ರೋಹಬಗೆದವರು ಮಾಡುವ ನಮಾಜನ್ನು ನಾನಿನ್ನು ಮಾಡುವುದಿಲ್ಲ. ಕಾಲು

ತೊಳೆಯಲು ನೀರು ತರಬೇಡ, ಖಾಸಿಂ. ನನ್ನ ಕತ್ತಿ ತೆಗೆದು ಕೊಂಡು ಬಾ. ಒಂದು ಕೈ ನವಾಬರ ಸೇವೆಯಲ್ಲಿ ವ್ಯರ್ಥವಾಯಿತು. ಉಳಿದ ಕೈ-ಮೈ ರಾಜಾ ಸಾಹೇಬರ ಸೇವೆಗೆ ವಿನಿಯೋಗವಾಗಲಿ”

-ಎಂದು ಹೇಳಿ, ಅಂತಿಮನಿರ್ಧಾರಕ್ಕೆ ಬಂದಂತೆ ಮೈ ಸೆಟೆಸಿ ಹೇಳಿ, ಹೊರನಡೆದ.

“ಅದೇನಾದರೂ ಮಾಡಿ, ಖಾವಂದ್, ಆದರೆ ನಮಾಜು ತೀರಿಸಿ ಹೋಗಿ – ತಾವು ಮುಸಲ್ಮಾನರು....”

“ಛಿ - ಜಾತಿಯ ಹೆಸರೆತ್ತಬೇಡ. ದ್ರೋಹಕ್ಕೆ ಮತ್ತೊಂದು ಹೊಲೆಹೆಸರಾಗಿಹೋಯಿತು ಜಾತಿ. ಆ ಕಳಂಕವನ್ನು ನನ್ನ ಮೈರಕ್ತದಿಂದ ತೊಳೆಯುವುದಷ್ಟೇ ನಾನು ಮುಸಲ್ಮಾನನಾಗಿ ಮಾಡಬೇಕಾದ ಕೆಲಸ. ನೀನೂ ಸಚ್ಚಾ ಮುಸಲ್ಮಾನನಾಗಿದ್ದರೆ ಬಾ - ನನ್ನ ಹಿಂದೆ. ಆ ನೀರಿನ ತಂಬಿಗೆಯನ್ನು ಬಿಸಾಡಿ ನನ್ನ ಕತ್ತಿ, ಕುದುರೆಯನ್ನು ತೆಗೆದುಕೊಂಡು ಬಾ”

-ಎಂದು ಹೇಳಿ, ಅದುವರೆಗೂ ನಿರ್ಜೀವನಂತಿದ್ದ ಸರ್ದಾರ್‌ಖಾನ್, ಹೊಸಜೀವ ಬಂದವನಂತೆ, ನಿಂತ ಕೊಠಡಿಯಿಂದಾಚೆ ನಡೆದ –

“ಖುದಾ, ನಿಜವಾಗಿಯೂ ನೀನಿದ್ದರೆ ನನ್ನ ಈ ಕೊನೆ ಪ್ರಾರ್ಥನೆಯನ್ನು ನಡೆಸಿಕೊಡು”

- ಎಂದು ಮನಸ್ಸಿನಲ್ಲಿಯೇ ಪ್ರಾರ್ಥಿಸುತ್ತಾ.

೨೬

“ಮದಕರಿನಾಯಕನನ್ನು ಹಿಡಿಯಬೇಕು, ಜೀವಂತ ಹಿಡಿದು ತರಬೇಕು”

-ಎಂದು ಹೈದರಾಲಿ ತನ್ನವರಿಗೆ ಕೂಗಿ ಕೂಗಿ ಅಪ್ಪಣೆ ಮಾಡುತ್ತಿರಲು –

“ಕಡು ಕಡುಗತ್ತಿ ಕೈಯಾಗೆ ಹಿಡಿದು
ಎಡಕೆ ಬಲಕೆ ಕಟ್ಯಾರಣ್ಣ ಎಲ್ಡೆಲ್ಡು ಆಯುಧವಾ-
ಹುಡುಕಿ ಹುಡುಕಿ ಕಡೀರಣ್ಣ
ಎಡಕೆ ಬಲಕೆ ನುಗ್ಗಿರಣ್ಣ –
ತಡಕಿಕೊಂಡು ಹೈದರಾಲಿಯಾ”

-ಎಂದು ಬೇಡಪಡೆ ರಣಕೇಕೆಹಾಕುತ್ತಾ, ಹೈದರಾಲಿಯ ಎದೆಬಿರಿಯುವಂತೆ ಕೂಗುತ್ತಿತ್ತು.

ಸುತ್ತಲೂ ನೂರಾರು ಕತ್ತಿಗಳು ಹಸಿದ ಹಾವಂತೆ ಮದಕರಿನಾಯಕನತ್ತ ನುಗ್ಗುತ್ತಿದ್ದವು; ಕೋವಿಗುಂಡುಗಳು ಸುತ್ತಮುತ್ತ ಕೆಂಡದ ಹುಳುಗಳಂತೆ ಹಾರುತ್ತಿದ್ದವು.

ಕತ್ತಿ, ಸೋಕಿದ ಕಡೆ, ಗುಂಡು ತಗಲಿದ ಕಡೆಯಿಂದ ನೆತ್ತರು ಚಿಮ್ಮುತ್ತಿತ್ತು –

ಕತ್ತಿ, ಗುಂಡುಗಳ ಏಟು ತಿಂದು ಹತ್ತಾರು ಗಾಯಗಳಾಗಿ, ನೆತ್ತರು ಸೋರಿ, ಮದಕರಿ ನಾಯಕನೇರಿದ ಶ್ವೇತಾಶ್ವ ರಕ್ತಾಶ್ವವಾಗಿ ಭಯಂಕರವಾಗಿ ಕೆನೆಯುತ್ತಿತ್ತು – ಆದರೆ ಮದಕರಿನಾಯಕನಿಗೆ ಆದಾವುದರ ಪರಿವೆಯೂ ಇರಲಿಲ್ಲ.

ರಣಾವೇಶ ಮೈತುಂಬಿದ ಮದಕರಿನಾಯಕ, ಕೇಳಿದ ಎದೆ ಬಿರಿವಂತೆ ರಣಘೋಷ ಕೂಗುತ್ತಾ, ಕೈಯಲ್ಲಿ ಹಿಡಿದ ಪರಿಘಾಯುಧವನ್ನು ಚಕ್ರಾಕಾರವಾಗಿ ಬೀಸಿ ನಾಲ್ಕು ಕಡೆಯಿಂದಲೂ ತನ್ನತ್ತ ಬರುತ್ತಿದ್ದ ಶತ್ರು ಸೈನಿಕರನ್ನು ಕುರಿದರಿಕಡಿಯುತ್ತಾ, ಮೈಮೇಲೆ ಬಿದ್ದ ಏಟಿನ ಲಕ್ಷ್ಯವೂ ಇಲ್ಲದೆ ಹತ್ತಿರ ಬಂದವರ ಚಂಡಾಡುತ್ತಾ, ಕೈಕಾಲು ಕತ್ತರಿಸುತ್ತಾ, ಹೊಳೆವ ನೆತ್ತರುಗೆಂಪಿನ ರಣಭೈರವನಂತೆ ಮುನ್ನುಗ್ಗುತ್ತಿದ್ದ. ಮೈಗೆ ಪೆಟ್ಟು ಬಿದ್ದಷ್ಟೂ ಆತನ ರಣೋತ್ಸಾಹ ಮತ್ತಷ್ಟು ಉಗ್ರವಾಗುತ್ತಿತ್ತು. 'ಮುಂದೆ ಬಿದ್ದವರಾರು, ಹಿಂದೆ ಸತ್ತವರಾರು' ಎಂಬುದನ್ನು ನೋಡದೆ ರಕ್ತಸರೋವರದಲ್ಲಿ ಜಲಕ್ರೀಡೆಯಾಡುವ ಮದೋನ್ಮತ್ತ ಸಲಗನಂತೆ ಕಡಿದಷ್ಟೂ ಕೈದಣಿಯದೆ, ಪೆಟ್ಟು ಬಿದ್ದಷ್ಟೂ ಮೈದಣಿಯದೆ, ಹೂಂಕಾರ ಮಾಡುತ್ತಾ, ಇದಿರಾದವರನ್ನು ಕಡಿಯುತ್ತಾ, ಅಕ್ಕಪಕ್ಕ ಬಂದವರನ್ನು ಕೊಚ್ಚುತ್ತಾ, ಕತ್ತರಿಸಿದ ತಲೆ, ಕಡಿದ ಕೈಕಾಲುಗಳಿಂದ ಚಿಮ್ಮಿದ ರಕ್ತ ಹೆಜ್ಜೆಗೊಮ್ಮೆ ರಕ್ತಸ್ನಾನ ಮಾಡಿಸುತ್ತಿರಲು, ಪರಿಘಾಯುಧದ ಬಿರುಗಾಳಿಗೆ ಸಿಕ್ಕ ಕತ್ತಿಗಳು ಹಿಡಿದ ಕೈಯೊಂದಿಗೇ ಕತ್ತರಿಸಿ ಬೀಳುತ್ತಿರಲು, ಕಾಲಿಗೆ ಸಿಕ್ಕ ರುಂಡಮುಂಡಗಳು ಕುಳಿತ ಕುದುರೆಯನ್ನು ರಣನಾಟ್ಯವಾಡುವಂತೆ ಮಾಡುತ್ತಿರಲು, ಕುದುರೆ ಜೋಲುವುದು, ಮುಗ್ಗರಿಸುವುದು – ಯಾವುದನ್ನೂ ನೋಡದೆ, ಹಣೆಯ ಮೇಲಾದ ಗಾಯಗಳಿಂದ ಹರಿದ ತನ್ನ ನೆತ್ತರನ್ನೇ ಕುಡಿದು ರಣಾಯಾಸವನ್ನು ಪರಿಹರಿಸಿಕೊಳ್ಳುತ್ತಾ, ಸುತ್ತಲ ಆಕ್ರಂದನಧ್ವನಿಗೆ ಕಿವುಡಾಗಿ, ನೆತ್ತರು ಸೋರಿ ಕುರುಡಾಗಿ, ಪ್ರಕ್ಷುಬ್ಧ ಕಾಲಯಮನ ಕೋಣದಂತೆ, ಹತ್ತಾರು ಗುಂಡೇಟು ತಿಂದ ಹೆಬ್ಬುಲಿಯಂತೆ, ಏಟು ಬಿದ್ದ ಕಡೆ ನುಗ್ಗಿ ಕಡಿಯುತ್ತಾ, ಚಂಡಮಾರುತದಂತೆ ಭೋರ್ಗರೆಯುತ್ತಾ ಮುನ್ನುಗ್ಗಿದ.

ನೆತ್ತರುಗೆಂಪು ಕವಿದ ಆತನ ಕಣ್ಣಿಗೆ ಕಂಡೂ ಕಾಣದಂತೆ ಉತ್ಸವಾಂಬೆಯ ದೇವಾಲಯ, ನೀಲಕಂಠೇಶ್ವರ ದೇವಾಲಯಗಳು ಹಾದುಹೋಗಿ, ಪಾತಾಳೇಶ್ವರನ ಗುಡಿಯ ಬಳಿ ಬರುವ ವೇಳೆಗೆ, ನೂರಾರು ಪೆಟ್ಟು ತಿಂದು ರಕ್ತಕಾರುತ್ತಿದ್ದ ಅವನ ಕುದುರೆ ಕುಸಿದುಬಿತ್ತು.

ಕುಸಿಯುತ್ತಿದ್ದ ಕುದುರೆಯಿಂದ ಹೆಬ್ಬುಲಿಯಂತೆ ಹಾರಿ ಮುನ್ನುಗ್ಗಿದ ಮದಕರಿನಾಯಕನನ್ನು ನೂರಾರು ಮಂದಿ ಶತ್ರುಸೈನಿಕರು ಸುತ್ತುವರಿದು ಮೇಲೆಬಿದ್ದರು.

ಮೇಲಿಂದಮೇಲೆ ಬಿದ್ದ ಕತ್ತಿಯ ಪೆಟ್ಟಿಗೆ ತೊಟ್ಟ ಉಕ್ಕಿನ ಬಲೆಗವಚ ಹರಿದು ಛಿದ್ರವಾಯಿತು. ಮೈ ಹತ್ತಾರು ಕಡೆಗಳಿಂದ ನೆತ್ತರು ಪುಟಿಯುವ ರಕ್ತಕಾರಂಜಿಯಾಯಿತು. ಗುಂಡುಗಳ ಗೂಡಾಯಿತು ಆತನ ವಜ್ರಕಾಯ.

ಆದರೂ ಮದಕರಿನಾಯಕ ಮುನ್ನುಗ್ಗುತ್ತಲೇ ಇದ್ದ –

ಎಡತೋಳು ಕತ್ತರಿಸಿ ರಕ್ತಕಾರುತ್ತಾ ನೆಲಕ್ಕುರುಳಿತು. ಕತ್ತಿಯ ಹೊಡೆತಗಳಿಂದ ಮೈ ಕ್ಷತವಿಕ್ಷತವಾಯಿತು. ಗಾಯಗೊಂಡ ಕಾಲುಗಳು ಕುಸಿಯುತ್ತಿದ್ದವು.

ಆದರೆ –

ಪರಿಘಾಯುಧ ಬೀಸುವ ಆತನ ಕೈ ಸೋಲಲಿಲ್ಲ; ಸುಂಟರಗಾಳಿಗೆ ಸಿಕ್ಕಿದಂತೆ ಸುತ್ತುತ್ತಲೇ ಇತ್ತು.

ಸುತ್ತ ಸಾವು ಸಾವಿರ ಕತ್ತಿಬಾಯಿ ಬಿರಿದು ಹಲ್ಮೊರೆಯುತ್ತಿರಲು, ಮದಕರಿನಾಯಕನಿಗೆ ಕಾಣುತ್ತಿದ್ದುದೊಂದೇ-

ಸಿದ್ದಯ್ಯನಬಾಗಿಲ ಮೇಲೆ ಹಾರುತ್ತಿದ್ದ ಹೈದರಾಲಿಯ ಧ್ವಜ.

ಕೊಚ್ಚುತ್ತಾ, ಕಡಿಯುತ್ತಾ, ಏಳುತ್ತಾ, ಬೀಳುತ್ತಾ, ರಕ್ತದಲ್ಲಿ ಜಾರಿ ಮುಗ್ಗರಿಸುತ್ತಾ, ಸನಿಹ ಬಂದವರನ್ನು ಸದೆಬಡಿಯುತ್ತಾ, ಮೆಟ್ಟಲಿಗೆ ಹತ್ತು ಜನರ ಬಲಿಗೊಡುತ್ತಾ, ಸಿದ್ದಯ್ಯನಬಾಗಿಲ ಪಕ್ಕದ ಮೆಟ್ಟಲುಗಳನ್ನು ಒಂದೊಂದನ್ನಾಗಿ ಏರಿದ – ಆ ವೇಳೆಗೆ ಆತನ ಕಾಲಿಗೆ ನಡೆಯುವ ಶಕ್ತಿಯೂ ಇಲ್ಲದೆ ತೆವಳುತ್ತಾ.

ಹಾಗೇ ಮೇಲೇರಿದ –

ಮುನ್ನುಗ್ಗಿದ – ಪೆಟ್ಟು ತಿಂದರೂ ಸಿಟ್ಟು ಬಿಡದೆ ಹೊಡೆವ ಕೈಯನ್ನೇ ಕಡಿಯಲೆತ್ನಿಸಿ ಬುಸುಗುಡುತ್ತಾ ಹರಿವ ಕಾಳೊರಗನಂತೆ ಬುಸುಗುಡುತ್ತಾ, ತೆವಳಿ, ಶತಶರಾಘಾತದಿಂದ ಜರ್ಝರಿತವಾಗಿ, ರಕ್ತ ಬಸಿದುಹೋಗಿ ದೇಹಬಲ ಕುಂದಿದರೂ ಛಲ ಬಿಡದೆ ಮುನ್ನುಗ್ಗುವ ವನವರಾಹನಂತೆ ಸಿದ್ದಯ್ಯನಬಾಗಿಲನ್ನೇರಿ, ಹೈದರಾಲಿಯ ಧ್ವಜ ಹಾರುತ್ತಿದ್ದ ಕಂಬದ ಬಳಿಸಾರಿ, ತನ್ನ ಮೈಯಲ್ಲಿ ಅಳಿದುಳಿದ ಶಕ್ತಿಯೆಲ್ಲವನ್ನೂ ಪ್ರಯೋಗಿಸಿ ಪರಿಘಾಯುಧವನ್ನು ಬೀಸಿದ.

ಆ ಸಿಡಿಲೇಟಿಗೆ ಧ್ವಜಸ್ತಂಭ ಮುರಿದು, ಹಾರುತ್ತಿದ್ದ ಹೈದರಾಲಿಯ ಹಸಿರು ನಿಶಾನೆ ರೆಕ್ಕೆ ಕತ್ತರಿಸಿದ ಹಕ್ಕಿಯಂತೆ ಕೆಳಗುರುಳಿತು.

ಆ ಧ್ವಜವನ್ನು ಮೆಟ್ಟಿನಿಂತು ವಿಕಟಾಟ್ಟಹಾಸ ಮಾಡಿದ ಮದಕರಿನಾಯಕ.

ನಾಲ್ದೆಸೆಯಿಂದಲೂ ನೂರಾರು ಗುಂಡುಗಳು ಆತನತ್ತ ಹಾರಿದವು ; ನೂರಾರು ಕತ್ತಿಗಳು ಕವಿದು ಬಂದು ಆತನನ್ನು ಮುತ್ತಿದವು.

ಗುಂಡೇಟು ತಿನ್ನುತ್ತಾ, ಕತ್ತಿ ಏಟಿಗೆ ಮೈ ಕೊಡುತ್ತಲೇ ಹೋರಾಡುತ್ತಿದ್ದ ಮದಕರಿನಾಯಕನ ಎದೆಗೆ ಒಮ್ಮೆಲೇ ಹತ್ತಾರು ಗುಂಡುಗಳು ಬಡಿದು, ಆ ಏಟಿಗೆ ಸಿಕ್ಕು ಕುಸಿಯುತ್ತಾ, ದುರ್ಗದ ಗಂಡುಭೂಮಿಗೆ ರಕ್ತತರ್ಪಣ ನೀಡುತ್ತಾ, ಕೋಟೆಯ ಮೇಲಿನಿಂದ ಕೆಳಗುರುಳಿದ ಮದಕರಿನಾಯಕ, ಸದ್ದಡಗಿದ ಗಂಟಲಿನಲ್ಲೇ –

"ಉತ್ಸವಾಂಬೆಗೆ ಜಯವಾಗಲಿ"

-ಎಂದು ಘೋಷಿಸುತ್ತಾ.

ಶವದ ಮೇಲೆರಗುವ ಹದ್ದುಗಳಂತೆ, ನೆಲಕ್ಕುರುಳಿದ ಮದಕರಿನಾಯಕನ ದೇಹದ ಮೇಲೆರಗಿದವು – ನವಾಬನ ಸೈನಿಕರ ಕತ್ತಿಗಳು.

ತಾಯ ತೊಡೆಯ ಮೇಲೆ ಮಲಗಿದಂತೆ ದುರ್ಗದ ನೆಲದ ಮೇಲೊರಗಿತ್ತು- ಮದಕರಿನಾಯಕನ ದೇಹ, ಹತ್ತಾರು ಕಡೆಯಿಂದ ರಕ್ತ ಪುಟಿದು ಚಿಮ್ಮುತ್ತಿರಲು.

ಕೆಳಗೆ ಬಿದ್ದ ಮದಕರಿನಾಯಕ, ತನ್ನ ರಕ್ತಸಿಕ್ತ ತುಟಿಗಳಿಂದ –

"ಅವ್ವಾ"

-ಎಂದು ಮುತ್ತಿಟ್ಟ, ದುರ್ಗದ ಭೂಮಿಯನ್ನು.

ಮತ್ತವನ ದೇಹ ಅಲುಗಾಡಲಿಲ್ಲ-

ರಕ್ತ ನೆಲವನ್ನು ತೋಯಿಸುತ್ತಿತ್ತು - 'ನನ್ನ ರಕ್ತದ ಕೊನೆ ಹನಿಯೂ ನಿನ್ನ ಚರಣವನ್ನು ತೊಳೆಯಲು ಮೀಸಲು' ಎಂದಂತೆ.

-ಎಂದು ಜಯಘೋಷ ಮಾಡಿತು ಹೈದರಾಲಿಯ ಸೇನೆ ಸಹಸ್ರಾರುಕಂಠಗಳಲ್ಲಿ.

ಮುಗಿಲನ್ನು ಕವಿದು ನಿಧಾನವಾಗಿ ಚಲಿಸುವ ಮದ್ದಿನ ಕಪ್ಪು ಹೊಗೆಯಲ್ಲಿ, ಪಶ್ಚಿಮದತ್ತ ಇಳಿಯುತ್ತಿದ್ದ ಸೂರ್ಯ, ಕೆಂಡದುಂಡೆಯಾಗಿ ತೂರಾಡುತ್ತಿರುವಂತೆ ಕಂಡಿತು.

ಮತ್ತೆ ಮತ್ತೆ ಜಯಘೋಷ ಕೇಳಿಬಂದು, ಆ ಸದ್ದೇ ಬಳಲಿ ಸತ್ತಂತೆ ಮೌನ ಆವರಿಸಿತು-

ಮಸಣಮೌನ –

ಹಗಲಿನಿಂದಲೂ - ತೋಫುಗಳ ಕರ್ಣಕಠೋರ ಢಂಕಾರ, ಕೋವಿಗಳ ಪಟಪಟಿಸುವ ಸದ್ದು, ಸೈನಿಕರ ರಣಕೇಕೆ, ಭೋರ್ಗರೆವ ರಣವಾದ್ಯರವ, ಗಾಯಗೊಂಡ ಸೈನಿಕರ ಚೀತ್ಕಾರ, ಸಾಯುತ್ತಿರುವವರ ಕೊನೆಯುಸಿರಿನ ಬಿಸಿಧ್ವನಿ, ಗಾಯಗೊಂಡ ಆನೆ-ಕುದುರೆಗಳ ಘೀಂಕಾರ, ಹೇಷಾರವ –

ಸಮರದ ಸಾವಿರ ಶಬ್ದಗಳನ್ನು ಚೆಂಡಾಟವಾಡಿದಂತೆ ಬಂಡೆಗಳಿಂದ ಬಂಡೆಗಳಿಗೆ ಬಡಿದು, ಧ್ವನಿಸಿ, ಮಾರ್ದನಿಸಿ, ಸೋತು ಬಸವಳಿದಂತೆ ಸದ್ದಡಗಿ ಶಬ್ದದ ಶವನಂಥ ಮೌನ ದುರ್ಗವನ್ನು ವ್ಯಾಪಿಸಿತು.

ಆ ಮೌನಕ್ಕೆ ಬೆದರಿ ರಕ್ತಪಿಪಾಸಿಗಳಾದ ಹದ್ದು ಕಾಗೆಗಳೂ ಹೆದರಿ ಓಡಿದಂತೆ ಮುಗಿಲು ಬಟ್ಟಬಯಲಾಗಿ, ಕರಿಹೊಗೆಯನ್ನುಂಡ ಕೆಂಪುಮೋಡಗಳು ಅನಾಥಪ್ರೇತಗಳಂತೆ ಆಕಾಶದಲ್ಲಿ ತೇಲಿದವು.

ಸೋತು, ರಕ್ತ ಇಂಗಿಹೋದ ಸೈನಿಕನ ದೇಹದಂತೆ ಕಾವಡಗಿದ ಸೂರ್ಯ, ಒಮ್ಮೆ ಕೆಂಗಿರಣಗಳನ್ನು ಕೆದರಿ, ಮರೆಯಾದ.

ಸಂಜೆಯ ಮಬ್ಬು – ಹೆಪ್ಪುಗಟ್ಟಿದ ಮೌನದ ಮಡುವಾಯಿತು. ಅಲ್ಲಲ್ಲಿ ಕೇಳಿಬರುತ್ತಿದ್ದ ಶಬ್ದಗಳೂ ಮೌನದ ಅಲೆಯ ಕ್ಷೀಣ ಸದ್ದಿನಂತಿದ್ದವು.

ಅದೆಲ್ಲವನ್ನೂ ನುಂಗಿ, ನೆಕ್ಕುವ ರಣಕಾಳಿಯ ಕೆನ್ನಾಲಗೆಯಂತೆ ಕಂಡ ಸಂಜೆಬಾನಿನಲ್ಲಿ ನಿಧಾನವಾಗಿ ಬೆಳಕನ್ನು ಕಬಳಿಸುತ್ತಾ, ಹೆಬ್ಬಾವಿನಂಥ ಕೃಷ್ಣಪಕ್ಷದ ಕತ್ತಲು - ಅಲ್ಲಲ್ಲಿ ಹೊತ್ತಿದ ದೀಪಗಳನ್ನೂ ಹೆದರಿಸಿ, ಮುಗಿಲಲ್ಲಿ ಹರಡಿತು.

ಬೆಳಕನ್ನು ಕಬಳಿಸುತ್ತಿರುವ ಕತ್ತಲು, ಕತ್ತಲಿನೊಂದಿಗೆ ದಟ್ಟವಾಗಿ ಹೆಣೆದ ಮೌನವನ್ನು ಕಣ್ಣೀರಾಗಿ ಹಿಂಡಿ ಮಾತುಗಳನ್ನು ಹನಿಹನಿಯಾಗಿ ಕರೆದಂತೆ ಆ ರಣಬಯಲಿನಲ್ಲೆಲ್ಲೋ ಪರಶುರಾಮನಾಯಕನ ಧ್ವನಿ-

'ಅಣ್ಣಾ... ಅಣ್ಣಾ...ಮದಕೇರಣ್ಣಾ....'

- ಎಂದು ಕೂಗಿಕೊಂಡು ಪ್ರೇತದಂತೆ ಅಲೆಯುತ್ತಿತ್ತು - ದುರ್ಗದ ಹೃದಯವೇ ಹಂಬಲಿಸಿ ಕರೆದಂತೆ.

ಆ ಕೂಗನ್ನೂ ನುಂಗಿ ದುರ್ಗವನ್ನು ಕತ್ತಲಾವರಿಸಿತು.

ಕತ್ತಲಾಯಿತು-

ಮತ್ತೆ ಹಗಲಾಗಲಿಲ್ಲ.



ಮದಕರಿನಾಯಕನ ನನಸಾಗದ ಕನಸು : ’ಹೈದರಾಲಿಯ ಪಂಜರ (?)’

ಗ್ರಂಥಾವಲೋಕನ

ಹುಲ್ಲೂರು ಶ್ರೀನಿವಾಸ ಜೋಯಿಸ್ (ಸಂ.) : ಪ್ರಾಚೀನ ಶಾಸನ ಲೇಖನ ಸಂಗ್ರಹ

ಎಂ. ಎಸ್. ಪುಟ್ಟಣ್ಣ : ಚಿತ್ರದುರ್ಗದ ಪಾಳಯಗಾರರು

ಹುಲ್ಲೂರು ಶ್ರೀನಿವಾಸ ಜೋಯಿಸ್ (ಸಂ.) : ಚಿತ್ರದುರ್ಗದ ಬಖೈರು

ಎಲ್. ಬಸವರಾಜು (ಸಂ.) : ಮಹಾಲಿಂಗೇಂದ್ರ ವಿಜಯ

ಲಿಂಗಣ್ಣ ಕವಿ : ಕೆಳದಿನೃಪವಿಜಯ

ತಿ. ತಾ. ಶರ್ಮ (ಸಂ.) : ಚಾರಿತ್ರಿಕ ದಾಖಲೆಗಳು

ಲಕ್ಷ್ಮಣ್ ತೆಲಗಾವಿ, ಡಾ|| ಎಂ. ವಿ. ಶ್ರೀನಿವಾಸ್ (ಸಂ.) : ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು

ಡಾ|| ಎಂ. ವಿ. ಶ್ರೀನಿವಾಸ್, ಲಕ್ಷ್ಮಣ್ ತೆಲಗಾವಿ (ಸಂ.) : ಚಂದ್ರವಳ್ಳಿ

ಲಕ್ಷ್ಮಣ್ ತೆಲಗಾವಿ, ಕೆ. ವೆಂಕಣ್ಣಾಚಾರ್ (ಸಂ.) : ಐತಿಹಾಸಿಕ ಚಿತ್ರದುರ್ಗ

ಲಕ್ಷ್ಮಣ್ ತೆಲಗಾವಿ, ಕೆ. ವೆಂಕಣ್ಣಾಚಾರ್, ಪಾಂಡುರಂಗ ಜೋಯಿಸ್ (ಸಂ.) : ಚಿತ್ರದುರ್ಗ ದರ್ಶಿನಿ

ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಇಲಾಖೆ (ಪ್ರ.) : ಕರ್ನಾಟಕ ಪರಂಪರೆ

ಎಂ. ವಿ. ಕೃಷ್ಣರಾವ್, ಟಿ. ಕೇಶವ ಭಟ್ (ಸಂ.) : ಕರ್ನಾಟಕ ಇತಿಹಾಸ ದರ್ಶನ

ಬಿಚ್ಚುಗತ್ತಿ ಭರಮಪ್ಪನಾಯಕ : ಚಿತ್ರದುರ್ಗದ ಗಜಕೇಸರಿ

ಕ.ರಾ.ಕೃ. (ಸಂ.) : ಚಿತ್ರಕಲ್ಲು ಮದಕರಿ (ಜಾನಪದ ಗೀತೆಗಳು)

ಹು. ಶ್ರೀ. ಪಾಂಡುರಂಗ ಜೋಯಿಸ್ : ಚಿತ್ರದುರ್ಗದ ಕತೆಗಳು

ಹು. ಶ್ರೀ. ಪಾಂಡುರಂಗ ಜೋಯಿಸ್ : ಮದಕರಿನಾಯಕ

ಎ. ಡಿ. ಕೃಷ್ಣಯ್ಯ : ವೀರವನಿತೆ ಓಬವ್ವ

ಮಾನವಿಕ ಕರ್ಣಾಟಕ

ಶರಣ ಸಾಹಿತ್ಯ

ಚಿತ್ರಕಲ್ಲು-(ಚಿತ್ರದುರ್ಗ ಜಿಲ್ಲಾ ಇತಿಹಾಸ ಪ್ರದರ್ಶನ, ಸ್ಮರಣ ಸಂಚಿಕೆ, ೧೯೭೪)

ವೇದಾವತಿ- (ಹೊಸದುರ್ಗ ತಾಲ್ಲೂಕು ಅಭಿವೃದ್ಧಿ ಮಂಡಳಿಯ ವಿಶೇಷ ಸಂಚಿಕೆ, ೧೯೮೦-೮೧)

ಜೇನು-(ಶ್ರೀ ಶಂಕರೇಶ್ವರ ಗ್ರಾಮಾಂತರ ಪ್ರೌಢಶಾಲೆ, ಜಾನಕಲ್, ವಾರ್ಷಿಕ ಸಂಚಿಕೆ, ೧೯೬೫)

C. Hayavadana Rao (Ed.): *Mysore Gazetteer*

Abhaya Shankar and B. N. Satyan (Ed.): *New Mysore Gazetteer* (Chitradurga, Bellary and Shimoga Districts)

C. Hayavadana Rao: *History of Mysore*

Col. Marks Wilks: *History of Mysore*

Grant Duff: *History of Marathas*

G. S. Sardesai: *New History of Marathas*

Francis (Ed.): *Bellary District Gazetteer*

Francis (Ed.): *Dharwar District Gazetteer*

E. P. Rice (Ed.): *Epigraphia Carnatica* (Chitradurga Vol.)

Imperial Gazetteer of India

Mysore Archaeological Reports

Mythic Society Journal

ಹಸ್ತ ಪ್ರತಿಗಳು

ಚಿತ್ರದುರ್ಗದ ಚರಿತ್ರೆ : ದಂಡಿನ ದಳವಾಯಿ ಕಾಟಪ್ಪನಾಯಕರು ಬರೆಸಿದ್ದು
ಮದಕರಿ ರಾಜೇಂದ್ರದಂಡಕ : ಚಂದ್ರಭೀಮ ಕವಿ
ಹರಪನಹಳ್ಳಿ ಪಾಳಯಗಾರರು : ಚಿಕ್ಕೆರೂರು ಗೋವಿಂದಾಚಾರ್ಯ
ಪಟ್ಟ ವಲ್ಲರಿ

ಕಾದಂಬರಿ ರಚನೆಯ -

ಆರಂಭ : ೧೦-೮-೧೯೮೧

ಮುಕ್ತಾಯ : ೨೯-೧೨-೧೯೮೧

ಮೈಸೂರು